
ಮನುಷ್ಯ ಜಾತಿ ತಾನೊಂದೆ ವಲಂ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಜಾನಪದ

ಡಾ. ವೀರಣ್ಣ ದಂಡೆ



೮ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಸನ್ಮಾನ್ಯರಾದ ಶ್ರೀ ಶಾಮರಾವ ಅವರಿಗೆ,

ಜನಪದ ಸಾಹಿತ್ಯ ಚರಿತ್ರೆ ಮುಗಿಸಿ, ೧೭ ಪಿಡಿಎಫ ಫೈಲ್ ಗಳಲ್ಲಿ ಕಳಿಸಿದ್ದೇನೆ. ಒಂದು ಓಪನ್ ಫೈಲ್ ಇದೆ. ಅದು ಮೊದಲಿನ ಪುಟಗಳ ಫೈಲ್. ಅದರಲ್ಲಿ ನನ್ನ ಮಾತು, ಹಾಗೂ ಪರಿವಿಡಿಗಳಿವೆ. ಇದಕ್ಕೆ ಉಳಿದ ಪುಟಗಳನ್ನು ಸೇರಿಸಿಕೊಳ್ಳಲು ಅನುಕೂಲವಾಗುತ್ತದೆ.

೧೭ ಪಿಡಿಎಫ್ ಫೈಲ್‌ಗಳನ್ನು ಒಂದಾದನಂತರ ಒಂದರಂತೆ ಒಂದು ಸಲ ಪ್ರಿಂಟ್ ಹಾಕಿಸಿ ನೋಡಿ. ಆದಷ್ಟು ಸರಿಯಾಗಿ ಮಾಡಿ ಕಳಿಸಿದ್ದೇನೆ. ಏನಾದರೂ ತಪ್ಪಾಗಿದ್ದರೆ ತಿಳಿಸಿ, ಸರಿಪಡಿಸಿ ಕಳಿಸುತ್ತೇನೆ.

ಪ್ರಾರಂಭದ ಎಲ್ಲ ಪುಟಗಳನ್ನು ಸೇರಿಸಿ, ಪರಿವಿಡಿ ವರೆಗಿನ ಒಂದು ಫೈಲ್ ಅನ್ನು ನನಗೆ ಮೇಲ್ ಮಾಡಲು ತಿಳಿಸಿ. ಒಂದು ಸಲ ನೋಡುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ

ದಿ. ೨೬-೬-೨೦೧೫

ಡಾ. ವೀರಣ್ಣ ದಂಡೆ

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಸಂಪುಟ–೮

ಜನಪದ ಸಾಹಿತ್ಯ ಚರಿತ್ರೆ

ಲೇಖಕರು

ಡಾ. ವೀರಣ್ಣ ದಂಡೆ

ಪ್ರಧಾನ ಸಂಪಾದಕರು

ಪುಂಡಲೀಕ ಹಾಲಂಬಿ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು–560018

ಲೆಖಕರ ಮಾತುಗಳು

ಕನ್ನಡ ಸಾಹಿತ್ಯ ಪರಿಷತ್ತಿನವರು ಜನಪದ ಸಾಹಿತ್ಯ ಚರಿತ್ರೆ ಬರೆದು ಕೊಡಬೇಕೆಂದು ಪತ್ರ ಬರೆದಾಗ ತುಂಬಾ ಸಂತೋಷದಿಂದಲೇ ಒಪ್ಪಿಕೊಂಡೆ. ನನ್ನಲ್ಲಿ ಒಂದಿಷ್ಟು ಕೃತಿಗಳ ಸಂಗ್ರಹವಿತ್ತು. ಅವುಗಳ ಪರಿಚಯವೂ ನನಗಿತ್ತು. ಹೀಗಾಗಿ ಚರಿತ್ರೆ ಸರಳವಾಗಿ ಬರೆದು ಮುಗಿಸಿ ಕೊಡಬಹುದೆಂದು ಭಾವಿಸಿದ್ದೆ. ಯಾವಾಗ ಕೃತಿಗಳ ಪರಿಶೀಲನೆ ನಡೆಸಿದೆನೊ ಆಗ ಚರಿತ್ರೆ ಬರೆಯುವ ಕಠಿಣ ಮಾರ್ಗದ ಬಗ್ಗೆ ಅರಿವು ಮೂಡತೊಡಗಿತು. ನಂತರ ಒಂದು ವರ್ಷ ಪರಿಯಂತ ನಿರಂತರವಾಗಿ ಪರಿಶ್ರಮ ಪಡಬೇಕಾಯಿತು. ಅವಶ್ಯಕ ಪುಸ್ತಕಗಳ ಸಂಗ್ರಹಕ್ಕಾಗಿ ಪಡಬಾರದ ಕಷ್ಟ ಪಡಬೇಕಾಯಿತು. ಕೆಲವು ಪುಸ್ತಕಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಖರಿದಿಸಲು ಅನುಮತಿ ಕೊಟ್ಟಿತು. ಇದರಿಂದ ಸಾಕಷ್ಟು ಅನುಕೂಲವೂ ಆಯಿತು. ಕೆಲವು ಸ್ನೇಹಿತರು, ಹಿರಿಯರು ಉದ್ದೇಶ ಅರಿತು ಕೂಡಲೇ ಸ್ಪಂಧಿಸಿದರು. ಕೆಲವರು ಸುಮ್ಮನಾದರು. ಹಲವಾರು ಸಲ ದೂರವಾಣಿ ಮೂಲಕ ಸಂಪರ್ಕ ಮಾಡಿದಾಗ ಕೆಲವರು ಮೌನವಹಿಸ ತೊಡಗಿದರು. ಅಂಚೆ ಮೂಲಕ ಬೆಲೆ ಕಳಿಸಿದರೂ ಕೆಲವರು ಸ್ಪಂಧಿಸಲಿಲ್ಲ.

ಬರೆಯುವುದು ಸಾಗಿದಂತೆ ಜನಪದ ಸಾಹಿತ್ಯದ ಚರಿತ್ರೆ ಬೇಗ ಬರೆದು ಮುಗಿಸಲು ಸಾಧ್ಯವಿಲ್ಲ ಎಂಬ ಅರಿವು ಮೂಡ ತೊಡಗಿತು. ಆದರೆ ಕನ್ನಡ ಸಾಹಿತ್ಯ ಪರಿಷತ್ತಿನವರು ಕೊಟ್ಟ ಅವಧಿ, ಪುಟಗಳ ಮಿತಿ ಇವುಗಳಲ್ಲಿ ಚರಿತ್ರೆ ಮುಗಿಸಬೇಕಾದ ಅನಿವಾರ್ಯತೆಯೂ ಇತ್ತು. ನನ್ನ ಕೈಗೆ ಕೂಡಲೆ ದೊರಕಿದ ಪುಸ್ತಕಗಳನ್ನು ಎಚ್ಚರಿಕೆಯಿಂದ ಗಮನಿಸಿದ್ದೇನೆ. ಕೆಲವು ಪುಸ್ತಕಗಳ ಮಹತ್ವ ನನಗೆ ಗೊತ್ತಿದ್ದೂ ಅವುಗಳನ್ನು ದೊರಕಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದಾಗ ಅನಿವಾರ್ಯವಾಗಿ ಸುಮ್ಮನಾಗಿದ್ದೇನೆ. ಇದು ಪ್ರಾರಂಭ. ಸಮಯವಕಾಶವಾದಾಗಲೆಲ್ಲ ಈ ಸಂಪುಟದ ಕೊರತೆಗಳನ್ನು ತುಂಬಿಕೊಳ್ಳಲು ಪ್ರಯತ್ನಿಸಲಾಗುವುದು.

‘ಜನಪದ ಸಾಹಿತ್ಯ ಚರಿತ್ರೆ’ ಒಂದು ಸಂಪುಟದಲ್ಲಿ, ಐದಾರು ನೂರು ಪುಟಗಳಲ್ಲಿ ಮುಗಿಯುವಂಥದಲ್ಲ. ಎಂಟ್ಹತ್ತು ಸಂಪುಟಗಳ ಒಂದು ದೊಡ್ಡ ಯೋಜನೆ ಮಾತ್ರ

ಜನಪದ ಸಾಹಿತ್ಯದ ಚರಿತ್ರೆ ಹಿಡಿದಿಡಲು ಸಾಧ್ಯ. ಆ ಸಂಪುಟಗಳು ಸುಮಾರಾಗಿ ಹೀಗಿರಬಹುದು:

೧. ಜನಪದ ಸಾಹಿತ್ಯದ ಪ್ರಾರಂಭದ ಹೆಜ್ಜೆಗಳು
೨. ಜನಪದ ಕಥೆ ಮತ್ತು ಪದ್ಯಗಂಧೀ ಗದ್ಯಸಾಹಿತ್ಯ ಪ್ರಕಾರಗಳು
೩. ಬಯಲಾಟ ಸಾಹಿತ್ಯ
೪. ಭಜನೆ ಹಾಡುಗಳು: ತತ್ತ್ವಪದಗಳು–ಸ್ವರವಚನಗಳು
೫. ಗಂಡುಮಕ್ಕಳ ಜನಪದ ಹಾಡುಗಳು
೬. ಹೆಣ್ಣುಮಕ್ಕಳ ಜನಪದ ಹಾಡುಗಳು
೭. ಕಥನಗೀತೆಗಳು–ಖಂಡಕಾವ್ಯಗಳು–ಮಹಾಕಾವ್ಯಗಳು
೮. ಜನಪದ ಸಾಹಿತ್ಯ ವಿಮರ್ಶೆ–ಸಂಶೋಧನೆ

ಮತ್ತೆ ಹೆಚ್ಚಿನ ವಿಷಯಗಳನ್ನು ಸೇರಿಸಿಕೊಂಡು ಇದನ್ನು ಬೇಕಾದ ಹಾಗೆ ವಿಸ್ತರಿಸಿಕೊಳ್ಳಬಹುದಾಗಿದೆ. ಇಂತಹ ಯೋಜನೆಯನ್ನು ಇಟ್ಟುಕೊಂಡು ಕನ್ನಡ ಸಾಹಿತ್ಯ ಪರಿಷತ್ತು, ಜಾನಪದ ವಿಶ್ವವಿದ್ಯಾಲಯ ಅಥವಾ ಜಾನಪದ ಅಕಾಡೆಮಿ ಇಂತಹ ಸಂಸ್ಥೆಗಳು 'ಜನಪದ ಸಾಹಿತ್ಯ ಚರಿತ್ರೆ' ತಯಾರಿಸುವ ಕೆಲಸಕ್ಕೆ ಪ್ರಯತ್ನಿಸಬಹುದಾಗಿದೆ.

ನಾನೀಗ ಮಾಡಿರುವುದು ಒಂದು ಸಣ್ಣ ಪ್ರಯತ್ನ ಮಾತ್ರ. ಅನೇಕ ಕೃತಿಗಳು ನನ್ನ ಕೈಗೆ ವೇಳೆಗೆ ಸರಿಯಾಗಿ ದೊರೆಯಲಿಲ್ಲ. ಬೇರೆ ಬೇರೆ ಗ್ರಂಥಾಲಯಗಳಿಗೆ ಭೇಟಿ ಇತ್ತು ಕೊರತೆಗಳನ್ನು ತುಂಬಿಕೊಳ್ಳಬೇಕೆಂಬ ನನ್ನ ಆಲೋಚನೆಯೂ ಇರುವ ಸಮಯದಲ್ಲಿ ಕೈಗೂಡಲಿಲ್ಲ. ಪುಟಗಳ ಮಿತಿ, ಕಾಲಾವಕಾಶಗಳಿಗೆ ಬದ್ಧವಾಗಿ ಕೆಲಸ ಮುಗಿಸಿ ಕೊಡಬೇಕಾಗಿರುವುದರಿಂದ ಸಾಧ್ಯವಾದಮಟ್ಟಿಗೆ ಕೈಗೆ ದೊರೆಯುವ ಕೃತಿಗಳನ್ನೇ ಅವಲೋಕಿಸುವುದು ಕಷ್ಟದ ಕೆಲಸವಾಯಿತು. ಮತ್ತೆ ಸಮಯವಕಾಶ ದೊರೆತಾಗಲೆಲ್ಲ ಕೊರತೆಗಳನ್ನು ತುಂಬಿಕೊಳ್ಳಲು ಪ್ರಯತ್ನ ಮಾಡಲಾಗುವುದು.

ಇಂತಹ ಒಂದು ಅವಕಾಶವನ್ನು ಒದಗಿಸಿಕೊಟ್ಟ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಹಿರಿಯರೂ ಶ್ರೀ ಪುಂಡಲೀಕ ಹಾಲಂಬಿ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಅವಕಾಶದ ಹಿಂದೆ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ರಾಜಶೇಖರ ಪಾಟೀಲ ಅವರ ಕೊಡುಗೆ ಬಹಳಷ್ಟಿದೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಬರವಣಿಗೆ ಮುಗಿಯುವವರೆಗೂ ಅತ್ಯಂತ ಸಂಯಮದಿಂದ ವರ್ತಿಸಿದ ಈ ಯೋಜನೆಯ ಸಂಯೋಜಕರಾದ ಶ್ರೀ ಶಾಮರಾವ ಅವರಿಗೂ, ಪರಿಷತ್ತಿನ ಎಲ್ಲ ಆಡಳಿತ ಮಂಡಳಿ ಸದಸ್ಯರಿಗೂ ಅಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ.

–ಡಾ. ವೀರಣ್ಣ ದಂಡೆ

ಪರಿವಿಡಿ

ಭಾಗ–೧ :
ಜನಪದ ಸಾಹಿತ್ಯ ಚರಿತ್ರೆ ಪ್ರವೇಶಿಕೆ

ಭಾಗ–೨ :
ಜನಪದ ಗದ್ಯ, ಪದ್ಯಗಂಧೀ ಗದ್ಯ ಸಾಹಿತ್ಯ ಪ್ರಕಾರಗಳು

ಭಾಗ–೩ :
ಜನಪದ ಹಾಡುಗಳು

* * *

ಭಾಗ–೧

ಜನಪದ ಸಾಹಿತ್ಯ ಚರಿತ್ರೆ ಪ್ರವೇಶಿಕೆ

೧. ಕನ್ನಡ ದೇಸಿ ಸಾಹಿತ್ಯ ನಡೆದು ಬಂದ ದಾರಿ

೨. ಜನಪದ ಸಾಹಿತ್ಯ ಅಧ್ಯಯನದ ವಿಭಾಗ ಕ್ರಮ

೩. ಕನ್ನಡ ಜಾನಪದ ಶಾಸ್ತ್ರೀಯ ಅಧ್ಯಯನ

೪. ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ : ಪರಂಪರೆ

೫. ಅನುವಾದಗೊಂಡು ಕನ್ನಡಕ್ಕೆ ಬಂದ ಜನಪದ ಸಾಹಿತ್ಯ

೧. ದೇಸಿ ಸಾಹಿತ್ಯ ನಡೆದು ಬಂದ ದಾರಿ

ಯಾವುದೇ ಭಾಷೆಯ ಸಾಹಿತ್ಯಕ್ಕೆ ಎರಡು ಪ್ರಮುಖವಾದ ಧಾರೆಗಳಿರುತ್ತವೆ. ಒಂದು ಮೌಖಿಕ ಧಾರೆ, ಇನ್ನೊಂದು ಲಿಖಿತ ಧಾರೆ. ಈ ಎರಡೂ ಧಾರೆಗಳನ್ನು ಕೂಡಿಸಿಯೇ ಒಂದು ಭಾಷೆಯ ಸಾಹಿತ್ಯ ಎಂದು ಗುರುತಿಸುವುದು. ಕನ್ನಡದಲ್ಲೂ ಸಹಜವಾಗಿಯೇ ಎರಡು ಧಾರೆಗಳಿವೆ. ಒಂದು 'ಮೌಖಿಕ ಧಾರೆ' ಅದು ಜನಪದ ಸಾಹಿತ್ಯ, ಇನ್ನೊಂದು 'ಲಿಖಿತ ಧಾರೆ' ಅದು ಶಿಷ್ಟ ಸಾಹಿತ್ಯ. ಜನಪದ ಸಾಹಿತ್ಯ ಅಲಿಖಿತ ಪರಂಪರೆಯಲ್ಲಿ ಬೆಳೆದು ಬಂದುದು, ಶಿಷ್ಟ ಸಾಹಿತ್ಯ ಲಿಖಿತ ಪರಂಪರೆಯಲ್ಲಿ ಬೆಳೆದು ಬಂದುದು. ಆದರೆ ಈಗಿರುವ ನಮ್ಮ ಸಾಹಿತ್ಯದ ಕಲ್ಪನೆಯೇ ತಪ್ಪಾಗಿದೆ ಎನಿಸುತ್ತದೆ. ನಾವು ಕೇವಲ ಲಿಖಿತ ಧಾರೆಯನ್ನು ಮಾತ್ರ ಕನ್ನಡ ಸಾಹಿತ್ಯ ಎಂದು ನಂಬಿಕೊಂಡು ಬಂದುದರಿಂದ ಕನ್ನಡದಲ್ಲಿ ನಡೆದ ಯಾವುದೇ ಬಗೆಯ ಅಧ್ಯಯನ ಅದು ಶಿಷ್ಟ ಸಾಹಿತ್ಯವನ್ನು ಕುರಿತೇ ಇರುವುದು ಕಂಡುಬರುತ್ತದೆ.

ಒಂದು ಭಾಷೆಯ ಸೃಜನಶೀಲ ಸಾಹಿತ್ಯವನ್ನು ಅನುಸರಿಸಿ ಹುಟ್ಟಿಕೊಳ್ಳುವ ಸಾಹಿತ್ಯ ಶಾಸ್ತ್ರಗಳೆಲ್ಲ ಕೇವಲ ಶಿಷ್ಟ ಸಾಹಿತ್ಯವನ್ನನುಸರಿಸಿ ಹುಟ್ಟಿಕೊಳ್ಳುತ್ತವೆ. ರಾಚನಿಕ ಶಾಸ್ತ್ರಗಳಾದ ಛಂದಸ್ಸು, ವ್ಯಾಕರಣ, ಭಾಷಾಶಾಸ್ತ್ರ ಈ ಮುಂತಾದವುಗಳು, ತಿರುಳು ಮತ್ತು ಪರಿಣಾಮವನ್ನು ಗಮನಿಸಿ ಹುಟ್ಟಿಕೊಳ್ಳುವ ಕಾವ್ಯಮೀಮಾಂಸೆ ಮತ್ತು ವಿಮರ್ಶೆಯಂತಹ ಶಾಸ್ತ್ರಗಳು ಕನ್ನಡದಲ್ಲಿ ಹುಟ್ಟಿಕೊಂಡಿರುವುದು ಕೇವಲ ಲಿಖಿತ ಮೂಲದ ಕನ್ನಡ ಸಾಹಿತ್ಯವನ್ನು ಅನುಸರಿಸಿಯೆ.

ಮೌಖಿಕ ಮೂಲದ ಜನಪದ ಸಾಹಿತ್ಯದ ಅಭ್ಯಾಸ ನಮ್ಮಲ್ಲಿ ಪ್ರಾರಂಭವಾಗಿರುವುದು ಆಧುನಿಕ ಕಾಲದಲ್ಲಿ. ಅದೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರದ ವರ್ಷಗಳಲ್ಲಿ. ಅದೂ ೧೯೫೦ರ ನಂತರದ ವರ್ಷಗಳಲ್ಲಿ. ಸ್ವಾತಂತ್ರ್ಯ ಪೂರ್ವದಲ್ಲಿ ೧೯೩೦ರ ನಂತರ ಭಾರತದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಗಳ ಕಾರಣವಾಗಿ, ವಿಶೇಷವಾಗಿ ಗಾಂಧೀಜಿ ಅವರ ಚಳುವಳಿಗಳ ಕಾರಣವಾಗಿ ನಮ್ಮಲ್ಲಿ ಸ್ವದೇಶಿ ಸಂಗತಿಗಳ ಅರಿವು ಮೂಡಿದ ಕಾರಣವಾಗಿ ಒಂದಿಷ್ಟು ಜನಪದ ಸಾಹಿತ್ಯದ ಬಗೆಗೆ ನಮ್ಮ ಹಿರಿಯರ ಲಕ್ಷ ಹರಿದಿದೆ ಎಂದು ಹೇಳಬಹುದು. ಯಾವಾಗಲೂ ನಮಗೆ ಆತಂಕಗಳು ಆವರಿಸಿಕೊಂಡಾಗಲೇ ನಮ್ಮತನದ ಅರಿವಾಗುವುದು. ಆ ಅರಿವಿನ ಫಲವೇ ಸ್ವಾತಂತ್ರ್ಯ

ಪೂರ್ವ ೧೫–೨೦ ವರ್ಷಗಳ ಮುಂಚೆ ಜನಪದ ಸಾಹಿತ್ಯದ ಮಹತ್ವದ ಬಗೆಗೆ ನಮ್ಮವರಲ್ಲಿ ಅರಿವು, ಅಭಿಮಾನ ಮೂಡಿದ್ದು. ಈ ಕಾರಣವಾಗಿ ಸಾವಕಾಶವಾಗಿ ಜನಪದ ಸಾಹಿತ್ಯದ ಅಷ್ಟಿಷ್ಟು ಸಂಗ್ರಹ, ಪ್ರಕಟನೆ, ಅಧ್ಯಯನಗಳು ಪ್ರಾರಂಭವಾದವು. ಈ ಅರಿವಿನ ಕಾವು ಸ್ವಾತಂತ್ರ್ಯ ನಂತರ ಮುಂದುವರೆದುದು ಎದ್ದು ಕಾಣುವ ಸಂಗತಿಯಾಗಿದೆ. ಪ್ರಪಂಚದ ತುಂಬ ನಮಗೆ ಇಂತಹ ಉದಾಹರಣೆಗಳು ಕಂಡುಬರುತ್ತವೆ. ಪಾರತಂತ್ರ್ಯದ ಒತ್ತಡದ ಬದುಕಿನಲ್ಲಿಯೇ ದೇಸಿ ಸಂಗತಿಗಳ ಅರಿವು–ಒಲವು ಮೂಡಿ, ದೇಸಿ ಸಾಹಿತ್ಯ ಸಂಸ್ಕೃತಿಗಳ ಅಪ್ಪುಗೆಯಿಂದಲೇ ಒಂದು ದೇಶದ ಸ್ವಾತಂತ್ರ್ಯ ಚಳುವಳಿ ಮೂಡಿಬರುವುದು, ಮತ್ತು ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗುವುದು.

ಈ ಮೇಲಿನ ಮಾತಿಗೆ ಅತ್ಯಂತ ಸೂಕ್ತ ಉದಾಹರಣೆ ಎಂದರೆ ಫಿನ್‌ಲ್ಯಾಂಡ್ ದೇಶ ಸ್ವಾತಂತ್ರ್ಯವಾದ ಕಥೆ. ಸ್ವಿಡಿಸ್ ಆಡಳಿತಕ್ಕೆ ಒಳಪಟ್ಟ ಫಿನ್‌ಲ್ಯಾಂಡ್ ಸುಮಾರು ೫೦೦ ವರ್ಷಗಳ ವರೆಗೆ ಪಾರತಂತ್ರ್ಯದ ದಾಸ್ಯದಲ್ಲಿಯೇ ಜೀವನ ಸಾಗಿಸಿತ್ತು. ಅಲ್ಲಿಯ ಒಬ್ಬ ವೈದ್ಯ ಲಾನ್‌ರಾಟ್ ಎನ್ನುವವನು ಗುಡ್ಡಗಾಡಿನಲ್ಲಿ ಕೆಲಸ ಮಾಡುತ್ತಿರುವ ಹೆಣ್ಣುಮಕ್ಕಳು ಫಿನ್ನಿಶ್ ಭಾಷೆಯಲ್ಲಿ ಹಾಡುತ್ತಿರುವುದನ್ನು ಕೇಳಿ ರೋಮಾಂಚನಗೊಳ್ಳುತ್ತಾನೆ. ತಮ್ಮ ದೇಸಿ ಭಾಷೆಯಲ್ಲೂ ಹಾಡುಗಳಿವೆ ಎಂಬುದು ಅವನಿಗೆ ರೋಮಾಂಚನಗೊಳ್ಳಲು ಕಾರಣವಾಗುತ್ತದೆ. ಆ ಹಾಡುಗಳನ್ನೆಲ್ಲ ಸಂಗ್ರಹಿಸಿ, ಸಂಪಾದಿಸಿ 'ಕಾಲೇವಾಲ' ಎಂಬ ಜನಪದ ಕಾವ್ಯವೊಂದನ್ನು ಆತ ೧೮೩೫ರಲ್ಲಿ ಪ್ರಕಟಿಸುತ್ತಾನೆ. ಈ ಕಾವ್ಯದ ಸಂದೇಶದಿಂದಲೇ ಫಿನ್ನಿಶ್ ಜನರಲ್ಲಿ ಸ್ವಾತಂತ್ರ್ಯದ ಅರಿವು ಮೂಡಿ, ಚಳುವಳಿಗಳು ಪ್ರಾರಂಭವಾಗಿ ಮುಂದೆ ಫಿನ್‌ಲ್ಯಾಂಡ್ ಸ್ವತಂತ್ರವಾಗುತ್ತದೆ. ಆ ದೇಶದ ಮಹಾಕಾವ್ಯ 'ಕಲೇವಾಲ' ಆಗಿದೆ. ಇಂದಿಗೂ ಆ ದೇಶದಲ್ಲಿ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳ ಪ್ರಕಟನೆಗೆ, ಅಧ್ಯಯನಕ್ಕೆ ಮೊದಲ ಆದ್ಯತೆ ಇದೆ ಎಂದು ತಿಳಿದುಬರುತ್ತದೆ.

ಭಾರತದಲ್ಲಿ ಅದೂ ಕರ್ನಾಟಕದಲ್ಲಿ ನಮ್ಮ ದೇಶ ಸ್ವಾತಂತ್ರ್ಯ ಆದ ನಂತರ ಅಲ್ಲಿಂದ ಈಚೆಗೆ ಸುಮಾರು ಸುಮಾರು ೬೦–೬೫ ವರ್ಷಗಳಲ್ಲಿ ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ, ಅಧ್ಯಯನ, ಪ್ರಕಟನೆಗಳು ವ್ಯಾಪಕವಾಗಿ ನಡೆದಿವೆ. ಅದರಿಂದ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಒಂದು ಹೊಸ ತಿರುವು ಬಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ.

'ದೇಸಿ' ಎನ್ನುವುದು ಮುಖ್ಯವಾಗಿ– 'ಮೌಖಿಕ ಪರಂಪರೆ'ಯನ್ನು, 'ಒಂದು ನಾಡಿನ ವಿಶೇಷ ಸಂಸ್ಕೃತಿ' ಯನ್ನು, 'ಪಾರಂಪರಿಕವಾಗಿ ಬಂದ ಬಹುಜನ ಸೃಷ್ಟಿ' ಮತ್ತು 'ಬಹುಜನ ಬಳಕೆಯ ಸಂಗತಿ' ಗಳನ್ನು, ವಿಶೇಷವಾಗಿ 'ತಲೆತಲಾಂತರಗಳಿಂದ ಬದುಕಿಗೆ ಆಸರೆಯಾಗಿ ಬಂದ ಮೌಖಿಕ ಜ್ಞಾನ'ವನ್ನು ಹೇಳಿಕೊಡುತ್ತದೆ. ಈ ಅರ್ಥದಲ್ಲಿ 'ದೇಸಿಸಾಹಿತ್ಯ' ಎಂದರೆ ಪಾರಂಪರಿಕ ಸಾಹಿತ್ಯ, ಮೌಖಿಕ ಸಾಹಿತ್ಯ, ಜನಪದ ಸಾಹಿತ್ಯವೆಂದು ಅರ್ಥವಾಗುತ್ತದೆ. ಯಾವುದೇ ಭಾಷೆಯಲ್ಲಿ ಸಹಜವಾದ ಎರಡು ಶಕ್ತಿಗಳು ಕಾಣಿಸುತ್ತವೆ. ಒಂದು ಅದರ ಸಂಪರ್ಕ ಸಾಮರ್ಥ್ಯ, ಅಂದರೆ ನಾವದನ್ನು ವ್ಯವಹಾರಕ್ಕಾಗಿ ಬಳಸುವ ಆಯಾಮ; ಇನ್ನೊಂದು ಅದು ಸಹಜವಾಗಿ ಕಟ್ಟಿಕೊಡುವ ಸಾಹಿತ್ಯದ ಆಯಾಮ;

ಅಂದರೆ ಮೌಖಿಕ ಸಾಹಿತ್ಯ ಅರ್ಥಾತ್ ಜನಪದ ಸಾಹಿತ್ಯ. ಈ ದೇಸಿ ಸಾಹಿತ್ಯದ ಕೆಲಸವೇನು? ಇದರ ಉಪಯೋಗ ಹೇಗೆ? ಎಂಬುದನ್ನು ಗಮನಿಸಿದರೆ ಅದು ಸಾಗಿಬಂದ ಬಗೆಯನ್ನು ಗಮನಿಸಿದಂತಾಗುತ್ತದೆ.

ಜನಪದಸಾಹಿತ್ಯ ಸೃಷ್ಟಿಗೆ 'ಸಹಜವಾದ ಸಂದರ್ಭ' ಮುಖ್ಯ. ಎಂತಹ ಸಂದರ್ಭಗಳಿವು ಎಂದು ಗಮನಿಸಿದರೆ, ಅವೆಲ್ಲ ಜೀವನದಲ್ಲಿ ಸಂಭವಿಸುವ ಸಹಜಘಟನೆಗಳೆ ಆಗಿರುತ್ತವೆ. ಮಾತಿನಲ್ಲಿ ಬಳಕೆಯಾಗಲು ಒಂದು ಗಾದೆ ಮಾತಿಗೆ ಎಂತಹ ಸಂದರ್ಭ ಬೇಕಾಗುವುದೋ ಅಂತಹದೇ ಸಂದರ್ಭದಲ್ಲಿ ಒಂದು ಗಾದೆ ಹುಟ್ಟುತ್ತದೆ ಮತ್ತು ಅಂತಹದೇ ಸಂದರ್ಭದಲ್ಲಿ ಅದು ಬಳಕೆಯಾಗುತ್ತದೆ.

ಜನಪದ ಕಲೆಗಳು ಮಾನವ ಸೃಷ್ಟಿಗಳು. ಇದು ಮನುಷ್ಯನ ಇನ್ನೊಂದು ಗುಣವನ್ನು ಎತ್ತಿ ತೋರುತ್ತದೆ. ಅವನಲ್ಲಿ ಎರಡು ಸೃಷ್ಟಿಶಕ್ತಿಗಳಿರುವುದು ನಮಗೆ ಎದ್ದುಕಾಣುತ್ತದೆ. ಒಂದು ವಂಶೋತ್ಪತ್ತಿ ಇನ್ನೊಂದು ಕಲಾಸೃಷ್ಟಿ. ಇವೆರಡೂ ಅವನಲ್ಲಿರುವ ನೈಸರ್ಗಿಕ 'ಸೃಷ್ಟಿಶಕ್ತಿಗಳೆ'. ಹೀಗಾಗಿ ಹಾಡು ಕುಣಿತಗಳು ಅವನಿಗೆ ಪರಕೀಯವೇನಲ್ಲ. ಅದಕ್ಕಾಗಿ ತನ್ನ ಖುಷಿಯ ಸಂದರ್ಭಗಳಲ್ಲಿ ಹಾಡು ಕುಣಿತಗಳನ್ನು ಮಾನವ ಬಹುಸಹಜವಾಗಿ ವ್ಯಕ್ತಪಡಿಸುತ್ತ ಬಂದಿದ್ದಾನೆ.

ಸಂದರ್ಭಗಳ ಸೃಷ್ಟಿ :

ಮಾನವನು ತಾನು ಹೆಚ್ಚು ಸುಸಂಸ್ಕೃತನಾದಂತೆ ಒಂದೊಂದೆ ಸಾಂಸ್ಕೃತಿಕ ಸಂದರ್ಭಗಳನ್ನು ಸೃಷ್ಟಿಮಾಡುತ್ತ ಹೊರಟನು. ಈ ಸಾಂಸ್ಕೃತಿಕ ಸಂದರ್ಭಗಳನ್ನು ನಾವು 'ಕೆಲಸದ ಸಂದರ್ಭಗಳು' ಮತ್ತು 'ಸಾಂಪ್ರದಾಯಿಕ ಸಂದರ್ಭಗಳು' ಎಂದು ಎರಡು ಬಗೆಯಲ್ಲಿ ಗುರುತಿಸಿಕೊಳ್ಳಬಹುದು. ತನ್ನ ಹೊಟ್ಟೆಪಾಡಿಗಾಗಿ ದುಡಿಯಲು ತೊಡಗಿದಾಗ, ಹೆಚ್ಚುಸಮಯದವರೆಗೆ ತೊಡಗಿಸಿಕೊಳ್ಳುವ ಮತ್ತು ಲಯಬದ್ಧವಾಗಿ ಕೆಲಸ ಸಾಗುವ ಸಂದರ್ಭಗಳಲ್ಲಿ ಆತ ಸಮಯಾಲಾಪನೆಗಾಗಿ ಹಾಡುಗಳನ್ನು ಹಾಡಿಕೊಳ್ಳಲು ತೊಡಗಿದನೆಂದು ತೋರುತ್ತದೆ. ಅಂತಹ ಸಂದರ್ಭಗಳು ಇಂದಿಗೂ ನಮಗೆ ಕಾಣುತ್ತವೆ. ನಾಟಿ ಮಾಡುವುದು, ಹಂತಿ ಹೊಡೆಯುವುದು, ಗೂಡುಮುರಿಯುವುದು, ಬೀಸುವುದು, ಕುಟ್ಟುವುದು, ಹೊಲಿಗೆ (ಕೌದಿ, ಕುಬ್ಬಸ, ಮುಂತಾದವು) ಕೆಲಸ, ಹಗ್ಗ ಹೊಸೆಯುವುದು, ಸುದೀರ್ಘ ಸಮಯ ತೆಗೆದುಕೊಳ್ಳುವ ಆಹಾರ ಸಾಮಗ್ರಿ ತಯಾರಿಕೆ (ಉದಾಹರಣೆಗಾಗಿ ಶಾವಿಗೆ ಹೊಸೆಯುವ, ಸೇಂಗಾಕಾಯಿಯಿಂದ ಬೀಜ ಬಿಡಿಸುವ ಮುಂತಾದ) ಈ ಮತ್ತು ಇಂತಹ ಅನೇಕ ಕೆಲಸದ ಸಂದರ್ಭಗಳಲ್ಲಿ ಹಾಡು ಹುಟ್ಟಿಕೊಳ್ಳಲು ಕಾಲಾವಾಕಾಶ ತೋರಿತು. 'ಸಾಂಪ್ರದಾಯಿಕ ಸಂದರ್ಭ'ಗಳೆಂದರೆ: ಮದುವೆ, ಸೋಬಾನ, ಕುಪ್ಪಸ, ಜೋಗುಳ ಇಂಥಲ್ಲಿ ಮತ್ತೆ ಹಾಡು ಕಾಣಿಸಿಕೊಂಡಿತು. ಇವುಗಳನ್ನು ಒಟ್ಟಿಗೆ ಸಾಂಸ್ಕೃತಿಕ ಸಂದರ್ಭಗಳೆಂದು ಹೆಸರಿಸಬಹುದು. ಹೀಗೆ ದೇಸಿ ಸಾಹಿತ್ಯವು ಮಾನವನ ಬದುಕಿನ ಬಲು ಸಹಜವಾದ ಸಾಂಸ್ಕೃತಿಕ ಸಂದರ್ಭಗಳಲ್ಲಿ ತೀರ ಸಹಜವಾಗಿಯೇ ಹುಟ್ಟಿ, ಉಪಯೋಗದಲ್ಲಿ ಉಳಿಯಲು ಪ್ರಾರಂಭವಾಯಿತು. ಹೀಗಾಗಿ ದೇಸಿಸಾಹಿತ್ಯವು

ಶಿಷ್ಟಸಾಹಿತ್ಯದಂತಹ ಏಕಾಂತದ ರಚನೆಯಲ್ಲ. ಅದು ಬದುಕಿನ ಜೊತೆಜೊತೆಗೆ ಸಹಜವಾಗಿ ಮೈತಳೆದು ಬಂದುದಾಗಿದೆ, ಬದುಕಿನ ಸುತ್ತ ಪಸರಿಸಿದುದಾಗಿದೆ.

ಶಿಷ್ಟ ಕವಿಗಳ ಸ್ವೀಕಾರ :

ದೇಸೀಸಾಹಿತ್ಯ ಬದುಕಿನ ಜೊತೆಹುಟ್ಟಿದ ಸಾಹಿತ್ಯವಾದುದರಿಂದ, ಇದರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಾಗಿಲ್ಲ. ಅಕ್ಷರ ಮಾಧ್ಯಮ ಹುಟ್ಟಿದ ನಂತರ ಹುಟ್ಟಲು ತೊಡಗಿದ ಸಾಹಿತ್ಯದಲ್ಲಿ, ಶಿಷ್ಟಕವಿಗಳು ಹುಟ್ಟಿಬೆಳೆದ ನಾಡಿನ ದೇಸಿಸಾಹಿತ್ಯ ಅವರ ಅನುಭವದ ಒಂದು ಅಂಗವಾಗಿಯೇ ಹೋಗುವುದರಿಂದ, ಪ್ರಪಂಚದ ಯಾವ ಶಿಷ್ಟಕವಿಗೂ ದೇಸಿಸಾಹಿತ್ಯದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದೆ ಹೇಳಬೇಕು. ಶಿಷ್ಟಸಾಹಿತ್ಯದಲ್ಲಿ ರಚನೆಗೊಂಡು, ಜನಸಾಮಾನ್ಯರ ಬದುಕಿಗೆ ಉಪಯೋಗವಾಗುವ ಪುರಾಣಸಾಹಿತ್ಯವಂತೂ ದೇಸಿಸಾಹಿತ್ಯದ ಬಳಕೆಯಿಂದ ಹೆಚ್ಚುಪ್ರಭಾವಿತಗೊಂಡಿತೆಂದು ಹೇಳಬೇಕು.

ನೈಜವಾದ ಬದುಕಿನಲ್ಲಿ ಶಿಷ್ಟಸಾಹಿತ್ಯಕ್ಕೆ ಬೇಕಾದ ಎರಡು ಸಂಗತಿಗಳು ಇರುತ್ತವೆ. ಒಂದು ಬದುಕು, ಎರಡು ಬದುಕಿನ ಒಂದಂಗವಾದ ದೇಸಿಕಲಾ ಪ್ರಪಂಚ. ಇವುಗಳಲ್ಲಿ ದೇಸಿಸಾಹಿತ್ಯವೂ ಒಂದು. ಹೀಗಾಗಿ ಶಿಷ್ಟಕವಿಗಳ ಅನುಭವದ ಆಯಾಮಗಳಲ್ಲಿ ಒಂದಾಗಿ ದೇಸಿಸಾಹಿತ್ಯ ಕಾಣುತ್ತದೆ. ಕನ್ನಡದ ಪಂಪನಿಂದ ಹಿಡಿದು ಕುವೆಂಪುವಿನವರೆಗೆ ಎಲ್ಲ ಕವಿಗಳು ದೇಸಿಸಾಹಿತ್ಯದ ಪ್ರಭಾವಕ್ಕೆ ಒಳಗಾಗಿದ್ದಾರೆ. ಹೀಗಾಗಿ ಶಿಷ್ಟಸಾಹಿತ್ಯದಲ್ಲೂ ದೇಸಿಸಾಹಿತ್ಯದ ಬಳಕೆ ಧಾರಾಳವಾಗಿ ಕಾಣುತ್ತದೆ.

ಆಬಾಲ ವೃದ್ಧರಿಗೆ ಬೇಕಾದುದು:

ಶಿಷ್ಟಸಾಹಿತ್ಯದ ಪ್ರಯೋಜನ ಪಡೆಯುವ ಸಹೃದಯರು ಎಂತಹರು ಎಂಬುದನ್ನು ಲೆಕ್ಕಹಾಕಿದರೆ, ಬಹುಸಂಖ್ಯಾತ ಜನಸಾಮಾನ್ಯರು ಈ ಗುಂಪಿನಿಂದ ಹೊರಗುಳಿಯುತ್ತಾರೆ. ಅಲ್ಲಿ ಅರ್ಹತೆಯ ಪ್ರಶ್ನೆ ಬಹುಮುಖ್ಯವಾಗುತ್ತದೆ. ಒಂದು ಕಾವ್ಯವನ್ನು ಓದಿ ಗ್ರಹಿಸಬಲ್ಲವ ಸಹೃದಯನೆನಿಸುತ್ತಾನೆ. ಪ್ರೌಢಶಿಕ್ಷಣ ಮತ್ತು ಪ್ರಾಪ್ತವಯಸ್ಸು ಇವು ಲಿಖಿತಮೂಲದ ಸಾಹಿತ್ಯ ಗ್ರಹಿಸುವಲ್ಲಿ ಅವಶ್ಯವಾದ ಅರ್ಹತೆಗಳೆನಿಸುತ್ತವೆ. ಆದರೆ ಜನಪದ ಸಾಹಿತ್ಯದ ಸಹೃದಯನಿಗೆ (ಕೇಳುಗ, ನೋಡುಗ) ಶಿಕ್ಷಣ ಮತ್ತು ವಯಸ್ಸಿನ ನಿರ್ಬಂಧ ಮತ್ತು ಅವಶ್ಯಕತೆಗಳಿಲ್ಲ. ಒಂದು ಮಗುವಿಗೆ ವಯಸ್ಸೆಂಬ ಮಾತಿಲ್ಲ. ಎಳೆಯ ಮಗುವಿಗೆ ಕೇಳಲು ದೊರೆಯುವುದು ಸಂಗೀತ ಬೆರೆತ ಜನಪದ ಹಾಡು. ಇದರಿಂದ ಒಂದು ಮಗು ಕಿರಿಕಿರಿಯನ್ನು ಕಳೆದುಕೊಳ್ಳುತ್ತದೆ, ಶಾಂತವಾಗುತ್ತದೆ, ನಿದ್ರೆಗೆ ಹೋಗುತ್ತದೆ. ಈ ಸಂಗೀತ ಬೆರೆತ ಕಾವ್ಯ (ಹಾಡು) ಇಂತಹ ಚಮತ್ಕಾರದ ಪರಿಣಾಮವನ್ನು ಬೀರುವ ಶಕ್ತಿ ಹೊಂದಿದೆ.

ಲಾಲಿಯ ಹಾಡಿದರ ಲಾಲೀಸಿ ಕೇಳ್ಯಾನ ।
ತಾಯಿ ಹಂಬಲ ಮರತಾನ 'ಕಂದಯ್ಯ'
ತೋಳ ಬೇಡ್ಯಾನ ತಲೆಗಿಂಬ । (ಗ.ಹಾ. ೯೫)

ಜೋಗೂಳ ಹಾಡಿದರ ಆಗಳೇ ಕೇಳ್ಯಾನ।
ಹಾಲ ಹಂಬಲ ಮರತಾನ।ಕಂದೈಗ।
ಜೋಗೂಳದಾಗ ಅತಿ ಮುದ್ದ। (ಗ.ಹಾ. ೯೫)

ಈ ಕಾವ್ಯ ತಾಯಿಗೆ ನೆರವಾಗುತ್ತದೆ. ಮಗುವಿನ ಮೇಲೆ ಪರಿಣಾಮ ಬೀರುತ್ತದೆ. ಇಲ್ಲಿ ಒಂದು ಮಗುವು ತಾಯಿಯನ್ನು, ಅವಳ ಎದೆಯ ಹಾಲನ್ನು ಮರೆಯುವಂತಹ ಪರಿಣಾಮವನ್ನು- ಒಂದು ಲಾಲಿಯ ಪ್ರಯೋಗ ಮಾಡುತ್ತದೆ. ಇಲ್ಲಿ ಕೇವಲ ಸಂಗೀತದ ಪರಿಣಾಮವನ್ನೇ ಲೆಕ್ಕಕ್ಕೆ ಹಿಡಿಯಲಾಗದು. ಹಾಗಾದರೆ ಪಂಪನ ಒಂದು ಪದ್ಯವನ್ನೋ ರನ್ನನ –**'ಆ ರವಮಂ ನಿರ್ಜಿತ ಕಂ/ಠೀರವರವಮಂ, ನಿರಸ್ತವ ಘನರವಮಂ ಕೋ/ ಪಾರುಣನೇತ್ರಂ ಕೇಳ್ದಾ / ನೀರೊಳಗಿರ್ದುಂ ಬೆಮರ್ತನುರಗ ಪತಾಕಂ'** (ಸಾ.ಭಿ.ವಿ.೭-೨೨) ಎಂಬುದನ್ನು ರಾಗವಾಗಿ ಹೇಳಿ ಮಗುವನ್ನು ಮಲಗಿಸಲು ಸಾಧ್ಯವಿದೆಯೇ? ತೊಟ್ಟಿಲಿನ ಜೀಕುವಿಕೆಯ ಲಯಕ್ಕೆ ಹೊಂದಿಕೆಯಾಗುವುದು ಕೇವಲ ತ್ರಿಪದಿ ಮಾತ್ರ. ಇಲ್ಲಿಯ ಸಂಗೀತ ಬೆರೆತ ಹಾಡು ಮಗುವಿನ ಮನಸ್ಸಿನ ಮೇಲೆ ಬೀರುವ ಪರಿಣಾಮವು ಕಿರಿಕಿರಿಯನ್ನು ದೂರಮಾಡಿ ನೆಲೆಗೊಳಿಸುವ ಮಾನಸಿಕ ನೆಮ್ಮದಿ, ಶಾಂತಿ-ಸುಖ ವಿಶೇಷವೆನಿಸುತ್ತದೆ.

ಕೂಸಿಗೆ ಸ್ವಲ್ಪ ವಯಸ್ಸಾಗಬೇಕು. ಕೂಡುವಂತೆ, ನಿಲ್ಲುವಂತೆ, ಹೆಜ್ಜೆ ಇಡುವಂತೆ, ಆಡುವಂತೆ ಆದರೆ ಸಾಕು, ಪ್ರಾರಂಭವಾಗುತ್ತದೆ 'ಆನಿ ಬಂತು ಆನಿ, ಯಾವೂರಾನಿ' ಎಂಬ ಪ್ರಾಸುಗಳ ರಾಗ. ಇದು ಜನಪದ ಸಾಹಿತ್ಯದ 'ನುಡಿಯುವ ಕಾವ್ಯ' ಪ್ರಕಾರ. ಅಂದರೆ ಒಂದು ಮಗು ತನಗೆ ಮಾತು ಬರದ ಮುನ್ನ ಹಾಡುವ ಕಾವ್ಯದ ಶ್ರೋತೃವಾದರೆ, ಕೂಡುವ ಆಡುವ ವಯಸ್ಸಿನಲ್ಲಿ ಅದು ಜನಪದ ಸಾಹಿತ್ಯದ 'ನುಡಿಯುವ ಕಾವ್ಯ'ದ ಶ್ರೋತೃ ಆಗುತ್ತದೆ. ಈ 'ನುಡಿಯುವ ಕಾವ್ಯ'ದ ಮೂಲಕವಾಗಿಯೇ ಮಗು ಸಾವಕಾಶವಾಗಿ ಪ್ರಪಂಚದ ಜ್ಞಾನ ಪಡೆಯಲು ಪ್ರಾರಂಭಿಸುತ್ತದೆ. ಇಷ್ಟೆಲ್ಲ ನಡೆಯುವುದು ಬಹಳವೆಂದರೆ ಅದರ ಎರಡನೇ ವರ್ಷದ ವಯಸ್ಸಿನಲ್ಲಿಯೆ. ಒಂದು ವರ್ಷ ಹಾಡಿನ ಶ್ರೋತೃವಾಗಿ, ಇನ್ನೊಂದು ವರ್ಷದಲ್ಲಿ ನುಡಿಯುವ ಕಾವ್ಯದ ಶ್ರೋತೃವಾಗಿ ಪರಿವರ್ತನೆ ಹೊಂದುವ ಮಗು, ಸುಮಾರಾಗಿ ಈ ಅವಧಿಯಲ್ಲಿಯೇ ಮಾತು ಕಲಿಯಲು ಪ್ರಾರಂಭಿಸಿತೆಂದು ಇಟ್ಟುಕೊಂಡರೆ, ಮತ್ತೆ ಆ ಮಗುವಿಗೆ ಇನ್ನೊಂದು ಮೌಖಿಕ ಸಾಹಿತ್ಯ ಪ್ರಕಾರದ ಪರಿಚಯವಾಗಲು ಪ್ರಾರಂಭವಾಗುತ್ತದೆ; ಅದೇ ಕಥಾ ಪ್ರಕಾರ.

ಊಟ ಮಾಡುತ್ತ, ಮಲಗುತ್ತ ತನಗೆ ಕಥೆ ಹೇಳಬೇಕೆಂದು ಹಟಮಾಡುತ್ತದೆ. 'ನುಡಿಯುವ ಕಾವ್ಯ' ಅಂದರೆ ಮಕ್ಕಳಹಾಡು (ಶಿಶುಪ್ರಾಸ)ಗಳ ಜೊತೆಗೆ ಆಡಲು, ಹೆಜ್ಜೆ ಇಡಲು, ಪ್ರಪಂಚದ ತಿಳುವಳಿಕೆ ಪಡೆಯಲು ಪ್ರಾರಂಭಿಸಿದ ಮಗು ಒಮ್ಮೆ ಕಥೆ ಕೇಳಲು ಪ್ರಾರಂಭಿಸಿದರೆ ಈ ಪ್ರಪಂಚದ ಸ್ವರೂಪ, ಸಂಬಂಧಗಳನ್ನು ಅರಿಯತೊಡಗುತ್ತದೆ. ಪಕ್ಷಿ-ಪ್ರಾಣಿ, ಕ್ರಿಮಿ-ಕೀಟ, ಎಲ್ಲಕ್ಕಿಂತ ಹೆಚ್ಚಾಗಿ ಮಾನವನ ಸ್ವಭಾವ-ಸಂಬಂಧಗಳನ್ನು ಅರಿಯಲು ಪ್ರಾರಂಭಿಸುತ್ತದೆ. ಅಕ್ಷರ ಶೋಧದ ಮುಂಚೆಯಂತೂ ಮಾನವನಿಗೆ ಮಗುವಿನಿಂದ ಮಸಣದವರೆಗಿನ 'ಸಂಪೂರ್ಣ ಜೀವನ ಶಿಕ್ಷಣ' ದೊರಕಿದ್ದೇ ಈ

ಕಥೆಗಳಿಂದ. ಈಗಲೂ ಕಥೆ ಕೇಳದ ಒಂದುಜೀವ ಪ್ರಪಂಚದಲ್ಲಿ ದೊರೆಯಲು ಸಾಧ್ಯವಿಲ್ಲ. ಇಂತಹ ಕಥೆಗೆ ಆಬಾಲವೃದ್ಧರಾಗಿ ಎಲ್ಲರೂ ಶ್ರೋತೃಗಳಾಗಿರುತ್ತಾರೆ. ವಯಸ್ಸು-ಲಿಂಗ, ವರ್ಗ-ವರ್ಣ ಯಾವುದೇ ಭೇದವಿಲ್ಲದೆ ಕಥೆ ಎಲ್ಲರಿಗೂ ಹಿಡಿಸುತ್ತದೆ ಮತ್ತು ಬದುಕಲು ಕಲಿಸುತ್ತದೆ.

ಬದುಕಿನ ಒಂದೊಂದು ಕ್ಷಣ ಒಂದೊಂದು ವಯಸ್ಸು, ಒಂದೊಂದು ಸಂದರ್ಭದಲ್ಲಿ, ಒಂದೊಂದು ಜನಪದ ಸಾಹಿತ್ಯದ ಪ್ರಕಾರ ಸೃಷ್ಟಿಯಾಗುತ್ತ ಪ್ರಯೋಗಗೊಳ್ಳುತ್ತ ಇರುತ್ತದೆ. ನೂರಾರು ಜನ ಶ್ರೋತೃಗಳಾಗುತ್ತ ಸಂತೋಷ ಮತ್ತು ಶಿಕ್ಷಣ (ಪ್ರಯೋಜನ) ಪಡೆಯುತ್ತಲೇ ಉತ್ತಮ ಬದುಕು ಸಾಗಿಸಲು ತಯಾರಾಗುತ್ತ ಹೋಗುತ್ತಾರೆ.

ಕಲೆಯ ಆರಾಧನೆಯಿಂದ ಅಮಂಗಳ ಪರಿಹಾರ:

ಮಮ್ಮಟನು ಅಮಂಗಳ ಪರಿಹಾರವನ್ನು ತನ್ನ ಪ್ರಸಿದ್ಧ ಕಾವ್ಯಪ್ರಯೋಜನದ ಪಟ್ಟಿಯಲ್ಲಿ ಸೇರಿಸುತ್ತಾನೆ. ಅಲ್ಲಿ ಅವನು ಕೊಡುವ ಉದಾಹರಣೆ ಕವಿಗಳಿಗೆ ಸಂಬಂಧಿಸಿ ಇದೆ. "ಬಾಣನ ಸಮಕಾಲೀನನಾದ ಮಯೂರನೆಂಬ ಕವಿ ತನಗೆ ಒದಗಿದ್ದ ತೊನ್ನನ್ನು 'ಸೂರ್ಯಶತಕ'ದ ರಚನೆಯಿಂದ ಕಳೆದುಕೊಂಡನಂತೆ. ಮಮ್ಮಟನ ಹೇಳಿಕೆಗೆ ಈ ಐತಿಹ್ಯ ಆಧಾರ" (ಭಾ.ಕಾ.ಮೀ.೧೬೭). ನಾವಿಲ್ಲಿ ಹರಿಶ್ಚಂದ್ರ ಕಾವ್ಯವನ್ನು ಬರೆದು ತನ್ನ ಗುರುವಾದ ಹರಿಹರನಿಂದ ಹಲ್ಲುಗಳನ್ನು ಕಳೆದುಕೊಂಡ ರಾಘವಾಂಕನ ಉದಾಹರಣೆಯನ್ನು ಕೊಡಬಹುದಾಗಿದೆ. ನಂತರ ರಾಘವಾಂಕನು ಒಂದೊಂದೇ ಧಾರ್ಮಿಕ ಕಾವ್ಯವನ್ನು ಬರೆದಂತೆ ಒಂದೊಂದು ಹಲ್ಲು ಚಿಗಿತುಬಂದವೆಂಬ ಮಾತು ಮಮ್ಮಟನ ಉದಾಹರಣೆಗೆ ಸಮನಾಗಿದೆ. ಆದರೆ ಇವೆಲ್ಲ ಅಪ್ಪಟ ಜನಪದ ನಂಬುಗೆಗಳಂತೆ ತೋರುತ್ತವೆ. ಸಂಸ್ಕೃತ ಅಲಂಕಾರಿಕರ ಲೆಕ್ಕದಲ್ಲಿ ಇದು ಕವಿಗಳಿಗೆ ಸಂಬಂಧಪಟ್ಟ ಸಂಗತಿಯಾಗಿದೆ. ಆದರೆ ಜನಪದರಲ್ಲಿ- ಕಾವ್ಯವನ್ನು ಆರಾಧಿಸುವುದರಿಂದ ಸಹೃದಯರೆಲ್ಲರಿಗೂ ಅನಿಷ್ಟ ಪರಿಹಾರವಾಗುತ್ತದೆ ಎಂಬ ಭಾವನೆಯಿರುವುದನ್ನು ಕಾಣುತ್ತೇವೆ.

ಜನಪದ ಪುಣ್ಯಕಥಾನಕಗಳು ಕೊನೆಯಲ್ಲಿ ತಮ್ಮ ಧ್ಯೇಯವನ್ನು ಸಾರುವಾಗ- ಮುತ್ತೈದೆತನ ಘನವಿರಲಿ, ಬಾಲಾಗ ಆಸಿ ಘನವಿರಲಿ, ಪುತ್ರನ ಸಂತಾನ ಜಯಜಯ- ಮುಂತಾದ ಆಶಯಗಳನ್ನು ಘೋಷಿಸುತ್ತವೆ. ಇದೆಲ್ಲವನ್ನು ಗಮನಿಸಿದರೆ ಇವು ಅನಿಷ್ಟ ಪರಿಹಾರಕ್ಕಾಗಿ ಹಾಡುವ ಹಾಡುಗಳಾಗಿವೆ ಎಂಬುದು ಖಚಿತವಾಗುತ್ತದೆ. ಅದಕ್ಕಾಗಿಯೇ ಇವುಗಳನ್ನು ಪುಣ್ಯಕಥಾನಕಗಳು ಎಂದು ಕರೆಯುವುದು.

ಹಾಡನ್ನು- ಕಾವ್ಯವನ್ನು ಕೇಳುವುದು ಪುಣ್ಯದ ಕೆಲಸ. ಅದನ್ನು ನಿರಾಕರಿಸುವದು ಪಾಪದ ಕೆಲಸ- ಎಂಬ ಅಭಿಪ್ರಾಯ ಜನಪದರದು. ಆದುದರಿಂದ ಕಲೆಯ ಅನಾದರಣೆಗೆ ಮೃತ್ಯುವಿನಂಥ ಕೆಡುಕನ್ನು ಅವರು ಹೇಳುತ್ತಾರೆ. ಇದು ಜನಪದರಲ್ಲಿರುವ ಸಾಹಿತ್ಯದ (ಕಲೆಯ) ಆರಾಧನೆಯ ಬಗೆಗಿನ ಮಹತ್ತಾದ ವಿಚಾರವನ್ನು ಹೇಳುತ್ತದೆ. ಮತ್ತು ಈ ಕಾವ್ಯ ಬದುಕುಳಿಯುವುದು- ಜನರು ಕೇಳಲಿ, ತಮ್ಮ ಬದುಕಿಗೆ ದಾರಿಗಾಣಲಿ ಎಂಬ ಸದುದ್ದೇಶದಿಂದ. ಅದಕ್ಕಿಂತಲೂ ಮಹತ್ವದ ವಿಚಾರವೆಂದರೆ ಈ ಸಾಹಿತ್ಯ ಉಳಿಯುವುದೇ

ಅದರ ಪ್ರಸಾರದಿಂದ. ಪ್ರಸಾರವೇ ಇಲ್ಲವೆಂದರೆ ಜನಪದ ಸಾಹಿತ್ಯಕ್ಕೆ ಬದುಕು ಇಲ್ಲ. ಅದಕ್ಕಾಗಿ ತನಗೆ ಗೊತ್ತಿರುವ ಜನಪದದ ಒಂದು ಪ್ರಕಾರವನ್ನು ಇತರರಿಗೆ ಹೇಳುವುದು, ಹಾಗೆ ಹೇಳುತ್ತಿರುವುದನ್ನು ಶ್ರದ್ಧೆಯಿಂದ ಕೇಳುವುದು– ಇವುಗಳನ್ನು ಪುಣ್ಯದ ಕೆಲಸಗಳೆಂದೇ ಭಾವಿಸಲಾಗುತ್ತದೆ. ಇದಕ್ಕೆ ವ್ಯತಿರಿಕ್ತವಾದ ನಡತೆ, ಉದಾಹರಣೆಗೆ ತನಗೆ ಬಂದ ಹಾಡು, ಕತೆ ಮುಂತಾದವುಗಳನ್ನು ಇತರರ ಮುಂದೆ ಹೇಳದೇ ಇರುವುದು; ಒಂದು ಹಾಡು, ಒಂದು ಕಥೆ ಯಾವುದೋ ನೆವವೊಡ್ಡಿ ಕೇಳದೇ ಇರುವುದು– ಇವು ಒಂದು ರೀತಿಯಿಂದ ಆ ಸಾಹಿತ್ಯಕ್ಕೆ ಅಗೌರವ–ಅಪಚಾರ ಬಗೆದಂತೆಯೆ. ಇವು ಜನಪದ ಸಾಹಿತ್ಯದ ಪ್ರಸಾರಕ್ಕೆ ಅಡ್ಡಿಯಾಗುವ ಕ್ರಿಯೆಗಳಾದುದರಿಂದ ಈ ವರ್ತನೆಗಳು ಶಿಕ್ಷೆಗೆ ಯೋಗ್ಯವಾದುವೆಂದು ಜನಪದರು ಭಾವಿಸುತ್ತಾರೆ. ಈ ಉದ್ದೇಶವನ್ನು ಹೊತ್ತ ಕೆಲ ಹಾಡುಗಳೂ ಕಥೆಗಳೂ ದೊರೆಯುತ್ತವೆ:

೧. ಒಬ್ಬ ಜಿಪುಣ ಗೊಂಡಿಗೆ ನಾಲ್ಕು ಕಥೆಗಳು ಬರುತ್ತಿದ್ದವು. ಆದರೆ ಅವನು ಅವುಗಳನ್ನು ಯಾರ ಮುಂದೆಯೂ ಹೇಳುತ್ತಿರಲಿಲ್ಲ. ಇದರಿಂದ ಕೋಪಗೊಂಡ ಕಥೆಗಳು ಅವನು ಮಲಗಿರುವಾಗ ಅವನ ಹೊಟ್ಟೆಯಿಂದ ಹೊರಗೆ ಬಂದು ಅವನನ್ನು ಕೊಲ್ಲಲು ಆಲೋಚನೆ ಮಾಡುತ್ತವೆ. ಒಂದು ಕಥೆಯು ದಾರಿಯ ಮರವಾಗಿ ಅವನ ಮೇಲೆ ಬಿದ್ದು, ಇನ್ನೊಂದು ಹಾವಾಗಿ ಕಚ್ಚಿ, ಮತ್ತೊಂದು ಹೊಳೆ ದಾಟುವಾಗ ತೆರೆಯಾಗಿ ಬಂದು, ಮೊಗದೊಂದು ಆತ ಊಟ ಮಾಡುವಾಗ ಬಾಯಲ್ಲಿಟ್ಟುಕೊಂಡ ತುತ್ತನ್ನು ಸೂಜಿಮಯವಾಗಿಸಿ ಅವನನ್ನು ಕೊಲ್ಲಲು ನಿರ್ಣಯಿಸುತ್ತವೆ. ಅದರಂತೆ ಪ್ರಯತ್ನ ಮಾಡುತ್ತವೆ. ಆದರೆ ಈ ಸಮಾಚಾರ ತಿಳಿದ ಗೊಂಡಿಯ ಸೇವಕ ಅವನನ್ನು ಈ ಎಲ್ಲ ಅಪಾಯಗಳಿಂದ ಉಳಿಸುತ್ತಾನೆ'.

– (ಭಾರತೀಯ ಜನಪದ ಕಥೆಗಳು, ಪು.೨–೩)

೨. 'ಒಂದು ಹಾಡು ಒಂದು ಕಥೆ' ಎಂಬ ಒಂದು ಕಥೆಯಲ್ಲಿ – ಒಂದು ಹಾಡು ಹಾಗೂ ಒಂದು ಕಥೆ ಗೊತ್ತಿರುವ ಒಬ್ಬ ಹೆಣ್ಣುಮಗಳು ಅವನ್ನು ಯಾರ ಮುಂದೆಯೂ ಹೇಳುತ್ತಿರಲಿಲ್ಲ, ಹಾಡುತ್ತಿರಲಿಲ್ಲ. ಆಕೆಯನ್ನು ತೊರೆದು ಹೋಗಲು ಅವು ನಿರ್ಧರಿಸಿದವು. ಒಂದು ದಿನ ಕಥೆ ಅವಳ ಮನೆಯ ಅಂಗಳದಲ್ಲಿ ಎರಡು ಬೂಟುಗಳಾಗಿ ಕುಳಿತಿತು. ಹಾಡು ಒಂದು ಕೋಟು ಆಗಿ ಗೋಡೆಯ ಗೂಟಕ್ಕೆ ನೇತುಬಿದ್ದಿತು. ಹೊರಗಿನಿಂದ ಬಂದು ಇವುಗಳನ್ನು ಕಂಡ ಅವಳ ಗಂಡನು ಸಂಶಯ ಪಟ್ಟುಕೊಂಡನು. ಇಬ್ಬರಲ್ಲೂ ಬಿರುಕು ಮೂಡಿತು. ಗಂಡನು ಮಲಗಲು ಹನುಮಂತ ದೇವರ ಗುಡಿಗೆ ಹೋದನು. ಈಕೆ ಮನೆಯಲ್ಲಿಯೇ ಚಿಂತೆಯಲ್ಲಿ ಮಲಗಿದಳು.

ಆ ಊರೊಳಗಿನ ಹಣತೆಗಳೆಲ್ಲ ರಾತ್ರಿ ಕಳೆಯಲು ಹನುಮಂತ ದೇವರ ಗುಡಿಗೆ ತೆರಳುವುದು ವಾಡಿಕೆಯಾಗಿತ್ತು. ಎಲ್ಲ ಮನೆಗಳಿಂದ ಹಣತೆಗಳು ಬಂದು ಬಂದು ನೆರೆದವು. ಒಂದು ಹಣತೆ ಮಾತ್ರ ತಡಮಾಡಿ ಬಂದಿತು. ಉಳಿದ ಹಣತೆಗಳೆಲ್ಲ ಕಾರಣ ಕೇಳಿದವು. ಅದಕ್ಕೆ ಆ ಹಣತೆ ಹೇಳಿತು: ನಮ್ಮ ಮನೆಯಲ್ಲಿ ಗಂಡ–ಹೆಂಡತಿಗೆ ಜಗಳ. ಕಾರಣ, ಹೆಂಡತಿ ತನಗೆ ಬರುವ ಹಾಡು ಕಥೆ ಬೇರೆಯವರ ಮುಂದೆ ಹೇಳದ್ದಕ್ಕಾಗಿ ಅವು

ಬೂಟು, ಕೋಟುಗಳಾಗಿ ಇಬ್ಬರಲ್ಲೂ ಭಿನ್ನಾಭಿಪ್ರಾಯ ಮೂಡುವಂತೆ ಮಾಡಿದವು ಎಂದು ಹೇಳಿತು. ಅಲ್ಲಿಯೇ ಮಲಗಿದ್ದ ಗಂಡನು ವಿಷಯ ತಿಳಿದು ಮನೆಗೆ ಹೋದನು. ಕಥೆ ಹಾಡಿನ ಸುದ್ದಿ ತೆಗೆದು ಹೆಂಡತಿಗೆ ಮಾತಾಡಿಸಿ ನೋಡಿದನು. ಆದರೆ ಆಕೆಗೆ ಬರುತ್ತಿದ್ದ ಕಥೆ ಹಾಡು ಎರಡೂ ಆಕೆಗೆ ಮರೆತು ಹೋಗಿದ್ದವೆಂದು ತಿಳಿಯಿತು'.

('ಉತ್ತರ ಕರ್ನಾಟಕದ ಜನಪದ ಕಥೆಗಳು' (ಪು.೫೦-೫೧).

ಈ ಮೇಲೆ ಉಲ್ಲೇಖಿಸಿದ ಎರಡೂ ಕಥೆಗಳು- ಜನಪದ ಸಾಹಿತ್ಯದ ಪ್ರಸಾರದ ಮಹತ್ವವನ್ನು ಹೇಳುತ್ತವೆ. ಜನಪದ ಸಾಹಿತ್ಯವೆಂದರೆ ಅದು ಬದುಕಿನ ಜ್ಞಾನವನ್ನು ಹೊತ್ತುದಾಗಿದೆ. ಹಾಡು ಕಥೆ ಕೇಳುವ ಮೂಲಕವಾಗಿ ಶ್ರೋತೃಗಳು ಬದುಕಿನ ಜ್ಞಾನವನ್ನು ಸಂಪಾದಿಸುತ್ತಾರೆ. ಇಂತಹ ಬದುಕಿನ ಜ್ಞಾನವನ್ನು ಮುಚ್ಚಿಡುವುದು ಎಂದರೆ ಅದು ಘೋರ ಅಪರಾಧ ಎಂಬುದು ಜನಪದರ ತಿಳುವಳಿಕೆಯಾಗಿದೆ.

ಇಂದಿನ ಬಳಕೆ :

'ದೇಸಿ ಸಾಹಿತ್ಯ ಇಂದು ಸಾಯುತ್ತಿದೆ' ಎಂದೂ 'ದೇಸಿಯವಾದ ಯಾವುದೇ ಸಂಗತಿ ಸಾಯುವುದಿಲ್ಲ ಅದು ಸಹಜವಾಗಿ ಬದಲಾಗುತ್ತಿರುತ್ತದೆ' ಎಂದೂ ಎರಡು ವಿಭಿನ್ನ ಅಭಿಪ್ರಾಯಗಳು ನಮಗಿಂದು ಕೇಳಲು ದೊರೆಯುತ್ತವೆ. ಬದುಕಿನ ಒಂದಂಗವೇ ಆಗಿರುವ ದೇಸಿಸಾಹಿತ್ಯ ಬದುಕಿನ ಜೊತೆಗೆ ಬದಲಾವಣೆಯನ್ನು ಹೊಂದುತ್ತಿರುತ್ತದೆ. ನಮ್ಮ ಸಂಸ್ಕೃತಿಯ ಸಂಗತಿಗಳು ಸಾವಕಾಶವಾಗಿ ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಹೊಂದುತ್ತಿರುತ್ತವೆ. ಹೀಗೆ ಬದಲಾಗುವ ಸಾಂಸ್ಕೃತಿಕ ಸಂಗತಿಗಳಲ್ಲಿ ದೇಸಿಸಾಹಿತ್ಯವೂ ಒಂದು. ಬದುಕಿನ ಅನೇಕ ಸಂದರ್ಭಗಳು ಬಳಕೆಯಿಂದ ತಪ್ಪಿಹೋಗುತ್ತಿವೆ. ರೈತಾಪಿ ಕೆಲಸಗಳು ಬದಲಾಗಿವೆ. ಹಂತಿ ಹೊಡೆಯುವ, ಬಾವಿಯಿಂದ ನೀರೆತ್ತುವ, ಬೀಸುವ, ಕುಟ್ಟುವ, ಆಹಾರ ಸಾಮಗ್ರಿ ತಯಾರಿಸುವ, ಹೊಲಿಯುವ ಕೆಲಸಗಳು ಬಹು ಪ್ರಮಾಣದಲ್ಲಿ ಬದಲಾಗಿವೆ. ಆ ಕೆಲಸಗಳನ್ನು ಈಗ ಯಂತ್ರಗಳು ನಿರ್ವಹಿಸುತ್ತಿದ್ದು ಅಲ್ಲಿ ಬಳಕೆಯಾಗುವ ಹಾಡುಗಳು, ಕಥೆಗಳು ಮಾಯವಾಗುತ್ತಿವೆ.

ಈಗ ದೇಸಿಸಾಹಿತ್ಯ ಸಾಯುತ್ತಿದೆ, ಅದನ್ನು ಉಳಿಸಿಕೊಳ್ಳಬೇಕು ಎಂಬ ನಮ್ಮ ಹಿರಿಯರ ಕಾಳಜಿಗೆ ಈ ಮೇಲೆ ವಿವರಿಸಿದ ನಿದರ್ಶನಗಳು ಉದಾಹರಣೆಗಳಾಗಿವೆ. ಬಳಕೆಯಿಂದ ತಪ್ಪಿಹೋಗುತ್ತಿರುವ, ಬದುಕಿನ ಸಂದರ್ಭಗಳಲ್ಲಿ ಬಳಕೆಯಾಗುತ್ತಿರುವ ದೇಸಿಸಾಹಿತ್ಯದ ಸಂರಕ್ಷಣೆಯ ಅವಶ್ಯಕತೆ ಇದೆ. ಅದು ಅವಶ್ಯಕತೆ ಇಲ್ಲ ಎಂದು ಹೇಳುವ ಆಧುನಿಕರ ಮಾತಿನಲ್ಲಿ ಅರ್ಥವಿಲ್ಲವೆಂದೆ ಹೇಳಬೇಕಾಗುತ್ತದೆ. ಬಳಕೆಯಿಂದ ತಪ್ಪಿಹೋಗುತ್ತಿರುವ ನಮ್ಮ ಪಾರಂಪರಿಕ ಜ್ಞಾನವನ್ನು ಉಳಿಸಿಕೊಳ್ಳುವ ಜವಾಬ್ದಾರಿ ಈಗ ನಮ್ಮ ಮೇಲಿದೆ.

ಈಗ ದೇಸಿಸಾಹಿತ್ಯದ ಸಮೃದ್ಧಿ ಕಾಲ ಮುಗಿಯುತ್ತಿದೆ ಏನೋ ಎಂಬಂತೆ ತೋರುತ್ತಿದೆ. ಇದಕ್ಕೆ ಕಾರಣವೆಂದರೆ ದೇಸಿಸಾಹಿತ್ಯ ಸಮೃದ್ಧಿಯಾಗಿ ಸೃಷ್ಟಿಯಾಗುತ್ತಿದ್ದ ಸಂದರ್ಭಗಳನೇಕವು ಕರಗಿಹೋಗುತ್ತಿರುವುದು ಒಂದು ಪ್ರಮುಖ ಕಾರಣವಾದರೆ, ಶಿಕ್ಷಿತ

ಸಮಾಜವು ಅನೇಕ ಸಂಪ್ರದಾಯಗಳನ್ನು ಅರ್ಥವಿಲ್ಲದವುಗಳೆಂದು ಆಚರಣೆಯಿಂದ ಕೈಬಿಡುತ್ತಿರುವುದು ಇನ್ನೊಂದು ದೊಡ್ಡ ಮಾರಕವೆನ್ನಬೇಕಾಗುತ್ತದೆ. ಉದಾಹರಣೆಗಾಗಿ ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಅನೇಕ ಶುಭಕಾರ್ಯದ ಸಂದರ್ಭಗಳು ಮಾಯವಾಗುತ್ತಿರುವುದು ಇದಕ್ಕೆ ಕಾರಣವೆನ್ನಬೇಕಾಗುತ್ತದೆ. ಒಂದು ಗಂಡು ಒಂದು ಹೆಣ್ಣು ಗಂಡ–ಹೆಂಡರಾಗುವ 'ಮದುವೆ ಸಂದರ್ಭ'ವೆಂದರೆ ಹಾಡು ಸೃಷ್ಟಿಯಾಗುವ (ಸುಮಾರು ಇಪ್ಪತ್ತು ಸಂದರ್ಭಗಳನ್ನು ಒಳಗೊಂಡ) ಒಂದು ಮಹತ್ವದ ಸಂದರ್ಭ ತಪ್ಪಿಹೋಗುತ್ತಿದೆ. ಹೆಣ್ಣುಮಕ್ಕಳು ಮೈನರೆದ ಸುದ್ದಿಗಳು ಈಗ ಖುಷಿಯನ್ನು ವ್ಯಕ್ತಪಡಿಸುವ ಸಂದರ್ಭಗಳಾಗಿ ಉಳಿದಿಲ್ಲ. ಬದಲಾಗಿ ಅವುಗಳ ಆಚರಣೆಯೇ ಇಂದು ಮಾಯವಾಗುತ್ತಿದೆ. ಇದೇ ಗತಿ ಸೋಬಾನ ಸಂದರ್ಭಕ್ಕೂ ಕೂಡ ಬಂದೊದಗಿದೆ. ಕುಪ್ಪಸದ ಸಂದರ್ಭವೂ ಕೂಡ ಅಷ್ಟೆ, ಕೂಸಿಗೆ ಹೆಸರಿಡುವ ಸಂದರ್ಭವೂ ಹಾಡಿಲ್ಲದೆ ಭಣಗುಡುತ್ತಿರುತ್ತದೆ.

ದಾಖಲೀಕರಣವು ಚರಿತ್ರೆಯ ಪ್ರಜ್ಞೆಯಿಂದ ನಡೆಯಲಿ :

ದೇಸೀಸಾಹಿತ್ಯದ ಬಹುಪ್ರಮುಖವಾದ ಹಾಡುಗಳು ಸೃಷ್ಟಿಗೊಳ್ಳುವ ಸಂದರ್ಭಗಳೇ ಬತ್ತಿಹೋಗುತ್ತಿರುವುದರಿಂದ ದೇಸಿಸಾಹಿತ್ಯದ ಬೆಳವಣಿಗೆಗೆ ದೊಡ್ಡ ಆತಂಕ ಬಂದೊದಗಿದೆ. ಇಂತಹವನ್ನು ಸಂಗ್ರಹಿಸಿಡಬೇಕು. ಕೇವಲ ಬರವಣಿಗೆಯ ರೂಪದಲ್ಲಿ ಅಲ್ಲ, ಧ್ವನಿಮುದ್ರಣ ಯಂತ್ರದ ಮೂಲಕ, ಸಾಧ್ಯವಾದರೆ ವೀಡಿಯೊ ಕ್ಯಾಮರಾಗಳ ಮೂಲಕ ಇವುಗಳನ್ನು ಹಿಡಿದಿಟ್ಟು ಕಾಪಾಡುವ ಕೆಲಸ ಆಗಬೇಕು. ಈ ಕೆಲಸ ಒಬ್ಬರಿಂದ ಅಥವಾ ಸರ್ಕಾರದಿಂದ ಆಗುವಂತಹದಲ್ಲ. ಸಾರ್ವಜನಿಕರು ಕೂಡ ಈ ಬಗೆಗೆ ಆಸ್ಥೆವಹಿಸಬೇಕಾದುದು ಜರೂರಿ ಇದೆ. ತಮ್ಮ ಮನೆಯಲ್ಲಿ ಒಳ್ಳೆಯ ಹಾಡುಗಾರರು: ತಾಯಿ, ಅಕ್ಕ–ತಂಗಿ, ಹೆಂಡತಿ, ಮಗಳು, ಅಜ್ಜಿ, ಅತ್ತಿಗೆ–ಯಾರಾದರೂ ಆಗಿರಬಹುದು, ಅವರಿಗೆ ಬರುವ ಜನಪದ ಸಾಹಿತ್ಯದ ಭಾಗಗಳನ್ನು ಶಕ್ತ್ಯಾನುಸಾರ ಕಾಪಾಡುವ ಕೆಲಸವನ್ನು ಆಯಾ ಮನೆಯವರು ಮಾಡುವ ಅವಶ್ಯಕತೆ ಇದೆ. ಈ ಕೆಲಸ ಅವರವರ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಆದರೂ ಪರ್ವಾಯಿಲ್ಲ. ಕನಿಷ್ಠಪಕ್ಷ ಬರೆದಿಡುವ ಕೆಲಸವಾದರೂ ಆಗಬೇಕು. ಸ್ವಲ್ಪ ಅನುಕೂಲಸ್ಥರು ಧ್ವನಿಮುದ್ರಣ ಯಂತ್ರಗಳಲ್ಲಿ ಜನಪದ ಸಾಹಿತ್ಯವನ್ನು ಕಾಪಾಡಿ ಇಡುವ ಕೆಲಸವನ್ನು ಮಾಡಬಹುದು. ಇನ್ನೂ ಅನುಕೂಲವಾದರೆ ವೀಡಿಯೊ ಕ್ಯಾಮಾರಾಗಳ ಮೂಲಕ ಸಂರಕ್ಷಿಸಿಡುವ ಕೆಲಸವನ್ನು ಮಾಡಬೇಕು. ಇಂತಹ ಸಂಗ್ರಹಗಳನ್ನು ಅನುಕೂಲವಾದರೆ ತಾವೇ ಪ್ರಕಟಿಸಬಹುದು. ಆಗದಿದ್ದ ಪಕ್ಷದಲ್ಲಿ ಇನ್ನೊಬ್ಬರಿಗೆ ಕೊಡುವಾಗ ತಮ್ಮಲ್ಲಿ ಮೂಲಪ್ರತಿಯನ್ನು ಕಾಯ್ದುಕೊಂಡು, ಇನ್ನೊಂದು ಪ್ರತಿಯನ್ನು ಮಾಡಿಕೊಂಡು ಒಯ್ಯಲು ಅನುಮತಿ ಕೊಡಲು ಪರ್ವಾಯಿಲ್ಲ.

ಮನೆಮನೆಯಲ್ಲೂ ತಯಾರಾಗುವ ಇಂತಹ ಸಂಗ್ರಹಗಳನ್ನು– ಹಳೆಯ ಕಾಲಕ್ಕೆ ತಾಡೋಲೆ ಹಸ್ತಪ್ರತಿಗಳ ಸಂರಕ್ಷಣೆ ಮಾಡಿದಂತೆ ಮಾಡಬೇಕು. ಈ ಸಂಗ್ರಹಗಳನ್ನು ಆಯಾ ಮನೆತನದ ಸಾಂಸ್ಕೃತಿಕ ಆಸ್ತಿಯಾಗಿ ಕಾಯ್ದುಕೊಂಡು ಬರುವ ಜವಾಬ್ದಾರಿಯನ್ನು ಹೊಂದಬೇಕು. ಇದರಿಂದ ಎರಡು ಕೆಲಸಗಳು ಆದಂತಾಗುತ್ತದೆ. ಒಂದು– ತಮ್ಮ

ಮನೆತನದ ಒಬ್ಬ ಪ್ರತಿಭಾವಂತ ಹಾಡುಗಾರನ ಸ್ಮರಣೆಯನ್ನು ಉಳಿಸಿಕೊಂಡಂತಾಗಿ, ಆ ಮನೆತನದ ಚರಿತ್ರೆ ಉಳಿದುಕೊಂಡಂತಾಗುತ್ತದೆ. ಮತ್ತು ಇಡೀ ಜನಾಂಗದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳುವ ಬಹುಮುಖ್ಯ ಜವಾಬ್ದಾರಿಯನ್ನು ನಿಭಾಯಿಸಿದಂತಾಗುತ್ತದೆ. ಈ ಕ್ರಮ ಮಾತ್ರ ನಮ್ಮ ಬಹುಮೂಲ್ಯ ಸಾಂಸ್ಕೃತಿಕ ಸಂಪತ್ತನ್ನು ಕಾಪಾಡಬಹುದಾಗಿದೆ. ಮತ್ತು ಈ ಅರಿವು ನಮ್ಮಲ್ಲಿ ನಮ್ಮದರ ಬಗೆಗೆ ಕಾಳಜಿಯನ್ನು, ಅಭಿಮಾನವನ್ನು ಅಂಕುರಿಸುವ ಕೆಲಸ ಮಾಡುತ್ತದೆ. ಇದರಿಂದಾಗಿ ನಮಗಿರುವ ಜಾಗತೀಕರಣದ ಭಯ ಅಲ್ಪಮಟ್ಟಿಗೆ ದೂರಾಗುವ ಸಾಧ್ಯತೆಯೂ ಇದೆ. ಮುಂದೊಂದು ದಿನ ಇಂತಹವುಗಳ ಚರಿತ್ರೆ ಬರೆಯುವ ಕಾಲವೂ ಬರುತ್ತದೆ. ಆಗ ಆ ಚರಿತ್ರೆ ನಮ್ಮ ಪರಂಪರೆಯ ಬಹುಮೂಲ್ಯ ಜ್ಞಾನದ ಚರಿತ್ರೆಯೇ ಆಗಿರುತ್ತದೆ.

ಸಾಹಿತ್ಯವೆಂದರೆ ಶಿಷ್ಟ-ಮೌಖಿಕ ಎರಡು ಸಾಹಿತ್ಯದ ಕಲ್ಪನೆ ಬೇಕು:

ಒಂದು ಭಾಷೆಯ ಸಾಹಿತ್ಯವೆಂದರೆ ಅದು ಬರಹ ಮೂಲದ ಶಿಷ್ಟಸಾಹಿತ್ಯ ಮತ್ತು ಮೌಖಿಕ ಮೂಲದ ಜನಪದ ಸಾಹಿತ್ಯ ಇವೆರಡೂ ಒಳಗೊಂಡಂತಹ ಒಂದು ಕಲ್ಪನೆ ಇರಬೇಕಾದುದು ಅವಶ್ಯ. ನಾವೀಗ ಕನ್ನಡ ಸಾಹಿತ್ಯವೆಂದರೆ ಕೇವಲ ಬರಹ ಮೂಲದ ಶಿಷ್ಟಸಾಹಿತ್ಯವನ್ನು ಮಾತ್ರ ಗಮನಿಸುತ್ತಿದ್ದೇವೆ. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಶಾಸ್ತ್ರಗಳೆಲ್ಲ ಕೇವಲ ಶಿಷ್ಟಸಾಹಿತ್ಯವನ್ನು ಗಮನಿಸಿ ಹುಟ್ಟಿಕೊಂಡ ಶಾಸ್ತ್ರಗಳಾಗಿವೆ. ಕನ್ನಡದ ವ್ಯಾಕರಣಶಾಸ್ತ್ರ, ಗ್ರಂಥಸಂಪಾದನಾಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಶಾಸನಶಾಸ್ತ್ರ, ಕಾವ್ಯಮೀಮಾಂಸೆ, ಸಂಶೋಧನಶಾಸ್ತ್ರ, ಛಂದಸ್ಸು, ವಿಮರ್ಶೆ ಹೀಗೆ ಯಾವುದೇ ಶಾಸ್ತ್ರವನ್ನು ಗಮನಿಸಿದರೂ ಅಲ್ಲೆಲ್ಲ ಕೇವಲ ಶಿಷ್ಟಸಾಹಿತ್ಯದ ಹಿನ್ನೆಲೆ ಇರುವುದು ಸ್ಪಷ್ಟವಾಗಿ ಗೋಚರಕ್ಕೆ ಬರುತ್ತದೆ.

ಈಗಿರುವ ಕನ್ನಡ ಸಾಹಿತ್ಯ ಶಾಸ್ತ್ರಗಳು ಎಂತಹವು?

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಶಾಸ್ತ್ರಗಳನ್ನು ನಾವು ಗಮನಿಸಿದರೆ ಅವೆಲ್ಲ ನೇರವಾಗಿ ಸಂಸ್ಕೃತ ಸಾಹಿತ್ಯದಿಂದ ಬಂದವುಗಳು. ಅಲ್ಪಮಟ್ಟಿಗೆ ಕನ್ನಡ ಶಿಷ್ಟಸಾಹಿತ್ಯವನ್ನು ಗಮನಿಸಿ ಹುಟ್ಟಿಕೊಂಡವು. ಕನ್ನಡದ ಶಿಷ್ಟಸಾಹಿತ್ಯವು ಸಂಸ್ಕೃತ ಸಾಹಿತ್ಯದ ಪ್ರಭಾವದಡಿಯಲ್ಲಿ ಬೆಳೆಯುವಾಗ ಶಾಸ್ತ್ರೀಯ ಪರಿಕಲ್ಪನೆಗಳೆಲ್ಲ ಕನ್ನಡದಲ್ಲಿ ಬಳಕೆಯಾಗಲು ಪ್ರಾರಂಭವಾದದ್ದು ಸಂಸ್ಕೃತದಲ್ಲಿದ್ದಂಥ ಶಾಸ್ತ್ರೀಯ ಪರಿಕಲ್ಪನೆಗಳೆ. ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯದ ಪಡಿನೆಳಲು, ಹಾಗೆಯೇ ಕನ್ನಡದಲ್ಲಿರುವ ಶಾಸ್ತ್ರಗಳೆಲ್ಲವೂ ಸಂಸ್ಕೃತ ಶಾಸ್ತ್ರಗಳ ಪಡಿನೆಳಲುಗಳೆ ಆಗಿವೆ. ಆದರೆ ಅಲ್ಲಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಶಾಸ್ತ್ರೀಯ ಸಂಗತಿಗಳನ್ನು ದಾಖಲಿಸಲು ಕನ್ನಡ ಕವಿಗಳು ಪ್ರಯತ್ನಿಸಿದ್ದು ಕಂಡುಬರುತ್ತದೆ.

ಶಾಸ್ತ್ರಗಳು ಯಾಕೆ ಬೇಕು?

ನಮಗೆ ಸಾಹಿತ್ಯದ ಶಾಸ್ತ್ರಗಳು ಯಾಕೆ ಬೇಕು? ಎಂಬುದು ಒಂದು ಮಹತ್ವದ ಪ್ರಶ್ನೆ. ಸಾಹಿತ್ಯ ಬದುಕಿನ ಭಾವನಾತ್ಮಕ ಸಂಗತಿಗಳ ಅನುಕರಣೆಯಾದರೆ, ಶಾಸ್ತ್ರವು ಈ ಭಾವ-ಭಾವನೆಗಳಲ್ಲಿ ಅಡಗಿರುವ ಬದುಕಿನ ವೈಚಾರಿಕತೆಯನ್ನು ಗುರುತಿಸಿ ತೋರಿಸಿಕೊಡುವ

ಒಂದು ಪ್ರಕ್ರಿಯೆ. ಹೀಗಾಗಿ ಶಾಸ್ತ್ರಗಳು ಹುಟ್ಟುವುದು ಸಾಹಿತ್ಯದ ಗರ್ಭದಿಂದಲೆ. ಅದಕ್ಕಾಗಿ ಸಾಹಿತ್ಯದ ಗಂಭೀರವಾದ ಅಧ್ಯಯನ ನಡೆಯಲು, ಅದರಿಂದ ಬದುಕಿಗೆ ಸಾಹಿತ್ಯದ ಪ್ರಯೋಜನ ಪಡೆಯಲು ಶಾಸ್ತ್ರಗಳು ಬೇಕು. ಶಾಸ್ತ್ರಗಳು ಹುಟ್ಟುಹಾಕುವ ಪ್ರಮಾಣಗಳಿಂದಲೇ ಆಯಾ ಸಾಹಿತ್ಯದ ಚಿಂತನೆ, ಪ್ರಮಾಣ ನಡೆಯುತ್ತದೆ. ಬದುಕಿನ ಬಗ್ಗೆ ಅರಿವು ಮೂಡಿಸುತ್ತದೆ. ಶಾಸ್ತ್ರ ಬೇಡವೆಂದರೆ ಆ ಸಾಹಿತ್ಯದ ಗಂಭೀರವಾದ ಅಧ್ಯಯನ ನಡೆಯಲು ಸಾಧ್ಯವಿಲ್ಲ ಮತ್ತು ಅಂತಹ ಸಾಹಿತ್ಯದಿಂದ ಬದುಕಿಗೆ ಪ್ರಯೋಜನ ಪಡಯಲೂ ಸಾಧ್ಯವಾಗುವುದಿಲ್ಲ. ಹೀಗಾಗಿ ಒಂದು ಭಾಷೆಯ ಸಾಹಿತ್ಯ ಚರಿತ್ರೆ ಎಂದರೆ ಆ ಭಾಷೆಯ ಸಾಹಿತ್ಯ ಮತ್ತು ಆ ಸಾಹತ್ಯವನ್ನನುಸರಿಸಿ ಹುಟ್ಟಿಕೊಂಡ ಶಾಸ್ತ್ರಗಳ ಚರಿತ್ರೆಯೂ ಆಗಿರುತ್ತದೆ.

ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಲಾಭಗಳಲ್ಲಿ ಮೌಖಿಕ ಪರಂಪರೆಗೂ ಲಾಭ ದೊರೆಯಲಿ:

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಮುಂದಿನ ಯೋಜನೆಗಳೇನು? ಎಂಬುದರ ಬಗ್ಗೆ ಇತ್ತೀಚೆಗೆ ಮೈಸೂರಿನಲ್ಲಿ ಒಂದು ಚರ್ಚೆ ನಡೆಯಿತು. ಈ ಯೋಜನೆಗಳು ಹಳಗನ್ನಡ, ಹಸ್ತಪ್ರತಿ, ಶಾಸನ ಇವುಗಳಿಗೆ ಸಂಬಂಧಿಸಿಯೇ ಹೆಚ್ಚಾಗಿ ಇರಬೇಕೆಂಬ ಒಲವು ಕನ್ನಡದ ಹಿರಿಯ ವಿದ್ವಾಂಸರಗಳಲ್ಲಿ ಕಂಡುಬಂದಿತು. ಆದರೆ ಶಾಸ್ತ್ರೀಯ ಭಾಷೆಯ ಯೋಜನೆಗಳಲ್ಲಿ ಕನ್ನಡ ಜನಪದ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಸೇರಿಸಿಕೊಳ್ಳಬೇಕು ಎಂಬ ವಿಚಾರಗಳನ್ನು ನಾವು ಕೆಲವರು ಮುಂದಿಟ್ಟೆವು. ಆದರೆ ಅದರ ಪ್ರಯೋಜನ ಏನೂ ಆಗಲಿಲ್ಲ ಎಂದು ತೋರುತ್ತದೆ.

ಈ ಬಗೆಗೆ ನಾವು ಮುತುವರ್ಜಿ ವಹಿಸಬೇಕಾದ ಅವಶ್ಯಕತೆ ಇದೆ. ಹೀಗೆ ಕನ್ನಡದ ಹಿರಿಯರು ಮೌಖಿಕ ಸಾಹಿತ್ಯದ ಬಗ್ಗೆ ಅಸಡ್ಡೆ ತೋರಲು ಕಾರಣವೆಂದರೆ, ಜನಪದ ಸಾಹಿತ್ಯದ ಬಗ್ಗೆ ಗಂಭೀರವಾದ ಅಧ್ಯಯನಗಳು ನಡೆದಿಲ್ಲ ಎನ್ನುವುದೇ ಆಗಿದೆ. ಜನಪದ ಸಾಹಿತ್ಯದ ಶಾಸ್ತ್ರೀಯ ಸಂಗತಿಗಳ ಬಗ್ಗೆ ಅಭ್ಯಾಸ ನಡೆಯದೇ ಇರುವುದು ಇಂತಹ ಕೊರತೆಗಳಿಗೆ ಕಾರಣವೇನೋ ಎನಿಸುತ್ತದೆ. ಎಲ್ಲಿಯವರೆಗೆ ಜನಪದ ಸಾಹಿತ್ಯದ ಶಾಸ್ತ್ರಗಳು ಪ್ರತ್ಯೇಕವಾಗಿ ರೂಪಿತಗೊಂಡು, ಈ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನ ನಡೆಯುವುದಿಲ್ಲವೋ ಅಲ್ಲಿಯವರೆಗೆ ಜನಪದ ಸಾಹಿತ್ಯದ ಬಗೆಗೆ ಈ ಅನಾದರದ ಭಾವ ಮುಂದುವರೆಯುತ್ತದೆ. ಜನಪದ ಸಾಹಿತ್ಯದ ಗಂಭೀರವಾದ ಅಧ್ಯಯನ ನಡೆಯದ ಹೊರತು ಶಿಷ್ಟಸಾಹಿತ್ಯದ ವಿದ್ವಾಂಸರು ಈ ಕಡೆ ಗಮನ ಹರಿಸುವ ಯಾವ ಲಕ್ಷಣಗಳೂ ಕಾಣುವುದಿಲ್ಲ.

ಈಗ ನಡೆದಿರುವ ಶಾಸ್ತ್ರೀಯ ಅಧ್ಯಯನ:

ಜನಪದ ಸಾಹಿತ್ಯವನ್ನು ಕುರಿತು ಈಗ ನಡೆದಿರುವ ಶಾಸ್ತ್ರಗಳ ಶೋಧದ ಅಧ್ಯಯನ ತೀರ ಅತ್ಯಲ್ಪ. ಇಲ್ಲಿಯವರೆಗೆ ಜನಪದ ಸಾಹಿತ್ಯ ಸಂಸ್ಕೃತಿಗಳ ಸಂದರ್ಭಗಳಲ್ಲಿ ನಾವು ಅನುಸರಿಸಿದ್ದು ಕೇವಲ ಪಾಶ್ಚಾತ್ಯ ಮಾದರಿಗಳನ್ನು. ಅವು ನಮಗೆ ಅನುಕೂಲವಾಗಿರುವುದು ಕೇವಲ ಕ್ಷೇತ್ರಕಾರ್ಯ ಮತ್ತು ಆ ಮೂಲಕ ನಡೆಯುವ ಅಧ್ಯಯನಗಳಲ್ಲಿ. ಇಲ್ಲೂ ಕೂಡ ನಮ್ಮದೇ ಆದ ಪರಿಕಲ್ಪನೆಗಳನ್ನು ಕಂಡುಕೊಳ್ಳುವುದು ಅಗತ್ಯವಿದೆ.

ಛಂದಸ್ಸು:

ಛಂದಸ್ಸಿನ ವಿಷಯದಲ್ಲಿ ಸಂಸ್ಕೃತವೇ ಕನ್ನಡಕ್ಕೆ ಆಧಾರವಾದರೂ ಅಲ್ಲಿಂದ ತಪ್ಪಿಸಿಕೊಳ್ಳುವ ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ. ಅಕ್ಷರ ಗಣಗಳಿಂದ ಮಾತ್ರಾಗಣಕ್ಕೆ ತಿರುಗುವ ಪ್ರಯತ್ನ ಅಂತಹದು. ಅಂಶ ಗಣಗಳ ಬಗೆಗೆ ಅಲ್ಪಮಟ್ಟಿನ ಅಭ್ಯಾಸ ನಡೆದಿದೆ. ಅದರಲ್ಲೂ ಸಾಂಗತ್ಯ, ತ್ರಿಪದಿಗಳನ್ನು ಬಳಸುವಲ್ಲಿ ಈ ಪ್ರಯತ್ನ ಸ್ಪಷ್ಟವಾಗಿ ಕಾಣುತ್ತದೆ. ಈ ಎರಡೂ ಮೂಲಭೂತವಾಗಿ ಕನ್ನಡ ಮೌಖಿಕ ಪರಂಪರೆಗೆ ಸೇರಿದ ಛಂದೋಪ್ರಕಾರಗಳಾಗಿರುವುದು ನಮಗೆಲ್ಲ ತಿಳಿದ ವಿಷಯವೇ ಆಗಿದೆ. ಇವುಗಳನ್ನೊಳಗೊಂಡು ಉಳಿದಂತೆ ನಾಗವರ್ಮನು 'ಛಂದೋಂಬುಧಿ' ಗ್ರಂಥದಲ್ಲಿ ಕೆಲವು ಅಚ್ಚಗನ್ನಡ ವಿಷಯ ಜಾತಿಗಳನ್ನು ಹೆಸರಿಸುತ್ತಾನೆ. ಅವನು ಹೆಸರಿಸುವ ೧೦ ಛಂದೋಪ್ರಕಾರಗಳು-ಕನ್ನಡ ವಿಷಯ ಜಾತಿಗಳು ಹೀಗೆವೆ:

ಮದನವತಿಯಕ್ಕರಂ ಚೌ
ಪದಿ ಗೀತಿಕೆ ಯೇಳೆ ತಿವದಿಯುತ್ಸಾಹಂ ಷ
ಟ್ಪದಿಯಕ್ಕರಿಗೆ ಕರಂ ಚೆ
ಲ್ವೊದವಿದ ಛಂದೋವತಂಸಮಬ್ಜದಳಾಕ್ಷೀ (೫ನೆಂಯ ಅಧಿಕಾರ)

೧. ಏಳೆ, ೨. ತ್ರಿಪದಿ, ೩. ಅಕ್ಕರ, ೪. ಗೀತಿಕೆ, ೫. ಚೌಪದಿ, ೬. ಉತ್ಸಾಹ, ೭. ಷಟ್ಪದಿ, ೮. ಅಕ್ಕರಿಕೆ, ೯. ಮದನವತಿ, ೧೦. ಛಂದೋವತಂಸ. ನಾಗವರ್ಮನು ಇಷ್ಟು ಪ್ರಕಾರಗಳನ್ನು ಹೇಳಿದ ನಂತರ ಹೊಸಗನ್ನಡದ ಕಾಲಕ್ಕೆ ಡಿ.ಎಸ್.ಕರ್ಕಿ ಅವರು ತಮ್ಮ ಪ್ರಬಂಧದಲ್ಲಿ ಅಷ್ಟಿಷ್ಟು ಇವುಗಳ ಬಗ್ಗೆ ಆಲೋಚಿಸಿರುವುದನ್ನು ಬಿಟ್ಟರೆ ಮತ್ತೆ ವಿಶೇಷವಾಗಿ ಇವುಗಳ ಬಗ್ಗೆ ಹೆಚ್ಚಿನ ಅಭ್ಯಾಸ ನಡೆದಿಲ್ಲ.

ಇವುಗಳ ಬಗ್ಗೆ ಕನ್ನಡದ ಮೌಖಿಕ ಪರಂಪರೆಯಲ್ಲಿ ಹೆಚ್ಚಿನ ಶೋಧ ನಡೆಯಬೇಕಾಗಿರುವುದು ಅವಶ್ಯವಿದೆ. ಇವುಗಳಿಗೆ ತಕ್ಕ ಉದಾಹರಣೆಗಳು ಯಾವುವು ಎಂಬುದನ್ನು ಪತ್ತೆ ಹಚ್ಚುವ ಕೆಲಸ ನಡೆಯಬೇಕು. ಮತ್ತೆ ಕನ್ನಡದ ಮೌಖಿಕ ಪರಂಪರೆಯಲ್ಲಿ ದೊರೆಯುವ ಹಾಡುಗಳ ಛಂದೋಪ್ರಕಾರಗಳ ಅಧ್ಯಯನ ನಡೆಯಬೇಕು. ಅಂದಾಗ ನಾಗವರ್ಮನು ಹೇಳಿದ ಪ್ರಕಾರಗಳಿಗೂ ಹೆಚ್ಚಿನ ಕನ್ನಡದ ಅನೇಕ ಛಂದೋಪ್ರಕಾರಗಳು ನಮಗೆ ದೊರೆಯುವ ಸಾಧ್ಯತೆ ಇದೆ. ಈ ಬಗೆಯ ಅಭ್ಯಾಸ ನಡೆದಾಗ ಮಾತ್ರ ಮೌಖಿಕ ಪರಂಪರೆಯ ಸಾಹಿತ್ಯದ ಅಭ್ಯಾಸ ಕನ್ನಡಕ್ಕೆ ಅನಿವಾರ್ಯವಾಗುತ್ತದೆ. ಶಿಷ್ಟಸಾಹಿತ್ಯದ ಹಿರಿಯರು ಕನ್ನಡ ಮೌಖಿಕ ಸಾಹಿತ್ಯದ ಬಗ್ಗೆಯೂ ಆದರ ತೋರುವಂತಾಗುತ್ತದೆ.

ಸಂಪಾದನಾಶಾಸ್ತ್ರ:

ಶಿಷ್ಟಸಾಹಿತ್ಯಕ್ಕೆ ಗ್ರಂಥಸಂಪಾದನಾಶಾಸ್ತ್ರ ಇರುವಂತೆ ಮೌಖಿಕ ಕಾವ್ಯ ಮತ್ತು ಉಳಿದ ಪ್ರಕಾರಗಳ ಸಂಪಾದನೆಗೆ ಮಾರ್ಗ ಏನು ಎಂಬುದರ ಬಗ್ಗೆ ನಾವು ಗಂಭೀರವಾಗಿ ಚರ್ಚೆಮಾಡಿಲ್ಲವೆಂದೇ ಎನಿಸುತ್ತದೆ. ಮಹಾಕಾವ್ಯಗಳ ಸಂಪಾದನೆಯಲ್ಲಿ ಡಾ। ಜೀಶಂಪ ಅವರು ಹಾಕಿಕೊಟ್ಟ ಮಾರ್ಗವನ್ನು ನಾವು ಅನುಸರಿಸುವುದು ಈಗ ಸೂಕ್ತವೆಂಬ ನಿರ್ಧಾರಕ್ಕೆ

ಬಂದಿದ್ದೇವೆ. ಅಂದರೆ ಒಬ್ಬನು ಹಾಡಿದ ಒಂದು ಪಠ್ಯವನ್ನು ಪ್ರತ್ಯೇಕವಾಗಿ ಪ್ರಕಟಮಾಡುವುದು ವೈಜ್ಞಾನಿಕ ಕ್ರಮವೆಂದು ನಾವೀಗ ಭಾವಿಸಿದ್ದೇವೆ. ಇದು ಪಾಶ್ಚಾತ್ಯರಲ್ಲೂ ಒಪ್ಪಿತವಾದ ಸಂಗತಿಯೇ ಆಗಿದೆ. ಆದರೆ ಕನ್ನಡದಲ್ಲಿ ಅನೇಕ ಮಹಾಕಾವ್ಯಗಳನ್ನು ಪ್ರಕಟಿಸಿದ ಡಾ॥ ಪಿ. ಕೆ. ರಾಜಶೇಖರ ಅವರು ಮಲೆಯಮಾದೇಶ್ವರ ಮಹಾಕಾವ್ಯವನ್ನು ಸಂಪಾದಿಸುವ ಕಾಲಕ್ಕೆ ಅನೇಕ ಸಂಪ್ರದಾಯಗಳಿಗೆ ಸೇರಿದ ಪಠ್ಯಗಳನ್ನು ಒಂದೆಡೆ ಸೇರಿಸಿದ್ದಾರೆ ಎಂದು ತಿಳಿದುಬರುತ್ತದೆ. ಈ ಕ್ರಮವನ್ನು ಅನೇಕರು ಟೀಕಿಸುವುದನ್ನು ನಾನು ಓದಿದ್ದೇನೆ, ಕೇಳಿದ್ದೇನೆ. ಆದರೆ ಟೀಕೆ ಮತ್ತು ಅಲ್ಲಗಳೆಯುವ ಕ್ರಮಕ್ಕಿಂತ ಹಾಗೆ ಮಾಡಿರುವುದರಿಂದ ಪಠ್ಯದ ಗತಿ ಏನಾಗಿದೆ? ಅದರಿಂದ ಆಗುವ ಹಾನಿಗಳೇನು? ತಪ್ಪುಗಳೇನು? ಎಂದು ನಾವು ಇವತ್ತಿಗೂ ಚರ್ಚೆ ಮಾಡಿಲ್ಲ. ಏಕೆ ಹೀಗೆ ಎಂಬುದನ್ನು ನಾವಿಂದು ಚಿಂತಿಸಬೇಕಾಗಿದೆ ಮತ್ತು ಉತ್ತಮ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ.

ಸಂಗ್ರಹ ಮತ್ತು ದಾಖಲೀಕರಣ ಪಾಶ್ಚಾತ್ಯರ ಅನುಕರಣೆ ಸರಿಯೇ? ಸಾಧುವೇ?:

ನಾವಿಂದು ಮೌಖಿಕ ಪರಂಪರೆಯಲ್ಲಿ ಸಂಪಾದನೆಯ ಪದ್ಧತಿಯುನ್ನು ಅನುಸರಿಸುತ್ತಿರುವುದು ಪಾಶ್ಚಾತ್ಯರ ಕ್ರಮವನ್ನು. ಇದು ಎಷ್ಟರಮಟ್ಟಿಗೆ ಸರಿ ಎಂಬ ಬಗ್ಗೆಯೂ ನಾವು ವಿಚಾರ ಮಾಡಬೇಕಾಗಿದೆ. ಸಂಶೋಧನೆಗೆ ಸಂಬಂಧಪಟ್ಟಂತೆ ಕ್ಷೇತ್ರಕಾರ್ಯದ ನಿಯಮಗಳಾಗಿ ಪಾಶ್ಚಾತ್ಯ ಗ್ರಹಿಕೆಗಳನ್ನೇ ಅನುಸರಿಸುತಿದ್ದೇವೆ. ಅವರು ಪ್ರದರ್ಶನ ಸಿದ್ಧಾಂತ ಮತ್ತು ಸಂದರ್ಭ ಸಿದ್ಧಾಂತಗಳಲ್ಲಿ ಸೂಚಿಸುವುದು, ದಾಖಲೀಕರಣಕ್ಕಾಗಿ ಅನೇಕ ಜನರನ್ನು ಒಂದೇ ವೇಳೆಗೆ ಬಳಸಿಕೊಳ್ಳಬೇಕು ಎಂದು. ಜೊತೆಗೆ ಅನೇಕ ಕ್ಯಾಮರಾಗಳು, ವಿಡಿಯೋ ಕ್ಯಾಮರಾಗಳು, ಟೇಪ ರಿಕಾರ್ಡರ್‌ಗಳು ಮತ್ತೆ ಹೀಗೆ ಅನೇಕ ಮಷಿನರಿಗಳನ್ನು ಬಳಸಿಕೊಂಡು ದಾಖಲೀಕರಣ ನಡೆಯಬೇಕು ಎಂದು ಒತ್ತಾಯಿಸುತ್ತಾರೆ. ಇವೆಲ್ಲ ನಡೆಯಬೇಕಾದುದು ನಮ್ಮಲ್ಲಿಯ ಸಂಸ್ಥೆಗಳಿಂದಲೇ ಹೊರತಾಗಿ ವ್ಯಕ್ತಿಗಳಿಂದ ಸಾಧ್ಯವಿಲ್ಲ. ಭಾರತೀಯ ಸಂಶೋಧಕರಿಗೆ ವೈಯಕ್ತಿಕವಾಗಿ ಅಷ್ಟೊಂದು ಮಷಿನರಿಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ. ಅವರ ಆರ್ಥಿಕ ಸ್ಥಿತಿ ಅಷ್ಟೊಂದು ಉತ್ತಮವಾಗಿಲ್ಲ. ಅದಕ್ಕಾಗಿ ಭಾರತೀಯ ಸಂದರ್ಭದಲ್ಲಿ ನಮಗೆ ಯಾವ ಬಗೆಯ ಸಂಗ್ರಹಕಾರ್ಯ ಮಾಡಲು ಸಾಧ್ಯ, ಯಾವ ಬಗೆಯಲ್ಲಿ ದಾಖಲೀಕರಣ ಮಾಡಲು ಸಾಧ್ಯ? ಆ ಬಗೆಯಲ್ಲಿ ನಡೆಯುವಂತೆ ನಮ್ಮ ಶಾಸ್ತ್ರೀಯ ಚಿಂತನೆಗಳನ್ನು ರೂಪಿಸಿಕೊಳ್ಳುವುದು ಅನಿವಾರ್ಯ.

ಸಂಗ್ರಹ ಮತ್ತು ಸಂಪಾದನೆಗಳು ಹಿಂದೆ ಬಿದ್ದಿವೆ:

ನಾವು ನಮ್ಮಲ್ಲಿಯ ಸಂಗ್ರಾಹಕರನ್ನು ಕೇವಲ ಸಂಗ್ರಾಹಕರೆಂದು ಹೀಯಾಳಿಸುತ್ತಿದ್ದೇವೆ. ಇದರಿಂದ ನಮ್ಮಲ್ಲಿ ಸಂಗ್ರಹಗಳು ಕಡಿಮೆಯಾಗಿವೆ. ಸಂಗ್ರಹ ಮತ್ತು ಸಂಪಾದನೆಗಳು ಸಂಶೋಧನೆಯ ಬಹುಮುಖ್ಯ ಧಾರೆಗಳೇ ಆಗಿದ್ದು, ಅವು ಆಯಾ ಸಂಗ್ರಾಹಕ ಮತ್ತು ಸಂಪಾದಕನ ಸಾಮರ್ಥ್ಯವನ್ನು ತೋರಿಸುತ್ತವೆ. ಆ ಸಾಮರ್ಥ್ಯವನ್ನು ಗುರುತಿಸುವ ಕೆಲಸ ನಮ್ಮಲ್ಲಿ ನಡೆಯಬೇಕು. ಅದು ಬಿಟ್ಟು ಕೇವಲ ಪಾಶ್ಚಾತ್ಯರ ಸಿದ್ಧಾಂತಗಳನ್ನು ಉರು ಹೊಡೆಯುವ ಜನರಿಗೆ, ಕ್ಷೇತ್ರದ ಸಂಪರ್ಕವೇ ಇಲ್ಲದ ಅನೇಕರಿಗೆ ನಾವು ಅನಾವಶ್ಯಕ

ಮಣೆ ಹಾಕುತ್ತಿದ್ದೇವೆ. ಇದರಿಂದ ನಿಜವಾದ ಪರಿಶ್ರಮ ಪಡುವ ವಿದ್ವಾಂಸರು ತಮ್ಮ ಕೆಲಸಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಹೀಗಾಗಿ ನಮ್ಮಲ್ಲಿ ಉತ್ತಮ ಸಂಗ್ರಹಗಳು ಬರುತ್ತಿಲ್ಲ. ಈ ಬಗ್ಗೆ ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ.

ವಿಮರ್ಶೆ ಮತ್ತು ಕಾವ್ಯಮೀಮಾಂಸೆ:

ಒಂದು ಸಾಹಿತ್ಯ ಕ್ಷೇತ್ರ ಬೆಳೆಯಲು ಮತ್ತು ಅದರ ಶಕ್ತಿ ಏನು ಎಂದು ತಿಳಿಯಲು ವಿಮರ್ಶೆ ಮತ್ತು ಕಾವ್ಯಮೀಮಾಂಸೆ ಕ್ಷೇತ್ರಗಳಲ್ಲಿ ಬೆಳವಣಿಗೆ ಆಗಬೇಕು. ನಾನು ಈ ಕ್ಷೇತ್ರದಲ್ಲಿ ಸ್ವಲ್ಪ ಕೆಲಸ ಮಾಡಿರುವುದರಿಂದ ಇಲ್ಲಿಯ ಕೆಲ ಅನುಭವಗಳನ್ನು ಹೇಳಬೇಕೆನಿಸುತ್ತದೆ.

ನಾನು ಮೊದಲಿಗೆ 'ಜನಪದ ಕಾವ್ಯಮೀಮಾಂಸೆ' ಎಂಬ ಹೆಸರಿನಲ್ಲಿ ಒಂದು ಸಣ್ಣ ಕೃತಿ ಬರೆದುದು ೧೯೮೨ರಲ್ಲಿ. ಅಲ್ಲಿಂದ ನಿರಂತರವಾಗಿ ಈ ಶಾಸ್ತ್ರದ ಬೆಳವಣಿಗೆಯನ್ನು ಮುಂದುವರೆಸುತ್ತಲೇ ಬಂದಿದ್ದೇನೆ. ಆದರೆ ಜನಪದ ಕ್ಷೇತ್ರದ ವಿದ್ವಾಂಸರು ಈ ಬೆಳವಣಿಗೆಯನ್ನು ಸ್ವೀಕರಿಸಿದ ಬಗ್ಗೆ ನಾನಿಲ್ಲಿ ಹೇಳಲು ನಿಜವಾಗಿಯೂ ಹಿಂಜರಿಯುತ್ತೇನೆ. ಐವತ್ತು ಪುಟಗಳ ಒಂದು ಲೇಖನದ ರೂಪದಲ್ಲಿ ಇದ್ದ ಬರವಣಿಗೆ ಬೆಳೆದು ಒಂದು ಶಾಸ್ತ್ರರೂಪಕ್ಕೆ ಬಂದು ನಿಲ್ಲಲು ೨೨ ವರ್ಷಗಳೇ ಬೇಕಾದವು. ನಾವು ಒಬ್ಬೊಬ್ಬರು ಒಂದೊಂದರಲ್ಲಿ ಆಸಕ್ತಿ ಉಳ್ಳವರು ಒಂದೊಂದು ಕ್ಷೇತ್ರವನ್ನು ಆರಿಸಿಕೊಂಡು ಕೆಲಸ ಮಾಡಲು ಪ್ರಾರಂಭ ಮಾಡಿದರೆ, ಮತ್ತೆ ಕನಿಷ್ಠ ೧೦ ವರ್ಷಗಳಾದರೂ ಬೇಕಾಗಬಹುದು, ಕನ್ನಡದ ಇತರ ವಿದ್ವಾಂಸರು ಇಲ್ಲಿಯ ಬೆಳವಣಿಗೆಗಳನ್ನು ಗಮನಿಸಲು. ಅಂತಹ ಪ್ರಯತ್ನವನ್ನು ನಾವು ಮಾಡಬೇಕಾಗಿದೆ.

ಜನಪದ ಕತೆಗಳನ್ನು, ಹಾಡುಗಳನ್ನು, ಆಟದ ಕೃತಿಗಳನ್ನು ನಾವು ಎಷ್ಟರಮಟ್ಟಿಗೆ ವಿಮರ್ಶೆಗೆ ಒಳಮಾಡುತ್ತಿದ್ದೇವೆ? ಅಲ್ಲಿ ಅನುಸರಿಸುವ ಕ್ರಮಗಳೇನು? ಆ ಬಗೆಗೆ ನಾವು ಎಚ್ಚರವಹಿಸಿಲ್ಲ ಎನ್ನುವುದೇ ನನ್ನ ಭಾವನೆ. ಈ ಬಗೆಯ ನಿರ್ಲಕ್ಷ, ಅನಾದರಗಳೇ ಮುಂದುವರೆದರೆ ಈ ಸಾಹಿತ್ಯದ ಅಭ್ಯಾಸ ಮತ್ತೆ ಕುಂಠಿತವಾಗುವುದು ಸಹಜ. ಅದಕ್ಕಾಗಿ ನಾವು ನಮ್ಮ ಮನಸ್ಸುಗಳನ್ನು ಸ್ವಲ್ಪ ವಿಶಾಲಮಾಡಿಕೊಳ್ಳುವುದು ಅವಶ್ಯವೆನಿಸುತ್ತದೆ.

ಕರ್ನಾಟಕ ಜಾನಪದಶಾಸ್ತ್ರ ಅಧ್ಯಯನ : ಒಂದು ಮುನ್ನೋಟ :

ಕರ್ನಾಟಕದಲ್ಲಿ ಜಾನಪದ ಸಾಹಿತ್ಯದ ಅಭ್ಯಾಸ ಅಧಿಕೃತವಾಗಿ ೧೯೬೭ರಲ್ಲಿ ಪ್ರಾರಂಭವಾಯಿತೆಂದು ಇಟ್ಟುಕೊಂಡರೂ ಜಾನಪದಶಾಸ್ತ್ರ ಅಭ್ಯಾಸ ಪ್ರಾರಂಭವಾಗಿ ಈಗ ಐವತ್ತು ವರ್ಷಗಳ ಸಮೀಪಕ್ಕೆ ಬಂದಿದ್ದೇವೆ. **'ಹೊನ್ನಬಿತ್ತೇವು ಹೊಲಕೆಲ್ಲ'** (೧೯೬೭) ಎಂಬ ಗ್ರಂಥದಿಂದ ಮೊದಲ್ಗೊಂಡು ೨೦೦೩ರವರೆಗೆ ಪ್ರಕಟವಾದ ಪ್ರಮುಖ ಜಾನಪದಶಾಸ್ತ್ರ ತಜ್ಞರ ಕೃತಿಗಳನ್ನು ಗಮನಿಸಿದರೆ– ಅಲ್ಲೆಲ್ಲ ನಮಗೆ ಕಂಡುಬರುವ ಸಾಮಾನ್ಯ ಚಿಂತನೆಗಳೆಂದರೆ ಪ್ರಮುಖವಾಗಿ ಮೂರು:

೧. ಕೈ ತಪ್ಪಿ ಹೋಗುತ್ತಿರುವ ಜಾನಪದ ಸಂಗತಿಗಳ ರಕ್ಷಣೆ ಆಗುವುದು ಹೇಗೆ?
೨. ಜಾನಪದ ಸಂಗತಿಗಳ ಸಂಗ್ರಹ ಹೇಗಾಗಬೇಕು?

೩. ಜಾನಪದಶಾಸ್ತ್ರ ಅಧ್ಯಯನದಲ್ಲಿ ಪಾಶ್ಚಾತ್ಯರ ಸಿದ್ಧಾಂತಗಳ ಅಭ್ಯಾಸದ ಅವಶ್ಯಕತೆ.

೪. ದೇಸಿ ದೃಷ್ಟಿಯಿಂದ ಜಾನಪದ ಸಂಗತಿಗಳ ಅಭ್ಯಾಸದ ಅವಶ್ಯಕತೆ.

ಇಂತಹ ಕಾಳಜಿಗಳು ಯಾವುದೇ ಶಿಸ್ತಿನ ಅಧ್ಯಯನದ ಪ್ರಾರಂಭದಲ್ಲಿ ಕಾಣಿಸಿಕೊಳ್ಳು ವುದು ಸಹಜ. ಆದರೆ ಐವತ್ತು ವರ್ಷಗಳಷ್ಟು ಸುದೀರ್ಘ ಕಾಲಾವಧಿಯಲ್ಲಿ ನಿರಂತರವಾಗಿ ಈ ಚಿಂತನೆಗಳು ಮುಂದುವರೆದುಕೊಂಡು ಬಂದಿರುವುದು ಜಾನಪದಶಾಸ್ತ್ರದ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಈ ದೃಷ್ಟಿಯಿಂದ ಜಾನಪದಶಾಸ್ತ್ರದ ಚಿಂತನೆ ಜೀವಂತವಾಗಿರುವುದು ಗಮನಿಸಬೇಕಾದ ಮಾತು.

ಕಾಲ ಬದಲಾದಂತೆ ಬದುಕಿನ ರೀತಿಗಳು ಬದಲಾಗುವುದು ಸಹಜ. ಹೀಗಾಗುವಾಗ ಅನೇಕ ಜಾನಪದ ಸಂಗತಿಗಳು ಬಳಕೆಯಿಂದ ತಪ್ಪಿಹೋಗುವುದು ಸಹಜ. ಎದ್ದುಕಾಣುವ ಸಂಗತಿಗಳೆಂದರೆ– ಜನಪದ ಕಲೆಗಳು ಮತ್ತು ಹಾಡಿನ ಪ್ರಕಾರಗಳು ತೀವ್ರವಾಗಿ ತಪ್ಪಿಹೋಗು ತ್ತಿರುವುದು. ನಮ್ಮಲ್ಲಿ 'ಜಾನಪದಶಾಸ್ತ್ರ'ದ (Folklore) ಅರಿವು ಮೂಡಿದಾಗಿನಿಂದ – ಕಳೆದುಹೋಗುತ್ತಿರುವ ಜನಪದ ಸಾಮಗ್ರಿಗಳ ಬಗ್ಗೆ ನಮ್ಮ ಹಿರಿಯರಿಂದ ಆತಂಕ ವ್ಯಕ್ತವಾಗುತ್ತಲೇ ಬಂದಿದೆ. ಅವುಗಳನ್ನು ಯಾವ ಬಗೆಯಲ್ಲಿ ಉಳಿಸಿಕೊಳ್ಳಲು ಸಾಧ್ಯವೋ ಹಾಗೆ ಉಳಿಸಿಕೊಳ್ಳಲು ತವಕ ವ್ಯಕ್ತವಾದುದನ್ನೂ ನಾವು ಕಾಣುತ್ತೇವೆ. ಅಂತಹ ಕಾಳಜಿಗಳನ್ನು ವ್ಯಕ್ತಪಡಿಸುತ್ತಲೇ ಬಂದ ಎಚ್.ಎಲ್.ನಾಗೇಗೌಡ ಅವರಿಂದ 'ಜಾನಪದ ಲೋಕ', ಮೈಸೂರು ವಿಶ್ವವಿದ್ಯಾಲಯದಲ್ಲಿ 'ಜನಪದ ವಸ್ತು ಸಂಗ್ರಹಾಲಯ', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಇವುಗಳ ಮುಂದುವರಿಕೆಯಾಗಿ ಹರಿದಾಸ ಭಟ್ಟ ಅವರ 'ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ' ಇವೆಲ್ಲ ಅಸ್ತಿತ್ವಕ್ಕೆ ಬಂದಿವೆ.

ಜಾನಪದಶಾಸ್ತ್ರದ (Folklore) ಅಭ್ಯಾಸದ ಬಗ್ಗೆ ಕಾಳಜಿ ವ್ಯಕ್ತಪಡಿಸಿದ ಮತ್ತು ಪಾಶ್ಚಾತ್ಯ ವಿಚಾರಧಾರೆಗಳಿಗೆ ಒಲಿದ ಯುವ ಜನಾಂಗ ೧೯೯೦ರ ವೇಳೆಗೆ ಮತ್ತು ನಂತರ ನಿರಂತರವಾಗಿ ಮುಂದೆ, ಈ ಹಳೆಯ ಜನಗಳ ಕಾಳಜಿಗಳನ್ನು ಹಗುರವಾಗಿ ಗ್ರಹಿಸಿ, ಲೇವಡಿ ಮಾಡಿ –'ಜಾನಪದ ಜೀವನ ಸಾಯುವಂಥದಲ್ಲ, ಅದು ನಿರಂತರ ಬದಲಾಗುತ್ತ ಹೋಗುತ್ತದೆ, ಅದಕ್ಕಾಗಿ ಜಾನಪದ ಸಾಮಗ್ರಿಯನ್ನು ಹರಿಬರಿಯಿಂದ ಸಂಗ್ರಹ ಮಾಡುವುದು, ಪ್ರಕಟಿಸುವುದು ಸರಿಯಲ್ಲ. ಅದರ ದಾಖಲಾತಿ ವೈಜ್ಞಾನಿಕವಾಗಿ ನಡೆಯಬೇಕು' ಎಂದು ಹೇಳಲು ಪ್ರಾರಂಭಿಸಿದರು. ಇದು ಪಾಶ್ಚಾತ್ಯರ ಚಿಂತನೆಗಳ ಫಲ ಎಂಬುದು ಸ್ಪಷ್ಟವಾಗಿಯೇ ಇದೆ.

ಮೂಲಭೂತವಾಗಿ ಈ ಎರಡೂ ತಲೆಮಾರಿನ ದೃಷ್ಟಿಗಳೇ ಭಿನ್ನವಾಗಿದ್ದವು ಎಂಬುದನ್ನು ನಾವು ಲಕ್ಷಿಸಬೇಕಾಗುತ್ತದೆ:

೧. ಹಿರಿಯರ ದೃಷ್ಟಿ ಜಾನಪದ ಸಾಮಗ್ರಿಗಳತ್ತ (Folk material).

೨. ಆಧುನಿಕರ ದೃಷ್ಟಿ ಜಾನಪದಶಾಸ್ತ್ರ (Folklore) ಅಧ್ಯಯನದತ್ತ.

ಆಧುನಿಕರ ದೃಷ್ಟಿಯಲ್ಲಿ 'ಜಾನಪದಶಾಸ್ತ್ರ'ದ ಅಧ್ಯಯನ ಪ್ರಮುಖವಾದ್ದು. ಜಾನಪದ ಸಾಮಗ್ರಿಯನ್ನು (Folk material) ಹೇಗೆ ಸಂಗ್ರಹಿಸಿದರೆ ತಮ್ಮ ಅಭ್ಯಾಸಕ್ಕೆ ಯೋಗ್ಯ ಎಂಬ ದೃಷ್ಟಿ ಉಳ್ಳವರು ಆಧುನಿಕರು. ಈ ಭಿನ್ನ ಧೋರಣೆಗಳಿಂದ ಕರ್ನಾಟಕ ಜಾನಪದಶಾಸ್ತ್ರ

ಕ್ಷೇತ್ರದಲ್ಲಿ ಪ್ರಯೋಜನವೇ ಆಗಿದೆ. ಹಳಬರಿಂದ ಸಂಗ್ರಹಗಳು, ವಸ್ತುಸಂಗ್ರಹಾಲಯಗಳು, ದಾಖಲಾತಿ ಕೇಂದ್ರಗಳು ಅಸ್ತಿತ್ವಕ್ಕೆ ಬಂದಿವೆ. ಹೊಸಬರಿಂದ ಜಾನಪದಶಾಸ್ತ್ರದಲ್ಲಿ ವಿಭಿನ್ನ ದೃಷ್ಟಿಯ ಅಭ್ಯಾಸಗಳು ನಡೆದಿವೆ.

ಅಧುನಿಕರ ದೃಷ್ಟಿ ಬದಲಾವಣೆಯಿಂದ ನಮಗೆ ಎರಡು ಲಾಭಗಳಾಗಿವೆ:

೧. ಕರ್ನಾಟಕದ ಸಂಸ್ಕೃತಿಯ ಅಧ್ಯಯನ ಮತ್ತು ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಭಾರೀ ಬದಲಾವಣೆಗಳಾಗಿವೆ. ಮಹತ್ವದ ಅಭ್ಯಾಸಗಳು ನಡೆದಿವೆ.

೨. ಜಾನಪದಶಾಸ್ತ್ರದ ಅಧ್ಯಯನಕಾರರ ದೃಷ್ಟಿ ಬದಲಾವಣೆಯಿಂದಾದ ಅಡ್ಡ ಪರಿಣಾಮವೆಂದರೆ–ನಮ್ಮಲ್ಲಿಯ ಸಾಂಪ್ರದಾಯಿಕ ಜಾನಪದ ಸಂಗತಿಗಳ ಸಂಗ್ರಹ ಮತ್ತು ಪ್ರಕಟಣೆಗಳಲ್ಲಿ ಗಮನಾರ್ಹವಾದ ಹಿನ್ನಡೆ ಕಂಡು ಬಂದುದು.

ನಾವಿಲ್ಲಿ ನಿಂತು ಸ್ವಲ್ಪ ಆಲೋಚಿಸಬಹುದಾಗಿದೆ. ಸಂಗ್ರಹ ಮತ್ತು ಅಭ್ಯಾಸಗಳು ಎರಡು ಭಿನ್ನ ಕೆಲಸಗಳು. ಸಂಗ್ರಹ ಒಂದು ಸಂಗತಿಯ ಪ್ರಾಥಮಿಕ ಅಭ್ಯಾಸದ ರೀತಿಯೂ ಹೌದು. ಸಂಗ್ರಹಗಳು ಸಾಮಾನ್ಯದಿಂದ ಶಾಸ್ತ್ರೀಯವರೆಗೆ ಹಲವಾರು ಪ್ರಕಾರಗಳಲ್ಲಿರುತ್ತವೆ. ಅದು ಆಯಾ ಸಂಗ್ರಾಹಕನ ಸಾಮರ್ಥ್ಯವನ್ನು, ಜ್ಞಾನವನ್ನು ಅವಲಂಬಿಸಿರುತ್ತದೆ.

ಜೊತೆಗೆ ಅಭ್ಯಾಸಗಳಲ್ಲೂ ಹೀಗೇ ಇದೆ. ಸಾಮಾನ್ಯ ಅಭ್ಯಾಸದಿಂದ ಶಾಸ್ತ್ರೀಯ ಅಭ್ಯಾಸದವರೆಗೆ. ಕೆಲವರಿಗೆ ಸಂಗ್ರಹ ಮಾಡಲು ಸಾಧ್ಯ, ಅಲ್ಲಿಯೇ ಅವರ ವೈಜ್ಞಾನಿಕ ಸಾಮರ್ಥ್ಯವೆಲ್ಲ ವ್ಯಕ್ತವಾಗಿರುತ್ತದೆ. ಒಂದು ದೃಷ್ಟಿಯಿಂದ ಅವರು ಒದಗಿಸಿದ ಪಠ್ಯಗಳು ಗಮನಾರ್ಹವಾಗಿರುತ್ತವೆ. ತಮ್ಮ ಅವರ ಅಭ್ಯಾಸಗಳ ಫಲವನ್ನು ಪ್ರಸ್ತಾವನೆಯಲ್ಲಿ ದಾಖಲಿಸಲು ಅವರು ಪ್ರಯತ್ನಿಸಿರುತ್ತಾರೆ. ಮುದೇನೂರ ಸಂಗಣ್ಣ , ಕರಾಕೃ, ಗದ್ದಗಿಮಠ, ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ ಮುಂತಾದವರ ಸಂಗ್ರಹಗಳನ್ನು ನಾವಿಲ್ಲಿ ಗಮನಿಸಬಹದಾಗಿದೆ. ಹಾಗೆಯೇ ಕೆಲವರ ಆಸಕ್ತಿ ಕೇವಲ– ಅಭ್ಯಾಸದ ಮಟ್ಟಕ್ಕೇ ನಿಲ್ಲಬಹುದಾಗಿದೆ. ಇಂಥವರಿಗೆ ಕ್ಷೇತ್ರಕಾರ್ಯಕ್ಕೆ ಹೋಗಲು ಸಾಧ್ಯವಾಗುವುದಿಲ್ಲ.

ಆದುದರಿಂದ ವೈಜ್ಞಾನಿಕವಾದ ದಾಖಲಾತಿ ಮತ್ತು ವೈಜ್ಞಾನಿಕವಾದ ಅಭ್ಯಾಸ ಇವೆರಡರ ಕಡೆ ಹೆಚ್ಚು ಲಕ್ಷಕೊಡುವವರು–ಮಾಡಬೇಕಾದ ಕೆಲಸಗಳು ಎರಡು:

೧. ತಮಗೆ ಮುಖ್ಯವೆನಿಸುವ ಸಂಗ್ರಹಗಳನ್ನು ಗಮನಿಸಬೇಕು.

೨. ತಮ್ಮ ಅಭ್ಯಾಸಕ್ಕೆ ಅನುಕೂಲವಾದ ರೀತಿಯಲ್ಲಿ ತಾವೇ ತಮಗೆ ಬೇಕಾದ ಪಠ್ಯ/ಮಾಹಿತಿಗಳ ಸಂಗ್ರಹ ಮಾಡಿಕೊಳ್ಳಬೇಕು.

ಆಧುನಿಕ ಜಾನಪದಶಾಸ್ತ್ರಜ್ಞರು– ಸಂಗ್ರಹದಲ್ಲಿ ತೊಡಗುವ ಜನಪದ ಸಂಸ್ಕೃತಿ ಪ್ರಿಯರನ್ನು ಅನಾವಶ್ಯಕವಾಗಿ ಟೀಕೆ ಮಾಡುವುದನ್ನು ಬಿಟ್ಟುಬಿಡುವುದು ಉತ್ತಮವೆಂದು ತೋರುತ್ತದೆ. ಪಾಶ್ಚಾತ್ಯರ ದಾಖಲೀಕರಣದ ಬಗ್ಗೆ ನನ್ನದೇ ಆದ ಒಂದು ವೈಯಕ್ತಿಕವಾದ ಅಭಿಪ್ರಾಯವಿದೆ, ಅದನ್ನು ಪುನಃ ಇಲ್ಲಿ ಉಚ್ಚರಿಸುವುದು ಅವಶ್ಯವೆಂದು ತೋರುತ್ತಿದೆ. ಅವರ ಸಾಂದರ್ಭಿಕ ಮತ್ತು ಪ್ರದರ್ಶನ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮತ್ತು ಬೃಹತ್ ಪಠ್ಯದ ಕಲ್ಪನೆಯ ಹಿನ್ನೆಲೆಯಲ್ಲಿ, ಒಟ್ಟಾರೆ ಭಾರತೀಯ ಸಂದರ್ಭದಲ್ಲಿ, ನಮ್ಮ ಆರ್ಥಿಕ ಹಿನ್ನೆಲೆಯನ್ನು ಗಮನಿಸಿ ಹೇಳುವುದಾದರೆ, ವೈಯಕ್ತಿಕವಾಗಿ ಆ ದೃಷ್ಟಿಯ ದಾಖಲೀಕರಣ

ತುಂಬಾ ದುಬಾರಿಯದು ಎನಿಸುತ್ತದೆ. ಬಹುಶಃ ಯಾವ ಹೊರದೇಶದ ವಿದ್ವಾಂಸನೂ ವೈಯುಕ್ತಿಕವಾಗಿ ಅಷ್ಟೊಂದು ಖರ್ಚು ಮಾಡಿಕೊಂಡು ದಾಖಲೀಕರಣ ಮಾಡಲಾರನೆಂಬುದೇ ನನ್ನ ನಂಬುಗೆ. ಅದೇನಿದ್ದರೂ ಬೃಹತ್ ಯೋಜನೆಗಳಲ್ಲಿ ಅಥವಾ ಸಂಸ್ಥೆಗಗಳಲ್ಲಿ ನಡೆಯಬೇಕಾದ ಕೆಲಸ ಅದು. ಅದಕ್ಕಾಗಿ ಭಾರತೀಯ ಸಂದರ್ಭದಲ್ಲಿ ಒಬ್ಬನಿಗೆ ಸಾಧ್ಯವಾದಂತೆ ಜನಪದ ಸಂಗತಿಗಳ ಸಂಗ್ರಹ, ದಾಖಲೀಕರಣ ನಡೆಸಲು ನಾವು ಪ್ರೋತ್ಸಾಹ ಮಾಡಬೇಕಾದುದು ಅವಶ್ಯವಿದೆ. ಸಂಗ್ರಹಕಾರರ ಶ್ರಮ ಮತ್ತು ಅವರ ಜ್ಞಾನವನ್ನು ಗೌರವಿಸುವ ಮನಸ್ಸನ್ನು ವಿದ್ವಾಂಸರು ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ.

ಚಿತ್ರಕಲಾ ಜಗತ್ತಿನಲ್ಲಿ ಉಪಯೋಗಿ ಕಲೆ ಮತ್ತು ಲಲಿತಕಲೆಗಳೆಂಬ ಎರಡು ಪ್ರಕಾರಗಳನ್ನು ಮಾಡಿಕೊಳ್ಳಲಾಗುತ್ತದೆ. ಈ ಆಧಾರದ ಮೇಲೆಯೇ 'ಕಲೆಗಾಗಿ ಕಲೆ ಮತ್ತು ಜೀವನಕ್ಕಾಗಿ ಕಲೆ' ಎಂಬ ಚರ್ಚೆ ಬೆಳೆದುಬಂದುದೆಂದು ತೋರುತ್ತದೆ. ಉಪಯೋಗಿ ಕಲೆಗಳೆಲ್ಲ ದೇಸೀ ಕಲೆಯ ದೃಷ್ಟಿ ಹೊಂದಿದವುಗಳಾಗಿವೆ, ಇಲ್ಲವೆ ದೇಸೀ ಕಲೆಗಳೇ ಆಗಿವೆ. ಅಂದರೆ ಇವೆಲ್ಲ ಸ್ಥಳೀಯ ಸಂಸ್ಕೃತಿಯಲ್ಲಿ ಹುಟ್ಟಿ ಅಲ್ಲೇ ಬಳಕೆಯಾಗುತ್ತ, ಆ ಸಂಸ್ಕೃತಿಯನ್ನು ಬೆಳೆಸುವ ಮಹತ್ವದ ಕೆಲಸವನ್ನು ಮಾಡುತ್ತವೆ. ಹೀಗಿದ್ದೂ ಚಿತ್ರ ಶಿಲ್ಪ ಮತ್ತು ವಾಸ್ತುಶಿಲ್ಪ ಈ ಮೂರೂ ಕಲೆಗಳು ಒಟ್ಟುಗೂಡಿ ಗಣಿಸುವ ಚಿತ್ರಕಲಾ ಕ್ಷೇತ್ರದಲ್ಲಿ ಈ ದೇಸೀ ಕಲೆಗಳ ಬಗೆಗೆ ಸಾಕಷ್ಟು ಆದರ, ಯೋಗ್ಯ ಸ್ಥಾನಮಾನ ಇವೆಲ್ಲ ಇವೆ. ದೇಸೀ ಕಲೆಗಳು ಕಟ್ಟಿಕೊಡುವ ಸಂಸ್ಕೃತಿಯ ಚಾರಿತ್ರ್ಯದ ಬಗ್ಗೆ ಅವರಲ್ಲಿ ಸಾಕಷ್ಟು ತಿಳುವಳಿಕೆ ಇದೆ. ಆ ಬಗೆಗೆ ಅವರಿಗೆ ಅರಿವು ಇದೆ. ಅಭಿಮಾನ ಇದೆ. ನಮ್ಮ ಸಂಸ್ಕೃತಿಯಲ್ಲಿ ಈ ದೇಸೀ ಕಲೆಗಳಿಗೆ ಹೆಚ್ಚಿನ ಮಹತ್ವವಿದೆ ಎಂದು ನಂಬಲಾಗುತ್ತದೆ.

ಲಲಿತಕಲೆಯ ಇನ್ನೊಂದು ಗುಂಪಾದ ಸಂಗೀತ, ನೃತ್ಯ ಮತ್ತು ನಾಟಕ ಕ್ಷೇತ್ರದಲ್ಲಿ, ಕೊನೆಯ ಲಲಿತಕಲೆ ಎಂದು ಗಣಿಸುವ ಸಾಹಿತ್ಯ ಕ್ಷೇತ್ರದಲ್ಲಿ– ಇಲ್ಲಿಯ ದೇಸೀ ಕಲಾ ಪ್ರಕಾರಗಳನ್ನು ಪ್ರೀತಿಯಿಂದ ಕಾಣುತ್ತಿಲ್ಲ. ಸಾಹಿತ್ಯ ಮತ್ತು ಕ್ರಿಯಾತ್ಮಕ ಕಲೆಗಳ ಈ ಗುಂಪಿನಿಂದ ದೇಸೀ ಮಾದರಿಗಳ ಬಗ್ಗೆ ಆದರ ವಿಶ್ವಾಸ ತೋರಿಸದೆ, ಒಂದು ರೀತಿಯಿಂದ ದೂರ ಇಡಬೇಕೆಂಬ ಬಯಕೆ– ಎಲ್ಲ ಕಡೆ ಸಾರ್ವತ್ರಿಕವಾಗಿದೆ.

ಈ ನೀತಿ ಸರ್ಕಾರಿ ಸಂಸ್ಥೆಗಳ ಮಟ್ಟದಲ್ಲೂ ಕಂಡುಬರುತ್ತದೆ. ಸಂಗೀತ–ನೃತ್ಯ ಅಕಾಡೆಮಿ, ಚಿತ್ರಕಲಾ ಅಕಾಡೆಮಿ, ಶಿಲ್ಪಕಲಾ ಅಕಾಡೆಮಿ, ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿಗಳು–ತಮ್ಮ ತಮ್ಮ ದೇಸೀ ಕಲೆಗಳನ್ನು ಮತ್ತು ಸಾಹಿತ್ಯವನ್ನು ದೂರ ಇಡುತ್ತಿವೆ. ಇದು ತೀರ ಅಪಾಯದ ಕೆಲಸ. ಹೀಗಾಗಿಯೇ ಜಾನಪದ ಅಕಾಡೆಮಿಯ ಕ್ಷೇತ್ರ ತೀರ ವಿಸ್ತಾರವಾಗಿ, ಏನು ಮಾಡಿದರೂ ಬಗೆಹರಿಯದಂತಾಗಿದೆ. ಆಯಾ ಅಕಾಡೆಮಿಗಳು ತಮ್ಮ ತಮ್ಮ ಕ್ಷೇತ್ರದ ದೇಸೀ ಕಲೆಗಳನ್ನು ಸ್ವಲ್ಪಮಟ್ಟಿಗಾದರೂ ಪ್ರೋತ್ಸಾಹಿಸುವ ಹೊಣೆಗಾರಿಕೆ ಹೊರುವ ಕಡೆ ಲಕ್ಷವಹಿಸಬೇಕು. ಸಾಹಿತ್ಯ ಅಕಾಡೆಮಿಯಂತೂ ದೇಸೀ ಸಾಹಿತ್ಯದಿಂದ ದೂರ ಇರುವ ನಿರ್ಧಾರ ಮಾಡಿದಂತಿದೆ. ಅನ್ಯಭಾಷೆಗಳಿಗೆ ಸಾಕಷ್ಟು ಅವಕಾಶ ಕೊಡುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಸಾಹಿತ್ಯದ ಸ್ಪಷ್ಟಕಲ್ಪನೆ ಇಲ್ಲದೆ ಕೊರಗುತ್ತಿದೆ. ಮುಟ್ಟಿದರೆ ಮೈಲಿಗೆಯಾಗುವುದೆಂಬ ಅಭಿಪ್ರಾಯ ಹೊಂದಿದೆ. ಇದರಿಂದ ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಹಾನಿ ಆಗಿದೆ, ಆಗುತ್ತಿದೆ ಎಂಬುದನ್ನು ಗಮನಿಸಬೇಕಾಗಿದೆ.

ಇಂಗ್ಲೀಷ ವ್ಯಾಮೋಹಿಯಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯು– ಈ ಪರದೇಶಿ ದಾಸ್ಯ ಪ್ರಜ್ಞೆಯಿಂದ ಹೊರಬರಲು ಇರುವ ಒಂದೇ ಉಪಾಯವೆಂದರೆ, ದೇಸಿ ಸಾಹಿತ್ಯವನ್ನು ಗಮನಾರ್ಹವಾಗಿ ಪರಿಗಣಿಸುವುದು. ಇಂದು ಕನ್ನಡ ಸಾಹಿತ್ಯ ಚಿಂತನೆಯಲ್ಲಿ ಏನಾದರು ಹೊಸಬೆಳವಣಿಗೆಯಾದರೆ, ಅದನ್ನು ದೇಸೀ ದೃಷ್ಟಿಯಿಂದ ನೋಡುವುದರಿಂದ ಸಾಧ್ಯವೆಂಬುದನ್ನು ಲಕ್ಷಿಸಬೇಕು. ಈ ದೃಷ್ಟಿ ಬೆಳೆದದ್ದು ಜಾನಪದಶಾಸ್ತ್ರ ಕ್ಷೇತ್ರದಲ್ಲಿ ಆದ ಹೊಸ ಕೆಲಸಗಳಿಂದ. ಈ ಮಹತ್ವದ ದೃಷ್ಟಿಯಿಂದಾಗಿಯೇ ಅನೇಕ ಸಂಶೋಧನ ಅಧ್ಯಯನಗಳು ಜಾರಿಗೆ ಬಂದಿವೆ. ಅಂತಹ ಮಹತ್ವದ ಅಧ್ಯಯನಗಳನ್ನು ಮಾಡಿದವರು ಜಾನಪದ ಸಾಹಿತ್ಯವನ್ನು ಅಭ್ಯಾಸ ಮಾಡಿದ ಜನ ಎಂಬುದನ್ನು ಗಮನಿಸಬೇಕು.

ವಿಶ್ವವಿದ್ಯಾಲಯ, ಶಾಲೆ ಕಾಲೇಜುಗಳ ಕನ್ನಡ ಪಠ್ಯಗಳಲ್ಲಿ ಶಿಷ್ಟ ಮತ್ತು ಮೌಖಿಕ ಪರಂಪರೆಯ ಸಾಹಿತ್ಯಕ್ಕೆ ಸಮಾನ ಸ್ಥಾನಮಾನ ದೊರಕುವಂತಾಗಬೇಕು. ಕನ್ನಡದ ಪಾರ್ಶ್ವಭಾಗ ತಿಳಿದಿರುವ ನಮಗೆ ಅದರ ಸಂಪೂರ್ಣ ಪರಿಚಯವಾಗುವಂತಾಗಬೇಕು.

ಬೇರೆ ಬೇರೆ 'ಸಾಮಾಜಿಕ ಶಾಸ್ತ್ರ'ಗಳ ಜನ ಜಾನಪದ ಸಂಗತಿಗಳನ್ನು ಬಳಸಿಕೊಳ್ಳು ವಂತಾಗಬೇಕು. ಮುಖ್ಯವಾಗಿ ಇತಿಹಾಸಶಾಸ್ತ್ರ ಅಧ್ಯಯನಕಾರರು ಜಾನಪದ ಸಂಗತಿಗಳ ವಿಶ್ವಾಸಾರ್ಹತೆಯ ಉಪಯೋಗ ಪಡೆಯಬೇಕು. ಜಾನಪದ ವೈದ್ಯಕೀಯ ಕ್ಷೇತ್ರದ ಜ್ಞಾನ ಬಹುತೀವ್ರಗತಿಯಲ್ಲಿ ಬಳಕೆಯಿಂದ ನಶಿಸಿ ಹೋಗುತ್ತಿದೆ. ಈ ಬಗೆಗೆ ವೈದ್ಯಕೀಯ ಕ್ಷೇತ್ರದೆಡೆ ಜಾನಪದಶಾಸ್ತ್ರಜ್ಞರು ತೀವ್ರವಾಗಿ ಗಮನ ಹರಿಸಬೇಕಾದ ಅಗತ್ಯವಿದೆ.

***

೨. ಜನಪದ ಸಾಹಿತ್ಯ ಅಧ್ಯಯನದ ವಿಭಾಗ ಕ್ರಮ

ಯಾವುದೇ ಒಂದು ಅಭ್ಯಾಸವು ಕ್ರಮಬದ್ಧವಾಗಿ ವೈಜ್ಞಾನಿಕವಾಗಿ ಆಗಬೇಕೆಂದರೆ ಆ ವಿಷಯವನ್ನು ಒಂದು ಕ್ರಮಕ್ಕೆ ಅಳವಡಿಸುವುದು ಅನಿವಾರ್ಯ ಮತ್ತು ಅಗತ್ಯ. ನಾವು ಕನ್ನಡ ಸಾಹಿತ್ಯವನ್ನು ಅಭ್ಯಸಿಸಲು ಪ್ರಮುಖ ಕವಿ, ಕವಿಗಳ ಮತ ಅಥವಾ ಕಾಲಮಾನಗಳ ಅನ್ವಯ ಕೆಲವು ಘಟ್ಟಗಳಾಗಿ ವಿಭಾಗಿಸಿಕೊಳ್ಳುತ್ತೇವೆ. ಹಾಗೆಯೇ ಕನ್ನಡ ಜನಪದ ಸಾಹಿತ್ಯದ ಅಧ್ಯಯನದ ಚರಿತ್ರೆಯನ್ನು ಕ್ರಮಬದ್ಧವಾಗಿ ಅಭ್ಯಸಿಸಲು ಅನುಕೂಲವಾಗುವಂತೆ ಅದರ ಬೆಳವಣಿಗೆಯನ್ನು ಗಮನಿಸಿ ಕೆಲವು ಘಟ್ಟಗಳಲ್ಲಿ ವಿಭಾಗಿಸಿಕೊಳ್ಳುವುದು ಅನಿವಾರ್ಯ ಮತ್ತು ಅನುಕೂಲಕರ.

ಜನಪದ ಸಾಹಿತ್ಯದ ಅಧ್ಯಯನ ಎಂದರೆ ಜನಪದ ಸಾಹಿತ್ಯ ಪಠ್ಯಗಳ ಸಂಗ್ರಹ ಮತ್ತು ಆ ಪಠ್ಯಗಳನ್ನು ಕುರಿತು ನಡೆದ ಅಧ್ಯಯನದ ಪ್ರಯತ್ನಗಳು ಈ ಎರಡೂ ಸೇರಿರುತ್ತವೆ. ಜೊತೆಗೆ ಸಾಹಿತ್ಯದ ಪಠ್ಯವೆಂದರೆ ಅದೊಂದು 'ಸಾಂಸ್ಕೃತಿಕ ಪಠ್ಯ' ಆಗಿರುತ್ತದೆ ಎಂಬ ಕಲ್ಪನೆ ಜನಪದ ಸಾಹಿತ್ಯದ ಅಭ್ಯಾಸದೊಂದಿಗೆ ಚಿಗುರೊಡೆದು ನಿಂತಿದೆ. ಜನಪದ ಸಾಹಿತ್ಯವು ನಮ್ಮ ಜೀವನದ ಸಂದರ್ಭಗಳಿಗೆ ಸಂಬಂಧಿಸಿದ್ದು, ಬದುಕಿನ ಒಂದಂಗವೆ ಆಗಿರುವುದರಿಂದ ಬದುಕಿನ ಸಾಂಸ್ಕೃತಿಕ ಸಂಗತಿಗಳೂ ಜನಪದ ಸಾಹಿತ್ಯದ ಅಂಗಪಠ್ಯಗಳಾಗಿ ಸೇರಿಹೋಗುತ್ತವೆ. ಹೀಗಾಗಿ ಜನಪದ ಸಾಹಿತ್ಯ ಪರಿಕಲ್ಪನೆಯಲ್ಲಿ ಪಠೀ ಪಠ್ಯಗಳು ಮತ್ತು ಅವುಗಳ ಅಧ್ಯಯನಗಳು ಮಾತ್ರ ಸೇರಿಕೊಳ್ಳದೆ ಪಠ್ಯಗಳ ಜೊತೆಗೆ ಬದುಕಿನ ಸಾಂಸ್ಕೃತಿಕ ಸಂಗತಿಗಳೂ ಸೇರಿಕೊಳ್ಳುತ್ತವೆ. ವಿಭಾಗಕ್ರಮದಲ್ಲಿ ಈ ಎಲ್ಲ ಸಂಗತಿಗಳನ್ನು ಗಮನಿಸಬೇಕಾಗುತ್ತದೆ.

ಕನ್ನಡ ಜನಪದ ಸಾಹಿತ್ಯದ ಅಧ್ಯಯನದ ಚರಿತ್ರೆಯನ್ನು ಅಭ್ಯಸಿಸಬಲ್ಲ ನಾಲ್ಕೈದು ವಿದ್ವಾಂಸರು ಈಗಾಗಲೇ ಅದನ್ನು ಕೆಲವು ಘಟ್ಟಗಳಲ್ಲಿ ವಿಭಾಗಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಜನಪದ ಸಾಹಿತ್ಯವೆಂದರೆ ಅದು ಕೇವಲ ಹಾಡು ಎಂಬ ಕಲ್ಪನೆ ಮೊದಮೊದಲಿಗೆ ಇದ್ದುದನ್ನು ಕಾಣುತ್ತೇವೆ. ನಂತರ ಬರಬರುತ್ತ ಜನಪದ ಸಾಹಿತ್ಯದ ಇತರ ಸಾಹಿತ್ಯಿಕ ಪಠ್ಯಗಳು ಅರಿವಿಗೆ ಬಂದಂತೆ ವಿಭಾಗಕ್ರಮದಲ್ಲಿ ವ್ಯತ್ಯಾಸವಾಗುವುದನ್ನು ಕಾಣುತ್ತೇವೆ. ಜೊತೆಗೆ ಜನಪದ ಸಾಹಿತ್ಯದ ಅಧ್ಯಯನವೆಂದರೆ ಅದು ಸಂಸ್ಕೃತಿಯ ಅಧ್ಯಯನ ಎನ್ನುವ ಕಲ್ಪನೆ ಬಹುಬೇಗನೆ ಒಡಮೂಡಿ ಬಂದಂತೆ ತೋರುತ್ತದೆ. ಜನಪದ ಸಾಹಿತ್ಯದ ಮೊದಲ ಸಂಗ್ರಹಗಳು ಪ್ರಕಟವಾದುದೇ ಹಲಸಂಗಿ ಗೆಳೆಯರ ಗುಂಪಿನ ಕೊಡುಗೆಗಳಿಂದ, ಅದು

೧೯೩೧ರಲ್ಲಿ 'ಗರತಿಯ ಹಾಡು' ಪ್ರಕಟವಾಗುವ ಮೂಲಕ. ಆದರೆ ಅರ್ಚಕ ಬಿ. ರಂಗಸ್ವಾಮಿ ಅವರ ಕೃತಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಬಹುಬೇಗನೆ ಅಂದರೆ, ೧೯೩೩ ರಲ್ಲಿ ಪ್ರಕಟವಾಗಿ ಸಾಹಿತ್ಯದ ಜೊತೆ ಸಂಸ್ಕೃತಿಯ (ಬದುಕಿನ) ಅಧ್ಯಯನ ಎನ್ನುವ ಕಲ್ಪನೆ ಬೆರೆತುಕೊಂಡಿತು. ದೆವುಡು ಅವರ 'ಕರ್ನಾಟಕ ಸಂಸ್ಕೃತಿ' (೧೯೩೫) ಪ್ರಕಟವಾಗಿ ಈ ಕಲ್ಪನೆ ಇನ್ನಷ್ಟು ಗಟ್ಟಿಗೊಂಡಿತು.

ಜನಪದ ಸಾಹಿತ್ಯದ ಅಭ್ಯಾಸಕ್ಕೆ ಅನುಕೂಲವಾಗುವಂತೆ ವಿಭಾಗಿಸಿಕೊಂಡ ಕ್ರಮಗಳನ್ನು ಗಮನಿಸಿದರೆ – ಅವೆಲ್ಲ ಕಾಲವನ್ನು, ಸಾಹಿತ್ಯ ಪ್ರಕಾರಗಳನ್ನು, ಅಧ್ಯಯನದ ರೀತಿಯನ್ನು ಗಮನಿಸಿ ವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ. ಇಂತಹ ಪ್ರಯತ್ನಗಳಲ್ಲಿ ಚೆನ್ನವೀರ ಕಣವಿಯವರು ಮೊದಲಿಗರಾಗಿ ನಿಲ್ಲುತ್ತಾರೆ. ಅವರು ೧೯೬೩ ರಲ್ಲಿ 'ಕನ್ನಡ ನುಡಿ' ಎಂಬ ಪತ್ರಿಕೆಯಲ್ಲಿ 'ಸ್ವಾತಂತ್ರ್ಯಪೂರ್ವದ ಕನ್ನಡ ಜನಪದ ಸಾಹಿತ್ಯ' ಎಂಬ ಲೇಖನವನ್ನು ಬರೆದರು. ಸ್ವಾತಂತ್ರ್ಯಪೂರ್ವದ ಕಾಲವು ಕನ್ನಡ ಜನಪದ ಸಾಹಿತ್ಯ ಅಧ್ಯಯನದ ಒಂದು ಘಟ್ಟವಾಗಿ ನಿಲ್ಲುತ್ತದೆ (ಸಾಹಿತ್ಯ ಚಿಂತನ, ೧೯೬೬). ಹೀಗೆ ಒಂದು ಮಹತ್ವದ ಘಟ್ಟವನ್ನು ಗುರುತಿಸಿ, ಅದರ ಪರಿಚಯ ಮಾಡಹೊರಟ ಶ್ರೀ ಚೆನ್ನವೀರ ಕಣವಿ ಅವರು ಕೇವಲ ಹಲಸಂಗಿ ಗೆಳೆಯರ ಗುಂಪಿನ ಕಾಣಿಕೆಗಳಾದ– 'ಗರತಿಯ ಹಾಡು' (೧೯೩೧), ಜೀವನ ಸಂಗೀತ' (೧೯೩೩) ಹಾಗೂ 'ಮಲ್ಲಿಗೆ ದಂಡೆ' (೧೯೩೫) ಈ ಮೂರು ಸಂಕಲನಗಳ ಜೊತೆಗೆ ಮತಿಘಟ್ಟ ಕೃಷ್ಣಮೂರ್ತಿ ಅವರ 'ನಾಡಪದಗಳು' (೧೯೪೩) ಎಂಬ ಸಂಕಲನವನ್ನು ಸೇರಿಸಿಕೊಂಡು, ನಾಲ್ಕು ಕೃತಿಗಳನ್ನು ಮಾತ್ರ ಪ್ರಮುಖವಾಗಿ ಇಟ್ಟುಕೊಂಡು ತಮ್ಮ ಲೇಖನದಲ್ಲಿ ಅವುಗಳನ್ನು ಪರಿಚಯಿಸುತ್ತಾರೆ. ಚೆನ್ನವೀರ ಕಣವಿ ಅವರು ಒಂದು ಮಹತ್ವದ ಕಾಲಘಟ್ಟವನ್ನು ಗುರುತು ಹಚ್ಚಿಯೂ ಅದರ ಸಮಗ್ರ ಸ್ವರೂಪವನ್ನು ಪರಿಚಯಿಸಲಿಲ್ಲ ಎಂಬುದೊಂದು ಕೊರತೆಯಾಗಿ ಕಾಣುತ್ತದೆ.

ಚೆನ್ನವೀರ ಕಣವಿ ಅವರ ಲೇಖನವನ್ನು ಗಮನಿಸಿ ಡಾ. ಜಿ.ಶಂ. ಪರಮಶಿವಯ್ಯ ಅವರು ಈ ರೀತಿ ಅಭಿಪ್ರಾಯ ಪಡುತ್ತಾರೆ : "ಕನ್ನಡ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳ ಐತಿಹಾಸಿಕ ವಿವೇಚನೆಯನ್ನು ನಡೆಸುವಾಗ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಎಂದು ಪ್ರಮುಖ ವಿಭಾಗಗಳಾಗಿ ಮಾಡಿಕೊಳ್ಳುವುದನ್ನು ಕಾಣಬಹುದು. ಇಲ್ಲಿ 'ಸ್ವಾಂತಂತ್ರ್ಯ' ಕಾಲವನ್ನು ನಿರ್ದೇಶಿಸುವ ಒಂದು ಗಡಿಯ ಸ್ವಾತಂತ್ರ್ಯಪೂರ್ವದ ಗೆರೆ ಮಾತ್ರ. ಏಕೆಂದರೆ ಕನ್ನಡ ಜಾನಪದ ಕ್ಷೇತ್ರದ ಯಾವುದೇ ಪ್ರಮುಖವಾದ ಘಟ್ಟವನ್ನು ಅದು ಗುರುತಿಸುವುದಿಲ್ಲ". (ಪ್ರಬುದ್ಧ ಕರ್ನಾಟಕ, ಚಿನ್ನದ ಸಂಚಿಕೆ, ೧೯೬೯, ಪು.೪೯೧)

ಹೀಗೆ ಹೇಳುವ ಡಾ. ಜೀ.ಶಂ.ಪರಮಶಿವಯ್ಯ ಅವರೆ ಆ ಹಿಂದೆಯೇ ೧೯೬೭ರಲ್ಲಿ ತರೀಕೆರೆಯಲ್ಲಿ (ಚಿಕ್ಕಮಗಳೂರು ಜಿಲ್ಲೆ) ನಡೆದ 'ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ' ದಲ್ಲಿ ತಾವೇ ಸ್ವತಃ 'ಸ್ವಾತಂತ್ರ್ಯಪೂರ್ವ ಜನಪದ ಸಾಹಿತ್ಯ ಸಂಗ್ರಹ' ಎಂಬ ಲೇಖನವನ್ನು ಮಂಡಿಸಿದ್ದರು. ಅಲ್ಲಿಯೇ ಸಿ.ಪಿ.ಕೆ. ಅವರು 'ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ' ಎಂಬ ಪ್ರಬಂಧವನ್ನು ಪ್ರಸ್ತುತ ಪಡಿಸಿದ್ದರು (ಹೊನ್ನಬಿತ್ತೇವು ಹೊಲಕೆಲ್ಲ,

೧೯೬೭). ಈ ಮೇಲಿನ ಎರಡೂ ಕಾಲಘಟ್ಟಗಳನ್ನು ಗುರುತಿಸುವಲ್ಲಿ ಏನಿಲ್ಲವೆಂದರೂ ಪ್ರಪ್ರಥಮವಾಗಿ ವಿಂಗಡನೆಯ ಪ್ರಜ್ಞೆಯನ್ನು ಮೂಡಿಸಿದ ಶ್ರೇಯಸ್ಸು ಅವುಗಳಿಗಿದೆ ಎಂಬುದನ್ನು ಮರೆಯುವಂತಿಲ್ಲ.

೧೯೬೭ರಲ್ಲಿ ಪ್ರಕಟಗೊಂಡ 'ಹೊನ್ನಬಿತ್ತೇವು ಹೊಲಕೆಲ್ಲ' ಎಂಬ ಕೃತಿಯಲ್ಲಿ ಕಾಲಾನುಸಾರ, ಪ್ರದೇಶವಾರು ಜನಪದ ಸಾಹಿತ್ಯವನ್ನು ವಿಭಾಗಿಸಿಕೊಂಡು ಆಯಾ ಕಾಲಘಟ್ಟಗಳಲ್ಲಿ ಮತ್ತು ಕರ್ನಾಟಕದ ಬೇರೆಬೇರೆ ವಿಭಾಗಗಳಲ್ಲಿ ಜನಪದ ಸಾಹಿತ್ಯದ ಸಂಗ್ರಹ ಮತ್ತು ಅಧ್ಯಯನಗಳು ಅನುಕ್ರಮವಾಗಿ ಹೇಗೆ ನಡೆದಿವೆ ಎಂಬುದನ್ನು ಸಮೀಕ್ಷಿಸುವ ಮಹತ್ವದ ಲೇಖನಗಳನ್ನು ಕಾಣುತ್ತೇವೆ.

ಕಾಲಾನುಕ್ರಮವನ್ನನುಸರಿಸಿದ ವಿಭಾಗ ಕ್ರಮ ಹೀಗಿದೆ :

೧. ಸ್ವಾತಂತ್ರ್ಯ ಪೂರ್ವ ಜನಪದ ಸಾಹಿತ್ಯ ಸಂಗ್ರಹ, ಶ್ರೀ ಜೀ.ಶಂ.ಪರಮಶಿವಯ್ಯ

೨. ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ, ಶ್ರೀ ಸಿ.ಪಿ.ಕೃಷ್ಣಕುಮಾರ

ಈ ಎರಡು ಲೇಖನಗಳು ಕನ್ನಡ ಜನಪದ ಸಾಹಿತ್ಯದ ಪ್ರಾರಂಭವನ್ನು ಗುರುತಿಸುವ ಮಹತ್ವದ ಲೇಖನಗಳೆಂಬುದು ಸ್ಪಷ್ಟ.

ಪ್ರದೇಶವಾರು ವಿಭಾಗ ಕ್ರಮವನ್ನು ಅನುಸರಿಸಿದ ಲೇಖನಗಳು :

೧. ದಕ್ಷಿಣ ಕರ್ನಾಟಕದ ಜನಪದ ಸಾಹಿತ್ಯ, ಜೀ. ಶಂ. ಪರಮಶಿವಯ್ಯ

೨. ಉತ್ತರ ಕರ್ನಾಟಕದ ಜನಪದ ಸಾಹಿತ್ಯ, ಸಿಂಪಿ ಲಿಂಗಣ್ಣ

೩. ಉತ್ತರ ಕನ್ನಡದ ಜಾನಪದ ಸಾಹಿತ್ಯ, ಶ್ರೀ ಗೌರೀಶ ಕಾಯ್ಕಿಣಿ

೪. ಉತ್ತರ ಕನ್ನಡದ ಜಾನಪದ ಕಥೆಗಳು, ಡಾ. ಎಲ್.ಆರ್. ಹೆಗಡೆ

೫. ದಕ್ಷಿಣ ಕನ್ನಡದ ಜನಪದ ಸಾಹಿತ್ಯ, ಏರ್ಯ ಲಕ್ಷ್ಮೀನಾರಾಯಣ ಆಳ್ವ

೬. ಕೊಡಗಿನ ಜನಪದ ಗೀತೆಗಳು, ಶ್ರೀ ಕೆ. ಸಿ. ಭೀಮಯ್ಯ

೭. ಜನಪದ ಸಾಹಿತ್ಯಕ್ಕೆ ಕಾಸರಗೋಡಿನ ಕೊಡುಗೆ, ಶ್ರೀ ಕಯ್ಯಾರ ಕಿಞ್ಞಣ್ಣರೈ

೮. ದಕ್ಷಿಣ ಕನ್ನಡದ ಯಕ್ಷಗಾನ, ಶ್ರೀ ಟಿ. ಕೇಶವಭಟ್ಟ

ಈ ಎಲ್ಲ ಲೇಖನಗಲ್ಲಿ ಆಯಾ ಭಾಗದಲ್ಲಿ ಪ್ರಚಲಿತದಲ್ಲಿರುವ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸಿದ್ದಾರೆ. ಆದರೆ ಆಯಾ ಭಾಗದಲ್ಲಿ ಪ್ರಕಟಗೊಂಡ ಕೃತಿಗಳನ್ನು ಮುಂದಿಟ್ಟುಕೊಂಡು ಬರೆದ ಲೇಖನಗಳು ಇವಲ್ಲ. ಏನಿದ್ದರೂ ಪ್ರದೇಶವಾರು ಅಧ್ಯಯನದ ಅನಾವರಣ ಮಾಡಿದ ಲೇಖನಗಳಿವು.

೧೯೬೯ ರಲ್ಲಿ ಡಾ. ಜೀ.ಶಂ. ಪರಮಶಿವಯ್ಯ ಅವರು ಹೀಗೆ 'ಕನ್ನಡ ಜನಪದ ಸಾಹಿತ್ಯ ಅಧ್ಯಯನ ಚರಿತ್ರೆಯನ್ನು ಸಾರಾಸಗಟಾಗಿ ವಿಭಾಗಿಸಿ ಅಭ್ಯಸಿಸುವುದು ಸರಿಯಲ್ಲ' ಎಂದು ಸಾರಿದ ನಂತರವೂ ೧೯೭೫ರಲ್ಲಿ ಡಾ. ಎಲ್. ಆರ್. ಹೆಗಡೆ ಅವರು ತಮ್ಮ **'ಕನ್ನಡ ಜನಪದ ಸಾಹಿತ್ಯ– ೨೫ ವರ್ಷಗಳ ಸಾಧನೆ'** ಎಂಬ ಕೃತಿಯಲ್ಲಿ – 'ಸ್ವಾತಂತ್ರ್ಯಪೂರ್ವ ಕಾಲದ ಜನಪದ ಸಾಹಿತ್ಯ' ಹಾಗೂ 'ಸ್ವಾತಂತ್ರ್ಯೋತ್ತರ ಕಾಲದ ೨೫ ವರ್ಷಗಳ

ಸಾಧನೆ' ಎಂದು ಪುನಃ ಅದೇ ಹೆಸರಿನ ಘಟ್ಟಗಳನ್ನು ಗುರುತಿಸಿಕೊಂಡರು. ಆದರೆ ಎರಡನೇ ಘಟ್ಟದ ಬಗೆಗೆ ಅವರು ಸವಿವರವಾಗಿ ಅಭ್ಯಾಸ ಮಾಡಿದುದರಿಂದ ಕನ್ನಡ ಜನಪದ ಸಾಹಿತ್ಯ ಅಧ್ಯಯನದ ಚರಿತ್ರೆ ಕುರಿತಂತೆ ಅವರ ಈ ಪ್ರಯತ್ನ ಸ್ತುತ್ಯರ್ಹವೆನಿಸುತ್ತದೆ. ಇಷ್ಟೊಂದು ಸುದೀರ್ಘ ಅವಧಿ ೨೫ ವರ್ಷಗಳಲ್ಲಿ ಪ್ರಕಟವಾದ ಕೃತಿಗಳು, ಜನಪದ ಸಾಹಿತ್ಯದ ಸಂಗ್ರಹ ಅಧ್ಯಯನಗಳಿಗಾಗಿ ದುಡಿದ ವಿದ್ವಾಂಸರ ಸೇವೆ ಮುಂತಾದವುಗಳ ಮಾಹಿತಿಗಳನ್ನು ಓತಪ್ರೋತವಾಗಿ ಕೊಡುತ್ತಾರೆ. ಇಂತಹ ಮಾಹಿತಿಯನ್ನು ಆ ಹಿಂದೆ ಇನ್ನಾವ ಕೃತಿಯೂ ನೀಡದೆ ಇರುವುದು ಗಮನಾರ್ಹ ಸಂಗತಿ.

ಡಾ. ಎಲ್.ಆರ್. ಹೆಗಡೆ ಅವರ **'ಕನ್ನಡ ಜನಪದ ಸಾಹಿತ್ಯ– ೨೫ ವರ್ಷಗಳ ಸಾಧನೆ'** (೧೯೭೨) ಎಂಬುದು ಭಾರತ ಸ್ವಾತಂತ್ರ್ಯದ ೨೫ನೇ ವರ್ಷದ ಬೆಳ್ಳಿಹಬ್ಬದ ಆಚರಣೆಯ ನೆಪದಲ್ಲಿ 'ಕ್ನನಡ ಸಾಹಿತ್ಯ ಪರಿಷತ್ತು' ಹಾಕಿಕೊಂಡ ಯೋಜನೆಯಡಿ ತಯಾರಿಸಿದ ಕೃತಿಯಾಗಿದೆ. ಈ ಕೃತಿಯಲ್ಲಿ ಡಾ. ಹೆಗಡೆ ಅವರು ಮುಖ್ಯವಾಗಿ ಸ್ವಾತಂತ್ರ್ಯಾನಂತರ ಬಂದ ಕೃತಿಗಳನ್ನೇ ಸಮೀಕ್ಷೆ ಮಾಡಬೇಕಾಗಿರುವುದರಿಂದ ಮತ್ತೆ ವಿಶೇಷವಾಗಿ ವಿಭಾಗ ಕ್ರಮವನ್ನು ಗುರುತಿಸಿಕೊಳ್ಳಲು ಹೋಗಿಲ್ಲ. ಆದರೂ ಮೊದಲಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಏನಾಗಿದೆ, ಸ್ವಾತಂತ್ರ್ಯ ನಂತರ ಏನಾಗಿದೆ ಎಂದು ನೋಡಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ನಂತರ ಅವರ ಪರಿವಿಡಿಯನ್ನು ಗಮನಿಸಿದರೆ ಜನಪದ ಸಾಹಿತ್ಯ ಪ್ರಕಾರಗಳನ್ನು ಇಟ್ಟುಕೊಂಡು ಸಮೀಕ್ಷೆ ಮಾಡಿರುವುದು ಕಂಡುಬರುತ್ತದೆ. ಹೀಗಾಗಿ ಅವರು ಆಲೋಚಿಸಿರಬಹುದಾದ ವಿಭಾಗ ಕ್ರಮವನ್ನು ಅವರ ಪರಿವಿಡಿಯನ್ನು ಗಮನಿಸಿ ಎರಡು ಬಗೆಯಲ್ಲಿ ಗುರುತಿಸಿಕೊಳ್ಳಬಹುದಾಗಿದೆ–

೧. ಕಾಲವನ್ನನುಸಿರಿಸಿದ ಕ್ರಮ.

೨. ಸಾಹಿತ್ಯ ಪ್ರಕಾರಗಳನ್ನು ಗಮನಿಸಿದ ಕ್ರಮ.

ಕಾಲವನ್ನನುಸಿರಿಸಿದ ಕ್ರಮ :

೧. ಸ್ವಾತಂತ್ರ್ಯ ಪೂರ್ವ ಕಾಲದ ಜನಪದ ಸಾಹಿತ್ಯ

೨. ಸ್ವಾತಂತ್ರ್ಯೋತ್ತರ ಕಾಲದ ಇಪ್ಪತ್ತೈದು ವರ್ಷಗಳ ಸಾಧನೆ

ಸಾಹಿತ್ಯ ಪ್ರಕಾರಗಳನ್ನು ಗಮನಿಸಿದ ಕ್ರಮ :

೧. ಸಂದರ್ಭ ಗ್ರಂಥಗಳು
೨. ಸಂಮಿಶ್ರ ಕೌಟುಂಬಿಕ ಗೀತೆಗಳು
೩. ಇತರ ಗರತಿಯರ ಹಾಡುಗಳು
೪. ಭಕ್ತಿಗೀತೆಗಳು
೫. ವಿಶಿಷ್ಟ ಸಂಪ್ರದಾಯದ ಪದಗಳು
೬. ಮದುವೆಯ ಹಾಡುಗಳು
೭. ಕಥನ ಕವನಗಳು
೮. ಲಾವಣಿಗಳು

೯. ಕೋಲಾಟದ ಪದಗಳು

೧೦. ವಿಶಿಷ್ಟ ಗ್ರಂಥಗಳು

೧೧. ಕಥೆಗಳು

೧೨. ಜಾನಪದ ನಾಟಕಗಳು

೧೩. ಒಗಟುಗಳು

೧೪. ಗಾದೆಗಳು

ಸ್ವಾತಂತ್ರ್ಯ ಪೂರ್ವದಲ್ಲಿ ಆದ ಜನಪದ ಸಾಹಿತ್ಯದ ಬಗೆಗಿನ ಕೆಲಸವನ್ನು ಕೇವಲ ೩೦ ಪುಟಗಳಲ್ಲಿ ಸಮೀಕ್ಷಿಸಿ, ಮುಂದೆ ಸುಮಾರು ೧೭೦ ಪುಟಗಳ ವ್ಯಾಪ್ತಿಯಲ್ಲಿ ಸ್ವಾತಂತ್ರ್ಯ ನಂತರದ ಇಪ್ಪತ್ತೈದು ವರ್ಷಗಳಲ್ಲಿ ಬಂದ ಕೃತಿಗಳನ್ನು ಗಮನಿಸಿ, ಜನಪದ ಸಾಹಿತ್ಯ ಪ್ರಕಾರಗಳಂತೆ ಕೃತಿಗಳನ್ನು ಒಂದೆಡೆ ಇಟ್ಟುಕೊಂಡು ಸಮೀಕ್ಷಿಸುವ ಪ್ರಯತ್ನ ಮಾಡಿದ್ದಾರೆ.

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಎಂದು ವಿಭಾಗಿಸಿಕೊಳ್ಳುವ ಕ್ರಮವನ್ನು ಸಾರಾಸಗಟಾದ ಕ್ರಮ ಎಂದಿದ್ದ ಡಾ. ಜೀಶಂಪ ಅವರು ಕನ್ನಡ ಜನಪದ ಸಾಹಿತ್ಯ ಅಧ್ಯಯನದ ಇತಿಹಾಸದ ಕೆಲವು ಮಹತ್ವದ ಘಟ್ಟಗಳನ್ನು ಗುರುತಿಸುವಲ್ಲಿ ಮುಂದೆ ಬರಬೇಕಾಯಿತು. ಅವರು ೧೯೭೮ ರಲ್ಲಿ ಎಂಬ ತಮ್ಮ ಕೃತಿಯಲ್ಲಿ ಕಾಲವನ್ನನುಸರಿಸಿ ಮಾಡಿಕೊಂಡ ವಿಭಾಗ ಕ್ರಮ ಈ ರೀತಿ ಇದೆ (**ಜಾನಪದ, ಪು.೬೬–೬೭**) :

೧. ೧೮೦೦–೧೯೩೦ : ಆರಂಭ ಯುಗ

೨. ೧೯೩೧–೧೯೪೭ : ನವೋದಯ ಯುಗ

೩. ೧೯೪೭–೧೯೬೫ : ಪೋಷಕ ಯುಗ

೪. ೧೯೬೬–ರಿಂದ : ವೈಜ್ಞಾನಿಕ ಯುಗ

ಇದರಲ್ಲಿ ಮೊದಲನೆಯ ಘಟ್ಟ ೧೩೦ ವರ್ಷಗಳ ಕಾಲಾವಧಿಯಷ್ಟು ವಿಸ್ತಾರವಾದ ಅಧ್ಯಯನವನ್ನು ಒಳಗೊಂಡು, ಹಿಡಿತಕ್ಕೆ ಸಿಗದಂತಾಗುತ್ತದೆ. ಅಲ್ಲದೆ ೧೯೦೦ರವರೆಗೆ ಸ್ವತಃ ಕನ್ನಡಿಗರು ಜನಪದ ಸಾಹಿತ್ಯದ ಸಂಗ್ರಹ ಮತ್ತು ಅಧ್ಯಯನಕ್ಕೂ ಇಳಿದಿರಲಿಲ್ಲ. ೧೮೦೦ ರಿಂದ ೧೯೦೦ ರವರೆಗೆ ಕನ್ನಡ ಜನಪದ ಸಾಹಿತ್ಯದ ಅಷ್ಟಿಷ್ಟು ಕೆಲಸ ಮಾಡಿದವರು ಪಾಶ್ಚಾತ್ಯರೆ. ಹೀಗಿರುವುದರಿಂದ ಡಾ॥ ಜೀ.ಶಂ.ಪರಮಶಿವಯ್ಯ ಅವರು ಸೂಚಿಸಿದ 'ಆರಂಭ ಯುಗ' ಎಂಬುದು ಸರಿಯಾದ ಘಟ್ಟವೆನಿಸಲಾರದು. ಅವರು ಸೂಚಿಸಿದ ೧೯೩೧ ರಿಂದ ೧೯೪೭ರ ವರೆಗಿನ ಕಾಲ ಕನ್ನಡ ಜನಪದ ಸಾಹಿತ್ಯ ಅಧ್ಯಯನ ಚರಿತ್ರೆಯ ಬಹುಪ್ರಮುಖ ಘಟ್ಟ. ಆದರೆ ಅದಕ್ಕೆ ಕೊಟ್ಟ 'ನವೋದಯ ಯುಗ' ಎನ್ನುವ ಹೆಸರು ಅದೇ ಅವಧಿಗೆ 'ನವೋದಯ ಯುಗ' ಎಂದು ಕನ್ನಡ ಶಿಷ್ಟಸಾಹಿತ್ಯ ಚರಿತ್ರೆಯಲ್ಲೂ ಗುರುತಿಸುವದರಿಂದ ಅಲ್ಲಿ ಅನುಕರಣೆಯ ಭಾಸವಾಗುತ್ತದೆ. ಅದಕ್ಕಾಗಿ ಹೊಸ ಹೆಸರೊಂದನ್ನು ಅವರು ಇಟ್ಟುಕೊಂಡಿದ್ದರೆ ಸರಿಯೆನಿಸಬಹುದಿತ್ತು. ಇನ್ನು ೧೯೪೭ ರಿಂದ ೧೯೬೬ರ ಅವಧಿಯನ್ನು 'ಪೋಷಕ ಯುಗ' ಎನ್ನುತ್ತಾರೆ. ಕನ್ನಡ ಜನಪದ

ಸಾಹಿತ್ಯದ ಅಭ್ಯಾಸದಲ್ಲಿ ಅದೊಂದು ಮಹತ್ವದ ಕಾಲ. ನಾನು ತಾನು ಎಂದು ಅನೇಕ ಜನ ತರುಣರು ಜಾನಪದ ಸಾಹಿತ್ಯ ಸಂಗ್ರಹಣೆಗೆ ಇಳಿದ ಕಾಲವದು. ೧೯೬೬ ರಿಂದ ಜನಪದ ಸಾಹಿತ್ಯದ ಅಭ್ಯಾಸಕ್ರಮ ವೈಜ್ಞಾನಿಕ ದೃಷ್ಟಿ ಪಡೆಯಿತೆಂಬ ಗ್ರಹಿಕೆಯ ಹಿನ್ನೆಲೆಯಲ್ಲಿ ಅದರ ಈ ಹಿಂದಿನ ಅವಧಿಯನ್ನು 'ಪೋಷಕ ಯುಗ' ಎಂದು ಕರೆದಂತೆ ತೋರುತ್ತದೆ. ಇನ್ನೂ ೧೯೬೬ ರಿಂದ ಈಚೆಗೆ 'ವೈಜ್ಞಾನಿಕ ಯುಗ' ಎಂದರೆ ಎಲ್ಲಿಯವರೆಗೆ? ಎಂಬುದು ಸ್ಪಷ್ಟವಾಗುವುದಿಲ್ಲ. ಏಕೆಂದರೆ ಸಧ್ಯದ ಕಾಲವನ್ನು ಕೇವಲ ವೈಜ್ಞಾನಿಕ ಕಾಲವೆನ್ನಲು ಬಾರದು. ಇಂದು ಕನ್ನಡ ಜನಪದ ಸಾಹಿತ್ಯದ ಅಧ್ಯಯನ ವೈಜ್ಞಾನಿಕ ಅಭ್ಯಾಸದೊಂದಿಗೆ ಈಗಾಗಲೇ ಬಹುದೂರ ಸಾಗಿಬಂದಿದೆ.

೧೯೭೯ ರಲ್ಲಿ ಪ್ರಕಟವಾದ 'ನಮ್ಮ ಜಾನಪದ ಸಮೀಕ್ಷೆ' ಎಂಬ ಕೃತಿಯಲ್ಲಿ 'ಕರ್ನಾಟಕದಲ್ಲಿ ಜಾನಪದ ಸಂಗ್ರಹ ಮತ್ತು ಅಧ್ಯಯನದ ಸ್ವರೂಪ' ಎಂಬ ಭಾಗವನ್ನು ಡಾ. ಸೋಮಶೇಖರ ಇಮ್ರಾಪೂರ ಅವರು ಹೀಗೆ ವಿಭಾಗಿಸಿಕೊಳ್ಳುತ್ತಾರೆ :

೧. ೧೯ನೇ ಶತಮಾನದ ಸಾಧನೆ–೧೮೦೦ ರಿಂದ ೧೯೦೦

೨. ೨೦ನೇ ಶತಮಾನದ ಪೂರ್ವಾರ್ಧದ ಸಾಧನೆ–೧೯೦೧ ರಿಂದ ೧೯೫೦

೩. ೨೦ನೇ ಶತಮಾನದ ಉತ್ತರಾರ್ಧದ ಸಾಧನೆ– ೧೯೫೦ ರಿಂದ ಈಚೆಗೆ.

* ೧೯೫೦–೧೯೬೫ ರವರೆಗೆ ಒಂದು ಘಟ್ಟ
* ೧೯೬೬ ರಿಂದ ಈಚೆಗೆ ಇನ್ನೊಂದು ಘಟ್ಟ

ಡಾ। ಜೀ. ಶಂ. ಪರಮಶಿವಯ್ಯ ಅವರ ವಿಭಾಗೀಕರಣದ ಅನುಕರಣದ ಜಾಡಿನಲ್ಲಿಯೇ ಅಲ್ಪಸ್ವಲ್ಪ ಬದಲಾವಣೆಗಳ ಜೊತೆಗೆ ಡಾ. ಇಮ್ರಾಪೂರ ಅವರು ಇಲ್ಲಿಯ ವಿಭಾಗಕ್ರಮವನ್ನು ಗುರುತಿಸಿಕೊಂಡಿದ್ದಾರೆ. ಅವರು ಸೂಚಿಸಿದ ಮೊದಲನೆ ಘಟ್ಟ ತೃಪ್ತಿ ತರುವಂತಹದಾಗಿದೆ. ಮುಂದಿನ ಕಾಲ ವಿಂಗಡನೆಗಳು ಸುಮಾರಾಗಿ ಜೀ.ಶಂ.ಪ. ಅವರು ಸೂಚಿಸಿದ ಛಾಯೆಯಲ್ಲಿವೆ.

'ಜಾನಪದ ಅಧ್ಯಯನ ಸಂಕ್ಷಿಪ್ತ ಇತಿಹಾಸ' (೧೯೮೧) ಎಂಬ ಕೃತಿಯಲ್ಲಿ ಡಾ। ನಂ. ತಪಸ್ವೀಕುಮಾರ ಅವರು ಕನ್ನಡ ಜನಪದ ಸಾಹಿತ್ಯ ಅಧ್ಯಯನವು ಬೆಳೆದು ಬಂದ ಕ್ರಮವನ್ನು ಅನುಸರಿಸಿ ಸಧ್ಯದ ಮಟ್ಟಿಗೆ ಸಮಾಧಾನವೆನಿಸಬಹುದಾದ ಆರು ಘಟ್ಟಗಳನ್ನು ಗುರುತಿಸಿಕೊಂಡಿದ್ದಾರೆ. ಡಾ. ನಂ. ತಪಸ್ವಿ ಕುಮಾರ ಅವರು ಮಾಡಿಕೊಂಡ ವಿಂಗಡನಾ ಘಟ್ಟಗಳು ಇಂತಿವೆ :

೧. ೧೯೦೦ ಕ್ಕಿಂತ ಹಿಂದಿನ ಕಾಲ : ಪೋಷಕ ಯುಗ

೨. ೧೯೦೧ – ೧೯೩೦ : ಅರುಣೋದಯ ಕಾಲ

೩. ೧೯೩೧ – ೧೯೫೦ : ಪ್ರಥಮ ಸುವರ್ಣ ಸಂಚಯ ಘಟ್ಟ

೪. ೧೯೫೧–೧೯೬೦ : ಸಮೃದ್ಧ ಸುಗ್ಗಿಯ ಕಾಲ

೫. ೧೯೬೧–೧೯೭೦ : ನವಮನ್ವಂತರ ದಶಕ

೬. ೧೯೭೧–೧೯೮೦ : ದ್ವಿತೀಯ ಸುವರ್ಣ ಸಂಚಯ ಘಟ್ಟ

ಈ ವಿಭಾಗೀಕ್ರಮದ ಅಡಿಯಲ್ಲಿ ಒಂದು ಚರಿತ್ರೆಯ ಕೃತಿಯನ್ನೇ ಬರೆಯಲು ಪ್ರಯತ್ನಿಸಿರುವುದು ಶ್ಲಾಘನೀಯ ಸಂಗತಿಯಾಗಿದೆ. ಡಾ. ನಂ.ತಪಸ್ವಿಕುಮಾರ ಅವರು ಕಾಲವನ್ನು ವಿಂಗಡಿಸುವ ಕ್ರಮ ಹಾಗೂ ಆಯಾ ಅವಧಿಗೆ ಕೊಡುವ ಹೆಸರುಗಳು ಕೂಡ ಸಮಂಜಸವೆನಿಸುತ್ತವೆ. ಒಂದು ಮತ್ತು ಎರಡನೆಯ ಘಟ್ಟಗಳನ್ನು ಹೊರತುಪಡಿಸಿ ಮುಂದಿನ ಕಾಲಘಟ್ಟಗಳನ್ನು ಹತ್ತು ವರ್ಷಗಳ ಅವಧಿಯ ಒಂದೊಂದು ಕಾಲಘಟ್ಟವನ್ನು ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಪ್ರತಿಯೊಂದು ವಿಭಾಗ ಕನ್ನಡ ಜಾನಪದ ಸಾಹಿತ್ಯ ಅಧ್ಯಯನ ಹಂತಹಂತವಾಗಿ ಬೆಳೆದುಬಂದ ಬಗೆಯನ್ನು ಗುರುತಿಸುತ್ತವೆ.

ಡಾ. ತಪಸ್ವಿಕುಮಾರ ಅವರು ಗುರುತಿಸಿದ ಮೊದಲ ಘಟ್ಟದಲ್ಲಿ ಪಾಶ್ಚಾತ್ಯರ ಸೇವೆಯೇ ಅಧಿಕವಾಗಿದೆ. ಅವರ ಕೆಲಸವೇ ನಮ್ಮವರಿಗೆ ಸ್ಫೂರ್ತಿ ನೀಡಲು, ಜನಪದ ಸಾಹಿತ್ಯದತ್ತ ಲಕ್ಷಹರಿಸಲು ಸಹಾಯವಾದುದರಿಂದ ಪೋಷಕ ಯುಗ ಎನ್ನುವ ಹೆಸರು ಸೂಕ್ತವೆನಿಸುತ್ತದೆ.

ಎರಡನೆಯ ಅವಧಿ ನಮ್ಮವರು ಜನಪದ ಸಾಹಿತ್ಯದತ್ತ ಕಾಳಜಿ ವಹಿಸಿ ದುಡಿಯಲು ಮುಂದಾದ ಕಾಲವದು. ಆಗಲೇ ಮಧುರಚೆನ್ನ, ಪಿ. ಧೂಲಾಸಾಹೇಬ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಈ ಮುಂತಾದ ಹಲಸಂಗಿ ಗುಂಪಿನ ಗೆಳೆಯರು, ಮಾಸ್ತಿ, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಬಿ.ಎಂ.ಶ್ರೀ. ಮುಂತಾದ ಕನ್ನಡ ಶಿಷ್ಟಸಾಹಿತ್ಯ ದಿಗ್ಗಜರು ಜನಪದ ಸಾಹಿತ್ಯದ ಪ್ರಚಾರಕ್ಕೆ ತೊಡಗಿದ್ದರು. ಮಹತ್ವದ ಸಭೆ ಸಮಾರಂಭಗಳಲ್ಲಿ ಜನಪದ ಸಾಹಿತ್ಯವನ್ನು ಕುರಿತು ಮಾತನಾಡಿದರು, ಪತ್ರಿಕೆಗಳಿಗೆ ಬರೆದರು. ಹೀಗಾಗಿ ಈ ಕಾಲವನ್ನು ಅರುಣೋದಯ ಕಾಲ ಎನ್ನುವುದು ಸಮಂಜಸವೆನಿಸುತ್ತದೆ.

ಮೂರನೆಯದು ನಿಜವಾಗಿಯೂ ಸುವರ್ಣ ಸಂಚಯ ಘಟ್ಟ. ಅದನ್ನು 'ಪ್ರಥಮ ಸುವರ್ಣಸಂಚಯ ಘಟ್ಟ' (೧೯೩೧–೪೦) ಎಂದಿದ್ದಾರೆ ಡಾ. ತಪಸ್ವಿಕುಮಾರ. ಈ ಅವಧಿಯಲ್ಲಿಯೇ ಹಲಸಂಗಿ ಗೆಳೆಯರ ಗುಂಪಿನ ಪ್ರಯತ್ನ ಫಲಬಿಟ್ಟಿದು. ಪರಿಣಾಮವಾಗಿ ಐತಿಹಾಸಿಕ ದಾಖಲೆಯಾದ ಕನ್ನಡ ಜನಪದ ಸಾಹಿತ್ಯದ ಪ್ರಥಮ ಸಾಹಿತ್ಯ ಸಂಕಲನ 'ಗರತಿಯ ಹಾಡು' (೧೯೩೧) ಹೊರಬಂದಿತು. ಜೊತೆಗೆ 'ಜೀವನ ಸಂಗೀತ' (೧೯೩೩), 'ಮಲ್ಲಿಗೆ ದಂಡೆ' (೧೯೩೫) ಕೃತಿಗಳು ಪ್ರಕಟಗೊಂಡವು.

ನಾಲ್ಕನೆಯ 'ಸಮೃದ್ಧ ಸುಗ್ಗಿಯ ಕಾಲ'ದಲ್ಲಿ ಡಾ। ಬಿ. ಎಸ್. ಗದ್ದಗಿಮಠ, ಕ.ರಾ.ಕೃಷ್ಣರಾವ ಅವರಂತಹ ಮಹಾಪ್ರಯತ್ನವಾದಿಗಳು ಕಾಣಿಸಿಕೊಂಡರು. ೧೯೫೧ ರಿಂದ ೧೯೬೦ರ ಕಾಲ ಸಮೃದ್ಧಿಯ ಕಾಲವೆನಿಸಲು ಈ ಇಬ್ಬರು ಮಹನೀಯರ ಪಾಲು ಬಹುಪ್ರಮುಖವಾಗಿದೆ.

೧೯೬೧ರಿಂದ ೭೦ರ ಅವಧಿ ನಿಜವಾಗಿ ಜನಪದ ಸಾಹಿತ್ಯ ಅಧ್ಯಯನದಲ್ಲಿ ಹೊಸ ದೃಷ್ಟಿ ಹಾಯ್ದು, ಪರಿಣಾಮವಾಗಿ ಹೊಸ ತಿರುವನ್ನು ಪಡೆದುಕೊಂಡ ಕಾಲವಾಗಿದೆ. ಆದುದರಿಂದ ಅದನ್ನು 'ನವಮನ್ವಂತರ ಕಾಲ' ಎಂಬಲ್ಲಿ ಅತಿಶಯವೇನೂ ಕಾಣದು.

೧೯೭೧–೮೦ ರ ಅವಧಿಯಲ್ಲಿ ವೈಜ್ಞಾನಿಕ ದೃಷ್ಟಿ ಬೆಳೆದು ಸಂಗ್ರಹ, ಸಂಪಾದನೆ, ವಿಮರ್ಶೆ, ಸಂಶೋಧನೆಗಳು ವಿಪುಲವಾಗಿ ನಡೆದವು. ಹೀಗೆ ಕನ್ನಡ ಜನಪದ ಸಾಹಿತ್ಯದ

ಅಧ್ಯಯನದ ಚರಿತ್ರೆಯಲ್ಲಿ ಅನೇಕ ಜನ ವಿದ್ವಾಂಸರು ಹಲವಾರು ಬಗೆಯಲ್ಲಿ ಘಟ್ಟಗಳನ್ನು ಗುರುತಿಸಿಕೊಳ್ಳಲು ಮಾಡಿದ ಪ್ರಯತ್ನಗಳಲ್ಲಿ ತಪಸ್ವಿಕುಮಾರರ ವಿಭಾಗ ಕ್ರಮ ತಕ್ಕಮಟ್ಟಿಗೆ ಸಮಾಧಾನಕರವಾಗಿದೆ. ಅವರು ಕಾಲಘಟ್ಟಗಳ ಅವಧಿ ಸೂಚಿಸುವುದು ಸರಿಯಾಗಿದೆ ಎಂದರೂ ಅವುಗಳಿಗೆ ಹೆಸರು ಕೊಡುವಲ್ಲಿ ಸ್ವಲ್ಪಮಟ್ಟಿನ ಲೇಖಕರ ಉತ್ಸಾಹ ಮುಂದಾಗಿರುವುದು ಭಾಸವಾಗುತ್ತದೆ.

ಈ ಎಲ್ಲ ಪ್ರಯತ್ನಗಳು ನಡೆದುದು ೧೯೭೦ ರಿಂದ ೧೯೮೦ರ ಅವಧಿಯಲ್ಲಿ. ಮುಂದೆ ಇಂತಹ ಪ್ರಯತ್ನಗಳು ನಡೆದಿರುವುದು ಕಂಡುಬರುವುದಿಲ್ಲ. ಹಿರಿಯರಲ್ಲಿ ಕಂಡುಬರುವ ಉತ್ಸಾಹ, ಅಧ್ಯಯನದ ಬಗೆಗಿನ ಕಾಳಜಿಗಳು ಮುಂದಿನವರಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಅಧ್ಯಯನಗಳು ಬಹುವ್ಯಾಪಕವಾಗಿ ನಡೆದಿವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಕನ್ನಡದಲ್ಲಿ ಜಾನಪದಶಾಸ್ತ್ರದ ಅಧ್ಯಯನ ಪ್ರಾರಂಭವಾದುದು ಜನಪದ ಸಾಹಿತ್ಯದಿಂದಲೇ ಎಂಬುದು ಗಮನಾರ್ಹ ಸಂಗತಿ. ಜನಪದ ಸಾಹಿತ್ಯವನ್ನು ನಮ್ಮವರು ಸ್ಥೂಲವಾಗಿ ವಿಭಾಗಿಸಿದ್ದು ಹೀಗೆ : ೧. ಜನಪದ ಪದ್ಯ ಸಾಹಿತ್ಯ, ೨. ಜನಪದ ಗದ್ಯ ಸಾಹಿತ್ಯ, ೩. ಜನಪದ ಮಿಶ್ರ ಸಾಹಿತ್ಯ ಅಥವಾ ಬಯಲಾಟಗಳು. ಇದೊಂದು ಸ್ಥೂಲವಾದ ವಿಂಗಡಣೆ.[೧] ನಮ್ಮ ಜನಪದ ಸಾಹಿತ್ಯದ ಅನೇಕ ಪ್ರಕಾರಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆ ಇನ್ನೂ ಆಗಬೇಕಾಗಿರುವ ಈ ಸಮಯದಲ್ಲಿ ಇಂತಹ ಒಂದು ಸ್ಥೂಲ ವಿಂಗಡಣೆ ಅನಿವಾರ್ಯವೂ ಕೂಡ.

ನಮ್ಮಲ್ಲಿ ಜಾನಪದಶಾಸ್ತ್ರದ ಅಭ್ಯಾಸ ಇನ್ನೂ ಸಂಗ್ರಹ, ಸಂಪಾದನೆಗಳ ಹಂತದಲ್ಲಿರುವಾಗಲೇ ನಮ್ಮ ಹಿರಿಯರ ಗಮನ ಬೇರೆ ರಾಷ್ಟ್ರಗಳಲ್ಲಿ ನಡೆದ ಜಾನಪದಶಾಸ್ತ್ರ ಅಭ್ಯಾಸದ ಕಡೆಗೆ ಹರಿದುದರಿಂದ – ಕನ್ನಡ ಜಾನಪದಶಾಸ್ತ್ರ, ಅದರಲ್ಲಿಯೂ ಜನಪದ ಸಾಹಿತ್ಯದ ಅಭ್ಯಾಸವು ಪಾಶ್ಚಾತ್ಯರ ಅಭ್ಯಾಸದ ತಿಳುವಳಿಕೆಯಿಂದಾಗಿ – ಸಂಗ್ರಹದ ಜೊತೆಗೆಯೇ ಶಾಸ್ತ್ರೀಯ ಅಭ್ಯಾಸವೂ ೧೯೬೦ ರ ಸುಮಾರಿಗೆ ಪ್ರಾರಂಭವಾಯಿತು. ಹೀಗಾಗಿ ನಮ್ಮಲ್ಲಿ ಸಂಗ್ರಹದ ಕೊರತೆಯೂ ಕಾಣಿಸಿಕೊಳ್ಳುತ್ತದೆ. ಜೊತೆಗೆ ಹೊರದೇಶಗಳು ಜಾನಪದಶಾಸ್ತ್ರ ಅಭ್ಯಾಸದ ಕ್ರಮದಲ್ಲಿ ಬಹುದೂರ ಸಾಗಿದುದನ್ನು ಮನಗಂಡು, ಆ ಕಂದಕ ತುಂಬಿಕೊಳ್ಳುವ ಆತುರದ ಮನೋಧರ್ಮವೂ ಕಾಣಿಸಿಕೊಳ್ಳುತ್ತದೆ. ಈ ಎಲ್ಲ ಭಾರಗಳ ಜೊತೆಗೆ ನಾವು ಸಾಗಬೇಕಾಗಿ ಬಂದುದರಿಂದ, ನಮ್ಮತನದ ಕೊರತೆ ಅಂದರೆ ಕನ್ನಡ ಜಾನಪದದ ಜೀವನಾಡಿಯನ್ನು ಕಂಡುಕೊಳ್ಳದೇ ಇರುವ ಕೊರತೆಯೂ ಎದ್ದು ಕಾಣುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ಕನ್ನಡ ಜನಪದ ಸಾಹಿತ್ಯ ಪ್ರಕಾರಗಳನ್ನು ಇನ್ನೂ ಖಚಿತವಾಗಿ ಅವುಗಳ ಸ್ಥಾನ – ಮಾನಗಳನ್ನು ಗುರುತಿಸಿಕೊಳ್ಳದ ನಾವು, ಅನಿವಾರ್ಯವಾಗಿ ಗದ್ಯ, ಪದ್ಯ ಮತ್ತು ಮಿಶ್ರ (ಬಯಲಾಟ) ಸಾಹಿತ್ಯಗಳೆಂದು ವಿಂಗಡಿಸಿಕೊಳ್ಳುವಲ್ಲಿ ಸಮಾಧಾನ ಪಡಬೇಕಾಗಿದೆ. ಈ ಮೂರು ಪ್ರಕಾರಗಳಲ್ಲಿ ಎರಡರ ನಿಲುವು ಸ್ಪಷ್ಟವಾಗಿದೆ. ಪದ್ಯದ

ಎಲ್ಲ ಪ್ರಕಾರಗಳನ್ನು ಒಂದೆಡೆ, ಮಿಶ್ರ ಸಾಹಿತ್ಯ ಎಂದಾಗ ಬಯಲಾಟಗಳನ್ನು ಇನ್ನೊಂದೆಡೆ ಕೂಡಿಹಾಕುತ್ತೇವೆ. ಈಗ ಹೆಚ್ಚು ಸಂಕೀರ್ಣವಾದುದೆಂದರೆ ಗದ್ಯ ಪ್ರಕಾರ ಮಾತ್ರ.

'ಉತ್ತರ ಕರ್ನಾಟಕದ ಜನಪದ ಗದ್ಯ ಸಾಹಿತ್ಯ' ಪ್ರಕಾರಗಳನ್ನು ಗುರುತಿಸಲು ಪ್ರಯತ್ನಿಸಿದ ಡಾ.ಎಂ.ಎಂ. ಕಲಬುರ್ಗಿ ಅವರು – ಗದ್ಯ ಸಾಹಿತ್ಯದಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳನ್ನು ಗುರುತಿಸುತ್ತಾರೆ (**ಮಾರ್ಗ ೨, ಪು. ೪೪೪**) :

೧. ಹಿರಿಯ ಪ್ರಕಾರ – ಕಥೆ, ಬಯಲಾಟ

೨. ಕಿರಿಯ ಪ್ರಕಾರ – ಪಡೆನುಡಿ, ಗಾದೆ, ಉಪಮೆ, ಒಗಟು, ಒಡಬು, ಒಡಪು, ಪರಾಕು, ಲಾಲಿ, ಮಕ್ಕಳಾಟ.

ಡಾ॥ ಎಂ.ಎಂ. ಕಲಬುರ್ಗಿ ಅವರು 'ಹಿರಿಯ ಪ್ರಕಾರ' ಮತ್ತು 'ಕಿರಿಯ ಪ್ರಕಾರ' ಎಂದು ಗುರುತಿಸಿಕೊಂಡು, 'ಹಿರಿಯ ಪ್ರಕಾರ'ದಲ್ಲಿ ಕಥೆಗಳ ಜೊತೆಗೆ ಬಯಲಾಟವನ್ನೂ ಸೇರಿಸಿದ್ದಾರೆ. ನಮ್ಮೆಲ್ಲರ ಸಹಜ ತಿಳುವಳಿಕೆಯಂತೆ ಬಯಲಾಟಗಳನ್ನು ಮಿಶ್ರಸಾಹಿತ್ಯ ರೂಪವೆಂದು ಪರಿಗಣಿಸಬೇಕು. ಬಯಲಾಟಗಳಲ್ಲಿ ಅತ್ಯಂತ ಶಕ್ತಿಶಾಲಿ ಗದ್ಯಮಾದರಿಗಳಾಗಿ ತೋರುವಂಥವು ಪಾತ್ರಧಾರಿಗಳ ಮಾತುಗಳು ಮತ್ತು ಸಾರಥಿ ಮಾತುಗಳು. ಅವುಗಳನ್ನು ಇಡೀ ಬಯಲಾಟದ ನಿಲುವಿನಲ್ಲೇ ಇಟ್ಟು ಯೋಚಿಸುವುದು ಹೆಚ್ಚು ಸಮಂಜಸವೆನಿಸುತ್ತದೆ. ಡಾ. ಕಲಬುರ್ಗಿ ಅವರ 'ಕಿರಿಯ ಪ್ರಕಾರ'ದ ಸಾಲಿನಲ್ಲಿ ಸೇರಿಕೊಂಡ ಲಾಲಿ, ಪಡೆನುಡಿ, ಉಪಮೆ, ಪರಾಕು, ಗಾದೆ, ಒಗಟು, ಒಡಪು, ಒಡಬು, ಮಕ್ಕಳಾಟದ ಹಾಡುಗಳನ್ನು ಕುರಿತು ಒಂದಿಷ್ಟು ಯೋಚಿಸಬೇಕು.

ಲಾಲಿಗಳು ನಮಗೆಲ್ಲ ತಿಳಿದಿರುವಂತೆ ತ್ರಿಪದಿಗಳು; ಹಾಡುಗಳು. ಪಡೆನುಡಿಗಳನ್ನು ಹಾಗೂ ಉಪಮೆಗಳನ್ನು ಶಿಷ್ಟಸಾಹಿತ್ಯದಲ್ಲಿ ಸಾಹಿತ್ಯ ಪ್ರಕಾರಗಳೆಂದು ಏಕೆ ಗಣಿಸಿಲ್ಲ? ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಉಪಮೆಗಳಂತೂ ಅಲಂಕಾರಗಳ ಉದಾಹರಣೆಗಳಾಗಿ ಮಾತ್ರ ಗಮನಿಸಲಾಗುತ್ತದೆ; ಪ್ರತ್ಯೇಕ ಸಾಹಿತ್ಯ ರೂಪಗಳಾಗಿ ಅಲ್ಲ. ರಾಜ–ಮಹಾರಾಜರನ್ನು ಕುರಿತು, ದೇವ–ದೇವತೆಗಳನ್ನು ಕುರಿತು 'ಪರಾಕುಗಳು' ನಮ್ಮಲ್ಲಿ ಬಳಕೆಯಲ್ಲಿವೆ. ಅವು ವಿಶೇಷಣಗಳಾಗಿ ತೋರುತ್ತವೆಯೇ ವಿನಃ ಪ್ರತ್ಯೇಕ ಸಾಹಿತ್ಯ ಪ್ರಕಾರಗಳಾಗಿ ಅಲ್ಲ.

ಇನ್ನು ಗಾದೆ, ಒಗಟು, ಒಡಪು, ಒಡಬು, ಮಕ್ಕಳಾಟದ ಹಾಡುಗಳು, ಆಣಿಪೀಣಿ ಒಟ್ಟಿಗೆ ಈ ಪ್ರಕಾರಗಳು ಪದ್ಯಗಂಧೀ ಗದ್ಯ ಸಾಹಿತ್ಯ ಮಾದರಿಗೆ ಸೇರುತ್ತವೆ. ಅವು ಶುದ್ಧ ಗದ್ಯಗಳೂ ಆಗಿಲ್ಲ, ಶುದ್ಧ ಪದ್ಯಗಳೂ ಆಗಿಲ್ಲ. 'ಪದ್ಯಗಂಧೀ ಗದ್ಯ' ಎನ್ನುವ ಮಾತು ಈಗಾಗಲೇ ಸಾಹಿತ್ಯ ಲೋಕದಲ್ಲಿ ಪರಿಚಿತವಾಗದ ವಿಶೇಷ ಪದವಾಗಿದ್ದು, ಈ ಮೇಲೆ ಉಲ್ಲೇಖಿತಗೊಂಡ ಜನಪದ ಸಾಹಿತ್ಯ ಪ್ರಕಾರಗಳನ್ನು ಹೀಗೆ ಗುರುತಿಸಲು ಯಾವ ಅಡ್ಡಿಯೂ ಇಲ್ಲ. ಶಿಷ್ಟ ಸಾಹಿತ್ಯದಲ್ಲಿ ವಚನಗಳ ಬಗೆಗಿನ ಚರ್ಚೆಯನ್ನು ನಾವು ಈ ಹಂತದಲ್ಲಿ ಗಮನಕ್ಕೆ ತಂದುಕೊಳ್ಳಬೇಕು. ಅವುಗಳನ್ನು ಗದ್ಯವೂ ಅಲ್ಲದ ಪದ್ಯವೂ ಅಲ್ಲದ ನಿಲುವಿನಲ್ಲಿ ಕನ್ನಡದ ವಿದ್ವಾಂಸರು ಗ್ರಹಿಸಿದ ರೀತಿಯನ್ನು ಇಲ್ಲಿ ನೆನೆದುಕೊಳ್ಳಬೇಕು.

ವಚನಗಳನ್ನು 'ಪದ್ಯ ಗಂಧೀ ಗದ್ಯ'ದ ಮಾದರಿಗಳು ಎಂದು ಹೇಳಿ, ಆ ಕಡೆ ಗದ್ಯ ಸಾಹಿತ್ಯದಲ್ಲೂ ಈ ಕಡೆ ಪದ್ಯ ಸಾಹಿತ್ಯದಲ್ಲೂ ಸೇರಿಸದೆ ಪ್ರತ್ಯೇಕವಾದ ಸ್ಥಾನವೊಂದನ್ನು ಕಲ್ಪಿಸಿಕೊಟ್ಟಂತೆ ಜನಪದ ಸಾಹಿತ್ಯದ ಈ ವಿಶೇಷ ಪ್ರಕಾರಗಳನ್ನೂ ಹಾಗೆ ಇಟ್ಟಲು ಅಡ್ಡಿಯಿಲ್ಲ.

ಈ ಎಲ್ಲ ಸಂದಿಗ್ಧತೆಗಳ ನಡುವೆ ಯಾವ ಆತಂಕವೂ ಇಲ್ಲದೆ ಜನಪದ ಗದ್ಯ ಸಾಹಿತ್ಯದ ಪ್ರಕಾರವಾಗಿ ಜನಪದ ಕಥೆಗಳ ಜೊತೆಗೆ, ಐತಿಹ್ಯ ಮತ್ತು ಪುರಾಣ ಕಥೆಗಳನ್ನು ಸೇರಿಸಿಕೊಂಡರೆ ಅಭ್ಯಾಸಕ್ಕೊಂದು ಶಾಸ್ತ್ರೀಯ ನೆಲೆಗಟ್ಟನ್ನು ಕಂಡುಕೊಂಡಂತಾಗುತ್ತದೆ.

***

೩. ಕನ್ನಡ ಜಾನಪದ ಶಾಸ್ತ್ರೀಯ ಅಧ್ಯಯನ

ನಮಗಿಂದು ಕೇವಲ ಸಂಗ್ರಹಗಳೆನಿಸುವ ಕನ್ನಡ ಜನಪದ ಸಾಹಿತ್ಯದ ಪ್ರಥಮ ಕೃತಿಗಳಾದ 'ಗರತಿಯ ಹಾಡು (೧೯೩೧), 'ಮಲ್ಲಿಗೆ ದಂಡೆ' (೧೯೩೫), ಜೀವನ ಸಂಗೀತ (೧೯೩೩)ಗಳಂಥ ಕೃತಿಗಳಲ್ಲಿ ಶಾಸ್ತ್ರೀಯತೆ ಹುಡುಕುವುದು ಹೇಗೆ? ಆದರೆ ಆ ಮೂರು ಕೃತಿಗಳನ್ನು ಮೀರಿಸುವಂತಹ, ಅವುಗಳನ್ನು ಮರೆಸುವಂತಹ ಕೃತಿಗಳು ವಿರಳ ಎಂದು ಹೇಳುವಲ್ಲಿ ಏನು ಗುಟ್ಟು ಅಡಗಿದೆ? ಅಲ್ಲಿಯ ಹಾಡುಗಳ ಆಯ್ಕೆ, ಸಂಪಾದನಾ ಕ್ರಮ, ಟಿಪ್ಪಣಿಗಳ ವಿವರ ಇವೆಲ್ಲ ನೋಡಿದಾಗ ಈ ಶಾಸ್ತ್ರೀಯ ಅಂಶಗಳೇ ಆ ಕೃತಿಗಳನ್ನು ಇನ್ನೂ ಉಳಿಸಿವೆ ಎನಿಸುತ್ತದೆ.

ಬರಬರುತ್ತ ಜಾನಪದ ಶಾಸ್ತ್ರದ ಬಗೆಗಿನ ನಮ್ಮ ತಿಳುವಳಿಕೆ ಬೆಳೆಯುತ್ತ ಬಂದಿದೆ. ಹೊರದೇಶಗಳಲ್ಲಿ ಜಾನಪದ ಶಾಸ್ತ್ರದ ಬಗೆಗೆ ನಡೆದ ಅಭ್ಯಾಸದ ರೀತಿಗಳು ನಮಗೆ ಗೊತ್ತಾದಂತೆ, ಸುಮ್ಮನೆ ತನ್ನಷ್ಟಕ್ಕೆ ತಾನು – ತನ್ನ ಲಯ ತಾನಗಳಲ್ಲಿ ಹೆಜ್ಜೆ ಹಾಕುತ್ತ ನಡೆದವನು, ಒಮ್ಮೆಲೇ ತನ್ನೆದುರಿಗೆ ತೆರೆದುಕೊಂಡ ಅದ್ಭುತ ಲೋಕವನ್ನು ಕಂಡು ಬೆರಗಾಗುವಂತೆ, ಎಲ್ಲವನ್ನೂ ನೋಡಿ ಆನಂದಿಸಬೇಕೆಂಬ ಸಂಭ್ರಮದಲ್ಲಿ ಅವನ ಓಡಾಟ ತೀವ್ರಗೊಂಬಂತೆ – ಫಿನ್‌ಲ್ಯಾಂಡ್, ಇಂಗ್ಲ್ಯಾಂಡ್, ಜರ್ಮನಿ, ಅಮೇರಿಕಾಗಳಲ್ಲಿಯ ಜಾನಪದದ ಬಗೆಗಿನ ಅಭ್ಯಾಸ ಅರಿತುಕೊಂಡು, ನಮ್ಮ ಚಿತ್ತ ಹೌಹಾರಿತು. ಅದರಂತೆಯೇ ಕನ್ನಡ ಜಾನಪದಶಾಸ್ತ್ರವನ್ನು ಅರಿಯಲು ನಮ್ಮ ಜನ ಮುಂದಾಯಿತು. ಈ ಕೆಲಸ ೧೯೬೦ ರಿಂದ ಇನ್ನಷ್ಟು ತೀವ್ರಗೊಂಡಿತು.

೧೯೬೦ ರಿಂದ ಕನ್ನಡ ಜಾನಪದಶಾಸ್ತ್ರ ಅಭ್ಯಾಸ ಕ್ರಮದಲ್ಲಿ ಅಪಾರ ಬದಲಾವಣೆ ಕಾಣಿಸಿದ್ದು ಸಹಜ. ಈ ಅವಧಿಯಲ್ಲಿ ಜಾನಪದಶಾಸ್ತ್ರದ ಬಗೆಗೆ – ಕರ್ನಾಟಕರಾಜ್ಯ, ಭಾರತ ದೇಶ ಮತ್ತು ಪ್ರಪಂಚ ಜಾನಪದಶಾಸ್ತ್ರದ ಬಗೆಗೆ ತಿಳುವಳಿಕೆಯುಳ್ಳ ಅನೇಕ ವಿದ್ವಾಂಸರು, ಆಸಕ್ತರು ಕನ್ನಡ ಜಾನಪದ ಭೂಮಿಕೆಗೆ ಅಧಿಕೃತವಾಗಿ ಪ್ರವೇಶಿಸಿದರು. ದಕ್ಷಿಣ ಕನ್ನಡದ ಕಡೆ ಡಾ. ಶಿವರಾಮ ಕಾರಂತ, ಅಮೃತ ಸೋಮೇಶ್ವರ, ಉತ್ತರ ಕನ್ನಡದ ಕಡೆ ಎಲ್.ಆರ್. ಹೆಗಡೆ, ಬಾಂಬೆ ಕರ್ನಾಟಕದ ಕಡೆ ಡಾ.ಬಿ.ಎಸ್. ಗದ್ದಗಿಮಠ, ಆರ್. ಸಿ. ಹಿರೇಮಠ, ಡಾ. ಸುಂಕಾಪುರ, ಜ್ಯೋತಿ ಹೊಸೂರ, ಬೆಟಗೇರಿ ಕೃಷ್ಣಶರ್ಮ, ಸಿಂಪಿ ಲಿಂಗಣ್ಣ, ಮದ್ರಾಸ ಕನ್ನಡದ ಕಡೆ ಮುದೇನೂರ ಸಂಗಣ್ಣ, ಹಾಗೆಯೇ ಮೈಸೂರಿನ

ಕಡೆ ಡಾ. ದೇ ಜವರೇಗೌಡ, ಹಾ.ಮಾ. ನಾಯಕ, ಸಿಪಿಕೆ ಹಾಗೂ ಡಾ.ಜೀ.ಶಂ. ಪರಮಶಿವಯ್ಯ – ಈ ಎಲ್ಲ ಹಿರಿಯ ತಲೆಮಾರಿನವರು ಕನ್ನಡ ಜನಪದ ಸಾಹಿತ್ಯದ ಅಭ್ಯಾಸವನ್ನು ಶಾಸ್ತ್ರೀಯ ಅಧ್ಯಯನದ ಕಡೆಗೆ ತಿರುಗಿಸಿದವರು.

೧೯೭೦ರ ಸುಮಾರಿಗೆ – ಬರಿದಾಗಿದ್ದ ಹೈದರಾಬಾದ ಕರ್ನಾಟಕದ ಕಡೆ ಡಾ.ಬಿ.ಬಿ ಹೆಂಡಿ ಅವರ ಪ್ರವೇಶದಿಂದಾಗಿ (೧೯೭೨) ಅಲ್ಲೂ ಜನಪದ ಸಾಹಿತ್ಯದ ಅಧ್ಯಯನ ಪ್ರಾರಂಭವಾಗಿ ಒಂದು ಶಿಸ್ತು ಕಾಣಿಸಿಕೊಂಡಿತು. ಡಾ. ಎಂ. ಎಸ್. ಲಠ್ಠೆ, ಡಾ. ಎಂ. ಜಿ. ಬಿರಾದಾರ ಈ ಭಾಗದಲ್ಲಿ ಜಾನಪದಶಾಸ್ತ್ರದ ಅಭ್ಯಾಸ ಬೆಳೆಯಲು ಶ್ರಮಿಸಿದರು. ದಕ್ಷಿಣ ಕನ್ನಡದ ಕಡೆ ಡಾ. ವಿವೇಕ ರೈ. ಧಾರವಾಡದ ಕಡೆ ಡಾ. ಸೋಮಶೇಖರ ಇಮ್ರಾಪೂರ, ಡಾ. ದೇವೇಂದ್ರಕುಮಾರ ಹಕಾರಿ ಹಾಗೂ ಮೈಸೂರಿನಲ್ಲಿ ಅನೇಕ ಹೊಸಬರ ತಂಡವೇ ಪ್ರವೇಶವಾಗಿ– ಜಾನಪದಶಾಸ್ತ್ರದ ಅಭ್ಯಾಸ ವೈಜ್ಞಾನಿಕದೆಡೆಗೆ ಸಾಗಿತು. ೧೯೮೦ರ ನಂತರ ಇಡೀ ಕರ್ನಾಟಕದ ತುಂಬ ಯುವ ವಿದ್ವಾಂಸರ ಪ್ರವೇಶವಾಗಿ, ಕನ್ನಡ ಜಾನಪದಶಾಸ್ತ್ರದ ಅಭ್ಯಾಸ ಅನೇಕ ದಿಗಂತಗಳನ್ನು ತೆರೆದುಕೊಂಡು ಸಾಗಿತು.

ಜಾನಪದಶಾಸ್ತ್ರ ಅಭ್ಯಾಸಕ್ಕೆ ಮತ್ತು ಪ್ರಕಟನೆಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ಥಾನ ಒದಗಿಸಿಕೊಟ್ಟ ಪ್ರಥಮ ವಿಶ್ವವಿದ್ಯಾಲಯವೆಂದರೆ ಧಾರವಾಡದ 'ಕರ್ನಾಟಕ ವಿಶ್ವವಿದ್ಯಾಲಯ'. ಪ್ರೊ. ಕೆ.ಜಿ. ಕುಂದಣಗಾರ ಅವರು ಬಿ.ಎಸ್.ಗದ್ದಗಿಮಠ ಅವರನ್ನು ತಮ್ಮ ಮಾರ್ಗದರ್ಶನದಲ್ಲಿ 'ಕನ್ನಡ ಜಾನಪದ ಗೀತೆಗಳು' ಎಂಬ ವಿಷಯವನ್ನು ಕುರಿತು ಪಿಎಚ್.ಡಿ ಅಧ್ಯಯನಕ್ಕೆ ತೊಡಗಿಸಿದ್ದು– ವಿಶ್ವವಿದ್ಯಾಲಯ ಮಟ್ಟದಲ್ಲಿ ಜಾನಪದ ಅಭ್ಯಾಸಕ್ಕೆ ಅವಕಾಶಮಾಡಿಕೊಟ್ಟದ್ದು ಪ್ರಪ್ರಥಮವೆನಿಸುತ್ತದೆ. ಇಲ್ಲಿಂದಲೇ ಜನಪದ ಸಾಹಿತ್ಯ ಕ್ಷೇತ್ರಕ್ಕೊಂದು ಶಾಸ್ತ್ರೀಯ ದೃಷ್ಟಿಕೋನವೂ ಪ್ರಾಪ್ತವಾಯಿತು. ೧೯೫೪ ಕ್ಕೆ ಡಾ. ಗದ್ದಿಗಮಠ ಅವರಿಗೆ ಪಿಎಚ್.ಡಿ. ಬಂದಿದೆ ಎಂದರೆ ಕನಿಷ್ಠ ಮೂರ್‍ನಾಲ್ಕು ವರ್ಷಗಳ ಹಿಂದೆ, ಸು. ೧೯೫೧–೫೨ ನೇ ವರ್ಷದಲ್ಲಿಯೇ ಡಾ. ಗದ್ದಗಿಮಠರು ಪಿಎಚ್.ಡಿ ಗೆ ಹೆಸರು ನೋಂದಾಯಿಸಿರಬೇಕು.೧೯೬೩ ರಲ್ಲಿ ಡಾ. ಗದ್ದಗಿಮಠ ಅವರ ಪ್ರಬಂಧ ಕರ್ನಾಟಕ ವಿಶ್ವ ವಿದ್ಯಾಲಯದಿಂದಲೇ ಪ್ರಕಟವಾಗಿ ಜನರ ಕೈಗೆ ಸೇರಿದ್ದು ಐತಿಹಾಸಿಕ ದಾಖಲೆ. ೧೯೯೬ ರಲ್ಲಿ ಎರಡನೇ ಮುದ್ರಣದಲ್ಲಿ ಪುಸ್ತಕದ ೨೦೦೦ ಪ್ರತಿಗಳು ಅಚ್ಚಾಗಿ, ಇಲ್ಲಿಯವರೆಗೆ ಹಲವಾರು ಮುದ್ರಣಗಳನ್ನು ಕಂಡ ಈ ಪ್ರಬಂಧವು ಕರ್ನಾಟಕದ ಪಿಎಚ್.ಡಿ. ಪ್ರಬಂಧಗಳ ಪ್ರಕಟನೆಯಲ್ಲಿಯೇ ಇತಿಹಾಸ ಸ್ಥಾಪಿಸಿದೆ. ಇದು ಈ ಕೃತಿಯ ಜನಪ್ರಿಯತೆ, ಅವಶ್ಯಕತೆ ಮತ್ತು ಅಲ್ಲಿಯ ಶಾಸ್ತ್ರೀಯ ಅಧ್ಯಯನದ ಮಹತ್ವವನ್ನು ಹೇಳಿಕೊಡುತ್ತದೆ.

೧೯೬೬ ರಲ್ಲಿ ಮೈ. ವಿ. ವಿ. ಕನ್ನಡ ಎಂ.ಎ. ನಲ್ಲಿ ಜಾನಪದ ಸಾಹಿತ್ಯದ ನೂರಂಕಿನ ಒಂದು ಪತ್ರಿಕೆಯನ್ನು ಪ್ರಾರಂಭಿಸಿದರೆ ಅದರ ಮರುವರುಷವೇ ೧೯೬೭ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ ಕನ್ನಡ ಎಂ.ಎ. ನಲ್ಲಿ ಜಾನಪದ ಸಾಹಿತ್ಯದ ಒಂದು ಪತ್ರಿಕೆಯನ್ನು ಪ್ರಾರಂಭಿಸಿತು. ಮುಂದೆ ೧೯೭೩ ರಲ್ಲಿ ಮೈ.ವಿ.ವಿ.; ೧೯೭೪ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಜಾನಪದಶಾಸ್ತ್ರ ಎಂ.ಎ. ಪ್ರಾರಂಭಿಸಿದವು. ೧೯೭೩ ರಲ್ಲಿ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ' ಪ್ರಾರಂಭಿಸಿ, ನಿರಂತರವಾಗಿ ನಡೆಸಿಕೊಂಡು

ಬರುತ್ತಿರುವ ಕೀರ್ತಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ. ಅಷ್ಟೇ ಅಲ್ಲದೆ ೧೯೫೪ ರಷ್ಟು ಹಿಂದೆ ಜಾನಪದ ಸಾಹಿತ್ಯದ ವಿಷಯಗಳನ್ನು ಪ್ರಚಾರ ಉಪನ್ಯಾಸಗಳಲ್ಲಿ ಅವಕಾಶಮಾಡಿಕೊಟ್ಟದ್ದು ಕರ್ನಾಟಕ ವಿಶ್ವವಿದ್ಯಾಲಯ ಎಂಬ ಮಾತೂ ಪ್ರಮುಖವಾಗಿ ದಾಖಲಾಗಬೇಕಾಗಿದೆ. ೧೯೫೪, ಜುಲೈ ತಿಂಗಳಲ್ಲಿ ಡಾ। ಎ. ಕೆ. ರಾಮಾನುಜನ್ ಅವರು ಬೆಳಗಾಂವ ಜಿಲ್ಲೆಯ ಚಿಕ್ಕೋಡಿಯಲ್ಲಿ 'ಗಾದೆಗಳು' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದ್ದಾರೆ, ಆ ಪುಸ್ತಕ ೧೯೫೫ ರಲ್ಲೇ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಹೀಗಾಗಿ ಜಾನಪದ ಸಾಹಿತ್ಯದ ಕೃತಿಗಳನ್ನು ಪ್ರಕಟನೆಗೆ ಅವಕಾಶ ಮಾಡಿಕೊಟ್ಟ ಕೀರ್ತಿಯೂ ಮೊದಲು ಕರ್ನಾಟಕ ವಿಶ್ವವಿದ್ಯಾಲಯಕ್ಕೇ ಸಲ್ಲುತ್ತದೆ.

೧೯೫೫ ರಲ್ಲೇ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾದ ಎ. ಕೆ. ರಾಮಾನುಜನ್ ಅವರ 'ಗಾದೆಗಳು' ಎಂಬ ಪುಸ್ತಿಕೆ (೧೯೬೦ ರಲ್ಲಿ ಎರಡನೇ ಮುದ್ರಣ ಗೊಂಡಿದೆ), ಹಾಗೂ ೧೯೬೫ರಲ್ಲಿ ಪ್ರಕಟವಾದ ಎಲ್.ಆರ್. ಹೆಗಡೆ ಅವರ 'ಜಾನಪದ ಕಥೆಗಳು' ಎಂಬ ಪುಸ್ತಿಕೆ – ಇವೆರಡೂ ೧೯೬೦ ರ ಸುತ್ತಮುತ್ತ ಹೊರ ಬಂದ ಜನಪದ ಸಾಹಿತ್ಯದ ಶಾಸ್ತ್ರೀಯ ಅಧ್ಯಯನದಲ್ಲಿ ಕಾಣಿಸಿಕೊಂಡ ಪುಟ್ಟ ಮತ್ತು ಪ್ರಥಮ ಹೆಜ್ಜೆಗಳಾಗಿವೆ.

೧೯೬೬ ರ ಪ್ರಾರಂಭದಲ್ಲಿ ಡಾ. ಜೀಶಂಪ ಅವರು Festival of Dance ಎಂಬ ವಿಶೇಷಾಂಕಕ್ಕೆ ಒಂದು ಲೇಖನ ಬರೆದು Folklore ದ ಬಗ್ಗೆ ಒಂದು ಕಲ್ಪನೆ ಒದಗಿಸಿದರು. ಜಾನಪದಶಾಸ್ತ್ರದ ಬಗೆಗೆ ನಡೆದ ಕಾರ್ಯದ ಬಗೆಗೆ ಮಾಹಿತಿ ಕೊಟ್ಟರು. ಅದೇ ವರ್ಷ ಡಿಸೆಂಬರ ೮, ೯ ಹಾಗೂ ೧೦ ರಂದು ಮೈಸೂರು ವಿಶ್ವವಿದ್ಯಾಲಯ ತನ್ನ ಸುವರ್ಣ ಮಹೋತ್ಸವದ ವಿಚಾರ ಸಂಕಿರಣಗಳಲ್ಲಿ ಪ್ರಥಮ ಗೋಷ್ಠಿಯಾಗಿ ಜಾನಪದ ಸಾಹಿತ್ಯ ಪ್ರಬಂಧಗಳ ಮಂಡನೆಗೆ ಅವಕಾಶ ಮಾಡಿಕೊಟ್ಟಿತು. ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣಾರಾಯ, ಗೊರೂರು ರಾಮಸ್ವಾಮಿ ಅಯ್ಯಂಗಾರ, ಜಿ. ವರದರಾಜರಾವ, ಶಿವರಾಮ ಕಾರಂತ ಹಾಗೂ ಡಾ. ಹಾ.ಮಾ. ನಾಯಕ ಅವರು ಪ್ರಬಂಧಗಳನ್ನು ಮಂಡಿಸಿದರು. "ಜಾನಪದ ಸಾಹಿತ್ಯ ಅದರ ಸ್ವರೂಪ" ಎಂಬ ಪ್ರಬಂಧದಲ್ಲಿ ಡಾ. ಹಾ. ಮಾ. ನಾಯಕರು Folklore ದ ಬಗೆಗೆ ಕನ್ನಡದಲ್ಲಿ ವಿವರಣೆ ನೀಡಿ, Folkloreಗೆ ಸಂವಾದಿಯಾಗಿ 'ಜಾನಪದ', Folkಗೆ 'ಜನಪದ' ಎಂಬ ಪರ್ಯಾಯ ಪದಗಳನ್ನು ಸೂಚಿಸಿದರು.

೧೯೬೭ ಡಿಸೆಂಬರ ೬ ಮತ್ತು ೭ ರಂದು ತರೀಕೆರೆಯಲ್ಲಿ ಐತಿಹಾಸಿಕ **'ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ'** ನಡೆಯಿತು. ಅದರ ಸಂಸ್ಮರಣ ಗ್ರಂಥ **'ಹೊನ್ನ ಬಿತ್ತೇವು ಹೊಲಕೆಲ್ಲ'** ಬಿಡುಗಡೆಯಾಯಿತು. ಇದರಲ್ಲಿ ಒಟ್ಟಿಗೆ ೫೮ ಜನ ವಿದ್ವಾಂಸರು ಜಾನಪದದ ಹಲವಾರು ಬಗೆಯ ೫೮ ಲೇಖನಗಳನ್ನು ಬರೆದಿದ್ದಾರೆ. ನಿಜವಾಗಿಯೂ ಕನ್ನಡ ಜಾನಪದ ಕ್ಷೇತ್ರಕ್ಕೆ ಒಂದು ಹೊಸ ಆಲೋಚನೆ ಕೊಟ್ಟ ಸಮ್ಮೇಳನ ಇದು. ಅದರ ದಾಖಲಾತಿಯಾಗಿರುವ 'ಹೊನ್ನ ಬಿತ್ತೇವು ಹೊಲಕೆಲ್ಲ' ಆ ಐತಿಹಾಸಿಕ ಸತ್ಯವನ್ನು ಸಾರಿ ಸಾರಿ ಹೇಳುತ್ತದೆ. ಡಾ. ಗದ್ದಗಿಮಠ ಅವರ ಪಿಎಚ್.ಡಿ. ಪ್ರಬಂಧದ ನಂತರ ಎರಡನೇ ಮೈಲಿಗಲ್ಲು, ಮತ್ತು ಇಡೀ ಕನ್ನಡ ಜಾನಪದ ಸಾಹಿತ್ಯವನ್ನು ಶಾಸ್ತ್ರೀಯ ದೃಷ್ಟಿಯಿಂದ ನೋಡಿದ, ನೋಡಬೇಕೆಂಬ ಬೀಜ ಅಂಕುರಿಸಿದ ಸಮ್ಮೇಳನ ಮತ್ತು ಅದರ ದಾಖಲಾತಿ

ರೂಪ 'ಹೊನ್ನ ಬಿತ್ತೇವು ಹೊಲಕೆಲ್ಲ' ಸ್ಮರಣ ಗ್ರಂಥ. ಇವೆರಡೂ ಅಪೂರ್ವ ಮತ್ತು ಅದ್ವಿತೀಯ. ೧೯೬೭ ರಲ್ಲೇ ಪ್ರಕಟವಾದ ಡಾ. ಜೀ. ಶಂ. ಪರಮಶಿವಯ್ಯ ಅವರ ಮೂರು ಮುಖ್ಯಪುಸ್ತಕಗಳು ೧) ಜನಪದ ಸಾಹಿತ್ಯ ಸಮೀಕ್ಷೆ, ೨) ನಮ್ಮ ಜನಪದ ಸಾಹಿತ್ಯ, ೩) ಕನ್ನಡ ಒಗಟುಗಳು– ಇವುಗಳನ್ನು ಅಗತ್ಯವಾಗಿ ದಾಖಲಿಸಲೇಬೇಕು. ಕನ್ನಡ ಜಾನಪದ ಸಾಹಿತ್ಯದ ಶಾಸ್ತ್ರೀಯ ಅಧ್ಯಯನದ ದೃಷ್ಟಿಯಲ್ಲಿ ಡಾ. ಜೀ.ಶಂ.ಪ. ಹಾಗೂ ಅವರ ಕೃತಿಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತ ಬಂದಿವೆ.ಇಲ್ಲಿಂದ ರಾಶಿರಾಶಿಯಾಗಿ ಜನಪದ ಸಾಹಿತ್ಯದ ಹಲವಾರು ಪ್ರಕಾರಗಳಿಗೆ ಸಂಬಂಧಿಸಿದ ಸಂಗ್ರಹಗಳು, ವಿಮರ್ಶೆಗಳು ಹೊರಬರತೊಡಗಿದವು. ಆ ಸಂಗ್ರಹಗಳ ಸಂಪಾದನಾ ಕ್ರಮದಲ್ಲಿ, ಜೊತೆಗೆ ಅವುಗಳ ಪ್ರಸ್ತಾವನೆಯಲ್ಲಿ ಶಾಸ್ತ್ರೀಯತೆ ಹಣಿಕಿಕ್ಕತೊಡಗಿತು. ೧೯೬೭ ರಿಂದ ೧೯೭೦ ರ ವರೆಗೆ ನಮ್ಮ ಹಿರಿಯರು ಜನಪದ ಗದ್ಯಸಾಹಿತ್ಯವೆಂದು ಪರಿಗಣಿಸುವ ಕಥೆ, ಗಾದೆ, ಒಗಟುಗಳ ಸಂಗ್ರಹಗಳು– ಶಾಸ್ತ್ರೀಯುವಾದ ಸಂಪಾದನಾಕ್ರಮ ಮತ್ತು ಪ್ರಸ್ತಾವನೆಯನ್ನೊಳಗೊಂಡು ಹೊರಬಂದವು.

ಕಥೆಗಳ ಸಾಲಿನಲ್ಲಿ ೧೯೬೭ ರಲ್ಲಿ ಒಂದು ಸಂಪುಟ, ೧೯೬೮ ರಲ್ಲಿ ಒಂದು ಸಂಪುಟ, ಹೀಗೆ 'ಜಾನಪದ ಕಥಾಮೃತ" ಎಂಬ ಎರಡು ಕಥಾ ಸಂಪುಟಗಳನ್ನು ಶಾಸ್ತ್ರೀಯವಾದ ಸಂಪಾದನೆಯೊಂದಿಗೆ ಪ್ರಕಟಿಸಿದ ಕೀರ್ತಿ ಧವಳಶ್ರೀ ಅವರಿಗೆ ಸಲ್ಲುತ್ತದೆ. ೧೯೬೯ ರಲ್ಲಿ ರಾಗೌ ಅವರ 'ಕರ್ನಾಟಕದ ಜನಪದ ಕಥೆಗಳು' ಪ್ರಕಟವಾಯಿತು. ಈ ಕೃತಿಗೆ ಬರೆದ ಪ್ರಸ್ತಾವನೆಯಲ್ಲಿ ಪಾಶ್ಚಾತ್ಯರಲ್ಲಿ ಜನಪದ ಕಥೆಗಳ ಕುರಿತು ನಡೆದ ಶಾಸ್ತ್ರೀಯ ದೃಷ್ಟಿಕೋನಗಳ ವಿವರಗಳನ್ನು ಕೊಟ್ಟಿರುವುದು ಆಗಿನ ಕಾಲಕ್ಕೆ ಜನಪದ ಕಥೆಗಳನ್ನು ಕುರಿತು ಗಮನ ಸೆಳೆಯಲು ಉಪಯುಕ್ತವಾಯಿತು. ಜನಪದ ಕಥೆಗಳ ಸಂಗ್ರಹ, ಸಂಪಾದನೆ ಮತ್ತು ಅದರ ವೈಜ್ಞಾನಿಕ ಅಭ್ಯಾಸದ ದೃಷ್ಟಿಯಿಂದ ೧೯೭೦ ರಲ್ಲಿ ಪ್ರಕಟವಾದ ಡಾ. ಜೀಶಂಪ ಅವರ 'ಕನ್ನಡ ಜನಪದ ಕಥೆಗಳು' ಎಂಬ ಕೃತಿ ಒಂದು ಮಹತ್ವದ ಹೆಜ್ಜೆ ಗುರುತಾಗಿದೆ. ಈ ಕೃತಿ ಪ್ರಕಟವಾದ ನಂತರ ಬಂದ ಕಥಾ ಸಂಗ್ರಹಗಳಲ್ಲೆಲ್ಲ ಇದರ ಪ್ರಭಾವ ಮುದ್ರೆ ಕಾಣುತ್ತದೆ.

೧೯೬೭ ರಲ್ಲಿ ಪ್ರಕಟವಾದ ಒಗಟುಗಳ ಸಾಲಿನಲ್ಲಿ ಡಾ. ಜೀಶಂಪ ಅವರ 'ಕನ್ನಡ ಒಗಟುಗಳು' ಪ್ರಮುಖವಾಗಿದೆ. ೧೯೭೦ ರಲ್ಲಿ ಪ್ರಕಟವಾದ ಸುಧಾಕರ ಅವರ 'ಜನಪದ ಬೆಡಗಿನ ವಚನಗಳು', ರಾಗೌ ಅವರ 'ನಮ್ಮ ಒಗಟುಗಳು' ಸಂಗ್ರಹಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಗಾದೆಗಳ ಸಾಲಿನಲ್ಲಿ ೧೯೬೭ ರಲ್ಲಿ ಪ್ರಕಟವಾದ ರಾಗೌ ಅವರ' ನಮ್ಮ ಗಾದೆಗಳು', ಎಚ್.ಎಸ್. ಅಚ್ಚಪ್ಪ ಅವರ 'ಗ್ರಂಥಸ್ಥ ಗಾದೆಗಳು' ಮುಖ್ಯವಾಗಿವೆ. ಹೀಗೆ ಕನ್ನಡ ಜನಪದ ಸಾಹಿತ್ಯದಲ್ಲಿ (ಗದ್ಯ, ಪದ್ಯ, ಸಹಿತ) ಶಾಸ್ತ್ರೀಯತೆಯ ನಾಂದಿ ಹಾಡಿದ ಕಾಲವೆಂದರೆ ೧೯೬೦ ರಿಂದ ೧೯೭೦ ರ ಕಾಲ ಎಂದು ಹೇಳುವಲ್ಲಿ ಯಾವ ಸಂಶಯವೂ ಇಲ್ಲ.

೧೯೭೧ – ೮೦ ರ ಕಾಲ ಕನ್ನಡ ಜಾನಪದಶಾಸ್ತ್ರದ ಪ್ರಮುಖ ವೈಜ್ಞಾನಿಕ ಘಟ್ಟ, ಹಿಂದಿನ ದಶಕದಲ್ಲಿ ಶಾಸ್ತ್ರೀಯತೆಗೆ ನಾಂದಿ ಹಾಡಿದರೆ, ಈ ದಶಕದಲ್ಲಿ ಅದು ಬೆಳೆದು

ನಿಂತಿತು. ಡಾ.ಹಾ.ಮಾ. ನಾಯಕ ಅವರ 'ಜಾನಪದ ಸ್ವರೂಪ' (೧೯೭೧) ಈ ದಶಕದ ವೈಜ್ಞಾನಿಕತೆಯನ್ನು ಉದ್ಘಾಟಿಸಿದರೆ, ಜ್ಯೋತಿ ಹೊಸೂರ ಅವರ 'ಹೆಸರ ಹೇಳ್ತಿನಿ ಒಡಪ ಕಟ್ಟಿ' (೧೯೭೧) ಕೃತಿ ಜನಪದ ಗದ್ಯ ಸಾಹಿತ್ಯದ ಇನ್ನೊಂದು ಶಾಖೆಯನ್ನು ಶಾಸ್ತ್ರೀಯವಾಗಿ ತೆರೆದಿಟ್ಟಿತು. ಈ ಹತ್ತು ವರ್ಷಗಳ ಅವಧಿಯಲ್ಲಿ ಜನಪದ ಗದ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನೂರಾರು ಸಂಗ್ರಹಗಳು ಬೆಳಕು ಕಂಡಿವೆ. ಕಥೆ, ಗಾದೆ, ಒಗಟು, ಒಡಪು ಈ ಪ್ರಮುಖ ಪ್ರಕಾರಗಳ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಡಾ. ಸಿಂಪಿ ಲಿಂಗಣ್ಣ, ಡಾ. ಬಿ.ಬಿ. ಹೆಂಡಿ, ಡಾ. ಎಂ. ಎಸ್. ಲಠ್ಠೆ, ಡಾ. ಸೋಮಶೇಖರ ಇಮ್ರಾಪುರ, ಡಾ. ಜೀಶಂಪ, ಡಾ. ಬಸವರಾಜ ಮಲಶೆಟ್ಟಿ, ಸಿ. ವೀರಣ್ಣ, ಟಿ.ಎಸ್. ರಾಜಪ್ಪ, ಕ್ಯಾತನಹಳ್ಳಿ ರಾಮಣ್ಣ, ಅಂಬಳಿಕೆ ಹಿರಿಯಣ್ಣ, ಹಿ. ಸಿ. ರಾಮಚಂದ್ರೇಗೌಡ, ರಾಗೌ, ತೀ. ನಂ. ಶಂಕರನಾರಾಯಣ ಮುಂತಾದ ವಿದ್ವಾಂಸರು ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ವೈಜ್ಞಾನಿಕವಾಗಿ ಸಂಪಾದಿಸಿ, ಅಭ್ಯಾಸಪೂರ್ಣ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದ್ದಾರೆ.

೧೯೮೦-೯೦ ಮತ್ತು ನಂತರದ ಒಂದೆರಡು ವರ್ಷ ಸೇರಿಸಿಕೊಂಡರೆ ಈ ಕಾಲದಲ್ಲಿ ಹಳೆ ತಲೆಮಾರಿನ ಜನ ಹಿಂದಕ್ಕೆ ಸರಿದು ಹೊಸ ತಲೆಮಾರಿನ ಯುವಕರು ಮುಂದೆ ಬಂದ ಕಾಲ ಇದು. ಈ ದೃಷ್ಟಿಯಿಂದ ಇದು ವೈಜ್ಞಾನಿಕ ನೆಲೆಯ ಸಂಕ್ರಮಣ ಕಾಲ. ಹೊಸ ಪೀಳಿಗೆ ಜಾನಪದ ಕ್ಷೇತ್ರಕ್ಕೆ ಕಾಲಿಸಿರಿದ್ದು ೧೯೮೦ ರ ಸುತ್ತಮುತ್ತ. ಈ ಹತ್ತು ಹನ್ನೆರಡು, ವರುಷಗಳ ಅವಧಿಯಲ್ಲಿ ಅವರೆಲ್ಲ ಕನ್ನಡ ಜಾನಪದಶಾಸ್ತ್ರವನ್ನು ಕಟ್ಟುನಿಟ್ಟಾಗಿ ಶಾಸ್ತ್ರೀಯ ಮಟ್ಟದಲ್ಲಿ ಅರಿಯುವ, ಪ್ರಯೋಗಿಸುವ ಕೆಲಸವನ್ನು ಮಾಡಿದ್ದಾರೆ. ವಿಶ್ವವಿದ್ಯಾಲಯಗಳ ಸಂಪರ್ಕ, ಜಾನಪದ ಅಕಾಡೆಮಿಯ ಸ್ಥಾಪನೆಯಾಗಿ ಅದು ನಡೆಸಿದ ವಿಚಾರ ಸಂಕಿರಣಗಳು, ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರದ ಅಂತರರಾಷ್ಟ್ರೀಯ ಕಮ್ಮಟಗಳು (೧೯೮೭) ಹಾಗೂ ಫೇಲೋಶಿಪ್‌ಗಳಂತಹ ಯೋಜನೆಯ ಸೌಲಭ್ಯಗಳು – ಅನೇಕ ಯುವಕರನ್ನು ವೈಜ್ಞಾನಿಕವಾಗಿ ಯೋಚನೆ ಮಾಡಲು ತೊಡಗಿಸಿದವು. ದಿನಾಂಕ ೩-೧೧-೧೯೮೦ ರಂದು 'ಜಾನಪದ ಮತ್ತು ಯಕ್ಷಗಾನ ಅಕಾಡೆಮಿ' ಹುಟ್ಟಿಕೊಂಡಿತು. ಅದು ೧೯೯೦ ರ ವರೆಗೆ ೨೮ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿತು. ಇದರಿಂದಾಗಿ ಇಡೀ ಕರ್ನಾಟಕದಲ್ಲಿ ಜಾನಪದಶಾಸ್ತ್ರದ ಅಭ್ಯಾಸ ತೀವ್ರವಾಗಿ ನಡೆಯಿತು. ಶಾಸ್ತ್ರೀಯ ದೃಷ್ಟಿಯಿಂದ ಜಾನಪದಶಾಸ್ತ್ರವನ್ನು ನೋಡುವ ಪ್ರವೃತ್ತಿಯನ್ನು ಯುವಕರಲ್ಲಿ ಬೆಳೆಯಿಸಿತು.

ಮೈಸೂರು ಮತ್ತು ಧಾರವಾಡಗಳಿಗೇ ಸೀಮಿತವಾಗಿದ್ದ ಜಾನಪದಶಾಸ್ತ್ರದ ವೈಜ್ಞಾನಿಕ ಅಭ್ಯಾಸ ಹೈದ್ರಾಬಾದ ಕರ್ನಾಟಕದಂಥ ಪ್ರದೇಶಕ್ಕೂ ಹಬ್ಬಿತು. ಹೀಗೆ ಇಡೀ ಕರ್ನಾಟಕದ ತುಂಬ ಜಾನಪದದ ಅಭ್ಯಾಸ ಪ್ರಾರಂಭವಾದ ದಶಕ ಇದು. ೧೯೮೨ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವೂ ಕೂಡ 'ಜಾನಪದ ಮತ್ತು ಕನ್ನಡ' ಎಂಬ ವಿಷಯ ಕುರಿತು ಹೊಸದಾಗಿ ಎಂ. ಎ. ಕೋರ್ಸ್ ಪ್ರಾರಂಭಿಸಿತು. ಡಾ. ಬಿ. ಬಿ. ಹೆಂಡಿ ಅವರು ಇದಕ್ಕೆಲ್ಲ ಕಾರಣಕರ್ತರು. ಇದಕ್ಕೆ ಪೂರ್ವಭಾವಿಯಾಗಿ ೧೯೭೪ ರಿಂದ ೧೯೭೮ ರ ವರೆಗೆ 'ಜನಪದ ಕಥೆ ಮತ್ತು ಹಾಡುಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟನಾ ಯೋಜನೆ' ಒಂದನ್ನು (ಇಡೀ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ) ಬಹು ಯಶಸ್ವಿಯಾಗಿ ಪೂರೈಸಿದ್ದರು.

೧೯೭೦ –೮೦ ರ ಅವಧಿಯಲ್ಲಿ ಬಂದ ಜನಪದ ಸಾಹಿತ್ಯ ಸಂಗ್ರಹಗಳ ಸಂಪಾದನೆ ಮತ್ತು ಅವುಗಳಿಗೆ ಬರೆದ ಪ್ರಸ್ತಾವನೆಗಳು ಮಾತ್ರ ಶಾಸ್ತ್ರೀಯವೆನಿಸಿದ್ದವು. ೧೯೮೦–೯೦ ರ ಅವಧಿಯಲ್ಲಿ – ಪ್ರತ್ಯೇಕವಾಗಿ ಶಾಸ್ತ್ರೀಯ ಅಧ್ಯಯನವನ್ನೊಳಗೊಂಡ ಗ್ರಂಥಗಳೇ ಕಾಣಿಸಿಕೊಳ್ಳುತ್ತವೆ. ಕಥೆಗಳಿಗೆ ಸಂಬಂಧಿಸಿದಂತೆ ಮೂರು ಜನ ತಮ್ಮ ಪಿಎಚ್.ಡಿ. ಅಧ್ಯಯನಗಳನ್ನು ಈ ಅವಧಿಯಲ್ಲಿ ಪೂರೈಸಿದ್ದಾರೆ: ೧೯೮೦ ರಲ್ಲಿ 'ಕನ್ನಡ ಜನಪದ ಕಥೆಗಳು' ಎಂಬ ಪ್ರಬಂಧಕ್ಕೆ ಡಾ.ಕೆ.ಆರ್.ಸಂಧ್ಯಾರೆಡ್ಡಿ ಅವರು, ಮೈಸೂರು ವಿ.ವಿ.ದಿಂದ, ಇಲ್ಲಿಂದಲೇ ಡಾ. ಹಿ.ಶಿ. ರಾಮಚಂದ್ರೇಗೌಡ ಅವರು 'ಕನ್ನಡ ಜನಪದ ಕಥಾವರ್ಗಗಳು' ಎಂಬ ಪ್ರಬಂಧಕ್ಕೆ ೧೯೮೨ರಲ್ಲಿ, ಹಾಗೂ ಡಾ. ವೀರಣ್ಣ ದಂಡೆ ಅವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು' ಎಂಬ ಪ್ರಬಂಧಕ್ಕೆ ೧೯೮೩ ರಲ್ಲಿ ಪಿಎಚ್.ಡಿ. ಪಡೆದಿದ್ದಾರೆ ಡಾ. ಸೋಮಶೇಖರ ಇಮ್ರಾಪುರ ಅವರು 'ಕನ್ನಡ ಒಗಟುಗಳು' ಎಂಬ ಪ್ರಬಂಧಕ್ಕೆ ಕ.ವಿ.ವಿ. ಯಿಂದ (೧೯೮೦), ಡಾ. ಪಿ. ಕೆ. ರಾಜಶೇಖರ ಅವರು 'ಕನ್ನಡ ಜನಪದ ಪುರಾಣಗಳು' ಎಂಬುದಕ್ಕೆ ಮೈಸೂರು ವಿ.ವಿ.ಯಿಂದ ಪಿಎಚ್.ಡಿ. ಪಡೆದಿದ್ದಾರೆ.

ಜನಪದ ಗದ್ಯ ಸಾಹಿತ್ಯದ ಶಾಸ್ತ್ರೀಯ ಅಧ್ಯಯನ, ಸಮೀಕ್ಷೆ, ಚರ್ಚೆಗಳು ೧೯೬೬ ನಂತರ ಆಗಾಗ ನಡೆದಿವೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಮೂರು ಪುಸ್ತಕಗಳು ಹಾಗೂ ಆರು ಲೇಖನಗಳು ಇದುವರೆಗೆ ಪ್ರಕಟವಾಗಿವೆ. ಅವುಗಳ ವಿವರಗಳು ಈ ಕೆಳಗಿನಂತಿವೆ :

ಪುಸ್ತಕಗಳು :

೧. ಜನಪದ ಸಾಹಿತ್ಯ, ಎಲ್. ಆರ್. ಹೆಗಡೆ, ೧೯೭೨.

೨. ನಮ್ಮ ಜನಪದ ಸಮೀಕ್ಷೆ. ಡಾ. ಸೋಮಶೇಖರ ಇಮ್ರಾಪುರ, ೧೯೭೩

೩. ಜನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ, ನಂ. ತಪಸ್ವೀಕುಮಾರ. ೧೯೮೧

ಲೇಖನಗಳು :

೧. ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಿ.ಪಿ.ಕೆ. ೧೯೬೭. (ಹೊನ್ನ ಬಿತ್ತೇವು ಹೊಲಕೆಲ್ಲ).

೨. ಜನಪದ ಗದ್ಯ ಕಥೆಗಳು, ಜೀಶಂಪ, ೧೯೭೮. (ಜಾನಪದ ಸಂಗಮ).

೩. ಕರ್ನಾಟಕದ ಜಾನಪದ ಅಧ್ಯಯನ, ಜೀಶಂಪ, ೧೯೭೮, (ಜಾನಪದ)

೪. ಕರ್ನಾಟಕದ ಜಾನಪದ ಅಧ್ಯಯನ, ಅಂಬಳಿಕೆ ಹಿರಿಯಣ್ಣ, ೧೯೮೯, (ಕರ್ನಾಟಕ ಜಾನಪದ).

೫. ಗಾದೆ ಒಗಟು ಒಡಬು ಒಡಪು ಸಂಬಂಧ, ಡಾ. ಸೋಮಶೇಖರ ಇಮ್ರಾಪುರ, ೧೯೮೯, (ಕರ್ನಾಟಕ ಜಾನಪದ).

೬. ಜನಪದ ಗದ್ಯ ಕಥನಗಳು, ಡಾ. ವೀರಣ್ಣ ದಂಡೆ, ೧೯೮೯, (ಕರ್ನಾಟಕ ಜಾನಪದ).

* * *

೪. ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ : ಪರಂಪರೆ

ಹೈದರಾಬಾದ ಕರ್ನಾಟಕ ಇಡೀ ಇಂಡಿಯಾದ ಇತಿಹಾಸಕ್ಕಿಂತ ಭಿನ್ನವಾದ, ಸುಮಾರಾಗಿ ಫಿನ್‌ಲ್ಯಾಂಡಿನಂತಹ ಇತಿಹಾಸವನ್ನು ಹೊಂದಿದೆ. ಫಿನ್‌ಲ್ಯಾಂಡ್ ೭೦೦ ವರುಷಗಳವರೆಗೆ (೧೧೫೫ – ೧೮೦೯) ಸ್ವೀಡನ್ನಿನ ಗುಲಾಮಗಿರಿಯನ್ನು ಅನುಭವಿಸಿ, ತನ್ನ ಭಾಷೆ ಸಂಸ್ಕೃತಿಯನ್ನು ಮರೆತ ನಾಡಾಗಿತ್ತು. ಅಲ್ಲಿಯ ಜನಪದ ಸಾಹಿತ್ಯ ಮಾತ್ರ ಫಿನ್ನಿಷ್ ಭಾಷೆ ಸಂಸ್ಕೃತಿಯನ್ನು ಹೊತ್ತು ಉಳಿಸಿತ್ತು. 'ಕಲೆವಾಲ' ಜನಪದ ಕಾವ್ಯ ಶೋಧದಿಂದಾಗಿ ಅಲ್ಲಿಯ ಜನರಲ್ಲಿ ತಮ್ಮ ಭಾಷೆ, ಸಂಸ್ಕೃತಿಗಳ ಅರಿವು ಉಂಟಾಗಿ ಪರಕೀಯ ಗುಲಾಮಗಿರಿಯಿಂದ ಸ್ವತಂತ್ರವಾಗಲು ಕಾರಣವಾಯಿತು. ಹಾಗೆಯೇ ಹೈದರಬಾದ ಕರ್ನಾಟಕವು ಅಧಿಕೃತವಾಗಿ ೩–೮–೧೩೪೭ ರಲ್ಲಿ ಕಲಬುರ್ಗಿಯಲ್ಲಿ ಬಹಮನಿ ರಾಜ್ಯ ಸ್ಥಾಪನೆಯಾದ ನಂತರ, ನಿರಂತರವಾಗಿ ಮುಸ್ಲೀಂ ಸಂಸ್ಕೃತಿ ಮತ್ತು ಉರ್ದು ಭಾಷೆಯ ವಿಪರೀತ ಪ್ರಭಾವ ಮತ್ತು ಬಳಕೆಯಿಂದಾಗಿ ಇಲ್ಲಿಯ ಸಂಸ್ಕೃತಿ ಮತ್ತು ಕನ್ನಡ ಭಾಷೆಗಳು ಜನರ ಅರಿವಿನಿಂದ ದೂರ ಸರಿದವು. ಆದರೆ ಜಾನಪದದಲ್ಲಿ ಮಾತ್ರ ಇವೆರಡರ ಉಳಿವಿಕೆ ಕಂಡುಬರುತ್ತದೆ. ಇಲ್ಲಿಯ ಕನ್ನಡ ಭಾಷೆ ಉಳಿದದ್ದು ಎರಡು ಅಂಶಗಳಿಂದಾಗಿ ಮಾತ್ರ : ೧) ಹೆಣ್ಣು ಮಕ್ಕಳಿಂದ, ೨) ಜನಪದ ಸಾಹಿತ್ಯದಿಂದ. ಅದಕ್ಕಾಗಿ ಕರ್ನಾಟಕದ ಬೇರೆಡೆಯ ಜನಪದ ಸಾಹಿತ್ಯಕ್ಕಿಂತ ಹೈದರಾಬಾದ ಕರ್ನಾಟಕದಲ್ಲಿಯ ಜನಪದ ಸಾಹಿತ್ಯ ವಿಶಿಷ್ಟವೆನಿಸುತ್ತದೆ.

ಹೈದರಬಾದ ಕರ್ನಾಟಕದಲ್ಲಿ ದೊರೆಯುವ ಜನಪದ ಸಾಹಿತ್ಯ ಬಹು ವಿಶಿಷ್ಟವಾಗಿರುವುದು ಸತ್ಯಸಂಗತಿ. ಇದು ೬೦೦ ವರುಷಗಳವರೆಗೆ ಮುಸ್ಲೀಂ ಸಂಸ್ಕೃತಿಗೆ ಒಳಗಾದುದರಿಂದ, ಇಲ್ಲಿ ಬಹುಸಂಖ್ಯಾತ ಹಿಂದೂಗಳ ಸಂಸ್ಕೃತಿಯು ಎಷ್ಟೋ ಅಂಶಗಳನ್ನು ಮುಸ್ಲೀಂರಿಂದ ಸ್ವೀಕರಿಸಿದೆ. ಬೀದರ ಜಿಲ್ಲೆಯಲ್ಲಿಯ ಭುಲಾಯಿ ಪದ್ಧತಿ ಬಹುಶಃ ಮುಸ್ಲೀಂರಿಂದ ಸ್ವೀಕರಿಸಿದುದಾಗಿರಬೇಕು. ಕಲಬುರ್ಗಿ ಜಿಲ್ಲೆಯಲ್ಲಿ ಭುಲಾಯಿ ಹಾಡುಗಳನ್ನು 'ಚಪ್ಪಳಗಿ ಹಾಡು' ಎಂದು ಕರೆಯುತ್ತಾರೆ. ಚಪ್ಪಾಳೆ ಬಾರಿಸುತ್ತ ಇವನ್ನು ಹಾಡುವುದರಿಂದ ಈ ಹೆಸರು ಬಂದಿರುವ ಸಾಧ್ಯತೆಯಿದೆ. ಮೋಹರಂ ಹಬ್ಬವನ್ನು ಇಲ್ಲಿಯ ಪ್ರತಿಯೊಂದು

ಮನೆಯವರೂ ಆಚರಿಸುತ್ತಾರೆ. ಈ ಪರಿಣಾಮವಾಗಿಯೇ ಹೈದರಾಬಾದ ಕರ್ನಾಟಕದಲ್ಲಿ ಮೋಹರಂ ಹಾಡುಗಳ ವಿಪುಲ ಫಸಲು ಕಾಣಿಸುತ್ತದೆ. ಮುಸ್ಲೀಂ ಆಚರಣೆಯಾದರೂ ಹಿಂದೂಗಳ ಕಥಾ ವಸ್ತುವುಳ್ಳ, ಅಷ್ಟೆ ಏಕೆ ಪುರಾಣ ಕಥೆಗಳುಳ್ಳ ಹಾಡುಗಳೂ ಈ ಸಮಯದಲ್ಲಿ ಬಳಕೆಗೆ ಬಂದಿವೆ.

ಈ ನಾಡಿನಲ್ಲಿ ಉರ್ದುವಿನ ಪ್ರಭಾವದಿಂದ ಕನ್ನಡ ಭಾಷೆ ಹಾಳಾಗಿ ಹೋಯಿತು ನಿಜ. ವಿಚಿತ್ರವೆಂದರೆ ಜನಪದ ಕಾವ್ಯಲೋಕದಲ್ಲಿ ಮುಸ್ಲೀಂ ಕವಿಗಳು ಕಾಣಿಸಿಕೊಂಡು ಕನ್ನಡವನ್ನು, ಹಿಂದೂಗಳ ಸಾಂಸ್ಕೃತಿಕ ವಿಷಯಗಳನ್ನು ಈ ಕವಿಗಳು ಬಳಸಿದ್ದಾರೆ, ಉಳಿಸಿದ್ದಾರೆ. ಕಲಬುರ್ಗಿ ಜಿಲ್ಲೆಯ – ಮಹಾಗಾಂವದ ಮೀರಾಸಾಹೇಬ (ಪಂಚಾಕ್ಷರಿ), ಬೇನೂರಿನ ಖಾಕಿಗುರು, ಸಾವಳಗಿಯ ಮಹಮ್ಮದಸಾಬ, ದೇಗಾಂವಿಯ ಹಜರತಸಾಬ, ನರೋಣಾದ ಹೈದರಾಲಿ, ಕಾಳಗಿ ಮಶಾಕಸಾಬ, ಭೈರಾಮಡಗಿ ಹೈದರಾಸಾಬ, ಬೀದರ ಜಿಲ್ಲೆಯ – ಕೊಳ್ಳೂರ ಹುಸನಸಾಬ, ಲಾಡವಂತಿಯ ಲಾಡ–ಮದನಸಾ, ಮಂಗಲಗಿಯ ನನ್ನುಸಾಬ ಈ ಮುಂತಾದ ಮುಸ್ಲೀಂ ಕವಿಗಳು ಹೈದರಾಬಾದ ಕರ್ನಾಟಕದಲ್ಲಿ ಕನ್ನಡ ಭಾಷೆ ಉಳಿಯಲು, ಜನಪದ ಸಾಹಿತ್ಯ ಬೆಳೆಯಲು ಕಾರಣರಾಗಿದ್ದಾರೆ. ಇವರಲ್ಲಿ ದೇಗಾಯಿ ಹಜರತ, ಬೇನೂರಿನ ಖಾಕಿಗುರು ಹಾಗೂ ಸಾವಳಗಿ ಮಹಮ್ಮದಸಾಬ ಇವರ ಕಾವ್ಯ ಒಂದೊಂದು ಪಿಎಚ್.ಡಿ. ಅಧ್ಯಯನಕ್ಕೆ ಅರ್ಹವಾಗಿವೆ.

ಮುಸ್ಲೀಂ ಕವಿಗಳು ಕನ್ನಡ ಭಾಷೆ ಉಳಿಸಿದಂತೆ, ಹಿಂದೂ ಕವಿಗಳು ಮುಸ್ಲೀಂ ಸಂಸ್ಕೃತಿಯನ್ನು ತಮ್ಮ ಕಾವ್ಯಗಳಿಗೆ ವಸ್ತುವಾಗಿಸಿದ್ದಾರೆ. ಇವರೆಲ್ಲ ಹಿಂದೂ –ಮುಸ್ಲೀಂ ಸೌಹಾರ್ದತೆಗೆ ಕಾರಣವಾಗಿದ್ದಾರೆ. ಈ ಮೂಲಕ ಇಲ್ಲಿಯ ಜನಪದ ಸಾಹಿತ್ಯ ಆ ಕೆಲಸ ಮಾಡಿದೆ ಎನ್ನಬೇಕು.

ಹೈದರಾಬಾದ ಕರ್ನಾಟಕದ ಇತಿಹಾಸವು (೧೫–೮–೧೯೪೭ ರಿಂದ ೧೮–೯–೧೯೪೮ ರ ವರೆಗಿನ ಇತಿಹಾಸ) ಲಿಖಿತ ರೂಪದಲ್ಲಿ ದೊರೆಯಲಾರದು. ಈ ಇತಿಹಾಸವನ್ನು ರೂಪಿಸಿಕೊಳ್ಳಲು ನಾವು ಜಾನಪದದ ಮೊರೆ ಹೋಗಬೇಕಾದುದು ಅವಶ್ಯ. ಹಲವಾರು ಪ್ರಚಲಿತ ಸಂಗತಿಗಳು, ಗಾದೆಗಳು, ಹಾಡುಗಳು, – ಈ ಇತಿಹಾಸವನ್ನು ಹೊತ್ತು ಇನ್ನೂವರೆಗೆ ಉಳಿದುಕೊಂಡು ಬಂದಿವೆ. ಈ ಹಿನ್ನೆಲೆಯಲ್ಲಿ ನಲವಡಿ ಶ್ರೀಕಂಠಶಾಸ್ತ್ರೀಗಳ "ಹೈದರಾಬಾದ ರಜಾಕಾರರ ಲಾವಣಿ", ಕಮಲಾಪುರ ವಿರುಪಾಕ್ಷ ಸ್ವಾಮಿಗಳ "ಭುಲಾಯಿ ಪದ", ಮುಚಳಂಬಿ ರಾಮಲಿಂಗಪ್ಪ ಅಂಬಲಗೆ ಅವರ "ರಜಾಕಾರ ಭುಲಾಯಿ ಪದ" ಗಮನಾರ್ಹ ದಾಖಲೆಗಳಾಗಿವೆ. ಇನ್ನೂ ನೂರಾರು ಸಾವಿರಾರು ಹಾಡುಗಳು ಆಗಿನಕಾಲದ ಜನಜೀವನ, ಹೋರಾಟ– ಇವುಗಳ ಸತ್ಯ ಕಥೆಯನ್ನು ಮೆರೆಯುತ್ತವೆ. ಅವೆಲ್ಲವನ್ನು ವ್ಯಾಪಕವಾದ ದಾಖಲಾತಿಗಳ ಮೂಲಕ ಸಂಗ್ರಹಿಸಿ, ಅಧ್ಯಯನಕ್ಕೆ ಬಳಿಸಿಕೊಂಡರೆ ಹೈದರಾಬಾದ ಕರ್ನಾಟಕದ ಕಳೆದುಹೋದ ಇತಿಹಾಸದ ಕೊಂಡಿಯನ್ನು ಗುರುತಿಸಿಕೊಳ್ಳಬಹುದಾಗಿದೆ.

ಬಯಲಾಟದ ವಿಶಿಷ್ಟ ಕಲೆಯಾದ ಪಾರಿಜಾತದ ಮೂಲ ಕಾವ್ಯ ಹುಟ್ಟಿದ್ದು ರಾಯಚೂರಿನ ಅಪರಾಳ ತಮ್ಮಣ್ಣ ಅವರಿಂದ. ಬೀದರ ಜಿಲ್ಲೆಯಲ್ಲಿ ಬಯಲಾಟದ

ಪ್ರಾಚೀನ ರೂಪಗಳಾದ ಬೀದಿ ಬಯಲಾಟಗಳು ದೊರೆಯುತ್ತವೆ. ಕಲಬುರ್ಗಿ ಜಿಲ್ಲೆಯಲ್ಲಿ ಬಹು ವಿಶಿಷ್ಟವಾದ 'ಗೌಳಗಿತ್ತಿ' ಡಪ್ಪಿನಾಟ ದೊರೆಯುತ್ತದೆ.

ರಾಯಚೂರಿನ ಶ್ರೀಕೃಷ್ಣ ಪಾರಿಜಾತ ಕಾವ್ಯ, ಕಲಬುರ್ಗಿಯ 'ಗೌಳಗಿತ್ತಿ' ಡಪ್ಪಿನಾಟ ಹಾಗೂ ಬೀದರಿನ ಬೀದಿ ಬಯಲಾಟದ 'ಕೃಷ್ಣ–ಗೊಲ್ಲತಿ' ಗೀತರೂಪಕ, ಇವೆಲ್ಲವುಗಳ ವಸ್ತು ಒಂದೇ ಆಗಿದೆ. ಕೃಷ್ಣ–ಗೋಪಿಕೆಯರಿಗೆ ಸಂಬಂಧಿಸಿದ ಈ ಕಥಾವಸ್ತು ಹೈದರಾಬಾದ ಕರ್ನಾಟಕದ ಒಂದೊಂದು ಜಿಲ್ಲೆಯಲ್ಲಿ– ಒಂದೊಂದು ರೂಪದಲ್ಲಿ ಸೃಷ್ಟಿಗೊಂಡು ಪ್ರಚಲಿತದಲ್ಲಿರುವುದು ಸೋಜಿಗದ ಸಂಗತಿ. ಇದು ಸಂಶೋಧನೆಗೆ ಅತ್ಯಂತ ಯೋಗ್ಯ ಸಮಸ್ಯೆಯಾಗಿದೆ.

ಕರ್ನಾಟಕದಲ್ಲಿ ಜಾನಪದ ಶಾಸ್ತ್ರದ ಅಭ್ಯಾಸ ಪ್ರಾರಂಭವಾದುದು ಜನಪದ ಸಾಹಿತ್ಯದಿಂದಲೇ. ಅಧಿಕೃತವಾಗಿ ಹಲಸಂಗಿ ಗೆಳೆಯರ ಗುಂಪು ೧೯೩೧ ರಲ್ಲಿ 'ಗರತಿಯ ಹಾಡು' ಸಂಕಲನ ಪ್ರಕಟಿಸಿದ್ದು ಪ್ರಥಮ ಪ್ರಯತ್ನ. ಡಾ.ಬಿ.ಎಸ್. ಗದ್ದಗಿಮಠ ಅವರು 'ಕನ್ನಡ ಜಾನಪದ ಗೀತೆಗಳು' ಎಂಬ ವಿಷಯ ಕುರಿತು ಸಂಶೋಧನೆ ನಡೆಸಿ, ೧೯೫೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದದ್ದು, ಜಾನಪದ ಅಧ್ಯಯನದ ಮೊದಲ ಕೆಲಸವೆನಿಸುತ್ತದೆ. ನಂತರ ಮೈಸೂರು ವಿಶ್ವವಿದ್ಯಾಲಯವು ೧೯೬೬ ರಲ್ಲಿ, ಕರ್ನಾಟಕ ವಿಶ್ವವಿದ್ಯಾಲಯವು ೧೯೬೭ ರಲ್ಲಿ ಎಂ.ಎ. ಕನ್ನಡ ಪಠ್ಯಕ್ರಮದಲ್ಲಿ ಜನಪದ ಸಾಹಿತ್ಯದ ನೂರಂಕಿನ ಒಂದು ಪತ್ರಿಕೆ ಪ್ರಾರಂಭಿಸಿದವು. ಮತ್ತೆ ಮುಂದೆ ಮೈಸೂರು ವಿಶ್ವವಿದ್ಯಾಲಯವು ೧೯೭೩ರಲ್ಲಿ ಜಾನಪದ ಶಾಸ್ತ್ರ ಎಂ.ಎ. ಪ್ರಾರಂಭಿಸಿದರೆ, ಪುನಃ ಅದರ ಮರುವರುಷವೇ ೧೯೭೪ರಲ್ಲಿ ಕರ್ನಾಟಕ ವಿ.ವಿ. ಯೂ ಎಂ.ಎ. ಜಾನಪದ ಶಾಸ್ತ್ರ ಪ್ರಾರಂಭಿಸಿತು. ಜೊತೆಗೆ ೧೯೭೩ ರಲ್ಲೇ (ಅಂದರೆ ಮೈಸೂರು ವಿ.ವಿ. ಜಾನಪದ ಶಾಸ್ತ್ರ ಎಂ.ಎ. ಪ್ರಾರಂಭಿಸಿದ ವರುಷವೇ) ಕ.ವಿ.ವಿ. 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ'ವನ್ನು ಪ್ರಾರಂಭಿಸಿತು. ಇದಕ್ಕೆಲ್ಲ ಮುಖ್ಯ ಕಾರಣಕರ್ತರು ಡಾ. ಆರ್. ಸಿ. ಹಿರೇಮಠ ಅವರು. ಆ ಸಮ್ಮೇಳನಗಳು ಇಂದಿಗೂ ನಡೆದುಕೊಂಡು ಬರುತ್ತಿರುವುದು ಕರ್ನಾಟಕ ಜಾನಪದ ಶಾಸ್ತ್ರ ಇತಿಹಾಸದಲ್ಲಿ ದಾಖಲಾಗತಕ್ಕಂಥದ್ದು.

ಈ ನಡುವೆ ಖಾಸಗಿಯಾಗಿ – ಉತ್ತರ ಕರ್ನಾಟಕದಲ್ಲಿ : ವಿಜಾಪೂರ ಜಿಲ್ಲೆಯಲ್ಲಿ ಹಲಸಂಗಿ ಗೆಳೆಯರ ಗುಂಪಿನ ಚೆನ್ನಮಲ್ಲಪ್ಪ, ರೇವಪ್ಪ, ಸಿಂಪಿ ಲಿಂಗಣ್ಣ, ಪಿ. ಧೂಲಾ ಮುಂತಾದವರು, ಧಾರವಾಡ ಕಡೆ ಡಾ. ಗದ್ದಗಿಮಠ, ಬೆಟಗೇರಿ ಕೃಷ್ಣಶರ್ಮ ಅವರು, ಬೆಳಗಾಂವ ಕಡೆ ಜ್ಯೋತಿ ಹೊಸೂರು, ಬಳ್ಳಾರಿ ಕಡೆ ಮುದೇನೂರ ಸಂಗಣ್ಣ ಮುಂತಾದವರು; ದಕ್ಷಿಣ ಕರ್ನಾಟಕದಲ್ಲಿ – ಚಿತ್ರದುರ್ಗ ಕಡೆ ಕೆ.ಆರ್. ಲಿಂಗಪ್ಪ, ಬೆಂಗಳೂರ ಕಡೆ ಕ.ರಾ.ಕೃ, ಕರಿಂಖಾನ, ಮತಿಘಟ್ಟ ಸಹೋದರರು, ಮೈಸೂರು ಕಡೆ ಡಾ. ಜೀಶಂಪ; ಅಲ್ಲದೆ – ಉತ್ತರ ಕನ್ನಡದಲ್ಲಿ ಎಲ್.ಆರ್. ಹೆಗಡೆ, ದಕ್ಷಿಣ ಕನ್ನಡದಲ್ಲಿ ಶಿವರಾಮ ಕಾರಂತ, ಶಿವರಾಮ ಐತಾಳ, ಅಮೃತ ಸೋಮೇಶ್ವರ – ಈ ಮುಂತಾದ ಹಿರಿಯ ತಲೆಮಾರಿನ ಜನ ಜನಪದ ಸಾಹಿತ್ಯಕ್ಕಾಗಿ ದುಡಿದಿರುವುದು ಕಂಡುಬರುತ್ತದೆ. ಇವರೆಲ್ಲ ಪ್ರಕಟಿಸಿದ ಸಂಗ್ರಹಗಳು ಇವತ್ತು ಅತ್ಯಂತ ಮೌಲಿಕವೆನಿಸುತ್ತವೆ.

ಹೈದರಾಬಾದ ಕರ್ನಾಟಕದ ದುರ್ದೈವವೆಂದರೆ – ಈ ಭಾಗದ ಜಾನಪದಕ್ಕಾಗಿ ದುಡಿಯುವ ವಿದ್ಯಾಸಂಸ್ಥೆಗಳಾಗಲೀ, ಹಿರಿಯ ತಲೆಮಾರಿನ ಜನಗಳಾಗಲೀ ಇಲ್ಲಿ ಕಾಣಿಸಿಕೊಳ್ಳದೇ ಇರುವುದು. ೧೯೭೦ ರಲ್ಲಿ ಕಲಬುರ್ಗಿಯಲ್ಲಿ ಪ್ರಾರಂಭವಾದ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಕನ್ನಡ ಪಠ್ಯಕ್ರಮದಲ್ಲಿ ಬೋಧಿಸಲಾಗುತ್ತಿದ್ದ ನೂರಂಕಿನ ಜನಪದ ಸಾಹಿತ್ಯ (ಎಂ.ಎ. ಪ್ರಥಮಕ್ಕೆ ಒಂದು ಪತ್ರಿಕೆ, ದ್ವಿತೀಯಕ್ಕೆ ಒಂದು) ಪತ್ರಿಕೆಯಿಂದಲೇ ಈ ಭಾಗದಲ್ಲಿ ಜಾನಪದದ ಅರಿವು ಮೂಡಲು ಕಾರಣವಾಯಿತು.

ಡಾ. ಬಿ.ಬಿ. ಹೆಂಡಿ ಅವರ ಕಾರ್ಯಸಾಧನೆ :

ಡಾ. ಬಿ.ಬಿ. ಹೆಂಡಿ ಅವರು ೧೯೭೨ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗಕ್ಕೆ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರೆಂದು ಬಂದ ನಂತರ ಜಾನಪದದ ಬಗೆಗಿನ ಚಟುವಟಿಕೆಗಳು ವ್ಯಾಪಕವಾಗಿ ನಡೆದವು. ಹೀಗೆ ನಡೆಯಲು ಡಾ. ಹೆಂಡಿ ಅವರಿಗೆ ಜಾನಪದದ ಬಗೆಗೆ ಇರುವ ಅಪಾರ ಪ್ರೀತಿ, ತಿಳುವಳಿಕೆಗಳು ಮುಖ್ಯ ಕಾರಣವೆನಿಸುತ್ತವೆ. ಸ್ವತಃ ಜಾನಪದದ ವಿದ್ವಾಂಸರೂ ಪ್ರತಿಭಾವಂತ ಕಲಾವಿದರೂ ಆದ ಡಾ. ಹೆಂಡಿ ಅವರು ಈ ಭಾಗದಲ್ಲಿ ಜಾನಪದದ ಅರಿವು ಮೂಡಿಸಿದ ಏಕಮೇವ ವ್ಯಕ್ತಿಯಾಗಿ ಕಾಣುತ್ತಾರೆ. ಇವತ್ತು ಎದ್ದು ಕಾಣುವ ಹೈದರಾಬಾದ ಕರ್ನಾಟಕದ ವಿದ್ವಾಂಸರೆಲ್ಲ – ಡಾ. ಹೆಂಡಿ ಅವರ ಪ್ರೋತ್ಸಾಹ, ಪ್ರೇರಣೆ ಮತ್ತು ಮಾರ್ಗದರ್ಶನಗಳ ಫಲವಾಗಿಯೇ ಮುಂದೆ ಬಂದವರು ಎಂಬುದು ಗಮನಾರ್ಹ ಸಂಗತಿ. ಅದಕ್ಕಾಗಿ ಡಾ. ಹೆಂಡಿ ಅವರು ಗೈದ ಜಾನಪದದ ಕೆಲಸಗಳೇನು? ಎಂಬುದನ್ನು ಅವಲೋಕಿಸುವುದು ಅಗತ್ಯವೆನಿಸುತ್ತದೆ:

೧. ಡಾ. ಬಿ. ಬಿ. ಹೆಂಡಿ ಅವರು ಕಲಬುರ್ಗಿಗೆ ಬಂದ ವರುಷವೇ ೧೯೭೨–೧೯೭೩ ರ ಅವಧಿಯಲ್ಲಿ (೧೯೭೩, ಮಾರ್ಚ್ ತಿಂಗಳಲ್ಲಿ) ಬೆಟಗೇರಿ ಕೃಷ್ಣಶರ್ಮ ಅವರಿಂದ ಜಾನಪದಕ್ಕೆ ಸಂಬಂಧಿಸಿದ ಮೂರು ದಿನಗಳ ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿದರು. ಇದು ಕಲಬುರ್ಗಿಯಲ್ಲಿ ನಡೆದ, ಜಾನಪದಕ್ಕೆ ಸಂಬಂಧಿಸಿದ ಪ್ರಪ್ರಥಮ ವಿಶೇಷ ಕಾರ್ಯಕ್ರಮವಾಗಿದೆ. ಈ ಭಾಗದ ಅನೇಕ ಜನ ವಿದ್ವಾಂಸರು, ಉಪನ್ಯಾಸಕರು, ವಿದ್ಯಾರ್ಥಿಗಳು – ಈ ಮೂರು ದಿನಗಳ ಕಾರ್ಯಕ್ರಮಕ್ಕೆ ಹಾಜರಾಗಿ ಜನಪದ ಸಾಹಿತ್ಯದ ವ್ಯಾಪ್ತಿಯನ್ನೂ, ಸವಿಯನ್ನೂ ಮನಗಂಡರು.

೨. 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ' ಎಂಬ ಯೋಜನೆಯೊಂದನ್ನು ೧೯೭೩ ರಲ್ಲಿ (ಜೂನ್ ತಿಂಗಳಲ್ಲಿ) ಪ್ರಾರಂಭಿಸಿದರು. ಇದಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ೧೦.೦೦೦ ರೂ. ಗಳ ಧನಸಹಾಯ ದೊರಕಿತ್ತು. ಈ ಯೋಜನೆಯಲ್ಲಿ – ಕನ್ನಡ ವಿಭಾಗದ ಅಧ್ಯಾಪಕರನ್ನು ಹಾಗೂ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಹೆಚ್ಚಿನ ಜನರಲ್ಲಿ ಜಾನಪದದ ಬಗ್ಗೆ ಆಸಕ್ತಿ ಬೆಳೆಯಲು ಕಾರಣರಾದರು.

೩. ಈ ಮೇಲಿನ ಯೋಜನೆ ಕಾರ್ಯ ಪ್ರಾರಂಭಿಸಿದ ಕೂಡಲೇ ಇನ್ನೊಂದು ಬಹುದೊಡ್ಡ ಜಾನಪದ ಯೋಜನೆಯನ್ನು ರೂಪಿಸಿ, ಯುಜಿಸಿ ಧನಸಹಾಯಕ್ಕಾಗಿ

ಒಪ್ಪಿಸಿದರು. "ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ ಮತ್ತು ಹಾಡುಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟನಾ ಯೋಜನೆ" – ಎಂಬ ಹೆಸರಿನ ಆ ಯೋಜನೆಯನ್ನು ಮನ್ನಿಸಿ, ಯುಜಿಸಿ ೬೫೦೦೦–೦೦ ರೂ. ಗಳ ಧನಸಹಾಯ ಕೊಡಲು ಮುಂದೆ ಬಂದಿತು. ತತ್ಫಲವಾಗಿ ೧೯೭೫ರಲ್ಲಿ ಈ ಯೋಜನೆ ತನ್ನ ಕಾರ್ಯ ಪ್ರಾರಂಭಿಸಿತು.

ಸ್ವತಃ ಡಾ. ಹೆಂಡಿ ಅವರು ಈ ಯೋಜನೆಯ ಮುಖ್ಯ ಸಂಶೋಧಕರಾಗಿ ಕೆಲಸ ನಿರ್ವಹಿಸಿದರು. ತಮ್ಮ ಜೊತೆಗೆ ಡಾ. ಎಂ. ಜಿ. ಬಿರಾದರ, ಡಾ. ಎಂ.ಎಸ್. ಲಠ್ಠೆ ಅವರನ್ನು ಸಂಶೋಧಕರೆಂದು ತೊಡಗಿಸಿಕೊಂಡರು. ಶಂಕರಗೌಡ ಬಿರಾದಾರ, ಡಾ.ಬಿ.ಎಸ್. ಪೊಲೀಸ ಪಾಟೀಲ, ಸೂಗಯ್ಯ ಹಿರೇಮಠ ಹಾಗೂ ನಾನು ಸಹಾಯಕ ಸಂಶೋಧಕರೆಂದು ಕೆಲಸ ಮಾಡಿದೆವು.

ಈ ಯೋಜನೆ ೧೯೭೫–೧೯೭೮ ರ ವರೆಗೆ ನಡೆಯಿತು. ಇದರಿಂದಾಗಿ ಜಾನಪದವನ್ನು ತಮ್ಮ ಆಸಕ್ತಿ ಕ್ಷೇತ್ರವನ್ನಾಗಿ ಆರಿಸಿಕೊಳ್ಳಲು ಈ ಎಲ್ಲ ಜನರಿಗೆ ಕಾರಣವಾಯಿತು. ಈ ಯೋಜನೆಯಲ್ಲಿ ಅನೇಕ ಜನ ಆಸಕ್ತರು, ಉಪನ್ಯಾಸಕರು, ಪ್ರಾಧ್ಯಾಪಕರು ಆಸ್ಥೆವಹಿಸಿ ಕೆಲಸಮಾಡಿದರು. ಇದರಿಂದಾಗಿ ಸಾವಿರಾರು ಪುಟಗಳಷ್ಟು ಜನಪದ ಕಥೆ, ಹಾಡುಗಳ ಸಂಗ್ರಹವಾಗಲು ಕಾರಣವಾಯಿತು. ಇವತ್ತಿಗೂ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಕಪಾಟುಗಳಲ್ಲಿ ಈ ಸಂಗ್ರಹ ತುಂಬಿ ಹೋಗಿರುವುದು ಅಲ್ಲಿಗೆ ಭೇಟಿ ನೀಡಿದ ಆಸಕ್ತರಿಗೆ ಮನವರಿಕೆಯಾಗುವ ಸಂಗತಿ. ಇಲ್ಲಿ ಸಂಕಲಿತ ವಿಷಯದ ವಿಶೇಷವೆಂದರೆ, ಅದರ ಬಹುಭಾಗ ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯದಿಂದಲೇ ತುಂಬಿಹೋಗಿರುವುದು.

ಡಾ। ಬಿ. ಬಿ. ಹೆಂಡಿ ಅವರ ಸಂಪಾದಕತ್ವದಲ್ಲಿ ಹೊರಬಂದ 'ಆಯ್ದ ಜನಪದ ಕಥನ ಗೀತೆಗಳು' (೧೯೮೧), 'ಹರದೇಶಿ ನಾಗೇಶಿ' (೧೯೮೩, ಇತರರೊಂದಿಗೆ), ಅಲ್ಲದೆ ನಿವೃತ್ತರಾಗುವ ಮುಂಚೆ ಅವರೇ ತಯಾರಿಸಿಟ್ಟಿದ್ದು, ನಂತರ ಪ್ರಕಟವಾದ 'ನೂರೆಂಟು ಜನಪದ ಕಥೆಗಳು' (೧೯೮೭, ಇತರರೊಂದಿಗೆ) ಈ ಸಂಗ್ರಹಗಳೆಲ್ಲ ಯುಜಿಸಿ ಯೋಜನೆಯಡಿ ಸಂಗ್ರಹಿತಗೊಂಡ ಹಾಡು ಮತ್ತು ಕಥೆಗಳ ಸಂಗ್ರಹಗಳೇ ಆಗಿವೆ.

೪. ಜಾನಪದಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳನ್ನು ಸಂಶೋಧನೆಗೆ ತೊಡಗಿಸಲು, ಪಿಎಚ್.ಡಿ ಪದವಿಗಾಗಿ ಜಾನಪದ ಸಮಸ್ಯೆಗಳನ್ನು ಕೊಟ್ಟವರಲ್ಲಿ ಡಾ. ಹೆಂಡಿ ಅವರೇ ಮೊದಲಿಗರು. ೧೯೭೫ ರಲ್ಲಿ ಶ್ರೀ ಶಂಕರಗೌಡ ಬಿರಾದಾರ ಅವರನ್ನು, ೧೯೭೭ ಡಾ. ವೀರಣ್ಣ ದಂಡೆ ಅವರನ್ನು ಜನಪದ ಸಾಹಿತ್ಯ ಕುರಿತ ವಿಷಯಗಳ ಮೇಲೆ ಪಿಎಚ್.ಡಿ. ಅಧ್ಯಯನಕ್ಕೆ ತೊಡಗಿಸಿದರು.

೫. ೧೯೭೮ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ನಡೆಯುವ ಅಖಿಲ ಕರ್ನಾಟಕ ಐದನೆಯ ಜಾನಪದ ಸಮ್ಮೇಳನವನ್ನು ಕಲಬುರ್ಗಿ ಸ್ನಾತಕೋತ್ತರ ಕನ್ನಡ ವಿಭಾಗದ ಆಶ್ರಯದಲ್ಲಿ ಕಲಬುರ್ಗಿಯಲ್ಲಿ ನಡೆಸಲು ಕಾರಣರಾದರು. ಈ ಸಮ್ಮೇಳನದ ಅಂಗವಾಗಿ ನಡೆದ ವಿಚಾರ ಸಂಕಿರಣಗಳ ಬಹುತೇಕ ವಿಷಯಗಳು ಹೈದರಾಬಾದ ಕರ್ನಾಟಕದ

ಜನಪದ ಸಾಹಿತ್ಯವನ್ನು ಕುರಿತೇ ಇದ್ದದ್ದು ಒಂದು ವಿಶೇಷ ಸಂಗತಿ. ಈ ಭಾಗದ ಜನಪದ ಕವಿಗಳು ಮತ್ತು ಅವರ ಕಾವ್ಯವನ್ನು ಕುರಿತಂತೆ ವಿಷಯ ವ್ಯಾಪ್ತಿಯನ್ನು ಹೊಂದಿಸಲಾಯಿತು. ಶರಣಬಸವೇಶ್ವರ ಅನುಭವಮಂಟಪದಲ್ಲಿ ದಿನಾಂಕ ೮ ಮತ್ತು ೯ನೇ ಜನೇವರಿ, ೧೯೭೮ ರಂದು ನಡೆದ ಈ ಸಮ್ಮೇಳನ ಹೆಚ್ಚು ಜನರು ವೀಕ್ಷಿಸುವಂತಾಯಿತು. ಈ ಭಾಗದ ಕಲಾಮೇಳಗಳ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಹೀಗಾಗಿ ಇದು ಒಂದು ದೃಷ್ಟಿಯಿಂದ ಹೈದರಾಬಾದ ಕರ್ನಾಟಕದ ಜಾನಪದ ಸಮ್ಮೇಳನವೇ ಅನಿಸಿಕೊಳ್ಳುತ್ತದೆ.

೬. ೧೯೮೩ರಲ್ಲಿ ತಾವೇ ರೂಪಿಸಿದ "ಕನ್ನಡ ಮತ್ತು ಜಾನಪದ" ಎಂ.ಎ. ಎಂಬ ಪ್ರತ್ಯೇಕ ಕೋರ್ಸನ್ನು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ಕಾರಣರಾದರು. ಇದು ನಿರಂತರವಾಗಿ ಈ ಭಾಗದಲ್ಲಿ ಜಾನಪದದ ಅಭ್ಯಾಸ ನಡೆಯಲು ಕಾರಣವಾಗಿದೆ. ಇವತ್ತು ಕನ್ನಡ ವಿಭಾಗದಲ್ಲಿ ಜಾನಪದದ ಬಗೆಗೆ ಏನು ನಡೆದರೂ ಅದು ಡಾ. ಬಿ.ಬಿ ಹೆಂಡಿ ಅವರ ಕಲ್ಪನೆಯ ಕೂಸಾಗಿರುತ್ತದೆ ಎಂಬುದನ್ನು ಗಮನಿಸಬೇಕು.

೭. ದಿನಾಂಕ ೨೮, ೨೯ ಹಾಗೂ ೩೦ ನವೆಂಬರ ೧೯೮೩ ರಲ್ಲಿ ಜಾನಪದ ಅಕಾಡೆಮಿಯ ಸಹಯೋಗದಿಂದ, ಕನ್ನಡ ವಿಭಾಗದಲ್ಲಿ 'ಸಣ್ಣಾಟಗಳ ವಿಚಾರಗೋಷ್ಠಿ' ಒಂದನ್ನು ನಡೆಸಿದರು. ಮೂರು ದಿನಗಳವರೆಗೆ ನಡೆದ ಈ ಗೋಷ್ಠಿಗಳು ತೀರ ಗಂಭೀರವಾಗಿದ್ದವು. ಕಲಬುರ್ಗಿಯ ಜಾನಪದ ಆಸಕ್ತರೆಲ್ಲ ಈ ಮೂರು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ, ಜಾನಪದದ ತಿಳುವಳಿಕೆಯನ್ನು ಹೆಚ್ಚಿಸಿಕೊಂಡರು.

೮. ಇಷ್ಟೆಲ್ಲ ಕೆಲಸ – ಸಂಘಟನೆ ಯಾವ ಸಪ್ಪಳವೂ ಇಲ್ಲದೆ ಏಕವ್ಯಕ್ತಿ ಮುಂದಾಳತ್ವದಲ್ಲಿ ಗೈದುದು ಅದ್ಭುತ ಸಂಗತಿ. ಹೀಗೆ ಒಂದು ಸಂಸ್ಥೆಯ ಕೆಲಸವನ್ನು ಇಷ್ಟೊಂದು ಅಗಾಧವಾಗಿ ನಿರ್ವಹಿಸುತ್ತಲೇ, ವೈಯಕ್ತಿಕವಾಗಿಯೂ ಬಹು ಎತ್ತರಕ್ಕೆ ಬೆಳೆದ ವ್ಯಕ್ತಿ ಡಾ. ಬಿ.ಬಿ. ಹೆಂಡಿ. ರಾಜ್ಯಮಟ್ಟದಲ್ಲಿ ನಡೆದ ಅನೇಕ ಜಾನಪದ ವಿಚಾರ ಸಂಕಿರಣಗಳಲ್ಲಿ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದರು. ಈ ಎಲ್ಲ ಕಾರಣಗಳಿಂದಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಲಕ್ಷ್ಮೇಶ್ವರದಲ್ಲಿ ನಡೆದ "ಅಖಿಲ ಕರ್ನಾಟಕ ೧೦ ನೇ ಜಾನಪದ ಸಮ್ಮೇಳನ"ದ ಅಧ್ಯಕ್ಷರಾಗಿ ಸ್ಥಾನ ಪಡೆದರು. ೧೯೯೧ ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಾಜ್ಯ ಪ್ರಶಸ್ತಿಗೆ ಪಾತ್ರರಾದರು.

ಇಷ್ಟೆಲ್ಲ ಒಂದು ವಿದ್ಯಾ ಸಂಸ್ಥೆಯ ಒಬ್ಬ ಪ್ರತಿನಿಧಿ – ಪ್ರಾಧ್ಯಾಪಕನಿಂದ ನಡೆದಿರುವಾಗ, ಪ್ರತ್ಯೇಕವಾಗಿ ಬೇರೆ ಸಂಸ್ಥೆ ಮತ್ತು ವ್ಯಕ್ತಿಗಳಿಂದ ಕೂಡ ಆಗಾಗ ಜಾನಪದದ ಬಗ್ಗೆ ಅರಿವು ಮೂಡಿಸುವ ಕೆಲಸ ಈ ಭಾಗದಲ್ಲಿ ನಡೆದವು :

೧. ಕಲಬುರ್ಗಿ ಆಕಾಶವಾಣಿಯು ಆಗಾಗ ಜನಪದ ಹಾಡುಗಳನ್ನು ಬಿತ್ತರಿಸುವ ಕೆಲಸ ಮಾಡುತ್ತಿತ್ತು.

೨. ವಿಶ್ವನಾಥರೆಡ್ಡಿ ಮುದ್ನಾಳ ಅವರು ೧೯೭೫ ಅಕ್ಟೋಬರ ೩ ನೇ ತಾರೀಕಿನಿಂದ ೫ನೇ ತಾರೀಕಿನವರೆಗೆ – ರಾಜ್ಯ ಮಟ್ಟದ "ಲಾವಣಿ ಹಾಗೂ ಗೀಗೀ ಸಮ್ಮೇಳನ"ವೊಂದನ್ನು

ನಡೆಸಿದರು. ಕರ್ನಾಟಕದ ನಾನಾ ಕಡೆಗಳಿಂದ ಬಂದ ೪೫ ಮೇಳಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಒಟ್ಟು ೨೨ ತಂಡಗಳಿಗೆ ನಾನಾ ಬಗೆಯ ಬಹುಮಾನಗಳನ್ನು ವಿತರಿಸಲಾಯಿತು. ತೀರ್ಪುಗಾರರಾಗಿ ಮುದೇನೂರ ಸಂಗಣ್ಣ, ಶಾಂತರಸ, ಸಿಂಪಿಲಿಂಗಣ್ಣ, ಕೆ.ಆರ್. ಲಿಂಗಪ್ಪ ಆಗಮಿಸಿದ್ದರು. ಅಂದಿನ ಉಪರಾಷ್ಟ್ರಪತಿ ಬಿ.ಡಿ. ಜತ್ತಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರೆ, ಎಚ್. ಎಲ್. ನಾಗೇಗೌಡ ಮುಖ್ಯ ಅತಿಥಿಗಳಾಗಿದ್ದರು. ಜಿ. ನಾರಾಯಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಲಬುರ್ಗಿಯ ಟೌನಹಾಲನಲ್ಲಿ ನಡೆದ ಈ ಸಮ್ಮೇಳನ ಒಂದು ಅದ್ಭುತ ಕೆಲಸ ಮಾಡಿತು. ಲಾವಣಿಕಾರರಲ್ಲಿ ಒಂದು ಹೊಸ ಚೈತನ್ಯ ಮೂಡಿಸಿತು. ಈ ಭಾಗದ ಜನರ ಗಮನ ಜನಪದ ಹಾಡುಗಾರಿಕೆಯತ್ತ ಹರಿಯುವಂತೆ ಮಾಡಿತು.

೩. ಇದೇ ಸಮಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ಜನಪದ ಕಲೆಗಳಿಗೆ ಸಂಬಂಧಪಟ್ಟಂತೆ ಈ ಭಾಗದಲ್ಲೂ ನಡೆದವು. ೧೯೭೬ ರಲ್ಲಿ ಆರು ತಿಂಗಳ ಕಾಲ, ಪ್ರತಿ ಜಿಲ್ಲೆಯಲ್ಲೂ ಇಬ್ಬಿಬ್ಬರು ಕಲಾ ಮಾಹಿತಿಗಾರರನ್ನು ನೇಮಿಸಿ, ಕಲಾಕಾರರ ಮತ್ತು ಕಲೆಗಳ ಮಾಹಿತಿಗಳನ್ನು ಸಂಕಲಿಸಲಾಯಿತು. ಜೊತೆಗೆ ಎಲ್ಲ ಜಿಲ್ಲೆಗಳಲ್ಲಿ ಒಂದು ಕಲಾ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಲಾಯಿತು. ಇಂತಹ ಕಲಾಪ್ರದರ್ಶನಗಳು ಹೈದರಾಬಾದ ಕರ್ನಾಟಕದ ಜಿಲ್ಲೆಗಳಲ್ಲೂ ನಡೆದವು.[೧] ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಮಹಾ ವಿದ್ಯಾಲಯಗಳ ಆವರಣದಲ್ಲಿ ಈ ಕಲಾ ಮಹೋತ್ಸವ ಏರ್ಪಟ್ಟಿತ್ತು. ಇದು ಜನಪದ ಕಲಾಕಾರರಲ್ಲೊಂದು ಹೊಸ ಚೇತನ ಮೂಡಿಸಿತು. ಈ ಯೋಜನೆಯಡಿ ಸಂಗ್ರಹಗೊಂಡ ಮಾಹಿತಿಯ ಪುಸ್ತಕ 'ಕರ್ನಾಟಕ ಜನಪದ ಕಲೆಗಳು' ಎಂಬ ಹೆಸರಿನಲ್ಲಿ ಕ.ಸಾ.ಪ. ದಿಂದ ೧೯೭೭ರಲ್ಲಿ ಪ್ರಕಟವಾಗಿದೆ.

ಡಾ| ಬಿ. ಬಿ. ಹೆಂಡಿ ಅವರ ಪರಂಪರೆ :

ಡಾ. ಹೆಂಡಿ ಅವರ ಅಗಾಧವಾದ ಪ್ರಭಾವ ಪ್ರೇರಣೆಗಳಡಿ ಜಾನಪದಕ್ಕೆ ತಮ್ಮನ್ನು ತೊಡಗಿಸಿಕೊಂಡು, ಹೈದರಾಬಾದ ಕರ್ನಾಟಕದ ಜಾನಪದ ವಿದ್ವಾಂಸರಲ್ಲಿ ಎದ್ದುಕಾಣುವ ಡಾ. ಎಂ. ಎಸ್. ಲಠ್ಠೆ, ಡಾ. ಎಂ.ಜಿ. ಬಿರಾದಾರ, ಡಾ. ಶಶಿಕಲಾ ಮೋಳ್ದಿ ಡಾ. ಸಂಗಮೇಶ ಸೌದತ್ತಿಮಠ, ಡಾ.ಬಿ.ಎಸ್. ಪೊಲೀಸಪಾಟೀಲ ಹಾಗೂ ಡಾ. ವೀರಣ್ಣ ದಂಡೆ ಮುಂತಾದವರು ಪ್ರಮುಖರಾಗಿದ್ದಾರೆ. ಇವರೆಲ್ಲ ನೇರವಾಗಿ ಡಾ. ಬಿ.ಬಿ. ಹೆಂಡಿ ಅವರು ಮುಖ್ಯಸ್ಥರಾಗಿದ್ದಾಗ, ಅವರು ಹಾಕಿಕೊಂಡ ಹಲವಾರು ಜಾನಪದದ ಕಾರ್ಯಕ್ರಮ ಗಳಲ್ಲಿ ಒಂದಿಲ್ಲಾ ಒಂದು ರೀತಿಯಿಂದ ಭಾಗಿಗಳಾಗಿ ಜಾನಪದದ ಬಗ್ಗೆ ಆಸಕ್ತಿ ಹೊಂದಿದವ ರಾಗಿದ್ದಾರೆ. ಈ ಮಾತಿಗೆ ಬಹುದೊಡ್ಡ ಸಾಕ್ಷಿಯೆಂದರೆ ೧೯೭೨ಕ್ಕಿಂತ ಮುಂಚೆ, ಅಂದರೆ ಡಾ. ಬಿ.ಬಿ. ಹೆಂಡಿ ಅವರು ಕಲಬುರ್ಗಿ ಸ್ನಾತಕೋತ್ತರ ಕೇಂದ್ರಕ್ಕೆ ಬರುವುದಕ್ಕಿಂತ ಮುಂಚೆ ಇವರ್‍ಯಾರೂ ಜಾನಪದದ ಬಗ್ಗೆ ಯೋಚಿಸಿರಲಿಲ್ಲ. ಬರೆದಿರಲಿಲ್ಲ ಎಂಬುದು.

ಡಾ| ಎಂ.ಎಸ್. ಲಠ್ಠೆ ಅವರು ಕನ್ನಡ ಅಧ್ಯಾಪಕರೆಂದು ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರಕ್ಕೆ ೧೯೭೨ರಲ್ಲಿ, ಅಂದರೆ ಡಾ.ಬಿ.ಬಿ. ಹೆಂಡಿ ಅವರು ಕಲಬುರ್ಗಿಗೆ ಬಂದ

ವರುಷವೇ ಬಂದರು. ಅವರು ಕಲಬುರ್ಗಿಗೆ ಬರುವ ಮುನ್ನ ಜಾನಪದದ ಬಗ್ಗೆ ಏನೂ ಕೆಲಸ ಮಾಡಿದಂತೆ ತೋರುವುದಿಲ್ಲ. ಅವರು ಜಾನಪದ ಕೆಲಸಕ್ಕೆ ತೊಡಗಿದ್ದು, ಆ ಮೂಲಕವಾಗಿ ಬೆಳೆದದ್ದು, ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಹೆಸರು ಮಾಡಿದ್ದು – ಕಲಬುರ್ಗಿಗೆ ಬಂದ ನಂತರವೇ. ಇಲ್ಲಿ ಅವರಿಗೆ ಡಾ. ಬಿ.ಬಿ. ಹೆಂಡಿ ಅವರ ಸಹಯೋಗ, ಪ್ರೇರಣೆ ದೊರೆಯಿತು. ಹೆಂಡಿ ಅವರು ತಾವು ಜಾನಪದದ ಬಗೆಗೆ ಹಾಕಿಕೊಂಡ ವಿವಿಧ ಯೋಜನೆಗಳಲ್ಲಿ ಇವರನ್ನು ತೊಡಗಿಸಿಕೊಂಡರು. ಹೀಗಾಗಿ ಡಾ. ಲಠ್ಠೆ ಅವರ ಜಾನಪದ ಸಂಗ್ರಹಕ್ಕೆ–ಕ್ಷೇತ್ರಕಾರ್ಯದ ಮುಖ್ಯ ಕ್ಷೇತ್ರ–ಕನ್ಯೆ ನೆಲವಾದ ಹೈದರಾಬಾದ ಕರ್ನಾಟಕವೇ ಆಯಿತು. ಅದಕ್ಕಾಗಿಯೇ ಅವರ ಜಾನಪದ ಚಿಂತನೆಯಲ್ಲಿ, ಬರವಣಿಗೆಯಲ್ಲಿ, ಅವರು ತಂದ ಸಂಗ್ರಹಗಳಲ್ಲಿ ಹೈದರಾಬಾದ ಕರ್ನಾಟಕದ ಪಾಲೇ ಮಹತ್ವದ್ದಾಗಿದೆ.

ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆಗಳು ಡಾ. ಲಠ್ಠೆ ಅವರ ವೈಯಕ್ತಿಕ ಅಭಿಲಾಷೆಗಳಾಗಿವೆ. ಅವರ ಜಾಣತನ, ವ್ಯವಹಾರ ಚತುರತೆಗಳು ಜನಪದ ಸಾಹಿತ್ಯ ಸಂಗ್ರಹಗಳ ಪ್ರಕಟನೆಗೆ ಸಹಾಯಕವಾಗಿವೆ. ಅನೇಕ ಜನ ದಾನಿಗಳನ್ನು ಪ್ರಕಾಶನದ ಕೆಲಸಕ್ಕೆ ಬಳಸಿಕೊಂಡಿದ್ದಾರೆ. ನೂರಾರು ಜನ ಹೈದರಬಾದ ಕರ್ನಾಟಕದ ವಿದ್ಯಾರ್ಥಿಗಳನ್ನು ಕ್ಷೇತ್ರಕಾರ್ಯಕ್ಕಾಗಿ ದುಡಿಸಿಕೊಂಡಿದ್ದಾರೆ. ಎಂತಲೇ ಸುಮಾರು ಇಪ್ಪತ್ತು ಜಾನಪದ ಸಂಗ್ರಹಗಳು ಹೊರಬರಲು ಕಾರಣವಾಗಿದೆ.

೧೯೭೨–೭೩ರ ಅವಧಿ, ಡಾ। ಹೆಂಡಿ ಅವರ ಸಹಯೋಗ ಪ್ರೇರಣೆಗಳಿಂದಾಗಿ ಡಾ. ಲಠ್ಠೆ ಅವರು ಜಾನಪದದ ಬಗ್ಗೆ ಆಸಕ್ತಿ ತಳೆಯಲು ಕಾರಣವಾದ ಅವಧಿಯಾಗಿದೆ. ೧೯೭೪ ರಲ್ಲಿ ಜಾನಪದಕ್ಕೆ ಸಂಬಂಧಿಸಿದಂತೆ ಅವರ ಕೆಲಸ ಪ್ರಾರಂಭವಾಯಿತು. ಒಂದು ಕಡೆ ಸಾಮೂಹಿಕವಾಗಿ ಡಾ। ಹೆಂಡಿ ಅವರ ಯೋಜನೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತ, ಇನ್ನೊಂದೆಡೆ ವೈಯಕ್ತಿಕವಾಗಿ ಜಾನಪದ ಸಂಗ್ರಹಕ್ಕೆ ತೊಡಗಿದರು. ೧೯೭೪, ಆ ಒಂದೇ ವರ್ಷದಲ್ಲಿ ವಿಷಯವನ್ನು ಸಂಗ್ರಹಿಸಿ ಒಮ್ಮೆಗೇ ಮೂರು ಪುಸ್ತಕಗಳನ್ನು ಹೊರತಂದ ಸಾಹಸ ಅವರದು. ಅವರ ಮೊದಲ ಸಂಗ್ರಹ 'ಉತ್ತರ ಕರ್ನಾಟಕದ ಗಾದೆಗಳು' ಎಂಬುದು ಡಾ.ಬಿ.ಬಿ. ಹೆಂಡಿ ಅವರ ಜೊತೆ ಸಂಪಾದಕತ್ವದಲ್ಲೂ, ಒಗಟು ಮತ್ತು ಒಡಪುಗಳ ಇನ್ನೆರಡು ಸಂಗ್ರಹಗಳನ್ನು ವೈಯಕ್ತಿಕವಾಗಿಯೂ ಹೊರತಂದರು.

ಇವರ ಪ್ರಾರಂಭದ ಸಂಗ್ರಹಗಳಿಗೆ "ಉತ್ತರ ಕರ್ನಾಟಕ" ಎಂಬ ವ್ಯಾಪ್ತಿಯ ಹೆಸರು ಸಂಗ್ರಹಗಳ ಹೆಸರಿನೊಂದಿಗೆ ಸೇರಿದ್ದು ಒಂದು ಸ್ವಾರಸ್ಯ. ಹಾಗೇಕೆ ಆಯಿತೆಂದರೆ ಆ ಅವಧಿಯಲ್ಲಿ ಉತ್ತರ ಕರ್ನಾಟಕದಿಂದ ಜಾನಪದ ಸಂಗ್ರಹಗಳು ಪ್ರಕಟವಾಗುತ್ತಲೇ ಇರಲಿಲ್ಲ. ದಕ್ಷಿಣ ಕರ್ನಾಟಕದಿಂದ ಅತ್ಯಂತ ಭರದಿಂದ ಜಾನಪದ ಸಂಗ್ರಹಗಳು ಹೊರಬರುತ್ತಿದ್ದ ಕಾಲ ಅದು. ಡಾ. ಲಠ್ಠೆ ಅವರು ಇದನ್ನು ಗಮನಿಸಿ ತಮ್ಮ ಸಂಗ್ರಹಗಳು ಉತ್ತರ ಕರ್ನಾಟಕದ ಪ್ರತಿನಿಧಿಗಳು ಎಂಬಂತೆ, ಹಾಗೆ ಹೆಸರಿಡಲು ಬಯಸಿದರು. ಆದರೆ ಅವರ ಸಂಕಲನಗಳ ಬಹುತೇಕ ವಿಷಯಗಳೆಲ್ಲ ಕಲಬುರ್ಗಿ ಜಿಲ್ಲೆಯಲ್ಲಿ, ಜೊತೆಗೆ ರಾಯಚೂರ ಮತ್ತು ಬೀದರ ಜಿಲ್ಲೆಗಳಲ್ಲಿ ಸಂಗ್ರಹಗೊಳ್ಳುತ್ತಿದ್ದವು. ಇದರ ಜೊತೆ ತಮ್ಮ ಜಿಲ್ಲೆಯಾದ ಬೆಳಗಾಂವದಿಂದ ಹಾಗೂ ತಾವು ಸಹಜವಾಗಿ ಸಂಪರ್ಕಿಸಲು ಸಾಧ್ಯವಾದ

ವಿಜಾಪೂರ ಜಿಲ್ಲೆಯಿಂದ ಸ್ವಲ್ಪ ಮಾಹಿತಿ ಕೂಡಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು. ಏನಿದ್ದರೂ ಹೈದರಾಬಾದ ಕರ್ನಾಟಕದ ಮಾಹಿತಿಯೇ ೭೫ ರಿಂದ ೮೦ ಪ್ರತಿಶತ ಕೂಡಿರುತ್ತಿತ್ತು ಎಂಬುದು ಗಮನಾರ್ಹ ಸಂಗತಿ. ಆದುದರಿಂದ ಅವರ ಬಹುತೇಕ ಸಂಗ್ರಹಗಳೆಲ್ಲ ಹೈದರಾಬಾದ ಕರ್ನಾಟಕದ ಪ್ರತಿನಿಧಿಗಳು ಎಂಬುದರಲ್ಲಿ ಎರಡು ಮಾತಿಲ್ಲ.

೧೯೭೮ ರಲ್ಲಿ ಪ್ರಕಟವಾದ "ಉತ್ತರ ಕರ್ನಾಟಕದ ಒಡಪುಗಳು" ಸಂಗ್ರಹಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದುದು ಅವರಿಗೆ ಜಾನಪದ ಕೆಲಸದಲ್ಲಿ ಮುಂದುವರೆಯಲು ಇನ್ನಷ್ಟು ಪ್ರೇರಣೆಯೊದಗಿಸಿತು. ನಂತರ ಬಂದ "ಉತ್ತರ ಕರ್ನಾಟಕದ ಹಂತಿಯ ಹಾಡುಗಳು" (೧೯೭೫), "ಚುಕ್ಕೋಳ ಪದಗಳು" (೧೯೭೬) ಅವರ ಸಂಗ್ರಹಗಳಲ್ಲಿ ತೀರ ಗಮನಾರ್ಹ ಕೃತಿಗಳು. "ಜನಪದ ಕವಿ ಚರಿತೆ" (೧೯೭೯) ಒಂದು ಉತ್ತಮ ಮಾಹಿತಿಗಳ ಶೋಧ ಸಂಗ್ರಹ. "ಬಯಲಾಟದ ಸಾರಥಿ" (೧೯೭೮) ಒಂದು ವಿಶಿಷ್ಟ ಸಂಗ್ರಹ. ಜನಪದ ಭಾಷೆಯ ಅಧ್ಯಯನಕಾರರಿಗೆ ಒಂದು ಉತ್ತಮ ಆಕರ ಗ್ರಂಥ. ಇಂಥದೇ ಉದ್ದೇಶಕ್ಕೆ "ಜನಪದ ನುಡಿಗಟ್ಟುಗಳು" (೧೯೮೧, ಇತರರೊಂದಿಗೆ) ಬಳಕೆಯಾಗುತ್ತದೆ. ಇವರು ಪ್ರಕಟಿಸಿದ ಸಣ್ಣಾಟ ಮತ್ತು ದೊಡ್ಡಾಟದ ಸಂಗ್ರಹಗಳು ಕೂಡ ಜನಪದ ಸಾಹಿತ್ಯ ಅಭ್ಯಾಸಿಗಳಿಗೆ ಉಪಯುಕ್ತವೆನಿಸುತ್ತವೆ. ಹೈದರಬಾದ ಕರ್ನಾಟಕದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವೈಯಕ್ತಿಕವಾಗಿ ಸಂಗ್ರಹದ ಕೆಲಸ ಮಾಡಿದವರು ಬೇರೆ ಯಾರೂ ಇಲ್ಲ. ಈ ದೃಷ್ಟಿಯಿಂದ ಕರ್ನಾಟಕದ ಜಾನಪದ ಇತಿಹಾಸದಲ್ಲಿ ಡಾ.ಲಠ್ಠೆ ಅವರು ಹೈದರಾಬಾದ ಕರ್ನಾಟಕದ ಪ್ರತಿನಿಧಿಯಾಗಿ ದಾಖಲಾಗುತ್ತಾರೆ.

ಇಷ್ಟೆಲ್ಲ ಸಂಗ್ರಹ ಸಂಪಾದನೆ ಮತ್ತು ಪ್ರಕಟನಾ ಕೆಲಸದಲ್ಲಿ ಮುಳುಗುತ್ತಲೇ, ನಾಡಿನ ಹಲವಾರು ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತ, ಹೈದರಾಬಾದ ಕರ್ನಾಟಕವನ್ನು ಪ್ರತಿನಿಧಿಸುತ್ತ ಬಂದಿದ್ದಾರೆ. ಈ ಎಲ್ಲ ಕೊಡುಗೆಗಳನ್ನು ಗಮನಿಸಿಯೇ ೧೯೮೪ ರಲ್ಲಿ ಜಾನಪದ ಅಕಾಡೆಮಿ ವಿದ್ವಾಂಸ ಪ್ರಶಸ್ತಿ ಇತ್ತಿತು. ೧೯೯೨ರಲ್ಲಿ "ಅಖಿಲ ಕರ್ನಾಟಕ ೧೯ನೇ ಜಾನಪದ ಸಮ್ಮೇಳನ"ದ (ಧಾರವಾಡ, ಎಪ್ರಿಲ್ ತಿಂಗಳ) ಅಧ್ಯಕ್ಷ ಸ್ಥಾನ ಪ್ರಾಪ್ತಿಯಾಯಿತು.

ಡಾ.ಎಂ.ಜಿ. ಬಿರಾದಾರ ಅವರು ಪ್ರತಿಭಾವಂತರು. ಜಾನಪದದ ಬಗೆಗೆ ತಿಳುವಳಿಕೆಯುಳ್ಳವರು. ವಿಮರ್ಶನ ಶಕ್ತಿ, ಸಂಶೋಧನ ಸೂಕ್ಷ್ಮತೆ ಪಡೆದವರು. ಅವರು ೧೯೭೩ ರಿಂದ ಜಾನಪದದ ಬಗ್ಗೆ ಯೋಚಿಸಲು ಬರೆಯಲು ತೊಡಗಿದರು. ನಾಡಿನ ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದರು. ಪರಿಣಾಮವಾಗಿ ಐಯ್ದು ಲೇಖನಗಳ "ಜಾನಪದ ಸಮಾಲೋಕನ" (೧೯೮೧), ಹತ್ತು ಲೇಖನಗಳ "ಜಾನಪದ ಜೀವಾಳ" (೧೯೮೭) ಕೃತಿಗಳು ಹೊರಬಂದಿವೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಟವಾದ "ಹರದೇಶೀ ನಾಗೇಶಿ" (೧೯೮೩), "ನೂರೆಂಟು ಜನಪದ ಕಥೆಗಳು" (೧೯೮೭) ಈ ಕೃತಿಗಳ ಸಂಪಾದಕರಲ್ಲಿ ಒಬ್ಬರಾಗಿದ್ದಾರೆ.

ಡಾ. ಶಶಿಕಲಾ ಮೋಳ್ದಿ ಅವರು ಹೆಣ್ಣುಮಕ್ಕಳ ಹಾಡುಗಳಿಗೆ ಸಂಬಂಧಪಟ್ಟ ಎರಡು ಸಂಕಲನಗಳನ್ನು ಪ್ರಕಟಿಸಿದ್ದಾರೆ. "ಹರದೆಯರ ಹಾಡುಗಳು" (೧೯೭೭). "ಚಾಜದ

ಹಾಡುಗಳು" (೧೯೮೯). ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಡಾ. ಲಠ್ಠೆ ಅವರು ಕೈ ಹಚ್ಚದೇ ಬಿಟ್ಟ ಮಹತ್ವದ ಪ್ರಕಾರಗಳನ್ನು ಡಾ. ಮೋಳ್ದಿ ಅವರು ಆರಿಸಿಕೊಂಡಿದ್ದಾರೆ ಎಂಬುದು. ಡಾ. ಸಂಗಮೇಶ ಸೌದತ್ತಿಮಠ ಅವರು ಮೂಲತಃ ಭಾಷಾವಿಜ್ಞಾನಿಗಳು. ಜಾನಪದವನ್ನು ಆ ದೃಷ್ಟಿಯಲ್ಲಿ ಗಮನಿಸಿದ ಮೊದಲಿಗರು. ತತ್ಫಲವಾಗಿ ಬಿಡಿಲೇಖನಗಳ ಸಂಗ್ರಹ "ಜನಪದ ಭಾಷಾ ಸಮೀಕ್ಷೆ "(೧೯೮೫) ಹೊರಬಂದಿದೆ. ದುರುದುಂಡೀಶ ಕವಿಯ "ಪ್ರಭು ದೇವರ ಯಕ್ಷಗಾನ" (೧೯೮೨, ಇತರರೊಂದಿಗೆ) ಶೋಧಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ. ಇದಕ್ಕೆ ಜಾನಪದ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿದೆ.

ಡಾ. ಬಸವರಾಜ ಪೊಲೀಸಪಾಟೀಲರು ಡಾ. ಬಿ.ಬಿ. ಹೆಂಡಿ ಅವರ ಜಾನಪದ ಯೋಜನೆಯಲ್ಲಿ "ಸಹಾಯಕ ಸಂಶೋಧಕ"ರೆಂದು ದುಡಿದವರು. ತತ್ಫಲವಾಗಿ "ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯ" ಎಂಬ ವಿಷಯ ಕುರಿತು ಡಾ.ಎಂ.ಎಸ್. ಲಠ್ಠೆ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನ ಮಾಡಿದರು (೧೯೮೪). ಈ ಪ್ರಬಂಧದಲ್ಲಿ ವ್ಯಾಪಕವಾಗಿ ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯದ ಸಮೀಕ್ಷೆ ಮಾಡಲಾಗಿದೆ. "ಜಾನಪದ ಭಾರತಿ" (೧೯೮೫). 'ಜಾನಪದ ಸಿರಿ' (೧೯೯೦) ಎಂಬೆರಡು ಬಿಡಿಲೇಖನಗಳ ಸಂಗ್ರಹಗಳು ಹೊರಬಂದಿವೆ.

ಕೊನೆಯದಾಗಿ ನಾನು ಗ್ಯೆದ ಜಾನಪದದ ಬಗೆಗಿನ ಕೆಲ ಮಾಹಿತಿಗಳನ್ನು ಇಲ್ಲಿ ಸೇರಿಸಲು ಬಯಸುತ್ತೇನೆ. ಡಾ. ಹೆಂಡಿ ಅವರ ಯೋಜನೆಯಲ್ಲಿ "ಸಹಾಯಕ ಸಂಶೋಧಕ" ಎಂದು ದುಡಿಯುವ ಅವಕಾಶ ನನಗೆ ದೊರಕಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಮೂಡಲು ಕಾರಣವಾಯಿತು ೧೯೭೭ ರಲ್ಲಿ "ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಂಯ ಮತ್ತು ಮಾದರಿಗಳು" ಎಂಬ ವಿಷಂಯ ಸೂಚಿಸಿ, ತಮ್ಮ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ತೊಡಗಿಸಿದವರು ಡಾ.ಬಿ.ಬಿ. ಹೆಂಡಿ ಅವರೇ. ಇಲ್ಲಿಂದ ನಾನು ಸ್ವತಂತ್ರವಾಗಿ ಕನ್ನಡ ಜಾನಪದದ ಬಗ್ಗೆ ಯೋಚಿಸಲು ಕಾರಣವಾಯಿತು. ತತ್ಫಲವಾಗಿ ಆರು ಲೇಖನಗಳ ಪ್ರಥಮ ಕೃತಿ "ಜನಪದ ಕಥೆ ವಸ್ತು ಮತ್ತು ತಂತ್ರ" ಪುಸ್ತಕ ೧೯೮೧ರಲ್ಲಿ ಹೊರ ಬಂದಿತು. ಆ ವರ್ಷದ ಕರ್ನಾಟಕ ಸರಕಾರದ "ದೇವರಾಜ ಬಹದ್ದೂರ ಪ್ರಶಸ್ತಿ"ಯೂ ಈ ಪುಸ್ತಕಕ್ಕೆ ಬಂದಿತು. ೧೯೮೨ರಲ್ಲಿ "ಜನಪದ ಕಾವ್ಯ ಮೀಮಾಂಸೆ" ಪ್ರಕಟವಾಯಿತು. 'ಶಿಷ್ಟಕಾವ್ಯ'ಕ್ಕೆ ಒಂದು ತತ್ವವಿರುವಂತೆ, ಆ ಹಿನ್ನೆಲೆಯಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳು ಹುಟ್ಟಿಕೊಂಡಂತೆ – ಜನಪದ ಕಾವ್ಯದ ಹುಟ್ಟಿನ ಹಿಂದೆಯೂ ತತ್ವವಿರುತ್ತದೆ ಎಂಬುದನ್ನು ಇಲ್ಲಿಯ ಪರಿಕಲ್ಪನೆಗಳ ಅಡಿಯಲ್ಲಿ ಚರ್ಚಿಸಲಾಗಿದೆ. ಕಾವ್ಯದ ಸ್ವರೂಪ, ಕಾರಣ, ಪ್ರಯೋಜನಗಳಲ್ಲದೆ – ಅವುಗಳ ಧಾಟಿ, ಸೊಲ್ಲು, ಛಂದಸ್ಸು ಇತ್ಯಾದಿಗಳ ಬಗ್ಗೆ ವಿಚಾರಿಸಲಾಗಿದೆ. ಶಿಷ್ಟ ಕಾವ್ಯದ ಹುಟ್ಟಿಗೂ ಜನಪದ ಕಾವ್ಯದ ಹುಟ್ಟಿಗೂ ವ್ಯತ್ಯಾಸವಿರುವುದನ್ನು ಗಮನಿಸಿ, ಜನಪದ ಕಾವ್ಯವನ್ನು ತೂಗಿ ನೋಡಲು – ವಿಮರ್ಶಿಸಲು ಪ್ರತ್ಯೇಕ ಮಾನದಂಡಗಳ ಅವಶ್ಯ ಇರುವುದನ್ನು ಮನಗಾಣಿಸಲಾಗಿದೆ. ಈ ನಿಟ್ಟಿನಲ್ಲಿ – ಈ ಪುಸ್ತಕ ಒಂದು ಹೊಸ ಕ್ಷೇತ್ರವನ್ನು ತೆರೆದು ತೋರಿಸುವ ಪ್ರಯತ್ನವಾದುದರಿಂದ, ಕರ್ನಾಟಕದ ತುಂಬ ಜಾನಪದ ವಿದ್ವಾಂಸರು

ನನ್ನ ಹೆಸರನ್ನು ಗುರುತಿಸಲು ಸಾಧ್ಯವಾಯಿತು. ೧೯೮೫ ರಲ್ಲಿ "ಆಯ್ದ ಗಾದೆಗಳು ಹಾಗೂ ಒಗಟುಗಳು' ಪುಸ್ತಕವನ್ನು ಪ್ರಕಟಿಸಿದೆ. ಇಲ್ಲಿಯ ಗಾದೆಗಳನ್ನು ಆರ್ನೆ – ಥಾಮ್ಸನ್ "ಮಾದರಿ ಸೂಚಿ" ವಿಭಾಗೀಕರಣದನ್ವಯ ಮತ್ತು ಒಗಟುಗಳನ್ನು ಥಾಮ್ಸನ್ 'ಆಶಯ ಸೂಚಿ' ವಿಭಾಗೀಕರಣದನ್ವಯ ವಿಭಾಗಿಸಿ ನೋಡುವ ಪ್ರಯೋಗವನ್ನು ಮಾಡಲಾಗಿದೆ. ಈ ಪುಸ್ತಕಕ್ಕೆ ೧೯೮೫ರ ಗುಲಬರ್ಗಾ ವಿಶ್ವವಿದ್ಯಾಲಯ ಪ್ರಶಸ್ತಿಯೂ ಲಭಿಸಿತು. ೧೯೮೬ ರಲ್ಲಿ ಹೈದರಾಬಾದ ಕರ್ನಾಟಕದ ಕೊಡುಗೆಯಾಗಿ, ಬಯಲಾಟದ ಮೂಲ ರೂಪಗಳಾದ, ಬೀದರ ಜಿಲ್ಲೆಯಲ್ಲಿ – ಕೋಲಾಟದ ಜೊತೆಗೆ ಪ್ರಚಲಿತದಲ್ಲಿರುವ "ಬೀದಿ ಬಯಲಾಟ"ಗಳ ಎರಡು ಗೀತ ರೂಪಕಗಳನ್ನು ಹೊತ್ತ "ಬೀದಿ ಬಯಲಾಟಗಳು" ಪುಸ್ತಕವನ್ನು ಪ್ರಕಟಿಸಿದೆ. ೧೯೮೭ರಲ್ಲಿ ಪ್ರಕಟಿಸಿದ "ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಮಾದರಿ ಸೂಚಿ" ಪುಸ್ತಕಕ್ಕೆ ಜಾನಪದ ಅಕಾಡೆಮಿ ಪ್ರಶಸ್ತಿ ಬಂದಿತು. ಈ ಮಾದರಿ ಸೂಚಿ ಕನ್ನಡ ಜಾನಪದ ಅಭ್ಯಾಸಿಗರಿಗೆ ಒಂದು ವೈಜ್ಞಾನಿಕ ಅಧ್ಯಯನ ದೃಷ್ಟಿ ಬೀರುವ ಕೃತಿಯಾಗಿದೆ. ಜನಪದ ಕಾವ್ಯ ವಿಮರ್ಶೆಗೆ ಸಂಬಂಧಿಸಿದಂತೆ "ಪ್ರಥಮ ವಿಮರ್ಶೆ" ಎಂಬ ಹೊಸ ಪರಿಕಲ್ಪನೆಯನ್ನು ಗುರುತಿಸಿ, ಸಿದ್ಧಾಂತದ ರೂಪಕೊಟ್ಟು, ನಾಡಿನ ಪ್ರಸಿದ್ಧ ವಿಮರ್ಶಕರಿಂದ ಹದಿನೇಳು ಲೇಖನಗಳನ್ನು ಬರೆಯಿಸಿದೆ. ಅವೆಲ್ಲ ಜಾನಪದ ಅಕಾಡೆಮಿಯ ಪತ್ರಿಕೆ "ಜಾನಪದ ಗಂಗೋತ್ರಿ" (೪–೨,೧೯೯೦)ಯಲ್ಲಿ "ಜನಪದ ಕಾವ್ಯ ಪ್ರಥಮ ವಿಮರ್ಶೆ" ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ೧೯೮೧ ರಿಂದ ೧೯೯೧ರ ವರೆಗೆ ೨೫ ಲೇಖನಗಳ ಸಂಗ್ರಹ "ಕನ್ನಡ ಜಾನಪದ ಪ್ರಜ್ಞೆ" (೧೯೯೩) ಎಂಬ ಪುಸ್ತಕ ಪ್ರಕಟವಾಗಿದೆ. ಇದು ನಾನು ಕನ್ನಡ ಜಾನಪದದ ಬಗ್ಗೆ ಹತ್ತು ವರ್ಷ (೧೯೮೧–೧೯೯೨) ಆಲೋಚಿಸಿದುದರ ಫಲವಾಗಿದೆ ಎನ್ನಬೇಕು.

ಸಮಾರೋಪ :

ಡಾ। ಬಿ. ಬಿ. ಹೆಂಡಿ ಅವರ ವಲಯದಿಂದ ಹೊರಗಿದ್ದು, ಜಾನಪದದ ಕೆಲಸ ಮಾಡಿದವರಲ್ಲಿ ಡಾ. ಚೆನ್ನಣ್ಣ ವಾಲೀಕಾರ ಅವರು ಪ್ರಮುಖರಾಗಿದ್ದಾರೆ. ಡಾ। ಎಂ. ಬಿ. ಕೊಟ್ರಶೆಟ್ಟಿ ಅವರ ಮಾರ್ಗದರ್ಶನದಲ್ಲಿ "ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳು" ಕುರಿತು, ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಅಧ್ಯಯನ ಮಾಡಿದ್ದಾರೆ. 'ಗುಲಬರ್ಗಾ ಜಿಲ್ಲೆಯ ಮೋಹರಂ ಪದಗಳು (೧೯೮೩), 'ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು' (೧೯೭೬) ಎಂಬೆರಡು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. "ಒಂದು ಗ್ರಾಮದ ಜಾನಪದೀಯ ಅಧ್ಯಯನ" ೧೯೯೧ ರಲ್ಲಿ ಪ್ರಕಟವಾಗಿದೆ.

ಹೈ.ಕ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿ ಬೇರೆ ಭಾಗದವರಿಂದ ಪ್ರಾಸಂಗಿಕವಾಗಿ ಸಂಗ್ರಹಿಸಿದ ನಾಲ್ಕು ಕೃತಿಗಳು ಮೈಸೂರು ವಿಶ್ವವಿದ್ಯಾಲಯದಿಂದ ಹೊರಬಂದಿವೆ. 'ಬೀದರ ಜಿಲ್ಲೆಯ ಜನಪದ ಕಥೆಗಳು' (೧೯೭೬) ಹಾಗೂ 'ಬೀದರ ಜಿಲ್ಲೆಯ ಜನಪದ ಗೀತೆಗಳು' (೧೯೭೬) ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರ ಸಂಪಾದಕತ್ವದಲ್ಲಿ 'ರಾಯಚೂರು ಜಿಲ್ಲೆಯ ಜನಪದ ಕಥೆಗಳು' (೧೯೭೬), 'ರಾಯಚೂರ ಜಿಲ್ಲೆಯ ಜನಪದ ಹಾಡುಗಳು' (೧೯೭೬) ಶ್ರೀ ಟಿ.ಎಸ್. ರಾಜಪ್ಪ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ.

ಇಷ್ಟೆಲ್ಲ ಕೆಲಸವಾದರೂ ಕರ್ನಾಟಕದ ಬೇರೆಡೆ ನಡೆದ ಜಾನಪದದ ಬಗೆಗಿನ ಕೆಲಸಗಳನ್ನು ಗಮನಿಸಿದರೆ ನಮ್ಮಲ್ಲಿ ನಡೆದುದು ಏನೂ ಅಲ್ಲವೆನಿಸುತ್ತದೆ. ಮೈಸೂರು ವಿಶ್ವವಿದ್ಯಾಲಯದ 'ಜಾನಪದ ವಸ್ತು ಸಂಗ್ರಹಾಲಯ', ಎಚ್.ಎಲ್ ನಾಗೇಗೌಡ ಅವರ 'ಜಾನಪದ ಟ್ರಸ್ಟ', ಉಡುಪಿಯ 'ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ', ಕಾರಂತರ 'ಯಕ್ಷಗಾನ ಪ್ರಯೋಗಗಳು' – ಇವೆಲ್ಲವನ್ನು ನೋಡಿದಾಗ ನಮ್ಮ ಪ್ರಗತಿಯ ಅವಶ್ಯಕತೆಯ ಮನವರಿಕೆಯಾಗುತ್ತದೆ. ಆಗಬೇಕಾದ ಕೆಲಸ ಇನ್ನೂ ಆಗಿಲ್ಲವೆನಿಸುತ್ತದೆ. ಅದಕ್ಕಾಗಿ ಮುಂದುವರೆಯುವುದು ತುರ್ತೆನಿಸುತ್ತದೆ.

* * *

೫. ಅನುವಾದಗೊಂಡು ಕನ್ನಡಕ್ಕೆ ಬಂದ ಜನಪದ ಸಾಹಿತ್ಯ

ಕರ್ನಾಟಕದಲ್ಲಿ ಜಾನಪದಶಾಸ್ತ್ರ ಅಧ್ಯಯನದ ಅರಿವು ಮೂಡಿದ್ದು ಎಪ್ಪತ್ತರ ದಶಕದಲ್ಲಿ. ಕನ್ನಡದ ನವೋದಯದ ಪ್ರಾರಂಭದಲ್ಲಿ ಅಂದರೆ ೧೯೦೦ರ ಸುತ್ತಮುತ್ತ ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಜಾನಪದಶಾಸ್ತ್ರ ಕುರಿತು ಅಲ್ಪಪ್ರಮಾಣದ ಪ್ರಯತ್ನಗಳು ನಡೆದಿವೆ. ಅವೆಲ್ಲ ಆಯಾ ಕಾಲದ ಅನಿವಾರ್ಯ ಕೆಲಸಗಳಾಗಿ, ಮಾಡುವವರಿಗೆ ತಾವೇನು ಮಾಡುತ್ತಿದ್ದೇವೆ ಎಂಬುದು ಅವರ ಅರಿವಿಗೆ ಇಲ್ಲದೇ ಆದ ಮಹತ್ವದ ಕೆಲಸಗಳಾಗಿವೆ. ೧೯೩೧ ರಲ್ಲಿ ಹಲಸಂಗಿಯ ಗೆಳೆಯರ ಬಳಗದಿಂದ 'ಗರತಿಯ ಹಾಡು' ಎಂಬ ತ್ರಿಪದಿಗಳ ಸಂಕಲನ ಪ್ರಕಟವಾದ ನಂತರ, ಅವರಿಂದಲೇ ಸ್ವಾತಂತ್ರ್ಯ ಪೂರ್ವದಲ್ಲಿ ಇನ್ನೆರಡು ಕೃತಿಗಳು ಪ್ರಕಟವಾದವು. ಇಂತಹ ಸಾಹಿತ್ಯ ಕೃತಿಗಳ ಪ್ರಕಟನೆಯ ಪೂರ್ವದಲ್ಲಿ ನಡಕೇರಿಯಂಡ ಚಿಣ್ಣಪ್ಪ ಅವರಿಂದ ಕೊಡಗಿನ ಜಾನಪದ ಸಂಸ್ಕೃತಿಯನ್ನು ಪರಿಚಯಿಸುವ ಕೃತಿ 'ಪಟ್ಟೋಲೆ ಪಳಮೆ' ೧೯೨೪ರಲ್ಲಿ ಕನ್ನಡದಲ್ಲಿ ಪ್ರಕಟವಾದುದನ್ನು ಇಲ್ಲಿ ನೆನೆಸಿಕೊಳ್ಳಬೇಕು. ಬಹುಶಃ ಈ ಕೃತಿಯ ಪ್ರಭಾವದಿಂದಲೇ ಇರಬೇಕು, ಅರ್ಚಕ ಬಿ. ರಂಗಸ್ವಾಮಿ ಅವರು ತಮ್ಮೂರನ್ನೇ ಕೇಂದ್ರವಾಗಿಟ್ಟುಕೊಂಡು ೧೯೩೩ರಲ್ಲಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಎಂಬ ಕೃತಿಯನ್ನು ಪ್ರಕಟಿಸಿದರು. ಈ ಸಂದರ್ಭದಲ್ಲಿ ಚಿಣ್ಣಪ್ಪ ಮತ್ತು ರಂಗಸ್ವಾಮಿ ಅವರು ಮಾದರಿ ಕೆಲಸ ಮಾಡಿದ್ದಾರೆ ಎಂಬುದನ್ನು ನೆನೆಯುವುದು ಅಗತ್ಯವಾಗಿದೆ.

ಸ್ವಾತಂತ್ರ್ಯ ಬಂದನಂತರವೂ ಇಂತಹ ಕೆಲ ಕೃತಿಗಳು ಪ್ರಕಟಗೊಂಡಿವೆ. ಆದರೆ ೧೯೬೦ರ ನಂತರ, ಸರಿಯಾಗಿ ೧೯೬೬ ಮತ್ತು ೧೯೬೭ ಈ ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಜನಪದ ಸಾಹಿತ್ಯವನ್ನು ಎಂ.ಎ. ಕನ್ನಡ ಕೋರ್ಸ್‌ನಲ್ಲಿ ನೂರಂಕಿನ ಒಂದು ಪತ್ರಿಕೆಯಾಗಿ ಸೇರ್ಪಡೆ ಮಾಡಿದ ನಂತರ ಅಧಿಕೃತವಾಗಿ ಕನ್ನಡದಲ್ಲಿ ಜಾನಪದಶಾಸ್ತ್ರದ ಅಭ್ಯಾಸ ಅನಾವರಣ ಆದಂತಾಯಿತು.

ಪಾಶ್ಚಾತ್ಯ ಜಾನಪದಶಾಸ್ತ್ರದ ಅರಿವು :

ಪಾಶ್ಚಾತ್ಯರಲ್ಲಿ ಜಾನಪದಶಾಸ್ತ್ರ ಕುರಿತು ಏನು ಅಭ್ಯಾಸ ನಡೆದಿದೆ ಎಂಬುದನ್ನು ಅಧ್ಯಯನ ಮಾಡಿಕೊಂಡು, ನಮ್ಮಲ್ಲೂ ಅಂತಹ ಅಧ್ಯಯನಗಳು ನಡೆಯಬೇಕು ಎಂಬ ಹಂಬಲದಿಂದ ಕನ್ನಡ ಜಾನಪದಶಾಸ್ತ್ರದ ಅಧ್ಯಯನಗಳು ಪ್ರಾರಂಭವಾದವು. ಅಲ್ಲಿಂದ

ಪರಭಾಷೆಯಲ್ಲಿ ಪ್ರಕಟಗೊಂಡ ಕೃತಿಗಳ ಅವಲೋಕನ ಮತ್ತು ಅಧ್ಯಯನದ ಜೊತೆಗೆ ಅವಶ್ಯವಾದ ಸಂಗತಿಗಳನ್ನು ಕನ್ನಡದಲ್ಲಿ ಪರಿಚಯಿಸುವ, ಅನುವಾದಿಸಿಕೊಳ್ಳುವ ಕೆಲಸಗಳು ಪ್ರಾರಂಭವಾದವು.

ಕರ್ನಾಟಕ ಜಾನಪದಶಾಸ್ತ್ರ ಕ್ಷೇತ್ರದಲ್ಲಿ ಪ್ರಾರಂಭದಲ್ಲಿ ಎರಡು ಬಗೆಯ ಕೆಲಸಗಳು ನಡೆದಿವೆ. ಒಂದು ನಮ್ಮ ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳನ್ನು ಪರಿಚಯಿಸುವ ಪ್ರಯತ್ನ, ಎರಡನೆಯದು ಜಾನಪದಶಾಸ್ತ್ರದ ಶಾಸ್ತ್ರೀಯ ಅಧ್ಯಯನದ ತಿಳುವಳಿಕೆಗಾಗಿ ಬೇರೆ ದೇಶಗಳಲ್ಲಿ ಆ ಬಗೆಯ ಕೆಲಸಗಳು ಏನು ನಡೆದಿವೆ ಎಂಬುದನ್ನು ಗಮನಿಸಿ, ಅವುಗಳನ್ನು ಕನ್ನಡಕ್ಕೆ ಪರಿಚಯಿಸಿ ಕೊಡುವ ಪ್ರಯತ್ನಗಳು. ಮುಂದೆ ಬರಬರುತ್ತ ನಮ್ಮಲ್ಲೂ ಇಂಗ್ಲೀಷ ಹಿಂದಿಯಂತಹ ಭಾಷೆಗಳಿಗೆ ಕರ್ನಾಟಕ ಜಾನಪದ ಸಾಹಿತ್ಯ ಮತ್ತು ಇಲ್ಲಿ ನಡೆದ ಬೇರೆ ಬೇರೆ ಕೆಲಸಗಳು ಪರಿಚಯವಾಗಬೇಕೆಂಬ ಆಲೋಚನೆಗಳು ಮೂಡಿ, ಇಲ್ಲಿಯ ಪಠ್ಯಗಳನ್ನು ಬೇರೆ ಭಾಷೆಗಳಿಗೆ ಪರಿಚಯಿಸಿ ಕೊಡುವ ಪ್ರಯತ್ನಗಳೂ ನಡೆದವು.

ಪಾಶ್ಚಾತ್ಯ ಜಾನಪದಶಾಸ್ತ್ರ ಪರಿಚಯ– ಪ್ರವೇಶಿಕೆ :

೧೯೬೬ರ ಡಿಸೆಂಬರ್ ೮, ೯, ೧೦ ರಂದು ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಜರುಗಿದ ಒಂದು ಗೋಷ್ಠಿಯಲ್ಲಿ ಕನ್ನಡ ಜನಪದ ಸಾಹಿತ್ಯವನ್ನು ಪರಿಚಯಿಸಿ ಕೊಡುವ ಪ್ರಯತ್ನಗಳು ನಡೆದವು. ಈ ಗೋಷ್ಠಿಯಲ್ಲಿ ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣಾರಾಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ. ವರದರಾಜರಾವ, ಶಿವರಾಮ ಕಾರಂತ ಹಾಗೂ ಹಾ. ಮಾ. ನಾಯಕ ಅವರು ಪ್ರಬಂಧಗಳನ್ನು ಮಂಡಿಸಿದರು. 'ಜಾನಪದ ಸಾಹಿತ್ಯ ಅದರ ಸ್ವರೂಪ' ಎಂಬ ಪ್ರಬಂಧದಲ್ಲಿ ಡಾ. ಹಾಮಾನಾ ಅವರು ಫೋಕ್‌ಲೋರ್ ಪದದ ಬಗೆಗೆ ಕನ್ನಡದಲ್ಲಿ ವಿವರಣೆ ನೀಡಿ, ಫೋಕ್‌ಲೋರ್‌ಗೆ ಸಂವಾದಿಯಾಗಿ 'ಜಾನಪದ', 'ಫೋಕ್'ಗೆ ಸಂವಾದಿಯಾಗಿ 'ಜನಪದ' ಎಂಬ ಪದಗಳನ್ನು ಸೂಚಿಸಿದರು. ಅಲ್ಲಿಂದ ನಿರಂತರವಾಗಿ ಹೊರದೇಶಗಳಲ್ಲಿ– ವಿಶೇಷವಾಗಿ ಫಿನ್‌ಲ್ಯಾಂಡ್, ಅಮೇರಿಕಾ, ಜರ್ಮನಿ ಮತ್ತು ಇಂಗ್ಲೆಂಡ್ ಈ ದೇಶಗಳಲ್ಲಿ ನಡೆದ ಜಾನಪದಶಾಸ್ತ್ರ ಸಂಬಂಧಿ ಅಧ್ಯಯನಗಳನ್ನು ಕನ್ನಡದಲ್ಲಿ ಪರಿಚಯ ಮಾಡಿಕೊಡುವ ಪ್ರಯತ್ನಗಳು ನಿರಂತರವಾಗಿ ನಡೆದವು.

ಈ ಸಂದರ್ಭದಲ್ಲಿ ಪಾಶ್ಚಾತ್ಯರಲ್ಲಿ ಬಳಕೆಯಾದ ಅನೇಕ ಪಾರಿಭಾಷಿಕ ಮತ್ತು ವಿಶೇಷ ಪದಗಳಿಗೆ ಕನ್ನಡದಲ್ಲಿ ಸಂವಾದಿ ಪದಗಳನ್ನು ಗುರುತಿಸಿಕೊಳ್ಳುವ ಪ್ರಯತ್ನಗಳೂ ನಡೆದವು. ಪ್ರಮುಖವಾಗಿ ಇಂಗ್ಲೀಷಿನಲ್ಲಿ ದೊರೆಯುವ ಜಾನಪದಶಾಸ್ತ್ರ ಸಂಬಂಧಿ ವಿಷಯಗಳನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಗಮನಿಸಿ, ಅವುಗಳನ್ನು ಕನ್ನಡಕ್ಕೆ ಪರಿಚಯ ಮಾಡಿಕೊಡುವ ಪ್ರಯತ್ನಗಳನ್ನು ಪ್ರಾರಂಭಿಸಿದರು. ಪ್ರಾರಂಭದಲ್ಲಿ ೧೯೬೬–೬೭ರ ನಂತರ ಕನ್ನಡದಲ್ಲಿ ಪ್ರಕಟವಾದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಸಂಗ್ರಹಗಳಿಗೆ ಆಯಾ ಸಂಪಾದಕರು ಬರೆದ ಪ್ರಸ್ತಾವನೆಗಳಲ್ಲಿ ಇಂತಹ ಪ್ರಯತ್ನಗಳು

ವಿಶೇಷವಾಗಿ ಕಾಣುತ್ತವೆ. ೧೯೬೬ ರಿಂದ ೧೯೮೫ರ ವರೆಗಿನ ಅವಧಿಯಲ್ಲಿ ಬಂದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಯಾವುದೇ ಬಗೆಯ ಸಂಕಲನಗಳು, ಕರ್ನಾಟಕದ ಯಾವುದೇ ಭಾಗದಿಂದ ಬರಲಿ, ಆಯಾ ಕೃತಿಯ ಸಂಪಾದಕರು ಮಾಡಿದ ಪ್ರಯತ್ನವೆಂದರೆ, ತಾವು ಸಂಗ್ರಹಿಸಿ ಪ್ರಕಟಿಸುತ್ತಿರುವ ವಿಷಯಕ್ಕೆ ಸಂಬಂಧಿಸಿ ಹೊರದೇಶಗಳಲ್ಲಿ ನಡೆದ ಅಧ್ಯಯನದ ಪರಿಚಯ, ಆ ಪ್ರಕಾರದ ಸ್ವರೂಪವನ್ನು ಹೊರದೇಶಗಳಲ್ಲಿ ಹೇಗೆ ಗ್ರಹಿಸಲಾಗಿದೆ, ಅದರ ವಿಭಾಗೀಕ್ರಮ ಹೇಗೆ ನಡೆದಿದೆ, ಅಲ್ಲಿ ಬಳಕೆಯಾದ ಪಾರಿಭಾಷಿಕ/ವಿಶೇಷ ಪದಗಳಿಗೆ ಕನ್ನಡದಲ್ಲಿ ಯಾವ ಪದಗಳನ್ನು ಬಳಸಬಹುದು ಎಂಬ ಸಂಗತಿಗಳನ್ನು ಕನ್ನಡಕ್ಕೆ ಪರಿಚಯಿಸಿಕೊಡುವ, ಯಥಾವತ್ತಾಗಿ ಅಲ್ಲಿಯ ಆಲೋಚನೆಗಳನ್ನು ಎತ್ತಿಕೊಂಡು ಕನ್ನಡದಲ್ಲಿ ಅನುವಾದಿಸಿ ಇಡುವ ಪ್ರಯತ್ನಗಳು ನಡೆದವು. ಇಂತಹ ಪ್ರಯತ್ನಗಳಲ್ಲಿ ೧೯೬೯ ರಲ್ಲಿ ಪ್ರಕಟವಾದ ರಾಗೌ ಅವರ 'ಕರ್ನಾಟಕ ಜನಪದ ಕಥೆಗಳು' ಎಂಬ ಸಂಗ್ರಹಕ್ಕೆ ಅವರು ಬರೆದ ಪ್ರಸ್ತಾವನೆ, ಮತ್ತು ೧೯೭೦ ರಲ್ಲಿ ಡಾ. ಜೀಶಂಪ ಅವರ 'ಕನ್ನಡ ಜನಪದ ಕಥೆಗಳು' ಎಂಬ ಕಥಾಸಂಗ್ರಹಕ್ಕೆ ಅವರು ಬರೆದ ಪ್ರಸ್ತಾವನೆಗಳು ಪ್ರಸಿದ್ಧವಾಗಿವೆ. ಇಲ್ಲೆಲ್ಲ ಈ ಇಬ್ಬರು ವಿದ್ವಾಂಸರು ಜನಪದ ಕಥೆಗಳಿಗೆ ಸಂಬಂಧಿಸಿ ಹೊರದೇಶಗಳಲ್ಲಿ ನಡೆದ ಅಧ್ಯಯನಗಳನ್ನು ಪರಿಚಯಿಸುವುದಲ್ಲದೆ, ಕಥೆಗಳಿಗೆ ಸಂಬಂಧಿಸಿದ ಮೋಟೀಫ್, ಟೈಪ್, ಜನಪದ ಕಥೆಗಳ ಪ್ರಕಾರಗಳ ಹೆಸರುಗಳು ಹೀಗೆ ಈ ಪಾರಿಭಾಷಿಕ ಪದಗಳಲ್ಲದೆ ಅನೇಕ ಸಿದ್ಧಾಂತಗಳನ್ನೂ ಇಲ್ಲಿ ಪರಿಚಯಿಸಿದರು. ಆಗಿನ ಕಾಲದಲ್ಲಿ ಮೈಸೂರು ಭಾಗದಿಂದ ಪ್ರಕಟವಾದ ಶಿಶುಪ್ರಾಸ, ಗಾದೆ, ಒಗಟು, ಕಥೆ, ಹಲವಾರು ಬಗೆಯ ಹಾಡುಗಳು ಹೀಗೆ ಜನಪದ ಸಾಹಿತ್ಯದ ಯಾವುದೇ ಬಗೆಯ ಸಂಗ್ರಹಗಳು ಬಂದರೂ ಅವುಗಳ ಪರಿಚಯ ಮಾಡುವಲ್ಲಿ ಹೊರದೇಶದ ಕಲ್ಪನೆಗಳನ್ನೇ ಸಂಪಾದಕರು ಹೆಚ್ಚಾಗಿ ಅನುಸರಿಸಿದರು. ಈ ಪದ್ಧತಿಯನ್ನೇ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದ ಸಂಗ್ರಹಗಳ ಸಂಪಾದಕರೂ ಅನುಸರಿಸಿದರು. ಈ ಅವಸರದಲ್ಲಿ ಕೆಲವು ತಪ್ಪುಗಳೂ ಆದವು. ಉದಾ: ಟೈಪ್-ವರ್ಗ ಎಂದದ್ದು, ಕನ್ನಡದ ಎಲ್ಲ ಕಥನಪರ ಜನಪದ ಹಾಡುಗಳನ್ನು ಬ್ಯಾಲೆಡ್ ಅರ್ಥದಲ್ಲಿ ಸ್ವೀಕರಿಸಿ, ಎಲ್ಲವನ್ನೂ ಲಾವಣಿಗಳು ಎಂದು ಕರೆದದ್ದು ಇತ್ಯಾದಿ.

ಪಾಶ್ಚಾತ್ಯ ಅಧ್ಯಯನಗಳ ಮಾದರಿ :

ಆಗಿನ ಕಾಲದಲ್ಲಿ ಜನಪದ ಸಾಹಿತ್ಯವನ್ನು ಪ್ರಕಟಿಸುವಾಗ, ಅವುಗಳನ್ನು ಪರಿಚಯಿಸುವಾಗ ಎಲ್ಲರೂ ಅನುಸರಿಸಿದ್ದು ಇಂಗ್ಲೀಷಿನಲ್ಲಿ ಇರುವ ಕೃತಿಗಳಲ್ಲಿ ಬಂದಿರುವ ಸಂಗತಿಗಳನ್ನೇ. ಆಗಿನ ಕಾಲದ ಜನಪದ ಸಾಹಿತ್ಯವನ್ನು ಪ್ರಕಟಿಸುವ ಓಘದಲ್ಲಿ, ಹುಮ್ಮಸ್ಸಿನಲ್ಲಿ ಎಲ್ಲರೂ ಅನುಸರಿಸಿದ್ದು ಇಂತಹ ಪದ್ಧತಿಯನ್ನೇ. ಈ ಸಂದರ್ಭದಲ್ಲಿ ಹೆಚ್ಚು ಉಪಯೋಗವಾದ ಇಂಗ್ಲೀಷಿನ ಗ್ರಂಥಗಳೆಂದರೆ :

1. The Folk Tale; Stith Thompson
2. Standard Dictionary of Folklore, Mythology and legend; Leach Maria (Ed)

3. Folklore and Folklife- An Introduction; Dorson Richard

4. The Study of Folklore; Dundes Alan (Ed.)

ಇಂತಹ ಪ್ರಸಿದ್ಧ ಕೃತಿಗಳನ್ನು ಸುಮಾರಾಗಿ ಕರ್ನಾಟಕದ ಎಲ್ಲ ಭಾಗದ ವಿದ್ವಾಂಸರು ಗಮನಿಸಿ, ಅಲ್ಲಿಯ ಅಭಿಪ್ರಾಯಗಳನ್ನು ಕನ್ನಡದಲ್ಲಿ ಕೊಡುವ, ತಮ್ಮ ಸಂಗ್ರಹಗಳಿಗೆ ಅಲ್ಲಿಯ ಅಭಿಪ್ರಾಯಗಳನ್ನು ಅನುಸರಿಸುವ ಕೆಲಸವನ್ನು ಮಾಡಿದರು. ಹೀಗೆ ಇಂಗ್ಲೀಷಿನಲ್ಲಿರುವ ಜಾನಪದಶಾಸ್ತ್ರಕ್ಕೆ ಸಂಬಂಧಿಸಿದ ಮೂಲ ವಿಷಯಗಳ ಪರಿಚಯ ಕನ್ನಡಕ್ಕೆ ಆಗುತ್ತ ನಡೆಯಿತು. ಇಲ್ಲಿ ೧೯೭೭ರಲ್ಲಿಯೇ ಪ್ರಕಟವಾದ ದೇಜಗೌ ಅವರ 'ಜಾನಪದ ಅಧ್ಯಯನ' ಎಂಬ ಕೃತಿಯನ್ನು ದಾಖಲಿಸಬೇಕು. ಇದರಲ್ಲಿ ಜನಪದ ಗೀತೆ, ಕಥೆ, ಕಥನ ಕಾವ್ಯ, ಐತಿಹ್ಯ-ಪುರಾಣಗಳು, ಕುಣಿತ, ಬಯಲಾಟ, ಗಾದೆಗಳು, ಒಗಟುಗಳು, ಮಾಟ-ಮಂತ್ರ, ನಂಬಿಕೆಗಳು, ಸಂಪ್ರದಾಯಗಳು ಮತ್ತು ಹಬ್ಬಗಳು, ಸಸ್ಯ ಜಾನಪದ, ಪ್ರಾಣಿಜಾನಪದ- ಹೀಗೆ ಒಟ್ಟಿಗೆ ೧೨ ಲೇಖನಗಳಿದ್ದು, ಇವೆಲ್ಲವೂ ಪಾಶ್ಚಾತ್ಯ ಜಾನಪದಶಾಸ್ತ್ರ ಕ್ಷೇತ್ರದಲ್ಲಿ ಹೇಗೆ ಪರಿಚಿತವಾಗಿವೆ ಎಂಬುದನ್ನು ಪರಿಚಯಿಸುವ ಕೃತಿ ಇದಾಗಿದೆ. ಸಹಜವಾಗಿಯೇ ಡಾ. ಜವರೇಗೌಡರಂತಹ ಪ್ರಭಾವಿ ವಿದ್ವಾಂಸರ ಕೃತಿ, ಮತ್ತು ಹೊರದೇಶದ ಜ್ಞಾನದ ಹಿನ್ನೆಲೆಯನ್ನು ಪರಿಚಯಿಸುವ ಕೃತಿ ಇದಾಗಿ ತುಂಬಾ ಪ್ರಭಾವ ಬೀರಿದ್ದು ಸೋಜಿಗವೇನಲ್ಲ. ನೇರವಾಗಿ ಅನುವಾದವಲ್ಲವಾದರೂ ವಿಷಯವೆಲ್ಲ ಹೊರಗಿನದೆ ಎಂಬುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ಇದೊಂದು ಸಂಗ್ರಹಾನುವಾದವೆಂದರೆ ತಪ್ಪಾಗಲಾರದು.

ಇದೇ ಸಂದರ್ಭದಲ್ಲಿ ರಾಗೌ ಮತ್ತು ಸಿಪಿಕೆ ಜೊತೆಯಾಗಿ ಸ್ಟಿಥ್ ಥಾಮ್ಸನ್ ಅವರ 'ದಿ ಫೋಕ್ ಟೇಲ್' ಎಂಬ ಪ್ರಸಿದ್ಧ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರೆಂದು ತಿಳಿದುಬರುತ್ತದೆ. ಇದು ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಬೇಕಿತ್ತು. ಆದರೆ ಕೆಲ ತಾಂತ್ರಿಕ ತೊಂದರೆಗಳಿಂದ ಈ ಕೃತಿ ಇನ್ನೂವರೆಗೆ ಪ್ರಕಟವಾಗದೇ ಇರುವುದು ಒಂದು ದೊಡ್ಡ ಹಾನಿಯೇ ಎಂದು ಹೇಳಬೇಕು. ಅದು ಈಗಲೂ ಪ್ರಕಟವಾಗುವ ಅಗತ್ಯವಿದೆ.

ಬರಬರುತ್ತ ಬೇರೆ ದೇಶಗಳಲ್ಲಿ ನಡೆದ ಅಧ್ಯಯನಗಳನ್ನು ಅನುಸರಿಸಿ ಕನ್ನಡದಲ್ಲೂ ಅಂತಹ ಅಧ್ಯಯನಗಳಾಗಬೇಕೆಂದು ಭಾವಿಸಿ, ವಿದ್ಯಾರ್ಥಿಗಳಿಗೆ ಸಂಶೋಧನಾಧ್ಯಯನಕ್ಕಾಗಿ ವಿಷಯಗಳನ್ನು ಆರಿಸಿಕೊಡುವ ಪ್ರಯತ್ನಗಳು ನಡೆದವು. ಅಂತಹ ಅಧ್ಯಯನಗಳೆಂದರೆ ಡಾ. ಜೀಶಂಪ ಅವರ ಮಾರ್ಗದರ್ಶನದಲ್ಲಿ ಡಾ. ಹಿ.ಶಿ.ರಾಮಚಂದ್ರೇಗೌಡ ಅವರ ಪಿಎಚ್.ಡಿ. ಅಧ್ಯಯನ 'ಜನಪದ ಕಥೆಗಳ ವರ್ಗಗಳು', ಡಾ. ರಾ.ಗೌ. ಅವರ ಮಾರ್ಗದರ್ಶನದಲ್ಲಿ ತಯಾರಾದ ಡಾ. ಕೆ.ಆರ್. ಸಂಧ್ಯಾರೆಡ್ಡಿ ಅವರ ಪಿಎಚ್.ಡಿ.ಪ್ರಬಂಧ 'ಕನ್ನಡ ಜನಪದ ಕಥೆಗಳು', ಡಾ. ಬಿ.ಬಿ.ಹೆಂಡಿ ಅವರ ಮಾರ್ಗದರ್ಶನದಲ್ಲಿ ನಾನು ಮಾಡಿದ ಪಿಎಚ್.ಡಿ. ಅಧ್ಯಯನ 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು' – ಇವು ನೇರವಾಗಿ ಜನಪದ ಕಥೆಗಳ ಅಧ್ಯಯನಗಳಿಗೆ ಸಂಬಂಧಿಸಿದಂತೆ ಹೊರದೇಶಗಳಲ್ಲಿ ನಡೆದ ಅಧ್ಯಯನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು

ಕನ್ನಡದ ಕಥೆಗಳಿಗೆ ಅನ್ವಯಿಸಿ ನಡೆದ ಅಧ್ಯಯನಗಳು. ಬೇರೆ ವಿಷಯಗಳಿಗೆ ಸಂಬಂಧಿಸಿಯೂ ಇಂತಹ ಅಧ್ಯಯನಗಳು ನಡೆದವು. ಬಿಡಿಬಿಡಿಯಾಗಿ ಇಂತಹ ಕೆಲ ಲೇಖನಗಳೂ ಬಂದವು.

ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳ ಪ್ರಭಾವ :

೧೯೮೮ರ ವರ್ಷದಲ್ಲಿ ಉಡುಪಿಯ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರವು ಅಮೇರಿಕೆಯ ಫೋರ್ಡ್‌ಫೌಂಡೇಶನ್ ಧನಸಹಾಯದಿಂದ ಅಂತರಾಷ್ಟ್ರೀಯ ಜಾನಪದ ಕಮ್ಮಟವೊಂದನ್ನು ಹಮ್ಮಿಕೊಂಡಿತು. ಈ ಕಮ್ಮಟ ನಾಲ್ಕು ಹಂತಗಳಲ್ಲಿ ನಡೆದು, ಪಾಶ್ಚಾತ್ಯರಲ್ಲಿ ಇರುವ ಜಾನಪದಶಾಸ್ತ್ರ ಅಧ್ಯಯನದ ಮಾದರಿಗಳನ್ನು ಪರಿಚಯಿಸಿ ಕೊಡುವ ಕೆಲಸವನ್ನು ಮಾಡಿತು. ಪೀಟರ್ ಜೆ. ಕ್ಲಾಸ್ ಹಾಗೂ ಕು.ಶಿ. ಹರಿದಾಸಭಟ್ಟ ಅವರ ಪ್ರಯತ್ನವನ್ನು ಇಲ್ಲಿ ನೆನೆಸಿಕೊಳ್ಳಬೇಕು. ಮೊದಲಿನ ಎರಡು ಕಮ್ಮಟಗಳು ಕ್ರಮವಾಗಿ ಉಡುಪಿ ಮತ್ತು ಮೈಸೂರುಗಳಲ್ಲಿ ನಡೆದವು. ಇಲ್ಲಿ ಅಲನ್ ಡಂಡಸ್, ಎ.ಕೆ.ರಾಮಾನುಜನ್, ಪೀಟರ್ ಜೆ. ಕ್ಲಾಸ್, ಬ್ಲ್ಯಾಕ್ ಬರ್ನ್, ಕೋರಮ್, ಜೀಶಂಪ ಅಂಥವರು ಪಾಠಗಳನ್ನು ಹೇಳಿದರು. ಈ ಎರಡೂ ಹಂತಗಳಲ್ಲಿ ಅವರು ಪರಿಚಯಿಸಿದ್ದು ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳನ್ನು. ನಂತರದ ಎರಡು ಹಂತಗಳು ಧಾರವಾಡ ಮತ್ತು ಉಡುಪಿಯಲ್ಲಿ ನಡೆದವು. ಇಲ್ಲಿ ವಿಶೇಷವಾಗಿ ಪಾಶ್ಚಾತ್ಯರ ಕ್ಷೇತ್ರಕಾರ್ಯ ಪದ್ಧತಿಯನ್ನು ಪರಿಚಯಿಸಲಾಯಿತು. ಹೀಗಾಗಿ ನಂತರದ ದಿನಗಳಲ್ಲಿ ಪಾಶ್ಚಾತ್ಯ ಜಾನಪದಶಾಸ್ತ್ರದ ಶಾಸ್ತ್ರೀಯ ಅಧ್ಯಯನವೇ ಒಂದು ದಿಕ್ಸೂಚಿಯಾಗಿ ಕರ್ನಾಟಕದ ಎಲ್ಲ ಕಡೆ ಈ ಸಿದ್ಧಾಂತ ಮತ್ತು ಶಾಸ್ತ್ರಗಳ ಪರಿಚಯ, ಇವುಗಳನ್ವಯ ಅಧ್ಯಯನಗಳು ನಡೆದವು.

ಮುಂದಿನ ಕೆಲ ವರ್ಷಗಳಲ್ಲಿ, ಸು. ೨೦೦೦ನೇ ವರ್ಷದ ವರೆಗೆ ಈ ಬಗೆಯ ಲೇಖನಗಳೇ ಹೆಚ್ಚಾಗಿ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಪ್ರಕಟಗೊಂಡುದನ್ನು ಕಾಣುತ್ತೇವೆ. ಈ ಕಮ್ಮಟದಲ್ಲಿ ಭಾಗವಹಿಸಿದ ಸುಮಾರು ೨೦ ಜನ ವಿದ್ವಾಂಸರೇ ಈ ೧೦ ವರ್ಷಗಳ ಅವಧಿಯಲ್ಲಿ ಕರ್ನಾಟಕದ ಜಾನಪದಶಾಸ್ತ್ರಾಧ್ಯಯನದ ಮುಂಚೂಣಿಯಲ್ಲಿ ಕಾಣಿಸಿಕೊಂಡು ಕೆಲಸ ಮಾಡಿದರು. ನಾನೂ ಈ ಕಮ್ಮಟದ ಒಬ್ಬ ಅಭ್ಯರ್ಥಿಯಾಗಿದ್ದು ಈ ಬಗೆಯ ಹೆಚ್ಚಿನ ಕೆಲಸಗಳನ್ನು ಮಾಡಲು ಸಾಧ್ಯವಾಯಿತು. ಕೆ. ಚಿನ್ನಪ್ಪಗೌಡ, ಪುರುಷೋತ್ತಮ ಬಿಳಿಮಲೆ, ಎ. ವಿ. ನಾವಡ, ಕೃಷ್ಣಯ್ಯ, ಹಿ. ಶಿ. ರಾಮಚಂದ್ರೇಗೌಡ, ತೀ. ನಂ. ಶಂಕರನಾರಾಯಣ, ಕೆ.ಆರ್. ಸಂಧ್ಯಾರೆಡ್ಡಿ, ಎ. ಸಿ. ಲಲಿತಾ, ಟಿ. ಗೋವಿಂದರಾಜು, ವಾಮನ ನಂದಾವರ, ಬಸವರಾಜ ನೆಲ್ಲಿಸರ್, ಕೆ. ಅಭಯಕುಮಾರ, ಕೃಷ್ಣಮೂರ್ತಿ ಹನೂರ, ಬಿ. ಶಿವರಾಮಶೆಟ್ಟಿ ಮುಂತಾದವರು ಈ ಕಮ್ಮಟದಲ್ಲಿ ಇದ್ದ ವಿದ್ವಾಂಸರೇ ಆಗಿದ್ದಾರೆ. ಈ ಎಲ್ಲಾ ವಿದ್ವಾಂಸರು ಜಾನಪದಶಾಸ್ತ್ರ ಸಿದ್ಧಾಂತಗಳನ್ನು ಪರಿಚಯ ಮಾಡಿಕೊಳ್ಳುವ, ಅವುಗಳನ್ನು ಕನ್ನಡದಲ್ಲಿ ಬರೆಯುವ, ಪತ್ರಿಕೆಗಳಲ್ಲಿ ಪ್ರಕಟಿಸುವ ಕೆಲಸವನ್ನು ವ್ಯಾಪಕವಾಗಿ ಮಾಡಿದರು.

ಇದೇ ಸಂದರ್ಭದಲ್ಲಿಯೇ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮುಂದಾಗಿ, ಹಲವಾರು ವಿದ್ವಾಂಸರನ್ನು ಬಳಸಿಕೊಂಡು 'ಜಾನಪದ ಕೈಪಿಡಿ' ಎಂಬ

ಕೃತಿಯೊಂದನ್ನು ಹೊರತಂದಿತು. ಇದು ಕನ್ನಡ ಪುಸ್ತಕ ಪ್ರಾಧಿಕಾರದಿಂದ ೧೯೯೭ರಲ್ಲಿ ಪ್ರಕಟವಾಯಿತು. ಇದರಲ್ಲಿ ಪಾಶ್ಚಾತ್ಯರಲ್ಲಿ ಬಳಕೆಯಾದ ಹೆಚ್ಚಿನ ಪಾರಿಭಾಷಿಕ ಪದಗಳನ್ನು, ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳನ್ನು, ಹೊರದೇಶದ ಮತ್ತು ಕನ್ನಡ ನಾಡಿನ ಪ್ರಸಿದ್ಧ ವಿದ್ವಾಂಸರನ್ನು, ಬೇರೆ ದೇಶಗಳಲ್ಲಿ ನಡೆದ ಜಾನಪದಶಾಸ್ತ್ರದ ಕೆಲಸಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಪರಿಚಯಿಸುವ ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ.

ಹೀಗೆ ಕರ್ನಾಟಕದಲ್ಲಿ ಜಾನಪದಶಾಸ್ತ್ರದ ಅಧ್ಯಯನವು ಒಂದು ರೀತಿಯಲ್ಲಿ ಶಾಸ್ತ್ರೀಯವಾಗಿ ನಡೆಯಲು ನೆರವಾದುದು ಹೊರದೇಶಗಳಲ್ಲಿ ನಡೆದ ಅಧ್ಯಯನಗಳನ್ನು ಕನ್ನಡಕ್ಕೆ ಪರಿಚಯಿಸಿಕೊಡುವ ಪ್ರಯತ್ನದಿಂದಲೇ ಎಂಬುದನ್ನು ನಾವು ಒಪ್ಪಲೇ ಬೇಕಾಗುತ್ತದೆ. ಇಂತಹ ಅಧ್ಯಯನದ ಕಾರಣವಾಗಿಯೇ ಕನ್ನಡ ಜಾನಪದಶಾಸ್ತ್ರದ ವಿಷಯಗಳ ಅರಿವನ್ನು ದೇಸೀ ಹಿನ್ನೆಲೆಯಲ್ಲಿ ಹೆಚ್ಚಿಸಿಕೊಳ್ಳುವ ಒಂದು ಆಲೋಚನೆಯ ಎಳೆಯೂ ಕಾಣಿಸಿಕೊಳ್ಳತೊಡಗಿತು. ಇದು ಕರ್ನಾಟಕದಲ್ಲಿ ನಡೆದ ಒಂದು ಬದಲಾವಣೆಯಂತೆಲೇ ಹೇಳಬೇಕು.

ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳಿಗೆ ಪ್ರತಿಯಾಗಿ ದೇಸೀ ಸಿದ್ಧಾಂತಗಳ ಮಂಡನೆ:

ಜಾನಪದಶಾಸ್ತ್ರ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಎರಡು ಮಹತ್ವದ ವಿಚಾರಸಂಕಿರಣಗಳು ನಡೆದಿದ್ದು, ಅಂತಹ ಎರಡು ಕೃತಿಗಳು ಪ್ರಕಟಗೊಂಡಿವೆ. ೧೯೯೩ರಲ್ಲಿ 'ಜಾನಪದ ಅಧ್ಯಯನದ ಇತ್ತೀಚಿನ ಸಾಧ್ಯತೆಗಳು' ಎಂಬ ವಿಷಯದ ಮೇಲೆ 'ಸಹೃದಯ ಸಾಂಸ್ಕೃತಿಕ ಅಕಾಡೆಮಿ' ಧಾರವಾಡ ಇವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಒಂದು ವಿಚಾರ ಸಂಕಿರಣ ನಡೆಸಿ, ಅಲ್ಲಿ ಮಂಡಿತವಾದ ಪ್ರಬಂಧಗಳ ಸಂಗ್ರಹ 'ಜಾನಪದ: ಹೊಸ ದೃಷ್ಟಿ' ಎಂಬ ಕೃತಿಯನ್ನು 'ಸಹಿತಾ ಪ್ರಕಾಶನ' ಧಾರವಾಡ ೧೯೯೪ ರಲ್ಲಿ ಪ್ರಕಟಿಸಿದೆ. ಹಾಗೆಯೇ ೧೯೯೪ ರಲ್ಲಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ 'ಪಾಶ್ಚಾತ್ಯ ಜಾನಪದ ಸಿದ್ಧಾಂತಗಳು ಮತ್ತು ಪ್ರತಿಸಿದ್ಧಾಂತ' ಎಂಬ ವಿಚಾರ ಸಂಕಿರಣ ನಡೆದು, ಅಲ್ಲಿ ಮಂಡಿತವಾದ ಪ್ರಬಂಧಗಳ ಸಂಗ್ರಹ 'ಜಾನಪದ ಸೈದ್ಧಾಂತಿಕ ಪ್ರಜ್ಞೆ ಮತ್ತು ದೇಶೀವಾದ' ಎಂಬ ಹೆಸರಿನಲ್ಲಿ ೧೯೯೮ ರಲ್ಲಿ ಕೃತಿ ಪ್ರಕಟವಾಗಿದೆ (ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು). ಈ ಎರಡೂ ಕೃತಿಗಳಲ್ಲಿಯ ಪ್ರಬಂಧಗಳನ್ನು ಗಮನಿಸಿದರೆ, ಅವೆಲ್ಲವೂ ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳನ್ನು ಕನ್ನಡಕ್ಕೆ ಪರಿಚಯಿಸಿಕೊಡುವ ಪ್ರಯತ್ನಗಳಾಗಿರುವುದು ಸ್ಪಷ್ಟವಾಗುತ್ತದೆ. ಆದರೆ ಮಂಗಳೂರಿನಲ್ಲಿ ನಡೆದ ವಿಚಾರಸಂಕಿರಣದ ಕೆಲ ಪ್ರಬಂಧಗಳಲ್ಲಿ ದೇಶೀ ಸಿದ್ಧಾಂತಗಳನ್ನು ರೂಪಿಸಿಕೊಳ್ಳುವ ಹೊಸ ಆಲೋಚನೆಗಳೂ ಕಾಣುತ್ತವೆ. ಇದು ಕನ್ನಡದಲ್ಲಿ ಕಾಣಿಸುವ ಒಂದು ಹೊಸ ಬೆಳವಣಿಗೆಯಾಗಿದೆ. ಇಂತಹ ಪ್ರಯತ್ನದ ಫಲಗಳು ಅಲ್ಲಲ್ಲಿ ಕಾಣಸಿಗುತ್ತವೆ.

ಪಾಶ್ಚಾತ್ಯ ಜಾನಪದಶಾಸ್ತ್ರದ ಪರಿಚಯ ಇನ್ನೂ ಸರಿಯಾಗಿ ಆಗದ ಮುನ್ನವೇ ನಾನು ೧೯೮೨ರ ಜನೇವರಿಯಲ್ಲಿಯೇ 'ಜನಪದ ಕಾವ್ಯಮೀಮಾಂಸೆ' ಎಂಬ ಕೃತಿ ಪ್ರಕಟಿಸಿದ್ದನ್ನು ಇಲ್ಲಿ ಉಲ್ಲೇಖಿಸಬೇಕು. ನಂತರ ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳು

ಮತ್ತು ಶಾಸ್ತ್ರಗಳು ಪರಿಚಯವಾಗುತ್ತ ಹೋದಂತೆ ನಾನು ಅನೇಕ ದೇಶೀ ಸೈದ್ಧಾಂತಿಕ ಚಿಂತನೆಗಳ ಲೇಖನಗಳನ್ನು ಬರೆಯುತ್ತ ಹೋದೆ. ಹೀಗೆ ಬರೆಯುತ್ತ ಬಂದ, ಇಂತಹ ಲೇಖನಗಳ ಸಂಗ್ರಹ 'ಜನಪದ ಸಾಹಿತ್ಯ ಸಿದ್ಧಾಂತಗಳು' ಎಂಬುದು ೧೯೯೩ರಲ್ಲಿ ಪ್ರಕಟವಾಗಿತ್ತು. ಮುಂದೆ ಪಾಶ್ಚಾತ್ಯ ಜಾನಪದಶಾಸ್ತ್ರ ಸಿದ್ಧಾಂತಗಳನ್ನು ಕನ್ನಡದಲ್ಲಿ ಪರಿಚಯಿಸುವ ಕೆಲ ಪ್ರಮುಖ ಲೇಖನಗಳ ಜೊತೆ ಕನ್ನಡದಲ್ಲಿ ನಾನು ಬರೆದ ಸೈದ್ಧಾಂತಿಕ ಲೇಖನಗಳನ್ನು ಸೇರಿಸಿ ಒಂದು ಉತ್ತಮ ಸಂಗ್ರಹವನ್ನು ಸಂಪಾದಿಸಿ, 'ಜಾನಪದಶಾಸ್ತ್ರ ಸಿದ್ಧಾಂತಗಳು' ಎಂಬ ಹೆಸರಿನಲ್ಲಿ ೧೯೯೯ರಲ್ಲಿ ಒಂದು ಕೃತಿಯನ್ನು ಪ್ರಕಟಿಸಿದೆ. ಆ ಪುಸ್ತಕಕ್ಕೆ ಆಗಿನ ದಿನಗಳಲ್ಲಿ ಉತ್ತಮ ಪ್ರತಿಕ್ರಿಯೆ ಸಿಕ್ಕಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಪಾಶ್ಚಾತ್ಯ ಜಾನಪದ ಕ್ಷೇತ್ರಕಾರ್ಯ ಪದ್ಧತಿಯ ಪರಿಚಯ :

ಜಾನಪದಶಾಸ್ತ್ರ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಇರುವವು ಪಾಶ್ಚಾತ್ಯ ಆಲೋಚನೆಗಳೇ ಆಗಿವೆ. ಅವರಲ್ಲಿಯ ಕ್ಷೇತ್ರಕಾರ್ಯ ಪದ್ಧತಿಯನ್ನು ಪರಿಚಯಿಸುವ ಸಿಸಿಎ ಪೈ ಅವರಿಂದ ರಚಿತವಾಗಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾದ, 'ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ' ಎಂಬ ಕೃತಿ ೧೯೭೮ರ ಸುಮಾರಿನಲ್ಲಿಯೆ ಪ್ರಕಟವಾದುದನ್ನು ಕಾಣುತ್ತೇವೆ. ಇದರಿಂದ ಕ್ಷೇತ್ರಕಾರ್ಯ ಹೇಗೆ ಮಾಡಬೇಕು ಎಂಬ ಮಾದರಿಗೆ ಈ ಕೃತಿಯೇ ನಮಗೆ ಅನಿವಾರ್ಯವಾಯಿತು. ಇವತ್ತಿಗೂ ಪಾಶ್ಚಾತ್ಯ ಮಾದರಿಯನ್ನೆ ಅನುಸರಿಸುವ ಅನಿವಾರ್ಯತೆ ಕನ್ನಡಗರಿಗೆ ಇದೆ ಎಂಬ ಆಲೋಚನೆಯ ಹಿನ್ನೆಲೆಯಲ್ಲಿ ಅವರ ಪದ್ಧತಿಗಳನ್ನು ಪರಿಚಯಿಸುವ ಅನೇಕ ಲೇಖನಗಳು ಕರ್ನಾಟಕದ ವಿದ್ವಾಂಸರಿಂದ ಬಂದುದನ್ನು ನಾವು ಕಾಣುತ್ತೇವೆ. ವಿಶ್ವವಿದ್ಯಾಲಯದ ಮಟ್ಟದಲ್ಲಿ ಕ್ಷೇತ್ರಕಾರ್ಯದ ಪದ್ಧತಿ ಪರಿಚಯಿಸುವಾಗ ಪಠ್ಯಕ್ರಮದಲ್ಲಿ ಪಾಶ್ಚಾತ್ಯ ಮಾದರಿಗಳನ್ನೇ ಪರಿಚಯಿಸುವುದನ್ನು ಕಾಣುತ್ತೇವೆ. ೨೦೦೪ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ ಪ್ರಕಟವಾದ ಎಸ್. ಎ. ಕೃಷ್ಣಯ್ಯ ಅವರು ಬರೆದ 'ಜಾನಪದ ದಾಖಲಾತಿ ಸಂಗ್ರಹಾಲಯ' ಎಂಬ ಕೃತಿ ಈ ದೃಷ್ಟಿಯಲ್ಲಿ ಮತ್ತೊಂದು ಹೊಸ ಪ್ರಯತ್ನವಾಗಿದೆ. ಸಂಗ್ರಹ ಅಷ್ಟೇ ಅಲ್ಲ, ಹಲವು ಮಾಧ್ಯಮಗಳನ್ನು ಬಳಸಿಕೊಂಡು ಜಾನಪದಶಾಸ್ತ್ರ ಸಂಗತಿಗಳನ್ನು ಹೇಗೆ ದಾಖಲಿಸಿಕೊಳ್ಳಬೇಕು ಎಂಬ ಪಾಶ್ಚಾತ್ಯ ತಿಳುವಳಿಕೆಯನ್ನು ಕೊಡುವ ಕೃತಿ ಇದಾಗಿದೆ. ದಾಖಲಾತಿಯ ಜೊತೆಗೆ ವಸ್ತು ಸಂಗ್ರಹಾಲಯದ ಸ್ವರೂಪವನ್ನೂ ಈ ಕೃತಿ ಹೇಳಿಕೊಡುತ್ತದೆ. ಇದೆಲ್ಲ ಪಾಶ್ಚಾತ್ಯ ಜಾನಪದಶಾಸ್ತ್ರದ ಪ್ರಭಾವವೇ ಆಗಿದೆ. ಸಂಗ್ರಹಿತ ಮತ್ತು ದಾಖಲೆಗೊಂಡ ವಸ್ತುಗಳನ್ನು ಕಾಪಾಡುವ ಪದ್ಧತಿಯೂ ಸಹಜವಾಗಿಯೇ ಪಾಶ್ಚಾತ್ಯರ ಪದ್ಧತಿಯೇ ಆಗಿರುವುದು ಸಹಜ. ಅವುಗಳನ್ನು ಪರಿಚಯಿಸುವ 'ಜಾನಪದ ವಸ್ತು ಸಂಗ್ರಹಾಲಯ' ಎಂಬ ಕೃತಿಯೊಂದು ಕುವೆಂಪು ವಿಶ್ವವಿದ್ಯಾಲಯದಿಂದ ೨೦೦೪ ರಲ್ಲಿ ಪ್ರಕಟವಾಗಿರುವುದನ್ನು ನಾವು ಕಾಣುತ್ತೇವೆ. ಹೀಗಾಗಿ ಕರ್ನಾಟಕದಲ್ಲಿ ಕ್ಷೇತ್ರಕಾರ್ಯ, ದಾಖಲಾತಿ, ದಾಖಲಾತಿ ಸಂಗ್ರಹಾಲಯಗಳು ಮತ್ತು ವಸ್ತು ಸಂಗ್ರಹಾಲಯಗಳ ಪದ್ಧತಿಯಲ್ಲಿ ಪಾಶ್ಚಾತ್ಯರ ಅನುಕರಣೆ ವ್ಯಾಪಕವಾಗಿ ಕಾಣುತ್ತದೆ.

ಜಾನಪದಶಾಸ್ತ್ರ ಪೂರಕ ಕ್ಷೇತ್ರಗಳು :

ಪಾಶ್ಚಾತ್ಯರಲ್ಲಿ ನಡೆದ ಜಾನಪದಶಾಸ್ತ್ರ ಅಧ್ಯಯನ ಮಾದರಿಯಲ್ಲಿಯೇ ನಮ್ಮಲ್ಲಿಯೂ ಅಭ್ಯಾಸ ನಡೆಯಬೇಕೆಂಬ ಹಂಬಲ ಸಾಮಾನ್ಯವಾಗಿ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗವು 'ಜಾನಪದ ಮತ್ತು ಪೂರಕ ಕ್ಷೇತ್ರಗಳು' ಎಂಬ ವಿಷಯ ಕುರಿತು ೧೯೯೦ರಲ್ಲಿ ಒಂದು ವಿಚಾರ ಸಂಕಿರಣವನ್ನೇ ಏರ್ಪಡಿಸಿತ್ತು. ಇಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ 'ಜಾನಪದ ಮತ್ತು ಪೂರಕ ಕ್ಷೇತ್ರಗಳು' ಎಂಬ ಕೃತಿ ೧೯೯೧ರಲ್ಲಿ ಪ್ರಕಟವಾಗಿದೆ. ಇಲ್ಲಿಯ ಲೇಖನಗಳಲ್ಲಿ ಪಾಶ್ಚಾತ್ಯರಲ್ಲಿ ವಿವರಣೆಗೊಂಡ ವಿಷಯಗಳ ಪರಿಚಯ ವ್ಯಾಪಕವಾಗಿ ಕಾಣುತ್ತದೆ. ಜಾನಪದಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಪಠ್ಯಗಳಲ್ಲಿ ಅಳವಡಿಸಿ ಬೋಧಿಸುವ ಪದ್ಧತಿ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಇಂದಿಗೂ ಕಾಣುತ್ತದೆ.

ಜನಪದ ಸಾಹಿತ್ಯ ಕೃತಿಗಳ ಅನುವಾದಗಳು :

ಪ್ರಪಂಚದ ಪ್ರಸಿದ್ಧ ದ್ವಿಭಾಷಾ ತಜ್ಞರೆಂದು ಹೆಸರಾದವರು ಎ. ಕೆ. ರಾಮಾನುಜನ್ ಅವರು. ಅವರಿಗೆ ೧೯೬೦ಕ್ಕಿಂತ ಮುಂಚೆಯೇ ಜಾನಪದ ಸಾಹಿತ್ಯದ ಹುಚ್ಚು ಹಿಡಿದಿತ್ತು ಎಂದರೆ ಆಶ್ಚರ್ಯವೆನಿಸುತ್ತದೆ. ಅವರು ವಚನಗಳನ್ನು ಇಂಗ್ಲೀಷ ಪ್ರಪಂಚಕ್ಕೆ ಪರಿಚಯಿಸಿ ಕೊಟ್ಟ ಪ್ರತಿಭಾವಂತರು. ಅಂಥವರು ೧೯೫೫ರಲ್ಲಿಯೇ ಗಾದೆಗಳನ್ನು ಕುರಿತು ಬರೆದ ಒಂದು ಪುಟ್ಟ ಕೃತಿ 'ಗಾದೆಗಳು' ಎಂಬುದನ್ನು ೧೯೫೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದೆ. ಇಲ್ಲಿ ಗಾದೆಗಳ ಸ್ವರೂಪವನ್ನು ವಿವರಿಸುವಾಗ ಅವರು ತಮ್ಮ ಓದಿನ ವಿಸ್ತಾರದಲ್ಲಿ ಬೇರೆಬೇರೆ ದೇಶಗಳಲ್ಲಿ ಗಾದೆಗಳನ್ನು ಕುರಿತು ಹೇಳುವ ಮಾತುಗಳನ್ನು ಓತಪ್ರೋತವಾಗಿ ಉಲ್ಲೇಖಿಸುತ್ತಾರೆ. ಹಾಗೆ ನೋಡಿದರೆ ಹೊರದೇಶದವರ ದೃಷ್ಟಿಯಲ್ಲಿ ಗಾದೆಗಳನ್ನು ಪರಿಚಯಿಸಿದ ಮೊದಲ ಕೃತಿ ಇದು. ಮುಂದೆ ೧೯೯೧ರಲ್ಲಿ 'ಫೋಕ್‌ಟೇಲ್ಸ್ ಫ್ರಾಮ್ ಇಂಡಿಯಾ' (೧೯೯೧) ಎಂಬ ೧೧೦ ಕಥೆಗಳ ಒಂದು ಸಂಗ್ರಹವನ್ನು ಎ.ಕೆ.ರಾಮಾನುಜನ್ ಅವರು ಇಂಗ್ಲೀಷಿನಲ್ಲಿ ಪ್ರಕಟಿಸಿದರು. ಅಂದರೆ ಭಾರತದ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಾಗಿರುವ ಜನಪದ ಕಥೆಗಳನ್ನು ತಮ್ಮ ಸ್ನೇಹಿತರ ಮೂಲಕ ಸಂಗ್ರಹಿಸಿ, ತಾವೂ ಒಂದಿಷ್ಟು ಸಂಗ್ರಹದ ಕೆಲಸ ಮಾಡಿ, ಅವೆಲ್ಲವನ್ನು ಇಂಗ್ಲೀಷಿಗೆ ಭಾಷಾಂತರಿಸಿ ಪ್ರಕಟಿಸಿದರು. ಹೀಗೆ ಇಂಗ್ಲೀಷಿನಲ್ಲಿ ಪ್ರಕಟವಾದ ಈ ಕೃತಿಯನ್ನು ಮಹಾಬಲೇಶ್ವರ ರಾವ್ ಎನ್ನುವವರು ಕನ್ನಡಕ್ಕೆ ಅನುವಾದಿಸಿದರು. ಇದು 'ಭಾರತೀಯ ಜನಪದ ಕತೆಗಳು' (೨೨ ಭಾಷೆಗಳಿಂದ ಆಯ್ದ ಬಾಯ್ಮಾತಿನ ಕತೆಗಳು) ಎಂಬ ಹೆಸರಿನಲ್ಲಿ ೨೦೦೦ನೇ ವರ್ಷದಲ್ಲಿ ಎನ್.ಬಿ.ಟಿ. ಇಂದ ಪ್ರಕಟವಾಗಿದೆ. ಸಣ್ಣ ಸಣ್ಣ ಜನಪದ ಕಥೆಗಳನ್ನು ಆಯ್ದುಕೊಂಡು ಈ ಸಂಗ್ರಹವನ್ನು ತಯಾರಿಸಲಾಗಿದೆ. ಹೆಚ್ಚಾಗಿ ಮಕ್ಕಳ ಮುಂದೆ ಹೇಳುವ ಜನಪದ ಕಥೆಗಳೇ ಇಲ್ಲಿರುವುದು ವಿಶೇಷ. ಇದರಲ್ಲಿ ಕರ್ನಾಟಕದ ಕಥೆಗಳೂ ಇವೆ. ಹೀಗೆ ಭಾರತದಲ್ಲಿಯ ಕಥೆಗಳು ಇಂಗ್ಲೀಷಿಗೆ ಅನುವಾದಗೊಂಡುದು, ಮತ್ತೆ ಇಂಗ್ಲೀಷಿನಿಂದ ಕನ್ನಡಕ್ಕೆ ಈ ಎಲ್ಲ ಕಥೆಗಳು ಪರಿಚಯವಾದುದು ಈ ಕೃತಿಯ ವಿಶೇಷವೇ.

ಹೀಗೆ ಭಾರತೀಯ ಜನಪದ ಸಾಹಿತ್ಯದ ಕೃತಿಗಳು ಮೊದಲು ಇಂಗ್ಲೀಷಿನಲ್ಲಿ ಪ್ರಕಟವಾಗಿ, ನಂತರ ಅವುಗಳ ಮಹತ್ವವನ್ನು ಮನಗಂಡು ಕನ್ನಡಕ್ಕೆ ತರ್ಜುಮೆಗೊಂಡ ಇನ್ನೂ ಕೆಲವು ಕೃತಿಗಳು ನಮಗೆ ದೊರೆಯುತ್ತವೆ. ಅವೆಲ್ಲ ಕನ್ನಡದ ಪ್ರಸಿದ್ಧ ಪ್ರಾಧ್ಯಾಪಕರುಗಳಿಂದಲೇ ಕನ್ನಡಕ್ಕೆ ಬಂದ ಕೃತಿಗಳಾಗಿವೆ. ದುರ್ಗಾ ಭಾಗವತ ಅವರು ಮಹಾರಾಷ್ಟ್ರದ ಅತ್ಯಂತ ಪ್ರಸಿದ್ಧ ಸಂಶೋಧಕರು. ಅವರು ಇಂಗ್ಲೀಷಿನಲ್ಲಿ ರಚಿಸಿದ ಎರಡು ಕೃತಿಗಳು ಕನ್ನಡಕ್ಕೆ ಬಂದಿರುವುದು ಒಂದು ವಿಶೇಷ. 'ಭಾರತೀಯ ಜಾನಪದ ಸಮೀಕ್ಷೆ' ಎಂಬ ಕೃತಿಯೊಂದನ್ನು, ನಮ್ಮಲ್ಲಿ ಎಂ.ಎ. ಕನ್ನಡದಲ್ಲಿ ಪ್ರಾರಂಭವಾದ ಜನಪದ ಸಾಹಿತ್ಯದ ಪತ್ರಿಕೆಯನ್ನು ಬೋಧಿಸಲು ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಪ್ರೊ. ಕೆ. ಮರುಳಸಿದ್ದಪ್ಪ ಅವರು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿ, ಬೆಂಗಳೂರು ವಿಶ್ವವಿದ್ಯಾಲಯದಿಂದ ೧೯೭೪ರಲ್ಲಿಯೇ ಪ್ರಕಟಿಸಿರುವುದು ಒಂದು ಐತಿಹಾಸಿಕ ಮಹತ್ವದ ಸಂಗತಿಯೇ ಆಗಿದೆ. ಇದೇ ರೀತಿ ದುರ್ಗಾ ಭಾಗವತರ ಇನ್ನೊಂದು ಕೃತಿ 'ದಿ ರಿಡಲ್ ಇನ್ ಇಂಡಿಯನ್ ಲೈಫ್ ಲೋರ್ ಆಂಡ್ ಲಿಟರೇಚರ್' ಎಂಬುದನ್ನು ಡಾ। ಬಿ. ಎ. ವಿವೇಕ ರೈ ಅವರು 'ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು' ಎಂಬ ಹೆಸರಿನಲ್ಲಿ ೧೯೮೮ ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಅವರು ೧೯೭೧ರಲ್ಲಿಯೇ ಅನುವಾದಿಸಿ, ಅದರ ಹಸ್ತಪ್ರತಿಯನ್ನು ಇಟ್ಟುಕೊಂಡು ವಿದ್ಯಾರ್ಥಿಗಳಿಗೆ ಪಾಠ ಹೇಳಲು ಬಳಸಿಕೊಂಡಿದ್ದಾರೆ. ಮೂಲ ಲೇಖಕರ ಅನುಮತಿ ಪಡೆದು ಪ್ರಕಟಿಸಬೇಕೆಂಬ ಅವರ ಹಂಬಲ ಸುದೀರ್ಘವಾಗಿ ೧೮ ವರ್ಷಗಳ ವರೆಗೆ ಕಾಯುವಂತೆ ಮಾಡಿದೆ. ಆದರೆ ೧೯೭೧ರಿಂದಲೇ ಅದರ ಹಸ್ತಪ್ರತಿಯ ಉಪಯೋಗವಾಗುತ್ತ ಬಂದುದು ಗಮನಾರ್ಹ ಸಂಗತಿ.

ಪೀಟರ್ ಜೆ. ಕ್ಲಾಸ್ ಅವರು ಅಮೆರಿಕೆಯವಾರದರೂ ಅವರು ಹೆಚ್ಚು ಕೆಲಸ ಮಾಡಿದ್ದು, ತುಳು ಜಾನಪದದ ಬಗ್ಗೆ. ತುಳುಜಾನಪದದ ಬಗೆಗೆ ಬರೆದ ಪೀಟರ್ ಅವರ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದವರು ಎ. ವಿ.ನಾವಡ ಮತ್ತು ಸುಭಾಶ್ಚಂದ್ರ ಎನ್ನುವವರು. ಇದನ್ನು ೧೯೮೭ ರಲ್ಲಿ ಪ್ರಾದೇಶಿಕ ವ್ಯಾಸಂಗ, ಕುಂದಾಪುರ ಅವರು 'ತುಳುವ ದರ್ಶನ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇಂತಹ ಪ್ರಯತ್ನಗಳಿಂದ ಹೊರಗಿನವರಿಂದ ಜಾನಪದಶಾಸ್ತ್ರ ಕ್ಷೇತ್ರದ ಅಧ್ಯಯನ ಹೇಗೆ ನಡೆದಿದೆ, ಏನು ನಡೆದಿದೆ ಎಂಬುದು ಕನ್ನಡ ವಿದ್ವಾಂಸರ ಗಮನಕ್ಕೆ ಬರುತ್ತ ಹೋಗಿರುವುದು ಪ್ರಮುಖಸಂಗತಿಯಾಗುತ್ತದೆ.

ಭಾರತೀಯ ಜನಪದ ಸಂಸ್ಕೃತಿ, ಸಾಹಿತ್ಯಗಳನ್ನು ಇಂಗ್ಲೀಷಿಗೆ ಪರಿಚಯಿಸಿಕೊಡುವ ಪ್ರಯತ್ನದಲ್ಲಿ ಎನ್.ಬಿ.ಟಿ.ಯಿಂದ ಪ್ರಕಟವಾದ ಪ್ರತಿರಾಜ್ಯದ ಜಾನಪದ ಸಾಹಿತ್ಯ, ಸಂಸ್ಕೃತಿಯನ್ನು ಪರಿಚಯಿಸುವ ಕೃತಿಗಳ ಪ್ರಕಟನೆ ಮೆಚ್ಚುವಂತಹದು. ಅವೆಲ್ಲ ಮಹಾರಾಷ್ಟ್ರ ಜಾನಪದ, ತಮಿಳು ಜಾನಪದ, ಆಂದ್ರ ಜಾನಪದ ಹೀಗೆ ರಾಜ್ಯಗಳ ಹೆಸರಿನ ಮೇಲೆಯೇ ಮೊದಲು ಇಂಗ್ಲೀಷಿನಲ್ಲಿ ಪ್ರಕಟವಾದ ಕೃತಿಗಳನ್ನು ನಂತರ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿರುವುದನ್ನು ಕಾಣುತ್ತೇವೆ. ಇದು ಹೊರದೇಶದವರಿಗೆ

ಅನುಕೂಲವಾಗುವುದರೊಂದಿಗೆ, ಭಾರತೀಯ ಬೇರೆ ಬೇರೆ ಭಾಷಿಕ ಜನರಿಗೆ ಭಾರತದ ಒಂದು ನಾಡಿನ ಜಾನಪದ ಸಂಸ್ಕೃತಿ ಸಾಹಿತ್ಯಗಳನ್ನು ಅರಿತುಕೊಳ್ಳಲು ಉತ್ತಮವಾದ ಸಹಾಯಕ ಕೃತಿಗಳಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಕನ್ನಡದಿಂದ ಇಂಗ್ಲೀಷಿಗೆ :

ಕರ್ನಾಟಕದ ಜನಪದ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಹೀಗೆ ನಾನಾ ಬಗೆಯ ವಿಷಯಗಳನ್ನು ಪರಿಚಯಿಸುವ ಲೇಖನಗಳನ್ನು ಆಯ್ದುಕೊಂಡು, ಇಂಗ್ಲೀಷಿಗೆ ಭಾಷಾಂತರಿಸಿ, ಪ್ರಕಟಿಸಿದ; ಕೃಷ್ಣಮೂರ್ತಿ ಹನೂರ ಅವರು ಸಂಪಾದಿಸಿದ, ಕೃತಿ 'ಎನ್‌ಸೈಕ್ಲೋಪಿಡಿಯಾ ಫೋಕ್ ಕಲ್ಚರ್ ಆಫ್ ಕರ್ನಾಟಕ ಸ್ಟಡೀಸ್' (೧೯೯೦) ತೀರ ಮಹತ್ವದ ಸಂಪುಟವಾಗಿದೆ. ಇದು ಇನ್‌ಸ್ಟಿಟ್ಯೂಟ್ ಆಫ್ ಏಶಿಯನ್ ಸ್ಟಡೀಜ್ ಮದ್ರಾಸ್ ಅವರ ಒಂದು ಯೋಜನೆಯಲ್ಲಿ ತಯಾರಾದ ಕೃತಿಯಾಗಿದ್ದು, ಇದರಲ್ಲಿ ಕನ್ನಡದ ಜಾನಪದಕ್ಕೆ ಸಂಬಂಧಿಸಿದ ೬೦ ವಿಷಯಗಳ ಲೇಖನಗಳಿವೆ. ಈ ಸಂಪುಟದಲ್ಲಿ ನಾನು ಹೊಸದಾಗಿ ಬರೆದ 'ಜನಪದ ಕಾವ್ಯಮೀಮಾಂಸೆ'(೧೯೮೨) ಎಂಬ ಶಾಸ್ತ್ರ ಕೃತಿಯನ್ನು ಇಡಿಯಾಗಿ ಇಂಗ್ಲೀಷಿಗೆ ಅನುವಾದಿಸಿ ಪ್ರಕಟಿಸಿರುವುದು ಒಂದು ವಿಶೇಷ ಸಂಗತಿಯೆ.

ಕನ್ನಡದಲ್ಲಿ ಹೊಸದಾಗಿ ಬೆಳೆದು ನಿಂತ 'ಜನಪದ ಕಾವ್ಯಮೀಮಾಂಸೆ'ಯ ವಿಸ್ತೃತ ರೂಪವನ್ನು ಇಂಗ್ಲೀಷಿಗೆ ಪರಿಚಯಿಸುವ ನನ್ನ ಕೃತಿ 'ಫೋಕ್ ಪೋಯಟಿಕ್ಸ್' (ಆರ್.ಆರ್.ಸಿ. ೧೯೯೯) ಕನ್ನಡದಲ್ಲಿ ಬೆಳೆದು ಬಂದ ಒಂದು ವಿಶೇಷ ಕಾವ್ಯಶಾಸ್ತ್ರ ಗ್ರಂಥವಾಗಿದೆ. ಹೀಗೆಯೇ ಕನ್ನಡ ಜನಪದ ಸಾಹಿತ್ಯ, ರಂಗಭೂಮಿ ಇವುಗಳನ್ನು ಇಂಗ್ಲೀಷಿಗೆ ಪರಿಚಯಿಸುವ ಕೆಲಸದಲ್ಲಿ, ಎಸ್.ಎ. ಕೃಷ್ಣಯ್ಯ ಅವರ 'ಕರ್ನಾಟಕ ಪುಪ್ಪೆಟರಿ'(ಆರ್.ಆರ್.ಸಿ, ಉಡಪಿ, ೧೯೮೮), ಡಾ. ಬಸವರಾಜ ನಾಯ್ಕರ ಅವರ 'ದಿ ಫೋಕ್ ಥೀಯೆಟರ್ ಆಫ್ ಕರ್ನಾಟಕ' (ಕವಿವಿ,೧೯೯೬), ಸಿ.ಎನ್.ರಾಮಚಂದ್ರನ್ ಹಾಗೂ ಪದ್ಮಾ ಶರ್ಮಾ ಅವರ 'ಸ್ಟ್ರಿಂಗ್ಸ್ ಆಂಡ್ ಸಿಂಬಾಲ್ಸ್' (ಕನ್ನಡ ವಿವಿ, ೨೦೦೭), ಇವೆಲ್ಲ ಮಹತ್ವದ ಪ್ರಯತ್ನಗಳಾಗಿವೆ. ಆದರೆ ಇವುಗಳ ಪರಿಣಾಮ ಹೊರಗಿನವರ ಮೇಲೆ ಆಗಿದೆಯೇ? ಆದರೆ ಎಷ್ಟರಮಟ್ಟಿಗೆ ಆಗಿದೆ? ಎಂಬುದು ನಮಗೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಇಂಗ್ಲೀಷಿನಿಂದ ಬರುವುದನ್ನು ನಾವು ಎಷ್ಟು ತೀವ್ರವಾಗಿ ಸ್ವಾಗತಿಸುತ್ತೇವೆಯೋ, ಅಷ್ಟೇ ನಿರ್ಲಕ್ಷ್ಯದಿಂದ ನಮ್ಮಲ್ಲಿಯ ಸಂಗತಿಗಳು ಇಂಗ್ಲೀಷಿಗೆ ಹೋದಾಗ ನೋಡಲಾಗುತ್ತದೆ ಎಂದು ತಿಳಿದುಬರುತ್ತದೆ. ಆದರೂ ನಡೆಯುವ ಪ್ರಯತ್ನಗಳು ನಡೆಯಲೇ ಬೇಕು. ಆ ದೃಷ್ಟಿಯಿಂದ ಕನ್ನಡದಿಂದ ಇಂಗ್ಲೀಷಿಗೆ ಭಾಷಾಂತರಗೊಂಡು ಹೋದ ಜಾನಪದಶಾಸ್ತ್ರದ ಸಂಗತಿಗಳು ಕಡಿಮೆಯೆಂದೇ ಹೇಳಬೇಕು.

* * *

ಭಾಗ–೨

ಜನಪದ ಗದ್ಯ, ಪದ್ಯಗಂಧೀ ಗದ್ಯ ಸಾಹಿತ್ಯ ಪ್ರಕಾರಗಳು

೧. ಜನಪದ ಗದ್ಯ ಕಥೆಗಳು :
   * ಜನಪದ ಕಥೆಗಳು
   * ಐತಿಹ್ಯಗಳು.

೨. ಜನಪದ ಗಾದೆಗಳು

೩. ಜನಪದ ಒಗಟುಗಳು

೪. ಜನಪದ ಒಡಪುಗಳು

೫. ಜನಪದ ವಡಬುಗಳು

೬. ಜನಪದ ಮಕ್ಕಳ ಹಾಡುಗಳು :
   * ಮಕ್ಕಳಾಟದ ಹಾಡುಗಳು
   * ಆಣಿಪೀಣಿ ಹಾಡುಗಳು

೧. ಜನಪದ ಗದ್ಯ ಕಥೆಗಳು

೧. ಜನಪದ ಕಥೆಗಳು :

ಜನಪದಕಥೆ ಮನುಷ್ಯನ ಜ್ಞಾನ ಪರಂಪರೆಯನ್ನು ಹೊತ್ತ ಅಮೂಲ್ಯ ಸಾಹಿತ್ಯ ಪ್ರಕಾರವಾಗಿದೆ. ಈ ಪ್ರಪಂಚದಲ್ಲಿ ಕಥೆಗಳನ್ನು ಆಲಿಸದ ಒಬ್ಬನನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಜನಪದ ಕಥೆಗಳು ಮನುಷ್ಯ ಬದುಕಿಗೆ ಅವಶ್ಯವಾದ ಸಂಜೀವಿನಿ ತುಂಬಿದ ಪಾತ್ರೆಗಳಾಗಿವೆ. ಕಥೆ ಮಾನವ ಬದುಕಿನ ಒಂದು ಅಂಗ. ಅವನ ಜ್ಞಾನದ ಬಹುಮಹತ್ವದ ಆಗರ. ಯಾವುದೇ ಪ್ರಯಾಸವಿಲ್ಲದೆ ಅವನ ಜ್ಞಾನದ ಬುತ್ತಿಯಾಗಿ, ಸ್ಮೃತಿಯ ರೂಪದಲ್ಲಿ ಅವನ ಜೊತೆಗೆ ಇರುವವು ಕಥೆಯ ಬೀಜಗಳು. ಹೀಗಾಗಿ ಮೌಖಿಕ ಮತ್ತು ಲಿಖಿತ ರೂಪದ ಸಾಹಿತ್ಯ ಚರಿತ್ರೆಯಲ್ಲಿ ಕಥೆಗಳದೇ ಪ್ರಮುಖ ಪಾತ್ರವೆನಿಸುತ್ತದೆ.

ಜನಪದಸಾಹಿತ್ಯದಲ್ಲಿ 'ಗದ್ಯಕಥನ'ಗಳ ಭಾಗ ಪ್ರಮುಖವಾದುದಾಗಿದೆ. R.S. Boggs ಅವರು ಸೂಚಿಸುವ Folk Narratives ಎಂಬುದಕ್ಕೆ ನಮ್ಮಲ್ಲಿಯ 'ಜನಪದ ಗದ್ಯ ಕಥನಗಳು' ಎಂಬುದು ಸಮಾನಾರ್ಥಕವಾಗಿದೆ. R.S. Boggs ಅವರು Folk Narratives ಗಳಲ್ಲಿ Myth, legend ಮತ್ತು Marchen ಎಂಬ ಭಾಗಗಳನ್ನು ಸೂಚಿಸುತ್ತಾರೆ. Myth ಎಂದರೆ ಪುರಾಣ ಕಥೆಗಳು, Legend ಎಂದರೆ ಐತಿಹ್ಯಗಳು, Marchen ಎಂದರೆ ಕಟ್ಟುಕಥೆಗಳು- ಎಂದು ಕನ್ನಡದಲ್ಲಿ ಬಳಸಲಾಗುತ್ತಿದೆ. ಮೊದಲಿನವೆರಡು ಪದಗಳು ಸರಿಯಾಗಿದ್ದು, Marchen ಎಂಬುದಕ್ಕೆ 'ಕಟ್ಟುಕಥೆ' ಎಂದು ಬಳಸಿದ್ದರೂ, ಸಾರ್ವತ್ರಿಕವಾಗಿ 'ಜನಪದ ಕಥೆ'ಗಳೆಂದೇ ಬಳಸಲಾಗುತ್ತದೆ. 'ಜನಪದ ಕಥೆ' ಇಂಗ್ಲೀಷಿನ Folktale ಎಂಬ ಪದದ ಸಮಾನಾರ್ಥಕವಾಗಿದೆ. Folktale ಎಂಬ ಪದ ಪ್ರಪಂಚದಾದ್ಯಂತ ಸಾರ್ವತ್ರಿಕವಾಗಿ ಬಳಕೆಗೆ ಬಾರದ ಮುನ್ನ- ಜರ್ಮನಿಯ Marchen, ಇಂಗ್ಲೀಷಿನ Fairytale, ನಾರ್ವೆಯ Eventyr, ಫ್ರಾನ್ಸಿನ Conte populaire, ಸ್ವಿಡ್ಸರ್ಲೆಂಡಿನ Saga, ರಷ್ಯಾದ Skazka- ಮುಂತಾದ ಪದಗಳು ಸ್ಥಳೀಯವಾಗಿ ಸೀಮಿತ ಅರ್ಥದಲ್ಲಿ ಬಳಕೆಯಾಗುತ್ತಿದ್ದವು. ಸ್ಟಿಥ್‌ಥಾಮ್ಸನ್ನರು Marchen ಗೆ Chimerat ಎನ್ನುವ ಪದವನ್ನು ಸೂಚಿಸಿ- Marchen ಬಳಕೆಯಾದ ಅರ್ಥಲ್ಲಿಯೇ ಚರ್ಚಿಸಿದಂತೆ ತೋರುತ್ತದೆ. ಈ ಎಲ್ಲ ಪ್ರಾದೇಶಿಕ ಪದಗಳು ಸೂಚಿಸುವ ಅರ್ಥದ ಕಥೆಗಳು -Folktale 'ಜನಪದ ಕಥೆ' ಎಂಬ ಹೆಸರಿನಡಿ ಸೇರಬಲ್ಲವಾಗಿವೆ. ಅದಕ್ಕಾಗಿ

ಐತಿಹ್ಯ ಮತ್ತು ಪುರಾಣ ಕಥೆಗಳ ಜೊತೆಗೆ Marchen –ಕಟ್ಟು ಕಥೆ ಎಂಬುದರ ಬದಲಾಗಿ, Folktale- ಜನಪದ ಕಥೆ ಎಂದು ಇಟ್ಟುಕೊಳ್ಳುವುದು ಹೆಚ್ಚು ಸಮಂಜಸವೆನಿಸುತ್ತದೆ. ಹೀಗಾಗುವುದರಿಂದ R.S. Boggs ಅವರು Folk Narratives ಗದ್ಯ ಕಥನಗಳಲ್ಲಿ ಸೂಚಿಸುವ ಮೂರನೆಯ ಪ್ರಕಾರವಾದ Marchen ಎಂಬುದರ ಬದಲಾಗಿ Folktale ಎಂದು ಬದಲಾಯಿಸಿಕೊಂಡಂತಾಗುತ್ತದೆ.

'ಜನಪದ ಕಥೆಗಳು' ಎಂಬುದು ಇಂಗ್ಲೀಷಿನ 'ಫೋಕ್‌ಟೇಲ್' (folktale) ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದವಾಗಿದೆ. 'ಅಜ್ಜಿಯ ಕಥೆಗಳು' ಎಂದರೆ ಜನಪದ ಕಥೆಗಳೆಂದೇ ಅರ್ಥವಾಗುತ್ತದೆ. 'ಅಜ್ಜಿಯ ಕಥೆ'ಎಂಬ ಈ ಪದವು ಸುಮಾರಾಗಿ ಕರ್ನಾಟಕದ ಶಿಕ್ಷಿತ ಸಮುದಾಯದಲ್ಲಿ ಗುರುತಿಸುವಂತಹದು. ಹಳ್ಳಿಯ ಬದುಕಿನಲ್ಲಿ– 'ಒಂದು ಕತಿ ಹೇಳು' ಎಂದರೆ ಅದು ಜನಪದ ಕಥೆಯನ್ನೇ ಕುರಿತು ಹೇಳುವ ಮಾತಾಗುತ್ತದೆ. ಅಂದರೆ ಈಗ 'ಅಜ್ಜಿ ಕಥೆ'ಗಳು ಅಥವಾ 'ಜನಪದ ಕಥೆ'ಗಳು ಎಂದು ಕರೆಯುವ ಕಥೆಗಳನ್ನು ಕೇವಲ 'ಕಥೆ'(ಕತಿ) ಎಂದು ಕರೆಯುವ ರೂಢಿ ಈಗಲೂ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿದೆ.

ಜನಪದಕಥೆಗಳಲ್ಲಿ– ಸರಗತಿ, ಒಡಗತಿ, ನಗಸಾ ಕತಿ (ಹಾಸ್ಯ ಕಥೆಗಳು ಹಾಗೂ ಅಡಗತೆಗಳು) ಎಂಬ ಮೂರು ಬಗೆಯ ಕಥೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಗುರುತಿಸುತ್ತಾರೆ. ಮಕ್ಕಳು ರಾತ್ರಿ ಹಾಸಿಗೆಯಲ್ಲಿ ಮಲಗಲು ಅಡ್ಡಾದಾಗ, ಆಯಿ(ಅಜ್ಜಿ), ಮುತ್ಯಾ (ಅಜ್ಜ), ತಾಯಿ, ತಂದೆ ಅಥವಾ ಯಾರಾದರೂ ಕಥೆ ಹೇಳುವವರು ಇದ್ದಾಗ 'ಕತಿ ಹೇಳು' ಎಂದು ಕೇಳಿದರೆ ಕಥೆ ಹೇಳುವವರು ಸುಮಾರಾಗಿ ಹಾಕುವ ಮರು ಪ್ರಶ್ನೆ ಎಂದರೆ, 'ಯಾವ ಕತಿ ಹೇಳ್ಲಿ? ಸರಕತಿನೋ? ಇಲ್ಲ ಒಡಗತಿನೋ?' ಎಂದು. ಸರಗತಿ ಮತ್ತು ಒಡಗತಿ– ಈ ಎರಡೂ ಬಗೆಯ ಕಥೆಗಳು ಬೇಡವಾಗಿದ್ದರೆ ಕೇಳುಗ/ಮಗು 'ನಗಸಾ ಕತಿ ಹೇಳು' ಎಂದು ಕೇಳುವುದು ಸಾಮಾನ್ಯ ಸಂಗತಿ.

'ಅಡಗತಿ' ಎಂಬ ಇನ್ನೊಂದು ಪದವನ್ನೂ ಬಳಸಲಾಗುತ್ತದೆ. 'ಅಡಗತಿ' ಎಂದರೆ 'ಉಪಕಥೆ' ಎಂದು ಅರ್ಥವಾಗುತ್ತದೆ. 'ಉಪಕಥೆ' ಎಂಬುದು ಕಥೆಗಳ ಒಂದು ಪ್ರಕಾರವನ್ನು ಹೇಳುವುದಿಲ್ಲ. ಬದಲಾಗಿ ದೀರ್ಘ ಕಥೆಯ ನಡುವೆ ಬಳಸುವ 'ಸಣ್ಣ ಕಥೆ'ಗಳನ್ನು 'ಉಪ ಕಥೆ' ನಿರ್ದೇಶಿಸುತ್ತದೆ. ಇವು ಯಾವಾಗಲೂ ಹಾಸ್ಯ ಕಥೆಗಳೇ ಆಗಿರುತ್ತವೆ, ಕೆಲವೊಮ್ಮೆ ನೀತಿ ಪ್ರಧಾನವಾದ ಕಥೆಗಳಾಗಿರಲೂ ಸಾಧ್ಯ. 'ಅಡಗತಿ'ಯ ಸಂದರ್ಭವೆಂದರೆ ಹಳ್ಳಿಗಳಲ್ಲಿ ಪುರಾಣ, ಪ್ರವಚನ, ಕೀರ್ತನೆಗಳನ್ನು ಹೇಳುವ ಸ್ವಾಮಿಗಳು, ರಾತ್ರಿಯೆಲ್ಲ ದೀರ್ಘವಾದ ಕಥೆ ಹೇಳುವ ಗೊಂದಲಿಗರು– ನಡುನಡುವೆ ಮನರಂಜನೆಗೆಂದು ಹೇಳುವ 'ಸಣ್ಣ ರೂಪದ ಸರಳ ಕಥೆ'ಗಳು ಅಡಗತೆಗಳು ಎನಿಸುತ್ತವೆ.

ವಿಶ್ವ ಜನಪದ ಕಥೆಗಳ ಮಾದರಿ ಸೂಚಿ ಎನಿಸಿಕೊಂಡಿರುವ ಆರ್ನೆ– ಥಾಮ್ಸನ್ನರ 'Types of the Folk tale'ಎಂಬ ಕೃತಿಯಲ್ಲಿ ಸ್ಟಿಥ್ ಥಾಮ್ಸನ್ ಅವರು ಮಾಡಿಕೊಳ್ಳುವ ಪ್ರಮುಖ ವಿಭಾಗೀಕರಣದಲ್ಲಿ ೧) ಪ್ರಾಣಿ ಕಥೆಗಳು, ೨)ಸಾಮಾನ್ಯ ಜನಪದ ಕಥೆಗಳು,

೩) ಹಾಸ್ಯ ಹಾಗೂ ಅಡ್ಡ ಕಥೆ(ಅಡಗತೆ)ಗಳು –ಎಂಬ ಮೂರು ಪ್ರಮುಖವಾದ ಭಾಗಗಳನ್ನು ಕಾಣುತ್ತೇವೆ. ನಾಲ್ಕನೆಯದಾಗಿ ಅಷ್ಟೊಂದು ಪ್ರಮುಖವಲ್ಲದ 'ಸೂತ್ರಬದ್ಧ ಕಥೆಗಳು' (Formula Tales) ಎಂಬ ವಿಭಾಗೀಕರಣವೂ ಒಂದಿದೆ.

ಜನಪದರು ಹೇಳುವ ಸರಗತಿ, ಒಡಗತಿ, ನಗಸಾ ಕತಿ ಎಂಬ ಈ ಮೂರು ಪ್ರಕಾರಗಳಲ್ಲಿ ಮತ್ತು ಥಾಮ್ಸನ್ನರು ಗುರುತಿಸುವ ಪ್ರಾಣಿ ಕಥೆಗಳು, ಹಾಸ್ಯ ಕಥೆಗಳು, ಸಾಮಾನ್ಯ ಕಥೆಗಳು ಎಂಬ ಮೂರು ಪ್ರಕಾರಗಳಲ್ಲಿ– ಎರಡು ಪ್ರಕಾರಗಳು ಒಂದೇ ಬಗೆಯಾಗಿರುವುದನ್ನು ಗಮನಿಸಬೇಕು. ಜನಪದರ ಸರಗತಿ (ಸರಳ ಕಥೆ) ಎನ್ನುವುದನ್ನು ಥಾಮ್ಸನ್ನರು 'ಸಾಮಾನ್ಯ ಜನಪದ ಕಥೆಗಳು' (Ordinary Folk tales) ಎನ್ನುತ್ತಾರೆ. ಜನಪದರು 'ನಗಸಾ ಕತಿ' ಮತ್ತು 'ಅಡಗತಿ' (ಹಾಸ್ಯ ಹಾಗೂ ಅಡಗತಿ)ಎಂದು ಕರೆಯುವ ಕಥಾಪ್ರಕಾರವನ್ನು ಥಾಮ್ಸನ್ನರು 'ಹಾಸ್ಯ ಹಾಗೂ ಅಡಗತೆಗಳು' (Jokes and Anecdotes) ಎಂದೇ ಕರೆಯುತ್ತಾರೆ. ಕರ್ನಾಟಕದ ಜನಸಾಮಾನ್ಯರು ಗುರುತಿಸುವ ಕಥೆಗಳ ಪ್ರಕಾರಗಳು ಮತ್ತು ಪ್ರಪಂಚದ ಬಹುದೊಡ್ಡ ಕಥಾತಜ್ಞರೂ ಜಾನಪದ ವಿದ್ವಾಂಸರೂ ಆದ ಥಾಮ್ಸನ್ನರು ಗುರುತಿಸುವ ಕಥಾಪ್ರಕಾರಗಳು ಒಂದೇ ಬಗೆಯಾಗಿರುವುದು ನಿಜವಾಗಿಯೂ ಆಶ್ಚರ್ಯದ ಸಂಗತಿಯೇ.

ವ್ಯತ್ಯಾಸ ಕಾಣುವುದು ಉಳಿದಿರುವ ಇನ್ನೊಂದು ಪ್ರಕಾರದಲ್ಲಿ ಮಾತ್ರ. 'ಪ್ರಾಣಿಕಥೆ'ಗಳನ್ನು (Animal Tales) ಥಾಮ್ಸನ್ನರು ಪ್ರತ್ಯೇಕವಾಗಿ ಗುರುತಿಸಿದರೆ, ಜನಸಾಮಾನ್ಯರು 'ಒಡಗತಿ'ಗಳನ್ನು ಪ್ರತ್ಯೇಕವಾಗಿ ಗುರುತಿಸುತ್ತಾರೆ. ಹಾಗೆ ನೋಡಿದರೆ 'ಪ್ರಾಣಿಕಥೆಗಳು' ಸರಳ ಕಥೆಗಳ ಗುಣಗಳನ್ನು ಪಡೆದಿವೆ. ಆದರೆ ಅವುಗಳ ಸಂಖ್ಯಾಪ್ರಮಾಣ ಜಗತ್ತಿನ ತುಂಬ ಗಮನಾರ್ಹವಾಗಿ ಕಾಣುವುದರಿಂದ ಥಾಮ್ಸನ್ನರು ಅದನ್ನು ಪ್ರತ್ಯೇಕ ಪ್ರಕಾರವಾಗಿ ಗಣಿಸಲು ಕಾರಣವಾಗಿರಬೇಕೆನಿಸುತ್ತದೆ. ಇದಕ್ಕೆ ನಿದರ್ಶನವಾಗಿ ಅವರ ಮುಂದೆ 'ಪಂಚತಂತ್ರದ ಕಥೆಗಳು' ಹಾಗೂ 'ಇಸೋಪನ ನೀತಿ ಕಥೆಗಳು' ಎಂಬ ಕಥಾಗುಚ್ಛಗಳು ಇದ್ದವು. 'ಒಡಗತೆಗಳು' ಎಂಬ ಪ್ರಕಾರವನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಭಾರತದ ಪ್ರಸಿದ್ಧ ಕಥಾಗುಚ್ಛ 'ಬೇತಾಳನ ಕಥೆಗಳು' ಎಂಬ ಕೃತಿ ಇತ್ತಾದರೂ ಥಾಮ್ಸನ್ನರು ಆ ಕಡೆ ಗಮನ ಹರಿಸಿದಂತಿಲ್ಲ. ಮೇಲಾಗಿ ಒಡಗತೆಗಳ ಸಂಖ್ಯೆಯೂ ಕಡಿಮೆ ಪ್ರಮಾಣದಲ್ಲಿದ್ದು, ಸುಲಭವಾಗಿ ಥಾಮ್ಸನ್ನರ ಕೈಗೆ ದೊರೆಯದೆ ಇರುವುದು ಒಂದು ಕಾರಣವಾಗಿರಬೇಕು. ಹೀಗಾಗಿಯೇ ಥಾಮ್ಸನ್ನರು ಗುರುತಿಸಿಕೊಳ್ಳುವ 'ಸಾಮಾನ್ಯ ಜನಪದ ಕಥೆಗಳು' (Ordinary Folk tale) ಎಂಬ ಭಾಗದಲ್ಲೂ ಅವರು ಗುರುತಿಸಿಕೊಳ್ಳುವ ಅನೇಕ ಉಪವಿಭಾಗಗಳಲ್ಲೂ ಒಡಗತೆಗಳ ಒಂದು ಪ್ರತ್ಯೇಕ ಉಪವಿಭಾಗ ಕೂಡ ಕಾಣುವುದಿಲ್ಲ. ಅವರು ಸಾಮಾನ್ಯ ಜನಪದ ಕಥೆಗಳು ಎಂಬ ವಿಭಾಗದಡಿ ಗುರುತಿಸಿಕೊಳ್ಳುವ ಕೆಲ ಉಪವಿಭಾಗಗಳು ಹೀಗಿವೆ:

ಎ) ಮಾಂತ್ರಿಕ ಕಥೆಗಳು - A. Tales Of Magic,
ಬಿ) ಧಾರ್ಮಿಕ ಕಥೆಗಳು - B. Religious Tales,
ಸಿ) ಸಾಹಸ ಕಥೆಗಳು - C. Novelle (Romantic Tales),
ಡಿ) ಮೂರ್ಖ ರಾಕ್ಷಸ ಕಥೆಗಳು - D . Tales Of stupid Ogre,

ಇವು ಥಾಮ್ಸನ್ನರು ತಮ್ಮ 'ಮಾದರಿ ಸೂಚಿ'ಯಲ್ಲಿ ಗುರುತಿಸಿಕೊಳ್ಳುವ ಸಾಮಾನ್ಯ 'ಜನಪದ ಕಥೆಗಳು' ಎಂಬ ವಿಭಾಗದ ಉಪಪ್ರಕಾರಗಳಾಗಿವೆ. ಅವರೇ ಬೇರೆಡೆಯಲ್ಲಿ ಜನಪದ ಕಥೆಗಳ ಪ್ರಕಾರಗಳನ್ನು ಈ ಕೆಳಗಿನಂತೆ ಗುರುತಿಸುತ್ತಾರೆ: ೧. ಐತಿಹ್ಯಗಳು, ೨. ಕಿನ್ನರ ಕಥೆಗಳು, ೩. ಪ್ರಾಣಿಕಥೆಗಳು, ೪. ನೀತಿ ಕಥೆಗಳು, ೫. ಪುರಾಣ ಕಥೆಗಳು– ಎಂದು. ಈ ಐದು ಪ್ರಕಾರಗಳ ಜೊತೆ 'ಹಾಸ್ಯ ಕಥೆಗಳು' ಹಾಗು 'ಒಡಗತೆಗಳು' ಎಂಬ ಇನ್ನೆರಡು ಪ್ರಕಾರಗಳನ್ನು ಸೇರಿಸಿದರೆ ಹೆಚ್ಚು ಕಡಿಮೆ ಜನಪದ ಕಥೆಗಳ ಬಹುತೇಕ ಪ್ರಮುಖ ಪ್ರಕಾರಗಳನ್ನು ಗುರುತಿಸಿಕೊಂಡಂತಾಗುವುದು. ಆದರೆ ಐತಿಹ್ಯ ಮತ್ತು ಪುರಾಣ ಕಥೆಗಳ ಬಗೆಗೆ ನಾವು ಭಿನ್ನವಾಗಿಯೇ ಆಲೋಚಿಸಬೇಕಾಗುತ್ತದೆ.

ಒಟ್ಟು ಜನಪದ ಗದ್ಯಕಥಾ ಪ್ರಕಾರಗಳನ್ನು ಗಮನಿಸಿ ಜನಪದ ಕಥೆಗಳು, ಐತಿಹ್ಯಗಳು, ಪುರಾಣಕಥೆಗಳು– ಎಂಬ ಮೂರು ಪ್ರತ್ಯೇಕ ಪ್ರಕಾರಗಳನ್ನು ಗುರುತಿಸಿ ಕೊಳ್ಳುವುದು ಹೆಚ್ಚು ಸಮಂಜಸವೆಂದು ಕಾಣುತ್ತದೆ. ಇವೆಲ್ಲವು ತಾವು ನಿರ್ವಹಿಸುವ ವಸ್ತುವಿನಲ್ಲಿ ಮತ್ತು ರೂಪುಗೊಳ್ಳುವ ರಚನೆಯಲ್ಲಿ ತೀರ ಭಿನ್ನವಾಗಿವೆ ಎಂಬುದನ್ನು ಗಮನಿಸಬೇಕು. ಐತಿಹ್ಯಗಳು ಐತಿಹಾಸಿಕ ಪಳೆಯುಳಿಕೆಗಳಂತೆ ತೋರುವ, ಯಾವುದೋ ಒಂದು ಘಟನೆಗೆ ಸಾಕ್ಷಿಗಳನ್ನು ತೋರಿಸಿ ನಿರೂಪಿಸಲ್ಪಡುವ ಸಂಗತಿಗಳಾಗಿರುತ್ತವೆ. ಪುರಾಣಗಳು ಹೆಚ್ಚು ಧಾರ್ಮಿಕ ಭಾವನೆಗಳನ್ನು ಹೊತ್ತಿದ್ದು, ದೇವತೆಗಳನ್ನು, ದೈವೀ ಸಂಗತಿಗಳನ್ನು, ಸೃಷ್ಟಿಯ ರಹಸ್ಯಗಳನ್ನು ಹೇಳುವ ಸಂಗತಿಗಳನ್ನು ಕುರಿತಿರುತ್ತವೆ. ಇವೆರಡರ ಜೊತೆ ಜನಪದ ಕಥೆಗಳನ್ನು ಪ್ರತ್ಯೇಕವಾಗಿ ಗಣಿಸುವಾಗ ಜನಪದ ಕಥೆಗಳಲ್ಲಿ ಕಾಲ್ಪನಿಕತೆ ಮುಂದಾಗಿ, ಮನುಷ್ಯ ಸ್ವಭಾವವನ್ನು, ಮಾನವ ಬದುಕನ್ನು ವಿಶ್ಲೇಷಿಸುವ ಸಂಗತಿಗಳನ್ನು ಕಾಣುತ್ತೇವೆ. ಇವೆಲ್ಲ ಮಾನವ ಬದುಕಿನ ಸುದೀರ್ಘವಾದ ಇತಿಹಾಸವನ್ನು ಹೇಳುತ್ತಿವೆ ಎನಿಸುತ್ತದೆ. ಆದರೆ ಕನ್ನಡದಲ್ಲಿ ಜನಪದ ಕಥೆಗಳಿಗೆ ಸಂಬಂಧಪಟ್ಟಂತೆ ವ್ಯಾಪಕವಾದ ಕೆಲಸ ನಡೆದಿದೆ. ಐತಿಹ್ಯಗಳಿಗೆ ಸಂಬಂಧಿಸಿದಂತೆ ಒಂದಿಷ್ಟು ಕೆಲಸ ನಡೆದಿದ್ದು, ಜನಪದ ಪುರಾಣಗಳ ಬಗ್ಗೆ ಇನ್ನೂ ಜನಪದ ವಿದ್ವಾಂಸರು ಗಮನ ಹರಿಸಬೇಕಾಗಿದೆ.

ಜನಪದ ಕಥೆಗಳಲ್ಲಿ ಅವುಗಳ ರಚನೆಯನ್ನು ಗಮನಿಸಿ, ಒಟ್ಟಾರೆಯಾಗಿ ಸರಳ ಕಥೆಗಳು ಮತ್ತು ಸಂಕೀರ್ಣಕಥೆಗಳು ಎಂಬ ಎರಡು ಗುಂಪುಗಳನ್ನು ಗುರುತಿಸಬಹುದಾಗಿದೆ. ವಸ್ತುವನ್ನು ಗಮನಿಸಿ ಥಾಮ್ಸನ್ನರು ಮಾದರಿ ಸೂಚಿಯಲ್ಲಿ ಮಾಡಿಕೊಂಡಂತೆ ೧. ಪ್ರಾಣಿಕಥೆಗಳು, ೨. ಹಾಸ್ಯ ಕಥೆಗಳು, ೩. ಸಾಮಾನ್ಯ ಕಥೆಗಳು, ೪. ಸೂತ್ರರೂಪದ ಕಥೆಗಳು ಎಂದು ಇಟ್ಟುಕೊಳ್ಳಬಹುದಾಗಿದೆ. ಪ್ರಾಣಿಕಥೆಗಳು, ಹಾಸ್ಯಕಥೆಗಳು ಮತ್ತು ಸೂತ್ರರೂಪದ ಕಥೆಗಳು ಸರಳ ಕಥೆಗಳ ಗುಂಪಿಗೆ ಸೇರುತ್ತವೆ. ಸಾಮಾನ್ಯ ಕಥೆಗಳು ಎಂದು ಕರೆದ ಗುಂಪೇ ಸಂಕೀರ್ಣ ಕಥೆಗಳ ಬಹುದೊಡ್ಡ ಗುಂಪಾಗಿದೆ.

ಈ ಬರಹವನ್ನು ಸಿದ್ಧಪಡಿಸುವಾಗ ನಾನು ಕನ್ನಡದಲ್ಲಿ ಬಂದ ಸುಮಾರು ೬೦–೭೦ ಕಥಾಸಂಗ್ರಹಗಳನ್ನು ಗಮನಿಸಿದ್ದೇನೆ. ಇವುಗಳಲ್ಲಿ ಕೇವಲ ೧೪ ಸಂಗ್ರಹಗಳಲ್ಲಿ ಮಾತ್ರ ಕಥೆಗಳನ್ನು ವಿಂಗಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ಎಲ್ಲ ಸಂಗ್ರಹಗಳ ಸಂಪಾದಕರುಗಳನ್ನು ಗಮನಿಸಿದರೆ, ಸಿಂಪಿ ಲಿಂಗಣ್ಣ ಅವರೊಬ್ಬರನ್ನುಳಿದು ಮಿಕ್ಕವರೆಲ್ಲ

ವಿಶ್ವವಿದ್ಯಾಲಯಗಳಲ್ಲಿ ಮಹಾವಿದ್ಯಾಲಯಗಳಲ್ಲಿ ಶಿಕ್ಷಕರಾಗಿರುವವರು. ಇವರೆಲ್ಲ ಜಾನಪದ ತಜ್ಞರೆನಿಸಿಕೊಂಡವರು. ಇವರ ವಿಭಾಗೀಕರಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಸುಮಾರು ೪೫–೪೬ ಸಂಗ್ರಹಗಳ ಸಂಪಾದಕರು ಯಾರೂ ಕೂಡ ಕಥೆಗಳನ್ನು ವಿಭಾಗಿಸಿಕೊಡಲು ಪ್ರಯತ್ನಿಸಿಲ್ಲದಿರುವುದು ಕಂಡುಬರುತ್ತದೆ. ಅವರ ಕಥಾಸಂಗ್ರಹಗಳ ಪರಿವಿಡಿಗಳಲ್ಲೆಲ್ಲ ಕಥೆಗಳ ಹೆಸರುಗಳೇ ಕಾಣುತ್ತವೆ. ವಿಶ್ವವಿದ್ಯಾಲಯಗಳೂ ಅಕಾಡೆಮಿಗಳೂ ಪ್ರಸಿದ್ಧ ಕನ್ನಡದ ಸಂಸ್ಥೆಗಳೂ ಈ ಸಂಗ್ರಹಗಳನ್ನು ಪ್ರಕಟಿಸಿವೆ.

ಜೀಶಂಪ ಅವರು ತಮ್ಮ **'ಕನ್ನಡ ಜನಪದ ಕಥೆಗಳು'** (೧೯೭೦) ಎಂಬ ಸಂಗ್ರಹದ ಕಥೆಗಳನ್ನು ವಿಭಾಗಿಸುವಲ್ಲಿ ಸ್ಟಿಥ್ ಥಾಮ್ಸನ್ ಅವರ 'Types of the Folk tale' ಕೃತಿಯಲ್ಲಿ ಮಾಡಿಕೊಂಡ ವರ್ಗೀಕರಣವನ್ನು ಅನುಸರಿಸಿದ್ದಾರೆ. 'The Folk Tale' ಕೃತಿಯಲ್ಲಿ ಮತ್ತು ಮೆರಿಯಾ ಲೀಚ್ ಅವರ The Dictionary of Folklore Mythology and Legend ಎಂಬ ಕೃತಿಯಲ್ಲಿ ಸ್ಟಿಥ್ ಥಾಮ್ಸನ್ನರು ತಮ್ಮ ಲೇಖನಗಳಲ್ಲಿ ಚರ್ಚಿಸಿದ ವಿಭಾಗೀಕರಣವನ್ನು ರಾಗೌ ಅವರು ತಮ್ಮ **'ಕರ್ನಾಟಕದ ಜನಪದ ಕಥೆಗಳು'** (೧೯೭೯) ಕೃತಿಯಲ್ಲಿಯ ಕಥೆಗಳನ್ನು ವಿಭಾಗಿಸಿಕೊಳ್ಳಲು ಅನುಸರಿಸಿದ್ದಾರೆ. ಕನ್ನಡದಲ್ಲಿ ಮುಂದೆ ಬಂದ ಬಹುತೇಕ ಕಥಾಸಂಗ್ರಹಗಳು ಅನುಸರಿಸಿದ್ದು, ಸ್ಟಿಥ್ ಥಾಮಸ್ನ ಅವರ (ಜೀ.ಶಂ.ಪ. ಹಾಗೂ ರಾಗೌ ಅನುಸರಿಸಿದ) ವಿಭಾಗೀಕ್ರಮಗಳನ್ನೆ.

ಆರ್ನೆ–ಥಾಮ್ಸನ್ ಕಥಾಮಾದರಿ ಸೂಚಿಯಲ್ಲಿಯ ವಿಭಾಗಗಳನ್ನು ಪ್ರತ್ಯೇಕವಾಗಿ ಸೂಚಿಸುತ್ತ ಹೋದರೆ ಮತ್ತೆ ಸ್ಥಳೀಯವಾದ ಕೆಲ ವಿಭಾಗಗಳನ್ನು ಹೆಚ್ಚಿಗೆ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಂತಹ ಒಂದು ಪ್ರಯತ್ನವನ್ನು ನಾನು ಸಂಪಾದಿಸಿದ **'ಆಯ್ದ ಜನಪದ ಕಥೆಗಳು'** ಎಂಬ ಕೃತಿಯಲ್ಲಿ ಮಾಡಿದ್ದೇನೆ: ೧. ಪ್ರಾಣಿ ಕಥೆಗಳು, ೨. ಅದ್ಭುತ ಎದುರಾಳಿಗಳು, ೩. ಮಾಟಕ್ಕೊಳಗಾದ ಪತಿ–ಪತ್ನಿಯರು, ೪. ಅಸಾಮಾನ್ಯ ಸಹಾಯಕರು, ೫. ಮಾಟದ ಸಾಧನಗಳು, ೬. ಕುಳ್ಳರ ಅದ್ಭುತ ಕಥೆಗಳು, ೭. ಧಾರ್ಮಿಕ ಕಥೆಗಳು, ೮. ಹಣೇಬರಹದ ಕಥೆಗಳು, ೯. ಹಾಸ್ಯ ಕಥೆಗಳು, ೧೦. ಸೂತ್ರಬದ್ಧ ಕಥೆಗಳು. ಆದರೆ ಆರ್ನೆ–ಥಾಮ್ಸನ್ ಅವರ ಮಾದರಿ ಸೂಚಿಯ ವಿಭಾಗೀಕ್ರಮ ಕೂಡ ಯಥಾವತ್ ಅನುಸರಿಸುವುದು ಖಂಡಿತ ಸರಿಯಲ್ಲ. ಅಲ್ಲಿ ಸೂಚಿಸಿದ ಉಪವಿಭಾಗಗಳನ್ನು ಪ್ರತ್ಯೇಕ ವಿಭಾಗಗಳಾಗಿ ಸೂಚಿಸುತ್ತ, ಅಷ್ಟಕ್ಕೆ ನಿಲ್ಲದೆ ಜನಪದ ಕಥೆಗಳ ಸಂಕೀರ್ಣ ಸ್ವಭಾವಗಳಿಗನುಸರಿಸಿ ಮತ್ತೆ ಮತ್ತೆ ವಿಭಾಗಗಳನ್ನು ಗುರುತಿಸಿಕೊಳ್ಳುತ್ತ ಹೋಗುವುದು ಹೆಚ್ಚು ಸರಿಯಾದ ಕ್ರಮವೆನಿಸುತ್ತದೆ. ಥಾಮ್ಸನ್ನರು ಸೂಚಿಸುವ ಐದಾರು ಪ್ರಕಾರಗಳಲ್ಲಿಯೇ ಎಲ್ಲ ಜನಪದ ಕಥೆಗಳನ್ನು ಹಿಡಿದಿಡಲು ಸಾಧ್ಯವಿಲ್ಲ. ಆದರೆ ಇವು ಜನಪದ ಕಥೆಗಳ ಪ್ರಸಿದ್ಧ ಪ್ರಕಾರಗಳೆಂದು ಬೇಕಾದರೆ ಇಟ್ಟುಕೊಳ್ಳಬಹುದಾಗಿದೆ.

ಲಿಖಿತ ಪರಂಪರೆ ಮತ್ತು ಜನಪದ ಕಥೆಗಳು :

ಸುಮಾರು ೪೦, ೪೫ ವರ್ಷಗಳ ಹಿಂದೆಯಷ್ಟೇ ಜಾನಪದದ ಬಗೆಗೆ ಅರಿವು ಮೂಡಿಸಿಕೊಂಡ ನಾವು – ಶಾಸ್ತ್ರೀಯ ಅಧ್ಯಯನದ ಹಂತವನ್ನು ಇನ್ನೂ ಗಂಭೀರವಾಗಿ ತಲುಪಿಲ್ಲವೆನಿಸುತ್ತದೆ. ಇಲ್ಲಿಯವರೆಗೆ ನಮ್ಮ ಅಭ್ಯಾಸ ನಡೆದುದು – ಪಾಶ್ಚಾತ್ಯರ ಅಭ್ಯಾಸದ

ಕ್ರಮವನ್ನು ಅರಿತುಕೊಳ್ಳುವುದು ಮತ್ತು ಅಂತಹ ಪ್ರಯೋಗಗಳನ್ನು ನಮ್ಮಲ್ಲಿ ಮಾಡಿಕೊಳ್ಳುವುದು. ಈ ಕೆಲಸವೂ ಅಸಮಗ್ರ ಮತ್ತು ಅರ್ಧಮರ್ಧವಾಗಿದೆ. ಇನ್ನು ಮುಂದೆ ಈ ಹಂತ ದಾಟಿ, ಅಧ್ಯಯನದ ದಾರಿಯಲ್ಲಿ ನಮ್ಮದೇ ಆದ ವಿಚಾರಗಳನ್ನು ಕಂಡುಕೊಳ್ಳುವ ಕೆಲಸ ನಡೆಯಬೇಕಾಗಿದೆ.

ಜನಪದ ಕಥೆಗಳ ಚರಿತ್ರೆ ಬರೆಯುವುದೆಂದರೆ ಅವುಗಳ ದಾಖಲೆ ಮತ್ತು ಅಧ್ಯಯನದ ಚರಿತ್ರೆಯನ್ನು ಬರೆದಂತೆಯೇ. ಮೌಖಿಕ ಕಥೆ ಅದು ಮನುಷ್ಯನ ಜ್ಞಾನದ ಅವಿಭಾಜ್ಯ ಅಂಗವಾಗಿರುವುದರಿಂದ ಅದರ ಚರಿತ್ರೆಯನ್ನು ಪ್ರಾರಂಭಿಸುವುದು, ಗುರುತಿಸುವುದು ಮನುಷ್ಯನ ಹುಟ್ಟಿನ ಜೊತೆಗೆಯೆ ಆಗುತ್ತದೆ. ಕನ್ನಡದಲ್ಲಿ ಜನಪದ ಕಥೆಗಳ ದಾಖಲೆ ಕಾಣಿಸುವುದು ಶಿಲ್ಪ ಮತ್ತು ಶಿಲಾಶಾಸನಗಳಲ್ಲಿ ಪ್ರಥಮವೆಂದು ಕಾಣುತ್ತದೆ. ಭಾರತದ ತುಂಬ ಕಾಣುವ ಶಿಲ್ಪದ ಮೇಲಿನ ಉಬ್ಬು ಚಿತ್ರಗಳಲ್ಲಿ ಪಂಚತಂತ್ರದ ಕಥೆಗಳ ಕೆಲ ಕಥೆಗಳೇ ಕಾಣುತ್ತವೆಂದು ತಿಳಿದುಬರುತ್ತದೆ. ಅದರಲ್ಲೂ ಕನ್ನಡದಲ್ಲಿ ಕ್ರಿ.ಶ. ೭೪೦ರಷ್ಟು ಹಿಂದೆ ಶಿಲ್ಪದಲ್ಲಿ ಕೆತ್ತಿದ **'ಪಂಚತಂತ್ರ'**ದ ಕೆಲ ಕಥೆಗಳು ಕಂಡುಬರುತ್ತವೆ. 'ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿಯ ಹತ್ತಿರವಿರುವ ಪಟ್ಟದಕಲ್ಲಿನಲ್ಲಿ ಮಲ್ಲಿಕಾರ್ಜುನ ಗುಡಿಯಿದ್ದು, ಅದರಲ್ಲಿ ಪಂಚತಂತ್ರದ ಕತೆಗಳು ಶಿಲ್ಪದಲ್ಲಿ ಕೊರೆಯಲ್ಪಟ್ಟಿವೆ. ಈ ದೇವಾಲಯವನ್ನು ಚಾಲುಕ್ಯ ಎರಡನೆಯ ವಿಕ್ರಮಾದಿತ್ಯನ ರಾಣಿಯಾದ ತ್ರೈಲೋಕ್ಯ ಮಹಾದೇವಿ ಸುಮಾರು ಕ್ರಿ. ಶ. ೭೪೦ ರಲ್ಲಿ ಕಟ್ಟಿಸಿರುವಳು.

ಮಲ್ಲಿಕಾರ್ಜುನ ದೇವಾಲಯದ ಗರ್ಭಗುಡಿಯ ಹತ್ತಿರವಿದ್ದ ಕಂಬಗಳಲ್ಲಿ ಕೆಳಗೆ ಕಾಣಿಸಿದ ಪಂಚತಂತ್ರ ಕತೆಗಳಿವೆ.

ಅ) ಮಂಗ ಮತ್ತು ಮೊಸಳೆಯ ಕತೆ

ಬ) ಮಂಗ ಉಲಕೋಚಿತನದಿಂದ ಬೆಣಿ ಕಿತ್ತಿದ ಕತೆ

(ಎ.ಎಂ.ಅಣ್ಣಿಗೇರಿ, ಪಟ್ಟದಕಲ್ಲು ಗುಡಿಗಳು, ಪು. ४४-४೫)

೨. ಸಿರ್ಸಿಯಿಂದ ಎರಡು ಮೈಲು ದೂರದಲ್ಲಿದ್ದ ಎಸಳೆ ಎಂಬಲ್ಲಿದ್ದ ದೇವಾಲಯದಲ್ಲಿ ಕೆಳಗಿನ ಪಂಚತಂತ್ರ ಕತೆಗಳಿವೆ.

ಅ) ಮಂಗ ಉಲಕೋಚಿತನದಿಂದ ಬೆಣಿ ಕೆತ್ತಿದ ಕತೆ

ಆ) ಹಂಸಗಳು ಮತ್ತು ಆಮೆ

೩. ಬಳ್ಳಿಗಾವಿಯ ತ್ರಿಪುರಾಂತೇಶ್ವರ ದೇವಾಲಯದ ದಕ್ಷಿಣಕ್ಕಿರುವ ಒಂದು ದೇವಾಲಯದ ಚಿತ್ರಪಟ್ಟಿಕೆಯಲ್ಲಿ ಪಂಚತಂತ್ರದ ಕೆಳಗಿನ ಚಿತ್ರಣವಿದೆ.

ಅ) ಹಂಸಗಳು ಮತ್ತು ಆವೆ

ಆ) ತಗರುಗಳು ಮತ್ತು ನರಿ

ಕ) ಮೊಸಳೆ ಮತ್ತು ಕಪಿ

(ಮೈಸೂರು ಗಝೆಟಿಯರ್ ಭಾಗ-೧, ಪು.೧೪೯)

೪. ಒಂದು ಶಿಲಾಶಾಸನದಲ್ಲಿ ಕೂರವಳ್ಳಿ ಗ್ರಾಮದ ಕೈಕೋಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ ವೃಷಭದ ಸಂಗತಿಯೊಂದು ಬರೆಯಲ್ಪಟ್ಟಿದೆ. ವೃಷಭವು ವಾಮನಯ್ಯನ ಹೊಲದಲ್ಲಿ ಹೊಕ್ಕು ಮೇಯುತ್ತಿರುವಾಗ, ಕಡು ಮೂರ್ಖತೆಯಿಂದ ವಾಮನಯ್ಯ ಅದನ್ನು ದೊಡ್ಡ ಕೋಲಿನಿಂದ ಹೊಡೆಯಲು ಅದು ಶಿವನೇ ರಕ್ಷಕನು ಎನ್ನುವಂತೆ ಕೂಗಿ ಪ್ರಾಣ ಬಿಟ್ಟಿತಂತೆ. 'ಪರೀಕ್ಷಿಸದೆ ಮುಂಗುಲಿಯನ್ನು ಬ್ರಾಹ್ಮಣಿಯೊಬ್ಬಳು ಕೊಂದಳು' ಎಂಬ ನಾಣ್ಣುಡಿ ನಿಜವಾಯಿತು ಎಂದು ಕೊನೆಗೆ ಹೇಳಿದೆ.

(ಎಂಎಆರ್ ೧೯೨೭, ಪ.೫೩, ಸಿ.೧೦೪೦ಎ.ಡಿ.)

(ಮೇಲಿನ ನಾಲ್ಕೂ ಉಲ್ಲೇಖಗಳು: ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ, ಪು. ೩೫೭ –೩೫೮. ಲೇ: ಡಾ. ವರದರಾಜ ಹುಯಿಲಗೋಳ)

ಹಳಗನ್ನಡ ಸಾಹಿತ್ಯದ ಅನಾವರಣ ಆಗುವುದೇ ಜನಪದ ಕಥೆಗಳ ಸಂಗ್ರಹವಾಗಿರುವ 'ವಡ್ಡಾರಾಧನೆ'(ಕ್ರಿ.ಶ.೯೨೫) ಎಂಬ ಕಥಾಗುಚ್ಛದಿಂದ. ಇಲ್ಲಿಯ ಲೇಖಕ ಜನಪದ ಕಥೆಗಳನ್ನು ಆರಿಸಿಕೊಂಡು ಅವುಗಳನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿದ್ದಾನೆ. ಹೀಗಾಗಿ ವಡ್ಡಾರಾಧನೆಯ ಕಥೆಗಳು ಜನಪದ ಕಥೆಗಳೇ? ಎಂದು ಸಂಶಯ ಪಡುವಷ್ಟರ ಮಟ್ಟಿಗೆ ಬದಲಾವಣೆ ಹೊಂದಿವೆ. ಜೈನಧರ್ಮದ ತತ್ತ್ವಗಳನ್ನು ಅರುಹಲು ಅನೇಕ ಜನಪದ ಕಥೆಗಳನ್ನು ಬಳಸಿಕೊಂಡ ಲೇಖಕ ಅವುಗಳನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿದ್ದರೂ ಮೂಲ ಜನಪದ ಕಥೆಗಳ ಎಳೆಗಳನ್ನು ಅಲ್ಲಿಯ ಕಥೆಗಳಲ್ಲಿ ಧಾರಳವಾಗಿ ಗುರುತಿಸಬಹುದಾಗಿದೆ. ಹಳೆಗನ್ನಡ ಕಾವ್ಯಗಳಲ್ಲಿ ನಯಸೇನನ 'ಧರ್ಮಾಮೃತ'ದ (ಕ್ರಿ.ಶ.೧೧೧೨) ಕಥೆಗಳು ಪ್ರಸಿದ್ಧವಾಗಿವೆ. ಇಲ್ಲೂ ನಯಸೇನನು ಅನೇಕ ಜನಪದ ಕಥೆಗಳನ್ನು ಬಳಸಿಕೊಳ್ಳುತ್ತಾನೆ. ಜೈನಧರ್ಮದ ಪ್ರಸಾರದ ಮುಖ್ಯ ಉದ್ದೇಶ ನಯಸೇನನದಾಗಿರುವುದರಿಂದ ತನ್ನ ಉದ್ದೇಶಕ್ಕೆ ತಕ್ಕಂತೆ ಕಥೆಗಳನ್ನು ಅಲ್ಪಮಟ್ಟಿಗೆ ಬದಲಾಯಿಸಿಕೊಳ್ಳುವುದನ್ನು ಕಾಣುತ್ತೇವೆ.

ದುರ್ಗಸಿಂಹನ **'ಪಂಚತಂತ್ರ'**ವಂತೂ (ಕ್ರಿ.ಶ.೧೦೪೦) ನೇರವಾಗಿ ಜನಪದ ಕಥೆಗಳ ಗುಚ್ಛವಾಗಿದೆ. ಪ್ರಾರಂಭದಲ್ಲಿ ಪೈಶಾಚಿಕ ಭಾಷೆಯಲ್ಲಿ, ನಂತರ ಸಂಸ್ಕೃತ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಪಂಚತಂತ್ರದ ಕಥೆಗಳು ನೇರವಾಗಿ ಜನಪದರಿಂದ ತೆಗೆದುಕೊಂಡವುಗಳು ಮತ್ತು ಲಿಖಿತ ಪರಂಪರೆಯ ಮೂಲಕ ಹಿಂತಿರುಗಿ ಜನಪದರಿಗೆ ಬಂದು ಮುಟ್ಟಿದವುಗಳು. ಹೀಗಾಗಿ ಮೂಲ ಜನಪದ ಸಂಗತಿಗಳನ್ನು ಬದಲಾಯಿಸಿಕೊಳ್ಳದೆ, ಪ್ರಾಣಿಕಥೆಗಳನ್ನು ಆಯ್ದುಕೊಂಡು ಮಾನವರಿಗೆ ನೀತಿ ಬೋಧೆ ಮಾಡುವ ಉದ್ದೇಶ ಇವುಗಳಿಗಿರುವುದರಿಂದ ಸಹಜವಾಗಿಯೇ ಇವು ಪ್ರಸಿದ್ಧವಾಗಿವೆ. ಹೀಗಾಗಿ ಕನ್ನಡ ಜನಪದ ಪ್ರಾಣಿ ಕಥೆಗಳಲ್ಲಿ ಹೆಚ್ಚು ಪ್ರಸಿದ್ಧವಾದ ಕಥೆಗಳೆಂದರೆ 'ಪಂಚತಂತ್ರ'ದ ಕಥೆಗಳೇ ಆಗಿವೆ. ಜಗತ್ ಪ್ರಸಿದ್ಧ ಆರ್ನೆ–ಥಾಮ್ಸನ್ ಕಥಾ ಮಾದರಿ ಸೂಚಿ **'ಟೈಪ್ಸ್ ಆಫ್ ದಿ ಫೋಕ್‌ಟೇಲ್'** ಕೃತಿಯಲ್ಲೂ ಪಂಚತಂತ್ರದ ಕಥೆಗಳು ಸ್ಥಾನಪಡೆದಿವೆ.

ಜೈನ ಕವಿಗಳು ಬಳಸಿದ ಜನಪದ ಕಥೆಗಳು, ಜೈನ ಮತ್ತು ಬ್ರಾಹ್ಮಣ ಕವಿಗಳು ಬರೆದ ರಾಮಾಯಣ ಮಹಾಭಾರತ ಮತ್ತು ಅನೇಕ ಪುರಾಣ ಕಥೆಗಳು, ವೀರಶೈವ

ಕವಿಗಳು ಬರೆದ ಕಾವ್ಯಗಳಲ್ಲಿಯ ಪವಾಡ ಕಥೆಗಳು ಇವೆಲ್ಲ ಜನಪದ ಕಥೆಗಳ ಆಶಯಗಳನ್ನು ಬಳಸಿಕೊಂಡಿವೆ. ಅನೇಕ ಸಲ ಕನ್ನಡದ ಜೈನ, ವೀರಶೈವ, ವೈದಿಕ ಕವಿಗಳು ತಮ್ಮ ಕಾವ್ಯಗಳಲ್ಲಿ ನೇರವಾಗಿ ಜನಪದ ಕಥೆಗಳನ್ನೇ ಬಳಸಿಕೊಂಡಿದ್ದಾರೆ. ಅಥವಾ ಜನಪದ ಕಥೆಗಳನ್ನು ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಬಳಸಿಕೊಂಡಿದ್ದಾರೆ. ದೃಷ್ಟಾಂತಗಳ ರೂಪದಲ್ಲಿ ಬಳಸಿದ್ದಾರೆ. ಈ ಕಾವ್ಯಗಳನ್ನು ಬಲ್ಲವರು ಓದಿ ಮಾಡಿದ ಪ್ರವಚನ, ಪುರಾಣ ಕಥನಗಳಿಂದ ಜನಸಾಮಾನ್ಯರು ಮತ್ತೆ ಅವುಗಳನ್ನು ಸ್ವೀಕರಿಸಿದ್ದಾರೆ. ಪ್ರಚಾರ ಮಾಡಿದ್ದಾರೆ. ಹೀಗೆ ಜನಪದ ಕಥೆಗಳ ಬಳಕೆ, ಸೃಷ್ಟಿ ನಡೆಯುತ್ತಲೇ ಇದೆ. ಈ ಕ್ರಿಯೇ ಕಥನ ಸಾಹಿತ್ಯಗಳಲ್ಲಿ ಎಲ್ಲ ಕಾಲಕ್ಕೂ ನಡೆಯುತ್ತಲೇ ಇರುತ್ತದೆ.

ಮುದ್ರಣ ಮಾಧ್ಯಮದ ಮೂಲಕ ಪ್ರಸಾರಗೊಂಡ ಕಥೆಗಳು:

ಪ್ರತಿಭಾವಂತ ಕನ್ನಡ ಕವಿಗಳ ಕಾವ್ಯಗಳಲ್ಲಿ ಜನಪದ ಕಥೆಗಳು ಸ್ಥಾನ ಪಡೆಯುತ್ತ ಬಂದುದಲ್ಲದೆ, ನೇರವಾಗಿ ಅನೇಕ ಬಗೆಯ ಕಥಾಗುಚ್ಛಗಳನ್ನೇ ತಾಡೋಲೆಗಳಲ್ಲಿ, ಕಾಗದಗಳಲ್ಲಿ ಬರೆದು ಪ್ರಚಾರ ಮಾಡುವ ಕ್ರಿಯೆಯೂ ಹಿಂದೆ ನಡೆದಿದೆ. ನಮ್ಮಲ್ಲಿ ಮುದ್ರಣ ಮಾಧ್ಯಮ ಬಂದನಂತರ, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಗದಗ ಪಟ್ಟಣದಲ್ಲಿ ಮುದ್ರಣಾಲಯಗಳು ಪ್ರಾರಂಭವಾದ ನಂತರ, ಅನೇಕ ಬಗೆಯ ಕಥೆಗಳನ್ನು ಸರಳ ಕನ್ನಡದಲ್ಲಿ ಬರೆದು ಪ್ರಕಟಿಸಿದ್ದು ಕಂಡುಬರುತ್ತದೆ. ಇವುಗಳಲ್ಲಿ ಕನ್ನಡ ಜನಪದ ಕಥೆಗಳ ಜೊತೆಗೆ ಸಂಸ್ಕೃತದಲ್ಲಿ ಪ್ರಸಿದ್ಧವಾದ ಕಥಾಗುಚ್ಛಗಳಿಂದ ಆಯ್ದ ಕಥೆಗಳು, ಬೇರೆ ದೇಶಗಳಿಂದ ನಮ್ಮಲ್ಲಿ ಬಂದ ಕಥೆಗಳನ್ನು ಕನ್ನಡದಲ್ಲಿ ಬರೆದು ಪ್ರಕಟಪಡಿಸಿದ ಉದಾಹರಣೆಗಳು ದೊರೆಯುತ್ತವೆ. ಆದರೆ ಇವುಗಳ ಮೇಲೆ ಪ್ರಕಟನೆಯ ವರ್ಷಗಳನ್ನು ಮುದ್ರಿಸುವ ಪರಿಪಾಠವನ್ನು ಕಾಣುವುದಿಲ್ಲ. ಹೀಗಾಗಿ ಚರಿತ್ರೆಯಲ್ಲಿ ಉಲ್ಲೇಖಿಸುವಾಗ ಅನಾನುಕೂಲವಾಗುತ್ತಿದೆ.

ವಿಶೇಷವಾಗಿ ಭಾರತದ ತುಂಬ ಪ್ರಸಿದ್ಧವಾಗಿದ್ದ ಲಿಖಿತ ಮೂಲದ ಕಥೆಗಳು ಮೌಖಿಕ ಪರಂಪರೆಯಲ್ಲಿ ಪುರಾಣ, ಪ್ರವಚನಗಳ ಮೂಲಕ, ಧಾರ್ಮಿಕ ಉಪನ್ಯಾಸಗಳ ಮೂಲಕ ಭಾರತದ ತುಂಬ ಮೊದಲಿನಿಂದಲೂ ಪ್ರಸಿದ್ಧವಾಗಿದ್ದವೆಂದು ತೋರುತ್ತದೆ. ಇದಕ್ಕೆ ಕಾರಣ ಬದುಕಿನ ಪಾಠಗಳನ್ನು, ಸಾಮಾಜಿಕ ಬೋಧೆಗಳನ್ನು, ಧಾರ್ಮಿಕ ತತ್ತ್ವನೀತಿಗಳನ್ನು ಇಡೀ ಪ್ರಪಂಚದ ತುಂಬ ಆಯಾ ದೇಶದ ಹಿರಿಯರು ಜನಪದ ಕಥೆಗಳನ್ನು ಬಳಸಿಕೊಳ್ಳುವ ಮೂಲಕ ಪ್ರಸಿದ್ಧಿಗೆ ತರುತ್ತ ಬಂದಿರುವುದು ಸ್ಪಷ್ಟವಾಗಿದೆ. ಹೀಗಾಗಿ ಕನ್ನಡದಲ್ಲಿ ಎರಡು ಬಗೆಯ ಕಥಾವಾಹಿನಿಗಳು ಪ್ರಚಾರದಲ್ಲಿವೆ. ೧. ಭಾರತದ ಕಥಾ ಪರಂಪರೆ, ೨. ಹೊರದೇಶದ ಕಥಾಪರಂಪರೆ.

ಕರ್ನಾಟಕದಲ್ಲಿ ಮುದ್ರಣ ಮಾಧ್ಯಮ ಬಂದನಂತರ ಪ್ರಕಟಗೊಂಡ ಕಥಾಗುಚ್ಛಗಳನ್ನು ಗಮನಿಸಿದರೆ, ಅವುಗಳಲ್ಲಿ ಜನಪದ ಕಥೆಗಳು, ಲಿಖಿತ ಮೂಲದ ಕಥೆಗಳೂ ಸೇರಿಕೊಂಡಿವೆ. ಈ ಎರಡೂ ಕಥಾಪರಂಪರೆಗಳು ವ್ಯಾಪಕವಾಗಿ ಕೊಳುಕೊಡೆ ನಡೆಸಿರುವುದು ಬಹುಸ್ಪಷ್ಟವಾಗಿದೆ.

ಜನಪದ ಕಥೆಗಳ ಬಗ್ಗೆ ಮಾತನಾಡುವಾಗಲೂ ಈ ಮಾತುಗಳನ್ನು ಯಥಾವತ್ತಾಗಿ ಬಳಸಬಹುದಾಗಿದೆ. ಹತ್ತೊಂಬತ್ತನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ಪಾಶ್ಚಾತ್ಯ ವಿದ್ವಾಂಸರುಗಳು ಮತ್ತು ಮಿಷನರಿಗಳು ಇಲ್ಲಿ ಜಾನಪದ ಸಂಗ್ರಹದ ಕೆಲಸ ಮೊದಲು ಮಾಡಿದರು. ಕನ್ನಡ ಜನಪದ ಕಥೆಗಳ ಬಗ್ಗೆ ಮೊದಲು ಪರಿಚಯ ನೀಡಿದವರು Abbe dubois ಅವರು. ಅವರ ಕೃತಿ 'Hindu manners, Customs and Ceremonies' (1816) ಎಂಬುದರಲ್ಲಿ ಈ ಪ್ರಥಮ ಕೆಲಸ ನೆರವೇರಿತು. ಈ ಫ್ರೆಂಚ್ ವಿದ್ವಾಂಸನು ಕನ್ನಡದ ನಾಲ್ಕು ಕಥೆಗಳನ್ನು, ಜೊತೆಗೆ ಒಂದಿಷ್ಟು ಗಾದೆ, ಮೂಢನಂಬಿಕೆಗಳನ್ನೂ ಇಲ್ಲಿ ಪರಿಚಯ ಮಾಡಿಕೊಟ್ಟನು. ನಂತರ Mary Frere ಅವರು Old Deccan days ಎಂಬ ಹೆಸರಿನ ೨೫ ಕಥೆಗಳ ಸಂಗ್ರಹವನ್ನು ೧೮೬೮ ರಲ್ಲಿ ಪ್ರಕಟಿಸಿದರು. 'ಈ ಕಥೆಗಳನ್ನು ಮುಂಬೈ ಕರ್ನಾಟಕದ ಭಾಗದಿಂದ ಸಂಗ್ರಹಿಸಿದ್ದು, ಲಿಂಗಾಯತ ಧರ್ಮಸ್ಥಳಾದ, ಅನ್ನ ಲಿಬೆರ್ಟಾ ಡೀ ಸೌಜ ಎಂಬುವವಳು ಈ ಕಥೆಗಳ ವಕ್ತೃ ಎಂಬುದು ತಿಳಿದುಬರುತ್ತದೆ.'

Theodor Benfey ಅವರು ೧೮೫೯ರಲ್ಲಿ ಪಂಚತಂತ್ರವನ್ನು ಸಂಸ್ಕೃತದಿಂದ ಜರ್ಮನ್ ಭಾಷೆಗೆ ಅನುವಾದ ಮಾಡಿದ ನಂತರ ಪ್ರಪಂಚದ ವಿದ್ವಾಂಸರುಗಳ ಲಕ್ಷ್ಯ ಭಾರತೀಯ ಜನಪದ ಕಥೆಗಳ ಕಡೆಗೆ ಹರಿಯಿತು. ಬೆನ್ಫೆಯವರು ಅಭ್ಯಾಸ ಪೂರ್ಣವಾದ ತಮ್ಮ ಪ್ರಸ್ತಾವನೆಯಲ್ಲಿ, ಪ್ರಪಂಚಕ್ಕೆ ಜನಪದ ಕಥೆಗಳನ್ನು ನೀಡಿದುದು ಭಾರತ, ಅದಕ್ಕಾಗಿ ವಿಶ್ವದ ಜನಪದ ಕಥೆಗಳಿಗೆಲ್ಲ ಭಾರತವೇ ತೌರು ಎಂದು ಹೇಳಿ, 'ಭಾರತೀಯ ಮೂಲ ಸಿದ್ಧಾಂತ'ವನ್ನು ಮುಂದಿಟ್ಟರು. ಈ ಮೂಲಕ ಮ್ಯಾಕ್ಸ್ ಮುಲ್ಲರ್, ಆಂಡ್ರ್ಯೂಲ್ಯಾಂಗ ಅಂಥವರು ಈ ಕಡೆ ಗಮನಹರಿಸಲು ಕಾರಣರಾದರು.

೧೯೩೫ರ ಸುಮಾರಿಗೆ ಕನ್ನಡ ವಿದ್ವಾಂಸರುಗಳಿಂದ ಕರ್ನಾಟಕದ ಜನಪದ ಕಥೆಗಳ ಸಂಗ್ರಹದ ಕಾರ್ಯ ಆರಂಭವಾದುದು ಕಂಡುಬರುತ್ತದೆ. ೧೯೬೫ ರವರೆಗೆ ಬಂದ ಸಂಗ್ರಹಗಳೆಲ್ಲ ಅನುವಾದಗಳು ಇಲ್ಲವೆ ತಿದ್ದಿ ಬರೆದ ಸಂಕಲನಗಳಾಗಿವೆ. ಮೊದಮೊದಲಿಗೆ ಕ್ಷೇತ್ರಕಾರ್ಯದಿಂದ ನೇರವಾಗಿ ಜನಪದ ಕಥೆಗಳನ್ನು ಸಂಗ್ರಹ ಮಾಡದೆ ಈಗಾಗಲೇ ಬೇರೆ ಬೇರೆ ರೀತಿಯಲ್ಲಿ ಪ್ರಕಟವಾದ ಕೃತಿಗಳಿಂದ ಕಥೆಗಳನ್ನು ಆಯ್ದುಕೊಂಡು, ಸರಳವಾದ ಕನ್ನಡದಲ್ಲಿ ಬರೆದು ಪ್ರಕಟಿಸಿದರು. ಇಲ್ಲವೆ ಬೇರೆ ಭಾಷೆಯ ಜನಪದ ಕಥೆಗಳನ್ನು ಸಂಗ್ರಹಾನುವಾದ ರೂಪದಲ್ಲಿ ಬರೆದು ಪ್ರಕಟಿಸಿದರು. ಇಲ್ಲೆಲ್ಲ ಮಕ್ಕಳ ಮನರಂಜನೆಯೇ ಮುಖ್ಯ ಉದ್ದೇಶವಾಗಿದ್ದಿತೆಂದು ತೋರುತ್ತದೆ. ೧೯೪೧ ರಲ್ಲಿ ಪ್ರಕಟವಾದ ಜಿ.ಪಿ.ರಾಜರತ್ನಂ ಅವರ **'ರಾಯರ ನರಿ ಮೊದಲಾದ ಕಥೆಗಳು'** ಒಂದು ಅನುವಾದ ಕೃತಿ. ಗ್ರೀಮ್ ಸಹೋದರರ ಹಾಗೂ ಈಸೋಫನ ಕಥೆಗಳನ್ನು ಅನುವಾದ ಮಾಡಿ ಎಂ. ರಾಮರಾವ ಅವರು ೧೯೪೪ ರಿಂದ ೧೯೬೫ರ ವರೆಗೆ ಕೆಲ ಕಥಾಸಂಕಲನಗಳನ್ನು ಪ್ರಕಟಿಸಿದರು. ಗ್ರೀಮ್ ಸಹೋದರರ ಸುಮಾರು ೧೩೫ ಕಥೆಗಳನ್ನು ಈ ಮೂಲಕ ಕನ್ನಡಕ್ಕೆ ಕೊಟ್ಟರು. ಇವರ ಜೊತೆಗೆ ಇಂತಹ ಕೆಲಸ ಮಾಡಿದ ಎಚ್.ಎಂ. ಶಂಕರನಾರಾಯಣರಾವ್, ಕೂಡಲಿ ಚಿದಂಬರಂ, ಕೆ.ಟಿ.ಎಸ್. ಸುಂದರ್ ಮುಂತಾದವರ ಹೆಸರುಗಳನ್ನು ಕೊಡಬಹುದಾಗಿದೆ. ಇವರೆಲ್ಲ ಪರದೇಶದ ಜನಪದ ಕಥೆಗಳನ್ನು ಕನ್ನಡಕ್ಕೆ ಕೊಟ್ಟ ಮಹನೀಯರು.

೧೯೩೫ರಲ್ಲಿ ಪ್ರಕಟವಾದ ದೇವುಡು ಅವರ 'ಕರ್ನಾಟಕ ಸಂಸ್ಕೃತಿ'ಯಲ್ಲಿ ೨೦ ಜನಪದ ಕಥೆಗಳಿರುವುದು ಗಮನಾರ್ಹ. ಒಂದು ದೃಷ್ಟಿಯಲ್ಲಿ ಕನ್ನಡ ಜನಪದ ಕಥೆಗಳನ್ನು ಕೊಟ್ಟ ಪ್ರಥಮ ಗ್ರಂಥ ಇದು ಎನ್ನಬೇಕಾಗುತ್ತದೆ. ೧೯೪೫ ರಲ್ಲಿ ಕನ್ನಡ ಜನಪದ ಕಥೆಗಳ ಸಂಕಲನ ದೇವುಡು ಮತ್ತು ರಾಮು ಅವರು 'ತಂತ್ರಗಾರ ನರಿ ಮತ್ತು ಇತರ ಕಥೆಗಳು' ಎಂಬ ಹೆಸರಿನಡಿ ಸಂಗ್ರಹಿಸಿಕೊಟ್ಟರು. ಕನ್ನಡದ ಜನಪದ ಕಥಾಸಂಕಲನಗಳನ್ನು ಚಿಕ್ಕಪುಟ್ಟ ಪುಸ್ತಕಗಳ ರೂಪದಲ್ಲಿ ತಂದವರೆಂದರೆ ಜಿ.ಪಿ. ರಾಜರತ್ನಂ, ಸೇಡಿಯಾಪು ಕೃಷ್ಣಭಟ್ಟ, ಮಿರ್ಜಿ ಅಣ್ಣಾರಾಯ, ಉಷಾದೇವಿ ಮಿರ್ಜಿ, ಎಂ. ರಾಮರಾವ, ಮತಿಘಟ್ಟ ಕೃಷ್ಣಮೂರ್ತಿ ಮುಂತಾದವರು.

೧೯೬೫ರ ನಂತರ ಮೈಸೂರು ವಿಶ್ವವಿದ್ಯಾಲಯದ ಪ್ರೋತ್ಸಾಹ ಮತ್ತು ಪರಿಣಾಮಗಳಿಂದ ದಕ್ಷಿಣ ಕರ್ನಾಟಕದಲ್ಲಿ ಕನ್ನಡ ಜನಪದ ಕತೆಗಳ ಸಂಗ್ರಹ ಸಂಪಾದನೆಗಳು ವ್ಯಾಪಕವಾಗಿಯೇ ನಡೆದವು. ಕರ್ನಾಟಕದ ಎಲ್ಲ ಜಿಲ್ಲೆಗಳ ಪ್ರಾತಿನಿಧಿಕ ಕಥಾ ಸಂಕಲನಗಳನ್ನು ತರುವ ಪ್ರಯತ್ನ ಈ ವಿಶ್ವವಿದ್ಯಾಲಯದಿಂದ ನಡೆಯಿತು. ಪ್ರತಿಯೊಬ್ಬ ಸಂಪಾದಕನೂ ತನ್ನ ಸಂಗ್ರಹಕ್ಕೆ ಪ್ರಸ್ತಾವನೆ ಬರೆಯಲು ಮಾಡಿದ ಸೀಮಿತ ಪ್ರಯತ್ನಗಳೇ ಕನ್ನಡ ಜನಪದ ಕಥೆಗಳ ಅಧ್ಯಯನದಲ್ಲಿ ನಡೆದ ಪ್ರಥಮ ಪ್ರಯತ್ನಗಳಾಗಿವೆ.

೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಥಮ ಜಾನಪದ ಪ್ರಾಧ್ಯಾಪಕರಾದ, ಡಾ.ಜೀ.ಶಂ. ಪರಮಶಿವಯ್ಯ ಅವರು ತಮ್ಮ **'ಕನ್ನಡ ಜನಪದ ಕಥೆಗಳು'** ಎಂಬ ಸಂಗ್ರಹ ಪ್ರಕಟಿಸಿದ ಮೇಲೆ, ಕರ್ನಾಟಕದ ಜನಪದ ಕಥೆಗಳ ಅಧ್ಯಯನದ ವಿಧಾನದಲ್ಲಿ ಒಂದು ಹೊಸ ಮಾರ್ಗವೇ ಪ್ರಾರಂಭವಾಯಿತು. ಈ ಸಂಗ್ರಹಕ್ಕೆ ಡಾ.ಜೀ.ಶಂ.ಪ. ಅವರು ಬರೆದ ಪ್ರಸ್ತಾವನೆ ಜನಪದ ಕಥೆಗಳ ಅಧ್ಯಯನದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿ ನಿಂತಿತು. ಇಲ್ಲಿಯ ವಿಂಗಡಣಾಕ್ರಮ, ಕಥೆಗಳ ಆಯ್ಕೆಯಲ್ಲಿ ಶಾಸ್ತ್ರೀಯ ಗುಣಮಟ್ಟಗಳು ಕಾಣಿಸಿಕೊಂಡವು. ಪ್ರಸ್ತಾವನೆಯಲ್ಲಿ – ಜಾನಪದದ ಬಗ್ಗೆ ಅವಿಸ್ಮರಣೀಯ ಕೆಲಸ ಮಾಡಿದ ಫಿನ್‌ಲ್ಯಾಂಡ್, ಜರ್ಮನಿ, ಇಂಗ್ಲೆಂಡ್ ಮತ್ತು ಅಮೇರಿಕಾ ಮುಂತಾದ ದೇಶಗಳಲ್ಲಿ ಜನಪದ ಕಥೆಗಳ ಬಗ್ಗೆ ನಡೆದ ಅಧ್ಯಯನದ ಸಮೀಕ್ಷೆಯನ್ನು ಮಾಡಿದ್ದಾರೆ. ಜೊತೆಗೆ ಆರ್ನೆ – ಥಾಮ್ಸನ್ನರ ಕಥಾಮಾದರಿ ಸೂಚಿಯಲ್ಲಿ ಕಾಣಿಸುವ ಅನೇಕ ಕಥಾಮಾದರಿಗಳಿಗೆ ಕರ್ನಾಟಕದಲ್ಲಿ ದೊರೆಯುವ ಹಲವು ಉದಾಹರಣೆಗಳನ್ನು ಇಲ್ಲಿ ಮೊದಲಬಾರಿಗೆ ಗಮನಿಸಿದ್ದಾರೆ. ಪ್ರಾದೇಶಿಕ ಮಟ್ಟದಲ್ಲಿ ಕಥೆಗಳ ಅಧ್ಯಯನದ ಮಹತ್ವವನ್ನು ಎತ್ತಿ ಹೇಳಿದ್ದಾರೆ. ಹೀಗಾಗಿ, 'ಕನ್ನಡದಲ್ಲಿ ಪ್ರಪ್ರಥಮ ವೈಜ್ಞಾನಿಕ ಸಂಗ್ರಹ' ಎಂಬ ಅಭಿದಾನಕ್ಕೆ ಈ ಕೃತಿ ಪಾತ್ರವಾಗುತ್ತದೆ. ಡಾ. ಜೀ.ಶಂ.ಪ. ಅವರಿಂದಲೇ ೧೯೭೦ರಲ್ಲಿ **'ಆಯ್ದ ಜನಪದ ಕಥೆಗಳು'**, ೧೯೭೯ ರಲ್ಲಿ **'ದಕ್ಷಿಣ ಕರ್ನಾಟಕದ ಜಾನಪದ ಕಥೆಗಳು'** ಎಂಬ ಮಹತ್ವದ ಸಂಗ್ರಹಗಳು ಪ್ರಕಟವಾಗಿವೆ. ಅವರ **'ಕನ್ನಡ ಜನಪದ ಕಥೆಗಳು'** ಪ್ರಕಟವಾದ ನಂತರ ಬಂದ ಬಹುತೇಕ ಸಂಕಲನಗಳಲ್ಲಿ ಡಾ. ಜೀ.ಶಂ.ಪ. ಅವರ ಸಂಗ್ರಹದ ಪ್ರಭಾವವನ್ನು ಕಾಣುತ್ತೇವೆ.

ಈ ಕೃತಿಯ ಮೊದಲೇ ಉತ್ತಮ ಎನ್ನಬಹುದಾದ ಕೆಲವು ಸಂಗ್ರಹಗಳು ಕಾಣಿಸಿಕೊಂಡಿದ್ದವು. ೧೯೬೭ ರಲ್ಲಿ ಪ್ರಕಟವಾದ ಶ್ರೀ ಧವಳಶ್ರೀ ಅವರ **'ಜನಪದ**

ಕಥಾಮೃತ' ಇಂತಹ ಒಂದು ಸಂಕಲನ. ಈ ಕೃತಿಯ ಎರಡನೇ ಸಂಪುಟವನ್ನು ೧೯೬೮ರಲ್ಲಿ ಹೊರತಂದರು. ಈ ಎರಡರಲ್ಲೂ ಶಾಸ್ತ್ರೀಯ ಮಟ್ಟದ ಸಂಪಾದನೆ, ವಿವರಣೆಗಳನ್ನು ಕಾಣಬಹುದಾಗಿದೆ. ರಾಗೌ ಅವರಿಂದ ೧೯೭೯ರಲ್ಲಿ **'ಕರ್ನಾಟಕದ ಜನಪದ ಕಥೆಗಳು'** ಎಂಬ ಹೆಸರಿನಲ್ಲಿ ಒಂದು ಸಂಗ್ರಹ ಪ್ರಕಟವಾಯಿತು. ಉತ್ತಮಮಟ್ಟದ ಶಾಸ್ತ್ರೀಯ ಸಂಪಾದನೆ ಮತ್ತು ಅಭ್ಯಾಸಪೂರ್ಣ ಪ್ರಸ್ತಾವನೆಯನ್ನು ಹೊತ್ತ ಜನಪದ ಕಥಾಸಂಕಲನ ಇದು. ೧೯೭೪ ರಲ್ಲಿ ಪ್ರಕಟವಾದ ಸಿ. ವೀರಣ್ಣ ಅವರ **'ಒಬ್ಬನೇ ಹೇಳಿದ ೨೨ ಜನಪದ ಕಥೆಗಳು'** ಎಂಬ ಸಂಗ್ರಹ, ಅದರ ಪ್ರಸ್ತಾವನೆ ಬಹು ಮುಖ್ಯವಾದುದಾಗಿದೆ. ಕನ್ನಡ ಕಥೆಗಳ ಸಾಂಸ್ಕೃತಿಕ ಅಧ್ಯಯನದ ಪ್ರಸ್ತಾಪವನ್ನು ಇಲ್ಲಿ ಕಾಣುತ್ತೇವೆ. ಉಳಿದಂತೆ ಜನಪದ ಕಥೆಗಳನ್ನು ಸಂಗ್ರಹಿಸಿ, ಅಲ್ಪ ಮಟ್ಟಿನ ವಿವರಗಳುಳ್ಳ ಪ್ರಾಸ್ತಾವನೆಗಳೊಂದಿಗೆ ಸಂಕಲನಗಳನ್ನು ಅನೇಕ ಜನ ವಿದ್ವಾಂಸರು ಹೊರತಂದಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಜನಪದ ಕಥೆಗಳ ಪ್ರಕಟನೆ ನಿರೀಕ್ಷಿತ ಮಟ್ಟದಲ್ಲಿ ನಡೆಯಲಿಲ್ಲ. ೧೯೭೨ ರಲ್ಲಿ ಹಳೆಯ ತಲೆಮಾರಿನ ಶ್ರೀ ಸಿಂಪಿ ಲಿಂಗಣ್ಣನವರಿಂದ **'ಉತ್ತರ ಕರ್ನಾಟಕದ ಜನಪದ ಕಥೆಗಳು'** ಎಂಬ ಸಂಕಲನ ಪ್ರಕಟಗೊಂಡಿತು. ೧೯೭೯ರಲ್ಲಿ ಡಾ. ಬಸವರಾಜ ಮಲಶೆಟ್ಟಿ ಅವರಿಂದ **'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು'** ಪ್ರಕಟವಾಯಿತು. ೧೯೮೭ ರಲ್ಲಿ –ಡಾ. ಬಿ. ಬಿ. ಹೆಂಡಿ, ಡಾ.ಎಂ.ಜಿ. ಬಿರಾದಾರ ಹಾಗೂ ಡಾ.ಎಂ. ಎಸ್. ಲಠ್ಠೆ ಅವರಿಂದ ಸಂಪಾದಿತ, ೧೧೧ ಕಥೆಗಳ ಬೃಹತ್ ಸಂಗ್ರಹವೊಂದು, **'ಜನಪದ ನೂರೆಂಟು ಕಥೆಗಳು'** ಎಂಬ ಹೆಸರಿನಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಯೋಜನೆಯಡಿ ಕ್ಯಾತನಹಳ್ಳಿ ರಾಮಣ್ಣನವರಿಂದ **'ಬೀದರ ಜಿಲ್ಲೆಯ ಜನಪದ ಕಥೆಗಳು', 'ಗೊಂದಲಿಗರ ಕಥೆಗಳು'** ಎಂಬ ಎರಡು ಸಂಗ್ರಹಗಳು, ಟಿ.ಎಸ್. ರಾಜಪ್ಪ ಅವರಿಂದ **'ಧಾರವಾಡ ಜಿಲ್ಲೆಯ ಜನಪದ ಕಥೆಗಳು', 'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು', 'ಬೆಳಗಾಂ ಜಿಲ್ಲೆಯ ಜನಪದ ಕಥೆಗಳು', 'ರಾಯಚೂರು ಜಿಲ್ಲೆಯ ಜನಪದ ಕಥೆಗಳು'** ಎಂಬ ನಾಲ್ಕು ಸಂಗ್ರಹಗಳು ಹೊರಬಂದಿವೆ.

ಆದರೆ ಪ್ರಕಟಗೊಳ್ಳದೇ ಇರುವ, ಸಂಗ್ರಹಿತಗೊಂಡ ಜನಪದ ಕಥೆಗಳ ಸಂಗ್ರಹ, ಗುಲ್ಬರ್ಗಾ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬಹುದೊಡ್ಡ ಪ್ರಮಾಣದಲ್ಲಿದೆ. ೧೯೭೩ರಲ್ಲಿ 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ' ಎಂಬ ಯೋಜನೆಯೊಂದು, ಕರ್ನಾಟಕ ವಿಶ್ವವಿದ್ಯಾಲಯದ ಧನಸಹಾಯ ಪಡೆದು ಡಾ. ಬಿ. ಬಿ. ಹೆಂಡಿ ಅವರು ೧೯೭೨–೭೩ರಲ್ಲಿ ಪೂರೈಸಿದರು. ಡಾ. ಬಿ.ಬಿ.ಹೆಂಡಿ ಅವರ ನೇತೃತ್ವದಲ್ಲಿ ಯುಜಿಸಿ ನೆರವಿನಿಂದ 'ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ ಮತ್ತು ಹಾಡುಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆ' ಎಂಬ ಯೋಜನೆ ೧೯೭೩ರಲ್ಲೇ ಕಾರ್ಯ ಪ್ರಾರಂಭಿಸಿ ೧೯೭೮ರವರೆಗೆ ಬಹುದೊಡ್ಡ ಪ್ರಮಾಣದಲ್ಲಿ ಕಥೆಗಳ ಸಂಗ್ರಹ ನಡೆಯಿತು. ಈಗ ಅವುಗಳ ಸಂಪಾದನೆ ಮತ್ತು ಪ್ರಕಟನೆಗಳು ನಡೆದು, ಸಂಕಲನಗಳು ಹೊರಬಂದರೆ ಮುಂದಿನ

ಅಭ್ಯಾಸಿಗಳಿಗೆ ಅನುಕೂಲವಾಗುತ್ತದೆ. ಈ ಮೇಲೆ ಉಲ್ಲೇಖಿಸಿದ 'ಜನಪದ ನೂರೆಂಟು ಕಥೆಗಳು'(೧೯೮೭) ಈ ಸಂಗ್ರಹದಿಂದಲೇ ಹೊರಬಂದ ಒಂದು ಕೃತಿಯಾಗಿದೆ.

ಮುದ್ರಣದ ಮೂಲಕ ಕನ್ನಡಕ್ಕೆ ಬಂದ ಕಥೆಗಳಲ್ಲಿ ಅತ್ಯಂತ ಮಹತ್ವದ ಕೊಡುಗೆ ಕೊಟ್ಟವರೆಂದರೆ ಜಿ.ಪಿ.ರಾಜರತ್ನಂ ಅವರಾಗಿದ್ದಾರೆ. ಅವರು ವಿಶೇಷವಾಗಿ ಮಕ್ಕಳಿಗಾಗಿ ಭಾರತದ ಬೇರೆ ಬೇರೆ ಭಾಷೆಯಲ್ಲಿಯ ಕಥೆಗಳನ್ನು, ಇಂಗ್ಲೀಷಿನಲ್ಲಿ ಪ್ರಕಟವಾದ ಜನಪದ ಕಥೆಗಳನ್ನು, ಜಾತಕ ಕಥೆಗಳನ್ನು, ಹಿಂದೂ ಧಾರ್ಮಿಕ ವಲಯದಲ್ಲಿ ಪ್ರಸಿದ್ಧವಾಗಿರುವ ಭಾರತ ರಾಮಾಯಣ ಭಾಗವತ ಕಥೆಗಳನ್ನು, ಮತ್ತೆ ಪ್ರಸಿದ್ಧವಾದ ಹೊರದೇಶದ ಜನಪದ ಮತ್ತು ಜನಪ್ರಿಯ ಕಥೆಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿ, ಕೆಲವನ್ನು ತಾವೇ ಸಂಗ್ರಹಿಸಿ ಬರೆದು ಪ್ರಕಟಿಸಿದ್ದಾರೆ. ಅವರು ಕಥೆಗಳನ್ನು ಹೇಗೆ ಸಂಗ್ರಹಿಸಿ ಬರೆದಿದ್ದಾರೆ ಎಂಬುದನ್ನು ಅವರ ಕೃತಿಗಳಲ್ಲಿಯೇ ವಿವರಿಸಿದ್ದಾರೆ. **'ನಾಳೀಜಂಘ'(೧೯೪೫)** ಎಂಬ ಕೃತಿಯಲ್ಲಿ ಹೀಗೆ ಬರೆದಿದ್ದಾರೆ: 'ಇದು ಮೂಲ ಸಂಸ್ಕೃತದ ಬರಿಯ ಭಾಷಾಂತರವಲ್ಲ. ಇಂಗ್ಲೀಷಿನಲ್ಲಿ **'ರೀ–ಟೋಲ್ಡ್'** ಅನ್ನುತ್ತಾರಲ್ಲಾ, ಹಾಗೆ, ಅಲ್ಲಿ ಸಂಸ್ಕೃತದಲ್ಲಿ ಹೇಳಿದ ಕಥೆಯೇ ಇಲ್ಲಿ ಕನ್ನಡದಲ್ಲಿ, ಕಥೆ ಕೆಡದ ಹಾಗೆ, ಕಥೆಗೆ ನಮ್ಮ ಕಪಿಚೇಷ್ಟೆ ಸೇರದ ಹಾಗೆ, ಅಲ್ಲಿರುವ ಒಂದು ಮಾತು ಇಲ್ಲಿ ಮಕ್ಕಳಿಗೆ ಮನದಟ್ಟಬೇಕೆಂಬ ಉದ್ದೇಶದಿಂದ ಮೂರೋ ನಾಲ್ಕೋ ಮಾತಾಗಿ ಬೆಳೆದಿದೆ ಅಷ್ಟೆ' (ಪು.೫). ಇದು ಬಹುಶಃ ಅವರ ಎಲ್ಲ ಕಥೆಗಳ ಸಂಗ್ರಹಗಳಿಗೂ ಅನ್ವಹಿಸುವ ಮಾತಾಗಿದೆ. ಜಿ.ಪಿ.ರಾಜರತ್ನಂ ಅವರ ಕಥಾಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಗಮನಿಸಿದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಿದ ಅವರ ಹೆಸರನ್ನು ಜನಪದ ಸಾಹಿತ್ಯ ಚರಿತ್ರೆಯಲ್ಲಿ ಇಲ್ಲಿಯವರೆಗೂ ಒಮ್ಮೆಯೂ ಚರ್ಚೆಗೆ ಬರದೇ ಇರುವುದು ಸೋಜಿಗವೆನಿಸುತ್ತದೆ. ಅವರ **'ಪಂಡಿತನ ನೆರಳು ಮತ್ತು ಇತರ ಕತೆಗಳು'** ಎಂಬ ಕೃತಿ ಪ್ರಕಟವಾದುದು ೧೯೪೬ರಲ್ಲಿ, ಸ್ವಾತಂತ್ರ್ಯಪೂರ್ವದಲ್ಲಿ. ಈ ಕೃತಿಯಲ್ಲಿ ಜಾರ್ಜಿಯಾ ದೇಶದ ಜನಪದ ಸಾಹಿತ್ಯದ ಒಂದು ಕಥೆ ಮತ್ತು ಡೆನ್ಮಾರ್ಕಿನ ಹ್ಯಾನ್ಸ್ ಕ್ರಿಶ್ಚನ್ ಆ್ಯಂಡರ್ಸನ್ (೧೮೦೫–೧೮೭೫) ಅವರ **'ಫೇರಿ ಟೇಲ್ಸ್'** ಕೃತಿಯಿಂದ ಆಯ್ದ ಮೂರು ಕಿನ್ನರ ಕಥೆಗಳು ಇದರಲ್ಲಿವೆ. ಅವರ ಕೃತಿಗಳನ್ನು ಪ್ರಕಟ ಮಾಡಿದ ಸಂಸ್ಥೆ ನಿಟ್ಟೂರು ಶ್ರೀನಿವಾಸರಾಯ ಅವರ ಸತ್ಯಶೋಧನ ಪ್ರಕಟನ ಮಂದಿರ, ಕೋಟೆ ಬೆಂಗಳೂರು.

ರಾಜರತ್ನಂ ಅವರು ಮಕ್ಕಳಿಗಾಗಿ ಕೊಟ್ಟ ಕೃತಿಗಳೆಲ್ಲ ಹೆಚ್ಚಾಗಿ ಕಥಾರೂಪದ ಕೃತಿಗಳೇ ಆಗಿವೆ. ಈ ಕೃತಿಯ ಜೊತೆಗೆ ಪ್ರಕಟವಾದ ಕೃತಿಗಳ ಪಟ್ಟಿಯಲ್ಲಿ ತೆನಾಲಿ ರಾಮ, ಮಕ್ಕಳ ಮಂಛೌಸನ್ ಹಾಗೂ ಪುಟಾಣಿ ಪಂಚತಂತ್ರ ಎಂಬ ಕೃತಿಗಳ ಹೆಸರುಗಳು ಇವೆ. ಈ ಕೃತಿಯಲ್ಲಿ ಮತ್ತೆ ಸಧ್ಯದಲ್ಲಿ ಪ್ರಕಟವಾಗಲಿರುವ ಕೃತಿಗಳ ಒಂದು ಪಟ್ಟಿ ಇದೆ. ಜೊತೆಗೆ ಈಗಾಗಲೇ ಪ್ರಕಟವಾದ ಮಕ್ಕಳ ಸಾಹಿತ್ಯ ಹಾಗೂ ಧಾರ್ಮಿಕ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳ ದೀರ್ಘ ಪಟ್ಟಿಗಳಿವೆ. ಅವೆಲ್ಲವನ್ನು ಗಮನಿಸಿದರೆ ಅಲ್ಲೆಲ್ಲ ಕಥೆಗಳ ಮೂಲಕವೇ ಕೃತಿರಚನೆಗೆ ತೊಡಗುವುದು ಕಂಡುಬರುತ್ತದೆ. ಜನಪದ ಕಥೆಗಳು, ಭಾರತ ರಾಮಾಯಣ ಹಾಗೂ ಭಾಗವತದ ಕಥೆಗಳು, ಬೌದ್ಧ ಹಾಗೂ ಜೈನ ಕಥೆಗಳು ಹಾಗೂ ಪಾಶ್ಚಾತ್ಯ ಜನಪದ ಕಥೆಗಳು ಈ ಕಥಾಪ್ರಪಂಚವೇ ಅಲ್ಲಿದೆ. ಇದನ್ನು ಗಮನಸಿದರೆ

ಜಿ.ಪಿ.ರಾಜರತ್ನಂ ಅವರು ಕಥಾಸಾಹಿತ್ಯವನ್ನು ಹೆಚ್ಚು ಪ್ರಚಾರ ಮಾಡಿದ ಕನ್ನಡದ ಮೊದಲ ಹಿರಿಯರು ಎನಿಸುತ್ತಾರೆ.

ರಾಜರತ್ನಂ ಅವರ **'ನಾಳೀಜಂಘ'** ಭಾರತದ ಉಪಕಥೆಗಳನ್ನು ಒಳಗೊಂಡ ಮೊದಲನೆಯ ಕೃತಿ. ಇದು ಪ್ರಕಟವಾದುದು ೧೯೪೪ರಲ್ಲಿ. ಮುಂದಿನ ಭಾಗಗಳು ಕ್ರಮಶಃ ಪ್ರಕಟವಾಗುತ್ತವೆ ಎಂದು ಬೆನ್ನು ಪುಟದಲ್ಲಿ ಮುದ್ರಿಸಲಾಗಿದೆ. ೧೯೫೭ ರಲ್ಲಿ 'ಹಿಂದೂಸ್ಥಾನದ ಕಿರುಗತೆಗಳು' ಎಂಬ ಕೃತಿ ಪ್ರಕಟವಾಗಿದೆ. ಶ್ರೀ ಆರ್ಥರ್ ಡಂಕನ್ ಎನ್ನುವವರು 'ದಿ ಗೋಲ್ಡನ್ ಟ್ರೆಷರಿ ಆಫ್ ಇಂಡಿಯನ್ ಟೇಲ್ಸ್' ಎಂಬ ಹೆಸರಿನಿಂದ ಪ್ರಕಟಿಸಿದ ಪ್ರಸಿದ್ಧ ಕೃತಿಯಿಂದ ೧೦ ಕಥೆಗಳನ್ನು ಆಯ್ದುಕೊಂಡು ಬಿ.ಎಸ್.ರಾಮಸ್ವಾಮಿ ಅಯ್ಯಂಗಾರ್ ಅವರು ಅವನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಇದರಲ್ಲಿಯ ಕಥೆಗಳನ್ನು ಗಮನಿಸಿದರೆ ಧರ್ಮರಾಯ, ಬುದ್ಧ, ಮೀರಾಬಾಯಿ, ಅಕ್ಬರ್ ಇಂತಹ ಜನರಿಗೆ ಸಂಬಂಧಿಸಿದ ಘಟನೆಗಳು ಇಲ್ಲಿವೆ. ಮೈಸೂರು ಸೀತಾರಾಮಶಾಸ್ತ್ರಿಗಳು ೧೯೧೨ರಲ್ಲಿಯೇ 'ಭಾರತೋಪಾಖ್ಯಾನ ತರಂಗಿಣಿ' ಎಂಬ ಸಮಗ್ರ ಮಹಾಭಾರತ ಕಥೆಗಳನ್ನು ಒಳಗೊಂಡ ಕೃತಿಯನ್ನು ಪ್ರಥಮವಾಗಿ ಮುದ್ರಿಸಿದವರಾಗಿದ್ದಾರೆ. ಇದನ್ನು ಗಮನಿಸಿದರೆ ಸುಮಾರು ೧೯೦೦ರ ಹೊತ್ತಿಗೆ ನಮ್ಮಲ್ಲಿಯ ಕಥಾಪ್ರಪಂಚ ಪ್ರಕಟನೆಯ ಅವಕಾಶ ಪಡೆಯಲು ಪ್ರಾರಂಭಿಸಿತೆಂದು ಇಟ್ಟುಕೊಳ್ಳಬಹುದಾಗಿದೆ.

ನಮ್ಮ ದೇಶದ ಬಹುದೊಡ್ಡ ಕಥಾಗುಚ್ಛವೆಂದರೆ ದುರ್ವಿನೀತನು (ಕ್ರಿ.ಶ. ೬೦೦) ಕನ್ನಡಕ್ಕೆ ತಂದ 'ಬೃಹತ್ ಕಥಾಕೋಶ' ಅಥವಾ 'ಕಥಾಸರಿತ್ಸಾಗರ'. ಇದರಲ್ಲಿಯ ಸಾವಿರಾರು ಕಥೆಗಳಲ್ಲಿ ಅನೇಕ ಜನಪದ ಕಥೆಗಳು ಸೇರ್ಪಡೆಯಾಗಿವೆ. ಈ ಕಥಾಕೋಶದ ಮೂಲಕ ಅನೇಕ ಪುರಾಣ ಕಥೆಗಳು ಜನಸಾಗರದಲ್ಲಿ ಪ್ರಚಾರ ಪಡೆದಿವೆ. ಈ ಕೃತಿಯನ್ನು ಕ್ಷೇಮೇಂದ್ರನು ಸಂಸ್ಕೃತದಲ್ಲಿ ಸಂಗ್ರಹಿಸಿ 'ಬೃಹತ್ಕಥಾಮಂಜರಿ' ಎಂಬ ಕೃತಿ ಬರೆದುದನ್ನು ಅನುಸರಿಸಿ, ಎ. ಆರ್. ಕೃಷ್ಣಶಾಸ್ತ್ರಿಗಳು 'ಕಥಾಮೃತ' ಎಂಬ ಹೆಸರಿನ ಕೃತಿಯನ್ನು ಕನ್ನಡದಲ್ಲಿ ಬರೆದಿದ್ದಾರೆ. ಇದರ ಪ್ರಥಮ ಆವೃತ್ತಿ ಪ್ರಕಟವಾದುದು ೧೯೫೧ ರಲ್ಲಿ. ಸ್ವಾತಂತ್ರ್ಯದ ಹೊಸ್ತಿಲಲ್ಲಿ ಭಾರತದಲ್ಲಿ ಪ್ರಚಲಿತದಲ್ಲಿರುವ, ಬಹು ಜನಪ್ರಿಯ ಕಥೆಗಳನ್ನು ಹೀಗೆ ಲಿಖಿತ ಮಾಧ್ಯಮದ ಮೂಲಕ ಸಾಮಾನ್ಯರಿಗೆ ತಲುಪಿಸುವ ಕೆಲಸ ನಡೆದುದು ಗಮನಾರ್ಹ ಸಂಗತಿಯಾಗಿದೆ. ಇದರಲ್ಲಿಯೇ ಶೃಂಗಾರ ಕಥೆಗಳು, ಬೇತಾಳನ ಕಥೆಗಳು, ಪಂಚತಂತ್ರದ ಕಥೆಗಳು ಈ ಎಲ್ಲ ಕಥಾಗುಚ್ಛಗಳ ಕಥೆಗಳು ಬರುತ್ತವೆ. ಈ ಕೃತಿಯಲ್ಲದೆ ಪ್ರಕಟನೆಯ ವರ್ಷ ಹಾಕದೇ ಪ್ರಕಟಿಸುವ ಪದ್ಧತಿ ಇರುವ ಗದುಗಿನ ಹಲವಾರು ಪ್ರಕಾಶನ ಸಂಸ್ಥೆಗಳು 'ಶೃಂಗಾರ ಕಥೆಗಳು', 'ಬೇತಾಳನ ಕಥೆಗಳು', ಬತ್ತೀಸ ಪುತ್ಥಳಿಗಳು ಹೇಳಿದ ಕಥೆಗಳು, ಪಂಚತಂತ್ರ', ಅಕಬರ್ ಬೀರಬಲ್ಲರ ಕಥೆಗಳು, ವೇದದೊಳಗಿನ ಕಥೆಗಳು, ಶ್ರೀ ಹರಿ ವಿಜಯ – ಈ ಬಗೆಯ ಅನೇಕ ಕಥಾಸಂಗ್ರಹಗಳನ್ನು ಪ್ರಕಟಿಸುತ್ತ ಬಂದುದು ಕಂಡುಬರುತ್ತದೆ. ಹೀಗೆ ಲಿಖಿತ ಮೂಲದಲ್ಲಿದ್ದ ಭಾರತೀಯ ಕಥೆಗಳು (ಜನಪದ ಕಥೆಗಳು ಸೇರಿದಂತೆ) ಕೃತಿಗಳ ಮೂಲಕ ಜನರಿಗೆ ತಲುಪುವಂತೆ ಆಗಿರುವುದು ಮಹತ್ವದ ಕೆಲಸವಾಗಿದೆ. ಈ ಮೂಲಕ

ಹಾಸ್ಯಕಥೆಗಳು, ಪ್ರಾಣಿಕಥೆಗಳು, ಸರಳ ಮತ್ತು ಸಂಕೀರ್ಣ ಜನಪದ ಕಥೆಗಳೂ ಪ್ರಸಾರಕ್ಕೆ ಬರಲು ಅನುಕೂಲವಾಗಿರುವುದು ಮಹತ್ವದ ಸಂಗತಿ ಎನಿಸುತ್ತದೆ.

ಬೌದ್ಧ ಮತ್ತು ಜೈನಧರ್ಮದ ಕಥೆಗಳು :

ಬೌದ್ಧ ಮತ್ತು ಜೈನ ಧರ್ಮ ಪ್ರಸಾರಕ್ಕಾಗಿ ಬಳಸಿಕೊಂಡ ಕಥೆಗಳ ಸಂಗ್ರಹಗಳು ಪ್ರಕಟಗೊಂಡಿರುವುದು ಕಂಡುಬರುತ್ತದೆ. ನಯಸೇನನ ಧರ್ಮಾಮೃತದ ಕಥೆಗಳ ಗುಚ್ಛವೊಂದು **'ದರ್ಶನದ ಕಥೆಗಳು'** ಹಸರಿನಲ್ಲಿ ಪ್ರಕಟವಾಗಿದೆ. ೧೯೫೧ರಲ್ಲೇ ಪ್ರಕಟವಾದ ಈ ಕೃತಿಯ ಲೇಖಕರು ಬಿ.ಶಂಕರ ಭಟ್ಟ ಹಾಗೂ ಬಿ.ಎಂ.ಶರ್ಮಾ ಅವರು. ಈ ಕೃತಿ ಮೊದಲೊಮ್ಮೆ ಪ್ರಕಟವಾದುದನ್ನು ಸೂಚಿಸಿದ್ದಾರೆ. ಆದರೆ ಮೊದಲನೇ ಪ್ರಕಟನೆಯ ವರ್ಷ ಹಾಕದೇ ಇರುವುದು ಒಂದು ಕೊರತೆಯಾಗಿ ಕಾಣುತ್ತದೆ.

ಜಿ.ಪಿ.ರಾಜರತ್ನಂ ಅವರು ಮೊದಲಿನಿಂದಲೂ ಜಾತಕದ ಕಥೆಗಳನ್ನು ಮಕ್ಕಳಿಗಾಗಿ ಬರೆದು ಪ್ರಕಟಿಸುತ್ತ ಬಂದಿದ್ದಾರೆ. ೧೯೪೬ರಲ್ಲಿ ಪ್ರಕಟವಾದ **'ಪಂಡಿತನ ನೆರಳು'** ಕೃತಿಯಲ್ಲಿ ಬುದ್ಧನ ಕಥೆಗಳು, ಜಾತಕ ಕಥೆಗಳು ಎಂಬ ಎರಡು ಕೃತಿಗಳು ಪ್ರಕಟವಾದ ಬಗ್ಗೆ ನಮೂದಿಸಿದ್ದಾರೆ. ಆದರೆ ಅವು ಪ್ರಕಟವಾದ ವರ್ಷಗಳ ನಮೂದಾಗಿಲ್ಲ. ಅವು ೧೯೪೬ ಕ್ಕಿಂತ ಮುಂಚೆ ಪ್ರಕಟವಾದವು ಎಂದಿಟ್ಟುಕೊಂಡು ಮುಂದುವರೆಯುವುದು ಅನಿವಾರ್ಯವಾಗಿದೆ. ನಮ್ಮ ಕೈಗೆ ೧೯೭೪ರಲ್ಲಿ ಪ್ರಕಟವಾದ **'ಆರು ಕೊಂಬಿನ ಆನೆ ಮೊದಲಾದ ಬೋಧಿಸತ್ವನ ಕತೆಗಳು'** ಎಂಬ ಕೃತಿ ದೊರೆಯುತ್ತದೆ. ಇದರಲ್ಲಿ ೧೯ ಕಥೆಗಳನ್ನು ಸರಳವಾಗಿ ಬರೆದು ಕೊಟ್ಟಿದ್ದಾರೆ. ಅಂಜಲೀಪಾಲ್ ಅವರ **'ಜಾತಕದ ಕತೆಗಳು'** ಎಂಬುದನ್ನು ಡಾ. ಶಿವರಾಮ ಕಾರಂತ ಅವರು ಕನ್ನಡಸಿದ ಕೃತಿಯನ್ನು ಐಬಿಎಚ್ ೧೯೭೯ರಲ್ಲಿ ಪ್ರಕಟಿಸಿದೆ. ಇದರಲ್ಲಿ ೯ ಜಾತಕ ಕಥೆಗಳಿವೆ. ಇವನ್ನು ಓದಿದರೆ ಇವೆಲ್ಲ ಶುದ್ಧ ಜನಪದ ಕಥೆಗಳಂತೆಯೇ ತೋರುತ್ತವೆ. ಹೀಗಾಗಿ ಜೈನರೂ ಬೌದ್ಧರೂ ಜನಪದ ಕಥೆಗಳನ್ನು ತಮ್ಮ ಧರ್ಮಪ್ರಸಾರಕ್ಕೆ ಬಳಸಿಕೊಂಡಿರುವುದು, ಅವನ್ನು ಕೃತಿಗಳ ಮೂಲಕ ಪ್ರಚಾರಕ್ಕೆ ತಂದಿರುವುದು ಕಂಡುಬರುತ್ತದೆ.

ಜಾತಕ ಕಥೆಗಳ ಸಮಗ್ರ ಸಂಪುಟಗಳು ಇಬ್ಬರು ವಿದ್ವಾಂಸರಿಂದ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾಗಿರುವುದು ಕಂಡುಬರುತ್ತದೆ. ರುಕ್ಮಿಣಿ ಗಿರಿಮಾಜಿ ಅವರು ಅನುವಾದಿಸಿದ ಜಾತಕ ಕಥೆಗಳ ಸಂಪುಟಗಳು 'ಜಾತಕ ಮತ್ತು ಜಾತಕ ಕಥೆಗಳು' ಎಂಬ ಹೆಸರಿನಲ್ಲಿ ೧೯೯೧ ರಿಂದ ೧೯೯೭ರ ಅವಧಿಯಲ್ಲಿ ಆರು ಸಂಪುಟಗಳಲ್ಲಿ ಪ್ರಕಟವಾಗಿವೆ. ಡಾ. ಬಿ.ನಂ.ಚಂದ್ರಯ್ಯ ಅವರು 'ಬುದ್ಧನ ಜಾತಕ ಕಥೆಗಳು' ಎಂಬ ಹೆಸರಿನಲ್ಲಿ ಐದು ಸಂಪುಟಗಳಲ್ಲಿ ೨೦೦೦ ಅವಧಿಯಲ್ಲಿ ಪ್ರಕಟಿಸಿದ್ದಾರೆ. ಆ ಮೊದಲು ಅವುಗಳನ್ನು ಆರು ಸಂಪುಟಗಳಲ್ಲಿ ೧೯೯೪-೧೯೯೫ರ ಅವಧಿಯಲ್ಲಿ ಪ್ರಕಟಿಸಿದ್ದಾರೆ. ಈ ಇಬ್ಬರು ವಿದ್ವಾಂಸರು ಪಾಲಿ ಭಾಷೆಯಿಂದ ನೇರವಾಗಿ ಈ ಜಾತಕ ಕಥೆಗಳನ್ನು ಅನುವಾದಿಸಿದ್ದು, ಮೂಲ ಪಾಲಿ ಸಾಹಿತ್ಯದ ಕಥೆಗಳು ನೇರವಾಗಿ ಕನ್ನಡಕ್ಕೆ ಬಂದಂತಾಗಿದೆ. ಈ ಕಥೆಗಳನ್ನು ತಮ್ಮ ಉದ್ದೇಶಕ್ಕೆ ತಕ್ಕಂತೆ ಅಲ್ಪಸ್ವಲ್ಪ ಮಾರ್ಪಾಟು ಮಾಡಿಕೊಂಡಿದ್ದರೂ

ಇವೆಲ್ಲ ಜನಪದ ಕಥೆಗಳು ಎಂಬುದರಲ್ಲಿ ಎರಡು ಮಾತಿಲ್ಲ. ಬಹುಶಃ ಲಿಖಿತ ರೂಪ ತಾಳಿದ ಪ್ರಾಚೀನ ಜನಪದ ಕಥೆಗಳು ಇವು ಎಂಬುದನ್ನು ಇಬ್ಬರೂ ಅನುವಾದಕರು ಅಭಿಪ್ರಾಯ ಪಡುತ್ತಾರೆ. ಡಾ. ಬಿ.ಎನ್. ಚಂದ್ರಯ್ಯ ಅವರು ಜಾತಕ ಕಥೆಗಳನ್ನು ಕುರಿತು ಹೀಗೆ ಬರೆಯುತ್ತಾರೆ: 'ಅಂದಿನ ಗಂಗಾ –ಯಮುನಾ ಪ್ರದೇಶದಲ್ಲಿ ಜನರಿಗೆ ಪರಿಚಿತವಾಗಿದ್ದ ಸಾಮಾನ್ಯ ಜನ ಹೃದಯದಲ್ಲಿ ಹುಟ್ಟಿದ ಕಥೆಗಳು, ಜಾತಕ ಕಥೆಗಳು. ಇವುಗಳ ಪ್ರಭಾವದಿಂದ ರಚಿತವಾದ ಕಥಾಸಂಗ್ರಹಗಳೇ ಪಂಚತಂತ್ರ ಮತ್ತು ಕಥಾಸರಿತ್ಸಾಗರ. ಅನೇಕ ಬಾರಿ ವಿದೇಶಿ ಪ್ರವಾಸವನ್ನು ಕೈಕೊಂಡು, ವಿದೇಶಿ ರೂಪವನ್ನು ಪಡೆದು 'ಯಮನ ಯಾಮಿನೀ ಕಥೆಗಳು' (ಅರೇಬಿಯನ್ ನೈಟ್ಸ್), 'ಈಸೋಪನ ಕಥೆಗಳು' ಆದವು. ಈ ದೃಷ್ಟಿಯಿಂದ ಜಾತಕ ಕಥೆಗಳು ಜಗತ್ತಿನಲ್ಲಿಯೇ 'ಅತಿ ಪ್ರಾಚೀನವಾದ, ಪರಿಪೂರ್ಣವಾದ, ಅತಿ ಪ್ರಮುಖವಾದ ಜಾನಪದ ಕಥೆಗಳ ಸಂಗ್ರಹವಾಗಿವೆ'. (It is the oldest, more complete and most important collection of folklore extent- Rhys Davids). (ಬುದ್ಧನ ಜಾತಕ ಕಥೆಗಳು, ಸಂ. ೬, ಎರಡು ಮಾತು, ಪು.೫).

ಬುದ್ಧನು ತನ್ನ ೫೪೭ ಹಿಂದಿನ ಜನ್ಮಗಳ ಕಥೆಗಳನ್ನು ಹೇಳಿರುವುದೇ ಜಾತಕ ಕಥೆಗಳು ಎಂದು ಹೇಳಲಾಗುತ್ತದೆ. ಸು. ಕ್ರಿ.ಪೂರ್ವ ೩ನೇ ಶತಮಾನದಷ್ಟೊತ್ತಿಗೆ ಜಾತಕ ಕಥೆಗಳು ಬಹುಪ್ರಸಿದ್ಧಿಯನ್ನು ಪಡೆದಿದ್ದವು ಎಂದು ಹೇಳಲಾಗುತ್ತದೆ. ಅಶೋಕನ ಕಾಲಕ್ಕೆ (ಕ್ರಿ.ಪೂ.೨೭೩) ಶ್ರೀಲಂಕಾಕ್ಕೆ ಧರ್ಮ ಪ್ರಸಾರಕ್ಕಾಗಿ ಕಳುಹಿಸಲಾದ ಮಹಿಂದ ಸಂಘಮಿತ್ತ ಮತ್ತು ಇತರರು ಜಾತಕ ಕಥೆಗಳನ್ನು ಹೆಚ್ಚು ಪ್ರಚಾರ ಮಾಡಿದರೆಂದೂ, ಸುಮಾರು ಕ್ರಿ.ಪೂರ್ವ ಒಂದನೇ ಶತಮಾನದಲ್ಲಿ ಇವೆಲ್ಲ ಸಿಂಹಳೀ ಭಾಷೆಯಲ್ಲಿ ಲಿಖಿತ ರೂಪದಲ್ಲಿ ದಾಖಲಾಗಿರಬೇಕೆಂದೂ ಊಹಿಸಲಾಗುತ್ತದೆ. ಸುಮಾರು ಕ್ರಿ.ಶ. ೫ನೇ ಶತಮಾನದಲ್ಲಿ ಈ ಕಥೆಗಳು ಪಾಲಿ ಭಾಷೆಗೆ ಅನುವಾದಗೊಂಡಿರಬೇಕೆಂದು ಅನುಮಾನಿಸಲಾಗುತ್ತದೆ. ಈ ಕಥೆಗಳಿಗೆ ಹೀಗೆ ಲಿಖಿತರೂಪ ಕೊಟ್ಟವನು ಬುದ್ಧಘೋಸ ಎನ್ನಲಾಗುತ್ತದೆ. ಜಾತಕ ಕಥೆಗಳ ಲಿಖಿತ ರೂಪದ ಗ್ರಂಥಕ್ಕೆ **'ಜಾತಕಟ್ಠ ಕಥಾವಣ್ಣನಾ'** ಎಂದು ಕರೆಯಲಾಗುತ್ತದೆ. " **'ಜಾತಕಟ್ಠ ಕಥಾವಣ್ಣನಾ'** ಈ ಪ್ರಕಾರದ ಸಾಹಿತ್ಯದ ಮೇಲೆ ತುಂಬಾ ಪ್ರಭಾವ ಬೀರಿದೆ. ಜಾತಕಟ್ಠ ಕಥಾವರ್ಣನೆಯಂತೆ ಕಥೆಗಳಿರುವ ಇತರ ಪ್ರಸಿದ್ಧ ಗ್ರಂಥಗಳೆಂದರೆ ಪಂಚತಂತ್ರ ಮತ್ತು ಸರಿತ್ಸಾಗರ. ಪಂಚತಂತ್ರವು ಸಂಸ್ಕೃತದಲ್ಲಿದೆ. ಪಂಚತಂತ್ರ ರಚಿತವಾದುದು ೧೨ನೇ ಶತಮಾನದಲ್ಲಿ. ಕಥಾಸರಿತ್ಸಾಗರಕ್ಕೆ ಮಾತೃಕೆಯಾದ ಬೃಹತ್ಕಥೆಯು (ಪೈಶಾಚಿಕ ಭಾಷೆಯಲ್ಲಿದೆ) ರಚಿತವಾದದ್ದು ೬ನೇ ಶತಮಾನದಲ್ಲಿ. ಪಂಚತಂತ್ರ ಮತ್ತು ಕಥಾಸರಿತ್ಸಾಗರದಲ್ಲಿ ಜಾತಕ ಕಥೆಗಳಂತಿರುವ ಅಥವಾ ಅವುಗಳ ರೂಪಾಂತರಗಳೆನ್ನಬಹುದಾದ ಕಥೆಗಳಿವೆ. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಜಾತಕ ಕಥೆಗಳ ಪ್ರಭಾವವಿಲ್ಲದಿದ್ದರೆ ಈ ಎರಡು ಸಂಸ್ಕೃತ ಗ್ರಂಥಗಳಲ್ಲಿ ಜಾತಕ ಕಥೆಗಳಂತಹ ಕಥೆಗಳು ಇರುತ್ತಿರಲಿಲ್ಲ. ರ್‍ಹೀಸ್ ಡೇವಿಡ್ಸ್‌ರು ಜಾತಕ ಕಥೆಗಳಿಗೆ ಬರೆದಿರುವ ತಮ್ಮ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಪಂಚತಂತ್ರ ಕಥೆಗಳು ದೇಶ–ವಿದೇಶಗಳಲ್ಲಿ ಪ್ರಸಾರವಾಗಿ ಯಾವಯಾವ ರೂಪವನ್ನು ಪಡೆದಿವೆ ಎಂಬುದನ್ನು ಚರ್ಚಿಸಿದ್ದಾರೆ. ಈ ಕಥೆಗಳೇ

ಈಸೋಪನ ಕಥೆಗಳೂ ಯಮನ ಯಾಮಿನೀ ಕಥೆಗಳೂ (ಅರೇಬಿಯನ್ ನೈಟ್ಸ್) ಆಗಿ ರೂಪಾಂತರ ಪಡೆದವು ಎಂದು ಸಾಧಾರಪೂರ್ಣವಾಗಿ ತೋರಿಸಿದ್ದಾರೆ." (ಜಾತಕ ಮತ್ತು ಜಾತಕ ಕಥೆಗಳು, ಸಂ.೬, ಪ್ರ. ಪು.೧೫).

ಅನುವಾದಗೊಂಡು ಕನ್ನಡಕ್ಕೆ ಬಂದ ಭಾರತೀಯ ಜನಪದ ಕಥೆಗಳು:

ನೇರವಾಗಿ ಭಾರತೀಯ ಜನಪದ ಕಥೆಗಳ ಸಂಗ್ರಹದ ಕೃತಿಗಳಲ್ಲಿ ಜಿ.ಪಿ.ರಾಜರತ್ನಂ ಅವರು ಇಂಗ್ಲೀಷ ಮೂಲದಿಂದ ಅನುವಾದಿಸಿ ಕೊಟ್ಟ ಕೃತಿ **'ಕಾಶ್ಮೀರದ ಹಳ್ಳಿಯ ಕತೆಗಳು'** ೧೯೪೯ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಕಾಶ್ಮೀರದ ಏಳು ಜನಪದ ಕಥೆಗಳಿವೆ. ಇದನ್ನು ಹಿಂದ್ ಕಿತಾಬ್ಸ್ ಲಿಮಿಟೆಡ್ ಬೊಂಬಾಯಿಯ ಬೆಂಗಳೂರು ಶಾಖೆ ಮುದ್ರಿಸಿದೆ. ನನ್ನ ಕೈಗೆ ಸಿಕ್ಕ ಭಾರತದ ಕಥೆಗಳ ಅತ್ಯಂತ ಹಳೆಯ ಕೃತಿ ಇದು. ಇದರಲ್ಲಿ ಜಗತ್ಪಸಿದ್ಧವಾದ ಆರ್ನೆ-ಥಾಮ್ಸನ್ ಕಥಾಮಾದರಿ ಸೂಚಿಯಲ್ಲಿ ನಮೂದಾದ ನಾಲ್ಕು ಕಥೆಗಳಿರುವುದು ಗಮನಾರ್ಹ. ಯಕ್ಷಿಣಿಯ ಉಂಗುರ (ಮಾದರಿ ೫೬೦), ಚಿಪ್ಪಿಗನೂ ಭೂತಗಳೂ (ಮಾದರಿ ೧೧೫೪), ಕತೆ ಹೇಳುವವನೂ ಅವನ ಐದು ಸೂತ್ರಗಳೂ (ಮಾದರಿ ೯೧೦ಕೆ), ವಜೀರನ ಮಗ (ಮಾದರಿ ೫೧೬ಎ) ಈ ಕಥೆಗಳು ಪ್ರಪಂಚದ ತುಂಬ ಪ್ರಸಿದ್ಧವಾದ ಕಥೆಗಳಾಗಿವೆ.

೧೯೬೭ ರಲ್ಲಿ ಪ್ರಕಟವಾದ **'ಇಂಡಿಯಾದ ಜನಪದ ಕಥೆಗಳು'** ಎಂಬ ಸಂಕಲನವೊಂದು ನನ್ನ ಮುಂದಿದೆ. ಇದು ನಾಲ್ಕನೇ ಭಾಗವೆಂದು ಕೃತಿಯ ಮುಖಪುಟದ ಮೇಲೆ ಮುದ್ರಣಗೊಂಡಿದೆ. ಇನ್ನೂ ಮೊದಲಿನ ಮೂರು ಭಾಗಗಳು ನನಗೆ ದೊರಕಿಲ್ಲ. ಈ ಕೃತಿಯಲ್ಲಿಯ ಕಥೆಗಳನ್ನು ಮಧ್ಯಭಾರತದ ಗುಡ್ಡಗಾಡುಗಳಲ್ಲಿ ವಾಸವಾಗಿರುವ ಆದಿವಾಸಿಗಳಿಂದ ಡಾ. ವೆರಿಯರ್ ಎಲ್ವಿನ್ ಅವರು ಸಂಗ್ರಹಿಸಿ, 'ಮಹಾ ಕೋಶಲದ ಜನಪದ ಕಥೆಗಳು' ಎಂಬ ಬೃಹತ್ ಸಂಪುಟವನ್ನು ೧೯೪೪ರಲ್ಲಿ ಪ್ರಕಟಿಸಿದ್ದಾರೆಂದು ಗೊತ್ತಾಗುತ್ತದೆ. ಅಲ್ಲಿಂದ ೧೦ ಕಥೆಗಳನ್ನು ಆಯ್ದು ಪ್ರಸ್ತುತ ಸಂಕಲನದಲ್ಲಿ ಅನುವಾದಿಸಿ ಕೊಡಲಾಗಿದೆ. ಹೀಗಾಗಿ ಕನ್ನಡಕ್ಕೆ ಬಂದ ಭಾರತದ ಜನಪದ ಕಥೆಗಳಲ್ಲಿ ನಾಲ್ಕೂ ಭಾಗಗಳು ಮುಖ್ಯವೆನಿಸುತ್ತವೆ. ಇಂತಹ ಕೃತಿಗಳನ್ನು ಶೋಧಿಸಿ, ಪುನರ್ ಮುದ್ರಣ ಮಾಡುವ ಅವಶ್ಯಕತೆ ಬಹಳವಿದೆ. ವೆರಿಯರ್ ಎಲ್ವಿನ್ ಅವರು ಇಂಗ್ಲೆಂಡಿನಿಂದ ೧೯೨೭ರಲ್ಲಿ ಭಾರತಕ್ಕೆ ಬಂದು, ಇಲ್ಲಿಯ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಶ್ರಮಿಸಿದವರು. ಅವರು ಸಲ್ಲಿಸಿದ ಸೇವೆಗೆ ಭಾರತ ಸರ್ಕಾರವು ೧೯೬೧ರಲ್ಲಿ 'ಪದ್ಮಭೂಷಣ' ಪ್ರಶಸ್ತಿಯನ್ನಿತ್ತು ಗೌರವಿಸಿತ್ತು. ಇಂಥವರ ಕೃತಿಗಳು ಕನ್ನಡಿಗರ ಕೈಗೆ ಆಗಾಗ ಸಿಗುವಂತೆ ಮಾಡಬೇಕಾದುದು ಸರ್ಕಾರದ ಕರ್ತವ್ಯವಾಗಿದೆ.

೧೯೬೯ರಲ್ಲಿ ಪ್ರಕಟವಾದ **'ಬಿತ್ತಿದ್ದನ್ನು ಬೆಳೆದುಕೋ'** ಎಂಬ ಕೃತಿ ಇನ್ನೊಂದು ಅಪರೂಪದ ಜನಪದ ಕಥೆಗಳ ಸಂಗ್ರಹವಾಗಿದೆ. ಇದರಲ್ಲಿ ಮಧ್ಯಪ್ರದೇಶ ರಾಜ್ಯಕ್ಕೆ ಸೇರಿದ ಬುಂದೇಲಖಂಡದ ೧೧ ಜನಪದ ಕಥೆಗಳನ್ನು ಮ. ಗ. ಶೆಟ್ಟಿ ಅವರು ಅನುವಾದಿಸಿದ್ದಾರೆ. ಬೆಂಗಳೂರಿನ ಮಹಿಳಾ ಕಾರ್ಮಿಕರ ಸಹಕಾರ ಸಂಘ ಅದನ್ನು

ಪ್ರಕಟಿಸಿದೆ. ಅಂದರೆ ನಮ್ಮವರ ಲಕ್ಷ್ಯ ವ್ಯಾಪಕವಾಗಿ ಕಥಾಸಾಹಿತ್ಯದ ಕಡೆ, ಜೊತೆಗೆ ಜನಪದ ಕಥೆಗಳ ಕಡೆಗೂ ಇತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಮೇಲಿನ ಕೃತಿಗಳಂತೆ ನಮ್ಮ ದೇಶದ ಇತರ ರಾಜ್ಯದ ಜನಪದ ಕಥೆಗಳನ್ನು ಕನ್ನಡಕ್ಕೆ ತಂದು ಪ್ರಕಟಿಸುವ ಕೆಲಸ ಮಾಡಿದ್ದು ನ್ಯಾಶನಲ್ ಬುಕ್ ಟ್ರಸ್ಟ್ ಸಂಸ್ಥೆ. ೧೯೭೭ರಲ್ಲಿ **'ಪಂಜಾಬಿನ ಲೋಕ ಕಥೆಗಳು'** ಎಂಬ ಜನಪದ ಕಥೆಗಳ ಸಂಗ್ರಹವನ್ನು ಪ್ರಕಟಿಸಿದೆ. ಮೂಲ ಹರ್‌ಭಜನ್ ಸಿಂಗ್ ಅವರ ಕೃತಿಯನ್ನು ಕನ್ನಡಕ್ಕೆ ತಂದವರು ಹೆಚ್.ಎಸ್.ಪಾರ್ವತಿ ಅವರು. ಇಂತಹ ಪ್ರಯತ್ನ ಮುಂದುವರೆಯುತ್ತ ಆಧುನಿಕ ಕಾಲದಲ್ಲೂ ನಡೆದಿರುವುದು ಕಂಡುಬರುತ್ತದೆ. ಭಾರತದ ಪ್ರಸಿದ್ಧ ಪ್ರಾಧ್ಯಾಪಕರು ಎ.ಕೆ.ರಾಮಾನುಜನ್ ಅವರು. ಅವರು ಜನಪದ ಸಾಹಿತ್ಯದ ಬಗೆಗೂ ಆಸಕ್ತಿ ಹೊಂದಿದವರಾಗಿದ್ದರು. ನಮ್ಮ ದೇಶದ ಜನಪದ ಕಥೆಗಳನ್ನು ಬಹಳ ಆಸಕ್ತಿಯಿಂದ ತಾವು ಸ್ವತಃ ಕೆಲವನ್ನು ಸಂಗ್ರಹಿಸಿ, ಮತ್ತೆ ಸ್ನೇಹಿತರಿಂದ, ಪರಿಚಿತರಿಂದ, ತಾವೇ ಸ್ವತಃ ಕ್ಷೇತ್ರಕಾರ್ಯ ಮಾಡಿ, ಹೀಗೆ ೨೨ ಭಾರತೀಯ ಭಾಷೆಗಳಿಂದ ಜನಪದ ಕಥೆಗಳನ್ನು ಆಯ್ದು, ಅವನ್ನೆಲ್ಲ ಇಂಗ್ಲೀಷಿಗೆ ಭಾಷಾಂತರಿಸಿ **'ಫೋಕ್ ಟೇಲ್ಸ್ ಫ್ರಾಮ್ ಇಂಡಿಯಾ'** ಎಂಬ ಹೆಸರಿನಲ್ಲಿ ೧೯೯೧ ರಲ್ಲಿ ಪ್ರಕಟವಾದ ಕೃತಿಯನ್ನು ಶ್ರೀ ಮಹಾಬಲೇಶ್ವರ ರಾವ್ ಅವರು ಕನ್ನಡಸಿದ್ದಾರೆ. ನ್ಯಾಶನಲ್ ಬುಕ್ ಟ್ರಸ್ಟ್ ನಿಂದ ಈ ಕೃತಿ ಪ್ರಕಟವಾದದ್ದು ೨೦೦೦ದಲ್ಲಿ. ೧೦೬ ಕಥೆಗಳ ಈ ಸಂಗ್ರಹದ ಕಥೆಗಳು ಚಿಕ್ಕಚಿಕ್ಕವಾಗಿದ್ದು, ರಾಮಾನುಜನ್ ಅವರ ಆಯ್ಕೆ ಕುತೂಹಲಕರವಾಗಿದೆ. ಎ.ಕೆ.ರಾಮಾನುಜನ್ ಅವರ ಇಂತಹದೇ ಇನ್ನೊಂದು ಕೃತಿ **'ಎ ಫ್ಲಾವರಿಂಗ ಟ್ರೀ'**(೧೯೯೯). ಈ ಕೃತಿಯಲ್ಲಿಯ ಜನಪದ ಕಥೆಗಳೆಲ್ಲ ಕನ್ನಡ ಕಥೆಗಳು. ಅವುಗಳನ್ನು ವಿವಿಧ ಮೂಲಗಳಿಂದ ಆಯ್ದುಕೊಂಡು, ಇಂಗ್ಲೀಷಿಗೆ ಅನುವಾದಿಸಿ, ಪ್ರಕಟಿಸಿದ ಕೃತಿ ಅದು. ಈ ಕೃತಿಯಲ್ಲಿಯ ೭೧ ಜನಪದ ಕಥೆಗಳನ್ನು ಪ್ರೊ. ಕರೀಗೌಡ ಬೀಚನಹಳ್ಳಿ ಅವರು ಕನ್ನಡಸಿ, **'ಕಥೆ ಮತ್ತು ಹಾಡು'** ಎಂಬ ಹೆಸರಿನಲ್ಲಿ ೨೦೦೩ ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಇದು ಭಾರತೀಯ ಜನಪದ ಕಥೆಗಳು ಕನ್ನಡಕ್ಕೆ ಬಂದ ಚರಿತ್ರೆಯಾಗಿದೆ.

ಎ.ಕೆ.ರಾಮಾನುಜನ್ ಅವರ ಎರಡೂ ಕಥೆಗಳ ಸಂಗ್ರಹಗಳಲ್ಲಿಯ ಕಥೆಗಳನ್ನು ಗಮನಿಸಿದರೆ, ಅವರಿಗೆ ಚಿಕ್ಕ ಚಿಕ್ಕ ಕಥೆಗಳು, ನವಿರಾದ ಹಾಸ್ಯ, ಸಾಮಾನ್ಯ ನೀತಿ ಬೋಧಕ ಕಥೆಗಳು ಹೆಚ್ಚು ಹಿಡಿಸಿವೆ ಎಂದು ತೋರುತ್ತದೆ. ರಮ್ಯ ಕಥೆಗಳು, ಕಿನ್ನರ ಕಥೆಗಳು, ಒಗಟಿನ ರೂಪದಲ್ಲಿರುವ ಕಥೆಗಳು, ಮಾಟದ ಕಥೆಗಳು, ಗಂಡ–ಹೆಂಡತಿ, ಅತ್ತೆ–ಅಳಿಯ ಇಂಥವರಿಗೆ ಸಂಬಂಧಿಸಿದ ಬಲಿತ ಹಾಸ್ಯ ಹಾಗೂ ಶೃಂಗಾರ ಕಥೆಗಳು, ಅವರ ಆಯ್ಕೆಯಲ್ಲಿ ಅತ್ಯಲ್ಪ. ಸಂಕೀರ್ಣ ಜನಪದ ಕಥೆಗಳನ್ನು ಸಂಪೂರ್ಣವಾಗಿ ಅವರು ದೂರ ಇಟ್ಟು ಆದಷ್ಟು ಸರಳ ಕಥೆಗಳನ್ನು ಆಯ್ಕೆಮಾಡಿಕೊಂಡಿದ್ದಾರೆ. ಹೀಗಾಗಿ ಅವರ ದೃಷ್ಟಿಯಲ್ಲಿ ಅಂತರಾಷ್ಟ್ರೀಯ ದೃಷ್ಟಿ ಇದ್ದು, ಅವರು ಆಯ್ಕೆ ಮಾಡಿದ ಭಾರತದ ಕಥೆಗಳು ಮುಖ್ಯವಾಗಿ ಸರಳವಾದ ಸ್ವರೂಪದಲ್ಲಿದ್ದು, ಕರ್ನಾಟಕದಿಂದ, ಭಾರತದಿಂದ ಹೊರಗಿರುವ ಇತರ ರಾಜ್ಯಗಳ, ದೇಶಗಳ ಆಸಕ್ತರಿಗೆ ಸರಳವಾಗಿ ಕನ್ನಡದ ಜನಪದ ಕಥೆಗಳು ಮುಟ್ಟಲಿ ಎಂಬ ಉದ್ದೇಶ ಅವರದಾಗಿರುವಂತೆ ತೋರುತ್ತದೆ.

ಅನುವಾದಗೊಂಡು ಕನ್ನಡಕ್ಕೆ ಬಂದ ಹೊರದೇಶದ ಕಥೆಗಳು :

ಭಾರತದಲ್ಲಿ ಪ್ರಚಲಿತದಲ್ಲಿರುವ ಜನಪದ ಕಥೆಗಳು, ಪುರಾಣ ಕಥೆಗಳು, ಧಾರ್ಮಿಕ ಕಥೆಗಳು, ಕಾವ್ಯ ಕಥೆಗಳು ಇವೆಲ್ಲವೂ ನಮ್ಮಲ್ಲಿ ಮುದ್ರಣ ವ್ಯವಸ್ಥೆ ಬಂದಕೂಡಲೇ ಪ್ರಕಟವಾಗಲು ತೊಡಗಿರುವುದು ಕಂಡುಬರುತ್ತದೆ. ಆ ಚರಿತ್ರೆ ನಮಗೆ ಸ್ವಾತಂತ್ರ್ಯ ಪೂರ್ವ ದಿಂದಲೂ ದೊರೆಯುವುದನ್ನು ಗಮನಿಸುತ್ತೇವೆ. ಹೇಗೆ ನಮ್ಮ ದೇಶದ ಬೇರೆ ಬೇರೆ ಪ್ರದೇಶ, ಬೇರೆ ಬೇರೆ ಭಾಷೆಯ ಕೃತಿಗಳಿಂದ ಜನಪದ ಕಥೆಗಳು ಕನ್ನಡಕ್ಕೆ ಬಂದವೋ ಹಾಗೆಯೇ ಹೊರದೇಶದ ಜನಪದ ಕಥೆಗಳು, ವಿಶೇಷವಾಗಿ ಇಂಗ್ಲೀಷಿನಲ್ಲಿ ಪ್ರಕಟವಾದ ಕೃತಿಗಳಲ್ಲಿ ಲಭ್ಯವಾಗಿದ್ದವೋ ಅಂತಹ ಕಥೆಗಳು ಇಂಗ್ಲೀಷಿಗೆ ತರ್ಜುಮೆಯಾಗಿ ಕನ್ನಡಕ್ಕೆ ಹರಿದುಬಂದ ಇತಿಹಾಸವನ್ನು ನಾವು ಗಮನಿಸಬೇಕಾಗಿದೆ.

ಮುದ್ರಣ ಮಾಧ್ಯಮ ಇಲ್ಲದಾಗ ಜನಪದ ಕಥೆಗಳು ದೇಶಪರ್ಯಟನವನ್ನು ಹೇಗೆ ಮಾಡಿದವು? ಎಂಬ ಚರ್ಚೆಯಲ್ಲಿ ಬಹುಮುಖ್ಯವಾಗಿ– ಕೈಬರಹದ ಪ್ರತಿಯ ಮೂಲಕ; ಯಾತ್ರಿಕರು, ಸೈನಿಕರು ಮತ್ತು ಧರ್ಮಪ್ರಚಾರಕರ ಮೂಲಕ ಅವೆಲ್ಲ ಪರ್ಯಟನ ಮಾಡಿದವೆಂದು ನಮಗೆ ಗೊತ್ತಾಗುತ್ತದೆ. ಈಗ ಹೊರದೇಶದ ಜನಪದ ಕಥೆಗಳು ನಮ್ಮಲ್ಲಿ ಮುದ್ರಣ ವ್ಯವಸ್ಥೆ ಬಂದ ನಂತರ ಹೇಗೆ ಕನ್ನಡಕ್ಕೆ ಕಾಲಿಟ್ಟವು ಎಂಬುದನ್ನು ಗಮನಿಸಬಹುದಾಗಿದೆ.

ನನ್ನ ಕೈಗೆ ದೊರಕಿರುವ ಕೃತಿಗಳನ್ನು ಗಮನಿಸಿ ಹೇಳುವುದಾದರೆ ಈಗಾಗಲೇ ಉಲ್ಲೇಖ ಮಾಡಿರುವ ಜಿ.ಪಿ.ರಾಜರತ್ನಂ ಅವರ **'ಪಂಡಿತನ ನೆರಳು'** ಎಂಬ ಕಥಾಗುಚ್ಛ ನಾಲ್ಕು ಹೊರದೇಶದ ಕಥೆಗಳನ್ನು ಹೊತ್ತು ಕನ್ನಡಕ್ಕೆ ಬಂದ ಮೊದಲನೇ ಕೃತಿಯಾಗಿದೆ. ಇದು ಪ್ರಕಟವಾದುದು ೧೯೪೬ನೇ ವರ್ಷದಲ್ಲಿ; ಸ್ವಾತಂತ್ರ್ಯಪೂರ್ವದಲ್ಲಿ. ಇದರಲ್ಲಿ 'ಮೊದಲನೆ ಕಥೆ ಜಾರ್ಜಿಯಾದೇಶದ ಜನಪದ ಸಾಹಿತ್ಯದಿಂದ ಎತ್ತಿಕೊಂಡು ಬರೆದದ್ದು; ಉಳಿದ ಮೂರು ಹ್ಯಾನ್ಸ್ ಕ್ರಿಶ್ಚನ್ ಆ್ಯಂಡರ್ಸನ್ ಎಂಬವನ ಮೂರು ಕತೆಗಳ ಅನುವಾದ' (ಪಂಡಿತನ ನೆರಳು,ಪು.೩). ಆ್ಯಂಡರ್ಸನ್ (೧೮೦೫–೧೮೭೫) ಡೆನ್ಮಾರ್ಕ್ ದೇಶದವನು. ಅಂದರೆ ಜಾರ್ಜಿಯಾ ದೇಶದ ಒಂದು ಕತೆ, ಡೆನ್ಮಾರ್ಕ್ ದೇಶದ ಮೂರು ಜನಪದ ಕಥೆಗಳ ಸಂಗ್ರಹವನ್ನು ಮೊದಲಿಗೆ ಕೊಟ್ಟ ಕೀರ್ತಿ ರಾಜರತ್ನಂ ಅವರಿಗೆ ಸಲ್ಲುತ್ತದೆ. ಮಕ್ಕಳಿಗಾಗಿ ತುಂಬ ಸ್ವಾರಸ್ಯಕರವಾಗಿ ಬರೆದ ಕಥೆಗಳ ಗುಚ್ಛ ಇದಾಗಿದೆ. ಈ ಕಥೆಗಳ ಮಹತ್ವವನ್ನು ಕುರಿತು ರಾಜರತ್ನಂ ಅವರು ಹೀಗೆ ಬರೆಯುತ್ತಾರೆ: 'ಚಿಕ್ಕ ಮಕ್ಕಳು ಈ ಕತೆಗಳನ್ನು ಓದಿದರೆ ಮನಸ್ಸಿಗೆ ರಂಜನೆಯಾಗುತ್ತದೆ. ಇದನ್ನೇ ದೊಡ್ಡವರು ಓದಿದರೆ, ಇಲ್ಲಿನ ಘಟನೆಗಳನ್ನು ತಮ್ಮ ಸುತ್ತುಮುತ್ತಿನ ಜನರ ನಡೆನುಡಿಗಳಿಗೆ ಅನ್ವಯಿಸಿಕೊಂಡು, ಅದರಿಂದ ಲೋಕನೀತಿಯನ್ನು ಸಂಗ್ರಹಿಸಬಹುದು; ಬದುಕಿನಲ್ಲಿ ಇಂದ್ರಿಯಗಳಿಗೆ ಗೋಚರವಾದುದು ಅಷ್ಟೇ ಅಲ್ಲದೆ ಅತೀಂದ್ರಿಯವಾದುದೂ ಒಂದು ಉಂಟೆಂಬ ನಂಬಿಕೆ ಸರ್ವದೇಶಕ್ಕೂ ಸಾಮಾನ್ಯವೆಂಬುದನ್ನೂ ಕಾಣಬಹುದು; ಪರದೇಶದ ಉತ್ಕೃಷ್ಟ ಕವಿಯ ಮನೋಧರ್ಮ ಸ್ವದೇಶದ ಉತ್ಕೃಷ್ಟ ಕವಿಯ ಮನಸ್ಸಿನಂತೆಯೇ ವಿಶ್ವಸ್ಪರ್ಶಿ ಎಂಬುದನ್ನೂ ಕಾಣಬಹುದು' (ಪಂಡಿತನ ನೆರಳು, ಪು.೪). ರಾಜರತ್ನಂ ಅವರು ಅನುವಾದಿಸಿದ

ಜನಪದ ಕಥೆಗಳ ಇನ್ನೊಂದು ಸಂಗ್ರಹ **'ಚಿಕ್ಕಮಕ್ಕಳ ಏಸಾಪ್'** ಎಂಬ ಕೃತಿಯಲ್ಲಿ ೩೦ ಕಥೆಗಳಿವೆ. ಇದು ಪ್ರಕಟವಾದುದು ೧೯೬೦. ಬಹುಶಃ ಈ ಕಾಲದಿಂದಲೇ ಪ್ರಕಟವಾಗಲು ತೊಡಗಿದ, ಆದರೆ ಅನುವಾದಕರ ಹೆಸರು ಇಲ್ಲದ ಮತ್ತು ಪ್ರಕಟನೆಯ ವರ್ಷವಿಲ್ಲದ ಗದಗ ಮೂಲದಿಂದ ಪ್ರಕಟವಾದ ಒಂದು ಕೃತಿ **'ಈಸಪನ ನೀತಿ ಕಥೆಗಳು'** ಎಂಬುದರಲ್ಲಿ ೯೮ ಕಥೆಗಳಿರುವುದು ಗಮನಾರ್ಹ.

ಕನ್ನಡಕ್ಕೆ ಭಾರತದ ನಾನಾ ಭಾಷೆಗಳ ಲಿಖಿತ ಮೂಲಗಳಿಂದ ಕಥೆಗಳು ಬಂದದ್ದು ಹೆಚ್ಚಿಗೆ. ಬುದ್ಧನ ಜಾತಕದ ಕಥೆಗಳು, ಜೈನರ ಧಾರ್ಮಿಕ ಕಥೆಗಳು, ವೈದಿಕರ ಪುರಾಣ ಕಥೆಗಳು ಸಾಕಷ್ಟು ಪ್ರಮಾಣದಲ್ಲಿ ಕನ್ನಡಕ್ಕೆ ಬಂದಿವೆ. ಆದರೆ ಭಾರತದ ಬೇರೆ ಬೇರೆ ಪ್ರದೇಶ, ಬೇರೆ ಬೇರೆ ಭಾಷೆಗಳ ಮೌಖಿಕ ಜನಪದ ಕಥೆಗಳು ಕನ್ನಡಕ್ಕೆ ಬಂದುದು ತೀರ ಕಡಿಮೆ. ಹೊರದೇಶದ ಜನಪದ ಕಥೆಗಳು ಲಿಖಿತ ಪರಂಪರೆಯ ಮೂಲದಿಂದ ಕನ್ನಡಕ್ಕೆ ಬಂದುದು ಹೆಚ್ಚಾಗಿದೆ.

೧೮೧೨ರಲ್ಲಿ ಜರ್ಮನಿಯ ಗ್ರಿಮ್ ಸಹೋದರರು 'ಹೌಸ್ ಹೋಲ್ಡ ಟೇಲ್ಸ್' ಎಂಬ ಹೆಸರಿನಲ್ಲಿ ಜನಪದ ಕಥೆಗಳನ್ನು ಪ್ರಕಟಿಸಿ ಒಂದು ಇತಿಹಾಸವನ್ನೇ ನಿರ್ಮಿಸಿದರು. ಇವತ್ತು ಗ್ರಿಮ್ ಸಹೋದರರ ಕಥೆಗಳು ಪಂಚತಂತ್ರದ ಕಥೆಗಳಂತೆ ಪ್ರಪಂಚ ಪರ್ಯಟನ ಮಾಡಿವೆ. ಆಶ್ಚರ್ಯವೆಂದರೆ ಅವು ಕನ್ನಡಕ್ಕೂ ಬಂದಿವೆ. ಜಿ.ಪಿ.ರಾಜರತ್ನಂ ಅವರ ಹೆಚ್ಚು ಕೃತಿಗಳನ್ನು ಪ್ರಕಟಿಸಿದ ಸತ್ಯಶೋಧನ ಪ್ರಕಟನ ಮಂದಿರ (ಕೋಟೆ, ಬೆಂಗಳೂರು) ಈ ಪ್ರಕಾಶನ ಸಂಸ್ಥೆಯವರೇ ಕನ್ನಡಕ್ಕೆ ತರ್ಜುಮೆಗೊಂಡ ಗ್ರಿಮ್ ಸಹೋದರರ ಜನಪದ ಕಥೆಗಳ ಪ್ರಮಾಣ ಹೆಚ್ಚಿಗಿದೆ. ಈ ಎಲ್ಲ ಕಥೆಗಳನ್ನು ಕನ್ನಡಿಸಿದವರು ಎಂ. ರಾಮರಾವ್ ಅವರು. ಆ ಕೃತಿಗಳ ಹೆಸರುಗಳನ್ನು ಇಲ್ಲಿ ಕ್ರಮವಾಗಿ ಉಲ್ಲೇಖಿಸುವುದು ಅವಶ್ಯವೆನಿಸುತ್ತದೆ:

ಅ.ಸಂ. ಕೃತಿ	ಪ್ರಕಟನ ವರ್ಷ	ಕಥೆಗಳ ಸಂಖ್ಯೆ
೧. ಮಂಜಿನ ಮಣಿ	೧೯೪೭	೧೧
೨. ಜೀವರಸ	೧೯೪೭	೦೮
೩. ಚಿಪ್ಪಿಗನ ಸಾಹಸ,	೧೯೪೭	೧೨
೪. ಜಲದೇವತೆ	೧೯೪೯	೧೦
೫. ಸೇವಕರತ್ನ	೧೯೫೦	೦೫
೬. ಶಕ್ತಿಪುರುಷ	೧೯೫೧	೦೫
೭. ವನಮಂದಿರ	೧೯೫೩	೧೦
೮. ಎಲ್ಲೂ ಇಲ್ಲದ ಊರು	೧೯೫೬	೫೦
೯. ನೀಲಿಯ ದೀಪ	೧೯೬೦	೧೨
೧೦. ಗಾಜಿನ ಚೆಂಡು	೧೯೬೫	೧೨

ಒಟ್ಟು ಕಥೆಗಳು – ೧೩೫

೧೯೪೭ರಲ್ಲಿ ಪ್ರಾರಂಭವಾದ ಈ ಕೃತಿಗಳ ಪ್ರಕಟಣೆ ಸತತವಾಗಿ ಇಪ್ಪತ್ತು ವರ್ಷಗಳ ವರೆಗೆ ನಡೆದಿರುವುದು ಸ್ತುತ್ಯರ್ಹಪ್ರಯತ್ನ ಎನ್ನಬೇಕು. ಇವುಗಳಲ್ಲಿ ಕೆಲವು ಕಥೆಗಳು ೧೯೪೭ಕ್ಕಿಂತ ಮುಂಚಿನಿಂದಲೇ ಪಠ್ಯಪುಸ್ತಕಗಳಲ್ಲಿ ಬೆಳಕು ಕಂಡಿದ್ದವು ಎಂದು ಅಲ್ಲಲ್ಲಿ ಟಿಪ್ಪಣಿ ಬರೆದಿರುವುದು ಕಂಡುಬರುತ್ತದೆ. ಹೀಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಈ ಕಥೆಗಳ ಅನುವಾದ ಮತ್ತು ಪ್ರಕಟಣೆ ಪ್ರಾರಂಭವಾದ ಇತಿಹಾಸ ನಮಗೆ ದೊರೆತಂತಾಗುತ್ತದೆ.

ಎಂ. ರಾಮರಾವ ಅವರು ೧೯೪೭ಕ್ಕಿಂತ ಏಳೆಂಟು ವರ್ಷಗಳ ಪೂರ್ವದಲ್ಲಿಯೇ ಅನುವಾದ ಕೆಲಸ ಪ್ರಾರಂಭ ಮಾಡಿರುವ ಬಗ್ಗೆ ಮೊದಲನೇ ಕಥಾಸಂಕಲನ **'ಚಿಪ್ಪಿಗನ ಸಾಹಸ'**ದಲ್ಲಿ ಬರೆದುಕೊಂಡಿದ್ದಾರೆ. ಅಂದರೆ ಅವರು ಅನುವಾದದ ಕೆಲಸ ಪ್ರಾರಂಭ ಮಾಡಿರುವದು ೧೯೪೦ರ ಸುತ್ತಮುತ್ತ ಎಂದಿಟ್ಟುಕೊಳ್ಳಬಹುದಾಗಿದೆ. ಸತ್ಯಶೋಧನ ಪ್ರಕಟನ ಮಂದಿರದ ಒಡೆಯರು ನಿಟ್ಟೂರು ಶ್ರೀನಿವಾಸರಾಯರು. ಎಂ. ರಾಮರಾವ ಅವರು ಗ್ರೀಮ್ ಸಹೋದರರ ಕಥೆಗಳ ಸಂಗ್ರಹದ ಬಗ್ಗೆ, ತಾವು ಅನುವಾದ ಮಾಡುತ್ತಿರುವ ಉದ್ದೇಶದ ಬಗ್ಗೆ ಏನೂ ಹೇಳಿಕೊಂಡಿಲ್ಲ. ಅದರೆ ಈ ಕಥೆಗಳಲ್ಲಿಯ ಪಾತ್ರಗಳ ಹೆಸರುಗಳನ್ನು, ವಾತಾವರಣವನ್ನು ಕನ್ನಡಕ್ಕೆ ಹೊಂದಿಕೊಳ್ಳುವಂತೆ ಅಲ್ಲಲ್ಲಿ ಬದಲಾಯಿಸಿಕೊಂಡ ಬಗ್ಗೆ ಬರೆದುಕೊಂಡಿದ್ದಾರೆ. ಅವರ ಮೊದಲ ಸಂಗ್ರಹವಾದ 'ಮಂಜಿನ ಮಣಿ' (ಈ ಕೃತಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಎಪ್ರಿಲ್, ೧೯೪೭ರಲ್ಲಿ ಪ್ರಕಟವಾಗಿ ಹೊರಬಂದಿದೆ.) ಅನುವಾದಕರ ಬಿನ್ನಹದಲ್ಲಿ ಹೀಗೆ ಬರೆದುಕೊಂಡಿದ್ದಾರೆ– 'ಜರ್ಮನಿ ದೇಶದ ಪ್ರಖ್ಯಾತ ಜನಪದ ಕಥಾಸಂಗ್ರಾಹಕರಾದ ಗ್ರಿಮ್ ಸಹೋದರರ ಹನ್ನೊಂದು ಕತೆಗಳ ಕನ್ನಡ ಅನುವಾದವನ್ನು ಮುಂದೆ ಕೊಟ್ಟಿದ್ದೇನೆ. ಅಚ್ಚಿನಲ್ಲಿರುವ ಇನ್ನೆರಡು ಹೊತ್ತಿಗೆಗಳು ಹೊರಬಿದ್ದಾಗ ಗ್ರಿಮ್ ಕತೆಗಳ ಪರಿಚಯ ನಮ್ಮ ನಾಡಿನ ಬಾಲಕ ಬಾಲಕಿಯರಿಗೆ ಸಾಕಷ್ಟು ದೊರೆಯುವುದೆಂದು ನಂಬಿದ್ದೇನೆ. ಪಾಶ್ಚಾತ್ಯ ದೇಶಗಳಲ್ಲಿ ಈ ಕತೆಗಳನ್ನು ಓದದ ಹುಡುಗರು ಅಪರೂಪ. ಸಣ್ಣವರ ಕಣ್ಣಿಗೆ ಆಕರ್ಷಕವಾಗುವಂತೆ ಬಣ್ಣಬಣ್ಣದ ಚಿತ್ರಗಳಿಂದ ತುಂಬಿದ ಅಗ್ಗವಾದ ಅಸಂಖ್ಯಾತ ಪುಟ್ಟ ಪುಸ್ತಕಗಳು ಮಕ್ಕಳಿಗಾಗಿಯೇ ಅಲ್ಲಿ ತಯಾರಾಗುತ್ತವೆ. ಇಂಗ್ಲೆಂಡಿನಲ್ಲಿ ಪ್ರಕಟವಾಗಿರುವ ಶಿಶುಸಾಹಿತ್ಯದ ಸಚಿತ್ರಗ್ರಂಥಗಳನ್ನು ನೋಡಿದಾಗ ಎಂದು ಇಂತಹ ಕನ್ನಡ ಪುಸ್ತಕಗಳು ನಮ್ಮ ಕಿರಿಯರ ಕೈಸೇರುವುದು? ಎಂಬ ಈರ್ಷೆ ಮೂಡುತ್ತದೆ.' (ಬಿನ್ನಹ). ಅಂದರೆ ತಾವು ಹೊರದೇಶದ ಜನಪದ ಕಥೆಗಳನ್ನು ಅನುವಾದ ಮಾಡುತ್ತಿರುವುದು ಮಕ್ಕಳಿಗಾಗಿ ಎಂಬ ಅಭಿಪ್ರಾಯವನ್ನು ಎಂ. ರಾಮರಾವ ಅವರು ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾರೆ.

೧೯೫೩ರಲ್ಲಿ ಪ್ರಕಟವಾದ 'ವನಮಂದಿರ' ಕಥಾಸಂಕಲನದ ಕೊನೆಯ ಪುಟದಲ್ಲಿ ಹೀಗೆ ಕೆಲವು ಸಾಲುಗಳು ಪ್ರಕಟವಾಗಿವೆ. ಮೇಲೆ ಇಲ್ಲಿಯವರೆಗೆ ಪ್ರಕಟವಾದ ರಾಮರಾವ ಅವರ ಪುಸ್ತಕಗಳ ಪಟ್ಟಿ ಕೊಟ್ಟು, ಕೆಳಗಡೆ ಹೀಗೆ ವಿವರಿಸಲಾಗಿದೆ: 'ನಿಮ್ಮ ಮಕ್ಕಳಿಗೆ ಯೋಗ್ಯವೂ ಉಪಯುಕ್ತವೂ ಆದ ಉಡುಗೊರೆಯನ್ನು ಕೊಡಲು ಇಷ್ಟಪಡುವಿರೇನು? ಅವರ ಕಲ್ಪನಾಶಕ್ತಿ ಹದವಾಗಿ ಬೆಳೆಯಬೇಕೆಂದು ಬಯಸುವಿರೇನು? ಅವರ ವಾಚನಾಭಿರುಚಿ

ನಿರಾಯಾಸವಾಗಿ, ಸ್ವಯಂಪ್ರೇರಿತವಾಗಿ ಸಮರ್ಪಕವಾಗಿ ವೃದ್ಧಿಹೊಂದಬೇಕೆಂದು ಅಪೇಕ್ಷಿಸುವಿರೇನು? ಇಡಿ ಜಗತ್ತಿನ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸುವಿಖ್ಯಾತವಾಗಿರುವ ಹಲವಾರು ಕತೆಗಳ ಪರಿಚಯ ಅವರಿಗೆ ಲಭಿಸಬೇಕೆಂದು ಆಶಿಸುವಿರೇನು? ಹಾಗಾದರೆ, ನಿಮ್ಮ ಮನೆಗಳಲ್ಲೂ ನಿಮ್ಮ ಶಾಲೆಗಳಲ್ಲೂ ಮೇಲ್ಕಂಡ ಪುಸ್ತಕಗಳು ಇದ್ದೇ ಇರಬೇಕು. ಮಕ್ಕಳಿಗೆ ಸಕ್ಕರೆಯಂತೆ ಪ್ರಿಯವಾದ ಅದ್ಭುತ ರಮ್ಯ ಕತೆಗಳಿವು. ನಮ್ಮ ಸಮಾಜದ ರೀತಿ ನೀತಿಗಳಿಗೆ ಹೊಂದಿಕೆಯಾಗುವಂತೆ ಮಾರ್ಪಾಟಾಗಿರುವುದು ಈ ಕತೆಗಳ ವೈಶಿಷ್ಟ್ಯ.' (ವನಮಂದಿರ, ೧೯೫೩). ಇಲ್ಲಿಯೇ ಕೃತಿಯ ಬೆನ್ನುಪುಟಕ್ಕೆ ಈ ಸಂಗ್ರಹಗಳ ಮಹತ್ವವನ್ನು ಕುರಿತು ಹೇಳುವ, ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾದ ಕೆಲ ಸಾಲುಗಳನ್ನು ಪ್ರಕಟಿಸಿದ್ದಾರೆ: 'ಮಕ್ಕಳಿಗೆ ರುಚಿಸುವ ಸಾಹಿತ್ಯ ಸಾಕಷ್ಟು ಹುಲುಸಾಗಿ ಬೆಳೆಯದಿದ್ದ ಕನ್ನಡದಲ್ಲಿ ಇತರ ಪ್ರಾಂತ್ಯಗಳ, ದೇಶಗಳ, ಕಥೆಗಳಿಗೆ ಕನ್ನಡದುಡಿಗೆ ತೊಡಿಸಿದುದರಿಂದ ನಾಡಿನ ಮಕ್ಕಳಿಗೆ ಉಪಕಾರ ಮಾಡಿದಂತಾಗುತ್ತದೆ. ....ಗ್ರಿಮ್ ಸಹೋದರರ ಕತೆಗಳನ್ನು ಕನ್ನಡ ಕಂದಗಳಿಗೆ ಶ್ರೀ ರಾಮರಾಯರು ತಿಳಿಗನ್ನಡದಲ್ಲಿ ಬಣ್ಣಗುಂದದಂತೆ ಕನ್ನಡಿಸಿದ್ದಾರೆ. ಈ ಕಥೆಗಳನ್ನು ಶಲಾಮಕ್ಕಳೂ ಅವರ ಹೆತ್ತವರು ಸಹ ಓದಿ ಆನಂದಪಡುವರೆಂದು ನಮಗೆ ಭರವಸೆಯಿದೆ.' ಮುಂದೆ ಇನ್ನೂ ಐದಾರು ಪತ್ರಿಕೆಗಳಲ್ಲಿ ಬಂದ ಅಭಿಪ್ರಾಯಗಳನ್ನು ಪ್ರಕಟಿಸಿದ್ದು, ಅವೆಲ್ಲ ಸುಮಾರಾಗಿ ಇದೇ ಅಭಿಪ್ರಾಯವನ್ನೇ ಹೊಂದಿವೆ.

ಶ್ರೀ ಎಂ. ರಾಮರಾಯ ಅವರು ಸ್ವತಃ ಹೊಂದುವ ಅಭಿಪ್ರಾಯವನ್ನೇ ಪತ್ರಿಕೆಗಳೂ ಹೊಂದಿವೆ, ಪ್ರಕಾಶನ ಸಂಸ್ಥೆಯೂ ಹೊಂದಿದೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಪ್ರಕಟವಾಗದ ಕಾಲದಲ್ಲಿ ಈ ಕತೆಗಳು ಪ್ರಕಟವಾಗಿ ಆ ಕೊರತೆಯನ್ನು ಅಲ್ಪಮಟ್ಟಿಗೆ ನೀಗಿಸಿವೆ. ಮುಖ್ಯವಾಗಿ ಜನಪದ ಕಥೆಗಳು ಮಕ್ಕಳ ಸಾಹಿತ್ಯ, ಇವುಗಳ ಮುಖ್ಯ ಉದ್ದೇಶ ಮಕ್ಕಳಿಗೆ ಮನರಂಜನೆಯನ್ನು ಕೊಡುವುದು. ದೊಡ್ಡವರೂ ಓದಿ ಸಂತೋಷ ಪಡಬಹುದು. ನಮ್ಮ ಸಮಾಜದ ರೀತಿ ನೀತಿಗಳನ್ನು ತಿಳಿಯಬಹುದು. ಇಷ್ಟು ಸುಮಾರಾಗಿ ಅನುವಾದಗೊಂಡು ಬರುತ್ತಿರುವ ಜನಪದ ಕಥೆಗಳ ಬಗ್ಗೆ ಇರುವ ಆಗಿನ ಕಾಲದ ಗ್ರಹಿಕೆಯಾಗಿದೆ.

ಕೊನೆಯ ಸಂಗ್ರಹ **'ಗಾಜಿನ ಚೆಂಡು'** (೧೯೬೫) ಪ್ರಕಟವಾಗುವಾಗ ಕಥೆಗಳ ಅನುವಾದ ಮತ್ತು ಅವುಗಳ ಕೃತಿಗಳ ಪ್ರಕಟನೆ ಪ್ರಾರಂಭವಾಗಿ ೨೦-೨೫ ವರ್ಷಗಳು ಕಳೆದು ಹೋಗಿವೆ. ಎಂ.ರಾಮರಾವ ಅವರ ಅಭಿಪ್ರಾಯ ಬರಬರುತ್ತ ಹೆಚ್ಚು ಸ್ಪಷ್ಟವಾಗುತ್ತ ಹೋಗಿದೆ. ಇದು ಜನಪದ ಕಥೆಗಳ ಮಹತ್ವದ ಗ್ರಹಿಕೆಗೆ ಸಂಬಂಧಿಸಿದಂತೆ ಕಂಡುಬರುವ ಮಾರ್ಪಾಟಾಗಿದೆ. ಅವರ ಅಭಿಪ್ರಾಯ ಈಗ ಹೀಗಾಗಿದೆ: 'ಗ್ರೀಮ್ ಸಹೋದರರು ಸಂಗ್ರಹಿಸಿ ಜಗತ್ತಿಗೆ ನೀಡಿದ ಕತೆಗಳು ಜರ್ಮನಿ ದೇಶದ ರೈತರಲ್ಲೂ ಇತರರಲ್ಲೂ ಪ್ರಚಾರದಲ್ಲಿದ್ದ ಜಾನಪದ ಕತೆಗಳು. ಅವು ಎಲ್ಲ ವಯಸ್ಸಿನ ಮಕ್ಕಳ ಮನಗಳನ್ನೂ ಸೂರೆಗೊಂಡು ಅವರ ಕಲ್ಪನೆಗೆ ರಸದೂಟವನ್ನು ಒದಗಿಸುವ ಸಾಧನಗಳಾಗಿ ಜಗತ್ತಿನಲ್ಲೆಲ್ಲಾ ಸವಿಖ್ಯಾತವಾಗಿವೆ. ಹಿರಿಯರಿಗೆ ಕೂಡ ಸಂತೋಷದಾಯಕವು ನೀತಿಬೋಧಕವೂ ಆಗಬಲ್ಲ ಅಂಶಗಳು ಅವುಗಳಲ್ಲಿ ಇಲ್ಲದಿಲ್ಲ.' (ಗಾಜಿನ ಚೆಂಡು, ಪೀಠಿಕೆ).

ಎಂ. ರಾಮರಾಯರಿಂದ ಅನುವಾದಗೊಂಡು ಪ್ರಕಟವಾದ ಪಾಶ್ಚಾತ್ಯ ಜನಪದ ಕತೆಗಳ ಇನ್ನೆರಡು ಸಂಗ್ರಹಗಳು ನಮಗೆ ದೊರೆಯುತ್ತವೆ. **'ಚಕ್ರವರ್ತಿಯ ಕೋಗಿಲೆ'** ಎಂಬದು ಹ್ಯಾನ್ಸ್ ಕ್ರಿಶ್ಚಿಯನ್ ಆಂಡರ್‌ಸನ್ ಅವರ ಏಳು ಕಿನ್ನರ ಕತೆಗಳ ಅನುವಾದ ಸಂಗ್ರಹವಾದರೆ, **'ನಾಗಕನ್ನಿಕೆ ಮತ್ತು ಇತರ ಕಥೆಗಳು'** (೧೯೪೯) ಎಂಬುದು ವಿವಿಧ ದೇಶಗಳ ಎಂಟು ಜನಪದ ಕಥೆಗಳ ಸಂಗ್ರಹವಾಗಿದೆ. **'ರಾಜಕುಮಾರನ ಕನಸು'** ಎಂಬುದು ಸರ್ಬಿಯಾ ದೇಶದ ಎರಡು ಕತೆಗಳ ಸಂಗ್ರಹ, ಇನ್ನೊಂದು ಸಂಗ್ರಹದ ಹೆಸರೇ 'ಎರಡು ಕತೆಗಳು'. ಹೀಗೆ ಒಬ್ಬನೇ ಅನುವಾದಕನಿಂದ ಸುಮಾರು ೧೫೦ ರಷ್ಟು ಹೊರದೇಶದ ಕತೆಗಳು ವಿಶೇಷವಾಗಿ ಗ್ರಿಮ್ ಸಹೋದರರ ಕಥೆಗಳು, ಮಕ್ಕಳಿಗಾಗಿ ಕನ್ನಡಕ್ಕೆ ಬಂದುದು ತೀರ ಗಮನಾರ್ಹ ವಿಷಯವೇ ಆಗಿದೆ. ಒಂದು ಕಡೆ ಕನ್ನಡಕ್ಕೆ ಹೊರದೇಶದ ಕಥೆಗಳು ಬಂದುದು, ಇನ್ನೊಂದು ಕಡೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಬೆಳೆಯುತ್ತ ಹೋದುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸಂಗತಿಯೆಂದೇ ಹೇಳಬೇಕು.

ಹೊರದೇಶದ ಜನಪದ ಕಥೆಗಳು ಕನ್ನಡ ಸಾಹಿತ್ಯ ಲೋಕಕ್ಕೆ ಇಷ್ಟೊಂದು ಪ್ರಮಾಣದಲ್ಲಿ ಬಂದುದು ಹೆಮ್ಮೆ ಪಡುವ ಸಂಗತಿ. ನಂತರ ನಮಗೆ ದೊರೆಯುವ ಈ ಬಗೆಯ ದೊಡ್ಡ ಕೃತಿಯೆಂದರೆ ಹ.ಕ.ರಾಜೇಗೌಡ ಅವರ **'ಜಗತ್ತಿನ ಜನಪದ ಕಥೆಗಳು'** ಎಂಬುದು. ಎಂ.ರಾಮರಾವ ಅವರಿಂದ ಗ್ರಿಮ್ ಸಹೋದರರ ಕಥೆಗಳು ಪ್ರಕಟವಾದದು ೧೯೪೭ ರಿಂದ ೧೯೬೫ರ ವರೆಗೆ. ಹ.ಕ.ರಾಜೇಗೌಡರ ಕೃತಿ ಪ್ರಕಟವಾದುದು ೧೯೭೩ ರಲ್ಲಿ. ಅವರ ಸಾಹಸವೆಂದರೆ ಬೇರೆ ಬೇರೆ ದೇಶದ ೫೩ ಜನಪದ ಕಥೆಗಳ ಆಯ್ಕೆ. ಅದರಲ್ಲಿ ಸುಮಾರು ೪೩ ದೇಶಗಳಿಂದ ಒಂದೊಂದೇ ಕಥೆಯನ್ನು ಆಯ್ದಿದ್ದಾರೆ. ಮತ್ತೆ ಭಾರತದ ೧೦ ಭಾಷೆಗಳಿಂದ ಒಂದೊಂದರಂತೆ ೧೦ ಕಥೆಗಳನ್ನು ಆರಿಸಿಕೊಂಡಿದ್ದಾರೆ. ೪೦೦ ಪುಟಗಳ ಈ ಬೃಹತ್ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ಈ ಅವಧಿಯಲ್ಲಾಗಲೇ ಮೈಸೂರು ವಿಶ್ವವಿದ್ಯಾಲಯದಲ್ಲಿ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಂದು ಪರಿವರ್ತನಾ ಯುಗವೇ ಪ್ರಾರಂಭವಾದುದರಿಂದ, ಬಹುಶಃ ರಾಜೇಗೌಡರು ಇಂತಹ ಸಾಹಸ ಮಾಡಿದ್ದಾರೆಂದು ತೋರುತ್ತದೆ. ಒಮ್ಮೆಗೆ ಜಗತ್ತಿನ ಜನಪದ ಕಥೆಗಳನ್ನು ಓದಲು, ಅವುಗಳನ್ನು ತಿಳಿದುಕೊಳ್ಳಲು ಅನುಕೂಲವಾಗುವಂತೆ ಮಾಡಿದ ಹ.ಕ.ರಾಜೇಗೌಡರು ಅಭಿನಂದನಾರ್ಹರು.

ಈ ಸಾಲಿಗೆ ಸೇರುವ ಇನ್ನೊಂದು ಮಹತ್ವದ ಪ್ರಯತ್ನ ರಾ. ಲಕ್ಷ್ಮೀನಾರಾಯಣ ಅವರು ಮಾಡಿದ್ದಾರೆ. ಚೀನಾ ದೇಶದ ೧೦ ಜನಪದ ಕಥೆಗಳನ್ನು ಆರಿಸಿಕೊಂಡು, ಆಗಾಗ ಅನುವಾದ ಮಾಡಿ, **'ಚಿನ್ನದ ಕಳಶ'** (೧೯೭೯) ಎಂಬ ಕೃತಿಯ ಮೂಲಕ ಕನ್ನಡದ ಮಕ್ಕಳಿಗೆ ಅವನ್ನು ಒದಗಿಸುವ ಮಹದುಪಕಾರ ಮಾಡಿದ್ದಾರೆ. ಚೀನಾದ ಒಂದೊಂದು ಜಾತಿಗೆ ಸೇರಿದ ಜನರಿಂದ ಸಂಗ್ರಹಿಸಲ್ಪಟ್ಟ ಹತ್ತು ಜನಾಂಗಗಳ ೧೦ ಜನಪದ ಕತೆಗಳು ಇಲ್ಲಿವೆ. ಚಿಕ್ಕಮಗಳೂರಿನಿಂದ ಈ ಕೃತಿ ಪ್ರಕಟವಾಗಿರುವುದು ಗಮನಾರ್ಹ. ಮೈಸೂರು ಪರಿಸರದಿಂದ ದೂರವಿರುವ ಒಬ್ಬ ಪ್ರಾಧ್ಯಾಪಕರು ಈ ಕೆಲಸ ಮಾಡಿರುವುದು ಗಮನಿಸಬೇಕಾದ ಸಂಗತಿಯೇ ಆಗುತ್ತದೆ. ಈ ಸಾಲಿಗೆ ಸೇರುವ ಇನ್ನೊಂದು ಕೃತಿ

ನಮಗೆ ದೊರೆಯುತ್ತಿದ್ದು, ಬೆಂಗಳೂರಿನವರಾದ ಶ್ರೀಮತಿ ವನಮಾಲಾ ಆಚಾರ ಅವರು ವಿಯಟ್ನಾಮ್ ದೇಶದ ೨೩ ಜನಪದ ಕಥೆಗಳನ್ನು ಅನುವಾದಿಸಿ, **'ಸುವರ್ಣ ಪಕ್ಷಿ'** (೧೯೮೨) ಎಂಬ ಹೆಸರಿನಲ್ಲಿ ಈ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇದನ್ನು ಮಕ್ಕಳು ಓದಿ ಸಂತೋಷ ಪಡಲಿ ಎಂಬ ಭಾವವನ್ನು ಅನುವಾದಕರು ವ್ಯಕ್ತಪಡಿಸಿದ್ದಾರೆ. ಈ ಸಾಲಿಗೆ ಸೇರುವ ಇನ್ನೊಂದು ಕೃತಿ **'ಉಕ್ರೈನಿನ ಜಾನಪದ ಕಥೆಗಳು'** (೧೯೮೮) ಎಂಬುದು ೨೨ ಕಥೆಗಳ ಒಂದು ಅನುವಾದ ಕೃತಿ. ಇದರ ಅನುವಾದಕರು ಕೆ.ಎಲ್. ಗೋಪಾಕೃಷ್ಣರಾವ.

ಮೇಲಿನ ಎಲ್ಲ ಕಥೆಗಳು ಬಂದುದು ಇಂಗ್ಲೀಷ ಭಾಷೆಯ ಮೂಲಕ. ಹೆಚ್ಚಾಗಿ ಇಂಗ್ಲೀಷ ಪ್ರಾಧ್ಯಾಪಕರೆ ಅವನ್ನು ಕನ್ನಡಿಸಿ ಕೊಟ್ಟಿದ್ದಾರೆ. ಹ.ಕ.ರಾಜೇಗೌಡ ಒಬ್ಬರು ಅಪವಾದವಾಗಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಅಲ್ಲದೆ ಗದಗ-ಹುಬ್ಬಳ್ಳಿ ಮೂಲದ ಜನಪ್ರಿಯ ಪುಸ್ತಕ ಮಾಲೆಗಳಲ್ಲಿ ನಮಗೆ ಅರೇಬಿಯನ್ ರಾಷ್ಟ್ರದ ಕತೆಗಳು ಸಾಕಷ್ಟು ಬೆಳಕು ಕಂಡಿವೆ. ಅವುಗಳಲ್ಲಿ **ಅರೇಬಿಯನ್ ನೈಟ್ಸ್, ೧೦೦೧ ನೈಟ್ಸ್, ಹಾತಿಮತಾಯಿ ಕಥೆಗಳು, ಗುಲ್‌ಬಕಾವಲಿ** ಈ ಮುಂತಾದ ಬಹು ಆಕರ್ಷಕ ಕಥಾಸಂಗ್ರಹಗಳು ನಿರಂತರವಾಗಿ ಪ್ರಕಟವಾಗುತ್ತಲೇ ಇವೆ. ಆದರೆ ಇವುಗಳ ಅನುವಾದಕರ ಹೆಸರು, ಪ್ರಕಟವಾದ ವರ್ಷ ಇವುಗಳ ನಮೂದುಗಳು ಕೃತಿಗಳಲ್ಲಿ ನಮಗೆ ಕಾಣುವುದಿಲ್ಲ. ಈ ಸಾಲಿಗೆ **'ಈಸಪನ ನೀತಿ ಕಥೆಗಳು'** ಎಂಬ ಗ್ರೀಸ್ ದೇಶದ ಕಥೆಗಳ ಸಂಗ್ರಹಗಳೂ ಪ್ರಕಟವಾಗಿವೆ. ಒಂದು ಸಂಗ್ರಹವಂತೂ ಇಸೋಪನ ೯೮ ಕಥೆಗಳ ಸಂಗ್ರವಾಗಿದ್ದು, ಅದರ ಮೇಲೆ ಪ್ರಕಾಶಕರ ಹೆಸರು ಕೂಡ ಮುದ್ರಣವಾಗಿಲ್ಲ. ಅದರೂ ಇವು ಈ ಬೇರೆ ಬೇರೆ ದೇಶದ ಕಥೆಗಳನ್ನು ಪ್ರಸಾರ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಇವೆಲ್ಲ ನಿರಂತರವಾಗಿ ಇವತ್ತಿಗೂ ಪ್ರಕಟವಾಗುತ್ತಲೇ ಇವೆ. ಜನರ ಕೈಗೆ ಸಿಗುತ್ತಲೇ ಇವೆ. ಇತ್ತೀಚೆಗೆ ಕೆಲವು ಪ್ರಕಾಶಕರು ಜನಪ್ರಿಯ ಪುಸ್ತಕಮಾಲೆಗಳಲ್ಲಿ ಬೇರೆ ಬೇರೆ ದೇಶದ ಜನಪದ ಕಥೆಗಳನ್ನು ಪ್ರಕಟಿಸುವ ಕೆಲಸವನ್ನೂ ಮಾಡುತ್ತಿದ್ದಾರೆ.

ಪ್ರಾರಂಭದ ಪ್ರಮುಖ ಕನ್ನಡ ಜನಪದ ಕಥೆಗಳ ಸಂಗ್ರಹಗಳು :

೧೯೬೫ ನಂತರ ಮೈಸೂರು ವಿಶ್ವವಿದ್ಯಾಲಯದ ಪ್ರೋತ್ಸಾಹ ಮತ್ತು ಪರಿಣಾಮಗಳಿಂದ ದಕ್ಷಿಣ ಕರ್ನಾಟಕದಲ್ಲಿ ಕನ್ನಡ ಜನಪದ ಕತೆಗಳ ಸಂಗ್ರಹ ಸಂಪಾದನೆಗಳು ಸ್ವಲ್ಪ ವ್ಯಾಪಕವಾಗಿಯೇ ನಡೆದವು. ಕರ್ನಾಟಕದ ಎಲ್ಲ ಜಿಲ್ಲೆಗಳ ಪ್ರಾತಿನಿಧಿಕ ಕಥಾ ಸಂಕಲನಗಳನ್ನು ತರುವ ಪ್ರಯತ್ನ ಈ ವಿಶ್ವವಿದ್ಯಾಲಯದಿಂದ ನಡೆಯಿತು. ಪ್ರತಿಯೊಬ್ಬ ಸಂಪಾದಕನೂ ತನ್ನ ಸಂಗ್ರಹಕ್ಕೆ ಪ್ರಸ್ತಾವನೆ ಬರೆಯಲು ಮಾಡಿದ ಸೀಮಿತ ಪ್ರಯತ್ನಗಳೇ ಕನ್ನಡ ಜನಪದ ಕಥೆಗಳ ಅಧ್ಯಯನದಲ್ಲಿ ನಡೆದ ಪ್ರಥಮ ಪ್ರಯತ್ನಗಳಾಗಿವೆ.

೧೯೬೭ ರಲ್ಲಿ ಪ್ರಕಟವಾದ ಶ್ರೀ ಧವಳಶ್ರೀ (ಎಂ.ಎ.ಜಯಚಂದ್ರ) ಅವರ 'ಜನಪದ ಕಥಾಮೃತ' ಇಂತಹ ಒಂದು ಸಂಕಲನ. ಇದರ ವಿಶೇಷತೆ ಎಂದರೆ ಒಬ್ಬರಿಂದಲೇ ೧೫ ಜನಪದ ಕಥೆಗಳನ್ನು ಸಂಗ್ರಹಿಸಿ, ತಕ್ಕಮಟ್ಟಿನ ವಿದ್ವತ್ತಿನ ಪ್ರಸ್ತಾವನೆಯನ್ನು ಬರೆದು ಪ್ರಕಟಿಸಿದ್ದು. ಈ ಕೃತಿಯನ್ನು ೧೯೬೭ರ ಆಗಸ್ಟನಲ್ಲಿ ಹೊರತಂದು, ಇದೇ ಹೆಸರಿನ

೨೧ ಕಥೆಗಳ ಎರಡನೇ ಸಂಪುಟವನ್ನು ಜನೇವರಿ ತಿಂಗಳು ೧೯೬೮ರಲ್ಲಿ ಹೊರತಂದಿದ್ದಾರೆ. ಅಂದರೆ ಹೆಚ್ಚುಕಡಿಮೆ ಎರಡೂ ಸಂಗ್ರಹಗಳನ್ನು ಒಮ್ಮೆಗೆ ಮುದ್ರಿಸಿದ ಅವರು ಪ್ರಕಟಮಾಡಿದ ವರ್ಷ ಬೇರೆಯಾಗಿ ತೋರಿಸಲು ಹೀಗೆ ಮಾಡಿದ್ದಾರೆಂದು ತೋರುತ್ತದೆ. ಈ ಎರಡರಲ್ಲೂ ಶಾಸ್ತ್ರೀಯ ಮಟ್ಟದ ಸಂಪಾದನೆ, ವಿವರಣೆಗಳನ್ನು ಕಾಣಬಹುದಾಗಿದೆ. ವಕ್ತಾರರು ಕಥೆಗಳನ್ನು ಹೇಳಿದಂತೆಯೇ ಬರೆಯಲು ಪ್ರಯತ್ನಿಸಿದ ಅರಿವೂ ಇಲ್ಲಿ ಕಾಣಿಸಿಕೊಳ್ಳುತ್ತದೆ. ೧೯೬೬ರ ಡಿಸೆಂಬರ್ ತಿಂಗಳಿನಲ್ಲಿ ನಡೆದ ಮೈಸೂರು ವಿ.ವಿ.ಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ನಡೆದ ಜನಪದ ಸಾಹಿತ್ಯ ಗೋಷ್ಠಿ, ಹಾಗೂ ೧೯೬೬ನೇ ವರ್ಷ ಮೈ.ವಿ.ವಿ. ಕನ್ನಡ ಎಂ.ಎ.ಕೋರ್ಸ್‌ನಲ್ಲಿ ನೂರಂಕಿನ ಒಂದು ಜನಪದ ಸಾಹಿತ್ಯ ಪತ್ರಿಕೆಯನ್ನು ಸೇರಿಸಿದ್ದು, ಈ ಮುಂತಾದ ಸಂಗತಿಗಳು ಡಾ. ಜಯಚಂದ್ರ ಅವರ ಮೇಲೆ ಪ್ರಭಾವ ಬೀರಿರುವ ಸಾಧ್ಯತೆ ಇದೆ. ೧೯೫೦ ರಿಂದಲೇ ಕನ್ನಡದಲ್ಲಿ ಜನಪದ ಸಾಹಿತ್ಯದ ಬಗೆಗೆ ಅರಿವು ಮೂಡಿದ, ಅಭ್ಯಾಸ ನಡೆದ ಕುರುಹುಗಳು ನಮಗೆ ದೊರೆಯುತ್ತವೆ. ವಿಶೇಷವಾಗಿ ಡಾ. ಬಿ.ಎಸ್.ಗದ್ದಗಿಮಠ ಅವರ ಕೆಲಸಗಳನ್ನು ನಾವಿಲ್ಲಿ ನೆನೆಸಿಕೊಳ್ಳಬಹುದು. ಆದರೆ ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಮತ್ತು ಆ ಕಾಲಕ್ಕೆ ವೈಜ್ಞಾನಿಕ ಎನ್ನಬಹುದಾದ ರೀತಿಯಲ್ಲಿ ಸಂಗ್ರಹಿಸಿ ಸಂಪಾದಿಸಿ ಪ್ರಕಟಸಿದ ಕೀರ್ತಿ ಡಾ. ಜಯಚಂದ್ರ ಅವರಿಗೆ ನಿಸ್ಸಂದೇಹವಾಗಿ ಸಲ್ಲಬೇಕು. **'ಕರ್ನಾಟಕ ಸಂಸ್ಕೃತಿ'** (೧೯೩೫) ಕೃತಿಯಲ್ಲಿ ದೇವುಡು ಅವರು ಪ್ರಾಸಂಗಿಕವಾಗಿ ಕೊಟ್ಟ ಕಥೆಗಳು ಗೆಜೆಟ್ಟಿಯರ್ ಮತ್ತು ಶಾಸನಗಳಲ್ಲಿರುವ ಕತೆಗಳಾಗಿವೆ. ನಾವು ಗ್ರಹಿಸುವಂತೆ ಇವು ಅಪ್ಪಟ ಜನಪದ ಕಥೆಗಳಲ್ಲ ಎಂಬುದನ್ನು ಗಮನಿಸುವುದು ಅವಶ್ಯವೆನಿಸುತ್ತದೆ. ದೇವುಡು ಅವರು ಈ ಕಥೆಗಳ ವಿಭಾಗೀಕರಣದ ಇಂತಹ ಪ್ರಯತ್ನವನ್ನು ಮಾಡಿದ್ದಾರೆ. 'ಈ ಕಥೆಗಳನ್ನು ನಾನಾ ವಿಧವಾಗಿ ವಿಭಾಗಿಸಲು ಸಾಧ್ಯ. ಆದರೂ ನಾವು ನಡೆದ ಕಥೆಗಳು, ಪುರಾಣ ಕಥೆಗಳು, ವಿನೋದ ಕಥೆಗಳು ಎಂದು ಮೂರು ವಿಭಾಗ ಮಾಡುವೆವು. ಶಾಸನಾದಿಗಳಲ್ಲಿ, ಗ್ರಂಥಾದಿಗಳಲ್ಲಿ ನಡೆದವು ಎಂದೇ ಉಲ್ಲೇಖವಿರುವ ಕಥೆಗಳು ಮೊದಲನೆಯ ಜಾತಿ. ಸ್ಥಳಮಾಹಾತ್ಮ್ಯೆ, ದೇವತಾ ಪ್ರಭಾವಾದಿ ಕಥೆಗಳು ಎರಡನೆಯ ಜಾತಿಯ ಪುರಾಣ ಕಥೆಗಳು, ಹೊತ್ತು ಕಳೆಯುವ ಉದ್ದೇಶದಿಂದ ಒಬ್ಬರಿಗೊಬ್ಬರು ಹೇಳಿಕೊಳ್ಳುವ ಕಥೆಗಳು ಮೂರನೆಯ ಜಾತಿ.' (ಕ.ಸಂ.ಪು.೧೩೯-೪೦). ಹೀಗೆ ಲೀಖಿತ ಮೂಲದಿಂದ ಇಲ್ಲಿಯ ಕಥೆಗಳನ್ನು ಆಯ್ದುಕೊಂಡಿದ್ದಾರೆ.

೧೯೬೯ರ ಮಧ್ಯದಲ್ಲಿ (ಜುಲೈ ತಿಂಗಳು) ಪ್ರಕಟಗೊಂಡು ಹೊರಬಂದ ಒಂದು ಜನಪದ ಕಥೆಗಳ ಸಂಗ್ರಹ ಡಿ.ಲಿಂಗಯ್ಯ ಅವರ **'ಮಣ್ಣಿನ ಮಿಡಿತ'** ಎಂಬುದು. ಇದರಲ್ಲಿ ೨೨ ಕಥೆಗಳಿದ್ದು, ಎಲ್ಲ ಕಥೆಗಳನ್ನು ವಕ್ತಾರರು ಕಥೆಹೇಳುವ ರೀತಿಯಲ್ಲಿಯೇ ಬರೆದುಕೊಳ್ಳಲಾಗಿದೆ. ಮುಖ್ಯವಾಗಿ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಯ ಗ್ರಾಮಗಳಿಂದ ಈ ಕಥೆಗಳನ್ನು ಸಂಗ್ರಹಿಸಲಾಗಿದೆ. ಸಂಪಾದಕರಾದ ಶ್ರೀ ಡಿ.ಲಿಂಗಯ್ಯ ಅವರು 'ನನ್ನ ನುಡಿ' ಎಂಬ ತಮ್ಮ ಮಾತುಗಳಲ್ಲಿ ಕಥೆಗಳನ್ನು ದಂತಕಥೆ, ಕಟ್ಟುಕಥೆ, ಅದ್ಭುತಕಥೆ, ದೆವ್ವದಕಥೆ, ಮಾಯಾಮಾಟದಕಥೆ, ಪ್ರಾಣಿಕಥೆ, ಪೌರಾಣಿಕ ಅಥವಾ ಐತಿಹ್ಯ, ಐತಿಹಾಸಿಕ, ಚಾರಿತ್ರಿಕ, ಸಾಮಾಜಿಕ ಎಂಬ ಹತ್ತು ಪ್ರಕಾರಗಳಲ್ಲಿ ವಿಂಗಡಿಸಬಹುದೆಂದು ಹೇಳಿದ್ದಾರೆ.

ಪ್ರತಿಯೊಂದು ಪ್ರಕಾರದ ಸ್ವರೂಪವನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ. ತಮ್ಮ ಸಂಗ್ರಹದಲ್ಲಿಯ ಕೆಲವು ಕಥೆಗಳು ಬೇರೆ ಕಡೆ ಕಂಡುಬರುವ ಕಥೆಗಳಿಗೆ ಹೋಲಿಕೆಯಾಗುವುದನ್ನು ಗುರುತಿಸಿ ಬರೆದಿದ್ದಾರೆ. ತಾವು ಕಥೆಗಳನ್ನು ಸಂಗ್ರಹ ಮಾಡಿದ್ದು ಯಾವಾಗ ಮತ್ತು ಎಲ್ಲಿ ಎಂಬುದನ್ನು ವಿವರಿಸಿದ್ದಾರೆ. ವಕ್ತಾರರ ಬಗೆಗೆ ವಿವರವಾದ ಮಾಹಿತಿಗಳನ್ನು ಒದಗಿಸಿದ್ದಾರೆ. ಶಬ್ದಾರ್ಥಕೋಶ ಕೊಟ್ಟಿದ್ದಾರೆ. ಇವೆಲ್ಲವನ್ನು ಗಮನಿಸಿದಾಗ ಇವರಿಗೆ ಜನಪದ ಸಾಹಿತ್ಯದ ಬಗೆಗೆ ಒಳ್ಳೆಯ ತಿಳುವಳಿಕೆ ಇತ್ತು ಎನಿಸುತ್ತದೆ. ಡಿ.ಲಿಂಗಯ್ಯ ಅವರಿಂದಲೇ ೧೯೭೧ರಲ್ಲಿ **'ಪಡಿನೆರಳು'** ಎಂಬ ಜನಪದ ಕಥಾ ಸಂಕಲನವೊಂದು ಮುದ್ರಣಗೊಂಡಿದೆ. ಇದರಲ್ಲಿ ಬೆಂಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ೧೮ ಕಥೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಶಾಸ್ತ್ರೀಯ ಸಂಪಾದನೆ ಮತ್ತು ಅಭ್ಯಾಸಪೂರ್ಣ ಪ್ರಸ್ತಾವನೆಯನ್ನು ಹೊತ್ತ ಜನಪದ ಕಥಾಸಂಕಲನ, ರಾಗೌ ಅವರಿಂದ ೧೯೭೪ರ ಕೊನೆಯಲ್ಲಿ (ಅಕ್ಟೋಬರ್‌ನಲ್ಲಿ) **'ಕರ್ನಾಟಕದ ಜನಪದ ಕಥೆಗಳು'** ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಇದರಲ್ಲಿ ೬೩ ಕಥೆಗಳನ್ನು ಕೊಡಲಾಗಿದ್ದು, ಅವೆಲ್ಲವನ್ನು ಪಾಶ್ಚಾತ್ಯರ ವಿಭಾಗಿಕ್ರಮದಂತೆ: ಕಿನ್ನರ ಕಥೆಗಳು, ನೀತಿ ಕಥೆಗಳು, ಪ್ರಾಣಿ ಕಥೆಗಳು, ಅತಿಮಾನುಷ ಕಥೆಗಳು, ವಿನೋದ ಕಥೆಗಳು, ಒಗಟು ಕಥೆಗಳು ಎಂದು ಆರು ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಜೊತೆಗೆ ಈ ಕೃತಿಯಲ್ಲಿ ಪಾಶ್ಚಾತ್ಯರಲ್ಲಿ ಜನಪದ ಕಥೆಗಳನ್ನು ಕುರಿತು ಹುಟ್ಟಿಕೊಂಡ ಅನೇಕ ಪರಿಕಲ್ಪನೆಗಳನ್ನು, ಸಿದ್ಧಾಂತಗಳನ್ನು, ವಾದಗಳನ್ನು ಪರಿಚಯಿಸಿರುವುದು ಪ್ರಮುಖವಾಗಿ ಎದ್ದು ಕಾಣುವ ಅಂಶವಾಗಿದೆ. ಮಂಡ್ಯ, ಮೈಸೂರು, ಬೆಂಗಳೂರು, ಹಾಸನ ಜಿಲ್ಲೆಯ ಗ್ರಾಮಗಳಿಂದ ಇಲ್ಲಿಯ ಕಥೆಗಳನ್ನು ಸಂಗ್ರಹಿಸಲಾಗಿದೆ. ಆದರೆ ವಕ್ತಾರರ ಹೆಚ್ಚಿನ ವಿವರಗಳನ್ನು ನಾವಿಲ್ಲಿ ಕಾಣಲಾರೆವು. ಆ ದೃಷ್ಟಿಯಿಂದ ಧವಳಶ್ರೀ (ಎಂ.ಎ.ಜಯಚಂದ್ರ) ಹಾಗೂ ಡಿ.ಲಿಂಗಯ್ಯ ಅವರ ಸಂಗ್ರಹಗಳಲ್ಲಿಯ ಮಾಹಿತಿಗಳು ಗಮನಾರ್ಹವಾಗಿವೆ.

೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಥಮ ಜಾನಪದ ಪ್ರಾಧ್ಯಾಪಕರಾದ ಡಾ.ಜೀ.ಶಂ. ಪರಮಶಿವಯ್ಯ ಅವರು ತಮ್ಮ **'ಕನ್ನಡ ಜನಪದ ಕಥೆಗಳು'** ಎಂಬ ಸಂಗ್ರಹ ಪ್ರಕಟಿಸಿದ ಮೇಲೆ, ಕರ್ನಾಟಕದ ಜನಪದ ಕಥೆಗಳ ಅಧ್ಯಯನದ ವಿಧಾನದಲ್ಲಿ ಒಂದು ಹೊಸ ಮಾರ್ಗವೇ ಪ್ರಾರಂಭವಾಯಿತು. ಈ ಸಂಗ್ರಹಕ್ಕೆ ಡಾ.ಜೀ.ಶಂ.ಪ. ಅವರು ಬರೆದ ಪ್ರಸ್ತಾವನೆ ಜನಪದ ಕಥೆಗಳ ಅಧ್ಯಯನದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿ ನಿಂತಿತು. ಇಲ್ಲಿಯ ವಿಂಗಡಣಾಕ್ರಮ, ಕಥೆಗಳ ಆಯ್ಕೆಯಲ್ಲಿ ಶಾಸ್ತ್ರೀಯ ಗುಣಮಟ್ಟಗಳು ಕಾಣಿಸಿಕೊಂಡವು. ಪ್ರಸ್ತಾವನೆಯಲ್ಲಿ – ಜಾನಪದದ ಬಗ್ಗೆ ಅವಿಸ್ಮರಣೀಯ ಕೆಲಸ ಮಾಡಿದ ಫಿನ್‌ಲ್ಯಾಂಡ್, ಜರ್ಮನಿ, ಇಂಗ್ಲೆಂಡ್ ಮತ್ತು ಅಮೇರಿಕಾ ಮುಂತಾದ ದೇಶಗಳಲ್ಲಿ ಜನಪದ ಕಥೆಗಳ ಬಗ್ಗೆ ನಡೆದ ಅಧ್ಯಯನದ ಸಮೀಕ್ಷೆಯನ್ನು ಮಾಡಿದ್ದಾರೆ. ಜೊತೆಗೆ ಆರ್ನೆ–ಥಾಮ್ಸನ್ನರ ಕಥಾಮಾದರಿ ಸೂಚಿಯಲ್ಲಿ ಕಾಣಿಸುವ ಅನೇಕ ಕಥಾಮಾದರಿಗಳಿಗೆ ನಮ್ಮಲ್ಲಿ ದೊರೆಯುವ ಹಲವು ಜನಪದ ಕಥೆಗಳನ್ನು ಉದಾಹರಣೆಯಾಗಿ ಇಲ್ಲಿ ಮೊದಲಬಾರಿಗೆ ಗಮನಿಸಿದ್ದಾರೆ. ಪ್ರಾದೇಶಿಕ ಮಟ್ಟದಲ್ಲಿ ಕಥೆಗಳ ಅಧ್ಯಯನದ ಮಹತ್ವವನ್ನು

ಎತ್ತಿ ಹೇಳಿದ್ದಾರೆ. ಹೀಗಾಗಿ, 'ಕನ್ನಡದಲ್ಲಿ ಪ್ರಪ್ರಥಮ ವೈಜ್ಞಾನಿಕ ಸಂಗ್ರಹ' ಎಂಬ ಅಭಿದಾನಕ್ಕೆ ಈ ಕೃತಿ ಪಾತ್ರವಾಗುತ್ತದೆ. ಇಲ್ಲಿ ಸುದೀರ್ಘವಾದ ೬೮ ಕಥೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅವನ್ನು ಅತಿಮಾನುಷ ಪತ್ನಿಯರು, ಅತಿಮಾನುಷ ಪತಿಗಳು, ಅತಿಮಾನುಷ ವಿರೋಧಿಗಳು, ರಮ್ಯ ಕಥೆಗಳು, ಅದ್ಭುತ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ಹಾಸ್ಯ ಕಥೆಗಳು, ಪ್ರಾಣಿ ಕಥೆಗಳು ಎಂದು ವಿಭಾಗಿಸಿದ್ದಾರೆ. ರಾಗೌ ಅವರು ಸ್ಟಿಥ್ ಥಾಮ್ಸನ್ ಅವರು ಜಾನಪದ ಕೋಶ ಒಂದರಲ್ಲಿ ಬರೆದ ಲೇಖನದಲ್ಲಿ ಚರ್ಚಿಸಿದ ವಿಂಗಡನಾ ಕ್ರಮವನ್ನು ಅನುಸರಿಸಿದೆ. ಜೀಶಂಪ ಅವರು ಆಂಟಿ ಆರ್ನೆ ಮತ್ತು ಸ್ಟಿಥ್ ಥಾಮ್ಸನ್ ಅವರ **'ಟೈಪ್ಸ್ ಆಫ್ ದಿ ಫೋಕ್‌ಟೇಲ್'** ಎಂಬ ಕೃತಿಯಲ್ಲಿ ಅನುಸರಿಸಿದ ವಿಭಾಗೀಕ್ರಮವನ್ನು ಅನುಸರಿಸಿದ್ದಾರೆ. ವಕ್ತಾರರ ವಿವರ, ಅರ್ಥಕೋಶ, ಮಾದರಿ ಸೂಚಿಯೊಂದಿಗೆ ಕೊಟ್ಟ ಆಶಯಗಳು ಇವೆಲ್ಲ ಜೀಶಂಪ ಅವರ ಈ ಸಂಗ್ರಹದ ಮೌಲ್ಯವನ್ನು ಹೆಚ್ಚಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ಅಧ್ಯಯನ ಪ್ರಕಟನೆ ಈ ಸಂಗತಿಗಳಲ್ಲಿ ೧೯೬೬ ರಿಂದ ೧೯೮೦ರ ೧೫ ವರ್ಷಗಳ ಅವಧಿಯನ್ನು ನಾವು ಬಹುಮಹತ್ವದ ಅವಧಿಯಂತಲೇ ಪರಿಗಣಿಸಬೇಕು. ಒಂದು ರೀತಿಯಿಂದ ಜನಪದ ಸಾಹಿತ್ಯವು ಕನ್ನಡದ ಮೈತುಂಬಿದ ಕಾಲ ಇದಾಗಿದೆ. ಕನ್ನಡದ ಶಿಷ್ಟಸಾಹಿತ್ಯದ ಪ್ರಮುಖವಾದ ಏಕೀಕೃತ ಮುಖಕ್ಕೆ ಮೌಖಿಕ ಮುಖದ ಸಾಹಿತ್ಯದ ಎಳೆಯೊಂದು ಸೇರಿ, ಸೆರುತ್ತಲೇ ಎಲ್ಲ ರೀತಿಯಿಂದ ಮೈತುಂಬಿಕೊಂಡು ಸಾಗಿ ಬೆಳೆದು, ಸಾವಿರ ವರ್ಷದ ಲಿಖಿತ ಮೂಲದ ಸಾಹಿತ್ಯದ ಇತಿಹಾಸವನ್ನು ಇನ್ನಷ್ಟು ಸಮೃದ್ಧಗೊಳಿಸಿದ ಕಾಲ ಇದಾಗಿದೆ. ಸಾಹಿತ್ಯಪಥ್ಯವೆಂದರೆ ಅದು ಸಾಂಸ್ಕೃತಿಕ ಪಥ್ಯವೆಂಬ ಮಹತ್ವದ ಕಲ್ಪನೆ ಕೊಡಲು ಕಾರಣವಾದ ಕಾಲ ಇದು. ಕನ್ನಡ ಸಾಹಿತ್ಯ ಸಂಸ್ಕೃತಿಯ ಅಧ್ಯಯನಕ್ಕೆ ನೂರಾರು ಮುಖಗಳನ್ನು ಸೇರಿಸಿದ ಕಾಲ ಇದಾಗಿದೆ. ಅದರಲ್ಲಿ ಜನಪದ ಕಥೆಯ ಪ್ರಕಾರದ ಕೊಡುಗೆ ಮಹತ್ವದ ಕೊಡುಗೆಯಾಗಿದೆ. ಜನಪದ ಸಾಹಿತ್ಯವೆಂದರೆ ಕೇವಲ ಗೀತಸಾಹಿತ್ಯವೆಂದು ಭಾವಿಸಿದ್ದ ಕಾಲದಲ್ಲಿ ಜನಪದ ಕಥೆಗಳ ಪ್ರಕಟನೆ ೧೯೬೭ರಲ್ಲಿ ಅನಾವರಣಗೊಂಡು, ೧೯೮೦ರಷ್ಟೊತ್ತಿಗೆ ಗೀತ ಪ್ರಕಾರಕ್ಕಿಂತಲೂ ಅತ್ಯಂತ ಮಹತ್ವ ಪ್ರಕಾರವೆನಿಸಿ, ಕರ್ನಾಟಕದ ವಿದ್ವಾಂಸರ ಗಮನಸೆಳೆಯುವಲ್ಲಿ ಯಶಸ್ವಿಯಾಗಿದೆ.

ಡಾ. ಜೀಶಂಪ ಅವರ **'ಕನ್ನಡ ಜನಪದ ಕಥೆಗಳು'** ೧೯೭೦ರಲ್ಲಿ ಪ್ರಕಟವಾದ ನಂತರ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ, ಆಗಿನ ಕಾಲದ ಹಿರಿಕಿರಿಯ ವಿದ್ವಾಂಸರೆಲ್ಲ ಜೀಶಂಪ ಕೃತಿಯನ್ನು ಅನುಸರಿಸಿ ಜನಪದ ಕಥೆಗಳ ಸಂಗ್ರಹಗಳನ್ನು ಹೊರತರಲು ಪ್ರಯತ್ನ ಮಾಡಿರುವುದು ಗೋಚರಿಸುತ್ತದೆ. ಹೀಗಾಗಿ ಜೀಶಂಪ ಅವರ **'ಕನ್ನಡ ಜನಪದ ಕಥೆಗಳು'** ಸಂಗ್ರಹ ಒಂದು ರೀತಿಯಲ್ಲಿ ಮಾದರಿ ಸಂಗ್ರಹ ಎಂತಲೇ ಹೇಳಬೇಕು.

ಡಾ. ಜೀ.ಶಂ.ಪ. ಅವರಿಂದಲೇ ೧೯೭೦ರಲ್ಲಿ **'ಆಯ್ದ ಜನಪದ ಕಥೆಗಳು'**, ಎಂಬ ಇನ್ನೊಂದು ಕಥೆಗಳ ಸಂಕಲನ ಹೊರಬಂದಿದೆ. ಇಲ್ಲಿಯ ಕಥೆಗಳನ್ನು ಸಂಗ್ರಹಿಸಿದವರು ಆಗಿನ ಎಂ.ಎ. ವಿದ್ಯಾರ್ಥಿಗಳು. ವಿದ್ಯಾರ್ಥಿಗಳು ಸಂಗ್ರಹಿಸಿ ತಂದ ೧೦೦ ಕಥೆಗಳಲ್ಲಿ

೪೧ ಕಥೆಗಳನ್ನು ಆರಿಸಿ ಇಲ್ಲಿ ಪ್ರಕಟಿಸಿದ್ದಾರೆ. ಕೊನೆಯಲ್ಲಿ ವಕ್ತಾರರ ಮಾಹಿತಿ, ಸಂಗ್ರಾಹಕರ ಮಾಹಿತಿಗಳ ಜೊತೆಗೆ, ಆಯ್ದುಕೊಂಡ ಕಥೆಗಳನ್ನು ಅತಿಮಾನುಷ ಕಥೆಗಳು, ರಮ್ಯ ಕಥೆಗಳು, ವಾಸ್ತವಿಕ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ಪ್ರಾಣಿ ಕಥೆಗಳು ಹಾಗೂ ಸ್ಥಳ ಕಥೆಗಳು ಎಂದು ಆರು ಪ್ರಕಾರಗಳಲ್ಲಿ ವಿಭಾಗಿಸಿದ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ೧೯೭೬ ರಲ್ಲಿ **'ದಕ್ಷಿಣ ಕರ್ನಾಟಕದ ಜಾನಪದ ಕಥೆಗಳು'** ಎಂಬ ಇನ್ನೊಂದು ಮಹತ್ವದ ಸಂಗ್ರಹ ಪ್ರಕಟಿಸಿದ್ದಾರೆ.

೧೯೭೦ರ ನಂತರ ಮೈಸೂರು ಭಾಗದ ವಿದ್ವಾಂಸರಂತೂ ಸರಿಯೇ ಸರಿ, ಜೊತೆಗೆ ವಿಶೇಷವಾಗಿ ವಿಶ್ವವಿದ್ಯಾಲಯಗಳು ಮತ್ತು ಸ್ನಾತಕೋತ್ತರ ಕೇಂದ್ರಗಳಿರುವ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿಯ ವಿದ್ವಾಂಸರು ಒಮ್ಮೆಗೇ ಜನಪದ ಕಥೆಗಳ ಸಂಗ್ರಹಕ್ಕೆ ತೊಡಗಿರುವುದು ಕಂಡುಬರುತ್ತದೆ. ಒಂದೆರಡು ವರ್ಷಗಳು ಕಳೆಯುತ್ತಲೇ ಕೆಲವರು ಅಲ್ಲಲ್ಲಿ ಹಿಂದಿನ ಕಥೆಗಳ ಸಂಗ್ರಹಗಳನ್ನು ಮೀರಿನಿಲ್ಲುವ, ಗುಣಮಟ್ಟದಲ್ಲಿ, ವಿಷಯಗಳ ಆಯ್ಕೆಯಲ್ಲಿ, ವಿಭಾಗೀಕರಣದಲ್ಲಿ ತಮ್ಮ ಸಂಗ್ರಹಗಳು ವಿಶೇಷವಾಗಬೇಕೆಂಬ ಹಂಬಲ ತೋರಿದುದರಿಂದ ಮುಂದಿನ ಸಂಗ್ರಹಗಳಲ್ಲಿ ಅಲ್ಪಮಟ್ಟಿನ ವ್ಯತ್ಯಾಸಗಳು ಕಾಣುತ್ತ ಹೋಗಿದೆ. ಒಬ್ಬ ವಕ್ತಾರನಿಂದಲೇ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸುವುದು, ಒಂದು ಗ್ರಾಮ, ಒಂದು ಪ್ರದೇಶ, ಒಂದು ಜಿಲ್ಲೆ ಹೀಗೆ ಪ್ರಾದೇಶಿಕವಾಗಿ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು, ಒಗಟು ಕಥೆಗಳನ್ನೇ ಒಂದೆಡೆ ಸಂಕಲಿಸಿ, ಗಾದೆಯ ಕಥೆಗಳನ್ನೇ ಒಂದೆಡೆ ಸಂಗ್ರಹಿಸಿ- ವಿಶೇಷವಾದ ಕಥಾಸಂಗ್ರಹಗಳನ್ನು ಪ್ರಕಟಿಸಿರುವುದು ಕಂಡುಬರುತ್ತದೆ.

ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯ ಮುಂದೆ ಬಂದು ಜನಪದ ಸಾಹಿತ್ಯದ ಸಂಗ್ರಹಗಳನ್ನು ಪ್ರಕಟಿಸಲು ತೊಡಗಿರುವುದು ಕಂಡುಬರುತ್ತದೆ. ಅದು ಕಥೆಗಳ ಸಂಗ್ರಹಗಳನ್ನೂ ಸಾಕಷ್ಟು ಪ್ರಕಟಿಸುತ್ತದೆ. ಜೊತೆಗೆ ಕರ್ನಾಟಕದ ಬೇರೆ ವಿಶ್ವವಿದ್ಯಾಲಯಗಳೂ ಇಂತಹ ಕಥಾಸಂಗ್ರಹಗಳನ್ನು ಪ್ರಕಟಸಿವೆ. ೧೯೮೧ ನಂತರ ಈ ಕೆಲಸಕ್ಕೆ ಮುಖ್ಯವಾಗಿ ಕನ್ನಡ ಸಾಹಿತ್ಯಪರಿಷತ್ತು ಕೈಹಾಕುತ್ತದೆ. ವೈಯಕ್ತಿಕ ಪ್ರಕಾಶನ ಸಂಸ್ಥೆಗಳಿಂದಲೂ ಅನೇಕ ಜನ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಆದರೆ ೧೯೯೦ ನಂತರ ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆಗಳು ಕಡಿಮೆಯಾಗುತ್ತ ಬಂದಿರುವುದು ಕಂಡುಬರುತ್ತದೆ.

ಪ್ರಾರಂಭದಲ್ಲಿ ಧವಳಶ್ರೀ ಕಾವ್ಯನಾಮದಿಂದ ಜನಪದ ಕಥೆಗಳ ಸಂಗ್ರಹವನ್ನು ಪ್ರಕಟಿಸಿದ ಎಂ.ಎ.ಜಯಚಂದ್ರ ಅವರು ವೈಯಕ್ತಿಕ ಪ್ರಕಟನಾ ಸಂಸ್ಥೆಯೊಂದರಿಂದ ತಮ್ಮ ಕೃತಿಗಳನ್ನು ಪ್ರಕಟಿಸಿರುವುದು ಕಂಡುಬರುತ್ತದೆ. ರಾಗೌ ಅವರ ಕಥಾಸಂಗ್ರಹವನ್ನು ಪ್ರಕಟಿಸಿರುವವರೂ ತ.ವೆಂ.ಸ್ಮಾರಕ ಗ್ರಂಥಮಾಲೆಯವರು. ಜೀಶಂಪ ಅವರ **'ಕನ್ನಡ ಜನಪದ ಕಥೆಗಳು'** (೧೯೭೦) ಸಂಗ್ರಹವೇ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ ಮೊದಲನೇ ಜನಪದ ಕಥೆಗಳ ಸಂಗ್ರಹ. ನಂತರ ಮೈಸೂರು ವಿಶ್ವವಿದ್ಯಾಲಯ ನಿರಂತರವಾಗಿ ಅನೇಕ ಕಥೆಗಳ ಸಂಗ್ರಹಗಳನ್ನು ಪ್ರಕಟಿಸುತ್ತ ಬಂದಿದೆ.

೧೯೭೪ ರಲ್ಲಿ ಪ್ರಕಟವಾದ ಸಿ. ವೀರಣ್ಣ ಅವರ **'ಒಬ್ಬನೇ ಹೇಳಿದ ೨೨ ಜನಪದ**

ಕಥೆಗಳು' ಎಂಬ ಸಂಗ್ರಹದ ಪ್ರಸ್ತಾವನೆ ಬಹು ಮುಖ್ಯವಾದುದಾಗಿದೆ. ಕನ್ನಡದ ಕಥೆಗಳ ಸಾಂಸ್ಕೃತಿಕ ಅಧ್ಯಯನದ ಪ್ರಸ್ತಾಪವನ್ನು ಇಲ್ಲಿ ಕಾಣುತ್ತೇವೆ. ಅದರಲ್ಲೂ ಒಬ್ಬನೇ ಕಥೆಗಾರ ಹೇಳಿದ ಇಷ್ಟೊಂದು ಕಥೆಗಳನ್ನು ಒಂದೆಡೆ ಕಲೆಹಾಕಿ, ಒಬ್ಬ ಕಲಾವಿದನಿಂದ ಸಂಗ್ರಹಿಸಿದ ಬೃಹತ್ ಕೃತಿ ಇದಾಗಿದೆ. ಉಳಿದಂತೆ ಜನಪದ ಕಥೆಗಳನ್ನು ಸಂಗ್ರಹಿಸಿ, ಅಲ್ಪ ಮಟ್ಟಿನ ವಿವರಗಳುಳ್ಳ ಪ್ರಾಸ್ತಾವನೆಗಳೊಂದಿಗೆ ಸಂಕಲನಗಳನ್ನು ಹೊರತಂದವರೆಂದರೆ, ಎಲ್.ಆರ್. ಹೆಗಡೆ. ಟಿ.ಎಸ್. ರಾಜಪ್ಪ, ಕ್ಯಾತನಹಳ್ಳಿ ರಾಮಣ್ಣ, ಡಿ. ಲಿಂಗಯ್ಯ, ಎಚ್.ಜೆ, ಲಕ್ಕಪ್ಪಗೌಡ, ಕೆ.ವೈ. ಶಿವಕುಮಾರ, ಅಂಬಳಿಕೆ ಹಿರಿಯಣ್ಣ, ಮೈಲಹಳ್ಳಿ ರೇವಣ್ಣ ಮುಂತಾದವರು.

ಉತ್ತರ ಕರ್ನಾಟಕದಲ್ಲಿ ಜನಪದ ಕಥೆಗಳ ಪ್ರಕಟನೆ ಅಷ್ಟು ಮಟ್ಟದಲ್ಲಿ ನಡೆಯಲಿಲ್ಲ. ೧೯೭೨ ರಲ್ಲಿ ಹಳೆಯ ತಲೆಮಾರಿನ ಶ್ರೀ ಸಿಂಪಿ ಲಿಂಗಣ್ಣನವರಿಂದ 'ಉತ್ತರ ಕರ್ನಾಟಕದ ಜನಪದ ಕಥೆಗಳು' ಎಂಬ ಸಂಕಲನ ಪ್ರಕಟಗೊಂಡಿತು. ೧೯೭೯ರಲ್ಲಿ ಡಾ. ಬಸವರಾಜ ಮಲಶೆಟ್ಟಿ ಅವರಿಂದ 'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು' ಪ್ರಕಟವಾಯಿತು. ೧೯೮೭ ರಲ್ಲಿ –ಡಾ. ಬಿ. ಬಿ. ಹೆಂಡಿ, ಡಾ.ಎಂ.ಜಿ. ಬಿರಾದಾರ ಹಾಗೂ ಡಾ.ಎಂ. ಎಸ್. ಲಠ್ಠೆ ಅವರಿಂದ ಸಂಪಾದಿತ, ೧೧೧ ಕಥೆಗಳ ಬೃಹತ್ ಸಂಗ್ರಹವೊಂದು 'ಜನಪದ ನೂರೆಂಟು ಕಥೆಗಳು' ಎಂಬ ಹೆಸರಿನಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಈ ಮೂರನ್ನು ಬಿಟ್ಟರೆ ಉತ್ತರ ಕರ್ನಾಟಕದವರಿಂದಲೇ ಇಲ್ಲಿಯ ಜನಪದ ಕಥೆಗಳ ಸಂಗ್ರಹಗಳು ಹೊರಬಂದಿಲ್ಲ. ಆದರೆ ಕ್ಯಾತನಹಳ್ಳಿ ರಾಮಣ್ಣನವರಿಂದ 'ಬೀದರ ಜಿಲ್ಲೆಯ ಜನಪದ ಕಥೆಗಳು', 'ಗೊಂದಲಿಗರ ಕಥೆಗಳು' ಎಂಬ ಎರಡು ಸಂಗ್ರಹಗಳು, ಟಿ.ಎಸ್. ರಾಜಪ್ಪ ಅವರಿಂದ 'ಧಾರವಾಡ ಜಿಲ್ಲೆಯ ಜನಪದ ಕಥೆಗಳು', 'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು', 'ಬೆಳಗಾಂ ಜಿಲ್ಲೆಯ ಜನಪದ ಕಥೆಗಳು', 'ರಾಯಚೂರು ಜಿಲ್ಲೆಯ ಜನಪದ ಕಥೆಗಳು' ಎಂಬ ನಾಲ್ಕು ಸಂಗ್ರಹಗಳು ಹೊರಬಂದಿವೆ. ಮೈಸೂರಿನವರಾದ ಕ್ಯಾತನಹಳ್ಳಿ ರಾಮಣ್ಣ ಮತ್ತು ಟಿ.ಎಸ್. ರಾಜಪ್ಪ ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿ, ಆ ವಿಭಾಗದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಯೋಜನೆಯಲ್ಲಿ ಕ್ಷೇತ್ರಕಾರ್ಯ ಕೈಕೊಂಡು ಸಂಗ್ರಹಿಸಿ, ಪ್ರಕಟಿಸಿದ ಕೃತಿಗಳು ಇವಾಗಿವೆ. ಹೀಗಾಗಿ ಉತ್ತರ ಕರ್ನಾಟಕದಲ್ಲಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಗೊಂಡು ಪ್ರಕಟವಾದ ಕೃತಿಗಳು ಇವಾಗಿವೆ ಎಂಬ ಮಹತ್ವ ಈ ಕೃತಿಗಳ ಜೊತೆಗೆ ಇದೆ ಎಂಬುದನ್ನು ಗಮನಿಸಬೇಕು.

ಸಂಗ್ರಹಗೊಂಡು ಪ್ರಕಟಗೊಳ್ಳದೇ ಇರುವ ಜನಪದ ಕಥೆಗಳ ಸಂಗ್ರಹ, ಗುಲ್ಬರ್ಗಾ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬಹುದೊಡ್ಡ ಪ್ರಮಾಣದಲ್ಲಿದೆ. ೧೯೭೫ರಲ್ಲಿ 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ' ಎಂಬ ಯೋಜನೆಯೊಂದನ್ನು ಕರ್ನಾಟಕ ವಿಶ್ವವಿದ್ಯಾಲಯ ಧನಸಹಾಯದಿಂದ, ಡಾ। ಬಿ. ಬಿ. ಹೆಂಡಿ ಅವರು ಜನಪದ ಕಥೆಗಳ ಸಂಗ್ರಹ ಕಾರ್ಯಮಾಡಿದರು. ಇದೇ ವಿದ್ವಾಂಸರ ನೇತೃತ್ವದಲ್ಲಿ ಯುಜಿಸಿ ನೆರವಿನಿಂದ **'ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ ಮತ್ತು ಹಾಡುಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆ'** ಎಂಬ ಯೋಜನೆ ೧೯೭೫ರಲ್ಲೇ

ಕಾರ್ಯ ಪ್ರಾರಂಭಿಸಿ ಬಹುದೊಡ್ಡ ಪ್ರಮಾಣದಲ್ಲಿ ಕಥೆಗಳ ಸಂಗ್ರಹ ನಡೆಯಿತು. ಈಗ ಅವುಗಳ ಸಂಪಾದನೆ ಮತ್ತು ಪ್ರಕಟನೆಗಳು ನಡೆದು, ಸಂಕಲನಗಳು ಹೊರಬಂದರೆ ಮುಂದಿನ ಅಭ್ಯಾಸಿಗಳಿಗೆ ಅನುಕೂಲವಾಗುತ್ತದೆ. ಈ ಮೇಲೆ ಉಲ್ಲೇಖಿಸಿದ 'ಜನಪದ ನೂರೆಂಟು ಕಥೆಗಳು' ಈ ಸಂಗ್ರಹದಿಂದಲೇ ಹೊರಬಂದ ಒಂದು ಪುಸ್ತಕವಾಗಿದೆ.

ವಿಶೇಷ ಕಥಾ ಸಂಕಲನಗಳು :

ಒಬ್ಬ ವಕ್ತಾರನಿಂದ ಸಂಗ್ರಹಗೊಂಡ ಜನಪದ ಕಥೆಗಳ ಸಂಕಲನಗಳು :

ಒಬ್ಬ ವಕ್ತಾರನಿಂದ ಸಂಗ್ರಹಿಸಿದ ಕಥೆಗಳ ಅವನ ಪ್ರತಿಭೆಯನ್ನು ಅವಲಂಬಿಸಿರುವುದರಿಂದ ಅವನ ವೈಯಕ್ತಿಕ ಬದುಕು, ಜಾಣತನ, ಮೌಲ್ಯ ವಿವೇಚನೆ, ಭಾಷೆಯ ಬಳಕೆ ಮುಂತಾದ ಸಂಗತಿಗಳ ಹಿನ್ನೆಲೆಯಲ್ಲಿ ಒಬ್ಬನ ಅಭಿವ್ಯಕ್ತಿಯಾಗಿ ಆ ಕಥೆಗಳನ್ನು, ಕಥಾಸಂಗ್ರಹವನ್ನು ಗಮನಿಸಬೇಕಾದ ಅವಶ್ಯವೆನಿಸುತ್ತದೆ.

ಕನ್ನಡದಲ್ಲಿ ಜಾನಪದದ ಅರಿವು ಮೂಡುವ ಸಂದರ್ಭದ್ಲಲಿಯೇ ಇಂತಹ ಕಥಾಸಂಗ್ರಹಗಳು ಅಪರೂಪಕ್ಕೆ ಪ್ರಕಟವಾಗಿವೆ. ಇನ್ನೂ ೧೯೭೦ರ ಸುತ್ತಮುತ್ತಲ ಅವಧಿಯಲ್ಲಿಯೇ ಎಮ್.ಎ.ಜಯಚಂದ್ರ ಅವರು ತಮಗೆ ಅರಿವಿಗೆ ಬಾರದೆಯೇ ಸಹಜವಾಗಿ ತಮ್ಮ ಅಜ್ಜಿಯಿಂದ ಸಂಗ್ರಹಿಸಿದ ೧೫ ಕಥೆಗಳನ್ನು **'ಜಾನಪದ ಕಥಾಮೃತ'** ಎಂಬ ಹೆಸರಿನಲ್ಲಿ ೧೯೬೭ರಲ್ಲಿಯೇ ಪ್ರಕಟಿಸಿದ್ದಾರೆ. ಬೆಂಗಳೂರು ಜಿಲ್ಲೆಯ ದೊಡ್ಡಬೆಲೆ ಗ್ರಾಮದ ಶ್ರೀಮತಮ್ಮ ಅವರು ಹೇಳಿದ ಕಥೆಗಳು ಇಲ್ಲಿವೆ. ಇವರು ಈ ಕೃತಿಯ ಸಂಪಾದಕರಾದ ಎಮ್.ಎ.ಜಯಚಂದ್ರ (ಧವಳಶ್ರೀ) ಅವರ ಅಜ್ಜಿ (ತಾಯಿಯ ತಾಯಿ). ಜೈನ ಸಮುದಾಯಕ್ಕೆ ಸೇರಿದ ಈ ಹೆಣ್ಣುಮಗಳ ೭೫ನೇ ವರ್ಷದಲ್ಲಿ ಈ ಕಥೆಗಳನ್ನು ಅವರಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಹತ್ತು ಪುಟಗಳ ಪ್ರಸ್ತಾವನೆಯಲ್ಲಿ ಜನಪದ ಸಾಹಿತ್ಯ, ಕಥೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸಿರುವುದು ಗಮನಾರ್ಹ. ಏಕೆಂದರೆ ಈ ಸಂಗ್ರಹ ಜಾನಪದದ ಬಗ್ಗೆ ಅರಿವು ಇರುವ ಒಬ್ಬ ಎಂ.ಎ. ಪದವೀಧರನಿಂದ ಸಂಗ್ರಹಗೊಂಡು ಪ್ರಕಟವಾದ ಮೊದಲನೇ ಕೃತಿ. ಅವರು ಇಲ್ಲಿಯ ಕಥೆಗಳನ್ನು ವಿಂಗಡಿಸಲು ಯೋಚಿಸಿ, ಇನ್ನೂ ಕನ್ನಡದಲ್ಲಿ ಒಂದಿಷ್ಟು ಕಥೆಗಳು ಪ್ರಕಟವಾಗದೆ ವಿಂಗಡನಾ ಕ್ರಮ ಸೂಕ್ತವಾಗಲಾರದು ಎಂದು ಭಾವಿಸಿ ಕೈ ಬಿಟ್ಟಿದ್ದಾರೆ. ಇದನ್ನು ಗಮನಿಸಿದರೆ ಶೈಕ್ಷಣಿಕ ಶಿಸ್ತಿನಡಿ ಕನ್ನಡದಲ್ಲಿ ಕಥೆಗಳ ಪುಸ್ತಕಗಳು ಇನ್ನೂ ಪ್ರಕಟವಾಗಬೇಕು ಎಂಬ ಅರಿವು ಅವರ ಮನಸ್ಸಿನಲ್ಲಿ ಕಾಡಿದೆ ಎಂಬುದು ಸ್ಪಷ್ಟ.

ಈ ನಡುವೆ ಜೀಶಂಪ ಅವರ 'ಕನ್ನಡ ಜನಪದ ಕಥೆಗಳು' ಸಂಗ್ರಹ ಪ್ರಕಟವಾಗಿ, ಜನಪದ ಕಥೆಗಳ ಸಂಗ್ರಹ ಸಂಪಾದನೆಗಳಲ್ಲಿ ಒಂದು ವೈಜ್ಞಾನಿಕ ದೃಷ್ಟಿ ಹಣಿಕಿಕ್ಕಿತು. ವಿಶೇಷವಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಕೋರ್ಸಿನ ಅಧ್ಯಯನಕ್ಕೆ ಸೇರಿ, ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಒಂದು ಪತ್ರಿಕೆ ತೆಗೆದುಕೊಂಡ ವಿದ್ಯಾರ್ಥಿಗಳು

ಅತ್ಯಂತ ಹುಮ್ಮಸ್ಸಿನಿಂದ ಜನಪದ ಸಾಹಿತ್ಯ ಸಂಗ್ರಹಕ್ಕೆ ತೊಡಗಿದ ಸೂಚನೆಗಳು ಅಲ್ಲಲ್ಲಿ ನಮಗೆ ದೊರೆಯುತ್ತವೆ. ಅಂಥವರಲ್ಲಿ ಕೆ.ವೈ.ಶಿವಕುಮಾರ್ ಅವರು ಒಬ್ಬರು. ಶಿವಕುಮಾರ ಅವರು ತಮ್ಮ ಚಿಕ್ಕಮ್ಮ ಶ್ರೀಮತಿ ಸಿದ್ಧಲಿಂಗಮ್ಮ ಅವರಿಂದ ಕಥೆಗಳನ್ನು ಸಂಗ್ರಹಿಸಿ, ೧೯೭೨ರಲ್ಲಿ **'ನಾಗೇಂದ್ರ ಮತ್ತು ಇತರ ಜನಪದ ಕಥೆಗಳು'** ಎಂಬ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಸಿದ್ಧಲಿಂಗಮ್ಮ ಅವರ ತವರು ಮನೆ ನಾಗಮಂಗಲ ತಾಲೂಕಿನ ಬೆಲ್ಲಾಳೆ ಛತ್ರ, ಮದುವೆಯಾಗಿ ಬಂದದ್ದು ಮೈಸೂರು ಜಿಲ್ಲೆಯ ಕೃಷ್ಣರಾಜನಗರಕ್ಕೆ. ೧೯೭೦ ರಲ್ಲಿ ಡಾ. ಜೀಶಂಪ ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ಆಯ್ದ ಜನಪದ ಕಥೆಗಳು' ಸಂಗ್ರಹದಲ್ಲಿ ಶಿವಕುಮಾರ ಅವರು ತಮ್ಮ ಚಿಕ್ಕಮ್ಮಳಿಂದ ಸಂಗ್ರಹಿಸಿದ ೪ ಕಥೆಗಳು ಪ್ರಕಟವಾಗಿವೆ. ಬಹುಶಃ ಈ ಪ್ರೇರಣೆಯಿಂದಲೇ ಶಿವಕುಮಾರ ಅವರು ಒಂದು ಜನಪದ ಕಥೆಗಳ ಸಂಗ್ರಹ ಹೊರತರಲು ಮುಂದಾಗಿರಬೇಕೆನಿಸುತ್ತದೆ. ತಮ್ಮ ಸಂಗ್ರಹದಲ್ಲಿ ದೀರ್ಘವಾದ ೯ ಜನಪದ ಕಥೆಗಳನ್ನು (ಸಂಪಾದಕರು ತಮಗೆ ಬರುವ 'ಪುಟ್ಟಮ್ಮಣ್ಣಿ' ಎಂಬ ಒಂದು ಕಥೆಯನ್ನು ತಾವೇ ಬರೆದು ಹಾಕಿದ್ದಾರೆ), ಹಾಗೂ ಒಂಬತ್ತು ಚಿಕ್ಕಚಿಕ್ಕ ಐತಿಹ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ತಮ್ಮ ಚಿಕ್ಕಮ್ಮನಿಗೆ ಬರುವ ಇತರ ಜನಪದ ಸಾಹಿತ್ಯದ ಸಂಗತಿಗಳ ಬಗ್ಗೆ, ಜನಪದ ಕಥೆಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಇಲ್ಲಿಯ ಕಥೆಗಳನ್ನು ಒರೆಗೆ ಹಚ್ಚುವ ಅವಶ್ಯಕತೆಯಿದೆ.

ಡಾ. ತೀ.ನಂ.ಶಂಕರನಾರಾಯಣ ಅವರಿಂದ ಸಂಪಾದಿತ ಕೃತಿ 'ಸಂಕೀರ್ಣ ಜನಪದ ಕಥೆಗಳು' ಎಂಬುದು ಒಬ್ಬ ವಕ್ತಾರನಿಂದಲೇ ಸಂಗ್ರಹಗೊಂಡು, ಮೈಸೂರು ವಿಶ್ವವಿದ್ಯಾಲಯದಿಂದ ೧೯೭೪ರಲ್ಲಿ ಪ್ರಕಟವಾದ ಮಹತ್ವದ ಸಂಗ್ರಹವಾಗಿದೆ. ಇಲ್ಲಿಯ ಎಲ್ಲ ಕಥೆಗಳನ್ನು ಅವರು ಸಂಗ್ರಹಿಸಿದ್ದು, ೧೯೭೧ರ ನವ್ಹಂಬರ್ ತಿಂಗಳಿನಲ್ಲಿ ಎಂಬುದನ್ನು ಡಾ. ಶಂಕರನಾರಾಯಣ ಅವರು ದಾಖಲಿಸಿದ್ದಾರೆ. ಇಲ್ಲಿಯ ಸುದೀರ್ಘವಾದ ಎಂಟು ಕಥೆಗಳು ೧೫೦ ಪುಟಗಳ ವ್ಯಾಪ್ತಿಯಲ್ಲಿ ಪ್ರಕಟವಾಗಿವೆ. ಈ ಸಂಗ್ರಹದ ಕಥೆಗಳ ವಿಶೇಷತೆ ಎಂದರೆ, ಕಾಡುಗೊಲ್ಲರ ಸಮುದಾಯಕ್ಕೆ ಸೇರಿದ ಶ್ರೀ ಮೂಡಲಪ್ಪ ಅವರು ಇಲ್ಲಿಯ ಕಥೆಗಳ ವಕ್ತಾರರಾಗಿರುವುದು. ಈತ ಸಂಗ್ರಹ ಕಾಲಕ್ಕೆ ೪೦ ವರ್ಷದವನು, ಬ್ರಹ್ಮಚಾರಿ. ಕಾಡುಗೊಲ್ಲರ ಧಾರ್ಮಿಕ ಕಾರ್ಯಗಳನ್ನೂ ನಡೆಸಿಕೊಡುವಂಥವನು. ಈತನು ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಹುಳಿಗೆರೆ ಗ್ರಾಮಕ್ಕೆ ಸೇರಿದವನು.

ಮೊದಲು ಸಂಗ್ರಹಗೊಂಡು ಪ್ರಕಟವಾದ ಕೃತಿಗಳ ವಕ್ತಾರರಲ್ಲಿ ಒಬ್ಬರು ಜೈನರು, ಇನ್ನೊಬ್ಬರು ಲಿಂಗಾಯತರು. ಒಂದು ಬುಡಕಟ್ಟಿಗೆ ಸೇರಿದ ಮೂಡಲಪ್ಪ ಅವರಿಂದ ಈ ಕಥೆಗಳನ್ನು ಸಂಗ್ರಹಿಸಿದ್ದು ಒಂದು ವಿಶೇಷ ಸಂಗತಿಯೇ ಆಗುತ್ತದೆ. ಕಥೆಗಳು ಬೇರೆ ಬೇರೆ ಸಮುದಾಯಗಳಲ್ಲಿ ಹೇಗೆ ಜೀವಂತವಾಗಿರುತ್ತವೆ, ವಕ್ತಾರನ ಸಮುದಾಯದ ಸಂಸ್ಕೃತಿಯ ಸಂಗತಿಗಳು ಕಥೆಗಳಲ್ಲಿ ಹೇಗೆ ನುಸುಳಿ ಬರುತ್ತವೆ ಎಂಬ ಸೂಕ್ಷ್ಮ ಸಂಗತಿಗಳನ್ನು ಮುಂದಿಟ್ಟುಕೊಂಡು ಇಂತಹ ಒಬ್ಬ ವಕ್ತಾರನ ಪಠ್ಯಗಳನ್ನು ಅಭ್ಯಾಸ ಮಾಡಲು ಇಂತಹ ಕೃತಿಗಳು ಸಹಾಯಕ್ಕೆ ಬರುತ್ತವೆ. ಜಾನಪದ ಕ್ಷೇತ್ರದಲ್ಲಿ ಹೀಗೆ ವಕ್ತಾರರನ್ನೇ

ಕೇಂದ್ರವಾಗಿಟ್ಟುಕೊಂಡು ಅಧ್ಯಯನಗಳು ನಡೆದಿಲ್ಲ. ಒಂದಿಷ್ಟು ಜನಪದ ಮಹಾಕಾವ್ಯಗಳ ಅಧ್ಯಯನದಲ್ಲಿ ಒಬ್ಬನೇ ವಕ್ತಾರ ಹಾಡಿದ ಬೃಹತ್ ಪಠ್ಯ ಎಂಬ ವಿಷಯ ಕೂಡಲೇ ಗಮನಕ್ಕೆ ಬರವುದರಿಂದ ಅಲ್ಲಿ ವಕ್ತಾರ ಕೇಂದ್ರಿತ ಒಂದೆರಡು ಅಧ್ಯಯನಗಳು ನಡೆದಿರುವುದು ಗಮನಕ್ಕೆ ಬರುತ್ತದೆ. ಇಂತಹ ಪ್ರಯತ್ನಗಳು ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ನಡೆಯಬೇಕಾದುದು ಅವಶ್ಯವಿದೆ.

ಡಾ. ತೀ.ನಂ. ಶಂಕರನಾರಾಯಣ ಅವರ ಈ ಸಂಗ್ರಹವನ್ನು ಗಮನಿಸಿದರೆ, ಡಾ. ಜೀ.ಶಂ.ಪ ಅವರ ನಂತರ ಕಥೆಗಳ ಮಾದರಿ ಮತ್ತು ಆಶಯಗಳ ಬಗ್ಗೆ ಖಚಿತವಾದ ತಿಳುವಳಿಕೆ ಉಳ್ಳವರಾಗಿದ್ದು, ತಮ್ಮ ಸಂಗ್ರಹದ ಎಂಟೂ ಕಥೆಗಳನ್ನು **'ಟೈಪ್ಸ್ ಆಫ್ ದಿ ಫೋಕ್‌ಟೇಲ್'** ಕೃತಿಯ ಆಧಾರದಿಂದ ಪರಿಶೀಲಿಸಿ, ಒಂದೊಂದು ಕಥೆಯೂ ಯಾವ ಯಾವ ಮಾದರಿಗೆ ಸೇರಿದ್ದು ಎಂದು ನಿರ್ಧರಿಸಿ, ಮಾದರಿಯ ಹೆಸರುಗಳನ್ನು, ಸಂಖ್ಯೆಗಳನ್ನು ನಿರ್ದಿಷ್ಟವಾಗಿ ಕೊಟ್ಟಿದ್ದಾರೆ. ಕಥೆಯ ಮಾದರಿಯನ್ನು ತುಂಬಾ ಖಚಿತವಾಗಿ ಅಲ್ಲದಿದ್ದರೂ ಕಥಾಸಾರಂಶ ರೂಪದಲ್ಲಿ ರಚಿಸಿಕೊಡಲು ಪ್ರಯತ್ನಿಸಿದ್ದಾರೆ. ಮತ್ತು ಆಯಾ ಮಾದರಿಯ ಕಥೆಗಳಲ್ಲಿ ಬರುವ ಆಶಯಗಳನ್ನು ಗುರುತಿಸಿ, **'ಮೋಟಿಫ್ ಇಂಡೆಕ್ಸ್ ಆಫ್ ಫೋಕ್ ಲಿಟರೇಚರ್'** ಕೃತಿಯನ್ನು ಮುಂದಿಟ್ಟುಕೊಂಡು ಆಶಯಗಳ ಖಚಿತವಾದ ಸಂಖ್ಯೆಗಳೊಂದಿಗೆ ಅವುಗಳನ್ನು ಬರೆದು ಪಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಹೀಗಾಗಿ ಆಗಿನ ಕಾಲಕ್ಕೆ ಒಬ್ಬ ಯುವ ತರುಣನಿಂದ ಹೊರಬಂದ ಶಾಸ್ತ್ರೀಯ ದೃಷ್ಟಿಯ ಒಂದು ಅಪರೂಪದ ಕಥಾಸಂಕಲನ ಇದು ಎನಿಸುತ್ತದೆ.

ಈ ಮೇಲಿನ ಕೃತಿಗಳು ಪ್ರಕಟವಾದ ನಂತರ, ಒಬ್ಬ ವಕ್ತಾರನಿಂದಲೇ ಜನಪದ ಕಥೆಗಳನ್ನು ಸಂಗ್ರಹಿಸಿದ್ದು ಎಂಬ ಅರಿವು ಹೊತ್ತು, ಆ ವಿಶೇಷತೆಯನ್ನು ಗಮನಿಸಿಯೇ ಕೃತಿಗೆ ಹೆಸರು ಕೊಡಲು ನಿಶ್ಚಯಿಸಿ ಪ್ರಕಟವಾದ ಕೃತಿ **'ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕತೆಗಳು'**. ಇದರ ಸಂಪಾದಕರು ಡಾ. ಸಿ. ವೀರಣ್ಣ. ಪ್ರಕಟವಾದುದು ೧೯೭೪ರಲ್ಲಿ, ಬೆಂ.ವಿ.ವಿ.ಯಿಂದ. ಈ ಸಂಗ್ರಹದ ಕಥೆಗಳನ್ನು ಹೇಳಿದವರು ಎಚ್.ಸಿ.ಮುನಿಯಪ್ಪ. ಒಕ್ಕಲುಮಕ್ಕಳು ಸಮುದಾಯಕ್ಕೆ ಸೇರಿದವರು. ಊರು ಹಣಬೆ. ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಜಿಲ್ಲೆಯ ಒಂದು ಸಣ್ಣ ಹಳ್ಳಿ.

ಈ ಕೃತಿಗೆ ಮುನ್ನುಡಿ ಬರೆದಿರುವ ಡಾ। ಜಿ. ಎಸ್. ಶಿವರುದ್ರಪ್ಪ ಅವರು ಹೀಗೆ ಬರೆಯುತ್ತಾರೆ– 'ಈ ಸಂಗ್ರಹದಲ್ಲಿರುವ ಇಪ್ಪತ್ತೆರಡು ಕತೆಗಳು ಒಬ್ಬನೇ ಹೇಳಿದವುಗಳೆಂಬುದೆ ಈ ಸಂಗ್ರಹದ ವಿಶೇಷಗಳಲ್ಲಿ ಒಂದು. ಯಾಕೆಂದರೆ ಇದುವರೆಗು ಬಂದ ಹಲವು ಜನಪದ ಕತೆಗಳ ಸಂಗ್ರಹ ಹಲವರಿಂದ, ಹಲವೆಡೆಯಿಂದ ಕೇಳಿ ಬರೆದುಕೊಂಡವು. ಆದರೆ ಈ ಕತೆಗಳು ಮಾತ್ರ ಒಂದೇ ಊರಿನ, ಒಬ್ಬನೇ ವ್ಯಕ್ತಿಯ ಬಾಯಿಂದ ಬಂದವು. ಹೀಗೆ ಒಬ್ಬರೇ ಹೇಳಿದ ಹಾಡುಗಳ ಸಂಗ್ರಹಗಳು ಬಂದಿವೆ. ಸೋಬಾನೆ ಚಿಕ್ಕಮ್ಮನ ಪದಗಳು, ತಿಮ್ಮಕ್ಕನ ಪದಗಳು ಇಂಥವು. ಆದರೆ ಒಬ್ಬನೇ ಹೇಳಿದ ಕತೆಗಳು ಒಂದು ಸಂಪುಟವಾಗಿ ಬರುತ್ತಿರುವುದು ನಮಗೆ ತಿಳಿದಮಟ್ಟಿಗೆ ಇದೇ ಮೊದಲು' (ಒ.ಹೇ.ಕ.ಮುನ್ನುಡಿ ಪು.೪.). ಡಾ. ಜಿಎಸ್‌ಎಸ್ ಅವರೇ ಈ ಕೃತಿಗೆ ಹೆಸರನ್ನು

ಸೂಚಿಸಿದ್ದಾರೆ ಎಂಬುದು ಇಲ್ಲಿಯ ಮಹತ್ವದ ಸಂಗತಿಯಾಗಿದೆ. ಅವರು ಶಿಷ್ಟಸಾಹಿತ್ಯದ ಕವಿ, ವಿಮರ್ಶಕ, ಕಾವ್ಯಮೀಮಾಂಸಕಾರ. ಹೀಗಾಗಿ ಅಭಿವ್ಯಕ್ತಿಯ ಬಗ್ಗೆ ಎಚ್ಚರ ಆಸಕ್ತಿ ಇರುವ ಕರ್ನಾಟಕದ ಹಿರಿಯರೊಬ್ಬರು ಒಂದು ಜನಪದ ಕಥೆಯ ಸಂಗ್ರಹವನ್ನು ಹೀಗೆ ಒಬ್ಬನ ಅಭಿವ್ಯಕ್ತಿಯಾಗಿ ನೋಡುವ ಅವಶ್ಯಕತೆ ಇದೆ ಎಂದು ಗ್ರಹಿಸಿದ್ದು ಒಂದು ವಿಶೇಷ ದೃಷ್ಟಿಯೇ ಎನ್ನಬೇಕು. ಒಬ್ಬನ ಅಭಿವ್ಯಕ್ತಿಯ ಮಹತ್ವವನ್ನು ಅರಿತೇ ಅವರು ಹೀಗೆ ಮಾಡಿದ್ದಾರೆ ಎಂಬುದು ಸ್ಪಷ್ಟ. ಮತ್ತು ಈ ಕೃತಿಯ ವಿಶೇಷತೆಯನ್ನು ವಿವರಿಸುವಲ್ಲಿ ಅವರು ಕಂಡುಕೊಂಡ ಮೊದಲ ಸಂಗತಿಯೇ ಇದಾಗಿದೆ.

ಆದರೆ ಈ ಮೇಲೆ ಹೇಳಿದಂತೆ ಧವಳಶ್ರೀ ಅವರ **'ಜಾನಪದ ಕಥಾಮೃತ'**, ಶಿವಕುಮಾರ ಅವರ **'ನಾಗೇಂದ್ರ ಮತ್ತು ಇತರ ಜನಪದ ಕಥೆಗಳು'**, ಡಾ. ತೀ.ನಂ.ಶಂಕರನಾರಾಯಣ ಅವರಿಂದ ಸಂಗ್ರಹಗೊಂಡು ಪ್ರಕಟವಾದ **'ಸಂಕೀರ್ಣ ಜನಪದ ಕಥೆಗಳು'** ಇವೆಲ್ಲ ಆಯಾ ಕೃತಿಗಳ ಸಂಪಾದಕರಿಗೆ ಅರಿವಿಲ್ಲದೆಯೂ ಒಬ್ಬೊಬ್ಬ ವಕ್ತಾರ ಹೇಳಿದ ಕಥೆಗಳ ಸಂಗ್ರಹಗಳೇ ಆಗಿದ್ದು, **'ಒಬ್ಬನೇ ಹೇಳಿದ ಇಪ್ಪತ್ತೇರಡು ಜಪದ ಕಥೆಗಳು'** ಸಂಗ್ರಹಕ್ಕಿಂತ ಮುಂಚೆಯೇ ಪ್ರಕಟವಾಗಿವೆ. ಈ ಸಂಗತಿ ಡಾ. ಸಿ. ವೀರಣ್ಣ ಹಾಗೂ ಮುನ್ನುಡಿ ಬರೆದ ಜಿಎಸ್ಎಸ್ ಅವರ ಗಮನಕ್ಕೆ ಬಂದಂತಿಲ್ಲ. ಆದರೆ ಒಬ್ಬನಿಂದ ಸಂಗ್ರಹಿತ ಸಾಹಿತ್ಯ ಅಧ್ಯಯನಕ್ಕೆ ಒಂದು ಉತ್ತಮ ಸಾಹಿತ್ಯವಾಗಬಲ್ಲುದು ಎಂಬ ಜಿ.ಎಸ್.ಎಸ್. ಅವರ ಅಭಿಪ್ರಾಯ ಮಹತ್ವದ್ದಾಗಿದೆ. ಅವರೇ ಮುಂದುವರೆದು ಹೇಳುತ್ತಾರೆ– 'ಈ ಕತೆಗಳನ್ನು ಓದುತ್ತ ಹೋದಂತೆ ನನಗೆ ಖುಷಿ ಕೊಟ್ಟ ಅಂಶವೆಂದರೆ, ಈ ಕತೆಗಳ ಅಭಿವ್ಯಕ್ತಿ. ನಾನು ಕತೆಗಾರನನ್ನು, ಅವನ ಪರಿಸರವನ್ನು ಹಾಗೂ ಆತನ ಅಭಿವ್ಯಕ್ತಿಯನ್ನು ಬೇರ್ಪಡಿಸಿ ನೋಡಲಾರೆ. ಕತೆ ಹೇಳುವವನ ಭಾಷೆಯ ಸೊಗಸು, ಸೊಗಡು, ಅವನ ಧಾಟಿ, ಧ್ವನಿ, ಹಾಸ್ಯ, ಅವನ ಸಮಕಾಲೀನತೆಯಿಂದ ಆತನ ಅಭಿವ್ಯಕ್ತಿಗೆ ಒದಗುವ ವಿಶೇಷತೆ, ಇವೂ ನನ್ನಂಥವನಿಗೆ ಮುಖ್ಯ' (ಅದೇ,೫). ಶಿವರುದ್ರಪ್ಪನವರ ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಜನಪದ ಕಥೆಗಳ ಅಷ್ಟೇ ಅಲ್ಲ, ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳ ಅಧ್ಯಯನ ನಡೆಯಬೇಕಾದುದು ಅವಶ್ಯವಿದೆ. ಜಾನಪದ ಕ್ಷೇತ್ರದಲ್ಲಿ ಒಂದಿಷ್ಟು ಕವಿಕೇಂದ್ರಿತ ಅಧ್ಯಯನಗಳು ನಡೆದಿವೆ; ವಕ್ತೃ ಕೇಂದ್ರಿತ ಅಧ್ಯಯನಗಳು ನಡೆದಿಲ್ಲ. ಹಾಗೆ ನಡೆಯಬೇಕಾದುದು ಅವಶ್ಯವಿದೆ. ಅದೂ ಜನಪದ ಕಥೆಗಳ ಅಧ್ಯಯನದಲ್ಲಿ 'ವಕ್ತೃ ಕೇಂದ್ರಿತ' ಅಧ್ಯಯನ ಸ್ವಲ್ಪ ಕಠಿಣವೆನಿಸಿದರೂ ಆ ಬಗೆಯ ಅಧ್ಯಯನಗಳ ಜರೂರಿ ಇದೆ ಎಂದು ಹೇಳಬಹುದಾಗಿದೆ.

ಸಂಪಾದಕರಾದ ಡಾ. ಸಿ.ವೀರಣ್ಣ ಅವರು ಒಂದು ಮಹತ್ವದ ಮತ್ತು ಅತ್ಯಂತ ವಿಶೇಷವೆನಿಸುವ ಕೆಲಸವನ್ನು ಮಾಡಿದ್ದಾರೆ. ಒಬ್ಬ ಪ್ರತಿಭಾವಂತನ ಅಭಿವ್ಯಕ್ತಿಯನ್ನು ಒಂದೆಡೆ ಹಿಡಿದಿಟ್ಟಿದ್ದಾರೆ. ಇಂತಹ ಪ್ರಯತ್ನಗಳು ಕಥೆಗಳಿಗೆ ಸಂಬಂಧಿಸಿದಂತೆ ನಡೆದಿರುವುದು ಅಪರೂಪ. ಅವುಗಳಲ್ಲಿ ಪ್ರಸ್ತುತ ಕೃತಿಯೇ ಬೃಹತ್ ಸಂಪುಟ. ಇಂತಹ ಕೃತಿಗಳು ಇನ್ನೂ ಬರಬೇಕು. ಹೀಗೆ ಒಬ್ಬ ಕಲಾವಿದನ ಅಭಿವ್ಯಕ್ತಿಗಳನ್ನು ಕುರಿತು ವಿಶೇಷವಾದ ಅಧ್ಯಯನಗಳು ನಡೆಯಬೇಕು. ಹೀಗಾಗುವುದರಿಂದ ಜನಪದ ಸಾಹಿತ್ಯದಲ್ಲಿ ಇನ್ನೊಂದು

ಬಗೆಯ ಅಧ್ಯಯನದ ದಾರಿ ತೆರೆದುಕೊಳ್ಳುತ್ತದೆ. ಮತ್ತು ಅಧ್ಯಯನದ ಫಲಿತಾಂಶ ಕೂಡ ಭಿನ್ನವಾಗಿರುತ್ತದೆ.

೧೯೭೦ ಸುತ್ತಮುತ್ತಲೇ ಬಂದಂತಹ ಈ ಕೃತಿಯ ಸಂಪಾದಕರ ಮತ್ತು ಈ ಕೃತಿಯ ಪ್ರಕಟನಾ ಕೇಂದ್ರ ಒಮ್ಮೆಗೆ ಬದಲಾಗಿರುವುದನ್ನು ನಾವು ಗಮನಿಸುತ್ತೇವೆ. ಜಾನಪದವನ್ನು ಅಧ್ಯಯನ ಮಾಡಿದ ಮತ್ತು ಮೈಸೂರು ವಿಶ್ವವಿದ್ಯಾಲಯ ಮತ್ತು ಮೈಸೂರಿನ ಪರಿಸರದಿಂದಲೇ ಪ್ರಕಟವಾದ ಕೃತಿಗಳೇ ಆಗಿನ ಕಾಲಕ್ಕೆ ಮಹತ್ವದ ಗಮನ ಸೆಳೆಯುತ್ತಿದ್ದವು. ಇದು ಸಹಜವಾದ ಸಂಗತಿಯೇ. ಬೆಂಗಳೂರು ವಿಶ್ವವಿದ್ಯಾಲಯವು ಜನಪದ ಸಾಹಿತ್ಯ ಪ್ರಕಟನೆಗೆ ಕೈಹಾಕಿದುದು, ಮತ್ತು ಎಡಪಂಥೀಯ ವಿಚಾರಧಾರೆ ಹೊಂದಿದ ಸಿ. ವೀರಣ್ಣ ಅವರಂಥವರು ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆಗೆ ತೊಡಗಿದ್ದು ಇವೆರಡೂ ನವೀನ ಸಂಗತಿಗಳೆ. ಬಹುಶಃ ಈ ಸಂಗತಿಗಳೆ ಸಿ.ವೀರಣ್ಣ ಅವರಿಂದ ಈ ಮುಂದಿನ ಮಾತುಗಳನ್ನು ಆಡಿಸಿದೆ ಎನ್ನಬೇಕು: 'ನಮ್ಮ ಜಾನಪದ ವಿದ್ವಾಂಸರಲ್ಲಿ ನನ್ನ ಕೋರಿಕೆ ಇಷ್ಟೆ, ಜಾನಪದವನ್ನು ತಲೆಯ ಮೇಲೆ ಹೊತ್ತು ರೋಮಾಂಚನಗೊಳ್ಳುತ್ತಾ, ಉದ್ಗಾರಗಳನ್ನು ಹೊರಡಿಸುವುದಾಗಲೀ, ಜಾನಪದದ ಇತಿಹಾಸ, ರೂಪ, ತಂತ್ರಗಳನ್ನು ಗಮನದಲ್ಲಿರಿಸಿ, ವಸ್ತುವಿನ ಆಶಯ ಮತ್ತು ಪರಿಣಾಮದ ಬಗ್ಗೆ ತಾಟಸ್ಥ್ಯ ವಹಿಸುವುದಾಗಲೀ, ಸಮಕಾಲೀನ ಬದುಕಿಗೆ ಪೋಷಕವಾಗುವಂತಹ ಅಧ್ಯಯನ ವಿಧಾನಗಳಲ್ಲ. ಯಾವುದೇ ಹೊರದೇಶದ ಅಧ್ಯಯನ ವಿಧಾನಗಳ ನೆರವು ಪಡೆದುಕೊಂಡರೂ, ನಮ್ಮ ಜನತೆಯನ್ನು, ಆ ಜನತೆ ಬದುಕುತ್ತಿರುವ ಸಮಾಜವನ್ನು ಪ್ರಧಾನವಾಗಿ ಗಮನದಲ್ಲಿರಿಸಿಕೊಂಡು, ಹೊಸ ಜೀವನವನ್ನು ಕಟ್ಟಲು ನೆರವಾಗುವಂತಹ ಅಧ್ಯಯನ ವಿಧಾನಗಳನ್ನು ರೂಪಿಸಿಕೊಳ್ಳುವುದು ಅಗತ್ಯ–ಎಂಬುದನ್ನು ಗಮನಿಸಿದರೆ ಸಾಕು.' (ಅದೆ, ಅರಿಕೆ ಪು. ೭). ಈ ಮಾತುಗಳನ್ನು ಗಮನಿಸಿದರೆ ಮೈಸೂರು ವಿ. ವಿ. ಸುತ್ತಲಿನ ವಿದ್ವಾಂಸರು ಆಗಿನ ಸಂದರ್ಭದಲ್ಲಿ ಅನುಸರಿಸುತ್ತಿರುವ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನಗಳನ್ನು ಕುರಿತು ಈ ಮಾತುಗಳಿವೆ ಎಂಬಂತೆ ತೋರುತ್ತದೆ. ಮುಖ್ಯವಾಗಿ ವಸ್ತುವನ್ನು ಗಮನಿಸಬೇಕು, ಕೇವಲ ತಂತ್ರಗಳನ್ನು ಗಮನಿಸಿದರೆ ಸಾಲದು ಎಂಬ ಎಚ್ಚರಿಕೆ ಈ ಸಂಪಾದಕರ ಅಭಿಪ್ರಾಯದಲ್ಲಿದೆ ಎನಿಸುತ್ತದೆ. 'ಜನಪದ ಕತೆಗಳನ್ನು ಅಧ್ಯಯನ ಮಾಡಲು ಪೂರ್ವ ಮತ್ತು ಪಶ್ಚಿಮದ ಅನೇಕ ವಿದ್ವಾಂಸರು ನಾನಾ ವಿಧಾನಗಳನ್ನು ಅವಲಂಬಿಸಿರುವುದು ಕಾಣುತ್ತದೆ. ಚಾರಿತ್ರಿಕವಾಗಿ, ಭೌಗೋಲಿಕವಾಗಿ, ಮನಶ್ಶಾಸ್ತ್ರೀಯವಾಗಿ, ಸಾಮಾಜಿಕವಾಗಿ, ಹೀಗೆ ಅನೇಕ ರೀತಿಗಳಲ್ಲಿ ಕತೆಗಳನ್ನು ಅಧ್ಯಯನ ಮಾಡಲು ಸಾಧ್ಯವೆಂದು ತೋರಿಸಿಕೊಟ್ಟಿದ್ದಾರೆ. 'ಈ ಸಂಗ್ರದಲ್ಲಿ ನಾನು ಒಬ್ಬ ಕತೆಗಾರನನ್ನೇ ಕೇಂದ್ರವಾಗಿಟ್ಟುಕೊಂಡು, ಅವನ ಸಾಮಾಜಿಕ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ಅವನು ಹೇಳುವ ಕತೆಗಳಲ್ಲಿ ಕಂಡುಬರುವ ಸಮಾಜದ ರೂಪುರೇಷೆಗಳನ್ನು ಗುರುತಿಸಲು ಪ್ರಯತ್ನಿಸಿದ್ದೇನೆ'. (ಅದೇ, ಪ್ರಸ್ತಾವನೆ, ಪು.೩). ಪಾಶ್ಚಾತ್ಯರ ಸಿದ್ಧಾಂತಗಳನ್ನೇ ಮುಂದಿಟ್ಟುಕೊಂಡು ಜಾನಪದ ಸಾಹಿತ್ಯದ ಅಧ್ಯಯನ ಮಾಡುವುದಕ್ಕಿಂತ ಜನರ ಜೀವನವನ್ನೇ ಆಧರಿಸಿ ಅಧ್ಯಯನ ನಡೆಯಬೇಕೆಂಬ ಎಚ್ಚರಿಕೆಯನ್ನು ಸಂಪಾದಕರು ಇಲ್ಲಿ ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ವಕ್ತಾರನನ್ನೇ ಕೇಂದ್ರವಾಗಿರಿಸಿಕೊಂಡು ಕಥೆಗಳನ್ನು ಹೇಗೆ ಅಧ್ಯಯನ ಮಾಡಬಹುದು ಎಂಬ

ಮಾದರಿಯನ್ನು ಪ್ರಸ್ತಾವನೆಯಲ್ಲಿ ತೋರಿಸಿದ್ದಾರೆ. ಹೀಗಾಗಿ ಒಂದು ಹೊಸಬಗೆಯ ಅಧ್ಯಯನದ ದಿಸೆಯನ್ನು ತೆರೆದು ತೋರಿಸುವ ಪ್ರಯತ್ನವನ್ನು ಈ ಕೃತಿ ಮಾಡುತ್ತದೆ.

ಈ ಕೃತಿಗೆ ಸುದೀರ್ಘವಾದ ೮೨ ಪುಟಗಳ ಪ್ರಸ್ತಾವನೆ ಇದೆ. ಮತ್ತೆ ೮೩ ಪುಟಗಳ ವ್ಯಾಪ್ತಿಯಲ್ಲಿ ನಾಲ್ಕು ಅನುಬಂಧಗಳನ್ನು ಕೊಟ್ಟಿದ್ದಾರೆ. ಸಂಪಾದಕರ ಪರಿಶ್ರಮ ಗಮನಿಸುವಂತಿದೆ. ಅವರು ಮೊದಲೇ ಹೇಳಿದಂತೆ ಕೇವಲ ಪಾಶ್ಚಾತ್ಯರ ಸೈದ್ಧಾಂತಿಕ ದೃಷ್ಟಿಗೆ ಅಂಟಿಕೊಳ್ಳದೆ, ಕಥೆಗಳ ವಸ್ತು ಮತ್ತು ವಕ್ತಾರನ ಬದುಕು ಇವುಗಳನ್ನು ಮುಖ್ಯವಾಗಿ ಗಮನಿಸಿ ಇಲ್ಲಿಯ ಪ್ರಸ್ತಾವನೆ ಮತ್ತು ಅನುಬಂಧಗಳನ್ನು ತಯಾರಿಸಿದ್ದಾರೆ. ಇದೊಂದು ಮಾದರಿ ಸಂಗ್ರಹದಂತೆಯೇ ಆಗಿದೆ. ಪ್ರಸ್ತಾವನೆಯಲ್ಲಿ ಕಥೆಯ ವಸ್ತುವಿನ ಬಗೆಗೆ, ತಾವು ಕಥೆಗಳನ್ನು ಸಂಗ್ರಹ ಮಾಡಿದ ಬಗ್ಗೆ, ಕಥೆಗಾರನ ಪರಿಚಯ ಮತ್ತು ಆತನ ಸಂದರ್ಶನಗಳನ್ನು ಕೊಟ್ಟಿದ್ದಾರೆ. ಈ ಸಂಗತಿಗಳನ್ನು ಮುಂದಿಟ್ಟುಕೊಂಡು ಕಥೆಗಳ ಅಧ್ಯಯನ ಮಾಡಬೇಕಾದುದು ಅವಶ್ಯವಿದೆ. ಅನುಬಂಧಗಳಲ್ಲಿ ಮೊದಲು ಹೇಳಿಸಿದ ಒಂದು ಕಥೆಯನ್ನು ನಾಲ್ಕು ತಿಂಗಳುಗಳ ನಂತರ ಪುನಃ ಹೇಳಿಸಿದ್ದಾರೆ. ಅದನ್ನು ಅನುಬಂಧದಲ್ಲಿ ಕೊಟ್ಟು, ಮೊದಲು ಹೇಳಿದ ಕಥೆಯ ಪಾಠಕ್ಕೂ ನಂತರ ಹೇಳಿದ ಕಥೆಯ ಪಾಠಕ್ಕೂ ಆಗಿರುವ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ನಂತರ ಕಥೆಗಳ ಮಾದರಿ ಮತ್ತು ಆಶಯಗಳನ್ನು ಗುರುತಿಸಲು ಪ್ರಯತ್ನಿಸಿದ ಭಾಗ ಇದೆ. ಸಂಪಾದಕರಿಗೆ ಮಾದರಿ ಮತ್ತು ಆಶಯಗಳ ಸರಿಯಾದ ಕಲ್ಪನೆ ಇಲ್ಲ. ಅವರು ಈ ವಿಷಯಕ್ಕೆ ಸಂಬಂಧಿಸಿದ ಕೃತಿಗಳನ್ನು ನೋಡಬೇಕೆಂದು ಪ್ರಯತ್ನ ಪಟ್ಟರೂ ಅವರಿಗೆ ಆ ಕೃತಿಗಳು ದೊರಕಿಲ್ಲ. ಹೀಗಾಗಿ ಖಚಿತವಾಗಿ ಮಾದರಿ ಮತ್ತು ಆಶಯಗಳನ್ನು ಗುರುತಿಸಲು ಅವರಿಗೆ ಸಾಧ್ಯವಾಗಿಲ್ಲ. ಕೊನೆಯಲ್ಲಿ ಅವರು ಕೊಟ್ಟ ಶಬ್ದಕೋಶ ಉಪಯುಕ್ತವಾಗಿದೆ. ಇಲ್ಲಿಯ ಸಂಪಾದಕರ ದೃಷ್ಟಿ, ಅವರ ಪ್ರಯೋಗ ಮತ್ತು ಪ್ರಯತ್ನಗಳನ್ನು ನಾವು ಮೆಚ್ಚಿಕೊಳ್ಳಬೇಕು.

೧೯೭೫ ರಲ್ಲಿ **'ಎಪ್ಪತ್ತೊಂದು ಜನಪದ ಕಥೆಗಳು'** ಎಂಬ ಸಂಗ್ರಹವನ್ನು ಕೆ.ವೈ.ಶಿವಕುಮಾರ ಅವರು ಪ್ರಕಟಿಸಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಥೆಗಳನ್ನು ಹೊಂದಿದ ಮೊದಲನೇ ಕೃತಿ ಇದು ಎನಿಸುತ್ತದೆ. ೫೧೦ ಪುಟಗಳ ಒಂದು ಬೃಹತ್ ಸಂಪುಟ ಇದಾಗಿದೆ. ಪರಿವಿಡಿಯಲ್ಲಿ ಕಥೆಗಳನ್ನು ವಕ್ತಾರರ ಹೆಸರಿನಲ್ಲಿ ಭಾಗವಾಗಿ ವಿಂಗಡಿಸಿ ಕೊಟ್ಟಿದ್ದಾರೆ. ಐದು ಜನ ವಕ್ತಾರರು ಕ್ರಮವಾಗಿ ಇಲ್ಲಿಯ ಕಥೆಗಳನ್ನು ಹೀಗೆ ಹೇಳಿದ್ದಾರೆ: ಶ್ರೀ ಹೆಬ್ಬಾಳೈನೋರು–೨೧, ಶ್ರೀ ಹೆಬ್ಬಾಳೈನೋರ ಪತ್ನಿ ಪಾರ್ವತಮ್ಮನವರು–೧೧, ಹೈಬ್ಬಾಳೈನೋರ ಮಕ್ಕಳು–೫, ಹೀಗೆ ಒಂದೇ ಕುಟುಂಬದವರು ಹೇಳಿದ ೩೭ ಕಥೆಗಳು ಇಲ್ಲಿರುವುದು ವಿಶೇಷವೆ. ಇನ್ನೊಂದು ಕುಟುಂಬದ ಕುಂಟಪ್ಪ ಉ॥ ಸಿದ್ದಪ್ಪ–೧೦, ಮತ್ತೊಂದು ಕುಟುಂಬದ ಶ್ರೀಮತಿ ದೇವೀರಮ್ಮ ಸಿದ್ದವೀರಶೆಟ್ಟರು–೨೪ ಕಥೆಗಳನ್ನು ಹೇಳಿದ್ದಾರೆ. ಈ ಸಂಗ್ರಹದ ಇನ್ನೊಂದು ವೈಶಿಷ್ಟ್ಯವೆಂದರೆ ಈ ಎಲ್ಲ ಕಥೆಗಾರರು ನೆಲೆಸಿದ್ದು ಮೈಸೂರು ಜಿಲ್ಲೆಯ ಕೃಷ್ಣರಾಜನಗರದಲ್ಲಿ. ಹೀಗಾಗಿ ಒಂದೇ ಊರಿನಲ್ಲಿ ಸಂಗ್ರಹಿಸಿ ಪ್ರಕಟವಾದ ಕೃತಿ ಇದಾಗುತ್ತದೆ. ಇಲ್ಲಿಯ ವಕ್ತಾರರು ಹೇಳಿದ ಕಥೆಗಳ ಮೊತ್ತ ನೋಡಿದರೆ, ಒಬ್ಬ ಹೇಳಿದ ೫ ಕಥೆಗಳನ್ನು ಬಿಟ್ಟರೆ, ಒಬ್ಬೊಬ್ಬ ವಕ್ತಾರನ ಕಥೆಗಳನ್ನು

ಇಟ್ಟುಕೊಂಡೂ ಅಧ್ಯಯನ ಮಾಡಬಹುದಾಗಿದೆ. ಇಲ್ಲಿಯ ಕಥೆಗಳನ್ನು ವಕ್ತಾರರ ಲೆಕ್ಕದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಅಭ್ಯಾಸ ಮಾಡಬಹುದು. ಅಥವಾ ಒಂದೇ ಗ್ರಾಮದ ಕಥೆಗಳಾಗಿಯೂ ಇವನ್ನು ಅಭ್ಯಾಸ ಮಾಡಬಹುದು. ಈ ದೃಷ್ಟಿಯಿಂದ ಇಲ್ಲಿಯ ಕಥೆಗಳು ಗಮನ ಸೇಳೆಯುತ್ತವೆ.

ವಕ್ತಾರರನ್ನು ಮುಖ್ಯವಾಗಿಟ್ಟುಕೊಂಡು ಜನಪದ ಕಥೆಗಳನ್ನು ಅಭ್ಯಾಸ ಮಾಡಬಹುದು ಎಂಬ ಸಂಗತಿಯನ್ನು ಸಂಪಾದಕರಾದ ಶಿವಕುಮಾರ ಅವರು ಆಗಿನ ಕಾಲದಲ್ಲಿ ಗಮನಿಸಿದ್ದರು ಎಂಬ ಸೂಚನೆಗಳು ಅವರ ಪ್ರಸ್ತಾವನೆಯಲ್ಲಿ ದೊರೆಯುತ್ತವೆ. 'ನನ್ನ ಆತ್ಮೀಯ ಗುರುವರ್ಯರೊಬ್ಬರು– ಜನಪದ ಕತೆಗಾರರ ಜೀವನ ಚರಿತ್ರೆಯನ್ನು ಓದುಗರಿಗೆ ತಿಳಿಸಿಕೊಡುವುದು ಸರಿಯಷ್ಟೆ. ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿಯಾದರೂ ನೀವು ತಿಳಿದುಕೊಂಡಿರುತ್ತೀರ, ಅವರ ವೈಯಕ್ತಿಕ ಜೀವನದ ಪ್ರಭಾವವೇನಾದರೂ ಅವರು ಹೇಳುವ ಕಥೆ, ಗೀತೆಗಳ ಮೇಲೆ ಆಗಿರುತ್ತದೆಯೇ. ಆಗಿದ್ದರೆ ಅದನ್ನು ಗುರುತಿಸುವ ಪ್ರಯತ್ನವನ್ನು ಮಾಡಿ. ಅದು ಒಳ್ಳೆಯ ಕೆಲಸವಾಗುತ್ತದೆ ಎಂಬ ಅಮೂಲ್ಯವಾದ ಸಲಹೆಯನ್ನು ವ್ಯಕ್ತಪಡಿಸಿದರು.' ಎಂದು ಬರೆಯುತ್ತಾರೆ. ಅವರ ಗುರುಗಳ ಸಲಹೆಯ ಮೇರೆಗೆ ಅವರು ಈ ವಿಷಯವನ್ನು ಗಮನಿಸಿದ್ದಾರೆ. ಅದನ್ನು ಅವರು ಹೀಗೆ ವಿವರಿಸುತ್ತಾರೆ: 'ನಾನು ಒಬ್ಬ ಮಹಿಳೆಯಿಂದ ಸಂಗ್ರಹಿಸಿದ ಕಥೆಯಲ್ಲಿ– ಒಬ್ಬ ರಾಜನಿಗೆ ಮಕ್ಕಳೇ ಇರುವುದಿಲ್ಲ. ಅವನ ಹೆಂಡ್ತಿ ಅವನಿಗೆ ಇನ್ನೊಂದು ಮದುವೆಯಾಗು ಎಂದು ಹೇಳುತ್ತಾಳೆ. ಆಗ ರಾಜ ನಿನಗೆ ಆಗಲಿಲ್ಲ, ಇನ್ನು ಇನ್ನೊಬ್ಬಳನ್ನು ಕಟ್ಟಿಕೊಂಡು ಅವಳ ಬಾಳನ್ನು, ನಿನ್ನ ಬಾಳನ್ನು ಎರಡನ್ನೂ ನಾನು ಹಾಳು ಮಾಡಲಿ? ಆಗುವುದಿಲ್ಲವೆಂದು ಹೇಳುತ್ತಾನೆ– ಎಂಬುದಾಗಿ ಬರುತ್ತದೆ. ಈ ಮಹಿಳೆ ತನ್ನ ಗಂಡನಿಗೆ ಎರಡನೆ ಹೆಂಡತಿ. ಮೊದಲನೆ ಹೆಂಡತಿಗೂ ಮಕ್ಕಳಿರಲಿಲ್ಲ. ಇವರಿಗೂ ಮಕ್ಕಳಿಲ್ಲ. ಅಲ್ಲದೆ ಇವರ ಗಂಡ ಆಗಲೇ ತೀರಿಕೊಂಡಿದ್ದಾರೆ. ...ಈ ರೀತಿ ಗುರುತಿಸುತ್ತ ಹೋದರೆ ಜನಪದ ಕಥೆಗಳಲ್ಲಿ ಪಾಠಾಂತರಗಳು ಏಕೆ, ಹೇಗೆ ಆಗುತ್ತವೆ ಎಂಬುದನ್ನೂ ಸಹ ಗುರುತಿಸಬಹುದು' (ಎ.ಜ.ಕ.ಪ್ರ.ಪು.೨). ಈ ಅರಿವಿನ ಹಿನ್ನೆಲೆಯಲ್ಲಿಯೇ ಅವರು ತಾವು ಸಂಗ್ರಹಿಸಿದ ಕಥೆಗಳನ್ನು ಪ್ರತ್ಯೇಕವಾಗಿ ವಕ್ತಾರರ ಹೆಸರಿನಲ್ಲಿಯೇ ಭಾಗ ಮಾಡಿಕೊಂಡಂತೆ ತೋರುತ್ತದೆ.

ಡಾ. ಎಲ್. ಆರ್. ಹೆಗಡೆ ಅವರು ಕಾರವಾರ ಜಿಲ್ಲೆಯಿಂದ ಬಹುಮಹತ್ವದ ಸಂಕಲನಗಳನ್ನು ಕೊಟ್ಟ ಹಿರಿಯರು. ಅವರು ೧೯೭೮ರಲ್ಲಿ ಪ್ರಕಟಿಸಿದ **'ಕರಾವಳಿಯ ಕಥೆಗಳು'** ಎಂಬ ಸಂಗ್ರಹದ ೨೪ ಕಥೆಗಳನ್ನು ಹೇಳಿದವಳು ಜಟ್ಟು ಜಟ್ಟಿ ಮುಕ್ರಿ ಎಂಬ ಒಬ್ಬ ಹರಿಜನ ಮುದುಕಿ. ಈಕೆ ಹೆಗಡೆ ಎಂಬ ಗ್ರಾಮದವಳು. ಈಕೆಯಿಂದ ಮತ್ತು ಈಕೆಯ ಮಗಳಾದ ಪರಮೇಶ್ವರಿಯಿಂದ ಹಲವಾರು ಹಾಡುಗಳನ್ನು, ಕಥೆಗಳನ್ನು ಎಲ್.ಆರ್. ಹೆಗಡೆ ಅವರು ಸಂಗ್ರಹಿಸಿದ್ದಾರೆ. ೧೯೭೫ನೇ ವರ್ಷದಲ್ಲಿ ಹರಿಜನ ಕೇರಿಗೆ ಹೋಗಿ, ಅಲ್ಲಿಯ ದೇವಸ್ಥಾನಗಳ ಕಟ್ಟೆಯ ಮೇಲೆ ಕುಳಿತು ತಾಯಿ–ಮಗಳಿಂದ ಹಾಡುಗಳನ್ನು ಕಥೆಗಳನ್ನು ಸಂಗ್ರಹಿಸಿದ್ದಾರೆ.

ಈ ಸಾಲಿಗೆ ಸೇರುವ ಇನ್ನೊಂದು ಕೃತಿ ಎಂದರೆ ಕೃಷ್ಣಮೂರ್ತಿ ಹನೂರ ಅವರಿಂದ ಸಂಪಾದನೆಗೊಂಡು, ೧೯೭೮ ರಲ್ಲಿ ಪ್ರಕಟವಾದ **'ಲೀಲಾವತಿ-ಪದ್ಮಾವತಿ'** ಎಂಬ ಕಥಾಸಂಗ್ರಹ. ಈ ವಕ್ತಾರನು ಗೊಲ್ಲಗೌಡನಾಗಿದ್ದು, ಹೆಸರು ಕ್ಯಾತಗಾನಹಳ್ಳಿ ಗಿರಿಯಯ್ಯ. ಈತನು ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಕ್ಯಾತಗಾನಹಳ್ಳಿ ಎಂಬ ಗ್ರಾಮದವನು. ಆದರೆ ಈತನ ವ್ಯವಹಾರವೆಲ್ಲ ಚಿತ್ರದುರ್ಗ ಜಿಲ್ಲೆಗೆ ಸೇರಿದ ಚೆಳ್ಳಕೆರೆ ಗ್ರಾಮಕ್ಕೆ ಸಂಬಂಧಿಸಿವೆ. ಈ ಲೀಲಾವತಿ-ಪದ್ಮಾವತಿಯರು ಬೃಹತ್ಕಥೆಯಲ್ಲಿ ಬರುವ ಬೇತಾಳನ ಕಥೆಗಳಿಗೆ ಸಂಬಂಧಿಸಿದವರು. ಒಬ್ಬ ನಿರಕ್ಷರಿ ವಕ್ತಾರ, ಅದೂ ಬುಡಕಟ್ಟಿಗೆ ಸೇರಿದ ಗೊಲ್ಲ ಜನಾಂಗದವನು, ಅವನಿಗೆ ಲಿಖಿತ ಪರಂಪರೆಯ ದೀರ್ಘಕಥೆಗಳು ಬರುವುದೆಂದರೆ ಆಶ್ಚರ್ಯದ ಸಂಗತಿಯೇ. ಈ ಕಥೆಗಳು ಲಿಖಿತದಿಂದ ಮೌಖಿಕದ ಕಡೆ ಬಂದವೋ, ಮೌಖಿಕದಿಂದ ಲಿಖಿತಕಡೆ ಹರಿದುಹೋದವೋ ಎಂಬ ಆಶ್ಚರ್ಯ ಉಂಟಾಗುತ್ತದೆ. ಅದಕ್ಕಾಗಿಯೇ ಇಂತಹ ವಕ್ತಾರರ ಕಥೆಗಳ ಅಧ್ಯಯನ ನಡೆಯಬೇಕಾದುದು ಅವಶ್ಯವಿದೆ ಎಂದು ಹೇಳುವುದು. ಈ ಎಲ್ಲ ಸಂಗ್ರಹಗಳ ಒಂದು ವಿಶೇಷವೆಂದರೆ, ತಮ್ಮ ವಕ್ತಾರರ ಬಗೆಗೆ ವಿವರವಾದ ಮಾಹಿತಿಗಳನ್ನು ಸಂಪಾದಕರು ಒದಗಿಸುತ್ತಾರೆ, ಮತ್ತು ಸುದೀರ್ಘವಾದ ಸಂದರ್ಶನಗಳನ್ನು ನಡೆಸಿ, ತಮ್ಮ ಸಂಗ್ರಹಗಳಲ್ಲಿ ಹಾಕಿದ್ದಾರೆ. ಇವೆಲ್ಲ ಅಧ್ಯಯನಕ್ಕೆ ಅನುಕೂಲವಾಗುವ ಸಂಗತಿಗಳಾಗಿವೆ.

೧೯೭೯ ರಲ್ಲಿ ಇನ್ನೊಂದು ಇಂತಹದೇ ಕಥಾಸಂಕಲನ ಹೊರಬಂದಿದೆ. ಅದು **'ನೂರೊಂದು ಗಿಳಿ ಮತ್ತು ಇತರ ಕತೆಗಳು'** ಎಂಬುದು. ಇಲ್ಲಿಯ ೨೪ ಕಥೆಗಳನ್ನು ಡಿ.ಕೆ.ಈರೇಗೌಡ ಅವರು ೮೨ ವರ್ಷ ವಯಸ್ಸಿನ ತಮ್ಮ ತಂದೆ ನಂಜೇಗೌಡರಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇವರ ಊರು ಹಾಸನ ತಾಲೂಕಿಗೆ ಸೇರಿದ ಹೊಸಹಳ್ಳಿ ಎಂಬುದು. ಅವರು ತಮ್ಮ ಸಂಗ್ರಹದ ಪ್ರಸ್ತಾವನೆಯಲ್ಲಿ ಹೀಗೆ ಬರೆದುಕೊಂಡಿದ್ದಾರೆ : 'ನನ್ನ ತಂದೆಯವರ ವೃತ್ತಿ ವ್ಯವಸಾಯ. ಅವರು ಆಳುಗಳೊಡನೆ ಕೆಲಸ ಮಾಡುವಾಗ ಅವರ ಬೇಸರ ಕಳೆಯಲು ಅಥವಾ ಕೆಲಸ ಹಗುರಗೊಳಿಸಲು ಅಥವಾ ಸಂಜೆ ಮನೆಯಲ್ಲಿ ಎಲ್ಲರೂ ಒಂದೆಡೆ ಸೇರಿದ್ದಾಗ ಕತೆ ಹೇಳುತ್ತಿರುವುದನ್ನು ನಾನು ಚಿಕ್ಕವನಾಗಿದ್ದಾಗ ಕೇಳಿದ್ದೆ. ಕೆಲಸ ಮಾಡುವ ಸಂದರ್ಭದಲ್ಲಿ ಮಾತನಾಡುತ್ತಿದ್ದಾಗ ಆ ಮಾತಿನ ಯಾವುದೋ ಎಳೆಯನ್ನು ಹಿಡಿದು ಕತೆಗೆ ಆರಂಭಿಸುತ್ತಿದ್ದರು. ಇದರಿಂದ ಕೆಲಸದ ಆಯಾಸ ಪರಿಹಾರವಾಗುವುದರ ಜೊತೆಗೆ ಒಂದು ರೀತಿಯ ನೀತಿ ಬೋಧನೆಯೂ ಆಗುತ್ತಿತ್ತು. ಎಷ್ಟೋ ವೇಳೆ ಜಗಳ ಮಾಡಿಕೊಂಡೊ, ಬೇರೆ ಯಾವುದಕ್ಕೊ ದೂರು ತಂದರೆ ಅವರಿಗೆ ಈ ಕತೆಗಳನ್ನು ಹೇಳಿ ಸಮಾಧಾನ ಮಾಡುತ್ತಿದ್ದುದುಂಟು. ಇದನ್ನು ನೋಡಿದಾಗ ಜನಪದ ಕತೆಗಳು ಕೇವಲ ಮನರಂಜನೆಯನ್ನು ಮಾತ್ರ ಒದಗಿಸುವುದಿಲ್ಲ, ಸಮಾಜದ ಆಗುಹೋಗುಗಳಲ್ಲೂ ಅವುಗಳ ಪಾತ್ರವಿದೆ, ಬದುಕನ್ನು ತಿದ್ದಲು ಅವು ಸಹಾಕಾರಿಯಾಗುತ್ತವೆ ಎಂಬುದು ವ್ಯಕ್ತವಾಗುತ್ತದೆ' (ಪ್ರ. ಪು.೧೨). ಸಂಪಾದಕರ ಈ ಗಮನ ಬಹುಮಹತ್ವದ ಸಂಗತಿಯನ್ನು ಬಿತ್ತರಿಸುತ್ತದೆ. ಅಂದರೆ ಒಬ್ಬ ಪ್ರತಿಭಾವಂತ ವಕ್ತಾರ ಕೇವಲ ಕಥೆಗಳನ್ನು ಹೇಳುತ್ತಾನೆ ಅಥವಾ ಹಾಡುತ್ತಾನೆಂದಲ್ಲ. ಆ ಹಾಡು ಕಥೆ ಗಾದೆ ಒಗಟು

ಮುಂತಾದವುಗಳನ್ನು ತನ್ನ ಬದುಕನ್ನು ಅರ್ಥೈಸಲು, ಬದುಕಿನ ತೊಡಕುಗಳನ್ನು ಸರಳಗೊಳಿಸಿಕೊಳ್ಳಲು ಬಳಸಿಕೊಳ್ಳುತ್ತಾನೆ ಎಂಬುದು ಬಹುಮುಖ್ಯಸಂಗತಿ. ಈ ಸಂಗತಿಗಳು ಒಬ್ಬ ವಕ್ತಾರ ನಿರೂಪಿಸಿದ ಕತೆಗಳಲ್ಲೂ ಹಣಿಕಿಕ್ಕಿ ಕೊಳ್ಳಬಹುದು. ಇಂತಹ ಸೂಕ್ಷ್ಮಗಳನ್ನು ಗುರುತಿಸುವ ಕೆಲಸ ಒಬ್ಬ ವಕ್ತಾರನ ಮೌಖಿಕ ಸಾಹಿತ್ಯದಲ್ಲಿ ನಡೆಯಬೇಕು. ಅದನ್ನು ಕೇವಲ ಒಬ್ಬ ಪ್ರತಿಭಾವಂತ ವಕ್ತಾರ ನಿರೂಪಿಸುತ್ತಾನೆಂದು ಮಾತ್ರವಲ್ಲ, ಅದು ಅವನ ಅಭಿವ್ಯಕ್ತಿ ಎಂದು ನೋಡುವ ದೃಷ್ಟಿಯನ್ನು ನಾವು ಬೆಳೆಸಿಕೊಳ್ಳಬೇಕು. ಪಂಪನ ಕಾವ್ಯದಲ್ಲಿ ಪಂಪನ ವ್ಯಕ್ತಿತ್ವ ಕಾಣುವಂತೆ, ಒಬ್ಬ ಪ್ರತಿಭಾವಂತ ವಕ್ತಾರನು ನಿರೂಪಿಸುವ ಜನಪದ ಸಾಹಿತ್ಯದಲ್ಲೂ ಅವನ ವ್ಯಕ್ತಿತ್ವ–ಅವನ ಬದುಕು ಹುದುಗಿರುತ್ತದೆಂಬ ದೃಷ್ಟಿಯ ಅಧ್ಯಯನಗಳು ನಡೆಯುವುದು ಅವಶ್ಯವೆನಿಸುತ್ತದೆ.

ಡಿ.ಕೆ.ಈರೇಗೌಡ ಅವರು ತಮ್ಮ ಪ್ರಸ್ತಾವನೆಯಲ್ಲಿ ಹೀಗೂ ಬರೆದುಕೊಂಡಿದ್ದಾರೆ: 'ಈಗಾಗಲೆ ಪ್ರಕಟವಾಗಿರುವ ಸಿ.ವೀರಣ್ಣ ಅವರು 'ಒಬ್ಬರೆ ಹೇಳಿದ ಇಪ್ಪತ್ತೆರಡು ಜನಪದ ಕತೆಗಳು' ಬಿಟ್ಟರೆ ಇಷ್ಟೊಂದು ಕತೆಗಳನ್ನು ಒಬ್ಬರಿಂದಲೇ ಸಂಗ್ರಹಿಸಿ ಪ್ರಕಟಿಸಿರುವುದು ಕಂಡುಬರುತ್ತಿಲ್ಲ'(ಪ್ರ. ಪು. ೧೧). ಆದರೆ ಈ ಮೊದಲೇ ಸಾಕಷ್ಟು ಜನ ಇಂತಹ ಕೆಲಸ ಮಾಡಿರುವುದು ಈಗಾಗಲೇ ನೋಡಿರುವುದರಿಂದ, ಮೊದಮೊದಲಿಗೆ ಹುಮ್ಮಸ್ಸಿನಲ್ಲಿ ಸಂಗ್ರಹ ಮತ್ತು ಪ್ರಕಟಣೆ ಎಂಬ ಕೆಲಸದಲ್ಲಿ ತೊಡಗಿದ ಯುವಕರಿಗೆ ಇಂತಹ ಕೆಲಸವನ್ನು ನಾನೇ ಮಾಡುತ್ತಿದ್ದೇನೆ ಎಂಬ ಭಾವನೆ ಬರುವುದು ಸ್ವಾಭಾವಿಕವಾಗಿದೆ.

೧೯೯೩ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯಿಂದ ಪ್ರಕಟವಾದ **'ಬಂಗಾರ ಕೂದಲ ಚೈರಾಣಿ'** ಡಾ. ಎಂ.ಜಿ.ಈಶ್ವರಪ್ಪ ಅವರಿಂದ ಸಂಪಾದನೆಗೊಂಡ ಒಂದು ವಿಶಿಷ್ಟ ಕೃತಿಯಿದಾಗಿದೆ. ಇಲ್ಲಿಯ ಕಥೆಗಳನ್ನು ಗಿರಿಜಾಬಾಯಿ ಎನ್ನುವಾಕೆ ಮರಾಠ ಸಮುದಾಯಕ್ಕೆ ಸೇರಿದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಹತ್ತಿರದ ಒಂದು ಹಳ್ಳಿಗೆ ಸಂಬಂಧಿಸಿದವಳು. ಈ ಸಂಗ್ರಹದ ೨೫ ಕಥೆಗಳನ್ನು ಹೇಳಿದಾಕೆ ಅವಳು. ಮಧ್ಯವಯಸ್ಸಿನಲ್ಲಿಯೇ ಗಂಡ ತೀರಿಕೊಂಡಾಗ, ಆಕೆಗೆ ಮೂವರು ಮಕ್ಕಳು. ಎಲ್ಲರನ್ನೂ ಕೂಲಿನಾಲಿ ಮಾಡಿ ಬೆಳೆಸಿದಳು. ಮಕ್ಕಳ ಮದುವೆಯಾದ ಮೇಲೆ ಮತ್ತೆ ಒಂಟಿಯಾದಳು. ಮಕ್ಕಳೆಲ್ಲ ಅವಳನ್ನು ಬಿಟ್ಟು ಹೋದರು. ಈಕೆ ಯಾವುದೇ ಊರಿಗೆ ಹೋದರೂ ಯಾವುದೋ ಒಂದು ಮನೆಯ ಕಟ್ಟೆಯ ಮೇಲೆ ಕುಳಿತು, ಮಕ್ಕಳನ್ನು ಕೂಡಿಸಿಕೊಂಡು ಕಥೆ ಹೇಳುತ್ತಿದ್ದರೆ ಗಿರಿಜಾಬಾಯಿಯ ಕಥೆ ಹೇಳುವ ಮೋಡಿಗೆ ಅವರೆಲ್ಲ ಪರವಶರಾಗುತ್ತಿದ್ದರಂತೆ.

ಕಥೆ ಹೇಳುವ ಒಬ್ಬ ವಕ್ತಾರ ಕೇಳುಗರ ಮನಸ್ಸಿನ ಮೇಲೆ ಎಂತಹ ಪರಿಣಾಮವನ್ನು ಬೀರಬಲ್ಲ ಎಂಬುದಕ್ಕೆ ಸಂಪಾದಕರು ವಿವರಿಸುವ ಒಂದು ಉದಾಹರಣೆಯನ್ನು ಗಮನಿಸಬಹುದಾಗಿದೆ. ಎಂ.ಜಿ.ಈಶ್ವರಪ್ಪ ಅವರು ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಯಾಗಿದ್ದಾಗ ಒಂದು ದೊಡ್ಡ ಶಿಬಿರವನ್ನು ಏರ್ಪಡಿಸಿದ್ದರಂತೆ. ಸಾಯಂಕಾಲ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಒಬ್ಬ ವಿದ್ಯಾರ್ಥಿ ಒಂದು ಜನಪದ ಕಥೆ ಹೇಳುತ್ತೇನೆಂದನು. ನಾಲ್ಕೈದುನೂರು ಜನರ ಮುಂದೆ ಜನಪದ ಕಥೆಯೊಂದರ ನಿರೂಪಣೆ ಪರಿಣಾಮ ಬೀರಬಹುದೇ? ಎಂದು ಅನುಮಾನ ಪಡುತ್ತಲೇ ಅನುಮತಿ ಇತ್ತರಂತೆ.

'ಆತ ಕಥೆ ಶುರುಮಾಡಿದ. ಹದಿನೈದಿಪ್ಪತ್ತು ಜನರು ಕೂತು ಕೇಳುವಂತಹ ಕಥೆಯನ್ನು ನೂರಾರು ಜನ ಮಂತ್ರಮುಗ್ಧರಂತೆ ಕುಳಿತು ಕೇಳುತ್ತಿದ್ದಾರೆ. ಸಣ್ಣ ಹಾವಭಾವಗಳೊಂದಿಗೆ, ಧ್ವನಿಯ ಏರಿಳಿತದೊಂದಿಗೆ ರಾಜಕುಮಾರಿಯನ್ನು ರಾಜಕುಮಾರನಿಂದ ಹುಡುಕಿಸಿದ, ಪಂಥಗಳನ್ನು ಗೆಲ್ಲಿಸಿದ, ಸಾಹಸಗಳನ್ನು ಮೆರೆಸಿದ, ಅತಿಮಾನುಷ ವ್ಯಕ್ತಿಗಳನ್ನು ಸೃಷ್ಟಿಸಿದ, ಪ್ರಾಣಿಗಳನ್ನು ಮನುಷ್ಯರನ್ನಾಗಿ ಮನುಷ್ಯರನ್ನು ಪ್ರಾಣಿಗಳನ್ನಾಗಿ ಪರಿವರ್ತಿಸಿದ. ಕೊನೆಯಲ್ಲಿ ಚಪ್ಪಾಳೆಯನ್ನು ಗಿಟ್ಟಿಸಿಯೇ ಬಿಟ್ಟ. ಒಬ್ಬ ಕಾಲೇಜು ವಿದ್ಯಾರ್ಥಿಯ ಮೇಲೆ ಇಷ್ಟು ಗಾಢವಾದ ಪ್ರಭಾವ ಬೀರಿರುವ ಜನಪದ ಕಥೆಗಾರ ಯಾರು? ಎಂಬ ಅನ್ವೇಷಣೆ ಆಗಿನಿಂದಲೇ ಪ್ರಾರಂಭವಾಯಿತು. ಆತ ಕತೆಗಾರನಲ್ಲ ಕತೆಗಾರ್ತಿ. ಈ ಸಂಕಲನದ ಎಲ್ಲ ಕತೆಗಳೂ ಆಕೆಯವೇ' (ಪ್ರ.ಪು.೯). ಆಕೆಯೇ ಗಿರಿಜಾಬಾಯಿ.

ಅವಳ ಕಥಾನಿರೂಪಣೆಯನ್ನು ಕುರಿತು ಸಂಪಾದಕರು ಹೀಗೆ ಬರೆದಿದ್ದಾರೆ: "ಗಿರಿಜಾಬಾಯಿಗೆ ಅಪಾರವಾದ ಪ್ರಾಪಂಚಿಕ ಜ್ಞಾನ ಇತ್ತು. ಅಲ್ಲಿ ಇಲ್ಲಿ ಕೇಳಿದ ಆಧುನಿಕ ಮಾಹಿತಿಗಳನ್ನು ತಮ್ಮ ಕಥಾ ಪ್ರಪಂಚಕ್ಕೆ ಉಚಿತವಾಗಿ ಸೇರಿಸಿಕೊಳ್ಳುತ್ತಿದ್ದರು. ಕೇಳಿದ ಕಥೆಯನ್ನು ಕೇಳಿದಂತೆಯೇ ಹೇಳುವುದು ಅವರ ಜಾಯಮಾನವಾಗಿರಲಿಲ್ಲ" (ಪ್ರ.ಪು.೧೨). ಅಜ್ಜಿಯ ಸೃಜನಶೀಲ ಮನಸ್ಸು, ಮತ್ತು ತನ್ನ ಚಿಂತನೆಗಳನ್ನು, ಪ್ರಸ್ತುತ ಸಮಾಜದ ಸ್ಥಿತಿಗತಿಗಳನ್ನು ಬೆರೆಸಿ ಆಕೆ ಕಥೆಯನ್ನು ಹೇಗೆ ಹೇಳುತ್ತಿದ್ದಳು ಎಂಬುದಕ್ಕೆ ಉದಾಹರಣೆಯಾಗಿ ಒಂದು ಕಥೆಯನ್ನು ಉಲ್ಲೇಖಿಸಿದ್ದಾರೆ. ಒಬ್ಬ ಗುಣವಂತ, ಅವಿವಾಹಿತ ಹರಿಜನ ಹುಡುಗಿಯ ಹೊಟ್ಟೆಯಲ್ಲಿ ಗಾಂಧೀಜಿಗೆ ಮರುಹುಟ್ಟು ಪಡೆಯಬೇಕೆಂಬ ಆಸೆಯಾಗಿ, ಅವಳಿಗೆ ತಮ್ಮ ಇಚ್ಛೆಯನ್ನು ತಿಳಿಸಿ, ಈ ವಿಷಯವನ್ನು ಯಾರ ಮುಂದೆಯೂ ಬಿಚ್ಚಿ ಹೇಳಬಾರದು ಎಂದು ಹೇಳಿದರಂತೆ. ಅದಕ್ಕೆ ಒಪ್ಪಿದ ಹುಡುಗಿಯ ಗರ್ಭ ಬೆಳೆಯಲು ಪ್ರಾರಂಭವಾಯಿತು. ಜನರು ಆಡಿಕೊಳ್ಳಲು ತೊಡಗಿದರು. ಗಂಡನಿಲ್ಲದ ಬಾಲೆ ಬಸುರಿಯಾದ ವಿಷಯ ಪಂಚಾಯತಿಗೆ ಬಂದಾಗ, ಅನಿವಾರ್ಯವಾಗಿ ಹುಡುಗಿ, ನನ್ನ ಹೊಟ್ಟೆಯಲ್ಲಿ ಗಾಂಧೀಜಿ ಬೆಳೆಯುತ್ತಿದ್ದಾರೆ ಎಂದಳು. ಕೊಟ್ಟ ಮಾತಿಗೆ ತಪ್ಪಿದ್ದರಿಂದ ಗರ್ಭ ಕರಗಿ ಹೋಯಿತು. ಇಲ್ಲದಿದ್ದರೆ ಗಾಂಧೀಜಿ ಹುಟ್ಟಿ ಬರುತ್ತಿದ್ದರು. ಇದು ಗಿರಿಜಾಬಾಯಿ ಹೇಳಿದ ಜನಪದ ಕಥೆ. ಜನಪದ ಘಟನೆಯೊಂದಕ್ಕೆ ಗಾಂಧೀಜಿಯ ಸನ್ನಿವೇಶವನ್ನು ಹೊಂದಿಸಿಕೊಂಡು, ನಮ್ಮ ದೇಶಕ್ಕೆ ಗಾಂಧೀಜಿಯ ಅವಶ್ಯಕತೆ ಇದೆ ಎಂಬ ಸಂದೇಶವನ್ನು ಬೀರುವ ಮಹತ್ವದ ಕೆಲಸವನ್ನು ಈ ಕಥೆಯ ಮೂಲಕ ಗಿರಿಜಾಬಾಯಿ ಮಾಡಿದ್ದಾಳೆ. ಇಂತಹ ವಕ್ತಾರರ ಅಭಿವ್ಯಕ್ತಿಯ ಅಧ್ಯಯನ ನಡೆಯುವುದು ಸೂಕ್ತವೆನಿಸುತ್ತದೆ. ಈ ದೃಷ್ಟಿಯಿಂದ ಒಬ್ಬೊಬ್ಬ ಪ್ರತಿಭಾವಂತ ವಕ್ತಾರನ ಕಥೆಗಳನ್ನು ಪ್ರತ್ಯೇಕವಾಗಿ ಪ್ರಕಟಿಸುವುದು ಮತ್ತು ಆ ವಕ್ತಾರನ ಕ್ರಿಯಾಶೀಲತೆಯನ್ನು ಅಧ್ಯಯನ ಮಾಡುವುದು ಸಾಹಿತ್ಯದ ಮಹತ್ವದ ಅಭ್ಯಾಸವೆನಿಸುತ್ತದೆ. ಡಾ. ಎಂ.ಜಿ.ಈಶ್ವರಪ್ಪ ಅವರು ಗಿರಿಜಾಬಾಯಿಯ ಕತೆಗಳನ್ನು ಗಮನಿಸಿ ಬರೆಯುವ ಮಾತುಗಳನ್ನು ಇಲ್ಲಿ ಗಮನಿಸಬೇಕು: 'ವಕ್ತೃ ಒಬ್ಬರೇ ಆಗುವುದರಿಂದ ಕತೆಗಾರ್ತಿಯ ಮನೋಭಾವ, ಅಭಿರುಚಿಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಕತೆಗಾರ್ತಿಯ ಅನುಭವ ವಿಶಾಲತೆ, ಭಾಷಾಸಂಪತ್ತು, ಜೀವನ ದೃಷ್ಟಿಕೋನ ಮುಂತಾದವುಗಳನ್ನು ನಿಖರವಾಗಿ ನಾವು ಗುರುತಿಸಬಹುದು. ಕಥೆಯ ರೂಪರಚನೆಯ ವಿಷಯದಲ್ಲಿ ಕತೆಗಾರಳ ಪಾತ್ರ

ವಿಶಿಷ್ಟವಾದುದಾಗಿದೆ. ಕಥೆಯನ್ನು ಆರಂಭ ಮಾಡುವ ರೀತಿ, ಬೆಳೆಸುವ ವಿಧಾನ, ಘಟನೆಗಳನ್ನು ಜೋಡಿಸುವ ತಂತ್ರಗಾರಿಕೆ, ಕೊನೆಯಲ್ಲಿ ಕೆಟ್ಟವರಿಗೆ ಕೊಡುವ ಶಿಕ್ಷೆ ಮುಂತಾದ ವಿಷಯದಲ್ಲಿ ಒಂದು ರೀತಿಯ ಶಿಸ್ತು ಕಾಣಬಹುದು' (ಪ್ರಪು.೧೫). ಈ ಎಲ್ಲ ಸಂಗತಿಗಳು ಪ್ರತಿಯೊಬ್ಬ ಪ್ರತಿಭಾವಂತ ಕಥೆಗಾರನಲ್ಲಿ ಕಾಣುವ ಗುಣಗಳಾಗಿವೆ. ಈ ದೃಷ್ಟಿಯಿಂದ ಜನಪದ ಕಥೆಗಳ ಅಧ್ಯಯನ ನಡೆಯಬೇಕಾದುದು ಅವಶ್ಯವೆನಿಸುತ್ತದೆ.

ಡಾ. ಈಶ್ವರಪ್ಪ ಅವರು ಇಲ್ಲಿಯ ಜನಪದ ಕಥೆಗಳ ವಿಂಗಡನಾ ಕ್ರಮವನ್ನು ಹೇಳುವ ರೀತಿಯೂ ನವೀನವಾಗಿದೆ. 'ವಸ್ತು ಹಾಗೂ ಪಾತ್ರಗಳ ಆಧಾರದ ಮೇಲೆ ಇಲ್ಲಿಯ ಕಥೆಗಳನ್ನು ವಿಂಗಡಿಸಿದ್ದೇನೆ. ಮೊದಲ ಹತ್ತು ಕಥೆಗಳು ಸ್ತ್ರೀ ಪ್ರಧಾನವಾದವುಗಳು. ನಂತರದ ಏಳು ಕಥೆಗಳು ಪುರುಷ ಪ್ರಧಾನವಾದವುಗಳು. ಕೊನೆಯ ಎರಡು ಪ್ರಾಣಿ ಪ್ರಧಾನವಾದ ಕಥೆಗಳಾಗಿದ್ದು, ಉಳಿದ ಆರು ಕಾರ್ಯಕಾರಣ ಸಂಬಂಧವನ್ನು ಹೇಳುವಂತಹುಗಳಾಗಿವೆ' (ಪ್ರ.ಪು.೧೪). ಇಲ್ಲಿಯ ವಿಂಗಡನಾ ಕ್ರಮವೂ ಮೊದಲನೆಯದಾಗಿ ಪಾಶ್ಚಾತ್ಯ ಮಾದರಿಯಿಂದ ಭಿನ್ನವಾದುದಾಗಿದೆ.

೧೯೯೯ ರಲ್ಲಿ ಜೀನಹಳ್ಳಿ ಸಿದ್ಧಲಿಂಗಪ್ಪ ಅವರಿಂದ ಸಂಪಾದನೆಗೊಂಡ ಕೃತಿ 'ಸುಮ್ ಸುಮ್ಕೆ ಬಸಯ್ಯ' ೧೬ ಕಥೆಗಳನ್ನು ಒಳಗೊಂಡಿದೆ. ಇಲ್ಲಿಯ ಕಥೆಗಳನ್ನು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಕಣಕಟ್ಟೆ ಗ್ರಾಮದ ಚಿಕ್ಕಮಲ್ಲಪ್ಪ ಅವರಿಂದ ಸಂಗ್ರಹಿಸಲಾಗಿದೆ. ತಾವು ಒಬ್ಬನೇ ವಕ್ತಾರನಿಂದ ಸಂಗ್ರಹಿಸಿದ ಕಥೆಗಳನ್ನು ಒಂದು ಕೃತಿಯಾಗಿ ಪ್ರಕಟಿಸುತ್ತಿರುವ ಬಗ್ಗೆ ಸಂಪಾದಕರಿಗೆ ಎಚ್ಚರಿಕೆ ಇದೆ. ಇದಕ್ಕೆ ೧೪ ಪುಟಗಳ ಸುದೀರ್ಘ ಮುನ್ನುಡಿ ಬರೆದಿರುವ ಎಸ್. ಶಿವಾನಂದ ಅವರು ಈ ಕೃತಿಯ ವಿಶೇಷತೆಯನ್ನು ಗಮನಿಸಿ ಹೀಗೆ ಬರೆಯುತ್ತಾರೆ : 'ಇವು ಒಬ್ಬರೇ ಹೇಳಿದ ಕಥೆಗಳು ಎಂಬ ಸಂಗತಿಯೊಳಗಡೆ ಮತ್ತೊಂದು ಮುಖ್ಯವಾದ ಅಂಶವೂ ಸೇರಿಕೊಂಡಿದೆ : ಈ ಕಥೆಗಳನ್ನು ಹೇಳಿರುವವರು ಒಬ್ಬ ಪುರುಷರು ಎಂಬುದು. ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅತ್ತೆ–ಸೊಸೆಯರು, ಹಿರೇಸೊಸೆ–ಕಿರಿಸೊಸೆಂದಿರು, ಅಕ್ಕ ತಂಗಿಯರು, ಸವತಿಯರು, ಅತ್ತಿಗೆ–ನಾದಿನಿ, ಅಳಿಯ–ಮಗಳು, ತವರು ಮನೆ ಮೊದಲಾದ ಸ್ತ್ರೀ ಅಧಿಕಾರ ಸಂಬಂಧೀ ಆಶಯಗಳು ಒಬ್ಬ ಗಂಡಸು ಹೇಳಿರುವ ಇಲ್ಲಿನ ಕಥೆಗಳಲ್ಲಿ ಪ್ರಧಾನವಾಗಿ ಬರುವುದಿಲ್ಲ. ಅಜ್ಜಿಯರು ಹೇಳುವ ಕಥೆಗಳಲ್ಲಿ ಕಾಣಸಿಗುವ ಹೆಣ್ಣು ಹೆಣ್ಣಿನ ಮೇಲೆ ನಡೆಸುವ ಅಧಿಕಾರ–ದರ್ಪಕ್ಕೆ ಸಂಬಂಧಿಸಿದ ಕಥಾವಸ್ತುಗಳು ಪುರುಷ ಕಥನಕಾರನಲ್ಲಿ ಗೈರುಹಾಜರಾಗಿರುವ ಅಂಶ ಗಂಭೀರ ಅಧ್ಯಯನಕ್ಕೆ ಯೋಗ್ಯವಾಗಿದೆ' (ಪು.೧). ಈ ಮಾತುಗಳು ಒಬ್ಬ ಆಧುನಿಕ ಶಿಷ್ಟಸಾಹಿತ್ಯ ವಿಮರ್ಶಕನ ಮಾತುಗಳಾಗಿದ್ದು, ಅವರಾಡುವ ಇನ್ನೊಂದೆರಡು ಮಾತುಗಳೂ ಗಮನಿಸುವಂತಿವೆ : 'ಜನಪದ ಕಥೆಗಳನ್ನು ಕುರಿತಂತೆ ಗಂಭೀರವಾದ ವಿಮರ್ಶೆ–ವಿಶ್ಲೇಷಣೆ ನಮ್ಮಲ್ಲಿ ಬಂದಿಲ್ಲವೆಂದೇ ಹೇಳಬೇಕಾಗುತ್ತದೆ. ಮಾಸ್ತಿ, ಅನಂತಮೂರ್ತಿ, ಲಂಕೇಶ್, ಮಹಾದೇವ ಮುಂತಾದವರ ಕಥೆಗಳನ್ನು ಚರ್ಚಿಸಿದಂತೆ ಜನಪದ ಕಥೆಗಳ ಬಗ್ಗೆ ವ್ಯಾಪಕವಾಗಿ ಯಾಕೆ ವಿಮರ್ಶೆ–ವಿಶ್ಲೇಷಣೆ ನಡೆಯುತ್ತಿಲ್ಲ?

ಎಂಬ ಪ್ರಶ್ನೆ ಕಾಡುತ್ತದೆ. ಈ ಸ್ಥಿತಿಗೆ ಎರಡು ನೆಲೆಗಳು ಕಾರಣವಿರಬಹುದು. ಒಂದು: ಸಾಹಿತ್ಯ ವಿಮರ್ಶಕರ ದೃಷ್ಟಿಕೋನ; ಮತ್ತೊಂದು ಜಾನಪದ ವಿದ್ವಾಂಸರ ಧೋರಣೆ.'(ಪು.೨). ಒಬ್ಬ ವಕ್ತಾರನ ಹಿನ್ನೆಲೆಯಲ್ಲಿ ಕಥೆಗಳ ಅಭಿವ್ಯಕ್ತಿ ವಿಶೇಷವೆನಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಬಗೆಗಿನ ಅಧ್ಯಯನಗಳು ಜನಪದ ಸಾಹಿತ್ಯದಲ್ಲಿ ನಡೆಯಬೇಕು. ಜಾನಪದ ಅಧ್ಯಯನಕಾರರ ದೃಷ್ಟಿ ಬದಲಾಗಬೇಕು, ಶಿಷ್ಟವಿಮರ್ಶಕರು ಜನಪದ ಸಾಹಿತ್ಯದ ಬಗ್ಗೆ ವಹಿಸುವ ನಿರ್ಲಕ್ಷತನ ಕರಗಬೇಕು.

ಕ್ರಿ.ಶ. ೨೦೦೦ನೇ ಇಸ್ವಿಯಲ್ಲಿ ಇಂತಹ ಇನ್ನೊಂದು ಕೃತಿ ಹೊರಬಂದಿದೆ. ಶ್ರೀಮತಿ ಸರೋಜಿನಿ ಆಯ್. ಪಾವಟೆ ಅವರು **'ಚಲವಾದಿ ಗೌರಮ್ಮನ ಕಥೆಗಳು'** ಎಂಬ ಸಂಗ್ರಹವನ್ನು ಪ್ರಕಟಿಸಿದ್ದಾರೆ. ೧೦೨ ಪುಟಗಳಲ್ಲಿ ೫೪ ಕಥೆಗಳಿವೆ. ಅಂದರೆ ಒಂದು ಪುಟ, ಎರಡು ಪುಟ ಹೆಚ್ಚೆಂದರೆ ಮೂರು ಪುಟಗಳ ವ್ಯಾಪ್ತಿಯ ಕಥೆಗಳಿವು. ಪ್ರಾಣಿ ಕಥೆಗಳು, ಹಾಸ್ಯಕಥೆಗಳು, ಒಗಟಿನ ಕಥೆಗಳು, ಮಕ್ಕಳ ಕಥೆಗಳು ಇಲ್ಲಿ ಕಡಿಮೆ. ಇಲ್ಲೆಲ್ಲ ಹೆಚ್ಚು ಕಥೆಗಳು ಹೆಣ್ಣುಮಕ್ಕಳ ಜೀವನದ ಸುತ್ತಲೇ ತಿರುಗುತ್ತವೆ. ಬಹುತೇಕ ನೀತಿ ಕಥೆಗಳು, ಧಾರ್ಮಿಕ ವರ್ಗಕ್ಕೆ ಸೇರುವ ಕಥೆಗಳು ಇಲ್ಲಿವೆ. ಗೌರಮ್ಮನವರಿಗೆ ೮೦ ವರ್ಷ ಮೇಲ್ಪಟ್ಟು ವಯಸ್ಸಾದಾಗ ಈ ಕಥೆಗಳನ್ನು ಸಂಗ್ರಹಿಸಲಾಗಿದೆ. ಬಹುಶಃ ಈ ವಯಸ್ಸು, ಗೌರಮ್ಮ ಬದುಕಿದ ಕಷ್ಟದ ದಿನಗಳು ಈ ಕಥೆಗಳನ್ನು ನಿಯಂತ್ರಿಸಿರಬೇಕೆನಿಸುತ್ತದೆ. ಗೌರಮ್ಮ ಕೇವಲ ಕಥೆಗಾರ್ತಿ ಅಲ್ಲ, ಆಕೆ ಒಳ್ಳೆಯ ಹಾಡುಗಾರ್ತಿ ಎಂದೂ ತಿಳಿದುಬರುತ್ತದೆ. ಬಹುಮುಖ ಪ್ರತಿಭೆಯ ಈ ಕಥೆಗಾರ್ತಿಯನ್ನು ಗುರುತಿಸಿ, ಇಲ್ಲಿಯ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಸಂಪಾದಕರಾದ ಶ್ರೀಮತಿ ಸರೋಜನಿ ಪಾವಟೆ ಅವರು ಕನ್ನಡ ಉಪನ್ಯಾಸಕರಾಗಿದ್ದಾರೆ. ಗೌರಮ್ಮನ ಸಂದರ್ಶನವೊಂದನ್ನು ನಡೆಸಿ ಅವರ ಕೆಲ ವೈಯಕ್ತಿಕ ವಿವರಗಳು ದೊರೆಯುವಂತೆ ಮಾಡಿದ್ದಾರೆ. ಇಲ್ಲಿಯ ಕಥೆಗಳೇ ನಮಗೆ ದೊಡ್ಡ ಸರಕು.

ಒಗಟು ಹಾಗೂ ಗಾದೆವುಳ್ಳ ಕಥೆಗಳು :

ಕನ್ನಡದಲ್ಲಿ ಒಗಟು ಕಥೆಗಳು ಹಾಗೂ ಕೊನೆಯಲ್ಲಿ ಗಾದೆ ಬರುವ ನೀತಿಕಥೆಗಳು ಸಾಕಷ್ಟು ಬರುತ್ತವೆ. ಇಂತಹ ಒಂದೆರಡು ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ. ಕುರುವ ಬಸವರಾಜ ಅವರು **'ಜನಪದ ಒಗಟು ಕಥೆಗಳು'** (೧೯೮೯) ಎಂಬ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಭಾರತದಲ್ಲಿ **'ಬೇತಾಳನ ಕಥೆಗಳು'** ಬಹುಪ್ರಸಿದ್ಧಿಯನ್ನು ಪಡೆದಿವೆ. ಅವೆಲ್ಲ ಬೇರೆ ಬೇರೆಯಾದ ಒಗಟಿನ ಕಥೆಗಳೇ ಆಗಿದ್ದು, ಬೇತಾಳ ಮತ್ತು ವಿಕ್ರಮನನ್ನು ಬಳಸಿಕೊಂಡು ಒಂದು ಕಥಾಕೊಂಡಿಯನ್ನು ನಿರ್ಮಿಸಿಕೊಂಡು ನಿರಂತರವಾಗಿ ಒಂದಾದ ಒಂದರಂತೆ ಕಥೆಗಳನ್ನು ಪೋಣಿಸುವ ಸಾಮಾನ್ಯ ತಂತ್ರವನ್ನು ಬಳಸಲಾಗಿದೆ. ಹೀಗಾಗಿ ಅವೆಲ್ಲ ಮೂಲತಃ ಜನಪದ ಒಗಟಿನ ಕಥೆಗಳೇ ಆಗಿವೆ ಎಂಬುದು ಗಮನಿಸತಕ್ಕ ಮಾತು. ಅಲ್ಲೆಲ್ಲ ಒಬ್ಬನ ಜ್ಞಾನ ಪರೀಕ್ಷೆಯ ಉದ್ದೇಶವೇ ಅಡಗಿರುವುದು ಕಂಡುಬರುತ್ತದೆ. ಕೆಲವು ಅವನ ಲೆಕ್ಕದ ಜಾಣ್ಮೆಯನ್ನೂ ಪರೀಕ್ಷಿಸುತ್ತಿದ್ದರೆ, ಕೆಲವು ಮಾತಿನ ಅರ್ಥಜ್ಞಾನವನ್ನೂ ಪರಿಕ್ಷಿಸುವಂತಹವೂ ಇವೆ. ಇಂತಹ ಕಥೆಗಳು ವಿಶೇಷವಾಗಿ ಮಕ್ಕಳ ಜ್ಞಾನವನ್ನು ವೃದ್ಧಿಸುವಲ್ಲಿ

ನೆರವಾಗುತ್ತವೆ.

ಕುರುವ ಬಸವರಾಜ ಅವರು ತಾವು ಅನೇಕ ವರ್ಷಗಳವರೆಗೆ ಸಂಗ್ರಹ ಮಾಡಿ ಕೂಡಿಸಿಕೊಂಡ ೪೩ ಒಗಟಿನ ಕಥೆಗಳನ್ನು ಇಲ್ಲಿ ಕೊಟ್ಟಿದ್ದಾರೆ. ಈ ಕೃತಿ ಚಿಕ್ಕದಾದರೂ ಇಲ್ಲಿಯ ಕಥೆಗಳನ್ನು ಕುರಿತು ಅನೇಕ ಜನ ಹಿರಿಯರು ಡಾ. ಹಾಮಾನಾ, ಡಾ. ಎಚ್.ಎಲ್.ನಾಗೇಗೌಡ, ಸಿಪಿಕೆ, ಎಂ.ಎ.ಜಯಚಂದ್ರ ಇಂಥವರೆಲ್ಲ ಮೆಚ್ಚುಗೆಯ ಮಾತನಾಡಿದ್ದಾರೆ.

ಜೀನಹಳ್ಳಿ ಸಿದ್ಧಲಿಂಗಪ್ಪ ಅವರು **'ಜನಪದ ಒಗಟು ಮತ್ತು ಗಾದೆಯ ಕಥೆಗಳು'** (೨೦೦೨)ಎಂಬ ಒಂದು ಕಥಾ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ೨೦ ಒಗಟು ಕಥೆಗಳು, ೧೦ ಗಾದೆಯ ಕಥೆಗಳಿವೆ. ಮೇಲೆ ಹೇಳಿದಂತೆ ಒಗಟು ಕಥೆಗಳ ವಿಶೇಷವೆಂದರೆ ಮಕ್ಕಳಲ್ಲಿ ಜಾಣತನವನ್ನು ತುಂಬುವುದು. ಕೆಲವು ಕಥೆಗಳು ಮಕ್ಕಳಿಗೆ ಸಂಬಂಧಿಸಲಾರದ ಕಥೆಗಳೂ ಇವೆ. ಹೆಣ್ಣುಮಕ್ಕಳಿಗೆ ಸಂಬಂಧಿಸಿದ, ಅದು ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ ಸಂದರ್ಭದಲ್ಲಿ ಬಳಕೆಯಾಗುವ ಒಗಟುಗಳಲ್ಲಿ ಬಲಿತ ಶೃಂಗಾರವೇ ಕಾಣುತ್ತದೆ. ಹೀಗಾಗಿ ಒಗಟಿನ ಕಥೆಗಳಲ್ಲೂ ನಾವು ವಿಂಗಡಣೆಯ ಕೆಲಸ ಮಾಡಬೇಕಾಗುತ್ತದೆ. ಇನ್ನು ಗಾದೆ ಬಳಕೆಯಾಗುವ ಕಥೆಗಳಲ್ಲಿ ಯಾವಾಗಲೂ ಗಾದೆಗಳು ಉಪಯೋಗವಾಗುವುದು ಕಥೆಯ ಕೊನೆಯಲ್ಲಿ. ಒಂದು ರೀತಿಯಿಂದ ಆ ಗಾದೆಯನ್ನು ಕಥೆಯ ಶೀರ್ಷಿಕೆಯಾಗಿ ಬಳಸಿದರೆ, ಕಥೆ ಆ ಗಾದೆಯ ವಿವರಣೆಯಾಗಿರುತ್ತದೆ. ಒಂದು ಅನುಭವವನ್ನು ಬಿಡಿಸಿ ಹೇಳುವ ರೂಪದಲ್ಲಿ ಈ ಕಥೆಗಳು ಇರುತ್ತವೆ. ಹೀಗಾಗಿ ಹೆಚ್ಚಾಗಿ ನೀತಿಯನ್ನು ಹೇಳುವ ಉದ್ದೇಶ ಇಂತಹ ಕಥೆಗಳದ್ದಾಗಿರುತ್ತದೆ. ಪಂಚತಂತ್ರದ ಕಥೆಗಳಲ್ಲಿ, ಈಸೋಪನ ನೀತಿ ಕಥೆಗಳಲ್ಲಿ ಈ ತಂತ್ರ ಇರುವುದನ್ನು ಕಾಣುತ್ತೇವೆ. ಇವು ಶುದ್ಧ ನೀತಿ ಕತೆಗಳೇ ಆಗಿದ್ದು, ಹೆಚ್ಚಾಗಿ ಕೀರ್ತನಕಾರರು, ಪ್ರವಚನಕಾರರು, ಧರ್ಮ ಪ್ರಚಾರಕರು ಇಂತಹ ಕಥೆಗಳನ್ನು ಅಡಗತೆಗಳಾಗಿ, ದೃಷ್ಟಾಂತಗಳಾಗಿ ಬಳಸುತ್ತಾರೆ.

ಕೆ. ಕೃಷ್ಣಪ್ಪ ರೆಡ್ಡಿ ಅವರು ಸಂಪಾದಿಸಿದ **'ಗಾದೆಯ ಕಥೆಗಳು'** ೧೯೯೪ರಲ್ಲಿ ಪ್ರಕಟವಾಗಿದೆ. ಈ ಕಥಾಸಂಕಲನದ ಕಥೆಗಳನ್ನು ಗಮನಿಸಿದರೆ ಅನುಭವದ ಮಾತುಗಳು ಎಲ್ಲ ಕಡೆ ಬಳಕೆಯಾಗುವುದು ಗಮನಕ್ಕೆ ಬರುತ್ತದೆ. ಸಂಪಾದಕರು ಅನೇಕ ವರ್ಷಗಳವರೆಗೆ ತುಂಬಾ ಶ್ರಮಪಟ್ಟು, ಲಕ್ಷವಹಿಸಿ ೨೫ ಕಥೆಗಳನ್ನು ಸಂಗ್ರಹಿಸಿದ್ದಾರೆ. ಇಂತಹ ಕಥೆಗಳು ಬಹಳ ದೀರ್ಘವಾಗಿರದೆ, ಅವೆಲ್ಲ ಒಂದೆರಡು ಪುಟಗಳ ವ್ಯಾಪ್ತಿ ಮಾತ್ರ ಹೊಂದಿರುವುದು ಕಂಡುಬರುತ್ತದೆ. ಇಲ್ಲಿಯ ಕಥೆಗಳನ್ನು ದಾಂಪತ್ಯ ಕಥೆಗಳು, ತಂತ್ರ ಕುತಂತ್ರ ಕಥೆಗಳು, ಹಾಸ್ಯ ಕಥೆಗಳು, ವೃತ್ತಿ ಕಥೆಗಳು, ನೀತಿ ಕಥೆಗಳು, ಐತಿಹ್ಯ ಕಥೆಗಳು, ಪ್ರಾಣಿ ಕಥೆಗಳು ಎಂದು ಏಳು ಪ್ರಕಾರದ ಕಥೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ಮೇಲೆ ಹೇಳಿದಂತೆ ಕಥೆಯ ತಲೆ ಬರಹವಾಗಿ ಗಾದೆಗಳನ್ನು ಕೊಟ್ಟರೆ, ಕಥೆಗಳು ಅವುಗಳ ವಿವರಗಳಂತೆ ತೋರುತ್ತವೆ ಎಂಬುದನ್ನು ಈ ಸಂಗ್ರಹದಲ್ಲಿ ಕಾಣಬಹುದಾಗಿದೆ. ಇಲ್ಲಿಯ ಕಥೆಗಳ ಹೆಸರುಗಳೆಲ್ಲ ಗಾದೆಗಳೇ ಆಗಿರುವುದು ವಿಶೇಷ. ಇವೆಲ್ಲ ಅನುಭವನ್ನು ವಿವರಿಸುವ ದೃಷ್ಟಾಂತದ ಕಥೆಗಳಾಗಿರುತ್ತವೆ. ಇಂತಹ ಕಥೆಗಳು ಮಕ್ಕಳಿಗೆ ವಿಶೇವಾಗಿ ಹಿಡಿಸುತ್ತವೆ.

ಎಲ್ಲ ವಯಸ್ಸಿನ ಜನ ಇವುಗಳನ್ನು ಓದಿ/ಕೇಳಿ ಸಂತೋಷ ಪಡುಬಹುದು. ಅನುಭವವನ್ನು ಹೆಚ್ಚಿಸಿಕೊಳ್ಳಬಹುದು. ನೀತಿ ಬೋಧನೆ ಪಡೆಯಬಹುದು. ಇಂತಹ ಕತೆಗಳಲ್ಲಿ ಸ್ಥಳೀಯ ಸಂಸ್ಕೃತಿ ಪ್ರಮುಖವಾಗಿ ಎದ್ದುಕಾಣುತ್ತದೆ.

೨೦೦೪ ರಲ್ಲಿ ಡಾ| ಎಲ್.ಆರ್. ಹೆಗಡೆ ಅವರು ಸಂಪಾದಿಸಿದ **'ಕತೆ ಗಾದೆಗಳು'** ಎಂಬ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿದೆ. ಇದರಲ್ಲಿ ಒಟ್ಟಿಗೆ ೨೭ ಕಥೆಗಳಿವೆ. ಅವುಗಳನ್ನು ಅತಿಮಾನುಷ ಕಥೆಗಳು, ಮಾಂತ್ರಿಕ ಕಥೆಗಳು, ವಾಸ್ತವಿಕ ಕಥೆಗಳು, ಪ್ರಾಣಿಗಳು ಮತ್ತು ಮನುಷ್ಯರು ಎಂದು ವಿಭಾಗಿಸಿಕೊಂಡಿದ್ದಾರೆ. ಗಾದೆವುಳ್ಳ ಕಥೆಗಳ ವಿಶೇಷತೆ ಎಂದರೆ ಅವು ವಾಸ್ತವ ಸಂಗತಿಗಳನ್ನು ಬಿತ್ತರಿಸುವ, ಅಣಕಿಸಿ ಅಥವಾ ನೀತಿ ಬೋಧೆ ಮಾಡಿ ಮನಸ್ಸನ್ನು ತಿದ್ದುವ ಮುಖ್ಯವಾದ ಕೆಲಸವನ್ನು ಮಾಡುತ್ತವೆ. ಗಾದೆಗಳು ಸುಮಾರಾಗಿ ಕಥೆಗಳ ತಲೆಬರಹಗಳೇ ಆಗಿರುತ್ತವೆ. ಗಾದೆವುಳ್ಳ ಕಥೆಗಳ ಬಗ್ಗೆ ಎಲ್.ಆರ್.ಹೆಗಡೆ ಅವರು ಹೀಗೆ ಬರೆಯುತ್ತಾರೆ: 'ನಮ್ಮ ಶ್ರೀಸಾಮಾನ್ಯರ ಆದರ್ಶಗಳನ್ನು ಸಂಸ್ಕೃತಿಯನ್ನು ಕೊಂಡಾಡುವ ಸಂದರ್ಭದಲ್ಲಿ ಅಸಭ್ಯವರ್ತನೆ ಮಾಡುವವರೂ ಅನೀತಿವಂತರೂ ದಯಾಗುಣ ಉಳ್ಳವರಂತೆಯೇ ನಿರ್ದಯರೂ ಕ್ರೂರಿಗಳೂ ಸಹ ಇರುವರೆಂಬುದನ್ನು ನಾವು ತಿಳಿದಿರುಬೇಕು ಎಂಬುದನ್ನು ಈ ಗಾದೆ ಕಥೆಗಳು ತಿಳಿಸಿಕೊಡುತ್ತವೆ'(ಪು.೧೨).

ಈ ಗುಂಪಿಗೆ ಸೇರುವ ಇನ್ನೊಂದು ಮಹತ್ವದ ಕೃತಿ **'ಪುರುಷನ ಪುಣ್ಯಾ ನಾರೀ ಭಾಗ್ಯ'** (೨೦೦೬) ಎಂಬುದು. ೩೨೧ ಪುಟಗಳ ಬೃಹತ್ ಸಂಪುಟದಲ್ಲಿ, ೧೪೦ ಗಾದೆಯ ಕಥೆಗಳನ್ನು ಡಾ. ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿ ಕೊಟ್ಟಿದ್ದಾರೆ. ಕನ್ನಡದಲ್ಲಿ ಈವರೆಗೆ ಬಂದ ಇಂತಹ ಕಥಾ ಸಂಗ್ರಹಗಳಲ್ಲಿ ಹೆಚ್ಚಿನ ಕತೆಗಳ್ನು ಹೊತ್ತ ಪುಸ್ತಕ ಇದಾಗಿದೆ. ಏನೇ ಮಾಡಿದರೂ ಎದ್ದು ಕಾಣುವಂತೆ, ಮಹತ್ವದ ಕೊಡುಗೆಯಾಗುವಂತೆ ಮಾಡುವ ಡಾ. ರಾಜಶೇಖರ ಅವರದು ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆಯಲ್ಲಿ ಮಹತ್ವದ ಹೆಸರು. ತಮ್ಮ ಸಂಗ್ರಹಗಳಿಂದಲೇ ಇಡೀ ಕರ್ನಾಟಕದ ಗಮನಸೆಳೆದವರು ಅವರು. ಇಂತಹ ಮಹತ್ವದ ಸಂಪಾದಕರಿಂದ ಬಂದ ಕೃತಿ ಹಲವಾರು ದೃಷ್ಟಿಗಳಿಂದ ವಿಶೇಷವಾಗಿ ಕಾಣುವುದು ಸಹಜ.

ಇಲ್ಲಿಯ ಕಥೆಗಳ ತಲೆಬರಹಗಳೇ ಗಾದೆಗಳಾಗಿವೆ. ಇಂತಹ ಕಥೆಗಳು ವಿಸ್ತಾರದಲ್ಲಿ ಚಿಕ್ಕವಾಗಿದ್ದು, ಪರಿಣಾಮದಲ್ಲಿ ತೀರ ಹರಿತವಾಗಿರುತ್ತವೆ. ಮಕ್ಕಳಿಗೆ, ಹಿರಿಯರಿಗೆ ಎಲ್ಲರಿಗೂ ಹಿಡಿಸುವ ಕಥೆಗಳಿವು. ಜನಪದ ಕಥೆಗಳಲ್ಲಿ ಅತ್ಯಂತ ವಾಸ್ತವ ಪ್ರಜ್ಞೆಯನ್ನು ಹೊಂದಿದ ಕಥೆಗಳೆನಿಸುತ್ತವೆ. ವ್ಯಂಗ್ಯ, ಹಾಸ್ಯ, ಸರಳ, ಅರ್ಥಗರ್ಭಿತ, ನೀತಿಯುತ ಸಂಗತಿಗಳಿಂದ ಈ ಕಥೆಗಳು ತಮ್ಮ ಅಸ್ತಿತ್ವವನ್ನು ಸಾರುತ್ತಿರುತ್ತವೆ. ಡಾ. ಪಿ.ಕೆ. ರಾಜಶೇಖರ ಅವರು ಪರಿವಿಡಿಯಲ್ಲಿ ಕಥೆಗಳನ್ನು ವಿಭಾಗಿಸಿಕೊಳ್ಳದೆ, ಅನುಬಂಧದಲ್ಲಿ– ಪ್ರಾಣಿ ಕಥೆಗಳು, ನೀತಿಕಥೆಗಳು, ಬುದ್ಧಿವಂತಿಕೆ ಕಥೆಗಳು, ಹಾಸ್ಯ ಕಥೆಗಳು, ರಮ್ಯಕಥೆಗಳು, ಜಿಪುಣ ಕಥೆಗಳು, ವಂಚಕರ ಕಥೆಗಳು, ಅದೃಷ್ಟ ಮತ್ತು ವಿಧಿಯ ಕಥೆಗಳು, ಪುರಾಣ ಕಥೆಗಳು, ಐತಿಹ್ಯಗಳು ಎಂದು ೧೦ ವಿಭಾಗಗಳಲ್ಲಿ ಅವುಗಳನ್ನು ವಿಂಗಡಿಸಿ ತೋರಿಸಿದ್ದಾರೆ. ನಾನಾ

ಸಮುದಾಯಗಳಿಗೆ ಸೇರಿದ, ನಾನಾ ವಯಸ್ಸಿನ, ೧೦೪ ಜನ ಪುರುಷರು, ಸ್ತ್ರೀಯರು ಇಲ್ಲಿಯ ಕಥೆಗಳನ್ನು ಹೇಳಿದ್ದಾರೆ. ಈ ಕಥೆಗಳನ್ನು ಸಂಗ್ರಹಿಸಿದ ಪ್ರದೇಶವೂ ತುಂಬಾ ವಿಸ್ತಾರವಾಗಿದೆ. ಮೈಸೂರು, ಬೆಂಗಳೂರು, ತುಮಕೂರು, ಚಾಮರಾಜನಗರ, ಮಂಡ್ಯ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು–ಈ ಒಂಬತ್ತು ಜಿಲ್ಲೆಗಳ ಹಳ್ಳಿಗಳಿಗೆ ಸೇರಿದ ವಕ್ತಾರರಿಂದ ಕಥೆಗಳನ್ನು ಸಂಗ್ರಹಿಸಿದ್ದಾರೆ. ಎಲ್ಲ ದೃಷ್ಟಿಯಿಂದ ಮಹತ್ವದ ಸಂಗ್ರಹ ಇದಾಗಿದೆ.

ಆರಾಧನೆಯ ಕಥೆಗಳು

ಜನಪದ ಸಾಹಿತ್ಯದಲ್ಲಿ ಬಹುವಿಶೇಷವಾದ ಪ್ರಕಾರವೆಂದರೆ ಜನಪದ ಕಥೆ. ಕನ್ನಡದಲ್ಲಿ ಉನ್ನತಮಟ್ಟದ ಶೈಕ್ಷಣಿಕ ವಲಯದಲ್ಲಿ ಜನಪದ ಸಾಹಿತ್ಯದ ಮಹತ್ವ ಅರಿವಾಗುತಿದ್ದಂತೆಯೇ ೧೯೭೦ರ ಸುತ್ತಮುತ್ತಲಿನ ಅವಧಿಯಲ್ಲಿ ಕರ್ನಾಟಕದ ವಿದ್ವಾಂಸರು ವಿಶೇಷವಾಗಿ ವಿಶ್ವವಿದ್ಯಾಲಯ, ಮತ್ತು ಮಹಾವಿದ್ಯಾಲಯಗಳ ಕನ್ನಡ ಶಿಕ್ಷಕರು ಒಮ್ಮೆಗೆ ಈ ಸಾಹಿತ್ಯದ ನಾನಾ ಪ್ರಕಾರಗಳ ಸಂಗ್ರಹಕ್ಕೆ ತೊಡಗಿದರು. ಅವರಿಗೆ ಅರಿವಿಲ್ಲದೆಯೇ ಸಮಾಜದ ನಾನಾ ಮಗ್ಗುಲುಗಳಲ್ಲಿ ಪ್ರಚಾರದಲ್ಲಿರುವ ಸಾಹಿತ್ಯದ ಸಂಗ್ರಹ, ತಕ್ಕಮಟ್ಟಿನ ಅಧ್ಯಯನ, ಪ್ರಕಟನೆಗಳು ಒಮ್ಮೆಲೆ ಪ್ರಾರಂಭವಾದವು. ಜನಪದ ಹಾಡುಗಳ ಜೊತೆಗೆ ಹೆಚ್ಚಾಗಿ ಗಮನ ಸೆಳೆದ ಪ್ರಕಾರಗಳೆಂದರೆ ಕಥೆ ಹಾಗೂ ಗಾದೆಗಳು. ಅದರಲ್ಲೂ ಕಥೆಗಳ ಸಂಗ್ರಹಗಳು ಬಹು ವೈವಿಧ್ಯಮಯವಾಗಿ ನಡೆದಿರುವುದು ಕಂಡುಬರುತ್ತದೆ.

ಜಾನಪದಶಾಸ್ತ್ರ ಅಧ್ಯಯನ ಪ್ರಾರಂಭವಾದ ನಂತರ ಕರ್ನಾಟಕದಲ್ಲಿ ಜನಾಂಗಿಕ ಅಧ್ಯಯನಗಳು ವ್ಯಾಪಕವಾಗಿ ನಡೆದು ಸಾಹಿತ್ಯ ಅಧ್ಯಯನಕ್ಕೆ ಒಂದು ಹೊಸ ತಿರುವು ಬಂದಿತು. ಇಲ್ಲಿ ಸಾಂಸ್ಕೃತಿಕ ಸಂಗತಿಗಳು ಹೆಚ್ಚು ತೀವ್ರವಾಗಿ ವಿದ್ವಾಂಸರ ಗಮನ ಸೆಳೆದವು. ಕಥೆಗಳ ವಿಷಯದಲ್ಲೂ ಹಾಗೆಯೇ ಆಗಿದೆ. ಜನಪದ ಕಥೆಗಳು ಎಲ್ಲ ಜನಾಂಗಗಳಲ್ಲಿ ಪ್ರಚಾರದಲ್ಲಿರುವ ಒಂದು ಸಾಹಿತ್ಯ ಪ್ರಕಾರ. ಒಂದೊಂದು ಜನಾಂಗದಲ್ಲಿ ಪ್ರಚಾರದಲ್ಲಿರುವ ಕಥೆಗಳು ಸಾಂಸ್ಕೃತಿಕವಾಗಿ ವಿಭಿನ್ನ ರೀತಿಯಿಂದ ಕಾಣುವುದು, ಭಿನ್ನಭಿನ್ನ ರೀತಿಯಲ್ಲಿ ಪ್ರದರ್ಶನಗೊಳ್ಳುವುದು ಸಹಜವಾಗಿಯೆ ಎದ್ದು ಕಾಣುವ ವಿಷಯವಾಗಿದೆ. ಹೀಗಾಗಿ ೧೯೭೦ರ ಪ್ರಾರಂಭದ ದಿನಗಳಲ್ಲಿಯೇ ಜನಪದ ಕಥೆಗಳ ಸಂಗ್ರಹಕ್ಕೆ ತೊಡಗಿದ ವಿದ್ವಾಂಸರು ತಮ್ಮ ತಮ್ಮ ಪ್ರದೇಶಗಳಲ್ಲಿ, ತಮ್ಮ ತಮ್ಮ ಸಂಪರ್ಕದಲ್ಲಿ ಬರುವ ಜನಾಂಗಗಳಲ್ಲಿರುವ ಕಥೆಗಳ ವಿಶೇಷತೆಯನ್ನು ಗಮನಿಸಿದವರು ಅವುಗಳನ್ನು ಸಂಗ್ರಹಿಸಿ, ಪ್ರಸ್ತಾವನೆಗಳಲ್ಲಿ ಅವುಗಳ ಅಭ್ಯಾಸದ ವಿಶೇಷತೆಗಳನ್ನು ಗುರುತಿಸಿ, ಬರೆದು ಪ್ರಕಟಿಸಿಲು ತೊಡಗಿದರು. ಅಂತಹವುಗಳಲ್ಲಿ ಸೇವ ನಮಿರಾಜಮಲ್ಲ ಎನ್ನುವವರು 'ಭೂತಾರಾಧನೆಯ ಕತೆಗಳು' ಎಂಬ ಸಂಗ್ರಹವನ್ನು ಮೈ.ವಿ.ವಿ.ಯಿಂದ ೧೯೭೦ ರಲ್ಲಿಯೇ ಪ್ರಕಟಿಸಿದ್ದಾರೆ. ಇಲ್ಲಿ ಮಂಗಳೂರು ಮತ್ತು ಉಡುಪಿ ಕರಾವಳಿಯ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಭೂತಾರಾಧನೆಗೆ ಸಂಬಂಧಿಸಿದ, ೧೫ ಭೂತಗಳ ಬಗೆಗಿನ ಕಥೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ವಿಶೇಷವಾಗಿ ತುಳುವರ ಆರಾಧನೆಯ ಕಥೆಗಳು ಇವು ಎನ್ನಬೇಕು. ಇಲ್ಲಿ ಸಮುದ್ರ ತೀರದ ಜನಗಳ ಜೀವನದ ರೀತಿ, ಅವರ ನಂಬಿಕೆಗಳಿಗೆ ಸಂಬಂಧಿಸಿದ

ಆರಾಧನಾ ಕಥೆಗಳಿವು. ಭೂತಗಳ ಆರಾಧಕರು ದಲಿತ ಜನಸಮುದಾಯಕ್ಕೆ ಸೇರಿದವರು. ನಲ್ಕೆ, ಪರವ, ಪೊಂಬದ ಎಂಬ ದಲಿತರು ವಿಶೇಷವಾಗಿ ಈ ಭೂತಗಳ ಆರಾಧನೆಯನ್ನು ಮಾಡುತ್ತಾರೆ. ಅವರ ನಂಬುಗೆಯ ಕಥೆಗಳಿವು ಎನಿಸುತ್ತವೆ. ಹೀಗಾಗಿ ಆ ಜನಗಳ ಗಂಭೀರ ಭಾವನೆಗೆ ಸಂಬಂಧಿಸಿದ ಕಥೆಗಳು ಇಲ್ಲಿವೆ. ಒಂದು ದೃಷ್ಟಿಯಿಂದ ಧಾರ್ಮಿಕ ನಂಬುಗೆಗಳಿಗೆ ಸಂಬಂಧಿಸಿದ ಕಥೆಗಳು ಎನಿಸುತ್ತವೆ. ಈ ಕಥೆಗಳ ಸುತ್ತಲೇ ಈ ದಲಿತರ ಬದುಕಿನ ಸಂಗತಿಗಳು ಹರಿಯುವುದು ಇಲ್ಲಿ ಮುಖ್ಯಸಂಗತಿಯಾಗಿ ಕಾಣುತ್ತದೆ.

ದಲಿತರು ಭೂತಗಳ ಆರಾಧಕರಾದರೂ ಉಳಿದ ಸಾಮಾಜಿಕರೂ ಇದರಲ್ಲಿ ಭಾಗವಹಿಸುವುದು ಸಾಮಾನ್ಯ. ಅಲ್ಲಿ ಒಂದೊಂದು ಜನಾಂಗದವರಿಗೆ ಒಂದೊಂದು ಚಾಜಾ–ಸಾಂಸ್ಕೃತಿಕ ಅಧಿಕಾರ ಇರುವುದನ್ನು ಗಮನಿಸಿದರೆ, ಈ ಕಥೆಗಳು ಆ ಎಲ್ಲ ಜನಾಂಗಳನ್ನೊಳಗೊಂಡು ಸೃಷ್ಟಿಯಾದ ಸಾಂಸ್ಕೃತಿಕ ಚರಿತ್ರೆಗಳು ಎನಿಸುತ್ತವೆ. 'ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮದ ಅಗಸನ ಮನೆತನವಿತ್ತು. ಭೂತಗಳ ಮಂಚಕ್ಕೆ ವಸ್ತ್ರ ಹೊದಿಸುವುದು ಮತ್ತು ಅವುಗಳ ದೀವಟಿಗೆಗಳನ್ನು ಉರಿಸಿ ಹಿಡಿಯುವುದು ಅವರ ಕರ್ತವ್ಯ. ನಾಯಿಂದನು ಭೂತಕ್ಕೆ ಛತ್ರ ಹಿಡಿದು ನಿಲ್ಲಬೇಕು. ಊರ ಬಡಗಿ ತೋರಣವನ್ನು ಕಟ್ಟುವವ. ಊರ ಕುಂಬಾರರು ಪಲ್ಲಕ್ಕಿ ಹೊರಬೇಕು. ಊರ ಗಾಣಿಗನು ಕಂಬು ಊದಬೇಕು. ಪೌರೋಹಿತ್ಯಕ್ಕೆ ಗ್ರಾಮದ ಬ್ರಾಹ್ಮಣ ಮನೆತನದವರು. ಈ ವ್ಯವಸ್ಥೆ ಅಸ್ಥಿಪಂಜರದ ರೂಪದಲ್ಲಾದರೂ ಇಂದೂ ಈ ಜಿಲ್ಲೆಯ ಗ್ರಾಮ ಜೀವನದಲ್ಲಿ ಕಂಡುಬರುತ್ತಿದೆ.' (ಭೂತಾರಾಧನೆ, ಪ್ರಮು. ೮–೯). ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಸಂಸ್ಕೃತಿಯನ್ನು ಅರಿಯಲು ಇಲ್ಲಿಯ ಕಥೆಗಳು ಸಹಾಯಕ್ಕೆ ಬರುತ್ತವೆ.

ಡಾ. ಕ್ಯಾತನಹಳ್ಳಿ ರಾಮಣ್ಣನವರು **'ಗೊಂದಲಿಗರ ಕಥೆಗಳು'**(೧೯೭೨), **'ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು'** (೧೯೭೫) ಎಂಬ ಎರಡು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಗೊಂದಲಿಗರು ತುಳಜಾಪೂರ ಅಂಬಾಭವಾನಿಯ ಆರಾಧಕರು. ಉತ್ತರ ಕರ್ನಾಟಕದ ಬಹುತೇಕ ಕಡೆ ಮದುವೆ ಮುಂಜಿವೆಯಂತಹ ಮಹತ್ವದ ಕಾರ್ಯಕ್ರಮಗಳಲ್ಲಿ ಅಂಬಾಭವಾನಿಯನ್ನು ತಮ್ಮ ಮನೆಯಲ್ಲಿ ಪ್ರತಿಷ್ಠಾಪನೆ ಮಾಡಿ, ಗೊಂದಲಿಗರನ್ನು ಕರೆಸಿ ಪೂಜೆ ಮಾಡಿಸುತ್ತಾರೆ. ಇದಕ್ಕೆ ಗೊಂದಲ ಹಾಕಿಸುವುದು ಎನ್ನುತ್ತಾರೆ. ಅಂದು ರಾತ್ರಿ ಭಕ್ತಜನವೆಲ್ಲ ನೆರೆದಿರುತ್ತಾರೆ. ಇಡೀ ರಾತ್ರಿ ಗೊಂದಲಿಗರು ಕಥೆಗಳನ್ನು ಅಭಿನಯ, ತುಂಡು ಹಾಡುಗಳು, ಸಂಭಾಷಣೆ ರೂಪದ ಮಾತುಗಾರಿಕೆಗಳಿಂದ ಆಕರ್ಶಕವಾಗಿ ಪ್ರದರ್ಶನ ಮಾಡುತ್ತಾರೆ. ಇದಕ್ಕೆ ಕಥೆಮಾಡುವುದು ಎನ್ನುತ್ತಾರೆ.

ಒಂದನೆಯ ಕಥಾಸಂಕಲನ ಬಿಜಾಪೂರ ಜಿಲ್ಲೆಯಲ್ಲಿ ಸಂಗ್ರಹವಾಡಿದ ಕಥೆಗಳದ್ದಾಗಿದೆ. ಇದರಲ್ಲಿ ಏಳು ಕಥೆಗಳಿವೆ. ಎರಡನೆಯದು ಶಿವಮೊಗ್ಗ ಜಿಲ್ಲೆಯಲ್ಲಿ ಸಂಗ್ರಹಿಸಿದ ಕಥೆಗಳ ಸಂಗ್ರಹವಾಗಿದೆ. ಇದರಲ್ಲಿ ಒಟ್ಟಿಗೆ ಹತ್ತು ಕಥೆಗಳಿದ್ದು ಅವುಗಳನ್ನು ಧಾರ್ಮಿಕ ಮತ್ತು ಲೌಕಿಕ ಎಂದು ವಿಂಗಡಿಸಿ ಕೊಟ್ಟಿದ್ದಾರೆ. ಭೂತಾರಾಧನೆಯ ಕಥೆಗಳೂ ಪ್ರತಿಷ್ಠಾಪಿಸಿದ ಭೂತದ ಸಮ್ಮುಖದಲ್ಲಿ ಪ್ರದರ್ಶನ ಮಾಡುವ ಕಥೆಗಳಾಗಿವೆ. ಗೊಂದಲಿಗರ ಕಥೆಗಳ ಪ್ರದರ್ಶನವೂ ಪ್ರತಿಷ್ಠಾಪಿಸಿದ ಅಂಬಾಭವಾನಿ ಎದುರಿನಲ್ಲಿಯೇ ನಡೆಯುತ್ತದೆ.

ಇಲ್ಲಿಯೂ ಧಾರ್ಮಿಕ ಭಾವನೆ ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಗೊಂದಲಿಗರು ಈ ಗಂಭೀರ ಸನ್ನಿವೇಶದಲ್ಲೂ ರಾತ್ರಿಯಿಡೀ ಜನರಿಗೆ ನಿದ್ರೆಬಾರದಂತೆ ಕಥೆ ಆಕರ್ಶಕವಾಗಿರಲು ಅಭಿನಯ, ಹಾಡು, ಸಂಭಾಷಣೆ, ಹಾಸ್ಯ ಮುಂತಾದವುಗಳಿಂದ ಕಥೆಗಳನ್ನು ತುಂಬುತ್ತಾರೆ. ಛತ್ರಪತಿ ಶಿವಾಜಿಯ ಆಡಳಿತಾವಧಿಯಲ್ಲಿ ಗೌಪ್ಯಕೆಲಸಗಳನ್ನು ನೀಗಿಸಿದ ಜನ ಇದು ಎಂದೂ ಹೇಳಲಾಗುತ್ತದೆ. ಬಹುಶಃ ಗೊಂದಲಿಗರ ಸಾಹಿತ್ಯವನ್ನು ಈ ಬಗೆಯಲ್ಲಿ ಶೋಧಿಸಿ, ಸಂಗ್ರಹಿಸಿ, ಅಗತ್ಯ ಮಾಹಿತಿಗಳೊಂದಿಗೆ ಪ್ರಕಟಿಸಿದ ಕೃತಿಗಳು ಇವಾಗಿವೆ. ಹೀಗಾಗಿ ಜನಪದ ಸಾಹಿತ್ಯ ಲೋಕಕ್ಕೆ ಒಂದು ವಿಶೇಷ ಜನಾಂಗದ ಕಥಾಪ್ರಕಾರವನ್ನು ಕೊಟ್ಟ ಶ್ರೇಯಸ್ಸು ಕ್ಯಾತನಹಳ್ಳಿ ರಾಮಣ್ಣನವರಿಗೆ ಸಲ್ಲುತ್ತದೆ.

'ಲಕ್ಷಾಪತಿ ರಾಜನ ಕಥೆ' (೧೯೭೩) ಎಂಬ ಕೃತಿಯನ್ನು ಡಾ. ಚಂದ್ರಶೇಖರ ಕಂಬಾರ ಅವರು ಮುದೇನೂರ ಸಂಗಣ್ಣನವರ ನೆರವಿನೊಂದಿಗೆ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇಲ್ಲಿಯ ಕಥೆಯನ್ನು ಜೋಳಿಗೇರು ಎಂಬ ವಿಶೇಷ ಜಾತಿಗೆ ಸೇರಿದ ವಕ್ತಾರರು ಹೇಳಿದ್ದಾರೆ. ಗೊಂದಲಿಗರಂತೆ ಇವರದೂ ಒಂದು ತಂಡ ಇರುತ್ತದೆ. ಮುಖ್ಯ ಕಥೆಗಾರ ಏಕತಾರಿ ಹಿಡಿದಿರುತ್ತಾನೆ. ಹಿಮ್ಮೇಳದಲ್ಲಿ ದಂಬಡಿ ತಾಳ ತಂಬೂರಿ ಹಿಡಿದ ಎರಡ್ಮೂರು ಜನ ಇರುತ್ತಾರೆ. ಕತೆಗಾರಿಕೆ ಇಡೀ ರಾತ್ರಿಯೆಲ್ಲ ನಡೆಯುತ್ತದೆ. ಒಮ್ಮೊಮ್ಮೆ ಒಂದೇ ಕಥೆಯನ್ನೇ ಎರಡ್ಮೂರು ರಾತ್ರಿಗಳವರೆಗೂ ಮುಂದುವರೆಸುತ್ತಾರೆ. ಮಳೆ ಬಾರದಿದ್ದಾಗ, ತೊಂದರೆ ಎದುರಾದಾಗ, ಮದುವೆಯ ಒಂದೆರಡು ದಿನ ಮುಂಚೆ ಮನೆದೇವರ ಆರಾಧನೆ ಇದ್ದಾಗ ಇವರನ್ನು ಕರೆಸಿ ಕಥೆ ಹೇಳಿಸುವ ಪದ್ಧತಿ ಇದೆ ಎಂದು ತಿಳಿದುಬರುತ್ತದೆ. ಜೋಳಿಗೇರು ಎಂಬ ಹೆಸರು ಭಿನ್ನವಾಗಿದೆ. ಇವರ ಕಥೆ ಹೇಳುವ ರೀತಿ ಸಮಯ ಉದ್ದೇಶ ಎಲ್ಲವೂ ಗೊಂದಲಿಗರಂತೆಯೇ ಇದೆ. ಈ ಲಕ್ಷಾಪತಿ ರಾಜನ ಕಥೆಯನ್ನೂ ಗೊಂದಲಿಗರು ಹೇಳುತ್ತಾರೆ.

ಇಲ್ಲಿ ಸಂಗ್ರಹಿಸಿ ಪ್ರಕಟಿಸಲಾದ 'ಲಕ್ಷಾಪತಿ ರಾಜನ ಕಥೆ' ೧೨೪ ಪುಟಗಳಷ್ಟು ದೀರ್ಘವಾಗಿದೆ. ಕಲಾವಿದರು ಕಥೆಯನ್ನು ಹೇಗೆ ಪ್ರದರ್ಶನ ಮಾಡಿದರೋ ಹಾಗೆಯೇ ಸಂಗ್ರಹಿಸಲಾಗಿದೆ. ಹೀಗಾಗಿ ಗೊಂದಲಿಗರ ಮತ್ತು ಈ ಜೋಳಿಗೆರ ಕಥೆಮಾಡುವ ಪದ್ಧತಿ ಅದು ಹೇಗೆ ಪ್ರದರ್ಶನದ ರೂಪವಾಗಿ ಮಾರ್ಪಡುತ್ತದೆ ಎಂಬುದಕ್ಕೆ ಈ ಕೃತಿ ಹಿಡಿದಿಟ್ಟದ್ದು ಒಂದು ವಿಶೇಷ ಪ್ರಯೋಗವಾಗಿದೆ. ಸಂಭಾಷಣೆಯ ರೂಪದಲ್ಲೇ ಈ ಕಥೆಯನ್ನು ಹಿಡಿದಿಡಲಾಗಿದೆ.

ಡಾ. ಎಲ್.ಆರ್.ಹೆಗಡೆ ಅವರು ಸಂಪಾದಿಸಿ ಪ್ರಕಟಿಸಿದ **'ಮಲೆನಾಡ ಸೆರಗಿನ ಕಥೆಗಳು'** (೧೯೮೩) ವಿಶೇಷವಾಗಿ ಅಲೆಮಾರಿ ಜನಾಂಗಗಳಿಂದ ಸಂಗ್ರಹಿಸಿದ ಕಥೆಗಳಾಗಿವೆ. ಇಲ್ಲಿಯ ೧೫ ಕಥೆಗಳನ್ನು ೧೯೬೮ರ ಸುಮಾರಿನಲ್ಲಿಯೆ ಸಂಗ್ರಹಿಸಿದ್ದಾರೆ. ಈ ಕಥೆಗಳನ್ನು ಗಮನಿಸಿದರೆ ಉತ್ತರ ಕರ್ನಾಟಕದಲ್ಲಿ ಗೊಂದಲಿಗರು ಬಳಸುವ ಕಥೆಗಳೇ ಆಗಿವೆ. ಈ ೧೫ ಕಥೆಗಳಲ್ಲಿ ಲಕ್ಷಾಪತಿ ರಾಜನ ಕಥೆಯೂ ಒಂದಾಗಿದೆ. ಹೀಗಾಗಿ ಈ ಸಂಗ್ರಹವನ್ನು ಈ ಆರಾಧನಾ ಕಥೆಗಳ ಸಂಗ್ರಹಗಳ ಸಾಲಿಗೆ ಸೇರಿಸಲಾಗಿದೆ.

ಗೊಂದಲಿಗರೂ ಅಲೆಮಾರಿಗಳೆ. ಜೋಳಿಗೆರೂ ಅಲೆಮಾರಿಗಳೆ. ಹೆಗಡೆ ಅವರ ಕಥೆಗಳ ವಕ್ತಾರರೂ ಅಲೇಮಾರಿಗಳೆ. ಈ ಮೂರೂ ಜನಾಂಗಗಳು ಕೈಯಲ್ಲಿ ತಂತಿವಾದ್ಯ ತುಂತುಣಿ, ಏಕತಾರಿ ಹಿಡಿದು ಬಾರಿಸುತ್ತ ಹಾಡುಹೇಳುತ್ತ ಭಿಕ್ಷೆಯನ್ನೆತ್ತಿ ಜೀವನ ಸಾಗಿಸುವವರೆ. ಜೊತೆಗೆ ಇವರಲ್ಲಿ ವಿಶೇಷವಾದ ಕಥೆಗಳನ್ನು, ಹಾಡು ಮತ್ತು ಸಂಭಾಷಣೆಗಳನ್ನು ಬೆರೆಸಿ, ಅಭಿನಯಪೂರ್ವಕವಾಗಿ ಕಥೆಗಳನ್ನು ಪ್ರದರ್ಶನ ಮಾಡುವ ಜನಾಂಗದವರೇ ಆಗಿದ್ದಾರೆ. ಈ ದೃಷ್ಟಿಯಿಂದ ಇಲ್ಲಿಯ ಕಥೆಗಳು ಅಧ್ಯಯನ ಯೋಗ್ಯವೆನಿಸುತ್ತವೆ.

ಒಂದು ಜನಾಂಗವನ್ನು ಪ್ರತಿನಿದಿಸುವ ಕಥಾಸಂಕಲನಗಳು

ಕನ್ನಡದಲ್ಲಿ ಜಾನಪದ ಸಾಹಿತ್ಯದ ಸಂಗ್ರಹ, ಅಧ್ಯಯನಗಳು ಪ್ರಾರಂಭವಾದಾಗ ಡಾ. ಎಲ್.ಆರ್. ಹೆಗಡೆ ಅವರು ಈ ಕ್ಷೇತ್ರದಲ್ಲಿ ಉತ್ತರ ಕನ್ನಡದಿಂದ ಗುರುತಿಸಿಕೊಂಡ ಹಿರಿಯ ಜಾನಪದ ವಿದ್ವಾಂಸರು. ಅವರು ಹೊನ್ನಾವರ, ಕುಮಟಾ, ಕಾರವಾರ ಸುತ್ತಲೂ ಇರುವ ಸಿದ್ದಿ ಜನಾಂಗದಿಂದ ಜನಪದ ಕಥೆಗಳನ್ನು ಸಂಗ್ರಹಿಸಿ, **'ಸಿದ್ದಿಯರ ಕಥೆಗಳು'** ಎಂದು ೧೯೭೮ರಲ್ಲಿಯೇ ಪ್ರಕಟಿಸಿದ್ದಾರೆ.

ಈ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸುವಾಗ ಇಲ್ಲಿಯ ಕಥೆಗಳನ್ನು ಒಂದು ಕ್ರಮದಲ್ಲಿ ವಿಂಗಡಿಸಿರುವುದು ಕಂಡುಬರುತ್ತದೆ. ಅದೆಂದರೆ ಪಾಶ್ಚಾತ್ಯರಲ್ಲಿ ಜನಪದ ಕಥೆಗಳ ಬಗ್ಗೆ ನಡೆದ ಅಧ್ಯಯನ ನಮ್ಮಲ್ಲಿ ಈಗಾಗಲೇ ಪರಿಚಯವಾಗಿ, ವಿಶೇಷವಾಗಿ ಸ್ಟಿಥ್ ಥಾಮ್ಸನ್ ಅವರ ವಿಂಗಡನಾ ಕ್ರಮವನ್ನು ಬಳಸಲು ಕನ್ನಡದ ವಿದ್ವಾಂಸರು ೧೯೭೦ರ ಸುತ್ತಮುತ್ತ ಪ್ರಾರಂಭ ಮಾಡಿದ್ದರು. ಹೆಗಡೆ ಅವರು ಇಂತಹ ವಿಭಾಗೀ ಕ್ರಮವನ್ನೇ ಅನುಸರಿಸಿರುವುದು ಇಲ್ಲಿ ಕಂಡು ಬರುತ್ತದೆ. ಈ ಕೃತಿಯಲ್ಲಿರುವ ೩೫ ಕಥೆಗಳನ್ನು ಅತಿಮಾನುಷ ಕಥೆಗಳು, ಅತಿಮಾನುಷ ಪತ್ನಿಯರು, ರಮ್ಯ ಕಥೆಗಳು, ವಾಸ್ತವಿಕ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ಐತಿಹ್ಯ, ಒಗಟಿನ ಕಥೆ, ಮನುಷ್ಯರು ಮತ್ತು ಪ್ರಾಣಿಕಥೆಗಳು, ಪ್ರಾಣಿಕಥೆಗಳು– ಹೀಗೆ ಒಂಬತ್ತು ಪ್ರಕಾರದ ಕಥೆಗಳನ್ನು ಗುರುತಿಸಿ ಇಲ್ಲಿ ಪ್ರಕಟಿಸಿರುವುದು ಕಂಡುಬರುತ್ತದೆ.

ಜೊತೆಗೆ ಅಭ್ಯಾಸಪೂರ್ಣವಾದ ಪೀಠಿಕೆಯನ್ನು ಬರೆದಿದ್ದಾರೆ. ಸಿದ್ದಿಜನಾಂಗ ಮೂಲತಃ ಆಫ್ರಿಕನ್ ನಿಗ್ರೋಗಳೆಂದೂ ಇವರ ಮೂಲ ಜನಾಂಗ ಮೊಜಾಂಬಿಕಾದವರೆಂದೂ ಪೋರ್ಚುಗೀಜರು ಭಾರತಕ್ಕೆ ಬರುವಾಗ ಕರೆತಂದ ಜನಾಂಗವೆಂದೂ ಗೊತ್ತಾಗುತ್ತದೆ. ಇಂತಹ ವಿಶೇಷ ಜನಾಂಗದಿಂದ ಕನ್ನಡದಲ್ಲಿ ಕಥೆಗಳನ್ನು ಸಂಗ್ರಹ ಮಾಡಿ ಪ್ರಕಟಿಸಿರುವುದು ಒಂದು ವಿಶೇಷವೆ ಆಗಿದೆ. ಕಥೆಗಳನ್ನು ಗಮನಿಸಿದರೆ ಅವೆಲ್ಲ ಭಿನ್ನವಾದ ಕಥೆಗಳೇನಲ್ಲ. ಆದರೆ ಸಿದ್ದಿಯರು ಆಡುವ ಕನ್ನಡ ಭಾಷೆ ಎಂತಹದು ಎಂಬುದಕ್ಕೆ ಇಲ್ಲಿಯ ಭಾಷೆ ನಮಗೆ ಉದಾಹರಣೆಯಾಗಿ ದೊರೆಯುತ್ತದೆ. ಆ ಮೂಲಕ ನಾವು ಸಿದ್ಧಿಯರ ಸಂಸ್ಕೃತಿ ಇಲ್ಲೆಲ್ಲ ಹೇಗೆ ಕಾಣುತ್ತದೆ ಎಂಬುದನ್ನು ಗುರುತಿಸಬಹುದಾಗಿದೆ.

ಕಾರವಾರ ಜಿಲ್ಲೆಯ ಹೊನ್ನಾವರ ಭಾಗದಿಂದಲೇ ಡಾ. ಶಾಂತಿ ನಾಯಕ ಅವರು **'ಉತ್ತರ ಕನ್ನಡದ ಹವ್ಯಕರ ಜನಪದ ಕಥೆಗಳು'**(೧೯೮೧) ಎಂಬ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇಲ್ಲಿನ ಕಥೆಗಳನ್ನು ೧೦ ರಿಂದ ೧೭ ವರ್ಷದ ಹುಡುಗರಿಂದ ಸಂಗ್ರಹಿಸಲಾಗಿದೆ. ಹೀಗಾಗಿ ಮಕ್ಕಳಿಗೆ ಇಷ್ಟವಾಗುವ ಕಥೆಗಳೇ ಇಲ್ಲಿವೆ. ಚಿಕ್ಕ ಚಿಕ್ಕ ಕಥೆಗಳಿಂದ ತುಂಬಿದ ೧೧೮ ಪುಟಗಳ ಈ ಕೃತಿಯಲ್ಲಿ ೬೩ ಕಥೆಗಳಿರುವುದು ಸೋಜಿಗವೇನಲ್ಲ. ಮತ್ತು ಇಲ್ಲಿಯ ಹೆಚ್ಚು ಕಥೆಗಳು ಪಂಚತಂತ್ರ, ಈಸೋಪನ ಕಥೆಗಳು ಮತ್ತು ಗ್ರಿಮ್ ಸಹೋದರರ ಕಥೆಗಳೇ ಆಗಿರುವುದು ಸಹಜವಾಗಿದೆ. ಅವೆಲ್ಲ ಮಕ್ಕಳು ತಮ್ಮ ಪಠ್ಯಗಳಲ್ಲಿ ಓದಿರುತ್ತಾರೆ. ಅಥವಾ ಮಕ್ಕಳಿಗೆ ಹಿಡಿಸುವ ಕಥೆಗಳನ್ನೇ ಅವರು ಬಾಲ್ಯದಿಂದಲೂ ಕೇಳುತ್ತ ಬಂದಿದ್ದು, ಅವನ್ನೇ ಸಂಗ್ರಹ ಮಾಡಿದ್ದಾರೆ. ಅಥವಾ ತಾವೇ ತಮಗೆ ಬರುವ ಕಥೆಗಳನ್ನು ಬರೆದುಕೊಟ್ಟಿದ್ದಾರೆ. ಇಲ್ಲಿಯ ವಿಶೇಷವೆಂದರೆ ಹವ್ಯಕರ ಭಾಷೆ. ಭಾಷಾ ದೃಷ್ಟಿಯಿಂದ, ಮತ್ತು ಮಕ್ಕಳು ಸಂಗ್ರಾಹಕರಾದರೆ ಜನಪದ ಕಥೆಗಳ ಸ್ಥಿತಿ ಏನಾಗುತ್ತದೆಂಬುದಕ್ಕೆ ಇಲ್ಲಿಯ ಕಥೆಗಳು ಉದಾಹರಣೆಗಳಾಗಿ ವಿಶೇಷ ಗಮನ ಸೆಳೆಯುತ್ತವೆ. ಡಾ. ಶಾಂತಿ ನಾಯಕ ಅವರು ತಮ್ಮ ೧೭ ಪುಟಗಳ ಪ್ರಸ್ತಾವನೆಯಲ್ಲಿ ಕಥೆಗಳ ತೌಲನಿಕ ಅಧ್ಯಯನ ಮಾಡಿದ್ದಾರೆ.

ಶ್ರೀ ಜಿ.ಬಿ.ಖಾಡೆ ಅವರಿಂದ ಬಿಜಾಪೂರ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಕುರುಬ ಜನಾಂಗದವರು ವಿಶೇಷವಾಗಿ ಜಾತ್ರೆಗಳಲ್ಲಿ, ಡೊಳ್ಳಿನ ವಾಲಗ ನಡೆಯುವಾಗ, ಒಂದು ದಮ್ಮು ಡೊಳ್ಳಿನ ವಾಲಗ ಮುಗಿದ ನಂತರ ನಡುವೆ ಕಥೆಹೇಳುವ ರೂಢಿಯಿದೆಯಂತೆ. ಬೀರಪ್ಪ, ಮಾಳಿಂಗರಾಯ ಈ ಮುಂತಾದ ಸಾಂಸ್ಕೃತಿಕ ನಾಯಕರ ಜಾತ್ರೆಗಳ ಸಂದರ್ಭದಲ್ಲಿ ಇಲ್ಲಿಯ ೨೩ ಕಥೆಗಳನ್ನು ಸಂಗ್ರಹಿಸಿರುವುದಾಗಿ ಸಂಪಾದಕರು ಬರೆದುಕೊಂಡಿದ್ದಾರೆ. ಆದರೆ ಇಲ್ಲಿಯ ಕಥೆಗಳನ್ನು ಗಮನಿಸಿದರೆ, ಇವೆಲ್ಲ ಸಾಮಾನ್ಯವಾದ ಜನಪದ ಕಥೆಗಳೇ ಆಗಿವೆ. ವಿಶೇಷವಾಗಿ ಆ ಜನಾಂಗಕ್ಕೆ ಸಂಬಂಧಿಸಿದ, ಅಥವಾ ಅಲ್ಲಿಯ ಉತ್ಸವ, ಆರಾಧನೆಗೆ ಸಂಬಂಧಿಸಿದ ಕಥೆಗಳು ಅವೇನಲ್ಲ. ಆದರೆ ಈ ಸಂಪ್ರದಾಯ ವಿಶೇಷವೆನಿಸುತ್ತದೆ. ಬಿಜಾಪೂರ ಜಿಲ್ಲೆಯ ಈ ಬಗೆಯ ಸಂದರ್ಭದಲ್ಲಿ ಹೇಳುವ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿ ಪರೀಕ್ಷಿಸಬೇಕಾದುದು ಅವಶ್ಯವಿದೆ.

ಈ ಸಾಲಿನಲ್ಲಿ ನಮಗೆ **'ಲಂಬಾಣಿ ಜನಪದ ಕತೆಗಳು'** (೧೯೯೪) ಎಂಬ ಮತ್ತೊಂದು ಸಂಗ್ರಹ ಕಾಣುತ್ತದೆ. ಇದನ್ನು ಸೋಮಣ್ಣ ಹೊಂಗಳ್ಳಿ ಅವರು ಸಂಗ್ರಹ ಮಾಡಿಕೊಟ್ಟಿದ್ದಾರೆ. 'ಈ ಸಂಕಲನದಲ್ಲಿ ಚಿಕ್ಕಕೊಡಗಲಿ, ಕೊಪ್ಪಳ, ಮೇದಕ್(ಆಂಧ್ರ), ರಾಯಚೂರು ಜಿಲ್ಲೆಯ ವಕ್ತೃಗಳಿಂದ ೩೦ ಕಥೆಗಳನ್ನು ಸಂಗ್ರಹಿಸಿಕೊಂಡಿರುತ್ತೇನೆ. ಕಾರಣ ಅಲ್ಲಿನ ಲಂಬಾಣಿ ಜನರು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಹೊಸ ಹಳ್ಳಿಯ ಬಳಿ ಇರುವ ಸಕ್ಕರೆ ಫ್ಯಾಕ್ಟರಿಯಲ್ಲಿ ಕೆಲಸಮಾಡುತ್ತ ಅಲ್ಲೆ ನೆಲಸಿದ್ದಾರೆ' (ಅರಿಕೆ, ಪು.೭). ಹೀಗೆ ಹಲವಾರು ಕಡೆಯಿಂದ ದುಡಿಯಲು ಬಂದು, ಒಂದೇ ಕಡೆ ನೆಲೆಸಿರುವ ಲಂಬಾಣಿಗಳಿಂದ ಸಂಗ್ರಹಿಸಿದ ಕತೆಗಳು ಇವಾಗಿವೆ. ಮತ್ತು ಭಾಷೆಯನ್ನೂ ಸಂಪಾದಕರು ತಿದ್ದಿ ತಮ್ಮ ಸುಧಾರಿತ ಭಾಷೆಯಲ್ಲಿ ಬರೆದಿದ್ದಾರೆ. ಹೀಗಾಗಿ ಈ ಸಂಗ್ರಹ ಜಾತಿ ಹಾಗೂ ಭಾಷಾ ದೃಷ್ಟಿಗಳಿಂದ ಅಂತಹ ವಿಶೇಷ ಎನಿಸುವುದಿಲ್ಲ. ಲಂಬಾಣಿಗಳಲ್ಲಿ ಪ್ರಚಲಿತದಲ್ಲಿರುವ ಕತೆಗಳ ಒಂದು

ಕಲ್ಪನೆ ಮಾತ್ರ ಈ ಸಂಗ್ರಹದಿಂದ ನಮಗೆ ದೊರೆಯುತ್ತದೆ. ಸಾಂಸ್ಕೃತಿಕ ದೃಷ್ಟಿಯಿಂದ ಅವರ ಬದುಕಿನ ಸಂಗತಿಗಳೇನಾದರೂ ಇದ್ದರೆ ಅವನ್ನು ಅಂತಹ ಸಂಗತಿಗಳು ವಕ್ತಾರರಿಂದ ಕಥೆಗಳಲ್ಲಿ ಹೇಗೆ ಸೇರಿಕೊಳ್ಳುತ್ತವೆ ಎಂಬ ಸಂಗತಿಯನ್ನು ಇಂತಹ ಸಂಗ್ರಹಗಳಲ್ಲಿ ಗಮನಿಸಿ ಅಧ್ಯಯನ ಮಾಡಬಹುದಾಗಿದೆ.

ಡಾ. ಎಂ.ಎಸ್. ಶೇಖರ್ ಅವರು **'ನಮ್ಮ ಮುಸ್ಲಿಂ ಹಿನ್ನೆಲೆಯ ಜನಪದ ಕತೆಗಳು'** (೨೦೦೧) ಎಂಬ ಕಥಾಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಇಲ್ಲಿಯ ವಿಶೇಷತೆ ಎಂದರೆ ವಕ್ತೃಗಳೆಲ್ಲರೂ ನಾಲ್ಕು ಜನ ಮುಸ್ಲಿಂ ಹೆಣ್ಣುಮಕ್ಕಳೇ. ಎಲ್ಲರೂ ಹಾಸನ ಜಿಲ್ಲೆಗೆ ಸೇರಿದವರು. ಅವರೆಲ್ಲ ಹಳ್ಳಿಯಲ್ಲಿ ಹುಟ್ಟಿ ಈಗ ಬದುಕಿಗಾಗಿ ಹಾಸನ ಪಟ್ಟಣ ಸೇರಿದವರು. ಇಲ್ಲಿಯ ಒಟ್ಟು ೫೨ ಕಥೆಗಳಲ್ಲಿ ೪೨ ಕಥೆಗಳನ್ನು ಶ್ರೀಮತಿ ಖುತೇಜಾಬಿ ಎಂಬ ಒಬ್ಬ ಹೆಣ್ಣುಮಗಳೇ ಹೇಳಿದ್ದಾಳೆ. ಎರಡನೇದಾಕೆ ಶ್ರೀಮತಿ ಜಮೀಲಾಬಿ ೬, ಶ್ರೀಮತಿ ಪ್ಯಾರಿಜಾಹಾ ೨, ಶ್ರೀಮತಿ ನೂರ್‌ಜಾಹಾ ೨ ಕಥೆಗಳನ್ನು ಹೇಳಿದ್ದಾರೆ. ಹಾಗೆ ನೋಡಿದರೆ ಈ ಸಂಗ್ರಹದ ಮುಖ್ಯಕಥೆಗಳು ಖುತೇಜಾಬಿ ಹೇಳಿದ ಕಥೆಗಳಿಂದ ತುಂಬಿದೆ. ೧೯೨ ಪುಟಗಳಷ್ಟು ಖುತೇಜಾಬಿ ಹೇಳಿದ ಕತೆಗಳು ಹರಡಿಕೊಂಡಿವೆ. ಸಂಪಾದಕರು ಈಕೆಯನ್ನು ಪರಿಚಯಿಸುವ ಪರಿ ನೋಡಿದರೆ ಈಕೆ ಅತ್ಯಂತ ಆಕರ್ಶಕವಾಗಿ ಕಥೆ ಹೇಳುವ ವಕ್ತಾರಳಾಗಿದ್ದಾಳೆ. ಅಂತಲೇ ಆಕೆ ಹೋದಕಡೆಯಲ್ಲೆಲ್ಲ ಸಂಪಾದಕರು ಅಡ್ಡಾಡಿ ಆಕೆ ಹೇಳಿದ ಕಥೆಗಳನ್ನು ಸಂಗ್ರಹಿಸಿದ್ದಾರೆ. ಮುಂದಿನ ಸುಮಾರು ೩೦-೩೫ ಪುಟಗಳ ವ್ಯಾಪ್ತಿಯಲ್ಲಿ ಉಳಿದವರ ಕಥೆಗಳಿವೆ. ಇಲ್ಲಿ ಖುತೇಜಾಬಿಯ ೪೨ ಕಥೆಗಳನ್ನೇ ಸೇರಿಸಿ ಒಂದು ಸಂಗ್ರಹವನ್ನು ಮಾಡಬಹುದಿತ್ತೇನೋ. ಈಗಲೂ ೪೨ ಕಥೆಗಳನ್ನು ಗಮನಿಸಿ ಅಧ್ಯಯನ ಮಾಡಬಹುದಾಗಿದೆ. ಇಲ್ಲಿಯ ಎಲ್ಲಕತೆಗಳ ತಲೆಬರಹಗಳು ಮಾತ್ರ ಉರ್ದು ಭಾಷೆಯಲ್ಲಿಯೆ ಇರುವುದು ವಿಶೇಷ. ಉರ್ದು ಭಾಷೆ ಮತ್ತು ಉಚ್ಚಾರಣೆಯ ಪ್ರಭಾವ ಸಹಜವಾಗಿಯೇ ಕಾಣುತ್ತದೆ. ಆದರೆ ಈ ಎಲ್ಲ ಕಥೆಗಳು ನಮ್ಮಲ್ಲಿ ಸಹಜವಾಗಿ ಪ್ರಚಾರದಲ್ಲಿರುವ ಜನಪದ ಕಥೆಗಳೇ ಆಗಿವೆ. ಇವನ್ನು ಖುತೇಜಾಬಿಯಂತಹ ವಕ್ತಾರರು ಉರ್ದುವಿನಲ್ಲಿ ಹೇಳುತ್ತಿದ್ದರೆಂದು ತೋರುತ್ತದೆ. ಹೀಗಾಗಿಯೇ ಇಲ್ಲಿ ಉರ್ದು ಮಿಶ್ರಿತ ಭಾಷೆಯ ಪ್ರಭಾವ ಕಾಣುತ್ತದೆ. ವಕ್ತಾರರು ಹೇಳುವ ಸಹಜ ಜನಪದ ಕಥೆಗಳಲ್ಲಿ ವಕ್ತಾರರ ಸಂಸ್ಕೃತಿ ಹೇಗೆ ಬೆರೆಸಿ ಬರುತ್ತದೆ ಎಂಬುದಕ್ಕೆ ಇಂತಹ ಕಥಾ ಸಂಗ್ರಹಗಳ ಅಧ್ಯಯನ ಅವಶ್ಯವಾಗಿದೆ.

ಈ ಮೇಲೆ ಪರಿಚಯಗೊಂಡ ಏಳು ಕಥಾಸಂಗ್ರಹಗಳು ಆರು ಜನಾಂಗಗಳಿಂದ ಸಂಗ್ರಹಗೊಂಡು ಪ್ರಕಟವಾಗಿರುವುದು ವಿಶೇಷ. ದಲಿತರು, ಲಂಬಾಣಿಗಳು, ಗೊಂದಲಿಗರು, ಸಿದ್ದಿಯರು, ಹವ್ಯಕರು, ಮುಸ್ಲೀಮರು ಈ ಜನಾಂಗಗಳಲ್ಲಿ ಪ್ರಚಾರದಲ್ಲಿರುವ ಕಥೆಗಳೂ ಸಾಮಾನ್ಯವಾಗಿ ಎಲ್ಲ ಜನಾಂಗಗಳಲ್ಲಿ ಪ್ರಚಾರದಲ್ಲಿರುವ ಕಥೆಗಳೇ ಆಗಿರುವುದು ಎದ್ದು ಕಾಣುತ್ತದೆ. ಆದರೆ ಭಾಷೆ ಮತ್ತು ಅಭಿವ್ಯಕ್ತಿಗಳ ಮಟ್ಟದಲ್ಲಿ ಇವೆಲ್ಲ ಭಿನ್ನವಾಗಿವೆ. ಆ ದೃಷ್ಟಿಯಿಂದಲೂ ಈ ಕಥೆಗಳನ್ನು ಗಮನಿಸುವುದು ಅವಶ್ಯವೆನಿಸುತ್ತದೆ.

ಪ್ರಾದೇಶಿಕ ಜನಪದ ಕಥೆಗಳ ಸಂಗ್ರಹಗಳು :

ಕರ್ನಾಟಕದ ಪ್ರಾತಿನಿಧಿಕ ಜನಪದ ಕಥೆಗಳ ಸಂಗ್ರಹಗಳು :

ಜನಪದ ಕಥೆಗಳನ್ನು ಒಬ್ಬ ವಕ್ತಾರನಿಂದ ಸಂಗ್ರಹಿಸಿದಂತೆ, ಒಂದು ಗ್ರಾಮ, ಒಂದು ಪ್ರದೇಶ, ಒಂದು ತಾಲೂಕು, ಒಂದು ಜಿಲ್ಲೆ ಹೀಗೆ ಪ್ರಾದೇಶಿಕ ಮಿತಿಯನ್ನು ಹಾಕಿಕೊಂಡು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ ಕಥಾಸಂಕಲನಗಳು ನಮಗೆ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ಇಡೀ ಕರ್ನಾಟಕದ ಕಥೆಗಳ ಸಂಕಲನವೊಂದು ಡಾ. ಎಚ್.ಎಲ್.ನಾಗೇಗೌಡ ಅವರು ಹಲವಾರು ಸಂಕಲನಗಳಿಂದ ಆಯ್ದು, ಒಂದು ಸಂಗ್ರಹವನ್ನು ಪ್ರಕಟಿಸಿದ ಉದಾಹರಣೆ ನಮ್ಮ ಮುಂದಿದೆ. ಹೀಗೆ ಪ್ರದೇಶ ವ್ಯಾಪ್ತಿಯನ್ನು ಗಮನಿಸಿ ಆಯಾ ಸಂಗ್ರಹದ ಉದ್ದೇಶ, ಪ್ರಯೋಜನಗಳು ಭಿನ್ನಭಿನ್ನವಾಗುತ್ತವೆ ಎಂಬುದನ್ನು ಗಮನಿಸಬೇಕು. ಹೊಸದೆಹಲಿಯಲ್ಲಿರುವ ಕೇಂದ್ರಸಾಹಿತ್ಯ ಅಕಾಡೆಮಿಯು **'ಉತ್ತರ ಕರ್ನಾಟಕ ಜನಪದ ಕಥೆಗಳು'** (೧೯೭೨) ಎಂಬ ಸಂಕಲನವನ್ನು, **'ದಕ್ಷಿಣ ಕರ್ನಾಟಕದ ಜನಪದ ಕಥೆಗಳು'** (೧೯೭೯) ಎಂಬ ಇನ್ನೊಂದು ಸಂಕಲನವನ್ನು ಪ್ರಕಟಿಸಿದೆ. ಈ ಎರಡು ಕೃತಿಗಳನ್ನು ಗಮನಿಸಿದರೆ ಇಡೀ ಕರ್ನಾಟಕದ ಕಥೆಗಳನ್ನು ಗಮನಿಸಿದಂತಾಗುತ್ತದೆ ಎಂಬ ಭಾವನೆಯ ಹಿನ್ನೆಲೆಯಲ್ಲಿ ಇವನ್ನು ಪ್ರಕಟಿಸಿದಂತೆ ತೋರುತ್ತದೆ. ಒಂದನೆಯದನ್ನು ಸಿಂಪಿ ಲಿಂಗಣ್ಣನವರು, ಎರಡನೆಯದನ್ನು ಡಾ. ಜೀ.ಶಂ.ಪ. ಅವರು ಸಂಗ್ರಹಿಸಿ ಕೊಟ್ಟಿದ್ದಾರೆ.

'ಉತ್ತರಕರ್ನಾಟಕ ಜನಪದ ಕಥೆಗಳು' ಕೃತಿಯಲ್ಲಿ ೭೮ ಕಥೆಗಳಿವೆ. ಅವುಗಳನ್ನು ರಮ್ಯ ಕಥೆಗಳು, ಅತಿಮಾನುಷ ಕಥೆಗಳು, ವಾಸ್ತವಿಕ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ವಿವರಣಾತ್ಮಕ ಕಥೆಗಳು, ಸ್ಥಳ ಕಥೆಗಳು, ನೀತಿ ಕಥೆಗಳು, ಪ್ರಾಣಿ ಕಥೆಗಳು, ವಿನೋದ ಕಥೆಗಳು ಎಂದು ಒಂಬತ್ತು ವಿಭಾಗಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. ವಿಶೇಷವಾಗಿ ತಾವು ಮುಂಬಯಿ ಕರ್ನಾಟಕಕ್ಕೆ ಸೇರಿದವರಾಗಿದ್ದು, ಮೊದಲಿನಿಂದಲೂ ಜನಪದ ಸಾಹಿತ್ಯದ ಬಗ್ಗೆ ಆಸಕ್ತಿವುಳ್ಳವರಾಗಿ ತಮಗೆ ಬಂದ ಕಥೆಗಳನ್ನು ನೇರವಾಗಿ ತಾವೇ ಬರೆದು ಹಾಕಿದ್ದಾರೆ. ಇನ್ನು ಕಾರವಾರ ಜಿಲ್ಲೆಯಿಂದ ಡಾ. ಎಲ್.ಆರ್. ಹೆಗಡೆ ಅವರು ಸಂಗ್ರಹಿಸಿದ ನಾಲ್ಕು ಕಥೆಗಳನ್ನು ಓದಿ ಅವನ್ನೂ ತಾವೆ ಮತ್ತೊಮ್ಮೆ ಬರೆದು ಮುಗಿಸಿದ್ದಾರೆ. ಇನ್ನು ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಕಥೆಗಳನ್ನು ಇಲ್ಲಿಯೇ ಸಂಗ್ರಹಿಸಿ ಅವುಗಳನ್ನು ಹೇಳಿದಂತೆಯೇ ಇಡಲಾಗಿದೆ ಎಂದು ಬರೆದಿದ್ದಾರೆ.

'ದಕ್ಷಿಣ ಕರ್ನಾಟಕದ ಜನಪದ ಕಥೆಗಳು' (೧೯೭೯) ಎಂಬುದನ್ನು ಸಂಪಾದಿಸಿ ಕೊಟ್ಟವರು ಡಾ. ಜೀಶಂಪ ಅವರು. ಜೀಶಂಪ ಅವರು ಈಗಾಗಲೇ ಜನಪದ ಕಥೆಗಳನ್ನು ಸಂಗ್ರಹಿಸಿ ಅಭ್ಯಾಸವಿರುವ, ತಮಗೆ ಪರಿಚಯವಿರುವ ಅನೇಕರಿಂದ ಬೇರೆ ಬೇರೆ ಜಿಲ್ಲೆಗಳಿಂದ ಮೂರ್‍ನಾಲ್ಕು ಕಥೆಗಳನ್ನು ತರಿಸಿಕೊಂಡು, ಅವುಗಳಲ್ಲಿ ಆಯ್ದು ಈ ಸಂಗ್ರಹದಲ್ಲಿ ಬಳಸಿಕೊಂಡಿದ್ದಾರೆ. ಇಲ್ಲಿಯ ೫೧ ಕಥೆಗಳನ್ನು ಬಯಲು ಸೀಮೆಯ ಕಥೆಗಳು, ಮಲೆನಾಡಿನ ಕಥೆಗಳು ಎಂದು ಪ್ರದೇಶವಾರು ವಿಂಗಡಿಸಿ ಪ್ರಕಟಿಸಿದ್ದಾರೆ. ಇಲ್ಲಿಯ ಕಥೆಗಳನ್ನು ೨೭ ಜನರಿಂದ ತರಿಸಿಕೊಂಡಿರುವುದನ್ನು ಕೊನೆಯಲ್ಲಿ ವಿವರವಾಗಿ ಕೊಟ್ಟಿದ್ದಾರೆ.

ಈ ಎರಡು ಪ್ರಾತಿನಿಧಿಕ ಕಥಾಸಂಗ್ರಹಗಳನ್ನು ನೋಡಿದರೆ, ಇಡೀ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಜನಪದ ಕಥೆಗಳ ಒಂದು ಸಾಮಾನ್ಯ ಪಟ್ಟಿ ನಮಗೆ ದೊರೆತಂತಾಗುತ್ತದೆ. ಹೀಗೆ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಕಥೆಗಳನ್ನು ನೋಡಬೇಕೆಂಬುವವರಿಗೆ, ಅಧ್ಯಯನ ಮಾಡಬೇಕೆಂಬುವವರಿಗೆ ದೇಶದ ಅಧಿಕೃತ ಸಂಸ್ಥೆಯೊಂದು ಪ್ರಕಟಿಸಿದ ಇಂತಹ ಸಂಗ್ರಹಗಳು ಮಾದರಿಯಾಗಿ ದೊರೆಯಲಿ ಎಂಬ ದೊಡ್ಡ ಉದ್ದೇಶ ಇವುಗಳ ಹಿಂದೆ ಇರುತ್ತದೆ ಎಂಬುದನ್ನು ಗಮನಿಸಬೇಕು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಜನಪದ ಕಥೆಗಳನ್ನು ಅಧ್ಯಯನ ಮಾಡುವವರಿಗೆ ಇಂತಹ ಮಾದರಿ ಸಂಗ್ರಹಗಳು ನೆರವಾಗುತ್ತವೆ.

ಉತ್ತರ ಕರ್ನಾಟಕದ ಪ್ರಾತಿನಿಧಿಕ ಸಂಗ್ರಹವಾಗಿ ಸಿಂಪಿ ಲಿಂಗಣ್ಣ ಅವರ ಸಂಗ್ರಹದ ಜೊತೆಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ೧೯೮೭ರಲ್ಲಿ ಪ್ರಕಟವಾದ **'ಜನಪದ ನೂರೆಂಟು ಕತೆಗಳು'** ಎಂಬ ಜನಪದ ಕಥೆಗಳ ಸಂಗ್ರಹವನ್ನು ಗಮನಿಸುವುದು ಅಗತ್ಯವಾಗಿದೆ. ಈ ಕೃತಿಯಲ್ಲಿ ಕಲಬುರಗಿ, ಬೀದರ, ರಾಯಚೂರು, ಬಿಜಾಪೂರ, ಬಳ್ಳಾರಿ, ಬೆಳಗಾಂವ ಜಿಲ್ಲೆಗಳಿಗೆ ಸೇರಿದ ಕಥೆಗಳಿವೆ. ೧೧೧ ಕಥೆಗಳ ಬೃಹತ್ ಸಂಗ್ರಹ ಇದು. 'ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ ಹಾಡುಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟನೆ' ಎಂಬ ಡಾ. ಬಿ.ಬಿ.ಹೆಂಡಿ ಅವರ ಯೋಜನೆಯಡಿ (೧೯೭೫-೧೯೭೮) ಸಂಗ್ರಹಗೊಂಡ ಕಥೆಗಳು ಇಲ್ಲಿವೆ. ಡಾ. ಹೆಂಡಿ ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗಲೇ ಇಲ್ಲಿಯ ಕಥೆಗಳನ್ನು ಆರಿಸಿ, ಶುದ್ಧಪ್ರತಿ ತಯಾರಿಸಿ, ಪ್ರಸ್ತಾವನೆ ಬರೆದು, ಅನುಬಂಧಗಳನ್ನು ಸೇರಿಸಿ, ಮುದ್ರಣಕ್ಕೆ ತಯಾರಿಸಿದ ಹಸ್ತಪ್ರತಿ, ಅವರು ನಿವೃತ್ತಿ ಹೊಂದಿದ ನಂತರ ಪ್ರಕಟವಾಗಿದೆ. ಹೀಗಾಗಿ ಸಂಪಾದಕರ ಹೆಸರುಗಳಲ್ಲಿ ಅವರ ಹೆಸರನ್ನು ಕೊನೆಯಲ್ಲಿ ಹಾಕಲಾಗಿದೆ. ಜನಪದ ಸಾಹಿತ್ಯದ ಅಭ್ಯಾಸ ಪ್ರಾರಂಭವಾದ ಹೊಸದರಲ್ಲಿ ಸಂಗ್ರಹಿಸಿದ ಕಥೆಗಳು ಇವಾಗಿವೆ. ಇಲ್ಲಿಯ ಕಥೆಗಳನ್ನು ಸಂಗ್ರಹಿಸುವಲ್ಲಿ ಸ್ಥಳೀಯರ ಸಹಾಯವನ್ನು ಪಡೆಯಲಾಗಿದೆ. ವಕ್ತಾರರು ಕಥೆ ಹೇಳುವ ಧಾಟಿಯಲ್ಲಿಯೇ ಅವುಗಳನ್ನು ಬರೆಯಲು ಪ್ರಯತ್ನಿಸಿದ ಕಥೆಗಳು ಇಲ್ಲಿವೆ. ಹೀಗಾಗಿ ಸಿಂಪಿ ಅವರ ಕಥಾಸಂಗ್ರಹದಲ್ಲಿ ಅವರೇ ತಿದ್ದಿ ಬರೆದ ಕಥೆಗಳಿದ್ದರೆ, ಇಲ್ಲಿ ನೇರವಾಗಿ ಕ್ಷೇತ್ರದಿಂದ ಸಂಗ್ರಹಿಸಿದ ಕಥೆಗಳು ಇರುವುದರಿಂದ ಉತ್ತರ ಕರ್ನಾಟಕದ ಅಧಿಕೃತ ಸಂಗ್ರಹವಾಗಿ **'ಜನಪದ ನೂರೆಂಟು ಕತೆಗಳು'** ಕೃತಿಯನ್ನು ನೋಡುವುದು ಹೆಚ್ಚು ಉಪಯುಕ್ತವೆನಿಸುತ್ತದೆ. ಇಲ್ಲಿಯ ಕಥೆಗಳನ್ನು ರಮ್ಯಕತೆಗಳು, ಅಸಾಮಾನ್ಯ ಕತೆಗಳು, ಅತಿಮಾನುಷ ಕತೆಗಳು, ಮಂತ್ರ-ಮಾಟದ ಕತೆಗಳು, ಹಾಸ್ಯಕತೆಗಳು, ನೀತಿಕತೆಗಳು, ಪ್ರಾಣಿಕತೆಗಳು, ಸಂಕೀರ್ಣ ಕತೆಗಳು ಎಂಬ ಭಾಗಗಳಲ್ಲಿ ವಿಂಗಡಿಸಿ ತೋರಿಸಿದ್ದಾರೆ. ಸಂಗ್ರಾಹಕರ, ವಕ್ತಾರರ ಎರಡೂ ಪಟ್ಟಿಗಳನ್ನು ಕೊಟ್ಟಿದ್ದಾರೆ. ೧೨ ಪುಟಗಳ ಒಂದು ಪುಟ್ಟ ಪ್ರಸ್ತಾವನೆಯಲ್ಲಿ ಆಗಿನ ಕಾಲಕ್ಕೆ ಅಗತ್ಯವಾದ ಮಾಹಿತಿಗಳನ್ನು ಕೊಡಲು ಪ್ರಯತ್ನಿಸಿದ್ದಾರೆ. ಪಾಶ್ಚಾತ್ಯರಲ್ಲಿ ಜನಪದ ಕಥೆಗಳನ್ನು ಯಾವ ಹೆಸರಿನಿಂದ ಕರೆಯುತ್ತ ಬಂದರು ಎಂಬುದನ್ನು ಪ್ರಸ್ತಾಪಿಸುತ್ತ ಗ್ರಿಮ್ ಸಹೋದರರ ಪ್ರಸ್ತಾಪವನ್ನೂ ಮಾಡಿದ್ದಾರೆ. ಆಶಯ, ಮಾದರಿಗಳ ಸಂಕ್ಷಿಪ್ತ

ಪರಿಚಯವೂ ಇಲ್ಲಿದೆ. ಚಾರಿತ್ರಿಕ ಭೌಗೋಲಿಕ ಸಿದ್ಧಾಂತ, ಪುರಾಣಮೂಲ ಸಿದ್ಧಾಂತ, ಭಾರತೀಯ ಮೂಲ ಸಿದ್ಧಾಂತ, ಮಾನವಶಾಸ್ತ್ರೀಯ ಪಂಥ, ರಚನಾತತ್ತ್ವ ಇವುಗಳ ಪರಿಚಯವನ್ನೂ ಮಾಡಿದ್ದಾರೆ. ಸಂಕ್ಷಿಪ್ತವಾಗಿ ಜನಪದ ಕತೆಗಳ ಲಕ್ಷಣಗಳನ್ನೂ ಬರೆದಿದ್ದಾರೆ. ಕೊನೆಯಲ್ಲಿ ಈ ಸಂಗ್ರಹದ ಕಥೆಗಳ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗುರುತಿಸಿ ವಿವರಿಸಿದ್ದಾರೆ. ಡಾ. ಹೆಂಡಿ ಅವರಿಗೆ ಜನಪದ ಸಾಹಿತ್ಯದ ಬಗ್ಗೆ ಅಪಾರವಾದ ತಿಳುವಳಿಕೆ ಇತ್ತು. ಜೊತೆಗೆ ಜನಪದ ಸಾಹಿತ್ಯಕ್ಕೆ ಸಂಬಂದಿಸಿದಂತೆ ಎಂ.ಎ. ತರಗತಿಗಳಿಗೆ ಪಾಠಗಳನ್ನು ಹೇಳಬೇಕಾಗಿ ಬಂದಾಗ, ಆಗಿನ ಕಾಲದಲ್ಲಿ ಪಾಶ್ಚಾತ್ಯರ ವಿವರಣೆಗಳ ಅರಿವು ಅಗತ್ಯವಾದುದರಿಂದ ಅದನ್ನೂ ಅವರು ಓದಿಕೊಂಡಿದ್ದರು. ತಮ್ಮ ಯೋಜನೆಯಲ್ಲಿ ಸಂಗ್ರಹವಾದ ಅಪಾರವಾದ ಜನಪದ ಸಾಹಿತ್ಯದ ಪ್ರಾತಿನಿಧಿಕ ಸಂಗ್ರಹಗಳನ್ನು ತರಬೇಕೆಂಬ ಅವರ ಬಯಕೆಯಂತೆ ಅವರೇ ಸ್ವತಃ ಆಯ್ಕೆ ಮಾಡಿದ, ಪ್ರಸ್ತಾವನೆ ಮತ್ತು ಅನುಬಂಧಗಳನ್ನು ತಯಾರಿಸಿ ಪ್ರಕಟವಾದ ಎರಡು ಕೃತಿಗಳೆಂದರೆ ಒಂದು **'ಹರದೇಶಿ–ನಾಗೇಶಿ'**(೧೯೮೩), ಇನ್ನೊಂದು **'ಜನಪದ ನೂರೆಂಟು ಕತೆಗಳು'** (೧೯೮೭). ಜನಪದ ಸಾಹಿತ್ಯದ ಬಗೆಗೆ ಸ್ಪಷ್ಟವಾದ ಅರಿವಿರುವ ಡಾ.ಬಿ.ಬಿ.ಹೆಂಡಿ ಅವರ ಜನಪದ ಕತೆಗಳ ಪ್ರಸ್ತುತ ಸಂಗ್ರಹವನ್ನು ಉತ್ತರ ಕರ್ನಾಟಕದ ಅಧಿಕೃತ ಪ್ರಾತಿನಿಧಿಕ ಸಂಗ್ರಹವೆಂದು ಗಮನಿಸುವುದು ಹೆಚ್ಚು ಉಚಿತವೆನಿಸುತ್ತದೆ.

ಜಿಲ್ಲಾ ಜನಪದ ಕಥೆಗಳ ಸಂಗ್ರಹಗಳು :

ಮೈಸೂರು ವಿಶ್ವವಿದ್ಯಾಲಯದ ಒಂದು ಯೋಜನೆಯಂತೆ ಪ್ರತಿಜಿಲ್ಲೆಯಿಂದ ಒಂದೊಂದು ಜನಪದ ಕಥೆಗಳ ಸಂಗ್ರಹ, ಇನ್ನೊಂದು ಹಾಡುಗಳ ಸಂಗ್ರಹ ಹೊರಬೇಕೆಂಬ ಯೋಜನೆಯಡಿ ಅನೇಕ ಕಥಾ ಸಂಗ್ರಹಗಳು ಪ್ರಕಟವಾಗಿದ್ದು, ಅವೆಲ್ಲ ಒಂದೊಂದು ಜಿಲ್ಲೆಯ ಹೆಸರನ್ನು ಹೊತ್ತುಕೊಂಡು ಪ್ರಕಟವಾಗಿರುವುದು ಕಂಡುಬರುತ್ತದೆ. ಹೀಗೆ ಪ್ರಕಟವಾದ ಹತ್ತು ಸಂಗ್ರಹಗಳು ನನ್ನ ಮುಂದಿವೆ. ಒಂದು ಜಿಲ್ಲೆಯ ಪ್ರಾತಿನಿಧಿಕ ಕಥೆಗಳಿಗಾಗಿ ನೋಡುಬಹುದಾದ ಸಂಗ್ರಹಗಳು ಇವಾಗಿವೆ.

ಈ ಯೋಜನೆ ಬಹುಶಃ ೧೯೭೦ರಲ್ಲಿ ಪ್ರಾರಂಭವಾದಂತೆ ತೋರುತ್ತದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಜಾನಪದ ವಿಭಾಗಕ್ಕೆ ಸಹಾಯಕ ಸಂಶೋಧಕರೆಂದು ನೇಮಕವಾದ ಕ್ಯಾತನಹಳ್ಳಿ ರಾಮಣ್ಣ ಮತ್ತು ಟಿ.ಎಸ್.ರಾಜಪ್ಪ ಅವರನ್ನು ಕಥೆ ಮತ್ತು ಹಾಡುಗಳ ಸಂಗ್ರಹಕ್ಕೆ ಮೊದಲು ಕಳಿಸಿದ್ದು ಬಹುಶಃ ಉತ್ತರಕರ್ನಾಟಕಕ್ಕೆಂದೇ ತೋರುತ್ತದೆ. ಹೀಗಾಗಿ ಪ್ರಕಟವಾದ ಕೃತಿಗಳನ್ನು ಗಮನಿಸಿದರೆ ಉತ್ತರಕರ್ನಾಟಕದಿಂದ ಸಂಗ್ರಹಗೊಂಡ ಜನಪದ ಸಾಹಿತ್ಯ ಸಂಕಲನಗಳೇ ಮೊದಲ ಪ್ರಾರಂಭದ ವರ್ಷಗಳಲ್ಲಿ ಪ್ರಕಟವಾಗಿರುವುದು ಕಂಡುಬರುತ್ತದೆ. ಅದರಲ್ಲೂ ಟಿ.ಎಸ್.ರಾಜಪ್ಪ ಅವರು ಮೂರು ಜಿಲ್ಲೆಯ ಕಥೆಗಳನ್ನು ಸಂಗ್ರಹಸಿ, ಮೂರು ಜಿಲ್ಲೆಯ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. **'ಬೆಳಗಾಂವ ಜಿಲ್ಲೆಯ ಜನಪದ ಕಥೆಗಳು'**(೧೯೭೩), **'ಧಾರವಾಡ ಜಿಲ್ಲೆಯ ಜನಪದ ಕಥೆಗಳು'**(೧೯೭೫) ಎರಡು ಕೃತಿಗಳನ್ನು ಮುಂಬಯಿ ಕರ್ನಾಟಕದಿಂದ, **'ರಾಯಚೂರು ಜಿಲ್ಲೆಯ ಜನಪದ ಕಥೆಗಳು'**(೧೯೭೬) ಎಂಬುದು ಹೈದ್ರಾಬಾದ ಕರ್ನಾಟಕಕ್ಕೆ

ಸೇರಿದ ಜಿಲ್ಲೆಯಿಂದ ಪ್ರಕಟವಾದ ಕಥೆಗಳ ಸಂಗ್ರಹಗಳಾಗಿವೆ. ಈ ಎಲ್ಲ ಕಥಾ ಸಂಗ್ರಹಗಳು ಬಹುಶಃ ಉತ್ತರ ಕರ್ನಾಟಕದಿಂದ ಪ್ರಕಟವಾದ ಪ್ರಥಮ ಜನಪದ ಕಥಾಸಂಗ್ರಹಗಳಾಗಿವೆ. ಇವುಗಳಲ್ಲಿ **'ಧಾರವಾಡ ಜಿಲ್ಲೆಯ ಜನಪದ ಕಥೆಗಳು'** ಎಂಬುದರಲ್ಲಿ ೨೮ ಕಥೆಗಳಿವೆ. ಕೊನೆಯ ೨೭, ೨೮ನೇ ಕಥೆಗಳನ್ನು ಮಾತ್ರ ಒಬ್ಬ ವಕ್ತಾರ ಹೇಳಿದ್ದು, ಉಳಿದ ೨೬ ಕಥೆಗಳನ್ನು ಹೊಳೆಆಲೂರಿನ ೫೫ ವರ್ಷದ ಶ್ರೀ ಮಾರುತಿ ಭೀಮರಾವ್ ಮದರಿ ಎನ್ನುವವರು ಹೇಳಿದ್ದಾರೆ. ಹೀಗಾಗಿ ಒಬ್ಬ ವಕ್ತಾರನ ಕಥೆಗಳೇ ಇಲ್ಲಿ ಮುಖ್ಯವೆನಿಸುತ್ತವೆ ಎಂಬುದನ್ನು ಗಮನಿಸಬೇಕು. ಆದರೆ ಕೃತಿಯ ಹೆಸರನ್ನು ಜಿಲ್ಲೆಯ ಹೆಸರಿನ ಮೇಲೆ ಇಟ್ಟುದುದರಿಂದ ಈ ಕೃತಿಯನ್ನು ಈ ವಿಭಾಗದಲ್ಲಿ ಸೇರಿಸಲಾಗಿದೆ. ಶ್ರೀ ಮಾರುತಿ ಭೀಮರಾವ ಮದರಿ ಅವರು ಅಗೇರು ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅವರನ್ನು ಕುರಿತು ಸಂಪಾದಕರು ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ಬರೆದಿದ್ದಾರೆ : 'ಇಪ್ಪತ್ತಾರು ಕಥೆಗಳನ್ನು ಶ್ರೀ ಮಾರುತಿ ಭೀಮರಾವ್ ಮದರಿಯವರಿಂದಲೂ ಉಳಿದೆರಡು ಕತೆಗಳನ್ನು ಶ್ರೀ ಬಸವಣ್ಣಗೌಡರಿಂದಲೂ ಸಂಗ್ರಹಿಸಲಾಗಿದೆ. ಶ್ರೀ ಮದರಿಯವರು ಪಾತ್ರೆಗಳನ್ನು ಊರೂರುಗಳಿಗೆ ಮಾರಲು ಹೋಗುತ್ತಿದ್ದಾಗ, ಸಂಗಡಿಗರು ಬೇಸರ ಕಳೆಯಲು ಒಬ್ಬರಿಗೊಬ್ಬರು ಕತೆಗಳನ್ನು ಹೇಳಿಕೊಳ್ಳುತ್ತಿದ್ದು ಅಲ್ಲಿ ಅನೇಕ ಕತೆಗಳನ್ನು ಕಲಿತುಕೊಳ್ಳುವುದರೊಂದಿಗೆ ಮನೆಯಲ್ಲಿ ತಮ್ಮ ತಾಯಿಯವರಿಂದಲೂ ಕೆಲವು ಕತೆಗಳನ್ನು ಕಲಿತರು. ಒಗಟಿನ ಕತೆಗಳು ಬಹಳವಾಗಿ ಬರುತ್ತಿದ್ದು, ಈಗ ನೆನಪಿನ ಶಕ್ತಿ ಕುಗ್ಗಿರುವುದರಿಂದ ಬಹಳಷ್ಟು ಕತೆಗಳು ಅವರಿಗೆ ಮರೆತುಹೋಗಿವೆ. ಶ್ರೀ ಮದರಿಯವರು ಕತೆಗಳನ್ನು ಹೇಳುವುದರಲ್ಲಿ ನಿಪುಣರು' (ಪ್ರಪು. ೧೨). ಹೀಗಾಗಿ ಒಬ್ಬನೇ ಹೇಳಿದ ಜನಪದ ಕಥೆಗಳನ್ನು ಕುರಿತು ಅಧ್ಯಯನ ಮಾಡಲು ಮುಂದಾಗುವವರು ಈ ಕಥಾಸಂಕಲನವನ್ನು ಆ ಗುಂಪಿನಲ್ಲೂ ಧಾರಾಳವಾಗಿ ಬಳಸಿಕೊಳ್ಳುವುದು ಸರಿ ಎನಿಸುತ್ತದೆ. ಒಂದೊಂದು ಜಿಲ್ಲೆಯಿಂದ ಕೆಲವು ಕಥೆಗಳನ್ನು ಸಂಗ್ರಹಿಸಿ, ವಿಶ್ವವಿದ್ಯಾಲಯದಿಂದ ಪ್ರಕಟಿಸುವ ಅವಕಾಶ ಇರುವುದರಿಂದ ಈ ಮತ್ತು ಇಂತಹ ಜಿಲ್ಲಾಸಂಕಲನಗಳ ಪ್ರಸ್ತಾವನೆಗಳಲ್ಲಿ ಹೊಸದೇನೂ ಕಾಣಿಸದು. ತಮ್ಮ ಸಂಕಲನದ ಕಥೆಗಳು ಈಗಾಗಲೇ ಪ್ರಕಟವಾಗಿರುವ ಕಥಾಸಂಕಲನಗಳಲ್ಲಿ ತೋರುತ್ತಿದ್ದರೆ, ಅದನ್ನು ಗುರುತಿಸಿ ಹೇಳುವ ಕೆಲಸವನ್ನು ಮಾಡಿದ್ದಾರೆ. ಇಲ್ಲಿಯ ಕಥೆಗಳನ್ನು ಅತಿಮಾನುಷ ಕಥೆಗಳು, ಅದ್ಭುತ ಕಥೆಗಳು, ರಮ್ಯ ಕಥೆಗಳು, ಬುದ್ಧಿವಂತಿಕೆ ಕಥೆಗಳು, ಪ್ರಾಣಿ ಕಥೆಗಳು ನೀತಿ ಕಥೆಗಳು, ವಾಸ್ತವಿಕ ಕಥೆಗಳು, ಒಗಟಿನ ಕಥೆಗಳು ಎಂದು ವಿಭಾಗೀಕರಿಸಿ ನೋಡುವ ಪ್ರಯತ್ನವನ್ನೂ ಮಾಡಿದ್ದಾರೆ.

'ರಾಯಚೂರು ಜಿಲ್ಲೆಯ ಜನಪದ ಕಥೆಗಳು' (೧೯೭೬) ಎಂಬುದರಲ್ಲಿ ಚಿಕ್ಕಚಿಕ್ಕ ೪೯ ಕಥೆಗಳು ಇವೆ. ಇವುಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಅತಿಮಾನುಷ ಕಥೆಗಳು, ಹಾಸ್ಯ ಕಥೆಗಳು, ರಮ್ಯಕಥೆಗಳು, ಪ್ರಾಣಿಕಥೆಗಳು, ಬುದ್ಧಿವಂತಿಕೆ ಕಥೆಗಳು, ವಾಸ್ತವಿಕ ಕಥೆಗಳು, ಅದ್ಭುತ ಕಥೆಗಳು ಎಂದು ವಿಂಗಡಿಸಿ ತೋರಿಸಿದ್ದಾರೆ.

೧೯೭೬ ರಲ್ಲಿಯೆ **'ಬೀದರ ಜಿಲ್ಲೆಯ ಜನಪದ ಕಥೆಗಳು'** ಎಂಬ ಕೃತಿ ಪ್ರಕಟವಾಗಿದ್ದು, ಇದನ್ನು ಕ್ಯಾತನಹಳ್ಳಿ ರಾಮಣ್ಣನವರು ಸಂಗ್ರಹಿಸಿ ಸಂಪಾದಿಸಿದ್ದಾರೆ. ಇಲ್ಲಿಯ ೨೫

ಕಥೆಗಳನ್ನು ಬೀದರ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಸಂಗ್ರಹಿಸಿ ಕೊಡುವ ಕೆಲಸವನ್ನು ಮಾಡಿದ್ದಾರೆ. ಇಲ್ಲಿಯ ಕಥೆಗಳನ್ನು ಅತಿಮಾನುಷ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ಅದ್ಭುತ ಕಥೆಗಳು, ರಮ್ಯ ಕಥೆಗಳು, ವಾಸ್ತವಿಕ ಕಥೆಗಳು, ಹಾಸ್ಯ ಕಥೆಗಳು ಎಂದು ವಿಂಗಡಿಸಬಹುದೆಂದು ಪ್ರಸ್ತಾವನೆಯಲ್ಲಿ ತೋರಿಸಿದ್ದಾರೆ. ಈ ಕಥಾಸಂಕಲನ ಮತ್ತು ಟಿ.ಎಸ್.ರಾಜಪ್ಪ ಅವರ **'ರಾಯಚೂರು ಜಿಲ್ಲೆಯ ಜನಪದ ಕಥೆಗಳು'** ಎಂಬ ಕಥಾಸಂಕಲನಗಳು ಹೈದ್ರಾಬಾದ ಕರ್ನಾಟಕದಿಂದ ಮೊದಲಬಾರಿಗೆ ಪ್ರಕಟಗೊಂಡ ಜನಪದ ಕಥೆಗಳ ಸಂಗ್ರಹಗಳಾಗಿವೆ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿಯಾಗುತ್ತದೆ.

'ನಮ್ಮ ಜನಪದ ಕಥೆಗಳು' (೧೯೭೬) ಎಂದು ನಾಮಕರಣಗೊಂಡಿರುವ ಕೃತಿ ನಿಜವಾಗಿಯೂ 'ಕಾರವಾರ ಜಿಲ್ಲೆಯ ಜನಪದ ಕಥೆಗಳು' ಎಂದು ಕರೆಯಬಹುದಿತ್ತೇನೋ. ಈ ಕೃತಿಯ ಸಂಪಾದಕರು ಮೈಸೂರು ವಿ.ವಿ.ಗೆ ಸಂಬಂಧಪಡದ ಡಾ. ಎಲ್.ಆರ್. ಹೆಗಡೆ ಅವರು ಸಂಪಾದಕರಾಗಿರುವುದರಿಂದ ಬಹುಶಃ ಕೃತಿಯ ಹೆಸರು ಬದಲಾದಂತೆ ತೋರುತ್ತದೆ. ಆದರೆ ಮೈಸೂರು ವಿಶ್ವವಿದ್ಯಾಲಯದ ಯೋಜನೆಯಡಿಯಂತೆಯೇ ಈ ಕೃತಿ ತಯಾರಾಗಿರುವುದು ಗಮನಿಸತಕ್ಕ ಮಾತು. ಈ ಸಂಗ್ರಹದಲ್ಲಿ ೪೦ ಕಥೆಗಳಿವೆ. 'ಇಲ್ಲಿ ಅರ್ಧದಷ್ಟು ಕತೆಗಳನ್ನು ಹೇಳಿದವರು ಹವ್ಯಕ ಬ್ರಾಹ್ಮಣರು. ಉಳಿದವನ್ನು ಗೊಂಡರು, ನಾಮಧಾರಿಗಳು, ಹಾಲಕ್ಕಿ ಒಕ್ಕಲಿಗರು, ಗಾಮೊಕ್ಕಲು, ಶೇರುಗಾರರು, ಮುಕರಿ ಹರಿಜನರು ಮತ್ತು ಮರಾಠಿ ಜೋಗಿಗಳು ಹೇಳಿದ್ದಾರೆ. ಆಯಾ ಕಥೆಗಳಲ್ಲಿ ಆಯಾ ಜನರು ಆಡುವ ಕನ್ನಡದ ರೀತಿಗಳನ್ನು ನೋಡಬಹುದು' (ಪ್ರ.ಪು.೩೦). ಜಿಲ್ಲೆಯ ಪ್ರಾತಿನಿಧಿಕ ಸಂಗ್ರಹಗಳಲ್ಲಿ ಹೆಗಡೆ ಅವರು ಸಂಪಾದಿಸಿ ಕೊಟ್ಟ ಈ ಕೃತಿ ಹೆಚ್ಚು ಗಮನ ಸೆಳೆಯುತ್ತದೆ. ಇಲ್ಲಿಯ ಕಥೆಗಳನ್ನು ಹೇಳಿದ ಜನಸಮುದಾಯ, ಅವರು ಬಳಸುವ ಭಾಷೆ ಖಂಡಿತ ವಿಶಿಷ್ಟವಾದವುಗಳಾಗಿವೆ. ಇಡೀ ಕರ್ನಾಟಕದ ತುಂಬ ದೊರೆಯುವ ಭಾಷೆಗೂ ಕಾರವಾರ ಜಿಲ್ಲೆಯ ಭಾಷೆಗೂ ತುಂಬಾ ವ್ಯತ್ಯಾಸ ಕಾಣುತ್ತದೆ. ಸಂಪಾದಕರಾದ ಹೆಗಡೆ ಅವರು ಬರೆದ ಪ್ರಸ್ತಾವನೆ ತುಂಬ ಮೌಲಿಕವಾಗಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಜನಪದ ಕಥೆಗಳ ಬಗ್ಗೆ ನಡೆದ ಅಧ್ಯಯನದ ಅರಿವಿರುವ ಹೆಗಡೆ ಅವರು ತಮ್ಮ ಸಂಗ್ರಹದ ಕಥೆಗಳ ಮಹತ್ವವನ್ನು ಸ್ಥಳೀಯ ಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಪಡೆಯುವ ಮಹತ್ವವನ್ನು ೩೦ ಪುಟಗಳ ಅಧ್ಯಯನಪೂರ್ಣವಾದ ತಮ್ಮ ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ.

೧೯೭೬ನೇ ವರ್ಷದಲ್ಲಿ ಮೈಸೂರು ವಿ.ವಿ.ಯಿಂದ ನಾಲ್ಕು ಜನಪದ ಕಥೆಗಳ ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ಮೇಲೆ ಪರಿಚಯಿಸಿದ ಮೂರು ಕೃತಿಗಳು ಸೇರಿ, ಕೊನೆಯದು **'ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು'** (೧೯೭೬) ಎಂಬುದಾಗಿದೆ. ಇದರ ಸಂಪಾದಕರು ಡಾ. ಅಂಬಳಿಕೆ ಹಿರಿಯಣ್ಣ ಅವರು. ಜಿಲ್ಲಾವಾರು ಪ್ರಕಟವಾದ ಜನಪದ ಕಥೆಗಳ ಸಂಗ್ರಹಗಳಲ್ಲಿ ಅತಿ ಹೆಚ್ಚಿನ ಕಥೆಗಳನ್ನು ಒಳಗೊಂಡ ಕೃತಿ ಇದು. ಒಂದು ನೂರು ಕಥೆಗಳನ್ನು, ಪರಿವಿಡಿಯಲ್ಲಿಯೇ ವಿಂಗಡಿಸಿಕೊಟ್ಟಿದ್ದಾರೆ: ರಮ್ಯ ಕಥೆಗಳು, ಅತಿಮಾನುಷ ಕಥೆಗಳು, ಮಾಂತ್ರಿಕ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ವಿನೋದ

ಕಥೆಗಳು, ಪ್ರಾಣಿ ಕಥೆಗಳು, ವಾಸ್ತವಿಕ ಕಥೆಗಳು, ಒಗಟು ಕಥೆಗಳು ಎಂದು ಎಂಟು ಪ್ರಕಾರಗಳಲ್ಲಿ ವಿಂಗಡಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲುಕಿನ ೩೩ ವಕ್ತಾರರಿಂದ ಈ ಕಥೆಗಳನ್ನು ಸಂಗ್ರಹಿಸಲಾಗಿದೆ. ೧೯ ಪುಟಗಳ ಪ್ರಸ್ತಾವನೆಯಲ್ಲಿ ತಮ್ಮ ಕೃತಿಯಲ್ಲಿಯ ಸಂಕಲನದ ಕಥೆಗಳು ಬೇರೆ ಸಂಕಲನದಲ್ಲಿ ದೊರಯುವ ಕಥೆಗಳಿಗೆ ಹೋಲಿಕೆಯಾಗುವುದನ್ನು ಗುರುತಿಸುವ ಹಾಗೂ ಸುಮಾರು ೧೪ ಕಥೆಗಳ ಮಾದರಿಗಳನ್ನು ಗುರುತಿಸಿ, ಸಾರಾಂಶ ರೂಪದಲ್ಲಿ ಮಾದರಿಗಳನ್ನು ಕೊಟ್ಟು, ಅಲ್ಲಿ ಬಳಕೆಯಾದ ಕೆಲ ಆಶಯಗಳನ್ನು ಗುರುತಿಸಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ.

೧೯೭೯ ರಲ್ಲಿ **'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು'** ಎಂಬ ಹೆಸರನ್ನು ಹೊತ್ತು ಒಮ್ಮೆಗೇ ಎರಡು ಸಂಗ್ರಹಗಳು ಪ್ರಕಟವಾಗಿವೆ. ಒಂದು ಟಿ.ಎಸ್.ರಾಜಪ್ಪ ಅವರು ತಯಾರಿಸಿದ ೩೫ ಕಥೆಗಳಿರುವ ಕೃತಿ ಮೈ.ವಿ.ವಿ.ಯಿಂದ ಪ್ರಕಟವಾಗಿದೆ. ಇನ್ನೊಂದು ೩೯ ಕಥೆಗಳುಳ್ಳ ಸಂಗ್ರಹವನ್ನು ಡಾ. ಬಸವರಾಜ ಮಲಶೆಟ್ಟಿ ಅವರು ತಯಾರಿಸಿದ್ದು, ಇದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಈ ಎರಡೂ ಕೃತಿಯಲ್ಲಿಯ ಕಥೆಗಳನ್ನು ವಿಂಗಡಿಸಿಕೊಂಡ ರೀತಿಯೂ ಒಂದೇ ಬಗೆಯಾಗಿದೆ. ರಮ್ಯಕಥೆಗಳು, ಬುದ್ಧಿವಂತಿಕೆ ಕಥೆಗಳು, ಅತಿಮಾನುಷ ಕಥೆಗಳು, ಅದ್ಭುತ ಕಥೆಗಳು, ಹಾಸ್ಯಕಥೆಗಳು, ಪ್ರಾಣಿ ಕಥೆಗಳು ಎಂಬ ವಿಭಾಗಗಳಲ್ಲಿ, ಮಲಶೆಟ್ಟಿ ಅವರ ಸಂಗ್ರಹದಲ್ಲಿ ಅತಿಮಾನುಷ ಕಥೆಗಳು ಎಂಬ ವಿಭಾಗ ಮಾತ್ರ ಕಾಣುವುದಿಲ್ಲ.

'ಹಾಸನ ಜಿಲ್ಲೆಯ ಜನಪದ ಕಥೆಗಳು' (೧೯೮೦) ಕೃತಿಯ ಸಂಪಾದಕರು ಡಾ. ಹಿ.ಶಿ.ರಾಮಚಂದ್ರೇಗೌಡ ಅವರು. ಸಂಪಾದಕರು ಮೈವಿವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲೇ ಇರುವವರು. ಆದರೆ ಈ ಕೃತಿ ಪ್ರಕಟವಾದುದು ಬೆಂಗಳೂರು ವಿಶ್ವವಿದ್ಯಾಲಯದಿಂದ. ೯೩ ಕಥೆಗಳ ಈ ಬೃಹತ್ ಸಂಗ್ರಹದ ಕಥೆಗಳನ್ನು ರಮ್ಯಕಥೆಗಳು, ಅತಿಮಾನುಷ ಕಥೆಗಳು, ಹಾಸ್ಯಕಥೆಗಳು, ಪ್ರಾಣಿ ಕಥೆಗಳು, ಬುದ್ಧಿವಂತಿಕೆ ಕಥೆಗಳು, ನೀತಿ ಕಥೆಗಳು, ಒಗಟು ಕಥೆಗಳು, ಮಾಂತ್ರಿಕ ಕಥೆಗಳು ಎಂಬ ಎಂಟು ವಿಭಾಗಗಳಲ್ಲಿ ವಿಂಗಡಿಸಿ ಕೊಂಡಿದ್ದಾರೆ. ೨೮ ಪುಟಗಳ ಪ್ರಸ್ತಾವನೆ ಇದೆ. ಇದರಲ್ಲಿ ಜನಪದ ಕಥೆಗಳು ಸಾಹಿತ್ಯ ಪ್ರಕಾರವಾಗಬಲ್ಲವು ಎಂಬ ಅಂಶವನ್ನು ವಿವರವಾಗಿ ಸಮರ್ಥಿಸುವ ಕೆಲಸ ಮಾಡಿದ್ದಾರೆ.

೨೦೧೧ ರಲ್ಲಿ ನಾನು (ವೀರಣ್ಣ ದಂಡೆ) ಸಂಪಾದಿಸಿ ಪ್ರಕಟಿಸಿದ ಕೃತಿ **'ಆಯ್ದ ಜನಪದ ಕಥೆಗಳು'**. ಇದರಲ್ಲಿ ಒಟ್ಟಿಗೆ ೩೦ ಕಥೆಗಳಿದ್ದು, ಎರಡು ಕಥೆಗಳನ್ನು ಹೊರತುಪಡಿಸಿ, ಉಳಿದವೆಲ್ಲ ಕಲಬುರ್ಗಿ ಜಿಲ್ಲೆಗೆ ಸಂಬಂಧಪಟ್ಟವಾಗಿವೆ. ಈ ಕೃತಿಗೆ ಆರಿಸಿಕೊಂಡ ಕಥೆಗಳು ಸಣ್ಣ ಸಣ್ಣವಾಗಿರಬೇಕೆಂದು ಯೋಜಿಸಲಾಗಿತ್ತು. ಡಾ. ಜೀಶಂಪ ಅವರ **'ಕನ್ನಡ ಜನಪದ ಕಥೆಗಳು'** (೧೯೭೦) ಪ್ರಕಟವಾದ ನಂತರ ೨೦೧೦ರವರೆಗೆ ಅಂದರೆ ಸುಮಾರು ೪೦ ವರ್ಷಗಳ ವರೆಗೆ, ಜೀಶಂಪ ಅವರು ಹಾಕಿದ ಮಾರ್ಗದಲ್ಲಿಯೇ ಜಾನಪದಶಾಸ್ತ್ರಜ್ಞರು ಸಾಗಿದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ. ಜನಪದ ಕಥೆಗಳ ಬಗ್ಗೆಯೇ ವಿಶೇಷವಾಗಿ ಅಧ್ಯಯನ ಮಾಡಿದ ಅನುಭವ ಇರುವ ನಾನು ಒಂದು ಕಥಾಸಂಕಲನವನ್ನು ವಿಶೇಷವಾಗಿ ಸಂಪಾದಿಸಿ ಕೊಡಬೇಕೆಂಬ ಹಂಬಲವನ್ನು ಬಹುದಿನಗಳಿಂದ ಇಟ್ಟುಕೊಂಡಿದ್ದೆ.

ಪಿಎಚ್.ಡಿ. (೧೯೮೩) ಅಧ್ಯಯನಕ್ಕಾಗಿ ಈಗಾಗಲೇ ಆಶಯ ಮತ್ತು ಮಾದರಿ ಸೂಚಿಗಳನ್ನು ವೈಜ್ಞಾನಿಕವಾಗಿ ತಯಾರಿಸಿದ ಅನುಭವ ಇರುವುದರಿಂದ ಆ ಅನುಭವವನ್ನು ಬಳಸಿಕೊಂಡು ಒಂದು ಉತ್ತಮವಾದ ಜನಪದ ಕಥಾಸಂಕಲನವನ್ನು ಸಂಪಾದಿಸಿ, ಪ್ರಕಟಿಸಬೇಕೆಂಬ ಹಂಬಲದಿಂದ **'ಆಯ್ದ ಜನಪದ ಕಥೆಗಳು'** ಕೃತಿಯನ್ನು ತಯಾರಿಸಲು ಪ್ರಯತ್ನಿಸಿದ್ದೇನೆ.

ಈ ಕೃತಿಯಲ್ಲಿ ಆನೆ–ಥಾಮ್ಸನ್ ಮಾದರಿ ಸೂಚಿಯಲ್ಲಿ ಅನುಸರಿಸಿದ ವಿಭಾಗೀಕ್ರಮವನ್ನು ಅನುಸರಿಸುತ್ತಲೇ ಅದರಲ್ಲಿ ಸ್ವತಂತ್ರವಾದ ಮಾರ್ಗ ಗುರುತಿಸಿಕೊಂಡು, ಸ್ಥಳೀಯ ಹೊಸ ಕಥೆಗಳನ್ನೂ ಗುರುತಿಸಿ, ಹೊಸಹೊಸ ವಿಭಾಗಗಳನ್ನು ಗುರುತಿಸಿಕೊಳ್ಳಬಹುದಾಗಿದೆ ಎಂಬುದನ್ನು ತೋರಿಸಿಕೊಡಲು ಪ್ರಯತ್ನಿಸಲಾಗಿದೆ. ೧. ಪ್ರಾಣಿ ಕಥೆಗಳು, ೨. ಅದ್ಭುತ ಎದುರಾಳಿಗಳು, ೩. ಮಾಟಕ್ಕೊಳಗಾದ ಪತಿ–ಪತ್ನಿಯರು, ೪. ಅಸಾಮಾನ್ಯ ಸಹಾಯಕರು, ೫. ಮಾಟದ ಸಾಧನಗಳು, ೬. ಕುಳ್ಳರ ಅದ್ಭುತ ಕಥೆಗಳು, ೭. ಧಾರ್ಮಿಕ ಕಥೆಗಳು, ೮. ಹಣೇಬರಹದ ಕಥೆಗಳು, ೯. ಹಾಸ್ಯ ಕಥೆಗಳು, ೧೦. ಸೂತ್ರಬದ್ಧ ಕತೆಗಳು ಎಂದು ೧೦ ವಿಭಾಗಗಳಲ್ಲಿ ಕಥೆಗಳನ್ನು ವಿಂಗಡಿಸಿಕೊಂಡು, ಒಂದೊಂದು ವಿಭಾಗದಲ್ಲಿ ಕೇವಲ ಮೂರು ಮೂರು ಕಥೆಗಳನ್ನು ಆಯ್ದು ಕೊಡಲಾಗಿದೆ. ಇದರಿಂದ ಕಥೆಗಳ ಸ್ವಾರಸ್ಯವನ್ನು ಗ್ರಹಿಸುತ್ತ, ಆ ಕಥೆಗಳ ಮೂಲಕವಾಗಿ ಸಂಬಂಧಿಸಿದ ವಿಭಾಗದ ಸ್ವರೂಪ ಮತ್ತು ಉದ್ದೇಶವನ್ನು ಗ್ರಹಿಸಲು ಓದುಗರಿಗೆ ಸಹಜವಾಗಿ ಸಾಧ್ಯವಾಗುವಂತೆ ಮಾಡಲಾಗಿದೆ.

ಕಥೆಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಶಾಸ್ತ್ರೀಯ ಸಂಗತಿಗಳನ್ನು ಬೆರಸಿ ಸಂಪಾದನೆ ಮಾಡಲಾಗಿದೆ. ವಕ್ತಾರರು ಹೇಳುವ ಕಥೆಯ ಹೆಸರಿನಲ್ಲಿ ಹೆಚ್ಚಿನ ಅರ್ಥ ಇರಲಾರದು. ಅದಕ್ಕಾಗಿ ಒಂದು ಕಥೆಯ ಮುಖ್ಯ ಉದ್ದೇಶವನ್ನೇ ಒಂದು ಕಥೆಯ ಮಾದರಿಯ ತಲೆಬರಹ ಹೊಂದಿರುತ್ತದೆ. ಹೀಗಾಗಿ ಮಾದರಿಯ ಹೆಸರನ್ನು ಕಥೆಯ ತಲೆಬರಹವಾಗಿ ಕೊಟ್ಟುಕೊಳ್ಳಲಾಗಿದೆ. ಇದರಿಂದ ಕಥೆಗಳ ಹೆಸರೇ ಹೆಚ್ಚು ಆಕರ್ಷಕವೆನಿಸುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಶಾಸ್ತ್ರೀಯ ಸಂಗತಿಯಾಗಿ ಮಾದರಿ ತಲೆಬರಹವಾಗಿದ್ದುದನ್ನು, ಕಥೆಯ ತಲೆ ಬರಹವಾಗಿ ಬಳಸಿಕೊಂಡು ಓದುಗರಲ್ಲಿ ಕಥೆಯ ಬಗ್ಗೆ ಆಸಕ್ತಿ ಕೆರಳುವಂತೆ ಮಾಡಲಾಗಿದೆ.

ಮಾದರಿ ಹೆಸರಿನ ನಂತರ, ಕೆಳಗೆ ಮಾದರಿಯ ಸಂಖ್ಯೆಯನ್ನು ಕೊಟ್ಟು, ಅದರ ಕೆಳಗೆ ತಾಂತ್ರಿಕವಾಗಿ ರಚಿಸಿಕೊಂಡ ಮಾದರಿಯ ವಿವರವನ್ನು ಕೊಡಲಾಗಿದೆ. ಇದರಿಂದ ಶಾಸ್ತ್ರೀಯವಾಗಿ ಒಂದು ಮಾದರಿಯನ್ನು ಅದರ ಎಲ್ಲ ತಾಂತ್ರಿಕ ಭಾಗಗಳೊಂದಿಗೆ ಕೊಟ್ಟಿರುವುದರಿಂದ ಒಂದು ಮಾದರಿಯ ಪೂರ್ಣಪಾಠವನ್ನು ಕೊಟ್ಟಂತಾಗುತ್ತದೆ. ಅಂದರೆ ಮಾದರಿಯ ತಲೆಬರಹ, ಮಾದರಿಯ ಸಂಖ್ಯೆ, ಮಾದರಿಯ ವಿವರ. ಇದರಿಂದ ಒಬ್ಬ ಗಂಭೀರ ಅಧ್ಯಯನಕಾರನಿಗೆ ಹೆಚ್ಚಿನ ಸಹಾಯವಾಗುತ್ತದೆ. ಮಾದರಿಯ ಕೆಳಗೆ ಕೊಟ್ಟ ಕಥೆ ಪ್ರಪಂಚದ ಕಥೆಗಳ ವಿಭಾಗೀಕ್ರಮದಲ್ಲಿ ಅದು ಯಾವ ಜಾತಿಗೆ ಸೇರಿದುದು ಎಂಬುದು ಒಬ್ಬ ಗಂಭೀರ ಅಧ್ಯಯನಕಾರನಿಗೆ ಸ್ಪಷ್ಟವಾಗುತ್ತದೆ. ಮಾದರಿಯನ್ನು

ಓದಿಕೊಳ್ಳುವ ಮೂಲಕವಾಗಿಯೇ ಕಥೆಯ ವಸ್ತುವಿನ ಮಹತ್ವದ ಬಗ್ಗೆ ಮನವರಿಕೆಯಾಗುತ್ತದೆ. ಅದೇ ಒಬ್ಬ ಸಾಮಾನ್ಯ ಓದುಗನಿಗೆ ಒಂದು ಆಕರ್ಷಕ ಹೆಸರಿನ ಮೂಲಕ ಗಮನ ಸೆಳೆಯುವಂತಾಗಿ ಮಾದರಿಯ ವಿವರಗಳನ್ನು ಓದಿದಾಗ, ಅದು ಕನಿಷ್ಠ ಕಥೆಯ ಸಾರಾಂಶ ಒದಗಿಸಿದಂತಾಗಿ ಕಥೆಯಲ್ಲೇನಿದೆ ಎಂಬ ವಿಷಯ ಮನದಟ್ಟಾಗುತ್ತದೆ. ಆಗ ಕಥೆಯನ್ನು ಓದಲು ತೊಡಗಿದರೆ ಅವನಿಗೆ ಸ್ಥಳೀಯ ಭಾಷೆ ಅಷ್ಟೊಂದು ಅಡ್ಡಿಪಡಿಸದು. ಕೆಲ ಪದಗಳ ಅರ್ಥ ತಿಳಿಯದಿದ್ದರೂ ಕಥೆಯ ಸಾರಾಂಶ ಆತನಿಗೆ ಗೊತ್ತಾಗಿರುವುದರಿಂದ ಕಥೆಯ ವಸ್ತುವನ್ನು ಆತ ಗ್ರಹಿಸಬಲ್ಲವನಾಗುತ್ತಾನೆ. ಕೆಲ ಶಬ್ದಗಳ ಅರ್ಥ ತಿಳಿಯಲು ಆತ ಕೊನೆಯಲ್ಲಿರುವ ಶಬ್ದಕೋಶದ ಪಟ್ಟಿಯ ಸಹಾಯವನ್ನು ಪಡೆಯುತ್ತಾನೆ. ಮತ್ತೆ ಇದಕ್ಕಾಗಿ ಶಬ್ದಕೋಶಗಳ ಮೊರೆ ಹೋಗುವ ಅವಶ್ಯಕತೆ ಬೀಳಲಾರದು. ಹೀಗಾಗಿ ಒಬ್ಬ ಸಾಮಾನ್ಯ ಓದುಗನಿಗೆ ಕಥೆಯನ್ನು ಓದಲು, ಅದರ ಗಂಭೀರವಾದ ಅಧ್ಯಯನಕಾರನಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಕಥೆಯ ಮಹತ್ವವನ್ನು ಅರಿಯಲು ಅನುಕೂಲವಾಗುವ ಕ್ರಮಗಳನ್ನು ಅನುಸರಿಸಲಾಗಿದೆ. ಈ ತಂತ್ರವನ್ನು ಇಲ್ಲಿಯ ಮೂವತ್ತು ಕಥೆಗಳಿಗೂ ಅಳವಡಿಸಿಕೊಳ್ಳಲಾಗಿದೆ. ಪ್ರಯಾಸಪಟ್ಟು ಕಥೆಗಳಲ್ಲಿಯ ಆಶಯಗಳನ್ನು ಗುರುತಿಸಿಕೊಂಡು, ಮಾದರಿಗಳನ್ನು ತಯಾರಿಸಿಕೊಂಡು ಇಂತಹ ಆಶಯ ಮತ್ತು ಮಾದರಿಗಳ ಪಟ್ಟಿಯನ್ನು ಕೃತಿಯ ಕೊನೆಗೆ ಅನುಬಂಧದ ರೂಪದಲ್ಲಿ ಕೊಡುವುದರಿಂದ ಹೆಚ್ಚಿನ ಲಾಭವಾಗಲಾರದು. ಕಥೆಗೆ ಸಂಬಂಧಿಸಿದಂತೆ ಮಾದರಿಯನ್ನು ಬಳಸಿಕೊಳ್ಳುವುದರಿಂದ ಹೆಚ್ಚಿನ ಲಾಭಗಳಾಗುವುದರಲ್ಲಿ ಎರಡು ಮಾತಿಲ್ಲ.

ಒಂದು ಗ್ರಾಮದ ಜನಪದ ಕಥೆಗಳು :

ಒಂದು ಗ್ರಾಮದಿಂದ ಸಂಗ್ರಹಿಸಿದ ಜನಪದ ಕಥೆಗಳ ಸಂಗ್ರಹಗಳು ನಮಗೆ ದೊರೆಯುತ್ತವೆ. ಒಂದು ಗ್ರಾಮ, ಒಂದು ಜಿಲ್ಲೆ ಹೀಗೆ ಒಂದು ಕಂದಾಯ ಘಟಕಗಳನ್ನು ಕುರಿತು ಅಧ್ಯಯನ ಮಾಡಬೇಕಾದುದು ಅವಶ್ಯವೆನಿಸುತ್ತದೆ. ಒಂದು ಜಿಲ್ಲಾವ್ಯಾಪ್ತಿಯನ್ನು ಇಟ್ಟುಕೊಂಡು ಅನೇಕರು ಜನಪದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳನ್ನು ಅಧ್ಯಯನ ಮಾಡಿರುವುದು ಕಂಡುಬರುತ್ತದೆ. ಅಲ್ಲೆಲ್ಲ ಅಧ್ಯಯನಕ್ಕೆ ಒಂದು ಪ್ರಾದೇಶಿಕ ಮಿತಿ ಹಾಕಿಕೊಳ್ಳುವ ಉದ್ದೇಶ ಸಹಜವಾಗಿ ಕಂಡುಬರುತ್ತದೆ. ಇಂಥಲ್ಲಿ ನಮಗೆ ತಿಳಿಯದೇ ಅನೇಕ ಪ್ರಾದೇಶಿಕ ಸಂಗತಿಗಳು ಜನಪದ ಕಥೆಗಳಲ್ಲಿ ನುಗ್ಗಿ ಬರುತ್ತವೆ. ಅವನ್ನು ಗುರುತಿಸುವ ಕೆಲಸ ನಡೆಯಬೇಕು. ಒಂದು ಗೊತ್ತಾದ ಪ್ರದೇಶದಲ್ಲಿ ಎಂತಹ ಕಥೆಗಳು ದೊರೆಯುತ್ತವೆ ಎಂಬ ಒಂದು ಸಾಮಾನ್ಯ ಕಲ್ಪನೆ ಇಂತಹ ಅಧ್ಯಯನಗಳಿಂದ ದೊರೆಯುತ್ತದೆ. ಒಂದು ಸಲ ಡಾ. ಜೀಶಂಪ ಅವರು 'ಕಲಬುರ್ಗಿ ಜಿಲ್ಲೆಯ ಜನಪದ ಪ್ರಾಣಿ ಕಥೆಗಳಲ್ಲಿ ತಂತ್ರಿ ಪ್ರಾಣಿ ಯಾವುದು ಬರುತ್ತದೆ'? ಎಂಬ ವಿವರವೊಂದನ್ನು ಕೇಳಿದ್ದರು. ಆಗ ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳನ್ನು ಪರಿಶೀಲಿಸಿದಾಗ ನರಿ ಮತ್ತು ಮಂಗಗಳು ತಂತ್ರಿಗಳಾಗಿ ಕಂಡುಬರುವುದನ್ನು ಗಮನಿಸಲಾಯಿತು. ಅಂದರೆ ಆಯಾ ಭಾಗದಲ್ಲಿರುವ ಪ್ರಾಣಿಗಳು ಜನಪದ ಕಥೆಗಳಲ್ಲಿ ಸ್ಥಾನಪಡೆಯುತ್ತವೆ. ಎಲ್ಲಿ ಹೇಗೆ ಪಡೆಯುತ್ತವೆ ಎಂಬ ಸಂಗತಿಯೂ ಇದರಿಂದ ಗೊತ್ತಾಗುತ್ತದೆ. ಇಂತಹ ಸಂಗತಿಗಳ

ಜೊತೆಗೆ ಸಾಂಸ್ಕೃತಿಕ ಸಂಗತಿಗಳಾದ ಉಡುಗೆತೊಡುಗೆ, ಆಹಾರ ಪಾನೀಯ, ಭಾಷೆ, ವರ್ತನೆಗಳು ಎದ್ದುಕಾಣುವ ಸಂಗತಿಗಳು. ಜೊತೆಗೆ ಒಂದು ಭಾಗದ ನಂಬಿಕೆಗಳು, ಆಚರಣೆಗಳು, ಹಬ್ಬಹರಿದಿನಗಳು ಇಂತಹ ಸಂಗತಿಗಳು ವಿಶೇಷವಾಗಿ ಕಥೆಗಳ ವಿವರಗಳಲ್ಲಿ ಸ್ಥಾನಪಡೆಯುತ್ತವೆ. ಈ ದೃಷ್ಟಿಯಿಂದಲೂ ಅಧ್ಯಯನಗಳು ನಡೆಯಬೇಕಾದುದು ಅವಶ್ಯವೆನಿಸುತ್ತದೆ.

ಇನ್ನು ಒಂದು ಜಿಲ್ಲೆಯಿಂದ ಒಮ್ಮೆಗೆ ಒಂದು ಗ್ರಾಮದ ವ್ಯಾಪ್ತಿಗೆ ಬಂದಾಗ, ಸಹಜವಾಗಿಯೇ ಆ ಗ್ರಾಮವನ್ನು ಪ್ರತಿನಿಧಿಸುವ ಅನೇಕ ಆಲೋಚನೆಗಳು, ಸಾಂಸ್ಕೃತಿಕ ಸಂಗತಿಗಳು ಅಲ್ಲಿ ಕತೆಗಳ ವಿವರಗಳಲ್ಲಿ ಬೆರೆಸಿ ಬರುವ ಸಾಧ್ಯತೆ ಸಹಜವಾಗಿರುತ್ತದೆ. ಹೀಗೆ ಒಂದು ಗ್ರಾಮದ ಕಥೆಗಳನ್ನು ಕುರಿತು ಅಧ್ಯಯನ ನಡೆದಿಲ್ಲ. ಮತ್ತು ಕಥೆಗಳ ಹಾಡುಗಳ ಇಂತಹ ಸಂಕಲನಗಳು ಬಂದರೂ ಕನಿಷ್ಠ ಅವುಗಳಿಗೆ ಬರೆದ ಪ್ರಸ್ತಾವನೆಯಲ್ಲಿಯೂ ಇಂತಹ ಶೋಧದ ಚಿಂತನೆಗಳು ಕಂಡುಬರುವುದಿಲ್ಲ. ಕಥೆಗಳ ಪ್ರಸ್ತಾವನೆಯಲ್ಲಿ ಕಂಡು ಬರುವುದು ಪಾಶ್ಚಾತ್ಯ ಅಧ್ಯಯನವನ್ನು ಪರಿಚಯಿಸುವ ಪ್ರಯತ್ನಗಳೆ ಜಾಸ್ತಿ. ಈಗಲಾದರೂ ಜನಪದ ಸಾಹಿತ್ಯದ ಅಧ್ಯಯನದಲ್ಲಿ ಒಂದಿಷ್ಟು ಸ್ಥಳೀಯ ಸಂಸ್ಕೃತಿಯ ಹುಡುಕಾಟ ನಡೆಯಬೇಕಾದುದು ಅವಶ್ಯವಿದೆ. ಬರೀ ಪಾಶ್ಚಾತ್ಯ ಸಿದ್ಧಾಂತಗಳ ಹಿನ್ನೆಲೆಯ ಅಧ್ಯಯನಗಳು ಇನ್ನುಮೇಲೆ ಕಡಿಮೆಯಾಗಬೇಕಾದುದು ಅವಶ್ಯವಿದೆ.

ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಬೇಕೆಂಬ ಮೈಸೂರು ವಿಶ್ವವಿದ್ಯಾಲಯದ ಯೋಜನೆಯಡಿ ಸಹಾಯಕ ಸಂಶೋಧಕರಾಗಿ ಕರ್ನಾಟಕದ ತುಂಬ ಜನಪದ ಸಾಹಿತ್ಯದ ಸಂಗ್ರಹಕ್ಕಾಗಿ ಅಡ್ಡಾಡಿದವರು ಶ್ರೀ ಕ್ಯಾತನಹಳ್ಳಿ ರಾಮಣ್ಣ ಮತ್ತು ಶ್ರೀ ಟಿ.ಎಸ್.ರಾಜಪ್ಪ ಅವರು. ಇವರು ಪ್ರಾರಂಭದ ವರ್ಷಗಳಲ್ಲಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅಡ್ಡಾಡಿ ಜನಪದ ಸಾಹಿತ್ಯದ ಪದ್ಯಪ್ರಕಾರ ಮತ್ತು ಗದ್ಯಪ್ರಕಾರಗಳನ್ನು ಸಂಗ್ರಹಿಸಿ ಸಂಪಾದಿಸಿ, ಮೈಸೂರು ವಿ.ವಿ.ಯಿಂದ ಪ್ರಕಟಿಸಿದ್ದುಂಟು. ಅದಕ್ಕಿಂತ ಮೊದಲು ತಾವಿನ್ನು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಟಿ.ಎಸ್.ರಾಜಪ್ಪ ಅವರು ಸಂಗ್ರಹಿಸಿ ಪ್ರಕಟಿಸಿದ ಕೃತಿ **'ದಾಳಿಂಬೆ ರಾಣಿ ಮತ್ತು ಇತರ ಕತೆಗಳು'** (೧೯೭೧) ಎಂಬುದು. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ತಗಡೂರು ಗ್ರಾಮದ, ವೀರಶೈವ ಹೆಣ್ಣುಮಕ್ಕಳಿಂದ ಈ ಕಥೆಗಳನ್ನು ಸಂಗ್ರಹಿಸಿದ್ದಾರೆ. ಇದರಲ್ಲಿಯ ಒಂಬತ್ತು ಕತೆಗಳನ್ನು ಸಹಜವಾಗಿಯೇ ತಾವು ಎಂ.ಎ. ಮೊದಲ ವರ್ಷದ ವಿದ್ಯಾರ್ಥಿಯಾಗಿ ಜನಪದ ಸಾಹಿತ್ಯದ ಒಂದು ಪತ್ರಿಕೆಯನ್ನು ಆರಿಸಿಕೊಂಡಾಗ, ಉತ್ಸಾಹಿತರಾಗಿ ತಮ್ಮೂರಿನ ಹಿರಿಯರಿಂದ ಈ ಕಥೆಗಳನ್ನು ಸಂಗ್ರಹಸಿದ್ದಾರೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಈ ಕಥೆಗಳು ಏನು ಹೇಳುತ್ತವೆಂಬುದನ್ನು ಅರಿಯಲು ಅಧ್ಯಯನಕ್ಕೆ ಒಳಪಡಿಸಬೇಕಾದುದು ಅವಶ್ಯವಿದೆ.

'ನಮ್ಮೂರಿನ ಜನಪದ ಕಥೆಗಳು' (೧೯೭೫) ಎಂಬ ಹೆಸರನ್ನು ಹೊತ್ತ ಮೊದಲ ಕೃತಿ ಪ್ರಕಟಪಡಿಸಿದವರು ದೊ.ನಾ.ರಾಮೇಗೌಡ ಎನ್ನುವವರು. ಈ ಸಂಗ್ರಹದಲ್ಲಿರುವ ೨೬ ಕಥೆಗಳನ್ನು, ತಮ್ಮೂರಾದ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ದೊಡ್ಡನಕಟ್ಟೆ ಗ್ರಾಮದ ಐದು ಜನ ಒಕ್ಕಲಿಗ ಸಮುದಾಯಕ್ಕೆ ಸೇರಿದ ವಕ್ತಾರರಿಂದ ಸಂಗ್ರಹಿಸಿದ್ದಾರೆ.

ಈ ಐವರಲ್ಲಿ ಒಬ್ಬಳು ಮಾತ್ರ ಮಹಿಳೆಯಾಗಿದ್ದಾಳೆ. ಈ ಕೃತಿಗೆ ಸುಮಾರು ೭೨ ಪುಟಗಳ ಸುದೀರ್ಘ ಪ್ರಸ್ತಾವನೆಯನ್ನು ಬರೆದಿದ್ದಾರೆ. ಕಾಲದ ಮಹಿಮೆ ಎಂಬಂತೆ ಆ ಪ್ರಸ್ತಾವನೆ ಬಹಳವಾಗಿ ಅವಲಂಬಿಸಿರುವುದು ಸ್ಟಿಥ್ ಥಾಮ್ಸನ್ ಅವರ 'ದಿ ಫೋಕ್‌ಟೇಲ್' ಎಂಬ ಕೃತಿಯನ್ನು. ಹೀಗಾಗಿ ತಾವು ಸಂಗ್ರಹಿಸುತ್ತಿರುವ ತಮ್ಮೂರಿನ ಸಂಗತಿಗಳ ಬಗ್ಗೆ ಅವರು ಚರ್ಚಿಸಲು ಸಾಧ್ಯವಾಗಿಲ್ಲ.

'ನಮ್ಮ ಹಳ್ಳಿಯ ಜನಪದ ಕಥೆಗಳು'(೧೯೭೮) ಎಂಬ ಕೃತಿಯಲ್ಲಿ ನಗುವನ ಹಳ್ಳಿ ಪಿ.ರತ್ನ ಅವರು ತಮ್ಮ ಊರಾದ ಮಂಡ್ಯ ಜಿಲ್ಲೆಯ, ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಎಂಬ ಗ್ರಾಮದಿಂದ ಸಂಗ್ರಹಿಸಿದ ೩೭ ಕಥೆಗಳು ಇಲ್ಲಿವೆ. ಈ ಗ್ರಾಮ ಮೈಸೂರಿಗೆ ಹತ್ತಿರದಲ್ಲಿರುವುದರಿಂದ ನಾಗರಿಕತೆಗೆ ಪಕ್ಕಾಗಿದೆ. **'ಬೆಳೆಯೋ ಬೆಳೆಯೋ ವಾಲೆಮರವೆ'** (೧೯೭೯) ಎಂಬ ಸಂಗ್ರಹದ ೨೪ ಕಥೆಗಳನ್ನು ಇದರ ಸಂಪಾದಕರಾದ ಪುನರ್ವಸು ಅವರು ತಮ್ಮ ಗ್ರಾಮವಾದ ಮಂಡ್ಯ ಜಿಲ್ಲೆಯ ಉಮ್ಮಡಹಳ್ಳಿಯಿಂದ ಸಂಗ್ರಹಿಸಿದ್ದಾರೆ.

'ಗುಲಗಂಜಿ ಮಾದೇವಿ' (೧೯೮೧) ಎಂಬುದರಲ್ಲಿಯ ಕಥೆಗಳನ್ನು ಸಂಪಾದಕರಾದ ಕುರುವ ಬಸವರಾಜ ಅವರು ತಮ್ಮ ಗ್ರಾಮವಾದ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ಕುರುವ ಗ್ರಾಮದಲ್ಲಿ ಸಂಗ್ರಹಿಸಿದ್ದಾರೆ. ಇಲ್ಲಿಯ ೧೪ ಕಥೆಗಳಲ್ಲಿ ಕುರುವ ಗ್ರಾಮದವರಲ್ಲದ ಒಬ್ಬ ವಕ್ತಾರ ಹೇಳಿದ ಎರಡು ಮಾತ್ರ ಕಥೆಗಳಿವೆ. ಹೀಗಾಗಿ ಇದನ್ನು ಒಂದೇ ಗ್ರಾಮದ ಕಥಾಸಂಕಲನದ ಕೆಳಗೆ ಸೇರಿಸಲಾಗಿದೆ. ಈ ಸಂಗ್ರಹದ ಅನುಬಂಧವಾಗಿ ಕೊಟ್ಟ ಶಬ್ದಾರ್ಥಗಳ ಪಟ್ಟಿ, ಬೈಗುಳಗಳ ಪಟ್ಟಿ ಮುಂದಿನ ಅಧ್ಯಯನಕಾರರಿಗೆ ಅಲ್ಪಮಟ್ಟಿಗೆ ಸಹಾಯಕ್ಕೆ ಬರುತ್ತವೆ.

೧೯೮೧ ರಲ್ಲಿ ಪ್ರಕಟವಾದ ಜೀನಹಳ್ಳಿ ಸಿದ್ಧಲಿಂಗಪ್ಪ ಅವರ **'ಕಥೆ ಹೇಳೆ ಗುಬಲಾಡಿ'** ಎಂಬುದರಲ್ಲಿ ೧೭ ಕಥೆಗಳಿವೆ. ಅವುಗಳಲ್ಲಿ ೧೨ ಕಥೆಗಳು ಒಬ್ಬ ವಕ್ತಾರರೇ ಹೇಳಿದ್ದಾರೆ. ಹೀಗಾಗಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ಜೀನಹಳ್ಳಿಯಿಂದ ಸಂಗ್ರಹಿಸಿದ ಈ ಕಥೆಯ ವಕ್ತಾರರಲ್ಲಿ ಒಬ್ಬರು ಮಾತ್ರ ಬೇರೆ ಗ್ರಾಮದವರಾಗಿದ್ದು ಎರಡು ಕಥೆಗಳನ್ನು ಹೇಳಿದಂತೆ ತೋರುತ್ತದೆ. ಈ ಬೇರೆ ಗ್ರಾಮದ ಒಬ್ಬ ಪುರುಷ ವಕ್ತಾರನನ್ನು ಬಿಟ್ಟರೆ ಜೀನಹಳ್ಳಿಯ ನಾಲ್ಕು ಜನ ಹೆಣ್ಣುಮಕ್ಕಳಿಂದ ಇಲ್ಲಿಯ ಕಥೆಗಳನ್ನು ಸಂಗ್ರಹಿಸಿದ್ದಾರೆ. ಇಲ್ಲಿಯ ಕಥೆಗಳೆಲ್ಲ ಸ್ತ್ರೀಪ್ರಧಾನವಾದ ಕಥೆಗಳಾಗಿರುವುದನ್ನು ಗಮನಿಸಿ, ೨೦೦೧ರಲ್ಲಿ ಈ ಕೃತಿಯ ಹೆಸರನ್ನು **'ಸ್ತ್ರೀವಾದಿ ಜನಪದ ಕಥೆಗಳು'** ಎಂದು ಬದಲಿಸಿಟ್ಟು ಪ್ರಕಟಿಸಿದ್ದಾರೆ. ನಂತರ ಇದು ಪಠ್ಯಪುಸ್ತಕವಾಗಿದ್ದರಿಂದ ಮತ್ತೆ ಎರಡ್ಮೂರು ಸಲ ಪ್ರಕಟವಾಗಿದೆ. ಜನಪದ ಕಥೆಗಳನ್ನು ಹೊಸ ದೃಷ್ಟಿಕೋನಗಳಿಂದ ನೋಡಬಹುದು ಎಂಬುದಕ್ಕೆ ಈ ಕೃತಿಯೊಂದು ಉದಾಹರಣೆಯಾಗಿದೆ.

ಜಿಲ್ಲಾ ಜನಪದ ಕಥೆಗಳ ಸಂಕಲನ ಮಾಲೆಯಲ್ಲಿ ಮೈ.ವಿ.ವಿ.ಯಿಂದ ಪ್ರಕಟವಾದ ಕೃತಿ **'ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು'** (೧೯೮೩) ಎಂಬುದು. ಇದರ ಸಂಪಾದಕರು

ಜಿ. ವಿಶ್ವೇಶ್ವರಪ್ಪ ಅವರು. ಈ ಕೃತಿಯ ವಿಶೇಷವೆಂದರೆ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲೂಕಿಗೆ ಸೇರಿದ ಹುಚ್ಚವ್ವನಹಳ್ಳಿ ಎಂಬ ತಮ್ಮ ಗ್ರಾಮದ ನಾಲ್ಕು ಜನ ವಕ್ತಾರರಿಂದ ಇಲ್ಲಿಯ ೧೬ ಕಥೆಗಳನ್ನು ಸಂಗ್ರಹಿಸಿದ್ದಾರೆ. ವಕ್ತಾರರಲ್ಲಿ ಇಬ್ಬರು ವಾಲ್ಮೀಕಿ ಜನಾಂಗಕ್ಕೆ ಸೇರಿದವರಾದರೆ ಇನ್ನಿಬ್ಬರು ಹರಿಜನ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ೧೬ ಕಥೆಗಳ ವ್ಯಾಪ್ತಿ ೪೦೦ ಪುಟಗಳಷ್ಟಿದೆ ಎಂದರೆ ಅಶ್ಚರ್ಯವಾಗುತ್ತದೆ. ಒಂದೊಂದು ಕಥೆ ಕನಿಷ್ಠ ೧೫-೨೦ ಪುಟಗಳಿಂದ ೩೫-೪೦ ಪುಟಗಳ ವ್ಯಾಪ್ತಿಯನ್ನು ಪಡೆದಿವೆ. ಇವೆಲ್ಲ ಸಂಕೀರ್ಣಕಥೆಗಳಾಗಿದ್ದುದರಿಂದ ಕಥೆಗಳು ದೀರ್ಘ ಎನಿಸುತ್ತವೆ. ಈ ಸಂಗ್ರಹದ ಕಥೆಗಳನ್ನು ಕುರಿತು ಡಾ. ಜೀಶಂಪ ಅವರು ಹೀಗೆ ಬರೆದಿದ್ದಾರೆ: 'ಇವೆಲ್ಲವೂ ಸಂಕೀರ್ಣ ಕಥೆಗಳು. ಒಂದೊಂದು ಕತೆಯೂ ತನ್ನದೇ ಆದ ವೈಶಿಷ್ಟ್ಯದಿಂದ ಗಮನಾರ್ಹವಾದುವಾಗಿವೆ. ಎಲ್ಲ ಕಥೆಗಳಲ್ಲೂ ಪಾತ್ರಗಳಿಗೆ ಹೆಸರು ಸೂಚಿತವಾಗಿರುವುದರಿಂದ ಇವು ವೃತ್ತಿಗಾಯಕ ಮೂಲದಿಂದ ಬಂದ ಕಥೆಗಳಾಗಿರಬೇಕು. ತಜ್ಞರಾದ, ಅನುಭವಿಗಳಾದ, ಸೂಜಾಣರಾದ ಕತೆಗಾರರು ಮಾತ್ರ ಇಂಥ ದೀರ್ಘ ಕಥೆಗಳನ್ನು ನಿರೂಪಿಸಲು ಸಾಧ್ಯ' (ವಿಭಾಗ ಸಂಪಾದಕರ ಮಾತು, ಪು. ೯).

ಈ ಕೃತಿಗೆ **'ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು'** ಎಂದು ಹೆಸರಿಸುವುದಕ್ಕಿಂತ ಒಂದೇ ಗ್ರಾಮದಲ್ಲಿಯೆ ಇಲ್ಲಿಯ ಕಥೆಗಳನ್ನು ಸಂಗ್ರಹಿಸಿದ್ದರಿಂದ **'ಹುಚ್ಚವ್ವನಹಳ್ಳಿಯ ಜನಪದ ಕಥೆಗಳು'** ಎಂದು ಹೆಸರಿಸಬಹುದಿತ್ತೆಂದು ತೋರುತ್ತದೆ. ಏಕೆಂದರೆ ಒಂದೇ ಗ್ರಾಮದಲ್ಲಿ ಸಂಗ್ರಹಿಸಿದ ಕಥೆಗಳು ವಿಶೇಷವಾಗಿ ಆ ಗ್ರಾಮದ ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಈ ಸಂಸ್ಕೃತಿ ಆ ಭಾಗಕ್ಕೆ, ಆ ತಾಲೂಕಿಗೆ, ಆ ಜಿಲ್ಲೆಗೆ ಹೀಗೆ ಅದೆಷ್ಟು ವ್ಯಾಪ್ತಿಯಲ್ಲಿ ತನ್ನ ಪ್ರಭಾವವನ್ನು ಬೀರಿರುತ್ತದೆ? ಅಥವಾ ಎಷ್ಟು ವ್ಯಾಪ್ತಿಯ ಜನಜೀವನದ ಸಂಸ್ಕೃತಿಯನ್ನು ಒಂದು ಗ್ರಾಮ ದಕ್ಕಿಸಿಕೊಂಡಿರುತ್ತದೆ. ಸಂಸ್ಕೃತಿಯ ಇಂತಹ ಸಂಗತಿಗಳ ಪ್ರಭಾವ, ಹಿಡಿತದ ಸ್ವರೂಪವೇನು? ಎಂಬಂತಹ ಸಂಗತಿಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಭಾಷೆ, ವಾಕ್ಯದ ರಚನೆಗಳು, ಪ್ರಯೋಗವಾಗುವ ನುಡಿಗಟ್ಟುಗಳು, ಗಾದೆಗಳು, ಉಡುಗೆ ತೊಡುಗೆ, ಆಹಾರ ಪದ್ಧತಿ, ಆರ್ಥಿಕ ಸ್ಥಿತಿಗತಿ, ಹಾಸ್ಯ, ಮನರಂಜನೆ ಧಾರ್ಮಿಕ ಮನೋಭಾವನೆ, ಸಂಪ್ರದಾಯ-ನಂಬುಗೆಗಳು, ವ್ಯವಹಾರ ಚಾತುರ್ಯ ಇವೆಲ್ಲವನ್ನೂ ಅರಿಯಲು ಜನಪದ ಕಥೆಗಳು ಸಹಾಯಕ್ಕೆ ಬರುತ್ತವೆ. ಅದಕ್ಕಾಗಿ ಪ್ರದೇಶದ ವ್ಯಾಪ್ತಿ ಹಿರಿದು-ಕಿರಿದಾದಂತೆ ಕಥೆಯಲ್ಲಾಗುವ ಬದಲಾವಣೆಗಳನ್ನೂ ಗಮನಿಸಲು ಸಾಧ್ಯವಾಗುತ್ತದೆ.

ವೈ. ಸಿ. ಬಾನುಮತಿ ಅವರು ತಮ್ಮ ತವರು ಮನೆ ಹಾಸನ ಜಿಲ್ಲೆಯ ಪ್ರಸಿದ್ಧ ತಾಲೂಕು ಕೇಂದ್ರ ಬೇಲೂರು ಪಟ್ಟಣದವರು. ಬೇಲೂರಿನ ಮಗ್ಗಲೂರು ಇಬ್ಬೀಡು. ಆ ಗ್ರಾಮದ ಪ್ರತಿಭಾವಂತರಾದ ಇಬ್ಬರಿಂದ ೨೫ ಕಥೆಗಳನ್ನು ಸಂಗ್ರಹಿಸಿ 'ಇಬ್ಬೀಡಿನ ಜನಪದ ಕಥೆಗಳು' ಎಂಬ ಕೃತಿಯನ್ನು ೧೯೮೯ರಲ್ಲಿ ಪ್ರಕಟಿಸಿದ್ದಾರೆ. ಇಬ್ಬೀಡಿನ ಪರಿಚಯ, ವಕ್ತಾರರ ಸಂದರ್ಶನ, ಕೆಲ ಕಥೆಗಳನ್ನು ಟೇಪನಲ್ಲಿ ಧ್ವನಿಮುದ್ರಿಸಿಕೊಂಡು ಬರೆದುದು

ಇವೆಲ್ಲ ಈ ಸಂಗ್ರಹದ ವಿಶೇಷತೆಗಳಾಗಿವೆ. ಅಧ್ಯಯನಕ್ಕೆ ಕನಿಷ್ಠ ಇಂತಹ ಸಂಗತಿಗಳು ದಾಖಲಾಗಿರಬೇಕಾದುದು ಅವಶ್ಯವೆನಿಸುತ್ತದೆ.

ನರಸಿಂಹೇಗೌಡ ನಾರಣಾಪುರ ಅವರು ಸಂಗ್ರಹಿಸಿ ಪ್ರಕಟಿಸಿರುವ 'ಮೇಲುಕೋಟೆ ಸುತ್ತಿನ ಜನಪದ ಕಥೆಗಳು' (೧೯೮೯) ವಿಶೇಷವಾಗಿ ತಮ್ಮ ಗ್ರಾಮವಾದ ನಾರಣಾಪುರದ (ಮಂಡ್ಯ ಜಿಲ್ಲೆ, ಪಾಂಡವಪುರ ತಾ.) ಕೆಲ ಜನ ವಕ್ತಾರರಿಂದ ೩೦ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇಲ್ಲಿಯ ಕಥೆಗಳನ್ನು ಹೇಳಿದವರೆಲ್ಲ (ಒಬ್ಬರನ್ನು ಹೊರತು ಪಡಿಸಿ) ಉಳಿದವರೆಲ್ಲ ಒಕ್ಕಲಿಗರು. ಅದೂ ವಿಶೇಷವಾಗಿ ಸಂಪಾದಕರ ತಂದೆಯವರೇ ಇಲ್ಲಿಯ ಹತ್ತು ಕಥೆಗಳನ್ನು ಹೇಳಿದ್ದಾರೆ. ತಾಯಿಯಿಂದಲೂ ಒಂದು ಕಥೆಯನ್ನು ಸಂಗ್ರಹಿಸಿದ್ದಾರೆ. ಮತ್ತೆ ತಮಗೆ ಬರುವ ಮೂರು ಕಥೆಗಳನ್ನು ಬರೆದು ಹಾಕಿದ್ದಾರೆ. ಅಂದರೆ ಅರ್ಧ ಕಥೆಗಳು ಒಂದೇ ಮನೆಯವರು ಹೇಳಿದ ಕಥೆಗಳು. ಉಳಿದ ಕಥೆಗಳನ್ನು ಗ್ರಾಮದವರಿಂದ ಸಂಗ್ರಹಿಸಲಾಗಿದೆ. ಹೀಗಾಗಿ ಸಹಜವಾಗಿಯೇ ಇಲ್ಲಿಯ ಕಥೆಗಳು ಅಧ್ಯಯನಕಾರರಲ್ಲಿ ಕುತೂಹಲ ಮೂಡಿಸುತ್ತವೆ.

ಹಲವು ಪ್ರದೇಶ, ಹಲವು ವಕ್ತಾರರಿಂದ ಸಂಗ್ರಹಿಸಿದ ಕೃತಿಗಳು :

ಜನಪದ ಸಾಹಿತ್ಯದಲ್ಲಿ ಅತ್ಯಂತ ಆಕರ್ಷಕ ಪ್ರಕಾರವೆಂದರೆ ಜನಪದ ಕಥೆಗಳದು. ಹೀಗಾಗಿ ೧೯೭೦ರ ಸುತ್ತಮುತ್ತಲಿನ ಕಾಲದಲ್ಲಿ ಅನೇಕ ಜನ ಜನಪದ ಸಾಹಿತ್ಯ ಆಸಕ್ತರು ಕತೆಗಳ ಸಂಗ್ರಹಕ್ಕೆ ತೊಡಗಿ, ಅವುಗಳನ್ನು ಪ್ರಕಟಿಸಿದ್ದಾರೆ. ಜನಪದ ಸಾಹಿತ್ಯವನ್ನು ಪ್ರಕಟಿಸಲು ಕರ್ನಾಟಕದಲ್ಲಿ ೧೯೮೦ರ ನಂತರ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ' ಅಸ್ತಿತ್ವದಲ್ಲಿ ಬಂದಿತು. 'ಕನ್ನಡ ಸಾಹಿತ್ಯ ಪರಿಷತ್ತು' ತನ್ನ ಬೆಳ್ಳಿಹಬ್ಬದ ಸಂದರ್ಭದಲ್ಲಿ ೧೯೮೧ ರಲ್ಲಿ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಪ್ರಕಟಿಸಿತು. ಅದರಲ್ಲಿ ಜನಪದ ಕಥೆಗಳ ಸಂಗ್ರಹಗಳೂ ಇವೆ. ಮೈಸೂರು ವಿಶ್ವವಿದ್ಯಾಲಯದ ನಂತರ ಉಳಿದ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳಿಂದಲೂ ಜನಪದ ಸಾಹಿತ್ಯದ ಕೃತಿಗಳು ಹೊರಬಂದಿವೆ. ಇಲ್ಲೆಲ್ಲ ಹೊರಬಂದ ಕಥಾಸಂಗ್ರಹಗಳನ್ನು ಗಮನಿಸಿದರೆ ಅವುಗಳಲ್ಲಿ ಒಂದು ಗೊತ್ತಾದ ಪ್ರದೇಶದಿಂದ ಸಂಗ್ರಹಿಸದೆ, ಹಲವಾರು ಕಡೆ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ ಸಂಗ್ರಹಗಳೂ ಕನ್ನಡದಲ್ಲಿ ಪ್ರಕಟವಾಗಿವೆ. ಇಂತಹ ಸಂಗ್ರಹಗಳಿಗಾಗಿ ಹಲವಾರು ವಕ್ತಾರರಿಂದ ಕಥೆಗಳನ್ನು ಸಂಗ್ರಹಿಸಲಾಗಿರುವುದು ಕಂಡುಬರುತ್ತದೆ. ಹೀಗಾಗಿ ಕಥೆಗಳನ್ನು ಪಠ್ಯಗಳನ್ನು ಒದಗಿಸುವುದು ಮಾತ್ರ ಇಂತಹ ಸಂಗ್ರಹಗಳ ಪ್ರಮುಖ ಉದ್ದೇಶವಾಗಿ ಕಾಣುತ್ತದೆ.

೧೯೭೧ ರಲ್ಲಿ ಪ್ರಕಟವಾದ ಜನಪದ ಕಥೆಗಳ ಸಂಗ್ರಹದಲ್ಲಿ ಡಾ. ಎಚ್.ಜೆ.ಲಕ್ಕಪ್ಪಗೌಡ ಅವರ 'ಜನಪದ ಕಥಾವಳಿ' ಪ್ರಮುಖವಾಗಿದೆ. ಡಾ. ಲಕ್ಕಪ್ಪಗೌಡ ಅವರು ಆಗ ಮಂಗಳೂರಿನ ಮಂಗಳಗಂಗೋತ್ರಿಯಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಮೈಸೂರು ವಿ.ವಿ.ಯ ತಮ್ಮ ಸಹೋದ್ಯೋಗಿಗಳು ಮಾಡುತ್ತಿರುವ ಕೆಲಸವನ್ನು ಕಂಡು, ೨೫ ಜನಪದ ಕಥೆಗಳ ಸಂಗ್ರಹವೊಂದನ್ನು ಅವರು 'ಕರ್ನಾಟಕ ಸಹಕಾರೀ ಪ್ರಕಾಶನ

ಮಂದಿರ' ಬೆಂಗಳೂರು ಇಲ್ಲಿಂದ ಪ್ರಕಟಪಡಿಸುತ್ತಾರೆ. ಕಿನ್ನರ ಕಥೆಗಳು, ನೀತಿಕಥೆಗಳು, ಅತಿಮಾನುಷ ಕಥೆಗಳು, ವಿನೋದ ಕಥೆಗಳು ಎಂಬ ವಿಭಾಗೀಕರಣದಡಿ ಕಥೆಗಳನ್ನು ವಿಭಾಗಿಸಿಕೊಂಡಿದ್ದಾರೆ. ಅನುಬಂಧದಲ್ಲಿ ವಿಸ್ತಾರವಾದ ಅರ್ಥಕೋಶ ಕೊಟ್ಟಿರುವುದು ಎದ್ದುಕಾಣುತ್ತದೆ. ವಕ್ತಾರರ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಇವರು ಪ್ರಸ್ತಾವನೆ ಬರೆಯಲು ಹೋಗದೇ ಇರುವುದು ದೊಡ್ಡ ಕೊರತೆಯಾಗಿ ಎದ್ದುಕಾಣುತ್ತಿದೆ. ಇಲ್ಲಿಯ ಕಥೆಗಳು ಮೈಸೂರು, ಹಾಸನ ಜಿಲ್ಲೆಗಳಿಗೆ ಸೇರಿವೆ. ಇವರು ಕಥೆಗಳನ್ನು ಸಂಗ್ರಹಿಸಿದ ವರ್ಷಗಳನ್ನು ನಮೂದಿಸಿದ್ದು, ಅವೆಲ್ಲ ೧೯೬೨ ರಿಂದ ೧೯೬೭ನೇ ಸಾಲಿನಲ್ಲಿ ಸಂಗ್ರಹಿಸಿದ ಕಥೆಗಳಾಗಿರುವುದು ಗಮನಿಸತಕ್ಕ ಸಂಗತಿಯಾಗಿದೆ.

ಜನಪದ ಸಾಹಿತ್ಯವನ್ನು ಬಲ್ಲ ವಿದ್ವಾಂಸರಿಂದ ಜನಪದ ಕಥೆಗಳ ಸಂಗ್ರಹಗಳ ಪ್ರಕಟನೆ ಪ್ರಾರಂಭವಾದ ದಾಖಲೆ ದೊರೆಯುವುದು, ಮತ್ತು ಎಲ್ಲರೂ ಗುರುತಿಸುವುದು ಎಂ.ಎ.ಜಯಚಂದ್ರ (ಧವಳಶ್ರೀ) ಅವರ 'ಜಾನಪದ ಕಥಾಮೃತ' ಎಂಬ ಸಂಗ್ರಹವನ್ನು. ಅವರು ಆಗಾಗ ಜನಪದ ಕಥೆಗಳ ಸಂಗ್ರಹವನ್ನು ಪ್ರಕಟಿಸುತ್ತಲೇ ಬಂದಿದ್ದಾರೆ. ಹಲವಾರು ಕಡೆ, ಹಲವಾರು ಬಗೆಯ ವಕ್ತಾರರಿಂದ ಸಂಗ್ರಹಿಸಿದ ಜನಪದ ಕಥೆಗಳ ಒಂದು ಗಮನಾರ್ಹ ಕೃತಿಯನ್ನು ೧೯೭೭ರಲ್ಲಿಯೇ ಬೆಂಗಳೂರು ವಿ.ವಿ.ಯಿಂದ ಪ್ರಕಟಿಸಿದ್ದಾರೆ. **'೧೧೫ ಜಾನಪದ ಕಿರುಕತೆಗಳು'** ಎಂಬುದು ಆ ಕೃತಿಯ ಹೆಸರು. ಸುಮಾರು ೬೦೦ ಪುಟಗಳ ವ್ಯಾಪ್ತಿಯನ್ನು ಈ ಕೃತಿ ಹೊಂದಿದೆ. ದೀರ್ಘವಾದ ಪ್ರಸ್ತಾವನೆ, ೧೩ ಬಗೆಯ ಅನುಬಂಧಗಳು ಇಲ್ಲಿವೆ. ಇದನ್ನು ನಾವು ಗಮನಿಸಿದರೆ ಸಾಕು ಸಂಪಾದಕರು ಎಷ್ಟೊಂದು ವಿಷಯಗಳನ್ನು ಈ ಸಂಗ್ರಹದಲ್ಲಿ ಕೊಡಲು ಪ್ರಯತ್ನಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಪುನಃ ಹೇಳಿಸಿದ ಕಥೆಗಳು, ಕಥೆಗಳ ವಿಭಜನೆ, ವಕ್ತಾರರ ಸಂಕ್ಷಿಪ್ತ ಪರಿಚಯ, ಇಂಗ್ಲೀಷ ಪದಸೂಚಿ, ವಿಷಯ ಸೂಚಿ, ಸಂಖ್ಯಾಸೂಚಿ, ಶಬ್ದಕೋಶ, ಆಶಯ ಸೂಚಿ–ಹೀಗೆ ಅನೇಕ ಮಾಹಿತಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಇದೆಲ್ಲವನ್ನು ಗಮನಿಸಿದರೆ, ಒಂದು ಜನಪದ ಕಥಾಸಂಕಲನವು ಒಂದು ಅಪರೂಪದ ಮಾದರಿ ಸಂಗ್ರಹವಾಗಲಿ ಎಂಬ ಉದ್ದೇಶ ಇದರ ಹಿಂದೆ ಇರುವುದು ಸ್ಪಷ್ಟವಾಗುತ್ತದೆ. ವಕ್ತಾರರ ಪಟ್ಟಿಯೊಂದರಲ್ಲಿ ಅವರು ಯಾವ ಪ್ರದೇಶಕ್ಕೆ ಸಂಬಂಧಿಸಿದವರು ಎಂಬ ಮಾಹಿತಿಯೂ ಇದೆ. ಆಂದ್ರಪ್ರದೇಶಕ್ಕೂ ಸೇರಿದ ಗ್ರಾಮಗಳಿಂದಲೂ ಇಲ್ಲಿಯ ಕಥೆಗಳನ್ನು ಸಂಗ್ರಹಿಸಿದ್ದಾರೆ. ಸಂಪಾದಕರು ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ಬರೆದುಕೊಂಡಿದ್ದಾರೆ: 'ಈ ಸಂಕಲನದ ೧೧೫ ಕಥೆಗಳನ್ನು ೩೮ ಜನ ಜಾನಪದ ಕಥೆಗಾರರು ಹೇಳಿದ್ದಾರೆ. ಇವರು ಬೇರೆ ಬೇರೆ ಜಾತಿಗೆ, ಬೇರೆ ಬೇರೆ ಪ್ರದೇಶಕ್ಕೆ, ಬೇರೆ ಬೇರೆ ವಯೋಮಾನಕ್ಕೆ ಸೇರಿದವರಾಗಿದ್ದಾರೆ, ವಿವಿಧ ಕಸುಬಿನವರಾಗಿದ್ದಾರೆ. ...ಜಾತಿ (ಅಥವಾ ಧರ್ಮ), ಪ್ರದೇಶ, ವಯಸ್ಸು, ಕಸುಬು ಇವು ಕಥೆಯಶೈಲಿ, ವಸ್ತುವಿನ ಮೇಲೆ ಏನಾದರೂ ಪ್ರಭಾವ ಬೀರಬಲ್ಲುವೆ? ಪ್ರಭಾವವಿದ್ದರೆ ಯಾವ ಪ್ರಮಾಣದಲ್ಲಿ? ಎಂಬುದನ್ನು ವಿವೇಚಿಸಬಹುದಾಗಿದೆ. ...ಇಲ್ಲಿಯ ಕೆಲವು ಜಾನಪದ ಕಥೆಗಾರರ ಮಾತೃಭಾಷೆ ಕನ್ನಡವಾಗಿರದೆ, ತಮಿಳು, ತುಳು, ಮರಾಠಿ ಮೊದಲಾದ ಭಾಷೆಗಳಾಗಿವೆ' (ಪ್ರ.ಪು.೧೦). ಸಂಪಾದಕರ ಈ ಮಾತುಗಳನ್ನು ಗಮನಿಸಿದರೆ ಬಹುವೈವಿಧ್ಯಮಯವಾದಂತಹ ಕಥೆಗಳು ಇಲ್ಲಿರುವುದು ಸಹಜವಾಗಿಯೇ ಕಂಡುಬರುತ್ತದೆ.

ಇದೇ ಸಂಪಾದಕರಿಂದ ತಯಾರಿಸಲಾಗಿರುವ ಇನ್ನೊಂದು ಕಥಾಸಂಕಲನ **'ಸಂಸಾರಿ ಹೆಚ್ಚೋ ಸಂನ್ಯಾಸಿ ಹೆಚ್ಚೋ'** (೧೯೮೧) ಎಂಬುದರಲ್ಲಿ ೪೫ ಕಥೆಗಳಿದ್ದು, ಬೇರೆ ಬೇರೆ ಭಾಗದ ೨೮ ಜನ ವಕ್ತಾರರಿಂದ ಸಂಗ್ರಹಿಸಿದ ಕಥೆಗಳು ಇಲ್ಲಿವೆ. ಸಂಪಾದಕರು ಮತ್ತೆ ಇಲ್ಲಿ ಹತ್ತಾರು ಬಗೆಯ ಅನುಬಂಧಗಳನ್ನು ಕೊಡಲು ಪ್ರಯತ್ನಿಸಿದ್ದಾರೆ. ಇಂತಹ ಸಂಗ್ರಹಗಳಲ್ಲಿ ಕಥೆಗಳೇ ಮುಖ್ಯವಾಗುತ್ತವೆ. ಉಳಿದ ಸಂಗತಿಗಳನ್ನು ಅವುಗಳ ಜೊತೆಗೆ ನೋಡಬಹುದಾಗಿದೆ.

ಈ ಬಗೆಯ ಕಥಾಸಂಗ್ರಹಗಳು ಇನ್ನೂ ಕೆಲವಿವೆ. ಡಾ. ಕೆ. ಆರ್. ಸಂಧ್ಯಾರೆಡ್ಡಿ ಅವರು ಸಂಪಾದಿಸಿದ **'ಮೂವತ್ತು ಜನಪದ ಕಥೆಗಳು'** (೧೯೮೧), ಡಾ. ತರೀಕೆರೆ ರಹಮತ್ ಸಂಪಾದಿಸಿದ ಇಪ್ಪತ್ತು ಕಥೆಗಳ ಸಂಗ್ರಹ **'ಐವರು ಹೇಳಿದ ಜಾನಪದ ಕಥೆಗಳು'**(೧೯೮೧), ಮೈಲಹಳ್ಳಿ ರೇವಣ್ಣ ಅವರು ಸಂಪಾದಿಸಿದ ೫೩ ಕಥೆಗಳುಳ್ಳ **'ಅಡವಿಗುಮಾರ ಮತ್ತು ಇತರ ಜನಪದ ಕಥೆಗಳು'** (೧೯೮೫), ಡಾ. ಡಿ.ಕೆ. ರಾಜೇಂದ್ರ ಅವರಿಂದ ಸಂಪಾದಿತವಾಗಿರುವ ೬೦ ಕಥೆಗಳ ಸಂಗ್ರಹ **'ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳು'** (೧೯೯೩), ಡಾ. ಬಸವರಾಜ ನೆಲ್ಲಿಸರ ಅವರು ಸಂಪಾದನೆ ಮಾಡಿದ ೫೩ ಕಥೆಗಳ ಸಂಗ್ರಹ **'ಮಲೆನಾಡಿನ ಜನಪದ ಕಥೆಗಳು'** (೨೦೦೪), ನಾಡೋಜ ಎಚ್.ಎಲ್. ನಾಗೇಗೌಡ ಅವರಿಂದ ಸಂಪಾದನೆಗೊಂಡಿರುವ ೫೬ ಕಥೆಗಳುಳ್ಳ **'ಕನ್ನಡ ಜನಪದ ಕಥೆಗಳು'** (೨೦೦೮) ಎಂಬುವು ಈ ಬಗೆಯ ಸಂಗ್ರಹಗಳಾಗಿವೆ.

ಕನ್ನಡ ಜನಪದ ಕಥೆಗಳ ಅಧ್ಯಯನ-ಸಂಶೋಧನೆ :

ಡಾ.ಜೀ.ಶಂ. ಪರಮಶಿವಯ್ಯ ಅವರು ತಮ್ಮ **'ಕನ್ನಡ ಜನಪದ ಕಥೆಗಳು'**(೧೯೭೦) ಎಂಬ ಸಂಗ್ರಹದ ಪ್ರಸ್ತಾಪನೆಯಲ್ಲಿ ಪ್ರಪಂಚದಾದ್ಯಂತ ಪ್ರಚಲಿತದಲ್ಲಿರುವ ೨೫ ಕಥಾಮಾದರಿಗಳಿಗೆ ಕನ್ನಡ ಜನಪದ ಕಥೆಗಳನ್ನು ಉದಾಹರಣೆಯಾಗಿ ಗುರುತಿಸಿದ್ದೇ ಸಂಶೋಧನೆಯ ಶಾಸ್ತ್ರೀಯ ಪ್ರಯತ್ನದ ಮೊದಲ ಹೆಜ್ಜೆ ಎನ್ನಬೇಕು.

ಶ್ರೀಮತಿ ಕೆ.ಆರ್. ಸಂಧ್ಯಾರೆಡ್ಡಿ ಅವರು **'ಕನ್ನಡ ಜನಪದ ಕಥೆಗಳು'** ಎಂಬ ವಿಷಯವನ್ನು ಕುರಿತು, ಡಾ.ಸಿ.ಪಿ.ಕೆ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ೧೯೮೦ರಲ್ಲಿ, ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದಾರೆ. ಈ ಪ್ರಬಂಧ ೧೯೮೨ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರಿಂದ ಪ್ರಕಟವೂ ಆಗಿದೆ. ಈ ಪ್ರಬಂಧದಲ್ಲಿ ಆವರೆಗೆ ಹೊರದೇಶಗಳಲ್ಲಿ ನಡೆದ ಅಧ್ಯಯನಗಳನ್ನು ಅವಲೋಕಿಸಿದ್ದಾರೆ. ಕೊನೆಗೆ ಸಂಕ್ಷಿಪ್ತವಾಗಿ ಮಾದರಿ ಸೂಚಿ ಕೊಟ್ಟಿದ್ದಾರೆ.

ಡಾ. ಸಂಧ್ಯಾರೆಡ್ಡಿ ಅವರ ಅಧ್ಯಯನವು ಹೆಚ್ಚಾಗಿ ಪಾಶ್ಚಾತ್ಯರ ಸಿದ್ಧಾಂತಗಳ ಹಿನ್ನೆಲೆಯಲ್ಲಿಯೇ ಆಗಿದೆ. ಕಥೆಗಳ ಸ್ವರೂಪ, ಪ್ರಕಾರಗಳು, ಆಶಯ-ಮಾದರಿಗಳು, ಕಥೆಗಳ ಕುರಿತು ಪಾಶ್ಚಾತ್ಯರಲ್ಲಿ ಹುಟ್ಟಿಕೊಂಡ ಸಿದ್ಧಾಂತಗಳು-ಇವುಗಳ ಪರಿಚಯ ಇಲ್ಲಿ ಕಾಣುತ್ತವೆ. ನಾಲ್ಕನೆಯ ಅಧ್ಯಾಯದಲ್ಲಿ ಕಥೆಗಳ ಪ್ರಕಾರಗಳನ್ನು ಇಟ್ಟುಕೊಂಡು ಆಯಾ ಪ್ರಕಾರದ ಕಥೆಗಳ ಸ್ವರೂಪದ ಹಿನ್ನೆಲೆಯಲ್ಲಿ ಕನ್ನಡ ಕಥೆಗಳನ್ನು ಪರಿಚಯಿಸುವ ಕೆಲಸ

ಮಾಡಿದ್ದಾರೆ. ಉಳಿದಂತೆ ಕಥೆಗಳ ಶೈಲಿ–ತಂತ್ರ, ಸಾಹಿತ್ಯಕ ಮೌಲ್ಯ, ಹೀಗೆ ಶಾಸ್ತ್ರೀಯ ಸಂಗತಿಗಳ ಹಿನ್ನೆಲೆಯಲ್ಲಿ ಕಥೆಗಳ ಅಧ್ಯಯನ ಮಾಡಿದ್ದಾರೆ. ಒಂದು ಅಧ್ಯಾಯದಲ್ಲಿ ಕಥೆಗಳ ಸಾಂಸ್ಕೃತಿಕ ಮಹತ್ವವನ್ನು ಪರಿಶೀಲಿಸಿದ್ದಾರೆ. ಇದು ಭಾರತೀಯ–ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಮುಖ ಅಧ್ಯಯನವೆನಿಸುತ್ತದೆ. ಇನ್ನೊಂದು ಅಧ್ಯಾಯದಲ್ಲಿ ಕನ್ನಡದಲ್ಲಿ ಪ್ರಕಟವಾದ ಜನದಪ ಕಥಾಸಂಕಲನಗಳನ್ನು ಮುಂದಿಟ್ಟುಕೊಂಡು ಒಂದು ಜನಪದ ಕಥೆಗಳ ಅಧ್ಯಯನದ ಇತಿಹಾಸವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ. ಅನುಬಂಧದಲ್ಲಿ ೨೨ ಜನಪದ ಕಥೆಗಳ ಸಂಕಲನಗಳನ್ನು ಮುಂದಿಟ್ಟುಕೊಂಡು ಸುಮಾರು ೫೫ ಪುಟಗಳ ಒಂದು ಮಾದರಿ ಸೂಚಿಯನ್ನು ತಯಾರಿಸಿಕೊಂಡಿದ್ದು, ಒಟ್ಟಿಗೆ ೧೪೮ ಮಾದರಿಗಳನ್ನು ಗುರುತಿಸಿದ್ದಾರೆ. ಪ್ರಾಣಿ ಕಥೆಗಳ ಮಾದರಿಗಳು–೧೫, ಸಾಮಾನ್ಯ ಕಥೆಗಳ ಮಾದರಿಗಳು–೭೮, ಹಾಸ್ಯ ಕಥೆಗಳ ಮಾದರಿಗಳು–೫೦, ಸೂತ್ರರೂಪದ ಕಥೆಗಳ ಮಾದರಿಗಳು–೫. ಕೆಲವನ್ನು ಹೊಸ ಮಾದರಿಗಳೆಂದು ಗುರುತಿಸಿದ್ದು, ಅವುಗಳಿಗೆ ಸಂಖ್ಯೆ ಕೊಡುವ ಗೋಜಿಗೆ ಹೋಗಿಲ್ಲ. ಸಂಧ್ಯಾರೆಡ್ಡಿ ಅವರ ಈ ಭಾಗ ಆಗಿನ ಕಾಲದ ಆದ್ಯಯನದಲ್ಲಿ ಮಹತ್ವದ ಭಾಗವಾಗಿದೆ. ಮಾದರಿಗಳನ್ನು ಶಾಸ್ತ್ರೀಯವಾಗಿ ರಚನೆ ಮಾಡಿಕೊಂಡಿದ್ದರೆ ಖಂಡಿತವಾಗಿಯೂ ಅವರ ಅಧ್ಯಯನ ಒಂದು ಮಹತ್ವದ ಕೊಡುಗೆಯಾಗುತ್ತಿತ್ತು. ಆದರೆ ಅವರು ಮಾದರಿಗಳ ಸಂಖ್ಯೆಗಳನ್ನು ಗುರುತಿಸಿ, ಮಾದರಿಯ ರಚನೆಗಳ ಬದಲಾಗಿ ಕಥೆಗಳ ಸಾರಾಂಶಗಳನ್ನು ಕೊಟ್ಟಿದ್ದಾರೆ. ಆದರೂ ಕಥೆಗಳ ಮಾದರಿ ಸಂಖ್ಯೆಗಳನ್ನು ಗುರುತಿಸಿದ್ದು, ಆ ಸಂಖ್ಯೆಯ ಕಥೆ ಪ್ರಕಟವಾದ ಯಾವ ಸಂಗ್ರಹದಲ್ಲಿ ಬರುತ್ತದೆಂದು ಉಲ್ಲೇಖಿಸಿದ್ದು ಪರಿಶ್ರಮದ ಕಲಸವೇ ಆಗಿದೆ. ಕೊನೆಯಲ್ಲಿ ಆಶಯಗಳ ೮೪ ಪುಟಗಳ ಒಂದು ದೊಡ್ಡ ಸೂಚಿಯನ್ನು ಕೊಟ್ಟಿದ್ದಾರೆ. ಥಾಮ್ಸನ್ನರ ಆಶಯ ಸೂಚಿಯನ್ನು ಮುಂದಿಟ್ಟುಕೊಂಡು ತಯಾರಿಸಿದ ಈ ಸೂಚಿ ಕಥೆಗಳ ಅಧ್ಯಯನದಲ್ಲಿ ಒಂದು ಮಹತ್ವದ ಕೆಲಸವೇ ಆಗಿದೆ. ಒಟ್ಟಿನ ಮೇಲೆ ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಒಂದು ಅಧ್ಯಯನಪೂರ್ಣ ಸಂಶೋಧನ ಪ್ರಬಂಧ ಇದಾಗಿದೆ ಎಂದು ಧಾರಾಳವಾಗಿ ಹೇಳಬಹುದಾಗಿದೆ.

ಡಾ. ವೀರಣ್ಣ ದಂಡೆ ಅವರು ಪಿಎಚ್.ಡಿ. ಪ್ರಬಂಧದ ಒಂದು ಭಾಗವಾಗಿ ತಯಾರಿಸಿದ **'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಮಾದರಿ ಸೂಚಿ'** (೧೯೮೭) ಎಂಬ ಕಥಾಮಾದರಿ ಸೂಚಿಯೊಂದು ೧೯೮೭ ರಲ್ಲಿ ಪ್ರಕಟವಾಗಿದೆ. ಆರ್ನೆ–ಥಾಮ್ಸನ್ ಅವರ Types of the Folktale ಎಂಬ ಜಗತ್ಪ್ರಸಿದ್ಧ ಕಥಾಮಾದರಿ ಸೂಚಿಯನ್ನು ಅನುಸರಿಸಿ, ಕಥಾಮಾದರಿಗಳನ್ನು ಎಲ್ಲ ತಂತ್ರಾಂಶಗಳನ್ನು ಬಳಸಿ ರಚಿಸಿಕೊಂಡ ಕೃತಿಯಾಗಿದೆ. ಹೀಗಾಗಿ ಆಗಿನ ಕಾಲಕ್ಕೆ ಕರ್ನಾಟಕದ ವಿದ್ವಾಂಸರ ಹಾಗೂ ವಿದ್ಯಾರ್ಥಿಗಳ ತೀವ್ರಗಮನ ಸೆಳೆದ ಕೃತಿ ಇದಾಗಿತ್ತು.

ಸುಮಾರು ೫೦೦ ಕನ್ನಡದ ಕಥೆಗಳನ್ನು ಮುಂದಿಟ್ಟುಕೊಂಡು ಅವುಗಳಿಂದ ಆಶಯಗಳನ್ನು ಹೊರತೆಗೆದು, ಥಾಮ್ಸನ್ ಅವರ Motif Index of Folk literature (6vols) ಎಂಬ ಜಗತ್ಪ್ರಸಿದ್ಧ ಆಶಯ ಸೂಚಿಯನ್ವಯ ೩೦೦ ಪುಟಗಳ ಆಶಯ

ಸೂಚಿಯೊಂದನ್ನು ತಮ್ಮ ಪಿಎಚ್.ಡಿ. ಪ್ರಬಂಧದ ಒಂದು ಭಾಗವಾಗಿ ತಯಾರಿಸಿದ್ದಾರೆ. ಈ ಸೂಚಿಯಿಂದ ಆಶಯಗಳನ್ನು ಬಳಸಿಕೊಂಡು, ತಾಂತ್ರಿಕವಾಗಿ ಪರಿಪೂರ್ಣವಾದ **'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಮಾದರಿ ಸೂಚಿ'** ರಚಿಸಿದ್ದಾರೆ. ಆರ್ನೆ–ಥಾಮ್ಸನ್ ಮಾದರಿ ಸೂಚಿಯಲ್ಲಿ ಗುರುತಿಸಲಾಗಿರುವ ೧೫೫ ಮಾದರಿಗಳನ್ನಲ್ಲದೆ, ೮೨ ಹೊಸ ಮಾದರಿಗಳನ್ನು ಈ ಮಾದರಿ ಸೂಚಿಯಲ್ಲಿ ಗುರುತಿಸಿಕೊಳ್ಳಲಾಗಿದೆ.

೨೫ ಪುಟಗಳ ಪೀಠಿಕೆಯಲ್ಲಿ ಆಶಯ ಹಾಗೂ ಮಾದರಿಗಳ ಸ್ಪಷ್ಟವಾದ ಕಲ್ಪನೆಯನ್ನು ಕನ್ನಡ ಜನಪದ ಕಥೆಗಳ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಹೀಗಾಗಿ ಆಶಯ ಮತ್ತು ಮಾದರಿ ಪರಿಕಲ್ಪನೆಗಳ ಸವಿವರವಾದ ಪರಿಚಯ ಹೊಂದಿದ ಪ್ರಸ್ತಾವನೆಯಿಂದ ಈ ಕೃತಿಯ ಉಪಯೋಗ ಇನ್ನಷ್ಟು ಉತ್ತಮ ರೀತಿಯಿಂದ ಮಾಡಿಕೊಳ್ಳಲು ಅಭ್ಯಾಸಿಗಳಿಗೆ ಅನುಕೂಲವಾಯಿತು. ಹೀಗಾಗಿ ಕನ್ನಡ ಜನಪದ ಕಥೆಗಳಿಗೆ ಸಂಬಂದಿಸಿದಂತೆ ಆಗಿನ ಕಾಲಕ್ಕೆ ಪ್ರಕಟವಾದ ಒಂದು ಅಪರೂಪದ ವೈಜ್ಞಾನಿಕ ಕೃತಿ ಎಂಬ ಹೆಗ್ಗಳಿಕೆ ಈ ಕೃತಿಗಿದೆ.

ಡಾ. ಜೀ.ಶಂ.ಪರಮಶಿವಯ್ಯ ಅವರ ಮಾರ್ಗದರ್ಶನದಲ್ಲಿ ಹಿ. ಶಿ. ರಾಮಚಂದ್ರೇಗೌಡ ಅವರು– **'ಕನ್ನಡ ಜನಪದ ಕಥಾವರ್ಗಗಳು'** (ವರ್ಗ=ಮಾದರಿ) ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ, ಮೈಸೂರು ವಿಶ್ವವಿದ್ಯಾಯದಿಂದ ೧೯೮೨ ರಲ್ಲಿ ಪಿಎಚ್.ಡಿ. ಪಡೆದಿದ್ದಾರೆ. (ಪ್ರಾರಂಭದಲ್ಲಿ ಟೈಪ್ ಎಂಬ ಪದಕ್ಕೆ ವರ್ಗ ಎನ್ನುವ ಪದ ಬಳಸಲಾಗುತ್ತಿತ್ತು. ನಂತರ ಅದನ್ನು ಮಾದರಿ ಎಂದು ಬಳಸಲಾಗುತ್ತಿದೆ.) ಈ ಪ್ರಬಂಧವು ೧೯೯೦ರಲ್ಲಿ ಪ್ರಕಟವಾಗಿದೆ. ಪ್ರಕಟವಾದ ಜನಪದ ಕಥೆಗಳ ಸಂಗ್ರಹಗಳನ್ನು ಮುಂದಿಟ್ಟುಕೊಂಡು, ಸುದೀರ್ಘವಾದ ಮಾದರಿ ಸೂಚಿ ತಯಾರಿಸಿಕೊಳ್ಳಲಾಗಿದೆ. ಇದರಲ್ಲಿ ೧೬೨ ಮುಖ್ಯ ಕಥಾಮಾದರಿಗಳನ್ನೂ ೨೬೬ ಸಹಕಥಾ ಮಾದರಿಗಳನ್ನೂ ಮತ್ತು ೧೧ ಕನ್ನಡ ಪ್ರಾದೇಶಿಕ ಮಾದರಿಗಳನ್ನೂ ಗುರುತಿಸಿದ್ದಾರೆ. ಆದರೆ ಮಾದರಿಗಳ ರಚನೆಗಳನ್ನು ಶಾಸ್ತ್ರೀಯವಾಗಿ ಕಟ್ಟಿಕೊಳ್ಳದೆ, ಕೇವಲ ಕಥಾಸಾರಾಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಡಾ. ರಾಮಚಂದ್ರೇಗೌಡ ಅವರು ಸ್ವಲ್ಪ ಪ್ರಯತ್ನ ಪಟ್ಟಿದ್ದರೆ ಒಂದು ಉತ್ತಮವಾದ ಶಾಸ್ತ್ರೀಯ ಮಾದರಿ ಸೂಚಿಯನ್ನು ಕೊಡಬಹುದಿತ್ತು. ಪ್ರಬಂಧದ ಪ್ರಾರಂಭದ ಅಧ್ಯಾಯಗಳಲ್ಲಿ ಮಾದರಿ ಮತ್ತು ಆಶಯ ಪರಿಕಲ್ಪನೆಗಳ ಬಗ್ಗೆ ಪಾಶ್ಚಾತ್ಯರಲ್ಲಿ ಕಾಣುವ ಕಲ್ಪನೆಗಳನ್ನು ತುಂಬಾ ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಅಧ್ಯಾಯಗಳಲ್ಲಿ ಜನಪದ ಕಥೆಗಳ ಅಧ್ಯಯನದ ಇತಿಹಾಸ ಮತ್ತು ಹಲವಾರು ಬಗೆಯ ಪ್ರಮೇಯಗಳನ್ನು ವಿವರಿಸಿದ್ದಾರೆ.

ಡಾ। ಬಿ. ಬಿ. ಹೆಂಡಿ ಅವರ ಮಾರ್ಗದರ್ಶನದಲ್ಲಿ ನಾನು (ವೀರಣ್ಣ ದಂಡೆ) **'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು'** ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ೧೯೮೩ ರಲ್ಲಿ ಪಿಎಚ್.ಡಿ. ಸಂಪಾದಿಸಿದ್ದೇನೆ. ಈ ಅಭ್ಯಾಸ ಕಲಬುರ್ಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಚಾರದಲ್ಲಿರುವ ಜನಪದ ಕಥೆಗಳನ್ನು ಕುರಿತದ್ದಾದುದರಿಂದ ಇಲ್ಲಿನ ಕಥೆಗಳನ್ನು ನೋಡುವ ದೃಷ್ಟಿ ವಿಶಿಷ್ಟವಾಗಿದೆ. ಪ್ರಾದೇಶಿಕ ಮಟ್ಟದಲ್ಲಿ ಕಥೆಗಳ ಸವಿವರವಾದ ಸಾಂಸ್ಕೃತಿಕ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಇದೊಂದು ಹೊಸ ಪ್ರಯೋಗ. ಕನ್ನಡ ಶಾಸನಗಳು, ಹಳೆಗನ್ನಡ

ನಡುಗನ್ನಡ ಕೃತಿಗಳು ಕೊಡುವ ಸಾಂಸ್ಕೃತಿಕ ಸಂಗತಿಗಳಿಗೂ ಅನೇಕ ಮಹತ್ವದ ಸಾಂಸ್ಕೃತಿಕ ಸಂಗತಿಗಳು ಜನಪದ ಕಥೆಗಳಲ್ಲಿ ಅಡಗಿರುವುದನ್ನು ಶೋಧಿಸುವ ಮಹತ್ವದ ಅಧ್ಯಯನ ಇಲ್ಲಿ ನಡೆದಿದೆ. ಜನಪದ ಕಥೆಗಳಲ್ಲಿ ಕಾಣುವ ಸಾಮಾಜಿಕ ವ್ಯವಸ್ಥೆ, ಸಾಮಾಜಿಕ ನಂಬುಗೆಗಳು ಹಾಗೂ ರೂಢಿಗಳು, ದೇವದೇವತೆಗಳು ರಾಕ್ಷಸರು ಹಾಗೂ ಇತರ ಶಕ್ತಿಗಳ ಕಲ್ಪನೆ, ಮಾಟ, ಹಾಸ್ಯ ಹಾಗೂ ಅಡಗತೆಗಳು ಮತ್ತು ಪ್ರಾಣಿ ಕಥೆಗಳು ಇವುಗಳ ಸಾಂಸ್ಕೃತಿಕ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಹೀಗಾಗಿ ಕರ್ನಾಟಕದ ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಲ್ಲಿ ಈ ಪ್ರಬಂಧದಲ್ಲಿ ಮಾಡಿರುವ ಸಾಂಸ್ಕೃತಿಕ ಅಧ್ಯಯನ ಗಮನಿಸತಕ್ಕದ್ದಾಗಿದೆ.

ಥಾಮ್ಸನ್ನರ ಆಶಯ ಸೂಚಿ Motif Index of Folk literature (6vols) ಮತ್ತು ಆರ್ನೆ–ಥಾಮ್ಸನ್ನರ ಮಾದರಿ ಸೂಚಿ Types of the Folktale ಇವುಗಳ ಹಿನ್ನೆಲೆಯಲ್ಲಿ ಇಲ್ಲಿನ ಕಥೆಗಳನ್ನು ತೌಲನಿಕವಾಗಿ ನೋಡಲಾಗಿದೆ. ಸುಮಾರು ೫೦೦ ಕಥೆಗಳನ್ನು ಆಧಾರವಾಗಿಟ್ಟುಕೊಂಡು, ಆರ್ನೆ–ಥಾಮ್ಸನ್ನರ ಮಾದರಿ ಸೂಚಿಯಲ್ಲಿ ದೊರೆಯುವ ೧೫೫ ಮಾದರಿಗಳನ್ನಲ್ಲದೆ, ೮೨ ಹೊಸ ಮಾದರಿಗಳನ್ನು ಗುರುತಿಸಿಕೊಳ್ಳಲಾಗಿದೆ. ಹೀಗೆ ಒಟ್ಟು ೨೪೨ ಮಾದರಿಗಳನ್ನು– ಅನೇಕ ಕಥಾಪಾಠಗಳನ್ನು ಗಮನಿಸಿ ಶಾಸ್ತ್ರೀಯ ದೃಷ್ಟಿಯಿಂದ, ಎಲ್ಲ ತಾಂತ್ರಿಕ ಅಂಶಗಳೊಂದಿಗೆ ಮಾದರಿಗಳನ್ನು ರಚಿಸಿಕೊಂಡಿದ್ದು ಒಂದು ಪ್ರಯೋಗವಾಗಿದೆ. ಈ ಮಾದರಿ ಸೂಚಿಯನ್ನು ಇನ್ನಷ್ಟು ವಿಸ್ತರಿಸಿ, ಮಹತ್ವದ ಪ್ರಸ್ತಾವನೆ ಯೊಂದಿಗೆ ೧೯೮೭ರಲ್ಲಿ ಪ್ರಕಟಿಸಲಾಗಿದೆ ಎಂಬುದನ್ನು ಈ ಮೇಲೆ ವಿವರಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ೫೦೦ ಕಥೆಗಳಿಂದ ಗುರುತಿಸಿದ ಸುಮಾರು ಎಂಟು ಸಾವಿರ ಆಶಯಗಳ, ೩೦೦ ಪುಟಗಳ ವ್ಯಾಪ್ತಿಯ ಸುದೀರ್ಘ ಆಶಯ ಸೂಚಿಯನ್ನು ಎಲ್ಲ ತಾಂತ್ರಿಕ ಅಂಶಗಳೊಂದಿಗೆ ತಯಾರಿಸಿ ಕೊಡಲಾಗಿದೆ. ೮೦೦೦ ಆಶಯಗಳಲ್ಲಿ ೧೩೦೦ ಹೊಸ ಆಶಯಗಳಿವೆ. ಕನ್ನಡ ಜನಪದ ಕಥೆಗಳ ಅಧ್ಯಯನದಲ್ಲಿ ಇದೊಂದು ವಿಶೇಷ ಪ್ರಯತ್ನ. ಒಂದೆಡೆ ಪಾಶ್ಚಾತ್ಯರ ಶಾಸ್ತ್ರೀಯ ಅಧ್ಯಯನದ ಹಿನ್ನೆಲೆಯಲ್ಲಿ ಆಶಯ ಮತ್ತು ಮಾದರಿಗಳನ್ನು ಗುರುತಿಸುವ ಪ್ರಯತ್ನ ಮಾಡಿದರೆ, ಇನ್ನೊಂದು ಭಾಗವಾಗಿ ಅವುಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡುವಲ್ಲಿ ಜನಪದ ಕಥೆಗಳ ಪ್ರಾದೇಶಿಕ ಅಧ್ಯಯನದ ಮಹತ್ವವನ್ನೂ ತೋರಿಸಿದಂತಾಗಿದೆ. ಈ ಪ್ರಬಂಧವು ೨೦೦೩ರಲ್ಲಿ ಬೆಂಗಳೂರಿನ ಸಿವಿಜಿ ಪ್ರಕಾಶನದಿಂದ ಪ್ರಕಟಗೊಂಡಿದ್ದು, ಈಗ ೨೦೧೩ ರಲ್ಲಿ ಬೆಂಗಳೂರಿನ ಸಾಗರ ಪ್ರಕಾಶನದಿಂದ ಪುನರ್ ಮುದ್ರಣಗೊಂಡಿದೆ.

ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಮೈಸೂರಿನ ಮುಕ್ತ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಇತ್ತೀಚೆಗೆ ಇನ್ನೊಂದು ಮಹತ್ವದ ಅಧ್ಯಯನ ನಡೆದಿದೆ. ಡಾ. ಎಸ್. ಅನಸೂಯಾ ಅವರು ಡಾ. ಡಿ.ಟಿ.ಬಸವರಾಜ ಅವರ ಮಾರ್ಗದರ್ಶನದಲ್ಲಿ **'ಕನ್ನಡ ಜನಪದ ಕಥೆಗಳಲ್ಲಿ ಸ್ತ್ರೀ'** ಎಂಬ ವಿಷಯ ಕುರಿತು ಸಂಶೋಧನ ಅಧ್ಯಯನ ಮಾಡಿದ್ದಾರೆ. ಆ ಕೃತಿ ೨೦೧೧ರಲ್ಲಿ ಮುದ್ರಣಗೊಂಡಿದೆ. ಜನಪದ ಕಥೆಗಳ ಸಾಂಸ್ಕೃತಿಕ ಮಹತ್ವವನ್ನು ಹೇಳುವ ಇನ್ನೊಂದು ಪ್ರಯತ್ನವನ್ನು ನಾವಿಲ್ಲಿ ಕಾಣುತ್ತೇವೆ. ಸ್ತ್ರೀ ಎಂದಾಗ ಆಕೆಯ ಬಹುಮುಖ ವ್ಯಕ್ತಿತ್ವ ಮೊದಲು ಎದ್ದು ಕಾಣುತ್ತದೆ. ತಾಯಿ, ಮಲತಾಯಿ,

ಹೆಂಡತಿ, ಸವತಿ, ವಾರಗಿತ್ತಿ, ಸಹೋದರಿ ಈ ವ್ಯಕ್ತಿತ್ವಗಳಲ್ಲಿ ಮಹಿಳೆ ಹೇಗೆ ವರ್ತಿಸಿದ್ದಾಳೆ ಎಂದು ನೋಡುವ ಸಮೀಕ್ಷೆ ಇಲ್ಲಿದೆ. ಜೊತೆಗೆ ಅತ್ತಿಗೆ–ನಾದಿನಿ, ಅತ್ತಿಗೆ–ಮೈದುನ, ಅತ್ತೆ–ಸೊಸೆ ಈ ಸಂಬಂಧಗಳ ನಡುವಿನ ಸಾಮರಸ್ಯದ ಸಂಗತಿಗಳೂ ಇಲ್ಲಿ ಸಮೀಕ್ಷೆಗೆ ಒಳಪಟ್ಟಿವೆ. ಸ್ತ್ರೀಯ ವ್ಯಕ್ತಿತ್ವನ್ನು ಕುರಿತು ಅಧ್ಯಯನ ಮಾಡುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. ಕಥೆಗಳಲ್ಲಿ ಕಂಡುಬರುವಂತೆ ಆಕೆಯ ಸದ್ಗುಣಗಳು–ಪಾತಿವ್ರತ್ಯ, ಧೈರ್ಯ, ಜಾಣ್ಮೆ, ತ್ಯಾಗ, ತಾಳ್ಮೆ ಈ ಮುಂತಾದವುಗಳು; ದುರ್ಗುಣಗಳಾದ ಮತ್ಸರ, ಅಸೂಯೆ, ಈ ಮುಂತಾದ ಗುಣಗಳು ಯಾವ ಯಾವ ಸಂದರ್ಭಗಳಲ್ಲಿ ಒಂದು ಹೆಣ್ಣಿನಲ್ಲಿ ಕಾಣಿಸಿಕೊಳ್ಳುತ್ತವೆ ಎಂಬ ಸೂಕ್ಷ್ಮವಾದ ಅವಲೋಕನವೂ ಈ ಪ್ರಬಂಧದಲ್ಲಿದೆ. ಕೊನೆಯಲ್ಲಿ ಸಾಮಾಜಿಕ ವಿಧಿನಿಷೇಧಗಳು– ಜನನ, ಋತುಮತಿ, ಬಸುರಿ, ಬಾಣಂತಿ, ವೈಧವ್ಯ, ಸುಮಂಗಲಿ ವಸ್ತ್ರ ಒಡವೆಗಳನ್ನು ಧರಿಸಬಾರದು, ಮದುವೆ ಈ ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆ ಹೆಣ್ಣಿನ ಸುತ್ತಲಿರುವ ವಿಧಿನಿಷೇಧಗಳನ್ನು ವಿವರವಾಗಿ ಅಧ್ಯಯನ ಮಾಡಲಾಗಿದೆ. ಹೀಗೆ ಕೇವಲ ಸ್ತ್ರೀಯನ್ನೇ ಕೇಂದ್ರವಾಗಿಟ್ಟುಕೊಂಡು ಮಾಡಿದ ಜನಪದ ಕಥೆಗಳ ಅಧ್ಯಯನ ಇದಾಗಿ, ಸಹಜವಾಗಿಯೇ ಗಮನಸೆಳೆಯುತ್ತದೆ.

* * *

ಪ್ರಮುಖ ಜನಪದ ಕಥಾ ಸಂಗ್ರಹಗಳು

೧. ಮುದ್ರಣ ಮಾಧ್ಯಮದ ಮೂಲಕ ಪ್ರಸಾರಗೊಂಡ ಕಥೆಗಳು:

೧೯೪೯ : ನಾಳೀಜಂಘ, ಜಿ.ಪಿ.ರಾಜರತ್ನಂ, ಸಾಹಿತ್ಯ ಕುಟೀರ, ಬೆಂಗಳೂರು.

೧೯೫೧ : ಕಥಾಮೃತ, ಎ.ಆರ್. ಕೃಷ್ಣಶಾಸ್ತ್ರಿ, –ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು–೪

೧೯೫೭ : ಹಿಂದೂಸ್ಥಾನದ ಕಿರುಗತೆಗಳು, ಅನು. ಬಿ.ಎಸ್.ರಾಮಸ್ವಾಮಿ ಅಯ್ಯಂಗಾರ್, –ಎಸ್.ಎಸ್.ಎನ್.ಬುಕ್‌ಡಿಪೋ, ಸಿಟಿಮಾರ್ಕೆಟ್, ಬೆಂಗಳೂರು.

೨. ಬೌದ್ಧ ಮತ್ತು ಜೈನಧರ್ಮದ ಕಥೆಗಳು :

೧೯೫೧ : ದರ್ಶನದ ಕಥೆಗಳು, ಬಿ.ಶಂಕರ ಭಟ್ಟ ಮತ್ತು ಬಿ.ಎಂ.ಶರ್ಮಾ, –ವಿವೇಕಾಭ್ಯುದಯ ಕಾರ್ಯಾಲಯ, ವೀರಭವನ, ಮಂಗಳೂರು.

೧೯೭೩ : ಕರ್ಮ, ಅನು. ಜಿ.ಪಿ.ರಾಜರತ್ನಂ, –ವಿದೇಹ, ಮಲ್ಲೇಶ್ವರಂ, ಬೆಂಗಳೂರು.

೧೯೭೪ : ಆರು ಕೊಂಬಿನ ಆನೆ, ಜಿ.ಪಿ.ರಾಜರತ್ನಂ, ಸ್ಟ್ಯಾಂಡರ್ಡ್ ಬುಕ್‌ಡಿಪೋ, ಅವೆನ್ಯೂ ರೋಡ್, ಬೆಂಗಳೂರು–೨.

೧೯೭೯ : ಜಾತಕದ ಕತೆಗಳು, ಅಂಜಲೀಪಾಲ್, ಅನು. ಡಾ. ಶಿವರಾಮ ಕಾರಂತ, –ಐ.ಬಿ.ಎಚ್.ಪ್ರಕಾಶನ, ಬೆಂಗಳೂರು–೯.

೧೯೯೧-೧೯೯೭ : ಜಾತಕ ಮತ್ತು ಜಾತಕ ಕಥೆಗಳು, ೧-೬, ಅನು. ಶ್ರೀಮತಿ ರುಕ್ಮಿಣಿ ಗಿರಿಮಾಜಿ, -ಬುದ್ಧ ವಚನ ಟ್ರಸ್ಟ್, ಗಾಂಧೀನಗರ, ಬೆಂಗಳೂರು-೯

೨೦೦೪ : ಬುದ್ಧನ ಜಾತಕ ಕಥೆಗಳು(೧-೬), ಅನು. ಪ್ರೊ. ಬಿ.ನಂ.ಚಂದ್ರಯ್ಯ, -ವಿಶ್ವಮೈತ್ರಿ ಸಂಶೋಧನಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ(ರಿ), ನಂ.೩, ಬಿ.ಎಡ್.ಕಾಲೇಜ ಪೂರ್ವ, ಸರಸ್ವತಿಪುರಂ, ಮೈಸೂರು-೫೭೦ ೦೦೯.

೩. ಅನುವಾದಗೊಂಡು ಕನ್ನಡಕ್ಕೆ ಬಂದ ಭಾರತೀಯ ಜನಪದ ಕಥೆಗಳು :

೧೯೪೯ : ಕಾಶ್ಮೀರದ ಹಳ್ಳಿಯ ಕತೆಗಳು, ಸೋಮನಾಥ ಧಾರ್, ಸನು. ಜಿ.ಪಿ.ರಾಜರತ್ನಂ, -ಹಿಂದ್ ಕಿತಾಬ್ಸ್ ಲಿ.(ಬೊಂಬಾಯಿ), ಬೆಂಗಳೂರು-೩.

೧೯೬೭ : ಇಂಡಿಯಾದ ಜನಪದ ಕಥೆಗಳು (ಭಾಗ-೪), ಅನು. ಎಲ್ವಿನ್ ಪ್ರಿಯ, -ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫.

೧೯೭೯ : ಬಿತ್ತಿದ್ದನ್ನು ಬೆಳಕೋ, ಶಿವಶಹಾ ಚತುರ್ವೇದಿ, ಅನು. ಮ.ಗ.ಶೆಟ್ಟಿ, -ಮಹಿಳಾ ಕಾರ್ಮಿಕರ ಸಹಕಾರ ಸಂಘ, ಬೆಂಗಳೂರು-೧೯.

೧೯೭೯ : ಪಂಜಾಬಿನ ಲೋಕ ಕಥೆಗಳು, (ಸಂ) ಹರ್‌ಭಜನ್ ಸಿಂಗ, ಅನು.ಎಚ್.ಎಸ್.ಪಾರ್ವತಿ, -ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸದೆಹಲಿ.

೨೦೦೦ : ಭಾರತೀಯ ಜನಪದ ಕತೆಗಳು, (೨೨ ಭಾಷೆಗಳಿಂದಾಯ್ದ ಕಥೆಗಳು), (ಸಂ) ಎ.ಕೆ.ರಾಮಾನುಜನ್, ಅನು. ಮಹಾಬಲೇಶ್ವರ ರಾವ್, -ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸದೆಹಲಿ.

೨೦೦೩ : ಕಥೆ ಮತ್ತು ಹಾಡು, (ಸಂ) ಎ.ಕೆ.ರಾಮಾನುಜನ್, ಅನು. ಡಾ. ಕರೀಗೌಡ ಬೀಚನಹಳ್ಳಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಜಿ. ಬಳ್ಳಾರಿ.

೪. ಕನ್ನಡಕ್ಕೆ ಅನುವಾದಗೊಂಡು ಬಂದ ಹೊರದೇಶದ ಜನಪದ ಕಥೆಗಳು :

೧೯೪೬ : ಪಂಡಿತನ ನೆರಳು ಮತ್ತು ಇತರ ಕತೆಗಳು, (ಅನು) ಜಿ.ಪಿ.ರಾಜರತ್ನಂ, -ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೪೭ : ಮಂಜಿನಮಣಿ, ಅನು. ಎಂ.ರಾಮರಾವ, -ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೪೭ : ಚಿಪ್ಪಿಗನ ಸಾಹಸ, ಅನು. ಎಂ.ರಾಮರಾವ, -ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೪೭ : ಜೀವರಸ, ಅನು. ಎಂ.ರಾಮರಾವ, -ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೪೯ : ನಾಗಕನ್ನಿಕೆ ಮತ್ತು ಇತರ ಕಥೆಗಳು, ಅನು. ಎಂ.ರಾಮರಾವ, -ಎಸ್.ಎಸ್.ಎನ್. ಬುಕ್ ಡಿಪೊ, ನ್ಯೂ ಮಾರ್ಕೆಟ್, ಬೆಂಗಳೂರು.

೧೯೪೯ : ಜಲದೇವತೆ, ಅನು. ಎಂ.ರಾಮರಾವ, -ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೫೦ : ಸೇವಕರತ್ನ, ಅನು. ಎಂ.ರಾಮರಾವ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೫೧ : ಶಕ್ತಿಪುರುಷ, ಅನು. ಎಂ.ರಾಮರಾವ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೫೩ : ಮನಮಂದಿರ, ಅನು. ಎಂ.ರಾಮರಾವ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೫೬ : ಎಲ್ಲೂ ಇಲ್ಲದ ಊರು, ಅನು. ಎಂ.ರಾಮರಾವ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೬೦ : ನೀಲಿಯ ದೀಪ, ಅನು. ಎಂ.ರಾಮರಾವ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೬೦ : ಚಿಕ್ಕಮಕ್ಕಳ ಏಸಾಪ್, ಜಿ.ಪಿ.ರಾಜರತ್ನಂ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೬೫ : ಗಾಜಿನ ಚೆಂಡು, ಅನು. ಎಂ.ರಾಮರಾವ, –ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು.

೧೯೭೩ : ಜಗತ್ತಿನ ಜನಪದ ಕಥೆಗಳು, ಅನು. ಹ.ಕ.ರಾಜೇಗೌಡ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೧೯೭೯ : ಚಿನ್ನದ ಕಳಶ, ಅನು. ರಾ. ಲಕ್ಷ್ಮೀ ನಾರಾಯಣ, –ಗಿರೀಶ ಪ್ರಕಾಶನ, ಹೊಸಮನೆ ರಸ್ತೆ, ಚಿಕ್ಕಮಗಳೂರು.

೧೯೮೨ : ಸುವರ್ಣ ಪಕ್ಷಿ, ಅನು. ಶ್ರೀಮತಿ ವನಮಾಲಾ ಆಚಾರ, –ಲಿಪಿ ಪ್ರಕಾಶನ, ಬೆಂಗಳೂರು–೪.

೧೯೮೮ : ಉಕ್ರೈನಿನ ಜಾನಪದ ಕಥೆಗಳು, ಅನು. ಕೆ.ಎಲ್. ಗೋಪಾಲಕೃಷ್ಣರಾವ, –ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು.

೫. ಇತರ ಕೃತಿಗಳಲ್ಲಿ ಕನ್ನಡ ಜನಪದ ಕಥೆಗಳ ಪ್ರಕಟನೆ :

1816 : 'Hindu manners, Customs and Ceremonies', Abbe dubois

Old Deccan days, Mary Frere

೧೯೩೫ : ಕರ್ನಾಟಕ ಸಂಸ್ಕೃತಿ, ದೇವುಡು, – ಶಾರದಾ ಪ್ರಕಾಶನ, ಗಾಂಧಿ ನಗರ, ಬೆಂಗಳೂರು–೧೯

೬. ಪ್ರಾರಂಭದ ಪ್ರಮುಖ ಕನ್ನಡ ಜನಪದ ಕಥೆಗಳ ಸಂಗ್ರಹಗಳು :

೧೯೬೭ : ಜಾನಪದ ಕಥಾಮೃತ (ಸಂಪುಟ–೧), (ಸಂ) ಧವಳಶ್ರೀ, –ಪದ್ಮಶ್ರೀ ಪ್ರಕಾಶನ, ದೊಡ್ಡಬೆಲೆ, ಜಿ. ಬೆಂಗಳೂರು.

೧೯೬೮ : ಜಾನಪದ ಕಥಾಮೃತ (ಸಂಪುಟ-೨), (ಸಂ) ಧವಳಶ್ರೀ,
-ಪದ್ಮಶ್ರೀ ಪ್ರಕಾಶನ, ದೊಡ್ಡಬೆಲೆ, ಜಿ. ಬೆಂಗಳೂರು.
೧೯೬೯ : ಮಣ್ಣಿನ ಮಿಡಿತ, (ಸಂ) ಡಿ. ಲಿಂಗಯ್ಯ,
-ಸಾಹಿತ್ಯ ಪ್ರಕಾಶನ, ಪೀಹಳ್ಳಿ, ಜಿ. ಮಂಡ್ಯ.
೧೯೬೯ : ಕರ್ನಾಟಕದ ಜಾನಪದ ಕಥೆಗಳು, (ಸಂ) ರಾಗೌ,
-ತ.ವೆಂ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು-೪.
೧೯೭೦ : ಕನ್ನಡ ಜನಪದ ಕಥೆಗಳು, (ಸಂ) ಜೀ.ಶಂ.ಪರಮಶಿವಯ್ಯ,
-ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೧೯೭೦ : ಆಯ್ದ ಜನಪದ ಕಥೆಗಳು, (ಸಂ) ಜೀ.ಶಂ.ಪರಮಶಿವಯ್ಯ,
-ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೧೯೭೧ : ಪಡಿನೆರಳು, (ಸಂ) ಡಿ. ಲಿಂಗಯ್ಯ, -ಕನ್ನಡ ಕಲಾ ಸಂಘ(ರಿ),ಶಿಡ್ಲಘಟ್ಟ.

೭. ಒಬ್ಬ ವಕ್ತಾರ ಹೇಳಿದ ಜನಪದ ಕಥೆಗಳ ಸಂಗ್ರಹಗಳು :

೧೯೬೭ : ಜಾನಪದ ಕಥಾಮೃತ(ಸಂ.೧), (ಸಂ) ಧವಳಶ್ರೀ(ಎಂ.ಎ.ಜಯಚಂದ್ರ),
-ಪದ್ಮಶ್ರೀ ಪ್ರಕಾಶನ, ದೊಡ್ಡಬೆಲೆ, ತುಮಕೂರು ಜಿಲ್ಲೆ.
೧೯೭೪ : ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕಥೆಗಳು, (ಸಂ) ಸಿ.ವೀರಣ್ಣ,
-ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
೧೯೭೪ : ಸಂಕೀರ್ಣ ಜನಪದ ಕಥೆಗಳು, (ಸಂ) ತೀ.ನಂ. ಶಂಕರನಾರಾಯಣ,
-ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೯೭೫ : ಎಪ್ಪತ್ತೊಂದು ಜನಪದ ಕಥೆಗಳು, (ಸಂ) ಕೆ.ವೈ.ಶಿವಕುಮಾರ್,
-ಅರುಣ ಪ್ರಕಾಶನ, ಕೃಷ್ಣರಾಜನಗರ, ಜಿ. ಮೈಸೂರು.
೧೯೭೮ : ಲೀಲಾವತಿ-ಪದ್ಮಾವತಿ, (ಸಂ) ಕೃಷ್ಣಮೂರ್ತಿ ಹನೂರು,
-ಚಿತ್ರದುರ್ಗ ಜಿಲ್ಲಾ ಜನಪದ ಸಾಹಿತ್ಯ ಪ್ರಕಟನಾ ಸಮಿತಿ, ಚಿತ್ರದುರ್ಗ.
೧೯೭೮ : ಕರಾವಳಿಯ ಕಥೆಗಳು, (ಸಂ) ಡಾ. ಎಲ್. ಆರ್. ಹೆಗಡೆ,
-ಜ್ಞಾನಸಾಧನ ಗ್ರಂಥಮಾಲೆ, ಕುಮಟಾ, ಉತ್ತರ ಕನ್ನಡ.
೧೯೭೯ : ನೂರೊಂದು ಗಿಳಿ ಮತ್ತು ಇತರ ಕತೆಗಳು, (ಸಂ) ಡಿ.ಕೆ.ಈರೇಗೌಡ,
-ಕಾದಂಬರಿ ಲೋಕ, ಸರಸ್ವತಿಪುರಂ, ಮೈಸೂರು-೯.
೧೯೮೬ : ಕಲಬರಹಳ್ಳಿಯ ಕತೆಗಳು, (ಸಂ) ಕಲಮರಹಳ್ಳಿ ಮಲ್ಲಿಕಾರ್ಜುನ,
-ಚಿನ್ಮಯ ಪ್ರಕಾಶನ, ಚಿತ್ರದುರ್ಗ.
೧೯೯೩ : ಬಂಗಾರ ಕೂದಲಿನ ಜೈರಾಣಿ, (ಸಂ) ಡಾ. ಎಂ.ಜಿ.ಈಶ್ವರಪ್ಪ,
-ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
೧೯೯೯ : ಸುಮ್ ಸುಮ್ಕೆ ಬಸಯ್ಯ, (ಸಂ) ಜೀನಹಳ್ಳಿ ಸಿದ್ದಲಿಂಗಪ್ಪ, -ಪ್ರೇಮ ಪ್ರಕಾಶನ, ಜೀನಹಳ್ಳಿ, ಜಿ. ದಾವಣಗೆರೆ.

೨೦೦೦ : ಚಲವಾದಿ ಗೌರಮ್ಮನ ಕಥೆಗಳು, (ಸಂ) ಶ್ರೀಮತಿ ಸರೋಜನಿ ಆಯ್. ಪಾವಟೆ, -ಶ್ರೀ ಐ.ಎಸ್.ಪಾವಟೆ ಪ್ರಕಾಶನ, ಬಾಗಲಕೋಟ.

೮. ಒಗಟು ಮತ್ತು ಗಾದೆಗಳ ಜನಪದ ಕಥೆಗಳ ಸಂಗ್ರಹಗಳು :

೧೯೮೯ : ಜನಪದ ಒಗಟು ಕಥೆಗಳು, (ಸಂ) ಕುರುವ ಬಸವರಾಜ, -ಅಂತರಂಗ ಪ್ರಕಾಶನ, ಕುರುವ, ತಾ. ಹೊನ್ನಾಳಿ, ಜಿ. ಶಿವಮೊಗ್ಗ.

೧೯೯೪ : ಗಾದೆಯ ಕಥೆಗಳು, (ಸಂ) ಕೆ. ಕೃಷ್ಣಪ್ಪ ರೆಡ್ಡಿ, -ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೦೦೨ : ಜನಪದ ಒಗಟು ಮತ್ತು ಗಾದೆಯ ಕಥೆಗಳು, (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ, -ಶೃತಿ ಪ್ರಕಾಶನ, ಜೀನಹಳ್ಳಿ, ತಾ. ಹೊನ್ನಾಳಿ, ಜಿ. ಶಿವಮೊಗ್ಗ.

೨೦೦೬ : ಪುರುಷನ ಪುಣ್ಯ ನಾರೀ ಭಾಗ್ಯ, (ಸಂ) ಡಾ. ಪಿ.ಕೆ.ರಾಜಶೇಖರ,- ಹೊನ್ನಾರು ಜನಪದ ಗಾಯಕರು, ಜಯನಗರ, ಮೈಸೂರು.

೯. ಆರಾಧನಾ ಜನಪದ ಕಥೆಗಳು :

೧೯೭೦ : ಭೂತಾರಾಧನೆಯ ಕತೆಗಳು, (ಸಂ) ಸೇವ ನಮಿರಾಜಮಲ್ಲ, -ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೨ : ಗೊಂದಲಿಗರ ಕಥೆಗಳು, (ಸಂ) ಕ್ಯಾತನಹಳ್ಳಿ ರಾಮಣ್ಣ, -ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೩ : ಲಕ್ಷಾಪತಿ ರಾಜನ ಕಥೆ, (ಸಂ) ಚಂದ್ರಶೇಖರ ಕಂಬಾರ, ನೆರವು: ಮುದೇನೂರು ಸಂಗಣ್ಣ, -ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯೭೫ : ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು, (ಸಂ) ಕ್ಯಾತನಹಳ್ಳಿ ರಾಮಣ್ಣ, -ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೮೩ : ಮಲೆನಾಡ ಸೆರಗಿನ ಕಥೆಗಳು, (ಸಂ) ಎಲ್.ಆರ್.ಹೆಗಡೆ, - ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೦. ಒಂದು ಜನಾಂಗದ ಜನಪದ ಕಥೆಗಳು :

೧೯೭೮ : ಸಿದ್ದಿಯರ ಕಥೆಗಳು, (ಸಂ) ಎಲ್.ಆರ್.ಹೆಗಡೆ, - ಜ್ಞಾನಸಾಧನ ಗ್ರಂಥಮಾಲೆ, ಕುಮಟಾ (ಉ.ಕ).

೧೯೮೧ : ಉತ್ತರ ಕನ್ನಡದ ಹವ್ಯಕರ ಜನಪದ ಕಥೆಗಳು, (ಸಂ) ಡಾ. ಶಾಂತಿ ನಾಯಕ -ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೮೧ : ಬೆಳವಲ ಬೆಳಕು, (ಸಂ) ಜಿ.ಬಿ.ಖಾಡೆ, -ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೯೪ : ಲಂಬಾಣಿ ಜನಪದ ಕತೆಗಳು, (ಸಂ) ಸೋಮಣ್ಣ ಹೊಂಗಳ್ಳಿ –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೦೦೧ : ನಮ್ಮ ಮುಸ್ಲಿಂ ಹಿನ್ನೆಲೆಯ ಜನಪದ ಕತೆಗಳು, (ಸಂ) ಡಾ. ಎಂ. ಎಸ್. ಶೇಖರ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೧. ಕರ್ನಾಟಕದ ಪ್ರಾತಿನಿಧಿಕ ಜನಪದ ಕಥೆಗಳ ಸಂಗ್ರಹಗಳು :

೧೯೭೨ : ಉತ್ತರ ಕರ್ನಾಟಕದ ಜನಪದ ಕಥೆಗಳು, (ಸಂ) ಸಿಂಪಿ ಲಿಂಗಣ್ಣ,– ಸಾಹಿತ್ಯ ಅಕಾಡೆಮಿ, ಹೊಸದೆಹಲಿ.

೧೯೭೭ : ಕರ್ನಾಟಕ ಜನಪದ ಕಥೆಗಳು, (ಸಂ) ಎಚ್.ಎಲ್. ನಾಗೇಗೌಡ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೭೯ : ದಕ್ಷಿಣ ಕರ್ನಾಟಕದ ಜನಪದ ಕಥೆಗಳು, ಸಂ) ಜೀ. ಶಂ. ಪರಮಶಿವಯ್ಯ –ಸಾಹಿತ್ಯ ಅಕಾಡೆಮಿ, ಹೊಸದೆಹಲಿ.

೧೯೮೭ : ಜನಪದ ನೂರೆಂಟು ಕಥೆಗಳು, (ಸಂ) ಬಿರಾದಾರ ಎಂ.ಜಿ., ಲಠ್ಠೆ ಎಂ.ಎಸ್., ಹೆಂಡಿ ಬಿ.ಬಿ., ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೨. ಜಿಲ್ಲಾ ಜನಪದ ಕಥೆಗಳ ಸಂಗ್ರಹಗಳು :

೧೯೭೩ : ಬೆಳಗಾಂ ಜಿಲ್ಲೆಯ ಜನಪದ ಕಥೆಗಳು, (ಸಂ) ಟಿ.ಎಸ್.ರಾಜಪ್ಪ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೪ : ಧಾರವಾಡ ಜಿಲ್ಲೆಯ ಜನಪದ ಕಥೆಗಳು, (ಸಂ) ಟಿ.ಎಸ್.ರಾಜಪ್ಪ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೬ : ರಾಯಚೂರು ಜಿಲ್ಲೆಯ ಜನಪದ ಕಥೆಗಳು, (ಸಂ) ಟಿ.ಎಸ್.ರಾಜಪ್ಪ, – ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೬ : ಬೀದರ ಜಿಲ್ಲೆಯ ಜನಪದ ಕಥೆಗಳು, (ಸಂ) ಕ್ಯಾತನಹಳ್ಳಿ ರಾಮಣ್ಣ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೬ : ನಮ್ಮ ಜನಪದ ಕಥೆಗಳು, (ಸಂ) ಡಾ. ಎಲ್.ಆರ್.ಹೆಗಡೆ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೬ : ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು, (ಸಂ) ಎ. ಹಿರಿಯಣ್ಣ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೯ : ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು, (ಸಂ) ಟಿ.ಎಸ್.ರಾಜಪ್ಪ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೯ : ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು, (ಸಂ) ಬಸವರಾಜ ಮಲಶೆಟ್ಟಿ, – ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೮೦ : ಹಾಸನ ಜಿಲ್ಲೆಯ ಜನಪದ ಕಥೆಗಳು, (ಸಂ) ಎಚ್.ಎಸ್.ರಾಮಚಂದ್ರೇಗೌಡ, –ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೦೧೧ : ಆಯ್ದ ಜನಪದ ಕಥೆಗಳು, (ಸಂ) ಡಾ. ವೀರಣ್ಣ ದಂಡೆ, –ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೩. ಒಂದೂರಿನ ಜನಪದ ಕಥೆಗಳ ಸಂಗ್ರಹಗಳು :

೧೯೭೧ : ದಾಳಿಂಬೆ ರಾಣಿ ಮತ್ತು ಇತರ ಕತೆಗಳು, (ಸಂ) ಟಿ.ಎಸ್. ರಾಜಪ್ಪ, –ಜಾನಪದ ಬಳಗ, ಮಾನಸ ಗಂಗೋತ್ರಿ, ಮೈಸೂರು.

೧೯೭೨ : ನಾಗೇಂದ್ರ ಮತ್ತು ಇತರ ಕಥೆಗಳು, (ಸಂ) ಕೆ.ವೈ.ಶಿವಕುಮಾರ್, –ಅರುಣ ಪ್ರಕಾಶನ, ಕೃಷ್ಣರಾಜನಗರ, ಜಿ. ಮೈಸೂರು.

೧೯೭೫ : ನಮ್ಮೂರಿನ ಜನಪದ ಕಥೆಗಳು, (ಸಂ) ದೊನಾರಾ, –ತಂ.ವೆಂ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು–೪.

೧೯೭೮ : ನಮ್ಮ ಹಳ್ಳಿಯ ಜನಪದ ಕಥೆಗಳು, (ಸಂ) ನಗುವನಹಳ್ಳಿ ಪಿ.ರತ್ನ, –ಪ್ರಶಾಂತಿ ಪ್ರಕಾಶನ, ಯಾದವಗಿರಿ, ಮೈಸೂರು–೨.

೧೯೭೯ : ಬೆಳೆಯೋ ಬೆಳೆಯೋ ವಾಲೆಮರವೆ, (ಸಂ) ಪುನರ್ವಸು, –ಕಾದಂಬರಿಲೋಕ, ಸರಸ್ವತಿಪುರಂ, ಮೈಸೂರು–೯.

೧೯೮೧ : ಕಥೆ ಕೇಳೇ ಗುಬಲಾಡಿ, (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪಮಹಾಕವಿ ರಸ್ತೆ, ಬೆಂಗಳೂರು.

೧೯೮೧ : ಗುಲಗಂಜಿ ಮಾದೇವಿ, (ಸಂ) ಕುರುವ ಬಸವರಾಜ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪಮಹಾಕವಿ ರಸ್ತೆ, ಬೆಂಗಳೂರು.

೧೯೮೩ : ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು, (ಸಂ) ಜಿ. ವಿಶ್ವೇಶ್ವರಪ್ಪ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೮೯ : ಇಬ್ಬೀಡಿನ ಜನಪದ ಕತೆಗಳು, (ಸಂ) ವೈಸಿ.ಭಾನುಮತಿ,–ಕೇಶವ ಪ್ರಕಾಶನ, ಮೈಸೂರು–೨೩.

೧೦೮೯ : ಮೇಲುಕೋಟೆ ಸುತ್ತಿನ ಜನಪದ ಕಥೆಗಳು, (ಸಂ) ನರಸಿಂಹೇಗೌಡ ನಾರಣಾಪುರ, –ಹೊಂಗಿರಣ ಪ್ರಕಾಶನ, ರಾಬರ್ಟ್‌ಸನ್‌ಪೇಟೆ, ಕೋಲಾರ ಚಿನ್ನದ ಗಣಿ–೫೬೩ ೧೨೨.

೧೪. ಹಲವು ಪ್ರದೇಶ, ಹಲವು ವಕ್ತಾರರಿಂದ ಸಂಗ್ರಹಿಸಿದ ಕೃತಿಗಳು :

೧೯೭೧ : ಜನಪದ ಕಥಾವಳಿ, (ಸಂ) ಎಚ್.ಜೆ.ಲಕ್ಕಪ್ಪಗೌಡ, –ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು.

೧೯೭೭ : ೧೧೫ ಜಾನಪದ ಕಿರುಕತೆಗಳು, (ಸಂ) ಎಂ.ಎ. ಜಯಚಂದ್ರ, –ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯೮೧ : ಸಂಸಾರಿ ಹೆಚ್ಚೋ ಸಂನ್ಯಾಸಿ ಹೆಚ್ಚೋ, (ಸಂ) ಎಂ.ಎ. ಜಯಚಂದ್ರ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೮೧ : ಮೂವತ್ತು ಜನಪದ ಕಥೆಗಳು, (ಸಂ) ಡಾ. ಕೆ.ಆರ್.ಸಂಧ್ಯಾರೆಡ್ಡಿ –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೮೧ : ಐವರು ಹೇಳಿದ ಜಾನಪದ ಕಥೆಗಳು, (ಸಂ) ತರೀಕೆರೆ ರಹಮತ್, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೮೫ : ಅಡವಿಗುಮಾರ ಮತ್ತು ಇತರ ಜನಪದ ಕಥೆಗಳು, (ಸಂ) ಮೈಲಹಳ್ಳಿ ರೇವಣ್ಣ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೯೩ : ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳು, (ಸಂ) ಡಾ. ಡಿ.ಕೆ.ರಾಜೇಂದ್ರ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೦೦೪ : ಮಲೆನಾಡಿನ ಜನಪದ ಕಥೆಗಳು, (ಸಂ) ಡಾ. ಬಸವರಾಜ ನೆಲ್ಲಿಸರ, –ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.

೨೦೦೮ : ಕನ್ನಡ ಜನಪದ ಕಥೆಗಳು, (ಸಂ) ನಾಡೋಜ ಎಚ್.ಎಲ್.ನಾಗೇಗೌಡ, –ಕರ್ನಾಟಕ ಜಾನಪದ ಪರಿಷತ್ತು, ನಂ ೧, ಕರ್ನಾಟಕ ಸರ್ಕಾರಿ ನೌಕರರ ವಸತಿ ಬಡಾವಣೆ, ಎಂ.ಎಸ್.ರಾಮಯ್ಯ ಆಸ್ಪತ್ರೆ ಎದುರು, ಬೆಂಗಳೂರು–೫೪.

೧೫. ಕನ್ನಡ ಜನಪದ ಕಥೆಗಳ ಅಧ್ಯಯನ–ಸಂಶೋಧನೆ :

೧೯೮೨ : ಕನ್ನಡ ಜನಪದ ಕಥೆಗಳು, ಡಾ. ಕೆ. ಆರ್. ಸಂಧ್ಯಾರೆಡ್ಡಿ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೧೯೮೭ : ಕಲಬುರ್ಗಿ ಜಿಲ್ಲೆಯ ಕಥೆಗಳ ಮಾದರಿ ಸೂಚಿ, ಡಾ. ವೀರಣ್ಣ ದಂಡೆ, –ಮೂಡಲ ಪ್ರಕಾಶನ, ಬ್ರಹ್ಮಪುರ, ಕಲಬುರ್ಗಿ,

೧೯೯೮ : ಕನ್ನಡ ಜನಪದ ಕಥಾವರ್ಗಗಳು, ಡಾ. ಹಿ.ಶಿ.ರಾಮಚಂದ್ರೇಗೌಡ, –ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೦೦೩ : ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು, ಡಾ. ವೀರಣ್ಣ ದಂಡೆ, –ಸಿ.ವಿ.ಜಿ.ಪ್ರಕಾಶನ, ಬೆಂಗಳೂರು.

೨೦೧೧ : ಕನ್ನಡ ಜನಪದ ಕಥೆಗಳಲ್ಲಿ ಸ್ತ್ರೀ, ಡಾ. ಎಸ್. ಅನಸೂಯ, –ಬನಶಂಕರಿ ಪ್ರಿಂಟರ್ಸ್, ರಾಘವೇಂದ್ರ ನಗರ, ಮೈಸೂರು–೧೧.

೧೬. ಸಹಾಯಕ ಗ್ರಂಥಗಳು :

1927 : Aarne Antti. Stith Thompson: Type of the Folktales, FFC. No. 74.

1930 : Boggs Ralphs: Index of Spanish Folktales, FFC, No. 90.

1955-58 : Thompson Stith: Motif Index of Folkliterature (6 Vols.) FFC No. 106-109, Indianan Univ. Press, Bloomington, USA, 1932-36.

1958 : Thompson S. & Jonas Balys: Motif index of the oral tales of India, - Bloomington, Indiana.

1960 : Thompson & W.E. Robert: Types of Indic oral tales, FFC, No. 184.

1967 : Thompson Stith: The Folktale, Holt, Rinehart, and Winston, Newyork, Chicago, San Francisco, Toronto, London.

೧೯೭೬ : ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ, ಡಾ. ವರದರಾಜ ಹುಯಿಲಗೋಳ,- ಸಾಹಿತ್ಯ ಭಂಡಾರ, ಹುಬ್ಬಳ್ಳಿ-೨೦.

* * *

೨. ಐತಿಹ್ಯಗಳು :

ಕನ್ನಡದಲ್ಲಿ ಐತಿಹ್ಯಗಳಿಗೆ ಸಂಬಂಧಿಸಿದಂತೆ ಕೆಲಸ ನಡೆದಿರುವುದು ತೀರ ಕಡಿಮೆ. ಅದರಲ್ಲೂ ಆಧುನಿಕ ಜಾನಪದಶಾಸ್ತ್ರ ವಿದ್ವಾಂಸರಿಂದ ಐತಿಹ್ಯಗಳ ಬಗ್ಗೆ ನಡೆದ ಕೆಲಸ ತೀರ ಅಲ್ಪ. ಅದರಲ್ಲೂ ಪುರಾಣ ಕಥೆಗಳಿಗೆ ಸಂಬಂಧಿಸಿದಂತೆ ಒಂದು ಸಣ್ಣ ಸಂಗ್ರಹ ಕೂಡ ಪ್ರಕಟವಾಗಿಲ್ಲದಿರುವುದು ನಿರಾಶೆಯನ್ನುಂಟು ಮಾಡುತ್ತದೆ.

೧೯೩೬ರಲ್ಲಿ ಪ್ರಕಟವಾದ **'ಕೋಲಾರ ನಾಡೂ–ಕತೆಗಳೂ'** ಎಂಬ ಒಂದು ಕೃತಿಯಲ್ಲಿ ಮು. ವೆಂಕಟಕೃಷ್ಣಪ್ಪ ಕೋಲಾರ ನಾಡನ್ನು ಪರಿಚಯ ಮಾಡುವುದರೊಂದಿಗೆ ಸುಮಾರು ೨೨ ಐತಿಹ್ಯಗಳನ್ನು ಅವರು ಸಂಗ್ರಹಿಸಿ ಕೊಟ್ಟಿರುವುದು ಒಂದು ಅಪರೂಪದ ಕೆಲಸವೇ ಆಗಿದೆ. ವೆಂಕಟಕೃಷ್ಣಪ್ಪ ಅವರು ತಮ್ಮ ಮಾತುಗಳಲ್ಲಿ ಹೀಗೆ ಬರೆದುಕೊಂಡಿದ್ದಾರೆ : 'ಕೋಲಾರ ನಾಡಿನ ಹೆಚ್ಚು ಪರಿಚಯವಿಲ್ಲದ ಅಣ್ಣತಮ್ಮಂದಿರುಗಳ ಉಪಯೋಗಕ್ಕೆಂದು ಈ ಸಣ್ಣ ಪುಸ್ತಕವು ಸಿದ್ಧವಾಗಿದೆ. ಇದರ ಮೂಲಕ ಈ ನಾಡಿನ ಲಘುಪರಿಚಯವಾಗಿ, ಅದರಿಂದ ಹಿಂದು–ಇಂದು–ಮುಂದಿನ ವಿಷಯಗಳಲ್ಲಿ ಅಭಿಮಾನ, ಶ್ರದ್ಧೆ, ಸಾಹಸಗಳು ನಾಡುಗರಲ್ಲಿ ಪ್ರಜ್ವಲಿಸಿ, ಲೇಖಕನು ಧನ್ಯತೆ ಹೊಂದುವನೆಂಬ ಆಸೆಯಿದೆ' (ಎರಡುಮಾತು). ಒಂದು ನಾಡು ಪರಿಚಯವಾಗಬೇಕಾದುದು ಆ ನಾಡಿನಲ್ಲಿ ಇರುವ ಐತಿಹ್ಯಗಳಿಂದ ಎಂಬ ಮಾತು ಇಲ್ಲಿ ಮುಖ್ಯ. ಆದರೆ ೧೯೩೬ರಲ್ಲಿ ಆಡಿದ ಈ ಮಾತಿನ ಪ್ರಯೋಜನ ಇಂದಿನವರೆಗೂ ಕನ್ನಡನಾಡಿನಲ್ಲಿ ಆಗಿಲ್ಲ ಎಂಬುದು ವಿಶಾದದ ಸಂಗತಿ.

೧೯೭೬ರಲ್ಲಿ ಇನ್ನೊಂದು ಐತಿಹ್ಯಗಳ ಸಂಗ್ರಹ **'ಕೆಚ್ಚಿನ ಕಿಡಿಗಳು'** ಪ್ರಕಟವಾಗಿದೆ. ಬೇಕಲ ರಾಮನಾಯಕ ಎನ್ನುವವರು ಈಗ ಕರ್ನಾಟಕದ ಕೈತಪ್ಪಿ ಹೋಗಿರುವ ಕಾಸರಗೋಡಿನಿಂದ ಇಲ್ಲಿಯ ಐತಿಹ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಕೃತಿ ಪ್ರಕಟವಾಗಿರುವುದು ಕೂಡ ಕಾಸರಗೋಡಿನ ಗೀತಾ ಪ್ರಕಾಶನದಿಂದ. ಇದರಲ್ಲಿ ವೀರತನಕ್ಕೆ ಸಂಬಂಧಿಸಿದ ೧೮ ಐತಿಹ್ಯಗಳಿವೆ. ಅಂದರೆ ಇವೆಲ್ಲ ಐತಿಹಾಸಿಕ ಸಂಗತಿಗಳನ್ನು ಕುರಿತ ಐತಿಹ್ಯಗಳಾಗಿರುವದು ಸ್ಪಷ್ಟ. ಬೇಕಲ್ ರಾಮನಾಯಕ ಅವರು ಹೀಗೆ ಬರೆದುಕೊಂಡಿದ್ದಾರೆ: 'ನಮ್ಮ ನಾಡಿನಲ್ಲಿ ಮಾಸ್ತಿಕಲ್ಲು, ವೀರಗಲ್ಲು, ಶಾಸನಕಲ್ಲು, ಕೋಟೆ, ಬುರುಜು, ಗೆಲ್ಗಂಬಗಳು ಕಾಣಿಸದ ಎಡೆಯಿಲ್ಲ. ಈ ಒಂದೊಂದು ಕಲ್ಲೂ ಒಂದೊಂದು ಕಥೆಯನ್ನೋ, ಐತಿಹ್ಯವನ್ನೋ ಹೇಳಿ ಹೇಳಿ ಸವೆಯುತ್ತ ಬಂದಿದೆ. ಆದರೆ ಅದನ್ನು ಕಾಣುವ ಕಣ್ಣುಬೇಕು. ಕೇಳುವ ಕಿವಿ ಬೇಕು. ಇತಿಹಾಸಕ್ಕೆ ಸಾಮಾನ್ಯ ಜನವನ್ನು ಕಾಣುವ ಕಣ್ಣಿಲ್ಲ. ಇತಿಹಾಸದ ಪುಟದಲ್ಲಿ ಕಾಣುದಂಥ ಎಷ್ಟೋ ಚಾರಿತ್ರಿಕಾಂಶಗಳು ಜನದ ಹೃದಯ ಪುಟದಲ್ಲಿ ಉಳಿದುಕೊಂಡಿವೆ. ಅವಕ್ಕೆ ಈ ಕಲ್ಲು, ಕಂಬಗಳು ಸಾಕ್ಷಿ ನುಡಿಯುತ್ತವೆ. ಇವನ್ನು ತಿಳಿದು ಉಳಿಸಿಕೊಳ್ಳುವುದು, ಬಳಸಿ ಬೆಳಸಿಕೊಳ್ಳುವುದು ನಮ್ಮ ಕರ್ತವ್ಯ. ಆ ದಾರಿಯಲ್ಲಿ

ನಡೆದು ಹಳ್ಳಿಯ ಹಾಡುಗಳಿಂದಲೂ ಹಿರಿಯರ ಹೇಳಿಕೆಗಳಿಂದಲೂ ಎತ್ತಿಕೊಂಡ ಹಲವು ಹದಿನೆಂಟು ಕಿಡಿಗಳೇ ಈ **'ಕೆಚ್ಚಿನ ಕಿಡಿಗಳು'** (ಮ.ಶಿ).

ಬೇಕಲ ರಾಮನಾಯಕ ಅವರ ಮತ್ತೊಂದು ಐತಿಹ್ಯಗಳ ಸಂಗ್ರಹ **'ತೆಂಕನಾಡ ಐತಿಹ್ಯಗಳು'**. ಮತ್ತದೆ ಕಾಸರಗೋಡಿನ ಗೀತಾಪ್ರಕಾಶನದವರೇ ಇದನ್ನು ೧೯೬೯ರಲ್ಲಿ ಪ್ರಕಟಿಸಿದ್ದಾರೆ. ಮೊದಲಿನಂತೆ ಇಲ್ಲೂ ನಾಡಿನ ಪ್ರಸಿದ್ಧ ಹೋರಾಟಗಾರರ ಕುರಿತ ಐತಿಹ್ಯಗಳನ್ನೇ ಕೂಡಿಹಾಕಿದ್ದಾರೆ. ಅವರ ಉದ್ದೇಶ ಕಾಸರಗೋಡಿನ ವೀರಕನ್ನಡಿಗರ ಇತಿಹಾಸವನ್ನು ಪ್ರಕಟಿಸಬೇಕು ಎಂಬುದಾಗಿದೆ. ಈ ವೀರತನ ಕನ್ನಡಿಗರಲ್ಲಿ ನಿರಂತರವಾಗಿ ಕಾಣಿಸಿಕೊಂಡು ಒಂದಿಲ್ಲ ಒಂದುದಿನ ಕಾಸರಗೋಡನ್ನು ಕನ್ನಡನಾಡಿಗೆ ಸೇರ್ಪಡೆಗೊಳಿಸುವ ಕೆಲಸವನ್ನು ಅವರು ಮಾಡಲಿ ಎಂಬ ಹಂಬಲ ಲೇಖಕರಲ್ಲಿ ಮತ್ತು ಪ್ರಕಾಶಕರಲ್ಲಿ ತುಂಬಿದೆ. ರಾಮನಾಯಕ ಅವರು ಹೀಗೆ ಬರೆದುಕೊಂಡಿದ್ದಾರೆ : 'ಕರ್ಣಾಟಕ ವೀರಶ್ರೀಗೆ ಇತಿಹಾಸ ಪ್ರಸಿದ್ಧರಾದ ರಾಜಮಹಾರಾಜರು ಕಿರೀಟವಿಟ್ಟರಾದರೆ ಸರ್ವಸಾಮಾನ್ಯ ದಂಡಾಳುಗಳೂ ಕಳೆಗೊಟ್ಟರೆಂಬುದನ್ನು ಮರೆಯತಕ್ಕುದಲ್ಲ. ಇತಿಹಾಸವು ಕಾಣದ ಅವರ ಕೆಚ್ಚೆದೆಯ ಕಟ್ಟಾಳ್ತನವು ಜನಮನದಲ್ಲಿ ಅಚ್ಚೊತ್ತಿ ನಿಂತಿದೆ. ಅಂಥ ಸಾಮಾನ್ಯ ದಂಡಾಳುಗಳು 'ದಂಡು ಕಡಿದ' ಇತಿವೃತ್ತವೇ ಈ 'ತೆಂಕನಾಡ ಐತಿಹ್ಯಗಳು'. ...ನಮ್ಮ ಸುತ್ತಮುತ್ತಣ ಕೋಟೆ ಕೊತ್ತಳಗಳನ್ನು ಹುಡುಕಾಡಿ, ಕಟ್ಟೆ ಕಲ್ಲುಗಳೊಡನೆ ಮಾತಾಡಿ, ಮುದಿಯಜ್ಜಂದಿರ ಬಾಯಿ ಬಿಡಿಸಿ ತಿಳಿದುಕೊಂಡ ಕೆಲವು ಕತೆಗಳನ್ನಿಲ್ಲಿ ಕೊಟ್ಟಿರುವೆನು. ಈ ಬಗೆಯ ಎಷ್ಟೋ ಕತೆಗಳು ಇನ್ನೂ ಕತ್ತಲೆಯಲ್ಲಿ ಅಡಗಿರುವುವು. ಸಂಶೋಧಕರ ಗಮನ ಅತ್ತ ಹರಿದರೆ ಅವುಗಳೂ ಬೆಳಕನ್ನು ಕಾಣಬಹುದು. ವೀರಸಾಹಿತ್ಯ ಹುಲುಸಾಗಬಹುದು' (ಅರಿಕೆ). ತಾವು ಕರ್ನಾಟಕದಿಂದ ವಂಚಿತರಾಗಿ, ಹೋರಾಟದ ಮೂಲಕವಾಗಿ ಕೊನೆಗೊಮ್ಮೆ ಕಾಸರಗೋಡು ಕರ್ನಾಟಕವನ್ನು ಸೇರಬೇಕು ಎಂಬ ಮನೋಭಾವದ ಹಿನ್ನೆಲೆಯಲ್ಲಿಯೇ ಇಲ್ಲಿಯ ಐತಿಹ್ಯಗಳು ಸಂಗ್ರಹವಾದಂತೆ ತೋರುತ್ತದೆ. ಆ ಕಾರಣವಾಗಿಯೇ ಪ್ರಸ್ತುತ ಎರಡೂ ಕೃತಿಗಳು ಕಾಸರಗೋಡಿನಿಂದ ಪ್ರಕಟವಾಗಿವೆ.

ಡಾ. ಜಿ.ವಿ.ಡಿ. ಅವರಿಂದ ಸಂಪಾದನೆಗೊಂಡು, ೧೯೭೮ರಲ್ಲಿ ಪ್ರಕಟವಾದ **'ಕನ್ನಡ ಐತಿಹ್ಯಗಳು'** ಎಂಬುದು, ೧೯೭೦ರ ನಂತರ ಜಾನಪದವನ್ನು ಅರಿತು ಐತಿಹ್ಯಗಳನ್ನು ಸಂಗ್ರಹ ಮಾಡಿದ ಹೊಸ ಪೀಳಿಗೆಯ ಮೊದಲ ಕೃತಿ ಇದು. ಇದರಲ್ಲಿ ಒಟ್ಟಿಗೆ ೧೦೮ ಐತಿಹ್ಯಗಳಿದ್ದು, ಅವನ್ನು ಮಂಡ್ಯ, ಮೈಸೂರು, ಬೆಂಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಕೆಲ ಗ್ರಾಮಗಳಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿಯ ಐತಿಹ್ಯಗಳನ್ನು ಸ್ಥಳೀಯ ಐತಿಹ್ಯಗಳು ಹಾಗೂ ಸಂಚಾರಿ ಐತಿಹ್ಯಗಳೆಂದು ಎರಡು ಭಾಗಗಳಲ್ಲಿ ವಿಂಗಡಿಸಿ ಕೊಂಡಿದ್ದಾರೆ. ಸ್ಥಳೀಯ ಐತಿಹ್ಯಗಳಲ್ಲಿ– ದೇವರು, ಬೆಟ್ಟ–ಗುಡ್ಡಗಳು–ಕಲ್ಲುಗಳು, ಸ್ಥಳನಾಮ ಗಳು, ಪ್ರಮುಖ ಸ್ಥಳಗಳು, ವ್ಯಕ್ತಿಗಳು–ಮನೆತನ, ಹೊಳೆ–ತೀರ್ಥ, ಕೆರೆ–ಕಟ್ಟೆಗಳು, ಕಾಡು–ಮರಗಿಡಗಳು ಎಂದು ಎಂಟು ಉಪವಿಭಾಗಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಸಂಚಾರಿ

ಐತಿಹ್ಯಗಳಲ್ಲಿ– ದೇವರು, ಕಲ್ಲುಗಳು–ಬೆಟ್ಟಗುಡ್ಡಗಳು, ನಿಕ್ಷೇಪ ಎಂದು ಮೂರು ಉಪವಿಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ.

'ಉದಾಹರಣೆಗೆ ಕಲ್ಲುಗಳು–ಬೆಟ್ಟಗುಡ್ಡಗಳು' ಭಾಗದಲ್ಲಿಯ ಒಂದು ಸಣ್ಣ ಐತಿಹ್ಯವನ್ನು ಮಾದರಿಗಾಗಿ ನೋಡಬಹುದು. **ಕುಂತಿಬೆಟ್ಟ :** ಇಂದು ಮಂಡ್ಯಜಿಲ್ಲೆಯ ಪಾಂಡವಪುರದಲ್ಲಿದೆ. ಪಾಂಡವರು ವನವಾಸಕ್ಕೆ ಬಂದಿದ್ದಾಗ, ಈ ಬೆಟ್ಟದಲ್ಲಿ ಸ್ವಲ್ಪಕಾಲವಿದ್ದರಂತೆ. ಕುಂತಿಯು ಸ್ನಾನ ಮಾಡಿ ಒಣಗಲು ತನ್ನ ಸೀರೆಯನ್ನು ಹಾಕಿದ್ದ ಸ್ಥಳದಲ್ಲಿ ಸೀರೆಯ ಉದ್ದ ಮತ್ತು ಅಗಲವಾದ ಗೆರೆ ಉಂಟಾಗಿರುವುದಾಗಿ ಹೇಳುತ್ತಾರೆ. ಕುಂತಿಯು ವಾಸಿಸುತ್ತಿದ್ದ ಈ ಬೆಟ್ಟಕ್ಕೆ ಕುಂತಿ ಬೆಟ್ಟ ಎಂದು ಹೆಸರಾಯಿತು.

ಪ್ರಸ್ತುತ ಸಂಗ್ರಹದಲ್ಲಿಯ ಐತಿಹ್ಯಗಳ ದೀರ್ಘವನ್ನು ಗಮನಿಸಿದರೆ ಎರಡ್ಮೂರು ಪುಟಗಳ ಉದ್ದದ ಕೆಲ ಐತಿಹ್ಯಗಳೂ ದೊರೆಯುತ್ತವೆ. ಹೆಚ್ಚಿನ ಐತಿಹ್ಯಗಳು ಎರಡು, ಮೂರು, ನಾಲ್ಕು ಮತ್ತು ಅದಕ್ಕಿಂತ ಹೆಚ್ಚಿನ ಪುಟಗಳಲ್ಲೂ ಅಚ್ಚಾಗಿವೆ. ಅಲ್ಲಲ್ಲಿ ಒಂದೇ ಸಾಲಿನಲ್ಲಿ ಮುಗಿದ ಐತಿಹ್ಯಗಳೂ ಇವೆ. ಜನಪದ ಕಥೆಗಳಂತೆ ಐತಿಹ್ಯಗಳನ್ನೂ ಕೂಡ ವಕ್ತಾರರು ಹೇಳಿದಂತೆ ದಾಖಲಿಸಿ, ಪ್ರಕಟಿಸುವ ಪ್ರಯತ್ನಗಳು ನಡೆಯಬೇಕು. ಕರ್ನಾಟಕದಲ್ಲಿ ಜನಪದ ಕಥೆಗಳಂತೆ ಐತಿಹ್ಯಗಳನ್ನೂ ಗಂಭೀರವಾಗಿ ಗಣಿಸುವ ಕಾಲ ಇನ್ನೂ ಬರಬೇಕಾಗಿದೆ. ಐತಿಹ್ಯಗಳ ಬಗ್ಗೆ ಕನ್ನಡದಲ್ಲಿ ಇನ್ನೂ ಉತ್ತಮ ಎನ್ನಬಹುದಾದ ಒಂದು ಸಂಗ್ರಹವೂ ಬಂದಿಲ್ಲ ಎಂಬುದು ವಿಷಾದದ ಸಂಗತಿ.

ಕನ್ನಡ ಐತಿಹ್ಯಗಳ ಅಧ್ಯಯನ :

ಕನ್ನಡದಲ್ಲಿ ಐತಿಹ್ಯಗಳಿಗೆ ಸಂಬಂಧಿಸಿದಂತೆ ನಡೆದ ಕೆಲಸ ಅತ್ಯಲ್ಪ ಮಾತ್ರ. ಕಥೆಗಳ ಸಂಗ್ರಹಗಳು ಪ್ರಕಟವಾಗಿರುವುದನ್ನು ಗಮನಿಸಿದರೆ ಐತಿಹ್ಯಗಳ ಸಂಗ್ರಹಗಳ ಕಡೆ ಕರ್ನಾಟಕದ ಜಾನಪದ ವಿದ್ವಾಂಸರು ಗಮನ ಹರಿಸಿಲ್ಲವೆಂದೇ ಹೇಳಬೇಕಾಗುತ್ತದೆ. ಗಮನಾರ್ಹವಾದ ಒಂದು ಸಂಗ್ರಹ ಕೂಡ ಪ್ರಕಟವಾಗದೇ ಇರುವುದು ಒಂದು ದೊಡ್ಡ ಕೊರತೆಯೇ ಆಗಿದೆ. ಆದರೆ ಗ್ರಾಮಗ್ರಾಮಗಳಲ್ಲೂ ಐತಿಹ್ಯಗಳು ದೊರೆಯುತ್ತವೆ. ಶಾಸನಗಳು ಮತ್ತು ವೀರಗಲ್ಲುಗಳು ಕೊಡುವ ಐತಿಹಾಸಿಕ, ಸಾಂಸ್ಕೃತಿಕ ಸಂಗತಿಗಳಿಗಿಂತ ಮಹತ್ವದ ಸಂಗತಿಗಳನ್ನು ಐತಿಹ್ಯಗಳು ಕೊಡುತ್ತವೆ. ಅವುಗಳ ಸಂಗ್ರಹ ಮತ್ತು ಅಧ್ಯಯನಗಳ ಕಡೆ ಲಕ್ಷ್ಯಕೊಡುವುದು ಅವಶ್ಯವೆನಿಸುತ್ತದೆ.

ಕನ್ನಡದಲ್ಲಿ ಐತಿಹ್ಯಗಳ ಸಂಗ್ರಹಗಳಿಗಿಂತ, ಐತಿಹ್ಯಗಳನ್ನು ಕುರಿತು ನಡೆದ ಸಂಶೋಧನಾಧ್ಯನಗಳು ಗಮನಸೆಳೆಯುತ್ತವೆ. ಆದರೆ ಹೀಗೆ ಸಂಶೋಧನಾಧ್ಯಯನ ಮಾಡಿದವರೂ ತಾವು ಸಂಗ್ರಹಿಸಿದ ಐತಿಹ್ಯಗಳನ್ನು ಸಂಪಾದಿಸಿ ಪ್ರಕಟಿಸುವ ಗೋಜಿಗೆ ಹೋಗದಿರುವುದು ಒಂದು ಕೊರತೆಯಾಗಿ ಎದ್ದು ಕಾಣುತ್ತದೆ. ಐತಿಹ್ಯಗಳಿಗೆ ಸಂಬಂಧಿಸಿದಂತೆ ಎರಡು ಪಿಎಚ್.ಡಿ.ಅಧ್ಯಯನಗಳು ನಡೆದಿವೆ. ಡಾ. ಎ. ಸುಬ್ಬಣ್ಣರೈ ಅವರು ಡಾ.

ತಾಳ್ತಜೆ ವಸಂತಕುಮಾರ ಅವರ ಮಾರ್ಗದರ್ಶನದಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ **'ದ.ಕ.ಜಿಲ್ಲೆಯ ಐತಿಹ್ಯಗಳು'** ಎಂಬ ವಿಷಯ ಕುರಿತು ಪಿಎಚ್.ಡಿ. ಅಧ್ಯಯನ ಮಾಡಿದ್ದಾರೆ. ಈ ಕೃತಿ ೧೯೯೪ರಲ್ಲಿ ಮುಂಬಯಿ ವಿ.ವಿ.ಯ ಕನ್ನಡ ವಿಬಾಗದಿಂದಲೇ ಪ್ರಕಟವಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಡಾ. ವೀರಣ್ಣ ದಂಡೆ ಅವರ ಮಾರ್ಗದರ್ಶನದಲ್ಲಿ ಡಾ. ಗಿರೇಗೌಡ ಅರಳಿಹಳ್ಳಿ ಅವರು 'ರಾಯಚೂರು ಜಿಲ್ಲೆಯ ಐತಿಹ್ಯಗಳು' ಎಂಬ ವಿಷಯ ಕುರಿತು ಪಿಎಚ್.ಡಿ.ಅಧ್ಯಯನ ಮಾಡಿದ್ದು, ಅದು ೨೦೧೧ರಲ್ಲಿ ಪ್ರಕಟವಾಗಿದೆ.

ಸುಬ್ಬಣ್ಣ ರೈ ಅವರು ಸ್ವತಃ ಕ್ಷೇತ್ರಕಾರ್ಯ ಮಾಡಿ ಸಾಕಷ್ಟು ಐತಿಹ್ಯಗಳನ್ನು, ಸಂಬಂಧಿಸಿದ ಸ್ಥಳಗಳ ಚಿತ್ರಗಳನ್ನೂ ಸಂಗ್ರಹಿಸಿದ್ದಾರೆ. ಕೃತಿಯ ಅನುಬಂಧದಲ್ಲಿ ಕೆಲ ಐತಿಹ್ಯಗಳನ್ನೂ ಕೆಲ ಚಿತ್ರಗಳನ್ನೂ ಕೊಟ್ಟಿದ್ದಾರೆ. ತಾವು ಸಂಗ್ರಹಿಸಿದ ಐತಿಹ್ಯಗಳನ್ನು ಸ್ಥಳೈತಿಹ್ಯಗಳು, ವ್ಯಕ್ತಿ ಐತಿಹ್ಯಗಳು, ಐತಿಹಾಸಿಕ ಐತಿಹ್ಯಗಳು ಎಂದು ವಿಭಾಗಿಸಿಕೊಂಡು ಸಾಕಷ್ಟು ವಿವರವಾಗಿ ವಿಷಯವನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಶಾಸನಗಳು ಏನೆಂದರೂ ಆಡಳಿತ, ಧರ್ಮ ಮತ್ತು ಅರ್ಥ ಇವುಗಳನ್ನು ಪಡೆದವರ ಪರವಾಗಿಯೇ ಹೆಚ್ಚಾಗಿ ಹುಟ್ಟಿಕೊಂಡಿರುವುದು ಸ್ಪಷ್ಟವಾಗಿದೆ. ಆದರೆ ಐತಿಹ್ಯಗಳು ಇವರನ್ನೊಳಗೊಂಡೂ ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದ ಸಂಗತಿಗಳನ್ನು ಹೊತ್ತಿರುವುದನ್ನು ಕಾಣುತ್ತೇವೆ. ಹೀಗಾಗಿ ಒಂದು ನಾಡಿನ ಇತಿಹಾಸ, ಧರ್ಮ, ಸಂಸ್ಕೃತಿಯನ್ನು ಅರಿಯಲು ಸ್ಥಳೀಯವಾದ ಐತಿಹ್ಯಗಳ ಅಧ್ಯಯನದ ಮಹತ್ವ ಎದ್ದು ಕಾಣುತ್ತದೆ. ದಕ್ಷಿಣ ಕನ್ನಡದಂತಹ ಪ್ರದೇಶದಲ್ಲಿ ಶಾಸನ ಮತ್ತು ವೀರಗಲ್ಲುಗಳ ಕೊರತೆ ಎದ್ದು ಕಾಣುತ್ತದೆ. ಇಂಥಲ್ಲಿ ಚರಿತ್ರೆಯ ನಿರ್ಮಾಣಕ್ಕೆ ಐತಿಹ್ಯಗಳ ಮೊರೆ ಹೋಗುವುದು ಅನಿವಾರ್ಯವಾದ ಸಂಗತಿಯಾಗಿದೆ. ಇದನ್ನು ಲೇಖಕರು ಗುರುತಿಸಿ ಹೀಗೆ ಬರೆಯುತ್ತಾರೆ: 'ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗಂತೂ ಇತಿಹಾಸ ರಚನೆಗೆ ಮುಖ್ಯ ಆಕರಗಳಾಗಿ ಲಭಿಸುವವುಗಳು ಇಲ್ಲಿನ ಜಾನಪದವಷ್ಟೇ. ಶಾಸನಗಳಂತಹ ಶಿಷ್ಟಪದೀಯ ಪ್ರಾಥಮಿಕ ಆಕರಗಳ ಕೊರತೆ ಮತ್ತು ಜನಪದ ಸಾಹಿತ್ಯವೂ ಸೇರಿದ ಜಾನಪದದ (ವಿವಿಧ ಪ್ರಕಾರಗಳ) ಮಿಗತೆ–ಇವುಗಳೇ ಇದಕ್ಕೆ ಕಾರಣವೆನ್ನಬೇಕು. ಕರಾವಳಿ ಕರ್ನಾಟಕದ ಇತಿಹಾಸವನ್ನು ಬರೆಯಹೊರಟ ಪ್ರಸಿದ್ಧ ಇತಿಹಾಸಜ್ಞರಿಗೂ ಐತಿಹ್ಯ, ಪುರಾಣಗಳೇ ಮೊದಲಾದ ಈ ಪ್ರದೇಶದ ಜಾನಪದ ಆಕರಗಳನ್ನು ಬಳಸಿಕೊಳ್ಳದೆ ಮುಂದುವರಿಯಲು ಸಾಧ್ಯವಾಗಲಿಲ್ಲ'(ಪು.೮೬–೮೭). ೧೫೦ ಪುಟಗಳ ವಿವರಣೆ, ೪೪ ಪುಟಗಳ ಅನುಬಂಧಗಳನ್ನೊಳಗೊಂಡ ಈ ಕೃತಿ ಐತಿಹ್ಯಗಳಿಗೆ ಸಂಬಂದಿಸಿದಂತೆ ಒಂದು ಮಹತ್ವದ ಅಧ್ಯಯನವಾಗಿದೆ.

೨೦೧೦ರಲ್ಲಿ ಪ್ರಕಟವಾದ ಸಂಶೋಧನ ಗ್ರಂಥ **'ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ'** ಎಂಬುದು. ಡಾ. ವೃಷಭಕುಮಾರ ಅವರು ಡಾ। ಆರ್. ವ್ಹಿ. ಎಸ್. ಸುಂದರಂ ಅವರ ಮಾರ್ಗದರ್ಶನದಲ್ಲಿ ಮಾಡಿದ ಪಿಎಚ್.ಡಿ. ಸಂಶೋಧನ ಗ್ರಂಥ ಇದಾಗಿದೆ. ಇಲ್ಲಿಯ ಒಂದು ಅಧ್ಯಾಯದಲ್ಲಿ ಮಾತ್ರ ಮೈಸೂರು ಜಿಲ್ಲೆಗೆ ಸಂಬಂಧಿಸಿದ

ಐತಿಹ್ಯಗಳನ್ನು: ಘಟನಾ ಐತಿಹ್ಯಗಳು, ಸ್ಥಳೀಯ ಐತಿಹ್ಯಗಳು, ವ್ಯಕ್ತಿ ಐತಿಹ್ಯಗಳು- ಎಂದು ವಿಭಾಗಿಸಿಕೊಂಡು ವಿವರಿಸಿದ್ದಾರೆ. ಉಳಿದ ಮೊದಲರ್ಧ ಪ್ರಬಂಧದ ವ್ಯಾಪ್ತಿ ಐತಿಹ್ಯಗಳ ಅರ್ಥ, ಸ್ವರೂಪ, ಲಕ್ಷಣ, ಮೈಸೂರು ಜಿಲ್ಲೆಯ ಪರಿಚಯ ಇವೆಲ್ಲ ತುಂಬಿಕೊಂಡಿವೆ.

ಡಾ. ಗಿರೇಗೌಡ ಅವರ **'ರಾಯಚೂರು ಜಿಲ್ಲೆಯ ಐತಿಹ್ಯಗಳು'** (೨೦೧೧) ತುಂಬಾ ವಿಸ್ತಾರವಾದ ಅಧ್ಯಯನವನ್ನೊಳಗೊಂಡ ಕೃತಿಯಾಗಿದೆ. ೩೦೦ ಪುಟಗಳ ವ್ಯಾಪ್ತಿಯಲ್ಲಿರುವ ಈ ಕೃತಿಗಾಗಿ ಸಂಶೋಧಕರು ಇಡೀ ರಾಯಚೂರು ಜಿಲ್ಲೆಯಲ್ಲೆಲ್ಲ ಅಡ್ಡಾಡಿ ಸುಮಾರು ೩೦೦ ಐತಿಹ್ಯಗಳನ್ನು ಸಂಗ್ರಹಿಸಿ, ಅಧ್ಯಯನಕ್ಕಾಗಿ ಅಳವಡಿಸಿಕೊಂಡಿದ್ದಾರೆ. ೯೯ ಜನ ವಕ್ತಾರರಿಗೆ ಮಾತನಾಡಿಸಿದ್ದಾರೆ. ಸಾಕಷ್ಟು ಚಿತ್ರಗಳನ್ನು ಸಂಗ್ರಹಿಸಿದ್ದಾರೆ. ರಾಯಚೂರು ಜಿಲ್ಲೆಯ ಇತಿಹಾಸವನ್ನು ಚಿತ್ರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಸಾಮಾಜಿಕ ಧಾರ್ಮಿಕ ಆರ್ಥಿಕ ಪೌರಾಣಿಕ ಸಂಗತಿಗಳನ್ನೊಳಗೊಂಡ ಸಾಂಸ್ಕೃತಿಕ ಜೀವನವನ್ನು ವಿವರಿಸಿದ್ದಾರೆ. ನೆಲ-ಜಲ, ಸಸ್ಯ, ಪ್ರಾಣಿ-ಪಕ್ಷಿಗಳು, ಗುಡ್ಡಬೆಟ್ಟಗಳಿಗೆ ಸಂಬಂಧಿಸಿದ ರಾಯಚೂರು ಜಿಲ್ಲೆಯ ಪ್ರಾಕೃತಿಕ ನೋಟವನ್ನು ಕಂಡರಿಸಿದ್ದಾರೆ. ವ್ಯಕ್ತಿ, ಸ್ಥಳನಾಮ, ಕುಲಮೂಲಗಳಿಗೆ ಸಂಬಂಧಿಸಿದ ಐತಿಹ್ಯಗಳನ್ನು ಬಿಡಿಸಿ ತೋರಿಸಲು ಪ್ರಯತ್ನಿಸಿದ್ದಾರೆ. ಒಟ್ಟಿನ ಮೇಲೆ ರಾಯಚೂರು ಜಿಲ್ಲೆಯ ಒಟ್ಟು ಜನಜೀವನ ಮತ್ತು ಇತಿಹಾಸ ಐತಿಹ್ಯಗಳಲ್ಲಿ ಹೇಗೆ ದಾಖಲಾಗಿದೆ ಎಂಬುದನ್ನು ವಿವರಿಸುವ ಮಹತ್ವದ ಕೆಲಸವನ್ನು ಮಾಡಿದ್ದಾರೆ. ಕರ್ನಾಟಕದ ಪ್ರತಿಜಿಲ್ಲೆಯಿಂದಲೂ ಇಂತಹ ಕೆಲಸಗಳು ನಡೆದರೆ ಕರ್ನಾಟಕದ ಇತಿಹಾಸ ಮತ್ತು ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದಂತೆ ವ್ಯಾಪಕ ವಿಸ್ತಾರವೊಂದು ದೊರೆತಂತಾಗುತ್ತದೆ. ಎಲ್ಲದಕ್ಕೂ ಶಾಸನ ಮತ್ತು ಕನ್ನಡ ಕೃತಿಗಳಿಗೆ ಅವಲಂಬನೆಯಾಗುವ ಸಂಶೋಧನೆಯ ಮಿತಿಯನ್ನು ಅರಿತುಕೊಂಡು ಜಾನಪದ ಸಾಹಿತ್ಯದ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಸಂಶೋಧನೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವ ಅಗತ್ಯವಿದೆ ಎಂಬ ಅರಿವನ್ನು ಐತಿಹ್ಯಗಳಿಗೆ ಸಂಬಂಧಿಸಿದ ಅಧ್ಯಯನಗಳು ಹೇಳಿಕೊಡುತ್ತವೆ.

* * *

ಕನ್ನಡ ಐತಿಹ್ಯಗಳ ಸಂಗ್ರಹಗಳು :

೧೯೩೬ : ಕೋಲಾರ ನಾಡೂ-ಕತೆಗಳೂ, ಮು. ವೆಂಕಟಕೃಷ್ಣಪ್ಪ, -ಸತ್ಯಶೋದನ ಪ್ರಕಟನ ಮಂದಿರ, ಬೆಂಗಳೂರು ನಗರ.

೧೯೬೬ : ಕೆಚ್ಚಿನ ಕಿಡಿಗಳು (ಐತಿಹ್ಯ ಸಂಚಯ), ಬೇಕಲ್ ರಾಮನಾಯಕ, -ಗೀತಾ ಪ್ರಕಾಶನ, ಶಿವರಾಮಪೇಟೆ, ಕಾಸರಗೋಡು, ದ.ಭಾರತ.

೧೯೬೯ : ತೆಂಕನಾಡ ಐತಿಹ್ಯಗಳು, ಬೇಕಲ್ ರಾಮನಾಯಕ, -ಗೀತಾ ಪ್ರಕಾಶನ, ಶಿವರಾಮಪೇಟೆ, ಕಾಸರಗೋಡು, ದ.ಭಾರತ.

೧೯೭೮, ೨೦೦೩ : ಕನ್ನಡ ಐತಿಹ್ಯಗಳು, (ಸಂ) ಡಾ. ಜಿ.ವಿ.ಡಿ., –ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು–೨೪.

ಕನ್ನಡ ಐತಿಹ್ಯಗಳ ಅಧ್ಯಯನಗಳು :

೧೯೯೪ : ದ.ಕ.ಜಿಲ್ಲೆಯ ಐತಿಹ್ಯಗಳು, ಡಾ. ಎ. ಸುಬ್ಬಣ್ಣ ರೈ, ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೨೦೧೧. ರಾಯಚೂರು ಜಿಲ್ಲೆಯ ಐತಿಹ್ಯಗಳು, ಡಾ. ಗಿರೇಗೌಡ ಅರಳಿಹಳ್ಳಿ, – ಅನುಷಾ ಪ್ರಕಾಶನ, ವಿರುಪಾಪುರ–೫೮೪ ೧೨೮, ತಾ. ಸಿಂಧನೂರು, ಜಿ.ರಾಯಚೂರು.

೨೦೧೦ : ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ, ಡಾ. ವೃಷಭಕುಮಾರ್, –ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

* * *

೨. ಜನಪದ ಗಾದೆಗಳು

ಗಾದೆ ಒಂದು ಸಾಲಿನ ಜನಪದ ಸಾಹಿತ್ಯ ಪ್ರಕಾರ. ಬಹುಶಃ ಪ್ರಾಚೀನರು ಏಕಪದಿ ಎಂದು ಗಾದೆಯನ್ನೇ ಕರೆದಿರಬೇಕೆನಿಸುತ್ತದೆ. ಪ್ರತ್ಯೇಕವಾಗಿದ್ದರೆ ಸ್ವತಂತ್ರ ಅಸ್ತಿತ್ವವನ್ನು ಹೊಂದಿರುವ ಗಾದೆ ಪದ್ಯಗಳಲ್ಲಿ ಪ್ರಯೋಗಗೊಂಡು ಆ ಪದ್ಯದ ನುಡಿಯ ಒಂದು ಭಾಗವಾಗಿ/ಸಾಲಾಗಿ ಹೋಗುತ್ತದೆ. ಹೀಗೆ ಒಮ್ಮೆಲೆ ಒಂದು ಸಾಲಿನ ಒಂದು ಸ್ವತಂತ್ರ ಪ್ರಕಾರವಾಗಿ ಗದ್ಯದಲ್ಲಿ ಗಣಿಸುವ ಗಾದೆ, ತನ್ನ ವಿಶಿಷ್ಟ ಕಾವ್ಯದ ಗುಣಗಳಿಂದಾಗಿ ಪದ್ಯದಲ್ಲೂ ಬಳಕೆಯಾಗುತ್ತದೆ. ಹೀಗಾಗಿ ಅದರಲ್ಲಿ ಪದ್ಯದ ಗುಣಲಕ್ಷಣಗಳಿರುವುದು ಸ್ಪಷ್ಟವಾಗುತ್ತದೆ.

ಕಥೆಗಳಂತೆ ಗಾದೆಗಳೂ ಸಾರ್ವತ್ರಿಕ ಗುಣಗಳನ್ನು ಹೊಂದಿವೆ. ಜಗತ್ತಿನ ತುಂಬ ಎಲ್ಲ ಭಾಷೆಗಳಲ್ಲೂ ಗಾದೆಗಳ ಸೃಷ್ಟಿಯನ್ನು ಕಾಣುತ್ತೇವೆ. ಗಾದೆಗಳು ಅನುಭವದ ನುಡಿಗಳು. ಒಂದೊಂದು ಅನುಭದ ಹಿಂದೆ ಒಂದೊಂದು ಘಟನೆ ಹುದುಗಿರುತ್ತದೆ. ಮಾತಿನಲ್ಲಿ ಬಳಕೆಯಾಗುವ ಸಹಜ ಸಾಹಿತ್ಯವೆಂದರೆ ಗಾದೆ. ಗಾದೆಯನ್ನು ಮಾತಿನಲ್ಲಿ ಬಳಸದ ಮಾನವರು ಇರಲು ಸಾಧ್ಯವಿಲ್ಲ. ಅದಕ್ಕಾಗಿ ಮಾತನಾಡುವ ಮನುಷ್ಯನಿರುವಲ್ಲಿ ಗಾದೆಗಳು ಇದ್ದೇ ಇರುತ್ತವೆ.

ಪಡೆನುಡಿ, ಬೈಗುಳಗಳು ಒಂದು ಪದ ಅಥವಾ ಒಂದೆರಡು ಪದಗಳಿಂದ ಸೃಷ್ಟಿಗೊಂಡು, ಸಹಜ ಮಾತುಗಾರಿಕೆಯಲ್ಲಿ ಓತಪ್ರೋತವಾಗಿ ಬಳಕೆಯಾಗುತ್ತವೆ. ಇವು ಉಪಮೆ, ರೂಪಕ ಮತ್ತು ಶ್ಲೇಷೆ ಅಲಂಕಾರಗಳಿಗೆ ಅತ್ಯಂತ ಉತ್ತಮ ಉದಾಹರಣೆಗಳಾಗಿರುತ್ತವೆ. ಅದಕ್ಕಾಗಿ ಅಲಂಕಾರಗಳ ಉಗಮ ಸ್ಥಾನವೆಂದರೆ ಪಡೆನುಡಿ ಮತ್ತು ಬೈಗುಳಗಳೇ ಆಗಿವೆ. ಮಾತಿನಲ್ಲಿ ಸೃಷ್ಟಿಗೊಳ್ಳುವ ಸಹಜ ಅಲಂಕಾರಗಳೆಂದರೆ ಉಪಮೆ, ರೂಪಕ ಮತ್ತು ಶ್ಲೇಷೆಗಳು. ಉಪಮೆ ರೂಪಕ ಶ್ಲೇಷೆಗಳಿಲ್ಲದೆ ಮಾತುಗಳು ಪ್ರಯೋಗವಾಗಲಾರವು. ಈ ಉಪಮೆ ರೂಪಕ ಶ್ಲೇಷಾಲಂಕಾರಗಳಿಂದಲೇ ೧೨೦ಕ್ಕೂ ಮೇಲ್ಪಟ್ಟು ಅಲಂಕಾರಗಳು ಇಂದು ಕನ್ನಡದಲ್ಲಿ ಗುರುತಿಸಲ್ಪಟ್ಟಿವೆ.

ಪಡೆನುಡಿ ಮತ್ತು ಬೈಗುಳಗಳ ನಂತರದ ಸ್ಥಾನ ಗಾದೆಗಳಿಗೆ. ಪಡೆನುಡಿ, ಬೈಗುಳಗಳು ಒಂದು ಪದವಾಗಿ ಸೃಷ್ಟಿಗೊಳ್ಳುವುದರಿಂದ ಮತ್ತು ಮಾತಿನಲ್ಲಿ ಬಳಕೆಯಾಗಲು ತಕ್ಕ ರಚನೆಯನ್ನು ಹೊಂದಿರುವುದರಿಂದ ಅವುಗಳ ಬಳಕೆ ವ್ಯಾವಹಾರಿಕ ಮಾತಿನಲ್ಲಿ ವ್ಯಾಪಕವಾಗಿ ಆಗುತ್ತವೆ. ಗಾದೆಗಳು ಒಂದು ವಾಕ್ಯದ ದೀರ್ಘ ರಚನೆಯನ್ನು ಪಡೆದು ಅಪರೂಪಕ್ಕೆ

ಮಾತಿನಲ್ಲಿ ಬಳಕೆಯಾಗುತ್ತಿರುತ್ತವೆ. ಹೀಗೆ ಬಳಕೆಯಾದಾಗ ಮಾತಿಗೊಂದು ಮೊನಚು, ಶಕ್ತಿ, ಗಂಭೀರತೆ, ತೂಕ, ಅನುಭವದ ಸ್ಪರ್ಶ ಪ್ರಾಪ್ತವಾಗುತ್ತದೆ. ಶಕ್ತಿಶಾಲಿಯಾದ, ತೀವ್ರ ಪರಿಣಾಮಕಾರಿಯಾದ ಸಂಕ್ಷಿಪ್ತ ಮಾತಿಗೆ ಪಡೆನುಡಿ, ಬೈಗುಳಗಳು; ಅನುಭವದ ಶ್ರೀಮಂತಿಕೆಯ ಮಾತಿಗೆ ಗಾದೆಗಳು ಬಳಕೆಯಾಗುವುದು ಸಾಮಾನ್ಯ. ಅಂತಲೇ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಗಾದೆಗಳು ನ್ಯಾಯಪದ್ಧತಿಯಲ್ಲೂ ಬಳಕೆಯಾಗುತ್ತವೆ. ತಿಳಿದುಬರುತ್ತದೆ. ಅಷ್ಟೊಂದು ತೂಕಬದ್ಧವಾದ, ತರ್ಕಬದ್ಧವಾದ ಚಿಂತನೆ ಒಂದು ಗಾದೆಮಾತಿನಲ್ಲಿ ಹುದುಗಿರುತ್ತದೆ.

ಗಾದೆಗಳು ಕೇವಲ ಭಾಷಿಕ ಪ್ರಕಾರವಲ್ಲ. ಶುದ್ಧ ಭಾಷಿಕ ಪ್ರಕಾರಗಳೆಂದರೆ ಪಡೆನುಡಿ ಹಾಗೂ ಬೈಗುಳಗಳು ಮಾತ್ರ. ಮಾತಿನಲ್ಲಿಯೇ ಅವುಗಳ ಬಳಕೆ ವ್ಯಾಪಕವಾಗಿ ಆಗುವುದು. ಅವುಗಳ ಬಳಕೆ ಸಾಹಿತ್ಯದಲ್ಲಿ ಆದರೂ ಅವು ಸ್ವತಃ ಸಾಹಿತ್ಯ ಪ್ರಕಾರಗಳಲ್ಲ. ಗಾದೆ ಸ್ವತಃ ಸಾಹಿತ್ಯದ ಪ್ರಕಾರ; ಜೊತೆಗೆ ಬೇರೆ ಸಾಹಿತ್ಯದಲ್ಲೂ ಬಳಕೆಯಾಗುತ್ತದೆ. ಅದಕ್ಕಾಗಿ ಗಾದೆಗಳನ್ನು ಕೇವಲ ಭಾಷಿಕ ಪ್ರಕಾರದಲ್ಲಿ ಸೇರಿಸುವುದು ಸರಿಯಾದ ಕ್ರಮವೆನಿಸದು.

ಗಾದೆಗಿರುವ ಶಕ್ತಿ ಅಪಾರವಾದುದು. ಅದು ಎದುರಿನವರನ್ನು ತನ್ನ ಪ್ರಭಾವಕ್ಕೆ ಎಳೆದುಕೊಳ್ಳುತ್ತದೆ. ಅನುಭವವನ್ನು ಮುಂದಿಟ್ಟು ಮಾತಿಗೆ ತೂಕ ತಂದಿಡುತ್ತದೆ. ಅದಕ್ಕಾಗಿ 'ಮಾತು ಬಲ್ಲವನಿಗೆ ಜಗಳವಿಲ್ಲ' ಎನ್ನುವುದನ್ನು 'ಗಾದೆ ಬಲ್ಲವನಿಗೆ ಜಗಳವಿಲ್ಲ' ಎಂದು ಹೇಳಬಹುದು. ಗಾದೆಗಳು ಒಬ್ಬನ ಸೃಷ್ಟಿಯಾದರೂ ಅಲ್ಲಿರುವ ಅನುಭವ ಸಾರ್ವಜನಿಕವಾದುದು. ಹೀಗಾಗಿ ಗಾದೆಗಳನ್ನು ಜನ ಒಪ್ಪಿಕೊಳ್ಳುತ್ತಾರೆ. ಸೃಷ್ಟಿಯ ಶಕ್ತಿವುಳ್ಳವನು ಹೊಸ ಗಾದೆಗಳ ನಿರ್ಮಾಣವನ್ನೂ ಮಾಡುತ್ತಾನೆ. ಜನ ಸ್ವೀಕರಿಸಿ ಬಳಸಲು ತೊಡಗಿದರೆ ಅದು ಗಾದೆಯಾಗಿ ಅಧಿಕೃತವಾಗಿ ಪ್ರಚಾರ ಹೊಂದುತ್ತದೆ.

ಜನಪದ ಸಾಹಿತ್ಯದ ಕಥೆ, ಗಾದೆ, ಒಗಟು, ತ್ರಿಪದಿಗಳನ್ನು ಕನ್ನಡ ಶಿಷ್ಟ ಸಾಹಿತಿಗಳು ಸಹಜವಾಗಿ ಬಳಸಿಕೊಂಡಿದ್ದಾರೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕವಿಗಳು ಕಥೆಗಳನ್ನು ಗಾದೆಗಳನ್ನು ವ್ಯಾಪಕವಾಗಿ ಬಳಸಿಕೊಂಡಿದ್ದಾರೆ. ಕನ್ನಡದಲ್ಲಿ ವಚನಕಾರರಂತೂ ಗಾದೆಗಳನ್ನೇ ಅಧಿಕೃತ ಜ್ಞಾನದ ಆಕರಗಳೆಂದು ಒಪ್ಪಿಕೊಂಡಿದ್ದಾರೆ. ಅವರು ಲಿಖಿತ ಮೂಲದ ಜ್ಞಾನದ ಅಕರಗಳಾದ ವೇದ, ಶಾಸ್ತ್ರ, ಪುರಾಣಗಳನ್ನು ಅಲ್ಲಗಳೆದು ಮಾತನಾಡುತ್ತಾರೆ. 'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ' ಎಂದೂ 'ಶಾಸ್ತ್ರ ಸಂತೆಯ ಮಾತು, ಪುರಾಣ ಪುಂಡರ ಗೋಷ್ಠಿ' ಎಂದೂ ಲಿಖಿತ ಮೂಲದ ಜ್ಞಾನಕೋಶಗಳನ್ನು ಹೀಗಳೆಯುತ್ತಾರೆ. ಅವುಗಳ ಬದಲಿಗೆ ಸಾಮಾನ್ಯರ ಜ್ಞಾನಕೋಶಗಳಾದ ಗಾದೆಗಳನ್ನು ಅಧಿಕೃತ ಜ್ಞಾನದ ಪ್ರಮಾಣಗಳನ್ನಾಗಿ ವಚನಕಾರರು ಸ್ವೀಕರಿಸುತ್ತಾರೆ. 'ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ', 'ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ', 'ಕಳ್ಳಗಂಜಿ ಕಾಡ ಹೊಕ್ಕಡೆ ಹುಲಿ ತಿಂಬುದ ಮಾಬುದೆ' ಇಂತಹ ಅನುಭವದ ಗಾದೆ ಮಾತುಗಳನ್ನೇ ಅವರು ಜ್ಞಾನದ–ಅನುಭವದ ಪ್ರಮಾಣಗಳನ್ನಾಗಿ ಸ್ವೀಕರಿಸುತ್ತಾರೆ. ಬಹುಶಃ ವಚನಗಳ ಕಾಲದಲ್ಲಿಯೇ 'ಗಾದೆ ವೇದಕ್ಕೆ ಸಮಾನ', 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬಂತಹ ಗಾದೆ ಮಾತುಗಳು ಹುಟ್ಟಿಕೊಂಡಿರಬೇಕೆಂದು ತೋರುತ್ತದೆ.

ತಮ್ಮ ಅನುಭವಗಳನ್ನು ಅಭಿವ್ಯಕ್ತಿಸುವಾಗ ವಚನಕಾರರು ಗಾದೆಯಂತಹ ಮಾತುಗಳನ್ನು ಸ್ವತಃ ಸೃಷ್ಟಿಸುತ್ತಾರೆ. 'ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದವುಂಟೆ? ದೀಪಕ್ಕೆ ದೀಪ್ತಿಗೆ ಭಿನ್ನವುಂಟೆ?', 'ಗುಂಗುರಿಗೆ ಸುಂಡಿಲು ಹುಟ್ಟಿದಡೆ ಆನೆಯಾಗಬಲ್ಲುದೆ', 'ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ, ಹಾವಿನ ಸಂಗವೇ ಲೇಸು' ಇಂತಹ ಅನೇಕ ಮಾತುಗಳು ಗಾದೆಗಳಂತೆ ಸೃಷ್ಟಿಯಾಗಿವೆ. ಗಾದೆಯ ಗುಣಗಳನ್ನು ಹೊಂದಿವೆ.

ಗಾದೆಗಳ ಇತಿಹಾಸ ಹೇಳುವುದು ಸಾಧ್ಯವಿಲ್ಲ. ಗಾದೆ, ಒಗಟು, ಕಥೆ ಈ ಮೂರು ಜನಪದ ಸಾಹಿತ್ಯ ಪ್ರಕಾರಗಳು ಎಲ್ಲ ಭಾಷೆಗಳ ಜೊತೆಗೆ ಹುಟ್ಟಿಕೊಳ್ಳುತ್ತ ಬಂದವುಗಳು. ಏಕೆಂದರೆ ಮಾತಿಗಿರುವ ಸೃಷ್ಟಿಶಕ್ತಿಯ ದ್ಯೋತಕಗಳು ಗಾದೆ, ಒಗಟು, ಕಥೆಗಳು. ಅದರಲ್ಲೂ ಗಾದೆಗಳೇ ಮಾತಿನ ಸೃಷ್ಟಿಯಲ್ಲಿ ಅಪಾರವಾಗಿ ಕಾಣುವಂತಹವು. ಪಡೆನುಡಿ, ಬೈಗುಳಗಳ ನಂತರದ ಮೌಖಿಕ ಸೃಷ್ಟಿಗಳೆಂದರೆ ಗಾದೆಗಳೇ ಆಗಿವೆ. ಇವೆಲ್ಲ ಮಾತಿನ ಸಹಜ ಸೃಷ್ಟಿಗಳು.

ಗಾದೆಗಳನ್ನು ಬಳಸದ ಕವಿಯೊಬ್ಬ ನಮಗೆ ಸಿಗಲಾರ. ಹೀಗಾಗಿ ಕನ್ನಡ ಸಾಹಿತ್ಯದ ಪ್ರಾರಂಭದಿಂದ ಇಲ್ಲಿಯವರೆಗೆ ಬೆಳಕು ಕಂಡ ಗ್ರಂಥಗಳಲ್ಲಿ ಮುಖ್ಯವಾಗಿ ಗಾದೆಗಳ ಪ್ರಯೋಗ ಸಿಕ್ಕೆಸಿಗುತ್ತದೆ. ಇದಕ್ಕೆ ಸಾಕ್ಷಿಯಾಗಿ ಎಚ್.ಎಸ್.ಅಚ್ಚಪ್ಪ ಅವರ **'ಗ್ರಂಥಸ್ಥ ಗಾದೆಗಳು'** (೧೯೬೯) ಎಂಬ ಕೃತಿ ನಮಗೆ ದೊರೆಯುತ್ತದೆ. ಅಚ್ಚಪ್ಪ ಅವರು ಅತ್ಯಂತ ಶ್ರಮದಾಯಕವಾದ ಕೆಲಸಕ್ಕೆ ಕೈಹಾಕಿದ್ದಾರೆ. ಗಾದೆಗಳನ್ನು, ಕವಿಗಳು ಸೃಷ್ಟಿಮಾಡಿದ ಸೂಳ್ನುಡಿಗಳನ್ನೂ ಅವರು ಕನ್ನಡ ಕೃತಿಗಳಿಂದ ಹೆಕ್ಕಿ ತೆಗೆದು ಕಲೆಹಾಕಿ ಅವನ್ನು ಪ್ರಕಾಶ ಪಡಿಸಿದ್ದಾರೆ. ಗಾದೆಗಳು ಜನಪದರಿಗೂ ಶಿಷ್ಟರಿಗೂ ಹಿಡಿಸುವ ಒಂದು ಪ್ರಕಾರ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಗ್ರಂಥಸ್ಥ ಗಾದೆಗಳು ಮೂಲತಃ ಜನಪದ ಗಾದೆಗಳೇ ಆಗಿವೆ. ಜನಪದ ಗಾದೆಗಳನ್ನೇ ಎಲ್ಲ ಕವಿಗಳು ಬಳಸಿಕೊಂಡಿರುವುದು. ಭಾಷೆಯ ಬದಲಾವಣೆ ಮಾತ್ರ ಅಲ್ಪಸ್ವಲ್ಪ ಕಾಣುತ್ತೇವೆ. ಕೆಲವು ಕವಿಗಳು ಅಲ್ಲಲ್ಲಿ ಗಾದೆಯಂತಹ ಸ್ವತಂತ್ರ ರಚನೆಗಳನ್ನು ಸೃಷ್ಟಿ ಮಾಡಿರುವುದೂ ಕಂಡುಬರುತ್ತದೆ.

ನಾವು ಗಮನಿಸಿದ ಗಾದೆಗಳ ಸಂಗ್ರಹಗಳಲ್ಲಿ ನಾಲ್ಕು ಬಗೆಯ ಕೆಲಸಗಳು ಗೋಚರಿಸುತ್ತವೆ. ಒಂದು ಸಂಪಾದಕರು ಸ್ವತಃ ಕ್ಷೇತ್ರಕ್ಕೆ ಹೋಗಿ, ಗಾದೆಗಳನ್ನು ಸ್ವತಃ ಸಂಗ್ರಹಿಸಿ, ಒಂದು ಉತ್ತಮವಾದ ಪ್ರಸ್ತಾವನೆಯನ್ನು ಬರೆದು ಪ್ರಕಟಿಸಿದ ಸಂಗ್ರಹಗಳು. ಇವು ನಿಜವಾಗಿ ಕನ್ನಡದ ಬಹುದೊಡ್ಡ ಕೆಲಸವನ್ನು ಮಾಡಿವೆ. ಕನ್ನಡದ ಗಾದೆ ಸಾಹಿತ್ಯವನ್ನು ಸಂಗ್ರಹಿಸಿ, ಕನ್ನಡದ ಒಂದು ಬಗೆಯ ಸಾಹಿತ್ಯವನ್ನು ಉಳಿಸುವ, ಕನ್ನಡದ ಜ್ಞಾನಕೋಶವನ್ನು ವೃದ್ಧಿಗೊಳಿಸುವ, ಕಾಪಾಡುವ ಅತ್ಯಂತ ಮಹತ್ವದ ಕೆಲಸ ಇವರದು.

ಎರಡನೆಯದು ಗಾದೆಗಳ ಸೂಚಿ ತಯಾರಿಕೆ. ತಮಗಿಂತಲೂ ಹಿಂದೆ ಬಂದ ಗಾದೆಗಳ ಸಂಗ್ರಹಗಳನ್ನು ಗಮನಿಸಿ, ಅವುಗಳ ಜೊತೆಗೆ ತಾವು ಸಂಗ್ರಹಿಸಿದ ಗಾದೆಗಳನ್ನೂ ಕೂಡಿಸಿ ಜೋಡಿಸಿ ಒಂದು ಸೂಚಿಯನ್ನು ತಯಾರಿಸುವುದು. ಇದರಿಂದ ಆ ತನಕ ಬಂದ ಗಾದೆಗಳ ಒಂದು ಪ್ರಮಾಣ ಗೊತ್ತಾಗುವುದಲ್ಲದೆ, ಕೆಲವೊಬ್ಬರು ಅವುಗಳನ್ನು ವಿಷಯಾನುಸಾರ ವಿಂಗಡಿಸಿಕೊಡಲು ಪ್ರಯತ್ನ ಮಾಡಿರುವುದೂ ಕಂಡುಬರುತ್ತದೆ.

ಮೂರನೆಯವರು ಇವರು ಕ್ಷೇತ್ರಕ್ಕೆ ಹೋದವರಲ್ಲ, ಕನ್ನಡ ಗಾದೆಗಳನ್ನು ಸಂಗ್ರಹ ಮಾಡಿದವರಲ್ಲ. ಕೆಲವರು ತಮಿಳು, ತೆಲುಗು, ಮಲೆಯಾಳಿ ಹೀಗೆ ದ್ರಾವಿಡ ಭಾಷೆಗಳಿಂದ, ಕೆಲವೊಬ್ಬರು ಇಂಗ್ಲೀಷ ಹಾಗೂ ಬೇರೆ ಬೇರೆ ದೇಶಗಳ ಭಾಷೆಗಳಿಂದ ಕನ್ನಡ ಗಾದೆಗಳಿಗೆ ಸಮಾನವಾದ ಗಾದೆಗಳನ್ನು ಹುಡುಕಿ ಕೊಡುವ ಕೆಲಸವನ್ನು ಮಾಡಿದ್ದಾರೆ. ಇನ್ನೂ ಕೆಲವರು ಅನ್ಯ ಭಾಷೆಗಳಿಂದ ಗಾದೆಗಳನ್ನು ಕನ್ನಡದಲ್ಲಿ ಅನುವಾದಿಸಿ ಕೊಡುವ ಕೆಲಸವನ್ನೂ ಮಾಡಿದ್ದಾರೆ. ಹೀಗೆ ಮಾಡುವಾಗ ಬೇರೆ ಭಾಷೆಯಲ್ಲಿಯ ಗಾದೆಯಂತಹ ಒಂದು ಕನ್ನಡದ ಗಾದೆ ದೊರೆತರೆ ಅದನ್ನು ಹೋಲಿಕೆಗಾಗಿ ಕೊಡುವ ಪ್ರಯತ್ನವನ್ನೂ ಮಾಡಿದ್ದಾರೆ.

ಇನ್ನು ನಾಲ್ಕನೆಯ ವರ್ಗಕ್ಕೆ ಸೇರಿದ ಜನವೂ ಕ್ಷೇತ್ರಕ್ಕೆ ಹೋದವರಲ್ಲ. ಇವರು ಮಾಡಿದ ಕೆಲಸವೆಂದರೆ, ಕೆಲ ಗಾದೆಗಳನ್ನು ಆಯ್ದುಕೊಂಡು ಅವುಗಳಿಗೆ ವಿವರಣೆಗಳನ್ನು ಬರೆದುದು. ಟೀಕೆ ಬರೆಯುವ ಪದ್ಧತಿ ಕನ್ನಡದಲ್ಲಿ ಮೊದಲಿನಿಂದಲು ಇದೆ. ಅನೇಕ ಕನ್ನಡದ ಕೃತಿಗಳಿಗೆ, ವಚನಗಳಿಗೆ ಸಾರಾಂಶಗಳನ್ನು, ಟೀಕೆಗಳನ್ನು, ವೃತ್ತಿಗಳನ್ನು ಒದಗಿಸಿದ ಉದಾಹರಣೆಗಳು ದೊರೆಯುತ್ತವೆ. ಜನಪದ ಸಾಹಿತ್ಯದಲ್ಲಿ ಇಂತಹ ಟೀಕೆ ಅಥವಾ ಸಂದರ್ಭವನ್ನು ವಿವರಿಸುವ ಕೆಲಸ ನಡೆದಿರುವುದು ಗಾದೆಗಳ ಸಂಬಂಧದಲ್ಲಿ ಮಾತ್ರ ಎಂಬುದನ್ನು ಗಮನಿಸಬೇಕು.

ಐದನೆಯ ಕೆಲಸವೆಂದರೆ ಗಾದೆಗಳನ್ನು ಕುರಿತು ವಿಮರ್ಶಾತ್ಮಕ ಬರಹಗಳನ್ನು ಬರೆದುದು. ಇಂತಹ ಕೆಲವು ಲೇಖನಗಳು, ಸಣ್ಣ ಪುಸ್ತಿಕೆಗಳು ಮಾತ್ರ ಕಂಡುಬರುತ್ತವೆ. ಗಾದೆಗಳನ್ನು ಕುರಿತು ವೈವಿಧ್ಯಮಯವಾದ ಕೆಲಸ ನಡೆದರೂ ವಿಮರ್ಶೆ ಸಂಶೋಧನೆಯ ಕೆಲಸ ನಡೆದಿರುವುದು ತೀರ ಅತ್ಯಲ್ಪ ಮಾತ್ರವಾಗಿ ಕಂಡುಬರುತ್ತದೆ.

ಪ್ರಾರಂಭದ ಬರಹಗಳು :

ಜನಪದ ಗಾದೆಗಳ ಬಗ್ಗೆ ಕಾಳಜಿ ಇಟ್ಟುಕೊಂಡು ಬರೆದ ಒಂದು ಲೇಖನ ನಮಗೆ ೧೯೨೧ ರ ಕಾಲದಲ್ಲಿ ದೊರೆಯುತ್ತದೆ. **'ಕನ್ನಡ ಗಾದೆಗಳ ಜೀರ್ಣೋದ್ಧಾರ'** ಎಂಬ ಲೇಖನ ಬರೆದವರು ಎಚ್.ಕೆ.ಮಲ್ಲಪ್ಪ ಅವರು. ಈ ಲೇಖನ 'ಪರಿಷತ್ ಪತ್ರಿಕೆ' ಜುಲೈ ೧೯೨೧ರಲ್ಲಿ ಪ್ರಕಾಶಗೊಂಡಿದೆ. "ಗಾದೆಯ ಮಾತು ವೇದಕ್ಕೆ ಸಮಾನ' ಎಂದು ನಮ್ಮ ಪೂರ್ವಜರು ಹೇಳುವಂತೆ ಗಾದೆಗಳು ನೀತಿಬೋಧಕವೂ ಜನಾದರಣೀಯವೂ ಆಗಿರುತ್ತವೆ. ತಿದ್ದುಪಾಡಾದ ಪ್ರತಿಯೊಂದು ದೇಶದಲ್ಲಿಯೂ ಜನಾಂಗದ ಭಾಷೆಯಲ್ಲಿಯೂ ಆಯಾ ದೇಶಕ್ಕೂ ಆಯಾ ಜನಾಂಗಕ್ಕೂ ಆಯಾ ಭಾಷೆಗೂ ಒಪ್ಪುವಂತಹ, 'ಮಾತಿಗೆ ಮೊದಲೊಂದು ಗಾದೆ, ಊಟಕ್ಕೆ ಮೊದಲೊಂದು ಉಪ್ಪಿನಕಾಯಿ' ಎಂಬಂತೆ ಗಾದೆಗಳು ಇದ್ದೇ ಇರುವವು"(ಪು.೧೩೪) ಎಂಬ ಮಾತಿನಿಂದ ಪ್ರಾರಂಭವಾಗುವ ಈ ಲೇಖನ ಗಾದೆಗಳ ಮಹತ್ವವನ್ನು ಹೇಳುತ್ತ ಹೋಗುತ್ತದೆ. "ಪಂಡಿತ ಪಾಮರರಿಂದಲೂ ಆಬಾಲ ವೃದ್ಧರಿಂದಲೂ ಪ್ರತಿನಿತ್ಯವೂ ಎತ್ತಿ ಆಡಲ್ಪಡುವ ಯೋಗ್ಯತೆಯನ್ನು ನಮ್ಮ ಕನ್ನಡ ನಾಣ್ಣುಡಿಗಳು ಪಡೆದಿದ್ದರೂ ದಯಾದಾಕ್ಷಿಣ್ಯವಿವರ್ಜಿತರಾದ ಕೆಲವು ಭಾಷಾಭಿಮಾನ ಶೂನ್ಯರು ಈ ತಾಯ್ನುಡಿಯ

ನಾಣ್ಣುಡಿಗಳ ಕತ್ತಿಗೆ ಕೈಹಾಕಿ ದೂಡುತ್ತಿರುವರು. ಅನ್ಯರಿಗಿರುವಂತೆ ನಮಗೂ ಗ್ರಂಥಸ್ಥವಾದ ಭಾಷೆಯುಂಟು, ನೀತಿಬೋಧಕವೂ ರಸಪರಿಪುಷ್ಟವೂ ಆದ ಗಾದೆಗಳುಂಟು ಎಂದು ದರ್ಪದಿಂದ ಮುಖವನ್ನು ಮೇಲಕ್ಕೆತ್ತಿ ನಿರ್ಭೀತಿಯಿಂದ ಎದೆಯನ್ನು ತಟ್ಟಿ ಹೇಳುವುದಕ್ಕೆ ಅಂಜಿ ಹಿಂಜರಿದು ನಿಲ್ಲುವರು" (ಪು.೧೩೫). ಈ ಬಗೆಯ ಅಭಿಮಾನದ ಮಾತುಗಳನ್ನು ಹೇಳುತ್ತ ಗಾದೆಗಳ ಸಂಗ್ರಹದ ಬಗ್ಗೆ ನಮ್ಮ ಜನ ಲಕ್ಷವಹಿಸಬೇಕು ಎಂಬ ವಿನಂತಿಯನ್ನು ಮಾಡಿಕೊಳ್ಳುತ್ತಾರೆ. ಕೊನೆಯಲ್ಲಿ ವಿಷಯಾನುಸಾರ ಕೆಲವು ಗಾದೆಗಳನ್ನು ಉದಾಹರಿಸಿದ್ದಾರೆ. ಅವರು ಉಲ್ಲೇಖಿಸಿದ ಕೆಲವು ಗಾದೆಗಳು ಹೀಗಿವೆ:

ಪಾರಲೌಕಿಕ ವರ್ಗಕ್ಕೆ : ಗುರುವಿನಂತೆ ಶಿಷ್ಯ, ತಂದೆಯಂತೆ ಮಗ.

ನೈತಿಕ ವರ್ಗಕ್ಕೆ : ಬಡವನ ಸಿಟ್ಟು ದವಡೆಗೆ ಮೂಲ.

ಸಾಮಾಜಿಕ ವರ್ಗಕ್ಕೆ : ಸಜ್ಜನರ ಸಂಗ ಹೆಜ್ಜೇನು ಸವಿದಂತೆ.

ವ್ಯವಸಾಯ ವರ್ಗಕ್ಕೆ : ಉತ್ತು ಬಾಳುವವನಿಗೆ ಎತ್ತಲೂ ಭಯವಿಲ್ಲ.

ವಾಣಿಜ್ಯ ವರ್ಗಕ್ಕೆ : ಹಣವಿಲ್ಲದವ ಹೆಣಕ್ಕಿಂತಲೂ ಕಡೆ

ಕೈಗಾರಿಕೆಯ ವರ್ಗಕ್ಕೆ : ಆಳಾಗಿ ದುಡಿದು ಅರಸಾಗಿ ಉಣ್ಣಬೇಕು.

ಕೊನೆಯಲ್ಲಿ ಅವರು ಈ ಸಂದೇಶವನ್ನು ಸಾರುತ್ತಾರೆ: "ಹೀಗೆ ಜನಸಾಮಾನ್ಯಕ್ಕೆಲ್ಲ ಅಜ್ಞಾನ ನಿವೃತ್ತಿಯಾಗಿ ಉತ್ತಮ ಗತಿ ದೊರೆಯುವಂತೆ ದಾರಿಯನ್ನು ತೋರುವ, ವ್ಯಸನದಲ್ಲಿ ಮುಳುಗಿ ಯಾವ ಕೆಲಸವನ್ನೂ ಮಾಡದೆ ಕೈಕಟ್ಟಿಕೊಂಡು ಕುಳಿತುಕೊಳ್ಳುವವರಿಗೆ ಮನೋರಂಜನೆಯನ್ನು ಮಾಡಿ ಕಾರ್ಯದಲ್ಲಿ ಆಸಕ್ತಿಯನ್ನೂ ಲವಲವಿಕೆಯನ್ನೂ ಹುಟ್ಟಿಸುವ, ನಾವು ಹೋದ ಕಡೆಯಲ್ಲೆಲ್ಲ ನಮ್ಮ ಜತೆಯಲ್ಲಿಯೇ ಬಂದು ಸದ್ಗುರುವಿನಂತೆಯೂ ಸ್ನೇಹಿತರಂತೆಯೂ ನಮಗೆ ಹಿತೋಪದೇಶವನ್ನು ಮಾಡುವ, ಮಹಾನದಿಗಳಂತೆ ಜ್ಞಾನೋದಯವೆಂಬ ಜಲದಿಂದ ವಿಚಾರಶಕ್ತಿಗಳೆಂಬ ಪೈರುಗಳನ್ನು ಸೊಂಪಾಗಿ ಬೆಳೆಯುವಂತೆ ಆರೈಕೆ ಮಾಡುವ, ಈ ಕನ್ನಡ ಗಾದೆಗಳನ್ನು 'ಬಾರೆನ್ನ ಕುಲವೆ ಚಲವೆ...' ಎಂದು ಬರಮಾಡಿಕೊಂಡು ಬಾಚಿ ತಬ್ಬಿಕೊಳ್ಳಿರಿ" (೧೩೯).

ದೇವುಡು ನರಸಿಂಹಶಾಸ್ತ್ರಿಗಳು ತಮ್ಮ **'ಕರ್ನಾಟಕ ಸಂಸ್ಕೃತಿ'**(೧೯೩೫) ಯಲ್ಲಿ 'ಗಾದೆಗಳೂ ಒಗಟೆಗಳೂ' ಎಂಬ ಅಧ್ಯಾಯವನ್ನು ಬರೆದಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಕರ್ನಾಟಕ ಸಂಸ್ಕೃತಿಯ ಭಾಗ ಗಾದೆಗಳು, ಹಾಗೂ ಕರ್ನಾಟಕ ಸಂಸ್ಕೃತಿ ದೊರೆಯುವ ಬಹುಮುಖ್ಯ ಆಕರವೆಂದರೆ ಅದು ಕನ್ನಡ ಗಾದೆಗಳು ಎಂಬುದು. "ಗಾದೆಗಳನ್ನು ಅರಿಯದವರೇ ಇಲ್ಲ; ಆದರೂ ಗಾದೆಯೆಂದರೆ ಏನು ಎಂಬುದನ್ನು ಎಲ್ಲರೂ ಒಪ್ಪುವಂತೆ ಹೇಳುವುದು ಸಾಧ್ಯವಿಲ್ಲ. ಒಟ್ಟಿನಲ್ಲಿ 'ತಲೆತಲಾಂತರದಿಂದ ಶೇಖರವಾಗಿರುವ ಅನುಭವವು ಯಾವನಾದರೊಬ್ಬನ ಬಾಯಲ್ಲಿ ಮಾತಾಗಿ ಹೊರಬೀಳುವುದು. ಜನತೆಯು ಆ ಮಾತಿನ ಸೊಬಗಿಗೂ ಅದರ ಹಿಂದಿರುವ ಅನುಭವಕ್ಕೂ ಮೆಚ್ಚಿ ಅದನ್ನು ನಾಣ್ಯವಾಗಿ ಸಂಗ್ರಹಿಸುವರು. ಜ್ಞಾತಾಜ್ಞಾತವಾಗಿ ಅದನ್ನು ಸಾಧ್ಯವಾದಂತೆಲ್ಲ ಅವರಿವರೆನ್ನದೆ ತಿದ್ದುವರು; ಉಜ್ಜಿ ಹೊಳಪಿಕ್ಕುವರು. ಹೀಗೆ ಸಿದ್ಧವಾದ ಆ 'ಮೊಹರೆ

ವಾಕ್ಯವು ಗಾದೆ' ಎಂದು ಹೇಳಬಹುದು"(ಪು. ೧೬೩). ಮುಂದುವರೆದು ದೇವುಡು ಅವರು ಗಾದೆಗಳು ಹೇಗೆ ಹುಟ್ಟಿದವು ಎಂದು ಹೇಳಲು ಹೋಗಿ, ಒಂದೊಂದು ಗಾದೆಯ ಹಿಂದೆ ಒಂದೊಂದು ಘಟನೆ, ಒಂದೊಂದು ಕಥೆಯೇ ಅಡಗಿರುವುದನ್ನು ತೋರಿಸಲು ಕಥಾಸರಿತ್ಸಾಗರದಿಂದ ಒಂದು ಕಥೆಯನ್ನೇ ಉಲ್ಲೇಖ ಮಾಡಿದ್ದಾರೆ. **'ಹಾವಿಗೆ ಮುನಿದು ಒಳ್ಳೆಯನ್ನು ಕೊಂದಂತೆ'** ಎಂಬ ಗಾದೆಯ ಹಿಂದಿನ ಘಟನೆ ಅದು. ತಂದೆಯೊಬ್ಬ ಮಗಳಿಗೆ ಧಾರೆಯೆರೆದು ಕೊಡುವಾಗ ಮಗಳು ಹಾವು ಕಚ್ಚಿ ಸಾವನ್ನಪ್ಪುತ್ತಾಳೆ. ಮದುಮಗ ತನ್ನ ಹೆಂಡತಿಯನ್ನು ಬದುಕಿಸಿಕೊಳ್ಳಲು ಅರ್ಧ ಆಯುಷ್ಯವನ್ನು ಧಾರೆ ಎರೆಯುತ್ತಾನೆ. ಮದುಮಗಳು ಜೀವಂತಳಾಗುತ್ತಾಳೆ. ಮುಂದೆ ಹಾವು ಕಂಡಕೂಡಲೆ ಅದು ತನ್ನ ಹೆಂಡತಿಯನ್ನು ಸಾಯಿಸುತ್ತದೆಂದು ಕಂಡ ಹಾವನ್ನು ಕೊಲ್ಲುತ್ತ ಹೊರಡುತ್ತಾನೆ. ಮುಂದೆ ತನಗೆ ಹೊಡೆಯಲು ಬಂದ ಗಂಡನಿಗೆ ಒಳ್ಳೆಯೊಂದು, 'ಅಯ್ಯಾ ಹಾರುವಾ! ಹಾವಿಗೆ ಮುನಿದು ಒಳ್ಳೆಯನ್ನು ಕೊಲ್ಲುವೆ. ನಿನ್ನ ಹೆಂಡಿರನ್ನು ಕಚ್ಚಿದ್ದು ಹಾವು, ಒಳ್ಳೆಯಲ್ಲ, ನಂಜಿರುವುದು ಹಾವಿಗೆ, ಒಳ್ಳೆಗಲ್ಲ' ಎಂದಿತಂದೆ.

ಮುಂದುವರೆದು ವೇದಕ್ಕೂ ಗಾದೆಗೂ ಇರುವ ನಂಟನ್ನು ಹೇಳುವ ಗಾದೆಯೊಂದನ್ನು ದೇವುಡು ಅವರು ಉಲ್ಲೇಖ ಮಾಡಿ ಬರೆಯುತ್ತಾರೆ. "ಈ ಗಾದೆಗಳು ಅನುಭವದ ತಿರುಳು ಎಂಬುದನ್ನು ತೋರಿಸುವ ಗಾದೆಯೂ ಒಂದುಂಟು. **'ವೇದ ಗಾದೆಯ ಮಾತು, ಶಾಸ್ತ್ರ ತಿಳಿದವರ ಮಾತು, ಪುರಾಣ ಪುಂಡರ ಮಾತು'** ಎಂಬ ಈ ಗಾದೆಯಲ್ಲಿ ವೇದಮಂತ್ರಗಳು ಅನುಷ್ಠಾನ ಸಾದೃಶ್ಯದಿಂದ ಪಡೆಯುವ ಸಿದ್ಧಿಯನ್ನು ಕುರಿತು ಹೇಳುವ ಮಾತುಗಳು ಎಂಬುದನ್ನು ಎಷ್ಟು ಚೆನ್ನಾಗಿ ಚಿತ್ರಿಸಿದೆ. ...ಇದಿಷ್ಟು **'ವೇದ ಗಾದೆಯ ಮಾತು'** ಎಂಬ ಗಾದೆಯಲ್ಲಿ ಪಾಕವಿಳಿದಿರುವುದು. ಹೀಗೆ ಸಂದರ್ಭೋಚಿತವಾಗಿ, ವಿಸ್ತಾರವಾದ ಅನುಭವ ಪ್ರಪಂಚವೊಂದನ್ನು ಚೊಕ್ಕವಾದ ಪುಟ್ಟ 'ಮೊಹರೆ ವಾಕ್ಯ'ಗಳಲ್ಲಿ ಗಾದೆಯು ಹೇಳುವುದು. ಆ ಗಾದೆಯು ವೇದಕ್ಕೆ ಸಮಾನವೆಂದು ಜನತೆಯು ಅಂಗೀಕರಿಸುವುದು"(ಪು.೧೬೫-೧೬೬).

'ವೇದ ಗಾದೆಯ ಮಾತು, ಶಾಸ್ತ್ರ ಸಂತೆಯ ಗುಲ್ಲು, ಪುರಾಣ ಪುಂಡರ ಗೋಷ್ಟಿ' (೩೯೯೯) ಎಂಬ ಗಾದೆಯನ್ನು ಕಿಟ್ಟೆಲ್ಲರೂ ಉಲ್ಲೇಖಿಸಿದ್ದಾರೆ. ಈ ಗಾದೆ ವಚನವೊಂದರಲ್ಲಿ ನೇರವಾಗಿ ಬಳಕೆಯಾಗಿರುವದನ್ನು ಗಮನಿಸಬೇಕು. 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ'(ಅಲ್ಲಮ-೪೬೫). 'ಗಾದೆ' ಎಂಬ ಪದದ ಬದಲು 'ಓದಿನ' ಎಂಬ ಪದವನ್ನು ಹಾಕಿಕೊಂಡು ಅಲ್ಲಮಪ್ರಭುಗಳು ನೇರವಾಗಿ ಒಂದು ಗಾದೆಯನ್ನೇ ಬಳಸಿಕೊಂಡು ವಚನ ಬರೆದಂತೆ ತೋರುತ್ತದೆ. ವಚನಕಾರರು ಮೌಖಿಕ ಜ್ಞಾನವನ್ನು ಒಪ್ಪಿಕೊಂಡು ಲಿಖಿತ ಜ್ಞಾನವನ್ನು ದೂರ ಇಟ್ಟರೆಂಬುದಕ್ಕೆ ಈ ಗಾದೆ ಒಂದು ಉತ್ತಮ ಉದಾಹರಣೆಯಾಗಿದೆ. ಆದರೆ 'ಗಾದೆ ವೇದಕ್ಕೆ ಸಮಾನ' ಎಂಬ ಗಾದೆಯೊಂದು ನಮಗೆ ದೊರೆಯುತ್ತದೆ. ಆ ಗಾದೆಯಿಂದಾಗಿಯೇ 'ವೇದ ಗಾದೆಯ ಮಾತು' ಎಂಬ ಮತ್ತೊಂದು ಗಾದೆ ಹುಟ್ಟಲು ಕಾರಣವೂ ಆಗಿರಬೇಕು.

ಇಲ್ಲಿ ಗಮನಿಸಬೇಕಾದ ಮಾತೆಂದರೆ 'ಗಾದೆ ವೇದಕ್ಕೆ ಸಮಾನ' ಎಂಬ ಗಾದೆಯನ್ನು ಅನೇಕ ಜನ ವೈದಿಕ ವಿದ್ವಾಂಸರು ಗಮನಿಸಿಯೂ ಅದರ ಮಗ್ಗುಲಲ್ಲಿ ಹುಟ್ಟಿದ ಬೇರೊಂದು ನಮೂನೆಯ ಗಾದೆಗಳನ್ನು ಉಲ್ಲೇಖಿಸುವುದು ಕಾಣುತ್ತದೆ. ಕನ್ನಡದಲ್ಲಿ ದೊರೆಯುವ ಮೊದಲ ಗಾದೆಗಳ ಸಂಕಲನ 'ಕಲ್ಲಚ್ಚಿನ ಗಾದೆಗಳು' ಕೃತಿಯ ಮೂಲ ಅನಾಮಧೇಯ ಸಂಪಾದಕರು ಗಾದೆಗಳನ್ನು ಆರಿಸುವಲ್ಲಿ 'ವೇದವೆಂಬುದು ಗಾದೆಯೋ?' (೨೯೬೪) ಎಂಬ ಗಾದೆಯನ್ನು ಆಯ್ಕೆ ಮಾಡಿಕೊಡುತ್ತಾರೆ. ಇದನ್ನು ಕಿಟ್ಟೆಲ್ಲರೂ ಆರಿಸಿಕೊಂಡಿದ್ದಾರೆ. ಟಿ.ವಿ.ವೆಂಕಟರಮಣಯ್ಯ ಅವರು ತಮ್ಮ 'ಕನ್ನಡ ಗಾದೆಗಳ ಕೋಶ'ದಲ್ಲಿ 'ವೇದದಲ್ಲಿ ಹುಸಿಯಿಲ್ಲ, ಆದಿಯಲ್ಲಿ ಜನವಿಲ್ಲ' (ಪು.೩೭೦) ಎಂಬ ಗಾದೆಯನ್ನು ಆರಿಸಿಕೊಂಡಿದ್ದಾರೆ. ಬಹುಶಃ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮತ್ತೊಂದು ಗಾದೆಗೆ ಪರ್ಯಾಯವಾಗಿ ಸೃಷ್ಟಿಸಿದ ಖೋಟಾ ಗಾದೆ ಇದಾಗಿರುವಂತೆ ತೋರುತ್ತದೆ. ಕಿಟ್ಟೆಲ್ ಅವರು 'ಗಾದೆ ವೇದಕ್ಕೆ ತಲೆದಿಂಬು'(೯೫೦) ಎಂಬ ಇನ್ನೊಂದು ಮಹತ್ವಪೂರ್ಣ ಗಾದೆಯನ್ನು ಆಯ್ದುಕೊಟ್ಟಿದ್ದಾರೆ. ದೇವುಡು ಅವರು ಕರ್ನಾಟಕ ಸಂಸ್ಕೃತಿಯ ಶೋಧದಲ್ಲಿ ಇಂತಹ ಗಾದೆಯೊಂದನ್ನು ಆಯ್ದುಕೊಳ್ಳುವುದಲ್ಲದೆ, ಗಾದೆಯ ಪರವಾಗಿ ವಿಶ್ಲೇಷಣೆ ಮಾಡುವುದೂ ಮುಖ್ಯವಾಗಿ ತೋರುತ್ತದೆ.

ದೇವುಡು ಅವರು ಮುಂದುವರೆದು ಗಾದೆಗಳ ಮೂದಲಿಕೆಯ ಪ್ರಮುಖ ಗುಣವನ್ನು ವಿವರಿಸಲು ಬ್ರಾಹ್ಮಣ, ಲಿಂಗಾಯತರನ್ನು ಒಳಗೊಂಡಂತೆ ಮತ್ತೆ ಅನೇಕ ಜಾತಿಯ ಸ್ವಭಾವಗಳನ್ನು ಲೇವಡಿ ಮಾಡುವ ಹಲವಾರು ಗಾದೆಗಳನ್ನು ಆಯ್ದು ಕೊಡುತ್ತಾರೆ. ಇದು ದೇವುಡು ಅವರ ವ್ಯಕ್ತಿತ್ವವನ್ನು ದರ್ಶಿಸುತ್ತದೆ. "ಗಾದೆಗಳಲ್ಲಿ ಒಂದೊಂದು ಕುಲದವರಿಗೆ ಮಾತ್ರ ಸಂಬಂಧಿಸಿದವೂ ಉಂಟು: 'ಅಭ್ಯಾಸವಿಲ್ಲದ ಬ್ರಾಹ್ಮಣ ಔಪಾಸನ ಮಾಡುವುದಕ್ಕೆ ಹೋಗಿ ಗಡ್ಡ ಮೀಸೆ ಸುಟ್ಟುಕೊಂಡ', 'ಅಪ್ಪಾಭಟ್ಟರ ಸೊಸೆಯಾಗಿ ತಿಪ್ಪಾಭಟ್ಟರ ಮಗಳಾಗಿ ಲವಣ ಎಂದರೆ ಕಾಣೆನೇ ದೊಡ್ಡಮ್ಮ ಸಗಣಿ' ಮೊದಲಾದವು ಬ್ರಾಹ್ಮಣರಿಗೆ ಮಾತ್ರ ಅನ್ವಯಿಸತಕ್ಕವು. 'ಶಿವ ಕೊಟ್ಟರೂ ಶಿದ್ದಪ್ಪ ಕೊಡ', 'ಬಡದೇವರ ಕಂಡರೆ ಬಿಲ್ಲಪತ್ರೆಯೂ ಭುಸ್ಸೆಂತು' ಮೊದಲಾದವು ವೀರಶೈವರ ಸಂಬಂಧವನ್ನು ತೋರಿಸತಕ್ಕವು. ...ಹಾಗೆಯೇ ಬಹುಮಟ್ಟಿಗೆ ಇತರರು ಕುಲಕುಲದವರನ್ನು ಕುರಿತು ಆಡಿಕೊಂಡಂತೆ ಕಂಡರೂ ಆಯಾ ಕುಲದ ಮುಖ್ಯ ಲಕ್ಷಣಗಳನ್ನು ಕನ್ನಡಿಸಿದಂತೆ ತೋರುವ ಗಾದೆಗಳೂ ಇವೆ. 'ಕೊಮಟಿಗ ಕೊಡ ಬಣಜಿಗ ಬಿಡ', 'ಹಸಿದ ಹಾರುವನನ್ನೂ ಉಂಡ ಒಕ್ಕಲಿಗನನ್ನೂ ಕೆಣಕಬೇಡ', 'ನರಕಕ್ಕೆ ಹೋದರೂ ನಾಮಧಾರಿ ನಂಬಬೇಡ' ಮೊದಲಾದ ಗಾದೆಗಳು ಇಂತಹವು"(೧೬೮).

ದೇವುಡು ಅವರ ತಿಳಿವಳಿಕೆ ಅಗಾಧವಾಗಿದೆ. ಬಹುಶಃ ಮೊದಲನೆಯದಾಗಿ ಕನ್ನಡ ಕವಿಗಳು ಬಳಸಿರುವ ಗಾದೆಗಳನ್ನು ಉದಾಹರಿಸಿದ್ದಾರೆ. ಅವರು ಬರೆಯುತ್ತಾರೆ: "ಇವೆಲ್ಲದರ ಜೊತೆಗೆ ಕಾವ್ಯರಾಶಿಯಿಂದಲೂ ಬಂದು ಸೇರಿರುವ 'ಕಣ್ಬೇನೆಯ ಕರಡಿಯವೊಲರಚುವಂ ವಾಚಕನೇ?' (ಛಂದೋಂಬುಧಿ), 'ದೊರೆಗೆ ಪಿರಿಯರು ಮೊಳರೇ?' (ಪಂಪ ರಮಾಯಣ), 'ಕೃತ್ರಿಮದ ವಿಷದ ಸೋಂಕಿಗೆ ಗರುಡನಳವಳಿಯೆ

ಮತ್ತೆ ರಕ್ಷೆಗೆ ಮಂತ್ರಿಸುವರಾರ್?' (ಜೈಮಿನಿ), ... 'ತಲೆಗೆ ಹೂವ ತಹೆನಲ್ಲದೆ ಹುಲ್ಲ ತರುವೆನೆ?' (ಶಿವಶರಣರ ವಚನಗಳು)" (ಪು.೧೬೯). ಕೊನೆಯಲ್ಲಿ ಕೆಲವು ಪರದೇಶಗಳ ಗಾದೆಗಳನ್ನು ಉಲ್ಲೇಖಿಸಿದ್ದಾರೆ. "ಅಂತೂ ಗಾದೆಗಳ ರಾಶಿಯು ದಿನದಿನಕ್ಕೂ ಬೆಳೆಯುತ್ತಿದೆ. ಹಳೆಯದು ಅಳಿದಂತೆಲ್ಲ ಹೊಸಹೊಸದು ಹುಟ್ಟಿಬಂದು ತುಂಬುತ್ತಲಿದೆ. ಹಾಡು ಕಥೆಗಳಂತೆ ಹಳೆಯವೂ ಮತ್ತೆ ಹೊಸ ರೂಪದಲ್ಲಿ ಹುಟ್ಟಿಬರುತ್ತಲೂ ಇವೆ. 'ಅಲ್ಲಿ ಬಿದ್ದು ಇಲ್ಲಿ ಬಿದ್ದು ಮಗ ಗುಂಡುಕಲ್ಲಾದ' ಎಂಬಂತೆ 'ಹೋದವು ಹೋಗಿ, ಬಂದು ಬಂದು ಈ ಭಂಡಾರವು ಮಾತ್ರ ಎಂದಿನಂತೆ ಸಮುದ್ರದಂತೆ ಅಪಾರವಾಗಿದೆ' ಎಂದು ನಿಶ್ಶಂಕವಾಗಿ ಹೇಳಬಹುದು" (೧೬೯).

ಗಾದೆಗಳ ಬಗ್ಗೆ ವಿಮರ್ಶಾತ್ಮಕವಾದ ಈ ಮೇಲೆ ವಿಚಾರಿಸಿದ ಎರಡು ಲೇಖನಗಳ ನಂತರ ನಮಗೆ ದೊರೆಯುವ ಒಂದು ಸಣ್ಣ ಕೃತಿ ಡಾ. ಎ. ಕೆ. ರಾಮಾನುಜನ್ ಅವರ **'ಗಾದೆಗಳು'** (೧೯೫೫) ಎಂಬ ಪುಟ್ಟ ಕೃತಿ. ರಾಮಾನುಜನ್ ಅವರು ಆಗ ಲಿಂಗರಾಜ ಕಾಲೇಜಿನಲ್ಲಿ ಇಂಗ್ಲೀಷ ಅಧ್ಯಾಪಕರೆಂದು ಕೆಲಸ ಮಾಡುತ್ತಿದ್ದರೆಂದು ತೋರುತ್ತದೆ. ನಾವೆಲ್ಲರೂ ತಿಳಿದಿರುವಂತೆ ರಾಮಾನುಜನ್ ಅವರು ಅತ್ಯಂತ ಪ್ರತಿಭಾವಂತರು. ನಂತರ ಅವರು ಜಗತ್ಪ್ರಸಿದ್ಧ ಇಂಗ್ಲೀಷ ಪ್ರಾಧ್ಯಾಪಕರಾಗಿ ಹೆಸರುವಾಸಿಯಾದರು. ಅಂತಹ ಪ್ರತಿಭಾವಂತರಿಗೆ ೧೯೫೫ ರಷ್ಟು ಹಿಂದೆ, ಅಂದರೆ ಇಂದಿಗೆ ೬೦ ವರ್ಷಗಳ ಹಿಂದೆ ಅವರಿಗೆ ಗಾದೆಗಳ ಹುಚ್ಚು ಹತ್ತಿಕೊಂಡಿತ್ತು ಎನ್ನುವುದೇ ಆಶ್ಚರ್ಯದ ಸಂಗತಿ. ಮೇಲಾಗಿ ೬೦ ವರ್ಷಗಳು ಕಳೆದರೂ ಗಾದೆಗಳನ್ನು ಕುರಿತ ಈ ಸಣ್ಣ ಪುಸ್ತಿಕೆಯನ್ನು ಸರಿಗಟ್ಟುವಂತಹ ಮತ್ತೊಂದು ಕೃತಿ ಕನ್ನಡದಲ್ಲಿ ಬೇರೊಬ್ಬರಿಂದ ಬರಲಿಲ್ಲ ಎಂಬುದು ಸತ್ಯ ಸಂಗತಿ.

ಈ ಸಮಯದಲ್ಲಿ ನಾವು ಕರ್ನಾಟಕ ವಿಶ್ವವಿದ್ಯಾಲಯವನ್ನು ನೆನೆಸಿಕೊಳ್ಳಬೇಕು. ಕರ್ನಾಟಕದಲ್ಲಿ ಮೊಟ್ಟಮೊದಲು ಜನಪದ ಸಾಹಿತ್ಯಕ್ಕೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನಕ್ಕೆ, ಪ್ರಕಟನೆಗೆ ಅವಕಾಶ ಮಾಡಿಕೊಟ್ಟ ವಿಶ್ವವಿದ್ಯಾಲವೆಂದರೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ. ಅದು ಹುಟ್ಟಿದ್ದೇ ೧೯೪೯ರಲ್ಲಿ. ಆ ವಿಶ್ವವಿದ್ಯಾಲಯ ಪ್ರಾರಂಭವಾದ ಹೊಸದರಲ್ಲಿಯೇ ಡಾ. ಬಿ.ಎಸ್.ಗದ್ದಗಿಮಠ ಅವರಿಗೆ **'ಕನ್ನಡ ಜಾನಪದ ಗೀತಗಳು'** ಎಂಬ ವಿಷಯದ ಮೇಲೆ ಪಿಎಚ್.ಡಿ. ಯಂತಹ ಉನ್ನತ ಪದವಿಗೆ ಜನಪದ ಸಾಹಿತ್ಯ ಕುರಿತು ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟದ್ದು ಒಂದು ದಾಖಲೆ ಕೆಲಸವಾಗಿದೆ. ಅವರಿಗೆ ಪಿಎಚ್.ಡಿ.ಪದವಿ ದೊರೆತುದು ೧೯೫೪ರಲ್ಲಿ. (ಆದರೆ ಆ ಕೃತಿ ಪ್ರಕಟನೆಯಾಗಲು ಮುಂದೆ ಸುಮಾರು ೧೦ ವರ್ಷಗಳೇ (೧೯೬೩) ಹಿಡಿದಿವೆ). ೧೯೫೪ ಜುಲೈ ತಿಂಗಳಲ್ಲಿ ರಾಮಾನುಜನ್ ಅವರು ಒಂದು ಪ್ರಚಾರ ಉಪನ್ಯಾಸಕ್ಕಾಗಿ ಗಾದೆಗಳ ಬಗ್ಗೆ ಮಾತನಾಡಲು ವಿಷಯ ತೆಗೆದುಕೊಂಡಿದ್ದು, ಅದನ್ನು ಬಹುಬೇಗನೆ ಬರೆದುಕೊಟ್ಟದ್ದು, ವಿಶ್ವವಿದ್ಯಾಲಯ ತಡಮಾಡದೆ ೧೯೫೫ರಲ್ಲಿಯೇ ಅದನ್ನು ಮುದ್ರಣಗೊಳಿಸಿದ್ದು ಈಗ ಜನಪದ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸಂಗತಿಗಳಾಗಿ ಕಾಣುತ್ತಿವೆ.

ಬಹುಶಃ ೬೦ ವರ್ಷಗಳ ಹಿಂದೆ ಜನಪದ ಸಾಹಿತ್ಯದ ಬಗ್ಗೆ ಒಂದು ವಿಮರ್ಶಾತ್ಮಕ ಕೃತಿ ಬಂದದ್ದು ರಾಮಾನುಜನ್ ಅವರ **'ಗಾದೆಗಳು'** (೧೯೫೫) ಎಂಬ ಪುಸ್ತಿಕೆಯೇ ಆಗಿದೆ. ಇದಕ್ಕಿಂತ ಮುಂಚೆ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಸಣ್ಣಸಣ್ಣ ಲೇಖನಗಳು ಪ್ರಕಟವಾಗಿವೆ. ಹೀಗಾಗಿ ಈ ಕೃತಿಗೆ ಒಂದು ಚಾರಿತ್ರಿಕ ಮಹತ್ವವೂ ಇದೆ. ನಂತರ ಗಾದೆಗಳನ್ನು ಕುರಿತು ಮತ್ತೆ ಬಿಡಿ ಲೇಖನಗಳು, ಇಲ್ಲವೆ ಗಾದೆಗಳ ಸಂಗ್ರಹದೊಂದಿಗೆ ಸಂಪಾದಕರು ಬರೆದಿರುವ ಪ್ರಸ್ತಾವನೆಗಳೇ ಗಾದೆಗಳನ್ನು ಕುರಿತು ಬಂದ ವಿಮರ್ಶಾತ್ಮಕ ಸಂಶೋಧನಾತ್ಮಕ ಬರಹಗಳಾಗಿವೆ. ಗಾದೆಗಳನ್ನು ಕುರಿತು ಇಲ್ಲಿಯವರೆಗೆ ಒಂದು ಪಿಎಚ್.ಡಿ. ಅಧ್ಯಯನ ಕೂಡ ನಡೆದಿಲ್ಲ ಎಂದರೆ ಆಶ್ಚರ್ಯವೆನಿಸುತ್ತದೆ. ಇದಕ್ಕೆಲ್ಲ ಗಾದೆಗಳ ಸಂಕೀರ್ಣ ಸ್ವರೂಪವೇ ಕಾರಣವಾಗಿದೆ. ತೀರ ವ್ಯಾಪಕವಾಗಿ ಬಹುಪ್ರಮಾಣದಲ್ಲಿ ದೊರೆಯುವ ಗಾದೆಗಳನ್ನು ಕುರಿತು ಅಧ್ಯಯನಕ್ಕೆ ಅಳವಳಡಿಸುವುದು ತುಂಬ ಪ್ರಯಾಸದ ಕೆಲಸವೇ ಆಗಿದೆ.

ಇಲ್ಲಿಯವರೆಗೆ ಯಾರ್ಯಾರು ಕನ್ನಡ ಗಾದೆಗಳ ಬಗ್ಗೆ ಬರೆದಿದ್ದಾರೋ ಅವರೆಲ್ಲ ರಾಮಾನುಜನ್ ಅವರ 'ಗಾದೆಗಳು' ಕೃತಿಗೆ ಆಭಾರಿಯಾಗಿದ್ದಾರೆ. ಕೆಲವರು ಉಲ್ಲೇಖ ಮಾಡಿದ್ದಾರೆ, ಕೆಲವರು ಉಲ್ಲೇಖ ಮಾಡದೆ ಬಳಸಿಕೊಂಡಿದ್ದಾರೆ. ಈ ಕೃತಿಯ ಪ್ರಭಾವ ಮತ್ತು ಪರಿಣಾಮಗಳನ್ನು ಲೆಕ್ಕ ಹಾಕಿದರೆ ಅದು ಕನ್ನಡದ ಮೇಲೆ, ಕನ್ನಡಿಗರ ಮೇಲೆ ಇನ್ನಿಲ್ಲದ ಪ್ರಭಾವ ಬೀರಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಅಂಗೈ ಅಗಲದ ಈ ಸಣ್ಣ ಪುಸ್ತಕದ ಪರಿವಿಡಿ ನೋಡಿದರೆ, ಆಕಾಶವೇ ಅಂಗೈಯಲ್ಲಿ ಹಿಡಿಯುವ ಸಾಹಸದಂತೆ ತೋರುತ್ತದೆ. ಅತ್ಯಂತ ಸಂಕೀರ್ಣವಾದ ವೈವಿಧ್ಯಮಯವಾದ ಗಾದೆಗಳ ಗುಣಗಳು, ಒಳಗೊಳ್ಳುವ ವಿಷಯಗಳು ಅವೆಲ್ಲವನ್ನೂ ಒಟ್ಟಿಗೆ ಹೇಳಿಬಿಡಬೇಕೆಂಬ ಹಂಬಲ ರಾಮಾನುಜನ್ ಅವರಲ್ಲಿ ಕಾಣುತ್ತದೆ. ಅದನ್ನು ಈ ಪುಸ್ತಿಕೆಯ ಪರಿವಿಡಿ ನೋಡಿದರೆ ನಮ್ಮ ಅರಿವಿಗೆ ಬರುತ್ತದೆ. ಎ.ಕೆ.ರಾಮಾನುಜನ್ ಅವರು ಬರೆಯುತ್ತಾರೆ 'ಈಗ ಕೆಲವು ವರ್ಷಗಳಿಂದ ಒಳಗೇ ಏರಿಬರುತ್ತಿದ್ದ ಗಾದೆಯ ಹುಚ್ಚು, ಹೋದವರುಷ ಜುಲೈ ತಿಂಗಳಲ್ಲಿ, ಚಿಕ್ಕೋಡಿಯ ವ್ಯಾಸಂಗ ವಿಸ್ತರಣ ಶಿಬಿರದಲ್ಲಿ ಕೋಡಿ ಹರಿಯಿತು' ಎಂದು. ಗಾದೆ ಹಿಡಿಸುವ ಹುಚ್ಚು ಎಂತಹದು ಎಂಬುದಕ್ಕೆ ಈ ಮಾತು ಸಾಕ್ಷಿ. ಅವರು ಗಾದೆಯಿಂದ ತಮಗಾದ ಲಾಭವನ್ನು ಹೀಗೆ ವಿವರಿಸುತ್ತಾರೆ: 'ಗಾದೆಯ ಕಡೆ ನನ್ನ ಗಮನ ಹರಿದ ಹೊಸದರಲ್ಲಿ, ಈ ನಾಲ್ಕು ನುಡಿಯ ಅಂಗೈ ಇಂತಹ ಆಕಾಶ ತೋರಿಸೀತೆಂದು ಎಣಿಸಿರಲಿಲ್ಲ– 'ಸ್ವಲ್ಪ ಕಂಡವನಿಗೆ ಅಚ್ಚರಿ ಬಹಳ' ಎಂತಲೋ ಏನೋ, ಇದನ್ನು ಬರೆಯುವ ಪ್ರಯತ್ನದಲ್ಲಿ ನಾನೆಷ್ಟೋ ಕಲಿತಿದ್ದೇನೆ, ಹಲವು ದಿಕ್ಕಿನಲ್ಲಿ ಬಾಗಿಲು ತೆರೆದು, ಎಷ್ಟೋ ವಿಷಯ ಬೆಳಕಾಯಿತು'.

ಗಾದೆಗಳಿಗೆ ಸಂಬಂಧಿಸಿದಂತೆ ನಂ. ತಪಸ್ವೀಕುಮಾರ್ ಅವರು ೧೯೭೨ ರಲ್ಲಿ **'ಕನ್ನಡ ಗಾದೆಗಳ ಸಮೀಕ್ಷೆ'** ಎಂಬ ಒಂದು ವಿಮರ್ಶೆ/ಸಂಶೋಧನಾತ್ಮಕ ಕೃತಿಯನ್ನು ಪ್ರಕಟಿಸಿದ್ದಾರೆ. ೧೨೦ ಪುಟಗಳ ಈ ಕೃತಿಯಲ್ಲಿ ಅಲ್ಲಿಯವರೆಗೆ ಬಂದ ಕನ್ನಡ ಗಾದೆಗಳ ಸಂಗ್ರಹಗಳನ್ನು ಮುಂದಿಟ್ಟುಕೊಂಡು, ಮತ್ತೆ ಇಂಗ್ಲೀಷಿನಲ್ಲಿ ದೊರೆಯುವ ಗಾದೆಗಳ ಬಗೆಗಿನ ಕೃತಿಗಳನ್ನು ಅವಲೋಕಿಸಿ, ಈ ಕೃತಿಯನ್ನು ರಚಿಸಿದ್ದಾರೆ. ನಂ.ತಪಸ್ವೀಕುಮಾರ

ಅವರು ಗಾದೆಗಳನ್ನು ಕುರಿತು ಪಿಎಚ್.ಡಿ.ಗಾಗಿ ಅಧ್ಯಯನ ಮಾಡುತ್ತ ಬರೆದ ಕೃತಿಯಿದು ಎಂದು ಬರೆದುಕೊಂಡಿದ್ದಾರೆ. 'ಗಾದೆಗಳ ಹುಟ್ಟು ಬೆಳವಣಿ' ಎಂಬ ಅಧ್ಯಾಯದಲ್ಲಿ ಗಾದೆಗಳ ಹಿನ್ನೆಲೆಯನ್ನು ಕುರಿತು ವಿವೇಚಿಸಲು ಪ್ರಯತ್ನಿಸಿದ್ದಾರೆ. "ಗಾದೆಯಿಲ್ಲದ ಭಾಷೆಯಿಲ್ಲ, ಭಾಷೆಯಿಲ್ಲದ ಜನಾಂಗವಿಲ್ಲ' ಎಂಬುದು ಬೆಲೆಯುಳ್ಳ ಸೂಕ್ತಿ. ಪ್ರಪಂಚದಾದ್ಯಂತ ಪ್ರಚಲಿತವಿರುವ ಸುಮಾರು ೪೦೦೦ಕ್ಕೂ ಹೆಚ್ಚಾಗಿರುವ ಭಾಷೆಗಳಲ್ಲಿ ಪ್ರತಿಯೊಂದು ಭಾಷೆಯೂ ಗಾದೆಗಳನ್ನೊಳಗೊಂಡಿದೆ. ಇಷ್ಟರಮಟ್ಟಿನ ಪ್ರಾಚುರ್ಯವನ್ನು ಪಡೆದುಕೊಂಡಿರುವ ಗಾದೆಗಳು ಹೇಗೆ ಹುಟ್ಟಿ ಬೆಳೆದವು? ಇದು ತುಂಬ ಕುತೂಹಲಕಾರಕ ಪ್ರಶ್ನೆ" (ಪು.೧) ಎಂಬ ಅಭಿಪ್ರಾಯದೊಂದಿಗೆ ತಮ್ಮ ಬರವಣಿಗೆಯನ್ನು ಪ್ರಾರಂಭಿಸುತ್ತಾರೆ. "ಆದಿ ಮಾನವನ ಆಡುಮಾತೇ ಗೀತಾತ್ಮಕವಾಗಿತ್ತು' ಎಂಬ ತತ್ವವನ್ನು ಬಹುಮಂದಿ ವಿದ್ವಾಂಸರು ಒಪ್ಪಿಕೊಂಡಿದ್ದಾರೆ" (ಪು.೨) ಎಂಬ ನಿರ್ಣಯವೇ ಕೊನೆಯವರೆಗೂ ಉಳಿದುಕೊಂಡುಬಂದಿದೆ. ಗಾದೆಗಳ ಬೆಳವಣಿಗೆಯ ವಿಷಯದಲ್ಲಿ ಜೆ.ಎ.ಕೆಲ್ಲೊ ಅವರು ಹೇಳುವ "ಗಾದೆಗಳು ಮತ್ತು ಸುಭಾಷಿತ ಸಾಹಿತ್ಯ–ಇವೆರಡು ಗ್ರೀಕ್ ತತ್ವಜ್ಞಾನದ ಎರಡು ಬೀಜಾಭಿವೃದ್ಧಿ ಕ್ಷೇತ್ರಗಳಾಗಿದ್ದವು"(ಪು.೨) ಎಂಬ ಮಾತು ಪ್ರಸಿದ್ಧವಾದುದಾಗಿದೆ.

ಕನ್ನಡ ಗಾದೆಗಳ ಬೆಳವಣಿಗೆಯನ್ನು ಗುರುತಿಸುತ್ತ 'ಕವಿರಾಜ ಮಾರ್ಗ' ಮೊದಲ್ಗೊಂಡು ಕನ್ನಡಕಾವ್ಯಗಳಲ್ಲಿ ಗಾದೆಗಳು ಬಳಕೆಯಾಗಿರುವುದನ್ನು ಸಮೀಕ್ಷಿಸಿದ್ದಾರೆ. 'ನಾಣ್ಣುಡಿಯ ಬೆಡಂಗೆ (ಬೆಡಂಗು) ಕನ್ನಡದ ಮಾತಿನೊಳ್' ಎಂದಿರುವುದು ಕನ್ನಡ ಭಾಷೆಯ ಮೂಲ ಸತ್ವ ಮತ್ತು ಸ್ವತಂತ್ರ ವ್ಯಕ್ತಿತ್ವವನ್ನು ಎತ್ತಿತೋರುತ್ತದೆ"(ಪು.೧೭) ಎಂಬ ಮಾತನ್ನು ಆಡಿ ಕನ್ನಡದ ಕವಿಗಳು ಜನಪದ ಗಾದೆಗಳನ್ನು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿರುವುದನ್ನು ಉಲ್ಲೇಖಿಸುತ್ತ ಹೋಗಿದ್ದಾರೆ.

ಮುಂದೆ ಗಾದೆಗಳ ಸ್ವರೂಪದ ಬಗ್ಗೆ ವಿವೇಚಿಸುತ್ತ ಜನಪದ ಗಾದೆಗಳು, ನಾಗರಿಕ ಗಾದೆಗಳು, ಗ್ರಂಥಸ್ಥ ಗಾದೆಗಳು ಎಂದು ಮೂರುಬಗೆಯ ಗಾದೆಗಳನ್ನು ಗುರುತಿಸುತ್ತಾರೆ. ನಾಗರಿಕ ಗಾದೆಗಳು ಎಂದರೆ ನಗರವಾಸಿಗಳು ಜನಪದ ಗಾದೆಗಳನ್ನೇ ಒಂದಿಷ್ಟು ಸುಧಾರಿಸಿ ಹೇಳುವ ಪದ್ಧತಿ ಎನ್ನುತ್ತಾರೆ. 'ಗ್ರಂಥಸ್ಥ ಗಾದೆಗಳು ಬಹುವಾಗಿ ಕವಿಕೃತವಾದವು. ಅವು ತುಂಬ ಆಲೋಚಿಸಿ, ಸಂಸ್ಕರಿಸಿ, ನಿಗವಿಟ್ಟು ತಿದ್ದಿ ತಯಾರಿಸಿದ ಮೆಚ್ಚಿನ ಹೊನ್ನೊಡವೆಗಳಿದ್ದಂತೆ' ಎನ್ನುವ ಲೇಖಕರು ಕವಿಗಳು ಜನಪದ ಗಾದೆಗಳನ್ನು ಬಳಸುತ್ತಲೇ ಕೆಲ ಹೊಸ ಗಾದೆಗಳನ್ನೂ ಸೃಷ್ಟಿಸುತ್ತಾರೆ ಎಂಬ ಅಭಿಪ್ರಾಯವನ್ನು ತಾಳುತ್ತಾರೆ.

ಗಾದೆಗಳ ಸಾಮಾಜಿಕ ಮೌಲ್ಯವನ್ನು ಗುರುತಿಸುವಲ್ಲಿ ಸಾಮಾಜಿಕ ವಸ್ತುವುಳ್ಳ ಕೆಲ ಗಾದೆಗಳನ್ನು ಆರಿಸಿಕೊಂಡು ವಿವರಿಸುತ್ತ ಹೋಗುತ್ತಾರೆ. ಗಾದೆಗಳ ಸಾಹಿತ್ಯಿಕ ಮೌಲ್ಯಗಳ ಬಗ್ಗೆಯೂ ವಿವರವಾಗಿ ಚರ್ಚಿಸಿದ್ದಾರೆ. ಗಾದೆಯಲ್ಲಿ ಬಳಕೆಯಾಗುವ ಪ್ರಾಸ, ಅಲಂಕಾರ, ವಸ್ತು ಇತ್ಯಾದಿಗಳು ಬಳಕೆಯಾಗುವುದನ್ನು ಒಂದೊಂದು ಗಾದೆ ಉದಾಹರಿಸಿ ವಿವರಿಸುತ್ತ ಹೋಗಿದ್ದಾರೆ. ೧೯೭೨ರಷ್ಟು ಹಿಂದೆ ಗಾದೆಗಳಿಗೆ ಸಂಬಂಧಿಸಿದಂತೆ ಇಂತಹ ಒಂದು ಕೃತಿ ರಚಿಸಿದ್ದು ಮಹತ್ವದ ಸಂಗತಿಯಾಗಿದೆ. ಇದನ್ನು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದೆ.

ಗಾದೆ ಅನುಭವದ ಆಗರ, ಜ್ಞಾನದ ಭಂಡಾರ. ಅದು ಸ್ವತಃ ಚಿಕ್ಕದು, ಆಕಾಶ ತೋರಿಸಬಲ್ಲುದು. ಪ್ರಪಂಚದಲ್ಲಿ ಮತ್ತೊಂದು ಇಂತಹ ಸಾಹಿತ್ಯ ಪ್ರಕಾರ ಇರಲಾರದು. ಒಂದು ಸಾಲಿನ ಸಾಹಿತ್ಯ ಇರುವುದು ಗಾದೆಯೊಂದೆ. ಜನಪದ ಸಾಹಿತ್ಯದಲ್ಲಿ ಸಾರಾಂಶಗಳನ್ನು, ಟೀಕೆಗಳನ್ನು, ವಿವರಣೆಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ಬರೆಸಿಕೊಂಡ ಸಾಹಿತ್ಯವೆಂದರೆ ಗಾದೆವೊಂದೇ. ಇತರ ಯಾವ ಸಾಹಿತ್ಯಕ್ಕೂ ಇಂತಹ ಬಹುಬಗೆಯ ಶಾಸ್ತ್ರಸಾಹಿತ್ಯ ಬೆಳೆದುಬಂದಿಲ್ಲ. ನೇರವಾಗಿ ಬದುಕಿಗೆ ಕೂಡಲೇ ಉಪಯೋಗಕ್ಕೆ ಬರುವ ಜ್ಞಾನದ ಮೂಲ ಗಾದೆಯಾಗಿರುವುದರಿಂದ ಇವುಗಳು ಹೊಸ ಹೊಸ ರೀತಿಯಲ್ಲಿ ಮತ್ತೆ ಮತ್ತೆ ಲಿಖಿತ ಮೂಲದ ಕೃತಿಗಳ ಮೂಲಕ ಪ್ರಚಾರಕ್ಕೆ ಬರುತ್ತಲಿವೆ. ಗಾದೆಗಳ ಹಿಂದೆ ಕಥೆಗಳು ಅಡಗಿವೆ. ಅಂದರೆ ತನ್ನ ಒಡಲಲ್ಲಿ ಒಂದು ಮಹಾಕಾವ್ಯವನ್ನೇ ಅಡಗಿಸಿಟ್ಟುಕೊಳ್ಳುವ ಸಾಮರ್ಥ್ಯ ಒಂದು ಗಾದೆಗಿದೆ. ಇವುಗಳನ್ನು ಸಂಗ್ರಹ ಮಾಡುವುದು ಇತರ ಸಾಹಿತ್ಯದಂತೆ ಸುಲಭವಲ್ಲ. ಕೇಳಿದರೆ ಥಟ್ಟನೆ ನೆನಪಿಗೆ ಬಾರದ, ಪ್ರಸಂಗ ಬಂದಾಗ ಥಟ್ಟನೆ ಬಾಯಿಗೆ ಬರುವ ವಿಚಿತ್ರ ಸಾಹಿತ್ಯ ಪ್ರಕಾರವಿದು.

೧. ಗಾದೆಗಳ ಸ್ವತಂತ್ರ ಕೃತಿಗಳು :

೧೮೫೨ ರಲ್ಲಿ ಪ್ರಕಟವಾದ **'ಗಾದೆಗಳು'** ಎಂಬ ಹೆಸರಿನ ಸಂಗ್ರಹವೊಂದು ಬೆಳಕು ಕಂಡಿದೆ. ಹಾಮಾನಾ ಅವರ **'ಜಾನಪದ ಗ್ರಂಥಸೂಚಿ'** ಯಲ್ಲಿ ಈ ಕೃತಿಯನ್ನು **'ಕನ್ನಡ ಗಾದೆಗಳು'** ಎಂದು ಕರೆದಿದ್ದಾರೆ. ಅದನ್ನು ಕ್ಯಾತನಹಳ್ಳಿ ರಾಮಣ್ಣ ಮತ್ತು ಟಿ.ಎಸ್.ರಾಜಪ್ಪ ಅವರು ಕೃತಿಯನ್ನು ಪುನಃ ಪ್ರತಿಮಾಡಿಕೊಂಡು ಸಂಪಾದಿಸಿ, ೨೦೦೧ರಲ್ಲಿ ಪ್ರಕಟಿಸುವಾಗ **'ಕಲ್ಲಚ್ಚಿನ ಗಾದೆಗಳು'** ಎಂಬ ಹೆಸರನ್ನು ಕೊಟ್ಟಿದ್ದಾರೆ. ಕನ್ನಡ ಜನಪದ ಸಾಹಿತ್ಯದ ಪ್ರಕಟನೆಯ ಇತಿಹಾಸವನ್ನು ೧೮೫೨ ರಷ್ಟು ಹಿಂದೆ ಒಯ್ಯುವ ಈ ಕೃತಿ ಒಂದು ಮಹತ್ವದ ದಾಖಲೆ. ಈ ಕೃತಿಯಲ್ಲಿ ೩೪೪೩ ಗಾದೆಗಳಿವೆ. ಅವುಗಳನ್ನು ಅಕಾರಾದಿಯಾಗಿ ಜೋಡಿಸಲಾಗಿದೆ. ಸುಂದರವಾದ ಕೈಬರಹವಿದೆ. ಈ ಕೃತಿಯ ಮೂಲ ಪ್ರತಿಯ ಬಗ್ಗೆ ಈಗ ಪ್ರಕಟಿಸಿರುವ ಸಂಪಾದಕರು ಹೀಗೆ ಬರೆದಿದ್ದಾರೆ: "ಕನ್ನಡ ಗಾದೆಗಳ ಪ್ರಕಟನೆಯ ಕಾಲವನ್ನು ನೂರೈವತ್ತು ವರ್ಷಗಳಷ್ಟು ಹಿಂದಕ್ಕೆ ಸರಿಸಿ, ಕನ್ನಡದ ಮೊಟ್ಟಮೊದಲ ಗಾದೆಗಳ ಸಂಕಲನ ಎಂಬ ಕೀರ್ತಿಗೆ ಒಳಗಾಗಿರುವ ಅಪರೂಪದ ಈ ಸಂಕಲನವು ಯಾರಿಂದ ಸಂಗ್ರಹಗೊಂಡಿತು ಎಂಬ ಸಂಗತಿಯನ್ನು ನಿಗೂಢವಾಗಿಯೇ ಉಳಿಸಿಕೊಟ್ಟಿದೆ. ೧೮೫೨ರಲ್ಲಿ ಪ್ರಕಟವಾಗಿರುವ ಈ ಕಲ್ಲಚ್ಚಿನ ಪ್ರತಿಯು ಫೂಲ್ಸ್‌ಕ್ಯಾಪ್ ಆಕಾರದಲ್ಲಿದ್ದು, ೧೦೭ ಪುಟಗಳನ್ನು ಒಳಗೊಂಡಿದ್ದು, ಒಟ್ಟು ೩೪೫೭ ಗಾದೆಗಳಿವೆ. ಈ ಪುಸ್ತಕದಲ್ಲಿ ಪ್ರಕಾಶಕರ ಹೆಸರು ನಮೂದಾಗಿಲ್ಲ. ಮಂಗಳೂರಿನಲ್ಲಿ ಛಾಪಿಸಿದ್ದು ಎಂದು ಮಾತ್ರ ನಮೂದಾಗಿದೆ. ಕೆಲವು ಗಾದೆಗಳು ಅಸ್ಪಷ್ಟವಾಗಿವೆ. ಅಸ್ಪಷ್ಟವೂ ಆಗಿದ್ದು ಕೆಲವು ಅಪೂರ್ಣ ರೂಪದಲ್ಲಿಯೂ ದೊರಕಿರುವುದರಿಂದ ಈ ಪುನರ್ಮುದ್ರಣದ ಪ್ರತಿಯಲ್ಲಿ ಗಾದೆಗಳ ಸಂಖ್ಯೆ ವ್ಯತ್ಯಾಸವಾಗಿದೆಯಷ್ಟೆ. ಅಚ್ಚನ್ನೂ ನಾಚಿಸುವಂಥ ಏಕರೂಪದ ಕೈಬರಹ ಹಾಗೂ ಅದೇ ಮಾದರಿಯ ಕನ್ನಡ ಅಂಕಿಗಳು ವಿಸ್ಮಯಕಾರಿಯಾಗಿವೆ. ಹತ್ತೊಂಬತ್ತನೆಯ ಶತಮಾನದ ಕನ್ನಡ ಅಕ್ಷರಗಳ ರೂಪಗಳನ್ನೂ ಈ ಕಲ್ಲಚ್ಚಿನ ಪ್ರತಿಯಲ್ಲಿ ಕಾಣಬಹುದು. ಜೊತೆಗೆ ಶಿಸ್ತುಬದ್ಧ ಅಕಾರಾದಿ" (ಪ್ರ.ಪು.೮). ಈ ಕೃತಿಯ ಪ್ರಕಟನೆ ಸಹಜವಾಗಿಯೇ

ಕ್ಯಾತನಹಳ್ಳಿ ಮತ್ತು ರಾಜಪ್ಪ ಅವರಿಗೆ ಹೆಸರು ತಂದಿದೆ. ಆಗಿನ ಕಾಲಕ್ಕೆ ಈ ಕೃತಿ ಎಷ್ಟು ಪ್ರಚಾರ ಪಡೆಯಿತೋ ಏನೋ ನಮಗೆ ತಿಳಿಯದು. ಅದು ಕನ್ನಡ ಸಾಹಿತ್ಯದ ಮೇಲೆ ಮಾಡಿದ ಪರಿಣಾಮವೂ ನಮ್ಮ ಅರಿವಿಗೆ ಬರದು. ಆದರೆ ಅತ್ಯಂತ ಪರಿಶ್ರಮದ ಕೆಲಸ ಮಾಡಿದ ಆ ಅಜ್ಞಾತ ಸಂಪಾದಕರು ಮಾತ್ರ ಕನ್ನಡದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಜನಪದ ಸಾಹಿತ್ಯ ಅಷ್ಟೇ ಅಲ್ಲ ಇಡೀ ಕನ್ನಡ ಸಾಹಿತ್ಯ ಪ್ರಕಟನೆಯ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿ ಅವರು ನಿಲ್ಲುತ್ತಾರೆ.

ಈ ಕೃತಿಗಾಗಿ ಗಾದೆಗಳನ್ನು ಸಂಗ್ರಹಿಸಿದ ಪ್ರದೇಶವ್ಯಾಪ್ತಿಯನ್ನು ಕುರಿತು ಈಗಿನ ಸಂಪಾದಕರು ಅಲ್ಲಿಯ ಗಾದೆಗಳನ್ನು ಗಮನಿಸಿ ಹೀಗೆ ಬರೆದಿದ್ದಾರೆ : "ಕನ್ನಂಬಾಡಿಯಲ್ಲಿ ಕಂಬಳೀ ಕಿತ್ತುಕೊಂಡರೆ ಬಲಮುರಿಯಲ್ಲಿ ಹಲ್ಲಮುಡೀ ಕಚ್ಚಿಕೊಂಡ(೫೭೭) ಎಂಬ ಗಾದೆಯನ್ನು ಗಮನಿಸಿದರೆ ಈ ಸಂಕಲನದ ಗಾದೆಗಳು ಬಹುಪಾಲು ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಸಂಗ್ರಹವಾಗಿರುವಂತೆ ತೋರುತ್ತದೆ. ಹೆಚ್ಚಿನ ಗಾದೆಗಳಲ್ಲಿ ಈ ಎರಡೂ ಜಿಲ್ಲೆಗಳ ಬದುಕು ಕಂಡುಬರುತ್ತದೆ. ಈ ಎರಡೂ ಜಿಲ್ಲೆಗಳು ಹಿಂದೊಮ್ಮೆ ಒಂದೇ ಜಿಲ್ಲೆಯಾಗಿದ್ದು ಬದುಕು ಒಂದೇ ತೆರನಾಗಿದ್ದುದು ಆಶ್ಚರ್ಯದ ಮಾತಲ್ಲ" (ಪ್ರ.ಪು. ೯). ಮುಂದುವರೆದು ಮತ್ತೆ ಹೀಗೆ ಬರೆಯುತ್ತಾರೆ: "ನಂಜನಗೂಡು, ಮೇಲುಕೋಟೆ, ಕೊಡಿಯಾಲ, ಗೊಟ್ಟಕೆರೆ, ನರಗುಂದ, ತೋಕೂರು, ಬಂಡೆಹಳ್ಳಿ, ಬಂಟವಾಳ, ವಿಜಾಪೂರ, ವಂಡಾರ, ಬಸ್ರೂರ, ಕೋಟೇಶ್ವರ, ಅಡೂರು, ಪಣಂಬೂರು, ಹಗಲವಾಡಿ, ಚಂದಾವರ, ಹಂಪೆ, ಬಂಕಾಪುರ, ಕುಮಟೆ ಹೀಗೆ ಕರ್ನಾಟಕದ ವಿವಿಧ ಭಾಗಗಳ ಹೆಸರುಗಳಷ್ಟೇ ಅಲ್ಲದೆ, ಕರ್ನಾಟಕದಾಚೆಗಿನ ಔರಂಗಾಬಾದ್ ಎಂಬ ಪ್ರದೇಶವೂ ಇಲ್ಲಿ ಪ್ರಸ್ತಾಪವಾಗುತ್ತದೆ. ಇದರಿಂದ ಈ ಗಾದೆಗಳ ಸಂಗ್ರಹವ್ಯಾಪ್ತಿಯ ವೈಶಾಲ್ಯವನ್ನು ತಿಳಯಬಹುದಾಗಿದೆ" (ಪ್ರ.ಪು.೯).

ಕ್ಯಾತನಹಳ್ಳಿ ರಾಮಣ್ಣ ಮತ್ತು ಟಿ.ಎಸ್.ರಾಜಪ್ಪ ಅವರು ಸಂಪಾದಿಸಿ ೨೦೦೧ರಲ್ಲಿ ಪ್ರಕಟಿಸಿದ (೨೦೧೧ ಎರಡನೇ ಮುದ್ರಣ) **'ಕಲ್ಲಚ್ಚಿನ ಗಾದೆಗಳು'** ಕೃತಿಯಲ್ಲಿ ಡೇನಿಯಲ್ ಸ್ಯಾಂಡರ್ಸನ್ ಸಂಗ್ರಹಿಸಿದ ೨೧೪ ಗಾದೆಗಳನ್ನು ಅನುಬಂಧ–೧ ರಲ್ಲಿ ಕೊಟ್ಟಿದ್ದಾರೆ. ಸಂಪಾದಕರು ಅಲ್ಲಿ ಹೀಗೆ ಬರೆದುಕೊಂಡಿದ್ದಾರೆ: "ಈ ಸಂಕಲನದ ಕೊನೆಯಲ್ಲಿ ಇರುವ ಒಂದು ಅನುಬಂಧದಲ್ಲಿ ಇನ್ನೊಂದು ವೈಶಿಷ್ಟ್ಯವಿದೆ. ಗಾದೆಗಳ ಕ್ಷೇತ್ರಕ್ಕೆ ಹೊಸ ಹೆಸರೊಂದನ್ನು ಪರಿಚಯಿಸಿಕೊಡಲಾಗಿದೆ. ಸುಮಾರು ೧೯೦೦ರ ಕಾಲದಲ್ಲೇ ಈ ಕ್ಷೇತ್ರದಲ್ಲಿ ದುಡಿದಿರುವ ರೆವರೆಂಡ್ ಡೇನಿಯಲ್ ಸ್ಯಾಂಡರ್‌ಸನ್ ಎಂಬ ವಿದ್ವಾಂಸರೊಬ್ಬರು ಈ ಆಧುನಿಕ ಕಾಲಕ್ಕೆ ಮೊದಲಸಲ ಪರಿಚಯವಾಗುತ್ತಿದ್ದಾರೆ" (ಪ್ರ.ಪು.೭). ಆದರೆ **'ಕನ್ನಡ ಗಾದೆಗಳ ಕೋಶ'** ಕೃತಿಯ ಸಂಪಾದಕರಾದ ಟಿ.ವಿ.ವೆಂಕಟರಮಣಯ್ಯ ಅವರು ಡೇನಿಯಲ್ ಅವರ **'ಕಥಾಸಂಗ್ರಹ'** (ಸಂ.೨) ಗಮನಿಸಿದ್ದಾರೆ. ಮತ್ತು ಆ ಕೃತಿಯಲ್ಲಿ ಪುಟ ೨೭೮ ರಿಂದ ೨೯೧ ವರೆಗೆ ಕೊಟ್ಟ ಗಾದೆಗಳನ್ನು ತಮ್ಮ ಕೃತಿಗೆ ಬಳಸಿಕೊಂಡಿದ್ದಾರೆ. ಆ ಕೃತಿ ಮೈಸೂರು ವೆಸ್ಲಿಯನ್ ಪಬ್ಲಿಷಿಂಗ್ ಸೊಸೈಟಿ, ೧೯೨೧ ರಲ್ಲಿ ಪ್ರಕಟಿಸಿರುವ ಮಾಹಿತಿಯನ್ನೂ ದಾಖಲಿಸಿದ್ದಾರೆ.

ಆದರೆ ತಾವು ಬಳಸಿಕೊಂಡ ಕೃತಿಗಳಲ್ಲಿಯ ಒಂದೊಂದು ಗಾದೆಯೂ ಯಾವ ಸಂಗ್ರಹದಿಂದ ಎತ್ತಿಕೊಂಡದ್ದು ಎಂಬ ಉಲ್ಲೇಖ ಕೊಟ್ಟಿದ್ದರೆ ಅವರ ಕೆಲಸಕ್ಕೆ ಇನ್ನಷ್ಟು ಮಹತ್ವ ಬರುತ್ತಿತ್ತು.

ಕನ್ನಡ ಗಾದೆಗಳ ಪ್ರಕಟನೆಯ ಇತಿಹಾಸದಲ್ಲಿ ರೆವರಂಡ್ ಎಫ್. ಕಿಟ್ಟೆಲ್ಲ ಅವರ ಶಬ್ದಕೋಶದ ಪ್ರಕಟನೆ ಒಂದು ಮಹತ್ವದ ಆಕರವಾಗಿ ಕಾಣುತ್ತದೆ. ೧೮೯೪ರಲ್ಲಿ ಪ್ರಕಟವಾದ **'ಕನ್ನಡ-ಇಂಗ್ಲೀಷ ಡಿಕ್ಷನರಿ'** ಯಲ್ಲಿ ೪೨೬೦ ಗಾದೆಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆ ನೋಡಿದರೆ ಇದು ನಿಜವಾಗಿಯೂ ಅತ್ಯಂತ ಮಹತ್ವದ ಪ್ರಯತ್ನ. ಕನ್ನಡದ ಪದಗಳಿಗೆ ಸರಿಯಾದ ಅರ್ಥ ವಿವರಣೆಗಳನ್ನು ಒದಗಿಸಲು ಗಾದೆಗಳನ್ನು ಉಲ್ಲೇಖಿಸುವುದು ಸಾಮಾನ್ಯ ಜ್ಞಾನವಲ್ಲ. ಆದರೆ ಈ ಕೆಲಸಕ್ಕೆ ಸಾಕಷ್ಟು ಸಹಾಯ ಮಾಡಿದವರು ಆಗಿನ ಕಾಲದ ಕನ್ನಡದ ದೊಡ್ಡ ವಿದ್ವಾಂಸರ ತಂಡ ಎಂಬುದನ್ನು ಮರೆಯುವಂತಿಲ್ಲ. ಇದು ಸಂಪೂರ್ಣವಾಗಿ ಕಿಟ್ಟೆಲ್ಲ ಒಬ್ಬರ ಕೆಲಸವಲ್ಲ. ಈ ಕೋಶವನ್ನು ತಯಾರಿಸಲು ನೇಮಿಸಿಕೊಂಡ ಕನ್ನಡ ವಿದ್ವಾಂಸರ ಪ್ರಯತ್ನವೂ ಅದರಲ್ಲಿದೆ ಎಂಬುದನ್ನು ಮರೆಯುವಂತಿಲ್ಲ. ಅಲ್ಲಿ ಸಂಗ್ರಹಿಸಿದ ಗಾದೆಗಳ ಪ್ರಮಾಣವೂ ದೊಡ್ಡದಾಗಿದೆ. ಮೊದಲನೆಯದಾಗಿ ಗಾದೆಗಳ ಒಂದು ಮಹತ್ವದ ಪ್ರಯೋಜನವನ್ನು ಈ ಕೋಶದಲ್ಲಿ ನಾವು ನೋಡುತ್ತೇವೆ. ಒಂದು ಭಾಷೆಯ ಪದಗಳನ್ನು ಅರ್ಥೈಸಲು ಅದೇ ಸಂಸ್ಕೃತಿಯಲ್ಲಿ ಹುಟ್ಟಿಕೊಂಡ ಗಾದೆಗಳ ಸಹಾಯದಿಂದ ಸಾಧ್ಯ ಎಂಬುದು ಇಲ್ಲಿಯ ಮಹತ್ವದ ಸಂಗತಿಯಾಗಿದೆ. ಹೀಗಾಗಿ ಗಾದೆಗಳ ಪ್ರಕಟನೆಯ ಮತ್ತು ಅವುಗಳನ್ನು ಬಳಸಿಕೊಂಡ ಉದ್ದೇಶದ ಇತಿಹಾಸದಲ್ಲೂ ಈ ಕೋಶದ ಮಹತ್ವ ಅಡಗಿದೆ.

ಕಿಟ್ಟೆಲ್ ಕೋಶದಲ್ಲಿರುವ ಎಲ್ಲ ಗಾದೆಗಳನ್ನು ಬೇರೆ ಮಾಡಿ, **'ಕಿಟ್ಟೆಲ್ ಕೋಶದ ಗಾದೆಗಳು'** (೧೯೬೯) ಎಂಬ ಕೃತಿಯನ್ನು ರಾಗೌ ಅವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿದ್ದಾರೆ. ಕೊನೆಯಲ್ಲಿ ಆರಿಸಿದ ಕೆಲ ಶಬ್ದಗಳಿಗೆ ಅರ್ಥಗಳನ್ನು ಕೊಟ್ಟಿದ್ದಾರೆ. ಕಿಟ್ಟೆಲ್ ಕೋಶದ ಗಾದೆಗಳನ್ನು ಗಮನಿಸಿಯೇ ಒಂದು ಮಹತ್ವಪೂರ್ಣ ಅಧ್ಯಯನ ಮಾಡಬಹುದಾಗಿದೆ ಎಂಬ ಕಲ್ಪನೆಯನ್ನು ಈ ಕೃತಿ ಮೂಡಿಸುತ್ತದೆ. ಗಾದೆಗಳನ್ನು ಸಂಗ್ರಹಿಸಿದ ಪ್ರದೇಶವನ್ನು ಕಿಟ್ಟೆಲ್ ಅವರು ಹೀಗೆ ವಿವರಿಸಿದ್ದಾರೆ: Kannada Proverbs collected in the South-Mahratta country, Mysore and Canara. (Most of them are old and very instructive, some adopted from Tulu, and some of late origin.) (ಪ್ರಿಫೇಸ್ ಪು. ೬). ಮಹಾರಾಷ್ಟ್ರದ ದಕ್ಷಿಣಭಾಗ ಎಂದರೆ ಬಾಂಬೆ ಕರ್ನಾಟಕದ ಭಾಗಗಳು ಇರಬೇಕು. ಕಿಟ್ಟೆಲ್ಲರು ಕೆಲದಿನ ಧಾರವಾಡದಲ್ಲಿ ಉಳಿದು ಈ ಕೋಶಕ್ಕಾಗಿ ಪದಗಳನ್ನು ಸಂಗ್ರಹಿಸಿದ್ದು ತಿಳಿದುಬರುತ್ತದೆ. ಹೀಗಾಗಿ ಧಾರವಾಡ, ಬೆಳಗಾಂವ ಹಾಗೂ ಅವಿಭಾಜಿತ ವಿಜಯಪುರ ಜಿಲ್ಲೆಯ ಭಾಗಗಳಿಂದ, ಜೊತೆಗೆ ಮೈಸೂರು ಮತ್ತು ಕರಾವಳಿ ಪ್ರದೇಶಗಳಿಂದ ಇಲ್ಲಿಯ ಗಾದೆಗಳನ್ನು ಸಂಗ್ರಹಿಸಿದಂತೆ ತೋರುತ್ತದೆ. ಹೀಗಾಗಿ ಕಿಟ್ಟೆಲ್ ಕೋಶದ ಗಾದೆಗಳು ಕರ್ನಾಟಕದ ಬಹುತೇಕ ಭಾಗಗಳಿಂದ ಸಂಗ್ರಹಿಸಿದ ಗಾದೆಗಳಾಗಿವೆ.

ಅರ್ಚಕ ಬಿ. ರಂಗಸ್ವಾಮಿ ಅವರು ೧೯೩೩ರಲ್ಲಿ ಪ್ರಕಟವಾದ ತಮ್ಮ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'** ಕೃತಿಯಲ್ಲಿ ತಾವು ತಮ್ಮೂರಿನಲ್ಲಿ ಸಂಗ್ರಹಿಸಿದ ೬೬೪ ಗಾದೆಗಳನ್ನು ಕೊಟ್ಟಿದ್ದಾರೆ. ಒಂದೂರಿನಲ್ಲಿ ಇಷ್ಟೊಂದು ಬಗೆಯಲ್ಲಿ ಗಾದೆಗಳು ದೊರೆತಿರುವುದು ಸಾಮಾನ್ಯ ಸಂಗತಿಯಲ್ಲ. ಇಲ್ಲಿಯ ಗಾದೆಗಳನ್ನು ಗಮನಿಸಿದರೆ ಅಲ್ಲೆಲ್ಲ ಸುಪ್ರಸಿದ್ಧ ಗಾದೆಗಳೆಲ್ಲ ಇವೆ. **'ಗಾದೆ ವೇದಕ್ಕೆ ಸಮಾನ, ಕೆಟ್ಟ ಮೇಲೆ ಬುದ್ಧಿ ಬಂತು ಅಟ್ಟ ಮೇಲೆ ಒಲೇ ಉರಿಯಿತು, ಕೈ ತೋರಿಸಿ ಅವಲಕ್ಷಣ ಅನಿಸಿಕೊಂಡ ಹಾಗಾಯ್ತು, ಕಂಡಿದ್ದು ಹೇಳಿದರೆ ಕೆಂಡದಂತಹ ಕೋಪ'** ಮುಂತಾದವು. ಒಂದು ಹಳ್ಳಿಯಲ್ಲಿ ದೊರೆಯುವ ಇಲ್ಲಿಯ ಗಾದೆಗಳನ್ನು ಗಮನಿಸಿದರೆ, ಅವುಗಳ ಸಾರ್ವತ್ರಿಕತೆ ಬಗ್ಗೆ ನಿಜವಾಗಿಯೂ ಆಶ್ಚರ್ಯ ಮೂಡುತ್ತದೆ.

ಅರ್ಚಕ ಬಿ. ರಂಗಸ್ವಾಮಿ (ಜನನ: ೧೮೯೫, ಮರಣ: ೨೯–೯–೧೯೯೧) ಅವರು ತಮ್ಮ ಪುಸ್ತಕ ಪ್ರಕಟವಾಗುವಾಗ ೩೮ ವರ್ಷ ವಯಸ್ಸಿನವರು. ಅವರು ಸಂಸ್ಕೃತ ವಿದ್ಯಾಭ್ಯಾಸ ಮಾಡಿಯೂ ಹಳ್ಳಿಯಲ್ಲೇ ಉಳಿದವರು. ತಮ್ಮೂರಿನಲ್ಲಿ ನಾಲ್ಕನೆಯ ತರಗತಿಯವರೆಗೆ ಓದಿದ ರಂಗಸ್ವಾಮಿ ಅವರು ನಂತರ ಮೈಸೂರಿನಲ್ಲಿ ೧೬ವರ್ಷಗಳ ಕಾಲ ಸಂಸ್ಕೃತ ವಿದ್ಯಾಭ್ಯಾಸ ಮಾಡಿದ್ದರು. ವೇದ ಆಗಮಗಳಲ್ಲಿ ಅಗಾಧವಾದ ವಿದ್ವತ್ತು ಗಳಿಸಿದ್ದರು. ಆಗಮದ ಪ್ರಾಧ್ಯಾಪಕನಾಗಬಲ್ಲ ಶಿಕ್ಷಣ, ವಿದ್ವತ್ತು ಅವರಲ್ಲಿ ಇತ್ತು. ಅದೆಲ್ಲವನ್ನು ಬಿಟ್ಟು ಬಂದು ಬಂಡಿಪುರದಲ್ಲಿ ವಾಸವಾಗಿದ್ದು, ಜನಪದ ಸಾಹಿತ್ಯದ ಕಡೆ ಗಮನ ಹರಿಸಿದ್ದು ಆಶ್ಚರ್ಯದ ಸಂಗತಿಗಳೇ ಅಗಿವೆ.

ಬಹುಶಃ ತಮ್ಮ ೩೫–೩೬ನೇ ವಯಸ್ಸಿನಲ್ಲಿ ಎರಡ್ಮೂರು ವರ್ಷಗಳ ಕಾಲ ಈ ಕೃತಿರಚನೆಯಲ್ಲಿ ತೊಡಗಿರಬೇಕೆನಿಸುತ್ತದೆ. ಅವರ ಕೌಟುಂಬಿಕ ಜೀವನದಲ್ಲಿ ಸಾವುನೋವುಗಳು ಮೇಲಿಂದ ಮೇಲೆ ಅಪ್ಪಳಿಸುತ್ತಲೆ ಇದ್ದವು. ಅಂತಹದರಲ್ಲಿ ಇಂತಹ ಒಂದು ಕೆಲಸ ಮಾಡಬೇಕೆಂದು ಅನಿಸಿದ್ದೇ ಆಶ್ಚರ್ಯದ ಮಾತು. ಅವರ ಊರು ಮಂಡ್ಯ ಜಿಲ್ಲೆಯ, ಕೃಷ್ಣರಾಜಪೇಟೆ ತಾಲೂಕಿನ ಬಂಡಿಹೊಳೆ ಎಂಬ ಪುಟ್ಟ ಗ್ರಾಮ. ಕೇವಲ ೧೨೦ ಮನೆಗಳುಳ್ಳ ಗ್ರಾಮವದು. ತಮಗೆ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'** ಬರೆಯಲು ಪ್ರೇರಣೆಯಾದ ಹಿನ್ನೆಲೆಯನ್ನು ರಂಗಸ್ವಾಮಿ ಅವರು ಹೀಗೆ ಬರೆದುಕೊಂಡಿದ್ದಾರೆ. "ಹಳ್ಳಿಯ ವಾಸದಲ್ಲಿ ವ್ಯರ್ಥವಾಗಿ ಎಷ್ಟೋ ದಿನಗಳು ಕಳೆದ ಮೇಲೊಂದು ದಿನ 'ವಿಶ್ವಕರ್ಣಾಟಕ' ಪತ್ರಿಕೆಯಲ್ಲಿ 'ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂದು ಬರೆದಿದ್ದುದನ್ನು ಓದಿದೆನು. ಆಗ ಆ ವಾಕ್ಯದ ಮಹತ್ತ್ವದ ಕಡೆಗೆ ಲಕ್ಷ್ಯವು ಕಡಮೆಯಾಗಿಯೇ ಇತ್ತು. ಹಳ್ಳಿಗರ ರಾಗಿ ಬೀಸುವ ಪದ, ಕೋಲಾಟದ ಪದ, ಕಣಗಳಲ್ಲಿ ಹಾಡುವ ಪದ, ಇವೆಲ್ಲವುಗಳ ಕಡೆಗೆ ಲಕ್ಷ್ಯವಿಟ್ಟು ನೋಡಿದಾಗ ಮೇಲಿನ ವಾಕ್ಯವು ಹೃದಯದಲ್ಲಿ ತನ್ನದೇ ಒಂದು ರಾಜ್ಯವನ್ನು ಕಟ್ಟಿತು. ಅದರ ಕ್ರಮವೇ ಈ 'ಹುಟ್ಟಿದ ಹಳ್ಳಿ'ಯಾಗಿ ಪರಿಣಮಿಸಿತು" (ಅರಿಕೆ, ಪು.೯). ರಂಗಸ್ವಾಮಿ ಅವರು ತಮ್ಮ ಕೆಲಸಕ್ಕೆ ಕೈಹಾಕಿದ ನಂತರದ ಅನುಭವವನ್ನು ಹೀಗೆ ವ್ಯಕ್ತಪಡಿಸುತ್ತಾರೆ: "ಹೆಸರಿಗೆ 'ಪಾಮರ ಸಾಹಿತ್ಯ'ವೆಂಬುದು ದಿಟ. ಆದರೆ ರಸದ ಝರಿಯು ಪಂಡಿತ ಸಾಹಿತ್ಯದ ಜೊತೆಯಲ್ಲಿಯೇ ಹರಿಯುವುದು"(ಅದೆ, ಪು.೯). ಅವರ

ಲಕ್ಷ್ಯ ಈ ಕಡೆ ಹರಿಯಲು ಇನ್ನೊಂದು ಮುಖ್ಯಕಾರಣವೂ ಇತ್ತು. ಅದೆಂದರೆ ಸ್ವಾತಂತ್ರ್ಯ ಚಳವಳಿಯ ಕಾವು. ದೇಶಭಕ್ತಿಯ ಹಮ್ಮಸ್ಸು. ಅವರು ಒಂದೆಡೆ ಹೀಗೆ ಉಲ್ಲೇಖಿಸಿದ್ದಾರೆ "ದೇಶ ಸೇವೆಯನ್ನು ಮರೆಯುವುದಕ್ಕಾದೀತೆ? ವೃತ್ತಿವಂತರು, ಜಹಗೀರ್ದಾರರು, ಹಳ್ಳಿಯ ಉಪಾಧ್ಯಾಯರು, ಗ್ರಾಮದ ಮುಖಂಡರು ಮುಂತಾದವರು ಈ ವಿಧವಾದ ಕಾರ್ಯರಂಗಕ್ಕಿಳಿದರೆ ಕರ್ಣಾಟಕ ಸಾಹಿತ್ಯವನ್ನು ತುಂಬಿಡಲು ಕಟ್ಟಡವನ್ನೆಲ್ಲಿ ತರೋಣ?" (ಅದೆ, ಪು.೧೧). ಮುಂದುವರೆದು ಹೀಗೂ ಬರೆದಿದ್ದಾರೆ "ಸ್ನೇಹಿತರೆ! ಸಂಸ್ಕೃತಿಯನ್ನು ಬಿಟ್ಟೀರಿ ಜೋಕೆ. ಔಚಿತ್ಯವನ್ನು ಮರೆತೀರಿ ಎಚ್ಚರಿಕೆ" (ಅದೆ, ಪು.೧೩). ಜನಪದ ಸಾಹಿತ್ಯ ಸಂಸ್ಕೃತಿಗಳ ಸಂಪರ್ಕಗಳು ಅವರಲ್ಲಿ ಈ ಬಗೆಯ ಅರಿವು ಮೂಡಿಸಿವೆ ಎಂಬುದು ಸ್ಪಷ್ಟ. ಈ ಅರಿವು ಕೆಲಸ ಮಾಡಲು ತೊಡಗಿಸಿದ್ದು ಸ್ವಾತಂತ್ರ್ಯ ಚಳುವಳಿಯ ಸಂಗತಿ ಎಂಬುದು ಗಮನಾರ್ಹ. ಅವರ ಈ ಬಗೆಯ ಎಚ್ಚರಿಕೆಯ ಮಾತುಗಳು, ಅವರ ಕೆಲಸದ ಮಾದರಿಗಳು ಇಂದಿನವರಿಗೆ ಸ್ಫೂರ್ತಿಯಾಗಬೇಕಾದ ಅವಶ್ಯಕತೆ ಇದೆ.

ದೇವುಡು ಅವರು ತಾವು ಸಂಗ್ರಹಿಸಿದ ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿದ್ದಾರೆ. ಗಾದೆಗಳ ಬಗ್ಗೆ ನೇರವಾಗಿ ಏನೂ ಹೇಳಿಲ್ಲವಾದರೂ ಅವರು ಜನಪದ ಸಾಹಿತ್ಯದ ಬಗ್ಗೆ ಆಡಿದ ಮಾತುಗಳು ಅವು ಗಾದೆಗಳನ್ನೂ ಕುರಿತು ಆಡಿದ ಮಾತುಗಳೆನಿಸುತ್ತವೆ. ರಂಗಸ್ವಾಮಿ ಅವರ ನಂತರ ಇಂತಹ ಒಂದು ಪ್ರಯತ್ನವನ್ನು ಯಾರೂ ಮಾಡಿಲ್ಲ. ಒಂದು ಗ್ರಾಮದ ಇಡೀ ಸಂಸ್ಕೃತಿಯನ್ನು ಹಿಡಿದಿಡುವ ಪ್ರಯತ್ನ ಒತ್ತಟ್ಟಿಗಿರಲಿ, ಒಂದು ಸಂಗ್ರಹಕ್ಕಾಗುವಷ್ಟು ಗಾದೆಗಳನ್ನು ಒಂದೂರಿನಲ್ಲಿ ಸಂಗ್ರಹ ಮಾಡಿದ್ದು ಕೂಡ ಚಾರಿತ್ರಿಕ ದಾಖಲೆಯೇ ಆಗಿದೆ. ಕರ್ನಾಟಕ ಸಂಸ್ಕೃತಿಯನ್ನು ಅರಿಯಲಿಕ್ಕೆ ಬಂಡಿಹೊಳೆ ಗ್ರಾಮದ ಇಡೀ ಮಾಹಿತಿ, ಅದರಲ್ಲಿಯ ಗಾದೆಗಳು ನಮಗೆ ಇಂದು ಮಹತ್ವದ ಆಕರಗಳಾಗಿ ಕಾಣುತ್ತವೆ. ಒಂದೂರಿನಲ್ಲಿ ಕಾಣುವ ಗಾದೆಗಳು ಇಡಿ ರಾಜ್ಯದ ತುಂಬ ಎಲ್ಲೆಡೆ ಕಾಣುತ್ತವೆ ಎಂಬುದೆ ಸಂಸ್ಕೃತಿ ಹುಟ್ಟಿಸುವ ಆಶ್ಚರ್ಯ. ಇದರಲ್ಲಿ ಅನೇಕ ಗಾದೆಗಳು ಪ್ರಪಂಚದ ಇತರ ದೇಶಗಳಲ್ಲಿ ದೊರೆಯುವ ಗಾದೆಗಳಿಗೂ ಸಮಾನವಾಗಿರುತ್ತವೆ ಎಂಬುದು ಇನ್ನೂ ಅಗಾಧವಾದ ಸಂಗತಿ. ಸಮುದ್ರದ ನೀರಿನ ಗುಣವನ್ನು ಅರಿಯಲು ಒಂದು ಬೊಗಸೆ ನೀರು ಸಾಕೆಂಬಂತೆ, ಮನುಷ್ಯನ ಸಂಸ್ಕೃತಿಯನ್ನು ಅರಿಯಲು ಬಂಡಿಹೊಳೆಯ ಗಾದೆಗಳು ನಿದರ್ಶನವಾಗುತ್ತವೆ. 'ಅತಿ ಆಸೆ ಗತಿಗೇಡು, ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದರು, ಅರವತ್ತು ವರ್ಷಕ್ಕೆ ಅರುಳೋ ಮರುಳೋ, ಅಂಗಳದಲ್ಲಿರುವವರೆಲ್ಲರೂ ಲಿಂಗವಂತರೇ ಆದರೆ ಒಳಕ್ಕೆ ಹೋದ ಕೋಳಿ ಕಾಣುವುದಿಲ್ಲ, ಅಂತೂ ಇಂತೂ ಕುಂತಿಮಕ್ಕಳಿಗೆ ರಾಜ್ಯವಿಲ್ಲ, ಅಜ್ಜಿ ನೂತದ್ದೆಲ್ಲ ಅಜ್ಜನ ಉಡಿದಾರಕ್ಕೆ ಆಯ್ತು, ಆನೆ ಭಾರ ಆನೆಗೆ ಇರುವೆ ಭಾರ ಇರುವೆಗೆ, ಇಬ್ಬರ ಜಗಳ ಮೂರನೆಯವನಿಗೆ ಲಾಭ, ಇರುಳು ಕಂಡ ಭಾವಿಗೆ ಹಗಲು ಬಿದ್ದ, ಊರಿಗೆ ಮಾಡಿದ ಉಪಕಾರ ಹೆಣಕ್ಕೆ ಮಾಡಿದ ಶೃಂಗಾರ, ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು' ಇಂತಹ ನೂರಾರು ಗಾದೆಗಳನ್ನು ಗುರುತಿಸಿಕೊಡಬಹುದು. ರಂಗಸ್ವಾಮಿ ಅವರದು ಒಂದು ಮಾದರಿ ಕೆಲಸವಾಗಿದೆ.

ಹಳೆಯ ಕಾಲದಲ್ಲಿ ಬಹಳ ವೈವಿಧ್ಯಮಯವಾದ ಕೆಲಸ ನಡೆದಿರುವುದು ಕಂಡುಬರುತ್ತದೆ. ಒಬ್ಬರ ನೋಡಿ ಒಬ್ಬರು ಎಂಬಂತೆ ಸ್ವತಂತ್ರವಾದ, ಮಹತ್ವದ ಕೆಲಸಗಳನ್ನು ಮಾಡುತ್ತ ಹೋಗಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಈ ಕೆಲಸಗಳು ಅತ್ಯಂತ ಶ್ರದ್ಧೆಯಿಂದ, ರಾಷ್ಟ್ರೀಯ ಭಾವನೆಯಿಂದ ನಡೆದಂತಹವುಗಳಾಗಿವೆ. ಇಂತಹ ಹುಮ್ಮಸ್ಸಿನಲ್ಲಿಯೇ ಮಾಡಿದ ಇನ್ನೊಂದು ಕೆಲಸ ನಮಗೆ ಎದುರಾಗುತ್ತದೆ; ೧೯೪೪ರಲ್ಲಿ ಎಚ್.ಎಸ್.ಅಚ್ಚಪ್ಪ ಅವರು ಒಂದು ಸಾವಿರ ಗಾದೆಗಳ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿದ್ದಾರೆಂದು ತಿಳಿದುಬರುತ್ತದೆ. ಬಹುಶಃ ಈ ಕೃತಿಯಲ್ಲಿ ಕನ್ನಡ ಗ್ರಂಥಗಳಿಂದ ಆಯ್ದು ಗಾದೆಗಳಿವೆ ಏನೋ ಎಂಬ ಅನುಮಾನ ಬರುತ್ತದೆ. ಈ ಕೆಲಸವನ್ನು ಅವರು ಮುಂದುವರೆಸಿ **'ಗ್ರಂಥಸ್ಥ ಗಾದೆಗಳು'** (೧೯೬೯) ಎಂಬ ಕೃತಿಯನ್ನು ತಯಾರಿಸಿದಂತೆ ತೋರುತ್ತದೆ.

ಸ್ವಾತಂತ್ರ್ಯಾ ನಂತರ ಜನಪದ ಸಾಹಿತ್ಯದ ಕೆಲಸಗಳು ಪ್ರಾರಂಭವಾಗುವುದು ಒಮ್ಮೆಗೆ ೧೯೬೫ರ ನಂತರವೆ. ಆ ಮೊದಲು ಅಲ್ಲೊಂದು ಇಲ್ಲೊಂದು ಕೆಲಸಗಳು ನಡೆದಿವೆ. ಆದರೆ ಕನ್ನಡದ ವಿದ್ವತ್‌ಲೋಕ ವ್ಯಾಪಕವಾಗಿ ಜನಪದ ಸಾಹಿತ್ಯದ ಕಡೆ ಲಕ್ಷ್ಯ ಹಾಕಿದ್ದು ಮಾತ್ರ ೧೯೬೫ರ ನಂತರವೇ. ೧೯೬೦ರ ನಂತರ ಜನಪದ ಸಾಹಿತ್ಯದ ಬಗೆಗೆ ಅರಿವು ಮೂಡಿ, ಕ್ಷೇತ್ರಕಾರ್ಯ ಮಾಡಿ ಗಾದೆಗಳನ್ನು ಸಂಗ್ರಹಿಸುವ ಕೆಲಸ ವಿಶ್ವವಿದ್ಯಾಲಯದ, ಮಹಾವಿದ್ಯಾಲಯಗಳ ಪ್ರಾಧ್ಯಾಪಕರಿಂದ ಪ್ರಾರಂಭವಾಯಿತು. ಇದರಿಂದಾದ ಲಾಭವೆಂದರೆ ಹೊಸ ಗಾದೆಗಳ ಸಂಗ್ರಹ. ಕಥೆಗಳು ಮತ್ತು ಗಾದೆಗಳು ಮಾನವನ ಜ್ಞಾನಾನುಭವದ ಪ್ರಮುಖವಾದ ವಾಹಕಗಳಾಗಿರುವುದರಿಂದ ಅವುಗಳ ಸಂಖ್ಯೆ ಸಹಜವಾಗಿಯೇ ಹೆಚ್ಚಿಗೆ ಇರುತ್ತದೆ. ಪುನರಾವರ್ತನೆಗಳನ್ನು ಗಮನಿಸದೆ ತಮ್ಮ ತಮ್ಮ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ ಕಥೆ ಮತ್ತು ಗಾದೆಗಳನ್ನು ಸಂಗ್ರಹಿಸುವ ರೂಢಿ ಬೆಳೆದುಕೊಂಡು ಬಂದಿದೆ. ಇದರಿಂದ ಕನ್ನಡಕ್ಕೆ ಸಾಕಷ್ಟು ಲಾಭವೂ ಆಗಿದೆ. ಭಾಷಿಕ ಅಧ್ಯಯನಕ್ಕೆ, ಸ್ಥಳೀಯ ಸಂಸ್ಕೃತಿಯ ಅಧ್ಯಯನಕ್ಕೆ ಇವೆಲ್ಲ ಅನುಕೂಲವಾಗುತ್ತವೆ. ೧೯೬೦ರ ನಂತರ ಬಂದ ಯಾವುದೆ ಪ್ರಕಾರದ ಜನಪದ ಸಾಹಿತ್ಯದ ಸಂಗ್ರಹಗಳಿಗೆಲ್ಲ ಅಭ್ಯಾಸಪೂರ್ಣವಾದ ಒಂದು ಪ್ರಸ್ತಾವನೆ ಬರೆಯುವುದು ಸಾಮಾನ್ಯವಾಯಿತು. ಒಂದು ದೃಷ್ಟಿಯಿಂದ ಈ ಪ್ರಸ್ತಾವನೆಗಳೆ ಆಯಾ ಪ್ರಕಾರದ ಮೊದಲಿನ ಅಧ್ಯಯನಗಳೂ ಎನಿಸುತ್ತವೆ. ಈ ಪ್ರಸ್ತಾವನೆಗಳಲ್ಲಿ ಆಯಾ ಸಾಹಿತ್ಯ ಪ್ರಕಾರದ ಸ್ವರೂಪ ಲಕ್ಷಣ, ಪರಂಪರೆ, ಅವು ಹೊತ್ತಿರುವ ಜ್ಞಾನ, ಅವುಗಳ ಪ್ರಯೋಜನ ಮುಂತಾದ ಸಂಗತಿಗಳನ್ನು ಪ್ರಸ್ತಾವಿಸುವುದು ಸಾಮಾನ್ಯ ಸಂಗತಿಯಾಯಿತು.

ಈ ಪ್ರಸ್ತಾವನೆಗಳನ್ನು ಬರೆಯುವಾಗ ಪಾಶ್ಚಾತ್ಯರಲ್ಲಿ ಈ ಬಗೆಗೆ ಏನೇನು ಕೆಲಸ ನಡೆದಿದೆ, ಅಲ್ಲಿ ತಾವು ಪ್ರಕಟಿಸುತ್ತಿರುವ ಪ್ರಕಾರಕ್ಕೆ ಏನನ್ನುತ್ತಾರೆ. ಅವುಗಳ ಲಕ್ಷಣ, ವಿಭಾಗಕ್ರಮ, ವಿಶೇಷತೆ ಹೀಗೆ ಇಂಗ್ಲೀಷಿನಲ್ಲಿ ಕನ್ನಡಿಗರ ಕೈಗೆ ಸರಳವಾಗಿ ದೊರೆಯುವ ನಾಲ್ಕೈದು ಕೃತಿಗಳನ್ನು ಗಮನಿಸಿ ಈ ಎಲ್ಲ ಮಾಹಿತಿಗಳನ್ನು ಸಂಗ್ರಹಿಸುವುದು ಸಾಮಾನ್ಯ ಸಂಗತಿ ಯಾಯಿತು.

ಕರ್ನಾಟಕದಲ್ಲಿ ಜಾನಪದದ ಅರಿವು ಮೂಡಿದ ನಂತರ ಪ್ರಕಟವಾದ ಕೃತಿಗಳಲ್ಲಿ ಡಾ. ರಾ.ಗೌ ಅವರ **'ನಮ್ಮ ಗಾದೆಗಳು'** (೧೯೬೮) ಮೊದಲನೆಯ ಮತ್ತು ಪ್ರಮುಖವಾದ ಕೃತಿಯಾಗಿದೆ. ೨೨೦೦ ಗಾದೆಗಳನ್ನು ಇಲ್ಲಿ ಅಕಾರಾದಿಯಾಗಿ ಜೋಡಿಸಿದ್ದಾರೆ. ಗಾದೆಗಳನ್ನು ವಿಷಯಾನುಸಾರ ವಿಂಗಡಿಸಿದರೆ ಹೆಚ್ಚು ಪ್ರಯೋಜನವಾಗುತ್ತಿತ್ತು. ಮತ್ತು ರಾಗೌ ಅವರು ಈ ಕೆಲಸವನ್ನು ಮಾಡಬಹುದಿತ್ತು. ಇದು ಮುಂದಿನವರಿಗೆ ಒಂದು ದಾರಿದೀಪವೂ ಆಗಬಹುದಿತ್ತು. ಆದರೆ ಹಾಗಾಗಿಲ್ಲ ಎಂಬುದು ವಿಷಾದದ ಸಂಗತಿ.

೪೫ ಪುಟಗಳ ಸುದೀರ್ಘವಾದ ಪ್ರಸ್ತಾವನೆ, ೨೨ ಪುಟಗಳ ಶಬ್ದಕೋಶ ಈ ಕೃತಿಯ ವಿಶೇಷತೆಗಳಾಗಿ ಕಾಣುತ್ತವೆ. ಇಲ್ಲಿಂದ ಈ ಕೃತಿಯ ರಚನೆಯನ್ನು ಮುಂದೆ ಬಂದಿರುವ ಬಹುತೇಕ ಗಾದೆಗಳ ಸಂಗ್ರಹಗಳು ಅನುಸರಿಸುವುದನ್ನು ಕಾಣುತ್ತೇವೆ. 'ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಂತೆ ಗಾದೆಯೂ ಒಂದು ವಿಶಿಷ್ಟ ಕಲಾ ವರ್ಗಕ್ಕೆ ಸೇರಿದುದೇ ಆಗಿದೆ' ಎನ್ನುವ ರಾಗೌ ಅವರು, 'ಗಾದೆಗಳು ಜನಸಾಮಾನ್ಯರ ಬಿಡಿ ಕವಿತೆಗಳು; ಅವರ ಜೀವನ ಮಂದಾರದ ಸಂಸ್ಕೃತಿ ಪರಾಗಗಳು' ಎನ್ನುತ್ತಾರೆ. 'ಗಾದೆ ಜನಜೀವನದ ವ್ಯಾಪಕ ಸತ್ವ, ತತ್ವ, ಜನಜೀವನದಂತೆ ವೈಶಾಲ್ಯವನ್ನೂ ವೈವಿಧ್ಯವನ್ನೂ ಹೊಂದಿರುವುದರಿಂದ ಗಾದೆಯನ್ನು ಕುರಿತಾದ ನಿಷ್ಕೃಷ್ಟ ವಿಮರ್ಶೆ ಯಾವಾಗಲೂ ಕಷ್ಟಸಾಧ್ಯವೇ. ಅದರಲ್ಲೂ ಅದರ ಸಾಮಾನ್ಯ ತತ್ವಗಳನ್ನು (General Principles) ಹೇಳುವುದಂತು ತುಂಬಾ ಕಷ್ಟದ ಕೆಲಸ' (ಪ್ರ.ಪು.೧೩) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮುಂದುವರೆದು ಹೀಗೆ ಬರೆಯುತ್ತಾರೆ 'ಸೂತ್ರವೊಂದರಲ್ಲಿ ಗಾದೆಯ ಸಮಸ್ತ ಲಕ್ಷಣಗಳನ್ನೆಲ್ಲ ಬಂಧಿಸಲು ಬರುವಂತಿಲ್ಲ. ಗಾದೆ ನೂರು ಭಾವದ ನೂರು ವಿಷಯದ ನೂರು ಅಭಿವ್ಯಕ್ತಿಯಾಗಿರುವುದರಿಂದ ಈ ಕಷ್ಟ ಒದಗುವುದು ಅತ್ಯಂತ ಸಹಜ. ಹೀಗಾಗಿ ಅದರ ಸ್ವರೂಪ, ಲಕ್ಷಣ, ಉಗಮ, ವಿಕಾಸ, ಇತ್ಯಾದಿ ವಿಷಯಗಳಿಗೆ ಕೈ ಹಚ್ಚಲು ಹೊರಡುವ ಲೇಖಕನಿಗೆ ಎದುರಾಗುವ ಸಮಸ್ಯೆಗಳು ಇವು. ಆದ್ದರಿಂದ ಗಾದೆಗಳ ಲಕ್ಷಣ ನಿರೂಪಣೆಗಳಲ್ಲಿ ನಿಖರತೆ, ನಿಷ್ಕೃಷ್ಟತೆ ಹಾಗೂ ನಿರ್ದಿಷ್ಟತೆ ಕಾಣಬರದೇ ಹೋದರೆ ಅದಕ್ಕೆ ಅದರ ಅಪಾರ ವಸ್ತು ವಿಸ್ತಾರಗಳು ಕಾರಣವಾಗುತ್ತವೆಂದು ತೋರುತ್ತದೆ' (ಅದೆ, ಪು.೧೩).

ಇವು ಗಾದೆಗಳನ್ನು ಕುರಿತು ಅಧ್ಯಯನಕ್ಕೆ ತೊಡಗುವವರಿಗೆ ನಿಜವಾಗಿಯೂ ಎದುರಾಗುವ ಸಮಸ್ಯೆಗಳಾಗಿವೆ. ಗಾದೆಯನ್ನು ಒಂದು ವ್ಯಾಖ್ಯೆಯಲ್ಲಿ ಹಿಡಿದಿಟ್ಟು ಅದರ ಸ್ವರೂಪವನ್ನು ಹೇಳಲು ಸಾಧ್ಯವಿಲ್ಲ. ಅವುಗಳ ವಿಭಾಗೀಕರಣ ಇನ್ನೂ ಕಠಿಣವಾದ ಕೆಲಸ. ಅವು ಬಿಡಿಬಿಡಿಯಾದ ಅನುಭವದ ಅಭಿವ್ಯಕ್ತಿಗಳಾಗಿರುವುದರಿಂದ ಅವುಗಳ ವೈವಿಧ್ಯವನ್ನು ಒಂದು ಚೌಕಟ್ಟಿಗೆ ಕೂಡಿಸಲು ಆಗುವುದಿಲ್ಲ. ಈ ಕಷ್ಟವನ್ನು ಅರಿತೇ ನಾವು ಗಾದೆಗಳ ಸಂಗ್ರಹಗಳನ್ನು ಗಮನಿಸಬೇಕು. ಅವುಗಳಲ್ಲಿ ಸಾಮಾನ್ಯವಾಗಿ ಕಾಣುವ ವಿಡಂಬನೆ, ಹಾಸ್ಯ, ನೀತಿ, ಆರೋಗ್ಯ, ಕೃಷಿ ಹೀಗೆ ಒಂದೊಂದು ಸಂಗತಿಗಳನ್ನು ಇಟ್ಟುಕೊಂಡು ಅಂತಹ ಗಾದೆಗಳನ್ನು ಆರಿಸಿಕೊಂಡು ವಿಶ್ಲೇಷಣೆ ಮಾಡಬಹುದು. ಆದರೆ ಎಲ್ಲವನ್ನೂ ಮಾಡಿ ಮುಗಿಸುತ್ತೇನೆನ್ನುವುದು ಗಾದೆಗಳ ಮುಂದೆ ಆಗಲಾರದ ಮಾತು.

ಈ ಸಂಬಂಧದಲ್ಲಿ **'ಕನ್ನಡ ಗಾದೆಗಳ ಕೋಶ'** ಎಂಬ ಸೂಚಿಯನ್ನು ತಯಾರಿಸಲು ಹೋಗಿ, ೫೫೬ ವಿಷಯಗಳಡಿ ೪೦೦೦ ಗಾದೆಗಳನ್ನು ವಿಂಗಡಿಸಿ ಕೊಟ್ಟ ಟಿ.ವಿ.ವೆಂಕಟರಮಣಯ್ಯ ಅವರ ಪ್ರಯತ್ನವನ್ನು ನಾವು ಗಮನಿಸಬೇಕು. ಅವರು ಕ್ಷೇತ್ರಕ್ಕೆ ಹೋಗಿ ತಾವೇ ಗಾದೆಗಳನ್ನು ಸಂಗ್ರಹ ಮಾಡದೇ ಹೋದರೂ ಗಾದೆಗಳಲ್ಲಿ ಅಷ್ಟೊಂದು ವಿಷಯಗಳಿವೆ ಎಂಬುದನ್ನು ತಿಳಿಸಲು ಮಾಡಿದ ಪ್ರಯತ್ನವನ್ನು ಮೆಚ್ಚಲೇಬೇಕು.

ರಾಗೌ ಅವರು ಗಾದೆಗಳಲ್ಲಿ ಕಾಣುವ ಕಾವ್ಯದ ಗುಣಗಳನ್ನು ಲಕ್ಷಿಸುತ್ತಾರೆ. "ಮೊತ್ತಮೊದಲ ಮಾತೆಂದರೆ ಗಾದೆಗಳು ಗದ್ಯಪದ್ಯಗಳೆರಡರಲ್ಲಿಯೂ ರಚಿತವಾಗಿವೆ ಎಂಬುದೇ ಆಗಿದೆ. ಗದ್ಯವೆಂದರೆ ಸಾಮಾನ್ಯ ಗದ್ಯವಲ್ಲ; ಪದ್ಯವೆಂದರೆ ನಿರ್ದಿಷ್ಟವಾದ ಪದ್ಯವಲ್ಲ. ಅಂದರೆ ಬಹುಮಟ್ಟಿಗೆ ವಚನಸಾಹಿತ್ಯವನ್ನು ಹೋಲುವಂತೆ ಇವೆ" (ಪು.೧೬) ಎಂಬ ಅವರ ಮಾತು ಗಮನಾರ್ಹವಾಗಿದೆ. ತಮ್ಮ ಈ ಮಾತಿಗೆ ಅಡಿಟಿಪ್ಪಣಿಯನ್ನು ಹೀಗೆ ಬರೆದಿದ್ದಾರೆ "ವಚನಗಳ ರಚನೆಯನ್ನು ಗಮನಿಸಿದರೆ, ಗಾದೆಗಳು ವಚನಗಳ ಮೇಲೆ ಸಾಕಷ್ಟು ಪ್ರಭಾವ ಬೀರಿರುವಂತೆ ಕಾಣುತ್ತದೆ. ಮಾತ್ರವಲ್ಲದೆ, ವಚನಗಳ ತಾಯಿಬೇರು ಗಾದೆಗಳಲ್ಲಿಯೇ ಇರುವಂತೆ ಭಾಸವಾಗುತ್ತದೆ. ಅಲ್ಲದೆ ಗಾದೆಗಳು ವಚನದಂತೆ ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು. ಇದೊಂದು ಊಹೆ ಅಷ್ಟೇ" ಎಂದಿದ್ದಾರೆ. ಇದು ರಾಗೌ ಅವರ ಅನುಮಾನವಾದರೂ ಸಂಶೋಧನೆಯ ದೃಷ್ಟಿಯಿಂದ ಮಹತ್ವದ ಊಹೆಯೇ ಆಗಿದೆ. ವಚನಗಳಿಗೆ ಜನಪದ ಸಾಹಿತ್ಯದ ವಿಶೇಷ ಸಾಹಿತ್ಯ ರೂಪಗಳಾದ ತ್ರಿಪದಿ, ಗಾದೆ, ಒಗಟು, ಒಡಪು, ಒಡಬು, ಮಕ್ಕಳಾಟದ ಹಾಡುಗಳು, ಆಣಿಪೀಣಿ–ಈ ಮುಂತಾದ ಪ್ರಕಾರಗಳು ಮೂಲಪ್ರೇರಣೆಯಾಗಿರುವುದು ಸತ್ಯಸಂಗತಿಯೇ ಆಗಿದೆ. "ಆದಿವಾಸಿಯ ಭಾಷೆ ಸಾಮಾನ್ಯವಾಗಿ ಕಾವ್ಯಮಯವಾಗಿದ್ದುದರಿಂದ ಸ್ವಾಭಾವಿಕವಾಗಿಯೇ ಬಂದ ಗಾದೆಗಳಲ್ಲಿ ಛಂದೋಬದ್ಧತೆ, ಪ್ರಾಸಾನುಪ್ರಾಸ, ಅಲಂಕಾರ ಪ್ರಿಯತೆ ಕಂಡುಬಂದಿದ್ದರೆ ಅದಕ್ಕೆ ಆಶ್ಚರ್ಯಪಡಬೇಕಾದುದಿಲ್ಲ" (ಅದೆ, ಪು.೧೬) ಎಂಬ ಮಾತು ಸತ್ಯವಾದುದಾಗಿದೆ. ಗಾದೆಗಳಲ್ಲಿ ಮೌಖಿಕ ಹಾಗೂ ಸಾಹಿತ್ಯಿಕ ಗಾದೆಗಳು ಎಂದೂ ಗಾದೆಗಳು ವಿಶ್ವದ ತುಂಬ ಸಮಾನಾಂಶಗಳಿಂದ ಕಾಣುತ್ತವೆಂದೂ ಸಾಮಾಜಿಕ ಚರಿತ್ರೆ ಸಾಮಾನ್ಯ ನೀತಿ ಸಾಮಾನ್ಯ ನೀತಿ ಗಾದೆಗಳಲ್ಲಿ ಅಡಗಿವೆ ಎಂದು ಬರೆಯುತ್ತಾರೆ. ಗಾದೆಗಳ ಸಂಗ್ರಹಗಳು ಪಾಶ್ಚಾತ್ಯರಲ್ಲಿ, ನಂತರ ಭಾರತೀಯರಲ್ಲಿ, ಆಮೇಲೆ ಕನ್ನಡದಲ್ಲಿ ಬೆಳಕುಕಂಡ ಬಗೆಯನ್ನು ವಿವರಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿಯೇ ೧೯೬೭ರಲ್ಲಿ ಕನ್ನಡ ಎಂ.ಎ. ಕೋರ್ಸ್‌ನಲ್ಲಿ ನೂರಂಕಿನ ಒಂದು ಜನಪದ ಸಾಹಿತ್ಯ ಪತ್ರಿಕೆ ಸೇರ್ಪಡೆಯಾದ ನಂತರ, ಅಲ್ಲಿಯ ಶಿಕ್ಷಕ ವರ್ಗ ಮತ್ತು ಜನಪದ ಸಾಹಿತ್ಯ ಪತ್ರಿಕೆಯನ್ನು ಅಭ್ಯಾಸ ಮಾಡಲು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು, ಜನಪದ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟನೆಯಲ್ಲಿ ಆಸಕ್ತಿ ತೋರಿಸತೊಡಗಿದ್ದು ಸಹಜವಾಗಿದೆ. ಜೊತೆಗೆ ಮೈಸೂರು ವಿಶ್ವವಿದ್ಯಾಲಯವು ಜನಪದ ಸಾಹಿತ್ಯ ಪ್ರಕಟನೆಗೂ ಆದ್ಯತೆ ಕೊಟ್ಟಿದ್ದು ಆ ವಿಶ್ವವಿದ್ಯಾಲಯದ ವಾತಾವರಣದಲ್ಲಿರುವವರು ಸಹಜವಾಗಿಯೇ ಜನಪದ ಸಾಹಿತ್ಯದೆಡೆ ಆಸಕ್ತಿ ತಾಳಿದರು.

ಪ್ರೊ. ಸುಧಾಕರ ಅವರು ಸಂಪಾದಿಸಿದ **'ನಮ್ಮ ಸುತ್ತಿನ ಗಾದೆಗಳು'** ೧೯೭೩ ರಲ್ಲಿ

ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ೧೯೦೨ ಗಾದೆಗಳ ಸಂಗ್ರಹವಿದು. ೨೮ ಪುಟಗಳ ಪ್ರಸ್ತಾವನೆ, ೩೦ ಪುಟಗಳ ಅರ್ಥಕೋಶವನ್ನು ಕೊಟ್ಟಿದ್ದಾರೆ. 'ಇದುವರೆಗೆ ಅಚ್ಚಾಗಿರುವ ಗಾದೆಗಳನ್ನು ಬಿಟ್ಟು, ಸುಮಾರು ಎರಡು ಸಾವಿರ ಗಾದೆಗಳನ್ನು ಈ ಪುಸ್ತಕ ರೂಪದಲ್ಲಿ ಹೊರ ತರುತ್ತಿದ್ದೇನೆ' ಎನ್ನುತ್ತಾರೆ ಸುಧಾಕರ ಅವರು. ಪುನರಾವರ್ತನೆಯನ್ನು ತಪ್ಪಿಸಲು ಅವರು ಮಾಡಿದ ಪ್ರಯತ್ನ ಗಮನಿಸಬೇಕು. ಪ್ರಾರಂಭದ ವಿದ್ವಾಂಸರನೇಕರು ಪುನರಾವರ್ತನೆಯನ್ನು ತಪ್ಪಿಸಲು ಪ್ರಯತ್ನ ಮಾಡಿರುವುದನ್ನು ಬರೆದುಕೊಂಡಿದ್ದಾರೆ. ಇದು ಗಾದೆಗಳಿಗೆ ಸಂಬಂಧಿಸಿದ ಸಂಗ್ರಹಗಳಲ್ಲಿ ಕಂಡುಬರುವ ಮಾತು. ಇದು ಹೀಗಾಗಬಾರದಿತ್ತೇನೋ ಎನಿಸುತ್ತದೆ. ಬೇರೆ ಬೇರೆ ಭಾಗಗಳಿಂದ ಸ್ವತಃ ಗಾದೆಗಳನ್ನು ಸಂಗ್ರಹ ಮಾಡಿದವರು ಪುನರಾವರ್ತನೆಗಳನ್ನು ತೆಗೆದುಹಾಕಬಾರದಿತ್ತು ಎನಿಸುತ್ತದೆ. ಇದರಿಂದ ಗಾದೆಗಳಲ್ಲಿ ಉಂಟಾಗುವ ಪ್ರಾದೇಶಿಕ ವ್ಯತ್ಯಾಸಗಳು, ವಿಶೇಷವಾಗಿ ಭಾಷೆಯ ವ್ಯತ್ಯಾಸಗಳು, ಅಲ್ಲಿ ಕಂಡುಬರುವ ಪ್ರಾದೇಶಿಕ ಸಾಂಸ್ಕೃತಿಕ ಎಳೆಗಳು ಇವೆಲ್ಲ ಕಳೆದುಹೋಗುತ್ತವೆ. ಮತ್ತು ಒಂದು ಗಾದೆ ಎಲ್ಲೆಲ್ಲಿ ಪ್ರಚಾರದಲ್ಲಿದೆ ಎಂಬುದನ್ನು ತಿಳಿಯಲು ಅಡ್ಡಿಯಾಗುತ್ತದೆ. ಆದರೆ ಕ್ಷೇತ್ರಕಾರ್ಯ ಮಾಡಿದ ಬಹುತೇಕ ವಿದ್ವಾಂಸರು ಹೀಗೇಕೆ ನಿರ್ಣಯ ತೆಗೆದುಕೊಂಡರೆಂಬುದೇ ಅರ್ಥವಾಗುವುದಿಲ್ಲ. ಅದೂ ಗಾದೆಗಳಿಗೆ ಸಂಬಂಧಿಸಿದಂತೆ ಮಾತ್ರ ಇಂತಹ ನಿರ್ಧಾರ ಕಾಣುತ್ತದೆ. ಕಥೆ, ಒಗಟು, ಮಕ್ಕಳ ಹಾಡುಗಳು, ಬೇರೆ ಪ್ರಕಾರದ ಯಾವುದೇ ಬಗೆಯ ಹಾಡುಗಳು– ಇಂತಹ ಬೇರೆ ಯಾವ ಪ್ರಕಾರಗಳನ್ನು ಸಂಪಾದನೆ ಮಾಡುವಾಗಲೂ ಪುನರಾವರ್ತನೆಗಳನ್ನು ಕೈಬಿಟ್ಟಿಲ್ಲ. ಗಾದೆಗಳಿಗೆ ಸಂಬಂಧಿಸಿದಂತೆ ಮಾತ್ರ ಹೀಗೆ ಆಗಿದೆ. ಹೀಗಾಗದಿದ್ದರೆ ಲಾಭವಾಗುತ್ತಿತ್ತೆಂದು ತೋರುತ್ತದೆ.

ಪ್ರೊ. ಸುಧಾಕರ ಅವರು ತಾವು ಗಾದೆಗಳನ್ನು ಸಂಗ್ರಹಿಸಿದ ಪ್ರದೇಶಗಳನ್ನು ದಾಖಲಿಸಿದ್ದಾರೆ. 'ಇಲ್ಲಿಯ ಗಾದೆಗಳು ಪ್ರಮುಖವಾಗಿ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಎಣ್ಣೆಗೆರೆಯ ಸುತ್ತಮುತ್ತ ಹಾಗೂ ನೆಲಮಂಗಳ ತಾಲ್ಲೂಕಿನ ಬಿಲ್ಲನಕೋಟೆಯ ಸುತ್ತಮುತ್ತ ಬಳಕೆಯಲ್ಲಿರುವಂಥವು. ಸ್ವಲ್ಪ ಭಾಗ ರುದ್ರಪಟ್ಟಣ, ಎಳಂದೂರು, ಬೇಗೂರುಗಳಲ್ಲಿ ಸಂಗ್ರಹಿಸಿದಂಥವು' ಎಂದು ತಾವು ಗಾದೆಗಳನ್ನು ಸಂಗ್ರಹಿಸಿದ ಪ್ರದೇಶವನ್ನು ತಿಳಿಸುತ್ತಾರೆ. ಇದು ಗಾದೆಗಳ ಅಧ್ಯಯನಕ್ಕೆ ಮಹತ್ವದ ಸಂಗತಿಯಾಗುತ್ತದೆ.

ಪ್ರಸ್ತಾವನೆಯಲ್ಲಿ ಗಾದೆಗಳ ಸಾಂಸ್ಕೃತಿಕ ಸಂಗತಿಗಳನ್ನು ವಿವರಿಸಲು ಪ್ರಯತ್ನಿಸಿದ್ದಾರೆ. 'ಸಾಮಾನ್ಯವಾಗಿ ಗಾದೆ ಇಲ್ಲದ ಭಾಷೆಯಿಲ್ಲ; ಗಾದೆ ಬರದ ಮನುಷ್ಯನಿಲ್ಲ. ಗಾಳಿ ಬೆಳಕಿನಂತೆ ಜನಜೀವನದ ಉದ್ದಗಲಗಳನ್ನು ಆವರಿಸಿಕೊಂಡಿರುವ ಗಾದೆ ಜನಪದ ಸಾಹಿತ್ಯದ ಜನಪ್ರಿಯ ಪ್ರಕಾರಗಳಲ್ಲೊಂದು' ಎಂಬ ವಿವರಣೆ ಮಹತ್ವದ ಮಾತಾಗುತ್ತದೆ. 'ಗಾದೆಗಳು ಒಂದು ರಾಷ್ಟದ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರವನ್ನೊಳಗೊಂಡ ಅಲಿಖಿತ ಇತಿಹಾಸ; ರಾಷ್ಟ್ರದ ಅಂತರಂಗವನ್ನು ಪ್ರತಿಬಿಂಬಿಸುವ ಕನ್ನಡಿ' ಎನ್ನುವ ಅವರ ಮಾತೂ ಅಷ್ಟೆ ಮಹತ್ವದ್ದಾಗುತ್ತದೆ. 'ಚರಿತ್ರಕಾರರಿಗೆ, ಸಮಾಜಶಾಸ್ತ್ರಜ್ಞರಿಗೆ, ಭಾಷಾಶಾಸ್ತ್ರಜ್ಞರಿಗೆ, ಮಾನವ ಶಾಸ್ತ್ರಜ್ಞರಿಗೆ, ಪ್ರಾಣಿಶಾಸ್ತ್ರಜ್ಞರಿಗೆ–ಕೆಲಸ ಮಾಡಲಿಚ್ಛಿಸುವ ಇನ್ನೂ ಅನೇಕ ಶಾಖೆಗಳ

ಶಾಸ್ತ್ರಜ್ಞರಿಗೆ ಗಾದೆಗಳು ಹೇಗೆ ಕೊರೆ ಬೀಳದ ಗಣಿಗಳಂತಿವೆ, ಅಕ್ಷಯ ಭಂಡಾರಗಳಂತೆ ಆಹಾರವನ್ನೊದಗಿಸುತ್ತವೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ' ಎಂಬಂತಹ ಸಂಪಾದಕರ ಮಾತುಗಳಲ್ಲಿ ಸತ್ಯಾಂಶವಡಗಿದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಜನಪದ ಸಾಹಿತ್ಯದ ಕೆಲಸಗಳು ೧೯೬೭ರಿಂದಲೇ ಕಾಣಿಸಿಕೊಳ್ಳುತ್ತವೆ. ಉತ್ತರ ಕರ್ನಾಟಕದಲ್ಲಿ, ಅರ್ಥಾತ್ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪ್ರದೇಶವ್ಯಾಪ್ತಿಯಲ್ಲಿ ಸಾವಕಾಶವಾಗಿ ೧೯೭೦ರ ನಂತರ ಜನಪದ ಸಾಹಿತ್ಯದ ಕೆಲಸಗಳು ಪ್ರಾರಂಭವಾಗುತ್ತವೆ. ಗಾದೆಗಳಿಗೆ ಸಂಬಂಧಿಸಿದಂತೆ ೧೯೭೪ ರಲ್ಲಿ ಪ್ರಕಟವಾದ ಡಾ. ಬಿ.ಬಿ.ಹೆಂಡಿ ಹಾಗೂ ಡಾ. ಎಂ.ಎಸ್.ಲಠ್ಠೆ ಅವರು ಕೂಡಿ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ ಗಾದೆಗಳ ಸಂಗ್ರಹ **'ಉತ್ತರ ಕರ್ನಾಟಕದ ಗಾದೆಗಳು'** ಎಂಬುದು ೧೧೬೮ ಗಾದೆಗಳನ್ನು ಹೊತ್ತ, ಉತ್ತರ ಕರ್ನಾಟಕದಿಂದ ಪ್ರಕಟವಾದ ಮೊದಲ ಗಾದೆಗಳ ಸಂಗ್ರಹವಾಗಿದೆ. ಹೀಗಾಗಿ ಈ ಸಂಗ್ರಹಕ್ಕೆ ಪ್ರಾದೇಶಿಕ ಪ್ರಾತಿನಿಧ್ಯ ಪ್ರಾಪ್ತವಾಗುತ್ತದೆ. 'ದಂಡ ಬಂದಾಗ ತುರಕ ಮಾತ ಕಲತ', 'ಹರಕ ಇರ್ಲಿ ಮುರಕ ಇರ್ಲಿ ಮಗಲಾಗೊಂದು ತುರುಕ ಇರ್ಲಿ', 'ಲಿಂಗದಂತಾವಾದ್ರೂ ಜಂಗಮನ ನಂಬಬಾರ್ದು', 'ಸಾವಿರ ಕುದರಿ ಸರದಾರ ಮನಿ ಹೆಣ್ತಿಗ ಪಿಂಜಾರ' ಇಂತಹ ಅನೇಕ ಪ್ರಾದೇಶಿಕ ಸಂಸ್ಕೃತಿ, ಚರಿತ್ರೆಯ ಮಹತ್ವವುಳ್ಳ ಗಾದೆಗಳು ಈ ಸಂಗ್ರಹದಲ್ಲಿವೆ.

ಈ ಕೃತಿಯಲ್ಲಿಯ ಗಾದೆಗಳನ್ನು ಕಲಬುರಗಿ ಜಿಲ್ಲೆಯಲ್ಲಿಯೇ ಹೆಚ್ಚಾಗಿ ಸಂಗ್ರಹಿಸಿದ್ದು, ಜೊತೆಗೆ ಬಿಜಾಪುರ, ಬೆಳಗಾಂವ ಜಿಲ್ಲೆಗಳಿಂದ ಕೆಲವು ಗಾದೆಗಳನ್ನು ಸಂಗ್ರಹಿಸಿ ಸೇರಿಸಲಾಗಿದೆ. ಹೀಗಾಗಿ ಈ ಕೃತಿಯ ಹೆಸರಿನಲ್ಲಿ ಉತ್ತರ ಕರ್ನಾಟಕ ಎಂಬ ಪದ ಸೇರಿದೆ. ಇಲ್ಲಿಯ ಪ್ರಸ್ತಾವನೆ ಸಂಕ್ಷಿಪ್ತವಾಗಿದ್ದರೂ ಗಾದೆಗಳ ಬಗೆಗೆ ಒಂದು ಸ್ಪಷ್ಟ ಕಲ್ಪನೆಯನ್ನು ಕೊಡುವಂತಿದೆ. 'ಗಾದೆಯ ಲಕ್ಷಣವು ಗೆರೆಕೊರೆದು ಒಂದೇ ವಾಕ್ಯದಲ್ಲಿ ಹೇಳಲು ಬಾರದಂತಹದು. ಅದೊಂದು ಪರಂಪರಾಗತ ಮಾತು. ಅನುಭವಿಸಿ ಮನವರಿಕೆ ಮಾಡಿಕೊಂಡ ನುಡಿ. ಪ್ರಸಂಗಕ್ಕೆ ಸರಿಯಾದ ಅರ್ಥ, ಸಮರ್ಥನೆಗೆ ಸಹಾಯಕವಾಗಿ ಬಂದ ವಾಕ್ಯ. ಹೃದಯ ಬಿಚ್ಚಿ ಹೊರಬಂದ ವಿಷಯ, ಕಿರಿದರಲ್ಲಿ ಹಿರಿದಾದ ಅರ್ಥವನ್ನು ಸೂಚಿಸವಂತಹದು. ಸಂಸ್ಕೃತಿ ಹಾಗೂ ಲೋಕಾನುಭವದ ಸಮ್ಮಿಲನದಿಂದ ಜಾನಪದ ಸಾಹಿತ್ಯಕ್ಕೇನೆ ಹೆಚ್ಚಿನ ಹೊಳಪು ತಂದುಕೊಟ್ಟ ಶ್ರೇಯಸ್ಸು ಈ ಗಾದೆಗಳಿಗೆ' (ಪು. ೩೫೩). ಹೀಗೆ ಸಂಗ್ರಹಗೊಳಿಸಿ ಗಾದೆಯ ಸ್ವರೂಪವನ್ನು ಹೇಳುವ ರೀತಿ ಗಮನ ಸೆಳೆಯುತ್ತದೆ. ಗಾದೆಯ ಸಾಮಾನ್ಯ ಲಕ್ಷಣಗಳನ್ನು ಸಂಗ್ರಹವಾಗಿ ಐದು ಅಂಶಗಳಲ್ಲಿ ಕೊಟ್ಟಿದ್ದಾರೆ:

೧. ಅನುಭವದ ಸರಳತೆ ಗಾದೆಗಳ ಹೆಗ್ಗುರುತು.

೨. ಜೀವಂತ ಸಾಮಗ್ರಿ ಮಾತ್ರ ಗಾದೆಗಳಲ್ಲಿ ವಸ್ತುವಾಗಿ ಉಳಿದುಕೊಳ್ಳುತ್ತದೆ.

೩. ಗಾದೆಯ ಅರ್ಥ ರುಚಿಯಲ್ಲಿ ಒಗರಾದುದು.

೪. ಚಮತ್ಕಾರಯುಕ್ತವಾದ ರಚನಾರೂಪ– ಸೂತ್ರಪ್ರಾಯವಾದ ಮಾತು, ಪದಗಳ ಆಯ್ಕೆಯಲ್ಲಿ ಶಿಷ್ಟಾಶಿಷ್ಟವೆಂಬ ತಾರತಮ್ಯ ಎಣಿಸದೇ ಇರುವುದು, ಎರಡು ವಾಕ್ಯ ಅಥವಾ

ವಾಕ್ಯ ಖಂಡಗಳಲ್ಲಿರುವುದು, ಬೇಕು ಬೇಡ ಬಾರದು ಅಲ್ಲ ಇಲ್ಲ ಎಂಬಂತಹ ಬೋಧನಾಪರವಾದ ಪದಗಳ ಬಳಕೆ.

೫. ಪ್ರಾಸ ಇಲ್ಲವೆ ವರ್ಣಾವೃತ್ತಿ ಗಾದೆಯ ಪದಗುಂಫನಕ್ಕೆ ನಿಯಮನವನ್ನು ತರುವ ಅಂಶವಾಗಿದೆ. ಈ ಎಲ್ಲ ಅಂಶಗಳನ್ನೊಳಗೊಂಡ ಪ್ರಸ್ತಾವನೆ ಸಂಕ್ಷಿಪ್ತವಾದರೂ ಮಹತ್ವದ ಬರಹ ಎನಿಸುತ್ತದೆ. ಈ ಸಂಗ್ರಹಕ್ಕೆ ಪ್ರಾದೇಶಿಕ ಮಹತ್ವ ಇರುವುದು ಸಾಮಾನ್ಯ.

ಉತ್ತರ ಕರ್ನಾಟಕದಿಂದ ಆ ವೇಳೆಗೆ ಪ್ರಕಟವಾದುದು **'ಉತ್ತರ ಕರ್ನಾಟಕದ ಗಾದೆಗಳು'** ಇದೊಂದೇ ಕೃತಿ. ಮತ್ತೆ ಇಂತಹ ಸಂಗ್ರಹಗಳು ನಿರಂತರವಾಗಿ ಪ್ರಕಟವಾಗುತ್ತ ಹೋಗಿರುವುದು ದಕ್ಷಿಣ ಕರ್ನಾಟಕದಲ್ಲಿಯೇ. ಮೊದಲ ಸಲ ಮೈಸೂರು ಬಿಟ್ಟು ಬೆಂಗಳೂರು ವಿಶ್ವವಿದ್ಯಾಲಯದ ಒಬ್ಬ ಅಧ್ಯಾಪಕರು ಗಾದೆಗಳ ಒಂದು ಸಂಗ್ರಹವನ್ನು ೧೯೭೭ರಲ್ಲಿ ಪ್ರಕಟಿಸಿರುವುದು ಕಂಡುಬರುತ್ತದೆ. ೧೯೬೭ರಲ್ಲಿ ಪ್ರಾರಂಭವಾದ ಗಾದೆಗಳ ಸಂಗ್ರಹಗಳ ಪ್ರಕಟನೆ ಹತ್ತು ವರ್ಷಗಳ ಅವಧಿಯಲ್ಲಿ ಪ್ರಕಟವಾದುವು ಕೇವಲ ಮೂರು ಸಂಗ್ರಹಗಳು ಮಾತ್ರ ಎಂಬುದನ್ನು ಗಮನಿಸಬೇಕು.

೧೯೭೭ರಲ್ಲಿ ಪ್ರಕಟವಾದ ಡಾ. ಕಾಳೇಗೌಡ ನಾಗವಾರ ಅವರ ಗಾದೆಗಳ ಸಂಗ್ರಹ **'ಬೀದಿ ಮಕ್ಕಳು ಬೆಳದೊ',** ಈಗ ಸಪ್ನ ಬುಕ್ ಹೌಸ್‌ನಿಂದ ೨೦೧೩ರಲ್ಲಿ ಪ್ರಕಟವಾದ ಕೃತಿ ನನ್ನ ಮುಂದಿದೆ. ಈ ಕೃತಿಯಲ್ಲಿ ೧೪೧೬ ಗಾದೆಗಳಿವೆ. ಅಕಾರಾದಿ ಜೋಡಣೆ ಇದೆ. ೨೪ ಪುಟಗಳ ಪ್ರಸ್ತಾವನೆಯಲ್ಲಿ ಗಾದೆಗಳ ವಿಷಯವನ್ನು ವಿವರಿಸಿದ್ದಾರೆ. ಇಲ್ಲಿಯ ವಿಶೇಷವೆಂದರೆ ಸುಮಾರು ೫೦ ಪುಟಗಳಷ್ಟು ಕೊಟ್ಟಿರುವ ಶಬ್ದಾರ್ಥಕೋಶ. ಇಂತಹ ಪ್ರಾದೇಶಿಕ ಸಣ್ಣ ಸಣ್ಣ ಕೋಶಗಳಿಂದಲೇ ಇಂದು ದೊಡ್ಡ ದೊಡ್ಡ ಜನಪದ ಶಬ್ದಕೋಶಗಳು ಬರಲು, ಅದರಿಂದ ಕನ್ನಡ ಪದಗಳ ಶ್ರೀಮಂತಿಕೆ ಜಾಸ್ತಿಯಾಗಲು ಸಾಧ್ಯವಾಗುತ್ತಿದೆ. ಗಾದೆಗಳ ಸಾಲುಗಳನ್ನು ಕತ್ತರಿಸಿ ಇಡುವ ಪ್ರಯತ್ನ ಸ್ವಲ್ಪಮಟ್ಟಿಗೆ ಮೊದಲಿನಿಂದಲೂ ಕಾಣುತ್ತದೆ. ಆದರೆ ಇಲ್ಲಿಯ ಪ್ರತಿಯೊಂದು ಗಾದೆಗಳ ಪ್ರಾಸಗಳನ್ನು ಗಮನಿಸಿ ಸಾಲುಗಳನ್ನು ಕತ್ತರಿಸಿ ಇಟ್ಟಿರುವುದರಿಂದ ಇಲ್ಲಿಯ ಗಾದೆಗಳು ಕಾವ್ಯದ ನುಡಿಗಳಂತೆ ಗೋಚರವಾಗುತ್ತಿವೆ.

ಅಚ್ಚೇರಕ್ಕಿ
ತಲಕಾಡಿನ ಚಿಕ್ಕಿ
ಬಂದೋರ್ಗಿಕ್ಕಿ
ಕೈ ಬಾಯ್ ನೆಕ್ಕಿ (೧೨)

ಅಜ್ಜನಳ್ಳಿಯೋರ ಮನೇಲಿ
ಏನ್ಕೆಲ್ಸ ಅಂದ್ರೆ
ಉಜ್ಜುದು;
ಉಂಡೆ ಕಟ್ಟುದು:
ತಿನ್ನುದು. (೧೩)

ಅಜ್ಜಿ ಇಲ್ಲದ ಮನೆ
ಮಜ್ಜಿಗೆ ಇಲ್ಲದ ಊಟ
ಸಜ್ಜನರಿಲ್ಲದ ಸಭೆ
ಎಂದ್ಗೂ ಬೇಡ (೧೫)

ಗಾದೆಗಳ ಈ ವಿಶೇಷ ರೂಪಗಳನ್ನು ಗಮನಿಸಿದರೆ ಒಗಟು, ಒಡಮಗಳ ಮಾದರಿಯಲ್ಲಿ ಇವನ್ನು ಕೊಡಲು ಪ್ರಯತ್ನಿಸಲಾಗಿದೆ ಎಂದು ಕಾಣುತ್ತದೆ. ಇದರಿಂದ ಗಾದೆಗಳ ಕಾವ್ಯಗುಣ ಥಟ್ಟನೆ ಹೊಳೆಯುವಂತಾಗಿರುವುದು ಎದ್ದುಕಾಣುವ ಸಂಗತಿಯಾಗಿದೆ. ಇಲ್ಲಿಯ ಪ್ರತಿ ಪುಟದಲ್ಲಿಯ ರೇಖಾಚಿತ್ರಗಳು, ಅಲ್ಲಿಯ ಯಾವುದೇ ಗಾದೆಗಳಿಗೂ ಸಂಬಂಧಿಸಿರದಿದ್ದರೂ ಪುಟಗಳ ಸೌಂದರ್ಯವನ್ನು ಹೆಚ್ಚಿಸಿವೆ, ಜನಪದ ಬದುಕಿನ ಅನೇಕ ಸಂಗತಿಗಳನ್ನು ಪ್ರತಿನಿಧಿಸುತ್ತವೆ. ಮಕ್ಕಳಿಗೆ ಇಂತಹ ಕೃತಿಗಳನ್ನು ನೋಡಿದರೆ ಖುಷಿಯಾಗುತ್ತದೆ. ಪ್ರಕಟನೆಯ ದೃಷ್ಟಿಯಿಂದ ಸ್ವಲ್ಪ ದುಬಾರಿಯಾಗಬಹುದಾದ ಈ ಕ್ರಮವನ್ನು ಕನಿಷ್ಠ ದೊಡ್ಡ ದೊಡ್ಡ ಪ್ರಕಾಶಕರು ಅನುಸರಿಸಬಹುದಾಗಿದೆ.

ಸಂಪಾದಕರಾದ ಡಾ. ಕಾಳೇಗೌಡ ನಾಗವಾರ ಅವರು ಈ ಕೃತಿಗೆ ಬರೆದ ಅರಿಕೆಯಲ್ಲಿ ಒಂದು ಪ್ಯಾರಾ ಗಮನ ಸೆಳೆಯುತ್ತದೆ: "ವೇದ, ಉಪನಿಷತ್ತು, ಬೈಬಲ್ಲುಗಳಲ್ಲೂ ಗಾದೆಗಳು ಕಾಣಿಸಿಕೊಂಡಿವೆ; ಇವೆಲ್ಲಾ ಮೂಲದಲ್ಲಿ ಜನತೆಯಿಂದಲೇ ಪಡೆದವು. ಅನೇಕ ಶಿಷ್ಟಕವಿಗಳು ಕೂಡ ತಮ್ಮ ಅಭಿವ್ಯಕ್ತಿಗೆ ಸಾಮರ್ಥ್ಯವನ್ನು ತುಂಬಲು ಗಾದೆ ಮತ್ತು ಜನತಾನುಡಿಗಟ್ಟುಗಳನ್ನು ಬಳಸಿಕೊಂಡಿರುವುದು ಉಂಟು. ಗಾದೆಗಳು ಒಟ್ಟು ಸಮಾಜದ ಆಸ್ತಿ. ಯಾವ ಧರ್ಮ, ಮತವೂ ತನ್ನ ಹಿಡಿತಕ್ಕೆ ಇವುಗಳನ್ನು ಪೂರ್ಣವಾಗಿ ತೆಗೆದುಕೊಳ್ಳಲಾಗಿಲ್ಲ. ಗಾದೆಯು ಕೀಟಲೆ ಮಾಡದೆ, ಟೀಕಿಸದೆ ಬಿಟ್ಟ ಯಾವ ಸಂಗತಿಯೂ ಕಾಣುವುದಿಲ್ಲ. ಮನುಷ್ಯನ ಮೂಲ ಗುಣ ಒಂದೇ ಆಗಿರುವುದರಿಂದ ದೇಶಕಾಲಗಳ ಕಟ್ಟುಪಾಡುಗಳಿಲ್ಲದೆ ಒಂದೇ ಬಗೆಯ ಅನುಭವದ ಮಾತುಗಳು ಜಗತ್ತಿನ ನಾನಾ ಭಾಷೆಗಳ ಗಾದೆಗಳಲ್ಲಿ ಕಂಡುಬರುತ್ತವೆ" (ಅರಿಕೆ, ಪು.೪).

೧೯೮೧ ಹಾಗೂ ನಂತರ ಬರುವ ಸಂಗ್ರಹಗಳ ಸ್ವರೂಪ ತಾನಾಗಿಯೇ ಬೇರೆಯಾಗಿ ಕಾಣುತ್ತದೆ. ಈ ಬದಲಾವಣೆಯ ಅವಧಿಯ ಮೊದಲ ಕೃತಿಯಾಗಿ ೧೯೮೧ರಲ್ಲಿ ಪ್ರಕಟವಾದ ಬಿ. ಕೃಷ್ಣಪ್ಪ ರೆಡ್ಡಿ ಅವರ **'ಗ್ರಾಮೀಣ ಗಾದೆಗಳು'** ಎಂಬ ಸಂಗ್ರಹ ಕಾಣಿಸುತ್ತದೆ. ಮೇಲಿನ ನಾಲ್ಕೂ ಜನ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು. ರೆಡ್ಡಿ ಅವರು ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದವರು. ಅವರ ಆಯ್ಕೆ ಮತ್ತು ಸಂಪಾದನೆಯ ಸ್ಪಷ್ಟತೆಗಳು ಬಹುಮುಖ್ಯವಾಗಿವೆ:

೧. 'ಗಾದೆಯ ಉಗಮ, ಸ್ವರೂಪ ಲಕ್ಷಣಗಳನ್ನು ಕುರಿತು ಈಗಾಗಲೇ ವಿದ್ವಾಂಸರ ಹಾಗೂ ಸಂಗ್ರಹಕಾರರ ವ್ಯಾಖ್ಯಾನಗಳು ಕನ್ನಡದಲ್ಲಿ ಸಾಕಷ್ಟಿರುವ ಕಾರಣ ಮತ್ತೆ ಆ ಪ್ರಸ್ತಾಪಕ್ಕೆ ಕೈ ಹಾಕಲಿಚ್ಚಿಸುವುದಿಲ್ಲ' ಎಂದೇ ತಮ್ಮ ಪ್ರಸ್ತಾವನೆಯನ್ನು ಪ್ರಾರಂಭ ಮಾಡುತ್ತಾರೆ. ಮತ್ತು ಹಾಗೆಯೇ ನಡೆದುಕೊಳ್ಳುತ್ತಾರೆ.

೨. ತಮ್ಮ ಕೃತಿಗೆ 'ಎಲ್ಲೂ ಪ್ರಕಟವಾಗದ ೧೨೨೪ ಗಾದೆಗಳನ್ನು ಆಯ್ದು ಸಂಗ್ರಹಕಾರ್ಯವನ್ನು' ಪೂರ್ಣಗೊಳಿಸುತ್ತಾರೆ. 'ಪಾಠಾಂತರವನ್ನುಳ್ಳ ಗಾದೆಗಳನ್ನು ಉಳಿಸಿಕೊಂಡು, ಪ್ರಕಟವಾಗಿರುವ ಗಾದೆಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದೇನೆ' ಎಂದಿದ್ದಾರೆ. ಪುನರಾವರ್ತನೆ ತಪ್ಪಿಸುವಲ್ಲಿ ಇಲ್ಲೂ ಹಾನಿಯಾಗಿದೆ.

ನಾಲ್ಕು ಪುಟಗಳ ತಮ್ಮ ಪ್ರಸ್ತಾವನೆಯಲ್ಲಿ ಆಡುವ ಮಾತುಗಳು ಗಮನಸೆಳೆಯುತ್ತವೆ. "ಈ ಸಂಗ್ರಹಕಾರ್ಯ ಪೂರ್ಣಗೊಂಡಾಗ ಯೋಚಿಸುವಂತೆ ಮಾಡಿದ ಅಂಶವೆಂದರೆ ಅಸ್ಪೃಶ್ಯತೆಯನ್ನು ಕುರಿತಾದ ಗಾದೆಗಳ ಸಂಖ್ಯೆ. ಅವು ಬೆರಳೆಣಿಕೆಯಷ್ಟೂ ಇಲ್ಲ– ನಾಲ್ಕೇ ನಾಲ್ಕು! ...ಕುಲಭೇದ ನಿವಾರಣೆಯ ಬಗೆಗೆ ಕೇವಲ ನಾಲ್ಕೇ ನಾಲ್ಕು! ದಲಿತ ವರ್ಗದ, ಜನಸಾಮಾನ್ಯರ ದಿಟ್ಟ ಎದೆಗಾರಿಕೆಯ ಹೃದಯದಿಂದ ಬಾಣದಂತೆ ಜಿಗಿದಿರಬೇಕು ಈ ಗಾದೆಗಳು–

'ಎಲ್ಲಾ ಹಾಲೂ ಬೆಳ್ಗೇ ಎಲ್ರ ನೆತ್ರಾನೂ ಕೆಂಪ್ಗೇ'
'ಕಾಳು ಕಡಿಗೆ ಕುಲಗೋತ್ರಾನ?'
'ನೆಲ ಕೊಳ್ಳೋನು, ಕೊಡೋನ್ನ ಕುಲ ಕೇಳ್ತಾನ?'
ನೆಲ ನಂಬಿದವ್ನ ಕುಲ ಕೇಳಬ್ಯಾಡ'

ಮಣ್ಣಿನಲ್ಲಿ ಕಣ್ಣು ಬಿಟ್ಟ ಮಾನವರೆಲ್ಲಾ ಒಂದೇ ಎಂಬ ಸಮನ್ವಯ ದೃಷ್ಟಿಯ ತತ್ವವನ್ನು ಮಣ್ಣಿನ ಮಕ್ಕಳ ಮನದಿಂದ ಮೂಡಿರುವ ಈ ಗಾದೆಗಳು, ಪರಿಣಾಮಕಾರಿ ಯಾಗುವಂತೆ ಸಾರಿಸಾರಿ ಹೇಳುತ್ತವೆ" (ಪ್ರ.ಪು. ೩). ಸಂಪಾದಕರಿಗೆ ಈ ಬಗೆಯ ಗಾದೆಗಳು ಏಕೆ ಕಡಿಮೆ ಪ್ರಮಾಣದಲ್ಲಿವೆ ಎಂಬುದು ಒಂದು ದೊಡ್ಡ ಪ್ರಶ್ನೆಯಾಗಿ ಕಾಡಿದೆ. ಮುಂದೆ ಗಾದೆಗಳ ಪ್ರಾಚೀನತೆಯನ್ನು ಗುರುತಿಸಲು ನಮಗೆ ಲಿಖಿತ ದಾಖಲೆಗಳ ಅಭಾವವಿದೆ ಎಂಬುದನ್ನು ಹೇಳುತ್ತಾರೆ. ನಂತರ ಆಧುನಿಕ ಗಾದೆಗಳನ್ನು ಗಮನಿಸಿ, ಬ್ರಿಟಿಷರು ಭಾರತದಲ್ಲಿ ಆಸ್ಪತ್ರೆಗಳನ್ನು ತೆರೆದಾಗ 'ಆಸೆ ಬಿಟ್ಟೋನು ಆಸ್ಪತ್ರೆಗೆ ಹೋಗ್ತಾನೆ' ಎಂಬ ಗಾದೆ, ಬಸ್ಸುಗಳು ಬಂದ ನಂತರ ಹುಟ್ಟಿಕೊಂಡಿರುವ 'ಎತ್ತಿಲ್ದ ಬಂಡಿ ನೋಡಾಕೆ ಬುತ್ತಿ ಕಟ್ಕಂಡು ಹೋದ್ರಂತೆ' ಎಂಬಂತಹ ಗಾದೆಗಳನ್ನು ಉಲ್ಲೇಖಿಸಿ ಅವುಗಳು ಹುಟ್ಟಿದ ಸಂದರ್ಭಗಳನ್ನು ವಿವರಿಸುತ್ತಾರೆ. ಈ ಮಾತುಗಳನ್ನೇ ಮುಂದುವರೆಸಿ, ಗಾದೆಗಳು ಎಂದೋ ಹುಟ್ಟಿ ಈಗ ಹುಟ್ಟುವುದೇ ನಿಲ್ಲಿಸಿಲ್ಲ ಎಂಬ ಮಾತು ನಿಜವಾದುದಲ್ಲ ಎಂಬುದಕ್ಕೆ ಇನ್ನೂ ಕೆಲ ಆಧುನಿಕ ಗಾದೆಗಳನ್ನು ಉದಾಹರಿಸುತ್ತಾರೆ. 'ಕಂದನ ಬರ್ದಾಗೆ ಮಂಗನನ್ನೇ ಸುಟ್ಕಂಡು ತಿಂದ್ರಂತೆ', ಗುದ್ದವ್ವನ ಬ್ಯಾನ್ಯಾಗೆ ಸಿದ್ಗಿ ಹೊತ್ತೋರೆ ಸತ್ರು', 'ದೊಕ್ಕೆ ಬರ್ದಾಗೆ ದೆವ್ವನ ಜಾತ್ರೆ ನೆರೀತು' ಈ ಗಾದೆಗಳು ಆಗಾಗ ಸಂಭವಿಸಿದ ಬರಗಾಲದ ಭೀಕರತೆಯನ್ನು ಹೇಳುತ್ತವೆ. 'ಉಪ್ಪಿಟ್ಟು ಕಾಫಿ, ಎತ್ತು ಬಂಡಿ ಮಾರ್ತಿ', 'ಓದೋದ್ರ ಜತೆ ನನ್ಮಗ ಸೇದೋದ್ನೂ ಕಲ್ತ', 'ಸೊಸೈಟಿ ಸಾಲ ಹೆಂಡ್ತಿ ಮಕ್ಳಿಗೆ ಮೂಲ' – ಈ ಮುಂತಾದವು ಆಧುನಿಕ ಬದುಕಿನಲ್ಲಿ ಹುಟ್ಟಿದ ಗಾದೆಗಳಾಗಿವೆ. 'ಕಾಲದ ಅನುಭವ ಮುದ್ರೆಯನ್ನು ಒತ್ತಿಸಿಕೊಂಡಿರುವ ಇಂಥ ಗಾದೆಗಳು ಕಾಲ ನಿರ್ಣಯ ಹಾಗೂ ಜನಜೀವನದ ದೃಷ್ಟಿಯಿಂದ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತವೆ' ಎನ್ನುವ ಸಂಪಾದಕರ ಮಾತು ಸರಿಯಾದುದಾಗಿದೆ.

ತಮ್ಮ ಸಂಗ್ರಹದ ಗಾದೆಗಳು ಯಾವ ಪ್ರದೇಶದಿಂದ ಆಯ್ದುಕೊಂಡವುಗಳು ಎಂಬುದನ್ನೂ ದಾಖಲಿಸುತ್ತಾರೆ. "ಈ ಸಂಗ್ರಹದಲ್ಲಿರುವ ಗಾದೆಗಳು ಮುಕ್ಕಾಲು ಪಾಲಿನಷ್ಟು ಹೊನ್ನಾಳಿ, ಚನ್ನಗಿರಿ, ಶಿಕಾರಿಪುರ ತಾಲ್ಲೂಕುಗಳಿಗೆ ಸಂಬಂಧಿಸಿವೆ. ಇನ್ನುಳಿದ ಗಾದೆಗಳು ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಸಂಬಂಧಿಸಿವೆ. ಸುಮಾರು ಹದಿನೈದು ವರ್ಷಗಳಿಂದ ನಾನು ಕಲೆಹಾಕುತ್ತ ಬಂದಿದ್ದ ಸುಮಾರು ೨೩೦೦ ಗಾದೆಗಳಿಗೆ ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಬಂದು ವಿದ್ಯಾರ್ಜನೆಯಲ್ಲಿ ತೊಡಗಿರುವ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಮಿತ್ರರು ೧೧೬೦ ಗಾದೆಗಳನ್ನು ಒದಗಿಸಿ ನನ್ನಲ್ಲಿದ್ದ ಗಾದೆಗಳ ಮೊತ್ತವನ್ನು ದೊಡ್ಡದು ಮಾಡಿ ಉಪಕಾರ ಮಾಡಿದ್ದಾರೆ' ಎಂದಿದ್ದಾರೆ. ಈ ಸಂಗ್ರಹದಿಂದಲೇ ಹೊಸ ಗಾದೆಗಳನ್ನು ಆಯ್ದುಕೊಂಡು ಪ್ರಸ್ತುತ ಸಂಕಲನವನ್ನು ತಯಾರಿಸಿದ್ದಾರೆ.

ಇದೆಲ್ಲ ನಾಲ್ಕು ಪುಟಗಳ ಪ್ರಸ್ತಾವನೆಯ ಮಾತಾಯಿತು. ಅವರು ಈ ಕೃತಿಗೆ ತಯಾರಿಸಿ ಕೊಟ್ಟ ನಾಲ್ಕು ಅನುಬಂಧಗಳು ಈ ಸಂಗ್ರಹದ ಮಹತ್ವವನ್ನು ಹೆಚ್ಚಿಸಿವೆ. ಅನುಬಂಧ-೧ 'ಗ್ರಾಮೀಣ ಪಾರಿಭಾಷಿಕ ಪದಕೋಶ' ದಲ್ಲಿ ೩೦ ವಿಶೇಷವಾದ ಪದಗಳಿಗೆ, ೧೯ ಪುಟಗಳ ಸುದೀರ್ಘವಾದ ವಿವರಣೆಯನ್ನು ಬರೆದಿದ್ದಾರೆ. ಈ ಭಾಗ ಒಂದು ದೃಷ್ಟಿಯಿಂದ ಗಾದೆಗಳಲ್ಲಿ ಮೂಡಿಬಂದ ಸ್ಥಳೀಯ ಸಂಸ್ಕೃತಿಯ ಅಧ್ಯಯನ ಎನ್ನುವಂತಿದೆ. ವಿಶೇಷವಾದ ಸಸ್ಯಗಳು, ಮಳೆ ಬಾರದೆ ಬಿದ್ದ ಬರಗಾಲಗಳು, ಸಸ್ಯಗಳಿಗೆ ಪ್ರಾಣಿಗಳಿಗೆ ಮನುಷ್ಯರಿಗೆ ಬರುವ ರೋಗಗಳು, ಆಹಾರ ಪದಾರ್ಥಗಳು, ನೆಟಗಲ್ಲುಗಳು, ಜನಾಂಗಗಳು- ಹೀಗೆ ನಾನಾಬಗೆಯ ವಿಶೇಷ ಪದಗಳನ್ನು ಆಯ್ದುಕೊಂಡು ಸಮರ್ಪಕವಾದ, ಅವಶ್ಯವಾದ, ಒಮ್ಮೊಮ್ಮೆ ಸಂಶೋಧನಾತ್ಮಕವಾದ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಒಂದು ಸಣ್ಣ ಟಿಪ್ಪಣಿಯುಳ್ಳ ವಿವರವನ್ನು ಗಮನಿಸಬಹುದಾಗಿದೆ. **'ದೊಕ್ಕೆಬರ'** (೫೯೩-ಈ ಸಂಖ್ಯೆ ಗಾದೆಯ ಅನುಕ್ರಮವನ್ನು ಸೂಚಿಸುತ್ತದೆ)- 'ಡೊಕ್ಕೆ>ದೊಕ್ಕೆ=ಹೊಟ್ಟೆ. ಕಂದನ ಬರಕ್ಕೆ ಮತ್ತೊಂದು ಹೆಸರು ದೊಕ್ಕೆಬರ. ವಾರಗಟ್ಟಲೆ ಹಿಡಿಹಿಟ್ಟು ಕಾಣದ ಹೊಟ್ಟೆ ಬೆನ್ನಿಗಂಟಿ ಮಾತಾಡಲು ಉಸಿರೂ ಬಾರದೆ ಒದ್ದಾಡಿದ ಜನ ತಣ್ಣಗಾದರಂತೆ. ಸುಡುಗಾಡು ತುಂಬಿದ ಹೆಣಗಳನ್ನು ಹಗಲಲ್ಲಿ ಹದ್ದು, ಕಾಗೆ, ನಾಯಿ, ನರಿಗಳು ಕಿತ್ತಾಡಿ ತಿಂದರೆ, ರಾತ್ರಿಯಲ್ಲಿ ದೆವ್ವಗಳು 'ಥರ್' ಎನ್ನುವಂತೆ ತಿಂದು, ತೇಗು ಹಾಕುತ್ತಾ 'ತಕಥೈ' ಎಂದು ಸಂತಸದಿಂದ ಕುಣಿದಾಡಿದುವಂತೆ. ಈ ಬರ ಮಾರಿಯ ಅನಾಹುತದ ಬಗೆಗೆ ರಚನೆಯಾಗಿರುವ ಬರಹಗಳನ್ನು ಒಂದೆಡೆ ಸಂಗ್ರಹಿಸಿದರೆ ಅದೊಂದು ಉತ್ತಮವಾದ 'ಶೋಕ ಸಾಹಿತ್ಯ' ಸಂಪುಟವಾದೀತು' (ಪು.೮೩).

ಅನುಬಂಧ-೨ 'ಗಾದೆಯ ಕತೆಗಳು' ಎಂದಿದೆ. ಒಂದೊಂದು ಗಾದೆಯ ಹಿಂದೆ ಒಂದೊಂದು ಘಟನೆ ಇರುವುದು ಸಹಜ. ಒಮ್ಮೊಮ್ಮೆ ಒಂದೊಂದು ಜನಪದ ಕಥೆಯೇ ಗಾದೆಗಳಿಗೆ ಉದಾಹರಣೆಯಾಗಿ ವಿವರಿಸುವುದನ್ನು ಕಾಣುತ್ತೇವೆ. ಅಂತಹ ಕಥೆ ಹೇಳುವ ೬ ಗಾದೆಗಳನ್ನು ಆಯ್ದುಕೊಂಡು, ಅವುಗಳ ಹಿನ್ನೆಲೆ ಬಿತ್ತರಿಸುವ ಕಥೆಗಳನ್ನು ಸಂಗ್ರಹಿಸಿ ಕೊಟಿದ್ದಾರೆ. 'ಅಯ್ಯಪ್ಪಗೆ ಆದದ್ದು ದಾಸಪ್ಪಗೂ ಆಗ್ತೈತಿ', 'ಆನೆ ಜಗ್ದು ಒಂಟೆ ಯುಟ್ಟಂಗೆ', 'ಕಲ್ಲಂಗ್ಡಿ ಕನಸ್ನಾಗೆ ಬುಡೇನ್‌ಸಾಬಿ ಬಡ್ವಾದ್ನಂತೆ', 'ನೀರಾಗಿದ್ದ ಅಗಸ ಬಾಯಾರ್ಸಿ ಸತ್ತಂಗೆ',

'ಬೆಲ್ಡೋನು ಬಾಯ್ಬಾಯ್ ಬಡ್ಕಂಡ್ರೆ ತೆಂಗಿನ್ಕಾಯ್ನೋನು ತಲೆತಲೆ ಹೊಡ್ಕಂಡ', 'ರೆಡ್ಡೀ ಅಂದ್ರೆ ಬಂಗಾರ ಕಡ್ಡಿ ಅಂತ'– ಈ ಆರು ಗಾದೆಗಳ ಹಿಂದಿರುವ ಕತೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಜೊತೆಗೆ ವಕ್ತಾರರ ವಿವರಗಳೂ ಇವೆ. ಬಹುಶಃ ಕೃಷ್ಣಪ್ಪ ರೆಡ್ಡಿ ಅವರ ಈ ಪ್ರಯತ್ನವೇ ಮುಂದೆ ಅವರಿಗೆ **'ಗಾದೆಯ ಕತೆಗಳು'** ಎಂಬ ಕೃತಿಯೊಂದನ್ನು ತರಲು ಕಾರಣವಾದಂತೆ ತೋರುತ್ತದೆ. ಸಂಪಾದಕನು ಒಂದು ಸಂಗ್ರಹಕ್ಕೆ ಮಾಡುವ ಪ್ರಯತ್ನಗಳು ಮತ್ತೆ ಅವನಿಗೆ ಮುಂದಿನ ಕೆಲಸಗಳಿಗೆ ದಾರಿಮಾಡಿಕೊಡುತ್ತವೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ. ಅನುಬಂಧ–೩ 'ಅರ್ಥಕೋಶ'ವಾಗಿದೆ. ೩೦ ಪುಟಗಳಷ್ಟು ಶಬ್ದಾರ್ಥಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅನುಬಂಧ–೪ 'ಗಾದೆಗಳ ವರ್ಗೀಕರಣ' ಎಂದಿದೆ. ಇಲ್ಲಿ ಅನಾರೋಗ್ಯ, ಆಟ, ಆಭರಣ, ಆರೋಗ್ಯ, ಇತ್ತೀಚಿನ ಗಾದೆಗಳು, ಉತ್ತನೆ, ಉಪದೇಶ ಹೀಗೆ ೪೬ ಬಗೆಯ ವಿಷಯಗಳನ್ನು ಗುರುತಿಸಿ, ಆಯಾ ವಿಭಾಗಗಕ್ಕೆ ಸಂಬಂಧಿಸಿದ ಗಾದೆಗಳ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಹೀಗೆ ಮಾಡುವ ಬದಲಾಗಿ ಈ ವಿಭಾಗೀ ಕರಣದಡಿಯೇ ಗಾದೆಗಳನ್ನು ವಿಭಾಗಿಸಿ ಕೊಟ್ಟಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತು.

೧೯೮೪ರಲ್ಲಿ ಪ್ರಕಟವಾದ **'ಜಾನಪದ ಪರಿಮಳ'** (ಭಾಗ–೨) ಡಾ. ಬಿ.ಎಸ್. ಕುಲಕರ್ಣಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ ಜನಪದ ಸಾಹಿತ್ಯದ ಹಲವಾರು ಪ್ರಕಾರಗಳನ್ನು ಹೊತ್ತ ಉತ್ತರ ಕರ್ನಾಟಕದಿಂದ ಪ್ರಕಟವಾದ ಒಂದು ಕೃತಿ. ಇದರಲ್ಲಿ ಒಂದು ಭಾಗ ಗಾದೆಗಳಿಗೆ ಸಂಬಂಧಿಸಿದಂತಿದೆ. ೧೦೩೪ ರಷ್ಟಿರುವ ಇಲ್ಲಿಯ ಗಾದೆಗಳನ್ನು 'ಬೆತ್ತಲೆ ಗಾದೆಗಳು' (ಲೋಕೋಕ್ತಿಗಳು) ಎಂದು ಕರೆಯಲಾಗಿದೆ. ಇಲ್ಲಿ ಗಾದೆಗಳ ಜೊತೆಗೆ ಕೆಲವು ಸಾಮಾನ್ಯವಾದ ಅನುಭವದ ಮಾತುಗಳೂ ಇವೆ. ಬಹುಶಃ ಇವುಗಳನ್ನೇ ಲೋಕೋಕ್ತಿಗಳು ಎಂದಂತಿದೆ. 'ಈ ಜನ್ಮಕ ಏಟ ಕೊಟ್ಟರೂ ಹಿಂಗಂಗಿಲ್ಲಂತ', 'ಇಂಥಕಿ ಮ್ಯಾಲ ಹ್ಯಾಂಗರೆ ಕೈ ಏಳತದಂತ', 'ಇಸ್ಪೇಟ ಆಡಿದವರ ತೆಲಿ ಸರಿ ಇರಂಗಿಲ್ಲಂತ'– ಇಂತಹ ಮಾತುಗಳ ಸಂಗ್ರಹದ ಉದ್ದೇಶ ಗೊತ್ತಾಗುವುದಿಲ್ಲ. ಆದರೆ ಸಂಪಾದಕರು 'ಇವುಗಳಲ್ಲಿ ಪ್ರಾದೇಶಿಕ ಭಾಷೆ ಅಡಕವಾಗಿದ್ದರಿಂದ ಭಾಷಾಶಾಸ್ತ್ರಜ್ಞರಿಗೆ ಅಭ್ಯಾಸಕ್ಕಾಗಿ ಉಪಯುಕ್ತವಾಗಿವೆ' (ಮುನ್ನುಡಿ, ಪು.೩) ಎಂದಿದ್ದಾರೆ. ಆದರೆ ಗಾದೆಗಳಷ್ಟನ್ನೇ ಬೇರೆಯಾಗಿ ಕೊಟ್ಟಿದ್ದರೆ ಸಾಕಾಗಿತ್ತು ಎನಿಸುತ್ತದೆ.

ನಾನು (ವೀರಣ್ಣ ದಂಡೆ) ಸಂಪಾದಿಸಿದ **'ಆಯ್ದ ಗಾದೆಗಳು ಹಾಗೂ ಒಗಟುಗಳು'** (೧೯೮೫) ಎಂಬ ಕೃತಿಯಲ್ಲಿ ೧೩೪೫ ಗಾದೆಗಳಿವೆ. ಇವೆಲ್ಲ ಕಲಬುರಗಿ ಜಿಲ್ಲೆಯಲ್ಲಿ ಸಂಗ್ರಹಿಸಿದ ಗಾದೆಗಳಾಗಿವೆ. ಈ ಕೃತಿ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ.(ದ್ವಿ) ವರ್ಗಕ್ಕೆ ಪಠ್ಯವಾಗಿ ತಯಾರಿಸಬೇಕಾಗಿದ್ದರಿಂದ ಆ ವಯಸ್ಸಿನ ಮಕ್ಕಳು ಯಾವುದೇ ಹಿಂಜರಿಕೆಯಿಲ್ಲದೆ ಓದಬಹುದಾದ ಗಾದೆಗಳನ್ನೇ ಇಲ್ಲಿ ಆರಿಸಿಕೊಳ್ಳಲಾಗಿದೆ. ವಿಭಾಗೀಕರಣದ ದೃಷ್ಟಿಯಿಂದ ಒಂದು ಹೊಸ ಪ್ರಯೋಗವನ್ನು ಮಾಡಲಾಗಿದೆ. ನಾನು ಜನಪದ ಕಥೆಗಳ ಆಶಯ ಮತ್ತು ಮಾದರಿಗಳನ್ನು ಕುರಿತು ಸಂಶೋಧನ ಅಧ್ಯಯನ ಮಾಡಿದವನಾದ್ದರಿಂದ ಅವುಗಳನ್ನು ಅನ್ವಯಿಸಿ ವಿಭಾಗ ಮಾಡಬಹುದೆನಿಸಿತು. ಹೀಗಾಗಿ ಒಗಟುಗಳನ್ನು ಆಶಯ ಸೂಚಿ (ಮೋಟೀಫ್ ಇಂಡೆಕ್ಸ್) ವಿಂಗಡನಾ ಕ್ರಮದಂತೆ ಹಾಗೂ ಗಾದೆಗಳನ್ನು ಮಾದರಿ ಸೂಚಿ

(ಟೈಪ್ ಇಂಡೆಕ್ಸ್) ವಿಭಾಗೀಕ್ರಮದಂತೆ ಅಳವಡಿಸಲು ಪ್ರಯತ್ನ ಮಾಡಿದ್ದೇನೆ. ಹೀಗೆ ಮಾಡಲು ಗಾದೆ ಮತ್ತು ಒಗಟುಗಳ ಸ್ವರೂಪವೇ ಕಾರಣವಾಗಿದೆ ಮತ್ತು ಅನುಕೂಲವಾಗಿದೆ.

ಗಾದೆಗಳನ್ನು ಕಥಾಮಾದರಿ ಸೂಚಿ ಅನ್ವಯ ವಿಭಾಗಿಸಿಕೊಳ್ಳಬಹುದಾಗಿದೆ. ಒಂದು ಗಾದೆಯ ಹಿಂದೆ ಒಂದು ಘಟನೆ, ಒಂದು ಕಥೆ ಅಡಗಿರುತ್ತದೆ ಎಂಬುದು ನಮಗೆಲ್ಲ ತಿಳಿದ ವಿಷಯ. ಅಂದರೆ ಕಥೆಯ ಗುಣಗಳು ಗಾದೆಗಳಲ್ಲಿ ಕಾಣುತ್ತವೆ. ಮುಖ್ಯವಾಗಿ ಒಂದೊಂದು ಗಾದೆಯೂ ಸ್ವತಂತ್ರವಾಗಿದ್ದು, ಅರ್ಥಕ್ಕಾಗಿ ಬೇರೊಂದನ್ನು ಅವಲಂಬಿಸಿ ಇರುವುದಿಲ್ಲ. ಈ ಸ್ವತಂತ್ರವಾದ, ಪ್ರತ್ಯೇಕ ಅಸ್ತಿತ್ವ ಹೊಂದಿದ ಗಾದೆಯ ಗುಣಲಕ್ಷಣವೇ ಕಥೆಗಳಲ್ಲಿ ಕಾಣುವ ಮುಖ್ಯಗುಣಕ್ಕೆ ಹೋಲುವಂತಹದಾಗಿದೆ. ಗಾದೆಗಳ ಹಿನ್ನೆಲೆಯಲ್ಲಿ ಹೇಳುವ ಕಥೆಗಳು ಸರಳ ಕಥೆಗಳ ಗುಂಪಿಗೆ ಸೇರಿರುತ್ತವೆ. ಇವು ಒಳಗೊಳ್ಳುವ ವಿಷಯ, ಇವುಗಳ ರಚನೆ ಒಂದೇ ಬಗೆಯಾಗಿದ್ದು, ಎರಡನ್ನೂ ಸಾಮಾನ್ಯವಾದ ವಿಭಾಗೀಕರಣದಲ್ಲಿ ಹಿಡಿದಿಡಲು ಸಾಧ್ಯವಿಲ್ಲ. **'ಕನ್ನಡ ಗಾದೆಗಳ ಕೋಶ'**(೧೯೬೩) ಕೃತಿಯಲ್ಲಿ ಟಿ.ವಿ.ವೆಂಕಟರಮಣಯ್ಯ ಅವರು ಗಾದೆಗಳನ್ನು ವಿಷಯಾನುಸಾರ ವಿಭಾಗಿಸಿಕೊಳ್ಳಲು ಪ್ರಯತ್ನ ಮಾಡಿ, ಕೇವಲ ೪೦೦೦ ಗಾದೆಗಳನ್ನು ೫೫೬ ವಿಷಯಗಳಡಿ ಗುರುತಿಸಿಕೊಂಡು, ಮತ್ತೆ ೪೦೦೦ ಗಾದೆಗಳನ್ನು ವಿಂಗಡಿಸಿಕೊಳ್ಳಲು ಸಾಧ್ಯವಾಗದೆ ಅವುಗಳನ್ನು ಅಕಾರಾದಿಯಾಗಿ ಕೊಟ್ಟದ್ದನ್ನು ಇಲ್ಲಿ ಗಮನಿಸಬೇಕು. ಗಾದೆಗಳಂತಹ ವಿಷಯಗಳನ್ನೇ ಕಥೆಗಳು ಹೊಂದುವುದರಿಂದ ಕಥೆಗಳನ್ನು ಸರಳವಾಗಿ ವಿಭಾಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕಾರಣವಾಗಿಯೇ ಕಥೆಗಳನ್ನು ವಿಭಾಗಿಸಿಕೊಳ್ಳಲು ಮಾದರಿಗಳ ಪರಿಕಲ್ಪನೆ ಹುಟ್ಟಿಕೊಂಡದ್ದು. ಈ ಹಿನ್ನೆಲೆಯಲ್ಲಿ ಮಾದರಿಗಳ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಗಾದೆಗಳನ್ನು ಪರಿಗಣಿಸಿಕೊಂಡು, ಆ ವಿಭಾಗೀಕ್ರಮವನ್ನು ಅನುಸರಿಸಲು ಸಾಧ್ಯವಿದೆ ಎಂಬುದನ್ನು ಈ ಕೃತಿಯಲ್ಲಿ ತೋರಿಸಿಕೊಡಲಾಗಿದೆ.

ಪ್ರಸ್ತಾವನೆಯ ಮೊದಲ ಪ್ಯಾರಾ ಹೀಗಿದೆ : "ಗಾದೆಗಳು ತಮ್ಮ ಅಸ್ತಿತ್ವದಲ್ಲಿ ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿದವುಗಳಲ್ಲ. ಒಂದು ಗಾದೆ ಇನ್ನೊಂದರಂತೆ ಕಂಡರೂ ಈ ಸಾಮ್ಯವು ಗಾದೆಗಳೆರಡು ತಳೆದಿರುವ ಧೋರಣೆಯಾಗಿರುತ್ತದೆ. ಒಂದು ಗಾದೆಯಿಂದ ಇನ್ನೊಂದು ಗಾದೆ ಹುಟ್ಟಿಕೊಳ್ಳಲಾರದು. ಇಲ್ಲವೆ ಒಂದು ಗಾದೆಯ ಹುಟ್ಟಿಗೆ ಇನ್ನೊಂದು ಗಾದೆಯು ಮೂಲಕಾರಣವಾಗಲಿ, ಪ್ರೇರಣೆಯಾಗಲಿ ಆಗಿರಲಾರದು ಮತ್ತು ಅವುಗಳ ಹುಟ್ಟಿನ ಮೂಲ ಕೂಡ ಒಂದೇ ಆಗಿರಲು ಸಾಧ್ಯವಿಲ್ಲ. ಒಂದು ಅನುಭವಕ್ಕೆ ಒಂದು ಗಾದೆ. ಹೀಗೆ ಗಾದೆಗಳ ಸಂಗ್ರಹವೊಂದು ಜೀವನದ ಅನುಭವಗಳ ಕೋಶವೇ ಆಗಿರುತ್ತದೆ". ನನಗೆ ಅರಿವಿಲ್ಲದೆಯೇ ಮೊದಲಿನ ಪ್ಯಾರಾವೇ ಹೀಗೆ ಆದುದರಿಂದ ಈ ಕೃತಿಯನ್ನು ಅವಲೋಕಿಸುವಾಗ ಮೊದಲು ಗಮನಿಸಬೇಕಾದುದು ವಿಭಾಗೀಕರಣವನ್ನೆ. ನಂತರ ಅವುಗಳ ವಿಷಯ ಇತ್ಯಾದಿಗಳನ್ನು ಗಮನಿಸಬೇಕು.

ಈ ಕೃತಿಯಲ್ಲಿ ಗಾದೆಗಳು ಹೊತ್ತಿರುವ ವಿಷಯಗಳನ್ನು ಗಮನಿಸಿ ೧೩ ಬಗೆಯ ವಿಷಯಗಳಡಿ ಇಲ್ಲಿಯ ಗಾದೆಗಳನ್ನು ವಿಭಾಗಿಸಿಕೊಳ್ಳಲಾಗಿದೆ.

೧-೨೫೦: ಸಸ್ಯವರ್ಗ,
೨೫೧-೯೦೦: ಪ್ರಾಣಿಗಳು,
೯೦೧-೧೪೦೦ : ಮಾನವ ದೈಹಿಕ ವರ್ಗ,
೧೪೦೧-೨೦೦೦ : ಮಾನವ ಬಂಧುವರ್ಗ,
೨೦೦೧-೨೪೦೦ : ಮಾನವ ಸ್ವಭಾವ-ಗುಣಲಕ್ಷಣಗಳು,
೨೪೦೧-೩೦೦೦ : ಸಾಮಾಜಿಕ ವ್ಯವಸ್ಥೆ- ಉದ್ಯೋಗ, ಜಾತಿ, ಜನಾಂಗಳು,
೩೦೦೧-೩೧೦೦ : ಕೃಷಿ ಸಂಬಂಧಿ,
೩೧೦೧-೩೨೫೦ : ಊಟೋಪಚಾರ,
೩೨೫೧-೩೩೫೦ : ಸಿರಿತನ ಬಡತನ,
೩೩೫೧-೩೪೫೦ : ವಿಧಿ ಪಾಪ ಪುಣ್ಯ,
೩೪೫೧-೩೬೫೦ : ಬುದ್ಧಿಭಾವ,
೩೫೬೧-೩೬೦೦ : ಸಂಗೀತ,
೩೭೦೧-೩೮೦೦ : ಭೂಖಗೋಳ ವರ್ಗ.

ಹೀಗೆ ಇಲ್ಲಿಯ ಗಾದೆಗಳನ್ನು ವಿಷಯಾನುಸಾರ ವಿಂಗಡಿಸಿಕೊಳ್ಳಲಾಗಿದೆ. ನಂತರ ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ವಿಭಾಗೀಕರಣ ಮುಂದುವರೆಯುತ್ತದೆ. ಉದಾಹರಣೆಗಾಗಿ **'IV. ೧೪೦೧-೨೦೦೦ : ಮಾನವ ಬಂಧುವರ್ಗ'** ದ ಬಗೆಗೆ ಬರುವ ಗಾದೆಗಳನ್ನು ವಿಭಾಗಿಸಿಕೊಂಡ ರೀತಿಯನ್ನು ಈ ಕೆಳಗೆ ಕೊಡಲಾಗಿದೆ. ವಿಭಾಗೀಕರಣದ ಶೀರ್ಷಿಕೆಗಳ ಜೊತೆಗೆ ಅವುಗಳ ಕೆಳಗೆ , ವಿಭಾಗೀಕರಣದ ಸ್ಪಷ್ಟತೆಗಾಗಿ ಒಂದೊಂದು ಗಾದೆಯನ್ನು ಮಾತ್ರ ಕೊಡಲಾಗಿದೆ.

IV. ೧೪೦೧-೨೦೦೦ : ಮಾನವ ಬಂಧುವರ್ಗ

೧೪೦೧-೧೬೫೦ : ರಕ್ತ ಸಂಬಂಧಿಕರು

೧೪೦೧-೧೫೫೦ : ಪ್ರಾಥಮಿಕ ರಕ್ತ ಸಂಬಂಧಿಕರು

೧೪೦೧-೧೪೨೦ : ತಾಯಿ-ತಂದೆ

೧೪೦೧.ಮಕ್ಕಳ ಹಡ್ದು ಬಂಜಿತನ ತಪ್ಲಿಲ್ಲ, ಭತ್ತ ಬೆಳ್ದು ಬಡ್ತನ ತಪ್ಲಿಲ್ಲ.

೧೪೨೧-೧೪೪೦ : ಮಕ್ಕಳು

೧೪೨೧.ಅಂಬಾ ಅಂದ್ರ ಆಕ್ಳಲ್ಲ, ಗೊಂಬಿ ತನ್ನ ಮಕ್ಳಲ್ಲ.

೧೪೪೧-೧೪೫೦ : ತಾಯಿ-ಮಕ್ಕಳು

೧೪೪೧.ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿ ಇಲ್ಲ.

೧೪೫೧-೧೪೬೦ : ತಾಯಿ-ಮಗಳು

೧೪೫೧.ತಾಯಿಯಂಗ ಮಗಳು, ನಾಯಿಯಂಗ ಬಾಲಾ.

೧೪೬೧-೧೪೭೦ : ತಾಯಿ-ಮಗ

೧೪೬೧.ತಾಯಿ ಮಾತ ಮೀರ್ದಾಂವ ನಾಯಿಭ್ರಷ್ಟ ಆಗ್ತಾನ.

೧೪೭೧–೧೪೮೦ : ಅಪ್ಪ–ಮಗ

೧೪೭೧.ಅಪ್ಪ ಹಾಕಿದ ಆಲದ ಮರ ಅಂತ ಉರ್ಲ ಹಾಕೋತಾರೇನು?

೧೪೮೧–೧೪೯೦ : ಮಗ

೧೪೮೧.ಮಗ ಉಂಡ್ರ ಕೇಡಲ್ಲ, ಮಳಿ ಬಂದ್ರ ಕೇಡಲ್ಲ.

೧೪೯೧–೧೫೦೦ : ಮಗಳು

೧೪೯೧.ಹೆಣ್ಣ ಹುಟ್ಟಿದ ಮನಿ ತಣ್ಣಗ.

೧೫೦೧–೧೫೧೦ : ಅಣ್ಣ–ತಮ್ಮ

೧೫೦೧ ಹುಟ್ಟುತ್ಲೆ ಅಣ್ಣತಮ್ರು, ಬೆಳೀತ್ಲೆ ಭಾಗಾದಿ.

೧೫೧೧–೧೫೨೦ : ಅಕ್ಕ–ತಂಗಿ

೧೫೧೧.ಅಕ್ಕ ತಂಗೇರ ಧನಿ ರೊಕ್ಕ ಬಾರಿಸಿದಂಗ

೧೫೨೧.–೧೫೩೦ : ಅಕ್ಕ

೧೫೨೧.ಹಿರಿಯಕ್ಕನ ಚಾಳಿ ಮನಿ ಮಂದೀಗೆಲ್ಲ.

೧೫೩೧–೧೬೦೦ : ಮಾಧ್ಯಮಿಕ ರಕ್ತ ಸಂಬಂಧಿಕರು

೧೫೩೧–೧೫೭೦ : ಅಜ್ಜ–ಅಜ್ಜಿ

೧೫೩೧.ಅಡೂಡ್ಯಾಗ ಆಯಿ ಮೈನರ್ದಳಂತ.

೧೫೭೧–೧೫೮೦ : ಅಜ್ಜಿ–ಮೊಮ್ಮಗ

೧೫೭೧.ಮಮ್ಮಗ್ಗ ಅಂಜಿ ಗುಮ್ಮ್ಯಾಗ ಅಡಗರ, ಗುಮ್ಮ ಬಂದು ಉಮ್ಮ ಕೊಟ್ಟೀತಂತ.

೧೬೦೧–೧೬೧೦ : ಭಾವ (ಅಕ್ಕನ ಗಂಡ)

೧೬೦೧.ಅಕ್ಕ ಇದ್ರ ಭಾವ, ರೊಕ್ಕ ಇದ್ರ ಸಂತಿ.

೧೬೧೧–೧೬೨೦ : ಸೋದರಮಾವ

೧೬೧೧.ತಾಯಿ ಸತ್ತು ಸ್ವಾದರ ಮಾವ ಇರಬೇಕು.

೧೬೨೧–೧೬೩೦ : ಅತ್ತಿಗೆ

೧೬೨೧.ಅತ್ಗೆವ್ವ ಅಂದ್ರ ಹೆತ್ತವ್ವಂತ.

೧೬೩೧–೨೦೦೦ : ವೈವಾಹಿಕ ಸಂಬಂಧಿಕರು

೧೬೩೧–೧೬೬೦ : ವಧು–ವರರು

೧೬೩೧.ಚಳಿಗಾಲ್ದಾಗ ವಧು–ವರ ನೋಡಾಕ ಹೋಗ್ಬಾರ್ದು.

೧೬೬೧–೧೭೩೦ : ವೈವಾಹಿಕ ಪ್ರಾಥಮಿಕ ಸಂಬಂಧಿಕರು

೧೬೬೧–೧೬೭೦ : ಗಂಡ–ಹೆಂಡತಿ

೧೬೬೧.ಎಂದು ಇಲ್ದು ಎಳ್ಗ ಅಂದ್ರ, ತಿಂಗ್ಳೀಗೊಮ್ಮಿ ನಗು ಬಂದಿತಂತ.

೧೬೭೧–೧೬೯೦ : ಗಂಡ

೧೬೭೦.ಅಳ್ಯಾ ಅಲ್ಲ ಮಗಳ ಗಂಡ.

೧೬೯೧–೧೭೩೦ : ಹೆಂಡತಿ

೧೬೯೧.ಅಟ್ಟುಣ್ಣಾವ್ನ ಹೆಣ್ತಿ ಆಗಬಾರ್ದು, ಮಟ್ಟಿ ಹೊಡ್ಯಾವ್ನ ಆಳಾಗಬಾರ್ದು.

೧೭೩೧-೧೮೫೦ : ವೈವಾಹಿಕ ಮಾಧ್ಯಮಿಕ ಸಂಬಂಧಿಕರು

೧೭೩೧-೧೭೪೦ : ಅತ್ತೆ-ಮಾವ

೧೭೩೧. ಹೆಣ್ಣು ಕೊಟ್ಟಿ ಬೆನ್ನ ಕೊಟ್ಟಿ

೧೭೪೧-೧೭೫೦ : ಅತ್ತೆ-ಅಳಿಯ

೧೭೪೧. ಅತ್ತಿ ಅಳ್ಯಾಗ ಮರಳ, ಕತ್ತಿ ಕರಕಿಗ ಮರಳ.

೧೭೫೧-೧೭೬೦ : ಅತ್ತೆ-ಸೊಸೆ

೧೭೫೧. ಕತ್ತಿ ಹಂತಾದೊಂದು ಅತ್ತಿ ಇರ್ಬೇಕು, ನಾಯಿ ಹಂತಾದೊಂದು ತಾಯಿ ಇರ್ಬೇಕು.

೧೭೬೧-೧೭೭೦ : ಅಳಿಯ

೧೭೬೧. ಅಳಿಯನಿಗಿಂತ ಬ್ರಾಹ್ಮಣನಿಲ್ಲ, ಮಗಳ್ಗಿಂತ ಮುತ್ತೈದೆ ಇಲ್ಲ.

೧೭೭೧-೧೭೮೦ : ಸೊಸೆ

೧೭೭೧. ಹಿರಿತನಮಾಡss ಹಿರಿಸೊಸಿ ಅಂದ್ರ (ಹಿರಿ ಸೊಸಿಗ ಹಿರಿತನಕೊಟ್ರ) ಚಪ್ಲಿ ಹಾಕೊಂಡು ದೇವ್ರ ಪೂಜೆ ಮಾಡ್ತಿದ್ಳಂತ.

೧೭೮೧-೧೭೯೦ : ನಾದುನಿ

೧೭೮೧. ನಡ್ಯಾ ಮನಿಗ ನಾದನಿ ಮೂಲ.

೧೭೯೧-೧೮೦೦ : ಸೊಸೆ (ಹೆಂಡತಿ ತಂಗಿ)

೧೭೯೧. ಹೆಣ್ತಿ ತಂಗಿಗಿ ಬಿಡಬಾರ್ದು, ಹೊಲ್ದ ಬಲ್ಲಿ ಹೊಲ ಬಿಡಬಾರ್ದು.

೧೮೦೧-೧೮೧೦ : ಸವತಿ

೧೮೦೧. ಸಂವ್ತಿ ಸಣ್ಣಕೆಲ್ಲ ಭಾಗಾದಿ ಬಡವಿ ಅಲ್ಲ.

೧೮೦೨. ಸಂವ್ತಿ ಅಂದ್ರ ಸಾಯಾ ಹೆಣಾನೂ ಎದ್ದು ಕುಂತಂತ.

೧೮೫೧-೧೯೦೦ : ವೈವಾಹಿಕ ತೃತೀಯ ಸಂಬಂಧ

೧೮೫೧-೧೮೬೦ : ಬೀಗರು

೧೮೫೧. ಅಕ್ಕಿ ಮ್ಯಾಲ್ನು ಪ್ರೀತಿ, ನೆಂಟರ ಮ್ಯಾಲ್ನು ಪ್ರೀತಿ?

ಈ ಬಗೆಯಲ್ಲಿ ವಿಭಾಗೀಕರಣವನ್ನು ಮಾಡಿಕೊಂಡರೆ ಕನ್ನಡದಲ್ಲಿ ದೊರೆಯುವ ಗಾದೆಗಳನ್ನು ಈ ವಿಭಾಗೀಕರಣದಡಿ ಹೊಂದಿಸಿಕೊಳ್ಳಬಹುದಾಗಿದೆ. ಟಿ.ವ್ಹಿ.ವೆಂಕಟರಮಣಯ್ಯ ಅವರ **'ಕನ್ನಡ ಗಾದೆಗಳ ಕೋಶ'** ದಲ್ಲಿ ಸೂಚಿಸಿದ ೫೫೬ ವಿಷಯಗಳನ್ನು, ಮತ್ತು ಹು.ಮ.ರಾಮಾರಾಧ್ಯರು **'ಕನ್ನಡ ಗಾದೆಗಳ ಮಹಾಕೋಶ'** ದಲ್ಲಿ ಗುರುತಿಸಿಕೊಂಡ ವಿಷಯಗಳನ್ನು ಗಮನಿಸಿದ್ದೇನೆ. **'ಕಥಾಮಾದರಿ ಸೂಚಿ'** ವಿಭಾಗೀಕ್ರಮದಡಿ ಈ ಎಲ್ಲ ವಿಷಯಗಳನ್ನು ಸರಳವಾಗಿ ಹೊಂದಿಸಿಕೊಳ್ಳಬಹುದಾಗಿದೆ. ಮೈಸೂರು ವಿಶ್ವವಿದ್ಯಾಲಯದವರು ಹೊರತಂದ **'ಸಮಗ್ರ ಕನ್ನಡ ಗಾದೆಗಳು'** ಸೂಚಿಯ ನಾಲ್ಕು ಸಂಪುಟಗಳನ್ನೂ ಗಮನಿಸಿದ್ದೇನೆ. ಈ ಸಂಪುಟದಲ್ಲಿಯ ಸುಮಾರು ೩೦ ಸಾವಿರ ಕನ್ನಡ ಗಾದೆಗಳನ್ನು ವೈಜ್ಞಾನಿಕವಾಗಿ ವಿಭಾಗಿಸಿಕೊಳ್ಳಲು ಸಾಧ್ಯವಿದೆ. ಈ ವಿಭಾಗೀಕ್ರಮದಲ್ಲಿ ಗಾದೆಗಳ ಭಿನ್ನಪಾಠಗಳನ್ನೂ ಗುರುತಿಸಿಕೊಳ್ಳಲು ಅವಕಾಶವಿದೆ. ಯಾವುದೇ ಪಾಠವನ್ನು

ಕೈಬಿಡುವ ಅವಶ್ಯಕತೆ ಬೀಳುವುದಿಲ್ಲ. ಹೀಗೆ ವಿಭಾಗೀಕರಣಕ್ಕೆ ಒಳಪಡಿಸಿದರೆ ಕನ್ನಡದಲ್ಲಿ ಎಷ್ಟು ವಿಷಯಗಳಿಗೆ ಸಂಬಂಧಿಸಿದಂತೆ ಗಾದೆಗಳು ದೊರೆಯುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಅತ್ಯಂತ ಕಠಿಣವಾದ ಗಾದೆಗಳ ಅಧ್ಯಯನಕ್ಕೂ ಅನುಕೂಲವಾಗುತ್ತದೆ. ಮುಂದೆ ಗಾದೆಗಳ ಸೂಚಿ ತಯಾರಿಸುವವರು ಈ ಸೂಚನೆಗಳನ್ನು ಗಮನಿಸಬಹುದಾಗಿದೆ.

ಡಾ। ಪಿ. ಕೆ. ರಾಜಶೇಖರ ಅವರು ಜನಪದ ಸಾಹಿತ್ಯ ಸಂಗ್ರಹ ಮತ್ತು ಸಂಪಾದಕರಲ್ಲಿ ಕರ್ನಾಟಕದಲ್ಲಿಯೇ ಎದ್ದು ಕಾಣುವ ಹೆಸರು. ಅವರು ಸಂಗ್ರಹಿಸದ ಜನಪದ ಸಾಹಿತ್ಯ ಪ್ರಕಾರವೇ ಇಲ್ಲವೇನೋ ಅನ್ನುವಷ್ಟು ಕೆಲಸವನ್ನು ಅವರು ಮಾಡಿದ್ದಾರೆ. ಯಾವುದೇ ಪ್ರಕಾರಕ್ಕೆ ಕೈಹಾಕಿದರೂ ಅವರ ಸಂಗ್ರಹ ಸಂಪಾದನೆಗಳು ವಿಶೇಷವಾಗಿರುತ್ತವೆ. ಗಾದೆಗಳಿಗೆ ಸಂಬಂಧಿಸಿದಂತೆ ೧೯೯೧ರಲ್ಲಿ **'ಭೂಮಿ ತೂಕದ ಮಾತು'** ಎಂಬ ಸಂಗ್ರಹವೊಂದನ್ನು ನರಸಿಂಹೇಗೌಡ ನಾರಣಾಪುರ ಅವರ ಜೊತೆಗೂಡಿ ಸಂಪಾದಿಸಿ ಪ್ರಕಟಿಸಿದ್ದಾರೆ. ೧೫೦೧ ಗಾದೆಗಳ ಸಂಗ್ರಹವಿದು. ಹಿಂದೆ ಪ್ರಕಟವಾದ ಗಾದೆಗಳ ಸಂಗ್ರಹಗಳಲ್ಲಿ ಕಾಣಿಸಿಕೊಂಡ ಗಾದೆಗಳನ್ನು ಬಿಟ್ಟು, ಹೊಸ ಗಾದೆಗಳನ್ನು ಇಲ್ಲಿ ಪ್ರಕಟಸಲಾಗಿದೆ ಎಂದಿದ್ದಾರೆ. ಇದು ಒಬ್ಬರು ಪ್ರಾರಂಭ ಮಾಡಿದ ನಂತರ ಮುಂದೆ ಎಲ್ಲರೂ ಹೀಗೆಯೇ ಮಾಡುತ್ತ ಹೋಗಿದ್ದಾರೆ. ಇಲ್ಲಿಯ ಸಂಪಾದನೆಯ ಬಗ್ಗೆ ಒಂದು ಮಾತು ಹೇಳಬೇಕು. ಗಾದೆಗಳನ್ನು ಸಂಗ್ರಹಿಸುವಾಗಲೇ ಎಚ್ಚರಿಕೆಯಿಂದ ಉಚ್ಚಾರಣೆ ಹೇಗೆ ಮಾಡುತ್ತಾರೋ ಹಾಗೆಯೇ ದಾಖಲಿಸಿಕೊಳ್ಳಲಾಗಿದೆ. ಜೊತೆಗೆ ಒಂದು ಗಾದೆಯ ಭಿನ್ನ ಪಾಠಗಳನ್ನು ಅಡಿಟಿಪ್ಪಣಿಯಲ್ಲಿ ಕೊಡುವ ಕ್ರಮವನ್ನು ಅನುಸರಿಸಿದ್ದಾರೆ.

(೬೩೨). ತಡ್ಕೊಳ್ಳಾರ್ದೆ ಗಿಡ್ಕೊಂಡ್ ಸತ್ಲು (ಭಿನ್ನಪಾಠ : ತಡ್ಕೊನಾರ್ದೋನ್ ಹಿಡ್ಕೊಂಡ್ ಸತ್ತ, ಜಡ್ಕೊಂಡ್ ಸತ್ತ)

(೮೩೫). ನೆರ್ಮನೆ ಎಸುರುಗೆ ಇಟ್ಟೋದಂಗೆ (ನೆರ್ಮನೆ ಕಾಯಾಲ್ ಕಾಸ್ದಂಗೆ)

ಈ ಸಂಕಲನದ ಗಾದೆಗಳ ಆಯ್ಕೆಯಲ್ಲಿ ಶೀಲ ಅಶ್ಲೀಲಗಳ ಮುಜುಗರಕ್ಕೆ ಒಳಗಾಗದೆ ಸಂಪಾದಕರು ಕೆಲಸ ಮಾಡಿದ್ದಾರೆ. ಹೀಗಾಗಿ ಗಾದೆಗಳ ಆ ಮುಖ ಕುರಿತು ಅಧ್ಯಯನ ಮಾಡುವವರಿಗೆ ಇಲ್ಲಿ ಅನೇಕ ಉದಾಹರಣೆಗಳು ದೊರೆಯುತ್ತವೆ. ಈ ಕೃತಿಯ ಇನ್ನೊಂದು ವಿಶೇಷತೆಯೆಂದರೆ ವಕ್ತಾರರ ವಿವರ ಮಾಹಿತಿಗಳನ್ನು ಒದಗಿಸಿದ್ದು. ಕೊಡಗು, ಕೋಲಾರ, ಚಿಕ್ಕಮಗಳೂರು, ತುಮಕೂರು, ಮಂಡ್ಯ, ಮೈಸೂರು ಮತ್ತು ಹಾಸನ ಜಿಲ್ಲೆಗಳಿಂದ ಸಂಗ್ರಹಿಸಿದ ಗಾದೆಗಳು ಇಲ್ಲಿವೆ. ಸಂಪಾದಕರು ತುಂಬಾ ಶ್ರಮವಹಿಸಿ ಮಾಡಿದ ಕೆಲಸವೆಂದರೆ 'ವಿಷಯ ಸೂಚಿ'ಯನ್ನು ಒದಗಿಸಿದ್ದು. ಈ ಬಗೆಯ ಒಂದು ಸೂಚಿ ಕಾಣುವುದು ಮೊದಲನೆಯದಾಗಿದೆ. ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡಿರುವದರಿಂದ ಯಾವುದೋ ವಿಷಯದ ಬಗೆಗಿನ ಗಾದೆಗಳನ್ನು ಗಮನಿಸಲು ಈ ಸೂಚಿ ಅನುಕೂಲವಾಗುತ್ತದೆ ಎಂಬ ಅರಿವು ಸಂಪಾದಕರಿಗೆ ಇದೆ.

ಡಾ। ಪಿ.ಕೆ.ರಾಜಶೇಖರ ಅವರ ಇನ್ನೊಂದು ಕೊಡುಗೆ 'ಮುತ್ತಿನ ಕಣಜ' ೧೨೩೦ ಗಾದೆಗಳ ಸಂಗ್ರಹ. ಇಲ್ಲಿ ಮೊದಲಿನ 'ಭೂಮಿತೂಕದ ಮಾತು' ಸಂಗ್ರಹದ ಗಾದೆಗಳಷ್ಟು

ಯಥಾವತ್ ಬರೆಯಲು ಹೋಗಿಲ್ಲದಿರುವುದು ಕಂಡುಬರುತ್ತದೆ. ಅನುಬಂಧದಲ್ಲಿ ೧೪ ಗಾದೆಯ ಹಿಂದಿನ ಕಥೆಗಳನ್ನು ಕೊಟ್ಟಿದ್ದಾರೆ. ಇಲ್ಲೂ ವಿಷಯ ಸೂಚಿಯನ್ನು ಸೇರಿಸಿದ್ದಾರೆ. ಅರ್ಥಕೋಶವೂ ಇದೆ. ಕೊಡಗು, ಚಿಕ್ಕಮಗಳೂರು, ತುಮಕೂರು, ಮೈಸೂರು, ಬೆಂಗಳೂರು, ಚಾಮರಾಜ ನಗರ ಮತ್ತು ಹಾಸನ ಜಿಲ್ಲೆಗಳಿಂದ ಸಂಗ್ರಹಿಸಿದ ಗಾದೆಗಳು ಇಲ್ಲಿವೆ. ಇಲ್ಲೂ ಗಾದೆಗಳ ಭಿನ್ನ ಪಾಠಗಳನ್ನು, ಭಿನ್ನ ಪದಗಳನ್ನು ಕೊಡಲು ಪ್ರಯತ್ನ ಮಾಡಿದ್ದಾರೆ. ಶೀಲ ಅಶ್ಲೀಲಗಳ ಬಗ್ಗೆ ಮಡಿವಂತಿಕೆ ಮಾಡಿಲ್ಲದಿರುವುದು ಕಂಡುಬರುತ್ತದೆ.

(೯೦೫). ಮಳೆ ಹೂದ್ರೆ ಕೇಡ? **ಮಕ್ಕಾದರೆ** ಕೇಡ? (ಭಿನ್ನ ಪದ : ಮಕ್ಳುಂಡ್ರೆ)

(೯೦೦). ಮಲೆಹೋರಿ ಹಂಗ್ ನನ್ ಗಂಡಿದ್ರೆ ಮನೆ ಬುಟ್ಯಾಕ್ ಬತ್ತಿದ್ದನಕ್ಕ?

ಅಪರೂಪಕ್ಕೆ ಸುದೀರ್ಘವಾದ ಗಾದೆಗಳ ಉದಾಹರಣೆಗಳು ಈ ಸಂಗ್ರಹದಲ್ಲಿ ದೊರೆಯುತ್ತವೆ.

ಮಿಣಿಕಿ ಮಿಣಿಕಿ ಎಸ್ಟೇನ್ ಮಾಡಿದದ? ಅಂದ್ರೆ
ಹುಳ್ಳಿ ಉದುರ್ಸಿ, ಬ್ಯಾಳೆ ಬೆದುರ್ಸಿ,
ತಪ್ಪರು ತಡಕಾಕಿ, ಸೊಪ್ಪು ಹುಡುಕಾಕಿ
ಹಾಗಲ ಕಾಯ ಹೆಚ್ಚಾಕಿ, ನೆಲ್ಲವುರೆ ಕಾಯ ಮೆಲ್ಲುಗ್ಹಾಕಿ
ಈರೆಗಾಯಿ ಇಡಿದ್ಹಾಕಿ ಕುಂಬಳಕಾಯ ಒಡುದ್ಹಾಕಿ
ಸೋರೆಕಾಯ ಸೀಳ್ಹಾಕಿ ಹಸೀ ಕಾಳೆಸ್ರು ಮಾಡಿ
ಬಿಸಿ ಮುದ್ದೆ ಮಾಡಿದ್ದೆ ಕನಕ್ಕ ಅಂದ್ಲಂತೆ
(ಪ್ರಸ್ತಾವನೆಯಲ್ಲಿ ಮಾತ್ರ ಉಲ್ಲೇಖ)

೨೩೭. ಉಳೋ ಎತ್ತು ಉದುಕ್ ಆಯ್ತು
ಬಿತ್ತನೆ ರಾಗಿ ಮುದುಗಾಯ್ತು
ಉಳೋ ನೇಗ್ಲು ಸೌದೆಗಾಯ್ತು
ಇನ್ನು ನೀನು
ಮಿಣುಚುದ್ರೂ ಇಲ್ಲ; ಗಿಣುಚುದ್ರೂ ಇಲ್ಲ.
(ಕಥೆಯ ಹಿನ್ನೆಲೆ ಕೊಟ್ಟಿದ್ದಾರೆ)

೪೯೫. ಕುಟ್ಟನ ಅಂದ್ರೆ ಹಸೀ ಬತ್ತ
ಕುಯ್ಯನ ಅಂದ್ರೆ ಕಾವೀ ಕೋಳಿ
ದೇವ್ರುರ್ ಕ್ವಾಣೇಲಿ ಒಸಿ ತಾವದೆ
ಅದುರೊಳಗೊಂದ್ ಹಾವದೆ

೮೧೬.ಬುಟ್ರೂ ಸೂಳೇ ಬುಟ್ಹೋದಳೆ?
ಬೆಟ್ಟಿಕೋಯ್ತಳೆ, ಬಿದುರು ತತ್ತಳೆ, ಬುಟ್ಟಿ ಹೆಣೀತಳೆ
ಸುತ್ತಿ ಮಾರ್ತಳೆ, ಸುಖಾ ಪಡ್ತಳೆ,

೧೦೮೭. ಹಣೆ ಮ್ಯಾಲೆ ಹಣೆ ಬಿದ್ದು
ಹಣೆ ಬರ ಹಿಂಗಾಯ್ತು
ಹೊಟ್ಟೆ ಮ್ಯಾಲ್ ಹೊಟ್ಟೆ ಬಿದ್ದು
ಹೊಟ್ಟೆ ಹಿಂಗಾಯ್ತು
ಕಾಲ್ ಮ್ಯಾಲೆ ಕಾಲ್ ಬಿದ್ದು
ಕಾಲ್ವೆ ಕೆಟ್ಹೋಯ್ತು ಅಂದ್ಲಂತೆ

ಇಂತಹ ದೀರ್ಘವಾದ ಇನ್ನೊಂದಿಷ್ಟು ಗಾದೆಗಳನ್ನು ಸಂಪಾದಕರು ಕೊಟ್ಟಿದ್ದಾರೆ. ಇವು ಗಾದೆಗಳ ರಚನೆಯನ್ನು ಮೀರಿವೆ ಎಂಬುದು ಸಂಪಾದಕರಿಗೆ ಸ್ಪಷ್ಟವಾಗಿ ಗೊತ್ತಿದೆ. ಇಂತಹ ದೀರ್ಘವಾದ ಗಾದೆ ಮಾತುಗಳು ಇರಲು ಸಾಧ್ಯವೇ? ಎಂಬುದು ಸಹಜವಾಗಿ ಹುಟ್ಟುವ ಪ್ರಶ್ನೆ. ೨೩೭ನೇ ಸಂಖ್ಯೆಯ ಗಾದೆಯ ಹಿಂದಿನ ಕಥೆಯನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಆದರೆ ನನಗೆ ತಿಳಿದಂತೆ ಅದು ಗಾದೆಯಾಗಿರದೆ ಕಥೆಗಳಲ್ಲಿ ಆಗಾಗ ಪ್ರಯೋಗವಾಗುವ ಲಘು ಸೂತ್ರರೂಪದ ಹಾಡಿನಂತಿದೆ. ಬಹುಶಃ ಈ ದೀರ್ಘವಾದ ಗಾದೆಗಳು ಕೂಡ ಕಥೆಗಳಲ್ಲಿ ಬಳಕೆಯಾಗುವ ಸೂತ್ರರೂಪದ ಹಾಡುಗಳಾಗಿರಬೇಕೆನಿಸುತ್ತದೆ.

"ಗಾದೆ ಎಂಬ ಶಬ್ದ ಸಂಸ್ಕೃತದ ಗಾಥಾ ಶಬ್ದದ ತದ್ಭವ. ಗಾಥಾ ಎಂದರೆ ಪ್ರಾಕೃತ ಛಂದಸ್ಸಿನ ಮಾತ್ರಾವೃತ್ತದ ಒಂದು ಭೇದ. ಹೀಗಾಗಿ ಗಾಥಾ ಶಬ್ದವು ಗಾದೆಯ ಅರ್ಥ ಸ್ಪಷ್ಟತೆಯನ್ನು ಹೊಂದಿಲ್ಲ" (ಪ್ರ.ಪು.೭) ಎಂಬ ಮಾತು ಗಮನಾರ್ಹವಾಗಿದೆ. ಹಾಗಾದರೆ ಗಾದೆ ಪದಕ್ಕೆ ಗಾಥಾ ಹೇಗೆ ಮೂಲವಾಗುತ್ತದೆ? ಎಂಬ ಪ್ರಶ್ನೆ ಸಹಜವಾಗಿಯೇ ಇಲ್ಲಿ ಹುಟ್ಟಿಕೊಳ್ಳುತ್ತದೆ. ಕನ್ನಡದ ಕವಿಗಳು ಗಾದೆಯೆನ್ನುವ ಪದವನ್ನೂ ಬಳಸಿದ್ದಾರೆ. ಎಲ್ಲ ಪದಗಳಿಗೂ ಯಾವುದೋ ಭಾಷೆಯ ಮೂಲ ಹುಡುಕುವುದು ಸರಿಯಾದ ಕ್ರಮವೆನಿಸದು. ಪಿ.ಕೆ.ರಾಜಶೇಖರ ಅವರು ಪ್ರಸ್ತಾವನೆಯಲ್ಲಿ ಗಾದೆ ಮತ್ತು ನಾಣ್ಣುಡಿ ಎನ್ನುವ ಪದಗಳನ್ನು ಕನ್ನಡ ಕವಿಗಳು ಎಲ್ಲೆಲ್ಲಿ ಉಲ್ಲೇಖ ಮಾಡಿದ್ದಾರೆ ಎಂಬುದನ್ನು ಹುಡುಕಿಕೊಟ್ಟಿದ್ದಾರೆ. "ಗಾದೆಗೆ ಹಳೆಗನ್ನಡದಲ್ಲಿ 'ನಾಟ್ನುಡಿ' ಎಂಬ ಹೆಸರಿದ್ದು ಆ 'ನುಡಿಗಳೊಡಂಬಡಲ್ ಬಗೆದವೋಲ್ ಬಗೆಯಂ ಮಿಗಲೀಯದೊಂದೆ ನಾಟ್ನುಡಿಯ ಬೆಡಂಗೆ ಕನ್ನಡದ ಮಾತಿನೊಳ್' (ಕವಿರಾಜಮಾರ್ಗ. ೧.೧೪೯). 'ನನ್ನಿಯಾದುದು ಸುತಂಗೆ ಕಥೆವೇಟ್ಟರೆಂಬ ನಾಟ್ನುಡಿ ಜಗದೊಳ್'(ಪಂಪನ ಆದಿಪುರಾಣ, ೮.೧೪). ... 'ಅರಸುಮಾನೆಯಂ ತಿರಿಪುವರಿಚ್ಚೆ ಎಂಬ ಲೋಕ ಗಾದೆ ಪುಸಿಯಕ್ಕು' (ಪಂಚತಂತ್ರ, ೯೫-೮), 'ಗಾದೆಯ ಬಳಕೆ ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು' (ಕುಮಾರವ್ಯಾಸ, ವಿ.ಪ.೩-೪೫)... ಕ್ರಮೇಣ ನಾಟ್ನುಡಿ ಇತ್ಯಾದಿಗಳ ಬಳಕೆ ತಪ್ಪಿ ಗಾದೆಯೇ ಜನಪ್ರಿಯವಾದಂತೆ ಕಾಣುತ್ತದೆ" (ಪ್ರ.ಪು.೮,೯).

೨೦೦೩ ರಲ್ಲಿ ಪ್ರಕಟವಾದ **'ದೀಪದ ಕೆಳಗೆ ಕತ್ತಲೆ'** ಎಂಬ ಕಾವ್ಯಾತ್ಮಕ ಹೆಸರನ್ನು ಇಟ್ಟುಕೊಂಡ ಕೃತಿಯ ಸಂಪಾದಕರು ಡಾ. ಮೈಲಹಳ್ಳಿ ರೇವಣ್ಣ ಅವರು. ಇಲ್ಲಿಯ ೧೪೧೨ ಗಾದೆಗಳನ್ನು ಮುಖ್ಯವಾಗಿ ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ

ಸಂಗ್ರಹಿಸಿದ್ದಾರೆ. ಗಾದೆಗಳ ಪ್ರಾಸಗಳಿಗೆ ಸಂಬಂಧಿಸಿದಂತೆ ಗಾದೆಯ ಸಾಲುಗಳನ್ನು ಕಡಿದು ಜೋಡಿಸಿದ್ದರಿಂದ ಅವುಗಳಲ್ಲಿ ಕಾವ್ಯದ ಛಾಯೆ ಕಾಣುವಂತೆ ಮಾಡಿದ್ದಾರೆ. ಹೀಗೆ ಕಾವ್ಯದಂತೆ ಗಾದೆಗಳ ರೂಪಗಳನ್ನು ರಚಿಸಿಕೊಂಡ ಎರಡನೆಯ ಕೃತಿ ಇದು. ಉದಾಹರಣೆಗೆ :

'ಹೋದರೆ ಹುಳಿಮಜ್ಜಿಗೆ ಕೊಡ್ದೋಳು
ಹೇಳಿ ಕಳುಹಿಸಿದರೆ ಮೊಸರು ಕೊಟ್ಟಾಳೆ?'

'ಹೋದಾರ್ ಬಂದಾರುಂಡು
ನೆಂಟ್ರು ಉಂಡು ಬಂಟ್ರುಂಡು
ಆಗಲೆ ಬಂದೆಯ ಕಾಳೇಗೌಡ
ಗಡ್ಗಡ್ಡೆ ನೀಡ್ತಿದ್ದೆ ಅಂದ್ಲಂತೆ'

'ಮೂರ್‍ಮುದ್ದೆ ಮುರುಕು
ಮೇಲೊಂದ್ ಗಿರುಕು
ಕುಂಬ ಮಜ್ಜಿಗೆ ಕುಡಿಕೆ ಅಂಬ್ರ
ಯಾವನನ್ ಸವತಿ ಕಾಲದೂಳಾತ್ತವ್ವ
ಕೂಳೆ ಸೇರ್‍ವಲ್ಲು ಅಂದ್ಲಂತೆ'

"ಈ ಸಂಕಲನಕ್ಕಾಗಿ ನಾನು ಸಂಗ್ರಹಿಸಿದ ಗಾದೆಗಳು ಮೂರು ಸಾವಿರ. ಆದರೆ ಇವುಗಳಲ್ಲಿ ಕೇವಲ ೧೪೧೨ ಗಾದೆಗಳನ್ನು ಮಾತ್ರ ಉಳಿಸಿಕೊಂಡಿದ್ದೇನೆ. ಇವುಗಳಲ್ಲಿ ಶೇ ೯೦ ಭಾಗದಷ್ಟು ಗಾದೆಗಳು ದಲಿತ ವಕ್ತೃಗಳಿಂದ ಸಂಗ್ರಹಿಸಿದಂತಹವು. ...ಈಗಾಗಲೇ ಪ್ರಕಟವಾದ ಹಲವು ಸಂಗ್ರಹಗಳನ್ನು ಗಮನಿಸಿ; ಪುನರಾವರ್ತನೆಯಾಗಿದ್ದಲ್ಲಿ ಅಂತಹ ಗಾದೆಗಳನ್ನು ಕೈಬಿಟ್ಟಿದೆ. ನನ್ನ ಸಂಗ್ರಹದ ಪಾಠ, ಇತರೆ ಸಂಗ್ರಹದ ಪಾಠಕ್ಕೆ ಭಿನ್ನವಾಗಿದೆ ಎಂದು ಕಂಡುಬಂದಾಗ ಅಂತಹ ಉತ್ತಮ ಪಾಠವನ್ನು ಉಳಿಸಿಕೊಂಡು, ಕೆಲವೆಡೆ ಅಡಿಟಿಪ್ಪಣಿಯಲ್ಲಿ ನಮೂದಿಲಾಗಿದೆ" (ಪ್ರ.ಪು. ೩೩). ಸಂಪಾದಕರು ಇಲ್ಲಿ ಒಮ್ಮೆಗೇ ಮೂರ್‍ನಾಲ್ಕು ಸಂಗತಿಗಳನ್ನು ಹೇಳಿಬಿಟ್ಟಿದ್ದಾರೆ. ತಾವು ಈ ಗಾದೆಗಳನ್ನು ಎಲ್ಲಿ ಸಂಗ್ರಹಿಸಿದ್ದು, ಈ ಕೃತಿಗಾಗಿ ಗಾದೆಗಳನ್ನು ಹೇಗೆ ಆಯ್ಕೆಮಾಡಿಕೊಂಡದ್ದು ಎಂಬ ಸಂಗತಿಗಳು ಮುಖ್ಯವಾಗಿವೆ. ಗಾದೆಗಳನ್ನು ಪ್ರಕಟಿಸುವಾಗ ಪುನರಾವರ್ತನೆಗಳನ್ನು ಬಿಡುತ್ತಿರುವುದು ಕಂಡುಬರುತ್ತಿದೆ. ರಾಗೌ, ಸುಧಾಕರ, ಕಾಳೆಗೌಡ, ಕೃಷ್ಣಪ್ಪ ರೆಡ್ಡಿ ಮುಂತಾದವರು ಹೀಗೆ ಪುನರಾವರ್ತನೆಗಳನ್ನು ತೆಗೆದು ಹಾಕಿದ್ದೇವೆ ಎಂದಿದ್ದಾರೆ. ಪುನರಾವರ್ತನೆ ದೋಷದಿಂದ ಮುಕ್ತವಾಗಲು ಹೋಗಿ ಪ್ರಕಟವಾದ ಗಾದೆಗಳನ್ನು ಕೈಬಿಡುವಾಗ, ತುಂಬಾ ಎಚ್ಚರಿಕೆ ವಹಿಸಬೇಕು. ಹಾಗೊಂದು ವೇಳೆ ತಾವು ಸ್ವತಃ ಕ್ಷೇತ್ರಕಾರ್ಯ ಮಾಡುವಾಗಲೇ ಸಿಕ್ಕ ಒಂದು ಗಾದೆಯನ್ನು ಕೈಬಿಡುವುದರಿಂದ ಖಂಡಿತವಾಗಿ ಹಾನಿಯಾಗುತ್ತದೆ. ವಕ್ತಾರ, ಪ್ರದೇಶ ಬದಲಿಯಾದಂತೆ ಭಾಷೆ, ಬದುಕು-ಸಂಸ್ಕೃತಿ ಈ ಅಂಶಗಳೆಲ್ಲ ಬದಲಾಗುವುದು ಸಹಜ. ಗಾದೆಗಳನ್ನು ಕೈಬಿಡದೇ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಗಾದೆಗಳನ್ನು ಪ್ರಕಟಪಡಿಸುವುದರಿಂದ ಇಡೀ ಕರ್ನಾಟಕದ ತುಂಬ ಪ್ರಚಾರದಲ್ಲಿರುವ ಗಾದೆಗಳು ಎಷ್ಟಿವೆ,

ಅಪರೂಪಕ್ಕೆ ಹೊಸದಾಗಿ ದೊರೆಯುವ ಗಾದೆಗಳು ಯಾವುವು? ಎಂಬ ಬಗ್ಗೆ ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಈಗಾಗಲೇ ಅನೇಕ ಜನ ಹಾಗೆ ಮಾಡಿದ್ದಾರೆ, ಮುಂದಿನವರೂ ಅದನ್ನೇ ಅನುಸರಿಸಿದ್ದಾರೆ, ಗಾದೆಗಳ ವಿಷಯದಲ್ಲಿ ಮಾತ್ರ ಇಂತಹ ಮಾತುಗಳು ಕೇಳಿಬರುತ್ತಿವೆ. ಸಂಗ್ರಹಿತ ಜನಪದ ಸಾಹಿತ್ಯದಲ್ಲಿ ಯಾವುದೇ ಬಗೆಯ ಸಾಹಿತ್ಯವನ್ನು ಮುದ್ರಣದಿಂದ ಕೈಬಿಡುವಾಗ ಆಗುವ ಹಾನಿಯ ಬಗೆಗೆ ಎಚ್ಚರಿಕೆಯಿಂದಿರುವುದು ಉತ್ತಮ.

ಮೈಲಹಳ್ಳಿ ರೇವಣ್ಣನವರು ಹೇಳುವ ಇನ್ನೊಂದು ಮಾತು ಗಮನಾರ್ಹವಾಗಿದೆ. ಈ ಸಂಗ್ರಹದ ಗಾದೆಗಳಲ್ಲಿ ೯೦% ದಲಿತರ ಕೇರಿಗಳಿಂದಲೇ ಸಂಗ್ರಹಿದವು ಎಂಬ ಮಾತು. ಅವರ ಪ್ರಸ್ತಾವನೆಯಲ್ಲಿ ವಿಶ್ಲೇಷಣೆಗೆ ಆಯ್ದುಕೊಂಡದ್ದು ಕೂಡ ಇಂತಹ ಗಾದೆಗಳನ್ನೇ. ಭಿನ್ನ ಭಿನ್ನ ಪ್ರದೇಶಗಳಿಂದ ಬಂದ ಗಾದೆಗಳ ಸಂಗ್ರಹದಂತೆ, ಭಿನ್ನ ಭಿನ್ನ ಕೇರಿಗಳಿಂದಲೂ ಗಾದೆಗಳ, ಬೇರೆ ಬೇರೆ ಪ್ರಕಾರದ ಜನಪದ ಸಾಹಿತ್ಯದ ಸಂಗ್ರಹಗಳು ಬರಬೇಕು. ವೈವಿಧ್ಯಮಯವಾದ ಸಾಹಿತ್ಯ, ಮತ್ತು ವಿಶೇಷವಾದ ಸಂಸ್ಕೃತಿಗಳನ್ನು ಅಧ್ಯಯನ ಮಾಡಲು ಇವು ಖಂಡಿತ ಸಹಾಯ ಮಾಡುತ್ತವೆ. ದಲಿತ ಕೇರಿ ಅಂದರೆ ಮೈಲಹಳ್ಳಿ ಅವರು ಸಹಜವಾಗಿ ಸಂಗ್ರಹಿಸಿದ್ದು ಮಾದಿಗ ಕೇರಿಗಳಲ್ಲಿಯೇ. ಹೀಗಾಗಿಯೇ ಆ ಜನಾಂಗದ ವಿಶೇಷ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅನೇಕ ಗಾದೆಗಳು ಇಲ್ಲಿ ಸಂಗ್ರಹಗೊಂಡಿದ್ದು ಕಾಣುತ್ತದೆ. ಹೀಗಾಗಿ ಈ ಸಂಗ್ರಹಕ್ಕೆ ಒಂದು ವಿಶೇಷತೆ ಪ್ರಾಪ್ತವಾಗುತ್ತದೆ.

ಸಂಪಾದಕರು ಮತ್ತೆ ಗಾದೆಯ ಸ್ವರೂಪ ಲಕ್ಷಣ ಮುಂತಾದ ಸಂಗತಿಗಳನ್ನು ಹೇಳುವ ಗೋಜಿಗೆ ಹೋಗದೆ ನೇರವಾಗಿ ಗಾದೆಗಳ ವಿಶ್ಲೇಷಣೆಗೆ ತೊಡಗಿದ್ದಾರೆ. ಹೀಗೆ ವಿಶ್ಲೇಷಣೆ ಮಾಡುವಾಗ–ಸಾಮಾಜಿಕ ಗಾದೆಗಳು, ಸಾಹಿತ್ಯದ ಗಾದೆಗಳು, ಭಾಷಿಕ ಗಾದೆಗಳು, ಸಾಂಸ್ಕೃತಿಕ ಗಾದೆಗಳು, ಸ್ತ್ರೀ ನೆಲೆಯ ಗಾದೆಗಳು ಎಂಬ ಶೀರ್ಷಿಕೆಗಳಡಿ ಅವುಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಕೊನೆಯಲ್ಲಿ ಕ್ಷೇತ್ರಕಾರ್ಯದ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಗಾದೆಗಳು ನ್ಯಾಯ ಬಗೆಹರಿಸಲು ಉಪಯೋಗವಾಗುತ್ತವೆ ಎಂಬ ಮಾತನ್ನು ಸಾಬೀತುಪಡಿಸಲೆಂಬಂತೆ ಇಲ್ಲಿ ಒಂದು ಘಟನೆಯನ್ನು ಅವರು ವಿವರಿಸುತ್ತಾರೆ. ಮದುವೆಯಾಗಿ ಒಂದು ವರ್ಷವೂ ಪೂರ್ತಿಯಾಗಿರಲಿಲ್ಲ; ಒಬ್ಬ ಹುಡುಗ ತನ್ನ ಹೆಂಡತಿಯನ್ನು ತವರಿನಲ್ಲಿಯೇ ಬಿಟ್ಟಿದ್ದನಂತೆ. ನ್ಯಾಯ ಮಾಡಲು ಬಂದ ಹಿರಿಯರು, ಕಾರಣ ಕೇಳಿದರೆ ಹೆಂಡತಿಯ ತವರಿನಲ್ಲಿ ತನಗೆ ಸರಿಯಾಗಿ ಮರ್ಯಾದೆ ದೊರೆಯಲಿಲ್ಲ ಎಂಬ ಕಾರಣ ದೊರೆಯಿತು. ನ್ಯಾಯ ಮಾಡಲು ಬಂದ ಹಿರಿಯರು ಆ ಹುಡುಗನಿಗೆ ತಿಳಿಸಿ ಹೇಳಿ, 'ಜಗ್ಳದಲ್ಲಿ ಒಳ್ಳೆ ಮಾತು ಬರಲ್ಲ, ಬರಗಾಲ್ದಲ್ಲಿ ಒಳ್ಳೆ ಊಟ ಸಿಗಲ್ಲ' ಎಂಬ ಗಾದೆಯನ್ನು ಬಳಸಿಕೊಂಡು ಹುಡುಗನಿಗೆ ತಿಳಿಹೇಳಿ, ಅವನು ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗುವಂತೆ ಒಪ್ಪಿಸಿದರಂತೆ. ಗಾದೆಗಳ ಮಹತ್ವವನ್ನು ವಿವರಿಸುವ ಇಂತಹ ಪ್ರಸಂಗಗಳನ್ನು ಜನಪದ ಸಾಹಿತ್ಯ ಸಂಪಾದಕರು ಲಕ್ಷಿಸಬೇಕು.

ಒಂದು ಗಾದೆಯನ್ನು ದಲಿತ ಸಂಸ್ಕೃತಿಗೆ ಸಂಬಂಧಪಟ್ಟಂತೆ ವಿಶ್ಲೇಷಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. "ದಲಿತ ಜನಾಂಗದಲ್ಲಿ ಹೆಚ್ಚು ಬಳಕೆಯಲ್ಲಿರುವ 'ಕೊಟ್ಟ

ಹೆಣ್ಣು ಕುಲದ ಹೊರಗೆ' ಎಂಬ ಗಾದೆಯನ್ನು ವಿಶ್ಲೇಷಿಸಿ ನೋಡಿದರೆ ಮದುವೆಯಾಗಿ ಹೋದ ಹೆಣ್ಣಿಗೆ ತಂದೆಯ ಮನೆ ಕುಲಾಚಾರ, ವಿಧಿನಿಷೇಧಗಳಾವುವೂ ಸಂಬಂಧ ಪಡುವುದಿಲ್ಲ. ಮದುವೆಯಾದಂದಿನಿಂದ ಆ ಹೆಣ್ಣು ಗಂಡನ ಮನೆಯ ರೂಢಿ, ಸಂಪ್ರದಾಯಗಳಿಗೆ ಮಾತ್ರ ಬದ್ಧಳಾಗುವಳು. ಶ್ರಾದ್ಧಾದಿ–ಕರ್ಮಗಳ ವಿಷಯದಲ್ಲಿ ಹಬ್ಬ ಹರಿದಿನಗಳ ಸಂದರ್ಭದಲ್ಲಿ, ಕುಲದ ಕಟ್ಟುನಿಟ್ಟುಗಳ ವಿಚಾರದಲ್ಲಿ, ಅವಳು ಗಂಡನ ಮನೆಯ ಪದ್ಧತಿಗಳನ್ನೇ ಆಚರಿಸಬೇಕಾಗುವುದು. ಅಷ್ಟೆ ಅಲ್ಲ ಅವಳ ಯಾವ ದೂರುಗಳನ್ನು ಆಕೆಯ ಪೋಷಕರು ಕೇಳುವ ಸ್ಥಿತಿಯಲ್ಲಿರುವುದಿಲ್ಲ. ಗಂಡನ ಮನೆಯವರಿಂದ ತೊಂದರೆಗೆ ಒಳಗಾದಾಗ, ಅದು ಬಗೆಹರಿಯದ ಸಮಸ್ಯೆಯಾಗಿದ್ದರಂತೂ ಜವಾಬ್ದಾರಿಯಿಂದ ಕಳಚಿಕೊಳ್ಳಲು 'ಹೆಣ್ಣು ಕೊಟ್ಟಾಯ್ತು, ಹೊಗೆಸೊಪ್ಪು ಸುಟ್ಟಾಯ್ತು' ಎಂಬ ಗಾದೆಯನ್ನು ಮೆಲುಕು ಹಾಕಿ ಸುಮ್ಮನಾಗುವರು" (ಪ್ರ.ಪು.೧೨). ದಲಿತರ ಆಹಾರ ಪಾನೀಯಗಳಿಗೆ ಸಂಬಂಧಿಸಿದ ಅನೇಕ ಗಾದೆಗಳನ್ನು ಅವರು ಅಲ್ಲಲ್ಲಿ ಬಳಸಿಕೊಳ್ಳುತ್ತಾರೆ. ಹೀಗಾಗಿ ಈ ಕೃತಿಗೆ ಒಂದು ವಿಶೇಷತೆ ತಾನಾಗಿಯೇ ಪ್ರಾಪ್ತವಾಗುತ್ತದೆ. ಹೀಗೆಯೇ ಭಿನ್ನಭಿನ್ನ ಕೇರಿಗಳಿಂದಲೂ ಸಂಗ್ರಹಗಳು ಬರಬೇಕಾದುದು ಅವಶ್ಯ.

೨೦೦೫ರಲ್ಲಿ ಪ್ರಕಟವಾದ **'ಧರಿನಾಡ ಜಾನಪದ ಗಾದೆಗಳು'** ಎಂಬುದು ಬೀದರ ಜಿಲ್ಲೆಯಲ್ಲಿ ಸಂಗ್ರಹಿಸಿದ ದೇಶಾಂಶ ಹುಡಗಿ ಅವರು ಸಂಪಾದಿಸಿದ ಗಾದೆಗಳ ಸಂಗ್ರಹ. ಈ ಕೃತಿಯಲ್ಲಿ ೧೧೭೯ ಗಾದೆಗಳಿವೆ. ದೇಶಾಂಶ ಹುಡಗಿ ಅವರು ಕನ್ನಡ ಶಾಲೆಯ ಶಿಕ್ಷಕರಾಗಿ ನಂತರ ಪ್ರೌಢಶಾಲೆಗೆ ಬಡ್ತಿ ಪಡೆದು, ಸಾಕ್ಷರತಾ ಪ್ರಸಾರದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಿರುಗಾಡುತ್ತ ತಮಗೆ ದೊರೆತ ಜನಪದ ಸಾಹಿತ್ಯವನ್ನು ಆಗಾಗ ಸಂಗ್ರಹ ಮಾಡುತ್ತ ಬಂದಿದ್ದಾರೆ. **'ಧರಿನಾಡ ಜಾನಪದ ಗಾದೆಗಳು'** ಹೀಗೆಯೇ ಹತ್ತಾರು ವರ್ಷಗಳ ವರೆಗೆ ಸಂಗ್ರಹ ಮಾಡಿದ ಕೃತಿಯಾಗಿದೆ. ಬೀದರ ಜಿಲ್ಲೆಗೆ ಸಂಬಂಧಿಸಿದಂತೆ ಒಂದು ದೊಡ್ಡ ಕನ್ನಡ–ಕನ್ನಡ ಶಬ್ದಕೋಶವನ್ನು ತಯಾರಿಸಿ ಪ್ರಕಟಿಸಿದ ಕೀರ್ತಿ ಅವರದಾಗಿದೆ. ಇಲ್ಲಿಯ ಗಾದೆಗಳ ಬಗ್ಗೆ ಅವರು ಹೀಗೆ ಬರೆದುಕೊಂಡಿದ್ದಾರೆ: "ಧರಿನಾಡಿನ ಈ ಜಾನಪದ ಗಾದೆಗಳು ಕನ್ನಡ, ಮರಾಠಿ, ತೆಲುಗು, ಉರ್ದು ಮೊದಲಾದ ಭಾಷೆಗಳ ಕಿಚ್ಚಡಿಯ ರುಚಿಯಿಂದ ಕೂಡಿವೆ. ಕನ್ನಡದ ಒಂದೆರಡು ಪದಗಳ ಜೊತೆಗೆ ಅನ್ಯಭಾಷೆಗಳ ಸುಂದರ ಮೇಳವಾದಂತಾಗಿದೆ" (ನನ್ನ ನುಡಿ, ಪು.೧೦). ನಿಜವಾಗಿಯೂ ಕರ್ನಾಟಕದ ಒಂದು ಜಿಲ್ಲೆಯಲ್ಲಿ ಆಡುವ ಕನ್ನಡ ಭಾಷೆಯ ಸ್ಥಿತಿ ಏನಿದೆ ಎಂದು ಅರಿಯಲು ಈ ಕೃತಿಯಲ್ಲಿಯ ಗಾದೆಗಳು ನಮ್ಮ ಸಹಾಯಕ್ಕೆ ಬರುತ್ತವೆ. ಇಲ್ಲಿಯ ಗಾದೆಗಳ ವಿಶೇಷ ಭಾಷೆಯನ್ನು ಕುರಿತು ಸಂಪಾದಕರು ಕೊಡುವ ವಿವರಣೆ ಹಾಗೂ ಉದಾಹರಣೆಗಳು ಕುತೂಹಲಕರವಾಗಿವೆ: "ಮರಾಠಿ ಪ್ರಭಾವದ ಈ ಗಾದೆಯಲ್ಲಿ ಕನ್ನಡ ಎಲ್ಲಡಗಿದೆ ಹುಡುಕಿ ನೋಡಿರಿ: 'ದುಷ್ಕಾಳದಾಗ ತೇರಾಂವಾ ಮೈನಾ', 'ನನಗಾ ನಿನಗಾ ಜಮಾಸಾಲ, ನಿನಗ ಬಿಟ್ಟು ಕರ್ಮಾಸಾಲ'. ಕನ್ನಡದಲ್ಲಿ ತೆಲುಗುವು ಕೂಡ ಇಲ್ಲಿ ತನ್ನ ಮುದ್ರೆಯನ್ನು ಒತ್ತಿದೆ. ನಾರಾಯಣಖೇಡ ಹಾಗೂ ಜಹಿರಾಬಾದಿನ ಗ್ರಾಮಾಂತರ ಕನ್ನಡಿಗರು ತೆಲುಗುವಿನಲ್ಲಿ ಕನ್ನಡ, ಕನ್ನಡದಲ್ಲಿ ತೆಲುಗು ಬೆರೆಸುತ್ತ ತಮ್ಮ ಭಾಷಾ ಸೊಬಗಿನ ಬೆರಗನ್ನು ಬಿತ್ತಲು

ಮರೆಯುವುದಿಲ್ಲ. ಇಲ್ಲಿ ತೆಲುಗು ಇದ್ದದ್ದಿದ್ದಂತೆ ಬಳಕೆಯಾಗಿದೆ ನೋಡಿರಿ– 'ಅಯ್ಯಲು ಮಿಯ್ಯಲು ತಕತ್ಯೆಯಲು ನಂಬಿಗಸ್ತರಲ್ಲ'. ಉರ್ದುವಿನ ಬೆರಕೆ ಕನ್ನಡಕ್ಕೆ ಅನ್ಯಭಾವವಿಲ್ಲದೆ ಆಗಿದೆ ಎಂಬುದಕ್ಕೆ ಕೆಳಗಿನ ಗಾದೆಗಳು ನಿದರ್ಶನವಾಗಿವೆ. 'ಮಾಡಿಮಟ್ಟಿ ಮಾಕೂ ಚೋದೂ', 'ಅಂಧೇರ ನಗರಿ, ಚೌಪಟರಾಜಾ'. ಆಡು ಕನ್ನಡದಲ್ಲಿ ಮೇಲ್ಕಂಡ ಹಲವು ಗಾದೆಗಳು ಬಳಕೆಗೊಳ್ಳುವುದರಿಂದ ಅಂಥ ಹಲವು ಗಾದೆಗಳು ಇಲ್ಲಿ ಸಂಕಲಿತಗೊಂಡಿವೆ"(ಅದೆ, ಪು.೧೦). 'ಅಡುನುಡಿಯಲ್ಲಿಯ ಗಾದೆ–ಬಳಕೆ ತೆಗೆದುಹಾಕಿದರೆ ಅದು ಹಿಂಡಿ ಎಸೆದ ಕಬ್ಬಿನ ಹಿಪ್ಪಿಯಂತಾಗುತ್ತದೆ. ಧರಿ ನಾಡಿನಲ್ಲಿ ಹುಟ್ಟಿದ ಇಂಥ ಗಾದೆಗಳೇ 'ಧರಿನಾಡಿನ ಜಾನಪದ ಗಾದೆಗಳು' ಎನ್ನಬಹುದಾಗಿದೆ' ಎನ್ನುತ್ತಾರೆ ಸಂಪಾದಕರು. ಭಾಷೆಯ ಈ ಸಂಗತಿಗಳಿಂದ ಈ ಸಂಕಲನ ಕನ್ನಡ ಗಾದೆಗಳ ಸಂಗ್ರಹದಲ್ಲಿ ವಿಶೇಷವೆನಿಸುತ್ತದೆ. ಧರಿನಾಡು ಎಂಬ ಪ್ರದೇಶದ ಹೆಸರು ಕೊಟ್ಟುಕೊಂಡು, 'ಧರಿನಾಡ ಕನ್ನಡ ಸಂಘ, ಕೇಂದ್ರ ಸಮಿತಿ(ರಿ), ಬೀದರ' ಎಂದು ಒಂದು ಸಂಘಟನೆಯನ್ನು ಹುಟ್ಟು ಹಾಕಿ, ಆ ಸಂಸ್ಥೆಯಿಂದ ಅನೇಕ ಕೃತಿಗಳನ್ನು ಪ್ರಕಟಿಸುತ್ತ ಬಂದಿದ್ದಾರೆ ಹುಡಗಿ ಅವರು. 'ಧರಿನಾಡು' ಎನ್ನುವುದಕ್ಕೆ ಅವರ ವಿವರಣೆ ಹೀಗಿದೆ: "ನನ್ನ ಕೃತಿಗೆ ನಾನು 'ಧರಿನಾಡಿನ ಜಾನಪದ ಗಾದೆಗಳು' ಎಂಬ ಹೆಸರನ್ನಿಟ್ಟಿರುವೆನು. ಬೀದರ ಜಿಲ್ಲೆಯೊಳಗೊಂಡಂತೆ ಉದಗೀರ, ಲಾತೂರ, ನಾರಾಯಣಖೇಡ, ತಾಂಡೂರು, ಜಹಿರಾಬಾದ, ಚಿಂಚೋಳಿ(ತಾಲೂಕಾ), ಉಮ್ಮರ್ಗಾ, ಕಲಬುರ್ಗಿ ತಾಲೂಕಿನ ಸೀಮಾಂತ ಭಾಗ ಮೊದಲಾದವುಗಳನ್ನು 'ಧರಿನಾಡು' ಭಾಗಗಳು ಎಂದು ನಮ್ಮ ಲೆಕ್ಕಾಚಾರ. ...ಬೀದರಿನ ಎತ್ತರ ಭಾಗಕ್ಕೆ ಧರಿ, ಧರಿಪ್ರಾಂತ, ಧರಿನಾಡು...ಎಂಬಿತ್ಯಾದಿಯಾಗಿ ಹೆಸರಿಸಿದ್ದಾರೆ. 'ಧರಿ' ಎಂದರೆ ಭೂಮಿ. 'ನಾಡು' ಎಂದರೆ ಒಂದು ವಿಶಿಷ್ಟ ಭೂಭಾಗ. ಬೀದರ ಜಿಲ್ಲೆಯ ಆಸುಪಾಸಿನ ಭೂಭಾಗ ಎಂಬ ಅರ್ಥದಲ್ಲಿ ಧರಿ ಎಂಬ ಈ ಪದವನ್ನು ಬಳಕೆಯಲ್ಲಿ ತಂದು ನಾನು ನನ್ನವರ ಜತೆಗೂಡಿ ಧರಿನಾಡು ಕನ್ನಡ ಸಂಘ ಕಟ್ಟಿದ್ದೇನೆ. ಅದರಂತೆ ಧರಿನಾಡಿನ ಗಾದೆಗಳು ಎಂದು ಹೆಸರಿಸಿದ್ದೇನೆ" (ಅದೆ, ಪು.೧೧). ಈ ನಾಡಿನ ವಿಶೇಷವೆಂದರೆ ಪೂರ್ವಕ್ಕೆ ಆಂಧ್ರಪ್ರದೇಶ, ಪಶ್ಚಿಮಕ್ಕೆ ಮಹಾರಾಷ್ಟ್ರದ ಪ್ರದೇಶಗಳು ಹತ್ತಿಕೊಂಡಿವೆ. ಮೇಲಾಗಿ ಬೀದರ ಉರ್ದುವಿನಿಂದ ತತ್ತರಿಸಿ ಹೋದ ಪ್ರದೇಶ. ಹೀಗಾಗಿ ಮರಾಠಿ, ತೆಲುಗು ಹಾಗೂ ಉರ್ದುಗಳ ನಡುವೆ ಕನ್ನಡ ಹುಡುಕಾಡುವ ಕೆಲಸವನ್ನು ಈ ಗಾದೆಗಳನ್ನು ಮುಂದಿಟ್ಟುಕೊಂಡು ಮಾಡಬೇಕೆಂಬುದು ಸಂಪಾದಕರ ಅಭಿಪ್ರಾಯವಾಗಿದೆ.

ಗಾದೆಗಳನ್ನು ಹಾಡುಗಳಂತೆ ಕಥೆಗಳಂತೆ ಒಂದೆಡೆ ಕುಳಿತು ಒಬ್ಬ ವಕ್ತಾರನಿಂದ ಸಂಗ್ರಹಿಸಲು ಸಾಧ್ಯವಿಲ್ಲ. ಗಾದೆಗಳನ್ನು ಹೇಳೆಂದು ಕುಳಿತರೆ ಅವು ತಟ್ಟನೆ ನೆನಪಿಗೂ ಬರುವುದಿಲ್ಲ. ಸಮಯ ಬಂದಾಗ, ಒಂದೊಂದೆ ಗಾದೆಗಳನ್ನು ಟಿಪ್ಪಣಿ ಮಾಡುತ್ತ ಹೋಗುವುದು ಇಲ್ಲಿ ಅನಿವಾರ್ಯ. ದೇಶಾಂಶ ಹುಡಗಿ ಅವರು ಈ ಸಂಗ್ರಹದ ಗಾದೆಗಳನ್ನು ತಾವು ಸಂಗ್ರಹ ಮಾಡಿದ್ದು ಹೇಗೆ ಎಂದು ಹೀಗೆ ಹೇಳುತ್ತಾರೆ: "ಗಾದೆಗಳ ಸಂಗ್ರಹಕ್ಕಾಗಿ ನಾನು ನೇರ ಕ್ಷೇತ್ರಕಾರ್ಯ ಕೈಗೊಳ್ಳದಿದ್ದರೂ ಯಾರೊಡನೆಯಾಗಲಿ ಮಾತಾಡುವಾಗ ಅವರ ಬಾಯಿಯಿಂದ ಗಾದೆಯೊಂದು ಹೊರಬಿದ್ದ ತಕ್ಷಣ, ಆಗಿಂದಾಗ ನನ್ನ ಟಿಪ್ಪಣಿಯಲ್ಲಿ

ದಾಖಲು ಮಾಡಿಕೊಳ್ಳುತ್ತಿದ್ದೆ" (ಅದೆ,ಪು.೨೦). ಜನಪದ ಸಾಹಿತ್ಯ ಸಂಗ್ರಾಹಕರು ಗಮನಿಸಬೇಕಾದ ಮಾತು ಇದು.

೨೦೧೧ರಲ್ಲಿ ಪ್ರಕಟವಾದ 'ಹೊನ್ನಾಡಿನ ಗಾದೆಗಳು' ಎಂಬುದು ಜೀನಹಳ್ಳಿ ಸಿದ್ಧಲಿಂಗಪ್ಪ ಅವರ ಗಾದೆಗಳ ಸಂಗ್ರಹ. ಸಿದ್ಧಲಿಂಗಪ್ಪ ಅವರದು ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಎದ್ದು ಕಾಣುವ ಹೆಸರು. ಅಂಥವರು ಒಂದು ಸಂಗ್ರಹ ತರುತ್ತಾರೆಂದರೆ ಅಲ್ಲಿ ವಿಶೇಷತೆ ಇದ್ದೇ ಇರುತ್ತದೆ. "ಹೊನ್ನಾಳಿ, ಶಿಕಾರಿಪುರ, ಶಿವಮೊಗ್ಗ, ಹರಿಹರ, ಭದ್ರಾವತಿ ಈ ಸುತ್ತಮುತ್ತಲಿನ ತಾಲ್ಲೂಕಿನಲ್ಲಿ ಸಂಗ್ರಹಿಸಲಾದ ಗಾದೆಗಳು ಇಲ್ಲಿವೆ. ಹೆಚ್ಚಿನವು ಹೊನ್ನಾಳಿ ತಾಲ್ಲೂಕಿಗೆ ಸೇರಿವೆ. ಹಾಗಾಗಿ ಈ ಸಂಕಲನಕ್ಕೆ 'ಹೊನ್ನಾಡಿನ ಗಾದೆಗಳು' ಎಂದು ಹೆಸರಿಟ್ಟಿದ್ದೇನೆ" ಎನ್ನುತ್ತಾರೆ ಸಂಪಾದಕರು. "೨೦೦೦ಕ್ಕೂ ಹೆಚ್ಚು ಗಾದೆಗಳನ್ನು ಸಂಗ್ರಹಿಸಿದ್ದರೂ ಪುನರುಕ್ತಿಗೊಂಡವುಗಳನ್ನು ಹೊರತುಪಡಿಸಿ, ಪುನರುಕ್ತಿಯಂತೆ ಕಂಡರೂ ಪ್ರಾದೇಶಿಕ ಭಾಷೆ, ಸಂಸ್ಕೃತಿ, ಬದುಕಿನ ಹಿನ್ನೆಲೆಯಲ್ಲಿ ಉಳಿಸಿಕೊಳ್ಳಬಹುದಾದ ಗಾದೆಗಳನ್ನು ಇಲ್ಲಿ ಹೆಕ್ಕಿಕೊಡುವ ಪ್ರಯತ್ನ ಮಾಡಲಾಗಿದೆ" ಎಂದಿದ್ದಾರೆ.

ಅನುಬಂಧ-೨ ರಲ್ಲಿ 'ಗಾದೆಗಳ ವರ್ಗೀಕರಣ' ವನ್ನು ಕೊಟ್ಟಿದ್ದು, ಊಟ, ಊರು-ಪಟ್ಟಣ, ಒಕ್ಕಲು-ಬೇಸಾಯ, ನಂಬಿಕೆ, ಪ್ರಾಣಿ-ಪಕ್ಷಿ, ಮರಗಿಡ, ಮಳೆ-ಬೆಳೆ, ಲೆಕ್ಕಾಚಾರ, ವಿಡಂಬನೆ, ಸಂಬಂಧಗಳು, ಹೆಸರು ಹೀಗೆ ೧೧ ವಿಧಗಳಲ್ಲಿ ಇಲ್ಲಿಯ ಗಾದೆಗಳನ್ನು ವಿಂಗಡಿಸಿ, ಆಯಾ ವಿಭಾಗದ ಹೆಸರಿನ ಕೆಳಗೆ ಗಾದೆಗಳ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಕೃಷ್ಣಪ್ಪ ರೆಡ್ಡಿ ಅವರು ಹೀಗೆಯೇ ಮಾಡಿದ್ದರು. ಗಾದೆಗಳನ್ನು ಅಕಾರಾದಿಯಾಗಿ ಕೊಡುವ ಬದಲು ಈ ವಿಭಾಗೀಕ್ರಮವನ್ನೇ ಅಳವಡಿಸಿಕೊಂಡಿದ್ದರೆ ಖಂಡಿತ ವಿಶೇಷವಾಗುತ್ತಿತ್ತು ಮತ್ತು ಅದು ಹೆಚ್ಚು ಉಪಯುಕ್ತವಾಗುತ್ತಿತ್ತು. ಈ ಅಕಾರಾದಿ ಪದ್ಧತಿಯನ್ನು ಬಿಟ್ಟುಬಿಡುವುದು ಹೆಚ್ಚು ಫಲಕಾರಿ.

ಸಿದ್ಧಲಿಂಗಪ್ಪ ಅವರಿಗೆ ಗಾದೆಗಳ ಸಾಹಿತ್ಯಿಕ ಗುಣ ವಿಶೇಷವಾಗಿ ಹಿಡಿಸಿದೆ. ಹೀಗಾಗಿ ಗಾದೆಗಳನ್ನು ಪ್ರಾಸಕ್ಕನುಗುಣವಾಗಿ ಸಾಲುಗಳನ್ನು ಸೀಳಿ ಕಾವ್ಯದ ಮಾದರಿಯಲ್ಲಿಟ್ಟಿದ್ದಾರೆ. ಹಿಂದೆ ಕಾಳೇಗೌಡರು, ಮೈಲಹಳ್ಳಿ ರೇವಣ್ಣನವರು ಈ ಕ್ರಮವನ್ನು ಅನುಸರಿಸಿದ್ದರು.

'ಓಸಿ ಆಡ್ದೋನು
ಆರ್ತಿಂಗ್ಳಿಗೇ ಕೆಟ್ಟ
ಇಣ್ಕಿ ನೋಡ್ದೋನು
ಮೂರ್ತಿಂಗ್ಳಿಗೆ ಕೆಟ್ಟ'
'ಗೇಣುದ್ದ ಹರ್ದದ್ದನ್ನು ಹೊಲಿದ್ರೆ
ಮೂರ್ದಿನ್ದಾಗೆ ಮಾರುದ್ದ ಹರ್ಕಳ್ತು'

ತಮ್ಮ ಸಂಕಲನದ ಗಾದೆಗಳನ್ನು ಕುರಿತು ಅವರು ಹೀಗೆ ಹೇಳಿಕೊಂಡಿದ್ದಾರೆ: "ಭಾಷಿಕ ಗಾದೆಗಳು ಹೊನ್ನಾಡಿನ ಆಡುನುಡಿಯ ಸೊಗಡನ್ನು ಯಥಾವತ್ತಾಗಿ ಸಾಂಸ್ಕೃತಿಕ

ಸೊಬಗಿನೊಂದಿಗೆ ಪ್ರತಿಬಿಂಬಿಸಿವೆ. ಪ್ರಾದೇಶಿಕವಾಗಿ ಬಳಕೆಯಲ್ಲಿರುವ, ಅಳಿಸಿಹೋಗಿರುವ, ಹೊಸಹೊಸದಾಗಿ ಸೇರಿಕೊಂಡಿರುವ ಪದಸಂಪತ್ತು, ಈ ಗಾದೆಗಳಲ್ಲಿ ಯಥೇಚ್ಚವಾಗಿ ತುಂಬಿಕೊಂಡಿದೆ. ಎರಡು ಸಾಲಿನಿಂದ ಮೂರ್‍ನಾಲ್ಕು ಸಾಲಿನವರೆಗೆ ಗಾದೆಗಳ ಸ್ವರೂಪ, ರಚನೆಗಳಿದ್ದರೂ ಛಂದೋ–ವಿನ್ಯಾಸಗಳ ಅನೇಕ ರೂಪಗಳನ್ನು ಪರಿಚಯಿಸುತ್ತವೆ. ಆಡುನುಡಿಯ ಸೊಗಸು ಪ್ರತಿಯೊಂದು ಗಾದೆಗಳಲ್ಲಿ ವರ್ಣಮಯವಾಗಿ ಅಭಿವ್ಯಕ್ತಗೊಂಡಿದೆ. ಸಹಜ ಪ್ರಾಸ, ಲಯ, ವಿನ್ಯಾಸ, ಧ್ವನಿ ಭಾವಗಳ, ಅರ್ಥ ಸೂಕ್ಷ್ಮತೆಗಳ ವೈಖರಿಯನ್ನು ಇಲ್ಲಿ ಕಾಣಬಹುದು. ಆದಿ, ಮಧ್ಯ ಮತ್ತು ಅಂತ್ಯ ಪ್ರಾಸಗಳ ರಚನೆಯಿಂದಾಗಿ ನೆನಪಿಟ್ಟುಕೊಳ್ಳಲು, ಗಾದೆಗಳನ್ನು ಜನಪ್ರಿಯಗೊಳಿಸಲು ಸಹಾಕರಿಯಾಗಿವೆ" (ಪ್ರ.ಪು.೧೫).

೨. ಗಾದೆಗಳ ಸೂಚಿ ತಯಾರಿಕೆ

೧೯೬೫ರಲ್ಲಿ ಪ್ರಕಟವಾದ ಟಿ. ವಿ. ವೆಂಕಟರಮಣಯ್ಯ ಅವರು ಸಂಪಾದಿಸಿದ **'ಕನ್ನಡ ಗಾದೆಗಳ ಕೋಶ'** ಎಂಬುದು ೮೦೦೦ ಗಾದೆಗಳ ಸಂಗ್ರಹವಾಗಿದೆ. ಮೊದಲ ಸಲ ಪ್ರಕಟವಾಗುವಾಗ ಈ ಕೃತಿಯಲ್ಲಿ ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿದ್ದರು. ಅದಕ್ಕೆ ಮುನ್ನುಡಿ ಬರೆದ ದ.ರಾ.ಬೇಂದ್ರೆ ಅವರು ವಿಷಯಾನುಸಾರ ವಿಂಗಡನೆ ಮಾಡಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು ಎಂಬ ಮಾತನ್ನು ಬರೆದದ್ದರಿಂದ ಎರಡನೇ ಮುದ್ರಣದ ಕಾಲಕ್ಕೆ, ಅಂದರೆ ೧೯೭೯ರಲ್ಲಿ ೪೦೦೦ದಷ್ಟು ಗಾದೆಗಳನ್ನು ವಿಷಯಾನುಸಾರ ವಿಂಗಡಿಸಿಕೊಡಲು ಪ್ರಯತ್ನ ಮಾಡಿರುವುದನ್ನು ಸ್ವತಃ ಸಂಪಾದಕರೇ ಬರೆದುಕೊಂಡಿದ್ದಾರೆ. (ಅರಿಕೆ ಪು. ೩೪). ಹೀಗಾಗಿ ಎರಡನೇ ಮುದ್ರಣದ ಕೃತಿಯ ವಿಶೇಷತೆ ಎಂದರೆ ೫೫೬ ವಿಷಯಗಳಡಿ ಸುಮಾರು ೪೦೦೦ ಗಾದೆಗಳನ್ನು ಗುರುತಿಸಿದ್ದು. ಮತ್ತೆ ಉಳಿದ ೪೦೦೦ ಗಾದೆಗಳನ್ನು ಅಕಾರಾದಿಯಾಗಿ ಹಾಗೇ ಇಟ್ಟುಕೊಂಡಿದ್ದಾರೆ.

ಸಂಪಾದಕರು ಇಲ್ಲಿಯ ಗಾದೆಗಳನ್ನು ಕ್ಷೇತ್ರಕಾರ್ಯ ಮಾಡಿ ತಾವು ಸ್ವತಃ ಸಂಗ್ರಹ ಮಾಡದೆ, ೧೯೬೩ರ ವರೆಗೆ ಬಂದ ೨೫ ಕೃತಿಗಳನ್ನು, ೧೨ ಲೇಖನಗಳನ್ನು ಗಮನಿಸಿ, ಅಲ್ಲಿಂದ ಗಾದೆಗಳನ್ನು ಆಯ್ದುಕೊಂಡಿದ್ದಾರೆ. ಪ್ರಾಮಾಣಿಕವಾಗಿ ಕೊನೆಯಲ್ಲಿ ತಾವು ಬಳಸಿಕೊಂಡ ಕೃತಿಗಳ ಮತ್ತು ಲೇಖನಗಳ ಪಟ್ಟಿಯನ್ನು ಒದಗಿಸಿದ್ದಾರೆ. ಕೆಲವು ಕನ್ನಡ ಗಾದೆಗಳಿಗೆ ಸಮಾನವಾದ ಇಂಗ್ಲೀಷ ಹಾಗೂ ಸಂಸ್ಕೃತ ಗಾದೆಗಳನ್ನು ಕೊನೆಯಲ್ಲಿ ಕೊಟ್ಟಿದ್ದಾರೆ. ಹೀಗಾಗಿ ಇದೊಂದು **'ಕನ್ನಡ ಗಾದೆಗಳ ಸೂಚಿ'** ಯಾಗಿದೆ. ಬಹುಶಃ ಇದೇ ಅರ್ಥದಲ್ಲಿಯೆ ಕೃತಿಗೆ **'ಕನ್ನಡ ಗಾದೆಗಳ ಕೋಶ'** ಎಂದು ಹೆಸರಿಸಿದ್ದಾರೆ. ಆದರೆ ಯಾವ ಗಾದೆಯನ್ನು ಯಾವ ಸಂಗ್ರಹದಿಂದ ಬಳಸಿಕೊಳ್ಳಲಾಗಿದೆ ಎಂದು ತಿಳಿಯುವಂತೆ ದಾಖಲೆಗೊಳಿಸಿಲ್ಲ. ಹೀಗಾಗಿ ಆ ಕೊರತೆ ಈ ಕೃತಿಯ ಮಹತ್ವವನ್ನು ಕಡಿಮೆಗೊಳಿಸುತ್ತದೆ. ಆದರೆ ಹೀಗೆ ಗಾದೆಗಳ ಸೂಚಿ ತಯಾರಿಸಬಹುದು ಎಂಬ ಸಾಧ್ಯತೆಯನ್ನು ಮೊದಲ ಸಲ ಈ ಕೃತಿ ಎತ್ತಿ ತೋರಿಸಿದೆ. ತಾವು ಹೀಗೆ ಸೂಚಿಯನ್ನು ತಯಾರಿಸುತ್ತಿದ್ದೇನೆ ಎಂದು ವೆಂಕಟರಮಣಯ್ಯ ಅವರು ಎಲ್ಲಿಯೂ ಹೇಳಿಕೊಂಡಿಲ್ಲ. ಹಾಗೆ ನೇರವಾಗಿ ಹೇಳಿ, ಗಾದೆಗಳನ್ನು ಬಳಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು.

೧೯೬೬ ರಲ್ಲಿ ಎಚ್.ಎಸ್.ಅಚ್ಚಪ್ಪ ಅವರ **'ಗ್ರಂಥಸ್ಥ ಗಾದೆಗಳು'** ಕೃತಿ ಪ್ರಕಟವಾಗಿದೆ. ಇದೊಂದು ವಿಶೇಷ ಪ್ರಯತ್ನ. ಈ ಕೃತಿ ತಯಾರಿಸಲು ಹಿಡಿದ ದೀರ್ಘ ಅವಧಿ, ಸಂಪಾದಕರ ಶ್ರಮ ಇವೆಲ್ಲ ಎದ್ದು ಕಾಣುತ್ತವೆ. ಸುಮಾರು ೭೦೦ ಪುಟಗಳ ಈ ಸಂಪುಟಕ್ಕಾಗಿ ಕನ್ನಡ ಕಾವ್ಯಗಳಿಂದ ಆಯ್ದು ಸುಮಾರು ೧೦ ಸಾವಿರ ಗಾದೆ ಮಾತುಗಳನ್ನು, ಸೂಳ್ನುಡಿಗಳನ್ನು ಹೆಕ್ಕಿ ತೆಗೆದಿದ್ದಾರೆ. ಕನ್ನಡದ ಮೊದಲನೆಯ ಕೃತಿ 'ಕವಿರಾಜಮಾರ್ಗ' ದಿಂದ ಪ್ರಾರಂಭಿಸಿ, ಮುದ್ದಣನ ವರೆಗಿನ ಒಟ್ಟು ೧೩೦ ಕವಿಗಳು ಬರೆದ, ೧೬೩ ಕೃತಿಗಳಿಂದ ಗಾದೆ ಮತ್ತು ಸೂಳ್ನುಡಿಗಳನ್ನು ಆರಿಸಿಕೊಳ್ಳಲಾಗಿದೆ. ಇಂತಹ ಶ್ರಮದ ಕೆಲಸಕ್ಕೆ ಅಚ್ಚಪ್ಪ ಅವರಿಗೆ ೨೨ ವರ್ಷಗಳ ದೀರ್ಘಾವಧಿ ಹಿಡಿದಿದೆ ಎಂದು ತಿಳಿದುಬರುತ್ತದೆ. ಇದೊಂದು ಪರಿಶ್ರಮದ ಕೆಲಸ ಎಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿ ಬಳಕೆಯಾದ ಗಾದೆಗಳನ್ನು, ಸೂಳ್ನುಡಿಗಳನ್ನು ಆಯಾ ಕವಿಗಳ ಕೃತಿಗಳ ಹೆಸರುಗಳ ಕೆಳಗಡೆಯೇ ಕೊಡುತ್ತ ಹೋಗಿರುವುದರಿಂದ ಇದೊಂದು ಉತ್ತಮವಾದ ಸೂಚಿಯ ಗುಣಗಳನ್ನು ಹೊಂದಿದೆ. ಇದರಿಂದ ಅಭ್ಯಾಸಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ.

೫೭೨ ಪುಟಗಳ ಪಠ್ಯ, ೮೫ ಪುಟಗಳ ಅನುಬಂಧದ ಭಾಗಗಳಿವೆ. ಪ್ರಾರಂಭದಲ್ಲಿ ಸುದೀರ್ಘವಾದ ಪೀಠಿಕೆ ಇದೆ. ಅನುಬಂಧಗಳಲ್ಲಿ ಸುಮಾರು ೩೦ ಪುಟಗಳಷ್ಟು ಶಬ್ದಾರ್ಥಗಳನ್ನು ಕೊಟ್ಟಿದ್ದಾರೆ. ನಂತರ ಕೃತಿಗಳ ಅಕಾರಾದಿ, ಕವಿಗಳ ಅಕಾರಾದಿ, ಜೊತೆಗೆ ಆಧಾರಗ್ರಂಥಗಳ ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾರೆ.

ಈ ಕೃತಿಗೆ ಕನ್ನಡದ ಆಗಿನ ದೊಡ್ಡ ದೊಡ್ಡ ಸಾಹಿತಿಗಳು ತಮ್ಮ ಅಭಿಪ್ರಾಯಗಳನ್ನು ಬರೆದಿದ್ದಾರೆ. ಶ್ರೀಕಂಠಶಾಸ್ತ್ರಿ, ವೆಂಕಟಸುಬ್ಬಯ್ಯ, ಚಿದಾನಂದಮೂರ್ತಿ, ಪರಮೇಶ್ವರ ಭಟ್ಟ, ವೆಂಕಟಸುಬ್ಬಯ್ಯ, ತೀನಂಶ್ರೀ, ಡಿ.ಎಲ್.ಎನ್., ತ.ಸು.ಶಾಮರಾಯ, ಜಿ.ವರದರಾಜರಾವ್, ದೇ. ಜವರೇಗೌಡ ಇವರೆಲ್ಲ ತಮ್ಮ ಅಭಿಪ್ರಾಯಗಳನ್ನು ಕೊಟ್ಟ ಮಹನೀಯರಾಗಿದ್ದಾರೆ. ಆದರೆ ಅವೆಲ್ಲ ಪ್ರೋತ್ಸಾಹದ ಮಾತುಗಳಾಗಿದ್ದು, ಆ ಗ್ರಂಥಕ್ಕೆ ಸಹಾಯ ಸಹಕಾರ ನೀಡಬೇಕೆಂದು ವಿನಂತಿಸಿಕೊಂಡ ಒಕ್ಕಣೆಗಳಾಗಿವೆ. ಹೀಗಾಗಿ ಕೃತಿಯ ಮಹತ್ವವನ್ನು ತಿಳಿಯಲು ಈ ವಿದ್ವಾಂಸರ ಒಕ್ಕಣೆಗಳು ನಿಷ್ಪ್ರಯೋಜಕವಾಗಿವೆ.

ಸಂಪಾದಕರಾದ ಎಚ್.ಎಸ್.ಅಚ್ಚಪ್ಪ ಅವರೇ ಪ್ರಕಾಶಕರೂ ಆಗಿದ್ದಾರೆ. ಅಚ್ಚಪ್ಪ ಅವರು ತಮ್ಮ ಈ ಕೃತಿಯ ಬಗ್ಗೆ ಹೀಗೆ ಬರೆದುಕೊಂಡಿದ್ದಾರೆ: "ಇದೊಂದು ಮೇರು ಕೃತಿ. ಇದರಲ್ಲಿ ಕನ್ನಡ ನಾಡಿನ ಪೂರ್ವಕವಿಗಳ ಅತ್ಯಮೂಲ್ಯವಾದ ಗ್ರಂಥಗಳಿಂದ ಆಯ್ದು ಸಂಗ್ರಹಿಸಲಾಗಿರುವ ಗಾದೆಗಳು, ಸೂಕ್ತಿಗಳು ೧೦ ಸಾವಿರಕ್ಕೂ ಮೇಲ್ಪಟ್ಟು ಇವೆ. ಸಂಪಾದಕರು ಬಹುಶ್ರಮಪಟ್ಟು ಈ ಪುಸ್ತಕವನ್ನು ಸಿದ್ಧಪಡಿಸಿರುತ್ತಾರೆ" (ಪ್ರಕಾಶಕರ ನುಡಿ, ಪು.೨೩). "ಗಣಪತಿಯನ್ನು ಮಾಡೋಕೆ ಹೊರಟು ಅವರಪ್ಪನ್ನ ಮಾಡಿದ ಅಂತ ಒಂದು ಗಾದೆ. ಈ ಗಾದೆಗೆ ರೂಢಿಯಲ್ಲಿ ಇರುವ ಅರ್ಥವನ್ನು ಬಿಟ್ಟು ಶ್ರೀ ಅಚ್ಚಪ್ಪನವರು ಕನ್ನಡ ಗಾದೆಗಳ ಕ್ಷೇತ್ರದಲ್ಲಿ ಮಾಡಿರುವ ಮಾಡುತ್ತಿರುವ ಕಾರ್ಯವನ್ನು ಗಮನಿಸಿದರೆ ಮೇಲಿನ ಹಳೆಯ ಗಾದೆಗೆ ಒಂದು ಹೊಸ ಅರ್ಥ ಗೋಚರವಾಗುತ್ತದೆ. ೧೯೪೪ ರಲ್ಲಿ 'ಕನ್ನಡ ಗಾದೆಗಳು' (ಕ್ರೌನ್ ೧೪೨ ಪುಟ)ಎಂಬ ಪಿಳ್ಳಾರಿ ಪೂಜೆಯಿಂದ ಪ್ರಾರಂಭ ಮಾಡಿ,

ಈಗ ೧೯೬೮ರಲ್ಲಿ 'ಗ್ರಂಥಸ್ಥ ಗಾದೆಗಳು'(ಡೆಮಿ ೭೨೨ ಪುಟ) ಎಂಬ ಗಂಗಾಧರೇಶ್ವರನ ಪೂಜೆಯವರೆಗೆ ಬೆಳೆದಿದ್ದಾರೆ" (ಎರಡು ಮಾತು). ಹೀಗೆ ಬರೆದವರು ಹಿರಿಯರಾದ ಜಿ.ಪಿ.ರಾಜರತ್ನಂ ಅವರು. ನಿಜವಾಗಿಯೂ ತುಂಬ ಪರಿಶ್ರಮದ, ಬೃಹತ್ತಾದ ಕೃತಿ ಇದು. ಅಚ್ಚಪ್ಪನವರ ಸಂಯಮವನ್ನು, ನಿರಂತರ ಪರಿಶ್ರಮವನ್ನು ನಾವು ಮೆಚ್ಚಲೇ ಬೇಕು.

ರಾಜರತ್ನಂ ಅವರು ದಾಖಲಿಸುವಂತೆ ಅಚ್ಚಪ್ಪನವರು ಇಂಟರ್‌ಮೀಡಿಯಟ್ ಕೂಡ ಮುಗಿಸದವರಂತೆ. ಅವರ ಹಳೆಗನ್ನಡ, ನಡುಗನ್ನಡ ಕೃತಿಗಳ ಜ್ಞಾನ ಮೆಚ್ಚಲೇ ಬೇಕು. ತಾವು ಬರೆದ ಅರಿಕೆಯಲ್ಲಿ ಅಚ್ಚಪ್ಪನವರು ಹೀಗೆ ಬರೆದುಕೊಂಡಿದ್ದಾರೆ: "**ಗ್ರಂಥಸ್ಥ ಗಾದೆಗಳು** ಒಂದು ಸಂಕಲಿತ ಗ್ರಂಥ. ಇದರಲ್ಲಿ ಕನ್ನಡ ಭಾಷೆಯಲ್ಲಿ ಈವರೆಗೆ ದೊರೆತಿರುವ ಗ್ರಂಥಗಳಲ್ಲಿ ಅತ್ಯಂತ ಮೊದಲನೆಯ ಗ್ರಂಥವಾದ ನೃಪತುಂಗನ 'ಕವಿರಾಜಮಾರ್ಗ'ದಿಂದ, ಎಂದರೆ ಕ್ರಿ.ಶ. ೯ನೆಯ ಶತಮಾನದಿಂದ, ಮುದ್ದಣಕವಿಯ ರಾಮಾಯಣ ಸಂಬಂಧವಾದ 'ಶ್ರೀ ರಾಮಾಶ್ವಮೇಧ', 'ಅದ್ಭುತ ರಾಮಾಯಣ', 'ಶ್ರೀರಾಮಪಟ್ಟಾಭಿಷೇಕ'–ಈ ಗ್ರಂಥಗಳ ವರೆಗೆ, ಎಂದರೆ ಕ್ರಿ.ಶ.೨೦ನೇ ಶತಮಾನದವರೆಗೆ ರಚಿತವಾಗಿರುವ ೧೬೫ ಉದ್ಗ್ರಂಥಗಳಿಂದ ೧೦,೦೦೦ ಕ್ಕೂ ಮೇಲ್ಪಟ್ಟು ಗಾದೆಗಳನ್ನೂ ಗಾದೆಗಳ ಮೌಲ್ಯವುಳ್ಳ ಕವಿಸೂಕ್ತಿಗಳನ್ನೂ, ಸಂಸ್ಕೃತನ್ಯಾಯಗಳನ್ನೂ, ಶ್ಲೋಕಗಳನ್ನೂ, ಶ್ಲೋಕವಾದಗಳನ್ನೂ ಆಯ್ದು ಸಂಗ್ರಹಿಸಲಾಗಿದೆ". ಈ ಮಾತನ್ನು ಅಚ್ಚಪ್ಪ ಅವರೇ ಸ್ಪಷ್ಟಪಡಿಸಿದ್ದರಿಂದ ನಾವು ಇದು ಬರೀ ಗಾದೆಗಳ ಸಂಗ್ರಹವಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಇಲ್ಲಿ ಸಂಗ್ರಹಿಸಿದ ಬೇರೆ ಮಾತುಗಳು ಗಾದೆಗೆ ಸಮಾನವಾದ ಮಾತುಗಳಾಗಿವೆಯೇ ಹೊರತಾಗಿ ಗಾದೆಗಳಲ್ಲ ಎಂದು ಸಂಪಾದಕರೇ ಸ್ಪಷ್ಟಪಡಿಸಿದ್ದಾರೆ. ಅಂದರೆ ಗಾದೆಗಳಿಗೂ ಉಳಿದ ಪ್ರಕಾರಗಳಾದ ಕವಿಸೂಕ್ತಿ, ಸಂಸ್ಕೃತನ್ಯಾಯಗಳು, ಶ್ಲೋಕಗಳು, ಶ್ಲೋಕವಾದಗಳು ಇವುಗಳಿಗೆ ಸಮೀಪದ ಸಂಬಂಧವಿದೆಯೇ ಹೊರತು ಇವುಗಳೆಲ್ಲ ನೇರವಾಗಿ ಗಾದೆಗಳಲ್ಲ ಎಂಬ ಅಭಿಪ್ರಾಯವೇ ಅಚ್ಚಪ್ಪ ಅವರದಾಗಿದೆ. ಅದಕ್ಕಾಗಿ ಈ ವಿಷಯದ ಬಗೆಗೆ ಮತ್ತೆ ನಾವು ಚರ್ಚೆ ಮಾಡುವುದು ಅನಾವಶ್ಯಕವೆನಿಸುತ್ತದೆ. ಅಚ್ಚಪ್ಪ ಅವರು ಆಯ್ದುಕೊಂಡ ಕೆಲ ಉದಾಹರಣಗಳನ್ನು ನೋಡಬಹುದು :

ನೃಪತುಂಗ(ಕ್ರಿ.ಶ.ಸು.೮೫೦) ಕವಿರಾಜಮಾರ್ಗಂ :

ನೆಲ್ಲುಂ ಮೊಸರುಂ ಗುಡಿದಂತೆ (೨–೪)
ಮುತ್ತುಂ ಮೆಳಸುಂ ಕೋದಂತೆ (೨–೫)
ಕೂಸಿನ ತಲೆಯೊಳ್ ಬಿಣ್ಪರೆಯನಿಟ್ಟವೋಲ್ (೨–೬)
ಎರಡಕ್ಕೆ ಬಿಟ್ಟ ಕರುವಂ ಪೋಲ್ಗುಂ (೨–೯)

ಶಿವಕೋಟ್ಯಾಚಾರ್ಯ (ಕ್ರಿ.ಶ.ಸು.೯೨೦) ವಡ್ಡಾರಾಧನೆ

ಅರಪ ಬಳ್ಳಿ ಕಾಲ್ತೊಡರ್ದತ್ತು (೪–ಪುಟ ೫೯, ಸಾಲು೧೮)

ದೇವರ ದಾಸಿಮಯ್ಯ (ಕ್ರಿ.ಶ.೧೦೪೦) ದೇವರ ದಾಸಿಮಯ್ಯನ ವಚನಗಳು

ಹುಣಸೆಯ ಹೂವೆಲ್ಲಾ ಕಾಯಾಗ ಬಲ್ಲುದೆ? (೪೩)
ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ (೩೮)

ಹಂದಿ ಶ್ರೀಗಂಧವ ಹೂಸಿದಡೇನು? ಗಂಧರಾಜನಾಗಬಲ್ಲುದೇ?(೩೯)

ನಯಸೇನ (ಕ್ರಿ.ಶ.೧೧೧೨) ಧರ್ಮಾಮೃತಂ

ಆದಿತ್ಯಂಗೆ ಸೊಡರಂ ತೋರಿಸಿದರ್ (೧೦-೬೭)

ಅಗಸೆಯ ಮರಕ್ಕೆ ತೊನಸೆ ಮರಿದುಂಬಿ (೭-೨೨೯)

ಬಸವಣ್ಣ (ಕ್ರಿ.ಶ.ಸು.೧೧೬೦) ಬಸವಣ್ಣನವರ ವಚನಗಳು

ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ (೧-೧೧೯)

ಉಡುವಿನ ನಾಲಗೆಯಂತೆ ಎರಡಾದರೆ ಕೂಡಲಸಂಗಯ್ಯ ಮೆಚ್ಚುವನೆ?(೧-೧೦೨)

ವೆಂಕಟರಮಣಯ್ಯ ಅವರ **'ಕನ್ನಡ ಗಾದೆಗಳ ಕೋಶ'** (೧೯೬೯ಎರಡನೇ ಮುದ್ರಣ), ಹಾಗೂ ಎಚ್.ಎಸ್. ಅಚ್ಚಪ್ಪ ಅವರ 'ಗ್ರಂಥಸ್ಥ ಗಾದೆಗಳು' (೧೯೬೯) ಬಂದ ನಂತರ ಗಾದೆಗಳ ಇಂತಹ ಕೋಶಗಳನ್ನು ತಯಾರಿಸುವ ಒಂದು ಪರಂಪರೆಯೇ ನಮ್ಮಲ್ಲಿ ಹುಟ್ಟಿಕೊಂಡಿತು. ಹು.ಮ.ರಾಮಾರಾಧ್ಯ ಅವರು ತಯಾರಿಸಿದ್ದ **'ಕನ್ನಡ ಗಾದೆಗಳ ಮಹಾಕೋಶ'** (೧೯೮೨) ಎಂಬ ಹೆಸರಿನ ಗಾದೆಗಳ ಎರಡು ಬೃಹತ್ ಸಂಪುಟಗಳ ಹಸ್ತಪ್ರತಿಯನ್ನು ಅವರು ಮರಣ ಹೊಂದಿದ ಹತ್ತು ವರ್ಷಗಳ ನಂತರ (ಮರಣ ೧೯೭೩) ಸಾಹಿತ್ಯ ಪರಿಷತ್ತು ಪ್ರಕಟಿಸಿದೆ (೧೯೮೨). ಅಂದರೆ ಮೊದಲ ಗಾದೆಗಳ ಸೂಚಿ ಪ್ರಕಟವಾದ ಇಪ್ಪತ್ತು ವರ್ಷಗಳ ನಂತರ ಇನ್ನೊಂದು ಅಂತಹ ಸೂಚಿ ಪ್ರಕಟವಾಗಿದೆ.

ರಾಮಾರಾಧ್ಯ ಅವರು ಉತ್ತಮವಾದ ಗಾದೆಗಳ ಸಂಗ್ರಾಹಕರು ಎಂದು ತಿಳಿದುಬರುತ್ತದೆ. ಅವರು ಕೊಟ್ಟ ಗಾದೆಗಳ ಸಂಗ್ರಹಗಳ ಪಟ್ಟಿ ಇತ್ಯಾದಿಗಳನ್ನು ಪ್ರಕಟನೆಯ ಕಾಲಕ್ಕೆ ಕೈಬಿಡಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷರು ತಾವು ಬರೆದ ಮುನ್ನುಡಿಯಲ್ಲಿ ತಿಳಿಸಿದ್ದಾರೆ. "ರಾಮಾರಾಧ್ಯರು ನಾಡಿನಾದ್ಯಂತ ಸಂಚರಿಸಿ ಸಂಗ್ರಹಿಸಿರುವ ಗಾದೆಗಳ ಜೊತೆಗೆ ಬೇರೆಯವರ ಪ್ರಕಟಿತ ಸಂಗ್ರಹಗಳಿಂದ ಆಯ್ದುಕೊಂಡಿದ್ದ ಗಾದೆಗಳನ್ನು (ಪರಿಶೀಲಿಸಿ ಸೇರಿಸಬೇಕಾದ ಗಾದೆಗಳ ನಾಲ್ಕು ಪಟ್ಟಿ) ಇದರೊಡನೆ ಸೇರ್ಪಡೆಯಾಗಿದ್ದವು. ಜೊತೆಗೆ ಗಾದೆಗಳ ಅಕಾರಾದಿ ಪಟ್ಟಿ, ಅಕಾರಾದಿ ಪಟ್ಟಿಯ ಅನುಬಂಧ, ಕನ್ನಡದಲ್ಲಿ ಗಾದೆಗಳ ಸಾಹಿತ್ಯ ಪಟ್ಟಿ, ಪರಿಶೀಲನೆಗೆ ಒಳಪಟ್ಟ ಪುಸ್ತಕಗಳ ಪಟ್ಟಿ ಇತ್ಯಾದಿ ಭಾಗಗಳನ್ನು ಗಾಂಧಿ ಸಾಹಿತ್ಯ ಸಂಘದ ಸನ್ಮಿತ್ರರು ಒದಗಿಸಿದ್ದರು. ರಾಮಾರಾಧ್ಯರು ಸಂಗ್ರಹಿಸಿದ ಸಾಹಿತ್ಯ ಸಂಪತ್ತಿನೊಂದಿಗೆ ನಮ್ಮ ಸನ್ಮಿತ್ರರು ಸಿದ್ಧಪಡಿಸಿದ್ದ ಈ ಎಲ್ಲ ಭಾಗಗಳನ್ನು ಪರಿಶೀಲನೆಗೆ ಒಪ್ಪಿಸಿದೆವು. ರಾಮಾರಾಧ್ಯರು ನಾಡಿನಾದ್ಯಂತ ಸಂಚರಿಸಿ ಸಂಗ್ರಹಿಸಿರುವ ಗಾದೆಗಳ ಜೊತೆಗೆ ಬೇರೆಯವರ ಪ್ರಕಟಿತ ಸಂಗ್ರಹಗಳಿಂದ ಆಯ್ದುಕೊಂಡಿರುವ ಗಾದೆಗಳನ್ನು ಇದರೊಂದಿಗೆ ಸೇರಿಸಿ ಪ್ರಕಟಿಸುವುದು ಸರಿಯಲ್ಲವೆಂದು ಪರಿಶೀಲನಕಾರರು ಅಭಿಪ್ರಾಯ ಪಟ್ಟರು. ಅವರ ತೀರ್ಮಾನದಂತೆ ಆ ಭಾಗಗಳನ್ನೂ ಪ್ರಕಟಣೆಯಲ್ಲಿ ಕೈಬಿಡಲಾಗಿದೆ. ಈ ದೃಷ್ಟಿಯಿಂದ ಜಾನಪದ ಕ್ಷೇತ್ರದಲ್ಲಿಯೇ ಪ್ರಸ್ತುತ ಮಹಾಕೋಶಕ್ಕೆ ಮಹತ್ವದ ಸ್ಥಾನ ಲಭಿಸುತ್ತದೆಂದೂ, ರಾಮಾರಾಧ್ಯರ ಸಂಗ್ರಹಕಾರ್ಯದ ಬಗೆಗೆ ಪೂಜ್ಯ ಭಾವನೆಯುಂಟಾಗುತ್ತದೆಂದೂ ಭಾವಿಸಿದ್ದೇನೆ" (ಪು.೪-೫).

ಅಧ್ಯಕ್ಷರು ಬರೆದ ಈ ಮಾತುಗಳನ್ನು ಗಮನಿಸಿದರೆ, ರಾಮಾರಾಧ್ಯರು ಪ್ರಾಮಾಣಿಕವಾಗಿ ತಾವು ಕೊಟ್ಟ ಅನೇಕ ಪಟ್ಟಿಗಳನ್ನು ಕಿತ್ತುಹಾಕಿದ್ದು ಖಂಡಿತ ಸರಿಯಲ್ಲ. ಅನೇಕ ಪಟ್ಟಿಗಳನ್ನು ತಯಾರಿಸಿದವರು ರಾಮಾರಾಧ್ಯರೋ ಅಥವಾ ಅವರ ಸ್ನೇಹಿತರೋ? ಎಂಬುದೂ ಸ್ಪಷ್ಟವಾಗುತ್ತಿಲ್ಲ. ಏನಿದ್ದರೂ ಕನಿಷ್ಠ ಗಾದೆಗಳ ಸಂಗ್ರಹಗಳ ಪಟ್ಟಿಯಾದರೂ ಕೊಡಬಹುದಿತ್ತು. ಇವರು ಮಾಡಿದ ಕೆಲಸದಿಂದ ಇಂದು ರಾಮಾರಾಧ್ಯರ ಇಡೀ ಕೆಲಸವನ್ನೇ ಸಂಶಯದಿಂದ ನೋಡುವಂತಾಗಿರುವುದು ದುದುರ್ದೈವದ ಸಂಗತಿ. ಅದಕ್ಕಾಗಿ ಈ ಕೃತಿ ಈಗಿರುವಂತೆ ಮೂಡಿಸುವ ಸಂಶಯಗಳಿಗೆ ರಾಮಾರಾಧ್ಯರು ಖಂಡಿತ ಬಾಧ್ಯರಾಗುವುದಿಲ್ಲ.

ರಾಮಾರಾಧ್ಯರಿಗೆ ಗಾದೆಗಳ ಬಗ್ಗೆ ಅತಿಯಾದ ಪ್ರೀತಿ ಇತ್ತು ಎಂಬುದಕ್ಕೆ ಅವರ ಇತರ ಪ್ರಕಟಿತ ಲೇಖನಗಳು, ಕೃತಿಗಳು, ಅಪ್ರಕಟಿತ ಕೃತಿಗಳ ತಲೆಬರಹಗಳು ನಮಗೆ ಸಾಕ್ಷಿಯಾಗುತ್ತವೆ. 'ಗಾದೆಗಳ ಗೀತಗಳು'(ಕೀರ್ತನೆಗಳು), 'ಗಾದೆಗಳ ಕಥೆಗಳು', 'ಭಂಡಾಟ ಬದುಕಿಸಿತು ಕೇಣ ಕೆಡಿಸಿತು' (ಪ್ರಹಸನ), ಅಪ್ರಕಟಿತ ಕೃತಿಗಳಾದ – 'ಗಾದೆ ರಾಮಾಯಣ', 'ಗಾದೆ ಭಾರತ', 'ಗಾದೆಗಳ ಪೌರಾಣಿಕ ಕಥೆಗಳು', 'ಗಾದೆಗಳ ಪ್ರಹಸನಗಳು', 'ಗಾದೆಗಳ ವಿಶ್ವರೂಪ'– ಈ ಕೃತಿಗಳು ರಾಮಾರಾಧ್ಯರಿಗೆ ಗಾದೆಗಳ ಬಗ್ಗೆ ಇರುವ ಪ್ರೀತಿಯನ್ನು ತೋರಿಸುತ್ತವೆ. ಇದನ್ನು ಗಮನಿಸಿದರೆ ಅವರು ಸಾಕಷ್ಟು ಗಾದೆಗಳನ್ನು ಸಂಗ್ರಹಿಸಿರಬೇಕೆನಿಸುತ್ತದೆ. ಆದರೆ ಈಗ ಪ್ರಕಟವಾಗಿರುವ **'ಕನ್ನಡ ಗಾದೆಗಳ ಮಹಾಕೋಶ'** ಎರಡು ಸಂಪುಟಗಳ ಇಡೀ ಗಾದೆಗಳನ್ನು ರಾಮಾರಾಧ್ಯರೇ ಸಂಗ್ರಹಿಸಿದರೇ? ಅವರು ಮಾಡಿದ ಗಾದೆಗಳ ಸಂಗ್ರಹ ಎಷ್ಟು? ಬೇರೆ ಸಂಗ್ರಹಗಳಿಂದ ಪಡೆದದ್ದೆಷ್ಟು? ಯಾವ ಭಾಗಗಳನ್ನು ತೆಗೆದು ಹಾಕಲಾಗಿದೆ? ಇವೆಲ್ಲ ಮಾತುಗಳು ಉಳಿದುಕೊಳ್ಳುತ್ತವೆ.

ಬಹುಶಃ ಈ ಸಂಪುಟಗಳಿಗೆ ಪ್ರೇರಣೆ ವೆಂಕಟರಮಣಯ್ಯ ಅವರು ತಮ್ಮ **'ಕನ್ನಡ ಗಾದೆಗಳ ಕೋಶ'** ದ ಎರಡನೇ ಮುದ್ರಣದಲ್ಲಿ (೧೯೬೯ರಲ್ಲಿ) ಅಳವಡಿಸಿದ ೫೫೬ ವಿಷಯಗಳಡಿ ವಿಭಾಗಿಸಿ ಕೊಟ್ಟ ಪದ್ಧತಿ ಮುಖ್ಯವಾಗಿರಬೇಕೆನಿಸುತ್ತದೆ. ಜೊತೆಗೆ ಎಚ್.ಎಸ್.ಅಚ್ಚಪ್ಪ ಅವರ **'ಗ್ರಂಥಸ್ಥ ಗಾದೆಗಳು'** (೧೯೬೯) ಕೃತಿಯ ಪ್ರಭಾವವೂ ಇರಬೇಕೆನಿಸುತ್ತದೆ. 'ಕನ್ನಡ ಗಾದೆಗಳ ಕೋಶ' ಎಂದಿದ್ದ ವೆಂಕಟರಮಣಯ್ಯನವರ ಕೃತಿಯ ಹೆಸರಿಗೆ 'ಮಹಾ' ಎನ್ನುವುದನ್ನು ಸೇರಿಸಿಕೊಂಡು **'ಕನ್ನಡ ಗಾದೆಗಳ ಮಹಾ ಕೋಶ'** ಎಂದು ತಮ್ಮ ಕೃತಿಗೆ ಹೆಸರಿಟ್ಟುಕೊಂಡಿದ್ದಾರೆ. ಹೀಗೆ ಹೇಳುವಾಗ ಒಂದು ಮಾತನ್ನು ಗಮನಿಸಬೇಕು, ಈ ಕೃತಿಯ ಹೆಸರನ್ನು ಕೊಟ್ಟವರು ರಾಮಾರಾಧ್ಯರೋ ಅಥವಾ ಅವರ ಮರಣಾನಂತರ ಪ್ರಕಟವಾಗುವಾಗ ಇಟ್ಟುಕೊಂಡ ಹೆಸರೋ ಎಂಬುದು ನಮಗೆ ಸ್ಪಷ್ಟವಾಗುವುದಿಲ್ಲ. ವೆಂಕಟರಮಣಯ್ಯ ಅವರು ಮಾಡಿಕೊಂಡ ೫೫೬ ವಿಷಯಗಳ ವಿಭಾಗೀಕ್ರಮವನ್ನು ರಾಮಾರಾಧ್ಯರ ಕೃತಿಯಲ್ಲಿ ಅನುಸರಿಸಲಾಗಿದೆ. ಅಚ್ಚಪ್ಪನವರ 'ಗ್ರಂಥಸ್ಥ ಗಾದೆಗಳು' ಕೃತಿಯನ್ನಂತೂ ಪೂರ್ತಿಯಾಗಿ ಬಳಸಿಕೊಂಡಿದ್ದಾರೆನಿಸುತ್ತದೆ. ರಾಮಾರಾಧ್ಯರ ಕೆಲಸವೆಂದರೆ ಮೂಲ ಜನಪದ ಗಾದೆ ಕೊಟ್ಟು, ಉಲ್ಲೇಖಿತ ಗಾದೆಯನ್ನು ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಹೇಗೆ ಬಳಸುತ್ತಾರೆಂದು ತೋರಿಸಲು ನೇರವಾಗಿ ಅಚ್ಚಪ್ಪನವರ ಗ್ರಂಥವನ್ನು ಬಳಸಿಕೊಂಡು, ಕವಿಯ ಮಾತುಗಳಲ್ಲಿಯ ಗಾದೆಗಳನ್ನು ಕೊಡುತ್ತ ಹೋಗಿದ್ದಾರೆ.

ಹು.ಮ.ರಾಮಾರಾಧ್ಯ ಅವರು ತಮ್ಮ ಸಂಪುಟಗಳಲ್ಲಿ ಗಾದೆಗಳನ್ನು ಕೆಲವು ವಿಷಯಗಳಡಿ ವಿಭಾಗಿಸಿಕೊಂಡಿದ್ದಾರೆ. ಮೊದಲ ಸಂಪುಟದಲ್ಲಿಯ ೧೦೬೫೩ ಗಾದೆಗಳನ್ನು: ೧. ಆಧ್ಯಾತ್ಮಿಕ-ತಾತ್ವಿಕ, ೨. ರಾಜಕೀಯ, ೩. ಶೈಕ್ಷಣಿಕ, ೪. ಸಾಮಾಜಿಕ, ೫. ಕೌಟುಂಬಿಕ, ೬. ಔದ್ಯೋಗಿಕ ಎಂಬ ಭಾಗಗಳಲ್ಲಿ ವಿಭಾಗಿಸಿಕೊಂಡಿದ್ದಾರೆ. ಎರಡನೇ ಸಂಪುಟದಲ್ಲಿ ಈ ವಿಭಾಗೀಕ್ರಮವನ್ನು ಮುಂದುವರೆಸಿ, ೭. ಗುಣಶೀಲ ಸ್ವಭಾವ, ೮. ಸಂಕೀರ್ಣ ಎಂಬ ವಿಭಾಗಗಳಲ್ಲಿ ೧೦೬೫೪ ರಿಂದ ೧೫೫೮೨ ಗಾದೆಗಳನ್ನು ಕೊಟ್ಟಿದ್ದಾರೆ.

ಅನುಬಂಧ-೧ ರಲ್ಲಿ **'ಇಂದಿನ ಕೆಲವು ಗಾದೆಗಳು'** ಎಂದು ೪೩೮ ಗಾದೆಗಳನ್ನು, ಅನುಬಂಧ-೨ ರಲ್ಲಿ **'ಅನ್ಯ ದೇಶೀಯ ಹಾಗೂ ಅನ್ಯ ಭಾಷಾ ಗಾದೆಗಳು'** ಎಂದು ಇಂಗ್ಲೀಷ, ಹೀಬ್ರೂ, ಈಜಿಪ್ತ, ರುಮಾನಿಯಾ ಹೀಗೆ ಹಲವಾರು ದೇಶ ಭಾಷೆಗಳ, ಮತ್ತು ಹಿಂದಿ, ಮರಾಠಿ ಮುಂತಾದ ಕೆಲ ಭಾರತೀಯ ಭಾಷೆಗಳ ೪೭೮ ಗಾದೆಗಳನ್ನು ಕೊಟ್ಟಿದ್ದಾರೆ. ಅನುಬಂಧ-೩ **'ಗಾದೆಗಳ ಕಾವ್ಯ ಪ್ರಯೋಗಗಳು'** ಎಂದಿದೆ. ಇಲ್ಲಿ ಎಂಟು ವಿಷಯಗಳಿಗೆ ಸಂಬಂಧಿಸಿದಂತೆ ೧೧೫೭ ಗಾದೆಗಳನ್ನು ವಿಂಗಡಿಸಿ ಕೊಟ್ಟಿದ್ದಾರೆ. ಇಲ್ಲಿ ವಿಂಗಡಿಸಿಕೊಂಡ ವಿಷಯಗಳು ಹೀಗಿವೆ: ೧. ಆಧ್ಯಾತ್ಮಿಕ, ೨. ರಾಜಕೀಯ, ೩. ಶೈಕ್ಷಣಿಕ, ೪. ಸಾಮಾಜಿಕ, ೫. ಕೌಟುಂಬಿಕ, ೬. ಔದ್ಯೋಗಿಕ, ೭. ಗುಣಶೀಲ ಸ್ವಭಾವ, ೮. ಸಂಕೀರ್ಣ. ಕನ್ನಡ ಕಾವ್ಯಗಳಲ್ಲಿ ಪ್ರಯೋಗಗೊಂಡ ಗಾದೆಗಳನ್ನು ಹೀಗೆ ವಿಂಗಡಿಸಲು ಪ್ರಯತ್ನಿಸಿದ್ದಾರೆ. ಇಲ್ಲಿಯ ವಿಶೇಷವೆಂದರೆ, ಒಂದು ಸಹಜವಾದ ಜನಪದ ಗಾದೆಯನ್ನು ಮೊದಲು ಕೊಟ್ಟು, ಅದರ ಕೆಳಗೆ ಆ ಗಾದೆ ಮಾತು ಯಾವ ಯಾವ ಕೃತಿಯಲ್ಲಿ ಬಂದಿದೆ, ಅದರ ರೂಪ ಹೇಗಿದೆ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಕೊಡುತ್ತ ಹೋಗಿದ್ದಾರೆ. ಹೀಗೆ ಎಂಟು ವಿಷಯಗಳಡಿ, ೧೧೫೭ ಜನಪದ ಗಾದೆಗಳು ಕನ್ನಡ ಕಾವ್ಯಗಳಲ್ಲಿ ಬಳಕೆಯಾದ ರೂಪಗಳನ್ನು ಕಾವ್ಯಗಳ ಉಲ್ಲೇಖಗಳ ಜೊತೆ, ಯಾವ ಪದ್ಯ, ಎಷ್ಟನೇ ಸಂಧಿ ಎಂಬ ಮಾಹಿತಿಗಳನ್ನೂ ಉಲ್ಲೇಖಿಸುತ್ತ ಹೋಗಿದ್ದಾರೆ. ಉದಾಹರಣೆಗೆ ಒಂದೆರಡನ್ನು ನೋಡಬಹುದು:

೨೧೫ : ಹತ್ತು ಜನದ ಮಧ್ಯೆ ಬಿದ್ದ ಹಾವು ಸಾಯದು.

೧. ನಾಲುವರ ನಡುವಣ ಹಾವು ಸಾಯದು
    -(ವಿ.ಪ. ೩-೧೮) ಕರ್ಣಾಟ ಭಾರತ ಕಥಾಮಂಜರಿ.

೨. ಹಾವು ಹಲಬರ ನಡುವೆ ಸಾಯದು
    -(ಸ.ಪ.೧೫.ಪ.೨೮) ಕರ್ಣಾಟ ಭಾರತ ಕಥಾಮಂಜರಿ.

೩. ಹತ್ತರೊಳು ಬಿದ್ದಂಥ ಹಾವು ಸಾಯಲುಬಹುದೇ?
    -(ಮು.ದಾ.ದ್ರೌಪದೀ ವಸ್ತ್ರಾಪಹರಣ) ಉದಯರಾಗ

೪. ಹತ್ತರೊಳು ಬಿದ್ದ ಹಾವು ಸಾಯಬಾರದು.
    -(ಸಂ.೧೦-೧೬೯) ಬಿಜ್ಜಳನ ಚರಿತ್ರೆ

೨೩೫. 'ಕೈ (ಅಂಗೈ) ಹುಣ್ಣಿಗೆ (ನೆಲ್ಲಿಗೆ)/ ಅಂಗೈ ನೋಡಲಿಕ್ಕೆ/ಮುಂಗೈ ಕಂಕಣಕ್ಕೆ ಕನ್ನಡಿ ಯಾಕೆ?'.

'ಕಣ್ಣಿಗೆ ಕಾಣುವುದಕ್ಕೆ ಕನ್ನಡಿಯಾಕೆ'. 'ಕರತಲದ ಕಜ್ಜಿಗೆ ಕನ್ನಡಿ ಯಾಕೆ?'.

೧. ಮುಂಗೈಯ ಕಂಕಣಮಂ ಕನ್ನಡಿಯಿಂ ನೋಳ್ಪ ಗಾಂಪರಂತೆ
-(೯-೧೧೫) ಧರ್ಮಾಮೃತ

೨. ಮುಂಗೈಯ ಕಂಕಣಕೆ ಕಂನಡಿಯ ತೋರುವಂತೆ
-(೧೩೬) ಬಸವೇಶ್ವರ ವಚನಗಳು

೩. ಮುಂಗಯ್ಯ ಕಂಕಣಕೆ ಕನ್ನಡಿ ಬೇಡ
-(೨೩) ಉರಿಲಿಂಗ ಪೆದ್ದಿಯ ವಚನಗಳು

೧೯. ಕರದ ಕಂಕಣಕೆ ಕನ್ನಡಿಯುಂಟೆ?
-(ಸಂ.೪-ಪ.೧೮, ಸಂ.೫೦-ಪ.೩೩) ಚೆನ್ನಬಸವ ಪುರಾಣ.

೩೦. ಯಾಕೆ ಮುಂಗೈಯ ಕಂಕಣಕೆ ಕನ್ನಡಿಯು
-(ಸಂ.೪-೨೧೩) ಮೋಳಿಗಯ್ಯನ ಪುರಾಣ

ಹೀಗೆ ಒಂದು ಗಾದೆ ೩೦ ಸಲ ಬೇರೆ ಬೇರೆ ಕನ್ನಡ ಗ್ರಂಥಗಳಲ್ಲಿ ಬಳಕೆಯಾಗಿರುವುದನ್ನು ಉಲ್ಲೇಖಿಸುತ್ತಾರೆ. ಅತಿ ಹೆಚ್ಚು ಸಲ ಕನ್ನಡ ಕವಿಗಳು ಬಳಸಿದ ಗಾದೆ ಇದು. ಹೀಗೆಯೇ ೧೧೫೭ ಗಾದೆಗಳನ್ನು ಬೇರೆ ಬೇರೆ ಕನ್ನಡ ಕಾವ್ಯಗಳಲ್ಲಿ ದೊರೆಯುವುದನ್ನು ಉಲ್ಲೇಖಿಸುತ್ತಾರೆ. ಹಿಂದೆ ಹೇಳಿದಂತೆ ಕನ್ನಡ ಕಾವ್ಯಗಳಿಂದ ಉಲ್ಲೇಖಿತ ಗಾದೆಗಳು ಎಚ್.ಎಸ್. ಅಚ್ಚಪ್ಪನವರ 'ಗ್ರಂಥಸ್ಥ ಗಾದೆಗಳು' ಕೃತಿಯಿಂದ ತೆಗೆದುಕೊಂಡಿರುವುದು ಸ್ಪಷ್ಟವಾಗಿ ತೋರುತ್ತದೆ. ಆದರೆ ಒಂದು ಗಾದೆಯನ್ನು ಯಾರ್ಯಾರು ಹೇಗೆ ಹೇಗೆ ಬಳಸಿದ್ದಾರೆಂಬುದನ್ನು ತೋರಿಸಲು ಸಂಪಾದಕರು ಒಂದಿಷ್ಟು ಶ್ರಮ ಪಟ್ಟಿದ್ದಾರೆಂಬುದು ಎದ್ದು ಕಾಣುತ್ತದೆ. ಗಾದೆಗಳ ಅಧ್ಯಯನಕ್ಕೆ ಈ ಬಗೆಯ ಪ್ರಯತ್ನಗಳು ಸಹಾಯಕವಾಗುತ್ತವೆ.

ಇದರ ಮುಂದಿನ ಹೆಜ್ಜೆಯಾಗಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಕೈಕೊಂಡ **'ಸಮಗ್ರ ಕನ್ನಡ ಗಾದೆಗಳು'** ಪ್ರಕಟನೆಯ ಪ್ರಯತ್ನ, ೨೦೧೨ರಲ್ಲಿ ನಾಲ್ಕು ಸಂಪುಟಗಳಲ್ಲಿ ಹೊರಬಂದಿವೆ. ಈ ಸಂಪುಟಗಳಿಗಾಗಿ ೩೩ ಗಾದೆಗಳ ಸಂಗ್ರಹಗಳನ್ನು ಬಳಸಿಕೊಂಡಿದ್ದಾರೆ. ಒಟ್ಟಿಗೆ ಈ ನಾಲ್ಕು ಸಂಪುಟಗಳಲ್ಲಿ ೨೮,೩೧೬ ಗಾದೆಗಳಿವೆ. ಇವೆಲ್ಲವನ್ನೂ ಅಕಾರಾದಿಯಾಗಿ ಹೊಂದಿಸಲಾಗಿದೆ. ಇವು ಒಂದು ವಿಶ್ವವಿದ್ಯಾಲಯದಿಂದ ತಯಾರಿಸಿ ಪ್ರಕಟಿಸಿದ ಅಧಿಕೃತ ಸಂಪುಟಗಳು. ಇವುಗಳನ್ನು ಪರಿಷ್ಕೃತಗೊಳಿಸುತ್ತ ಹೋದರೆ ಕನ್ನಡ ಗಾದೆಗಳ ಲೆಕ್ಕ ಒಂದೆಡೆ ದೊರೆಯುತ್ತದೆ. ಅಭ್ಯಾಸಿಗಳಿಗೆ ಅನುಕೂಲವಾಗುತ್ತದೆ.

ಹಾಮಾನಾ ಅವರು ೧೯೮೩ರ ಅವಧಿಯಲ್ಲಿಯೇ ಕನ್ನಡದ ಎಲ್ಲ ಗಾದೆಗಳನ್ನು ಒಂದೆಡೆ ತರುವ ಯೋಚನೆ ಮಾಡಿ, ಕ್ಯಾತನಹಳ್ಳಿ ರಾಮಣ್ಣ ಹಾಗೂ ಟಿ.ಎಸ್.ರಾಜಪ್ಪ ಅವರಿಗೆ ತಮ್ಮ ಕೈಗೆ ಸಿಕ್ಕ ಸಂಗ್ರಹಗಳಿಂದ ಗಾದೆಗಳನ್ನು ಒಂದೊಂದು ಸ್ಲಿಪ್‌ಗಳ ಮೇಲೆ ಬರೆಯಲು ಸೂಚಿಸಿದ್ದರಂತೆ. ಅದರಂತೆ ಆಗಲೇ ಹಲವಾರು ಸಾವಿರ ಕಾರ್ಡುಗಳ ಮೇಲೆ ಗಾದೆಗಳನ್ನು ಬರೆದು ಮುಗಿಸಿದ್ದರಂತೆ. ಆದರೆ ಆ ಯೋಜನೆ ಮುಂದುವರೆಯದೆ,

ಆಗ ಬರೆದ ಕಾರ್ಡುಗಳನ್ನು ಈಗ ಈ ಯೋಜನೆಗಾಗಿ ಬಳಸಿಕೊಂಡಿದ್ದಾರೆ ಎಂದು ತಿಳಿದುಬರುತ್ತದೆ. ನಂತರ ಕೆಲವು ಸಂಗ್ರಹಗಳನ್ನು ಬಳಸಿಕೊಂಡಂತೆ ತೋರುತ್ತದೆ.

ಹಾಗೆ ನೋಡಿದರೆ ಇಂತಹ ಬೃಹತ್ ಯೋಜನೆಗಳನ್ನು ಕನ್ನಡ ಒಗಟುಗಳು, ಒಡಪುಗಳು, ಮಕ್ಕಳ ಹಾಡುಗಳು, ಆಣಿಪೀಣಿ ಹಾಡುಗಳು ಈ ಎಲ್ಲ ಸಣ್ಣ ಪ್ರಕಾರದ ಜನಪದ ಸಾಹಿತ್ಯದ ಸೂಚಿಗಳನ್ನು ಯೋಜನಾಬದ್ಧವಾಗಿ ರೂಪಿಸಿಕೊಂಡು ಹೊರತರುವ ಅವಶ್ಯಕತೆ ಇದೆ. ವಿಶ್ವವಿದ್ಯಾಲಯಗಳು ಇಂತಹ ಯೋಜನೆಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡುವ ಜರೂರಿ ಇದೆ. ಸಮಗ್ರ ಜನಪದ ಸಾಹಿತ್ಯ ಪ್ರಕಟನಾ ಯೋಜನೆಯೊಂದು ಕರ್ನಾಟಕ ಸರ್ಕಾರ ಕೈಕೊಂಡಿದ್ದು, ಅಲ್ಲಿ ಪ್ರಕಟವಾಗಿರುವ ಸಂಪುಟಗಳಲ್ಲಿ ಒಂದೊಂದು ಕೃತಿಯಿಂದ ಕೆಲಕೆಲವು ಭಾಗಗಳನ್ನು ಅಷ್ಟೇ ತೆಗೆದುಕೊಳ್ಳುತ್ತಿರುವುದರಿಂದ ಆ ಕೆಲಸ ಒಂದು ಬಗೆಯ ಸಾಹಿತ್ಯದ ಸಮಗ್ರ ಸೂಚಿಯಾಗಿ ಕಾಣುತ್ತಿಲ್ಲ. ಅಪರೂಪಕ್ಕೆ ಸಿಗುವ ಸಣ್ಣ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದಂತೆ ಪರಿಪೂರ್ಣ ಸಂಪುಟಗಳನ್ನು ರೂಪಿಸುವ ಅವಕಾಶ ಈ ಯೋಜನೆಯಡಿ ಇತ್ತು. ಅದೂ ಕೈಗೂಡಿಲ್ಲವೆಂಬುದು ಸ್ಪಷ್ಟವಾಗಿದೆ.

೩. ಸಮಾನ ಗಾದೆಗಳ ಹುಡುಕಾಟ ಹಾಗೂ ಅನುವಾದಗಳು :

ದ್ರಾವಿಡ ಭಾಷೆಯ ಗಾದೆಗಳ ತತ್ಸಮಾನ ಗಾದೆಗಳು :

೧೯೬೨ರಲ್ಲಿ **'ನಾಲ್‌ನುಡಿ –ನಾಣ್ನುಡಿ'** ಎಂಬ ಗಾದೆಗಳ ಸಂಗ್ರಹವೊಂದನ್ನು ಎಂ. ಮರಿಯಪ್ಪ ಭಟ್ಟ ಅವರು ಪ್ರಕಟಿಸಿದ್ದಾರೆ. ೪೬೨ ಗಾದೆಗಳನ್ನು, ೧೨೫ ಪುಟಗಳ ಪುಸ್ತಿಕೆಯಲ್ಲಿ ಜೋಡಿಸಿದ್ದಾರೆ. ಆಗಿನ ಕಾಲಕ್ಕೆ ಈ ಕೃತಿಯ ೩೦೦೦ ಪ್ರತಿಗಳನ್ನು ಅಚ್ಚುಹಾಕಿಸಿದ್ದಾರೆ. ಇದರ ವಿಶೇಷತೆ ಎಂದರೆ, ಇಂಗ್ಲೀಷ ವಿದ್ವಾಂಸರು ಕನ್ನಡ ಗಾದೆಗಳನ್ನು ಇಂಗ್ಲೀಷನಲ್ಲಿ ದೊರೆಯುವ ಸಮಾನವಾದ ಗಾದೆಗಳ ಜೊತೆ ಪ್ರಕಟಿಸಿದ ಕೃತಿಗಳನ್ನು ಕಾಣುತ್ತೇವೆ. ಆದರೆ ಎಂ. ಮರಿಯಪ್ಪ ಭಟ್ಟ ಅವರ ಜೊತೆ ಎನ್. ವೆಂಕಟರಾವ್, ಆರ್. ಪಿ. ಸೇತುಪಿಳ್ಳೆ ಹಾಗೂ ಎಸ್. ಕೆ. ನಾಯರ್ ನಾಲ್ವರು ದೇಸಿ ವಿದ್ವಾಂಸರು ಕೂಡಿ ೪೬೨ ಕನ್ನಡ ಗಾದೆಗಳಿಗೆ ತೆಲುಗು, ತಮಿಳು, ಮಲೆಯಾಳ ಈ ಭಾಷೆಗಳಲ್ಲಿನ ಸವಾನ ಗಾದೆಗಳನ್ನು ಹುಡುಕಿ ಕೊಟ್ಟಿದ್ದಾರೆ. ಈ ಬಗೆಯ ಪ್ರಯತ್ನಇದೊಂದೇ ಎಂದು ತೋರುತ್ತದೆ. ಇಂಗ್ಲೀಷಿನ ಬದಲಾಗಿ ಹೀಗೆ ಸ್ಥಳೀಯ ಭಾಷೆಗಳ ಸಾಹಿತ್ಯದ ತೌಲನಿಕ ಕೆಲಸ ನಡೆಯಬೇಕು ಎಂಬ ಧೋರಣೆಯ ಹಿನ್ನೆಲೆಯಲ್ಲಿ ಇಂತಹ ಪ್ರಯತ್ನಗಳು ನಡೆದಿರಬೇಕೆಂದು ತೋರುತ್ತದೆ.

ಬಿ.ಡಿ.ಜತ್ತಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರು ಸರ್ಕಾರದಿಂದ ಈ ಯೋಜನೆ ಕಾರ್ಯಗತವಾಗಿದೆ. ಇದಕ್ಕೆ ಮುನ್ನುಡಿ ಬರೆದಿರುವ ಮುಖ್ಯಮಂತ್ರಿಗಳು ಹೀಗೆ ಬರೆದಿದ್ದಾರೆ : "ಮದರಾಸಿನ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರು ಅಮೆರಿಕದ ಫೋರ್ಡ್ ಫೌಂಡೇಷನ್ ನಿಧಿಯ ಸಹಾಯದಿಂದ ದಕ್ಷಿಣ ಭಾರತದ ನಾಲ್ಕು ಭಾಷೆಗಳಲ್ಲಿ ಉತ್ತಮ ಸಾಹಿತ್ಯವನ್ನು ಅಗ್ಗದ ಬೆಲೆಗೆ ಅಂದವಾಗಿ ಮುದ್ರಿಸಿಕೊಡಲು ಪ್ರಕಾಶಕರಿಗೆ ಪ್ರೋತ್ಸಾಹ ನೀಡುವ ಒಂದು ಯೋಜನೆಯನ್ನು ಮಾಡಿ ಅದರಂತೆ ಈಗ ನಾಲ್ಕೈದು

ವರ್ಷ ಕೆಲಸ ಮಾಡಿದ್ದಾರೆ. ಈಗಾಗಲೇ ಈ ನಾಲ್ಕು ಭಾಷೆಗಳಲ್ಲಿ ಸಂಸ್ಥೆಯ ಆಶ್ರಯದಲ್ಲಿ ೨೫೦ ಗ್ರಂಥಗಳು ಪ್ರಕಟವಾಗಿವೆ. ಕನ್ನಡದಲ್ಲೇ ನಾಲ್ವತ್ತೈದು ಆಗಿವೆ". ಅಂದರೆ ೧೯೬೦ರ ಸುಮಾರಿನಲ್ಲಿಯೇ ದಕ್ಷಿಣ ಭಾಷೆಗಳ ಆದಾನ ಪ್ರದಾನ ಕಾರ್ಯಕ್ರಮಗಳು ಪ್ರಾರಂಭವಾದುದರ ಸೂಚನೆ ಇಲ್ಲಿದೆ. ಇದೊಂದು ಮಾದರಿ ಕೃತಿ. "ಈ ಸಂಗ್ರಹದಲ್ಲಿ ಒಟ್ಟು ನಾನ್ನೂರ ಅರವತ್ತೇಳು ಗಾದೆಗಳನ್ನು ಸಂಗ್ರಹಿಸಿದ್ದೇವೆ. ಅಂದರೆ ಎರಡು ಅಥವಾ ಹೆಚ್ಚು ದ್ರಾವಿಡ ಭಾಷೆಗಳಲ್ಲಿ ಸಾಮ್ಯವಿರುವ ಗಾದೆಗಳನ್ನು ಮಾತ್ರ ಸಂಗ್ರಹಿಸಲಾಗಿದೆ". ಸಂಪಾದಕರ ಈ ಮಾತಿನಲ್ಲಿ ಈ ಕೃತಿಯಲ್ಲಿ ನಡೆದ ಕೆಲಸದ ಬಗೆಗೆ ನಮಗೆ ಮಾಹಿತಿ ಒದಗುತ್ತದೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದಾಗಿದೆ.

೨೩೦ :

ಕ. ಚಂದ್ರನನ್ನು ನೋಡಿ ನಾಯಿ ಬೊಗಳಿದ ಹಾಗೆ.

ತೆ. ಚಂದ್ರುನಿ ಚೂಚಿ ಕುಕ್ಕಲು ಮೊರಗಿನಟ್ಲು.

ತ. ಚಂದಿರನೈಪ್ಪಾತ್ತು ನಾಯ್ ಕುರೈತ್ತಾರ್ಪೋಲಾ.

ಮ. ಚಂದ್ರನೆ ನೋಕಿ ನಾಯ ಕುರೆಕ್ಕುನ್ನತುಪೋಲೆ.

೨೭೦ :

ಕ. ನಂಬಿದವನ ನಡು ನೀರಿನಲ್ಲಿ ಕೈಬಿಡುವುದೆ?

ತೆ. ನಮ್ಮಿ ನಡಿವೀಧಿಲೋ ವೇಶಿನವಾತು ಎವರು?

ತ. ನಂಬಿನ ಪೇರ್ೈ ನಟ್ಟಾಱ್ರಿಲ್ ವಿಡಲಾಮಾ?

ಮ. ನಂಬಿಯವರೆ ನಡುಪ್ಪುರ್ೈಯಿಲ್ ಕೈವಿಡರುದು.

"ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ನೆರವಿನಲ್ಲಿ, ಮದರಾಸು ವಿಶ್ವವಿದ್ಯಾನಿಲಯದ ದ್ರಾವಿಡ ಭಾಷಾ ಪ್ರಾಧ್ಯಾಪಕರುಗಳಿಂದ ಸಂಪಾದಿಸಲ್ಪಟ್ಟ ಸಮಾನ ದ್ರಾವಿಡ ಗಾದೆಗಳ ಈ ಸಂಗ್ರಹವು ಆಯಾ ಭಾಷೆಯಲ್ಲಿ ಮೊತ್ತಮೊದಲ ಪ್ರಯತ್ನವೆಂಬುದು ಸರ್ವವಿದಿತ. ಈ ಪುಸ್ತಕವು ಓದುಗನಿಗೆ ದಕ್ಷಿಣ ಭಾರತದ ಭಾಷೆ, ಸಂಸ್ಕೃತಿಗಳಲ್ಲಿರುವ ಸಾಮಾನ್ಯ ಐಕ್ಯದೃಷ್ಟಿಯನ್ನು ಅರಿವು ಮಾಡಿಕೊಡುತ್ತವೆಂಬ ಆಶಯ ನಮಗಿದೆ". ಸಂಪಾದಕರ ಕೊನೆಯ ಈ ಮಾತು ನಮಗೆ ಈ ಕೃತಿಯ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ.

ಲಂಬಾಣಿ ಗಾದೆಗಳ ಅನುವಾದ : 'ಲಂಬಾಣಿ ಗಾದೆಗಳು' (೧೯೮೨) ಎಂಬುದು ಡಾ. ಸಣ್ಣರಾಮ ಅವರ ಕೃತಿ. ೨೨೫ ಲಂಬಾಣಿ ಗಾದೆಗಳನ್ನು ಆರಿಸಿಕೊಂಡು, ಅವುಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡು, ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಇವರ ಅನುವಾದಗಳು ಸೃಜನಶೀಲವಾಗಿದ್ದು, ಗಾದೆಗಳ ರಚನೆಯಂತೆಯೇ ಅನುವಾದದ ರಚನೆಗಳು ಇರುವಂತೆ ನೋಡಿಕೊಂಡಿದ್ದಾರೆ. ಇದು ಅನುವಾದಕನೊಬ್ಬನಲ್ಲಿರುವ ಸೃಜನಶೀಲ ಶಕ್ತಿಯ ಅಭಿವ್ಯಕ್ತಿ ಎಂತಲೇ ಹೇಳಬೇಕು. ಉದಾಹರಣೆಗೆ ಒಂದೆರಡು ಅನುವಾದಿಸಿದ ಗಾದೆಗಳನ್ನು ನೋಡಬಹುದು.

೧. ನಮ್ಮ ಕೊಡ್ಲಿಯೇ ನಮ್ಮ ಕಾಲು ಕೊಯ್ಯುವುದು.

೨. ಅಪರೂಪದ ಬೆಕ್ಕು ಭಟ್ಟಿ ಇಳಿಸಿದ ಮಜ್ಜಿಗೆ ಕೇಳಿತಂತೆ.

೩. ಅಂತವರಿಗೆ ಅಂತವರದೇ ಸ್ನೇಹ ಏಡಿಗೂ ಕೆಸರಿಗೂ ಇರುವ ಸ್ನೇಹ.

ಹೀಗೆ ಗಾದೆಗಳ ರಚನೆಯನ್ನು ಅದಷ್ಟು ಉಳಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಆದರೆ ಇಲ್ಲಿ ಒಂದು ಸಣ್ಣ ಸಂಗತಿಯನ್ನು ಸಣ್ಣರಾಮ ಅವರು ಗಮನಿಸಬಹುದಿತ್ತು. ಒಂದನೇ ಗಾದೆಯನ್ನು ಗಮನಿಸಿದರೆ, ಅದರಂತಹ ಒಂದು ಗಾದೆ ಕನ್ನಡದಲ್ಲಿದೆ. 'ಕುಲಕ್ಕೆ ಮೂಲ ಕೊಡಲಿಯ ಕಾವು' ಎಂದು. ಇಂಥವನ್ನು ಗಮನಿಸಿ, ಸಾಧ್ಯವಾದಲ್ಲಿ ಅವನ್ನು ಕೊಡುತ್ತ ಹೋಗಿದ್ದರೆ ಕೃತಿಯ ಮೌಲ್ಯ ಇನ್ನೂ ಹೆಚ್ಚುತ್ತಿತ್ತು. ಆದರೆ ಸಣ್ಣರಾಮ ಅವರು ಮಾಡಿದ ಕೆಲಸ ಕಡಿಮೆ ಏನೂ ಆಗಿಲ್ಲ. ಅವರು ಲಂಬಾಣಿ ಸಂಸ್ಕೃತಿಯ ವಿಶೇಷವಾದ ಟಿಪ್ಪಣಿಗಳನ್ನು ಕೊಡುತ್ತ ಹೋಗಿದ್ದಾರೆ. ಇದರಿಂದ ಗಾದೆಗಳಲ್ಲಿ ಕಾಣಿಸಿಕೊಂಡ ಲಂಬಾಣಿ ಸಂಸ್ಕೃತಿಯನ್ನು ದರ್ಶಿಸುವ ಕೆಲಸವನ್ನೂ ಜೊತೆಯಲ್ಲೇ ಮಾಡಿದ್ದಾರೆ. ಕೆಲವು ಕಡೆ ವಿಶೇಷವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವು ಕಡೆ ಗಾದೆಯ ಹಿಂದೆ ಅಡಗಿರುವ ಘಟನೆಗಳನ್ನೇ ವಿವರಿಸಿ ಹೇಳಿದ್ದಾರೆ. ಜೊತೆಗೆ ತಾವು ಗಮನಿಸಿದ ಬೇರೆ ಕಡೆ ಅಂತಹ ಘಟನೆಯುಳ್ಳ ಕಥೆಗಳು ದೊರೆಯುತ್ತಿದ್ದರೆ ಅವನ್ನು ಉಲ್ಲೇಖಿಸಿದ್ದಾರೆ. ಇದು ಸಣ್ಣರಾಮ ಅವರ ಪ್ರಾಮಾಣಿಕ ಪ್ರಯತ್ನವಾಗಿದೆ. ಉದಾಹರಣೆಗೆ ೧೦ನೇ ಕ್ರಮಸಂಖ್ಯೆಯ ಗಾದೆ ಹೀಗಿದೆ : **'ಬಂದು ಸಿಕ್ಕೊಂಡಿದ್ದೇನೆ ಇವನ ಕೈಗೆ ತೀಡಾ ಎಂದಿಗೂ ಬಿಡದು ಈ ಪೀಡೆ'**. ಸಂಪಾದಕರು ಇದಕ್ಕೆ ಒಂದು ತಾಂಡಾದಲ್ಲಿದ್ದ ತೀಡಾ ಎಂಬ ಭಕ್ತನ ಕಥೆಯನ್ನೇ ಹೇಳುತ್ತಾರೆ. ಅದರ ಸಾರಾಂಶ ಹೀಗಿದೆ: ಲಂಬಾಣಿಗಳು ಅಲೆಮಾರಿಗಳು. ತೀಡಾ ತನ್ನ ಜೊತೆಗಾರರೊಂದಿಗೆ ಒಂದು ರಾಜಧಾನಿಗೆ ಬಂದು ಊರಹೊರಗೆ ಬಿಡಾರ ಹೂಡಿರುತ್ತಾನೆ. ರಾಣಿಯ ಕಳುವಾದ ಕೊರಳ ಹಾರ ಕದ್ದವರು ಯಾರೆಂದು ಹೇಳದಿದ್ದರೆ, ಶಿಕ್ಷೆ ಕೊಡುವುದಾಗಿ ಹೇಳುತ್ತಾನೆ. ಮತ್ತು ಅವನನ್ನು ಬಂಧಿಸಿ ಒಂದು ಕೋಣೆಯಲ್ಲಿಡುತ್ತಾನೆ. ರಾತ್ರಿ ತೀಡಾನಿಗೆ ನಿದ್ರೆ ಬರದೆ 'ಎಲ್ಲಿಗಿ ಹೋಗಿದ್ದಿ ನಿದ್ರಾದೇವಿ' ಎಂದು ಕೂಗುತ್ತಾನೆ. ಈ ಕೋಣೆಯ ಕಾವಲುಗಾರ್ತಿಯ ಹೆಸರು 'ನಿಂದಡಿ'. ಇವಳೇ ರಾಣಿಯ ಹಾರ ಕದ್ದಾಕೆ. ಈತ ಹಾರ ಕದ್ದವರಾರು ಎಂದು ತಿಳಿದುಕೊಂಡೇ ನನ್ನ ಹೆಸರಿನಿಂದ ಕೂಗುತ್ತಿದ್ದಾನೆಂದು ಭಾವಿಸಿ, ತಾನು ಕದ್ದ ಹಾರವನ್ನು ತೀಡಾನಿಗೆ ಕೊಡುತ್ತಾಳೆ. ಆತ ಅವಳಿಂದ ಹಣ ಪಡೆದು, ಹಾರವನ್ನು ಬಚ್ಚಲ ಕಲ್ಲಿನ ಕೆಳಗೆ ಇಡಿಸುತ್ತಾನೆ. ಮರುದಿನ ರಾಜನಿಗೆ ಬಚ್ಚಲ ಕಲ್ಲಿನ ಕೆಳಗೆ ಹಾರವಿರುವುದಾಗಿ ಹೇಳುತ್ತಾನೆ.

ರಾಜ ತೀಡಾನಿಗೆ ತನ್ನ ಹತ್ತಿರವೇ ಇಟ್ಟುಕೊಳ್ಳುತ್ತಾನೆ. ಒಂದು ದಿನ ವನದಲ್ಲಿ ಅಡ್ಡಾಡುವಾಗ, ರಾಜ ತನ್ನ ಕೈಯಲ್ಲಿ ಏನನ್ನೊ ಹಿಡಿದು, ತಾನು ಹಿಡಿದುದು ಏನು? ಎಂದು ಕೇಳಿದಾಗ, ತೀಡಾ ಈ ಗಾದೆಯನ್ನು ಉಚ್ಚರಿಸುತ್ತಾನೆ– **'ಬಂದು ಸಿಕ್ಕೊಂಡಿದ್ದೇನೆ ಇವನ ಕೈಗೆ ತೀಡಾ ಎಂದಿಗೂ ಬಿಡದು ಈ ಪೀಡೆ'**. ರಾಜನ ಕೈಗೆ ಸಿಕ್ಕಿದುದು ತೀಡಾ ಎಂಬ ಹುಳ. ರಾಜ ಈತ ನಿಜವಾಗಿಯೂ ಜಾಣನೆಂದು ಬಹುಮಾನಗಳನ್ನು ಕೊಡುತ್ತಾನೆ. ತೀಡಾ ಅಂದೇ ರಾತ್ರಿ ತನ್ನ ಸಂಗಡಿಗರೊಂದಿಗ ಊರು ಬಿಡುತ್ತಾನೆ.

ಇದು ದೊಡ್ಡ ಕಥೆಯೇ ಆಯಿತು. ಸಂಪಾದಕರು ಮತ್ತೆ ಅನೇಕ ಗಾದೆಗಳಿಗೆ ಸಣ್ಣ ಸಣ್ಣ ವಿವರಣೆಗಳನ್ನು ಕೊಡುತ್ತಾ ಹೋಗುತ್ತಾರೆ. ಎಲ್ಲಿ ಲಂಬಾಣಿ ವಿಶೇಷ ಸಂಸ್ಕೃತಿಯ ಸಂಗತಿಗಳಿರುತ್ತವೋ ಅಂಥಲ್ಲಿ ತಪ್ಪದೇ ವಿವರಿಸುತ್ತಾರೆ. ಹೀಗಾಗಿ ಈ ಕೃತಿ ಕೇವಲ ಲಂಬಾಣಿ ಗಾದೆಗಳ ಸಂಗ್ರಹ, ಅವುಗಳ ಕನ್ನಡ ಅನುವಾದ ಕೃತಿ ಅಷ್ಟೆ ಆಗಿರದೆ ಲಂಬಾಣಿ ಸಂಸ್ಕೃತಿಯನ್ನು ದರ್ಶಿಸುವ ಕೃತಿಯೂ ಆಗಿದೆ.

'ಅನ್ಯ ಭಾಷೆಯ ಗಾದೆಗಳಲ್ಲಿ ಕಂಡುಬರುವಂತೆ ಲಂಬಾಣಿಗರ ಗಾದೆಗಳಲ್ಲಿಯೂ ಅವರ ಆಚಾರ, ವಿಚಾರ, ನ್ಯಾಯ, ನೀತಿ, ಸಂಪ್ರದಾಯ–ಇವೆಲ್ಲವನ್ನು ಗುರುತಿಸಬಹುದು. ಅನೇಕ ಗಾದೆಗಳು ಈ ಜನರ ಸಾಮಾಜಿಕ ಜೀವನಕ್ಕೆ ಹಿಡಿದ ಕೈಗನ್ನಡಿಗಳಾಗಿವೆ. **'ಲಂಬಾಣಿಗರ ಬದುಕಿನ ಕಗ್ಗಂಟು ಮೀನಿನ ಮುಳ್ಳು'** (*೫೫*) ಈ ಗಾದೆ ಅವರ ಸಮಾಜದ ಕಟ್ಟುಕಟ್ಟಳೆ ಎಷ್ಟು ಸಂಕೀರ್ಣವೆಂಬುದರ ಮೇಲೆ ಬೆಳಕು ಬೀರುತ್ತದೆ. ಇವರ ಬಳಗದಲ್ಲಿ ರೂಪಿತವಾದ ನಿಬಂಧನೆಗಳನ್ನು ಯಾರಾದರೊಬ್ಬ ಮೀರಿ ನಡೆದರೆ ಅವನಿಗೆ ದಂಡ ವಿಧಿಸುವರು. ಅದನ್ನೂ ಮೀರಿದರೆ ಅವನಿಗೆ ಬಹಿಷ್ಕಾರ ಹಾಕುವರು. ಹೀಗೆ ಬಹಿಷ್ಕರಿಸಲ್ಪಟ್ಟವನು ಯಾರ ಆದರಕ್ಕೂ ಪಾತ್ರನಲ್ಲ. ಸಭೆ, ಮದುವೆ, ಹಬ್ಬ, ಇತರ ಯಾವುದೇ ಸಂತೋಷ ಕೂಟದಲ್ಲಿ ಆತನಿಗೆ ಪ್ರವೇಶವಿಲ್ಲ. ಈ ಕಟ್ಟಳೆ ಕೇವಲ ಒಂದು, ಎರಡು ತಾಂಡಗಳಿಗೆ ಮಾತ್ರ ಸೀಮಿತವಲ್ಲ. ಇಡೀ ಲಂಬಾಣಿ ಬಳಗದವರೆಲ್ಲ ಅಂತಹ ಬಹಿಷ್ಕಾರವನ್ನು ಪುರಸ್ಕರಿಸುವರು ಮತ್ತು ಅನುಸರಿಸುವರು. ಸಮಾಜವನ್ನು ತೊರೆದು ಯಾರೂ ಬದುಕುವುದಕ್ಕೆ ಆಗುವುದಿಲ್ಲ. ಜನನ–ಮರಣಕ್ಕಾದರೂ ಬಳಗದವರ ಅವಶ್ಯಕತೆ ಇದ್ದೇ ಇರುವುದು. ಆದುದರಿಂದ ಬಹಿಷ್ಕರಿಸಲ್ಪಟ್ಟವನು ಕೆಲವೇ ದಿನಗಳಲ್ಲಿ ಮಣಿದು ನಿಬಂಧನೆಗಳನ್ನು ಒಪ್ಪುವನು. ಅದಕ್ಕೆ ಲಂಬಾಣಿಗರ ಬದುಕಿನ ಕಗ್ಗಂಟು ಮೀನಿನ ಮುಳ್ಳಿನಂತೆ ಪದರು ಪದರಾಗಿ ಬಿಡಿಸಲಸದಳವಾಗಿರುವುದು. ಇವರ ಸಂಕೀರ್ಣ ಸಾಮಾಜಿಕ ಬದುಕು, ಗಾದೆಯ ಮಾತಾಗಿ ಹೋಗಿದೆ' (ಪ್ರ. ಪು. ೨).

ಈ ಕೃತಿಗೆ ಬರೆದ ಪ್ರಸ್ತಾವನೆಯೂ ಹೀಗೆ ಲಂಬಾಣಿಗಳ ಕೌಟುಂಬಿಕ ಚಿತ್ರಣ, ಸಂಪ್ರದಾಯ, ನಂಬುಗೆ, ವಿಶೇಷವಾಗಿ ತೀರ್ಪು ಕೊಡುವಲ್ಲಿಯೂ ಈ ಗಾದೆಗಳು ಪಾತ್ರವಹಿಸುವುದನ್ನು ವಿವರಿಸಿದ್ದಾರೆ. ಲಂಬಾಣಿಗಳು ನಂಬುವಂತೆ ನ್ಯಾಯ ಎನ್ನುವುದು ಹೇಗೆ ಮಾಡಬೇಕು ಎಂಬುದಕ್ಕೆ ಕೆಲ ಗಾದೆಗಳ ಉದಾಹರಣೆಗಳನ್ನು ಕೊಡುತ್ತಾರೆ: **'ದೀರ್ಘಾಲೋಚನೆ ಮಾಡಿ ಸಂಶಯ ನಿವಾರಿಸಿಕೊಳ್ಳಬೇಕು', 'ತಾಯಿಯದು ತಾಯಿಗೆ, ತಂದೆಯದು ತಂದೆಗೇ ಹೇಳಬೇಕು', 'ಅವರದು ಅವರಿಗೆ ಹೇಳಿ ಪಾಪ ಮುಕ್ತರಾಗಬೇಕು', 'ಹಾಲನ್ನು ಹಾಲಾಗಿ, ನೀರನ್ನು ನೀರಾಗಿ ಸೋಸಬೇಕು'**– ಈ ಮುಂತಾದ ಗಾದೆಗಳು ನ್ಯಾಯ ಹೇಗಿರಬೇಕು ಎಂಬುದಕ್ಕೆ ಲಂಬಾಣಿಗಳಲ್ಲಿ ಇರುವ ವಿಶ್ವಾಸವನ್ನು ವ್ಯಕ್ತಪಡಿಸುತ್ತವೆ.

ಲಂಬಾಣಿ ಗಾದೆಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಇನ್ನೊಂದು ಗಾದೆಗಳ ಸಂಗ್ರಹ ಪ್ರಕಟವಾಗಿದೆ. ಡಾ. ಡಿ.ಬಿ.ನಾಯಕ ಅವರು **'ಲಂಬಾಣಿ ಗಾದೆಗಳು'** (೨೦೦೧) ಎಂಬ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಸಣ್ಣರಾಮ ಅವರ ಕೃತಿ ಪ್ರಕಟವಾದ ಇಪ್ಪತ್ತು ವರ್ಷಗಳ ನಂತರ ಈ ಕೃತಿ ಪ್ರಕಟವಾಗಿದೆ ಎಂಬುದನ್ನು ಲಕ್ಷಿಸಬೇಕು. ಸಣ್ಣರಾಮ

ಅವರ ಕೃತಿಯನ್ನು ಅನುಸರಿಸಿಯೇ ಈ ಕೃತಿಯನ್ನು ತಯಾರಿಸಲಾಗಿದೆ ಎಂಬುದು ಇಲ್ಲಿಯ ಮುಖ್ಯಸಂಗತಿಯಾಗಿದೆ. ೪೦೧ ಲಂಬಾಣಿ ಗಾದೆಗಳನ್ನು ಕನ್ನಡ ಅನುವಾದ ಸಹಿತ ಮುದ್ರಿಸಲಾಗಿದೆ. ಇಲ್ಲೂ ಯಾವ ಗಾದೆ ಲಂಬಾಣಿ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೋ ಆ ಸಂಗತಿಗಳನ್ನು ಆಯಾ ಗಾದೆಗಳ ಕೆಳಗೇ ವಿವರಿಸಲಾಗಿದೆ.

೧. ಅಧರ್ಮಿಗಳ ತೀಜ ಹಸಿರಾಗಿರೊಲ್ಲ.

'ಲಂಬಾಣಿಗರು ಶ್ರೀಕೃಷ್ಣನ ಆರಾಧನೆಯ ಹಿನ್ನೆಲೆಯಲ್ಲಿ ತೀಜ ಅಂದರೆ ಗೋದಿ ಸಸಿಯ ಹಬ್ಬವನ್ನು ಆಚರಿಸುತ್ತಾರೆ. ಈ ಸಮಯದಲ್ಲಿ ಲಂಬಾಣಿ ಕನ್ಯೆಯರು ಒಂಬತ್ತು ದಿವಸಗಳವರೆಗೆ ದೇವರ ಹೆಸರಿನಲ್ಲಿ ಗೋದಿ ಸಸಿಗಳನ್ನು ಬೆಳೆಸುತ್ತಾರೆ. ಸಸಿಗಳನ್ನು ಬೆಳೆಸುವಾಗ ನಿಯಮ, ನಿಷ್ಠೆಗಳನ್ನು ಪಾಲಿಸುವುದುಂಟು. ಯಾವ ಯುವತಿಯು ಬೆಳೆಸಿದ ಸಸಿಗಳು ಹಸಿರಾಗಿರುತ್ತವೆಯೋ ಅವಳು ಶೀಲವಂತೆ ಎಂದು ಭಾವಿಸುತ್ತಾರೆ. ಯಾರ ಸಸಿಗಳು ಹಳದಿ ವರ್ಣವನ್ನು ಹೊಂದಿರುತ್ತವೆಯೋ ಅವಳು ಅಧರ್ಮಿಯೆಂದು ತಿಳಿಯುತ್ತಾರೆ'.

ಈ ಕೃತಿಯಲ್ಲಿ ಲಂಬಾಣಿ ಗಾದೆಗಳಿಗೆ ಸಮಾನವಾದ ಕನ್ನಡ ಗಾದೆಗಳು ದೊರೆಯುವುದನ್ನು ಲಕ್ಷಿಸಬಹುದಿತ್ತು. 'ಮ್ಯಾಲ ಬೆಳ್ಳಗ, ಒಳಗ ಕಪ್ಪಗ'(೨೭) ಎಂಬ ಗಾದೆಗೆ ಸಮಾನವಾಗಿ 'ಮ್ಯಾಗ ಝುಗಝುಗ ಒಳಗ ಭಗಭಗ' ಎಂಬ ಗಾದೆಯೊಂದು ಕನ್ನಡದಲ್ಲಿ ದೊರೆಯುವುದನ್ನು ಕೊಡಬಹುದಿತ್ತು. ಈ ಕೊರತೆ ಮೊದಲಿನ ಗಾದೆಗಳ ಸಂಗ್ರಹದಂತೆ ಇಲ್ಲೂ ಉಳಿದುಕೊಳ್ಳುತ್ತದೆ. ಒಂದು ಆಶ್ಚರ್ಯದ ಸಂಗತಿಯೆಂದರೆ ಡಾ. ಡಿ.ಬಿ.ನಾಯಕರು ಈ ಕೃತಿಗೆ ಬರೆದ ಪ್ರಸ್ತಾವನೆಯಲ್ಲಿ ಸುದೀರ್ಘವಾಗಿ ವರ್ಗೀಕರಣದ ಬಗ್ಗೆ ಚರ್ಚೆ ಮಾಡಿದ್ದಾರೆ. 'ದಶಮಾಂಸ ಪದ್ಧತಿಯಲ್ಲಿ ವರ್ಗೀಕರಣ' ಕುರಿತು ವಿವರಿಸಿ ಅನೇಕ ನಮೂನೆಯಲ್ಲಿ ಗಾದೆಗಳನ್ನು ವಿಭಾಗಿಸಿಕೊಳ್ಳಬಹುದಾದ ಸಾಧ್ಯತೆಯನ್ನು ತೆರೆದು ತೋರಿಸುತ್ತಾರೆ. ನಂತರ 'ಘಟನೆಗಳನ್ನು ಹಿನ್ನೆಲೆಯಾಗಿ ಉಳ್ಳ ಗಾದೆಗಳು' ಎಂದು ವಿವರಿಸುತ್ತಾರೆ. ಮುಂದೆ 'ಗಾದೆಗಳಲ್ಲಿ ಲಂಬಾಣಿ ಸಂಸ್ಕೃತಿ' ಎಂದು ಅನೇಕ ಸಂಗತಿಗಳ ಹಿನ್ನೆಲೆಯಲ್ಲಿ ಬರುವ ಗಾದೆಗಳನ್ನು ಉಲ್ಲೇಖ ಮಾಡುತ್ತಾರೆ. ಒಟ್ಟಿಗೆ ಇವೆಲ್ಲ ಗಾದೆಗಳನ್ನು ವಿಭಾಗಿಸಿ ಕೊಡಬಹುದಾದ ಸಾಧ್ಯತೆಗಳನ್ನು ತೆರೆದು ತೋರಿಸುತ್ತವೆ. ಆದರೆ ಕೃತಿಯಲ್ಲಿ ಮತ್ತೆ ಅಕಾರಾದಿಯನ್ನೇ ಅನುಸರಿಸುವುದನ್ನು ಕಂಡರೆ ಅವರು ಪ್ರಸ್ತಾವನೆಯಲ್ಲಿ ಮಾಡಿದ ಚರ್ಚೆಗಳೆಲ್ಲ ಅನುಪಯುಕ್ತವೆನಿಸುತ್ತವೆ. ಏನಿದ್ದರೂ ಬುಡಕಟ್ಟು ಸಂಸ್ಕೃತಿಗೆ ಸೇರುವ ಲಂಬಾಣಿ ಸಮುದಾಯದ ಸಾಂಸ್ಕೃತಿಕ ಅಧ್ಯಯನಗಳಿಗೆ ಇಂತಹ ವಸ್ತುಗಳು ಅಮೂಲ್ಯವೆನಿಸುತ್ತವೆ.

ಆದರೆ ಈ ಎರಡೂ ಕೃತಿಗಳ ದೊಡ್ಡ ಕೊರತೆ ಎಂದರೆ ತಾವು ಈ ಗಾದೆಗಳನ್ನು ಸಂಗ್ರಹ ಮಾಡಿದ ತಾಂಡಾಗಳ ವಿವರಗಳನ್ನು ಕೊಡದೇ ಇರುವುದು. ಒಂದು ವಿಶಿಷ್ಟ ಸಂಸ್ಕೃತಿಗೆ ಸಂಬಂಧಿಸಿದ ಜನಪದ ಸಾಹಿತ್ಯ ಸಂಗ್ರಹಗಳು ಇವಾಗಿರುವುದರಿಂದ ಇವುಗಳ ವಿವರ ಕೊಟ್ಟಿದ್ದರೆ ಮುಂದಿನ ಅಭ್ಯಾಸಿಗಳಿಗೆ ಅನುಕೂಲವಾಗುತ್ತಿತ್ತು.

ಇಂಗ್ಲೀಷ ಭಾಷೆಯಲ್ಲಿರುವ ಗಾದೆಗಳ ಅನುವಾದ : ಕನ್ನಡ ಗಾದೆಗಳಿಗೆ ಸಮಾನವಾದ ಇಂಗ್ಲೀಷ ಭಾಷೆಯಲ್ಲಿರುವ ಗಾದೆಗಳನ್ನು ಗುರುತಿಸುವ ಅಥವಾ ಇಂಗ್ಲೀಷ ಭಾಷೆಯಲ್ಲಿರುವ ಗಾದೆಗಳನ್ನು ಕನ್ನಡಕ್ಕೆ ಅನುವಾದಿಸುವ ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ. ಡಾ. ಹಾ.ಮಾ.ನಾಯಕ ಅವರ **'ಕನ್ನಡ ಜಾನಪದ ಗ್ರಂಥಸೂಚಿ'**ಯಲ್ಲಿ ಇನ್ನೂ ಅನೇಕ ಗಾದೆಗಳ ಸಂಗ್ರಹಗಳು ದಾಖಲಾಗಿರುವುದು ಕಂಡುಬರುತ್ತದೆ. ಆದರೆ ಅವು ನಮ್ಮ ಕೈಗೆ ಗಾದೆಗಳ ಸಂಗ್ರಹಗಳು ಸ್ವಾತಂತ್ರ್ಯಪೂರ್ವದಿಂದ ನಿರಂತರವಾಗಿ ಪ್ರಕಟವಾಗುತ್ತಲೇ ಇವೆ. ಇದನ್ನು ಗಮನಸಿದರೆ ಗಾದೆಗಳ ಜನಪ್ರಿಯತೆ ನಮಗೆ ಮನವರಿಕೆಯಾಗುತ್ತದೆ. ಸಾಮಾನ್ಯ ಜನಪದರನ್ನು ಒಳಗೊಂಡು, ವಿದ್ವಾಂಸರಾದಿಯಾಗಿ ಎಲ್ಲರಿಗೂ ಹಿಡಿಸುವ ಒಂದು ಸಾಹಿತ್ಯಪ್ರಕಾರ ಗಾದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ೧೮೯೪ರಲ್ಲಿ ಪ್ರಕಟವಾದ **'ಪಾಪ್ಯುಲರ್ ಕೆನರೀಸ್ ಪ್ರಾವರ್ಬ್ಸ್ ಅಂಡ್ ದೆರ್ ಇಂಗ್ಲೀಷ್ ಈಕ್ವಿವೆಲೆಂಟ್ಸ್'** ಎಂಬ ಗಾದೆಗಳ ಸಂಗ್ರಹದ ಸಂಪಾದಕರು ಶದ್ರಾಚ್ ಐಮನ್ ಮತ್ತು ಉಭಯದ ನರಸಿಂಹರಾವ್. ಕೃತಿಯ ಹೆಸರೇ ಸೂಚಿಸುವಂತೆ, ಕನ್ನಡದ ಗಾದೆಗಳಿಗೆ ಇಂಗ್ಲೀಷಿನಲ್ಲಿ ದೊರೆಯುವ ಸಮಾನ ಗಾದೆಗಳನ್ನು ಹುಡುಕಿಕೊಡುವ ಮಹತ್ವದ ಕೆಲಸವನ್ನು ಇವರು ಮಾಡಿದ್ದಾರೆ. ಅಂದರೆ ಗಾದೆಗಳ ಸಾರ್ವತ್ರಿಕ ಗುಣವನ್ನು ಗುರುತಿಸಲು ಮಾಡಿದ ಪ್ರಯತ್ನವಿದು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಂತಹ ಇನ್ನೂ ಕೆಲವು ಸಂಗ್ರಹಗಳು ಪ್ರಕಟವಾದ ಬಗ್ಗೆ ಡಾ. ಹಾಮಾನಾ ಅವರ ಸೂಚಿಯಲ್ಲಿ ನಮೂದುಗಳಿರುವುದು ಕಂಡುಬರುತ್ತದೆ. ಇವೆಲ್ಲ ಗಾದೆಗಳ ಸಾರ್ವತ್ರಿಕ ಗುಣವನ್ನು ಹೇಳುವ ಪ್ರಯತ್ನಗಳಾಗುತ್ತವೆ.

ಇತ್ತೀಚೆಗೆ ಇಂತಹ ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ. **'ಆಂಗ್ಲ ಗಾದೆಗಳು ಮತ್ತು ತತ್ಸಮ ಕನ್ನಡ ಗಾದೆಗಳು'** (೨೦೧೨) ಎಂಬುದು ಎಂ.ಕೆ. ಗೋಪಿನಾಥ ಅವರ ಕೃತಿ. ಇದರಲ್ಲಿ ೨೧೬೮ ಇಂಗ್ಲೀಷ ಗಾದೆಗಳಿಗೆ ತತ್ಸಮಾನವಾದ ಕನ್ನಡದ ಗಾದೆಗಳನ್ನು ಹುಡುಕಿಕೊಡುವ ಕೆಲಸವನ್ನು ಇವರು ಮಾಡಿದ್ದಾರೆ ಎನ್ನುವುದಕ್ಕಿಂತ ತತ್ಸಮಾನ ಕನ್ನಡ ಗಾದೆಗಳು ದೊರೆತಲ್ಲಿ ಕೊಟ್ಟು, ಹೆಚ್ಚಿನ ಇಂಗ್ಲೀಷ ಗಾದೆಗಳಿಗೆ ಸೂತ್ರಪ್ರಾಯವಾಗಿ ಕನ್ನಡಕ್ಕೆ ಅನುವಾದಿಸುವ ಕೆಲಸವನ್ನು ಗೋಪಿನಾಥ ಅವರು ಮಾಡಿದ್ದಾರೆ. ಇಂಗ್ಲೀಷಿನ ಗಾದೆಗಳನ್ನು ಅಕಾರಾದಿಯಾಗಿ, ಅದೇ ರೀತಿಯಲ್ಲಿ ಅನೇಕ ಮುಖ್ಯಪದಗಳ ಅಡಿಯಲ್ಲಿ ವಿಭಾಗಿಸಿಕೊಳ್ಳುತ್ತ ಹೋಗಲಾಗಿದೆ.

F /ಎಫ್ :

Face / ಮುಖ

767. Face is the index of mind.
ಮುಖ ಮನಸ್ಸಿನ ಕನ್ನಡಿ.

768. A pretty face is a fortune.
ಸುಂದರ ಮುಖವೇ ಒಂದು ಅದೃಷ್ಟ.

769. A beautiful face is a letter of recommendation.
ಸುಂದರ ಮುಖ ಒಂದು ಶಿಫಾರಸ್ಸು ಪತ್ರವಿದ್ದಂತೆ.

770. Private faces in public places are wiser and nicer than public faces in private places.
ಖಾಸಗಿ ಸ್ಥಳಗಳಲ್ಲಿನ ಸಾರ್ವಜನಿಕ ಮುಖಗಳಿಗಿಂತ ಸಾರ್ವಜನಿಕ ಸ್ಥಳಗಳಲ್ಲಿನ ಖಾಸಗಿ ಮುಖಗಳು ಸುಂದರ ಮತ್ತು ಬುದ್ಧಿಯಿಂದ ಕೂಡಿದವು.

ಇಂತಹದೇ ಕೆಲಸ ಮಾಡಿದ ಇನ್ನೊಂದು ಕೃತಿ **'ಕನ್ನಡ ಇಂಗ್ಲೀಷ ಗಾದೆಗಳು'** (೨೦೧೨). ಇದನ್ನು ತಯಾರಿಸಿದವರು ಶಂಕರಾನಂದ ಎನ್ನುವವರು. ಅವರು ೧೮೭೬ ಇಂಗ್ಲೀಷ ಗಾದೆಗಳನ್ನು ಆರಿಸಿಕೊಂಡು, ಅವುಗಳಿಗೆ ಕನ್ನಡ ಅರ್ಥ ಬರೆಯುತ್ತ ಹೋಗಿದ್ದಾರೆ. ಅಲ್ಲಲ್ಲಿ ಸಮಾನವಾದ ಗಾದೆಗಳನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಇಂತಹವುಗಳಿಂದ ಕನ್ನಡ ಗಾದೆಗಳ ಅಧ್ಯಯನಕ್ಕೆ ಖಂಡಿತ ಸಹಾಯವಾಗುತ್ತದೆ. ಮತ್ತು ಗಾದೆಗಳ ಸಾರ್ವತ್ರಿಕತೆಯನ್ನು ಅರಿಯಲು ಅನುಕೂಲವಾಗುತ್ತದೆ. ಉದಾಹರಣೆಗೆ ಗಮನಿಸಿ:

141. Life is short, but art is long.
ಜೀವನ ಅಲ್ಪಕಾಲಿಕ, ಕಲೆ ದೀರ್ಘಕಾಲಿಕ.

153. An ass is an ass, though laden with its own wings.
ಹುಲಿ ಚರ್ಮ ಹೊದ್ದುಕೊಂಡಿದ್ದರು ಕತ್ತೆ ಕತ್ತೆಯೇ.

155. The ass that brays most eats less.
ಮಾತು ಹೆಚ್ಚು ಕೃತಿ ಕಡಿಮೆ.

156. An ass loaded with gold climbs the top of castle.
ಚಿನ್ನದ ಮೂಟೆ ಹೊತ್ತ ಕತ್ತೆ ಅರಮನೆಯ ಮೆಟ್ಟಲೇರುತ್ತದೆ.

ಸಂಪಟೂರು ವಿಶ್ವನಾಥ ಅವರು ಒಂದು ವಿಶೇಷ ಪ್ರಯತ್ನ ಮಾಡಿದ್ದು, ೧೬ ದೇಶಗಳ ೫೦೦೦ ಗಾದೆಗಳನ್ನು ಆಯಾ ದೇಶಗಳ ಹೆಸರಿನ ಕೆಳಗೆ ಅನುವಾದಿಸಿಕೊಡಲು ಪ್ರಯತ್ನ ಮಾಡಿದ್ದಾರೆ. ಆ ಕೃತಿಯ ಹೆಸರು **'ಜಗತ್ತಿನ ಜನಪ್ರಿಯ ಗಾದೆಗಳು'**(೨೦೧೩) ಎಂದಿದೆ. 'ಕನ್ನಡದಲ್ಲಿ ಸಮೃದ್ಧವಾದ ಗಾದೆ ಸಾಹಿತ್ಯ ಇರುವಂತೆಯೇ ಭಾರತದ ಹಾಗೂ ಪರದೇಶಗಳ ಜನಪ್ರಿಯ ಗಾದೆಗಳ ಪರಿಚಯ ಮಾಡಿಕೊಡುವುದೇ 'ಜಗತ್ತಿನ ಜನಪ್ರಿಯ ಗಾದೆಗಳು' ಪುಸ್ತಕದ ಉದ್ದೇಶ' ಎಂದಿದ್ದಾರೆ ಕೃತಿಕಾರರು. 'ಜಗತ್ತಿನ ಜನಪ್ರಿಯ ಗಾದೆ'ಗಳಲ್ಲಿ ಭಾರತ, ಚೀಣಾ, ಕೊರಿಯ (ಉತ್ತರ ಮತ್ತು ದಕ್ಷಿಣ), ಇಸ್ರೇಲ್, ಅರೇಬಿಯ (ಪರ್ಷಿಯಾ), ಅಮೆರಿಕಗಳು, ಇಂಗ್ಲೆಂಡ್, ಸ್ಕಾಟ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಡೆನ್ಮಾರ್ಕ್, ಹಾಲೆಂಡ್, ಸ್ಪೈನ್, ಪೋರ್ಚುಗಲ್ ಮತ್ತು ಗ್ರೀಸ್ ದೇಶಗಳ ಗಾದೆಗಳಿವೆ'. ಇಂತಹ ಪ್ರಯತ್ನಗಳಿಂದ ಜಗತ್ತಿನ ಗಾದೆಗಳ ಗುಣ-ಸ್ವಭಾವಗಳು ನಮಗೆ ಸಹಜವಾಗಿ ಗೊತ್ತಾಗುತ್ತವೆ. ಓದುಗರ ಜ್ಞಾನವನ್ನು ಹೆಚ್ಚಿಸುವ ಪರಿಣಾಮಕಾರಿ ಕೆಲಸವನ್ನು ಇಂತಹ ಕೃತಿಗಳು ಮಾಡುತ್ತವೆ.

೪. ಗಾದೆಗಳಿಗೆ ಸಾರಾಂಶ, ವಿವರಣೆಗಳನ್ನು ಬರೆದ ಕೃತಿಗಳು:

ನನ್ನ ಕೈಗೆ ದೊರೆತ ದಾಖಲೆಗಳಂತೆ ೧೯೬೮ ರಿಂದಲೇ ಕನ್ನಡ ಗಾದೆಗಳಿಗೆ ವಿವರಣೆಗಳನ್ನೊದಗಿಸುವ ಪ್ರಯತ್ನಗಳು ಅಲ್ಪಪ್ರಮಾಣದಲ್ಲಿ ನಡೆದು, ಇತ್ತೀಚೆಗೆ ೨೦೦೦ ನಂತರ ಇಂತಹ ಕೆಲಸಗಳು ಸಾವಕಾಶವಾಗಿ ಹೆಚ್ಚಾಗುತ್ತ ಬಂದಿರುವುದು ಕಂಡುಬರುತ್ತದೆ. **'ಭಾವಾರ್ಥ ವಿಸ್ತರಣ-ಪ್ರಬಂಧ ಮಾರ್ಗ'**(೧೯೬೮) ಎಂಬ ಅಪರೂಪದ ಕೃತಿಯೊಂದನ್ನು ಟಿ.ಕೇಶವ ಭಟ್, ಚ. ಸುಂದರೇಶನ್ ಇವರಿಬ್ಬರು ಕೂಡಿ ತಯಾರಿಸಿದ್ದಾರೆ. ವಿಶೇಷವಾಗಿ ವಿದ್ಯಾರ್ಥಿಗಳು ಬರವಣಿಗೆಗೆ ತೊಡಗಲು ಅನುಕೂಲವಾಗಬಹುದಾದ ಉದ್ದೇಶದಿಂದ ಈ ಕೃತಿಯನ್ನು ತಯಾರಿಸಿದಂತೆ ತೋರುತ್ತದೆ. ಇದರಲ್ಲಿ ಒಂದೊಂದು ಗಾದೆಯನ್ನು ಕೊಟ್ಟು ಅದರ ಭಾವವನ್ನು ಎರಡ್ಮೂರು ಪುಟಗಳ ವರೆಗೆ ವಿಸ್ತರಿಸಿ ಬರೆದು ತೋರಿಸಿ ಕೊಡುವ ಕೆಲಸವನ್ನು ಮಾಡಿದ್ದಾರೆ. 'ಮಾತು ಬೆಳ್ಳಿ ಮೌನ ಬಂಗಾರ', 'ಉಪ್ಪು ಕೊಟ್ಟವರನ್ನು ಮುಪ್ಪಿನ ತನಕ ನೆನೆ', 'ಗೊಂಬೆಗೆ ಕೈ ಮುಗಿದರೂ ನಂಬಿಕೆ ಇರಬೇಕು', 'ಇಂದು ಬಾಳು ನಾಳೆ ಹಾಳು' ಇಂತಹ ಒಂಭತ್ತು ಗಾದೆಗಳಿಗೆ ವಿವರಣೆಗಳನ್ನು ಬರೆದಿದ್ದಾರೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಗೆ ಅವರು ಕೊಟ್ಟ ವಿವರಣೆಯ ಒಂದು ಪ್ಯಾರಾ ಹೀಗಿದೆ: 'ಹಾಸಿಗೆ ಇದ್ದಷ್ಟು ಕಾಲು ಚಾಚಲರಿಯದವರು ತಮ್ಮ ವೆಚ್ಚಕ್ಕಾಗಿ ಅನೀತಿಗೆ, ಕುಮಾರ್ಗಕ್ಕೆ ಇಳಿಯುವ ಸಂಭವವೇ ಹೆಚ್ಚು. ಅವರು ಮೇಲು ಮಟ್ಟದವರ ಜೀವನವನ್ನು ಅನುಕರಿಸುವುದಕ್ಕಾಗಿ ಕಳ್ಳತನದಿಂದಲೋ ದರೋಡೆಯಿಂದಲೋ ಸಂಪಾದಿಸಲು ತೊಡಗುತ್ತಾರೆ. ಇನ್ನು ಕೆಲವರು ಸಾಲ ತೆಗೆದು ಗೌರವಶಾಲಿಗಳಾಗಿ ಬಾಳಲು ಪ್ರಯತ್ನಿಸಿ, ದಿವಾಳಿಯಾಗುತ್ತಾರೆ. ಇಂತಹ ಜನರಿಗೆಲ್ಲ ಬೆಳಕನ್ನು ನೀಡುತ್ತಿದೆ- ಮೇಲಿನ ನಾಣ್ಣುಡಿ. ಆದುದರಿಂದ ಬಂದುದರಲ್ಲಿ ತೃಪ್ತಿಪಡುವ ಗುಣವನ್ನು ಮಾನವ ತಳೆಯಬೇಕು'(ಪು.೪೭).

ನಂತರ ಮತ್ತೆ ಇಂತಹ ವಿವರಣೆಗಳನ್ನು ಬರೆಯಲು ಹೇಗೆ ಕಲಿಯಬೇಕು ಎಂಬುದನ್ನು ತೋರಿಸಲು ೧೨ ಗಾದೆಗಳನ್ನು ಹಂತ ಹಂತವಾಗಿ, ಯಾವ ವಿಷಯಗಳನ್ನು ಗಮನಿಸಿ, ಹೇಗೆ ವಿವರಣೆಗಳನ್ನು ಕೊಡಬೇಕು ಎಂಬುದನ್ನು ಪ್ರಾಯೋಗಿಕವಾಗಿ ಬರೆದು ತೋರಿಸಿದ್ದಾರೆ. ನಂತರ ಲೋಕೋಕ್ತಿಗಳು ಎಂದು ೭೧ ಗಾದೆಗಳನ್ನು, ಪರೀಕ್ಷಾ ಪ್ರಯೋಗವೆಂದು ೫೦ ಗಾದೆಗಳನ್ನು ಹೀಗೆ ಒಟ್ಟಿಗೆ ೧೨೧ ಗಾದೆಗಳನ್ನು ಕೊಟ್ಟಿದ್ದಾರೆ. ಜೊತೆಗೆ ಕವಿಸೂಕ್ತಿಗಳು ಎಂದು ಕನ್ನಡ ಕಾವ್ಯಗಳಲ್ಲಿ ಬಳಕೆಯಾದ ೫೦ ಗಾದೆಗಳನ್ನು, ಗಾದೆಗಳಿಗೆ ಸಮಾನವಾದ ಕವಿಗಳ ಮಾತುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಇಲ್ಲಿಯ ಗಾದೆಗಳ ವಿವರಣೆಗಳನ್ನು ಗಮನಿಸಿದರೆ ಉತ್ತಮವಾವಾಗಿವೆ ಎನಿಸುತ್ತದೆ.

'ಜನಪ್ರಿಯ ಗಾದೆಗಳ ನಿಘಂಟು' (೧೯೮೯) ಎಂಬುದು ೧೫೪೦ ಕನ್ನಡ ಗಾದೆಗಳಿಗೆ ಒಂದು ಸಾಲಿನ ಅರ್ಥ ಬರೆಯಲು ಪ್ರಯತ್ನಸಿದ ಕೃತಿ. ಪುಸ್ತಕ ಮುಖ ಪುಟದ ಮೇಲೆ 'ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕೃತ, ಮರಾಠಿ ಸಮಾನಾರ್ಥಕ ಜನಪ್ರಿಯ ಗಾದೆ ಸಹಿತ' ಎಂಬ ಆಕರ್ಷಕ ಸಾಲನ್ನು ಮುದ್ರಿಸಿದ್ದಾರೆ. ಒಂದು ಕನ್ನಡ ಗಾದೆಗೆ ಕನ್ನಡದಲ್ಲಿಯೇ ದೊರೆಯುವ ಇನ್ನೊಂದು ಸಮಾನ ಗಾದೆಯನ್ನು ಹೆಚ್ಚು ಸಲ ಕೊಟ್ಟಿದ್ದಾರೆ. ಉಳಿದ ಭಾಷೆಯ ಗಾದೆಗಳನ್ನು ಹುಡುಕಿ ಕೊಟ್ಟದ್ದು ಅಪರೂಪ. ಅಲ್ಲೊಂದು ಇಲ್ಲೊಂದು

ಮಾತ್ರ ಕಾಣುತ್ತವೆ. ನಿಘಂಟು ಎಂದು ಕರೆದುಕೊಂಡುದರಿಂದ ಅಕ್ಷರಾನುಕ್ರಮಣಿಕೆಯಲ್ಲಿ ಮುಖ್ಯ ಗಾದೆಗಳನ್ನು ಹೊಂದಿಸಿಕೊಂಡಿದ್ದಾರೆ.

ಈಗ ೨೦೦೦ದ ನಂತರವೇ ಇಂತಹ ಕೃತಿಗಳು ಒಮ್ಮೆಗೆ ಕಾಣಿಸಿಕೊಳ್ಳುತ್ತವೆ. 'ಗಾದೆ ಮಾತುಗಳು'(೨೦೦೧) ಎಂಬ ಗ್ರಂಥವನ್ನು ತಯಾರಿಸಿದವರು ಶ್ರೀ ಗುರುನಾಥ ಹೊ. ಶೀಲವಂತರು. ೩೨೭ ಜನಪ್ರಿಯ ಗಾದೆಗಳನ್ನು ಆಯ್ದುಕೊಂಡು ಅವುಗಳಿಗೆ ಹತ್ತಾರು ಸಾಲುಗಳ ವಿವರಣೆಗಳನ್ನು ಬರೆಯುವ ಪ್ರಯತ್ನ ಮಾಡಿದ್ದಾರೆ. ಇವರ ವಿವರಣೆಗಳನ್ನು ಓದಿ ನೋಡಿದರೆ ತಕ್ಕಮಟ್ಟಿಗೆ ಉತ್ತಮ ವಿವರಣೆಗಳನ್ನು ಬರೆಯಲು ಪ್ರಯತ್ನಿಸಿದ್ದಾರೆ ಎನಿಸುತ್ತದೆ. ಒಂದು ಉದಾಹರಣೆಯನ್ನು ನೋಡಬಹುದಾಗಿದೆ :

೧೨೪ . ಕಂಡರೆ ಆಗದವನಿಗೆ ಉಂಡರೆ ಆದೀತೆ.

'ವೈರಿಯು ತನ್ನ ಎದುರುರಾಳಿಗೆ ಕೇಡು ಬಗೆಯಲು ಹವಣಿಸುತ್ತಿರುತ್ತಾನೆ. ತನಗೆ ಆಗದ ವ್ಯಕ್ತಿಗೆ ಒಳ್ಳೆಯದಾದರೆ ಸಹಿಸಲಾರದ ವಿಷಯವಾಗಿಬಿಡುತ್ತದೆ. ಹೇಗಾದರೂ ಮಾಡಿ ಸಮಸ್ಯೆ ತಂದೊಡ್ಡುವುದು ಆತನ ಕಾರ್ಯವಾಗಿರುತ್ತದೆ. ಸವಾಲು ನೀಡಿ ಎದೆ ಉಬ್ಬಿಸಿ ನಡೆಯುವವನು ತಲೆಬಾಗಿಸಲೇಬೇಕೆಂಬ ದೃಢ ನಿರ್ಧಾರದ ಮುಂದೆ ಎಲ್ಲ ಸತ್ಯಗಳು ಮೌನ ತಾಳುತ್ತವೆ. ತಿನ್ನುವ ತುತ್ತು ಒಡೆಯುವ ಜನ ಚನ್ನಾಗಿ ಉಣ್ಣುವುದನ್ನು ಹೇಗೆ ಸಹಿಸ್ಯಾರು! ಸಹಿಸುವುದೇ ಇಲ್ಲ. ಕ್ಷಣಕ್ಷಣಕ್ಕೂ ಕಿಡಿಕಾರುವ ಕಣ್ಣುಗಳು ತನ್ನ ಕಡು ವೈರಿಯ ಬಾಳನ್ನು ಸುಡಲು ಹವಣಿಸುತ್ತಿರುತ್ತವೆ. ತನ್ನನ್ನು ಅವಮಾನಗೊಳಿಸಿದವನನ್ನು ಹೀಗಳೆಯುವುದೆಂದರೆ ಸಂತಸದ ಸಂಗತಿಯೇ ಆಗಿರುತ್ತದೆ'.

'ಜನಜನಿತ ಗಾದೆಗಳು'(೨೦೦೫) ಎಂಬುದು ರಾಜೇಶ್ವರಿ ಜಯಕೃಷ್ಣ ಅವರ ಕೃತಿಯಾಗಿದೆ. ಈ ಕೃತಿಯ ವಿಶೇಷತೆ ಎಂದರೆ ವಿದ್ಯಾರ್ಥಿಗಳಿಗಾಗಿ ಉತ್ತಮವಾದ ಗಾದೆಗಳನ್ನು ಆಯ್ದುಕೊಂಡು ಪ್ರಬಂಧದ ಮಾದರಿಯಲ್ಲಿ ವಿವರಣೆಗಳನ್ನು ಬರೆದು ತೋರಿಸಿದ ಕೃತಿ ಇದಾಗಿದೆ. ಕೇವಲ ೫೨ ಗಾದೆಗಳನ್ನು ಆಯ್ದುಕೊಂಡು ಅವುಗಳಿಗೆ ಮೂರು–ನಾಲ್ಕು ಐದು ಪುಟಗಳವರೆಗೆ ಪ್ರಬಂಧ ಮಾದರಿಯ ವಿವರಣೆಗಳನ್ನು ಬರೆಯುತ್ತ ಹೋಗಿದ್ದಾರೆ. ಕೃತಿಯ ಮುಖಪುಟದಲ್ಲಿಯೇ 'ವಿದ್ಯಾರ್ಥಿಗಳಿಗಾಗಿ ಪ್ರಬಂಧ ರಚನೆಗೆ ಉಪಯುಕ್ತ' ಎಂಬ ಒಕ್ಕಣೆಯನ್ನು ಮುದ್ರಿಸಲಾಗಿದೆ. ಇಂತಹ ವಿವರಣೆಗಳಿಂದ ವಿದ್ಯಾರ್ಥಿಗಳು ಬರವಣಿಗೆಗೆ ತೊಡಗಲು ಹೆಚ್ಚು ಉಪಯುಕ್ತವಾಗುತ್ತದೆ.

ಈ ಬಗೆಯ ಕೃತಿಗಳಲ್ಲಿ ಹೆಚ್ಚು ವೈಜ್ಞಾನಿಕವಾದ ಉಪಯುಕ್ತವಾದ, ಒಂದು ರೀತಿಯಲ್ಲಿ ಶ್ರೇಷ್ಠವೆನ್ನಬಹುದಾದ ಕೃತಿ ಎಂದರೆ **'ಜನಪ್ರಿಯ ಕೃಷಿ ಗಾದೆಗಳು'**(೨೦೦೭) ಎಂಬುದು. ಇಲ್ಲಿಯ ೧೫೩೦ ಗಾದೆಗಳಿಗೆ, ೩೪೪ ಪುಟಗಳಷ್ಟು ದೀರ್ಘವಾಗಿ ವೈಜ್ಞಾನಿಕವಾದ ವಿವರಣೆಗನ್ನು ಬರೆದವರು ನಾಲ್ಕು ಜನ ಕೃಷಿ ತಜ್ಞರು. ಡಾ। ಎಂ. ಎ. ನಾರಾಯಣ ರೆಡ್ಡಿ, ಡಾ। ಕೆ.ಜೆ.ದೇವೆಂದ್ರಪ್ಪ, ಡಾ। ಕೆ. ಜಗದೀಶ್ವರ, ಡಾ। ಹೆಚ್.ಎಸ್. ಶಿವರಾಮು ಇವರೆಲ್ಲ ಕೃಷಿಕ್ಷೇತ್ರದಲ್ಲಿ ಉನ್ನತ ಪದವಿಗಳನ್ನು ಪಡೆದವರು. ಹೀಗಾಗಿ ಇಲ್ಲಿಯ ವಿವರಣಗಳೆಲ್ಲ ಅತ್ಯಂತ ವೈಜ್ಞಾನಿಕವಾಗಿವೆ.

ಇಲ್ಲಿಯ ಗಾದೆಗಳನ್ನು ಕೃಷಿಗೆ ಸಂಬಂಧಿಸಿದಂತೆ ಇರುವ ೨೮ ವಿಧಗಳಲ್ಲಿ ವಿಭಾಗಿಸಿಕೊಂಡಿದ್ದಾರೆ. 'ಮಳೆ ನಕ್ಷತ್ರಗಳು, ಮಳೆಗಳು, ಋತುಮಾನಗಳು, ಗಾಳಿ, ನೀರು, ಸಮುದ್ರ–ಸಾಗರ–ಉಪ್ಪು, ನದಿ–ತೊರೆ–ಹೊಳೆ, ಕೆರೆ, ಬಾವಿ, ಭೂಮಿ–ಮಣ್ಣು–ಬೆಟ್ಟ, ಕಾಡು–ವನ–ತೋಪು ಮತ್ತು ಗಿಡ ಮರಗಳು, ಸಾಕು ಪ್ರಾಣಿಗಳು, ಕಾಡು ಪ್ರಾಣಿಗಳು, ಜಲಚರ ಪ್ರಾಣಿಗಳು, ಹೊಲ–ಗದ್ದೆ–ತೋಟ, ಮೇವು–ಹುಲ್ಲು–ಕಳೆಗಳು, ಆರಂಬ–ಒಕ್ಕಲು–ಕೃಷಿ–ವ್ಯವಸಾಯ, ಕೃಷಿ ಉಪಕರಣಗಳು ಮತ್ತು ಇತರ ಪರಿಕರಗಳು, ಉಳುಮೆ ಮತ್ತು ಅಗೆತ, ತಿಪ್ಪೆ ಮತ್ತು ಗೊಬ್ಬರ, ಬೀಜ ಮತ್ತು ಬಿತ್ತನೆ, ಔಷಧಿಗಳು, ಬೆಳೆಗಳು, ಹತ್ತಿ–ನೂಲು ಇತ್ಯಾದಿ, ಎಣ್ಣೆ, ಹಾಲು ಮತ್ತು ಅದರ ಉತ್ಪನ್ನಗಳು, ಅಡುಗೆ–ಊಟ–ತಿಂಡಿ ಇತ್ಯಾದಿ, ಕೀಟ ಮತ್ತು ರೋಗಗಳು' ಹೀಗೆ ಈ ಇಡೀ ಕೃತಿಯನ್ನು ಓದಿ ಮುಗಿಸಿದಾಗ, ಜನಪದರಿಗಿರುವ ಕೃಷಿಜ್ಞಾನದ ಅರಿವಾಗುತ್ತದೆ. ಈ ಎಲ್ಲ ಗಾದೆಗಳು ಸಾಮಾನ್ಯರ ಕೃಷಿ ಅನುಭವದಿಂದಲೇ ಹುಟ್ಟಿಕೊಂಡವುಗಳು ಎಂಬುದು ಈ ಕೃಷಿ ವಿಜ್ಞಾನಿಗಳ ಅಭಿಪ್ರಾಯ.

ಈ ಕೃತಿಯಲ್ಲಿಯ ಯಾವುದೇ ಪುಟ ತೆಗೆದು, ಯಾವುದೇ ಗಾದೆ ಮಾತಿಗೆ ಬರೆದ ವಿವರಣೆಯನ್ನು ಓದಿದರೂ ನಮಗೆ ಸಮಾಧಾನವಾಗುತ್ತದೆ. ನಮ್ಮ ಪಾರಂಪರಿಕರ ಜ್ಞಾನದ ಮಹತ್ವದ ಅರಿವಾಗುತ್ತದೆ. ಎಲ್ಲ ಗಾದೆಗಳಿಗೆ ಪೂರಕವಾಗಿ ಈ ಕೃತಿಯಲ್ಲಿ ವಿವರಣೆಗಳಿವೆ. ಉದಾಹರಣೆಗಾಗಿ ಒಂದೆರಡು ವಿವರಣೆಗಳನ್ನು ಗಮನಿಸಬಹುದಾಗಿದೆ:

೧. ಅಶ್ವಿನಿ ಮಳೆ ಬಂದ್ರೆ ಅರಿಶಿನಕ್ಕೆ ಮೇಲು, ಅಡಿಕೆಗೆ ಬೀಳು!

ಅಶ್ವಿನಿ ಮಳೆ ಪ್ರಾರಂಭಗೊಳ್ಳುವುದು ಏಪ್ರಿಲ್ ತಿಂಗಳ ಎರಡನೇ ವಾರದಲ್ಲಿ. ಆಗ ಉರಿಬಿಸಿಲಿನ ಬೇಸಿಗೆ ಕಾಲ. ಅರಿಶಿನ ಒಂಬತ್ತು ತಿಂಗಳ ಬೆಳೆ. ಅದರ ಗುಪ್ತ ಕಾಂಡಗಳು ಮಣ್ಣೊಳಗೆ ಇರುವುದುರಿಂದ ಮಳೆಯಾದಲ್ಲಿ ತೇವ ಲಭಿಸುತ್ತದೆ. ಅದರಿಂದ ರಸವತ್ತಾಗಿ ತೂಕ ಹೆಚ್ಚಲು ಅನುಕೂಲವಾಗುತ್ತದೆ. ಅಡಿಕೆಯ ಕಥೆಯೇ ಬೇರೆ. ಬಿಸಿಲಿನ ಬೇಗೆಗೆ ಎಲೆಗಳು ಸುಟ್ಟಂತಾಗುತ್ತವೆ. ಕೆಂಪು ಜೇಡದ ಸಮಸ್ಯೆ ಹೆಚ್ಚಾಗುತ್ತದೆ. ಕೊಯ್ಲು ಮಾಡುವ ಸಮಯ ಹಾಗಾಗಿ ಕಾಯಿ ಸೀಳುವ ಸಾಧ್ಯತೆ ಜಾಸ್ತಿ. ರೋಗಗಳ ಹಾವಳಿ ಹೆಚ್ಚಾಗುವ ಸಾಧ್ಯತೆ ಇರುತ್ತದೆ' (ಪು.೮).

೨೦. ಒಡ್ಡಿಲ್ಲದ ಹೊಲ, ಗೊಡ್ಡೆಮ್ಮೆ ಇದ್ದಂಗೆ!

'ಹೊಲವಾಗಲೀ ಅಥವಾ ಗದ್ದೆಯಾಗಲೀ ಸುತ್ತ ಬಲವಾದ ಹಾಗೂ ಎತ್ತರವಿರುವ ಬದು ಇದ್ದರೆ ಅದರಿಂದ ಬಿದ್ದ ಮಳೆಯ ನೀರು ಹೊರಹೋಗದೆ ಅಲ್ಲಿಯೇ ಇಂಗಿ, ಹೆಚ್ಚುಕಾಲ ತೇವ ಉಳಿಯುವಂತಾಗುತ್ತದೆ. ಮಣ್ಣು ಕೊಚ್ಚುವುದಿಲ್ಲ ಹಾಗೂ ಹಾಕಿದ ಗೊಬ್ಬರ ಗೋಡು ನಷ್ಟಗೊಳ್ಳುವುದಿಲ್ಲ. ಬದುಗಳಿಲ್ಲದ ಹೊಲ ತೆರೆದಿಟ್ಟಂತಿರುತ್ತದೆ. ಗೊಡ್ಡೆಮ್ಮೆಯನ್ನು ಸಾಕಿ, ಉಪಚರಿಸಿದರೆ ಹೇಗೋ ಇದೂ ಹಾಗೆಯೇ' (ಪು.೧೫೮).

ಹೀಗೆ ಇಡೀ ಕೃತಿಯ ತುಂಬ ಒಂದೊಂದು ಗಾದೆಯಲ್ಲಿ ಅಡಗಿರುವ ವೈಜ್ಞಾನಿಕ ಜ್ಞಾನವನ್ನು ತೆರೆದು ತೋರಿಸುವ ಕೆಲಸ ಇಲ್ಲಿ ನಡೆದಿರುತ್ತದೆ. ಗಾದೆಗಳಿಗೆ ಸಂಬಂಧಿಸಿದಂತೆ

ಒಂದೊಂದು ಜ್ಞಾನಶಾಖೆಯವರು ಈ ಬಗೆಯ ಕೆಲಸಗಳನ್ನು ಮಾಡಿದರೆ, ಗಾದೆಗಳ ಮಹತ್ವ ಎಲ್ಲರಿಗೆ ಅರಿವಾಗುತ್ತದೆ. ನಮ್ಮ ಪುರಾತನರ ಜ್ಞಾನದ ನೈಜತೆಯ ಅರ್ಥವಾಗುತ್ತದೆ.

'ಐದ್ದು ನೂರೊಂದು ಗಾದೆಗಳು'(೨೦೦೭) ಎಂಬುದು ಬಿ.ಜಿ.ರಮೇಶ ಅವರ ಕೃತಿ. ೧೦೧ ಗಾದೆಗಳಿಗೆ ಸುಮಾರು ಅರ್ಧಪುಟದಷ್ಟು ವಿವರಣೆ ಬರೆಯುತ್ತ ಹೋಗಿದ್ದಾರೆ. ಹೆಚ್ಚಾಗಿ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಗಾದೆಗಳನ್ನೇ ಆಯ್ದುಕೊಂಡಿದ್ದಾರೆ. 'ಅಲ್ಪ ವಿದ್ಯಾ ಮಹಾ ಗರ್ವಿ', 'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು', 'ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲದು, ಮಾವ ಸತ್ತರೆ ಹುಣ್ಣಿಮೆ ನಿಲ್ಲದು', 'ಅತಿ ಆಸೆ ಗತಿ ಕೆಡಸಿತು', 'ಅಹಂಕಾರಕ್ಕೆ ಉದಾಸೀನವೇ ಮದ್ದು'– ಇಂತಹ ಗಾದೆಗಳ ಆಯ್ಕೆಯೇ ಇಲ್ಲಿ ಮುಖ್ಯವಾಗಿ ಮಾಡಿದ್ದಾರೆ. ಇಂತಹದೇ ಉದ್ದೇಶಕ್ಕಾಗಿ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ೧೫೧ ಗಾದೆಗಳನ್ನು ಆಯ್ದುಕೊಂಡು ವಿವರಣೆಗಳನ್ನು ಬರೆದ ಕೃತಿ **'ವಿದ್ಯಾರ್ಥಿಗಳಿಗಾಗಿ ಜನಪ್ರಿಯ ಗಾದೆಗಳ ವಿಸ್ತರಣೆ'** (೨೦೧೧). ಇದನ್ನು ತಯಾರಿಸಿದವರು ಅಭಿನಂದನ ಅವರು. **'ಜನಪ್ರಿಯ ಗಾದೆಗಳು'** (೨೦೧೧) ಕೂಡ ಇಂತಹದೇ ಉದ್ದೇಶದ ೧೨೩ ಗಾದೆಗಳನ್ನು ಆಯ್ದುಕೊಂಡು ವಿವರಣೆಗಳನ್ನು ಕೊಟ್ಟ ಕೃತಿಯಾಗಿದೆ. ಇದರ ಸಂಪಾದಕರು ಎಸ್.ದೇವರಾಜ ಅವರು.

'೧೦೦೦ ಅರ್ಥಪೂರ್ಣ ಗಾದೆಗಳು' (೨೦೧೨) ಎಂಬುದು ಸಂಪುಟೂರು ವಿಶ್ವನಾಥ ಅವರ ಕೃತಿ. ಇದರಲ್ಲಿ ಒಂದು ಸಾವಿರ ಗಾದೆಗಳಿಗೆ ಉತ್ತಮ ಎನ್ನಬಹುದಾದ ಅರ್ಥಪೂರ್ಣವಾದ ಸಂಕ್ಷಿಪ್ತ ವಿವರಣೆಗಳನ್ನು ಬರೆದಿದ್ದಾರೆ. ಈ ಗುಂಪಿನಲ್ಲಿ **'ಜನಪ್ರಿಯ ಕೃಷಿ ಗಾದೆಗಳು'** ಎಂಬ ಕೃತಿಯ ನಂತರ ಗಮನಾರ್ಹವಾದ ಕೃತಿ ಎನಿಸುತ್ತದೆ. ಆದರೆ ಇಲ್ಲಿಯ ಗಾದೆಗಳೆಲ್ಲ ಕೇವಲ ಕನ್ನಡದ ಗಾದೆಗಳೇ ಆಗಿಲ್ಲ. 'ನಮ್ಮ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ಜೀವಂತವಾಗಿರುವ ಗಾದೆಗಳನ್ನು ಕೇಳಿ, ಸಂಗ್ರಹಿಸಿ, ಸರಳೀಕರಿಸಿ, ಆಡುಭಾಷೆಗೆ ಸಮೀಪವಾಗಿರುವಂತೆ ಸರಳ ಕನ್ನಡದಲ್ಲಿ ನಿರೂಪಿಸಿದ್ದೇನೆ'(ಮುನ್ನುಡಿ ಪು.೨) ಎಂದಿದ್ದಾರೆ ಸಂಪಾದಕರು. ಆದರೆ ಕೃತಿಯಲ್ಲಿ ಯಾವ ಗಾದೆ ಯಾವ ಭಾಷೆಯದು ಎಂದು ತಿಳಿಯುವಂತೆ ಉಲ್ಲೇಖಿಸಿದ್ದರೆ ಕೃತಿಯ ಬೆಲೆ ಹೆಚ್ಚುತ್ತಿತ್ತು. ಇಂತಹ ಸಣ್ಣಪುಟ್ಟ ಕೊರತೆಗಳಿಂದ ಒಂದು ಕೃತಿ ಕೇವಲ ಜನಪ್ರಿಯ ಕೃತಿಯಾಗಿ ನಿಲ್ಲುತ್ತದೆ.

ಈ ಕೃತಿಯ ಬೆನ್ನುಡಿಯಲ್ಲಿ ಹೀಗಿದೆ: 'ಬದುಕು ಅರ್ಥಪೂರ್ಣವಾಗಬೇಕಾದರೆ ಮಾರ್ಗದರ್ಶನ ಅಗತ್ಯ. ಓದು ಬಲ್ಲವರಿಗೆ ಈ ಮಾರ್ಗದರ್ಶನ ಪುಸ್ತಕಗಳಿಂದ. ಆದರೆ ಓದಲು ತಿಳಿಯದವರಿಗೆ, ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ಹರಿದು ಬರುವ ಅನುಭವಯುಕ್ತ ಆಡುಮಾತಿನಿಂದ ಮಾರ್ಗದರ್ಶನ ಆಗುತ್ತದೆ. ಸಾರವತ್ತಾದ, ಸಂಕ್ಷಿಪ್ತ, ಧ್ಯೇಯವಾಕ್ಯಗಳು ಗಾದೆಗಳೆನಿಸಿಕೊಳ್ಳುತ್ತವೆ. ಇಂತಹ ಒಂದು ಸಾವಿರ ಗಾದೆಗಳು, ಸಾರ್ವಕಾಲಿಕ ನೀತಿ ಚಿಂತಾಮಣಿ ಎನ್ನಿಸಿಕೊಂಡು ನಿಮ್ಮ ಕೈಸೇರಿದೆ. ಪ್ರತಿಯೊಂದು ಗಾದೆಯ ಅರ್ಥ ಮನನ ಯೋಗ್ಯ. ಬದುಕಿನ ವಿವಿಧ ಹಂತ, ಚಟುವಟಿಕೆ, ತಿಳಿವಳಿಕೆಗಳಿಗೆ ಸಂಬಂಧಿಸಿದ ಈ ಗಾದೆಗಳಿಂದ ಪ್ರತಿಯೊಬ್ಬರೂ ಶಾಂತಿ, ಸಮಾಧಾನಗಳನ್ನು ಕಂಡುಕೊಳ್ಳಲು ಸಾಧ್ಯ'.

ವಿಶ್ವನಾಥ ಅವರ ವಿವರಣೆಗಳು ಸಂಕ್ಷಿಪ್ತವಾಗಿದ್ದು, ಅರ್ಥಪೂರ್ಣವಾಗಿವೆ. ಉದಾಹರಣೆಗೆ :

೭೧. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ.

'ಎಲ್ಲರನ್ನೂ ಸಮಾನಾಗಿ ಕಾಣಬೇಕು. ತನ್ನಂತೆಯೇ ಪರರನ್ನೂ ಬಗೆಯಬೇಕು ಎನ್ನುವುದು ಅನುಭವಿಗಳ ಸಲಹೆ. ಆದರೆ ಸಣ್ಣ ಮನುಷ್ಯರು ಎಲ್ಲದರಲ್ಲೂ ಭೇದ ಭಾವವನ್ನು ತೋರಿಸುತ್ತಾರೆ. ಸ್ವಾರ್ಥಪರರು ತಮಗೆ ಬೇಕಾದವರಿಗೆ ಬೇರೆ ರೀತಿ ನೀತಿ, ದೂರದವರಿಗೆ ಬೇರೆ ರೀತಿ ನೀತಿ ಅನುಸರಿಸುತ್ತಾರೆ. ಇದನ್ನೇ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುತ್ತದೆ ಈ ಗಾದೆ'.

೭೫. ಇಬ್ಬರ ಜಗಳ ಮೂರನೇಯವನಿಗೆ ಲಾಭ.

'ಸಣ್ಣಮಟ್ಟ ಭಿನ್ನಾಭಿಪ್ರಾಯಗಳು ಸಂಸಾರಿಕ ಜೀವನದಲ್ಲಿ ಇದ್ದದ್ದೇ. ಇವುಗಳನ್ನು ಎಷ್ಟು ಬೇಗ ಪರಿಹರಿಸಿಕೊಂಡರೆ ಅಷ್ಟು ಒಳ್ಳೆಯದು. ಸಂಸಾರದ ಸದಸ್ಯರು ಎಲ್ಲದಕ್ಕೂ ಒಬ್ಬರನೊಬ್ಬರು ದೂರುತ್ತಾ, ಕಿತ್ತಾಡುತ್ತಿದ್ದರೆ ಮನೆ ಶಾಂತಿಯನ್ನು ಕಳೆದುಕೊಂಡು ಹಾಳಾಗುತ್ತದೆ. ಒಳ ಜಗಳದ ದುರ್ಲಾಭವನ್ನು ಹೊರಗಿನವರು ಪಡೆದುಕೊಳ್ಳುವುದಂತೂ ನಿಶ್ಚಿತ'.

'ಬೆಳಕು ತೋರುವ ಗಾದೆಗಳು' (೨೦೧೨) ಎಂಬುದು ಸಿ.ಎಸ್.ಪ್ರಸಾದ ಅವರ ಕೃತಿ. ಇದರಲ್ಲಿ ೪೦೦ ಗಾದೆಗಳಿಗೆ ವಿವರಣೆಗಳನ್ನು ಕೊಡಲಾಗಿದೆ. ಸಿ.ಎಸ್.ಪ್ರಸಾದ ಅವರ ಗಾದೆಗಳ ಆಯ್ಕೆ ಚೆನ್ನಾಗಿದೆ. ಮನುಷ್ಯನ ಬದುಕಿಗೆ ಬೇಕಾದ ಮೌಲ್ಯಯುತ ಗಾದೆಗಳನ್ನೇ ಆರಿಸಿಕೊಂಡು, ಅವುಗಳಿಗೆ ಬೇಸರವಿಲ್ಲದೆ, ಮೌಲಿಕವಾದ ವಿವರಣೆಗಳನ್ನು ಕೊಟ್ಟಿದ್ದಾರೆ. ತಮ್ಮ ಓದಿನ ಅನುಭವನ್ನು ತಮ್ಮ ಬರವಣಿಗೆಗೆ ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಹೀಗಾಗಿ ಈ ಟೀಕಾಗ್ರಂಥಗಳಲ್ಲಿ ಎದ್ದುಕಾಣುವ ಕೃತಿ ಇದಾಗಿದೆ. ಈ ಟೀಕಾಗ್ರಂಥಗಳಲ್ಲಿ ಗಣಿಸಬಹುದಾದ ಕೃತಿಗಳಲ್ಲಿ ಕೃಷಿಗೆ ಸಂಬಂಧಿಸಿದ ಗಾದೆಗಳಿಗೆ ಟೀಕೆಗಳನ್ನು ಬರೆದ ಡಾ. ಎಂ.ಎ.ನಾರಾಯಣರೆಡ್ಡಿ ಹಾಗೂ ಅವರ ಸ್ನೇಹಿತರ ಪ್ರಯತ್ನ, ಎರಡನೆಯದು ಸಂಪಟೂರು ವಿಶ್ವನಾಥ ಅವರ ಕೃತಿ '೧೦೦೦ ಅರ್ಥಪೂರ್ಣ ಗಾದಗಳು' ಹಾಗೂ ಪ್ರಸ್ತುತ 'ಬೆಳಕು ತೋರುವ ಗಾದೆಗಳು' ಕೃತಿ. ಸಿ.ಎಸ್.ಪ್ರಸಾದ ಅವರ ಬರವಣಿಗೆಯಲ್ಲಿ ಬಿಗಿ ಇದೆ, ವಿಷಯವನ್ನು ಹಿಡಿದು ವಿಸ್ತರಿಸುವ ಸಾಮರ್ಥ್ಯವಿದೆ, ತಾನು ಓದಿದ ಅನುಭವದ ಬೆಂಬಲವನ್ನು ತಕ್ಕಂತೆ ಒಗ್ಗಿಸಿಕೊಂಡು ಬರೆಯುವಲ್ಲಿ ಅವರು ಸಫಲರಾಗಿದ್ದಾರೆ. ಉದಾಹರಣೆಗೆ ಅವರ ಒಂದು ವಿವರಣೆಯನ್ನು ನೋಡಬಹುದಾಗಿದೆ.

೧೨೬. ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು.

ಇಂದು ಪಾಪದವರ ಅಂದರೆ ಅಮಾಯಕರ ಮೇಲೆ ಸವಾರಿ ಮಾಡುವ, ಕಿರುಕುಳ ಕೊಡುವ ಮಂದಿ ಅಧಿಕವಿದ್ದಾರೆ. ಅದರಲ್ಲೂ ಆ ವ್ಯಕ್ತಿಯಲ್ಲೊಂದು ಸಣ್ಣ ನ್ಯೂನತೆ

ಕಂಡುಬಂದರೂ ಆತನ ಮೇಲೆ ಹರಿಯುವ ಜನರಿರುತ್ತಾರೆ. ಆರ್ಥಿಕ ದೌರ್ಬಲ್ಯ ವಿದ್ದರಂತೂ ಆ ವ್ಯಕ್ತಿಯನ್ನು ಕಾಲಕಸದಂತೆ ಕಾಣುವರು. ಅತಿ ಒಳ್ಳೆಯತನ, ಪ್ರಾಮಾಣಿಕತೆ, ನಿಷ್ಠೆಯು ಅಪಾಯ ತಂದೊಡ್ಡಬಲ್ಲದೆಂದು, ಬಹಳ ಸೌಮ್ಯ ಸ್ವಭಾವವು ಒಳ್ಳೆಯದಲ್ಲವೆಂದು ಈ ಗಾದೆ ಸಾರಿ ಹೇಳುತ್ತದೆ. ಗಾಂಧಿತತ್ವ ಈ ಕಾಲಕ್ಕೆ ಒಗ್ಗುವುದಿಲ್ಲವೆಂಬುದು ವಿಷಾದಕರ ಸಂಗತಿ. ಉತ್ತಮರನ್ನು ದುರುಪಯೋಗಪಡಿಸಿಕೊಳ್ಳುವ ಜನರೇ ಈಗ ಹೆಚ್ಚು ಕಂಡುಬರುತ್ತಾರೆ. **'ಗೂಳಿ ಬಿದ್ದರೆ ಆಳಿಗೊಂದು ಕಲ್ಲು'** ಎಂದು ಇದಕ್ಕೇ ಹೇಳುವುದು. ಸತ್ಯವಂತರಿಗಿದು ಕಾಲವಲ್ಲ ಎಂಬುದು ಅಷ್ಟೇ ಸತ್ಯ. ಸತ್ಯವಂತರಿಗೆ ಸತ್ವಪರಿಕ್ಷೆ ಎಂಬುದನ್ನು ಹರಿಶ್ಚಂದ್ರ ಸಾರಿ ಹೇಳಿದ್ದಾನೆ. ಭಗವಂತನು ತನ್ನ ಭಕ್ತರನ್ನು ನಾನಾ ಪರೀಕ್ಷೆಗೊಳಪಡಿಸಿ, ತದನಂತರವೇ ಅವನಿಗೆ ಸಾಕ್ಷಾತ್ಕಾರವಾಗುತ್ತಾನೆ. ಹರ ತನ್ನ ಭಕ್ತರ ತಿರಿವಂತೆ ಮಾಡುವ ಎಂದಿದ್ದಾನೆ ಜೇಡರ ದಾಸಿಮಯ್ಯ. ದಾನಶೂರ ಕರ್ಣ ತನ್ನ ಗುಣದಿಂದ ಕಷ್ಟಕ್ಕೆ ಸಿಲುಕಿದ ರೀತಿ, ಧರ್ಮರಾಯನ ಅತಿ ಒಳ್ಳೆಯ ನಡತೆ ಅವನನ್ನು ವನವಾಸ ಅನುಭವಿಸಲು ಕಾರಣವಾದ ರೀತಿ, ಅತಿಥಿ ಸತ್ಕಾರ್ಯಕ್ಕೆ ಹೆಸರಾದ ಬಲಿಚಕ್ರವರ್ತಿಯು ಪಾತಾಳಕ್ಕೆ ತುಳಿಯಲ್ಪಟ್ಟ ಪ್ರಸಂಗಗಳು, 'ಅತಿ ಸರ್ವತ್ರ ವರ್ಜಯೇತ್' ಅಂದರೆ ಯಾವುದೂ ಅತಿಯಾಗ ಬಾರದು ಎಂಬುದನ್ನು ಸ್ಪಷ್ಟಪಡಿಸುತ್ತದೆ. Too good is too bad ಅಲ್ಲವೆ! (ಪು.೬೩).

'ಗ್ರಾಮೀಣರ ವೇದ'(೨೦೧೨) ಎಂಬ ಗ್ರಂಥದಲ್ಲಿ ಡಾ. ಮಂಜಪ್ಪ ಪಿ ಅವರು ಸುಮಾರು ೩೦೦೦ ಗಾದೆಗಳಿಗೆ, ಒಂದೆರಡು ಸಾಲುಗಳ ಸಾರಾಂಶ ಬರೆಯಲು ಪ್ರಯತ್ನಿಸಿದ್ದಾರೆ. ಉದಾಹರಣೆಗೆ : 'ಎಲ್ಲರೂ ಪಲ್ಲಕ್ಕಿಯಲ್ಲಿ ಕುಳಿತರೆ ಹೊರುವವರ್‍ಯಾರು?'– ಎಲ್ಲರು ಹಿರಿಯತನ ಮಾಡುವವರಾದರೆ ದುಡಿಯುವವರಾರು?, 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ'– ಪ್ರತಿಯೊಬ್ಬರು ದುಡಿಯುವುದು ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಮತ್ತು ಮಾನ ಮುಚ್ಚಲು.

ಹೀಗಿವೆ ಅವರ ಸಾರಾಂಶಗಳು. ಅವರು ಪ್ರತಿಗಾದೆಯ ಸಾರಾಂಶ ಬರೆಯುವ ಬದಲು ಇನ್ನೊಂದಿಷ್ಟು ವಿವರಿಸಿ ಬರೆಯಲು ಪ್ರಯತ್ನಿಸಿದರೆ ಹೆಚ್ಚು ಉಪಯುಕ್ತ ವಾಗುತ್ತಿತ್ತೆಂದು ತೋರುತ್ತದೆ. ಇವರೊಬ್ಬ ದೈಹಿಕ ಶಿಕ್ಷಕರೆಂದು ತೋರುತ್ತದೆ. ಕ್ರೀಡಾ ವಿಷಯದಲ್ಲಿ ಪಿಎಚ್.ಡಿ.ಪಡೆದು, ಹೈಸ್ಕೂಲ್ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ, ಇಂತಹ ಕೃತಿಗಳನ್ನು ತಯಾರಿಸುವಲ್ಲಿ ಅವರು ಆಸಕ್ತಿ ತೋರಿರುವುದು ಮೆಚ್ಚತಕ್ಕ ಮಾತು.

'ನಮ್ಮ ಸುತ್ತಿನ ಗಾದೆಗಳ ಸಮೀಕ್ಷೆ' (೨೦೧೩) ಪಂಡಿತ ಎಂ.ಈಶ್ವರಪ್ಪ ಅವರ ಕೃತಿ. ಇಲ್ಲಿ ಗಾದೆಗಳನ್ನು ೧೭ ಪ್ರಕಾರಗಳಲ್ಲಿ ವಿಂಗಡಿಸಿಕೊಂಡು, ಒಂದೊಂದು ಗಾದೆಗೆ ಸಾರಾಂಶ ಬರೆಯಲು ಪ್ರಯತ್ನಿಸಿದ್ದಾರೆ. ಇಲ್ಲೂ ಒಂದೆರಡು ಸಾಲುಗಳಲ್ಲಿಯೇ ಗಾದೆಗಳ ಸಾರಾಂಶ ಮುಗಿಸಲು ಪ್ರಯತ್ನಿಸಿದ್ದಾರೆ. ಇನ್ನೂ ಸ್ಪಷ್ಟತೆ ಬೇಕಾಗಿತ್ತು ಎನಿಸುತ್ತದೆ.

* * *

ಗಾದೆಗಳ ಪ್ರಮುಖ ಸಂಪಾದನೆಗಳು :

೧. ಸ್ವತಂತ್ರ ಗಾದೆಗಳ ಸಂಗ್ರಹಗಳು

೧೮೫೨ : ಗಾದೆಗಳು (ಸಂ) ಅನಾಮಧೇಯ (ಹೆಸರು ಗೊತ್ತಾಗಿಲ್ಲ) –ಮಂಗಳೂರು. **'ಕಲ್ಲಚ್ಚಿನ ಗಾದೆಗಳು'** (ಈ ಕೃತಿಯ ಹೊಸ ಹೆಸರು), (ಸಂ) ಕ್ಯಾತನಹಳ್ಳಿ ರಾಮಣ್ಣ, ಟಿ. ಎಸ್. ರಾಜಪ್ಪ, –ಸಾಗರ ಪ್ರಕಾಶನ, ನಾಗರಭಾವಿ ೨ನೇ ಹಂತ, ಬೆಂಗಳೂರು–೭೨. (೨೦೦೧, ೨೦೧೧)

೧೯೩೩ : ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಅರ್ಚಕ ಬಿ.ರಂಗಸ್ವಾಮಿ, –ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.(೨ನೇ ಮು. ೧೯೭೧)

೧೯೬೮ : ನಮ್ಮ ಗಾದೆಗಳು, (ಸಂ) ರಾಗೌ, –ಡಿ.ವಿ.ಕೆ. ಮೂರ್ತಿ, ಮೈಸೂರು–೪.

೧೯೬೯ : ಕಿಟ್ಟೆಲ್ ಕೋಶದ ಗಾದೆಗಳು, (ಸಂ) ರಾಗೌ, –ಡಿ.ವಿ.ಕೆ. ಮೂರ್ತಿ, ಮೈಸೂರು–೪.

೧೯೭೩ : ನಮ್ಮ ಸುತ್ತಿನ ಗಾದೆಗಳು, (ಸಂ) ಪ್ರೊ. ಸುಧಾಕರ, –ಕಾವ್ಯಶ್ರೀ ಪ್ರಕಾಶನ, ರಾಮಕೃಷ್ಣ ನಗರ, ಮೈಸೂರು–೨೨. (೨ನೇ ಮು. ೧೯೮೭, ೩ನೇ ಮು. ೨೦೧೧)

೧೯೭೪ : ಉತ್ತರ ಕರ್ನಾಟಕದ ಗಾದೆಗಳು, (ಸಂ) ಡಾ। ಬಿ. ಬಿ. ಹೆಂಡಿ, ಡಾ. ಎಂ.ಎಸ್.ಲಠ್ಠೆ, ರವೀಂದ್ರ ಪ್ರಕಾಶನ, ಜಗತ್, ಗುಲಬರ್ಗಾ.

೧೯೭೭ : ಬೀದಿ ಮಕ್ಕಳು ಬೆಳದೊ, (ಸಂ) ಡಾ. ಕಾಳೇಗೌಡ ನಾಗವಾರ, ಸಪ್ನ ಬುಕ್ ಹೌಸ್, –ಗಾಂಧಿನಗರ, ಬೆಂಗಳೂರು. (೫ನೇ ಮು.೨೦೧೩)

೧೯೮೧ : ಗ್ರಾಮೀಣ ಗಾದೆಗಳು, (ಸಂ) ಬಿ.ಕೃಷ್ಣಪ್ಪ ರೆಡ್ಡಿ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮.

೧೯೮೩ : ಗಾದೆಗಳು, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೯೮೪ : ಜಾನಪದ ಪರಿಮಳ–೨, (ಸಂ) ಡಾ. ಬಿ.ಎಸ್.ಕುಲಕರ್ಣಿ, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩.

೧೯೮೫ : ಆಯ್ದ ಗಾದೆಗಳು ಹಾಗೂ ಒಗಟುಗಳು, (ಸಂ) ಡಾ. ವೀರಣ್ಣ ದಂಡೆ, –ಕವಿಮಾರ್ಗ ಪ್ರಕಾಶನ, ತೇಜಸ್ವಿನಿ, ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಗುಲಬರ್ಗಾ–೫೮೫ ೧೦೬.

೨೦೦೦ : ಆಯ್ದ ಗಾದೆಗಳು, (ಸಂ) ಡಾ. ಶಾಲಿನಿ ರಘುನಾಥ, –ಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು–೯.

೨೦೦೩ : ದೀಪದ ಕೆಳಗೆ ಕತ್ತಲೆ, (ಸಂ) ಡಾ. ಮೈಲಹಳ್ಳಿ ರೇವಣ್ಣ, –ರಾಜ್ ಪ್ರಕಾಶನ, ಬನ್ನಿಮಂಟಪ, ಮೈಸೂರು–೧೫.

೨೦೧೧ : ಹೊನ್ನಾಡಿನ ಗಾದೆಗಳು, (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ, –ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ತಾ. ಹೊನ್ನಾಳಿ, ಜಿ. ದಾವಣಗೆರೆ.

೨. ಸೂಚಿಗಳ ತಯಾರಿಕೆ

೧೯೬೩ : ಕನ್ನಡ ಗಾದೆಗಳ ಕೋಶ, (ಸಂ) ಟಿ.ವಿ.ವೆಂಕಟರಮಣಯ್ಯ, –ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.

೧೯೬೯ : ಗ್ರಂಥಸ್ಥ ಗಾದೆಗಳು, (ಸಂ) ಎಚ್.ಎಸ್.ಅಚ್ಚಪ್ಪ, –ಎಚ್.ಎಸ್.ಅಚ್ಚಪ್ಪ, ೩೨೩, ೫ನೇ ಮುಖ್ಯಬೀದಿ, ಜಯನಗರ, ಮೈಸೂರು–೪.

೧೯೮೨ : ಕನ್ನಡ ಗಾದೆಗಳ ಮಹಾಕೋಶ, (೧–೨ ಸಂ.), (ಸಂ) ಹು.ಮ.ರಾಮಾರಾಧ್ಯ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೨೦೧೨ : ಸಮಗ್ರ ಕನ್ನಡ ಗಾದೆಗಳು (೧–೪ ಸಂ.), (ಸಂ) ಡಾ. ಕೆಎನ್.ಗಂಗಾನಾಯಕ್, –ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩. ಅನುವಾದ ಹಾಗೂ ಸಮಾನ ಗಾದೆಗಳ ಹುಡುಕಾಟ

೧೯೬೨ : ನಾಲ್‌ನುಡಿ–ನಾಣ್ನುಡಿ, (ಸಂ) ಎಂ. ಮರಿಯಪ್ಪ ಭಟ್ಟ, ಎನ್. ವೆಂಕಟರಾವ್, ಆರ್. ಸಿ. ಸೇತುಪಿಳ್ಳೆ, ಎಸ್. ಕೆ. ನಾಯಕ, –ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೧೯೮೨ : ಲಂಬಾಣಿ ಗಾದೆಗಳು, (ಸಂ) ಸಣ್ಣರಾಮ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೨೦೦೧ : ಬುಡಕಟ್ಟಿನ ಲಂಬಾಣಿ ಗಾದೆಗಳು, (ಸಂ) ಡಾ. ಡಿ.ಬಿ.ನಾಯಕ, –ಬಂಜಾರ ಪ್ರಕಾಶನ, ಗುಲಬರ್ಗಾ–೨.

೨೦೧೨ : ಆಂಗ್ಲ ಗಾದೆಗಳು ಮತ್ತು ತತ್ಸಮ ಕನ್ನಡ ಗಾದೆಗಳು, (ಸಂ) ಎಂ. ಕೆ. ಗೋಪಿನಾಥ, –ಸುರಾ ಬುಕ್ಸ್ ಪ್ರೈ.ಲಿ., ಬೆಂಗಳೂರು.

೨೦೧೨ : ಕನ್ನಡ–ಇಂಗ್ಲೀಷ ಗಾದೆಗಳು, (ಸಂ) ಶಂಕರಾನಂದ, ಕಾಲ ಪ್ರಕಾಶನ, ರಾಜಾಜಿ ನಗರ, ಬೆಂಗಳೂರು–೧೦

೨೦೧೩ : ಜನಗತ್ತಿನ ಜನಪ್ರಿಯ ಗಾದೆಗಳು, (ಸಂ) ಸಂಪಟೂರು ವಿಶ್ವನಾಥ, –ಸಪ್ನ ಬುಕ್‌ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು–೯.

೪. ಗಾದೆಗಳಿಗೆ ಸಾರಾಂಶ, ವಿವರಣೆಗಳನ್ನು ಬರೆದ ಕೃತಿಗಳು:

೧೯೬೮ : ಭಾವಾರ್ಥ ವಿಸ್ತರಣ–ಪ್ರಬಂಧಮಾರ್ಗ, ಟಿ.ಕೇಶವ ಭಟ್ಟ, ಚ.ಸುಂದರೇಶನ್, –ಭವತಾರಿಣಿ, ೫೨, ಚೌಳುಬೀದಿ, ಬೆಂಗಳೂರು–೨.

೧೯೮೯ : ಜನಪ್ರಿಯ ಗಾದೆಗಳ ನಿಘಂಟು, ಕಾವ್ಯಪ್ರೇಮಿ, ಸಮಾಜ ಪುಸ್ತಕಾಲಯ, ಧಾರವಾಡ–೧.

೨೦೦೧ : ಗಾದೆ ಮಾತುಗಳು, ಶ್ರೀಗುರುನಾಥ ಹೊ. ಶೀಲವಂತರು, –ಶಾಬಾದಿಮಠ ಪ್ರಿಂಟಿಂಗ್ ಪ್ರೆಸ್, ಗದಗ.

೨೦೦೫ : ಜನಜನಿತ ಗಾದೆಗಳು, ರಾಜೇಶ್ವರಿ ಜಯಕೃಷ್ಣ, –ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು.

೨೦೦೭ : ಜನಪ್ರಿಯ ಕೃಷಿ ಗಾದೆಗಳು, ಡಾ. ಎಂ.ಎ.ನಾರಾಯಣ ರೆಡ್ಡಿ, ಡಾ. ಕೆ.ಜೆ.ದೇವೇಂದ್ರಪ್ಪ, ಡಾ. ಕೆ. ಜಗದೀಶ್ವರ, ಡಾ. ಹೆಚ್.ಎಸ್.ಶಿವರಾಮು, –ಕೃಷಿವಿಕಾಸ ಪಬ್ಲಿಕೇಷನ್ಸ್, ಬೆಂಗಳೂರು.

೨೦೦೭ : ಆಯ್ದ ನೂರೊಂದು ಗಾದೆಗಳು, ಬಿ.ಜಿ.ರಮೇಶ್, –ಚಂದನ ಪ್ರಕಾಶನ, ಬೆಂಗಳೂರು.

೨೦೧೧ : ವಿದ್ಯಾರ್ಥಿಗಳಿಗಾಗಿ ಜನಪ್ರಿಯ ಗಾದೆಗಳ ವಿಸ್ತರಣೆ, ಅಭಿನಂದನ, –ತನು ಮನು ಪ್ರಕಾಶನ, ಶ್ರೀರಾಮಪುರ ಬಡಾವಣೆ, ಮೈಸೂರು–೩.

೨೦೧೧ : ಜನಪ್ರಿಯ ಗಾದೆಗಳು, ಎಸ್. ದೇವರಾಜ, ಲಾವಣ್ಯ ಪುಸ್ತಕಾಲಯ, ಬೆಂಗಳೂರು.

೨೦೧೨ : ೧೦೦೦ ಅರ್ಥಪೂರ್ಣ ಗಾದೆಗಳು, ಸಂಪಟೂರು ವಿಶ್ವನಾಥ, –ವಸಂತ ಪ್ರಕಾಶನ, ಜಯನಗರ, ಬೆಂಗಳೂರು–೧೧.

೨೦೧೨ : ಬೆಳಕು ತೋರುವ ಗಾದೆಗಳು, ಸಿ.ಎಸ್.ಪ್ರಸಾದ್, –ಸಾತ್ವಿಕ ಪ್ರಕಾಶನ, ಯಲಚೇನಹಳ್ಳಿ, ಬೆಂಗಳೂರು–೭೮.

೨೦೧೨ : ಗ್ರಾಮೀಣರ ವೇದ, ಡಾ. ಮಂಜಪ್ಪ ಪಿ., –ಬೇವಿನ ಸುಮ, ಜ್ಯೋತಿನಗರ, ಉಳ್ಳಾಲ ಮುಖ್ಯರಸ್ತೆ, ಬೆಂಗಳೂರು–೫೬.

೨೦೧೩ : ನಮ್ಮ ಸುತ್ತಿನ ಗಾದೆಗಳ ಸಮೀಕ್ಷೆ, ಪಂ.ಎಂ.ಈಸ್ವರಪ್ಪ, –ಕಾವ್ಯಾಮೃತ ಪ್ರಕಾಶನ, ಕ್ಯಾತ್ಸಂದ್ರ, ತುಮಕೂರು–೪.

೫. ಸಹಾಯಕ ಲೇಖನಗಳು, ಪುಸ್ತಕಗಳು:

೧೯೨೧ : ಕನ್ನಡ ಗಾದೆಗಳ ಜೀರ್ಣೋದ್ಧಾರ (ಲೇಖನ), ಎಚ್. ಕೆ. ಮಲ್ಲಪ್ಪ, –ಪರಿಷತ್ಪತ್ರಿಕೆ, ಜುಲೈ ೧೯೨೧; ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೧೯೫೫ : ಕನ್ನಡ ಗಾದೆಗಳು, ಎ.ಕೆ.ರಾಮಾನುಜನ್, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೨ : ಕನ್ನಡ ಗಾದೆಗಳ ಸಮೀಕ್ಷೆ, ನಂ. ತಪಸ್ವೀಕುಮಾರ್, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೬ : ಕನ್ನಡ ಗಾದೆ ಮಾತುಗಳು, ಎಸ್.ಎಂ.ನಾಯಕ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩.

* * *

೩. ಜನಪದ ಒಗಟುಗಳು

ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಗಾದೆ, ಒಗಟು ಮುಂತಾದವುಗಳನ್ನು ಆರ್.ಎಸ್. ಬಾಗ್ಸ್ ಅವರು ಭಾಷಿಕ ಬಗೆಯಲ್ಲಿ ಸೇರಿಸುವುದರಿಂದ ಕನ್ನಡದ ವಿದ್ವಾಂಸರೆಲ್ಲ ಅದನ್ನು ಹಲವಾರು ಕಡೆ ಉಲ್ಲೇಖಿಸುತ್ತಾರೆ. ಆದರೆ ಗಾದೆ, ಒಗಟು, ಮಕ್ಕಳಾಟದ ಹಾಡುಗಳು, ಆಣಿಪೀಣಿ ಹಾಡುಗಳು ಇವುಗಳನ್ನು ನಾವು ನೇರವಾಗಿ ಸಾಹಿತ್ಯದ ಪ್ರಕಾರಗಳಾಗಿ ಗಣಿಸಬೇಕು. ಖಂಡಿತ ಅವು ಕೇವಲ ಭಾಷಿಕ ಪ್ರಕಾರಗಳಲ್ಲ. ಭಾಷಿಕ ಪ್ರಕಾರಗಳಾಗಿ ನಾವು ಪಡೆನುಡಿ ಮತ್ತು ಬೈಗುಳ ಇವುಗಳನ್ನು ಮಾತ್ರ ಪರಿಗಣಿಸಬೇಕು. ಏಕೆಂದರೆ ಮಕ್ಕಳಾಟದ ಹಾಡುಗಳು, ಆಣಿಪೀಣಿ ಹಾಡುಗಳು ಇವುಗಳನ್ನು ನೇರವಾಗಿ ಹಾಡುಗಳೇ ಎಂದು ಕರೆಯುವ ರೂಢಿ ಇದೆ. ಗಾದೆ, ಒಗಟು, ಒಡಪುಗಳು ಗದ್ಯವನ್ನೂ ಮೀರಿದ ಪದ್ಯದ ಛಾಯೆಯನ್ನು ಹೊಂದಿರುವಂಥವು. ಹೀಗಾಗಿ ಮಕ್ಕಳಾಟದ ಹಾಡುಗಳು, ಆಣಿಪೀಣಿಗಳನ್ನೂ ಸೇರಿಸಿಕೊಂಡು ಇವೆಲ್ಲವುಗಳನ್ನು ಪದ್ಯಗಂಧೀಗದ್ಯ ಸಾಹಿತ್ಯ ಮಾದರಿಗಳೆಂದು ಗಣಿಸಬಹುದಾಗಿದೆ.

ಜನಪದ ಸಾಹಿತ್ಯದಲ್ಲಿ ಅಂತಾರಾಷ್ಟ್ರೀಯ ರೂಪಗಳು, ರಾಷ್ಟ್ರೀಯ ರೂಪಗಳು ಹಾಗೂ ಸ್ಥಳೀಯ ರೂಪಗಳು ಎಂದು ವಿಂಗಡಿಸಬಹುದಾದ ಸಾಹಿತ್ಯ ಪ್ರಕಾರಗಳು ದೊರೆಯುತ್ತವೆ. ಜನಪದ ಕಥೆ, ಗಾದೆ, ಒಗಟು– ಈ ಪ್ರಕಾರಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರೂಪಗಳು. ಇವುಗಳ ವಸ್ತು ಮತ್ತು ರಚನೆ ಒಂದೇ ಬಗೆಯಾಗಿದ್ದು, ಕನ್ನಡದಲ್ಲಿ ಸಿಗುವ ಒಂದು ಕಥೆ, ಗಾದೆ ಹಾಗೂ ಒಗಟು ನಮ್ಮ ದೇಶದ ಅಥವಾ ಯಾವುದಾದರೂ ಒಂದು ದೇಶದ ಒಂದು ಗ್ರಾಮದಲ್ಲಿ ದೊರೆಯಬಹುದು. ಅದಕ್ಕಾಗಿ ಈ ಮೂರು ಪ್ರಕಾರಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಹಿತ್ಯ ಪ್ರಕಾರಗಳೆಂದು ಕರೆಯಲಾಗುತ್ತದೆ. ಉಳಿದ ಜನಪದ ಸಾಹಿತ್ಯ ಪ್ರಕಾರಗಳನ್ನು ಸ್ಥಳೀಯ ಮಾದರಿಗಳೆಂದು ಕರೆಯಬೇಕಾಗುತ್ತದೆ. ಒಂದು ಸಮಾನ ಸಂದರ್ಭ ಮತ್ತು ಆ ಸಂದರ್ಭದಲ್ಲಿ ಬಳಕೆಯಾಗುವ ಸಾಹಿತ್ಯ ಪ್ರಕಾರ ದೊರೆಯಬಹುದಾದರೂ ಅವುಗಳ ರಚನೆ, ಸ್ವರೂಪ ಮತ್ತು ವಸ್ತು ಒಂದೇ ಬಗೆಯಾಗಿರಲಾರವು. ಅದರಲ್ಲೂ ವಿಶೇಷವಾಗಿ ಜನಪದ ಹಾಡುಗಳ ಪ್ರಕಾರಗಳಂತೂ ಸ್ಥಳೀಯ ಸಂಸ್ಕೃತಿಯ ಪ್ರತಿನಿಧಿಯಾಗಿರುವುದರಿಂದ ಜನಪದ ಗೀತ ಪ್ರಕಾರಗಳನ್ನು ಸ್ಥಳೀಯ ಪ್ರಕಾರಗಳೆಂದೇ ಗಣಿಸಬೇಕು.

ನಮ್ಮ ಮುಂದಿರುವ ಒಗಟು ಪ್ರಕಾರವು ಮಾನವನ ಬುದ್ಧಿಮತ್ತೆಗೆ ಸಂಬಂಧಿಸಿದ ಸಾಹಿತ್ಯ ಪ್ರಕಾರವಾಗಿದೆ. ಅದು ಸಣ್ಣ ಮಕ್ಕಳಿಂದ ಹಿಡಿದು ವಯಸ್ಸಾದವರವರೆಗಿನ ಬುದ್ಧಿಶಕ್ತಿಯನ್ನು ಹೆಚ್ಚಿಸುವ, ಜಾಣತನವನ್ನು ಪರೀಕ್ಷಿಸುವ ರೂಪದಲ್ಲಿ, ಆಯಾ ವಯಸ್ಸಿಗೆ ತಕ್ಕಂತಹ ವಿಷಯಗಳನ್ನು ಪ್ರಶ್ನೆಗಳನ್ನಾಗಿ ಒಡ್ಡಿ, ಮೆದುಳಿಗೆ ಕೆಲಸ ಕೊಟ್ಟು ಅದು ಸದಾ ಚುರುಕಾಗಿ ಇರುವಂತೆ ನೋಡಿಕೊಳ್ಳುವ ಕೆಲಸ ಮಾಡುತ್ತದೆ.

ಒಗಟು ರಚನೆಯಲ್ಲಿ ಪ್ರಾಸಬದ್ಧವಾದ ಒಂದೆರಡು ಸಾಲುಗಳಿಂದ ಐದಾರು ಸಾಲುಗಳ ವ್ಯಾಪ್ತಿಯಲ್ಲಿ ಒಂದು ಸಂಗತಿಯನ್ನು ವರ್ಣಿಸಿ, ಪ್ರಶ್ನೆಯನ್ನು ಒಡ್ಡುತ್ತದೆ. ಉತ್ತರ ಮಾತ್ರ ಒಗಟಿನ ರಚನೆಯಿಂದ ಹೊರಗೆ ಇರುತ್ತದೆ. ಕೇಳಲು ಆಕರ್ಷಕವೆನಿಸುವ ರಚನೆಯುಳ್ಳ ಒಗಟು, ಹಾಕಿದ ಪ್ರಶ್ನೆಗೆ ಉತ್ತರ ಹುಡುಕುವ ಜಾಣತನದ ಕೆಲಸಕ್ಕೆ ಹಚ್ಚುತ್ತದೆ. ಹೀಗೆ ನಿರಂತರವಾಗಿ ಮೆದುಳನ್ನು ಉಜ್ಜುವ, ಅದನ್ನು ಚುರುಕಾಗಿಸುವ ಕೆಲಸ ಮಾಡುವ ಉದ್ದೇಶವೇ ಒಗಟುಗಳ ಹಿಂದೆ ಇರುತ್ತದೆ. ಈ ಪ್ರಶ್ನೆ ಬಿಡುಸುವ ಹಿಂದೆ ಒಂದು ಜ್ಞಾನದ ಅರಿವು ಉಂಟಾಗುತ್ತದೆ. ಅದು ಮಾನವನ ಅನುಭವವನ್ನು ಹೆಚ್ಚಿಸುತ್ತದೆ. ಎದೆಗಾರಿಕೆಯನ್ನು ವೃದ್ಧಿಸುತ್ತದೆ. ಆಲೋಚನೆಯನ್ನು ಬೆಳೆಸುತ್ತದೆ. ಒಗಟಿನ ರಚನೆ ಸೂತ್ರಪ್ರಾಯವಾದ ಮಾತಾಗಿರುತ್ತದೆ. ಅದಕ್ಕಾಗಿ ಇವನ್ನು **'ಸೂತ್ರರೂಪದ ಒಗಟುಗಳು' (ಸೂತ್ರಾತ್ಮಕ ಒಗಟುಗಳು, ಸೂತ್ರಬದ್ಧ ಒಗಟುಗಳು)** ಎನ್ನುವುದು.

'ಹಿಡಿದರೆ ಹಿಡಕಿ ತುಂಬ
ಬಿಟ್ಟರೆ ಮನಿ ತುಂಬ' (ದೀಪ)

'ಅಂತಪ್ಪನ ಹಿತ್ಲಾಗ ಇಂತಿಂಥ ಬದ್ನಿಕಾಯಿ
ತುಂಬ ಇಲ್ಲ ತೊಗಟಿ ಇಲ್ಲ' (ತತ್ತಿ)

'ಅಕ್ಕಕ್ಕ ಊರ ನೋಡ
ಊರ ಮ್ಯಾಗಿನ ತೇರ ನೋಡ
ತೇರ ಮ್ಯಾಗಿನ ಗೊಂಬಿ ನೋಡ
ಗೊಂಬಿ ಮ್ಯಾಗಿನ ಸಿಂಬಿ ನೋಡ
ಸಿಂಬಿ ಮ್ಯಾಗಿನ ಬುಟ್ಟಿ ನೋಡ
ಬುಟ್ಟ್ಯಾಗಿನ ಕಸ ನೋಡ
ಕಸದಾಗಿನ ಗುಲಗಂಜಿ ನೋಡ'

ಒಗಟುಗಳ ವ್ಯಾಪಕವಾದ ರಚನೆ ಈ ಬಗೆಯಲ್ಲಿ ಸೂತ್ರಪ್ರಾಯವಾಗಿಯೇ ಇರುತ್ತದೆ. ಇನ್ನೂ ಕೆಲವು ಒಗಟುಗಳ ರೂಪರಚನೆಯಲ್ಲಿ ಬದಲಾವಣೆಯೂ ಆಗುತ್ತದೆ. ಸೂತ್ರರೂಪದ ಮಾದರಿಗೆ ಹೊರತಾಗಿ ಒಂದು ಸಂಗತಿಯನ್ನು ಘಟನೆಯಂತೆ–ಕಥೆಯಂತೆ ವಿವರಗೊಳಿಸಿ, ಉತ್ತರವನ್ನು ಬಯಸುವ ಕೆಲ ಮಾದರಿಗಳು ನಮಗೆ ದೊರೆಯುತ್ತವೆ. ಇವನ್ನು **'ವಿವರಣಾತ್ಮಕ ಒಗಟುಗಳು'** ಎಂದು ಕರೆಯ ಬಹುದಾಗಿದೆ. ಈ ವಿವರಣೆಗಳು ಘಟನೆಯಂತಹ–ಕಥೆಯಂತಹ ರೂಪದಲ್ಲಿರುವುದರಿಂದ ಇವುಗಳನ್ನು ಗ್ರಾಮಾಂತರ

ಪ್ರದೇಶದಲ್ಲಿ ಬಳಸುವ **'ಒಡಗತೆಗಳು'** ಎಂಬ ಹೆಸರಿನಿಂದಲೂ ಗುರುತಿಸಬಹುದಾಗಿದೆ. ಅಂದರೆ ಇಂತಹ ಒಗಟುಗಳನ್ನು **'ವಿವರಣಾತ್ಮಕ ಒಗಟುಗಳು'** ಅಥವಾ **'ಒಡಗತೆಗಳು'** ಎಂದು ಕರೆಯಲು ಅಡ್ಡಿಯಿಲ್ಲ. ಹೀಗಾಗಿ ಒಗಟುಗಳಲ್ಲಿ **ಸೂತ್ರರೂಪದ ಒಗಟುಗಳು** ಮತ್ತು **ವಿವರಣಾತ್ಮಕ ಒಗಟುಗಳು** (ಒಡಗತೆಗಳು) ಎಂದು ಎರಡು ಪ್ರಕಾರಗಳನ್ನು ಗುರುತಿಸಿಕೊಂಡಂತಾಗುತ್ತದೆ.

'ಸೂತ್ರರೂಪದ ಒಗಟು'ಗಳಲ್ಲಿ ವಿಷಯಾನುಸಾರ ಮತ್ತು **'ವಿವರಣಾತ್ಮಕ ಒಗಟು' (ಒಡಗತೆ)**ಗಳಲ್ಲಿ ವಿವರಣೆಯನ್ನನುಸರಿಸಿ ಹಲವಾರು ಪ್ರಕಾರಗಳನ್ನು ಗುರುತಿಸಿಕೊಳ್ಳ ಬಹುದಾಗಿದೆ. **'ಸೂತ್ರರೂಪದ ಒಗಟು'**ಗಳ ವಿಭಾಗೀಕ್ರಮ ಸಾಮಾನ್ಯವಾಗಿ– ಮಾನವ ಅವಯವಗಳು, ಪ್ರಾಣಿಗಳು, ಪಕ್ಷಿಗಳು, ಕ್ರಿಮಿ–ಕೀಟಗಳು, ನೈಸರ್ಗಿಕ ಸಂಗತಿಗಳು, ಆಕಾಶಕಾಯಗಳು, ಭೂಮಿ ಹೀಗೆ ವಿಷಯಾನುಸಾರ ಹಲವಾರು ಭಾಗಗಳಲ್ಲಿ ಗುರುತಿಸಿಕೊಳ್ಳಬಹುದಾಗಿದೆ. **'ವಿವರಣಾತ್ಮಕ ಒಗಟು'**(ಒಡಗತೆ)ಗಳನ್ನು– ೧. ಗಣಿತದ ಒಗಟುಗಳು, ೨. ಲಘು ಕಥಾರೂಪದ ಒಗಟುಗಳು, ೩. ದ್ವಂದ್ವಾರ್ಥದ–(ಗೊಂದಲ ಹುಟ್ಟಿಸುವ) ಒಗಟುಗಳು, ೪. ಹಲವು ಪ್ರಶ್ನೆಗಳಿಗೆ ಒಂದೇ ಉತ್ತರದ ಒಗಟುಗಳು– ಎಂದು ನಾಲ್ಕು ಪ್ರಕಾರಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಇಂತಹ ಒಗಟುಗಳು ಇನ್ನೂ ದೊರೆತರೆ ಮತ್ತೆ ಹೆಚ್ಚಿನ ಪ್ರಕಾರಗಳನ್ನು ಗುರುತಿಸಿಕೊಳ್ಳಲು ಸಾಧ್ಯವಾಗ ಬಹುದಾಗಿದೆ.

'ಸೂತ್ರರೂಪದ ಒಗಟುಗಳು' ಸಾಮಾನ್ಯವಾದ ಒಗಟುಗಳಾಗಿದ್ದು, ಅವುಗಳ ಬಗೆಗೆ ಹೆಚ್ಚಿನ ವಿವರಣೆ ಬೇಕಾಗಿಲ್ಲ. ಆದರೆ **'ವಿರಣಾತ್ಮಕ ಒಗಟುಗಳು' (ಒಡಗತೆಗಳು)** ಭಾಗದಲ್ಲಿ ಬೇರೆ ಬೇರೆ ಬಗೆಯ ಒಗಟಿನ ಮಾದರಿಗಳು ಸೇರುವುದರಿಂದ ಅವುಗಳನ್ನು ಸ್ಪಷ್ಟಪಡಿಸುವುದು ಅವಶ್ಯವೆನಿಸುತ್ತದೆ.

೧. ಗಣಿತದ ಒಗಟುಗಳು : ವಸ್ತುವಿನ ಬದಲಾಗಿ ನೇರವಾಗಿ ಅಂಕಿಅಂಶಗಳನ್ನೇ ಬಳಸಿಕೊಂಡು ಒಂದು ಪ್ರಶ್ನೆಯನ್ನು ಸಿದ್ಧಮಾಡುತ್ತದೆ. ಅದನ್ನು ಸಂಕ್ಷಿಪ್ತವಾಗಿ ಒಂದು ಕಥೆಯ ರೂಪದಲ್ಲಿ ವಿವರಿಸಿ, ಸೂಕ್ತ ಉತ್ತರವನ್ನು ಬಯಸುತ್ತದೆ. ಇಂತಹ ಒಗಟು ಮೌಖಿಕ ಪರಂಪರೆಯಲ್ಲಿ ಲೆಕ್ಕದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಕೂಡಿಸುವ, ಕಳೆಯುವ, ಭಾಗಿಸುವ, ಗುಣಿಸುವ, ಆಲೋಚಿಸುವ, ನಿರೂಪಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಉದಾಹರಣೆಗೆ :

'ಹೊಲದಾಗಿನ ಹಸರಗಿಡದಾಗ ಎಷ್ಟೋ ಗಿಳಿ ಕುಂತಿದ್ದುವು. ದಾರಿ ಹಿಡಿದು ಹೋಗಾಂವ ನೀವೆಷ್ಟು? ಅಂತ ಅವುಕುರ್ನ ಕೇಳಿದ. ಆಗ ಗಿಳಿಗಳು ಹೇಳಿದವು: ನಾವು, ನಮ್ಮಷ್ಟು, ನಮ್ಮರ್ಧ, ನಮ್ಮಗಿರ್ಧ, ನೀನೊಬ್ಬ ಕೂಡಿದ್ರ ನೂರ ಆಗ್ತೇವು ಅಂತ ಹೇಳಿದವು. ಹಂಗಾದ್ರ ಮೊದಲ ಗಿಡದಾಗಿದ್ದ ಗಿಳಿ ಎಷ್ಟು?'. (ಉ. ೩೬).

'ಒಬ್ಬಾಕಿ ರಾಣಿ ಅರಮನಿಗ ಏಳು ಬಾಗಲ. ಒಂದೊಂದು ಬಾಗಲಕ ಒಬ್ಬೊಬ್ಬ ಕಾವಲಗಾರ. ರಾಣಿಗಿ ಭೆಟ್ಟಿಯಾಗಲಾಕ ಹೋಗಾಂವಾ ತಾ ತಂದ ನಿಂಬಿ ಹಣ್ಣಿನಾಗ ಒಬ್ಬೊಬ್ಬ ಕಾವಲಗಾರಗೂ ತಾನು ತಂದದ್ರ ಅರ್ಧಾರ್ಧ ಕೊಟಗೋತ ಹೋದ್ರ, ರಾಣಿಗಿ ಅರ್ಧ ನಿಂಬಿಹಣ್ಣ ಮುಟ್ತಾದ. ಹಾಗಾದರ ಅಂವಾ ಒಯ್ದ ಹಣ್ಣೆಷ್ಟು?'. (ಉ. ೬೪).

೨. ಲಘು ಕಥಾರೂಪದ ಒಗಟುಗಳು: ಚಕಿತಗೊಳಿಸುವ ಪ್ರಶ್ನೆಯನ್ನೊಡ್ಡಿ, ಚುರುಕಾದ ಉತ್ತರ ಬಯಸುವ ಕೆಲವು 'ಘಟನಾ ಪ್ರಧಾನ' ಲಘುಕಥಾರೂಪದ ಒಗಟುಗಳು ದೊರೆಯುತ್ತವೆ. ಇವುಗಳ ಉದ್ದೇಶ ಎದುರಿನವನ ಜಾಣತನವನ್ನು, ವಿಶೇಷವಾಗಿ ಅನುಭವವನ್ನು ಪರೀಕ್ಷಿಸುವುದು. ಇಂಥವು ಹೆಚ್ಚಾಗಿ ಹೆಣ್ಣು ಗಂಡಿನ ನಡುವೆ ನಡೆಯುವ ಜಾಣತನದ ಪರೀಕ್ಷೆಯಲ್ಲಿ ಬಳಕೆಯಾಗುತ್ತವೆ. ಒಂದು ರೀತಿಯಿಂದ ಗಂಡಸಿನ ಸಾಮರ್ಥ್ಯವನ್ನು ಪರೀಕ್ಷಿಸುವ ಉದ್ದೇಶ ಇಲ್ಲಿರುತ್ತದೆ. ಉದಾಹರಣೆಗೆ:

'ಗಂಡ ಸಂತೆಗೆ ಹೊರಟಿರುತ್ತಾನೆ. ಮನೆಗೆ ಏನೇನು ಸಾಮಾನು ತರಬೇಕು ಅಂತ ಕೇಳಿದಾಗ ಗಂಡನ ಬುದ್ಧಿವಂತಿಕೆ ತಿಳಿಯೋಕೆ ಹೆಂಡ್ತಿ ಹೇಳುತ್ತಾಳೆ: 'ಸಕ್ರಿಗಿಂತ ಸವಿಯಾದ್ದು, ಬಂಗಾರಕ್ಕಿಂತ ಹೆಚ್ಚಿಂದು, ಮನೆ ಬಾಳಿಕೆಗೆ ಬೇಕಾದವು ಎರಡು ಸಾಮಾನುಗಳ ತಾ' ಎಂದಳು. ಇವನ್ಗೆ ಆ ಮಾತಿನ ತಳ ಬುಡ ಏನೂ ಅರ್ಥವಾಗಲಿಲ್ಲ. ತನಗೆ ಗೊತ್ತಿರೋ ಜನಾನೆಲ್ಲ ಕೇಳ್ದ. ಹೆಂಡತಿ ಹೇಳಿದಂಥ ಮಾತಿಗೆ ಉತ್ತರ ಸಿಕ್ಕಲಿಲ್ಲ. ಕೊನೆಗೆ ಒಂದು ಅಜ್ಜಿ 'ಸಕ್ರೆಗಿಂತ ಸವಿಯಾದದ್ದು ಅಂದ್ರೆ ಉಪ್ಪು, ಬಂಗಾರಕ್ಕಿಂತ ಹೆಚ್ಚಿಂದು ಅಂದ್ರೆ ಕುಂಕುಮ. ಮನೆ ಬಾಳಿಕೆಗೆ ಬೇಕಾದ ಎರಡು ಅಂದ್ರೆ ಮೊರ' ಎಂದು ಹೇಳುತ್ತಾಳೆ. ಇವುಗಳಿಲ್ಲದೆ ಮನೆ ಸಂಸಾರ ಮಾಡೋಕೆ ಬರೋದೆ ಇಲ್ಲ ನೋಡು ಎಂದ ಅಜ್ಜಿಯ ಮಾತು ಕೇಳಿಕೊಂಡು ಅಷ್ಟನ್ನೂ ಕೊಂಡುಕೊಂಡು ಮನೆಗೆ ಬರ್ತಾನೆ'. (ಜಂಬುನೇರ್ಲಣ್ಣು ಜಗ್ಗಿಬಿದ್ದಾವೆ, ಒಗಟು-೬೧).

'ಗಂಡ ಸಂತೆಗೆ ಹೊರಟಿರ್ತಾನೆ. ಮನೆಗೆ ಏನೇನು ತರಬೇಕು ಅಂತ ಹೀಂಗ ಹೇಳಿದಳು: 'ಕರ ಕಟ್ಟಾಕೆ ಕಣ್ಣಿ, ಮುಡ್ಕಂಬಾಕೆ ಹೂ, ಸಾರಿಗೆ ಪಲ್ಯೆಕಾಯಿ, ಒಲೆಗೆ ಸೌದೆ ತಕ್ಕಂಡು ನಾನು ಕೊಟ್ಟ ದುಡ್ಡು ವಾಪಸ್ ತಾ' ಎಂದು. ಹೀಂಗ ಹೇಳಿ ತಾನು ಕೊಟ್ಟ ಪೈಸೆ ವಾಪಸ್ ಕೊಡಬೇಕು ಅಂತಲೂ ಹೇಳ್ತಾಳೆ. ಹಾಗಾದರೆ ಅವನು ಆಕೆ ಹೇಳಿದಂಥ ಕಣ್ಣಿ, ಹೂ, ಪಲ್ಯಕಾಯಿ, ಒಲಿಗೆ ಸೌದೆ ತಂದನೆ? ಅದಕ್ಕೆಲ್ಲ ಕಾಸುಕೊಟ್ಟನೆ? ಅಂಬುದು ಪ್ರಶ್ನೆ. ಹೌದು? ಹೆಂಡ್ತಿ ಹೇಳಿದ್ದೆಲ್ಲ ತಂದ. ಆಕೆ ಕೊಟ್ಟ ಐದು ಪೈಸೇನೂ ವಾಪಸ್‌ಕೊಟ್ಟ,

ಅವನು ಹೆಂಡ್ತಿಗಿಂತಲೂ ಬುದ್ಧಿವಂತ. ತಾನು ಹೊಲ್ದಲ್ಲಿ ಬೆಳೆದಂಥಾ ಪುಂಡಿ ಗಿಡ್ದಲ್ಲಿ ಕರುಗಳು ಕಟ್ಟಾಕೆ ಕಣ್ಣಿ ಮಾಡ್ಕಂಡ. ಹೆಂಡ್ತಿಗೆ ಮುಡಿಯಾಕೆ ಘುಂಡಿ ಹೂ ಬಿಡಿಸ್ಕಂಡ. ಒಲೆಗೆ ಸೌದೇನೂ ಅದೇ ಗಿಡ್ದಲ್ಲಿ ಸಿಕ್ತು. ಹೆಂಡ್ತಿ ಕೊಟ್ಟ ಐದು ಪೈಸೇನೂ ಹಾಗೇ ಉಳಿತು. ತಂದು ಪಾಪಸ್ ಕೊಟ್ಟ, ಆಗ ಹೆಂಡ್ತಿ ಇವನನ್ನು ಬಹಳ ಮೆಚ್ಚಿಕೊಂಡ್ಳು'. (ಜಂಬುನೇರ್ಲಣ್ಣು ಜಗ್ಗಿಬಿದ್ದಾವೆ, ಒಗಟು-೬೧).

೩. **ದ್ವಂದ್ವಾರ್ಥದ (ಗೊಂದಲ ಹುಟ್ಟಿಸುವ) ಒಗಟುಗಳು:** ಕೆಲವು ಒಗಟುಗಳು ಕೇಳುಗರನ್ನು ಗೊಂದಲದಲ್ಲಿ ನೂಕಿ ಉತ್ತರ ತಡಕಾಡಲು ಹಚ್ಚುತ್ತವೆ. ಇಲ್ಲಿ ಭಾಷಾ ಚಮತ್ಕಾರವೇ ಮುಖ್ಯವಾಗಿರುತ್ತದೆ. ಕೇಳುವ ವಿವರಣಾತ್ಮಕ ಒಗಟಿನಲ್ಲಿ ಒಂದೊಂದು ಪದಕ್ಕೆ, ಪದಗಳ ಉಚ್ಚಾರಣೆಗೆ ಮಹತ್ವವಿರುವಂತೆ ಈ ಬಗೆಯ ಒಗಟುಗಳನ್ನು ವಿವರಿಸಲಾಗಿರುತ್ತದೆ. ಉದಾಹರಣೆಗೆ :

'ಕೆರ್‍ಯಾಗ ಏಳೆಮ್ಮಿ, ಒಡ್ಡಿಗಿ ಹತ್ತೆಮ್ಮಿ, ಮನ್ಯಾಗ ಹಿಂಡೆಮ್ಮಿ. ಎಲ್ಲಾ ಕೂಡಿಸಿ ಎಮ್ಮಿಗಳು ಎಷ್ಟು?' (ಒಂದು). ಒಂದೇ ಎಮ್ಮೆಯೇ ಕೆರೆಯಿಂದ ಎದ್ದು, ಹೊರಬರಬೇಕಾದರೆ ಕೆರೆಯ ಒಡ್ಡನ್ನು ಅರ್ಥಾತ್ ದಿಬ್ಬವನ್ನು ಹತ್ತಿ, ಮನೆಗೆ ಬಂದು ಹಾಲು ಹಿಂಡುತ್ತದೆ-ಕೊಡುತ್ತದೆ. ಹೀಗಾಗಿ ಇಲ್ಲಿರುವ ಭಾಷಾ ಚಮತ್ಕಾರವೇ ಮುಖ್ಯ. ಭಾಷೆಯ ಚಮತ್ಕಾರದ ಕಡೆ ಲಕ್ಷ ಇರದವ ದಡ್ಡನಾಗಿ ಕಾಣುತ್ತಾನೆ.

೪. ಹಲವು ಪ್ರಶ್ನೆಗಳಿಗೆ ಒಂದೇ ಉತ್ತರದ ಒಗಟುಗಳು :

ಹಲವಾರು ಪ್ರಶ್ನೆಗಳಿಗೆ ಒಂದೇ ಮಾತಿನಲ್ಲಿ ಉತ್ತರಿಸುವ ಒಗಟುಗಳು ಇವು. ಇಲ್ಲಿ ಪ್ರಶ್ನೆ ಕೇಳುವವನ ಗ್ರಹಿಕೆ, ಅವನ ವಿಷಯ ಜ್ಞಾನಗಳ ಪರೀಕ್ಷೆ ಇಂತಹ ಒಗಟುಗಳ ಮುಖ್ಯ ಉದ್ದೇಶವಾಗಿರುತ್ತದೆ. ಉದಾಹರಣೆಗಾಗಿ :

'ಒಬ್ಬಗ ಬೆಣ್ಣಿ ಧಾರಣಿ ಬೇಕಾಗಿತ್ತು, ಇನ್ನೊಬ್ಬಗ ಕಲ್ಯಾಣ ದಾರಿ ತಿಳಿಬೇಕಾಗಿತ್ತು. ಇಬ್ಬರೂ ಒಂದೇ ವೇಳೆಗೆ ಬಂದು, ಒಬ್ಬನಿಗೆ ಕೇಳಿದರು. ಅವನು ಇಬ್ಬರಿಗೂ ಒಂದೇ ಮಾತಿನ ಉತ್ತರ ಹೇಳಿದ. ಮೊದಲನೇದವ್ನಿಗಿ ಧಾರಣಿ ಗೊತ್ತಾತು. ಎರಡನೇದವನಿಗ ನಿರಾಶಾ ಆಯ್ತು. ಹಂಗಾದ್ರ ಅಂವ ಹೇಳಿದ ಉತ್ತರ ಏನು?'. (ನಾಕಾಣೆ).

'ಒಬ್ಬನಿಗೆ ಕಡ್ಲಿ ತಿನ್ನಲು ಕರೆದರು. ಅದೇ ವೇಳೆಗೆ ಅವನಲ್ಲಿ ಇನ್ನೊಬ್ಬ ನಿಚ್ಚಕೆ ಬೇಡಲು ಬಂದನು. ಇಬ್ಬರಿಗೂ ಒಂದೇ ಉತ್ರರ ಹೇಳಬೇಕು'. (ಹಲ್ಲಿಲ್ಲ).

ಈ ಮೇಲೆ ವಿವರಿಸಿದ ನಾಲ್ಕು ಬಗೆಯ ಒಗಟುಗಳನ್ನು ಸೇರಿಸಿ, ಇವುಗಳನ್ನು **'ವಿವರಣಾತ್ಮಕ ಒಗಟುಗಳು'** ಎಂದು ಕರೆಯಬಹುದಾಗಿದೆ.

'ಒಡಗತೆಗಳು' (ಒಡಕತಿ>ಒಡಗತಿ) ಎಂಬ ಹೆಸರು ಈ ಮೇಲೆ ವಿವರಿಸಿದ ನಾಲ್ಕು ಬಗೆಯ ವಿವರಣಾತ್ಮಕ ಒಗಟುಗಳಿಗೆ ಕರೆಯುವ ರೂಢಿ ಮೊದಲಿನಿಂದಲೂ ಬಂದಿರಬೇಕೆಂದು ತೋರುತ್ತದೆ. ಅಂದರೆ ಒಗಟುಗಳು ಮತ್ತು ಒಡಗತೆಗಳು ಎಂಬ ಎರಡು ಪದಗಳು ಇಲ್ಲಿ ಬಳಕೆಯಲ್ಲಿರುವುದನ್ನು ನಾವು ಗಮನಿಸಬೇಕು. 'ಒಗಟುಗಳು' ಎಂಬುದು 'ಸೂತ್ರರೂಪದ ಒಗಟು'ಗಳಿಗೂ 'ಒಡಗತೆ' ಎಂಬುದು 'ವಿವರಣಾತ್ಮಕ ಒಗಟು' ಗಳಿಗೂ ಅನ್ವಯವಾಗುತ್ತ ಬಂದಿದೆ.

'ಒಗಟಿನ ಕಥೆಗಳು' ಎಂದರೆ ಬೇತಾಳನ ಕಥೆಗಳಂತೆ ದೀರ್ಘವಾದ ಜನಪದ ಕಥೆಗಳ ಒಂದು ಪ್ರಕಾರವಾಗಿರುತ್ತದೆಂಬುದನ್ನು ಇಲ್ಲಿ ಗನಿಸಬೇಕು. ಇಂತಹ ಕಥೆಗಳು ಜನಪದ ಕಥೆಗಳ ಭಾಗಗಳಾಗಿ ಬರುತ್ತವೆ. ಅವನ್ನು ಇಲ್ಲಿ ಸೇರಿಸಲು ಬರುವುದಿಲ್ಲ.

'ಸೂತ್ರ ರೂಪದ ಒಗಟು' ಗಳನ್ನು ಅವುಗಳು ಬಳಸಿಕೊಳ್ಳುವ ವಸ್ತು-ವಿಷಯಗಳನ್ನು ಅನುಸರಿಸಿ ಅನೇಕ ಪ್ರಕಾರಗಳನ್ನು ಗುರುತಿಸಿಕೊಳ್ಳಬಹುದಾಗಿದೆ. **'ವಿವರಣಾತ್ಮಕ ಒಗಟು'**ಗಳನ್ನು ಅವುಗಳು ಪ್ರಶ್ನೆಗಳನ್ನೊಡ್ಡುವ ಬಗೆಯನ್ನು ಅನುಸರಿಸಿ ಈ ಹಿಂದೆ ವಿವರಿಸಿದಂತೆ ನಾಲ್ಕು ಪ್ರಕಾರಗಳಲ್ಲಿ ಗುರುತಿಸಬಹುದಾಗಿದೆ. ಮುಂದೆ ಒಗಟುಗಳ ಕೃತಿಗಳನ್ನು ಸಮೀಕ್ಷಿಸುವಾಗ ಆಯಾ ಸಂಪಾದಕರು ಅನುಸರಿಸುವ ವಿಭಾಗೀಕ್ರಮಗಳನ್ನು ನೋಡುವಾಗ, ಈ ವಿಷಯವನ್ನು ಗಮನಿಸಿ ಚರ್ಚಿಸುತ್ತ ಹೋಗಲಾಗಿದೆ.

ಒಗಟುಗಳನ್ನು ನೇರವಾಗಿ ಕೇಳುವವನೊಬ್ಬನಿದ್ದರೆ, ಅವುಗಳನ್ನು ಒಡೆಯುವವ ಇನೊಬ್ಬನಿರುತ್ತಾನೆ. ಎಲ್ಲವುಗಳ ಅರ್ಥವನ್ನೂ ಎದುರಿನವನು ಒಡೆಯುತ್ತಾನೆಂದಲ್ಲ. ಆತನಿಗೆ ಇದೊಂದು ರೀತಿಯಲ್ಲಿ ಕಲಿಕೆ (ಶಿಕ್ಷಣ) ಆಗಿರುವುದರಿಂದ ಕೊನೆಯಲ್ಲಿ ಅವನಿಗೆ ಉತ್ತರನ್ನು ತಿಳಿಸಿಹೇಳಿ, ಅದು ಹೇಗೆ ಎಂದು ವಿವರಿಸುವ (ಬೋಧಿಸುವ) ಕೆಲಸವೂ ನಡೆಯುತ್ತದೆ. ಹೀಗಾಗಿ ಒಗಟು ಒಡ್ಡುವ ಮತ್ತು ಅವುಗಳನ್ನು ಒಡೆಯುವ ಈ ಕ್ರಿಯೆ ಕಲಿಕೆ ಮತ್ತು ಬೋಧನೆಗಳನ್ನೊಳಗೊಂಡ ಒಂದು ಶಿಕ್ಷಣ ಈಯುವ ಕೆಲಸವೆ ಆಗಿದೆ.

ಕಥೆ ಮತ್ತು ಗಾದೆಗಳಂತೆ ಒಗಟು ಮನುಷ್ಯನ ಜ್ಞಾನವಾಹಿನಿಗಳಲ್ಲಿ ಪ್ರಮುಖವಾದ ಸಾಹಿತ್ಯ ಪ್ರಕಾರವಾಗಿದೆ. ಒಗಟು ಇಂಥಲ್ಲಿ ಕಾಣುವುದಿಲ್ಲ ಎಂದಿಲ್ಲ. ಅದು ಕಥೆಗಳಲ್ಲಿ, ಎಲ್ಲ ಪ್ರಕಾರದ ಹಾಡುಗಳಲ್ಲಿ ಸಾಮಾನ್ಯವಾಗಿ ಕಾಣುತ್ತದೆ. ಮನುಷ್ಯನ ಜಾಣತನಕ್ಕೆ ಸಂಬಂಧಿಸಿದ ಸಂಗತಿಗಳಲ್ಲಿ ಸುಮಾರಾಗಿ ಒಗಟು ಕಾಣುತ್ತದೆ. ಹೀಗಾಗಿ ನಾವು ಅವೆಲ್ಲವನ್ನೂ ಒಂದೆಡೆಗೆ ತರಲು ಸಾಧ್ಯವಿಲ್ಲ. ಜನಪದ ಕಥೆಗಳಲ್ಲಿ 'ಬೇತಾಳನ ಕಥೆಗಳು' ಮಾದರಿಯ 'ಒಗಟುಕಥೆಗಳು' ಸಾಕಷ್ಟು ದೊರೆಯುತ್ತವೆ. 'ಜನಪದ ಒಗಟು ಕಥೆಗಳ' ಸಂಗ್ರಹವೇ ಬೇತಾಳನ ಕಥೆಗಳಾಗಿವೆ. ಇಂತಹ ಅನೇಕ ಕಥೆಗಳನ್ನು ಸಂಗ್ರಹಿಸಿ ಕುರುವ ಬಸವರಾಜ ಅವರು ೪೩ ಒಗಟಿನ ಕಥೆಗಳ ಒಂದು ಸಂಗ್ರಹವನ್ನೇ **'ಜನಪದ ಒಗಟು ಕತೆಗಳು'** (೧೯೮೯) ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ. ಎಲ್.ಆರ್.ಹೆಗಡೆ ಅವರು ತಮ್ಮ **'ಒಗಟುಗಳು ಮತ್ತು ಕತೆಗಳು'** (೧೯೯೩) ಎಂಬ ಸಂಗ್ರಹದಲ್ಲಿ ೧೨ ಕಥೆಗಳನ್ನು ಪ್ರಕಟಿಸಿದ್ದಾರೆ. ಜೀನಹಳ್ಳಿ ಸಿದ್ಧಲಿಂಗಪ್ಪ ಅವರು **'ಜನಪದ ಒಗಟು ಮತ್ತು ಗಾದೆಯ ಕಥೆಗಳು'** (೨೦೦೨) ಎಂಬ ಸಂಗ್ರಹದಲ್ಲಿ ೨೦ ಕಥೆಗಳನ್ನು ಪ್ರಕಟಿಸಿದ್ದಾರೆ. ಇವೆಲ್ಲ ಕಥೆಗಳನ್ನು ಗಮನಿಸಿದರೆ, ಅವೆಲ್ಲ ಒಗಟುಳ್ಳ ಲಘುಕಥಾ ಮಾದರಿಗಳಾಗಿಲ್ಲ; ಬದಲಾಗಿ ಜನಪದ ಕಥೆಗಳೇ ಆಗಿವೆ. ಅದಕ್ಕಾಗಿ ಇಂತಹ ದೀರ್ಘವಾದ 'ಒಗಟು ಕಥೆ'ಗಳನ್ನು ಒಗಟುಗಳೆಂದು ಗಣಿಸುವಂತಿಲ್ಲ. ಇನ್ನು ಹಲವಾರು ನಮೂನೆಯ ಹಾಡಿನ ಪ್ರಕಾರಗಳಲ್ಲಿ ಒಗಟುಳ್ಳ ಹಾಡುಗಳು ಇದ್ದೇ ಇರುತ್ತವೆ. ಇಂತಹ ಬಗೆಯ ಹಾಡುಗಳಲ್ಲಿ ಒಗಟು ಇಲ್ಲವೆಂದಿಲ್ಲ. ಕಾರಣ ಒಗಟುಳ್ಳ ಹಾಡುಗಳನ್ನೂ ಒಗಟುಗಳಲ್ಲಿ ಸೇರಿಸುವ ಅಗತ್ಯವಿಲ್ಲ. ಆದರೆ ಕನ್ನಡ ಒಗಟುಗಳ ಸಂಗ್ರಹಗಳಲ್ಲಿ ಸಾಮಾನ್ಯವಾಗಿ ಹಾಡಿನ ರೂಪದಲ್ಲಿ ತಮಗೆ ದೊರೆತ ಕೆಲನುಡಿಗಳನ್ನು, ಅಪರೂಪಕ್ಕೆ ಕೆಲವರು ತಮಗೆ ದೊರೆತ ಒಗಟು ಕಥೆಗಳನ್ನು– ಒಗಟುಗಳ ಸಂಗ್ರಹಗಳಲ್ಲಿ ಪ್ರಕಟಿಸಿದ್ದಾರೆ. ಆದರೆ ಇವುಗಳನ್ನು ಜನಪದ ಒಗಟುಗಳು ಪ್ರಕಾರದಲ್ಲಿ ಹಿಡಿಯುಂತಿಲ್ಲ.

ಪ್ರೊ. ಸುಧಾಕರ ಅವರು ಒಗಟುಗಳನ್ನು **'ಜನಪದ ಬೆಡಗಿನ ವಚನಗಳು'** ಎಂದು ಒಗಟುಗಳ ಒಂದು ಸಂಗ್ರಹವನ್ನೇ ಪ್ರಕಟಿಸಿದ್ದಾರೆ. ೧೨ನೇ ಶತಮಾನದ ಬೆಡಗಿನ ವಚನಗಳನ್ನು ಒಗಟುಗಳೊಂದಿಗೆ ಹೋಲಿಸಿ ವಿವರಿಸಲು ಪ್ರಯತ್ನಿಸಿದ್ದಾರೆ. ಹೋಲಿಕೆ ಇದ್ದರೆ ತೌಲನಿಕ ಅಧ್ಯಯನ ಮಾಡಬಹುದು. ಆದರೆ 'ಬೆಡಗಿನ ವಚನ'ಗಳನ್ನು 'ಜನಪದ ಒಗಟು'ಗಳೆಂದೂ 'ಒಗಟು'ಗಳನ್ನು 'ಬೆಡಗಿನ ವಚನ'ಗಳೆಂದೂ ಗ್ರಹಿಸುವುದು, ಕರೆಯುವುದು ಮತ್ತು ಒಂದನ್ನು ಇನ್ನೊಂದರ ಮಟ್ಟಕ್ಕೆ ಏರಿಸುವುದು ಇಳಿಸುವುದು ಸರಿಯಾದ

ಕ್ರಮವಲ್ಲ. ಒಂದೆರಡು ಕಡೆ ಹೋಲಿಕೆ ಇದ್ದಮಾತ್ರಕ್ಕೆ ಬೆಡಗಿನ ವಚನಗಳು ಮತ್ತು ಜನಪದ ಒಗಟುಗಳು ಎರಡೂ ಒಂದೇ ಆಗಲು ಸಾಧ್ಯವಿಲ್ಲ. ಮತ್ತು ಒಗಟುಗಳನ್ನು 'ಜನಪದ ಬೆಡಗಿನ ವಚನಗಳು' ಎಂದು, 'ಬೆಡಗಿನ ವಚನ'ಗಳನ್ನು 'ಒಗಟಿನ ವಚನಗಳು' ಎಂದೂ ಕರೆಯುವುದು ಸಮಂಜಸ ಎನಿಸಲಾರದು. ಅಂತಹ ಪ್ರಯತ್ನಕ್ಕೂ ಯಾವುದೇ ಮಹತ್ವವಿರಲು ಸಾಧ್ಯವಿಲ್ಲ. ಏನಿದ್ದರೂ ಅವುಗಳನ್ನು ರೂಪ ಮತ್ತು ರಚನೆಯ ಅಂಶಗಳ ಹೋಲಿಕೆಯ ಹಂತದಲ್ಲಿ ಮಾತ್ರ ತೌಲನಿಕ ದೃಷ್ಟಿಯಿಂದ ನೋಡಬಹುದಾಗಿದೆ. ಒಟ್ಟಾರೆಯಾಗಿ ಎರಡರ ಉದ್ದೇಶ ಒಂದೇ ಆಗಿರಲು ಸಾಧ್ಯವಿಲ್ಲ.

ಒಗಟುಗಳ ರಚನಾ ಶಿಲ್ಪವನ್ನು ಗಮನಿಸಿ ಅವುಗಳನ್ನು ಎರಡು ಪ್ರಕಾರಗಳಲ್ಲಿ ಗುರುತಿಸಬಹುದಾಗಿದೆ: ೧. ಸೂತ್ರರೂಪದ ಒಗಟುಗಳು, ೨. ವಿವರಣಾತ್ಮಕ ಒಗಟುಗಳು. ಹೀಗೆ ಗುರುತಿಸಿಕೊಂಡು ಪ್ರಾರಂಭದಲ್ಲಿ ಚರ್ಚಿಸಲಾಗಿದೆ. ಆದರೆ ಕನ್ನಡದಲ್ಲಿ ಪ್ರಕಟವಾದ ಮಹತ್ವದ ಒಗಟುಗಳ ಸಂಪಾದಕರು ತಮ್ಮ ಸಂಗ್ರಹಗಳಲ್ಲಿ ಮೊದಮೊದಲಿಗೆ ಹಾಡಿನ ರೂಪದಲ್ಲಿರುವ ಒಗಟಿನ ಕೆಲ ಮಾದರಿಗಳನ್ನೂ ಕೊಟ್ಟಿದ್ದಾರೆ. ಈ ಹಾಡಿನ ರೂಪದಲ್ಲಿರುವ ಒಗಟುಗಳನ್ನು ಇಲ್ಲಿ ಲೆಕ್ಕಕ್ಕೆ ಹಿಡಿಯುವ ಅವಶ್ಯಕತೆ ಇಲ್ಲ. ಏಕೆಂದರೆ ಒಗಟುಗಳು ಪ್ರವೇಶ ಮಾಡದ ರೂಪಗಳೇ ಇಲ್ಲ ಎಂಬುದನ್ನು ಈಗಾಗಲೇ ಚರ್ಚೆ ಮಾಡಲಾಗಿದೆ. ಹಾಡುಗಳನ್ನೇ ಉದಾಹರಣೆಗಾಗಿ ಹಿಡಿಯುವುದಾದರೆ ಎಲ್ಲ ಪ್ರಕಾರದ ಹಾಡುಗಳಲ್ಲಿ– ಭಜನೆ, ಕೋಲಾಟ, ಗೀಗೀ, ಲಾವಣಿ, ಹಂತಿ, ಕಥನಪರ ಹಾಡುಗಳು ಹೀಗೆ ಬಹುಬಗೆಯ ಹಾಡುಗಳನ್ನು ತೆಗೆದುಕೊಂಡರೂ ಅಲ್ಲಿ ಒಗಟಿನ ನುಡಿಗಳು ನಮಗೆ ಸಿಕ್ಕೇ ಸಿಗುತ್ತವೆ. ಆದುದರಿಂದ ಹಾಡಿನ ಪ್ರಕಾರವನ್ನು ಹೊರಗಿಟ್ಟು ಶುದ್ಧ ಒಗಟುಗಳನ್ನು ಮಾತ್ರ, ಅದರಲ್ಲೂ 'ಸೂತ್ರರೂಪದ ಒಗಟುಗಳು' ಮತ್ತು 'ವಿವರಣಾತ್ಮಕ ಒಗಟುಗಳು' ಈ ಎರಡನ್ನು ಮಾತ್ರ ಇಲ್ಲಿ ಸಮೀಕ್ಷೆಗೆ ಎತ್ತಿಕೊಳ್ಳಲಾಗುತ್ತಿದೆ.

ಸೂತ್ರರೂಪದ ಒಗಟುಗಳನ್ನು ಒಗಟುಗಳ ಉತ್ತರಗಳನ್ನು ಗಮನಿಸಿ, ವಿಷಯಾನುಸಾರ ವಿಂಗಡನೆ ಮಾಡಿಕೊಂಡು ಅನೇಕ ಪ್ರಕಾರಗಳನ್ನು ಗುರುತಿಸಲಾಗುತ್ತದೆ. ಆಕಾಶ, ಭೂಮಿ, ನೀರು, ಸಸ್ಯ ವರ್ಗ ಮತ್ತು ಎಲ್ಲ ಬಗೆಯ ಜೀವಜಂತುಗಳನ್ನು ಗಮನಿಸಿ ಒಗಟುಗಳು ನಿರ್ಮಾಣವಾಗುತ್ತವೆ. ಒಗಟುಗಳ ನಿರ್ಮಾಣಕ್ಕೆ ಬಳಸಿಕೊಳ್ಳುವ ವಸ್ತುಗಳನ್ನು ಗಮನಿಸಿ ಈ ವಿಂಗಡಣೆ ವ್ಯಾಪಕವಾಗಿ ಇರುತ್ತದೆ. ಎರಡನೇ ಪ್ರಕಾರವಾದ 'ವಿವರಣಾತ್ಮಕ ಒಗಟುಗಳು' ಭಾಗದಲ್ಲಿ ಸಧ್ಯಕ್ಕೆ ನಾಲ್ಕು ಪ್ರಕಾರಗಳನ್ನು ಗುರುತಿಸಿಕೊಳ್ಳಲಾಗಿದೆ. ೧. ಗಣಿತದ ಒಗಟುಗಳು, ೨. ಲಘು ಕಥಾರೂಪದ ಒಗಟುಗಳು, ೩. ದ್ವಂದ್ವಾರ್ಥದ (ಗೊಂದಲ ಹುಟ್ಟಿಸುವ) ಒಗಟುಗಳು, ೪. ಹಲವು ಪ್ರಶ್ನೆಗಳಿಗೆ ಒಂದೇ ಉತ್ತರದ ಒಗಟುಗಳು. ಇನ್ನು ಮುಂದೆ 'ಸೂತ್ರರೂಪದ ಒಗಟುಗಳು' ಮತ್ತು 'ವಿವರಣಾತ್ಮಕ ಒಗಟುಗಳು' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಗಮನಾರ್ಹವಾದ ಸಂಗ್ರಹಗಳನ್ನು ಮುಂದಿಟ್ಟುಕೊಂಡು ಅವುಗಳ ವಿಶೇಷತೆಗಳನ್ನು ಗಮನಿಸುತ್ತ ಚರಿತ್ರೆಯನ್ನು ಬೆಳೆಸಲಾಗುತ್ತದೆ.

* * *

೧
ಸೂತ್ರ ರೂಪದ ಒಗಟುಗಳ ಸಂಗ್ರಹಗಳು

೧೯೩೬ ರಲ್ಲಿಯೇ ಪ್ರಕಟವಾದ ದೇವುಡು ಅವರ **'ಕರ್ನಾಟಕ ಸಂಸ್ಕೃತಿ'** ಕೃತಿಯಲ್ಲಿ ಒಗಟುಗಳ ಬಗ್ಗೆ ಬರೆದಿದ್ದಾರೆ. "ಗಾದೆಗಳಂತೆ ಒಗಟೆಗಳು ಸರ್ವವ್ಯಾಪಿಗಳಾಗಿವೆ. ಆದರೆ ಗಾದೆಗಳಂತೆ ಇವು ದೈನಂದಿನ ವ್ಯವಹಾರದಲ್ಲಿ ಬೆರೆದುಹೋಗಿವೆಯೆಂದು ಹೇಳಲಾಗುವುದಿಲ್ಲ. ಗಾದೆಗಳು ಊಟ ಉಪಚಾರಗಳಂತೆ ಬಾಳಿನಲ್ಲಿ ಬೆರೆತಿದ್ದರೆ, ಒಗಟೆಗಳು ಆಟಗಳಂತೆ ಜೀವನದಲ್ಲಿ ಒಂದು ಸ್ಥಾನವನ್ನು ಪಡೆದಿವೆಯೆನ್ನಬಹುದು. ಸುಖ ದುಃಖಗಳಲ್ಲೆಲ್ಲ ಗಾದೆಗಳು ಬರುತ್ತವೆ. ಆದರೆ ಒಗಟೆಗಳು ಬರುವುದಕ್ಕೆ ಮನಃ ಪ್ರಸಾದವು ಬೇಕು. ಹೇಳುವವನಿಗೂ ಕೇಳುವವನಿಗೂ ವಿನೋದ ಪ್ರಿಯತೆಯು, ರಸಿಕತೆಯು ಬೇಕು. ಜೊತೆಗೆ ಪ್ರಕಟವಾಗಿರುವುದನ್ನು ವಿಕಟವಾಗಿ ಮುಚ್ಚಿಟ್ಟು ಹುಡುಕಿನೋಡು ಎಂಬ ಆಟವಾಡುವ ಮನೋಭಾವವವು ಬೇಕು" (ಪು.೧೭೦). ದೇವುಡು ಅವರು ಆಗಿನ ಕಾಲಕ್ಕೆ ಒಗಟು ಮತ್ತು ಗಾದೆಗಳನ್ನು ತೌಲನಿಕವಾಗಿ ನೋಡಿದ್ದು ಆಶ್ಚರ್ಯಕರವಾಗಿ ತೋರುತ್ತದೆ. ಅವರ ಗ್ರಹಿಕೆ ಅಗಾಧವಾದುದಾಗಿದೆ. ದೇವುಡು ಅವರು ಗುರುತಿಸುವಂತೆ ಗಾದೆಗಳಿಗೂ ಒಗಟುಗಳಿಗೂ ಒಂದೇ ಗುಣ ಹೋಲುತ್ತದೆ ಅದು ಸರ್ವವ್ಯಾಪಿ ಗುಣ ಎನ್ನುವುದು. ಉಳಿದಂತೆ ಎರಡರಲ್ಲೂ ವ್ಯತ್ಯಾಸವೇ ಕಾಣುವುದನ್ನು ಅವರು ಗುರುತಿಸುತ್ತಾರೆ. ಮುಖ್ಯವಾಗಿ ಒಗಟುಗಳು ಆಟದ ಮನೋಭಾವನೆಯನ್ನು ಹೊಂದಿದವುಗಳು ಎನ್ನುವುದು. ಅವು ಅಭಿವ್ಯಕ್ತಿಗೊಳ್ಳುವಾಗ ಹೇಳುವ ಮತ್ತು ಕೇಳುವ ಇಬ್ಬರ ಮನಸ್ಸುಗಳು ಪ್ರಸನ್ನವಾಗಿರಬೇಕು. ರಸಿಕತನ ಇಲ್ಲಿ ಮುಖ್ಯವಾಗಿ ಕಾಣುತ್ತದೆ. ಹಾಗಿಲ್ಲದಿದ್ದರೆ ಒಗಟು ಪ್ರದರ್ಶನಗೊಳ್ಳಲಾರದು ಎಂಬ ಅವರ ಅಭಿಪ್ರಾಯ ಒಪ್ಪತಕ್ಕದ್ದಾಗಿದೆ. **"ಕಣ್ಣಾ ಮುಚ್ಚಾಲೆಯ ಕಾವ್ಯಸ್ವರೂಪವೇ ಒಗಟೆ"** (ಪು. ೧೭೧) ಎಂಬ ಅವರ ಮಾತಂತೂ ಅತ್ಯಂತ ಅರ್ಥಪೂರ್ಣವಾಗಿದೆ. ಅದು ಒಗಟಿನ ಸ್ವರೂಪವನ್ನು ಹೇಳುವ ಒಂದು ಮಹತ್ವದ ವ್ಯಾಖ್ಯೆಯಾಗಿದೆ. 'ಹಗ್ಗ ಹಾಸಿದೆ ಕೋಣ ಮಲಗಿದೆ' (ಕುಂಬಳಬಳ್ಳಿ, ಕಾಯಿ), 'ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿಯ ಲಿಂಗ' (ಹಲಸಿನ ತೊಳೆ, ಬೀಜ) ಈ ಒಗಟುಗಳನ್ನು ವಿವರಿಸಿ ಹೇಳುವ ಪ್ರಯತ್ನವನ್ನೂ ಮಾಡಿದ್ದಾರೆ. ಆದರೆ ಆ ವಿವರಣೆ ಸಮಂಜಸವೆನಿಸುವುದಿಲ್ಲ. ದೇವುಡು ಅವರು ಹಾಡಿನಲ್ಲಿರುವ ಒಗಟುಗಳನ್ನೂ ಗಮನಿಸುತ್ತಾರೆ; ಉದಾಹರಣೆಗಳನ್ನೂ ಕೊಡುತ್ತಾರೆ. ಆದರೆ ಹಾಡಿನ ಎಲ್ಲ ಪ್ರಕಾರಗಳಲ್ಲಿ ಒಗಟು ಸಾಮಾನ್ಯವಾಗಿ ಬರುವುದರಿಂದ ಹಾಡು ಒಗಟಿನ ವಿಶೇಷ ಪ್ರಕಾರವಲ್ಲವಾದುದರಿಂದ ಹಾಡಿನಲ್ಲಿರುವ ಒಗಟುಗಳನ್ನು ನಾವು ಇಲ್ಲಿ ಚರ್ಚಿಸುವುದನ್ನು ದೂರ ಇಡುವುದು ಅನಿವಾರ್ಯವಾಗಿದೆ.

ಒಗಟುಗಳ ಸಾರ್ವತ್ರಿಕತೆ, ಪ್ರಾಚೀನತೆ ಮತ್ತು ಅವುಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತು ದೇವುಡು ಅವರು ಒಂದು ಪ್ಯಾರಾವನ್ನು ಹೀಗೆ ಬರೆದಿದ್ದಾರೆ: "ಜನಜನಾಂಗಗಳಲ್ಲಿಯೂ ಈ ಒಗಟೆಗಳಿದ್ದುವು; ಇವೆ. ಸಂಹಿತೆಯಲ್ಲಿಯೂ ಒಗಟೆಗಳು ಅಲ್ಲಲ್ಲಿ ಬಂದಿವೆ. ಅಷ್ಟೇ ಅಲ್ಲ; ಬ್ರಾಹ್ಮಣಗಳಲ್ಲಿ ಯಜ್ಞೀಯ ಪಾದಾರ್ಥಗಳಲ್ಲಿ ಅಲೌಕಿಕವಾಗಿ ಅತೀಂದ್ರಿಯ ಸಾಮರ್ಥ್ಯಗಳನ್ನು ಕಂಡು ಅವುಗಳ ವಿನಿಯೋಗವನ್ನು ಗೊತ್ತು ಮಾಡುವ

ಮನೋಭಾವವೊಂದಿದೆ. ಅದು ಇಂತಹ ಒಗಟೆಗಳನ್ನು ಮಾಡುವ ಮನೋಭಾವದ ಮೂಲವೆಂದು ನಮ್ಮ ಭಾವನೆ. ಇತರ ದೇಶಗಳ ಒಗಟೆಗಳಲ್ಲಿ 'ಹಗ್ಗ ಹಾಸಿದೆ ಕೋಣ ಮಲಗಿದೆ' ಎಂಬ ಒಗಟೆಯಲ್ಲಿರುವ ಆಟವೊಂದು ಕಂಡುಬಂದರೆ, ನಮ್ಮ ದೇಶದ ಒಗಟೆಗಳಲ್ಲಿ 'ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿಯ ಲಿಂಗ' ಎಂಬ ಒಗಟೆಯಲ್ಲಿರುವಂತೆ ಆಟದ ಜೊತೆಗೆ ಪಾಟವೂ ಬೆರೆದಿರುವುದು ಕಂಡುಬರುತ್ತದೆ. ಇದು ನಮ್ಮ ಸಂಸ್ಕೃತಿಯ ಗುರುತು"(ಪು.೧೭೪).

ಒಗಟುಗಳು ವಿನೋದಪರ ಎಂಬ ಮಾತು ನಿಜವಾದುದು. ಆದರೆ ಅವು ಒಮ್ಮೊಮ್ಮೆ ತೀರ ಗಂಭೀರವಾಗಿ ಅಪರೂಪಕ್ಕೆ ಆಧ್ಯಾತ್ಮಿಕ ಸಂಗತಿಗಳನ್ನೂ ಹೊಂದಿರುತ್ತವೆ ಎಂಬುದನ್ನು ಹೇಳಲು: 'ಒಂದು ಮರದ ಮೇಲೆ ಎರಡು ಹಕ್ಕಿಗಳಿವೆ. ಒಂದು ರುಚಿಯಾದ ಹಣ್ಣುಗಳನ್ನು ತಿನ್ನುತ್ತದೆ; ಮತ್ತೊಂದು ಏನೂ ತಿನ್ನದೆ ಸುಮ್ಮನೆ ಕುಳಿತಿದೆ' ಎಂಬ ಒಗಟನ್ನು ಉದಾಹರಣೆಯಾಗಿ ಕೊಡುತ್ತಾರೆ. ಇದರಲ್ಲಿ ಜೀವಾತ್ಮ ಮತ್ತು ಪರಮಾತ್ಮ ಸಂಗತಿಗಳು ಹುದುಗಿವೆ ಎಂಬುದನ್ನು ಗುರುತಿಸುತ್ತಾರೆ. ಮತ್ತೆ ಒಗಟುಗಳಲ್ಲಿಯ ವಿಧಗಳನ್ನು ಗುರುತು ಹಚ್ಚುವ ಪ್ರಯತ್ನದಲ್ಲಿ ಒಂದು ಸಾಲಿನಲ್ಲಿ ಇಡಲು ಸಾಧ್ಯವಿರುವವುಗಳನ್ನು–ಗಾದೆಗಳಂತಿರುವ ಒಗಟುಗಳೆಂದೂ, ಎರಡು ಸಾಲಿನಲ್ಲಿ ಬರೆಯಬಹುದಾದುವನ್ನು ದ್ವಿಪದಿಗಳೆಂದೂ ಮೂರು ಸಾಲುಗಳಲ್ಲಿ ಬರೆಯ ಬಹುದಾದವುಗಳನ್ನು ತ್ರಿಪದಿಗಳೆಂದೂ ನಾಲ್ಕು ಸಾಲುಗಳಲ್ಲಿ ಬರೆಯಬಹುದಾದುವನ್ನು ಚೌಪದಿಗಳೆಂದೂ ಕರೆಯುತ್ತಾರೆ. ಅವುಗಳಿಗೆ ತಕ್ಕಂತೆ ಸಾಲುಗಳನ್ನು ಸೀಳಿ ಉದಾಹರಣೆಗಳನ್ನು ಕೊಡುತ್ತಾರೆ.

೧. ಏಕಪದಿಗಳು : (ಗಾದೆಗಳಂತಿರುವ ಒಂದು ಸಾಲಿನ ಒಗಟುಗಳು):

ಹಸುರು ಕೋಲಿಗೆ ಮುತ್ತಿನ ತುರಾಯಿ (ಈರುಳ್ಳಿ ಹೂವು)

ಹಸುರು ಗಿಡದ ಮೇಲೆ ಮೊಸರು ಚೆಲ್ಲಿದೆ (ಮಲ್ಲಿಗೆಯ ಮೆಳೆ)

ಗಾದೆಗಳಂತೆಯೇ ಒಗಟುಗಳು ಹೊಸ ಹೊಸದಾಗಿ ಹುಟ್ಟುವುದೂ ಉಂಟು:

ಬಾಯಿಲ್ಲದ ಬಳ್ಳಿ ಬಾರಿಬಾರಿಗೂ ಮಾತಾಡುತ್ತದೆ (ಟೆಲಿಫೋನ್)

ಗಾಡಿ ಗಾಡಿ ಸೌದೆ ತಿಂದು
ಭಂಡಿ ಭಂಡಿ ನೀರು ಕುಡಿದು
ಹೊಗೆಯ ಕಾರಿ ಕೂಗಿಕೊಂಡು
ಓಟ ಓಡುವ ಕುದುರೆ ಯಾವುದು । (ರೈಲು ಗಾಡಿ)

೨. ದ್ವಿಪದಿಗಳು :

ಮೊಗ್ಗರಳಿ ಹೂವಾಗಿ ಪುಷ್ಪ ತಾನಲ್ಲ
ಹಿಗ್ಗಲಿಸಿ ನೋಡಿದರೆ ಪರಿಮಳವೆ ಇಲ್ಲ (ಕೊಡೆ)

ಹನ್ನೆರಡು ಕೊಟ್ಟಿಡಿ ಮೂವತ್ತು ತೊಟ್ಟಿಲು
ಮಲಗುವರು ಮಾತ್ರ ಇಬ್ಬರೇ ಮಕ್ಕಳು (ವರ್ಷ, ತಿಂಗಳು, ದಿನ)

೩. ತ್ರಿಪದಿಗಳು :

ಕಡಿದರೆ ಹಾಲು
ಹೊಡೆದರೆ ಹಾಲು
ಬಡಿದರೆ ಸಾವಿರ ಮಕ್ಕಳು । (ಹಲಸಿನ ಹಣ್ಣು)

ಬಿಳೀಗದ್ದೆ ಕರೀಬತ್ತ
ಕಯ್ಯಾಗೆ ಹಾಕಬೇಕು
ಬಾಯ್ಯಾಗೆ ತೆಗೆಯಬೇಕು । (ಪುಸ್ತಕ ಬರೆಯುವುದು ಓದುವುದು)

೪. ಚೌಪದಿ

ಕಯ್ಯುಂಟು ಕಾಲಿಲ್ಲ ಸಿರವರಿದ ಮುಂಡ
ಮೆಯ್ಯಲ್ಲಿ ನವಗಾಯ ಒಂಬುತ್ತು ತುಂಡ
ಓಡಿಬಂದೊಯ್ಯನೇ ಹೆಗಲೇರಿಕೊಂಡ
ಕಯ್ಯಬಿಟ್ಟೆಸೆದರೆ ತಾ ಮುದುರಿಕೊಂಡ। (ಅಂಗಿ)

ಸುತ್ತು ಸುತ್ತುವುದು ವಾಲೆ ತಾನಲ್ಲ
ಚಿತ್ರ ಬರೆಯುವುದು ಕಂಟ ತಾನಲ್ಲ
ಪೆಟ್ಟಿಗೆಯಲ್ಲಿಡಲು ಆಭರಣವಲ್ಲ
ತಿಳಿದು ಹೇಳುವ (ವಾ) ಜಾಣಗರಿದಲ್ಲ। (ಹಾವು)

ಲೇಖನದ ಕೊನೆಯಲ್ಲಿ ಹೊರದೇಶದ ಕೆಲವು ಒಗಟುಗಳನ್ನೂ ಉಲ್ಲೇಖಿಸಿದ್ದಾರೆ:

ನೆಲೆಗೇ ನಿಲ್ಲದೆ ಹಾರಾಡುವುದು ಯಾವುದು: (ಗಾಳಿ)
ಹೊಡೆದಾಡಿಯೂ ಗಾಸಿಯಾದ ವೀರರು ಯಾರು? (ಹಲ್ಲು)

–ಸೆನೆಗಲ್ಲಿನ ವೋಲುಫ್‌ರವು.

ತಿಂದುಹಾಕುವ ಮೀನುಗಳ ನಡುವೆ ನಿಂತಿರುವ ವೀರನಾರು? (ನಾಲಗೆ)
ತಲೆಗೊಂದು ಟೋಪಿ ಹಾಕಿಕೊಂಡಿರುವ ಇಪ್ಪತ್ತು ಜನ ಅಣ್ಣತಮ್ಮಂದಿರು(ಬೆರಳು)

–ಸಮೋಅನ್‌ರು.

ಕುದುರೆಗೆ ಮಿಂಚಿ ಓಡಿ ನೀರು ದಾಟಿದರೂ ನೆನೆಯದೆ ಇರುವವರಾರು?
(ಸೂರ್ಯ)
ಒಬ್ಬ ತಂದೆಗೆ ಹನ್ನೆರಡು ಮಕ್ಕಳು (ಸಂವತ್ಸರ)

–ಫ್ರಾನ್‌ಸಿನವು.

ಆಗಿನ ಕಾಲಕ್ಕೆ ದೇವುಡು ಅವರು ಇಷ್ಟೆಲ್ಲ ವಿಷಯಗಳನ್ನು ಗಮನಿಸಿದ್ದು ಆಶ್ಚರ್ಯವೆನಿಸುತ್ತದೆ. ಅವರು ಒಗಟುಗಳ ಸ್ವರೂಪ ಹೇಳುತ್ತಾರೆ; ಅವುಗಳು ಪ್ರಯೋಗವಾಗುವಾಗಿನ ವ್ಯಕ್ತಿಗಳ ಮನೋಸ್ಥಿತಿಯನ್ನು ಚರ್ಚಿಸುತ್ತಾರೆ. ಒಗಟುಗಳ ಸಾರ್ವತ್ರಿಕ ಗುಣಗಳನ್ನು ಗುರುತಿಸುತ್ತಾರೆ; ಅವುಗಳ ವಿಷಯವನ್ನು ಗಮನಿಸುತ್ತಾರೆ.

ಹೊಸ ವಿಷಯವನ್ನು ಆಧರಿಸಿ ಹೊಸ ಒಗಟುಗಳು ನಿರ್ಮಾಣವಾಗುವುದನ್ನು ಉಲ್ಲೇಖಿಸುತ್ತಾರೆ. ಅವುಗಳ ರಚನೆಯನ್ನು ಇಟ್ಟುಕೊಂಡು ಒಗಟುಗಳ ಪ್ರಕಾರಗಳನ್ನು ಗುರುತಿಸುತ್ತಾರೆ. ವಿಶೇಷವಾಗಿ ಒಂದು ಸಾಲಿನಿಂದ ಹಿಡಿದು ನಾಲ್ಕು ಸಾಲಿನ ವರೆಗಿನ ಒಗಟುಗಳನ್ನು ಸಂಗ್ರಹಿಸಿ, ಸಾಲುಗಳನ್ನು ಒಡೆದು, ಬರೆದು ತೋರಿಸುತ್ತಾರೆ. ಹೊರದೇಶದ ಕೆಲ ಒಗಟುಗಳನ್ನು ಉದಾಹರಿಸುತ್ತಾರೆ. ದೇವುಡು ಅವರು ಉದಾಹರಿಸುವ ಚೌಪದಿ ರೂಪದ ಒಗಟುಗಳು ಹಾಡಿನ ಉದಾಹರಣೆಗಳಾಗಿವೆ. ಉಳಿದಂತೆ ಅವರು ಆರಿಸಿಕೊಂಡ ಎಲ್ಲ ಒಗಟುಗಳು 'ಸೂತ್ರರೂಪದ ಒಗಟು'ಗಳೇ ಆಗಿವೆ ಎಂಬುದನ್ನು ಗಮನಿಸಬೇಕು.

೧೯೭೦ರ ನಂತರ ಜಾನಪದಶಾಸ್ತ್ರದ ಅರಿವು ಮೂಡಿದ ನಂತರ ಪ್ರಕಟವಾದ ಒಗಟುಗಳ ಸಂಗ್ರಹಗಳನ್ನು ಸಂಪಾದಿಸಿ ಹೊರತಂದವರು ವಿಶ್ವವಿದ್ಯಾಲಯ, ಮಹಾವಿದ್ಯಾಲಯಗಳ ಪ್ರಾಧ್ಯಾಪಕರು. ಅವರು ಪಾಶ್ಚಾತ್ಯರಲ್ಲಿಯ ಪ್ರಕಾರಗಳನ್ನೇ ಗಮನಿಸುತ್ತಾರೆ. ಆದರೆ ದೇವುಡು ಅವರು ೧೯೩೫ ಕ್ಕಿಂತ ಮುಂಚೆ ಬರೆದ **'ಕರ್ನಾಟಕ ಸಂಸ್ಕೃತಿ'** ಕೃತಿಯ ಬರಹಗಳಲ್ಲಿ ಸ್ವತಂತ್ರವಾಗಿ ಆಲೋಚನೆ ಮಾಡುತ್ತಾರೆ ಮತ್ತು ಅನೇಕ ಹೊಸ ವಿಚಾರಗಳನ್ನು ಕೊಡುತ್ತಾರೆ.

೧೯೬೭ರಲ್ಲಿಯೇ ಜೀ.ಶಂ.ಪರಮಶಿವಯ್ಯ ಅವರು **'ಕನ್ನಡ ಒಗಟುಗಳು'** ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಆಗಿನ್ನೂ ಅವರು ವಿಶ್ವವಿದ್ಯಾಲಯವನ್ನು ಪ್ರವೇಶ ಮಾಡಿರಲೇ ಇಲ್ಲ. "ಕಳೆದ ಕೆಲವು ವರ್ಷಗಳಿಂದ ನಾನು ಹಳೆಯ ಮೈಸೂರಿನ ನಾನಾ ಕಡೆಗಳಲ್ಲಿ ಸಂಗ್ರಹಿಸಿದ ಸುಮಾರು ಒಂದು ಸಾವಿರ ಒಗಟುಗಳಲ್ಲಿ ಮುನ್ನೂರು ಒಗಟುಗಳನ್ನು ಪ್ರಸಾದ ಪತ್ರಿಕೆಯ ಜನಪದ ಸಾಹಿತ್ಯ ವಿಭಾಗಕ್ಕೆ ಅಣಿಗೊಳಿಸಬೇಕಾಯಿತು. ಅವಷ್ಟನ್ನೇ ಈ ಕಿರುಹೊತ್ತಗೆಯ ರೂಪದಲ್ಲಿ ಪ್ರಕಟಿಸುತ್ತಿದ್ದೇನೆ" (ಅರಿಕೆ, ಪು೬). ಇದು ಜೀಶಂಪ ಅವರು ಬರೆದ ಮಾಹಿತಿ. ಇದನ್ನು ಗಮನಿಸಿದರೆ ಜೀಶಂಪ ಅವರಿಗೆ ಮೊದಲಿನಿಂದಲೂ ಜನಪದ ಸಾಹಿತ್ಯದಲ್ಲಿ ಆಸಕ್ತಿ ಇತ್ತು ಎಂದು ಗೊತ್ತಾಗುತ್ತದೆ. ಇಲ್ಲಿಯ ಒಗಟುಗಳನ್ನು ಅಕಾರಾದಿಯಾಗಿ ಜೋಡಿಸಿದ್ದಾರೆ. ಹಿಂದೆ ಕ್ರಮಸಂಖ್ಯೆಗಳನ್ನು ಹಾಕಿದ್ದಾರೆ. ಉತ್ತರಗಳನ್ನು ಕೊನೆಯಲ್ಲಿ ಕ್ರಮಸಂಖ್ಯೆಗನುಸಾರವಾಗಿ ಕೊಟ್ಟಿದ್ದಾರೆ. ಜೀಶಂಪ ಅವರು ಈ ಕೃತಿಗೆ ಹಾಕಿದ ರಾಚನಿಕ ಚೌಕಟ್ಟನ್ನು ಮುಂದಿನ ಬಹುತೇಕ ಜನ ಒಗಟುಗಳ ಸಂಪಾದಕರು ಅನುಸರಿಸಿದ್ದಾರೆ. ಒಬ್ಬೊಬ್ಬರು ಮಾತ್ರ ಈ ಕ್ರಮವನ್ನು ಮುರಿಯಲೆಂಬಂತೆ ಉತ್ತರಗಳನ್ನು ಮಾತ್ರ ಆಯಾ ಪುಟಗಳಲ್ಲಿಯೇ ಅಡಿಟಿಪ್ಪಣಿಯಂತೆ ಕೊಟ್ಟಿದ್ದಾರೆ.

ಆಧುನಿಕ ಕಾಲದಲ್ಲಿ ವೈಜ್ಞಾನಿಕವಾಗಿ ಜನಪದ ಸಾಹಿತ್ಯ ಸಂಸ್ಕೃತಿಯ ಅರಿವು ಮೂಡದ ಮುನ್ನ ಡಾ. ಜೀಶಂಪ ಅವರು ಮಾಡಿದ ಕೆಲಸ ದಾಖಲಾರ್ಹವಾಗಿದೆ. ಅವರು ಈ ಕೃತಿಗೆ ಬರೆದ ಅರಿಕೆಯಲ್ಲಿ ಒಗಟುಗಳ ಕಾವ್ಯಗುಣದ ಬಗ್ಗೆ ಹೆಚ್ಚು ಆಕರ್ಷಿತರಾಗಿರುವುದು ಕಂಡುಬರುತ್ತದೆ. ಅವರು ಮೊದಲನೇ ಪ್ಯಾರಾದಲ್ಲಿಯೇ ಹೀಗೆ ಬರೆಯುತ್ತಾರೆ: "ಜನಪದ ಸಾಹಿತ್ಯದಲ್ಲಿ ಕಥೆಗಳು, ಗೀತೆಗಳು, ಗಾದೆಗಳಂತೆಯೇ ಒಗಟುಗಳೂ ಒಂದು ಪ್ರಮುಖ ಅಂಗವಾಗಿ ನಿಲ್ಲುತ್ತವೆ. ಬುದ್ಧಿಕೌಶಲವನ್ನು ಒರೆಗೆ ಹಚ್ಚಿ ನೋಡುವ ಇವುಗಳ ಸೃಷ್ಟಿಯ ಹಿನ್ನೆಲೆಯಲ್ಲಿ ವಿಶಿಷ್ಟವಾದ ಕವಿಮನೋಧರ್ಮದ ಮಿಡಿತವನ್ನು

ಕಾಣಬಹುದು. ಒಂದು ಅರ್ಥದಲ್ಲಿ ಒಂದೊಂದು ಒಗಟೂ ಒಂದು ಪುಟ್ಟ ಭಾವಗೀತೆ. ಅಪೂರ್ವವಾದ ವಸ್ತುಸಾದೃಸ್ಯ, ಕಲ್ಪನಾಸೌಂದರ್ಯಗಳ ಜೊತೆಗೆ ಆಲೋಚನೆಯ ರಸಪಾಕವೇ ಆಗಿ ಒಗಟುಗಳು ಕುತೂಹಲಕಾರಿಯಾಗಿರುತ್ತವೆ. ಏನಿಲ್ಲವೆಂದರೂ ಅವುಗಳ ರಚನಾಕೌಶಲವಾದರೂ ನಮ್ಮ ಮನಸ್ಸನ್ನು ಆಕರ್ಷಿಸಬಲ್ಲದು. ಪ್ರಾಸಾನುಪ್ರಾಸಗಳ ಬೆಡಗು, ಲಯವಿನ್ಯಾಸ, ಪದಬಂಧುರತೆಗಳ ಬೆರಗನ್ನು ಯಾರಾದರೂ ಮೆಚ್ಚಿ ತಲೆದೂಗುವಂತಿರುತ್ತದೆ" (ಅರಿಕೆ, ಪು.೧). ಒಂದೇ ಪ್ಯಾರಾದಲ್ಲಿ ಒಗಟಿನ ಸ್ವರೂಪವನ್ನು ಹೇಳಲು ಪ್ರಯತ್ನಿಸಿದಂತಿದೆ. ಅವರು ಹೇಳುವ ಒಗಟಿನ ಪ್ರಮುಖ ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು :

೧. ಜನಪದ ಸಾಹಿತ್ಯದ ಪ್ರಮುಖ ಪ್ರಕಾರ.
೨. ಬುದ್ಧಿಕೌಶಲ ಒರೆಗೆ ಹಚ್ಚಿ ನೋಡುವ ದೃಷ್ಟಿ.
೩. ಒಗಟುಗಳ ಸೃಷ್ಟಿಯ ಹಿಂದೆ ಕವಿಮನೋಧರ್ಮದ ಮಿಡಿತ ಕಾಣುವುದು:
 –ಪ್ರಾಸಾನುಪ್ರಾಸಗಳ ಬೆಡಗು, ಲಯವಿನ್ಯಾಸ, ಪದಬಂಧುತರೆಗಳ ಬೆರಗು.
೪. ಆಲೋಚನೆಯ ರಸಪಾಕ.
೫. ಅದರ ಗುಣ ಕುತೂಹಲಕಾರಿ.
೬. ಮನಸ್ಸನ್ನು ಆಕರ್ಷಿಸುವ ರಚನಾ ಕೌಶಲ.

ಈ ಮೇಲಿನ ಆರು ಅಂಶಗಳು ಒಗಟನ್ನು ಸಾಹಿತ್ಯದ ಒಂದು ಪ್ರಕಾರವಾಗಿ ನೋಡಿದ ಸಂಗತಿಗಳಾಗಿವೆ. ಜನಪದ ಸಾಹಿತ್ಯದ ಇನ್ನೊಂದು ಗುಣವೆಂದರೆ ಅದರ ಸಂಸ್ಕೃತಿಯ ಮುಗ್ಗಲು. 'ಜನಾಂಗದ ಸಂಸ್ಕೃತಿಯ ಅಧ್ಯಯನದಲ್ಲಿ ಇತರ ಸಾಹಿತ್ಯಾಂಗಗಳಂತೆಯೇ ಇದರ ಮಹತ್ವವೂ ಪ್ರಮುಖವಾದುದೇ ಆಗಿದೆ' ಎನ್ನುತ್ತಾರೆ. ಮುಂದುವರೆದು ಜನಪದ ಸಾಹತ್ಯದ ಕಥೆ, ಹಾಡು, ಗಾದೆಗಳಿಗೆ ಸಂಬಂಧಿಸಿದಂತೆ ಕೆಲಸ ನಡೆದಿದೆಯಾದರೂ ಒಗಟುಗಳಿಗೆ ಸಂಬಂಧಿಸಿದಂತೆ ಏನೇನೂ ಕೆಲಸ ನಡೆದಿಲ್ಲ ಎಂಬುದನ್ನು ಗಮನಿಸಿ, ಖೇದ ವ್ಯಕ್ತಪಡಿಸುತ್ತಾರೆ.

> ಕೊಕ್ಕುಂಟು ಕೂಗಲಾರದು
ರೆಕ್ಕೆಯುಂಟು ಹಾರಲಾರದು
ಸಕಲೆಂಟು ಧಾನ್ಯಗಳುಂಟು
ತಿನ್ನಲಾರದು. (೧೩೫)

> ಗಂಟುನೂರು ಗಜನೂರು
ಮಂಪಟನೂರು ಮನೆನೂರು
ಬಂಟನೀನಾದರೆ ತಿಳಿದ್ಹೇಳು (೧೩೫ಬ)

> ಗಿಡಮರಕ್ಕೆ ಗೆಜ್ಜೆ ಕಟ್ಟಿದೆ.(೧೩೬)

> ಗಿಡ್ಡಿ ಗುದ್ದಿದರೆ ಮನೆತುಂಬ ಮಕ್ಕಳು (೧೩೭)

> ಗುಡುಗುಡುಗುಮ್ಮ
ಗುದ್ದಲಿ ತಮ್ಮ

ಏಕೋರಾಮ
ನಾಕುಕಾಲು
ಗುಡ್ಡದಹಿಂದೆ
ಗುಂಡ್ಕಲ್ಲು ಬಿದ್ದಿದೆ (೧೩೯)

> ನೆಟ್ಟ ಮರಕ್ಕೆ ನೆರಳಿಲ್ಲ (೧೯೨, ಉ. ದಾರಿ)
> ನೋಡಿದ್ರೆ ಕಲ್ಲು/ ನೀರ ಬಿಟ್ರೆ ಮಣ್ಣು (೧೯೩, ಉ. ಸುಣ್ಣ)

ತಾವು ಸಂಗ್ರಹಿಸಿದ ಸಾವಿರಾರು ಒಗಟುಗಳಲ್ಲಿ ಅತ್ಯುತ್ತಮವಾದ ಇಂತಹ ಒಗಟುಗಳನ್ನು ಸಂಗ್ರಹಿಸಿ, ಒಂದು ಮಾದರಿ ದಾರಿಯನ್ನು ಜೀ.ಶಂ.ಪ ಅವರು ಹಾಕಿದರು ಎನಿಸುತ್ತದೆ. ಅದಕ್ಕೆ ಹಿನ್ನುಡಿ ಬರೆದ ಸಿಪಿಕೆ ಅವರು ಒಗಟುಗಳ ಗುಣಗಳನ್ನು ವಿವರವಾಗಿಯೇ ಬರೆದಿದ್ದಾರೆ. ಹೀಗೆ ಎಲ್ಲ ದೃಷ್ಟಿಯಿಂದ ಕನ್ನಡದ ಮೊದಲ ಒಗಟುಗಳ ಸಂಗ್ರಹವಾಗಿ ಜೀಶಂಪ ಅವರ ಈ ಕೃತಿ ಚಿಕ್ಕದಾದರೂ ಒಂದು ಮಹತ್ವದ ಕೃತಿ ಎನಿಸುತ್ತದೆ.

ರಾಗೌ ಅವರು ೧೯೭೦ರಲ್ಲಿ **'ನಮ್ಮ ಒಗಟುಗಳು'** ಎಂಬ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಸುಮಾರು ೫೧೦ ಒಗಟುಗಳು ಇದರಲ್ಲಿವೆ. ಕೊನೆಯಲ್ಲಿ ಒಂದೆರಡು ಪುಟಗಳಷ್ಟು ಹಾಡಿನ ರೂಪದಲ್ಲಿರುವ ಒಗಟುಗಳನ್ನೂ ಕೊಟ್ಟಿದ್ದಾರೆ. ಎಲ್ಲ ಹಾಡುಗಳ ಪ್ರಕಾರಗಳಲ್ಲಿ ಒಗಟುಳ್ಳ ನುಡಿಗಳು ಇದ್ದೇ ಇರುತ್ತವೆ. ಕಾರಣ ನಾವಿಲ್ಲಿ ಅವುಗಳನ್ನು ಗಮನಿಸುವ ಅವಶ್ಯಕತೆ ಇಲ್ಲ. ಇಲ್ಲಿರುವ ಮುಖ್ಯ ಒಗಟುಗಳೆಲ್ಲ ಸೂತ್ರರೂಪದ ಒಗಟುಗಳು. ಒಗಟುಗಳನ್ನು ಯಾವುದೇ ಬಗೆಯ ವಿಭಾಗೀಕರಣಕ್ಕೆ ಒಳಮಾಡದೆ ಅವುಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡಿದ್ದಾರೆ. ಇಲ್ಲಿನ ಒಗಟುಗಳನ್ನು ಸಂಗ್ರಹಿಸಿದ ಪ್ರದೇಶಗಳನ್ನು ಖಚಿತವಾಗಿ ಹೇಳಿಲ್ಲ. ಆದರೆ ಅಭ್ಯಾಸ ಪೂರ್ಣವಾದ ೪೯ ಪುಟಗಳ ಸುದೀರ್ಘ ಪ್ರಸ್ತಾವನೆಯನ್ನು ಬರೆದಿದ್ದಾರೆ. ಒಗಟುಗಳ ಮುಖ್ಯಗುಣಗಳನ್ನು ಗಮನಿಸಿ ರಾಗೌ ಅವರು ಹೀಗೆ ಬರೆಯುತ್ತಾರೆ : "ಆದಿವಾಸಿ ಕಂಡುಕೊಂಡ ಅಭಿವ್ಯಕ್ತಿಯ ಹಲವು ಪ್ರಕಾರಗಳಲ್ಲಿ ಒಗಟೂ ಒಂದು. ಮೂಲಭೂತವಾಗಿ ಸೃಷ್ಟಿಯೇ ಒಂದು ಪ್ರಶ್ನೆ. ಜೀವನವೇ ಒಂದು ಅರ್ಥವತ್ತಾದ ಸಮಸ್ಯೆ ಎಂಬ ಸಾಂಕೇತಿಕ ದೃಷ್ಟಿಯ ಹಿನ್ನೆಲೆಯಲ್ಲಿ ರಚಿತವಾಗಿರುವ ಇದು ಮೂಲ ನಿವಾಸಿಯ ಊಹನೆ ಪರಿಭಾವನೆಗಳನ್ನು ಬಹುಚೆನ್ನಾಗಿ ತೆರೆದು ತೋರಿಸುತ್ತದೆ. ಇದು ಅವನ ಬುದ್ಧಿ ಕುಶಲತೆಗೆ ಹಿಡಿದ ಕನ್ನಡಿ ಮಾತ್ರವಾಗಿರದೆ; ಮುಂದಿನ ಅವನ ಸಾಧನೆಯ ಹಲವು ಪುಟಗಳಿಗೆ ಬರೆದ ಮುನ್ನುಡಿಯೂ ಆಗಿದೆ. ಇದು ಸೃಷ್ಟಿಯ ಗೂಢತೆಯನ್ನು ಬಿಡಿಸುತ್ತದೆಯೊ ಇಲ್ಲವೊ, ಗುಹಾವಾಸಿಯ ರಹಸ್ಯ ಜೀವನ ಮತ್ತು ಅವನ ಸಂಪ್ರದಾಯ ಆಚಾರಗಳ ಕಡೆಗಂತು ಬೆಳಕನ್ನು ಚೆಲ್ಲುತ್ತದೆ ಎಂಬುದರಲ್ಲಿ ಸಂಶಯವಿರಲಾರದು" (ಪ್ರ.ಪು.೫). ಈ ಹೇಳಿಕೆ ರಾಗೌ ಅವರ ಒಟ್ಟು ಅನುಭವವನ್ನು ದರ್ಶಿಸುತ್ತದೆ. ಒಗಟು ಆದಿಮಾನವನು ಸೃಷ್ಟಿಯ ಅದ್ಭುತ ಸಂಗತಿಗಳ ಬಗ್ಗೆ ತೋರಿದ ಕುತೂಹಲ, ಊಹನೆಗಳ ಕೊಡುಗೆ ಎಂಬ ಮಾತು ಸರಿ ಎನಿಸುತ್ತದೆ. ಅವರು ಮುಂದುವರೆದು ಹೇಳುತ್ತಾರೆ: "ಜಗತ್ತಿನ ಎಲ್ಲ ಕಡೆಗಳಲ್ಲೂ ಸಾರ್ವತ್ರಿಕವಾಗಿ ಹರಡಿಕೊಂಡಿರುವ ಇದು ಜನಾಂಗವೊಂದರ ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯಗಳ

ಮುಪ್ಪುರಿಯಾಗಿದೆ. ಬಾಹ್ಯಾಂತರಗಳ ಸಮಯೋಚಿತ ಪ್ರತೀಕವಾಗಿದೆ. ಸಾಮಾನ್ಯ ಜನತೆಯ ಬುದ್ಧಿವೈಭವ, ಹಾಸ್ಯಪ್ರಿಯತೆ, ಚತುರೋಕ್ತಿ, ವಿಡಂಬನ ಸ್ವಭಾವ, ಬೋಧನ ಮನೋಧರ್ಮ ಮತ್ತು ರಚನಾ ಸಾಮರ್ಥ್ಯಗಳನ್ನು ಅತ್ಯಂತ ವರ್ಣರಂಜಿತವಾಗಿ ಚಿತ್ರಿಸಲು ಯತ್ನಿಸುತ್ತದೆ ಒಗಟು. ಇಂಥ ಒಗಟಿನ ಅಧ್ಯಯನ ದೇಶವಿದೇಶಗಳ ಸಾಂಸ್ಕೃತಿಕ ಸಂಬಂಧಕ್ಕೆ ಹೊಸ ಗವಾಕ್ಷವೊಂದನ್ನು ತೆರೆಯುತ್ತದೆ. ಮಾನವಶಾಸ್ತ್ರ ಮತ್ತು ಭಾಷಾಶಾಸ್ತ್ರಗಳ ತೌಲನಿಕ ಸಂಶೋಧನಾ ವಿಧಾನಗಳಿಗೆ ಹೊಸ ಮೈಲುಗಳಲ್ಲುಗಳನ್ನು ನಿಲ್ಲಿಸಿ, ಪರಿಭಾವನೆಯ ವಿನೂತನ ಕೋಶಗಳನ್ನು ಸೃಜಿಸುತ್ತದೆ" (ಪ್ರ.ಪು.೭). ಈ ಮಾತು ಒಗಟಿನ ಒಟ್ಟು ಗುಟ್ಟಗಳನ್ನು ಬಿಚ್ಚಿಡುತ್ತದೆ. 'ಸಾಮಾನ್ಯ ಜನತೆಯ ಬುದ್ಧಿವೈಭವ, ಹಾಸ್ಯಪ್ರಿಯತೆ, ಚತುರೋಕ್ತಿ, ವಿಡಂಬನ ಸ್ವಭಾವ, ಬೋಧನ ಮನೋಧರ್ಮ ಮತ್ತು ರಚನಾ ಸಾಮರ್ಥ್ಯಗಳನ್ನು ಅತ್ಯಂತ ವರ್ಣರಂಜಿತವಾಗಿ ಚಿತ್ರಿಸಲು ಯತ್ನಿಸುತ್ತದೆ ಒಗಟು.' ಈ ಹೇಳಿಕೆ ಒಗಟಿನ ಒಟ್ಟು ಮೂಲಭೂತ ಗುಣಗಳನ್ನು ಬಿಚ್ಚಿಡುತ್ತದೆ.

ಆದಿಮಾನವರ ಆಲೋಚನೆಗಳಿಗೆ, ಅವರ ಸಂಸ್ಕೃತಿಗೆ ಸಂಬಂಧಿಸಿದ ಕೆಲ ಒಗಟುಗಳನ್ನು ಉದಾಹರಿಸಿ ವಿವರಿಸಿದ್ದರೆ ಒಗಟುಗಳ ಮಹತ್ವ ಇನ್ನಷ್ಟು ಸ್ಪಷ್ಟವಾಗುತ್ತಿತ್ತು. ಆದರೆ ರಾಗೌ ಅವರ ಒಟ್ಟು ಒಗಟುಗಳ ಆಯ್ಕೆ ಉತ್ತಮವಾಗಿದೆ.

ಸೊಸೆಯೆ ಸೊಸೆಯೆ
ಸೊಗಾಲದ ಮುತ್ತೆ
ಇಂಬೆ ವನವೆ ಈಶ್ವರಿ ಬೇರೆ
ಅಟ್ಟ ಅಡುಗೆ ಎಲ್ಲಿ ಮಡಗಿದ್ದಿ
ಅಟ್ಟಕ್ಕೆ ಹಾಕಲಿಲ್ಲ
ಬೆಟ್ಟಕ್ಕೆ ತುಂಬಲಿಲ್ಲ
ನಮ್ಮಪ್ಪನವರ ಮನೆಗೆ ಹೊರಿಸಲಿಲ್ಲ
ಹೆತ್ತಮ್ಮ ನಿನ್ನ ಅರಮನಿಗೆ **(ತಲೆ ಕೂದಲು)**

ಸಾರಿ ಬಂದಾದೆ ಸಣ್ಣ ಸಾವಂತಿಗೆ ಹೂವ್ಗೆ
ಊರಿಗೆ ಬಂದಾದೆ ದೊಡ್ಡ ಹಬ್ಬ
ಕೋಳಿ ಕೂಗೋ ಹೊತ್ತಿಗೆ ಬಂದಾದೆ
ಪುಟ್ಟ ಕುಂಬಳಕಾಯ್ಗೆ
ಸಾರಿಸು ಸಗಣಿ ಹಾಕು
ಸಣ್ಣ ಸಾವಂತಿಗೆ ಮುಡಿಸು ಅಂತದೆ **(ದೀಪಾವಳಿ)**

'ನಮ್ಮ ಒಗಟುಗಳು' ಸಂಗ್ರಹದ ಒಗಟುಗಳನ್ನು ಗಮನಿಸಿದರೆ ಇವುಗಳನ್ನು ಕವಿತೆಯ ರೂಪದಲ್ಲಿ ಚರಣಗಳನ್ನು ಸೀಳಿ ಮುದ್ರಿಸಿದ್ದಾರೆ. ಹೀಗಾಗಿ ಇವುಗಳ ರೂಪ ಕವಿತೆಯಂತೆ ಕಾಣುತ್ತಿದೆ. ಈ ಸಂಗ್ರಹದಲ್ಲಿಯ ಕೆಲವು ಒಗಟುಗಳು ಉತ್ತರ ಕರ್ನಾಟಕದಲ್ಲೂ ಪ್ರಚಾರದಲ್ಲಿವೆ ಎನಿಸುತ್ತದೆ. ಆದರೆ ಈ ಮೇಲೆ ಉಲ್ಲೇಖಿಸಿದಂತಹ ಅನೇಕ ಒಗಟುಗಳು ಪ್ರಸ್ತುತ ಸಂಗ್ರಹದಲ್ಲಿವೆ. ಇಂತಹ ಒಗಟುಗಳ ವಿವರಣೆ, ವಿಮರ್ಶೆ, ಅವುಗಳ ಸಾಂಸ್ಕೃತಿಕ

ಹಿನ್ನೆಲೆ ಮುಂತಾದವುಗಳ ಚರ್ಚೆ ವಿಮರ್ಶೆ ನಡೆಯಬೇಕಾದುದು ಅವಶ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರದೇಶವಾರು, ಜಿಲ್ಲಾವಾರು ಒಗಟುಗಳ ಅಧ್ಯಯನ ನಡೆಯಬೇಕಾದುದು ಅವಶ್ಯವೆನಿಸುತ್ತದೆ.

ಇದರ ನಂತರ ೧೯೭೦ ರಲ್ಲಿ ಪ್ರೊ. ಸುಧಾಕರ ಅವರು **'ಜನಪದ ಬೆಡಗಿನ ವಚನಗಳು'** ಎಂಬ ಒಗಟುಗಳ ಸಂಗ್ರಹವನ್ನು ಸಂಪಾದಿಸಿದ್ದು, ಇದನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟ ಮಾಡಿದೆ. ಬಹುಶಃ ಮೈಸೂರು ವಿ.ವಿ.ಯಿಂದ ಪ್ರಕಟವಾದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಮೊದಲ ಸಂಗ್ರಹ ಇದಾಗಿರಬೇಕೆನಿಸುತ್ತದೆ. ಅವರು ಆ ಸಂಗ್ರಹಕ್ಕೆ **'ಜನಪದ ಬೆಡಗಿನ ವಚನಗಳು'** ಎಂದು ಹೆಸರಿಟ್ಟು ಕರೆದಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ ಡಾ. ಜೀಶಂಪ ಅವರ 'ಕನ್ನಡ ಒಗಟುಗಳು' ಕೃತಿಗೆ ಹಿನ್ನುಡಿ ಬರೆದಿರುವ ಡಾ. ಸಿಪಿಕೆ ಅವರು ಅದನ್ನು 'ಒಗಟುಗಳು' ಎಂದು ಒಂದು ಲೇಖನದ ರೂಪದಲ್ಲಿ ತಮ್ಮ 'ಜಾನಪದ ಪ್ರತಿಭೆ' (೧೯೬೯) ಕೃತಿಯಲ್ಲಿ ಪ್ರಕಟಿಸಿದ್ದಾರೆ. ಆ ಹಿನ್ನುಡಿಯಲ್ಲಿ ಸಿಪಿಕೆ ಅವರು – "ಶರಣರ ವಚನಗಳಲ್ಲಿ ಮೈದೋರಿದ ಒಗಟುಗಳಿಗೆ 'ಬೆಡಗಿನ ವಚನಗಳು' ಎಂಬ ವಿಶೇಷಾಭಿಧಾನವುಂಟು" ಎಂದು ಬರೆದಿದ್ದಾರೆ. ಬಹುಶಃ ಪ್ರೊ. ಸುಧಾಕರ ಅವರು ಈ ಮಾತನ್ನು ಗಮನಿಸಿ, ತಮ್ಮ ಸಂಗ್ರಹಕ್ಕೆ ಒಗಟುಗಳನ್ನು 'ಜನಪದ ಬೆಡಗಿನ ವಚನಗಳು' ಎಂದು ಹೆಸರಿಟ್ಟುಕೊಂಡಂತೆ ತೋರುತ್ತದೆ. ಕೆಲ ಸಂಗತಿಗಳಲ್ಲಿ ಒಗಟುಗಳಿಗೂ ಬೆಡಗಿನ ವಚನಗಳಿಗೂ ಹೋಲಿಕೆ ಕಂಡುಬರುವುದು ಸಹಜ. ಕಾವ್ಯದ ಬಹುತೇಕ ಮಾದರಿಗಳಲ್ಲಿ ಒಗಟು ಮಾದರಿಗಳು ಬಳಕೆಯಾಗಿವೆ. ಹಾಗೆಯೇ ವಚನಗಳಲ್ಲೂ ಒಗಟು ಮಾದರಿಗಳು ಬಳಕೆಯಾಗಿರಬಹುದು. ಹಾಗೆಂದ ಮಾತ್ರಕ್ಕೆ ಒಗಟುಗಳನ್ನು 'ಜನಪದ ಬೆಡಗಿನ ವಚನಗಳು' ಎಂದು ಹೆಸರಿಟ್ಟುಕೊಂಡಿರುವುದು, ಮತ್ತು ಹಾಗೆ ಸಾಧಿಸಲು ಹೊರಟಿರುವುದು ಒಂದು ಆವೇಶದ ಕೆಲಸವೆಂದೇ ಹೇಳಬೇಕಾಗುತ್ತದೆ. ಒಗಟುಗಳನ್ನು 'ಜನಪದ ಬೆಡಗಿನ ವಚನಗಳು' ಎಂದೂ ಬೆಡಗಿನ ವಚನಗಳನ್ನು 'ಜನಪದ ಒಗಟುಗಳು' ಎಂದೂ ಕರೆಯುವುದು ಸರಿಯಾದ ಕ್ರಮವಲ್ಲ. 'ವಚನಕಾರರ ಬೆಡಗಿನ ವಚನಗಳ ಮೂಲ ಒಗಟುಗಳೇ' ಎಂಬುದು ಸುಧಾಕರ ಅವರ ಅಭಿಪ್ರಾಯ. 'ಬೆಡಗಿನ ವಚನಗಳು ಒಗಟುಗಳ ಪ್ರಕಾರಕ್ಕೆ ಋಣಿಯಾಗಿರಬೇಕು ಅಥವಾ ಒಗಟುಗಳು ವಚನ ಸಾಹಿತ್ಯ ಪ್ರಕಾರಕ್ಕೆ ಅದರಲ್ಲೂ ಬೆಡಗಿನ ವಚನಗಳಿಗೆ ಮೂಲ ಸೆಲೆಯಾಗಿರಬೇಕು ಎನಿಸುತ್ತದೆ' (ಪ್ರ.ಪು.೨೧). 'ಒಗಟುಗಳು ವಚನಗಳ ಹಾಗೆ ಇತ್ತ ಪೂರ್ಣ ಗದ್ಯವೂ ಅಲ್ಲ; ಅತ್ತ ಪೂರ್ಣ ಪದ್ಯವೂ ಅಲ್ಲ, ಮಧ್ಯಂತರದಲ್ಲಿ ನಿಲ್ಲುವಂಥವು. ಗದ್ಯದ ಸರಳತೆ ನೇರತೆಯೂ ಇದೆ; ಪದ್ಯದ ಲಯಬದ್ಧತೆ ತೀವ್ರತೆಯೂ ಇದೆ' (ಪ್ರ.ಪು.೩೮–೩೯).

ಪ್ರೊ. ಸುಧಾಕರ ಅವರ ಈ ಮಾತುಗಳಲ್ಲಿ ಅಲ್ಪಮಟ್ಟಿನ ಸತ್ಯಾಂಶ ಅಡಗಿದೆ. ಆದರೆ ಒಗಟಿನ ಮಾದರಿ ವಚನಕಾರರಿಗೆ ಪ್ರೇರಣೆಯಾಗಿದ್ದರೂ ಎರಡೂ ಒಂದೇ ಆಗಿರಲು ಸಾಧ್ಯವಿಲ್ಲ. ಬೆಡಗಿನ ವಚನಗಳು ಹೆಚ್ಚಾಗಿ ಆಧ್ಯಾತ್ಮಿಕ ಅನುಭವಗಳನ್ನು ಗಂಭೀರವಾಗಿ ನಿರೂಪಿಸುತ್ತವೆ. ಒಗಟುಗಳು ಮನೋರಂಜನೆ ಮಾಡುತ್ತಲೇ ಬದುಕಿನ ಅರಿವನ್ನು ವಿಸ್ತರಿಸುವ, ಬುದ್ಧಿಗೆ ಕೆಲಸ ಕೊಟ್ಟು ಜಾಣತನವನ್ನು ಹೆಚ್ಚಿಸುವ ಉದ್ದೇಶವನ್ನು

ಹೊಂದಿವೆ. ಅಂತರಂಗದ ಅರಿವನ್ನು ಹೆಚ್ಚಿಸುವ ಗಂಭೀರಸ್ವಭಾವ ಬೆಡಗಿನ ವಚನಗಳದು. ಹೀಗಾಗಿ ರಂಜನೀಯ ಸ್ವಭಾವದ ಒಗಟುಗಳಿಗಿಂತ ಬೆಡಗಿನ ವಚನಗಳ ಸ್ವಭಾವ ತೀರಭಿನ್ನವಾದುದಾಗಿದೆ. ಆದರೆ ಒಗಟುಗಳ ಛಾಯೆ ವಚನಗಳಲ್ಲಿ ಕಾಣುತ್ತದೆ ಎಂಬ ಮಹತ್ವದ ಸಂಗತಿಯನ್ನು ಪ್ರೊ.ಸುಧಾಕರ ಅವರು ಕೊಟ್ಟ ಮಹತ್ವದ ಸೂಚನೆಯಾಗಿದೆ. ಈ ಕೃತಿಗಿಂತ ಮುಂಚೆ ಪ್ರಕಟವಾದ 'ನಮ್ಮ ಗಾದೆಗಳು'(೧೯೬೯) ಕೃತಿಯ ಪ್ರಸ್ತಾವನೆಯಲ್ಲಿ ರಾಗೌ ಅವರು ಗಾದೆಗಳ ಸ್ವರೂಪ ವಚನಗಳಿಗೆ ಹೋಲುತ್ತದೆ ಎಂಬ ಮಹತ್ವದ ಮಾತನ್ನು ಆಡಿದ್ದರು. ವಚನ ಸಾಹಿತ್ಯಕ್ಕೆ ಹೀಗೆ ಜನಪದ ಸಾಹಿತ್ಯದ ಯಾವುದೋ ಒಂದು ಪ್ರಕಾರ ಪ್ರೇರಣೆಯಾಗಿರಬೇಕೆಂಬ ಸಂಗತಿಗಿಂತ ಜನಪದ ಸಾಹಿತ್ಯದ ಬಹುತೇಕ ಪ್ರಕಾರಗಳ ಪ್ರಭಾವ ಅವುಗಳ ಮೇಲೆ ಆಗಿದೆ ಎಂದು ಹೇಳುವುದು ಹೆಚ್ಚು ಸರಿಯಾದುದು ಎಂಬ ಅಭಿಪ್ರಾಯಗಳೆಲ್ಲ ಆಗಲೇ ಮೂಡಿದ್ದವು. ಬಹುಶಃ ಆ ಸಂಗತಿಯ ಹಿನ್ನೆಲೆಯಲ್ಲಿ ಪ್ರೊ. ಸುಧಾಕರ ಅವರು ಸ್ವಲ್ಪ ಭಾವಾವೇಶದಲ್ಲಿ ಒಗಟುಗಳೇ ಬೆಡಗಿನ ವಚನಗಳಿಗೆ ಮೂಲವೆಂದು ಸಾಧಿಸಲು ಹೋಗಿದ್ದಾರೆನಿಸುತ್ತದೆ. ಈ ಆವೇಶದಲ್ಲಿಯೇ ಅವರು ಒಗಟುಗಳ ತಮ್ಮ ಸಂಗ್ರಹಕ್ಕೆ 'ಜನಪದ ಬೆಡಗಿನ ವಚನಗಳು' ಎಂದು ಹೆಸರಿಟ್ಟಿರದ್ದಾರೆ.

ಇಲ್ಲಿಯ ಒಗಟುಗಳನ್ನು ಸಂಗ್ರಹಿಸಿದ ಪ್ರಾದೇಶಿಕ ವಿಸ್ತಾರವನ್ನು ಸಂಪಾದಕರು ಹೀಗೆ ವಿವರಿಸಿದ್ದಾರೆ: 'ಇವುಗಳಲ್ಲಿ ಮುಕ್ಕಾಲು ಪಾಲು ಒಗಟುಗಳು ನನ್ನ ಹುಟ್ಟೂರಾದ ಎಣ್ಣೆಗೆರೆಯ (ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ) ಸುತ್ತಮುತ್ತ ಸಂಗ್ರಹಿಸಿದಂಥವು. ಇನ್ನು ಕಾಲುಭಾಗ, ರುದ್ರಪಟ್ಟಣ (ಅರಕಲಗೂಡು ತಾಲ್ಲೂಕು), ಬೇಗೂರು (ಗುಂಡ್ಲುಪೇಟೆ ತಾಲ್ಲೂಕು) ಮತ್ತು ಯಳಂದೂರುಗಳಲ್ಲಿ ಸಂಗ್ರಹಿಸಿದಂಥವು"(ಅರಿಕೆ, ಪು.೧೦).

ಸುಧಾಕರ ಅವರು ಬರೆದಿರುವ ೩೦ ಪುಟಗಳ ಪ್ರಸ್ತಾವನೆ ಆಗಿನ ಕಾಲಕ್ಕೆ ಬಂದಿರುವ ಒಗಟುಗಳನ್ನು ಕುರಿತ ವಿಸ್ತಾರವಾದ ಚರ್ಚೆವುಳ್ಳ ಪ್ರಸ್ತಾವನೆಯಾಗಿದೆ. ಅವರು ಮೊದಲಿಗೆ ಗ್ರೀಕ ಪುರಾಣಗಳಲ್ಲಿ, ಬೈಬಲ್‌ನಲ್ಲಿ, ವೇದಗಳಲ್ಲಿ, ಮನುಸ್ಮೃತಿಯಲ್ಲಿ ಒಗಟುಗಳ ಮಾದರಿಗಳು ಕಾಣಿಸುತ್ತವೆಂಬ ಮಾತುಗಳನ್ನು ಬರೆಯುತ್ತಾರೆ. ನಂತರ ಕನ್ನಡಕ್ಕೆ ಬಂದು ಕವಿರಾಜಮಾರ್ಗಕಾರ ಮತ್ತು ಕಾವ್ಯಾವಲೋಕನಕಾರರು 'ಹೇಳಿಕೆ' ಪ್ರಕಾರಗಳನ್ನು ಹೇಳುತ್ತಾರೆ ಎಂದು, ಅವು ಒಗಟುಗಳಂತೆ ತೋರುವುದನ್ನು ಭಾವಿಸಿ ಉಲ್ಲೇಖಿಸುತ್ತಾರೆ. ಮುಂದೆ ಕಂತಿ ಹಂಪರ ಸಮಸ್ಯೆಗಳಲ್ಲಿ, ಅಕ್ಕ ಅಲ್ಲಮರ ವಚನಗಳಲ್ಲಿ, ಕನಕ–ಪುರಂದರರ ಕೀರ್ತನೆಗಳಲಿ, ಸರ್ವಜ್ಞನ ವಚನಗಳಲ್ಲಿ ಮೈದೋರಿದವು ಎನ್ನುತ್ತಾರೆ. ನಡುಗನ್ನಡದಲ್ಲಿ ಬರುವ ವಚನಕಾರರಿಗೆ, ಕೀರ್ತನಕಾರರಿಗೆ ಸರ್ವಜ್ಞನಿಗೆ 'ಜನಪದ ಜೀವನದಲ್ಲಿ ಜಾಗರವಾಡುತ್ತಿದ್ದ ಒಗಟುಗಳೇ ಸ್ಫೂರ್ತಿ ಸೆಲೆಯಾಗಿರಬಹುದೆ?' ಎಂಬ ಪ್ರಶ್ನೆಯನ್ನು ಹಾಕಿಕೊಂಡು, ಅದೇ ಉತ್ಸಾಹದಲ್ಲಿ ಅಕ್ಕ–ಅಲ್ಲಮರ ಬೆಡಗಿನ ವಚನಗಳಿಗೆ ಜನಪದ ಒಗಟುಗಳೆ ಉಗಮಸ್ಥಾನ ಆಗಿರಬೇಕು ಎಂದುಕೊಳ್ಳುತ್ತಾರೆ. ಈ ಚರ್ಚೆಯನ್ನೇ ಮುಂದುವರೆಸಿ ಡಾ. ಎಲ್. ಬಸವರಾಜು, ಡಿ.ಎಲ್.ಎನ್., ಎಂ.ಆರ್.ಶ್ರೀನಿವಾಸಮೂರ್ತಿ, ಎಂ. ಚಿದಾನಂದಮೂರ್ತಿ ಇವರುಗಳ 'ಜನಪದ ಸಾಹಿತ್ಯದ ಮೂಲ ಪ್ರಭಾವವೇ ವಚನಗಳ ಉಗಮಕ್ಕೆ ಕಾರಣವಾಗಿರಬಹುದು' ಎಂಬ ಹೇಳಿಕೆಗಳನ್ನು ಗಮನಿಸುತ್ತಾರೆ.

ಮುಂದುವರೆದು ತಾವು ಜನಪದ ಗಾದೆಗಳಂತೆ ತೋರುವ ಅಥವಾ ಗಾದೆಗಳನ್ನೇ ತಮ್ಮ ವಚನಗಳಲ್ಲಿ ಬಳಸಿದವರ ಮಾತುಗಳನ್ನು ಗುರುತಿಸಿ ಉಲ್ಲೇಖಿಸುತ್ತಾರೆ. ನಂತರ ಬೆಡಗಿನ ವಚನಗಳ ಸಾಲುಗಳಿಗೂ ಜನಪದ ಒಗಟುಗಳ ಸಾಲುಗಳಿಗೂ; ಮುಂದುವರೆದು ಒಂದೆರಡು ಬೆಡಗಿನ ವಚನಗಳಿಗೂ ಇಡಿಯಾಗಿ ಒಂದೆರಡು ಒಗಟುಗಳಿಗೂ ಸಾಮ್ಯತೆ ಇರುವುದನ್ನು ಗುರುತಿಸುತ್ತಾರೆ. ಕೇವಲ ವಚನಗಳಿಗೆ ಅಷ್ಟೆ ಅಲ್ಲ ಇಡೀ ಕನ್ನಡ ಸಾಹಿತ್ಯದ ಮೇಲೆಯೇ ಜನಪದ ಸಾಹಿತ್ಯದ ಪ್ರಭಾವವಿರುವುದು ಸಹಜ. ಇದು ಪ್ರಪಂಚದ ತುಂಬ ಕಾಣುವ ಸಂಗತಿ. ಒಂದು ಭಾಷೆಯಲ್ಲಿರುವ ಜನಪದ ಸಾಹಿತ್ಯದ ಸತ್ವವನ್ನು ಹೀರಿಕೊಂಡೇ ಆಯಾ ಭಾಷೆಯ ಶಿಷ್ಟಸಾಹಿತ್ಯ ನಿರ್ಮಾಣವಾಗುತ್ತಿರುತ್ತದೆ. ಈ ಮಾತಿಗೆ ಬೆಡಗಿನ ವಚನಗಳೇನೂ ಹೊರತಾಗಿರಲಾರವು.

ಪ್ರೊ. ಸುಧಾಕರ ಅವರ ಒಂದು ಒಳ್ಳೆಯ ಪ್ರಯತ್ನವೆಂದರೆ ಒಗಟುಗಳ ಸ್ವರೂಪವನ್ನು ಹೇಳುವ ವಿದ್ವಾಂಸರ ಹೇಳಿಕೆಗಳನ್ನು ಒಂದೆಡೆ ಕೊಡುತ್ತ ಕನ್ನಡಿಗರ ಹೇಳಿಕೆಗಳನ್ನೂ ಉಲ್ಲೇಖಿಸುವು

ದುರ್ಗಾ ಭಾಗವತ – ಗೂಢತೆ ಒಗಟುಗಳ ಪ್ರಧಾನ ಲಕ್ಷಣ.

ಜೇಮ್ಸ್ ಎ. ಕೆಲ್ಲೊಸ – ಊಹೆಯಿಂದ ಬಿಡಿಸಬೇಕಾದ ಸಂದಿಗ್ಧವಾದ ಹೇಳಿಕೆ...ಇದು ರೂಪಕ ಮೂಲ.

ದೆವುಡು ನರಸಿಂಹಶಾಸ್ತ್ರಿ– 'ಕಣ್ಣಾಮುಚ್ಚಾಲೆಯ ಕಾವ್ಯಸ್ವರೂಪವೇ ಒಗಟು'.

ಸಿಪಿಕೆ– 'ಒಂದು ವಸ್ತುವನ್ನು ಮೊತ್ತೊಂದು ವಸ್ತುವಿನ ವ್ಯಾಜದಿಂದ ಚಮತ್ಕಾರ ಯುತವಾಗಿ ವರ್ಣಿಸುವುದು, ಆ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು ಒಗಟು'.

ಗೊರೂರು ರಾಮಸ್ವಾಮಿ ಅಯ್ಯಂಗಾರ– 'ಒಂದು ವಸ್ತುವನ್ನು ಚಮತ್ಕಾರಯುತವಾಗಿ ಕೇಳುವವರ ಬುದ್ಧಿ ಭ್ರಮಿಸುವಂತೆ ಪದಾರ್ಥಾಂತರದಿಂದ ವರ್ಣಿಸಿ ಅದನ್ನು ಗುರುತಿಸುವಂತೆ ಹೇಳುವುದು ಒಗಟೆಯ ರಹಸ್ಯ'.

ಜೀಶಂಪ– 'ಬುದ್ಧಿಕೌಶಲವನ್ನು ಒರೆಗೆ ಹಚ್ಚಿ ನೋಡುವ ಇವುಗಳ ಸೃಷ್ಟಿಯ ಹಿನ್ನೆಲೆಯಲ್ಲಿ ವಿಶಿಷ್ಟವಾದ ಕವಿ ಮನೋಧರ್ಮದ ಮಿಡಿತವನ್ನು ಕಾಣಬಹುದು. ಒಂದು ಅರ್ಥದಲ್ಲಿ ಒಂದೊಂದು ಒಗಟೂ ಒಂದು ಪುಟ್ಟ ಭಾವಗೀತೆ'.

ಪಾಶ್ಚಾತ್ಯರ ಉಲ್ಲೇಖಗಳಿಂದಲೇ ಬೀಗುತ್ತಿದ್ದ ಕಾಲದಲ್ಲಿ ಪ್ರೊ. ಸುಧಾಕರ ಅವರು ಕನ್ನಡಿಗರ ಸ್ವತಂತ್ರ ವಿಚಾರಗಳನ್ನು ಗುರುತಿಸಿ, ನಿಜವಾಗಿ ಕನ್ನಡ ಒಗಟುಗಳ ಸ್ವರೂಪವನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸಿರುವುದು ಸ್ವಾಗತಾರ್ಹವಾಗಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ಸುಧಾಕರ ಅವರು ಅನುಬಂಧದಲ್ಲಿ ಕೆಲವು ಒಗಟುಗಳಿಗೆ ಅವರು ಕೊಡುವ ಕಥೆಗಳ ವಿವರಗಳನ್ನು ಗಮನಿಸಿದರೆ, ಇವೆಲ್ಲ ಜನಪದ 'ಒಗಟು ಕಥೆ'ಗಳಲ್ಲಿ ಬರುವ ಒಗಟುಗಳೇ ಆಗಿವೆ. ಮತ್ತು ಈ

ಕಥೆಗಳೆಲ್ಲ ಬೇತಾಳನ ಕಥೆಗಳ ಸ್ವರೂಪದ 'ಒಗಟು ಕಥೆಗಳು' ಆಗಿವೆ. ಅದಕ್ಕಾಗಿ ಅವು ಒಗಟುಗಳಿಗೆ ಉದಾಹರಣೆಗಳಾಗಲಾರವು.

'ಉತ್ತರ ಕರ್ನಾಟಕದ ಒಗಟುಗಳು' (೧೯೭೪) ಎಂಬುದು ಡಾ. ಎಂ.ಎಸ್.ಲಠ್ಠೆ ಅವರು ಸಂಪಾದಿಸಿದ ಒಂದು ಸಂಗ್ರಹ. ಇದರಲ್ಲಿ ಹೈದ್ರಾಬಾದ ಕರ್ನಾಟಕ ಮತ್ತು ಬಾಂಬೆ ಕರ್ನಾಟಕದ ೭೮೦ ಸೂತ್ರ ರೂಪದ ಒಗಟುಗಳಿವೆ. ಕೊನೆಯಲ್ಲಿ ಕೆಲವು ಹಾಡಿನ ರೂಪದ ಒಗಟುಗಳೂ ಇವೆ. ಈ ಕೃತಿಯ ವಿಶೇಷತೆ ಎಂದರೆ ಅಪರೂಪಕ್ಕೆ ೨೭ ವಿವರಣಾತ್ಮಕ ಒಗಟುಗಳನ್ನೂ ಕೊಟ್ಟಿರುವುದು. ಇಲ್ಲಿಯವರೆಗೆ ಪ್ರಕಟವಾದ ಒಗಟುಗಳ ಸಂಗ್ರಹಗಳಲ್ಲಿ 'ವಿವರಣಾತ್ಮಕ ಒಗಟುಗಳು' ಪ್ರಕಟವಾಗಿರಲಿಲ್ಲ ಎಂಬುದು ಮುಖ್ಯ ಸಂಗತಿ.

ಡಾ. ಎಂ.ಎಸ್. ಲಠ್ಠೆ ಅವರು ಕಲಬುರ್ಗಿಯಲ್ಲಿದ್ದುಕೊಂಡು ೧೯೭೪ರಿಂದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಸಂಪಾದಿಸಿ ಹೊರತರಲು ಪ್ರಾರಂಭಿಸಿದರು. ಈ ಕೆಲಸ ಅವರು ಬದುಕಿರುವವರೆಗೆ ನಿರಂತರವಾಗಿ ನಡೆಯಿತು. ಉತ್ತರಕರ್ನಾಟಕದಿಂದ ಜನಪದ ಸಾಹಿತ್ಯ ಸಂಗ್ರಹಗಳು ಪ್ರಕಟವಾಗಿರದೇ ಇರುವ ಹಿನ್ನೆಲೆಯಲ್ಲಿ, ತಮ್ಮ ಜಿಲ್ಲೆಯಾದ ಬೆಳಗಾಂವದಿಂದ, ಮತ್ತು ಅವರಿಗೆ ಆಗಿನ ಕಾಲಕ್ಕೆ ಸಹಜವಾಗಿ ಸಂಪರ್ಕಿಸಲು ಸಾಧ್ಯವಾಗುವ ಬಿಜಾಪೂರ ಜಿಲ್ಲೆಯಿಂದ ಕೆಲಕೆಲ ಮಾದರಿಗಳನ್ನು ತರಿಸಿಕೊಂಡು ವ್ಯಾಪಕವಾಗಿ ಕಲಬುರಗಿ ಮತ್ತು ಹೈ.ಕ.ಭಾಗದ ಜಿಲ್ಲೆಗಳಿಂದ ಕೆಲ ಮಾದರಿಗಳನ್ನು ಸಂಗ್ರಹಿಸಿ, ತಮ್ಮ ಸಂಗ್ರಹಗಳನ್ನು ಪ್ರಕಟಿಸುವಾಗ 'ಉತ್ತರ ಕರ್ನಾಟಕ' ಎಂಬ ಹೆಸರನ್ನು ಜೊತೆಗೆ ಸೇರಿಸತೊಡಗಿದರು. ಆ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಗೆ **'ಉತ್ತರಕರ್ನಾಟಕದ ಒಗಟುಗಳು'** ಎಂದು ನಾಮಕರಣ ಮಾಡಿದ್ದು. ಅವರು ಒಂದೇ ವರ್ಷ ೧೯೭೪ರಲ್ಲಿ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಗಟು, ಗಾದೆ, ಒಡಪು ಈ ಮೂರು ಜನಪದ ಸಾಹಿತ್ಯ ಸಂಗ್ರಹಗಳನ್ನು ಹೊರತಂದರು. ಈ ಮೂರೂ ಸಂಗ್ರಹಗಳಿಗೆ 'ಉತ್ತರ ಕರ್ನಾಟಕ' ಎಂಬ ಪ್ರಾದೇಶಿಕ ವ್ಯಾಪ್ತಿಯನ್ನು ಸೂಚಿಸುವ ಪದವನ್ನು ಬಳಸಿದ್ದಾರೆ. ತಾವು ಒಗಟುಗಳನ್ನು ಸಂಗ್ರಹಿಸಿದ ಪ್ರದೇಶವನ್ನು ಡಾ। ಲಠ್ಠೆ ಅವರು ಹೀಗೆ ವಿವರಿಸಿದ್ದಾರೆ: 'ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಸುಮಾರು ೭೮೦ ಒಗಟುಗಳನ್ನು ಇಲ್ಲಿ ಕಲೆಹಾಕಲಾಗಿದೆ. ಇವು ಕಲಬುರ್ಗಿ, ಬೆಳಗಾವಿ, ಧಾರವಾಡ, ವಿಜಾಪೂರ, ಬೀದರ ಜಿಲ್ಲೆಗಳ ಪ್ರಾದೇಶಿಕ ಒಗಟುಗಳಾಗಿವೆ' (ಪ್ರ. ಪು.೭).

ಒಗಟುಗಳ ಸ್ವಭಾವವನ್ನು ಸಂಪಾದಕರು ಹೀಗೆ ವಿವರಿಸುತ್ತಾರೆ: "ಬುದ್ಧಿಯ ಹರಿತ, ಭಾಷೆಯ ಬೆಡಗು, ಮಾತಿನ ಚಮತ್ಕಾರಗಳಿಂದ ಕನ್ನಡ ಸಾಹಿತ್ಯದಲ್ಲಿ ಒಗಟುಗಳಿಗೆ ವಿಶೇಷವಾದ ಸ್ಥಾನವಿದೆ. ಅವು ಮನುಷ್ಯನ ವಿಚಾರ ಪರೀಕ್ಷೆಗೆ ಒರೆಗಲ್ಲುಗಳಾಗಿವೆ. ಪ್ರಶ್ನೆ ಕೇಳಿದಾಗ ಒಗಟು ಒಡೆಯದೆ ಸೋತರೆ ತೀರಿತು. ಮುಖ ಸಪ್ಪೆ. ಸೋತರೂ ಮತ್ತೆ ಗೆದೆಯುವ ಭರವಸೆ. ಹೀಗಾಗಿ ಸೋಲು ಗೆಲವುಗಳ ಬುದ್ಧಿಯ ಹೋರಾಟ ಒಗಟುಗಳಲ್ಲಿ ಅಡಕವಾದುದರಿಂದ ಅವು ಶ್ರೀಸಾಮಾನ್ಯನ ವಿನೋದದಾಟಗಳಾಗಿವೆ" (ಪ್ರ.ಪು.೭). ಒಗಟುಗಳು ಬುದ್ಧಿ, ಬೆಡಗಿನ ಭಾಷೆ, ಮಾತಿನ ಚಮತ್ಕಾರ, ಮನುಷ್ಯನ ವೈಚಾರಿಕ ಪರೀಕ್ಷೆ, ವಿನೋದದಾಟಗಳು– ಈ ವಿಶೇಷಣಗಳನ್ನು ಗಮನಿಸಬೇಕು. ಒಗಟುಗಳ ಒಟ್ಟು ಹೂರಣ, ಪರಿಣಾಮ ಎಲ್ಲವೂ ಈ ಮಾತಿನಲ್ಲಿದೆ.

ಒಗಟಿನ ಮೂಲಗುಣ ಸ್ಪರ್ಧೆ. ಇದು ದೈಹಿಕ ಹೋರಾಟದ ಪರೀಕ್ಷೆಯ ಸ್ಪರ್ಧೆಯಲ್ಲ. ಇದು ಬುದ್ಧಿಗೆ ಸಂಬಂಧಿಸಿದ ಸ್ಪರ್ಧೆ. ಹೀಗಾಗಿ ಬುದ್ಧಿ ದೈಹಿಕ ಕಸರತ್ತನ್ನು ಬಳಸಿಕೊಳ್ಳಲಿಲ್ಲ ಎಂದರೆ ಅದಕ್ಕೆ ಉಳಿದಿರುವುದು ಒಂದೇ ಮಾಧ್ಯಮ ಅದು ಮಾತು. ಮಾತು ಪರೀಕ್ಷೆಗಾಗಿ ಬಳಕೆಯಾಗುವಾಗ ಅದು ಪಡೆಯುವ ಅನೇಕ ಶಕ್ತಿಗಳು ಅಲ್ಲಿ ಪಾಲುಪಡೆಯುತ್ತವೆ, ಪ್ರದರ್ಶನಗೊಳ್ಳುತ್ತವೆ. ಗೌಪ್ಯತೆಯನ್ನು ಸೃಷ್ಟಿಸಲು ಮಾತು ರೂಪಕವಾಗಬೇಕು, ಧ್ವನಿಯಾಗಬೇಕು. ಅರ್ಥವನ್ನು ಒಳಗಿಟ್ಟು, ಆ ಗುಟ್ಟನ್ನು ಒಡೆಯುವಂತೆ ಪ್ರಶ್ನೆ ಹಾಕುತ್ತದೆ ಒಗಟು. ಹೀಗಾಗಿ ಬಳಕೆಯಾದ ಮಾತಿನ ಒಂದೊಂದು ಪದವನ್ನು ಅರ್ಥೈಸಲು ಎದುರಿನವರಿಗೆ ಸವಾಲಾಗುತ್ತದೆ. ಪದ ಪದಗಳನ್ನೂ ಅರಿಯಬೇಕು, ಒಟ್ಟು ಮಾತಿನ ಹಿಂದಿರುವ ಧ್ವನಿಯನ್ನು ಗ್ರಹಿಸಬೇಕು. ಅದರಿಂದ ತನ್ನ ಊಹೆಗೆ ಬಂದವುಗಳಲ್ಲಿ ಖಚಿತವಾದುದನ್ನು ಕಚ್ಚಿಹಿಡಿಯಬೇಕು. ಇಷ್ಟೆಲ್ಲ ಮಾಡಬೇಕೆಂದರೆ ಎದುರಿನವನಿಗೆ ಇಷ್ಟೆಲ್ಲ ಕಸರತ್ತು ಮಾಡುವ ಬುದ್ಧಿಯ ತಾಕತ್ತು ಎದುರಿನವರಲ್ಲಿ ಇರಬೇಕು. ಇದು ಸರಳವಾಗಿ ಎದ್ದು ಕಾಣುವ ಒಗಟಿನ ಸಾಮರ್ಥ್ಯ.

ಒಗಟುಗಳ ಮಾದರಿಗಳು ಶಿಷ್ಟಸಾಹಿತ್ಯ ರೂಪಗಳಲ್ಲಿ ಅಭಿವ್ಯಕ್ತಗೊಂಡುದನ್ನು ಡಾ। ಎಂ.ಎಸ್.ಲಠ್ಠೆ ಅವರು ಗಮನಿಸಿ, ಜನಪದ ಒಗಟುಗಳು ಮತ್ತು ಗ್ರಾಂಥಿಕ ಒಗಟುಗಳು ಎಂದು ಎರಡು ಬಗೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ಕಂತಿ ಹಂಪರ ಸಮಸ್ಯೆಗಳು, ಬೆಡಗಿನ ವಚನಗಳು, ಮುಂಡಿಗೆಗಳು ಇವೆಲ್ಲ ಜನಪದ ಒಗಟಿನ ಪ್ರತಿರೂಪಗಳು ಎನ್ನುತ್ತಾರೆ. ಒಗಟಿನ ಕೆಲಗುಣಗಳಿರುವ ರೂಪಗಳು ಇವು. ಆದರೆ ನೇರವಾಗಿ ಒಗಟುಗಳಲ್ಲ ಎಂಬುದು ಅವರಿಗೆ ತಿಳಿದಿದೆ. ಮತ್ತೆ ಒಗಟಿನ ಮಾದರಿಗಳು ಜಗತ್ತಿನ ತುಂಬ ಬೇರಬೇರೆ ಪ್ರಕಾರಗಳಲ್ಲಿ ಬಳಕೆಯಾಗುವುದನ್ನು ಮನಗಂಡು ಹೀಗೆ ಬರೆಯುತ್ತಾರೆ: "ಅನೇಕ ರಾಜಮಹಾರಾಜರು, ಶೂರ ಸರದಾರರು ಒಗಟಿಗೆ ಉತ್ತರಿಸಿ ರಾಜ್ಯವನ್ನು, ರಾಜಕನ್ನಿಕೆಯರನ್ನು ಗೆದ್ದುತಂದ ಉದಾಹರಣೆಗಳಿವೆ. ಒಗಟು ಒಡೆದವರಿಗೆ ತಮ್ಮ ಮಕ್ಕಳನ್ನು ಕೊಟ್ಟು ಲಗ್ನ ಮಾಡಿಕೊಡುವ ಪರಿಪಾಠ ಇತ್ತಂತೆ" (ಪ್ರ.ಪು.೧೫-೧೬). ಈ ಎಲ್ಲ ಉದಾಹರಣೆಗಳು ಜನಪದ ಕಥೆಗಳಲ್ಲಿ ದೊರೆಯುತ್ತವೆ. ಬಹುಶಃ ಆದಿ ಮಾನವನ ಹಂತದಲ್ಲಿರುವ ಇಂತಹ ಆಶಯಗಳು ಜನಪದ ಕಥೆಗಳಲ್ಲಿ ಉಳಿದುಕೊಂಡು ಬಂದಿರುವ ಸಾಧ್ಯತೆ ಇದೆ. 'ಬರಿದಾದ ಬಾವಿಯ ತುಂಬ ಹಣ ತುಂಬಿದವನಿಗೆ', 'ಮೇಲೆ ಕಟ್ಟಿರುವ ಮೀನಿನ ಛಾಯೆಯನ್ನು ಕೆಳಗಿಟ್ಟಿರುವ ನೀರಿನ ಪಾತ್ರೆಯಲ್ಲಿ ನೋಡಿ ಮೀನಿನ ಕಣ್ಣು ಛೇದಿಸಿದವನಿಗೆ', 'ಏಳು ಹೆಡೆಯ ಸರ್ಪ ಅಪಹರಿಸಿದ ರಾಜಕುಮಾರಿಯನ್ನು ಬಿಡಿಸಿ ತಂದವನಿಗೆ', 'ಊರಿಗೆ ಹತ್ತಿದ ಹುಲಿಯನ್ನು ಕೊಂದವನಿಗೆ'–ರಾಜಕುಮಾರಿಯನ್ನೂ ರಾಜ್ಯವನ್ನೂ ಬಹುಮಾನವಾಗಿ ಕೊಟ್ಟ ಉದಾಹರಣೆಗಳಿವೆ. ಇವು ಒಬ್ಬನ ಹಲಬಗೆಯ ಸಾಮರ್ಥ್ಯಗಳನ್ನು, ಪರೀಕ್ಷಿಸುವ, ವಿಶೇಷವಾಗಿ ಜಾಣತನ, ಧೈರ್ಯ, ದೈಹಿಕ ಸಾಮರ್ಥ್ಯಗಳನ್ನು ಪರೀಕ್ಷಿಸುವ ಒಗಟುಗಳು. ಜ್ಞಾನವನ್ನು ಪರೀಕ್ಷಿಸುವ ಭಾಷಾ ಚಮತ್ಕಾರದ ಮಾತುಗಳು ಒಗಟುಗಳಾಗಿ ಪ್ರಯೋಗವಾಗುತ್ತವೆ. ಒಬ್ಬಾಕೆ ತನ್ನಲ್ಲಿ ಬರಲು ಬಯಸಿದವನಿಗೆ ಉಸುಕಿನ ಆನೆ ತಯಾರಿಸಿ, ಅದರ ಮೇಲೆ ಕುಳಿತುಕೊಂಡು ಬರಲು ಹೇಳಿದಳು. ಆತ ಆಗಲಿ, ಎಂದು ಮರುದಿನ ಅವಳ ಮನೆಯ ಮುಂದೆ ಬಂದು– 'ಉಸುಕಿನ ಆನೆ ಬಂದಿದೆ, ಜರಡಿಯಲ್ಲಿ ನೀರು

ತೆಗೆದುಕೊಂಡು ಬಾ' ಎಂದು ಹೇಳಿಕಳಿಸಿದನು. ಆಕೆ ಆತುರದಿಂದ ಬಂದು ಉಸುಕಿನ ಆನೆ ಎಲ್ಲಿ? ಎಂದಾಗ, ಜರಡಿಯಲ್ಲಿ ನೀರೇಲ್ಲಿ? ಎಂದು ಕೇಳಿ, ಆಕೆಯನ್ನು ಸೋಲಿಸಿದನು.

ಒಗಟುಗಳ ಪರಿಣಾಮವನ್ನು ಡಾ.ಲಠ್ಠೆ ಅವರು ಹೀಗೆ ವಿವರಿಸುತ್ತಾರೆ: "ಒಗಟುಗಳಿಂದ ಪ್ರತಿಭೆ ಗರಿಗೆದರುತ್ತದೆ, ಭಾಷಾ ವೈಖರಿ ಹೆಚ್ಚುತ್ತದೆ. ಬುದ್ಧಿ ಭಾವನೆಗಳ ಬೆರಕೆಯಾಗುತ್ತದೆ. ತಿರುಳಿನ ನುಡಿಗಳಿಂದಾಗಿ ತತ್ತ್ವದರ್ಶನ ಉಂಟಾಗುತ್ತದೆ. ಕಲ್ಪನೆ, ಭಾವನೆ, ಚಿತ್ರಶಕ್ತಿಗಳಿಗೆ ಚಾಲನೆ ಸಿಕ್ಕುತ್ತದೆ. ನುಡಿಯ ಬೆಡಗಿನಿಂದ ಭಾಷೆ ಅಲಂಕಾರಪೂರ್ಣವಾಗಿ ತಲೆದೂಗಿಸುತ್ತದೆ. ಮಕ್ಕಳ, ನಿರಕ್ಷರಿ ಜನತೆಯ ಮುಗ್ಧಮನಸ್ಸು ಚೇತರಿಸಿಸುತ್ತದೆ. ಸೂಕ್ಷ್ಮ ನಿರೀಕ್ಷಣಾ ಸಾಮರ್ಥ್ಯಕ್ಕೆ ಒಪ್ಪವಿಟ್ಟಂತಾಗುತ್ತದೆ. ಜಾನಪದ ಕ್ಷೇತ್ರದ ಒಗಟುಗಳು ಬುದ್ಧಿಶಾಲಿಗಳ ಒರೆಗಲ್ಲಾಗಿವೆ. ಹಾಸ್ಯರಸದ ತವನಿಧಿಯಾಗಿವೆ" (ಪ್ರ.ಪು.೧೫). ಒಂದೇ ಉಸುರಿನಲ್ಲಿ ದಡದಡನೆ ಒಗಟುಗಳ ಪರಿಣಾಮವನ್ನು ಪಟ್ಟಿಮಾಡುವ ಸಂಪಾದಕರ ಈ ಪ್ಯಾರಾ ಮಹತ್ವದ್ದೆನಿಸುತ್ತದೆ. ಪಾಶ್ಚಾತ್ಯರ ಮಾತುಗಳನ್ನೇ ಓದಿ, ಕನ್ನಡದಲ್ಲಿ ಬರೆಯುವ ಕೃತ್ರಿಮ ಕೆಲಸಕ್ಕಿಂತ ತಮ್ಮ ಅನುಭವವನ್ನೇ ಪಟ್ಟಿಮಾಡುತ್ತ ಹೋಗುವ ಈ ಕ್ರಮ ಮತ್ತು ವಿವರಣೆ ನೈಜವೆನಿಸುತ್ತದೆ. ಇದು ನಿಜವಾದ ಒಗಟುಗಳ ಪರಿಣಾಮದ ಸ್ಥಿತಿ.

ಡಾ. ಲಠ್ಠೆ ಅವರು ತಮ್ಮ ಸಂಗ್ರಹದಲ್ಲಿಯ ಒಗಟುಗಳನ್ನು ಅವುಗಳ ಉತ್ತರಗಳ ವಿಷಯವನ್ನು ಗಮನಿಸಿ ಏಳು ಭಾಗಗಳಲ್ಲಿ ವಿಂಗಡಿಸಿ ಕೊಂಡಿದ್ದಾರೆ. ಈ ಏಳರಲ್ಲಿ ನಾವು ಗುರುತಿಸಿಕೊಂಡ **'ಸೂತ್ರರೂಪದ ಒಗಟು'**ಗಳ ಐದು ಪ್ರಕಾರಗಳು ಕಾಣುತ್ತವೆ. ಸಹಜವಾಗಿಯೇ ಇವೆಲ್ಲ ವಿಷಯಾನುಸಾರ ವಿಂಗಡಿಸಿಕೊಂಡ ಪ್ರಕಾರಗಳಾಗಿವೆ : ೧. ಅವಯವಗಳಿಗೆ ಸಂಬಂಧಿಸಿದ ಒಗಟುಗಳು, ೨. ನಿಸರ್ಗಕ್ಕೆ ಸಂಬಂಧಿಸಿದ ಒಗಟುಗಳು, ೩. ಪಕ್ಷಿ, ಕ್ರಿಮಿ–ಕೀಟ, ಪ್ರಾಣಿಗಳಿಗೆ ಸಂಬಂಧಿಸಿದ ಒಗಟುಗಳು, ೪ ಊಟ ಉಪಚಾರಗಳಿಗೆ ಸಂಬಂಧಿಸಿದ ಒಗಟುಗಳು, ೫. ಸಂಸಾರ ಪರಿಸರಕ್ಕೆ ಸಂಬಂಧಿಸಿದ ಒಗಟುಗಳು.

'ಸೂತ್ರರೂಪದ ಒಗಟು'ಗಳ ಪ್ರಕಾರಗಳನ್ನು ಗುರುತಿಸಿಕೊಳ್ಳುವಾಗ, ಒಗಟುಗಳ ರಚನೆಯಿಂದ ಹೊರಗುಳಿಯುವ ಉತ್ತರಗಳನ್ನು ಗಮನಿಸಿಯೇ ಪ್ರಕಾರಗಳನ್ನು ಗುರುತಿಸಿಕೊಂಡಿರುವುದು ಸರಿಯಾಗಿದೆ. ಉತ್ತರಗಳು ಒಗಟುಗಳ ರಚನೆಯಿಂದ ಹೊರಗಿದ್ದರೂ ಈ ಉತ್ತರಗಳನ್ನು ಮುಚ್ಚಿಟ್ಟು, ಮರೆಮಾಡಿ, ರೂಪಕದಲ್ಲಿ ವರ್ಣಿಸಿ ಒಗಟಿನ ರಚನೆಯಾಗಿರುತ್ತದೆ. ಹೀಗಾಗಿ ಒಗಟುಗಳ ಉತ್ತರಗಳು ಅವುಗಳ ವಿಭಜನೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಇದು ಸಾಮಾನ್ಯವಾಗಿ ಅನುಸರಿಸುವ ಕ್ರಮ. ಡಾ. ಲಠ್ಠೆ ಅವರು ಈ ಕ್ರಮಕ್ಕೆ ನಾಂದಿ ಹಾಡಿದ್ದಾರೆ. ದೇವುಡು ಅವರು ಸಾಲುಗಳನ್ನು ಲೆಕ್ಕಕ್ಕೆ ಹಿಡಿದು ಏಕಪದಿ, ದ್ವಿಪದಿ, ತ್ರಿಪದಿ, ಚೌಪದಿ ಎಂದು ಒಗಟುಗಳ ಪ್ರಕಾರಗಳನ್ನು ಗುರುತಿಸಿಕೊಂಡಿದ್ದನ್ನು ನೆನಸಿಕೊಳ್ಳಬೇಕು. ಅದು ಹೆಚ್ಚು ತಾಂತ್ರಿಕವಾದುದು. ಒಗಟುಗಳ ದೊಡ್ಡಮಟ್ಟದ ಸಂಗ್ರಹಗಳಿಗೆ ಆ ಪದ್ಧತಿ ಸರಿಹೊಂದಲಾರದು. ಉತ್ತರಗಳನ್ನು ಮುಂದಿಟ್ಟುಕೊಂಡು ವಿಷಯಾನುಸಾರ ಮಾಡಿಕೊಳ್ಳುವ ವಿಂಗಡನಾ ಕ್ರಮವೇ ಹೆಚ್ಚು ಉಪಯುಕ್ತವೆನಿಸುತ್ತದೆ. ಡಾ. ಎಂ.ಎಸ್.ಲಠ್ಠೆ ಅವರು ತಾವು ಬರೆದ ಪ್ರಸ್ತಾವನೆಯಲ್ಲಿ ತಮ್ಮ ವಿಭಾಗೀಕ್ರಮಕ್ಕೆ ಸಂಬಂದಿಸಿದಂತೆ ಒಂದೊಂದು ಉದಾರಣೆಯನ್ನು ಕೊಡುವ ಪ್ರಯತ್ನವನ್ನು ಮಾಡಿದ್ದಾರೆ :

ಸೂತ್ರರೂಪದ ಒಗಟುಗಳು:

೧. ಅವಯವಕ್ಕೆ ಸಂಬಂಧಸಿದ ಒಗಟುಗಳು:
ಅಕ್ಕವ್ವ ಅತ್ತರ ತಂಗೆವ್ವನೂ ಅಳತಾಳ– (ಕಣ್ಣು)
ಒಂದ ಮಾಡ್ದಾಗ ಬತ್ತೀಸ ಕವಡಿ– (ಹಲ್ಲು)
ಒಂದ ಗಡಿಗಿ ಒಂಬತ್ತು ತೂತ – (ಶರೀರ)

೨. ನಿಸರ್ಗಕ್ಕೆ ಸಂಬಂಧಿಸಿದ ಒಗಟುಗಳು :
ಇಟೀಟ ಗುಂಡ ಗುಂಡದಾಗ ನೀರ
ನೀರಾಗ ಬೇರ ಬೇರಿಗ ಬೆಂಕಿ – (ದೀಪ)
ಒಂದ ಹಪ್ಪಳ ಊರಿಗೆಲ್ಲಾ ಊಟ –(ಚಂದ್ರ)

೩. ಪಕ್ಷಿ, ಕ್ರಿಮಿ–ಕೀಟ, ಪ್ರಾಣಿಗಳಿಗೆ ಸಂಬಂಧಿಸಿದ ಒಗಟುಗಳು :
ನಿಂಗನಗೌಡನ ಮಗ ನಿಂತಲ್ಲೆ ನಿದ್ದಿ ಮಾಡ್ತಾನ – (ಕುದುರೆ)
ಗಿಡ್ಡ ಮಗಾ ಗುಡ್ಡಾ ಏರ್ತಾದ –(ನುಸಿ)
ಘಾತಕ ರಂಡಿ ಯಾತಕ ಬಂದಿ
ಆಡೋ ಹುಡುಗರ್ನ ಅಳಸಾಕ ಬಂದಿ –(ಚೇಳು)

೪ ಊಟ ಉಪಚಾರಗಳಿಗೆ ಸಂಬಂಧಿಸಿದ ಒಗಟುಗಳು :
ಕೊಟಗ್ಯಾನ ಪಾರ ಲಟಗಿ ಹೊಡಿತದ –(ಕುದಿಯುವ ನುಚ್ಚು)
ಹಗ್ಗ ಹಾಸ್ಯಾದ ಗೂಳಿ ಮನಗ್ಯಾದ –(ಕುಂಬಳ ಬಳ್ಳಿ, ಕಾಯಿ)

೫. ಸಂಸಾರ ಪರಿಸರಕ್ಕೆ ಸಂಬಂಧಿಸಿದ ಒಗಟುಗಳು :
ಹಸರ ಕುಬಸಕ ಹನ್ನೆಡ ಟಿಬ್ಬಿ –(ಪತ್ರೋಳಿ)
ಗಿಡ್ಡಾನ ಹುಡುಗ ಬಡ್ಡ್ಯಾಗ ಸಿಕ್ಕಾನ –(ಕೊಡ್ಲಿ)
ಅಪ್ಪನ ರೊಕ್ಕ ಎಣಸಲ್ಕ ಬರಾಲ
ಅವ್ವನ ಸೀರಿ ಮಡಚಲಕ ಬರಾಲ –(ಚುಕ್ಕೆಗಳು, ಆಕಾಶ)

ಇನ್ನು ಸಂಪಾದಕರು ಗುರುತಿಸಿಕೊಳ್ಳುವ ಆರನೆಯ ಪ್ರಕಾರ **'ಲೆಕ್ಕಕ್ಕೆ ಸಂಬಂಧಿಸಿದ ಒಗಟುಗಳು'** ಎಂಬುದು. ಈ ಪ್ರಕಾರದಲ್ಲಿ ನಾವು ಗುರುತಿಸಿಕೊಳ್ಳುವ 'ವಿವರಣಾತ್ಮಕ ಒಗಟು' ಗಳ ನಾಲ್ಕೂ ಪ್ರಕಾರಗಳು ಸೇರಿಕೊಂಡಿವೆ. ಅವನ್ನು ಈ ಕೆಳಗಿನಂತೆ ವಿಭಾಗಿಸಿ ತೋರಿಸಬಹುದಾಗಿದೆ.

ವಿವರಣಾತ್ಮಕ ಒಗಟುಗಳು (ಒಡಗತೆಗಳು):

೧. ಗಣಿತದ ಒಗಟುಗಳು : ಡಾ. ಲಠ್ಠೆ ಅವರು ಈ ಪ್ರಕಾರದ ಒಗಟುಗಳಲ್ಲಿ ಲೆಕ್ಕಕ್ಕೆ ಸಂಬಂಧಿಸಿದ ಒಗಟುಗಳನ್ನು ಮಾತ್ರ ಹೇಳುತ್ತಾರೆ. ಉದಾಹರಣೆಗೆ : ಒಬ್ಬ ಪೂಜಾರಿ ಹೂವ ತಗೊಂಡು ದೇವರ ಗುಡಿಗೆ ಹ್ವಾದ. ಆ ಗುಡಿಗ ಆರ ಬಾಗಲ ಇದ್ದುವು. ಆರೂ ಬಾಗಲಕೂ ತಾನು ತಂದ ಅರ್ಧದಷ್ಟು ಹೂವ ಇಡತಾ ಇಡತಾ ಹ್ವಾದ. ಕೊನಿಗೆ

ದೇವರಿಗೆ ಒಂದ ಹೂವ ಉಳಿತು. ಹಂಗಾದ್ರ ಅವ ತಂದ ಹೂವ ಎಷ್ಟು? (೬೪).
ಇಂಥವು ಸರಳ ಗಣಿತಕ್ಕೆ ಸಂಬಂಧಿಸಿದ ಲೆಕ್ಕಗಳು.

೨. ಲಘು ಕಥಾರೂಪದ ಒಗಟುಗಳು: ಗಂಡಸಿನ ಜಾಣತನ ಮತ್ತು ಅನುಭವವನ್ನು ಪರೀಕ್ಷಿಸುವ ಇವು, ಹೆಣ್ಣು ಗಂಡಿಗೆ ಒಡ್ಡುವ ಪರೀಕ್ಷೆಗಳಾಗಿವೆ. 'ರಾಜನ ಮಗಳು ರಾಜಾ ಕರದಾಗ ಬರೋದಿಲ್ಲಂತ ಹೇಳಿದಳು. ಯಾಕಂದ್ರ ಕಳಕೊಂಡವನ ಹೆಂಡತಿ ಹುಡಕಾಕ ಹೋದವನ ತಂದಿಗಿ ಬೆನ್ನ ಕೊಟ್ಟ ಮಕ್ಕೊಂಡಿದ್ದಳು. ಹಂಗಾದ್ರ ಹಾರಿಗಿ ಬೆನ್ನಕೊಟ್ಟು ಮನಗಿದ್ದಳು?' (ಗಾಳಿಗೆ: ಕಳೆದ ಹೆಂಡತಿ ಸೀತೆ, ಹುಡಕಲು ಹೋದವನು ಹನುಮಂತ. ಅವನ ತಂದೆ ಮರುತ).

'ಸರ್ಪದಾ ದಿಬ್ಬದವರು ಹೂಲತೆಯಾ ಶೆಟ್ಟೆಪ್ಪನಿಗೆ ಮೂರು ಸೇರು ಮುಸಲ್ಮಾನರ ದೇವರನ್ನು ತರಲು ಪತ್ರ ಬರೆದಿದ್ದರು. ಯಾರು ಯಾರಿಗೆ ಏನೆಂದು ಬರೆದಿದ್ದರು?' (ಸರ್ಪ–ಹಾವು, ದಿಬ್ಬ–ಏರಿ=ಹಾವೇರಿ, ಹೂಲತೆ=ಹುಬ್ಬಳ್ಳಿ. ಹಾವೇರಿಯವರು ಹುಬ್ಬಳ್ಳಿಯ ಶೆಟ್ಟೆಪ್ಪನಿಗೆ ಮೂರುಸೇರು ಅಲ್ಲಾ ತರಲಿಕ್ಕೆ ಬರೆದಿದ್ದರು).

೩. ದ್ವಂದ್ವಾರ್ಥದ–(ಗೊಂದಲ ಹುಟ್ಟಿಸುವ) ಒಗಟುಗಳು: ಡಾ. ಲಠ್ಠೆ ಅವರು ಲೆಕ್ಕಕ್ಕೆ ಎಂದು ಕೊಡುವ ಉದಾಹರಣೆಯನ್ನು ಗಮನಿಸಿ: 'ಕೆರ್‍ಯಾಗ ಏಳೆಮ್ಮಿ, ಒಡ್ಡಿಗಿ ಹತ್ತೆಮ್ಮಿ, ಮನ್ಯಾಗ ಹಿಂಡೆಮ್ಮಿ. ಎಲ್ಲಾ ಕೂಡಿ ಎಷ್ಟು?' (ಒಂದು).

'ಹೊತ್ತಿರತ ಆರಬೇಕಂತ್ಹೇಳಿ ಹತ್ತ ಸೀರಿ ಒಣಗ ಹಾಕಿದ್ರು. ಒಂದು ಸೀರಿ ಒಣಗಾಕ ಒಂದು ನಿಮಿಷ ಬೇಕಾದ್ರ, ಒಣಗ ಹಾಕಿದ ಹತ್ತೂ ಸೀರಿ ಒಣಗಾಕ ಎಷ್ಟು ವ್ಯಾಳೆ ಬೇಕು?' (ಒಂದು ನಿಮಿಷ).

'ಹಿಂದಿನ ಕತ್ತಿಗಿ ಮುಂದೆರಡು ಕತ್ತಿ, ಮುಂದಿನ ಕತ್ತಿಗಿ ಹಿಂದೆರಡು ಕತ್ತಿ. ನಡುವಿನ ಕತ್ತಿಗಿ ಹಿಂದೊಂದು ಮುಂದೊಂದು ಕತ್ತಿ. ಒಟ್ಟ ಎಷ್ಟ ಕತ್ತಿ?' (ಮೂರು ಕತ್ತಿಗಳು)

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದರೆ ಇವು ಗಣಿತಕ್ಕೆ ಸಂಬಂಧಿಸಿದ ಉದಾಹರಣೆಯಾಗಿರದೆ, ಉತ್ತರ ಹೇಳುವವರಿಗೆ ದಾರಿತಪ್ಪಿಸುವ, ಗೊಂದಲ ಹುಟ್ಟಿಸುವ, ಭಾಷಾ ಚಮತ್ಕಾರಗಳಾಗಿವೆ. ಮೊದಲನೇ ಉದಾಹರಣೆಯಲ್ಲಿ – ಕೆರೆಯಲ್ಲಿ ಇದ್ದ ಎಮ್ಮೆ ಒಂದು. ಅದು ಕೆರೆಯಿಂದ ಎದ್ದು, ಕೆರೆಯ ಒಡ್ಡು ಹತ್ತಿ, ಮನೆಯಲ್ಲಿ ಹಾಲು ಹಿಂಡಬೇಕು. ಆದರೆ ಈ ಒಗಟಿನ ವಿವರಣೆಯು ಕೇಳುಗರ ಲಕ್ಷ ಅಂಕಿಗಳ ಕಡೆಗೆ ಸೆಳೆದು, ದಾರಿತಪ್ಪಿಸುವ ಕೆಲಸ ಮಾಡುತ್ತದೆ. ಎರಡನೇ ಉದಾಹರಣೆಯಲ್ಲಿ ಕೇಳುವವರಿಗೆ ತಾನೇನು ಕೇಳುತ್ತಿದ್ದೇನೆ ಎನ್ನುವುದರ ಕಡೆಗೆ ಲಕ್ಷಹರಿಯದಂತೆ ಮಾಡಿ, ಗೊಂದಲ ಹುಟ್ಟಿಸುತ್ತದೆ. ಹೀಗಾಗಿ ಉತ್ತರಿಸುವಲ್ಲಿ ಕೇಳುಗ ತಪ್ಪುತ್ತಾನೆ. ಹೀಗೆ ಕೇಳುಗನಿಗೆ ಗೊಂದಲದಲ್ಲಿ ನೂಕಿ ತಪ್ಪುದಾರಿಗೆಳಸುವ ಇಂತಹ ಭಾಷಾ ಚಮತ್ಕಾರದ ಒಗಟುಗಳು– ಪಝುಲ್‌ಗಳು (Puzzle=ದಾರಿತಪ್ಪಿಸುವ ಒಗಟುಗಳು) ಕನ್ನಡದಲ್ಲಿ ಸಾಕಷ್ಟು ದೊರೆಯುತ್ತವೆ.

೪. ಹಲವು ಪ್ರಶ್ನೆಗಳಿಗೆ ಒಂದೇ ಉತ್ತರದ ಒಗಟುಗಳು : ಡಾ. ಲಠ್ಠೆ ಅವರ ಕೃತಿಯಲ್ಲಿ ಕೊಟ್ಟಿರುವ ಉದಾಹರಣೆಗಳಲ್ಲಿಯೇ ಇನ್ನೊಂದು ನಮೂನೆಯ ವಿವರಣಾತ್ಮಕ

ಒಗಟಿನ ಉದಾಹರಣೆ ದೊರಯುತ್ತವೆ. ಅದೆಂದರೆ ಎರಡು ಪ್ರಶ್ನೆಗಳಿಗೆ ಒಂದೇ ಉತ್ತರವುಳ್ಳ ಒಗಟುಗಳು. ಉದಾಹರಣೆಗೆ : 'ಒಬ್ಬಗ ಊಟಕ ಎಬ್ಬಸಬೇಕಾಗಿತ್ತು, ಇನ್ನೊಬ್ಬಗ ವ್ಯಾಳೆ ಹೇಳಬೇಕಾಗಿತ್ತು. ಇಬ್ಬರಿಗೂ ಒಂದೇ ಶಬ್ದದಿಂದಲೇ ಉತ್ತರಿಸಬೇಕು' (ಏಳು).

'ಹುಡುಗರು ಚಂಡಾಡುವಾಗ ಅದು ಮನೆಯ ಮಾಳಿಗೆಯ ಮೇಲೆ ಬಿದ್ದಿತು. ಹುಡುಗ ಚೆಂಡು ಹುಡುಕೊಂಡು ಬಂದ. ಇನ್ನೊಬ್ಬ ವ್ಯಾಳೆ ಕೇಳ್ಕೊಂಡು ಬಂದ. ಇಬ್ಬರಿಗೂ ಒಂದೇ ಮಾತಿನಲ್ಲಿ ಉತ್ತರ ಹೇಳಬೇಕು'. (ಹತ್ತು).

ಒಗಟುಗಳ ಏಳನೆಯ ಪ್ರಕಾರವೆಂದು ಕೊನೆಯಲ್ಲಿ 'ಹಾಡಿನ ರೂಪದಲ್ಲಿರುವ ಒಗಟುಗಳು' ಎಂದು ಗುರುತಿಸಿದ್ದಾರೆ. ಅವುಗಳನ್ನು ಇಲ್ಲಿ ಚರ್ಚಿಸುವ ಅವಶ್ಯಕತೆ ಇಲ್ಲ. ಡಾ. ಎಂ.ಎಸ್.ಲಠ್ಠೆ ಅವರ ಸಂಗ್ರಹದ ವಿಶೇಷತೆ ಎಂದರೆ ಇಲ್ಲಿ ಒಗಟುಗಳ ಎಲ್ಲ ಪ್ರಕಾರಗಳಿಗೆ ಉದಾಹರಣೆ ದೊರೆಯುವುದು. ಸೂತ್ರರೂಪದ ಒಗಟುಗಳನ್ನು ವಿಷಯಾನು ಕ್ರಮಣಿಕೆಯಲ್ಲಿ ವಿಭಾಗಿಸಿಕೊಂಡಿದ್ದು, ಈ ಕ್ರಮದಲ್ಲಿ ಹೆಚ್ಚಿನ ಪ್ರಕಾರಗಳನ್ನು ಗುರುತಿಸಿಕೊಳ್ಳುವ ಸಾಧ್ಯತೆ ಕಾಣುತ್ತದೆ. ವಿವರಣಾತ್ಮಕ ಒಗಟುಗಳ ನಾಲ್ಕೂ ಪ್ರಕಾರಗಳಿಗೆ ಇಲ್ಲಿ ಉದಾಹರಣೆಗಳು ದೊರೆಯುತ್ತವೆ. ಹಿಂದೆ ಬಂದ ಜೀಶಂಪ, ರಾಗೌ, ಸುಧಾಕರ ಅವರ ಒಗಟುಗಳ ಸಂಗ್ರಹಕ್ಕಿಂತ ಹೆಚ್ಚಿನ ಒಗಟುಗಳುಳ್ಳ, ಒಗಟುಗಳನ್ನು ವಿಭಾಗಿಸಿಕೊಳ್ಳುವ ಪ್ರಯತ್ನ ಮಾಡಿರುವ ಮೊದಲನೇ ಸಂಗ್ರಹವಿದು. ಹೀಗಾಗಿ ಈ ಸಂಗ್ರಹಕ್ಕೆ ಸಹಜವಾಗಿಯೇ ಒಂದು ಮಹತ್ವಪ್ರಾಪ್ತವಾಗುತ್ತದೆ.

ಡಾ. ಎಂ.ಎಸ್. ಲಠ್ಠೆ ಅವರ ಸಂಗ್ರಹದ ನಂತರ ಉತ್ತರ ಕರ್ನಾಟಕದಿಂದಲೇ ಇನ್ನೊಂದು ಮಹತ್ವದ ಸಂಗ್ರಹ ಪ್ರಕಟವಾಗಿರುವುದು ಕಂಡುಬರುತ್ತದೆ. ಡಾ.ಸೋಮಶೇಖರ ಇಮ್ರಾಪೂರ ಅವರು ಸಂಪಾದಿಸಿದ **'ಕನ್ನಡ ಸಾವಿರದ ಒಗಟುಗಳು'** (೧೯೭೬) ಇಲ್ಲಿಯವರೆಗೆ ಕನ್ನಡದಲ್ಲಿ ಬಂದ ಒಗಟುಗಳ ಸಂಗ್ರಹಗಳಲ್ಲಿ ಅತ್ಯಂತ ದೊಡ್ಡ ಸಂಗ್ರಹ. ಅದರಲ್ಲಿ ೧೧೨೫ ಒಗಟುಗಳಿವೆ. (ಕೊನೆಯಲ್ಲಿ ೬೩ ಹಾಡಿನ ರೂಪದಲ್ಲಿರುವ ಒಗಟುಗಳನ್ನೂ ಕೊಟ್ಟಿದ್ದಾರೆ). ಈ ಒಗಟುಗಳನ್ನು ಅಕಾರಾದಿಯಾಗಿ ಹೊಂದಿಸಿದ್ದಾರೆ. ಆದರೆ ಸುದೀರ್ಘವಾದ ೮೦ ಪುಟಗಳ ಪ್ರಸ್ತಾವನೆಯಲ್ಲಿ ಅನೇಕ ನಮೂನೆಯ ಒಗಟುಗಳ ವಿಭಾಗೀಕ್ರಮಗಳನ್ನು ಚರ್ಚಿಸುತ್ತಾರೆ. ತಮಗೆ ಸರಿಕಂಡ ಕ್ರಮದಲ್ಲಿ ಇಲ್ಲಿಯ ಒಗಟುಗಳನ್ನು ವಿಭಾಗಿಸಿ ಕೊಟ್ಟಿದ್ದರೆ ಮುಂದಿನ ಅಭ್ಯಾಸಿಗಳಿಗೆ ಅನುಕೂಲವಾಗುತ್ತಿತ್ತು. ಒಂದೇ ಜೀವಿ/ವಸ್ತು/ಸಂಗತಿಗೆ ಸಂಬಂಧಿಸಿದಂತೆ ಒಗಟುಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬ ಸಂಗತಿ ಓದುಗರಿಗೆ ಥಟ್ಟನೆ ಮನವರಿಕೆಯಾಗುತ್ತಿತ್ತು. ಈ ಕೃತಿಯಲ್ಲಿಯ ಒಗಟುಗಳನ್ನು ೧೯೭೪–೭೫ನೇ ಸಾಲಿನ ಎಂ.ಎ.ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗಿದೆ. ಹೀಗಾಗಿ ಆಧುನಿಕ ಒಗಟುಗಳು ಎದ್ದುಕಾಣುವಷ್ಟು ಸಂಖ್ಯಾಬಲವನ್ನು ಹೊಂದಿವೆ.

ಈ ಸಂಕಲನದಲ್ಲಿ ಕೆಲವು ವಿಶೇಷವಾದ ರಚನೆಗಳುಳ್ಳ ಒಗಟುಗಳಿದ್ದು, ಅಂತವುಗಳನ್ನು ದೆವುಡು ಅವರೂ ಉಲ್ಲೇಖಿಸುತ್ತಾರೆ. ನಂತರ ಡಾ. ಎಂ.ಎಸ್.ಲಠ್ಠೆ ಅವರ ಸಂಗ್ರಹದಲ್ಲೂ ಅಪರೂಪಕ್ಕೆ ಒಂದೆರಡು ಪ್ರಕಟವಾಗಿವೆ. ಇವುಗಳ ರಚನೆಯನ್ನು

ಗಮನಿಸಿದರೆ ಒಂದು ಕಾಲಕ್ಕೆ ಇವುಗಳನ್ನು ಯಾರೋ ಒಬ್ಬರು ಬರೆದು ಪ್ರಸಿದ್ಧಿಸಿದ ಅನುಮಾನ ಬರುತ್ತದೆ. ಅವೆಲ್ಲ ಚೌಪದನ ನುಡಿಗಳಾಗಿರುವುದು ಕಂಡುಬರುತ್ತದೆ.

ಆಕಾಶಕ್ಕೆ ಹಾರುವುದು ಪಕ್ಷಿಯಲ್ಲ
ಬಾಲವಿಹುದು ಹನುಮಂತನಲ್ಲ
ಬಿಲ್ಲು ಬಾಣಗಳುಂಟು ಬೇಡನಲ್ಲ
ಸೂತ್ರವುಂಟು ಕೀಲುಗೊಂಬೆಯಲ್ಲ (೧೫೯, ಗಾಳೀಪಟ)

ಆರು ದಾರಿಗಳುಂಟು ಹೀರೇಕಾಯಿಯಲ್ಲ
ಒಳಗೆ ಹುಳಿ ಉಂಟು ಹುಣಸೆ ಹಣ್ಣಲ್ಲ
ಮೇಲೆ ಹಸುರುಂಟು ಲಿಂಬೆಹಣ್ಣಲ್ಲ
ಇದು ಹೇಳಬಲ್ಲ ಜ್ಞಾನಿಗರಿದಲ್ಲ? (೧೭೮, ನೆಲ್ಲಿಕಾಯಿ)

ಇದು ಡಾ.ಲಠ್ಠೆ ಅವರ ಸಂಗ್ರಹದಲ್ಲೂ ಇದೆ, ಡಾ. ಇಮ್ರಾಪೂರ ಅವರ ಸಂಗ್ರಹದಲ್ಲಿದ್ದು, ಮೂರನೇ ಸಾಲು ಇರಲಿಲ್ಲ. ಅದನ್ನು ಡಾ. ಲಠ್ಠೆ ಅವರ ಸಂಗ್ರಹದಲ್ಲಿ ಮುದ್ರಣಗೊಂಡ ಚೌಪದಿಯಿಂದ ತೆಗೆದುಕೊಳ್ಳಲಾಗಿದೆ. ಮುಂದೆ ಯಾರೋ ಕೆಲ ಹೊಸ ಚೌಪದನಗಳನ್ನು ಬರೆದಂತೆ ತೋರುತ್ತದೆ. ಉದಾಹರಣೆಗೆ:

ಊಟ ತಿಂಡಿಗಳುಂಟು ಮನೆಯಲ್ಲ
ಕುರ್ಚಿ ಮೇಜುಗಳುಂಟು ಶಾಲೆಯಲ್ಲ
ಜನಸಂದಣಿಯುಂಟು ಜಾತ್ರೆಯಲ್ಲ
ವ್ಯಾಪಾರ ನಡೆಯುವುದು ಸಂತೆಯಲ್ಲ (೨೨೧, ಹೊಟೆಲ್)

ಮರದಲ್ಲಿ ವಾಸಿಸಿದರೂ ಪಕ್ಷಿಯಲ್ಲ
ನಾರುವಸ್ತ್ರವನುಟ್ಟರೂ ಯೋಗಿಯಲ್ಲ
ಮೂರು ಕಣ್ಣುಗಳಿದ್ದರೂ ಈಶನಲ್ಲ
ನೀರನೊದಗಿಸುವೆನಾದರೂ ಮೇಘನಲ್ಲ (೮೨೫, ತೆಂಗಿನಕಾಯಿ)

ಈ ಚೌಪದಿಗಳು ಜನರ ಬಾಯಿಯಲ್ಲಿ ಒಂದಿಷ್ಟು ಕೆಟ್ಟಿವೆ. ಆದರು ಅವುಗಳ ಪೂರ್ಣ ರೂಪವೇನು ಹದಗೆಟ್ಟಿಲ್ಲ. ಇಂತಹ ಚೌದನಗಳು ಸಾಕಷ್ಟು ಸೇರಿಕೊಂಡಿವೆ. ದೇವುಡು ಅವರೂ ಇಂತಹ ಎರಡು ಚೌಪದಿಗಳನ್ನು ಉದಾಹರಿಸುತ್ತಾರೆ: 'ಕಯ್ಯುಂಟು ಕಾಲಿಲ್ಲ ಸಿರವರಿದ ಮುಂಡ', 'ಸುತ್ತು ಸುತ್ತುವುದು ವಾಲೆ ತಾನಲ್ಲ' ಎಂಬಂಥ ಚೌಪದನಗಳು ಒಂದಿಷ್ಟು ಸುಧಾರಿಸಿದ ರಚನಗಳೆನಿಸುತ್ತವೆ. ಜನಪದ ಸಾಹಿತ್ಯದ ನೈಜತೆ ಇಂಥಲ್ಲಿ ಕೊರತೆಯಾಗಿ ಕಾಣುತ್ತದೆ. ಅಧ್ಯಯನಕ್ಕೆ ಬಳಸಿಕೊಳ್ಳುವಾಗ ಇಂತಹ ಸಂಗತಿಗಳನ್ನು ಗಮನಿಸುವುದು ಅವಶ್ಯವೆನಿಸುತ್ತವೆ. ಸಲ್ಪಸ್ವಲ್ಪ ನಾಗರಿಕ ಸಂಪರ್ಕಕ್ಕೆ ಬಂದರೂ ಒಬ್ಬ ಗ್ರಾಮಾಂತರ ಪ್ರದೇಶದ ಕವಿಯ ಭಾಷೆ, ಛಂದಸ್ಸು, ದೃಷ್ಟಿಗಳು ಹೇಗೆ ಬದಲಾವಣೆಯಾಗುತ್ತವೆ ಎಂಬುದನ್ನು ಗುರುತಿಸಲು ಇಂತಹ ಉದಾಹರಣೆಗಳು ಸಹಾಯಕ್ಕೆ ಬರುತ್ತವೆ.

ಡಾ. ಸೋಮಶೇಖರ ಇಮ್ರಾಪುರ ಅವರು ತಮ್ಮ ಸಂಗ್ರಹಕ್ಕೆ ಬರೆದ ಪ್ರಸ್ತಾವನೆಯಲ್ಲಿ ಅನೇಕ ಸಂಗತಿಗಳನ್ನು ಚರ್ಚಿಸುತ್ತಾರೆ. ೧೦ ಸಂಗತಿಗಳನ್ನು ಇಟ್ಟುಕೊಂಡು ಈ ಪ್ರಸ್ತಾವನೆಯನ್ನು ಬೆಳೆಸಿದ್ದಾರೆ. ಒಗಟುಗಳ ಅರ್ಥ, ಸ್ವರೂಪ, ಪ್ರಾಚೀನತೆ, ವರ್ಗೀಕರಣ, ಪ್ರಕಾರಗಳು, ಗಾದೆ-ಒಗಟು-ಒಡಪುಗಳ ಸಂಬಂಧ, ವ್ಯತ್ಯಯಗಳು, ಪ್ರಯೋಜನಗಳು, ಸಾಹಿತ್ಯಕ ಮೌಲ್ಯ. ಈ ಪ್ರಮುಖವಾದ ಚರ್ಚೆಗಳನ್ನು ಪ್ರಸ್ತಾವನೆಯಲ್ಲಿ ಕಾಣುತ್ತೇವೆ.

ಗಾದೆ ಒಂದನ್ನು ಬಿಟ್ಟು ಉಳಿದೆಲ್ಲ ಜನಪದ ಸಾಹಿತ್ಯ ಪ್ರಕಾರಗಳ ಬಳಕೆ ತೀರ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಗಾದೆ ಸಹಜವಾಗಿ ಮಾತಿನಲ್ಲಿಯೇ ಬಳಕೆಯಾಗುವಂತಹದು. ಅದಕ್ಕೆ ವಿಶೇಷವಾಗಿ ಪ್ರತ್ಯೇಕ ವೇಳೆ, ಹೇಳುವವರು-ಕೇಳುವವರು, ವಿಶೇಷ ಸಂದರ್ಭ ಇವೆಲ್ಲ ಬೇಕಾಗಿಲ್ಲ. ಹೀಗಾಗಿ ಮಾತುಬಲ್ಲ ಜಾಣನಿಗೆ ಗಾದೆಗಳ ಸಹಾಯ ಸಹಜವಾಗಿ ಬೇಕೆಬೇಕು. ಆದರೆ ಮಕ್ಕಳಿಗೆ ಜಾಣರನ್ನಾಗಿಸುವ ಒಗಟುಗಳು, ಅವರೊಡನೆ ಆಟವಾಡಲು ಬಳಸುವ ಮಕ್ಕಳ ಹಾಡುಗಳು, ಅವರಿಗೆ ಜೀವನಾನುಭವವನ್ನು ಎರೆಯುವ ಮತ್ತು ಮನರಂಜನೆ ಕೊಡುವ ಕಥೆಗಳು- ಇವನ್ನೂ ಕೂಡ ನಾವು ಬಳಸುವುದನ್ನು ಕಡಿಮೆ ಮಾಡಿದ್ದೇವೆ. ಇಂಗ್ಲೀಷಿನ ಗೀಳು ನಮಗೆ ಇವುಗಳಿಂದ ದೂರ ಮಾಡುತ್ತಿದೆ. ನವನಾಗರಿಕತೆಯಲ್ಲೂ ಇವುಗಳ ಸ್ಥಾನ ಕಡಿಮೆಯಾಗುತ್ತಿದೆ. ಇದು ಕನ್ನಡ ಭಾಷೆಗೆ, ಕನ್ನಡ ಸಂಸ್ಕೃತಿಗೆ ಒಂದು ರೀತಿಯಿಂದ ಮಾರಕವೇ. "ಪ್ರಪಂಚದ ಎಲ್ಲ ದೇಶದ, ಎಲ್ಲ ಜನಾಂಗಗಳಲ್ಲೂ ಪರಂಪರಾಗತವಾಗಿ ಮನರಂಜಿಸುತ್ತ ಬಂದ ಒಗಟುಗಳು, ನವನಾಗರಿಕತೆಯ ವಾತಾವರಣದಲ್ಲಿ ತಮ್ಮ ಜನಪ್ರಿಯತೆಯನ್ನು ಬಹುಮಟ್ಟಿಗೆ ಕಳೆದುಕೊಂಡಿರುವುದು ನಿಜ. . . . ಪ್ರಾಚೀನ ಕಾಲದಲ್ಲಿ ಮಾತ್ರ ಇವು ಬೌದ್ಧಿಕ ಕಸರತ್ತುಗಳಿಗಾಗಿ-ಜೂಜು, ಪಣ, ಸ್ಪರ್ಧೆ, ವಿನೋದ ಮುಂತಾದ ಉದ್ದೇಶಗಳಿಗೆ ಬಳಸುತ್ತಿದ್ದು, ಸಾರ್ವತ್ರಿಕವಾಗಿ ಎಲ್ಲ ಕಡೆಗೂ ಮಾನ್ಯತೆ ಪಡೆದವುಗಳಾಗಿದ್ದವು, ಜನಪ್ರಿಯವಾಗಿದ್ದವು" (ಪ್ರಪು.೨-೩) ಎಂಬ ಮಾತನ್ನು ಡಾ. ಸೋಮಶೇಖರ ಇಮ್ರಾಪೂರ ಅವರು ಬರೆಯುತ್ತಾರೆ. "ಜನಸಾಮಾನ್ಯರ ಕಲ್ಪನಾಪ್ರತಿಭೆಗೆ ಸಾಕ್ಷಿಯಾಗಿರುವ ಈ ಒಗಟುಗಳು ರೂಪಕ, ಸಂಕೇತಗಳನ್ನೊಳಗೊಂಡ ಪ್ರಾಸಬದ್ಧ ರಚನೆಗಳಾದ್ದರಿಂದ ಕಾವ್ಯಮಾರ್ಗವನ್ನೇ ಹೆಚ್ಚಾಗಿ ಅನುಕರಿಸಿದಂಥವುಗಳು" (ಪ್ರ.ಪು.೯) ಎಂಬ ಸಂಪಾದಕರ ಮಾತು ಒಗಟುಗಳ ಕಾವ್ಯದ ಗುಣದ ಬಗ್ಗೆ ಹೇಳಿದ ಮಾತಾಗಿದೆ.

ಡಾ. ಇಮ್ರಾಪೂರ ಗುರುತಿಸುವ ಒಗಟುಗಳ ಸ್ವರೂಪದ ಸಂಗತಿಗಳು ಹೀಗಿವೆ:

೧. ಉಪಮಾನ ಉಪಮೇಯಗಳೇ ಒಗಟಿನ ಸರ್ವಸ್ವ.

೨. ಒಗಟಿನ ಎರಡು ವಸ್ತುಗಳಲ್ಲಿ ಪರಸ್ಪರ ವಿರೋಧ ಮತ್ತು ನಿಷೇಧಾತ್ಮಕತೆಗಳು ಕಾಣಿಸಿಕೊಳ್ಳುತ್ತವೆ.

೩. ಒಗಟಿನ ಮತ್ತೊಂದು ವಿಶೇಷ ಲಕ್ಷಣವೇ ಶ್ಲೇಷೆ.

೪. ಹಾಸ್ಯ-ವಿಡಂಬನೆ ಒಗಟುಗಳ ವಸ್ತುವಾಗಬಹುದು.

೫. ರೂಪಕ ಭಾಷೆಯಲ್ಲಿ ಅಶ್ಲೀಲತೆಯ ಪ್ರದರ್ಶನ.

ವರ್ಗೀಕರಣಕ್ಕೆ ಸಂಬಂಧಿಸಿದಂತೆ ನಾವು ಯಾರದೋ ವಿಭಾಗೀಕ್ರಮವನ್ನು ಅನುಸರಿಸಿ ಎಡವುದಕ್ಕಿಂತ ಈ ವಿಷಯದಲ್ಲಿ ಸ್ವತಂತ್ರವಾದ ಒಂದು ಕ್ರಮವನ್ನು ಅನುಸರಿಸುವುದು

ಯಾವಾಗಲೂ ಸರಿಯಾದುದು. ಕ್ಷೇತ್ರಕಾರ್ಯದ ಅನುಭವ, ಸಂಗ್ರಹಿಸಿದ ಸಾಹಿತ್ಯದೊಂದಿಗಿನ ನಿರಂತರ ಸಂಬಂಧಗಳಿಂದ, ಒಬ್ಬನಿಗೆ ತಮ್ಮಲ್ಲಿ ಹುದುಗಿರುವ ಮೂಲ ಗುಣಗಳನ್ನು ಬಿಟ್ಟುಕೊಡುತ್ತವೆ. ಸಂಗ್ರಾಹಕನ ಅನುಭವವೇ ಅವನಿಗೆ ದಾರಿ ತೋರಿಸುತ್ತದೆ. ತನ್ನ ಅನುಕೂಲಕ್ಕೆ ತಕ್ಕಂತೆ ಆತ ವಿಭಾಗೀಕರಣವನ್ನು ಮಾಡಿಕೊಳ್ಳಬಹುದು. ಇದು ಒಬ್ಬನು ಸಂಗ್ರಹಿಸಿದ ಒಗಟುಗಳ ಮೊತ್ತವನ್ನೂ ಅನುಸರಿಸುತ್ತದೆ. ಒಗಟುಗಳ ಬಗೆಗೆ ನಡೆದ ವರ್ಗೀಕರಣದ ವಿಧಾನಗಳನ್ನು ಗಮನಿಸಿದರೆ, ಸಾಮಾನ್ಯವಾಗಿ ಒಗಟುಗಳನ್ನು ಅಕಾರಾದಿಯಾಗಿ ಜೋಡಿಸುವುದು ಹೆಚ್ಚು ಸುಲಭ ಕ್ರಮ. ಉಳಿದಂತೆ ಒಗಟುಗಳ ಉತ್ತರಗಳ ವಿಷಯಗಳನ್ನನುಸರಿಸಿ ವಿಭಾಗೀಕ್ರಮ ಮಾಡಿಕೊಳ್ಳುವುದು ಇನ್ನೊಂದು ಕ್ರಮ. ಉಳಿದಂತೆ ಅನೇಕ ಜನ ಭಾರತೀಯರು, ಹೊರದೇಶದವರು ಮಾಡಿದ ಪ್ರಯತ್ನಗಳು ಅವರವರ ಕ್ಷೇತ್ರಕಾರ್ಯದ ಅನುಭವ ಮತ್ತು ಸಂಗ್ರಹಿಸಿದ ಒಗಟುಗಳ ಮೊತ್ತವನ್ನು ಅವಲಂಬಿಸಿದ್ದು ಸಹಜವಾಗಿ ಕಂಡುಬರುತ್ತದೆ. ಒಬ್ಬಿಬ್ಬರು ತಮ್ಮ ಸಂಶೋಧನ ಅಧ್ಯಯನದಲ್ಲಿ ಒಗಟುಗಳ ರಚನಾ ಕ್ರಮವನ್ನು ಅನುಸರಿಸಿದ್ದಾರೆ. ಕೆಲವೊಬ್ಬರು ಭಾಷಾಶಾಸ್ತ್ರೀಯ ಅಂಶಗಳನ್ನು ಗಮನಿಸಿ ವರ್ಗೀಕರಿಸಿದ್ದಾರೆ. ಇಂತಹ ಪ್ರಯತ್ನಗಳು ವಿದ್ವತ್‌ವಲಯದಲ್ಲಿ ಮಾತ್ರ ಓಲಾಡುವಂತಹವು. ಸಂಶೋಧನ ಅಧ್ಯಯನದಲ್ಲಿ ಕಾಣಿಸಿಕೊಳ್ಳುವ ಅಪರೂಪದ ಪ್ರಯತ್ನಗಳಿವು. ಒಗಟುಗಳ ಸಂಗ್ರಹವುಳ್ಳ ಒಂದು ಕೃತಿಗೆ ಒಗ್ಗಿಸಿಕೊಳ್ಳಲು ಅಷ್ಟು ಸುಲಭಸಾಧ್ಯವಲ್ಲದ ಕ್ರಮಗಳಿವು.

ಒಗಟುಗಳ ವರ್ಗೀಕರಣದ ಎಲ್ಲ ಪ್ರಯತ್ನಗಳನ್ನು ಗಮನಿಸಿ, ಒಟ್ಟಾರೆಯಾಗಿ ಒಗಟುಗಳನ್ನು ಐದಾರು ಪ್ರಕಾರಗಳಲ್ಲಿ ಗುರುತಿಸಿಕೊಳ್ಳಬಹುದು ಎಂಬ ಒಂದು ನಿರ್ಣಯಕ್ಕೆ ಡಾ.ಇಮ್ರಾಪೂರ ಅವರು ಬರುತ್ತಾರೆ. ಅವರು ಸಂಸ್ಕರಿಸಿಕೊಂಡು ಗುರುತಿಸಿದ ಪ್ರಕಾರಗಳು ಹೀಗಿವೆ:

೧. ದ್ವಂದ್ವಾರ್ಥದ ಒಗಟುಗಳು.
೨. ಗೂಡಾರ್ಥದ ಒಗಟುಗಳು.
೩. ಚಿತ್ರಶಬ್ದದ ಒಗಟು ಇಲ್ಲವೆ ಸ್ವಪ್ನದ ಒಗಟು.
೪. ಪದ ಸಮಸ್ಯೆ
೫. ನಾಟು ನುಡಿಗಳು
೬. ಗಣಿತದ ಒಗಟುಗಳು.
೭. ಪ್ರಶ್ನೋತ್ತರ ಒಗಟುಗಳು ಮತ್ತು ಸ್ಪರ್ಧಾತ್ಮಕ ಒಗಟುಗಳು.
೮. ಒಗಟು ಕಥೆಗಳು.
೯. ವಿನೋದಾತ್ಮಕ ಮತ್ತು ವಿಡಂಬನಾತ್ಮಕ ಒಗಟುಗಳು
೧೦. ಅನ್ವಯಾರ್ಥದ ಒಗಟುಗಳು ಅಥವಾ ದೂರಾನ್ವದ ಒಗಟುಗಳು.
೧೧. ಶಕುನದ ಒಗಟುಗಳು.
೧೨. ಒಡಬು–ಒಗಟುಗಳು.

"ಸಾಹಿತ್ಯವು ಜೀವನದ ಪಡಿನೆಳಲು ಎಂಬುದನ್ನು ಎಷ್ಟರ ಮಟ್ಟಿಗೆ ಸಾರ್ಥಕಗೊಳಿಸಿ ಕೊಂಡಿದೆಯೋ, ಅಷ್ಟೇ ಮಟ್ಟದಲ್ಲಿ ಒಗಟು ಕೂಡಾ ಹಾಸ್ಯ, ವಿನೋದ, ವಿಡಂಬನೆ,

ನೀತಿಬೋಧೆ, ತಾತ್ವಿಕ ಜಿಜ್ಞಾಸೆ ಮುಂತಾದವುಗಳಿಂದ ತನ್ನ ಸಾರ್ಥಕತೆಯನ್ನು ಪರಂಪರೆಯುದ್ದಕ್ಕೂ ವಿನಿಯೋಗಿಸುತ್ತ ಬಂದಿದೆ. ಉದ್ದೇಶವಿಷ್ಟೇ; ಒಗಟು ಜಾನಪದೀಯವಾದರೂ ಶಿಷ್ಟ ಕಾವ್ಯದಂತೆಯೇ ಜನತೆಯ ಆಶೋತ್ತರಗಳನ್ನು ಚಿತ್ರಿಸಬಲ್ಲದೆಂಬುದು" (ಪ್ರಪು.೭೨).

ಜಗತ್ತಿನ ತುಂಬ ಎಲ್ಲೆಲ್ಲಿ ಜನಪದ ಸಾಹಿತ್ಯದ ಅಭ್ಯಾಸ ನಡೆದಿದೆಯೋ ಆಯಾ ದೇಶಗಳಲ್ಲೆಲ್ಲ ಒಗಟುಗಳ ಅಧ್ಯಯನಗಳು ನಡೆದಿವೆ. ಅವುಗಳ ಸಾಹಿತ್ಯಿಕ ಗುಣಗಳನ್ನು ಗಮನಿಸಿ ಒಗಟುಗಳ ಸಾಹಿತ್ಯಿಕ ಅಧ್ಯಯನಗಳು, ವಸ್ತುವಿನ ವೈವಿಧ್ಯತೆಯನ್ನು ನೋಡಿ ಸಾಂಸ್ಕೃತಿಕ ಅಧ್ಯಯನಗಳು, ಒಗಟುಗಳ ಭಾಷೆಯನ್ನು ಗಮನಿಸಿ ಅವುಗಳ ಭಾಷಿಕ ಹಾಗು ರಾಚನಿಕ ಅಧ್ಯಯನಗಳು ಹೀಗೆ ಒಗಟುಗಳ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಭಾಷಿಕ ಅಧ್ಯಯನಗಳು ನಡೆಯಬೇಕು. ಆಯಾ ದೃಷ್ಟಿಯಿಂದ ಅವುಗಳ ವಿಭಾಗೀಕರಣದ ಕೆಲಸಗಳೂ ನಡೆಯಬೇಕು. ಕನ್ನಡದಲ್ಲಿ ಅಪರೂಪಕ್ಕೆ ಡಾ. ಸೋಮಶೇಖರ ಇಮ್ರಾಪೂರ ಅವರ ಒಂದು ಪ್ರಯತ್ನ ಮಾತ್ರ ನಡೆದಿರುವುದು ಕಂಡುಬರುತ್ತದೆ.

೧೯೮೨ರಲ್ಲಿ ಶಾಂತಿ ನಾಯಕ ಅವರು **'ಜಾಣೆ ಕನ್ನಡವ ತಿಳಿದ್ಹೇಳೆ'** ಎನ್ನುವ ಒಗಟುಗಳ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಕಾರವಾರ ಜಿಲ್ಲೆಯಿಂದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಹತ್ವದ ಕೆಲಸ ಮಾಡಿದವರೆಂದರೆ ಶಾಂತಿ ನಾಯಕ ಎನ್.ಆರ್.ನಾಯಕ, ಹಾಗೂ ಎಲ್.ಆರ್.ಹೆಗಡೆ ಅವರು. ಶಾಂತಿ ನಾಯಕ ಅವರು ಹೊನ್ನಾವರದಂತಹ ಒಂದು ತಾಲೂಕ ಪ್ರದೇಶದಲ್ಲಿದ್ದು, ಅಲ್ಲಿಯ ಸಣ್ಣ ಸಣ್ಣ ಬುಡಕಟ್ಟು ಜನಗಳ ಜೊತೆಗೆ ಸಂಪರ್ಕದಲ್ಲಿದ್ದು, ಅತ್ಯಂತ ಸಂಕೀರ್ಣ ಕನ್ನಡ ಭಾಷೆಗಳ ಜನಪದ ಸಾಹಿತ್ಯದ ಬಗೆಗೆ ಕೆಲಸ ಮಾಡಿದ್ದಾರೆ. ಪ್ರಸ್ತುತ **'ಜಾಣೆ ಕನ್ನಡವ ತಿಳಿದ್ಹೇಳೆ'** ಕೂಡ ಅಂತಹ ಟಿಪಿಕಲ್ ಕನ್ನಡದಲ್ಲಿಯೇ ಸಂಗ್ರಹಿಸಿದ ಒಗಟುಗಳ ಸಂಗ್ರಹ.

ನಾಡವರು, ಹಾಲಕ್ಕಿ ಒಕ್ಕಲಿಗರು, ನಾಮಧಾರಿಗಳು, ಗಾಣಿಗರು, ದೇಶಭಂಡಾರಿ, ಉಪ್ಪಾರ, ಮೊಗೇರ, ಮುಕ್ರಿ, ಹವ್ಯಕ–ಹೀಗೆ ಕಾರವಾರ ಜಿಲ್ಲೆಯ ಹೊನ್ನಾವರದ ಸುತ್ತಮುತ್ತಲ ಪ್ರದೇಶದಲ್ಲಿ ವಾಸವಾಗಿರುವ ಹಲವಾರು ಜನಾಂಗಗಳಲ್ಲಿ ಇಲ್ಲಿಯ ಒಗಟುಗಳನ್ನು ಸಂಗ್ರಹಿಸಿದ್ದು, ಅವುಗಳ ಭಾಷೆ ಸಾಮಾನ್ಯವಾದ ಸರಳ ಕನ್ನಡದಂತಿಲ್ಲ. ಅಲ್ಲಿಯ ಕನ್ನಡ ಕಾರವಾರ ಬಿಟ್ಟು ಹೊರಗಿನವರಿಗೆ ಸರಳವಾಗಿ ಅರ್ಥವಾಗುವಂತಿಲ್ಲ. ಇಂತಹ ಕನ್ನಡದಲ್ಲಿಯ ಒಗಟುಗಳನ್ನು ಸಂಗ್ರಹಿಸಿ, ಕಾರವಾರ ಜಿಲ್ಲೆಯಿಂದ ಹೊರಗಿನವರಿಗೂ ಈ ಒಗಟುಗಳು ತಿಳಿಯಬೇಕೆಂಬ ಹಂಬಲದಿಂದ ಅನೇಕ ರೀತಿಯಲ್ಲಿ ವಿವರಣೆಗಳನ್ನು, ಟಿಪ್ಪಣಿಗಳನ್ನು ಒದಗಿಸಿದ್ದಾರೆ. ಇದು ಸಂಪಾದಕರ ನಿಷ್ಠೆಯನ್ನು ಹೇಳಿಕೊಡುತ್ತದೆ. ಅಲ್ಲಿಯ ಭಾಷೆಗೆ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು:

> ಸರಕ್ಕನೆ ಬಂತು ಮುಡಿಕಂಡು ಕುಳ್ತ್‌ಕಣ್ತು. (ಅಡ್ಕೆ ಕೊನೆ)

> ವಂದ್ ಬಟ್ಟಾ ಗಡ್ಡಾ ಮೀಸೆ ಬೋಳ್ಸ್ಕಂಡು ಸಂತೆಗೋಗ್ತಾ.(ಅಡಕಿ)

> ಮಗ್ಳು ಮಂಗ್ಳೂರಿಗ್ಹೋಗಿ ಮದ್ವೆ ಸಾಗ್‌ಸ್ಕಾ ಬಂತ್ತು.
ಅಜ್ಜಿ ತಲ್ ಗೊಡೆಗೇ ಇರ್ತು. (ಅಡಕೆ ಹೂ)

ಇಲ್ಲಿಯ ೭೦೦ ಒಗಟುಗಳನ್ನು ಅವುಗಳ ಉತ್ತರಗಳನ್ನು ಗಮನಿಸಿ ಆಕಾಶ, ಪ್ರಾಣಿ–ಪಕ್ಷಿ–ಕೀಟ, ಅಂಗಾಂಗ, ಸಸ್ಯ, ಧಾರ್ಮಿಕ, ಉಪಕರಣ, ಅಲಂಕಾರ, ಅಡುಗೆ ಹೀಗೆ ಮುಖ್ಯವಾಗಿ ಎಂಟು ವಿಭಾಗಗಳಲ್ಲಿ ವಿಭಾಗಿಸಿಕೊಂಡಿದ್ದಾರೆ. ಮತ್ತೆ ಈ ವಿಭಾಗಗಳಲ್ಲಿ ಸಣ್ಣ ಸಣ್ಣ ವಿಷಯಗಳನ್ನು ಮಾಡಿಕೊಂಡು ನಾಲ್ಕು, ಐದು, ಆರು ಹೀಗೆ ಎಷ್ಟು ಸಂಖ್ಯೆಯಲ್ಲಿ ಒಗಟುಗಳು ಕೊಡಲಿಕ್ಕೆ ಸಾಧ್ಯ ಅವಷ್ಟರ ಒಂದೊಂದು ಗುಂಪು ಮಾಡುತ್ತ, ಅವುಗಳಿಗೆ ಒಂದು ಹೆಸರು ಕೊಡುತ್ತ ಹೋಗಿದ್ದಾರೆ. ಅಂಗಾಂಗ ಎಂಬ ವಿಭಾಗದಲ್ಲಿ– ಉಗ್ರು, ಕಣ್ಣು, ಕಯ್ಬೆರಳು, ಕೂದ್ಲು, ಕೆಮಿ, ಗಡ್ಡಾ, ಚಮ್ಕಲು, ನಿದ್ದೆ, ನೆರಳು, ಮೂಗು, ಮೊಲೆ, ಸಿಂಬ್ಳಾ ಹೀಗೆ ಆಯಾ ವಿಷಯಕ್ಕೆ ಸಂಬಂಧಪಟ್ಟಂತೆ ಒಗಟುಗಳ ಒಳವಿಭಾಗಗಳನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇದು ಬಹುಶ್ರಮದ ಕೆಲಸ. ಈ ಮೊದಲು ಇಷ್ಟೊಂದು ಪರಿಶ್ರಮದ ಕೆಲಸವನ್ನು ಯಾರೂ ಮಾಡಿರಲಿಲ್ಲ. ಮೊದಲ ಸಲ ಇಂತಹ ಪ್ರಯತ್ನಕ್ಕೆ ಕೈಹಾಕಿದ್ದಾರೆ ಶಾಂತಿ ನಾಯಕ ಅವರು. ಈ ರೀತಿ ವಿಂಗಡಿಸಿದ ಒಗಟುಗಳೆಲ್ಲ 'ಸೂತ್ರರೂಪದ ಒಗಟು'ಗಳಾಗಿವೆ.

ಮತ್ತೊಂದು ನಮೂನೆಯ ಒಗಟುಗಳನ್ನು 'ಒಗಟು, ಒಡಗತೆಗಳು' ಎಂದಿದ್ದಾರೆ. ಇವು 'ವಿವರಣಾತ್ಮಕ ಒಗಟುಗಳು' (ಒಡಗತೆಗಳು) ವಿಭಾಗದ ಕಥಾಮಾದರಿಯ ಒಗಟುಗಳಾಗಿವೆ. ಹಾಡಿನಲ್ಲಿ ಕಂಡುಬರುವ ಒಗಟುಗಳನ್ನು ಒಂದಿಷ್ಟು ಸಂಗ್ರಹ ಮಾಡಿಕೊಟ್ಟಿದ್ದಾರೆ. ಅವನ್ನು 'ಒಗಟು, ಒಡಪೆಗಳು' ಎಂದು ಕರೆದಿದ್ದಾರೆ. ಇಲ್ಲಿ ಅರ್ಥವನ್ನು ಒಳಗಿಟ್ಟು ಸಾಂಕೇತಿಕವಾಗಿ ಮಾತನಾಡಲಾಗುತ್ತದೆ. ಅದಕ್ಕೆ ಡಾ. ಶಾಂತಿ ನಾಯಕ ಅವರು ಕೊಟ್ಟ ಒಂದು ಉದಾಹರಣೆಯನ್ನು ಗಮನಿಸಬಹುದಾಗಿದೆ:

'ಗುಡ್ಗ್‌ತೀರಿ, ಮಿಂಚ್ತೀರಿ, ಮೊಳೆಯಾಕ್ ಹೊಯ್ಯೊಕಲಾ'

'ಕರೂ ಕಟ್ಟಿ ಕರೂಗ್ ಹುಲ್ಲಾಕಿ ಕರ್ರೈಕ್ ತಿಂಬೂಕಲಾ' (೩)

'ಮೂರನೆಯದು ಅಂಕೋಲೆಯ ಕುಮಾರಪಂತರಿಂದ ಸಂಗ್ರಹಿಸಿದ್ದು, ಕತೆ ಹೀಗಿದೆ: ಗಂಡ–ಹೆಂಡತಿ ಯಾವುದೋ ಜಗಳದ ನಿಮಿತ್ತ ಮಾತು ಬಿಟ್ಟಿದ್ದರು. ಊಟದ ಹೊತ್ತಿಗೆ ಗಂಡ ಮಿಂದು ಬಂದು ಹೆಂಡತಿ ಊಟಕ್ಕೆ ಕರೆಯುವುದನ್ನು ಹಾರೈಸಿ ಕುಳಿತ. ಕರೆಯದೇ ಒಳಗೆ ಹೋಗುವುದು ಹೇಗೆ?

ಗಂಡ ಜಳಕ ಮುಗಿಸಿ ಬಂದದ್ದನ್ನು ನೋಡಿ ಹೊಳೆಯುವ ತಾಟು ತಂಬಿಗೆ ಇಟ್ಟು ಹೆಂಡತಿ ಊಟ ಬಡಿಸಿದಳು. ಆದರೆ ಕರೆಯುವದು ಹೇಗೆ? ತಾಟು ತಂಬಿಗೆ ಜಪ್ಪಿ ಸದ್ದು ಮಾಡಿದಳು. ಸದ್ದು ಓಡಾಟ ಮಾತ್ರವಿತ್ತೇ ಹೊರತು ಊಟಕ್ಕೆ ಕರೆ ಬರಲಿಲ್ಲ; ವೇಳೆ ಕಳೆಯಿತು. ಗಂಡ ಉಪಾಯವಾಗಿ ಮಾತಾಡಿದ.

ಗುಡುಗುತ್ತದೆ; ಮಿಂಚುತ್ತದೆ; ಮಳೆ ಏಕೆ ಹೊಯ್ಯು(ಸುರಿ)ವದಿಲ್ಲ? ಎಂದು ಒಗಟಾಗಿ ಪ್ರಶ್ನೆ ಕೇಳಿದ. ಅದಕ್ಕೆ ಹೆಂಡತಿಯೂ ಕರುವನ್ನು ಕಟ್ಟಿ ಕರುವಿಗೆ ಹುಲ್ಲನ್ನೂ ಹಾಕಿದ್ದೇನೆ. ಕರು ಏಕೆ ಮೇಯುವದಿಲ್ಲ ಎಂದು ಕೇಳಿದಳು".

ಹೀಗೆ ಡಾ. ಶಾಂತಿ ನಾಯಕ ಅವರು ಕೊಟ್ಟ ಐದು ಕತೆಗಳು 'ವಿವರಣಾತ್ಮಕ ಒಗಟುಗಳು' (ಒಡಗತೆಗಳು) ಭಾಗಕ್ಕೆ ಸೇರುವ ಕತೆಗಳಾಗಿವೆ. ಹೊನ್ನಾವರ ಪರಿಸರದಿಂದ ಹೊರಗಿರುವವರಿಗೆ ತಿಳಿಯದ ಕನ್ನಡ ಬಳಕೆ ಇರುವ ಒಗಟುಗಳನ್ನು ಆರಿಸಿಕೊಂಡು ಅವನ್ನು ಎಲ್ಲರಿಗೂ ತಿಳಿಯುವಂತೆ ಗ್ರಾಂಥಿಕ ಭಾಷೆಯಲ್ಲಿ ಬರೆಯುವ ಪ್ರಯತ್ನವನ್ನು ಸಂಪಾದಕರು ಮಾಡಿದ್ದಾರೆ. ಇದನ್ನು ಅವರು 'ಒಗಟುಗಳ ಹೊಸಗನ್ನಡ ರೂಪ' ಎಂಬ ಶೀರ್ಷಿಕೆಯಡಿ ಕೊಟ್ಟಿದ್ದಾರೆ. ೩೫ ಪುಟಗಳಷ್ಟು ಸುದೀರ್ಘ ಬರವಣಿಗೆ ಇದಾಗಿದೆ. ಹೀಗಾಗಿ ಈ ಪ್ರಯತ್ನವನ್ನೂ ನಾವು ಗಮನಿಸಲೇ ಬೇಕಾಗುತ್ತದೆ. ಅಂದರೆ ಅಲ್ಲಿಯ ಭಾಷೆ ಹೊರಗಿನವರಿಗೆ ತಿಳಿಯುವದಿಲ್ಲ ಎಂಬ ಕಾರಣಕ್ಕಾಗಿ ಈ ಪ್ರಯತ್ನವನ್ನು ಅವರು ಮಾಡಿದ್ದಾರೆ. ಸಂಪಾದಕರ ಇಂತಹ ಪ್ರಯತ್ನಗಳು ಕೃತಿಯ ಮೌಲ್ಯವನ್ನು ಹೆಚ್ಚಿಸುತ್ತವೆ; ಸಂಪಾದಕರ ಜವಾಬ್ದಾರಿಯ ಅರಿವನ್ನು ಮಾಡಿಕೊಡುತ್ತವೆ. ಉದಾ: 'ಮೊಳ=ಗಂಡುಬೆಕ್ಕು. ಪ್ರಥಮ ಸ್ವರವನ್ನು ದೀರ್ಘವಾಗಿ ಉಚ್ಚರಿಸಬೇಕು. ಉದಾ–ಮೊsಳ, ಬೊsನ, ಮೊsಡ, ಸೊsಳೆ'. ಇಂತಹ ಟಿಪ್ಪಣಿಗಳನ್ನು ೧೫ ಪುಟಗಳಷ್ಟು ದೀರ್ಘವಾಗಿ ಬರೆದಿದ್ದಾರೆ.

ಟಿಪ್ಪಣಿ–೨ ರಲ್ಲಿ ಎಂತಹ ಭಾಷೆಯಲ್ಲಿ ಯಾವ ಯಾವ ಸಂಖ್ಯೆಯ ಒಗಟುಗಳಿವೆ ಎಂದು ಕೊಟ್ಟಿದ್ದಾರೆ: ಉದಾ: ನಾಡವರ ಭಾಷೆಯಲ್ಲಿರುವ ಒಗಟುಗಳು, ಹಾಲಕ್ಕಿ ಒಕ್ಕಲಿಗರ ಭಾಷೆಯಲ್ಲಿರುವ ಒಗಟುಗಳು, ನಾಮಧಾರಿ, ಗಾಣಿಗ, ದೇಶಭಂಡಾರಿ, ಉಪ್ಪಾರ, ಮೊಗೇರ, ಮುಕ್ರಿ ಮುಂತಾದವರ ಭಾಷೆಯಲ್ಲಿರುವ ಒಗಟುಗಳು, ಶಿಷ್ಟ ಭಾಷೆಗೆ ಸಮೀಪದಲ್ಲಿರುವ ಒಗಟುಗಳು, ಉಳಿದ ಒಗಟುಗಳು ಹವ್ಯಕ ಭಾಷೆಯಲ್ಲಿವೆ. ಇವುಗಳಿಗೆಲ್ಲ ಒಗಟುಗಳ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಮತ್ತೆ ಯಾವ ಯಾವ ಒಗಟು ಯಾರ್‍ಯಾರು ಯಾರ್‍ಯಾರಿಂದ ಸಂಗ್ರಹಿಸಿ ಕೊಟ್ಟರು ಎಂಬ ವಿವರಗಳನ್ನೂ ಕೊಟ್ಟಿದ್ದಾರೆ.

ಇನ್ನೊಂದು ವಿಶೇಷ ಪ್ರಯತ್ನವನ್ನು ಅವರು ಮಾಡಿದ್ದಾರೆ. ಕೆಲವು ಶಬ್ದಗಳಿಗೆ 'ಟಿಪ್ಪಣಿ' ಗಳನ್ನು ಬರೆದು, ತೀರ ಪ್ರಾದೇಶಿಕ ಪದಗಳ ಅರ್ಥದ ಜೊತೆಗೆ ಅವನ್ನು ಹೇಗೆ ಒಡೆದು ಓದಬೇಕೆಂದು ತಿಳಿಸುವ ಪ್ರಯತ್ನವನ್ನೂ ಮಾಡಿದ್ದಾರೆ.

೧೯೮೫ ರಲ್ಲಿ ನಾನು (ವೀರಣ್ಣ ದಂಡೆ) ಸಂಪಾದಿಸಿದ ಒಂದು ಕೃತಿ **'ಆಯ್ದ ಗಾದೆಗಳು ಹಾಗೂ ಒಗಟುಗಳು'** ಎಂಬುದು ಪ್ರಕಟವಾಗಿದೆ. ಇಲ್ಲಿಯ ಗಾದೆ ಮತ್ತು ಒಗಟುಗಳನ್ನು ಬೇರೆ ಮಾಡಿ, **'ಕನ್ನಡ ಒಗಟುಗಳ ಸೂಚಿ', 'ಕನ್ನಡ ಗಾದೆಗಳ ಸೂಚಿ'** ಎಂಬ ಎರಡು ಪ್ರತ್ಯೇಕ ಚಿಕ್ಕಸಂಗ್ರಹಗಳನ್ನೂ ಪ್ರಕಟಿಸಲಾಗಿದೆ. ಇಲ್ಲಿಯ ಒಗಟುಗಳನ್ನು ಬಳಕೆಗೊಂಡ ವಿಷಯಗಳನ್ನು ಆಧರಿಸಿ, ಅಂದರೆ ಒಗಟುಗಳ ಅರ್ಥಗಳನ್ನು ಗಮನಿಸಿ ಹನ್ನೊಂದು ಪ್ರಕಾರಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ: ೧. ಪ್ರಾಣಿಗಳು, ೨. ಸಸ್ಯವರ್ಗ, ೩. ಶರೀರ ಸಂಬಂಧಿಗಳು, ೪. ಭೂ ಖಗೋಳ ವರ್ಗ, ೫. ಗೃಹೋಪಕರಣಗಳು, ೬. ಆಹಾರ ಪದಾರ್ಥಗಳು, ೭. ವ್ಯವಸಾಯ ಸಂಬಂಧಿಗಳು, ೮. ನಾಮವಾಚಿಗಳು, ೯. ಅಲಂಕಾರ ವಸ್ತುಗಳು, ೧೦. ಸೌಲಭ್ಯ ಸಾಧನಗಳು, ೧೧. ಅನೇಕಾರ್ಥವುಳ್ಳ ಒಗಟುಗಳು.

ಹೀಗೆ ಒಗಟುಗಳು ಯಾವ ವಸ್ತುವನ್ನು ವರ್ಣಿಸುತ್ತವೆಯೋ ಆ ವಸ್ತುವನ್ನು ಇಟ್ಟುಕೊಂಡು ಅಂದರೆ ಒಗಟುಗಳ ಉತ್ತರಗಳನ್ನು ಗಮನಿಸಿ ಈ ವಿಭಾಗೀಕ್ರಮವನ್ನು

ಇನ್ನೂ ಬೆಳೆಸಬಹುದಾಗಿದೆ. ಇಲ್ಲಿಯ ವಿಭಾಗೀಕ್ರಮವನ್ನು ಶಾಸ್ತ್ರೀಯಗೊಳಿಸಲು ಪ್ರಯತ್ನಿಸಲಾಗಿದೆ. ನಾನು ಜನಪದ ಕಥೆಗಳ ಆಶಯ ಮತ್ತು ಮಾದರಿಗಳನ್ನು ಕುರಿತು ಅಧ್ಯಯನ ಮಾಡಿದ್ದರಿಂದ ಒಗಟುಗಳ ವಸ್ತು–ಉತ್ತರಗಳನ್ನು ಗಮನಿಸಿ, ಸ್ಟಿಥ್ ಥಾಮ್ಸನ್ನರ ಜನಪದ ಕಥೆಗಳನ್ನು ಕುರಿತು ತಯಾರಿಸಿದ **'ಆಶಯ ಸೂಚಿ'** ಯಲ್ಲಿ ಬಳಸಿದ ದಶಮಾಂಸ ವಿಭಾಗೀಕ್ರಮವನ್ನು ಅನುಸರಿಸಿ ಒಗಟುಗಳನ್ನು ವಿಭಾಗಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ವಿಭಾಗೀಕ್ರಮದಲ್ಲಿ ಒಂದು ವಸ್ತು ಮತ್ತು ಆ ವಸ್ತುವಿನ ಸಣ್ಣ ಸಣ್ಣ ವಿಷಯಕ್ಕೆ ಸಂಬಂಧಿಸಿದ ಒಗಟುಗಳೂ ಒಂದೆಡೆ ಬರುತ್ತವೆ. ಇದರಿಂದ ಒಗಟುಗಳನ್ನು ಮನರಂಜನೆಗಾಗಿ ಓದುವವರಿಗೆ ಹೆಚ್ಚು ರಂಜನೀಯವಾಗಿ ಜೋಡಿಸಿ ಕೊಟ್ಟಂತಾಗುತ್ತದೆ. ವಿಶೇಷವಾಗಿ ಗಂಭೀರವಾದ ಅಧ್ಯಯನ ಮಾಡುವವರಿಗೆ ಒಗಟುಗಳು ಒಂದು ವಿಷಯಕ್ಕೆ ಸಂಬಂದಿಸಿ ಹೇಗೆ ರೂಪುಗೊಳ್ಳುತ್ತವೆ ಎಂಬುದು ಥಟ್ಟನೆ ಗಮನಕ್ಕೆ ಬಂದು ಅವುಗಳನ್ನು ವಿಶ್ಲೇಷಿಸಲು ಅನುಕೂಲವಾಗುತ್ತದೆ. ಹಾಗೂ ಒಂದು ಭಾಷೆಯಲ್ಲಿ ಸಿಗುವ ಎಲ್ಲ ಒಗಟುಗಳನ್ನು ಈ ವಿಭಾಗೀಕ್ರಮಕ್ಕೆ ಅಳವಡಿಸಿ ಒಂದೆಡೆ ತರಲು ಸಾಧ್ಯವಾಗುತ್ತದೆ. ಹೀಗಾಗಿ ಈ ಕ್ರಮ ಹೆಚ್ಚು ಸಮಾಧಾನಕರವಾದ ಕ್ರಮ ಎನಿಸುತ್ತದೆ. ವಿಶೇಷವಾಗಿ ಒಗಟುಗಳ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೆ ಈ ವಿಭಾಗೀಕ್ರಮದಿಂದ ಹೆಚ್ಚು ಅನುಕೂಲವಾಗುತ್ತದೆ. ಇನ್ನು ಭಾಷಾಶಾಸ್ತ್ರೀಯ ದೃಷ್ಟಿಯಿಂದ ಮತ್ತು ಬೇರೆ ದೃಷ್ಟಿಯಿಂದ ಅಧ್ಯಯನ ಮಾಡುವವರು ಮತ್ತೆ ಆ ದೃಷ್ಟಿಗೆ ಅನುಕೂಲವಾಗುವ ವಿಭಾಗೀಕ್ರಮವನ್ನು ಅಳವಡಿಸಿಕೊಳ್ಳಬಹುದಾಗಿದೆ.

'ಆಶಯ ಸೂಚಿ'ಯಂತೆ ದಶಮಾಂಶ ಪದ್ಧತಿ ಅನುಸರಿಸಿದ ವಿಭಾಗೀಕ್ರಮದ ಮಾದರಿ ಹೀಗಿದೆ:

ಕೂದಲಿಗೆ ಸಂಬಂದಿಸಿದ ಈ ಒಗಟುಗಳನ್ನು ಗಮನಿಸಬಹುದು:

ಕ ೧೧. ಕೂದಲು

ಕ ೧೧.೦.೧. ಕಪ್ಪತ ಗುಡ್ಡದ ಮ್ಯಾಲ ಇಪ್ಪತ ಸೇರ ನವಣಿ ಬಿತ್ತ್ಯಾರ.
ಅಳ್ಯಾಂವ ಬೀಗ ಇಲ್ಲ. ಲೆಕ್ಕ ಮಾಡಾಂವ ಒಕ್ಕಲಿಗ್ಯಾ ಇಲ್ಲ.

ಕ ೧೧.೦.೨. ಸೂಜಿಯುಟು ಸಣ್ಣ, ಕಾಗಿ ಬಣ್ಣ

ಕ ೧೧.೧. ಬೇತಾಲಿ

ಕ ೧೧.೧.೨. ಬಣವ್ಯಾಗ ಬಾರ್ಕೋಲ ಬಿದ್ದಾದ.

ಕ. ೧೧.೨. ತುರುಬ.

ಕ ೧೧.೨.೧. ಗುಡಿ ಹಿಂದ ಗುಂಡಗಲ್ಲ ಬಿದ್ದಾದ.

ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಮೊದಲು ಒಂದು ಅಕ್ಷರವನ್ನು ಕೊಡಲಾಗುತ್ತದೆ. ಮಾನವ ಶರೀರ ಸಂಬಂಧಿ ವಿಷಯಗಳಿಗೆ 'ಕ' ಅಕ್ಷರದಿಂದ ಗುರುತಿಸಲಾಗಿದೆ. ಅದರಲ್ಲಿ ಕೂದಲಿಗೆ ಸಂಬಂಧಿಸಿದ ಒಗಟುಗಳ ಸಾಮಾನ್ಯ ಸಂಖ್ಯೆ ೧೧. ಕೂದಲಿಗೆ ಸಂಬಂಧಿಸಿದ ಇನ್ನೆರಡು ಸಂಗತಿಗಳು ಇಲ್ಲಿವೆ. ಒಂದು ಬೇತಾಲಿ ಅದನ್ನು **ಕ ೧೧.೧.** ಎಂದೂ, ತುರುಬನ್ನು **ಕ. ೧೧.೨.** ಎಂದು ಗುರುತಿಸಿಕೊಳ್ಳಲಾಗಿದೆ.

ಇನ್ನು ಅವುಗಳನ್ನು ವಿವರಿಸುವ ಒಗಟುಗಳನ್ನು ಮುಂದೆ ಒಂದು ಅಂಶ(.) ಕೊಟ್ಟು ನಂತರ ಎಷ್ಟು ಒಗಟುಗಳಿವೆಯೋ ಅಷ್ಟನ್ನು ಸಂಖ್ಯೆ ವೃದ್ಧಿಸುತ್ತ ಒಗಟುಗಳನ್ನು ಕೊಡುತ್ತ ಹೋಗಬಹುದು. ಮೇಲೆ ಉಲ್ಲೇಖಿಸಿದ ಉದಾಹರಣೆಗಳನ್ನೇ ಗಮನಿಸಿ, ಕೂದಲಿಗೆ ಸಂಬಂಧಿಸಿದ ಎರಡು ಒಗಟುಗಳು ದೊರೆತಿರುವುದರಿಂದ ಕ ೧೧.೦.೧ ಹಾಗೂ ಕ ೧೧.೦.೨ ಎಂದು ಗುರುತಿಸಿ ಒಗಟುಗಳನ್ನು ಕೊಡಲಾಗಿದೆ. ಇದು ಅಮೆರಿಕೆಯಲ್ಲಿ ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡ ಒಂದು ವಿಭಾಗೀಕ್ರಮವಾದರೂ ಅದು ಒಗಟುಗಳಿಗೆ ಸರಿಯಾಗಿ ಅಳವಡುವುದರಿಂದ ಹೆಚ್ಚು ಅನುಕೂಲವೆನಿಸುತ್ತದೆ.

ಒಗಟುಗಳ ರೂಪಕ್ಕೆ ಸಂಬಂಧಿಸಿದಂತೆ ಒಂದು ಮಾತು ಹೇಳಬೇಕು. ಹೆಚ್ಚಿನ ಪುಟಗಳನ್ನು ಕಡಿಮೆ ಮಾಡಿಕೊಳ್ಳಲು ಒಗಟುಗಳ ಒಂದೊಂದು ಸಾಲುಗಳಿಗೆ ಒಂದೊಂದು ಅಲ್ಪವಿರಾಮ(,)ವನ್ನು ಬಳಸುತ್ತ ಹೋಗಲಾಗಿದೆ. ಬದಲಾಗಿ ಸಾಲುಗಳನ್ನು ಒಡೆದೂ ಕೊಡಬಹುದಾಗಿದೆ. ಈ ಕೃತಿಯಲ್ಲಿ ಕೇವಲ 'ಸೂತ್ರರೂಪದ ಒಗಟು'ಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. 'ವಿವರಣಾತ್ಮಕ ಒಗಟು'ಗಳಿಗೆ ಈ ಪದ್ಧತಿ ಅಳವಡಿಸುವುದು ಸುಲಭವಲ್ಲ. ಅವುಗಳಿಗೆ ಬೇಕಾದರೆ 'ಕಥಾವಾದರಿ ಸೂಚಿ' ಕ್ರಮವನ್ನು ಅನುಸರಿಸಬೇಕಾಗುತ್ತದೆ.

ಡಾ. ಎಂ.ಎನ್.ವಾಲಿ ಅವರ **'ಜಾನಪದ ಒಗಟುಗಳು'** (೧೯೮೬) ಬಿಜಾಪೂರ ಜಿಲ್ಲೆಯಿಂದ ಬಂದುದು. ಡಾ. ವಾಲಿ ಅವರು ಬಿಜಾಪೂರ ಜಿಲ್ಲೆಯಿಂದ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ಉತ್ತಮ ಸಂಗ್ರಹಗಳನ್ನು ತಂದಿದ್ದಾರೆ. ಈ ಕೃತಿಯಲ್ಲಿ ೫೭೧ ಸೂತ್ರರೂಪದ ಒಗಟುಗಳು, ೩೨ ವಿವರಣಾತ್ಮಕ ಒಗಟುಗಳು ಇವೆ. ಒಂದು ವಿಶೇಷವೆಂದರೆ ಸೂತ್ರರೂಪದ ಒಗಟುಗಳನ್ನು: 'ಪ್ರಾಕೃತಿಕ ವಸ್ತು–ಕ್ರಿಯೆ, ಸಸ್ಯ ಸಂಪತ್ತು, ನಿತ್ಯದ ಸಲಕರಣೆಗಳು, ದೇಹಾಂಗಗಳು, ಊಟೋಪಚಾರದ ವಸ್ತುಗಳು, ಜೀವಜಗತ್ತು, ಒಗಟುಗಳಲ್ಲಿ ವಿನೋದ, ಅಶ್ಲೀಲ ಆವರಣ' ಎಂದು ಎಂಟು ಪ್ರಕಾರಗಳಲ್ಲಿ ಸೂಚಿಸಿದ್ದಾರೆ. ಅವರು ಸೂಚಿಸುವ ೯ನೇ ಪ್ರಕಾರ 'ಗಣಿತ, ಜಾಣ್ಮೆ ಹಾಗೂ ಪ್ರಶ್ನೋತ್ತರ ಒಗಟುಗಳು' ಎಂದಿದ್ದು ಇವೆಲ್ಲ 'ವಿವಣಾತ್ಮಕ ಒಗಟು'ಗಳ ಪ್ರಕಾರಗಳಾಗಿವೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಎಲ್ಲರೂ ತಮ್ಮ ಸಂಗ್ರಹದಿಂದ ಅಶ್ಲೀಲ ಒಗಟುಗಳನ್ನು ತೆಗೆದುಹಾಕಿದ್ದರೆ ಡಾ. ವಾಲಿ ಅವರು ಅವುಗಳನ್ನು ಅಧಿಕೃತವಾಗಿ ಒಂದು ಪ್ರಕಾರವಾಗಿ ಪರಿವಿಡಿಯಲ್ಲೂ ಸೂಚಿಸಿ ೫೮ ಒಗಟುಗಳನ್ನು ಕೊಟ್ಟಿದ್ದಾರೆ. ಇಂತಹ ಪೋಲಿ ಒಗಟುಗಳು ಎಲ್ಲ ಕಡೆ ದೊರೆಯುತ್ತವೆ. ಆದರೆ ಮಕ್ಕಳು ಓದುವಾಗ ಮುಜುಗುರ ಉಂಟಾಗುತ್ತದೆಂಬ ಭಾವನೆಯಿಂದ ಅವನ್ನು ಕೈಬಿಡುತ್ತ ಬಂದಿರುತ್ತಾರೆ. ಆದರೆ ಅಭ್ಯಾಸದ ದೃಷ್ಟಿಯಿಂದ ಇಂತಹ ಒಗಟುಗಳೂ ಸಹಾಯಕ್ಕೆ ಬರುತ್ತವೆ. ಇಲ್ಲಿಯ ಇನ್ನೊಂದು ವಿಶೇಷವೆಂದರೆ ವಿನೋದದ ಒಗಟುಗಳನ್ನು ಒಂದೆಡೆ ಕೊಟ್ಟಿರುವುದು : 'ಬೆಳ್ಳಿ ಛಡಿ, ನೆಲಕ ಬಡಿ'(ಸುಂಬಳ), 'ಅಲ್ಲಿ ಬುಳು ಬುಳು ಇಲ್ಲಿ ಬುಳುಬುಳು/ ಕಲ್ಯಾಣತನಕ ಬುಳುಬುಳು'(ಕುರಿ ಹಿಕ್ಕಿ), 'ಅಚ್ಚಿಕ ಇಚ್ಚಿಕ ಗುಡ್ಡ/ ನಡುವ ಹುಲಿ ಗುಡಗತೈತಿ'(ಹೂಸು) ಇಂತಹ ಒಗಟುಗಳು ಕೇಳಲು ರಂಜನೀಯವೆನಿಸುತ್ತವೆ ಮತ್ತು ಅವುಗಳ ಉತ್ತರ ಗೊತ್ತಾದರಂತೂ ಮಕ್ಕಳಿಗೆ ನಗು ಉಕ್ಕಿಬರುವದು ಸ್ವಾಭಾವಿಕ.

ಈ ಕೃತಿಯಲ್ಲಿಯ 'ಗಣಿತ, ಜಾಣ್ಮೆ ಹಾಗೂ ಪ್ರಶ್ನೋತ್ತರ ಒಗಟುಗಳು' ಎಂಬ ವಿಭಾಗದಲ್ಲಿ ಕೊಟ್ಟ ಒಗಟುಗಳೆಲ್ಲ 'ವಿವರಣಾತ್ಮಕ ಒಗಟು'ಗಳಾಗಿವೆ.

೧. ಗಣಿತದ ಒಗಟುಗಳು :

> ಒಬ್ಬನಿಗೆ ದಾರಿಯಲ್ಲಿ ಒಂದು ಹಣದ ಚೀಲ ಸಿಕ್ಕಿತು. ಅಷ್ಟರಲ್ಲಿ ಇನ್ನೊಬ್ಬ ಬಂದ. ಅವರಿಬ್ಬರು ಸಮನಾಗಿ ಹಂಚಿಕೊಳ್ಳತೊಡಗಿದಾಗ ಒಂದು ರೂಪಾಯಿ ಹೆಚ್ಚಾಯಿತು. ಮೂರನೆಯವ, ನಾಲ್ಕನೆಯವ, ಐದನೆಯವ, ಆರನೆಯವ ಹೀಗೆ ಒಬ್ಬೊಬ್ಬರಾಗಿ ಬಂದರು. ಪ್ರತಿಸಾರೆ ಹಂಚಲೆತ್ನಿಸಲು ಒಂದು ರೂಪಾಯಿ ಹೆಚ್ಚಾಗುತ್ತಲೇ ಇತ್ತು. ಏಳನೆಯವ ಬಂದ ಆ ಚೀಲದ ಹಣ ಸರಿಯಾಗಿ ಹಂಚಿಕೆಯಾಯಿತು. ಹಾಗಾದರೆ ಆ ಚೀಲದಲ್ಲಿದ್ದ ರೂಪಾಯಿಗಳೆಷ್ಟು? (೨, ಉ. ೩೦೧ ರೂ.)

> ಒಂದು ಮಾವಿನ ಗಿಡದಲ್ಲಿ ಎಷ್ಟೋ ಹಣ್ಣುಗಳಿದ್ದವು. ಆ ಹಣ್ಣುಗಳನ್ನು ಇಳಿಸಿ ರಾಸಿ ಹಾಕಲಾಯಿತು. ಗಿಡ ಕಾಯ್ದ ಆಳಿಗೆ ಒಂದು ಪಾಲು, ಗಿಡದ ಒಡೆಯನಿಗೆ ಎರಡು ಪಾಲು ಹಂಚಲಾಯಿತು. ಒಡೆಯನು ತನಗೆ ದೊರಕಿದ ಪಾಲಿನಿಂದ ಒಂದು ಹಣ್ಣು ತೆಗೆದು ಆಳಿನ ಪಾಲಿನಲ್ಲಿ ಹಾಕಿದರೆ ಇಬ್ಬರ ಪಾಲುಗಳು ಸಮನಾಗುತ್ತವೆ. ಹಾಗಾದರೆ ಆ ಗಿಡದಲ್ಲಿ ದೊರೆತ ಹಣ್ಣುಗಳೆಷ್ಟು? (೮, ಉ. ಆರು ಹಣ್ಣುಗಳು)

೨. ಲಘು ಕಥಾರೂಪದ ಒಗಟುಗಳು:

> ತಾರೆಗಳ ಹನ್ನೆರಡನೆಯ ಪೆಸರಿನ, ಪತಿಯ ಪಿತನ, ಅಗ್ರಜನ ಅಗ್ರಜನ, ಹೆತ್ತವನ ಹೊತ್ತವನ, ಸಹೋದರಿಯ ಸಂಭ್ರಮಕ್ಕೆ ಬರಬೇಕು. (೨೨, ಉತ್ತರ-ಎಮ್ಮೆ: ಉತ್ತರಾಳ ಗಂಡ ಅಭಿಮನ್ಯುವಿನ ತಂದೆ ಅರ್ಜುನನ ಅಣ್ಣ ಭೀಮನ ಅಣ್ಣ ಧರ್ಮರಾಯನ ಹೆತ್ತವ ಯಮನ ಹೊತ್ತವ ಕೋಣನ ಸಹೋದರಿ ಎಮ್ಮೆ. ಎಮ್ಮೆ ಈದಿದೆ ಗಿಣ್ಣ ಉಣ್ಣಲು ಬನ್ನಿ).

> ಕೃಷ್ಣನು ಸ್ನಾನ ಮಾಡುವಾಗ ಗೋಪಿಕೆಯರು ಬೆಳದಿಂಗಳಲ್ಲಿ ಚಂದ್ರಕಾಂತ ಶಿಲೆಯ ತಂಬಿಗೆಯಿಂದ ನೀರೆರೆಯುತ್ತಿದ್ದರು. ಆ ನೀರು ಅಕ್ಷಯವಾಗುತ್ತಿತ್ತು. ಚಂದ್ರನು ಮುಳುಗಿದ ಮೇಲೆಯೂ ನೀರು ಅಕ್ಷಯವಾಯಿತು. ಅದು ಹೇಗೆ? (೨೩, ಅವರು ಚಂದ್ರಮುಖಿಯರಿದ್ದುದರಿಂದ).

೩. ದ್ವಂದ್ವಾರ್ಥದ (ಗೊಂದಲ ಹುಟ್ಟಿಸುವ) ಒಗಟುಗಳು:

> ನಾನೂರು ರೂಪಾಯಿಗಳಿಗೆ ಕೊಂಡ ಕುದುರೆ ೩೦೦ ರೂಪಾಯಿಗಳಿಗೆ ಮಾರಿದರೆ ಎಷ್ಟು ಲಾಭ ಬರುವುದು? (೩, ಉ. ನಾನೂರು=ನಾನು ನೂರು ಎಂದು ಹಿಡಿದು, ಲಾಭ ೨೦೦ ರೂ.)

> ಒಂದು ಹಗ್ಗಕ್ಕೆ ಎರಡು ರೂಪಾಯಿ ಆದರೆ ಕುಣಿಕೆಗೆ ಏನು ಬಿತ್ತು? (೫, ಕೊಡ ಬಿತ್ತು)

> ಮುಂದಿನ ಎತ್ತಿಗೆ ಹಿಂದೆರಡು ಎತ್ತು, ಹಿಂದಿನ ಎತ್ತಿಗೆ ಮುಂದೆರಡು ಎತ್ತು, ನಡುವಿನ ಎತ್ತಿಗೆ ಹಿಂದೊಂದು ಮುಂದೊಂದು ಎತ್ತು. ಹಾಗಾದರೆ ಒಟ್ಟು ಎಷ್ಟು ಎತ್ತುಗಳು? (೬, ಉ. ಮೂರು ಎತ್ತುಗಳು)

> ಹಂಚಿಗೆ ಹತ್ತ ರೊಟ್ಟಿ, ಕಡಚಿಗೆ ಏಳು ರೊಟ್ಟಿ, ಬುಟ್ಟ್ಯಾಗ ಒಂದ ರೊಟ್ಟಿ, ನೆಲವಿಗೆ ಆರ ರೊಟ್ಟಿ, ಹಾಗಾದರೆ ಒಟ್ಟು ರೊಟ್ಟಿಗಳೆಷ್ಟು? (೧೧, ಉ. ಒಂದು ರೊಟ್ಟಿ)

೪. ಒಂದೇ ಉತ್ತರದ ಒಗಟುಗಳು :

> ಒಬ್ಬ ನಿಚ್ಚಣಿಕಿ ಬೇಡಾಕ ಬಂದಾನ. ಇನ್ನೊಬ್ಬ ಕಡ್ಲಿ ತಿನ್ನಾಕ ಕರೀತಾನ. ಇಬ್ಬರಿಗೂ ಒಂದೇ ಉತ್ತರ ಕೊಡಬೇಕು. (೧೪, ಉ. ಹಲ್ಲಿಲ್ಲ)

> ಒಬ್ಬನ ಚೆಂಡು ಮಾಳಿಗಿ ಮ್ಯಾಲ ಬಿದ್ದಿತ್ತು. ಇನ್ನೊಬ್ಬ ಕುದರಿ ಬೇಡಲಾಕ ಬಂದ. ಇಬ್ಬರಿಗೂ ಒಂದೇ ಉತ್ತರ ಕೊಡಬೇಕು. (೨೦, ಉ. ಹತ್ತು)

ಡಾ. ಎಂ.ಎನ್.ವಾಲಿ ಅವರು **'ಜಾನಪದ ಒಗಟುಗಳು'** ಕೃತಿಗೆ ಬರೆದ ಪ್ರಸ್ತಾವನೆಯೂ ವಿಶಿಷ್ಟವಾಗಿದೆ. ಕನ್ನಡ ಜನಪದ ಸಾಹಿತ್ಯದ ಸಂಗ್ರಹಗಳನ್ನು ಪ್ರಕಟಿಸಿದ ಸಂಪಾದಕರು ಆಯಾ ವಿಷಯಗಳ ತಮ್ಮ ಕೃತಿಗಳಿಗೆ ಪ್ರಸ್ತಾವನೆಗಳನ್ನು ಬರೆಯುವಾಗ ಅವರ ಲಕ್ಷ ಹೆಚ್ಚಾಗಿ ಇರುವುದು ಹೊರದೇಶದ ಜನ ಏನು ಹೇಳಿದ್ದಾರೆ ಎನ್ನುವ ಕಡೆ. ವಾಲಿ ಅವರೂ ಪಾಶ್ಚಾತ್ಯರ ವಿಚಾರಗಳನ್ನು ಹೇಳಲು ಪ್ರಯತ್ನ ಪಟ್ಟೂ ಅವರು ಕನ್ನಡದ ಹಿರಿಯರು ಈ ಒಗಟುಗಳನ್ನು ಕುರಿತು ಏನು ಹೇಳಿದ್ದಾರೆ ಎಂಬುದನ್ನು ಸಂಗ್ರಹಿಸಿ ಉಲ್ಲೇಖಿಸಿದ್ದಾರೆ.

೧. ಯಾವುದೊಂದು ಜೀವನ ಸಂಗತಿಗಳನ್ನು ಸಾಂಕೇತಿಕ ಮಾತುಗಳಲ್ಲಿ ಪರ್ಯಾಯಾರ್ಥವುಂಟಾಗುವಂತೆ ಬಣ್ಣಿಸಿ ಹೇಳಿದ ಲಯಬದ್ಧವಾದ ಗದ್ಯ ರಚನೆಗಳೇ ಒಗಟೆಗಳೆನಿಸುವವು. ಲಯದ ಬಲವು ಹೆಚ್ಚಾದಾಗ ಈ ಒಗಟೆಗಳು ಪದ್ಯದ ರೂಪವನ್ನೂ ತಳೆದಿರುವವು. –ಡಾ. ಬೆಟಗೇರಿ ಕೃಷ್ಣಶರ್ಮ.

೨. ಒಗಟು ಚಮತ್ಕಾರಿಕ ಉಕ್ತಿ, ಒಗಟುಗಳಲ್ಲಿ ಪ್ರಸ್ತುತವು ದೂರ ಸರಿಯುತ್ತದೆ. ಅಪ್ರಸ್ತುತವು ಶಬ್ದವಾಗಿರುತ್ತದೆ. ಈ ಅಪ್ರಸ್ತುತದ ಆಧಾರದ ಮೇಲೆ ಪ್ರಸ್ತುತವನ್ನು ಕಂಡುಹಿಡಿಯಬೇಕು. –ಆರ್.ಸಿ.ಹಿರೇಮಠ.

ಇಂತಹ ಕೆಲಸ ಮೊದಲು ಮಾಡಿದವರು ಪ್ರೊ. ಸುಧಾಕರ. ಅಲ್ಲಿಯ ದೇವುಡು, ಗೋರೂರು, ಸಿಪಿಕೆ, ಜೀಶಂಪ ಮುಂತಾದವರ ಮಾತುಗಳನ್ನು ಬಳಸಿಕೊಂಡುದಲ್ಲದೆ ಬೆಟಗೇರಿ ಕೃಷ್ಣಶರ್ಮ, ಆರ್.ಸಿ.ಹಿರೇಮಠ ಇವರ ಮಾತುಗಳನ್ನೂ ಆರಿಸಿ ಹಾಕಿಕೊಂಡಿದ್ದಾರೆ. ಇವರ ಜೊತೆಗೆ ತಮಗಿಂತ ಮುಂಚೆ ಮಹತ್ವದ ಒಗಟುಗಳ ಸಂಗ್ರಹಗಳನ್ನು ತಂದ ಡಾ. ಎಂ.ಎಸ್.ಲಠ್ಠೆ, ಡಾ. ಸೋಮಶೇಖರ ಇಮ್ರಾಪೂರ, ಡಾ. ವೀರಣ್ಣ ರಾಜೂರ ಈ ಮುಂತಾದ ವಿದ್ವಾಂಸರುಗಳ ಅಭಿಪ್ರಾಯಗಳನ್ನೂ ಗಮನಿಸಬಹುದಿತ್ತು. ಒಗಟುಗಳ ಬಗ್ಗೆ ಈ ಎಲ್ಲ ವಿದ್ವಾಂಸರು ಸ್ವತಂತ್ರವಾಗಿ ಹೇಳುವ

ಮಾತುಗಳು ಯಾವ ಪಾಶ್ಚತ್ಯ ವಿದ್ವಾಂಸರ ಹೇಳಿಕೆಗಳಿಗಿಂತ ಕಡಿಮೆಯಾದವು ಎನ್ನುವಂತಿಲ್ಲ. 'ಒಗಟುಗಳು ಮಾನವನ ಮನರಂಜನೆಯ ಹಾಗೂ ಮನೋವಿಕಾಸದ ಸಾಧನಗಳಾಗಿವೆ; ಅವನ ತಾತ್ವಿಕ ಚಿಂತನೆಯ ಪ್ರತೀಕಗಳಾಗಿವೆ" (ಪ್ರ.ಪು.೨೧) ಎಂಬ ಡಾ. ಎಂ.ಎನ್. ವಾಲಿಯವರ ಮಾತೂ ಗಮನಿಸುವಂತಿದೆ.

೧೯೯೨ ರಲ್ಲಿ ಪ್ರಕಟವಾದ **'ಜಂಬುನೇರ್ಲಣ್ಣು ಜಗ್ಗಿ ಬಿದ್ದಾವೆ'** ಎಂಬುದು ಡಾ. ಮೈಲಹಳ್ಳಿ ರೇವಣ್ಣ ಅವರು ಸಂಪಾದಿಸಿದ ಒಗಟುಗಳ ಸಂಗ್ರಹ. ಇದರಲ್ಲಿ ಒಟ್ಟಿಗೆ ೭೩೬ ಸೂತ್ರರೂಪದ ಒಗಟುಗಳಿವೆ. ಇವುಗಳನ್ನು ಕೃತಿಯಲ್ಲಿ ಅಕಾರಾದಿಯಾಗಿ ಜೋಡಿಸಿಕೊಂಡಿದ್ದಾರೆ. ಉಳಿದಂತೆ ಕೆಲವು ವಿವರಣಾತ್ಮಕ ಒಗಟುಗಳನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಈ ಕೃತಿಯಲ್ಲಿಯ ಒಗಟುಗಳನ್ನು ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಹಾವೇರಿ, ಕಾರವಾರ ಹೀಗೆ ವ್ಯಾಪಕ ಪ್ರದೇಶಗಳಲ್ಲಿ ಸಂಗ್ರಹಿಸಿದ್ದಾರೆ. ಸಂಪಾದಕರು ಒಂದು ಕಡೆ ಹೀಗೆ ಬರೆದುಕೊಂಡಿದ್ದಾರೆ : "ಈ ಸಂಕಲನದ ಶೇಕಡ ೯೦ ಭಾಗದಷ್ಟು ಒಗಟುಗಳು ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಂಗ್ರಹಿಸಿದಂಥವು. ದಲಿತ ಸಮೂಹದ ಒಗಟುಗಳೇ ಇಲ್ಲಿ ಹೆಚ್ಚು. ಹಾಗಾಗಿ ಈ ಒಗಟುಗಳಲ್ಲಿ ಆ ಸಮೂಹದ ಬದುಕಿನ ಒಳ ಮಜಲುಗಳು ಕಾಣಸಿಗುತ್ತವೆ. ಸಾಂಸ್ಕೃತಿಕ ಸಾಮಾಜಿಕ ಅಧ್ಯಯನಕ್ಕೆ ಇವು ವಸ್ತುವಾಗಬಲ್ಲವು" (ಪ್ರ.ಪು.೧೩). ಬಹಳ ಮಹತ್ವದ ಮಾತನ್ನು ಸಂಪಾದಕರು ಇಲ್ಲಿ ದಾಖಲಿಸಿದ್ದಾರೆ. ಸಂಪಾದಕರಾದ ಮೈಲಹಳ್ಳಿ ರೇವಣ್ಣನವರು ಮಾದಿಗ ಸಮುದಾಯಕ್ಕೆ ಸೇರಿದವರು. ಅವರು ತಮ್ಮ ಪಿಎಚ್.ಡಿ. ಅಧ್ಯಯನಕ್ಕೆ ತೆಗೆದುಕೊಂಡ ವಿಷಯ 'ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ' ಎಂದು. ಹೀಗಾಗಿ ಅವರು ತಮ್ಮ ಪಿಎಚ್.ಡಿ. ಅಧ್ಯಯನಕ್ಕಾಗಿ ಬೇಕಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಕ್ಷೇತ್ರಕಾರ್ಯಕ್ಕೆ ಹೋಗಿದ್ದು ಮಾದಾರ ಕೇರಿಗಳಿಗೆ. ಅವರು ಪ್ರಕಟಿಸಿದ ಜನಪದ ಹಾಡು, ಗಾದೆ ಮತ್ತು ಒಗಟುಗಳ ಸಂಗ್ರಹಗಳು ಮುಖ್ಯವಾಗಿ ಆ ಜನಾಂಗದ ಸಂಸ್ಕೃತಿಯನ್ನು ಹೊತ್ತ ಪ್ರಮುಖ ಸಂಗ್ರಹಗಳಾಗಿವೆ. ಈ ಸಂಗ್ರಹದಲ್ಲಿ ಸಹಜವಾಗಿ ಕಾಣಿಸಿಕೊಂಡ ಒಂದು ಉದಾಹರಣೆಯನ್ನು ಇಲ್ಲಿ ಉಲ್ಲೇಖಿಸಬೇಕು.

> ಕಳ್ಳು ತಿಂಬ್ತಾರೆ ಕಣ್ಣು ಬಿಡ್ತಾರೆ
ಯಾಕೆ ನಮ್ಮವರು ಮ್ಯಾಕ್ ನೋಡ್ತಾರೆ (೬೮)

(**ಭಿನ್ನ ಪಾಠ :** ನಿನಗಾಗಿ ತಂದ್ರು ನನ್ನ/ ನಾನೇನು ಮಾಡ್ದೆ ನಿನ್ನ/ನೀನ್ಯಾಕೆ ನೋಡ್ತಿ ನನ್ನ).

"ಗಂಡ ಹೆಂಡ್ತಿ ಇಬ್ರು ಇದ್ರು. ಆವೊತ್ತು ಅವ್ರ ಮನೇಲಿ ಮಾಂಸದ ಸಾರು. ಹೆಂಡ್ತಿ ಸೋರೇಲಿ ಮಾಂಸ ಬೇಸಾಕೆ ಹಾಕಿ, ಕಾರ ಅರ್ಕಂಡ್ ಬರಾಕೆ ಹೊರಡ್ತಾಳೆ. ಅದಕೂ ಮುಂಚೆ ಗಂಡಗೆ ಏನ್ಹೇಳ್ತಾಳಂದ್ರೆ; 'ನೋಡ್ರಿ ನಾನು ಕಾರ ಅರ್ಕಂಡ್ ಬರ್ತಿನಿ. ನೀವು ಅಲ್ಲಿವರ್ಗೂ ಒಲೆ ಉರುಬ್ತಾ ಇರಬೇಕು. ಒಲೆ ಕೆಟ್ಟರೆ ಮಾಂಸ ಅರ್ಧಂಬರ್ದ ಬೇಯುತ್ತೆ' ಅಂತ ಹೇಳಿ ಹೋದ್ಳು.

ಇವ್ನು ಸ್ವಲ್ಪ ಆಸೆ ಬುರುಕ. ಹೆಂಡ್ತಿ ಆ ಕಡೆ ಹೋಗುತ್ಲೂ ಒಂದು ಚೋಟುದ್ದ ಕರುಳು ತಕ್ಕಂಡು ಚೆನ್ನಾಗೆ ತೊಳ್ಕಂಡು, ಅದರ ಒಳಗೆ ಮಾಂಸದ ಜೊತೆ ಚರ್ಬಿ ಇರುತ್ತಲ್ಲ ಅದನ್ನು ಕರುಳೊಳಗೆ ಹಾಕಿ ಕೊನೇಲಿ ಆಚೆ ಈಚೆ ಗಂಟು ಹಾಕ್ತಾನೆ, ಅದನ್ನು ಸೋರೆ ಒಳಗೆ ಹಾಕಿ ಬೇಸ್ತಾನೆ. ಅವನ್ದೊಂದು ದುರಾಸೆ ಏನಂದ್ರೆ ಕಾರ ಅರಿಯಾಕೆ ಹೋಗಿರೊ ಹೆಂಡ್ತಿ ಬರೋದ್ರಲ್ಲಿ ಕರುಳೊಳಗೆ ಇರೋ ಚರ್ಬಿಯ ತುಪ್ಪ ನಾನೇ ಕುಡೀಬೇಕು ಅಂಬೋದು.

ಸ್ವಲ್ಪ ಹೊತ್ತಾದ್ಮೇಲೆ ಇವ್ನು ಆ ಕರುಳುಬಳ್ಳಿ ಹೊರಗೆ ತೆಗೆದು ನೋಡ್ತಾನೆ. ಚರ್ಬಿ ಕರಗಿ ತುಪ್ಪದಂಗೆ ಆಗಿರುತ್ತೆ. ಹೆಂಡ್ತಿ ಬರೋದ್ರಲ್ಲಿ ನಾನೇ ಕುಡಿಬೇಕಂತ ಸುಡೋ ಚರ್ಬೀನೆ ಬಾಯಲ್ಲಿ ಸುರ್ಕಂಡ. ಹಾಗೆ ಸುರಿತ್ಲೂ ಗಂಟಲು ಸುಟ್ಗಂಡ್, ಹೊಟ್ಟೆಗಿರೋ ಕರುಳು ಸುಟ್ಟು ಜೀವಾನೇ ಹೊಂಟೋಯ್ತು. ಅವ್ನು ಕುಂತು ತಲೆ ಎತ್ಗಂಡು, ಒಂದು ಕೈಯಲ್ಲಿ ಹಿಡಿದ ಬಳ್ಳಿ ಬಾಯಹತ್ತಿರ ಇರಾದು ಹಾಗೆ ಇದೆ. ಬಿಟ್ಕಣ್ಣು ಬಿಟ್ಟಂಗೆ ಇದಾವೆ. ಹೆಂಡ್ತಿ ಕಾರ ರುಬ್ಕಂಡು ಬಂದು ನೋಡ್ತಾಳೆ– ಗಂಡ ಕಣ್ಣು ಬಿಟ್ಗಂಡ್ ಮ್ಯಾಕ್ ನೋಡ್ತಾ ಇದಾನೆ. ಆಗ ಅವಳಿಗೆ ಎಲ್ಲ ಅರ್ಥವಾಯಿತು".

ಈ ವಿವರವನ್ನು ಗಮನಿಸಿದರೆ ದಲಿತವಕ್ತಾರರಿಂದ ಮಾತ್ರ ಈ ವಿವರಣೆ ಬರಲು ಸಾಧ್ಯ ಎಂಬುದು ಸ್ಪಷ್ಟ. ಇಂತಹ ಉದಾಹರಣೆಗಳು ಸಂಸ್ಕೃತಿಯ ಅಧ್ಯಯನದಲ್ಲಿ ವಿಶೇಷವೆನಿಸುತ್ತವೆ. ಈ ಸಂಗ್ರಹದ ಒಗಟುಗಳನ್ನು ನೋಡಿದಾಗ ಇನ್ನೂ ವಿಶೇಷವೆನಿಸಿದ್ದು ಭಾಷೆ; ಭಾಷೆಯ ಜೊತೆಗೆ ಬೆರೆತುಕೊಂಡಿರುವ ಆಯಾ ಪ್ರದೇಶದ ಸಂಸ್ಕೃತಿ. ಜನಾಂಗದ ಸಂಸ್ಕೃತಿಯನ್ನು ಸ್ವಲ್ಪ ಪ್ರಯಾಸಪಟ್ಟು ಹುಡುಕಬೇಕಾಗುತ್ತದೆ. ಹಾಡುಗಳಲ್ಲಿ ಕಾಣುವ ಆಯಾ ಜನಾಂಗದ ಸಂಸ್ಕೃತಿ, ಒಗಟುಗಳಂಥ ಅಂತಾರಾಷ್ಟ್ರೀಯ ಪ್ರಕಾರಗಳಲ್ಲಿ ವಿರಳವಾಗಿ ಕಾಣಿಸಿಕೊಳ್ಳುವಂತೆ ತೋರುತ್ತದೆ.

> ಕಲ್ಲು ಕಟ್ಟದ ಬಾವಿ
ಬೋವಿ ಮುಟ್ಟದ ಬಾವಿ
ನೀರು ಮಿಸುಕದ ಬಾವಿ
ಅಂತ್ರದಲ್ಲಿರುವ ಬಾವಿ
ಅದಾವ ಬಾವಿ (೨೬೮, ಉ. ತೆಂಗಿನ ಎಳನೀರು)

> ಕರೆ ಗುಡಿ ಬಿಳಿ ದೇವರು
ಅದ್ರಾಗ ಬೊಕ್ಕು ಬುಲ್ಡೆ ಪೂಜಾರಿ
ಹೊಕ್ಕು ಪೂಜೆ ಮಾಡ್ತಾನೆ (೨೬೨, ಕಡಗೋಲು)

ಈ 'ಸೂತ್ರಾತ್ಮಕ ಒಗಟು'ಗಳನ್ನು ಗಮನಿಸಿದರೆ ಇವು ಸುಮಾರಾಗಿ ಎಲ್ಲ ಕಡೆ ಕಾಣಿಸಿಕೊಳ್ಳುವ ಒಗಟುಗಳೇ ಆಗಿವೆ. ಆದರೆ ಇಲ್ಲಿ ಬಳಕೆಯಾದ 'ಬೋವಿ, ಮಿಸುಕದ, ಅಂತ್ರದಲ್ಲಿ, ಬೊಕ್ಕುಬುಲ್ಡೆ' ಇಂತಹ ಪದಗಳು ವಿಶೇಷವೆನಿಸುತ್ತವೆ. ಮೊದಲನೇ ಒಗಟಿನ ಉತ್ತರವು ಉತ್ತರ ಕರ್ನಾಟಕದಲ್ಲಿ ಕೇಳಿದರೆ ಬರೆ 'ತೆಂಗಿನ ನೀರು' ಎಂದು ಮಾತ್ರ

ಇರಲು ಸಾಧ್ಯ. 'ತೆಂಗಿನ ಎಳನೀರು' ಎಂದಿರುವುದಿಲ್ಲ. ಎರಡನೇ ಒಗಟಿನ ಉತ್ತರ ಕೂಡ ವಿಶೇಷವಾಗಿದೆ. 'ಬೊಕ್ಕು ಬುಲ್ಡೆ'=ಬೊಕ್ಕು ತಲೆ ಎಂದು ಅರ್ಥವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಕಡಗೋಲು ಅಥವಾ ಬೆಣ್ಣೆ ಕಡಿದು ಮಜ್ಜಿಗೆ ಮಾಡಲು ಉಪಯೋಗಿಸುವ ಕಟ್ಟಿಗೆ ಸಾಧನದ ತಲೆ ಬೋಳಾಗಿರುವುದಿಲ್ಲ. ಅದು ಅನೇಕ ಖಾಚುಗಳಿಂದ ತಯಾರಿಸಿರುತ್ತಾರೆ. ಇದು ಬೇಗನೆ ಬೆಣ್ಣೆಯನ್ನು ಕಡೆಯಲು ಅನುಕೂಲವಾಗಿರುತ್ತದೆ. ಈ ಬಗೆಯ ಅಧ್ಯಯನವೇ ಜಿಲ್ಲೆಗೊಂದು ಪಿಎಚ್.ಡಿ. ಪ್ರಬಂಧವಾಗಬಹುದಾಗಿದೆ.

ಅನುಬಂಧದ ಭಾಗದಲ್ಲಿ ೧. ಗೀತಾತ್ಮಕ ಒಗಟುಗಳು, ೨. ಗಣಿತಾತ್ಮಕ ಒಗಟುಗಳು, ೩. ಸರಪಣಿ ಒಗಟುಗಳು, ೪. ಸಂಭಾಷಣಾತ್ಮಕ ಒಗಟುಗಳು, ೫. ಕಥನಾತ್ಮಕ ಒಗಟುಗಳು ಎಂದು ಐದು ಪ್ರಕಾರದ ಒಗಟುಗಳ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿರುವ ಗೀತಾತ್ಮಕ ಒಗಟುಗಳನ್ನು ನಾವಿಲ್ಲಿ ಲೆಕ್ಕಕ್ಕೆ ಹಿಡಿಯುತಿಲ್ಲ. ಅನುಕ್ರಮ ಸಂಖ್ಯೆ ೩೩–೩೮ 'ಸರಪಣಿ ಒಗಟುಗಳು' ಹಾಗೂ 'ಸಂಭಾಷಣಾತ್ಮಕ ಒಗಟುಗಳು' ಭಾಗದ ೩೯–೪೬ನೇ ಸಂಖ್ಯೆಯ ಒಗಟುಗಳಲ್ಲಿ ೪೨ನೇ ಒಗಟು ಒಂದನ್ನು ಬಿಟ್ಟು ಉಳಿದೆವೆಲ್ಲ 'ಸೂತ್ರಾತ್ಮಕ ಒಗಟು'ಗಳೇ ಆಗಿವೆ. ಒಗಟುಗಳನ್ನು ಭಾಗ ಮಾಡಿಕೊಳ್ಳುವಾಗ ಹೀಗೆ ಸರಪಣಿ ಒಗಟುಗಳು, ಸಂಭಾಷಣಾತ್ಮಕ ಒಗಟುಗಳು ಎಂದು ಗುರುತಿಸಿಕೊಳ್ಳ ಬಹುದಾಗಿದೆ. ಉಳಿದಂತೆ ೪೨, ೪೭–೭೪ರವರೆಗೆ ಇರುವ ೨೯ ಒಗಟುಗಳು 'ವಿವರಣಾತ್ಮಕ ಒಗಟುಗಳು' ಭಾಗದಲ್ಲಿ ಗುರುತಿಸಿಕೊಂಡ 'ಲಘು ಕಥಾರೂಪದ ಒಗಟುಗಳು' ಎಂಬ ಭಾಗಕ್ಕೆ ಸೇರುವ ಒಗಟುಗಳಾಗಿವೆ. ಇವು ಗಣಿತದ ಬದಲಾಗಿ ಕೇವಲ ಸಾಮಾನ್ಯ ಜಾಣತನವನ್ನು ಪರೀಕ್ಷಿಸುವ ಒಗಟುಗಳಾಗಿರುತ್ತವೆ. ಉದಾ:

> ಅದೊಂದು ಹಳ್ಳಿ. ಪ್ರಾಯ್ದು ಗುಡ್ಡನ ಜೊತೆ ಹುಡ್ಗಿ ಸ್ನೇಹ ಬೆಳಿದಿರ್ತದೆ. ಆದ್ರೆ ಅವರಿಬ್ರು ಒಂದು ಕಡೆ ಸೇರಿ ಪ್ರೇಮ ಮಾಡಾಕೆ ಆಗಿರೊಲ್ಲ. ಇಬ್ರುಗೂ ಸಂಕೋಚ. ಒಂದಿನ ಹುಡ್ಗ ಧೈರ್ಯ ಮಾಡಿ ತನ್ನ ಮನಸ್ನಲ್ಲಿರೋ ಆಸೇನಾ ತಿಳಿಸ್ದ. ಇಂದೇ ನಾನು ನಿಮ್ಮನಿಗೆ ಬರ್ತೀನಿ ಅಂತ ಹೇಳ್ದ. ಆಗ ಹುಡ್ಗಿ 'ನೀನು ಹಿಂಗೆ ಬರಿಗೈಲಿ ಬರಬಾರ್ದು. 'ಹದ ತಕ್ಕಂಡು, ಮದ ತಕ್ಕಂಡು, ಮಧುಗಿರಿ ಗುಂಡ್ ತಕ್ಕಂಡ್, ಹನುಮಂತ್ನ ಗುಡ್ಡ ಸರಿ ಮಾಡ್ಕಂಡ್, ಕೆರೆ ನೀರು ಜಲ ಬತ್ತೊವಷ್ಟತ್ತಿಗೆ, ನಮ್ಮ ಅರಮನ್ಗೆ ಬಾ ಅಂದ್ಲು'. 'ಹದ ತಕ್ಕಂಡು, ಮದ ತಕ್ಕಂಡು, ಮಧುಗಿರಿ ಗುಂಡ್ ತಕ್ಕಂಡ್' ಅಂದ್ರೆ ಎಲೆ ಅಡಿಕೆ ಸುಣ್ಣ. ಹನುಮಂತ್ನ ಗುಡ್ಡ ಅಂದ್ರೆ ಮುಖದಲ್ಲಿ ಬೆಳೆದಿರೊ ಗಡ್ಡ. ಕೆರೆನೀರು ಜಲ ಬತ್ತುವಷ್ಟೊತ್ತಿಗೆ ಅಂದ್ರೆ ದೀಪ ಆರಿಸೊ ಸಮಯಕ್ಕೆ ಸರಿಯಾಗಿ ನನ್ನ ಮನೆಗೆ ಬರಬೇಕು ಅಂತ ಸೂಚನೆ ಕೊಡ್ತಾಳೆ (೭೨). ಇಂತಹ 'ಲಘುಕಥಾ ರೂಪದ ಒಗಟುಗಳು' ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ.

೧೯೫೩ರಲ್ಲಿ ಡಾ. ಎಲ್. ಆರ್. ಹೆಗಡೆ ಅವರು **'ಒಗಟುಗಳು ಮತ್ತು ಕತೆಗಳು'** ಎಂಬ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಈ ಕೃತಿಯ ಮೇಲೆ ಪ್ರಕಟವಾದ ವರ್ಷದ ನಮೂದು ಕೂಡ ಇಲ್ಲ. ಅದನ್ನು ಹೆಗಡೆ ಅವರ ಪ್ರಕಟವಾದ ಕೃತಿಗಳ ಪಟ್ಟಿಯನ್ನು ನೋಡಿ ಇಲ್ಲಿ ನಮೂದಿಸಲಾಗಿದೆ. ಈ ಕೃತಿಯಲ್ಲಿ ಮೊದಲಿಗೆ ಹಾಡುಗಳಲ್ಲಿ ದೊರೆಯುವ

ಒಗಟಿನ ಮಾದರಿಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ನಂತರ ಎರಡನೇ ಭಾಗ 'ಗದ್ಯದಲ್ಲಿ ಒಗಟುಗಳು' ಎಂದಿದೆ. ಈ ಭಾಗದಲ್ಲಿ 'ಸೂತ್ರರೂಪದ ಒಗಟು'ಗಳನ್ನು ಮೊದಲಿಗೆ ವಿಷಯಾನುಕ್ರಮದಲ್ಲಿ ವಿಭಾಗಿಸಿಕೊಟ್ಟಿದ್ದಾರೆ : 'ದೇವರು, ಪ್ರಾಕೃತಿಕ, ಮರ ಬಳ್ಳಿ ಹೂ, ಶರೀರ ಅವಯವ, ಆಹಾರ, ಪ್ರಾಣಿ ವರ್ಗ, ಆಭರಣ ಅಲಂಕಾರ, ಆಧುನಿಕ, ಸಂಕೀರ್ಣ' ಎಂದು ೨೮೭ ಒಗಟುಗಳನ್ನು ವಿಭಾಗಿಸಿ ಕೊಟ್ಟಿದ್ದಾರೆ. ಈ ವಿಭಾಗೀಕರಣವನ್ನೇ ಮುಂದುವರೆಸಿ– ಒಂದೇ ಉತ್ತರ (೬ ಒಗಟುಗಳು), ಲೆಕ್ಕದ ಒಗಟುಗಳು (೧೭ ಒಗಟುಗಳು) ಎಂದು ಎರಡು ನಮೂನೆಗಳನ್ನೂ ಸೇರಿಸಿದ್ದಾರೆ. ಕೊನೆಯ ಈ ಎರಡು ಪ್ರಕಾರಗಳು 'ವಿವರಣಾತ್ಮಕ ಒಗಟುಗಳು' ಎಂಬ ವಿಭಾಗದ ಪ್ರಕಾರಗಳಾಗಿವೆ.

ಮುಂದೆ ಮೂರನೆಯ ವಿಭಾಗವಾಗಿ 'ಒಗಟು ಕಥೆಗಳು' ಎಂದಿದ್ದು, ಇದರಲ್ಲಿ ೨೦ ಕಥೆಗಳನ್ನು ಕೊಟ್ಟಿದ್ದಾರೆ. ಇವೆಲ್ಲ 'ವಿವರಣಾತ್ಮಕ ಒಗಟು'ಗಳ ಭಾಗದಲ್ಲಿ ಬರುವ ಲಘುಕಥಾರೂಪದ ಒಗಟುಗಳೇ ಆಗಿವೆ. ಆದರೆ ಒಂದೆರಡು ಕಥೆಗಳು ದೀರ್ಘವಾಗಿದ್ದು, ಓದಿ ನೋಡಿ ಹೇಳಬಹುದೆಂದರೆ ಭಾಷೆ ಸರಿಯಾಗಿ ಅರ್ಥವಾಗಲಿಲ್ಲ.

ಈ ಕೃತಿಯಲ್ಲಿ ಕಾರವಾರ ಜಿಲ್ಲೆಗೆ ಸಂಬಂಧಿಸಿದ 'ಸೂತ್ರರೂಪದ ಒಗಟುಗಳು' ಮತ್ತು 'ವಿವರಣಾತ್ಮಕ ಒಗಟುಗಳು'– ಎರಡೂ ನಮೂನೆಯ ಒಗಟುಗಳನ್ನು ಸಂಗ್ರಹಿಸಿ ಕೊಟ್ಟಿದ್ದು, ಸೂತ್ರರೂಪದ ಒಗಟುಗಳನ್ನು ವಿಷಯಾನುಸಾರ ಒಂಬತ್ತು ವಿಭಾಗಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. ವಿವರಣಾತ್ಮಕ ಒಗಟುಗಳನ್ನು– ಒಂದೇ ಉತ್ತರದ ಒಗಟುಗಳು, ಲೆಕ್ಕದ ಒಗಟುಗಳು, ಒಗಟು ಕಥೆಗಳು ಎಂದು ಮೂರೂ ಪ್ರಕಾರದ ಒಗಟುಗಳನ್ನು ಕೊಟ್ಟಿದ್ದಾರೆ. ಈ ಕೃತಿಯ ವಿಶೇಷವೆಂದರೆ ವಕ್ತಾರರ ವಿವರವಾದ ಮಾಹಿತಿಗಳನ್ನು ಕೊಟ್ಟಿರುವುದು. ಬೇರೆ ಕೃತಿಗಳಲ್ಲಿ ವಕ್ತಾರರ ಮಾಹಿತಿಗಳು ಸರಿಯಾಗಿ ದಾಖಲಾಗಿಲ್ಲ.

ದಲಿತ ಕೇರಿಯಿಂದ ಬಂದ ಡಾ. ಟಿ.ಎಂ.ಭಾಸ್ಕರ್ ಅವರು ಒಗಟುಗಳನ್ನು ಸಂಗ್ರಹಿಸಿದ್ದು ಹರಿಜನ ವಕ್ತೃಗಳಿಂದ **'ನಮ್ಮ ಸುತ್ತಿನ ಒಗಟುಗಳು'** (೨೦೦೭) ಎಂಬುದರಲ್ಲಿ ೩೭೫ ಸೂತ್ರರೂಪದ ಒಗಟುಗಳಿವೆ. ಬಹುಶಃ ಎಂ. ಎ. ವಿದ್ಯಾರ್ಥಿಗಳನ್ನು, ಸಂಶೋಧನ ವಿದ್ಯಾರ್ಥಿಗಳನ್ನು ಸಂಪಾದಕರು ನೆನೆಸುವುದರಿಂದ, ಕಲ್ಯಾಣ ಕರ್ನಾಟಕ ಎನ್ನುತ್ತಿರುವುದರಿಂದ ಇವೆಲ್ಲ ಹೈದ್ರಾಬಾದ ಕರ್ನಾಟಕದಲ್ಲಿ, ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಒಗಟುಗಳೆಂದು ತೋರುತ್ತದೆ. ಒಗಟುಗಳನ್ನು ೧೨ ವಿಧದಲ್ಲಿ ವಿಭಾಗಿಸಿಕೊಂಡಿದ್ದಾರೆ : ಮನುಷ್ಯ ಸಂಬಂಧಿ, ನಿತ್ಯೋಪಯೋಗಿ ವಸ್ತು ಸಂಬಂಧಿ, ಆಹಾರ ಸಂಬಂಧಿ, ಪ್ರಾಣಿ ಸಂಬಂಧಿ, ನಿಸರ್ಗ ಸಂಬಂಧಿ, ಗಣಿತ ಸಂಬಂಧಿ, ಲೋಕದೃಷ್ಟಿ ಸಂಬಂಧಿ, ಘಟನಾ ಸಂಬಂಧಿ, ಆಧುನಿಕ, ಅಶ್ಲೀಲ ವಿಷಯ ಸಂಬಂಧಿ, ಸಂಕೀರ್ಣ– ಹೀಗೆ ಇಲ್ಲಿಯ ವಿಭಾಗೀಕರಣವಿದೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಗಣಿತ ಸಂಬಂಧಿ ಒಗಟುಗಳು, ಮತ್ತು ಘಟನಾ ಸಂಬಂಧಿ ಒಗಟುಗಳು 'ವಿವರಣಾತ್ಮಕ ಒಗಟುಗಳು' ಪ್ರಕಾರದ ಎರಡು ಉದಾಹರಣೆಗಳಾಗಿವೆ. ಘಟನಾ ಸಂಬಂಧಿ ಒಗಟುಗಳು 'ಲಘು ಕಥಾರೂಪದ ಒಗಟು'ಗಳಾಗಿವೆ.

> ಊರಾಗ ಒಬ್ಬ ಪಟೇಲ, ಪೀರಗ ಹರಕಿ ಮಾಡಿದ್ದ. ಸವುರ್ಸಬೇಕು, ಸ್ವಲ್ಪ ನಸುಕ ಆಗಿತ್ತು. ಮಲ್ಲ ಮನ್ಯಾಗ ಮಲಗಿದ್ದ. ಗೌಡ ಬಂದು ಕರಕೊಂಡು ಹೋದ. ಮಲ್ಲ ಕಂದೂರಿ ಮಾಡಿದ್ದ. ಮಲ್ಲನ ಹೆಂಡತಿ ಬಂದು ಉಣಬ್ಯಾಡ್ರಿ, ಇದು ಮುಡದಾರ ಆಗ್ಯಾದ ಅಂದ್ಳು. ಅದು ಮುಡದಾರ ಯಾಕ ಆಯ್ತು? (೩೨೪, ಉತ್ತರ : ಹೆಂಡತಿ ಜೊತೆಗೆ ಮಲಗಿ ಹೋಗಿದ್ದ).

ಈ ಒಗಟಿನ ರಚನಾ ಸ್ವರೂಪವಂತೂ 'ಲಘು ಕಥಾರೂಪದ ಒಗಟು' ಆಗಿದೆ. ಇದರ ವಿವರಗಳನ್ನು ಗಮನಿಸಿದರೆ, ಮಾಂಸಾಹಾರಿ ಅಡಿಗೆಯ ವಿಷಯವನ್ನು ವಿವರಿಸುತ್ತಿದೆ. ಇಂಥ ವಿವರಗಳು ಖಂಡಿತ ದಲಿತ ಸಂಸ್ಕೃತಿಯ ವಿವರಗಳನ್ನು ಪಡೆಯುವಲ್ಲಿ ಸಹಕಾರಿಯಾಗುತ್ತವೆ.

೨೦೦೯ ರಲ್ಲಿ ಬೀದರ ಜಿಲ್ಲೆಯಿಂದ **'ಧರಿನಾಡ ಜಾನಪದ ಒಗಟುಗಳು'** ಎಂಬ ಒಂದು ಸಂಗ್ರಹ ಹೊರಬಂದಿದೆ. ಈ ಕೃತಿಯ ಸಂಪಾದಕರು ಶ್ರೀ ದೇಶಾಂಶ ಹುಡಗಿ ಅವರು. ಅವರು ಸ್ವತಃ ಹಳ್ಳಿಯ ಬಾಳನ್ನು ಬದುಕಿದವರು. ಅವರು ಪ್ರಕಟಿಸಿದ ಜನಪದ ಗಾದೆಗಳ ಸಂಗ್ರಹವಾಗಲಿ, ಒಗಟುಗಳ ಸಂಗ್ರಹವಾಗಲಿ ಒಮ್ಮೆಗೆ ಪ್ರಕಟಸಬೇಕೆಂದು ಸಂಗ್ರಹಿಸಿದವುಗಳಲ್ಲ. ಅವರಿಗೆ ಜನಪದ ಸಾಹಿತ್ಯದ ಆಸಕ್ತಿ ಬಾಲ್ಯದಿಂದಲೂ ಇದ್ದಂತೆ ತೋರುತ್ತದೆ. ಈಗವರಿಗೆ ೮೦ ವರ್ಷ ವಯಸ್ಸು. ಅವರು ಸ್ವತಃ ಹಲವಾರು ಗಾದೆಗಳನ್ನು ಒಗಟಗಳನ್ನು ಬಲ್ಲವರು. ಚಿಕ್ಕಂದಿನಲ್ಲಿ ಮನೆಯ ಅಂಗಳದಲ್ಲಿ ನಡೆಯುವ ಒಗಟುಗಳ ಸ್ಪರ್ಧೆಯಲ್ಲಿ ಹಿರಿಯರಿಂದ ಶಬ್ಬಾಶ್‌ಗಿರಿ ಪಡೆದವರು. ಅವರು ತಮ್ಮ ಬಾಲ್ಯದ ನೆನಪುಗಳನ್ನು ಹೀಗೆ ಬರೆದುಕೊಂಡಿದ್ದಾರೆ : "ಈಗ ಸುಮಾರು ಅರವತ್ತು ವರ್ಷಗಳ ಹಿಂದೆ ನನ್ನ ದೂರದ ಸಂಬಂಧಿ ಅಕ್ಕ, ಸಂಗಮ್ಮ...ಒಡ್ಗತೆಗಳ ಒಡತಿಯಾಗಿದ್ದಳು. ಆಕೆ ಸುಮಾರು ೧೦-೧೫ ವರ್ಷದವಳಿದ್ದಾಗಿಂದ ನಮ್ಮೂರಿಗೆ ಬಂದಾಗಲೆಲ್ಲ ನನ್ನ ಅಕ್ಕ, ತಂಗಿ, ತಮ್ಮಂದಿರು ಮತ್ತು ನನ್ನ ಚಿಕ್ಕಪ್ಪಂದಿರ ಮಕ್ಕಳನ್ನು ಒಗ್ಗೂಡಿಸಿಕೊಂಡು ಒಡಗತೆಗಳ ಸ್ಪರ್ಧೆ ಏರ್ಪಡಿಸುತ್ತಿದ್ದರು. ಆಕೆ ಶಾಬ್ಬಾಶ್ ಅಂದಾಗೆಲ್ಲ ನನಗೆ ಜಾನಪದ ಅಕಾಡೆಮಿಯ ಪ್ರಶಸ್ತಿ ಸಿಕ್ಕಷ್ಟು ಉಲ್ಲಾಸವು ಉಕ್ಕುತಿತ್ತು. ರಾತ್ರಿ ಊಟ ಮುಗಿದ ಮೇಲೂ ನಮ್ಮ ಸ್ಪರ್ಧೆ ನಡೆಯುತ್ತಲೇ ಇರುತ್ತಿತ್ತು" (ಪ್ರ.ಪು.೧೨).

ದೇಶಾಂಶ ಹುಡಗಿ ಅವರ ಬರವಣಿಗೆ ಮೋಹಕವಾಗಿದೆ. ಬೀದರಿನ ಆಡುಭಾಷೆಯ ದೇಸಿ ಪದಗಳನ್ನು ಅವರು ಪರಿಣಾಮಕಾರಿಯಾಗಿ ಬಳಸುತ್ತಾರೆ. ಒಗಟುಗಳು ಪ್ರದರ್ಶನಗೊಳ್ಳುವ ಸಂದರ್ಭವನ್ನು ಅವರು ನೈಜವಾಗಿ ಚಿತ್ರಿಸಿದ್ದಾರೆ. ಈ ಬಗೆಯ ಚಿತ್ರಣವನ್ನು ಒಗಟುಗಳ ಬೇರೆ ಸಂಪಾದಕರು ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ಅವರ ಮಾತಿನಲ್ಲಿ ಪರಿಚಯ ಮಾಡಿಕೊಳ್ಳುವುದು ಉತ್ತಮ. "ವಿಶಾಲ ಅಂಗಳ. ನುಲಿಯಿಂದ ನೆಯ್ದ ನಾಲ್ಕಾರು ಹೊರಸುಗಳನ್ನು ಅಂಗಳದಲ್ಲಿ ಹಾಕಿ ಅವುಗಳ ಮೇಲೆ ಗುಂಪು ಗುಂಪಾಗಿ, ಅಂಗಾತ ಆಕಾಶಕ್ಕೆ ಮೋರೆ ಮಾಡಿ ಮಲಗಿ ಮಿನುಗುವ ತಾರೆಗಳ, ಹುಣ್ಣಿಮೆಯಾದರೆ ಚಂದ್ರನ ಬೆಳದಿಂಗಳ ಆಸ್ವಾದನೆ ಮಾಡುತ್ತ ಸ್ಪರ್ಧೆಗಿಳಿಯುತ್ತಾರೆ–

ಚುಟುಕು ಚುಂಗಿ । ಲೋಲೋ ಭಂಗಿ । ಏನ ತಿಳಿ
ತಿಂಬಾದ್ರಾಗದಾನಾ ಉಂಬಾದ್ರಾಗದಾ? ತಿಳಿವವರ ಪ್ರಶ್ನೆ.
ತಿಂಬಾದ್ರಾಗಿಲ್ಲಾ ಉಂಬಾದ್ರಾಗಿಲ್ಲಾ! ಉತ್ತರ.
ಜೀವಾ ಇದ್ದೀದದಾನಾ, ಜೀವಾ ಇಲ್ಲದ್ದು ಅದಾ?
ಜೀವಾ ಇದ್ದೀದದಾ!
ಇಷ್ಟೆಲ್ಲಾ ಸುಳಿವು ಕೊಟ್ಟ ಮೇಲೂ ತಿಳಿಯದಿದ್ರೆ –
ಸೋತೇ?
ಸೋತ.
ಅಗಸಿತನಾ ಕುಂಡಿ ಎಳೆದೆ?
ಎಳ್ದ!
ಆಯಿ ಚರ್ಕುಳಿ ಕುಡ್ದ?
ಕುಡ್ದ!

ಹೀಗೆ ಎಲ್ಲ ರೀತಿಯಿಂದ ಸೋತೆನೆಂದು ಎದುರಾಳಿ ಒಪ್ಪಿದಾಗ ಸವಾಲೆಸೆದವ ಅದು 'ಚೇಳು' ಎಂದು ಅರ್ಥ ಹೇಳಿದಾಗ ಎಲ್ಲರೂ ಹಿಗ್ಗಿನ ಕೇಕೆ ಹಾಕುತ್ತಿದ್ದರು. ಈಗ ಮತ್ತೊಬ್ಬರು ಸವಾಲು ಎಸೆಯುತ್ತಿದ್ದರು. ಉಳಿದವರು ಅರ್ಥವನ್ನು ಹೇಳುತ್ತಿದ್ದರು. ಅಡಿಗೆ ಮನೆಯಿಂದ ಊಟಕ್ಕಾಗಿ ತಾಯಿಯ ಕರೆ ಬಂದಾಗಲೇ ಈ ವೇದಿಕೆಯು ಬರ್ಖಾಸ್ತು ಆಗುತ್ತಿತ್ತು!" (ಪ್ರ.ಮು.೬).

ಇಂತಹ ಅನುಭವವಿರುವ ಸಂಪಾದಕರ ಇಡೀ ಕುಟುಂಬವೇ ಪ್ರತಿಭಾವಂತರ ಕುಟುಂಬ. ಜೊತೆಗೆ ತಮಗೆ ಭೇಟಿಯಾದ ಮತ್ತೆ ಕೆಲವು ಪ್ರತಿಭಾವಂತರಿಂದಲೂ ಒಗಟುಗಳನ್ನು ಸಂಗ್ರಹಿಸಿದ್ದಾರೆ. ಒಗಟುಗಳಲ್ಲಿ ಕಾವ್ಯದ ಗುಣಗಳು ತುಂಬಿ ಹೋಗಿರುತ್ತವೆ ಎಂಬುದನ್ನು ಸಂಪಾದಕರು ಗ್ರಹಿಸಿದ್ದಾರೆ. ಒಗಟುಕಾವ್ಯದ ಮೂಲ ಜೀವಾಳ ಅಲಂಕಾರಗಳು ಮತ್ತು ಪ್ರಾಸ ಎಂಬುದನ್ನು ಅವರು ಸರಿಯಾಗಿಯೇ ಗ್ರಹಿಸಿದ್ದಾರೆ. 'ಪ್ರಾಸವಿಲ್ಲದ ಒಗಟುಗಳೇ ಇರುವುದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅವುಗಳಲ್ಲಿ ಆದಿಪ್ರಾಸ, ಅಂತ್ಯಪ್ರಾಸ,ಅನುಪ್ರಾಸ, ವೃತ್ಯನುಪ್ರಾಸ ಇತ್ಯಾದಿಗಳು ಸುಂದರವಾಗಿ, ಸಾರ್ಥವಾಗಿ, ಅಲಂಕಾರಿಕವಾಗಿ ಅಡಕಗೊಂಡು ರಚನಾಕಾರನ ಕವಿತ್ವ ಶಕ್ತಿಯನ್ನು ಪ್ರದರ್ಶಿಸುತ್ತಿರುತ್ತವೆ; ಕೇಳುವವರಲ್ಲೂ ಕವಿತ್ವ ಶಕ್ತಿಯನ್ನು ಅವರಿಗರಿವಿಲ್ಲದಂತೆ ಬಿತ್ತುತ್ತಿರುತ್ತವೆ. ಇಲ್ಲಿ ನೋಡಿರಿ–

> ಅಕ್ಕಕ್ಕ ಭಾಯಿ ನೋಡು
ಭಾಯಿ ಮ್ಯಾಲ ಗಿಡಾ ನೋಡು
ಗಿಡದ ಮ್ಯಾಲ ಕಾಯಿ ನೋಡು
ಕಾಯಿ ತಿಂದು ಬಾಯಿ ನೋಡು ಎನು ತಿಳಿ? (ನೇರಿಲೆ ಹಣ್ಣು)

ಇಲ್ಲಿ ಅಂತ್ಯ ಪ್ರಾಸವೇ ಮುಖ್ಯವಾಗಿದ್ದರೆ ಭಾಯಿ–ಭಾಯಿ, ಗಿಡ–ಗಿಡ, ಕಾಯಿ–ಬಾಯಿ ಪದಗಳ ಪ್ರಸಬದ್ಧತೆಯು ಕಾವ್ಯತ್ವ ಪ್ರದರ್ಶನ ಮಾಡುತ್ತಿರುತ್ತವೆ"(ಪ್ರ.ಮು.೭).

ಒಗಟುಗಳಲ್ಲಿ ಕಾಣುವ ಅಲಂಕಾರಗಳನ್ನು ಕುರಿತು ಹೀಗೆ ಬರೆದಿದ್ದಾರೆ. "ಇವುಗಳೆಲ್ಲ ಅತ್ಯಂತ ಅಗಾಧ ವ್ಯಂಜನಾ ಶಕ್ತಿಯಿಂದ ಕೂಡಿದ ಹನಿಗಮನ–ಮಿನಿಗಮನ– ಚುಟುಕುಗಳಿಗೆ ಚಪರಾಕಿ ಹೊಡೆದು ಮುಂದೆ ಸಾಗುವ ಸಾಮರ್ಥ್ಯ ಹೊಂದಿವೆ. ಇಲ್ಲಿ ರೂಪಕ, ಉಪಮಾ, ಇತ್ಯಾದಿಗಳು ಹಿಗ್ಗಿನಿಂದ ಹುಚ್ಚೆದ್ದು ಕುಣಿಯುತ್ತವೆ. ಭಾವಕ್ಕೆ ತಕ್ಕಂತೆ ಪದಗಳು ತಂತಾನೆ ರೂಪುಗೊಂಡು ಮೆರೆಯುತ್ತವೆ, ನಲಿಯುತ್ತವೆ"(ಪ್ರ.ಪು.೯).

ಇಲ್ಲಿ ಮುಖ್ಯವಾಗಿ ಸೂತ್ರರೂಪದ ಒಗಟುಗಳೇ ಇವೆ. ವಿವರಣಾತ್ಮಕ ಒಗಟುಗಳಲ್ಲಿ 'ಲಘುಕಥಾರೂಪದ ಒಗಟು'ಗಳು ಹತ್ತಿಪ್ಪತ್ತು ಸೇರಿಕೊಂಡಿವೆ. ಹಾಗೆ ಇಂತಹದೇ ರೂಪದ ಕಥೆಯೆಂದು ಕೊಟ್ಟ ಒಂದು ಉದಾಹರಣೆ, ಬೇತಾಳನ ಕಥೆಯ ಮಾದರಿಯ ಒಂದು 'ಒಗಟಿನ ಕಥೆ' ಸೇರಿಕೊಂಡಿದೆ. ಇಲ್ಲಿರುವ 'ಲಘುಕಥಾರೂಪದ ಒಗಟು' ಮಾದರಿಗೆ ಒಂದೆರಡು ಉದಾಹರಣೆಗಳನ್ನು ನೋಡಬಹುದಾಗಿದೆ.

" 'ಇಲ್ಲಿ ಬಗ್ಗು, ಕಾನ್ಮೋಡಿ, ಕಾಪಾಳ್ಚಿನ್ನಿ' ಈ ಮೂರು ವಸ್ತುಗಳನ್ನು ತರಲು ಒಬ್ಬ ಖಿಲಾಡಿ ಮುದುಕನು ಒಬ್ಬ ಹುಡುಗನಿಗೆ ಮೂರು ದುಡ್ಡು ಕೊಟ್ಟು ಕಳಿಸಿದನು. ಆ ಹುಡುಗ ದುಕಾನ್ಕ ಹೋಗಿ, 'ಇಲ್ಲಿ ಬಗ್ಗು ಕಾನ್ಮೋಡಿ, ಕಪಾಳ್ಚಿನ್ನಿ' ಕುಡು ಎಂದು ದುಕಾನದಾರನಿಗೆ ಮೂರು ದುಡ್ಡು ಕೊಟ್ಟನು. ಆಗ ದುಕಾನ್ದಾರನು ಆ ಹುಡುಗಗ ಬಲ್ಲಿ ಕರ್ದು ಬಗ್ಗಿಸಿದನು. ನುರಿಯಾಗಿ ಕಿವಿ ಹಿಂಡಿದನು. ಆ ಮೇಲೆ ಕಪಾಳಕ್ಕೆ ಕಿಡಿ ಕಾರುವಂತೆ ಸಡ್ಡಾಸಿ ಹೊಡೆದನು. ಆ ಮ್ಯಾಲ 'ಕೊಟ್ಟ ನೋಡು' ಅಂದ್ನು. ಹಾಂಗ್ಯಾಕ ಮಾಡಿದ್ನು ತಿಳಿ". (ಇಲ್ಲಿ ಬಗ್ಗು=ಕರೆಯುವಿಕೆ, ಕಾನ್ಮೋಡಿ=ಕಿವಿ ಹಿಂಡುವಿಕೆ, ಕಪಾಳಚಿನ್ನಿ=ಮೆಲುಕಿಗೆ ಕೊಡುವ ಏಟು).

"ನಾಕು ಮಂದಿ ಕೂಡಿ ಕಾಶೀಗಿ ಹೊಂಟ್ರು. ಒಂದು ಊರಾಗ ರಾತ್ರಿ ಉಳ್ದೂರು. ಅಲ್ಲಿ ಕಳ್ಳರ ಕಾಟಾ ತೋಲು ಇತ್ತು. ಪಾಳಿಲಿಂದ ಕಾಯ್ಕೋತಾ ಕುಂತ್ರು. ಪೈಲೆದಾಂವ ಹೊತ್ಗಮ್ನಿ ಸಲ್ಯಾಕ ಒಂದು ಘೊಂಬಿ ಮಾಡ್ದ. ದೂಸ್ರಾದಾಂವ ಸೀರಿ ನೆಯ್ದು ಉಡುಸ್ದ. ತೀಸ್ರಾದಾಂವ ತಾಳಿ ಮಾಡಿ ಕಟ್ದ. ನಾಕ್ನೆದಾಂವ ಜೀವಾಥುಂಬ್ದ. ಆಕಿ ಯಾರಿಗಿ ಮಾಡ್ಕೋಬೇಕು? ಏನ್ ತಿಳಿ". (ಗೊಂಬೆ ಮಾಡಿದಾಂವ ತಂದೆ, ಸೀರಿ ಉಡಿಸಿದಾಂವ ಅಣ್ಣ, ಜೀವ ತುಂಬಿದವ ಪರಮಾತ್ಮ, ತಾಳಿ ಕಟ್ಟಿದವ ಗಂಡ)

ಹೀಗೆ ವಿವರಣಾತ್ಮಕ ಕಥೆಗಳ ಈ ಒಂದು ಪ್ರಕಾರದ ಒಗಟುಗಳು ಮಾತ್ರ ಇಲ್ಲಿ ಕಾಣಿಸುತ್ತವೆ. ಭಾಷೆ ಹೊಸದು, ಒಡಗತೆಗಳು ಹೊಸವು ಕಾಣಿಸುತ್ತವೆ.

೨೦೧೨ ರಲ್ಲಿ ಪ್ರಕಟವಾದ ಜೀನಹಳ್ಳಿ ಸಿದ್ಧಲಿಂಗಪ್ಪ ಅವರ **'ಬಲ್ಲಂಥ ಜಾಣ ಬಿಡಿಸ್ಹೇಳು'** ಎಂಬುದು ೧೦೫೫ ಸೂತ್ರರೂಪದ ಒಗಟುಗಳ ಸಂಗ್ರಹ. ಇವುಗಳನ್ನು ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಸಂಗ್ರಹಿಸಲಾಗಿದೆ. ವಿಶೇಷವಾಗಿ ಹೊನ್ನಾಳಿ, ಚೆನ್ನಗಿರಿ, ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ ತಾಲೂಕುಗಳಲ್ಲಿ ಇಲ್ಲಿಯ ಒಗಟುಗಳನ್ನು ಸಂಗ್ರಹಿಸಿರುವದನ್ನು ಸಂಪಾದಕರು ಬರೆದುಕೊಂಡಿದ್ದಾರೆ. ಇಲ್ಲಿಯ ಒಗಟುಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡಿದ್ದಾರೆ. ಸಹಜವಾಗಿಯೇ ಸ್ಥಳ ಬದಲಾವಣೆಯಾಗಿದೆ.

ಅನೇಕ ಹೊಸ ಒಗಟುಗಳು ಈ ಸಂಗ್ರಹದಲ್ಲಿ ಸಿಗುವಂತಾಗಿದೆ. ಇಲ್ಲಿಯ ಒಗಟುಗಳನ್ನು ೧೯೭೫ ರಿಂದ ೧೯೮೨ರ ಅವಧಿಯಲ್ಲಿ ಸಂಗ್ರಹಿಸಲಾಗಿದೆ ಎಂದು ಸಂಪಾದಕರು ಬರೆದುಕೊಂಡಿದ್ದಾರೆ.

ಇಲ್ಲಿಯ **ಸೂತ್ರರೂಪದ ಒಗಟುಗಳು** ಹೆಚ್ಚು ಕಾವ್ಯಾತ್ಮಕವಾಗಿ ಕಂಡುಬರುತ್ತವೆ.

> ಗದ್ದೇಗೌಡನ ಮಗಳು
ಮುದ್ದೆ ಸಾವಂತ್ರವ್ವ
ಹಡೆದ ಮಕ್ಕಳನೆಲ್ಲ
ಮಂದಿಗೆ ಕೊಟ್ಟು
ಬರೆ ತೊಟ್ಲು ತೂಗ್ತಾಳೆ (೪೬೭, ಉ. ತೆಂಗಿನ ಮರ)

> ಗಾಳಿ ಕುಡಿದು ಬದುಕುತ್ತೆ
ನೀರು ಕುಡಿದು ಸಾಯುತ್ತೆ (೪೭೪, ಉ. ಬೆಂಕಿ)

> ನಡೆಯವವು ಎಂಟು ಕಾಲು
ನಡೆ ತಪ್ಪಿದ್ದು ಎರಡು ಕಾಲು
ನುಡಿಯೋವು ನಾಲ್ಕು ನಾಲಗೆ
ನುಡಿ ತಪ್ಪಿದದು ಒಂದು ನಾಲಗೆ (೬೦೭, ಉ. ಹೆಣ-ನಾಲ್ವರು ಜನ)

ಇಂತಹ ಸಂಗ್ರಹಗಳನ್ನು ನೋಡಿದಾಗ, ಪ್ರಾದೇಶಿಕ ಒಗಟುಗಳ ಅಧ್ಯಯನ ನಡೆಯುವುದು ಅವಶ್ಯವೆನಿಸುತ್ತದೆ.

೨

ವಿವರಣಾತ್ಮಕ ಒಗಟುಗಳ (ಒಡಗತೆಗಳ) ಸಂಗ್ರಹಗಳು

ಜನಪದ ಒಗಟುಗಳಲ್ಲಿ ಎರಡು ಪ್ರಕಾರಗಳನ್ನು ಗುರುತಿಸಿಕೊಳ್ಳಲಾಗಿದೆ. ಒಂದು 'ಸೂತ್ರಾತ್ಮಕ ಒಗಟುಗಳು', ಎರಡನೆಯದು 'ವಿವರಣಾತ್ಮಕ ಒಗಟುಗಳು'. ಇಲ್ಲಿಯವರೆಗೆ ಮುಖ್ಯವಾಗಿ 'ಸೂತ್ರಾತ್ಮಕ ಒಗಟು'ಗಳ ಸಂಗ್ರಹವನ್ನು ಪರಿಶೀಲಿಸಲಾಯಿತು. ಈ ಒಗಟುಗಳ ಸಂಗ್ರಹದಲ್ಲೂ ಪ್ರಾಸಂಗಿಕವಾಗಿ ಕೆಲಕೆಲವು 'ವಿವರಣಾತ್ಮಕ ಒಗಟುಗಳು' ಸಂಗ್ರಹಿಸಿ ಕೊಟ್ಟಿರುವುದನ್ನು ಗಮನಿಸಲಾಗಿದೆ. ಕೆಲ ವಿದ್ವಾಂಸರು ಗಣಿತದ ಒಗಟುಗಳನ್ನು ಸಂಗ್ರಹಿಸಿ ಕೊಡಲು ಹೋಗಿ, ವಿವರಣಾತ್ಮಕ ಒಗಟುಗಳ ಹೆಚ್ಚಿನ ಪ್ರಕಾರಗಳನ್ನೂ ಅವುಗಳಲ್ಲಿ ಸೇರಿಸಿ ಕೊಟ್ಟಿದ್ದಾರೆ. ಅಂತಹ ವಿವರಣಾತ್ಮಕ ಒಗಟುಗಳ ಕೆಲ ಸಂಗ್ರಹಗಳೂ ಪ್ರಕಟವಾಗಿವೆ. ಅದಕ್ಕಾಗಿ ಅಂತಹ ಒಗಟುಗಳ ಸಂಗ್ರಹಗಳನ್ನೇ ಪ್ರತ್ಯೇಕವಾಗಿ ಇಲ್ಲಿ ಸಮೀಕ್ಷಿಸಲಾಗಿದೆ.

೧೯೭೫ ರಲ್ಲಿಯೇ ಪಿ.ಕೆ.ರಾಜಶೇಖರ ಅವರು **'ಜನಪದ ಚಮತ್ಕಾರ ಗಣಿತ'** ಎಂಬ ಒಂದು ಚಿಕ್ಕ ಕೃತಿಯನ್ನು ತಮ್ಮ ಸ್ನೇಹಿತರಾದ ಸಣ್ಣನಂಜೇಗೌಡ ಹಾಗೂ ಡಿ. ದೊಡ್ಡಲಿಂಗೇಗೌಡ ಅವರೊಂದಿಗೆ ಕೂಡಿಕೊಂಡು ಸಂಪಾದಿಸಿ ಪ್ರಕಟಿಸಿದ್ದಾರೆ. ಜಾನಪದ ಪ್ರಕಾರದ ಒಂದು ಹೊಸ ಸೇರ್ಪಡೆ ಎಂಬ ಉತ್ಸಾಹದಲ್ಲಿ ಈ ಕೃತಿಯನ್ನು ಸಂಪಾದಕರು

ಹೊರತಂದಿದ್ದಾರೆ. ಈ ಮೊದಲೇ ಪ್ರಕಟವಾದ ಒಗಟುಗಳ ಸಂಕಲನಗಳಲ್ಲಿ ಕೆಲವೊಂದು ವಿವರಣಾತ್ಮಕ ಒಗಟುಗಳು ಸೇರ್ಪಡೆಯಾಗಿವೆ. ಆದರೆ ಇಂತಹ ಗಣಿತ ಮತ್ತು ಇತರ ವಿವರಣಾತ್ಮಕ ಒಗಟುಗಳನ್ನು ಸೇರಿಸಿಯೇ ಒಂದು ಕೃತಿ ಪ್ರಕಟಪಡಿಸಿದ್ದು ಮೊದಲನೆಯದು. ಇದರಲ್ಲಿ ವಿವರಣಾತ್ಮಕ ಒಗಟುಗಳ ನಾಲ್ಕು ಪ್ರಕಾರಗಳಾದ 'ಗಣಿತದ ಒಗಟುಗಳು, ಲಘುಕಥನಾತ್ಮಕ ಒಗಟುಗಳು, ದ್ವಂದ್ವಾರ್ಥದ ಒಗಟುಗಳು, ಒಂದೇ ಉತ್ತರದ ಒಗಟುಗಳು' ಸೇರ್ಪಡೆಯಾಗಿವೆ. ಹೀಗಾಗಿ ವಿವರಣಾತ್ಮಕ ಒಗಟುಗಳ ಒಂದು ಹೊಸ ಕೃತಿ ಇದಾಗಿದೆ. ಈ ಕೃತಿಗೆ ಬೆನ್ನುಡಿ ಬರೆದಿರುವ ಪ್ರೊ. ಜೀ. ಶಂ. ಪರಮಶಿವಯ್ಯ ಅವರು ಹೀಗೆ ಅಭಿಪ್ರಾಯ ಪಡುತ್ತಾರೆ: 'ಜನಪದ ಅನುಭವ ಭಂಡಾರದಲ್ಲಿ ಬುದ್ಧಿಕೌಶಲಗಳ ದ್ಯೋತಕವಾಗಿ, ವ್ಯವಹಾರ ವಿನೋದಗಳ ಸಾಧನವಾಗಿ ಹುದುಗಿರಬಹುದಾದ ಇಂಥ ಸಾಮಗ್ರಿ ಯಾರ ಕುತೂಹಲವನ್ನಾದರೂ ಕೆರಳಿಸುತ್ತದೆ. ಕನ್ನಡ ಜಾನಪದದ ಹೊಸ ಶಾಖೆಯೊಂದರತ್ತ ನಮ್ಮ ದೃಷ್ಟಿಯನ್ನು ಸೆಳೆಯುತ್ತಿರುವ ಈ ಮೂರು ಮಂದಿ ತರುಣ ಮಿತ್ರರೂ ಅಭಿನಂದನಾರ್ಹರು'. ಇಲ್ಲಿಯ ಒಡಗತೆಗಳನ್ನು ಮೈಸೂರು, ತುಮಕೂರು, ಮಂಡ್ಯ, ಬೆಂಗಳೂರು, ಕೊಡಗು, ಹಾಸನ ಈ ಭಾಗಗಳಿಂದ, ಹಲವಾರು ಜನಗಳಿಂದ ಕೇಳಿ ತರಿಸಿಕೊಳ್ಳಲಾಗಿದೆ. ಇದರಲ್ಲಿ ಒಟ್ಟಿಗೆ ೬೧ ವಿವರಣಾತ್ಮಕ ಒಗಟುಗಳಿವೆ.

೧. ಗಣಿತದ ಒಗಟುಗಳು : ಆನೆಗೆ ಐದು ರೂಪಾಯಿ, ಕುದುರೆಗೆ ಮುಕ್ಕಾಲು ರೂಪಾಯಿ, ಕತ್ತೆಗೆ ಕಾಲು ರೂಪಾಯಿ. ನೂರು ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಒಟ್ಟು ನೂರು ರಾಸು ಆನೆ, ಕುದುರೆ, ಕತ್ತೆಗಳನ್ನು ತಂದರೆ ಎಷ್ಟು ಆನೆಗಳನ್ನು ತರಬಹುದು? ಎಷ್ಟು ಕುದುರೆಗಳನ್ನು ತರಬಹುದು? ಎಷ್ಟು ಕತ್ತೆಗಳನ್ನು ತರಬಹುದು?

ಉತ್ತರ : ೧ ಆನೆಗೆ ೫ ರೂ. ೧೪ ಆನೆಗಳು= ೭೦=೦೦ ರೂ.
೧ ಕುದುರೆಗೆ ೩/೪ ರೂ. ೧೭ ಕುದುರೆಗಳು=೧೨=೭೫ ರೂ.
೧ ಕತ್ತೆಗೆ ೧/೪ ರೂ. ೬೯ ಕತ್ತೆಗಳು= ೧೭=೨೫ ರೂ.
----
೧೦೦ ರಾಸು, ೧೦೦=೦೦ರೂ.

೨. ಲಘು ಕಥಾರೂಪದ ಒಗಟುಗಳು:

೮೨. ಒಬ್ಬ ರಾಜ ಯಾವುದೋ ಕಾರ್ಯನಿಮಿತ್ತ ಪ್ರಯಾಣವನ್ನು ಕೈಗೊಂಡು ಹೊರಡಲು ಸಿದ್ಧನಾದ. ಅವನು ಕೋಟೆಯ ಬಾಗಿಲಿಗೆ ಬಂದಾಗ ಹಿಂದಿನ ರಾತ್ರಿ ಕೋಟೆಯ ಬಾಗಿಲನ್ನು ಕಾಯುತ್ತಿದ್ದ ಕಾವಲುಗಾರ ಬಂದು ರಾಜನನ್ನು ತಡೆದು 'ಸ್ವಾಮಿ ನೀವು ಈ ದಿನ ಪ್ರಯಾಣ ಮಾಡಬೇಡಿ. ಪ್ರಯಾಣದ ಹಾದಿಯಲ್ಲಿ ಅನಾಹುತ ಸಂಭವಿಸುತ್ತದೆ. ನೀವು ಪ್ರಯಾಣ ಮಾಡುತ್ತಿರುವ ದಾರಿಯಲ್ಲಿರುವ ಸೇತುವೆ ಒಡೆದು ನೀವು ನೀರುಪಾಲಾದಂತೆ ಕನಸು ಕಂಡೆ. ಆದ್ದರಿಂದ ನೀವು ಖಂಡಿತ ಪ್ರಯಾಣ ಬೆಳೆಸಬೇಡಿ' ಎಂದು ಅಂಗಲಾಚಿದ. ಸೇವಕನ ಮಾತಿನಿಂದ ಬೇಸರಗೊಂಡ ರಾಜ ಪ್ರಯಾಣವನ್ನು ನಿಲ್ಲಿಸಿದ. ಕೊಂಚ ಹೊತ್ತಿನಲ್ಲೆ ಸೇತುವೆ ಮುರಿದು ಬಿದ್ದ ಸುದ್ದಿ ಬಂತು. ಕಾವಲುಗಾರನ ಕನಸು ನಿಜವಾದುದರಿಂದ ರಾಜನ ಪ್ರಾಣ ಉಳಿಯಿತು. ರಾಜ ತಕ್ಷಣವೆ ಕಾವಲುಗಾರನನ್ನು

ಅವನ ಕೆಲಸದಿಂದ ತೆಗೆದುಹಾಕಿದ. ಇದರಿಂದ ಕಾವಲುಗಾರ ನಿರುದ್ಯೋಗಿಯಾದ. ರಾಜ ಹೀಗೆ ಮಾಡಿದ್ದು ಸರಿಯೆ?

ಉತ್ತರ : ರಾಜ ಕಾವಲುಗಾರನನ್ನು ತೆಗೆದು ಹಾಕಿದ್ದು ಸರಿ. ಏಕೆಂದರೆ ರಾತ್ರಿಯ ವೇಳೆಯಲ್ಲಿ ಕಾವಲುಗಾರ ಕೋಟೆಯ ಬಾಗಿಲನ್ನು ಕಟ್ಟೆಚ್ಚರದಿಂದ ಕಾಯ್ದುಕೊಳ್ಳದೆ ನಿದ್ರೆ ಮಾಡಿ ಕನಸು ಕಂಡಿದ್ದ. ಕಾವಲುಗಾರನ ಕರ್ತವ್ಯ ನಿದ್ರೆ ಮಾಡುವುದಲ್ಲವಾದ್ದರಿಂದ ರಾಜ ಅವನನ್ನು ತೆಗೆದು ಹಾಕಿದ. ಆದರೆ ಅವನ ಪ್ರಾಣ ಉಳಿಯಲು ಕಾವಲುಗಾರ ಕಾರಣವಾದ್ದರಿಂದ ಅವನಿಗೆ ಬಹುಮಾನ ಕೊಟ್ಟು ಸನ್ಮಾನ ಮಾಡಿದ.

೩. ದ್ವಂದ್ವಾರ್ಥದ (ಗೊಂದಲ ಹುಟ್ಟಿಸುವ) ಒಗಟುಗಳು:

೭೦. ಒಂದು ಮಣ ಹತ್ತಿ ಭಾರವೋ? ಒಂದು ಮಣ ಕಬ್ಬಿಣ ಭಾರವೋ?

ಉತ್ತರ : ಎರಡೂ ಒಂದೊಂದೇ ಮಣವಾಗಿರುವುದರಿಂದ ಎರಡೂ ಸಮನಾಗಿವೆ.

೬೧. ಹೆಡ್ಡ ಹೆಡ್ಡರಿಗೆ ಒಂದೇ ಹಾದಿ, ಜಾಣ ಹೆಡ್ಡರಿಗೆ ಎರಡು ಹಾದಿ, ಜಾಣ ಜಾಣರಿಗೆ ಮೂರು ಹಾದಿ, ಎಲ್ಲಾ ಸೇರಿ ಎಷ್ಟು ಹಾದಿ?

ಉತ್ತರ : ಮೂರು ದಾರಿ.

ಪಿ. ಕೆ. ರಾಜಶೇಖರ ಅವರು ಎಸ್. ಗೋಪಾಲಕೃಷ್ಣ ಅವರೊಂದಿಗೆ ಸಂಪಾದಿಸಿದ ಇಂತಹದೇ ಇನ್ನೊಂದು ಕೃತಿ **'ಆಯ್ದ ಜನಪದ ಲೆಕ್ಕಗಳು'**(೧೯೭೯). ಹೊಸದಾಗಿ ೨೦ ವಿವರಣಾತ್ಮಕ ಒಗಟುಗಳನ್ನು ಜೊತೆಗೆ 'ಜನಪದ ಚಮತ್ಕಾರ ಗಣಿತ'ದಿಂದ ಇನ್ನಷ್ಟನ್ನು ಸೇರಿಸಿ, ಈ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಒಟ್ಟಿಗೆ ೬೧ ಒಡಗತೆಗಳಿವೆ.

ವಿವರಣಾತ್ಮಕ ಒಗಟುಗಳ ಇನ್ನೊಂದು ಮಹತ್ವದ ಸಂಕಲನ ಪ್ರಕಟವಾದುದು ಉತ್ತರ ಕರ್ನಾಟಕದಿಂದ. ಡಾ. ವೀರಣ್ಣ ರಾಜೂರ ಹಾಗೂ ಬಿ.ಬಿ.ಬಿರಾದಾರ ಅವರು ಈ ಕೃತಿಯ ಸಂಪಾದಕರಾಗಿದ್ದಾರೆ. **'ಜಾನಪದ ಜಾಣ್ಮೆ'** (೧೯೮೧) ಎಂಬ ವಿವರಣಾತ್ಮಕ ಒಗಟುಗಳ ಒಂದು ದೊಡ್ಡ ಸಂಗ್ರಹವನ್ನೇ ಅವರು ಪ್ರಕಟಿಸಿದ್ದಾರೆ. ಈ ವಿವರಣಾತ್ಮಕ ಒಗಟುಗಳಲ್ಲಿ ಸಾಮಾನ್ಯವಾಗಿ ಎಲ್ಲರ ಗಮನ ಸೆಳೆದಿರುವುದು ಲೆಕ್ಕದ ಒಗಟುಗಳೇ. "ಜಾನಪದ ಅಧ್ಯಯನದಲ್ಲಿ ಲೆಕ್ಕಗಳದು ಒಂದು ಗಮನಾರ್ಹ ಭಾಗ. ಹೀಗಿದ್ದೂ ವಿದ್ವಾಂಸರ ದೃಷ್ಟಿ ಇದರತ್ತ ಹರಿಯದಿರುವುದು ಸೋಜಿಗದ ಸಂಗತಿ. ಉಳಿದ ಜಾನಪದ ಸಾಹಿತ್ಯಪ್ರಕಾರಗಳಂತೆ ಇದೂ ಕೂಡ ವಾಚಿಕ ಸಂಪ್ರದಾಯದಲ್ಲಿಯೇ ಉಳಿದು, ಬೆಳೆದು ಬಂದಿದೆ. ಒಗಟಿನಂತೆ ಜಾನಪದರ ಜಾಣ್ಮೆಯನ್ನು ಮೆರೆಯುವ, ಅವರ ಬುದ್ಧಿಮತ್ತೆಯನ್ನು ತೆರೆದು ತೋರಿಸುವ ಒಂದು ವಿಶಿಷ್ಟಪ್ರಕಾರವಾಗಿ ನಿಂತಿದೆ" (ಪ್ರ.ಮ.೧). ಈ ಕೃತಿಯಲ್ಲಿರುವ ಎಲ್ಲ ಬಗೆಯ ವಿವರಣಾತ್ಮಕ ಒಗಟುಗಳನ್ನು ಸಂಪಾದಕರು ಲೆಕ್ಕಗಳು ಎಂದೇ ಕರೆದಿದ್ದಾರೆ. 'ಒಗಟಿನಂತೆ ಜಾನಪದರ ಜಾಣ್ಮೆಯನ್ನು ಮೆರೆಯುವ, ಅವರ ಬುದ್ಧಿಮತ್ತೆಯನ್ನು ತೆರೆದು ತೋರಿಸುವ ಒಂದು ವಿಶಿಷ್ಟಪ್ರಕಾರವಾಗಿ ನಿಂತಿದೆ' ಎನ್ನುವ ಸಂಪಾದಕರ ಮಾತುಗಳನ್ನು

ಗಮನಿಸಿದರೆ, ತಾವು ಸಂಗ್ರಹಿಸಿದ ಲೆಕ್ಕಗಳು ಒಗಟಿನಂತಿವೆ ಎಂದು ಅವರಿಗೆ ಭಾಸವಾಗಿರುವುದು ಪ್ರಮುಖ ಸಂಗತಿಯಾಗಿದೆ. ಇದನ್ನು ಗಮನಸಿದರೆ 'ವಿವರಣಾತ್ಮಕ ಒಗಟು'ಗಳನ್ನು ಕೂಡ ಸಂಪಾದಕರು ಒಗಟುಗಳೆಂದೆ ಗ್ರಹಿಸಿದ್ದು ಸ್ಪಷ್ಟವಾಗಿದೆ. ಇವುಗಳಲ್ಲಿ ನೇರವಾಗಿ ಲೆಕ್ಕದ ಮಾದರಿಗಳು ಬರುವುದರಿಂದ ಅಂಥವುಗಳನ್ನು 'ಜನಪದ ಲೆಕ್ಕಗಳು' ಎಂದು ಕರೆಯುವಲ್ಲಿ ತ್ತಪ್ಪೇನೂ ಇಲ್ಲ. ಒಗಟುಗಳ ಬೆಳವಣಿಗೆಯ ರೂಪವೇ ಈ ಲೆಕ್ಕಗಳಾಗಿವೆ. ವಿಶೇಷವಾಗಿ ಎಳೆಯರಿಗಾಗಿ ಒಡ್ಡಿದ ಪ್ರಶ್ನೆಗಳು ಇವು. ಹಾಗೆಯೇ ಕೆಲವು ಬಲಿತ ಗಣಿತದ ಪ್ರಶ್ನೆಗಳೂ ಆಗಿರುತ್ತವೆ. ಆದಕ್ಕಾಗಿ ಇಂಥವುಗಳನ್ನು ಒಗಟಿನ ಬೆಳೆದ ಭಾಗಗಳು ಎಂದು ಗಣಿಸಬಹುದಾಗಿದೆ.

ಈ ಗಣಿತ ಪ್ರಕಾರದ ಒಗಟುಗಳನ್ನು ಕಲೆಹಾಕಿದ ಸಂಪಾದಕರು ಇವುಗಳನ್ನು ಕುರಿತು ಹೇಳುವ ಕೆಲ ಮಾತುಗಳನ್ನು ಗಮನಿಸಬೇಕು: 'ಅನುಭವದ ಅಭಿವ್ಯಕ್ತಿಯಾದ ಜನಪದ ಸಾಹಿತ್ಯದಲ್ಲಿ ಇದೂ ಒಂದು ಮಹತ್ವದ ಪ್ರಕಾರವಾಗಿ ನಿಂತಿದೆ' (ಪು.೨) ಎನ್ನುವಲ್ಲಿ ಅವರಿಗೆ ತಿಳಿದೋ ತಿಳಿಯದೋ ಇದು ಸಾಹಿತ್ಯದ ಪ್ರಕಾರವಾಗಿ ನಿಂತಿದೆ ಎಂಬ ಮಾತು ಅವರಿಂದ ಬಂದಿರುವುದನ್ನು ಗಮನಿಸಬೇಕು. 'ಮನರಂಜನೆಗಾಗಿ ಸೃಷ್ಟಿಸಿದ ಸಮಸ್ಯಾತ್ಮಕ ಲೆಕ್ಕಗಳ ಭಾಗ ಕುತೂಹಲಕಾರಿಯಾಗಿದುದು' ಎನ್ನುವಲ್ಲಿ ಇವುಗಳ ಮೂಲ ಉದ್ದೇಶ ಮನರಂಜನೆಯಾಗಿದೆ ಎಂಬುದು ಇನ್ನೊಂದು ಪ್ರಮುಖ ಸಂಗತಿ. ಹೀಗೆ ಹೇಳುವಾಗಲೂ ಮನರಂಜನೆಯ ಹಿಂದೆ ಕಲಿಕೆ ಎಂಬುದು ಎಲ್ಲ ಕಡೆ ಖಂಡಿತವಾಗಿ ಇರುತ್ತದೆಂಬುದನ್ನೂ ಗಮನಿಸಬೇಕು.

ಈ ಸಂಗ್ರಹದಲ್ಲಿ ಒಟ್ಟಿಗೆ ೨೨೦ ವಿವರಣಾತ್ಮಕ ಒಗಟುಗಳಿವೆ. ಅವುಗಳಲ್ಲಿ ೧೭೧ ಗದ್ಯರೂಪದಲ್ಲಿ, ಉಳಿದವು ಪದ್ಯರೂಪದಲ್ಲಿವೆ. ಗದ್ಯರೂಪದ ಗಣಿತದ ಒಗಟುಗಳಲ್ಲಿ– 'ಕಥಾರೂಪದ ಲೆಕ್ಕಗಳು', 'ಚುಟುಕು ಲೆಕ್ಕಗಳು' ಎಂದು ಎರಡು ಪ್ರಕಾರಗಳನ್ನು ಸಂಪಾದಕರು ಗುರುತಿಸಿದ್ದಾರೆ. ಇವುಗಳನ್ನು ಗಮನಿಸಿದರೆ, ಇವೆಲ್ಲ ಹಿಂದೆ ಗುರುತಿಸಿಕೊಂಡ ವಿವರಣಾತ್ಮಕ ಒಗಟುಗಳ ಒಂದು ಪ್ರಕಾರವಾದ 'ಲಘುಕಥಾರೂಪದ ಒಗಟು'ಗಳನ್ನು 'ಕಥಾರೂಪದ ಲೆಕ್ಕಗಳು' ಎಂದು ಒಂದು ಗುಂಪಾಗಿಸಿ, 'ದ್ವಂದ್ವಾರ್ಥದ (ಗೊಂದಲ ಹುಟ್ಟಿಸುವ–ಪಝಲ್ ರೂಪದ) ಒಗಟು'ಗಳನ್ನು 'ಚುಟುಕು ಒಗಟುಗಳು' ಎಂದು ಇನ್ನೊಂದು ಗುಂಪಾಗಿಸಿ ಗುರುತಿಸಿದ್ದಾರೆ. ೧೭೧ ವಿವರಣಾತ್ಮಕ ಒಗಟುಗಳನ್ನು ೩೩ ಭಾಗ ಮಾಡಿ ಕೊಟ್ಟಿದ್ದಾರೆ. ಅದರಲ್ಲಿ ೩೨ನೇ ಭಾಗವನ್ನು 'ಮೋಸದ ಲೆಕ್ಕ' ಎಂದು ಕರೆದಿದ್ದಾರೆ. ಅಂದರೆ 'ದ್ವಂದ್ವಾರ್ಥದ (ಗೊಂದಲ ಹುಟ್ಟಿಸುವ) ಒಗಟು'ಗಳೇ ಇಲ್ಲಿ ಪ್ರಮುಖವಾಗಿವೆ. ಉದಾಹರಣೆಗೆ:

> ಕೊಣಮಿಗ್ಯಾಗ ಒಂದರೊಟ್ಟಿ, ಹಂಚಿನ್ಯಾಗ ಹತ್ತರೊಟ್ಟಿ, ಮಟ್ಟ್ಯಾಗ ಆರರೊಟ್ಟಿ ಹಂಗಾರ ಒಟ್ಟ ಎಷ್ಟ ರೊಟ್ಟಿ? (೧೫೨, ಉ. ಒಂದು ರೊಟ್ಟಿ)

> ಕೆರಿಯಾಗ ಒಂದ ಕಾಗಿ, ತೆವರ್‍ಯ್ಯಾಗ ಏಳಕಾಗಿ, ಗಿಡ್ಡಮ್ಯಾಗ ಹತ್ತಕಾಗಿ, ಹಂಗಾರ ಒಟ್ಟ ಎಷ್ಟ ಕಾಗಿ? (೧೫೩, ಒಂದು ಕಾಗಿ)

ಇವುಗಳ ಉದ್ದೇಶವೆಂದರೆ ಉತ್ತರ ಹೇಳುವವನಿಗೆ ಗೊಂದಲ ಹುಟ್ಟಿಸುವುದೇ ಆಗಿದೆ. ಆದಕ್ಕಾಗಿ ಇವುಗಳನ್ನು ಅಂತಹ ಪ್ರಕಾರದಲ್ಲಿ ಸೇರಿಸುವುದು ಉತ್ತಮ.

ಭಾಗ ೨ ಮತ್ತು ೩ ರಲ್ಲಿ ಪದ್ಯದಲ್ಲಿ ಸಿಗುವ ಒಗಟಿನ ರೂಪದ ನುಡಿಗಳನ್ನು, ಹಸ್ತಪ್ರತಿಯಿಂದ ಹುಡುಕಾಡಿ ಕೊಟ್ಟಿದ್ದಾರೆ. ಸಂಪಾದಕರಿಬ್ಬರೂ ಹಸ್ತಪ್ರತಿಗಳನ್ನು ಸದಾ ನೋಡುತ್ತಲೇ ಇರುವವರು. ಅವರು ತಮಗೆ ಆಗಾಗ ದೊರೆತ ಇಂತಹ ಕಂದಪದ್ಯ, ತ್ರಿಪದಿ, ಚೌಪದಿಗಳನ್ನು ಸಂಗ್ರಹಿಸಿ ಇಲ್ಲಿ ಕೊಟ್ಟಿದ್ದಾರೆ. ಇದು ಪರಿಶ್ರಮದ ಕೆಲಸವಾದರೂ ಪದ್ಯ ರೂಪದಲ್ಲಿರುವ ಒಗಟು ಮಾದರಿಗಳನ್ನು ನಾವಿಲ್ಲಿ ಗಣಿಸುವ ಹಾಗಿಲ್ಲ. ಅದಕ್ಕಾಗಿ ಅವುಗಳ ಬಗ್ಗೆ ಹೆಚ್ಚಿನ ಚರ್ಚೆಯ ಅವಶ್ಯಕತೆ ಇಲ್ಲ.

ಈ ಕೃತಿಯ ಇನ್ನೊಂದು ವಿಶೇಷವೆಂದರೆ ಒಗಟುಗಳ ಉತ್ತರಗಳ ಭಾಗವೇ ಅತ್ಯಂತ ದೀರ್ಘವಾಗಿರುವ ಭಾಗವಾಗಿರುವುದು. ಪಠ್ಯದ ಭಾಗ ೫೭ ಪುಟಗಳಷ್ಟಿದ್ದರೆ, ಅವುಗಳಿಗೆ ಸಂಪಾದಕರು ಸುದೀರ್ಘವಾಗಿ ಉತ್ತರಗಳನ್ನು ಬರೆದಿದ್ದು, ೮೯ ಪುಟಗಳಷ್ಟಿದೆ. ಪ್ರತಿಯೊಂದು ಲೆಕ್ಕದ ಉತ್ತರವನ್ನೂ ವಿವರವಾಗಿ ಬರೆದಿದ್ದಾರೆ. ಹೀಗೆ ಒಂದು ವಿಶೇಷ ನಮೂನೆಯ ಒಗಟುಗಳನ್ನು ಶ್ರಮವಹಿಸಿ ಸಂಗ್ರಹಿಸುವುದಲ್ಲದೆ, ಅವುಗಳಿಗೆ ಉತ್ತರಗಳನ್ನೂ ಇಷ್ಟೊಂದು ಸುದೀರ್ಘವಾಗಿ ಕೊಟ್ಟ ಕೃತಿಗಳಲ್ಲಿ ಇದೊಂದೇ ಹೀಗಿರುವುದು. ಇಂತಹ ಕೃತಿಯನ್ನು ಕೊಟ್ಟ ಸಂಪಾದಕರ ಶ್ರಮ ಸಾರ್ಥಕವಾದುದಾಗಿದೆ.

ಜೀನಹಳ್ಳಿ ಸಿದ್ಧಲಿಂಗಪ್ಪ ಅವರು ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಎದ್ದು ಕಾಣುವ ಹೆಸರು. ಅವರು **'ಗ್ರಾಮೀಣ ಜಾಣಗಣಿತ ಮತ್ತು ಭಾಷಾ ಚಮತ್ಕಾರ'** (೨೦೧೨) ಎಂಬ ಬೃಹತ್ ಕೃತಿಯನ್ನು ಪ್ರಕಟಿಸಿದ್ದಾರೆ. ವಿವರಣಾತ್ಮಕ ಒಗಟುಗಳು ಅಥವಾ ಒಡಗತೆಗಳಿಗೆ ಸಂಬಂಧಿಸಿದ ಅತ್ಯಂತ ಬೃಹತ್ ಗ್ರಂಥವಿದು. ಕನ್ನಡದಲ್ಲಿ ಈ ಬಗೆಯ ದೊಡ್ಡ ಕೆಲಸ ಮಾಡಿದವರು ಸಿದ್ಧಲಿಂಗಪ್ಪ ಅವರೊಬ್ಬರೆ. ಸೂತ್ರರೂಪದ ಒಗಟುಗಳಿಗೆ ಸಂಬಂಧಿಸಿದಂತೆಯೂ ಅವರದು ಮತ್ತೊಂದು ಇಂತಹ ಕೃತಿ **'ಬಲ್ಲಂಥ ಜಾಣ ಬಿಡಿಸ್ಹೇಳು'**(೨೦೧೨) ೧೦೫೫ ಒಗಟುಗಳ ಬೃಹತ್ ಸಂಗ್ರಹ ಬಂದಿರುವುದು ಕೂಡ ಗಮನಾರ್ಹ. ಇವೆಲ್ಲವನ್ನೂ ಅವರು ಸಂಗ್ರಹಿಸಿದ್ದು ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ.

'ಗ್ರಾಮೀಣ ಜಾಣಗಣಿತ ಮತ್ತು ಭಾಷಾ ಚಮತ್ಕಾರ' ಕೃತಿ ವಿವರಣಾತ್ಮಕ ಒಗಟುಗಳಿಗೆ (ಒಡಗತೆಗಳಿಗೆ) ಸಂಬಂಧಿಸಿದಂತೆ ಅವರು ಪ್ರಕಟಿಸಿದ ಏಳು ಸಂಗ್ರಹಗಳ ಸಮಗ್ರ ಸಂಪುಟ. ೩೮೮ ಪುಟಗಳ ಈ ಕೃತಿಯಲ್ಲಿ ೫೨೦ ಒಡಗತೆಗಳಿವೆ. ಈ ಸಂಗ್ರಹದಲ್ಲಿ ಸೇರಿದ ಕೃತಿಗಳ ವಿವರ ಹಿಗಿದೆ:

೧೯೮೧ : ಜನಪದ ಜಾಣಗಣಿತ ಮತ್ತು ಭಾಷಾ ಚಮತ್ಕಾರ(೧೬ ಸಲ ಮುದ್ರಣ)
೧೯೮೫ : ಜನಪದ ಗಣಿತ-ಚಮತ್ಕಾರ (೧೩ ಸಲ ಮುದ್ರಣ)
೧೯೮೬ : ಗ್ರಾಮೀಣ ಚಮತ್ಕಾರ ಗಣಿತ (೧೨ ಸಲ ಮುದ್ರಣ)
೧೯೮೭ : ಜನಪದ ಅಂಕಗಣಿತ-ಜಾಣ ಚಮತ್ಕಾರ (೬ನೇ ಸಲ ಮುದ್ರಣ)

೧೯೯೪ : ಜನಪದ ವಿನೋದ ಗಣಿತ (೪ನೇ ಸಲ ಮುದ್ರಣ)
೨೦೦೮ : ಜನಪ್ರಿಯ ಲೆಕ್ಕ ಚಮತ್ಕಾರ (೨ನೇ ಸಲ ಮುದ್ರಣ)
೨೦೦೮ : ಜನಪ್ರಿಯ ಜಾಣಪದ ಜಾಣ್ಮೆ (೨ನೇ ಸಲ ಮುದ್ರಣ)

ಮೊದಲಿನ ಮೂರು ಪುಸ್ತಕಗಳ ಪುನರ್ ಮುದ್ರಣ ಲೆಕ್ಕ ನಿಜವಾಗಿಯೂ ಗಾಬರಿ ಹುಟ್ಟಿಸುತ್ತದೆ. ಜನಪದ ಸಾಹಿತ್ಯವನ್ನು ಜನ ಗಮನಿಸುವುದಿಲ್ಲ ಎಂಬ ಮಾತು ಒಮ್ಮೊಮ್ಮೆ ಅನುಮಾನ ಹುಟ್ಟಿಸುತ್ತದೆ. ಆದರೆ ಕೃತಿಗಳ ಪ್ರಕಟನೆ ಮತ್ತು ಓದುವಿಕೆಯಲ್ಲಿ ಉತ್ತರ ಕರ್ನಾಟಕ ಇನ್ನೂ ಸುಧಾರಿಸಿಕೊಳ್ಳಬೇಕೆಂಬುದು ನಿಜ ಸಂಗತಿ.

ಸಿದ್ಧಲಿಂಗಪ್ಪ ಅವರ ಕೃತಿಯ ಹೆಸರಿನಲ್ಲಿಯೆ ಈ ಬಗೆಯ ವಿವರಣಾತ್ಮಕ ಒಗಟುಗಳಲ್ಲಿ (ಒಡಗತೆಗಳಲ್ಲಿ) ಎರಡು ಪ್ರಕಾರಗಳನ್ನು ಮಾಡಿಕೊಂಡಿದ್ದಾರೆ. ಒಂದು ಭಾಗವನ್ನು 'ಜಾಣಗಣಿತ' ಎಂದೂ ಇನ್ನೊಂದು ಭಾಗವನ್ನು 'ಭಾಷಾ ಚಮತ್ಕಾರ' ಎಂದೂ ಗುರುತಿಸಿದ್ದಾರೆ. 'ಭಾಷಾ ಚಮತ್ಕಾರ' ವಿವರಣಾತ್ಮಕ ಒಗಟುಗಳ (ಒಡಗತೆಗಳ) ಒಂದು ಸ್ವಭಾವ. ಈ ಕೃತಿಯಲ್ಲಿ ವಿವರಣಾತ್ಮಕ ಒಗಟುಗಳ ನಾಲ್ಕು ಪ್ರಕಾರಗಳನ್ನು ಪ್ರಾರಂಭದಲ್ಲಿಯೇ ಗುರುತಿಸಿಕೊಳ್ಳಲಾಗಿದೆ: **೧. ಗಣಿತದ ಒಗಟುಗಳು, ೨. ಲಘು ಕಥಾರೂಪದ ಒಗಟುಗಳು, ೩. ದ್ವಂದ್ವಾರ್ಥದ-(ಗೊಂದಲ ಹುಟ್ಟಿಸುವ) ಒಗಟುಗಳು, ೪. ಹಲವು ಪ್ರಶ್ನೆಗಳಿಗೆ ಒಂದೇ ಉತ್ತರದ ಒಗಟುಗಳು.** ಈ ನಾಲ್ಕರಲ್ಲಿ ಮೊದಲಿನ ಗಣಿತದ ಒಗಟುಗಳು ಒಂದು ಪ್ರಕಾರವನ್ನು ಬಿಟ್ಟು ಉಳಿದ ಮೂರೂ ಪ್ರಕಾರಗಳಲ್ಲಿ ಭಾಷೆಯ ಚಮತ್ಕಾರವೇ ಕೆಲಸ ಮಾಡುತ್ತಿರುತ್ತದೆ. ಆದರೆ ಈ ಪ್ರಕಾರಗಳನ್ನು ಗುರುತಿಸಿಕೊಳ್ಳುವುದು ಅಭ್ಯಾಸದ ದೃಷ್ಟಿಯಿಂದ ಅನುಕೂಲಕರವೆನಿಸುತ್ತದೆ. ಒಡಗತೆಗಳ ನಾಲ್ಕೂ ಪ್ರಕಾರಗಳು ಸಿದ್ಧಲಿಂಗಪ್ಪ ಅವರ ಕೃತಿಯಲ್ಲಿ ದೊರೆಯುತ್ತವೆ. ಆದರೆ ಅವರು ಮಾಡಿಕೊಂಡ ಗಣಿತದ ಪ್ರಕಾರಗಳಲ್ಲಿ ಅನೇಕವು ಭಾಷಾ ಚಮತ್ಕಾರದ ವಿಭಾಗದಲ್ಲಿ ಸೇರಬೇಕಾದವುಗಳು ಉಳಿದುಕೊಂಡಿವೆ.

೧. ಗಣಿತದ ಒಗಟುಗಳು : ಒಬ್ಬ ದಾರಿಯಲ್ಲಿ ಹೋಗುತ್ತಿದ್ದಾಗ ಒಂದು ಮುತ್ತಿನ ಸರ ಸಿಕ್ಕಿತು. ತೆಗೆದುಕೊಳ್ಳುವ ಹೊತ್ತಿಗೆ ಇನ್ನೊಬ್ಬರು ಅದನ್ನು ನೋಡಿದರು. ಇಬ್ಬರೂ ಹಂಚಿಕೊಳ್ಳಲು ಹೋದರು. ಒಂದು ಮುತ್ತು ಹೆಚ್ಚಿಗೆ ಉಳಿಯಿತು. ಈ ಪ್ರಕಾರ ಮೂರು, ನಾಲ್ಕು, ಐದು, ಆರನೆಯವರು ಹಂಚಿಕೊಂಡಾಗ ಒಂದೊಂದು ಮುತ್ತು ಉಳಿಯುತ್ತಿತ್ತು. ಏಳನೆಯವರು ಬಂದಾಗ ಸಮನಾಗಿ ಹಂಚಿಕೆಯಾದವು. ಹಾಗಾದರೆ ಆ ಸರದಲ್ಲಿ ಎಷ್ಟು ಮುತ್ತುಗಳು ಇದ್ದವು? (**ಉತ್ತರ**-೩೨೧)

೨. ಲಘು ಕಥಾರೂಪದ ಒಗಟುಗಳು: ಒಂದು ಹೊಳೆಯಲ್ಲಿ ದೋಣಿ ನಡೆಸುವವನು ದೋಣಿಯಲ್ಲಿ ಒಂದು ಹಸುವನ್ನು ಈ ಕಡೆಯಿಂದ ಆ ಕಡೆಗೆ ಸಾಗಿಸುತ್ತಿದ್ದನು. ಆ ದೋಣಿಯು ಒಬ್ಬ ಮನುಷ್ಯ ಮತ್ತು ಒಂದು ಹಸುವಿನ ತೂಕವನ್ನು ಮಾತ್ರ ತಡೆದುಕೊಳ್ಳುತ್ತಿತ್ತು. ಇದಕ್ಕಿಂತ ಹೆಚ್ಚುಭಾರ ಹಾಕಿದ್ದಾದರೆ ಆ ದೋಣಿಯೇ ನೀರಿನಲ್ಲಿ ಮುಳುಗಿ ಹೋಗುತ್ತಿತ್ತು. ಹೀಗಿರುವಾಗ ಹೊಳೆಯ ಮಧ್ಯದಲ್ಲಿ ಹಸುವು ಒಂದು ಕರುವಿಗೆ ಜನ್ಮ ನೀಡಿತು. ಅಲ್ಲದೆ ದೋಣಿಯಲ್ಲಿ ಒಬ್ಬ ಮನುಷ್ಯ, ಒಂದು ಹಸು ಹಾಗೂ

ಒಂದು ಕರು, ಒಟ್ಟು ಮೂರು ಆದಂತಾಯಿತು. ಹಾಗಾದರೆ ದೋಣಿಯ ತೂಕ ಹೆಚ್ಚಾಗಿ ಹೊಳೆಯಲ್ಲಿ ಮುಳುಗುತ್ತದೆಯೇ? (೩೫೫, **ಉತ್ತರ:** ದೋಣಿ ಮುಳುಗುವುದಿಲ್ಲ. ಏಕೆಂದರೆ ಹಸುವಿನ ಹೊಟ್ಟೆಯಲ್ಲಿದ್ದ ಕರುವು ಜನಿಸಿ ಹೊರಗೆ ಬಂದಿದೆಯಷ್ಟೆ. ತೂಕದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ).

೩. ದ್ವಂದ್ವಾರ್ಥದ-(ಗೊಂದಲ ಹುಟ್ಟಿಸುವ) ಒಗಟುಗಳು: ಬೆಂಡೆಕಾಯಿ ಬಿತ್ತಿ ಅವರೆಕಾಯಿ ಕೀಳಬೇಕು ಹೇಗೆ? (೨೬೦, **ಉತ್ತರ:** ಯಾರು ಬೀಜ ಹಾಕಿರುತ್ತಾರೋ ಅವರೇ ಕಾಯಿ ಕೀಳಬೇಕು ಎಂಬ ಅರ್ಥ)

೪. ಹಲವು ಪ್ರಶ್ನೆಗಳಿಗೆ ಒಂದೇ ಉತ್ತರದ ಒಗಟುಗಳು : ಒಬ್ಬೋನಿಗೆ ಒಂದು ತೆಂಗಿನಕಾಯಿ ಬೇಕಾಗಿರುತ್ತದೆ. ತೆಂಗಿನಕಾಯಿ ತೆಗೆದುಕೊಳ್ಳವವನು ಮೊದಲು ಒಂದು ಅಂಗಡಿಗೆ ಬರುತ್ತಾನೆ. ಅಂಗಡಿಯವನಿಗೆ ತೆಂಗಿನಕಾಯಿ ಬೆಲೆ ಎಷ್ಟು ಅಂತ ಕೇಳುತ್ತಾರೆ. ಅದೇ ಹೊತ್ತಿಗೆ ಕುದುರೆಯನ್ನು ಕಳೆದುಕೊಂಡವನು ಅಲ್ಲಿಗೆ ಬಂದು 'ಸ್ವಾಮಿ ನನ್ನದೊಂದು ಕುದುರೆ ಕಳೆದುಹೋಗಿದೆ. ಇತ್ತ ಕಡೆಗೆ ಬಂದಿದ್ದು ಏನಾದರೂ ಕಂಡಿರುವಿರಾ?' ಅಂತ ಕೇಳಿದನು. ಆಗ ಅಂಗಡಿಯವನು ಇಬ್ಬರಿಗೂ ಯೋಚಿಸಿ ಒಂದೇ ಮಾತಿನಲ್ಲಿ ಉತ್ತರ ಕೊಡುತ್ತಾನೆ. ಆ ಉತ್ತರ ಏನು? (೩೬೬, **ಉತ್ತರ:** ನಾಕಾಣೆ)

ಬಸವರಾಜ ಎಸ್. ಜಂಗಣ್ಣಿ ಅವರು ಬಾಗಲಕೋಟ ಜಿಲ್ಲೆಯ ಗ್ರಾಮಗಳಲ್ಲಿ ಸಂಗ್ರಹಿಸಿದ 'ವಿವರಣಾತ್ಮಕ ಒಗಟು'ಗಳನ್ನು **'ಮೋಜಿನ ಗಣಿತ'** (೧೯೯೬) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಕೃತಿಯ ಹೆಸರೇ ಸೂಚಿಸುವಂತೆ ಮನರಂಜನೆಗಾಗಿ ಗಣಿತ ಎನ್ನುವಲ್ಲಿ ಮನರಂಜನೆ ಮತ್ತು ಶಿಕ್ಷಣ ಎರಡನ್ನೂ ಕೊಡುವ ಪ್ರಕಾರ ಇದು. ಈ ಕೃತಿಯ ಸಂಪಾದಕರು ಒಂದು ಹಳ್ಳಿಯಲ್ಲಿರುವ ಔದ್ಯೋಗಿಕ ತರಬೇತಿ ಸಂಸ್ಥೆಯಲ್ಲಿ ಶಿಕ್ಷಕರಾಗಿದ್ದಾರೆ. ಅವರ ಸೋದರ ಮಾವಂದಿರು ಮನೆಯಲ್ಲಿಯೇ ಹೇಳುತ್ತಿದ್ದ ಈ ಗಣಿತದ ಒಗಟುಗಳನ್ನು ಕುತೂಹಲದಿಂದ ಸಂಗ್ರಹಿಸಿ ಈ ಕೃತಿಯನ್ನು ಹೊರತಂದಿದ್ದಾರೆ. 'ಪುಸ್ತಕದ ಹೆಸರೇ ಸೂಚಿಸುವಂತೆ ಮೋಜಿನಿಂದ ಕೂಡಿರುವ, ಮೆದುಳಿಗೆ ಕಸರತ್ತು ನೀಡುವ, ಕುತೂಹಲ ಕೆರಳಿಸುವ, ಮನರಂಜೆ ಒದಗಿಸುವ ಜಟಿಲವಾದ ಹಾಗೂ ಅಷ್ಟೇ ಸರಳವಾದ ಸಮಸ್ಯೆಗಳ ಸಂಗ್ರಹವೇ ಈ ಮೋಜಿನ ಗಣಿತ' ಎಂದು ಒಂದೇ ಉಸಿರಿನಲ್ಲಿಯೇ ಈ ಒಗಟುಗಳ ಸ್ವರೂಪ, ಇವುಗಳ ಪರಿಣಾಮ-ಪ್ರಯೋಜನ ಎಲ್ಲವನ್ನೂ ಹೇಳಿಮುಗಿಸಿದ್ದಾರೆ. ಇಂತಹ ಒಂದು ಮಹತ್ವದ ಕೆಲಸ ಮಾಡುತ್ತಿರುವ ಬಗ್ಗೆ ಅರಿವು ಇಲ್ಲದೆಯೇ ಸಂಪಾದಕರು ಈ ಕೆಲಸವನ್ನು ಮಾಡಿಮುಗಿಸಿದ್ದಾರೆ. ೬೦ ಪುಟಗಳ ಒಂದು ಚಿಕ್ಕ ಕೃತಿಯಿದು. ಇದರಲ್ಲಿ ಆಕರ್ಷಕವಾದ ೫೦ 'ವಿವರಣಾತ್ಮಕ ಒಗಟು'ಗಳಿವೆ. ಇವುಗಳಿಗೆ ಕೊಟ್ಟ ಉತ್ತರಗಳ ಭಾಗವನ್ನೂ ವಿವರವಾಗಿ ಕೊಡಲಾಗಿದೆ.

೧. ಗಣಿತದ ಒಗಟುಗಳು :

> ಒಂದು ಗಿಡದಲ್ಲಿ ಕಾಗೆಗಳ ಹಿಂಡು ಕುಳಿತಿತ್ತು. ಒಬ್ಬ ಪ್ರಯಾಣಿಕ ದಾರಿಹಿಡಿದು ಹೋಗುವಾಗ ಆ ಗಿಡದ ಕೆಳಗೆ ಹಾಯ್ದು ಹೋಗುವನು. ಆ ಗಿಡದ ಮೇಲೆ ಇರುವ

ಕಾಗೆಗಳನ್ನು ಕುರಿತು–'ಗಿಡದಲ್ಲಿರುವ ನಿಮ್ಮ ಸಂಖ್ಯೆ ಎಷ್ಟು?' ಎಂದು ಕೇಳಿದನು. ಆಗ ಕಾಗೆಗಳ ಗುಂಪಿನ ಹಿರಿಯ ಕಾಗೆಯು ಆ ಮನುಷ್ಯನಿಗೆ ನೇರವಾಗಿ ತಮ್ಮ ಸಂಖ್ಯೆಯನ್ನು ತಿಳಿಸದೇ ಒಗಟಿನ ರೂಪದಲ್ಲಿ 'ನಾವು, ನಮ್ಮಷ್ಟು, ನಮ್ಮಅರ್ಧ(೧/೨), ನಮ್ಮ ಗಿರ್ಧ (೧/೪) ಮತ್ತು ನಾನೊಬ್ಬ ಸೇರಿದರೆ ಒಟ್ಟು ನಮ್ಮ ಸಂಖ್ಯೆ ೧೦೦ ಆಗುತ್ತದೆ' ಎಂದು ಹೇಳಿತು. ಆಗ ಆ ಪ್ರಯಾಣಿಕ ಇದರ ಅರ್ಥ ತಿಳಿದುಕೊಂಡು ಆ ಗಿಡದಲ್ಲಿ ಒಟ್ಟು ಎಷ್ಟು ಕಾಗೆಗಳಿವೆ ಎಂಬುದನ್ನು ಅರ್ಥ ಮಾಡಿಕೊಂಡು ಮುಂದೆ ಪ್ರಯಾಣ ಬೆಳೆಸಿದನು. ಹಾಗಾದರೆ ಆ ಗಿಡದಲ್ಲಿ ಒಟ್ಟು ಎಷ್ಟು ಕಾಗೆಗಳಿದ್ದವು? ಅಂದರೆ ಕಾಗೆ ಹೇಳಿದ 'ನಾವು' ಎಂಬುದರ ಅರ್ಥವೆಷ್ಟು? (೪೬, ಉತ್ತರ: ೩೬+೩೬+೧೮+೯+೧=೧೦೦)

> ಒಂದು ಹೊಲದಲ್ಲಿ ಜೋಳ ಬೆಳೆದು ನಿಂತಿತ್ತು. ಅಲ್ಲಿಗೆ ಗುಬ್ಬಿಗಳ ಒಂದು ಹಿಂಡು ಬಂತು. ಒಂದೊಂದು ಜೋಳದ ತೆನೆಯ ಮೇಲೆ ಒಂದೊಂದು ಗುಬ್ಬಿಯು ಕುಳಿತುಕೊಂಡಾಗ ಒಂದು ಗುಬ್ಬಿಗೆ ಕುಳಿತುಕೊಳ್ಳಲು ತೆನೆ ಸಿಗಲಿಲ್ಲ. ನಂತರ ಎರಡೆರಡು ಗುಬ್ಬಿಗಳು ಒಂದು ತೆನೆಯ ಮೇಲೆ ಕುಳಿತವು. ಆಗ ಒಂದು ತೆನೆ ಹೆಚ್ಚಾಯಿತು. ಹಾಗಾದರೆ ಆ ಹೊಲದಲ್ಲಿರುವ ಒಟ್ಟು ಜೋಳದ ತೆನೆಗಳೆಷ್ಟು? ಮತ್ತು ಹೊಲಕ್ಕೆ ಬಂದ ಗುಬ್ಬಿಗಳೆಷ್ಟು? (೨೨, **ಉತ್ತರ :** ೩ ತೆನೆ, ೪ ಗುಬ್ಬಿಗಳು).

೨. ಲಘು ಕಥಾರೂಪದ ಒಗಟುಗಳು:

> ಒಬ್ಬ ವ್ಯಕ್ತಿ ಒಂದು ಹುಲಿ, ಒಂದು ಹಸು ಮತ್ತು ಒಂದು ಹೊರೆ ಹುಲ್ಲನ್ನು ತೆಗೆದುಕೊಂಡು ಪ್ರಯಾಣಿಸುತ್ತಿದ್ದಾಗ ದಾರಿಯಲ್ಲಿ ನದಿಯು ಬರುತ್ತದೆ. ಅಲ್ಲಿ ಒಂದು ದೋಣಿಯು ಇರುತ್ತದೆ. ಆದರೆ ಅದರಲ್ಲಿ ಅಂಬಿಗ ಇರಲಿಲ್ಲ. ಅವನು ದೋಣಿಯಲ್ಲಿ ಒಂದೊಂದನ್ನೇ ಸಾಗಿಸಬೇಕಾಗುತ್ತದೆ. ಒಟ್ಟಿಗೆ ಮೂರನ್ನೂ ಸಾಗಿಸಲು ಸಾಧ್ಯವಿಲ್ಲ. ಹುಲಿಯನ್ನು ಮೊದಲು ಸಾಗಿಸಲು ಹಸು ಅಲ್ಲಿದ್ದ ಹುಲ್ಲನ್ನು ತಿನ್ನುತ್ತದೆ. ಹುಲ್ಲನ್ನು ಮೊದಲು ಸಾಗಿಸಲು ಹೋದರೆ ಹುಲಿಯು ಹಸುವನ್ನು ತಿಂದುಹಾಕುತ್ತದೆ. ಹುಲಿ ಮತ್ತು ಹಸುವನ್ನು ಒಂದೇ ದಡದಲ್ಲಿ ಬಿಡುವಂತಿಲ್ಲ. ಹಾಗೆಯೇ ಹಸು ಮತ್ತು ಹುಲ್ಲನ್ನು ಒಂದೇ ದಡದಲ್ಲಿ ಬಿಡಲು ಸಾಧ್ಯವಿಲ್ಲ. ಹಾಗಾದರೆ ಆ ವ್ಯಕ್ತಿಯು ಆ ಮೂರನ್ನೂ ಸುರಕ್ಷಿತವಾಗಿ ಯಾವ ರೀತಿ ಸಾಗಿಸುತ್ತಾನೆ?

(೨೯, **ಉತ್ತರ :** ಮೊದಲು ಹಸುವನ್ನು ದೋಣಿಯಲ್ಲಿ ತೆಗೆದುಕೊಂಡು ಹೋಗಿ ಆ ಕಡೆಯ ದಂಡೆಗೆ ಬಿಟ್ಟು ವಾಪಸ್ ಬರುತ್ತಾನೆ; ಹುಲ್ಲನ್ನು ಹುಲಿಯು ತಿನ್ನುವುದಿಲ್ಲ. ನಂತರ ಹುಲ್ಲಿನ ಹೊರೆಯನ್ನು ಆ ದಡಕ್ಕೆ ಇಟ್ಟು, ಆಕಳನ್ನು ವಾಪಸ್ ತರುತ್ತಾನೆ. ಹುಲಿಯನ್ನು ಆ ದಡಕ್ಕೆ ಸಾಗಿಸುತ್ತಾನೆ. ತಿರುಗಿ ಬಂದು ಹಸುವನ್ನು ಒಯ್ಯುತ್ತಾನೆ.)

* * *

ಪ್ರಮುಖ ಕನ್ನಡ ಒಗಟುಗಳ ಸಂಗ್ರಹಗಳು

೧. ಸೂತ್ರರೂಪದ ಒಗಟುಗಳ ಸಂಗ್ರಹಗಳು :

೧೯೬೭ : ಕನ್ನಡ ಒಗಟುಗಳು, (ಸಂ) ಜೀ. ಶಂ. ಪರಮಶಿವಯ್ಯ, –ಸಾಹಿತ್ಯ ಸದನ, ಸರಸ್ವತಿಪುರಂ, ಮೈಸೂರು.

೧೯೭೦ : ಜನಪದ ಬೆಡಗಿನ ವಚನಗಳು, (ಸಂ) ಸುಧಾಕರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೦ : ನಮ್ಮ ಒಗಟುಗಳು, (ಸಂ) ರಾಗೌ, –ಉಷಾಸಾಹಿತ್ಯ ಮಾಲೆ, ಮೈಸೂರು.

೧೯೭೩ : ಒಗಟುಗಳು, (ಸಂ) ಲಕ್ಕಪ್ಪಗೌಡ ಎಚ್.ಜೆ.,–ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೪ : ಉತ್ತರ ಕರ್ನಾಟಕದ ಒಗಟುಗಳು, (ಸಂ) ಡಾ. ಎಂ.ಎಸ್.ಲಠ್ಠೆ, – ರವೀಂದ್ರ ಪ್ರಕಾಶನ, ಗುಲಬರ್ಗಾ. (೨ನೇ ಮು. ೧೯೭೭)

೧೯೭೬ : ಕನ್ನಡ ಸಾವಿರದ ಒಗಟುಗಳು, (ಸಂ) ಡಾ. ಸೋಮಶೇಖರ ಇಮ್ರಾಪೂರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೯ : ಆಯ್ದ ಜನಪದ ಲೆಕ್ಕಗಳು, (ಸಂ) ಪಿ.ಕೆ.ರಾಜಶೇಖರ, ಎಸ್.ಗೋಪಾಲಕೃಷ್ಣ, –ಹೊನ್ನಾರು ಪ್ರಕಾಶನ, ಮೈಸೂರು.

೧೯೮೨ : ಜಾಣೆ ಕನ್ನಡವ ತಿಳಿದ್ಹೇಳೆ, (ಸಂ) ಶಾಂತಿ ನಾಯಕ, –ಜಾನಪದ ಪ್ರಕಾಶನ, ಹೊನ್ನಾವರ.

೧೯೮೫ : ಆಯ್ದ ಗಾದೆಗಳು ಹಾಗೂ ಒಗಟುಗಳು, (ಸಂ) ಡಾ. ವೀರಣ್ಣ ದಂಡೆ, –ಮೂಡಲ ಪ್ರಕಾಶನ, ಕಲಬುರ್ಗಿ.

೧೯೮೬ : ಜನಪದ ಒಗಟುಗಳು, (ಸಂ) ಡಾ. ಎಂ.ಎನ್.ವಾಲಿ, –ಭುವನೇಶ್ವರಿ ಪ್ರಕಾಶನ, ಬಿಜಾಪೂರ.

೧೯೯೨ : ಜಂಬುನೇರ್ಲಣ್ಣು ಜಗ್ಗಿಬಿದ್ದಾವೆ, (ಸಂ) ಮೈಲಹಳ್ಳಿ ರೇವಣ್ಣ, – ಎನ್.ಆರ್.ಎ.ಎಮ್.ಎಚ್. ಪ್ರಕಾಶನ, ಕೋಟೇಶ್ವರ, ದ.ಕ.

೧೯೯೩ : ಒಗಟುಗಳು ಮತ್ತು ಕಥೆಗಳು, (ಸಂ) ಎಲ್.ಆರ್. ಹೆಗಡೆ, –ಜ್ಞಾನಸಾಧನ ಗ್ರಂಥಮಾಲೆ, ಸಿದ್ಧಾಪುರ(ಉ.ಕ.)

೨೦೦೭ : ನಮ್ಮ ಸುತ್ತಿನ ಒಗಟುಗಳು, (ಸಂ) ಡಾ. ಟಿ.ಎಂ.ಭಾಸ್ಕರ್, –ಮುರುಗ ಪ್ರಕಾಶನ, ಪಂಚಶೀಲ, ಪ್ರಬುದ್ಧನಗರ, ಗು.ವಿ.ವಿ.ಹಿಂದೆ, ಗುಲಬರ್ಗಾ–೬

೨೦೦೯ : ಧರಿನಾಡಿನ ಜಾನಪದ ಒಗಟುಗಳು, (ಸಂ) ದೇಶಾಂಶ ಹುಡಗಿ, –ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಮುಖ್ಯ ಬೀದಿ, ಕಲಬುರಗಿ.

೨೦೧೨ : ಬಲ್ಲಂಥ ಜಾಣ ಬಿಡಿಸ್ಥೇಳು, (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ, –ಶ್ರುತಿ ಪ್ರಕಾಶನ, ಜೀನಹಳ್ಳಿ, ತಾ. ಹೊನ್ನಾಳಿ, ಜಿ. ದಾವಣಗೆರೆ.

೨. ವಿರಣಾತ್ಮಕ ಒಗಟುಗಳ ಸಂಗ್ರಹಗಳು :

೧೯೭೫ : ಜನಪದ ಚಮತ್ಕಾರ ಗಣಿತ, (ಸಂ) ಪಿ.ಕೆ.ರಾಜಶೇಖರ, ಸಣ್ಣನಂಜೇಗೌಡ, ಡಿ.ದೊಡ್ಡಲಿಂಗೇಗೌಡ, –ಸಂಯುಕ್ತ ಪ್ರಕಾಶನ, ಮೈಸೂರು.

೧೯೭೯ : ಆಯ್ದ ಜನಪದ ಲೆಕ್ಕಗಳು, (ಸಂ) ಡಾ. ಪಿ.ಕೆ. ರಾಜಶೇಖರ, ಹೊನ್ನಾರು ಪ್ರಕಾಶನ, ಮೈಸೂರು.

೧೯೮೧ : ಜಾನಪದ ಜಾಣ್ಮೆ, (ಸಂ) ಬಿ.ವಿ.ಬಿರಾದಾರ, ಡಾ. ವೀರಣ್ಣ ರಾಜೂರ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೮೭ : ಜನಪದ ಅಂಕಗಣಿತ–ಜಾಣಚಮತ್ಕಾರ, (ಸಂ) ಜೀನಹಳ್ಳ ಸಿದ್ಧಲಿಂಗಪ್ಪ, ಪ್ರೇಮ ಪ್ರಕಾಶನ, ಶಿವಮೊಗ್ಗ.

೧೯೯೬ : ಮೋಜಿನ ಗಣಿತ, (ಸಂ) ಬಸವರಾಜ ಎಸ್. ಜಂಗಣ್ಣಿ, – ಬಸವರಾಜ ಎಸ್. ಜಂಗಣ್ಣಿ, ಹೈ.ಕ.ಶಿ.ಸಂ. ಔದ್ಯೋಗಿಕ ತರಬೇತಿ ಸಂಸ್ಥೆ, ಕಮಲಾಪೂರ.

೨೦೧೨ : ಗ್ರಾಮೀಣ ಜಾಣಗಣಿತ ಮತ್ತು ಭಾಷಾ ಚಮತ್ಕಾರ, (ಸಂ) ಜೀನಹಳ್ಳಿ ಸಿದ್ಧಲಿಂಗಪ್ಪ, –ಶ್ರುತಿ ಪ್ರಕಾಸನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ತಾ. ಹೊನ್ನಾಳಿ, ಜಿ. ದಾವಣಗೆರೆ.

ಸಹಾಯಕ ಗ್ರಂಥಗಳು :

೧೯೩೫, ೧೯೬೧, ೧೯೮೮ : ದೇವುಡು ನರಸಿಂಹ ಶಾಸ್ತ್ರಿ, –ಶಾರದಾ ಪ್ರಕಾಶನ, ಗಾಂಧೀನಗರ ಬೆಂಗಳೂರು,

೧೯೫೫, ೨೦೧೩ : ಗರತಿಯರ ಮನೆಯಿಂದ, (ಸಂ) ಈಶ್ವರಚಂದ್ರ ಚಿಂತಾಮಣಿ, –ಪಾರ್ವತೀಶ ಪ್ರಕಾಶನ, ದರ್ಗಾರೋಡ, ಬಿಜಾಪೂರ.

೧೯೬೯ ಜಾನಪದ ಪ್ರತಿಭೆ, ಸಿಪಿಕೆ, –ತುಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು–೪.

೧೯೭೯ : ಕನ್ನಡ ಒಗಟುಗಳ ಸಮೀಕ್ಷೆ, ಡಾ. ನಂ. ತಪಸ್ವೀಕುಮಾರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

***

೪. ಜನಪದ ಒಡಪುಗಳು

ಜನಪದ ಸಾಹಿತ್ಯದ ವಿಶೇಷ ಪ್ರಕಾರ ಈ ಒಡಪುಗಳು. ಇವು ಶುದ್ಧವಾಗಿ ಸ್ಥಳೀಯ ಸಂಸ್ಕೃತಿಯನ್ನು ಹೊತ್ತ ಸಾಹಿತ್ಯಪ್ರಕಾರವಾಗಿವೆ. ಸರಸ–ಶೃಂಗಾರ ಭಾವ ಇಲ್ಲಿಯ ಮುಖ್ಯ ಸಂಗತಿಯಾಗುತ್ತದೆ. ಏಕೆಂದರೆ ದಂಪತಿಗಳು ಪರಸ್ಪರ ಹೆಸರುಗೊಂಡು ಕರೆಯದ ಸಂಪ್ರದಾಯವುಳ್ಳ ಭಾರತ/ಕರ್ನಾಟಕದಲ್ಲಿ, ಹೆಂಡತಿಯಿಂದ ಗಂಡನ ಹೆಸರನ್ನು ಹೇಳಿಸುವುದು, ಗಂಡನಿಂದ ಹೆಂಡತಿಯ ಹೆಸರನ್ನು ಹೇಳಿಸುವುದು, ಒಂದು ರೀತಿಯಿಂದ ಸರಸದ ಸಂತೋಷದ ಸಂಗತಿಯೇ ಆಗುತ್ತದೆ. ಇದು ಪರಸ್ಪರರಲ್ಲಿ ಸಲುಗೆ ಬೆಳೆಸುವ, ಹತ್ತಿರ ಬರಿಸುವ, ಪರಸ್ಪರ ಪ್ರೀತಿಯನ್ನು ಬೆಳೆಸುವ–ಬೆರೆಸುವ ಕ್ರಿಯೆಯನ್ನು ಈ ಒಡಪುಗಳು ಮಾಡುತ್ತವೆ. ಒಡಪುಗಳು ಬಳಕೆಯಾಗುವ ಸಂದರ್ಭ ಸೃಷ್ಟಿಯಾಗುವುದೇ ನಾಲ್ಕು ಜನ ಸೇರಿ, ಸರಸ ಭಾವದ ಸಂದರ್ಭವನ್ನು ಸೃಷ್ಟಿಮಾಡಿದಾಗ. ಮಂಗಳ ಕಾರ್ಯಕ್ರಮಗಳಲ್ಲಿ ಪರಸ್ಪರ ಹೆಸರು ಹೇಳುವ ಪದ್ಧತಿ ಇದ್ದರೂ ಹೆಸರು ಕೇಳುವ ಉಲ್ಲಾಸದ ಸಂದರ್ಭವೊಂದು ಮತ್ತೆ ಅಲ್ಲಿ ಸೃಷ್ಟಿಯಾಗಬೇಕು. ಇದನ್ನು ಸೃಷ್ಟಿಸುವವರು ಅಲ್ಲಿ ನೆರೆದ ವಾರಿಗೆಯವರು, ಮತ್ತೆ ರಸಿಕ ಮನಸ್ಸಿನವರು. ಆ ಸಂದರ್ಭದಲ್ಲಿ ಪ್ರಮುಖವಾದ ಸತಿ–ಪತಿಗಳನ್ನು ಪರಸ್ಪರ ಹೆಸರು ಹೇಳುವಂತೆ ಛೇಡಿಸುತ್ತಾರೆ. ಸರಸ–ಶೃಂಗಾರದ ವಾತಾವರಣವನ್ನು ನಿರ್ಮಿಸುತ್ತಾರೆ. ಆಗ ಒಡಪುಗಳು ಪ್ರಯೋಗವಾಗುತ್ತವೆ. ಸತಿ–ಪತಿಗಳು ಪರಸ್ಪರ ಹೆಸರು ಹೇಳುತ್ತಾರೆ.

ದಂಪತಿಗಳು ತಮ್ಮ ತಮ್ಮ ಒಡನಾಡಿಯ– ಗಂಡನಾದರೆ ಹೆಂಡತಿಯ, ಹೆಂಡತಿಯಾದರೆ ಗಂಡನ ಹೆಸರು ಹೇಳುವಲ್ಲಿ ಬಳಸುವ ಸುಂದರವಾದ 'ನುಡಿ'ಗಳನ್ನು ಒಡಪುಗಳು ಎಂದು ಕರೆಯಲಾಗುತ್ತದೆ. ಒಡಪು ಮತ್ತು ಒಗಟುಗಳು ಉಚ್ಚಾರಣೆಗೆ ಸಮೀಪದ ಸಂಬಂಧ ಹೊಂದಿರುವುದರಿಂದ ಒಡಪುಗಳಿಗೆ ಒಗಟುಗಳು ಎಂದು ಹೇಳುವ ರೂಢಿಯೂ ಜನಸಮುದಾಯದಲ್ಲಿ ಕಾಣುತ್ತದೆ. ಆದರೆ ಒಡಪುಗಳು ಹೀಗೆ ಗಂಡ–ಹೆಂಡತಿಯರ ನಡುವೆ ಹೆಸರು ಹೇಳಲು ಬಳಕೆಯಾಗುವ ವಿಶೇಷ ಪ್ರಕಾರವೆಂದು, ಒಗಟು ಎಂದರೆ ಎದುರಿನವರಿಗೆ ಪ್ರಶ್ನೆಯನ್ನೊಡ್ಡಿ, ಅವರಿಂದ ಉತ್ತರವನ್ನು ಬಯಸುವ, ಇಂಗ್ಲೀಷಿನಲ್ಲಿ ರಿಡಲ್‌ಗಳೆಂದು ಕರೆಯುವ ಪ್ರಕಾರವೆಂದು ೧೯೭೦ರ ನಂತರ ವಿಶೇಷವಾಗಿ ಬಳಸಲು ತೊಡಗಿದಂತೆ ತೋರುತ್ತದೆ.

ಒಡಪುಗಳು, ಒಗಟುಗಳು ರಚನೆಯಲ್ಲಿ ವಿಶೇಷಾಗಿ ಕಾಣುತ್ತವೆ. ಇವು ಕೇವಲ ಶುಷ್ಕ ಗದ್ಯಮಾದರಿಗಳಾಗಿ ಕಾಣದೆ, ತಮ್ಮಲ್ಲಿ ಕಾವ್ಯಾತ್ಮಕ ಶಕ್ತಿಯನ್ನು ಹೊಂದಿದ ಸಾಹಿತ್ಯಿಕ ಪ್ರಕಾರಗಳಾಗಿ ತೋರುತ್ತವೆ. ಹೀಗಾಗಿ ಒಡಪು, ಒಗಟು ಇವುಗಳ ಜೊತೆಗೆ ಗಾದೆ, ವಡಬು, ಮಕ್ಕಳ ಹಾಡುಗಳು, ಆಣೀಪೀಣಿ ಹಾಡುಗಳು ಮತ್ತು ಸೂತ್ರರೂಪದ ಜನಪದ ಕಥೆಗಳಲ್ಲಿ ಬಳಕೆಯಾಗುವ ಹಾಡಿನ ತುಣುಕು– ಇವೆಲ್ಲವೂ ಕೇವಲ ಗದ್ಯದ ಮಾದರಿಗಳಲ್ಲ. ಬದಲಾಗಿ ಪದ್ಯದ ಕಸುವು, ಆಕಾರ ಹೊಂದಿದ ವಿಶೇಷ ಪ್ರಕಾರಗಳಾಗಿ ಕಾಣುತ್ತವೆ. ರೂಪದಲ್ಲಿ, ರಚನೆಯಲ್ಲಿ, ಭಾಷೆಯಲ್ಲಿ, ಕಾವ್ಯದ ಶಕ್ತಿಯಲ್ಲಿ ವಚನ ಸಾಹಿತ್ಯವನ್ನು ಹೋಲುವ ಈ ಎಲ್ಲಾ ಪ್ರಕಾರಗಳನ್ನು ಒಟ್ಟಿಗೆ **'ಪದ್ಯಗಂಧೀ ಗದ್ಯ'** ಮಾದರಿಗಳು ಎನ್ನಲು ಅಡ್ಡಿಯಿಲ್ಲವೆಂದು ತೋರುತ್ತದೆ.

ಜನಪದ ಸಾಹಿತ್ಯದಲ್ಲಿ 'ಒಡಪು' ಒಂದು ವಿಶೇಷ ಸಾಹಿತ್ಯ ಪ್ರಕಾರ. ಅದು ಯಾವುದೇ ಬಗೆಯ ಶುಭಕಾರ್ಯದ ಸಂದರ್ಭದಲ್ಲಿ ಬಳಕೆಯಾಗುವಂತಹದು. ಮದುವೆ, ಶೋಬಾನ, ಕುಪ್ಪಸ, ಜೋಗುಳ ಹೀಗೆ ವಿಶೇಷವಾಗಿ ಹೆಣ್ಣುಮಕ್ಕಳು ಸಂಭ್ರಮದಿಂದ ಭಾಗವಹಿಸುವ ಸಾಂಸ್ಕೃತಿಕ ಸಂದರ್ಭಗಳಲ್ಲಿ, ವಿಶೇಷವಾಗಿ ಆಯಾ ಸಂದರ್ಭದ ಕೇಂದ್ರಸಂಗತಿ ನಿರ್ವಹಿಸಿಯಾದ ನಂತರ, ಆ ಸಂದರ್ಭದ ಪ್ರಮುಖ ಮಹಿಳೆ ಗಂಡನ ಹೆಸರು ಹೇಳಬೇಕೆಂದು ಜನ ಬಯಸುತ್ತಾರೆ. ಅದು ಕೇವಲ ಹೆಣ್ಣುಮಕ್ಕಳ ಗುಂಪಾಗಿರಬಹುದು, ಅಥವಾ ಕೆಲವು ಸಲ ಗಂಡುಮಕ್ಕಳು ಇರುವ ಗುಂಪಾಗಿರಲೂ ಬಹುದು. ಹೆಂಡತಿ ಒಬ್ಬಳೇ ಇದ್ದರೂ ಸರಿ, ಗಂಡನ ಜೊತೆಗೆ ಇದ್ದರೂ ಸರಿ, ಅವರನ್ನು ಜೊತೆಯವರು ಪ್ರೀತಿಯಿಂದ ಪೀಡಿಸಿ ಗಂಡನ ಹೆಸರನ್ನು ಹೆಂಡತಿಯಿಂದ, ಹೆಂಡತಿಯ ಹೆಸರನ್ನು ಗಂಡನಿಂದ ಹೇಳಿಸಿಕೊಳ್ಳುತ್ತಾರೆ.

ಜನಪದ ಸಾಹಿತ್ಯ ರೂಪಗಳಲ್ಲಿ ವರ್ಣನೆ ಇಲ್ಲವೆನ್ನುವಷ್ಟು ಕಡಿಮೆ. ಆದರೆ ಒಡಪಿನ ಮುಖ್ಯ ಗುಣವೇ ವರ್ಣಿಸುವುದು. ಈ ಒಡಪುಗಳು ವಿಶೇಷಣಗಳಿದ್ದಂತೆ. ಯಾವುದೋ ಗುಣವನ್ನು, ಅಪರೂಪಕ್ಕೆ ಗುಣದೋಷವನ್ನು ವರ್ಣಿಸಿ, ಕೊನೆಯಲ್ಲಿ ಹೆಸರು ಹೇಳಲಾಗುತ್ತದೆ. ಈ ಬಗೆಯ ಪದ್ಧತಿಗಳು ನಮ್ಮಲ್ಲಿ ಮೊದಲಿನಿಂದಲೂ ಇವೆ. ಜಯಕಾರ ಹಾಕುವುದು ನಮ್ಮಲ್ಲಿ ಪೂರ್ವದಿಂದಲೂ ಇರುವ ಒಂದು ಪದ್ಧತಿ. ರಾಜಮಹಾರಾಜರ ಪರಾಕು ಹಾಕುವ ಪದ್ಧತಿಯೂ ನಮ್ಮಲ್ಲಿದೆ. ಜಯಕಾರ, ಪರಾಕುಗಳು ಈ ಬಗೆಯ ಉದ್ದೇಶದಿಂದಲೇ ಬಳಕೆಗೆ ಬಂದಂಥವುಗಳು. ಅವು ಒಂದು ರೀತಿಯಿಂದ ತಾವು ಮೆರವಣಿಗೆ ಹೊರಡಿಸಿದ ವ್ಯಕ್ತಿಯ ಗುಣಗಾನ ಮಾಡುವ ರೀತಿಯಲ್ಲಿರುತ್ತವೆ. ಹೀಗೆ ಪರಸ್ಪರ ಗುಣಗಾನ ಮಾಡಿ, ಅಂತಹ ಗುಣವುಳ್ಳವರು ಇವರು ಎಂದು ಹೆಸರು ಹೇಳುವಲ್ಲಿ ಗಂಡ–ಹೆಂಡತಿ ನಡುವೆ ಬಳಕೆಯಾಗುವ ಪ್ರಕಾರ 'ಒಡಪು' ಆಗಿದೆ.

ಜನಪದದಲ್ಲಿ ಯಾವುದೇ ಪ್ರಕಾರದ ಒಂದು ಸಾಹಿತ್ಯ ಹುಟ್ಟಲು ಮತ್ತು ಬಳಕೆಯಾಗಲು ಒಂದು ಸಂದರ್ಭವಂತೂ ಬೇಕೇ ಬೇಕು. ಒಂದು ಸಂದರ್ಭದಲ್ಲಿ

ಹುಟ್ಟಿದ ಒಂದು ಸಾಹಿತ್ಯಪ್ರಕಾರ ಅದು ಆ ಸಂದರ್ಭದಲ್ಲಿ ಅಷ್ಟೆ ಅಲ್ಲದೆ, ಆ ಸಂದರ್ಭದ ಸುತ್ತಮುತ್ತಲೂ ನಡೆಯುವ ಇತರ ಸಂದರ್ಭಗಳಲ್ಲೂ ಅದು ಬಳಕೆಯಾಗುತ್ತದೆ. ಉದಾಹರಣೆಗೆ ತ್ರಿಪದಿಗಳು ಹುಟ್ಟುವುದು ಎರಡು ಸಂದರ್ಭಗಳಲ್ಲಿ. ಹೆಣ್ಣುಮಕ್ಕಳ ಸಂದರ್ಭವಾದರೆ ಬೀಸುವ /ಕುಟ್ಟುವ(ಭತ್ತ) ಸಂದರ್ಭ, ಗಂಡುಮಕ್ಕಳ ಸಂದರ್ಭವಾದರೆ ಹಂತಿಯ ಸಂದರ್ಭ. ಈ ಬೀಸುವ/ಕುಟ್ಟುವ(ಭತ್ತ) ಸಂದರ್ಭಗಳಲ್ಲಿ ಹುಟ್ಟುವ ತ್ರಿಪದಿಗಳು ನಂತರ ಮೂಲ ಸಂದರ್ಭಕ್ಕೆ ಸಂಬಂಧಿಸಿದ, ಆ ಸಂದರ್ಭಕ್ಕೆ ಹೋಲುವಂತಹ ಇತರ ಸಂದರ್ಭಗಳಲ್ಲೂ ಬಳಕೆಯಾಗುತ್ತವೆ. ಹಂತಿಯ ಸಂದರ್ಭದಲ್ಲಿ ಹುಟ್ಟುವ ತ್ರಿಪದಿಗಳು ಗಳೆ ಗಾಡಿ ಹೊಡೆಯುವಾಗ, ಎತ್ತುಗಳನ್ನು ಮೆರವಣಿಗೆಯಲ್ಲಿ ಒಯ್ಯುವಾಗ ಬಳಕೆಯಾಗುವುದನ್ನು ಕಾಣುತ್ತೇವೆ.

ಒಡಪುಗಳು ಹುಟ್ಟುವ ಮತ್ತು ಬಳಕೆಯಾಗುವ ಮೂಲ ಸಂದರ್ಭವೆಂದರೆ, ಮದುವೆಯ ಸಂದರ್ಭ. ಗಂಡು–ಹೆಣ್ಣು ಗಂಡಹೆಂಡರಾದ ಕೂಡಲೇ ನಡೆಯುವ ಸಂದರ್ಭವೆಂದರೆ, ಅವರ ನಡುವೆ ಸಲುಗೆ ಉಂಟುಮಾಡುವ ಸರಸ ಸಂದರ್ಭ. ಗಂಡು ಹೆಣ್ಣಿಗೆ ತಾಳಿ ಕಟ್ಟಿ, ಅಕ್ಷತ ಬೀಳುವ ಸಂದರ್ಭ ಮದುವೆಯ ಕೇಂದ್ರ ಬಿಂದು. ಈ ಸಂದರ್ಭದ ಕ್ರಿಯೆಗಾಗಿಯೇ ಅನಂತ ಕ್ರಿಯೆಗಳು–ಸಂದರ್ಭಗಳು ನಿರ್ಮಾಣವಾಗುತ್ತವೆ, ಮತ್ತು ಮದುವೆಯ ಸಂದರ್ಭದ ಸಂಭ್ರಮವನ್ನು ಹೆಚ್ಚಿಸುತ್ತವೆ. ತಾಳಿ ಕಟ್ಟಿ, ಅಕ್ಷತೆ ಬಿದ್ದ ನಂತರ, ಹಂದರದಲ್ಲಿಯೇ ನವವಿವಾಹಿತರಲ್ಲಿ ಪರಸ್ಪರ ಸಲುಗೆ ಬೆಳೆಸುವ ಸಂದರ್ಭವೊಂದು ಸೃಷ್ಟಿಯಾಗುತ್ತದೆ. ಇಲ್ಲಿ ಮುಖ್ಯವಾಗಿ ಪರಸ್ಪರ ಹಸ್ತಸ್ಪರ್ಷ ಮಾಡುವ ಸರಸದಾಟಗಳು, ಪರಸ್ಪರ ಪ್ರೀತಿ–ಸಲುಗೆ ಬೆಳೆಸುವ ಸರಸದ ಮಾತುಗಳು ಬಳಕೆಯಾಗುತ್ತವೆ. ಇಲ್ಲಿ ಹುಟ್ಟುವ ಸರಸದ ಮಾತೇ 'ಒಡಪು'.

ಅಲ್ಲಿ ಹೆಂಡತಿಯಿಂದ ಗಂಡನ, ಗಂಡನಿಂದ ಹೆಂಡತಿಯ ಹೆಸರನ್ನು ಅವರವರ ಮುಂದೆಯೇ ಬಾಯಿಬಿಚ್ಚಿ ಹೆಸರನ್ನು ಉಚ್ಚರಿಸುವ ವಿಶೇಷ ಸಂದರ್ಭವದು. ಪರಸ್ಪರ ಒಲವು ವೃದ್ಧಿಸುವ, ಪ್ರೀತಿ ಉಕ್ಕಿಸುವ, ವಿಶ್ವಾಸ ಹೆಚ್ಚಿಸುವ ಕೆಲಸವನ್ನು ಒಡಪು ಮಾಡುತ್ತದೆ. ಹೊಸದಾಗಿ ಅದೇ ಆಗ ಗಂಡಹೆಂಡಿರಾದ ಆ ಎರಡು ಜೀವಗಳ ಹೃದಯವನ್ನು ಬೆಸೆಯುವ ಕ್ರಿಯೆ ನಡೆಯುವ ಭಾಷೆಯ ಪ್ರಕಾರವೇ ಒಡಪು. ಬರೀ ಹೆಸರಿನ ಉಚ್ಚಾರಣೆಗಿಂತ, ಹೆಸರಿನ ಹಿಂದೆ ಹೆಣೆಯುವ ವಿಶೇಷಣಗಳ ಸುಂದರವಾದ ಮಾತಿನ ಮಾಲೆ, ಹೆಚ್ಚು ಪರಿಣಾಮಕಾರಿಯಾಗಿರುತ್ತದೆ, ಶುಭವಾಗಿರುತ್ತದೆ. ಈ ಕಾರಣಕ್ಕಾಗಿಯೇ ಒಡಪುಗಳ ಸೃಷ್ಟಿಯಾಗುತ್ತದೆ ಮತ್ತು ಬಳಕೆಯಾಗುತ್ತದೆ. ಪರಸ್ಪರ ಒಡಪ ಹಚ್ಚಿ ಹೆಸರ್ಹೇಳುವ ಸರಸ ಸನ್ನಿವೇಷ ಒಂದಿಷ್ಟು ಕಾಲ ನಡೆಯುತ್ತದೆ. ಇಲ್ಲಿ ಹುಟ್ಟಿ, ಇಲ್ಲಿಯೇ ಬಳಕೆಯಾಗುವ ಒಡಪುಗಳು ಗಂಡ–ಹೆಂಡತಿಯರು ಭಾಗಿಯಾಗುವ ಇತರ ಹಲವಾರು ಸಂದರ್ಭಗಳಲ್ಲಿ ಹೀಗೆ ತಮ್ಮ ತಮ್ಮ ಗಂಡ–ಹೆಂಡತಿಯ ಹೆಸರು ಹೇಳಿಸುವಲ್ಲಿ ಬಳಕೆಯಾಗುತ್ತವೆ.

ಶೃಂಗಾರದ ಎಳೆಯೊಂದಕ್ಕೆ ಪೋಣಿಸಿದ ಸುಂದರವಾದ ಮುತ್ತುಗಳಂತೆ ಈ ಒಡಪು ಎನ್ನುವ ಮಾತು ಕಾಣಿಸುತ್ತದೆ. 'ಒಡಪುಗಳನ್ನು ಓದುವಾಗ ಗರತಿಯ

ಹಾಡುಗಳಲ್ಲಿ ಮಿಡಿಯುವ ದಾಂಪತ್ಯ ಪ್ರೇಮವೇ ಇಲ್ಲಿಯೂ ಮಿಡಿಯುವುದನ್ನು ಕಾಣಬಹುದಾಗಿದೆ' (ಉ.ಕ.ಒ.ಮುನ್ನುಡಿ ಪು. ೭) ಎನ್ನುವ ಡಾ. ಬಿ.ಬಿ.ಹೆಂಡಿ ಅವರ ಮಾತನ್ನು ಲಕ್ಷಿಸಬೇಕು. ಒಡಪುಗಳಲ್ಲಿ ಮಿಡಿಯುವುದು 'ದಾಂಪತ್ಯ ಪ್ರೇಮ' ಎನ್ನುವುದು ಮುಖ್ಯ ಸಂಗತಿ. ಈ ದಾಂಪತ್ಯ ಪ್ರೇಮದ ಉಗಮ ಪ್ರಾರಂಭವಾಗುವುದು. ಹಂದರದಲ್ಲಿ, ಹೊಸದಾಗಿ ಗಂಡಹೆಂಡಿರಾದ ಎರಡು ಜೀವಗಳ ನಡುವೆ. ಆ ಮೇಲೆ ಅದು ಈ ದಾಂಪತ್ಯ ಪ್ರೇಮವನ್ನು ಮುಂದುವರೆಸುವ ನಿರಂತರ ಕೆಲಸವನ್ನು ಮಾಡುತ್ತದೆ.

ಹೆಚ್ಚು ವರ್ಣನೆಯ ಸಾಮರ್ಥ್ಯ ಕಾಣಿಸುವುದು ಹೆಣ್ಣಿನಲ್ಲಿಯೇ. ಗಂಡಿನಲ್ಲಿ ಈ ಸಾಮರ್ಥ್ಯ ಮೊಟಕಾಗಿ ಕಾಣುತ್ತದೆ. "ಸ್ತ್ರೀಯು ತನ್ನ ಪತಿಯ ರೂಪ, ರುಚಿ, ಹಾವ–ಭಾವ–ವಿಲಾಸ–ವಿಭ್ರಮಗಳನ್ನೆಲ್ಲ ಮನಮುಟ್ಟಿ ನೋಡಿದ್ದಾಳೆ, ಎದೆ ತುಂಬಿ ಮೆಚ್ಚಿ ಬಣ್ಣಿಸಿದ್ದಾಳೆ– ತನ್ನ ಒಡಪುಗಳಲ್ಲಿ. ಪುರುಷನಿಗೆ ಈ ಹೃದಯವಂತಿಕೆಯಿಲ್ಲವೆಂದಲ್ಲ, ಆದರೆ ತನ್ನ ಸತಿಯ ವಿಷಯಕವಾದ ಕೋಮಲ ಭಾವನೆಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಲು ಆತನಿಗೆ ಸಂಕೋಚ, ಆತನ ಸ್ವಾಭಿಮಾನ ತಡೆಗಟ್ಟುತ್ತಿದೆ" (ಉ.ಕ.ಒ.ಮುನ್ನುಡಿ ಪು.೭) ಎನ್ನುವ ಡಾ. ಬಿ.ಬಿ.ಹೆಂಡಿ ಅವರ ಮಾತು ಒಡಪುಗಳ ಒಟ್ಟು ಗುಣವನ್ನು ಹೇಳುತ್ತದೆ. ಹೀಗಾಗಿಯೇ ಹೆಣ್ಣುಮಕ್ಕಳು ಹೇಳುವ ಒಡಪುಗಳು ಸಮೃದ್ಧವಾಗಿ, ಗಂಡುಮಕ್ಕಳು ಹೇಳುವ ಒಡಪುಗಳು ಕ್ವಚಿತ್ತಾಗಿ ದೊರೆಯುವುದನ್ನು ಕಾಣುತ್ತೇವೆ.

ಗಂಡಸರ ಒಡಪುಗಳು ಒರಟು ವಿಡಂಬನೆಗಳಂತೆ ತೋರಿದರೂ ಅವು ತನ್ನ ಹೆಂಡತಿಯನ್ನು ಅವಮಾನಗೊಳಿಸುವ ಉದ್ದೇಶ ಹೊಂದಿರುವುದಿಲ್ಲ ಎಂಬುದನ್ನು ಮೊದಲು ಗ್ರಹಿಸಬೇಕಾದ ಸಂಗತಿ. ಏಕೆಂದರೆ ಒಡಪುಗಳು ಬಳಕೆಯಾಗುವ ಸಂದರ್ಭ ಅದು ಸರಸದ ಸಲುಗೆಯ ಭಾವನೆ ವ್ಯಕ್ತವಾಗುವ ಸಂದರ್ಭ. ಅಲ್ಲಿ 'ಮಧುರ ಶೃಂಗಾರ ಭಾವ' ಒಡೆದು ಕಾಣುತ್ತಿರುತ್ತದೆ. ಸುತ್ತಲು ನೆರದವರು ಸುಮಂಗಲೆಯರು. ಆ ಸುಂದರಿಯರ ನಡುವೆ ತನ್ನ ಹೆಂಡತಿಯನ್ನು ಭಿನ್ನವಾದ ಒಲುಮೆಯಿಂದ ಕಾಣುವ ಗಂಡಿನ ಭಾವನೆ ವ್ಯಕ್ತವಾಗುವ ಪರಿ ಅದು. ಅದನ್ನು ವಾಚ್ಯವಾಗಿ ಗ್ರಹಿಸಿದರೆ ಅಪಾರ್ಥ ಹೊರಡುವುದು ಸಹಜ. ಒಂದಿಷ್ಟು ಸೂಚ್ಯವಾಗಿ ಗಮನಿಸುವುದು ಅವಶ್ಯವೆನಿಸುತ್ತದೆ.

ಒಡಪುಗಳನ್ನು ಹೇಳುವ ಸಂದರ್ಭಗಳು ಅವಮಾನ, ತೇಜೋವಧೆ ಮಾಡುವ ಪ್ರಸಂಗಗಳಾಗಿರುವುದಿಲ್ಲ. ಅದು ಸರಸದ, ಎಳೆಯ ಶೃಂಗಾರ ಭಾವ ಹಣಿಕಿಕ್ಕುವ, ಆ ಭಾವ ಬಲಿಯದೆ ಅದು ಸರಸ–ಶೃಂಗಾರವಾಗಿ ಹೊರಳುವ ಸಂದರ್ಭಗಳು ಅವಾಗಿರುತ್ತವೆ. ಹೆಣ್ಣು ತನ್ನ ಗಂಡನ ವರ್ಣನೆ ಮಾಡುವಲ್ಲಿ ತೀರ ಮಧುರವಾದ ಎಳೆಯ ಬೆಳದಿಂಗಳಿನಂತಹ ಶೃಂಗಾರ ಭಾವವು ಹೇಳುವವರಲ್ಲಿ, ಕೇಳುವರಲ್ಲಿ ಆವರಿಸಿಕೊಂಡಿರುತ್ತದೆ. ಗಂಡು ತನ್ನ ಹೆಂಡತಿಯನ್ನು ಕಿವಿಗೆ ಕೇಳಲು ಒರಟಾದ ಪದಗಳನ್ನು ಬಳಸಿಯೂ ಅಲ್ಲಿ ವ್ಯಕ್ತವಾಗುವುದು ಸ್ವಲ್ಪ ಗಟ್ಟಿಕೊಂಡ ಶೃಂಗಾರದ

ಭಾವವೇ. ಈ ಒಗಟುಗಳನ್ನು ತೀರ ಸರಳವಾಗಿ ನೋಡುವುದಕ್ಕಿಂತ ಅವನ್ನು ಧ್ವನ್ಯಾತ್ಮಕವಾಗಿ ನೋಡುವುದು ಹೆಚ್ಚು ಉತ್ತಮವೆನಿಸುತ್ತದೆ. ವಿಶೇಷವಾಗಿ ಗಂಡುಮಕ್ಕಳ ಒಡಪುಗಳನ್ನು ಹೀಗೆ ಕಾವ್ಯಾತ್ಮಕ ಸಂಗತಿಗಳಿಂದ ಸೀಳಿನೋಡಿದರೆ ಅಲ್ಲೆಲ್ಲ ಅವನ ರತಿಭಾವವೇ ಸೂಸುತ್ತಿರುವುದು ಅನುಭವಕ್ಕೆ ವೇದ್ಯವಾಗುತ್ತದೆ.

'ಗಣಕಿಲೆ ಬಡದರ ಕುಣಕೊಂತ ಬರತಾಳ....'

'ಹಗ್ಗದಲೇ ಹೊಡದರ ಮಗ್ಗಲ ಬರತಾಳ...'

ಈ ಒಡಪುಗಳನ್ನು ವಾಚ್ಯವಾಗಿ ನೋಡಿದರೆ ಸಹಜವಾಗಿಯೇ ಗಂಡಸಿನ ಒರಟುತನ ಕಾಣುತ್ತದೆ; ಅವನ ಮಾತುಗಳು ಹೆಣ್ಣನ್ನು ಅವಮಾನಿಸುವ ಮಾತುಗಳಾಗಿ ತುಂಬಾ ಒರಟಾಗಿ ಕಾಣುತ್ತವೆ. ಆದರೆ ಇವುಗಳಲ್ಲಿ ಬಳಕೆಯಾದ ಹಗ್ಗ, ಗಣಕಿಗಳು ಧ್ವನಿಸುವ ಅರ್ಥಗಳ ಸಾಂಕೇತಿಕತೆಯನ್ನು ಗಮನಿಸಿದರೆ; ಬಡದವನ ಕಡೆಯೇ ಹೆಂಡತಿ ಕುಣಿಯುತ್ತ ಬರುವುದು, ಹೊಡೆದವನ ಮಗ್ಗುಲಿಗೇ ಹೆಂಡತಿ ಸರಿದು ಬರುವುದು– ಇವೆಲ್ಲ ಶೃಂಗಾರದ ಸನ್ನಿವೇಶವನ್ನು ತೆರೆದಿಡುತ್ತವೆ. 'ಹಂಡೆದ ಸಂದ್ಯಾಗ ಉಂಡಿ ತಿಂತಾಳ' ಎನ್ನುವ ಒರಟು ಒಡಪು ಕೂಡ ಇಂತಹ ಭಾವನೆಯನ್ನೇ ವ್ಯಕ್ತಪಡಿಸುವ ಒಡಪಾಗಿದೆ. ಮಕ್ಕಳಾಟದ ಹಾಡುಗಳಲ್ಲಿ ಮಾವನನ್ನು ಹಂಗಿಸುವ ಒಂದು ಶಿಶುಗೀತ ಹೀಗಿದೆ:

ಕಾಗಿ ಕಾಗಿ ಕೌ
ಯಾರು ಬಂದಾರೌ
ಮಾವಾ ಬಂದಾನೌ
ಏನೇನ ತಂದಾನೌ
ಹಂಡೆದಂಥ ಕುಂಡಿ ತೊಗೊಂಡು
ಹಂಗೆ ಬಂದಾನೌ

ಈಗ 'ಹಂಡೆದ ಸಂದ್ಯಾಗ ಉಂಡಿ ತಿಂತಾಳ' ಎಂಬ ಒಡಪಿನಲ್ಲಿಯ ಹಂಡೆಯ ಅರ್ಥ ಗ್ರಹಿಸಿಕೊಳ್ಳಿ, ಅಲ್ಲಿ ತಿನ್ನುತ್ತಿರುವ ಉಂಡಿ ಏನು? ಎಂದು ತರ್ಕಿಸಿಕೊಳ್ಳಿ, ಇವು ಕೇವಲ ನಗಲು ಕೇಳುವ ರಂಜನೀಯ ನುಡಿಗಳಲ್ಲ, ಗಂಭೀರ ಶೃಂಗಾರ ಭಾವವನ್ನೇ ಕೆದಕುವ ಶಕ್ತಿಶಾಲಿ ರಚನೆಗಳೆನಿಸುತ್ತವೆ. ಇನ್ನು ಹೆಣ್ಣುಮಗಳು ಗಂಡನನ್ನು ಹಂಗಿಸಿ ಹೇಳುವ ಒಡಪು ಗಮನಿಸಿ:

'ಊರ್ತುಂಬಾ ಉರಕೊಂತ
ಉಗಾದಿ ಮುಂದ ಉಧೋ ಅಂತಾರ....'

ಈ ಒಡಪಂತೂ ಇನ್ನೂ ಧ್ವನ್ಯಾತ್ಮಕವಾಗಿದೆ. 'ಉರಿಯುವುದು' ಶೃಂಗಾರ ಭಾವ ಉದ್ದೀಪನವನ್ನು ಧ್ವನಿಸಿದರೆ, 'ಉಧೋ' ಎನ್ನುವುದು ಅದರ ಬೆಳವಣಿಗೆಯನ್ನು ಧ್ವನಿಸುತ್ತದೆ. ಈಗ ಊರು ಮತ್ತು ಉಗಾದಿಗಳು ಅದಕ್ಕೆ ಹೊಂದಿಕೊಂಡು ಅರ್ಥಬಿಟ್ಟುಕೊಡುತ್ತವೆ. 'ಊರ್ತುಂಬ', 'ಉಗಾದಿ ಮುಂದ' ಎನ್ನುವ ಪದಗಳು

ಕೇವಲ ಪ್ರಾಸಕ್ಕಾಗಿ ಪ್ರಯೋಗವಾದುವಲ್ಲ. ಊರು ದೇಹವನ್ನು, ಉಗಾದಿ ಆನಂದವನ್ನು ಧ್ವನಿಸುತ್ತವೆ. 'ಊರ್ತುಂಬಾ ಉರಕೊಂತ' ಎಂಬುದು ಗಂಡ–ಹೆಂಡತಿಯರ ಸರಸದ ಪ್ರಾರಂಭ ಮತ್ತು ವಿಸ್ತಾರವನ್ನು, 'ಉಗಾದಿ ಮುಂದ ಉಧೋ ಅಂತಾರ....' ಆ ಆನಂದದ ಔನತ್ಯ ಮತ್ತು ಅಂತ್ಯವನ್ನು ಸೂಚಿಸುತ್ತಿವೆ. ಆದುದರಿಂದ ಒಡಪುಗಳನ್ನು ಕೇವಲ ರಂಜನೀಯ ಭಾವದಿಂದ ನೋಡದೆ ಅವುಗಳನ್ನು ಗಂಭೀರವಾದ ದೃಷ್ಟಿಯಿಂದ ಅಧ್ಯಯನ ಮಾಡುವ ಅವಶ್ಯಕತೆ ಇದೆ ಎನಿಸುತ್ತದೆ.

ಕನ್ನಡದಲ್ಲಿ ಇಲ್ಲಿಯವರೆಗೆ ಪ್ರಕಟವಾದ ಒಡಪುಗಳ ಸಂಗ್ರಹಗಳನ್ನು ಗಮನಿಸಿದರೆ, ಈ ಸಾಹಿತ್ಯ ಪ್ರಕಾರ ಹೈದ್ರಾಬಾದ ಕರ್ನಾಟಕ ಹಾಗೂ ಬಾಂಬೆ ಕರ್ನಾಟಕದಲ್ಲಿ ವ್ಯಾಪಕವಾಗಿ, ದಕ್ಷಿಣ ಕರ್ನಾಟಕದಲ್ಲಿ ವಿರಳವಾಗಿ ಬಳಕೆಯಾಗುವುದು ಕಂಡುಬರುತ್ತದೆ. ಆದರೆ ಗಂಡಹೆಂಡರು ಭಾಗವಹಿಸುವ ಸಂದರ್ಭಗಳಲ್ಲಿ, ದಾಂಪತ್ಯ ಜೀವನಕ್ಕೆ ಮಹತ್ವ ಕೊಡುವ ಭಾರತದ ಬಹುಭಾಗಗಳಲ್ಲಿ ಒಡಪುಗಳು ಅಥವಾ ಒಡಪಿನಂತಹ ಪ್ರಕಾರಗಳು ಬಳಕೆಯಾಗಬಹುದಾದ ಸಾಧ್ಯತೆಗಳಿವೆ. ಅವನ್ನು ಸರಿಯಾಗಿ ಶೋಧಿಸುವ ಕೆಲಸ ನಡೆಯಬೇಕು.

* * *

ಈಶ್ವರಚಂದ್ರ ಚಿಂತಾಮಣಿ ಅವರು ತಮ್ಮ **'ಗರತಿಯರ ಮನೆಯಿಂದ'** ಎಂಬ ಸಂಗ್ರಹದಲ್ಲಿ, ೧೯೫೫ರಲ್ಲಿ ಸಂಗ್ರಹಿಸಿ 'ಗಂಡನ ಹೆಸರು ಹೇಳುವಾಗ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದ ೨೦ ಒಡಪುಗಳ ಒಂದು ಸಣ್ಣ ಪ್ರಯತ್ನವೇ ಒಡಪುಗಳನ್ನು ಬೆಳಕಿಗೆ ತಂದ ಮೊದಲನೆಯ ಪ್ರಯತ್ನವಾಗಿದೆ. ಇಲ್ಲಿ ಹೆಣ್ಣುಮಕ್ಕಳ ಒಡಪುಗಳನ್ನೇ ಪ್ರಕಟಿಸಿರುವುದು ಅವರು ಕೊಟ್ಟ ಶೀರ್ಷಿಕೆಯಿಂದಲೇ ಗೊತ್ತಾಗುತ್ತದೆ.

ಕುರುಂ ಕರುಂ ಸವತಿ ಮಿಡಿ
ಕುದರಿಗಿ ಹಾಕ್ಯಾರ ಕುತನಿ ಥಡಿ
ಕೈಯಾಗ ಹಾಕ್ಯಾರ ಬಂಗಾರ ಖಡಿ
ಅಗಸ್ಯಾಗ ಬರತಾರ ಖೂನಾ ಹಿಡಿ!

ಚಿಕ್ಕ ಚಿಕ್ಕ ನಿಲಿಗಿ, ಚಾರಕಾನಿ ಕುಬಸಾ
ವಜ್ಜರದ್ವಾಲಿ, ಗೆಜ್ಜಿಟಿಕ್ಕಿ
ಮುರಾಳ ಒಂಕಿ, ಮುರಗಿ ಸರಿಗಿ
ಹತ್ತು ಮಂದ್ಯಾಗ ಕುಂತು ನತ್ತ ಮಾಡಿಸತಾರ !

ಇಂತಹ ಉತ್ತಮವಾದ ಇಪ್ಪತ್ತು ಒಡಪುಗಳನ್ನು ಆಯ್ದುಕೊಟ್ಟಿರುವುದು ಒಂದು ಅಪರೂಪದ ಕೆಲಸವೇ ಆಗಿದೆ. ಇಲ್ಲಿಂದ ಬಹಳ ತಡಮಾಡಿ, ೧೯೭೧ ರಲ್ಲಿ ಪ್ರಕಟವಾದ ಜ್ಯೋತಿ ಹೊಸೂರ ಅವರ **'ಹೆಸರ ಹೇಳ್ತಿನಿ ಒಡಪ ಕಟ್ಟಿ'** ಕೃತಿಯೇ ಕನ್ನಡದಲ್ಲಿ ಪ್ರಕಟವಾದ ಒಡಪುಗಳ ಅತ್ಯುತ್ತಮ ಸಂಗ್ರಹ. ಸುಮಾರು ನೂರು ಪುಟಗಳ ಈ ಕೃತಿಯಲ್ಲಿ ೨೯೯ ಒಡಪುಗಳಿವೆ. ಇವುಗಳಲ್ಲಿ ೨೨೧ ಹೆಂಗಸರ ಒಡಪುಗಳು, ೭೮

ಗಂಡಸರ ಒಡಪುಗಳು ಇವೆ. ಹೆಂಗಸರ ಒಡಪುಗಳನ್ನು ೧೧ ವಿಧಗಳಲ್ಲೂ ಗಂಡಸರ ಒಡಪುಗಳನ್ನು ೪ ವಿಧಗಳಲ್ಲೂ ವಿಂಗಡಿಸಿಕೊಂಡಿದ್ದಾರೆ. ವಿಂಗಡನೆಯ ಹೆಸರುಗಳನ್ನು ಒಡಪುಗಳ ಆಕರ್ಷಕವಾದ ಸಾಲುಗಳಿಂದಲೇ ಗುರುತಿಸಿದ್ದು, ಅತ್ಯಂತ ಕಾವ್ಯಮಯವಾಗಿವೆ. 'ಸುಲಗಾಯಿ ಮುಂದ ಸುಳದಾಡತಾನ, ಆಡತಾನ... ನೋಡತಾನ, ಉಣ್ಣಾಂವ ಬಲ ಚೆದರ, ಬಂಗಾರ ಬಾಗಲಾ ತೆರಿ, ಹತ್ತ ಮಂದ್ಯಾಗ ಕುತ್ತ ಹೌಂದ ಅನಸ್ಕೋತಾನ, ಹಿಂತಾ ಗಂಡ ಸಿಗೂದ ಅಪರೂಪ, ನಮ್ಮಾವಗ ನನಗ ಬಾಳ ವರಾ, ಸಾಸಿವಿ ಬಣ್ಣದ ಸೀರಿ ಸವ್ವಾಸೇರ ಬಂಗಾರ, ನನಗ ಗೊತ್ತ ನನ್ನ ಗಂಡನ ಗತ್ತ, ಜಾಣೀನ ಕರ್ರೊಂಡು ಜಲ್ಮಾ ಮಾಡೂದ ಬಿಟ್ಟ, ಹೆಸರ ಕೇಳಾವರ ಹೆಣಾ ಎತ್ತಲಿ'– ಇವು ಹೆಂಗಸರ ಒಡಪುಗಳ ವಿಭಾಗಗಳ ಹೆಸರುಗಳು. 'ನನ ಹ್ಯಾಣತಿ ಬಲ ಬೆರಿಕಿ, ಮುತ್ತೋದಿ ನನ ಹ್ಯಾಣತಿ ಮನ್ಯಾಗ ಅದಾಳ, ನಾ ಒಂದ ಹೇಳಾಣಾ ತಾ ಒಂದ ಮಾಡತಾಳ, ಹೆಸರ ಕೇಳಕ್ಕಿನ ಹೆಡಮುರಕಿ ಕಟ್ಟ' – ಇವು ಗಂಡಸರ ಒಡಪುಗಳ ವಿಭಾಗಗಳ ಹೆಸರುಗಳು. ಈ ಕ್ರಮವನ್ನು ಮುಂದಿನ ಅನೇಕ ಜನರು ಅನುಸರಿಸಿದ್ದಾರೆ.

"ಗಂಡ ಹೆಂಡಂದಿರ ವಿವಿಧ ಪ್ರಸಂಗಗಳಲ್ಲಿ ಪರಸ್ಪರರ ಹೆಸರು ಹೇಳುವುದು ಒಂದು ಸಾಮಾಜಿಕ ರೂಢಿ. ಆಗ ಒಡಪು ಜೋಡಿಸುವುದು ಕರ್ನಾಟಕದ ಕೆಲವು ಪ್ರದೇಶದಲ್ಲಿಯ ಸಂಪ್ರದಾಯ. ಅಂಥ ಪ್ರದೇಶದ ಪ್ರಾತಿನಿಧಿಕ ಒಡಪುಗಳ ಸಂಗ್ರಹವಿದು. ವಸ್ತುತಃ ಬೆಳಗಾವಿ ಜಿಲ್ಲೆಯೊಳಗಿನ ರಾಯಬಾಗ ತಾಲೂಕಿನ ಊರುಗಳಾದ ಮುಗುಳಖೋಡ, ಹಾರೂಗೇರಿ, ಹಿಡಕಲ್ಲ, ಬಡಬ್ಯಾಕೂಡ ಮುಂತಾದ ಊರುಗಳಿಂದ ಇಲ್ಲಿಯ ಒಡಪುಗಳನ್ನು ಸಂಗ್ರಹಿಸಲಾಗಿದೆ. ಈ ಒಡಪುಗಳು ಪ್ರಾದೇಶಿಕತೆಯ ದೃಷ್ಟಿಯಿಂದ ಪೂರ್ಣ ಪ್ರಾತಿನಿಧ್ಯ ಒದಗಿಸಲಾರವೆಂಬ ಭಾವನೆ ಹುಟ್ಟುವುದು ಸ್ವಾಭಾವಿಕ. ಆದರೆ, ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಂತೆ ಒಡಪುಗಳು ಕೂಡ ಸಂಚಾರಿ ಸ್ವಭಾವದವು. ಹೆಣ್ಣು ತವರು ಮನೆಯಿಂದ ಅತ್ತೆಯ ಮನೆ ಸೇರಲು ಹಲವು ಹರದಾರಿ ಸಂಚರಿಸುವುದುಂಟು. ಅವಳೊಂದಿಗೆ ಒಡಪುಗಳೂ ಸಂಚರಿಸಿ, ಪ್ರಸಾರಗೊಳ್ಳುತ್ತವೆ. ಆದ್ದರಿಂದ ಇವು ಪ್ರಚಲಿತವಿರುವ ಪ್ರದೇಶದಲ್ಲೆಲ್ಲ ಅಲ್ಪಸ್ವಲ್ಪ ಪಾಠಾಂತರಗಳೊಂದಿಗೆ ಒಂದೇ ಬಗೆಯಾಗಿರುತ್ತವೆ. ಈ ದೃಷ್ಟಿಯಿಂದ ಮಾತ್ರ ಇದು ಪ್ರಾತಿನಿಧಿಕ ಸಂಗ್ರಹ" (ಅರಿಕೆ, ಪು.೧೦).

ಸಂಪಾದಕರು ತಮ್ಮ ಒಂದೇ ಉಸುರಿನಲ್ಲಿ ಹೇಳಿರುವ ಈ ಮೇಲಿನ ಪ್ಯಾರಾದಲ್ಲಿ ಎರಡ್ಮೂರು ಮಹತ್ವದ ಸಂಗತಿಗಳನ್ನು ದಾಖಲಿಸಿದ್ದಾರೆ. ೧. ದಂಪತಿಗಳು ಪರಸ್ಪರರ ಹೆಸರು ಹೇಳುವುದು ಒಂದು ಸಾಮಾಜಿಕ ರೂಢಿ ಎಂಬಲ್ಲಿ ಹೆಸರು ಹೇಳುವುದು ಒಂದು ಕಾಲಕ್ಕೆ ಕಡ್ಡಾಯವಾಗಿ, ಅದೊಂದು ಮಾಡಲೇಬೇಕಾದ ಸಂಪ್ರದಾಯ ಎನ್ನುವಂತೆ ಬಳಕೆಯಲ್ಲಿದೆ ಎಂಬ ಅರ್ಥ ಬರುತ್ತದೆ. ಹೀಗೆ ಹೆಸರು ಹೇಳುವಾಗ ಬರಿ ಹೆಸರು ಹೇಳುವುದು ಅಶುಭ, ಗೌರವವಲ್ಲ ಎಂಬ ದೃಷ್ಟಿಯಿಂದ ಗೌರವ ಸೂಚಕವಾಗಿ ಈ ವರ್ಣನೆಯ ಸಾಹಿತ್ಯಪ್ರಕಾರ ಹುಟ್ಟಿಕೊಂಡಿತು. ೨. ಈ ಒಡಪುಗಳು

ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಪ್ರಚಾರದಲ್ಲಿವೆ. ಅರ್ಥಾತ್ ಉತ್ತರ ಕರ್ನಾಟಕದಲ್ಲಿ ಇವುಗಳ ಬಳಕೆ ವ್ಯಾಪಕವಾಗಿದೆ ಎಂಬ ಭಾವನೆ ಇಲ್ಲಿ ಕಾಣಿಸಿಕೊಂಡಿದೆ. ೩. ಈ ಒಡಪುಗಳು ಬೆಳಗಾಂವ ಜಿಲ್ಲೆಯ ರಾಯಬಾಗ ತಾಲೂಕಿನ ಮೂರ್‍ನಾಲ್ಕು ಗ್ರಾಮಗಳಿಂದ ಸಂಗ್ರಹಗೊಂಡರೂ ಸಹಜವಾಗಿಯೇ ಪ್ರಸಾರ ಎನ್ನುವುದು ಈ ಪ್ರಕಾರದ ಬಹುಮುಖ್ಯ ಲಕ್ಷಣ. ಅದರಲ್ಲೂ ಹೆಣ್ಣುಮಕ್ಕಳು ಕೊಟ್ಟ ಮನೆಗೆ ಹೋಗುವುದರಿಂದ ಅವರ ಜೊತೆಗೆ ಒಡಪುಗಳೂ ವಲಸೆ ಹೋಗುತ್ತವೆ. ಹೀಗಾಗಿ ಈ ಕೃತಿಯಲ್ಲಿ ದೊರೆಯುವ ಒಡಪುಗಳು ಬಹುತೇಕ ಕಡೆ ದೊರೆಯುವ ಒಡಪುಗಳಾಗಿವೆ ಎಂಬುದು ಹೊಸೂರ ಅವರ ಸಹಜವಾದ ಗ್ರಹಿಕೆಯಾಗಿದೆ. ಈ ಮಾತನ್ನು ಅವರು ಹೀಗೆ ವಿವರವಾಗಿಸಿದ್ದಾರೆ. "ಉತ್ತರ ಕರ್ನಾಟಕದವರಿಗೆ ಈ ದೀರ್ಘ ಪ್ರಸ್ತಾವನೆ ಅನವಶ್ಯಕ ವೆನಿಸಬಹುದು. ಆದರೆ ಒಡಪುಗಳ ಪರಂಪರೆ ಇಲ್ಲದ ದಕ್ಷಿಣ ಕರ್ನಾಟಕದವರು ಅವುಗಳ ಸ್ವಾರಸ್ಯ ಅರಿತುಕೊಳ್ಳಲು ಅದು ಅವಶ್ಯಕವೆಂದು ಕೊಡಲಾಗಿದೆ" (ಅದೆ,ಪು೯). ಇದು ಉತ್ತರಕರ್ನಾಟಕದಲ್ಲಿರುವ ವಿಶೇಷ ಪ್ರಕಾರವಷ್ಟೇ ಅಲ್ಲ, ದಕ್ಷಿಣ ಕರ್ನಾಟಕದಲ್ಲಿ ಈ ಪ್ರಕಾರ ಇಲ್ಲ ಎಂಬ ಅವರ ಮಾತು, ಮುಂದೆ ಹೆಚ್ಚು ಚಾಲ್ತಿಗೆ ಬರುತ್ತದೆ. ದಕ್ಷಿಣ ಕರ್ನಾಟಕದಲ್ಲೂ ಒಡಪುಗಳಿರುವುದು ನಂತರ ಬೆಳಕಿಗೆ ಬರುತ್ತದೆ. ಜ್ಯೋತಿ ಹೊಸೂರ ಅವರು ಆಗಿನ ತಿಳುವಳಿಕೆಯಂತೆ ಸೂಚಿಸಿದ ಒಂದು ಸಣ್ಣ ಸಂಗತಿ, ಕರ್ನಾಟಕದ ಉಳಿದ ಪ್ರದೇಶಗಳಲ್ಲೂ ಒಡಪುಗಳ ಹುಡುಕಾಟಕ್ಕೆ ನಾಂದಿಯಾದದ್ದು, ಅದರಿಂದ ಜನಪದ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಲಾಭವಾಗಿರುವುದು ಒಳ್ಳೆಯ ಬೆಳವಣಿಗೆಯೆ.

'ಹೆಸರ ಹೇಳ್ತಿನಿ ಒಡಪ ಕಟ್ಟಿ' ಕೃತಿಗೆ ಮುನ್ನುಡಿ ಬರೆದಿರುವ ಬೆಟಗೇರಿ ಕೃಷ್ಣಶರ್ಮ ಅವರು ಹೀಗೆ ಬರೆಯುತ್ತಾರೆ: "ಸಾಮಾನ್ಯವಾಗಿ ಎಲ್ಲ ಶುಭ ಪ್ರಸಂಗಗಳಲ್ಲಿಯೂ ಈ ಒಡಪುಗಳನ್ನು ಹೇಳುವ ಕಾರ್ಯಕ್ರಮ ಇದ್ದೇ ಇರುವುದು. ಹೆಂಗಸರ ಒಡಪುಗಳು ಕಲೆಯ ಕುಸುರುಗಳಿಂದ ಕೂಡಿದುವಾಗಿದ್ದರೆ, ಗಂಡಸರ ಒಡಪಗಳು ಮೊಂಡು ಮೊಂಡಾಗಿರುವಂತೆ ಕಾಣುವವು. ತಿಳಿವಿನ ಕಣ್ಣಿದ್ದವರು ಆ ಮೊಂಡು ನುಡಿಗಳ ಹಿಂದೆ ಅಡಗಿರುವ ಗಂಡಿನ ಪ್ರೀತಿಯ ಬೆಲೆ ಎಷ್ಟೆಂಬುದನ್ನು ಗುರುತಿಸಬಹುದು"(ಪು.೭). ಈ ಮಾತಿನಲ್ಲಿ ಬೆಟಗೇರಿ ಅವರು ಹೆಂಗಸರ ಮತ್ತು ಗಂಡಸರ ಒಡಪುಗಳ ಒಟ್ಟು ಸ್ವಭಾವ ಹೇಗಿರುತ್ತದೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

"ಹಳ್ಳಿಗರು ದಾಂಪತ್ಯ ಪ್ರೇಮವನ್ನು ಹೇಗೆ ಹೇಗೆ ಪ್ರಕಟಿಸಬಲ್ಲರೆಂಬುದಕ್ಕೆ ಈ ಒಡಪದ ಸಾಹಿತ್ಯ ಸುಂದರ ಪ್ರಮಾಣಗಳನ್ನು ಒದಗಿಸಿಕೊಡಬಲ್ಲದು. ಅದರಲ್ಲಿಯೂ ಹೆಣ್ಣುಮಕ್ಕಳು ಹೇಳುವ ಒಡಪಗಳಂತೂ ಮಾಧುರ್ಯದ ಮೋದಕಗಳಂತಿರುವವು. ಮೊದಲಗಿತ್ತಿಯರು ಹೇಳುವ ಒಡಪುಗಳು ಪತಿ ವಿಷಯಕ ಪ್ರೇಮ ಪವಾಡಗಳನ್ನೂ ನೇರವಾದ ನುಡಿಗಳಲ್ಲಿ ಹೇಳುತ್ತಿದ್ದರೆ, ಪ್ರೌಢೆಯರು ಹೇಳುವ ಒಡಪುಗಳು ಪ್ರೀತಿ ಪ್ರದರ್ಶಕ ವಕ್ರೋಕ್ತಿಗಳಾಗಿರವವು" (ಮನ್ನುಡಿ, ಪು.೭). ಹೀಗೆ ವಿವರಿಸುವ ಬೆಟಗೇರಿ ಕೃಷ್ಣಶರ್ಮ ಅವರು ಎರಡು ಉದಾಹರಣೆಗಳನ್ನು ಉಲ್ಲೇಖಿಸುತ್ತಾರೆ:

ಮೊದಲಗಿತ್ತಿಯ ನೇರ ನುಡಿಯ ಒಡಪವಿದು:

ಪಾರಬತಿ ನಮ್ಮ ಅತ್ತಿ, ಶಿವರಾಯ ನಮ್ಮ ಮಾವ
ಮೋಜಿನ ಮನಿಮಂದಿ, ನಾಜೂಕದ ನೆಗೆಣ್ಣಾ್ಬರು
ಸತಿಬಾಮಿ ನನ್ನ ಸವತಿ, ರುಕಿಮಿಣಿ ನನ್ನ ಗೆಣತಿ
ಪಾರಿಜಾತ ಹೂವ ಪಾವುಡದಾಗ ಕಟ್ಕೊಂಡು
ನನ್ನ ಕಂಡ ನಕ್ಕೋತ ಬರತಾನ. . . .

ಪ್ರೌಢೆಯೊಬ್ಬಳು ಹೇಳುವ ಕೊಂಕು ನುಡಿಯ ಒಡಪ:

ಹೆಗ್ಗಣ ಬಡದ ಹೆಗಲಿಗೆ ಹಾಕ್ಯಾನ
ಬೆಕ್ಕ ಬಡದ ಬಗಲಿಗೆ ಹಾಕ್ಯಾನ
ತಗಣಿಗೆ ಮುಗದಾಣಾ ಹಾಕಿ
ತಂಗೀ ಕರ್‍ಯಾಕ ಹೊಂಟಾನ . . .

ಗಂಡಿನ ಒಡಪಗಳು, ಮೊಂಡು-ತುಂಡು ನುಡಿಗಳು :

ತೂತಿನ ಕೊಡ ಹೊತಗೊಂಡ
ತೂಕಡಿಸುತ್ತ ಬರತಾಳ . . .

ತಿಪ್ಪ್ಯಾಗ ತುಪ್ಪ ಮುಚ್ಚಿಟ್ಟು
ತುಡಗಿಲೆ ತಿಂತಾಳ . . . .

'ಇವು ನಗೆಗಾಗಿ ಆಡಿದ ಹುಸಿನುಡಿಗಳಾದುದರಿಂದ ಗಂಡಿರ ಪ್ರೇಮವು ಮತ್ತಿಷ್ಟು ಬಿಗಿಗೊಳ್ಳುವುದಲ್ಲದೆ ಸಡಿಲವಾಗದು' ಎನ್ನುತ್ತಾರೆ ಬೆಟಗೇರಿ ಕೃಷ್ಣಶರ್ಮ ಅವರು.

ಸಂಪಾದಕರಾದ ಜ್ಯೋತಿ ಹೊಸೂರ ಅವರು ತಮ್ಮ ೨೪ ಪುಟಗಳ ಪ್ರಸ್ತಾವನೆಯಲ್ಲಿ ಒಡಪುಗಳ ಬಗ್ಗೆ ಸುದೀರ್ಘವಾಗಿ ವಿವರಿಸಿದ್ದಾರೆ. ವಿಶೇಷವಾಗಿ ಅವುಗಳ ಕಾವ್ಯಾತ್ಮಕ ಗುಣಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಅವರು ಹೀಗೆ ಬರೆಯುತ್ತಾರೆ : "ಒಡಪುಗಳು ಗದ್ಯ ಸಾಹಿತ್ಯದ ಒಂದು ಅಂಗ. ಶೋಭನ ಮೊದಲಾದ ಸಾಂಪ್ರದಾಯಿಕ ಸಂಸ್ಕಾರಗಳೊಂದಿಗೆ ಒಡಪುಗಳ ಸಂಬಂಧವಿದೆ. ಹೀಗಾಗಿ ಜಾನಪದದ ಅಭ್ಯಾಸಕ್ಕೆ ಇವು ವಿಶೇಷ ನೆರವು ನೀಡಬಲ್ಲವು".

ಅತ್ತಲಾಗ ಅಂವ ಇತ್ತಲಾಗ ನಾ
ಕತ್ತಲಾಗ ಬಂದ ಕೈ ಹಿಡಿತಾನ . . . .

ಬಾಗಲದಾಗ ನಿತ್ತಾನ ಬಾಳಿಗೊನಿ ಹಿಡದಾನ
ಅಂಗಳಾಗ ನಿಂತಾನ ನಿಂಬಿಗೊನಿ ಹಿಡದಾನ
ಬಾಗೀರತಿ ಹಡದಾಳ ಬಾಗಿನಕ ಹೋಗತಾನ
ದಾರಿ ಬಿಡುವರ ಮಾರಿ ನೋಡತಾನ . . . .

ದೇವ ದೇವದವರು ದೇವ ಲೋಕದವರು
ದೇವೀಂದ್ರನ ಸೊಸ್ತ್ಯಾರು ಸಾಲ ಮುತ್ತೋದ್ಯಾರು
ಸೆರಗ ಹಿಡದ ಜಗ್ಗಿ ಹೆಸರ ಕೇಳುವಾಗ
ಸದರ ಮ್ಯಾಲ ಕುತ್ತ ನೆದರ ಹಚ್ಚತಾನ . . .

ಗುಂಗರಗೂದಲ ಬಂಗಾರ ಬೇತಲ
ರಂಗ ಮಂಚದ ಮ್ಯಾಲ ರಂಬೀನ ರಮಸತಾನ . . .

ಇಂತಹ ಒಡಪುಗಳನ್ನು ಗಮನಿಸಿದಾಗ, ಇವುಗಳಲ್ಲಿ ಅಡಗಿರುವ ಕಾವ್ಯದ ಗುಣಗಳು ಸ್ಪಷ್ಟವಾಗಿ ಎದ್ದು ಕಾಣುತ್ತವೆ. ಸಾಲುಗಳನ್ನು ಪದ್ಯದ ಮಾದರಿಯಲ್ಲಿ ಕತ್ತರಿಸಿಕೊಳ್ಳಲು ಸಹಾಯ ಮಾಡುವ ಲಯ, ಅವುಗಳಿಗೆ ಹೊಂದಿಕೊಂಡ ಪ್ರಾಸಗಳು, ಇವುಗಳಿಂದ ಉಂಟಾಗುವ ಒಂದು ರಾಚನಿಕ ರೂಪ ಇವೆಲ್ಲ ಮೇಲು ನೋಟಕ್ಕೆ ಗದ್ಯದಿಂದ ಒಡಪುಗಳನ್ನು ಬೇರ್ಪಡಿಸಿ ನೋಡಲು ಸಹಾಯ ಮಾಡುತ್ತವೆ. ಒಡಪುಗಳಲ್ಲಿ ಹುದುಗಿರುವ ಮಧುರ ಪ್ರೇಮದ ಭಾವ, ನಾನಾ ತರದ ಹೋಲಿಕೆಗಳಿಗಾಗಿ ಬಳಕೆಯಾಗುವ ಉಪಮೆ, ರೂಪಕ ಅಲಂಕಾರಗಳು ಅವುಗಳ ಆಂತರಿಕ ಸ್ನಿಗ್ಧತೆಯನ್ನು ಹೆಚ್ಚಿಸುತ್ತವೆ. ಹೀಗಾಗಿ ಒಡಪುಗಳನ್ನು ಬರಿ ಗದ್ಯ ಪ್ರಕಾರಗಳೆಂದು ಕರೆಯಲಾಗದು.

ಗಾದೆ, ಒಗಟು, ಒಡಪುಗಳನ್ನು ಗದ್ಯಪ್ರಕಾರಗಳೆಂದು ಗಣಿಸುತ್ತ ಬಂದಿರುವುದನ್ನು ಕಾಣುತ್ತೇವೆ. ಆದರೆ ಇವು ಶುದ್ಧ ಗದ್ಯಮಾದರಿಗಳಲ್ಲ; ವಿಶೇಷವಾದ ಪದ್ಯದ ಶಕ್ತಿವುಳ್ಳ ಸಾಹಿತ್ಯ ಪ್ರಕಾರಗಳಿವು ಎಂಬುದನ್ನು ಗಮನಿಸಬೇಕು. ವಚನಗಳಿಗೆ ಪ್ರಯೋಗಿಸುವ 'ಪದ್ಯಗಂಧಿ ಗದ್ಯ ಮಾದರಿಗಳಿವು' ಎನ್ನುವುದನ್ನು ಪ್ರಾರಂಭದಲ್ಲಿಯೇ ಚರ್ಚಿಸಲಾಗಿದೆ. ಗಾದೆ, ಒಗಟು, ಒಡಪುಗಳ ಈ ಗುಣವನ್ನು ಗಮನಿಸಿದ ಜ್ಯೋತಿ ಹೊಸೂರ ಅವರು ಹೀಗೆ ಬರೆಯುತ್ತಾರೆ : "ಜನಪದ ಗದ್ಯ ಸಾಹಿತ್ಯದಲ್ಲಿಯ ವಿಶಿಷ್ಟ ಪ್ರಕಾರಗಳಾದ ಗಾದೆ, ಒಗಟು, ಒಡಪುಗಳ ಅಭ್ಯಾಸ ಮಾಡುವಾಗ ವಚನ ಸಾಹಿತ್ಯದ ನೆನಪು ಮರುಕಳಿಸುತ್ತದೆ. ಎರಡರಲ್ಲೂ ಒಂದು ಬಗೆಯ ಸಾಮ್ಯ ಎದ್ದು ಕಾಣುತ್ತದೆ. ಒಂದು ಇನ್ನೊಂದರ ಉಗಮಕ್ಕೆ ಪ್ರಭಾವ ಬೀರಿರಬಹುದೆಂಬ ವಿಚಾರ ಸ್ಫುರಿಸುತ್ತದೆ. ಇವೆರಡರಲ್ಲಿ ಜನಪದ ಸಾಹಿತ್ಯದ ಪ್ರಾಚೀನತೆಯನ್ನು ಸ್ಥಾಪಿಸಬೇಕಾಗಿಲ್ಲ. ಹೀಗಾಗಿ ವಚನ ಸಾಹಿತ್ಯದ ಉಗಮಕ್ಕೆ ಇದುವೇ ಪ್ರೇರಕ ಎಂಬುದಾಗಿ ಹೇಳಬೇಕಾಗುತ್ತದೆ" (ಅದೆ,ಪು.೧೩). ಜ್ಯೋತಿ ಹೊಸೂರ ಅವರ ಮಹತ್ವದ ಮಾತು ಇದಾಗಿದೆ. ತಮಗಿಂತಲೂ ಮುಂಚೆ ಇಂತಹ ಅಭಿಪ್ರಾಯವನ್ನು ಹೊಂದಿದವರ ಮಾತುಗಳನ್ನು ಉಲ್ಲೇಖಿಸಿ, ಚರ್ಚಿಸಿ, ಕೊನೆಯಲ್ಲಿ ಇಂತಹ ಒಂದು ನಿರ್ಧಾರಕ್ಕೆ ಬರುತ್ತಾರೆ : "ಡಾ। ಎಂ. ಚಿದಾನಂದಮೂರ್ತಿ ಯವರು ಹೇಳುವಂತೆ ಕೇವಲ ತ್ರಿಪದಿಗಳಾಗಲಿ, ಶ್ರೀ ಸುಧಾಕರ ಅವರು ಹೇಳುವಂತೆ ಕೇವಲ ಗಾದೆ, ಒಗಟುಗಳಾಗಲಿ ಪ್ರತ್ಯೇಕವಾಗಿ ವಚನ ಸಾಹಿತ್ಯದ ಉಗಮಕ್ಕೆ ಪ್ರೇರಣೆ ನೀಡಿರಲಿಕ್ಕಿಲ್ಲ. ...ವಚನ ಸಾಹಿತ್ಯದ ಉಗಮಕ್ಕೆ ಜನಪದ ಸಾಹಿತ್ಯದ ಯಾವೊಂದು ಬಿಡಿರೂಪ (ಪ್ರಕಾರ) ಪ್ರೇರಣೆ ನೀಡಿರಬಹುದೆನ್ನದೇ ಇಡಿಯಾಗಿ ಅದರ ಎಲ್ಲ ಪ್ರಕಾರಗಳೂ ಪ್ರೇರಕವಾಗಿರ ಬಹುದೆಂದು ಹೇಳುವುದು

ಸೂಕ್ತ. ಗದ್ಯದ ಸರಳತೆ, ಪದ್ಯದ ಗೇಯತೆಗಳೆರಡೂ ವಚನಗಳ ವೈಶಿಷ್ಟ್ಯವೆಂಬ ಅಂಶ ಮೇಲಿನ ಮಾತಿಗೆ ಪುಷ್ಟಿಯನ್ನೀಯುತ್ತದೆ" (ಅದೆ, ಪು.೧೪-೧೫) ಎಂಬ ಹೊಸೂರ ಅವರ ಮಾತು ಹೆಚ್ಚು ಸರಿಯೆನಿಸುತ್ತದೆ. ಚರ್ಚೆಯನ್ನು ಮುಂದುವರೆಸಿ ಒಡಪುಗಳ ಸಾಹಿತ್ಯಿಕ ಗುಣಗಳನ್ನು ಚರ್ಚಿಸುತ್ತಾರೆ. ಸಾಹಿತಿಗಳ, ಸಮಾಜ ವಿಜ್ಞಾನಿಗಳ, ಮನಶಾಸ್ತ್ರಜ್ಞರ, ಮಾನವಶಾಸ್ತ್ರಜ್ಞರ, ಭಾಷಾಶಾಸ್ತ್ರಜ್ಞರ ಅಭ್ಯಾಸದ ಸಹಾಯಕ್ಕೆ ಬರುತ್ತವೆ ಎಂಬುದನ್ನು ಎಚ್ಚರಿಕೆಯಿಂದ ದಾಖಲಿಸುತ್ತಾರೆ.

ಹಾಡುಗಳೆಂದೇ ಕರೆಯುವ ಆದರೆ ಶುದ್ಧ ಹಾಡುಗಳಲ್ಲದ 'ಮಕ್ಕಳ ಹಾಡುಗಳು', 'ಆಣಿಪೀಣಿ' ಇವುಗಳನ್ನು ಗಾದೆ, ಒಗಟು, ಒಡಪುಗಳ ಗುಂಪಿನಲ್ಲಿ ಗಣಿಸಬಹುದಾಗಿದೆ. ಜೊತೆಗೆ ಇವುಗಳನ್ನು ಹೋಲುವ ರಚನೆವುಳ್ಳ ಒಡಬು ಹಾಗೂ ದುರಗಮುರಗಿ ಅವರು ಅನ್ನುವ ವಚನರೂಪದ ರಚನೆಗಳನ್ನು ಈ ಗುಂಪಿಗೆ ಸೇರಿಸಬಹುದಾಗಿದೆ. ಆ ಕಡೆ ಗದ್ಯವೆಂದರೆ ಗದ್ಯವೂ ಅಲ್ಲದ, ಈ ಕಡೆ ಪದ್ಯವೆಂದರೆ ಪದ್ಯವೂ ಅಲ್ಲದ ಒಂದು ವಿಶಿಷ್ಟ ಪ್ರಕಾರಗಳಿವು ಎಂಬುದನ್ನು ಗಮನಿಸಬೇಕು. ಇವೆಲ್ಲವುಗಳ ಜೊತೆಗೆ ಸೂತ್ರಬದ್ಧ ಜನಪದ ಕಥೆಗಳಲ್ಲಿ ಪ್ರಯೋಗವಾಗುವ 'ಪ್ರಾಸಬದ್ಧ ಸೂತ್ರಗಳನ್ನು' ಸೇರಿಸಿಕೊಂಡು ಇವುಗಳನ್ನು 'ಪದ್ಯಗಂಧಿ ಗದ್ಯ ಸಾಹಿತ್ಯ' ರೂಪಗಳೆಂದು ಕರೆಯಬಹುದಾಗಿದೆ.

'ವಿಶಿಷ್ಟ ಪ್ರಸಂಗಗಳಲ್ಲಿ ಬಳಕೆಗೊಳ್ಳುವ ಈ ಒಡಪುಗಳ ಅಭ್ಯಾಸ ಕನ್ನಡ ಸಂಸ್ಕೃತಿಯ ಅಭ್ಯಾಸಕ್ಕೆ ಪೂರಕ' ಎನ್ನುವ ಮಹತ್ವದ ಸಂಗತಿಯನ್ನು ಹೊಸೂರ ಅವರು ಗುರಿತಿಸಿದ್ದಾರೆ. ಒಡಪುಗಳು ಕನ್ನಡ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಒಡಪುಗಳು ಎಂತಹ ಸಾಂಸ್ಕೃತಿಕ ಸಂದರ್ಭದಲ್ಲಿ ಬಳಕೆಯಾಗಲು ತೊಡಗಿ ಬಾಳಿನುದ್ದಕ್ಕೂ ಬೆನ್ನುಹತ್ತಿ ಬರುತ್ತವೆ ಎಂಬುದನ್ನು ಸಂಪಾದಕರು ಸರಿಯಾಗಿ ಗುರುತಿಸುತ್ತಾರೆ. "ಮದುವೆಯೆಂದು ಸತಿ-ಪತಿಗಳಾಗಿ ಕೈ ಹಿಡಿದಾಗ ಹೆಸರು ಕೇಳುವುದು, ಹೇಳುವುದು ಆರಂಭಗೊಂಡುದು ಜೀವನದುದ್ದಕ್ಕೂ ವಿವಿಧ ಪ್ರಸಂಗಗಳಲ್ಲಿ ಮುಂದುವರಿ ಯುವುದು. ಬಾಳಿನಲ್ಲಿ ಹಲವು ಮಂಗಳ ಪ್ರಸಂಗಗಳನ್ನು ಮನುಷ್ಯ ಹಮ್ಮಿಕೊಳ್ಳುತ್ತಾನೆ. ಎಲ್ಲ ಮಂಗಲ ಪ್ರಸಂಗಗಳ ಒಂದಂಗವೆನ್ನುವಂತೆ ಒಡಪುಗಳೊಂದಿಗೆ ಗಂಡನ ಹೆಸರು ಹೇಳುವ, ಹೆಂಡತಿಯ ಹೆಸರು ಹೇಳುವ ಪರಂಪರೆ ಬೆಳೆದು ಬಂದಿದೆ" (ಪ್ರ.ಪು.೨). ಇದು ಒಡಪುಗಳ ವ್ಯಾಪಕ ಬಳಕೆಯನ್ನು ಹೇಳುವ ಮಾತು. ಗಂಡು-ಹೆಣ್ಣುಗಳು, ಗಂಡ-ಹೆಂಡತಿ ಆದ ಗಳಿಗೆಯಿಂದ ಪ್ರಾರಂಭವಾಗಿ, ಜೀವನದ ಎಲ್ಲ ಮಂಗಲ ಪ್ರಸಂಗಗಳಲ್ಲಿ, ಎಲ್ಲಿ ಮುತ್ತೈದಿ ಭಾಗವಹಿಸುತ್ತಾಳೊ ಅಂಥಲ್ಲಿ ಒಡಪುಗಳು ಬಳಕೆಯಾಗುತ್ತವೆ. ಗಂಡನ ಹೆಸರು, ಹೆಂಡತಿಯ ಹೆಸರು ಹೇಳುತ್ತಲೇ ಇರುತ್ತಾರೆ. ಇಲ್ಲಿ ಒಂದು ಮಾತನ್ನು ಗಮನಿಸಬೇಕು; ವಿಧವೆಯರು, ವಿಧುರರು ಮಂಗಲ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದೆಂಬ ನಂಬುಗೆ ನಮ್ಮ ಸಂಸ್ಕೃತಿಯ ಭಾಗವಾಗಿರುವುದರಿಂದ, ಮತ್ತು ದಂಪತಿಗಳು ಪರಸ್ಪರ ಹೆಸರು ಹೇಳುವುದು ಖುಷಿಯ ಸಂಗತಿಯಾಗಿರುವುದರಿಂದ

ವಿಧವೆಯರು ಮತ್ತು ವಿಧುರರು ಒಡಪುಗಳನ್ನು ಬಳಸಲು ಸಾಧ್ಯವಾಗುವುದಿಲ್ಲ.

"ಮಂಗಲ ಪ್ರಸಂಗಗಳಲ್ಲದೆ ಗುಳ್ಳವ್ವ (ಗುಳಕವ್ವ)ನ ಹಬ್ಬ, ನಾಗಪಂಚಮಿ ಮೊದಲಾದ ಹಬ್ಬಗಳಲ್ಲೂ ಕೆಲವೆಡೆ ಹೆಸರು ಕೇಳುವ ಮತ್ತು ಹೇಳುವ ಪದ್ಧತಿ ಇದೆ" (ಅದೆ, ಪು.೬). ಅಪರೂಪಕ್ಕೆ ಇಂತಹ ಪ್ರಸಂಗಗಳಲ್ಲಿ ಮೋಜಿಗಾಗಿ ದಂಪತಿಗಳು ಹೆಸರು ಹೇಳುವ ಪದ್ಧತಿ ರೂಢಿಯಾಗಿ ಬಂದಿರಬೇಕೆನಿಸುತ್ತದೆ. ಆದರೆ ಒಡಪುಗಳು ಹುಟ್ಟುವುದು ಹೊಸದಾಗಿ ಮದುವೆಯಾದ ಗಂಡ-ಹೆಂಡತಿಯರ ಸರಸ ಪ್ರಸಂಗದಲ್ಲಿ, ಅಲ್ಲಿಯೇ ಅವು ಬಳಕೆಯಾಗುವುದು ಸಹಜ. ಅದರ ಜೊತೆಗೆ ಮುತ್ತೈದೆಯರು ಭಾಗವಹಿಸುವ ಮಂಗಲ ಪ್ರಸಂಗಗಳಲ್ಲಿ ಸರಸಕ್ಕಾಗಿ, ಮೋಜಿಗಾಗಿ ಹೆಸರು ಹೇಳುವ ಪದ್ಧತಿ ರೂಢಿಯಾಗಿ ಬಂದಿರುವ ಸಾಧ್ಯತೆ ಇದೆ.

೧೯೭೪ರಲ್ಲಿ ಪ್ರಕಟವಾದ ಡಾ। ಎಂ.ಎಸ್.ಲಠ್ಠೆ ಅವರ ಒಡಪುಗಳ ಸಂಗ್ರಹ **'ಉತ್ತರ ಕರ್ನಾಟಕದ ಒಡಪುಗಳು'** ತುಂಬ ಪ್ರಸಿದ್ಧವಾದುದು. ಮುಖ್ಯವಾಗಿ ಕಲಬುರಗಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ, ಬೆಳಗಾಂವ, ಬಿಜಾಪೂರ ಈ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಸುಮಾರು ೪೬೧ ಒಡಪುಗಳ ಒಂದು ಅಪರೂಪದ ಸಂಗ್ರಹ. ಇದರಲ್ಲಿ ಮುಖ್ಯವಾಗಿ ಹೆಣ್ಣುಮಕ್ಕಳ ಒಡಪುಗಳು, ಗಂಡುಮಕ್ಕಳ ಒಡಪುಗಳು ಎಂಬ ಎರಡು ಪ್ರಕಾರಗಳನ್ನು ಮಾಡಿಕೊಂಡಿದ್ದಾರೆ. 'ಹೆಣ್ಣುಮಕ್ಕಳ ಒಡಪುಗಳು' ಎಂಬಲ್ಲಿ- 'ಹೆಸರು ಹೇಳುವ ಅಕ್ಕರತೆ, ಗಂಡನ ಗುಣಗೌರವ, ಗಂಡನ ಗುಣದೋಷಗಳು, ದಾಂಪತ್ಯ ಪ್ರೇಮ' ಎಂದು ನಾಲ್ಕು ಪ್ರಕಾರಗಳನ್ನು ಮಾಡಿಕೊಂಡಿದ್ದಾರೆ. 'ಗಂಡುಮಕ್ಕಳ ಒಡಪುಗಳು' ಎಂಬ ಭಾಗದಲ್ಲಿ 'ದಾಂಪತ್ಯ ಪ್ರೇಮ, ಹೆಂಡತಿಯ ಮಂಡತನ' ಎಂಬ ಎರಡು ಪ್ರಕಾರಗಳನ್ನು ಗುರುತಿಸಿಕೊಂಡಿದ್ದಾರೆ. ಗಂಡುಮಕ್ಕಳ ಒಡಪುಗಳ ಸಂಖ್ಯೆಯು ಗಣನೀಯವಾಗಿ ಕಡಿಮೆ ಇರುವುದು ಕಂಡುಬರುತ್ತದೆ.

ಪ್ರಸ್ತಾವನೆಯಲ್ಲಿ ಒಡಪುಗಳನ್ನು ಕುರಿತು ಹೀಗೆ ವಿವರಿಸಿದ್ದಾರೆ: "ರಾಜ-ಮಹಾರಾಜರ, ದೇವ-ದೇವತೆಗಳ, ಪೀಠಾಧಿಪತಿಗಳ ಸ್ವಸ್ತಿ ಸಮಸ್ತ ಪ್ರಶಸ್ತಿಗಳನ್ನು ನಮ್ಮವರು ಹಾಡಿ ಹೊಗಳುವುದುಂಟು. ಇವು ಅವರವರ ಶಕ್ತಿ, ಸಾಮರ್ಥ್ಯ, ಕೀರ್ತಿ, ಲೀಲೆಗಳಿಂದ ಕೂಡಿದಂಥವುಗಳು. ...ಜನಸಾಮಾನ್ಯರ ಜೀವನದಲ್ಲೂ ಮದುವೆಯಿಂದ ಮಸಣದವರೆಗಿನ ಮಧ್ಯಂತರದ ಮಂಗಲ ಕಾರ್ಯಗಳಲ್ಲಿ ಗಂಡನಾದವನು ಹೆಂಡತಿಯ, ಹೆಂಡತಿಯಾದವಳು ಗಂಡನ ಗುಣಸಾಮರ್ಥ್ಯಗಳನ್ನೂ ಒಕ್ಕಣಿಕೆಯ ರೂಪದಲ್ಲಿ ಹೇಳುವುದುಂಟು. ಅವೇ ಗಂಡ-ಹೆಂಡರ ಈ ಒಡಪುಗಳು"(ಪು.೧೨). ಒಡಪುಗಳಿಗೆ ಸಂಬಂಧಿಸಿದಂತೆ ಈ ಮಾತುಗಳು ಸರ್ವೇಸಾಮಾನ್ಯವಾಗಿ ಎಲ್ಲರೂ ಒಪ್ಪುವಂತಹ ಮಾತುಗಳು. ಈ ಅಭಿಪ್ರಾಯವನ್ನು ಮುಂದುವರೆಸುವ ಈ ಕೃತಿಗೆ ಮುನ್ನುಡಿ ಬರೆದಿರುವ ಡಾ. ಬಿ.ಬಿ.ಹೆಂಡಿ ಅವರು "ನಾಗರಿಕತೆಯ ಚರಿತ್ರೆಯಲ್ಲಿ ಉಚ್ಚವರ್ಗದ ರೀತಿ-ನೀತಿಗಳನ್ನು ಸಾಮಾನ್ಯ ಜನತೆ ಅನುಕರಿಸುವುದು ಒಂದು ಅಂಶವಾದರೆ, ಜನಸಾಮಾನ್ಯರ ರೂಢಿ ಪದ್ಧತಿಗಳೇ ಶಿಷ್ಟತೆಯ ರೂಪ ತಾಳಿ ಉಚ್ಚ ವರ್ಗದಲ್ಲಿ ಪ್ರವೇಶಿಸುವುದೂ ಇನ್ನೊಂದು ಅಂಶವಾಗಿದೆ.

ರಾಜ ಮಹಾರಾಜರ ಬಿರುದಾವಳಿಗಳ ಹಿಂದೆ ಐತಿಹಾಸಿಕ ಸಂಗತಿಗಳ ಆಧಾರವಿರುತ್ತದೆ. ಒಡಪುಗಳಲ್ಲೋ ಹಾಗಲ್ಲ. ಇವು ಹೇಳುವ ವರ್ಣನಾಂಶಗಳು ಬಹುಮಟ್ಟಿಗೆ ಆರೋಪಿತವಾದವುಗಳು. ವ್ಯಕ್ತಿಸಂಬಂಧಿಯಾದ ಚರಿತ್ರಾಂಶಗಳ ತಳಹದಿ ಅವಕ್ಕಿರುವದಿಲ್ಲ" (ಮು.ಪು.೬.) ಎನ್ನುವುದು ಹೆಂಡಿ ಅವರ ಅಭಿಪ್ರಾಯವಾಗಿದೆ. ಮುಂದುವರೆದು ಅವರು ಹೀಗೆ ಬರೆಯುತ್ತಾರೆ : "ರಚನಾ ರೂಪದ ದೃಷ್ಟಿಯಿಂದಲೂ ಒಡಪುಗಳಿಗೂ ಪ್ರಶಸ್ತಿ ವಚನಗಳಿಗೂ ಅಂತರವಿದೆ. ಒಡಪುಗಳಲ್ಲಿ ಲಯಬದ್ಧತೆ, ಗೇಯತೆ, ಸಮರೂಪಗಳಿದ್ದರೆ ಪ್ರಶಸ್ತಿಗಳಲ್ಲಿ ಹಾಗಿರಲೇಬೇಕೆಂಬ ಅನಿವಾರ್ಯವಿಲ್ಲ. ಪ್ರಶಸ್ತಿಯ ಉದ್ದೇಶ ವ್ಯಕ್ತಿಯ ಅಗ್ಗಳಿಕೆಯನ್ನು ಮಾತ್ರ ಎತ್ತಿ ತೋರಿಸುವದಾಗಿದ್ದರೆ, ಒಡಪುಗಳಲ್ಲಿ ಗುಣಗಾನದ ಜೊತೆಗೆ ವಿನೋದ, ವಿಡಂಬನೆಯೂ ಇರುತ್ತದೆ. ಆದುದರಿಂದ ಒಡಪು ಹಾಗು ಬಿರುದಾವಳಿಗಳಲ್ಲಿ ಸಂತಾನ ಸಂಬಂಧವನ್ನು ಹಚ್ಚುವುದು ಸಾಧ್ಯವಿಲ್ಲವಾಗುತ್ತದೆ" (ಮು.ಪು.೬) ಎನ್ನುತ್ತಾರೆ. ರಾಜಮಹಾರಾಜರ ಬಿರುದಾವಳಿಗಳ ಪ್ರಭಾವದಿಂದ ಒಡಪುಗಳು ಹುಟ್ಟಿದವು ಎನ್ನುವುದಕ್ಕಿಂತ, ಜನಸಾಮಾನ್ಯರಲ್ಲಿಯೇ ಅಂತಹ ಭಿನ್ನವಾದ ಸಂಪ್ರದಾಯವೊಂದು ಇರುವುದನ್ನು ಡಾ. ಹೆಂಡಿ ಅವರು ವಿವರಿಸುತ್ತಾರೆ. "ಪ್ರತಿಷ್ಠಾಪ್ರೀತಿ ಉಚ್ಚವರ್ಗದವರಿಗಷ್ಟೇ ಮೀಸಲಾದ ಮನೋವೃತ್ತಿಯಲ್ಲ. ಸಾಮಾನ್ಯ ಜನರಿಗೂ ಅದು ಇಷ್ಟವಾದುದೆ. ಅಂತೆಯೆ ಹಿಂದೆ ಪತ್ರ ಬರೆಯುವಾಗ 'ರಾಜಮಾನ್ಯ ರಾಜಶ್ರೀ', 'ತೀರ್ಥರೂಪ', 'ತೀರ್ಥಸ್ವರೂಪ' ಎಂದು ಒಕ್ಕಣಿಸುವ ರೂಢಿ ಇದ್ದಿತು. ಮದುವೆ, ಶೋಭನ ಸೀಮಂತಾದಿ ಸಂದರ್ಭಗಳಲ್ಲಿ ಉತ್ಸಾಹ ಹಿಗ್ಗಿ ನೂರ್ಮಡಿಸಿದಾಗ ಸಾಮಾನ್ಯ ವ್ಯಕ್ತಿಗಳೂ ತಮ್ಮನ್ನು 'ಶ್ರೀಮಾನ್'ರನ್ನಾಗಿ ಭಾವಿಸಿಕೊಂಡುದು ಸ್ವಾಭಾವಿಕ. ಸಹಜ ವಿನೋದಪರತೆಯೂ ಸೇರಿ ಒಡಪುಗಳಿಗೆ ವಿಶಿಷ್ಟವಾದ ಹೊಗರು ಪ್ರಾಪ್ತವಾಯಿತೆನ್ನಬಹುದು"(ಮು.ಪು.೬). ಇದು ಸಹಜವಾಗಿ ಒಪ್ಪಬಹುದಾದ ಸಂಗತಿಯೆನಿಸುತ್ತದೆ. ಒಲುವು ಇದ್ದಲ್ಲಿ ವರ್ಣನೆ ತಾನೇ ಚಿಮ್ಮಿಬರುವುದು ಸಹಜ. ಈ ಪ್ರೀತಿ, ಒಲುವು, ಪರಸ್ಪರ ಗೌರವ ಇವುಗಳನ್ನು ವ್ಯಕ್ತಪಡಿಸುವ ರೀತಿನೀತಿಗಳು ಪರಂಪರೆಯಿಂದಲು ಜನಸಾಮಾನ್ಯರಲ್ಲಿ ಕಾಣಿಸಿಕೊಳ್ಳುವುದು ಸಹಜ. ಹೀಗೆಯೇ ಒಲವಿನ ಅಭಿವ್ಯಕ್ತಿ ರೂಪಗಳೇ ಒಡಪುಗಳಾಗಿರುವುದು ಸಹಜ.

ಡಾ. ಎಂ.ಎಸ್. ಲಠ್ಠೆ ಅವರ ಈ **'ಉತ್ತರ ಕರ್ನಾಟಕದ ಒಡಪುಗಳು'** ಎಂಬ ಸಂಗ್ರಹ ಪ್ರಾರಂಭದ ಒಡಪುಗಳ ಸಂಗ್ರಹಗಳಲ್ಲಿ ಉತ್ತಮವಾದ ಸಂಗ್ರಹವಾಗಿದೆ. ಮಾತಿಲ್ಲ. ಮೇಲಾಗಿ ಈ ಕೃತಿಗೆ ಆಗ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದುದು ಅದರ ಗುಣಮಟ್ಟವನ್ನು ತೋರಿಸುತ್ತದೆ. ಪ್ರಸ್ತಾವನೆಯಲ್ಲಿ ಡಾ. ಲಠ್ಠೆ ಅವರು ಒಡಪು ಪದದ ಅರ್ಥವನ್ನು ವಿವರಿಸಿ ಹೇಳಲು ಪ್ರಯತ್ನಪಟ್ಟಿದ್ದಾರೆ. "ಒಡಪು ಎನ್ನುವ ಶಬ್ದ 'ಪೊಡರ್ಪು' ಶಬ್ದದಿಂದ ಬಂದಿರಬೇಕು. ಪೊಡರ್ ಮೂಲ ಶಬ್ದಕ್ಕೆ 'ಪು' ಪ್ರತ್ಯಯ ಸೇರಿ, ಪೊಡರ್ಪು ಆಗಿದೆ. ಪೊಡರ್ಪು ಎನ್ನುವುದಕ್ಕೆ Glitter, Shine, Lustre, Brightness, Glory, Power ಎನ್ನುವ ಅರ್ಥವಿದೆ. ಪೊಡರ್ಪು– ಪೊಡಪು–ಹೊಡಪು–ಒಡಪು ಎಂದಾಗಿರಬೇಕು. ಸೌಲಭ್ಯಾಕಾಂಕ್ಷಿಯಿಂದಾಗಿ ಈ

ಒಡಪು ಶಬ್ದ 'ಒಳ್ಪು ಒಪ್ಪು' ಎಂದಾಗಿರಬೇಕು. ಅಂದ-ಚಂದ ಈ ಒಡಪುಗಳಿಗೆ 'ಒಪ್ಪಾ ಇಟ್ಟು ಹೇಳು' ಎಂದೂ ಗಂಡ-ಹೆಂಡರ ಗುಣ ಸಾಮರ್ಥ್ಯಗಳನ್ನು ಧ್ವನಿಪೂರ್ಣವಾಗಿ ರಸವತ್ತಾದ ನುಡಿಗಳಲ್ಲಿ ಹೇಳುವುದರಿಂದ ಇವುಗಳಿಗೆ 'ಅರ್ಥಾ ಇಟ್ಟು ಹೇಳು' ಎಂದೂ ಕರೆಯುವ ಸಂಪ್ರದಾಯವಿದೆ" (ಪು.೧೨-೧೩) ಎಂದು ಡಾ. ಲಠ್ಠೆ ಅವರು ವಿವರಿಸಿದ್ದಾರೆ. ಈ ವಿವರಣೆ ಸರಿಯಾಗಿದೆ; ಮಾಹಿತಿಪೂರ್ಣವಾಗಿದೆ. ಒಡಪುಗಳ ಮೂಲ ಗುಣ ಸೌಂದರ್ಯ. ಅದರ ವಸ್ತುವೂ ಸುಂದರವಾದುದು. ಅಲ್ಲಿಯ ಆಯ್ಕೆಯೂ ಸೌಂದರ್ಯವೇ. ಒನಪು, ವಯ್ಯಾರಗಳಿಂದ ಕೂಡಿದ ಮಾತಿನ ಸಂಭ್ರಮ ಅದು. ಈ ಒನಪು ಒಪ್ಪವಾಗಿರುತ್ತದೆ. ಬಹುಶಃ ಒನಪು ಒಡಪು ಆಗಿರಲೂ ಬಹುದಾಗಿದೆ. "ಸ್ತ್ರೀಯು ತನ್ನ ಪತಿಯ ರೂಪ, ರುಚಿ, ಹಾವ-ಭಾವ-ವಿಲಾಸ-ವಿಭ್ರಮಗಳನ್ನೆಲ್ಲ ಮನಮುಟ್ಟಿ ನೋಡಿದ್ದಾಳೆ, ಎದೆ ತುಂಬಿ ಮೆಚ್ಚಿ ಬಣ್ಣಿಸಿದ್ದಾಳೆ- ತನ್ನ ಒಡಪುಗಳಲ್ಲಿ. ಪುರುಷನಿಗೆ ಈ ಹೃದಯವಂತಿಕೆಯಿಲ್ಲವೆಂದಲ್ಲ. ಆದರೆ ತನ್ನ ಸತಿಯ ವಿಷಯಕವಾದ ಕೋಮಲ ಭಾವನೆಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಲು ಆತನಿಗೆ ಸಂಕೋಚ. ಆತನ ಸ್ವಾಭಿಮಾನ ತಡೆಗಟ್ಟುತ್ತಿದೆ"(ಮು.ಪು.೭). ಇದು ಹೆಂಗಸರ ಒಡಪುಗಳು ಮತ್ತು ಗಂಡಸರ ಒಡಪುಗಳಿರುವ ವ್ಯತ್ಯಾಸ. ಉದಾಹರಣೆಗೆ :

ಹೆಣ್ಣುಮಕ್ಕಳ ಒಡಪು :

ಗುಂಡ ಹೂವ ಮಲ್ಲಿಗಿ ಹೂವ
ಚಂಡ ಹೂವ ಚೆಂದನ್ನ ಹೂವ
ಗಂಡಮಕ್ಕಳ ಬೇಡಿ ದೇವರ ಮುಂದ
ದಿಂಡರಕಿ ಉಳ್ಳತಾರ. . . .

ಮನಿಗೆ ಮಕ್ಕಳ ಚಂದ
ಬನಕ ಬಾಳಿ ಚಂದ
ಹೆಣ್ಣಿಗೆ ಚೊಚ್ಚಲ ಬಸರ ಚಂದ
ಕಣಕ್ಕ ರಾಶಿ ಚಂದ
ಹೆಣ್ಣಾಗ್ಲಿ ಕ್ಯಾದಿಗಿ ಚಂದ
ನಮ್ಮವರ ಮಕಕ್ಕ ಕುಡಿಮೀಸಿ ಚಂದ . . .

ಗಂಡಸರ ಒಡಪುಗಳು :

ಕಂಚಿನ ಕಣಕಲ ಮುತ್ತಿನ ಅಡಕಲ
ಅತ್ತಿ ಹೊಟ್ಟಿಲೆ ಮುತ್ತೋದಿ ಹುಟ್ಯಾಳ . . .

ಮೂಗಿನಾಗ ನತ್ತ ಕೊಳ್ಳಾಗ ಮುತ್ತ
ನಮ್ಮಾಕಿ ಯಾವಾಗಲೂ ನನ್ನ ಸುತ್ತ . . .

ಹೆಂಗಸರ ಮತ್ತು ಗಂಡಸರ ಒಡಪುಗಳಿಗೆ ವ್ಯತ್ಯಾಸ ಗುರುತಿಸುವ ಡಾ. ಬಿ.ಬಿ.ಹೆಂಡಿ ಅವರು ಹೀಗೆ ವಿವರಿಸುತ್ತಾರೆ : "ಸ್ತ್ರೀಯರು ಹೆಣೆದ ಒಡಪುಗಳಲ್ಲಿ ಹೆಚ್ಚಿನ ಲಾಲಿತ್ಯ, ಮಾಧುರ್ಯ, ವೈವಿಧ್ಯಗಳಿದ್ದರೆ, ಪುರುಷರು ಹೇಳುವಂತಹವು ಬಹುಮಟ್ಟಿಗೆ ಒರಟಾಗಿಯೂ ಚುಟುಕಾಗಿಯೂ ಕಂಡುಬರುತ್ತವೆ"(ಮು.ಪು.೭).

ಡಾ. ಲಠ್ಠೆ ಅವರ ಈ ಕೃತಿಯ ಇನ್ನೊಂದು ವಿಶೇಷವೆಂದರೆ ಒಡಪುಗಳ ಸಾಹಿತ್ಯಿಕ ಗುಣಗಳನ್ನು ಎತ್ತಿ ತೋರಿಸುವ ಪ್ರಯತ್ನವನ್ನು ಪ್ರಸ್ತಾವನೆಯಲ್ಲಿ ಮಾಡಿರುವುದು. ಪ್ರಾಸಬದ್ಧ ರಚನೆ, ದಿನಬಳಕೆಯ ಜೀವಂತ ಭಾಷೆ, ದಾಂಪತ್ಯ ಪ್ರೇಮ, ಕಲ್ಪನೆಯ ಸೊಗಸು, ಹೃದಯದ ಮಿಡಿತ, ಅನುಭವಿಸಿದ ಜೀವಂತ ಚಿತ್ರಗಳು, ಸಮಾಜದ ದೋಷ – ಈ ಮುಂತಾದ ವಿಷಯಗಳಿಗೆ ಅತ್ಯಂತ ಸೂಕ್ತವಾದ ಉದಾಹರಣೆಗಳನ್ನು ಎತ್ತಿ ಕೊಟ್ಟಿರುವುದು ಇಲ್ಲಿಯ ವಿಶೇಷ.

ಪ್ರಾಸಬದ್ಧ ರಚನೆ :

'ಹಂಡ ಮಾರಿ ಹೋರಿ ದುಂಡಮಾರಿ ಪೋರಿ'

'ಬಂಗಾರ ವಂಕಿ ಬನಾರಸಿ ಸೀರಿ
ಬಂದಿ ಹೂವಿನ ಕುಬಸ ಬಂದಾಳೊ ಇಲ್ಲೊ ಅಂತ
ಬಗ್ಗಿ ಬಗ್ಗಿ ನೋಡ್ತಾನ'

ದಿನಬಳಕೆಯ ಜೀವಂತ ಭಾಷೆ :
ಕಟಕ ರೊಟ್ಟಿ ತಟಕ ತುಪ್ಪ
ಕಟಗೊಂಡ ಹೋಗಂದ್ರ
ಸೆಟಗೊಂಡ ಹೋಗ್ತಾನ

ದಾಂಪತ್ಯ ಪ್ರೇಮ :
ಸಿಂಗಾರ ಸೀತಿಮನಿ ಬಂಗಾರ ದವತಿ ಮನಿ
ಪತಿಧರ್ಮಕ್ಕ ಕಂಡೇವ್ರಿ ಗುಳದಾಳಿ ಗರುತಿನ ಮನಿ

ಕಲ್ಪನೆಯ ಸೊಗಸು:
ಬೆಳದಿಂಗಳ ಬೆಳಕ ಕಲ್ಲಸಕ್ಕರಿ ಹಳಕ
ನಕ್ಷತ್ರಮ್ಯಾಲ ಕುತ್ತ ಅಕ್ಷಾರ ಬರೀತಾನ

ಹೃದಯದ ಮಿಡಿತ:
ಬಂಗಾರ ಬಾಯಿಗಿ ಸಿಂಗಾರ ತುಟಿ
ಬೆಲ್ಲಾ ಕುಡು ಅಂದ್ರ ಒಲ್ಲೆ ಹುಹೂಂ ಅಂತಾಳ

ಅನುಭವಿಸಿದ ಜೀವಂತ ಚಿತ್ರಗಳು:
ಹೆಪ್ಪ ಹಾಕಿದ್ರ ಹಾಲಮಸರ
ಬೀಜಾ ಬಿತ್ತಿದ್ರ ಹೊಲಾ ಹಸರ
ನಾ ಹೇಳಿದ್ರ ನಮ್ಮವರ ಹೆಸರ

ಸಮಾಜದ ದೋಷ :
ನಾಲ್ಯಾಗ ಕೆಸರ ನೆಲ್ವಿನಮ್ಯಾಲ ಮಸರ ನನ್ನಲ್ಲಿಲ್ಲ ಕಸರ
ನಾನೂ ನನ್ನ ತಂಗಿ ಹೇಳೋದು ನಲ್ಲನದೊಬ್ಬನದಃ ಹೆಸರ

ಹೀಗೆ ಒಂದು ಸಾಹಿತ್ಯ ರೂಪದಲ್ಲಿ ಇರಬೇಕಾದ ಎಲ್ಲ ಗುಣಗಳನ್ನು ಒಡಪುಗಳಲ್ಲಿ ಗುರುತಿಸುವ ಪ್ರಯತ್ನವನ್ನು ಸಂಪಾದಕರು ಮಾಡಿದ್ದಾರೆ. ಹೀಗಾಗಿ ಡಾ. ಎಂ.ಎಸ್.ಲಠ್ಠೆ ಅವರ ಪ್ರಸ್ತಾವನೆ, ಅದಕ್ಕೆ ಡಾ. ಬಿ.ಬಿ.ಹೆಂಡಿ ಅವರು ಬರೆದ ಮುನ್ನುಡಿ ಇವೆರಡೂ ವಿಶೇಷವಾಗಿವೆ. ಹೀಗಾಗಿ ಉತ್ತರಕರ್ನಾಟಕದ ಪ್ರಾತಿನಿಧಿಕ ಒಡಪುಗಳ ಸಂಗ್ರಹವಾಗಿ ಈ ಕೃತಿ ಗಮನ ಸೆಳೆಯುತ್ತದೆ.

೧೯೭೭ರಲ್ಲಿ **'ಬಳ್ಳಾರಿ ಜಿಲ್ಲೆಯ ಒಡಪುಗಳು'** ಎಂಬ ಸಂಗ್ರಹವೊಂದನ್ನು ಸಾಹಿತ್ಯಾನಂದ ಎನ್ನುವವರು ಪ್ರಕಟಿಸಿದ್ದಾರೆ. ೧೯೬೭ರಿಂದ ಪ್ರಾರಂಭವಾದ ಈ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ಮತ್ತು ಪ್ರಕಟನೆಯ ಕೆಲಸಗಳು ಹೀಗೆ ಪ್ರದೇಶದಿಂದ ಪ್ರದೇಶಕ್ಕೆ ವಿಸ್ತಾರಗೊಳ್ಳುತ್ತ ಹೊಗುವುದನ್ನು ನಾವು ಗಮನಿಸುತ್ತೇವೆ. ಒಂದು ಹೊಸ ಪ್ರಕಾರದ ಸಾಹಿತ್ಯ ಸಂಗ್ರಹ ಪ್ರಕಟವಾದ ಕೂಡಲೇ ಮತ್ತೆ ಇನ್ನೊಂದು ಪ್ರದೇಶದ ಒಬ್ಬ ಆಸಕ್ತ ಆ ಪ್ರಕಾರವನ್ನು ತನ್ನ ಪ್ರದೇಶದಲ್ಲಿ ಹುಡುಕಾಡಿ, ಸಂಗ್ರಹಿಸಿ ಪ್ರಕಟಿಸುವ ಪ್ರಯತ್ನವನ್ನು ಮಾಡುತ್ತಾನೆ. ಸಾಹಿತ್ಯಾನಂದ ಅವರು ಬಳ್ಳಾರಿ ಜಿಲ್ಲೆಯವರೆಂದು ತೋರುತ್ತದೆ. ಬೆಂಗಳೂರಿನಲ್ಲಿ ವಾಸವಾಗಿದ್ದ ಇವರು ಪತ್ರಿಕಾ ಪ್ರಕಟನೆಯೊಂದನ್ನು ಕೊಟ್ಟು, ತಮಗೆ ಒಡಪುಗಳನ್ನು ಕಳಿಸಿಕೊಡುವಂತೆ ವಿನಂತಿಸಿಕೊಳ್ಳುತ್ತಾರೆ. ಅಂಚೆ ಮೂಲಕ ತಮಗೆ ಬಂದ ಒಡಪುಗಳಲ್ಲಿ ಉತ್ತಮವಾದುವನ್ನು ಆಯ್ದುಕೊಂಡು – 'ಮಹಿಳೆಯರು ಹೇಳುವ ಒಡಪುಗಳು' ಹಾಗೂ 'ಪುರುಷರು ಹೇಳುವ ಒಡಪುಗಳು' ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. ಮತ್ತೆ ಈ ಎರಡು ಪ್ರಕಾರದ ಒಡಪುಗಳನ್ನು ವಿಷಯಾನುಸಾರ ಮತ್ತು ಸಂದರ್ಭಾನುಸಾರ, ಆ ಒಡಪುಗಳ ಸಾಲುಗಳನ್ನೇ ಬಳಸಿಕೊಂಡು ಹೆಂಗಸರ ಒಡಪುಗಳನ್ನು ೩೦ ಪ್ರಕಾರಗಳಲ್ಲಿ ವಿಭಾಗಿಸಿಕೊಳ್ಳುತ್ತಾರೆ : ೧. ಕುಂತ ಸಭಾದಾಗ ನಿಂತು ಹೇಳುವೆ, ೨. ಸುಗಂಧ ಹೂ ಇದ್ದಲ್ಲಿ ಸುಳಿದಾಡ್ತಾರೆ, ೩. ರಾಯರೇ ನನಗೆ ದೊರಿ, ೪. ಅತ್ತಿ ಹೊಟ್ಟೇಲಿ ಮುತ್ತಿನಂಥಾವ್ರು ಹುಟ್ಯಾರ, ೫. ನಾ ಬೇಕು ನಮ್ಮ ರಾಯರಿಗೆ–ಮುಂತಾಗಿ ಒಡಪುಗಳ ಸಾಲುಗಳನ್ನೇ ಬಳಸಿಕೊಂಡು ವಿಭಜಿಸಿಕೊಂಡಿದ್ದಾರೆ. ಪುರುಷರ ಒಡಪುಗಳನ್ನು ೯ ಪ್ರಕಾರಗಳಲ್ಲಿ : ೧. ಕುರ್‍ಚ್ಯಾಗ ಕುತ್ಗೊಂಡು ಕರ್ಚಿಕಾಯಿ ತಿಂತಾಳೆ, ೨. ನನ್ನ ಹೆಣ್ತಿ ಭಾಳ ಬೆರ್ಕಿ, ೩. ಅತ್ತಿ ಹೊಟ್ಟಿಲಿ ಹಟಮಾರಿ ಹುಟ್ಯಾಳೆ, ೪. ಮುದ್ದಿ ಉಂಡು ನಿದ್ದಿ ಮಾಡ್ತಾಳೆ– ಮುಂತಾಗಿ ಒಂಬತ್ತು ಪ್ರಕಾರಗಳಲ್ಲಿ ವಿಭಜಿಸಿ ಕೊಟ್ಟಿದ್ದಾರೆ. ಹೆಣ್ಣುಮಕ್ಕಳ ೧೭೬ ಒಡಪುಗಳು, ಗಂಡುಮಕ್ಕಳ ೫೫ ಒಡಪುಗಳು; ಒಟ್ಟಿಗೆ ೨೮೮ ಒಗಟುಗಳು ಈ ಕೃತಿಯಲ್ಲಿವೆ.

ಹಸರ ಸೀರಿ ಉಟ್ಟಾಳ
ಮುಂದೆಲಿಗಿ ಮುಸಕ ಹಾಕ್ಯಾಳ

ಬಾಳಮಂದಿ ಬಾಯಾಗ
ಬಾಳೇವಂತಿ ಅನಿಸಿಗೊಂತಾಳ . . .

ಇಂತಹ ಉತ್ತಮ ಒಡಪುಗಳನ್ನು ಈ ಸಂಗ್ರಹದಲ್ಲಿ ಆಯ್ದು ಹಾಕಿಕೊಂಡಿದ್ದಾರೆ. ವಿಶೇಷವಾಗಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಒಡಪುಗಳು ಇಲ್ಲಿರುವುದು ಗಮನಾರ್ಹ ಸಂಗತಿ. ಈ ಪ್ರದೇಶದಿಂದ ಸಂಗ್ರಹಗೊಂಡ ಮೊದಲ ಕೃತಿ ಇದು. ಹೀಗಾಗಿ ಈ ಕೃತಿ ಪ್ರದೇಶದ ದೃಷ್ಟಿಯಿಂದಲೂ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಮಹತ್ವವೆನಿಸುವ ವಿಚಾರಗಳನ್ನು ಹೊತ್ತ ಪ್ರಸ್ತಾವನೆ ಮಾತ್ರ ಇಲ್ಲಿ ಕಾಣುವುದಿಲ್ಲ.

೧೯೭೬ ರಲ್ಲಿ ಇಬ್ಬರು ಹೆಣ್ಣುಮಕ್ಕಳು ತಲಾ ಒಂದೊಂದು ಒಡಪುಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಜ್ಯೋತಿ ಹೊಸೂರ ಅವರಿಂದ ಒಡಪುಗಳ ಮೊದಲನೆಯ ಸಂಗ್ರಹ ೧೯೭೧ ರಲ್ಲಿ ಪ್ರಕಟವಾದರೆ, ಹೆಣ್ಣುಮಕ್ಕಳಿಗೆ ಸಂಬಂಧಿಸಿದ ವಿಶೇಷ ಪ್ರಕಾರವಾದ ಒಡಪುಗಳ ಸಂಗ್ರಹಕ್ಕೆ ತುಂಬಾ ತಡಮಾಡಿಯಾದರು ಹೆಣ್ಣುಮಕ್ಕಳು ಕೈಹಾಕಿದ್ದು ವಿಶೇಷವೇ ಆಗಿದೆ.

'ಜನಪದ ಒಡಪುಗಳು' ಶಾಂತಕುಮಾರಿ ಪಾಟೀಲ (ಡಾ.ಶಾಂತಾ ಇಮ್ರಾಪೂರ) ಅವರ ಒಂದು ಸುಂದರ ಒಡಪುಗಳ ಸಂಗ್ರಹ. ಇದರಲ್ಲಿ ೨೭೦ ಒಡಪುಗಳಿದ್ದು ಇವನ್ನು ಅಕಾರಾದಿಯಾಗಿ ಜೋಡಿಸಿದ್ದಾರೆ. "ಇಲ್ಲಿಯ ಒಡಪುಗಳನ್ನು ಹೇಳಿದವರೆಲ್ಲರೂ ಧಾರವಾಡ ಹಾಗೂ ವಿಜಾಪೂರದ ಜಿಲ್ಲೆಗಳಿಗೆ ಮಾತ್ರ ಸಂಬಂಧಪಟ್ಟವರು"(ಅರಿಕೆ, ಪು.೪) ಎಂಬ ಮಾತನ್ನು ಸಂಪಾದಕರು ತಾವು ಕ್ಷೇತ್ರಕಾರ್ಯ ಮಾಡಿದ ವ್ಯಾಪ್ತಿಯನ್ನು ದಾಖಲಿಸಿದ್ದಾರೆ. ಧಾರವಾಡ ಹಾಗೂ ಬಿಜಾಪೂರ ಭಾಗದ ಒಡಪುಗಳು ಇಲ್ಲಿ ಪ್ರಕಟವಾಗುತ್ತಿರುವುದು ಗಮನಿಸಬೇಕಾದ ಸಂಗತಿ. ಡಾ. ಲಠ್ಠೆ ಅವರ ಸಂಗ್ರಹದಲ್ಲಿ ಬಿಜಾಪೂರ ಜಿಲ್ಲೆಯ ಕೆಲವು ಒಡಪುಗಳು ಸೇರ್ಪಡೆಯಾಗಿದ್ದವು. ಇಲ್ಲಿ ಇನ್ನಷ್ಟು ಒಡಪುಗಳು ಆ ಭಾಗದಿಂದ ಸೇರ್ಪಡೆಗೊಳ್ಳುತ್ತಿವೆ.

"ಒಡಪು, ಒಗಟು ಹಾಗೂ ಒಡಬುಗಳ ಶಬ್ದೋತ್ಪತ್ತಿಯಲ್ಲಿ ಸಾಮ್ಯತೆ ಇದೆಯಾದರೂ ಆಯಾ ಪ್ರಕಾರಗಳ ಸ್ವರೂಪ, ಲಕ್ಷಣ, ಪ್ರಯೋಜನ, ಧೋರಣೆಗಳೇ ಬೇರೆ ಬೇರೆಯಾಗಿರುವುದರಿಂದ ಅವುಗಳನ್ನು ಒಂದೇ ನಿಟ್ಟಿನಿಂದ ನೋಡುವುದು ಅಸಾಧುವಾದುದು" (ಪ್ರ.ಪು.೮) ಎಂಬ ಸರಿಯಾದ ನಿರ್ಣಯವನ್ನು ಸಂಪಾದಕರು ತಾಳಿದ್ದಾರೆ. ಇಲ್ಲಿ ಕುತೂಹಲದ ಸಂಗತಿಯೆಂದರೆ ಡಾ. ಶಾಂತಾ ಇಮ್ರಾಪುರ ಅವರ ಪತಿ ಡಾ. ಸೋಮಶೇಖರ ಇಮ್ರಾಪೂರ ಅವರೇ ಮೊದಲು 'ಒಡಪು, ಒಗಟು ಹಾಗೂ ಒಡಬುಗಳಲ್ಲಿ ಸಾಮ್ಯತೆ ಕಾಣುತ್ತದೆ' ಎಂದು ಬರೆದವರು.

ಒಗಟುಗಳಿಗಿಂತ ಒಡಪುಗಳಲ್ಲಿ ಕಾವ್ಯದ ಶಕ್ತಿ ಸಹಜವಾಗಿಯೇ ಹೆಚ್ಚಾಗಿ ಕಾಣುತ್ತದೆ. ಏಕೆಂದರೆ ಒಡಪುಗಳಲ್ಲಿ ಪ್ರೀತಿ, ಪ್ರೇಮಗಳು ವಿಶೇಷವಾಗಿ ಕಾಣಿಸುವುದರಿಂದ ಒಲುವು ಇಲ್ಲಿ ಮುಖ್ಯವಾಗಿ ಕೆಲಸ ಮಾಡುತ್ತದೆ. ಇದರಿಂದಾಗಿ ಭಾಷೆ ತಾನಾಗಿಯೇ ಮೃದುವಾಗಿ, ಕಾವ್ಯಾತ್ಮಕವಾಗಿ ಸೃಜಿಸಲ್ಪಡುತ್ತದೆ.

ವೀಣೆಯಿಂದ ಹೊರಡುವುದು ಮಂಜುಳ ಧ್ವನಿ
ಕೋಲಾರದಲ್ಲಿರುವುದು ಬಂಗಾರದ ಖಣಿ
. . . ಅವರ ನುಡಿಗಳೆಂದರೆ ಅಮೃತದ ಹನಿ

ವಿಜಾಪುರ ಸಕ್ರಿ ಗೋದಿ ಬಕ್ರಿ
ಹಾಲ ಮೇಲಿನ ಕೆನಿ
ಹವಳ ಮುತ್ತಿನ ಗೊನಿ
ಊಟ ಮಾಡಂದ್ರ ಪ್ಯಾಟಿ ತಿರಗಾಕ ಹೋಗ್ತಾರ . . .

ಶರದೃತುವಿನ ರಾತ್ರಿಯಲ್ಲಿ ಉದಯನಾದ ಚಂದ್ರ
ನನ್ನಂಥ ಸತಿಗೆ . . .ರೇ ಇಂದ್ರ.

ವಾಸುದೇವನು ಶ್ರೀಕೃಷ್ಣನನ್ನು ಗೋಕುಲಕ್ಕೆ ಒಯ್ಯುವಾಗ
ಯಮುನೆಯು ಹಾದಿ ಬಿಟ್ಟಳು ಪರಮೇಶ್ವರನ ಪಾದ ತಾಕಿ
ಆ ವೇಳೆಗೆ ಅಪ್ಸರೆಯರು ಕುಣಿದರು ತಾಳ ಹಾಕಿ
. . . .ರಿಗೆ ನಮ್ಮ ತಂದೆತಾಯಿಯರು ಈ ದೇಹವನ್ನು ಅರ್ಪಿಸಿದರು
ಇಲ್ಲಿಯವರೆಗೆ ಹಾಲೆರೆದು ಸಾಕಿ.

ಇಂತಹ ಉತ್ತಮವಾದ ಒಡಪುಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ. ಡಾ. ಶಾಂತಾ ಇಮ್ರಾಪೂರ ಅವರು ಒಡಪುಗಳ ಸ್ವರೂಪವನ್ನು ಹೀಗೆ ಹೇಳುತ್ತಾರೆ: "ಒಡಪು ಎಂದರೆ 'ಒಡವೆ' ಅಂದರೆ ವಿಶೇಷಣ ಎನ್ನುವ ಅರ್ಥದಲ್ಲಿ ಪರಿಭಾವಿಸಿದರೆ ಒಡಪುಗಳು–ವಿಶೇಷಣಗಳೇ ಆಗಿರುವುದು ಸ್ಪಷ್ಟವಾಗುತ್ತದೆ. ಗಂಡನ ಇಲ್ಲವೆ ಹೆಂಡತಿಯ ಹೆಸರು ಹೇಳುವಾಗ ಒಪ್ಪುವ ಹಾಗೆ ಹೇಳುವುದು. ವಿಶೇಷಣ ಹಚ್ಚಿ ಹೇಳುವುದೆಂದರೆ ಅದೊಂದು ಮೋಜಿನ ಪ್ರಸಂಗ" (ಪ್ರ.ಪು.೮). ಅಂದರೆ ಒಡಪುಗಳು ವಿಶೇಷಣಗಳಂತೆ ಕೆಲಸ ಮಾಡುತ್ತವೆ ಎನ್ನುವ ಸಂಪಾದಕರ ಮಾತು ಸರಿಯಾಗಿದೆ. ಒಡಪುಗಳಲ್ಲಿ ಮುಖ್ಯವಾಗಿ ಎರಡು ಪ್ರಕಾರದ ಒಡಪುಗಳು ಕಾಣುತ್ತವೆ. ಹೆಣ್ಣುಮಕ್ಕಳ ಒಡಪುಗಳು ಮತ್ತು ಗಂಡುಮಕ್ಕಳ ಒಡಪುಗಳು. "ಹೆಣ್ಣುಮಕ್ಕಳ ಒಡಪುಗಳಲ್ಲಿ ಕಾಣಿಸಿಕೊಳ್ಳುವ ತಾಳ್ಮೆ, ಸಹನೆ ಹಾಗೂ ಅಪೂರ್ವ ಕಲಾವಂತಿಕೆ, ಗಂಡಿನ ಒಡಪುಗಳಲ್ಲಿ ದೊರಕುವುದು ದುಸ್ತರ. ಹೆಣ್ಣು ತನ್ನ ಗಂಡ ಎಂಥ ಕಟು ದುಷ್ಟನಿದ್ದರೂ ಆತನ ಬಗ್ಗೆ ಅಗಾಧ ಗೌರವ ಭಾವನೆ ತಳೆದರೆ, ಗಂಡು ಮಾತ್ರ ಎಂಥ ದೇವತೆಯಂಥ ಹೆಂಡತಿ ಇದ್ದರೂ ಅವಳನ್ನು ತೇಜೋಭಂಗಗೊಳಿಸಿ ಒಡಪು ಹೇಳುವುದುಂಟು. ಆದರೂ ಮನರಂಜನೆಯೇ ಮುಖ್ಯವಾಗಿಸಿಕೊಂಡ ಗ್ರಾಮೀಣರು ಇಂಥ ಅವಹೇಳನವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ" (ಪ್ರ.ಪು.೯). ಕಲೆಯ ದೃಷ್ಟಿಯಿಂದ ಹೆಣ್ಣುಮಕ್ಕಳ ಒಡಪುಗಳು ಬಲುಸುಂದರವಾಗಿರುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಮುಂದಿನ ಮಾತುಗಳಲ್ಲಿ ಸ್ತ್ರೀಪರ ಕಾಳಜಿಯ ಭಾವನೆಗಳು, ಒಂದು ರೀತಿಯಿಂದ ಸ್ತ್ರೀವಾದದ ಚಿಂತನೆಗಳು ವ್ಯಕ್ತಗೊಂಡಿವೆ. ಹೆಂಗಸರ ಒಡಪುಗಳು ಹೆಚ್ಚು ಕಾವ್ಯಾತ್ಮಕ ಗುಣಗಳಿಂದ ತುಂಬಿದ್ದು, ಓದುತ್ತಲೇ ಅವು ನಮಗೆ ಖುಷಿಕೊಡುತ್ತವೆ. ಆದರೆ ಗಂಡಸರ ಒಡಪುಗಳ

ಭಾಷಾಪ್ರಯೋಗವೇ ಒರಟಾಗಿ ಕಂಡು, ಹೀಗೆ ಹೆಂಡತಿಗೆ ಅವಮಾನವಾಗುತ್ತಿದೆ ಎಂದು ಭಾವಿಸಲು ಕಾರಣವಾಗುತ್ತಿದೆ.

ಡಾ. ಶಾಂತಾ ಇಮ್ರಾಪೂರ ಅವರು ಒಡಪುಗಳನ್ನು ಸುಶೀಕ್ಷಿತರ ಒಡಪುಗಳು, ಅಶಿಕ್ಷಿತರ ಒಡಪುಗಳು ಎಂದು ನೋಡಲು ಬಯಸುತ್ತಾರೆ. "ನನಗೆ ಒಡಪು ಹೇಳಿದವರಲ್ಲಿ ಕೆಲವರು ನಗರ ನಿವಾಸಿಗಳಾದರೆ, ಇನ್ನು ಕೆಲವರು ಗ್ರಾಮನಿವಾಸಿಗಳು. ನಗರವಾಸಿಗಳ ನಾಗರಿಕರ ಒಡಪುಗಳಲ್ಲಿ ಇತಿಹಾಸ, ಪುರಾಣ, ಐತಿಹ್ಯ, ಕಾವ್ಯ, ಸಾಹಿತ್ಯ, ಚರಿತ್ರೆ, ರಾಮಾಯಣ ಮಹಾಭಾರತಗಳಿಗೆ ಸಂಬಂದಿಸಿದ ಸಂಗತಿಗಳು ಹೆಚ್ಚು ಉಕ್ತವಾದರೆ, ಗ್ರಾಮೀಣರ ಒಡಪುಗಳಲ್ಲಿ ನಿಸರ್ಗ, ಕುಟುಂಬ ವಿವರ, ಗ್ರಾಮದೇವತೆಗಳು, ಐತಿಹ್ಯ ಇತ್ಯಾದಿಗಳು ಪ್ರಕಟವಾಗಿವೆ. ಗ್ರಾಮೀಣರ ಒಡಪುಗಳಲ್ಲಿಯ ವಾಸ್ತವತೆ, ಕಲ್ಪನಾ ಸಾಮಗ್ರಿಗಳು ನಗರ ನಿವಾಸಿಗಳ ಒಡಪುಗಲ್ಲಿ ಕಾಣಸಿಗದು. ಅವು ಕೃತ್ರಿಮವಾಗಿದ್ದು, ಸಾಹಿತ್ಯಿಕ ಶ್ರೀಮಂತಿಕೆಗೆ ಬಾಹಿರವಾಗಿವೆ. ಜನಪದ ಸಾಹಿತ್ಯದ ವಿಶೇಷ ಲಕ್ಷಣವಾದ ಸಾರ್ವತ್ರಿಕ ಸ್ವೀಕಾರಾರ್ಹತೆಗೆ ಅವು ತಕ್ಕ ಉದಾಹರಣೆಗಳಲ್ಲ. ಅಂಥವುಗಳನ್ನು ಜನಪದ ಶುದ್ಧ ಒಡಪುಗಳೆಂದು ಕರೆಯಬಹುದೇ? ಎಂಬುದೂ ವಿಚಾರಾರ್ಹ ಸಂಗತಿಯಾಗಿದೆ. ಇವು ಒಂದು ಸೀಮಿತ ಪರಿಸರಕ್ಕೆ ಮಾತ್ರ ಬದ್ಧವಾದವುಗಳು. ಗ್ರಾಮೀಣರ ಒಡಪುಗಳಂತೆ ಸಾರ್ವತ್ರಿಕ ಪ್ರಸಾರಯೋಗ್ಯತೆ ಈ ನಾಗರಿಕ ಒಡಪುಗಳಿಗಿಲ್ಲ"(ಪ್ರ.ಪು.೯–೧೦). ಸಂಪಾದಕರ ಈ ಪರಿಶೀಲನೆ ಒಪ್ಪುವಂಥದ್ದಾಗಿದೆ. ಜನಪದ ಹಾಡುಗಳಲ್ಲಿ ಇತ್ತೀಚೆಗೆ ಖೋಟಾ ಹಾಡುಗಳ ಹಾವಳಿ ಪ್ರಾರಂಭವಾಗಿದೆ. ಆದರೆ ಅದಕ್ಕಿಂತ ಬಹುಪೂರ್ವ ದಿಂದಲೇ ಖೋಟಾ–ಕಂತ್ರಿ ಒಡಪುಗಳ ಹಾವಳಿ ವಿಪರೀತವಾಗಿದೆ. ಮತ್ತು ಅವು ಈಗ ಹಳ್ಳಿಹಳ್ಳಿಗಳಲ್ಲಿ ಅಲ್ಪಸ್ವಲ್ಪ ಕಲಿತ ಹೆಣ್ಣುಮಕ್ಕಳ ಬಾಯಿ ಸೇರಿಕೊಂಡಿವೆ.

ನಾಗರಿಕ ಒಡಪುಗಳು :

'ಅಶ್ವತ್ಥಾಮನು ಪಾಂಡವ ವಂಶ ನಿರ್ಮೂಲನ ಮಾಡುವುದಕ್ಕಾಗಿ
ಉತ್ತರೆಯ ಗರ್ಭಕ್ಕೆ ಬಿಟ್ಟನು ಬ್ರಹ್ಮಾಸ್ತ್ರ
ಅದಕ್ಕೆ ಪ್ರತಿಯಾಗಿ ಅರ್ಜುನನು ಬಿಟ್ಟಿದ್ದು ಪಾಶುಪತಾಸ್ತ್ರ
.........ರ ಕೈಗೆ ಶೋಭಿಸುವುದು ನಾ ಕೊಡುವ ಕರವಸ್ತ್ರ'

'ಶ್ರೀರಾಮಚಂದ್ರನ ಪಾದಸ್ಪರ್ಶದಿಂದ ಆಯಿತು
ಆಹಲ್ಯೋದ್ಧಾರ . . . .ರು ಎನಗೆ ಪತಿಯಾಗಿ ದೊರೆತದ್ದರಿಂದ
ನಮ್ಮ ತಂದೆಯವರಿಗೆ ಇಳಿಯಿತು ಹೃದಯ ಭಾರ'

ಗ್ರಾಮೀಣ ಒಡಪುಗಳು :

'ಗಿಣಿ ಇದ್ರ ಗಿಡ ಚಂದ
ಹಸಿರು ಇದ್ರ ಅಡವಿ ಚಂದ

ಬಸರು ಇದ್ರ ನಾಡಿ ಚಂದ
ನನ್ನ ಜೋಡಿ ನನ್ನಾಕಿದ್ರ ನಾನs ಚಂದ್ರ'

'ಎಳ್ಳು ಹುವಿನ ಸೀರಿ
ಬೆಳ್ಳಿ ಕಾಲುಂಗರ
ಒಳ್ಳೆಯವರ ಮಗಳಂತ
ಹೊಳ್ಳೊಳ್ಳಿ ನೋಡತಾರ. . .'

ಇಂತಹ ಕೆಲವು ಒಡಪುಗಳನ್ನು, ಜೊತೆಗೆ ಸುಂದರವಾದ ಕೆಲ ಜನಪದ ಒಡಪುಗಳನ್ನು ಉಲ್ಲೇಖಿಸಿ ಡಾ. ಶಾಂತಾ ಅವರು ಹೀಗೆ ಬರೆಯುತ್ತಾರೆ : "ನಾಗರಿಕ ಒಡಪುಗಳು ಭಾಷೆ, ಭಾವ ಸಂಪತ್ತು, ಅಭಿವ್ಯಕ್ತಿಯ ನಾವಿನ್ಯತೆ ಎಲ್ಲಂದದಿಂದಲೂ ಕಳಪೆಯೆನಿಸುತ್ತವೆ. ಗ್ರಾಮೀಣರ ಅನುಭವ, ಭಾವ ಸಂಪತ್ತಿಗೆ ತಕ್ಕ ಕಾವ್ಯದಭಿವ್ಯಕ್ತಿ ಅನುಪಮವಾದುದು. ಒಡಪುಗಳು ಕಾವ್ಯದ ಶ್ರೇಷ್ಠ ಗುಣಗಳನ್ನು ಮೆರೆಯುತ್ತವೆ. ಪ್ರಾಸವಿನ್ಯಾಸ ಛಂದೋವೈವಿಧ್ಯದಿಂದ ಕಂಗೊಳಿಸುತ್ತವೆ. ರಸಿಕತೆ ಲಾಸ್ಯವಾಡುತ್ತದೆ. ಸಿಟ್ಟು ಸೆಡವು ಗಾಂಭೀರ್ಯಗಳು ಭೋರ್ಗರೆಯುತ್ತವೆ"(ಪ್ರ.ಪು.೧೨-೧೩).

೧೯೭೮ರಲ್ಲಿಯೇ ಬಂದ ಇನ್ನೊಂದು ಒಡಪುಗಳ ಸಂಗ್ರಹ **'ಕನ್ನಡ ಒಡಪುಗಳು'**. ಇದರ ಸಂಪಾದಕರು ಲೀಲಾವತಿ ತೋರಣಗಟ್ಟಿ. ಸಂಪಾದಕರು ಉತ್ತರ ಕರ್ನಾಟಕದವರು. ಆದರೆ ಈ ಕೃತಿ ಪ್ರಕಟವಾದುದು ಮೈಸೂರು ವಿಶ್ವವಿದ್ಯಾಲಯದಿಂದ. ಇಲ್ಲಿ ಒಟ್ಟಿಗೆ ೨೬೧ ಒಗಟುಗಳಿವೆ. ೧೬೬ ಹೆಣ್ಣುಮಕ್ಕಳು ಹೇಳುವ ಒಡಪುಗಳಾದರೆ, ೯೫ ಗಂಡುಮಕ್ಕಳು ಹೇಳುವ ಒಡಪುಗಳಾಗಿವೆ. ಇಲ್ಲಿಯ ಒಡಪುಗಳನ್ನು ಒಡಪುಗಳ ಸಾಲುಗಳನ್ನೇ ವಿಭಾಗದ ಹೆಸರುಗಳನ್ನಾಗಿ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ : ೧. ಬಾಗಲಾ ಬಿಟ್ಟ ಬದಿಗ್ಯಾಗ, ೨. ಮಾಲನ್ಯಾಗ ಕುಂತ ಮಮ್ಮಕ್ಕಳನ್ನ ಆಡಸ್ತಾರ, ಅರಮನಿಗಿ ಒಪ್ಪುವಂತವ್ರ ಹೊರಗಿಂದ ಬರ್ತಾರ, ೪. ಸೂಳಿ ಮನ್ಯಾಗ ಸುಕನಿದ್ದಿ ಮಾಡ್ತಾರ- ಮುಂತಾಗಿ ಹೆಣ್ಣುಮಕ್ಕಳ ಒಡಪುಗಳನ್ನು ೧೪ ಪ್ರಕಾರಗಳಲ್ಲಿ, ಗಂಡುಮಕ್ಕಳ ಒಡಪುಗಳನ್ನು ೫ ಪ್ರಕಾರಗಳಲ್ಲಿ ವಿಭಾಗಿಸಿಕೊಂಡಿದ್ದಾರೆ. ಇಲ್ಲಿಯ ವಿಶೇಷತೆ ಎಂದರೆ ಸಂಪಾದಕರು ತಮಗೆ ಪರಿಚಿತವಾಗಿರುವ ಒಡಪುಗಳನ್ನೇ ಇಲ್ಲಿ ಸಂಗ್ರಹಿಸಿ ಪ್ರಕಟಿಸಿರುವುದು. "ನಾನು ಬಾಲ್ಯದಿಂದ ಇಂದಿನವರೆಗೂ ಕೇಳುತ್ತಾ ಬಂದ ಒಡಪುಗಳನ್ನು ಈ ಸಂಗ್ರಹದಲ್ಲಿ ಕೊಟ್ಟಿದ್ದೇನೆ. ಜ್ಯೋತಿ ಹೊಸೂರವರ ಕೆಲ ಪಾಠಾಂತರಗಳನ್ನು ಇಲ್ಲಿ ಉಳಿಸಿಕೊಂಡಿದ್ದೇನೆ" (ಪ್ರ.ಪು.೧). ಈ ಮಾತುಗಳನ್ನು ಗಮನಿಸಿದರೆ ಸಂಪಾದಕರೇ ಒಡಪುಗಳ ಒಳ್ಳೆಯ ವಕ್ತಾರರಂತೆ ತೋರುತ್ತಾರೆ. "ಜ್ಯೋತಿ ಹೊಸೂರರ ಸಂಗ್ರಹದಲ್ಲಿ ಭಾಷೆ ಕನ್ನಡ ಮಹಾರಾಷ್ಟ್ರದ ಗಡಿಯ ಆಡುಮಾತಿನ ಭಾಷೆ. ನನ್ನ ಸಂಗ್ರಹದಲ್ಲಿ ಬೆಳಗಾಂವ ಜಿಲ್ಲೆಯ ಬೈಲಹೊಂಗಲ ಮತ್ತು ಸೌಂದತ್ತಿ ತಾಲೂಕಿನ ಆಡುಮಾತಿನ ಭಾಷೆ"(ಪ್ರ.೧೮) ಎಂದು ವಿವರಿಸಿದ್ದಾರೆ. ಅಂದರೆ ನಮಗೆ ಬೆಳಗಾಂವ ಜಿಲ್ಲೆಗೆ ಸಂಬಂಧಿಸಿದ ಒಡಪುಗಳ ಎರಡು ಸಂಗ್ರಹಗಳು ದೊರೆಯುತ್ತಿವೆ.

ಅರಗಿನ ಕೊಡಾ ಸೆರಗಿನ ಸಿಂಬಿ
ಸೀಲವಂತರ ಮಗಳ
ಸೀತಾದೇವಿ ಬರತಾಳಂತ
ಮಾರಿ ನೋಡಿ ದಾರಿ ಬಿಡತಾರ . . .

ವಜ್ಜರದ ಒಲಿ ಹೂಡಿ
ಬಂಗಾರ ತೆಪ್ಪೇಲಿ ಇಟ್ಟ
ಬೆಳ್ಳಿ ಸಂವಟ ಹಾಕಿ
ತೆಂಗಿನ ಹಾಲ ಸುರವಿ
ಗಂಧದ ಸೆಕ್ಕಿ ಪುಟಿ ಮಾಡಿ
ಊದಿನ ಕಡ್ಡಿ ಉರಿ ಮಾಡಿ
ಬೆಳದಿಂಗಳದಂತಾ ಬಾನಾ ಬಸದ
ಬಂಗಾರ ತಗಡಿನಂತಾ ಹೋಳ್ಗಿ ಮಾಡಿ
ಬಣ್ಣದ ಮನಿ ಹಾಕಿ
ರನ್ನದ ಅಡ್ಡಣಗಿ ಇಟ್ಟ
ಚಿತ್ತಾರ ಚೆರಿಗ್ಯಾಗ ನೀರ ತುಂಬಿಟ್ಟ
ಅತ್ತ ನೋಡಿನಿ ಇತ್ತ ನೋಡಿನಿ
ಸುತ್ತಿ ನೋಡಿನಿ ಸುಳದಾಡಿ ನೋಡಿನಿ
ಸೂಳಿ ಮನ್ಯಾಗ ಸುಕನಿದ್ದಿ ಮಾಡ್ತಾರ. . .

ಇಂತಹ ದೀರ್ಘವಾದ ಒಡಪುಗಳೂ ಈ ಸಂಗ್ರಹದಲ್ಲಿ ನೋಡಲು ದೊರೆಯುತ್ತವೆ. ಈ ಒಡಪಿನಲ್ಲಿ ಕಾಣುವ ವರ್ಣನೆಯ ಸಂಗತಿಗಳನ್ನು ಗಮನಿಸಿದೆ ಜನಪದರ ವರ್ಣನಾ ಸಾಮರ್ಥ್ಯದ ಬಗೆಗೆ ವಿಶ್ವಾಸ ಹುಟ್ಟುತ್ತದೆ. ಒಡಪು ವರ್ಣನಾ ಪ್ರಧಾನವಾದ ಸಾಹಿತ್ಯ ಪ್ರಕಾರವೇ ಆಗಿದ್ದು, ಈ ಒಡಪುಗಳ ಪ್ರಾದೇಶಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅಧ್ಯಯನ ನಡೆಯುವುದು ಅವಶ್ಯವೆನಿಸುತ್ತದೆ.

೧೯೮೧ ರಲ್ಲಿ ಪ್ರಕಟವಾದ **'ಜನಪದ ಒಡಪುಗಳು'** ಎಂಬ ಸಂಗ್ರಹವನ್ನು ಶಂಕರಾನಂದ ಉತ್ಲಾಸ ಅವರು ಸಂಪಾದಿಸಿದ್ದಾರೆ. ಕೇವಲ ಇಪ್ಪತ್ತು ಪುಟಗಳ ವ್ಯಾಪ್ತಿಯಲ್ಲಿ ಬಿಜಾಪೂರ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಕೆಲವು ಒಡಪಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. 'ಈ ಸಂಗ್ರಹದಲ್ಲಿ ಕಾಣಿಸಿಕೊಂಡ ಜನಪದ ಒಡಪುಗಳು ಹೆಚ್ಚಾಗಿ ಉತ್ತರ ಕರ್ನಾಟಕದ ವಿಜಾಪೂರ ಜಿಲ್ಲೆಯ ಕೆಲವಾರು ಹಳ್ಳಿಗಳಲ್ಲಿಯ ಹಿರಿಯ ಹೆಣ್ಣುಮಕ್ಕಳಿಂದ ಅನಕ್ಷರಸ್ತರಾದ ಕಿರಿಯ ಹೆಣ್ಣಮಕ್ಕಳಿಂದ ಕೇಳಿ ಬರೆದುಕೊಂಡಿರುವವಾಗಿವೆ. ಕೆಲ ಕೆಲವು ಮೇಲ್ನೋಟಕ್ಕೆ ಒಂದೇ ಬಗೆಯಾಗಿ ಕಂಡರೂ ಅಲ್ಲಲ್ಲಿ ಬದಲಾವಣೆ ಹೊಂದಿ ಬಳಕೆಯಲ್ಲಿರುವದರಿಂದ ಅವುಗಳನ್ನೂ ಬರೆದು ಸೇರಿಸಲಾಗಿದೆ. ಕೆಲವು ಹೆಣ್ಣುಮಕ್ಕಳು ಒಡಪುಗಳ ಕೊನೆಯಲ್ಲಿ ತಮ್ಮ ಗಂಡನ ಹೆಸರನ್ನು ಹೇಳಿದರೆ ಕೆಲವರು ರಾಯರು, ಯಜಮಾನರು, ದೇವರು, ಅರಸ,

ಪ್ರಧಾನಿ ಎನ್ನುವ ಪದದಲ್ಲಿ ಗಂಡನ ಹೆಸರು ಹೇಳುವದು ವಾಡಿಕೆ' (ಅರಿಕೆ, ಪು,೪). ಕೇವಲ ೨೦ ಪುಟಗಳ ಚಿಕ್ಕ ಪುಸ್ತಕದಲ್ಲಿ ೧೪೦ ಒಡಪುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಆದರೆ ಅವುಗಳ ಪ್ರಾಸಗಳನ್ನು ಗಮನಿಸಿ, ಸಾಲುಗಳಾಗಿ ವಿಂಗಡಿಸಿ, ಕಾವ್ಯದ ರೀತಿಯಲ್ಲಿ ಮುದ್ರಿಸಲು ಹೋಗಿಲ್ಲ; ಕೃತಿಯಲ್ಲಿ ಅವುಗಳನ್ನು ಕನಿಷ್ಠ ಅಕಾರಾದಿಯಾಗಿ ಜೋಡಿಸಲೂ ಹೋಗಿಲ್ಲ. ಆದರೆ ಇಲ್ಲಿಯ ಒಡಪುಗಳು ಮಾತ್ರ ಸುಂದರವಾಗಿವೆ, ಕಾವ್ಯಾತ್ಮಕವಾಗಿವೆ. ಉದಾಹರಣೆಗೆ:

'ಒಪ್ಪತ್ತಿನ ಹಾಲ ಕುಡದ ಇಪ್ಪತ್ತ ಕೂರಗಿ ಭೂಮಿ ಬಿತ್ತತಾರ, ತಂದಿ ರಾಯಪ್ಪಾ ತಂದಿ ಮಾಯಪ್ಪಾ, ಅವಸರಲೆ ಎದ್ದ ಅಡಗಿ ಮಾಡಕೊಂಡ ಹೊಲಕ್ಕ ಒಯ್ಯತಾರ, ತಾಯಿ ಸುಂದ್ರವ್ವಾ ತಾಯಿ ಚಂದ್ರವಾ, ಗಂಗಿ–ಗೌರಿ ಅನ್ನುವಂಥಾ ಹಗಿ ತಗದ ದಾನಾ ಮಾಡತಾರ, ಆಯಿ ಲಕ್ಕವ್ವಾ ಆಯಿ ತುಕ್ಕವ್ವಾ, ಮುತ್ತಿನ ಕುಡಗೋಲು ತಕ್ಕೊಂಡು ಮೂರುಸಾವಿರ ಗೂಡ ಒಟ್ಟಿ ಬರತಾರ, ಕಾಕಾ ಭೀಮಣ್ಣಾ ಕಾಕಾ ರಾಮಣ್ಣಾ, ಸಾವಿರ ಎತ್ತ ಹೊಡಕೊಂಡ ಸರಂಜಾಮಿ ಕಟಗೊಂಡ ಹೊಲದ ರಾಶಿ ತರತಾರ, ಮುತ್ತ್ಯಾ ಹೂವಣ್ಣಾ ಮುತ್ತ್ಯಾ ಶಿವಣ್ಣಾ, ಸೂರ್ಯ ಚಂದ್ರ ಅನ್ನುವಂಥಾ ಎರಡ ಬಣವಿ ಒಟ್ಟಿ ಸೂರ್ಯೋದಯಕ್ಕ ಬರತಾರ . . . . . .'

'ಹಾಲ ಮ್ಯಾಲಿನ ಕೆನಿ, ಹವಳಾ ಮುತ್ತಿನ ಗೊನಿ, ವಿಜಾಪುರ ಸಕ್ರಿ, ಗೋದಿ ಬಕ್ರಿ, ಊಟಾ ಮಾಡಂದ್ರ ಆಟಾ ಆಡತಾರ . . . .'

'ಜಾನಪದ ಪರಿಮಳ ಭಾಗ–೨' (೧೯೮೪) ಡಾ. ಬಿ.ಎಸ್. ಕುಲಕರ್ಣಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ ಒಂದು ಕೃತಿ. ಇದರಲ್ಲಿ ಜನಪದ ಗೀತೆಗಳು, ಒಡಪುಗಳು, ಗಾದೆಗಳು ಸಂಗ್ರಹಗೊಂಡಿವೆ. ಒಡಪುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಒಗಟುಗಳು ಎಂದೇ ಕರೆಯುವುದನ್ನು ಬಿ.ಎಸ್. ಕುಲಕರ್ಣಿ ಅವರು ಗುರುತಿಸುತ್ತಾರೆ. ಮತ್ತು ಈ ಕೃತಿಯ ಭಾಗ–೩ ರಲ್ಲಿ ಒಡಪುಗಳನ್ನು 'ಒಗಟುಗಳು' ಎಂದೇ ಮುದ್ರಿಸಿದ್ದಾರೆ. ಧಾರವಾಡ ಜಿಲ್ಲೆಯ, ನವಲಗುಂದ ತಾಲೂಕಿನ ಆಹೆಟ್ಟಿ ಎಂಬ ಗ್ರಾಮದಲ್ಲಿ ಈ ಕೃತಿಯಲ್ಲಿಯ ಎಲ್ಲ ೫೫೦ ಒಡಪುಗಳನ್ನು ಸಂಗ್ರಹಿಸಿದ್ದಾರೆ. ಒಂದೇ ಗ್ರಾಮದಲ್ಲಿ ಇಷ್ಟೊಂದು ಒಡಪುಗಳು ಸಂಗ್ರಹವಾದದ್ದೂ ಅಪರೂಪವೇ. ಹೆಣ್ಣು–ಗಂಡುಮಕ್ಕಳು ಹೇಳುವ ಒಡಪುಗಳನ್ನೂ ಬೇರೆ ಮಾಡಿಲ್ಲ. ಬಹುಶಃ ಕೇವಲ ಹೆಣ್ಣುಮಕ್ಕಳಿಂದ ಸಂಗ್ರಹಿಸಿದ ಒಡಪುಗಳು ಇಲ್ಲಿರುವಂತೆ ತೋರುತ್ತದೆ. ಇಲ್ಲಿಯ ಒಡಪುಗಳನ್ನು ಕನಿಷ್ಠಪಕ್ಷ ಅಕಾರಾದಿಯಾಗಿ ಕೊಡಲು ಕೂಡ ಪ್ರಯತ್ನಿಸಿಲ್ಲ. ಒಡಪುಗಳ ರಚನೆಯನ್ನು ಗಮನಿಸಿ, ಉಳಿದ ಸಂಪಾದಕರು ಕೊಡುವ ಮಾದರಿಯಂತೆ, ಪ್ರಾಸಕ್ಕೆ ತಕ್ಕಂತೆ ಸಾಲಾಗಿಸಲೂ ಪ್ರಯತ್ನಿಸಿಲ್ಲ. ಹೀಗಾಗಿ ಒಂದು ಅಥವಾ ಎರಡು ಸಾಲುಗಳಲ್ಲಿ ಹೆಚ್ಚಿನ ಒಡಪುಗಳು ಮುದ್ರಣಗೊಂಡಿದ್ದು, ಸುಮಾರು ೪೦ ಪುಟಗಳಲ್ಲಿ ೫೫೦ ಒಡಪುಗಳೂ ಮುದ್ರಣಗೊಂಡಿವೆ. ಉದಾಹರಣೆಗೆ :

'ಅಣ್ಣ ರಾವಣ ಇಪ್ಪತ್ತು ಕೋಟಿ ತಿರುಗಿ ಬರುವಾಗ ಕನ್ಯಾ ಕೊಟ್ಟು ಪುಣ್ಯ ಪಡೆದದ್ದು ಪತಿ ಧರ್ಮಕ್ಕಾಗಿ ನಾ ...ರಾಯರ ಹೆಸರ ಹೇಳತೆನಿ ನಿಮ್ಮೆಲ್ಲರ ಪ್ರೇಮಕ್ಕಾಗಿ'.

'ಪ್ಯಾಂಟು ಬೂಟು ಹಾಕುವರಲ್ಲಾ ಕಚೇರಿ ಕಟ್ಟಿ ಹತ್ತುವರಲ್ಲಾ ಮಾತಿಗಿ ಮಾತ್ರ ಸರಿಯುವರಲ್ಲಾ . . . .ರಾಯರು'.

ಒಡಪುಗಳ ಬೇರೆ ಸಂಗ್ರಹಗಳನ್ನು ಗಮನಿಸಿದರೆ ಅಲ್ಲಿರುವ ಗ್ರಾಮೀಣ ದೃಷ್ಟಿಯನ್ನು, ಅನುಭವವನ್ನು, ಬದುಕನ್ನು ವಿವರಿಸುವ ಒಡಪುಗಳು ಈ ಸಂಗ್ರಹದಲ್ಲಿ ಕಾಣುವುದಿಲ್ಲ. ಇಲ್ಲಿಯ ಒಡಪುಗಳು ದೇವದೇವತೆಗಳು, ರಾಮಾಯಣ ಮಹಾಭಾರತ ಇಂತಹ ಸಂಗತಿಗಳನ್ನು ಹೆಚ್ಚಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಶೃಂಗಾರ ಭಾವವುಳ್ಳ ಒಡಪುಗಳು ಕೂಡ ಅಪರೂಪಕ್ಕೆ ಕಾಣಬರುತ್ತವೆ. ಒಂದಿಷ್ಟು ಆಧುನಿಕ ರಚನೆಗಳಿರುವಂತೆ ತೋರುತ್ತವೆ. ಉದಾ: 'ಗೋಟು ಪಾಟ್ಲಿ ಇಡಲಾಕ ತ್ರಾಸ....ರಾಯರು ಬಿ.ಎ.ಪರೀಕ್ಷೆ ಪಾಸ', 'ಆಕಾಶದಲ್ಲಿ ಹಾರಾಡುವದು ಹಕ್ಕಿ. ...ರಾಯರ ಕೈಯಲ್ಲಿ ಕೊಡುವೆನು ಚಹಾ ಅವಲಕ್ಕಿ'. ಇಲ್ಲಿಯ ಒಡಪುಗಳನ್ನು ಓದುತ್ತ ಹೋದಂತೆ ಒಂದಿಷ್ಟು ಕೃತ್ರಿಮತೆಯ ಅನುಭವವಾಗುತ್ತ ಹೋಗುತ್ತದೆ. ಭಾಷೆ ತಿದ್ದಿದ್ದಾರೊ, ವಸ್ತು ಸೇರಿಸಿದ್ದಾರೊ? ಹೀಗೇನೋ ಅನುಭವವಾಗುತ್ತದೆ. ಬಹುಶಃ ಬ್ರಾಹ್ಮಣ ಸಮಾಜದಲ್ಲಿ ಬಳಕೆಯಲ್ಲಿರುವ ಒಡಪುಗಳನ್ನೇ ಇಲ್ಲಿ ಸಂಗ್ರಹಿಸಿದ್ದಾರೇನೋ ಎನಿಸುತ್ತದೆ. ಹೀಗಾಗಿದ್ದರೆ ಇವುಗಳಿಗೆ ಒಂದು ವಿಶೇಷತೆ ಇದ್ದೇ ಇರುತ್ತದೆ. ಇಲ್ಲಿಯ ಪರಿಶ್ರಮವನ್ನು ಮನ್ನಿಸಲೇ ಬೇಕು. ಆದರೆ ಇವುಗಳ ಶುಷ್ಕತೆಯನ್ನು ಮರೆಯುವಂತಿಲ್ಲ. ಡಾ. ಶಾಂತಾ ಇಮ್ರಾಪೂರ ಅವರು ಇಂತಹ ಒಡಪುಗಳ ಬಗ್ಗೆಯೇ ತಕರಾರು ಎತ್ತಿದ್ದನ್ನು ಹಿಂದೆ ಚರ್ಚಿಸಿದ್ದೇವೆ. ಆ ದೃಷ್ಟಿಯಿಂದ ಇದೊಂದು ಖೋಟಾ ಒಡಪುಗಳಿಂದ ತುಂಬಿದ ಭಾಗ ಎನಿಸುತ್ತದೆ. ಇಂತಹ ಇನ್ನೂ ಕೆಲವು ಸಣ್ಣ ಸಣ್ಣ ಕೃತಿಗಳು ಹಲವಾರು ವರ್ಷಗಳಿಂದ ಪುಸ್ತಕದ ಅಂಗಡಿಗಳು ತುಂಬಿದ್ದು, ಅವುಗಳ ಬಗ್ಗೆ ಕೊನೆಯಲ್ಲಿ ವಿವರಿಸಲಾಗಿದೆ.

೧೯೮೫ರಲ್ಲಿ ಪ್ರಕಟವಾದ ಡಾ. ಎಂ.ಎನ್.ವಾಲಿ ಅವರ **'ಸಿರಿಗನ್ನಡ ಒಡಪುಗಳು'** ೪೮೬ ಒಡಪುಗಳ ಸಂಗ್ರಹ. ಬಿಜಾಪೂರ ಜಿಲ್ಲೆಯಿಂದ ಸಂಗ್ರಹಿಸಿದ ಒಡಪುಗಳು ಇವು ಎಂಬುದು ಗೊತ್ತಾಗುತ್ತದೆ. ಇಲ್ಲಿಯ ಒಡಪುಗಳನ್ನು ಹೆಂಗಸರ ಒಡಪುಗಳು, ಗಂಡಸರ ಒಡಪುಗಳು ಎಂದು ಎರಡು ಭಾಗಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಹೆಣ್ಣುಮಕ್ಕಳ ಒಡಪುಗಳೇ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದು ಸಾಮಾನ್ಯ. ಹೀಗಾಗಿ ಅವುಗಳನ್ನು : ಗಂಡನ ಗುಣಗಾನ, ಗಂಡನ ಮೊಂಡುತನ ದೋಷ, ಆಭರಣಗಳ ವ್ಯಾಮೋಹ, ದೇವ-ಧರ್ಮ ನ್ಯಾಯ-ನೀತಿ ಸಂಬಂಧ, ಹಾಸ-ಪರಿಹಾಸ, ಆತ್ಮಪ್ರಶಂಸೆ ಮುಗ್ಧತೆ ಕ್ಷಮಾಪಣೆ, ಆಧುನಿಕತೆ, ಶುಭಶೋಭನ ಕಾರ್ಯವಿಧಾನಗಳು ಎಂದು ಎಂಟು ಪ್ರಕಾರಗಳಲ್ಲಿ ವಿಂಗಡಿಸಿ ಕೊಟ್ಟಿರುವುದು ಒಡಪುಗಳ ವೈವಿಧ್ಯವನ್ನರಿಯಲು ಅನುಕೂಲವಾಗಿದೆ. ಜೊತೆಗೆ ಕೊನೆಯ **'ಶುಭಶೋಭನ ಕಾರ್ಯವಿಧಾನಗಳು'** ಎಂಬುದರಲ್ಲಿ ಒಂಬತ್ತು ಸಂದರ್ಭಗಳನ್ನು ಸೂಚಿಸಿ, ಅಲ್ಲಿ ಬಳಕೆಯಾಗುವ ಒಡಪುಗಳನ್ನು ಕೊಟ್ಟಿದ್ದಾರೆ. ಕುಂಕುಮ-ಗಂಧ-ಅರಿಷಿಣ ಬುಕ್ಕಿಟ್ಟು ಹಚ್ಚುವಾಗ, ಕಾಲು ತೊಳೆಯುವಾಗ, ಉಡುಗೊರೆ ಕೊಡುವಾಗ, ಸುಗಂಧದ ಎಣ್ಣೆ ಪೂಸುವಾಗ, ಹೂಮಾಲೆ ಹಾಕುವಾಗ, ಆರತಿ

ಬೆಳಗುವಾಗ, ನಮಸ್ಕಾರ ಮಾಡುವಾಗ, ತಿಂಡಿ ತಿನಿಸು ಕೊಡುವಾಗ, ತಾಂಬೂಲ ಕೊಡುವಾಗ – ಹೀಗೆ ಒಡಪುಗಳಲ್ಲಿ ಪ್ರಸ್ತಾಪವಾಗುವ ವಿಷಯಗಳನ್ನು ಗಮನಿಸಿ, ವಿಭಾಗಿಸಿ ಕೊಟ್ಟಿರುವುದು ಒಡಪುಗಳ ಬಗ್ಗೆ ತಿಳಿದುಕೊಳ್ಳಲು ಅಧ್ಯಯನ ಮಾಡಲು ಹೆಚ್ಚು ಅನುಕೂಲವಾಗಿದೆ.

ಇಲ್ಲಿಯ ಒಡಪುಗಳನ್ನು ಬಿಜಾಪೂರ ಜಿಲ್ಲೆಯಿಂದ ಸಂಗ್ರಹಿಸಲಾಗಿದೆ ಎಂದಿಷ್ಟೆ ಹೇಳಿದ್ದಾರೆ. ಹೆಚ್ಚಿನ ವಿವರಗಳನ್ನು ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ವಕ್ತಾರರ ಹೆಸರುಗಳನ್ನೂ ಕೊಟ್ಟಿಲ್ಲದಿರುವುದು ಒಂದು ಕೊರತೆಯಾಗಿ ಕಾಣುತ್ತದೆ. ಆದರೆ ಇಲ್ಲಿಯ ಒಡಪುಗಳು ಸ್ವಭಾವತಃ ಸರಳವಾಗಿವೆ, ಕಾವ್ಯಾತ್ಮಕವಾಗಿವೆ.

ಸಾವಿರ ಸುರಳಿ ಹೋಳ್ಗಿ
ಎಂಟನೂರು ಎಣ್ಣಿ ಹೋಳ್ಗಿ
ಬಾದಾಮಿ ಬಾನಾ ಕುಡಚಿ ಬದ್ನಿಕಾಯಿ
ಸಾಂಗ್ಲಿ ಸಾರಾ ಹಿರಿಹೊಳಿ ನೀರಾ
ಕುಂತು ಉಂಡು ಖುಸಿಲೇ ಹೋಗ್ತಾರ . . . .

ಬಂಗಾರ ತೊಟ್ಟಿಲ ಬೆಳ್ಳಿ ಹಗ್ಗ
ಕಂದನ್ನ ತೂಗಿ ಮುಂದಕ ಬರತಾರ . . . .

ಕರದ ಕಾಡಿಗಿ ಜರದ ರುಂಬಾಲ
ನೆರದ ಮಂದ್ಯಾಗ ಕುಂತು ನ್ಯಾಯಾ ಮಾಡ್ತಾರ . . . .

ಇಂತಹ ಸುಂದರವಾದ ಒಡಪುಗಳಿಂದ ಈ ಸಂಗ್ರಹ ತುಂಬಿಹೋಗಿದೆ. ಒಡಪುಗಳ ಸಾಹಿತ್ಯಿಕ ಗುಣಗಳನ್ನು ಗಮನಿಸಿ ಇವುಗಳ ಅಧ್ಯಯನ ನಡೆಯಬೇಕು. ಇಲ್ಲಿಯವರೆಗೆ ಒಡಪುಗಳ ಸಂಗ್ರಹಗಳಿಗೆ ಬರೆದ ಪ್ರಸ್ತಾವನೆಗಳನ್ನು ಬಿಟ್ಟರೆ ಪ್ರತ್ಯೇಕವಾದ ಅಧ್ಯಯನಗಳು ನಡೆಯದೇ ಇರುವುದು ಒಂದು ದೊಡ್ಡ ಕೊರತೆಯಾಗಿ ಕಾಣುತ್ತದೆ.

ಇಲ್ಲಿಯವರೆಗೆ ಬಂದ ಒಡಪುಗಳ ಸಂಗ್ರಹಗಳು ಕೇವಲ ಉತ್ತರಕರ್ನಾಟಕದ ಜಿಲ್ಲೆಗಳಿಂದಲೇ ಪ್ರಕಟವಾಗಿವೆ. ಡಾ. ಎಂ.ಎಸ್.ಲಠ್ಠೆ ಅವರ ಒಂದು ಸಂಗ್ರಹವನ್ನು ಬಿಟ್ಟರೆ ಬಾಂಬೆ ಕರ್ನಾಟಕದಿಂದಲೇ ಹೆಚ್ಚಿನ ಸಂಗ್ರಹಗಳು ಬಂದಿವೆ. ಬೆಳಗಾಂವ, ಬಿಜಾಪೂರ, ಧಾರವಾಡ ಈ ಮೂರು ಜಿಲ್ಲೆಗಳಿಂದ ಹೆಚ್ಚಿನ ಸಂಗ್ರಹಗಳು ಪ್ರಕಟವಾಗಿವೆ. ಅಪರೂಪಕ್ಕೆ ಬಳ್ಳಾರಿಯಿಂದ ಒಂದು ಸಂಗ್ರಹ ಪ್ರಕಟವಾಗಿದೆ. ಸುಮಾರು ಎಂಟೊಂಬತ್ತು ವರ್ಷಗಳ ನಂತರ ಮಧ್ಯಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ವಿದ್ವಾಂಸರು ಒಡಪುಗಳ ಬಗೆಗೆ ಲಕ್ಷಹಾಕಿರುವುದು ಕಂಡುಬರುತ್ತದೆ.

೧೯೮೦ ರಲ್ಲಿ ಶ್ರೀಮತಿ ಬಿ.ಎಸ್.ನಾಗರತ್ನ ಅವರು 'ಜಾನಪದ ಪರಿಶೀಲನ' ಎಂಬ ತಮ್ಮ ಲೇಖನಗಳ ಸಂಗ್ರಹವೊಂದರಲ್ಲಿ 'ರೀತಿರಾತ್ಮಾ ಕಾವ್ಯಸ್ಯ...' ಎಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಅವರು ಹಾಸನ ಭಾಗದಲ್ಲಿ ಪ್ರಚಾರದಲ್ಲಿರುವ

ಒಡಪುಗಳನ್ನು ತಾವು ಸ್ವತಃ ಸಂಗ್ರಹಿಸಿ ಅವುಗಳನ್ನು ಪರಿಚಯ ಮಾಡಿಕೊಡುವ ಕೆಲಸವನ್ನು ಈ ಲೇಖನದಲ್ಲಿ ಮಾಡಿದ್ದಾರೆ. ಆದರೆ ನಾಗರತ್ನ ಅವರು ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ 'ಒಡಪು'ಗಳೆ ಹಾಸನ ಭಾಗದಲ್ಲಿ 'ತೊಡಕು' ಎಂಬ ಹೆಸರಿನಲ್ಲಿ ಪ್ರಚಾರದಲ್ಲಿವೆ ಎಂಬ ಸಂಗತಿ ಹೊಳೆದಂತಿಲ್ಲ. ಆದರೆ ನಾಗರತ್ನ ಅವರ ಲೇಖನದ ಬಗ್ಗೆ ಗಮನ ಸೆಳೆಯುವ ವಿ.ಎನ್. ಶಿವರಾಮು ಅವರು ನಾಗರತ್ನ ಅವರ ಲೇಖನವನ್ನು ಪ್ರಸ್ತಾಪಿಸಿ ಹೀಗೆ ಬರೆಯುತ್ತಾರೆ: "ದಕ್ಷಿಣ ಕರ್ನಾಟಕದ ಒಡಪುಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದ ಕೀರ್ತಿ ಬಿ.ಎಸ್.ನಾಗರತ್ನ ಅವರಿಗೆ ಸಲ್ಲುತ್ತದೆ. ೧೯೮೦ ರಲ್ಲಿ ಪ್ರಕಟವಾದ ಇವರ 'ಜಾನಪದ ಪರಿಶಿಲನ' ಎಂಬ ಪುಟ್ಟ ಕೃತಿಯಲ್ಲಿ ಹಾಸನ ಭಾಗದ ಒಡಪು(ತೊಡಕು)ಗಳನ್ನು ಪರಿಚಯಿಸುವ 'ರೀತಿರಾತ್ಮಾ ಕಾವ್ಯಸ್ಯ...' ಎಂಬ ಲೇಖನವೊಂದಿದೆ" (ದಕ್ಷಿಣ ಕರ್ನಾಟಕದ ಒಡಪುಗಳು, ಪ್ರ.ಪು.೨೦) ಎಂದು ಉಲ್ಲೇಖಿಸಿದ್ದಾರೆ. ಬಿ.ಎಸ್.ನಾಗರತ್ನ ಅವರು ತಮ್ಮ ಲೆಖನದಲ್ಲಿ ಉಲ್ಲೇಖಿಸಿದ ತೊಡಕುಗಳನ್ನು ಗಮನಿಸಿದರೆ, ಅವುಗಳ ಹಿನ್ನೆಲೆಯ ವಿವರಗಳನ್ನು ಗಮನಿಸಿದರೆ ಅವು ಒಡಪುಗಳೇ ಆಗಿರುವುದು ತಿಳಿದುಬರುತ್ತದೆ. "ಬಹುಶಃ ತೊಡಕುಗಳಷ್ಟು ವ್ಯಕ್ತಿಚಿತ್ರಗಳು ಅಭಿನಯಾತ್ಮಕವಾಗಿ ರೂಪುಗೊಳ್ಳುವುದು ಬೇರೆಕಡೆ ಕಂಡುಬರುವುದಿಲ್ಲ. ಪ್ರಾತಿನಿಧಿಕವಾಗಿ ಕೆಲವು ತೊಡಕುಗಳನ್ನು ವಿಶ್ಲೇಷಿಸಿ, ಈ ಮಾತನ್ನು ಪುಷ್ಟೀಕರಿಸಬಹು ದೆನಿಸುತ್ತದೆ.

ಹಸೀಮರ ಹತ್ನಾರ‍್ರು
ಒಣಗಿದ ಮರ ಕಡೀನಾರ‍್ರು
ಹಸೀಮಗೀನಂಥೋರು.......

ಇಲ್ಲಿ ಹೆಣ್ಣೊಬ್ಬಳು ತನ್ನ ಗಂಡನ ವ್ಯಕ್ತಿತ್ವವನ್ನು ತಾನು ಒಪ್ಪಿಕೊಂಡಂತೆ ಚಿತ್ರಿಸಿದ್ದಾಳೆ. ಸಾಮಾನ್ಯವಾಗಿ ಜನಪದ ಸಮಾಜದಲ್ಲಿ ಗಂಡನ ಹೆಸರನ್ನು ಹೇಳುವಾಗ ಹೆಣ್ಣು, ಹೆಂಡತಿಯ ಹೆಸರನ್ನು ಹೇಳುವಾಗ ಗಂಡು, ನೇರವಾಗಿ ವ್ಯಕ್ತಿಯ ಹೆಸರನ್ನು ಹೇಳದೆ ಈ ತೊಡಕುಗಳ ಆಲಂಕಾರಿಕ ಪೀಠಿಕೆಯೊಂದಿಗೆ ಹೇಳುತ್ತಾರೆ"(ಪು.೪೭). ಇಲ್ಲಿ ಉದಾಹರಿಸಿರುವ ತೊಡಕು, ಮತ್ತು ಲೇಖಕರ ವಿವರಣೆಯನ್ನು ಗಮನಿಸಿದರೆ ಈ ತೊಡಕುಗಳು ಒಡಪುಗಳೇ ಆಗಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಲೇಖನದಲ್ಲಿ ಉಲ್ಲೇಖಿಸಲಾದ ಇನ್ನೂ ಕೆಲವು ಒಡಪುಗಳನ್ನು ಗಮನಿಸಿದರೆ ಈ ಸಂಗತಿ ಮನದಟ್ಟಾಗುತ್ತದೆ.

ಅಗ್ಗದ ರವಿಕೆ
ಮಗ್ಗದ ಸೀರೆ
ಗರಿಕೆ ಹೊಲ
ನ್ಯರ್ಕೆ ಮನೆ
ದರಖಾಸು ಕೊಡೋಕೆ ಹೋಗವ್ರೆ.....

ಚಿಕ್ಮಂಕ್ರಿ ಹೊತ್ಕಂಡು
ಚಿನಕುಳ್ಳಿ ಕುರೀಕಂಡು
ಉಬ್ಲು ಹೊತ್ಕಂಡು
ತಬ್ರಿಸಾಡ್ತಾರೆ.....

ಚೀಟಿ ಚೀಲ ಚಪ್ಪಲಡ್ಕೆ
ಚಿಕ್ಕುಡ್ಗಿ ಕುಟ್ಟೆ
ಚಕ್ಕಂದ ಆಡ್ತಾರೆ .....

ಚಿನ್ನೊಲೆ ಮ್ಯಾಲೆ
ರನ್ನದ ತಪ್ಲಿ ಇಟ್ಟು
ಊದ್ಗಡ್ಡಿ ಉರಿಹಾಕಿ
ಅವಲಕ್ಕಿ ಅನ್ನಮಾಡಿ
ಸಕ್ರೆ ಸಾರ್ಮಾಡಿ
ಚಿನ್ನದ ಗಿಂಡೀಲಿ
ಪನ್ನೀರು ತಗೊಂಡು
ಪಯಣ ಹೋಗ್ತಾರೆ.....

ಹಗ್ಗದಲ್ಲಿ ಹೊಡುದ್ರೆ
ಮಗ್ಲಿಗೆ ಬತ್ತಾಳೆ.....

ಅಂಗೈಲಿ ಆರು ಪುಸ್ತಕ
ಮುಂಗೈಲಿ ಮೂರು ಪುಸ್ತಕ
ಬಂಗಾರದ ಪೆಟ್ಟಿಗೆ ಮೇಲ್ಕೂತು
ಇಂಗ್ಲೀಷ್ ಓದ್ತಾರೆ....

ನಾಗರತ್ನ ಅವರಿಗೆ ಇವುಗಳ ಕಾವ್ಯದ ಗುಣವನ್ನು ಹೇಳಬೇಕಾಗಿರುವುದರಿಂದ (ಅವರ ಲೇಖನದ ಉದ್ದೇಶವೇ ಅದಾಗಿದೆ) ಅವರು ಬೇರೆ ವಿಷಯಗಳ ಕಡೆ ಲಕ್ಷಹಾಕಿದಂತಿಲ್ಲ. "ಇವು ಗಂಡನನ್ನು ವಿಮರ್ಶೆ ಮಾಡಿ ಸಮಾಜದ ಮುಂದಿಡುವ ವಿಷಯ ಮಾತ್ರವಲ್ಲ; ಗಂಡ ದೇವರಿಗೆ ಅಥವಾ ಕುಲದೇವತೆಗೆ ಸಮಾನವೆನ್ನುವ ಅಭಿಪ್ರಾಯ ಆದಿವಾಸಿಗಳಿಂದಲೂ ನಡೆದುಬಂದುದು. ಅದು ಮನವರಿಕೆಯಾಗಿ ಅಪಾಯವುಂಟು ಮಾಡಬಹುದೆಂಬ ಮಾಂತ್ರಿಕ ನಂಬಿಕೆಯೂ ಇದರಲ್ಲಡಗಿದೆ. ಅಷ್ಟೇ ಏಕೆ, ಗಂಡನ ಹೆಸರು ಹೇಳಿದರೆ ಅವನ ಆಯಸ್ಸು ಕಡಿಮೆಯಾಗುತ್ತದೆನ್ನುವುದು ಇಂದಿನ ಸಂಪ್ರದಾಯಸ್ಥ ಗೃಹಿಣಿಯರ ನಂಬಿಕೆ ಕೂಡಾ. ಈ ಒಂದು ನಂಬಿಕೆಯೇ ಗಂಡನನ್ನು ಕಾವ್ಯಾಭಿವ್ಯಕ್ತಿಯಲ್ಲಿ ದೇವರಾಗಿಸುವ ಪ್ರಯತ್ನ ನಡೆದಿದೆ. ಇದು ನೇರವಾಗಿ ಹೆಂಡತಿ ಗಂಡನ ಬಗ್ಗೆ, ಗಂಡ ಹೆಂಡತಿಯ ಬಗ್ಗೆ ಹೇಳುವುದಾದ್ದರಿಂದ ನೇರವಾದ ಕಟುವಿಮರ್ಶೆ ಸಾಧ್ಯವಾಗುವುದಿಲ್ಲ. ಒಂದು ರೀತಿಯ ಸುಧಾರಣಾ ವಾದದಂತೆ

ಒಬ್ಬರನೊಬ್ಬರು ತಿದ್ದಿಕೊಳ್ಳಲೂ ಅವಕಾಶಮಾಡಿಕೊಡುತ್ತದೆ" (ಅದೆ, ಪು.೪೭). ಇದು ತೊಡಕು/ಒಡಪುಗಳ ಒಟ್ಟು ಮನೋಧರ್ಮ.

ವಿ. ಎನ್. ಶಿವರಾಮು ಅವರು ೧೯೮೧ರಲ್ಲಿ **'ಜಾನಪದ ಜಗತ್ತು'**(೨-೫, ೧೯೮೧) ಪತ್ರಿಕೆಗೆ 'ಒಡಪುಗಳು' ಎಂಬ ಒಂದು ಕಿರು ಲೇಖನವನ್ನು ಬರೆದಿದ್ದಾರೆ. "ಗಂಡನ ಹೆಸರನ್ನು ಹೇಳಲೇಬೇಕಾದ ಸಂದರ್ಭದಲ್ಲಿ ನೇರವಾಗಿ ಹೇಳದೆ, ತನ್ನ ಸುತ್ತಮುತ್ತಲಿನ ಪರಿಸರ, ಗಂಡನ ನಡವಳಿಕೆಗಳನ್ನು ಪ್ರಾಸಗಳಿಂದ ಕೂಡಿದ ಸಾಲುಗಳಿಂದ ಆಕರ್ಷಕವಾಗಿ ವರ್ಣಿಸಿ, ಗಂಡನನ್ನು ಹೊಗಳಿ ಅಥವಾ ತೆಗಳಿ ಕೊನೆಯಲ್ಲಿ ಹೆಸರನ್ನು ಸೇರಿಸಿ ಹೇಳುತ್ತಾರೆ. ಇದಕ್ಕೆ ಒಡಪು ಕಟ್ಟಿ ಹೆಸರು ಹೇಳುವುದು ಎನ್ನಲಾಗಿದೆ" (ಜಾ.ಜ.ಪು.೬) ಎಂದು ಬರೆದು ನಾಲ್ಕು ಒಡಪುಗಳನ್ನು ಉದಾಹರಿಸಿದ್ದಾರೆ. ಉದಾ:

ಅಚ್ಚಕ್ಕಿ ನುಚ್ಚಕ್ಕಿ
ಜಾಜಿ ಹೂವು ಜೇನುತ್ತುಪ್ಪ
ಚಿನ್ನದ ಮಣೆ ಮ್ಯಾಲೆ
ರನ್ನದ ತಟ್ಟೆ ಮಡಿಕೊಂಡು
ಬೆಳ್ಳಿ ರೂಪಾಯಿ ಲೆಕ್ಕ ಬಿಡ್ತಾರೆ . . .

ಗೋದ್ವೆ ತರ್ರಾರ್ರು ಜ್ವಾಳ ಬೀಸ್ನಾರ್ರು
ಉಂಡುಂಡು ಸೂಳೆ ಮನ್ಗೋಯ್ತಾರೆ . . .

ಶಿವರಾಮು ಅವರು 'ಒಡಪುಗಳು' ಎನ್ನುತ್ತಾರೆ. 'ಒಡಪು'ಗಳಿಗೆ 'ತೊಡಕು' ಎನ್ನುವ ಹೆಸರಿನಿಂದ ಕರೆಯಲಾಗುತ್ತದೆಂಬ ಬಗ್ಗೆ ಅವರಿಗೆ ಈ ಸಮಯದಲ್ಲಿ ತಿಳಿದಂತಿಲ್ಲ.

ಮೈಲಹಳ್ಳಿ ರೇವಣ್ಣ ಅವರು ೧೯೮೨ರಲ್ಲಿ **'ಕರ್ನಾಟಕ ಜಾನಪದ ಸಮೀಕ್ಷೆ'** ಎಂಬ ಕೃತಿಯಲ್ಲಿ **'ಕನ್ನಡದಲ್ಲಿ ಬೆಡಗು'** ಎಂಬ ಒಂದು ಲೇಖನವನ್ನು ಬರೆದಿದ್ದಾರೆ. ಒಡಪುಗಳಿಗೆ ಬೆಡಗು ಎನ್ನುವ ಪದ ದಕ್ಷಿಣ ಕರ್ನಾಟಕದಲ್ಲಿ ಬಳಕೆಯಾಗುತ್ತದೆ ಎಂದು ಇಲ್ಲಿ ಸೂಚಿಸಿದ್ದಾರೆ. "ಉತ್ತರ ಕರ್ನಾಟಕದ ಸಂಗ್ರಾಹಕರು ದಕ್ಷಿಣ ಕರ್ನಾಟಕದಲ್ಲಿ ಈ ಸಂಪ್ರದಾಯ ಇಲ್ಲವೆಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಬಹುಶಃ ಈ ಭಾಗದಲ್ಲಿಯೂ ಒಡಪುಗಳು ಇವೆ ಎಂಬುದು ಅವರ ಗಮನಕ್ಕೆ ಬಂದಿಲ್ಲ. ಇಲ್ಲಿಯೂ ಸಹ ಒಡಪು ಹೇಳುವ ಸಂಪ್ರದಾಯ ಕಂಡುಬಂದಿದೆ. ಈಗಾಗಲೇ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ವಿ. ಎನ್. ಶಿವರಾಮು ಸಂಗ್ರಹಿಸಿರುವ ಒಡಪುಗಳು 'ಜಾನಪದ ಜಗತ್ತು' ಸಂಚಿಕೆಯಲ್ಲಿ ಪ್ರಕಟವಾಗಿವೆ. 'ಬೆಡಗು' ಎಂಬ ಹೆಸರಿನಲ್ಲಿ ದಕ್ಷಿಣ ಕರ್ನಾಟಕದ ಚಿತ್ರದುರ್ಗ, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿ ಈ ಲೇಖಕ ಒಡಪುಗಳನ್ನು ಸಂಗ್ರಹಿಸಿದ್ದು ಅವು ಪ್ರಕಟವಾಗಬೇಕಾಗಿದೆ". (ಕನ್ನಡದಲ್ಲಿ ಬೆಡಗು, ಕರ್ನಾಟಕ ಜಾನಪದ ಸಮೀಕ್ಷೆ, ಪು.೧೨೮).

ಆ ಲೇಖನದ ನಂತರ ೧೯೮೯ರಲ್ಲಿ ಮೈಲಹಳ್ಳಿ ರೇವಣ್ಣನವರು ರಾಜ್ಯ ಸಂಪನ್ಮೂಲ ಕೇಂದ್ರಕ್ಕಾಗಿ **'ನಮ್ಮ ಒಡಪುಗಳು'** ಎಂಬ ಕೃತಿಯನ್ನು ತಯಾರಿಸಿ ಕೊಟ್ಟಿದ್ದಾರೆ. ಅವರು ಈ ಕೃತಿಗಾಗಿ ಒಡಪುಗಳನ್ನು ಸಂಗ್ರಹಿಸಿದ್ದು ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ. ಅಲ್ಲಿ ಹೀಗೆ ಬರೆದಿದ್ದಾರೆ: "ಹೆಸರು ಕೇಳುವ ಪರಿಪಾಠ ಕರ್ನಾಟಕದ ಎಲ್ಲ ಕಡೆ ಇದೆ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಇದೆ. ದಕ್ಷಿಣ ಕರ್ನಾಟಕದಲ್ಲಿ ಮದುವೆ, ಮಗುವಿನ ನಾಮಕರಣ, ಹೆಣ್ಣು ಮೈನೆರದ ಸಮಯದಲ್ಲಿ ಹೆಸರು ಹೇಳಿಸುವ ಸಂಪ್ರದಾಯವಿದೆ. ಉತ್ತರ ಕರ್ನಾಟಕದಲ್ಲಿ ಇಂಥ ಮಂಗಳ ಪ್ರಸಂಗದಲ್ಲಿ ಅಲ್ಲದೆ ಹಬ್ಬ ಹರಿದಿನಗಳಲ್ಲೂ ಹೆಸರು ಹೇಳಿಸುವ ರೂಢಿ ಉಂಟು. ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ 'ಒಡಪು'ಗೆ ಬದಲಾಗಿ 'ಬೆಡಗಿ'ನಲ್ಲಿ ಹೆಸರೇಳು ಎನ್ನುತ್ತಾರೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕುಗಳಲ್ಲಿ **'ಜೋಡು ಹೆಸರು'** ಅಂತ ಕರೆಯುತ್ತಾರೆ. ಮೈಸೂರು ಜಿಲ್ಲೆ ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ **'ಅರ್ಥಮಾನ'** ಎಂಬ ಹೆಸರಿದೆ. ಕೊಡಗಿನಲ್ಲಿ **'ಹೆಸರು ಹೇಳಿಸೋದು'** ಎಂಬ ಮಾತು ರೂಢಿಯಲ್ಲಿದೆ" (ಪು.೭). ಡಾ. ಮೈಲಹಳ್ಳಿ ರೇವಣ್ಣನವರು ಎಂಟ್ಹತ್ತು ಸಾಲುಗಳಲ್ಲಿ ಬಹಳಷ್ಟು ವಿಷಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಒಡಪುಗಳು ಉತ್ತರಕರ್ನಾಟಕದಲ್ಲಿಯಷ್ಟೇ ಬಳಕೆಯಲ್ಲಿವೆ ಎಂಬ ಮಾತನ್ನು ಮುಂದಿಟ್ಟುಕೊಂಡು, ಇವು ಕರ್ನಾಟಕದ ಎಲ್ಲ ಕಡೆ ದೊರೆಯುತ್ತವೆ ಎಂಬುದನ್ನು ವಿವರಿಸುತ್ತಾರೆ. ಅಲ್ಲದೆ ಅವರು ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಮಂಡ್ಯ, ಕೊಡಗು ಈ ನಾಲ್ಕೈದು ಜಿಲ್ಲೆಗಳಲ್ಲಿ ಒಡಪುಗಳಿಗೆ ಯಾವ ಹೆಸರಿನಿಂದ ಕರೆಯುತ್ತಾರೆ ಎಂಬುದನ್ನು ಸಂಗ್ರಹಿಸಿ ವಿವರಿಸಿದ್ದಾರೆ.

ರೇವಣ್ಣನವರು ಒಡಪುಗಳ ಸ್ವರೂಪವನ್ನು ಹೇಳುವ ಎರಡು ಸಾಲುಗಳು ಕೂಡ ಗಮನ ಸೆಳೆಯುತ್ತವೆ. "ಒಡಪುಗಳು ಸರಳವಾದ ಚುಟುಕುಗಳು, ಜನಪದರ ಬದುಕಿನ ನಿಜವಾದ ಚಿತ್ರ ಇವುಗಳಲ್ಲಿದೆ. ಶಬ್ದ ಚಿತ್ರದ ಮೋಡಿಯಿದೆ. ಪ್ರಾಸಗಳೇ ಇವುಗಳ ಮುಖ್ಯ ಲಕ್ಷಣ" (ಪು.೭). ಈ ಪುಟ್ಟ ಕೃತಿಯಲ್ಲಿ ಒಂದೊಂದೇ ಸಂದರ್ಭಗಳನ್ನು ಕೆಲವೇ ಮಾತುಗಳಲ್ಲಿ ವಿವರಿಸುತ್ತ ಅಲ್ಲಿ ಒಡಪುಗಳು ಯಾವಾಗ ಬಳಕೆಯಾಗುತ್ತವೆ ಎಂಬುದನ್ನು ವಿವರಿಸುತ್ತ, ಒಂದೊಂದೇ ಒಡಪನ್ನು ಉಲ್ಲೇಖಿಸುತ್ತ ಹೋಗಿದ್ದಾರೆ. ಕೊನೆಯಲ್ಲಿ ೧೦೦ ಒಡಪುಗಳನ್ನು ಅಕ್ಷರಾನುಕ್ರಮದಲ್ಲಿ ಕೊಟ್ಟಿದ್ದಾರೆ.

'ಕಂಚಿನ ಕದ ಬಿಟ್ಟು
ಹೆಂಚಿನ ಮನೆ ಬಿಟ್ಟು
ಮಲಗೊ ಮಂಚ ಬಿಟ್ಟು
ಮುತ್ತಿನಂಥ ಮೂರು ಮಕ್ಳು ಬಿಟ್ಟು
ಗತಿಗೆಟ್ಟವಳ ಮನ್ಗೆ
ಮತಿಗೆಟ್ಟು ಹೋಗ್ತರೆ ಮಲ್ಲಪ್ಪನೋರು'

'ದುರ್ಗ ದಾವಣಗೆರೆ ಸುತ್ತ
ರಾಗಿ ಜೋಳ ಬಿತ್ತ

ನತ್ತು ಮಾಡ್ಸಂದ್ರೆ ಇತ್ತ
ಮುಸುಣಿ ತಿರುವುತಾರೆ . . .'

'ದಕ್ಷಿಣ ಕರ್ನಾಟಕದ ಒಡಪುಗಳು'(೧೯೯೩) ಕೃತಿಯಲ್ಲಿ ಮಂಡ್ಯ, ಹಾಸನ, ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ, ಬೆಂಗಳೂರು ನಗರ– ಈ ಜಿಲ್ಲೆಗಳ ಹಲವಾರು ಗ್ರಾಮಗಳಲ್ಲಿ ಪ್ರಚಾರದಲ್ಲಿರುವ ೭೧೨ ಒಡಪುಗಳಿವೆ. ಡಾ. ಶಿವರಾಮು ಅವರು ತಮ್ಮ ಕೃತಿಯಲ್ಲಿಯ ಒಡಪುಗಳು ಎಲ್ಲಿಂದ ಸಂಗ್ರಹವಾದವುಗಳು ಎಂಬುದನ್ನು, ವಕ್ತಾರರ ವಿವರವಾದ ಮಾಹಿತಿ, ಸಂಗ್ರಹದ ವರ್ಷ ಇವೆಲ್ಲವುಗಳ ಜೊತೆಗೆ ಹೆಸರು ಹೇಳಿಸುವ ಮತ್ತು ಹೇಳುವ ಹಾಡುಗಳನ್ನೂ ಸಂಗ್ರಹಿಸಿ ಕೊಟ್ಟಿದ್ದಾರೆ. ವಿಶೇಷ ವಿಷಯ, ವಸ್ತು, ಹೆಸರುಗಳ ಸೂಚಿಯನ್ನು ಒದಗಿಸಿದ್ದಾರೆ. ಮತ್ತೆ ಕೆಲವು ಪದಗಳ ಅರ್ಥಸಹಿತ ವಿವರಣೆಗಳನ್ನು ಒದಗಿಸಿದ್ದಾರೆ. ತಮ್ಮ ಕೃತಿ ಪ್ರಕಟವಾಗುತ್ತಿರುವ ಮೊದಲೇ ಪ್ರಕಟವಾದ ಒಡಪುಗಳ ಸಂಗ್ರಹಗಳನ್ನು, ಲೇಖನಗಳನ್ನೂ ಗಮನಿಸಿ, ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹೀಗಾಗಿ ಕನ್ನಡದಲ್ಲಿ ಪ್ರಕಟವಾದ ಒಡಪುಗಳ ಸಂಗ್ರಹಗಳಲ್ಲಿ ಗಾತ್ರದಲ್ಲಿ, ಗುಣದಲ್ಲಿ, ವಿಷಯದ ನಿರೂಪಣೆಯಲ್ಲಿ **'ದಕ್ಷಿಣ ಕರ್ನಾಟಕದ ಒಡಪುಗಳು'** ಉತ್ತಮವಾದ ಒಡಪುಗಳ ಸಂಗ್ರಹವೆನಿಸುತ್ತದೆ. ಈ ಕೃತಿ ತಯಾರಿಕೆಯಲ್ಲಿ ಮೈಲಹಳ್ಳಿ ರೇವಣ್ಣ, ಕುರುವ ಬಸವರಾಜ ಹಾಗೂ ಜೀನಹಳ್ಳಿ ಸಿದ್ಧಲಿಂಗಪ್ಪ ಇವರ ವಿಶೇಷ ಕೊಡುಗೆ ಇದೆ ಎಂದು ತಿಳಿದುಬರುತ್ತದೆ.

ಮೊದಮೊದಲಿಗೆ ಉತ್ತರಕರ್ನಾಟಕದಿಂದ ಬಂದ ಒಡಪುಗಳ ಸಂಗ್ರಹಗಳ ಪ್ರಸ್ತಾವನೆಗಳಲ್ಲಿ, 'ಒಡಪುಗಳ ಬಳಕೆ ಕೇವಲ ಉತ್ತರ ಕರ್ನಾಟಕದಲ್ಲಿ ಮಾತ್ರ ಇದೆ' ಎಂಬ ಭಾವನೆ ವ್ಯಕ್ತವಾಗಿರುವದನ್ನು ಗಮನಿಸಿದ ಮೈಲಹಳ್ಳಿ ರೇವಣ್ಣನವರು, 'ಒಡಪುಗಳು ಇಡೀ ಕರ್ನಾಟಕದಲ್ಲಿ ಬಳಕೆಯಲ್ಲಿದ್ದು, ಉತ್ತರಕರ್ನಾಟಕದಲ್ಲಿ ಅವುಗಳ ಬಳಕೆ ಸಾಕಷ್ಟಿದೆ, ದಕ್ಷಿಣ ಕರ್ನಾಟಕದಲ್ಲಿ ಒಡಪುಗಳನ್ನು ಕೆಲವು ಸಂದರ್ಭಗಳಲ್ಲಿ ಹಿತಮಿತವಾಗಿ ಬಳಸುತ್ತಾರೆ' ಎಂಬುದನ್ನು ಗುರುತಿಸಿದ್ದರು. ಡಾ. ಶಿವರಾಮು ಅವರು ಎರಡನೇಯವರಾಗಿ ಒಡಪುಗಳು ಕರ್ನಾಟಕದ ತುಂಬ ಬಳಕೆಯಲ್ಲಿವೆ ಎಂಬ ವಿಷಯವನ್ನು ತಮ್ಮ ಕೃತಿಯ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸುತ್ತಾರೆ. ೧೯೮೦ ರಲ್ಲಿ ತಮಗೆ ದಕ್ಷಿಣ ಕರ್ನಾಟಕದಲ್ಲೂ ಒಡಪುಗಳಿವೆ ಎಂಬುದು ಗಮನಕ್ಕೆ ಬಂದ ವಿಷಯವನ್ನು ಪ್ರಸ್ತಾಪಿಸುವ ಶಿವರಾಮು ಅವರು, ಅದೇ ವರ್ಷವೇ ತಮಗಿಂತಲೂ ಮುಂಚೆ ಬಿ.ಎಸ್. ನಾಗರತ್ನ ಅವರು 'ಜಾನಪದ ಪರಿಶೀಲನ' ಎಂಬ ಕೃತಿಯಲ್ಲಿ 'ರೀತಿರಾತ್ಮಾ ಕಾವ್ಯಸ್ಯ....' ಎಂಬ ಲೇಖನದಲ್ಲಿ ಹಾಸನ ಭಾಗದಲ್ಲಿ ಒಡಪುಗಳು 'ತೊಡಕುಗಳು' ಎಂಬ ಹೆಸರಿನಲ್ಲಿ ಪ್ರಚಾರದಲ್ಲಿರುವುದನ್ನು ಪ್ರಸ್ತಾಪಿಸುವ ಸಂಗತಿಯನ್ನು ದಾಖಲಿಸುತ್ತಾರೆ.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಒಡಪುಗಳು ಭಿನ್ನಭಿನ್ನ ಹೆಸರುಗಳಲ್ಲಿ ಪ್ರಚಾರದಲ್ಲಿರುವುದನ್ನು ಮೈಲಹಳ್ಳಿ ರೇವಣ್ಣ ಅವರಂತೆ ಶಿವರಾಮು ಅವರೂ

ಪ್ರಸ್ತಾಪಿಸುತ್ತಾರೆ. "ಚಿತ್ರದುರ್ಗ ಮತ್ತು ಶಿವಮೊಗ್ಗ ಭಾಗಗಳಲ್ಲಿ 'ಬೆಡಗು' ಎಂದು ಕರೆಯುವ ಈ ಜನಪದ ಭಾಷಿಕ ಬಗೆಯನ್ನು ಚಿಕ್ಕಮಗಳೂರು ಮತ್ತು ಹಾಸನ ಸುತ್ತಿನಲ್ಲಿ 'ತೊಡಕು' ಎನ್ನುತ್ತಾರೆ. ನಾಗಮಂಗಲ ತುಮಕೂರು ಕಡೆಗೂ 'ತೊಡಕು' ಎಂಬ ಹೆಸರೇ ಇದ್ದರೂ ಒಡಪಿನೊಂದಿಗೆ ಹೆಸರೇಳುವುದು 'ಜೋಡೆಸ್ರು', ಒಡಪಿಲ್ಲದೆ ಹೇಳುವುದು 'ಒಂಟೆಸ್ರು' ಅನ್ನುತ್ತಾರೆ. ಬೆಂಗಳೂರಿನಲ್ಲಿ 'ಒಡಚು' ಎಂದಿದ್ದಾರೆ. ಮೈಸೂರು ಜಿಲ್ಲೆ ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ 'ಅರ್ಥಮಾನ' ಎಂಬ ಹೆಸರಿದ್ದರೆ, ಕೊಡಗಿನಲ್ಲಿ 'ಹೆಸರು ಹೇಳಿಸೋದು' ಎಂಬ ಮಾತು ರೂಢಿಯಲ್ಲಿದೆ" (ಪ್ರ.ಪು.೧೧). ಶಿವರಾಮು ಅವರು 'ನಿಮ್ಮ ಗಂಡನ ಹೆಸರ್ಹೇಳಿ' (೧೯೮೮) ಎಂಬ ತಮ್ಮ ಲೇಖನದಲ್ಲೂ ಹಿಂದೆಯೂ ಇಂತಹ ಅಭಿಪ್ರಾಯವನ್ನು ಬರೆದಿದ್ದರು. 'ಗಂಡ ಹೆಂಡಿರ ಹೆಸರು ಕೇಳುವ ಮತ್ತು ಹೇಳುವ ಪದ್ಧತಿ ದೇಶವಿಡೀ ಇರುವುದಲ್ಲದೆ ಒಡಪಿನೊಡನೆ ಹೆಸರೇಳುವ ಸಂಪ್ರದಾಯವೂ ಇದ್ದಂತಿದೆ' ಎನ್ನುವ ಶಿವರಾಮು ಅವರು ತಮ್ಮ ಪ್ರಸ್ತಾವನೆಯಲ್ಲಿ ಒಡಪುಗಳು ಎಲ್ಲೆಲ್ಲಿ ಬಳಕೆಯಾಗುತ್ತವೆಯೋ ಅಂತಹ ಸಂದರ್ಭಗಳನ್ನು ಸುದೀರ್ಘವಾಗಿ ಕೊಡುತ್ತಾರೆ.

ಹೆಣ್ಣುಮಕ್ಕಳು ವಿಶೇಷವಾಗಿ ಮುತ್ತೈದೆಯರು ಸಂಭ್ರಮದಿಂದ ಭಾಗವಹಿಸುವ ಶುಭಕಾರ್ಯದ ಸಂದರ್ಭಗಳಲ್ಲೆಲ್ಲ ಗಂಡನ ಹೆಸರು ಹೇಳಿಸುವ ಪದ್ಧತಿ ಸುಮಾರಾಗಿ ಎಲ್ಲ ಕಡೆ ಇದ್ದಂತಿದೆ. ಆದರೆ ಒಡಪುಗಳ ಸೃಷ್ಟಿಯ ಸಂದರ್ಭ ಮಾತ್ರ ಹೊಸದಾಗಿ ಮದುವೆಯಾದ ಗಂಡ–ಹೆಂಡಿರು ಪರಸ್ಪರ ಹೆಸರು ಹೇಳಲು ಬಳಸುವ ಸಂದರ್ಭ, ಅದೂ ಗಂಡು ಹೆಣ್ಣಿಗೆ ತಾಳಿ ಕಟ್ಟಿ, ಸಾರ್ವಜನಿಕರು ಅಕ್ಷತ ಹಾಕಿದ ನಂತರ ಹಂದರದಲ್ಲಿ ನಡೆಯುವ ಹಲವಾರು ಬಗೆಯ ಸರಸದ ಆಟಗಳಲ್ಲಿ ಪರಸ್ಪರ ಹೆಸರು ಹೇಳಿಸುವ ಸಂದರ್ಭದಲ್ಲಿ ಆ ಮದುಮಕ್ಕಳು ಒಡಪುಗಳನ್ನು ಬಳಸುವದು ಮೂಲ ಸಂದರ್ಭವಾಗಿದೆ. ಇಲ್ಲಿ ಹುಟ್ಟಿ–ಬಳಕೆಯಾಗುವ ಒಡಪುಗಳು ಮತ್ತೆ ಗಂಡ–ಹೆಂಡಿರು, ವಿಶೇಷವಾಗಿ ಹೆಂಡತಿಯರು (ಮುತ್ತೈದೆಯರು) ಭಾಗವಹಿಸುವ ಶುಭ ಸಂದರ್ಭಗಳಲ್ಲಿ ಒಡಪುಗಳು ಬಳಕೆಯಾಗುತ್ತ ಬಂದಿರುವುದು ಕಂಡುಬರುತ್ತದೆ.

ಡಾ. ಶಿವರಾಮು ಅವರು ಒಡಪುಗಳನ್ನು ಹೆಂಗಸರ ಒಡಪುಗಳು, ಗಂಡಸರ ಒಡಪುಗಳು ಎಂದು ಭಾಗ ಮಾಡಿಕೊಂಡು, ಒಡಪುಗಳನ್ನು ಅಕಾರಾದಿಯಾಗಿ ಜೋಡಿಸಿ ಕೊಟ್ಟಿದ್ದಾರೆ. ಇಷ್ಟೊಂದು ದೊಡ್ಡಪ್ರಮಾಣದ ಒಡಪುಗಳನ್ನು ವಿಷಯಾನುಸಾರ ವಿಂಗಡನೆ ಮಾಡಿಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಬಳಕೆಯಿರುವ ಒಡಪುಗಳೂ ಕಾವ್ಯಾತ್ಮಕವಾಗಿವೆ. ಉದಾಹರಣೆಗೆ:

ಅಕ್ಕ ಯಾಲಕ್ಕಿ ತಂಗಿ ದ್ರಾಕ್ಷಿ
ಅಕ್ಕಾರು ಹೇಳ್ಯಾರೆ ತಕ್ಕಂತ ಮಾತ
ಅಣ್ಣಾರು ಹೇಳ್ಯಾರೆ ಬಣ್ಣದಂತ ಮಾತ
ತಕ್ಕಂತ ಹೆಂಡತಿ ಕೂಟೆ ಕೂತು ನಕ್ಕಂತ ಮಾತಾಡ್ತಾರೆ....

ಅಂಗಳದಲ್ಲಿ ಅವ್ರೆ ಹೂವು
ಗಂಗಳದಲ್ಲಿ ಮಲ್ಗೆ ಹೂವು
ದಾರದಲ್ಲವ್ರೆ ದರಬಾರದಲ್ಲವ್ರೆ
ಕಚೇರಿ ಮುಂದೆ ಇಚಾರ್ಣೆ ಮಾಡ್ತಾರೆ...

ಬನಕ್ಕೆ ಗಿಡಗಳು ಚಂದ
ಬಳ್ಳಿ ವೃಕ್ಷಕ್ಕೆ ಚೆಂದ
ಶೀಲ ನಾರಿಗೆ ಚೆಂದ
ತಾಳ ಹಾಡಿಗೆ ಚಂದ
ನಾ ಚಂದ ನಮ್ಮ . . . ರಿಗೆ

ಹೆಣ್ಣುಮಕ್ಕಳು ಹೇಳುವ ಇಂತಹ ೬೩೬ ಒಡಪುಗಳು ಇಲ್ಲಿವೆ. ಉಳಿದಂತೆ ಗಂಡಸರು ಬಳಸುವ ಒಡಪುಗಳು ಎಲ್ಲಕಡೆಯಂತೆ ಇಲ್ಲೂ ಕಡಿಮೆಯಾಗಿವೆ. ಒಂದಿಷ್ಟು ಒರಟಾಗಿವೆ, ಒಂದಿಷ್ಟು ಉತ್ತಮವಾಗಿವೆ.

ಅರಗಿನ ಕೊಡ ಸೆರಗಿನ ಸಿಂಬೆ
ಶೀಲವಂತರ ಮಗಳು ಸೀತಾದೇವಿ
ದಾರಿಬಿಡು ಅಂದ್ರೆ ಮೋರೆ ನೋಡ್ತಾಳೆ. . .

ಅತ್ತೆ ಮಗಳೆ ಕೊತ್ತಿ ಮರಿಯೆ
ನನ್ನ ಚಿನ್ನದ ಸದರ ಬಿಟ್ಟು
ನಿನ್ನ ಬೆಳ್ಳಿ ಸದರಕ್ಕೋಗೆ . . .

ಮಾತು ಮಾತಿಗೆ ಮಾಡ್ತಾಳೆ ಆಣಿ
ಯಾತಕ್ಕೂ ಸೋಲುವುದಿಲ್ಲ ನಮ್ಮ ರಮಣಿ
ತನ್ನದೇ ನಡಸ್ತಾಳೆ ನಮ್ಮ ರಾಣಿ . . .

ಉತ್ತರ ಕರ್ನಾಟಕದಲ್ಲಿ ಮತ್ತೆ ಇತ್ತೀಚಿನ ಯುವಕರು ಒಡಪುಗಳ ಸಂಗ್ರಹಕ್ಕೆ ಕೈಹಾಕಿದ್ದು ಕಂಡು ಬರುತ್ತದೆ. ೧೯೭೧ರಲ್ಲಿ ಮೊದಲ ಸಂಗ್ರಹ ಬಂದನಂತರ ಆ ಕಾಲದ ಹಿರಿಕಿರಿಯ ವಿದ್ವಾಂಸರು ಸಹಜವಾಗಿಯೇ ಒಡಪುಗಳ ಬಗ್ಗೆ ಆಸಕ್ತಿ ತಾಳಿದ್ದರು. ಮುಂದೆ ೨೫ ವರ್ಷಗಳ ನಂತರ ಉತ್ತರ ಕರ್ನಾಟಕದ ಹೊಸ ಪೀಳಿಗೆಯಿಂದ ಒಡಪುಗಳ ಸಂಗ್ರಹ ಒಂದು ಪ್ರಕಟವಾಗಿರುವುದು ಕಂಡುಬರುತ್ತದೆ. ೧೯೯೫ರಲ್ಲಿ **'ಜನಪದ ಒಡಪುಗಳು'** ಎಂಬ ಒಂದು ಸಂಗ್ರಹವನ್ನು ಬಿ.ಎಸ್. ಭಜಂತ್ರಿ ಅವರು ಪ್ರಕಟಿಸಿದ್ದಾರೆ. ಈ ಒಡಪುಗಳನ್ನು ಬೆಳಗಾಂವ ಜಿಲ್ಲೆಯ ರಾಮದುರ್ಗ ಮತ್ತು ಗೋಕಾಕ ತಾಲೂಕಿನ ಪಂಚಗಾಂವ, ಬಿಚಗುಪ್ಪಿ, ಹುಲಕುಂದ, ಸಾಲಳ್ಳಿ, ಕೊಣ್ಣೂರ, ರೊಕ್ಕದಕೊಟ್ಟಿ, ನಾಗನೂರ ಈ ಗ್ರಾಮಗಳಲ್ಲಿ ಸಂಗ್ರಹಿಸಲಾಗಿದೆ. ಹೀಗಾಗಿ ಬೆಳಗಾಂವ ಜಿಲ್ಲೆಯಿಂದಲೇ ಮೂರು ಒಡಪುಗಳ ಸಂಗ್ರಹಗಳು ಪ್ರಕಟವಾದಂತಾಗುತ್ತದೆ. ಬಜಂತ್ರಿಯವರು ತಮಗಿಂತ ಮೊದಲು ಬಂದ ಒಡಪುಗಳ ಸಂಗ್ರಹಗಳನ್ನು ಗಮನಿಸಿ,

ಪ್ರಸ್ತಾವನೆಯಲ್ಲಿ ಅವೆಲ್ಲವನ್ನು ಉಲ್ಲೇಖಿಸುತ್ತಾರೆ. ಅವರು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಒಂದು ಹೊಸ ಸಂದರ್ಭವನ್ನು ತಮ್ಮ ಪ್ರಸ್ತಾವನೆಯಲ್ಲಿ ವಿವರಿಸುವುದು ಕಂಡುಬರುತ್ತದೆ. ಒಡಪುಗಳನ್ನು ಜೋಳದ ರಾಶಿಯ ಸಂದರ್ಭಗಳಲ್ಲಿ ಹೇಳುವ ವಾಡಿಕೆಯಿದ್ದು, ಅಲ್ಲಿ ದಂಪತಿಗಳು ಹೆಸರು ಹೇಳುವ ಪದ್ಧತಿಯಿದ್ದು, ಹೀಗೆ ಗಂಡ–ಹೆಂಡತಿ ಹೆಸರು ಹೇಳುವುದರಿಂದ ರಾಶಿ ಹೆಚ್ಚುತ್ತದೆ ಎಂಬ ಒಂದು ನಂಬುಗೆ ಇರುವುದನ್ನು ಉಲ್ಲೇಖಿಸುತ್ತಾರೆ. ಅವರ ವಿವರಣೆ ಹೀಗಿದೆ: "ಉತ್ತರ ಕರ್ನಾಟಕದಲ್ಲಿ ಒಡಪುಗಳ ಪ್ರಯೋಗ ಮಂಗಲ ಕಾರ್ಯಗಳಲ್ಲಷ್ಟೇ ಅಲ್ಲ ಉಳಿದ ಪ್ರಸಂಗಗಳಲ್ಲಿಯೂ ನಡೆಯುತ್ತದೆ. ವಿಶೇಷವಾಗಿ ಬೆಳಗಾಂವ ಜಿಲ್ಲೆಯ ಪೂರ್ವಭಾಗ ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ ಬಿಳಿಜೋಳ ಹೆಚ್ಚು ಬೆಳೆಯುತ್ತಾರೆ. ಬಿಳಿ ಜೋಳ ತೆನೆ ಮುರಿಯುವ ಸಂದರ್ಭದಲ್ಲಿ ಸ್ತ್ರೀಯರನ್ನು ಹೆಸರು ಕೇಳಲು ಒಂದು ಸುಸಂಧಿ. ತೆನೆ ಮುರಿಯಲು ಬಂದ ಸ್ತ್ರೀಯರು ತಾವು ಕುಳಿತಲ್ಲಿ ತೆನೆ ಕನಿಕೆ ಹಾಕಲು ಬಂದವರನ್ನು ಹೆಸರು ಕೇಳುತ್ತಾರೆ. ಅವರು ಇವರನ್ನು ಹೆಸರು ಹೇಳಿಸಿಕೊಂಡೇ ತೆನೆ ಮುರಿಯಲು ಬಿಡುತ್ತಾರೆ. ಸಾಯಂಕಾಲ ತೆನೆ ಮುರಿಯವುದು ಮುಗಿದ ನಂತರ ತೆನೆಗಳನ್ನು ಬಂಡಿ (ಚಕ್ಕಡಿ)ಗೆ ತುಂಬಲು ಬಂದವನು ಹೆಂಡತಿ ಹೆಸರು ಹೇಳಬೇಕು. ಬಿಡುವ ಸಂದರ್ಭದಲ್ಲಿಯೂ ಸ್ತ್ರೀಯರು ಗಂಡಂದಿರ ಹೆಸರು ಹೇಳಿಯೇ ಬಿಡಬೇಕು. ಹೀಗೆ ಹೆಸರು ಹೇಳುವ ಕೇಳುವದರಿಂದ ರಾಶಿ ಹೆಚ್ಚುತ್ತದೆ ಎಂಬ ನಂಬಿಕೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಬಂದಿದೆ" (ಪ್ರ.ಪು.೭). ಜನಪದ ಸಾಹಿತ್ಯ ರೂಪಗಳ ಸುತ್ತ ಇಂತಹ ನಂಬುಗೆಗಳು ಬೆಳೆಯುತ್ತ ಬರುವುದರಿಂದ ಅವು ಬಳಕೆಯಾಗುವ ಸಂದರ್ಭಗಳು ಹೆಚ್ಚಾಗುತ್ತ ಹೋಗುತ್ತವೆ. ಸರಸ–ಸಂದರ್ಭಗಳಲ್ಲಿ ಸಲುಗೆಗಾಗಿ ಮಾತ್ರವಲ್ಲ, ತಮ್ಮ ರಾಶಿ ವೃದ್ಧಿಸುವುದೆಂಬ ನಂಬುಗೆ ಒಡಪುಗಳ ಜೊತೆ ಬೆರೆತುಕೊಂಡು ಬಂದುದು ಒಂದು ವಿಶೇಷ ಸಂಗತಿಯಾಗಿ ಕಾಣುತ್ತದೆ.

ಚಿನ್ನಚಿನ್ನದಲ್ಲಿ ಚೆನ್ನಪಟ್ಟಣದಲ್ಲಿ
ಹೆಣ್ಣ ಬೇಡಾಕ ಹೋದ್ರ ಕೊಡ್ತೇವಿ ಕೊಡ್ತೇವಿ ಅಂದ್ರ
ಇಷ್ಟೆಲ್ಲ ಮಾಡಿ ಅಳ್ಯಾಗ ಏನ ಕೊಟ್ರಿ
ನೀರ ಕುಡು ಗಿಂಡಿ ನಿದ್ದಿ ಮಾಡು ಮಂಚ
ಎಡಗೈಯಾಗ ಲಿಂಗ ಸಿಂಗಾರ ಮನ್ಯಾಗ ಕುಂತ
ಶಿವಪೂಜೆ ಮಾಡ್ತಾರ. . . .

ಈ ಸಂಗ್ರಹದಲ್ಲಿ ಒಂದು ವಿಶೇಷ ಒಡಪು ದೊರೆಯುತ್ತಿದ್ದು, ಅದು ಬಾಲ್ಯವಿವಾಹ ಒಳ್ಳೆಯದಲ್ಲ ಎಂಬ ಅರಿವಿನಿಂದ ಮೂಡಿಬಂದಿದೆ. ಈ ಬಗೆಗೆ ಸರ್ಕಾರ ಅದೇಶ ಹೊರಡಿಸಿದ ಉಲ್ಲೇಖವನ್ನೂ ಮಾಡಲಾಗಿದೆ. ಒಡಪುಗಳು ಇಂತಹ ಕೆಲಸವನ್ನೂ ಮಾಡುವುದು ಅಪರೂಪದ ಉದಾಹರಣೆಯಾಗಿ ಈ ಒಡಪು ದಾಖಲಾಗಿದೆ:

ಚಿಕ್ಕ ಮಕ್ಕಳಿಗೆ ಲಗ್ನ ಮಾಡಬಾರದೆಂದು
ಸರ್ಕಾರ ಮಾಡಿತು ಕಾಯಿದೆ

....ರ ಹೆಸರು ಕೇಳಿದರೆ
ನಿಮಗೇನು ಬರುವದು ಪಾಯಿದೆ.

೧೯೯೫ರ ನಂತರ ನಮಗೆ ಇನ್ನೊಂದು ಒಡಪಿನ ಸಂಗ್ರಹ ದೊರೆಯಲು ೧೫ ವರ್ಷಗಳ ಸುದೀರ್ಘ ಅವಧಿಯೇ ಹೋಗಿರುವುದು ಕಂಡು ಬರುತ್ತದೆ. ೨೦೧೦ರಲ್ಲಿ ಬಿ. ಬಸವರಾಜ ಅವರು **'ಜಾನಪದ ಒಡಪುಗಳು'** ಎಂಬ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಇದನ್ನು ಗಮನಿಸಿದರೆ ಒಡಪುಗಳ ಸಂಗ್ರಹಗಳು ಪ್ರಕಟವಾಗುತ್ತಿರುವುದು ವಿರಳವಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಕಥೆ, ಗಾದೆ, ಒಗಟು ಈ ಸಾಹಿತ್ಯ ಪ್ರಕಾರದ ಸಂಗ್ರಹಗಳು ಆಗಾಗ ಪ್ರಕಟವಾಗುತ್ತಲೇ ಇರುವುದು ಕಂಡುಬರುತ್ತದೆ. ಒಡಪುಗಳನ್ನು ಕುರಿತು ಪ್ರಾರಂಭದಲ್ಲಿ ಒಂದೆರಡು ಪರಿಚಯಾತ್ಮಕ ಲೇಖನಗಳು ಪ್ರಕಟವಾದುದನ್ನು ಬಿಟ್ಟರೆ, ಒಡಪುಗಳ ಸಂಗ್ರಹಕಾರರು ಪ್ರಸ್ತಾವನೆಗಳಲ್ಲಿ ಒಡಪುಗಳ ಬಗ್ಗೆ ಬರದುದು ಮಾತ್ರ ಕಂಡುಬರುತ್ತದೆ. ೧೯೭೦ರಿಂದ ಪ್ರಾರಂಭಗೊಂಡು ಇಲ್ಲಿಯವರೆಗೆ ४೫ ವರ್ಷಗಳೇ ಕಳೆಯುತ್ತ ಬಂದರು ಒಡಪುಗಳನ್ನು ಒಂದು ಪಿಎಚ್.ಡಿ.ಅಭ್ಯಾಸ ಕೂಡ ನಡೆದಿಲ್ಲವೆಂಬುದು ಈ ಪ್ರಕಾರ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ತುಂಬ ನಿರ್ಲಕ್ಷ್ಯಕ್ಕೆ ಒಳಗಾದುದು ಎಂಬುದು ಸ್ಪಷ್ಟವಾಗಿ ತೋರುತ್ತದೆ.

ಬಿ.ಬಸವರಾಜ ಅವರ **'ಜಾನಪದ ಒಡಪುಗಳು'** ಸಂಗ್ರಹದ ಒಡಪುಗಳನ್ನು ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ ಕೆಲವು ಹಳ್ಳಿಗಳಿಂದ ಸಂಗ್ರಹಿಸಲಾಗಿದೆ. ಸಂಪಾದಕರು ತಾವು ಹರಪನಹಳ್ಳಿಯ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾಗ, ಸುತ್ತಮುತ್ತಲ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಅವರಿಂದ ಒಡಪುಗಳನ್ನು ತರಿಸಿ ಪ್ರಕಟಿಸಿರುವುದಾಗಿ ಅವರೊಂದಿಗೆ ಮಾತನಾಡಿದಾಗ ವಿವರಿಸಿದ್ದಾರೆ. ಈ ಕೃತಿಯ ವಿಶೇಷತೆಯೆಂದರೆ ೬೨೭ ಒಡಪುಗಳು ಇಲ್ಲಿದ್ದು, ಇಲ್ಲಿಯವರೆಗೆ ಪ್ರಕಟವಾದ ಒಡಪುಗಳ ಸಂಗ್ರಹಗಳಲ್ಲಿ ಅತ್ಯಂತ ಹೆಚ್ಚಿನ ಒಡಪುಗಳನ್ನು ಹೊಂದಿದ ಕೃತಿ ಎನಿಸುತ್ತದೆ. ಇಲ್ಲಿ ಒಡಪುಗಳನ್ನು ವಿಷಯಾನುಸಾರ ವಿಂಗಡನೆ ಮಾಡಿಕೊಂಡಿದ್ದು ವಿಶೇಷವಾಗಿ ಕಾಣುತ್ತದೆ. ಹೆಣ್ಣುಮಕ್ಕಳ ಒಡಪುಗಳನ್ನು ೧೨ ವಿಭಾಗಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. 'ಹಾಸ್ಯ ವಿನೋದ, ದಾಂಪತ್ಯ ಪ್ರಣಯ ಪ್ರೇಮ, ಪೌರಾಣಿಕ ಸಾಮಾಜಿಕ ವ್ಯಕ್ತಿಗಳು, ಗಂಡನ ಗುಣಗಾನ, ಉಡುಗೆ ತೊಡುಗೆ ಆಭರಣಗಳು, ಊಟ ತಿಂಡಿ ತಿನಿಸುಗಳು, ಮಕ್ಕಳ ಆಟ ಅಂದ ಚಂದ, ದೇವಾನುದೇವತೆಗಳ ಗುಣಗಾನ, ವ್ಯವಸಾಯ ಸಂಬಂಧ, ಮುತ್ತೈದಿತನ, ಹವ್ಯಾಸ, ಚಟ, ಪಕ್ಷಿ, ಪ್ರಾಣಿ, ಪೂಜೆ, ಆರಾಧನೆ, ಗೌರವ, ವೃತ್ತಿ' ಹೀಗೆ ವಿಷಯಾನುಸಾರ ವಿಂಗಡಿಸಿರುವುದು ಒಂದು ಉತ್ತಮ ಪ್ರಯತ್ನವೆಂದೇ ಹೇಳಬೇಕು. ಗಂಡುಮಕ್ಕಳ ಒಡಪುಗಳನ್ನು ಒಂದೇ ಕಡೆ ಕೊಟ್ಟಿದ್ದಾರೆ.

ಇಲ್ಲಿಯ ಒಡಪುಗಳು ಬಹಳ ವೈವಿಧ್ಯಮಯವಾಗಿರುವುದು ಕಂಡುಬರುತ್ತದೆ. ಹೀಗಾಗಿ ಒಡಪುಗಳ ಅಧ್ಯಯನಕಾರರಿಗೆ ಇಲ್ಲಿ ಹೆಚ್ಚು ಉತ್ತಮವಾದ ಕಾವ್ಯಾತ್ಮಕ ಒಡಪುಗಳು ದೊರೆಯುತ್ತವೆ. ಈ ದೃಷ್ಟಿಯಿಂದ ಸಂಗ್ರಹ ಗಮನಾರ್ಹವೆನಿಸುತ್ತದೆ.

ಮಡಿ ಮಡಿ ಅಂತಾರ ಓಡಿ ಹೋಟಲಿಗೆ ಹೋಗತಾರ
ಗುಡಿ ಗುಡಿ ಅಂತಾರ ಎಡಿ ಮಾಡದೆ ಉಣತಾರ
ವಡವಡ ಅಂತ ಬಂದು ಒಲಿ ಸಂದ್ಯಾಗ ಕೂಡತಾರ . . .

ಹಸರು ಗಿಡಕ್ಕೆ ಹೆಸರಾದೆ
ಕೊಟ್ಟ ಮನೆಗೆ ಸೊಸೆಯಾದೆ
ಕೋಲುಕುಂಟಿಗೆ ಹೆಸರಾದೆ
ನಮ್ಮಪ್ಪ ಕೊಟ್ಟದ್ದು ಕಂಚಿನ ಆರತಿ
ನಾವು ಬೆಳಗುವುದು ಮಂಗಳಾರತಿ . . .

ಸೀಗಿ ಹುಣ್ಣಿಮೆಯಲ್ಲಿ ಬೆಳಗುವುದು ಮಣ್ಣಿನ ಆರತಿ
ಗೌರಿ ಹುಣ್ಣಿಮೆಯಲ್ಲಿ ಬೆಳಗುವುದು ಸಕ್ಕರೆ ಆರತಿ
ಶುಭ ಕಾರ್ಯದಲ್ಲಿ ಬೆಳಗುವುದು ಮಂಗಳಾರತಿ
ಆದರೆ ನಾನು ಬೆಳಗುವುದು . . . ರಾಯರಿಗೆ ಪ್ರೇಮದಾರತಿ.

ವಿಚಾರಗೇಡಿಗಳ ಸಭೆಗೆ ಹೋಗಬಾರದು
ಆಚಾರಗೇಡಿಗಳ ಮನೆಯಲ್ಲಿ ಉಣಬಾರದು
ಯೋಚಿಸಿ ಹೇಳಿದ ನಮ್ಮ . . .ರ ಮಾತು ಮೀರಬಾರದು

ಹೀಗೆ ಇಲ್ಲಿಯ ಒಡಪುಗಳು ನವೀನವಾಗಿವೆ. ಒಡಪುಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸಾಕಷ್ಟು ವಿಷಯ ಇಲ್ಲಿ ದೊರೆಯುತ್ತದೆ.

ಜನಪ್ರಿಯ ಪುಸ್ತಕ ಮಾಲೆಗಳಾಗಿ ಉತ್ತರ ಕರ್ನಾಟಕದ ಹುಬ್ಬಳ್ಳಿ, ಗದಗ ಮೂಲದ ಪ್ರಕಾಶನದ ಇನ್ನೂ ಆರೇಳು ಕಿರುಪುಸ್ತಿಕೆಗಳು ನನ್ನ ಮುಂದಿವೆ. ಅವುಗಳನ್ನು ಸಂಗ್ರಹಿಸಿದವರು ಯಾರು? ಪ್ರಕಟವಾದ ವರ್ಷ ಯಾವುದು? ಈ ಬಗೆಯ ಯಾವುದೇ ಮಾಹಿತಿಗಳು ಅಲ್ಲಿಲ್ಲ. ಜನಪದ ಕಥೆ, ಹಾಡು, ವಿಶೇಷವಾಗಿ ಭಜನೆಯ ಹಾಡುಗಳು, ಹಾಗೂ ಒಡಪುಗಳಿಗೆ ಸಂಬಂಧಿಸಿದಂತೆ ಈ ಕೃತಿಗಳನ್ನು ಹೀಗೆ ಪ್ರಕಟ ಮಾಡಿ ಮಾರಾಟಕ್ಕೆ ಬಿಡುವ ಪದ್ಧತಿ ಮೊದಲಿನಿಂದಲೂ ಕಾಣುತ್ತದೆ. ಇವು ಹೆಚ್ಚಿನ ಸಂಖ್ಯೆಯಲ್ಲಿ ಜನ ಕೊಂಡುಕೊಳ್ಳುತ್ತಾರೆ. ಅವುಗಳ ಒಂದು ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ.

೧. ವಗಟುಗಳು	೧೬೪
೨. ಒಗಟುಗಳು	೦೮೬
೩. ಒಗಟಿನ ಮಾಲೆ	೨೧೧
೪. ಒಗಟಿನ ಮಾಲೆ	೧೮೬
೫. ಒಗಟಿನ ಮಾಲೆ	೨೮೧
೬. ವಿನೋದ ಒಗಟಿನ ಮಾಲೆ	೨೦೬
	೧೧೩೪

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಚಾರದಲ್ಲಿರುವ ಈ ಮಾಲೆಯ ಒಡಪುಗಳ ಪುಸ್ತಿಕೆಗಳಲ್ಲಿಯ ಒಡಪುಗಳು ಹೆಚ್ಚು ಪ್ರಚಾರದಲ್ಲಿವೆ. ಅಲ್ಪಸ್ವಲ್ಪ ಕಲಿತ ಹೆಣ್ಣುಮಕ್ಕಳು ನೇರವಾಗಿ ಸುಲಭವಾಗಿ ತಮ್ಮ ಕೈಗೆ ದೊರೆಯುವ ಇಂತಹ ಕೃತಿಗಳನ್ನೇ ಅವಲಂಬಿಸುವುದು ಸ್ವಾಭಾವಿಕ. ಹೀಗಾಗಿ ಒಡಪುಗಳ ಸಂಗ್ರಾಹಕರಿಗೆ ಕ್ಷೇತ್ರಕಾರ್ಯದಲ್ಲೂ ಇಂತಹ ಒಡಪುಗಳ ದರ್ಶನವಾಗುವ ಸಾಧ್ಯತೆ ಇದೆ. ಇವೆಲ್ಲ ಯಾರೋ ಒಬ್ಬಿಬ್ಬರು ತಾವೆ ಸೃಜಿಸಿ ಹಾಕಿದ ರಚನೆಗಳೆನಿಸುತ್ತವೆ. ಇಂತಹ ಖೋಟಾ ಜನಪದ ಸಾಹಿತ್ಯವನ್ನು ತಡೆಯುವುದು, ಗುರುತಿಸುವುದು ಒಂದು ದೊಡ್ಡ ಸಮಸ್ಯೆಯೇ ಆಗುತ್ತದೆ. ನಾನು ಗಮನಿಸಿದಂತೆ ಒಡಪುಗಳ ವಿಷಯದಲ್ಲಿ ಮಾತ್ರ ಇಂತಹ ಖೋಟಾ ರಚನೆಗಳ ಹಾವಳಿ ಜಾಸ್ತಿಯಾಗಿದೆ. ಉಳಿದಂತೆ ಹಾಗೆ ಕಂಡುಬರುವುದಿಲ್ಲ.

* * *

ಒಡಪುಗಳ ಸಂಗ್ರಹಗಳು :

೧೯೪೦ : ಮಕ್ಕಳ ಒಡಪುಗಳು, (ಸಂ) ಶಂ.ಭಾ.ಜೋಶಿ,– ಸಮಾಜ ಪುಸ್ತಕಾಲಯ, ಧಾರವಾಡ. (೨ನೇ ೧೯೪೬, ೩ನೇ ೧೯೬೬ ಮು.)

೧೯೭೧ : ಹೆಸರ ಹೇಳ್ತೇನಿ ಒಡಪಕಟ್ಟಿ, (ಸಂ) ಜ್ಯೋತಿ ಹೊಸೂರ, –ಜಾನಪದ ಮಂಟಪ, ಹಾರೂಗೇರಿ, ಜಿ.ಬೆಳಗಾಂವ.

೧೯೭೩ : ಒಲವಿನ ಒಡಪುಗಳು, ಶ್ರೀರಾಮ ಬಿದರಿ, ಮು. ಬೆಟಗೇರಿ,–ಜಾನಪದ ಸಾಹಿತ್ಯ ಸಂಘ, ಬಿಲಹಳ್ಳಿ.

೧೯೭೪ : ಉತ್ತರಕರ್ನಾಟಕದ ಒಡಪುಗಳು, (ಸಂ) ಡಾ. ಎಂ.ಎಸ್.ಲಠ್ಠೆ, –ರವೀಂದ್ರ ಪ್ರಕಾಶನ, ಕಲಬುರ್ಗಿ.

೧೯೭೭ : ಬಳ್ಳಾರಿ ಜಿಲ್ಲೆಯ ಒಡಪುಗಳು, (ಸಂ) ಸಾಹಿತ್ಯಾನಂದ, ನಿವೇದಿತ ಪ್ರಕಾಶನ, ಸುಬ್ರಹ್ಮಣ್ಯ ನಗರ, ಬೆಂಗಳೂರು–೧.

೧೯೭೯ : ಜನಪದ ಒಡಪುಗಳು, (ಸಂ) ಶಾಂತಕುಮಾರಿ ಪಾಟೀಲ (ಶಾಂತಾ ಇಮ್ರಾಪುರ), –ಚೇತನಾ ಪ್ರಕಾಶನ, ಧಾರವಾಡ.

೧೯೭೯ : ಕನ್ನಡ ಒಡಪುಗಳು, (ಸಂ) ಲೀಲಾವತಿ ತೋರಣಗಟ್ಟಿ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೮೧ : ಜನಪದ ಒಡಪುಗಳು, (ಸಂ) ಶಂಕರಾನಂದ ಉತ್ಲಾಸರ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೮೩ : ಸಿರಿಗನ್ನಡ ಒಡಪುಗಳು, (ಸಂ) ಡಾ. ಎಂ.ಎನ್. ವಾಲಿ, –ಭುವನೇಶ್ವರಿ ಪ್ರಕಾಶನ, ಬಿಜಾಪೂರ.

೧೯೮೯ : ನಮ್ಮ ಒಡಪುಗಳು, (ಸಂ) ಮೈಲಹಳ್ಳಿ ರೇವಣ್ಣ, –ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

೧೯೯೨ : ಉತ್ತರ ಕರ್ನಾಟಕದ ಜನಪದ ಒಡಪುಗಳು, (ಸಂ) ದಸ್ತಗೀರ ಅಲ್ಲಿಭಾಯಿ, –ಸಾಹಿತ್ಯ ಭಂಡಾರ, ಹುಬ್ಬಳಿ.

೧೯೯೩ : ದಕ್ಷಿಣ ಕರ್ನಾಟಕದ ಒಡಪುಗಳು, (ಸಂ) ವಿ.ಎನ್. ಶಿವರಾಮು, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೯೯೪ : ಜನಪದ ಒಡಪುಗಳು, (ಸಂ) ಬಿ.ಎಸ್. ಭಜಂತ್ರಿ, –ಚೈತನ್ಯ ಪ್ರಕಾಶನ, ಪಂಚಗಾಂವ–೫೯೧ ೧೩೦.

೨೦೧೦ : ಜಾನಪದ ಒಡಪುಗಳು, (ಸಂ) ಬಿ. ಬಸವರಾಜ, –ಶಾಬಾದಿಮಠ ಪ್ರಿಂಟಿಂಗ್ ಪ್ರೆಸ್, ಗದಗ.

ಒಡಪುಗಳ ಕುರಿತು ಲೇಖನಗಳು, ಕೃತಿಗಳು:

೧೯೮೦ : ಜಾನಪದ ಪರಿಶೀಲನ, ಬಿ.ಎಸ್.ನಾಗರತ್ನ, –ಮಾನವಿ ಪ್ರಕಾಶನ, ಪಡುವಾರಹಳ್ಳಿ, ಮೈಸೂರು–೨.

೧೯೮೧ : ಒಡಪುಗಳು, ವಿ.ಎನ್.ಶಿವರಾಮು, –ಜಾನಪದ ಜಗತ್ತು (೨–೫,೧೯೮೧), ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೧೯೮೨ : ಕನ್ನಡದಲ್ಲಿ ಬೆಡಗು, ಮೈಲಹಳ್ಳಿ ರೇವಣ್ಣ, –ಕರ್ನಾಟಕ ಜಾನಪದ ಸಮೀಕ್ಷೆ, (ಸಂ) ಜೀ.ಶಂ.ಪರಮಶಿವಯ್ಯ, –ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು.

೧೯೮೮ : ನಿಮ್ಮ ಗಂಡನ ಹೆಸರ್ಹೇಳಿ, ವಿ.ಎನ್.ಶಿವರಾಮು, –ಬಡವೊಂದು ಕವಲೆಂಟು, ವಿ.ಎನ್. ಶಿವರಾಮು, –ಅಂಕಿಅಂಶ ಪ್ರಕಾಶನ, ಆಲೂರು, ಹಾಸನ ಜಿಲ್ಲೆ.

೨೦೦೯ : ಒಡಪು(ಪುಸ್ತಿಕೆ), ಮೈಲಹಳ್ಳಿ ರೇವಣ್ಣ, –ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

* * *

೫. ಜನಪದ ವಡಬುಗಳು

ಜನಪದ ಸಾಹಿತ್ಯದ ಬಗ್ಗೆ ಬರೆಯುವಾಗ ನಮ್ಮ ವಿದ್ವಾಂಸರು ಮೊದಲಿನಿಂದಲೂ ಗಾದೆ–ಒಗಟು–ಒಡಪು–ವಡಬು ಸಂಬಂಧಾಂತರದ ಬಗ್ಗೆ ವಿಚಾರ ಮಾಡುತ್ತ ಬಂದಿದ್ದಾರೆ. ಇವುಗಳಲ್ಲಿ ರೂಪ ಸಾಮ್ಯತೆ ಮಾತ್ರ ಇದೆ. ವಾಸ್ತವವಾಗಿ ಈ ನಾಲ್ಕೂ ಪ್ರಕಾರಗಳು ಜನಪದ ಸಾಹಿತ್ಯದ ಪ್ರತ್ಯೇಕ ಪ್ರಕಾರಗಳೇ ಆಗಿವೆ. ಅದಕ್ಕಾಗಿ ಇವುಗಳ ಬಗ್ಗೆ ಮಾತನಾಡುವಾಗ, ಬರೆಯುವಾಗ ಈ ಸ್ಪಷ್ಟತೆ ಇರುವುದು ಅವಶ್ಯವಾಗಿದೆ. ಅದಕ್ಕಾಗಿ ಈ ನಾಲ್ಕೂ ಪ್ರಕಾರಗಳ ಚರ್ಚೆ ಪ್ರತ್ಯೇಕವಾಗಿಯೇ ನಡೆಯಬೇಕು.

ಮದುವೆಯ ಕಾಲಕ್ಕೆ ಗುಗ್ಗಳವನ್ನು ಹೊರುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿದೆ. ಇದನ್ನು ಗುಗ್ಗಳ ಸಂಪ್ರದಾಯ, ಪುರವಂತಿಕೆ ಸಂಪ್ರದಾಯ ಎನ್ನುತ್ತಾರೆ. ಇದು ವಿಶೇಷವಾಗಿ ವೀರಭದ್ರನ, ಆ ಮೂಲಕ ಶಿವನ ಆರಾಧನೆಯ ಸಂಪ್ರದಾಯವಾಗಿದೆ. ಈ ಸಂಪ್ರದಾಯ ದಕ್ಷಬ್ರಹ್ಮನ ಶಿರ ಹರಿಯಲು ವೀರಭದ್ರ ತೊಟ್ಟ ಅವತಾರದ ಅನುಕರಣೆಯಾಗಿದೆ. ಗುಗ್ಗಳ ಕೊಡ ಯಜ್ಞದ ಪ್ರತೀಕದಂತಿದೆ. ಮಣ್ಣಿನ ಮಡಕೆಯೊಂದನ್ನು ಅರ್ಧ ಮಾಡಿ, ಕೆಳ ಅರ್ಧವನ್ನು ಗುಗ್ಗಳಕ್ಕಾಗಿ ಬಳಸುತ್ತಾರೆ. ಮಡಕೆಯ ಕೆಳ ಅರ್ಧದಲ್ಲಿ ಕುಳ್ಳುಗಳನ್ನು ಹಾಕಿ ಬೆಂಕಿ ಮಾಡಿ, ಒಂದು ಗಂಧದ ಅಥವಾ ಇಂಗಳ ಕಟ್ಟಿಗೆಯ ಒಂದು ತುಂಡಿಗೆ ಅರಿವೆ ಸುತ್ತಿ, ಎಣ್ಣೆಯಲ್ಲಿ ಅದ್ದಿ, ಅದನ್ನೂ ಮಡಕೆಯ ಬೆಂಕಿಯಲ್ಲಿ ತುರುಕಿ ನಿಲ್ಲಿಸುತ್ತಾರೆ. ಇದನ್ನೇ ಗುಗ್ಗಳ ಮಡಕೆ ಎನ್ನುತ್ತಾರೆ.

ಗುಗ್ಗಳ ಎಂದರೆ ಒಂದು ಗಿಡದ ಅಂಟು. ಇದನ್ನು ಕೆಲವು ಕಡೆ 'ಅಂಟು ಜಾಲದ ಉಪ್ಪು' ಎನ್ನುತ್ತಾರೆ. ಇದನ್ನು ಬೆಂಕಿಯಲ್ಲಿ ಹಾಕಿದರೆ ಸುವಾಸನೆ ಬರುತ್ತದೆ. ಮತ್ತು ಬಹು ಹೊತ್ತಿನವರೆಗೆ ವಾಸನೆ ಬಿಡುತ್ತಿರುತ್ತದೆ. ಗುಗ್ಗಳವನ್ನು ಹೆಚ್ಚಾಗಿ ವೀರಭದ್ರ ದೇವರ ಮುಂದೆಯೇ ಉರಿಸುವ ಪದ್ಧತಿ ಇದೆ ಎಂದು ತಿಳಿದುಬರುತ್ತದೆ. ಹೀಗಾಗಿಯೇ ಮದುವೆಯ ಕಾಲಕ್ಕೆ ನಡೆಯುವ ವೀರಭದ್ರನ ಪೂಜೆ, ಮೆರವಣಿಗೆಗೆ ಗುಗ್ಗಳ ಸಂಪ್ರದಾಯ ಎಂತಲೇ ಹೆಸರು ಬಂದಿದೆ.

ಮದುವೆಯ ಕಾಲಕ್ಕೆ ಗುಗ್ಗಳ ಮಡಕೆಗೆ ವಿಶೇಷ ಪೂಜೆ ಇತ್ಯಾದಿಗಳು ನಡೆಯುತ್ತವೆ. ಹರಕೆ ಹೊತ್ತ ಮನೆಯ ಯಜಮಾನನು ಈ ಗುಗ್ಗಳ ಗಡಿಗೆಯನ್ನು ಹೊರುತ್ತಾನೆ.

ಬಾಜಿ ಬಜಂತ್ರಿಯೊಂದಿಗೆ ಊರಲ್ಲಿ ಮೆರವಣಿಗೆ ಹೊರಡುತ್ತದೆ. ಇದರ ಮುಂದಾಳತ್ವವನ್ನು ಪುರವಂತ ವಹಿಸುತ್ತಾನೆ. ಈ ಪುರವಂತನೇ ವೀರಭದ್ರನ ಅವತಾರಿ ಎಂತಲೂ ಅಥವಾ ವೀರಭದ್ರನ ಸೈನಿಕನೆಂತಲೂ ಭಾವಿಸಲಾಗುತ್ತದೆ. ಈತ ವಿಶೇಷವಾದ ವೇಷ ಭೂಷಣ ತೊಟ್ಟಿರುತ್ತಾನೆ. ವೇಷಗಳನ್ನು ತೊಡುತ್ತಾನೆ, ಆಭರಣಗಳನ್ನು ಧರಿಸುತ್ತಾನೆ, ಆಯುಧಗಳನ್ನು ಹಿಡಿದಿರುತ್ತಾನೆ. ಬಿಳಿ ಅಥವಾ ಕಾವಿ ಬಣ್ಣದ ಧೋತರ, ನಿಲವಂಗಿ ತೊಟ್ಟಿರುತ್ತಾನೆ. ಮೇಲೊಂದು ಕಂತಿಯನ್ನು ಧರಿಸಿರುತ್ತಾನೆ. ಉಟ್ಟಿರುವ ಧೋತರದ ಎರಡೂ ಕಚ್ಚೆಗಳನ್ನು ಹಾಕಿಕೊಂಡು, ಟೊಂಕಕ್ಕೆ ಬಿಗಿಯಾಗಿ ಕಟ್ಟಿಕೊಂಡಿರುತ್ತಾನೆ. ಮುಂಗೈ, ಭುಜ, ರಟ್ಟೆ ಮತ್ತು ಎದೆಗಳಿಗೆ ವಿಶೇಷ ಅಲಂಕೃತ ಕಿರೀಟ–ಪಟ್ಟಿಗಳನ್ನು ಕಟ್ಟಿಕೊಳ್ಳುತ್ತಾರೆ. ತಲೆಯ ಜಡೆಯನ್ನು ಬಿಟ್ಟು, ರಮ್ಮಾಲನ್ನು ಕಟ್ಟಿರುತ್ತಾನೆ. ಕಿವಿಯಲ್ಲಿ ಕರ್ಣಕುಂಡಲಗಳನ್ನು, ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿರುತ್ತಾನೆ. ಟೊಂಕಕ್ಕೆ ಗಂಟೆಯ ಸರ ಕಟ್ಟಿಕೊಂಡು, ಎದುರಿಗೆ ಕನ್ನಡಿಗಳನ್ನು ಜೋತು ಬೀಳುವಂತೆ ಕಟ್ಟಿಕೊಳ್ಳುವರು. ಕಾಲಿಗೆ ಗೆಜ್ಜೆಯ ಸರಗಳನ್ನು ಕಟ್ಟಿಕೊಳ್ಳುವರು. ಕೈಯಲ್ಲಿ ಖಡ್ಗ ಮತ್ತು ಶಸ್ತ್ರಹಾಕಿಕೊಳ್ಳುವ ಸಾಧನಗಳನ್ನು (ತಾಮ್ರದ ತಂತಿಗಳನ್ನು) ಹಿಡಿದಿರುತ್ತಾನೆ. ಪುರವಂತನ ಈ ವೇಶ ಹಾಕುವದಕ್ಕೆ ಕಾಶೆ ಕಟ್ಟುವುದು ಎನ್ನುತ್ತಾರೆ. ಕಾಶೆ ಎಂದರೆ ಕಚ್ಚೆಹಾಕಿ ಟೊಂಕಕ್ಕೆ ಬಿಗಿಯಾಗಿ ವೇಷವನ್ನು ಕಟ್ಟಿಕೊಳ್ಳುವ ಅರ್ಥ ಇದೆ. ಅಂದರೆ ಗಂಡುಗಚ್ಚೆ ಹಾಕುವುದು ಎಂದರ್ಥ. ವೀರನ ವೇಷಭೂಷಣ ಹಾಕಿಕೊಳ್ಳುವುದು ಕಾಶೆ ಕಟ್ಟುವುದರ ಅರ್ಥ. ಇಲ್ಲಿ ವೀರದ ಜೊತೆಗೆ ಆವೇಶ ಎಂಬ ಅರ್ಥವೂ ಕೂಡಿಕೊಳ್ಳುತ್ತದೆ. ಇದೆಲ್ಲವನ್ನೂ ಗಮನಿಸಿದರೆ ಪುರವಂತ ಒಂದು ದೃಷ್ಟಿಯಲ್ಲಿ ವೀರಭದ್ರನ ಪ್ರತಿಸೃಷ್ಟಿಯೇ ಆಗಿದ್ದಾನೆಂಬುದು ಸ್ಪಷ್ಟವಾಗುತ್ತದೆ.

ದಕ್ಷಿಣ ಕಾರ್ನಟಕದಲ್ಲಿ ಅಂದರೆ ವಿಶೇಷವಾಗಿ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಈ ಜಿಲ್ಲೆಗಳಲ್ಲಿ ಪುರವಂತನ ಜೊತೆಗೆ ಒಂದು ಕುಣಿತದ ಮೇಳವೇ ಇದ್ದು, ಇದನ್ನು ವೀರಗಾಸೆ ಮೇಳ ಎನ್ನುತ್ತಾರೆ. 'ವೀರಗಾಸೆ' ಯಲ್ಲಿಯ 'ಗಾಸೆ' ಕಾಶೆಯ ರೂಪಾಂತರವೇ ಆಗಿದ್ದು, ವೀರ+ಕಾಶೆ ಎನ್ನುವುದು 'ಗಂಡುಗಚ್ಚೆ' ಎಂಬ ಅರ್ಥವೇ ಕೊಡುತ್ತದೆ. ಉತ್ತರ ಕರ್ನಾಟಕದಲ್ಲಿರುವ ಕಾಶೆ ಕಟ್ಟುವುದು ಎಂಬ ಅರ್ಥವೇ ವೀರಗಾಸೆಯಲ್ಲಿದೆ. ಪುರವಂತನ ಜೊತೆಗಿನ ಮೇಳವೇ ಇದಾಗಿರುತ್ತದೆ. ಉಳಿದಂತೆ ನಮ್ಮಲ್ಲಿಯ ಗುಗ್ಗಳ ಸಂಪ್ರದಾಯ, ಜಾತ್ರೆಯ ಉತ್ಸವಗಳಲ್ಲಿ ಭಾಗವಹಿಸುವ ಸಂಪ್ರದಾಯ ಎಲ್ಲವೂ ಇದೆ. ಅಲ್ಲಿಯೂ ಪುರಂತನೇ ವಡಬುಗಳನ್ನು ಹೇಳುತ್ತಾನೆ. ಅಲ್ಲಿ ವಡಬುಗಳನ್ನು ಹೇಳುವುದಕ್ಕೆ 'ಖಡ್ಗ ಹೇಳುವುದು' ಎನ್ನುತ್ತಾರೆ. ಅನೇಕ ಸಲ ಅವನ್ನು ವಚನಗಳೆಂದೂ ಕರೆಯುತ್ತಾರೆ. ಅಲ್ಲೂ ಒಂದು ವಾದ್ಯಮೇಳ ಜೊತೆಗಿರುತ್ತದೆ. ಚಮಾಳ, ಡೊಳ್ಳು, ಕರಡೆ ಮತ್ತು ತಾಳಗಳು ಅಲ್ಲಿಯ ಮುಖ್ಯವಾದ್ಯಗಳಾಗಿರುತ್ತವೆ. ಪುರವಂತನು ಒಂದು ದಮ್ಮು ವಡಬುಗಳನ್ನು ಹೇಳಿದ ನಂತರ, ಮುಂದೆ ಒಂದು ದಮ್ಮು ವೀರಗಾಸೆ ಮೇಳದವರು ನೃತ್ಯ ಮಾಡುತ್ತಾರೆ.

"ಮೈಸೂರು ಜಿಲ್ಲೆಯ 'ಲಿಂಗದ ಬೀರರ ಕುಣಿತ'ವನ್ನು ಲಿಂಗಧಾರಣೆಯಾದ ತಂಬಡಿಗಳು ಮಾಡುತ್ತಾರೆ. ಕೆಲವು ಕಡೆ ಕುರುಬಗೌಡರ ಮತಕ್ಕೆ ಸೇರಿದವರು ಮಾಡುತ್ತಾರೆ.

ತ್ರಿಪುರ ಸಂಹಾರ ನೀತಿ, ದಕ್ಷಬ್ರಹ್ಮ ಸಂಹಾರ ಮುಂತಾದವನ್ನು ಹೇಳುತ್ತಾರೆ. 'ಬಹರೇ ಬಹಲರೇ ಬೀರ' ಎಂದು ಆರಂಭ ಮಾಡುತ್ತಾರೆ. ಮಿಕ್ಕೆಲ್ಲವೂ ಅದೇ ರೀತಿ ಇರುತ್ತದೆ. ಈ ಕಲೆ ಉತ್ತರ ಕರ್ನಾಟಕದಿಂದಲೇ ಈ ಕಡೆಗೆ ಬಂದಿರಬಹುದೆನಿಸುತ್ತದೆ" (ಜಾನಪದ ಸಂಕಲನ, ಪು. ೧೧೫).

ಉತ್ತರ ಕರ್ನಾಟಕದಲ್ಲಿ ಗುಗ್ಗಳದ ಮೆರವಣಿಗೆಯ ಮುಂದಾಳತ್ವವನ್ನು ಪುರವಂತ ವಹಿಸುತ್ತಾನೆ. ಜೊತೆಗೆ ಸಂಬಾಳ, ಬಾಜಿ ಮೇಳಗಳು ಇರುತ್ತವೆ. ಮೆರವಣಿಗೆಯ ಕಾಲಕ್ಕೆ ದೇವರ ಗುಡಿಗಳು ಬಂದಲ್ಲಿ, ದೇವರಿಗೆ ಪೂಜೆ ಸಲ್ಲಿಸಿ ಮೆರವಣಿಗೆ ಮುಂದಕ್ಕೆ ಹೊರಡುತ್ತದೆ. ಮೆರವಣಿಗೆಯನ್ನು ಅಲ್ಲಲ್ಲಿ ನಿಲ್ಲಿಸಿ ಪುರವಂತನು ವಡಬುಗಳನ್ನು ಹೇಳುತ್ತಾನೆ. ಈ ವಡಬುಗಳನ್ನು ವೀರಭದ್ರನ ವಡಬುಗಳೆಂದೂ, ವಡಬು ಹೇಳುವುದನ್ನು ಉಗ್ಘಡಿಸುವುದು ಎಂದೂ ಅನ್ನಲಾಗುತ್ತದೆ. 'ವಡಬುಗಳ ಉಗ್ಘಡಣೆ' ಎನ್ನುವುದು ಸಾಮಾನ್ಯ.

ಗುಗ್ಗಳ ಸಂಪ್ರದಾಯ ಇಲ್ಲದವರು ವೀರಭದ್ರ ದೇವರಿಗೆ ಬೇಡಿಕೊಂಡರೆ ಮದುವೆಯ ಕಾಲಕ್ಕೆ ಕೇವಲ ವೀರಭದ್ರದೇವರ ಮೂರ್ತಿಗಳನ್ನು ಮೆರವಣಿಗೆ ಮಾಡುವ ಪದ್ಧತಿಯಿದೆ ಎಂದು ತಿಳಿದುಬರುತ್ತದೆ. ವೀರಭದ್ರನ ಅಚ್ಚು ಇರುವ ಚಪ್ಪಟೆಯ ಮೂರ್ತಿಗಳನ್ನು ಮೆರವಣಿಗೆಗೆ ಬಳಸುವುದರಿಂದ ಈ ಮೆರವಣಿಗೆಯನ್ನು 'ಹಲಿಗೆ ಮೆರವಣಿಗೆ' ಎನ್ನುತ್ತಾರೆ. ಗುಗ್ಗಳ ಕೊಡದ ಹೊರತಾಗಿ ಇಲ್ಲಿ ವೀರಭದ್ರ ಮೂರ್ತಿಗಳ ಮೆರವಣಿಗೆ ಇರುತ್ತದೆ. ಈ ವೀರಭದ್ರನ ಮೆರವಣಿಗೆ ಹೊರಡುವ ಮುನ್ನ-ವೀರಭದ್ರನ ಸಂಪ್ರದಾಯವಿರುವ ಐದು ಮನೆಗಳಿಂದ ಐದು ವೀರಭದ್ರನ ಮೂರ್ತಿಗಳನ್ನು ಹರಕೆ ಹೊತ್ತವರ ಮನೆಗೆ ತರುತ್ತಾರೆ. ಒಂದು ಕಂಬಳಿ ಹಾಸಿ, ಅದರ ಮೇಲೆ ಮೂರ್ತಿಗಳನ್ನು ಇಟ್ಟು ಮೊದಲು ಪೂಜೆ ಮಾಡುತ್ತಾರೆ. ಯಾರ‍್ಯಾರ ಮನೆಯಿಂದ ವೀರಭದ್ರನ ಮೂರ್ತಿಗಳನ್ನು ತರಲಾಗಿದೆಯೋ ಆ ಮನೆಯ ಮುತ್ತೈದೆಯರಿಗೆ ಉಡಿತುಂಬುವ ಕಾರ್ಯವೂ ನಡೆಯುತ್ತದೆ. ನಂತರ ಹೊರಟು ಊರ ಮುಂದಿರುವ ನೀರಿನ ಹಳ್ಳ, ನದಿ ಅಥವಾ ಬಾವಿಗಳಿಗೆ ಮೆರವಣಿಗೆ ಹೋಗಿ, ಅಲ್ಲಿ ಜಲಧಿಗೆ ಪೂಜೆ ಸಲ್ಲಿಸಿ ತಿರುಗಿ ಬರುತ್ತದೆ. ಹೀಗೆ ಮೆರವಣಿಗೆ ಹೋಗುವಾಗ, ಬರುವಾಗ ನೇತೃತ್ವ ವಹಿಸುವವ ಪುರವಂತನೆ. ಅಲ್ಲಲ್ಲಿ ಮೆರವಣಿಗೆ ನಿಲ್ಲಿಸಿ ವಡಬುಗಳನ್ನು ಉಗ್ಘಡಿಸುವ ಕೆಲಸ ನಡೆಯುತ್ತದೆ.

ವಡಬುಗಳನ್ನು ಹೇಳುವ ಪದ್ಧತಿಯೇ ವಿಶೇಷವಾಗಿದೆ. 'ಖಡೆಖಡೆ ವೀರಭದ್ರ', 'ಆಹಾಹಾ ವೀರಭದ್ರ', 'ಆಹಹಾ! ಶ್ರೀ ಮನ್‌ಮಹಾದೇವನಿಗೆ ದೇವನಯ್ಯಾ' ಎಂದು ಮೊದಲು ಉಗ್ಘಡಿಸಿ, ಆ ಏರಿದ ಧ್ವನಿಯಲ್ಲಿಯೇ ವಡಬುಗಳನ್ನು ಲಯಬದ್ಧವಾಗಿ ಹೇಳಲು ಪ್ರಾರಂಭಿಸುತ್ತಾನೆ ಪುರವಂತ. ಅವನಿಗೆ ಸಾಥಿಯಾಗಿ ಚರ್ಮವಾದ್ಯದವನು, ವಡಬುಗಳ ನಿಲುಗಡೆಯಲ್ಲಿ ಚರ್ಮವಾದ್ಯವನ್ನು ಒಂದೆರಡು ಪೆಟ್ಟುಗಳಿಂದ ಲಯಬದ್ಧವಾಗಿ ನುಡಿಸಿ, ಆ ವೀರಾವೇಶದ ವಡಬು ಉಗ್ಘಡಣೆಗೆ ಇನ್ನಷ್ಟು ರೋಷವನ್ನು ತುಂಬುತ್ತಾನೆ. ವಡಬಿನ ಪ್ರತಿ ಸಾಲು ಅಥವಾ ಎರಡು ಸಾಲಿನ ಅಂತ್ಯದಲ್ಲಿ ಈ ನಿಲುಗಡೆ ಇರುತ್ತದೆ. ಒಡಬು ಮುಗಿದ ನಂತರ ಆ ದೃತ್ ಲಯದಲ್ಲಿಯೇ **'ಖಡೇ ಖಡೇ ವೀರಭದ್ರ, ಹ್ಯಾಂಗ ಬರ‍್ತಾನ ಬರ್ಲಿ', 'ಕರುಣೆಸೋ ಕರಿಗಜದ ಒಡೆಯ ನೀಲಮುತ್ತಿನ ಧಡಿಯ ರಾಚೋಟಿ**

ಶರ್ಪ, ಹ್ಯಾಂಗ ಬರ್ತಾನ ಬರ್ಲಿ' ಎಂದ ಕೂಡಲೇ ಬಾಜಿ ಮೇಳ ಊದಲು ಬಾರಿಸಲು ಪ್ರಾರಂಭ ಮಾಡುತ್ತದೆ. ಆ ಲಯದಲ್ಲಿಯೇ ಪುರವಂತ ಹೆಜ್ಜೆಹಾಕಿ ಕುಣಿಯುತ್ತ ಒಂದು ತತ್ತ್ವಪದವನ್ನು ಹಾಡುವ ಪದ್ಧತಿ ಹೈದ್ರಾಬಾದ ಕರ್ನಾಟಕದಲ್ಲಿ ಕಾಣಿಸುತ್ತದೆ. ಹಾಡು ಮುಗಿದ ನಂತರ ಅಲ್ಲಿಗೆ ಒಂದು ಗತ್ತು ಮುಗಿದು, ಮೆರವಣಿಗೆ ಮತ್ತೆ ಮುಂದಕ್ಕೆ ಸಾಗುತ್ತದೆ. ಹೀಗೆ ಮೆರವಣಿಗೆ ನಿಂತಾಗಲೆಲ್ಲ ಪುರವಂತ ಮತ್ತೆ ಮತ್ತೆ ವಡಬುಗಳನ್ನು ಹೇಳುತ್ತಿರುತ್ತಾನೆ.

ಶ್ರೀ ನಿಂಗಣ್ಣ ಸಣ್ಣಕ್ಕಿ ಅವರು ೧೯೭೭ರಲ್ಲಿ ಪ್ರಕಟವಾದ **'ಗಂಡಸರ ಜನಪದ ಹಾಡುಗಳು'** ಎಂಬ ತಮ್ಮ ಜನಪದ ಸಾಹಿತ್ಯದ ಹಾಡುಗಳ ಸಂಗ್ರಹದಲ್ಲಿ ವಡಬುಗಳನ್ನು **'ಗುಗ್ಗಳ ಹಾಡುಗಳು'** ಎಂದು ಗುರುತಿಸಿ, ಏಳು ವಡಬುಗಳನ್ನು ಹಾಡಿನ ರೂಪದಲ್ಲಿ ಮುದ್ರಿಸಿದ್ದಾರೆ. ಕಲಾವಿದರು ಹೇಳುವ ಲಯವನ್ನು ಗಮನಿಸಿ, ಚರಣಗಳನ್ನು ಸೀಳಿಕೊಂಡರೆ ವಡಬುಗಳ ರಚನೆ ಹೀಗೆ ಪದ್ಯದಂತೆ ಕಾಣುತ್ತದೆ. ಇದನ್ನೇ ಕೆಲವರು ವಡಬಿನ ರಚನೆ ವಚನದಂತೆ ಇದೆ ಎಂದು ಭಾವಿಸುತ್ತಾರೆ. ಅಲ್ಲಿ ಅನೇಕ ಶರಣರ ವಚನಗಳನ್ನು ಪ್ರಾಸಂಗಿಕವಾಗಿ ಬಳಸುವುದು ಇದಕ್ಕೆ ಕಾರಣವಾಗಿರಬೇಕೆನಿಸುತ್ತದೆ.

ನಿಂಗಣ್ಣ ಸಣ್ಣಕ್ಕಿ ಅವರು ಸಂಗ್ರಹಿಸಿ ಕೊಟ್ಟ ಗುಗ್ಗಳ ಹಾಡುಗಳಲ್ಲಿ ಒಂದೆರಡನ್ನು ಇಲ್ಲಿ ಉದಾಹರಿಸಬಹುದಾಗಿದೆ:

ಉಘೇ

ಮುಕ್ಕಾಲು ಭೃಂಗಿ ಬ್ಯಾಳಿ ಬಸವೇಶ್ವರ
ಮಹಾಂತ ಮಲ್ಲಯ್ಯ ಉಘೇ ಉಘೇ ।೧।
ಅಡಕೇಶ್ವರ ಶಿಖರೇಶ್ವರ ಬ್ಯಾಳಿ ಬಸವೇಶ್ವರ
ಮಹಾಂತ ಮಲ್ಲಯ್ಯ ಉಘೇ ಉಘೇ ।೨।
ಕಂಚೆನುಪ್ಪರಗಿ ಕೈಲಾಸಪತಿ ಶ್ರೀಪಾದ
ಮಹಾಂತ ಮಲ್ಲಯ್ಯ ಉಘೇ ಉಘೇ ।೩।
ಹರಹರಾ ಚನ್ನಗುಡಿ ಚನ್ನಮಲ್ಲಿಕಾರ್ಜುನ
ಮಹಾಂತ ಮಲ್ಲಯ್ಯ ಉಘೇ ಉಘೇ ।೪।
ಹಂಪಿ ವಿರುಪಾಕ್ಷ ಪಂಪಾಪತಿ ಶ್ರೀಪಾದ
ಮಹಾಂತ ಮಲ್ಲಯ್ಯ ಉಘೇ ಉಘೇ ।೫।

ಈ ಹಾಡನ್ನು ಗಮನಿಸಿದರೆ ಇದು ಹೈದ್ರಾಬಾದ ಕರ್ನಾಟಕದಲ್ಲೂ ಪ್ರಚಲಿತದಲ್ಲಿದೆ. ಇದನ್ನು ಹರಕೆ ಹೊತ್ತವರು ದೇವರಿಗೆ 'ದಂಡ ನಮಸ್ಕಾರ' (ಸಾಸ್ಟಾಂಗ ನಮಸ್ಕಾರ) ಹಾಕುವಾಗ, ಒಂದನೇ ಸಾಲನ್ನು ಆ ಆಚರಣೆಯ ನೇತೃತ್ವವಹಿಸಿದ ಸ್ವಾಮಿಗಳು ಅನ್ನುತ್ತಾರೆ; ಕೆಳಗಿನ ಸಾಲನ್ನು ಹಿಮ್ಮೇಳದವರು, ಅಂದರೆ ಆ ಆಚರಣೆಯಲ್ಲಿ ಭಾಗವಹಿಸಿದ ಜನಗಳೇ ಅನ್ನುತ್ತಾರೆ. ಈ ಎರಡನೇ ಸಾಲನ್ನು ಮೊದಲಿಗೆ ನಾಲ್ಕೈದು ಜನ ಅನ್ನಲು ಪ್ರಾರಂಭಿಸಿದರೆ, ನಂತರ ಇಡೀ ಈ ಆಚರಣೆಯ ಜೊತೆಗೆ ಇರುವ ಜನರೆಲ್ಲರೂ ಅನ್ನುತ್ತಾರೆ. ಗುಗ್ಗಳ ಮೆರವಣಿಗೆ ಪ್ರಾರಂಭವಾಗುವ ಸಮಯದಲ್ಲಿ ಮತ್ತು ಮೆರವಣಿಗೆಯ ಕಾಲಕ್ಕೆ ಈ

ನುಡಿಗಳನ್ನು ಅನ್ನುವ ರೂಢಿ ಇರಬೇಕು. ಮೆರವಣಿಗೆ ನಿಂತಾಗ ನೇರವಾಗಿ 'ವಡಬು'ಗಳನ್ನು ಉಗ್ಘಡಿಸುತ್ತಾರೆ.

ವೀರಭದ್ರ ಅವತಾರ

ಶ್ರೀ ವೀರಭದ್ರ ಹುಟ್ಟಿದ
ಪರಿಪರಿ ಹೇಳುವೆ ।ಪಲ್ಲ।
ದಕ್ಷಬ್ರಹ್ಮ ಕೈಲಾಸ ಸುಡುವೆನೆಂದಾ
ಯಜ್ಞ ಹೂಡಲು ಸ್ವರ್ಗ ಸಿಡಿಯೆಂದಾ ।
ಸಿಡಿಮಿಡಿಗೊಳ್ಳುವ ಶಿವಶಂಕರಾ
ಕಡು ಕೋಪದಿಂದ ಕಿಡಿಗಣ್ಣ ತೆರದಾ ।
ಆಗಲಾ ವೀರೇಶನು ಆರ್ಭಟಿಸಿ
ಗುಡುಗುಡು ಹೊಡೆದ ಕೆಡಸಿ ।
ಬ್ರಹ್ಮಾಂಡ ಹಿಡಿ ಹಿಡಿಸಿ
ಕೇಕೆ ಕೇಳಿಸಿ ಹೊಡಸಿ ।
ಬ್ರಹ್ಮನ ಎಲವು ಮುರಿದಂತೆ
ಸೂರ್ಯನ ಬೆಳಕು ಕುಕ್ಕುಟಂತೆ ।
ಏನು ಹಿಚಕುವಂತೆ ಆಜ್ಞೆ
ತ್ರಿಶೂಲಧರ ಶಿವನಾಜ್ಞೆ ।
ದಕ್ಷನ ಶಿರ ಅಗ್ನಿಗಾಹುತಿ
ಕೊಟ್ಟು ಬಾ, ವೀರಭದ್ರಾ ಖಡೆ ರುದ್ರಾ।

(ಗಂಡಸರ ಜನಪದ ಹಾಡುಗಳು, ಪು.೧೭೩)

ಹೀಗೆ ವೀರಭದ್ರನ ಪರ್ಯಾಯವಾಗಿ ಶಿವನ ಮಹಿಮೆಯನ್ನು ವಿವರಿಸಲು ಪ್ರಾರಂಭ ಮಾಡುತ್ತಾರೆ. ವಡಬುಗಳನ್ನು ಪುರವಂತರು ಹೇಳುವ ಲಯದಲ್ಲಿ ಚರಣಗಳನ್ನಾಗಿ ಒಡೆದು ಇಡುತ್ತ ಹೋದರೆ ಅದು ಕಾವ್ಯದ ರೂಪದಲ್ಲಿ ಕಾಣಿಸುತ್ತದೆ. ಇವುಗಳನ್ನು ಕಾವ್ಯಗಳು ಎನ್ನುವುದಕ್ಕಿಂತ ವಚನದ ರೂಪದವು ಎನ್ನವುದು ಹೆಚ್ಚು ಸಮಂಜಸ ಎಂದು ತೋರುತ್ತದೆ. ಈ ವಡಬುಗಳು ಶೈವಧರ್ಮದ ಘಟನೆಗಳನ್ನು ಅಂದರೆ ದಕ್ಷಯಜ್ಞ ಸಂಹಾರ, ಗಿರಿಜಾಕಲ್ಯಾಣ, ಗಂಗೆ–ಗೌರಿ ಇಂತಹ ಘಟನೆಗಳನ್ನು ವಿವರಿಸುವ ಪರಿಪಾಠವನ್ನು ಹೊಂದಿದೆ. ಹೀಗಾಗಿ ಇದು ಖಂಡಿತವಾಗಿ ಶೈವ ಸಂಪ್ರದಾಯಕ್ಕೆ ಸೇರಿದ ಒಂದು ಆಚಣೆಯಾಗುತ್ತದೆ. ಜೊತೆಗೆ ಶರಣರ ಚರಿತ್ರೆ, ಶರಣರ ತತ್ತ್ವಗಳನ್ನು ಸಾರುವ ವಡಬುಗಳೂ ಸಾಕಷ್ಟು ಕಂಡುಬರುತ್ತವೆ. ಅದರಲ್ಲೂ ವಿಶೇಷವಾಗಿ ಮಡಿವಾಳ ಮಾಚಿದೇವ ವೀರಭದ್ರನ ಅವತಾರವೆಂದು ವಿವರಿಸುವ ವಡಬುಗಳೂ ದೊರೆಯುತ್ತವೆ. ಈ ಆಚರಣೆ ೧೨ನೇ ಶತಮಾನದ ನಂತರ ರೂಢಿಯಲ್ಲಿ ಬಂದಿದ್ದರೆ, ಬಹುಶಃ ಅದು ಮಡಿವಾಳ ಮಾಚಿದೇವರ ಮಹಿಮೆಯನ್ನು ಸಾರಲು, ಆ ಮೂಲಕ ಶರಣರ ಚರಿತ್ರೆ ಶರಣರ ತತ್ತ್ವಗಳನ್ನು ಸಾರಲು ಹುಟ್ಟಿಕೊಂಡಿರಬೇಕು. ಅಥವಾ ಮೊದಲೇ ಶೈವಸಂಪ್ರದಾಯದಲ್ಲಿಯೇ ಇದ್ದ ಒಂದು

ಆಚರಣೆ ೧೨ನೇ ಶತಮಾನದ ನಂತರ ಲಿಂಗಾಯತ ಸಮೂಹದಲ್ಲಿ ಉಳಿದುಕೊಂಡು ಬಂದು, ನಂತರ ಶರಣರಿಗೆ ಸಂಬಂಧಿಸಿದ ಸಂಗತಿಗಳನ್ನು ಬಿತ್ತರಿಸಲು ಪ್ರಾರಂಭ ಮಾಡಿರಬೇಕೆನಿಸುತ್ತದೆ. ಅದಕ್ಕಾಗಿಯೇ ನಂತರ ಕೆಲ ವಚನಗಳನ್ನೂ ವಡಬುಗಳ ಪರ್ಯಾಯವಾಗಿ ಪ್ರಾಸಂಗಿಕವಾಗಿ ಹೇಳುವ ರೂಢಿ ಬೆಳೆದುಬಂದಂತೆ ತೋರುತ್ತದೆ. ಬೆಡಗಿನ ವಚನದಂತೆ ಕಾಣುವ ವಡಬೊಂದು ಸಣ್ಣಕ್ಕಿ ಅವರ ಸಂಗ್ರಹದಲ್ಲಿ ಇದೆ.

ಹಕ್ಕಿಯ ಒಡಪು

ಆಹಾಹಾಽ ವೀರಾಧಿ ವೀರಾಽ
ಆಹಾಹಾಽ ಶೂರಾಧಿ ಶೂರಾಽ ।ಪ।
ಮುಳ್ಳು ಮೊನೆಯ ಮೇಲೆ
ಮೂವತ್ತೆರಡು ಪಟ್ಟಣ
ಬುದ್ಧಿಯಿಲ್ಲದ ಪ್ರಧಾನಿಯಯ್ಯಾ।
ಕಾಲಿಲ್ಲದ ಕಾರಬಾರು ಕಾವಲು
ಕಣ್ಣಿಲ್ಲದ ತಳವಾರಯ್ಯಾ।
ಆ ತಳವಾರನ ಹೆಂಡಿತಿ ನಡುವಿಲ್ಲದ
ಕೊಡ ಹೊತ್ತು ನೀರಿಲ್ಲದ ಬಾವಿಗೆಯ್ಯಾ।
ಆ ಭಾವಿಯ ಮೇಲೆ ಬೇವಿನ ಮರ
ಅದಕ್ಕೆ ತುಂಬಿಲ್ಲದ ಹಣ್ಣಾಯಿತಯ್ಯಾ ।
ಆ ಹಣ್ಣು ತಿನ್ನಲು ಅಲ್ಲಿಗೆ
ರೆಕ್ಕೆಯಿಲ್ಲದ ಹಕ್ಕಿ ಬಂದಿತಯ್ಯಾ।
ಆ ಹಕ್ಕಿಗೆ ಅಲಗಿಲ್ಲದ ಅಂಬು ಬಿಡಲು
ಪಿಂಡಾಂಡ ಗುರಿಯಾಯಿತಯ್ಯಾ।
ಇದ ಸುಳ್ಳೆಂದರೆ ಮುಖದ ಮೇಲೆ
ಎಡ ಪಾದರಕ್ಷೆಯಿಂದ ಹೊಡೆಯಂದಾ ವೀರಾ ।

(ಗಂಡಸರ ಜನಪದ ಹಾಡುಗಳು, ಪು.೧೭೪-೧೭೫)

ಬೆಡಗಿನ ವಚನದಂತೆ ಕಾಣುವ ಈ ವಡಬು ಡಾ. ಸೋಮಶೇಖರ ಇಮ್ರಾಪೂರ ಅವರು ಉಲ್ಲೇಖಿಸಿದ ವಡಬಿನ ಭಿನ್ನಪಾಠವೇ ಆಗಿದೆ. ಇದೊಂದೇ ವಡಬು ಕರ್ನಾಟಕದ ಬಹುತೇಕ ಕಡೆ ಪ್ರಚಾರದಲ್ಲಿದಲ್ಲಿರುವುದು ಗಮನಾರ್ಹ. ಡಾ. ಇಮ್ರಾಪೂರ ಅವರ 'ಕನ್ನಡ ಸಾವಿರದ ಒಗಟುಗಳು'(೧೯೭೬), ನಿಂಗಣ್ಣ ಸಣ್ಣಕ್ಕಿ ಅವರ 'ಗಂಡಸರ ಜನಪದ ಹಾಡುಗಳು'(೧೯೭೮), ಬಸವರಾಜ ನೆಲ್ಲಿಸರ್ ಅವರ ಲೇಖನ 'ವೀರಗಾಸೆ ಮೇಳ ಒಂದು ವಿವೇಚನೆ' (ಜಾನಪದ ಸಂಕಲನ, ೧೯೭೮), ಹಾಗೂ ಶಂಕ್ರಪ್ಪ ತೊಂಡಿಹಾಳ ಅವರ ಕೃತಿ 'ಶ್ರೀ ವೀರಭದ್ರದೇವರ ವಡಪುಗಳು'(೨೦೦೨) ಈ ಎಲ್ಲ ಕಡೆ ಮುದ್ರಣಗೊಂಡಿರುವುದು ಕಾಣುತ್ತದೆ. ಡಾ. ಇಮ್ರಾಪೂರ ಹಾಗೂ ಡಾ. ನೆಲ್ಲಿಸರ್ ಅವರ ಪಾಠಗಳಲ್ಲಿ ಕೊನೆಯಲ್ಲಿ ಅಂಬಿಗರ ಚೌಡಯ್ಯನ ಪ್ರಸ್ತಾಪವಾಗುತ್ತದೆ. ಉಳಿದೆರಡು

ಪಾಠಗಳಲ್ಲಿ ಇಲ್ಲ. ಅಂಬಿಗರ ಚೌಡಯ್ಯನ ವಚನಗಳನ್ನು ಮತ್ತು ಬೇರೆ ಬೆಡಗಿನ ವಚನಗಳನ್ನು ಪರಿಶೀಲಿಸಿ ನೋಡಿದರೆ ಈ ವಚನ ಅಲ್ಲಿ ಕಂಡುಬರುವುದಿಲ್ಲ. ಹೀಗಾಗಿ ಬೆಡಗಿನ ವಚನಗಳನ್ನೇ ವಡಬುಗಳಾಗಿ ಹೇಳುವ ಪರಿಪಾಠವಿದೆ ಎಂಬ ಸಾಮಾನ್ಯ ಅನಿಸಿಕೆಯೊಂದಿದೆ. ಅದು ತಪ್ಪು ಅಭಿಪ್ರಾಯ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಬೆಡಗಿನಂತೆ ಕಾಣುವ ಇದೊಂದೇ ವಚನ ಮಾತ್ರ ಬಳಸುತ್ತಿರುವುದು ಗೋಚರವಾಗುತ್ತಿದೆ. ಆದರೆ ಕೆಲವು ಸಾಮಾನ್ಯ ನೀತಿಯ ಶರಣರ ವಚನಗಳನ್ನು, ವಿಶೇಷವಾಗಿ ಷಣ್ಮುಖಸ್ವಾಮಿ, ಬಸವಣ್ಣ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ ಇವರ ಕೆಲವೊಂದು ವಚನಗಳನ್ನು ವಡಬುಗಳಂತೆ ಪುರವಂತರು ಬಳಸುವುದು ಕಂಡುಬರುತ್ತದೆ. ಇದನ್ನು ಗಮನಿಸಿದರೆ, ಶರಣರ ಚರಿತ್ರೆ, ಅವರ ತತ್ತ್ವಾದರ್ಶಗಳನ್ನು ವಡಬುಗಳಾಗಿ ಹಾಗೂ ಅವರ ಚಿಂತನೆಗಳ ಪ್ರಸಾರಕ್ಕಾಗಿ ವಚನಗಳನ್ನು ಬಳಸುವ ಪದ್ಧತಿ ಬಂದಿರಬೇಕೆಂದು ತೋರುತ್ತದೆ.

೧೯೭೭ರಲ್ಲಿ ಪ್ರಕಟವಾದ 'ಜಾನಪದ ಸಂಕಲನ' ಎಂಬ ಕೃತಿಯಲ್ಲಿ ಡಾ. ಬಸವರಾಜ ನೆಲ್ಲಿಸರ ಅವರು 'ವೀರಗಾಸೆ ಮೇಳ– ಒಂದು ವಿವೇಚನೆ' ಎಂಬ ಲೇಖನವೊಂದನ್ನು ಬರೆದಿದ್ದಾರೆ. 'ಉತ್ತರ ಕರ್ನಾಟಕದಲ್ಲಿ ಪುರವಂತಿಕೆ ಎನ್ನುವುದನ್ನೇ ದಕ್ಷಿಣ ಕರ್ನಾಟಕದಲ್ಲಿ 'ವೀರಗಾಸೆ' ಎನ್ನುತ್ತಾರೆ. ಇವರೂ ಮದುವೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ವೀರಗಾಸೆಯವರನ್ನು ಕರೆಸಿ ವೀರಭದ್ರನ ಪೂಜೆ ಸಲ್ಲಿಸುವ ಸಂಪ್ರದಾಯವಿದೆ ಎಂದು ಬರೆಯುತ್ತಾರೆ. ಅಲ್ಲಿ ಹೇಳುವ ವಡಬುಗಳನ್ನು 'ಖಡ್ಗ' ಎಂದು ಕರೆಯುತ್ತಾರೆ. ವಚನಗಳೂ ಎನ್ನುತ್ತಾರೆ. ಅವುಗಳನ್ನು ಗಮನಿಸಿದರೆ ಶಿವ, ವೀರಭದ್ರ ಹಾಗೂ ಶಿವಶರಣರ ಮಹಿಮೆಗಳನ್ನು ಸಾರುವ ವಡಬುಗಳೇ ಅಲ್ಲಿರುವುದು ಕಂಡುಬರುತ್ತದೆ.

ವೀರಭದ್ರನ ಅವತಾರ

"ಆಹಹಾ ರುದ್ರ, ವೀರಭದ್ರದೇವರು ಹುಟ್ಟಿದ ರೂಪು ಎಂತೆಂದೊಡೆ. . .ದಕ್ಷನ ಶಿರವರಿದು, ಕೆಂಡದೋಕಳಿಯನಾಡುತ್ತಾ ಬರಲು, ದಕ್ಷನಾ ಸತಿ ಮೇನಕೆಯು ಎದುರು ಬಂದು ನಿಂತು, ಎನ್ನ ಮುತ್ತೈದೆತನವ ಪಾಲಿಸೋ ಎಂದು ಪಾದಕ್ಕೆರಗಲು, 'ಹರಿದ ತಲೆಗೆ ಕುರಿದಲೆಯಂ' ಇಟ್ಟು ಕೈಲಾಸ ದ್ವಾರವಂ ಪೋಗುವಾಗ ಶಿವಕಂಡು ನಸುನಕ್ಕು ಭಲರೇ ಬಾಪ್ಪುರೆ ಎಂದು ರತ್ನದ ಸಿಂಹಾಸನದ ಮೇಲೆ ಕುಳ್ಳಿರಿಸಿಕೊಂಡು ಪುಷ್ಪದ ಮಳೆ ಕರೆಸಿಕೊಂಡ, ನಮ್ಮ ಅಭಿನವ ರುದ್ರ, ಕರುಣಾಸಮುದ್ರ, ಕರೇಕಾಳಿಂಗ ರುದ್ರ, ಚಲದಂಕಮಲ್ಲ, ಗೊಂಡೇರಿಗಂಡ ನವಬ್ರಹ್ಮದೋಳ್ ಮೇಲಾದ ದಕ್ಷಬ್ರಹ್ಮನ ಶಿರವರಿದು ಅರಿದಲೆಗೆ ಕರಿದಲೆಯನಿಟ್ಟ ದೊರೆಯೇ ನಿನಗಾರು ಸರಿಯೇ! ಸರಿಸರಿ ಎಂದವರ ಹಲ್ಲು ಮುರಿಯೇ! ಕಡಕ್ಕಡೆ" (ಜಾನಪದ ಸಂಕಲನ, ಪು. ೧೦೯–೧೧೦).

ಸಾಮಾನ್ಯ ನೀತಿ

"ಅಹಹಾ ರುದ್ರ! ಎನ್ನ ತನು, ಎನ್ನ ಮನ, ಎನ್ನ ಧನ, ಎನ್ನ ಸತಿ ಸುತರೆಂಬ ಭಿನ್ನಣದ ಮೋಹದಿಂದ ಗನ್ನಘಾತುಕತನ ಮಾಡುವುದರಿಂದಲೇನೂ ಪ್ರಯೋಜನವಿಲ್ಲ. ಅದು ಹೇಗೆಂದರೆ, ಸಂಜೆಯೊಳ್ ಅನೇಕ ಪಕ್ಷಿಗಳು ಒಂದು ವೃಕ್ಷದಲ್ಲಿ ಕುಳ್ಳಿರ್ದು

ಪ್ರಾತಃಕಾಲದಲ್ಲಿ ಅಗಲಿ ಪೋದಂತೆ, ಎಣ್ಣೆ ತೀರಿದ ಬತ್ತಿಯಂತೆ. ಸಂತೆ ತೀರಿದ ಪೇಟೆಯಂತೆ, ಬಯಲು ಬಯಲಾಗಿ ಹೋಗುತ್ತಾರಲ್ಲದೆ ಯಾರೂ ಹಿಂದೆ ಬರಲಾರರು. ಅಹಹಾ ರುದ್ರ! ಹೆಂಡಿರಲ್ಲಿ ಸುಖವೆಂಬಿರಿ, ಹೆಂಡತಿಗೆ ಕಂಡ ಕಂಡದ್ದನ್ನು ತಂದು ದುಂಡೇತನದಿಂದ ಉಣಬಡಿಸಿದರೆ, ಬನ್ನಿ, ಹೋಗಿ, ಎನ್ನುತ್ತಾಳೆ. ಇಲ್ಲವಾದರೆ, ಎಲ್ಲೈ ಭಂಡನೇ ಹೋಗೋ ಬಾರೋ ಎನ್ನುತ್ತಾಳೆ....ನಂಟರಿಗೆ ಸರಿಸಮಾನವಾಗಿದ್ದರೆ ಗದ್ದಿಗೆಯನ್ನು ಹಾಕಿ ಮರ್ಯಾದೆ ಕೊಡುತ್ತಾರೆ. ಇಲ್ಲವಾದರೆ ಮುಖ ತಿರುಗಿಸಿ ಹೋಗುತ್ತಾರೆ. ಇದಂ ತಿಳಿದು, ಸತ್ಯ ನ್ಯಾಯ ಪರೋಪಕಾರದಿಂದ ಜಿವನ ನಡೆಸಿದರೆ ನೀವು ಸತ್ತಾಗ ನಿಮ್ಮಿಂದೆ ನಿಮ್ಮ ಪಾಪಪುಣ್ಯಂಗಳೇ ಬರುವವಲ್ಲದೆ ಮತ್ತೇನು ಬರಲಾರದಯ್ಯಾ ದೇವಾ, ಕಡಕ್ಕಡೆ". (ಅದೆ, ಪು. ೧೨೨).

೨೦೧೨ ರಲ್ಲಿ ಪ್ರಕಟವಾದ ದೇಶಾಂಶ ಹುಡಗಿ ಮತ್ತು ಚಂದ್ರಪ್ಪ ಹೆಬ್ಬಾಳಕರ್ ಅವರು ಸಂಪಾದಿಸಿದ **'ಬೀದರ ಜಿಲ್ಲೆಯ ಜಾನಪದ ಸೊಗಡು'** ಎಂಬ ಜನಪದ ಸಾಹಿತ್ಯದ ಕೃತಿಯಲ್ಲಿ ಕೆಲ ವಡಬುಗಳನ್ನು ಉಲ್ಲೇಖಿಸಿದ್ದಾರೆ. ಜೊತೆಗೆ ಬಸವಣ್ಣ ಅಂಬಿಗರ ಚೌಡಯ್ಯ ಇವರ ಒಂದೊಂದು ವಚನವನ್ನೂ ವಡಬುಗಳಾಗಿ ಕೊಟ್ಟಿದ್ದಾರೆ. ಅಲ್ಲಿ ಉಲ್ಲೇಖವಾಗಿರುವ ಒಂದು ವಡಬು ಹೀಗಿದೆ:

ಆಹಹಾ ! ಶ್ರೀ ಮನ್‌ಮಹಾದೇವನಿಗೆ ದೇವನಯ್ಯಾ
ಆಹಹಾ ! ಶ್ರೀ ಮನ್‌ಮಹಾದೇವನಿಗೆ ದೇವನಯ್ಯಾ
ಕಲ್ಯಾಣದಲ್ಲಿ ಬಸವಣ್ಣನು ಸತ್ತಿದ್ದ ಕಾಲಕ್ಕೆ
ಬಸವಣ್ಣನ ನಾಲ್ಕು ಕಾಲಿಗೆ ಹಗ್ಗವನ್ನು ಕಟ್ಟಿ
ದರದರಾ ದರದರನೆ ಎಳೆವರಯ್ಯಾ
ಕಚಕಚಾ ಕಚಕಚನೆ ಕಡೆವರು.
ಬಸವಣ್ಣನ ಚರ್ಮವನ್ನು ಚರಚರಾ ಚರಚರನೆ ಬಿಡುವರು
ಬಸಣ್ಣನ ಚರ್ಮದಿಂದ ತುಪ್ಪತುಂಬಲು ಸಿದ್ದಲಿ ಆಯಿತು
ಎಣ್ಣೆ ತುಂಬಲು ಬುದ್ದಲಿಯಾಯಿತು
ಸಿದ್ಧಲಿಯೊಳಗಿನ ತುಪ್ಪ, ಬುದ್ಧಲಿಯೊಳಗಿನ ಎಣ್ಣೆ
ಎದ್ದೆದ್ದು ಉಂಬುವಾಗ ನನ್ನ ಕುಲ ಹೆಚ್ಚು ನಿನ್ನಕುಲ ಹೆಚ್ಚು ಎಂದು
ಬಡಿದಾಡುವ ಕತ್ತೆಸೂಳೆಮಕ್ಕಳನ್ನೇ ಹಿಡಿದು
ಕಲ್ಯಾಣದ ಕಡೆ ಬಾಗಿಲಲ್ಲಿ ನಿಲ್ಲಿಸಿ
ನಮ್ಮ ಸಮಗಾರ ಹರಳಯ್ಯನ ಮನೆಗೆ ಹೋಗಿ
ಹನ್ನೆರಡು ವರ್ಷದ ಹಳೆಯ ಪಾದರಕ್ಷೆಗಳನೆ ತೆಗೆದುಕೊಂಡು
ನಮ್ಮ ಡೋಹರ ಕಕ್ಕಯ್ಯನ ಮನೆಗೆ ಹೋಗಿ
ಗುಂಡದೊಳಗೆ ಎದ್ದಿ ಮೂರು ಮೆಟ್ಟು ಶುದ್ಧ ಮಾಡಿ
ಲಟಲಟಾ ಲಟಲಟಾ ಹೊಡಿಯೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜ ಶರಣ.
ಕರುಣಿಸೋ ಕರುಣಿಸೋ ಕರಿಜಗದ ಒಡೆಯ

ನೀಲಮುತ್ತಿನ ಧಡಿಯ ರಾಚೋಟಿ ಶರ್ಪ
ಹ್ಯಾಂಗ ಬರ್‍ತಾನ ಬರ್ಲಿ.

ಈ ವಚನ ಪ್ರಕಟವಾಗಿರುವ ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಇಲ್ಲ. ಹೀಗೆ ಮೌಖಿಕ ಪರಂಪರೆಯಲ್ಲಿ ಬಂದ ವಡಬುಗಳಿಗೂ ಅಪರೂಪಕ್ಕೆ ವಚನಕಾರರ ಹೆಸರುಗಳನ್ನು ಬಳಸುವುದನ್ನು ನೋಡುತ್ತೇವೆ. ಈ ಬಗೆಗೆ ವ್ಯಾಪಕವಾದ ಶೋಧಕಾರ್ಯ ನಡೆಯಬೇಕೆನಿಸುತ್ತದೆ.

ಅಪರೂಪಕ್ಕೆ ಒಂದು ಒಡಬುಗಳ ಸಂಗ್ರಹ ದೊರಕಿದೆ. ಜನಪದ ಸಾಹಿತ್ಯವನ್ನು ಬಲ್ಲ ವಿದ್ವಾಂಸರು ವಡಬುಗಳ ಬಗ್ಗೆ ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡಿದ್ದಾರೆ. ಆದರೆ ವಡಬುಗಳ ಸಂಗ್ರಹಗಳನ್ನು ಪ್ರಕಟಿಸಿಲ್ಲ. ನನ್ನ ಮುಂದಿರುವ ಕೃತಿ **'ಶ್ರೀ ವೀರಭದ್ರದೇವರ ವಡಪುಗಳು'**(೨೦೦೨, ಮೂರನೇ ಮುದ್ರಣ) ಎನ್ನುವುದನ್ನು ಒಬ್ಬ ಪ್ರಸಿದ್ಧ ಪುರವಂತಿಕೆ ವೇಷಹಾಕುವ ದೊಡ್ಡ ಕಲಾವಿದ, ತನಗೆ ಬರುವ ವಡಬುಗಳನ್ನು ತಾನೆ ಬರೆದು, ಸಂಗ್ರಹಿಸಿದ್ದಾನೆ.

ಈ ಸಂಗ್ರಹಕ್ಕೆ ಒಂದು ವಿಶೇಷ ಮಹತ್ವವಿರುವುದೇ ಈ ಕಲಾವಿದನಿಂದಾಗಿ. ಈತ ತಾನು ಹದಿನಾಲ್ಕು ವರ್ಷದ ಬಾಲಕನಿದ್ದಾಗಿನಿಂದಲೂ ಪುರವಂತಿಕೆ ವೇಷ ಕಟ್ಟುತ್ತ ಬಂದವನು. ಆಗಿನಿಂದಲೇ ವಡಬುಗಳನ್ನು ಹೇಳುತ್ತ ಬಂದ ಬಗ್ಗೆ ಬರೆದುಕೊಂಡಿದ್ದಾನೆ. ಈ ಕಲಾವಿದನ ಹೆಸರು ಶಂಕ್ರಪ್ಪ ಬಸಪ್ಪ ತೊಂಡಿಹಾಳ, ಬೆಟಗೇರಿ–ಗದಗ. ಆತ ಹೀಗೆ ಬರೆದುಕೊಂಡಿದ್ದಾನೆ: "ನನಗೆ ವಡಬು ಹೇಳುವ ಹವ್ಯಾಸ ಸುಮಾರು ೧೪ ವರ್ಷದವನಿದ್ದಾಗಲೇ ಆರಂಭವಾಯಿತು. ಇದನ್ನು ಶ್ರೀ ವೀರಭದ್ರೇಶ್ವರ ಸದ್ಭಕ್ತ ಮಂಡಳಿ ಬೆಟಗೇರಿ ಇವರು ನಾನು ವಡಬು ಹೇಳುವಾಗ ತಪ್ಪಿದರೆ ತಿದ್ದುತ್ತ, ಬೆದರಿದರೆ ಸಾಂತ್ವನ ನೀಡಿ ನನ್ನನ್ನು ಒಳ್ಳೆಯ ಕಲಾವಿದನನ್ನಾಗಿ ಮಾಡಿದರು" (ನನ್ನ ಮಾತು, ಪು.೨). ವಡಬುಗಳೇನು ಎಂದು ತಿಳಿದುಕೊಳ್ಳಲು ಈ ಕಲಾವಿದನ ಮಾತುಗಳು ಮತ್ತು ಈತ ಹೊರ ತಂದ ಕೃತಿ ನಮಗೆ ಖಂಡಿತ ಸಹಾಯ ಮಾಡುತ್ತವೆ. ಈತ ತಾನು ತನ್ನ ಜೀವಮಾನದ ತುಂಬ ಹೇಳುತ್ತ ಬಂದ, ಹಿರಿಯರು ತನಗೆ ಹೇಳಿಕೊಟ್ಟ ವಡಬುಗಳನ್ನು ಬರೆದಿಟ್ಟುಕೊಂಡ ವಯಸ್ಸಿನ ಬಗ್ಗೆಯೂ ಆತ ಹೇಳಿಕೊಂಡಿದ್ದಾನೆ. "ನನ್ನ ಜೀವನದ ೪೧ ವಸಂತಗಳಲ್ಲಿ ಮುಕ್ಕಾಲು ಭಾಗ ಶ್ರೀ ವೀರಭದ್ರ ದೇವರ ಸೇವೆಯಲ್ಲಿ ಕಳೆದಿದ್ದೇನೆ. ....ಜಾನಪದ ಜಗತ್ತಿನಲ್ಲಿ ಗೀಗೀ ಪದ, ಚೌಡಕಿ ಪದ, ಸಂಪ್ರದಾಯದ ಪದ, ಕರಡಿ ಮಜಲು, ಲಾವಣಿ ಇವೇ ಮುಂತಾದವುಗಳಲ್ಲಿ **'ಶ್ರೀ ವೀರಭದ್ರ ದೇವರ ವಡಬುಗಳು'** ಎಂಬ ಕಲೆಯೂ ಒಂದು" (ನನ್ನ ಮಾತು, ಪು.೧). ಈ ಕಲಾವಿದನ ವಯಸ್ಸು ವೀರಭದ್ರನ ಕಾಶೆ ಕಟ್ಟುವಲ್ಲಿಯೇ ಕಳೆದಿರುವುದು ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ. ಹೀಗಾಗಿ ಈ ವಡಬುಗಳನ್ನು ನಾವು ನಂಬಬಹುದು. ಮತ್ತು ಈ ಕೃತಿಯ ವಡಬುಗಳನ್ನು ಎದುರಿಗೆ ಇಟ್ಟುಕೊಂಡು ವಡಬುಗಳ ಬಗ್ಗೆ ಒಂದಿಷ್ಟು ವಿವರಿಸಬಹುದು.

ಈ ವಡಬುಗಳನ್ನು ಎಲ್ಲೆಲ್ಲಿ ಹೇಳಲಾಗುತ್ತದೆ ಎಂಬುದನ್ನು ಕಲಾವಿದ ಶಂಕ್ರಪ್ಪ ತೊಂಡಿಹಾಳ ಅವರು ಹೀಗೆ ವಿವರಿಸಿದ್ದಾರೆ: "ಈ ವಡಬುಗಳನ್ನು ಶ್ರೀ ವೀರಭದ್ರ

ದೇವರ ರಥೋತ್ಸವ, ಅಗ್ನಿ ಹಾಯುವದು, ಗುಗ್ಗಳ ಕಾರ್ಯದಲ್ಲಿ ಮತ್ತು ಮಂಗಳವಾರ ನಡೆಯುವ ಪಾಲಕಿ ಸೇವೆಯಲ್ಲಿ ಅಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಪುರವಂತರು ಹೇಳುತ್ತಾರೆ" (ಪು.೨). ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕಂಡುಬರುವಂತೆ, ಈ ಪುರವಂತನ ಪಾತ್ರ ಮುಖ್ಯವಾಗಿ ಕಾಣುವುದು ಜಾತ್ರೆಗಳಲ್ಲಿ ಮತ್ತು ಮದುವೆಯ ಗುಗ್ಗಳ ಸಂದರ್ಭದಲ್ಲಿ. ಜಾತ್ರೆಯ ಯಾವುದೇ ಮೆರವಣಿಗೆ–ಗ್ರಾಮದಿಂದ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಗುಡಿಗೆ ಸಾಗಿಸುವ ಸಂದರ್ಭದಲ್ಲಿ, ರಥೋತ್ಸವಕ್ಕೆ ಮುನ್ನ ಹೊರಡುವ ಉತ್ಸವದಲ್ಲಿ, ಅಗ್ನಿ ಪ್ರವೇಶಕ್ಕಾಗಿ ಹೊರಡುವ ಉತ್ಸವದಲ್ಲಿ (ಮೊದಲಿಗೆ ಅಗ್ನಿ ಪ್ರವೇಶ ಮಾಡುವವನೂ ಪುರವಂತನೇ) ಪುರವಂತನ ಪಾತ್ರ ಕಾಣಿಸುತ್ತದೆ.

ಶಿವನ ಆರಾಧಕರಲ್ಲಿ ಕಾಣಿಸುವ ಒಂದು ವಿಶೇಷ ಸಂಪ್ರದಾಯ ಇದು. ಶರಣನಾದ ಮಡಿವಾಳ ಮಾಚಿದೇವನನ್ನು ವೀರಭದ್ರನ ಅವತಾರಿ ಎಂದು ಹೇಳಲಾಗುತ್ತದೆ. ಹೀಗಾಗಿ ವಡಬುಗಳಲ್ಲಿ ಈ ಕಲ್ಪನೆಯೂ ಬೆರೆತುಕೊಂಡಿದೆ. ಆದರೆ ಗುಗ್ಗಳ ಸಂಪ್ರದಾಯ ಮೂಲ ಶೈವಧರ್ಮದ ಸಂಪ್ರದಾಯವಾಗಿರುವಂತಿದೆ. ಶಿವನ ಆರಾಧಕರು ಶಿವನಿಗೆ ಸಲ್ಲಿಸುವ ವಿಶೇಷ ಮರ್ಯಾದೆ–ಪೂಜೆ ಈ ಗುಗ್ಗಳ ಪೂಜೆ ಎಂಬಂತೆ ಇದೆ.

ಸಾಮಾನ್ಯವಾಗಿ ಈ ಪುರವಂತಿಕೆಯನ್ನು ಕಟ್ಟುವವರು ಯಾರು? ಎಂಬುದನ್ನು ಗಮನಿಸಿದರೆ ಈ ವಿಷಯ ಇನ್ನಷ್ಟು ಸ್ಪಷ್ಟವಾಗುತ್ತದೆ. ಕೆಲವು ಕಡೆ ಲಿಂಗಾಯತ ಸ್ವಾಮಿಗಳು(ಜಂಗಮರು), ಸಿಂಪಿಗರು, ಲಿಂಗಾಯತರಲ್ಲಿ ಯಾವುದೇ ಪಂಗಡದವರೂ ಕಾಶೆ ಕಟ್ಟಬಹುದು. ಇನ್ನು ಕೆಲವು ಕಡೆ ಪಂಚಾಳ ಸಮುದಾಯಕ್ಕೆ ಸೇರಿದ ಅಕ್ಕಸಾಲಿ, ಬಡಿಗ ಈ ಸಮುದಾಯಕ್ಕೆ ಸೇರಿದ ಜನ ಪುರವಂತಿಕೆ ವೇಷ ಹಾಕುವ ಅರ್ಥಾತ್ ಕಾಶೆ ಕಟ್ಟುವ ಸಂಪ್ರದಾಯವಿದೆ. ಪಂಚಾಳರು ಪುರವಂತನ ವೇಷ ಹಾಕುವ ಪದ್ಧತಿ ತಿಂಥಿಣಿ ಮೌನೇಶನ ನಂತರ, ಅಂದರೆ ೧೬ನೇ ಶತಮಾನದ ನಂತರ ಪಂಚಾಳರು ಪುರವಂತನ ವೇಷ ಹಾಕುವ ಪದ್ಧತಿ ಪ್ರಾರಂಭವಾಗಿದೆ ಎಂಬುದು ಕೆಲ ಕಲಾವಿದರ ಅನಿಸಿಕೆ. ಏನಿದ್ದರೂ ಪಂಚಾಳರು ಜನಿವಾರ ಧರಿಸಿದರೂ ಅವರು ಶಿವನ ಭಕ್ತರೇ ಆಗಿದ್ದಾರೆ. ಮೌನೇಶ್ವರ ಆಗಿ ಹೋದ ನಂತರವಂತೂ ಪಂಚಾಳರೂ ಮೌನೇಶನನ್ನು ಪೂಜೆ ಮಾಡುತ್ತಿದ್ದಾರೆ. ಮೌನೇಶನು ಕೊಡೆಕಲ್ ಸಂಪ್ರದಾಯಕ್ಕೆ ಸೇರಿದ ಶರಣನು. ಕೊಡೆಕಲ್ ಬಸವಣ್ಣನವರ ಶಿಷ್ಯನು. ಮೌನೇಶನ ಕೆಲ ವಚನಗಳನ್ನೂ ವಡಬುಗಳ ರೀತಿಯಲ್ಲಿ ಅಲ್ಲಲ್ಲಿ ಬಳಸಲಾಗುತ್ತದೆ ಎಂದೂ ತಿಳಿದುಬರುತ್ತದೆ.

ಈ ಒಡಬುಗಳ ವಿಷಯ, ರಚನೆ, ಬಳಕೆ ಏನು? ಎಂದು ಸ್ಪಷ್ಟವಾಗಬೇಕು. ನಮ್ಮ ವಿದ್ವಾಂಸರು ಅನೇಕ ರೀತಿಯಿಂದ ಹೇಳುತ್ತ ಬಂದಿದ್ದಾರೆ. ಬೆಡಗಿನ ವಚನಗಳನ್ನೇ ವಡಬುಗಳಾಗಿ ಹೇಳುತ್ತಾರೆಂದೂ ಬರೆದಿದ್ದಾರೆ. ವಡಬುಗಳ ಕೃತಿಯಲ್ಲೂ ಅಂತಹ ಒಂದು ವಚನ ಇದ್ದು ಅದನ್ನು ಅಂಬಿಗರ ಚೌಡಯ್ಯನ ವಚನವೆಂದು ಕೊನೆಯಲ್ಲಿ ಉಲ್ಲೇಖವೂ ಇದೆ. ಡಾ. ಸೋಮಶೇಖರ ಇಮ್ರಾಪೂರ ಅವರು ಕೂಡ ಇದೇ ವಡಬನ್ನು ಉಲ್ಲೇಖಿಸಿದ್ದಾರೆ.

೩೭.
ಆಹಾ ವೀರಾ ಆಹಾ ಶರಭಾ
ಕೋಣನ ಕೊಂಬಿನ ಮೇಲೆ ಕಠೋರ ಎಂಬ ಪಟ್ಟಣ ಇತ್ತು
(ಮುಳ್ಳು ಮನೆಯ ಮೇಲೆ ಮೂವತ್ತೆರಡು ಪಟ್ಟಣ)
ಆ ಪಟ್ಟಣದಲ್ಲಿ ಹಾಯ್ ಹಾಯ್ ಎಂಬ ಗೌಡ
ಹುಯ್ ಹುಯ್ ಎಂಬ ಕುಲಕರ್ಣಿ
ಮ್ಯೆ ಮ್ಯೆ ಎಂಬ ತಳವಾರ
ಆ ತಳವಾರನ ಹೆಂಡತಿಗೆ ನಡುವಿಲ್ಲ
ಅವಳು ತಳವಿಲ್ಲದ ಕೊಡವನ್ನು ಹೊತ್ತುಕೊಂಡು
ಜಲವಿಲ್ಲದ ಬಾವಿಗೆ ಹೋದಳು
ಆ ಭಾವಿಯ ದಂಡೆಯ ಮೇಲೆ ಬೇರಿಲ್ಲದ ಬೇವಿನ ಮರ ಹುಟ್ಟಿತ್ತು
ಆ ಮರದ ಮೇಲೆ ರೆಕ್ಕೆ ಇಲ್ಲದ ಪಕ್ಷಿಯು ಕುಳಿತಿತ್ತು
ಆ ಪಕ್ಷಿಯನ್ನು ಕಣ್ಣಿಲ್ಲದವನು ನೋಡಿ
ಕಿವಿಯಿಲ್ಲದವನ ಮುಂದೆ ಹೇಳಲು
ಆಗ ಕಿವಿಯಿಲ್ಲದವನು ತುದಿಯಿಲ್ಲದ ಬಾಣದಿಂದ ಹೊಡೆಯಲು
ಆ ಪಕ್ಷಿಗೆ ಬಿತ್ತೋ ಬೀಳಲಿಲ್ಲವೋ
ಎಂದಾತ ಅಂಬಿಗರ ಚೌಡಯ್ಯ ಕಡೆ ಕಡೆ
(ಇದನ್ನೇ ಕೆಲವರು ಈ ರೀತಿಯಾಗಿಯೂ ಹೇಳುತ್ತಾರೆ)
ಇದರ ತಾತ್ಪರ್ಯವೇನೆಂದರೆ
ಆ ಸರ್ವಶಕ್ತಿ ಭಗವಂತನ ಕೃಪೆ ಇರಲು
ಅದು ಯಾವುದು ಅಸಾಧ್ಯ ಕಡೆ ಕಡೆ . . .

ಈ ವಡಬಿನ ಕೊನೆಯಲ್ಲಿ ಅಂಬಿಗರ ಚೌಡಯ್ಯನ ಹೆಸರು ಉಲ್ಲೇಖವಾಗಿರುವುದನ್ನು ಗಮನಿಸಬೇಕು. ಇದು ಖಂಡಿತ ಅಂಬಿಗರ ಚೌಡಯ್ಯನ ವಚನವಲ್ಲ. ಅಥವಾ ಇಡೀ ಬೆಡಗಿನ ವಚನಗಳನ್ನು ಗಮನಿಸಿದರೂ ಇಂತಹ ಯಾವುದೇ ವಚನ ಕಂಡುಬರುವದಿಲ್ಲ. ಕಲಾವಿದನೇ ಕೊಟ್ಟಿರುವ ಭಿನ್ನವಾಗಿ ಹೇಳುವ ಕೊನೆಯ ಸಾಲುಗಳನ್ನು ಗಮನಿಸಿದರೆ, ಅಂಬಿಗರ ಚೌಡಯ್ಯನ ಹೆಸರಿರುವ ಸಾಲಿನ ಬದಲಾಗಿ ಕೆಲವರು ಬೇರೆ ಸಾಲು ಹೇಳುವರೆಂಬುದು ತಿಳಿದು ಬರುತ್ತದೆ. ಜೊತೆಗೆ ಮೊದಲಿನ ಸಾಲಿನ ಬದಲಾಗಿಯೂ ಮತ್ತೊಂದು ಸಾಲಿರುವುದನ್ನು ಕಂಸಿನಲ್ಲಿ ಕೊಡಲಾಗಿದೆ. ಇದನ್ನು ಗಮನಿಸಿದರೆ ಇದು ಖಂಡಿತ ಅಂಬಿಗರ ಚೌಡಯ್ಯನ ವಚನ ಅಲ್ಲವೆಂಬುದು ಗೊತ್ತಾಗುತ್ತದೆ. ಆದರೆ ಪ್ರಾಸಂಗಿಕವಾಗಿ ಶರಣರ ವಚನಗಳನ್ನು ವಡಬುಗಳಂತೆ ಹೇಳುವ ಪದ್ಧತಿಯೂ ಇದೆ ಎಂದು ಹಿಂದೆ ಹೇಳಲಾಗಿದೆ. ಬಸವಣ್ಣ, ಅಂಬಿಗರ ಚೌಡಯ್ಯ, ಷಣ್ಮುಖಸ್ವಾಮಿ, ಮತ್ತೆ ಕೆಲವು ಅಜ್ಞಾತ ವಚನಕಾರರ ವಚನಗಳನ್ನು ಬಳಸುತ್ತಾರೆಂದು ಕೆಲ ಕಲಾವಿದರು ಹೇಳುತ್ತಾರೆ. ಮುಖ್ಯವಾಗಿ ಶಿವನಿಗೆ ಸಂಬಂಧಿಸಿದ ಘಟನೆಗಳನ್ನು, ಮತ್ತು ಶಿವಶರಣರಿಗೆ ಸಂಬಂಧಿಸಿದ ಘಟನೆಗಳನ್ನು ವಡಬುಗಳಾಗಿ ವಿವರಿಸಿ ಹೇಳುವುದನ್ನು ಕಾಣುತ್ತೇವೆ.

ವಾದ್ಯದ ಸಹಾಯದೊಂದಿಗೆ, ವೀರಾವೇಶದಿಂದ ಹೇಳುವ ನುಡಿಗಳಂತಿವೆ ವಡಬುಗಳು. ಒಗಟುಗಳ ಮಾದರಿಯಲ್ಲೂ ಕೆಲ ವಡಬುಗಳಿವೆ. ಒಗಟಿನ ಮಾದರಿಗಳು ಎಲ್ಲ ಪ್ರಕಾರಗಳಲ್ಲಿ ಕಾಣುವಂತೆ ವಡಬುಗಳಲ್ಲೂ ಕಾಣುತ್ತವೆಂದು ತೋರುತ್ತದೆ. ಒಗಟಿನ ಮಾದರಿ ವಡಬುಗಳನ್ನು ಅನೇಕ ಜನ ಬೆಡಗಿನ ವಚನಗಳೆಂದು ಭಾವಿಸಿ, ಬೆಡಗಿನ ವಚನಗಳನ್ನೇ ವಡಬುಗಳನ್ನಾಗಿ ಬಳಸುತ್ತಾರೆಂದು ಹೇಳಿದಂತಿದೆ. ಆದರೆ ವಚನಗಳನ್ನು ಬಳಸುವುದು ಪ್ರಾಸಂಗಿಕವಾಗಿ ಇದೆ. ಆದರೆ ಕೇವಲ ವಚನಗಳನ್ನೇ ವಡಬುಗಳೆಂದು ಬಳಸುವುದಿಲ್ಲ.

ವಡಬುಗಳು ಎನ್ನುವ ಪದ್ಧತಿ ಉತ್ತರಕರ್ನಾಟಕದಲ್ಲಿ ಇದೆ. ಇವುಗಳನ್ನು ಪುರವಂತರ ವಚಗಳು ಎಂದೂ ಅನ್ನುವ ರೂಢಿ ಇದೆ. ಚಿತ್ರದುರ್ಗ, ಶಿವಮೊಗ್ಗ ಆಕಡೆ ಇವುಗಳನ್ನು ಖಡ್ಗಗಳೆಂದೂ ವಚನಗಳೆಂದೂ ಕರೆಯುತ್ತಾರೆ. ಇವುಗಳನ್ನು ಹೇಳುವ ರೀತಿ ವಿಶೇಷವಾಗಿದ್ದು ಇವುಗಳ ರಚನೆ ವಚನಗಳಂತೆ ತೋರುತ್ತದೆ. ನಿಂಗಣ್ಣ ಸಣ್ಣಕ್ಕಿ ಅವರು ವಡಬುಗಳನ್ನು 'ಗುಗ್ಗಳ ಹಾಡುಗಳು' ಎಂದು ಕರೆದು ಆರೇಳು ವಡಬುಗಳನ್ನು ಪದ್ಯದ ಮಾದಿರಿಯಲ್ಲಿಯೇ ಸಂಗ್ರಹಿಸಿ ಪ್ರಕಟಿಸಿರುವುದನ್ನು ಹಿಂದೆ ಬರೆಯಲಾಗಿದೆ. (ಗಂಡಸರ ಜನಪದ ಹಾಡುಗಳು, ಪು.೧೬೬).

'ವಡಬು' ಎಂದರೆ ವಡಬಾಗ್ನಿ, ವಡಬಾನಲ, ಸಮುದ್ರದಲ್ಲಿರುವ ಬೆಂಕಿ ಎಂದೂ ವಡಿ ಎಂದರೆ ಬಿಸಿ, ಉಷ್ಣ, ಬಾಗಿದ ಕತ್ತಿ ಎಂದೂ ಅರ್ಥವಾಗುತ್ತದೆ. ಇದನ್ನು ಪುರವಂತ ವೀರಭದ್ರನ ಪ್ರತಿರೂಪ ಅಥವಾ ಆತನ ಸೈನಿಕನೆಂದು ಭಾವಿಸಲಾಗುತ್ತದೆ. ಗಮನಿಸಿದರೆ ಕ್ರೋಧದ ವ್ಯಕ್ತಿತ್ವವೇ ವೀರಭದ್ರನದಾಗಿದೆ. ಬೆಂಕಿಯನ್ನು ಕಾರುವ ವ್ಯಕ್ತಿತ್ವದಂತೆ ಪುರವಂತನ ವ್ಯಕ್ತಿತ್ವ ತೋರುವುದರಿಂದ, ಆತ ಉಗ್ಘಡಿಸುವ (ಬರೀ ಹೇಳುವ ಅಲ್ಲ) ಸಾಹಿತ್ಯಕ್ಕೆ ವಡಬುಗಳು ಎಂದು ಕರೆದಂತೆ ತೋರುತ್ತದೆ.

'ಶ್ರೀ ವೀರಭದ್ರದೇವರ ವಡಪುಗಳು' ಕೃತಿಯಲ್ಲಿರುವ ಒಡಬುಗಳ ಶೀರ್ಷಿಕೆಗಳನ್ನು ಗಮನಿಸಿ, ಅವುಗಳನ್ನು ಹೀಗೆ ವಿಭಜಿಸಬಹುದಾಗಿದೆ:

ಶೈವ ಸಂಪ್ರದಾಯ : ದಕ್ಷಯಜ್ಞ, ಕಾಮದಹನ, ಗಂಗೆ-ಗೌರಿ, ಗಿರಿಜಾ ಕಲ್ಯಾಣ, ಶಿವಸ್ಮರಣೆ ಮುಖ್ಯ, ಪವಿತ್ರ ಗಂಗಾ, ಬೋಳಾ ಶಂಕರ, ಪರಮೇಶ್ವರನಿಗೆ ಚಂದ್ರಶೇಖರನೆಂಬ ಬಿರುದು ಬಂದದ್ದು, ಯಾರು ಸರಿ, ಹರಿಹರರಲ್ಲಿ ಭೇದವಿಲ್ಲ, ಜಲಂಧರನ ಸಂಹಾರ.

ವೀರಭದ್ರನಿಗೆ ಸಂಬಂದಿಸಿದವು : ವರ ಪ್ರದಾಯಕ ಶ್ರೀ ವೀರಭದ್ರ, ಶ್ರೀ ವೀರಭದ್ರನ ಆರ್ಭಟ, ಕರುಣಿಸೋ ಶ್ರೀ ವೀರಭದ್ರ, ಭಯ ನಿವಾರಕ ಶ್ರೀ ವೀರಭದ್ರ, ಶ್ರೀ ವೀರಭದ್ರನ ಪಾದದಾಣೆ, ನೀ ಕಾಯೋ ಶ್ರೀ ವೀರಭದ್ರ, ಮಹಿಮಾಪುರುಷ ಶ್ರೀ ವೀರಭದ್ರ, ಶ್ರೀ ವಿರಭದ್ರನ ವಿಸ್ತಾರ, ಶರಭಾವತರಿಸಿದ ವೀರಭದ್ರ, ಪರವಂತರು ಗೆಜ್ಜೆ ಕಟ್ಟಿದ ವಿವರ, ಪರಾಕುಗಳು, ಶ್ರೀ ವೀರಭದ್ರನಿಂದ ಹಿರಣ್ಯ ರಾಕ್ಷಸನ ಸಂಹಾರ.

೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದವು : ಡಾಂಭಿಕ ಭಕ್ತಿಯ ವಿವಿಧ ರೂಪ, ವಿಚಾರ ಭಕ್ತಿ ಅವಶ್ಯ, ಇಬ್ಬಗೆಯ ಭಕ್ತಿ, ನಿಜಭಕ್ತಿಯಿಂದ ನಡೆಯಬೇಕು, ತನುಮನ ಶುದ್ಧಿಯೇ ಪಂಚಾಂಗ, ಪ್ರಸಾದದ ಮಹಿಮೆ, ಶರಣ ಹೇಗಿರಬೇಕು, ಬದನೆಕಾಯಿ

ಲಿಂಗವಾದದ್ದು, ಶ್ರೀ ಗುಡ್ಡಾಪುರ ದಾನಮ್ಮ, ವೀರಘಂಟಿ ಮಡಿವಾಳ ಮಾಚಯ್ಯ. ವೀರಭದ್ರ ಮಡಿವಾಳ ಮಾಚಯ್ಯನ ಅವತಾರ ಮಾಡಿದ್ದು, ಅರ್ಥದ ವಡಬು, ಯಾವುದನ್ನು ಯಾರು ಬಲ್ಲರು, ಒಗಟಿನ ವಡಬುಗಳು (೩೭–೪೦).

ಸಾಮಾಜಿಕ ರೀತಿ–ನೀತಿ : ದುಷ್ಟಕಾರ್ಯಗಳಿಂದ ದೂರಾಗು, ಸ್ತ್ರೀ ವ್ಯಾಮೋಹ ಸರಿಯಲ್ಲ, ಪತಿವ್ರತಾ ಧರ್ಮ, ಏನಿದ್ದರೇನು ಫಲ, ಅರ್ಥದ ವಡಬುಗಳು, ನೀನಾರಿಗಾದೆಯೋ ಎಲೆ ಮಾನವಾ.

ಇತರ ವಡಬುಗಳು : ಕೃಷ್ಣ ಸುಧಾಮ, ಪ್ರತಿ ಶನಿವಾರ ಹನುಮಂತನ ಗುಡಿಗೆ ಹೋಗುವುದು ಏಕೆ?, ಕೊಪ್ಪಳ ಗವಿಸಿದ್ಧೇಶ್ವರನ ಮಹಿಮೆ.

'ಶ್ರೀ ವೀರಭದ್ರದೇವರ ವಡಪುಗಳು' ಕೃತಿಯಲ್ಲಿಯ ವಡಬುಗಳನ್ನು ವಿಷಯಾನುಸಾರ ವಿಂಗಡಿಸಿದರೆ ಈ ಮೇಲಿನಂತೆ ಫಲಿತಾಂಶ ಹೊರಡುತ್ತದೆ. ಮುಖ್ಯವಾಗಿ ಈ ಸಂಪ್ರದಾಯ ಶೈವಧರ್ಮಕ್ಕೆ ಸಂಬಂಧಿಸಿದ್ದು, ಅದು ಈಗಿನ ಲಿಂಗಾಯತ ಸಮಾಜದಲ್ಲೂ ಉಳಿದುಕೊಂಡು ಬಂದಿದೆ. ಹೀಗಾಗಿ ೧೨ನೇ ಶತಮಾನದ ಶರಣರ ವಿಷಯಗಳಿಗೆ ಸಂಬಂಧಿಸಿದ ವಡಬುಗಳೂ ಸೃಷ್ಟಿಯಾಗಿವೆ ಎಂಬುದು ಸ್ಪಷ್ಟವಾಗಿ ತೋರುತ್ತದೆ. ಶಿವನ ಮಹಿಮೆಯನ್ನು ಸಾರುವ ಪೌರಾಣಿಕ ಸಂಗತಿಗಳನ್ನು ಬಿತ್ತರಿಸುವ ಉದ್ದೇಶ ಈ ಸಂಪ್ರದಾಯಕ್ಕೆ ಇದೆ ಎಂಬುದು ಮೇಲುನೋಟಕ್ಕೆ ಹೊಳೆಯುತ್ತದೆ. ಜೊತೆಗೆ ಇದು ವೀರಭದ್ರನ ಸಂಪ್ರದಾಯದಂತೆ ಉಳಿದು ಬಂದುದರಿಂದ ಅವನ ಮಹಿಮೆಯನ್ನು ಹೇಳುವ ವಡಬುಗಳೂ ಹುಟ್ಟಿವೆ. ಪೌರಾಣಿಕ ಸಂಗತಿಗಳ ಜೊತೆಗೆ ಕೆಲ ವಡಬುಗಳು ಸಾಮಾಜಿಕ ಸಂಗತಿಗಳಿಗೆ ಸಂಬಂಧಿಸಿ ನಿರ್ಮಾಣಗೊಂಡಿದ್ದು, ಅವೆಲ್ಲ ಸಾಮಾನ್ಯರಿಗೆ ನೀತಿಬೋಧೆ ಎಂಬಂತೆ ಇವೆ. ಕೊನೆಯಲ್ಲಿರುವ ಇತರ ವಡಬುಗಳು ಬಹುಶಃ ನಂತರದ ಸೃಷ್ಟಿಗಳಾಗಿವೆ. ಇವುಗಳಲ್ಲಿ ಅನ್ಯವಿಷಯಗಳ ಸೇರ್ಪಡೆ ಅಲ್ಪಪ್ರಮಾಣದಲ್ಲಿ ನಡೆಯುವುದು ಸಹಜ. ಪ್ರಾಸಂಗಿಕವಾಗಿ ಅಲ್ಲಲ್ಲಿ ಕೆಲವರು ಒಂದೆರಡು ವಚನಗಳನ್ನೂ ಅಪರೂಪಕ್ಕೆ ಬಳಸುತ್ತಾರೆಂದು ತಿಳಿದುಬರುತ್ತದೆ. ಅವುಗಳಲ್ಲಿ ಜೇಡರ ದಾಸಿಮಯ್ಯನ ವಚನಗಳು, ಷಣ್ಮುಖಸ್ವಾಮಿಗಳ ವಚನಗಳು ಕಂಡುಬರುತ್ತವೆ. ಜೇಡರ ದಾಸಿಮಯ್ಯನ ವಚನಗಳು: ಕಡೆಗೀಲಿಲ್ಲದ ಬಂಡಿ, ಇಳೆ ನಿಮ್ಮ ದಾನ ಈ ಮುಂತಾದವು; ಅಖಂಡೇಶ್ವರನ ವಚನಗಳು– ಎಚ್ಚರವಿರಬೇಕು ನಡೆನುಡಿಯಲ್ಲಿ ಮುಂತಾದವು.

ವಡಬುಗಳು **'ವಿಶೇಷವಾಗಿ ಹೇಳುವ ಪ್ರಕಾರ'**ಗಳು. ಇಲ್ಲಿ **'ಹೇಳುವ ರೀತಿ'** ವಿಶೇಷವಾಗಿರುತ್ತದೆ. ವೀರಭದ್ರನ ಸೈನಿಕನಂತೆ ಕಾಶೆ (ವಿಶೇಷ ವೇಷ) ಕಟ್ಟಿದ ಪುರವಂತ, ಕೈಯಲ್ಲಿಯ ಖಡ್ಗವನ್ನು ಝಳಪಿಸುತ್ತ ವೀರಾವೇಶವಿಂದಲೇ ಉಗ್ಗಡಿಸುವ (ವೀರಾವೇಶದಿಂದ ಹೇಳುವ) ರೀತಿಯನ್ನು ಇಲ್ಲಿ ಕಾಣುತ್ತೇವೆ. ಪುರವಂತನು ವಡಬುಗಳನ್ನು ಉಗ್ಗಡಿಸುವಾಗ ಅವನಿಗೆ ಸಾಥ ನೀಡುವುದು ಬಾಜಿ ಮೇಳ. ವಿಶೇಷವಾಗಿ ಚರ್ಮವಾದ್ಯಗಾರ ಉಗ್ಗಡಿಸುವ ಪ್ರತಿ ನಿಲುಗಡೆಗೆ ಲಯಬದ್ಧವಾಗಿ ಎರಡ್ಮೂರು ಪೆಟ್ಟುಗಳನ್ನು ಹಾಕುತ್ತಿರುತ್ತಾನೆ. ಇದು ಪುರವಂತ ಹೇಳುತ್ತಿರುವ ವೀರಾವೇಶದ ಮಾತಿಗೆ ಸ್ಫೂರ್ತಿಯನ್ನು ತುಂಬುತ್ತಿರುತ್ತದೆ.

ವಡಬುಗಳ ರಚನೆಯನ್ನು ಗಮನಿಸಿದರೆ ಕಾವ್ಯದ ಶಕ್ತಿ ಕಡಿಮೆ. ಗದ್ಯದ ಭಾರವೇ ಜಾಸ್ತಿಯಾಗಿರುವುದು ಕಾಣುತ್ತದೆ. ಘಟನೆಯೊಂದನ್ನು ಒಂದು ವಿಶೇಷ ರೀತಿಯಲ್ಲಿ ಸಾಮಾನ್ಯರ ಮುಂದೆ ಬಿತ್ತರಿಸುವ ಕೆಲಸ ಇಲ್ಲಿ ನಡೆದಿರುತ್ತದೆ. ಸರಳವಾಗಿ ಘಟನೆಯನ್ನು ಬಿತ್ತರಿಸುವ ಕೆಲಸ ಇದಾಗಿರುತ್ತದೆ. ಈ ಘಟನೆಗಳೆಲ್ಲ ಮೇಲೆ ಹೇಳಿದಂತೆ ಶಿವಮಹಿಮೆಗೆ ಸಂಬಂಧಿಸಿದವುಗಳೇ ಜಾಸ್ತಿಯಾಗಿರುತ್ತವೆ. ಲಿಂಗಾಯತ ಸಮಾಜದಲ್ಲಿ ಈ ಸಂಪ್ರದಾಯ ಉಳಿದುಬಂದಿರುವುರಿಂದ ಸಹಜವಾಗಿಯೇ ಶಿವಶರಣರ ಚರಿತ್ರೆ, ಅವರ ತತ್ತ್ವಗಳ ವಿವರಣೆಗಳೂ ವಡಬುಗಳಾಗಿವೆ. ಘಟನೆಗಳನ್ನು ತಿಳಿಯಾಗಿ ಬಿತ್ತರಿಸುವ ಪದ್ಧತಿ ಇಲ್ಲಿ ಕಾಣುವುದರಿಂದ ವಡಬುಗಳು ಸ್ವಲ್ಪ ದೀರ್ಘವಾಗಿವೆ ಎನಿಸುತ್ತದೆ. ವಡಬುಗಳು ಅರ್ಧಪುಟ, ಒಂದು ಪುಟದಿಂದ ಪ್ರಾರಂಭವಾಗಿ ಐದಾರು ಪುಟಗಳವರೆಗೆ ದೀರ್ಘವಾಗಿವೆ. ದಕ್ಷಯಜ್ಞ ಸಂಹಾರದ ಕಥೆ ಸುಮಾರು ೧೦ ಪುಟಗಳಷ್ಟು ದೀರ್ಘವಾಗಿದೆ. ವೀರಭದ್ರನ ಮಹಿಮೆ ಹೇಳುವ ವಡಬುಗಳು ಚಿಕ್ಕಚಿಕ್ಕವಾಗಿವೆ. ಉದಾಹರಣೆಗಾಗಿ ಕೆಲವು ವಡಬುಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಶಿವನ ಮಹಿಮೆ ಸಾರುವ ವಡಬು

'ಬೋಳಾ ಶಂಕರ' :

ಆಹಾ ವೀರಾ! ಆಹಾ ಶರಭಾ! ಹೇ ಶಂಭೋ! ನಿನ್ನ ಅಪಾರವಾದ ಮಹಿಮಾತಿಶಯ ಗಳನ್ನು ವರ್ಣಿಸಲು ವೇದಗಳು ಕಾಣದೆ ಅರಸುವವು. ನೀನು ಪರಬ್ರಹ್ಮನೆಂಬುವದಕ್ಕೆ ಮಂಕಣ್ಣನೆಂಬ ಮಹಾಸಿದ್ಧನು– ತನ್ನ ಮಾಯೆಯಿಂದ ಮೋಹಿತನಾದ ಬ್ರಹ್ಮನೇ ಮೊದಲಾದವರು ಇರುವ ಕಡೆಯಾದ ಈ ಜಗಜ್ಜಾಲವೆಲ್ಲವೂ ಕುಣಿಯುತ್ತಿರುವದು. ಮಾಯೆಯೊಳಗಾದ ನಿನ್ನನ್ನು ಹರಿ ಸುರ ಬ್ರಹ್ಮಾದಿಗಳಿಂದಲೇ ನಿರ್ಣಯಿಸಲ್ಪಡಲಿಲ್ಲವೆ? ಆಹಾ ದೇವರ ದೇವ ದಯಾ ನಿಧಿ, ಪಾವನ ಮೂರ್ತಿಯೇ! ನೀನು ಕರುಣಾಳು ಎಂಬುದಕ್ಕೆ ಕೋಳೂರು ಕೊಡಗೂಸನ್ನು ನಿನ್ನುದರದಲ್ಲಿರಿಸಿ ನೀನಿತ್ತ ಗಣಪದವಿಯೆ ಸಾಕ್ಷಿಯು. ನೀನು ಭಕ್ತವತ್ಸಲನು ಎಂಬುದಕ್ಕೆ ಪಿತೃ ಹತ್ಯನಾದ ಪರಮಪಾತಕಿಯಾದ ಚಂಡೇಶನೆಂಬುವವನಿಗೆ ನೀನಿತ್ತ ಗಣಪದವಿಯೇ ನಿದರ್ಶನವು. ಭಜಕನು ಭಾವಿಸಿದಲ್ಲಿ ಕೇಳಿದ ವರವನ್ನು ಕೊಟ್ಟಿರುವಿ. ಭಕ್ತರಾಧೀನನೆಂಬುವದಕ್ಕೆ ಪರವಿನಾಚಿಯ ಕುಚದಲ್ಲಿ ತೋರಿದಿ. ಕೇವಲ ಪಾಮರರಿಗೆ ಅವರವರ ಅನುಕೂಲವಾಗಿಯೇ ನಡೆಯುವ ಭಕ್ತರಕ್ಷಕ, ಕರುಣಾಕಟಾಕ್ಷನೆಂಬುವದಕ್ಕೆ ಅಮ್ಮವ್ವೆ ಮೊದಲಾದವರಿಗೆ ಅವರವರ ಭಾವದಂತೆಯೇ ಒಲಿದು ದಯಪಾಲಿಸಿದ ನಿತ್ಯ ಮುಕ್ತಿಯೇ ಪದವಿಯು. ಅದೂ ಅಲ್ಲದೆ ಶಿಭಕ್ತರಿಗೆ ನಂದೀಶ್ವರ, ಮಾರ್ಕಂಡೇಯ ಮೊದಲಾದ ಸತ್ಪುತ್ರರೆ ಚನ್ನವು. ಆಹಾ ದೇವರ ದೇವ, ವೃಕ್ಷವು ತೊಟ್ಟಿನಿಂದಾ ಅಮೂಲಾಗ್ರವಾಗಿ ಆವರಿಸಲ್ಪಟ್ಟಿರುವಂತೆ ಈ ಭೂಮಂಡಲವನ್ನು ನೀನು ಸುತ್ತು ಹಾಕಿಕೊಂಡಿರುವಿ. ನೀನು ಮಾಯೆಯನ್ನು ಹೊಂದಿದವನಾದರೂ ಚಂದ್ರನು ಚಂದ್ರಿಕೆಯಲ್ಲಿದ್ದರೂ ಚಂದ್ರನಿಗೆ ಏನೂ ವಿಕಾರಗೈಯುವಂತಿದ್ದರೂ ಈ ಲೋಕವನ್ನೆಲ್ಲ ಬೆಳಗುವಂತೆ ನೀನು ಮಾಯಾಲೇಪನ ವಿಲ್ಲದವನಾಗಿರುವಿ. ಸಾಂಬಾ! ನಿನ್ನ ಜಗನ್ನಾಟಕದ

ಸೂತ್ರಧಾರವು ಪರಮ ಆಶ್ಚರ್ಯಕರ ವಾದದ್ದು ನೋಡು. ನೀನು ಘೋರ ಸರ್ಪಗಳನ್ನು ಧರಿಸಿದವನಾದರೂ ನಿತ್ಯನಾಗಿಯೇ ವರ್ತಿಸುವಿ. ನೀನು ಕ್ರೂರವಾದ ಕಾಲಕೂಟ ವಿಷವನ್ನು ಭಕ್ಷಿಸಿದವನಾದರೂ ನಿತ್ಯನಾಗಿಯೇ ವರ್ತಿಸುವಿ. ನೀನು ಸ್ಮಶಾನವಾಸಿಯಾದರೂ ಭೂತಾದಿಗಳ ಒಡನಾಡಿಯಾದರೂ ಜಗತ್ ಪವಿತ್ರನಾಗಿರುವಿ. ನೀನು ತಿರುಕನಾಗಿದ್ದರೂ ನಿನ್ನ ಭಕ್ತರಿಗೆ ಬೇಡಿದ ಸಕಲ ಇಷ್ಟಾರ್ಥಗಳನ್ನು ಕೊಟ್ಟಿರುವಿ.

ಆಹಾ ದೇವರ ದೇವಾ, ದಯಾನಿಧಿಯೇ ಪಾವನ ಮೂರ್ತಿಯೇ, ನೀನು ಜಾಣನೆಂಬೆನೆ ಮರುಳರೊಡನೆ ಆಡಿರುವಿ. ಅಜ್ಞಾನಿಯೆಂಬೆನೆ ಸಕಲ ಶಾಸ್ತ್ರಗಳಿಗೆ ಜನಕನಾಗಿರುವಿ. ನೀನು ಸತ್ಕುಲ ಪ್ರಸೂತನೆಂಬೆನೆ, ಚಾಂಡಾಲನಲ್ಲಿ ಉಂಡಿರುವಿ. ನೀನು ಕುಲಹೀನನೆಂಬೆನೆ ಜಗದಾಚಾರ್ಯ ಎಂದೆನಿಸಿಕೊಂಡಿರುವಿ. ನೀನು ದೂರನೆಂಬೆನೆ, ಶಿವಭಕ್ತರ ಹೃದಯದಲ್ಲಿಯೇ ಅಡಗಿರುವಿ. ನೀನು ಸಮೀಪನೆಂಬನೆ! ವಾಚಾಮಗೋಚರ ವಾಗಿರುವಿ. ನೀನು ಕೃಪಣನೆಂಬೆನೆ, ಬ್ರಹ್ಮಾದಿಗಳಿಗೆ ಗಣಪದವಿಯನ್ನೇ ಕೊಟ್ಟಿರುವಿ. ದೇವರ ದೇವ ದಯಾನಿಧಿ, ದೀನೋದ್ಧಾರಕ. ಭಕ್ತವತ್ಸಲ, ಜನನ ಮರಣ ರಹಿತ, ಶಂಕರ ಫಾಹಿಮಾಂ ಫಾಹಿಮಾಂ ಫಾಹಿಮಾಂ ಗುರುವೇ ಕಡೆ ಕಡೆ. . . .

ವೀರಭದ್ರನ ಮಹಿಮೆ :

ವೀರಭದ್ರನ ಉಗ್ರರೂಪ ಹಾಗೂ ಕರುಣಾಮಯಿ

ಆಹಾ ವೀರಾ! ಆಹಾ ಶರಭಾ! ಕಡುಕೋಪದಿಂದ ಜಡೆಗಳನ್ನು ಕಿತ್ತಿಟ್ಟು, ಜಾಡಿಸಿ ಜಾಡಿಸಿ ಆರ್ಭಟಿಸಿ, ಕೊಡು ಕೊಡು ವರವನೆಂದೆನ್ನುತ್ತ, ಬಟ್ಟ ಬಟ್ಟ ಬಯಲೋಳು ಥಟ್ಟನೆ ಎದ್ದು ಬಂದನಯ್ಯಾ. ಆ ನಮ್ಮ ವಿರಶೈವ ಅವತಾರಿಕ ಪುಂಡ. ತನಗೆ ಒಲಿಯದೆ ಮೀರಿ ನಡೆದವರ ಗಂಡ. ಭಯ ಭಕ್ತಿಯಿಂದ ನಡೆದವರಿಗೆ ಕಣ್ಣಲ್ಲಿ ಕಂಡ ವಿದಂಡ. ತ್ರಿಕಾಶಕ್ಕೆ ಪುಂಡ. ಬಪ್ಪರೆ ಸೃಷ್ಟಿಯೊಳ್ ಅಧಿಕವಾದ ರಟ್ಟಿಹಳ್ಳಿ ಕಟುಗ್ರಹ ಕಲಿ ವೀರಭದ್ರಾ, ಅಭಿನವರುದ್ರಾ; ಕಡೆ ಕಡೆ . . .

ಶರಣರ ತತ್ತ್ವ, ಮಹಿಮೆ ಸಾರುವ ವಡಬುಗಳು:

ವೀರಘಂಟಿ ಮಡಿವಾಳ ಮಾಚಯ್ಯ

ಆಹಾ ವೀರಾ ಆಹಾ ಶರಭಾ ದುಷ್ಟ ದಮನ ಶಿಷ್ಟ ರಕ್ಷಣ. ವಿಚಕ್ಷಣ ಪೂರ್ಣ ಪ್ರಜ್ಞಾವತಾರಿ. ದೀಕ್ಷಾಧಾರಿಯಾಗಿ ಶಿವಭಕ್ತರ ಕಲ್ಯಾಣವನ್ನೇ ಬಯಸಿ, ತುಂಬಿದ ಹೊಳೆಯಲ್ಲಿ ಧುಮುಕಿ ಕಲಾಣಕ್ಕೆ ಬಂದು ನೆಲೆ ನಿಂತು, ಕಾಯಕವೇ ಕೈಲಾಸ ಎಂದು ನಂಬಿ ನಡೆದವರ ಆಳಾಗಿ, ಅವರ ಉಡಿಗೆ ತೊಡಿಗೆಗಳನ್ನು ತೊಳೆದು ಮಡಿಮಾಡಿಕೊಡುವ ಕಾಯಕದಲ್ಲಿ ನಿರತರಾಗಿ, ಹಿಂಡನಗಲಿದ ಕೇಸರಿಯಂತೆ, ಪುಂಡಪೋಕರಿಗಳನ್ನು ಸದೆಬಡಿಯುತ್ತಾ, ಬಿಜ್ಜಳನ ಆಕ್ರೋಶಕ್ಕೆ ಎದುರಾಗಿ ಮದಿಸಿದ ಮದ್ದಾನೆಯನ್ನು ಮರ್ದಿಸಿದ ಮಹಾವೀರ, ಶ್ರೀ ವೀರಭದ್ರನ ಅಪರವತಾರಿ ಶ್ರೀ ವೀರಘಂಟಿ ಮಡಿವಾಳ ಮಾಚಿದೇವ ತಂದೆಯೇ ಶರಣು ಶರಣು. ತಂದೆಯೇ ತ್ರಿಕಾಲ ಶರಣು. ಕಡೆ ಕಡೆ.. . . .

ಶರಣನು ಹೇಗಿರಬೆಕು :

ಆಹಾ ವೀರಾ! ಆಹಾ ಶರಭಾ! ನಮ್ಮ ಶ್ರೀ ವೀರಭದ್ರ ದೇವರಿಗೆ ತನುಮನ ಧನಗಳನ್ನರ್ಪಿಸಿ, ನಿಜ ಭಕ್ತಿಯಿಂದ ಗುಗ್ಗಳವನ್ನಾಡುವ ಹಿಗ್ಗಿನ ಮರುಳ ಮಾನವರೇ ವೀರಶೈವರೇ ಕೇಳಿರಿ! ಶರಣರಿಗೆ ಅಹಂಕಾರ ಸಲ್ಲದಯ್ಯಾ. ಯಾರು ಶರಣ ಸ್ಥಲದ ಮರ್ಮವನ್ನರಿಯದೆ ನಾನು ಶರಣ ತಾನು ಶರಣ ಎಂದು ಹೊಗಳಿಕೊಳ್ಳುವವರ ಮುಖ ನೋಡಲಾಗದು. ಅದೇನು ಕಾರಣವೆಂದರೆ ತಾವು ಶರಣರಾದೊಡೆ ತಮ್ಮ ಚಿತ್ತದ ಕೊನೆಯಲ್ಲಿ ಮುಸುಕಿದ ಕತ್ತಲೆಯ ಕಳೆಯಬೇಕು. ಅಷ್ಟಮದಗಳನ್ನು ಅಳಿಯಬೇಕು. ಇಷ್ಟಲಿಂಗದತ್ತ ಮನವ ಸೆಳೆಯಬೇಕು. ನಿತ್ಯ ಅನಿತ್ಯಗಳ ತತ್ವಗಳ ವಿಚಾರಕ್ಕೆ ಇಳಿಯಬೇಕು. ಇಂತಹುದನ್ನು ಅರಿಯದೇ ವಿಷಯಕ್ಕೆ ತುತ್ತಾಗಿ, ಕತ್ತಲೆಗೆ ಮರೆಯಾಗಿ, ಮುಕ್ತಿಯ ಹೊಂದುವದು ತಪ್ಪಿಸಿಕೊಂಡಡೆ ಎಂತಯ್ಯಾ, ಮಾತಿನಲ್ಲಿ ಶುದ್ಧವಿಲ್ಲದವರು, ಮನದಲ್ಲಿ ನಿಜವಿಲ್ಲದವರು, ಇಂದ್ರಿಯಗಳಿಗೆ ಅಧೀನರಾದವರು, ಬಣ್ಣದ ಮಾತಿನ ಬಾಯಿಬಡಕರು, ಭವದುಃಖಿಗಳು ಇವರೆಲ್ಲಾ ದೊಡ್ಡ ಶರಣರೇ? ಸತ್ತವರೆಲ್ಲ ಸ್ವರ್ಗಕ್ಕೆ ಹೋಗುವರೇ? ಖಡ್ಗ ಹಿಡಿದವರೆಲ್ಲ ಶೂರರೇ? ಲಿಂಗಧರಿಸಿದವರೆಲ್ಲ ವೀರಶೈವರೇ? ಅಲ್ಲಲ್ಲ! ಕಪಿಯ ಕೈಯಲ್ಲಿ ರತ್ನ ಕೊಟ್ಟರೆ ಅದು ಕಡಿದು ಚೆಲ್ಲುವದಲ್ಲದೆ ಆ ರತ್ನದ ಬೆಳಕನ್ನು ಅದು ಅರಿಯುವದೆ? ಇಂತೀ ದೃಷ್ಟಾಂತದಂತೆ ಲಿಂಗ ಧರಿಸಿದೊಡೆನು? ಆ ಲಿಂಗದ ಕಳೆಯನರಿಯದಿರ್ದೊಡೆ ಅದು ಧರೆಯ ಮೇಲಿನ ಕಲ್ಲಿನಂತೆ ಕಾಣಾ ಶ್ರೀರುದ್ರದೇವಾ ಭವಾರಣ್ಯದೇವಾ ಕಡೆಕಡೆ...

ಯಾವುದನ್ನು ಯಾರು ಬಲ್ಲರು?

ಕ್ಷೀರದ ರುಚಿಯ ಹಂಸ ಬಲ್ಲದಲ್ಲದೆ ನೀರೊಳಗಿರ್ಪ ನೀರಕೋಳಿ ಯತ್ತಬಲ್ಲದಯ್ಯಾ. ಕಬ್ಬಿನ ಸ್ವಾದ ಮದಗಜ ಬಲ್ಲದಲ್ಲದೆ ಸೋಗೆ ತಿಂಬುವ ಕುರಿಯತ್ತ ಬಲ್ಲದಯ್ಯಾ. ಪುಷ್ಪದ ಪರಿಮಳವ ಭ್ರಮರ ಬಲ್ಲದಲ್ಲದೆ ಮರ ಕಡಿಯುವ ಗುಂಗೇಹುಳವೆತ್ತ ಬಲ್ಲದಯ್ಯಾ. ಆದಿಯ ಸ್ಥಳ ಕುಲದ ನಿರ್ಣಯವ ಅನಾದಿಶರಣ ಬಲ್ಲನಲ್ಲದೆ ಈ ಲೋಕದ ಗಾದಿಯ ಮನುಜರು ಯತ್ತ ಬಲ್ಲರಯ್ಯಾ. ಪಿಂಡದೊಳಗೆ ಪ್ರಾಣವಿರ್ಪುದನೆಲ್ಲರೂ ಬಲ್ಲರು, ಪ್ರಾಣದೊಳಗೆ ಶಬ್ದವಿರ್ಪುದನೆಲ್ಲರೂ ಬಲ್ಲರಲ್ಲದೆ ಶಬ್ದದೊಳಗೆ ನಾದವಿರ್ಪುದನ್ಯಾರು ಅರಿಯರಿಲ್ಲ. ಶಬ್ದದೊಳಗೆ ನಾದವಿರ್ಪುದನ್ನೆಲ್ಲರೂ ಬಲ್ಲರಲ್ಲದೇ ನಾದದೊಳಗೆ ಮಂತ್ರವಿರ್ಪುದನ್ಯಾರು ಅರಿಯರಿಲ್ಲಾ. ನಾದದೊಳಗೆ ಮಂತ್ರ ವಿರ್ಪುದನ್ನೆಲ್ಲರೂ ಬಲ್ಲರಲ್ಲದೆ ಮಂತ್ರದೊಳಗೆ ಶಿವನಿರ್ಪುದನ್ಯಾರು ಅರಿಯರಲ್ಲಾ. ಮಂತ್ರದೊಳಗೆ ಶಿವನಿರ್ಪುದನೆಲ್ಲರೂ ಬಲ್ಲರಲ್ಲದೆ ಆ ಶಿವನ ಕೂಡುವ ಅವಿರಳ ಸಮರಸಮಂ ಯಾರೂ ಅರಿಯರಿಲ್ಲಾ. ವೇದ ಶಾಸ್ತ್ರ ಆಗಮ ಪುರಾಣ ತರ್ಕ ವ್ಯಾಕರಣ ಇತಿಹಾಸಗಳನ್ನೋದಿ ಕೇಳಿ ಹೇಳುವಾತ ಜಾಣನೇ? ಅಲ್ಲಲ್ಲಾ. ಜಾತಿಗೊಂದು ಮಾತು ಕಲಿತು ಸರ್ವರಿಗೂ ಹೇಳುವಾತ ಜಾಣನೇ ಅಲ್ಲಲ್ಲಾ. ಮತ್ಯಾವನು ಜಾಣನೆಂದರೆ ಮಂದಮತಿಯೆಂಬ ಕತ್ತಲೆಯ ಕಳೆದು, ತಥ್ಯಮಿಥ್ಯ ರಾಗದ್ವೇಷಗಳ ಅಳಿದು, ನಿತ್ಯಲಿಂಗದಲ್ಲಿ ಚಿತ್ರವಡಗಿರ್ಪ ಚಿನ್ಮಯ ಶರಣನೇ ಜಾಣನಯ್ಯಾ. ದೇವಾ ಕರೆಕಾಳಿಂಗ ರುದ್ರ. ಶಿವನ ಮೋಹದ ಕುಮಾರ. ಶ್ರೀ ವೀರಭದ್ರ ಕಡೆ ಕಡೆ . .

. * * *

ಒಡಬುಗಳ ಸಂಗ್ರಹಗಳು :

೨೦೦೨ (೩ನೇ ಮುದ್ರಣ) : ಶ್ರೀ ವೀರಭದ್ರದೇವರ ವಡಪುಗಳು, (ಸಂ) ಶಂಕ್ರಪ್ಪ ಬಸಪ್ಪ ತೊಂಡಿಹಾಳ, –ಪಾರು ಪ್ರಕಾಶನ, ಸ್ಟೇಶನ್ ರೋಡ್, ಗದಗ–೫೮೨ ೧೦೧.

ಸಹಾಯಕ ಗ್ರಂಥಗಳು :

೧೯೭೬ : ಕನ್ನಡ ಸಾವರದ ಒಗಟುಗಳು, (ಸಂ) ಡಾ. ಸೋಮಶೇಖರ ಇಮ್ರಾಪೂರ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೮ : ಗಂಡಸರ ಜನಪದ ಹಾಡುಗಳು, (ಸಂ) ನಿಂಗಣ್ಣ ಸಣ್ಣಕ್ಕಿ, –ಸಮಾಜ ಪುಸ್ತಕಾಲಂಯ, ಧಾರವಾಡ.

೧೯೭೮ : ಜಾನಪದ ಸಂಕಲನ, ಡಾ. ಬಸವರಾಜ ನೆಲ್ಲಿಸರ್, –ಯಕ್ಷಪ್ರಕಾಶನ, ಮೈಸೂರು–೯.

೨೦೧೨ : ಬೀದರ ಜಿಲ್ಲೆಯ ಜಾನಪದ ಸೊಗಡು, (ಸಂ) ದೇಶಾಂಶ ಹುಡಗಿ, ಚಂದ್ರಪ್ಪ ಹೆಬ್ಬಾಳಕರ, –ಶೋಭಾ ಕಲೆ, ಸಾಹಿತ್ಯ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ(ರಿ), ವಾಲ್ದೊಡ್ಡಿ, ತಾ.ಜಿ.ಬೀದರ.

* * *

೬. ಜನಪದ ಮಕ್ಕಳ ಹಾಡುಗಳು

೧. ಜನಪದ ಮಕ್ಕಳಾಟದ ಹಾಡುಗಳು :

ಜನಪದ ಸಾಹಿತ್ಯದಲ್ಲಿ 'ಮಕ್ಕಳ ಜನಪದ ಸಾಹಿತ್ಯ'ದ ಭಾಗ ದೊಡ್ಡದಿದೆ. ಕಥೆ, ಒಗಟು, ಲಾಲಿ, ಮಕ್ಕಳಾಟದ ಹಾಡುಗಳು, ಆಣಿಪೀಣಿ ಹಾಡುಗಳು– ಈ ಪ್ರಕಾರಗಳಂತೂ ಅವರಿಗಾಗಿಯೇ ಹುಟ್ಟಿದವು ಎನಿಸುತ್ತದೆ. ಕಥೆಯಲ್ಲಿ ಸ್ವಲ್ಪಭಾಗ ಹಿರಿಯರಿಗೆ ಸಂಬಂಧಿಸಿದವು ಇರಬಹುದು. ಮಕ್ಕಳಿಗೆ ಸಂಬಂಧಿಸಿದ ಸಾಹಿತ್ಯ ಪ್ರಕಾರ ದೊಡ್ಡ ಪ್ರಮಾಣದಲ್ಲಿದೆ. ಮಗುವಿನ ಬೆಳವಣಿಗೆಗೆ ತಕ್ಕಂತೆ ಈ ಸಾಹಿತ್ಯದ ಸ್ವರೂಪ ಬೆಳೆಯುತ್ತ, ವಿಸ್ತಾರವಾಗುತ್ತ ಹೋಗುವುದನ್ನು ಕಾಣುತ್ತೇವೆ. ಮಗು ಹುಟ್ಟಿದ ತಿಂಗಳೊಪ್ಪತ್ತಿನಲ್ಲಿ ಲಾಲಿ ಹಾಡು ಅದರ ಕಿವಿಗೆ ಬೀಳಲು ಪ್ರಾರಂಭವಾಗುತ್ತದೆ. ಮಗುವಿನ ಜೊತೆಗೆ ತಾಯಿ ಆಟವಾಡಲು ತೊಡಗಿದರೆ ಅಲ್ಲಿ ಮತ್ತೆ ಮಕ್ಕಳ ಜೊತೆ ಆಟವಾಡುವ ಹಾಡುಗಳನ್ನು ಅನ್ನಲು ಪ್ರಾರಂಭಿಸುತ್ತಾಳೆ. ಸುಮಾರು ಎರಡು ವರ್ಷಗಳಾಗುತ್ತಲೇ ಕಥೆಗಳು ಕಾಲಿಡುತ್ತವೆ. ಜೊತೆಗೆ ಒಗಟುಗಳೂ ಹಣಿಕಿಕ್ಕಿಕೊಳ್ಳುತ್ತವೆ. ವರ್ಷಗಳು ಕಳೆದಂತೆ ಆಟದ ಹಾಡುಗಳು ಪ್ರಯೋಗಗೊಳ್ಳುತ್ತವೆ. ಈ ಪ್ರಕ್ರಿಯೆಗೆ ಸಹಾಯಕವಾಗುವ ಲಯಬದ್ಧವಾದ ಭಾಷಾ ಸೃಷ್ಟಿಗಳನ್ನು ಮೌಖಿಕ ಪರಂಪರೆಯಲ್ಲಿ 'ಜನಪದ ಮಕ್ಕಳ ಹಾಡುಗಳು', 'ಚುಕ್ಕೋಳ ಪದಗಳು', 'ಶಿಶು ಪ್ರಾಸಗಳು' ಎಂದು ಮುಂತಾಗಿ ಗುರುತಿಸುವ ವಾಡಿಕೆ ಕನ್ನಡ ಜನಪದ ಸಾಹಿತ್ಯದಲ್ಲಿ ರೂಢಿಗೆ ಬಂದಿದೆ.

ಮಗುವಿನ ಕಿವಿಗೆ ಮೊದಲು ಬೀಳಲು ತೊಡಗುವ ಲಾಲಿ ಅದಕ್ಕೆ ತಿಳಿಯುತ್ತದೆಂದು ಅರ್ಥವಲ್ಲ. ಆದರೆ ಒಂದು ಲಯಬದ್ಧವಾದ ಧ್ವನಿ ಕೇಳಲು ಮಗುವಿಗೆ ಆಕರ್ಶಕ ಎನಿಸುತ್ತದೆ. ಶಬ್ದದೊಂದಿಗೆ ಸಂಗೀತದ ಒಂದು ಎಳೆ ಕೂಡಿಕೊಂಡು, ಅದು ಹಸುಗೂಸಿನ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಆ ಮಗುವಿನ ಎದುರಿಗೆ ಅರ್ಥಾತ್ ಮಗುವನ್ನು ಶ್ರೋತೃವಾಗಿಸಿಕೊಂಡು ಮೊದಲು ಪ್ರಯೋಗವಾಗುವುವು ಹಾಡುಗಳೆ. ಈ ಹಾಡುಗಳನ್ನು ಲಾಲಿಗಳು ಎಂದು ಕರೆಯುವ ವಾಡಿಕೆ ಕರ್ನಾಟಕದಲ್ಲಿದೆ.

ತಾಯಿ ತನ್ನ ಮಗುವಿಗೆ ಎರೆದು, ಅಳುವ ಮಗುವನ್ನು ತೊಟ್ಟಿಲಿಗೆ ಹಾಕಿ, ಮಗು ಕೂಡಲೇ ಕಿರಿಕಿರಿ ಕಳೆದುಕೊಂಡು ನಿದ್ರೆ ಹೋಗಬೇಕೆಂದು ಹಾಡಲು ತೊಡಗುತ್ತಾಳೆ.

ಕೆಲದಿನ ತಾಯಿ ಬಾಣಂತಿಯಾಗಿರುವವರೆಗೆ ಈ ಕೆಲಸ ಮೊದಲಾಗುವುದು ಅಜ್ಜಿಯಿಂದ. ನಂತರ ಈ ಜವಾಬ್ದಾರಿ ತಾಯಿಗೆ ವರ್ಗವಾಗುತ್ತದೆ. ಮಗುವಿನ ಮಲಗುವ ವೇಳೆಯಾದಾಗ, ಕಿರಿಕಿರಿ ಮಾಡುವಾಗ ತೊಟ್ಟಿಲಲ್ಲಿ ಹಾಕಿ, ತಾಯಿ ಲಾಲಿ ಹಾಡಲು ತೊಡಗುತ್ತಾಳೆ. ಈ ಲಾಲಿಗಳ ಧಾಟಿ ತೊಟ್ಟಿಲಿನ ತೂಗುವಿಕೆಯ ಲಯವನ್ನು ಅವಲಂಬಿಸಿರುತ್ತದೆ. ಮಗುವಿಗೆ ಹಾಡು ತಿಳಿಯಲಿ ಬಿಡಲಿ, ಹಾಡಿನಲ್ಲಿ ಮಗುವಿನ ವರ್ಣನೆಯೇ ಇರುತ್ತದೆ. ಇದು ಕೇಳುವ ಮಗುವಿಗೆ ಸಂಗೀತದ ಪ್ರಭಾವ, ಹಾಡುವ ತಾಯಿಗೆ ತನ್ನ ಕೂಸನ್ನು ತಾನು ವರ್ಣಿಸುತ್ತಿರುವ ಪ್ರೀತಿ ಅಭಿಮಾನಗಳು ಇಲ್ಲಿ ಎದ್ದುಕಾಣುತ್ತವೆ.

ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿಹುಬ್ಬು ಬೇವಿನೆಸಳಂಗ । ಕಣ್ಣೋಟ
ಶಿವನ ಕೈಯಲಗು ಹೊಳದಂಗ

ಇಲ್ಲಿಂದ, ಹೀಗೆ ಪ್ರಾರಂಭವಾಗುತ್ತದೆ ಮಗುವಿನ ವರ್ಣನೆ. ಮಗು ಮತ್ತು ತಾಯಿಯ ಪರಸ್ಪರ ವಾತ್ಸಲ್ಯ-ಮಮತೆ ಈ ಲಾಲಿಗಳಿಂದ ಬೆಳೆಯುತ್ತ ಹೋಗುತ್ತದೆ. ಲಾಲಿ ಮಗುವನ್ನು ಕುರಿತ ಸಾಹಿತ್ಯ. ಹೀಗಾಗಿ ಲಾಲಿ ಪ್ರಕಾರ 'ತಾಯಿಯ ಸಾಹಿತ್ಯ' ಎನಿಸುತ್ತದೆ. ಈ ಹಾಡಿನ ಪ್ರದರ್ಶನಕ್ಕೆ ಕಾರಣ ಮಗುವೇ ಆಗುತ್ತದೆ. ಹೀಗಾಗಿ ತಾಯಿಯ ಸಾಹಿತ್ಯದ ಪಾಲಿಗೆ ಸೇರುವ ಲಾಲಿ, ಕೂಸಿಗಾಗಿ ಪ್ರಯೋಗವಾಗುವ ಮೊದಲನೇ ಪ್ರಕಾರವೆನಿಸುತ್ತದೆ.

ಲಾಲಿಯ ಹಾಡಿದರ ಆಲಿಸಿ ಕೇಳ್ಯಾನ
ತಾಯಿ ಹಂಬಲ ಮರತಾನ । ಕಂದಯ್ಯ
ತೋಳ ಬೇಡ್ಯಾನ ತಲೆಗಿಂಬ

ಇದು ಲಾಲಿಯ ಪರಿಣಾಮವನ್ನು ಹೇಳುವ ತ್ರಿಪದಿಯಾಗಿದೆ. ಕೂಸು ಎರಡ್ಮೂರು ತಿಂಗಳು ಬೆಳೆಯಬೇಕು. ಅದರ ಅಲ್ಲಾಡುವ ಗೋಣು ನಿಲ್ಲಬೇಕು. ಇಲ್ಲಿಂದ ಪ್ರಾರಂಭ ವಾಗುತ್ತದೆ ಮಗುವಿನ ಚಲ್ಲಾಟ. ಈ ಕೂಸಿನೊಂದಿಗೆ ಪ್ರಾರಂಭವಾಗುತ್ತದೆ ತಾಯಿಯ ಸಂಬಂಧ ಬೆಸೆಯುವ ಭಾಷಾಪ್ರಯೋಗ. **ಕೂಸಿಗೆ ಭಾಷೆಯ ಉಣಿಸುವಿಕೆಗಾಗಿ (ಇನ್‌ಪುಟ್) ಬಳಸುವ ಸಣ್ಣ ಸಣ್ಣ 'ಪ್ರಾಸಬದ್ಧ ನುಡಿಗಳು' ನಿರ್ಮಾಣವಾಗುತ್ತವೆ ಮತ್ತು ಬಳಕೆಯಾಗುತ್ತವೆ.** ಲಾಲಿಗಳಂತೆ ಈ 'ಪ್ರಾಸಬದ್ಧ ನುಡಿಗಳು', 'ಭಾಷಾ ತುಣುಕುಗಳು' ಮಗುವಿಗೆ ತಿಳಿಯುವದಿಲ್ಲವಾದರೂ ಇವನ್ನು ಮಕ್ಕಳ ಸಾಹಿತ್ಯದಲ್ಲಿಯೇ ಗಣಿಸಲಾಗುತ್ತದೆ. ಏಕೆಂದರೆ ಆ ಭಾಷೆ ಮಗುವಿಗಾಗಿಯೇ ಸೃಷ್ಟಿಸಲಾಗುತ್ತದೆ; ಮಗುವಿಗೆ ತಿಳಿಯಲಿ ಎಂಬ ಉದ್ದೇಶದಿಂದಲೇ ವಿಶೇಷವಾಗಿ ಬಳಕೆಯಾಗುತ್ತದೆ. ತಾಯಿ ಬಳಸುವ ಈ ಭಾಷಾ ಪ್ರಯೋಗಗಳನ್ನು ಮಗುವಿನ ಜೊತೆಗೆ 'ಆಡುವ ಆಟ' ಎಂದೇ ಗಣಿಸಬೇಕು. ಅದಕ್ಕಾಗಿ **'ಮಕ್ಕಳಾಟದ ಹಾಡುಗಳು'** ಎಂದರೆ ಮಗುವಿನ ಜೊತೆಗೆ ತಾಯಿ (ಹಿರಿಯರು) ಆಟವಾಡುವಾಗ ಪ್ರಯೋಗವಾಗುವ ಹಾಡುಗಳೆಂದೂ, ನಂತರ ಮಕ್ಕಳು ಸೇರಿ ಆಟವಾಡುವಾಗ ಬಳಸುವ 'ಪ್ರಾಸಬದ್ಧ ನುಡಿಗಳು' ಎಂದೂ ಇಲ್ಲಿ ಭಾವಿಸಿಕೊಳ್ಳಬೇಕು.

ಇಂತಹ 'ಮಕ್ಕಳಾಟದ ಹಾಡುಗಳು' ಪರಿಪೂರ್ಣವಾದ ಹಾಡುಗಳಲ್ಲ. ಪದ್ಯದ

ಎಲ್ಲ ಗುಣಗಳನ್ನು ಹೊಂದಿದ, ಹಾಡಲು ಬರದ, ಒಂದು ರೀತಿಯಿಂದ ರಾಗಬದ್ಧವಾಗಿ ಹೇಳುವ ಅಥವಾ ಅನ್ನುವ ಹಾಡುಗಳು ಇವಾಗಿವೆ. ಹೀಗಾಗಿ ಈ ಮಕ್ಕಳ ಹಾಡುಗಳನ್ನು 'ಅನ್ನುವ ಪ್ರಕಾರ' ಎಂದು ಗುರುತಿಸಬಹುದಾಗಿದೆ. ಇವು ಹಾಡಲು ಬಾರದ ಭಾಷಾ ಲಯಗಳು; ಅದಕ್ಕಾಗಿ ಇವು ಅನ್ನುವ ಹಾಡುಗಳು. ಹಾಡುಗಳು ಎಂದಾಗ ನಮಗೆ ಗೊತ್ತಿರುವ ರಚನೆಯ ಮಾದರಿಗಳೇನಾದರೂ ಇಲ್ಲಿವೆಯೇ ಎಂದರೆ ಹಾಗೂ ಇಲ್ಲ. ಕೆಲವು ಒಂದು ಸಾಲಿನವು, ಕೆಲವು ಎರಡು ಸಾಲಿನವು. ಮೂರು ನಾಲ್ಕು ಸಾಲುಗಳಿಂದ ಮತ್ತೆ ಹೆಚ್ಚಿನ ಸಾಲುಗಳವರೆಗೆ ಇವುಗಳ ರಚನೆ ಕಾಣುತ್ತದೆ. ರಾಗಬದ್ಧವಾಗಿ ಒಂದೇ ಸವನೇ ಹೇಳಿ ಮುಗಿಸುವಂತಹ ಅಭಿವ್ಯಕ್ತಿ ವಿಧಾನ ಇಲ್ಲಿ ಕಾಣುತ್ತದೆ. ಹೀಗಾಗಿ ಮಕ್ಕಳ ಹಾಡುಗಳ ರಚನೆಯನ್ನು ಗಮನಿಸಿ ಇವುಗಳನ್ನು ಹಾಡುಗಳು ಎನ್ನುವ ಬದಲಾಗಿ 'ನುಡಿ'ಗಳು ಎನ್ನಬಹುದಾಗಿದೆ. 'ಅನ್ನುವ' ಬಗೆಯ 'ನುಡಿಗಳು' ಇವು. ಅದಕ್ಕಾಗಿ 'ಮಕ್ಕಳ ನುಡಿಗಳು' ಎಂದೂ ಇವುಗಳನ್ನು ಕರೆಯಬಹುದಾಗಿದೆ.

ಮಗುವಿಗೆ ಭಾಷೆಯನ್ನು ಉಣಿಸುವ, ಅನುಭವನ್ನು ಮಗುವಿನ ಗ್ರಹಣ ಕೋಶಕ್ಕೆ ರವಾನಿಸುವ ಬಹುಮಹತ್ವದ ಕೆಲಸವನ್ನು ಈ ನುಡಿಗಳು ಮಾಡುತ್ತವೆ. ಈ ಲಯಬದ್ಧವಾದ ನುಡಿಗಳ ಭಾಷೆ ವಿಶೇಷವಾಗಿರುತ್ತದೆ. ಪ್ರಾಸ ಇಲ್ಲಿಯ ಲಯದಲ್ಲಿ ತನ್ನ ಮೇಲುಗೈಯನ್ನು ಸಾಧಿಸುತ್ತದೆ. ಮಕ್ಕಳಿಗೆ ಪ್ರಾಸಬದ್ಧವಾದ ಮಾತುಗಳು-ನುಡಿಗಳು-ಸಾಲುಗಳು ಆಕರ್ಷಕವೆನಿಸುತ್ತವೆ. ಮಕ್ಕಳ ಲಕ್ಷ ಸೆಳೆಯುತ್ತವೆ.

ಮಕ್ಕಳ ಜೊತೆಗಿನ ಸಂವಹನದಲ್ಲಿ ಪ್ರಮುಖ ಪಾತ್ರ ವಹಿಸುವ ಇಂತಹ ವಿಶೇಷ ಭಾಷೆಯಲ್ಲಿ ಈ ನುಡಿಗಳ ರಚನೆಯಾದರೆ, ಸಾಮಾನ್ಯವಾಗಿ ಮಗುವಿನ ಜೊತೆಗೆ ವ್ಯವಹರಿಸುವ ಭಾಷೆಯ ಪದಪ್ರಯೋಗಗಳಲ್ಲೂ ವಿಶೇಷತೆ ಕಾಣುತ್ತದೆ. ನೀರಿಗೆ ಉಕ್ಕಾ, ಅನ್ನಕ್ಕೆ ಮಮ್ಮು, ರೊಟ್ಟಿಗೆ ಅಚ್ಚಿ ಮುಂತಾಗಿ ದೊಡ್ಡವರು ಬಳಸುವ ಪದಗಳಿಗಿಂತ ಬೇರೆಯದೇ ಆದ, ಮಗುವಿನ ತೊದಲು ನುಡಿಗಳನ್ನು ಅನುಕರಿಸಿ ಉಚ್ಚರಿಸುವ, ಮಗುವಿಗೆ ಇಷ್ಟವೆನಿಸುವ ಒಂದು ಭಾಷಾ ಪ್ರಯೋಗ ಇಲ್ಲಿ ಬಳಕೆಯಾಗುತ್ತಿರುತ್ತದೆ.

ಮಗುವಿನ ಜೊತೆಗಿನ ಈ ಸಂವಹನ ಕ್ರಿಯೆಯಲ್ಲಿ ಮೌಖಿಕವಾಗಿ ನೈಸರ್ಗಿಕವಾದ ಪಾಠಗಳು ನಿರ್ಮಾಣವಾಗುವುದನ್ನು ಗಮನಿಸಬೇಕು. ಮಗುವಿನ ಜೊತೆಗಿನ ಈ ಸ್ಪಂಧನ ಕನಿಷ್ಠ ಮೂರ್‍ನಾಲ್ಕು ವರ್ಷಗಳವರೆಗಾದರು ನಡೆಯುತ್ತದೆ. ಇಂದಿನ ಕಾಲದಲ್ಲಿ ಬಹಳ ಮುಖ್ಯವಾಗಿ ಮಗುವಿಗೆ ಈ ವಯಸ್ಸಿನಲ್ಲಿ ಅನುಭವವನ್ನು ಉಣಿಸುವ ಈ ಕ್ರಿಯೆಯೇ ತಪ್ಪಿಹೋಗುತ್ತಿದೆ. ಮಗುವನ್ನು, ಅಲ್ಲ ಕೂಸನ್ನು ಇನ್ನೊಬ್ಬರಿಗೆ ಒಪ್ಪಿಸಿ, ತಾಯಿ ದುಡಿಯಲು ಹೋಗುವ ಸಂದರ್ಭಗಳು ಸೃಷ್ಟಿಯಾಗಿವೆ. ಇದರಿಂದ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಕೊರತೆಗಳು ಕಾಣುವುದು ಸಹಜವಾಗಿದೆ.

ಕೂಸಿನ ಬೆಳವಣಿಗೆಯ ಹಂತಗಳನ್ನು ಗಮನಿಸಿ, ಮಕ್ಕಳ ಹಾಡುಗಳನ್ನು ವಿಭಾಗಿಸಿಕೊಳ್ಳಬಹುದಾಗಿದೆ. ೧. ಮಗುವಿಗೆ ಮಾತು ಬಾರದ ಹಂತದಲ್ಲಿ, ಅಂದಾಜು ಎರಡು ವರ್ಷಗಳವರೆಗೆ ತಾಯಿ ಪ್ರಯೋಗಿಸುವ ನುಡಿಗಳು. ೨. ಮಗು ಮಾತನಾಡಲು

ತೊಡಗಿದ ನಂತರದ ಎರಡರಿಂದ ನಾಲ್ಕು ವರ್ಷಗಳವರೆಗಿನ ನುಡಿಗಳು. ೩. ನಾಲ್ಕರಿಂದ ಎಂಟು ವರ್ಷಗಳವರೆಗಿನ ಓರಗೆಯ ಗಂಡು–ಹೆಣ್ಣು ಮಕ್ಕಳು ಸೇರಿ ಆಟವಾಡಲು ಬಳಸುವ ನುಡಿಗಳು. ೪. ಪ್ರತ್ಯೇಕವಾಗಿ ೮ ರಿಂದ ೧೪ ವರ್ಷಗಳ ವರೆಗಿನ ಹುಡಗಿಯರು ಬಳಸುವ ಆಟ–ಪಾಠಗಳು, ೫. ಪ್ರತ್ಯೇಕವಾಗಿ ೮ ರಿಂದ ೧೪ ವರ್ಷಗಳವರೆಗಿನ ಹುಡುಗರು ಬಳಸುವ ಆಟ–ಪಾಠಗಳು. ಇನ್ನು ಮುಂದುವರೆದು ವಿಷಯವನ್ನನುಸರಿಸಿ ೧. ವಿಡಂಬನ ನುಡಿಗಳು, ೨. ಕಥಾ ಮಾದರಿ ನುಡಿಗಳು–ಎಂಬ ಎರಡು ಪ್ರಕಾರಗಳನ್ನು ಗುರುತಿಸಿಕೊಳ್ಳ ಬಹುದಾಗಿದೆ. ವಿಷಯವನ್ನು ಗಮನಿಸಿ ಇನ್ನೂ ಹೆಚ್ಚಿನ ಪ್ರಕಾರಗಳನ್ನು ಗುರುತಿಸಿಕೊಳ್ಳಲು ಸಾಧ್ಯವಿದೆ. ಮೇಲಿನ ಒಂದು ಮತ್ತು ಎರಡನೇ ಪ್ರಕಾರಗಳು ಒಳಾಂಗಣದ ಪ್ರಕಾರಗಳು. ತಾಯಿ(ಹಿರಿಯರು) ಜೊತೆಗೆ ಮಗು ಆಡುತ್ತದೆ; ಅಥವಾ ತಾಯಿ ಮಗುವನ್ನು ಆಡಿಸುತ್ತಿರುತ್ತಾಳೆ. ೩–೫ರ ವರೆಗಿನ ಪ್ರಕಾರಗಳು ಮಕ್ಕಳು ಜೊತೆಯಾಗಿ ಸೇರಿ ಆಡುವ ಹೊರಾಂಗಣದ ಆಟಗಳಾಗಿವೆ. ಇಲ್ಲಿ ಹಿರಿಯರು ಪ್ರೇಕ್ಷಕರಾಗಿರುತ್ತಾರೆ.

೧. ಮಗುವಿಗೆ ಮಾತು ಬಾರದ ಹಂತದಲ್ಲಿ, ಎರಡು ವರ್ಷಗಳವರೆಗೆ ತಾಯಿ ಪ್ರಯೋಗಿಸುವ ನುಡಿಗಳು :

ಈ ಹಂತದಲ್ಲಿ ಮಗುವಿನ ಚಟುವಟಿಕೆಗಳನ್ನು ತಾಯಿ ಗಮನವಿಟ್ಟು ನುಡಿಗಳನ್ನು ಪ್ರಯೋಗಿಸುತ್ತಿರುತ್ತಾಳೆ. ಮಗುವಿಗೆ ಸಂತೋಷಗೊಳಿಸುವ, ಮಗುವಿಗೆ ನಗಲು ಕಲಿಸುವ ಉದ್ದೇಶವು ಪ್ರಾರಂಭದ ನುಡಿಗಳ ಹಿಂದೆ ಇರುತ್ತದೆ. ಮಗುವನ್ನು ತೊಡೆಯ ಮೇಲೆ ಅಂಗಾತ ಹಾಕಿಕೊಂಡು, ಅದರ ಹೊಟ್ಟೆಯ ಮೇಲೆ ಮೆಲ್ಲಗೆ ಬೆರಳಾಡಿಸುತ್ತ, ಅದರ ಜೊತೆಗೆ ಭಾಷಾ ಪ್ರಯೋಗವೂ ನಡೆಯುತ್ತದೆ. 'ಕುಟ್ ಕುಟ್ ಕುರ್‌ಽ' ಎನ್ನುತ್ತ, ಕೂಸಿನ ಹೊಟ್ಟೆಯ ಮೇಲೆ ಬೆರಳಾಡಿಸುವ ಲಯವು ಅಲ್ಲಿ ಪ್ರಯೋಗವಾಗುವ ಲಯಬದ್ಧವಾದ ಭಾಷಾಪ್ರಯೋಗವನ್ನು ನಿಯಂತ್ರಿಸುತ್ತದೆ. ಮಗು ಕಚಗುಳಿಗೆ ಸ್ಪಂಧಿಸುತ್ತ, ತಾಯಿಯ ಮುಖದ ಹಾವಭಾವಕ್ಕೂ ತಾಯಿಯಿಂದ ಉಚ್ಚರಿಸಲ್ಪಡುತ್ತಿರುವ ಆ ಭಾಷಾಪ್ರಯೋಗಕ್ಕೂ ಸ್ಪಂಧಿಸುತ್ತದೆ. ತಾಯಿಯು ತಾನೂ ನಕ್ಕುನಕ್ಕು ಗೋಣು ಹಾಕಿ, ಮಗುವಿನ ಲಕ್ಷ ಸೆಳೆದು, ಅದೂ ನಗುವಂತೆ ಮಾಡುತ್ತಾಳೆ. ಇಂತಹ ಸೂತ್ರಬದ್ಧ ನುಡಿಗಳನ್ನು ಹೇಳುತ್ತ ತಾಯಿಯು ಮಗುವಿನ ಜೊತೆಗೆ ಆಟವಾಡುತ್ತಾಳೆ; ಆಡಿಸುತ್ತಾಳೆ. ಮೂಕ ಮಗು ತನ್ನ ಹಸನ್ಮುಖದಿಂದ, ನಗುವಿನಿಂದ ಪ್ರತಿಕ್ರಿಯಿಸುತ್ತಿರುತ್ತದೆ.

ಈ ಕ್ರಿಯೆಗಳು ನಡೆಯಲಿ ಎಂಬ ಉದ್ದೇಶವೇ ಇಲ್ಲಿರುತ್ತದೆ. ತಾಯಿಯ ಕೈಬೆರಳುಗಳು ಮಗುವಿನ ಅಂಗಾಂಗವನ್ನು ಸ್ಪರ್ಶಿಸುವ ಕ್ರಿಯೆಯಂತೆ, ತಾಯಿ ತುಂಬಾ ಹಾವಭಾವದೊಂದಿಗೆ ಮಗುವಿನ ಮುಖಕ್ಕೆ ಮುಖ ಕೊಟ್ಟು– ಕೂಸಿನ ಕಿವಿಗಳಿಗೆ ಲಯಬದ್ಧವಾದ ನುಡಿಗಳನ್ನು, ಕಣ್ಣುಗಳಿಗೆ ತಾನು ಪ್ರಯೋಗಿಸುತ್ತಿರುವ ಭಾಷೆಗೆ ತಕ್ಕಂಥ ಹಾವಭಾವಗಳನ್ನು ತುಂಬುತ್ತಾಳೆ. ಇದು ಮಗುವಿನ ಜ್ಞಾನೇಂದ್ರಿಯಗಳನ್ನು ಬಳಸಿಕೊಂಡು ಒಂದೇ ವೇಳೆಗೆ ತ್ವಚೆಗೆ ಸ್ಪರ್ಶದ ಮೂಲಕ ಕಿವಿಗೆ ಶಬ್ದದ ಮೂಲಕ, ಕಣ್ಣಿಗೆ ಅಭಿನಯದ ಮೂಲಕ, ತಾಯಿ ತನ್ನ ಅನುಭವಗಳನ್ನು ಮಗುವಿನ ಅನುಭವ ಕೋಶಕ್ಕೆ ರವಾನಿಸುವ ಕೆಲಸ ಮಾಡುತ್ತಾಳೆ. ಜ್ಞಾನೇಂದ್ರಿಯಗಳ ಮೂಲಕ ತನ್ನ ಅನುಭವವನ್ನು ಮಗುವಿನ

ಅನುಭವ ಕೋಶಕ್ಕೆ ರವಾನಿಸುವ (ಉಣಿಸುವ-ಇನ್‌ಪುಟ್) ಬಹುಮಹತ್ವದ ಬೆಳವಣಿಗೆಯ ಕೆಲಸ ಇಲ್ಲಿ ನಡೆಯುತ್ತದೆ. ಇದರಿಂದ ಮಗುವಿನ ಅರಿವು ವಿಸ್ತಾರವಾಗುತ್ತ, ದೈಹಿಕ ಮತ್ತು ಮಾನಸಿಕ ಅಂದರೆ ಬಾಹ್ಯ ಮತ್ತು ಆಂತರಿಕ ಎರಡೂ ರೀತಿಯ ಬೆಳವಣಿಗೆಗೆ ಚಾಲನೆ ದೊರೆಯುತ್ತದೆ.

ಈ ಬಗೆಯ ತಾಯಿ-ಮಗುವಿನ ಆಟ-ಪಾಠಗಳು ಕರ್ನಾಟಕದ ತುಂಬ ಎಲ್ಲ ಕಡೆ ದೊರೆಯುತ್ತವೆ. ಮಂಡ್ಯ ಮೈಸೂರು ಕಡೆ ಇಂತಹ ಹಾಡುಗಳನ್ನು ದೂರಿಪದಗಳು ಎನ್ನುತ್ತಾರೆ ಎಂದು ರಾಗೌ ಅವರು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ: "ದೂರಿಪದಗಳು...ಮಕ್ಕಳ ಮುಖ ಅಥವಾ ದೇಹವನ್ನು ಮುಟ್ಟುವ ಅಥವಾ ಚಿವುಟುವ ಸಮಯದಲ್ಲಿ, ವಿಶೇಷವಾಗಿ ಪಾದ ಅಥವಾ ಮಂಡಿಯ ಮೇಲೆ ಮಕ್ಕಳನ್ನು ಕೂರಿಸಿ ಆಡಿಸುವ ಸಮಯದಲ್ಲಿ ಇವು ಬಳಕೆಯಾಗುತ್ತವೆ. 'ದೂರಿ ದೂರಿ ದುಕ್ಕಾಲಮ್ಮ, ಕೇರಿ ಕೇರಿ ತಿರುಗಾಳಮ್ಮ' ಎಂದು ಮುಂತಾಗಿ ಪ್ರಾರಂಭವಾಗುವ ಈ ಬಗೆಯ ಪ್ರಾಸಗಳು ಮಗುವಿಗೆ ಮನರಂಜನೆಯನ್ನು ಒದಗಿಸುವುದರ ಜೊತೆಯಲ್ಲಿ ತಾಯಿಯೂ ಅದರಲ್ಲಿ ಪಾಲಗೊಳ್ಳುವುದು ಒಂದು ವಿಶೇಷವಾಗಿದೆ" (ಕನ್ನಡ ಶಿಶುಪ್ರಾಸಗಳು, ಪ್ರ.ಪು.೯).

ಡಾ. ಶ್ರೀಕಂಠ ಕೂಡಿಗೆ ಅವರು 'ಜನಪದ ಶಿಶುಪ್ರಾಸಗಳು' ಎಂಬ ಕೃತಿಯಲ್ಲಿ ದೂರಿ ಹಾಡೊಂದನ್ನು ಉದಾಹರಣೆಯಾಗಿ ಕೊಟ್ಟು, ಅಲ್ಲಿ ನಡೆಯುವ ತಾಯಿ-ಮಗುವಿನ ಆಟವನ್ನು ವಿವರಿಸುತ್ತಾರೆ.

ಹಿಟ್ಟುಕುಟ್ಟು ಮಲ್ಲಕ್ಕ
ಅವರೆಕಾಯಿ ಚನ್ನಕ್ಕ
ಬಿದ್ದನೂರೋರ್ ಬಂದಾರೆ
ಎದ್ದುಕೂರು ಮಲ್ಲಕ್ಕ
(ಎದ್ದು ಕುಳಿತ ಮಗುವಿನ ಬೆರಳುಗಳನ್ನು ತೆಗೆದುಕೊಂಡು)
ಹಬ್ಬಬ್ಬಂತು
ಹಬ್ಬಕಕ್ಕಿಲ್ಲಂತು
ಸಾಲಕೊಯ್ಯಿ ಅಂತು
ಸಾಲಕ್ಕಾನಲ್ಲ ಅಂತು
ನಾನಿದಿನಿ ಕಾಡ್ಕೋಟ್ರಾಯ ಅಂತು
ಕಟ್ಟೆಕಟ್ಟು ಅಂತು
ನಾನಿದಿನಿ ಕಾಡ್ಕೋಟ್ರಾಯ ಅಂತು
ಕಟ್ಟೆಕಟ್ಟು ಅಂತು
ತುಪ್ಪಬಿಡು ಅಂತು
ಕಟ್ಕೊಡಿತೋ....ಕಟ್ಕೊಡಿತೋ....

"ಎಂಬ ಶಿಶುಪ್ರಾಸವನ್ನು ಮಕ್ಕಳನ್ನು ಆಡಿಸುವ ದೊಡ್ಡವರು ಹೇಳುತ್ತಾರೆ. ಪ್ರಾಸದ ಮೊದಲ ನಾಲ್ಕು ಸಾಲುಗಳನ್ನು ಹೇಳಿ ರಚ್ಚೆ ಮಾಡುವ ಮಗುವನ್ನು ಅಕರ್ಷಿಸುತ್ತಾರೆ.

ಕ್ರಮವಾಗಿ ಹಸ್ತದ ಕಿರುಬೆರಳಿನಿಂದ 'ಹಬ್ಬಬ್ಬಂತು' ಎಂದು ಶುರುಮಾಡಿ ಹೆಬ್ಬೆರಳಿಗೆ ಬಂದಾಗ 'ನಾನಿದಿನಿ' ಎಂದು ನಿಲ್ಲಿಸುತ್ತಾರೆ. ಅನಂತರ ಮಗುವಿನ ಅಂಗೈ ತೆಗೆದುಕೊಂಡು ಅದರ ಮೇಲೆ ವೃತ್ತಾಕಾರವಾಗಿ ಬೆರಳು ಸುತ್ತುತ್ತಾ ಕಟ್ಟೆಕಟ್ಟುವಂತೆ ನಟಿಸುತ್ತಾರೆ. ತುಪ್ಪ ಮತ್ತು ಹಾಲನ್ನು ಅದಕ್ಕೆ ಹಾಕುವಂತೆ ಅಭಿನಯಿಸುತ್ತಾರೆ. ಅನಂತರ 'ಕಟ್ಟೊಡಿತೋ' ಎಂದು ಕೂಗಿ ಹೇಳಿ, ಕಂಕುಳದವರೆಗೆ ಹರಿಯಿತೆಂದು ತೋರಿಸಿ ಕಚಗುಳಿ ಇಡುತ್ತಾರೆ. ಮಗು ಉಲ್ಲಾಸಗೊಳ್ಳುತ್ತದೆ"(ಜನಪದ ಶಿಶುಪ್ರಾಸಗಳು,ಪ್ರ.ಪು.೯).

ತಾಯಿ ತನ್ನ ಮಗುವಿಗೆ ಅನುಭವನ್ನು ಉಣಿಸುವ ಈ ಕ್ರಿಯೆಗೆ ಮಗು ಸ್ಪಂಧಿಸುವ ಮೊತ್ತವನ್ನು ತಾಯಿ ಗ್ರಹಿಸುತ್ತಿರುತ್ತಾಳೆ. ಮಗುವಿನ ಸ್ಪಂಧನೆಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಕಂಡುಬಂದರೂ ಅದನ್ನು ತಾಯಿ ಗ್ರಹಿಸುತ್ತಾಳೆ; ಅದರ ಪರಿಣಾಮವನ್ನು ತೀವ್ರಗೊಳಿಸಲು ಪ್ರಯತ್ನಿಸುತ್ತಾಳೆ. ಕುಂದುಗಳೇನಾದರೂ ಇದ್ದರೆ ವೈದ್ಯರ ಮೊರೆಹೋಗಲು ಈ ಅನುಭವದ ಹಂಚಿಕೆ ಅನುಕೂಲವಾಗುತ್ತದೆ. ವಿಶೇಷವಾಗಿ ಮಗುವಿನ ಗ್ರಹಿಕೆಯ ಪ್ರಮಾಣ, ಮಗುವಿನ ಕಿವಿ ಮೂಗು ತ್ವಚೆ ಕಣ್ಣುಗಳ ಗ್ರಹಿಕೆಯ ಗುಣಮಟ್ಟಗಳನ್ನು ತಾಯಿ ತನಗೆ ಅರಿವಿಲ್ಲದೆಯೆ ಗಮನಿಸುತ್ತಿರುತ್ತಾಳೆ, ಗ್ರಹಿಸುತ್ತಿರುತ್ತಾಳೆ. ಈ ತಾಯಿ ಮತ್ತು ಮಗುವಿನ 'ಪರಸ್ಪರ ಆಟ' (ಇಂಟರ್ ಎಕ್ಷನ್) ಒಂದು ಮಹತ್ವದ ಪ್ರಕ್ರಿಯೆ.

ತಾಯಿ ತಾನೆ ಮಗುವಿನ ಕಾಲುಗಳನ್ನು ತನ್ನ ಕೈಯಿಂದ ಎತ್ತಿ ಇಡುತ್ತ 'ತಮ್ಮನ ಕಾಲಾಗ ಗಿಲಗೆಜ್ಜಿ಼ ಗಿಲಗೆಜ್ಜಿ಼' ಎಂದು ಹಾಡುತ್ತ ನಡಿಗೆಯ ಪರಿಯನ್ನು ಮಗುವಿನ ಅನುಭವಕ್ಕೆ ಬರುವಂತೆ ಮಾಡುತ್ತಾಳೆ. ರಾತ್ರಿ ಹೊತ್ತು ಚುಕ್ಕೆಗಳಿಂದ ತುಂಬಿದ ಆಕಾಶವನ್ನು ತೋರಿಸಿ, ಅದರಲ್ಲಿ ಶುಭ್ರವಾಗಿ ಬೆಳಗುತ್ತಿರುವ ಚಂದ್ರನನ್ನು ತೋರಿಸಿ 'ಚಂದಾಮಾಮಾ ಚಾರಿಕಾಯಿ /ಬಟ್ಟಲ ತುಂಬ ಬಾರಿಕಾಯಿ' ಎಂದು ಆಕಾಶವನ್ನು ಪರಿಚಯಿಸುತ್ತಾಳೆ. ಚಂದ್ರ 'ಚಾರಿಕಾಯಿ' ಆಗುತ್ತಾನೆ, ಆಕಾಶ ಬಟ್ಟಲಾಗುತ್ತದೆ, ನಕ್ಷತ್ರಗಳು 'ಬಾರಿಕಾಯಿ' ಗಳಾಗುತ್ತವೆ. ಮಗುವಿಗೆ ಹೊಸ ಹೊಸ ವಿಷಯಗಳನ್ನು ತಿಳಿಸುತ್ತ ಹೋಗುವ ಪ್ರಕ್ರಿಯೆ ಇದು. ಮಗುವನ್ನು ಬೆನ್ನ ಮೇಲೆ ಹಾಕಿಕೊಂಡು 'ಕುರಿಮರಿ ಬೇಕೇನ್ರಿ಼ ಕುರಿಮರಿ಼' ಅನ್ನುತ್ತ ಮಗುವನ್ನು ಆಟವಾಡಿಸುತ್ತಾಳೆ. ಮಗು ಆಯಾಸಗೊಂಡು ಅಳುಮುಖ ಮಾಡಿ ರಾಗ ತೆಗೆಯಲು ಪ್ರಾರಂಭಿಸಿದರೆ ಕೂಡಲೇ ತಾಯಿ ಮಗುವನ್ನು ನೇವರಿಸಲು ಪ್ರಯತ್ನ ಪಡುತ್ತಾಳೆ. ಎದೆಯ ಮೇಲೆ ಹಾಕಿಕೊಂಡು ಮಗುವಿನ ಬೆನ್ನು ಚಪ್ಪರಿಸುತ್ತ 'ಅಳ್ಳುಳ್ಳಿ ಆಯಿ/ ಬಳ್ಳೊಳ್ಳಿ ಕಾಯಿ' ಎಂದು ತೂಗಾಡಿಸುತ್ತಾಳೆ. ಅದು ಇನ್ನೂ ಆಯಾಸಗೊಂಡಂತೆ ತೋರಿದರೆ ಒಯ್ದು, ತೊಟ್ಟಿಲಲ್ಲಿ ಮಗುವನ್ನು ಮಲಗಿಸಿ 'ಅಳಬ್ಯಾಡ ನನಕಂದ ನಾ ಸಂತಿಗ್ಹೋಗಿ ಬರ್ತೀನಿ' ಎಂದು ಲಾಲಿ ಹಾಡಲು ಪ್ರಾರಂಭಿಸುತ್ತಾಳೆ. ಈ ಬಗೆಯ ತಾಯಿ–ಮಗುವಿನ ಆಟ–ಪಾಠಗಳು ಈ ಹಂತದಲ್ಲಿ ಗಮನ ಸೆಳೆಯುತ್ತವೆ.

೨. ಮಗು ಮಾತನಾಡಲು ತೊಡಗಿದ ನಂತರದ ಎರಡರಿಂದ ನಾಲ್ಕು ವರ್ಷಗಳವರೆಗಿನ ನುಡಿಗಳು :

ಕೆಲ ಮಕ್ಕಳು ಒಂದು ವರ್ಷದಲ್ಲಿಯೇ ಸಾವಕಾಶವಾಗಿ ಒಂದೊಂದೆ ಮಾತು ಅನುಕರಿಸಲು ಪ್ರಾರಂಭಿಸುತ್ತವೆ. ಎರಡು ವರ್ಷವೆಂದರೆ ಮೂಕಮಗು ಈಗ ಮಾತನಾಡಲು,

ತೀವ್ರಗತಿಯಲ್ಲಿ ಹೇಳಿದ್ದನ್ನು ತಿಳಿಯಲು ಪ್ರಾರಂಭಿಸುತ್ತದೆ. ಮಗು ತಾನೆ ಪುಟ್ಟಪುಟ್ಟ ಹೆಜ್ಜೆಗಳನ್ನಿಡಲು ಪ್ರಾರಂಭಿಸುತ್ತದೆ. ಮಗುವನ್ನು ತನ್ನೆಡೆಗೆ ಕರೆದು, 'ಬಸು ಬಸು ಸಣ್ಣಾಂವ ಸಣ್ಣಾಂವ ಪೆಪ್ಪರಮೆಂಟ್ ತಿನ್ನಾವ ತಿನ್ನಾವ' ಎಂದು ಹಾಡು ಹೇಳಿ ಮಗುವಿಗೆ ನಡೆಯಲು ಪ್ರೇರೇಪಿಸುತ್ತಾಳೆ. ಅದು ಸಣ್ಣ ಸಣ್ಣ ಹೆಜ್ಜೆಗಳನ್ನು ಇಡುತ್ತಿದ್ದಂತೆ 'ಟುಂಟುಂ ಗಾಡಿ ಬಂತಲೇ ಓಡಿ' ಎನ್ನುತ್ತ ತಾಯಿ ಮಗುವನ್ನು ತೀವ್ರವಾಗಿ ಹೆಜ್ಜೆಹಾಕಿ ತನ್ನಡೆಗೆ ಬರುವಂತೆ ಪ್ರೇರೇಪಿಸುತ್ತಾಳೆ. ಮಗು ತಾಯಿಯ ಸೊನ್ನೆಗಳನ್ನು, ಮಾತಿನ ಮೋಡಿಯನ್ನು ಅರಿಯುತ್ತ ಸಾಗುತ್ತದೆ. ಮಗುವಿನಲ್ಲಿ ತಾನು ಹಿರಿಯ ಎಂಬ ಭಾವ ಬರುವಂತೆ ಮಗುವಿನ ಕೈಗೆ ಗೊಂಬೆ ಇಟ್ಟು, ಅದನ್ನು ತಾಯಿ ತಾನು ಮಗುವನ್ನು ಕಂಕುಳಲ್ಲಿ ಎತ್ತಿಕೊಳ್ಳುವಂತೆ ಮಗುವಿನ ಕಂಕುಳಲ್ಲಿ ಗೊಂಬೆಯನ್ನು ಹಿಡಿಸಿ, 'ಬಗಲಾಗೊಂದು ಗೊಂಬಿ/ ಅದು ನಮ್ಮ ತಂಗಿ' ಎಂದು ಹಾಡಲು ತೊಡಗುತ್ತಾಳೆ. ತನಗಿಂತಲೂ ಸಣ್ಣದಾದ, ತನ್ನಂತಹ ಮಗುವೊಂದು ತನಗೆ ದೊರೆಕಿತು ಎಂಬ ಭಾವ ಮಗುವಿನಲ್ಲಿ ಮೂಡಿ, ಅದರ ಸಂಬಂಧವನ್ನು ಮಗುವಿನ ಕಿವಿಗೆ ಬೀಳುವಂತೆ ಮಾಡುತ್ತಾಳೆ. ತಾನು ಅಂಗಾತ ಮಲಗಿ, ಕಾಲುಗಳನ್ನು ಮಡಚಿ, ಪಾದದ ಮೇಲೆ ಮಗುವನ್ನು ಕೂಡಿಸಿ, ಅದು ತನ್ನ ಮಡಚಿದ ಕಾಲುಗಳನ್ನು ಹಿಡಿಯುಂತೆ ಮಾಡಿ, 'ಆನಿ ಬಂತಾನಿ ಯಾವೂರ ಆನಿ' ಎಂಬ ಹಾಡನ್ನು ಹಾಡುತ್ತ, ತನ್ನ ಮಗುವನ್ನು ಆನೆ ಮಾಡಿ, ಅದರ ತೂಕ ಸಾಕಷ್ಟಿದೆ ಎಂಬ ಅರಿವನ್ನು ಮಗುವಿನಲ್ಲಿ ಬರುವಂತೆ ತನ್ನ ಕಾಲುಗಳಿಂದ ಮಗುವನ್ನು ತೂಗಿಸುತ್ತಾಳೆ. ಹೀಗೆ ವಯಸ್ಸಿಗೆ ತಕ್ಕಂತೆ ಮಗುವಿನ ಮಾನಸಿಕ-ದೈಹಿಕ ಮತ್ತು ಅರಿವಿನ ಬೆಳವಣಿಗೆಗಳು ಹೆಚ್ಚಾದಂತೆ ಅದಕ್ಕೆ ತಕ್ಕಂತೆ ಮಕ್ಕಳಾಟದ ಹಾಡುಗಳ ಪ್ರಯೋಗವೂ ಆಗುವುದನ್ನು ಗಮನಿಸುತ್ತೇವೆ. ಹೀಗಾಗಿ ಜನಪದ ಸಾಹಿತ್ಯದಲ್ಲಿ ಈ ಮಕ್ಕಳ ಹಾಡುಗಳಿಗೆ ತಾಯಂದಿರು ಗಮನ ಕೊಡಬೇಕಾದುದು ಅವಶ್ಯವಿದೆ.

೩. ಐದರಿಂದ ಎಂಟು ವರ್ಷಗಳವರೆಗಿನ ಗಂಡು-ಹೆಣ್ಣು ಓರಗೆಯ ಮಕ್ಕಳು ಸೇರಿ ಆಟವಾಡಲು ಬಳಸುವ ನುಡಿಗಳು :

ಒಂದು ಮತ್ತು ಎರಡನೇ ಹಂತದ ಅಂದರೆ ಸುಮಾರು ನಾಲ್ಕು ವರ್ಷಗಳವರೆಗೆ ಮಗು ಆಡುವುದು ತಾಯಿಯ ಸೆರಗಿನಲ್ಲಿಯೆ. ಅಪರೂಪಕ್ಕೆ ಮನೆಯ ಅಂಗಳದ ಮಕ್ಕಳಲ್ಲೂ ಸೇರಿರುತ್ತದೆ. ಮೂರನೇ ಹಂತದಲ್ಲಿ ಸಂಪೂರ್ಣವಾಗಿ ಮನೆಯ ಒಳಾಂಗಣ ಮತ್ತು ತಾಯಿಯನ್ನು ಬಿಟ್ಟು ಈಗ ಓರಗೆಯವರೊಂದಿಗೆ ಬೆರೆತು ಹೆಚ್ಚಿನ ಶಿಕ್ಷಣ ಮತ್ತು ಅರಿವು ಮೂಡಿಸಿಕೊಳ್ಳಲು ಉಪಕಾರಕವಾದ ಆಟಗಳನ್ನು ಮತ್ತು ಅವುಗಳಿಗೆ ತಕ್ಕ ಪಾಠಗಳನ್ನು ಉಪಯೋಗಿಸಲು ಕಲಿಯುತ್ತದೆ.

'ಹತ್ತಿಕಟಗಿ ಬತ್ತಿಕಟಗಿ'
'ಬೈಟ್ ಗುಬ್ಬಿ ಬೈಟ್'
'ಕಳ್ಳ್ಯಾ ಮಿಳ್ಳ್ಯಾ',
'ಮಳಿ ಬಾರೊ ಮಲ್ಲಯ್ಯ/ ಗುಡಿಕಟ್ಟೋ ಸಿದ್ದಯ್ಯ'
'ಕಣ್ಣು ಮುಚ್ಚಾಲೆ'

'ಗಂಗಾವತಿ ಥೇರ ಬಿಂದಿಗ್ಯಾಗ ಬೇರ/ ಗ್ವಾಲಗೇರಿ ಥೇರ ಗೊಲ್ಲಾಳಪ್ಪನ ಥೇರ'
'ಗೌಡರ ಮನಿ ಎಲ್ಲ್ಯಾದ? ಮ್ಯಾಕ್ ಮ್ಯಾಕ್ ಮ್ಯಾಕ್'

ಇಂತಹ ನುಡಿಗಳುಳ್ಳ ಆಟಗಳನ್ನು ಆಡುತ್ತ, ಮಕ್ಕಳು ಆಟಗಳೊಂದಿಗೆ ಪಾಠಗಳನ್ನೂ ಹೇಳಲು ಕಲಿಯುತ್ತವೆ. 'ಹತ್ತಿ ಕಟಗಿ ಬತ್ತಿ ಕಟಗಿ' ಆಟದಲ್ಲಿ ಹಾಡನ್ನು ನುಡಿಯುವ ಲಯಕ್ಕನುಗುಣವಾಗಿ ಮಕ್ಕಳು ಬೆರಳುಗಳನ್ನು ಎತ್ತೆತ್ತಿ ಇಡಲು ಕಲಿಯುತ್ತವೆ. 'ಕಳ್ಳ್ಯಾ ಮಿಳ್ಳ್ಯಾ' ಎನ್ನುತ್ತ ಲಯಬದ್ಧವಾಗಿ ತಮ್ಮ ದೇಹವನ್ನು ಸುತ್ತಲೂ ತಿರುಗಿಸಲು ಕಲಿಯುತ್ತವೆ. ಈ ವಯಸ್ಸಿನಲ್ಲಿ ಮಕ್ಕಳು ಪ್ರಾಯೋಗಿಕವಾಗಿ ಕೇವಲ 'ಪಾಠ' ಅಷ್ಟೇ ಅಲ್ಲ, ಅದರೊಳಗಿನ ಲಯವನ್ನು ಅನುಸರಿಸಲೂ ಕಲಿಯುತ್ತವೆ. ಸ್ವಲ್ಪ ಸ್ವಲ್ಪ ನುಡಿಗಳ ಅರ್ಥವನ್ನೂ ಅರಿಯುತ್ತ ಹೋಗುತ್ತವೆ. ಈ ಹಂತದ ಆಟಗಳಲ್ಲಿ ಹುಡುಗ-ಹುಡುಗಿಯರು ಕೂಡಿಯೇ ಆಡುವುದರಿಂದ ಸಹಕಾರದ ಅನುಭವವನ್ನು ಮಕ್ಕಳು ಪಡೆಯುವುದು ಗಮನಾರ್ಹ ಸಂಗತಿ ಎನಿಸುತ್ತದೆ.

೪. ಹುಡಗಿಯರು ಪ್ರತ್ಯೇಕವಾಗಿ ೮ ರಿಂದ ೧೪ ವರ್ಷಗಳ ವರೆಗೆ ಬಳಸುವ ಆಟ-ಪಾಠಗಳು :

ಹೆಣ್ಣುಮಕ್ಕಳು ಈ ಹಂತದಲ್ಲಿ ಆಡುವ ಆಟಗಳು ವಸ್ತುವಿನ ದೃಷ್ಟಿಯಿಂದ ಬದುಕನ್ನು ಅನುಕರಿಸುತ್ತಿರುತ್ತವೆ. ಅಲ್ಲಿ ದೊರೆಯುವ ದೈಹಿಕ ಕಸರತ್ತಿನಿಂದ ದೇಹಕ್ಕೆ ವ್ಯಾಯಾಮವೂ ಆಗುತ್ತಿರುತ್ತದೆ. ಇಲ್ಲೆಲ್ಲ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ವಿಷಯ ಹಾಗೂ ವ್ಯಾಯಾಮಗಳು ಇರುವುದನ್ನು ಗಮನಿಸಬೇಕು. ಈ ವ್ಯಾಯಾಮದ ರೀತಿಗಳಿಂದ ಮುಂದೆ ಹೆಣ್ಣುಮಕ್ಕಳು ಎದುರಿಸುವ ಹೆರಿಗೆಯಂತಹ ಕ್ರಿಯೆಗೆ ದೇಹ ಶಕ್ತಿಶಾಲಿಯಾಗುವ ಕ್ರಮಗಳು ಇರುತ್ತವೆ. ಜೊತೆಗೆ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಕೆಲಸಗಳಲ್ಲಿ ಪರಿಣತಿಯನ್ನು ಹೊಂದುವಲ್ಲಿ ಸಹಾಯಕವಾಗುವ ಕೈ, ಕಾಲುಗಳಿಗೆ ವಿಶೇಷವಾದ ಪರಿಣತಿಯನ್ನೊದಗಿಸುವ ಕ್ರಿಯೆಗಳೂ ಇಲ್ಲಿ ಇರುತ್ತವೆ.

ಮನೆಯ ಒಳಗೆ : ಹರಳಿನ ಆಟಗಳು-ಗಜಗ ಮುಂ.

೧. ಒಂದೊ/ ಎರಡೊ/ ಮೂರೊ/ನಾಲ್ಕೊ/ಐದೊ/ಸೈದೊ

೨. ಸುಪ್ಲಿ ಒಂದ/ ಸುಪ್ಲಿ ಎರಡ/ ಸುಪ್ಲಿ ಮೂರ/ ಸುಪ್ಲಿ ನಾಕ/ ಸುಪ್ಲಿ ಐದ/ ಸುಪ್ಲಿ ಸೈದ

೩. ಇಟ್ಟಿ ಬಿಟ್ಯಾಳ ಒಂದ
ಹೀರಿ ಎಡ್ಡ ಕಾಯಿ
ಜಾಜಿ ಮೂರ ಕಾಯಿ
ಜಾ ಪತ್ರಿ ನಾಕ
ಲವಂಗ ಲಟಕ ಐದ
ಪಿಂಜಾರ ಪಿಟಕ ಸೈದ

೪. ಶಂಕಬಾನಾ ಕುಂಬಳ ರಾಜಾ ಕುಡಕಿಗೊಂದ
ಶಂಕಬಾನಾ ಕುಂಬಳ ರಾಜಾ ಕುಡಕಿಗೆರಡ
ಶಂಕಬಾನಾ ಕುಂಬಳ ರಾಜಾ ಕುಡಕಿಗ್ಮೂರ

ಇಲ್ಲಿಯ ನುಡಿಗಳನ್ನು ಗಮನಿಸಿ. ಒಂದು **'ಪದ'**ದ ನುಡಿಯಿಂದ ಪ್ರಾರಂಭವಾಗಿ ಎರಡು ಪದಗಳ ನುಡಿ, ಮೂರು ಪದಗಳ ನುಡಿ, ನಾಲ್ಕು ಪದಗಳ ನುಡಿ ಹೀಗೆ ಏರುತ್ತ ಹೋಗುವುದನ್ನು ನೋಡುತ್ತೇವೆ. ವಯಸ್ಸು ಹೆಚ್ಚಾದಂತೆ ಇಂತಹ ಹಾಡುಗಳು ಕಠಿಣವಾಗುತ್ತ, ಅದರ ಜೊತೆಗೆ ಆಡುವ ಆಟದ ಬಗೆಯೂ ಹೆಚ್ಚು ಚಾಕಚಕ್ಕತೆಯಿಂದ ಕೂಡಿರುತ್ತದೆ. ವಿಷಯದ ಜ್ಞಾನವೂ, ದೈಹಿಕ ಚಾಕಚಕ್ಕತೆಗಳು ಇಲ್ಲಿ ವಿಸ್ತಾರವಾಗುತ್ತ ಹೋಗುವುದನ್ನು ಗಮನಿಸುತ್ತೇವೆ.

ಮೈದಾನದಲ್ಲಿ : ಅನುಕರಣೆಯ ಆಟಗಳು–ಮದುವೆ, ನೀರು ತರುವ, ಅತ್ತೆ–ಸೊಸೆಯರ ಸಂವಾದ ಮುಂತಾದವುಗಳನ್ನು ಅನುಕರಣೆ ಮಾಡಿ ಆಡುವ ಆಟ–ಪಾಠಗಳು ಇಲ್ಲಿ ಕಾಣುತ್ತವೆ. ಕುಂಟಲಿಪಿಯಂತಹ ಕ್ರೀಡೆಗಳೂ ಪಾಠದೊಂದಿಗೆ ಕಾಣಿಸಿಕೊಳ್ಳುತ್ತವೆ.

ಮನೆಯಲ್ಲಿ ಆಡುವ ಆಟಗಳು ಕುಳಿತುಕೊಂಡು ಆಡುವ ಆಟಗಳಾದರೆ ಮೈದಾನದಲ್ಲಿ ಆಡುವ ಆಟಗಳು ಬದುಕನ್ನು ಅನುಕರಿಸುವ ಆಟಗಳಾಗಿದ್ದು, ಇಲ್ಲಿ ಅಭಿನಯ, ಕುಣಿತ, ಓಡಾಟ, ಸಂಭಾಷಣೆ ಇತ್ಯಾದಿಗಳೆಲ್ಲ ಕೂಡಿ ಹೆಚ್ಚು ನಾಟಕೀಯ ಎನಿಸುತ್ತವೆ. ಸಂವಾದದ ಒಂದು ಉದಾಹರಣೆಯನ್ನು ನೋಡಬಹುದು.

ಇಬ್ಬರ ನಡುವೆ ನಡೆಯುವ ಸಂವಾದ. ಉಳಿದವರೆಲ್ಲ ಸುತ್ತಲೂ ಪ್ರೇಕ್ಷಕರು:

ಒ. ಕೋಳಿ ಬಂದಾವೇನ ಕೋಳಿ?
ಇ. ಬಂದಾವ
ಒ. ತತ್ತಿ ಏಸ ಇಟ್ಟಾವ
ಇ. ಮರದ ತುಂಬ ಇಟ್ಟಾವ
ಒ. ನನಗೀಸ ಕುಡು
ಇ. ವಣಗಿ ಮಾಡೀನಿ
ಒ. ವಣಗೀನೆ ಕುಡು
ಇ. ಮುಸರೀಗಿ ಹಾಕೀನಿ
ಒ. ಮುಸರೀನೆ ಕುಡು
ಇ. ಎಮ್ಮಿಗಿ ಹಾಕೀನಿ
ಒ. ಎಮ್ಮಿನೆ ಕುಡು
ಇ. ಹೊಲಕ ಹೋಗ್ಯಾದ
ಒ. ಹೊಲಾನೆ ಕುಡು
ಇ. ನನಗಂಡ ಬಯ್ತಾನ
ಒ. ನಿನಮಗನ ಹೆಸರೇನು?
ಇ. ನಾಗರಪಿ ಗುಲಾಲಪಿ
ಒ. ನಾಗರಪಿ ಗುಲಾಲಪಿ– ಅತ್ತೆತ್ತಿ ಬೆಂಕಿ ಕುಡು
ಇ. ನಮ್ಮತ್ತಿ ಮುಗಲ್ಯಾಗ ಮುತ್ತ ಪೋಣ್ಸಾಕ ಹೋಗ್ಯಾಳ

ಒ. ಅದೇನ ಕುಡ್ತದ ಖಂಗೀಸs ಖಂಗೀಸs
ಒಲ್ಯಾಗ ಮೂರ ಕಟಗಿ ಅಯ್ನೋರ ಬಂದಾನ ಹಿಟ್ಟಿಗಿ
ಗಂಡ ಬಂದಾನ ಸಿಟ್ಟಿಗಿ ಅತ್ತೆತ್ತಿ ಬೆಂಕಿ ಕುಡು
ಇ. ನಮ್ಮತ್ತಿ ಮುಗಲ್ಯಾಗ ಮುತ್ತ ಪೋಣ್ಸಾಕ ಹೋಗ್ಯಾಳ
ಒ. ಹತನನ ಸಂವತಿ ಕುಡಾಲಂತs ಕುಡಾಲಂತs
ಇ. ಮುತ್ತ ಚುಚಗೊ ಮುತಗಾರ್ಗ ಇಟಗೊ
ಒ. ತುಪ್ಪಾದಾಗ ನೊಣ– ನಿಮ್ಮವ್ವ ಹೆಣ
ಇ. ಗಾಣ್ಗೇರ ಘಸಿ – ಕುಂಡಿ ಮ್ಯಾಲ ಮಸಿ
ಒ. ಹಗೆದಾಗ ತೊಗರಿ – ಬಂತವ್ವ ಬಾರಗಿ

೫. ಪ್ರತ್ಯೇಕವಾಗಿ ೮ ರಿಂದ ೧೪ ವಯಸ್ಸಿನವರೆಗಿನ ಹುಡುಗರು ಬಳಸುವ ಆಟ–ಪಾಠಗಳು.

ಮೈದಾನದ ಆಟಗಳು : ಚಿಣಿ–ಫಣಿ, ಗೋಲಿ ಆಟ, ತೀತೀ(ಕಬ್ಬಡ್ಡಿ), ಲೋಡಲೋಡ ತಿಮ್ಮಯ್ಯ ಮುಂತಾದವು.

ಲೋಡ ಲೋಡ ತಿಮ್ಮಯ್ಯ :

೧. ಲೋಡ ಲೋಡ ತಿಮ್ಮಯ್ಯ
ಲಡ್ಡು ಎಲ್ಲಿ ಬಚ್ಚಿಟ್ಟಿ?

೨. ಕಣ್ಣಿ ಕಣ್ಣಿ ಮಸರ
ಬಳ್ಳೊಳ್ಳಿ ಖಾರ।
ತಿಂಗಳ ರೊಟ್ಟಿ
ತಂಗಳ ಬಾನಾ।

ತೀತೀ ಆಟ (ಕಬ್ಬಡ್ಡಿ) :

ಆಮ್ ಭೌ ಅಮ್ಲಿ ಭೌ
ಕಾಲೆ ಕಾಲೆ ಬದಾಮ ಭೌ
ಆಮ್ ಭೌ ಅಮ್ಲಿ ಭೌ
ಪಟೇಲ ಪಟೇಲಕಿ ದಾಂಡಾ ಭೌ

ಈ ನಾಲ್ಕು ಪ್ರಕಾರದ ಮಕ್ಕಳಾಟದ ಹಾಡುಗಳನ್ನುಳಿದು ಕೆಲವು ವಿಡಂಬನಾತ್ಮಕ ನುಡಿಗಳು ಮತ್ತೆ ಕೆಲವು ಒಂದಿಷ್ಟು ಕಥೆ ಹೇಳುವ ನುಡಿಗಳು ಇರುವುದು ಕಂಡುಬರುತ್ತದೆ. ಆಟಗಳ ಹಿನ್ನೆಲೆಯನ್ನೇ ಬಿಟ್ಟು ಕೇವಲ ಹಾಡುಗಳನ್ನಷ್ಟೇ ಇಟ್ಟುಕೊಂಡು ವಿಷಯಾನುಸಾರ ಮತ್ತೆ ಬೇರೆ ಬೇರೆ ಪ್ರಕಾರಗಳನ್ನು ಗುರುತಿಸಬಹುದಾಗಿದೆ. ಹೊರದೇಶಗಳಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿದರೆ ಅಲ್ಲಿ ಈ ಹಾಡುಗಳನ್ನು ವಿಷಯವನ್ನು ಗಮನಿಸಿ, ಭಾಷೆ–ಸಾಹಿತ್ಯ ಸಂಗತಿಗಳನ್ನು ಗಮನಿಸಿ ವಿಭಾಗಿಸಿಕೊಳ್ಳುವುದು ಕಂಡುಬರುತ್ತದೆ. ಕನ್ನಡದಲ್ಲಿ ಪ್ರಕಟವಾದ ಶಿಶುಪ್ರಾಸಗಳನ್ನು ಸಂಪಾದಿಸಿದ ವಿದ್ವಾಂಸರೆಲ್ಲ ಗಮನಿಸಿದ್ದು ಹೊರದೇಶದ

ವಿಭಾಗೀಕ್ರಮವನ್ನು. ಆದರೆ ಸಂದರ್ಭ ಪ್ರಮುಖವಾದ ಮಕ್ಕಳಾಟದ ಹಾಡುಗಳ ಪ್ರಕಾರಗಳನ್ನು ಸಂದರ್ಭಗಳೊಂದಿಗೆ ಗುರುತಿಸುವುದು ಹೆಚ್ಚು ಮಂಜಸ. ಸಂದರ್ಭ ಬಿಟ್ಟು ಹುಟ್ಟಿಕೊಂಡವುಗಳಲ್ಲಿ ಕಾಣುವಂಥವು ಈ ಮೇಲೆ ಸೂಚಿಸಿದಂತೆ ವಿಡಂಬನಾತ್ಮಕ ಮತ್ತು ಕಥನಾತ್ಮಕ ಹಾಡುಗಳು ಹೆಚ್ಚಾಗಿ ಕಂಡುಬರುತ್ತವೆ. ಅದಕ್ಕಾಗಿ ಆ ಎರಡು ಪ್ರಕಾರಗಳಿಗೆ ಮಾತ್ರ ಇಲ್ಲಿ ಒಂದೊಂದು ಉದಾಹರಣೆಗಳನ್ನು ಕೊಡಲಾಗಿದೆ.

೧. ವಿಡಂಬನ ನುಡಿಗಳು :

೧. ಆಯಿ ಆಯಿ ಬಂದಾಳ
ಕಾಯಿ ಕಬ್ಬ ತಂದಾಳ
ಜಗಲಿ ಮ್ಯಾಲ ಇಟ್ಟಾಳ
ಜಾರಕೊಂಡು ಬಿದ್ದಾಳ
ಕೋಲ ಹಿಡದು ಎದ್ದಾಳ

೨. ಒಂದ ಗೂಗಿ ಘೂಕ್
ಪಾವ ಜ್ವಾಳಾ ಮುಕ್

೩. ಆಟಕ ಬರವಲ್ಲು ಗೀಟಕ ಬರವಲ್ಲು
ಕಾಳಿಸಿಂಗನ ಮೊಮ್ಮಗಳು

೨. ಕಥೆ ಮಾದರಿ ನುಡಿಗಳು :

ಮುಂಜಾನಾದರ ಎದ್ದಾಳಾಯಿ
ಕಾಲಾಗ ಚಪ್ಲಿ ಮೆಟ್ಯಾಳಾಯಿ
ಊರ್ಮುಂದಿನ ಹೊಲಕ ಹೋಗ್ಯಾಳಾಯಿ
ಆಕಡಿ ಈಕಡಿ ನೋಡ್ಯಾಳಾಯಿ
ಲಟಲಟನಾದ್ರ ಮುರ್ದಾಳಾಯಿ
ಆ ಕಡಿಂದೊಬ್ಬ ದಾರಿಕಾರ ಬಂದ
ಆಯಿ ಆಯಿ ಬಗಲಾಂದೇನು?
ಮಗನ ಮಗ ಮಮ್ಮಗಪ್ಪ
ಅದ್ಯಾಂಗ ಹನಾ ನೋಡಾರಿ ಆಯಿ
ಮುತ್ತ ಮಾಣಿಕ ಜಡದಾವಪ್ಪ
ಆಯಿ ಆಯಿ ಬಗಲಾಂದೇನು?
ಮಗಳ ಮಗಳ ಮಮ್ಮಗಳಪ್ಪ
ಅದ್ಯಾಂಗ ಹಾಳ ನೋಡಾರಿ ಆಯಿ
ಕಣ್ಣ ಬಂದು ಅಳತಾವಪ್ಪ
ಹುಣಸಿನ ಜಬರಿ ಕಿತ್ಯಾನಪ್ಪ
ಆಯಿ ಆಯಿ ಹುಣಸಿನ ಜಬರಿ

ತೊಗೊರಪ್ಪ ನಿನ್ನ ತೆನಿಯ
ಮನಿಯಗಾದರು ಬರತಿದ್ದೆ
ಕಚಽ ಕಚಽನಂತ ಕುಟ್ಟತ್ತಿದ್ದೆ
ಪಟಽ ಪಟಽನಂತ ಕೇರ್ತಿದ್ದೆ
ಕರಽ ಕರಽನಂತ ಬೀಸ್ತಿದ್ದೆ
ಐದ್ಮಂದಿಗ ಊಟಕ ಕರಿತಿದ್ದೆ
ಸಾದಸಲಿಲ್ಲ ಕಳ್ತನ। ಸಾದಸಲಿಲ್ಲ ಕಳ್ತನ।

* * *

೧೯೩೩ ರಲ್ಲಿ ತಮ್ಮ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'** ಕೃತಿಯಲ್ಲಿ ಅರ್ಚಕ ಬಿ. ರಂಗಸ್ವಾಮಿ ಅವರು ಮಕ್ಕಳ ಹಾಡುಗಳ ಬಗ್ಗೆ ಹೀಗೆ ಬರೆದಿದ್ದಾರೆ: "ಗೌರೀ ಗಣೇಶನ ಹಬ್ಬಗಳಲ್ಲಿ 'ಗಣೇಶ ಬಂದ, ಹೊಟ್ಟೇ ಮೇಲೆ ಗಂಧ, ಕಾಯ್ಕಡ್ಬಿ್ತಂದ, ಚಿಕ್ಕೊಳೇಲ್ಬಿದ್ದ, ದೊಡ್ಡೊಳೇಲೆದ್ದ' ಎನ್ನುವ ಹಾಡೇ ಕೇಳುತ್ತಿತ್ತು. ಮಳೆಯು ಹುಯ್ಯುತ್ತಿರುವಾಗ ಚಿಕ್ಕ ಚಿಕ್ಕ ಹುಡುಗರು ಬೀದಿಗೆ ಓಡಿ ಬಂದು ಆಕಾಶದ ಕಡೆಗೆ ಮುಖ ತಿರಿಗಿಸಿಕೊಂಡು 'ಹೂಯ್ಯೊ ಹೂಯ್ಯೊ ಮಳ್ರಾಯಾ ಹೂವಿನ್ತೋಟಕ್ನೀರಿಲ್ಲಾ' ಎಂದು ಕೂಗಿಕೊಳ್ಳುತ್ತಿದ್ದರು. ಹೆಣ್ಣುಹುಡುಗರು 'ಕಣ್ಣಾಮುಚ್ಚೆ ಕಾಡೇಗೂಡೆ, ಉದ್ದಿನ ಮೂಡೆ ಉರಳೇ ಹೊಯ್ತು ನಮ್ಹಕ್ಕೀ ಬಿಟ್ನೋಬಿಟ್ಟೆ, ನಿಮ್ಹಕ್ಕಿ ಹಿಡಿದುಕೊಳ್ಳಿರೋ ಹಿಡಿದುಕೊಳ್ಳಿ' ಎಂದು ಕಣ್ಣಾಮುಚ್ಚಾಲೆ ಆಟ ಆಡುವರು"(ಪು. ೧೫೪). ಮಕ್ಕಳಾಟದ ಬಗ್ಗೆ ಹೀಗೆ ಹಾಡುಗಳನ್ನು ಉಲ್ಲೇಖಿಸುತ್ತ ಬರೆಯುವ ರಂಗಸ್ವಾಮಿ ಅವರು ಮುಂದೆ "ಕಣ್ಣಾಮುಚ್ಚೆ-ಕೋಟೆ ಮೇಲೆ ಕುಗೋಲು, ಸಾಧು ಗೋದು ಇತ್ಯಾದಿಗಳೆಲ್ಲಾ ಸರ್ವರಿಗೂ ಸದಾ ಮಂದಟ್ಟಾದ ವಿಷಯವೇ. ...ಹುಡುಗರ ಆಟಪಾಟದ ಮಾತುಗಳು ಕೆಲವು ಗೂಡಾರ್ಥಗಳಿಂದ ಕೂಡಿರುವಂತೆ ತೋರುವುದು. ಅರ್ಥ ಸಾಮಂಜಸ್ಯವಿಲ್ಲದೆ ಶಬ್ದರಚನೆಯು ಅಸಂಭವ. ಕಣ್ಣಾಮುಚ್ಚೆ ಇತ್ಯಾದಿ ವಾಕ್ಯರಚನೆಗಳ ನಿಬಂಧನಕಾರರಿಗೆ ಆದಿಯಲ್ಲಿ ಏನು ಅಭಿಪ್ರಾಯವಿತ್ತೋ ತಿಳಿಯದಾಗಿದೆ. ಒಂದು ವೇಳೆ ಹೀಗಿರಬಹುದೇ" (ಅದೆ, ಪು. ೧೫೫) ಎಂದು ಅದರ ವಿವರಣೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. ಆ ವಿವರಣೆ ನಮಗೀಗ ಸರಿಯೆನಿಸಲಾರದು. ಆದರೆ ಈ ಹಾಡುಗಳಲ್ಲಿ ಏನೋ ಗುಡಾರ್ಥ ತುಂಬಿರುತ್ತದೆ ಎಂಬ ಅವರ ಅನಿಸಿಕೆ ಸರಿಯಾದುದಾಗಿದೆ. ಎಲ್ಲ ಹಾಡುಗಳಲ್ಲಿ ಗೂಡಾರ್ಥಗಳಿಲ್ಲದಿದ್ದರೂ ಕೆಲವು ಹಾಡುಗಳಲ್ಲಂತೂ ರಂಗಸ್ವಾಮಿಗಳು ಅನುಮಾನಿಸುವಂತೆ ಗೂಡಾರ್ಥಗಳು ತುಂಬಿರುತ್ತವೆ. ಉದಾಹರಣೆಗೆ 'ಆನಿ ಬಂತಾನಿ' ಎಂಬ ಹಾಡಿನಲ್ಲಿ ಐತಿಹಾಸಿಕ ಸತ್ಯ ಇರುವದೆಂದು ಡಾ. ಬಿ.ಎಸ್.ಗದ್ದಗಿಮಠ, ಈಶ್ವರಚಂದ್ರ ಚಿಂತಾಮಣಿ ಅವರೆಲ್ಲ ಬರೆಯುತ್ತಾರೆ.

ಜನಪದ ಮಕ್ಕಳ ಹಾಡುಗಳನ್ನು ವಿಜಯಪುರ ಜಿಲ್ಲೆಯಲ್ಲಿ ಸಂಗ್ರಹಿಸಿದ ಕೆಲ ಉದಾಹರಣೆಗಳನ್ನು ಈಶ್ವರಚಂದ್ರ ಚಿಂತಾಮಣಿ ಅವರ **'ಗರತಿಯರ ಮನೆಯಿಂದ'** (೧೯೫೫) ಎಂಬ ಸಂಗ್ರಹದಲ್ಲಿ 'ಮಕ್ಕಳ ಆಟಗಳಲ್ಲಿ' ಎಂಬ ಹೆಸರಿನಲ್ಲಿ ಸ್ವಾರಸ್ಯಕರವಾದ ಸುಮಾರು ೨೦ ಹಾಡುಗಳನ್ನು ಪ್ರಕಟಿಸಿದ್ದಾರೆ. ಅವುಗಳಿಗೆ ಬರೆದ ನಾಲ್ಕೈದು ಸಾಲಿನ

ವಿವರಣೆ ಹೀಗಿದೆ: "ಮಕ್ಕಳಿಗೆ ಆಟವೆಂದರೆ ತೀರಿತು. ಬಲುಹಿಗ್ಗು; ಹುರುಪು. ಅವರು ಆಡುತ್ತಾಡುತ್ತ ಹಾಡು ಹೆಣೆಯುವರು; ರಾಗ ತೆಗೆಯುವರು; ದನಿಗೂಡಿಸುವರು. ಓದುಬಾರದ ಮಕ್ಕಳ ಬಾಯಿಯಿಂದ ಹೊರಡುವ ಮಾತುಗಳು, ಶಬ್ದ-ಜಾಲ, ಹಾಡುಗಳು ಹೊಸವೂ ಸರಿ; ಹಳೆಯವೆಂದರೂ ಒಪ್ಪಲೇಬೇಕು. ಈ ಹಾಡುಗಳು ತಲೆಮಾರುಗಳಿಂದ ಬಂದಿವೆ' (ಗರತಿಯರ ಮನೆಯಿಂದ, ಪು. ೭೯).

ಈಶ್ವರಚಂದ್ರ ಚಿಂತಾಮಣಿ ಅವರು ಕೊಡುವ ಮಕ್ಕಳ ಸೂತ್ರಬದ್ಧ ನುಡಿಗಳಲ್ಲಿ ಮೂರು ಆಣಿಪೀಣಿ ಹಾಡುಗಳೂ ಸೇರಿವೆ. ಕೆಲವೇ ಸೂತ್ರಬದ್ಧ ನುಡಿಗಳ ಸಂಗ್ರಹದಲ್ಲಿ ಮಕ್ಕಳನ್ನು ರಮಿಸುವ, ಕುಳಿತಲ್ಲಿಯೇ ಮಕ್ಕಳನ್ನು ರಂಜಿಸಲು ಹೇಳುವ, ಆಟದೊಂದಿಗೆ ಬಳಸುವ- ಇವೆಲ್ಲ ಸೂತ್ರಬದ್ಧ ನುಡಿಗಳು ಸೇರಿವೆ. ಹೀಗಾಗಿ ಸಣ್ಣ ಪ್ರಮಾಣದ ಈ ಮಕ್ಕಳ ಸೂತ್ರಬದ್ಧ ನುಡಿಗಳು ಉತ್ತಮ ಉದಾಹರಣೆಗಳಾಗಿ ನಮಗೆ ಕಾಣುತ್ತವೆ. ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾದ 'ಆನಿ ಬಂತಾನಿ' ಹಾಡೂ ಇಲ್ಲಿದೆ.

ಆನಿಬಂತಾನಿ
ಯಾವೂರಾನಿ
ವಿಜಯನಗರದ ಆನಿ
ಇಲ್ಲಿಗ್ಯಾಕ ಬಂತು
ಹಾದಿಗೊಂದು ದುಡ್ಡಾ
ಬೀದಿಗೊಂದು ದುಡ್ಡಾ
ಅದೆ ದುಡ್ಡು ಕೊಟ್ಟು
ಶೇರ ಖೊಬ್ರಿ ತಂದು
ಲಟಾ ಲಟಾ ಮುರಿದು
ಚುಕ್ಕೋಳ ಬಾಯಾಗ ಕೊಟ್ಟು
ನಾ ಇಷ್ಟು ತಿಂದೆ
ನೀ ಇಷ್ಟು ತಿಂದೆ
ಆನಿ ಬಂತಾಽನಿ!

ಈ ಹಾಡಿಗೆ ಈಶ್ವರಚಂದ್ರ ಚಿಂತಾಮಣಿ ಅವರು ಒಂದು ಟಿಪ್ಪಣಿ ಬರೆಯುತ್ತಾರೆ: "ಈ ಆನಿಯಾಟದ ಹಿನ್ನೆಲೆ: ವಿಜಯನಗರ ಸಾಮ್ರಾಜ್ಯದ ಐಶ್ವರ್ಯ ಸಾವಿರಾರು ಆನೆಗಳ ಮೇಲೆ ತುಂಬಿ ಹೋಗಿ, ದಿಕ್ಕು ದಿಕ್ಕಾಗಿ-ಹಾದಿ ಬೀದಿ ತುಂಬ ಹಾಳಾದ ಕತೆ ಇರಬೇಕೆಂದು ನನ್ನ ನಂಬುಗೆ. ಯಾಕೆಂದರೆ ಇದರ ಹಿನ್ನೆಲೆಯನ್ನು ಮೂರು ನಾಲ್ಕು ಊರುಗಳಲ್ಲಿ ಹಿರಿಯರಿಗೆ ಕೇಳಿದಾಗ ಅವರು ಮೇಲಿನ ಕತೆಯನ್ನೇ ಹೇಳಿದ್ದುಂಟು" (ಪು.೮೦).

ಇಂತಹ ಮಕ್ಕಳ ಸೂತ್ರಬದ್ಧ ನುಡಿಗಳನ್ನು ಸಂಗ್ರಹಿಸಿ ಡಾ. ಬಿ.ಎಸ್. ಗದ್ದಗಿಮಠ ಅವರು ತಮ್ಮ ಪಿಎಚ್.ಡಿ. ಪ್ರಬಂಧ **'ಕನ್ನಡ ಜಾನಪದ ಗೀತಗಳು'** (೧೯೬೩) ಎಂಬ ಕೃತಿಯಲ್ಲಿ **'ಮಕ್ಕಳ ಆಟ-ಹಾಡುಗಳು'** ಎಂಬ ಒಂದು ಅಧ್ಯಾಯವನ್ನೇ ಮಾಡಿ ಚರ್ಚಿಸಿದ್ದಾರೆ, ವಿವರಿಸಿದ್ದಾರೆ. "ಮಕ್ಕಳಾಟವು ನಮ್ಮ ಪ್ರಪಂಚದ ಅನುಕರಣ. ಈ ಅನುಕರಣ

ಬುದ್ಧಿಯು (ಇನ್‌ಸ್ಟಿಂಗ್ಸ್ ಆಫ್ ಇಮಿಟೇಶನ್) ಕೆಲವು ಮಕ್ಕಳಲ್ಲಿ ಐದು ವರುಷಕ್ಕಿಂತ ಮೊದಲು ಕಂಡರೂ ಎಲ್ಲ ಮಕ್ಕಳಲ್ಲಿ ಬಹುತರವಾಗಿ ಐದು ವರುಷದ ನಂತರ ಕಂಡುಬರುವುದು. ತೀರ ಚಿಕ್ಕಮಕ್ಕಳಲ್ಲಿ ಒಡೆದು ಕಂಡುಬರುವ ಆಟಗಳೆಂದರೆ ಗೊಂಬೆಯ ಆಟಗಳು. ಆಡಲು ಅವರಿಗೆ ಗೊಂಬೆ ಮೊದಲಾದ ಜೀನಸುಗಳೂ ಬೇಕು. ಹೆಣ್ಣುಮಗು, ಮನೆಯಲ್ಲಿ ತಾಯಿಯು ಜೋಗುಳವೆತ್ತಿ ಲಾಲಿಗಳನ್ನು ಹಾಡಿ ಮಗುವನ್ನು ಚಪ್ಪರಿಸಿ ಮಗ್ಗಲು ಮಲಗಿಸುವುದನ್ನು ನೋಡಿ ಗೊಂಬೆಯನ್ನು ತನ್ನ ಮಗುವನ್ನಾಗಿ ಮಾಡಿ ತಾನೂ ತಾಯಿಯ ಅನುಕರಣ ಮಾಡುವುದು" (ಕ.ಜಾ.ಗೀ. ಪು.೪೩-೪೪). ಹೀಗೆ ಜೀವನದ ಅನುಕರಣವೇ ಮಕ್ಕಳ ಆಟಗಳ ಜೀವಾಳವಾಗಿದ್ದು, ಇಲ್ಲೆಲ್ಲ ಸೂತ್ರಬದ್ಧ ನುಡಿಗಳು ಬಳಕೆಯಾಗುವುದನ್ನು ಡಾ. ಗದ್ದಗಿಮಠ ಅವರು ಗಮನಿಸುತ್ತಾರೆ. ಅನೇಕ ಆಟಗಳ ವಿವರಗಳೊಂದಿಗೆ ಸೂತ್ರಬದ್ಧ ನುಡಿಗಳನ್ನು ಉದಾಹರಣೆಯಾಗಿ ವಿವರಿಸಿದ್ದಾರೆ. ಆನಿ ಬಂತಾನಿ, ಕೈ ಕೈ ಎಲ್ಲೊಯ್ತು, ಗುಜುಗುಜು ಮಾಮರಿ, ಅಕ್ಕಿ ತೊಳಸೇನೌ ಇಂತಹ ಅನೇಕ ಹಾಡುಗಳನ್ನು ಉಲ್ಲೇಖಿಸುತ್ತ, ಆಯಾ ಆಟಗಳ ವಿವರಗಳನ್ನು ಕೂಡ ಬರೆಯುತ್ತಾರೆ. ಹೀಗಾಗಿ ೧೯೫೪ರಲ್ಲಿ ಪಿಎಚ್.ಡಿ. ದೊರೆಯಲು ಕಾರಣವಾದ ಈ ಕೃತಿ ಮುಂದೆ ಹತ್ತು ವರ್ಷಗಳ ದೀರ್ಘ ಅವಧಿಯ ನಂತರ ಪ್ರಕಟವಾಗಿದೆ.

ಕನ್ನಡ ಜನಪದ ಸಾಹಿತ್ಯ ಪ್ರಕಟನೆ ಆಧುನಿಕ ಯುಗದಲ್ಲಿ ಪ್ರಾರಂಭವಾಗುವುದು ೧೯೭೦ರ ನಂತರವೇ. ಅಪರೂಪಕ್ಕೆ ಒಂದೆರಡು ಸಂಗ್ರಹಗಳು ಆ ಮುಂಚೆಯೂ ಪ್ರಕಟವಾಗಿರಬಹುದು. ೧೯೭೨ರ ಪ್ರಾರಂಭದಲ್ಲಿಯೇ (ಜನೆವರಿ) ಮಕ್ಕಳಾಟದ ಹಾಡುಗಳಿಗೆ ಸಂಬಂಧಿಸಿ ಪ್ರಕಟವಾದ ಕೃತಿ 'ಶಿಶುಪ್ರಾಸಗಳು' ಎಂಬುದು. ಇದನ್ನು ಅದೇ ಆಗ ಮೈಸೂರಿನಲ್ಲಿ ಹುಟ್ಟಿಕೊಂಡಿದ್ದ 'ಜಾನಪದ ಬಳಗ' ಯುವಕರಿಂದ ಸಂಗ್ರಹಗೊಂಡ ಮಕ್ಕಳ ಹಾಡುಗಳು ಇಲ್ಲಿವೆ. ಈ ಕೃತಿಯಲ್ಲಿರುವ ೧೮೮ ಶಿಶುಪ್ರಾಸಗಳನ್ನು ಯಾರ‍್ಯಾರು ಎಲ್ಲೆಂಲ್ಲಿಂದ ಎಷ್ಟೆಷ್ಟು ಪ್ರಾಸಗಳನ್ನು ಸಂಗ್ರಹಿಸಿದ್ದಾರೆ ಎಂಬ ಮಾಹಿತಿ ಪಟ್ಟಿಯನ್ನು ಒಂದೆಡೆ ಮುದ್ರಿಸಿದ್ದಾರೆ. ಅದರಂತೆ ಡಿ.ಕೆ.ರಾಜೇಂದ್ರ ಅವರು ಹಾಸನ ತಾಲೂಕು, ಹೊರೆಯಾಲ ದೊರೆಸ್ವಾಮಿ ಅವರು ಗುಂಡ್ಲುಪೇಟೆ ತಾಲ್ಲೂಕು, ಚೌಡೇಗೌಡ ಬೀಡನಹಳ್ಳಿ ಅವರು ಟಿ.ನರಸೀಪುರ ತಾಲ್ಲೂಕು, ಜೀಶಂಪ ಅವರು ನಾಗಮಂಗಳ ತಾಲ್ಲೂಕು, ಪಿ.ಆರ್. ತಿಪ್ಪೇಸ್ವಾಮಿ ಅವರು ಸೋಮವಾರಪೇಟೆ ತಾಲೂಕು, ಟಿ.ಎಸ್.ರಾಜಪ್ಪ ಅವರು ನಂಜನಗೂಡು ತಾಲ್ಲೂಕು-ಗಳಿಂದ ಸಂಗ್ರಹಿಸಿ ತಂದ ಶಿಶುಪ್ರಾಸಗಳು ಇಲ್ಲಿವೆ.

ಆಗಿನ ಈ ಎಲ್ಲ ಯುವಕರು ಮುಂದೆ ಜಾನಪದ ಕ್ಷೇತ್ರದ ದೊಡ್ಡದೊಡ್ಡ ವಿದ್ವಾಂಸರಾಗಿ ಗಮನಾರ್ಹ ಕೆಲಸ ಮಾಡಿದವರಾಗಿದ್ದಾರೆ. ಈ ಕೃತಿಯ ಅರಿಕೆಯಲ್ಲಿ ಹೀಗೆ ಬರೆದಿದ್ದಾರೆ: "ಇದು 'ಶಿಶುಪ್ರಾಸಗಳ'ನ್ನೊಳಗೊಂಡ ಪ್ರಥಮ ಸಂಕಲನವಷ್ಟೇ ಅಲ್ಲ, ಒಂದು ಪ್ರಾತಿನಿಧಿಕ ಸಂಕಲನ ಕೂಡ. ಬೇರೆ ಬೇರೆ ಪ್ರಾಂತದಿಂದ ಬೇರೆಬೇರೆಯವರು ಸಂಗ್ರಹಿಸಿದುದನ್ನು ಇಲ್ಲಿ ಸಂಚಯಿಸಲಾಗಿದೆ. ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಲೂ ಇದು ಸಹಾಯಕವಾಗುತ್ತದೆ. ಮುಂಬರುವ ಶಿಶುಪ್ರಾಸಗಳ ಪ್ರಕಟನೆಗೆ ಇದು ನಾಂದಿಯಾಗಿರುವುದಷ್ಟೇ ಅಲ್ಲ, ಪ್ರೇರಕವೂ ಆಗಲಿ ಎಂದು ಆಶಿಸೋಣ. ...ಕನ್ನಡದಲ್ಲಿ

ಶಿಶುಪ್ರಾಸಗಳ ಬಗ್ಗೆ ಮೊದಲು ಪ್ರಸ್ತಾಪಿಸಿದವರು ಡಾ. ಹಾ.ಮಾ.ನಾಯಕ ಅವರು. ಇಂಗ್ಲೀಷಿನ ನರ್ಸರಿ ರೈಮ್ ಎಂಬ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಶಿಶುಪ್ರಾಸ ಎಂಬ ಹೆಸರನ್ನು ಪ್ರಥಮವಾಗಿ ಸೂಚಿಸಿದವರು ಅವರೇ".

'ಶಿಶು ಪ್ರಾಸಗಳು' ಒಂದು ಕೃತಿಯಾಗಿ ಮಕ್ಕಳ ಹಾಡುಗಳಿಗೆ ಸಂಬಂಧಿಸಿದಂತೆ ಮೊದಲ ಸಂಕಲನವಾಗಿರಬಹುದು. ಮಕ್ಕಳ ಹಾಡುಗಳ ಬಗೆಗೆ ಮೊದಲು ಪ್ರಸ್ತಾಪಿಸಿದವರು ಖಂಡಿತ ಹಾ. ಮಾ. ನಾಯಕರಲ್ಲ. ಈ ಮಕ್ಕಳಟಾದ ಹಾಡುಗಳನ್ನು ಕುರಿತು ೧೯೩೩ ರಲ್ಲಿ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'** ಕೃತಿಯಲ್ಲಿ ಅರ್ಚಕ ಬಿ. ರಂಗಸ್ವಾಮಿ ಅವರು, ೧೯೫೫ ರಲ್ಲಿ 'ಗರತಿಯರ ಮನೆಯಿಂದ' ಕೃತಿಯಲ್ಲಿ ಈಶ್ವರಚಂದ್ರ ಚಿಂತಾಮಣಿ ಅವರು, ೧೯೬೩ರಲ್ಲಿ ಪ್ರಕಟವಾದ ಡಾ. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತಗಳು' ಕೃತಿಯಲ್ಲಿಯೂ ಇವುಗಳ ಬಗ್ಗೆ ಪ್ರಸ್ತಾಪ, ವಿವರಣೆ, ವಿಶ್ಲೇಷಣೆಗಳಿವೆ. 'ಶಿಶುಪ್ರಾಸಗಳು' ಎಂಬ ಪದವೂ ಕನ್ನಡಕ್ಕೆ ಒಗ್ಗುವಂತಹದಲ್ಲ. ಅದೊಂದು ಅನುವಾದ ಪದ ಅಷ್ಟೆ. ಕನ್ನಡಕ್ಕೆ ನೈಜವಾದ ಹೆಸರೆಂದರೆ 'ಮಕ್ಕಳಾಟದ ಹಾಡುಗಳು' ಎಂಬುದೇ ಸರಿಯಾದುದು. ಪ್ರಾದೇಶಿಕ ಪದಗಳನ್ನು ಬಳಸಿಕೊಂಡು ಶಿಶುಗೀತಗಳು, ಚುಕ್ಕೋಳ ಪದಗಳು ಮುಂತಾಗಿ ಬೇಕಾದರೆ ಕರೆದುಕೊಳ್ಳಬಹುದು.

ಈ **'ಶಿಶುಪ್ರಾಸಗಳು'** ಕೃತಿಯಲ್ಲಿ ಕಾಣಿಸುವ ಅನೇಕ ನುಡಿಗಳು ಉತ್ತರಕರ್ನಾಟಕ ಭಾಗದಲ್ಲೂ ಪ್ರಚಾರದಲ್ಲಿವೆ. ಮತ್ತೆ ಮುಂದೆ ಪ್ರಕಟವಾದ ಇಂತಹ ಮಕ್ಕಳ ಹಾಡುಗಳ ಕೃತಿಗಳನ್ನು ಗಮನಿಸಿದರೆ ಅಲ್ಲೂ ಈ ಕೃತಿಯಲ್ಲಿಯ ಹಾಡುಗಳು ಕಾಣಿಸುತ್ತವೆ. ಇದನ್ನು ಗಮನಿಸಿದರೆ ಮಕ್ಕಳಹಾಡುಗಳಲ್ಲಿ ಕೆಲವಾದರೂ ಎಲ್ಲಕಡೆ ಪ್ರಚಾರ ಪಡೆದಿವೆ ಎನಿಸುತ್ತದೆ. ಗಾದೆ, ಕಥೆ, ಒಗಟುಗಳಾದರೆ ಸರಿ, ಪ್ರಾದೇಶಿಕ ರಚನೆಗಳಾಗಿರಬಹುದಾದ ಮಕ್ಕಳ ಹಾಡುಗಳು ಕೂಡ ಹೀಗೆ ಎಲ್ಲ ಕಡೆ ದೊರೆಯುತ್ತವೆಂದರೆ, ಇದು ನಿಜವಾಗಿಯೂ ಗಮನಿಸಬೇಕಾದ ಸಂಗತಿಯೇ ಎನಿಸುತ್ತದೆ. ಉದಾಹರಣೆಗೆ:

ಕಾಗೆ ಕಾಗೆ ಕೌಕೌ
ಯಾರ್ ಬತ್ತರೌ?
ಮಾವ ಬತ್ತನೌ
ಮಾವಂಗ್ ಏನ್ ಊಟ?
ರಾಗಿಕಲ್ ಗೂಟ

ಉತ್ತರ ಕರ್ನಾಟಕದಲ್ಲಿ ದೊರೆಯುವ ಇದರ ಪಾಠ ಹೀಗಿದೆ:

ಕಾಗಿ ಕಾಗಿ ಕೌ
ಯಾರ್ ಬಂದಾರೌ
ಮಾವ ಬಂದಾನೌ
ಏನ ತಂದಾನೌ
ಹಂಡೆದಂಥ ಕುಂಡಿ ತಗೊಂಡು
ಹಂಗೆ ಬಂದಾನೌ

ಮಾವನಿಗೇನು ಊಟ
ಬೀಸಕಲ್ಲ ಗೂಟ

'ಹತ್ತಿ ಕಟಗಿ ಬತ್ತಿ ಕಟಗಿ', 'ಕೈ ಕೈ ಎಲ್ಲಿಟ್ಟಿ', 'ಆನಿ ಬಂತಾನಿ ಯಾವೂರಾನಿ' ಇಂತಹ ಹತ್ತಾರು ನುಡಿಗಳು ಕರ್ನಾಟಕದ ಎಲ್ಲ ಕಡೆ ಪ್ರಚಾರದಲ್ಲಿರುವಂತೆ ತೋರುತ್ತದೆ. ಆದರೆ ಹೆಚ್ಚಿನ ನುಡಿಗಳು ಪ್ರಾದೇಶಿಕ ಸೃಷ್ಟಿಗಳೇ ಆಗಿವೆ. ಅದಕ್ಕಾಗಿ ಈ ಮಕ್ಕಳಾಟದ ಹಾಡುಗಳನ್ನು ವ್ಯಾಪಕವಾಗಿ ಸಂಗ್ರಹಮಾಡುವ ಕೆಲಸ ನಡೆಯಬೇಕು. ಈಗ ಆಗಿರುವುದು ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ.

'ಶಿಶು ಪ್ರಸಗಳು' ಕೃತಿಯಲ್ಲಿಯ ನುಡಿಗಳನ್ನು ಆಸಕ್ತ ಜನ ಸಂಗ್ರಹಿಸಿ, ಕೂಡಿ ವಿಚಾರ ಮಾಡಿ ಪಾಠಗಳನ್ನು ಆಯ್ಕೆ ಮಾಡಿದ್ದರಿಂದ ಇಲ್ಲಿಯ ನುಡಿಗಳು ಉತ್ತಮವಾಗಿವೆ, ಕಾವ್ಯಾತ್ಮಕವಾಗಿವೆ. ಆದರೆ ಒಂದಿಷ್ಟು ಅವಸರದಲ್ಲಿ ಪ್ರಕಟಪಡಿಸಿದ್ದಾರೆಂದು ತೋರುತ್ತದೆ. ಈ ನುಡಿಗಳ ಸಂದರ್ಭಗಳ ವಿವರಣೆಗಳನ್ನು ಕೊಟ್ಟಿದ್ದರೆ ಈ ಕೃತಿಗೆ ಇನ್ನೂ ಮಹತ್ವ ಬರುತ್ತಿತ್ತು.

೧೯೭೨ ರಲ್ಲಿಯೇ ರಾಗೌ ಅವರು **'ಕನ್ನಡ ಶಿಶು ಪ್ರಾಸಗಳು'** ಎಂಬ ಹೆಸರಿನಲ್ಲಿ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ೧೩೭ ಮಕ್ಕಳ ಹಾಡುಗಳಿವೆ. ಅವುಗಳನ್ನು ಅಕಾರಾದಿಯಾಗಿ ಜೋಡಿಸಿ ಕೊಟ್ಟಿದ್ದಾರೆ. ಕೊನೆಯಲ್ಲಿ ೪೭ ಹಾಡುಗಳ ಹಿನ್ನೆಲೆಯನ್ನು ಒದಗಿಸಿದ್ದಾರೆ. ಮಂಡ್ಯ, ಮೈಸೂರು ಜಿಲ್ಲೆಗಳ ಕೆಲ ಭಾಗಗಳಿಂದ ಈ ಕೃತಿಯಲ್ಲಿಯ ಮಕ್ಕಳ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇಲ್ಲಿಯ ಹಾಡುಗಳನ್ನು ರಾಗೌ ಅವರೂ 'ಶಿಶುಪ್ರಾಸಗಳು' ಎಂದೇ ಕರೆದಿದ್ದಾರೆ. ಅಮೆರಿಕಾದಲ್ಲಿ ಬಳಕೆಯಲ್ಲಿರುವ 'ನರ್ಸರಿ ರೈಮ್ಸ್' ಎನ್ನುವದನ್ನು ಡಾ. ಹಾಮಾನಾ 'ಶಿಶುಪ್ರಾಸಗಳು' ಎಂದು ಅನುವಾದಿಸಿದ್ದಾರೆ. ಈ ಕೃತಿಗೆ ಹಸರಿಟ್ಟವರೂ ಡಾ. ಹಾಮಾನಾಯಕ ಅವರೇ ಎಂಬ ಮಾತನ್ನು ರಾಗೌ ಅವರು ತಮ್ಮ ಅರಿಕೆಯಲ್ಲಿ ದಾಖಲಿಸಿದ್ದಾರೆ. ೧೯೬೭ರ ನಂತರ ಮೈಸೂರು ವಿಶ್ವವಿದ್ಯಾಲಯದ ವಲಯದಲ್ಲಿ ಜನಪದ ಸಾಹಿತ್ಯಕ್ಕೆ ಸಂಬಂದಿಸಿದ ಕೆಲಸಗಳು ಭರದಿಂದ ಸಾಗಿದವು. ಆಗಿನ ಕಾಲಕ್ಕೆ ಜನಪದ ಸಾಹಿತ್ಯದ ಯಾವುದೇ ಪ್ರಕಾರಗಳನ್ನು ಪರಿಚಯಿಸುವಾಗ ಹೊರದೇಶಗಳಲ್ಲಿ ಅವುಗಳನ್ನು ಏನೆಂದು ಕರೆಯುತ್ತಾರೆ, ಅದರ ಕನ್ನಡ ತರ್ಜುಮೆ ಏನಾಗುತ್ತದೆ? ಎನ್ನುವ ಕಡೆ ಲಕ್ಷ ಹಾಕಿದ್ದು ಸ್ವಾಭಾವಿಕ. ಅದರಲ್ಲೂ ಡಾ. ದೇಜಗೌ ಮತ್ತು ಹಾಮಾನಾ ಅವರು ತುಂಬಾ ಪ್ರಭಾವಶಾಲಿ ಪ್ರಾಧ್ಯಾಪಕರಾಗಿದ್ದು, ಅವರು ಹೇಳಿದುದನ್ನು, ಬರೆದುದನ್ನು ಅನುಮೋದಿಸುವ, ಅನುಕರಿಸುವ ಸಹಜಕ್ರಿಯೆಗಳು ಅವರ ಶಿಷ್ಯಗಣದಲ್ಲಿ ಎದ್ದು ಕಾಣುವುದು ಸ್ವಾಭಾವಿಕ.

ಈ 'ಶಿಶುಪ್ರಾಸಗಳು' ಎನ್ನುವ ಪದ 'ನರ್ಸರಿ ರೈಮ್ಸ್'ಗೆ ಸರಿಯಾದ ಸಂವಾದಿ ಪದವಾಗಿರಬಹುದು, ಆದರೆ ಕನ್ನಡಕ್ಕೆ ಅದು ಸಹಜವಾದ ಪದದಂತೆ ಭಾಸವಾಗುವುದಿಲ್ಲ. ಕೇಳಲು ಕಿವಿಗೆ ಹಿತವೆನಿಸುತ್ತಿಲ್ಲ. ಬದಲಾಗಿ ಸ್ವಲ್ಪ ಶುಷ್ಕವೆನಿಸುತ್ತದೆ. ಕಾರಣ ಇವುಗಳನ್ನು 'ಮಕ್ಕಳ ಹಾಡುಗಳು' ಎಂದರೇನೆ ಚಂದ. ಬೇಕಾದರೆ 'ಮಕ್ಕಳ ನುಡಿಗಳು' ಎನ್ನಬಹುದು.

ಕನ್ನಡದಲ್ಲಿ ಸಹಜವಾಗಿ ಬಳಕೆಯಾಗುವ ಪ್ರಾದೇಶಿಕ ಪದಗಳನ್ನು ಬಳಸಬಹುದು. ಡಾ. ಲಠ್ಠೆ ಅವರು ತಮ್ಮ ಕೃತಿಗೆ 'ಚುಕ್ಕೋಳ ಪದಗಳು' ಎಂದು ಕರೆದಿದ್ದಾರೆ. ಕೆಲವರು 'ಶಿಶುಗೀತಳು' ಎಂದೂ ಪ್ರಯೋಗಿಸಿದ್ದಾರೆ. ಹೀಗೆ ಯಾವುದಾದರೂ ಸಹಜ ಪದವನ್ನು ಬಳಸುವುದು ಹೆಚ್ಚು ಉತ್ತಮವೆಂದು ಕಂಡುಬರುತ್ತದೆ. ನಮಗೆ ಸಹಜವಾದ ಕನ್ನಡದಲ್ಲಿ ಬಳಕೆಯಲ್ಲಿರುವ ಪದಗಳಿಗೆ ಬದಲಾಗಿ ಅನುವಾದದ ಪದಗಳನ್ನು ಬಳಸುವ ಅಗತ್ಯ ಕಾಣುವುದಿಲ್ಲ. ಆದರೆ ಪ್ರಾರಂಭದಲ್ಲಿ ಇಂತಹ ಕೆಲಸಗಳು ನಡೆಯುವುದು ಸ್ವಾಭಾವಿಕ.

ರಾಗೌ ಅವರ ಕೃತಿ ಒಂದು ಸಂಪೂರ್ಣ ಕೃತಿಯ ರಚನೆಯನ್ನು ಹೊಂದಿದೆ. ಮೊದಲಿಗೆ ಪ್ರಸ್ತಾವನೆ, ಕೊನೆಯಲ್ಲಿ ಆಯ್ದ ಕೆಲ ನುಡಿಗಳ ಸಂದರ್ಭಗಳ ವಿವರಣೆ, ಒಂದಿಷ್ಟು ಪ್ರಾದೇಶಿಕ ಪದಗಳ ಅರ್ಥಕೋಶ ಇವೆಲ್ಲವನ್ನೂ ಕೊಟ್ಟಿದ್ದಾರೆ. ರಾಗೌ ಅವರು ಬರೆದ ಪ್ರಸ್ತಾವನೆ ಅಭ್ಯಾಸಪೂರ್ಣವಾಗಿದೆ. ಹೆಚ್ಚಾಗಿ ಪಾಶ್ಚಾತ್ಯರಲ್ಲಿರುವ ಮಕ್ಕಳ ಹಾಡುಗಳ ಬಗೆಗಿನ ವಿಚಾರಗಳನ್ನು ಪರಿಚಯಿಸಿ, ನಂತರ ಕನ್ನಡದ ಸಂದರ್ಭಕ್ಕೆ ಬರುತ್ತಾರೆ. 'ಕಂಠಸ್ಥ ಸಂಪ್ರದಾಯಗಳಲ್ಲಿ ಮಕ್ಕಳಿಗೆ ಸಂಬಂಧಿಸಿದ ಪರಂಪರಾಗತ ಜ್ಞಾನವೂ ಒಂದು; ಅದರ ಕಾವ್ಯ ಭಾಗವೇ ಶಿಶುಪ್ರಾಸಗಳು' ಎನ್ನುತ್ತಾರೆ. ರಾಗೌ ಅವರು ಶಿಶುಪ್ರಾಸಗಳನ್ನು ಕಾವ್ಯ ಎಂದು ಕರೆಯುವುದು ಇಲ್ಲಿ ಗಮನಾರ್ಹವಾಗಿದೆ. "ಭಾಷೆಯಲ್ಲಿನ ಅತ್ಯಂತ ಚೋದನ ಪದ್ಯಭಾಗವೆಂದರೆ ಈ ಶಿಶುಪ್ರಾಸಗಳು. ಇವು ಮಕ್ಕಳು ಪರಸ್ಪರವಾಗಿ ಕಲಿತುಕೊಳ್ಳುವಂಥವು, ತಲೆಮಾರಿನಿಂದ ತಲೆಮಾರಿಗೆ ಅವರಲ್ಲಿ ಹರಿದು ಬಂದಿರುವಂಥವು. ಇವು ಅವರಿಗೆ ಹೆಚ್ಚು ವಾಸ್ತವಿಕವೂ ಉಪಯುಕ್ತವೂ ಆಗಿವೆ. ವಿಸ್ಮೃತ ಮನೋರಂಜನೆಯನ್ನು ಒದಗಿಸಿವೆ. ಪ್ರಾಚೀನವಾದ ಮತ್ತು ವ್ಯಾಪಕ ಪ್ರಸಾರವಿರುವ ಈ ಬಗೆಯ ಪದ್ಯಗಳು, ತಮ್ಮ ನಾದ ಹಾಗೂ ವಸ್ತುವಿಷಯ ಗಳೆರಡರಲ್ಲಿಯೂ ಜಗತ್ತಿನಾದ್ಯಂತ ಸಾದೃಶ್ಯವನ್ನು ತೋರಿವೆ; ಪುರಾತನ ಕರ್ಮಾಚರಣೆಗಳ ಮತ್ತು ನಂಬಿಕೆಗಳ ಅವಶೇಷಗಳಾಗಿವೆ" (ಪ್ರ.ಪು.೨). ಇಲ್ಲಿಯ ಕೆಲವೇ ಸಾಲುಗಳಲ್ಲಿ ಮಕ್ಕಳ ಹಾಡುಗಳ ಸ್ವರೂಪ, ಪ್ರಸಾರ, ಪರಂಪರೆ, ಪ್ರಯೋಜನ, ಪರಿಣಾಮ, ಪ್ರಾಚೀನತೆ, ಪ್ರಪಂಚದಾದ್ಯಂತ ಪ್ರಸಾರದಲ್ಲಿರುವವು, ಮತ್ತು ಕೆಲ ಸಂಗತಿಗಳ ಅವಶೇಷಗಳು ಎಂಬ ಹಲವಾರು ಸಂಗತಿಗಳನ್ನು ಹೇಳಿಬಿಟ್ಟಿದ್ದಾರೆ.

'ಶಿಶುಪ್ರಾಸಗಳು ಮತ್ತು ಶಾಲಾ ಪ್ರಾಸಗಳು' ಎಂಬುದಾಗಿ ಮಕ್ಕಳ ಹಾಡುಗಳನ್ನು ಎರಡು ಬಗೆಯಲ್ಲಿ ಹೇಳುತ್ತಾರೆ. ಇವು ಹೊರದೇಶದಲ್ಲಿರುವ ಮಕ್ಕಳ ಹಾಡುಗಳನ್ನು ಗಮನಿಸಿ ಅಲ್ಲಿಯವರು ಗುರುತಿಸಿದ ಪ್ರಕಾರಗಳು ಎನಿಸುತ್ತವೆ. ನಮ್ಮಲ್ಲಿ 'ಶಾಲಾ ಪ್ರಾಸಗಳು' ಎನ್ನುವ ಭಾಗ ದೊಡ್ಡದಿದೆ ಎಂದು ಅನಿಸುವುದಿಲ್ಲ. ಮನೆಯ ಒಳಗೆ ಮತ್ತು ಮನೆಯ ಹೊರಗೆ (ಅಂಗಳ, ಬೀದಿ=ಒಳಾಂಗಣ, ಹೊರಾಂಗಣ) ಬಳಕೆಯಾಗುವ ಮಕ್ಕಳ ಹಾಡುಗಳು ಎಂದು ಬೇಕಾದರೆ ಹೇಳಬಹುದು. ಇಂತಹ ವಿಷಯಗಳ ಬಗ್ಗೆ ಪ್ರಸ್ತಾಪಿಸುವಾಗ ಇವು ಯಾವ ದೇಶದಿಂದ ಬಂದುವು, ಯಾವ ಕೃತಿಯಲ್ಲಿ ಯಾರು ಹೇಳಿದರು ಎಂದು ಖಚಿತವಾಗಿ ಹೇಳುತ್ತ ಹೋದರೆ ಹೆಚ್ಚು ಉಪಯುಕ್ತವಾಗುತ್ತದೆ. ಎಲ್ಲಿಯದೇ ಅದರು ಸರಿ, ವಿಷಯದ ಜ್ಞಾನ ಇರಲಿ. ಅದರಲ್ಲಿ ನಮಗೆ ಅನ್ವಯವಾಗುವುದು ಯಾವುದು? ಅನ್ಯವೆನಿಸುವುದು ಯಾವುದು? ಎಂಬ ವಿಷಯದ ಖಚಿತ ಸೂಚನೆಗಳೂ

ಅಲ್ಲಿರುವುದು ಅವಶ್ಯವೆಂದು ನಾವಿಂದು ಬಯಸುವುದು ತಪ್ಪಲ್ಲವೆನಿಸುತ್ತದೆ. ಕನ್ನಡದಲ್ಲಿ ಬಂದ ಐದಾರು ಮಕ್ಕಳಾಟದ ಹಾಡುಗಳ ಸಂಗ್ರಹಗಳನ್ನು ಗಮನಿಸಲಾಗಿದೆ. ಅವುಗಳಲ್ಲಿ ಶಾಲಾಪ್ರಾಸಗಳು ಗಣನೀಯ ಸಂಖ್ಯೆಯಲ್ಲಿ ತೋರುವುದಿಲ್ಲ. ಆದರೆ ವಿಶೇಷವಾಗಿ ಇಂಗ್ಲಂಡ ಅಮೇರಿಕಾದಂತಹ ದೇಶಗಳಲ್ಲಿ ಶಾಲಾಪ್ರಾಸಗಳು ಗಣನೀಯ ಪ್ರಮಾಣದಲ್ಲಿ ಇರಲು ಸಾಧ್ಯ. ಅಂಥಲ್ಲಿ ಮಾತ್ರ ಮನೆಯಲ್ಲಿ ಬಳಕೆಯಾಗುವ ಹಾಡುಗಳಿಗೂ ಶಾಲೆಯ ಆವರಣದಲ್ಲಿ ಬಳಕೆಯಾಗುವ ಹಾಡುಗಳಿಗೂ ಖಂಡಿತ ವ್ಯತ್ಯಾಸವಿರಲು ಸಾಧ್ಯವಿದೆ.

"ಶಾಲಾಪ್ರಾಸಗಳು ಮಕ್ಕಳಿಂದ ಮಕ್ಕಳಿಗೆ ಬರುವಂಥವು. ಕೌಟುಂಬಿಕ ಪ್ರಭಾವದ ಹೊರಗೆ ಆವರ್ತಿಸುವಂಥವು. ಈ ಬಗೆಯ ಪ್ರಾಸಗಳು ವಯಸ್ಕರು ಕೇಳುವುದಕ್ಕೆ ಆದೇಶಿತವಾಗಿರುವುದಿಲ್ಲ. ಇವು ಕೇವಲ ಬಾಲಕರ ವಿನೋದಗಳೂ ಆಲೋಚನೆಗಳೂ ಆಗಿರುತ್ತವೆ. ವಯಸ್ಸಾದವರು ಅವುಗಳನ್ನು ಗಮನಿಸುವುದಿಲ್ಲ. ಒಂದು ಪಕ್ಷ ಅವರೇನಾದರೂ ಗಮನಿಸಿದ್ದೇ ಆದರೆ, ಇವುಗಳನ್ನು ತುಳಿಯಲು ಯತ್ನಿಸುವುದು ಖಂಡಿತ. ಅವರಿಂದ ಈ ತರಹದ ರಚನೆಗಳಿಗೆ ಪ್ರೋತ್ಸಾಹ ದೊರಕುವುದಿಲ್ಲ. ಅಂದರೆ ಶಾಲಾ ಪ್ರಾಸಗಳಿಗೆ ದೊಡ್ಡವರ ಒಪ್ಪಿಗೆ ಇರುವುದಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಮಕ್ಕಳು ಮನೆಯ ವಾತಾವರಣದಿಂದ ಶಾಲೆಯ ವಾತಾವರಣಕ್ಕೆ ಬಂದ ಕೂಡಲೆ ಅವರ ಹಿಂದಿನ ಪ್ರಾಸಗಳಲ್ಲಿ ವ್ಯತ್ಯಾಸ ಗೋಚರಿಸಲು ಪ್ರಾರಂಭಿಸುತ್ತದೆ. ದಿನ ಕಳೆದಂತೆ ಅವುಗಳ ಪ್ರೀತಿ ತಪ್ಪಿ ತಮ್ಮದೇ ಆದ ಹೊಸ ಸ್ವತಂತ್ರ ಪ್ರಾಸಗಳನ್ನು ಸೃಷ್ಟಿಸಲು ತೊಡಗುತ್ತಾರೆ. ಒಂದು ಸಂಪ್ರದಾಯದಿಂದ ತಪ್ಪಿಸಿಕೊಂಡರೂ ಇನ್ನೊಂದು ಸಂಪ್ರದಾಯದಲ್ಲಿ ಮುಳುಗುವದನ್ನಿಲ್ಲಿ ಕಾಣುತ್ತೇವೆ" (ಪ್ರ.ಪು.೩). ಇದು ರಾಗೌ ಅವರು ಬಹುಶಃ ಅಮೆರಿಕೆಯಂತಹ ದೇಶದ ಶಾಲೆಗಳಲ್ಲಿ ಬಳಕೆಯಾಗುವ ಮಕ್ಕಳ ಹಾಡುಗಳ ಬಗ್ಗೆ ಬರೆದ ವಿದ್ವಾಂಸರೊಬ್ಬರ ವಿಚಾರಗಳನ್ನು ಅನುವಾದಿಸಿ ಹೇಳುತ್ತಿದ್ದಾರೆಂದು ತೋರುತ್ತದೆ. ಭಾರತದಂತಹ ದೇಶದಲ್ಲಾದರೆ ಮಕ್ಕಳು ಮನೆಯ ಹೊರಗೆ– ಅಂಗಳದಲ್ಲಿ ಅಥವಾ ಬೀದಿಯಲ್ಲಿ ಆಡುತ್ತಿದ್ದರೂ ಅವರು ದೊಡ್ಡವರ ದೃಷ್ಟಿಯಿಂದ ಸಂಪೂರ್ಣವಾಗಿ ದೂರ ಸರಿದಿರುವುದಿಲ್ಲ. ಮನೆಯ ಹೊರಗೆ ಮಕ್ಕಳು ಆಡುತ್ತಿರುವಾಗ ಅಲ್ಲಿ ಪೋಷಕರ ಜೊತೆ ಸುತ್ತಲಿನ ಮನೆಯ ಹಿರಿಯರೂ ಪ್ರೇಕ್ಷಕರಾಗಿ ಮಕ್ಕಳನ್ನು ಪ್ರೋತ್ಸಾಹಿಸುತ್ತಿರುತ್ತಾರೆ. ತಿದ್ದಿ ಹೇಳುವ, ಮಾರ್ಗದರ್ಶನ ಮಾಡುವ ಕೆಲಸಗಳೂ ಹಿರಿಯರಿಂದ ನಡೆದಿರುತ್ತವೆ. ಇಂಗ್ಲಂಡ, ಅಮೇರಿಕಾ ದೇಶಗಳಲ್ಲಾದರೆ ಮನೆಯ ಹೊರಗೆ ಶಾಲಾ ವಾತಾವರಣದಲ್ಲಿ ಮೇಲೆ ವಿವರಿಸಿದ ವಾತಾವರಣ ಇರುವುದು ಸಹಜ. ನಮ್ಮಲ್ಲಿ ಅವಾಚ್ಯ–ಅಶ್ಲೀಲ ಪದಗಳು ಬಳಕೆಯಾಗುವುದು ಅಪರೂಪ. ಅವು ೮ ರಿಂದ ೧೪ ವರ್ಷದ ಹೆಣ್ಣು–ಗಂಡು ಮಕ್ಕಳು ಪ್ರತ್ಯೇಕವಾಗಿ ಆಡುವ ಆಟಗಳಲ್ಲಿ ಅಪರೂಪಕ್ಕೆಂಬಂತೆ ಬಳಕೆಯಾಗುತ್ತವೆ. ಈ ವಯಸ್ಸಿನ ಮಕ್ಕಳಲ್ಲಿಯೇ ಬಳಕೆಯಾಗುವ ಕೆಲ ವಿಡಂಬನಾತ್ಮಕ ಹಾಡುಗಳಲ್ಲಿ ಇಂತಹ ಪದಗಳು ಬಳಕೆಯಾಗಬಹುದು. ಅವು ಅಶ್ಲೀಲ ಎನ್ನುವುದಕ್ಕಿಂತ ವಿಡಂಬನೆಗಾಗಿ ಬಳಸಿದ ಪದಗಳಾಗಿರಬಹುದಾಗಿದೆ.

ಮಕ್ಕಳ ಹಾಡುಗಳಿಗೆ ಸಂಬಂಧಿಸಿದಂತೆ ಡಾ. ರಾಗೌ ಅವರು ಗುರುತಿಸುವ ಒಂದು ಮಹತ್ವದ ಗುಣವೆಂದರೆ ಇವುಗಳಲ್ಲಿ ಶಬ್ದ ಮುಂದಾಗಿ ಅರ್ಥ ಹಿಂದಾಗಿರುತ್ತದೆ ಎಂಬರ್ಥದ

ಮಾತು. "ಯಾವುದೇ ರೀತಿಯ ಜನಪ್ರಿಯ ಪ್ರಾಸಕ್ಕೆ ಸಾಮಾನ್ಯವಾಗಿ ಎರಡು ಗುಣಗಳಿರುತ್ತವೆ: ತೂಗಿತೊನೆಯವ ಲಯ ಮತ್ತು ಪದ ಅಥವಾ ಧ್ವನಿಗಳ ಪುನರಾವೃತ್ತಿ. ಅರ್ಥ ಯಾಗಾಗಲೂ ಇಲ್ಲಿ ಗೌಣ. ಅನುರಣಿತ ಧ್ವನಿ ಸಂಯೋಜನೆಯೇ ರಚನೆಯ ಪ್ರಧಾನ ಲಕ್ಷಣ" (ಪ್ರ.ಪು. ೩-೪). ಈ ವಿವರಣೆಯಲ್ಲಿ ಶಿಶುಪ್ರಾಸಗಳನ್ನು ಹಾಡುಗಳೆಂದೇ ಗಣಿಸಿ, ಅವುಗಳಲ್ಲಿ ಹುದುಗಿರುವ ಕಾವ್ಯದ ಗುಣಗಳನ್ನು ಹೇಳುತ್ತಾರೆಂಬುದನ್ನು ಗಮನಿಸಬೇಕು.

ಪ್ರಾಸಗಳ ಲಕ್ಷಣಗಳಲ್ಲಿ ಏಕರೂಪತೆ, ವಾಹಕತ್ವ ಇವುಗಳನ್ನೂ ಕೂಡ ಹೇಳುವಾಗ ಹೊರಗಿನವರ ವಿಚಾರಗಳನ್ನೇ ಹೇಳುತ್ತಾರೆನಿಸುತ್ತದೆ. ಹೀಗೆ ಹೇಳುವಾಗ ನಮ್ಮಲ್ಲಿಯ ಮಕ್ಕಳ ನುಡಿಗಳ ಲಕ್ಷಣಗಳನ್ನು ಗಮನಿಸಿ ವಿವರಿಸಬಹುದಾಗಿದೆ. ಕರ್ನಾಟಕದ ಎಲ್ಲಕಡೆ ಪ್ರಚಾರದಲ್ಲಿರುವ ಕೆಲವು ನುಡಿಗಳನ್ನು ಹಿಂದೆ ಉಲ್ಲೇಖಿಸಲಾಗಿದೆ. ಅಲ್ಪಸ್ವಲ್ಪ ಭಿನ್ನತೆಗಳು ಕಾಣಬಹುದು. ಅದು ಜನಪದ ಸಾಹಿತ್ಯದಲ್ಲಿ ಸಹಜವಾದ ಒಂದು ಗುಣ. ವಾಹಕತ್ವವು ಈ ಹಾಡುಗಳ ಪ್ರಸರಣದ ತೀವ್ರತೆಯನ್ನು ಲಕ್ಷಿಸಿ ಹೇಳುವ ಮಾತಾಗುತ್ತದೆ. ಅಮೆರಿಕಾ ಇಂಗ್ಲಂಡದಂತಹ ದೇಶಗಳಲ್ಲಿ ಶಾಲಾ ಪ್ರಾಸಗಳು ಹೆಚ್ಚು ತೀವ್ರಗತಿಯಲ್ಲಿ ಪ್ರಸಾರವಾಗಬಹುದು. ಹೊಂದುವುದು ಕಾಣುತ್ತದೆ. ನಮ್ಮಲ್ಲಿ ಈ ವಾಹಕತ್ವವನ್ನು ಗಮನಿಸಬೇಕಾದುದು ಹೆಚ್ಚಾಗಿ ವಿಡಂಬನಾತ್ಮಕ ನುಡಿಗಳ ಪ್ರಸಾರದಲ್ಲಿ. ಪ್ರಾದೇಶಿಕ ಆಟಗಳ ನುಡಿಗಳಿಗಿಂತ ವಿಡಂಬನಾತ್ಮಕ ನುಡಿಗಳು ಒಂದಿಷ್ಟು ತೀವ್ರಗತಿಯಲ್ಲಿ ಚಲಿಸಿ ಪ್ರಸಾರ ಹೊಂದುತ್ತವೆ.

ಶಿಶುಪ್ರಾಸಗಳ ಹುಟ್ಟು ಏಕೆ, ಹೇಗೆ ಎನ್ನುವ ಪ್ರಶ್ನೆಗೆ ರಾಗೌ ಅವರಲ್ಲಿ ಉತ್ತರ ಹೀಗಿದೆ: "ಕೆಲವು ಮಕ್ಕಳು ಧೂಳಿನಲ್ಲಿ ಆಟವಾಡುತ್ತಿದ್ದಾಗ ಒಂದು ಅಥವಾ ಎರಡು ಸಾಲುಗಳನ್ನು ಇದ್ದಕ್ಕಿದ್ದ ಹಾಗೆ ಯಾವ ಅರ್ಥವೂ ಇಲ್ಲದೆ ಉಚ್ಚರಿಸಿರಬಹುದು. ಆಮೇಲೆ ಅವರಿಗಿಂತ ವಯಸ್ಸಿನಲ್ಲಿ ಹಿರಿಯರಾದವರು ಆ ಸಾಲುಗಳಿಗೆ ಮುಂದಿನ ಸಾಲುಗಳನ್ನು ಸೇರಿಸಿ ಪ್ರಾಸವನ್ನು ಪೂರ್ಣಗೊಳಿಸಿರಬೇಕು. ಹೀಗೆ ಕ್ರಮೇಣ ರಚನೆಯಾಗುತ್ತಾ ಪ್ರಚಾರಕ್ಕೆ ಬಂದಿರಬೇಕೆಂದು ತೋರುತ್ತದೆ". ಮುಂದುವರೆದು ರಾಗೌ ಹೀಗೆ ಬರೆಯುತ್ತಾರೆ: "ಕೆಲವು ಪ್ರಾಸಬದ್ಧ ಅಕ್ಷರಮಾಲೆಗಳನ್ನು ಅಪವಾದಗಳಾಗಿ ಪರಿಗಣಿಸಿದರೆ, ಶಿಶುಪ್ರಾಸಗಳ ಬಹುಭಾಗ ಚಿಕ್ಕಮಕ್ಕಳನ್ನು ಆಕರ್ಷಿಸುವ ವಯಸ್ಕರ ಮನೋರಂಜನೆಯ ಭಾಗಗಳಾಗಿರುವಂತೆ ಕಾಣುತ್ತದೆ. ಅವು ಜನಪದ ಗೀತೆಗಳ, ಲಾವಣಿಗಳ, ಬೀದಿ ಮಾರಾಟಗಾರರ ಕೂಗುಗಳ ಉಳಿಕೆಗಳು; ಅವೊಮ್ಮೆ ಪ್ರಮುಖ ವ್ಯಕ್ತಿಗಳನ್ನು ಕುರಿತಾದ ಕಟುವಿಡಂಬನೆಗಳಾಗಿದ್ದುವು ಅಥವಾ ಒರಟು ಹಾಸ್ಯಗಳಾಗಿದ್ದುವು" (ಪ್ರ. ಪು. ೭). ಈ ಮಾತಿಗೆ ಆಧಾರವಾಗಿ ರಾಗೌ ಅವರು ಅಮೆರಿಕಾ ವಿಶ್ವಕೋಶ ಸಂಪುಟ-೨೦ನ್ನು ಅಡಿಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ. ಡಾ. ರಾಗೌ ಅವರ ಈ ವರೆಗಿನ ವಿಶ್ಲೇಷಣೆ ಒಟ್ಟಾರೆಯಾಗಿ ಬೇರೆ ದೇಶದ ಶಿಶುಪ್ರಾಸಗಳ ಬಗ್ಗೆ ಬರೆದುದನ್ನು ಸಾರಾಂಶ ರೂಪದಲ್ಲಿ ಬರೆದಂತೆಯೇ ಅನಿಸುತ್ತದೆ.

ಶಿಶುಪ್ರಾಸಗಳ ವರ್ಗೀಕರಣವನ್ನು ಕುರಿತು ಹೇಳುವಾಗ- 'ಚಾರಿತ್ರಿಕ ಘಟನೆಗಳ ಸ್ಮರಣೆವುಳ್ಳ, ಅಣಕ-ವಿಡಂಬನೆ, ಅಸಂಬದ್ಧತೆ, ಚತುರೋಕ್ತಿ-ಪ್ರತ್ಯುತ್ತರಗಳು, ಶಾಬ್ದಿಕ ಉಪಾಯೋಕ್ತಿಗಳು, ಸಂಚಿತ ಪ್ರಾಸಗಳು, ಸಂಖ್ಯಾತ್ಮಕ, ಅಡ್ಡಹೆಸರುಗಳು-ಗುಣವಾಚಕಗಳು,

ಕ್ರೀಡಾಪ್ರಾಸಗಳು, ಸ್ಥಳೀಯ ಪ್ರಾಸಗಳು' ಹೀಗೆ ಸುಮಾರು ಒಂಬತ್ತು ಹತ್ತು ಪ್ರಕಾರಗಳನ್ನು ಗುರುತಿಸುವಲ್ಲಿ ಹೊರದೇಶದ ವಿದ್ವಾಂಸರು ಹೇಳುವ ಹೆಸರುಗಳ ಅನುವಾದಗಳಾಗಿರುವಂತೆ ತೋರುತ್ತವೆ. 'ಮಕ್ಕಳ ಪ್ರಾಸಗಳು, ಅವರ ಪರಿಹಾಸ ಪ್ರವೃತ್ತಿಗೆ ಪ್ರಾಕೃತಿಕ ಪ್ರತಿಭೆಗೆ, ಕಲ್ಪನಾ ಶಕ್ತಿಗೆ ನಿದರ್ಶನವಾಗಬಲ್ಲವು. ಬಾಲಕರ ಭಾವುಕ ಜೀವನದ ಅಸಂಬದ್ಧತೆಗಳ ಅಭಿವ್ಯಕ್ತಿಗಳು ಇವು' ಎನ್ನುವ ಮಾತಿನಲ್ಲಿಯ 'ಅಸಂಬದ್ಧತೆಗಳ ಅಭಿವ್ಯಕ್ತಿಗಳು' ಎಂದರೆ ಏನು? ಎಂಬುದು ಅರ್ಥವಾಗುತ್ತಿಲ್ಲ. ಕೆಲವೊಮ್ಮೆ ಪದಗಳ ಅರ್ಥ ಗೌಣವಾಗಿ ಅಲ್ಲಿ ಪ್ರಯೋಗವಾಗುತ್ತಿರುವ ನಾದದ ಗುಣವುಳ್ಳ ಮಾತುಗಳು ಒಂದು ವಿಶಿಷ್ಟವಾದ ಅರ್ಥವನ್ನು ಓದುಗರ/ಕೇಳುಗರ ಭಾವಕೋಶಕ್ಕೆ ರವಾನಿಸುತ್ತಿರುತ್ತವೆ. "ಪ್ರಾಸಗಳ ತರುವಾಯ ಜನಪದ ಗೀತಸಾಹಿತ್ಯ ಸೃಷ್ಟಿಗೊಂಡಿರಲು ಸಾಧ್ಯವಿದೆ. ಈ ಕಾರಣದಿಂದ ಶಿಶುಪ್ರಾಸಗಳನ್ನು ಜನಪದ ಗೀತೆಗಳ ಪೂರ್ವಸೃಷ್ಟಿಯೆಂದು ಕರೆಯಬಹುದು' (ಪ್ರ.ಪು.೧೫) ಎನ್ನುವ ಮಾತು ಯೋಚಿಸುವಂತಿದೆ.

ಮಕ್ಕಳು ಹಿರಿಯರ ನಡವಳಿಕೆಗಳನ್ನು, ದೈನಂದಿನ ಬದುಕನ್ನು ಅನುಕರಿಸುವುದು ಸಹಜ. ದೇವರು, ಪೂಜೆ, ವಿವಾಹ, ನಂಬುಗೆ, ಸಂಪ್ರದಾಯ ಇವುಗಳ ಜೊತೆ ಇಂತಹ ಸಂಗತಿಗಳ ಬಗ್ಗೆ ಮಕ್ಕಳ ಹಾಡುಗಳಿರುವುದರ ಕಡೆ ಗಮನ ಸೆಳೆಯುತ್ತಾರೆ. ಸಮಾಜ ಬಾಹಿರವಾದ ಸಂಗತಿಗಳೂ ಶಿಶುಪ್ರಾಸಗಳಲ್ಲಿ ಕಾಣುವುದನ್ನು ರಾಗೌ ಅವರು ಗುರುತಿಸುತ್ತಾರೆ. ಒಬ್ಬ ವಿಶ್ವವಿದ್ಯಾಲಯದ ವಿದ್ವಾಂಸ, ಮೊದಲ ಸಲ ಮಕ್ಕಳಾಟದ ಹಾಡುಗಳ ಒಂದು ಸಂಗ್ರಹ ತರುವಾಗ ಅವುಗಳ ಕುರಿತು ಒಂದು ಅಭ್ಯಾಸಪೂರ್ಣ ಪ್ರಸ್ತಾವನೆ ಬರೆದುದು ಕೃತಿಯ ಮೌಲ್ಯವನ್ನು ಹೆಚ್ಚಿಸುತ್ತದೆ. ಪಾಶ್ಚಾತ್ಯರ ಅಭಿಪ್ರಾಯಗಳನ್ನೇ ಗಮನಿಸುವ ಬದಲಾಗಿ ತಾವು ಸಂಗ್ರಹಿಸಿದ ಮಕ್ಕಳ ನುಡಿಗಳನ್ನು ಗಮನಿಸಿ ಒಂದಿಷ್ಟು ಸ್ವತಂತ್ರವಾದ ಆಲೋಚನೆಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ.

ಮೈಸೂರು ಭಾಗದಿಂದ ಎರಡು ಕೃತಿಗಳು ಬಂದನಂತರ ಉತ್ತರ ಕರ್ನಾಟಕ ಅದೂ ಕಲಬುರಗಿಯ ಭಾಗದಿಂದ ೧೯೭೬ ರಲ್ಲಿ ಪ್ರಕಟವಾದ ಡಾ. ಎಂ.ಎಸ್.ಲಠ್ಠೆ ಅವರು ಸಂಪಾದಿಸಿದ **'ಚುಕ್ಕೋಳ ಪದಗಳು'** ಎಂಬ ಕೃತಿ ಪ್ರಕಟವಾಗಿದೆ. ಇವತ್ತಿಗೂ ಉತ್ತರ ಕರ್ನಾಟಕದಿಂದ ಪ್ರಕಟವಾದ ಮಕ್ಕಳ ಹಾಡುಗಳಿಗೆ ಸಂಬಂಧಿಸಿದ ಏಕೈಕ ಕೃತಿಯಾಗಿದೆ. ಅಷ್ಟೇ ಅಲ್ಲ ಇಲ್ಲಿಯವರೆಗೆ ಕರ್ನಾಟಕದಲ್ಲಿ ಪ್ರಕಟವಾದ ಮಕ್ಕಳ ಹಾಡುಗಳಿಗೆ ಸಂಬಂಧಿಸಿದ ಒಂದು ಶ್ರೇಷ್ಠ ಸಂಕಲನವೂ ಆಗಿದೆ. ಇಡೀ ಕರ್ನಾಟಕದಲ್ಲಿಯೇ ಪ್ರಕಟವಾದ 'ಮಕ್ಕಳ ಹಾಡು'ಗಳ ಕೃತಿಗಳಲ್ಲಿ ಇದು ಅಪರೂಪದ ಕೃತಿಯಾಗಿದೆ. ಇಷ್ಟೊಂದು ಪ್ರಮಾಣದಲ್ಲಿ ಸುಂದರವಾದ ಮಕ್ಕಳ ಹಾಡುಗಳನ್ನು ಹೊಂದಿದ ಕೃತಿ ಕನ್ನಡದಲ್ಲಿ ಮತ್ತೊಂದು ಇಲ್ಲ. ಸುಮಾರು ಎರಡು ಸಾವಿರದಷ್ಟು ಮಕ್ಕಳ ನುಡಿಗಳನ್ನು ಸಂಗ್ರಹಿಸಿ, ಅದರಲ್ಲಿ ೨೬೦ ನುಡಿಗಳನ್ನು ಆರಿಸಿಕೊಳ್ಳಲಾಗಿದೆ. ಈ ಕೃತಿಗೆ ಮುನ್ನುಡಿ ಬರೆದಿರುವವರು ಹಿರಿಯರಾದ ಬೆಟಗೇರಿ ಕೃಷ್ಣಶರ್ಮ ಅವರು. ಅವರ ಕೆಲ ಮಾತುಗಳು ಮೌಲಿಕವಾಗಿದ್ದು ಅವನ್ನು ಮೊದಲು ಗಮನಿಸುವುದು ಅವಶ್ಯವೆನಿಸುತ್ತದೆ. "ಈ ಸಂಕಲನಗಳಲ್ಲಿ ಕೂಡಿಸಿದ ಕೃತಿಗಳೆಲ್ಲವೂ ಕನ್ನಡ ಜನಪದದಲ್ಲಿ ಹರಡಿಕೊಂಡಿರುವ **ಮಕ್ಕಳಾಟದ ಚುಟುಕು, ಹಾಡು,** ಒಕ್ಕಣೆಗಳು.

...ಇನ್ನೂ ಸಂಕಲಿತವಾಗಬೇಕಾಗಿರುವ **ಶಿಶುಸಾಹಿತ್ಯ** ಕೃತಿಗಳ ಸಂಖ್ಯೆ ಎಣಿಕೆಯಿಲ್ಲದಷ್ಟು ಇದೆ. ...ಇಂತಹ **ಶಿಶುಗೀತಗಳನ್ನು** ಸಂಗ್ರಹಿಸುವ ಕಾರ್ಯ ಒಬ್ಬಿಬ್ಬರಿಂದ ಸಾಧ್ಯವಾಗುವಂತಹದಲ್ಲ" (ಮುನ್ನುಡಿ, ಪು.೫). ಇಲ್ಲಿ ಬಳಕೆಯಾಗಿರುವ 'ಮಕ್ಕಳಾಟದ ಚುಟುಕು, ಹಾಡು, ಶಿಶುಸಾಹಿತ್ಯ, ಶಿಶುಗೀತ' ಈ ಪದಗಳನ್ನು ಗಮನಿಸಬೇಕು. 'ಮಕ್ಕಳಾಟದ ಹಾಡು' ಹಾಗೂ 'ಶಿಶುಗೀತ' ಎಂಬ ಹೆಸರಿನಿಂದ ಈ ಹಾಡುಗಳನ್ನು ಕರೆಯುವುದು ಹೆಚ್ಚು ಸಮಂಜಸವೆನಿಸುತ್ತದೆ. ಡಾ. ಲಠ್ಠೆ ಅವರು ಈ ಕೃತಿಗೆ **'ಚುಕ್ಕೋಳ ಪದಗಳು'** ಎಂದು ಕರೆಯುವಲ್ಲಿ 'ಚುಕ್ಕೋಳು' ಎನ್ನುವ ಪ್ರಾದೇಶಿಕ ಪದವನ್ನು ಬಳಸಿಯೂ ಮುಂದೆ 'ಪದಗಳು' ಎಂಬುದನ್ನು ಬಳಸಿಕೊಂಡಿದ್ದಾರೆ. ಮಕ್ಕಳ ಹಾಡುಗಳ ಗುಣಗಳನ್ನು ಬೆಟಗೇರಿ ಕೃಷ್ಣಶರ್ಮ ಅವರು ಹೀಗೆ ಗುರುತಿಸುತ್ತಾರೆ: "ಕನ್ನಡ ಜಾನಪದ ಶಿಶುಸಾಹಿತ್ಯ ವೈಶಿಷ್ಟ್ಯಪೂರ್ಣವಾದುದು. ಇದು ನಾದ ಲಯಗಳಿಂದ ತುಂಬಿದುದು, ಪ್ರಾಸಾನುಪ್ರಾಸಗಳ ಮೂಲಕ ಎಳೆಯರ ಕಿವಿ–ಮನಗಳನ್ನು ಸೆಳೆದು ನಲಿದಾಡಿಸುವ ಗುಣವುಳ್ಳಂತಹವು" (ಮು.ಪು.೫) ಎನ್ನುತ್ತಾರೆ. ಮುಂದುವರೆದು ಅವರು ಕನ್ನಡ ಶಿಶುಗೀತಗಳು ಮಹಾರಾಷ್ಟ್ರದಲ್ಲೂ ಪ್ರಸಾರವಾಗಿದ್ದುದ್ದನ್ನು ದಾಖಲಿಸುತ್ತಾರೆ. "ನಮ್ಮ ಕೆಲವೊಂದು ಶಿಶುಕೃತಿಗಳು, ಮಹಾರಾಷ್ಟ್ರದಲ್ಲಿ ಬಹುದಿನಗಳ ಹಿಂದೆಯೆ ಜನರ ಮನಸ್ಸನ್ನು ಆಕರ್ಷಿಸಿ, ಅನೇಕ ವಿಕಾರಗಳೊಂದಿಗೆ ಅಲ್ಲಿಯ ಮಕ್ಕಳನ್ನು ರಂಜಿಸುತ್ತ ಬಂದಿವೆ. ಸುಮಾರು ೧೯೧೩–೧೪ರಲ್ಲಿ ಇರಬಹುದು: ಆಗ ಪುಣೆಯಲ್ಲಿ ಪ್ರಕಟವಾಗುತ್ತಲಿದ್ದ 'ಚಿತ್ರಮಯ ಜಗತ್' ಎಂಬ ಸುಪ್ರಸಿದ್ಧ ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳನ್ನು ಓದಿದ ನೆನಪು ನನಗೆ, ಸಂಶೋಧಕರೊಬ್ಬರು, ಕನ್ನಡ ಶಿಶು ಸಾಹಿತ್ಯ ಮಹಾರಾಷ್ಟ್ರದ ಮನೆ ಮನೆಗಳಲ್ಲಿ ಬಂದು ಹೇಗೆ ಸೇರಿಕೊಂಡಿದೆಯೆಂಬುದನ್ನು ಕುರಿತು ಬರೆದ ಲೇಖಗಳವು.

'ಅವುಡಕ ಚವುಡಕ ದಾಮಾಡು
ದಾಮಾಡುಚಾ ಪಂಚಾಡು' ಎಂಬ ಶಿಶುಗೀತವನ್ನು

'ಅಡುಗೂಲ ಮಡಗೂಲ
ಸೋನ್ಯಾಚೀ ಕಡಗೋಲ' ಎಂಬ ಶಿಶುಗೀತವನ್ನೂ ಉದಾಹರಣೆಯಾಗಿ ಕೊಟ್ಟು, 'ಮೂಲ ಕನ್ನಡ ಗೀತಗಳಿವು, ಭಾಷೆ ತಿಳಿಯದ ಮಹಾರಾಷ್ಟ್ರೀಯರ ಬಾಯಲ್ಲಿ ಹೇಗೆ ಹೇಗೆ ವಿಕಾರಗೊಂಡಿವೆ' ಯೆಂಬುದನ್ನು ವಿವರ ವಿವರವಾಗಿ ಬರೆದು ತಿಳುಹಲಾಗಿತ್ತು ಆ ಲೇಖನಗಳಲ್ಲಿ" (ಮು.ಪು.೬). ಕನ್ನಡ ಮಕ್ಕಳಾಟದ ಹಾಡುಗಳು ಪುಣೆಯವರೆಗೂ ಪ್ರಸಾರವಾಗಿದ್ದು ಆಶ್ಚರ್ಯದ ಸಂಗತಿಯೇ. ಬಹುಶಃ ಅವುಗಳ ಶಕ್ತಿಯೇ ಈ ಪ್ರಸಾರಕ್ಕೆ ಕಾರಣವಾಗಿರಬೇಕು.

ಮುಂದೆ ಕನ್ನಡ ಸಾಹಿತ್ಯದಲ್ಲಿ ಶಿಶುಗೀತಗಳ ಪ್ರಭಾವವನ್ನು ಗುರುತಿಸುತ್ತ 'ಪುರಂದರ ದಾಸರ– ಶ್ರೀಕೃಷ್ಣನನ್ನು ಯಶೋದೆಯೂ ಗೊಲ್ಲತಿಯರೂ ಆಡಿಸಿದಂತೆ ರಚಿಸಿದ:

'ತಾರಮಯ್ಯ –ತಂದು ತೋರಮಯ್ಯ'
'ಕೈಯ ತೋರೋ ಕರುಣಿಗಳರಸಾ ಕೈಯ ತೋರೋ'
'ಆನೆ ಬಂತಾನೆ ಬಂತಮ್ಮಾ'

'ತಾತಾರೆ ಗುಬ್ಬಿ ತಾ ಹೊನ್ನ ಗುಬ್ಬಿ'
'ಮುಟ್ಟ ಬಾರೋ ರಂಗ ಮುಟ್ಟ ಬಾರೋ'
ಧಿಗಿಧಿಗಿ ನೀನು ಕುಣಿಯುತ ಬಾರೋ'

ಮೊದಲಾದ ಮಕ್ಕಳಾಟದ ಹಾಡುಗಳಿಗೆ ಸಮಕಾಲೀನ ಕನ್ನಡ ಶಿಶುಗೀತಗಳೇ ಪ್ರೇರಕವಾಗಿರಬಹುದು"(ಮು.ಪು.೬-೭). ಈ ಹಾಡುಗಳ ಬಗೆಗಳು ಹೇಗೆ ಭಿನ್ನವಾಗುತ್ತವೆ ಎಂಬುದನ್ನು ಬೆಟಗೇರಿಯವರು ಚೆನ್ನಾಗಿ ಗುರುತಿಸಿದ್ದಾರೆ. "ತೀರ ಚಿಕ್ಕ ಹಸುಳೆಗಳನ್ನು ತಾಯಂದಿರು ಆಡಿಸುವ ಶಿಶುಗೀತಳ ರೀತಿಯೆ ಬೇರೆ. ...ಹಸುಮಕ್ಕಳು ಬೆಳೆದು ಹುಡುಗರಾದ ಮೇಲೆ, ಇನ್ನೂ ಪರಾವಲಂಬಿಗಳೇ ಆದ ಅವರನ್ನು ಒಂದೆಡೆ ಕೂಡಿಸಿ, ಹಿರಿಯ ಹೆಣ್ಣುಮಕ್ಕಳು ಆಡಿಸುವಾಗ ಹೇಳುವ ಹಾಡುಗಳದು ಮತ್ತೊಂದು ಬಗೆ. ...ಹುಡುಗ ಹುಡುಗಿಯರು ಬೆಳೆದು ಹೈದರಾಗಿ ತಮ್ಮಷ್ಟಕ್ಕೆ ತಾವೇ ಆಡತೊಡಗಿದ ಮೇಲೆ ಅವರು ಆಡುವ ಆಟಗಳು ನೂರಾರು ಹಾಡುವ ಪದ್ಯಗೀತಗಳು ನೂರಾರು ಹುಡುಗಿಯರು ಬೆಳೆದು ಕೊಡಗೂಸುಗಳಾದಂತೆ, ಅವರು ಹೈದರಿಂದ ಬೇರೆಯಾಗಿ ತಮ್ಮವೇ ಆದ ಆಟಗಳನ್ನು ಆಡತೊಡಗುವರು. ಹುಡುಗರು ಬೆಳೆದಂತೆಲ್ಲ ಅವರ ಆಟಗಳೂ ಬೇರೆ ಬಗೆಯಾಗುವುವು. ಆಟದ ಹಾಡುಗಳಲ್ಲದೆ ಸಾಮಾನ್ಯ ಜ್ಞಾನವನ್ನು ಮಾಡಿಕೊಡುವ ಶಿಶುಗೀತಗಳೂ, ಪ್ರಾಸಪದ್ಯ-ತಿಲ್ಲಾಣಗಳೂ, ನಗೆವಾಡಿನ ತುಣುಕುಗಳೂ, ಮಕ್ಕಳ ಕಥೆಗಳಲ್ಲಿ ರಸಪುಷ್ಟಿಯನ್ನು ಮಾಡುವಂತಹ ತುಂಡು ಹಾಡುಗಳೂ ಬೇಕಾದಷ್ಟು ಇರುವವು"(ಮುನ್ನುಡಿ,ಪು.೮). ತಮ್ಮ ಒಂದು ಸಣ್ಣ ಮುನ್ನುಡಿಯಲ್ಲಿ ಮಕ್ಕಳಾಟದ ಹಾಡುಗಳ ವಿಧಗಳನ್ನು ಗುರುತಿಸಿರುವುದು ಕನ್ನಡ ಪಠ್ಯಗಳನ್ನು ಗಮನಿಸಿ ಎಂಬುದು ಬಹುಮುಖ್ಯ ಸಂಗತಿ.

ಡಾ. ಲಠ್ಠೆ ಅವರ 'ಚುಕ್ಕೋಳ ಪದಗಳು' ಕೃತಿಯಲ್ಲಿ ಸುಮಾರು ೨೬೦ ಮಕ್ಕಳ ಹಾಡುಗಳಿವೆ. ಅನುಬಂಧದಲ್ಲಿ ೫೧ ಹಾಡುಗಳ ಸಂದರ್ಭಗಳನ್ನು (ಆಟಗಳನ್ನು) ವಿಶೇಷವಾಗಿ ಪರಿಚಯಿಸಲಾಗಿದೆ. ಮಕ್ಕಳ ಬೆಳವಣಿಗೆಯಲ್ಲಿ, ಭಾಷೆ ಮತ್ತು ಭಾಷಿಕ ಲಯಗಳು ಹೇಗೆ ಕೆಲಸ ಮಾಡುತ್ತವೆ ಮತ್ತು ಮಗುವಿಗೆ ಅದು ಎಲ್ಲೆಲ್ಲಿ, ಯಾವ ವಯಸ್ಸಿನವರೆಗೆ ಸಹಾಯಕ್ಕೆ ಬರುತ್ತವೆ ಎಂಬುದು ನಮಗೆ ಈ ಸಂಗ್ರಹದ ಹಾಡುಗಳಿಂದ ತಿಳಿದುಬರುತ್ತದೆ. ಇಲ್ಲಿಯ ಹಾಡುಗಳನ್ನು ಹುಡುಗಿಯರ ಪದಗಳು, ಹುಡುಗರ ಪದಗಳು, ಸಮ್ಮಶ್ರ ಹಾಡುಗಳು ಎಂದು ವಿಭಾಗಿಸಿ ಕೊಂಡಿದ್ದಾರೆ. ಮತ್ತೆ ಪ್ರತಿ ವಿಭಾಗದಲ್ಲಿ ಒಳವಿಭಾಗಗಳಾಗಿ ಅ, ಬ, ಕ ಎಂದು ಗುರುತಿಸಿಕೊಂಡಿದ್ದಾರೆ. ಇಲ್ಲಿ ಮಾಡಿಕೊಂಡ ವಿಭಾಗೀಕ್ರಮದ ಸುಧಾರಿಸಿದ ವಿಭಾಗೀಕ್ರಮವನ್ನೇ ಬೆಟಗೇರಿ ಕೃಷ್ಣಶರ್ಮ ಅವರು ತಮ್ಮ ಮುನ್ನುಡಿಯಲ್ಲಿ ಇನ್ನಷ್ಟು ವಿಸ್ತರಿಸಿ ಹೇಳಿದ್ದಾರೆನಿಸುತ್ತದೆ. ಪ್ರತ್ಯೇಕವಾಗಿರುವ ಹುಡುಗಿಯರ ಪದಗಳು, ಹುಡುಗರ ಪದಗಳು- ಅವರೆಲ್ಲ ವಯಸ್ಸಿಗೆ ಬಂದು ಪ್ರತ್ಯೇಕವಾಗಿ ಆಡುವ ಆಟ-ಪಾಠಗಳಾಗಿವೆ. ಸಮ್ಮಿಶ್ರ ಹಾಡುಗಳಲ್ಲಿ ಮಕ್ಕಳು ಮನೆಯಲ್ಲಿ, ಮತ್ತು ಮನೆಯ ಅಂಗಳದಲ್ಲಿ ಆಡುವ ಆಟಗಳಾಗಿವೆ. ನಮ್ಮಲ್ಲಿ ಶಾಲಾಪ್ರಾಸಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ ಎಂಬುದಕ್ಕೆ 'ಸಾಲಿಬಿಟ್ಟು ಸರ್ವತ್ತಾತು' ಎಂಬ ಎಂಟ್ಹತ್ತು

ಹಾಡುಗಳುಳ್ಳ ಒಂದು ಸಣ್ಣ ಭಾಗ ಮಾತ್ರ ಇಲ್ಲಿರುವುದನ್ನು ಕಾಣಬಹುದಾಗಿದೆ. ಮಕ್ಕಳಾಟ–ಹಾಡುಗಳಲ್ಲಿಯೇ ಅಂಕಿಸಂಖ್ಯೆಗಳನ್ನು ಅರಿತುಕೊಳ್ಳುವ ಶಿಕ್ಷಣದ ಅವಕಾಶ ಕಾಣಿಸಿಕೊಳ್ಳುತ್ತದೆ. ಗಜಗದಾಟದಲ್ಲಿ–ಒಂದೋ ಎರಡೋ ಎಂದು ಅಂಕಿಗಳನ್ನು ಹೇಳುವ ಹಾಡುಗಳಿವೆ. ಚಿಣಿಫಣಿ ಆಟದ ಪಾಠದಲ್ಲೂ ಈ ಪದ್ಧತಿ ಇರುವುದನ್ನು ಗಮನಿಸುತ್ತೇವೆ.

ಈ ಮಕ್ಕಳಾಟದ ಹಾಡುಗಳು ಹೇಗೆ ಹುಟ್ಟುತ್ತವೆ ಎಂಬುದನ್ನು ಡಾ. ಎಂ.ಎಸ್.ಲಠ್ಠೆ ಅವರು ಹೀಗೆ ವಿವರಿಸುತ್ತಾರೆ : "ಮಗು ಅಳುತ್ತದೆ, ನಗುತ್ತದೆ. ಕಾಲು ಬಂದ ಮೇಲೆ ಓಡಾಡುತ್ತದೆ. ಮಾತು ಬಂದಂತೆ, ತಿಳುವಳಿಕೆ ಮೂಡಿದಂತೆ, ಇನ್ನೊಬ್ಬರ ಅನುಕರಣೆಗಿಳಿಯುತ್ತದೆ. ಈ ಅವಸ್ಥೆಯಲ್ಲಿ ತಾಯಿ, ದಾದಿ ಇಲ್ಲವೆ ವಯಸ್ಕರು ತಮಗೆ ಗೊತ್ತಿದ್ದ ಆಟ ಆಡಿಸುತ್ತಾರೆ, ಹಾಡು ಹೇಳಿಕೊಡುತ್ತಾರೆ. ನಡೆಯ ಹಚ್ಚುತ್ತಾರೆ, ನುಡಿಯ ಕಲಿಸುತ್ತಾರೆ... ಹೀಗೆ ಅವರಿವರ ಹಾಡುಗಳೆಲ್ಲ ಒಂದೆಡೆ ಸೇರಿ ಹಾಡಿನ ಹೊಳೆಯೆ ಹರಿದಂತಾಗುತ್ತದೆ. ಇಂಥ ಪರಿಸರದಲ್ಲಿ ಬೆಳೆದ, ಓಡಾಡಿದ ಮಗು ತಾನು ಅಂತಹ ಹಾಡು ರಚಿಸುತ್ತದೆ–ಕವಿಯಾಗಬೇಕೆಂದಲ್ಲ. ಸಹಜವಾಗಿಯೆ ಅವು ಉಕ್ಕುತ್ತವೆ. ತನ್ನ ನಾಲಿಗೆಯ ಮೇಲೆ ಬಿದ್ದೆದ್ದ ಅದೆಷ್ಟೊ ಶಬ್ದಗಳನ್ನೆತ್ತಿಕೊಂಡು ಗುನುಗುನು ಉಚ್ಚರಿಸಿದಾಗ, ದನಿ ತೆಗೆದಾಗ, ರಾಗ ಎಳೆದಾಗ– ಹಾಡುಗಳಾಗಿ ರೂಢಿಗತವಾಗುತ್ತವೆ" (ಪ್ರ.ಪು.೧೩). ಮಕ್ಕಳು ಆಟಗಳನ್ನು ಆಡುತ್ತ, ಹಾಡುಗಳನ್ನು ಹೇಳುತ್ತ, ತಾವೂ ಒಂದೆರಡು ಸಾಲುಗಳನ್ನು ನಿರ್ಮಿಸುತ್ತ ಹೋಗುವ ಕ್ರಿಯೆಯಲ್ಲಿ ಈ ಹಾಡುಗಳು ಹುಟ್ಟುತ್ತ ಹೋಗುತ್ತವೆಂಬುದು ಡಾ. ಲಠ್ಠೆ ಅವರ ಅಭಿಪ್ರಾಯ. ಇದೊಂದು ನೈಸರ್ಗಿಕವಾದ, ಸಹಜವಾದ ಕ್ರಿಯೆ. "ಚಿಕ್ಕಮಕ್ಕಳಿಂದ ಹೊರಬೀಳುವ ಪದಗಳೆಲ್ಲಾ, ಮಾತೂ ಕೂಡ, ಹಾಡೇ. ಗಿಡದ ಎಲೆ, ಹೂಗಳು ಹಸಿರು ಮುರಿಯುತ್ತ ಅರುಳುತ್ತಿರುವಂತೆ ಮಕ್ಕಳ ಮುಗ್ಧ ಮನಸ್ಸಿನಿಂದ ನೂರಾರು ಪದಗಳು ಅರಳುತ್ತ, ಉದರುತ್ತಿರುತ್ತವೆ. ಅವುಗಳನ್ನೇ ಮಕ್ಕಳ ಹಾಡುಗಳೆಂದು ಕರೆಯುತ್ತ ಬಂದಿದ್ದೇವೆ"(ಪ್ರ.ಪು.೧೪). ಮಕ್ಕಳ ಹಾಡುಗಳ ಸೃಷ್ಟಿ ತೀರ ನೈಸರ್ಗಿಕವಾದುದು. ಎಲೆ ಹೂಗಳು ಗಿಡದ ಗರ್ಭದಿಂದ ಚಿರುಗೊಡೆದು ಬರುವಂತೆ ಮಕ್ಕಳ ಮುಗ್ಧಮನಸ್ಸಿನಿಂದ ಹಾಡುಗಳು ಅರಳುತ್ತವೆಂಬ ಡಾ. ಲಠ್ಠೆ ಅವರ ಮಾತು ಮಹತ್ವದ್ದಾಗಿದೆ. ಇದಕ್ಕೆ ದೊಡ್ಡವರ ದನಿಯೂ ಕೂಡಿರುತ್ತದೆಂಬುದು ನಿರ್ವಿವಾದ. ಈ ಮಕ್ಕಳಾಟದ ಹಾಡುಗಳನ್ನು ರಚಿಸಿದವರು ಯಾರು? ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಇನ್ನೊಂದು ಕಡೆ ಡಾ. ಲಠ್ಠೆ ಅವರು ಹೀಗೆ ಅಭಿಪ್ರಾಯ ಪಡುತ್ತಾರೆ: "ಮಕ್ಕಳ ಹಾಡುಗಳನ್ನು ರಚಿಸಿದವರು ಯಾರು? ಮಕ್ಕಳೋ ಹಿರಿಯರೋ? ಮಕ್ಕಳ ಅವಸ್ಥೆಯನ್ನು ದಾಟಿ ಬಂದು ಮಗುವಿಗೆ ಜನ್ಮವಿತ್ತ ತಾಯಿಯೆಂದೇ ಹೇಳಬೇಕು. ಹಾಗೆಂದರೆ ಅವಳಿಗೇ ಗುತ್ತಿಗೆಯೆಂದೇನೂ ಅಲ್ಲ. ವಯಸ್ಸಾದ ಮಕ್ಕಳೂ ಅವರನ್ನು ಹಿಂಬಾಲಿಸಿದ ಕಿರಿಯರೂ ಕೂಡ ಹೊಸ ಹೊಸ ಹಾಡುಗಳನ್ನು ರಚಿಸುತ್ತ ಹೋಗಬಹುದು. ಹೆಚ್ಚಾಗಿ ಹಿರಿಯರಿಂದ ಬಳುವಳಿಯಾಗಿ ಬಂದಂಥವು" (ಪ್ರ. ಪು.೧೯). ಇವುಗಳನ್ನು 'ಮಕ್ಕಳ ಹಾಡುಗಳು' ಎಂದು ಕರೆಯುತ್ತ ಬಂದಿರುವುದು ಕೂಡ ಸಹಜವಾದುದು. ಇಂತಹ ಹೆಸರುಗಳಿಂದ ದೂರ ಎಳೆದರೆ, ಯಾರದೋ ಪ್ರಯೋಗದ ಅನುವಾದವಾದರೆ ಸಹಜವಾಗಿಯೇ ಅಲ್ಲಿ ಕೃತ್ರಿಮತೆ ತಲೆಹಾಕುತ್ತದೆ.

ತಾವು ಮಾಡಿಕೊಂಡ ವಿಭಾಗೀಕರಣದ ವಿವರಗಳನ್ನು ಲಠ್ಠೆ ಅವರು ಹೀಗೆ ಕೊಡುತ್ತಾರೆ: "ಈ ಪದಗಳಲ್ಲಿ ಮೂರು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ೧. ಹುಡುಗಿಯರ ಪದಗಳು, ೨. ಹುಡುಗರ ಪದಗಳು, ೩. ಸಮ್ಮಿಶ್ರ ಪದಗಳು. ಅದರಂತೆ ವಿಷಯ ವೈವಿಧ್ಯಕ್ಕನುಗುಣವಾಗಿ ಐದು ಭಾಗಗಳನ್ನಾಗಿಯೂ ವಿಂಗಡಿಸಿಕೊಳ್ಳಬಹುದು. ೧. ರಮಿಸುವ ಪದಗಳು, ೨. ಆಟದ ಪದಗಳು, ೩. ಕಥಾರೂಪದ ಪದಗಳು, ೪. ವಿಡಂಬನೆಯ ಪದಗಳು, ೫. ಒಗಟುರೂಪದ ಪದಗಳು. ಯಾವ ಬಗೆಯ ವರ್ಗೀಕರಣವಾದರೂ ಅದು ಅಭ್ಯಾಸದ ಅನುಕೂಲಕ್ಕಾಗಿ ಎಂದು ಮಾತ್ರ ಮರೆಯಕೂಡದು"(ಪ್ರ.ಮ.೧೪-೧೫೪). ಮಕ್ಕಳಾಟದ ಹಾಡುಗಳ ಸಹಜವಾದ ಕಾವ್ಯದ ಗುಣಗಳನ್ನು ಡಾ. ಲಠ್ಠೆ ಅವರು ಹೀಗೆ ಗುರುತಿಸುತ್ತಾರೆ: "ಮಕ್ಕಳ ಹಾಡುಗಳ ಲಕ್ಷಣಗಳನ್ನು ಹೀಗೆಯೇ ಎಂದು ಗೆರೆ ಕೊರೆದು ಹೇಳಲಿಕ್ಕಾಗದು. ಒಂದೊಂದು ಪ್ರದೇಶಕ್ಕೆ ಒಂದೊಂದು ರೀತಿ, ಪದ್ಧತಿ, ಧಾಟಿ, ಗೇಯತೆ ಬರಲೇಬೇಕು. ಪ್ರಾಸ ಇರಲೇಬೇಕು. ಹಾಗೆಂದಾಗ ಕಟ್ಟುನಿಟ್ಟುಗಳ ಬಂಧನ ಇವಕ್ಕಿಲ್ಲ. ಸಹಸಾ ಬರುವುದುಂಟು" (ಪ್ರ.ಮ.೧೬). ಇದು ಮಕ್ಕಳಾಟದ ಹಾಡುಗಳ ಸಹಜ ರಚನಾರೀತಿ. ಹೀಗೆಯೇ ಇರಬೇಕೆಂಬ ಯಾವ ಛಂದಸ್ಸಿನ ನಿಯಮ ಇಲ್ಲದಿದ್ದರೂ ರಾಗಬದ್ಧವಾಗಿ ಹೇಳಲು/ ಅನ್ನಲು ಬರುವಂತಹ ರಚನೆ ಅದಾಗಿರುತ್ತದೆ. ಇಲ್ಲವೆಂದರೂ ತಾಳಕ್ಕೆ ತಕ್ಕಂತೆ ಒಂದಿಷ್ಟು ಪ್ರಾಸಾನುಪ್ರಾಸಗಳು ಹಣಿಕಿಕ್ಕಿಕೊಳ್ಳುತ್ತವೆ. ಹೀಗೆ ಸಾಗುತ್ತದೆ ಡಾ. ಲಠ್ಠೆ ಅವರ ಪ್ರಸ್ತಾವನೆ. ಕನ್ನಡ ಮಕ್ಕಳಾಟದ ಹಾಡುಗಳನ್ನು ಸಂಗ್ರಹಿಸುತ್ತ, ಬರೆಯುತ್ತ, ಗುನುಗುನಿಸುತ್ತ ಮನಸ್ಸಿಗೆ ಹೊಳೆದ ವಿಚಾರಗಳಂತೆ ತೋರುತ್ತವೆ ಅವರ ಚಿಂತನೆಗಳು. ಇದು ಸಂಪಾದಕರಿಗೆ ಅಗತ್ಯವಾಗಿ ಬೇಕಾದ ದೃಷ್ಟಿ.

ಇನ್ನೊಂದು ಪ್ಯಾರಾದಲ್ಲಿ ಈ ಚುಕ್ಕೋಳ ಪದಗಳು ತಮಗೆ ಹೇಗೆ ಕಂಡಿವೆ ಎಂಬುದನ್ನು ಡಾ. ಲಠ್ಠೆ ಅವರು ಹೀಗೆ ವಿವರಿಸುತ್ತಾರೆ: "ಮಾತಿನ ಮೋಡಿ, ಚಾಕಚಕ್ಯತೆ, ಬಾಲಭಾವಗಳಿಂದ ಕೂಡಿದ ಹೇರಳ ಶಬ್ದಗಳು ಈ ಹಾಡುಗಳಲ್ಲಿ ಹೊರಬರುತ್ತಿರುತ್ತವೆ. ಕೆಲವಂತೂ ಸೂತ್ರಬದ್ಧವಾಗಿ ಕಾವ್ಯದ ತುಣುಕುಗಳೋಪಾದಿಯಲ್ಲಿ ಗಾದೆಗಳಂತೆಯೂ, ಅಲಂಕಾರ ಧ್ವನಿಗಳಾಗಿಯೂ, ಒಮ್ಮೊಮ್ಮೆ ಚಿತ್ರಕಾವ್ಯಗಳಾಗಿಯೂ ರೂಪ ತಾಳುತ್ತಿರುತ್ತವೆ. ಚತುರ ಸಂಭಾಷಣೆಗಳಿಂದಾಗಿ ನಾಟಕೀಯತೆ ತಲೆ ಎತ್ತಿದೆ. ಕೇವಲ ಹಾಸ್ಯಕ್ಕಾಗಿ, ಅಣಕಕ್ಕೆಂದು ಹುಟ್ಟಿಕೊಂಡ ಹಾಡುಗಳೂ ಇಲ್ಲದಿಲ್ಲ. ಅರ್ಥವಾಗದ ಅಸ್ಪಷ್ಟ ಶಬ್ದಗಳಿಂದ ಕೂಡಿದ, ಪ್ರಾಸಬದ್ಧ ಸಂಯೋಜನೆಯ ಹಾಡುಗಳನ್ನೂ ಮಕ್ಕಳ ಹಾಡುಗಳಲ್ಲಿ ಓದಬಹುದಾಗಿದೆ. ಮಕ್ಕಳ ಮಾನಸಿಕ ವಿಕಾಸವಾದಂತೆಲ್ಲಾ, ತಿಳುವಳಿಕೆ ಹೆಚ್ಚಾದಂತೆ ಅವರಿಂದ ಹೊರಬೀಳುವ ಹಾಡುಗಳಲ್ಲೂ ಭಾವದ ತೀವ್ರತೆ ಹೆಚ್ಚುತ್ತ ಹೋಗುತ್ತದೆ. ಜೊತೆಗೆ ದೇಹದ ಬೆಳವಣಿಗೆಯನ್ನೂ ಕಾಣುತ್ತೇವೆ" (ಪ್ರ.ಮ.೧೭). ಡಾ. ಲಠ್ಠೆ ಅವರು ಒಂದೇ ಉಸುರಿಗೆ ಎಷ್ಟೊಂದು ವಿಷಯಗಳನ್ನು ಹೇಳಿಬಿಟ್ಟಿದ್ದಾರೆ ಎನಿಸುತ್ತದೆ. ಇಂತಹ ಹತ್ತಾರು ಸಂಗತಿಗಳು ಮಕ್ಕಳಾಟದ ಹಾಡುಗಳಲ್ಲಿ ಕಾಣುವುದು ಸಹಜ.

ಈ ಮಕ್ಕಳಾಟದ ಹಾಡುಗಳ ಪ್ರಯೋಜನವನ್ನು ಕುರಿತು ಹೀಗೆ ಅಭಿಪ್ರಾಯ ಪಡುತ್ತಾರೆ: "ಮಕ್ಕಳ ಈ ಪದಗಳಿಂದ ಏನು ಪ್ರಯೋಜನ? ಹಣ ಸಿಗಲಿಕ್ಕಿಲ್ಲ. ಕೀರ್ತಿ

ಬರಲಿಕ್ಕಿಲ್ಲ. ಪ್ರೀತಿ ಮಾತ್ರ ಹುಟ್ಟುತ್ತದೆ. ಆನಂದ ಉಕ್ಕೇರುತ್ತದೆ. ಎಲ್ಲಕ್ಕೂ ಹೆಚ್ಚಾಗಿ ಮೋಜು ಅನಿಸಿ, ಮನರಂಜನೆ ದೊರಕುತ್ತದೆ. ...ಹೊರಗೆ ಓರಿಗೆಯ ಮಕ್ಕಳ ಜೊತೆ ಆಡುವಾಗ ಪರಸ್ಪರ ತಿಳುವಳಿಕೆ ಹೆಚ್ಚಿ ಮಕ್ಕಳಿಗೆ ಪ್ರಪಂಚದ ಜ್ಞಾನವಾಗುತ್ತದೆ. ...ಶಬ್ದ ಭಂಡಾರ ಬೆಳೆಸಿಕೊಳ್ಳಲು ಈ ಹಾಡುಗಳು ಸಾಕಷ್ಟು ಸಹಾಯಕಾರಿಯಾಗಿವೆ. ಹಾಡಿನೊಂದಿಗೆ ಆಟವಾಡುವುದರಿಂದ, ಮೈ ಮಣಿಸಿ ಕುಣಿಯುವುದರಿಂದ ಶರೀರಕ್ಕೆ ಒಳ್ಳೆಯ ವ್ಯಾಯಾಮ ದೊರಕಿ, ದೈಹಿಕ ಬೆಳವಣಿಗೆಯಾಗುತ್ತದೆ. ಮೈಮನಗಳಿಗೆ ನೆಮ್ಮದಿ ಉಂಟಾಗಿ ಹೊಸ ಹೊಸ ಕಾರ್ಯಕೈಕೊಳ್ಳಲು ಹೆಚ್ಚಿನ ಸ್ಫೂರ್ತಿ ದೊರಕುತ್ತದೆ" (ಪ್ರ.ಪು.೨೦).

'ಚುಕ್ಕೋಳ ಪದಗಳು' ಕೃತಿಯಲ್ಲಿಯ ಹಾಡುಗಳ ಸಂಗ್ರಹವನ್ನು ಕುರಿತು ಹೀಗೆ ಬರೆದಿದ್ದಾರೆ: " ಪ್ರಸ್ತುತ ಸಂಕಲನ ಉತ್ತರ ಕರ್ನಾಟಕದ ಪ್ರಾದೇಶಿಕ ಮಕ್ಕಳ ಹಾಡುಗಳಿಗೆ ಸೀಮಿತವಾದುದಾಗಿದೆ. ಅದರಲ್ಲೂ ಬೆಳಗಾವಿ, ಧಾರವಾಡ, ವಿಜಾಪೂರ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಈಗಲೂ ಪ್ರಚಲಿತದಲ್ಲಿರುವ ಪದಗಳಾಗಿವೆ"(ಪ್ರ.ಪು.೨೪).

ಈ ಕೃತಿಗಾಗಿ ಸಾವಿರಾರು ಹಾಡುಗಳನ್ನು ಸಂಗ್ರಹಿಸಿದ ಡಾ. ಲಠ್ಠೆ ಅವರು ಉತ್ತಮವಾದ ಸುಮಾರು ೨೬೦ ಹಾಡುಗಳನ್ನು ಇಲ್ಲಿ ಆಯ್ದುಕೊಂಡಿದ್ದಾರೆ. ಅಡಿಟಿಪ್ಪಣಿಯಲ್ಲಿ ಪಾಠಾಂತರಗಳನ್ನು ಕೊಡುತ್ತ ಹೋಗಿದ್ದಾರೆ. ಕಾವ್ಯದ ಗುಣಗಳಿಂದ ಇಲ್ಲಿಯ ಹಾಡುಗಳು ಗಮನ ಸೆಳೆಯುತ್ತವೆ.

ಇಲ್ಲಿ ಶಾಲೆಗೆ ಸಂಬಂಧಿಸಿದ ಹಾಡುಗಳು ಬಹಳ ಕಡಿಮೆ. ಆದರೆ ಈ ಆಟ-ಪಾಠಗಳಿಂದಲೇ ದೊರೆಯುವ ಶಿಕ್ಷಣ ಅದ್ಭುತವಾದುದು. ಆಟವಾಡುವಾಗ ಅಷ್ಟೆ ಅಲ್ಲ, ವ್ಯಾಯಾಮ ಮಾಡುವಾಗಲೂ ಹಾಡು ಹೇಳುತ್ತ, ವ್ಯಾಯಾಮ ಕಲಿಯುವ/ಕಲಿಸುವ ಪದ್ಧತಿ ಇರುವ ಹಾಡುಗಳೂ ಈ ಸಂಕಲನದಲ್ಲಿ ಇವೆ. ಸಾಮ ತೆಗೆಯುತ್ತ ಅನ್ನುವ ಹಾಡು ಹೀಗಿದೆ :

'ಗಿಡ್ಡ ತಮ್ಮಣ್ಣಾ ಚೆಡ್ಡಿ ಹಾಕಣ್ಣ
ಚೆಡ್ಡಿ ಹಾಕಣ್ಣಾ ಸಡ್ಡು ಹೊಡಿಯಣ್ಣಾ
ಸಡ್ಡು ಹೊಡಿಯಣ್ಣಾ ಸಾಮ ತಗಿಯಣ್ಣಾ
ಸಾಮ ತಗಿಯಣ್ಣಾ ನಿತ್ಯ ಕಾಲಣ್ಣ'

ಹೀಗೇ ಮುಂದುವರೆಯುತ್ತದೆ ಈ ಹಾಡು. ಇಂತಹ ೫ ಹಾಡುಗಳು ಇಲ್ಲಿವೆ. ಈ ಬಗೆಯ ವೈವಿಧ್ಯಮಯವಾದ ಹಾಡುಗಳಿಂದ ತುಂಬಿರುವ ಈ ಕೃತಿ ಕರ್ನಾಟಕದಲ್ಲಿ ಬಂದ ಇಂತಹ ಕೃತಿಗಳಲ್ಲಿಯೇ ಶ್ರೇಷ್ಠವೆನಿಸುತ್ತದೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಈ ಕೃತಿ ಪ್ರಕಟವಾದ ನಂತರ ಪ್ರಕಟವಾದ ದಕ್ಷಿಣ ಕರ್ನಾಟಕದ ಸಂಪಾದಕರು ಯಾರೂ ಕೂಡ ಈ ಕೃತಿಯನ್ನು ಕನಿಷ್ಠ ಉಲ್ಲೇಖ ಮಾಡಿರುವುದು ಕಂಡುಬರುವುದಿಲ್ಲ. ಆದರೆ ಡಾ. ಲಠ್ಠೆ ಅವರು ತಮ್ಮ ಕೃತಿಗಿಂತ ಮುಂಚೆ ಪ್ರಕಟವಾದ ಕೃತಿಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ತಪ್ಪದೆ ಪ್ರಸ್ತಾಪಿಸುತ್ತಾರೆ. ತಮಗೆ ಸರಿಯೆನಿಸಿದ ಆಯಾ ಕೃತಿಗಳಲ್ಲಿಯ ಮಾತುಗಳನ್ನು ಉಲ್ಲೇಖಿಸುತ್ತಾರೆ. ಆಗಿನ ಕಾಲಕ್ಕೆ 'ಚುಕ್ಕೋಳ ಪದಗಳು' ತುಂಬ ಪ್ರಸಿದ್ಧಿಯನ್ನು ಪಡೆದ ಕೃತಿಯಾಗಿತ್ತು. ಅದರ ಸಂಪಾದಕರಾದ ಡಾ. ಎಂ.ಎಸ್.ಲಠ್ಠೆ ಅವರೂ ಇಡೀ ಕರ್ನಾಟಕದ

ತುಂಬ ಹೆಸರುವಾಸಿಯಾಗಿದ್ದರು. ಗಮನಿಸಬೇಕಾದ ಸಂಗತಿಯೆಂದರೆ ಈ ಕೃತಿಯನ್ನು ಗಮನಿಸಿಯೂ ಗಮನಿಸದಂತೆ ಇರುವ ವಿದ್ವಾಂಸರಾರೂ ಕೂಡ ಒಂದು ಸಾಮಾನ್ಯವಾದ ಸ್ವತಂತ್ರವಾದ ವಿಭಾಗೀಕ್ರಮ ಕೂಡ ಮಾಡಿಕೊಳ್ಳುವ ಗೋಜಿಗೆ ಹೋಗಿಲ್ಲ. ಅವರೆಲ್ಲ ಮತ್ತೆ ಅಕಾರಾದಿಯನ್ನೇ ಅನುಸರಿಸಿದ್ದಾರೆ. ಯಾಕೆ ಹೀಗೆ? ಎಂಬುದು ಸಹಜವಾದ ಪ್ರಶ್ನೆಯಾಗಿದೆ.

ಡಾ. ಎಂ.ಎಸ್. ಲಠ್ಠೆ ಅವರ 'ಚುಕ್ಕೋಳ ಪದಗಳು' ಪ್ರಕಟವಾದ ವರ್ಷವೇ ಜಿವಿಡಿ ಅವರ **'ಕರ್ನಾಟಕ ಶಿಶುಪ್ರಾಸಗಳು'** (೧೯೭೬) ಪ್ರಕಟವಾಗಿದೆ. ಇಲ್ಲಿಯ ಶಿಶುಪ್ರಾಸಗಳನ್ನು ಮಂಡ್ಯ ಜಿಲ್ಲೆಯ ಮಂಡ್ಯ, ಮದ್ದೂರು, ಮಳವಳ್ಳಿ, ಮೈಸೂರು ಜಿಲ್ಲೆಯ ಟಿ.ನರಸೀಪುರ, ಬೆಂಗಳೂರು (ಗ್ರಾ) ಜಿಲ್ಲೆಯ ಕನಕಪುರ– ಈ ತಾಲೂಕುಗಳ ಕೆಲ ಗ್ರಾಮಗಳಲ್ಲಿ ಇಲ್ಲಿಯ ೨೯೧ ಶಿಶುಪ್ರಾಸಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ಅಕಾರಾದಿಯಾಗಿ ಜೋಡಿಸಿಕೊಳ್ಳಲಾಗಿದೆ. ಸುಮಾರು ೬೩ ನುಡಿಗಳ ಹಿನ್ನೆಲೆಯನ್ನು ವಿವರವಾಗಿ ಬರೆದು ಅನುಬಂಧದಲ್ಲಿ ಸೇರಿಸಲಾಗಿದೆ. ರಾಗೌ ಅವರ ಕೃತಿಯ ರಾಚನಿಕ ಚೌಕಟ್ಟನ್ನು ಆ ಭಾಗದಿಂದ ಮುಂದೆ ಪ್ರಕಟವಾದ ಕೃತಿಗಳು ಅನುಸರಿಸಿವೆ. ಜಿವ್ವಿಡಿ ಅವರು ೪೦ ಪುಟಗಳ ತುಂಬಾ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಅಮೆರಿಕಾ ಮತ್ತು ಇಂಗ್ಲಂಡ ದೇಶಗಳಲ್ಲಿ ನಡೆದ ಮಕ್ಕಳ ಹಾಡುಗಳ ಅಧ್ಯಯನದ ಕೃತಿಗಳನ್ನು ಗಮನಿಸಿ ಅವರಲ್ಲಿ ಈ ಹಾಡುಗಳ ಬಗೆಗೆ ಹೇಳುವ ಸ್ವರೂಪ, ರಚನೆ, ಪ್ರಕಾರ, ಪ್ರಯೋಜನ ಮುಂತಾದವುಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದ್ದಾರೆ. ತಾವು ಸಂಗ್ರಹಿಸಿದ ಸಾಹಿತ್ಯವನ್ನೇ ಗಮನಸದೇ ಹೋಗಿದ್ದಾರೆ.

ಮಕ್ಕಳ ಹಾಡುಗಳ ವರ್ಗೀಕರಣವನ್ನು ***'ದಿ ಲೋರ್ ಆಂಡ್ ಲ್ಯಾಂಗ್ವೇಜ ಆಫ್ ಸ್ಕೂಲ್ ಚಿಲ್ಡ್ರನ್ಸ್'*** ಎಂಬ ಕೃತಿಯನ್ನು ಆಧರಿಸಿ ಹೀಗೆ ಸೂಚಿಸಿದ್ದಾರೆ: "ಶಿಶುಪ್ರಾಸಗಳನ್ನು ಸುಲಭವಾಗಿ ವರ್ಗೀಕರಿಸಲಾಗದು. ಶಿಶುಪ್ರಾಸಗಳಲ್ಲಿ ಕೆಲವುಗಳ ಅರ್ಥ ಹೇಗೆ ಹಿಡಿತಕ್ಕೆ ಸಿಗುವುದಿಲ್ಲವೋ ಹಾಗೆಯೇ ಅವುಗಳ ಸ್ವರೂಪ ಸೂಕ್ಷ್ಮವಾಗಿರುವುದರಿಂದ. ಆದರೂ ಅವುಗಳನ್ನು – ಲಾಲಿಪದ (ಲುಲ್ಲಬೀಸ್), ಆಟದ ಅಥವಾ ದೂರಿಪ್ರಾಸಗಳು(ಪ್ಲೇ ಆರ್ ಡ್ಯಾಂಡಲಿಂಗ್ ರೈಮ್ಸ್), ಎಣಿಕೆಯ ಪ್ರಾಸಗಳು (ಕೌಂಟಿಂಗ್ ರೈಮ್ಸ್), ಐತಿಹಾಸಿಕ ಘಟನೆ ಅಥವಾ ಗಣ್ಯ ವ್ಯಕ್ತಿಗಳನ್ನು ಆಧರಿಸಿದ ಪ್ರಾಸಗಳು(ಬೇಸ್ಡ್ ಆನ್ ಹಿಸ್ಟೋರಿಕಲ್ ಇವೆಂಟ್ಸ್ ಆರ್ ಪರ್ಸೋನೇಸೆಸ್), ಸಂಚಿತ ಪ್ರಾಸಗಳು ಅಥವಾ ಪದ್ಯಗಳು (ಕ್ಯುಮ್ಯುಲೇಟಿವ್ ಲೈನ್ಸ್ ಆರ್ ವರ್ಸೆಸ್) ಮತ್ತು ಒಗಟುಗಳು – ಎಂದು ಆರು ವರ್ಗಗಳಾಗಿ ವಿಂಗಡಿಸಬಹುದು" (ಪ್ರ.ಪು.೧೪). ಈ ಎಲ್ಲ ಪ್ರಕಾರದ ಗೀತೆಗಳನ್ನು ತಮ್ಮ ಸಂಗ್ರಹದಲ್ಲಿಯ ಶಿಶುಪ್ರಾಸಗಳ ಸಂಖ್ಯೆಗಳನ್ನು (ಹಾಡುಗಳನ್ನಲ್ಲ) ಉಲ್ಲೇಖಿಸಿ ವಿವರಿಸುತ್ತಾರೆ. ನಂತರ ಮತ್ತೆ 'ಪ್ರಾಸಗಳ ಗುಣಗಳನ್ನು ಗಮನಿಸಿ ಇನ್ನೂ ಕೆಲವು ಉಪವರ್ಗಗಳಾಗಿ ಶಿಶು ಪ್ರಾಸಗಳನ್ನು ವಿಂಗಡಿಸಬಹುದು' ಎಂದು ಬರೆದು, ಮತ್ತೆ ಕೆಲ ಪ್ರಕಾರಗಳನ್ನು ಪರಿಚಯಿಸುತ್ತಾರೆ. ೧. ಮಾರ್ನುಡಿಯ ಪ್ರಾಸಗಳು, ೨. ಅಣಕ ಪ್ರಾಸಗಳು, ೩. ಅಸಂಬದ್ಧ ಪ್ರಾಸಗಳು, ೪. ಗಣಿತಾತ್ಮಕ ಸಮಸ್ಯೆಯ ಪ್ರಾಸಗಳು, ೫. ಸಂಖ್ಯಾತ್ಮಕ ಪ್ರಾಸಗಳು, ೬. ಅಡ್ಡ ಹೆಸರು ಮತ್ತು ಗುಣವಾಚಕ ಸಂಬಂಧ ಪ್ರಾಸಗಳು, ೭. ಸ್ಥಳೀಯ ಪ್ರಾಸಗಳು, ೮. ಗಾದೆ

ರೂಪದ ಪ್ರಾಸಗಳು, ೯. ನಂಬಿಕೆಯ ಪ್ರಾಸಗಳು. ಇಷ್ಟೆಲ್ಲ ಪ್ರಕಾರಗಳಿಗೆ ಉದಾಹರಣೆಯಾಗಿ ತಮ್ಮ ಸಂಗ್ರಹದಲ್ಲಿರುವ ಹಾಡುಗಳ ಸಂಖ್ಯೆಗಳನ್ನು ಉದಾಹರಿಸುತ್ತಾರೆ ಹೊರತಾಗಿ ಹಾಡಿನ ಪಠ್ಯಗಳನ್ನಲ್ಲ.

ಭಾಷೆ ಮತ್ತು ಸಾಹಿತ್ಯ ಕುರಿತು ಹೊರದೇಶಗಳಲ್ಲಿ ಹೇಗೆ ಅಧ್ಯಯನಗಳು ನಡೆದಿವೆ ಎಂದು ಪರಿಚಯಿಸುವ ಭಾಗದಲ್ಲಿ ಕೂಡ ಅವರು ಮಾಡಿಕೊಳ್ಳುವ ವರ್ಗೀಕರಣವನ್ನು ಪರಿಚಯಿಸುತ್ತಾರೆ: ೧. ಸುಂದರ ಶಬ್ದ ಚಿತ್ರಗಳು, ೨. ಚಿತ್ರಗಳ ಮಾಲೆ, ೩. ಕಥನ ಪ್ರಾಸಗಳು, ೪. ನಿಗೂಢ ಪ್ರಾಸಗಳು, ೫. ಪ್ರಕೃತಿ ಪ್ರೇಮ, ೬. ಸಕಲ ವಸ್ತು ವಿಷಯಗಳು, ೭. ಕುತೂಹಲದ ಪ್ರಾಸಗಳು. ಹೀಗೆ ಭಾಷೆ ಹಾಗೂ ಸಾಹಿತ್ಯ ದೃಷ್ಟಿಯಿಂದ ಏಳು ಪ್ರಕಾರಗಳನ್ನು ಗುರುತಿಸಿಕೊಂಡುದು ಕಾಣುತ್ತದೆ.

ಸಾಮಾಜಿಕ ಪ್ರಜ್ಞೆಯನ್ನು ಅವಲಂಬಿಸಿ ಅಧ್ಯಯನ ಮಾಡಬಹುದಾದ ಸಂಗತಿಗಳನ್ನು ವಿವರಿಸುವ ಭಾಗದಲ್ಲಿ: ೧. ಕೌಟುಂಬಿಕವಾಗಿ ತಾಯಿಯ ನಡವಳಿಕೆ, ೨. ದೈನಂದಿನ ಚಟುವಟಿಕೆಗಳು, ೩. ವಿವಾಹ ಪದ್ಧತಿ, ೪. ಹೆಣ್ಣು ತರುವಿಕೆ, ೫. ಹೆಣ್ಣನ್ನು ಕಳುಹಿಸುವುದು, ೬. ಸೋಬನ, ೭. ದೇವರು-ಹಬ್ಬ-ಜಾತ್ರೆ, ೮. ಹೆಣ್ಣು-ಗಂಡಿನ ಸಂಬಂಧ (ನೈತಿಕ ಸಂಬಂಧ, ಅನೈತಿಕ ಸಂಬಂಧ), ೯. ದಾಂಪತ್ಯ ಜೀವನದಲ್ಲಿ ಸರಸ-ವಿರಸ, ೧೦. ವಿವಾಹ ಪೂರ್ವ ಜೀವನ, ೧೧. ಪ್ರಾಸಗಳಲ್ಲಿ ಫ್ಯಾಸನ್, ೧೨. ಬೈಗುಳಗಳು, ೧೩. ಜನಪದ ನಂಬಿಕೆಗಳು. ಇಷ್ಟೆಲ್ಲ ವಿಷಯಗಳ ವಿವರಣೆಗಳ ಜೊತೆ ತಮ್ಮ ಕೃತಿಯಲ್ಲಿಯ ಕೆಲ ಉದಾಹರಣೆಗಳಿಗಾಗಿ ಮತ್ತೆ ಸಂಖ್ಯೆಗಳನ್ನೇ ಕೊಟ್ಟಿದ್ದಾರೆ.

ಒಂದು ಪ್ಯಾರಾ ಹೀಗಿದೆ : "ಶಿಶುಪ್ರಾಸಗಳನ್ನು ಕುರಿತು ಇಷ್ಟೆಲ್ಲಾ ವರ್ಗೀಕರಿಸಿದರೂ ವರ್ಗ ವರ್ಗಗಳ ನಡುವೆ ಸೂಕ್ಷ್ಮ ಅಂತರವಿದ್ದೇ ಇರುತ್ತದೆ. ಸಾಮಾನ್ಯವಾಗಿ ಶಿಶುಪ್ರಾಸಗಳಲ್ಲಿ ಕಾರ್ಯೋನ್ಮುಖವಾದ ಮಕ್ಕಳ ಮನಸ್ಸನ್ನು ಕಾಣಬಹುದು. ಶಿಶುಪ್ರಾಸಗಳಲ್ಲಿ ಗಂಭೀರ ಆಲೋಚನೆ ಕಡಿಮೆ. ಹಾಸ್ಯವೇ ಪ್ರಧಾನವಾಗಿದ್ದು, ಮನರಂಜನೆ ಇವುಗಳ ಗುರಿಯಾಗಿರುತ್ತದೆ ಎನ್ನಬಹುದು" (ಪ್ರ.ಪು.೨೫). ಆಡುವ ಮಯಸ್ಸಿನಲ್ಲಿ ಆಟಗಳೊಂದಿಗೆ (ಬರೀ ಕ್ರೀಡೆಗಳಲ್ಲ) ಹುಟ್ಟುವ ಹಾಡುಗಳ ಉದ್ದೇಶ ಮನರಂಜನೆ ಎಂಬುದು ಸ್ಪಷ್ಟ. ಇಲ್ಲಿ ಗಂಭೀರವಾದುದನ್ನು ಹುಡುಕುವ ಹಾಗಿಲ್ಲ. ಮನರಂಜನೆಯ ಜೊತೆಗೆ ಬದುಕಿನ ಶಿಕ್ಷಣವನ್ನು ಉಣಬಡಿಸುವ ಮಹತ್ವದ ಕೆಲಸವನ್ನು ಈ ಹಾಡುಗಳು ಮಾಡುತ್ತಿರುತ್ತವೆ. "ಮಕ್ಕಳು- ಮನುಷ್ಯ, ಪಕ್ಷಿ, ಪ್ರಾಣಿ, ಪ್ರಕೃತಿಯ ಬಗ್ಗೆ ತಮ್ಮ ವರ್ತನೆಯನ್ನು ಆ ಮೂಲಕ ತಮ್ಮದೇ ಆದ ವಿಶಿಷ್ಟ ವಿಚಿತ್ರ ಜಗತ್ತನ್ನು ತೆರೆದು ತೋರಿಸುವುದನ್ನು ಶಿಶುಪ್ರಾಸಗಳಲ್ಲಿ ಕಾಣಬಹುದು. ಈ ಶಿಶುಪ್ರಾಸಗಳಲ್ಲಿ ಮಕ್ಕಳ ಹಾಸ್ಯಪ್ರವೃತ್ತಿ, ಕಲ್ಪನಾಶಕ್ತಿ, ಅರಳುತ್ತಿರುವ ಪ್ರತಿಭೆಯನ್ನೂ ಭಾವುಕತೆಯನ್ನೂ ಮತ್ತು ರಚನಾ ಶಕ್ತಿಯನ್ನೂ ಕಾಣಬಹುದು"(ಪ್ರ.ಪು.೨೫). ಜಿವಿಡಿ ಅವರ ೪೦ ಪುಟಗಳ ಪ್ರಸ್ತಾವನೆಯನ್ನು ಓದಿ ಮುಗಿಸಿದಾಗ ಅಮೆರಿಕಾ ಇಂಗ್ಲಂಡ ದೇಶಗಳಲ್ಲಿ ಮಕ್ಕಳ ಹಾಡುಗಳನ್ನು ಕುರಿತು ಉತ್ತಮವಾದ ಅಧ್ಯಯನಗಳು ನಡೆದಿವೆ ಎಂಬುದು ಮನದಟ್ಟಾಗುತ್ತದೆ. ಈ ಹಾಡುಗಳನ್ನು ಹಲವಾರು ದೃಷ್ಟಿಗಳಿಂದ ಅಧ್ಯಯನ ಮಾಡಬಹುದು ಎಂಬ ಸಂಗತಿ ತಿಳಿದುಬರುತ್ತದೆ.

೧೯೭೯ರಲ್ಲಿ **'ಜನಪದ ಮಕ್ಕಳ ಪದಗಳು'** ಎಂಬ ಒಂದು ಚಿಕ್ಕ ಕೃತಿಯನ್ನು ಪ್ರಕಟಿಸಿದವರು ಶ್ರೀಮತಿ ಸುಶೀಲ ಹೊನ್ನೇಗೌಡ ಅವರು. ಒಬ್ಬ ಗೃಹಿಣಿಯಾಗಿ ಶ್ರೀಮತಿ ಸುಶೀಲಾ ಅವರು ಮಾಡಿದ ಕಾರ್ಯ ಮಹತ್ವದ್ದಾಗಿದೆ. ಈ ಕೃತಿಯ ಹೆಸರನ್ನು 'ಜನಪದ ಮಕ್ಕಳ ಪದಗಳು' ಎಂದಿಟ್ಟಿರುವುದು ಸಹಜವೆನಿಸುತ್ತದೆ. ವಿದ್ವತ್‌ಲೋಕದಲ್ಲಿ ಒಮ್ಮೊಮ್ಮೆ ನಡೆಯುವ ಒತ್ತಾಯದ ನಡಿಗೆ ಎಲ್ಲರಿಗೂ ಸರಿಬರುವುದಿಲ್ಲ ಎಂಬುದು ಈ ಕೃತಿಗೆ ಇಟ್ಟ ಹೆಸರೇ ಸಾಕ್ಷಿಯಾಗಿದೆ. ಆ ಭಾಗದ ದೊಡ್ಡ ದೊಡ್ಡ ವಿದ್ವಾಂಸರೆಲ್ಲ 'ಶಿಶುಪ್ರಾಸಗಳು' ಎಂಬ ಹೆಸರನ್ನೇ ಬಳಸುತ್ತ ಬಂದಿರುವಾಗ, ಹೀಗೆ ತಾವು 'ಜನಪದ ಮಕ್ಕಳ ಪದಗಳು' ಎಂಬ ಹೆಸರನ್ನು ಆಯ್ಕೆಮಾಡಿದ ಕಾರಣವನ್ನು ಸಂಪಾದಕರು ಹೀಗೆ ದಾಖಲಿಸಿದ್ದಾರೆ: "ಈ ಮಕ್ಕಳ ಪದಗಳಿಗೆ ಶಿಶುಗೀತೆಗಳು ಅಥವಾ ಶಿಶುಪ್ರಾಸಗಳು ಎನ್ನುತ್ತಾರೆ. ಆದರೆ ಇದು ಮಕ್ಕಳಿಗೆ ಅರ್ಥವಾಗುವುದು ಸ್ವಲ್ಪ ಕಷ್ಟವೆಂದು 'ಮಕ್ಕಳ ಪದಗಳು' ಎಂದು ಹೆಸರಿಟ್ಟಿದ್ದೇನೆ" (ನನ್ನ ಮಾತು). ಅಂದರೆ 'ಮಕ್ಕಳ ಪದಗಳು' ಎಂಬುದು ಸಹಜವಾದ ಎಲ್ಲರೂ ಬಳಸುವ, ಮಕ್ಕಳಿಗೂ ಅರ್ಥವಾಗುವ ಪದ ಎಂಬ ಭಾವ ಇಲ್ಲಿದೆ. ಇಂತಹ ಸರಳವಾದ ಸಹಜವಾಗಿ ಬಳಸುತ್ತ ಬಂದ ಹೆಸರು 'ಮಕ್ಕಳ ಪದಗಳು' ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. "ಇಲ್ಲಿಯ ಮಕ್ಕಳ ಪದಗಳನ್ನು ಮಂಡ್ಯ ಜಿಲ್ಲೆಯಲ್ಲಿ ಸಂಗ್ರಹಿಸಿದ್ದರೂ ಇದೇ ರೀತಿಯ ಪದಗಳು ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿಯೂ ದೊರೆಯುತ್ತವೆ"(ಅದೆ) ಎನ್ನುತ್ತಾರೆ ಸಂಪಾದಕರು. ಅಂದರೆ ಮೈಸೂರು ಮಂಡ್ಯ ಬೆಂಗಳೂರು ಭಾಗಗಳಲ್ಲೂ 'ಮಕ್ಕಳ ಪದಗಳು' ಎಂಬ ಹೆಸರು ರೂಢಿಯಲ್ಲಿದೆ ಎಂದಂತಾಯಿತು. ಈ ಪುಟ್ಟ ಕೃತಿಗೆ ಮುನ್ನುಡಿ ಬರೆದಿರುವ ಸಿಪಿಕೆ ಅವರು "ಶಿಶುಗೀತೆಗಳು ಅಥವಾ ಶಿಶುಪ್ರಾಸಗಳು ಜನಪದ ಗೀತೆಯ ಒಂದು ವಿಲಕ್ಷಣ ಪ್ರಕಾರ. ಅಂಥ ೧೧೫ ರಚನೆಗಳು ಇಲ್ಲಿ ಸಂಚಯಗೊಂಡಿವೆ. ಮಕ್ಕಳಿಗೆ ಇವು ಖುಷಿ ಕೊಡುವುದರಲ್ಲಿ ಸಂದೇಹವಿಲ್ಲ; ಮಾತ್ರವಲ್ಲ, ದೊಡ್ಡವರ ಅಧ್ಯಯನಕ್ಕೂ ಇವು ವಸ್ತುವಾಗಬಲ್ಲವು" (ಮುನ್ನುಡಿ). ಸಿಪಿಕೆ ಅವರ ಈ ಮಾತಿನಲ್ಲಿ ಮಕ್ಕಳ ಪದಗಳು 'ಜನಪದ ಗೀತ ಪ್ರಕಾರ'ಗಳು ಎಂಬುದು ಸ್ಪಷ್ಟವಾಗಿದೆ. ಜೊತೆಗೆ ಅವುಗಳ ಪರಿಣಾಮ ಮತ್ತು ಪ್ರಯೋಜನವನ್ನು ಹೇಳುವಲ್ಲಿ 'ಮಕ್ಕಳಿಗೆ ಖುಶಿ' ಕೊಡುತ್ತವೆ, ದೊಡ್ಡವರ ಅಧ್ಯಯನಕ್ಕೆ ವಸ್ತುವಾಗುತ್ತವೆ ಎಂಬ ಮಾತುಗಳು ಪ್ರಮುಖವಾದ ಸೂಚನೆಗಳೆನಿಸುತ್ತವೆ. ಮುಂದುವರೆದು ಸಿಪಿಕೆ ಅವರು ಹೀಗೆ ಬರೆಯುತ್ತಾರೆ: "ಶಿಶುಪ್ರಾಸಗಳಲ್ಲಿ ಅರ್ಥಕ್ಕೆ ಮಹತ್ವವಿಲ್ಲ. ಪ್ರಾಸ ಯೋಜನೆಗೇ ಪ್ರಾಶಸ್ತ್ಯ. ಮಕ್ಕಳ ಕುತೂಹಲವನ್ನು ಎಬ್ಬಿಸಿ, ಅವರ ಊಹನೆ ಕಲ್ಪನೆಗಳನ್ನು ಉದ್ದೀಪಿಸುವ ಕೆಲಸವನ್ನು ಈ ಬಗೆಯ ರಚನೆಗಳು ಯಶಸ್ವಿಯಾಗಿ ಮಾಡುತ್ತವೆ. ಪ್ರಾಸ ಬಂಧವೆ ಮುಖ್ಯವಾದರೂ ಕೆಲವು ರಚನೆಗಳಲ್ಲಿ ಅರ್ಥಗೌರವ ಅಷ್ಟಿಷ್ಟು ಕಂಡುಬರುತ್ತದೆ"(ಅದೆ). ಮಕ್ಕಳ ಪದಗಳ ಮುಖ್ಯ ಉದ್ದೇಶ ರಂಜನೆ. ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಅರ್ಥಕ್ಕಿಂತ ಶಬ್ದದ ಕಡೆಗೆ ಲಕ್ಷ ಇರುವುದು ಸಾಮಾನ್ಯ. ಒಂದೊಂದು ಶಬ್ದಗಳ ಅನುರಣನದಲ್ಲಿಯೇ ಮಕ್ಕಳು ಸಂತೋಷ ಪಡುತ್ತವೆ. ಕಿವಿಯಲ್ಲಿ ಗುಂಯ್ಗುಡುವ ಲಯಬದ್ಧವಾದ ಶಬ್ದದ ನಾದ ಅವರಿಗೆ ಆ ವಯಸ್ಸಿನಲ್ಲಿ ಅರ್ಥಕ್ಕಿಂತ ಶಕ್ತಿಯುತವಾಗಿ ಪರಿಣಾಮ ಬೀರುತ್ತದೆ. ಮಕ್ಕಳು

ಬೆಳೆದಂತೆ ಪ್ರಯೋಗವಾಗುವ ಪದಗಳಲ್ಲಿ ಅರ್ಥದ ಛಾಯೆ ತಾನಾಗಿಯೇ ಕಾಣತೊಡಗುತ್ತದೆ.

ಒಂದು ಎರಡು ಬಾಳೆಲೆ ಹರಡು
ಮೂರು ನಾಕು ಅನ್ನ ಹಾಕು
ಐದು ಆರು ಬೇಳೆಯ ಸಾರು
ಏಳು ಎಂಟು ಪಲ್ಯಕೆ ದಂಟು
ಒಂಬತ್ತು ಹತ್ತು ಎಲೆ ಮುದಿರೆತ್ತು.

ಇಲ್ಲಿ ಎರಡು ಸಂಗತಿಗಳು ಮಕ್ಕಳ ಗಮನಕ್ಕೆ ಬರುತ್ತ ಹೋಗುತ್ತವೆ. ಒಂದರಿಂದ ಹತ್ತರವರೆಗಿನ ಮಗ್ಗಿಗಳು, ಮತ್ತು ಆಹಾರ ಪದಾರ್ಥಗಳು. ಇವುಗಳ ತಿಳುವಳಿಕೆ ಮಗುವಿಗೆ ಬರಲಿ ಎಂಬ ಉದ್ದೇಶವೂ ಇಂತಹ ಹಾಡುಗಳ ಹಿಂದೆ ಇರುತ್ತದೆ.

ಸಿಪಿಕೆ ಅವರು ಈ ಕೃತಿಗೆ ಬರೆದ ಮುನ್ನುಡಿಯಲ್ಲಿ ಒಂದು ಮಹತ್ವದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಆ ಹೇಳಿಕೆ ಈ ಚಿಕ್ಕ ಕೃತಿಯ ಜೊತೆಗೆ ಮರೆಯಾಗಿ ಹೋಗುತ್ತಿತ್ತು. "ಈ ಶಿಶುಪ್ರಾಸಗಳಲ್ಲಿ ಏನಿದೆ ಎಂದು ತಾತ್ಸಾರ ತೋರಬೇಕಿಲ್ಲ. ನಮ್ಮ ಎಷ್ಟೋ ಪ್ರಾಚೀನ ಪ್ರೌಢ ಕಾವ್ಯಗಳಲ್ಲಿ ತಾನೆ ಏನಿದೆ, ಪ್ರಾಸ ಛಂದಸ್ಸುಗಳ ಪರಿಪೂರ್ಣತೆಯನ್ನು ಬಿಟ್ಟರೆ; ಅದು ಸಾಮಾನ್ಯರಿಗೆ ಮತ್ತು ಮಕ್ಕಳಿಗೆ ಅರ್ಥವಾಗುವುದೂ ಇಲ್ಲ. ಈ ಶಿಶುಗೀತೆಗಳಾದರೆ ಎಲ್ಲರಿಗೂ ಗ್ರಾಹ್ಯವಾಗುತ್ತವೆ; ಒಂದು ಗಳಿಗೆಯಾದರೂ ಮನಸ್ಸನ್ನು ಹಿಡಿದು ನಿಲ್ಲಿಸುತ್ತವೆ. ನಿಜವಾದ ಕಾವ್ಯ ನಿರ್ಮಾಣಕ್ಕೆ ಇವು ಮೆಟ್ಟಿಲಾಗಬಹುದು" (ಅದೆ). ಸಿಪಿಕೆ ಅಂಥವರಿಂದ ಇಂತಹ ದಿಟ್ಟ ಮಾತುಗಳು ಬಂದಿರುವುದನ್ನು ನಾವು ಗಂಭೀರವಾಗಿ ಗಮನಿಸಬೇಕು. ಕನ್ನಡದ ಪ್ರಾಚೀನ ಸಾಹಿತ್ಯ ಕೃತಿಗಳಿಗಿಂತ ಶಿಶುಗೀತೆಗಳೇ ಮಹತ್ವದವು ಎನ್ನುವ ಅವರ ಮಾತು, ಪರ್ಯಾಯವಾಗಿ ಜನಪದ ಸಾಹಿತ್ಯದ ಮಹತ್ವವನ್ನು ಹೇಳುವ ಮಾತಾಗುತ್ತದೆ. ಸಾಮಾನ್ಯರಿಗೆ, ಮಕ್ಕಳಿಗೆ ಅರ್ಥವಾಗುವ ಸಾಹಿತ್ಯವೇ ನಿಜವಾದ ಅರ್ಥದಲ್ಲಿ ಶ್ರೇಷ್ಠಸಾಹಿತ್ಯ ಎನ್ನುವ ಸಿಪಿಕೆ ಅವರ ಭಾವನೆ ಅರ್ಥಪೂರ್ಣವಾಗಿದೆ. ಈ ದೃಷ್ಟಿಯಿಂದ ಮಕ್ಕಳ ಹಾಡುಗಳು ಕನ್ನಡ ಸಾಹಿತ್ಯದ ಮಹತ್ವದ ಪ್ರಕಾರವೆನಿಸುತ್ತದೆ.

'ಜನಪದ ಮಕ್ಕಳ ಕೃತಿಗಳು' ಕೃತಿಯಲ್ಲಿರುವ ಪಠ್ಯದ ವ್ಯಾಪ್ತಿ ಕೇವಲ ೩೭ ಪುಟಗಳು ಮಾತ್ರ. ಇಲ್ಲಿರುವ ಹಾಡುಗಳ ಸಂಖ್ಯೆ ೧೧೫. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಇಲ್ಲಿರುವ ೧೧೫ ನುಡಿಗಳಲ್ಲಿ ೭೩ ನುಡಿಗಳ ಹಿನ್ನೆಲೆಯನ್ನು ಸಂಪಾದಕರು ಒದಗಿಸುತ್ತಾರೆ. ಉದಾಹರಣೆಗಾಗಿ ಸಂಪಾದಕರು ಬರೆದ ಒಂದು ಟಿಪ್ಪಣಿಯನ್ನು ಗಮನಿಸಬಹುದಾಗಿದೆ:

೩. ಅಟ್ಟೆ ಚಿಟ್ಟೆ ನಾಗರ ಚಿಟ್ಟೆ
ಹಾವು ಬಂದು ಕಚ್ಚಲಿ ಟೂ...ಟೂ...ಟೂ...

೪. ಅಟ್ಟ ಚಿಟ್ಟೆ ನಾಗರ ಚಿಟ್ಟೆ
ಮುಟ್ಟಾಳಮ್ಮ ಮೂರೇ ದಿವ್ಸ
ಒಂಟೆ ಮೇಲೆ ಕುದುರೆ ಮೇಲೆ
ಆನೆ ಮೇಲೆ ಟೂ...ಟೂ...ಟೂ...

ಸಂಪಾದಕರ ಟಿಪ್ಪಣಿ : ೨–೩ : 'ಮಕ್ಕಳು ಸಂಗ ಬಿಡುವಾಗ ಈ ಪದಗಳನ್ನು ಹೇಳುತ್ತಾರೆ. ಸಂಗ ಬಿಡುವಾಗ ಬಲಗೈಯ ತೋರು ಬೆರಳು ಮತ್ತು ನಡುಬೆರಳನ್ನು ಹಾವಿನ ಹೆಡೆಯಾಕಾರದಲ್ಲಿ ಬಾಗಿಸಿ ಪದ ಹೇಳುತ್ತ ಎರಡು ಕೆನ್ನೆ, ಹಣೆ ಮತ್ತು ಗಲ್ಲಕ್ಕೆ ತಾಗಿಸಿ ಬಾಯಿ ಬಳಿ ತಂದು ಟೂ...ಟೂ...ಟೂ... ಎಂದು ಹೇಳಿ ತೋರುಬೆರಳು ಮತ್ತು ನಡು ಬೆರಳನ್ನು ಬೇರೆ ಮಾಡುತ್ತಾರೆ. ಆ ಎರಡು ಬೆರಳುಗಳ ಸಂಬಂಧ ತಪ್ಪಿದಂತೆ ಆ ಹುಡುಗಿಯ ಸಂಗ ತಪ್ಪುವುದು. ಮತ್ತೆ ಸಂಗ ಕಟ್ಟಬೇಕಾದರೆ ಕೆಲವರು ಪರಸ್ಪರ ಕಿರುಬೆರಳುಗಳನ್ನು ತಾಕಿಸಿ ಸಂಗ ಕಟ್ಟುವರು. ಕೆಲವರು ತೋರುಬೆರಳು ಮತ್ತು ನಡುಬೆರಳುಗಳನ್ನು ಹೆಡೆಯಾಕಾರದಲ್ಲಿ ಹಿಡಿಯುವರು. ಒಬ್ಬಳು ತೋರು ಬೆರಳಿನಿಂದ ಆ ಎರಡು ಬೆರಳುಗಳನ್ನು ಬೇರೆ ಮಾಡುವಳು' (ಪು.೩೩).

'ಜನಪದ ಶಿಶುಪ್ರಾಸಗಳು'(೧೯೮೧) ಎಂಬ ಸಂಗ್ರಹವನ್ನು ಡಾ. ಶ್ರೀಕಂಠ ಕೂಡಿಗೆ ಅವರು ಸಂಗ್ರಹಿಸಿ, ಸಂಪಾದಿಸಿ ಕೊಟ್ಟಿದ್ದಾರೆ. ಈ ಕೃತಿಯಲ್ಲಿ ಒಟ್ಟಿಗೆ ೧೯೫ ಮಕ್ಕಳ ನುಡಿಗಳಿವೆ. 'ಇಲ್ಲಿನ ಶಿಶುಪ್ರಾಸಗಳನ್ನು ಶಿವಮೊಗ್ಗ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಿಂದ ಸಂಗ್ರಹಿಸಲಾಗಿದೆ'. ಇಲ್ಲಿಯ ಶಿಸುಪ್ರಾಸಗಳನ್ನು ಹಿಂದಿನವರಂತೆ ಅಕಾರಾದಿಯಾಗಿ ಜೋಡಿಸಿದ್ದಾರೆ. ಈ ಹಾಡುಗಳು ಪ್ರಯೋಗವಾಗುವ ಪ್ರದೇಶದಿಂದ ಹೊರಗಿನವರಿಗೆ ಇಲ್ಲಿಯ ಎಲ್ಲ ಕಡೆ ಬಳಕೆಯಾಗುವ ನುಡಿಗಳನ್ನು ಹೊರತುಪಡಿಸಿ, ಉಳಿದ ಅನೇಕ ನುಡಿಗಳ ಹಿನ್ನೆಲೆ ಗ್ರಹಿಸಿಕೊಳ್ಳುವುದು ಕಷ್ಟವಾಗುತ್ತದೆ. ವಿಶೇಷವಾದ ಕೆಲ ನುಡಿಗಳಿಗಾದರೂ ಸಂದರ್ಭಗಳನ್ನು ವಿವರಿಸಿದ್ದರೆ ಅನುಕೂಲವಾಗುತಿತ್ತು. ಡಾ. ಕೂಡಿಗೆ ಅವರು ಬರೆದ ಪ್ರಸ್ತಾವನೆ ಅಭ್ಯಾಸಪೂರ್ಣವಾಗಿದೆ. "ಹಾಡಿನ ಅರ್ಥದ ಗೋಜು ಅನಗತ್ಯ. ಪ್ರಾಸ ಮಾತ್ರವೇ ಮುಖ್ಯ. ಇದರಲ್ಲಿ ಮನಸ್ಸಿಗೆ ಉಲ್ಲಾಸ ದೊರೆಯುತ್ತದೆ. ಈ ಕ್ರಿಯೆಯಲ್ಲಿ ಸಾಂಪ್ರದಾಯಕ ಕಲಿಕೆ ಮತ್ತು ಮನೋರಂಜನೆ ಒಟ್ಟಿಗೆ ಸಾಗುತ್ತವೆ" (ಪ್ರ.ಪು.೬). ಡಾ. ಕೂಡಿಗೆ ಅವರು ಕೃತಿಗೆ ಶಿಶುಪ್ರಾಸಗಳು ಎಂಬ ಪದವನ್ನು ಸೇರಿಸಿದ್ದಾರೆ. ಶಿಶುಪ್ರಾಸ ಎನ್ನುವುದು ಯೋಗ್ಯ ಎಂಬ ಅಭಿಪ್ರಾಯ ಅವರದಾಗಿದೆ. ಆದರೆ ಈ ಮೇಲಿನ ಉಲ್ಲೇಖದ ಅವರ ಮೊದಲನೇ ಪದವೇ 'ಪ್ರಾಸಗಳು' ಎನ್ನುವ ಬದಲಾಗಿ 'ಹಾಡುಗಳು' ಎಂದಿರುವುದನ್ನು ಗಮನಿಸಬೇಕು. ತಮ್ಮ ಪ್ರಸ್ತಾವನೆಯಲ್ಲಿ ಮಕ್ಕಳಾಟದ ಹಾಡುಗಳನ್ನು ಹಲವಾರು ಕಡೆ ಹಾಡುಗಳು, ಗೀತಗಳು ಎಂದೇ ಕರೆಯುತ್ತಾರೆ. ಅದಕ್ಕಾಗಿ 'ಶಿಶುಪ್ರಾಸಗಳು' ಏನಿದ್ದರೂ ಅನುವಾದ ಮಾಡಲು ಹೋಗಿ ಹುಟ್ಟಿಕೊಂಡ ಶುಷ್ಕಪದ ಎಂಬುದನ್ನು ಗಮನಿಸಬೇಕು. ಅದು ಕನ್ನಡದಲ್ಲಿ ಸಹಜವಾಗಿ ಬಳಕೆಯಾಗುವ ಪದವಲ್ಲ.

ಮಕ್ಕಳಾಟದ ಹಾಡುಗಳ ಗುಣ ಸ್ವಭಾವಗಳನ್ನು ಹೇಳುವ ಸಂಪಾದಕರ ಕೆಲ ಸಾಲುಗಳು ಹೀಗಿವೆ:

೧. ಹಾಡುಗಳಲ್ಲಿನ ಪ್ರಾಸ ಮತ್ತು ನಾದದ ಸಮ್ಮೋಹಕ ಪರಿಣಾಮಗಳನ್ನು ನಾವು ಉಪೇಕ್ಷಿಸಲು ಬರುವುದಿಲ್ಲ.

೨. ಭಾವೀ ಜೀವನದ ಹೋರಾಟಕ್ಕೆ ಪೂರ್ವಸಿದ್ಧತೆಗಳಂತೆ ಕಾಣಿಸುತ್ತವೆ.

ಮಕ್ಕಳಾಟದ ಹಾಡುಗಳಲ್ಲಿ ಎರಡು ಪ್ರಕಾರಗಳನ್ನು ಅವರು ಹೇಳುತ್ತಾರೆ: ವಯಸ್ಕ ಪ್ರಾಸಗಳು, ಶಾಲಾಪ್ರಾಸಗಳು. ಇವನ್ನು ಹಿಂದೆ ರಾಗೌ ಅವರೂ ಹೇಳಿದ್ದರು. ಇದು ಪಾಶ್ಚಾತ್ಯರಲ್ಲಿ ಕಾಣುವ ಒಂದು ಸಂಗತಿಯಾಗಿದೆ. ನಮ್ಮಲ್ಲಿ ಶಾಲಾ ಪ್ರಾಸುಗಳ ಸಂಖ್ಯೆ ತೀರ ಕಡಿಮೆ ಎನ್ನುವುದನ್ನು ಹಿಂದೆಯೇ ಹೇಳಲಾಗಿದೆ.

ಡಾ. ಕೂಡಿಗೆ ಅವರು ಮಕ್ಕಳ ಹಾಡುಗಳಲ್ಲಿ ಕಾಣುವ ವಿಷಯಗಳನ್ನು ಗಮನಿಸಿ ಪರಿಚಯಿಸಿ ಉದಾಹರಣೆಗಳನ್ನು ಕೊಡುತ್ತ ಸಂದರ್ಭದ ವಿವರಣೆಯನ್ನು ಕೊಡುತ್ತಾರೆ. ಲೇವಡಿ, ತುಂಟಾಟ, ಕಿಲಾಡಿತನದ ಹಾಡುಗಳಿಗೆ ಕೊಡುವ ಉದಾಹರಣೆ ಹೀಗಿದೆ:

ಯಾರೋ ಒಬ್ಬರ ತಲೆ ಮ್ಯಾಲೆ
ಗುಬ್ಬಚ್ಚಿ ಕೂತುಕೊಂಡು
ಹಬ್ಬಬ್ಬ ಮಾಡುತ್ತೈತೆ
ಕಬ್ಬು ತಿನ್ನೊ ಮಕ್ಕಳೆಲ್ಲ
ಹೇಳಬ್ಯಾಡಿ !

ಸಂಖ್ಯೆ ವಾರ ಮತ್ತು ಬೆರಳುಗಳನ್ನು ಕುರಿತಾದ ಹಾಡುಗಳು, ವಿಡಂಬನಾತ್ಮಕ ಹಾಡುಗಳನ್ನು ಲೈಂಗಿಕ ನಿರ್ಭಿಡೆ, ಮತೀಯವಾದ ಗೇಲಿ, ಆಧುನಿಕತೆಗೆ ಸಂಬಂಧಿಸಿದ ಹಾಡುಗಳನ್ನು ಆಯ್ದು ಉಲ್ಲೇಖಿಸಿದ್ದಾರೆ. 'ಶಿಶುಪ್ರಾಸಗಳ ಸಂವಹನ ಕುರಿತು ವಿದ್ವಾಂಸರು ಚರ್ಚಿಸಿದ್ದಾರೆ. ಅವರ ಪ್ರಕಾರ ಶಿಶುಪ್ರಾಸಗಳಿಗಿಂತ, ಬಯಲು ಪ್ರಾಸ ಮತ್ತು ಶಾಲಾ ಪ್ರಾಸಗಳ ಪ್ರಸಾರ ಹೆಚ್ಚು ಶೀಘ್ರವಾದುದು' ಎಂದು ಹೊರದೇಶದ ವಿದ್ವಾಂಸರ ವಿಚಾರವನ್ನು ಹೇಳುವಲ್ಲಿ 'ಬಯಲು ಪ್ರಾಸ' ಎಂಬ ಒಂದು ಪ್ರಕಾರವನ್ನು ಪ್ರಸ್ತಾಪಿಸಿರುವುದು ಮುಖ್ಯ. ಬಹುಶಃ ಇದು ನಮ್ಮಲ್ಲಿಯಂತೆ ಬೆಳೆದ ಮಕ್ಕಳು ಮನೆಯ ಅಂಗಳ ಮತ್ತು ಬೀದಿಯಲ್ಲಿ ಆಡುವ ಆಟಗಳ ಜೊತೆಗಿನ ಹಾಡುಗಳನ್ನು ಹೋಲುವ ನುಡಿಗಳನ್ನು ಕುರಿತು ಹೇಳಿದ ಮಾತಾಗಿರಬೇಕು. ಸ್ಥಳೀಯ ಮಾಹಿತಿಗಳ ಸಂಗ್ರಹ, ಪ್ರಸ್ತಾಪ ಮಾಡುವಲ್ಲಿ ಪ್ರಾರಂಭದ ವಿದ್ವಾಂಸರು ಗಮನಹರಿಸಿದ್ದು ಕಡಿಮೆಯಾಗಿ ಕಾಣುತ್ತಿದೆ.

೧೯೮೨ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಕಟವಾದ **'ಆನೆ ಬಂತೊಂದಾನೆ'** ಎಂಬ ಜನಪದ ಮಕ್ಕಳ ಪದಗಳ ಸಂಗ್ರಹ ಪ್ರಕಟವಾಗಿದೆ. ಇವನ್ನು ಶಿಶುಪ್ರಾಸಗಳು ಎನ್ನದೆ, ಹಾಡಿನ ಒಂದು ಕಾವ್ಯಾತ್ಮಕ ಸಾಲನ್ನೇ ಕೃತಿಯ ಹೆಸರಾಗಿ ಬಳಸಿರುವುದನ್ನು ಗಮನಿಸಬೇಕು. ಎಚ್.ಎಲ್.ನಾಗೇಗೌಡ ಅವರು ತಮ್ಮ 'ಕರ್ನಾಟಕ ಜಾನಪದ ಟ್ರಸ್ಟ್' ಸಂಸ್ಥೆಗಾಗಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಯ ಹಲವಾರು ಜನರಿಂದ ಸಂಗ್ರಹಿಸಿದ ನುಡಿಗಳು ಇಲ್ಲಿವೆ. ನಂತರ ಅವರು 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ' ಅಧ್ಯಕ್ಷರಾದ ನಂತರ ಆ ಸಂಗ್ರಹವನ್ನು ಜಾನಪದ

ಅಕಾಡೆಮಿಯಿಂದಲೇ ಪ್ರಕಟಿಸಿದ್ದಾರೆ. ಇದರಲ್ಲಿ ಮಕ್ಕಳೊಂದಿಗೆ ತಾಯಂದಿರು ಆಡುವ ಮತ್ತು ಮಕ್ಕಳೇ ಕೂಡಿ ಆಡುವ ೮೨ ಆಟಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡು, ತಕ್ಕ ವಿವರಣೆಗಳೊಂದಿಗೆ ಪ್ರಕಟಿಸಿದ್ದಾರೆ. ಇಲ್ಲಿಯ ಬಹುಮುಖ್ಯ ಸಂಗತಿ ಎಂದರೆ ಹಲವಾರು ಆಟಗಳ ವಿವರಣೆಗಳಿಗೆ ಸಮಂಜಸವಾದ ರೇಖಾ ಚಿತ್ರಗಳನ್ನು ಹಾಕಿರುವುದು. ಇಲ್ಲಿಯ ಇನ್ನೊಂದು ವಿಶೇಷ ಸಂಗತಿ ಎಂದರೆ ಕರ್ನಾಟಕದ ಬಹುಭಾಗದಿಂದ ಮತ್ತು ಆಯಾ ಭಾಗದ ಆಸಕ್ತರಿಂದ ಇಲ್ಲಿಯ ನುಡಿಗಳನ್ನು ಸಂಗ್ರಹಿಸಿದ್ದು ಮತ್ತು ಅವುಗಳ ವಿವರಣೆಗಳನ್ನು ಬರೆಸಿದ್ದು. ಹೀಗಾಗಿ ಇದೊಂದು ಕರ್ನಾಟಕದ ಪ್ರಾತಿನಿಧಿಕ ಸಂಗ್ರಹವೆನಿಸುತ್ತದೆ. ಈ ಕೃತಿಯನ್ನು ಗಮನಿಸಿದಾಗ ಈ ಕೆಲಸ ಇನ್ನಷ್ಟು ಆಗಬೇಕಿತ್ತು ಎನಿಸುತ್ತದೆ. ಕರ್ನಾಟಕದಲ್ಲಿ ದೊರೆಯುವ ಎಲ್ಲ ಮಕ್ಕಳಾಟದ ನುಡಿಗಳನ್ನು ಹೀಗೆ ಬಲ್ಲವರಿಂದ ವಿವರಣೆ ಬರೆಸಿ, ಕಲಾವಿದರಿಂದ ರೇಖಾಚಿತ್ರಗಳನ್ನು ಬಿಡಿಸಿ– ಕಡಿಮೆ ಬೆಲೆಯಲ್ಲಿ ಕರ್ನಾಟಕದ ಮನೆಮನೆಗೂ ಮುಟ್ಟಿಸುವ ಕೆಲಸ ಆಗಬೇಕಾದುದು ಅವಶ್ಯವೆನಿಸುತ್ತದೆ.

ಎಚ್. ಎಲ್. ನಾಗೇಗೌಡರು ತಮ್ಮ ಮುನ್ನುಡಿಯಲ್ಲಿ ಕೆಲವೇ ಮಾತುಗಳನ್ನು ಬರೆದಿದ್ದು, ತುಂಬಾ ಅರ್ಥಪೂರ್ಣವಾಗಿವೆ. ಅವನ್ನು ಗಮನಿಸಬೇಕು. "ಈ ಬೀದಿಯ ಮಕ್ಕಳು ಕಟ್ಟಿದ ಹಾಡುಗಳೇ ಅಥವಾ ಅವರಿಗಾಗಿ ಕಟ್ಟಿದ ಹಾಡುಗಳೇ ಇಲ್ಲಿ ಪ್ರಕಟವಾಗಿರುವ ಜನಪದ ಶಿಶುಗೀತೆಗಳು. ಈ ಹಾಡುಗಳಲ್ಲಿ ಹೆಚ್ಚು ಅರ್ಥ ಹುಡುಕಲು ಹೋಗಬಾರದು. ಅನೇಕ ಹಾಡುಗಳು ಕೇವಲ ಪ್ರಾಸದಲ್ಲಿಯೇ ಮುಕ್ತಾಯವಾಗುತ್ತವೆ. ನವುರಾದ ಗೇಲಿ, ಆಟಕ್ಕೆ ತಕ್ಕ ತಾಳ ಮೇಳ, ಹಾಡುವಾಗ ಒದಗುವ ಖುಷಿ ಇವಷ್ಟೇ ಈ ಹಾಡುಗಳ ವೈಶಿಷ್ಟ್ಯ".

"ಈ ಮಕ್ಕಳ ಪದಗಳು ನಾಡಿನ ಎಲ್ಲಾ ಶಿಶುವಿಹಾರಗಳಲ್ಲೂ ಪ್ರಾಥಮಿಕ ಶಾಲೆಗಳಲ್ಲೂ, ಬೋಧಕರು ಹಾಗೂ ಮಕ್ಕಳ ಕೈಯಲ್ಲೂ ಇರಬೇಕೆಂಬುದು ನಮ್ಮ ಆಶಯ. ಇವು ಮಕ್ಕಳ ಮನಸ್ಸಿಗೆ ಹಿಡಿಯಬೇಕಾದರೆ ಚಿತ್ರಗಳು ತುಂಬಾ ಅವಶ್ಯಕ".

ತಾವೊಬ್ಬ ಐಎಎಸ್ ಅಧಿಕಾರಿಯಾಗಿ ಎಚ್.ಎಲ್.ನಾಗೇಗೌಡರು ಜನಪದ ಸಾಹಿತ್ಯವನ್ನು, ಕಲೆಗಳನ್ನು, ಕಲಾವಿದರನ್ನು ಪ್ರೀತಿಸಿದ್ದು ಅಮೋಘ. ಇವುಗಳ ಬಗ್ಗೆ ಅವರಿಗಿದ್ದ ಕಾಳಜಿ ಯಾರೂ ಪ್ರಶ್ನಿಸುವಂತಿಲ್ಲ. ಈ ಮಕ್ಕಳಾಟದ ಹಾಡುಗಳ ಕೃತಿಗಳು ಕರ್ನಾಟಕದ ತುಂಬ ಪ್ರಚಾರಕ್ಕೆ ಬರಬೇಕೆಂಬುದು ಅವರ ಬಯಕೆಯಾಗಿದೆ. ಹೊರದೇಶದ ನರ್ಸರಿ ರೈಮ್ಸ್‌ಗಳನ್ನು ನಮ್ಮ ಮಕ್ಕಳ ಬಾಯಲ್ಲಿ ಕೇಳಿ ಆನಂದ ಪಡುವ ನಾವು ಕರ್ನಾಟಕದ ಸಂಸ್ಕೃತಿಯ ಸೊತ್ತಾದ ಮಕ್ಕಳಾಟದ ಹಾಡುಗಳು ಕನ್ನಡ ಮುದ್ದುಮಕ್ಕಳ ಬಾಯಲ್ಲಿ ಗುನುಗುನಿಸಬೇಕೆಂದು ಬಯಸುವುದು ಸಹಜವಾಗಿದೆ. ನಾಡೋಜ ನಾಗೇಗೌಡ ಅವರು ಇವುಗಳನ್ನು 'ಗೀತಗಳು' 'ಹಾಡುಗಳು' ಎಂದೇ ಕರೆದಿದ್ದಾರೆ.

ವಾಟ್ ಈಸ್ ದಟ್?
ಮೋಟ್ ಗೋಡೆ ದಾಟ್!

ವಾಟ್ ಈಸ್ ದಿಸ್?
ಮಾವಿನಕಾಯ್ ಪುಸ್

ಈ ನುಡಿಯನ್ನು ಗಮನಿಸಿ, ಇದನ್ನು ಅಸಮಂಜಸ ನುಡಿ ಅನ್ನುವವರು ಅನ್ನಲಿ. ಆದರೆ ಇಂಗ್ಲೀಷನ್ನು ಲೇವಡಿ ಮಾಡುವ ಉದ್ದೇಶ ಈ ನುಡಿಗೆ ಇರುವುದನ್ನು ಗಮನಿಸುವುದು ಅವಶ್ಯವಾಗಿದೆ. ಈ ಕೃತಿಯಲ್ಲಿ ಆಟದ ವಿವರ, ಹಾಡು ಹೇಗೆ ಕೊಟ್ಟಿದ್ದಾರೆ ಎಂಬುದಕ್ಕೆ ಒಂದು ಚಿಕ್ಕ ನಿದರ್ಶನವನ್ನು ನೋಡಬಹುದಾಗಿದೆ.

೪. ಅಜ್ಜಿ ಮುಟ್ಟುವಾಟ: 'ಅನೇಕ ಜನ ಹುಡುಗರಿರುತ್ತಾರೆ. ಒಬ್ಬ(ಳು) ಅಜ್ಜಿ. ಮಣ್ಣಿನಲ್ಲಿ ಕೈ ಬೀಸಿದಂತೆ ಮಾಡುತ್ತಾಳೆ.

ಅಜ್ಜಿ ಅಜ್ಜಿ ಯೆಂತಾ ಹುಡುಕ್ತೆ
ಸೂಜಿ ಹುಡುಕ್ತೆ
ಸೂಜಿಯೆಂತಕ್ಕೆ?
ಚೀಲ ಹೊಲು(ದ)ಕ್ಕೆ
ಚೀಲಯೆಂತಕ್ಕೆ?
ದುಡ್ ತುಂಬಲಿಕ್ಕೆ
ದುಡ್‌ಯೆಂತದಕ್ಕೆ?
ಕತ್ತಿ ತರಲಿಕ್ಕೆ
ಕತ್ತಿಯೆಂತದಕ್ಕೆ?
ನಿಮ್ಮ ಕಾಲ ಕಡುಕ (ಕಡಿಯಲಿಕ್ಕೆ)

ಎಂದು ಹೇಳಿ, ಯಾರನ್ನಾದರೂ ಮುಟ್ಟಲು ಓಡಿಬರುತ್ತಾಳೆ. ಮುಟ್ಟಿದರೆ ಮುಟ್ಟಿಸಿಕೊಂಡವ(ಳು) ಅಜ್ಜಿ. ಇಲ್ಲವಾದರೆ ಅಜ್ಜಿ ಅದೇ ರೀತಿ ಹುಡುಕುವುದರಿಂದ ಆಟ ಮುಂದುವರಿಯುತ್ತದೆ'.

೧೯೮೩ ರಲ್ಲಿ ಪ್ರಕಟವಾದ **'ಗ್ರಾಮಾಂತರ ಶಿಶುಪ್ರಾಸಗಳು'** ಎಂಬುದು ಬೋರೇಗೌಡ ಚಿಕ್ಕಮರಳಿ ಅವರು ಸಂಪಾದಿಸಿದ ಕೃತಿ. 'ಮಂಡ್ಯ ಜಿಲ್ಲೆಯ ಪಾಂಡಪುರ ತಾಲ್ಲೂಕಿನ ವ್ಯಾಪ್ತಿಗೆ ಬರುವ ಕೆಲವು ಹಳ್ಳಿಗಳಲ್ಲಿ ಇಲ್ಲಿನ ಪ್ರಾಸಗಳನ್ನು ಸಂಗ್ರಹಿಸಿದ್ದೇನೆ. ಬಹುತೇಕ ಪ್ರಾಸಗಳು ನನ್ನ ಹುಟ್ಟೂರಾದ ಚಿಕ್ಕಮರಳಿಯಲ್ಲಿ ಸಂಗ್ರಹಿಸಿದವುಗಳೇ. ಸಿಕ್ಕ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದೇನೆ. ಪಾಠದೋಷ ಇದೆ ಎನ್ನಿಸಿದ ಕಡೆ ಸರಿ ಎನ್ನಿಸಬಹುದಾದ ಪಾಠಗಳನ್ನು ಊಹಿಸಿ ಅಡಿಟಿಪ್ಪಣಿಯಲ್ಲೇ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಕೊಟ್ಟಿದ್ದೇನೆ'. ಈ ಕೃತಿಯಲ್ಲಿಯ ಹಾಡುಗಳು ಯಾವ ಪ್ರದೇಶಕ್ಕೆ ಸಂಬಂಧಿಸಿದವು, ಇಲ್ಲಿನ ಸಂಪಾದನೆಯಲ್ಲಿ ತಾವು ಅನುಸರಿಸಿದ ಕ್ರಮವೇನು ಎಂದು ಸಂಪಾದಕರು ವಿವರಿಸಿದ ಸಂಗತಿ ಇದು. ಇಲ್ಲಿಯ ೧೮೫ ಹಾಡುಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡಿದ್ದಾರೆ. ಕೊನೆಯ ಅನುಬಂಧಲ್ಲಿ ೪೬ ಶಿಶುಪ್ರಾಸಗಳ ಸಂದರ್ಭಗಳನ್ನು ಸುದೀರ್ಘವಾಗಿ ವಿವರಿಸಿದ್ದಾರೆ. ಸ್ವಂತ ಕ್ಷೇತ್ರಕಾರ್ಯ ಮಾಡಿದ ಸಂಪಾದಕರ ಅನುಭವ ಇಲ್ಲಿ ಉಪಯೋಗಕ್ಕೆ ಬಂದಿದೆ.

ಬೋರೇಗೌಡ ಚಿಕ್ಕಮರಳಿ ಅವರ ಪ್ರಸ್ತಾವನೆ ಸುಮಾರಾಗಿ ರಾಗೌ ಅವರ ಪ್ರಸ್ತಾವನೆಯನ್ನು ಅನುಸರಿಸಿದರೂ ಅಲ್ಲಲ್ಲಿ ಬಹುಸೂಕ್ಷ್ಮವಾಗಿ ಸ್ವಂತಿಕೆಯನ್ನು ಮೆರದಿರುವುದು ಎದ್ದುಕಾಣುತ್ತದೆ. ಸಂಪಾದಕರ ಈ ಸ್ವಂತಿಕೆಯ ಗುಣವೇ ಈ ಕೃತಿಯ ಮೌಲ್ಯವನ್ನು ಹೆಚ್ಚಿಸುತ್ತದೆ. ಹೊರಗಿನವರ ಮಾತುಗಳನ್ನು ಇವರು ಅನುವಾದಿಸಿ ಕೊಡುವಾಗ ಅಡಿಟಿಪ್ಪಣಿಗಳಲ್ಲಿ ಸ್ಪಷ್ಟವಾಗಿ ಅದು ಎಲ್ಲಿಂದ ಎನ್ನುವುದು ಗೊತ್ತಾಗುವಂತೆ ಉಲ್ಲೇಖಿಸಿದ್ದಾರೆ. ಹೀಗಾದರೆ ಅಭ್ಯಾಸಿಗಳಿಗೆ ತೊಂದರೆ ಏನೂ ಆಗುವುದಿಲ್ಲ. "ಪ್ರಾಸ ಎಂಬ ಪದವೇ ಸೂಚಿಸುವಂತೆ ಶಿಶುಪ್ರಾಸಗಳಲ್ಲಿ ಅಂತ್ಯಪ್ರಾಸ ಹಾಗೂ ನಿರ್ದಿಷ್ಟ ವರ್ಣಗುಚ್ಛಗಳ ಪುನರಾವೃತ್ತಿಗಳೇ ಪ್ರಧಾನ, ಅರ್ಥ ಬಹುಮಟ್ಟಿಗೆ ಗೌಣ" (ಪ್ರ.ಪು.೩). ಇಂತಹ ಅಭಿಪ್ರಾಯ ಹಿಂದಿನಿಂದಲೂ ಬಂದಿದೆ. ಆದರೆ 'ಶಿಶುಪ್ರಾಸ' ಎನ್ನುವಲ್ಲಿಯ 'ಪ್ರಾಸ' ಹೆಚ್ಚು ಗಮನ ಸೆಳೆಯುವಂತೆ ಇದ್ದು, ಅದು ಶಿಶುಗೀತಗಳ ಪ್ರಾಸಗಳನ್ನೇ ಲಕ್ಷಿಸುತ್ತದೆ ಎಂಬ ಅರ್ಥಬರುವ ಈ ಮಾತಿನಲ್ಲಿ ಸತ್ಯಾಂಶವಿದೆ. 'ಶಿಶುಪ್ರಾಸಗಳು' ಎಂಬ ಹೆಸರಿನ ಮಿತಿ ಸಂಪಾದಕರ ಅರಿವಿನಲ್ಲಿದ್ದೂ ಅದನ್ನು ಕೊನೆಯವರೆಗೂ ಬಳಸಿರುವುದು ಕಂಡುಬರುತ್ತದೆ.

ಈಗಾಗಲೇ ವಿದ್ವಾಂಸರು ಮಾಡಿದ ಶಿಶುಪ್ರಾಸಗಳ ವರ್ಗೀಕರಣ ಪ್ರಯತ್ನವನ್ನು ಗುರುತಿಸಿ ಅವುಗಳ ಪ್ರಕಾರಗಳನ್ನು ಹೇಳಲು ಹೊರಡುತ್ತಾರೆ. ಲಾಲಿಪದ 'ಶಿಶುಪ್ರಾಸಗಳ ಗುಂಪಿಗೆ ಸೇರಿಸಬೇಕೆ ಬೇಡವೇ ಎಂಬ ಸಂಶಯ ಹುಟ್ಟಿಕೊಂಡಿದೆ' ಎಂಬ ನಿಲುವಿಗೆ ಬರುವುದು ಸರಿಯಾಗಿದೆ. ಆನಂತರ 'ದೂರಿಗಳು, ಒಗಟು ಪ್ರಾಸಗಳು, ಐತಿಹಾಸಿಕ ಘಟನೆ ಹಾಗೂ ವ್ಯಕ್ತಿಗಳನ್ನು ಕುರಿತ ಪ್ರಾಸಗಳು, ಅಣಕ ಅಥವಾ ವಿಡಂಬನ ಪ್ರಾಸಗಳು, ಚತುರೋಕ್ತಿ ಮತ್ತು ಪ್ರತ್ಯುಕ್ತಿ ಪ್ರಾಸಗಳು, ಸಂಚಿತ ಪ್ರಾಸಗಳು, ಸಂಖ್ಯಾತ್ಮಕ ಪ್ರಾಸಗಳು, ಕ್ರೀಡಾಪ್ರಾಸಗಳು' ಹೀಗೆ ಹೊರದೇಶದ ವಿದ್ವಾಂಸರು ಹೇಳುವ ಏಳು ಬಗೆಯ ಪ್ರಕಾರಗಳನ್ನು ಹಾಡುಗಳ ವಸ್ತು, ಗುಣಸ್ವಭಾವ, ಹಾಗೂ ಸಂದರ್ಭಗಳನ್ನು ಗಮನಿಸಿ ವಿವರಿಸುತ್ತಾರೆ. "ಇವುಗಳಲ್ಲಿ ಅಸಂಬಂದ್ಧತೆ, ಕೇವಲ ಪುನರುಕ್ತಿಗಳು ಅನಿವಾರ್ಯವಾಗಿ ತಲೆದೋರುತ್ತವೆ. ಶಿಶುಪ್ರಾಸಗಳ ಇಂತಹ ಅಸಂಬದ್ಧತೆ, ಪುನರುಕ್ತಿಗಳಲ್ಲಿಯೇ ಒಂದು ಬಗೆಯ ಮೋಜು ಅಡಗಿರುತ್ತದೆ ಎಂಬುದೇ ಸೋಜಿಗ. ಇದೇ ಅವುಗಳ ವೈಶಿಷ್ಟ್ಯ" (ಪ್ರ.ಪು.೯) ಎಂಬ ಮಾತನ್ನು ಹೇಳುವಲ್ಲಿ ಸಂಪಾದಕರ ಅನುಭವ, ಸ್ವಂತಿಕೆ ಎದ್ದು ಕಾಣುತ್ತದೆ. ಇಂತಹ ಮಾತುಗಳನ್ನು ಸೂಕ್ಷ್ಮವಾಗಿ ಅವರು ಅಲ್ಲಲ್ಲಿ ಆಡುತ್ತಾರೆ. ಈ 'ಅಸಂಬದ್ಧ' ಎನ್ನುವ ಮಾತು ಹೊರಗಿನವರ ಮಾತಿನ ಅನುವಾದವಾಗಿದೆ. ಇಂತಹ ಸಂಗತಿಗಳನ್ನು ನೇರವಾಗಿ ಅನುವಾದಿಸಿ ಹಾಕಿಕೊಳ್ಳುವುದು ಅನೇಕ ಸಲ ಅನಾವಶ್ಯಕ ಗೊಂದಲಗಳನ್ನು ಸೃಷ್ಟಿ ಮಾಡುತ್ತದೆ.

ನನ್ನ ಎದುರಿಗೆ ಒಂದು ವಿಶಿಷ್ಟ ಕೃತಿ ಇದೆ. **'ಚಿಲಿಪಿಲಿ' (೨೦೦೦)** ಎನ್ನುವ ಈ ಕೃತಿಯ ಸಂಪಾದಕರು ಮೇಟಿಕೇರಿ ಹಿರಿಯಣ್ಣ ಅವರು. ಈ ಕೃತಿಗಾಗಿ ಮಕ್ಕಳ ಹಾಡುಗಳನ್ನು ಸಂಗ್ರಹಿಸಿದ್ದು, 'ಹಾಸನ ಜಿಲ್ಲಾ ಪ್ರೌಢಸಾಲಾ ಮುಖ್ಯೋಪಾಧ್ಯಾಯರು ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ(ರಿ.), ಹಾಸನ'. ಈ ಸಂಘಟನೆಯ ಶಿಕ್ಷಕರು ಆಲೋಚಿಸಿದ್ದು, ಕೆಲಸ ಮಾಡಿದ್ದು ಅಪರೂಪದ ಕೆಲಸವಾಗಿದೆ. 'ಹಾಸನ ಜಿಲ್ಲೆ

ಜನಪದ ಸಾಹಿತ್ಯ ಮತ್ತು ಕಲೆಗಳ ಶ್ರೀಮಂತ ನಾಡು. ನೂರಾರು ವಿಭಿನ್ನ ಜಾನಪದ ಪ್ರಕಾರಗಳು ಇಲ್ಲುಂಟು. ಇಂತಹ ಜಾನಪದ ಪ್ರಕಾರಗಳಲ್ಲಿ ಒಂದಾದ ಜನಪದ ಶಿಶುಪ್ರಾಸಗಳನ್ನು ಸಂಗ್ರಹಿಸುವ, ಪ್ರಕಟಿಸುವ ಯೋಜನೆ' ಒಂದನ್ನು ೧೯೯೯ನೇ ವರ್ಷದಲ್ಲಿ ರೂಪಿಸುತ್ತಾರೆ. ಅದರಂತೆ ಒಂದು ಮನವಿ ಪತ್ರವನ್ನು ತಯಾರಿಸಿ, ಹಾಸನ ಜಿಲ್ಲೆಯ ಎಲ್ಲ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲೆಗಳಿಗೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಕಳುಹಿಸುತ್ತಾರೆ. ಆ ಮನವಿಯಲ್ಲಿ ನಶಿಸಿ ಹೋಗುತ್ತಿರುವ ಶಿಶುಪ್ರಾಸಗಳನ್ನು ತಮ್ಮ ಶಾಲಾ ಮಕ್ಕಳಿಂದ ಸಂಗ್ರಹಿಸಿ ತರಿಸಿ, ಆಯಾ ಮಕ್ಕಳ ಹೆಸರಿನಿಂದಲೇ ಅವುಗಳನ್ನು ಕಳುಹಿಸಬೇಕು ಎಂದು ಒಕ್ಕಣೆ ಇರುತ್ತದೆ. ಆ ವಿವರಗಳನ್ನು 'ಚಿಲಿಪಿಲಿ' ಕೃತಿಯ ಸಂಪಾದಕರೂ ಯೋಜನೆಯ ರೂವಾರಿಗಳೂ ಆದ ಮೇಟಿಕೆರೆ ಹಿರಿಯಣ್ಣ ಅವರು ತಮ್ಮ ಸಂಪಾದಕರ ಮಾತಿನಲ್ಲಿ ಹೀಗೆ ದಾಖಲಿಸಿದ್ದಾರೆ: "ಸಂಘ ೩೦೦೦ ಮನವಿ ಪತ್ರಗಳನ್ನು ಮುದ್ರಿಸಿ ಜನಪದ ಶಿಶುಪ್ರಾಸಗಳನ್ನು ಸಂಗ್ರಹಿಸಿ ಕಳುಹಿಸಿಕೊಡುವಂತೆ ಶಾಲಾ–ಕಾಲೇಜುಗಳಿಗೆ ಮನವಿ ಪತ್ರಗಳನ್ನು ಕಳುಹಿಸಿಕೊಟ್ಟಿತು. ಅಂತೆಯೇ ಹಾಸನ ಜಿಲ್ಲೆಯ ಸ್ಥಳೀಯ ಪತ್ರಿಕೆಗಳಿಗೂ ಪ್ರಕಟನೆಯನ್ನು ನೀಡಲಾಯಿತು. ನಮ್ಮ ಮನವಿಗೆ ಓಗೊಟ್ಟು ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಪ್ರಾಚಾರ್ಯರು ಸಾವಿರ ಸಾವಿರ ಸಂಖ್ಯೆಯಲ್ಲಿ ಜನಪದ ಶಿಶುಪ್ರಾಸಗಳನ್ನು ಸಂಗ್ರಹಿಸಿ ಕಳುಹಿಸಿಕೊಟ್ಟರು. ಹೀಗೆ ಸಂಗ್ರಹಿಸಿದ ಶಿಶುಪ್ರಾಸಗಳ ಸಂಖ್ಯೆ ೩,೮೪೪. ಅವುಗಳನ್ನಲ್ಲಿ ೧,೯೪೪ ಶಿಶುಪ್ರಾಸಗಳನ್ನು ಸ್ವತಃ ನಾನೇ ಸಂಗ್ರಹಿಸಿದೆ. ಅವುಗಳನ್ನು ಹೇಳುವಲ್ಲಿ, ಬರೆದುಕೊಡುವಲ್ಲಿ ಸುಮಾರು ೫೦೦ ವಿದ್ಯಾರ್ಥಿಗಳು ಗುರುಮಿತ್ರರಿಗೆ ನೆರವು ನೀಡಿದರು. ಅವುಗಳಲ್ಲಿ ಸುಮಾರು ೬೦೦ ವಿಭಿನ್ನ ಜನಪದ ಶಿಶುಪ್ರಾಸಗಳನ್ನು ಚಿಲಿಪಿಲಿಯಲ್ಲಿ ಮುದ್ರಿಸಲಾಗಿದೆ".

ಇದೊಂದು ವಿನೂತನ ಪ್ರಯೋಗ ಎಂಬುದರಲ್ಲಿ ಎರಡು ಮಾತಿಲ್ಲ. ಈ ಕೃತಿಯಲ್ಲಿ ಮುದ್ರಿಸಿದ ಮಾಹಿತಿಯ ಪ್ರಕಾರ : ಆಲೂರು ಪ್ರೌಢಶಾಲೆ, ಕಂದಲಿ ಪ್ರೌಢಶಾಲೆ, ಹೊಸಳ್ಳಿ ಪ್ರಾಥಮಿಕ ಶಾಲೆ, ಬ್ಯಾಬ ಪ್ರಾಥಮಿಕ ಶಾಲೆ, ಬಿಡಾರದಹಳ್ಳಿ ಪ.ಪೂ.ಕಾಲೇಜು, ಬಾಚೇನಹಳ್ಳಿ ಪ್ರೌಢಶಾಲೆ, ಗಿರಿಕ್ಷೇತ್ರ ಪ್ರೌಢಶಾಲೆ, ನುಗ್ಗೇನಹಳ್ಳಿ ಪ್ರಾಥಮಿಕ ಶಾಲೆ ಮತ್ತು ಎರಡು ಪ.ಪೂ.ಕಾಲೇಜುಗಳು, ಹಾಸನ ಪ್ರಾಥಮಿಕ ಶಾಲೆ, ಬಾಲಕಿಯರ ಸ.ಪ.ಪೂ.ಕಾಲೇಜು ಮತ್ತು ಡಯಟ್– ಹೀಗೆ ೪ ಪ್ರಾಥಮಿಕ ಶಾಲೆ, ೪ ಪ್ರೌಢಶಾಲೆ, ೪ ಪ.ಪೂ.ಕಾಲೇಜು ಹಾಗೂ ಒಂದು ಡಯಟ್; ಒಟ್ಟಿಗೆ ೧೩ ಶಾಲಾ ಕಾಲೇಜುಗಳ ೩೪೦ ವಿದ್ಯಾರ್ಥಿಗಳಿಂದ ಸಂಗ್ರಹಿಸಿ ತರಿಸಿದ ಮಕ್ಕಳ ಹಾಡುಗಳನ್ನು ಈ ಕೃತಿಯಲ್ಲಿ ಅಕಾರಾದಿಯಾಗಿ ಜೋಡಿಸಲಾಗಿದೆ.

ಈ ಕೃತಿಯಲ್ಲಿ ೪೬೬ ಕನ್ನಡ ಮಕ್ಕಳ ಹಾಡುಗಳಿದ್ದರೆ, ಉರ್ದುಭಾಷೆಯಲ್ಲಿ ಸಂಗ್ರಹಗೊಂಡ ೭೮ ಹಾಡುಗಳನ್ನು ಕನ್ನಡಕ್ಕೆ ಅನುವಾದಿಸಿ ಹಾಕಿದ್ದಾರೆ. ಹೀಗೆ ಈ ಕೃತಿಯಲ್ಲಿ ಒಟ್ಟಿಗೆ ೫೪೪ ಹಾಡುಗಳಿವೆ. ಉರ್ದು ಹಾಡುಗಳನ್ನು ಮೇಟಿಕೆರೆ ಹಿರಿಯಣ್ಣ ಅವರು ಸಿರಾಜುದ್ದೀನ್ ಅವರ ನೆರವಿನೊಂದಿಗೆ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಈ ಕೃತಿಗಾಗಿ ನಡೆದ ಪ್ರಯೋಗ, ಶಾಲಾಮಕ್ಕಳಿಂದಲೇ ಇಲ್ಲಿಯ ಎಲ್ಲ ಹಾಡುಗಳನ್ನು ಸಂಗ್ರಹಿಸಿದ್ದು, ಜೊತೆಗೆ ಉರ್ದು ಹಾಡುಗಳನ್ನು ಮೂಲ ಸಹಿತ ಕನ್ನಡಕ್ಕೆ ಅನುವಾದಿಸಿ

ಕೊಟ್ಟದ್ದು– ಈ ಕೃತಿಯ ವೈಶಿಷ್ಟ್ಯಗಳಾಗಿವೆ. ಇಂತಹ ಒಂದು ನವೀನ ಯೋಜನೆಯ ಮೂಲಕ ಒಂದು ಜನಪದ ಸಾಹಿತ್ಯ ಕೃತಿಯನ್ನು ಸಂಪಾದಿಸಿ ಕೊಟ್ಟುದಕ್ಕೆ ಸಂಪಾದಕರು ಅಭಿನಂದನೆಗೆ ಅರ್ಹರಾಗಿದ್ದಾರೆ.

ಇದರಿಂದ ಕನ್ನಡ ಜನಪದ ಸಾಹಿತ್ಯ ಲೋಕಕ್ಕೆ ಒಂದು ಹೊಸ ದೃಷ್ಟಿ ಕೊಟ್ಟಂತಾಗಿದೆ. ಇಲ್ಲಿಯ ಕೊರತೆಯೆಂದರೆ ಈ ಹಾಡುಗಳಿಗೆ ಮಕ್ಕಳಿಂದ ಅಥವಾ ಶಿಕ್ಷಕರಿಂದಲೇ ಹಾಡುಗಳ ಹಿನ್ನೆಲೆಯನ್ನು ಪಡೆದು ಪ್ರಕಟಿಸುವ ಅವಶ್ಯಕತೆ ಇತ್ತು. ಈಗ ಪಠ್ಯ ಮಾತ್ರ ಕೊಟ್ಟಂತಾಗಿದೆ. ಇದರಿಂದ ಅಧ್ಯಯನಕ್ಕೆ ಅಡಚಣೆಯಾಗುತ್ತದೆ. ಸಂಪಾದಕರು ಇಲ್ಲಿಯ ಹಾಡುಗಳನ್ನು ಗಮನಿಸಿ ಸ್ವತಂತ್ರವಾಗಿ ಆಲೋಚಿಸಿ, ಈ ಹಾಡುಗಳ ಪ್ರಕಾರಗಳನ್ನು ಒಂದೆಡೆ ಹೇಳುತ್ತಾರೆ. ತಾವು ಹೇಳುವ ಪ್ರಕಾರಗಳಿಗೆ ಹಾಡುಗಳನ್ನು ವಿಭಾಗಿಸಿ ಕೊಟ್ಟಿದ್ದರೆ ಕೃತಿಗೆ ಒಂದು ವೈಜ್ಞಾನಿಕ ಸ್ಪರ್ಶ ಬರುತ್ತಿತ್ತು. ಆದರೆ ಕೃತಿಯಲ್ಲಿ ಅವುಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡಿದ್ದಾರೆ.

ಇಲ್ಲಿಯ ಹಾಡುಗಳನ್ನು ಸಾದ್ಯಂತವಾಗಿ ಗಮನಿಸಿದಾಗ ಅನಿಸುವುದು ಇಷ್ಟು: ಹೊರದೇಶದವರು ವಿಶೇಷವಾಗಿ ಅಮೆರಿಕಾ ಮತ್ತು ಇಂಗ್ಲಂಡ ದೇಶದ ಮಕ್ಕಳ ಹಾಡುಗಳ ಬಗ್ಗೆ ಅಧ್ಯಯನ ನಡೆಸಿದ ಕೆಲವರ ಅಭಿಪ್ರಾಯಗಳನ್ನು ಗಮನಿಸಿ, ಕನ್ನಡದಲ್ಲಿ ಮಕ್ಕಳ ಹಾಡುಗಳನ್ನು ಮೊದಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದ ಸಂಪಾದಕರು, **'ಶಾಲಾ ಶಿಶುಪ್ರಾಸಗಳು'** ಎಂಬ ಒಂದು ಪ್ರಕಾರವನ್ನು ಪ್ರಸ್ತಾಪಿಸುತ್ತಾರೆ. ಆದರೆ ಶಾಲೆಯ ಪರಿಸರಕ್ಕೆ ಸಂಬಂಧಿಸಿದಂತೆ ಮಕ್ಕಳ ಹಾಡುಗಳು ಇಲ್ಲವೆನ್ನುವಷ್ಟು ಅವರ ಕೃತಿಗಳಲ್ಲಿಯೇ ಕಡಿಮೆಯಾಗಿವೆ. ಆದರೆ 'ಚಿಲಿಪಿಲಿ' ಸಂಗ್ರಹದ ಎಲ್ಲ ಹಾಡುಗಳನ್ನು ಸಂಗ್ರಹಿಸಿದ್ದು ಶಾಲಾಮಕ್ಕಳಿಂದ. ಸಂದರ್ಭಗಳನ್ನು ಸಂಗ್ರಹಿಸಿ ಇಲ್ಲಿ ಕೊಟ್ಟಿಲ್ಲ. ಕೇವಲ ಮಕ್ಕಳು ತಮಗೆ ಬರುವ ಹಾಡುಗಳನ್ನು ಇಲ್ಲಿ ಬರೆದುಕೊಟ್ಟದ್ದರಿಂದ ಇವನ್ನು **'ಕನ್ನಡ ಶಾಲಾ ಮಕ್ಕಳ ಹಾಡುಗಳು'** ಎನ್ನಬಹುದಾಗಿದೆ. ಹೀಗೆ ಅನ್ನಲು ಇಲ್ಲಿಯ ಹಾಡುಗಳೇ ಹಾಗೆ ಒತ್ತಾಯ ಮಾಡುತ್ತವೆ. ನಮಗೆ ಇಲ್ಲಿಯ ಹಾಡುಗಳಿಗೆ ಸಂದರ್ಭಗಳನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಒಂದು ಕಾರಣವಾದರೆ, ಸಂದರ್ಭ ರಹಿತ ಹಾಡುಗಳೇ ಇಲ್ಲಿ ಹೆಚ್ಚಾಗಿ ಸಂಗ್ರಹಗೊಂಡಿರುವುದು ಇನ್ನೊಂದು ಕಾರಣ. ತಮ್ಮ ಕೃತಿಯಲ್ಲಿರುವ ಹಾಡುಗಳನ್ನು ಗಮನಿಸಿ ಸಂಪಾದಕರು ಮಕ್ಕಳ ಹಾಡುಗಳ ಪ್ರಕಾರಗಳನ್ನು ಹೀಗೆ ಗುರುತಿಸಿದ್ದಾರೆ: "ಶಿಶುಪ್ರಾಸಗಳಲ್ಲಿ ಹಲವು ಬಗೆಗಳುಂಟು. ಸವಾಲು–ಜವಾಬು ಹೇಳುವ ಶಿಶುಪ್ರಾಸಗಳು, ಒಗಟು ಶಿಶುಪ್ರಾಸಗಳು, ಅಶ್ಲೀಲ ಶಿಶುಪ್ರಾಸಗಳು, ಜರಿಯುವ ಶಿಶುಪ್ರಾಸಗಳು, ಹಾಸ್ಯ ಶಿಶುಪ್ರಾಸಗಳು, ಆಟವಾಡುವಾಗ ಹೇಳುವ ಶಿಶುಪ್ರಾಸಗಳು, ನೀತಿ ಹೇಳುವ ಶಿಶುಪ್ರಾಸಗಳು, ಮಕ್ಕಳನ್ನು ರಂಜಿಸುವ ತಾಯಂದಿರು ಹೇಳುವ ಶಿಶುಪ್ರಾಸಗಳು, ಶಿಷ್ಟ ಸಾಹಿತ್ಯ ತಿರುಚಿರುವ ಗೀತೆಗಳು, ಅನ್ಯಭಾಷೆ ಮಿಶ್ರಿತ ಶಿಶುಪ್ರಾಸಗಳು ಇತ್ಯಾದಿ" (ಪು.೮). ಸಂಪಾದಕರು ತಮ್ಮ ಸಂಗ್ರಹದ ಹಾಡುಗಳನ್ನು ಗಮನಿಸಿಯೇ ಇಲ್ಲಿಯ ಪ್ರಕಾರಗಳನ್ನು ಗುರುತಿಸಿದ್ದು ಮಹತ್ವದ ಸಂಗತಿ. ಕನ್ನಡ ಮಕ್ಕಳ ಹಾಡುಗಳನ್ನು ಸಂಗ್ರಹಸಿದ ಅನೇಕರು ಅದಕ್ಕೆ ಪಾಶ್ಚಾತ್ಯ ಮಕ್ಕಳ ಹಾಡುಗಳಿಗೆ ಬರೆದ ಆಲೋಚನೆಗಳನ್ನು ಕನ್ನಡಿಸಿ ಪ್ರಸ್ತಾವನೆ ಬರೆದದ್ದೆ ಜಾಸ್ತಿ.

'ಆಟ ಆಡುವಾಗ ಹೇಳುವ ಶಿಶುಪ್ರಾಸಗಳು' ಎಂಬ ಪ್ರಕಾರ ಒಂದನ್ನು ಬಿಟ್ಟರೆ ಉಳಿದೆಲ್ಲವೂ ಮಕ್ಕಳು ಸುಮ್ಮನೆ ಮನರಂಜನೆಗಾಗಿ ಹೇಳಿಕೊಳ್ಳುವ ಪ್ರಕಾರದ ಹಾಡುಗಳೇ ಇಲಿರುವುದು ಗಮನಾರ್ಹ. ಅಂದರೆ ಶಾಲಾಮಕ್ಕಳಲ್ಲಿ ಪ್ರಚಾರ ಪಡೆಯುವ ಹಾಡುಗಳು ಎಂಥವು ಎಂಬದು ಇಲ್ಲಿ ನಮಗೆ ಸ್ಪಷ್ಟವಾಗುತ್ತದೆ. ಈ ಕೃತಿಗಾಗಿ ಪ್ರಯೋಗ ನಡೆದು ಈಗ ೧೫ ವರ್ಷಗಳು ಸಂದಿವೆ. ಬಹುಶಃ ಈಗ ಇನ್ನೊಮ್ಮೆ ಇಂತಹ ಪ್ರಯೋಗ ನಡೆಸಿದರೆ ಖಂಡಿತ ಇಷ್ಟೊಂದು ಹಾಡುಗಳು ಸಂಗ್ರಹವಾಗಲು ಸಾಧ್ಯವಿಲ್ಲವೇನೋ ಎನಿಸುತ್ತದೆ. ಅದರಲ್ಲೂ 'ಆಟ ಆಡುವಾಗ ಹೇಳುವ ಶಿಶುಪ್ರಾಸಗಳು' ಮತ್ತು 'ಮಕ್ಕಳನ್ನು ರಂಜಿಸಲು ತಾಯಂದಿರು ಹೇಳುವ ಶಿಶುಪ್ರಾಸಗಳು' ಬಹಳ ಕಡಿಮೆ ಪ್ರಮಾಣದಲ್ಲಿ ದೊರೆಯಬಹುದು; ದೊರೆಯಲಿಕ್ಕೂ ಇಲ್ಲ.

ಒಂದೆರಡು ಉದಾಹರಣೆಗಳು:

ಬಂದೆ ಕಣಣ್ಣ ಬಂದೆ ಕಣಣ್ಣ
ನನ್ ಬಣ್ಣ ನಿನ್ ಬಣ್ಣ ಒಂದೇ ಕಣಣ್ಣ
ನನ್ ಕಣ್ ನಿನ್ ಕಣ್ ಒಂದೇ ಕಣಣ್ಣ (೩೧೯)

ಬಸ್ ಬಂತು ಬಸ್
ಗೋರ್ಮೆಂಟ್ ಬಸ್
ಕೆಂಪು ಹಳದಿ ಬಸ್
ನೋಡು ಬಾರಣ್ಣ
ನಾನು ಕಂಡಕ್ಟರಾಗುವೆ
ರೈಟ್ ರೈಟ್ ಎನ್ನುವೆ (೩೨೪)

ಶಿವಪ್ಪ ಕಾಯೋ ತಂದೆ
ಮೂರು ಲೋಟ ಕಾಫಿ ದೇವ
ಹಸಿವೆಯನ್ನು ತಾಳಲಾರೆ
ಕಾಫಿ ಕುಡಿಸಯ್ಯ
ಇಡ್ಲಿಯಂತೆ ಚಟ್ನಿಯಂತೆ
ಇಂದ್ರಭವನದಲ್ಲಿ
ದೋಸೆಯಂತೆ ಕಾಫಿಯಂತೆ
ಭಟ್ಟರೋಟ್ಲಲ್ಲಿ (೪೪೧)

ಉರ್ದುವಿನಿಂದ ಕನ್ನಡಕ್ಕೆ ಅನುವಾದಿಸಿದ ಹಾಡುಗಳು:

ಕಣ್ಣು ಮುಚ್ಚೆ
ಗಗ್ಗೂ ರಾಣಿ
ರಾಜರ ಕುದರೆ ಬರ್ತಾ ಐತೆ
ಕೂಕ್ ಕೂಕ್ ಕೂಕ್ (೧)

ಒಂದು ಹೇಳಿ ಅಲ್ಲಾ
ಎರಡು ಹೇಳಿ ಮಿತ್ರ
ಮೂರು ಹೇಳಿ ಗುರು
ನಾಲ್ಕು ಹೇಳಿ ಪ್ರೀತಿ
ಐದು ಹೇಳಿ ಎಲೆ
ಆರು ಹೇಳಿ ಚಾವಣಿ
ಏಳು ಹೇಳಿ ಒಗ್ಗಟ್ಟು
ಎಂಟು ಹೇಳಿ ಅಟ್ಟಾ
ಒಂಭತ್ತು ಹೇಳಿ ಬೆಳಕು
ಹತ್ತು ಹೇಳಿ ಸಾಕು (೩೦)

ಪಂಕ ಮೇಲೆ ತಿರ್ಗುತಿತ್ತು
ಪಾಪು ಕೆಳಗೆ ಮಲಗಿತ್ತು
ಮಲಗು ಪಾಪು ಮಲಗು
ಕೆಂಪು ಪಲ್ಲಂಗದಲ್ಲಿ ಮಲಗು
ಅವ್ವ ಅಪ್ಪ ಬತ್ತಾರೆ
ಗೊಂಬೆ ಜೊತೇಲ್ ತತ್ತಾರೆ
ಅದ್ರಲೊಂದ್ ಮುರ್ದ್ಹೋಯ್ತು
ಮಾವನ್ ಮಗಂಗೆ ಬೇಸ್ರಾಯ್ತು (೩೧)

ಜನಪದ ಆಟಗಳ ಅಧ್ಯಯನಗಳು :

೧೯೭೮ರಲ್ಲಿ ಪ್ರಕಟವಾದ **'ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು'** ಕೃತಿಯ ಸಂಪಾದಕರು ಡಾ. ಎನ್. ಆರ್. ನಾಯಕ ಮತ್ತು ಶ್ರೀಮತಿ ಶಾಂತಿ ನಾಯಕ ಅವರು. ಈ ಕೃತಿ ಮುಖ್ಯವಾಗಿ ಕಾರವಾರ ಜಿಲ್ಲೆಯ ಜನಪದ ಕ್ರೀಡೆಗಳನ್ನು ಪರಿಚಯ ಮಾಡುವ ಕೃತಿ. ಆದರೆ ಕೆಲವು ಆಟಗಳಿಗೆ ಉಪಯೋಗವಾಗುವ ಹಾಡುಗಳನ್ನೂ ಸಂಗ್ರಹಿಸಿ, ಅವಶ್ಯವಾಗಿದ್ದಲ್ಲಿ ಉಲ್ಲೇಖ ಮಾಡಿದ್ದಾರೆ. ಇಲ್ಲಿಯ ಆಟಗಳನ್ನು ಅಲ್ಲಿ ಪ್ರಯೋಗವಾಗುವ ಮುಖ್ಯ ವಸ್ತು ಅಥವಾ ಸಂಗತಿಯನ್ನು ಗಮನಿಸಿ ೧೦ ಪ್ರಕಾರಗಳಲ್ಲಿ ಆಟಗಳನ್ನು ವಿಂಗಡಿಸಿಕೊಂಡಿದ್ದಾರೆ. ಈ ವಿಂಗಡನಾ ಕ್ರಮ ಗಮನಾರ್ಹವಾಗಿದೆ: ೧. ಹರಳಾಟಗಳು, ೨. ಬೆರಳಾಟಗಳು, ೩. ತುಳಿದಾಟಗಳು, ೪. ಸುತ್ತಾಟಗಳು, ೫. ಹುಡುಕಾಟಗಳು, ೬. ಕುಂಟಾಟಗಳು, ೭. ಎಳೆದಾಟಗಳು, ೮. ಗುರಿಯಾಟಗಳು, ೯. ಬೆನ್ನಟ್ಟುವ ಆಟಗಳು, ೧೦. ಅನುಕರಣದ ಆಟಗಳು.

ಇದೇ ಸ್ವರೂಪದ ಇನ್ನೊಂದು ಕೃತಿ **'ಜಾನಪದ ಆಟಗಳು'** (೨೦೦೬) ಎಂಬುದನ್ನು ಡಾ. ಮಲ್ಲಿಕಾರ್ಜುನ ಮೇತ್ರಿ ಅವರು ಬರೆದಿದ್ದಾರೆ. ಮುಖ್ಯವಾಗಿ ತಮಗೆ ಪರಿಚಯವಿರುವ ಮಕ್ಕಳ ಕ್ರೀಡೆಗಳನ್ನು ಪರಿಚಯಿಸುವ ಕೃತಿ ಇದು. ಅವರು ಬಿಜಾಪೂರ

ಜಿಲ್ಲೆಯವರಾದ್ದರಿಂದ ಬಹುಶಃ ಆ ಜಿಲ್ಲೆಯಲ್ಲಿ ಹೆಚ್ಚು ಪ್ರಚಾರದಲ್ಲಿರುವ ಆಟಗಳನ್ನು, ಅಲ್ಲಿರುವಂತೆ ಪರಿಚಯಿಸುವ ಕೆಲಸವನ್ನು ಮಾಡಿದ್ದಾರೆ. ಅಲ್ಲಲ್ಲಿ ಅಪರೂಪಕ್ಕೆ ಮಕ್ಕಳಾಟದ ಹಾಡುಗಳನ್ನೂ ಬಳಸಿಕೊಂಡಿದ್ದಾರೆ. ಆದರೆ ಅಷ್ಟಕ್ಕೆ ನಿಲ್ಲದೆ ಒಗಟುಗಳನ್ನು 'ಒಗಟಿನ ಆಟಗಳು' ಎಂದು, ಗಣಿತದ ಒಗಟುಗಳನ್ನು 'ಲೆಕ್ಕದಾಟಗಳು' ಎಂದು, 'ರಂಗಭೂಮಿ ಆಟಗಳು' ಎಂದು ಜನಪದ ಬಯಲಾಟಗಳನ್ನೂ ಪರಿಚಯಿಸಿದ್ದಾರೆ. ರಂಗಭೂಮಿಯ ಪರಿಚಯ ಬಿಟ್ಟರೆ ಉಳಿದೆಲ್ಲ ಪ್ರಕಾರಗಳು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ್ದು, ಇದೊಂದು ಜನಪದ ಮಕ್ಕಳ ಸಾಹಿತ್ಯ, ಕ್ರೀಡೆಗಳನ್ನು ಪರಿಚಯಿಸುವ ಕೃತಿ ಎಂದಿಟ್ಟುಕೊಳ್ಳಬಹುದು.

ಅಧಿಕೃತವಾಗಿ 'ಎಳೆಯರಿಗಾಗಿ ಜಾನಪದ' ಎಂಬ ವಿಭಾಗದ ಕೆಳಗೆ ಪ್ರಕಟವಾದ ಕೃತಿಯೊಂದು ನಮಗೆ ಕಾಣುತ್ತದೆ. 'ಸಾಲುಸಂಪಿಗೆ ನೆರಳು'(೨೦೦೦) ಎಂಬ ಕೃತಿಯ ಸಂಪಾದಕರು ಡಾ. ಕಾಳೇಗೌಡ ನಾಗವಾರ ಹಾಗೂ ಜಿ.ವಿ.ಆನಂದಮೂರ್ತಿ. ಈ ಕೃತಿಯಲ್ಲಿ – 'ಮಕ್ಕಳ ಪದಗಳು, ಒಗಟುಗಳು, ಗೀತೆಗಳು, ಗಾದೆಗಳು, ಜನಪದ ಕಥೆಗಳು' ಹೀಗೆ ಜನಪದ ಮಕ್ಕಳ ಸಾಹಿತ್ಯ ಸಂಪುಟವೊಂದನ್ನು ಕೊಟ್ಟಿದ್ದಾರೆ. ಈ ಕೃತಿಯನ್ನು ಅತ್ಯಂತ ಆಕರ್ಷಕವಾಗಿರುವಂತೆ ಸುಂದರವಾಗಿ ಮುದ್ರಿಸಲಾಗಿದೆ. ಮಕ್ಕಳಿಗೆ –ಬಾಲ್ಯದಲ್ಲಿ ಹಿಡಿಸಬಹುದಾದ ಜನಪದ ಸಾಹಿತ್ಯದ ಕೆಲ ಮಾದರಿಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ. ಮದುವೆಯ ಹಾಡುಗಳು, ಕೆಲ ತತ್ತ್ವಪದಗಳು, ಕೆರೆಗೆ ಹಾರದಂಥ ಹಾಡುಗಳನ್ನೂ ಸೇರಿಸಿದ್ದಾರೆ. ಇವನ್ನು ಬಿಡಬಹುದಾಗಿತ್ತು. ಇಲ್ಲಿಯ ವಿಶೇಷತೆ ಎಂದರೆ ಸಂದರ್ಭಕ್ಕೆ ತಕ್ಕಂಥ ರೇಖಾಚಿತ್ರಗಳನ್ನು ಹಾಕಿದ್ದು. ಪುಟಪುಟದಲ್ಲೂ ನಮಗೆ ಈ ರೇಖಾಚಿತ್ರಗಳು ಕಂಗೊಳಿಸುತ್ತವೆ. ಖಂಡಿತವಾಗಿ ಮಕ್ಕಳಿಗಾಗಿ ಇಂತಹ ಕೃತಿಗಳು ಕನ್ನಡದಲ್ಲಿ ಪ್ರಕಟವಾಗುವುದು ಅವಶ್ಯ. ಇವು ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸುತ್ತವೆ. ಕನ್ನಡ ಸಂಸ್ಕೃತಿಯನ್ನು ಮಕ್ಕಳಿಗೆ ಮುಟ್ಟಿಸುತ್ತವೆ. ಜನಪದ ಸಾಹಿತ್ಯವನ್ನು ಪ್ರಸಾರ ಮಾಡುತ್ತವೆ. ಇಂಥ ಕೃತಿಗಳನ್ನು ತಯಾರಿಸಿ ಪ್ರಕಟಿಸುವ ಕೆಲಸವನ್ನು ಅಕಾಡೆಮಿಗಳಂಥ ಸಂಸ್ಥೆಗಳು ಜರೂರಿಯಾಗಿ ಮಾಡಬೇಕಾದ ಕೆಲಸವೆ.

೧೯೯೦ರಲ್ಲಿ **'ಜನಪದ ಆಟಗಳು'** ಎಂಬ ವಿಚಾರಸಂಕಿರಣದ ಲೇಖನಗಳ ಸಂಕಲನವೊಂದು ಡಾ. ಬಿ.ಎ.ವಿವೇಕ ರೈ ಅವರ ಸಂಪಾದಕತ್ವದಲ್ಲಿ ಹೊರಬಂದಿದೆ. ಜನಪದ ಆಟಗಳ ಚಾರಿತ್ರಿಕ, ಸಾಮಾಜಿಕ, ಮನೋವೈಜ್ಞಾನಿಕ ಮತ್ತು ಸಂವಹನ ಮಾಧ್ಯಮವಾಗಿ ಜನಪದ ಆಟಗಳ ಚರ್ಚೆವುಳ್ಳ ಲೇಖನಗಳ ಸಂಗ್ರಹ ಈ ಕೃತಿ. ಇನ್ನೊಂದು **'ತುಳುನಾಡಿನ ಜನಪದ ಆಟಗಳು'**(೨೦೦೦) ಎಂಬುದು ಡಾ. ಗಣನಾಥ ಎಕ್ಕಾರು ಅವರು ಡಾ. ಕೆ. ಚಿನ್ನಪ್ಪಗೌಡ ಅವರ ಮಾರ್ಗದರ್ಶನದಲ್ಲಿ ಕೈಕೊಂಡ ಪಿಎಚ್.ಡಿ. ಅಧ್ಯಯನವಾಗಿದೆ. ಈ ಎರಡೂ ಕೃತಿಗಳಲ್ಲಿ ಜನಪದ ಮಕ್ಕಳಾಟದ ಹಾಡುಗಳನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ. ಕೇವಲ ಜನಪದ ಕ್ರೀಡೆಗಳನ್ನು ಮಾತ್ರ ಗಮನಿಸಿ ಅಧ್ಯಯನ ನಡೆಸಲಾಗಿದೆ.

* * *

ಮಕ್ಕಳ ಹಾಡುಗಳ ಸಂಗ್ರಹಗಳು :

೧೯೭೨ : ಶಿಶುಪ್ರಾಸಗಳು, (ಸಂ) ಡಿ.ಕೆ.ರಾಜೇಂದ್ರ ಮತ್ತು ಇತರರು, –ಜಾನಪದ ಬಳಗ, ಮಾನಸ ಗಂಗೋತ್ರಿ, ಮೈಸೂರು–೬.

೧೯೭೨ : ಕನ್ನಡ ಶಿಶುಪ್ರಾಸಗಳು, (ಸಂ) ರಾಗೌ, – ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೬ : ಚುಕ್ಕೋಳ ಪದಗಳು, (ಸಂ) ಡಾ. ಎಂ.ಎಸ್.ಲಠ್ಠೆ, –ಸತೀಶ ಪ್ರಕಾಶನ, ಕಲಬುರ್ಗಿ.

೧೯೭೬ : ಕರ್ನಾಟಕದ ಶಿಶು ಪ್ರಾಸಗಳು, (ಸಂ) ಜಿವಿಡಿ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೭೯ : ಜನಪದ ಮಕ್ಕಳ ಪದಗಳು, (ಸಂ) ಸುಶೀಲ ಹೊನ್ನೇಗೌಡ, –ಶರತ್ ಪ್ರಕಾಶನ, ಮಂಡ್ಯ.

೧೯೮೧ : ಜನಪದ ಶಿಶುಪ್ರಾಸಗಳು, (ಸಂ) ಶ್ರೀಕಂಠ ಕೂಡಿಗೆ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೮೨ : ಆನೆ ಬಂತೊಂದಾನೆ, (ಸಂ) ಇಲ್ಲ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೯೮೩ : ಗ್ರಾಮಾಂತರ ಶಿಶುಪ್ರಾಸಗಳು, (ಸಂ) ಬೋರೇಗೌಡ ಚಿಕ್ಕಮರಳಿ, –ಅನಿಕೇತನ, ಚಿಕಮರಳಿ, ಪಾಂಡವಪುರ ತಾ. ಮಂಡ್ಯ ಜಿಲ್ಲೆ.

೨೦೦೦ : ಚಿಲಿಪಿಲಿ, (ಸಂ) ಮೇಟಿಕೇರಿ ಹಿರಿಯಣ್ಣ, –ಹಾಸನ ಜಿಲ್ಲಾ ಪ್ರೌಢಸಾಲಾ ಮುಖ್ಯೋಪಾಧ್ಯಾಯರು ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ(ರಿ.), ಹಾಸನ.

ಸಯಾಯಕ ಗ್ರಂಥಗಳು :

೧೯೩೩, ೧೯೭೧ : ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಅರ್ಚಕ ಬಿ. ರಂಗಸ್ವಾಮಿ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೫೫, ೨೦೧೩ (ಎ.ಮು.) : ಗರತಿಯರ ಮನೆಯಿಂದ, (ಸಂ) ಈಶ್ವರಚಂದ್ರ ಚಿಂತಾಮಣಿ, ಪಾರ್ವತೀಶ ಪ್ರಕಾಶನ, ಬಿ. ೨೦, ಭಾವಸಾರ ನಗರ, ವಿಜಾಪುರ.

೧೯೬೩ : ಕನ್ನಡ ಜಾನಪದ ಗೀತಗಳು, ಡಾ. ಬಿ.ಎಸ್.ಗದ್ದಗಿಮಠ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೬೭, ಹೊನ್ನ ಬಿತ್ತೇವು ಹೊಲಕೆಲ್ಲ, (ಸಂ) ಇಲ್ಲ, ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ, ತರೀಕೆರೆ, ಶಿವಮೊಗ್ಗ ಜಿಲ್ಲೆ.

೧೯೭೯ : ಉತ್ತರ ಕನ್ನಡ ಜಿಲ್ಲೆಂಯ ಜನಪದ ಆಟಗಳು, (ಸಂ) ಡಾ. ಎನ್.ಆರ್.ನಾಯಕ, ಶ್ರೀಮತಿ ಶಾಂತಿ ನಾಯಕ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೯೦ : ಜನಪದ ಆಟಗಳು, (ಸಂ) ಡಾ. ಬಿ.ಎ.ವಿವೇಕರೈ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೦೦೦ : ಸಾಲು ಸಂಪಿಗೆ ನೆರಳು, (ಸಂ) ಡಾ. ಕಾಳೇಗೌಡ ನಾಗವಾರ, ಜಿ.ವಿ.ಆನಂದಮೂರ್ತಿ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೦೦೦ : ತುಳುನಾಡಿನ ಜನಪದ ಆಟಗಳು, ಡಾ. ಗಣನಾಥ ಎಕ್ಕಾರು, ಜ್ಞಾನೋದಯ ಪ್ರಕಾಶನ, ಬಸವೇಶ್ವರನಗರ, ಬೆಂಗಳೂರು–೬೬.

೨೦೦೬ : ಜಾನಪದ ಆಟಗಳು, ಡಾ. ಮಲ್ಲಿಕಾರ್ಜುನ ಸಂ. ಮೇತ್ರಿ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

* * *

೨. ಆಣೆಪೀಣಿ ಹಾಡುಗಳು :

ಉತ್ತರ ಕರ್ನಾಟಕಕ್ಕೇ ಸೀಮಿತವಾದ ಒಂದು ವಿಶೇಷ ಪ್ರಕಾರ ಆಣಿಪೀಣಿ ಹಾಡುಗಳು. ದೀಪಾವಳಿ ಹಬ್ಬದ ಸಂಭ್ರಮವೆಂದರೆ ಅದು ವಿಶೇಷವಾಗಿ ಬೆಳಕಿನ ಹಬ್ಬ; ದೀಪದ ಹಬ್ಬ. ಹಲವಾರು ಜನಸಮುದಾಯಗಳಲ್ಲಿ ಹಲವಾರು ಬಗೆಯ ಸಂಗತಿಗಳಿಗೆ, ವ್ಯಕ್ತಿಗಳಿಗೆ, ತಮ್ಮ ಮನೆಯಲ್ಲಿ ರಂಪರೆಯಿಂದ ಉಳಿದುಬಂದ ವಸ್ತುಗಳಿಗೆ, ವಿಶೇಷವಾಗಿ ಹೊಸದಾಗಿ ಮದುವೆಯಾದ ಮಕ್ಕಳಿಗೆ, ಮನೆಯಲ್ಲಿಯ ಎಲ್ಲ ಗಂಡುಮಕ್ಕಳಿಗೆ, ದನಕರುಗಳಿಗೆ ದೀಪಾವಳಿಯಂದು ಆರತಿ/ದೀಪ ಬೆಳಗುವ ಪದ್ಧತಿ ಇದೆ. ಊರ ಅಗಸನು ಅಮವಾಸ್ಯೆಯ ರಾತ್ರಿ, ಪಾಡ್ಯದದಿನ ನಸುಕಿನಲ್ಲಿ ಮನೆಮನೆಗೂ ತೆರಳಿ ಪ್ರತಿ ಮನೆಯರಿಗೂ ಆರತಿ ಮಾಡುವ ಸಂಪ್ರದಾಯವೂ ಕೆಲವು ಕಡೆಗಿದೆ. ದೀಪಾವಳಿ ವಿಶೇಷವಾಗಿ ಹಟ್ಟಿಹಬ್ಬ ಎಂತಲೂ ಹೇಳಲಾಗುತ್ತದೆ. ದನಗಳಿಗೆ ವಿಶೇಷ ಮಹತ್ವ ವಿರುವ ಹಬ್ಬ ಇದು. ದನಗಳಿಗೆ ಯಾವುದೇ ರೋಗಗಳು ಬರದಿರಲಿ ಎಂಬ ಭಾವನೆಯ ಹಿನ್ನೆಲೆಯಲ್ಲಿ ಮನೆಯ ಬಾಗಿಲಲ್ಲಿ ಉರಿ ಹಚ್ಚಿ ದನಗಳನ್ನು ದಾಟಿಸಲಾಗುತ್ತದೆ. ದೀಪಾವಳಿಯ ನೀರು ತುಂಬುವ ದಿನದಿಂದ ಪ್ರಾರಂಭವಾಗಿ ಕೊನೆಯ ಪಾಡ್ಯದವರೆಗೆ ಅಂದರೆ ಕಾರ್ತಿಕ ಶುದ್ಧ ಪ್ರತಿಪದೆಯಿಂದ ಪಂಚಮಿಯವರೆಗೆ ಈ ಐದೂ ದಿನ, ಇನ್ನು ಕೆಲವು ಕಡೆ ಚತುರ್ಥಿ ಹಾಗೂ ಪಾಡ್ಯ ಈ ಎರಡು ದಿನ– ದನಕಾಯುವ ಹುಡುಗರು, ಹೊತ್ತುಮುಳುಗಿ, ಕಣ್ಣಸಕಾದ ವೇಳೆಯಲ್ಲಿ ಮನೆಮನೆಗಳಿಗೆ ಬಂದು, ದನಗಳಿಗೆ ದೀಪ ಬೆಳಗುವ ವಿಶೇಷ ಕಾರ್ಯಕ್ರಮ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಇದೆ. ಹೀಗೆ ದನಗಳಿಗೆ ದೀಪ ಬೆಳಗುವ ಹಾಡುವ ಹಾಡುಗಳೇ 'ಅಣೀಪೀಣಿ' ಹಾಡುಗಳು.

ಪಣತಿ ಇಡಲು ಆಪ್, ಜೇಕು ಇಂತಹ ಹುಲ್ಲಿನಿಂದ ಮಾಡುವ ಒಂದು ವಿಶೇಷ ಸಾಧನಕ್ಕೆ 'ಆಣಿಪೀಣಿ' ಎನ್ನುತ್ತಾರೆ. ಆಪ್ ಅಥವಾ ಜೇಕಿನ ಹುಲ್ಲಿನ ಎಳೆಗಳನ್ನು ಕಿತ್ತು ತಂದು, ನಾಗರ ಹೆಡೆಯ ಆಕಾರದಲ್ಲಿ ಹೆಣೆದು, ಹೆಡೆಯ ಒಳಗಡೆ ಪಣತಿ ಇಡಲು ಬರುವಂತೆ ವ್ಯವಸ್ಥೆ ಮಾಡುತ್ತಾರೆ. ಕಾಡು ಹೂಗಳನ್ನು ಕಿತ್ತು ತಂದು ಆಣಿಪೀಣಿಗೆ ಅಲ್ಲಲ್ಲಿ ಸಿಕ್ಕಿಸಿ ಶೃಂಗರಿಸುತ್ತಾರೆ. ಹೀಗೆ ಮಾಡಿದ ಆಣಿಪೀಣಿ ಒಳಗೆ ಹಣತೆ ಇಟ್ಟು, ದೀಪ ಹಚ್ಚಿಕೊಂಡು, ದನಗಳನ್ನು ಕಾಯುವ ಯುವಕರು ತಂಡತಂಡವಾಗಿ, ತಾವು ದನ ಕಾಯುವ ಮನೆಮನೆಗಳಿಗೆ ದೀಪ ಬೆಳಗಲು ಹೋಗುತ್ತಾರೆ. ಒಬ್ಬರ ಮನೆಯಲ್ಲಿರುವ ಪ್ರತಿ ದನಕ್ಕೂ ದೀಪ ಬೆಳಗುವಾಗ ಆಯಾ ದನದ ಬಣ್ಣ, ವಯಸ್ಸು ಇವುಗಳನ್ನು ಗಮನಿಸಿ– ಆಕಳು, ಎತ್ತು, ಎಮ್ಮೆ, ಕೋಣ, ಆಡು, ಕುರಿ, ಕುದುರೆ, ಇವುಗಳಿಗೆ ಹಾಡುಗಳನ್ನು ಹೇಳುತ್ತ ದೀಪಬೆಳಗುತ್ತಾರೆ. ವಯಸ್ಸನ್ನು ಗಮನಿಸಿ–ಕರು, ಹೋರಿ, ಮಣಕಗಳೆಂದು, ಬಣ್ಣಗಳನ್ನು ಗಮನಿಸಿ–ಕರಿ ಆಕಳ, ಹಂಡಾಕಳ(ಹಂಡಿ), ಬಿಳಿ ಆಕಳ, ಕೆಂಪಾಕಳ ಹೀಗೆ ದನಗಳನ್ನು ಗುರುತಿಸುವ ಪದ್ಧತಿಯಂತೆ ಅವುಗಳನ್ನು ಉಲ್ಲೇಖಿಸಿ, ಹಾಡುಗಳನ್ನು ಹಾಡುತ್ತಾರೆ.

ಮಕ್ಕಳು ಆಟವಾಡುವಾಗ ಹೇಳುವ ಹಾಡುಗಳಂತೆ ಇವುಗಳ ಭಾಷೆ, ರಚನೆ, ಅನ್ನುವ ರೀತಿ ಇವೆಲ್ಲ ಹೋಲಿಕೆಯಾಗುತ್ತವೆ. ಆಣಿಪೀಣಿ ಹಾಡುಗಳು ಒಮ್ಮೆ ಪ್ರಾರಂಭವಾದರೆ ಮಕ್ಕಳು ಮಗ್ಗಿ ಪಾಠ ಒಪ್ಪಿಸುವ ರೀತಿಯಲ್ಲಿ, ಒಂದೇ ಸವನೆ ಹೇಳಿ ಮುಗಿಸುವ ಪದ್ಧತಿ ಕಾಣುತ್ತದೆ. ಈ ಹಾಡುಗಳು ಒಮ್ಮೆ ಪ್ರಾರಂಭವಾದರೆ ಮತ್ತೆ ಆ ಹಾಡುಗಳ ಯಾವುದೇ ಸಾಲುಗಳ ಪುನರಾವರ್ತನೆ ಆಗುವುದಿಲ್ಲ. ಪ್ರಾಸಬದ್ಧವಾದ ಸಾಲುಗಳನ್ನು ಪಟಪಟನೆ ಹೇಳುತ್ತ–ಅನ್ನುತ್ತ ಸಾಗುವ ಪದ್ಧತಿಯಲ್ಲಿ ಈ ನುಡಿಗಳನ್ನು ಹೇಳಲಾಗುತ್ತದೆ. ಈಶ್ವರಚಂದ್ರ ಚಿಂತಾಮಣಿ ಅವರು **'ಗರತಿಯರ ಮನೆಯಿಂದ'** (೧೯೫೫) ಎಂಬ ಕೃತಿಯಲ್ಲಿ ಮಕ್ಕಳ ಆಟಗಳ ಹಾಡುಗಳಲ್ಲಿಯೇ ಆಣಿಪೀಣಿಯ ಮೂರು ಹಾಡುಗಳನ್ನೂ ಕೊಟ್ಟಿದ್ದಾರೆ.

ಹೋರಿ ಹೋರಿ ಹ್ಯಾಂಗಿರಬೇಕು?
ತೆನಿ ತಿಂದು ಸೊಕ್ಕಿರಬೇಕು
ನೂಲಿನ ಮೊಗಡಾ ಹಾಕಿರಬೇಕು
ಜಾನಕಟ್ಟಿ ನಡದಿರಬೇಕು
ಮ್ಯಾಲ ಕುಂತು ಮರೆಸಿರಬೇಕು
ಬಂದವರೆಲ್ಲಾ ನೋಡಿರಬೇಕು
ಆಣಿ ಪೀಣಿ ಜಾಣೀರೆ.

ಹಂಡ ಕುದರಿ ಹಾರ್ತ ಬಂತು
ಚೆಂದ ಕುದುರಿ ಚೀರ್ತ ಬಂತು
ಕಲ್ಲಾಗ ಸಿಕ್ಕ್ಽದ ಕಾಗಿ ಮರಿ
ಹುಬ್ಬ ಹಾರ್ಸತದ ಗುಬ್ಬೀಮರಿ
ಟಿಂವಟಿಂವ ಅಂತ್ಽದ ಟೀವಕ್ಕಿ ಮರಿ
ಆಡಿಕೊಂತ ಬಂತು ಆಡಿನ ಮರಿ
ಬೇಡಿಕೊಂತ ಬಂತು ಬೆಕ್ಕಿನ ಮರಿ
ಆಣಿಪೀಣಿ ಜಾಣೀರೆ.

ಕಂದೀ ಎತ್ತು ಬಂದ್ಽದಪ್ಪ
ಉಪ್ಪಿನ ಮಾಳ್ಯಾಗ ಇಳದ್ಽದಪ್ಪ
ಅಂತರಗಂಗಿ ಬಂದಾಳಪ್ಪ
ಸಣ್ಣ ಶಾವಿಗಿ ಬಸದಾಳಪ್ಪ
ಕಣ್ಣಿ ಬೆಲ್ಲ ಒಗದಾಳಪ್ಪ
ಕಣ್ಣಾಗ ನೀರಾ ತಂದಾಳಪ್ಪ
ಆಣಿ ಪೀಣಿ ಜಾಣೀರೆ.

ಈ ಮೂರೂ ನುಡಿಗಳು ಅತ್ಯಂತ ಪ್ರಸಿದ್ಧ ನುಡಿಗಳೇ ಆಗಿವೆ. ಕಲಬುರಗಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲೂ ಇವು ಪ್ರಚಾರದಲ್ಲಿವೆ. ಹೋರಿ, ಕುದರಿ ಮತ್ತು ಬಣ್ಣವನ್ನು ಗಮನಿಸಿ ಕಂದು ಬಣ್ಣದ ಎತ್ತುಗಳನ್ನು ಬೆಳಗುವಾಗ ಬಳಸುವ ನುಡಿಗಳನ್ನು ಚಿಂತಾಮಣಿಯವರು ಉಲ್ಲೇಖಿಸುವುದು ಕಾಣುತ್ತದೆ.

ಡಾ. ಎಂ.ಜಿ.ಬಿರಾದಾರ ಅವರು **'ಜಾನಪದ ಸಾಹಿತ್ಯ ದರ್ಶನ-೧'** (೧೯೭೪) ರಲ್ಲಿ ಪ್ರಕಟವಾದ 'ಉತ್ತರ ಕರ್ನಾಟಕದ ಸಾಹಿತ್ಯ ಪ್ರಕಾರಗಳು' ಎಂಬ ತಮ್ಮ ಲೇಖನದಲ್ಲಿ 'ಪೀಡೆಯ ಹಾಡುಗಳು' ಎಂಬ ಉಪಶೀರ್ಷಿಕೆಯಡಿ ಹೀಗೆ ಬರೆದಿದ್ದಾರೆ : "ಉತ್ತರ ಕರ್ನಾಟಕದಲ್ಲಿ ಇದುವರೆಗೆ ಯಾರೂ ಪ್ರಸ್ತಾಪಿಸದ ವಿಶೇಷ ರೀತಿಯ ಹಾಡುಗಳು. ದೀಪಾವಳಿಯಲ್ಲಿ ದನಕಾಯುವ ಹುಡುಗರು ನಾಗರ ಹೆಡೆಯಾಕಾರದ ಹುಲ್ಲಿನ ಪೀಡೆಯನ್ನು ಮಾಡಿ, ಅದನ್ನು ಹೂವಿನಿಂದ ಸಿಂಗರಿಸುತ್ತಾರೆ. ಅದರಲ್ಲೊಂದು ಪಣತಿ ಇಟ್ಟುಕೊಂಡು ಮೂರೂ ಸಂಜೆಯ ಹೊತ್ತಿನಲ್ಲಿ ತಾವು ಕಾಯುವ ದನಗಳ ಮನೆ ಮನೆಗೆ ಹೋಗಿ ಈ ಪೀಡೆ ಬೆಳಗುತ್ತಾರೆ. ಆಗ ಒಬ್ಬೊಬ್ಬರು ಒಂದೊಂದು ಹಾಡು ಹೇಳುತ್ತಾರೆ. ಇವಕ್ಕೆ ಅರ್ಥ ಬಹಳಕಡೆಗೆ ಇರದಿದ್ದರೂ ಧ್ವನಿ, ಧಾಟಿಯಲ್ಲಿ ಭಾವಾವೇಗ ಭರಪೂರವಿರುತ್ತದೆ. ಶಾಲೆಯ ಮಕ್ಕಳು ಮಗ್ಗೀ ಹೇಳಿದಂತೆ ಉಸುರು ಬಿಡದೇ ಈ ಹಾಡು ಹೇಳುತ್ತಾರೆ. ಎತ್ತು, ಎಮ್ಮೆ, ಆಕಳು, ಹೋರಿ, ಆಡುಗಳಿಗೆ ಬೇರೆ ಬೇರೆ ಹಾಡುಗಳಿವೆ. ಡಾ. ಹಾ.ಮಾ.ನಾಯಕರು ಪ್ರಸ್ತಾಪಿಸಿದ ಅಂಟಿಗೆ ಪಂಟಿಗೆ ಹಾಡುಗಳಿಗೂ ಇವಕ್ಕೂ ಯಾವ ಸಂಬಂಧವೂ ಇಲ್ಲ. ಇಲ್ಲೊಂದು ಸಣ್ಣ ಹಾಡಿದೆ ನೋಡಿ:

ಎತ್ತ ಮಾರಲಾಕ ಹ್ವಾದೀನಪ್ಪ
ಕುಚನೂರ ಸಂತ್ಯಾಗ ಇಳದೀನಪ್ಪ
ಚಕಮಕಿ ಹೆಣ್ಣ ಕರದಾಳಪ್ಪ
ಸಣ್ಣ ಶ್ಯಾಂವಿಗಿ ಬಸದಾಳಪ್ಪ
ಚಿನ್ನಿ ಸಕ್ಕರಿ ತರಸ್ಯಾಳಪ್ಪ
ಒಲ್ಲೊಲ್ಲೆಂದರ ಉಣಿಸ್ಯಾಳಪ್ಪ
ಅರ್ಧಾ ದಾರೀ ಕಳುವ್ಯಾಳಪ್ಪ
ಕಣ್ಣಿಗಿ ನೀರ ತಂದಾಳಪ್ಪ
ಆಣೀ ಪೀಣೀ ಜಾಣಿಗೋ ಕೊಬ್ಬರಿ ಬಟ್ಟಲಾ ಬಾಯಾಗೋ.

ಎಂದು ಹಾಡಿ ಕೊಬ್ಬರಿ ಬಟ್ಟಲನ್ನೊ ಚಿಲ್ಲರೆ ಹಣವನ್ನೋ ಪಡೆಯುತ್ತಾರೆ.' (ಜಾನಪದ ಸಾಹಿತ್ಯ ದರ್ಶನ-೧, ಪು.೭೮-೭೯).

"ಪೀಡೆಯ ಹಾಡುಗಳು ಉತ್ತರ ಕರ್ನಾಟಕದಲ್ಲಿ ಮಾತ್ರ ಬಳಕೆಯಲ್ಲಿರುವ ವಿಶಿಷ್ಟ ಜಾತಿಯ ಜಾನಪದ ಪ್ರಕಾರ. ಆದರೆ ಇವುಗಳ ಸಂಗ್ರಹವಾಗಲಿ, ಉಲ್ಲೇಖವೂ ಕೂಡ ಎಲ್ಲಿಯೂ ಆಗಿಲ್ಲ. ಈ ಹಾಡುಗಳು ವಿಶೇಷವಾಗಿ ಬಿಜಾಪೂರ, ಬೆಳಗಾವಿ ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ಬಳಕೆಯಲ್ಲಿವೆ" (ಜಾನಪದ ಜೀವಾಳ, ಪು. ೧೩೪). ಈ ಆಣಿಪೀಣಿ

ಹಾಡುಗಳು ಕೇವಲ ಬಿಜಾಪೂರ ಬೆಳಗಾವಿ ಜಿಲ್ಲೆಯಲ್ಲಿಯೇ ಪ್ರಚಾರದಲ್ಲಿ ಇರದೆ ಇಡೀ ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ವಿಶೇಷ ಪ್ರಕಾರವಾಗಿದೆ. ಚಿಂತಾಮಣಿ ಅವರು ೧೯೫೫ ರಲ್ಲಿಯೇ ೩ ಹಾಡುಗಳನ್ನು ಪ್ರಕಟಿಸಿದ್ದಾರೆ. ಇನ್ನು ಇವುಗಳಿಗೆ 'ಪೀಡೆಯ ಹಾಡುಗಳು' ಎಂದುದು ಏಕೆ ಎಂಬುದಕ್ಕೆ ಸ್ಪಷ್ಟವಾಗಿಲ್ಲ. 'ಆಣಿಪೀಣಿ' ಎನ್ನುವುದರಲ್ಲಿ ಪೀಣಿ ಎನ್ನುವುದು ಬಹುಶಃ ಆಣಿ ಪದದ ಅನುರಣನ ಪದ ಇದ್ದಂತೆ ತೋರುತ್ತದೆ. ಪೀಣಿ ಎನ್ನುವುದನ್ನೇ ಪ್ರತ್ಯೇಕವಾಗಿ ಗಣಿಸಿ, ಅದು ಪೀಡೆ ಇರಬೇಕೆಂಬಂತೆ ಗಣಿಸುವಲ್ಲಿ, ದನಗಳಿಗೆ ದೀಪ ಬೆಳಗುವ ಉದ್ದೇಶದ ಹಿನ್ನೆಲೆಯನ್ನು– ಅವುಗಳ ಪೀಡೆ ದೂರಾಗಲಿ ಎಂಬ ಭಾವ ಇರಬಹುದೆಂದು ಭಾವಿಸಿ, ಹಾಗೆ ಅರ್ಥೈಸಿದಂತೆ ತೋರುತ್ತದೆ. ನುಡಿಗಳ ಕೊನೆಗೆ ಬರುವ ಸಾಲುಗಳಲ್ಲಿ ಈ ಪೀಡೆ(ತೊಂದರೆ) ತೊಲಗಲಿ ಎಂಬ ಅರ್ಥದ ಸಾಲು ಕೆಲವು ಕಡೆ ಬರುವುದು ಕಾಣುತ್ತದೆ.

ಹಳ್ಳದ ದಂಡ್ಯಾಗ ಕಳ್ಳರು ಕೂತಾರ
ಕಳ್ಳರ ಕೈಯಾಗ ಬೆಳ್ಳಿಯ ಕುಡಗೋಲ
ಬೆಳ್ಳಿಯ ಕುಡಗೋಲ್ಗಿ ಮಾರಮಾರ ಹುಲ್ಲ
ಮಾರಮಾರ ಹುಲ್ಲಿಗಿ ಬೋರ ಬೋರ ಹಾಲ
ಬೋರಬೋರ ಹಾಲಿಗಿ ಕಣಿಕಣಿ ಮಸರ
ಕಣಿಕಣಿ ಮಸರಿಗಿ ಚಿಲಿಪಿಲಿ ಮಜ್ಜಿಗಿ
ಚಿಲಿಪಿಲಿ ಮಜ್ಜಿಗಿ ಮುದ್ದಿಮುದ್ದಿ ಬೆಣ್ಣಿ
ಮುದ್ದಿ ಮುದ್ದಿ ಬೆಣ್ಣಿಗಿ ಕಳಕಳ ತುಪ್ಪ
ಕಳಕಳ ತುಪ್ಪಿಗಿ ಬಳಬಳ ರೊಕ್ಕ
ಆಣೀ ಪೀಣೀ ನಮ್ಮ **ಎಮ್ಮಿ ಪೀಡಾ ಹೊಳಿಯಾಚೆಗೋ**

'ಎಮ್ಮಿ ಪೀಡಾ ಹೊಳಿಯಾಚೆಗೋ' ಎಂಬ ಕೊನೆಯ ಸಾಲಿನ ಭಾಗವನ್ನು ಗಮನಿಸಬೇಕು. ಅಂದರೆ ದನಗಳ ಪೀಡೆ ದೂರಾಗಲಿ ಎಂಬ ಉದ್ದೇಶದಿಂದ ದನಗಳಿಗೆ ದೀಪ ಬೆಳಗುವ ಪದ್ಧತಿ ಇದೆ ಎಂಬುದು ಸ್ಪಷ್ಟವಾಗಿದೆ.

ಡಾ. ಎಂ.ಎಂ.ಕಲಬುರ್ಗಿ ಅವರು **'ಆಣೀ ಪೀಣೀ : ಒಂದು ಜಾನಪದ ಗೀತಪ್ರಕಾರ'** ಎಂಬ ಲೇಖನವೊಂದನ್ನು ತೀನಂಶ್ರೀ ಅವರ ಅಭಿನಂದನ ಗ್ರಂಥಕ್ಕೆ (೧೯೭೬) ಬರೆದಿದ್ದಾರೆ. ಅವರೂ ಕೂಡ ದಕ್ಷಿಣ ಕರ್ನಾಟಕದಲ್ಲಿರುವ ಅಂಟಿಗೆ ಪಂಟಿಗೆ ಸಂಪ್ರದಾಯಕ್ಕೂ 'ಆಣೀ ಪೀಣೀ' ಸಂಪ್ರದಾಯಕ್ಕೂ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸುತ್ತಾರೆ. "ಉತ್ತರಕರ್ನಾಟಕದ ಮಟ್ಟಿಗೆ ಹೇಳುವದಾದರೆ 'ಆಣೀ ಪೀಣೀ' ಯೆಂಬುದು ದೀವಳಿಗೆಯ ಪ್ರಸಂಗದಲ್ಲಿ ದನಗಳಿಗೆ ದೀಪಬೆಳಗುವ ಒಂದು ಸಂಪ್ರದಾಯ. ಈ ಪ್ರಸಂಗದಲ್ಲಿ ಹೇಳುವುವು 'ಆಣೀ ಪೀಣೀ ಹಾಡು' ಗಳು. ಪಶುಸಂಪತ್ತಿ ಹೆಚ್ಚಲಿ, ಅವು ಆರೋಗ್ಯದಿಂದ ಬಾಳಲಿ ಎಂಬ ಭಾವನೆಯಿಂದ ಆಚರಿಸಲ್ಪಡುವ ಈ ಸಂಪ್ರದಾಯ ಅಲ್ಪವ್ಯತ್ಯಾಸದಿಂದ ಉತ್ತರಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ ಇರುವಂತೆ ತೋರುತ್ತದೆ. ಆಣೀ ಪೀಣೀ, ಆಡೀ–ಪೀಡೀ ಎಂಬವು ಇದರ ಪ್ರಾದೇಶಿಕ ಪರ್ಯಾಯ ನಾಮಗಳು" (ಮಾರ್ಗ–೨, ಪು.೩೭೨).

ಡಾ. ಎಂ.ಎಂ.ಕಲಬುರ್ಗಿ ಅವರು 'ಆಣೀ ಪೀಣೀ'ಯ ಪ್ರಾಚೀನತೆಯನ್ನು ಗುರುತಿಸಲು ಅಜಿತಪುರಾಣದ ಒಂದು ಪದ್ಯದಲ್ಲಿ ಬರುವ 'ಅಂಟಸುಂಟಿಯು' ಎಂಬ ಪದದ ಕಡೆ ಲಕ್ಷ ಸೆಳೆಯುತ್ತಾರೆ. ಚಾವುಂಡರಾಯ ಪುರಾಣದ 'ದೀವಳಿಗೆಯ ಪಜೆಯಂತೆ ಪೊಕ್ಕಪರ್ ಮನೆಮನೆಯಂ' ಎಂಬ ಕ್ರಿಯೆಯು ಬಹುಶಃ ದನಕಾಯುವ ಹುಡುಗರು ತಂಡ ತಂಡವಾಗಿ ದನಗಳಿಗೆ ಬೆಳಗಲು ಮನೆಮನೆಗಳಿಗೆ ಹೊಗುವ ರೀತಿಯನ್ನು ಈ ಸಾಲು ಹೇಳುತ್ತಿರಬಹುದೆಂದು ಊಹಿಸುತ್ತಾರೆ. ಹೀಗಾಗಿ "ಇದು ನಿಜವಿದ್ದರೆ ಆಣೀ ಪೀಣೀ ಆಚರಣೆ ಕನಿಷ್ಟಪಕ್ಷ ಸಾವಿರವರ್ಷಗಳಷ್ಟು ಹಿಂದೆ ಹೋಗುತ್ತದೆ" (ಮಾರ್ಗ-೨, ಪು.೩೭೩) ಎನ್ನುತ್ತಾರೆ. ಜೊತೆಗೆ ತಮ್ಮ ಲೇಖನದ ಕೊನೆಯಲ್ಲಿ ೧೨ ಹಾಡುಗಳನ್ನು ಉಲ್ಲೇಖಿಸಿದ್ದಾರೆ. ಉದಾಹರಣೆ :

ಗುದಗುದನಾಲ ಗೂಟ ಮುರಿಯಿತೊ
ತ್ವಾಟಕನಾಲ ತೊಗಲ ಬಾರಕೋಲ
ಕವಳಿಗಡ್ಡಿ ಕಮಾಲ ಚಿಕ್ಕಿ
ಹೊಡಕೋರಪ್ಪ ಬಡಕೋರಪ್ಪ
ಕಲ್ಲಾಗ ಸಿಕ್ಕದ ಕಾಗಿಮರಿ
ಹುಬ್ಬ ಹಾರಸತದ ಗುಬ್ಬಿಮರಿ
ಟಿಂವ್ ಟಿಂವ್ ಅಂತಾದ ಟಿಂವಕ್ಕಿ ಮರಿ
ಆಯ್ಕೊಂಡು ತಿಂತದ ಆಡಿನ ಮರಿ
ಬಳಕೊಂಡು ತಿಂತದ ಬಳುವಿನ ಮರಿ
ಆಣೀಪೀಣೀ ನಮ್ಮ ಹೋರಿ ಪೀಡಾ ಹೊಳಿಯಾಚೆಗೋ

ಡಾ. ಅರವಿಂದ ಮಾಲಗತ್ತಿ ಅವರು ೧೯೮೩ರಲ್ಲಿ **'ಆಣೀಪೀಣಿ'** ಎಂಬ ಒಂದು ಸಂಗ್ರಹವನ್ನೇ ಹೊರತಂದಿದ್ದಾರೆ. ಈ ಸಂಗ್ರಹಕ್ಕೆ ಮೊದಲು ೫೮ ಪುಟಗಳ ಪ್ರಸ್ತಾವನೆ ಬರೆದು ಈ ಸಂಪ್ರದಾಯದ ಬಗ್ಗೆ, ಹಾಡುಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿದ್ದಾರೆ. ಅವರ ಮುಖ್ಯ ಚರ್ಚೆ ಆಣೀಪೀಣಿ ಹಾಡುಗಳ ಬಳಕೆ, ಅರ್ಥ, ಪ್ರಸಾರ ಎಲ್ಲೆಲ್ಲಿ, ದಕ್ಷಿಣ ಕರ್ನಾಟಕದ ಅಂಟಿಗೆ-ಪಂಟಿಗೆ ಸಂಪ್ರದಾಯಕ್ಕೂ ಆಣೀಪೀಣಿ ಸಂಪ್ರದಾಯಕ್ಕು ಸಂಬಂಧವಿಲ್ಲ- ಹೀಗೆ ಅನೇಕ ಸಂಗತಿಗಳನ್ನು ಒಳಗೊಂಡಿದೆ. "ಆಣೀಪೀಣಿ ಎನ್ನುವದು ದನಗಳ ಮೇಲಾದ ಪೀಡೆಯನ್ನು ಬೆಳಕಿನಿಂದ (ದೀಪ ಅಥವಾ ದೀವಟಿಗೆ) ನಿವಾರಿಸುವುದು ಈವರೆಗೆ ಗಮನಿಸಿದ್ದಾಗಿದೆ" (ಆಣೀಪೀಣಿ,ಪು.೧೪).

ಅರವಿಂದ ಮಾಲಗತ್ತಿ ಅವರು ಆಣೀಪೀಣಿ ಎನ್ನುವ ಬದಲಾಗಿ ಬಳಕೆಯಾಗುವ 'ಜೌಂಡಿಗ್ಯೋ ಪೌಂಟಗ್ಯೋ', 'ಆವಟಿಗೊ ಪವಟಿಗೊ' ಎನ್ನುವ ಪದಗಳ ಕಡೆ ಗಮನ ಸೆಳೆಯುತ್ತಾರೆ. ಹಾಡಿನ ಕೊನೆಯಲ್ಲಿ ಇವು ಬಳಕೆಯಾಗುವ ತುಣುಕುಗಳನ್ನೂ ಕೊಡುತ್ತಾರೆ:

'ಆಣೀಪೀಣಿ ಜಾಣಿಗೊ
ನಮ್ಮ ಎತ್ತಿನ ಪೀಡಾ ಹೊಳಿ ಆಚಾಕೋ'
'ಜೌಂಡಿಗ್ಯೋ ಪೌಂಟಗ್ಯೋ

ನಮ್ಮ ಎಮ್ಮಿ ಪೀಡಾ ಹೊಳಿ ಆಚಾಕೋ'
'ಆವಟಿಗೋ ಪವಟಿಗೊ
ಹೋರಿ ಪೀಡಾ ಹೊಳಿ ಆಚಾಕೊ ಹೊಗ್ಲ್ಯೊ' (ಆಣೀಪೀಣಿ, ಪು.೨೮)

ಇಲ್ಲಿ ಬಳಕೆಯಾದ ಪದಗಳನ್ನು ನೋಡಿದರೆ ಆಣೀಪೀಣಿ ಹೆಸರಿನ ಅರ್ಥ ಇನ್ನಷ್ಟು ಗೋಜಲಾಗುತ್ತದೆ. ಹೀಗೆ ಜನಪದ ಸಾಹಿತ್ಯದಲ್ಲಿ ಅಪರೂಪದ ಪ್ರಕಾರವಾಗಿರುವ, ಮಕ್ಕಳಿಂದ ಪ್ರಂಯೋಗವಾಗುವ, ಮಕ್ಕಳ ಹಾಡುಗಳಿಗೆ ಬಹಳ ಲಕ್ಷಣಗಳಲ್ಲಿ ಹೋಲಿಕೆಯಾಗುವ ಆಣೀಪೀಣಿ ಹಾಡುಗಳನ್ನು ಮಕ್ಕಳ ಸಾಹಿತ್ಯದ ಗುಂಪಿಗೆ ಸೇರಿಸಲು ಯಾವ ಅಡ್ಡಿಯೂ ಇಲ್ಲ.

ಆಣೀಪೀಣೀ ಹಾಡುಗಳ ಇನ್ನೊಂದು ಸಂಗ್ರಹ ಬೀದರ ಜಿಲ್ಲೆಯಿಂದ ಪ್ರಕಟಗೊಂಡಿದೆ. ೨೦೦೪ರಲ್ಲಿ **'ಬೀದರ ಜಿಲ್ಲೆಯ ಆಣೀ ಪೀಣೀ ಹಾಡುಗಳು'** ಎಂಬ ಕೃತಿಯನ್ನು ಸಂಪಾದಿಸಿದವರು ಮ.ಮಾ.ಬೋರಾಳ್ಕರ್ ಅವರು. ಈ ಹಾಡುಗಳು ತೀರ ಅಪರೂಪಕ್ಕೆ ದೊರೆಯುವ ಹಾಡುಗಳಾಗಿದ್ದು, ಬೋರಾಳಕರ್ ಅವರು ವ್ಯಾಪಕವಾದ ಕ್ಷೇತ್ರಕಾರ್ಯ ಮಾಡಿ ಇಲ್ಲಿಯ ಹಾಡುಗಳನ್ನೂ ಮಾಹಿತಿಗಳನ್ನೂ ಸಂಗ್ರಹಿಸಿದ್ದಾರೆ. "ಹುಮ್ನಾಬಾದ ತಾಲೂಕಿನಲ್ಲಿ ಹಾಗೂ ಬೀದರ ಜಿಲ್ಲೆಯ ಸುಮಾರು ಎರಡುನೂರಾ ಐವತ್ತೊಂದು ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಹಾಗೂ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಮೂವತ್ತೈದು ಹಳ್ಳಿಗಳ ಹಾಗೂ ಮಹಾರಾಷ್ಟ್ರದ ಉದಗೀರ, ಅಕ್ಕಲಕೋಟ, ಸೋಲ್ಲಾಪುರ, ಸಾಂಗ್ಲಿ; ಆಂದ್ರಪ್ರೇಶದ ಜಹೀರಾಬಾದ ತಾಲೂಕಿನ ಹಳ್ಳಿಗಳನ್ನು ಸಂಪರ್ಕಿಸಿದಾಗ ದೀಪಾವಳಿಗೆ ಗೋವುಗಳಿಗೆ ದೀಪ ಬೆಳಗುವ ಪದ್ಧತಿ ಜಾರಿಯಲ್ಲಿದ್ದು, ದನಕಾಯುವ ಹೈದರು ಈ ಕೆಳಗಿನ ಹಾಡುಗಳನ್ನು ಹಾಡಿದರು" (ಪ್ರ.ಪು.೩೯). ಸಂಪಾದಕರು ಈ ಕೃತಿಯಲ್ಲಿ ಪ್ರಕಟಿಸಿದ್ದು ೬೦ ಹಾಡುಗಳನ್ನು. ಅಂದರೆ ಈ ಹಾಡುಗಳ ರಚನೆ ವಿಪುಲವಾಗಿಲ್ಲವೆಂದು ಅರ್ಥವಾಗುತ್ತದೆ. ಆದರೆ ಈ ಹಾಡುಗಳ ಸಂಗ್ರಹಕ್ಕಾಗಿ ಹಾಗೂ ಮಾಹಿತಿಗಾಗಿ ಸಂಪಾದಕರು ತಾವು ಹೋದಲ್ಲೆಲ್ಲ ವಿಚಾರಿಸಿದ್ದಾರೆ, ದೊರೆತಷ್ಟನ್ನು ಸಂಗ್ರಹಿಸಿದ್ದಾರೆ. ಹಾಗೆ ನೋಡಿದರೆ ಈ ಕೃತಿ ಬೀದರ ಜಿಲ್ಲೆಯ ಹಾಡು ಹಾಗು ಮಾಹಿತಿಗಳಿಂದ ಕೂಡಿರದೆ, ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಸಂಗ್ರಹವೆಂಬಂತೆ ಇದೆ. ಸುಮಾರು ೩೮ ಪುಟಗಳ ಮಾಹಿತಿಪೂರ್ಣ ಪ್ರಸ್ತಾವನೆ ಈ ಕೃತಿಗೆ ಬರೆದಿದ್ದಾರೆ. ಈ ಕೃತಿಯಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಹೆಚ್ಚುಕಡಿಮೆ ಎಲ್ಲ ಸಾಕುಪ್ರಾಣಿಗಳಿಗೆ, ಅಂದರೆ ಕೊಟ್ಟಿಗೆಯಲ್ಲಿ ಕಟ್ಟುವ ಎಲ್ಲ ಪ್ರಾಣಿಗಳಿಗೆ, ಎಲ್ಲ ವಯಸ್ಸಿನ ಪ್ರಾಣಿಗಳಿಗೆ, ಎಲ್ಲ ಬಣ್ಣದ ಪ್ರಾಣಿಗಳಿಗೆ ಬೆಳಗುವ ಹಾಡುಗಳನ್ನು ಆರಿಸಿ ಆರಿಸಿ ಸಂಗ್ರಹಿಸಿ ಪ್ರಕಟಿಸಿದ್ದು. "ದೇವತಾ ಸ್ತುತಿಯ ಹಾಡುಗಳು, ಕರುವಿನ ಪದಗಳು, ಆಕಳ ಪದಗಳು, ಹಂಡಿಯ ಹಾಡುಗಳು, ಎಮ್ಮಿ ಕರುವಿನ ಹಾಡುಗಳು, ಎಮ್ಮಣಕದ ಪದಗಳು, ಎಮ್ಮಿಯ ಪದಗಳು, ಕೋಣದ ಹಾಡುಗಳು, ಆಡಿನ ಹಾಡುಗಳು, ಕುದರೆಯ ಹಾಡುಗಳು, ಪರಿಸರದ ಪದಗಳು, ಸವಾಲಿನ ಹಾಡುಗಳು, ವಿಚಾರಣೆ ಪದ, ಸ್ವಾಭಿಮಾನದ ಹಾಡುಗಳು, ಹೈನದ ಹಾಡುಗಳೆಂದು ಅಧ್ಯಯನದ ದೃಷ್ಟಿಯಿಂದ ವಿಂಗಡಿಸಿಕೊಳ್ಳಬಹುದು" (ಪ್ರ.ಪು.೩೯).

ಇಷ್ಟೊಂದು ಬಗೆಯ ಹಾಡುಗಳ ಉದಾಹರಣೆಗಳು ಈ ಕೃತಿಯಲ್ಲಿ ದೊರೆಯುವುದೇ ಈ ಕೃತಿಯ ಒಂದು ವೈಶಿಷ್ಟ್ಯವಾಗಿದೆ. ಇವುಗಳ ಸಂಗ್ರಹಕ್ಕಾಗಿ ಅವರು ಊರೂರು ಅಡ್ಡಾಡಿ ೧೮೭ ಹಾಡುಗಾರರಿಗೆ ಭೇಟಿಯಾದ ವಕ್ತಾರರ ಒಂದು ದೀರ್ಘ ಪಟ್ಟಿಯನ್ನು ಕೊನೆಯಲ್ಲಿ ಕೊಟ್ಟಿದ್ದಾರೆ.

ಮ.ಮಾ.ಬೋರಾಳಕರ ಅವರು ಕ್ಷೇತ್ರಕಾರ್ಯ ಕೈಕೊಂಡ ಪ್ರದೇಶಗಳು ಹಳೆಯ ಹೈದ್ರಾಬಾದ ರಾಜ್ಯಕ್ಕೆ ಸೇರಿದ ಪ್ರದೇಶಗಳಾಗಿದ್ದು, ಪ್ರತಿಹಾಡಿನ ಕೊನೆಯಲ್ಲಿ ಹೇಳುವ ಸ್ವರಗತಿಗಳು (ಸೊಲ್ಲು) ಹೀಗಿವೆ: "ಆಣೀ ಪೀಣಿ ಜಾಂದೆ ಸೇರ ಖೊಬ್ಬರಿ ಫಿರ್ಯಾಂದೇ", 'ಆಣಿಗೋ ಪಾಣಿಗೋ ಸೇರ ಖೊಬ್ರಿ ಬೀರಾಲೊ (ಬಿರಾಂದೆ)', 'ಚಕೋತ್ರೆ'. ಚಕೋತ್ರೆ ಎನ್ನುವ ಪದವೊಂದೇ ಸ್ವರಗತಿಯಾಗಿ ಬರುತ್ತಿರುವುದು ಯಾವ ಪ್ರದೇಶದ ಹಾಡು ಎಂಬುದು ಗೊತ್ತಾಗುವುದಿಲ್ಲ; ಅದರ ಅರ್ಥವೂ ಹೊತ್ತಾಗುತ್ತಿಲ್ಲ. 'ಫಿರ್ಯಾಂದೇ, ಬೀರಾಲೋ, ಬಿರಾಂದೆ' ಈ ಪದಗಳನ್ನು ನೋಡಿದರೆ ಬಹುಶಃ ಇವೆಲ್ಲ 'ಬೀರಲಿ>ಬೀರಲ್ಯೋ' ಪದಗಳ ಕೆಟ್ಟ ರೂಪಗಳಾಗಿರುವಂತಿವೆ. 'ಸೇರ ಕೊಬ್ಬರಿ ಬೀರಲಿ(ಬೀರಲ್ಯೋ) ಎಂದಿರುವಂತೆ ತೋರುತ್ತದೆ. ಡಾ. ಎಂ.ಜಿ. ಬಿರಾದಾರ ಅವರು ಉಲ್ಲೇಖಿಸಿದ ಒಂದು ಹಾಡಿನ ಕೊನೆಯಲ್ಲಿ 'ಕೊಬ್ಬರಿ ಬಟ್ಟಲಾ ಬಾಯಾಗೋ' ಎಂದಿರುವುದನ್ನು ಗಮನಿಸಬೇಕು.

ಈ ಹಾಡುಗಳನ್ನು ಹಾಡುವವರು ಮಕ್ಕಳೇ ಆಗಿರುವುದರಿಂದ ಇಲ್ಲೂ ಪ್ರಾಸಗಳೇ ಜೀವಾಳವಾಗಿ ಕಾಣುತ್ತವೆ. ದನಗಳಿಗೆ ಬೆಳಗುವ ಕ್ರಿಯೇ ಸಾಂಪ್ರದಾಯಿಕ ಕ್ರಿಯೆಯಾದರೂ ಮಕ್ಕಳ ರಂಜನೆ ಎದ್ದು ಕಾಣುತ್ತದೆ. ಭಾಷಾ ಮೆರವಣಿಗೆ ಈ ಹಾಡುಗಳಲ್ಲಿ ಎದ್ದುಕಾಣುವ ಸಂಗತಿ. ಉದಾಹರಣೆಗೆ:

ಕರಿ ಆಕಳು ಕಾಮನ ಕಂಟಿ
ಬಿಳಿ ಆಕಳು ಭೀಮನ ಕಂಟಿ
ಜಗಲಿ ತುಂಬ ದೇವರ ಕೂಡ್ಲ್ಯೋ
ಮುತ್ತಿನಂಥ ಮೂರ್ ಹೋರಿಗೊಳ್ ಹುಟ್ಲ್ಯೋ
ಹೋರಿ ಕೊಳ್ಳಾಗ ಗೆಜ್ಜಿ ಕಟ್ಲ್ಯೋ
ಗೆಜ್ಜಿ ಬಾಮರಿಗಿ ಕೊಟ್ಟ
ಬಾಮರ ನೆಂಟ ನಮ್ಮೂರಿಗಿ ಹೊಂಟ
ಕಾಲ ಜಾರಿ ಬಿದ್ದಾನೋ
ಕೈಯೂರಿ ಎದ್ದಾನೋ
ಅವನೀಗ ಏನ ಧಾಡಿ
ಮೊಣಕಾಲ ಧಾಡಿ
ಆಣಿಗೋ ಪೀಣಿಗೋ
ಸೇರ ಖೊಬ್ರಿ ಬಿರಾಲೋ

ಮ.ಮಾ.ಬೋರಳಕರ ಅವರು ಸಂಗ್ರಹಿಸಿ ಸಂಪಾದಿಸಿ ಇಟ್ಟ ಈ ಕೃತಿಯನ್ನು ಬೋರಾಳಕರ ಅವರು ಅಕಸ್ಮಾತ ಲಿಂಗೈಕ್ಯರಾದ್ದರಿಂದ(೨೦೦೩), ಅವರ ಧರ್ಮ ಪತ್ನಿ ಶ್ರೀಮತಿ ಮೀನಾ ಅವರು ಇದನ್ನು ಪ್ರಕಟಿಸುವ ಸಾಹಸ ಮಾಡಿದ್ದಾರೆ. ಇಂತಹ ಕೃತಿಯೊಂದನ್ನು ಉಳಸಿಕೊಟ್ಟ ಶ್ರೇಯಸ್ಸು ಶ್ರೀಮತಿ ಮೀನಾ ಅವರಿಗೆ ಸಲ್ಲಬೇಕು.

* * *

'ಆಣೀಪೀಣಿ' ಹಾಡುಗಳ ಸಂಗ್ರಹಗಳು :

೧೯೮೩ : ಆಣೀಪೀಣಿ, ಅರವಿಂದ ಮಾಲಗತ್ತಿ, –ಶೈಲ ಪ್ರಕಾಶನ, ಮುದ್ದೆಬಿಹಾಳ, ಜಿ. ಬಿಜಾಪೂರ.

೨೦೦೪ : ಬೀದರ ಜಿಲ್ಲೆಯ ಆಣೀಪೀಣೀ ಹಾಡುಗಳು, (ಸಂ) ಮ. ಮಾ. ಬೋರಾಳಕರ, –ಪ್ರಕೃತಿ ಪ್ರಕಾಶನ, ಚಿಟಗುಪ್ಪ, ತಾ. ಹುಮ್ನಾಬಾದ, ಜಿ.ಬೀದರ.

'ಆಣೀಪೀಣಿ' ಕುರಿತ ಲೇಖನಗಳು :

೧೯೫೫ : ಗರತಿಯರ ಮನೆಯಿಂದ, (ಸಂ) ಈಶ್ವರಚಂದ್ರ ಚಿಂತಾಮಣಿ, –ಪಾರ್ವತೀಶ ಪ್ರಕಾಶನ, ಬಿಜಾಪೂರ.(೨೦೧೩ ಎರಡನೇ ಮು.)

೧೯೭೪ : ಜಾನಪದ ಸಾಹಿತ್ಯ ದರ್ಶನ–೧, (ಸಂ) ಡಾ. ಆರ್.ಸಿ.ಹಿರೇಮಠ, –ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೮ : ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯ, ಎಂ.ಎಂ.ಕಲಬುರ್ಗಿ, –ಸಮಾಜ ಪುಸ್ತಕಾಲಯ, ಧಾರವಾಡ.

೧೯೮೭ : ಜಾನಪದ ಜೀವಾಳ, ಡಾ. ಎಂ.ಜಿ.ಬಿರಾದಾರ, –ಪುಸ್ತಕ ಅಕಾಡೆಮಿ, ಕಲಬುರ್ಗಿ.

೧೯೮೮ : ಮಾರ್ಗ–೨, ಡಾ. ಎಂ.ಎಂ.ಕಲಬುರ್ಗಿ, –ಸಪ್ನ ಬುಕ್ ಹೌಸ್, ಬೆಂಗಳೂರು.

* * *

ಭಾಗ–೩

ಜನಪದ ಹಾಡುಗಳು

೧. **ಹೊಲ–ಮನೆ ಕೆಲಸದ ಹಾಡುಗಳು:** ಬೀಸುವ ಹಾಡುಗಳು, ಕುಟ್ಟುವ ಹಾಡುಗಳು, ಹಂತಿಯ ಹಾಡುಗಳು.

೨. **ಪ್ರದರ್ಶನ ಕಲೆಯ ಹಾಡುಗಳು:** ಕೋಲಾಟದ ಹಾಡುಗಳು, ಗೀಗೀ ಹಾಡುಗಳು (ಲಾವಣಿಗಳು).

೩. **ಹಬ್ಬದ ಹಾಡುಗಳು:** ಶೀಗಿ–ಗೌರಿ ಹಾಡುಗಳು, ಹೋಳಿ ಹಾಡುಗಳು, ಮೋಹರಂ ಹಾಡುಗಳು.

೪. **ಸಂಪ್ರದಾಯದ ಹಾಡುಗಳು :** ಶುಭಕಾರ್ಯದ ಹಾಡುಗಳು–ಮದುವೆ, ಮೈನರೆದ, ಸೋಬಾನ, ಕುಪ್ಪಸ, ಜೋಗುಳ.

೫. **ಹೆಣ್ಣುಮಕ್ಕಳ ಜನಪದ ಕಥನ ಗೀತೆಗಳು.**

೬. **ಒಬ್ಬ ವಕ್ತಾರನ ಸಮಗ್ರ ಸಾಹಿತ್ಯ**

ಪ್ರವೇಶಿಕೆ :

ಜನಪದ ಹಾಡುಗಳಿಗೆ ಸಂಬಂದಿಸಿದಂತೆ ಸುಮಾರು ೨೦-೨೧ ನಮೂನೆಯ ಪುಸ್ತಕಗಳು ನನ್ನ ಮುಂದೆ ಗುಂಪುಗಳಾಗಿ ಬಿದ್ದಿವೆ. ಹೊಲ-ಮನೆಯ ಕೆಲಸಗಳ ಜೊತೆಗೆ ಬಳಕೆಯಾಗುವ ಹಾಡುಗಳನ್ನು 'ದುಡಿಮೆಯ ಹಾಡುಗಳು' ಎಂದು, ಅಥವಾ 'ಹೊಲ-ಮನೆಯ ಕೆಲಸದ ಹಾಡುಗಳು' ಎಂದೂ ಗುರುತಿಸಬಹುದಾಗಿದೆ. ವೃತ್ತಿ, ಕೆಲಸ, ಕಸುಬು, ಶ್ರಮ- ಹೀಗೆ ಬೇರೆ ಬೇರೆ ವಿಶೇಷಣಗಳನ್ನು ಹಚ್ಚಿ ಈ ಹಾಡುಗಳನ್ನು ಕರೆಯಬಹುದಾಗಿದೆ. ಹೆಣ್ಣುಮಕ್ಕಳು ಹಾಡುವ ತ್ರಿಪದಿಗಳ ಸಂಗ್ರಹಗಳೆಲ್ಲ ಬೇರೆ ಬೇರೆ ಕಾವ್ಯಾತ್ಮಕ ಹೆಸರುಗಳಿಂದ ಪ್ರಕಟವಾಗಿವೆ. ಅವೆಲ್ಲ ಬೀಸುವ ಕಾಲಕ್ಕೆ ಬಳಸುವ ತ್ರಿಪದಿಗಳಾಗಿವೆ. ಆದರೆ ಯಾವೊಂದು ಸಂಗ್ರಹವೂ 'ಬೀಸುವ ಹಾಡುಗಳು' ಎಂದು ಕರೆಸಿಕೊಂಡಿಲ್ಲ. ಸಮುದ್ರ ತೀರದ ಪ್ರದೇಶಗಳಲ್ಲಿ ಭತ್ತದಿಂದ ಕಾಳುಗಳನ್ನು ಬೇರೆ ಮಾಡುವ ಕ್ರಿಯೆಯಲ್ಲಿ ತೊಡಗುವ ಹೆಣ್ಣುಮಕ್ಕಳು ಬಳಸುವುದು ತ್ರಿಪದಿಗಳನ್ನೇ. ಇವನ್ನು 'ಕುಟ್ಟುವ ಹಾಡುಗಳು' ಅಥವಾ 'ಒನಕೆವಾಡುಗಳು' ಎಂದು ಕರೆಯಲಾಗುತ್ತದೆ. ಗಂಡುಮಕ್ಕಳು ಬಳಸುವ ತ್ರಿಪದಿಗಳು ಹುಟ್ಟುವುದು ಮತ್ತು ಬಳಕೆಯಾಗುವುದು ಹಂತಿಯ ಸಂದರ್ಭದಲ್ಲಿ. ಒಕ್ಕಲುತನಕ್ಕೆ ಸಂಬಂಧಿಸಿದ ಇತರ ಕೆಲಸಗಳಲ್ಲಿ ಮತ್ತು ಎತ್ತುಗಳ ಮೆರವಣಿಗೆಯಂಥ ಉತ್ಸವದ ಸಂದರ್ಭಗಳಲ್ಲಿ ಅವುಗಳನ್ನು ಬಳಸಲಾಗುತ್ತದೆ. 'ಹಂತಿಯ ಹಾಡುಗಳು' ಎಂಬ ಶೀರ್ಷಿಕೆಯಡಿಯಲ್ಲಿ ಕೃತಿಗಳು ಪ್ರಕಟವಾಗಿವೆ.

ಹಾಗೆಯೇ ಗಮನಿಸುತ್ತ ಹೋದರೆ ಕೆಲವು ಹಾಡುಗಳ ಸಂಗ್ರಹಗಳು ಹಬ್ಬಗಳನ್ನು ನಿರ್ದೇಶಿಸುತ್ತವೆ-ಹೋಳಿ ಹಾಡುಗಳು, ಮೋಹರಮ್ ಹಾಡುಗಳು, ಶೀಗಿ ಗೌರಿ ಹಾಡುಗಳು, ಅಂಟಿಗೆ ಪಂಟಿಗೆ ಹಾಡುಗಳು. ಹಾಡುವಾಗ ಬಳಸುವ ವಾದ್ಯಗಳ ಹೆಸರುಗಳ ಮೇಲೆ ಕೆಲವು ಹಾಡುಗಳ ಪ್ರಕಾರಗಳು ಪ್ರಸಿದ್ಧವಾಗಿವೆ: ಚೌಡಿಕೆ ಹಾಡುಗಳು, ಗುಮಟೆಯ ಪದಗಳು, ಡೊಳ್ಳಿನ ಪದಗಳು ಮುಂತಾದವು. ಕೆಲವು ಬಳಕೆಯಾಗುವ ಕಲೆಗಳನ್ನು ನಿರ್ದೇಶಿಸುತ್ತವೆ: ಕೋಲಾಟದ ಪದಗಳು, ಭುಲಾಯಿ ಪದಗಳು. ಇನ್ನು ಕೆಲವು ಹಾಡುಗಳ ಛಂದಸ್ಸನ್ನು ನಿರ್ದೇಶಿಸುತ್ತವೆ: ಚೌಪದನಗಳು, ದುಂದುಮೆಗಳು ಮುಂತಾದವು. ಇವುಗಳನ್ನು ಕುರಿತು ಬಂದ ಕೃತಿಗಳನ್ನು ಮುಂದಿಟ್ಟುಕೊಂಡು, ಈ ಸಾಹಿತ್ಯದ ಬಳಕೆ, ಪ್ರಕಟನೆ, ಅಧ್ಯಯನಗಳು ನಡೆದ ಇತಿಹಾಸವನ್ನು ಅವಲೋಕಿಸಬಹುದಾಗಿದೆ.

ಸಂಪ್ರದಾಯಕ್ಕೆ ಸಂಬಂಧಿಸಿದ ಅನೇಕ ನಮೂನೆಯ ಹೆಣ್ಣುಮಕ್ಕಳ ಹಾಡುಗಳು ಪ್ರತ್ಯೇಕ ಪ್ರತ್ಯೇಕವಾಗಿ ಪುಸ್ತಕಗಳ ರೂಪಗಳಲ್ಲಿ ಪ್ರಕಟವಾಗಿಲ್ಲ. ಕರ್ನಾಟಕದ ಎಲ್ಲ ಭಾಗದಿಂದಲೂ ಪ್ರಕಟವಾದ ಕೃತಿಗಳಲ್ಲಿ 'ಸಂಪ್ರದಾಯದ ಹಾಡುಗಳು' ಒಟ್ಟಿಗೆ ಒಂದೊಂದೇ ಕೃತಿಯಲ್ಲಿ ಸೇರಿವೆ. ಆಯಾ ಕೃತಿಗಳ ಪರಿವಿಡಿಯಲ್ಲಿ ಮಾತ್ರ ಸಂಪ್ರದಾಯದ ಹಾಡುಗಳನ್ನು

ಬೇರೆ ಬೇರೆ ಮಾಡಿ, ವಿಭಾಗಿಸಿದ್ದನ್ನು ಕಾಣುತ್ತವೆ.

ಎಲ್ಲಕ್ಕಿಂತ ಅತ್ಯಂತ ಹೆಚ್ಚಿನ ಕೃತಿಗಳು ಕಾಣುತ್ತಿರುವುದು 'ಕಥನ ಕಾವ್ಯಗಳು' ಪ್ರಕಾರಕ್ಕೆ ಸಂಬಂಧಿಸಿವೆ. ಇವೆಲ್ಲ ಬೇರೆ ಬೇರೆ ಸಂಪ್ರದಾಯಗಳಲ್ಲಿ, ಸಮಯ ದೊರೆತಾಗ ಹಾಡುವ ಹಾಡುಗಳಾಗಿವೆ. ಕೌಟುಂಬಿಕ, ಸಾಮಾಜಿಕ ವಸ್ತುವುಳ್ಳ ಹಾಡುಗಳು ಹೆಣ್ಣುಮಕ್ಕಳು ಹಾಡುವ ಹಾಡುಗಳಾಗಿವೆ. ಅವರಿಗೆ ಆಯಾ ಸಂಪ್ರದಾಯದ ಸಂದರ್ಭಗಳಲ್ಲಿ, ಅಥವಾ ಹೊಲ-ಮನೆಯ ದುಡಿಮೆಯ ಸಂದರ್ಭಗಳಲ್ಲಿ ಸಮಯವಕಾಶ ದೊರೆತರೆ ಈ ಹಾಡುಗಳನ್ನು ಹಾಡಿಕೊಳ್ಳುತ್ತಾರೆ. ಇವುಗಳಲ್ಲಿ ಹೆಣ್ಣುಮಕ್ಕಳೆ ಹಾಡುವ ಕೆಲವೊಂದು ದೀರ್ಘ ಕಥಾನಕಗಳನ್ನೂ ಸೇರಿಸಬಹುದಾಗಿದೆ. ಹೀಗಾಗಿ ಒಟ್ಟು ಈ ವಿಭಾಗವನ್ನು 'ಹೆಣ್ಣುಮಕ್ಕಳು ಹಾಡುವ ಕಥನ ಗೀತೆಗಳು' ಎಂದಿಟ್ಟುಕೊಳ್ಳಲು ಅಡ್ಡಿಯಿಲ್ಲ.

ಇನ್ನು ವೃತ್ತಿಗಾಯಕರ ಕಾವ್ಯಗಳನ್ನು ಎರಡು ಪ್ರಕಾರಗಳಲ್ಲಿ ವಿಭಾಗಿಸಿಕೊಳ್ಳುವುದು ಅನಿವಾರ್ಯವಾಗಿದೆ. ಖಂಡ ಕಾವ್ಯಗಳದು ಒಂದು ಪ್ರಕಾರ ಮಾಡಿಕೊಂಡು ೧೦೦-೧೫೦ ಪುಟಗಳ ವ್ಯಾಪ್ತಿಯಲ್ಲಿ ಬರುವ ವೃತ್ತಿಗಾಯಕರ ಹಾಡುಗಳನ್ನು ಹೀಗೆ 'ಖಂಡಕಾವ್ಯಗಳು' ಎಂದು ಗುರುತಿಸಬಹುದಾಗಿದೆ. ಇನ್ನು ಇದಕ್ಕಿಂತಲೂ ದೀರ್ಘವಾದ ಕಾವ್ಯಗಳನ್ನು 'ಮೌಖಿಕ ಮಹಾಕಾವ್ಯಗಳು' ಎಂದು ಗುರುತಿಸುವ ಪರಿಪಾಠ ಈಗಾಗಲೇ ಕರ್ನಾಟಕದಲ್ಲಿ ಕಾಣಿಸುತ್ತದೆ.

ಇನ್ನು ಕೆಲವು ವಿಶೇಷ ಸಂಗ್ರಹಗಳು ಕಾಣುತ್ತಿವೆ; ಅವೆಲ್ಲ ಪ್ರತಿಭಾವಂತರಾದ ಜನಪದ ಸಾಹಿತ್ಯದ ವಕ್ತಾರರ ಸಮಗ್ರ ಸಂಪುಟಗಳು. ಇವು ವಿಶೇಷವಾಗಿ ಹೆಣ್ಣುಮಕ್ಕಳ ಸಂಗ್ರಹಗಳಾಗಿ ಕಾಣುತ್ತಿವೆ. ಲಾವಣಿ-ಗೀಗೀ ಹಾಡುಗಳನ್ನು ಒಬ್ಬ ಕವಿ ರಚಿಸಿದ ಒಂದೆರಡು ಸಂಗ್ರಹಗಳು ಆಯಾ ಕವಿಯ ಹೆಸರಿಗೆ ಪ್ರಕಟವಾಗಿದ್ದು, ಅವನ್ನು ಲಾವಣಿ ಅಧ್ಯಾಯದಲ್ಲೆ ಚರ್ಚಿಸಲಾಗಿದೆ. ಇನ್ನೂ ಕೆಲವು ವಕ್ತಾರರ ಹೆಸರಿನಲ್ಲಿ ಕಥೆಗಳ ಸಂಗ್ರಹಗಳು ಪ್ರಕಟವಾಗಿದ್ದು, ಅವನ್ನು ಕಥೆಗಳ ಅಧ್ಯಾಯದಲ್ಲೆ ವಿವರಿಸಲಾಗಿದೆ. ಇನ್ನು ಹಲವಾರು ನಮೂನೆಯ ಹಾಡುಗಳು, ಗಾದೆ, ಒಗಟು, ಒಡಪು, ಮಕ್ಕಳ ಹಾಡುಗಳು ಮುಂತಾದವುಗಳನ್ನು ಒಟ್ಟಿಗೆ ಒಬ್ಬರಿಂದ ಸಂಗ್ರಹಿಸಿ ಪ್ರಕಟಿಸಿದ ಕೃತಿಗಳು ಕಾಣುತ್ತಿವೆ. ಅಂಥವುಗಳನ್ನು ಒಂದು ಅಧ್ಯಾಯದಡಿ ಚರ್ಚಿಸಬಹುದಾಗಿದೆ.

ಕನ್ನಡದಲ್ಲಿ ಪ್ರಕಟವಾದ ಕೃತಿಗಳನ್ನು ಗಮನಿಸಿ ಅವುಗಳನ್ನು ಹೀಗೆ ವಿಭಾಗಿಸಿಕೊಳ್ಳಬಹುದಾಗಿದೆ:

೧. **ಹೊಲ-ಮನೆ ಕೆಲಸದ ಹಾಡುಗಳು:** ಬೀಸುವ ಹಾಡುಗಳು, ಕುಟ್ಟುವ ಹಾಡುಗಳು, ಹಂತಿಯ ಹಾಡುಗಳು.

೨. **ಪ್ರದರ್ಶನ ಕಲೆಯ ಹಾಡುಗಳು:** ಕೋಲಾಟದ ಹಾಡುಗಳು, ಗೀಗೀ ಹಾಡುಗಳು (ಲಾವಣಿಗಳು).

೩. **ಹಬ್ಬದ ಹಾಡುಗಳು:** ಶೀಗಿ–ಗೌರಿ ಹಾಡುಗಳು, ಹೋಳಿ ಹಾಡುಗಳು, ಮೋಹರಂ ಹಾಡುಗಳು.

೪. **ಸಂಪ್ರದಾಯದ ಹಾಡುಗಳು** : ಶುಭಕಾರ್ಯದ ಹಾಡುಗಳು–ಮದುವೆ, ಮೈನರೆದ, ಸೋಬಾನ, ಕುಪ್ಪಸ, ಜೋಗುಳ.

೫. **ಹೆಣ್ಣುಮಕ್ಕಳ ಜನಪದ ಕಥನ ಗೀತೆಗಳು.**

೬. **ವೃತ್ತಿಗಾಯಕರ ಹಾಡುಗಳು** : ಖಂಡಕಾವ್ಯಗಳು, ಮೌಖಿಕ ಮಹಾಕಾವ್ಯಗಳು.

೭. ಒಬ್ಬ ವಕ್ತಾರನ ಸಮಗ್ರ ಸಾಹಿತ್ಯ.

* * *

೧. ಹೊಲ-ಮನೆ ಕೆಲಸದ ಹಾಡುಗಳು

೧. ಬೀಸುವ ಹಾಡುಗಳು :

ಕನ್ನಡ ಸಾಹಿತ್ಯದಲ್ಲಿ ಪಂಪಯುಗವು ಪ್ರಮುಖವಾಗಿರುವಂತೆ ಜನಪದ ಸಾಹಿತ್ಯ ಚರಿತ್ರೆಯಲ್ಲಿ ಹಲಸಂಗಿ ಗೆಳಯರ ಗುಂಪಿನ ಯುಗ ಮಹತ್ವದ್ದು. ಅದಕ್ಕಿಂತ ಮುಂಚಿನ ಪ್ರಯತ್ನಗಳು ಚಲನೆಯ ಹೆಜ್ಜೆ ಗುರುತುಗಳು. ಒಂದು ವಿಮಾನ ಚಲಿಸಲು ಪ್ರಾರಂಭಿಸಿ, ಚಲನೆಯ ತೀವ್ರತೆಯನ್ನು ಹೆಚ್ಚಿಸುತ್ತ, ಯಾವುದೋ ಒಂದು ಕ್ಷಣದಲ್ಲಿ ಅದು ಟೇಕ ಆಫ್ (ಉಡಾವಣೆ) ಆಗುವಂತೆ ಹಲಸಂಗಿ ಗೆಳೆಯರ ಗುಂಪಿನಿಂದ **'ಗರತಿಯ ಹಾಡು'** ಕೃತಿ(೧೯೩೧) ಪ್ರಕಟನೆ ಆದಂತೆ ತೋರುತ್ತದೆ.

೧೮ನೇ ಶತಮಾನದಲ್ಲಿಯೇ ಪಾಶ್ಚಾತ್ಯರಿಂದ ಭಾರತದಲ್ಲಿ ಜಾನಪದ ಸಾಹಿತ್ಯ ಸಂಗ್ರಹ ಕಾರ್ಯ ಮೊದಲಾಯಿತು. ೧೯೦೦ ರ ನಂತರ ಸು. ೧೯೨೦ ರ ಸುಮಾರಿಗೆ ವ್ಯಾಪಕವಾಗಿ ಭಾರತದ ತುಂಬ ಆಯಾ ನಾಡಿನ ಆಸಕ್ತ ದೇಶಪ್ರೇಮಿಗಳೂ ಸಾಹಿತ್ಯಪ್ರಿಯರೂ ಜನಪದ ಸಾಹಿತ್ಯದ ಸಂಗ್ರಹ ಪ್ರಕಟಣೆಗಳ ಕಡೆಗೆ ಗಮನಹರಿಸಿದರು.

ಕನ್ನಡದಲ್ಲಿ ಜನಪದ ಸಾಹಿತ್ಯ ಸಂಗ್ರಹಿಸಿ ಪ್ರಕಟಿಸಿದ ಹಲಸಂಗಿ ಗೆಳೆಯರ ಗುಂಪಿನ ಪಾತ್ರ ಬಹುಪ್ರಮುಖವಾದುದು. ಈ ಗುಂಪಿನ ಜೀವನಾಡಿಯಂತಿದ್ದ ಚೆನ್ನಮಲ್ಲಪ್ಪನವರು (ಮಧುರಚೆನ್ನರು) ೧೯೨೦-೨೧ ರ ಸುಮಾರಿನಿಂದಲೇ ಈ ಸಾಹಿತ್ಯದ ಬಗೆಗೆ ಆಸಕ್ತಿವುಳ್ಳವರಾಗಿದ್ದರು. ಇದಕ್ಕೆ ಮುಖ್ಯಕಾರಣವೆಂದರೆ ಹಲಸಂಗಿಯಲ್ಲಿ ಖಾಜಾಬಾಯಿ ಅವರಂತಹ ಪ್ರಭಾವಿ ಜನಪದ ಕವಿಗಳು ಆಗಿಹೋಗಿದ್ದರು. ಲಾವಣಿಗಳನ್ನು ಹಾಡುವ ಹಲವಾರು ಜನ ಕಲಾವಿದರು ಹಲಸಂಗಿಯಲ್ಲಿ ಇದ್ದರು. ಜೊತೆಗೆ ಯುವಕರಾದ ಮಧುರಚೆನ್ನ ಮತ್ತವರ ಗೆಳೆಯರು ದೇಶಪ್ರೇಮಿಗಳಾಗಿದ್ದರು. ಆಗ ಭಾರತದ ತುಂಬ ಸ್ವಾತಂತ್ರ್ಯ ಚಳುವಳಿಗಳು ಪ್ರಾರಂಭವಾಗಿದ್ದವು. ಗಾಂಧೀಜಿಯವರು ಭಾರತಕ್ಕೆ ಬಂದುದದರಿಂದ ನಮ್ಮ ಜನಗಳಲ್ಲಿ ದೇಶಪ್ರೇಮದ ಹುಮ್ಮಸ್ಸು ತುಂಬಿತ್ತು.

ಹಲಸಂಗಿ ಗೆಳೆಯರ ಗುಂಪು ಕೆಲಸ ಮಾಡಿದ್ದು ಭಾರತ ದೇಶವು ಪಾರತಂತ್ರ್ಯದಲ್ಲಿದ್ದ ಕಾಲದಲ್ಲಿ. ೧೯೨೦-೨೧ ರಿಂದ ೧೯೩೦-೩೨ ವರೆಗೆ ಗಾಂಧೀಜಿಯವರು ಭಾರತ

ಸ್ವಾತಂತ್ರ್ಯಕ್ಕಾಗಿ ನಡೆಸಿದ ಅಸಹಕಾರ ಚಳುವಳಿಯಿಂದ ಹಿಡಿದು ಉಪ್ಪಿನ ಸತ್ಯಾಗ್ರಹದವರೆಗಿನ ಅವಧಿಯಲ್ಲಿ ಭಾರತದಲ್ಲಿ ರಾಷ್ಟ್ರೀಯ ಭಾವನೆ ಒಡಮೂಡಿ ಬಂದಿತ್ತು. ಏನೇ ಕೆಲಸ ನಡೆದರೂ ಅದು ರಾಷ್ಟ್ರೀಯ ಭಾವನೆಯ ಹಿನ್ನೆಲೆಯಲ್ಲಿಯೇ ನಡೆಯುತ್ತಿತ್ತು.

೧೯೨೦ ರ ಸುಮಾರಿಗೆ ಇಡೀ ಇಂಡಿಯಾ ದೇಶದಲ್ಲಿ ಪ್ರಾರಂಭವಾದ ನವೋದಯ ಸಾಹಿತ್ಯ ಚಳುವಳಿಯ ಹಿಂದೆ ಅತ್ಯಂತ ಬಲಿಷ್ಠವಾಗಿ ಕೆಲಸ ಮಾಡಿದ್ದು ರಾಷ್ಟ್ರೀಯ ಭಾವನೆಯೆ. ಹೀಗೆ ಮೂಡಿ ಬಂದ ಸ್ವದೇಶಿ ಭಾವನೆಯ ಜೊತೆಗೆ ಆದರ್ಶ ಮತ್ತು ಆಧ್ಯಾತ್ಮಗಳು ಕೂಡ ಆಗಿನ ಮುಖ್ಯ ಭಾವಧಾರೆಗಳಾಗಿದ್ದವು.

ಒಂದರ್ಥದಲ್ಲಿ ದೇಶದ ಆಗಿನ ಪ್ರಮುಖ ಭಾವನೆಗಳೆ ಹಲಸಂಗಿ ಗೆಳೆಯರ ಗುಂಪಿನ ಲಕ್ಷಣಗಳಾಗಿದ್ದವು. ಆ ಗುಂಪಿನ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದಾಗಿದೆ:

೧. ಹಲಸಂಗಿ ಗೆಳೆಯರ ಗುಂಪಿನ ಸದಸ್ಯರೆಲ್ಲರೂ ಆಧ್ಯಾತ್ಮದ ಕಡೆಗೆ ಒಲವುಳ್ಳವರಾಗಿದ್ದು, ಆದರ್ಶವಾದಿಗಳಾಗಿದ್ದರು.

೨. ೧೯೨೨ ರಲ್ಲಿ ಶಾರದಾ ವಾಚನಾಲಯವನ್ನು ಸ್ಥಾಪನೆ ಮಾಡಿದರು.

೩. ಆಗಲೇ 'ಮೊಗ್ಗು' ಎಂಬ ಕೈಬರಹದ ಸಾಪ್ತಾಹಿಕವನ್ನು ಪ್ರಾರಂಭಿಸಿದರು.

೪. ನವೋದಯ ಭಾವನೆಯ ಕವಿತೆಗಳನ್ನು ಬರೆಯುತ್ತಿದ್ದರು (ಮಧುರಚೆನ್ನ, ಪಿ.ಧೂಲಾಸಾಹೇಬ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಎಲ್ಲರೂ ಬಾಲ್ಯದಲ್ಲಿ ಕವಿತೆಗಳನ್ನು ರಚಿಸುತ್ತಾರೆ).

೪. ಜನಪದ ಸಾಹಿತ್ಯದ ಬಗೆಗೆ ಪ್ರೀತಿವುಳ್ಳವರಾಗಿದ್ದರು.

೫. ೧೯೨೪ ರಲ್ಲಿ ಬೆಳಗಾಂವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಹಲಸಂಗಿ ಗೆಳೆಯರ ಗುಂಪಿನ ಅನೇಕ ಯುವಕರು ಸ್ವಯಂಸೇವಕರಾಗಿ ಭಾಗವಹಿಸುತ್ತಾರೆ.

೬. ಕಾಪಸೆ ರೇವಪ್ಪ ಅವರು ಹರ್ಡೇಕರ ಮಂಜಪ್ಪನವರ ಹರಿಹರ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಾರೆ. ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರುತ್ತಾರೆ.

೭. ಪಿ. ಧೂಲಾ ಸಾಹೇಬರಂತೂ ಭಾರತಕ್ಕೆ ಸ್ವಾತಂತ್ರ್ಯ ದೊರಕುವವರೆಗೆ ಮದುವೆಯಾಗುವುದಿಲ್ಲ, ತಲೆಯ ಮೇಲಿನ ಜಡೆ ತಗೆಯುವುದಿಲ್ಲ ಎಂಬ ಪ್ರತಿಜ್ಞೆಯನ್ನು ಮಾಡಿ ದೇಶಸೇವೆಗಾಗಿಯೇ ನಿಲ್ಲುತ್ತಾರೆ. ಹಾಗೂ ಬಾಗಲಕೋಟೆಯ ಹಿಂದುಸ್ತಾನಿ ಸೇವಾದಲವನ್ನು ಸೇರುತ್ತಾರೆ. ಅಲ್ಲಿ ಶ್ರೀ ಮಂಗಳವೇಢೆ ಶ್ರೀನಿವಾಸರಾಯರು ನಡೆಸುತ್ತಿದ್ದ 'ಕನ್ನಡಿಗ' ಎಂಬ ಪತ್ರಿಕೆಯಲ್ಲಿ ಕೆಲ ದಿವಸಗಳವರೆಗೆ ಕೆಲಸ ಮಾಡುತ್ತಾರೆ.

೮. ಮಧುರಚೆನ್ನರಂತೂ ಅರವಿಂದರ ಭಕ್ತರು. ಅನುಭಾವಿಗಳು. ಆಧ್ಯಾತ್ಮ ಚಿಂತಕರು. ಆದರ್ಶವಾದಿಗಳು, ರಾಷ್ಟ್ರಪ್ರೇಮಿಗಳು. ನಾಡಹಬ್ಬ, ಗಣೇಶೋತ್ಸವಗಳನ್ನು ಗೆಳೆಯರೊಂದಿಗೆ ಸೇರಿಕೊಂಡು ಆಚರಿಸುತ್ತಿದ್ದರು.

ಮಧುರಚೆನ್ನ ಮತ್ತವರ ಗೆಳೆಯರೆಲ್ಲರೂ ಬಹುಮುಖ ಪ್ರತಿಭಾವಂತರಾಗಿದ್ದರು. ಅವರ ಗಮನವು ದೇಸಿ ಸಾಹಿತ್ಯ ಸಂಸ್ಕೃತಿಗಳ ಕಡೆಗೆ ಹರಿಯಲು ಬಹುಮುಖ್ಯ ಕಾರಣಗಳಲ್ಲಿ ಒಂದೆಂದರೆ ಅದು ಪಾರತಂತ್ರ್ಯದ ಅರಿವು ಮತ್ತು ದೇಶಪ್ರೇಮದ ಉತ್ಸಾಹ.

ಹಲಸಂಗಿ ಚೆನ್ನಮಲ್ಲಪ್ಪ ಮತ್ತು ಪಿ.ಧೂಲಾ ಸಾಹೇಬರು ವಾರಗೆಯವರು. "ಪಿ.ಧೂಲಾಸಾಹೇಬರು ಜನಿಸಿದ್ದು ೧೯೦೧ರಲ್ಲಿ. ಅವರೇ ಶತಮಾನವನ್ನು ಪ್ರಾರಂಭಿಸಿದವರು. ಅವರ ನಂತರದ ಎರಡು ವರ್ಷಕ್ಕೆ ಮಧುರಚೆನ್ನರು (೧೯೦೩), ಆ ಮೇಲೆ ಸಿಂಪಿ ಲಿಂಗಣ್ಣನವರು (೧೯೦೫), ನಂತರದಲ್ಲಿ ಕಾಪಸೆ ರೇವಪ್ಪನವರು (೧೯೦೭)." (ಪಟೇಲ ಧೂಲಾಸಾಹೇಬ, ಪ್ರ.ಪುಟ ೯).

೧೯೨೧ ನೇ ಇಸ್ವಿಯಲ್ಲಿ ಮಧುರಚೆನ್ನ ಮತ್ತು ಪಿ.ಧೂಲಾಸಾಹೇಬರು ಮುಲ್ಕಿ ಪರೀಕ್ಷೆಯಲ್ಲಿ ಪಾಸಾದರು. ಆಗ ಪಿ. ಧೂಲಾಸಾಹೇಬರಿಗೆ ೨೦ ವರ್ಷ; ಮಧುರಚೆನ್ನರಿಗೆ ೧೮ ವರ್ಷ. ಈ ಸಮಯದಲ್ಲಿ ಹಲಸಂಗಿ ಗೆಳೆಯರು ಸುಮಾರು ೨೦ರ ಸುತ್ತಮುತ್ತಲಿನ ಪ್ರೌಢಾವಸ್ಥೆಗೆ ತಲುಪಿದವರು. ಹಲಸಂಗಿಯಲ್ಲಿ ಅದೇ ಖಾಜಾಬಾಯಿ ಎಂಬ ಪ್ರಸಿದ್ಧ ಲಾವಣಿಕಾರರು ಆಗಿ ಹೋಗಿದ್ದರು. ಅವರ ಹಾಡುಗಳನ್ನು ಹಾಡುವ ಕಲಾವಿದರು ಹಲಸಂಗಿಯಲ್ಲಿ ಇದ್ದು, ಈ ತರುಣರ ಮೇಲೆ ಸಹಜವಾಗಿಯೇ ಖಾಜಾಬಾಯಿ ಅವರ ಲಾವಣಿಗಳು ಪ್ರಭಾವ ಬೀರದ್ದವು. ಹೀಗೆ ಭಾರತದ ಸ್ವಾತಂತ್ರ್ಯ ಚಳುವಳಿಯ ಸ್ಪಂಧನ, ಖಾಜಾಬಾಯಿ ಅವರ ಲಾವಣಿಗಳ ಆಕರ್ಷಣೆ ಇವುಗಳಿಂದಾಗಿ ಹಲಸಂಗಿಯ ತರುಣರಲ್ಲಿ ಜನಪದ ಸಾಹಿತ್ಯದ ಪ್ರೇಮ ಅಂಕುರಿಸಿತು.

೧೯೨೧ರಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದ ಮಧುರಚೆನ್ನ ಮತ್ತು ಪಿ. ಧೂಲಾ ಸಾಹೇಬರು ಇಂಗ್ಲೀಷ ಕಲಿಯಲು ಬಿಜಾಪೂರಕ್ಕೆ ಹೋದರು. ಅಲ್ಲಿಯೇ ಬೇಂದ್ರೆ ಅವರ ಭೇಟಿ, ಪರಿಚಯವಾಯಿತು. ನಂತರ ಕೊನೆಯವರೆಗೂ ಮಧುರಚೆನ್ನ ಮತ್ತು ಬೇಂದ್ರೆ ಅವರು ಸಹೋದರರಂತೆ ನಡೆದುಕೊಂಡರು. ಧಾರವಾಡದಲ್ಲಿ ಬೇಂದ್ರೆಯವರು 'ಗೆಳೆಯರ ಗುಂಪು' ಕಟ್ಟಿಕೊಂಡಾಗ ಮಧುರಚೆನ್ನರು ಹಲಸಂಗಿಯಲ್ಲಿ 'ಗೆಳೆಯರ ಬಳಗ' ಕಟ್ಟಿಕೊಂಡರು. ೧೯೨೨-೨೩ರಲ್ಲಿ 'ಜಯಕರ್ನಾಟಕ' ಎಂಬ ಪತ್ರಿಕೆ ಧಾರವಾಡದಿಂದ ಪ್ರಾರಂಭವಾಯಿತು. ಇದರ ಸಂಪಾದಕರು ಆಲೂರು ವೆಂಕಟರಾಯ ಅವರು. ಮಧುರಚೆನ್ನ ಮತ್ತು ಅವರ ಗೆಳೆಯರು ಈ ಪತ್ರಿಕೆಯ ಜೊತೆಗೆ ನಿಕಟಸಂಬಂಧವನ್ನು ಹೊಂದಿ, ಕವಿತೆ ಮತ್ತು ಕಥೆಗಳನ್ನು 'ಜಯಕರ್ನಾಟಕ' ಪತ್ರಿಕೆಗೆ ಕಳಿಸಲು ತೊಡಗಿದರು.

೧೯೨೩ ರಲ್ಲಿ ಬಿಜಾಪುರದಲ್ಲಿ ೯ನೇ ಸಾಹಿತ್ಯ ಸಮ್ಮೇಳನ ನಡೆಯಿತು. ಅದರಲ್ಲಿ ಮಧುರಚೆನ್ನರು 'ಹಳ್ಳಿಯ ಹಾಡುಗಳು' ಎಂಬ ಪ್ರಬಂಧವನ್ನೂ ಪಿ. ಧೂಲಾಸಾಹೇಬರು 'ಲಾವಣಿಯ ಲಾವಣ್ಯ' ಎಂಬ ಪ್ರಬಂಧವನ್ನೂ ಮಂಡಿಸಿದರು. ಮಧುರಚೆನ್ನರ ಲೇಖನ ೧೯೨೪ರಲ್ಲಿ ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಯಿತು. ಆದರೆ ಪಿ.ಧೂಲಾಸಾಹೇಬರ ಲೇಖನ ಪ್ರಕಟವಾಗದೆ ಈಗ ಅದು ಕೈಗೆ ದೊರೆಯದಂತಾಗಿದೆ ಎಂಬುದು ವಿಷಾದದ ಸಂಗತಿಯಾಗಿದೆ.

ಹಲಸಂಗಿ ಗೆಳೆಯರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಜನಪದ ಹಾಡಿನ ಸಂಗ್ರಹಗಳನ್ನು ಪ್ರಕಟಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ೧೯೩೧ ರಲ್ಲಿ 'ಗರತಿಯ ಹಾಡು', ೧೯೩೩ ರಲ್ಲಿ 'ಜೀವನ ಸಂಗೀತ' ಹಾಗೂ ೧೯೩೫ ರಲ್ಲಿ 'ಮಲ್ಲಿಗೆ ದಂಡೆ' ಎಂಬ ಮೂರು ಸಂಗ್ರಹಗಳನ್ನು ಅವರು ಪ್ರಕಟಿಸಿದರು.

ಅಂದಿನ ಭಾರತೀಯ ಸ್ವದೇಶಿ ಭಾವನೆಗೆ ಮತ್ತು ಸಾಹಿತ್ಯದ ನವೋದಯಕ್ಕೆ ಮೂಲಭೂತವಾಗಿ ಎರಡು ಪ್ರೇರಣೆಗಳು ಮುಖ್ಯವಾಗಿದ್ದವು.

೧. ಬಾಹ್ಯ ಪ್ರೇರಣೆಗಳು.

೨. ಆಂತರಿಕ ಪ್ರೇರಣೆಗಳು.

ಪ್ರಪಂಚದ ವಿವಿಧ ರಾಷ್ಟ್ರಗಳ ಸ್ಥಿತಿಗತಿಗಳ ತಿಳಿವಳಿಕೆ ಹಾಗೂ ಇಂಗ್ಲೀಷ ಸಾಹಿತ್ಯದ ಅಭ್ಯಾಸ ನಮಗೆ ಹೊರಗಿನ ಪ್ರೇರಣೆಗಳಾದರೆ, ದಾಸ್ಯ ಮತ್ತು ಬಂಧನಗಳಿಂದ ಬಿಡುಗಡೆ ಹೊಂದಬೇಕೆಂಬ ಅಭಿಲಾಷೆ, ಅನೇಕ ವೀರರು ಬ್ರಿಟೀಷರ ವಿರುದ್ಧ ಬಂಡೆದ್ದುದು, ಗಾಂಧೀಜಿ ಚಳುವಳಿಗಳು–ಇದರಿಂದುಂಟಾದ ಸ್ವದೇಶಿ ಭಾವನೆ, ಸ್ಥಳೀಯ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗೆಗಿನ ಕಾಳಜಿಗಳು ಆಂತರಿಕ ಪ್ರೇರಣೆಗಳಾಗಿ ನಿಲ್ಲುತ್ತವೆ.

ಇತಿಹಾಸ ನಮಗೆ ಹೇಳಿಕೊಡುವುದೇನೆಂದರೆ ಯಾವಾಗಲೂ ಬಾಹ್ಯ ಪ್ರೇರಣೆಗಳಿಗಿಂತ ಆಂತರಿಕ ಪ್ರೇರಣೆಗಳು ಅತ್ಯಂತ ಬಲಿಷ್ಠವಾಗಿರುತ್ತವೆ ಮತ್ತು ಬದಲಾವಣೆಗೆ ದಾರಿ ಮಾಡಿಕೊಡುತ್ತವೆ ಎಂದು. ಫಿನ್‌ಲ್ಯಾಂಡ್ ಕೇವಲ ೪೦ ಲಕ್ಷದಷ್ಟು ಜನಸಂಖ್ಯೆಯುಳ್ಳ ಒಂದು ಅತಿ ಚಿಕ್ಕ ರಾಷ್ಟ್ರ. ಸುಮಾರು ಆರುವರಿನೂರು ವರ್ಷಗಳವರೆಗೆ (ಕ್ರಿ.ಶ. ೧೧೫೦–೧೮೦೭) ಸ್ವೀಡನ್ನಿನ ದಾಸ್ಯದಲ್ಲಿತ್ತು. ಅಷ್ಟು ದೀರ್ಘಕಾಲದವರೆಗೆ ಸ್ವೀಡಿಶ್ ಭಾಷೆಯೇ ಫಿನ್‌ಲ್ಯಾಂಡಿನ ಆಡಳಿತ, ಶೈಕ್ಷಣಿಕ ಹಾಗೂ ವ್ಯಾವಹಾರಿಕ ಭಾಷೆಯಾಗಿತ್ತು. ಮುಂದೆ (೧೮೦೭ರಲ್ಲಿ) ರಾಜಕೀಯ ಬದಲಾವಣೆಗಳಿಂದಾಗಿ, ಸ್ವೀಡನ್ನಿನಿಂದ ಪಾರಾಗಿ ರಷ್ಯಾ ದೇಶದ ಆಶ್ರಿತ ದೇಶವಾಗಿ ಮುಂದುವರೆಯಿತು. ೧೯೧೭ರಲ್ಲಿ ಸಂಪೂರ್ಣವಾಗಿ ಸ್ವತಂತ್ರವಾಯಿತು. ಹೀಗೆ ನಿರಂತರವಾಗಿ ಫಿನ್‌ಲ್ಯಾಂಡ್ ದಾಸ್ಯವನ್ನು ಅನುಭವಿಸುತ್ತಿರುವಾಗ, ಎರಡು ಸಂಗತಿಗಳು ಫಿನ್‌ಲ್ಯಾಂಡ್‌ನಲ್ಲಿ ಕಾಣಿಸಿಕೊಳ್ಳುತ್ತವೆ :

೧. ಕ್ರಿಶ್ಚಿಯನ್ ಧರ್ಮ ಫಿನ್‌ಲ್ಯಾಂಡ್ ಸೇರಿ ಆ ಜನರ ವಿಚಾರಗಳಲ್ಲಿ ಬದಲಾವಣೆಗಳಾದವು.

೨. ಜಾನಪದ ಸಾಹಿತ್ಯದ ಸಂಗ್ರಹಣೆಗೆ ತೊಡಗುವ ಮೂಲಕವಾಗಿ ಆ ಜನರಲ್ಲಿ ರಾಷ್ಟ್ರೀಯ ಭಾವನೆ ಕುದುರಿತು.

೧೮೩೧ ರಲ್ಲಿ Finnish Literary Society ಸ್ಥಾಪಿತವಾಗಿ ಫಿನಿಷ್ ಭಾಷೆ, ಸಾಹಿತ್ಯ, ಜನಪದ ಸಂರಕ್ಷಣೆಗೆ ಹಾಗೂ ಶಾಸ್ತ್ರೀಯ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿತು. ಇದೇ ಹೊತ್ತಿಗೆ ಲೆನ್ರೂಟ್ ಎಲಿಯಾಸ್ (೧೮೦೨–೧೮೮೪) 'ಕಲೆವಾಲ'(ಜನಪದ ಮಹಾಕಾವ್ಯ) ವನ್ನು ಸಂಪಾದಿಸಿ ಕೊಟ್ಟನು (೧೮೨೭–೧೮೩೫). ಈ ಕಾವ್ಯ ಜನರಲ್ಲಿ ಹೋರಾಟ ಮನೋಭಾವನೆಯನ್ನು ತುಂಬಿತು. ಇದರಿಂದಾಗಿ ಫಿನ್‌ಲ್ಯಾಂಡ್ ಸ್ವತಂತ್ರವಾಗಲು ಕಾರಣವಾಯಿತು. ಫಿನ್‌ಲ್ಯಾಂಡಿನ ಪರಿಸ್ಥಿತಿಯನ್ನು ಗಮನಿಸಿದರೆ ಆ

ಕಾಲದಲ್ಲಿ ತಮ್ಮ ಭಾಷೆಯಲ್ಲಿ ಸಾಹಿತ್ಯ ಇಲ್ಲದ ಕೊರತೆಯನ್ನು ನೀಗಿಸಿಕೊಳ್ಳಲು ಮತ್ತು ಆ ಮೂಲಕ ಸ್ವದೇಶೀ ಭಾವನೆಯನ್ನು ಬೆಳೆಸಿಕೊಳ್ಳಲು ಜನಪದ ಸಾಹಿತ್ಯ ಸಂಗ್ರಹ, ಅದರಲ್ಲೂ 'ಕಲೆವಾಲಾ' ಮಹಾಕಾವ್ಯದ ಪ್ರಕಟಣೆ (೧೮೩೫) ಗಮನಾರ್ಹವಾದ ಕೆಲಸ ಮಾಡಿತು.

ಫಿನಲ್ಯಾಂಡಿನ ಈ ಹಿನ್ನೆಲೆ ಹಲಸಂಗಿ ಗೆಳೆಯರ ಉದ್ದೇಶವನ್ನೂ ಹೇಳುತ್ತದೆ:

೧. ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವುದು.

೨. ಸ್ವದೇಶಿ ಭಾವನೆಯನ್ನು ವ್ಯಕ್ತಪಡಿಸುವುದು.

ಆಗಿನ ಕಾಲದ ಕನ್ನಡ ಸಾಹಿತ್ಯದ ಸ್ಥಿತಿಯನ್ನು ಕುರಿತು "ಜೀವನ ಸಂಗೀತ"ದ ಸಂಗ್ರಹಕಾರರು ಹೀಗೆ ಬರೆಯುತ್ತಾರೆ :

"ಮನುಷ್ಯನು ನಿರಕ್ಷರನಾಗಿದ್ದರೂ ಕೂಡ ಅವನಲ್ಲಿ ಪ್ರತಿಭೆಯು ಉದಯಿಸಿದರೆ ಕಲಿತವರನ್ನು ಕೂಡ ನಾಚಿಸುವ ಕೃತಿಗಳು ಆತನಿಂದ ಹೊರಪಡುವವೆಂಬ ಮಾತು ನವಶಿಕ್ಷಿತರಿಗೆ ಮನವರಿಕೆಯಾಗುವುದಕ್ಕೆ ಈ ಹಳೇ ಲಾವಣಿಗಳು ಸಾಕ್ಷಿಯಾಗಿವೆ. ಆದುದರಿಂದ ಮುಂದೆ ಕವಿಕೋಟಿಗೆ ಸೇರಲೆಳೆಸುವವರು ಪ್ರತಿಭೆಯನ್ನು ಪಡೆದುಕೊಳ್ಳದೆ ಗತ್ಯಂತರವಿಲ್ಲ ಎಂಬುದನ್ನು ಅರಿತುಕೊಳ್ಳುವುದಕ್ಕೂ ಇವು ಸಾಧನಗಳಾಗಿವೆ. ಅಲ್ಲದೆ ವಿದ್ಯಾರಹಿತರು ಕೂಡ ರಸೋನ್ಮೇಷಕ್ಕೆ ಬಂದು ಮುಟ್ಟಿರುವಾಗ ತಾವೇಕೆ ಆ ಸೆಲೆಗೆ ಮುಟ್ಟಬಾರದೆಂಬ ಆಸೆ-ಭರವಸೆಗಳು ಹೊಸಬರಲ್ಲಿ ಹೊರ ಚಿಮ್ಮುವುದಕ್ಕೂ ಇವು ಸಹಕಾರಿಗಳಾಗಿವೆ" (ಪರಿಚಯ-VI). ಈ ಮುಂತಾದ ಮಾತುಗಳಲ್ಲಿ ಜನಪದದ ಉತ್ತಮ ಕಾವ್ಯ ಹೊಸಗನ್ನಡದ ಉತ್ತಮ ಕಾವ್ಯಕ್ಕೆ ದಾರಿಯಾಗಲಿ ಎಂಬ ಅಭಿಲಾಷೆ ಅವರಲ್ಲಿದೆ. ಸಾಹಿತ್ಯದ ನವೋದಯದಲ್ಲಿ ರಾಷ್ಟ್ರದ ನವೋದಯವನ್ನು ಹಂಬಲಿಸುವ ಬಗೆಯಿದು ಎಂಬುದನ್ನು ನಾವು ಮರೆಯುವಂತಿಲ್ಲ.

ಆದರೆ ಹೊಸಗನ್ನಡದ ನವೋದಯ ಸಾಹಿತ್ಯಕ್ಕೆ ಕಾರಣಗಳನ್ನು ಗುರುತಿಸುವಲ್ಲಿ ನಮ್ಮ ಜನ ಹಲಸಂಗಿ ಗೆಳೆಯರ ಕೊಡುಗೆಯನ್ನು ಅಷ್ಟಾಗಿ ಗಮನಿಸಿಲ್ಲ. ಬದಲಾಗಿ, ಬಿ.ಎಂ.ಶ್ರೀ ಅವರ 'ಇಂಗ್ಲೀಷ ಗೀತೆ' ಕೃತಿಯೊಂದೇ ಏನೋ ಅದ್ಭುತ ಮಾಡಿದೆ, ಅದೊಂದರಿಂದಲೇ ನವೋದಯ ಕಾವ್ಯ ಹೊಸಮಾರ್ಗವನ್ನು ಕಂಡುಕೊಂಡಿತು- ಎಂಬ ಮಾತನ್ನು ಆಡುವುದು ಸಾಮಾನ್ಯವಾಗಿ ಕೇಳಿಬರುತ್ತದೆ.

ನಾವು ಈ ಮೇಲೆ ಅವಲೋಕಿಸಿದಂತೆ, ಭಾರತೀಯ ಸಂದರ್ಭದಲ್ಲಿ ನವೋದಯ ಪ್ರಾರಂಭವಾಗಲು-ಗುರುತಿಸಿದ ಬಾಹ್ಯ ಹಾಗೂ ಆಂತರಿಕ ಪ್ರೇರಣೆಗಳಲ್ಲಿ **'ಇಂಗ್ಲೀಷ ಗೀತೆ'** ಯು ಬಾಹ್ಯ ಕಾರಣಗಳಲ್ಲಿ ಒಂದಾದ ಇಂಗ್ಲೀಷ್ ಭಾಷೆ ಹಾಗೂ ಸಾಹಿತ್ಯದ ತಿಳಿವಳಿಕೆಯಲ್ಲಿ ಒಂದು ಸಣ್ಣ ಎಳೆ ಮಾತ್ರ. 'ಇಂಗ್ಲೀಷಿನ ಕಾವ್ಯ ಕನ್ನಡದಲ್ಲಿ ಕಾಣಿಸಿಕೊಂಡದ್ದು' ಎಂಬ ವೈಶಿಷ್ಟ್ಯ ಮಾತ್ರ ಅಲ್ಲಿ ಕಾಣಿಸುತ್ತದೆ. ಮೇಲಾಗಿ ಬಿ.ಎಂ.ಶ್ರೀ ಅವರದೇ ಈ ನಿಟ್ಟಿನಲ್ಲಿ ನಡೆದ ಪ್ರಥಮ ಪ್ರಯತ್ನವೇನೂ ಅಲ್ಲ. ಅವರಿಗಿಂತ ಮುಂಚೆಯೇ ಎಸ್. ಜಿ. ನರಸಿಂಹಾಚಾರ್ಯ, ಪಂಜೇ ಮಂಗೇಶರಾಯ, ಹಟ್ಟಿಯಂಗಡಿ ನಾರಾಯಣರಾಯ

ಇವರೆಲ್ಲ ೧೯೦೦ ರ ಸುಮಾರಿನಲ್ಲೇ ಇಂಗ್ಲೀಷ್ ಗೀತೆಗಳನ್ನು ಕನ್ನಡಕ್ಕೆ ತರುವ ಪ್ರಯತ್ನ ನಡೆಸಿದವರಲ್ಲಿ ಮೊದಲಿಗರು. ಪಂಜೇ ಮಂಗೇಶರಾಯರು ೧೯೦೨ ರಿಂದ ಇಂಗ್ಲೀಷ್ ಗೀತೆಗಳನ್ನು ಕನ್ನಡಕ್ಕೆ ತರಲು ಪ್ರಯತ್ನಿಸಿದರೆ, ೧೮೯೯-೧೯೦೦ ರ ಸುಮಾರಿನಲ್ಲೇ ಹಟ್ಟಿಯಂಗಡಿ ನಾರಾಯಣ ರಾಯರು 'ಆಂಗ್ಲ ಕವಿತಾ ಸಾರ" ಎಂಬ ಸಂಗ್ರಹವನ್ನು ತಂದರು. ಬಿ. ಎಂ. ಶ್ರೀ ಅವರು ೧೯೧೯ ರಲ್ಲಿ ೧೨ ಇಂಗ್ಲೀಷ ಗೀತೆಗಳ ಸಂಗ್ರಹ ತಂದರು. ೧೯೨೧ ರಲ್ಲಿ ಮತ್ತೆ ೧೨ ಗೀತೆಗಳನ್ನು ಸೇರಿಸಿ, ೧೯೨೪ ರಲ್ಲಿ ಮತ್ತೆ ೨೪ ಗೀತೆಗಳನ್ನು ಸೇರಿಸಿ ಪ್ರಕಟಿಸಿದರು. ಅದು ಪೂರ್ಣ ಪ್ರಮಾಣದಲ್ಲಿ ೬೦ ಗೀತೆಗಳೊಂದಿಗೆ ಪ್ರಕಟಗೊಂಡದ್ದು ೧೯೨೬ ರಲ್ಲಿ. ಅದು ಮರು ಮುದ್ರಣ ಪಡೆಯಲು ಮುಂದೆ ೨೬ ವರ್ಷ ಕಾಯಬೇಕಾಯಿತು. ಅಂದರೆ ಕನ್ನಡ ನವೋದಯದ ಸಂದರ್ಭದಲ್ಲಿ ೧೯೫೦ ರವರೆಗೆ ಪೂರ್ಣ ಪ್ರಮಾಣದ ಇಂಗ್ಲೀಷ್ ಗೀತೆಗಳ ಸಂಗ್ರಹದ ಕೇವಲ ಪ್ರಥಮ ಮುದ್ರಣದ ಪ್ರತಿಗಳು ಮಾತ್ರ ಖರ್ಚಾಗಿವೆ. ಮತ್ತೆ ಅದು ಪ್ರಕಟವಾದದ್ದು ನವೋದಯ ಕಾಲ ಮುಗಿದು, ನವ್ಯ ಪ್ರಾರಂಭದ ಹಂತದಲ್ಲಿದ್ದಾಗ ೧೯೫೩ ರಲ್ಲಿ.

ಹಲಸಂಗಿ ಗೆಳೆಯರ ಗುಂಪು ೧೯೩೧ ರಲ್ಲಿ ಪ್ರಕಟಿಸಿದ **'ಗರತಿಯ ಹಾಡು'** ಸ್ವಾತಂತ್ರ್ಯ ಪೂರ್ವದಲ್ಲಿ ನವೋದಯದ ಸಂದರ್ಭದಲ್ಲಿಯೇ ೧೯೩೬ ರಲ್ಲಿ ಪುನಃ ಪ್ರಕಟವಾಗಿದೆ. ೧೯೩೫ ರಲ್ಲಿ ಪ್ರಕಟವಾದ 'ಮಲ್ಲಿಗೆ ದಂಡೆ' ೧೯೪೮ ರಲ್ಲಿ ಮತ್ತೆ ಪ್ರಕಟವಾಗಿದೆ. ಅವರ ಇನ್ನೊಂದು ಕೊಡುಗೆ 'ಜೀವನ ಸಂಗೀತ' ೧೯೩೩ ರಲ್ಲಿ ಪ್ರಕಟವಾಗಿದೆ. ೧೯೫೩ ರಲ್ಲಿ ಪ್ರಕಟವಾದ **'ಭಾರತೀಯ ಕಾವ್ಯಮೀಮಾಂಸೆ'**ಯಲ್ಲಿ ತೀನಂಶ್ರೀ ಅವರು ವ್ಯಾಪಕವಾಗಿ 'ಗರತಿಯ ಹಾಡು' ಹಾಗೂ 'ಮಲ್ಲಿಗೆ ದಂಡೆ' ಪುಸ್ತಕಗಳಿಂದ ಉದಾಹರಣೆಗಳನ್ನು ಉಲ್ಲೇಖಿಸುತ್ತಾರೆ. ಈ ಪುಸ್ತಕದ ಹಸ್ತಪ್ರತಿ ೧೯೪೨ರ ಜನವರಿಯಲ್ಲೆ ಸಿದ್ಧವಾಗಿತ್ತು ಎಂಬುದು ಗಮನಾರ್ಹ ಸಂಗತಿ. ಒಂದು ಲಾಕ್ಷಣಿಕ ಗ್ರಂಥದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಜನಪದ ಕಾವ್ಯದ ಉದಾಹರಣೆಗಳ ಬಳಕೆಯಾದದ್ದು ಜನಪದ ಕಾವ್ಯದ ಸ್ಪಷ್ಟ ಪ್ರಭಾವವನ್ನು ಹೇಳುತ್ತದೆ.

ಕನ್ನಡ ಕಾವ್ಯದ ನವೋದಯದ ಸ್ಥಿತಿಯನ್ನು ಗಮನಿಸಿ, **'ಗರತಿಯ ಹಾಡು'** ಸಂಗ್ರಹಕ್ಕೆ ಬರೆದ ಬಿ.ಎಂ.ಶ್ರೀ ಅವರ ಪ್ರಸ್ತಾವನೆಯಲ್ಲಿ ಈ ಮಾತುಗಳಿವೆ: "ಸಂಸ್ಕೃತ ಇಂಗ್ಲೀಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢ ಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜಾನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ" (ಗರತಿಯ ಹಾಡು, ಪು. ೮).

ಸ್ವತಃ ಇಂಗ್ಲೀಷ್ ಗೀತೆಗಳ ಅನುವಾದಕರೇ ಹೇಳುವ ಈ ಮೇಲಿನ ಮಾತುಗಳನ್ನು ಗಮನಿಸಬೇಕು. ಹಲಸಂಗಿ ಗೆಳೆಯರ ಗುಂಪಿನ ಹಿರಿಯರಾದ ಮಧುರಚೆನ್ನರು ಹೀಗೆ ಬರೆಯುತ್ತಾರೆ : "ಕಾವ್ಯರತ್ನವನ್ನು ಯಾವ ಗಣಿಯಲ್ಲಿ ಅರಸಬೇಕು? ಮತ್ತು ಅದನ್ನು ಗುರುತಿಸುವುದಕ್ಕೆ ಕುರುಹುಗಳಾವವು? ಎಂಬುದನ್ನು ತಿಳಿಯಬೇಕಾದರೆ ಎರಡು ಮಾತುಗಳುಂಟು. ೧) ಜಗತ್ತಿನ ಪುರಾತನ ನೂತನ ಮಹಾಕವಿಗಳ ಕೃತಿಗಳನ್ನು

ಪರಿಶೀಲಿಸುವುದೊಂದು, ೨) ಕವಿಗಳೆಂದೆನಿಸಿಕೊಳ್ಳುವ ಹಂಬಲದ ಸೋಂಕು ಎಳ್ಳಷ್ಟು ಇಲ್ಲದ ಅಶಿಕ್ಷಿತ ಪುರಾತನರ ಜನಪದ ಸಾಹಿತ್ಯವನ್ನು ಸೋಸಿ ನೋಡುವುದು ಇನ್ನೊಂದು" (ಮಲ್ಲಿಗೆ ದಂಡೆ. IV).

ಮಧುರಚೆನ್ನರು ಕನ್ನಡ ಸಾಹಿತ್ಯದ ನವೋದಯಕ್ಕೆ ಕಾರಣಗಳೆಂದು ಗುರುತಿಸುವ ಬಾಹ್ಯ ಹಾಗೂ ಆಂತರಿಕ ಸಂಗತಿಗಳನ್ನು ಗಮನಿಸಿದರೆ, ಇವು ನವೋದಯ ಸಾಹಿತ್ಯದ ಪ್ರೇರಣೆಗಳು ಎಂಬುದರ ಜೊತೆಗೆ, ಬಿ. ಎಂ. ಶ್ರೀ ಹಾಗೂ ಮಧುರಚೆನ್ನರ ಅಭಿಪ್ರಾಯಗಳಲ್ಲಿ ಸಾಮ್ಯತೆ ಇದೆ ಎಂಬುದನ್ನು ನಾವು ಗಮನಿಸಬೇಕು. ಆದರೆ ಎಲ್.ಎಸ್. ಶೇಷಗಿರಿರಾವ್ ಅವರು "ಶ್ರೀಯವರ ಇಂಗ್ಲೀಷ್ ಗೀತೆಗಳಿಂದ ಸಾಮಾನ್ಯವಾಗಿ ರೋಮ್ಯಾಂಟಿಕ್ ಎಂದು ಕರೆಯುವ ನವೋದಯ ಯುಗ ಪ್ರಾರಂಭವಾಯಿತು" ಎಂದು ತೀರ ಸರಳ ನಿರ್ಧಾರಕ್ಕೆ ಬರುತ್ತಾರೆ. (ಹೊಸಗನ್ನಡ ಸಾಹಿತ್ಯ, ೧೯೭೫, ಪು. ೪೭). ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರ ಮಾತುಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ಗಮನಿಸಬಹುದಾಗಿದೆ. ಅವರು ಕನ್ನಡ ನವೋದಯ ಸಾಹಿತ್ಯದ ಪ್ರೇರಣೆಗಳನ್ನು ಹೀಗೆ ಪಟ್ಟಿ ಮಾಡುತ್ತಾರೆ.

೧. ಇಂಗ್ಲೀಷಿನಿಂದ ಬಂದ ಪ್ರೇರಣೆ.

೨. ಲಾವಣಿಗಳಲ್ಲಿ, ನಾಟಕದೊಳಗಿನ ಹಾಡುಗಳಲ್ಲಿ, ಕ್ರಿಸ್ತನ ಹಾಡುಗಳಲ್ಲಿ ಹುಟ್ಟಿಕೊಂಡ ಹೊಸತನ.

೩. ಜನಪದ ಗೀತೆಗಳು, ವಚನ ಕೀರ್ತನೆಗಳಲ್ಲಿ ಕಾಣುವ ಭಾವಗೀತಾತ್ಮಕತೆ.

೪. ಈ ಎಲ್ಲ ಪ್ರಭಾವಗಳ ಹಿನ್ನೆಲೆಯಲ್ಲಿ ಈ ಎಲ್ಲ ಅಂಶಗಳಿಂದಲೂ ಅಷ್ಟಷ್ಟು ಪ್ರಭಾವಗೊಳ್ಳುತ್ತ 'ಆಂಗ್ಲ ಕವಿತಾಸಾರ' ಮತ್ತು 'ಇಂಗ್ಲೀಷ್ ಗೀತೆ'ಗಳ ಮೂಲಕ ಖಚಿತ ರೂಪ ತಾಳಿದುದು" (ಹೊಸಗನ್ನಡ ಕಾವ್ಯ, ಪು. ೫).

ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ಅವರ ಈ ಪಟ್ಟಿಯಲ್ಲಿ ೧ ಹಾಗೂ ೪ನೆಯವು– ಬಾಹ್ಯ ಪ್ರೇರಣೆಗಳೂ, ೨ ಹಾಗೂ ೩ನೇಯವು ಆಂತರಿಕ ಪ್ರೇರಣೆಗಳೂ ಆಗಿವೆ. ಆದರೆ ಕನ್ನಡಕ್ಕೆ ಅನುವಾದಗೊಂಡ ಇಂಗ್ಲೀಷ್ ಕವನಗಳಿಂದಲೇ ಅಗಾಧವಾದ ಬದಲಾವಣೆ ಆಯಿತು ಎಂದು ಹೇಳುವುದು ಅರ್ಥವಿಲ್ಲದ ಮಾತೆನಿಸುತ್ತದೆ. ಹೀಗಾಗಿ ಕನ್ನಡ ಸಾಹಿತ್ಯದ ನವೋದಯಕ್ಕೆ ಬಾಹ್ಯ ಕಾರಣಗಳಲ್ಲಿ ಇಂಗ್ಲೀಷ್ ಸಾಹಿತ್ಯ, ಆಂತರಿಕ ಕಾರಣಗಳಲ್ಲಿ ಜನಪದ ಸಾಹಿತ್ಯ ಅತ್ಯಂತ ಪ್ರಬಲವಾದ ಪ್ರೇರಣೆಗಳಾಗಿವೆ ಎಂಬುದನ್ನು ಗಮನಿಸಬೇಕು.

ಈ ದೃಷ್ಟಿಯಿಂದ ಹಲಸಂಗಿ ಗೆಳೆಯರ ಕೊಡುಗೆ ಮಹತ್ವದ್ದೆನಿಸುತ್ತದೆ. ಅವರು ಕೊಟ್ಟ ಅಪರೂಪದ ಜನಪದ ಸಾಹಿತ್ಯದ ಮೂರು ಕೊಡುಗೆಗಳು– ಕನ್ನಡ ನವೋದಯದ ಪ್ರಾತಿನಿಧಿಕ ಗಮನಾರ್ಹ ಸಂಗ್ರಹಗಳು ಮತ್ತು ಕನ್ನಡ ಶಿಷ್ಟಸಾಹಿತ್ಯದ ನವೋದಯಕ್ಕೆ ಅವುಗಳ ಪ್ರೇರಣೆ ಮಹತ್ವವಾದುದು ಎಂಬ ಮಾತುಗಳನ್ನು ಗಮನಿಸಬೇಕು.

'ಗರತಿಯ ಹಾಡು' (೧೯೩೧) ಹಲಸಂಗಿ ಗೆಳೆಯರ ಪ್ರಥಮ ಕಾಣಿಕೆ. ಇದರಲ್ಲಿ ಸುಮಾರು ೮೦೦ ರಷ್ಟು ತ್ರಿಪದಿಗಳಿವೆ. ಮಧುರಚೆನ್ನ ಕಾವ್ಯನಾಮದ ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು ಈ ಕೃತಿಯ ಸಂಗ್ರಾಹಕರಾಗಿದ್ದಾರೆ. ತುಂಬಾ

ಪ್ರಯತ್ನ ಪಟ್ಟರೂ ಹಲಸಂಗಿಯಲ್ಲೂ 'ಗರತಿಯ ಹಾಡು' ಕೃತಿಯ ಮೊದಲನೇ ಮುದ್ರಣದ ಪ್ರತಿಗಳು ನೋಡಲು ದೊರಕುತ್ತಿಲ್ಲ. ಈ ಕೃತಿಗೆ ಬಿ.ಎಂ.ಶ್ರೀ, ದ.ರಾ.ಬೇಂದ್ರೆ, ಮಾಸ್ತಿವೆಂಕಟೇಶ ಅಯ್ಯಂಗಾರ, ಶ್ರೀ ಸಿಂಪಿ ಲಿಂಗಣ್ಣ ಇವರೆಲ್ಲ ಪ್ರಾಸ್ತಾವನೆ, ಪರಿಚಯ, ಆಶೀರ್ವಾದ, ಅರಿ ಕೆಗಳನ್ನು ಬರೆದಿದ್ದಾರೆ.

ಹಲಸಂಗಿ ಗೆಳೆಯರೆಲ್ಲರೂ ಯುವಕವಿಗಳಾದ್ದರಿಂದ ಜನಪದ ಕಾವ್ಯವೇ ಬಹುಪ್ರಮುಖವಾಗಿ ಅವರ ಗಮನ ಸೆಳೆಯಿತೆಂದು ತೋರುತ್ತದೆ. ಹೀಗಾಗಿ ಅವರು ಜನಪದ ಸಾಹಿತ್ಯದ ಅತ್ಯುತ್ತಮ ಕಾವ್ಯ ಮಾದರಿಗಳನ್ನು ಸಂಗ್ರಹಿಸಿಕೊಡುವ ಕೆಲಸ ಮಾಡಿದ್ದಾರೆ. ಯಾವುದೇ ಸಾಹಿತ್ಯದ ಅತ್ಯಂತ ಆಕರ್ಷಕ ಮತ್ತು ಪ್ರಭಾವಿ ಪ್ರಕಾರವೆಂದರೆ ಕಾವ್ಯವೇ. ಅದರಲ್ಲೂ ಸುಮಧುರವಾಗಿ ಹಾಡುವ ಕಾವ್ಯ ಹೆಚ್ಚು ಗಮನ ಸೆಳೆಯುವುದು ಸ್ವಾಭಾವಿಕ. ಹೀಗಾಗಿ ಅವರು ಮೊದಲು ಸಂಗ್ರಹಿಸಲು ತೊಡಗಿರುವುದು ತ್ರಿಪದಿಗಳನ್ನು. ತ್ರಿಪದಿಗಳು ಭಾಷೆ, ಛಂದಸ್ಸು, ಅಲಂಕಾರ ಇವುಗಳ ಬಳಕೆಯಲ್ಲಿ ಶಿಷ್ಟಸಾಹಿತ್ಯದ ಶಕ್ತಿಯನ್ನು ಹೊಂದಿದವುಗಳು. ಹೆಣ್ಣುಮಕ್ಕಳು ಧಾನ್ಯಗಳನ್ನು, ವಿಶೇಷವಾಗಿ ಉತ್ತರಕರ್ನಾಟಕದಲ್ಲಿ ಬಿಳಿಜೋಳ, ದಕ್ಷಿಣ ಕರ್ನಾಟಕದಲ್ಲಿ ರಾಗಿ ಈ ಪ್ರಮುಖ ಧಾನ್ಯಗಳನ್ನು ಬೀಸುವಾಗ ಹಾಡುವ ಹಾಡುಗಳು. ಜನಪದ ಹಾಡುಗಳ ಅನಾವರಣ ಆಗುವುದು ಸಹೃದಯರ ಎದುರಿನಲ್ಲಿ. ಆದರೆ ಬೀಸುವ ಸಮಯ ರಾತ್ರಿ, ಬೆಳಗಿನ ಜಾವ ಆದುದರಿಂದ ಕೇಳುವ ಸಹೃದಯರ ವಿಶೇಷ ಹಾಜರಾತಿ ಇಲ್ಲಿ ಇಲ್ಲ. ಗರತಿ ತನ್ನ ಬದುಕಿನ ಸಂಗತಿಗಳನ್ನೇ ತೋಡಿಕೊಳ್ಳುವ ಸಂದರ್ಭ ಇದಾಗಿದೆ. ಹೀಗಾಗಿ ತ್ರಿಪದಿಗಳು ಹುಟ್ಟುವ ಮತ್ತು ಬಳಕೆಯಾಗುವ ಸಂದರ್ಭವು ಏಕಾಂತ ಸಂದರ್ಭ ಎನಿಸುತ್ತದೆ. ಗಂಡಸರು ಬಳಸುವ ತ್ರಿಪದಿಗಳು ಹುಟ್ಟುವ ಸಂದರ್ಭ ಹಂತಿ ಸಂದರ್ಭವಾಗಿದ್ದು, ಅದು ಬೀಸುವ ಸಮಯವನ್ನೊಳಗೊಂಡು, ರಾತ್ರಿಯಿಂದ ಬೆಳಗಿನವರೆಗೆ ನಡೆಯುತ್ತದೆ. ಸಹೃದಯರ ಗೈರು ಹಾಜರಿಯಲ್ಲಿ– ಗರತಿ ತನ್ನ ಜೀವನದ ಅನುಭವಗಳನ್ನು ಬೀಸುವಾಗ ಹಾಡಾಗಿಸಿದರೆ, ಒಕ್ಕಲಿಗನು ತನ್ನ ರೈತ ಬದುಕಿನ ಅನುಭವಗಳನ್ನು ಹಂತಿ ಹೊಡೆಯುವಾಗ ಹಾಡಾಗಿಸುತ್ತಾನೆ. ಏಕಾಂತದ ಸಂದರ್ಭ ಎಂದರೆ ಅದು ಶಿಷ್ಟ ಸಾಹಿತ್ಯ ಹುಟ್ಟುವ ಸಂದರ್ಭ. ಅಂತಹ ಸಂದರ್ಭದಲ್ಲಿ ತ್ರಿಪದಿಗಳು ಹುಟ್ಟುವುದರಿಂದ ಇವು ಶಿಷ್ಟಸಾಹಿತ್ಯದ ಲಕ್ಷಣಗಳನ್ನೂ ಹೊಂದಿರುತ್ತವೆ. ಹೀಗಾಗಿಯೇ ಶಿಷ್ಟಸಾಹಿತಿಗಳಿಗೆ ಅರಿವಿಲ್ಲದೆಯೇ ಹೆಚ್ಚು ಮೆಚ್ಚುಗೆಯ ಜನಪದ ಸಾಹಿತ್ಯವೆನಿಸುವುದು ತ್ರಿಪದಿ ಪ್ರಕಾರವಾಗಿದೆ.

ಬಹುಶಃ ಜನಪದ ಸಾಹಿತ್ಯದ ಅತ್ಯಂತ ಶ್ರೇಷ್ಠ ಶಕ್ತಿಯುತ ಮತ್ತು ಜನಪ್ರಿಯ ಸಾಹಿತ್ಯ ಪ್ರಕಾರವೆಂದರೆ ತ್ರಿಪದಿ ಸಾಹಿತ್ಯವೇ ಆಗಿದೆ. ಹೀಗಾಗಿ ಸಹಜವಾಗಿಯೇ ಹಲಸಂಗಿ ಗೆಳೆಯರ ಗುಂಪಿನ ಯುವಕರ ಗಮನವೆಲ್ಲ ಹರಿದುದು ಈ ತ್ರಿಪದಿ ಸಾಹಿತ್ಯದ ಕಡೆಗೆ ಆಗಿರುವುದು ಸಹಜವಾಗಿದೆ. ಈ ಗೆಳೆಯರ ಗುಂಪಿನ ಸದಸ್ಯರು ಸಾಮೂಹಿಕವಾಗಿ ತ್ರಿಪದಿಗಳನ್ನು ಸಂಗ್ರಹಿಸಿದಂತೆ ತೋರುತ್ತದೆ. ಅವರು ಯಾವಾಗ ಈ ತ್ರಿಪದಿಗಳ ಸಂಗ್ರಹಕ್ಕೆ ತೊಡಗಿದರೆಂಬುದು ನಮಗೆ ಖಚಿತವಾಗಿ ಗೊತ್ತಾಗುವುದಿಲ್ಲ. ಸಂಗ್ರಹಿತ ತ್ರಿಪದಿಗಳನ್ನು ಬಹುಶಃ 'ಜಯಕರ್ನಾಟಕ' ಪತ್ರಿಕೆಗೆ ಕಳುಹಿಸಿ, ಪ್ರಕಟಿಸಿದಂತೆ ತೋರುತ್ತದೆ.

ಈ ಗುಂಪಿನ ಜೊತೆಗೆ ನಿಕಟ ಸಂಪರ್ಕ ಹೊಂದಿದ ಕವಿ ದ.ರಾ.ಬೇಂದ್ರೆ ಅವರು ಕೃತಿ ಪ್ರಕಟನೆಗಾಗಿ ಸಂಗ್ರಹಿತ ತ್ರಿಪದಿಗಳಲ್ಲಿ ಉತ್ಕೃಷ್ಟತಮವಾದುವನ್ನು ಆಯುವಲ್ಲಿ ಪ್ರಮುಖ ಪಾತ್ರ ವಹಿಸಿದಂತೆ ತೋರುತ್ತದೆ. ಪ್ರಕಟನೆಯ ಪೂರ್ವದಲ್ಲಿ ಬೇಂದ್ರೆ ಅವರು ತಾವು ಹೋದಲ್ಲೆಲ್ಲ ಉತ್ತಮವಾದ ತ್ರಿಪದಿಗಳನ್ನು ಉಲ್ಲೇಖಿಸಿ ಮಾತನಾಡಿದ ಸೂಚನೆಗಳು ನಮಗೆ ತೋರುತ್ತವೆ. ಪ್ರಕಟನೆಯ ಪೂರ್ವದಲ್ಲಿಯೇ ಮೈಸೂರಿನ ಭಾಗದಲ್ಲೂ ಬೇಂದ್ರೆ ಅವರು ತ್ರಿಪದಿಗಳನ್ನು ಉಲ್ಲೇಖಿಸಿ ಮಾತನಾಡುತ್ತಿದ್ದರಂತೆ. ಆಗೆಲ್ಲ ಈ ತ್ರಿಪದಿಗಳನ್ನು ಆಲಿಸಿದ ಹಿರಿಯರು ಇವುಗಳನ್ನು ಪ್ರಕಟಿಸಬೇಕೆಂಬ ಸಲಹೆ ಇತ್ತಂತೆ ತೋರುತ್ತದೆ. ಈ ಸಂಗತಿಯನ್ನು **'ಗರತಿಯ ಹಾಡು'** ಕೃತಿಗೆ ಆಶೀರ್ವಾದ ಬರೆದ ಮಾಸ್ತಿ ವೆಂಕಟೇಶಯ್ಯಂಗಾರ ಅವರು ತಮ್ಮ ಮಾತುಗಳಲ್ಲಿ ಉಲ್ಲೇಖಿಸುವುದನ್ನು ಕಾಣುತ್ತೇವೆ. "ಶ್ರೀಮಾನ್ ದತ್ತಾತ್ರೇಯ ಬೇಂದ್ರೆಯವರು ಮೈಸೂರು ಪ್ರಾಂತ್ಯಕ್ಕೆ ಬಂದಿದ್ದಾಗ ಈ ಪದಗಳಲ್ಲಿ ಹಲವನ್ನು ಅಲ್ಲಲ್ಲಿ ಸಭೆಗಳಲ್ಲಿ ಓದಿ ಹೇಳಿದರು. ಆಗ ಅವನ್ನು ಕೇಳಿದವರೆಲ್ಲ ಆನಂದಪಟ್ಟರು. ಅವುಗಳ ಸೊಗಸಿಗೆ ಮನಸೋತರು. ಅನೇಕರು ಇದನ್ನು ಪುಸ್ತಕ ರೂಪದಲ್ಲಿ ಅಚ್ಚುಮಾಡಿಸಬೇಕೆಂದು ಅಪೇಕ್ಷಿಸಿದರು. ಈ ಅಪೇಕ್ಷೆ ಈಗ ನೆರವೇರುತ್ತಿರುವುದು ಸಂತೋಷದ ವಿಷಯ" (ಗರತಿಯ ಹಾಡು, ಪು. ೨೧).

'ಗರತಿಯ ಹಾಡು' ಸ್ವಾತಂತ್ರ್ಯಪೂರ್ವದಲ್ಲಿ ಎರಡು ಸಲ (೧೯೩೧, ೧೯೩೬) ಪ್ರಕಟಗೊಂಡಿದೆ. ಮೊದಲ ಸಲ ಪ್ರಕಟವಾಗುವಾಗ ಬೇಂದ್ರೆ ಅವರ 'ಪರಿಚಯ' ಮತ್ತು ಮಾಸ್ತಿವೆಂಕಟೇಶ ಅಯ್ಯಂಗಾರ ಅವರ 'ಆಶೀರ್ವಾದ'ಗಳೊಂದಿಗೆ ಪ್ರಕಟವಾಗಿದೆ. ಬಿ.ಎಂ.ಶ್ರೀ ಅವರ 'ಪ್ರಸ್ತಾವನೆ' ಸೇರಿಕೊಂಡಿದೆ. ೧೯೫೬ ರಲ್ಲಿ ಮೂರನೇ ಮುದ್ರಣಕ್ಕೆ ಮತ್ತೆ ಸಿಂಪಿ ಲಿಂಗಣ್ಣನವರ 'ಅರಿಕೆ' ಸೇರಿಕೊಂಡಿದೆ. ಹೀಗೆ ಕನ್ನಡದ ಶ್ರೇಷ್ಠ ಸಾಹಿತಿಗಳ, ಚಿಂತಕರ ಅಭಿಪ್ರಾಯಗಳು ಈ ಕೃತಿಯ ಬೆಲೆಯನ್ನು, ಆಗಿನ ಕಾಲದ ಜರೂರುಗಳನ್ನು ಹೆಚ್ಚಿಸಿವೆ. ಇದರಿಂದ ಗರತಿಯ ಹಾಡಿನ ಮೌಲ್ಯ ಹೆಚ್ಚುತ್ತಲೇ ಹೋಗಿದೆ.

ಕವಿ ಬೇಂದ್ರೆ ಅವರು ಹೇಳುತ್ತಾರೆ 'ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ 'ಗರತಿಯ ಹಾಡಿ'ನ ಋಷಿಗಳು ಹೆಣ್ಣುಮಕ್ಕಳು-ನಮ್ಮ ತಾಯಿ ತಂಗಿಯರು, ಅಮ್ಮ ಅಕ್ಕಂದಿರು, ಮಡದಿ ಮಕ್ಕಳು. ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ, ಉಳಿದುದು ಕಾವ್ಯದ ಛಾಯೆ' (ಗ.ಹಾ. ೧೧). ಈ ಮಾತು ಜನಪದ ಸಾಹಿತ್ಯದ ಮಹತ್ವವನ್ನು ಹೇಳುವ ಜೊತೆಗೆ, ಸ್ವಾತಂತ್ರ್ಯಪೂರ್ವದಲ್ಲಿ ವ್ಯಕ್ತವಾದ ದೇಸಿ ಸಾಹಿತ್ಯ ಕುರಿತ ಒಂದು ಮಹತ್ವದ ಮನೋಭಾವವೇ ಆಗಿದೆ. ಸಾಹಿತ್ಯದ ಮೂಲ ಆನಂದವಾದರೂ ಈ ಕೃತಿಯನ್ನು ಪ್ರಕಟಿಸುವಲ್ಲಿ ಬೇರೊಂದು ಪ್ರಯೋಜನವೂ ಇದೆ ಎನ್ನುವ ಬೇಂದ್ರೆ ಅವರು ಅದನ್ನು ಹೀಗೆ ದಾಖಲಿಸುತ್ತಾರೆ: "ಬೀದರ, ಹೈದ್ರಾಬಾದುಗಳ ಉತ್ತರದ ತುದಿಯಿಂದ ನೀಲಗಿರಿ ಕೊಯಿಮತ್ತೂರಿನ ದಕ್ಷಿಣದ ವರೆಗೆ ಹಬ್ಬಿರುವ ಕರ್ನಾಟಕವು ಒಂದೆಂಬುದಕ್ಕೆ ಒಂದು ನಿದರ್ಶನವು ಈ ಹಾಡುಗಳಲ್ಲಿದೆ. ಅಲ್ಪಸ್ವಲ್ಪ ಪಾಠಭೇದದಿಂದ ಇವುಗಳಲ್ಲಿ ಅರ್ಧಕರ್ಧ ಹಾಡುಗಳು ಎಲ್ಲ ಕನ್ನಡ ಮನೆಗಳಲ್ಲಿ ಹರಡಿಕೊಂಡಿರಲು ಸಾಕು. ಈ ಜನಪದ ವೇದವೇ ಎಲ್ಲ ಕನ್ನಡಿಗರಿಗೂ ಸಾಮಾನ್ಯವಾದ ತಾಯ ಮೊಲೆಹಾಲು

ಎಂಬುದು ಅದನ್ನೋದಿದವರ ಅನುಭವಕ್ಕೆ ಬಾರದೆ ಇರದು. ಈ **ಅನುಭವದಿಂದುಂಟಾಗುವ ಐಕ್ಯಭಾವವು** ಅಂತಿಂತಹದಲ್ಲ. ಪ್ರಜಾಪ್ರಭುತ್ವದ ಈ ಕಾಲದಲ್ಲಿ ಜನಸಾಮಾನ್ಯದ ಹೃದಯದೊಳಗಿನ ಸುಖದ ಕನಸೆಂತಹದೆಂಬುದನ್ನು ಕಂಡುಕೊಳ್ಳಲು ಇದರಂತಹ ಬೇರೆ ಕೈಗನ್ನಡಿಯಿಲ್ಲ. ...ಸಂಸ್ಕೃತ ಇಂಗ್ಲೀಷ ಹಳೆಗನ್ನಡಗಳ ಪ್ರತಿಬಿಂಬವನ್ನು ತಳೆದ ಸಾಹಿತ್ಯಕ್ಕಿಂತಲೂ ಅಚ್ಚಗನ್ನಡದ ಅಚ್ಚೊತ್ತಿದ ಸಾಹಿತ್ಯದ ಅಗತ್ಯವು ಅಷ್ಟಿಷ್ಟೆಂದು ಹೇಳಬರದು" (ಗ.ಹಾ.೧೬). ಈ ಮಾತುಗಳಲ್ಲಿ ಕರ್ನಾಟಕವು ಒಂದೆಂಬ ಭಾವ, ಐಕ್ಯಭಾವ, ಸಂಸ್ಕೃತ ಇಂಗ್ಲೀಷ ಹಳೆಗನ್ನಡ ಪ್ರಭಾವದಿಂದ ಕಡೆಗಾಗಬೇಕೆಂಬ ಭಾವ– ಇವೆಲ್ಲ ಒಟ್ಟಿಗೆ ವ್ಯಕ್ತವಾಗಿರುವುದು ಕಂಡುಬರುತ್ತದೆ.

ಬಿ.ಎಂ.ಶ್ರೀ ಅವರು ಜನಪದ ಸಾಹಿತ್ಯದ ಬಗ್ಗೆ ತಾಳಿದ ಭಾವನೆ ಮಹತ್ವದ್ದು. ಅವರು ಹೇಳುತ್ತಾರೆ: "ಮೊದಲು ಹುಟ್ಟಿದುದು ಜನವಾಣಿ, ಅದು ಬೆಳೆದು, ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ ಬೇರು, ಕವಿವಾಣಿ ಹೂವು" (ಗರತಿಯ ಹಾಡು, ಪು.೫). ಇದು ಜನಪದ ಸಾಹಿತ್ಯದ ಮಹತ್ವವನ್ನು ಹೇಳುವ ಮಾತು. ಇಂದು ಜನಪದ ಸಾಹಿತ್ಯದ ಬಗೆಗೆ ಇನ್ನೂ ತಿಳುವಳಿಕೆ ಹೆಚ್ಚಾಗಬೇಕಾಗಿರುವ ಸಂದರ್ಭದಲ್ಲಿ ಬಿ.ಎಂ.ಶ್ರೀ ಅವರ ಮಾತು ಇಂದಿಗೂ ಅರ್ಥಪೂರ್ಣವೆನಿಸುತ್ತದೆ. ಬಿ.ಎಂ.ಶ್ರೀ ಅವರು ಮುಂದುವರೆದು ಹೇಳುವ ಈ ಮಾತುಗಳನ್ನು ನಾವು ಗಮನಿಸಬೇಕು: "ಸಂಸ್ಕೃತ–ಇಂಗ್ಲೀಷ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲು ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯ ಕೋಶವಾಗುವುದು. ಆಗ ಆ ಸಾಹಿತ್ಯವನ್ನೆಲ್ಲಾ ಆಮೂಲಾಗ್ರವಾಗಿ ಪರಿಶೋಧಿಸಿ, ಅದರ ಸ್ವರೂಪವನ್ನು ನಿರ್ಣಯಿಸಿ, ಇವುಗಳ 'ಸತ್ಯ–ಸೌಂದರ್ಯ–ಸುಖ'ಗಳನ್ನು ಅನುಭವಿಸಿ, ಇವುಗಳ ವರ್ಚಸ್ಸು ಹೊಸ ಸಾಹಿತ್ಯದಲ್ಲಿ ಮೂಡುವಂತೆ ಮಾಡಬಹುದು" (ಗ.ಹಾ.ಪು.೯). ಸ್ವಾತಂತ್ರ್ಯಪೂರ್ವದಲ್ಲಿ ಆಡಿದ ಈ ಮಾತುಗಳು ಇವತ್ತಿಗೂ ಅವಶ್ಯವಾಗಿ ಗಮನಿಸಬೇಕಾದ ಮಾತುಗಳೆನಿಸುತ್ತವೆ. ಜನಪದ ಸಾಹಿತ್ಯವನ್ನು ನಿರ್ಲಕ್ಷಿಸುವ ಜನ ಇವತ್ತಿಗೂ ಕಡಿಮೆ ಏನೂ ಆಗಿಲ್ಲ. ಅದನ್ನು ಸಂಗ್ರಹಿಸುವ ಪ್ರಕಟಿಸುವ ಕೆಲಸಗಳು ಮತ್ತೆ ಈಗ ಕುಂಠಿತವಾಗಿವೆ. ನಮ್ಮ ಸಂಸ್ಕೃತಿಯನ್ನು ತಮ್ಮ ಗರ್ಭದಲ್ಲಿ ಹುದುಗಿಸಿಕೊಂಡಿರುವ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಸಂಪಾದಿಸಿ ಪ್ರಕಟಿಸುವ ಜರೂರಿ ಇವತ್ತಿಗೂ ಇದೆ. ಅದನ್ನು ನಾವು ಮಾಡದಿದ್ದರೆ ಕರ್ನಾಟಕ ಸಂಸ್ಕೃತಿಯನ್ನು ನಾವು ಕಳೆದುಕೊಳ್ಳುವುದು ಖಚಿತ ಎಂಬ ಅರಿವು ನಮಗೆ ಇಂದೂ ಬರಬೇಕಾದುದು ಅವಶ್ಯವಿದೆ.

ಗರತಿಯ ಜೀವನದ ಮಹಾಕಾವ್ಯ :

ಗರತಿಯ ಹಾಡಿನ ತ್ರಿಪದಿಗಳಲ್ಲಿ ಮದುವೆಯಾದ ಹೆಣ್ಣಿನ ಭಾವನೆಗಳನ್ನೇ ಕಾಣುತ್ತೇವೆ. ಹೀಗಾಗಿ ತಾನು ಹುಟ್ಟಿದ ಮನೆಯಿಂದ ಹೊರಗಾಗಿ, ಕೊಟ್ಟಮನೆಯಲ್ಲಿ ಬಾಳುವಾಗಿನ ಅವಳ ತವರು ಮತ್ತು ತವರಿನ ಸಂಬಂಧಗಳು ಸ್ಮೃತಿಯ ರೂಪದಲ್ಲಿ ಆಸರೆಯಾಗಿ ನಿಲ್ಲುತ್ತವೆ. ಅಂತಹ ಗರತಿಯ ಬಾಳಿನ ಸ್ಮೃತಿಯೇ ಈ **'ಗರತಿಯ ಹಾಡು'** ಸಂಗ್ರಹವಾಗಿದೆ.

ವಿಶೇಷವಾಗಿ **'ಗರತಿಯ ಹಾಡು'** ಕೃತಿ ಗರತಿಯ ಜೀವನದ ಮಹಾಗಾಥೆಯಾಗಿದೆ. ಗರತಿಯ ಹಾಡಿನಲ್ಲಿಯ ತ್ರಿಪದಿಗಳ ವಿಂಗಡನಾಕ್ರಮವನ್ನು ಗಮನಿಸಿದರೆ ಅಲ್ಲಿ ಬಹುಮುಖ್ಯವಾಗಿ ಮೂರು ಭಾಗಗಳಿವೆ. ಒಂದು ತವರು ಮನೆ, ಎರಡನೆಯದು ಗಂಡನ ಮನೆ. ಮೂರನೆಯದು ಸಾಮಾಜ. ತವರಿನಲ್ಲಿ ತಾಯಿ–ತಂದೆ, ಅಕ್ಕ–ತಂಗಿ, ಅಣ್ಣ–ತಮ್ಮ ಈ ಸಂಬಂಧಗಳು ಕಾಣುತ್ತವೆ. ಉಳಿದಂತೆ ತಂದೆಯ ರಕ್ತಸಂಬಂಧಿಗಳು, ತಾಯಿ ರಕ್ತಸಂಬಂಧಿಗಳು ಇಲ್ಲಿ ಅಪರೂಪಕ್ಕೆ ಪ್ರಸ್ತಾಪವಾಗಬಹುದು. ಗಂಡನ ಮನೆಯಲ್ಲಿ ತಾನು–ತನ್ನ ಗಂಡ(ಸತಿಪತಿ), ವೈಧವ್ಯ, ಬಂಜೆ, ಮಕ್ಕಳು, ಲಾಲಿ, ಹರಕೆ, ಮಗ–ಸೊಸೆ, ಅತ್ತೆ–ಮಾವ. ಸಾಮಾಜಿಕ ಸಂಗತಿಗಳಲ್ಲಿ–ಸಂವಾದ, ಹಾಸ್ಯ, ನೀತಿ, ಪ್ರಾರ್ಥನೆ, ಪೌರಾಣಿಕ, ಐತಿಹಾಸಿಕ ಇವನ್ನು ಕಾಣಬಹುದು.

ಗರತಿಗೆ ಕೌಟುಂಬಿಕ ಜೀವನ ಬಹುಮುಖ್ಯವಾದುದು. ಇವತ್ತಿಗೂ ಆ ಸ್ಥಿತಿ ಹೆಚ್ಚು ಬದಲಾವಣೆ ಏನೂ ಆಗಿಲ್ಲ. ಹೆಣ್ಣು ಕಲಿತವಳಾದರೂ ಇವತ್ತಿಗೂ ಮನೆಯ ಒಳಗಿನ ವ್ಯವಹಾರಗಳನ್ನೆಲ್ಲ ಅವಳೇ ನೋಡಕೊಳ್ಳುವಾಕೆ. ಹೀಗಾಗಿ ಅವಳಿಗೆ ಹುಟ್ಟಿದ ಮನೆ ಮತ್ತು ಕೊಟ್ಟ ಮನೆಗಳೆರಡರ ಕೌಟುಂಬಿಕ ಸಂಬಂಧಗಳು ಗಾಢವಾಗಿ ಸುತ್ತುವರಿದಿರುತ್ತವೆ. ಹೆಚ್ಚಾಗಿ ಮನೆಯ ಹೊರಗಿನ ಜವಾಬ್ದಾರಿಗಳನ್ನು ನಿಭಾಯಿಸುವ ಗಂಡಸಿಗೆ ಈ ಕೌಟುಂಬಿಕ ಸಂಬಂಧಗಳ ಕಾವು ಅಷ್ಟಾಗಿ ಬಡಿಯಲಾರದು. ಆದರೆ ಅವನೂ ಈ ಆವಿಗೆಯಲ್ಲಿಯೇ ಜೀವನ ಸಾಗಿಸಬೇಕಾಗಿರುವುದರಿಂದ ಅದರ ಝಳದಲ್ಲಿ ನಲುಗಿ ಹೋಗಿರುತ್ತಾನೆ.

ಬದುಕಿನ ಹಾಸು ಹೀಗಿದೆ. ಅಲ್ಲಿಯ ನಗುವು, ಅಲ್ಲಿಯ ಅಳುವು ಯಾರಿಗೂ ಕೇಳಿಸದು. ಅಲ್ಲಿ ಎಲ್ಲರೂ ಕಣ್ಣಿದ್ದೂ ಕುರುಡರು, ಕವಿಯಿದ್ದೂ ಕಿವಿಡರು, ನಾಲಿಗ ಇದ್ದೂ ಮೂಗರು. ಇದು ಕೌಟುಂಬಿಕ ಜೀವನದಲ್ಲಿ ಕಾಣಿಸುವ ಬಹುದೊಡ್ಡ ದೌರ್ಬಲ್ಯ. ಇದುವೇ ಮನುಷ್ಯನ ಅಸಹಾಯಕತೆ. ಇದರಿಂದಾಗಿಯೇ ಬದುಕಿನ ಒಂದು ಮುಖ ದುರಂತಮಯವಾಗಿರುವುದು. ಇಂತಹ ಕೌಟುಂಬಿಕ ಕಾವಿನ ಮಧ್ಯ ಹೆಣ್ಣು ಗಂಡು ಇಡೀ ವಯಸ್ಸನ್ನು ತೇಯಬೇಕು. ಸಹಿಸಲು ಅಸಾಧ್ಯವಾದರೂ ವಾಸನೆ ಸುಗಂಧಮಯವಾಗಿದೆ ಎಂದು ಬೀಗಬೇಕು. ಇಂತಹ ತವರು ಮನೆ ಮತ್ತು ಗಂಡನ ಮನೆಗಳ ನಡುವೆ ಗರತಿಯ ಬಾಳುವೆ ಹರಿದಾಡುತ್ತಿರುತ್ತದೆ. ಅಪರೂಪಕ್ಕೆ ಒಮ್ಮೊಮ್ಮೆ ಸಾಮಾಜಿಕ ಸುಗಂಧ ಮೂಗಿಗೆ ಬಡಿಯಬಹುದು. ಅದೂ ಒಮ್ಮೊಮ್ಮೆ ದುರ್ಗಂಧವಾಗಿ ಹಿಂಸಿಸಬಹುದು. ಇಲ್ಲಿಯ ಅನುಭವಗಳು ಏನು? ಸಂಬಂಧಗಳು ಸರಳವಾಗಿ

ಕಾಣುತ್ತಿದ್ದರೂ ಒಂದೊಂದು ಸಂಬಂಧದ ಎದುರಿಗೆ ಗರತಿಯ ಪಾತ್ರ ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತದೆ. ಈ ಬದಲಾವಣೆಯ ನಡುವೆ ಅವಳ ಅನುಭವಗಳೇನು? ಎಂಬುದನ್ನು 'ಗರತಿಯ ಹಾಡು' ತ್ರಿಪದಿಗಳು ಹಿಡಿದಿಡುತ್ತವೆ.

ತವರು ಮನೆ , ತಾಯಿ-ತಂದೆ:

ತಾನು ಹುಟ್ಟಿಬೆಳೆದ ಮನೆ, ಮದುವೆ ಎಂಬ ಸಂಬಂಧದಿಂದ ತಾನು ದೂರಾದ ಮೇಲೆ ಅದು ತನಗೆ ತವರುಮನೆಯಾಗಿ ಪರಿವರ್ತನೆ ಹೊಂದುತ್ತದೆ. ತಾಯಿಂದ ಅದು ತವರು ಮನೆ ಎನಿಸುತ್ತದೆ. ಮದುವೆಯ ಬಂಧನದ ನಂತರ ಗರತಿಗೆ ತವರು ಮನೆಯ ಸ್ಮೃತಿಯೇ ಒಂದು ದೊಡ್ಡ ಆಸರೆಯಾಗಿ ದೊರೆಯುತ್ತದೆ. ಅಲ್ಲಿಯ ತಾಯಿ-ತಂದೆಗಳ ನೆನಪು ಗರತಿಗೆ ಎಂತಹ ಸಂಕಷ್ಟದಲ್ಲೂ ಸಹನೆಯನ್ನು ತಂದುಕೊಡುತ್ತದೆ. ಅದಕ್ಕಾಗಿ ಅವರ ನೆನಪು ಹಾಡಾಗಿ ಹರಿಯುತ್ತದೆ.

ತಾಯಿ ಕಟ್ಟಿದ ಬುತ್ತಿ ತರತರದ ಯಾಲಕ್ಕಿ
ಜರತರದ ಜಾಣೆ ಹಡೆದವ್ವನಿನಬುತ್ತಿ
ಬಿಚ್ಚ್ಯಂಡ ಭೀಮರತಿ ಮ್ಯಾಲ

'ತಾಯಿ ಕಟ್ಟಿದ ಬುತ್ತಿ' ತಾಯಿಯಿಂದ ತನಗೆ ಬಂದ ಅನುಭವದ ಸಾರ. ಅದೇ ಹೆಣ್ಣಿನ ಬದುಕಿಗೆ ಆಸರೆ. 'ಅದು ತರತರದ ಯಾಲಕ್ಕಿ'. ದೇಹಕ್ಕೂ ಮನಸ್ಸಿಗೂ ತನ್ನ ಸುತ್ತಲಿರುವ ಎಲ್ಲರಿಗೂ ಹಿತವನ್ನು ಕೊಡುವ ಬುತ್ತಿ, ಅನುಭವ. ಈ ಅನುಭವವೇ ಗರತಿಯ ಜೀವನದ ತುಂಬ ಸಹಾಯಕ್ಕೆ ಬರುವುದು. ಏಕೆಂದರೆ 'ಜರತರದ ಜಾಣೆ' ಹಡೆದವ್ವ ಕಟ್ಟಿದ ಬುತ್ತಿ ಇದು. ಅದನ್ನು ಈ ಬದುಕೆಂಬ ಭೀಮರತಿ ಹೊಳೆಯ ದಂಡೆಯ ಮೇಲೆ ಧೈರ್ಯದಿಂದ, ಖುಷಿಯಿಂದ ಹಂಚಿಕೊಂಡು ಯಶಸ್ವಿಯಾಗಿ ಬದುಕಿದೆ ಎಂಬುದು ಗರತಿಯ ಭಾವನೆ.

ರಾಗೀಯ ಒಣರೊಟ್ಟಿ ರಾಜಗೋಳಿಯ ಪಲ್ಲೆ
ರಾಜಕ ತವರವರು ಬಡವರು । ಮನಿಯಾಗ
ನಾಕು ದಿನವಿದ್ದು ಬರುವೇನ

ಗಂಜೀಯ ಕುಡಿದರೂ ಗಂಡನ ಮನಿ ಲೇಸು
ಅಂದಣದ ಮ್ಯಾಲ ಚವುರವ । ಸಾರಿದರ
ಹಂಗಿನ ತವರ ಮನಿ ಸಾಕ

'ತಾಯಿದ್ರ ತವರ್ಹೆಚ್ಚು', ತಾಯಿಲ್ದ ತವರಿಗಿ ಹೋಗದಿರು ನನ ಜೀವ', 'ಕಾಶಿ ನಿನ ಹೊರತು ತವರಿಲ್ಲ'ಎನ್ನುವ ಮಾತುಗಳು ತಾಯಿ ಇದ್ದರೆ ಮಾತ್ರ ತವರು ಎಂಬ ಮನೋಭಾವವನ್ನು ಅಭಿವ್ಯಕ್ತಿಸುತ್ತವೆ. ಇಂತಹ ತಾಯಿ ಇರುವ ಮನೆ ಅದು 'ಹಾಲುಂಡ ಮನೆ'.

ತಾಯಿದ್ದ ತವರು :

ಕಾಶೀಗಿ ಹೋಗಲಕ ಏಸೊಂದು ದಿನ ಬೇಕ
ತಾಸ್ಹೊತ್ತಿನ್ಹಾದಿ ತವರೂರ । ಮನಿಯಾಗ
ಕಾಸಿ ಕುಂತಾಳ ಹಡೆದವ್ವ

ಆಕಳ ಕರು ಬಂದು ಅಂಬಾ ಅಂಬಾ ಎಂದು
ತಮ್ಮವ್ವನ ಮೊಲಿಯ ನಲಿನಲಿದು । ಉಂಬಾಗ
ನಮ್ಮವ್ವನ ಧ್ಯಾನ ನನಗಾಗಿ

ತಾಯಿಲ್ಲ ತವರು :

ತಾಯಿ ಇಲ್ಲದ ಮನೆ ಅದು ಅಣ್ಣನ ಮನೆ, ತಮ್ಮನ ಮನೆ ಎಂದು ಕರೆಯಿಸಿಕೊಳ್ಳುತ್ತದೆ. ತಾಯಿ ಇಲ್ಲದ ತವರು ಮನೆಯ ದೃಶ್ಯವೊಂದನ್ನು ಗರತಿ ಹೀಗೆ ಮೂಡಿಸಿ ನಿಲ್ಲಿಸುತ್ತಾಳೆ:

ತಾಯಿಲ್ದ ತವರೀಗಿ ಹೋಗದಿರು ನನ ಮನವ
ನೀರಿಲ್ದ ಕೆರಿಗಿ ಕರ ಬಂದು । ತಿರುಗಾಗ
ಆಗ ನೋಡದರ ದುಃಖಗಳ

ಕಡಗ ಇಲ್ಲದ ಕೈಯ ಕರುಣ ಇಲ್ಲದ ಪುರುಷ
ಹಡೆದವ್ವನಿಲ್ದ ತವರೀಗಿ। ಹೋದಾರ
ಅಡವ್ಯಾಗ ವಸ್ತಿ ಇಳಿದಾಂಗ

'ತಾಯಿ ಇಲ್ಲದ ಮನೆ ತವರು ಮನೆ ಎನಿಸದು' ಎಂಬ ಭಾವ ಗರತಿಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ತಂದೆಯದು ಗಂಭೀರ ವ್ಯಕ್ತಿತ್ವ, ಮಗಳನ್ನು ಕಾಪಾಡುವ ಶಕ್ತಿ.

ತಂದಿ ನನ ಹಡೆದಪ್ಪ ಉಂಡು ಹೊರೆಯಕ ಹೊಂಟ
ಜಂಬ ಹಾಸೀದ ಜಮಖಾನಿ।ನನ ಮನಿಯ
ಗೊಂಬಿ ಬೀಸ್ಯಾವ ಸುಳಿಗಾಳಿ

ತಂದೀನ ನೆನೆದರ ತಂಗಳ ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ನ ।ನೆನೆದರ
ಮಾಸಿದ ತಲೆಯು ಮಡಿಯಾಯ್ತು

ಹೀಗೆ ತಂದೆಯನ್ನು ಮಗಳು ನೆನೆಯುತ್ತಾಳೆ. ತಾಯಿಯಂತೆ ತಂದೆ ಸಲುಗೆಯವನಲ್ಲ ಎಂಬುದು ನಮಗೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಸಂಬಂಧದಲ್ಲಿ ಹೀಗೆ ಇರುವುದು, ತಂದೆಯ ಬಗೆಗೆ ಮಗಳು ಹೆಚ್ಚು ಸಲುಗೆಯಿಂದ ಇರಲಾರದ ಸ್ಥಿತಿಯ ಏನೋ ಒಂದು ಬಗೆಯ ಕಂದರ ಕಾಣಿಸುತ್ತದೆ. ನಮ್ಮ ಸಂಸ್ಕೃತಿಯಲ್ಲಿಯೇ ಕಾಣುವ ಈ ಬಿರುಕಿನ ಕಡೆ ನಮ್ಮ ಲಕ್ಷ ಹೋಗಬೇಕಾದುದು ಅವಶ್ಯ.

ತೊಟ್ಟೀಲ ಹೊತಗೊಂಡು ತವರು ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು। ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳೋ

ಉಂಗುರ ಉಡದಾರ ಮುರಿದರ ಮಾಡಿಸಬಹುದು
ಮಡದಿ ಸತ್ತರ ತರಬಹುದು । ಹಡೆದಂಥ
ತಂದೆ ತಾಯೆಲ್ಲಿ ಸಿಕ್ಕಾರ

ಹೀಗೆ ತಂದೆಯನ್ನು ಕುರಿತು ಉತ್ತಮ ಭಾವನೆ ವ್ಯಕ್ತವಾಗಿದ್ದರೂ ತಾಯಿಯಂಥ ಭಾವನಾತ್ಮಕ ಸಂಬಂಧ ತಂದೆಯಲ್ಲಿ ಅಭಿವ್ಯಕ್ತಿಗೊಳ್ಳದೇ ಇರುವುದು ಎದ್ದುಕಾಣುತ್ತದೆ.

ಅಣ್ಣ–ತಮ್ಮ, ಅಕ್ಕ–ತಂಗಿ, ಅತ್ತಿಗೆ :

ಗರತಿಯ ಹಾಡಿನ ತ್ರಿಪದಿಗಳಲ್ಲಿ ಮದುವೆಯಾದ ಹೆಣ್ಣಿನ ಭಾವನೆಗಳನ್ನೇ ಕಾಣುತ್ತೇವೆ. ಹೀಗಾಗಿ ತಾನು ಹುಟ್ಟಿದ ಮನೆಯಿಂದ ಹೊರಗಾಗಿ, ಕೊಟ್ಟಮನೆಯಲ್ಲಿ ಬಾಳುವಾಗಿನ ಅವಳ ತವರು ಮತ್ತು ತವರಿನ ಸಂಬಂಧಗಳು ಸ್ಮೃತಿಯ ರೂಪದಲ್ಲಿ ಹೆಣ್ಣಿಗೆ ಆಸರೆಯಾಗಿ ನಿಲ್ಲುತ್ತವೆ. ಅಂತಹ ಗರತಿಯ ಬಾಳಿನ ಸ್ಮೃತಿಯೇ ಈ 'ಗರತಿಯ ಹಾಡು' ಸಂಗ್ರಹವಾಗಿದೆ.

ತಂದೆ–ತಾಯಿ ಸಂಬಂಧ ಮುಗಿದ ನಂತರ ಅಲ್ಲಿ ಉಳಿಯುವ ಸಂಬಂಧಗಳೆಂದರೆ ಕ್ರಮವಾಗಿ ಅಣ್ಣ–ತಮ್ಮ, ಅಕ್ಕ–ತಂಗಿ, ಅತ್ತಿಗೆಯರು ತವರಿನಲ್ಲಿ ಕಾಣಿಸುತ್ತಾರೆ.

ಹೆಣ್ಣಿನ ಜನುಮಕ ಅಣ್ಣತಮ್ಮರು ಬೇಕ
ಬೆನ್ನ ಕಟ್ಟುವರು ಸಭೆಯೊಳಗ।ಸಾವಿರದ
ಹೊನ್ನ ಕಟ್ಟುವರು ಉಡಿಯೊಳಗ

ಈ ತ್ರಿಪದಿಯಲ್ಲಿ ಅಣ್ಣತಮ್ಮರ ಬಗ್ಗೆ ಒಬ್ಬ ಸಹೋದರಿಗೆ ಇರುವ ಅಭಿಮಾನ ವ್ಯಕ್ತವಾಗುತ್ತದೆ. ತಾಯಿ–ತಂದೆಯರ ನಂತರ ಅವರು ಹೆಚ್ಚಾಗಿ ಕೊಂಡಾಡುವುದು, ನಂಬುವದು ಅಣ್ಣತಮ್ಮಂದಿರನ್ನು. ಜವಾಬ್ದಾರಿಗೆ ಸಂಬಂಧ ಪಟ್ಟಂತೆ ಅಣ್ಣನನ್ನು ಹೆಚ್ಚಾಗಿ ತಂದೆಯ ಸ್ಥಾನದಲ್ಲಿ ಕಾಣುತ್ತಾರೆ. ಏಕೆಂದರೆ ತಂದೆಯ ನಂತರ ಮನೆತನದ ಜವಾಬ್ದಾರಿ ಅಣ್ಣನ ಮೇಲೆಯೇ ಇರುವುದು.

ಅತ್ತೀಯ ಮನಿ ಸುದ್ದಿ ಹತ್ತ್ಯಾವ ತವರೀಗಿ
ಸಿಟ್ಟಿನವ ಭಾಳ ನನ್ನಣ್ಣ ।ಕೇಳೂತ
ಬಿಟ್ಟಾನೋ ತನ್ನ ಮರಿಗುದರಿ

ಅಣ್ಣನಲ್ಲಿ ಸಹೋದರಿ ಹುಡುಕುವ ತನ್ನ ಸುರಕ್ಷತೆಯ ಭಾವ ಇಲ್ಲಿ ವ್ಯಕ್ತವಾಗಿದೆ. ಸಹಜವಾಗಿಯೇ ತಂದೆಯ ನಂತರದ ಜವಾಬ್ದಾರಿ ಅವರು ಕಾಣುವುದು ಅಣ್ಣನಲ್ಲಿಯೆ. ತಮ್ಮನ ಬಗ್ಗೆ ಸಹಜವಾಗಿಯೇ ಅಭಿಮಾನ. ಆದರೆ ಆತ ತನಗಿಂತಲೂ ಸಣ್ಣವನಾದುದರಿಂದ ಅವನ ಏಳ್ಗೆಯ ಬಗ್ಗೆ, ತಾನು ತನ್ನ ಮಗಳನ್ನು ತಮ್ಮನಿಗೆ ಕೊಟ್ಟು ತವರಿನ ಸಂಬಂಧವನ್ನು ವೃದ್ಧಿಸುವ ಮನೋಭಾವನೆಯನ್ನು ಇಟ್ಟುಕೊಂಡಿರುತ್ತಾಳೆ.

ಸಣ್ಣ ಶಾಂವಿಗಿ ಒಲ್ಲ ಚಿನ್ನಿಸಕ್ಕರಿ ಒಲ್ಲ
ಹೆಣ್ಣೆಂಬ ಸೆಬುದ ಬಿಡವೊಲ್ಲ। ನನ ತಮ್ಮ
ಹೆಣ್ಣ ಕೊಡತೀನಿ ಉಣ್ಣೇಳ

ಸಾಮಾನ್ಯವಾಗಿ ಎಲ್ಲ ವರ್ಗದ ಹೆಣ್ಣುಮಕ್ಕಳಲ್ಲಿ ಕಾಣುವ ಮನೋಭಾವ ಇದು. ಇಲ್ಲಿ ಎರಡು ಸಂಗತಿಗಳನ್ನು ಗಮನಿಸಬೇಕು: ಒಂದು ತನ್ನ ತವರಿನ ಸಂಬಂಧವನ್ನು ಮುಂದುವರೆಸುವುದು, ಎರಡು ಈ ಸಂಬಂಧ ತನಗೆ ಹೆಚ್ಚು ಸುರಕ್ಷತೆಯನ್ನು ಒದಗಿಸುವುದೆಂದು ಭಾವಿಸುವುದು. ಹೀಗಾಗಲು ಕಾರಣವೆಂದರೆ, ತಾನು ಜನ್ಮ ತಳೆದ ಮನೆಯಿಂದ ಹೊರಗಾಗುವ ಹೆಣ್ಣು ಯಾವಾಗಲೂ ತನ್ನ ಸುರಕ್ಷತೆಯ ಬಗ್ಗೆ ಯೋಚಿಸುವುದು, ಅದನ್ನು ತನ್ನ ತವರಿನಲ್ಲಿಯೇ ಕಾಣುವುದು ಸಹಜವೆಂದು ತೋರುತ್ತದೆ. ಇದು ಭಾರತೀಯ ಸಮಾಜದಲ್ಲಿ ಎದ್ದು ಕಾಣುವ ಸಂಗತಿ.

ತನ್ನ ತಂದೆಯ ನಂತರ ಅವನ ಜವಾಬ್ದಾರಿಯನ್ನು ಅಣ್ಣನಲ್ಲಿ ನೋಡುವಂತೆ, ತನ್ನ ತಾಯಿಯ ಜವಾಬ್ದಾರಿಯನ್ನು ತನ್ನ ಅತ್ತಿಗೆಯಲ್ಲಿ ಕಾಣಲು ಬಯಸುವುದು ಸಹಜವಾದ ಮಾನಸಿಕ ಸ್ಥಿತಿ. ಆದರೆ ಆಕೆ ಕೇವಲ ಅಣ್ಣನ ಹೆಂಡತಿಯಾಗಿ ಕಾಣುವುದು ನಮ್ಮ ಕೌಟುಂಬಿಕ ಬಿಕ್ಕಟ್ಟುಗಳಲ್ಲಿ ಎದ್ದು ಕಾಣುವ ಸಂಗತಿ. ಈ ಕೊರತೆಯ ಅರಿವು ಮೂಡಿ, ಈ ಕಂದಕದ ಭಾವ ಒಬ್ಬ ಸಹೋದರಿಯಲ್ಲಿ ಮೂಡದಂತೆ ಆಗಲು ಭಾರತೀಯ ಸಮಾಜದಲ್ಲಿ ಇನ್ನೂ ಸಾವಿರ ವರ್ಷ ಬೇಕಾಗಬಹುದೇನೋ.

ಕಣ್ಣೀಗಿ ಮೂಗೀಗಿ ಎರಡೇನ ಅತ್ತೀಗಿ
ನಾ ನನ್ನ ಅಣ್ಣ ಎರಡೇನ। ಅತಿಗೆಮ್ಮ
ನಿನ್ನಿಂದ ಅಣ್ಣ ಎರಡಾದ

ಇದು ಭಾರತೀಯ ಸಂದರ್ಭದಲ್ಲಿ ಎಲ್ಲ ಕುಟುಂಬಗಳಲ್ಲಿ ಕಾಣುವ ಸಹಜವಾದ ಸ್ಥಿತಿ. ಈ ಕಂದರ ದೂರಾಗಲು ನಮ್ಮ ಸ್ತ್ರೀಯರಲ್ಲಿ ಒಂದಿಷ್ಟು ಹೊಂದಾಣಿಕೆಯ ಅರಿವು ಮೂಡುವುದು ಅವಶ್ಯವೆಂದು ತೋರುತ್ತದೆ. ನಮ್ಮ ಸಮಾಜ ಪುರುಷ ಪ್ರಧಾನವಾದರೂ ನಮ್ಮ ಕುಟುಂಬಗಳು ಸ್ತ್ರೀ ಪ್ರಧಾನವಾಗಿವೆ. ಸ್ತ್ರೀಯರಲ್ಲಿ ಹೆಚ್ಚು ಹೆಚ್ಚು ಅರಿವು ಮೂಡಿದಷ್ಟು ನಮ್ಮ ಕುಟುಂಬಗಳು ಹೆಚ್ಚು ಹೆಚ್ಚು ಬಲಿಷ್ಠವಾಗುತ್ತವೆ.

ತಾಯಿಮಕ್ಕಳು ಜೋಡು ತಾಳಿಸಾಮಾನು ಜೋಡು
ನಾನು ನಮ ತಂಗಿ ಸಮಜೋಡು । ಬರುವಾಗ
ಕಂಡವರು ಕರೆದು ಕೇಳ್ಯಾರ

ಅಣ್ಣ-ತಮ್ಮರು ಒಂದೊಂದು ಸಲ ದೂರಾದರೂ ಅಕ್ಕ-ತಂಗಿಯರ ಸಂಬಂಧಗಳು ಮಾತ್ರ ಗಟ್ಟಿಯಾಗಿಯೇ ಇರುವುದು ಸಾಮಾನ್ಯವಾಗಿ ಕಾಣುತ್ತದೆ. ಸ್ತ್ರೀಯರಲ್ಲಿ ಇದು ಸಾಮಾನ್ಯವಾಗಿ ಕಂಡುಬರುವ ಮನೋಭಾವ.

ಗಂಡನ ಮನೆಯ ಸಂಬಂಧಗಳು :

ಗಂಡನ ಮನೆಯನ್ನು ಅತ್ತೆಯ ಮನೆ ಎಂದೂ ಕರೆಯಲಾಗುತ್ತದೆ. ಆಗಾಗ ಅತ್ತೆ-ಮಾವರ ಮನೆ ಎಂದೂ ಅನ್ನಲಾಗುತ್ತದೆ. ಗಂಡಸರು ಹೆಚ್ಚಾಗಿ ಮನೆಯ ಹೊರಗೆ

ಇರುವವರು. ಯಾವಾಗಲೂ ಮನೆಯಲ್ಲಿ ಸದಾ ಕೂಡಿ ಇರಬೇಕಾದವರು ಸ್ತ್ರೀಯರು. ಇಂಥಲ್ಲಿ ಸಹಜವಾಗಿಯೇ ಭಿನ್ನಾಭಿಪ್ರಾಯಗಳು ಮೂಡುತ್ತವೆ. ಸಾವಕಾಶವಾಗಿ ಮಗನನ್ನು, ಮನೆಯ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತ ಹೋಗುವ ಅತ್ತೆ ಮಾನಸಿಕವಾಗಿ ಒಂದಿಷ್ಟು ಕಿರಿಕಿರಿಗೆ ಒಳಗಾಗುವುದು ಸಹಜ. ಇದನ್ನು ಸಹಿಸಿಕೊಂಡು ಇರುವ ಅತ್ತೆ ಇದ್ದಲ್ಲಿ ಒಡಕುಗಳು ಎದ್ದು ಕಾಣಲಾರವು. ಆದರೆ ಮಗ–ಸೊಸೆ–ಅತ್ತೆ ಈ ಸಂಬಂಧಗಳಲ್ಲಿ ಸ್ವಲ್ಪವೇ ಹೊಂದಾಣಿಕೆಯ ಕೊರತೆ ಕಂಡರೂ ಅದು ಕುಟುಂಬದ ನೆಮ್ಮದಿಗೆ ಭಂಗ ತರುತ್ತದೆ. ಕೌಟುಂಬಿಕ ಸಂಬಂಧಗಳು ಹಿಗ್ಗುವ ಸ್ವಭಾವವುಳ್ಳ ರಬ್ಬರ್‌ನಂತೆ. ಸ್ವಲ್ಪವೇ ಜಾಸ್ತಿಯಾದರೂ ಪರಿಣಾಮ ಭಿನ್ನವಾಗುತ್ತದೆ.

ಸಕ್ಕರಿ ಹೇರಿಕೊಂಡು ಸೊಲಗಕ್ಹೋಗೂ ಜಾಣ
ನಮ್ಮವ್ವಗ್ಹೇಳೊ ಮರಿಬ್ಯಾಡ । ಅತ್ತಿಮನಿ
ಬೆಳದಿಂಗಳು ನಮಗ ಬಿಸಿಲಾಯ್ತು

'ಬೆಳದಿಂಗಳು ನಮಗ ಬಿಸಿಲಾಯ್ತು' ಎನ್ನುವ ರೂಪಕವನ್ನು ಗಮನಿಸಬೇಕು. ಮೈಮನಸ್ಸುಗಳಿಗೆ ಆಹ್ಲಾದವನ್ನುಂಟು ಮಾಡುವ ಬೆಳದಿಂಗಳು ತನಗೆ ಸಹಿಸಿಕೊಳ್ಳಲು ಸಾಧ್ಯವಾಗದಂತಾಗಿದೆ. ಇದೊಂದು ಅದ್ಭುತವಾದ ರೂಪಕ. 'ಬೆಳದಿಂಗಳು ನಮಗ ಬಿಸಿಲಾಯ್ತು' ಇದನ್ನು ಬಿಚ್ಚಿ ಹೇಳುವುದು ಹೆಚ್ಚು ತೊಂದರೆಯಲ್ಲ. ಆದರೆ ಅದನ್ನು ಬಿಚ್ಚಿದರೆ ಈ ಮಾತಿನಲ್ಲಿರುವ ಗಂಭೀರತೆಗೆ ಭಂಗಬರುತ್ತದೆ ಎಂಬ ಭಾವ ಮೂಡುತ್ತದೆ. ತನ್ನವ್ವನಿಗೆ ಸುದ್ದಿ ಮುಟ್ಟಿಸಬೇಕು. 'ಅತ್ತಿಮನಿ' ಸ್ಥಿತಿ ಹೀಗಾಯಿತು ಎಂದು. ಆ ಮನೆಯಲ್ಲಿ ನಿಜವಾದ ಬೆಳದಿಂಗಳು ಮುಖ್ಯವಾಗಿ ತನ್ನ ಗಂಡ ಮತ್ತು ಮನೆಯ ಇಡೀ ಸಂಬಂಧಗಳು ಸೃಷ್ಟಿಸುವ ವಾತಾವರಣ. ಅತ್ತೆ–ಸೊಸೆ ಸಂಬಂಧಗಳ ಹೊಂದಾಣಿಕೆ ಬಿಸಿಲನ್ನೂ ಬೆಳದಿಂಗಳನ್ನಾಗಿಸುವ ಶಕ್ತಿಯನ್ನು ಹೊಂದಿರುತ್ತದೆ. ಆದರೆ ಹೊಂದಾಣಿಕೆಯ ಅಂಶಗಳು ಕಡಿಮೆಯಾದಾಗ ಆ ಸಂಬಂಧಗಳು ದೂರಸರಿಯುತ್ತವೆ. ಇದರಿಂದ ಇಡೀ ಕುಟುಂಬದ ಬಂಧ ಸಡಿಲಾಗುತ್ತದೆ. ಪರಿಣಾಮ ಏನೂ ಆಗಬಹುದು. ಅದನ್ನು ಬಾಯಿಬಿಚ್ಚಿ ಹೇಳಲು ಸಾಧ್ಯವಿಲ್ಲದ ಸ್ಥಿತಿಯನ್ನು ಇಲ್ಲಿ ಕಾಣುತ್ತೇವೆ.

ಅತ್ತಿಯ ಮನೆಯಲ್ಲಿ ಮತ್ತೆ ಹೊಂದಾಣಿಕೆ ಇರಬೇಕಾದುದು ನೆಗೆಯಣ್ಣಿಯರಲ್ಲಿ.

ಹಣ್ಣು ಮೆಣಸಿನಕಾಯಿ ಕಣ್ಣೀಗಿ ಕೆಂಪಗ
ಸಣ್ಣಕ್ಕಿ ಏನ ನೇಗೆಣ್ಣಿ । ಆಕಿ ಮಾತು
ಬೆಣ್ಣ್ಯಾಗ ಮುಳ್ಳು ಮುರಿದ್ಹಂಗ

ಬೆಣ್ಣೆಯಲ್ಲಿ ಮುಳ್ಳುಮುರಿಯುವಂತಹ ಮಾತುಗಳು ಕೌಟುಂಬಿಕ ಸಂಬಂಧಗಳಲ್ಲಿ ಹುಳಿ ಹಿಂಡುತ್ತವೆ.

ಹಚ್ಚೀದ ಮಾತೀಗಿ ಹರಿವ ಗಂಗ್ಯೆರಡಾಗಿ
ಇಚ್ಚುಳ್ಳ ಮನವು ವಿಷವಾಗಿ ।ಒಳಗೊಳಗ
ಹಚ್ಚಿದವರ್ಯಾರ ಕದನವ

ಗರತಿಯ ಸೂಕ್ಷ್ಮ ದೃಷ್ಟಿಯನ್ನು ಗಮನಿಸಬೇಕು. ಎಲ್ಲವೂ ಎದುರಿಗೆ ನಡೆಯುತ್ತಿದ್ದರೂ ಯಾವುದನ್ನೂ ತಡೆಯುವ ಸ್ಥಿತಿಯಲ್ಲಿ ಯಾರೂ ಇರುವುದಿಲ್ಲ. 'ಈ ಒಳಗೊಳಗೇ ಹಚ್ಚುವ' ಅನಾಹುತಗಳು ನಡೆದೇ ಹೋಗುತ್ತವೆ. ನೋಡನೋಡುತ್ತಲೇ ಕುಟುಂಬ ಹೋಳಾಗಿ ಹೋಗುತ್ತದೆ.

ಅರಸು ತೂಕದ ನಲ್ಲ ಗಳಿಸೂವ ಮೈದೂನ
ನಡಿಸಿಕೊಳುವತ್ತಿ ಸಿರಿಗಂಗಿ । ಮನಿಯಾಗ
ಬದುಕು ಮಾಡುವುದು ಅರಿದೇನ

ಕೌಟುಂಬಿಕ ಸೌಖ್ಯ ಇರಲು ಈ ಮೇಲಿನ ಗುಣಗಳು ಕೂಡಿಬರಬೇಕು.

ಸತಿ–ಪತಿ :

ಹಚ್ಚಡದ ಪದರಾಗ ಅಚ್ಚ ಮಲ್ಲಿಗಿ ಹೂವ
ಬಿಚ್ಚಿ ನನ ಮ್ಯಾಲ ಒಗೆವಂಥ। ರಾಯರನ
ಬಿಟ್ಟ್ಯಾಂಗ ಬರಲೆ ಹಡೆದವ್ವ

ಗಂಡ–ಹೆಂಡರಲ್ಲಿ ಪ್ರೀತಿ ವಿಶ್ವಾಸಗಳು ಕುದುರಿದಂತೆ ಸ್ತ್ರೀ ತವರು ಮನೆಯನ್ನು ಬಿಟ್ಟು ಗಂಡನ ಮನೆಯಲ್ಲಿ ಇರಲು ಬಯಸುವುದು ಸಹಜ. ಈ ಗಂಡಹೆಂಡರಲ್ಲಿ ಕಾಣುವ ಪರಸ್ಪರ ವಿಶ್ವಾಸ ಪ್ರೀತಿಗಳಿಂದಲೇ ಒಂದು ಮನೆಯ ಘನತೆ ಗೌರವಗಳು ಹೆಚ್ಚಾಗುವುದು, ಆ ಮನೆಯ ವಂಶಾಭಿವೃದ್ಧಿಯಾಗುವುದು. ಸಂಬಂಧಗಳು ಬಿಗಿಯಾಗುವುವು. ಬಿಸಿಲು ಬೆಳದಿಂಗಳಾವುದು. ಹೀಗಾಗಿ ಕೌಟುಂಬಿಕ ತತ್ತ್ವಜ್ಞಾನದಲ್ಲಿ ಗಂಡ–ಹೆಂಡರಲ್ಲಿ ಬಿಗಿ ಬಂಧನ ಬೆಳೆಯುವುದು ಅವಶ್ಯವೆನಿಸುತ್ತದೆ. ಇದು ಬದುಕಿನ ಬಹುಮಹತ್ವದ ತತ್ತ್ವಜ್ಞಾನ ಎಂಬುದರಲ್ಲಿ ಎರಡು ಮಾತಿಲ್ಲ. ಅದಕ್ಕಾಗಿಯೇ ಶರಣರು ಈ ಸಾಮಾನ್ಯರ ಅರಿವನ್ನು 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದೂ, 'ದೇವರ ಮುಂದೆ ನಂದಾ ದೀಪ ಉರಿದಂತೆ' ಎಂದೂ ವರ್ಣಿಸುತ್ತಾರೆ.

ಗಂಡಹೆಂಡಿರಲ್ಲಿ ಜಗಳ ಹೇಗಿರಬೇಕು, ಹೇಗಿರುತ್ತದೆ ಎಂಬುದನ್ನು ಒಂದು ತ್ರಿಪದಿ ಹೇಳುತ್ತದೆ.

ಗಂಡಹೆಂಡರ ಜಗಳ ಗಂಧತೀಡಿಧಾಂಗ
ನಿಂಗಕ ನೀರು ಎರೆದಾಂಗ । ಹಿರಿಹೊಳೆಯ
ಗಂಗವ್ವ ಸಾಗಿ ಹರಿದಂಗ

ಗಂಡ ಹೆಂಡಿರ ಸಂಬಂಧ ಇಷ್ಟೊಂದು ಗಂಭೀರವಾಗಿರಬೇಕು, ಅರ್ಥಪೂರ್ಣವಾಗಿ ಇರಬೇಕು. ಪರಸ್ಪರ ಭಕ್ತಿಯಿಂದ ಕೂಡಿರಬೇಕು. ಹೀಗಾದಾಗ ಗಂಡ ತಪ್ಪಿ ನಡೆದರೂ ಅದನ್ನು ಪ್ರೀತಿಯಿಂದ ಬಗೆಹರಿಸಿಕೊಳ್ಳಬಹುದು ಎಂಬುದು ಗರತಿಯ ಅನಿಸಿಕೆ.

ರಾಯ ಬರತಾರಂತ ರಾತ್ರೀಲಿ ನೀರಿಟ್ಟ
ರನ್ನಬಚ್ಚಲಕ ಮಣಿ ಹಾಕಿ। ಕೇಳೇನ
ಸಣ್ಣವಳ ಮ್ಯಾಲ ಸಂವತ್ಯಾಕ

ಕುಟುಂಬ ಜೀವನದಲ್ಲಿ ಪರಹೆಣ್ಣಿನ ಪ್ರವೇಶವಾಗುವುದು, ಪರಗಂಡಿನ ಪ್ರವೇಶವಾಗುದು ಅಪರೂಪಕ್ಕೆ ನಡೆಯುವ ಸಂದರ್ಭ. ಆ ಸಂದರ್ಭದಲ್ಲಿ ಹೆಣ್ಣು ಸೈರಿಸಿಕೊಳ್ಳಬಲ್ಲಳು. ಸಂಧಾನ ಮಾಡಿಕೊಳ್ಳಲು ಬಯಸುವಳು. ಆದರೆ ಗಂಡು ಇಂತಹ ಸೈರಣೆಯನ್ನು ಹೊಂದಿದ ಉದಾರಣೆಗಳು ನಮ್ಮಲ್ಲಿಲ್ಲ.

ಬಂಜೆತನ :

ಗಂಡ–ಹೆಂಡಿರ ನಡುವೆ ಅಷ್ಟೆ ಅಲ್ಲ ಬಿಟ್ಟು ಬಂದ ಮನೆಯ ಸಂಬಂಧವನ್ನು ಸ್ವಲ್ಪ ಮರೆಮಾಡಿ, ಬಂದ ಮನೆಯಲ್ಲಿ ಸಂಬಂಧವನ್ನು ಕುದುರಿಸುವ ಒಂದೇ ಒಂದು ಅವಕಾಶವೆಂದರೆ ಅದು ತಾಯಿಯಾಗುವ ಸಂಬಂಧದಲ್ಲಿ. ಹೆಣ್ಣು ತಾಯಿಯಾಗಲು ಬಯಸುವಲ್ಲಿ ಈ ಮಾನಸಿಕ ಬೇಡಿಕೆಯೂ ಇರುತ್ತದೆ. ಅದಕ್ಕಿಂತ ಮುಖ್ಯವೆಂದರೆ ತನ್ನ ವಂಶಾಭಿವೃದ್ಧಿ. ಈ ವಂಶಾಭಿವೃದ್ಧಿಯ ಕೆಲಸ ನಡೆಯಲಿಲ್ಲವೆಂದರೆ ಅದರ ಬಹುಪಾಲು ಹೊಣೆ ಹೊರುವಾಕೆ ಸ್ತ್ರೀಯಳೆ ಆಗಬೇಕಾದ ಸ್ಥಿತಿಯಲ್ಲಿ ಹುಟ್ಟಿದ ತ್ರಿಪದಿಗಳಿವು.

ಸ್ಥಿತಿ :

ಬಾಲಕರಿಲ್ಲ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ। ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ

ಬಯಕೆ :

ಕಂದನ ಕುಡು ಶಿವನೆ ಬಂಧನ ಬಡಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ

ಸ್ಥಿತಿ :

ಬಂಜಿಬಾಗಿಲ ಮುಂದ ಅಂಜೂರಿ ಗಿಡ ಹುಟ್ಟಿ
ಟೊಂಗಿಟೊಂಗೆಲ್ಲ ಗಿಣಿ ಕೂತು। ಹೇಳ್ಯಾವ
ಬಂಜಿ ನಿನ ಬದುಕ ಹೆರವರಿಗೆ

ಬಯಕೆ :

ವಿಠ್ಠಲನ ಗುಡಿ ಮುಂದ ಎಷ್ಟೊತ್ತು ನಿಂದರಲೆ
ಬಟ್ಟ ಕುಂಕುಮ ಬೆವತಾವ । ವಿಠ್ಠಲ
ಟೊಪ್ಪಿಗಿ ಮಗನ ದಯಮಾಡೊ

ಇಂದು ನಾವಿದನ್ನು ತಾಯಿಯಾಗುವ ಬಯಕೆ, ಮಕ್ಕಳ ಬಯಕೆ ಎಷ್ಟಿರುತ್ತದೆ ಎಂಬುದಕ್ಕೆ ಉದಾಹರಣೆ ಎಂದು ಇಟ್ಟುಕೊಳ್ಳಬಹುದಾಗಿದೆ. ಇಲ್ಲೂ ಮಕ್ಕಳಾಗದೇ ಇರುವುದಕ್ಕೆ ಹೆಣ್ಣೇ ಕಾರಣವೆಂಬ ನಂಬುಗೆ ಇರುವ ಕಾಲದ ಸತ್ಯ ಇದು. ಇಂದಿನ

ಕಾಲದಲ್ಲಿ ಇದು ಅಸತ್ಯವಾದರೂ ಮಕ್ಕಳ ಬಯಕೆ ಮಾತ್ರ ಎಲ್ಲರಿಗೂ ಇರುವಂತಹದೆ ಎಂಬುದರಲ್ಲಿ ಎರಡು ಮಾತಿಲ್ಲ.

ವೈಧವ್ಯ :

ಗಂಡ ಸತ್ತರಿನ್ನ ಗಂಧ ಕುಂಕುಮವ್ಯಾಕ
ಬಂಗಾರವ್ಯಾಕ ಬಳಿಯಾಕ । ಕೊರಳಿನ
ಸಿಂಗಾರ ಶಿವನೆ ಕಸಗೊಂಡ

ಬಯಕೆ :

ಗಂಡನಿಲ್ಲದ ಬಾಲಿ ದಂಡನಾಳಿದರೇನ
ಮುಂಡಿಯ ಹೂವು ಹೊಲತುಂಬ । ಅರಳಿದರ
ಚಂಡು ಹೂವಿನ ಹೋಲವ

ಹೀಗೆ 'ಗರತಿಯ ಹಾಡು' ಸಂಗ್ರಹವು ವಾಸ್ತವ ಜೀವನದ ತತ್ತ್ವಜ್ಞಾನವನ್ನು ಹೊಂದಿದೆ. ಒಂದು ರೀತಿಯಲ್ಲಿ ಇದು ಗರತಿಯ ಬದುಕನ್ನು ಬಿಚ್ಚಿಡುವ ಮಹಾಕಾವ್ಯವೇ ಆಗಿದೆ.

'ಗರತಿಯ ಹಾಡು' ಎಂಬ ಬೀಸುವ ಹಾಡುಗಳ ಸಂಗ್ರಹ ಪ್ರಕಟವಾದ ನಂತರ ಅಲ್ಲಿಯ ತ್ರಿಪದಿಗಳ ಕಾವ್ಯದ ಶಕ್ತಿಗೆ, ಆ ಕೃತಿಗೆ ಮುನ್ನುಡಿ, ಪ್ರಸ್ತಾವನೆ ಇತ್ಯಾದಿಗಳನ್ನು ಬರೆದ ಬೇಂದ್ರೆ, ಬಿಎಂಶ್ರೀ ಮುಂತಾದವರ ಮಾತುಗಳಿಗೆ ನಾಡಿನ ಪ್ರತಿಭಾವಂತರು ಪ್ರಭಾವಕ್ಕೊಳಗಾದುದು ಕಾಣುತ್ತದೆ. ಈ ಪ್ರಭಾವಕ್ಕೆ ಒಳಗಾಗಿ ಎಂಬಂತೆ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರು **'ಹಳ್ಳಿಯ ಹಾಡುಗಳು'** ಎಂಬ ತ್ರಿಪದಿಗಳ ಸಂಗ್ರಹವನ್ನು ೧೯೩೮ರಲ್ಲಿ ಪ್ರಕಟಿಸಿದರು. ಇಲ್ಲಿಯ ಸುಮಾರು ೧೨೫೦ ತ್ರಿಪದಿಗಳು ಹಾಸನ ಮತ್ತು ಮೈಸೂರು ಜಿಲ್ಲೆಗಳಿಂದ ಸಂಗ್ರಹಗೊಂಡಿವೆ. ಉತ್ತರ ಕರ್ನಾಟಕದಲ್ಲಿ ಬಿಳಿಜೋಳ ಮುಖ್ಯ ಆಹಾರವಾಗಿದ್ದು ಅವುಗಳನ್ನು ಬೀಸುವ ಕಾಲಕ್ಕೆ ತ್ರಿಪದಿಗಳು ಹುಟ್ಟುತ್ತವೆ ಮತ್ತು ಬಳಕೆಯಾಗುತ್ತವೆ. ದಕ್ಷಿಣ ಕರ್ನಾಟಕದ ಮುಖ್ಯ ಆಹಾರ ರಾಗಿ. ರಾಗಿಯನ್ನು ಬೀಸಿಯೇ ಹಿಟ್ಟು ಮಾಡಬೇಕು. ಹೀಗಾಗಿ ಅಲ್ಲಿಯ ತ್ರಿಪದಿಗಳನ್ನು ಹೆಣ್ಣುಮಕ್ಕಳು ರಾಗಿ ಬೀಸುವ ಕಾಲಕ್ಕೆ ಸೃಷ್ಟಿಮಾಡಿದವು ಮತ್ತು ಬಳಕೆ ಮಾಡುವಂಥವುಗಳಾಗಿವೆ. ಹೀಗಾಗಿ ಪ್ರದೇಶ ಬೇರೆಯಾದರೂ ಸಂದರ್ಭ ಒಂದೇ ಆಗಿದೆ.

"ಈ ಹಾಡುಗಳಲ್ಲಿ ಬಹುಭಾಗ ಹಳ್ಳಿಯ ಹಳಬರಿಂದ ಸಂಗ್ರಹಿದುದು. ಈಗಿನ ಪಡ್ಡೆ ಹುಡುಗರಾದ ಹಳ್ಳಿಯ ರೈತರಿಗೂ ರೈತಗಿತ್ತಿಯರಿಗೂ ಈ ಹಾಡುಗಳು ಚೆನ್ನಾಗಿ ಗೊತ್ತೇ ಆಗದೆ ಇರುವುದರಿಂದ ಈ ಸಂಗ್ರಹದಲ್ಲಿ ಅವರಿಂದ ನಮಗೆ ಯಾವ ಉಪಕಾರವೂ ಆಗಲಿಲ್ಲ" (ಮುನ್ನುಡಿ, ಪು.೫). ಈ ಮಾತುಗಳನ್ನು ಗಮನಿಸಿದರೆ ವಯಸ್ಸಾದವರಿಂದಲೇ ಹಾಡುಗಳನ್ನು ಸಂಗ್ರಹಿಸಿದ್ದು ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಯುವ ರೈತರಿಗೂ ಈ ಹಾಡುಗಳು ೧೯೩೮ರ ಸುಮಾರಿಗೇನೆ ಅಪರಿಚಿತವಾಗತೊಡಗಿದ್ದವು ಎಂಬ ಸಂಗತಿ ತಿಳಿದುಬರುತ್ತದೆ. ಈ ಸಂಗ್ರಹದ ತ್ರಿಪದಿಗಳನ್ನು ದೇವರು, ವರ್ಣನೆ, ಸಂಸಾರ ಎಂಬ

ಮೂರು ಮುಖ್ಯಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಮತ್ತೆ ಇವುಗಳಲ್ಲಿ ಹತ್ತಾರು ಪ್ರಕಾರಗಳನ್ನು ಮಾಡಿಕೊಳ್ಳಾಗಿದೆ. ಇಲ್ಲಿಯ ವಿಭಾಗಗಳನ್ನು, ಇಲ್ಲಿಯ ತ್ರಿಪದಿಗಳನ್ನು ನೋಡಿದರೆ 'ಗರತಿಯ ಹಾಡು' ಸಂಗ್ರಹದಂತಹ ಇನ್ನೊಂದು ಕೃತಿ ಇದು ಎನಿಸುತ್ತದೆ. ಇದರಲ್ಲಿಯೂ ಗರತಿಯು ತನ್ನ ಬಾಳಿನ ಅನುಭವಗಳನ್ನು, ಸಂಬಂಧದ ಸಂಗತಿಗಳನ್ನು ಹೇಳಿಕೊಂಡ ರೀತಿಯನ್ನೇ ನೋಡುತ್ತೇವೆ. ನಮಗಿರುವ ಒಂದು ಸಮಸ್ಯೆಯೆಂದರೆ ೧೯೩೮ರ ಪ್ರಕಟನೆಯಲ್ಲಿ ೭೫೦ ತ್ರಿಪದಿಗಳಿದ್ದವು. ಈಗ ನಮ್ಮ ಮುಂದಿರುವ ಮುದ್ರಣದಲ್ಲಿ (೨೦೦೯) ೧೧೫೦ ತ್ರಿಪದಿಗಳಿವೆ ಎಂದು ಸಂಪಾದಕರು ಬರೆದಿದ್ದಾರೆ. ಹೀಗೆ ಮಾಡಬಾರದಿತ್ತು ಎನಿಸುತ್ತದೆ. ಕೃತಿಯ ಪ್ರಾಚೀನತೆಯನ್ನು ಗಣಿಸಿ ಹೇಳುವ ಮಾತುಗಳಿಗೆ ಇಲ್ಲಿ ಅವಕಾಶ ಇಲ್ಲದಾಗುತ್ತದೆ. ೪೦೦ ತ್ರಿಪದಿಗಳಷ್ಟು ಹೆಚ್ಚಿಗೆ ಸೇರಿಸಿದಾಗ ಅರ್ಧದಷ್ಟು ತ್ರಿಪದಿಗಳು ಹೆಚ್ಚಿಗೆ ಸೇರಿದಂತಾಗಿ ಸಹಜವಾಗಿಯೇ ಮೂಲದ ಹೂರಣಕ್ಕೆ ಚ್ಯುತಿ ಬರುತ್ತದೆ. ಆಗಿನ ಎಂಟ್ಹತ್ತು ವರ್ಷಗಳಲ್ಲಿಯೇ ಇಂತಹ ಕೆಲಸ ನಡೆದಿದ್ದರು ಹೆಚ್ಚು ವ್ಯತ್ಯಾಸವೇನೂ ಕಾಣುತ್ತಿರಲಿಲ್ಲ. ಆದರೂ ಆಗಿನ ಕಾಲಕ್ಕೆ ಇಂತಹ ಒಂದು ಮಹತ್ವದ ಸಂಗ್ರಹವನ್ನು ಗೊರೂರರು ಪ್ರಕಟಿಸಿದ್ದು ಒಂದು ಐತಿಹಾಸಿಕ ದಾಖಲೆಯೇ ಆಗುತ್ತದೆ.

ಕರ್ನಾಟಕದ ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಅತ್ಯಂತ ಪ್ರಸಿದ್ಧ ಹೆಸರು ಕರಾಕೃ ಅವರದು. ಅವರು ಬೀಸುವ ಹಾಡುಗಳನ್ನು ಸಂಗ್ರಹಿಸಿ ೧೯೫೩ರಲ್ಲಿ **'ಆಯ್ದ ಮುತ್ತುಗಳು'** ಎಂಬ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ೧೪೯ ತ್ರಿಪದಿಗಳಿವೆ. ರಾಗಿ ಬೀಸುವಾಗ ಗರತಿಯರು ಹಾಡಿಕೊಳ್ಳುವ ತ್ರಿಪದಿಗಳು ಇಲ್ಲಿವೆ. ಇವುಗಳನ್ನು 'ಹಳ್ಳಿಯ ನೀತಿಮುಕ್ತಕಗಳು' ಎಂದು ಕರೆದಿದ್ದಾರೆ. ಕರಾಕೃ ಅವರು ತ್ರಿಪದಿಗಳಿಗೆ ಒಲದದ್ದು ಅವುಗಳಲ್ಲಿಯ ಸೊಗಡು-ಸೌಂದರ್ಯಗಳಿಗೆ. ಈ ಚಿಕ್ಕ ಕೃತಿಗೆ ವೆ.ಮುಂ.ಜೋಷಿ ಅವರು ಕೆಲವು ಮಾತುಗಳನ್ನು ಬರೆದಿದ್ದು, ಅಲ್ಲಿ ಅವರು ಹೀಗೆ ಹೇಳುತ್ತಾರೆ: "ಆರ್ಯರ ಜೀವನಕ್ಕೊಂದು ಕ್ರಮಬದ್ಧತೆಯನ್ನು ತರುವುದಕ್ಕೋಸ್ಕರ, ಕೃತಿ ಸ್ಮೃತಿ-ವೇದಗಳು ಅಸ್ತಿತ್ವದಲ್ಲಿ ಬಂದಂತೆ, ಅದ್ಕಕ್ಕೂ ಮುಂಚಿತವಾಗಿಯೇ ಒಂದು ವೈಶಿಷ್ಟ್ಯಪೂರ್ಣವಾದ ಸಮಾಜ ರಚನೆಯನ್ನು ಹೊಂದಿದ ನಮ್ಮ ಭಾಷಿಕರ ನುಡಿಮುತ್ತುಗಳು-ನಮ್ಮ ಸಾಮಾಜಿಕರಲ್ಲಿ ಒಂದು ಶಿಸ್ತು-ಸಂಪ್ರದಾಯತೆಯನ್ನು ಪರಂಪರಾಗತವಾಗಿ ಮುಂದುವರೆಸಿಕೊಂಡು ಬರುವಲ್ಲಿ ಸಹಾಯಕವಾದವು. ಆ ದೃಷ್ಟಿಯಿಂದ ನಮ್ಮ 'ಜಾನಪದ' ನಮ್ಮ ಜನಾಂಗದ 'ವೇದ'ವೇ ಆಗಿದೆ" (ಒಂದು ವಿಶ್ಲೇಷಣೆ, ಪು.೩). 'ಗಾದೆ ವೇದಕ್ಕೆ ಸಮಾನ' ಎಂಬ ಗಾದೆ ಮಾತು ಹೇಳುವ ಸತ್ಯಸಂಗತಿಯನ್ನು ಜೋಷಿ ಅವರು ಇಲ್ಲಿ ಬಿಚ್ಚಿ ಹೇಳಿದ್ದಾರೆ. "ಬೆಳಿಗ್ಗೆ ಎದ್ದಾಕ್ಷಣ 'ಆಹಾರ' ಸಿದ್ಧಗೊಳಿಸುವುದಕ್ಕಾಗಿ ನಮ್ಮ ಹೆಂಗಸರು ಬೀಸುವ ಕಲ್ಲಿನ ಮುಂದೆ ಕುಳಿತು ಬೀಸುವಾಗ ಆಗುವ ಆಯಾಸವನ್ನು ಕಳೆದುಕೊಳ್ಳುವುದಕ್ಕಾಗಿ ಹಾಡನ್ನು 'ಹಾಡತೊಡಗಿದರು'. ಈ ಹಾಡುಗಳಲ್ಲಿಯೂ ಸಮಾಜದ ಸ್ವಾಸ್ಥ್ಯ ಕಾಪಾಡಿಕೊಂಡು ಬರುವ ನೀತಿ ಪಾಠಗಳೇ ಕಾಣಸಿಗುತ್ತವೆ"(ಅದೆ,ಪು.೪). ಅಂತಹ ಹಾಡುಗಳ ಒಂದು ಸಂಗ್ರಹವೇ ಈ ಕೃತಿ. ಇಲ್ಲಿಯ ತ್ರಿಪದಿಗಳನ್ನು ವಿಷಯಾನುಸಾರ ಹೊಂದಿಸಿಲ್ಲ; ಕನಿಷ್ಠ ಅಕಾರಾದಿಯೂ ಇಲ್ಲ. ಈ ಕೃತಿಯ ಸಂಪಾದಕರು ಒಂದೆರಡು ಮಾತುಗಳನ್ನು ಬರೆದು,

ಈ ತ್ರಿಪದಿಗಳನ್ನು ಸಂಗ್ರಹಿಸಿದ್ದು ಎಲ್ಲಿ ಎಂತು ಎಂಬ ಒಂದಿಷ್ಟು ಮಾಹಿತಿಗಳನ್ನು ಕೊಟ್ಟಿದ್ದರೆ ಈ ಕೃತಿಗೆ ಇನ್ನೊಂದಿಷ್ಟು ಮಹತ್ವ ಬರತಿತ್ತು. ನನ್ನ ಕೈಯಲ್ಲಿ ೧೯೮೩ರಲ್ಲಿ ಪ್ರಕಟವಾದ ಪ್ರತಿ ಇದೆ. ಕೃತಿಯ ಹೊದಿಕೆಗೆ ಬೀಸುತ್ತ ಕುಳಿತ ಗರತಿಯ ಚಿತ್ರವಿದೆ. ಒಳಗೆ ಹಾಡುಗಳಿರುವ ಪ್ರತಿಪುಟಕ್ಕೆ ವಿವಿಧ ಭಂಗಿಯಲ್ಲಿರುವ ಸ್ತ್ರೀಯ ರೇಖಾ ಚಿತ್ರಗಳಿವೆ. ಇವೆಲ್ಲ ಆಕರ್ಷಕ ಗುಣಗಳಾಗಿ ಕಾಣುತ್ತವೆ.

ಗಂಡ ಒಳ್ಳೆಯವನೆಂದು ದಂಡೇಲಿ ಕೂರಬೇಡ
ಕೆಂಬಲ್ಲ ಬಿಟ್ಟು ನಗಬೇಡ।ತಂಗ್ಯಮ್ಮ
ನಮ್ಮ ತೌರಿಗೊಂದ್ಮಾತ ತರಬೇಡ
ಇಂತಹ ನುಡಿಮುತ್ತುಗಳಿಂದ ಈ ಕೃತಿ ತುಂಬಿದೆ.

ಗರತಿಯ ಹಾಡಿನ ಪ್ರಭಾವದಿಂದಾಗಿ ಗೋರೂರು ರಾಮಸ್ವಾಮಿ ಅಯ್ಯಂಗಾರ, ಕರಾಕೃ ಅಂಥವರು ಬೀಸುವ ಹಾಡಿನ ತ್ರಿಪದಿಗಳ ಸಂಗ್ರಹಕ್ಕೆ ಕೈಹಾಕಿ ಉತ್ತಮವಾದ ಸಂಗ್ರಹಗಳನ್ನು ಪ್ರಕಟಿಸಿದರು. ಶ್ರೀ ಮುದೇನೂರ ಸಂಗಣ್ಣನವರು ಬೀಸುವ ಹಾಡಿನ ತ್ರಿಪದಿಗಳ ಒಂದು ಸಂಗ್ರಹವನ್ನು ೧೯೭೭ರಲ್ಲಿ **'ನವಲು ಕುಣಿದಾವ'** ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಇದು 'ಗರತಿಯ ಹಾಡು' ಮುದ್ರಣಗೊಂಡ ೪೪ ವರ್ಷಗಳ ನಂತರ ಉತ್ತರ ಕರ್ನಾಟಕದಿಂದ ಬಂದ ಒಂದು ತ್ರಿಪದಿಗಳ ಸಂಗ್ರಹ. ೧೯೬೦ಕ್ಕಿಂತ ಮುಂಚೆ ಹರಿಹರ ನಗರದ ಸುತ್ತಮುತ್ತಲ ಪ್ರದೇಶದಿಂದ ಸಂಗ್ರಹಿಸಿಟ್ಟುಕೊಂಡಿದ್ದ ಸುಮಾರು ೭೦೦ ತ್ರಿಪದಿಗಳನ್ನು ಈ ಸಂಗ್ರಹದಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ ವೈಶಿಷ್ಟ್ಯವೆಂದರೆ ಇಲ್ಲಿಯ ಹಾಡುಗಳನ್ನು ೬೦ ಉಪಶೀರ್ಷಿಕೆಗಳಲ್ಲಿ ವಿಭಾಗಿಸಿಕೊಂಡಿರುವುದು.

ಶಿವಶಿವ ಎಂದರೆ ಶಿವ ನನ್ನ ಮನಿಯಾಗ
ಶಿವರೂಪ ನನ್ನ ಸಣ್ಣೆರಡು ।ಕಣ್ಣಾಗ
ಶಿವಪೂಜೆ ನನ್ನ ಮನದಾಗ

ಆದಷ್ಟು ಹೊಸ ತ್ರಿಪದಿಗಳನ್ನು ಆರಿಸಿ ಮುದ್ರಿಸುವ ಸಾಹಸವನ್ನು ಸಂಗಣ್ಣನವರು ಮಾಡಿರುವುದು ಕಂಡುಬರುತ್ತದೆ.

'ಗರತಿಯ ಹಾಡು' ಜಾಡಿನಲ್ಲಿಯೇ ೧೯೭೭ರಲ್ಲಿಯೇ ಪ್ರಕಟವಾದ ಇನ್ನೊಂದು ಮಹತ್ವದ ಬೀಸುವ ಹಾಡುಗಳ ಸಂಗ್ರಹ **'ಜನಪದ ತ್ರಿಪದಿಗಳು'** ಎಂಬುದು. ಇದರ ಸಂಪಾದಕರು ಶಾಂತಕುಮಾರಿ ಪಾಟೀಲ(ಡಾ. ಶಾಂತಾ ಇಮ್ರಾಪೂರ) ಅವರು. ಧಾರವಾಡ, ಬೆಳಗಾಂವ, ಬಿಜಾಪುರ, ರಾಯಚೂರು ಈ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಸಂಗ್ರಹಿಸಿದ ೪೩೦ ಉತ್ತಮವಾದ ತ್ರಿಪದಿಗಳು ಇಲ್ಲಿವೆ. ಇವುಗಳನ್ನು 'ಭಕ್ತಿ, ಬಾಂಧವ್ಯ, ಪ್ರೀತಿ–ಪ್ರಣಯ, ಇತರ ತ್ರಿಪದಿಗಳು' ಎಂಬ ನಾಲ್ಕು ಶೀರ್ಷಿಕೆಗಳಲ್ಲಿ ಇಲ್ಲಿಯ ತ್ರಿಪದಿಗಳನ್ನು ವಿಭಾಗಿಸಿಕೊಂಡಿದ್ದಾರೆ. 'ಬಾಂಧವ್ಯ' ವಿಭಾಗವೇ ಪ್ರಮುಖವಾಗಿದ್ದು. ಅದರಲ್ಲಿ 'ತಂದೆ–ತಾಯಿ–ಮಗಳು, ಅಕ್ಕ–ತಂಗಿ, ಅಣ್ಣ–ತಮ್ಮ, ತಾಯಿ–ಮಗ, ಅತ್ತೆ–ಸೊಸೆ, ಬೀಗ–ಬೀಗತಿ' ಎಂಬ ಆರು ವಿಧಗಳಲ್ಲಿ ತ್ರಿಪದಿಗಳನ್ನು ವಿಂಗಡಿಸಿಕೊಂಡಿದ್ದಾರೆ.

ಹೆಣ್ಣೀಗೆ ಹೋಗ್ವಾಗ ಹೆಣ್ಣೇನ ಮಾಡ್ತೀರಲಿ
ತುಪ್ಪ ಬಾನವ ಉಣತಿರಲಿ। ಹೆಣ್ಣಿನ ತಾಯಿ
ಉಮೇದದ ನಗೆಯ ನಗತಿರಲಿ

'ಗರತಿಯ ಹಾಡು' ತ್ರಿಪದಿಗಳ ಸಂಗ್ರಹ ಪ್ರಕಟವಾದ ನಂತರ "ಜನಪದ ಬಿಡಿ ತ್ರಿಪದಿಗಳಿಗೆ ಸಂಬಂಧಿಸಿದಂತೆ ಉತ್ತರಕರ್ನಾಟಕದಿಂದ ಬಂದ ಸಂಗ್ರಹಗಳಲ್ಲಿ ದಿ. ಶಿವೇಶ್ವರ ದೊಡ್ಡಮನಿ ಅವರ 'ನವಲೂರ ಮನೆಯಿಂದ', ಶ್ರೀ ಜ್ಯೋತಿ ಹೊಸೂರರ 'ಬೆರಸಿ ಇಟ್ಟೇನ ಬೆಲ್ಲದ ನೆನೆಗಡಲಿ' ಮತ್ತು ಶ್ರೀ ಮುದೇನೂರ ಸಂಗಣ್ಣನವರ 'ನವಿಲು ಕುಣಿದಾವ' ಮುಂತಾದ ಸಂಗ್ರಹಗಳು ಉತ್ಕೃಷ್ಟವಾದ ಬಿಡಿ ತ್ರಿಪದಿಗಳನ್ನು ಒಳಗೊಂಡಿರುವುದು ಗಮನಾರ್ಹ" (ಪ್ರ.ಪು.೪) ಎನ್ನುವ ಡಾ. ಶಾಂತಾ ಇಮ್ರಾಪೂರ ಅವರ ಮಾತು ಸರಿಯಾಗಿದೆ.

ಡಾ. ನಿಂಗಣ್ಣ ಸಣ್ಣಕ್ಕಿ ಅವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಹೊನಕುಪ್ಪಿ, ಕೌಜಲಗಿ, ಗೋಕಾಕ ಈ ಮೂರು ಗ್ರಾಮಗಳ ಹೆಣ್ಣುಮಕ್ಕಳಿಂದ ತ್ರಿಪದಿಗಳನ್ನು ಸಂಗ್ರಹಿಸಿ, **'ಗಿಳಿ ಕುಂತ ಕೂಗ್ಯಾವ'** ಎಂಬ ಸಂಗ್ರಹವನ್ನು ೧೯೯೮ರಲ್ಲಿ ಪ್ರಕಟಿಸಿದ್ದಾರೆ. ಇಲ್ಲಿಯ ತ್ರಿಪದಿಗಳನ್ನು ೨೪ ಶೀರ್ಷಿಕೆಗಳಲ್ಲಿ ವಿಭಾಗಿಸಿಕೊಂಡಿದ್ದಾರೆ. ಈ ವಿಭಾಗಗಳ ಹೆಸರುಗಳನ್ನು ಎಲ್ಲರಂತೆ ಇಟ್ಟುಕೊಳ್ಳದೆ ಹಾಡುಗಳಲ್ಲಿ ಬರುವ ಒಂದೊಂದು ಆಕರ್ಷಕ ಪದಗಳಿಂದಲೇ ಕರೆದಿದ್ದಾರೆ. 'ಗಿಳಿಕುಂತ ಕೂಗ್ಯಾವ, ಗಿಳಿರಾಮ, ಹುಡುಗಿಯರು, ಮಳೆರಾಜ, ನಿಂಬಿಯ ಬಣದ ಮ್ಯಾಗಳ' ಹೀಗಿವೆ ಇಲ್ಲಿಯ ವಿಭಾಗಗಳ ಹೆಸರುಗಳು. 'ಸಸಾರ ಸಂಸಾರ' ಎಂಬ ವಿಭಾಗವೇ ಸುದೀರ್ಘವಾಗಿದ್ದು, ೯೦ ಪುಟಗಳ ಪಠ್ಯದಲ್ಲಿ ೪೦ ಪುಟಗಳಷ್ಟು ಈ ವಿಭಾಗವೆ ಆವರಿಸಿದೆ. ಇಲ್ಲೆಲ್ಲ ಕೌಟುಂಬಿಕ ಸಂಬಂಧಗಳ ಕುರಿತು ತ್ರಿಪದಿಗಳಿವೆ. ಏನಿದ್ದರೂ ಇಲ್ಲಿಯ ತ್ರಿಪದಿಗಳು ಕೂಡ ಹೊಸ ತ್ರಿಪದಿಗಳೇ ಆಗಿವೆ.

ಈ ಕೃತಿಯ ವಿಶೇಷತೆ ಎಂದರೆ ಹೆಣ್ಣುಮಕ್ಕಳು ಬೀಸುವ ಹಾಡುಗಳನ್ನು ಹಾಡುವಾಗ ಕೆಲ ಸ್ವರಗತಿ(ಸೊಲ್ಲು)ಗಳನ್ನು ಹಚ್ಚಿ, ಅದೇ ಧಾಟಿಯಲ್ಲಿಯೇ ತ್ರಿಪದಿಗಳನ್ನು ಹಾಡುತ್ತಾರೆ. ನಿಂಗಣ್ಣ ಸಣ್ಣಕ್ಕಿ ಅವರು ಇಂತಹ ಸ್ವರಗತಿಗಳನ್ನು ಪಲ್ಲ, ಅನುಪಲ್ಲ ಎಂದು ಕರೆದಿದ್ದಾರೆ. ಈ ಸೊಲ್ಲುಗಳು ಪ್ರತಿ ಅರ್ಧ ತ್ರಿಪದಿಗೊಮ್ಮೆ ಪುನರಾವರ್ತನೆಗೊಳ್ಳುತ್ತವೆ. ಉದಾಹರಣೆಗೆ:

೮. ನನ ತಮ್ಮ

ನನಗ ನನ ತಮ್ಮ ಬಸವಣ್ಣ ।ಪಲ್ಲ।
ನನಗ ನನ ತಮ್ಮ ಬಸವಣ್ಣ
ಯವ್ವಾ ತಮ್ಮೆಲ್ಲಿದರಾದ ।ಅನುಪಲ್ಲ।
ಕಲ್ಲಿಗಿ ಮಕ್ಕಾಕಿ ಬಲ್ಲವನ ನೆನೆದೇನ
ಮಲ್ಲಿಗಿ ದಂಡಿ ಹೆಣದೇನ ....
ಯವ್ವಾ ತಮ್ಮೆಲ್ಲಿದರಾದ ।೧।

ಗುಡ್ಡದ ಮಾರ್‍ಯಾಗ ಗುಗ್ಗಳ ಹೊಗಿನ್ಯಾಕ
ದೊಡ್ಡವರು ಅಲ್ಲಿ ಇರತಾರ ....
ಯವ್ವಾ ತಮ್ಮೆಲ್ಲಿದರಾದ ।೨।

ದೊಡ್ಡವರು ಅವರ ಬಸವಣ್ಣನವರ
ದೊಡ್ಡತನವ ಅವರ ತೋರುವರ...
ಯವ್ವಾ ತಮ್ಮೆಲ್ಲಿದರಾದ ।೩।

ಈ ಮೇಲಿನ ಹಾಡಿನ ಭಾಗವನ್ನು ಗಮನಿಸಿ– ಪಲ್ಲ, ಅನುಪಲ್ಲ ಮುಗಿದ ನಂತರ ಬರುವ ೧ನೇ ನುಡಿ ಸ್ತುತಿಯಾಗಿದೆ. ಅದರ ರಚನೆ ಹೇಗಿದೆ ಎಂದು ನಂತರ ನೋಡೋಣ. ಈಗ ನುಡಿ ೨, ೩ ರನ್ನು ಗಮನಿಸಿ. ಅಲ್ಲಿರುವುದು ಒಂದು ತ್ರಿಪದಿ.

ಗುಡ್ಡದ ವಾರ್‍ಯಾಗ ಗುಗ್ಗಳ ಹೊಗಿನ್ಯಾಕ
ದೊಡ್ಡವರು ಅಲ್ಲಿ ಇರತಾರ।ಬಸವಣ್ಣನವರ
ದೊಡ್ಡತನವ ಅವರ ತೋರುವರ

ಈ ತ್ರಿಪದಿಯ ಹಾಡುಗಾರಿಕೆ ಸಂಪಾದಕರ ಅರಿವಿಗೆ ಇಲ್ಲ. ಹಾಗಿದ್ದರೆ ಅವರು ನುಡಿಗಳನ್ನು ಒಡೆದು ಕೊಡುವ ಗೋಜಿಗೆ ಹೋಗುತ್ತಿರಲಿಲ್ಲ. ಬದಲಾಗಿ ಸೊಲ್ಲು ಎಲ್ಲಿ ಪ್ರಯೋಗಗೊಳ್ಳುತ್ತದೆಂದು ಸೂಚಿಸುವಂತೆ ಮುದ್ರಿಸಬಹುದಿತ್ತು. ಬೀಸುವ ಹಾಡುಗಳ ನಿಜವಾದ ವೈವಿಧ್ಯತೆ ಇರುವುದು ಇಲ್ಲಿ. ಈಗ ಮೊದಲಿನ ಭಾಗ ಗಮನಿಸಿದರೆ ಅಲ್ಲಿಯೂ ಒಂದು ತ್ರಿಪದಿ ಇರುವುದು ಗಮನಕ್ಕೆ ಬರುತ್ತದೆ:

ಪಲ್ಲವಿ ಅನುಪಲ್ಲವಿ ಗಮನಿಸಿದರೆ ಅಲ್ಲಿ ಅರ್ಧ ತ್ರಿಪದಿ ಇದೆ. ಕೆಳಗೆ ಒಂದು ನುಡಿ ಹಾಕಿದಲ್ಲಿಯೂ ಅರ್ಧ ತ್ರಿಪದಿ ಇದೆ. ಎರಡೂ ಕೂಡಿ ಅಲ್ಲಿರುವುದು ಒಂದೇ ತ್ರಿಪದಿಯೆ.

ಕಲ್ಲಿಗಿ ಮಕ್ಕಾಕಿ ಬಲ್ಲವನ ನೆನೆದೇನ
ಮಲ್ಲಿಗಿ ದಂಡಿ ಹೆಣದೇನ । ನನಗ
ನನ ತಮ್ಮ ಬಸವಣ್ಣ ।

ಈಗ ಸೊಲ್ಲಿನ ಭಾಗ ಇರುವುದು **'ನನಗ ನನ ತಮ್ಮ ಬಸವಣ್ಣ/ಯವ್ವಾ ತಮ್ಮೆಲ್ಲಿದರಾದ'.** ಬೀಸುವ ಹಾಡಿನ ಧಾಟಿಗಳು, ಈ ಸೊಲ್ಲುಗಳ ಪ್ರಯೋಗದೊಂದಿಗೆ ಪ್ರಾರಂಭವಾಗುತ್ತವೆ. ಪ್ರತಿಯೊಂದು ಸೊಲ್ಲು ಒಂದೊಂದು ಧಾಟಿಯನ್ನು ಹೊಂದಿರುತ್ತವೆ. ಹೀಗಾಗಿ ಈ ಸೊಲ್ಲುಗಳು ಧಾಟಿಗಳನ್ನು ನಿಯಂತ್ರಿಸುತ್ತವೆ. ಬೀಸುವ ಕಲ್ಲಿನ ಧಾಟಿಗಳು ಅನೇಕ ನಮೂನೆಯಾಗಿವೆ. ಈ ಕೃತಿಯಲ್ಲಿ ಇಂತಹ ಅನೇಕ ಸೊಲ್ಲುಗಳು ಇರುವುದು ಕಂಡುಬರುತ್ತದೆ. ಬಹುಶಃ ಸೊಲ್ಲುಗಳು ಬದಲಾವಣೆಯಾಗಿ, ಧಾಟಿಗಳು ಭಿನ್ನವಾಗಿ, ಅದರ ಕೆಳಗೆ ಹಾಡಿದ ತ್ರಿಪದಿಗಳೆಲ್ಲವನ್ನೂ ಸೇರಿಸಿ ಒಂದು ಹಾಡೆಂದು ಸಂಪಾದಕರು ಭಾವಿಸಿದಂತೆ ತೋರುತ್ತದೆ. ಹೀಗಾಗಿ ತಾವು ಸಂಗ್ರಹ ಮಾಡಿದಂತೆಯೇ ಅವುಗಳನ್ನು ಪ್ರಕಟಿಸುವ ಕೆಲಸವನ್ನು ಸಂಪಾದಕರು ಮಾಡಿದ್ದಾರೆ. ಇಲ್ಲಿ ಬಳಕೆಯಾದ ಇನ್ನೂ ಕೆಲ

ಸೊಲ್ಲುಗಳು ಹೀಗಿವೆ:

೧. ಗಿಳಿ ಕುಂತ ಕೂಗ್ಯಾವ
೨. ನಿಂಬಿಯ ಬಣದ ಮ್ಯಾಗಳ
ಚಂದ್ರಾಮ ಚಂಡಾಡಿದ
೩. ಮಾತಿಗಿ ಮಲಕಿಲ್ಲ ರೀತಿಗಿ ತೊಡಕಿಲ್ಲ
ಯಾತರದಿಲ್ಲ ದರಕಾರ ಹಿಡಿ ಕಾಶಿದಾರಿ
೪. ಗುರುಧ್ಯಾನ ಅನ್ನು ನೀನು ಶಿವಧ್ಯಾನ ಅನ್ನು ನೀ
ಮಾಡುದ್ಯಾವಾಗ ನಿನಗ ಕೂಡುದ್ಯಾವಾಗ।
೫. ನನಗ ನನ ತಮ್ಮ ಬಸವಣ್ಣ
ಯವ್ವಾ ತಮ್ಮೆಲ್ಲಿದರಾದ
೬. ಹರಹರಾ ಏಳಯ್ಯಾ ಬೆಳಗಾದಾವು
೭. ಮಲ್ಲಿಗಿ ಅರಳ್ಯಾವ ಅಂಗಳದಾಗ
ಹೊಸಹೊಸ ಮಲ್ಲಿಗಿ ಅರಳ್ಯಾವ
೮. ಹಾಸೋಣ ಬಾರಕ್ಕ ಋಷಿ ಬಂದಾರ ಮನಿಗೆ
೯. ಸಾಧೂರ ಅಹುದವ್ವ ಇವರ
೧೦. ಸತ್ಯುಳ್ಳ ನನ ಗೋಪೆವ್ವ ನಿನ್ನ ಮರೆಯಲಿ ಹ್ಯಾಂಗ
೧೧. ಜಾಣೆ ನೀವು ಬಲ್ಲಿರೇನ
ಎಲ್ಲಾನು ಬೋಧಾ ತಂಗಿ ನೀವು ಬಲ್ಲಿರೇನ

ಇಂತಹ ಸ್ವರಗತಿಗಳ ಪ್ರಸ್ತಾಪವಿರುವ ಇನ್ನೊಂದು ಸಂಗ್ರಹ ನಮಗೆ ದೊರೆಯುತ್ತದೆ. 'ಕನ್ನಡ ತ್ರಿಪದಿ ಸಂಗ್ರಹ' ಎಂಬ ಬೀಸುವ ಹಾಡುಗಳ ಸಂಗ್ರಹವೊಂದನ್ನು ಡಾ. ಜಯಶ್ರೀ ದಂಡೆ ಅವರು ೨೦೧೨ ರಲ್ಲಿ ಪ್ರಕಟಿಸಿದ್ದಾರೆ. ತಮ್ಮ ತಾಯಿ ಶ್ರೀಮತಿ ಸುಮಿತ್ರಾದೇವಿ ಅಂಗಡಿ ಅವರು ಒಬ್ಬರೇ ಹಾಡಿದ ತ್ರಿಪದಿಗಳು ಇವಾಗಿವೆ. ಬೀಸುವ ಹಾಡಿನ ಸಂಗ್ರಹಗಳಲ್ಲಿ ಹೀಗೆ ಒಬ್ಬರೇ ಹಾಡಿದ ಹಾಡುಗಳ ಒಂದು ಸಂಗ್ರಹ ಕಾಣುವುದು ಇದೊಂದೆ. ಶ್ರೀಮತಿ ಸುಮಿತ್ರಾದೇವಿ ಅವರು ಅವಿಭಾಜಿತ ಬಿಜಾಪೂರ ಜಿಲ್ಲೆಗೆ ಸೇರಿದ, ಈಗ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಧನ್ನೂರ ಗ್ರಾಮದವರು. ಇವರು ಹಾಡಿದ ತ್ರಿಪದಿಗಳು ಹೆಚ್ಚಾಗಿ 'ಗರತಿಯ ಹಾಡು' ಸಂಗ್ರಹದ ತ್ರಿಪದಿಗಳಾಗಿರುವುದು ಗಮನಾರ್ಹ ಸಂಗತಿ. ಅಂದರೆ 'ಗರತಿಯ ಹಾಡು' ಸಂಗ್ರಹದ ತ್ರಿಪದಿಗಳು ಇವತ್ತಿಗೂ ಜನರ ನಾಲಿಗೆಯ ಮೇಲೆ ಇರುವುದು ಆಶ್ಚರ್ಯವೆನಿಸುತ್ತದೆ. ಅವುಗಳ ಜೊತೆಗೆ ಅನೇಕ ಹೊಸ ತ್ರಿಪದಿಗಳೂ ಇಲ್ಲಿವೆ. ಈ ಬಗೆಗೆ ಸಂಪಾದಕರು ಹೀಗೆ ವಿವರಿಸಿದ್ದಾರೆ: "ಇಲ್ಲಿಯ ತ್ರಿಪದಿಗಳನ್ನು ನನ್ನ ತಾಯಿ ಶ್ರೀಮತಿ ಸುಮಿತ್ರಾದೇವಿ ಅಂಗಡಿ ಅವರು ಹಾಡಿದ್ದಾರೆ. ಇಂದಿಗೂ ಬಿಜಾಪೂರ ಜಿಲ್ಲೆಯಲ್ಲಿ ೧೯೩೧ರಲ್ಲಿ ಪ್ರಕಟವಾದ ಗರತಿಯ ಹಾಡಿನ ಎಲ್ಲ ತ್ರಿಪದಿಗಳು ತುಂಬಾ ಪ್ರಚಾರದಲ್ಲಿವೆ. ಪ್ರಸ್ತುತ 'ಕನ್ನಡ ತ್ರಿಪದಿ ಸಂಗ್ರಹ' ಕೃತಿಯಲ್ಲಿ ಅನೇಕ ಹೊಸ ತ್ರಿಪದಿಗಳೂ ಮೊದಲನೆಯದಾಗಿ ಬೆಳಕು ಕಾಣುತ್ತಿವೆ. ಹೀಗಾಗಿ ಈ ಕೃತಿಗೆ ಮತ್ತೆ ಒಂದು ಮಹತ್ವ

ಇರುವುದನ್ನು ಕಾಣುತ್ತೇವೆ. ಅಂದರೆ ಸಾಹಿತ್ಯಿಕವಾಗಿ ತ್ರಿಪದಿಗಳು ಮರೆಯಲಾರದ ಪ್ರಕಾರ ಎನ್ನುವುದು ಒಂದು, ಮತ್ತು ಹೊಸದಾಗಿ ಅನೇಕ ತ್ರಿಪದಿಗಳು ಇಂದಿಗೂ ದೊರೆಯುತ್ತವೆ ಎಂಬುದು ಎರಡನೆಯದು"(ಸಂಪಾದಕರ ಮಾತು, ಪು.೬).

ಇಲ್ಲಿರುವ ೫೬೧ ತ್ರಿಪದಿಗಳನ್ನು ೨೩ ಭಾಗಗಳಲ್ಲಿ ವಿಂಗಡಿಸಿಕೊಂಡಿರುವುದು ಕಂಡುಬರುತ್ತದೆ. ಮುಖ್ಯವಾಗಿ ಗರತಿಗೆ ಎರಡು ಕುಟುಂಬಗಳ ಬದುಕು, ಸಂಬಂಧಗಳು ಅವಶ್ಯ. ತವರು ಮನೆಯ ರಕ್ತಸಂಬಂಧಿಗಳು ಹಾಗೂ ಗಂಡನ ಮನೆಯ ವೈವಾಹಿಕ ಸಂಬಂಧಿಗಳು ಹಾಗೂ ಹೊಟ್ಟಿಲಿ ಹುಟ್ಟಿದ ರಕ್ತ ಸಂಬಂಧಿಗಳು. ಇವರೆಲ್ಲರ ನಡುವೆ ಸ್ತ್ರೀಯ ಭಾವನೆಗಳೇನು? ಎಂಬ ಸಂಗತಿಗಳು ಕ್ರಮವಾಗಿ ಓದುಗರ ಅರಿವಿಗೆ ಬರುವಂತೆ ಸಂಪಾದನೆ ಮಾಡಿದ್ದು ಎದ್ದು ಕಾಣುತ್ತದೆ. ಅದರಲ್ಲೂ ಈ ಕೃತಿಯನ್ನು ವಿದ್ಯಾರ್ಥಿಗಳೂ ಮಕ್ಕಳೂ ಓದುವಂತಿರಲಿ ಎಂಬ ಭಾವನೆಯಿಂದ ಒಂದು ಅವಾಚ್ಯ ಪದವೂ ಕಾಣದ ತ್ರಿಪದಿಗಳನ್ನೇ ಕಣ್ಣಿಟ್ಟು ಆಯ್ಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. **'ಗರತಿಯ ಹಾಡು'** ಕೃತಿಯ ನಂತರ ಅಂತಹದೇ ಇನ್ನೊಂದು ಕೃತಿಯಾಗಿ **'ಕನ್ನಡ ತ್ರಿಪದಿ ಸಂಗ್ರಹ'** ಕಾಣುತ್ತದೆ.

'ಹಾಲಸ್ವಾರಿಯು ಸುತ್ತ ಯಾಲಕ್ಕಿ ಬಿದ್ದಾವ' (೧೯೭೬) ಎಂಬ ತ್ರಿಪದಿಗಳ ಸಂಗ್ರಹವೊಂದನ್ನು ಶ್ರೀ ಎಸ್.ಎಂ.ಬಿದರಿ ಅವರು ಪ್ರಕಟಿಸಿದ್ದಾರೆ. "ನರಗುಂದದಲ್ಲಿದ್ದಾಗ ಸಮೀಪದ ಹಳ್ಳಿಗಳಿಗೆ ಹೋಗುವ ಸಂದರ್ಭ ಬರುತ್ತಿತ್ತು. ಅಲ್ಲಿಗೆ ಹೋದಾಗ ಕೆಲವು ಪದ್ಯಗಳು ದೊರಕಿದವು. ಹೋಳಿ ಹಬ್ಬದ ಸಮಯದಲ್ಲಿ ಸುಗ್ಗಿಯ ಕಾಲದಲ್ಲಿ ಹಂತಿ ಹೊಡಯುವಾಗ ಜನರು ಪದ್ಯಗಳನ್ನು ಹಾಡುತ್ತಿದ್ದರು. ಅವರು ಹಾಡುತ್ತಿರುವಾಗಲೇ ಕೆಲವನ್ನು ಬರದುಕೊಂಡೆ. 'ಹಾಡುಗಳು ಬೇಕಾಗಿವೆ ಹಾಡಿರಿ' ಎಂದು ಹಾಡಿಸಿ ಹೆಣ್ಣುಮಕ್ಕಳ ಕಡೆಯಿಂದ ಬರೆದುಕೊಂಡೆ. ಆದಾಗ್ಯೂ ನಾನು ಕೂಡಿಸಿದ ಪದ್ಯಗಳು ಅತ್ಯಲ್ಪ ಎಂದು ಹೇಳಬಯಸುವೆ. ನನಗೆ ದೊರಕಿದ ಒಟ್ಟು ಪದ್ಯಗಳು ೧,೪೦೦. ಹಲವಾರು ಪುಸ್ತಕಗಳಲ್ಲಿ ಪ್ರಕಟಗೊಂಡ ಪದ್ಯಗಳನ್ನು ತೆಗೆದುಹಾಕಿದಾಗ ೫೬೦ ಪದ್ಯಗಳು ಉಳಿದವು"(ಪ್ರಾರ್ಥನೆ,ಪು.೧-೨). ಈ ಕೃತಿಗೆ ಇಬ್ಬರು ಹಿರಿಯರು ಶ್ರೀ ಸಿಂಪಿ ಲಿಂಗಣ್ಣ ಅವರು ಮುನ್ನುಡಿ ಹಾಗೂ ಬೆಟಗೇರಿ ಕೃಷ್ಣಶರ್ಮ ಅವರು ಆಶೀರ್ವಚನ ಬರೆದಿದ್ದಾರೆ. ಸಿಂಪಿ ಲಿಂಗಣ್ಣನವರು ಈ ಕೃತಿಯಲ್ಲಿ ಬೀಸುವ, ಹಂತಿ ಹಾಗೂ ಹೋಳಿ ಹಾಡುಗಳ ಮಿಶ್ರಣ ಇದ್ದು, ಕೆಲವು ತೀರ ಅವಾಚ್ಯ ತ್ರಿಪದಿಗಳಿರುವುದನ್ನು ಗುರುತಿಸುತ್ತಾರೆ. ಪ್ರಕಟವಾಗದ ತ್ರಿಪದಿಗಳು ಇಲ್ಲಿರುವುದು ಗಮನಾರ್ಹ ಸಂಗತಿ.

* * *

ಬೀಸುವ ಹಾಡಿನ ಸಂಗ್ರಹಗಳು :

೧೯೩೧ : ಗರತಿಯ ಹಾಡು, (ಸಂ) ಹಲಸಂಗಿ ಚೆನ್ನಮಲ್ಲಪ್ಪ, ರೇವಪ್ಪ, ಲಿಂಗಣ್ಣ, –ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ–೧, ೧೧ನೇ ಮುದ್ರಣ,೨೦೧೨.

೧೯೩೮ : ಹಳ್ಳಿಯ ಹಾಡುಗಳು, (ಸಂ) ಗೋರೂರು ರಾಮಸ್ವಾಮಿ ಅಯ್ಯಂಗಾರ್, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು, ೨೦೦೯.

೧೯೫೩ : ಆಯ್ದ ಮುತ್ತುಗಳು, (ಸಂ) ಕರಾಕೃ, ಜನಪದ ಅಕ್ಯಾಡೆಮಿ, ಕದಂಬ ಕಾರ್ಡುರಸ್ತೆ, ರಾಜಾಜಿನಗರ, ಬೆಂಗಳೂರು, ೧೯೮೩.

೧೯೭೯ : ನವಲು ಕುಣಿದಾವ, ಮುದೇನೂರ ಸಂಗಣ್ಣ, –ಅಕ್ಷರ ಪ್ರಕಾಶನ, ಸಾಗರ, ಕರ್ನಾಟಕ ರಾಜ್ಯ.

೧೯೭೯ : ಜನಪದ ತ್ರಿಪದಿಗಳು, (ಸಂ) ಶಾಂತಕುಮಾರಿ ಪಾಟೀಲ, –ಚೇತನಾ ಪ್ರಕಾಶನ, ಧಾರವಾಡ.

೧೯೯೮ : ಗಿಳಿಕುಂತ ಕೂಗ್ಯಾವ, (ಸಂ)ಡಾ. ನಿಂಗಣ್ಣ ಸಣ್ಣಕ್ಕಿ, –ಜಾನಪದ ಮಂಟಪ, ಕಾಲಗತಿ ಪ್ರಕಾಶನ, ರಾಯಬಾಗ, ಜಿ. ಬೆಳಗಾವಿ.

೨೦೧೨ : ಕನ್ನಡ ತ್ರಿಪದಿ ಸಂಗ್ರಹ, (ಸಂ) ಡಾ. ಜಯಶ್ರೀ ದಂಡೆ, –ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***

೨. ಕುಟ್ಟುವ ಹಾಡುವಗಳು

ಸಮುದ್ರ ತೀರದ ಪ್ರದೇಶದಲ್ಲಿ: ಕುಟ್ಟುವ/ಬೀಸುವ/ಸಸಿ ನೆಡುವ ಸಂದರ್ಭಗಳಲ್ಲಿ ಬಳಕೆಯಾಗುವ ಹಾಡುಗಳನ್ನು ಇಲ್ಲಿ ಸಮೀಕ್ಷಿಸಲಾಗುವುದು. ಯಾವುದೇ ಕೆಲಸ ದೀರ್ಘಕಾಲದವರೆಗೆ ನಡೆಯುತ್ತಿದ್ದು, ಅಲ್ಲಿ ಲಯಬದ್ಧವಾದ ಒಂದು ಧ್ವನಿ ಹುಟ್ಟಿಕೊಳ್ಳುತ್ತಿದ್ದರೆ ಅಂಥಲ್ಲಿ ಜನಪದ ಹಾಡುಗಳು ಸೃಷ್ಟಿಯಾಗುತ್ತವೆ ಮತ್ತು ಬಳಕೆಯಾಗುತ್ತವೆ. ಬೀಸುವ ಕೆಲಸ ಮನೆಯಲ್ಲಿ ನಡೆಯುವಂತಹದು. ಆರಾಮವಾಗಿ ಕುಳಿತು, ರಾತ್ರಿ ಹೊತ್ತು, ಅಥವಾ ಬೆಳಗಿನ ಜಾವ ನಸುಕಿನಲ್ಲಿ ಬೀಸುವ ಕೆಲಸ ನಡೆಯುತ್ತಿತ್ತು. ಪ್ರಶಾಂತವಾದ ವಾತಾವರಣ. ಲಯಬದ್ಧವಾದ ಬೀಸುವ ಕೆಲಸ. ಬೀಸುವ ಕ್ರಿಯೆಯಿಂದ ಹುಟ್ಟಿಕೊಳ್ಳುವ ಬೀಸುವ ಕಲ್ಲಿನ ನಾದ. ಇವೆಲ್ಲ ಹಾಡು ಹುಟ್ಟಲು ಪ್ರೇರಣೆಯನ್ನೊದಗಿಸುವ ವಾತಾವರಣವನ್ನು ಹುಟ್ಟುಹಾಕುತ್ತವೆ. ಅಲ್ಲಿ ತ್ರಿಪದಿಗಳು ಹುಟ್ಟಿಕೊಳ್ಳುತ್ತವೆ. ಹಂತಿ ಕೆಲಸ ಅಡವಿಯಲ್ಲಿ ನಡೆಯುವಂಥದ್ದು. ಬೀಸುವ ಸಂದರ್ಭದ ವೇಳೆ ಮತ್ತು ರಚನೆಯನ್ನೇ ಹಂತಿಯ ಸಂದರ್ಭದಲ್ಲೂ ಕಾಣುತ್ತೇವೆ. ಹೀಗಾಗಿ ಇಲ್ಲಿ ಹಂತಿ ಹೊಡೆಯುವ ರೈತನಿಂದ ಸೃಷ್ಟಿಗೊಳ್ಳುವುದು ತ್ರಿಪದಿಯೆ.

ಉತ್ತರ ಕರ್ನಾಟಕದವರಿಗೆ ಸಮುದ್ರ ತೀರದಲ್ಲಿ ವಾಸಮಾಡುವ ಜನರ ಹೊಲಮನೆಯ ಕೆಲಸಗಳು ಅಷ್ಟಾಗಿ ಪರಿಚಯವಿರಲಾರವು. ಉತ್ತರಕರ್ನಾಟಕದಲ್ಲಿ ಹಂತಿಯಂತಹ ಒಂದು ಕ್ರಿಯೆ ಸಮುದ್ರತೀರದ ಹೊಲಗೆಲಸದಲ್ಲಿ ನಡೆಯುವುದು ನಮ್ಮ ಗಮನಕ್ಕೆ ಬರುತ್ತದೆ. ಭತ್ತ ಬೆಳೆಯುವ ಆ ಒಕ್ಕಲಿಗರು ಭತ್ತವನ್ನು ಕುಟ್ಟಿ ಅದರಿಂದ ಅಕ್ಕಿ ಬೇರ್ಪಡಿಸುವ ಕೆಲಸವನ್ನು ಮಾಡುತ್ತಾರೆ. ಈ ಕೆಲಸ ಅವರಲ್ಲಿ ದೊಡ್ಡ ಕೆಲಸ. ದೀರ್ಘಕಾಲದ ವರೆಗೆ ನಡೆಯುವ ದುಡಿಮೆ. ಭತ್ತ ಕುಟ್ಟುವ ಕೆಲಸವನ್ನು ಹೆಚ್ಚಾಗಿ ಹೆಣ್ಣುಮಕ್ಕಳೇ ಮಾಡುತ್ತಾರೆ. ಅಲ್ಲೂ ತ್ರಿಪದಿಗಳೇ ಹುಟ್ಟಿಕೊಂಡಿವೆ. ಉತ್ತರ ಕರ್ನಾಟಕದಲ್ಲಿ ಜೋಳ ಬೀಸುವ, ದಕ್ಷಿಣ ಕರ್ನಾಟಕದಲ್ಲಿ ರಾಗಿ ಬೀಸುವ ಕೆಲಸಗಳು ನಡೆಯುವಾಗ ಹೆಣ್ಣುಮಕ್ಕಳು ಹಾಡಿಕೊಳ್ಳುವ ತ್ರಿಪದಿಗಳಂತೆ ಸುಮುದ್ರತೀರದ ಭಾಗಗಳಲ್ಲಿ ವಿಶೇಷವಾಗಿ ಕಾರವಾರ ಜಿಲ್ಲೆಯಲ್ಲಿ ಗದ್ದೆಗಳಲ್ಲಿ ಕಣ ಮಾಡಿ, ಭತ್ತ ಕುಟ್ಟುವಾಗ ತ್ರಿಪದಿಗಳನ್ನು ಹಾಡುತ್ತಾರೆ. ಕನ್ನಡ ಭಾಷೆಯಲ್ಲಿಯೆ ತ್ರಿಪದಿಗಳು ಹುಟ್ಟಿಕೊಂಡಿವೆ. ಆ ಎಲ್ಲ ತ್ರಿಪದಿಗಳು, ಬೀಸುವ ಹಾಡುಗಳ ತ್ರಿಪದಿಗಳ ವಸ್ತು ವಿಷಯ ಭಾವನೆಗಳನ್ನೇ ಹೊಂದಿವೆ.

ಕಾರವಾರ ಜಿಲ್ಲೆಯ ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಎಲ್.ಆರ್.ಹೆಗಡೆ ಅವರು ಅಗ್ರಗಣ್ಯರು. ಅವರು ಜನಪದ ಸಾಹಿತ್ಯದ ಬಹುಬಗೆಯ ಸಾಹಿತ್ಯ ಪ್ರಕಾರಗಳನ್ನು ಸಂಗ್ರಹಿಸಿ, ಪ್ರಕಟಿಸಿದ ಹಿರಿಯರು. ಅವರು ಕುಟ್ಟುವ ಹಾಡುಗಳ ಮೂರು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಹಾಡುಂಟೇ ನನ್ನ ಮಡಿಲಲ್ಲಿ'(೧೯೭೧), 'ಹಾಲಿನ ತೆನೆ' (೧೯೭೭), 'ಮಾತಿನರಗಿಣಿಯೇ ನುಡಿದಾವೋ'(೧೯೭೯). ಈ ಮೂರೂ ಸಂಗ್ರಹಗಳು ಕುಟ್ಟುವ ಸಂದರ್ಭದಲ್ಲಿ ಬಳಕೆಯಾಗುವ ತ್ರಿಪದಿಗಳ ಸಂಗ್ರಹಗಳಾಗಿವೆ. ಹೊಲದಲ್ಲಿ ಮಾಡಿದ

ಕಣದಲ್ಲಿಯೇ ದೊಡ್ಡ ಒರಳಿನಲ್ಲಿ ಭತ್ತ ಹಾಕಿ, ಸುತ್ತಲೂ ಹೆಣ್ಣುಮಕ್ಕಳು ನಿಂತು ಭತ್ತವನ್ನು ಕುಟ್ಟಿ, ಅದರಿಂದ ಅಕ್ಕಿಕಾಳುಗಳನ್ನು ಬೇರ್ಪಡಿಸುವ ಕೆಲಸ ಮಾಡುತ್ತಾರೆ. ಇಲ್ಲಿ ಬಳಕೆಯಾಗುವ ಮುಖ್ಯ ಸಾಧನ ಒನಕೆ. ಭತ್ತವನ್ನು ಒರಳಿಗೆ ಹಾಕಿ ಒನಕೆಯಿಂದ ಕುಟ್ಟುವ ಕ್ರಿಯೆ ನಡೆಯುವುದರಿಂದ ಇಲ್ಲಿ ಬಳಕೆಯಾಗುವ ಹಾಡುಗಳಿಗೆ 'ಒನಕೆವಾಡುಗಳು' ಎಂಬ ಹೆಸರು ಬಂದಿದೆ.

ಎಲ್. ಆರ್. ಹೆಗಡೆ ಅವರು ತಮ್ಮ ಮೊದಲಿನ ಸಂಗ್ರಹ **'ಹಾಡುಂಟೇ ನನ್ನ ಮಡಿಲಲ್ಲಿ'** (೧೯೭೧) ಎಂಬ ಕೃತಿಯಲ್ಲಿ ೨೫೩ ತ್ರಿಪದಿಗಳನ್ನು, ೨೨ ವಿಭಾಗಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. ಇವುಗಳನ್ನು 'ಭತ್ತ ಮೆರಿಯುವ ಹಾಡುಗಳು' ಎಂದು ಕರೆಯುತ್ತಾರೆ. ಮೆರಿಯುವ ಎಂದರೆ ಕುಟ್ಟುವ ಎಂಬ ಅರ್ಥವಾಗುತ್ತದೆಂದು ತಿಳಿದುಬರುತ್ತದೆ. ಇಲ್ಲಿಯ ಹಾಡುಗಳನ್ನು ಕಾರವಾರ ಜಿಲ್ಲೆಯಲ್ಲಿ ವಾಸವಾಗಿರುವ ಹವ್ಯಕ, ನಾಮಧಾರಿ, ಹಾಲಕ್ಕಿ ಒಕ್ಕಲಿಗ, ಗಾಮೊಕ್ಕಲ ಈ ಸಮುದಾಯಗಳಿಗೆ ಸೇರಿದ ಹೆಣ್ಣುಮಕ್ಕಳಿಂದ ಸಂಗ್ರಹಿಸಲಾಗಿದೆ. ತಮ್ಮ ಮೊದಲ ತ್ರಿಪದಿಗಳ ಸಂಗ್ರಹ **'ಹಾಡುಂಟೇ ನನ್ನ ಮಡಿಲಲ್ಲಿ'** ಕೃತಿಗೆ 'ಉತ್ತರ ಕನ್ನಡದ ತ್ರಿಪದಿಗಳ ಸಂಗ್ರಹ' ಎಂದು ಕರೆದಿದ್ದರೆ, ಎರಡನೇ ಸಂಗ್ರಹ 'ಹಾಲಿನ ತೆನೆ' (೧೯೭೭) ಕೃತಿಗೆ 'ಒನಕೆವಾಡುಗಳ ಸಂಕಲನ' ಎಂದಿದ್ದಾರೆ. ಈ ಸಂಗತಿಗಳನ್ನು ಗಮನಿಸಿದರೆ, ಇಲ್ಲಿ ಬಳಕೆಯಾಗುವ ಛಂದಸ್ಸು ತ್ರಿಪದಿ, ಈ ಹಾಡುಗಾರಿಕೆಯ ಹೆಸರು 'ಒನಕೆವಾಡು'. ಬೀಸುವ ಸಂದರ್ಭದಲ್ಲಿ ಬೀಸುವ ಕ್ರಿಯೆಯೇ ಮುಖ್ಯವಾಗಿ 'ಬೀಸುವ ಹಾಡು'ಗಳೆಂದು ಕರೆದಂತೆ, ಭತ್ತದಿಂದ ಕಾಳುಗಳನ್ನು ಬೇರ್ಪಡಿಸಲು ಕುಟ್ಟುವ ಕ್ರಿಯೆ ಮುಖ್ಯವಾಗಿ ನಡೆಯುವುದರಿಂದ ಇಲ್ಲಿ ಬಳಕೆಯಾಗುವ ಹಾಡುಗಳನ್ನು 'ಕುಟ್ಟುವ ಹಾಡುಗಳು' ಎಂದಿರುವುದು ಸ್ವಾಭಾವಿಕವಾಗಿದೆ. ಭತ್ತ ಮೆರಿಯುವಲ್ಲಿ ಒನಕೆಯಿಂದ ಕುಟ್ಟುವ ಕ್ರಿಯೆ ಮುಖ್ಯವಾಗಿ ನಡೆಯುವದರಿಂದ, ಇಲ್ಲಿ ಬಳಕೆಯಾಗುವ ಹಾಡುಗಳಿಗೆ 'ಒನಕೆವಾಡು' (ಒನಕೆ+ಹಾಡು) ಎಂದಂತೆ ತೋರುತ್ತದೆ. ಬಿಡಿ ತ್ರಿಪದಿಗಳಲ್ಲದೆ, ತ್ರಿಪದಿಗಳಿಂದ ರಚಿತಗೊಂಡ ಕಥಾನಕಗಳನ್ನೂ ಇಲ್ಲಿ ಬಳಸುತ್ತಾರೆಂದು ತಿಳಿದುಬರುತ್ತದೆ. ಈ ಸಂಗತಿಗಳನ್ನು ಎಲ್.ಆರ್.ಹೆಗಡೆ ಅವರು **'ಹಾಡುಂಟೇ ನನ್ನ ಮಡಿಲಲ್ಲಿ'** (೧೯೭೧) ಕೃತಿಯ ಪೀಠಿಕೆಯಲ್ಲಿ ಹೀಗೆ ವಿವರಿಸುತ್ತಾರೆ: "ತ್ರಿಪದಿಯಲ್ಲಿ ಬರೆದ ಹಾಡುಗಳು ಭತ್ತವನ್ನು ಕುಟ್ಟುವಾಗ ಹೇಳಲು ಅನುಕೂಲವಾಗುತ್ತವೆ. ಕ್ರಿ.ಶ. ೮೦೦ರಲ್ಲಿದ್ದ ಗಂಗರಾಜ ಶಿವಮಾರನ 'ಗಜಾಷ್ಟಕ' ಓವನಿಗೆಯೂ ಒನಕೆವಾಡೂ ಆಗಿದೆಯೆಂದೂ ಶಾಸನದಲ್ಲಿದೆಯಷ್ಟೇ? ಆ ಗಜಾಷ್ಟಕವು ತ್ರಿಪದಿಯ ಛಂದಸ್ಸಿನಲ್ಲಿದ್ದುದೇ ಅದು ಒನಕೆವಾಡಿನಂತೆ ರೂಢವಾಗಲು ಕಾರಣವಾಗಿದ್ದಿರಬೇಕು. ಚಾಲುಕ್ಯರಾಜನಾದ ಮೂರನೆಯ ಸೋಮೇಶ್ವರನು (ಕ್ರಿ.ಶ.೧೧೨೬-೧೧೩೬) ತನ್ನ ಮಾನಸೋಲ್ಲಾಸದಲ್ಲಿ ತ್ರಿಪದಿಗಳನ್ನು ಧಾನ್ಯಗಳನ್ನು ಕುಟ್ಟುವಾಗ ಹಾಡಬೇಕೆಂದು ಹೇಳಿರುತ್ತಾನೆ. ಭತ್ತ ಕುಟ್ಟುವಾಗ ತ್ರಿಪದಿಯ ಚರಣಗಳನ್ನು ಹೇಳುವಾಗ ಅರ್ಧದಲ್ಲಿಯೇ ನಿಂತು, ಸಾವರಿಸಿಕೊಂಡು, ಮುಂದೆ ಎರಡನೆಯ ಸಾಲನ್ನೇ ಎತ್ತುಗಡೆ ಮಾಡಿ ಮುಂದಿನ ಸಾಲನ್ನು ಮುಗಿಸುವ ರೂಢಿಯಿದೆ. ಇದಲ್ಲದೆ ಅರ್ಧ ತ್ರಿಪದಿಗಳಲ್ಲಿಯೇ ರಚಿಸಿದ ಹಾಡುಗಳನ್ನು ಹೇಳುವ ರೂಢಿಯೂ ಇದೆ. ಉದಾಹರಣೆಗೆ:

ಮಣ್ಕಚಂಡಿನ ಮೇನೆ ಮುದ್ಕಿ ಮಿಂಡನ ಮಾಡಿ
ತಕ್ಕತೈ ಮಂಗ ಕುಣಿಮಂಗ।

ತ್ರಿಪದಿಯ ಹಾಗೆಯೇ ಸಾಲುಗಳನ್ನು ಪುನರಾವರ್ತಿಸಿಕೊಂಡು ಮುಂದುವರಿಯುವ ಪಂಚಪದಿ, ಸಪ್ತಪದಿ ಎಂದೆನ್ನಬಹುದಾದ ಸಂಭಾಷಣೆಯುಳ್ಳ ಹಾಡುಗಳೂ ಚಿಕ್ಕ ಕಥನಕವನಗಳೂ 'ಉತ್ತರದೇವಿ'ಯ ಹಾಡಿನಂಥ ದೀರ್ಘ ಕಥನಕವನಗಳೂ ಕೂಡ ಒನಕೆವಾಡುಗಳಂತೆ ಉಪಯೋಗವಾಗುತ್ತವೆ"(ಪೀಠಿಕೆ, ಪು.೫).

ತಣ್ಣನ್ನ ಉಂಡ್ಕಂಡೀ ತಣ್ಣೀರ ಮಿಂದ್ಕಂಡೀ
ಹಿಡಿವೆನೇ ಜಂತಿರ ವಣಕೆಯ । ಅತ್ಯಮ್ಮ
ನೆನವೆನೇ ತಾಯವ್ವಿ ಬಳಗವ

ಜಂತರ ಹಿಡಿದ ಚಂದಾದ ಒನಕೆಯಿಂದ ಕುಟ್ಟುವ ಕೆಲಸದಲ್ಲಿ ನಿರತಳಾದ ಮಹಿಳೆ ತನ್ನ ತಾಯಿಯ ಬಳಗವನ್ನು ನೆನೆಸಿಕೊಂಡು ಹಾಡುತ್ತೇನೆ ಎನ್ನುತ್ತಾಳೆ. ಇಲ್ಲಿ ತ್ರಿಪದಿಗಳು ಬಳಕೆಯಾಗುತ್ತವೆಂಬ ಮಾತು ಸ್ಪಷ್ಟವಾಗಿದೆ. ಕರ್ನಾಟಕದ ಉಳಿದೆಡೆಯ ಬೀಸುವ ಹಾಡುಗಳಲ್ಲಿ ಗರತಿಯ ಭಾವನೆಗಳು ವ್ಯಕ್ತವಾಗುವಂತೆ ಪ್ರಸ್ತುತ 'ಹಾಡುಂಟೆ ನನ್ನ ಮಡಿಲಲ್ಲಿ' ಕೃತಿಗಳಲ್ಲಿಯ ತ್ರಿಪದಿಗಳನ್ನು ಗಮನಿಸಿದರೆ, ಅಂತಹ ಭಾವನೆಗಳೇ ಅಭಿವ್ಯಕ್ತವಾಗಿರುವುದು ಕಂಡುಬರುತ್ತದೆ. ಇಲ್ಲಿಯ ಕೆಲ ತ್ರಿಪದಿಗಳು ಬೀಸುವ ಹಾಡಿನ ತ್ರಿಪದಿಗಳನ್ನು ಹೋಲುತ್ತವೆ.

ಹೆಣ್ಣಾಗಿ ಹುಟ್ಟುದಕಿಂತ ಮಣ್ಣಾಗಿ ಹುಟ್ಟುವುದು ಲೇಸು
ಮಣ್ಣಿನ ಮೇಲೆ ಅಶ್ವತ್ಥ। ಮರವಾದ್ರೆ
ಹಾದಿಲ್ಹೋಪರಿಗೆ ನೆರಳಾದೆ

ಈ ಕೃತಿಯಲ್ಲಿಯ ಹಾಡುಗಳನ್ನು ವಿಭಾಗಿಸಿಕೊಂಡ ಪರಿಯನ್ನು ಗಮನಿಸಿದರೆ, ಒಂದೆರಡು ಬಗೆಯ ಹೆಸರುಗಳನ್ನು ಬಿಟ್ಟರೆ, ಉಳಿದೆಲ್ಲವೂ ಬೀಸುವ ಹಾಡುಗಳಿಗೆ ಮಾಡಿಕೊಳ್ಳುವ ವಿಭಾಗದ ಹೆಸರುಗಳಂತೆಯೇ ಇವೆ. 'ಬತ್ತ ಮೆರಿಯುವ ಹಾಡು, ತೊಟ್ಟಿಲ ಹಾಡು, ಮಕ್ಕಳು, ತವರು, ತಾಯಿ–ಮಗಳು, ಅಣ್ಣ–ತಮ್ಮ, ತಮ್ಮಯ್ಯ, ಅತ್ತಿಗೆ, ಮೈದುನ, ಅತ್ತೆ–ಸೊಸೆ, ನಲ್ಲ–ನಲ್ಲೆ, ರಸಿಕ, ಹೆಣ್ಣು, ಚದುರೆ, ಜಾರೆ, ಸೂಳೆ, ದೇವರು, ಕೋಳಿ, ಹಾಸ್ಯ, ಚೆನ್ನಮ್ಮ, ನೀತಿ, ಸಂಕೀರ್ಣಗೀತೆಗಳು' ಹೀಗೆ ಇಲ್ಲಿಯ ವಿಭಾಗಗಳ ಹೆಸರುಗಳಾಗಿವೆ. ಈ ಒನಕೆವಾಡುಗಳು ಕರ್ನಾಟಕದ ಬಹುಭಾಗದ ಜನರಿಗೆ ಪರಿಚಯವಿಲ್ಲ. ಕಾರಣ ಇಲ್ಲಿರುವ ವಿಭಾಗಗಳಿಗೆ ಒಂದೊಂದು ಉದಾಹರಣೆಯನ್ನು ಗಮನಿಸಿದರೆ, ಈ ಒನಕೆವಾಡುಗಳ ಒಂದು ಸ್ಪಷ್ಟ ಚಿತ್ರಣ ಬರಲು ಸಾಧ್ಯವಾಗುತ್ತದೆ.

ಬತ್ತ ಮೆರಿಯುವ ಹಾಡು :

ಬತ್ತ ಮೆರುಹೆಣ್ಣೆ ಲಚ್ಗೀಚ್ಗೆ ನೋಡ್ಬೇಡ
ಬತ್ತೀರೆ ನಿನ್ನ ದೆಸೆಯೋರು। ಬಿಂಕದೋರು
ತತ್ತೀರೆ ನಿನ್ನ ಬಯಕೀಯ

ತೊಟ್ಟಿಲ ಹಾಡು : (ಲಾಲಿಗಳಂತೆ ಇವೆ)

ಅತ್ತು ಕಾಡುವನಲ್ಲ ಹಲದು ಬೇಡುವನಲ್ಲ
ಹೊತ್ತಾರೆದ್ದುಂಬ ಮಗನಲ್ಲ।ಕೇರಿಯ
ಮಕ್ಕಳಿಗಿಲ್ಲೆ ಇವನ್ ವಾಜೆ

ನಿದ್ರೆ ಬಾರದ ಕಣ್ಣೀಗ್ ಮದ್ಯಾರು ಬಲ್ಲರು
ಗದ್ದೇಲಿ ಬೆಳೆದ ಗರುಗನ। ಕುಡಿತಂದು
ನಿದ್ರೆ ಕಾಡಿಗೆಯ ಪವಡಿಸು

ಮಕ್ಕಳು : (ಇಲ್ಲಿಯ ತ್ರಿಪದಿಗಳೂ ಲಾಲಿಗಳಾಗಿವೆ)

ಅರಿಯದಿದ ಬಾಲ ಕುರಿಯ ಕಾವಲಕ್ಹೋದ
ಕೆರಿಯ ಯೇರಿ ಮೇನೆ ವರುಗೀದ । ಮಾಶೇಶನೇ
ಬಿಸುಲಿಗೆ ತನ್ ಹೆಡಿಯ ಮರುಮಾಡು

ತವರು :

ಕಟ್ಟ ಮಾಡುಂಬುಕೆ ಕೊಟ್ಟ ಮನ್ಯೆ ಲೇಸೆ
ಪಟ್ಟಣ ಸಾಲ್ಯಲ್ಲೀ ಪಗಡಿಯೇ ।ಆಡುಂಬುಕೆ
ಹುಟ್ಟಿದ ಮನೆಯೇ ಅದು ಲೇಸು

ತಾಯಿ–ಮಗಳು :

ಬಾಳೀಲ್ಹಣ್ಣಿಗಿಂದೂ ಜೇನು ಸಕ್ಕುರಿ ಮೇಲು
ಅದಕಂದು ಮೇಲು ರಸದಾಳಿ। ಕಬ್ಬಿಗಿಂದು
ತಾಯವ್ವ ನಿನ್ಹಾಲು ಬಲು ರೀತಿ

ಅಣ್ಣ–ತಮ್ಮ :

ಹಳ್ಳದ ತಡಿಯಲ್ಲಿ ಯಾಕು ನಿತ್ತಿದೆ ತಮ್ಮಯ್ಯ
ಬೆಳ್ಳಕ್ಕಿ ನೀರು ಕುಡಿಯವೊ। ನಿನ ಕಯ್ಯಗನ
ಬೆಳ್ಳಿಯ ಹುಂಗಿಲದ ಬೆಳಕೀಗೆ

ಅಣ್ಣನೂ ತಂಗಿನೂ ಕಡುಲೇಳು ದೋಣಿ ಹತ್ತಿ
ನೆಡುಗಿನ ತಂಗಿಗೇ ಬಿಸುಲೆಂದ। ಅಣ್ಣಯ್ಯ
ಕೇಸಲು ಬಿಚ್ಚವ್ನೆ ನೆಳುಲೀಗೂ

ಅತ್ತಿಗೆ :

ಅತ್ತುಗಿ ಮನಿಲೀ ಹೆಣ್ಣ ಕೇಳಲು ಬಂದೆ
ಬಣ್ಣದ ಕಂಬ ಮರೆಸೇರಿ।ಲತ್ತುಗಿ
ಕಣ್ಣ ಜಡಿದಳೇ ಮುರಿಶಗೆ

ಅತ್ತೆ-ಸೊಸೆ :

ಬತ್ತವ ಮೆರುದೀ ದಣುದಿದದೇಯೇ ಸೊಸುಮುದ್ದೆ
ತಟ್ಟೇಯಲಿ ಹಾಲ ಯದುದನೇ । ಸೊಸಿಮುದ್ದೆ
ವಳುಗ್ಹೋಗಿ ಅದರ ಕುಡಿದ್ ಬಾರೆ

ಅಂದಲ್ಲ ಇಂದಲ್ಲ ಇಂದ್ಯೇನೇ ಅತ್ಯಮ್ಮ
ಬಂದಣ್ಣ ಕಣ್ ಮುಂತೆ ಬಡುವಾರಕಿ। ಅತ್ಯಮ್ಮ
ಒಳಗದಿಯೇನೆ ಹುಳಿತೇಳೀ

ಈ ಕೆಲವು ಉದಾಹರಣೆಗಳನ್ನು ಗಮನಿಸಿದರೆ, ಕನ್ನಡದ ತ್ರಿಪದಿಗಳ ಕಣಜಕ್ಕೆ ಇವು ದೊಡ್ಡ ಸಮೃದ್ಧಿಯನ್ನು ತಂದು ಕೊಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಹೆಗಡೆ ಅವರು ಪ್ರತಿ ತ್ರಿಪದಿಯಲ್ಲಿ ಕಾಣುವ ಸ್ಥಳೀಯವಾದ ವಿಶೇಷ ಪದಗಳಿಗೆ ಪ್ರತಿಪುಟದ ಅಡಿಯಲ್ಲಿ ಅರ್ಥಗಳನ್ನು ಕೊಡುತ್ತ ಬಂದಿದ್ದಾರೆ. ಇದೊಂದು ಬೇಸರವಿಲ್ಲದೆ ಮಾಡಿದ ಕೆಲಸ. ಭಾಷೆಯ ತೊಡಕು ಆಗಬಾರದು ಎಂಬ ತಿಳುವಳಿಕೆಯಿಂದ ಸಂಪಾದಕರು ಗೈದ ಅತ್ಯಂತ ಶ್ರಮದ ಕೆಲಸವಿದು.

ಡಾ. ಎಲ್.ಆರ್.ಹೆಗಡೆ ಅವರ ಒನಕೆವಾಡುಗಳ ಎರಡನೇ ಸಂಗ್ರಹ **'ಹಾಲಿನ ತೆನೆ'** (೧೯೭೭), ೪೩೪ ತ್ರಿಪದಿಗಳ ಸಂಗ್ರಹ. ಮೊದಲಿನ ಸಂಗ್ರಹಕ್ಕೆ ಅರ್ಥಗಳನ್ನು ಆಯಾ ಪುಟಗಳ ಅಡಿಯಲ್ಲಿಯೇ ಕೊಟ್ಟಿದ್ದರು. ಇಲ್ಲಿ ಪುಸ್ತಕದ ಕೊನೆಯಲ್ಲಿ 'ಅರ್ಥಕೋಶ' ಎಂದು ಕೊಟ್ಟಿದ್ದಾರೆ. ಇಲ್ಲಿಯ ತ್ರಿಪದಿಗಳನ್ನು ೩೦ ವಿಭಾಗಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಇಲ್ಲಿಯೂ 'ಹಾಡುಂಟೆ ನನ್ನ ಮಡಿಲಲ್ಲಿ' ಎಂಬ ಅವರ ಮೊದಲಿನ ಸಂಗ್ರಹದ ವಿಭಾಗಗಲ್ಲಿ ಕಾಣಿಸಿಕೊಂಡ ಅನೇಕ ವಿಭಾಗಗಳ ಜೊತೆ ಕೆಲ ವಿಭಾಗಗಳು ಹೆಚ್ಚಿಗೆ ಕಾಣಿಸುತ್ತವೆ. "ಉತ್ತರ ಕನ್ನಡದ ಜನಜೀವನ ಚಿತ್ರಣ ಒನಕೆವಾಡುಗಳಲಿ ಕಾಣುವಷ್ಟು ಇತರ ಸಾಹಿತ್ಯ ಪ್ರಕಾರಗಳಲ್ಲಿ ಕಾಣುವುದಿಲ್ಲ. ಇವು ಹಳ್ಳಿಯ ಹೆಂಗಸರ ಭಾವಗೀತೆಗಳು. ಇಲ್ಲಿಯ ತ್ರಿಪದಿಗಳಲ್ಲಿ ಹಳ್ಳಿಯ ಜೀವನ ಜೋಕಾಲಿಯನ್ನೂ ಕಾಣಬಹುದು" (ಪ್ರ.ಪು.೧) ಎಂಬುದು ಸಂಪಾದಕರ ಟಿಪ್ಪಣಿ. ಇಲ್ಲಿಯ ಬಹುತೇಕ ತ್ರಿಪದಿಗಳನ್ನು ನಾಮಧಾರಿ ಜಾತಿಯ ಹೆಣ್ಣುಮಕ್ಕಳಿಂದ ಸಂಗ್ರಹಿಸಲಾಗಿದೆ. ಕೆಲವನ್ನು ಗಾಮೊಕ್ಕಲ ಪಟಗಾರ ಹೆಂಗಸರಿಂದಲೂ ಸಂಗ್ರಹಿಸಿದ್ದಾರೆ. ಆದರೆ ಈ ಹಾಡುಗಳೂ ಕೂಡ ನಾಮಧಾರಿ ಜನಾಂಗದಲ್ಲಿ ಪ್ರಚಾರದಲ್ಲಿವೆ ಎಂಬುದು ಸಂಪಾದಕರ ಮಾತು. 'ಈ ಸಂಕಲನದ ಹಾಡುಗಳಲ್ಲಿ ಉತ್ತಮ ಕಾವ್ಯಗುಣವಿದೆಯೆಂಬುದನ್ನು ಸಾಹತ್ಯಪ್ರಿಯರು ಅರಿಯಬಹುದಾಗಿದೆ' ಎನ್ನುತ್ತಾರೆ ಹೆಗಡೆ ಅವರು. ಬಹುಶಃ ಈಗಾಗಲೇ ಇಂತಹ ಹಾಡುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ಅವರಿಗೆ ಅನುಭವವಿರುವುದರಿಂದ ಇಲ್ಲಿಯ ತ್ರಿಪದಿಗಳ ಆಯ್ಕೆ ಮಾಡುವಲ್ಲಿ ಉತ್ತಮವಾದ ತ್ರಿಪದಿಗಳನ್ನು ಆಯ್ದುಕೊಂಡಂತೆ ತೋರುತ್ತದೆ. ಆದರೆ ಹೆಗಡೆ ಅವರ ಎಲ್ಲ ಸಂಗ್ರಹಗಳಲ್ಲಿ, ಹಾಡುವಾಗ ರಾಗ ಎಳೆಯುವ ಸ್ಥಳಗಳಲ್ಲಿ ವಿಪರೀತವಾಗಿ 's' ಚಿನ್ಹೆಗಳನ್ನು ಹಾಕಿದ್ದು, ಇದು ಓದಲು ಅಡಿಚಣಿಯನ್ನುಂಟು ಮಾಡುತ್ತಿದೆ. ಬಹುಶಃ ಮುದ್ರಣದಲ್ಲಿ ಕಾಣಿಸಿಕೊಳ್ಳುವ ಈ ಬಗೆಯಿಂದಾಗಿಯೆ ಇರಬೇಕು, ಸಮುದ್ರ ತೀರದ ತ್ರಿಪದಿಗಳು ಕರ್ನಾಟಕದ ಇತರ

ಭಾಗದ ವಿದ್ವಾಂಸರ ಗಮನಕ್ಕೆ ಬರುವಲ್ಲಿ ಅಡ್ಡಿಯುಂಟಾಗಿರಬೇಕೆನಿಸುತ್ತದೆ. ಪ್ರಸ್ತಾವನೆಯಲ್ಲಿ ಒಂದೊಂದು ತ್ರಿಪದಿಯನ್ನು ಹಾಗೆ ಉದಾಹರಣೆಗೆ ತೋರಿಸಿ, ಪರಿಚಯಿಸಿ, ಕೃತಿಯಲ್ಲಿ ಪದ್ಯಗಳನ್ನು ಸರಾಗವಾಗಿ ಓದಲು ಅನುಕೂಲವಾಗುವಂತೆ ಮುದ್ರಿಸಬಹುದಾಗಿತ್ತು ಎನಿಸುತ್ತದೆ.

ಹಾಡೇಳು ಅಂದರೆ ನಾಯೇನ ಹೇಳಲಿ
ನೋಡವ್ವಾ ನನ್ನಾ ಸಂಸಾರಾ ।ಬೆಟ್ಟದಾ
ಕ್ಯಾಮೆಳ್ಳಿಗಿಂದೂ ಕಡಿಯಾದೇ
ಬತ್ತ ಕುಟ್ಟನೆ ಬಾರೆ ವಪ್ಪೂ ಸಾಯ್ಬನ ಸೋಳೀ
ನನ್ನಣ್ಣನ ಸೋಳೀ ಬಿಡೂಸೋಳೀ। ಜಾಂಬರ ಸೋಳೀ
ನನ್ನಾಡಿಗುತ್ತರವಾ ಕೊಡೂಬಾರೆ

ಹೀಗೆ ಸಾಗುತ್ತವೆ ಇಲ್ಲಿಯ ಹಾಡುಗಳು. ಈ ಬತ್ತ ಕುಟ್ಟುವ ಹಾಡುಗಳೇ ರಾಗಿ ಬೀಸುವಾಗಲೂ ಪ್ರಯೋಗವಾಗುತ್ತವೆ ಎಂಬುದಕ್ಕೆ ಈ ಕೃತಿಯಲ್ಲಿ ನಾಲ್ಕನೇ ಭಾಗವಾಗಿ **'ರಾಗಿ ಬೀಸುವ ಹಾಡು'** ಎಂದು ಕೆಲವು ತ್ರಿಪದಿಗಳನ್ನು ಕೊಟ್ಟಿದ್ದಾರೆ.

ರಾಗಿ ಕಲ್ಲೀಗೆ ರತ್ನದಾ ತುದಿಗೊಟ್ಟಾ
ಚಂದ್ರಾಮತಿಯಂಬೂ ಕಡಕೀಯೇ।
ಚಂದ್ರಾಮತಿಯೆಂಬೂ ಕಡ್ಕ ಮೇನೆ ಕಲ್ ಹೂಡಿ
ಬೀಸೂವಾ ಬನ್ನಿ ನೆರೆಯೋರೆ।

ಡಾ. ಎಲ್.ಆರ್.ಹೆಗಡೆ ಅವರ ಇನ್ನೊಂದು ಒನಕೆವಾಡುಗಳ ಸಂಗ್ರಹ **'ಮಾತಿನರಗಿಣಿಯೇ ನುಡಿದಾವೋ'**(೧೯೭೭). ಈ ಕೃತಿಯಲ್ಲಿ ೪೦೮ ತ್ರಿಪದಿಗಳಿವೆ. ಇಲ್ಲಿಯ ತ್ರಿಪದಿಗಳನ್ನು ಓದಲು ಬರುವಂತೆ ಪ್ರಕಟಿಸಿದ್ದು ಎದ್ದು ಕಾಣುತ್ತದೆ. ಅಂದರೆ ಹೆಗಡೆ ಅವರು ಉಳಿದ ಕೃತಿಗಳಲ್ಲಿ ಅತಿಯಾಗಿ ಬಳಸಿರುವ 'ऽ' ಚಿನ್ಹೆಯನ್ನು ಇಲ್ಲಿ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಹೀಗಾಗಿ ಓದಲು ಒಂದಿಷ್ಟು ಅನುಕೂಲವಾಗಿದೆ. ಇಲ್ಲಿ ಮತ್ತೆ ಅರ್ಥಗಳನ್ನು ಅಡಿ ಟಿಪ್ಪಣಿ ರೂಪದಲ್ಲಿಯೇ ಕೊಟ್ಟಿದ್ದಾರೆ. "ಕಳೆದು ಹೋದ, ಮರಳಿ ಬಾರದ ಬತ್ತ ಕುಟ್ಟುವ ಪದ್ಧತಿಯ ಹುಟ್ಟುಪಾಡುಗಳಲ್ಲಿ ಬಾಳಿನ ಪಟ್ಟ ಹಾಡುಗಳನ್ನು ಹಾಡುತ್ತಿದ್ದ ಮಾತಿನರಗಿಣಿಗಳಲ್ಲಿ ಹಲವರು ಮರೆಯಾಗಿ ಹೋದರು. ಅವನ್ನು ನಿರೂಪಿಸಿದವರಿಗೆ ನನ್ನ ಅನಂತ ಕೃಜ್ಞತೆಗಳು"(ಪು.೨೨). ಈ ಕೃತಿಯಲ್ಲಿಯ ಹಾಡುಗಳನ್ನೆಲ್ಲ ೧೯೭೧-೧೯೭೮ರ ಸುಮಾರಿನಲ್ಲಿಯೇ ಸಂಗ್ರಹಸಿದ್ದು, ಈಗ ಹಾಡುವವರೆ ಇಲ್ಲ ಎಂಬ ಭಾವವನ್ನು ಸಂಪಾದಕರು ವ್ಯಕ್ತಪಡಿಸಿದ್ದಾರೆ. ವಿಷಯಾನುಸಾರ ವಿಂಗಡನೆ ಮಾಡಿ, ಈ ಕೃತಿಯಲ್ಲಿ ವಿಭಾಗದ ಹೆಸರುಗಳನ್ನು ಕಾವ್ಯದ ತುಣುಕುಗಳಿಂದಲೇ ಆಯ್ದುಕೊಡುತ್ತಾರೆ. ಹೆಗಡೆ ಅವರ ಪ್ರಸ್ತಾವನೆ ಸ್ಪಷ್ಟವಾಗಿಲ್ಲ. ಓದಲೂ ತೊಂದರೆ, ತಿಳಿದುಕೊಳ್ಳಲೂ ತೊಂದರೆ.

ಸೂಳೆ ಮನೆಗ್ ಹೋಗ್ವರಿಗೇ ಸೂಡಿಯ ಬೆಳಕ್ಯಾಕೆ
ಕೈಯಲಿ ಮಲ್ಲುಗಿಯಾ ಸರವೇಕೆ। ಬಾವಯ್ಯ
ಸೂಳೆ ನಿಮು ಗುರುತಾ ಮರೆತಾಳ್ಯಾ

ಸೂಳೆ ಮನೆಗ್ ಹೋಗ್ವರಿಗೆ ಮಾಡಾಬೇಕೆ ಮಸಲಾತಾ
ಕೋಣೀವಳಗ ಹಾಕಿ ಕದಹಾಕಿ।ಬಾವಯ್ಯ
ಸಾಂಬ್ರಾಣಿ ಮೆಣಸ್ ಹಾಕಿ ಹೊಗೆ ಹಾಕಿ

ಈ ಕಾರವಾರ ಜಿಲ್ಲೆಯ ಹಾಡುಗಳ ಭಾಷೆ ತಿಳಿದುಕೊಳ್ಳಲು ತುಂಬಾ ಪ್ರಯಾಸ ಪಡಬೇಕಾಗುತ್ತದೆ.

೧೯೭೩ರಲ್ಲಿಯೇ ಪ್ರಕಟವಾದ **'ಮದ್ದುಂಟೆ ಜನನ ಮರಣಕ್ಕೆ'** ಎಂಬ ಬೃಹತ್ ಕೃತಿ ಗುಂಡ್ಮಿ ಚಂದ್ರಶೇಖರ ಐತಾಳ ಅವರದು. ಅದೊಂದು ಅದ್ಭುತವಾದ ಕೃತಿ ಎಂದು ಡಾ. ಎಲ್.ಆರ್.ಹೆಗಡೆ ಅವರೇ ಬರೆಯುತ್ತಾರೆ. ತ್ರಿಪದಿಗಳ ಇಷ್ಟೊಂದು ದೊಡ್ಡ ಗ್ರಂಥ ಇನ್ನೊಂದು ಇಲ್ಲ ಎನ್ನುವಷ್ಟರ ಮಟ್ಟಿಗೆ ಈ ಕೃತಿ ಇದೆ. ಆದರೆ ಈ ಬಗೆಗೆ ವಿದ್ವಾಂಸರು ಹೆಚ್ಚಿನ ಗಮನ ಹರಿಸಿದಂತಿಲ್ಲ. ಒನಕೆವಾಡುಗಳ ದೊಡ್ಡ ಸಂಗ್ರಹ ಇದು. ಇಲ್ಲಿಯ ಹಾಡುಗಳನ್ನು 'ಹರಕೆ, ತಾಯಿ–ಮಗು, ತಾಯಿ–ಮಗಳು–ತವರು, ಗೋಮಾತೆ, ಸರಸ, ಹಾಸ್ಯ, ದುಃಖನಿವೇದನೆ, ಸುಖ ನಿವೇದನೆ, ವರ್ಣನೆ, ಉಪದೇಶ, ಪ್ರಣಯ, ರಾಮಾಯಣ, ಮಹಾಭಾರತ, ಭಾಗವತ, ಇತಿಹಾಸ, ಒಗಟು, ಲೋಕಾನುಭ' ಹೀಗೆ ಹಲವಾರು ಹೆಸರುಗಳ ಅಡಿಯಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಇಲ್ಲಿಯ ತ್ರಿಪದಿಗಳನ್ನು ಓದಿಕೊಳ್ಳಲು, ಅರ್ಥ ತಿಳಿದುಕೊಳ್ಳಲು ಅಂತಹ ಕಷ್ಟವಾಗುವುದಿಲ್ಲ.

ಅತ್ತಿಗೆ ಹಡಿಯಲಿ ಹತ್ತೆಮ್ಮಿ ಕರಿಯಲಿ
ಹಿತ್ತಿಲ ಬಾಳಿ ಕೊನಿ ಬಿಡಲಿ। ಅತ್ತೆಂದು
ಅತ್ತೀಗಿ ಮಗಳು ಕರಿಯಲಿ

ಬಳಗವು ಹೆಚ್ಚಲಿ ಬಂಧನ ತಗ್ಗಲಿ
ಕೊಳಗದಲಿ ಹೊನ್ನ ಅಳಿಯಲಿ ।ತೌರ್ಮನಿಯ
ನಡುಮನಿ ಜ್ಯೋತಿ ಉರಿಯಲಿ

ಹೀಗೆ ಸರಾಗವಾಗಿ ಓದಿಕೊಂಡು ಹೋಗಬಹುದು. ಈ ತ್ರಿಪದಿಗಳು ಸಂಪೂರ್ಣವಾಗಿ ಭಿನ್ನವಾದ ಬದುಕಿನ ಪರಿಸರವನ್ನು ಕಟ್ಟಿಕೊಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಸಮುದ್ರತೀರದ ಪರಿಸರದ ಬದುಕನ್ನು ಪರಿಚಯಿಸುವ ದೊಡ್ಡ ಕೆಲಸವನ್ನು ಇವು ಮಾಡುತ್ತವೆ.

* * *

ಕುಟ್ಟುವ ಹಾಡಿನ ಸಂಗ್ರಹಗಳು :

೧೯೭೧ : ಹಾಡುಂಟೇ ನನ್ನ ಮಡಿಲಲ್ಲಿ, (ಸಂ) ಎಲ್.ಆರ್.ಹೆಗಡೆ, –ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯೭೩ : ಮದ್ದುಂಟೆ ಜನನಮರಣಕ್ಕೆ, (ಸಂ) ಗುಂಡ್ಮಿ ಚಂದ್ರಶೇಖರ ಐತಾಳ, ಕನ್ನಡ ಸಾಹಿತ್ಯ ಪರಿಷತ್ತು, ಉಡುಪಿ ಜಿಲ್ಲಾ ಘಟಕ, –೨೦೧೦.

೧೯೭೭ : ಹಾಲಿನ ತೆನೆ, (ಸಂ) ಡಾ. ಎಲ್.ಆರ್.ಹೆಗಡೆ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

೧೯೯೭ : ಮಾತೀನರಗಿಣಿಯೇ ನುಡಿದಾವ್ರೋ, (ಸಂ)ಡಾ. ಎಲ್.ಆರ್.ಹೆಗಡೆ, –ಎಲ್.ಆರ್.ಹೆಗಡೆ ಕೃತಿ ಪ್ರಕಾಶನ, ಸಮಿತಿ, ಶಿರಸಿ.

* * *

೩. ಹಂತಿಯ ಹಾಡುಗಳು

ಗಂಡಸರು ಬಳಸುವ ತ್ರಿಪದಿಗಳು ಹುಟ್ಟುವ ಸಂದರ್ಭವೆಂದರೆ ಅದು ಹಂತಿ ಸಂದರ್ಭ. ಇಲ್ಲಿ ಹುಟ್ಟಿದ ತ್ರಿಪದಿಗಳು ಒಕ್ಕಲಿಗನು ತೊಡಗುವ ಬೇರೆ ಬೇರೆ ಕೆಲಸಗಳಲ್ಲೂ ಬಳಸುತ್ತಿರುತ್ತಾನೆ. ಗಳೆ ಹೊಡೆಯುವಾಗ, ಮಟ್ಟಿ ಹೊಡೆಯುವಾಗ, ತನ್ನ ಹೊಲದಲ್ಲಿ ಬೆಳೆದ ದವಸ ಧಾನ್ಯಗಳನ್ನು, ಹುಲ್ಲು-ಕಣಕಿ ಚಕ್ಕಡಿಯಲ್ಲಿ ಸಾಗಿಸುವಾಗ, ಅಥವಾ ತನ್ನ ಕೆಲಸಕ್ಕೆ ಸಹಾಯಕವಾದ ಎತ್ತುಗಳನ್ನು ಉತ್ಸವದಲ್ಲಿ ಕೊಂಡೊಯ್ಯುವಾಗ (ಮೆರಸುವಾಗ) ಮತ್ತೆ ಮತ್ತೆ ಇದೇ ತ್ರಿಪದಿಗಳನ್ನು ಒಕ್ಕಲಿಗ ಬಳಸುತ್ತಾನೆ. ಆದರೆ ಆಯಾ ಕೆಲಸಗಳು ನಡೆಯುವ ಲಯಕ್ಕನುಗುಣವಾಗಿ ಬಳಸುವ ತ್ರಿಪದಿಗಳ ಧಾಟಿಗಳೂ ಬದಲಾವಣೆ ಯಾಗುತ್ತವೆ. ವಿಶೇಷವಾಗಿ ಚಕ್ಕಡಿಯಲ್ಲಿ ಮೇವು ಇತ್ಯಾದಿಗಳನ್ನು ತನ್ನ ಹೊಲದಿಂದ ಬೇರೆಡೆಗೆ ಸಾಗಿಸುವಾಗ ಭಾರವನ್ನು ಎಳೆಯುವ ಎತ್ತುಗಳು ಸಾವಧಾನವಾಗಿ ಸಾಗುತ್ತಿರುತ್ತವೆ. ಆಗ ಒಕ್ಕಲಿಗ ತನಗೆ ಹೊತ್ತು ಹೋಗಲೆಂದು, ತನ್ನ ಬೇಸರ ಕಳೆಯಲೆಂದು ಹಾಡಲು ತೊಡಗುತ್ತಾನೆ. ಇಲ್ಲಿ ಆತ ಬಳಸುವ ಹಾಡುಗಳು ಹಂತಿಯಲ್ಲಿ ಬಳಸುವ ತನ್ನ ಎತ್ತುಗಳನ್ನು ವರ್ಣನೆ ಮಾಡುವ ತ್ರಿಪದಿಗಳೆ ಆಗಿರುತ್ತವೆ. ಈ ಹಾಡುಗಳಿಗೆ ಬೊಲೋರಿ ಹಾಡುಗಳೆಂದು ಕರೆಯುತ್ತಾರೆ. ಅಲ್ಲಿ ಚಕ್ಕಡಿ ನಡೆಯುವ ಲಯಕ್ಕನುಗುಣವಾಗಿ ತ್ರಿಪದಿಗಳ ಧಾಟಿಗಳು ಬದಲಾವಣೆ ಆಗಿರುತ್ತವೆ. ಎರಡನೆಯದಾಗಿ ಮಟ್ಟಿ ಹೊಡೆಯುವಾಗ: ಅಲ್ಲಿ ಮಟ್ಟಿ ಎಳೆಯಲು ಎತ್ತುಗಳು ಬಾವಿಗೆ ಇಳಿಜಾರಾಗಿ ಕಟ್ಟಿದ ಬಾರಿಯ ಗುಂಟ ತಂಬರಗೋಲಿಗೆ ಹಾಕಿದ ಮಟ್ಟಿಯ ಹಗ್ಗವನ್ನು ಎಳೆಯುತ್ತ ಮುಂದೆ ಸಾಗಬೇಕು. ನೀರು ತುಂಬಿದ ಮಟ್ಟಿ ಮೇಲೆ ಬಂದು ನೀರು ಖಾಲಿಮಾಡಿ, ಮತ್ತೆ ಬಾವಿಯ ನೀರಿಗೆ ಖಾಲಿ ಮಟ್ಟಿ ಸಾಗಲು ಎತ್ತುಗಳು ಹಿಂದೆ ಹಿಂದೆ ಚಲಿಸಬೇಕು. ತುಂಬಿದ ಮಟ್ಟಿ ಎಳೆಯುವಾಗ ಭಾರವನ್ನು ಎಳೆಯಬೇಕಾಗುವುದರಿಂದ, ಖಾಲಿಯಾದ ಮಟ್ಟಿ ನೀರಿಗೆ ಹೋಗುವಾಗ ಎತ್ತುಗಳು ಹಿಂದೆ ಸರಿಯಬೇಕಾಗಿರುವುದರಿಂದ ಮಟ್ಟಿ ಹೊಡೆಯುವ ಕ್ರಿಯೆ ತೀರ ಸಾವಕಾಶವಾಗಿ ನಡೆಯುತ್ತದೆ. ಎತ್ತು ಮಟ್ಟಿ ಎಳೆದುಕೊಂಡು ಮುಂದೆ ಸಾಗುವಾಗ, ಅದನ್ನು ಬಾವಿಗೆ ಬಿಡಲು ಹಿಂದೆ ಸಾಗುವಾಗ ಹಾಡುವಿಕೆ ನಡೆದಿರುತ್ತದೆ. ಹೀಗಾಗಿ ಧಾಟಿಗಳು ಸಹಜವಾಗಿಯೇ ಇಲ್ಲಿಯ ಕ್ರಿಯೆಯ ಲಯಕ್ಕನುಗುಣವಾಗಿಯೇ ಬಳಕೆಯಾಗುವ ಹಾಡುಗಳ ಧಾಟಿಗಳು ಹುಟ್ಟಿಕೊಂಡಿವೆ.

ಜೋಳ ಉತ್ತರ ಕರ್ನಾಟಕದ ಪ್ರಮುಖ ಆಹಾರವಾದ್ದರಿಂದ ಹಿಂಗಾರಿ ಬೆಳೆಗಳಲ್ಲಿ ಜೋಳವೇ ಅತ್ಯಂತ ಪ್ರಮುಖ ಬೆಳೆಯಾಗಿರುತ್ತದೆ. ಎಲ್ಲ ಬೆಳೆಗಳ ರಾಶಿ ಮಾಡುತ್ತಾರೆ, ಕಣವನ್ನೂ ಮಾಡುತ್ತಾರೆ, ಆದರೆ ರಾಶಿಗಳಲ್ಲಿ ಬಿಳಿಜೋಳದ ರಾಶಿಯೇ ದೊಡ್ಡ ರಾಶಿ ಎನಿಸಿಕೊಳ್ಳುತ್ತದೆ. ಜೋಳ ಪ್ರಮುಖ ಆಹಾರ ಪದಾರ್ಥವಾಗಿರುವುದರಿಂದ ಉಳಿದ ಬೆಳೆಗಳ ರಾಶಿಗಳಿಗಿಂತ ಜೋಳದ ಬೆಳೆಯ ಬಗೆಗೆ ಒಕ್ಕಲಿಗನಲ್ಲಿ ಒಂದು ರೀತಿಯ ಭಕ್ತಿ-ಭಾವ ಕಾಣುತ್ತದೆ. ಜೋಳ ಬಿತ್ತಲು ಬಳಸುವ 'ಕೂರಿಗೆ' ಎಂಬ ಸಾಧನವನ್ನು

ಬಡಿಗೆನ ಅಂಗಳದಲ್ಲಿ ತುಂಬಿಸಿ, ಬಿಗಿಸಿ, ಅಲ್ಲಿಯೇ ಅದನ್ನು ಶೃಂಗರಿಸಿ, ಕಂಬಳಿ ಹಾಸಿನ ಮೇಲೆ ಇಟ್ಟು, ವಿಶೇಷವಾಗಿ ಪೂಜೆ ಸಲ್ಲಿಸುತ್ತಾರೆ. ವಿಭೂತಿ ಕುಂಕಮ ಹಚ್ಚಿ, ಆರತಿ ಬೆಳಗಿ, ಕಂಬಳಿ ಟೊಪ್ಪಿಗೆ ಹೊದ್ದು, ಕೂರಿಗೆಯನ್ನು ಹೊತ್ತು, ಮೌನಧರಿಸಿ ಮನೆಗೆ ಬರುತ್ತಾರೆ. ಮತ್ತೆ ಮನೆಯ ಪಡಸಾಲೆಯಲ್ಲಿ ಕಂಬಳಿ ಹಾಸಿ ಇಟ್ಟು, ಮತ್ತೆ ಪೂಜೆ ಪುನಸ್ಕಾರಗಳು ಸಲ್ಲುತ್ತವೆ. ಮನೆಯ ಹೆಣ್ಣುಮಕ್ಕಳು ಸಂಭ್ರಮದಿಂದ ಈ ಪೂಜೆಯನ್ನು ನೆರವೇರಿಸುತ್ತಾರೆ. ವಿಭೂತಿ ಕುಂಕುಮ ಹಚ್ಚಿ, ಹೂಹಾರ ಹಾಕಿ, ನೈವೇದ್ಯ ಸಲ್ಲಿಸಿ, ಎಲ್ಲರೂ ನಮಸ್ಕರಿಸುತ್ತಾರೆ. ಮುಂಜಾನೆ ನಸುಕಿನಲ್ಲಿ ಅದನ್ನು ಹೊಲಕ್ಕೆ ಹೊತ್ತಯ್ಯುವುದೂ ಅಷ್ಟೇ ಶ್ರದ್ಧಾಭಕ್ತಿಗಳಿಂದಲೇ. ತನ್ನ ಹೊಲದಲ್ಲಿ, ಆವತ್ತು ತನಗೆ ಒಳ್ಳೆಯ ದಿಕ್ಕು ಎಂದು ತೋಚಿದ ಕಡೆಗೆ ಕೂರಿಗೆ ಮುಖಮಾಡಿ ಇಟ್ಟು, ಮೌನ ಧರಿಸಿಯೇ ಕೂರಿಗೆಗೆ ಎತ್ತುಗಳನ್ನು ಹೂಡಿ, ಟೊಂಕಕ್ಕೆ ಜೋಳದ ಬೀಜದಿಂದ ತುಂಬಿದ ಉಡಿಚೀಲವನ್ನು ಕಟ್ಟಿಕೊಂಡು, ದೇವರನ್ನು ಸ್ಮರಿಸುತ್ತಾ ಕೂರಿಗೆಯನ್ನು ಚಾಂಗಿಸುತ್ತಾನೆ. ಬಿತ್ತುವ ಕೆಲಸದಲ್ಲಿ ನಿರತನಾದಾಗ ಸಾಮಾನ್ಯವಾಗಿ ಮೌನವನ್ನೇ ಧರಿಸಿರುವುದು ಕಂಡುಬರುತ್ತದೆ.

ಈ ಜೋಳದ ಬೆಳೆಯನ್ನು ಒಕ್ಕಲಿಗನು ಅತ್ಯಂತ ಮುತುವರ್ಜಿವಹಿಸಿ ಕಾಪಾಡುತ್ತಾನೆ. ಜೋಳ ಸಿಹಿಯಾದ ಬೆಳೆ. ಇದು ಬೆಳೆದು ದಂಟು ಬಿರುಸಾದರೆ ಅದನ್ನು ಕಬ್ಬು ಎಂದು ತಿನ್ನಲು ಬಳಸುತ್ತಾರೆ. ದನಗಳಿಗೆ ಅತ್ಯಂತ ಪೌಷ್ಟಿಕ ಆಹಾರವಾಗಿದ್ದು ಸರಿಯಾಗಿ ಬೆಳೆಯದ ದಂಟುಗಳನ್ನು ಅರಿಸಿ, ಕಿತ್ತು ಎತ್ತುಗಳಿಗೆ, ಮನೆಯ ದನಗಳಿಗೆ ದಿನಾಲು ಹಾಕುತ್ತಾರೆ. ದನಗಳಿಗೆ ಕಿತ್ತುಹಾಕುವ ದಂಟುಗಳನ್ನು 'ಬಾಟಿ' ಎಂದು ಕರೆಯುತ್ತಾರೆ. ಜೋಳದ ಬೆಳೆಗೆ ತೆನೆ ಮೂಡಿ, ಕಾಳುಗಳು ತುಂಬಲು ತೊಡಗಿದರೆ ಹಕ್ಕಿಗಳ ಹಾವಳಿ ಜಾಸ್ತಿಯಾಗುತ್ತದೆ. ಕವಣೆಯಲ್ಲಿ ಕಲ್ಲುಗಳನ್ನಿಟ್ಟು, ಬೀಸಿ ಹೊಡೆದು ಹಕ್ಕಿಗಳನ್ನು ಓಡಿಸಲು ಅನುಕೂಲವಾಗಲು, ಸಿಹಿಯಾದ ದಂಟುಗಳನ್ನು ಯಾರಾದರೂ ಕಿತ್ತುಕೊಂಡು ಹೋಗದಂತೆ ಕಾಯಲು ಹೊಲದ ನಡುವೆ 'ಅಟ್ಟ'(ಅಂಟ) ಹಾಕುತ್ತಾನೆ. ಅದರ ಮೇಲೆಯೇ ವಾಸ ಮಾಡುವುದು ತುಂಬಾ ಖುಷಿಯ ಸಂಗತಿಯೂ ಆಗಿರುತ್ತದೆ.

ಎಳ್ಳಾಮವಾಸೆಗೆ ಜೋಳದ ಬೆಳೆಗೆ ಪೂಜೆ ಸಲ್ಲಿಸುವ ವಿಶೇಷ ಕಾರ್ಯಕ್ರಮ ನಡೆಯುತ್ತದೆ. ಅಂದಿನ ಅಡಿಗೆಯೂ ವಿಶೇಷವೇ. ಬಿಳಿಜೋಳ, ಸಜ್ಜಿ ಮುಂತಾದ ಕಾಳುಗಳ ಹಿಟ್ಟಿನಿಂದ ಮಾಡಿದ ಕಡಬು, ಭಜ್ಜಿ ಎನ್ನುವ ವಿಶೇಷ ಸಾರು, ಮತ್ತೆ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಅಂದು ಮಾಡಲಾಗುತ್ತದೆ. ಹೊಲದಲ್ಲಿ ಅಬಟ್ಯಾನ ಗಿಡದ ಕೆಳಗೆ ಪಾಂಡವರನ್ನು ಪ್ರತಿಷ್ಠಾಪಿಸಿ, ಅವರಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಮನೆಯ ಯಜಮಾನ ತನ್ನ ಮಕ್ಕಳೊಂದಿಗೆ ಬೆಳೆಗಳಿಗೆ ಆಹಾರ ಸಿಂಪಡಿಸುವ (ಭೂಮಿತಾಯಿಗೆ ಆಹಾರ ಅರ್ಪಿಸುವ ಕ್ರಿಯೆ ಅದಾಗಿರಬೇಕೆನಿಸುತ್ತದೆ) ಚರಗ ಚೆಲ್ಲುವ ಕೆಲಸ ನಡೆಯುತ್ತದೆ. ಒಂದು ಗಂಗಾಳದಲ್ಲಿ ಅಂದಿನ ವಿಶೇಷ ಆಹಾರಗಳಾದ ಕಡಬು ಬಜ್ಜಿಗಳನ್ನು ತುಂಬಿಕೊಂಡು ಯಜಮಾನ ಹೊಲದ ತುಂಬ ಆಹಾರವನ್ನು ಚಲ್ಲುತ್ತ (ಅರ್ಪಿಸುತ್ತ) ಸಾಗುತ್ತಾನೆ. ಆತನ ಜೊತೆಗೆ ಸಾಗಿದ ಮಕ್ಕಳು ನೀರನ್ನು ಸಿಂಪಡಿಸುತ್ತ ಹೋಗುತ್ತಾರೆ. ಮೌನ ಇಲ್ಲಿಯೂ ಎದ್ದು ಕಾಣುತ್ತದೆ. ಚೆರಗ ಚೆಲ್ಲಿ ಬಂದವರು, ಪಾಂಡವರ ಮುಂದೆ ಬಂದು ನಮಸ್ಕಾರ ಮಾಡಿ, ಪೂಜೆ ಮುಗಿಸುತ್ತಾರೆ. ಅಂದು ಸಾಯಂಕಾಲ

ಗ್ರಾಮದ ದೊಡ್ಡ ರೈತರು ಜೋಳದ ದಂಟಿನಿಂದ ರಥದ ಆಕಾರದಲ್ಲಿ 'ಸೋನ್ಯಾದ ಬುಟ್ಟಿ' ತಯಾರಿಸುತ್ತಾರೆ. ಅದನ್ನು ಗ್ರಾಮದಲ್ಲಿ ಮೆರವಣಿಗೆ ಮಾಡುತ್ತಾರೆ. ಇಲ್ಲಿ ವಿಶೇಷವಾಗಿ ಮುತ್ತೈದೆಯರು ಆರತಿ ಹಿಡಿದು ಮುಂದೆ ಸಾಗುತ್ತಾರೆ. ಬಾಜಿ ಬಜಂತ್ರಿಗಳು ಮೊಳಗುತ್ತವೆ. ಗ್ರಾಮದ ಪ್ರತಿ ದೇವರ ಗುಡಿಗೂ ಸಾಗಿ ಪೂಜೆ ಸಲ್ಲಿಸಿ ಮುಂದೆ ಸಾಗುತ್ತಾರೆ. ಕೊನೆಗೆ 'ಸೋನ್ಯಾದ ಬುಟ್ಟಿ'ಯ ಮಾಲಿಕರ ಮನೆಗೆ ಮುಟ್ಟಲಾಗುತ್ತದೆ.

ಜೋಳದ ತೆನೆಗಳು ಕಾಳಿನಿಂದ ತುಂಬಿ ಬರುತ್ತಲೇ ಸೀತನಿ (ಸಿಹಿ ತೆನಿ) ಸುಡಲು ಹೊಲದಲ್ಲಿ ಹಾಕಿದ ಅಟ್ಟದ ಮಗ್ಗುಲಲ್ಲಿಯೇ 'ಒಲಗುಣಿ' (ಒಲೆಯ ಕುಣಿ) ತಯಾರಾಗುತ್ತದೆ. ಜೋಳದ ಬೆಳೆ ಬೆಳೆದವರು ತಮ್ಮ ಸಂಬಂಧಿಕರಿಗೆ, ಸ್ನೇಹಿತರಿಗೆ, ಬೀಗರು ನೆಂಟರಿಗೆ ಸೀತನಿ ತಿನ್ನಲು ವಿಶೇಷವಾಗಿ ಕರೆದುಕೊಂಡು ಬರುತ್ತಾರೆ. ಬೆಳಿಗ್ಗೆ ಮತ್ತು ಸಾಯಂಕಾಲ ಸೀತನಿ ಸುಡುವ ಸಮಯ. ಮನೆಯ ಹೆಣ್ಣುಮಕ್ಕಳು, ಮಕ್ಕಳು ಅತ್ಯಂತ ಸಂಭ್ರಮದಿಂದ ಸೀತನಿ ತಿನ್ನುವಲ್ಲಿ ಸೇರುತ್ತಾರೆ. ಒಲಗುಣಿಯಲ್ಲಿ ಸುಟ್ಟ ತೆನೆಯನ್ನು ಕೈಯಿಂದ ತಿಕ್ಕಿ ಕಾಳುಗಳನ್ನು ಉದುರಿಸಬೇಕು. ಆ ಸೀತನಿ ತಿನ್ನಲು ರುಚಿಯಾಗಿರುತ್ತದೆ. ಹೀಗೆ ಕೈಯಿಂದ ತಿಕ್ಕಿದಾಗ ಎಲ್ಲ ಕಾಳುಗಳು ಉದುರುವುದಿಲ್ಲ. ಆ ತೆನೆಗಳನ್ನು ಸೀತನಿ ತಿನ್ನುವುದು ಮುಗಿದ ನಂತರ ಒಂದು ಅಗಲವಾದ ಬಟ್ಟೆಯಲ್ಲಿ ಹಾಕಿ, ಇಬ್ಬರು ಕೂಡಿ, ಆ ವಸ್ತ್ರದ ಒಂದೊಂದು ಮಗ್ಗುಲಿನ ಎರಡೆರಡು ಮೂಲಿ ಚುಂಗಗಳನ್ನು ಹಿಡಿದು, ಅದರಲ್ಲಿ ಒಬ್ಬ ಒಂದು ಕೋಲು ತೆಗೆದುಕೊಂಡು, ತೆನೆಗಳನ್ನು ಬಡಿದು, ಉಳಿದ ಕಾಳುಗಳನ್ನು ಉದುರಿಸುತ್ತಾನೆ. ಈ ಕಾಳುಗಳನ್ನು ಒಣಗಿಸಿ, ನಂತರ ಮನೆಯ ಹೆಣ್ಣುಮಕ್ಕಳು ಇವುಗಳಿಂದ ಗುಗ್ಗರಿ ತಯಾರಿಸುತ್ತಾರೆ. ಈ ಗುಗ್ಗರಿ ಅತ್ಯಂತ ರುಚಿಕಟ್ಟಾಗಿರುತ್ತದೆ. ಎಲ್ಲ ತರದ ಗುಗ್ಗರಿಗಳಲ್ಲಿ ಈ ಗಗ್ಗರಿಯೇ ಪೌಷ್ಟಿಕ, ಮತ್ತು ತಿನ್ನಲು ರುಚಿಕಟ್ಟಾಗಿರುತ್ತದೆ. ಈ ಕಾಳುಗಳನ್ನು ಬೀಸಿ, ಅದರ ಹಿಟ್ಟಿನಿಂದ ಊಟದ ಜೊತೆ ತಿನ್ನಲು ನಾನಾ ತರದ ವ್ಯಂಜನ ಆಹಾರ ಪದಾರ್ಥಗಳನ್ನೂ ತಯಾರಿಸುತ್ತಾರೆ.

ಇನ್ನು ಜೋಳ ಕೊಯ್ಯುವುದು, ಬಣಮೆ ಒಟ್ಟುವುದು ಈ ಕೆಲಸಗಳು ನಡೆಯುತ್ತವೆ. ಹಂತಿ ಕಟ್ಟುವ ಹಿಂದಿನ ದಿನವೇ ಕಣಮಾಡಲಾಗುತ್ತದೆ. ಹಂತಿಯ ದಿನ ಮುಂಜಾನೆ ಕಣದ ನಡುವೆ ಮೇಟಿ ನೆಟ್ಟು, ಅದಕ್ಕೆ ವಿಶೇಷವಾಗಿ ತುಂಬಿದ ತೆನೆಗಳುಳ್ಳ ಜೋಳದ ಸೂಡುಗಳನ್ನು ಕಟ್ಟಿ, ಸೀರೆ ಉಡಿಸಿ, ಕಣದ ಲಕ್ಷ್ಮಿ ಎಂದು ಪೂಜೆ ಮಾಡಲಾಗುತ್ತದೆ. ಅಂದು ಹೆಣ್ಣಾಳುಗಳಿಗೆ ಕರೆಸಿ, 'ಗೂಡು (ಬಣವೆ) ಮುರಿಯುವ' ಕೆಲಸ ಪ್ರಾರಂಭವಾಗುತ್ತದೆ. ಅಂದರೆ ಒಟ್ಟಿದ ಬಣವೆಯಿಂದ ಸೂಡುಗಳನ್ನು ಬಿಡಿಸಿ, ಕಣದಲ್ಲಿ ಹಾಕಿ, ಜೋಳದ ದಂಟಿನಿಂದ ತೆನೆಗಳನ್ನು ಕೊಯ್ದು ಬಿಡಿಸುವ ಕೆಲಸವದು. ಕಣದ ಸುತ್ತಲೂ ಈ ತೆನೆ ಬಿಡಿಸುವ ಹೆಣ್ಣುಮಕ್ಕಳು ಕುಳಿತಿರುತ್ತಾರೆ. ಇವರ ಮುಂದೆ ಒಟ್ಟಿದ ಬಣವೆಯಿಂದ ಸೂಡುಗಳನ್ನು ತಂದು ಹಾಕಲಾಗುತ್ತದೆ. ಒಂದೊಂದೇ ಸೂಡು ಎತ್ತಿಕೊಂಡು, ಅವುಗಳಿಂದ ತೆನೆಗಳನ್ನು ಕೊಯ್ದು, ಕಣದಲ್ಲಿ ಹಾಕಿ, ಸೂಡನ್ನು ಹೊರಗೆ ಒಗೆಯುತ್ತ ಹೋಗುತ್ತಾರೆ. ಗೂಡು ಮುರಿಯುವುದು ಮುಗಿದಂತೆ ಸುತ್ತಲೂ ಬಿಂಡಿ ಕಟ್ಟುವ ಕೆಲಸ ನಡೆಯುತ್ತದೆ. ಈ ತುಂಬಿದ ಕಣದಲ್ಲಿ ರಾತ್ರಿ ಎತ್ತುಗಳನ್ನು ಮೇಟಿಗೆ ಕಟ್ಟಿದ ಸಾಲುದಾವಣಿಗೆ ಎತ್ತುಗಳನ್ನು

ಎರಡು ಸಾಲುಗಳಲ್ಲಿ ಕಟ್ಟಿ, ತೆನೆಗಳನ್ನು ತುಳಿಸುವ ಕ್ರಿಯೆಯನ್ನೇ ಹಂತಿ ಎಂದು ಕರೆಯಲಾಗುತ್ತದೆ. ರಾತ್ರಿ ಹಂತಿ ಕಟ್ಟುವ ಮುನ್ನ, ಈ ಹಂತಿಗಾಗಿ ಅಂದು ನೆರೆದವರಿಗೆ ಹುಗ್ಗಿ ಊಟ ಸಾಮಾನ್ಯವಾಗಿರುತ್ತದೆ. ಎತ್ತು ಕಟ್ಟುವ ಕ್ರಿಯೆಯ ಜೊತೆಗೆ ಹಂತಿಯ ಹಾಡುಗಳು ಪ್ರಾರಂಭವಾಗುತ್ತವೆ.

ಡಾ. ಬಿ.ಎಸ್.ಗದ್ದಗಿಮಠ ಅವರ ಪಿಎಚ್.ಡಿ.ಪ್ರಬಂಧ **'ಕನ್ನಡ ಜಾನಪದ ಗೀತಗಳು'** (೧೯೬೩) ಎಂಬುದರಲ್ಲಿ ಹಂತಿ ಸಂಪ್ರದಾಯಕ್ಕೆ ಸಂಬಂಧಿಸಿದಂತೆ 'ಸುಗ್ಗಿಯ ಹಾಡುಗಳು'(ಅ.೨), 'ಸುಗ್ಗಿಯ ಸಂಪ್ರದಾಯ'(ಅ.೧೦), 'ಹಂತಿಯ ಹಾಡುಗಳು'(ಅ.೧೨) ಎಂಬ ಮೂರು ಪ್ರತ್ಯೇಕ ಅಧ್ಯಾಯಗಳೇ ಇವೆ. ಹಂತಿಯ ಹಾಡುಗಳನ್ನು ಬಳಸಿಕೊಂಡು ಹಂತಿ ಸಂಪ್ರದಾಯ ಕ್ರಿಯೆಯ ಸಂಪೂರ್ಣ ವಿವರಗಳನ್ನು ಕೊಡುತ್ತಾರೆ. ಅಲ್ಲದೆ ಕೊನೆಯಲ್ಲಿ ಹಂತಿಯಲ್ಲಿ ಹಾಡುವ, ತ್ರಿಪದಿಯಲ್ಲಿರುವ ೧೧ ಕಥಾನಕಗಳನ್ನು ಮುದ್ರಿಸಿದ್ದು, ಅವೆಲ್ಲ ೧೨ನೇ ಶತಮಾನದ ಶರಣರಿಗೆ ಸಂಬಂದಿಸಿದ ಚರಿತ್ರೆಗಳಾಗಿವೆ. ಅವರ ದಾಖಲೆಯ ಪ್ರಕಾರ ಡಾ. ಗದ್ದಗಿಮಠ ಅವರ ತಂದೆ ಸಾವಳಿಗೆಯ್ಯ ೧೦೧ ಶರಣರ ಹಂತಿಯ ಹಾಡುಗಳನ್ನು ಹಾಡುತಿದ್ದರಂತೆ. ಅವುಗಳಲ್ಲಿ ಕೇವಲ ಈ ೧೧ ಹಾಡುಗಳನ್ನು ಮಾತ್ರ ಉಳಿಸಲು ಸಾಧ್ಯವಾಗಿದೆ ಎನ್ನುತ್ತಾರೆ. "ಒಕ್ಕಲು ನಾಡಾದ ಕರ್ನಾಟಕದಲ್ಲಿ ಸುತ್ತಲೂ ಕೇಳಬರುವ ಹಂತಿಯ ಹಾಡುಗಳು ಎಲ್ಲರ ಮನವನ್ನು ಆಕರ್ಷಿದಿರವು. ಬೆಳುವಲ ನಾಡಿನ ಹಂತಿಗಳೆಂದರೆ ನೂರಾರು ಚೀಲಗಳ ರಾಶಿ. ಸುಗ್ಗಿಯ ಸೊಬಗನ್ನು ಕಾಣಬೇಕು ಬೆಳುವಲದಲ್ಲಿ. ನೂರು ಎತ್ತುಗಳ ಮೇಟಿಯ ಕಣಗಳನ್ನು ನೋಡಿದರೆ ಮಲೆನಾಡಿನವರಿಗೆ ದಂಗುಬಡಿಯದಿರದು" (ಕಜಗೀ.ಪು.೩೧). ಬೆಳವಲ ನಾಡು ಅಷ್ಟೆ ಅಲ್ಲ ಉತ್ತರ ಕರ್ನಾಟಕದ ಎಲ್ಲ ಕಡೆ ಕಾಣುವ ಸ್ಥಿತಿ ಇದಾಗಿತ್ತು. ಹೈದ್ರಾಬಾದ ಕರ್ನಾಟಕದಲ್ಲೂ ನಾಲ್ಕುನೂರು ಚೀಲಗಳಷ್ಟು ಜೋಳ ಬೆಳೆದ ಉದಾಹರಣೆಗಳಿವೆ. ನೂರಾರು ಎಕರೆಯಷ್ಟು ಜೋಳವನ್ನೇ ಬೆಳೆಯಲಾಗುತ್ತಿತ್ತು. ಅಂತಹ ರಾಶಿಗಳು ವಾರಾನುಗಟ್ಟಲೆ ನಡೆಯುತ್ತಿದ್ದವು. ಅಲ್ಲೆಲ್ಲ ಹಂತಿಹಾಡುಗಳ ಸುರಿಮಳೆಯೇ ಆಗುತ್ತಿತ್ತು. ಗದ್ದಗಿಮಠ ಅವರ ವಿಶ್ಲೇಷಣೆ ಎಂದರೆ ೧೨ನೇ ಶತಮಾನದ ನಂತರ ಹಂತಿ ಸಂಪ್ರದಾಯವು ಸಂಪೂರ್ಣವಾಗಿ ಶರಣತತ್ತ್ವಗಳ ಆಧಾರವನ್ನು ಪಡೆಯಿತು ಎಂಬುದು. "ಒಕ್ಕಲಿಗನಿಗೆ ಹೊಲಗೆಲಸವೇ ಕಾಯಕ, ಸುಗ್ಗಿಯೇ ದಾಸೋಹ, ಹರಸೇವೆ. ಹಂಗಿಲ್ಲದ ಉದ್ಯೋಗವೆಂದರೆ ಒಕ್ಕಲುತನ. ನಿಸರ್ಗವು ದಯೆಮಾಡಿದರೆ ಸಾಕು, ಒಕ್ಕಲಿಗನ ಹನ್ನೆರಡು ತಿಂಗಳ ಕಾಯಕ ದಾಸೋಹ. ಅವನು ಸದಾ ಕೊಡುಗೈ ದಾನಿ.

ಕಡೆಯ ಬಲಕಿನ ತಾಳ, ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಕಿ ।ಜೀವನಕೆ
ನಡುವಿನ ತಾಳ ರೈತನಿಗೆ
ಒಂದು ತಾಳದ ಬೆಳೆಯ ಬಂದವರಿಗಿಲ್ಲೆನ್ನೆ
ಮುಂದು ಕೊಡುಗೈಯು ಒಕ್ಕಲಿಗ। ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ

ಹೀಗೆ ಒಕ್ಕಲಿಗನ ಗಳಿಕೆಯು ಎಲ್ಲರಿಗೂ ಹಂಚಿಹೋಗುವುದು. ಅವನು ಜಿಪುಣನಾದರೆ ಜೀವರಾಶಿಯು ಬದುಕುವ ಬಗೆ ಹೇಗೆ? ಅವನಿಗೆ ಸುಗ್ಗಿಯ ಕಣವೇ ಮಂಟಪವು, ಮೇಟಿಯೇ ಚೆನ್ನಬಸವೇಶ, ಆರಾಧನೆಯ ಮಾಡಿಸುವವನೇ ಹೊಣೆಗಾರ ರೈತ–ಬಸವೇಶ. ಇದಕ್ಕೆ ಗಣಿಯಾದ ಗುರು ಪ್ರಭುದೇವ, ಕಣದೊಳಗಿನ ಬುದ್ಧಿವಂತಲಿಂಗ (ಬೂದ).

ಕಣವೆ ಮಂಟಪವಾತೊ, ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ। ಕಣಮೇಟಿ
ಗಣಿಗುರುವು ಕಣಕೆ ಪ್ರಭುಲಿಂಗೊ॥

ಮೂರು ಕಾಲಿನ ಮೆಟ್ಟು ತ್ರಿವಿಧ ಲಿಂಗಗಳು, ತೂರುವ ಜೀವ, ಚಿತ್ಕಳೆ (ಪರಮಾತ್ಮಲಿಂಗ), ತೂರಿದ ರಾಶಿ ವಚನ ರಾಶಿ.

ಮೂರು ಕಾಲಿನ ಮೆಟ್ಟು ಮೂರು ಲಿಂಗಗಳೇನೊ
ತೂರುವನು ಜೀವಿ ಚಿತ್ಕಳೆಯು ।ವಚನಗಳು
ತೂರಿದಾ ರಾಶಿ ಶಿವಮತಕೆ।

ಮಹಾಶಿವಶರಣ ಡೋಹರ ಕಕ್ಕಯ್ಯನೇ ಈ ವಚನರಾಶಿಗೆ ಸೆಳ್ಳಾದ, ವಚನಗಳೇ ಚೊಕ್ಕ ಮುತ್ತಿನ ರಾಶಿ. ಎಂಟು ಕಟ್ಟಿನ ಇಕ್ಕಲಿಯೇ ಅಷ್ಟಾವರಣ ಬದ್ಧವಾದ ಲಿಂಗಾಯತ ಮತ. ಇದರಿಂದ ಹುಲುಸಾಗಿ ಉಕ್ಕಿದ ರಾಶಿಯೇ ವಚನಶಾಸ್ತ್ರವು.

ಕಕ್ಕಯ್ಯ ಸೆಳ್ಳಾಗಿ ಚೊಕ್ಕ ಮುತ್ತಿನ ರಾಶಿ
ಇಕ್ಕಲಿಯ ಎಂಟು ಕಟ್ಟುಗಳು ।ಹುಲುಸಾಗಿ
ಉಕ್ಕಿದವು ರಾಶಿ ವಚನಗಳು।

ಹಂತಿಗಣ್ಣಿಯು ಚೆನ್ನ, ಚಿಂತೆಯಿಲ್ಲದ ರಾಣಿ
ಬಂತು ಮಹಮನೆಗೆ ಬಸವಣ್ಣ।ಉಣಿಸಿದನು
ನಿಂತು ಶಿವಮತವ ಅಂಬಲಿಯ

ಈ 'ಮಹಮನೆ'ಯು ಬಸವಣ್ಣನವರ ಪ್ರಸಾದನಿಲಯವಿರಬೇಕು. ಈ ಪ್ರಕಾರ ಅನೇಕ ಹಂತಿಯ ಪದ್ಯಗಳನ್ನು, ಹಂತಿಯ ಹಾಡುಗಬ್ಬಗಳಲ್ಲಿ ಕಾಣಬಹುದು" (ಕಜಗಿ,ಪು.೧೩೪–೧೩೫).

ಇದು ಡಾ. ಗದ್ದಗಿಮಠ ಅವರು ಕೊಡುವ ವಿವರಣೆ. ಅವರ ಮುಖ್ಯವಾದ ವಿಚಾರವೆಂದರೆ ೧೨ನೇ ಶತಮಾನದ ಶರಣರ ಪ್ರಭಾವ ಒಕ್ಕಲುತನ ಉದ್ಯೋಗಸ್ಥರ ಮೇಲೆ ಸಾಕಷ್ಟು ಗಾಢವಾಗಿ ಆಗಿದೆ. ಹೀಗಾಗಿ ಉತ್ತರ ಕರ್ನಾಟಕದ ಪ್ರಮುಖ ಬೆಳೆಯಾದ ಜೋಳದ ರಾಶಿಯ ಪ್ರತಿಹಂತದಲ್ಲೂ ಶರಣರನ್ನು ನೆನೆಯುವ, ಅವರ ತತ್ತ್ವಾದರ್ಶಗಳಾದ ಕಾಯಕ ಮತ್ತು ದಾಸೋಹಗಳನ್ನು ಪಾಲಿಸುವ ಪರಿಪಾಠ ಮೊದಲಾಯಿತು. ಆದರೆ ಬರಬರುತ್ತ ಅದೆಲ್ಲ ಮಸಕಾಗುತ್ತ ಬಂದಿತು ಎಂಬುದು ಡಾ. ಗದ್ದಗಿಮಠ ಅವರ ವಿವರಣೆಯ ಪ್ರಮುಖ ಸಂಗತಿಯಾಗಿದೆ. ಈಗಂತು ಹಂತಿ ಕಟ್ಟುವ ಪದ್ಧತಿಯೇ ನಿಂತು ಹೋಗಿದೆ. ಬದಲಾಗಿ ರಾಶಿ ಯಂತ್ರಗಳು ಹೊಲಗಳಿಗೆ ನುಗ್ಗಿವೆ. ಹಾಡುಗಳಿಗೆ ಇನ್ನುಮೇಲೆ

ನೆಲೆಯೇ ಇಲ್ಲದಾಗಿದೆ. ಇದ್ದಬದ್ದ ಹಾಡುಗಳನ್ನೇ ಸಂಗ್ರಹಿಸಿ, ಉಳಿಸಿಕೊಳ್ಳುವತ್ತ ಲಕ್ಷ ಹಾಕಬೇಕಾದುದು ಅವಶ್ಯವಿದೆ. ಇವಾದರೂ ಮುಂದಿನ ಪೀಳಿಗೆಯ ಅಧ್ಯಯನಕ್ಕಾಗಿ ಲಭ್ಯವಾಗಬೇಕಾದುದು ಅವಶ್ಯವಿದೆ.

ಡಾ. ಗದ್ದಗಿಮಠ ಅವರ ಈ ಕೃತಿಯ ಇನ್ನೊಂದು ವೈಶಿಷ್ಟ್ಯವೆಂದರೆ ಅವರು ಸಂಗ್ರಹಿಸಿದ ೧೧ ಶರಣರ ದೀರ್ಘ ಹಾಡುಗಬ್ಬಗಳನ್ನು ಕೊನೆಯಲ್ಲಿ ಅನುಬಂಧದ ರೂಪದಲ್ಲಿ ಕೊಟ್ಟಿರುವುದು. ಕಲ್ಯಾಣ ಬಸವಯ್ಯ, ಹರಳಯ್ಯ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ, ಮೇದಾರ ಕೇತಯ್ಯ, ಇಳಿಹಾಳ ಬೊಮ್ಮಯ್ಯ, ಹೂಗಾರ ಮಾದಯ್ಯ, ಜಾತಿಗರ ಚೌಡಯ್ಯ, ನೇಗಿಯ ಅಮುಗಯ್ಯ, ಕುಂಬಾರ ಕುಂಡಯ್ಯ ಹಾಗೂ ಮಾದಾರ ಚೆನ್ನಯ್ಯ ಈ ೧೧ ಜನ ಶರಣರ ಚರಿತ್ರೆಗಳುಳ್ಳ ದೀರ್ಘ ಹಾಡುಗಳು ಇಲ್ಲಿವೆ. ಇವನ್ನು ಓದಿ ನೋಡಿದರೆ ಯಾವನೋ ಒಬ್ಬ ಜನಪದ ಕವಿಯ ಸೃಷ್ಟಿಗಳು ಇವೆನಿಸುತ್ತವೆ. ಇವೆಲ್ಲ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿ ಹೆಚ್ಚು ಪ್ರಚಾರದಲ್ಲಿವೆ ಎಂದು ತಿಳಿದುಬರುತ್ತದೆ. ದೊಡ್ಡ ಹಂತಿಗಳಲ್ಲಿ ಬಹುಶಃ ಇವನ್ನು ಹಾಡುವ ಪದ್ಧತಿ ಇತ್ತೆಂದೂ ತಿಳಿದುಬರುತ್ತದೆ. ಹರಿಹರನ ನಂತರ ಇಷ್ಟೊಂದು ಶಿವಶರಣರ ಚರಿತ್ರೆಗಳನ್ನು ಒಂದೆಡೆ ಕಾಣುವುದು ನಾವು ಗದ್ದಗಿಮಠರ ಈ ಕೃತಿಯಲ್ಲಿಯೆ. ಇವನ್ನು ಪ್ರತ್ಯೇಕವಾಗಿ ಮುದ್ರಿಸಿದರೆ, ಇದೊಂದು 'ಜನಪದ ಬಸವ ಪುರಾಣ'ವೇ ಎನಿಸುತ್ತದೆ.

'ಉತ್ತರ ಕರ್ನಾಟಕದ ಹಂತಿಯ ಹಾಡುಗಳು' (೧೯೭೫) ಎಂಬುದು ಡಾ. ಎಂ.ಎಸ್.ಲಠ್ಠೆ ಅವರು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ ಕೃತಿ. "ಹಂತಿ ಎಂಬ ಪದವು 'ಪಂಕ್ತಿ' ಪದದಿಂದ ಬಂದದ್ದು. 'ಪಂಕ್ತಿ' ಎಂದರೆ ಸಾಲು ಎನ್ನುವ ಅರ್ಥದಲ್ಲಿ ಬಳಸುವುದುಂಟು. ಪಂಕ್ತಿಯೇ ಪಂತಿ>ಹಂತಿ, ಹನ್ತಿ ಎಂದಾಗಿರುತ್ತದೆ" (ಪ್ರ.ಪು.೧೪). ಇದು ಡಾ. ಲಠ್ಠೆ ಅವರ ವಿವರಣೆ. ಈ ಕೃತಿಗಿಂತ ಮುಂಚೆ ಇಂತಹ ಕೃತಿ ಬಂದಿರಲಿಲ್ಲ. ಈಗ ೪೦ ವರ್ಷಗಳಾಗುತ್ತ ಬಂದರೂ ಇಲ್ಲಿಯವರೆಗೆ ಇಂತಹ ಮತ್ತೊಂದು ಕೃತಿ ಹೊರಬರಲಿಲ್ಲ ಎಂಬುದು ಈ ಕೃತಿಯ ಹೆಚ್ಚುಗಾರಿಕೆಯನ್ನು ತೋರಿಸುತ್ತದೆ. ಅತ್ಯಂತ ವೈಜ್ಞಾನಿಕವಾದ ವಿಭಾಗೀಕರಣದಲ್ಲಿ ಸುಮಾರು ೧೩೫೦ ಬಿಡಿ ನುಡಿಗಳಿವೆ. ೧೩೦೦ ತ್ರಿಪದಿಗಳು, ೫೦ ರಷ್ಟು ಚುಟುಕುಗಳು, ಖ್ಯಾಲಿಗಳು ಇಲ್ಲಿವೆ. ಹೆಣ್ಣುಮಕ್ಕಳು ಬೀಸುವಾಗ ಹಾಡಿಕೊಂಡ ತ್ರಿಪದಿಗಳಲ್ಲಿ ಅವಳ ಬದುಕಿನ ಚರಿತ್ರೆ ಇದ್ದು, ಅದೊಂದು 'ಗರತಿಯ ಜೀವನದ ಮಹಾಕಾವ್ಯ' ಆಗಿರುವಂತೆ, ಡಾ. ಎಂ.ಎಸ್. ಲಠ್ಠೆ ಅವರ ಕ್ರಮವಾದ ವಿಭಾಗೀಕರಣದಲ್ಲಿ **'ಉತ್ತರ ಕರ್ನಾಟಕದ ಹಂತಿಯ ಹಾಡುಗಳು'** ಕೃತಿಯಲ್ಲಿ ಒಕ್ಕಲಿನ ಬದುಕು, ಆತ ಮಣ್ಣಿನೊಂದಿಗೆ ಮತ್ತು ತನ್ನ ದನಗಳೊಂದಿಗೆ ಜೀವಿಸುವ ದೊಡ್ಡ ಬದುಕೆ ಇಲ್ಲಿರುವುದರಿಂದ ಈ ಕೃತಿ 'ಒಕ್ಕಲಿನ ಬದುಕಿನ ಮಹಾಕಾವ್ಯ' ಆಗಿದೆ. ಆದರೆ ಈ ಕೃತಿಯೆಡೆಗೆ ಕರ್ನಾಟಕದ ವಿದ್ವಾಂಸರ ಗಮನ ಅಷ್ಟಾಗಿ ಬೀಳಲಿಲ್ಲ. 'ಗರತಿಯ ಹಾಡು' ಕೃತಿಯಲ್ಲಿಯ ತ್ರಿಪದಿಗಳು ನೇರವಾಗಿ ಸ್ತ್ರೀಯ ಭಾವನೆಗಳನ್ನು ಹೊರಹಾಕುವುದು ಅವಳ ಕೌಟುಂಬಿಕ ಬದುಕಿನ ಪರಿಯನ್ನು. ಅದು ಕೂಡಲೇ ಎಲ್ಲರ ಮನಸ್ಸನ್ನೂ ಹಿಡಿದಿಡುವ ಸಂಗತಿ. ಆದರೆ ನಮ್ಮ ಸಾಹಿತಿಗಳಿಗೆ ಒಕ್ಕಲುತನದ ಬದುಕಿನ ಬವಣೆ ಸುಮಾರಾಗಿ

ಅಪರಿಚಿತ. ಅವರ ಅನುಭವದಿಂದ ಆಚೆಗೆ ಇರುವ ಒಂದು ಸಂಗತಿ. ಅದು ಕೆಲವರಿಗೆ ಪರಿಚಯವಿರಬಹುದು, ಕೆಲವರು ಆ ಬಗೆಗೆ ಆಸಕ್ತಿಯನ್ನೂ ಹೊಂದಿರಬಹುದು, ಆದರೆ ಅದರ ಆಕರ್ಷಣೆಯನ್ನು ತನ್ನ ಅಧ್ಯಯನದ ದಾರಿಯಲ್ಲಿ, ಆರಾಮದ ಜೀವನದಲ್ಲಿ ಕಳೆದುಕೊಳ್ಳುವುದು ಸಹಜ. ಹೀಗಾಗಿ ಒಕ್ಕಲಿಗನ ಶ್ರಮದ ಬದುಕು ವಿದ್ವಾಂಸರ ಭಾವನೆಗಳ ಹೊರವಲಯದಲ್ಲಿಯೇ ಉಳಿಯುತ್ತದೆ. ಆದುದರಿಂದ ಈ ಕೃತಿಯ ಬಗೆಗೆ ಹೆಚ್ಚಿನ ಲಕ್ಷ ಸೆಳೆಯಲಿಲ್ಲವೆಂದು ತೋರುತ್ತದೆ.

ಇಲ್ಲಿಯ ಹಾಡುಗಳನ್ನು ಮುಖ್ಯವಾಗಿ ಕಲಬುರಗಿ ಜಿಲ್ಲೆಯಿಂದ ಸಂಗ್ರಹಿಸಿದವುಗಳಾಗಿವೆ. ಜೊತೆಗೆ ಬಿಜಾಪೂರ ಮತ್ತು ಬೆಳಗಾವಿ ಜಿಲ್ಲೆಯಿಂದಲೂ ಕೆಲವೊಂದನ್ನು ಸಂಗ್ರಹಿಸಲಾಗಿದೆ. ಹೀಗಾಗಿ ಈ ಕೃತಿಗೆ 'ಉತ್ತರ ಕರ್ನಾಟಕ' ಎಂಬ ವ್ಯಾಪ್ತಿ ಸೇರಿಕೊಂಡಿದೆ. ವ್ಯಾಪಕವಾದ ಕ್ಷೇತ್ರಕಾರ್ಯದೊಂದಿಗೆ, ವಿದ್ಯಾರ್ಥಿಗಳನ್ನು, ಸ್ನೇಹಿತರನ್ನು ಸಂಗ್ರಹಕ್ಕಾಗಿ ಬಳಸಿಕೊಂಡಿರುವುದು ಸಹಜ. ಇಂತಹ ಒಂದು ಕೃತಿ ಬರುವಲ್ಲಿ ಡಾ. ಲಠ್ಠೆ ಅವರು ಪಟ್ಟಶ್ರಮ ದೊಡ್ಡದು. ಅನೇಕ ಸಾವಿರದಷ್ಟು ತ್ರಿಪದಿಗಳನ್ನು ಸಂಗ್ರಹಿಸಿ, ನಂತರ ಒಕ್ಕಲಿಗನ ಇಡೀ ಶ್ರಮದ ಬದುಕು ಕಣ್ಣ ಮುಂದೆ ಬರುವಂತೆ ತ್ರಿಪದಿಗಳನ್ನು ಹೊಂದಿಸಿಕೊಳ್ಳಲಾಗಿದೆ. ಇಲ್ಲಿಯ ೧, ೨, ೩ ಭಾಗಗಳಲ್ಲಿ, ೮೭ ಪುಟಗಳ ವ್ಯಾಪ್ತಿಯಲ್ಲಿ, ಸುಮಾರು ೫೦೦ ತ್ರಿಪದಿಗಳಲ್ಲಿ ರೈತನ ಶ್ರಮದ ಬದುಕಿನ ಚಿತ್ರಣ ನಮ್ಮ ಕಣ್ಮನಗಳನ್ನು ಆವರಿಸಿ ನಿಲ್ಲುತ್ತದೆ. ಅವನ ಜೊತೆಗೆ ಇರುವವು ಎತ್ತುಗಳು. ಭೂಮಿತಾಯಿ, ಎತ್ತು ಹಾಗೂ ಒಕ್ಕಲಿಗ ಈ ಮೂರು ಸಂಗತಿಗಳು ಇಲ್ಲಿ ಮುಖ್ಯ. ಹೀಗಾಗಿ ಇಲ್ಲಿ ದೊರೆಯುವ ಒಕ್ಕಲಿನ ಬದುಕು ವೈಯಕ್ತಿಕವಾದ ಬದುಕಲ್ಲ. ಅದು ಸಾರ್ವಜನಿಕ ಬದುಕು, ಇದೇ ಕಾಯಕದ ಬದುಕು. ಈ ಕಾಯಕ ಬದುಕಿನಲ್ಲಿ ಮನುಷ್ಯನ ಜೊತೆಗೆ ಪ್ರಾಣಿಗಳ ಸಂಬಂಧ ಗಾಢವಾಗಿದೆ. ಎತ್ತುಗಳನ್ನು ಒಕ್ಕಲಿಗನ ಶ್ರಮದ ಬದುಕಿನಿಂದ ಹೊರತೆಗೆದರೆ ಆ ಚಿತ್ರವನ್ನೇ ಕಟ್ಟಿಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ. ಹೀಗಾಗಿ ಒಕ್ಕಲಿಗನ ಶ್ರಮದ ಬದುಕನ್ನು ಕಟ್ಟಿಕೊಡುವ ಈ ಕೃತಿ ಒಕ್ಕಲಿಗನ ಬದುಕನ್ನು ಚಿತ್ರಿಸಿಕೊಡುವ ಮಹಾಕಾವ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ.

ಡಾ। ಎಂ. ಎಸ್. ಲಠ್ಠೆ ಅವರು ಈ ಕೃತಿಗೆ ಬರೆದ ಪ್ರಸ್ತಾವನೆಯಲ್ಲಿ, ಐದಾರು ಸಾಲುಗಳಲ್ಲಿಯೇ ಒಕ್ಕಲಿಗನ ಇಡೀ ಬದುಕನ್ನು, ಈ ಕೃತಿಯನ್ನು ಲಕ್ಷದಲ್ಲಿಟ್ಟುಕೊಂಡು ಹೀಗೆ ಚಿತ್ರಿಸುತ್ತಾರೆ: "ಒಕ್ಕಲಿಗರು ದುಡಿಮೆಯಲ್ಲೂ ದೇವರನ್ನು ಪ್ರಾರ್ಥಿಸುತ್ತಾರೆ. ಪೂಜೆ–ಪುನಸ್ಕಾರ ಮಾಡಿ ಕಷ್ಟ ಪರಿಹಾರಕ್ಕಾಗಿ ದೇವರನ್ನು ಮೊರೆ ಹೋಗುತ್ತಾರೆ. ಒಕ್ಕಲುತನಕ್ಕೆ ಬೇಕಾದ ಸಾಧನ, ಉಪಕರಣಗಳೂ ದೈವ–ದೇವತೆಗಳು. ಅವುಗಳನ್ನು ಪೂಜಿಸುತ್ತಾರೆ. ಅಪ್ಪಿ–ತಪ್ಪಿ ಅವಕ್ಕೆ ಕಾಲು ತಟ್ಟಿದರೆ ಮುಟ್ಟಿ ನಮಸ್ಕರಿಸುತ್ತಾರೆ. ಅವರ ತಾಯಿ ಭೂದೇವಿ, ತಂದೆ ಮಳೆರಾಜ. ಎದ್ದುಬಿದ್ದರೂ ಅವರದೇ ನಾಮಸ್ಮರಣೆ. ಅವರ ಸಂಪತ್ತೆಂದರೆ ಎರಡೆತ್ತುಗಳು. ಮೂರಿದ್ದವರ ಒಕ್ಕಲುತನ ಎಂದೂ ಮುರಿಯುವುದಿಲ್ಲ ಎನ್ನುವ ಅನುಭವದ ಮಾತೂ ಬಳಕೆಯಲ್ಲಿದೆ. ಎತ್ತು ಇಲ್ಲದವನ ಒಕ್ಕಲುತನವೆ ಅಲ್ಲವಂತೆ" (ಪ್ರ.ಮು.೧೨–೧೩). ಇದು ಒಕ್ಕಲಿನ ಒಟ್ಟು ಬದುಕಿನ ಒಂದು ನೋಟ. ಈ ಕೃತಿಯಲ್ಲಿ ಈ ಚಿತ್ರವನ್ನು

ಮೂಡಿಸುವಂತೆಯೇ ತ್ರಿಪದಿಗಳನ್ನು ಹೊಂದಿಸಿರುವುದು ಕಂಡುಬರುತ್ತದೆ. ಬಿಡಿ ತ್ರಿಪದಿಗಳನ್ನು ಹೊಂದಿಸಿದ ಶ್ರಮದ ಫಲ ಈ ಕೃತಿಯಲ್ಲಿ ಕಾಣುತ್ತದೆ.

ಭಾಗ–೧ ರಲ್ಲಿ 'ದೇವ ದೇವತೆಗಳ ಸ್ತುತಿ' ಪದ್ಯಗಳಿವೆ. ಒಕ್ಕಲಿಗರಿಗೆ ಆ ದೇವ ಈ ದೇವ ಎಂಬ ಭೇದಭಾವವಿಲ್ಲ. ಎಲ್ಲ ದೇವತೆಗಳು ಅವರಿಗೆ ಸಮಾನ. ಇಲ್ಲಿ ಒಕ್ಕಲಿಗರ ಸೌಹಾರ್ದಬದುಕಿನ ಒಳಗುಟ್ಟೇ ಅಡಗಿದೆ.

ಪಯಿಲೆ ಪ್ರಥಮದಾಗ ಯಾ ಅಣ್ಣಗ ನೆನಿಬೇಕೊ
ಗವರಿ ಮುಂದಿರುವ ಗಣಪಣ್ಣಗ। ನೆನದರ
ಬರವಲ್ದ ಹಾಡಾ ಬರತಾವೊ

ಹೀಗೆ ಗಣಪತಿಯನ್ನು ಮೊದಲ್ಗೊಂಡು ಶಿವ–ಪಾರ್ವತಿ, ಸರಸ್ವತಿ, ಲಕ್ಷ್ಮಿ, ಮರಗಮ್ಮ, ದುರಗಮ್ಮ, ಹನುಮಂತ ಹೀಗೆ ಊರಲ್ಲಿರುವ ಎಲ್ಲ ಗ್ರಾಮದೇವರುಗಳನ್ನು ನೆನೆಯುತ್ತಾನೆ ಒಕ್ಕಲಿಗ. ಅಂತಹ ೧೧೩ ತ್ರಿಪದಿಗಳು ಈ ಭಾಗದಲ್ಲಿವೆ.

ಭಾಗ–೨ 'ಸರದಾರ ನನ್ನೆತ್ತ' ಎಂಬುದು. ಒಕ್ಕಲಿಗನಿಗೆ ಅವನಷ್ಟೇ ಪ್ರಮುಖವಾದ ಇನ್ನೊಂದು ಜೀವವೆಂದರೆ ಎತ್ತು. ಅದನ್ನು ಬಸವಣ್ಣನೆಂದು ಆತ ಕರೆಯುತ್ತಾನೆ. ಈ ಅಧ್ಯಾಯದ 'ಬಂಟ ಹುಟ್ಯಾನ ಬಸವಣ್ಣ', 'ಪುಂಡಾನ ಎತಗೋಳು', 'ಸಾಗಿ ಬಾರಣ್ಣ ಸಾವಕಾಸ', 'ಸತ್ತರು ದುಡದೆಲ್ಲೊ ಇದ್ದರು ದುಡದೆಲ್ಲೊ' ಎಂಬ ನಾಲ್ಕು ಉಪಶೀರ್ಷಿಕೆಗಳಡಿ, ಸುಮಾರು ೨೦೦ ಕ್ಕೂ ಮೇಲ್ಪಟ್ಟು ತ್ರಿಪದಿಗಳನ್ನು ಕ್ರಮವಾಗಿ ಜೋಡಿಸಿ, ಎತ್ತನ್ನು, ಎತ್ತಿನ ಸಹಾಯವನ್ನು, ಎತ್ತಿನ ಮಹತ್ವವನ್ನು ಒಕ್ಕಲಿಗನ ಬಾಯಿಂದ ಸ್ಮರಿಸುವ ತ್ರಿಪದಿಗಳಲ್ಲಿ, ಎತ್ತಿನ ಬದುಕಿನ ಚಿತ್ರಣವನ್ನು ಕಾಣುತ್ತೇವೆ.

ಹಾಡ ಇಲ್ಲಿಗೆ ಸುರುವ ನೀಡೊ ನಮ್ಮಗ ವರವ
ಗರುಬ್ಯಾಡ ನಮಗ ಬಸವಣ್ಣ। ನಿನ ಪೂಜಿ
ಅರುವಿಟ್ಟು ಮೊದಲೆ ಮಾಡುವೆನೊ।

ಆಕಳ ಈವಾಗ ಪಾತಾಳ ನಡಗಿತ್ತು
ಯಾತಾಳದ ಕಲ್ಲು ಮರೆಯಾಗಿ।ಗೊಪೆಮ್ಮ
ಬಾಲಬಸವನ ಹಡದಾಳೊ।

ಹೀಗೆ ಬಸವನ ಪುರಾಣ ಪ್ರಾರಂಭವಾಗುತ್ತದೆ.

ಬೆಳ್ಳನ ಎರಡೆತ್ತ ಬೆಳ್ಳಿಯ ಕೋಡಣಸ
ಹಳ್ಳದ ಹೊಲವ ಹರಗ್ಯಾವೊ।ಬಸವಾನ
ತೆಳ್ಳನ ಹೊಟ್ಟಿ ಹಸದಾವೊ

ಎತ್ತುಗಳ ಶ್ರಮದ ಕಥೆ, ತನಗಾಗಿ ಅವು ದುಡಿವ ಪರಿಯನ್ನು ಒಕ್ಕಲಿಗ ಮುಂದುವರೆಸುತ್ತಾನೆ.

ಕರಕಿ ಕಣಗಿಲ ತಗಸಿ ಹಸನಾಯ್ತು ಭೂಮಿತಾಯಿ
ಬ್ಯಾಸಿಗಿ ಬಿಸಲ ಬಿರುಸಾಯ್ತೊ।ಬಸವಣ್ಣ
ಬ್ಯಾಸೊತ್ತ ಹಾದಿ ಹಿಡದಾನೊ

ಹೊಲ ಹಸನು ಮಾಡುವ ಕೆಲಸ ಈಗ ಮುಗಿಸಿದ ಬಸವಣ್ಣ. ಇಂತಹ ಶ್ರಮದ ಕೆಲಸಕ್ಕಾಗಿ ಆತ ದಣಿದುಕೊಳ್ಳುವುದು ಸ್ವಾಭಾವಿಕ. ಇನ್ನು ಮಳೆ ಸುರುವಾಗುವ ಕಾಲ.

ರೋಣಿಯ ಮಳೆಯಾಗಿ ಓಣೆಲ್ಲ ಕೆಸರಾಗಿ
ಜಾರಿ ಬಿದ್ದಿಯೊ ಜತನವ। ಬಸವಣ್ಣ
ತುರಾಯಿ ಬಿದ್ದಾವ ತುಳಿದೀರೊ

ಜೋಡ ಪದರಿನ ಹಗ್ಗ ಜೋತಾಡು ಬಾಸಿಂಗ
ಮಾತಾಡೊ ಗಂಟೆ ಕೊರಳಾಗ। ಕಟಗೊಂಡು
ಕೂರಿಗಿ ಮುಂದ ಕುಣಿದಾನೊ

ಹೀಗೆ ಬಸವಣ್ಣನನ್ನು ಶೃಂಗಾರಗೊಳಿಸುತ್ತಲೇ ಶ್ರಮದ ದಾರಿ ಹಿಡಿಯುತ್ತಾನೆ.

ಹಂತಿಯ ಕಟ್ಟುದಕ ಚಿಂತಿಯ ಮಾಡಬ್ಯಾಡ
ನಿಂತಿರೊ ನಿಲವ ಹೊಡಿತೀನಿ।ಬಸವಣ್ಣ
ಹಂತಿಯ ತುಳಿದು ಬರತಾನೊ

ಹೀಗೆ ಸಾಗುತ್ತದೆ ಬಸವಣ್ಣನ ಚರಿತ್ರೆ. ದನಗಳ ಶ್ರಮವನ್ನು ದಾಖಲಿಸುವ ಏಕಮೇವ ಸಾಹಿತ್ಯವೆಂದರೆ ಅದು ಹಂತಿಪದಗಳು. ಬದುಕೆಂದರೆ ಕೇವಲ ಒಂಟಿಮಾನವ ಸಾಗಿಸುವ ಬದುಕು ಪೂರ್ಣವಾದುದಲ್ಲ. ಅವನ ಜೊತೆ ಪ್ರಾಣಿಗಳ ಬದುಕು ಕೂಡ ಅವನಿಗಾಗಿ ಸವೆದಿರುತ್ತದೆ. ಹೀಗಾಗಿ ಅವನ ಜೊತೆಗೆ ಇರುವ ಪ್ರಾಣಿಗಳ–ಎತ್ತು, ಆಕಳು, ಎಮ್ಮೆ,ಕೋಣ, ಕುರಿ, ನಾಯಿ, ಬೆಕ್ಕು ಇವೆಲ್ಲವುಳ ಸಹಯೋಗದೊಂದಿಗೆ ಒಕ್ಕಲಿಗನ ಬದುಕು ಮುನ್ನೆಡೆಯುತ್ತಿರುತ್ತದೆ. ಪ್ರಾಣಿಗಳ ಬದುಕಿನ ಚರಿತ್ರೆ ಇಲ್ಲದೆ ಮಾನವನ ಬದುಕಿನ ಚರಿತ್ರೆ ಪೂರ್ಣಗೊಳ್ಳಲಾರದು. ಇಂತಹ ಪ್ರಾಣಿಗಳೊಂದಿಗನ ಬದುಕಿನ ಚರಿತ್ರೆ ನಮಗೆ ದೊರೆಯುವುದೇ ಜನಪದ ಸಾಹಿತ್ಯದಲ್ಲಿ. ಕುರಿ, ಆಕಳು, ಎಮ್ಮೆಗಳೊಂದಿಗಿನ ಮಾನವನ ಬದುಕು ನಮಗೆ ನೋಡಲು ದೊರೆಯುವುದು **'ಜನಪದ ಹಾಲುಮತ ಮಹಾಕಾವ್ಯ'** ದಲ್ಲಿ. ಎತ್ತುಗಳ ಜೊತೆಗಿನ ಮಾನವನ ಬದುಕು ದೊರೆಯುವುದು 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು' ಕೃತಿಯಲ್ಲಿ.

ಗಂಭೀರ ಬಸವಣ್ಣ ಹಂತಿಗಿ ಹೋಗ್ಯಾನ
ಕಂಕಿ ತುಳದಾನ ಕಾಲಾಗ।ಬಸವಣ್ಣ
ಕುಂಟಾಗಿ ಮೇವ ತಿನವಲ್ಲೊ।

ಬಾರಪ್ಪ ಬಸವಣ್ಣ ಭಾಸಿಂಗ ತರಸೀನಿ
ರೇಶಿಮಿ ಗೊಂಡ್ಯಾ ಉಟಗೊಳ್ಳು ।ಬಸವಯ್ಯ
ವರಸಕೊಮ್ಮೆ ನಿನ್ನ ಮೆರಸ್ತೀನಿ

ಈ ಮೇಲಿನ ಎರಡು ತ್ರಿಪದಿಗಳಗಲ್ಲಿ ಎತ್ತುಗಳಿಗೆ ಸಂಬಂಧಿಸಿದ ಎರಡು ಭಿನ್ನ ಮನಸ್ಸುಗಳಿವೆ. ಒಂದು ಬಸವಣ್ಣ ತನಗಾಗಿ ದುಡಿದು ದಣಿದುಕೊಳ್ಳುವುದು, ಇನ್ನೊಂದು ತನಗಾಗಿ ದುಡಿಯುವ ಜೀವವನ್ನು ಶೃಂಗರಿಸಿ ಆನಂದ ಪಡುವುದು. ಹೀಗೆ ಎತ್ತುಗಳನ್ನು ದನಗಳನ್ನು ಆನಂದ ಪಡಿಸಲು, ಅವುಗಳಿಗೆ ಗೌರವಸೂಚಿಸಲು, ಅವುಗಳ ಜೊತೆಗೆ ಉತ್ಸವದಲ್ಲಿ ಭಾಗವಹಿಸಲು, ಅವುಗಳಿಗಾಗಿಯೇ ಉತ್ಸವಗಳನ್ನು ಏರ್ಪಡಿಸಲು ಈ ಉದ್ದೇಶಗಳಿಗಾಗಿಯೇ ಮಣ್ಣೆತ್ತಿನ ಅಮವಾಸ್ಯೆ, ಕಾರ್ಹುಣವಿ, ದೀಪಾವಳಿ ಮುಂತಾದ ಸಂದರ್ಭಗಳನ್ನು ಬಳಸಿಕೊಳ್ಳುತ್ತಾನೆ. ಈ ಹಬ್ಬಗಳಲ್ಲಿ ದನಗಳನ್ನು ಖುಷಿಪಡಿಸಲೆಂಬಂತೆ, ಗೌರವಸೂಚಿಸಲೆಂಬಂತೆ ಅವುಗಳನ್ನು ಶೃಂಗರಿಸುವ, ಅವುಗಳಿಗಾಗಿ ಕ್ರೀಡೆಗಳನ್ನು ಏರ್ಪಡಿಸುವ, ಚಕ್ಕಡಿ ಹೂಡಿ ಮೆರಸುವ, ಬಣ್ಣಬಳಿದು ಝೂಲು ಹೊದಿಸಿ ಹಲಿಗೆ ಬಾಜಿ ಹಚ್ಚಿ ಮೆರವಣಿಗೆ ಮಾಡುವ ಕ್ರಿಯೆಗಳೆಲ್ಲ ನಡೆಯುತ್ತವೆ. ಅಲ್ಲೆಲ್ಲ ಹಾಡುವ ಹಾಡುಗಳು ಹಂತಿಯ ಹಾಡುಗಳೇ ಆಗಿರುತ್ತವೆ.

ಬಾರಪ್ಪ ಬಸವಣ್ಣ ಭಾಸಿಂಗ ತರಸೀನಿ
ರೇಶಿಮಿ ಗೊಂಡ್ಯಾ ಉಟಗೊಳ್ಳುಬಸವಯ್ಯ
ವರಸಕೊಮ್ಮೆ ನಿನ್ನ ಮೆರಸ್ತಿನಿ

ಹೊನ್ನುಗ್ಗಿ ಹೊಸದಿನ ಬಸವಣ್ಣನರಸಿಣ
ಕಾರುಣ್ಮಿದಿನ ಮದಿಮಗೊ। ಬಸವಣ್ಣ
ಕರಿಕಡದು ಚಾಜ ತರತಾನೋ

ಮಣ್ಣೆತ್ತಿನಮವಾಸಿ ದಿನ ಮಣ್ಣಿನೆತ್ತವ ಮಾಡಿ
ಎತ್ತ ಸತ್ತಾದ ಎಳದೊಯ್ಯ ।ಪಾಡೇವಾರ
ತೊಗಲ ಕೊಟ್ಟು ನೀ ಖಳ ಒಯ್ಯೊ

ಇದ್ದರೂ ದುಡದೆಲ್ಲೋ ಸತ್ತರೂ ದುಡದೆಲ್ಲೊ
ಡೋರರ ಡೋನಿಯಾಗ ನೆನಿದೆಲ್ಲೊ।ಬಸವಣ್ಣ
ನೇಗಲ ಮಿಣಿಯಾಗಿ ನಡದೆಲ್ಲೊ

ಎರಿಯ ಹೊಲ್ದಾನ ಬಳ್ಳಿ ಎಳಿಯ ಸವತಿಕಾಯಿ
ಹರಿಯಂದರ ಹ್ಯಾಂಗ ಹರಿಯಲೆ ।ಬಸವಣ್ಣನ
ಮರಿಯಂದರ ಹ್ಯಾಂಗ ಮರಿಯಲೆ

ಇದು ಹಂತಿಪದಗಳಲ್ಲಿ ಮೂಡಿಬಂದ ಎತ್ತಿನ ವರ್ಣನೆ. ಒಕ್ಕಲುತನ ಪ್ರಧಾನ ಉದ್ಯೋಗವುಳ್ಳ ನಮ್ಮ ನಾಡಿನಲ್ಲಿ ಒಕ್ಕಲುತನಕ್ಕೆ ಪ್ರಮುಖ ಸಹಾಯಕ ಪ್ರಾಣಿಯಾದ ಎತ್ತಿನ ಬದುಕು, ಅರ್ಥಾತ್ ಅದರೊಂದಿಗಿನ ಒಕ್ಕಲಿನ ಬದುಕು ನಮಗೆ ದೊರೆಯುವುದು ಹಂತಿಯ ಪದಗಳಲ್ಲಿ. ಡಾ. ಎಂ.ಎಸ್.ಲಠ್ಠೆ ಅವರು ಇಂತಹ ಚರಿತ್ರೆಯನ್ನು ಕ್ರಮಬದ್ಧವಾಗಿ ಚಿತ್ರಿಸುವಂತೆ ಇಲ್ಲಿಯ ತ್ರಿಪದಿಗಳನ್ನು ಹೊಂದಿಸಿಕೊಟ್ಟಿರುವುದು ಅವರ ಸಂಪಾದನಾ ಸಾಮರ್ಥ್ಯವನ್ನು ತೋರಿಸುತ್ತದೆ.

ಇನ್ನು ಭಾಗ-೩ 'ರೈತನ ರಾಬ' ಎನ್ನುವಲ್ಲಿ ರೈತನ ಪರಿಶ್ರಮದ ಕಥೆಯನ್ನು ಕ್ರಮಬದ್ಧವಾಗಿ ಬರುವಂತೆ ಮತ್ತೆ ನಾಲ್ಕು ಉಪಶೀರ್ಷಿಕೆಗಳಲ್ಲಿ- ಸುಮಾರು ೧೫೦ ತ್ರಿಪದಿಗಳನ್ನು ಹೊಂದಿಸಿದ್ದಾರೆ. 'ರೈತ ನಿನ ರಾಬ ಸುರುವಾಯ್ತು' ಎನ್ನುವಲ್ಲಿ ಒಕ್ಕಲಿಗನ ಕೆಲಸ ಪ್ರಾರಂಭವಾಗುವ ಬಗೆಯನ್ನು ಕಾಣುತ್ತೇವೆ.

ನಸಕಿನೊಳಗ ಎದ್ದು ಕಸಹೆಂಡಿ ತಾ ಬಳಿದು
ಮುಸುರಿ ಹತ್ತಿಕಾಳಿಡಬೇಕೊ। ಹಿಂಡಿ ಕೊಡಬೇಕೊ
ಬೆಳಕ ಹರಿವದರೊಳಗ ಜಳಕ ತಣ್ಣೀರಾಗ
ಕಳಕಮಲ್ಲಯ್ಯನ ಧ್ಯಾನ ಮಾಡಬೇಕೊ। ಗಳ್ಯಾ ಹೊಡಿಬೇಕೊ

ಹೀಗೆ ಪ್ರಾರಂಭವಾಗುತ್ತದೆ ರೈತನ ದಿನಚರಿ. ಅದು ಯುಗಾದಿಯ ದಿನದಿಂದ ಹೊಲ ಸಾಗುಮಾಡುವ ಅಧಿಕೃತ ಕೆಲಸ ಪ್ರಾರಂಭವಾಗುತ್ತದೆ.

ಉಗಾದಿ ಹಬ್ಬಕ ಹೊಸ ಹೋರಿ ಗಳೆ ಹೂಡಿ
ರೈತ ನಿನರಾಬ ಸುರುವಾಯ್ತು।ಬಸವಣ್ಣ
ಕಾಯೊಡದು ಕೈ ಮುಗದೇನೊ

ಹರಗಿ ಹದವನಾಯ್ತು ಮಡಿಕಿ ಕುಂಟಿಯನಾಯ್ತು
ಕೊಯ್ಲಾದ ಕುಂಪಿ ಸುಡೋದಾಯ್ತು।ಮೇಘರಾಜ
ನಿನ್ನ ಹಾದಿ ನಾನು ನೋಡದಾಯ್ತೊ

ರೈತನಿಗೆ ಜೋಡಿ ಯಾವಾಗಲೂ ಎತ್ತುಗಳೆ. ರೈತನು ತನ್ನ ಎತ್ತಿನೊಡಗೂಡಿ ಕೆಳಗೆ ಭೂಮಿತಾಯಿಯನ್ನು ಹಸನುಗೊಳಿಸಿ, ಮೇಲೆ ಆಕಾಶದ ಕಡೆಗೆ ಮುಖಮಾಡಿ ಮಳೆಯ ದಾರಿ ನೋಡುವುದು ಅವನ ಗತಿ. ಭೂಮಿಯೂ ಒಲಿಯಬೇಕು, ಆಕಾಶವೂ ಕೈಗೂಡಬೇಕು. ಎರಡರ ಮಧ್ಯ ಸವೆಯುವ ರೈತ-ಎತ್ತುಗಳು ಬದುಕಲು ಇವೆರಡೂ ಬಹುಮುಖ್ಯ.

ರೋಣಿ ಮಿರಗದ ಮಳಿಯ ತುಂಬಿ ಬಂದಂಗ ಹೊಳಿಯ
ಆರಿದ್ರಿ ಮಳಿಗ ಹಸಿಯಾಗಿ । ರೈತರು
ಖುಸಿಯಾದರೊ ತಮ್ಮ ಮನದಾಗ

ಹೀಗೆ ಆಕಾಶ ಒಲಿದು ಮಳೆರಾಜನನ್ನು ಕಳಿಸಿಕೊಟ್ಟರೆ ಮಾತ್ರ ರೈತನ ಬದುಕು ಚಿಗುರೊಡೆಯುತ್ತದೆ.

ಗದ್ದರಸಿ ಮಳಿರಾಯ ಬಿದ್ದಾನ ಭೂಮಿಮ್ಯಾಲ
ಎದ್ದಾನ ಒಕ್ಕಲಿಗ ಬೆಳತಾನ। ಕೂರಿಗಿ ಕುಂಟಿ
ಬಿದ್ದಾವೊ ಬಡಿಗೇರ ಅರಮನಿಯಾಗೊ

ಹೀಗೆ ಪ್ರಾರಂಭವಾಗುತ್ತದೆ ರೈತನ ಉಳುವ ಸಾಮಾನುಗಳ ತಯಾರಿಕೆ. ಬಡಿಗನಿಂದ ಪ್ರಾರಂಭವಾದ ಸಹಕಾರ ಅದು ಬೆಳೆಯುತ್ತ ಬೆಳೆಯುತ್ತ ಒಬ್ಬೊಬ್ಬ ಆಯಗಾರನ ಸಹಾಯ

ಪಡೆಯುತ್ತ ರೈತನ ಕೆಲಸಗಳು ಮುಂದುವರೆಯುತ್ತವೆ. ಬಡಿಗ, ಕಂಬಾರ, ಕುಂಬಾರ ಮುಂತಾಗಿ ಹದಿನೆಂಟು ಜಾತಿ ಜನಾಂಗಗಳ ಸಹಾಯವೂ ಅವನ ಹೊಲದ ಕೆಲಸಗಳು ನಡಯಲು, ಬದುಕು ಸಾಗಲು ಅವಶ್ಯ.

ಕಂಬಾರಣ್ಣನ ಹೊಂಬಲ ಚಂದ ।
ಬಡಿಗ್ಯಾರಣ್ಣನ ಮಂಡಿ ಚಂದ
ಮಂಡಿ ಕೆಳಗ ಹೊಂಬಲ ಬಿಗಿದು।
ಹೊಡಿಯೋ ಕೂರಗ್ಯೋ ।

'ಬಿಳಿಮುತ್ತಿನಂಥ ಬಿಳಿಜೋಳ' ಎನ್ನುವ ಉಪಶೀರ್ಷಿಕೆಯಡಿ ಒಕ್ಕಲಿಗ–ಎತ್ತು ಇವರ ಪರಿಶ್ರಮದ ಫಲ ಬೆಳೆದು ನಿಂತ ಚಿತ್ರ ಕಣ್ಣಿಗೆ ಕಟ್ಟುವಂತೆ ವರ್ಣಿಸುವದನ್ನು ಕಾಣುತ್ತೇವೆ.

ತೊಡಿ ಮಟ ಬಿಳಿಜ್ವಾಳಾ ಕಸ ತಗಿಯೊ ಜಳಜಳ
ಹೊಡಿ ಹಾಕಿ ತೆನಿಕಾಳ ಸಮತೂಕೊ। ನೋಡಿ ಬರಬೇಕೊ

ಹದ ನೋಡಿ ಹರಗ್ಯಾರೊ ಬೆದಿ ನೋಡಿ ಬಿತ್ಯಾರೊ
ಕೊಯ್ದು ಹೊಲ ಸೂಡ ಕಟ್ಯಾರೊ। ಬಣವಿ ಒಟ್ಯಾರೊ

'ಮೇಟಿಯ ಪೂಜಿ ತೆನಿ ಪೂಜಿ' ಎನ್ನುವ ಮೂರನೆಯ ಉಪಶೀರ್ಷಿಕೆಯಡಿ ಒಟ್ಟಿದ ಬಣವಿಯನ್ನು ಒಡೆದು ಗೂಡು ಮುರಿದು ಹಂತಿ ಮುಗಿಸುವ ವರೆಗಿನ ಕಥೆ ಇದೆ.

ಕಣ ಯಾರ ಕಡದಾರ ನೀರ್ಯಾರ ಹೊಡದಾರ
ಹೊಟ್ಟಹರವಿ ಮೇಟಿ ಜಡದಾರ ।ಮಳಖೇಡ
ಮುತ್ತೈದೆಯರು ಬಂದು ಮುರದಾರ

ಖಳದ ಪಾಳೇದ ಪೂಜಿ ರಾಗೋಲ ದಿಂಡಿನ ಪೂಜಿ
ಮೇಟಿಯ ಪೂಜಿ ತೆನಿಪೂಜಿ।ಬಸವನ
ಪಾದದ ಪೂಜಿ ಹಣಿಪೂಜಿ

ಮುತ್ತಿನ ರಾಸ್ಯೋ ಮುಗಲುದ್ದ ಸೆಳ್ಳೊ
ಕಂಕಿ ಹಾರ್‍ಯಾವೊ ಕಂಕಣಕೊ ।ಕಣದಾಗ
ಹೊಟ್ಟು ಹಾರ್‍ಹೋತೊ ಪಟ್ಟಣಕ

ಇಲ್ಲಿಗೆ ಹಂತಿ ಮುಗಿಯುತ್ತದೆ. ಮುಂದೆ 'ತೂರ್‍ಯಾಳೊ ಮುತ್ತು ಹೊಲದಾಗ' ಎಂಬ ಶೀರ್ಷಿಕೆಯಡಿ ಹಂತಿ ಎತ್ತುಗಳ ಕೊಳ್ಳ ಹರಿದು, ಮದನ ಮನಗಿಸಿ, ತೂರಿ ರಾಶಿ ಮನೆಗೆ ತಂದು ಹಚ್ಚುವವರೆಗಿನ ಕಥೆ ಇದೆ.

ಹಂತಿ ಹತ್ತಿಗ ಬಂತು ಕಂಕಿ ಕಡಿಯಕ ಬಂತು
ಕಂಚಿನಾರುತಿ ಬೆಳಗ್ಯಾರ ।ಬಸವಣ್ಣಿ
ಹಂತಿಯ ಕೊಳ್ಳ ಹರದಾರೊ

ಮೂರೂಸಂಜಿ ಹೊತ್ತು ಮುತ್ತೈದಿ ಬಂದಾಳೊ
ಆರುತಿ ತಳಗಿ ಬಲಗೈಯೊಳಿಹಿಡಕೊಂಡು
ತೂರ್ಯಾಳೊ ಮುತ್ತು ಹೊಲದಾಗ

ಇಲ್ಲಿಗೆ ರೈತನ ಶ್ರಮದ ಫಲ ಮನೆಗೆ ಸೇರುತ್ತದೆ. ಹೀಗೆ ಇಡಿಯಾಗಿ ಈ ಕೃತಿಯಲ್ಲಿ ರೈತ ಮತ್ತು ಎತ್ತುಗಳ ಪರಿಶ್ರಮದ ಬದುಕಿನ ಚರಿತ್ರೆ ಕಣ್ಣಿಗೆ ಕಟ್ಟುವಂತೆ ತ್ರಿಪದಿಗಳನ್ನು ಹೊಂದಿಸಿ ಸಂಪಾದಿಸಿರುವುದು ಎದ್ದು ಕಾಣುತ್ತದೆ.

ಹಂತಿ ಹಾಡುಗಳ ಇನ್ನೊಂದು ವೈಶಿಷ್ಟ್ಯವೆಂದರೆ ಸ್ಥಳೀಯ ಮಹಾತ್ಮರ ಬಗ್ಗೆ, ದೇವರ ಬಗ್ಗೆ, ಐತಿಹಾಸಿಕ, ಪೌರಾಣಿಕ ವ್ಯಕ್ತಿಗಳ ಬಗ್ಗೆ ತಮಗೆ ಗೊತ್ತಿರುವ ಕಥೆಗಳನ್ನು ತ್ರಿಪದಿಗಳಲ್ಲಿ ಹಾಡಿಕೊಳ್ಳುವುದು. ಇದರಿಂದ ಸ್ಥಳೀಯ ಚರಿತ್ರೆಯೊಂದು ಹಂತಿಯ ಹಾಡುಗಳಲ್ಲಿ ಉಳಿದುಕೊಂಡು ಬರುತ್ತದೆ. ಈ ಕೃತಿಯಲ್ಲಿ ಕಲಬುರಗಿ ಶರಣ ಬಸವೇಶ್ವರ, ಬಂದನವಾಜ, ಕೊಡೆಕಲ್ಲ ಬಸವಣ್ಣ, ತಿಂಥಿಣಿ ಮೌನಪ್ಪ, ಮೈಲಾಪುರದ ಮಲ್ಲಯ್ಯ ಇಂತಹ ಪ್ರಸಿದ್ಧ ದೇವರಗಳ ಬಗ್ಗೆ, ಸಲಗರದ ಮದಾರಸಾಬ, ಯಮನೂರ ಪೀರ ಇಂತಹ ಸ್ಥಳೀಯ ಮಹಾತ್ಮರ ಬಗ್ಗೆಯೂ ಚರಿತ್ರೆಗಳು ದಾಖಲಾಗಿವೆ. ಕಿತ್ತೂರ ಚೆನ್ನಮ್ಮ, ನರಗುಂದ ಬಾಬಾಸಾಬರಂಥ ಐತಿಹಾಸಿಕ ವ್ಯಕ್ತಿಗಳ ಚರಿತ್ರೆಗಳು, ಹನುಮಂತನಂತಹ ಮಹಾಭಾರತದ ವ್ಯಕ್ತಿಗಳ ಕಥೆಗಳು ದೊರೆಯುತ್ತವೆ. ಹೀಗಾಗಿ ಹಂತಿಪದಗಳ ಒಂದು ದೊಡ್ಡ ಸಂಗ್ರಹವಾದ ಈ ಕೃತಿ ಸಂಗ್ರಹ ಮತ್ತು ಸಂಪಾದನೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಕೃತಿ ಎನಿಸುತ್ತದೆ. ಹಂತಿ ಕಟ್ಟುವ ಕೆಲಸವೇ ನಿಂತುಹೋಗಿರುವ ಇಂದಿನ ಕಾಲದಲ್ಲಿ ಹಂತಿಯ ಬಗೆಗೆ ತಿಳಿದುಕೊಳ್ಳಲು, ಅಧ್ಯಯನ ನಡೆಸಲು ಒಂದು ವಿಶ್ವಾಸಿಕ ಬೃಹತ್ ಆಕರ ಗ್ರಂಥವೂ ಎನಿಸುತ್ತದೆ.

'ಉತ್ತರ ಕರ್ನಾಟಕದ ಹಂತಿ' (೨೦೦೯) ಎಂಬುದು ಡಾ. ಬಿ.ಬಿ.ಬಿರಾದಾರ ಅವರು ಹಂತಿ ಹಾಡುಗಳನ್ನು, ಹಂತಿ ಸಂಪ್ರದಾಯವನ್ನು ಕುರಿತು ಕೈಕೊಂಡ ಪಿಎಚ್.ಡಿ.ಅಧ್ಯಯನದ ಕೃತಿಯಾಗಿದೆ. ಒಂದು ವಿಶೇಷ ಸಂಗತಿ ಎಂದರೆ, ಈ ಸಂಶೋಧನ ಪ್ರಬಂಧಕ್ಕೆ ಡಾ. ಎಂ.ಎಸ್.ಲಠ್ಠೆ ಅವರ 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು' ಕೃತಿಯೇ ಮೂಲ ಆಧಾರವಾಗಿದೆ ಎಂಬುದು ಈ ಪಿಎಚ್.ಡಿ. ಪ್ರಬಂಧವನ್ನು ಪರಿಶೀಲಿಸಿದಾಗ ಸ್ಪಷ್ಟವಾಗುವ ಸಂಗತಿಯಾಗಿದೆ.

ಈ ಕೃತಿಯಲ್ಲಿ ಮುಖ್ಯವಾಗಿ ಎರಡು ಭಾಗಗಳನ್ನು ಮಾಡಿಕೊಂಡಿದ್ದಾರೆ. **೧. ಹಂತಿಯ ಕ್ರಿಯೆ :** ಇದರಲ್ಲಿ ಹಂತಿಯ ಕಾರ್ಯವಿಧಾನ, ಹಂತಿಯ ನಂಬಿಕೆಗಳು, ಹಂತಿಯ ಸಂಪ್ರದಾಯಗಳು ಎಂಬ ಅಧ್ಯಾಯಗಳಡಿ ಹಂತಿಯ ಒಟ್ಟು ತಯಾರಿ ಮತ್ತು ಅಲ್ಲಿ ನಡೆಯುವ ಕೆಲಸಗಳ ಜೊತೆಗೆ, ಈ ಹಂತಿಯ ಸುತ್ತಮುತ್ತಲಿರುವ ನಂಬಿಕೆ, ಸಂಪ್ರದಾಯಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಎರಡನೇ ಭಾಗ: ಹಂತಿಯ ಸಾಹಿತ್ಯ ಕುರಿತಿದ್ದು, ಇಲ್ಲಿ ಹಂತಿಯ ಹಾಡುಗಳ ಸ್ವರೂಪ, ಹಂತಿಯ ಹಾಡುಗಳ ವಸ್ತು,

ಹಂತಿಯ ಹಾಡುಗಳ ಸಾಹಿತ್ಯಿಕ ಮೌಲ್ಯ ಇವುಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಕೊನೆಗೆ ಅನುಬಂಧದಲ್ಲಿ ಕೆಲ ಅಪ್ರಕಟಿತ ಹಂತಿಯ ಹಾಡುಗಳನ್ನು, ವಕ್ತಾರರ ಮಾಹಿತಿ, ಒಕ್ಕಲುತನ ವೃತ್ತಿಪದಕೋಶ–ಮುಂತಾದವುಗಳನ್ನು ಕೊಟ್ಟಿದ್ದಾರೆ.

ಡಾ. ಬಿ.ಬಿ.ಬಿರಾದಾರ ಅವರು ಈ ಪ್ರಬಂಧವನ್ನು ಅತ್ಯಂತ ಶ್ರದ್ಧೆಯಿಂದ ತಯಾರಿಸಿದ್ದಾರೆ. ಮೊದಲನೆಯ ಭಾಗವನ್ನು ಎಷ್ಟು ಮುತುವರ್ಜಿವಹಿಸಿ ಮಾಡಿದ್ದಾರೊ ಎರಡನೆಯ ಭಾಗವನ್ನೂ ಅಷ್ಟೇ ಶ್ರದ್ಧೆಯಿಂದ ಮಾಡಿದ್ದಾರೆ. ಮೊದಲಿನ ಭಾಗದಲ್ಲಿ ಡಾ. ಬಿರಾದಾರ ಅವರ ಕ್ಷೇತ್ರಕಾರ್ಯದ ಅನುಭವ ಎದ್ದು ಕಾಣುತ್ತದೆ. ಬೆಳೆಯನ್ನು ಕೊಯ್ದು ಸೂಡು ಕಟ್ಟುವ ವಿಧಾನ, ಅವುಗಳಿಂದ ಬಣವಿ ಒಟ್ಟುವ ವಿಧಾನ, ಅದರಲ್ಲಿ ಎಷ್ಟು ಬಗೆಯಲ್ಲಿ ಬಣವಿಯನ್ನು ಮಾಡುತ್ತಾರೆ. ಹಂತಿಗಾಗಿ ಕಣ ಮಾಡುವ ರೀತಿ, ಮೇಟಿ, ಬಿಂಡಿ ಕಟ್ಟುವುದು, ಬಳಕೆಯಾಗುವ ವಸ್ತುಗಳು– ಹೀಗೆ ಎಲ್ಲವನ್ನೂ ಕೆಲ ರೇಖಾಚಿತ್ರಗಳ ಮೂಲಕ, ಇನ್ನು ಕೆಲವನ್ನು ಛಾಯಾಚಿತ್ರಗಳ ಮೂಲಕ ವಿವರಿಸಿದ್ದಾರೆ. ಜೋಳದ ರಾಶಿಯ ಸುತ್ತಲೂ ಇರುವ ಸಣ್ಣ ಸಣ್ಣ ವಿವರಗಳನ್ನೆಲ್ಲ ಕಲೆಹಾಕಿ, ಅವುಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಹಂತಿಯ ಹಾಡುಗಳ ವಿಶ್ಲೇಷಣೆ ಕೂಡ ಅಷ್ಟೆ ಶ್ರದ್ಧೆಯಿಂದ ಗೈದಿದ್ದಾರೆ. ಹೀಗಾಗಿ ಇದೊಂದು ಅಪರೂಪದ ಪ್ರಬಂಧವಾಗಿ, ಹಂತಿ ಕ್ರಿಯೆ ಮತ್ತು ಸಾಹಿತ್ಯದ ಬಗ್ಗೆ ಸಂಪೂರ್ಣ ಮಾಹಿತಿಗಳುಳ್ಳ ಒಂದು ಮಹತ್ವದ ಕೃತಿ ಎನಿಸುತ್ತದೆ.

***

ಹಂತಿ ಹಾಡುಗಳ ಸಂಗ್ರಹಗಳು :

೧೯೭೫ : ಉತ್ತರ ಕರ್ನಾಟಕದ ಹಂತಿಯ ಹಾಡುಗಳು, (ಸಂ) ಡಾ. ಎಂ.ಎಸ್.ಲಠ್ಠೆ, –ಮಲ್ಲಸರ್ಜ ಪ್ರಕಾಶನ, ಮುತನಾಳ, ಜಿ.ಬೆಳಗಾವಿ.

ಹಂತಿ ಹಾಡುಗಳ ಅಧ್ಯಯನ :

೧೯೬೩ : ಕನ್ನಡ ಜಾನಪದ ಗೀತಗಳು, ಡಾ. ಬಿ.ಎಸ್.ಗದ್ದಗಿಮಠ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦೦೯: ಉತ್ತರ ಕರ್ನಾಟಕದ ಹಂತಿ, ಡಾ.ಬಿ.ಬಿ.ಬಿರಾದಾರ, –ರೈಟ್‌ವೆಲ್ ಇಂಟರ್‌ನ್ಯಾಷನಲ್, ಶ್ರೀಗಂಧ ನಗರ, ಪೀಣ್ಯ ಎರಡನೇ ಹಂತ, ಬೆಂಗಳೂರು–೯೧.

***

೨. ಪ್ರದರ್ಶನ ಕಲೆಯ ಹಾಡುಗಳು

೧. ಕೋಲಾಟದ ಹಾಡುಗಳು :

ಜನಪದ ನೃತ್ಯ ಪ್ರಧಾನ ಕಲೆಗಳಲ್ಲಿ ಕೋಲಾಟವೇ ಅತ್ಯಂತ ಶ್ರೇಷ್ಠ ಕಲೆ. ಅನೇಕ ಕಡೆ ಕುಣಿತಗಳು ಕಾಣುತ್ತವೆ, ಕುಣಿತಗಳಿಂದಲೇ ಪ್ರದರ್ಶನಗಳು ಅನಾವರಣಗೊಳ್ಳುತ್ತವೆ. ಆದರೆ ಕೋಲಾಟದಲ್ಲಿರುವಷ್ಟು ಕುಣಿತದ ವೈವಿಧ್ಯತೆಗಳು ಅವುಗಳಲ್ಲಿ ಇಲ್ಲ. ಇದು ಬೀದಿಯ ಮೇಲೆ ಪ್ರದರ್ಶನಗೊಳ್ಳುವ ಅತ್ಯಂತ ಶ್ರೀಮಂತ ಜನಪದ ಕಲೆ. ಇಲ್ಲಿ ಕುಣಿತ, ಹಾಡು, ಸಂಗೀತ, ವೇಷಭೂಷಣ ಈ ನಾಲ್ಕೂ ಸಂಗತಿಗಳು ಸಮಸಮನಾಗಿ ಬೆರೆತಿರುತ್ತವೆ.

ಇದು ಮುಖ್ಯವಾಗಿ ಗಂಡುಮಕ್ಕಳ ಕಲೆ. ಇಲ್ಲಿ ಭಾಗವಹಿಸುವ ಅರ್ಧ ಯುವಕರು ಗಂಡುವೇಷವನ್ನು ತೊಟ್ಟರೆ, ಇನ್ನರ್ಧ ಯುವಕರು ಹೆಣ್ಣುವೇಷವನ್ನು ತೊಟ್ಟಿರುತ್ತಾರೆ. ಉತ್ತರ ಕರ್ನಾಟಕದಲ್ಲಿ ಹೆಣ್ಣು-ಗಂಡು ಮಕ್ಕಳು ಕೂಡಿ ಕೋಲಾಟವಾಡಿದ್ದನ್ನು ನಾನು ಗಮನಿಸಿಲ್ಲ. ಮತ್ತು ಯಾರಾದರೂ ಹಾಗೆ ದಾಖಲಿಸಿದ್ದು ಗಮನಕ್ಕೆ ಬಂದಿಲ್ಲ. ಇನ್ನು ಹೆಣ್ಣುಮಕ್ಕಳೇ ಈ ಕಲೆಯನ್ನು ಕಲಿತು ಆಡಬಹುದು. ಅವರು ತಮ್ಮ ಅಂಗಳದಲ್ಲಿ ಮಾತ್ರ ಪ್ರದರ್ಶನ ಮಾಡುವುದನ್ನು ಕೆಲವು ಕಡೆ ಗಮನಿಸಬಹುದಾಗಿದೆ. ಅಲ್ಲಿ ಪ್ರೇಕ್ಷಕರೂ ಹೆಣ್ಣುಮಕ್ಕಳೇ ಆಗಿರುವುದು ಸಾಮಾನ್ಯ. ಕೃಷ್ಣನ ಆರಾಧನೆವುಳ್ಳ ಕೆಲ ಸಮಾಜಗಳಲ್ಲಿ ಈ ಪದ್ಧತಿ ಇದ್ದಂತೆ ತೋರುತ್ತದೆ. ಉತ್ತರ ಭಾರತದಲ್ಲಿರುವ ದಾಂಡಿಯಾ ನೃತ್ಯ, ಗರ್ಭಾ ನೃತ್ಯಗಳಲ್ಲಿ ಹೆಣ್ಣುಮಕ್ಕಳು ಭಾಗವಹಿಸುವುದು ಸಾಮಾನ್ಯ. ಮತಿಘಟ್ಟ ಕೃಷ್ಣಮೂರ್ತಿ ಅವರು ಹೀಗೆ ಬರೆದಿದ್ದಾರೆ. "ಕೋಲಾಟ ಮುಖ್ಯವಾಗಿ ಗಂಡಸರಿಗೇ ಮೀಸಲಾದ ಆಟ. ಆದರೆ ಕೆಲವು ಹಬ್ಬ ಹುಣ್ಣಿಮೆಗಳಲ್ಲಿ ಮಹಿಳೆಯರೂ ಕೋಲಾಟ ಆಡುತ್ತಾರೆ. ಹಳೇ ಮೈಸೂರು ಪ್ರದೇಶ ಮತ್ತು ಉತ್ತರ ಕರ್ನಾಟಕದಲ್ಲಿ ಹೆಣ್ಣುಮಕ್ಕಳು ನಿರ್ದಿಷ್ಟ ಸಮಯಗಳಲ್ಲಿ ಕೋಲಾಟ ಆಡುವುದು ಪರಂಪರೆಯಾಗಿ ಬೆಳೆದು ಬಂದ ಸಂಪ್ರದಾಯವಾಗಿದ್ದುದು ಕಂಡುಬರುತ್ತದೆ" (ಕನ್ನಡ ಜನಪದ ಸಾಹಿತ್ಯ ಭಂಡಾರ, ಪು. ೬೩). ಇನ್ನು ಬಾಲಕರು ಕೋಲಾಟ ಕಲಿಯುವುದು ಅಪರೂಪ. ಶಾಲಾ ಉತ್ಸವಗಳಲ್ಲಿ ಮಕ್ಕಳಿಗೆ ಈ ಕಲೆಯನ್ನು ಕಲಿಸಿ ಪ್ರದರ್ಶನಗೊಳಿಸಬಹುದು. ಆದರೆ ಮೂಲತಃ ಇದು ವಯಸ್ಸಿಗೆ ಬಂದ ಗಂಡುಮಕ್ಕಳು ಆಡುವ ಕಲೆಯಾಗಿದೆ.

ಕಲಾವಿದರು ಇಬ್ಬಿಬ್ಬರು ಜೋಡಿಯಾಗಿ ಕೋಲು ಹಾಕುವುದು ಈ ಕಲೆಯಲ್ಲಿ ಕಾಣುವ ಸಾಮಾನ್ಯ ಸಂಗತಿ. ಇಂತಹ ೬ರಿಂದ ೧೨ ಜೋಡಿ ಕಲಾವಿದರು ಇರುವುದು ಸಾಮಾನ್ಯ. ಇದಕ್ಕೂ ಹೆಚ್ಚಿರಲೂ ಬಹುದು. "ಬೆಂಗಳೂರಿನಲ್ಲಿ ಆಚಾರ್ಯ ವಿನೋಬಾ ಭಾವೆಯವರ ಎದುರು ಅರವತ್ತಕ್ಕೂ ಹೆಚ್ಚು ಜನರ ಗ್ರಾಮೀಣ ತಂಡವೊಂದು ಉತ್ತಮ ರೀತಿಯಲ್ಲಿ ಕೋಲಾಟವಾಡಿ ಆಚಾರ್ಯರ ಪ್ರಶಂಸೆಗೆ ಪಾತ್ರವಾಯಿತು" (ಕನ್ನಡ ಜನಪದ ಸಾಹಿತ್ಯ ಭಂಡಾರ–೧, ಪು.೬೦). ಇದು ಮತಿಘಟ್ಟ ಕೃಷ್ಣಮೂರ್ತಿ ಅವರ ಮಾತು. ೬೦ ಜನರೆಂದರೂ ೩೦ ಜೋಡಿಗಳಾದವು.

ಈ ಕಲಾವಿದರು ತೊಡುವ ವೇಷಭೂಷಣಗಳೂ ವಿಶೇಷ. ಉತ್ತರಕರ್ನಾಟಕದಲ್ಲಿ ಅದು ಹೈದ್ರಾಬಾದ ಕರ್ನಾಟಕದಲ್ಲಿ ಅರ್ಧದಷ್ಟು ಕಲಾವಿದರು ಗಂಡು ವೇಷ ತೊಡುತ್ತಾರೆ. ಇನ್ನರ್ಧ ಕಲಾವಿದರು ಹೆಣ್ಣುವೇಷ ತೊಡುತ್ತಾರೆ. ಒಂದು ಹೆಣ್ಣು ಒಂದು ಗಂಡಿನಂತೆ ಜೋಡಿಯಾಗಿ ಕೋಲು ಹಾಕುತ್ತಾರೆ. ಗಂಡುವೇಷದವರು ಧೋತರ ಉಟ್ಟುಕೊಳ್ಳುವುದು ಸಾಮಾನ್ಯ. ಎರಡೂ ಕಡೆ ಕಚ್ಚೆಹಾಕಿ, ಮೇಲೊಂದು ಅಂಗಿ, ಜುಬ್ಬ (ನೆಹರು ಶರ್ಟ) ತೊಟ್ಟುಕೊಂಡು ಟೊಂಕಕ್ಕೆ ಟೊಂಕಪಟ್ಟಿ ಕಟ್ಟುತ್ತಾರೆ. ಮುಂಗೈಪಟ್ಟಿ, ರಟ್ಟೆಪಟ್ಟಿ ಧರಿಸುವುದು, ತಲೆಗೆ ಕಿರೀಟ, ಕಾಲಿಗೆ ಗೆಜ್ಜೆ ಧರಿಸುವುದು ಸಾಮಾನ್ಯ. ಹೆಣ್ಣುವೇಷ ಧರಿಸುವವರು ಸೀರೆ ಉಟ್ಟು, ಎರಡೂ ಕಚ್ಚೆ ಹಾಕಿರುತ್ತಾರೆ. ಟೊಂಕಕ್ಕೆ ಟೊಂಕಪಟ್ಟಿ ಕಟ್ಟಿರುತ್ತಾರೆ. ಗಂಡಿನಂತೆ ಇವರೂ ಮುಂಗೈಪಟ್ಟಿ, ರಟ್ಟೆಪಟ್ಟಿಗಳನ್ನು ಕಟ್ಟಿ, ತಲೆಗೆ ಕೃತಕ ಕೂದಲಿನ ಟೊಪ್ಪಿಗೆ ಹಾಕಿ, ಕಿರೀಟ ಕಟ್ಟಿರುತ್ತಾರೆ. ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಈ ಕಲಾವಿದರ ಮುಖಕ್ಕೆ ತಿಳಿ ಗುಲಾಬಿ ಬಣ್ಣ ಬಳಿಯುವುದು ಸಾಮಾನ್ಯ. ಕೆಲವು ಕಡೆ ಗಂಡುಮಕ್ಕಳಿಗೆ ತಿಳಿನೀಲಿ ಬಣ್ಣವನ್ನೂ ಹಚ್ಚುತ್ತಾರೆ. ಕೃಷ್ಣ–ಗೋಪಿಕೆಯರ ಕ್ರೀಡೆಯ ಅನುಕರಣೆ ಎಂಬ ಭಾವ ಇದರಿಂದ ಸ್ಪಷ್ಟವಾಗುತ್ತದೆ. ಕೆಲವು ಕಡೆ ಒಂದಿಬ್ಬರು ಮಕ್ಕಳಿಗಾದರೂ ಕೃಷ್ಣ–ಗೊಲ್ಲತಿಯ ವೇಷ ತೊಡಿಸಿರುವುದು ಕಂಡುಬರುತ್ತದೆ. ಹೀಗೆ ತಯಾರಾದ ಗಂಡು–ಹೆಣ್ಣು, ಅರ್ಥಾತ್ ಕೃಷ್ಣ–ಗೊಲ್ಲತಿಯರು ಪರಸ್ಪರ ಎದುರು ಬದುರಾಗಿ ನಿಂತು ಕೋಲು ಹಾಕುತ್ತಾರೆ. ಹೀಗೆ ಕಣ್ಣು ತುಂಬುವಂಥ ವೇಷ ತೊಟ್ಟು ಕುಣಿಯುವ ಈ ಗುಂಪನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬವಾಗಿ ಕಾಣುತ್ತದೆ.

ದಕ್ಷಿಣ ಕರ್ನಾಟಕದಲ್ಲಿ ಅಲ್ಲಲ್ಲಿ ನಡೆಯುವ ಪದರ್ಶನಗಳನ್ನು ನೋಡಿದಲ್ಲಿ ಕಾಣುವ ವೇಷಭೂಷಣವೆಂದರೆ, ಎಲ್ಲರೂ ಪಂಚೆ ಉಟ್ಟು, ಬನಿಯನ್ ಹಾಕಿರುತ್ತಾರೆ. ಅಥವಾ ಜುಬ್ಬ ಹಾಕಿ ಟೊಂಕಕ್ಕೆ ಒಂದು ಬಟ್ಟೆ ಕಟ್ಟಿರುತ್ತಾರೆ. ತಲೆಗೆ ಒಂದು ಬಣ್ಣದ ಬಟ್ಟೆ ಕಟ್ಟಿರುತ್ತಾರೆ. ಕಾಲಲ್ಲಿ ಗೆಜ್ಜೆ ಧರಿಸುವುದು ಸಾಮಾನ್ಯ. ಇಲ್ಲಿ ಗಂಡು–ಹೆಣ್ಣುವೇಷಗಳು ಕಾಣುವುದಿಲ್ಲ.

ಕೋಲಾಟದಲ್ಲಿ **ಕೋಲುಗಳು** ಮುಖ್ಯವಾದ ಸಾಧನಗಳು. ಅವನ್ನು **'ಕೋಲು ಗೂಟಗಳು'** ಎಂತಲೂ ಕರೆಯುವ ರೂಢಿ ಕೆಲವು ಕಡೆ ಇದೆ. ಕೋಲುಗಳನ್ನು ಒಂದೊಂದು ಪ್ರದೇಶದಲ್ಲಿ ತಮಗೆ ಅನುಕೂಲವಾದ ಉದ್ದದಲ್ಲಿ, ಆಯಾ ಪ್ರದೇಶದಲ್ಲಿ ದೊರೆಯುವ ಸೂಕ್ತವಾದ ಕಟ್ಟಿಗೆಯನ್ನು ಬಳಸಿ ತಯಾರಿಸಿರುತ್ತಾರೆ. 'ಬೈನೆ, ಕಾರೆ ಮತ್ತು ಗಂಟೆಕಣಗಳು

ಮರಗಳಿಂದ ತಾಯಾರಿಸಿದ ಕೋಲುಗಳು ಒಳ್ಳೆಯ ನಾದ ಕೊಡುತ್ತವೆ'. ಹೀಗೆ ಕಟ್ಟಿಗೆ ಬಳಸುವಾಗ ಗಮನಿಸುವ ಸಂಗತಿಯೆಂದರೆ, ಅದು ಒಣಗಿದ ಸ್ಥಿತಿಯಲ್ಲಿ ಕೋಲು ತಯಾರಿಸಿದಾಗ, ಒಂದಕ್ಕೊಂದು ಬಡಿದಾಗ ಒಳ್ಳೆಯ ನಾದ ಕೊಡಬೇಕು. ಸುಮಾರು ಒಂದುವರಿ ಅಡಿ ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ಉದ್ದ ಇದ್ದರೆ ಒಳ್ಳೆಯದು. ಏಕೆಂದರೆ ಕೋಲುಗಳನ್ನು ಒಂದಕ್ಕೊಂದು ಬಡಿಯುವ ಕ್ರಿಯೆ ಇಲ್ಲಿ ಮುಖ್ಯವಾಗಿ ನಡೆಯುವುದರಿಂದ ಅಲ್ಲಿ ಆ ಕ್ರಿಯೆಗೆ ಸುಲಭವಾಗಿ ಉಪಯೋಗಿಸುವಂತಿರಬೇಕು. ಕಲಾವಿದರ ಕೈಗಳಿಗೆ ಪೆಟ್ಟು ತಾಗದಂತೆ ಇರಬೇಕು. ಕಟ್ಟಿಗೆಯ ಸಾದಾ ತುಂಡುಗಳನ್ನೇ ಕೆಲವು ಕಡೆ ಬಳಸಿದರೆ, ಇನ್ನು ಕೆಲವುಕಡೆ ಅವುಗಳನ್ನು ಬಡಿಗನಿಂದ ಜಂತರ ಹಿಡಿಸಿ, ನೋಡಲು ಚಂದ ಕಾಣುವಂತೆ ಮಾಡುತ್ತಾರೆ. ಕೆಳಗೆ ಕೈಯಲ್ಲಿ ಸರಿಯಾಗಿ ಹಿಡಿಯಲು ಬರುವಂತೆ ಒಂದಿಷ್ಟು ದಪ್ಪವಾಗಿಟ್ಟು, ಮುಂದಕ್ಕೆ ಚೂಪಾಗಿಸುತ್ತ ಹೋಗಿರುತ್ತಾರೆ. ಕೈ ಹಿಡಿಯುವ ಕಡೆ, ಗೆಜ್ಜೆಗಳನ್ನು ಕಟ್ಟಲು ಅನುಕೂಲವಾಗುವಂತೆ ತೂತುಗಳನ್ನು ನಿರ್ಮಿಸಿ, ಗೆಜ್ಜೆಗಳನ್ನು ಕಟ್ಟಿರುತ್ತಾರೆ. ಕಟ್ಟಿಗೆಗಳಿಗೆ ಇನ್ನಷ್ಟು ಶಕ್ತಿ ತುಂಬಲು ಕೆಲವುಕಡೆ ಎಣ್ಣೆ ಬಳಿದು ಒಣಗಿಸಿರುತ್ತಾರೆ.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕೋಲಾಟವನ್ನು ಪಂಚಮಿಯ ವೇಳೆಗೆ ಕಲಿಯುತ್ತಾರೆ. ಗಂಡುಮಕ್ಕಳು ಕೋಲಾಟವಾಡಲು ಹೋದರೆ, ಹೆಣ್ಣುಮಕ್ಕಳು ಭುಲಾಯಿ ಹಾಕುತ್ತ ಹಾಡುಹಾಡುತ್ತ ಮನರಂಜನೆಯಲ್ಲಿ ತೊಡಗಿರುತ್ತಾರೆ. ಇದು ಬೀದರ ಹಾಗು ಕಲಬುರಗಿ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಕಾಣುವ ಸಂಗತಿ. ಭುಲಾಯಿ ಕಲಬುರಗಿ ಜಿಲ್ಲೆಯಲ್ಲೂ ಪ್ರಸಿದ್ಧವಾಗಿದ್ದು ಅದನ್ನು ಚಪ್ಪಳಿಗೆ ಹಾಕುವುದು, ಭುಲಾಯಿ ಹಾಕುವುದು, ಕೋಲುಹಾಕುವುದು ಎಂದು ಹೇಳುವ ರೂಢಿ ಇದೆ. ಎಂಟ್ಹತ್ತು ಹೆಣ್ಣುಮಕ್ಕಳು ಕೈಯಲ್ಲಿ ಕೋಲುಗಳಿಲ್ಲದೆ ಚಪ್ಪಾಳೆ ಬಡಿಯುತ್ತ, ಅಥವಾ ಕೈ ಕೈ ಹಿಡಿದು ಸುತ್ತಲೂ ತಿರುಗುತ್ತ ಕಥನಕವನಗಳನ್ನು ಹಾಡುತ್ತ ರಂಜನೆ ಪಡೆಯುವುದು ಸಾಮಾನ್ಯ ನೋಟ. ಇದು ಕೈಯಲ್ಲಿ ಕೋಲಿಲ್ಲದೆಯೂ 'ಕೋಲು ಹಾಕೋಣ' ಎನ್ನುತ್ತಲೇ ಹೆಣ್ಣುಮಕ್ಕಳು ಭಾಗವಹಿಸುತ್ತಾರೆ. ಹೀಗಾಗಿ ಇದೂ ಕೋಲಾಟದ ಮಾದರಿಯಲ್ಲಿಯೇ ಕಾಣಿಸುತ್ತದೆ. ಇದು ಮುಸ್ಲೀಮ ಹೆಣ್ಣುಮಕ್ಕಳು ಹಾಕುವ ಭುಲಾಯಿಯ ಅನುಕರಣೆ ಆಗಿರದೆ, ಇದು ಕೋಲಾಟದ ಅನುಕರಣೆಯೇ ಇರಬೇಕು ಎನಿಸುತ್ತದೆ. ಹೆಸರು ಮಾತ್ರ ಉರ್ದು ಹೆಸರು 'ಭುಲಾಯಿ' ಎನ್ನುವುದು ಬಳಕೆಯಾಗುತ್ತದೆ, ಅದು ಕೆಲವು ಕಡೆ ಮಾತ್ರ. ಇಲ್ಲಿ ಬಳಕೆಯಾಗುವ ಹಾಡುಗಳಿಗೆ 'ಕೋಲೆಣ್ಣ ಕೋಲೆ', 'ಕೋಲ ಮಲ್ಲಿಗೆ ಕೋಲೆ' ಇಂತಹ ಸೊಲ್ಲು–ಸ್ವರಗತಿಗಳು ಬಳಕೆಯಾಗುತ್ತಿದ್ದು, ಇದು ಕೋಲಾಟದ ಮಾದರಿ ಎನ್ನುವುದನ್ನು ಸ್ಪಷ್ಟಪಡಿಸುತ್ತವೆ. ಹೀಗೆ ಹೆಣ್ಣುಮಕ್ಕಳು ಪಂಚಮಿ ಹಬ್ಬದ ಸುತ್ತ ರಾತ್ರಿಹೊತ್ತು 'ಭುಲಾಯಿ' (ಕೋಲು) ಹಾಕುವುದು, ಹಗಲು ಹೊತ್ತು ಜೋಕಾಲಿ ಆಡಿ ಆನಂದಿಸುವುದು ಸಾಮಾನ್ಯವಾಗಿ ಕಾಣುತ್ತದೆ.

ಇನ್ನು ಕೆಲವು ಭಾಗಗಳಲ್ಲಿ ದೀಪಾವಳಿಯಂದು ಕೋಲು ಹಾಕುತ್ತಾರೆ ಎಂದು ತಿಳಿದುಬಂದರೆ, ಮತ್ತೆ ಕೆಲವು ಕಡೆ "ಹಬ್ಬ ಹರಿದಿನಗಳಲ್ಲಿ, ಮದುವೆ ಉತ್ಸವಗಳಲ್ಲಿ, ವಿಶೇಷ ಸಮಾರಂಭಗಳಲ್ಲಿ ಅವರು ತಪ್ಪದೆ ಕೋಲು ಹುಯ್ಯುವುದು ಅಭ್ಯಾಸವಾಗಿದೆ"

(ಕೋಲು ಪದಗಳು, ಪು.೧೪) ಎಂದು ತಿಳಿದುಬರುತ್ತದೆ. ಬಾಂಬೆಕರ್ನಾಟಕದ ಭಾಗದಲ್ಲಿ ಕೋಲಾಟ ಆಡುವ ಸಂದರ್ಭ ಕುರಿತು ಹೀಗೆ ಮಾಹಿತಿ ದೊರೆಯುತ್ತದೆ: "ಈ ಕೋಲಾಟ ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಅಲ್ಲದೆ ಬಿಡುವಿನ ವೇಳೆಯಲ್ಲಿ ನಡೆಯುತ್ತದೆ. ...ಗೌಳಿಗ ಜನಾಂಗವು ಮಾತ್ರ ದೀಪಾವಳಿಯಂದು ಹಗಲಿನಲ್ಲಿ ಓಣಿಓಣಿ ತಿರುಗಿ ಆಡುತ್ತಿರುವದು ಒಂದು ವಿಶೇಷವಾಗಿದೆ" (ಗ್ರಂಥಸ್ಥ ಕೋಲುಪದಗಳು, ಪು.೧೫). ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ಹೀಗೆ ಬರೆಯುತ್ತಾರೆ. "ಕೋಲಾಟವು ನಮ್ಮ ಜನರಿಗೆ ಬಹಳ ಪ್ರಿಯವಾದ ವಿನೋದವಾಗಿತ್ತೆಂದು ಕಾಣುತ್ತದೆ. ನವರಾತ್ರಿಯಲ್ಲಿ ಶಾಲೆಯ ಹುಡುಗರು, ದೀವಳಿಗೆಯಲ್ಲಿ ಹೆಣ್ಣುಮಕ್ಕಳು ಇದೆ ಸಂದರ್ಭದಲ್ಲಿ ಊರ ಕೋಲಾಟದ ಜನ ಈ ಆಟವನ್ನಾಡುತ್ತ ಊರು ಸುತ್ತುವುದು ಪದ್ಧತಿ. ಬಂದು ಆಟವಾಡಿದವರಿಗೆ ಊರ ಮುಂದಾಳುಗಳು ಸತ್ಕಾರ ಮಾಡಿ ಸ್ವಲ್ಪ ಅಥವಾ ಹೆಚ್ಚು ಉಚಿತವನ್ನು ಕೊಟ್ಟು ಕಳುಹಿಸುವರು. ಇದನ್ನು ಮಕ್ಕಳು ತಾವು ಮಾಡುವ ಗೌರೀ ಪೂಜೆಗೆ, ವಿನೋದ ಕೂಟಕ್ಕೆ, ಉಪಯೋಗಿಸುತ್ತಿದ್ದರು" (ಕರ್ನಾಟಕದ ಜನಪದ ಸಾಹಿತ್ಯ, ಪು.೪೩).

ಕೋಲಾಟಕ್ಕೆ ಒಂದು ಸಂಗೀತ ಮೇಳ ಇರಲೇಬೇಕು. ಕೋಲು ಹಾಕುವವರು ಕುಣಿಯುತ್ತ ಇರಬೇಕಾದುದರಿಂದ ಅವರಿಗೆ ತುಂಬಾ ದಣಿವು ಆಗುತ್ತದೆ. ಕುಣಿತದ ಕಡೆ, ಹೆಜ್ಜೆ ಬದಲಾಯಿಸುವ ಕಡೆ, ಸ್ಥಳಬದಲಾಯಿಸುವ ಕಡೆ ಅವರು ಲಕ್ಷ ಕೊಡಬೇಕಾದುದರಿಂದ ಸಂಗೀತದ ಲಯದ ಕಡೆ ಮಾತ್ರ ಅವರ ಲಕ್ಷವಿದ್ದು, ಹಾಡುಗಾರಿಕೆ ಕಡೆಗೆ ಲಕ್ಷ ಇರಲಾರದು. ಹೀಗಾಗಿ ಒಂದು ಪ್ರತ್ಯೇಕವಾದ ಸಂಗೀತ ಮೇಳ ಕೋಲಾಟದಲ್ಲಿ ಇರುತ್ತದೆ. ಕೋಲು ಹಾಕುವವರು ಸುತ್ತಲೂ ನಿಂತಿದ್ದರೆ, ಸಂಗೀತ ಮೇಳ ನಡುವೆ ಇರುತ್ತದೆ. ಹೈದ್ರಾಬಾದ ಕರ್ನಾಟಕದ ಕಡೆ ಇರುವ ಸಂಗೀತ ಪರಿಕರಗಳು ಹೀಗೆ ಕಾಣುತ್ತವೆ: ಹರ್ಮೋನಿಯಂ, ಸಾಧ್ಯವಾದರೆ ಪಿಟೀಲು, ಮೃದಂಗ ಅಥವಾ ತಬಲಾ–ದಗ್ಗಾ, ಎರಡ್ಮೂರು ಜೊತೆ ಗುಂಡು ತಾಳಗಳು, ಒಬ್ಬರು ಕೈಯಲ್ಲಿ ಗೆಜ್ಜೆಯ ಗೊಂಚಲು ಹಿಡಿದುಕೊಂಡಿರುತ್ತಾರೆ. ಮುಖ್ಯ ಹಾಡುಗಾರರು ಒಬ್ಬರು. ಅವರಿಗೆ ಇನ್ನೊಬ್ಬ ಸಾಥ್ ಕೊಡಬಹುದು. ಹಿಮ್ಮೇಳವಾಗಿ ಮೂರ್ನಾಲ್ಕು ಜನ. ಇಷ್ಟು ಕನಿಷ್ಠ ಸಂಗೀತ ಮೇಳ ಕಾಣುತ್ತದೆ. ಕರ್ನಾಟಕದ ಬೇರೆ ಬೇರೆ ಕಡೆ ಚರ್ಮವಾದ್ಯವಾಗಿ ಕೇವಲ ದಮ್ಮಡಿ ಬಳಸುತ್ತಾರೆಂದು ತಿಳಿದುಬರುತ್ತದೆ. ಇನ್ನು ಕೆಲವು ಕಡೆ ಹೆಚ್ಚುವರಿಯಾಗಿ ಶಹನಾಯಿ, ಹಲಗೆ ಬಳಸುತ್ತಾರೆ.

ಕೋಲಾಟದಲ್ಲಿ ಅನೇಕ ಪ್ರಕಾರಗಳಿರುವುದನ್ನು ಕಾಣುತ್ತೇವೆ. "ದಕ್ಷಿಣಕರ್ನಾಟಕದವರು ಕೋಲನ್ನು ಗಮನದಲ್ಲಿಟ್ಟುಕೊಂಡು ಲಗ್ಗೆ ಕೋಲು ಮೊದಲಾದ ಪ್ರಕಾರಗಳನ್ನು ಹೇಳುತ್ತಿದ್ದರೆ, ಉತ್ತರ ಕರ್ನಾಟಕದವರು ಕುಣಿತದ ಹೆಜ್ಜೆಯನ್ನು ಗಮನದಲ್ಲಿಟ್ಟುಕೊಂಡು ಲ್ಯಾವಣಿ ಹೆಜ್ಜೆ, ಎಡಗಾಲ ಹೆಜ್ಜೆ, ಸುತ್ತ ಹೆಜ್ಜಿ, ತೊಟ್ಟಲ ಹೆಜ್ಜಿ, ಬಂದೂಕ ಹೆಜ್ಜಿ, ಕುಸ್ತಿ ಹೆಜ್ಜಿ ಮೊದಲಾದ ಪ್ರಕಾರಗಳನ್ನು ಹೇಳುತ್ತಾರೆ" (ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ, ಪು. ೫೧). ಮತಿಘಟ್ಟ ಕೃಷ್ಣಮೂರ್ತಿ ಅವರು ದಕ್ಷಿಣ ಕರ್ನಾಟಕದ ಕಡೆ ಇರುವ ಕೋಲಾಟದ ಪ್ರಕಾರಗಳನ್ನು ಹೀಗೆ ಗುರುತಿಸುತ್ತಾರೆ: "ತಾಳಗಡ್ಡಿ, ತಟ್ಟುಗಡ್ಡಿ, ಗೀರುಗಡ್ಡಿ,

ಒಂದಾಳು ಸುತ್ತು, ಬಾಗು ಕೋಲು, ಬಗ್ಗು ಕೋಲು, ಒಂಟಿ ಕೋಲು, ಜೋಡು ಕೋಲು, ತೇರು ಕೋಲು, ದಂಡೆ ಕೋಲು, ಜಡೆ ಕೋಲು, ವಸ್ತು ಗೋಪು, ಚಿತ್ರ ಗೋಪು, ಚಕ್ರ ಗೋಪು ಹೀಗೆ ಕೋಲಾಟದ ಹಲವು ವರಸೆಗಳುಂಟು" (ಕನ್ನಡ ಜನಪದ ಸಾಹಿತ್ಯ ಭಂಡಾರ–೧ಪು. ೬೨). ಹಾಸನ ಜಿಲ್ಲೆಯಿಂದ ಕೋಲಾಟದ ಪದಗಳನ್ನು, ಮಾಹಿತಿಗಳನ್ನು ಸಂಗ್ರಹಸಿದ ಮಳಲಿ ವಸಂತಕುಮಾರ ಅವರು ಆ ಕಡೆ ಇರುವ ಕೋಲಾಟದ ಪ್ರಕಾರಗಳನ್ನು ಹೀಗೆ ಪಟ್ಟಿ ಮಾಡಿದ್ದಾರೆ: 'ಆಲವಣಿ ಕೋಲು, ನಿಲ್‌ಕೋಲು, ಸೋಬಾನೆ ಕೋಲು, ದೂರಿಕೋಲು, ದಂಡೆಕೋಲು, ಉಯ್ಯಾಲೆ ಕೋಲು, ಬಿಚ್ಚಡಿ ಕೋಲು, ಎಲೆಗಳ್ಳಿರಾಮನ ಕೋಲು, ತೇರು ಕೋಲು, ಗೀಜುಗನ ಕೋಲು, ಸುತಕೋಲು, ಬಾಗ್ಗೋಲು(ತಿಪರಿ), ಜೋಡ್ಗೋಲು, ಕಾಲ್‌ಸಂಧಿ ಕೋಲು, ಎರಡು ಮನೆ ಕೋಲು, ಒಂಟಿ ಕೋಲು, ಜಡೆಗೋಲು, ಹರಿಗೋಲು, ಹೊಗಳು ಕೋಲು, ೧ನೇ ತಾಳದ ಕೋಲು, ಕೊರವಂಜಿ ಕೋಲು'–ಹೀಗೆ ೨೧ ಕೋಲಾಟದ ಪ್ರಕಾರಗಳನ್ನು ಗುರುತಿಸುತ್ತಾರೆ.

ಕೋಲಾಟ ಶೃಂಗಾರ ಭಾವನೆಯನ್ನು ಹೊಮ್ಮಿಸುವ ಕಲಾಪ್ರಕಾರ. ಹೀಗಾಗಿ ಈ ಪ್ರಕಾರಕ್ಕೆ ನಂತರ ಕೃಷ್ಣ–ಗೊಲ್ಲತಿಯರ ಪ್ರಸಂಗವನ್ನು ನೆನೆಸುವ ಹಾಡುಗಳು ಸೇರಿಕೊಂಡವೋ ಅಥವಾ ಕೃಷ್ಣನ ಆರಾಧಕರಿಂದಲೇ ಕೋಲಾಟ ಅಸ್ತಿತ್ವಕ್ಕೆ ಬಂದಿತೋ ತಿಳಿಯದು. ಹೆಣ್ಣು–ಗಂಡು ಜೋಡಿಯಾಗಿ ಕೋಲು ಹಾಕುವುದು, ಅವರ ಮೋಹಕವಾದ ವೇಷಭೂಷಣ, ಕುಣಿತದ ಬಗೆಗಳು ಹಾಡಿನ ಧಾಟಿಗಳು, ಕೊನೆಗೆ ಉಪಯೋಗವಾಗುವ ಸಾಹಿತ್ಯ ಇವೆಲ್ಲವೂ ಶೃಂಗಾರ ಭಾವನೆಯನ್ನು ಉದ್ದೀಪನಗೊಳಿಸುವ ಪರಿಕರಗಳಾಗಿವೆ. ಜನಪದದಲ್ಲಿ ಹೀಗೆ ಶೃಂಗಾರವನ್ನು ನೇರವಾಗಿ ಪ್ರದರ್ಶನ ಮಾಡುವ, ಆದರೆ ಅಶ್ಲೀಲವನ್ನು ದೂರವಿಡುವ ಪ್ರಕಾರವೆಂದರೆ ಕೋಲಾಟ. ಶೃಂಗಾರದ ಜೊತೆಗೆ ವಿನೋದ, ಭಕ್ತಿ ಭಾವನೆಗಳುಳ್ಳ ಹಾಡುಗಳೂ ಇಲ್ಲಿ ಕಾಣುತ್ತವೆ.

* * *

ಅರ್ಚಕ ಬಿ. ರಂಗಸ್ವಾಮಿ ಅವರು ತಮ್ಮ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು ಕೃತಿಯಲ್ಲಿ'** (೧೯೩೩) ಉತ್ತಮವಾದ ३೦ ಕೋಲಾಟದ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಆ ಕಾಲಾವಧಿಯಲ್ಲಿ ಇಷ್ಟೊಂದು ಕೋಲಾಟದ ಹಾಡುಗಳು ಒಂದೆಡೆ ದೊರೆಯುವುದು ಈ ಕೃತಿಯಲ್ಲಿಯೇ ಎಂದು ತೋರುತ್ತದೆ.

೧

ಕೋಲೆಕೋಲೆ ಕೋಲು ಕೋಲಣ್ಣಕೋಲೆ
ಕೋಲೆಕೋಲೆ ಕೋಲು ಕೋಲಣ್ಣಕೋಲೆ ।
ಹೊತ್ನಾಂತೆ ಎದ್ದೂ ಯಾರ‍್ಯಾರ ನೆನದೇವು
ಕಲ್ಲೂಕಾವೇರಿ ಕಪಿನೀಯ(ಕೋಲೆ)। ಬಸ್ವಣ್ಣ
ಹೊತ್ನಾಂತೆ ಎದ್ದೂ ನೆನದೇವು ಕೋಲೆ।

ಹತ್ತೂ ಸಾವಿರ್ಪದ್ವ ಎತ್ತಿನ್ಮೇಲ್ಹೇರ್ಕೊಂಡು
ಮತ್ತೇ ಸಾವಿರವಾ ಕೈಯ್ಯಲ್ಲಿ ಹಿಡಿದೊ

ಆರೂಸಾವಿರ್ಪದ್ವ ಹೋರಿ ಮೇಲ್ಹೇರ್ಕೊಂಡು
ಬಂದೀವ್ನಿ ಬಾರೊ ಬಸ್ವಣ್ಣ ಸಾಭ್ಗೆ।

ಕೋಲೀನ್ಮೇಲೊಬ್ಬಾ ಬಸ್ವಣ್ಣ ಕೂತ್ಕೊಂಡು
ಲಾಲೀಸಿಪದ್ವಾ ಬರ್ಕೊಂಡ ಕೋಲೆ।

ಕೋಲಾಬಿಡ್ತಾರೆಂದು ಶಿಟ್ಟುಮಾಡಲಿ ಬ್ಯಾಡ
ನಿನ್ನಾಣೆಕೋಲಾ ಬಿಡ್ತೀವಿ ಕೋಲೇ।
ವೀಧ್ಯೆ ವೀಧ್ಯೆ ವೀಧತ್ತ ।

೨
ತಂದನೋ ತಾನಾನಿ ತಂದನೋ ತಾನಾನಿ
ತಾನು ತಂದನು ತಂದೆ, ನಾನಿ ತಂದನು ತಾನಿ
ತಾನು ತಂದನು ತಂದೆ, ಶಿವ್ನೀಗೆ ಶರಣೊ

ಹೀಗೆ ಸ್ತುತಿ ಪದಗಳು ಮೊದಲಿಗೆ ಸಾಗುತ್ತವೆ. ಈ ಪದಗಳನ್ನು ಹಾಡುವಾಗ ಕೋಲಾಟ ಹೇಗೆ ನಡೆಯುತ್ತದೆ, ಸ್ತುತಿಗಳು ಮುಗಿದ ನಂತರ ಕೋಲಾಟ ಹೇಗೆ ನಡೆಯುತ್ತದೆ ಎಂಬುದನ್ನು ನಾಲ್ಕು ಸಾಲುಗಳಲ್ಲಿ ರಂಗಸ್ವಾಮಿಯವರು ಹೀಗೆ ಬರೆಯುತ್ತಾರೆ: "ಇಲ್ಲಿಯವರೆಗೂ ಸುಮ್ಮನೆ ಕೋಲು ಮತ್ತು ತಾಳ ಝಿಲ್ಲರಿಗಳನ್ನು ಲಯಕ್ಕೆ ಸರಿಯಾಗಿ ಸದ್ದುಮಾಡುತ್ತಾ ನಿಂತಲ್ಲೇ ನಿಂತಿರುವರು. ಮುಂದಕ್ಕೆ ಪದ್ಮದಂತೆ ಚಕ್ರದಂತೆ ಕೋಟೆಯಂತೆ ಸೈನಿಕರಂತೆ ವ್ಯೂಹಗಳನ್ನು ರಚಿಸಿಕೊಂಡು, ಒಬ್ಬರ ಕೈಯಲ್ಲಿರುವ ಕೋಲಿಗೆ ಇನ್ನೊಬ್ಬರು ಟಕ್ಕಿ ಹೊಡೆಯುತ್ತಾ ಹಾಡುವರು" (ಪು.೨೫).

ಶರಣು ಶರಣು ಅಯ್ಯ ಗಣನಾಯ್ಕಾ
ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ ।
ಎಳ್ಳುಂಡೆ ಜೇನುತುಪ್ಪ ಗಣನಾಯ್ಕ
ನಮಗೆ ವಿದ್ಯೇವ ಕಲಿಸಯ್ಯ ಗಣನಾಯ್ಕ ।

ಹೀಗೆ ಗಣಪತಿಯನ್ನು ಶಿವನನ್ನು ನೆನೆಯುವ ಹಾಡುಗಳೊಂದಿಗೆ ಕೋಲಾಟ ತಮ್ಮ ತೀವ್ರತೆಯಡೆಗೆ ಸಾಗುತ್ತದೆ. ಜೊತೆಗೆ ಶೃಂಗಾರಮಯ ಹಾಡುಗಳು ಅಡಿಯಿಡುತ್ತವೆ.

೨೭
ನಿಲ್ಲೂ ನಿಲ್ಲಯ್ಯ ರಾಜ ನಿಜವಾ ನಾವೇನೂ ಬಲ್ಲೊ
ಮಲ್ಲೀಗೆ ಹಾರಗಳೆಲ್ಲಾವೊ ನಿಲ್ಲಯ್ಯ ।
ನಿಮ್ಮ ಕೇರಿಗೆ ಬಂದರಿನ್ನೂ ಅತ್ತೆ ಮಾವಾ ಕಂಡರೆಣ್ಣೆ

ಏನೆಂತಾ ಕೇಳುವರ್ಣ್ಣೆ ರಾಜ ನಿಲ್ಲಯ್ಯ ರಾಜ ।
ಅತ್ತೆಯಾದರೆ ಸಂತೆಗೆ ಹೋದಳು ಮಾವನಾದರೆ ಮನೆಯಲಿಲ್ಲ
ಗಂಡಾನಾದರೆ ದಂಡಿಗೆ ಹೋದ ನಿಲ್ಲು ನಿಲ್ಲಯ್ಯ ರಾಜ।
ಹಾಗಂದ ಮಾತಾ ಕೇಳಿ ನಾಳೆ ಬರುವೆ ನಿನ್ನ ಬಳಿಗೆ
ಮನೆಯ ಕುರುಹ ತೋರ್ಣ್ಣೆ ನಿಲ್ಲಯ್ಯ ರಾಜ ।

ವೀಧ್ಯೆ ವೀಧ್ಯೆ ವೀಧತ್ತ

೨೯

ಮಲ್ಲಿಗೇ ಮಲ್ಲಿಗೇ ಮಾತಾಡ್ಮಲ್ಲಿಗೇ
ಮಾತಾಡು ಮಾತಾಡು ಶ್ಯಾವಂತಿಗೆ ।

ಒಬ್ಬೀಗೆ ನಾಕ್ಮೊಲೆ ಒಬ್ಬೀಗೆ ಎರಡ್ಮೊಲೆ
ಒಬ್ಬೀಗೆ ಸದ್ಯಾ ಮೊಲೆಯಿಲ್ಲ ಮಲ್ಲಿಗೆ ।

ಹಸೀಗೆ ನಾಕ್ಮೊಲೆ ಆಡಿಗೆ ಎರಡ್ಮೊಲೆ
ಕೋಳಿಗೆ ಸದ್ಯಾ ಮೊಲೆಯಿಲ್ಲ ಮಲ್ಲಿಗೆ।

ಒಬ್ಬೀಗೆ ಕಾಲ್ಕೊಟ್ಟೆ ಒಬ್ಬೀಗೆ ಕೈಕೊಟ್ಟೆ
ಒಬ್ಬೀಗೆ ಸೀರೆ ಅಳುಕೊಟ್ಟೆ ಮಲ್ಲಿಗೆ ।

ಕಂಚಾರ್ಗೆ ಕಾಲ್ಕೊಟ್ಟೆ ಬಳ್ಗಾರನ್ಗೆ ಕೈಕೊಟ್ಟೆ
ಅಗ್ಸನ್ಗೆ ಸೀರೆ ಅಳುಕೊಟ್ಟೆ ಮಲ್ಲಿಗೆ ।

ಒಬ್ಬಾನ ಹಾಕಿದ್ದೆ ಒಬ್ಬಾನ ನೂಕಿದ್ದೆ
ಒಬ್ಬಾನ ಎಳ್ಕೊಂಡ್ಮಲಗಿದ್ದೆ ಮಲ್ಲಿಗೆ

ಕದ್ವಾನ ಹಾಕಿದ್ದೆ ತಾಳಾನ ನೂಕಿದ್ದೆ
ತಲ್ದಿಂಬ ಎಳ್ಕೊಂಡ್ಮಲ್ಗಿದ್ದೆ ಮಲ್ಲಿಗೆ ।

ಈ ಹಾಡಿಗೆ ರಂಗಸ್ವಾಮಿ ಅವರು ಒಂದು ಟಿಪ್ಪಣಿಯನ್ನು ಬರೆದಿದ್ದು ಅದು ಹೀಗಿದೆ: "ಮೇಲಿನ ಒಗಟೆಯ ಪದ್ಯವನ್ನು ಹೇಳಿ ಒಂದು ಗುಂಪಿನವರು ತಾವೇ ಕೋಲಾಟ ಆಡುತ್ತಿರುವಾಗ ಎದುರು ಗುಂಪಿನವರು ಮುಂದೆ ಹೇಳುವ ರೀತಿ ಆ ಒಗಟೆಯ ಅರ್ಥವನ್ನು ಹೇಳಿ ಅವರೊಡನೆ ಕೋಲಾಟವಾಡಿ ಆಮೇಲೆ ತಾವೂ ಒಂದು ಒಗಟೆಯನ್ನು ಹೇಳುತ್ತಿದ್ದರು. ಇವುಗಳನ್ನು ಆಯಾ ಕಾಲದಲ್ಲೆ ಕವಿತ್ವ ಮಾಡುತ್ತಿದ್ದರು" (ಪು.೫೭). ಇದರಿಂದ ಕೋಲಾಟದ ಎರಡು ಮೇಳಗಳು ಒಂದಕ್ಕೊಂದು ಎದುರಾಗಿ ಸ್ಪರ್ಧೆಗಳು ಏರ್ಪಡುತಿದ್ದವು ಎಂದೂ ಅವುಗಳಲ್ಲಿ ಹಾಡು ಅಷ್ಟೆ ಅಲ್ಲ, ಯಾವ ಮೇಳ ಕೋಲಾಟವನ್ನು ಚೆನ್ನಾಗಿ ಹಾಕಬಲ್ಲರು ಎಂಬ ಸ್ಪರ್ಧೆಯೂ ನಡೆಯುತ್ತಿತ್ತು ಎಂದೂ ಗೊತ್ತಾಗುತ್ತದೆ. ಈ ಸಂಗತಿ ಕರ್ನಾಟಕದ

ಎಲ್ಲಾ ಕಡೆಯೂ ಕಾಣುತ್ತದೆ. ಎಲ್ಲೆಲ್ಲಿ ಎರಡು ಮೇಳಗಳು ಎದುರು ಬದುರಾಗುತ್ತವೆಯೋ ಅಂಥಲ್ಲಿ ಈ ಬಗೆಯ ಸ್ಪರ್ಧೆಗಳು ನಡೆಯುವುದು ಸಾಮಾನ್ಯ. ಲಾವಣಿ ಮೇಳಗಳು, ಭಜನೆ ಮೇಳಗಳು ಸಾಮಾನ್ಯವಾಗಿ ಎದುರಾದಾಗ ಕೆಲಹೊತ್ತು ಇಂತಹ ಸ್ಪರ್ಧೆಗಳು ನಡೆಯುತ್ತಿರುತ್ತವೆ. ಇದು ಅವರವರ ಪ್ರತಿಭೆಯ ಸ್ಪರ್ಧೆಯೂ ಹೌದು. ಕಲೆಗಾರಿಕೆಯ ಸ್ಪರ್ಧೆಯೂ ಹೌದು. ಇದು ಗ್ರಾಮದ ಜನರನ್ನು ಸಂತೋಷಗೊಳಿಸುವ ಸಂಗತಿ. ಇದರಿಂದ ಯಾವುದೇ ಈರ್ಷೆಗಳು ಏರ್ಪಡಲಾರವು.

ರಂಗಸ್ವಾಮಿ ಅವರು ಕೊಟ್ಟ ಹಾಡುಗಳನ್ನು ಗಮನಿಸಿದರೆ, ಅಲ್ಲಿ ಕೃಷ್ಣನ ಪ್ರವೇಶವಾಗುತ್ತದೆ. ಕೋಲಾಟದಲ್ಲಿ ಶೃಂಗಾರದ ಸ್ಪರ್ಶ ಇರುವುದರಿಂದ ಜನಪದರು ಬಹುಶಃ ಕೃಷ್ಣ–ಗೊಲ್ಲತಿಯ ಪ್ರಸಂಗಗಳನ್ನು ಜೋಡಿಸಿಕೊಂಡಂತೆ ತೋರುತ್ತದೆ.

೩೦

ಬಾಲಾಗೋಪಾಲ ನಿನ್ನ ಬಾಲಾನೇನೇ ಗೋಪೆಮ್ಮಾ|

ನಾರಾಯಣನೆ ಬಾರೋ ನಾರೀಕಂದಯ್ಯ ಬಾರೊ
ನರ್ಲೋಕದೊಳಗೇ ಇರ್ರ್ವೋನೆ ಕೃಷ್ಣಯ್ಯ
ಸುರಲೋಕದೊಳಗೆ ಇರುವೋನೆ ಕೃಷ್ಣಯ್ಯ
ನಂದಾಗೋವಿಂದನ ಕರಕೋಳೆ ಗೋಪಮ್ಮ|
ಗೋಪಮ್ಮ ನಿನ್ನ ಮಗ ದಘಾದ ಕುಡಿಕಾಣೆ
ದೀವಿಗೆ ಕುಡಿಯಂತೆ ಉರಿವನೇನೆ ಗೋಪಮ್ಮ|
ಹೋಗಿ ಬಂದು ನಮ್ಮ ಕೆಲ್ಸಾವ ಕಳೆಯುವ
ನಂದಾಗೋವಿಂದನ ಕರಕೋಳೆ ಕೋಪಮ್ಮ|

ಬಾಲಾಗೋಪಾಲ ನಿನ್ನ ಬಾಲಾನೇನೇ ಗೋಪೆಮ್ಮಾ|

ವೀಧ್ಯೆ ವೀಧ್ಯೆ ವೀಧತ್ತ

"ಮೇಲಿನ ಪದ್ಯಗಳಲ್ಲಿ ದೇವತಾ ಸ್ತುತಿಗಳೂ ವೀರರ ವರ್ಣನೆಗಳೂ ಇವೆ. ಅವುಗಳನ್ನು ಕಾವ್ಯದ ದೃಷ್ಟಿಯಿಂದ ವಿಮರ್ಶಿಸಿದರೆ ಪಾಮರ ಸಾಹಿತ್ಯದಲ್ಲಿ ರಸ, ಶ್ಲೇಷೆ, ಅಲಂಕಾರ, ಪ್ರತಿಭೆ ಇವುಗಳ ಪ್ರವಾಹವೇ ತೋರಿಬರಬಹುದು. ಕೆಲವು ಪದ್ಯಗಳನ್ನು ಸಂಪೂರ್ಣವಾಗಿ ಬರೆದಿಲ್ಲ. ಏಕೆಂದರೆ ಒಂದು ರಥದ ವರ್ಣನೆಗೆ ಆರಂಭಿಸಿದರೆ ಚಕ್ರದಿಂದ ಕಳಶದವರೆಗೆ ಪ್ರತಿಯೊಂದು ಪದಾರ್ಥವನ್ನು ವರ್ಣಿಸಿ ಅದರಲ್ಲಿ ಮೇಲಿನ ಸಾಲಿನಲ್ಲಿ ಅರ್ಧವನ್ನೇ ಮತ್ತೆ ಕೆಳಗಿನ ಸಾಲಿನ ಪೂರ್ವಾರ್ಧವನ್ನಾಗಿ ತೆಗೆದುಕೊಂಡಿರುವರು. ಆ ರೀತಿ ಪ್ರತಿಯೊಂದನ್ನೂ ಹೇಳುವುದು ಕೋಲಾಟದವರ ಗತ್ತಿಗೂ ಮುಂದಿನ ಪದವನ್ನು ಜ್ಞಾಪಿಸಿಕೊಳ್ಳುವುದಕ್ಕೂ ಅನುಕೂಲವೇ ವಿನಾ ಬರವಣಿಗೆಯಲ್ಲೂ ಆ ರೀತಿ ಬರೆದರೆ ಬೇಜಾರಾಗಬಹುದೆಂದು ಬಿಟ್ಟಿದ್ದಾಗಿದೆ. ನಮ್ಮೂರಲ್ಲಿ ಮುದುಕರು ಇನ್ನೂ ಬೇರೆ ಬೇರೆ ಪದಗಳನ್ನು ಹಾಡುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲೂ ಇದೇರಿತಿ ಬೇರೆ ಬೇರೆ ಪದ್ಯಗಳು ರಸದೃಷ್ಟಿಯಿಂದ ಶ್ರೇಷ್ಠವಾಗಿ ರಚಿಸಲ್ಪಟ್ಟಿವೆ. ಸಾಹಿತಿಗಳು ಸಂಗ್ರಹಿಸಬೇಕಾಗಿ

ಪ್ರಾರ್ಥನೆ"(ಅದೆ, ಪು.೫೯). ಕೋಲಾಟದ ಹಾಡುಗಳ ಬಗೆಗಿನ ರಂಗಸ್ವಾಮಿಗಳ ತಿಳುವಳಿಕೆ ಅಗಾಧವಾಗಿದೆ. ಹಾಡುಗಾರಿಕೆಯಲ್ಲಿಯ ಪುನರಾವರ್ತನೆ ಅದು ಮುಂದಿನದನ್ನು ಜ್ಞಾಪಿಸಿಕೊಳ್ಳುವುದಕ್ಕೆ ಅನುಕೂಲ ಎಂಬ ಅವರ ಮಾತು ಪ್ಯಾರಿ–ಲಾರ್ಡ್ ಅವರ 'ಮೌಖಿಕ ಸೂತ್ರಾತ್ಮಕ ಸಿದ್ಧಾಂತ'ದ ಮಾತಿಗೆ ಸಮಾನವಾಗಿದೆ. ಈ ಸಿದ್ಧಾಂತವನ್ನು ಪ್ರತಿಪಾದಿಸುವ ಪ್ಯಾರಿ–ಲಾರ್ಡ್ ಅವರ ಕೃತಿ 'ದಿ ಸಿಂಗರ್ ಆಫ್ ಟೇಲ್ಸ್' ಪ್ರಕಟವಾದುದು ೧೯೬೦ರಲ್ಲಿ. ರಂಗಸ್ವಾಮಿಗಳು ಒಂದು ಹಳ್ಳಿಯಲ್ಲಿ ಕುಳಿತುಕೊಂಡು 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡುಗಳು' ಕೃತಿ ಬರೆದು ಪ್ರಕಟಿಸಿದ್ದು ೧೯೩೩ರಲ್ಲಿ. ಗ್ರಾಮಾಂತರ ಪ್ರದೇಶದ ಇಂತಹ ಅನುಭವಗಳು ನಮಗೆ ಆಶ್ಚರ್ಯವನ್ನು ಹುಟ್ಟಿಸುತ್ತವೆ. ಅವನ್ನು ಗುರುತಿಸುವ ಕೆಲಸ ಆಗಬೇಕಾಗಿದೆ. ರಂಗಸ್ವಾಮಿಗಳು ಹೇಳಿದಂತೆ ಬಳಕೆಯಿಂದ ತಪ್ಪಿಹೋಗುತ್ತಿರುವ ರಸವತ್ತಾದ ಹಾಡುಗಳನ್ನು ಸಂಗ್ರಹಿಸಿಡುವ ಕೆಲಸವೂ ನಡೆಯಬೇಕಾಗಿದೆ.

೧೯೩೫ರಲ್ಲಿ ಪ್ರಕಟವಾದ ದೇವುಡು ಅವರ 'ಕರ್ನಾಟಕ ಸಂಸ್ಕೃತಿ' ಕೃತಿಯಲ್ಲೂ ಕೋಲಾಟದ ಪ್ರಸ್ತಾಪವಿದೆ. "ಹೆಣ್ಣುಮಕ್ಕಳಲ್ಲಿಯೂ ಕೋಲಾಟವುಂಟು. ಅವರು ಬಸವಣ್ಣನನ್ನು ದೀವಳಿಗೆಯ ವೇಳೆಯಲ್ಲಿ ಕೂರಿಸಿ ಆ ಬಸವಣ್ಣನ ಮುಂದೆ ಕೋಲು ಹೊಯ್ಯುವರು. ಆದರೆ ಗಂಡುಸರ ಕೋಲಾಟಕ್ಕೆ ಆ ನಿರ್ಬಂಧವಿದ್ದಂತೆ ಇಲ್ಲ. ವ್ಯವಧಾನವು ಇದ್ದು ಆಸೆಯಾದಾಗಲೆಲ್ಲ ಕೋಲು ಹೊಯ್ಯುವರು. ಸುಗ್ಗಿಯಲ್ಲಿ ಕಣ ಕಾಯುವ ಕೆಲಸ ಬಿದ್ದಾಗ, ಬೆಳುದಿಂಗಳ ರಾತ್ರಿಯಲ್ಲಿ, ಹೆಚ್ಚು ಎಂದು ತೋರುತ್ತದೆ. ಈ ಕೋಲಾಟದ ಸಂದರ್ಭದಲ್ಲಿ ತಪ್ಪದೆ ಬಸವಣ್ಣನ ಹೆಸರು ಬಂದೇ ಬರುವಂತೆ ಕಾಣುತ್ತದೆ. ಇದೊಂದು ವಿಶೇಷ. ಈ ಕೋಲಾಟದ ಉತ್ಪತ್ತಿಯನ್ನು ಕುರಿತ ಒಂದು ಹಾಡನ್ನು 'ಜಯಕರ್ನಾಟಕ'ವು ಪ್ರಕಟಿಸಿದೆ: (ಸಂಪುಟ ೧೦, ಸಂಚಿಕೆ ೮, ಪು.೬೧೨).

ಸ್ವಾಮೀ ಹುಟ್ಟುವ ಮೊದಲೆ ಭೂಮಿ ಹುಟ್ಟುವ ಮೊದಲೆ
ಸ್ವಾಮಿ ಮಾದೇವ ರಾಯಾ । ಹುಟ್ಟಿಬಂದನೋ ಕೋಲು।೧।

*   *   *   *

ಪಾತಾಳ ಜಡಿದು ಪಾರವಾಳಕ್ಕಿ ಬಂದವು ಕೋಲು ।೩೦।

*   *   *   *

ಸತ್ಯದಲ್ಲಿ ಚಂದನ ಗಿಡವ ಪಡೆದನು ಶ್ರೀ ಮಾದೇವ ರಾಯ
ಬಸವನ ಕೋಡೀನ ಮೇಲೆ ಚಿಗ್ಗಾ ಸಾಕಿದವು ।೩೨।

*   *   *   *

"ದೇವತೆಗಳೆಲ್ಲ ಸೇರಿ ಕೋಲಾಟವಾಡಿದರು.
ಮಾದೇವ ರಾಯಾ ಮದ್ದಲಿ ತಡೆದಾ
ದೇವೇಂದ್ರ ರಾಯಾ ದೇಂವಟಿ ತಡೆದಾ
ತಾಳಾಮಣಿ ತಾಳಾ ತಡೆದನೂ ಕೋಲು

ಎಲ್ಲರೂ ಚಿನ್ನ ಬೆಳ್ಳಿ ಮುತ್ತಿನ ಕೋಲುಗಳನ್ನು ತೆಗೆದುಕೊಂಡು ಆಡಿದರು. ಚಿನ್ನ ಬೆಳ್ಳಿಯ ಕೋಲು ಸಿಗುರೊಡೆದವು. ಮುತ್ತಿನ ಕೋಲು ಮೂರು ತುಂಡಾಯಿತು. ಆಗ, 'ಈ ಆಟ ನಮಗೆ ತರವಲ್ಲ ।೫೩। ದೇವತೆಗಳಿರಾ ಈ ಆಟ ಮಾನವರ ಮಕ್ಕಳಿಗೆ ।೫೪।'

ಎಂದು 'ಸತ್ಯದಲಿ ಹಾಲು ಕೆರೆಯ ಪಡೆದನು ಮಾದೇವರಾಯ। ಹಾಲ ಕೆರೆಯಿಂದ ಮಾನವನ ಪಡೆದನು ।೫೬। ಅವನನ್ನು ದೇವತೆಗಳು ಕರೆದು 'ಚಿನ್ನದ ಮದ್ದಲಿ ನೀ ಹಿಡಿಯಬೇಕು' ಎಂದರು. ಅವನು 'ಚಿನ್ನದ ಮದ್ದಲಿ ತನಗೆ ಸ್ವಾಮೀ ತರವಲ್ಲ। ದೇವತೆಗಳಿರಾ। ಹೊನ್ನೆಯ ಮದ್ದಲಿ ತನಗೆ ಕೊಡಬೇಕು' ಎಂದು ಕೇಳಿಕೊಂಡನು. ಹೀಗೆಯೇ,

ಚಿನ್ನದ ತಾಳ ತನಗೆ ತರವಲ್ಲ ದೇವತೆಗಳಿರಾ
ಕಂಚಿನ ತಾಳ ಕೊಡಬೇಕು ।

ಚಿನ್ನದ ಕೋಲು ತರವಲ್ಲ ದೇವತೆಗಳಿರಾ
ಕೊಡಸೀನ ಕೋಲು ತನಗೆ ಕೊಡಬೇಕು।

ಚಿನ್ನದ ಗುಮಟೇ ತನಗೆ ತರವಲ್ಲ ದೇವತೆಗಳಿರಾ
ಮಣ್ಣಿನ ಗುಮಟೇ ತನಗೆ ಕೊಡಬೇಕು

ಎಂದು ಪ್ರಾರ್ಥಿಸಿದರು. ದೇವತೆಗಳು ಆಗಲೆಂದು ಹರೆಸಿ, ನೂರೊಂದು ಕೋಲೂ ನೂರೊಂದು ಹಾಡೂ ಕೊಟ್ಟು ತಮ್ಮ ತಮ್ಮ ಠಾವಿಗೆ ನಡೆದರು" (ಪು.೬೮-೬೯).

ಹೀಗೆ ಕೋಲಾಟದ ಉತ್ಪತ್ತಿಯನ್ನು ವಿವರಿಸುವ ದೇವುಡು ಅವರು ಅರ್ಚಕ ಬಿ.ರಂಗಸ್ವಾಮಿ ಅವರು ಉಲ್ಲೇಖಿಸುವ 'ಮಾತಾಡ್ ಮಾತಾಡು ಮಲ್ಲಿಗೆ' ಎಂಬ ಒಗಟಿನ ಹಾಡುನ್ನು ಉದಾಹರಿಸಿ, ಅಲ್ಲಿಯ ವಿವರಣೆಯನ್ನೇ ಉಲ್ಲೇಖಿಸುತ್ತಾರೆ. ಇಷ್ಟು ದೇವುಡು ಅವರು ಕೊಡುವ ಕೋಲಾಟದ ಮಾಹಿತಿ.

ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು **'ಕರ್ನಾಟಕ ಜನಪದ ಸಾಹಿತ್ಯ'**(೧೯೫೬) ಎಂಬ ಕೃತಿಯಲ್ಲಿ ಕೋಲಾಟವನ್ನು ಪ್ರಸ್ತಾಪಿಸಿ, ತಕ್ಕ ಮಟ್ಟಿಗೆ ಅದರ ಮಾಹಿತಿ ಒದಗಿಸುತ್ತಾರೆ. 'ಕೋಲಾಟ ನಮ್ಮ ಜನರಿಗೆ ಬಹಳ ಪ್ರಿಯವಾದ ವಿನೋದವಾಗಿತ್ತೆಂದು ಕಾಣುತ್ತದೆ' ಎನ್ನುವ ಮಾಸ್ತಿ ಅವರು- "ಕೋಲಾಟದ ಪದಗಳಲ್ಲಿ ದೇವರ ಸ್ತೋತ್ರದ ಪದಗಳು, ತತ್ವಗಳನ್ನೊಳಗೊಂಡ ಪದ್ಯಗಳು, ಸ್ಥಳದ ಇತಿಯಾಸವನ್ನೊಳಗೊಂಡ ಪದ್ಯಗಳು, ಆಯಾ ಹಬ್ಬ ಹುಣ್ಣಿಮೆ ಪ್ರಸ್ತ ಪ್ರಯೋಜನವನ್ನು ಕುರಿತ ಪದ್ಯಗಳು, ಧಣಿಯನ್ನು ಹೊಗಳಿ ಮೆಚ್ಚನ್ನು ಬೇಡುವ ಪದ್ಯಗಳು, ಹೀಗೆ ಅನೇಕ ಉದ್ದೇಶದ ಕೃತಿಗಳಿರುತ್ತವೆ" (ಕ.ಜ.ಸಾ., ಪು.೪೩) ಎನ್ನುತ್ತಾರೆ.

ಕೋಲು ಕೊಲೆನ್ನ ಕೋಲೇ ಶ್ರೀಗಂಧದ
ಕೋಲು ಕೋಲೆನ್ನ ಕೋಲೇ।
ಮಡಕೇರಿ ಮಲ್ಲೇಗೌಡ್ರು ದಾರದವಳ್ಳಿ ಕೆಂಚೇಗೌಡ್ರು
ಬಣಕಲ್ಲು ಸುಬ್ಬೇಗೌಡ್ರು ಮೂರು ಜನ ಸೇರಿದರಂತೆ
ಕೋಲು ಕೋಲೆನ್ನ।
ಅವರು ಮೂರು ಜನ ಸೇರಿದ ಸುದ್ದಿ ಕೇಳಿ

ಮೈಸೂರು ರಾಣಿಗೇ ಸಿಟ್ಟು ಬಂದಿತೋ
ಕೋಲೂ ಕೋಲೆನ್ನ।

ಮಾಸ್ತಿ ಅವರಿಗೆ ಈ ಕೋಲಾಟ, ಕೋಲಾಟದ ಹಾಡುಗಳು ಶೃಂಗಾರ ಭಾವನೆಯನ್ನು ಆಕರ್ಷಿಸುವವು ಎಂಬುದು ಚೆನ್ನಾಗಿ ತಿಳಿದಿದೆ.

ಜಾಣಾ ಜಾಣರಿಗೆಲ್ಲ ಜಾಣಾ ಕಾಣ್ರೋ ನಮ್ಮಯ್ಯ
ಜಾಜೀಯ ಹೂವ ಬೆಲೆಮಾಡಿ।
ಜಾಜೀಯ ಹೂವ ಬೆಲೆ ಮಾಡಿ ನಮ್ಮಯ್ಯ
ಸೋದಾರತ್ತೆ ಮಗಳಿಗೆ ಮುಡಿಸ್ಯಾನೆ।

ಎಂಬ ಪಲ್ಲವುಳ್ಳ ಹಾಡನ್ನು ಉದಾಹರಿಸುತ್ತಾರೆ. ಇಲ್ಲಿ ಮಾಸ್ತಿ ಅವರ ಆಸಕ್ತಿಯನ್ನು ಗಮನಿಸಬೇಕು. ಅವರಿಗೆ ಕೋಲಾಟದ ಬಗೆಗೆ ಚೆನ್ನಾಗಿ ತಿಳುವಳಿಕೆಯಿದೆ. ಕೋಲಾಟದ ಕೆಲ ಹಾಡುಗಳನ್ನೂ ಸಂಗ್ರಹಿಸಿದ್ದಾರೆ. ಅಲ್ಲಿಯ ಉದಾಹರಣೆಗಳನ್ನು ಕೊಡುತ್ತ ವಿಷಯವನ್ನು ವಿವರಿಸುತ್ತ ಹೋಗುತ್ತಾರೆ. ಒಂದು ಸರಸದ ಪದ್ಯ ಎಂದು ಉದಾಹರಿಸುವ ನುಡಿಯನ್ನು ಗಮನಿಸಿ:

ಎಲೆಯೋ ಎಲೆಯೋ ಯಲಿಯ ಬಳ್ಳೊಂದೆಲೆಯೊ
ಈ ಬಳ್ಳಿ ಮೆಟ್ಟೀ ಯಲೆಯ ಕುಯ್ಯೋಳ್ಯಾರೆ।
ನಾ ಕಾಣೋ ಬಾವಾ ನಿನ ಸೋದಾರತ್ತೆ ಮಗಳು।
ನೀ ಸೋದರತ್ತೆ ಮಗಳಾದ್ರೆ ಸೋತೆಲೆ ಕುಯ್ಹೆಣ್ಣೆ
ಸೋತೆಲೆ ಕುಯ್ಯೋಕೆ ನೀ ತಂದ್ದೆಂಗುಸು ನಾ ಅಲ್ಲ।

'ಇದೇ ಸರಸಕ್ಕೆ ಆರಂಭ. ಇದಾದ ಮೇಲೆ ಈ ಗಂಡೂ ಹೆಣ್ಣೂ ಚಮತ್ಕಾರದ ಮಾತುಗಳಿಂದ ಚೆಂಡಾಡುತ್ತಾರೆ'– ಎಂದು ಹೇಳಿ, ಈ ಕೆಳಗಿನ ರಂಜನೆಯ ಹಾಡನ್ನು ಉದಾಹರಿಸುತ್ತಾರೆ:

ಹಾ ಹೋ ಹೆಣ್ಣೆ ನೀ ದಿಂಡೆಕಾರ್ಹೆಣ್ಣೆ।
ನನಗ್ಯಾಕೊ ದಿಂಡು ನಿನ ಬಾಳೀಗೆ ದಿಂಡು।
ಹಾಹೋ ಹೆಣ್ಣೆ ನೀ ಸೊಕ್ಕೀನ ಹೆಣ್ಣೆ
ನನಗ್ಯಾಕೋ ಸೊಕ್ಕು ನಿನ್ನಡಕೀಗೆ ಸೊಕ್ಕು

ಹೀಗೆ ಸಾಗುತ್ತದೆ ಗಂಡು ಹೆಣ್ಣಿನ ಸಂವಾದ. ಈ ಬಗೆಯಲ್ಲಿ ಒಂದೊಂದು ಉದಾಹರಣೆ ಕೊಟ್ಟು ಅಲ್ಲಿಯ ಸ್ವಾರಸ್ಯವನ್ನು ಒಂದೆರಡು ಮಾತುಗಳಲ್ಲಿ ಹೇಳುತ್ತ ಹೋಗುತ್ತಾರೆ. ಅವರು ಇಂತಹ ಸಂವಾದ ಪದ್ಯಗಳಲ್ಲಿ ಇಡೀ ಕರ್ನಾಟಕದ ತುಂಬ ಪ್ರಸಿದ್ಧವಾದ ಒಂದು ಸಂವಾದದ ಹಾಡನ್ನು ಉಲ್ಲೇಖಿಸುತ್ತಾರೆ.

ಒಬ್ಬನನ್ನು ಕಟ್ಟಿದ್ದೆ ಒಬ್ಬನನ್ನು ಬಿಟ್ಟಿದ್ದೆ
ಒಬ್ಬನನ್ನು ಕರಕೊಂಡು ಒಳಗ್ಹೋದೆ।
ಯಾರನ್ನು ಕಟ್ಟಿದ್ದೆ ಯಾರನ್ನು ಬಿಟ್ಟಿದ್ದೆ

ಯಾರನ್ನು ಕರಕೊಂಡು ಒಳಗ್ಹೋದೆ।
ದನವನ್ನು ಕಟ್ಟಿದ್ದೆ ಕರುವನ್ನು ಬಿಟ್ಟಿದ್ದೆ
ಹಾಲನ್ನು ಕರಕೊಂಡು ಒಳಗ್ಹೋದೆ।
ಒಬ್ಬನಿಗೆ ಕಾಲು ಕೊಟ್ಟೆ ಒಬ್ಬನಿಗೆ ಕೈಕೊಟ್ಟೆ
ಒಬ್ಬನಿಗೆ ಸೀರೆಯನೇ ಕೊಟ್ಟೆ ।
ಯಾವೋನಿಗೆ ಕಾಲುಕೊಟ್ಟೆ ಯಾವೋನಿಗೆ ಕೈಕೊಟ್ಟೆ
ಯವೋನಿಗೆ ಸೀರೆಯನೇ ಕೊಟ್ಟೆ ।
ಕಂಚಿಗಾರಗೆ ಕಾಲುಕೊಟ್ಟೆ ಬಳೆಗಾರಗೆ ಕೈಕೊಟ್ಟೆ
ಅಗಸರವನಿಗೆ ಸೀರೆಯನೇ ಕೊಟ್ಟೆ ।
ಒಬ್ಬನನ್ನು ಹಾಸಿದ್ದೆ ಒಬ್ಬನನ್ನು ಹೊದ್ದಿದ್ದೆ
ಒಬ್ಬನ ಮೇಲೆ ಮಲಗಿದ್ದೆ ।

"ಇವು ಕ್ರಮವಾಗಿ ಹಾಸಿಗೆ, ಜಮಖಾನೆ, ತಲೆದಿಂಬು, ಹಾಗೆಯೇ ಹಾಕಿದ್ದು ಒಬ್ಬನನ್ನು, ದೂಡಿದ್ದು ಒಬ್ಬನನ್ನು, ಒಳಗೆ ಹೋಗುತಾ ಕರಕೊಂಡು ಬಂದದ್ದು ಒಬ್ಬನನ್ನು, ಇವು ಬಾಗಿಲು, ತಾಳು, ಜ್ಯೋತಿ. ಹೀಗೆ ಈ ಹೆಂಗಸು ಸಿಕ್ಕಿಕೊಳ್ಳುವಂತೆ ಮಾತನಾಡಿ ತಾನು ಮಾಡಿದ್ದು ಯಾವುದೂ ತಪ್ಪಿಲ್ಲವೆಂದು ಆಮೇಲೆ ವಿವರಿಸಿ ಮರ್ಯಾದೆಯಾಗಿ ಪಾರಾಗುತ್ತಾಳೆ" (ಅದೆ,ಪು.೪೭). ಹೀಗೆ ಮಾಸ್ತಿ ಅವರ ವಿವರಣೆ ಸಾಗುತ್ತದೆ. ಆದರೆ ಈ ಶೃಂಗಾರ ಸಲ್ಲಾಪ ಎನ್ನುವುದು 'ನಂಜಿಕೊಳ್ಳುವ ಪದಾರ್ಥದಂತೆ ಅವು ಮಿತವಾಗಿ ಇರಬೇಕು. ಜನತೆಯ ಸಾಹಿತ್ಯವು ಇಂಥ ಪದ್ಯಗಳಲ್ಲಿ ಈ ಉಪ್ಪಿನಕಾಯನ್ನು ಮಾಡಿಕೊಂಡಿದೆ' ಎಂಬ ಸತ್ಯವನ್ನು ಹೊರಗೆಡುವುತ್ತಾರೆ. ಜನಪದ ಕಲೆಗಳಲ್ಲಿ ಈ ಬಗೆಯ ಕಲೆ–ಸಾಹಿತ್ಯ ಹೊಂದಿರುವುದು ಕೋಲಾಟವೊಂದೇ ಎಂಬುದನ್ನು ಗಮನಸಿದರೆ, ಅಲ್ಲಿ ಉಪಯೋಗ ವಾಗುವ ಸರಸದ ಹಾಡುಗಳ ಶೃಂಗಾರ ವರ್ಣನೆಯ ಮಿತಿಗಳನ್ನು ಗಮನಿಸಿದರೆ, ಮಾಸ್ತಿ ಅವರ ಮಾತಿನ ಮಹತ್ವ ನಮಗೆ ಅರಿವಾಗುತ್ತದೆ. ಅವರು ಉಲ್ಲೇಖಿಸುವ ಈ ಮೇಲಿನ ಹಾಡು ತುಂಬಾ ಪ್ರಸಿದ್ಧವಾಗಿದ್ದು, ಅದು ಕರ್ನಾಟಕದ ತುಂಬ ದೊರೆಯುತ್ತದೆ.

ಪೂರ್ಣಪ್ರಮಾಣದ ಕೋಲುಪದಗಳ ಸಂಗ್ರಹವೊಂದು ಪ್ರತ್ಯೇಕವಾಗಿ ಪ್ರಕಟವಾದುದು ೧೯೭೦ ರಲ್ಲಿ. ಮಳಲಿ ವಸಂತಕುಮಾರ ಅವರು ಹಾಸನ ಜಿಲ್ಲೆಯ ತಮ್ಮೂರಿನಲ್ಲಿ ಸಂಗ್ರಹಿಸಿದ ಹಾಡುಗಳನ್ನು **'ಕೋಲು ಪದಗಳು'** ಎಂದು ಪ್ರಕಟಿಸಿದ್ದಾರೆ. ಆ ಹೊತ್ತಿನಲ್ಲಿ ವಿದ್ವಾಂಸರಿಂದ ಮನ್ನಣೆ ಪಡೆದ ಕೃತಿ ಇದಾಗಿದೆ. ಈ ಕೃತಿಯಲ್ಲಿಯ ಹಾಡುಗಳನ್ನು, ಸಂಪಾದನಾ ಕ್ರಮವನ್ನು, ಕೃತಿಗೆ ಸಂಪಾದಕರು ಬರೆದ ಪ್ರಸ್ತಾವನೆಯನ್ನು ಕುರಿತು ನಾಡಿನ ಜಾನಪದ ವಿದ್ವಾಂಸರಾದ ಡಾ. ಜೀಶಂಪ ಅವರು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಈ ಕೃತಿಯ ಬಗೆಗೆ ಬರೆದ ಮಾತುಗಳು ಹೀಗಿವೆ: "ಕೋಲಾಟದ ಸಂಪ್ರದಾಯದ ಮೇಲೆ ಸ್ವತಂತ್ರ ಕೃತಿಯನ್ನು ಪ್ರಕಟಿಸುವುದರ ಜೊತೆಗೆ ಸಂಪ್ರದಾಯ ಮತ್ತು ಸಾಹಿತ್ಯ ಎರಡನ್ನೂ ಅತ್ಯಂತ ಶಾಸ್ತ್ರೀಯವಾಗಿ ಪರಿಚಯಿಸುವ ಒಂದು ಸಮರ್ಥ ಪ್ರಯತ್ನವನ್ನು ಎಂ.ಸಿ.ವಸಂತಕುಮಾರ ಅವರ ಕೋಲುಪದಗಳು ಸಂಕಲನದಲ್ಲಿ

ಕಾಣಬಹುದು. ಕೋಲಾಟವನ್ನು ಒಂದು ಜನಪದ ಕಲೆಯಾಗಿ ಹೇಗೆ ನೋಡಬಹುದು, ಕೋಲಾಟದ ಬಗೆಗಳೆಷ್ಟು, ಒಂದೊಂದು ಕೋಲಾಟದ ಕ್ರಮದಲ್ಲೂ ಕಂಡುಬರುವ ವೈವಿಧ್ಯಗಳೇನು, ಕೋಲಾಟದ ಸಾಹಿತ್ಯಿಕ ವೈಶಿಷ್ಟ್ಯಗಳೇನು ಎಂಬ ಅಂಶಗಳ ಮೇಲೆ ವಸಂತಕುಮಾರ ಅವರು ನೀಡಿರುವ ಪರಿಚಯ ಕೇವಲ ಮಾಹಿತಿಗಳ ಸಂಗ್ರಹ ಮಾತ್ರ ಆಗಿರದೆ ಸಂಶೋದನಾತ್ಮಕ ವಿಶ್ಲೇಷಣೆಯೂ ಆಗಿದೆ. ವಿಸ್ತಾರ ಮತ್ತು ವೈವಿಧ್ಯದಲ್ಲಿಯೂ ವಸಂತಕುಮಾರ ಅವರ ಸಂಕಲನ ಗಮನಾರ್ಹವಾಗಿದೆ" (ಬೆನ್ನುಡಿ, ೨ನೇ ಮುದ್ರಣ). ಎಂ.ಸಿ.ವಸಂತಕುಮಾರ ಅವರು ಸ್ವತಃ ಕೋಲಾಟದಲ್ಲಿ ಭಾಗವಹಿಸಿ, ಅದರ ಸಂಪೂರ್ಣ ಪರಿಚಯವುಳ್ಳವರಾಗಿದ್ದಾರೆ. ಹೀಗಾಗಿ ಜನಪದ ಸಾಹಿತ್ಯದ ಇಂತಹ ಒಂದು ವೈಜ್ಞಾನಿಕವಾದ ಸಂಗ್ರಹವನ್ನು ೧೯೭೦ರ ಅವಧಿಯಲ್ಲಿಯೇ ಹೊರತರಲು ಅವರಿಗೆ ಸಾಧ್ಯವಾಗಿದೆ. ಬಹುಶಃ ತಮ್ಮೂರಿನ ಕಲಾವಿದರಿಂದಲೇ ಹಾಡುಗಳನ್ನು, ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಪ್ರಸ್ತಾವನೆ ಕೇವಲ ಪರಿಚಯಾತ್ಮಕ ಎನ್ನುವುದಕ್ಕಿಂತ ಸಂಶೋಧನಾತ್ಮಕ ಎನ್ನುವಂತಿದೆ. ಅವರಿಗೆ ಕೋಲಾಟದ ಬಗೆಗೆ ಸರಿಯಾದ ಪರಿಚಯವಿರುವುದರಿಂದ ಕೋಲಾಟವನ್ನು, ಕೋಲಾಟದ ಹಾಡುಗಳನ್ನು ಎಲ್ಲಂದದಲ್ಲಿ ಪರಿಚಯಿಸಿಕೊಡಲು ಅವರಿಗೆ ಸಾಧ್ಯವಾಗಿದೆ. ಕೋಲಾಟದ ಕಲಾವಿದರು, ಕೋಲುಗಳು, ಆಡುವ ಋತುಮಾನ, ಅವರ ವೇಷಭೂಷಣ, ಹಾಡುಗಳು, ಸಂಗೀತ ಪರಿಕರಗಳು, ಕೋಲಾಟದ ಹೆಜ್ಜೆಗಳು, ಕೋಲಾಟದ ವಿಧಗಳು, ವಿಧಗಳಿಗೆ ತಕ್ಕಂತೆ ಹಾಡುವ ಹಾಡುಗಳು ಇವುಗಳನ್ನು ಬಹಳ ವಿವರ ವಿವರವಾಗಿ ಕೊಡುತ್ತ ಹೋಗುತ್ತಾರೆ. ಅವರು ಪ್ರಸ್ತಾವನೆಯಲ್ಲಿ ಕೊಡುವ ಮಾಹಿತಿಗಳು ಹೀಗಿವೆ :

ಸಾಧನಗಳು : ಆಳುಗಳು, ಕೋಲುಗೂಟಗಳು, ಗೆಜ್ಜೆ, ದಮ್ಮಡಿ, ತಾಳ, ಮರಗಾಲುಗಳು ಮತ್ತು ಕೋಲುಪದಗಳು.

ಆಳುಗಳು : ಕನಿಷ್ಠ ಎಂಟು, ಅತಿ ಹೆಚ್ಚೆಂದರೆ ಇಪ್ಪತ್ತು ನಾಲ್ಕು ಆಳುಗಳು ಬೇಕು. ಕೋಲಾಟವು ನೋಡಲು ಲಕ್ಷಣವಾಗಿಯೂ, ಆಳುಗಳು ಕೋಲು ಕೊಡಲು ಮತ್ತು ಕುಣಿಯಲು ಅನುಕೂಲಕರವಾಗಿಯೂ ಇರಬೇಕಾದರೆ ಹತ್ತು ಜನರು ಮಾತ್ರ ಸಾಕಾಗುತ್ತದೆ.

ಕೋಲು ಗೂಟಗಳು: ಹತ್ತು ಇಂಚಿನ ಕೋಲು ಗೂಟಗಳು. ಬೈನೆ, ಕಾರೆ, ಗಂಟೆ ಕಣಗಳು ಮರಗಳಿಂದ ತಯಾರಿಸಿದ ಕೋಲುಗಳು ಒಳ್ಳೆಯ ನಾದ ಕೊಡುತ್ತವೆ. ಬೈನೆ ಅತ್ಯುತ್ತಮವಾದುದು.

ಗೆಜ್ಜೆ : ಕೋಲಾಟದ ಕಲಾವಿದರ ಕಾಲಿಗೆ, ಕೋಲುಗಳಿಗೆ ಗೆಜ್ಜೆ ಕಟ್ಟಿರುತ್ತಾರೆ.

ದಮ್ಮಡಿ : ಸಂಗೀತ ಪರಿಕರಗಳಲ್ಲಿರುವ ಚರ್ಮವಾದ್ಯ.

ತಾಳ : ಸಹಾಯಕ ಲೋಹ ವಾದ್ಯ.

ಮರಗಾಲು : ಹಾಲುವಣದ ಮರದಿಂದ ಮಾಡಿದ, ಎರಡು ಅಥವಾ ಎರಡೂವರೆ ಅಡಿ ಎತ್ತರದ ಮರಗಾಲು ಕಟ್ಟಿಕೊಂಡು ಒಂದಿಬ್ಬರು ಕುಣಿಯುತ್ತಿರುತ್ತಾರೆ.

ಸಂಪಾದಕರು ಹೇಳುವ ಮರಗಾಲು ಕಟ್ಟುವ ಪದ್ಧತಿ ಕೋಲಾಟದ ಭಾಗವಾಗಿರುವುದಲ್ಲ. ಜನರ ರಂಜನೆಗಾಗಿ ಮರಗಾಲು ಕಟ್ಟಿಕೊಂಡು ಕುಣಿಯಲಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಮರಗಾಲು ಕಟ್ಟಿಕೊಂಡವರು ಕುದುರೆಯ ಗೊಂಬೆಗಳನ್ನು ಹೆಗಲಿಗೆ ಸಿಕ್ಕಿಸಿಕೊಂಡು ಹಲಿಗೆಯ ಗತ್ತಿನೊಂದಿಗೆ ಕುಣಿಯುತ್ತಾರೆ. ಇದೊಂದು ಪ್ರತ್ಯೇಕವಾದ ಕಲೆಯಾಗಿದೆ.

ಕೋಲಾಟದ ಹಾಡುಗಳನ್ನು ಪರಿಚಯಿಸುವಾಗ ಅವುಗಳ ವಿಧಗಳನ್ನು ಹೇಳಿ, ಹಾಡುಗಳನ್ನು ಕೊಡುತ್ತ ಹೋಗುತ್ತಾರೆ. ಇದು ಸಂಪಾದಕರಿಗೆ ಕೋಲಾಟದ ಬಗೆಗೆ ಇರುವ ತಿಳುವಳಿಕೆಯನ್ನು ಹೇಳಿಕೊಡುತ್ತದೆ.

ಸವಿಗಾಗಿ:

ತಂದನಾನು ತಾದೆಂನನಾನ ತಂದನಾನು ತಾದಂನನಾನ
ದಿಮ್ದಿಮ್ಮಿ ದಿಮ್ಮಿಯ ಲೋಲಿ
ತಯ್ಯೋ ತಮ್ಮಯ್ಯ ಜಿಗ್ಗಿ, ತಾರು ಲಲ್ಲಲ್ಲೆ

ಸಂಪಾದಕರು 'ಸವಿಗಾಗಿ' ಎಂದು ಕೊಡುವ ಈ ನುಡಿ ಬಹುಶಃ ಕೋಲಾಟದಲ್ಲಿ ಪ್ರತಿ ಹಾಡಿನ ಕೊನೆ ಮಾಡುವಲ್ಲಿ, ಅಂದರೆ 'ಗತ್ತು ಮುರಿ' ಯುವಲ್ಲಿ ಅನ್ನುವ ನುಡಿಯಾಗಿರುವಂತೆ ತೋರುತ್ತದೆ.

ಕೋಲಾಟದ ವಿಧಗಳು : ೨೧ ಕೋಲಾಟದ ಪ್ರಕಾರಗಳನ್ನು ಗುರುತಿಸುತ್ತಾರೆ. ಜೊತೆಗೆ ಕೆಲವು ಕೋಲಾಟದ ವಿಧಗಳನ್ನು ಸರಿಯಾಗಿ ವಿವರಿಸುತ್ತಾರೆ.

"ಆರಂಭದ ಪ್ರಾರ್ಥನೆಯ ಕೋಲಿಗೂ, ಮುಕ್ತಾಯದ ಕೋಲಿಗೂ ಯಾವಾಗಲೂ ಗೊತ್ತಾದ ಗೀತೆಗಳನ್ನೇ ಹಾಡುತ್ತಾರೆ. ಹೆಚ್ಚಿನ ಕೋಲುಪದಗಳಲ್ಲಿ ಶೃಂಗಾರದ ಸೋನೆ ನಿರಂತರವಾಗಿ ಸೋರುತ್ತಿರುತ್ತದೆ. ವಿನೋದಕ್ಕೂ ವೈಚಿತ್ರ್ಯಕ್ಕೂ ಸಾಕಷ್ಟು ಅವಕಾಶವಿದೆ. ಭಕ್ತಿಯ ಭಾವಾವೇಷಕ್ಕೇನೂ ಕಡಮೆ ಇಲ್ಲ. ವೀರರಸವೂ ಅಲ್ಲಲ್ಲೆ ಇಣುಕು ಹಾಕುತ್ತದೆ. ಭಕ್ತಿಗೀತೆಗಳಲ್ಲಿ ಹೆಚ್ಚು ಗ್ರಾಮದೇವತೆಗಳನ್ನು ಕುರಿತಾಗಿರುತ್ತವೆ. ಅಲ್ಲದೆ ತಮಗೆ ಗೊತ್ತಿರುವ ಊರುಗಳನ್ನು ಕುರಿತು, ಆ ಊರಿನ ಏನಾದರೊಂದು ವೈಶಿಷ್ಟ್ಯವನ್ನು ಎತ್ತಿ ಹೇಳುವುದು ಕೆಲವು ಗೀತೆಗಳಲ್ಲಿ ಕಂಡುಬರುತ್ತದೆ. ಹಾಸ್ಯ ಮತ್ತು ಸಂಭಾಷಣೆಯು ಸಾಮಾನ್ಯವಾಗಿ ನಿಲ್ಪದಗಳಲ್ಲಿ ಕಂಡುಬರುತ್ತದೆ" (ಪ್ರಪು. ೨೫). ಇದು ಒಟ್ಟಿಗೆ ಕೋಲಾಟದ ಪದಗಳ ಬಗ್ಗೆ ಸಂಪಾದಕರು ಕೊಡುವ ಮಹತ್ವದ ಮಾಹಿತಿಯಾಗಿದೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಕೃಷ್ಣ–ಗೊಲ್ಲತಿಯರಿಗೆ ಸಂಬಂಧಪಟ್ಟ **'ಕೊರವಂಜಿ ಕೋಲು'** ಎಂಬ ಹಾಡೊಂದು ಮಾತ್ರ ಈ ಸನ್ನಿವೇಶಕ್ಕೆ ಸಂಬಂಧಿಸಿದೆ. ಕೊರವಂಜಿ ವೇಷದಲ್ಲಿರುವವನು ಕೃಷ್ಣನೆ ಆಗಿರುತ್ತಾನೆ. ಇನ್ನೊಬ್ಬ ರುಕ್ಮಿಣಿಯಾಗಿರುತ್ತಾನೆ. ಇದು ಕೋಲಾಟದ ಜೊತೆಯಲ್ಲಿ ಅಭಿನಯಿಸುವ ಪ್ರತ್ಯೇಕ ಒಂದು ಪ್ರದರ್ಶನವೇ ಆಗಿದೆ. ಇದನ್ನು ಗುರುತಿಸುವ ಸಂಪಾದಕರು ಹೀಗೆ ವಿವರಿಸುತ್ತಾರೆ: "ಈ ಕೊರವಂಜಿ ನೃತ್ಯ ಕೋಲಾಟಕ್ಕೆ ಮಾತ್ರ ಸೀಮಿತವಲ್ಲದೆ ಭರತ ನಾಟ್ಯದಂತಹ ಭಾರಿತೀಯ ಮಹಾ ನೃತ್ಯ

ಒಂದಕ್ಕೆ ಆಧಾರವಾಗಿವೆ ಎಂದಾಗ ಆನಂದವೂ ಆಶ್ಚರ್ಯವೂ ಉಂಟಾಗುತ್ತದೆ. ಪಿ. ಬ್ಯಾನರ್ಜಿ ಅವರು ಈ ಬಗ್ಗೆ ಹೀಗೆ ಬರೆದಿದ್ದಾರೆ:

Kuravanji is a folk Dance of Tamilnad. The classical dance Bharatha Natyam has sprung up from this particular type of folk-dance. the kuratis are performers of this danec, and they belong to a hilly nomadic tribe. They earn their livelihood from fortune telling and dancing. The dancers are pretty girls who wander all over the country side and dance to please those who pay them a small sum. (Projesh Banerji, The Deccan, 'The Folk -dance of India', p-24)" (ಪ್ರ.ಪು.೪೩).

ಈ ಮಾತುಗಳನ್ನು ಗಮನಿಸಿದರೆ, ಕೋಲಾಟದಲ್ಲಿ ಕೊರವಂಜಿ ದೃಶ್ಯ ಪ್ರತ್ಯೇಕವಾಗಿ ಪ್ರದರ್ಶನಗೊಳ್ಳುವಂಥದ್ದು ಎಂಬುದು ಸ್ಪಷ್ಟವಾಗುತ್ತದೆ. ಇದು ಹೈದ್ರಾಬಾದ ಕರ್ನಾಟಕದಲ್ಲಿ ಒಂದು ರೂಪಕದಂತೆ ಕೋಲಾಟದ ಜೊತೆ ಪ್ರದರ್ಶನಗೊಳ್ಳುತ್ತದೆ. ಹಾಗು ಸಂವಾದ ರೂಪದ ಹಾಡುಗಳು ಸಾಕಷ್ಟು ಬೆಳೆದು ಬಂದಿವೆ. 'ಕೃಷ್ಣ-ಗೊಲ್ಲತಿ' ಎಂಬ ಗೀತ ರೂಪಕದ ಜೊತೆ 'ರಾಮ-ಲಕ್ಷ್ಮಣ' ಎಂಬ ಗೀತರೂಪಕವೊಂದು ಬೆಳೆದುಬಂದಿರುವುದನ್ನು ಕಾಣುತ್ತೇವೆ. ಅಂದರೆ ಬ್ಯಾನರ್ಜಿ ಅವರು ಗುರುತಿಸುವಂತೆ ಇದೊಂದು ನೃತ್ಯ ಪ್ರಕಾರವಾಗಿದ್ದು, ಕೊರವಂಜಿ ಸಮುದಾಯಕ್ಕೆ ಸೇರಿದ ಕಲಾವಿದರು ಪ್ರದರ್ಶನ ಮಾಡುತ್ತಾರೆ. ಬಹುಶಃ ಈ ನೃತ್ಯ ಪ್ರಕಾರವೇ ಬಹುದಿನಗಳ ಹಿಂದೆ 'ಗೀತ ರೂಪಕ'ವಾಗಿ ಬೆಳೆದಂತೆ ತೋರುತ್ತದೆ. ಅದು ಕರ್ನಾಟಕವನ್ನು ಈ ಕೋಲಾಟದ ಮೂಲಕವೇ ಪ್ರವೇಶಿಸಿದಂತೆ ತೋರುತ್ತದೆ. ಈ ಗೀತರೂಪಕಗಳ ಬಗ್ಗೆ ಮುಂದೆ ವಿವರಿಸಲಾಗಿದೆ.

'ಕೋಲು ಪದಗಳು' ಕೃತಿಯಲ್ಲಿ ತುಂಬ ಜನಪ್ರಿಯವಾದ ಹಾಡುಗಳೂ ಇವೆ. 'ಚಿಕ್ಕಿ ಉಂಗುರಕೆ ನಾರಿ ಮನಸೋತಳೊ', 'ಗಲ್ಲ ಗಲ್ಲೆಂಬುತ, ಗಲ್ಲ ಗೆಜ್ಜೆಯ ಸಾರಂಬುತ' ಹಾಡುಗಳು ಈ ಸಂಗ್ರಹದಲ್ಲಿವೆ. ಎಲ್ಲಂದದಿಂದಲೂ ಪರಿಪುಸ್ಟವಾದ ಈ ಸಂಗ್ರಹ ಜನಪದ ಸಾಹಿತ್ಯದ ಅಧ್ಯಯನದ ಪ್ರಾರಂಭದ ವರ್ಷಗಳಲ್ಲಿ ಪ್ರಕಟವಾದ ಗಮನಾರ್ಹ ಸಂಗ್ರಹವೆನಿಸುತ್ತದೆ.

ಹಿರಿಯ ತಲೆಮಾರಿನ ಜನಪದ ಸಾಹಿತ್ಯ ಸಂಗ್ರಹ ಮತ್ತು ಸಂಪಾದಕರಲ್ಲಿ ಒಬ್ಬರಾದ ಮತಿಘಟ್ಟ ಕೃಷ್ಣಮೂರ್ತಿ ಅವರು ಕೋಲಾಟದ ಹಾಡುಗಳನ್ನು ಸಂಗ್ರಹ ಮಾಡಿದವರು, ಕೋಲಾಟದ ಬಗೆಗೆ ಬರೆದವರು. 'ಕನ್ನಡ ಜನಪದ ಸಾಹಿತ್ಯ ಸಂಪುಟ-೧' ೧೯೭೫ರಲ್ಲಿ ಪ್ರಕಟವಾಗಿದೆ. ಅಲ್ಲಿಯ ಕೆಲವು ಹಾಡುಗಳನ್ನೇ ಪುನಃ ಅವರು 'ಹೊನ್ನ ಹೊತ್ತಿಗೆ' (೨೦೦೭) ಕೃತಿಯಲ್ಲಿ ತೆಗೆದುಕೊಂಡು ಪ್ರಕಟಿಸಿದ್ದಾರೆ. "ಒಂದು ಗುಂಪು ಕೋಲು ಹಿಡಿದು ಕ್ರಮಬದ್ಧವಾಗಿ ಪರಸ್ಪರ ಕೈಲಿರುವ ಕೋಲುಗಳನ್ನು ಬಡಿದು ಹಿತವಾದ ನಾದವನ್ನುಂಟು ಮಾಡುತ್ತಾ ಆ ನಾದಕ್ಕೆ ತಕ್ಕಂತೆ ಶಿಸ್ತಿನಿಂದ ಹೆಜ್ಜೆ ಹಾಕಿಕೊಂಡು ಹಾಡುತ್ತಾ ನರ್ತಿಸುವುದೇ ಕೋಲು ಮೇಳ" (ಹೊನ್ನ ಹೊತ್ತಿಗೆ, ಪು.೧೯) ಎನ್ನುತ್ತಾರೆ. ಹೀಗೆ

ಕೋಲಾಟದ ಸಂಪೂರ್ಣ ಸ್ವರೂಪವನ್ನು, ಅದರ ರಚನೆ, ಭಾಗವಹಿಸುವ ಕಲಾವಿದರು, ಅಲ್ಲಿರುವ ಸಂಗೀತ ಮೇಳ, ಕೋಲಾಟದಲ್ಲಿರುವ ಪ್ರಕಾರಗಳು ಹೀಗೆ ಕೋಲಾಟದ ಬಗೆಗೆ ಸಂಪೂರ್ಣ ಮಾಹಿತಿಗಳನ್ನು ಕೊಟ್ಟವರಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಅವರು ಮೊದಲಿಗರು. "ಕೋಲಾಟದಲ್ಲಿ ಕುಣಿತ ಹಾಡುಗಾರಿಕೆ ಎರಡೂ ಮುಖ್ಯ. ಆಟದ ವರಸೆಗೆ ತಕ್ಕಂತೆ ಮೈಕೈ ಬಳಿಕಿಸಿ, ಬಗ್ಗಿಸಿ, ಬಾಗಿಸಿ ಹಿಂದು ಮುಂದು ಒಲಿದು, ನುಲಿದು, ನಿಂತ ಜಾಗ ಬದಲಾಯಿಸಿಕೊಳ್ಳುತ್ತಾ, ತಾಳ ತಪ್ಪದಂತೆ ಕೋಲು ಕೊಡುತ್ತಾ, ಪದ ಹೇಳುತ್ತಾ, ತೀವ್ರಗತಿಯಲ್ಲಿ ಹೆಜ್ಜೆ ಹಾಕುವುದು ಸುಲಭಸಾಧ್ಯವಲ್ಲ. ಅದಕ್ಕೆ ಶಕ್ತಿಯೂ ಬೇಕು, ಪರಿಶ್ರಮ ಚಾಕಚಕ್ಯತೆಯೂ ಬೇಕು. ಕುಣಿತದ ಜತೆಯಲ್ಲೆ ಪದವನ್ನೂ ಹೇಳುವುದರಿಂದ ಆಯಾಸ ಹೆಚ್ಚುತ್ತದೆ. ಉತ್ತಮವಾದ ಕುಣಿತದ ಜತೆಗೆ ಎಲ್ಲರೂ ಒಕ್ಕೊರಲಿನಿಂದ ಸುಶ್ರಾವ್ಯವಾಗಿ ಪದ ಹೇಳುವುದೂ ಅಗತ್ಯ. ಸಾಮಾನ್ಯವಾಗಿ ಕೋಲಾಟ ಕಲಿಸುವ ತಂಡದ ನಾಯಕ ಒಳ್ಳೆಯ ಹಾಡುಗಾರನೂ ಆಗಿರುತ್ತಾನೆ. ಅವನೇ ಮುಮ್ಮೇಳದಲ್ಲಿ ಹಾಡುವವನು. ಉಳಿದವರು ಹಿಮ್ಮೇಳದಲ್ಲಿ ಹಾಡುವವರು" (ಅದೆ, ಪು.೨೦). ಇನ್ನು ಅವರು ಕೋಲಾಟದ ಪ್ರಕಾರಗಳನ್ನು ಹೇಳುತ್ತಾರೆ, ಅದನ್ನು ಹಿಂದೆಯೇ ಉಲ್ಲೇಖ ಮಾಡಲಾಗಿದೆ. ಕೋಲಾಟದ ಹಾಡುಗಳು ಉತ್ತಮವಾದ ಭಾವಗೀತೆಗಳು ಎಂದೂ ಕೋಲಾಟ ಗಂಡಸರಿಗೆ ಮೀಸಲಾದ ಆಟವಾದರೂ ಅಲ್ಲಲ್ಲಿ ಹೆಂಗಳೆಯರೂ ಮಕ್ಕಳೂ ಕೋಲಾಟವಾಡುತ್ತಾರೆಂದೂ ಬರೆಯುತ್ತಾರೆ.

ಮತಿಘಟ್ಟ ಕೃಷ್ಣಮೂರ್ತಿ ಅವರು ತಾವು ಬಹಳ ಹಿಂದೆಯೇ ಸಂಗ್ರಹಿಸಿಟ್ಟುಕೊಂಡಿದ್ದ ೧೮೧ ಕೋಲಾಟದ ಹಾಡುಗಳನ್ನು 'ಕನ್ನಡ ಜನಪದ ಸಾಹಿತ್ಯ ಭಂಡಾರ-೧' (೧೯೭೩) ಎಂಬ ಸಾವಿರಕ್ಕೂ ಮಿಕ್ಕಪುಟಗಳ ದೊಡ್ಡ ಸಂಗ್ರಹದಲ್ಲಿ ಪ್ರಕಟಿಸಿದ್ದಾರೆ. ಇಷ್ಟೊಂದು ಪ್ರಮಾಣದ ಹಾಡುಗಳನ್ನು ಇನ್ನೂವರೆಗೆ ಯಾರೂ ಪ್ರಕಟಿಸಿದಂತಿಲ್ಲ. ಬೆಂಗಳೂರು ಮೈಸೂರು ಭಾಗದಲ್ಲಿ ಜನಪದ ಹಾಡುಗಳೆಂದು ಪ್ರಸಿದ್ಧವಾದ ಅನೇಕ ಹಾಡುಗಳು ಕೋಲಾಟದ ಹಾಡುಗಳೇ ಆಗಿದ್ದು, ಅವುಗಳನ್ನು ಮೊದಲು ಸಂಗ್ರಹ ಮಾಡಿದವರು ಮತಿಘಟ್ಟ ಕೃಷ್ಣಮೂರ್ತಿ ಎಂಬುದು ನಮಗೆ ಅವರು ಬರೆದುಕೊಂಡ ವಿವರಗಳಿಂದ ತಿಳಿದುಬರುತ್ತದೆ. "ಬಾರಯ್ಯ ಬೆಳದಿಂಗಳೇ, ಚೆಲುವಯ್ಯ ಚೆಲುವೋ, ಮೂಡಲ್ ಕುಣಿಗಲ್ ಕೆರೆ, ಚಾಮುಂಡಿ, ಮಾಯದಂಥ ಮಳೆಯ ಬಂತಣ್ಣ, ಫಲ್ಲು ಫಲ್ಲೆನುತ, ಮುಂಜಾನೆದ್ದು ಕುಂಬಾರಣ್ಣ, ಬಿಲ್ಲು ಬಂಗಾರವೇ, ಜವರಾಯ, ರಂಗನೊಲಿದ, ನಿಂಬೀಯಾ ಬನಾದ ಮೇಗಣ, ರಾಜ ಬಣ್ಣದ ಹಕ್ಕಿ, ಕುದುರೇನೆ ತಂದೀನಿ ಜೀನವ ಬಿಗಿಸಿದಿನಿ, ಯಾಕೆ ಮಾತಡವೊಲ್ಲೆ, ಜೋಗಿಯ ಜೊತೆಗಾತಿ- ಒಂದೇ ಎರಡೇ ಈ ಸಂಕಲದಲ್ಲಿರುವ ನೂರಕ್ಕೂ ಹೆಚ್ಚು ಗೀತೆಗಳನ್ನು ಹಲವು ಮಂದಿ ಗಾಯಕರು ಗ್ರಾಮಫೋನ್ ತಟ್ಟೆಗಳಲ್ಲಿ ಧ್ವನಿಸುರಳಿಗಳಲ್ಲಿ ಹಾಡಿದ್ದಾರೆ. ಈ ಗೀತೆಗಳನ್ನು ಮೇಲಿಂದ ಮೇಲೆ ಆಕಾಶವಾಣಿ, ದೂರದರ್ಶನಗಳಲ್ಲಿ ಬಿತ್ತರಿಸಲಾಗುತ್ತಿದೆ" ('ಹೊನ್ನ ಹೊತ್ತಿಗೆ', ಮೊದಲ ಮಾತು).

ಈ ಕೃತಿಯಲ್ಲಿಯ ಹಾಡುಗಳನ್ನು ಗಮನಿಸಿದರೆ ಇಲ್ಲಿಯ ಹಾಡುಗಳಲ್ಲಿ ಇನ್ನೊಂದು ವಿಶೇಷತೆ ಕಾಣುತ್ತಿದೆ. ಅದು ಕೃಷ್ಣ-ಗೊಲ್ಲತಿಯರ ಸಂವಾದಕ್ಕೆ ಸಂಬಂಧಪಟ್ಟ ಹಾಡುಗಳ

ಸಂಗತಿ. ಬೀದರ ಕಲಬುರಗಿ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ಹಾಡುಗಳು ಮತಿಘಟ್ಟ ಅವರ ಸಂಗ್ರಹದಲ್ಲಿ ದೊರೆಯುತ್ತಿವೆ. 'ಹೊನ್ನ ಹೊತ್ತಗೆ' ಕೃತಿಯ ೧೪-೧೭ರವರೆಗಿನ ನಾಲ್ಕು ಹಾಡುಗಳು ಅಂತಹ ಹಾಡುಗಳಾಗಿವೆ. ಬೀದರ ಕಲಬುರಗಿ ಭಾಗಗಳಲ್ಲಿ ಕೋಲಾಟದ ಜೊತೆಯಲ್ಲೇ 'ಕೃಷ್ಣ-ಗೊಲ್ಲತಿ' ಎಂಬ ಗೀತರೂಪಕವನ್ನು ಅಭಿನಯಿಸುವ ಸಂಪ್ರದಾಯವಿದ್ದು, ಆ ಗೀತರೂಪಕದಲ್ಲೂ ಈ ಹಾಡಿನ ಭಿನ್ನರೂಪಗಳು ದೊರೆಯುತ್ತವೆ. ಅವನ್ನು ಮುಂದೆ ವಿವರಿಸಲಾಗಿದೆ.

೧೪ನೇ ಹಾಡು ಕೃಷ್ಣನ ಸ್ತುತಿಯಾಗಿದೆ:

ಇಂದೀವರ ನಯನೇ ಗೋವಿಂದನ್ಯಾತಕೆ ಬಾರನೇ
ಗೋವಿಂದನ್ಯಾತಕೆ ಬಾರನೇ ಗೋಪಾಲನ್ಯಾತಕೆ ಬಾರನೇ।ಪ।
ಹಿಂಡು ಗೆಣೆಯರ ಕೂಡಿಕೊಂಡು ಚೆಂಡು ಬುಗುರಿನಾಡುತಾ
ಚೆಂಡು ಬುಗುರಿನಾಡುವಂಥ ಚೆಲುವ ಕೃಷ್ಣರಾಯನೇ।

೧೫ ನೇ ಹಾಡು 'ನಿನ್ನ ಮಗನ ಲೂಟಿ ಘನವಮ್ಮಾ'

ಗೊಲ್ಲತಿಯರು ಕೃಷ್ಣನು ತಮಗೆ ಕಾಡುತ್ತಿರುವುದನ್ನು ಕೃಷ್ಣನ ತಾಯಿಯಲ್ಲಿಗೆ ಹೋಗಿ ದೂರುವ ಹಾಡಾಗಿದೆ.

ನಿನ್ನ ಮಗನ ಲೂಟಿ ಘನವಮ್ಮಾ। ಗೋಪಿ
ಕರೆದು ಕೃಷ್ಣಗೆ ಬುದ್ಧಿ ಹೇಳಮ್ಮಾ।
ಮೂರಾಳು ಸ್ತ್ರೀಯರು ಗೋಪಮ್ಮಾ ನಾವು
ನೀರಿಗೆ ಹೋಗುತ್ತಿದ್ದೋ ಗೋಪಮ್ಮಾ
ಹಾರಿ ಹಾರೀ ಬಂದು ಗೋಪಮ್ಮಾ ನಮ್ಮ
ನೀರ ಕೊಡಗಳೊಡೆ ಗೊಪೆಮ್ಮಾ । ನಿನ್ನ ಮಗನs

ಆರಾಳು ಸ್ತ್ರೀಯರು ಗೋಪಮ್ಮಾ ನಾವು
ಮೊಸರು ಮಾರುತ ಬಂದೋ ಗೋಪಮ್ಮಾ
ವಾರೆವಾರೇಲಿ ಬಂದು ಗೋಪಮ್ಮಾ ನಮ್ಮಾ
ಮೊಸರು ಬೆಣ್ಣೀ ತಿಂದ ಗೋಪಮ್ಮಾ । ನಿನ್ನ ಮಗನ

ಹನ್ನೆರಡು ಸ್ತ್ರೀಯರು ಗೋಪಮ್ಮಾ ನಾವು
ತಾನಾವ ಮಾಡುತ್ತಿದ್ದೋ ಗೋಪಮ್ಮಾ
ಸೀರೆನೆಲ್ಲವ ಕದ್ದು ಗೋಪಮ್ಮಾ ನಮ್ಮ
ಕಣ್ಣ ಸನ್ನೆಲಿ ಕರೆದ ಗೋಪಮ್ಮಾ । ನಿನ್ನ ಮಗನ

೧೬ನೇ ಹಾಡು: ಜಾಲ ಗೋಪಾಲ

ಜಾಲs ಗೋಪಾಲ ನಿನ್ನ
ಬಾಲನೇನೇ ಗೋಪ್ಯಮ್ಮಾ ।ಪ।

ಗೋಪ್ಯಮ್ಮ ನೀ ಕೇಳು ಗೋಪೀ ಕಂದಯ್ಯ ಕೇಳು
ಗೋಕುಲದೊಳಗೊಂದ್ ಇರುವೋನೇ ಗೋಪೆಮ್ಮ
ಬಂದು ಬಂದು ನಮ್ಮ ಕೆಲಸವ ಕೆಡಿಸ್ತಾನೆ।
ಕಂದ ಗೋವಿಂದನಾ ಕರಕಳ್ಳೆ ಗೋಪಮ್ಮಾ
ಬಾಲ ಗೋವಿಂದನಾ ಕರಕಳ್ಳೆ ಗೋಪಮ್ಮಾ।

ಕೃಷ್ಣ : ಹಾಲು ಮಾರ್ತಾ ಬಂದಾಳಪ್ಪಾ
ನೀಲಿ ನಾಮದ್ ಗೊಲ್ಲರ್ಹುಡುಗಿ
ಹಾಲು ಮಾರ್‍ದ ಸುಂಕ ಕೇಳಿದ್ರ
ನೀಲಿ ನಾಮ ತೋರ್ಯಳೇ ಜಾಲಾಽ

೧೭ : ನಿಜವೇನೋ ಕೃಷ್ಣ :

ನಿಜವೇನೋ ಕೃಷ್ಣಾ ನಿಜವೇನೋ ಇಂಥ
ದುರುಳ ಬುದ್ಧಿಯ ನಿನಗೆ ತರವೇನೋ
ಕೃಷ್ಣಾ ತರವೇನೋ ।ಪ।
ಹಾಲನ್ನು ಕುಡಿದ್ಯಂತೆ ಗೊಲ್ಲರ ಮನೆ
ಬಾಲೆಯರನೊಡೆದೆಯಂತೆ
ಜಾಲುಗಾರಿಕೆಯಿಂದ ಸಾಲು ಮರವನೇರಿ
ಸೀರೆಯ ವೈದೆಯಂತೆ ನಿಜವೇನೋ ।೧।
ಮೊಸರನ್ನು ಕುಡಿದ್ಯಂತೆ ಗೊಲ್ಲರ ಮನೆ
ಸೊಸೆಯರ ಹೊಡೆದೆಯಂತೇ
ನಸುನಗೆಯಿಂದಲೀ ಹಸನಾದ ಹೆಣ್ಣುಗಳ
ಕುಚಗಳ ಪಿಡಿದೆಯಂತೆ ನಿಜವೇನೋ ।೨।

ಹೀಗೆ ಸಾಗುವ ಸಂವಾದ ರೂಪದಲ್ಲಿಯೇ 'ಕೃಷ್ಣ ಗೊಲ್ಲತಿ' ಗೀತರೂಪಕ ಇದೆ. ಈ ಬಗೆಗೆ ಹೆಚ್ಚಿನ ಅಧ್ಯಯನ ನಡೆಯುವುದು ಅವಶ್ಯವೆನಿಸುತ್ತದೆ.

ಸ್ತುತಿ ಮೊದಲ್ಗೊಂಡು ವೈವಿಧ್ಯಮಯವಾದ ಶೃಂಗಾರದ ಹಾಡುಗಳನ್ನು, ಕೊನೆಯಲ್ಲಿ ಕೋಲುಬಿಡುವಾಗ ಹಾಡುವ ಹಾಡುಗಳನ್ನೂ 'ಹೊನ್ನ ಹೊತ್ತಿಗೆ' ಸಂಗ್ರಹದಲ್ಲಿ ನೋಡಬಹುದಾಗಿದೆ. 'ತಾನು ತಾನಂದನೋ ತಂದನನೋ/ ತಂದನಿ ತಾನಂದನೋ ತಂದನಾನೋ' ಎನ್ನುವ ಸ್ವರಗತಿ ಬಹುಶಃ ದಕ್ಷಿಣ ಕರ್ನಾಟಕದ ಕೋಲಾಟದ ಹಾಡುಗಳಲ್ಲಿ ಪ್ರಸಿದ್ಧವಾಗಿರುವಂತಿದೆ.

ತಾನು ತಾನಂದನೋ ತಂದನನೋ। ತಂ
ದನಿ ತಾನಂದನೋ ತಂದನಾನೋ।
ಸೀಗೆಯ ಗುಡ್ಡದಾ ಸಿರಿಯಾ ನೋಡುವ ಬನ್ನಿ
ನಡು ಗುಡ್ಡದೊಳಗೇ ತಿರುಶೂಲಽ।

ತಂದನಿ ತಾನಂದನೋ ತಂದನಾನೋ।
ಸೀಗೇಯ ಗುಡ್ಡದಾಗೇ ಸಿರಿ ಗಂಧದ್ ಮರನ್ಹುಟ್ಟಿ
ಬೇಲೂರಿಗ್ ಬೇರು ಹರಿದವು।
ತಂದನಿ ತಾನಂದನೋ ತಂದನಾನೋ।
ಬೇಲೂರಿಗೆ ಬೇರು ಹರಿದಾವ್ ಬಸವನ್ಹಳ್ಳಿ
ಓರೇಗೇ ಮಗ್ಗು ಸುರುದವೇ ।
ತಂದನಿ ತಾನಂದನೋ ತಂದನಾನೋ।

ಹೀಗೆ ಈ ಸ್ವರಗತಿ ಸುಮಾರಾಗಿ ಹೆಚ್ಚು ಕಡೆ ಬರುವುದು ಕಾಣುತ್ತದೆ. ಕೋಲು ಬಿಡುವ ಹಾಡೊಂದನ್ನು ಮತಿಘಟ್ಟ ಕೃಷ್ಣಮೂರ್ತಿ ಅವರು ಕೊಡುತ್ತಾರೆ:

ಕೋಲೇ ಕೋಲೇ ಕೋಲೇ ಕೋಲನ್ನ ಕೋಲೆ
ಕೋಲೇ ಮಾಣಿಕದ ರತುನದ ಕೋಲೇ।ಪ।

ಹತ್ತು ಸಾವಿರ ಕೋಲ ಎತ್ತಿನ ಮೇಲ್ಹೇರಿಕಂಡು
ಮತ್ತೆ ರಾತುರಿಕೇ ಬರುತೀವಿ ಕೋಲೇ
ಮತ್ತೆ ರಾತುರಿಕೇ ಬರುತೀವಿ ಭೂಮಿತಾಯೀ
ನಮ್ಮೊಂದಿಗಾಡಿ ದಣಿದೆಯ ಕೋಲೇ – ಕೋಲೇ ಕೋಲೇ

ಬಸವಣ್ಣ ಹುಟ್ಟಲಿ ಹೊಸಕೋಟೆ ಕಟ್ಟಲಿ
ರಸಬಾಳೆ ಕಬ್ಬು ಬೆಳೆಯಲಿ ಕೋಲೇ
ರಸಬಾಳೆ ಕಬ್ಬು ಬೆಳೆಯಲಿ ನಮ್ಮೂರ
ಬಸವನ ತೇರು ಹರಿಯಲಿ ಕೋಲೇ– ಕೋಲೇ ಕೋಲೇ

ಕೋಲಾಟದ ವೈವಿಧ್ಯತೆಯನ್ನು ಅರಿಯಲು ಸಹಾಯವಾಗುವ ಒಂದು ಸಾಹಿತ್ಯ ಮಾದರಿ ಕ್ಯಾತನಹಳ್ಳಿ ರಾಮಣ್ಣನವರ **'ಬೀದರ ಜಿಲ್ಲೆಯ ಜನಪದ ಗೀತೆಗಳು'** (೧೯೭೬)ಎಂಬ ಕೃತಿಯಲ್ಲಿ ದೊರೆಯುತ್ತದೆ. ಅವರು ಈ ಕೃತಿಯಲ್ಲಿ 'ಕೋಲು ಪದಗಳು' ಎಂಬ ಒಂದು ಭಾಗವನ್ನು ಕೊಟ್ಟಿದ್ದು, ಅದರಲ್ಲಿ 'ರಾಮಾಯಣ', 'ಕೃಷ್ಣಲೀಲೆ' ಎಂಬ ಎರಡು ಸಂವಾದ ರೂಪದ ದೀರ್ಘ ಹಾಡುಗಳಿವೆ. ಪ್ರಸ್ತಾವನೆಯಲ್ಲಿ ಈ ಕೆಲವು ಮಾತುಗಳನ್ನು ಬರೆದಿದ್ದಾರೆ: "ಬೀದರ ಜಿಲ್ಲೆಯ ದಕ್ಷಿಣ ದಿಕ್ಕಿನ ಕಡೆಯ ಹಳ್ಳಿ ಹಳ್ಳಿಖೇಡ ಆ ಸುತ್ತಿನಲ್ಲೆಲ್ಲ ಕೋಲಾಟದಲ್ಲಿ ತುಂಬ ಪ್ರಸಿದ್ಧವಾದ ಊರು. ಇವರ ಕೋಲಾಟದ ವೈಶಿಷ್ಟ್ಯಗಳು ಇವು: ಸ್ಪರ್ಧೆಗಳು, ರಾಮಾಯಣ ಹಾಗೂ ಕೃಷ್ಣಲೀಲೆಗಳನ್ನು ಆಧರಿಸಿ ಈ ಭಾಗದಲ್ಲಿ ಬಹಳವಾಗಿ ಪ್ರಚಲಿತವಾಗಿರುವ ಹಾಡುಗಳನ್ನು ಮಾತ್ರ ಬಳಸುವಿಕೆ, ಬಿಡಿ ಹಾಡುಗಳ ಅಪರೂಪದ ಬಳಕೆ, ನಡುನಡುವೆ ಪೌರಾಣಿಕ ನಾಟಕಗಳ ಧಾಟಿಯಲ್ಲಿ ಸಂಭಾಷಣೆಗಳು" (ಪ್ರ.ಪು.೩೦).

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕೋಲಾಟದ ಮುಖ್ಯ ವಿಷಯ ಕೃಷ್ಣಗೊಲ್ಲತಿಯರಿಗೆ ಸಂಬಂಧಪಟ್ಟದ್ದು. ಕೃಷ್ಣನನ್ನು ಆರಾಧಿಸುವ ಎಲ್ಲ ಸಮಾಜದವರು ತಪ್ಪದೇ ಕೋಲಾಟವನ್ನು ಹಾಕುತ್ತಾರೆ. ಇಂತಹ ಸಮಾಜದಲ್ಲಿ ಮಹಿಳೆಯರ ತಂಡಗಳೂ

ಇರುತ್ತವೆ. ಆ ವಿಷಯಕ್ಕೆ ಸಂಬಂಧಿಸಿ, ಕೋಲಾಟದಲ್ಲಿ ಇಡೀ ಹಾಡನ್ನೇ ಹಾಡುವುದು; ಜೊತೆಗೆ ರಾಮಾಯಣದಲ್ಲಿ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗುವ ದೃಶ್ಯ; ಇವೆರಡರಲ್ಲೂ ಸಂವಾದ ರೂಪದ ಗೀತರೂಪಕವನ್ನು ನಾವು ಗಮನಿಸುತ್ತೇವೆ. ಕ್ಯಾತನಹಳ್ಳಿ ರಾಮಣ್ಣನವರು ಈ ಕೋಲಾಟದ ಪದಗಳನ್ನು ಸಂಗ್ರಹಿಸಿ, ಒಂದಿಷ್ಟು ವಿವರಣೆ ಕೊಟ್ಟರೆ ಚೆನ್ನಾಗಿರುತ್ತಿತ್ತು. ಅವರ ಉದ್ದೇಶ ಬೀದರ ಜಿಲ್ಲೆಯ ಹಾಡುಗಳ ಸಂಗ್ರಹವಾದ್ದರಿಂದ ಒಂದೊಂದೂ ಕಲೆಯ ಬಗ್ಗೆ ವಿವರಿಸಲು ಅಲ್ಲಿ ಅವಕಾಶ ಇಲ್ಲದಿರುವುದು ಒಂದು ಕಾರಣವಾದಂತಿದೆ.

ಬೀದರ ಜಿಲ್ಲೆಯಲ್ಲಿ ಮತ್ತು ಬೀದರ ಜಿಲ್ಲೆಗೆ ಹತ್ತಿಕೊಂಡಿರುವ ಕಲಬುರಗಿ ಜಿಲ್ಲೆಯ ಕೆಲವು ಊರುಗಳಲ್ಲಿ ಕೋಲಾಟದ ಜೊತೆಗೆ 'ಕೃಷ್ಣಗೊಲ್ಲತಿ' ಹಾಗೂ 'ರಾಮ–ಲಕ್ಷ್ಮಣ' (ರಾಮಾಯಣ) ಗೀತರೂಪಕಗಳನ್ನು ಕೋಲಾಟ ಕಲಿತ ಯುವಕರಿಗೆ ಹೊರತುಪಡಿಸಿ ಮತ್ತೆ ಕೆಲವು ಹುಡುಗರಿಗೆ ಕಲಿಸಿರುತ್ತಾರೆ. ಊರಿನ ಒಂದು ಸ್ಥಳದಲ್ಲಿ ಒಂದು ದಮ್ಮು ಕೋಲಾಟವಾಡಿದ ನಂತರ, ಕೋಲಾಟದ ಹುಡುಗರು ತಾವು ನಿಂತಂತೆಯೇ ದುಂಡಗೆ ಕುಳಿತುಕೊಳ್ಳುತ್ತಾರೆ. ನಡುವೆ ಇರುವ ಸಂಗೀತಗಾರರ ತಂಡ ಹಾಗೂ ಕುಳಿತಿರುವ ಕೋಲಾಟದ ಹುಡುಗರ ನಡುವೆ ಇರುವ ಸ್ಥಳದಲ್ಲಿ ಸುತ್ತಲೂ ತಿರುಗುತ್ತ ಗೀತರೂಪಕಗಳನ್ನು ಪ್ರದರ್ಶನ ಮಾಡುತ್ತಾರೆ. ಗೀತರೂಪಕದ ಒಂದು ದೃಶ್ಯ, ಅಥವಾ ಕೆಲವು ದೃಶ್ಯಗಳನ್ನು ಪ್ರದರ್ಶನ ಮಾಡಿದ ನಂತರ ಮತ್ತೆ ಕೋಲಾಟ ಪ್ರಾರಂಭ ಮಾಡುತ್ತಾರೆ. ಹೀಗೆಯೇ ಒಂದು ದಮ್ಮು ಕೋಲಾಟ, ಇನ್ನೊಂದು ದಮ್ಮು ಗೀತರೂಪಕಗಳ ಪ್ರದರ್ಶನ ಆಗುತ್ತ ಹೋಗುತ್ತದೆ. ಅದಕ್ಕಾಗಿ ಗೀತರೂಪಕಗಳನ್ನೂ ಕೋಲಾಟದ ಭಾಗವಾಗಿಯೇ ಪ್ರದರ್ಶನ ಮಾಡುತ್ತ ಬಂದಿರುವುದು ತಿಳಿದುಬರುತ್ತದೆ. ಇವತ್ತಿಗೂ ಬೀದರ ಜಿಲ್ಲೆಯಲ್ಲಿ ಕೋಲಾಟದ ಪ್ರದರ್ಶನ ಈ ಗೀತರೂಪಕಗಳ ಜೊತೆಗೇ ನಡೆಯುತ್ತದೆ.

ನಾನು (ವೀರಣ್ಣ ದಂಡೆ) ೧೯೮೩ ರಲ್ಲಿ ಸಂಗ್ರಹಿಸಿದ್ದ 'ಕೃಷ್ಣ–ಗೊಲ್ಲತಿ' ಹಾಗೂ 'ರಾಮ–ಲಕ್ಷ್ಮಣ' ಗೀತರೂಪಕಗಳ ಪಠ್ಯಗಳನ್ನು ೧೯೮೭ರಲ್ಲಿ **'ಬೀದಿ ಬಯಲಾಟಗಳು'** ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಒಂದು ಆಶ್ಚರ್ಯದ ಸಂಗತಿ ಎಂದರೆ, ಆಗಲೇ ಸುಮಾರು ೧೬–೧೭ವರ್ಷಗಳ ಹಿಂದೆ ನಮ್ಮೂರಿನಲ್ಲಿ 'ರಾಮ–ಲಕ್ಷ್ಮಣ' ಗೀತರೂಪಕವನ್ನು ಕಲಿಸಿದ್ದ ಲಾಲಪ್ಪನನ್ನು ಶೋಧಿಸಿ, ಅವನಿಂದ ಈ ಗಿತರೂಪಕವನ್ನು ಸಂಗ್ರಹಿಸಬೇಕೆಂದು ಹೊರಟವನು, ಕ್ಯಾತನಹಳ್ಳಿ ರಾಮಣ್ಣನವರು ಯಾವ ವಕ್ತಾರರಿಂದ ಈ ಗೀತೆಗಳನ್ನು ಸಂಗ್ರಹಿಸಿದ್ದರೋ ಅದೆ ವಕ್ತಾರರು ಹಳ್ಳಿಖೇಡ ಗ್ರಾಮದಲ್ಲಿ ದೊರೆತರು. ಮತ್ತೆ ಅವರಿಂದ ಎರಡೂ ಗೀತೆಗಳನ್ನು ಸಂಗ್ರಹಿಸಿದೆ. ಲಾಲಪ್ಪನನ್ನೂ ಭೇಟಿಯಾಗಿ ಅವನಿಂದಲೂ ಎರಡೂ ಗೀತೆಗಳನ್ನು ಸಂಗ್ರಹಿಸಿದೆ. ಹೀಗೆ ಲಾಲಪ್ಪ ಮತ್ತು ಹಳ್ಳಿಖೇಡದ ರಾಚಯ್ಯ ಮಠಪತಿ ಮತ್ತು ಸಿದ್ದಣ್ಣ ಬಸವತೀರ್ಥಪ್ಪ ಭೂರಿ ಅವರಿಂದ ಸಂಗ್ರಹಿಸಿದ ಗೀತೆಗಳ ಎರಡೆರಡು ಪಠ್ಯಗಳನ್ನು ಎದುರಿಗೆ ಇಟ್ಟುಕೊಂಡು ಸಂಪಾದಿಸುವ ಕೆಲಸವನ್ನು ನಾನು ಮಾಡಿದ್ದೇನೆ. ಈ ಗೀತರೂಪಕಗಳನ್ನು ಬೀದರ ಜಿಲ್ಲೆಯಲ್ಲಿ ಮತ್ತು ಕಲಬುರಗಿ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಕೋಲಾಟದ ಜೊತೆಗೆ ಆಡುವ ಪದ್ಧತಿ ಇವತ್ತಿಗೂ ಇದೆ.

ನನ್ನ (ವೀರಣ್ಣ ದಂಡೆ) ಹುಟ್ಟೂರು ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಸಲಗರ (ವ್ಹಿ.ಕೆ.) ಎಂಬ ಗ್ರಾಮ. ೧೯೫೮-೬೦ರ ಸುಮಾರು, ಅಂದರೆ ಬಾಲ್ಯದ ದಿನಗಳಲ್ಲಿ ನಾನು ಗಮನಿಸಿದಂತೆ ನಮ್ಮೂರು ಒಂದು ಜನಪದ ಕಲಾವಿದರ ಆಗರವಾಗಿ ಹೋಗಿತ್ತು. ಪ್ರತಿ ಹಬ್ಬಹುಣ್ಣಿವೆಗೆ ನಮ್ಮೂರ ಹಿರಿಯರು ಏನಾದರೊಂದು ಜನಪದ ಕಲೆಯ ಪ್ರದರ್ಶನವನ್ನು ಮಾಡಿಸುತ್ತಿದ್ದರು. ಪ್ರತಿ ಪಂಚಮಿಗೆ ಕೋಲಾಟ ಕಲಿಯುವುದು ಸಾಮಾನ್ಯ. ನಮ್ಮೂರಿನ 'ಮೇಲಿನ ಕೇರಿ' ಹಾಗೂ 'ಕೆಳಗಿನ ಕೇರಿ'ಯ ಜನಪದ ಕಲಾವಿದರಲ್ಲಿ ಸಾಮಾನ್ಯವಾಗಿ ಯಾವಾಗಲೂ ಸ್ಪರ್ಧೆ ಇರುತ್ತಿತ್ತು. ಬಸವಣ್ಣನ ಜಾತ್ರೆಗೆ ಅವರೊಂದು ಬಯಲಾಟ ಕಲಿತರೆ ಇವರೊಂದು ಬಯಲಾಟ ಕಲಿಯುತ್ತಿದ್ದರು. ಶ್ರಾವಣ ಮಾಸದಲ್ಲಿ ಎರಡೂ ಕೇರಿಯ ಭಜನೆಯ ಗುಂಪುಗಳು ಸ್ಪರ್ಧೆಗೆ ಇಳಿಯುವುದು ಸಾಮಾನ್ಯವಾಗಿತ್ತು. ಮೋಹರಂ ಹಬ್ಬಕ್ಕೂ ಕೂಡ ಎರಡೂ ಕೇರಿಗಳಲ್ಲಿ ಪಂಜಾ ಕೂಡುತ್ತಿದ್ದವು; ಇವತ್ತಿಗೂ ಕೂಡುತ್ತವೆ. ಎರಡೂ ಕೇರಿಗಳಲ್ಲಿ ಮೋಹರಂ ಹಾಡುಗಳು, ಲೇಜಿಮ್ ಮೇಳಗಳ ಧ್ವನಿಗಳು ಮೊಳಗುತ್ತಿರುತ್ತವೆ. ಪಂಚಮಿಗೆ ಕೋಲಾಟವಾಡುವುದು ಸಾಮಾನ್ಯ.

ಬಹುಶಃ ೧೯೬೭ನೇ ವರ್ಷ ಇರಬೇಕು. ಕೆಳಗಿನ ಕೇರಿಯವರು ಕೋಲಾಟ ಕಲಿತಿದ್ದರು. ಮೇಲಿನ ಕೇರಿಯವರು- ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿನ ಯರಬಾಗಾ ಎಂಬ ಗ್ರಾಮದ ಹರಿಜನ ಕೇರಿಯ ಲಾಲಪ್ಪ ಎನ್ನುವವರನ್ನು ಕೋಲಾಟ ಕಲಿಯಲು ಕರಸಿದ್ದರು. ಆದರೆ ಆತ ಕೋಲಾಟದ ಬದಲಿಗೆ, ಕೋಲಾಟವೆಂದೇ ಹೇಳಿ, ಕೋಲಾಟದ ಜೊತೆಗೆ ಪ್ರದರ್ಶನ ಮಾಡುವ 'ರಾಮ-ಲಕ್ಷ್ಮಣ' (ರಾಮಾಯಣ) ಗೀತರೂಪಕವನ್ನು ಯುವಕರಿಗೆ ಕಲಿಸಿದ್ದ. ಆತ ಕಲಿಸಬೇಕಾದದ್ದು ಕೋಲಾಟವನ್ನು. ಅದರ ಬದಲಿಗೆ ಈ ಗೀತರೂಪಕ ಕಲಿಸಿದ್ದ. ಹೀಗೆ ಕಲಿಸಲು ಕಾರಣವೆಂದರೆ, ಬೀದರ ಜಿಲ್ಲೆಯಲ್ಲಿ 'ರಾಮ-ಲಕ್ಷ್ಮಣ' (ರಾಮಾಯಣ) ಮತ್ತು 'ಕೃಷ್ಣ-ಗೊಲ್ಲತಿ' ರೂಪಕಗಳನ್ನು ಕೋಲಾಟದ ಜೊತೆಯಲ್ಲಿಯೇ ಪ್ರದರ್ಶನ ಮಾಡುವ ಪದ್ಧತಿಯಿದ್ದು, ಅವನ್ನು ಕೋಲಾಟದ ಪದಗಳೇ ಎನ್ನುತ್ತಾರೆ. ಲಾಲಪ್ಪನೂ ಅದನ್ನು ಕೋಲಾಟವೆಂದೆ ಕಲಿಸಿದ್ದ. ಹೀಗಾಗಿ ಪಂಚಮಿಯಂದು ಪ್ರದರ್ಶನದ ದಿನ ಎರಡೂ ತಂಡಗಳು ಎದುರಾಗಿ, ಕೆಳಗಿನ ಕೇರಿಯವರು ಕೋಲಾಟವೆಂದು ಒಂದು ದಮ್ಮು ಕೋಲಾಟವಾಡಿದರೆ, ಮೇಲಿನ ಕೇರಿಯವರು ಒಂದು ದಮ್ಮು 'ರಾಮ-ಲಕ್ಷ್ಮಣ' (ರಾಮಾಯಣ) ರೂಪಕವನ್ನು ಆಡಿಸಿದರು. ಸ್ಪರ್ಧೆ ಅನೇಕ ಗಂಟೆಗಳ ವರೆಗೆ ಹೀಗೆಯೇ ನಡೆದಿತ್ತು.

ಮರುವರುಷ ಕೆಳಗಿನ ಕೇರಿಯವರು ಕೋಲಾಟ ಕಲಿತಿರಲೇ ಇಲ್ಲ. ಹೀಗಾಗಿ 'ರಾಮ-ಲಕ್ಷ್ಮಣ' ಗೀತರೂಪಕ ಒಂದನ್ನೇ ಒಂದು ದಿನ ಹಗಲು, ಇನ್ನೊಂದು ದಿನ ಇಡೀ ರಾತ್ರಿ ಆಡಿಸಿದರು. ಮಾರನೆಯ ವರುಷ ಈ ಗೀತರೂಪಕ ಕಲಿಸಲು ಲಾಲಪ್ಪ ಬರಲಿಲ್ಲ. ನಮ್ಮೂರಿನ ಮೇಲಿನ ಕೇರಿಯ ಹಿರಿಯರೇ ಗೀತರೂಪಕಕ್ಕೆ ಮಾತುಗಳನ್ನು ಸೇರಿಸಿ ಪ್ರದರ್ಶನ ಮಾಡಿದರು. ಹೀಗೆ ಕೋಲಾಟದೊಂದಿಗೆ ಆಡುವ ಗೀತರೂಪಕಗಳನ್ನು ಸ್ವತಂತ್ರವಾಗಿಯೂ ಪ್ರದರ್ಶಿಸಬಹುದು ಎಂಬ ಸಾಧ್ಯತೆ ಇಲ್ಲಿ ಕಾಣಿಸಿಕೊಂಡಿತು. ಹೀಗಾಗಿಯೇ ನಾನು ಕೋಲಾಟದ ಜೊತೆಗೆ ಆಡುವ ಈ ಗೀತರೂಪಕಗಳು ಮೂಲತಃ

ಸ್ವತಂತ್ರವಾಗಿ ಬೀದಿಗಳ ಮೇಲೆ ಪ್ರದರ್ಶನ ಮಾಡುತ್ತಿದ್ದ ರೂಪಕಗಳಾಗಿರಬೇಕೆಂದು ಭಾವಿಸಿ, **'ಬೀದಿ ಬಯಲಾಟಗಳು'** ಎಂಬ ಹೆಸರಿನಲ್ಲಿ ಅವನ್ನು ಪ್ರಕಟಿಸಿದೆ. ಪ್ರಸ್ತಾವನೆಯಲ್ಲಿ ಈ ಎರಡೂ ಗೀತ ರೂಪಕಗಳು ಕೋಲಾಟದಿಂದ ಪ್ರತ್ಯೇಕವಾದ, ಬಯಲಾಟಗಳ ಪಠ್ಯಗಳು ಎಂದು ವಿವರಿಸಿದೆ.

'ಕೃಷ್ಣ–ಗೊಲ್ಲತಿ' ಗೀತರೂಪಕದ ಧಾಟಿಗಳು ಕೋಲಾಟದ ಹಾಡುಗಳ ಧಾಟಿಗಳನ್ನು ಹೋಲುತ್ತವೆ. ಪಾತ್ರಧಾರಿಗಳಿಲ್ಲದೆಯೂ ಕೋಲು ಹಾಕುವಾಗಲೇ ಬರೀ ಹಾಡಿನ ರೂಪದಲ್ಲಿ ಈ ರೂಪಕದ ಹಾಡುಗಳನ್ನು ಹಾಡಿಕೊಳ್ಳಬಹುದಾಗಿದೆ. ಇಡೀ ಗೀತರೂಪಕ ಅತ್ಯಂತ ರಂಜನೀಯವಾಗಿದೆ. **'ಕೃಷ್ಣ –ಗೊಲ್ಲತಿ'** ರೂಪಕವು ಸಂಭಾಷಣಾ ರೂಪದಲ್ಲಿದೆ.

ಕೃಷ್ಣ : ಹಾಲ ಮಾರುತ ಹೊಂಟಾಳಿವಳು
ಹವಳದ ನಾಮದ ಗೊಲ್ಲರ ಹುಡಗಿ
ಹಾಲಿನ ಸುಂಕ ಕೊಟ್ಹೋಗಂದರ
ಬಾಲ ಸತ್ತಂಗಳುಹುವಳಿವಳು
ಗೊಲ್ಲತಿ : ಹಾಲ ಮಾರುತ ನಾ ಹೋದೇನ
ಹಾರರಗೇರ್‍ಯಾಗ ಇವನೇ ಬಂದ
ಹಾಲಿನ ಸುಂಕ ಕೊಟ್ಹೋಗಂತ
ಇಪರೀತ ಕಾಡುವನಮಮ
ಕೃಷ್ಣ : ಮಸರ ಮಾರುತ ಹೊಂಟಾಳಿವಳು
ಕುಸಲದ ನಾಮದ ಗೊಲ್ಲರ ಹುಡಗಿ
ಮಸರಿನ ಸುಂಕ ಕೊಟ್ಹೋಗಂದರ
ಬಾಲ ಸತ್ತಂಗ ಅಳುಹುವಳಿವಳು
ಗೊಲ್ಲತಿ : ಮಸರ ಮಾರುತ ನಾ ಹೋದೇನ
ಕುಸಲದ ಗೇರ್‍ಯಾಗ ಇವನೇ ಬಂದ
ಮಸರಿನ ಸುಂಕ ಕೊಟ್ಹೋಗಂತ
ಇಪರೀತ ಕಾಡುವನಮಮ

ಗೊಲ್ಲತಿ : ಅಯ್ಯೋ ಹಾಲ ಎರದೆನೊ ರಂಗ
ಎನ್ನ ಬಾಲನೆ ದಾರಿಯ ಬಿಡುವೊ
ಕೃಷ್ಣ : ನಿನ್ನ ಬಾಲನಲ್ಲೆ ನಾರಿ
ನಿನ್ನ ಬಾಲನ ತಂದಿಯು ನಾನೆ
ಗೊಲ್ಲತಿ : ಅಯ್ಯೋ ಮಸರ ಎರದೆನೋ ರಂಗ
ಎನ್ನ ಅರಸನೆ ದಾರಿಯ ಬಿಡುವೊ
ಕೃಷ್ಣ : ನಿನ್ನ ಅರಸನಲ್ಲೆ ನಾರಿ
ನಿನ್ನ ಮನಿಯ ಪುರುಷ ನಾನೆ

ಕೃಷ್ಣ : ಗೊಲ್ಲತಿ ಬಿಡಲಾರೆ ನಿನಗ
ಬಿಡಲಾರೆ ನಿನಗ ಸೆಳಿವೆನೆ ಸೆರಗ
ಸೆಳಿವೆನೆ ಸೆರಗ ಸೆಳಿವೆನೆ ಸೆರಗ
ಗೊಲ್ಲತಿ ಬಿಡಲಾರೆ ನಿನಗ
ಗೊಲ್ಲತಿ : ಕೃಷ್ಣ ತರವಲ್ಲೊ ನಿನಗ
ತರವಲ್ಲೊ ನಿನಗ ಸೆಳಿವದು ಸೆರಗ
ಸೆಳಿವದು ಸೆರಗ ಸೆಳಿವದು ಸೆರಗ
ಕೃಷ್ಣ ತರವಲ್ಲೊ ನಿನಗ

ಗೊಲ್ಲತಿಯರು : (ದೇವಕಿಯಲ್ಲಿಗೆ ಬಂದು ದೂರುವರು)
ಹಗರಾಣಿ ಮಾಡಿದನಮ್ಮ
ನಿನ್ನ ಮಗ ಭಾಳ ದುರುಳ ಗೋಪೆಮ್ಮ
ಹಗರಾಣಿ ಮಾಡಿದ ಬಿಗದಪ್ಪಿ ಕೊಂಡಿದ
ಅಗರ ಕುಚದ ಮ್ಯಾಲೆ ಉಗರೂರಿ ಪೋದನಮ್ಮ
ಹಗರಾಣಿ ಮಾಡಿದ ಹಗರಾಣಿ ಮಾಡಿದ
ಹಗರಾಣಿ ಮಾಡಿದನಮ್ಮ
ನಿನ್ನ ಮಗ ಭಾಳ ದುರುಳ ಗೋಪೆಮ್ಮ ॥

(ಬೀದಿ ಬಯಲಾಟಗಳು, ಪು. ೮-೧೧)

೧೯೮೧ ರಲ್ಲಿ ಡಾ. ಬಸವರಾಜ ಮಲಶೆಟ್ಟಿ ಅವರ 'ಕೋಲಾಟದ ಪದಗಳು' ಎಂಬ ಕೃತಿ ಪ್ರಕಟಗೊಂಡಿದೆ. "ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಈ ಹಾಡುಗಳನ್ನು ಸಂಗ್ರಹಿಸಲಾಗಿದೆ. ಕರ್ನಾಟಕದ ತುಂಬೆಲ್ಲ ಪ್ರಚಾರದಲ್ಲಿರುವ ಕೋಲಾಟ ಈ ಭಾಗದ ಗಂಡಸರ ಪ್ರಮುಖ ಮನರಂಜನೆಯಾಗಿದೆ. ದಸರೆಯೆಂದು ಈ ಕೋಲಾಟಕ್ಕೆ ಹೆಚ್ಚಿನ ಕಳೆ ಏರುತ್ತದೆ. ...ಇಲ್ಲಿಯ ಕೋಲಾಟದ ಎರಡು ವಿಧಗಳು: ೧. ಸುತ್ತು ಕೋಲು: ವಿಲಂಬಿತ ಲಯದಲ್ಲಿ ಪದಹಾಡುತ್ತ ಅದರ ಲಯಕ್ಕೆ ತಕ್ಕಂತೆ ಕೋಲು (ಪೆಟ್ಟು)ಹಾಕುತ್ತ ತಿರುಗುವುದು ಸುತ್ತುಗೋಲು. ಗುಂಪಿನ ನಾಯಕ ಹಾಡಿದ್ದನ್ನು ಇತರರು ಅನುಕರಿಸುತ್ತಾರೆ. ೨. ಕೋಪಗೋಲು : ಪದ ಮುಗಿದ ಮೇಲೆ ದೃತ್ಗತಿಯಲ್ಲಿ ಕುಣಿಯುವ ಕುಣಿತ. ಈ ಸಂದರ್ಭದ ದೃತ್ ಲಯಕ್ಕೆ ಹೊಂದುವ ಬೇರೆಬೇರೆ ಪದದ ತುಂಡುಗಳಿರುತ್ತವೆ. ಇವಕ್ಕೆ 'ಕೋಪ' ಎಂದು ಹೆಸರು. ಮೇಳದಲ್ಲಿ ಸಾಮಾನ್ಯವಾಗಿ ಹನ್ನೆರಡು ಜನರಿರುತ್ತಾರೆ. ಈ ಸಂಖ್ಯೆ ಒಮ್ಮೊಮ್ಮೆ ಹದಿನಾರು ಹದಿನೆಂಟಕ್ಕೆ ಏರುವುದೂ ಉಂಟು. ಬಿಳಿಯ ಕಚ್ಚೆಪಂಚೆ, ಬಣ್ಣದ ಬನಿಯನ್, ತಲೆಗೆ ಬಣ್ಣದ ವಸ್ತ್ರ ಇವಿಷ್ಟು ಯೂನಿಫಾರ್ಮ್"(ಪೀಠಿಕೆ). ಇವು ಡಾ. ಮಲಶೆಟ್ಟಿ ಅವರು ತಮ್ಮ ಕೃತಿಗೆ ಬರೆದ ಒಂದು ಪುಟದ ಪೀಠಿಕೆಯಲ್ಲಿ ಹೇಳಿದ ಮಹತ್ವದ ಸಂಗತಿಗಳಾಗಿವೆ. ಒಂದು ನೂರು ಪುಟಗಳ ಈ ಕೃತಿಯಲ್ಲಿ ಒಟ್ಟಿಗೆ ೧೦೮ ಹಾಡುಗಳಿವೆ. ೧. ದೈವ, ೨. ಪ್ರಣಯ, ೩. ತಮಾಶೆ, ೪. ಸಂಕೀರ್ಣ ಎಂಬ ನಾಲ್ಕು ವಿಧಗಳಲ್ಲಿ ಇಲ್ಲಿಯ ಹಾಡುಗಳನ್ನು ವಿಭಾಗಿಸಿ ಕೊಡಲಾಗಿದೆ.

ಇಲ್ಲಿಂಯ ಹಾಡುಗಳಲ್ಲಿ ಕೆಲವೊಂದು ಹೈದ್ರಾಬಾದ ಕರ್ನಾಟಕದ ಉಳಿದೆಡೆ ಪ್ರಚಾರದಲ್ಲಿರುವ ಹಾಡುಗಳೂ ಇವೆ. ಕೋಲಾಟ ಪ್ರಾರಂಭದಲ್ಲಿ ಹೈ.ಕ.ದಲ್ಲಿ ಧೀಮಗತಿಯಲ್ಲಿ ನಿಂತಲ್ಲಿಯೇ ಕೋಲು ಹಾಕುತ್ತ ಹಾಡುವ ಹಾಡು ಇದು:

ನೀ ಅಳಬ್ಯಾಡೊ ನನ ಕಂದಾ
ನಾ ಸಂತಿಗಿ ಹೋಗಿ ಬರತೇನೊ । ನೀ ಅಳಬ್ಯಾಡೊ...
ನಾ ಸಂತಿಗಿ ಹೋಗಿ ಬರತೇನೋ। ನಿನಗ
ಮಂಡಾಳ್ಳ ಉಂಡಿ ತರತೇನೋ । ನೀ ಅಳಬ್ಯಾಡೊ...
ಪ್ಯಾಟಿಗಿ ಹೋಗಿ ಬರತೇನೋ । ನಿನಗ
ಮಕಮಲ್ಲಿನಂಗಿ ತರತೇನೋ । ನೀ ಅಳಬ್ಯಾಡೊ...

ಹಾಡು ಮುಗಿದ ನಂತರ ದೃತ್‌ಲಯದಲ್ಲಿ ಅನ್ನುವ ಚುಟುಕು:

ಗಾಳಿ ದೂಳಿಯೆಂಬುದು ಮಳಿಯಲ್ಲವೆ। ಇದು
ಹರಿಹಾರ ಮುಂದಿನ ಹೊಳಿಯಲ್ಲವೆ
ಕೊಟ್ಟೂರ ಸಂತಿ ಪಾಡಲ್ಲವೇ। ಅಲ್ಲಿ
ರೂಪಾಯ್ಕ ಒಂದು ಕಂಬಳೆಲ್ಲವೆ

ಕರ್ನಾಟಕದ ತುಂಬ ಕಾಣಿಸುವ ಹಾಡು ಇದು :

ಮಲ್ಲಿಗೆ ಮಾತನಾಡ
ಸ್ಯಾವಂತಿಗಿ ಹೂವೇನ ಮಾತನಾಡ।
ಒಬ್ಬನ ಕಟ್ಟಿದ್ದೆ ಒಬ್ಬನ್ನ ಬಿಟ್ಟಿದ್ದೆ
ಒಬ್ಬನ್ನ ಕರಕೊಂಡು ಒಳಗಿದ್ದೆ
ಯಾವನ್ನ ಕಟ್ಟಿದ್ದೆ ಯಾವನ್ನ ಬಿಟ್ಟಿದ್ದೆ
ಯಾವನ್ನ ಕರಕೊಂಡು ಒಳಗಿದ್ದೆ
ಆಕಳ ಕಟ್ಟಿದ್ದೆ ಕರುವನ್ನು ಬಿಟ್ಟಿದ್ದೆ
ಹಾಲಸ್ವಾರಿ ಕರಕೊಂಡ ಒಳಗಿದ್ದೆ ।೧।

ಒಬ್ಬನ್ನ ಕುಂದ್ರಿಸಿದ್ದೆ ಒಬ್ಬನ್ನ ನಿಂದ್ರಿಸಿದ್ದೆ
ಒಬ್ಬನ್ನ ಹಿಡಕೊಂಡು ಜಗ್ಗತಿದ್ದೆ
ಯಾವನ್ನ ಕುಂದ್ರಿಸಿದ್ದಿ ಯಾವನ್ನ ನಿಂದ್ರಿಸಿದ್ದಿ
ಯಾವನ್ನ ಹಿಡಕೊಂಡು ಜಗ್ಗತಿದ್ದೆ
ಗಡಗೀಯ ಕುಂಡ್ರಿಸಿದ್ದೆ ಕಡಗೋಲು ನಿಂದ್ರಿಸಿದ್ದೆ
ಹಗ್ಗವ ಹಿಡಕೊಂಡು ಜಗ್ಗತಿದ್ದೆ ।೨।

'ಕೋಲು ಕೋಲೆನ್ನ ಕೋಲೆ
ರನ್ನದ ಕೋಲು ಕೋಲೆನ್ನ ಕೋಲೆ'–
ಎಂಬುದು ಹೈದ್ರಾಬಾದ ಕರ್ನಾಟಕದಲ್ಲಿ ಪ್ರಸಿದ್ಧವಾದ ಸ್ವರಗತಿಯಾಗಿದೆ.

ಚೌಪದನಗಳು :

'ಮಾನೌಮಿಯ ಚೌಪದ' ಎನ್ನುವ ಒಂದು ಚಿಕ್ಕ ಕೃತಿ ನನ್ನ ಮುಂದಿದೆ. ಇದನ್ನು ಸಂಪಾದಿಸಿದವರು ಎನ್. ಅನಂತರಂಗಾಚಾರ್. ಪ್ರಕಟಿಸಿದ ಮೊದಲನೇ ವರ್ಷ ೧೯೪೦. ೪೪ ಪುಟಗಳ ಈ ಪುಟ್ಟ ಕೃತಿ ೧೯೬೧ರಲ್ಲಿ ಒಮ್ಮೆ, ೧೯೭೦ರಲ್ಲಿ ಒಮ್ಮೆ ಮುದ್ರಣವಾಗಿದೆ. ಈ ಕೃತಿಯಲ್ಲಿ ಮೂಗುರು ಎಂಬ ಗ್ರಾಮದ ಹೆಸರು ಉಲ್ಲೇಖವಾಗಿದೆ. ಈ ಗ್ರಾಮವು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿಗೆ ಸೇರಿದೆ ಎಂದು ಸಂಪಾದಕರು ಗುರುತಿಸಿದ್ದಾರೆ. ಜೊತೆಗೆ ಈ ಕಾವ್ಯದಲ್ಲಿ ಬರುವ ಮೈಸೂರು ಅರಸು ಮನೆತನಕ್ಕೆ ಸೇರಿದವರ 'ದೊಡ್ಡ ಕೃಷ್ಣರಾಜ ಒಡೆಯರ ದಳವಾಯಿ ವೀರಪ್ಪಾಜಿ ಮತ್ತು ದಳವಾಯಿ ದೇವರಾಜಯ್ಯ ಮೊದಲಾದವರನ್ನು ವರ್ಣಿಸಿರುವುದರಿಂದ ಈ ಗ್ರಂಥವು ಆ ಕಾಲದಲ್ಲಿ ಹುಟ್ಟಿರಬಹುದು' ಎನ್ನುವ ಸಂಪಾದಕರು ೧೭೧೪ ರಿಂದ ೧೭೩೪ ನೆಯ ವರ್ಷಗಳಲ್ಲಿ ನಡೆದ ಘಟನೆಗಳನ್ನು ವಿವರಿಸುತ್ತಾರೆ. ಬಹುಶಃ ಈ ಅವಧಿಯಲ್ಲಿ ಈ ಕಾವ್ಯ ಹುಟ್ಟಿರಬಹುದೆಂಬುದು ಅವರ ಅಂದಾಜು. ಹಾಡು ಏಕೀಕೃತವಾಗಿದೆ ಎನ್ನುವುದು ಅವರ ಅಭಿಪ್ರಾಯ.

ಮಾನವಮಿ ಆಚರಣೆ ಕರ್ನಾಟಕದಲ್ಲಿ ಪ್ರಸಿದ್ಧವಾದುದು. ಈ ಸಮಯದಲ್ಲಿ ಹರಕೆಯ ಪದಗಳಾಗಿ 'ಮಾನೌಮಿಯ ಚೌಪದ' ಉಪಯೋಗವಾಗುತ್ತದೆನ್ನುವ ಸಂಪಾದಕರ ವಿವರಣೆ ಹೀಗಿದೆ: "ಚೌಪದಗಳನ್ನು ಹಾಡುವುದು ಹಳ್ಳಿಗರಿಗೆ ಬಲು ಹೆಮ್ಮೆಯ ವಿಷಯ. ಹಬ್ಬಕ್ಕೆ ಮೂರು ನಾಲ್ಕು ತಿಂಗಳುಗಳು ಮೊದಲಿಂದ ಇದನ್ನು ಕಲಿಯುವುದಕ್ಕೆ ಪೂರ್ವಸಿದ್ಧತೆಗಳಾಗುತ್ತವೆ. ಹಳ್ಳಿಯ ಮಠದ ಉಪಾದ್ರು ಅಥವಾ ಅಯ್ಯಗಳು ಚೌಪದನವನ್ನು ಹಾಡುವುದಕ್ಕೆ ಯೋಗ್ಯರಾದ ಹುಡುಗರನ್ನು ಆರಿಸಿಕೊಂಡು ಅವರಿಗೆ ಶಿಕ್ಷಣವನ್ನು ಕೊಡುತ್ತಾರೆ. (ಇದಕ್ಕೆ ಅವರಿಗೆ ಪ್ರತ್ಯೇಕವಾದ ಸಂಭಾವನೆಯೂ ಉಂಟು). ಹುಡುಗರು ಹೇಳತಕ್ಕ ಚೌಪದವು ಕಿವಿಗೆ ರಮ್ಯವಾಗಿರುವಂತೆ ಅವರ ಆಕಾರವು ನೋಟಕ್ಕೆ ಹಿತವಾಗಿರುವುದಕ್ಕಾಗಿ ಅವರೆಲ್ಲರಿಗೂ ಒಂದೇ ತೆರನಾದ ಉಡುಪುಗಳನ್ನು ತೊಡಿಸುತ್ತಾರೆ. (ನಮ್ಮ ಕಡೆ ಆ ಉಡುಪಿನಿಂದಲೇ 'ಇವರು ಚೌಪದದ ಗುಂಪಿನವರು' ಎಂದು ಗುರುತಿಸುವ ವಾಡಿಕೆಯು ಈಗಲೂ ಇದೆ.) ಹುಡುಗರಿಗೆ ಕಸೂತಿಯ ಕೆಲಸ ಮಾಡಿದ ಒಂದು ಕಪ್ಪು ಬಣ್ಣದ ಮೊಕಮಲ್ ಟೋಪಿ, ಕರಿಯ ಅಂಗಿ, ಬಿಳಿಯ ಪೈಜಾಮ, ನಡುವಿಗೆ ಜರತಾರಿ ಪಟ್ಟಿ, ಕೈಯಲ್ಲಿ ಸಣ್ಣಗಿರುವ ಬಣ್ಣದ ಕಾಗದದಿಂದ ಅಲಂಕೃತವಾದ ಒಂದು ದೊಣ್ಣೆ ಅಥವಾ ಕೋಲಾಟದ ಕೋಲುಗಳು – ಇವುಗಳಿರುತ್ತವೆ. ಹಬ್ಬದ ಕಾಲದಲ್ಲಿ 'ಉಪಾದ್ರು' ಈ ಕಾಲಕ್ಕೋಸ್ಕರವೇ ಇಟ್ಟಿರುವ ರೇಷ್ಮೆಯ ರುಮಾಲನ್ನೂ ಅಂಗಿಯ ಮೇಲೆ ಉತ್ತರೀಯವನ್ನೂ ಧರಿಸಿ ಸಾಲುಸಾಲಾಗಿರುವ 'ಚೌಪದದದ ಮಕ್ಕಳನ್ನು' ಶಿಸ್ತಿನಿಂದ ನಡೆಸಿಕೊಂಡು ತಾವು ಹಿಂದೆ ಬಂದು ಚೌಪದಗಳನ್ನು ಹಾಡಿಸಿ, ಹುಡುಗರಿಗೆ ಕೊಬ್ಬರಿ ಬೆಲ್ಲವನ್ನೂ ತಮಗೆ ಉಡುಗೊರೆಯನ್ನೂ ಸಂಪಾದಿಸುತ್ತಾರೆ" (ಮುನ್ನುಡಿ,ಪು.೮).

ಮಕ್ಕಳೂ ಕೋಲಾಟವನ್ನು ಕಲಿಯುತ್ತಾರೆ ಎಂಬ ವಿವರಣೆಗಳನ್ನು ಹಿಂದೆ ಗಮನಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳಿಗೆ ಅಕ್ಷರಜ್ಞಾನ ಕೊಡುವ ಮಠದ

ಅಯ್ಯಗಳು, ಶಾಲಾ ಶಿಕ್ಷಕರೂ ವರ್ಷಕ್ಕೊಮ್ಮೆ ತಮ್ಮ ಸಂಬಳವಾಗಿ ಮನೆಮನೆಯವರೂ ಬಹುಶಃ ಆಯುವನ್ನು ಕೊಡುವ ಪದ್ಧತಿ ಇತ್ತೆಂದು ತೋರುತ್ತದೆ. ಅಥವಾ ಆಯವಲ್ಲವೆಂದಾದರೂ ಶಿಕ್ಷಣ ಕೊಡುವವರಿಗೆ ಪ್ರತಿಯಾಗಿ ಕಾಳುಕಡಿ ಕೊಡುವ ಪದ್ಧತಿ ಇರಬೇಕು. ಅವುಗಳನ್ನು ಪಡೆಯುವ ಉದ್ದೇಶದಿಂದ ಮಕ್ಕಳಿಗೆ ಚೌಪದಗಳನ್ನು ಕಲಿಸಿ, ಅವರಿಗೆ ಒಳ್ಳೆ ಬಣ್ಣಬಣ್ಣದ ಬಟ್ಟೆಗಳನ್ನು ತೊಡಿಸಿ, ಕೈಯಲ್ಲಿ ಕೋಲು ಕೊಟ್ಟು, ಚೌಪದಗಳನ್ನು ಹಾಡುತ್ತ ಮನೆಮನೆಗೆ ತೆರಳಿ, ಕಾಳುಕಡಿ ಸಂಗ್ರಹಿಸುವ ಪದ್ಧತಿ ಇತ್ತು. ಮಕ್ಕಳಿಗೆ ಕೈಯಲ್ಲಿ ಕೋಲು ಕೊಡುತ್ತಾರೆಂದರೆ ಅವರು ಬರೀ ಶೃಂಗಾರಕ್ಕಾಗಿ ಕೋಲು ಹಿಡಿಯದೆ, ಒಂದಿಷ್ಟು ಕೋಲಾಟವನ್ನೂ ಕಲಿತು, ಚೌಪದ ಹಾಡುತ್ತ, ಕೋಲಾಟವಾಡುತ್ತ ಗಲ್ಲಿಗಲ್ಲಿಗೂ ಮನೆಮನೆಗೂ ತಿರುಗುವ ಪದ್ಧತಿ ಇರಬೇಕು. ಹೀಗಾಗಿ ಚೌಪದನಗಳು ಮಾನವಮಿಗೆ ಬಳಕೆಯಾಗುವದರಿಂದ ಇವುಗಳನ್ನು 'ಮಾನೌಮಿ ಚೌಪದನಗಳು' ಎಂದಂತಿದೆ. ಕೋಲು ಹಾಕುತ್ತ ಹಾಡುವುದರಿಂದ ಇವುಗಳನ್ನು ಇತ್ತೀಚೆಗೆ 'ಗ್ರಂಥಸ್ಥ ಕೋಲುಪದಗಳು' ಎಂದು ಕರೆದಿರುವುದು ಕಂಡುಬರುತ್ತದೆ. ಹೀಗಾಗಿ ಚೌಪದನಗಳು ಅಕ್ಷರಬಲ್ಲ ಪ್ರತಿಭಾವಂತರ ಜಾನಪದ ಸಾಹಿತ್ಯ ಸೃಷ್ಟಿಗಳು ಎನ್ನಬೇಕು. ಜನಪದ ಸಾಹಿತ್ಯ ಹೀಗೂ ಹುಟ್ಟುತ್ತದೆ. ದೊಡ್ಡಾಟಗಳು ಅವು ನಿರಕ್ಷರಿಗಳಿಂದ ಸೃಷ್ಟಿಯಾಗಲು ಕಷ್ಟಸಾಧ್ಯವೆನಿಸುವಂತಿವೆ. ಇತ್ತೀಚೆಗೆ ಲಾವಣಿ–ಗೀಗೀ ಪದಗಳು, ಮೋಹರಂ ಪದಗಳು, ಅಷ್ಟೇ ಏಕೆ ಮಾತುಗಳುಳ್ಳ ಸಣ್ಣಾಟಗಳು ಅಕ್ಷರ ಬಲ್ಲ, ಆದರೆ ಗ್ರಾಮವಾಸಿಗಳಾದ ಜನಪದ ಕವಿಗಳಿಂದ ನಿರ್ಮಾಣವಾಗುತ್ತಿರುವುದು ಸ್ಪಷ್ಟವಾಗಿದೆ. ಚೌಪದನಗಳನ್ನು ನಾವು ಲಿಖಿತ ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿ ಗಣಿಸಬಹುದಾಗಿದೆ.

ಪ್ರಸ್ತುತ ಚೌಪದನವು ವಿಘ್ನೇಶ್ವರನ ಸ್ತುತಿಯೊಂದಿಗೆ ಪ್ರಾರಭವಾಗುತ್ತದೆ.

ಶ್ರೀ ವಿನಾಯಕ ನಿಮ್ಮ ಪಾದಪಂಕಜವ
ಭಾವದಿಂ ಭಜಿಸುವೆನು ಕೊಡು ವಿಷ್ಣುಪದವ ।

ಗಿರಿರಾಜನಂದನೆಯ ಮುಂದೆಸೆವ ಕಂದ
ಹರನ ಬಾಣನ ವೈರಿ ಅಕ್ಷತಾನಂದ
ಸುರನರೋರಗವಂದ್ಯ ಚರಣಾರವಿಂದ
ಕರುಣವಾರಿಧಿಯೆ ಪೊಗಳುವೆನು ಮುದದಿಂದ ।

ಹೀಗೆ ಪ್ರಾರಂಭವಾಗುವ ಈ ಚೌಪದನವು ಸರಸ್ವತಿ, ವಿಷ್ಣು, ವೀರಭದ್ರ, ಹನುಮಂತ, ಬಸವೇಶ್ವರ, ದೇಶೇಶ್ವರ, ತ್ರಿಪುರಾಂಬೆ, ಕಾವೇರಿ, ಮಹಾಕಾಳಿ, ದೊಡ್ಡ ಕೃಷ್ಣರಾಜಪ್ರಭುಗಳು, ದಳವಾಯಿ ವೀರರಾಜಯ್ಯ, ದಳವಾಯಿ ದೇವರಾಜಯ್ಯ, ಕರಣಿಕ, ಮಣಿಯಗಾರ, ಚಿನಿವಾರದವನು, ಅಕ್ಕಸಾಲೆ, ಸೆಟ್ಟಿ, ಗೌಡ, ಕುರುಬಗೌಡ, ದೇವದಾಸಿ, ಗಂಡುಮಗು, ಹೆಣ್ಣುಮಗು, ಒಗಟುಗಳು, ಕೊನೆಯಲ್ಲಿ 'ಹರಕೆಯ ಪದಗಳು' ಎಂಬ ಹೆಸರುಗಳ ಕೆಳಗೆ ಹಾಡಿನ ನುಡಿಗಳಿವೆ.

ಅಶ್ವಯುಜ ಶುದ್ಧ ಮಹರ್ನವಮಿ ಬರಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು।

ಆಯುರಾರೋಗ್ಯ ಐಶ್ವರ್ಯ ಹೆಚ್ಚಲೆಂದು
ಸಿರಿಯು ಸಂಪತ್ಕರವು ನಿಮಗಾಗಲೆಂದು
ಕಾಯಜನ ಪಿತಾನೌಮಿ ನಿಮಗಾಗಲೆಂದು
ಮಾಸ ಹನ್ನೆರಡಕ್ಕೆ ಮಾನೌಮಿ ನಿಮಗಾಗಲೆಂದು ।

ಮಳೆ ಹೊಯ್ದು ಬೆಳೆ ಬೆಳದು ಇಳೆ ದಣಿಯಲೆಂದು
ತಿಳಿಗೊಳಗಳುಕ್ಕಿ ಗೋವ್ಗಳು ಕರೆಯಲೆಂದು
ನಳಿನಮುಖಿಯರು ಪುತ್ರಿಯರ ಪಡೆಯಲೆಂದು
ಇಳೆಯೊಳಗೆ ಪರಸಿದೆವು ಬಾಲಕರು ಬಂದು।

ಕಡಲೆ ಬೆಲ್ಲವು ಕೊಬರಿ ನಮಗಾಗಬೇಕು
ಉಡುಗೊರೆಯ ತ್ಯಾಗ ನಮ್ಮಯ್ಯಗಳಿಗೆ ಬೇಕು
ಕಡಕು ಕಂಠಾಭರಣ ನಿಮಗಿರಲು ಬೇಕು
ತಡೆಯದೇ ಕೊಡಿಸಿ ನಮಗೀಗಾಗಬೇಕು ।

ಶ್ರೀಪತಿಯ ರಾಗ ಈಶ್ವರನ ಕೃಪೆಯಾಗಿ
ಆ ಪರಂಜ್ಯೋತಿ ಪರಬ್ರಹ್ಮ ನೆಲೆಯಾಗಿ
ಈ ಪರಿಯ ಚವಪದದ ಹರಕೆ ನಿಮಗಾಗಿ
ಗೋಪಾಲಕೃಷ್ಣ ನಂಜುಂಡ ನೆಲೆಯಾಗಿ ।

ಹೀಗೆ ಸಾಗಿ ಮುಕ್ತಾಯವಾಗುತ್ತದೆ ಈ ಚೌಪದನ. ಕನ್ನಡದಲ್ಲಿ ಪ್ರಕಟವಾದ ಎಲ್ಲ ಚೌಪದನಗಳ ರಚನೆ ಉದ್ದೇಶ ಇದೇ ಬಗೆಯದಾಗಿದೆ.

ಡಾ. ಎಂ.ಎಸ್.ಸುಂಕಾಪುರ ಅವರು ಪ್ರಕಟಿಸಿದ 'ಜೀವನ ಜೋಕಾಲಿ' ಭಾಗ–೧ 'ಚೌಪದನಗಳು' (೧೯೭೧) ಹನ್ನೊಂದು ಚೌಪದನಗಳ ಸಂಗ್ರಹವಾಗಿದೆ. 'ಗಣೇಶ, ವೀರಭದ್ರ, ಗಂಗೀಗೌರಿ, ಗುರುಭಕ್ತಾಂಡಾರಿ, ಚಿತ್ರಶೇಖರ, ಸೋಮಶೇಖರ, ವೀರಸಂಗಯ್ಯ, ಅದ್ವೈತ ತತ್ವ, ಕಂಸವಧ, ಮಾನೋಮಿ, ಬೆಡಗಿನ ಚೌಪದನಗಳು ಇಲ್ಲಿವೆ. ಇದನ್ನು ಗಮನಿಸಿದರೆ, ಈ ಚೌಪದನಗಳು ಒಂದೊಂದು ಕಥೆಯನ್ನು ಹೇಳುತ್ತವೆ. ಎನ್. ಅನಂತರಂಗಾಚಾರ್ ಅವರು ಸಂಪಾದಿಸಿದ 'ಮಾನೌಮಿಯ ಚೌಪದ' ದ ನುಡಿಗಳು ಈ ಕೃತಿಯ 'ಮಾನೋಮಿಚೌಪದನ'ದಲ್ಲಿ ಪುನರಾವರ್ತನೆಯಾಗಿವೆ. "ಚೌಪದನಗಳು ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಚೌಪದಿಂಯ ಧಾಟಿಂಯಲ್ಲಿ ಅವು ಮೂಡಿಬಂದಿರುವುದರಿಂದ ಚೌಪದನ ಎನಿಸಿಕೊಂಡಿವೆ. ಇವನ್ನು ನೀಳ್ಗವನಗಳೆಂದೂ ಕಥನ ಕವನಗಳೆಂದೂ ಕರೆಯಬಹುದು" (ಪ್ರ.ಪು.೮) ಎಂದು ಸುಂಕಾಪುರ ಅವರು ಸ್ಪಷ್ಟವಾಗಿ ಬರೆಯುತ್ತಾರೆ. ಇಲ್ಲಿಯ ಕೆಲವು ಚೌಪದನಗಳನ್ನು ಬರೆದ ಕವಿಗಳ ಹೆಸರುಗಳೂ ದೊರೆಯುತ್ತವೆ. ಇವುಗಳಲ್ಲಿಯ ಅತ್ಯಂತ ಉತ್ತಮ ಕೃತಿಯೆಂದು ಸಂಪಾದಕರು ಗುರುತಿಸಿರುವ 'ಗಂಗೀಗೌರಿ ಚೌಪದನ' ಬರೆದವನು ಅಂಬುಲಗಿ ಚನ್ನಬಸವೇಶ. ಈತ ಸ್ವತಃ ಶಿಕ್ಷಕನಾಗಿರುವಂತಿದೆ. ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನವನಾದ ಈ ಕವಿ ಇಂತಹ ಕಾವ್ಯಗಳಲ್ಲದೆ 'ಕುಮಾರ ವಿಜಯ' ಎಂಬ ದೊಡ್ಡ ಕಾವ್ಯವನ್ನೂ ಬರೆದಿದ್ದು,

ಈಗ ಅವರ ಬಗ್ಗೆ ಸಂಶೋಧನೆಗಳೂ ಸಾಕಷ್ಟು ನಡೆದಿವೆ. ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ವಾಸವಾದ ಕವಿಗಳು, ತಮ್ಮ ವಿದ್ವತ್ತಿನ ಮಧ್ಯ ಜಾನಪದ ಸೊಗಡನ್ನೂ ಇಟ್ಟುಕೊಂಡಿದ್ದರು ಎಂಬುದಕ್ಕೆ ಅಂಬುಲಗಿ ಗ್ರಾಮದ ಚೆನ್ನಬಸವೇಶ ಕವಿ ನಮಗೆ ಉದಾಹರಣೆಯಾಗಿದ್ದಾನೆ. ಹೀಗಾಗಿಯೇ 'ಚೌಪದನಗಳು ಸಂಪೂರ್ಣವಾಗಿ ಮಾರ್ಗಕ್ಕೂ ಸೇರಲಾರವು; ಸಂಪೂರ್ಣವಾಗಿ ದೇಸಿಗೂ ಹೊಂದಲಾರವು. ಅವೆರಡರ ಮಧ್ಯಮಾರ್ಗವನ್ನು ಇವು ಅನುಸರಿಸುತ್ತವೆ' ಎಂಬ ಡಾ. ಸುಂಕಾಪುರ ಅವರ ಮಾತು ಸರಿಯಾಗಿದೆ.

ಈ ಸಾಲಿನ ಇನ್ನೊಂದು ಕೃತಿ ಅಂದನೂರು ಶೋಭಾ ಅವರು ಸಂಪಾದಿಸಿದ **'ಗುರುಭಕ್ತಾಂಡಾರಿ ಚೌಪದನ'** (೧೯೮೭). ಇದನ್ನು ಬರೆದ ಕವಿ ಮಲ್ಲಣ್ಣ. ಕವಿಯ ಕಾಲ ತಿಳಿಯದು. ಪ್ರತಿಮಾಡಿದ ಕಾಲ ೧೭೪೨ ಎಂದಿದೆ. ಮೊದಲಿನ ಕೃತಿ ಹುಟ್ಟಿದ ಕಾಲ, ಅಂಬುಲಗಿ ಚನ್ನಬಸವನ ಕಾಲ, ಪ್ರಸ್ತುತ ಕೃತಿ ಪ್ರತಿಮಾಡಿದ ಕಾಲ ಇವನ್ನು ಗಮನಿಸಿದರೆ, ಚೌಪದನಗಳು ೧೭೦೦ರ ನಂತರದ ಸೃಷ್ಟಿಗಳೆನಿಸುತ್ತವೆ. ಈ ಬಗೆಗೆ ಹೆಚ್ಚಿನ ಶೋಧ ನಡೆಯಬೇಕು.

'ಗ್ರಂಥಸ್ಥ ಕೋಲುಪದಗಳು' (೨೦೧೧) ಎಂಬ ಕೃತಿಯ ಸಂಪಾದಕರು ಡಾ. ಬಿ. ಬಿ. ಬಿರಾದಾರ ಹಾಗೂ ಡಾ. ಶಕುಂತಲಾ ಬಿ. ಪಾಟೀಲ ಅವರು. "ಪ್ರಸ್ತುತ ಸಂಗ್ರಹದಲ್ಲಿ ಪೌರಾಣಿಕ ಕಥಾವಸ್ತುವಿದೆ, ಜೈನ ಪೌರಾಣಿಕ ಕಥೆಯೂ ಇಲ್ಲಿದೆ. ಚರಿತ್ರೆಗೆ ಸಂಬಂಧಪಟ್ಟಂತೆ ಶರಣರ ಹಾಡುಗಳು ಹೆಚ್ಚು ಸಂಖ್ಯೆಯಲ್ಲಿವೆ. ಗೋಕುಲ್ಯನ ಹಾಡಿನಂಥ ಶುದ್ಧ ರಾಜಕೀಯ ವಸ್ತು ಗಮನಾರ್ಹವೆನಿಸಿದೆ. ಜೀವನ ಮೌಲ್ಯ ಪ್ರತಿಪಾದಿಸುವ ಹಾಡುಗಳೂ ಇಲ್ಲಿವೆ" (ಪ್ರ.ಪು.೧೭). ಇವು ಈ ಸಂಗ್ರಹದಲ್ಲಿರುವ ಹಾಡುಗಳ ಬಗ್ಗೆ ಸಂಪಾದಕರು ಹೇಳುವ ಮಾತುಗಳು. ಇಲ್ಲಿಯ ೧೯ ಹಾಡುಗಳು ಪ್ರಾಚೀನ ಕಾಗದ ಪ್ರತಿಗಳಲ್ಲಿ ದಾಖಲಾಗಿರುವ ಕೋಲುಪದಗಳಾಗಿವೆ. ಇವೆಲ್ಲ ಮೌಖಿಕ ಪರಂಪರೆಯ ಹಾಡುಗಳಾಗಿವೆ ಎಂಬುದು ಸಂಪಾದಕರ ಟಿಪ್ಪಣಿಯಾಗಿದೆ. ಆದರೆ ಅವುಗಳನ್ನು ಅಕ್ಷರ ಬಲ್ಲವರು ಸಂಗ್ರಹಿಸಿ ಬರೆದಿಡುವ ಕೆಲಸ ಮಾಡಿದಂತೆ ತೋರುತ್ತದೆ ಎಂಬ ಭಾವ ಸಂಪಾದಕರದಾಗಿದೆ.

ಆದರೆ ಈ ಕೃತಿಯಲ್ಲಿ ಎರಡು ಸಾಲಿನ ಮತ್ತು ನಾಲ್ಕು ಸಾಲಿನ ನುಡಿಗಳಿವೆ. ನಾಲ್ಕು ಸಾಲಿನ ನುಡಿಗಳು ಚೌಪದನಗಳ ಮಾದರಿಯಲ್ಲಿವೆ. ದ್ವಿಪದಿಗಳನ್ನು ಪ್ರತ್ಯೇಕವಾಗಿಯೂ ಓದಿಕೊಳ್ಳಬಹುದು, ಎರಡೆರಡು ನುಡಿಗಳನ್ನು ಕೂಡಿಸಿಕೊಂಡು ಚೌಪದನಗಳಂತೆಯೂ ಓದಿಕೊಳ್ಳಬಹುದು. ಹೀಗಾಗಿ ಇಲ್ಲಿಯ ಹಾಡುಗಳು ಮೌಖಿಕ ಪರಂಪರೆಯಲ್ಲಿ ಹುಟ್ಟಿದವುಗಳಲ್ಲ. ಚೌಪದನಗಳನ್ನು ನಿರ್ಮಿಸಿದ ಕವಿಗಳ ಲಕ್ಷಣಗಳುಳ್ಳ ಕವಿಗಳೇ ಇಲ್ಲಿಯ ಕೋಲಾಟದ ಹಾಡುಗಳನ್ನು ರಚಿಸಿರುವುದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಈ ಹಾಡುಗಳನ್ನು ಕೋಲಾಟದ ಹಾಡುಗಳು ಎಂದು ಹಸ್ತಪ್ರತಿಯಲ್ಲೇ ಕರೆದಿರುವುದನ್ನು ಗಮನಿಸಿದರೆ, ಹುಡುಗರು ಕೋಲಾಟವನ್ನೇ ಕಲಿತು ಜೊತೆಗೆ ಹಾಡುವ ಹಾಡುಗಳು ಇವು ಎಂಬಂತೆ ತೋರುತ್ತದೆ. ಹೀಗಾಗಿ ಶಿಕ್ಷಣ ಕಲಿಯುವ ಮಕ್ಕಳು ಕೋಲಾಟ ಕಲಿಯುವಾಗ ಹಾಡುವ ಹಾಡುಗಳು ಇವು. ಇವುಗಳ ಉದ್ದೇಶ ಕೋಲು

ಹಾಕಲು ಬಳಸುವುದು, ಮತ್ತು ಮನೆಮನೆ ಕೋಲಾಟವಾಡುತ್ತ ಹೋಗಿ ಶಿಕ್ಷಕರಿಗಾಗಿ ದವಸಧಾನ್ಯಗಳನ್ನು ಸಂಗ್ರಹಿಸುವುದು ಎಂಬದು ಸ್ಪಷ್ಟವಾಗುತ್ತದೆ. ಹೀಗಾಗಿ ಮಕ್ಕಳ ಕೋಲಾಟದ ಹಾಡುಗಳಿಗೂ ಅಶಿಕ್ಷಿತರು ಕುಣಿತದ ಪ್ರಕಾರವಾದ ಕೋಲಾಟವನ್ನು ಪ್ರದರ್ಶಿಸಲು ಕಲಿಯುವ ಹಾಡುಗಳಿಗೂ ವ್ಯತ್ಯಾಸವಾಗುತ್ತದೆ. ಕೋಲಾಟದ ಹಾಡುಗಳ ಮೂಲ ಭಾವ ತಿಳಿ ಶೃಂಗಾರವಾಗುತ್ತದೆ, ಮಕ್ಕಳ ಕೋಲಾಟದ ಭಾವ ಹೆಚ್ಚಾಗಿ ಭಕ್ತಿಪ್ರಧಾನವಾಗುತ್ತದೆ. ಇಲ್ಲಿ ಆಯ್ದುಕೊಳ್ಳುವ ಕಥೆಗಳು ಭಕ್ತಿಪ್ರಧಾನವಾದವುಗಳೇ ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ.

* * *

ಕೋಲಾಟದ ಹಾಡುಗಳು ಸಂಗ್ರಹಗಳು :

೧೯೭೦ : ಕೋಲು ಪದಗಳು, (ಸಂ) ಮಳಲಿ ವಸಂತಕುಮಾರ, –ಡಿವಿಕೆ ಮೂರ್ತಿ, ಮೈಸೂರು, (೧೯೭೮, ೨ನೇ ಮುದ್ರಣ).

೧೯೭೫ : ಕನ್ನಡ ಜನಪದ ಸಾಹಿತ್ಯ ಭಂಡಾರ–೧, (ಸಂ) ಮತಿಘಟ್ಟ ಕೃಷ್ಣಮೂರ್ತಿ, –ಗುರುಮೂರ್ತಿ ಪ್ರಕಾಶನ, ೧೫,೧ನೇ ರಸ್ತೆ, ದತ್ತಾತ್ತೇಯ ಬಡಾವಣೆ, ಕೆಂಪೇಗೌಡ ನಗರ, ಬೆಂಗಳೂರು–೧೯

೧೯೮೧ : ಕೋಲಾಟದ ಪದಗಳು, (ಸಂ) ಬಸವರಾಜ ಮಲಶೆಟ್ಟಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೮೬ : ಬೀದಿ ಬಯಲಾಟಗಳು, (ಸಂ) ಡಾ. ವೀರಣ್ಣ ದಂಡೆ, ಮೂಡಲ ಪ್ರಕಾಶನ, ಚೌಡೇಶ್ವರ ಕಾಲನಿ, ಬ್ರಹ್ಮಪುರ ಕಲಬುರ್ಗಿ. (ಸಮಗ್ರ ಸಂಪುಟ–೬, ಸಾಗರ ಪ್ರಕಾಶನ, ಬೆಂಗಳೂರು, ೨೦೧೩).

೨೦೧೧ : ಗ್ರಂಥಸ್ಥ ಕೋಲುಪದಗಳು, (ಸಂ) ಡಾ. ಬಿ.ಬಿ.ಬಿರಾದಾರ, ಡಾ. ಶಕುಂತಲಾ ಜಿ.ಪಾಟೀಲ, –ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

ಸಹಾಯಕ ಗ್ರಂಥಗಳು :

೧೯೩೩ : ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಅರ್ಚಕ ಬಿ. ರಂಗಸ್ವಾಮಿ, –ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. (ಹುಟ್ಟಿದ ಹಳ್ಳಿ, ೧೯೭೧, ಎರಡನೇ ಮುದ್ರಣ).

೧೯೩೫ : ಕರ್ನಾಟಕ ಸಂಸ್ಕೃತಿ, ದೇವುಡು, –ಶಾರದಾ ಪ್ರಕಾಶನ, ಗಾಂಧೀನಗರ ಬೆಂಗಳೂರು.(೧೯೮೮ ಮೂರನೇ ಮುದ್ರಣ).

೧೯೫೬ : ಕರ್ನಾಟಕ ಜನಪದ ಸಾಹಿತ್ಯ , ಮಾಸ್ತಿ ವೆಂಕಟೇಶ ಅಯ್ಯಂಗಾರ, – ಜೀವನ ಕಾರ್ಯಾಲಯ, ಬೆಂಗಳೂರು.

೧೯೭೬ : ಬೀದರ ಜಿಲ್ಲೆಯ ಜನಪದ ಗೀತೆಗಳು, (ಸಂ) ಕ್ಯಾತನಹಳ್ಳಿ ರಾಮಣ್ಣ, – ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೦೦೭ : ಹೊನ್ನ ಹೊತ್ತಿಗೆ, (ಸಂ) ಮತಿಘಟ್ಟ ಕೃಷ್ಣಮೂರ್ತಿ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

* * *

೨. ಗೀಗೀ / ಲಾವಣಿ ಹಾಡುಗಳು :

ಕನ್ನಡ ಜನಪದ ಸಾಹಿತ್ಯದಲ್ಲಿ ಗೀಗೀ/ಲಾವಣಿ ಹಾಡುಗಳು ಸಮೃದ್ಧವಾಗಿ ದೊರೆಯುತ್ತವೆ. ಇವು ಜಾತ್ರೆ-ಉತ್ಸವಗಳಲ್ಲಿ ಹಾಡುವ ಹಾಡುಗಳು. ಈ ಹಾಡುಗಳು ಮುಖ್ಯವಾಗಿ ಕಥನಪರವಾದ ಹಾಡುಗಳು. ಇವುಗಳ ಇನ್ನೊಂದು ಮುಖ್ಯ ಗುಣವೆಂದರೆ ಈ ಹಾಡುಗಳಲ್ಲಿ ಕಾಣುವ ಹೆಣ್ಣು-ಗಂಡು ತತ್ತ್ವಗಳ ಚರ್ಚೆ. ಡಪ್ಪು ಹಿಡಿದವನು ಮೇಳದಲ್ಲಿ ಪ್ರಮುಖ ಹಾಡುಗಾರನಾಗಿರುತ್ತಾನೆ. ಅವನಿಗೆ ದನಿಗುಡಲು ತುಂತುಣಿ ಹಿಡಿದವನು ಸಹಾಯಕನಾಗಿರುತ್ತಾನೆ. ತಾಳ ಹಿಡಿದವ ಮತ್ತು ತುಂತುಣಿಹಿಡಿದವರು ಹಿಮ್ಮೇಳದವ ರಾಗಿರುತ್ತಾರೆ. ಕೆಲವು ಕಡೆ ಪಿಟೀಲನ್ನೂ ಬಳಸುತ್ತಾರೆ. ಯಾವಾಗಲೂ ಈ ಹಾಡಿನ ಎರಡು, ಮೂರು, ನಾಲ್ಕು ಮೇಳಗಳು ಒಂದೆಡೆ ತಮ್ಮ ಕಲೆಯನ್ನು ಪ್ರದರ್ಶನ ಮಾಡಬೇಕಾಗಿ ಬರುವುದರಿಂದ ಹಾಡುಗಾರಿಕೆಯಲ್ಲಿ ಒಂದು ಸ್ಪರ್ಧೆ ಏರ್ಪಡುವುದು ಸಾಮಾನ್ಯ. ಹೀಗಾಗಿ ಈ ಸ್ಪರ್ಧೆಯ ವಿಷಯವಾಗಿಯೇ ಒಂದು ಮೇಳ ಹೆಣ್ಣಿನ ಪರವಾಗಿ ವಾದಿಸಿದರೆ, ಇನ್ನೊಂದು ಮೇಳ ಗಂಡಿನ ಪರವಾಗಿ ವಾದಿಸುತ್ತದೆ. ನಿಜವಾಗಿ ಇರಬೇಕಾದುದು ತಾತ್ವಿಕ ಚರ್ಚೆ. ಅದು ಸ್ತ್ರೀತತ್ತ್ವ ಹೆಚ್ಚೊ, ಪುರುಷತತ್ತ್ವ ಹೆಚ್ಚೊ; ಸ್ತ್ರೀ ಮೊದಲೋ ಪುರುಷ ಮೊದಲೋ ಈ ಸಂಗತಿಗಳಿಂದ ಪ್ರಾರಂಭವಾಗಿ ಅವೆಲ್ಲ ಅನೇಕ ಸಲ ವಾಚ್ಯಕ್ಕೆ ಇಳಿದು, ಕೇಳುಗರಿಗೆ ರಂಜನೆಯನ್ನು ಒದಗಿಸುತ್ತವೆ. ಅವಾಚ್ಯಕ್ಕೆ ಇಳಿದು ಅಸಹನೆಯನ್ನುಂಟು ಮಾಡುತ್ತವೆ.

ಕನ್ನಡ ಸಾಹಿತ್ಯದಲ್ಲಿ ಲಾವಣಿಯ ದಾಖಲೆ ಸಿಗುವುದು ೧೬೫೦ ಸುಮಾರಿನಲ್ಲಿ ಇದ್ದ ಗುಣಚಂದ್ರನ ಛಂದಸ್ಸಾರ ಎಂಬ ಶಾಸ್ತ್ರಗ್ರಂಥದಲ್ಲಿ.

ಲಘುಗಳ ಮಿಳಿತವ ಮಾಡಿ
ಕೊನೆಯಲಿ ಗುರುಗಳ ಹೂಡಿ
ಅರ್ಥದ ಸಾರವ ನೋಡಿ
ಪ್ರಾಸನು ಕೊನೆಯಲಿ ಕೂಡಿ
ಪಾದ ಮಿತಿಯ ಬೀಸಾಡಿ
ಲಾವಳಿ ಕೃತಿಗಳ ಪಾಡಿ

ಕೊನೆಯ ಸಾಲಿನ ಮೊದಲನೆ ಪದ 'ಲಾವಳಿ' 'ಲಾವಣಿ'ಯೇ ಆಗಿರಬೇಕೆಂಬುದು ಇಲ್ಲಿಯವರೆಗೆ ಎಷ್ಟು ಜನ ವಿದ್ವಾಂಸರು ಈ ಪದ್ಯವನ್ನು ಉಲ್ಲೇಖ ಮಾಡಿದ್ದಾರೊ ಅವರೆಲ್ಲರ ಅಭಿಪ್ರಾಯವಾಗಿದೆ. ಅದು ನಿಜವಿದ್ದರೆ ೧೬೫೦ರಷ್ಟು ಹಿಂದೆ ಲಾವಣಿಯ ಉಲ್ಲೇಖವಾಗಿರುವುದು ಖಚಿತವಾದಂತಾಗುತ್ತದೆ. ಗುಣಚಂದ್ರನ ಈ ಲಕ್ಷಣದಂತೆ:

೧. ಲಾವಣಿಯ ಸಾಲುಗಳು ಹೆಚ್ಚಾಗಿ ಲಘುಗಳಿಂದ ಕೂಡಿರುತ್ತವೆ.
೨. ಪ್ರತಿಸಾಲಿಗೂ ಕೊನೆಯಲ್ಲಿ ಗುರು ಇರುತ್ತದೆ

೩. ಅರ್ಥವನ್ನನುಸರಿಸಿ ಕೊನೆಯ ಪ್ರಾಸ ಕಡ್ಡಾಯವಾಗಿ ಇರುತ್ತದೆ.
೪. ಪಾದಗಳ ಮಿತಿ ಇರುವುದಿಲ್ಲ, ಬೇಕಾದಷ್ಟು ಸಾಲುಗಳನ್ನು ಹೊಂದಿರುತ್ತದೆ.

ಕೆಲವರು ಇದು ಲಾವಣಿಯ ಲಕ್ಷಣವೆಂದು ಒಪ್ಪುವುದಿಲ್ಲ. ಲಾವಣಿ ಮರಾಠಿಯಿಂದ ಬಂದಿದ್ದು, ಮರಾಠಿಯಲ್ಲಿಯೇ ೧೭೫೦-೧೮೫೦ರ ಅವಧಿಯಲ್ಲಿ ಪ್ರಸಿದ್ಧಿಗೆ ಬಂದುದರಿಂದ, ಅದಕ್ಕಿಂತ ಮುಂಚೆ ಕನ್ನಡದಲ್ಲಿ ಲಾವಣಿ ಇರಲು ಹೇಗೆ ಸಾಧ್ಯ? ಎಂಬುದು ಅವರ ವಾದ. ಇನ್ನು ಕೆಲವರು ಕನ್ನಡದಿಂದಲೇ ಲಾವಣಿ ಮರಾಠಿಗೆ ಹೋಗಿದೆ ಎಂದು ವಾದಿಸುತ್ತಾರೆ. ಈಗ ಸಿಕ್ಕ ಕವಿಗಳ ಲೆಕ್ಕಾಚಾರದ ಪ್ರಕಾರ, ಡಾ. ಎಂ.ಎಸ್.ಲಠ್ಠೆ ಅವರು ತಮ್ಮ **'ಜನಪದ ಕವಿಚರಿತೆ'**ಯಲ್ಲಿ ದಾಖಲಿಸಿದಂತೆ ೧೭೮೦-೧೮೫೦ರಲ್ಲಿ ಬದುಕ್ಕಿದ್ದ ಸಂಗೊಳ್ಳಿ ಬಡಿಗೇರ ಎಂಬ ಕವಿಯೇ ಪ್ರಾಚೀನನಾಗಿದ್ದಾನೆ. ಅವನು ಸಂಗೊಳ್ಳಿ ರಾಯಣ್ಣನ ಸಮಕಾಲೀನನಾಗಿದ್ದು, ಅವನು ಬರೆದ ಒಂದು ಲಾವಣಿ 'ಕಿತ್ತೂರ ಕಾಳಗ' ಎಂಬುದನ್ನು ಅವರು ಉಲ್ಲೇಖಿಸುತ್ತಾರೆ. ಹೀಗಾಗಿ ಈಗ ಸಧ್ಯಕ್ಕೆ ಲಾವಣಿಯ ಖಚಿತ ದೂರವನ್ನು ೧೭೮೦ರಿಂದ ೧೮೫೦ ಅವಧಿ ಎಂದಿಟ್ಟುಕೊಳ್ಳಬಹುದಾಗಿದೆ. ಈ ಅವಧಿ ಕವಿ ಬದುಕ್ಕಿದ್ದ ಅವಧಿಯಾಗಿರುವುದರಿಂದ ಅವನ ೨೦ ವಯಸ್ಸಿನ ಸುತ್ತಮುತ್ತ ಈ ಹಾಡು ರಚನೆಯಾಗಿರಬಹುದೆಂದು ಇಟ್ಟುಕೊಂಡರೂ ಸಧ್ಯಕ್ಕೆ ೧೮೦೦ರಿಂದ ಲಾವಣಿಯ ಇತಿಹಾಸವನ್ನು ಗುರುತಿಸಿದಂತಾಗುತ್ತದೆ. ಇಲ್ಲಿಯೇ ಗಮನಿಸಬೇಕಾದ ಸಂಗತಿಯೆಂದರೆ, **'ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳು'**, ಡಾ. ಬಿ.ಬಿ.ಬಿರಾದಾರ ಅವರು ಹಸ್ತಪ್ರತಿಯಿಂದ ಸಂಗ್ರಹಿಸಿ ಪ್ರಕಟಿಸಿದ **'ಶೃಂಗಾರ ಲಾವಣಿಗಳು' ಹಾಗೂ 'ಗ್ರಂಥಸ್ಥ ಲಾವಣಿಗಳು'** ಈ ಕೃತಿಯಲ್ಲಿಯ ಅನೇಕ ಲಾವಣಿಗಳನ್ನು ರಚಿಸಿದವರ ಕಾಲ, ಪ್ರದೇಶಗಳನ್ನು ಗುರುತಿಸುವ ಕೆಲಸ ನಡೆದರೆ ಈ ಬಗೆಗೆ ಇನ್ನಷ್ಟು ಖಚಿತ ಮಾಹಿತಿಗಳು ಲಭ್ಯವಾಗಬಹುದಾಗಿದೆ.

೧೯೭೫ರ ನಂತರ ಕರ್ನಾಟಕದಲ್ಲಿ ಕನ್ನಡ ಜನಪದ ಸಾಹಿತ್ಯದ ಬಗೆಗೆ ಹೊಸ ಅರಿವು ಮೂಡಿತು. ಇದರಿಂದ ಜನಪದ ಸಾಹಿತ್ಯದ ಅನೇಕ ಪ್ರಕಾರಗಳನ್ನು ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸುತ್ತ, ಅವುಗಳಿಗೆ ಹೊಸ ಹೆಸರುಗಳನ್ನು ಕೊಡುತ್ತ ಸಾಗಿದರು. ಪ್ರಾರಂಭದಲ್ಲಿ ಲಾವಣಿ, ಗೀಗಿ ಹಾಡುಗಳನ್ನು ಬ್ಯಾಲೆಡ್‌ಗಳ ಲಕ್ಷಣಗಳ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನಗಳು ನಡೆದವು. ಆ ಬಗೆಗೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ವಿದ್ವಾಂಸರ ಮಧ್ಯ ಸಾಕಷ್ಟು ಚರ್ಚೆಗಳು ನಡೆದು ಈಗ ಜನಪದ ಕಥನಪರವಾದ ಹಾಡುಗಳನ್ನು ಕನ್ನಡದಲ್ಲಿ ಪ್ರಸಿದ್ಧವಾದ ಹೆಸರುಗಳಿಂದಲೇ ಕರೆಯುವ ರೂಢಿಯಾಗಿದೆ. ದಕ್ಷಿಣ ಕರ್ನಾಟಕದಲ್ಲಿರುವ ಲಾವಣಿಗಳಿಗೂ ಉತ್ತರ ಕರ್ನಾಟಕದಲ್ಲಿರುವ ಗೀಗೀ / ಹರದೇಶಿ-ನಾಗೇಶಿ ಹಾಡುಗಳಿಗೂ ಹಾಡುಗಾರಿಕೆಯಲ್ಲಿ, ರಚನೆಯ ಶಿಲ್ಪದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ದಕ್ಷಿಣ ಕರ್ನಾಟಕದಲ್ಲಿ ಒಬ್ಬನೇ ಹಾಡುಗಾರ ಕೈಯಲ್ಲಿ ಚಿಟಕಿ ಹಿಡಿದು ಬಾರಿಸುತ್ತ, ಹಾಡುತ್ತ ಹೋಗುತ್ತಾನೆ. ಬಹಳವೆಂದರೆ ಅವನಿಗೆ ಸಾಥಿಯಾಗಿ ಇನ್ನೊಬ್ಬನಿರುತ್ತಾನೆ. ಇದನ್ನು ಬಯಲು ಲಾವಣಿ ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿರುವುದು ಮೇಳ ಲಾವಣಿ. ಡಪ್ಪು ಹಿಡಿದು ಒಬ್ಬನು ಮುಂದೆ ಹಾಡುತ್ತಿದ್ದರೆ, ಹಿಮ್ಮೇಳದಲ್ಲಿ ತುಂತುಣಿ ಹಾಗು ತಾಳ ಹಿಡಿದ ಇನ್ನಿಬ್ಬರು ಇರುತ್ತಾರೆ. ಕೆಲವು ಕಡೆ ಪಿಟೀಲನ್ನೂ ಬಳಸುತ್ತಾರೆ.

ಲಾವಣಿಯು ದುಂದುಮೆ ಎಂಬ ಹಾಡಿನ ಪ್ರಕಾರದ ಬೆಳವಣಿಗೆಯ ರೂಪವೆಂದು ವಿದ್ವಾಂಸರ ಸಾಮಾನ್ಯ ನಂಬುಗೆಯಾಗಿದೆ. ದುಂದುಮಿ ವಾದ್ಯದೊಂದಿಗೆ ಹಾಡುವ ವೀರರಸ ಪ್ರಧಾನವಾದ ಹಾಡುಗಳಿಗೆ ದುಂದುಮೆ ಹಾಡುಗಳು ಎಂದು ಹೆಸರು. ಮೊದಲು ಡಂಗೂರ ಸಾರುವಾಗ ಬಾರಿಸುವ ವಾದ್ಯ ಈ ದುಂದುಮಿ. ಇದಕ್ಕೂ ಮೊದಲು ಬಹುಶಃ ಇದು ರಣವಾದ್ಯವಾಗಿದ್ದಿರಬಹುದೆಂದು ಊಹಿಸಲಾಗುತ್ತದೆ. ನಂತರ ಅದರ ನಾದದ ಪರಿಣಾಮ ಕಂಡು, ಜನರನ್ನು ಹುರಿದುಂಬಿಸಲು ವೀರರಸ ಪ್ರಧಾನವಾದ ಹಾಡುಗಳ ಜೊತೆಗೆ ಇದನ್ನು ಬಾರಿಸಲು ಪ್ರಾರಂಭಿಸಿರಬೇಕು. ಇದರಿಂದ ಹಾಡಿನ ಪರಿಣಾಮವೂ ಹೆಚ್ಚಿತೆಂದು ತೋರುತ್ತದೆ.

ನಂತರ ಜನಪ್ರಿಯತೆ ಪಡೆದ ಈ ಪ್ರಕಾರ ವಿವಿಧ ವಾದ್ಯಗಳೊಂದಿಗೆ ಪ್ರಚಾರದಲ್ಲಿ ಬಂದಿರಬೇಕು. ದುಂದುಮಿ ಹೋಗಿ, (ಬಳಕೆ ಕಡಿಮೆಯಾಗುತ್ತ ಬಂದು), ಡಪ್ಪು ಬಂದು, ಕಾಲಿಗೆ ಕೈಗೆ ಗೆಜ್ಜೆ ಕಟ್ಟಿಕೊಂಡು, ತಾಳ ಹಿಡಿದು ಮೋಜು ಮಾಡಿ, ಮನರಂಜನೆಯನ್ನುಂಟು ಮಾಡಲು ಮೊದಲು ಮಾಡಿದ ದುಂದುಮಿ ಪ್ರಕಾರ, ಲಾವಣಿಯಾಗಿ ಮಾರ್ಪಟ್ಟಿರಬೇಕು. ಸೌಂದರ್ಯ ಎಂಬ ಅರ್ಥದಲ್ಲಿಯೂ ಲಾವಣಿ ಬಳಸಲ್ಪಡುತ್ತದೆ. ಬಹುಶಃ ಶೃಂಗಾರ ರಸ ಪ್ರಧಾನವಾದ ಹಾಡುಗಳಿಗೆ ಈ ಪದ ಬಳಕೆಯಾಗಿರುವ ಸಾಧ್ಯತೆಯಿದೆ. ವೀರ, ಶೃಂಗಾರ, ಹಾಸ್ಯ ಯಾವುದಾದರೂ ಒಂದು ಸನ್ನಿವೇಶವನ್ನು, ಘಟನೆಯನ್ನು ತೆಗೆದುಕೊಂಡು ಹಾಡಿ ಜನರಲ್ಲಿ ಶೂರತನದ ಅರಿವನ್ನು ಮೂಡಿಸುವುದರ ಜೊತೆಗೆ ಶೃಂಗಾರ ಹಾಸ್ಯಗಳ ಮನರಂಜನೆಯನ್ನುಂಟು ಮಾಡಿರಬೇಕು.

ಬರುಬರುತ್ತ ಸಾಮಾಜಿಕ ರೀತಿ ನೀತಿಗಳು ಬದಲಾವಣೆಗೊಂಡಂತೆ ಜನರ ಮನೋಧರ್ಮವೂ ಬದಲಾಗಿ, ವೀರರಸ ಹಿಂದೆ ಸರಿದು, ಮನರಂಜನೆಯೆ ಮುಖ್ಯವಾಗಿರಿಸಿಕೊಂಡ ಶೃಂಗಾರ ಜನರ ಮೆಚ್ಚುಗೆ ಪಡೆಯಿತು. ಒಬ್ಬನ ಸ್ಥಳಕ್ಕೆ ಒಂದು ಗುಂಪು ತಯಾರಾಯಿತು. ಜೊತೆಗೆ ವಾದ್ಯಗಳೂ ಹೆಚ್ಚಾಗಿ ರಂಜನೆಯನ್ನು ಉಂಟುಮಾಡಿದವು. ಡಪ್ಪಿನೊಂದಿಗೆ ತುಂತುಣಿ, ತಾಳ, ಪಿಟೀಲು, ಗೆಜ್ಜೆ ಮುಂತಾದವುಗಳು ಸೇರಿಕೊಂಡು ಹಾಡಿಗೆ ಹೆಚ್ಚಿನ ರಂಗು ಬಂದಿತು.

ಶೃಂಗಾರವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡ ಇಂಥ ಗುಂಪುಗಳಲ್ಲಿ ಪರಸ್ಪರ ಸ್ಪರ್ಧೆಗಳುಂಟಾಗಿರುವ ಸಾಧ್ಯತೆಯಿದೆ. ಒಬ್ಬರು ಒಂದನ್ನು ಕುರಿತು ಹಾಡಿದರೆ ಇನ್ನೊಬ್ಬರು ಅದನ್ನು ವಿರೋಧಿಸಿ ಹಾಡಿದರು. ಗಂಡು ಒಬ್ಬನದಾದರೆ ಹೆಣ್ಣು ಇನ್ನೊಬ್ಬನದಾಯಿತು. ಹಾಡಿನಲ್ಲಿ ವರ್ಣನೆ ಚಮತ್ಕಾರಗಳು ಹೆಚ್ಚಿದವು. ವಿದ್ವತ್ತಿನ ಹೆಚ್ಚಿನ ಪ್ರದರ್ಶನ ಅನಿವಾರ್ಯವಾಯಿತು. ಆಗ ಶೃಂಗಾರ ಹಾಡುಗಳಿಗೆ ಆಧ್ಯಾತ್ಮಿಕ ಸ್ಪರ್ಶ ಬಂದಿತು. ಶೃಂಗಾರದ ಕಬ್ಬಿನಿಂದ ಆಧ್ಯಾತ್ಮಿಕ ರಸ ಸೋರುವಂತಾಯಿತು. ಗಂಡು ಶಿವ–ಹರ, ಹೆಣ್ಣು ಪಾರ್ವತಿ–ಶಕ್ತಿ. ಹರನ ಆರಾಧಕರು ಶಿವ ಅರ್ಥಾತ್ ಗಂಡು ಹೆಚ್ಚು ಮಾಡಿ ಹಾಡುವವರು–ಹರದೇಶಿಗಳು. ಶಕ್ತಿಯ ಆರಾಧಕರು ಪಾರ್ವತಿ ಅರ್ಥಾತ್ ಹೆಣ್ಣು ಹೆಚ್ಚು ಮಾಡಿ ಹಾಡುವವರು ನಾಗೇಶಿಗಳು. ಹರದೇಶಿಯವರ ಗುರುತು ತುರಾಯಿ, ನಾಗೇಶಿಯವರ ಗುರುತು ಕಲ್ಗಿಗಳಾದವು. ('ಕಲ್ಗಿ' ಎಂದರೆ ಹೂಮಾಲೆ ಇಲ್ಲವೆ ದಂಡೆ ಎಂತಲೂ,

'ತುರಾಯಿ' ಎಂದರೆ ತಲೆಯ ವಸ್ತ್ರಕ್ಕೆ ಸಿಕ್ಕಿಸುವ ಪಕ್ಷಿಯ ಗರಿ ಎಂತಲೂ ಕೈಯಲ್ಲಿ ಹಿಡಿಯುವ ಪುಷ್ಪಗುಚ್ಛವೆಂತಲೂ ಅರ್ಥವಾಗುತ್ತದೆ.) ಹೀಗೆ ಲಾವಣಿಯಿಂದ ಸಿಡಿದ ಈ ಪ್ರಕಾರ 'ಹರದೇಶಿ ನಾಗೇಶಿ' ಇಲ್ಲವೆ 'ಕಲ್ಗಿ ತುರಾಯಿ' ಎಂಬ ವಿಶಿಷ್ಟ ಹೆಸರುಗಳನ್ನು ಪಡೆಯಿತು. ಇದಕ್ಕೆ ಗೀಗೀ ಹಾಡುಗಳು ಇಲ್ಲವೇ ಜೀಜೀ ಹಾಡುಗಳು ಎಂದು ಕರೆಯುವುದು ಸಾಮಾನ್ಯ ರೂಢಿ. ಈ ಹೆಸರು ಬರಲು ಕಾರಣವೆಂದರೆ ಹಾಡಿನ ಪ್ರತಿನುಡಿಯ ಕೊನೆಗೆ ಗೀಗೀ ಇಲ್ಲವೇ ಜೀಜೀ ಎಂಬ ಸೊಲ್ಲು ಪ್ರಯೋಗವಾಗುವುದೇ ಆಗಿರುವಂತಿದೆ.

ಈ ಹಾಡುಗಳು ಬೆಳೆದು ಬಂದ ಬಗೆಗೆ ಹೇಳಲಾಗುವ ಇನ್ನೊಂದು ಮೂಲ ಧರ್ಮವಾಗಿದೆ. ಹಲವರು ಶಿವಭಕ್ತರಾದರೆ ಇನ್ನು ಕೆಲವರು ಶಕ್ತಿಯ ಆರಾಧಕರೆಂಬುದು ಸರ್ವವಿದಿತ. ನಾಗೇಶಿ ಮತ್ತು ಹರದೇಶಿ ಹೆಸರುಗಳೂ ಧರ್ಮ ಮೂಲವಾದವುಗಳೇ ಆಗಿರಬೇಕು. 'ಹರದಾಸ' – ಎಂದರೆ ದೇವದಾಸರೆಂದೂ ಇದರಿಂದ 'ಹರದೇಶಿ' ಎಂತಲೂ; 'ನಾಗವಾಸ' ಎಂದರೆ ದೇವದಾಸಿಯರ ವರ್ಗವೆಂದೂ, ಇದರಿಂದ 'ನಾಗೇಶಿ' ಎಂತಲೂ ಹೆಸರು ಬಂದಿರಬೇಕೆಂದು ಹೇಳಲಾಗುತ್ತದೆ. ಇವರು ತಮ್ಮ ತಮ್ಮ ದೇವರಿಗೆ ಪೂಜೆ ಸಲ್ಲಿಸುವಾಗ, ಹಾಗು ಭಿಕ್ಷೆ ಬೇಡುತ್ತ ತಿರುಗುವಾಗ ಆಯಾ ದೇವರುಗಳ ಮಹಿಮೆಯನ್ನು ಸಾರುವ ಹಾಡುಗಳನ್ನು ಮೊದಲು ಹಾಡುತ್ತಿದ್ದರು. ಇವುಗಳಲ್ಲಿ ಆಧ್ಯಾತ್ಮಿಕ ಅಂಶಗಳಿಂದ ಕೂಡಿದ ಹಾಡುಗಳೂ ಇರುತ್ತಿದ್ದವು. ನಂತರ ಜನರ ಮೆಚ್ಚುಗೆ ಪಡೆಯುತ್ತ ಇವು ಪ್ರಚುರತೆಯನ್ನು ಪಡೆದವು. ದೇವಿಭಕ್ತರಾದ ಗೊಂದಲಿಗರ ಹಾಡುಗಾರಿಕೆ ಬಹು ಪ್ರಸಿದ್ಧವಾದುದು. ಲಾವಣಿಯ ಬೆಳವಣಿಗೆ ಇವರಿಂದಲೆ ಆಯಿತೆಂದು ಹೇಳುವ ಮಾತು ಮೇಲಿನ ಹೇಳಿಕೆಯನ್ನೇ ಸಮರ್ಥಿಸುತ್ತದೆ. ನಂತರ ಸ್ಪರ್ಧೆಗಳಿದ ಈ ಪಂಗಡಗಳಲ್ಲಿ ಶೃಂಗಾರ ಸೇರಿಕೊಂಡಿತೆಂದು ನಂಬಲಾಗುತ್ತದೆ.

ಹರದೇಶಿ ಹಾಡುಗಾರರು ಗಣಪತಿ ಅಥವಾ ಯಾವುದಾದರೂ ಗಂಡು ದೇವರ ಸ್ತುತಿಯೊಂದಿಗೆ ಹಾಡಲು ಮೊದಲು ಮಾಡುತ್ತಾರೆ. ನಾಗೇಶಿ ಪಂಗಡದವರು ಸರಸ್ವತಿ–ಶಕ್ತಿ ಇಲ್ಲವೇ ಯಾವುದಾದರೂ ಹೆಣ್ಣುದೇವತೆಯ ಸ್ತುತಿಯೊಂದಿಗೆ ಹಾಡನ್ನು, ಪ್ರಾರಂಭಿಸುತ್ತಾರೆ. ಹರದೇಶಿ ಹಾಡುವವರು ಸಾಮಾನ್ಯವಾಗಿ ಗಂಡುಮಕ್ಕಳೆ. ಆದರೆ ನಾಗೇಶಿ ಹಾಡುವವರು ಹೆಣ್ಣುಮಕ್ಕಳಲ್ಲದೆ ಗಂಡುಮಕ್ಕಳ ಗುಂಪುಗಳೂ ಇವೆ. ನಾಗೇಶಿ ಹಾಡುವ ಗಂಡಸರಲ್ಲಿ ಕೆಲವರು ಹಾಡಲು ನಿಂತಾಗ ಸೀರೆ, ಕುಪ್ಪುಸ, ಬಳೆ ಮುಂತಾದ ಹೆಣ್ಣು ವೇಷಗಳನ್ನು ಹಾಕಿಕೊಂಡಿರುವುದುಂಟು. ಏನಿಲ್ಲವೆಂದರೂ ತಲೆಗೆ ದಂಡೆಯಾದರೂ ಹಾಕಿಕೊಂಡಿರುತ್ತಾರೆಂದು ತಿಳಿದು ಬರುತ್ತದೆ. ಆದರೆ ಇತ್ತೀಚೆಗೆ ಇದು ಕಡಿಮೆಯಾಗಿ ಸಹಜವಾದ ತಮ್ಮ ವೇಷದಲ್ಲಿಯೇ ನಿಂತು ಹಾಡುವರು.

ಪರಸ್ಪರ ವಾದಿಗಿಳಿದ ಈ ಪಂಗಡಗಳ ಉದ್ದೇಶ ಬರಿ ಶೃಂಗಾರವನ್ನೇ ಕುರಿತು ಹಾಡುವುದಾಗಿರದೆ, ಬೋಧನೆಯೂ ಅವಶ್ಯವೆಂದು ತಿಳಿದು ಕಥನ ಪರವಾದ ಲಾವಣಿಗಳನ್ನು ತಮ್ಮ ಧಾಟಿ, ವಾದ್ಯಮೇಳಕ್ಕೆ ಹೊಂದುವಂತೆ ಸರಿಪಡಿಸಿಕೊಂಡಿದ್ದಾರೆ.

ಅಂದರೆ ಮೊದಲಿಗೆ ದುಂದುಮಿಯಿಂದ ಬೇರೆಯಾಗಿ, ಈಗಲೂ ಉಳಿದುಕೊಂಡು ಬಂದ ಒಬ್ಬನೇ ಹಾಡುವ ಕಥಾಸಾರ ಅಥವಾ ವೀರರಸ ಪ್ರಧಾನವಾದ ಘಟನೆಗಳನ್ನು ಬಿತ್ತರಿಸುವ ಡಪ್ಪು, ತಾಳ ಇಲ್ಲವೇ ಚಿಟಿಕೆ ಸಹಾಯದಿಂದ ಹಾಡುವ ಹಾಡುಗಳಂತೂ

ಶುದ್ಧ ಲಾವಣಿಗಳೇ ಸರಿ. ಇವು ಬಯಲು ಲಾವಣಿಗಳೆಂದೆನಿಸಿಕೊಳ್ಳುತ್ತವೆ. ನಂತರ ಶೃಂಗಾರವೇ ಪ್ರಧಾನವಾಗಿ ಬೆಳೆದ, ಗಂಡು-ಹೆಣ್ಣಿನ ಮೇಲ್ಮೆಯನ್ನು ಸಾರುವ ಹಾಡುಗಳು ಗೀಗೀ ಹಾಡುಗಳು ಎಂದೆನಿಸಿಕೊಳ್ಳುತ್ತವೆ. ಇವರು ಹಾಡುವ ಬೋಧನಾಪರವಾದ ಕಥಾಸಾರ ಹಾಡುಗಳು ಲಾವಣಿಯ ಹಳೆಯ ರೂಪಕ್ಕೆ ಸಮನಾದವುಗಳು. ಈ ಹಾಡುಗಳು ಮೇಳ ಲಾವಣಿಗಳೆಂದೆನಿಸಿಕೊಳ್ಳುತ್ತವೆ. ಇಲ್ಲಿ ಒಬ್ಬ ಡಪ್ಪು ಹಿಡಿದು ಮುಂದೆ ಹಾಡುವನು, ಉಳಿದವರು ಇತರ ವಾದ್ಯಗಳೊಂದಿಗೆ ಹಿಮ್ಮೇಳದವರಾಗಿರುತ್ತಾರೆ.

ಒಬ್ಬನೇ ಹಾಡುವ ಲಾವಣಿಗಳು ಒಂದೇ ರಾಗದಲ್ಲಿ ಏಕತಾನವಾಗಿ ಹೆಚ್ಚಿನ ಏರುಪೇರುಗಳಿಲ್ಲದೆ ಸಾಗುತ್ತವೆ. ಆದರೆ ಗೀಗೀ ಮೇಳದವರು ಅಳವಡಿಸಿಕೊಂಡ ಹಾಡುಗಳ ಈಗಿನ ರೂಪ ಬದಲಾಗಿದೆ. ಹಾಡಿನ ಮೊದಲೊಂದು ಸ್ತುತಿರೂಪದ 'ಸಖಿ' ಅನ್ನುವರು. ಹಾಡು ಮುಗಿದ ನಂತರ ಅನ್ನುವ ಪದ 'ಖ್ಯಾಲಿ' ಎಂದೆನಿಸಿಕೊಳ್ಳುತ್ತದೆ. ಇದಕ್ಕೆ ಚಕ್ಕಡ, ಚ್ಯಾಲಿ ಎಂತಲೂ ಕರೆಯುವರು. ಸಖಿ ಹಾಗು ಖ್ಯಾಲಿಗಳ ನಡುವೆ ಅನ್ನುವ ಹಾಡು ಲಾವಣಿ ಅಥವಾ ಗೀಗೀ ಹಾಡು ಆಗಿರುತ್ತದೆ. ಈ ಹಾಡಿಗೆ ಮೂರು, ನಾಲ್ಕು ಅಥವಾ ಹೆಚ್ಚಿಗೆ 'ಚೌಕ' ಗಳಿರುತ್ತವೆ. ಹಾಡಿಗೆ ಮೊದಲು ಎರಡು ಮೂರು ಅಥವಾ ಹೆಚ್ಚು ಸಾಲಿನ ಒಂದು 'ಪಲ್ಲ' ಇರುತ್ತದೆ. ಇದಕ್ಕೆ 'ಚ್ಯಾಲ' ಎಂತಲೂ ಅನ್ನುವರು. ಸಾಮಾನ್ಯವಾಗಿ ಇದನ್ನು ವಿಲಂಬಿತ ಲಯದಲ್ಲಿ ಪ್ರಾರಂಭಿಸುವರು. ಅನಂತರ ಮಧ್ಯ ಲಯದ 'ಏರುನುಡಿ'ಗಳಾದ ಮೇಲೆ ಕೆಲವು ಧೃತ್‌ಲಯದ ಸಣ್ಣ ಸಣ್ಣ ಸಾಲಿನ 'ಇಳುವು' ನುಡಿಗಳು ಬರುವವು. ಇವಕ್ಕೆ 'ದುಮಾಲಿ' ಇಲ್ಲವೆ 'ಇಳುವು' ನುಡಿಗಳೆನ್ನುವರು. ಕೆಲವು ಕಡೆ ಇವನ್ನು 'ಚ್ಯಾಲ' ಎನ್ನುತ್ತಾರೆ. ಏರು ನುಡಿಗಳ ಛಂದಸ್ಸಿಗೂ ಇಳುವು ನುಡಿಗಳ ಛಂದಸ್ಸಿಗೂ ವ್ಯತ್ಯಾಸ ಕಂಡುಬರುತ್ತದೆ. ಧಾಟಿಯೂ ಬೇರೆಯಾಗಿರುತ್ತದೆ. ಈ ದುಮಾಲಿ ನುಡಿಗಳು ಮುಗಿದ ನಂತರ ಮತ್ತೆ ಮಧ್ಯ ಲಯದ ಏರುನುಡಿಯೊಂದು ಬರುವುದು. ಇದಕ್ಕೆ 'ಕೂಡಪಲ್ಲ' ಇಲ್ಲವೇ 'ಮಿಲಾಪ' ಎಂದು ಹೆಸರುಂಟು. ಈ ನುಡಿಯ ಎರಡ್ಮೂರು ಸಾಲುಗಳ ಮುಂದೆ, ಮೊದಲ ನುಡಿಯ ಎರಡ್ಮೂರು ಸಾಲುಗಳನ್ನು ತೀವ್ರ ಧೃತ್ ಲಯದೊಂದಿಗೆ ಪುನರಾವರ್ತಿಸಿ ಕೊನೆಗೊಳಿಸುವರು. ಕೆಲವೊಂದು ಹಾಡುಗಳಲ್ಲಿ ಒಮ್ಮೊಮ್ಮೆ ನಡುನಡುವೆ ಗದ್ಯವೂ ಬರುವುದುಂಟು. ಇದಕ್ಕೆ 'ವಚನ'ವೆಂತಲೂ ಕರೆಯುತ್ತಾರೆ. ಮತ್ತೆ ಕೆಲವು ಸಲ ಅಲ್ಲಲ್ಲಿ ಶ್ಲೋಕಗಳನ್ನು ಜೋಡಿಸಿರುತ್ತಾರೆ. ಇಲ್ಲಿಗೆ ಒಂದು ಚೌಕ ಮುಗಿಯುತ್ತದೆ. ಹೀಗೆ ಮುಕ್ತಾಯಗೊಂಡ ಮೊದಲನೆಯ ಚೌಕದಷ್ಟೆ ಏರು ಇಳುವು ನುಡಿಗಳನ್ನು ಹೊತ್ತ ಮುಂದಿನ ಚೌಕಗಳು ಇದೇ ರೀತಿ ಕೊನೆಗೊಳ್ಳುತ್ತವೆ.

ಕೆಲವೊಮ್ಮೆ ಒಂದೊಂದು ಚೌಕದಲ್ಲಿ ಹೆಚ್ಚು ಕಡಿಮೆ ನುಡಿಗಳೂ ಬರುವುದುಂಟು. ಒಂದು ಹಾಡಿನಲ್ಲಿ ಕನಿಷ್ಟವೆಂದರೆ ಮೂರು ಚೌಕಗಳಿರಬೇಕೆಂಬ ನಿಯಮವಿದೆ. ಹೆಚ್ಚಿನ ಚೌಕಗಳುಳ್ಳ ಹಾಡುಗಳೂ ಸಾಕಷ್ಟಿವೆ. ಹಾಡಿನ ಕೊನೆಯ ನುಡಿಯಲ್ಲಿ ಕವಿಯ ಹೆಸರು, ಆತನ ಗುರು, ಆರಾಧ್ಯ ದೇವತೆ, ಮನೆತನ, ಊರು ಮುಂತಾದ ವಿವರಗಳು ನಮೂದಿಸಲ್ಪಟ್ಟಿರುತ್ತವೆ. ಜೊತೆ ಹಾಡುಗಾರರ ಹೆಸರುಗಳನ್ನೂ ಸೇರಿಸಿರುತ್ತಾರೆ. ಕೆಲವೊಮ್ಮೆ ರಚಿಸಿದ ದಿನಾಂಕ, ತಾಲೂಕ, ಜಿಲ್ಲಾ ಇತ್ಯಾದಿ ಮಾಹಿತಿಯೊಂದಿಗೆ ಹಾಡು ಮುಗಿಯುತ್ತದೆ. ಇದರಿಂದ ಕವಿಯ ಪರಿಚಯ ತಿಳಿದು ಬರುವುದಲ್ಲದೆ, ಹಾಡಿನ ಹಳಮೆ, ಅದು

ರಚನೆಗೊಂಡಿರುವ ಪ್ರದೇಶ ಮುಂತಾದವುಗಳನ್ನು ನಿರ್ಧರಿಸಿಕೊಳ್ಳಲು ಕೂಡ ಅನುಕೂಲವಾಗುತ್ತದೆ.

* * *

ಕನ್ನಡ ಲಾವಣಿಗಳನ್ನು ೧೩೦ ವರ್ಷಗಳ ಹಿಂದೆ ಶಾಲಾ ಮಾಸ್ತರರುಗಳ ಸಹಾಯದಿಂದ ಸಂಗ್ರಹಿಸಿ, ಅವುಗಳನ್ನು ಸರಿಯಾಗಿ ಅರಿತುಕೊಂಡು, ಪ್ರಕಟಿಸಿದವರು ಜೆ. ಎಫ್. ಫ್ಲೀಟ್ ಅವರು. 'ಇಂಡಿಯನ್ ಆಂಟಿಕ್ವರಿ' ಎಂಬ ಪತ್ರಿಕೆಯ ಸಂಪಾದಕರಾಗಿದ್ದ ಅವರು ೧೮೮೫–೧೮೯೦ರ ಅವಧಿಯಲ್ಲಿ ಕನ್ನಡದ ಐದು ಲಾವಣಿಗಳನ್ನು ಪ್ರಕಟಿಸಿರುವುದು ಕಂಡುಬರುತ್ತದೆ. 'ಸಂಗೊಳ್ಳಿ ರಾಯಣ್ಣನ ದಂಗೆ', 'ಆದಾಯ ತೆರಿಗೆ', 'ಹಲಗಲಿಯ ಬೇಡರು', 'ಸಂಗ್ಯನ ಅಪರಾಧ ಮತ್ತು ಸಾವು', 'ಕಿತ್ತೂರ ಚನ್ನವ್ವನ ಸೊಸೆ'– ಎಂಬ ಐದು ಐತಿಹಾಸಿಕ ಮಹತ್ವವುಳ್ಳ ಲಾವಣಿಗಳನ್ನು ಅವರು ಪ್ರಕಟಿಸಿದ್ದಾರೆ. ಈ ಐದು ಲಾವಣಿಗಳನ್ನು 'ಇಂಡಿಯನ್ ಆಂಟಿಕ್ವರಿ' ಯಿಂದ ಪ್ರತಿಮಾಡಿಕೊಂಡು, ಕ್ಯಾತನಹಳ್ಳಿ ರಾಮಣ್ಣನವರು **'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು'** ಎಂಬ ಹೆಸರಿನಲ್ಲಿ ೧೯೭೨ರಲ್ಲಿ ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ. ಇದಕ್ಕೆ ಹೊರತಾಗಿ ಫ್ಲೀಟರು ಸಂಗ್ರಹಿಸಿದ, ಆದರೆ ಪ್ರಕಟವಾಗದೇ ಉಳಿದ ಕನ್ನಡ ಜನಪದ ಹಾಡುಗಳೆಲ್ಲವನ್ನೂ ಸಂಗ್ರಹಿಸಿ, ೧೯೯೧ರಲ್ಲಿ **'ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳು'** ಎಂಬ ಹೆಸರಿನಲ್ಲಿ ಮತ್ತೊಂದು ಕೃತಿಯನ್ನು ಕ್ಯಾತನಹಳ್ಳಿಯವರು ಪ್ರಕಟಿಸಿದ್ದಾರೆ. ಅದರಲ್ಲಿ ಮತ್ತೆ ಹೊಸದಾಗಿ ೧೨ ಲಾವಣಿಗಳು ಪ್ರಕಟವಾಗಿವೆ.

ಶಾಲಾ ಶಿಕ್ಷಕರ ಸಹಾಯದಿಂದ ಫ್ಲೀಟರು ಸಂಗ್ರಹಿಸಿದ ಈ ಲಾವಣಿಗಳ ರಚನೆಯನ್ನು, ಗಮನಿಸಿದರೆ, ಇವೆಲ್ಲ ಈಗಿನ ಹರದೇಶಿ–ನಾಗೇಶಿ ಹಾಡುಗಳ ರಚನೆಯನ್ನು ಹೊಂದಿರುವುದು ಕಂಡುಬರುತ್ತದೆ. ಮೊದಲಿಗೆ ಒಂದು ಪಲ್ಲ. ನಂತರ ಎರಡ್ಮೂರು ಸಮಾನ ಸಾಲುಗಳುಳ್ಳ ನುಡಿಗಳು. ಆನಂತರ ಇಳುವು ನುಡಿಗಳು. ನಂತರ ಒಂದು ಕೂಡು ಪಲ್ಲ. ಹೀಗೆ ಮುಕ್ತಾಯವಾಗುವ ಚೌಕಗಳಿಗೆ ಈ ಕೃತಿಯಲ್ಲಿ 'ನುಡಿ'ಗಳು ಎಂದಿದ್ದಾರೆ. ಆಗಲೇ ಈ ಹಾಡುಗಳಲ್ಲಿ ಮೂರು ಚೌಕಗಳು ಇರಬೇಕೆಂಬ ನಿಯಮ ಮೀರಿ, ಹತ್ತು ಚೌಕ್‌ಗಳ ವರೆಗೆ ಬೆಳೆದಿದ್ದವು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಉದಾಹರಣೆಗಾಗಿ ಒಂದು ಹಾಡಿನ ಒಂದು ಚೌಕ ಅನ್ನು ಸಂಗ್ರಹವಾಗಿ ನೋಡಬಹುದಾಗಿದೆ.

ಕಿತ್ತೂರ ಚನ್ನವ್ವನ ಸೊಸೆ

ಪಲ್ಲಾ
ಕಿತ್ತೂರ ಚನ್ನವ್ವನ ಸೊಸಿ ಹೊಂಗಲ ಬಿಟ್ಟು ಹೋಗುವಾಗ
ಮಾಡುತ್ತಿದ್ದಳಣ್ಣ ಮಹದುಖ್ಖ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದಕಾ

೧ನೇ ನುಡಿ

ಆರು ಆನಿ ಹದಿನಾರು ವಂಟಿ ಹನ್ನೆರಡು ಸಾವಿರ
ಕಾಲಬಲಾ ಮಾರಾಯ ತೋಪ ಹೋದವು ಹೇರಿ
ಹತ್ತುಹಂತಾ ಮುತ್ತಿನ ಪಾಲಿಕಿ ಸುತ್ತಲ್‌ಹಿಡುವ
ಹತ್ತು ಎಂಟು ಬೆಳ್ಳಿಕಾವಿನ ಆಪ್ತಾಗೇರಿ
ಚಂದದಿಂದ ಚಕ್ಕಡಿಗಳು ವೊಂದು ವುಳಿಯದ್ಹೋದವು
ತುರಂಗ ರಥದ ಚವರಿ

ಶಿಟ್ಟಿನ ಶಿಪಾಯಿಗಳು ದಿಟ್ಟತನದಲ್ಲಿ
ಹತ್ತುಹಂತಾ ಯಷ್ಟು ಇದ್ದವಲ್ಲಿ ಜರದ ಮರಿ
ಕಲ್ಲೂರ ಕಲಬಸಪ್ಪ ಕನ್ನೂರ ಮಲ್ಲಪ್ಪ
ಅವರಾದಿ ವೀರಪ್ಪ ಇದ್ದರ ಕಾರ್ಬಾರಿ
ಹಿಂತಿಂತಾ ಸರದಾರು ಕುಂತರ ಬಿದ್ದ ಹೋದಾರು
ಹೆಂತಾ ಬಂದಿತೊ ನಮಗ ಮಾರಿ ||ಚ್ಯೇ||

ಪಾಂಡವರಿಗೊನವೇಸ ಬಂದಂತೆ ಆದಿತು
ಪಾಪಿ ದುಸ್ವಾಸ ದ್ರೌಪತಿ ಸೀರಿ ಶಳೆದೋಯ್ವವಾಗ
ಭೂಪತಿಗಳೈವರು ಇದ್ದೇನು ಮಾಡುವರು

ಪಾಪಿ ಕೇಳ ನಮ್ಮಂತಾ ಪಾತಕರ್ಯಾರಿಲ
ಪನ್ನಂಗಧರನ ಸ್ತುತಿಸುತ ಈರವ್ವಾ
ಪಾರ್ವತಿ ಅರಸನ ನೆನಿಸಿದಳೊ ||ಯೇರ||

ಪೂರ್ವಜನ್ಮದ ಲಿಖಿತ ಪುಣ್ಣೆ ನಮ್ಮದು ತಪ್ಪಿತೆಂದು
ಬರದಾನ್ಯಾಕ ಬ್ರಹ್ಮ ಹಿಂತಾ ಬರಿ ||

ಇದು ಹಾಡಿನ ಒಂದು ಚೌಕ್. ಸಂಪಾದಕರು ಮುದ್ರಿಸಿದಂತೆ ಇಲ್ಲಿ ತೆಗೆದುಕೊಳ್ಳಲಾಗಿದೆ. ಪಲ್ಲ ಸರಿಯಾಗಿದೆ. ೧ನೇ ನುಡಿ ಎನ್ನುವುದು ೧ನೇ ಚೌಕ್. ಚೌಕ್‌ದಲ್ಲಿ ಮೊದಲಿಗೆ ಒಂದು ನುಡಿ ಇದೆ. ಇಂತಹ ಮೂರ್‍ನಾಲ್ಕು ನುಡಿಗಳು ಬರಹುದು. ನಂತರ ಆರು ಸಾಲುಗಳನ್ನು ಒಂದೇ ನುಡಿಯಂತೆ ಮುದ್ರಿಸಿ ||ಚ್ಯೇ|| ಎಂದಿರುವಲ್ಲಿ, ಎರಡೆರಡು ಸಾಲುಗಳಿಗೆ ಒಂದರಂತೆ ಬಿಡಿಸಿ ಓದಿದರೆ, ಅಲ್ಲಿ ಮೂರು ಚ್ಯಾಲ (ಇಳುವು ನುಡಿ)ಗಳಿವೆ. ಅದಕ್ಕಾಗಿಯೇ ||ಚ್ಯೇ|| ಎಂದು ಗುರುತಿಸಲಾಗಿದೆ. ಇವನ್ನೇ ಇಳುವು ನುಡಿಗಳೂ ಎನ್ನುತ್ತಾರೆ. ನಂತರ ಬರುವುದು ಯೇರು ನುಡಿ. ಈ ನುಡಿ ಚೌಕದ ಸಾಮಾನ್ಯ ನುಡಿಗಳ ಛಂದಸ್ಸಿನಂತೆ ಇರುತ್ತದೆ. ಇದೇ ಚೌಕದ ಕೊನೆಯ ನುಡಿ ಆಗಬೇಕಿತ್ತು. ಆದರೆ ಈ ನುಡಿ ಮುಗಿದ ನಂತರ ಮತ್ತೆ ಎರಡು ಸಾಲುಗಳನ್ನು ಬೆಳೆಸಿದ್ದಾರೆ. ಈ ಎರಡು ಸಾಲುಗಳಿಗೆ ಹಾಡಿನ ಮೊದಲಿನ ಪಲ್ಲವನ್ನು ಕೂಡಿಸಿಕೊಳ್ಳಬೇಕಾಗುತ್ತದೆ. ಆಗ ಇದು ಕೂಡುಪಲ್ಲವಾಗುತ್ತದೆ. ಇಂತಹ ೧೦ ಚೌಕ್‌ಗಳು ಈ ಹಾಡಿನಲ್ಲಿವೆ. ಹೀಗಾಗಿ

ಗೀಗೀಹಾಡುಗಳ ಈಗಿನ ರಚನೆ ೧೩೦ ವರ್ಷಗಳಷ್ಟು ಹಿಂದೆಯೂ ಇತ್ತೆಂದು ಕಂಡುಬರುತ್ತದೆ.

ಫ್ಲೀಟರು ತಾವು ಸಂಸ್ಕರಿಸಿ ಪ್ರಕಟಿಸಿದ ಐದು ಲಾವಣಿಗಳನ್ನು, ಜೊತೆಗೆ ಅಪ್ರಕಟಿತ ೧೨ ಲಾವಣಿಗಳನ್ನು ನೋಡಿದರೂ ಅವು ಕೂಡ ಐತಿಹಾಸಿಕ ಲಾವಣಿಗಳೆ ಆಗಿವೆ. ಕೇವಲ ಐತಿಹಾಸಿಕ ಲಾವಣಿಗಳನ್ನೇ ಸಂಗ್ರಹಿಸಿರುವ ಫ್ಲೀಟರ ಉದ್ದೇಶ ಏನಿತ್ತು ಎಂಬುದು ನಮಗೆ ಸ್ಪಷ್ಟವಾಗುವುದಿಲ್ಲ. ಆದರೆ ಗೀಗೀ ಹಾಡುಗಳ ಒಂದು ಗುಣ ನಮಗೆ ಗೊತ್ತಾಗುವುದೇನಂತೆ ಸ್ಥಳೀಯ ಘಟನೆಗಳನ್ನು ಆ ಕೂಡಲೇ ದಾಖಲಿಸುವ ಕೆಲಸ ಮಾಡಿರುವುದು. ಇದರಿಂದ ಕೇವಲ ಲಿಖಿತ ದಾಖಲೆಗಳನ್ನೇ ಅವಲಂಬಿಸಿ ಬರೆದ ನಮ್ಮ ಇತಿಹಾಸ, ಇನ್ನುಮುಂದೆ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡುಬಂದ ಸಂಗತಿಗಳನ್ನೂ ಗಮನಿಸಿ, ಪುನಃ ರಚಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂಬುದು ಮುಖ್ಯ. ಉದಾಹರಣೆಗೆ ಒಂದು ಸಂಗತಿಯನ್ನು ಗಮನಿಸಬೇಕು: ಕಲಬುರಗಿ ಜಿಲ್ಲೆಯ ಸುರಪುರ ಒಂದು ಬೇಡನಾಯಕರ ಸಂಸ್ಥಾನವಾಗಿತ್ತು. ಬ್ರಿಟಿಷರ ವಿರುದ್ಧ ಹೋರಾಡಲು ಸಂಗೊಳ್ಳಿ ರಾಯಣ್ಣನು ಸುರಪುರ ಸಂಸ್ಥಾನದ ಅರಸರ ಸಹಾಯವನ್ನು ಪಡೆದನು, ಬೇಡರ ಮೂರುನೂರು ಪಡೆ ರಾಯಣ್ಣನ ಸಹಾಯಕ್ಕೆ ಹೋಯಿತು ಎಂಬ ಸಂಗತಿ ಉಳಿದುಕೊಂಡು ಬಂದಿರುವುದು ಫ್ಲೀಟ ಸಂಗ್ರಹದ **'ಸಂಗೋಳ್ಳಿ ರಾಯಣ್ಣನ ದಂಗೆ'** ಎಂಬ ಲಾವಣಿಯಲ್ಲಿ ಮಾತ್ರ.

ವತ್ತರ ಮಾಡಿ ರಾಯಿನಾಯಿಕಾ
ಹೆತ್ತ ತಾಯಿ ಪಾದಕ ಬಿದ್ದು
ಮತ್ತ ಕತ್ತಿ ಹಿಡಿಕೊಂಡೊಂಟ ಧೀರಾ।

ಮಗಲಾಯರ ಶೀಮಿಗಿ ಹೋಗಿ
ಸುರಪುರರಸರ ಯಿದರಿಗಿ ನಿಂತು
ಕರವ ಮುಗಿದು ಮಾಡಿದಾನ ನಮಸ್ಕಾರಾ।

ಧೀರ ಹೌದೊ ರಾಯಿನಾಯಿಕಾ
ಹಾರಿ ಹನ್ನೆರಡಕ್ಕಡಿ ಜಿಗದಾ
ಅರಸ ನೋಡಿದಿವನ ಕಣ್ಣಾರಾ।

ಅರಸು ಮೆಚ್ಚಿ ಹರುಸವಾಗಿ
ಸಜ್ಜ್ಯಾ ನಿನಗ ಸರಿಯಿಲ್ಲೆಂದು
ಯೇನ ಬೇಡ್ತಿ ಬೇಡಂದ ರಣಸೂರಾ।

ಯೆನಗ ವಲಿದಾರ ನೀನು
ಮುನ್ನೂರು ಬ್ಯಾಡಕಿ ಕೊಡು
ಇನ್ನು ಆರಿಸಿ ವೈತೇನೋ ಪೂರಾ

ದಂಡನೆಲ್ಲಾ ತೊಕೊಂಡು ಬಂದು
ಭಂಡಾಯಿ ಮಾಡುನೆಂತೆಂದು
ಅವರಿಗ್ಹೇಳಿದಾನೊ ಚಾತುರಾ।

ರವಡ ಮಾಡಿ ರಾಯಿನಾಯಿಕಾ
ದವಡ ಮಾಡಿ ತಂದ ದಂಡನ
ಗಿಡದಾಗ ವೋದಿಟ್ಟ ಯೆಲ್ಲಾ ಬಾರಾ।

ಇಂತಹ ದಾಖಲೆಯಿಲ್ಲದ ಚರಿತ್ರೆಯ ಸಂಗತಿಗಳನ್ನು ಈ ಐತಿಹಾಸಿಕ ಲಾವಣಿಗಳಲ್ಲಿ ಹುಡುಕುವ ಕೆಲಸ ಅವಶ್ಯವಾಗಿ ನಡೆಯಬೇಕು. ಇಂತಹ ಕೆಲಸ ಇಡೀ ಲಾವಣಿ ಸಾಹಿತ್ಯದಲ್ಲಿ ನಡೆಯಬೇಕಾದ ಅವಶ್ಯವಿದೆ. ಈ ದೃಷ್ಟಿಯಿಂದ ಪ್ರಸ್ತುತ ಕೃತಿ ಮಹತ್ವದ್ದೆನಿಸುತ್ತದೆ.

ಹಲಸಂಗಿ ಗೆಳೆಯರ ಎರಡನೇ ಪ್ರಕಟನೆ **'ಜೀವನ ಸಂಗೀತ'** ಪ್ರಕಟವಾದುದು ೧೯೩೩ರಲ್ಲಿ. ಹಲಸಂಗಿ ಗೆಳೆಯರ ಗುಂಪಿನ ಶ್ರೀ ಸಿಂಪಿ ಲಿಂಗಣ್ಣ ಹಾಗೂ ಪಿ. ಧೂಲಾಸಾಹೇಬರು 'ಜೀವನ ಸಂಗೀತ'ವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಲಾವಣಿಯ ರಚನೆ ಖಚಿತವಾಗಿ ತಿಳಿದವರಿಂದ 'ಜೀವನ ಸಂಗೀತ' ಸಂಪಾದಿಸಲ್ಪಟ್ಟದ್ದರಿಂದ ಇಲ್ಲಿಯ ಹಾಡುಗಳ ಪ್ರಕಟನೆಯಲ್ಲಿ ಅವುಗಳ ಸಂಪೂರ್ಣ ರಚನೆಯನ್ನು ಕಾಣಬಹುದಾಗಿದೆ. ೧೯೩೩ರಲ್ಲಿ ಮೊದಲನೇ ಸಲ ಪ್ರಕಟವಾಗುವಾಗ ೧೨ ಲಾವಣಿಗಳು, ಮೊದಲಿಗೆ ಒಂದು ಸಖಿ, ಕೊನೆಗೆ ಒಂದು ಖ್ಯಾಲಿ– ಇಷ್ಟು ಹಾಡುಗಳನ್ನು ಪ್ರಕಟಿಸಲಾಗಿತ್ತು. ೧೯೭೧ರಲ್ಲಿ ಮರುಮುದ್ರಣವಾಗುವಾಗ ನಾಲ್ಕು ಲಾವಣಿಗಳನ್ನು ಅನುಬಂಧದ ರೂಪದಲ್ಲಿ ಸೇರಿಸಲಾಗಿದೆ. ಫ್ಲೀಟರ ನಂತರ ಲಾವಣಿ/ಗೀಗೀ ಹಾಡುಗಳನ್ನು ತಿಳಿದವರು ಸಂಗ್ರಹಿಸಿ, ಒಂದು ಕೃತಿಯ ರೂಪದಲ್ಲಿ ಪ್ರಕಟಿಸಿದ ಮೊದಲನೇ ಕೃತಿ ಇದು. ಇಲ್ಲಿ ಒಂದು ಮಾತನ್ನು ಗಮನಿಸಬೇಕು– ಹೊರದೇಶದವನಾದ ಫ್ಲೀಟ ಸಂಗ್ರಹಿಸಿದ್ದು ಸ್ವಾತಂತ್ರ್ಯಕ್ಕಾಗಿ ಕನ್ನಡಿಗರು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಘಟನೆಗಳುಳ್ಳ ಹಾಡುಗಳನ್ನು; ಆದರೆ ಕನ್ನಡಿಗರು ಸ್ವತಃ ಸಂಗ್ರಹಿಸಿದ್ದು ಶೃಂಗಾರ ಲಾವಣಿಗಳನ್ನು. ಇದು ಹೀಗೇಕೆ? ಎಂಬುದು ನಮಗೆ ಒಂದು ಪ್ರಶ್ನೆಯಾಗಿ ಕಾಡುತ್ತದೆ.

ಹಲಸಂಗಿ ಗೆಳೆಯರು ೧೯೩೧ರಲ್ಲಿ ಪ್ರಥಮ ಸಂಕಲನವಾಗಿ ಹೆಣ್ಣುಮಕ್ಕಳು ಹಾಡಿಕೊಳ್ಳುವ ಬೀಸುವ ಹಾಡುಗಳಾದ ತ್ರಿಪದಿಗಳ ಸಂಗ್ರಹ ಪ್ರಕಟಿಸಿದ ನಂತರ, ಎರಡನೇ ಕೊಡುಗೆಯಾಗಿ ೧೯೩೩ರಲ್ಲಿ 'ಜೀವನ ಸಂಗೀತದ'ದ ಮೂಲಕ ಗಂಡಸರ ಹಾಡುಗಳ ಸಂಗ್ರಹ ಕೊಟ್ಟಿದ್ದಾರೆ. ಜನಪದ ಪದ್ಯ ಪ್ರಕಾರದಲ್ಲಿ ಹಲಸಂಗಿ ಗೆಳೆಯರು ಕಂಡುಕೊಂಡ 'ಹೆಂಗಸರ ಹಾಡುಗಳು' ಮತ್ತು 'ಗಂಡಸರ ಹಾಡುಗಳು' ಎಂಬ ವೈಜ್ಞಾನಿಕ ದೃಷ್ಟಿಯು ಇಲ್ಲಿ ಕಾಣುತ್ತದೆ. ಗರತಿಯ ಹಾಡಿನಲ್ಲಿ ಹೆಣ್ಣಿನ ಮನೋಭಾವನೆ ಹುದುಗಿದ್ದರೆ 'ಜೀವನ ಸಂಗೀತ'ದಲ್ಲಿ ಗಂಡಸರ ಮನೋಭಾವನೆಯನ್ನು ಕಾಣುತ್ತೇವೆ.

'ಜೀವನ ಸಂಗೀತ'ವು ಕಥನ ಪರವಾದ ಹಾಡುಗಳನ್ನು ಹೊತ್ತ ಕನ್ನಡ ಜನಪದ

ಸಾಹಿತ್ಯದ ಪ್ರಥಮ ಕೃತಿ. ಅಲ್ಲದೆ ಹಳೆಯ ಲಾವಣಿಗಳ ಮೊದಲ ಸಂಗ್ರಹ. ಈ ಮಾತು ಈಗ ಪ್ರಚಲಿತದಲ್ಲಿರುವ ಗೀಗೀ ಹಾಡುಗಳನ್ನು ಗಮನಿಸಿ ಹೇಳಿದ್ದು. 'ಜೀವನ ಸಂಗೀತ'ದ ಸಂಗ್ರಹಕಾರರು ಆಗಿನ ಕಾಲಕ್ಕೂ– ಅಂದರೆ ೧೯೩೩ರ ಸುಮಾರಿಗೆ ವಸ್ತು, ರಚನೆಯಲ್ಲಿ ಬದಲಾವಣೆಗಳಾಗುತ್ತಿದ್ದವು ಎಂಬುದನ್ನು ದಾಖಲಿಸುತ್ತಾರೆ. "ಈಚೆಗಿನ ಕಾಲದ ಜನಜೀವನದಲ್ಲಿ ಹೊರಜಂಬ ಹೆಚ್ಚಾಗಿ ಒಳ ಜೊಳ್ಳುತನ ಬೆಳೆದು ಬಂದಿದ್ದರಿಂದ ಜನರಲ್ಲಿದ್ದ ಸವಿಗಾರಿಕೆಯೆಲ್ಲ ಲೋಪವಾಗಿ ರಸವಂತಿಕೆಯು ಮುಳುಗಿ ಹೋಗಿದೆ. ಜೀವನದಲ್ಲಿಯೇ ರಸವಿಲ್ಲದಾಗ ಅವರ ಹಾಡಿನಲ್ಲಿ ಎಲ್ಲಿಯ ರಸವು ಬರಬೇಕು? ಈಚೆಗಿನ ಹಾಡುಗಳೆಂದರೆ ನೀರಸವಾದ ಲೆಕ್ಚರನ್ನು ಧ್ವನಿಗೂಡಿಸಿ ತಾಳದಲ್ಲಿ ಹೇಳಿದಂತೆ... ಒಟ್ಟಿನಲ್ಲಿ ಈಚೆಗೆ ಇಪ್ಪತ್ತು ವರ್ಷಗಳಲ್ಲಿ ಹೊರಟ ಹೊಸ ಲಾವಣಿಕಾರರ ಹಾಡುಗಳಲ್ಲಿ ಕಾವ್ಯದ ವಿಲಾಸವಿಲ್ಲ ಬರೀ ಸಂಗೀತಮಯ ಲೆಕ್ಚರ್" (ಪರಿಚಯ VI). ಈ ರೀತಿ ಆಗಿನ ಕಾಲದ ಲಾವಣಿ ಸಾಹಿತ್ಯ ಮತ್ತು ಜನರ ಅಭಿರುಚಿ ಇವುಗಳ ಸ್ಥಿತಿಗತಿಗಳನ್ನು ಗಮನಿಸಿ, ತಾವು ಉತ್ತಮವಾದ ಹಳೆಯ ಇಪ್ಪತ್ತು ವರ್ಷಗಳ ಹಿಂದಿನ ಲಾವಣಿಗಳನ್ನು ಸಂಗ್ರಹಿಸಿ ಕೊಡುತ್ತಿರುವುದಾಗಿ ಹೇಳಿದ್ದಾರೆ. ಅಂದರೆ ಸು. ೧೯೧೦ ರ ಸುಮಾರಿಗೆ ರಚನೆಗೊಂಡ ಲಾವಣಿಗಳು 'ಜೀವನ ಸಂಗೀತ'ದಲ್ಲಿವೆ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.

ನಮ್ಮಲ್ಲಿ ಲಾವಣಿ ಪ್ರಕಾರ ಮಹಾರಾಷ್ಟ್ರದಿಂದ ಬಂದುದು ಎಂಬುದನ್ನು ವಿದ್ವಾಂಸರು ಅಲ್ಲಗಳೆದಿಲ್ಲ. ಮಹಾರಾಷ್ಟ್ರದ ಶಾಹಿರಿ ಕಾವ್ಯದ (೧೬೫೦–೧೮೧೮) ಮುಖವಾದ ಎರಡು ಪ್ರಕಾರಗಳು– ವೀರ ಕಾವ್ಯಗಳಾದ ಪೋವಾಡ ಮತ್ತು ಶೃಂಗಾರ ಕಾವ್ಯಗಳಾದ ಲಾವಣಿಗಳು, ಈ ಎರಡೂ ಪ್ರಕಾರದ ಹಳೆಯ ಉದಾಹರಣೆಗಳು 'ಜೀವನ ಸಂಗೀತ'ದಲ್ಲಿ ದೊರೆಯುತ್ತವೆ. ಪೋವಾಡಕ್ಕೆ ಭೀಷ್ಮಪರ್ವ, ವತ್ಸಲಾಹರಣ ಉದಾಹರಣೆಗಳಾದರೆ, ಲಾವಣಿಗೆ 'ಸಂಪಿಗೆ ತೆನಿಯಂಥ ಹುಡುಗ', 'ಅಸಲಜಾತ ಹೆಣ್ಣು', 'ಚಂದ್ರುಣಿ', 'ಗಿಡ್ಡ ಪೋರಿ', 'ಕರಿ ಹುಡುಗಿ' ಮುಂತಾದವು ಉದಾಹರಣೆಗಳಾಗಿವೆ.

ಮಹಾರಾಷ್ಟ್ರದಲ್ಲಿ ಶಾಹಿರಿ ಕಾವ್ಯ (೧೬೫೦–೧೮೧೮) ರಾಷ್ಟ್ರೀಯ ಮನೋಧರ್ಮದ ಹಿನ್ನೆಲೆಯಲ್ಲಿಯೇ ಬೆಳೆದು ಬಂದಂತಹದು. ಅದರಂತೆ ಕನ್ನಡದಲ್ಲೂ ಕೂಡಾ 'ಲಾವಣಿ' ಸಾಹಿತ್ಯ ಭಾರತೀಯ ನವೋದಯ ಸಂದರ್ಭದಲ್ಲಿ ಹುಟ್ಟಿ ಬಂದುದು. ಮುಖ್ಯವಾಗಿ ನಮ್ಮ ದಾಸ್ಯ ಮತ್ತು ಬಂಧನದ ವಿರುದ್ಧ ಬಂಡೆದ್ದ ಸಂಗತಿಗಳು ಕನ್ನಡ ಜನಪದ ಸಾಹಿತ್ಯದಲ್ಲಿ ಕೇವಲ ಲಾವಣಿ ಪ್ರಕಾರದಲ್ಲೇ ಪ್ರಮುಖವಾಗಿ ದಾಖಲಾಗುತ್ತ ಬಂದಿವೆ. ಫ್ಲೀಟರು ಸಂಗ್ರಹಿಸಿದ ಲಾವಣಿಗಳನ್ನು ಗಮನಿಸಿದಾಗ, 'ಹುಲಕುಂದ ಶಿವಲಿಂಗಸ್ವಾಮಿ ರಚಿಸಿದ ಕನ್ನಡ ಗೀಗೀ ಪದಗಳು' (೧೯೮೫), 'ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ' (೧೯೭೫) ಈ ಕೃತಿಗಳನ್ನು ನೋಡಿದಾಗ ಈ ವಿಷಯ ನಮಗೆ ಮನದಟ್ಟಾಗುತ್ತದೆ.

ಹಲಸಂಗಿ ಗೆಳೆಯರು 'ಜೀವನ ಸಂಗೀತ'ದ ಹಾಡುಗಳನ್ನು ಆಯ್ಕೆ ಮಾಡುವಾಗ– ಈ ಪ್ರತಿಭಟನೆಯ ಮನೋಭಾವನೆಯ ಹಾಡುಗಳನ್ನು ಹೆಚ್ಚಾಗಿ ಆಯ್ಕೆ ಮಾಡದೆ, ಶೃಂಗಾರ ಪರ ಲಾವಣಿಗಳನ್ನೆ ಆಯ್ಕೆ ಮಾಡಿರುವುದು ಕಂಡುಬರುತ್ತದೆ. ಒಂದರ್ಥದಲ್ಲಿ ಇದು 'ಜೀವನ ಸಂಗೀತ'ದ ಕೊರತೆಯೆಂದೇ ಹೇಳಬೇಕು. ಆದರೆ 'ಅಪೂರ್ವ ಮಾತಿದು'

ಎಂಬ ಒಂದು ಲಾವಣಿ ಮಾತ್ರ ನೇರವಾಗಿ ಬ್ರಿಟಿಷ್ ಆಡಳಿತದಿಂದಾಗಿ ಹದಗೆಟ್ಟ ಜನಜೀವನವನ್ನೇ ವ್ಯಾಪಕವಾಗಿ ಚಿತ್ರಿಸುತ್ತದೆ. 'ಭೀಷ್ಮಪರ್ವ', 'ವತ್ಸಲಾಹರಣ'ದಂತಹ ವೀರರಸ ಪ್ರಧಾನವಾದ ಹಾಡುಗಳು 'ಜೀವನ ಸಂಗೀತ'ದಲ್ಲಿ ಸೇರಿ ಹೋಗಿರುವುದು, ಆ ಕೊರೆತೆಯನ್ನು ಅಲ್ಪಮಟ್ಟಿಗೆ ತುಂಬಿಕೊಡುತ್ತವೆ. ಗೋಪಾಳ ದುರದುಂಡಿ ವಿರಚಿತ 'ಅಷ್ಟೂರ ಮಾತಿದು' ಲಾವಣಿ ಹೀಗೆ ಪ್ರಾರಂಭವಾಗುತ್ತದೆ:

ಅಷ್ಟೂರ ಮಾತಿದು ನಿಷ್ಟೂರ ಹೇಳತಿನಿ
ಬಿಟ್ಟಿಲ್ಲ ತುಂಬೀತು ಜಗವೆಲ್ಲ
ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ।

ವಿಶ್ವಾಸ ಗೆಳೆತನ ಗೆಳೆತ ವಿಶ್ವಾಸ
ಅಳೆದು ಬಳಸತಿರಿ ನೀವೆಲ್ಲ
ಹಿರಿಯರ ಕಿರಿಯರ ಮರಿಯಾದೆ ಉಳಿದಿಲ್ಲ
ಕಾಯ್ದೆ ಬುಕ್ಕ ಓದಿದ ಮ್ಯಾಲ ।

ಸೆರೆಗಾರನ ಅಂಗಡಿ ಶಿವನ ಗದ್ದುಗೀ
ನ್ಯಾಯ ನಡಿಯದು ರಾತರಿ ಹಗಲ
ಸಿಂದಿಖಾನ್ಯಾಗ ಮಂದೆಷ್ಟು ಇರತಾರ
ಕುಡಿವುದು ಬಿಟ್ರು ಎಮ್ಮಿಯ ಹಾಲ ।

ಇಳವು : ಆನಿ ಹೋಗಿ ಉಳಿಯಿತಪ್ಪ ಬಾಲ
ನನ್ನ ಕಡಿ, ನಿನ್ನ ಮೊದಲ
ಉತ್ತಮರದು ಅಡಗೀತಪ್ಪ ಸಲ್ಲ
ಕೆಟ್ಟ ಮಂದಿದು ಎಷ್ಟು ಬೋಲ್ಬಲ
ಈಗೈತಪ್ಪ ಇಂಗ್ರೇಜಿ ಅಮಲಾ
ಗಂಡ ಸೊತ್ತುದು ಹೆಂಗಸರ ಕಾಲ ।

ಏರು : ಹೆಣ್ಣು ಸರಕಾರ ಇದು ಮಣ್ಣಾಗ ಹಾಕಲಿ
ಸವನ ಮಾಡಿ ಇಟ್ಟೈತಿ ಎಲ್ಲ ಕುಲ
ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ॥

ಇಷ್ಟೆಲ್ಲ ಪರಿಸ್ಥಿತಿ ಹದಗೆಡಲು ಬ್ರಿಟಿಷರ ಆಡಳಿತವೇ ಕಾರಣವೆಂದು ಹೇಳಿ, 'ಹೆಣ್ಣು ಸರಕಾರ ಇದು ಮಣ್ಣಾಗ ಹಾಕಲಿ' ಎಂಬ ಪ್ರತಿಭಟನೆಯ ಮಾತನಾಡುತ್ತಾನೆ. 'ಅಷ್ಟೂರ ಮಾತಿದು' ಲಾವಣಿಯ ನಂತರ ನಾವು ಗಮನಿಸಬಹುದಾದ ಮಹತ್ವದ

ಲಾವಣಿಗಳೆಂದರೆ– 'ಭೀಷ್ಮಪರ್ವ' ಮತ್ತು 'ವತ್ಸಲಾಹರಣ'. ಈ ಹಾಡುಗಳ ಆಯ್ಕೆಯ ಮಹತ್ವವನ್ನು ಗುರುತಿಸುವಲ್ಲಿ ಎರಡು ಕಾರಣಗಳನ್ನು ಹೇಳಬಹುದಾಗಿದೆ:

೧. ಇವೆರಡೂ ಭೀಷ್ಮ ಮತ್ತು ಅಭಿಮನ್ಯುವಿನಂಥ ವೀರರ ವೃತ್ತಾಂತಗಳನ್ನು ಒಳಗೊಂಡು, ಸ್ವಾಭಿಮಾನ ಮತ್ತು ವೀರತ್ವ ಎರಡನ್ನೂ ಹೇಳುವ ಹಾಡುಗಳಾಗಿವೆ. ಈ ದೃಷ್ಟಿಯಿಂದ ನವೋದಯ ಸಂದರ್ಭದ ಗಮನಾರ್ಹ ಗೀತೆಗಳೆನಿಸುತ್ತವೆ.

೨. ಪೌರಾಣಿಕ ಸಂಗತಿಗಳನ್ನು ಜನಪದರು– ತಮ್ಮ ಕಾವ್ಯಕ್ಕೆ ಆಯ್ಕೆ ಮಾಡಿಕೊಳ್ಳುವಾಗ, ತಮ್ಮ ಜೀವನಕ್ಕೆ ಹತ್ತಿರವಾದ ಮತ್ತು ತಮ್ಮ ಜೀವನವನ್ನು ಪ್ರತಿಬಿಂಬಿಸುವ ಭಾಗಗಳನ್ನು ಮಾತ್ರ ಆಯ್ದುಕೊಳ್ಳುತ್ತಾರೆ. ಜೊತೆಗೆ ಆ ಘಟನೆಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ನಡೆಸುತ್ತಾರೆ. ಈ ದೃಷ್ಟಿಯಿಂದ 'ಕೃಷ್ಣ ಲೀಲೆ' ಮತ್ತು 'ಗೋಕುಲಾಷ್ಟಮಿ ದಿನ' ಈ ಹಾಡುಗಳನ್ನು ಗಮನಿಸಬಹುದಾಗಿದೆ.

'ಭೀಷ್ಮಪರ್ವ'ದಲ್ಲಿ ರಣರಂಗದಲ್ಲಿ ವೀರರ ಪರಿಚಯವನ್ನು ಕವಿ ಹೀಗೆ ಮಾಡಿಕೊಡುತ್ತಾನೆ.

ಇಳುವು :

ತ್ವಾಳಾಗಿ ಹೊಕ್ಕ ಅರ್ಜುನ ಮಾಡಿ ಕುರಿಹಿಂಡ । ಕೌರವರ ದಂಡ
ಗರ್ಜನೆ ಮಾಡಿ ಬಾಣ ಬಿಟ್ಟು ಹಾರಿಸಿದ ರುಂಡ । ಆಡಿದಂಗ ಚಂಡ
ಆ ಭೀಮ ಹೊಡೆದ ಹಾಕಾರಿ ಗದಾ ಎತಗೊಂಡ । ಹೊಕ್ಕನವ ಪುಂಡ
ಆನಿಸೊಂಡಿ ಹಿಡಿದು ಗರರರ । ತಿರುವಿಕೇರಿ ಒಗದ । ಒಗೆದ ತಾ ಒಗೆದ ।
ಕಾಲ ಮಂದಿನ ಹಿಡಿದು ದರರರ । ಎಳೆದು ಭೀಟಿ ಜಿಗಿದ । ಜಿಗಿದ ತಾ ಜಿಗಿದ ।
ಸಿಟ್ಟಿಗೇರಿ ಭೀಷ್ಮ ಕರರರ । ಹಲ್ಲ ತಿಂದು ತೆಗೆದ । ತೆಗೆದ ಬಾಣ ತೆಗೆದಾ ॥

ಇಂತಹ ಸನ್ನಿವೇಶಗಳ ಚಿತ್ರಣ– ನಮ್ಮ ದಾಸ್ಯ ಮತ್ತು ಬಂಧನದ ದಿನಗಳಲ್ಲಿ ನಮ್ಮಲ್ಲಿ ವೀರತ್ವವನ್ನು ತುಂಬುವ ಕೆಲಸವನ್ನು ಮಾಡುವಂತಹವು. ಪೌರಾಣಿಕ ಸಂಗತಿಗಳಲ್ಲಿ ವಾಸ್ತವಿಕ ಜೀವನವನ್ನು ಕಂಡುಕೊಳ್ಳುವ ರೀತಿಯನ್ನು 'ವತ್ಸಲಾಹರಣ'ದಲ್ಲಿ ನೋಡುತ್ತೇವೆ. ಪಾಂಡವರೆಲ್ಲ ವನವಾಸಕ್ಕೆ ಹೋಗಿಯಾಗಿದೆ. ಅರ್ಜುನನ ಹೆಂಡತಿ ಸುಭದ್ರಾಳು ಅಣ್ಣ ಬಲರಾಮನ ಮನೆಗೆ ಹೋದಾಗ, ಅತ್ತಿಗೆ ಬಸುರಿಯಾಗಿರುವುದನ್ನು ಗಮನಿಸಿ, ಹೆಣ್ಣು ಹುಟ್ಟಿದರೆ ತನ್ನ ಮಗ ಅಭಿಮನ್ಯುವಿಗೆ ಕೊಡಬೇಕೆಂದು ನಿಶ್ಚಯಿಸುತ್ತಾಳೆ. ಅಣ್ಣ ಬಲರಾಮನು ತಂಗಿಯ ಮುಲಾಜಿಗೆ ಒಪ್ಪಿಗೆಯಿತ್ತರೂ, ಮುಂದೆ ಪಾಂಡವರಂತಹ ಬಡವರ ಮನೆಗೆ ಮಗಳನ್ನು ಕೊಡಲು ಬಯಸದೆ, ಶ್ರೀಮಂತರಾದ ಕೌರವರ ಮನೆಯಲ್ಲಿ ಮಗಳು ಸುಖವಾಗಿ ಇರಬಹುದೆಂದು ಬಯಸಿ, ಕೊಟ್ಟ ಮಾತಿಗೆ ತಪ್ಪಿ ನಡೆಯುತ್ತಾನೆ. ಸುದ್ದಿ ತಿಳಿದ ಸುಭದ್ರ:

ತವರ ಮನಿಯ ಆಶೆಯಿಂದ ನನ್ನ ಪತಿ
ಅರ್ಜುನನ ನಾ ಮರೆತೆನೋ ।
ನಮ್ಮಣ್ಣಗಳದಿಂದ ಧೈರ್ಯ ಹಿಡಿದೆನೋ ।
ನನ್ನ ನೋಡ್ತಾರ ಅಂತ ಭಾಳ ನಂಬಿದೆನೋ ॥

ಎಂಬಿತ್ಯಾದಿಯಾಗಿ ಗೋಳಾಡುತ್ತಾಳೆ. ಅಭಿಮನ್ಯು– ತನಗೆ ಕೊಟ್ಟ ಹೆಣ್ಣನ್ನು ತಾನು ಗೆದ್ದು ತರುತ್ತೇನೆಂದು ಆರ್ಭಟ ಮಾಡುವುದು, ಘಟೋತ್ಗಜನೊಂದಿಗೆ ವತ್ಸಲಾಳನ್ನು ಗೆದ್ದು ತರುವುದು– ಇತ್ಯಾದಿ ಸನ್ನಿವೇಶಗಳು ನಮ್ಮ ನೆರೆಮನೆಯವೇನೋ ಎನಿಸುವಷ್ಟು ಸಹಜವಾಗಿದೆ.

'ಜೀವನ ಸಂಗೀತ' ಒಂದು ಅಪ್ಪಟ ನವೋದಯದ ಕೊಡುಗೆ ಎನ್ನುವುದರಲ್ಲಿ ಎರಡು ಮಾತಿಲ್ಲ. ದೈವಭಕ್ತಿ ಪರವಾದ ಜನಪದ ಸಾಹಿತ್ಯ ವಿಪುಲವಾಗಿ ನಮಗೆ ದೊರೆಯುತ್ತದೆ. ದೇವರ ಅಗಾಧ ಲೀಲೆಯನ್ನು ಒಪ್ಪಿದ ನವೋದಯದ ಭಾವನೆಯ ಹಿನ್ನೆಲೆಯಲ್ಲಿ ಇಲ್ಲಿಯ ಸಖಿ 'ಪ್ರಾರ್ಥನೆ', ಹಾಗೂ ಖ್ಯಾಲಿ– 'ನಿನ್ನ ಹೊರತು ದೇವರೇ ಇಲ್ಲ'– ಎಂಬವುಗಳನ್ನು ಗಮನಿಸಬಹುದಾಗಿದೆ:

ಭುವನದೊಳಗೆ ಬಂದೆನು ಜನಿಸಿ
ಹರಿಯ ಪಾದ–ಸೇವಕ ಅನಿಸಿ
ನಿಮ್ಮ ಪಾದ ಮೌಲ್ಯ ನನ್ನ ಆಶಿ
ನಿಜಾ ತೋರಿಸೋ ಗುರು ಪರಿಹರಿಸಿ ।

ಎಂಬಂತಹ ಅರ್ಪಣಭಾವ 'ಪ್ರಾರ್ಥನೆ'ಯಲ್ಲಿ ಕಾಣುತ್ತೇವೆ. 'ನಿನ್ನ ಹೊರತು ದೇವರೇ ಇಲ್ಲ' ಎಂಬ ಖ್ಯಾಲಿಯಲ್ಲಿ ಖಾಜಾಭಾಯಿಯವರು ದೇವರು ಒಬ್ಬನೇ ಎಂಬುದನ್ನು ಹೇಳುತ್ತಾರೆ. ಇಲ್ಲಿಯ ಉದಾಹರಣೆಯನ್ನು ಗಮನಿಸುವ ಮುನ್ನ ಈತ ಮುಸ್ಲಿಂ ಕವಿ ಎಂಬುದನ್ನು ಗಮನಿಸಬೇಕು. ಖಾಜಾಭಾಯಿ ಹೀಗೆ ಬರೆಯುತ್ತಾರೆ:

ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥

....

ಕಲ್ಲ ಇರುವುದು ಮಡ್ಡ್ಯಾಗ
ಕಲ್ಲ ದೇವರ ಹುಟ್ಟು ಒಡ್ಡರ ತಿಮ್ಮಯ್ಯನ ಕೈಯ್ಯಾಗ ।
ತಾಮ್ರ ಹಿತ್ತಾಳಿ ದೇವರ ಹುಟ್ಟುವುದು ಪತ್ತಾರನ ಮನಿಯಾಗ ।
ಕಟಗಿ ದೇವರ ಹುಟ್ಟುವುದು ಬಡಿಗ್ಯಾನ ಕೈಯಾಗ ।
ಮಣ್ಣದೇವರ ಹುಟ್ಟುವುದು ಕುಂಬಾರ ಗುಂಡಯ್ಯನ ಮನಿಯಾಗ ॥

ಇಂಥವು ದೇವರ ಆಗುವುದಿಲ್ಲ
ಈ ಮಂದಿಗಿ ತಿಳಿಯುವುದಿಲ್ಲ
ಸುಳ್ಳೆ ಆಗತಾರ ಖರ್ಚಿಗೆ ಮೂಲ
ದೇವರಂಬವ ಒಬ್ಬ ಹಾನ ಮ್ಯಾಲ
ಅವನ ಹೊರತು ದೇವರೇ ಇಲ್ಲ ।
ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥

ಕಲಬುರ್ಗಿ ಕಲ್ಯಾಣ ಹಂಪಿ ಹದರಿಯ ಪೀರಾ
ಹುಲಜಂತಿ ಉಮರ್ಜಿ ಸೊಲ್ಲಾಪುರ ಸಿದ್ರಾಮೇಶ್ವರ

ಇವರು ದೇವರೇ ಅಲ್ಲ।
ಇವರು ಹಾರೊ ಮಾನೊ ಮನುಸ್ಯಾರ
ದುಡುಕೊಂಡು ದುಡುಕೊಂಡು ಇವರು ಆಗ್ಯಾರ
ದೊಡ್ಡ ದೊಡ್ಡ ಶರಣರ ।
ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ।

ಹಲಸಂಗಿ ಗೆಳೆಯರ ಮೂರೂ ಸಂಗ್ರಹಗಳನ್ನು ಗಮನಿಸಿದರೆ, ಅಲ್ಲೆಲ್ಲ ಅವರ ದೃಷ್ಟಿ– ಅತ್ಯುತ್ತಮ ಕಾವ್ಯ ಮಾದರಿಗಳನ್ನು ಆರಿಸುವ ಕಡೆಗೆ ಇರುವುದು ಸ್ಪಷ್ಟವಾಗುತ್ತದೆ. 'ಜೀವನ ಸಂಗೀತ'ದ ಶೃಂಗಾರ ಮತ್ತು ರಂಜನಾಯುಕ್ತ ಲಾವಣಿಗಳು ಈ ಮಾತಿಗೆ ತಕ್ಕ ಉದಾಹರಣೆಗಳಾಗಿವೆ. ಇದಕ್ಕೆ ಕಾರಣ ಅವರಿಗೆ ಸತ್ವಯುತವಾದ ಕಾವ್ಯ ಕನ್ನಡ ಸಾಹಿತ್ಯದಲ್ಲೂ ಬೆಳೆಯಲಿ ಎಂಬ ಉದ್ದೇಶವಿರುವುದು. ಸಂಗ್ರಹಕಾರರು ಹೀಗೆ ಬರೆದುಕೊಳ್ಳುತ್ತಾರೆ. "ಬರಿ ಹೊಸಗನ್ನಡದವರಿಗೆ ಕಾವ್ಯವೆಂದರೆ ಧ್ವನಿ ತೆಗೆದು ಹೇಳುವದೊಂದೇನೋ ಎಂಬುದಕ್ಕಿಂತ ಹೆಚ್ಚಿಗೇನೂ ಗೊತ್ತಾಗುವಂತಿರಲಿಲ್ಲ. ಅದರಲ್ಲಿ ನಾಲ್ಕೈದು ವರ್ಷಗಳಲ್ಲಿ ಮಾತ್ರ ಇಂಥವರಿಗೆ ತುಸು ತುಸು ಅನ್ನವು ಸಿಗಹತ್ತಿದೆ. ಈಗ ನಾವು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಇದೇ ಕಾರ್ಯಕ್ಕೆ ಕೈಲಾದಷ್ಟು ಕೈ ಹಚ್ಚುತ್ತಿದ್ದೇವೆ" (ಪರಿಚಯ– VII). ಈ ಮಾತುಗಳಲ್ಲಿ ಕನ್ನಡ ಕಾವ್ಯದ ಕೃಷಿಯ ಕೊರತೆ ಮನಗಂಡು, ಜನರಿಗಾಗಿ ಉತ್ತಮ ಕಾವ್ಯದ ಶೋಧ ನಡೆಸಿದಾಗ, ಅವರಿಗೆದುರಾದುದು ಜನಪದ ಕಾವ್ಯಕ್ಷೇತ್ರ. ಈ ಕಾವ್ಯದ ಅಭ್ಯಾಸ ಕನ್ನಡದಲ್ಲಿ ಉತ್ತಮ ಕಾವ್ಯ ಬರಲು ಕಾರಣವಾಗುತ್ತದೆ ಎಂಬ ಭಾವನೆ ನಮಗಿಲ್ಲಿ ಕಾಣುತ್ತದೆ. ಹೀಗೆ ಕನ್ನಡ ಕಾವ್ಯದ ಬಗ್ಗೆ ಟಿಪ್ಪಣಿ ಮಾಡಲು ಕಾರಣವೆಂದರೆ ಹಲಸಂಗಿ ಗೆಳೆಯರು ಸುಮಾರಾಗಿ ಎಲ್ಲರೂ ಕವಿಗಳಾಗಿದ್ದರು ಎಂಬುದು ಗಮನಾರ್ಹಸಂಗತಿಯಾಗಿ ಕಾಣುತ್ತದೆ.

ಜೀವನ ಸಂಗೀತದ ಉತ್ತಮ ಕಾವ್ಯಮಾದರಿಗಳೆಂದರೆ ಶೃಂಗಾರ ಲಾವಣಿಗಳು. ಇವುಗಳ ಜೊತೆಗೆ 'ಬಸುರಿದ್ದೇನ್ಹೆಸರೇನಿಡೋಣ' ಹಾಗೂ 'ನಾಗರಪಂಚಮಿ'ಯಂತಹ ಹಾಡುಗಳು. ಇವು ಪಾರತಂತ್ರ್ಯದಿಂದಾಗಿ ಅದುಮಿ ಹೋದ ಜೀವನದ ಬೇಸರವನ್ನು ದೂರೀಕರಿಸಿ, ನವೋಲ್ಲಾಸವನ್ನು ತುಂಬುವ ಕೆಲಸ ಮಾಡಬಲ್ಲವಾಗಿವೆ. ದಾಸ್ಯದಲ್ಲಿದ್ದಾಗಲೂ ನಗು ನಗುತ್ತ ಖುಷಿಪಡುವ ಗುಣವನ್ನು ಈ ಹಾಡುಗಳು ವ್ಯಕ್ತಪಡಿಸುತ್ತವೆ.

ಕನ್ನಡದಲ್ಲಿ ಸ್ತ್ರೀಪರವಾದ ಸಾಹಿತ್ಯ ಗಂಡಸರು ಸೃಷ್ಟಿ ಮಾಡಿದ್ದು, ಜನಪದ ಕಾವ್ಯದಲ್ಲಿ ಮಾತ್ರ, ಅದೂ ಲಾವಣಿ ಸಾಹಿತ್ಯದಲ್ಲಿ. ಹರದೇಶಿ–ನಾಗೇಶಿ, ಕಲ್ಗಿ–ತುರಾ ಎಂದು ಕರೆಸಿಕೊಳ್ಳುವ ಹೆಣ್ಣು–ಗಂಡಿನ ವಾದ–ಪ್ರತಿವಾದ, ಅದು ಸಾಮಾನ್ಯ ಗಂಡು–ಹೆಣ್ಣಿನ ಎಳೆ ಹಿಡಿದು ಸ್ವರ್ಗದ ಮೆಟ್ಟಲು ಹತ್ತುವ ಅದ್ಭುತ ವಿಧಾನವನ್ನು ನಾವು ಲಾವಣಿಗಳಲ್ಲಿ ಕಾಣುತ್ತೇವೆ. ಆದರೆ ಜೀವನ ಸಂಗೀತದ ಇನ್ನೊಂದು ಕೊರತೆಯೆಂದರೆ, ಇಲ್ಲಿ ಕೇವಲ ಗಂಡು ಹೆಚ್ಚೆಂದು ವಾದ ಮಾಡುವ ಹಾಡುಗಳನ್ನೇ ಆಯ್ಕೆ ಮಾಡಿದ್ದು, ಹೆಣ್ಣಿನ ಪರವಾದ ಹಾಡುಗಳನ್ನು ಕೈಬಿಟ್ಟಿದ್ದು.

ಇಲ್ಲಿಯ ಶೃಂಗಾರ ಲಾವಣಿಗಳಲ್ಲಿ ಕಾಣುವುದು ವಾಮಪ್ರಣಯವನ್ನು. ಅಂದರೆ ಮದುವೆಯಾದ ಹೆಣ್ಣಿನ ವರ್ಣನೆ ಮತ್ತು ಆಕೆಯು ಪರಪುರುಷನ ಜೊತೆ ಸ್ನೇಹ ಬೆಳೆಸುವ ರೀತಿಯನ್ನು. ಇದು ಸಾಹಿತ್ಯದಿಂದ ಕಲಿಯುವ ಪಾಠಕ್ಕೆ ಮಾದರಿಯಾಗಿರದೆ, ಕೇವಲ ರಂಜನೆಗಾಗಿ ಮಾತ್ರ ಈ ಸಂಭೋಗ ಶೃಂಗಾರ ಲಾವಣಿಗಳನ್ನು ಗ್ರಹಿಸುವುದನ್ನು ನಾವು ಗಮನಿಸಿದ್ದೇವೆ. ಈ ವಸ್ತು ತಾತ್ತ್ವಿಕಲೋಕ ಪ್ರವೇಶವಾದಾಗ, ಈ ಗಂಡು–ಹೆಣ್ಣಿನ ಸಂಬಂಧ ಒಂದು ಲೀಲೆಯೆಂಬಂತೆ ಜನ ಗ್ರಹಿಸುತ್ತಾರೆ: ಕೃಷ್ಣ–ಗೋಪಿಕೆಯರಂತೆ, ಶಿವ–ಗಂಗಿಯರ ಪ್ರಸಂಗದಂತೆ. ಅಲ್ಲಿ ಲೌಕಿಕದ ವಾಸನೆ ಸುಳಿಯಲಾರದು; ಸುಳಿಯಬಾರದು ಎಂಬುದು ಜನಪದರ ಭಾವನೆ.

ಶೃಂಗಾರ ಲಾವಣಿಗಳಿಗೆ 'ಜೀವನ ಸಂಗೀತ' ಹೆಸರಾಗಿದೆ. ಇಲ್ಲಿಯ ಅಸಲಜಾತ ಹೆಣ್ಣು, ಸಂಪಿಗೆ ತೆನಿಯಂಥ ಹುಡುಗ, ಚಂದ್ರುಣಿ, ಕರಿಹುಡುಗಿ, ಗಿಡ್ಡಪೋರಿ–ಸಂಭೋಗ ಶೃಂಗಾರಕ್ಕೆ ಪ್ರಸಿದ್ಧವಾದ ಲಾವಣಿಗಳು. 'ಗೋಕುಲಾಷ್ಟಮಿ ದಿನ', 'ಕೃಷ್ಣಲೀಲೆ'ಗಳು ಭಕ್ತಿ ಶೃಂಗಾರಕ್ಕೆ ಉತ್ತಮ ಮಾದರಿಗಳು. 'ಬಸರಿದ್ದೇನ್ಹೆಸರೇನಿಡೋಣ' ಹಾಸ್ಯ ಬೆರೆತ ಶೃಂಗಾರಕ್ಕೆ ಒಂದು ಮಾದರಿ. ಹೀಗೆ ೧೨ ಲಾವಣಿಗಳಲ್ಲಿ ೮ ಲಾವಣಿಗಳು ಶೃಂಗಾರ ರಸ ಪ್ರಧಾನವಾದವುಗಳೆ ಆಗಿವೆ.

'ಅಸಲಜಾತ ಹೆಣ್ಣು', 'ಚಂದ್ರುಣಿ'– ಇವೆರಡೂ ತುಂಬಿನಿಂದ ಸೌಂದರ್ಯವತಿಯರ ವರ್ಣನೆಗಳಾದರೆ, 'ಕರಿ ಹುಡುಗಿ' ಹಾಗೂ 'ಗಿಡ್ಡ ಪೋರಿ' ಎಂಬಿವು ಬಣ್ಣ ಹಾಗೂ ನಿಲುವುಗಳನ್ನು ಗಮನಿಸಿದ ವರ್ಣನೆಗಳಾಗಿವೆ. ಈ ನಾಲ್ಕು ಲಾವಣಿಗಳ ಪ್ರಾರಂಭ ಮುಖ್ಯವಾಗಿ ಹೆಣ್ಣಿನ ವರ್ಣನೆಯಿಂದಲೇ ಕೂಡಿದೆ. ಮೊದಲಿನ ಚೌಕಗಳಲ್ಲಿ ಬರುವ ವರ್ಣನೆ– ಅಸಾಧಾರಣವೆನಿಸುವಷ್ಟಿದ್ದು ಅತ್ಯುತ್ತಮ ಕಾವ್ಯ ಭಾಗಗಳೆನಿಸುತ್ತವೆ.

ಅಸಲಜಾತ ಹೆಣ್ಣು :

ಹೆಣ್ಣ ಅಸಲಜಾತ ಪದ್ಮಿನಿ । ಸುರತ ಚಂದ್ರುಣಿ
ಹೊರಟೆ ನಾಗಿಣಿ । ನೋಡ ತಿರುಗಿ
ಮರಿಗುದರಿ ಕುಣಿಸಿದಂಗ ನಾಜೂಕ ನಿನ್ನ ನಡಗಿ
ಹೊಳಿ ನೀರ ಥೆರಿಯ ಹೊಡಿದಂಗ ಒದುತೆ ನಿಲಗೀ
ತ್ರಿಲೋಕ ತಿರುಗಿ ಬಂದೆ ಹಾಡಿ । ಇಲ್ಲ ನಿನ್ನ ಜೋಡಿ
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ॥

ಗರಗರಾ ತಿರುವತೇ ಕಣ್ಣ । ಕೆಂಪ ಮೈಬಣ್ಣ
ಬೇತಲ ಸಣ್ಣ । ಕತ್ತಿಧಾರಿ ।
ನಿನ್ನ ಕಂಡು ಪಕ್ಷಿಗಳು ನಿಂತು ಹೌವ್ವಹಾರಿ
ನಿನ್ನ ನಡಿಗಿ ನೋಡಿ ನವಿಲ ಕುಣಿವುದ ಮರೆತಿತರಿ
ನಿನ್ನ ಶಬ್ದ ಕೇಳಿ ಆಗಿ ಲುಬ್ದ । ಕೋಗಿಲೆ ನಾಚಿ ಕದ್ದ
ವನಾ ಬಿಟ್ಟು ಎದ್ದ । ಹೊಯ್ತು ಹಾರಿ।

ಚಂದ್ರುಣಿ :

ಚಂದ್ರುಣಿ ಚಂದನದ ಗೊಂಬಿ । ರತ್ನದ ಕಂಬಿ
ಆದಿ ಜಗದಂಬಿಯಂಗ ಡೌಲ ।
ನಿನ್ನ ಸರಿ ಈಗ ದೇವತೆರು ಯಾರೂ ಇಲ್ಲ
ಏನು ಬೇಡಿ ಬಂದೆ ಶಿವನಲ್ಲಿ ಎಷ್ಟು ಅಮಲ ।
ಮದವೇರಿಸಿ ಹೊಂಟಂಗ ಆನಿ ಜಾತ ಪದ್ಮಿನಿ
ಪಟ್ಟದಾ ರಾಣಿ ಗಾದಿ ಮ್ಯಾಲ ।

ನಿನ್ನ ಪ್ರಾಯ ತುಂಬಿದಾ ಹೊಳಿ । ಬಾಳಿಯ ಸುಳಿ
ಚಂದ್ರನ ಕಳಿ ಕಸರಯಿಲ್ಲ ।
ಆದಿ ವಿಷ್ಣು ಪಿಂಡ ಮಾಡಿದಾನ ತೆಗೆದ ಹೊಯ್ಲಾ
ಬಿನ್ನ ಬ್ಯಾಸರಿಲ್ಲದೆ ತಿದ್ದಿ ಕೈಕಾಲ ।
ಮಹೇಶ್ವರ ಜೀವನ ದನಿ । ಬ್ರಹ್ಮ ಬರೆದ ಫಣಿ
ಬೇಡಿ ಬಂದೆ ಜಾಣಿ ಸುಳ್ಳೇನಲ್ಲ ॥

ನಿನ್ನ ಮೂಗ ಸಂಪಿಗೀ ತೆನಿ । ಮುತ್ತಿನ ಗೊನಿ
ಕೋಗಿಲಂಗ ಧನಿ ಎಳಿಯ ಕಮಲ
ಓಣಿ ಹಿಡಿದ ಹೊಂಟೆ ಕುಣಿದಂಗ ಗಂಡ ನವಿಲ
ಮಂದಿ ದಂಗವರದ ನಿಂತ ನೋಡಿ ನಿನ್ನ ಮಜಲ ॥
ನಿನ್ನ ಒನಪ ನೋಡಿ ಬಾ ಬೆರೆತ । ಮನಿಯ ಮಾರ ಮರತ
ಹಾರಿತ ನನ್ನ ಸುರತ ಬಿದ್ದಂಗ ಸಿಡಲ ॥

ಈ ಮೇಲಿನ ಎರಡೂ ವರ್ಣನೆಗಳಿಗಿಂತ ಭಿನ್ನವಾದ ವರ್ಣನೆ 'ಗಿಡ್ಡಪೋರಿ' ಮತ್ತು 'ಕರಿಹುಡುಗಿ'ಯಲ್ಲಿ ಕಾಣುತ್ತೇವೆ. ಇವೆರಡೂ ಒಂದಕ್ಕೊಂದು ತೋಡಿ ಎಂಬಂತೆ ಭಾಸವಾಗುತ್ತದೆ.

ಗಿಡ್ಡಪೋರಿ:

ಗಿಡ್ಡ ಪೋರಿ ಮಡ್ಡಹರಿ ಮಕ್ಕರ್ । ಕಣ್ಣ ತಿರುವಿ ಚಕ್ಕರ್
ನಿಂತು ನೀ ನಕ್ಕರ ಉಳ್ಳತಾವ ಮುತ್ತ ।

ವಸ್ತ ಕಾರಿಪಟ್ಟಿ ವಾಲಿಗಂಟು ಮೂಗನಾಗ ಸರಜಾಮ ನತ್ತ ।
ಶ್ರೀ ಸಾನಿದಪ ಪದನೀಸ ಸರಿಗಮ ನಾರಿ ನಿನಗತ್ತ ।
ನಮ ಕಂಡು ಹೋಗಬ್ಯಾಡ ಚದರಿ ।
ಓಡಿದಾಂಗ ಬೆದರಿ ಕಾರ್ಬುಣವಿ ಎತ್ತ ॥

ಏನು ಮುಂಗಾರಿ ಮಳಿಹಾಂಗ ಸಿಡಲ್ । ಬಿದ್ದಿತು ಖಡಲ್
ಎದಿ ಅಂತು ಧಡಲ್ ಆಗಿ ನಿಂತೆ ಮೂಕ ।

ನಿನ್ನ ಸುರತ ಕಂಡು ಮೈ ಮರೆತ । ಮಾತಾಡ ಧಾರಿತ ತರ್ಕ
ಮತ್ತ ಯಾದ ಹಚ್ಚಿ ಶೋಧ ಮಾಡಿ ಕೇಳತ । ನಿನಗೊಂದ ಸೋಕ ।
ಕುಡು ಭರಸ ಮಾಡೂನು ಸರಸ ಬೆಳ್ಳಬೆಳತನಕಾ ॥

ಕರೀಹುಡುಗಿ :

ನೀ ಬಾರ ಕರ್‍ತನ ಕರೀ ಹುಡುಗೀ । ಕರೀ ಸೀರಿ ಉಡಿಗಿ
ನವಿಲನಾಂಗ ನಡಿಗಿ ನಡುತೆ ಸವನಾ ।
ಕರಿ ಕೂದಲ ಬೇತಲಿ ತೀಡಿ ತೆಗೆದೆ ಸಣ್ಣ
ಕರಿ ಹುಬ್ಬ ಕೊರೆದಂಗ ಕರಿ ಕಾಡಿಗಿ ಗಣ್ಣ ।

ಏನು ಹೇಳಲಿ ನಾರಿ ನಿನ್ನ ಕಪ್ಪ ।
ಆಯಿತ ನೆಪ್ಪ ನೀಲದ್ಧಣ್ಣ ॥ ೧ ॥

ಕರಿ ಹಣಚಿ ಬಟ್ಟಿನ ಖಲಿ । ಗಲ್ಲದ ಮ್ಯಾಲ ಬಾಲಿ
ಹಲ್ಲಿಗಿ ಜಾಚೇಲಿ ಹಚ್ಚಿದಿ ತುಂಬ
ಕರಿ ಕರಿಮಣಿ ಕೊರಳಾಗ ಒಪ್ಪತಾವ ರಂಭಾ
ಮೈನರೆದೆ ಉಚ್ಚಿದಂಗ ಕರಿ ಮಾವಿನ ತುಂಬ ।

ಕರಿಗೋಟ ಕೈಯಾಗ ಬಳಿ । ಚಿಕ್ಕ ಪ್ರಾಯ ಎಳಿ
ನಿನ್ನ ಈ ಬೆಳಿ ಕರಿಬಾಳಿಯ ಬಂಬಾ ॥ ೨ ॥

ಕನ್ನಡ ಸಾಹಿತ್ಯದಲ್ಲೂ ಜನಪದ ಸಾಹಿತ್ಯದಲ್ಲೂ ಗಂಡಸರ ವರ್ಣನೆಗಳು ಅಪರೂಪ. ಅಂತಹ ಅಪರೂಪದ ಉದಾಹರಣೆಯೊಂದು 'ಜೀವನ ಸಂಗೀತ'ದಲ್ಲಿ ದೊರೆಯುತ್ತದೆ. ಲಾವಣಿಯ ಹೆಸರೇ 'ಸಂಪಿಗಿ ತೆನಿಯಂಥ ಹುಡುಗ'.

ಸಿಂಪಿಗಿ ತೆನಿಯಂಥ ಹುಡುಗ । ಸಂತ್ಯಾಗ್ಹಾಯ್ದು ಹೋಗ್ತಾನ
ಹಂತೀಲ್ಹೋಗಿ ಕೇಳಲೇನ ಹೆಸರ ।
ನನ್ನ ಕಾಂತನ ರೂಪ ಹೊಂಟಂಗ ಹುಣ್ವಿ ಚಂದರ
ಇವನ ಚಿಂತೆಯೊಳಗ ಜೀವಕ್ಕಿಲ್ಲ ಸ್ಥಿರಾರ ।
ಕನಸಿನಾಂಗ ಕಂಡಂಗಾಯ್ತು । ಮನಸಿನಂದು ಹೋಗುವಲದು
ಹಲಸಂಗಿ ಊರಾಗಿಲ್ಲ ಇವನಂಥವರ.

'ಗೋಕುಲಾಷ್ಟಮಿ' ಮತ್ತು 'ಕೃಷ್ಣಲೀಲೆ' ಈ ಎರಡರಲ್ಲಿ ಶೃಂಗಾರ– ಲೇಪಿತ ಭಕ್ತಿ ವ್ಯಕ್ತಪಡಿಸುವುದನ್ನು ಕಾಣುತ್ತೇವೆ:

ಶ್ರೀ ಗೋಪಿಕಾ ಸ್ತ್ರೀಯರು । ಅಷ್ಟ ನಾಯಕಿಣೆರು
ಬಾಲ ಗರುಡರು ಹುಡುಕುತಾರ ಕೃಷ್ಣನ ।
ಸಾವಿತ್ರಿ ಸತ್ಯಭಾಮೆ ಕೂಡಿ ಹುಡುಕುತಾರ
ಗೋಕುಲಾಷ್ಟಮಿ ದಿನ ।

ಎಂದು ಪ್ರಾರಂಭವಾಗುವ 'ಗೋಕುಲಾಷ್ಟಮಿ' ಹಾಡು, ಗೋಪಿಕೆಯರು ಕೃಷ್ಣನಿಗಾಗಿ ಪರಿತಪಿಸುವ, ಜಪಿಸುವ ರೀತಿ ಅವರಲ್ಲಿರುವ ಕೃಷ್ಣನ ಬಗೆಗಿನ ಭಕ್ತಿ ಭಾವುಕತೆಗಳನ್ನು ವ್ಯಕ್ತಪಡಿಸುತ್ತವೆ.

'ಕೃಷ್ಣ ಲೀಲೆ'ಯಲ್ಲಿ–

ಹೊತ್ತು ಹಾಲ್ಮೊಸರ ಸೋರಿ
ಹಿಡಿದೆವೊ ಮಥುರಾ ದಾರಿ
ಹಾದಿ ಕಟ್ಟಿ ದಾರಿ ।
ಕಾಡಿದಾ ಮುರಹರಿ ಕೃಷ್ಣ ಬಿದ್ದ ಖ್ಯಾಲಕ ॥

ಮುಂತಾಗಿ ಪ್ರಾರಂಭವಾಗುವ ಈ ಹಾಡು ಕೃಷ್ಣನ ಶೃಂಗಾರ ಲೀಲೆಗಳನ್ನು ಹೇಳುತ್ತದೆ. 'ಬಸರಿದ್ದೇನ್ವೆಸರೇನಿಡೋಣ' ಮತ್ತು 'ನಾಗಪಂಚಮಿ' ಎಂಬೆರಡು ಹಾಡುಗಳು ಹಾಸ್ಯ ಬೆರೆತ ರಂಜನೀಯ ಹಾಡುಗಳೆನಿಸುತ್ತವೆ. 'ಬಸುರಿದ್ದೇನ್ವೆಸರೇನಿಡೋಣ'ದಲ್ಲಿ –ಸತಿಪತಿಯರ ನಾಟಕೀಯ ಮಾತುಗಳು ಓದುಗರಿಗೆ ಕಚಗುಳಿ ಇಡುತ್ತವೆ. ರಾತ್ರಿ ಉಂಡು ಹಾಸಿಗೆ ಮೇಲೆ ಇಬ್ಬರೂ ಬಡಿದಾಡುತ್ತ ಸಂಭಾಷಿಸುತ್ತಾರೆ :

ಸತಿ ಪತಿ ಕೂಡಿ ಜೋಡಿ । ಹಿತದಿಂದ ಮಲಗಿದಾಗ
ಗೊತ್ತ ಮಾಡಿ ಹೇಳ್ಗಂಡಾ ಹ್ಯಾಂಗ್ಮಾಡೂನ
ನಿಮ್ಮಂದ ಮಾತೊಂದು । ಬಿಚ್ಚಿ ಮುಚ್ಚಿ ಹೇಳ್ತೀನು
ಬಸುರಿದ್ದೇನ್ವೆಸರಿನ್ನ ಏನಿಡೂನ ।

ಎಂದು ಪ್ರಾರಂಭವಾಗುವ ಈ ಹಾಡು ಉದ್ದಕ್ಕೂ ಕುತೂಹಲಭರಿತವಾಗಿದೆ.

ಹಡಿಯೂ ದಿನ ಸನೀ ಬಂತು । ಎಂಟೇ ತಿಂಗಳ ಮುಂದುಳಿತು
ಕೆಟ್ಟಿಗಿಟ್ಟ ಹಡದೀ ನಿನ್ನ ಚೆಟ್ಟಾ ಎತ್ತೀನ ।

ಎಂದು ಎಚ್ಚರಿಸಿದ ಗಂಡ–

ಜೋಡ್ನಿ ಎಲ್ಲ ಕೂಡ್ಸುದ್ರೊಳಗ । ದೀಡುತಿಂಗಳಾಯಿತಪ್ಪ
ತಡದ ಹೊರಗ ಆದಳಲ್ಲಿಂದ ।

ಎಂದು ತೆರೆ ಎಳೆಯುತ್ತಾನೆ. 'ಜೀವನ ಸಂಗೀತ'ದಿಂದಾಗಿ ಕನ್ನಡದಲ್ಲಿ ಲಾವಣಿ ಕೃತಿಗಳು ಬೆಳಕು ಕಾಣಲು ಕಾರಣವಾಯಿತು. ಗಮನಿಸಬೇಕಾದ ವಿಶೇಷ ಸಂಗತಿ ಎಂದರೆ, ಲಾವಣಿ ಕೃತಿ ಪ್ರಕಟಣೆಯ ಪರಂಪರೆ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಬೆಳೆದುಕೊಂಡು ಬಂದಿದೆ. ಅದರಲ್ಲೂ ಒಬ್ಬ ಕವಿಯ ರಚನೆಗಳು ಒಂದೆಡೆ ಸಂಗ್ರಹಗೊಂಡು ಪ್ರಕಟವಾದದ್ದು ಜಾನಪದ ಇತಿಹಾಸದಲ್ಲೇ ಒಂದು ಹೊಸ ಬಗೆಯದು. ಅಂದರೆ ಜನಪದ ಕಾವ್ಯ ಪ್ರಕಟಣೆಗಳೆಲ್ಲ ಹಲವರ ಕೃತಿಗಳ ಸಂಕಲನವಾಗಿದ್ದವು. ಮುಂದೆ ಒಬ್ಬ ಕವಿಯ ಕೃತಿಗಳನ್ನು ಒಂದೆಡೆ ಪ್ರಕಟಿಸುವ ರೂಢಿ ಪ್ರಾರಂಭವಾಯಿತು. ಇದರಿಂದ ಜನಪದ ಕಾವ್ಯದ ಅಭ್ಯಾಸಕ್ಕೆ ಒಂದು ಹೊಸ ಹಾದಿ ತೆರೆದುಕೊಳ್ಳುವ ಸಾಧ್ಯತೆ ಕಾಣುತ್ತದೆ.

ಲಾವಣಿ/ಗೀಗೀ ಹಾಡುಗಳನ್ನು ಗಮನಿಸಿದರೆ, ಇವು ಅಲ್ಪಮಟ್ಟಿಗೆ ಅಕ್ಷರ ಬಲ್ಲವರ ರಚನೆಗಳೆನಿಸುತ್ತವೆ. 'ಜೀವನ ಸಂಗಿತ' ಪ್ರಕಟವಾದ ನಂತರ ಕೃತಿರೂಪದಲ್ಲಿ ಪ್ರಕಟವಾದ ಪುಸ್ತಕವೆಂದರೆ **'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು'** (೧೯೭೨). ಆದರೆ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ ಒಂದು ಕೃತಿ ನಮ್ಮ ಕೈಗೆ ದೊರೆಯುವುದು ೧೯೭೪ರಲ್ಲಿ ಪ್ರಕಟವಾದ ನಿಂಗಣ್ಣ ಸಣ್ಣಕ್ಕಿ ಅವರು ಪ್ರಕಟಿಸಿದ **'ಬಾಳಗೋಪಾಳನ ಲಾವಣಿಗಳು'** ಎಂಬ ಕೃತಿ. ಅಂದರೆ ೧೯೩೩ ರಲ್ಲಿ 'ಜೀವನ ಸಂಗಿತ' ಪ್ರಕಟವಾದರೆ, ೪೧ ವರ್ಷಗಳ ನಂತರ ಅಂತಹ ಒಂದು ಕೃತಿ ಪ್ರಕಟವಾಗಿದೆ ಎಂಬುದು ಗಮನಿಸತಕ್ಕ ಮಾತು. ಸಣ್ಣಕ್ಕಿ ಅವರ ಕೃತಿಯ ಇನ್ನೊಂದು ವೈಶಿಷ್ಟ್ಯವೆಂದರೆ, ಏಕಕವಿ ಕೃತ ಹಾಡುಗಳನ್ನು ಒಂದೆಡೆ ಪ್ರಕಟಿಸಿದ್ದು. ಇದು ಕನ್ನಡ ಜನಪದ ಸಾಹಿತ್ಯದ ಇತಿಹಾಸದಲ್ಲಿ ಒಂದು ಹೊಸ ಬದಲಾವಣೆ ಎಂಬುದನ್ನು ಗಮನಿಸಬೇಕು.

ಬಾಳಗೋಪಾಳ ತುಂಬಾ ಪ್ರಸಿದ್ಧವಾದ ಲಾವಣಿಕಾರ. ಬೆಳಗಾವಿ ಜಿಲ್ಲೆಯ, ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದವರು. ಈತನ ಕಾಲವನ್ನು ೧೮೩೦ ರಿಂದ ೧೯೧೦ ವರೆಗೆ ಎಂದು ಸಂಪಾದಕರು ಗುರುತಿಸಿದ್ದಾರೆ. ಈತ ಹುಟ್ಟು ಪ್ರತಿಭಾವಂತ ಕವಿ. ಸಾಕಷ್ಟು ಅನುಕೂಲವಿರುವ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಈತನ ತಂದೆ ಭೀಮರಾವ ಮಗನಿಗೆ ಬಾಲ್ಯದಿಂದಲೇ ವಿದ್ಯಾಭ್ಯಾಸ ಕೊಡಿಸಿದ್ದರು. ಶಾಸ್ತ್ರಜ್ಞಾನಿಯನ್ನಾಗಿ ಮಾಡಲು ಪ್ರಯತ್ನಿಸಿದರು. ಆದರೆ ಪ್ರತಿಭೆ ಎಳೆದುಕೊಂಡು ಹೋದುದು ಲಾವಣಿ ಹಾಡುಗಾರಿಕೆಯೆಡೆಗೆ. ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಸಾವಿರಾರು ಲಾವಣಿಗಳನ್ನು ಬರೆದಿದ್ದಾನೆಂದು ತಿಳಿದುಬರುತ್ತದೆ. ಸಣ್ಣಕ್ಕಿ ಅವರ ಪ್ರಯತ್ನದಿಂದಾಗಿ ಈ ಕೆಲವು ಹಾಡುಗಳು ಮಾತ್ರ ನಮಗೆ ಲಭ್ಯವಾಗುತ್ತವೆ.

ಈ ಕೃತಿಯಲ್ಲಿಯ ಹಾಡುಗಳನ್ನು ಗಮನಿಸಿದರೆ ಸಹಜವಾಗಿಯೇ ಅವೆಲ್ಲ ಪೌರಾಣಿಕ ಕಥಾವಸ್ತುಗಳಿಗೆ ಸಂಬಂಧಿಸಿದ ಹಾಡುಗಳಾಗಿವೆ. ಸತ್ಯ ಹರಿಶ್ಚಂದ್ರ, ಸುಲೋಚನಾ ಸಹಗಮನ, ರಾವಣ ಸಂಹಾರ, ದ್ರೌಪದಿ ವಸ್ತ್ರಾಪಹರಣ, ಭೀಷ್ಮಪ್ರತಿಜ್ಞೆ, ವೃಷಕೇತು ಅರ್ಜುನರ ಯುದ್ಧ, ಉಷಾಹರಣ, ಸತ್ಯಭಾಮಾ ವಿರಹ, ಶ್ರೀವಿಷ್ಣು ವ್ಯಾಜಸ್ತುತಿ ಮುಂತಾದವು. ಈ ಪೌರಾಣಿಕ ಕಥೆಗಳ ಮೂಲಕವೇ ಕವಿ ಸಾಮಾಜಿಕ ನೀತಿಯನ್ನು ಬಿತ್ತರಿಸಲು ಪ್ರಯತ್ನಿಸಿದ್ದಾನೆ. ಉತ್ತರಕರ್ನಾಟಕದ ಲಾವಣಿ/ಗೀಗೀ ಹಾಡುಗಾರರ ಇನ್ನೊಂದು ಮುಖ ತತ್ತ್ವ ಹೆಣ್ಣು-ಗಂಡಿಗೆ ಸಂಬಂಧಪಟ್ಟಂಥ ವಿಷಯವೇ ಈ ಹಾಡುಗಾರಿಕೆಯ ಪ್ರಮುಖ ವಸ್ತು ಆಗಿರುವದರಿಂದ ಈ ಹೆಣ್ಣು-ಗಂಡಿನ ಮಿಲನದಿಂದುಂಟಾಗುವ ಜೀವೋತ್ಪತ್ತಿಯ ಚರ್ಚೆ ಇವರಲ್ಲಿ ಸಾಮಾನ್ಯವಾಗಿ ಕಾಣುತ್ತದೆ. ಹೀಗಾಗಿ ಅಂತಹ ಒಂದೆರಡು ಹಾಡುಗಳು ಇಲ್ಲಿವೆ. ಅದರಲ್ಲೂ ಈ ಕವಿಗೆ ಒಂದಿಷ್ಟು ಶಿಕ್ಷಣವೂ ದೊರಕಿದೆ, ಶಾಸ್ತ್ರಜ್ಞಾನವೂ ಆಗಿದೆ. ಹೀಗಾಗಿ ಆತ ಈ ವಿಷಯದ ಬಗೆಗೆ ಹಾಡುಗಳನ್ನು ಬರೆಯಲು ಸಾಧ್ಯವಾಗಿದೆ. ಅಂಡೋತ್ಪತ್ತಿ ಮತ್ತು ಪಿಂಡೋತ್ಪತ್ತಿ ಎಂಬ ಎರಡು ತಾತ್ತ್ವಿಕ ಹಾಡುಗಳು ಇಲ್ಲಿವೆ. ಅಂಡೋತ್ಪತ್ತಿಯಲ್ಲಿ ಪಂಚತತ್ವಗಳ ವಿಚಾರ ಹೇಳಿದ್ದಾನೆ.

ಪ್ರಥಮ ಇತ್ತ ಓಂಕಾರ ಎಂಬುವಾ
ಪ್ರಣವದೊಳಗ ಹುಟ್ಟಿ ಮೂರು ಗುಣಾ

ಅಕಾರ, ಉಕಾರಾ ಮಕಾರಾ ಇವು ಮೂರಾ
ಬೀಜಾಕ್ಷರ ಅಂತ ಮೊದಲ ತಿಳಿ ನೀನಾ
ಅಕಾರ ಎಂಬುದು ನಾದ ಆದಿತು
ಉಕಾರ ಬಿಂದು ಅಕ್ಷರ ಕೇಳ ನೀನಾ
ಮಕಾರದೊಳಗ ಕಳೆ ಹುಟ್ಟಿತು
ಮೂರಕ ಮೂರ ಆಧಾರ ಮುನ್ನಾ

ಹೀಗೆ ಸಾಗುತ್ತದೆ ಕವಿಯ 'ಅಂಡೋತ್ಪತ್ತಿ' ವಿವರಣೆ. ಅವನ 'ಪಿಂಡೋತ್ಪತ್ತಿ' ಹಾಡಿನಲ್ಲಿ ತಾಯಿಯ ಶರೀರದಲ್ಲಿ ಗಂಡು-ಹೆಣ್ಣಿನ ಮಿಲನದಿಂದ ಜೀವದ ಉತ್ಪತ್ತಿ ಹೇಗಾಗುತ್ತದೆ ಎಂಬುದನ್ನು ವಿವರಿಸುತ್ತಾನೆ.

ಮೊದಲ ತಿಂಗಳಿಗೆ ಕಮಲದ ಒಳಗ
ಬಿಂದು ತುಂಬಿ ಇರುವುದು ಅಷ್ಟಾ
ಎರಡನೆ ತಿಂಗಳಿಗೆ ನೀರ ಆಗಿ ಅದ
ರಸಾ ಕೂಡಿ ಆಗುದು ಒಟ್ಟಾ
ಮೂರ ತಿಂಗಳಿಗೆ ಆಗುದು ರಕ್ತಾ
ನಾಲ್ಕನೆಯ ತಿಂಗಳಿಗೆ ಕೈಕಾಲ ಆಕಾರ ಹುಟ್ಟುತಾ
ಐದನೆಯ ತಿಂಗಳಿಗೆ ತೇಜ ಆಗುವುದು ಪ್ರಖ್ಯಾತಾ
ಆರನೆಯ ತಿಂಗಳಿಗೆ ಪಂಚ ತತ್ವ ನಿಶ್ಚಿತಾ
ಏಳನೆಯ ತಿಂಗಳಿಗೆ ಸಪ್ತ ಧಾತು ಪ್ರಖ್ಯಾತಾ
ಎಂಟನೆಯ ತಿಂಗಳಿಗೆ ಅಷ್ಟಾಂಗ ವಿಪರೀತಾ
ಒಂಬತ್ತನೆ ತಿಂಗಳಿಗೆ ಉಗರ ರೋಮಗಳ
ಸರುವ ಶರೀರ ಆದೀತ ಶಿಸ್ತ.

ಕವಿ ಬಾಳಗೋಪಾಳನಿಗೆ ಒಂದಿಷ್ಟು ಶಿಕ್ಷಣ ದೊರಕಿರುವುದರಿಂದಲೇ ಇಂತಹ ಜ್ಞಾನ ಅವನಿಗೆ ಸರಾಗವಾಗಿ ಹೇಳಲು ಸಾಧ್ಯವಾಗಿದೆ ಎನಿಸುತ್ತದೆ. ಈತನ 'ಕುಕವಿ ನಿಂದೆ' ಕವಿತೆ ಅತ್ಯಂತ ಪ್ರಸಿದ್ಧವಾದುದು. ಈ ಹಾಡು ಅಕ್ಷರ ಜ್ಞಾನ, ಓದಿನ ಜ್ಞಾನ ಈ ಕವಿಗೆ ಇತ್ತು ಎಂಬುದನ್ನು ತಿಳಿಸಿಕೊಡುವ ಮಹತ್ವದ ಹಾಡಾಗುತ್ತದೆ. ಪ್ರತಿಭೆ ಇಲ್ಲದವನ ಕಾವ್ಯ, ವ್ಯಕ್ತಿತ್ವ ಎಂತಹದು ಎಂಬ ಸಂಗತಿ ಈ ಹಾಡಿನಲ್ಲಿ ಪ್ರಮುಖವಾಗಿ ಬಿತ್ತರವಾಗಿದೆ.

ಅರ್ಥ ತಿಳಿಯದ ಅನುಭಾವ ಕಲಿತ
ಅಳತಿಗೆಟ್ಟ ನಿಂತ ನಾಡಾಗ
ಮಂಗ್ಯಾನ ಕೈಯಾಗ ಮಾಣಿಕ ಕೊಟ್ಟರ
ಹಲ್ಲಾಗ ಹಾಕಿ ಕಡದ ಒಗದ್ಹಂಗ। ಪಲ್ಲ ।

ಕರ್ನಾಟಕದಲ್ಲಿ ಲಾವಣಿಗಳ ಸಂಗ್ರಹಗಳನ್ನು ಹೆಚ್ಚಾಗಿ ಪ್ರಕಟಿಸಿದವರು ಡಾ. ನಿಂಗಣ್ಣ ಸಣ್ಣಕ್ಕಿ ಅವರು. ಉತ್ತರ ಕರ್ನಾಟಕದಲ್ಲಿ ಅವರಷ್ಟು ಲಾವಣಿ ಹಾಡುಗಳನ್ನು ಪ್ರಕಟಿಸಿದವರು ಬೇರೊಬ್ಬರು ಕಾಣುತ್ತಿಲ್ಲ. ಅವರು ಒಂದಾದನಂತರ ಒಂದರಂತೆ ೧೯೭೨ ರಿಂದ ೧೯೮೧ರ

ವರೆಗೆ ಹತ್ತುವರ್ಷದ ಅವಧಿಯಲ್ಲಿ ನಾಲ್ಕು ಲಾವಣಿಗಳ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಎರಡು ಒಬ್ಬೊಬ್ಬ ಕವಿಯ ಹಾಡುಗಳ ಸಂಗ್ರಹಗಳಾದರೆ, ಇನ್ನೆರಡು ಒಂದೊಂದು ವಿಷಯಕ್ಕೆ ಸಂಬಂಧಿಸಿದ ಹಾಡುಗಳನ್ನು ಆಯ್ದು ಎರಡು ಕೃತಿಗಳನ್ನು ಸಂಪಾದಿಸಿದ್ದಾರೆ.

೧೯೭೫ರಲ್ಲಿ **'ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ'** ಎಂಬ ಲಾವಣಿಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ರಾಯಣ್ಣನಿಗೆ ಸಂಬಂಧಿಸಿದ ಆರು ಲಾವಣಿಗಳಿದ್ದು, ಕೊನೆಯಲ್ಲಿ ರಾಯಣ್ಣನಿಗೆ ಸಂಬಂಧಿಸಿದ ಒಂದು ಸಖಿ ಇದೆ. ಮೊದಲಿನ ಲಾವಣಿಯೊಂದು ಫ್ಲೀಟರು ಸಂಗ್ರಹಿಸಿದ ಲಾವಣಿಯಾಗಿದ್ದು, ಉಳಿದ ಐದು ಲಾವಣಿಗಳನ್ನು ನಿಂಗಣ್ಣವರು ಸ್ವತಃ ಸಂಗ್ರಹಿಸಿದ್ದಾರೆ. ಸ್ಥಳೀಯ ವೀರರಿಗೆ ಸಂಬಂಧಿಸಿದ ಇಂತಹ ಹಾಡುಗಳ ಸಂಗ್ರಹದಿಂದ ನಮ್ಮಲ್ಲಿರುವ ಚರಿತ್ರೆಯನ್ನು ಪುನಃ ರಚಿಸಿಕೊಳ್ಳುವ ಕೆಲಸ ಅಗತ್ಯವಾಗಿ ನಡೆಯಬೇಕಾಗುತ್ತದೆ. ಹೀಗಾಗಿ ಚರಿತ್ರೆಗೆ ಸಂಬಂಧಿಸಿದಂತೆ ಇಲ್ಲಿಯ ಹಾಡುಗಳು ಮಹತ್ವದ ದಾಖಲೆಗಳೆನಿಸುತ್ತವೆ. ಈ ಕೃತಿಗೆ ಪ್ರಸ್ತಾವನೆಯನ್ನು ಬರೆದಿರುವ ಹಿರಿಯರಾದ ಬೆಟಗೇರಿ ಕೃಷ್ಣಶರ್ಮ ಅವರು ಇಲ್ಲಿಯ ಹಾಡುಗಳನ್ನು ಕುರಿತು ಹೀಗೆ ಬರೆಯುತ್ತಾರೆ: "ಬ್ರಿಟಿಷರು ರಾಯಣ್ಣನನ್ನು ಗಲ್ಲಿಗೆ ಏರಿಸಿದರೂ ನಮ್ಮ ಜನರು ನಿರ್ಲಿಪ್ತ ಮನದವರಾಗಿ ಔದಾಸೀನ್ಯ ತಳೆದು ಇದ್ದುಬಿಟ್ಟರು. ಆದರೆ ವ್ಯಕ್ತಿಯ ಯೋಗ್ಯತೆಯ ಮರ್ಮವನ್ನರಿತ ಜಾನಪದ ಸಹೃದಯರಿಗೆ ಸುಮ್ಮಗಿರುವುದಾಗಲಿಲ್ಲ. ಅಂತಹ ವಿರೋಧಕ ಪರಿಸ್ಥಿತಿಯಲ್ಲಿಯೂ ರಾಯಣ್ಣನ ವೀರ ಚರಿತವನ್ನು ತಮ್ಮ ಹೃದಯದ ಮಾತುಗಳಿಂದ ಹೊರಹೊಮ್ಮಿಸಿದರು. ಇಂದಿನ ನಮ್ಮ ಕಣ್ಣೆದುರು ರಾಯಣ್ಣನ ವೀರಸಹಜ ಚಿತ್ರವು ನಿಲ್ಲುವಂತೆ ಮಾಡಿದರು. ಬ್ರಿಟಿಷರು ಬರೆದು ಇರಿಸಿದ, ರಾಯಣ್ಣನಿಗೆ ಸಂಬಂಧಿಸಿದ ಇತಿಹಾಸ ಪುಟಗಳನ್ನೇ ನಾವು ನಂಬಿ ಕುಳಿತಿದ್ದರೆ, ಆತನ ನಿಜವಾದ ಯೋಗ್ಯತೆ ನಮಗೆ ತಿಳಿಯುತ್ತಲೇ ಇರಲಿಲ್ಲ. ಆದರೆ ನಮ್ಮ ಜಾನಪದ ಕವಿಗಳು ಹಾಡಿ ಹೊಗಳಿದ ಪವಾಡಗೀತಗಳು ನಮಗೆ ರಾಯಣ್ಣನ ನಿಜವಾದ ಸ್ವರೂಪವನ್ನು ಹುರಿದುಂಬಿಸುವ ಮಾತುಗಳಲ್ಲಿ ಚಿತ್ರಿಸಿ, ಇಂದಿನ ಕನ್ನಡಿಗರ ಹೃದಯಗಳನ್ನು ಹೆಮ್ಮೆಯಿಂದ ಹಿಗ್ಗಿಸುತ್ತವೆ. ಮೈಯನ್ನು ನಿಂತ ನವಿರುಗಳಿಂದ ಉಬ್ಬಿಸುತ್ತವೆ" (ಪ್ರ.ಪು.೧೩–೧೪).

ಪುಂಡ ಕಿತ್ತೂರ ನಾಡಿನೊಳಗ ಭಂಡಾಯ ಮಾಡಿದ ರಾಯಾ
ಪಂಡಿತರೆಲ್ಲಾ ಇಟ್ಟ ಕೇಳರಿ ಚಿತ್ತಾ ।ಪ।
ಅಂವ ಜಾತಿಲೆ ಕುರುಬ ಬೀರುನ ಭಕ್ತಾ
ಹಳಬ ಸರಕಾರದ ಚಾಕರಿ ಮಾಡುತಿದ್ದೊ ಸಿಸ್ತಾ
ಕುಲಕರ್ಣಿ ದಶಿಯಿಂದ ಪೈಲೆ ಕದನ ಹುಟ್ಟಿ ಊರಬಿಟ್ಟ
ಸುತ್ತೆಲ್ಲ ಹಾವಳಿ ಮಾಡಿದೋ ವಿಪರೀತಾ
ಬಂಟ ಇದ್ದರ ಇರಬೇಕೋ ಪುಂಡ ರಾಯ ಪ್ರಖ್ಯಾತ
ಮುಂದಿನ ಕೆಡಗಾಲಕಿನ್ನ ಅಂದಾನೋ ಬ್ರಾಹ್ಮಣ
ಬಂದ ಉಟ್ಟಿರುವ ಧೋತ್ರಾ ಒಗತಾರಕೋ ರಾಯಾ ನೀನಾ।

ಹೀಗೆ ರೋಷ ಭರಿತವಾಗಿಯೇ ಸಾಗುತ್ತವೆ ಇಲ್ಲಿಯ ಎಲ್ಲ ಲಾವಣಿಗಳು. ಇದೊಂದು ಚರಿತ್ರೆಯ ಮಹತ್ವದ ಆಕರ ಗ್ರಂಥವೇ ಎನಿಸುತ್ತದೆ.

ಡಾ. ನಿಂಗಣ್ಣ ಸಣ್ಣಕ್ಕಿ ವರದೇ ಇನ್ನೊಂದು ಕೃತಿ **'ದೈವದ ಎರಡು ಲಾವಣಿಗಳು'** (೧೯೮೦). ಇಲ್ಲಿ ಈಡಿಪಸ್ ಹಾಗೂ ಇಲೆಕ್ಟ್ರಾ ಕಾಂಪ್ಲೆಕ್ಸ್‌ಗೆ ಸಂಬಂಧಿಸಿದ ಎರಡು ಲಾವಣಿಗಳನ್ನು ಒಂದೆಡೆ ಪ್ರಕಟಿಸಿದ್ದಾರೆ. 'ಬ್ರಹ್ಮ ಬರೆದ ಲಾವಣಿ' 'ಮಗಳ ಗಂಡ'ತನಕ್ಕೂ 'ಸೆಟವಿ ಬರಹದ ಲಾವಣಿ' 'ತಾಯಿಗಂಡ'ತನಕ್ಕೂ ಉದಾಹರಣೆಗಳಾಗಿವೆ. ಈ ಎರಡೂ ಮನಸ್ಸಿನ ಸಂಕೀರ್ಣತೆಗಳುಳ್ಳ ಕಥೆಗಳು ಜಗತ್ತಿನ ಎಲ್ಲ ದೇಶಗಳಲ್ಲಿ ಸಿಗುವಂಥ ಕಥೆಗಳೇ ಆಗಿವೆ. ಹಣೆಬರಹವನ್ನು ತಪ್ಪಿಸಿಕೊಳ್ಳಲು ಮಾನವರಿಂದ ಸಾಧ್ಯವಿಲ್ಲ ಎಂಬ ನಂಬುಗೆಯ ಹಿನ್ನೆಲೆಯಲ್ಲಿ ಇಲ್ಲಿಯ ಎರಡೂ ಲಾವಣಿಗಳು ಹುಟ್ಟುಪಡೆದಿವೆ. ಇಂತಹ ನಂಬುಗೆಗಳು ಜಗತ್ತಿನ ತುಂಬ ಇವೆ ಎಂಬುದಕ್ಕೆ ಈ ಆಶಯಗಳುಳ್ಳ ಕಥೆಗಳು ಎಲ್ಲ ಕಡೆಗೆ ದೊರೆಯುವುದೇ ದೊಡ್ಡ ಸಾಕ್ಷಿ ಎನ್ನಬೇಕು.

'ಬ್ರಹ್ಮ ಬರದ ಲಿಪಿ ಎಂದೂ ತಪ್ಪಿದ್ದಲ್ಲಾ
ಇರವಿ ಎಂಬತ್ತು ಕೋಟಿಗಿ ಮೊದಲ ಬಲ್ಲಾಂವ ಬಲ್ಲಾಬಲ್ಲಾ!'

ಎಂಬುದು ಇಲ್ಲಿಯ ಗಟ್ಟಿ ನಂಬುಗೆ. ಬ್ರಹ್ಮನ ಮಗ ಭೃಗು. ಹೊಲೆಯನ ಮಗಳನ್ನು ಮದುವೆಯಾದ. ಆಕೆಗೆ ಹುಟ್ಟಿದ ಮಗುವನ್ನು ಕೊಂದು ಅಡವಿಯಲ್ಲಿ ಒಗೆದ. ಪಕ್ಷಿಗಳು ಸಂಜೀವೀನಿ ರಸಹಾಕಿ ಮಗುವನ್ನು ಬದುಕಿಸಿದವು. ಆ ಮಗು ಪಾತರದವರ ಮನೆ ಸೇರಿ, ಯೌವ್ವನಕ್ಕೆ ಬಂದಿತು. ಭೃಗು ಬಂದು, ಅವಳೊಡನೆ ಕೂಡಿ, ಮಗುವನ್ನು ಪಡೆದ. ನಂತರ ವಿಷಯ ಗಮನಕ್ಕೆ ಬಂದಿತು. ತನ್ನ ಮಗುವನ್ನು ಹೀಗೆ ಆಡಿಸಿದ:

'ಮಗಳ ಮಗನೆ ಬಾರೊ
ಮೇಲೆ ಮೊಮ್ಮಗನೆ ಬಾರೋ
ನನ್ನ ಮಗನೆ ಬಾರೊ
ಕರ್ಮದ ಮಗ ಅಂತ ತೂಗುತಲಿ
ಜೋಗುಳ ಹಾಡುತಲಿ'

ಇದು ಈ ಕಥೆಯ ಒಟ್ಟು ಸಾರಾಂಶ. ಇಂತಹದೇ ಇನ್ನೊಂದು ಬಗೆಯ ಸಂಗತಿ ಸೆಟವಿಯ ಕತೆಯಲ್ಲಿ ಬರುತ್ತದೆ. ಬ್ರಹ್ಮನು ತನ್ನ ಮಗನ ಹಣೆಬರಹ ಬರೆದರೆ ಸೆಟವಿ ತನ್ನ ಮಗಳ ಹಣೆಬರಹವನ್ನು ಬರೆಯುತ್ತಾಳೆ. ಅವಳೂ ಹೊಲೆಯನನ್ನು ಮದುವೆಯಾಗಿ, ಅವನಿಂದ ಪಡೆದ ಮಗನೊಂದಿಗೆ ಮದುವೆಯಾಗಿ, ಮಕ್ಕಳನ್ನು ಪಡೆಯುತ್ತಾಳೆ.

'ನಿನ್ನ ದೈವದಾಂದ ಕೇಳವ್ವ ನೀನು ಸ್ಪಷ್ಟಾ
ಹುಟ್ಟಿದ ಹನ್ನೆರಡು ವರುಷಕ ತಂಗಿ
ಸಮಗಾರನ ಮದುವೆಯಾಗಿ ಹೋಗುದು
ಅದರುಷ್ಟಾ ಅದರುಷ್ಟಾ ಹಿಂಗೆ ಅದೀತ ನಿನ್ನ ದೈವದಾಗ ಕೆಟ್ಟ
ನಿನ್ನ ಹೊಟ್ಟಿಲೆ ಹುಟ್ಟಿದಂತಹ ಮಗನ
ಭೋಗಿಸಬೇಕ ಕೇಳವ್ವ ನೀನು ಸ್ಪಷ್ಟಾ'

ಅಲ್ಲಿ ತಂದೆ ಬರೆದ ಹಣೆಬರಹ ತಪ್ಪಿಸಿಕೊಳ್ಳಲು ಮಗನಿಂದ ಆಗಲಿಲ್ಲ. ಇಲ್ಲಿ ತಾಯಿ ಬರೆದ ಹಣೆಬರಹ ದಾಟಲು ಮಗಳಿಂದ ಸಾಧ್ಯವಾಗಲಿಲ್ಲ. ಹೀಗೆ ಭಾರತೀಯ ಪರಂಪರೆಯ ನಂಬುಗೆಗಳಲ್ಲಿ ಇರುವ ದೈವ ನಿರ್ಧರಿಸುವ ಇಬ್ಬರು ಮಕ್ಕಳ ಹಣೆಬರಹವೇ ಹೀಗಾದ ಕಥೆಗಳನ್ನು ಇವೆರಡೂ ಒರೆಯುತ್ತವೆ.

ನಿಂಗಣ್ಣ ಸಣ್ಣಕ್ಕಿ ಅವರ ಲಾವಣಿಗಳ ನಾಲ್ಕನೇ ಸಂಗ್ರಹ **'ಸಾತು ಕ್ಯಾಮಣ್ಣನ ಲಾವಣಿಗಳು'** (೧೯೮೧). ಬಾಳಗೋಪಾಳನ ಲಾವಣಿಗಳ ನಂತರ ಮತ್ತೆ ಏಕಕವಿಕೃತ ಲಾವಣಿಗಳನ್ನು ಮುದ್ರಿಸಿದ ಕೀರ್ತಿ ಸಣ್ಣಕ್ಕಿ ಅವರಿಗೆ ಸಲ್ಲುತ್ತದೆ. ಸಾತು ಎಂಬುದು ಕ್ಯಾಮಣ್ಣನ ಜೊತೆಗಾರ ಸಾತಪ್ಪನ ಸಂಕ್ಷಿಪ್ತ ನಾಮ. ಕ್ಯಾಮಣ್ಣಪ್ಪ ಕವಿಯ ಹೆಸರು. ತನ್ನ ಜೊತೆಗಾರನ ಹೆಸರಿನೊಂದಿಗೆ ತನ್ನ ಹೆಸರನ್ನು ಸೇರಿಸಿ, ಕಾವ್ಯನಾಮವನ್ನು 'ಸಾತು ಕ್ಯಾಮಣ್ಣ' ಎಂದು ಇಟ್ಟುಕೊಂಡಿದ್ದಾನೆ. 'ಸಾತು ಕ್ಯಾಮಣ್ಣ'ನ ಒಂದು ಅದ್ಭುತವೆಂದರೆ ಈತ ಕುರುಡನಾಗಿದ್ದು ಪ್ರಸಿದ್ಧ ಲಾವಣಿಕಾರನಾಗಿದ್ದ ಎಂಬುದು. ಲಾವಣಿಗಳನ್ನು ನಿರಕ್ಷರಿಗಳಿಗಿಂತ ಅಲ್ಪಮಟ್ಟಿಗೆ ಅಕ್ಷರಜ್ಞಾನವುಳ್ಳವರೇ ಬರೆದುದು ಜಾಸ್ತಿ. ಈ ಕವಿಗೆ ಅಕ್ಷರ ಜ್ಞಾನವಂತೂ ಕಡೆಗೆ ಉಳಿಯಿತು, ಕಣ್ಣುಗಳೂ ಇರದೆ ಲಾವಣಿಗಳನ್ನು ಬರೆದಿದ್ದಾನೆ ಎಂಬುದೇ ಆಶ್ಚರ್ಯದ ಸಂಗತಿ. ಬಹುಶಃ ಪ್ರತಿಭೆಯ ಆಟ ಒಮ್ಮೊಮ್ಮೆ ಎಲ್ಲ ನಿಯಮಗಳನ್ನು ಮುರಿದಿಕ್ಕುತ್ತದೆ ಎಂಬುದಕ್ಕೆ 'ಸ್ಯಾತು ಕ್ಯಾಮಣ್ಣ' ಒಂದು ಉದಾಹರಣೆಯಾಗಿದ್ದಾನೆ. ೧೦೨ ವರ್ಷ ಬದುಕಿದ ಈ ಕವಿ ಜಾಡರ ಸಮುದಾಯಕ್ಕೆ ಸೇರಿದವನು. ಇವನ ಕಾಲ ೧೮೫೦–೧೯೩೮. ಈತ ಬೆಳಗಾವಿ ಜಿಲ್ಲೆಯ ಗೋಕಾಕ ನಗರದವನು. 'ಲೋಕದಲ್ಲಿಯ ಮಾಯೆಯ ಆಟವನ್ನು ತಿಳಿದು ಹೆಚ್ಚಾಗಿ ಆ ಮಾಯೆಯನ್ನು ಜಯಿಸುವಂತಹ ಭಕ್ತಿ–ಜ್ಞಾನ–ವೈರಾಗ್ಯಗಳನ್ನು ಕುರಿತು ವಿವರಿಸುವ ಲಾವಣಿಗಳನ್ನೇ ಇವನು ಹೆಚ್ಚಾಗಿ ರಚಿಸಿದ್ದಾನೆ' ಎಂದು ತಿಳಿದುಬರುತ್ತದೆ. ಪ್ರತಿಭಾವಂತನಿಗೆ ಲೋಕಜ್ಞಾನ ಅರಿಯಲು ಕಣ್ಣುಗಳು ಮುಖ್ಯ. ಕಣ್ಣುಗಳೆ ಇಲ್ಲದ ಕವಿಗೆ ಅನಿವಾರ್ಯವಾದ ಒಂದು ವಸ್ತುವೆಂದರೆ ಅದು ತತ್ತ್ವಗಳ ಜ್ಞಾನ. ಹೀಗಾಗಿ ಕವಿ ಬದುಕಿನ ತತ್ತ್ವಗಳನ್ನೇ ಕುರಿತು ಹಾಡುಗಳನ್ನು ಬರೆದುದು ಸಹಜ. ಆದರೆ ಅನೇಕ ವಾಸ್ತವ ಸಂಗತಿಗಳನ್ನು ಜನರಿಂದ ಕೇಳಿತಿಳಿದುಕೊಂಡು ಆ ವಿಷಯಗಳ ಕುರಿತು ಹಾಡುಗಳನ್ನು ರಚಿಸಬಲ್ಲ ಶಕ್ತಿ ಈತನಿಗಿತ್ತು. ಹೀಗಾಗಿ ಕೆಲವು ವಾಸ್ತವ ಸಂಗತಿಗಳನ್ನು ಕುರಿತೂ ಹಾಡುಗಳನ್ನು ರಚಿಸಿದ್ದಾನೆ. ಈ ಸಂಗ್ರಹದಲ್ಲಿರುವ ೧೫ ಹಾಡುಗಳಲ್ಲಿ 'ನಾವ ಮುಳುಗಿದ ಲಾವಣಿ' ಒಂದು ಮಾತ್ರ ವಾಸ್ತವ ಸಂಗತಿಯುನ್ನು ಆಧರಿಸಿದೆ. ಉಳಿದವೆಲ್ಲ ಪೌರಾಣಿಕ ಇಲ್ಲವೆ ತತ್ತ್ವಜ್ಞಾನವನ್ನೊಳಗೊಂಡ ಹಾಡುಗಳಾಗಿವೆ. 'ಅನುಭಾವಿ ಮತ್ತು ಪ್ರಾಪಂಚಿಕನ ವಾದ, ಸತ್ಯವತಿ ಲಾವಣಿ, ಬ್ರಹ್ಮ ಅಕಲ ಲಾವಣಿ, ಹೆಂಗಸಿನ ಪ್ರೀತಿಯ ಲಾವಣಿ, ಕೊಣ್ಣೂರ ಕಾಡಸಿದ್ಧೇಶ್ವರ ಲಾವಣಿ, ದಶಾವತಾರ ಲಾವಣಿ, ಪತಿವ್ರತಾ ನೀಲಾವತಿ ಲಾವಣಿ, ವಿಚಿತ್ರ ಹೆಣ್ಣ ಮಾಯಾ ತಮ್ಮಾ ಲಾವಣಿ' ಈ ಮುಂತಾದ ಲಾವಣಿಗಳಿವೆ. ಗೋಕಾಕದ ಸುತ್ತಮುತ್ತಲ ಗೊಂದಲಿಗರು ಈ ಕವಿಯ ಹಾಡುಗಳನ್ನು ಹೆಚ್ಚಾಗಿ ಹಾಡುತ್ತಾರೆಂದು ತಿಳಿದುಬರುತ್ತದೆ.

ಕವಿ ಮೂರು ವರ್ಷದ ಮಗುವಿದ್ದಾಗ ಕಣ್ಣುಬೇನೆ ಬಂದು ಕುರುಡನಾದನಂತೆ. ಹೀಗಾಗಿ ಈತ ಸಾತಪ್ಪ ಹೇಳಿದ ಸಂಗತಿಗಳನ್ನು, ತನಗೆ ಯಾರಾದರೂ ಹೇಳಿದ ಕಥೆಗಳನ್ನು ಹಾಡುಗಳನ್ನಾಗಿ ಮಾಡುತ್ತಿದ್ದನಂತೆ. ಈತ ಬಯಲಾಟಗಳನ್ನೂ ಬರೆದ ಬಗ್ಗೆ ಮಾಹಿತಿ ದೊರೆಯುತ್ತದೆ. ಇವೆಲ್ಲವನ್ನು ಕವಿ ಹೇಳುತ್ತಿದ್ದ, ಅವನ ಮಗ ಬರೆದುಕೊಳ್ಳುತ್ತಿದ್ದ ಎಂದು ತಿಳಿದುಬರುತ್ತದೆ. ಕಣ್ಣಿಲ್ಲದವನ ಕವಿತೆಗಳು ಸಹಜವಾಗಿಯೇ ಜಾಳಜಾಳವಾಗಿ ತೋರುತ್ತವೆ.

ಶಿವನ ಸ್ತುತಿ

ಕೈಲಾಸವಾಸ ಜಗದೀಶ ಅಲ್ಲ ಇಂವ ಶಿವಾ
ನಗಿ ಬರತದ ನೋಡಿ ಇವನ ವೈಭವಾ। ಪ ।
ಇಂವ ಶಿವ ಆದರ ಹೊಟ್ಟಿ ಕೂಳಿಗೆ ಇಲ್ಲೇನ ಗತಿ
ಇದು ಭಿಕಾರಿ ಬಾವಾ ಭಿಕ್ಷಾ ಬೇಡಿ ತಿಂತತಿ॥
ಇದಕೆಲ್ಲಿಂದ ಬಂದೀತು ಗಂಧ ಪರಿಮಳದ ಅಕ್ಷತಿ
ಹಿಡದೆಲ್ಲಿದ ಕುಲಾ ಇವನ ಮಡಿ ಏನು ಸುಡತತಿ॥
ತೆಲಿ ಬುರಡಿ ಮಾಲಿ ಕೊರಳಲ್ಲಿ ಹಾಕಿಕೊಂಡ ಬಹು ಪ್ರೀತಿ
ಮೈಯಲ್ಲಾ ಧರಿಸಿದಾನ ಹೆಣದ ಭಸ್ಮ ವಿಭೂತಿ॥
ಇವಗ ಸುಡಗಾಡದಾಗ ಹೆಂಗಾರ ಗಮಸತತಿ ಜೀವಾ॥೧॥

ಇದುವರೆಗೆ ಪ್ರಕಟವಾದ ಜನಪದ ಲಾವಣಿಗಳ ಸಂಗ್ರಹಕ್ಕು ೧೯೭೭ರಲ್ಲಿ ಎ.ಜಿ.ನೀಲಗಾರ ಅವರು ಸಂಗ್ರಹಿಸಿ ಪ್ರಕಟಿಸಿದ **'ಜಾನಪದ ಝೇಂಕಾರ'** ಎಂಬ ಲಾವಣಿಗಳ ಸಂಗ್ರಹಕ್ಕೂ ತುಂಬಾ ವ್ಯತ್ಯಾಸವಿದೆ. ನೀಲಗಾರರ ಮನೆತನ ಹಾಡುಗಾರರ ಮನೆತನವೆಂದು ತೋರುತ್ತದೆ. ಎ.ಜಿ.ನೀಲಗಾರರು ಸ್ವತಃ ಹಾಡುಗಾರರು. "ನನ್ನ ಹಿರಿಯರು ತಲೆ ತಲಾಂತರದಿಂದ ಕನ್ನಡ ನಾಡಿನಲ್ಲಿ ಅಲ್ಲಲ್ಲಿ ಅಲೆದು ಕೂಡಿ ಹಾಕಿದುದು ಈ ಸಂಗ್ರಹ. ಇದೇ ನನ್ನ ಆಸ್ತಿ. ...ಐದು ತಲೆಗಳ ಹಿಂದೆಯೇ ಸಂಗ್ರಹವಾಗಿದ್ದ ಈ ಹೊತ್ತಿಗೆಗಳು ಮೋಡಿ ಅಕ್ಷರಗಳಲ್ಲಿ ಕೈಬರಹದಲ್ಲಿದ್ದವು. ಕೈಹಿಡಿದರೆ ಪುಡಿಯಾಗುವ ವಿಚಿತ್ರ ರೂಪಕ್ಕೆ ತಿರುಗಿದ ಪುಟಗಳಿಂದ ಬಹಳ ಪ್ರಯಾಸಪಟ್ಟು ಇವುಗಳನ್ನು ಎತ್ತಿ ಬರೆಯಲಾಗಿದೆ. ಆಸ್ಥೆ ಸಂಯಮಗಳಿಂದ ಮೋಡಿಯನ್ನು ಕನ್ನಡಕ್ಕೆ ಅರ್ಥಪೂರ್ಣವಾಗಿ ಬರೆದು ಹಸ್ತಪ್ರತಿಗಳನ್ನು ಸಿದ್ಧಪಡಿಸಿ ವ್ಯಾಖ್ಯೆಯನ್ನು ಬರೆದ ನನ್ನ ಮಗಳು ಶ್ರೀಮತಿ ಸಂಗೀತಾಳ ಈ ಕಾರ್ಯ ಪ್ರಶಂಶನಾರ್ಹ" (ನನ್ನ ನುಡಿ, ಪು.೭). ಸಂಪಾದಕರ ಈ ಮಾತುಗಳಿಂದ ನೀಲಗಾರರ ಮನೆತನ ಮೊದಲಿನಿಂದಲೂ ಹಾಡುಗಾರರ ಮನೆತನವಾಗಿದ್ದು, ಹೀಗೆ ಜನಪದ ಹಾಡುಗಳನ್ನು ಸಂಗ್ರಹಿಸಿಟ್ಟಂತೆಯೂ ತೋರುತ್ತದೆ. "ಸಂಗ್ರಹಗಳಲ್ಲಿನ ಎಲ್ಲ ಕವನಗಳನ್ನು ನಾನು ಕಷ್ಟಪಟ್ಟು ನನ್ನ ತಂದೆಯವರ ಹತ್ತಿರ ಹಗಲು ರಾತ್ರಿ ಕುಳಿತು ಕಂಠಪಾಠ ಮಾಡಿದ್ದು ಇರುತ್ತದೆ" (ಅದೆ,ಪು.೭) ಎನ್ನುವ ಸಂಪಾದಕರ ಮಾತಿನಿಂದ ತಾವು ಕಷ್ಟಪಟ್ಟು ಕಲಿತು ಈ ಹಾಡುಗಳನ್ನು ಹಾಡುತ್ತಿದ್ದುದು ತಿಳಿದುಬರುತ್ತದೆ.

ಈ ಕೃತಿಯಲ್ಲಿಯ ಕೆಲವು ಹಾಡುಗಳು ಸಖಿಗಳಂತೆ, ಖ್ಯಾಲಿಗಳಂತೆ ಉಪಯೋಗ

ವಾಗುವಂಥವುಗಳೂ ಇವೆ. ದಕ್ಷಿಣ ಕರ್ನಾಟಕದ ಕೆಲವು ಲಾವಣಿಗಳೂ ಇಲ್ಲಿರುವಂತೆ ತೋರುತ್ತವೆ. ಇಲ್ಲಿಯ ಲಾವಣಿಗಳನ್ನು ಐದು ಪ್ರಕಾರಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ.

೧. ಐತಿಹಾಸಿಕ ಲಾವಣಿಗಳು
೨. ಪೌರಾಣಿಕ ಲಾವಣಿಗಳು
೩. ಶೃಂಗಾರ ಲಾವಣಿಗಳು
೪. ಆಧ್ಯಾತ್ಮಿಕ ಲಾವಣಿಗಳು
೫. ಸಂಕೀರ್ಣ ಲಾವಣಿಗಳು

ಐತಿಹಾಸಿಕ ಲಾವಣಿಗಳಲ್ಲಿ 'ಸಂಗೋಳ್ಳಿ ರಾಯಣ್ಣನ ಪದ' ಒಂದನ್ನು ಬಿಟ್ಟರೆ ಉಳಿದ ಹಾಡುಗಳು ಪೂರ್ಣಪ್ರಮಾಣದ ಲಾವಣಿಗಳಾಗಿಲ್ಲ. ಅವೆಲ್ಲ ಖ್ಯಾಲಿಗಳಂತೆ ಹಾಡಿಕೊಳ್ಳುವ ಸಣ್ಣ ಹಾಡುಗಳಾಗಿವೆ. 'ಸಂಗೊಳ್ಳಿ ರಾಯಣ್ಣನ ಪದ' ಉತ್ತರ ಕರ್ನಾಟಕದ ಲಾವಣಿಯ ಲಕ್ಷಣಗಳನ್ನು ಹೊಂದಿಲ್ಲ. ಇದು ಮೈಸೂರು ಭಾಗದ ಲಾವಣಿಯಂತಿದೆ ಎಂಬುದು ಓದಲು ತೊಡಗಿದರೆ ಅನುಭವಕ್ಕೆ ಬರುತ್ತದೆ. ಇದರ ಸಾಲುಗಳನ್ನು ಕಡಿದು ಇಡಲು ಕೂಡ ಸಂಪಾದಕರಿಗೆ ಸಾಧ್ಯವಾಗಿಲ್ಲ. ನುಡಿಗಳನ್ನು ಉದ್ದಕ್ಕೆ ಮುದ್ರಿಸಿದ್ದಾರೆ. ಸಾಲುಗಳನ್ನು ಕಡಿದು ಹೀಗೆ ಇಡಬಹುದಾಗಿದೆ :

ದೇವ ದೇವ ಗುರು ನಾಮವ ಸ್ಮರಿಸುತ
ಹೇಳುವೆ ಕೇಳರಿ ಮುಂದಿನ ಕತನವನು
ವೀರ ಕೇಸರಿ ರಾಯಣ್ಣನ ಚರಿತ್ರವನೊ
ಜನ್ಮ ಸ್ಥಾನವ ಸಂಗೊಳ್ಳಿ ಗ್ರಾಮವನೊ॥

ಬೆಳಗಾಂವಿ ಜಿಲ್ಲಾ ಸಂಪಗಾಂವಿ ತಾಲೂಕ
ಸನ್ನ ಹಳ್ಳಿ ಸಂಗೊಳ್ಳಿ ಗ್ರಾಮವನು
ತಾಯಿ ಕೆಂಚವ್ವನ ಗರ್ಭದಲಿ ಜನಿಸಿದನೊ
ಕೀರ್ತಿ ಪಡದನೀ ಹಿಂದುಸ್ಥಾನವನೊ ॥

ಹೀಗೆ ಸಾಗುತ್ತದೆ ಈ ಲಾವಣಿ. ಕೊನೆಯ ನುಡಿಯಲ್ಲಿ ಕವಿಯ ಅಂಕಿತವೂ ಇಲ್ಲ. ಎರಡನೆಯ ಭಾಗವಾದ ಪೌರಾಣಿಕ ಲಾವಣಿಗಳಲ್ಲಿ ಒಂದೆರಡನ್ನು ಬಿಟ್ಟರೆ ಉಳಿದವೆಲ್ಲ ಬಾಳಗೋಪಾಳನ ಲಾವಣಿಗಳೇ ಆಗಿವೆ. ನಿಂಗಣ್ಣ ಸಣ್ಣಕ್ಕಿ ಅವರು ಸಂಗ್ರಹಿಸಿ **'ಬಾಳಗೋಪಾಳನ ಲಾವಣಿಗಳು'** ಎಂಬ ಕೃತಿಯಲ್ಲಿ ಪ್ರಕಟಿಸಿದ ಬಹುತೇಕ ಎಲ್ಲ ಲಾವಣಿಗಳು ಈ ಕೃತಿಯಲ್ಲಿವೆ. ಸಣ್ಣಕ್ಕಿ ಅವರು ತಾವು ಸ್ವತಃ ತಿರುಗಾಡಿ ಈ ಹಾಡುಗಳನ್ನು ಸಂಗ್ರಹಿಸಿದ್ದೇನೆ ಎನ್ನುತ್ತಾರೆ. ಜೊತೆಗೆ ತಮ್ಮಲ್ಲಿ ಗೋಪಾಳನ ಇನ್ನಷ್ಟು ಹಾಡುಗಳಿದ್ದು, ಈಗ ಸಧ್ಯಕ್ಕೆ ಇವಿಷ್ಟನ್ನು ಮಾತ್ರ ಪ್ರಕಟಿಸುತ್ತಿದ್ದೇನೆ ಎಂದಿದ್ದಾರೆ. ನೀಲಗಾರ ಅವರು ತಮ್ಮ ಮನೆಯಲ್ಲಿದ್ದ ಹಳೆಯ ಕಾಗದಗಳಿಂದ ಈ ಕೃತಿಯ ಹಾಡುಗಳನ್ನು ಪ್ರತಿಮಾಡಲಾಗಿದೆ ಎನ್ನುತ್ತಾರೆ. ಆದರೆ ಎರಡೂ ಕೃತಿಗಳಲ್ಲಿ ಬಾಳಗೋಪಾಳನ ಅವೇ ಹಾಡುಗಳಿರುವುದು ಕಂಡುಬರುತ್ತದೆ. ಪೌರಾಣಿಕ ಲಾವಣಿಗಳಲ್ಲಿ ಮತ್ತೆ ಕೆಲವರ ಒಂದೆರಡು ಹಾಡುಗಳೂ ಸೇರಿಕೊಂಡಿವೆ.

ಮೂರನೆಯ ಶೃಂಗಾರ ಲಾವಣಿಗಳು ಭಾಗದಲ್ಲಿ ಅನೇಕ ಹೊಸ ಹಾಡುಗಳು ಬೆಳಕು ಕಂಡಿವೆ. ಈ ಕೃತಿಯ ವೈಶಿಷ್ಟ್ಯವೆಂದರೆ ಹಲವಾರು ಹಳೆಯ ಲಾವಣಿಕಾರರ ಹಾಡುಗಳು ಇಲ್ಲಿರುವುದು. ಇಂಚಲದ ಕೆಂಚನಾಯಕ, ರಾಣು ಕುಬಣ್ಣ, ಕಲಾದಗಿ ಇನಾಮದಾರ, ಮಲ್ಲಬಸಯ್ಯ ಹೀಗೆ ಬೇರೆ ಬೇರೆ ಲಾವಣಿಕಾರರ ಹಾಡುಗಳೂ ಇಲ್ಲಿವೆ. ಈ ಭಾಗದಲ್ಲಿರುವ ೨೭ ಹಾಡುಗಳಲ್ಲಿ ಒಂದೆರಡು 'ಜೀವನ ಸಂಗೀತ'ದಲ್ಲಿಯ ಹಾಡುಗಳಿವೆ. ಎರಡ್ಮೂರು ಬಾಳಗೋಪಾಳನ ಹಾಡುಗಳಿವೆ. ಉಳಿದವೆಲ್ಲ ಬೇರೆ ಬೇರೆ ಕವಿಯ ಅಪ್ರಕಟಿತ ಹಾಡುಗಳೇ ಇವೆ. ಅತ್ಯಂತ ಪ್ರಮುಖವಾದ ಭಾಗ ಇದು. ಇಲ್ಲಿಯ ಶೃಂಗಾರ ಲಾವಣಿಗಳಲ್ಲಿ ಅತ್ಯಂತ ವಾಚ್ಯವಾದ ಹಾಡುಗಳೂ ಇವೆ. ಅಪರೂಪಕ್ಕೆ ಕೆಲವೊಂದು ವರ್ಣನಾ ಪ್ರಧಾನವಾದ ಹಾಡುಗಳಿವೆ. ಎಲ್ಲವೂ ಗಂಡಿನ ಪರವಾಗಿರುವ, ಹೆಣ್ಣನ್ನು ಭೋಗಕ್ಕೆ ಬಳಸಿಕೊಳ್ಳುವ, ಬಲ್ಲಂತೆ ವಾಚ್ಯವಾಗಿ, ಅನೇಕಸಲ ಅವಾಚ್ಯವಾಗಿ ಹೆಣ್ಣಿನ ಅಂಗ-ಸಂಗವನ್ನು ವರ್ಣಿಸುವ ಹಾಡುಗಳೂ ಇಲ್ಲಿವೆ.

ಪ್ರೇಮಾತಿಶಯ

ಶೃಂಗಾರವಾದ ನಾರಿ ನಿನ್ನ ಉಂಗುರುಗೂದಲು ಸಾಗಿ ಬಿದ್ದಿವೆ
ಬಂಗಾರ ವಸ್ತು ಅಂಗದಲ್ಲಿ ಜಡೆದು ಇಟ್ಟಿಯೆ।
ಉಂಗುರ ಬೆರಳಿನಲ್ಲಿ ಜರದ ಹಿರದ ಶೀರಿ ಉಟ್ಟೀಯೆ ॥
ನೋಡಿ ಪೆಂಗರಿಯಾದ ಖಾಸ ರೇಶ್ಮಿ ಕುಪ್ಪಸ ತೊಟ್ಟೀಯೆ।
ಕಂಗಾಲ ಮಾಡಿ ಹೋಗಬೇಡ
ಹ್ಯಾಂಗರ ಮಾಡಿ ಕರೆಯುವೆನು
ಮುಂಗುರುಳಗಳ ತಿದ್ದಿ ತೀಡಿ ತುರಬ ಕಟ್ಟೀಯೆ
ಎನ್ನ ಅಂಗ ಸಂಗ ಮಾಡಿ ಎಂದು ಬೋಗ ಕೊಟ್ಟೀಯೆ। ಪ।

ಆಧ್ಯಾತ್ಮಿಕ ಲಾವಣಿಗಳು ಎಂಬ ಭಾಗದಲ್ಲಿರುವ ಎರಡೂ ಲಾವಣಿಗಳು ಮತ್ತೆ ಬಾಳಗೋಪಾಳನ ಹಾಡುಗಳೇ ಆಗಿವೆ.

ಐದನೆಯದಾದ ಸಂಕೀರ್ಣ ಲಾವಣಿಗಲ್ಲಿ ಕೊನೆಯವೆರಡು ಲಾವಣಿಗಳನ್ನು ಬಿಟ್ಟರೆ ಉಳಿದವೆಲ್ಲ ಮೈಸೂರು ಭಾಗದ ದಕ್ಷಿಣ ಕರ್ನಾಟಕದಲ್ಲಿ ಹಾಡುವ ಲಾವಣಿಗಳಂತೆ ತೋರುತ್ತವೆ. ಆದರೆ ಸಂಪಾದಕರು ಈ ಬಗೆಗೆ ಯಾವ ಸುಳಿವನ್ನೂ ಕೊಟ್ಟಿಲ್ಲ. ಈ ಕೃತಿಯ ಹಾಡುಗಳನ್ನು ಮೋಡಿಲಿಪಿಯಿಂದ ಕನ್ನಡ ಲಿಪಿಯಲ್ಲಿ ಬರೆದ, ಈ ಕೃತಿಯ ಕೊನೆಯಲ್ಲಿ 'ಲಾವಣಿ ಪದ್ಯ ಕಥನ-ಒಂದು ವಿವೇಚನೆ' ಎಂಬ ವಿವರಣೆಯನ್ನು ಬರೆದ, ಈ ಕೃತಿಯ ಸಂಪಾದಕರ ಮಗಳು ಸಂಗೀತಾ ಅವರು ಹೀಗೆ ಬರೆಯುತ್ತಾರೆ: "ಮೈಸೂರು ಭಾಗದಲ್ಲಿ ಇವುಗಳಿಗೆ 'ಗರಡಿ ಮನೆಯವರ ಹಾಡುಗಳು' ಅಂದರೆ ವೀರರ ಹಾಡುಗಳು ಎಂದು ಕರೆಯುತ್ತಿದ್ದರು. ಅಲ್ಲಿ ಲಾವಣಿ ಹಾಡುವ ಧಾಟಿಯೇ ಬೇರೆ. 'ಸುವ್ವಿ ಸವ್ವಮ್ಮಲಾಲೆ' ಎಂಬ ಪಲ್ಲವಿಯಿಂದ ಪ್ರಾರಂಭವಾಗುವವು"(ಪು.೨೬೧-೨೬೨). ಈ ಕೃತಿಯಲ್ಲಿ 'ಸುವ್ವಿ ಸವ್ವಮ್ಮಲಾಲೆ' 'ತಂದನಾನೆ', 'ನವಲೆದುಂಬಿ' ಈ ಬಗೆಯ ಸ್ವರಗತಿಗಳುಳ್ಳ ಹಾಡುಗಳು ಕಾಣುತ್ತವೆ. ಇವು ಖಂಡಿತವಾಗಿ ಉತ್ತರಕರ್ನಾಟಕದ ಲಾವಣಿಗಳಲ್ಲ.

ಕೆಂಡದರಾಯ

ಸುವ್ವಿ ಸುವ್ವಮ್ಮ ಲಾಲೆ ಸುವ್ವಲಾಲೆ
ಜಾಣೆ ಜಾಗಾರದ್ಹೆಣ್ಣೆ ಸುವ್ವಲಾಲೆ।
ಬಳೆಗಾರ ಮಲ್ಲಣ್ಣ
ಶಿವನ ಬಳೆಯ ಮಾರುತ ಬಂದ
ಆಚೆ ಮನೆ ಅಕ್ಕಂದಿರೆ
ಈಚೆ ಮನೆ ತಂಗೆಂದಿರೆ
ಬಳೆ ಸೆಟ್ಟಿ ಕರಿಯಮ್ಮ
ಬಳೆಗಾರನ ಕರಿಯಮ್ಮ
ಬಳೆಯ ತೊಡಬೇಕು ಬನ್ನಿ
ಬಾದಾರು ಅರಮನೆಗೆ
ಸಣ್ಣ ಕಂಬಳಿ ಗದ್ದಿಗ್ಹಾಕಿ
ಜಾಣೆ ಜಾಗರದ್ಹೆಣ್ಣೆ ಸುವ್ವಲಾಲೆ॥

ಈ ಹಾಡು ಹದಿನಾರು ಪುಟಗಳಷ್ಟು ಸುದೀರ್ಘವಾಗಿದೆ.

ಮುಳ್ಳು ಬಿದ್ದಾವೆ ಮುಗಲುದ್ದ

ನವಲೇದುಂಬಕ್ಕಯ್ಯ ನವಲೇದುಂಬಿ
ನವಲೇದುಂಬವ್ವ ಜಾನೀ ನವಲೇದುಂಬಿ।
ಅತ್ತಮ್ಮ ಅತ್ತಮ್ಮ
ಹಿತ್ತಲು ಗೊಂದ್ಹಾವು ಬತ್ತು
ಹಾವಲ್ಲ ಕಾನಮ್ಮಿ
ಅದೊಂದು ಜಾತಿಯ ಮೀನು
ಅದ ಹಿಡಕೊಂಡೆ ಬಾರಮ್ಮಿ
ಹೆಡಗೇಲಿ ಕೌಚಮ್ಮಿ
ಅದರ ಕಣ್ಣಾನೆ ಮೀಟಮ್ಮಿ
ಕಳಿಯಡಕೆ ಮಾಡಮ್ಮಿ
ಅದರ ನಾಲಿಗೆಯ ಎಳಿಯಮ್ಮಿ
ಚಿಗುರೆಲೆ ಮಾಡಮ್ಮಿ
ಅದರ ಮಿದುಲೇಯ ತಗಿಯಮ್ಮಿ
ಕೆನೆಸುಣ್ಣ ಮಾಡಮ್ಮಿ
ನವಲೆದುಂಬಕ್ಕಯ್ಯ ನವಲೇದುಂಬಿ
ನವಲೆದುಂಬವ್ವ ಜಾಣೆ ನವಲೇದುಂಬಿ॥

ಗೌಡನ ಮಗಳ ಕಥೆ

ಜಗಂಜ್ಯೋತಿ ಮಾವಿನ ಮರವೆ ತಂದೆನಾನ
ಬಯಲುಸೀಮಿ ಗೌಡನ ಮಗಳೆ ತಂದೆನಾನ।
ಯಾವ ಸೀಮೆ ಗೊಲ್ಲರ ಹುಡುಗ
ಏಳು ಸಾವಿರ ಹೂಡಿದನವ
ಹೂಡಿಕೊಂಡಿ ಗೊಲ್ಲರ ಹುಡುಗ
ಸುರಹೊನ್ನೆ ಮರತಕ್ಕೆ ಬಂದು
ಕರಿಯ ಕಂಬಳಿಯ ತಿರುಗಿ
ಗದ್ದಿಗೆ ಹೂಡಿ ಬೀಸಿ ಗದ್ದಿಗೆ ಹೂಡಿ।

ಈ ಲಾವಣಿಗಳು ಮೈಸೂರು ಭಾಗದ ಲಾವಣಿಗಳು ಎಂಬುದು ಸ್ಪಷ್ಟವಾಗಿ ತೋರುತ್ತದೆ. ಆ ಭಾಗದಲ್ಲಿ ಲಾವಣಿಗಳ ಸಂಗ್ರಹ ಆಗಿರುವುದು ನಮ್ಮ ಗಮನಕ್ಕೆ ಬರುವುದಿಲ್ಲ. ನೀಲಗಾರ ಕೃತಿಯಲ್ಲಿ ಇಂತಹ ಕೆಲವು ಲಾವಣಿಗಳು ದೊರೆಯುವುದು ಅಪರೂಪವೇ. ಏನಿದ್ದರೂ ಈ ಕೃತಿಯಲ್ಲಿಯ ಲಾವಣಿಗಳನ್ನು ವಿಭಾಗಿಸಿಕೊಂಡಿರುವ ರೀತಿ ಚೆನ್ನಾಗಿದೆ. ಹಾಡುಗಳ ಸಂಗ್ರಹವೂ ವೈವಿಧ್ಯಮಯವಾಗಿದೆ. ಇಲ್ಲಿಯವರೆಗೆ ಪ್ರಕಟವಾದ ಲಾವಣಿಗಳ ಸಂಗ್ರಹದಲ್ಲಿ ಈ ಕೃತಿ ತನ್ನ ವೈವಿಧ್ಯತೆಯಿಂದಾಗಿ ಗಮನ ಸೆಳೆಯುತ್ತದೆ.

೧೯೮೧ರಲ್ಲಿ ಡಾ. ಸಂಗಮೇಶ ಬಿರಾದಾರ ಅವರು ಸಂಪಾದಿಸಿದ 'ಚಾಪ ಹಾಕತೀವ ಡಪ್ಪಿನ ಮ್ಯಾಲ' ಎಂಬ ಎನ್ನುವ ಲಾವಣಿಗಳ ಸಂಗ್ರಹವೊಂದು ಪ್ರಕಟಿಸಿದ್ದಾರೆ. ಇದರಲ್ಲಿ ೧೪ ಪೌರಾಣಿಕ ಲಾವಣಿಗಳು ಮಾತ್ರ ಸಂಗ್ರಹಗೊಂಡಿವೆ.

ಉತ್ತರ ಕರ್ನಾಟಕದ ಲಾವಣಿಗಳ ಒಟ್ಟು ಸ್ವರೂಪವನ್ನು ಪ್ರತಿನಿಧಿಸುವ, ೯೨ ವಿವಿಧಬಗೆಯ ಲಾವಣಿ ಹಾಡುಗಳ ಸಂಗ್ರಹ **'ಹರದೇಶಿ ನಾಗೇಶಿ'** ಎಂಬ ಹೆಸರನ್ನು ಹೊತ್ತ ಕೃತಿಯೊಂದು ಡಾ. ಬಿ.ಬಿ.ಹೆಂಡಿ ಅವರ ನೇತೃತ್ವದಲ್ಲಿ ೧೯೮೩ ರಲ್ಲಿ ಪ್ರಕಟವಾಗಿದೆ. ಈ ಕೃತಿಯ ಸಂಪಾದಕರುಗಳಲ್ಲಿ ಡಾ. ಬಿ.ಬಿ.ಹೆಂಡಿ ಅವರ ಜೊತೆಗೆ ಡಾ. ಎಂ.ಜಿ.ಬಿರಾದಾರ, ಡಾ. ಎಂ.ಎಸ್.ಲಠ್ಠೆ ಅವರ ಹೆಸರುಗಳೂ ಇವೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಈ ಬೃಹತ್ ಸಂಪುಟ ಪ್ರಕಟವಾಗಿದೆ. ಇದರ ಸಂಪೂರ್ಣ ಶ್ರೇಯಸ್ಸು ಹೋಗಬೇಕಾದುದು ಡಾ. ಬಿ.ಬಿ.ಹೆಂಡಿ ಅವರಿಗೆ. ಅವರಿಗೆ ಲಾವಣಿ ಹಾಡುಗಳ ಮೇಲೆ ಎಲ್ಲಿಲ್ಲದ ಪ್ರೀತಿ ಇತ್ತು. ಬೀಬೀ ಇಂಗಳಗಿ ಹಸನಸಾಬನ ಲಾವಣಿಗಳನ್ನು ಅವರು ಆಗಾಗ ಗುನುಗುನಿಸುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿರುವ ಕನ್ನಡ ವಿಭಾಗಕ್ಕೆ ಮುಖ್ಯಸ್ಥರಾಗಿ ಬಂದ ನಂತರ ಅವರು ಯುಜಿಸಿಯಿಂದ 'ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ, ಹಾಡುಗಳ ಸಂಗ್ರಹ ಸಂಪಾದನೆ ಪ್ರಕಟನೆ' ಎಂಬ ಯೋಜನೆಯನ್ನು ಮಂಜೂರು ಮಾಡಿಕೊಂಡರು. ತಮ್ಮ ಜೊತೆಗೆ ವಿಭಾಗದ ಎಲ್ಲ ಸಹೋದ್ಯೋಗಿಗಳನ್ನು ಅದರಲ್ಲಿ ತೊಡಗಿಸಿಕೊಂಡರು. ಹೀಗಾಗಿ ವ್ಯಾಪಕವಾಗಿ ಇಡೀ ಉತ್ತರ ಕರ್ನಾಟಕದ ತುಂಬ ಇರುವ ಲಾವಣಿಗಳ ದೊಡ್ಡ ಸಂಗ್ರಹವೇ ಈ ಯೋಜನೆಯಡಿ ಕೂಡಿತು. ಈ ಸಂಗ್ರಹದಿಂದ ಕೃತಿಗಳನ್ನು ಪ್ರಕಟಿಸಬೇಕೆಂದು

ಯೋಚಿಸಿ, ತಮಗೆ ಅತ್ಯಂತ ಪ್ರಿಯವಾದ ಲಾವಣಿ ಹಾಡುಗಳನ್ನು ಆಯ್ದುಕೊಳ್ಳಲು ಪ್ರಾರಂಭಿಸಿದರು.

ಸಂಗ್ರಹವಾದ ಲಾವಣಿ ಹಾಡುಗಳಲ್ಲಿ ಹಾಡುಗಳನ್ನು ಓದಿ, ತಮಗೆ ಸರಿಕಂಡ ಹಾಡುಗಳನ್ನು ಹುಡುಕಾಡಿ, ಸರಿತಪ್ಪುಗಳನ್ನು ಗಮನಿಸುತ್ತ ಉತ್ತಮವಾದ, ಮತ್ತು ಹರದೇಶಿ ನಾಗೇಶಿ ಕಲ್ಪನೆಯನ್ನು ಸ್ಪಷ್ಟವಾಗಿ ಕೊಡುವ ಹಾಡುಗಳನ್ನು ವರ್ಷಾನುಗಟ್ಟಲೆ ಆಯ್ದುಕೊಂಡು ಅವುಗಳನ್ನು ಕ್ರಮಗೊಳಿಸಿ, ಪ್ರಕಟನೆಗೆ ಸಿದ್ಧಪಡಿಸಿದವರು ಡಾ. ಬಿ.ಬಿ.ಹೆಂಡಿ ಅವರು. ಈ ಕೃತಿ ಪ್ರಕಟವಾದರೆ ಲಾವಣಿಗಳ ಒಟ್ಟು ಸ್ವರೂಪ ಓದುಗರಿಗೆ ತಿಳಿದುಬರಬೇಕೆಂಬ ಉದ್ದೇಶ ಅವರದಾಗಿತ್ತು. ಈ ಕೃತಿಯ ಪರಿವಿಡಿ ನೋಡಿದರೇನೆ ಅಂತಹ ಒಂದು ಕಲ್ಪನೆ ಬರುವಂತೆ ವಿಭಾಗಿಸಿಕೊಳ್ಳಲಾಗಿದೆ. ಈ ಕೃತಿಯ ಪರಿವಿಡಿ ಹೀಗಿದೆ: ೧. ಸ್ತುತಿ, ೨. ಹಾಡು ಹಾಡುಗಾರಿಕೆ, ೩. ಹರದೇಶಿ, ೪. ನಾಗೇಶಿ, ೫. ಸವಾಲ, ೬. ಸಂಕೀರ್ಣ, ೭. ಚರಿತ್ರೆ.

ಹಳ್ಳಿಗಳಲ್ಲಿ ವಿಶೇಷವಾಗಿ ಜಾತ್ರೆಗಳ ಸಂದರ್ಭದಲ್ಲಿಯೇ ಗೀಗೀ ಹಾಡುವ ತಂಡಗಳನ್ನು ಕರೆಸುವುದು ವಾಡಿಕೆ. ಯಾವಾಗಲೂ ಲಾವಣಿ ಹಾಡುಗಳ ಎರಡು ತಂಡಗಳು ಇರಬೇಕು. ಹೀಗೆ ತಂಡಗಳನ್ನು ಆಮಂತ್ರಿಸುವಾಗ ಒಂದು ಹರದೇಶಿ ಪಂಗಡ, ಇನ್ನೊಂದು ನಾಗೇಶೀ ಪಂಗಡವನ್ನೇ ಆಮಂತ್ರಿಸುತ್ತಾರೆ. ಅಕಸ್ಮಾತ್ ಎರಡು ತಂಡಗಳನ್ನು ತರಿಸುವುದು ಗ್ರಾಮಸ್ಥರಿಗೆ ಭಾರವೆನಿಸಿದರೆ ಬಂದ ಒಂದೇ ಪಂಗಡದವರು ತಮ್ಮಲ್ಲಿಯೇ ಒಬ್ಬರು ಹರದೇಶಿ ಹಾಡಿದರೆ ಇನ್ನೊಬ್ಬರು ನಾಗೇಶಿ ಹಾಡುತ್ತಾರೆ. ಜೊತೆ ಹಾಡುಗಾರರಲ್ಲಿ ಅಂತಹ ಒಳ್ಳೆಯ ಹಾಡುಗಾರರಿಲ್ಲದಿದ್ದರೆ ಒಬ್ಬನೇ ಹಾಡುಗಾರ ಒಂದು ನಾಗೇಶಿ ಹಾಡನ್ನು, ಇನ್ನೊಂದು ಅದಕ್ಕೆ ಪ್ರತಿಯಾದ ಹರದೇಶಿ ಹಾಡನ್ನು ಹಾಡುತ್ತಾನೆ. ಹಾಡುಗಾರರು ಹಾಡಲು ಪ್ರಾರಂಭ ಮಾಡುವಾಗ ಮೊದಲೊಂದು ಸ್ತುತಿ ಹಾಡುವುದು ಪದ್ಧತಿ. ನಂತರ ತನ್ನ ಹಾಡುಗಾರಿಕೆ ಬಗ್ಗೆ ವಿನಯ ಇತ್ಯಾದಿಗಳನ್ನು ಪ್ರದರ್ಶಿಸುವ ಹಾಡು ಹಾಡುವುದು ಸಾಮಾನ್ಯ. ಸಾವಕಾಶವಾಗಿ ಸ್ಪರ್ಧೆ ಕಾವಿಗೆ ಬೀಳುತ್ತ ಹೋಗುತ್ತದೆ. ಹರದೇಶಿ ಪಂಗಡದವರು ಗಂಡನ್ನು ಹೆಚ್ಚು ಮಾಡಿ ಹಾಡಿದರೆ, ನಾಗೇಶಿ ಪಂಗಡದವರು ಹೆಣ್ಣನ್ನು ಹೆಚ್ಚು ಮಾಡಿ ಹಾಡುತ್ತಾರೆ. ಈ ಹಾಡುಗಾರಿಕೆಯ ಮುಖ್ಯ ಸ್ಪರ್ಧೆ ಇರುವುದೇ ಈ ಬಗೆಯ ಹಾಡುಗಾರಿಕೆಯಲ್ಲಿ. ಈ ಹಾಡುಗಾರಿಕೆಯಲ್ಲಿ ವೈವಿಧ್ಯತೆ ತರಲು ಸಾಮಾನ್ಯವಾದ ಸವಾಲ-ಜವಾಬ ಹಾಡುಗಳನ್ನು ಹಾಡುತ್ತಾರೆ. ಇವು ಒಗಟಿನ ಮಾದರಿಯ ಹಾಡುಗಳು. ಒಬ್ಬನು ಕೇಳುವ ಒಂದು ಪ್ರಶ್ನೆಗೆ ಇನ್ನೊಂದು ತಂಡದವರು ಉತ್ತರ ಹೇಳಬೇಕು. ಇದು ಸ್ಪರ್ಧೆಯ ನಿಯಮ.

ಈ ಸ್ಪರ್ಧೆಗೆ ಹೊರತಾಗಿ ಆಯಾ ಸ್ಥಳೀಯ ಘಟನೆಗಳನ್ನು ಆಧರಿಸಿದ ಹಾಡುಗಳನ್ನು, ಸಾಮಾನ್ಯ ನೀತಿ, ವಿಡಂಬನೆ, ಬದುಕಿನ ದುರಂತ, ಸುಖ, ಉದ್ಯೋಗದ ಲಾಭ-ಹಾನಿಗಳು, ಆಧ್ಯಾತ್ಮ-ಸಾಧನೆ ಹೀಗೆ ಸಾಮಾನ್ಯರ ಬದುಕಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು ವಾಡಿಕೆ. ಈ ಕೃತಿಯ 'ಸಂಕೀರ್ಣ' ಭಾಗದಲ್ಲಿ ಅಂತಹ ಹಾಡುಗಳಿವೆ. ಕೊನೆಯ ಭಾಗ 'ಚರಿತ್ರೆ' ಎಂದಿದೆ. ಇಲ್ಲಿ ಐತಿಹಾಸಿಕ, ಪೌರಾಣಿಕ ವ್ಯಕ್ತಿಗಳಿಗೆ ಸಂಬಂಧಿಸಿದ

ಹಾಡುಗಳನ್ನು ಕಾಣಬಹುದಾಗಿದೆ. ಅಲ್ಲಲ್ಲಿ ಸ್ಥಳೀಯ ಮಹಾತ್ಮರ ಹಾಡುಗಳನ್ನೂ ಹೋರಾಟಗಾರರ ಹಾಡುಗಳನ್ನೂ ಹಾಡುತ್ತಾರೆ. ಇಂತಹ ಎಲ್ಲ ಹಾಡುಗಳು ಇಲ್ಲಿವೆ. ಈ ದೀರ್ಘ ಹಾಡುಗಳ ಕೊನೆಯಲ್ಲಿ ಒಂದು 'ಖ್ಯಾಲಿ' ಅಂದರೆ ದೃತ್ ಲಯದಲ್ಲಿ ಒಂದು ಚಿಕ್ಕ ಹಾಡನ್ನು ಹಾಡುತ್ತಾರೆ. ಈ ಹಾಡುಗಳನ್ನು ಹರದೇಶಿ–ನಾಗೇಶಿ ವಿಭಾಗದಲ್ಲಿ ಅವುಗಳಿಗೆ ಸಂಬಂಧಿಸಿರುವ ಖ್ಯಾಲಿಗಳನ್ನು ಕೊಟ್ಟಿದ್ದಾರೆ. ಹೀಗೆ ಈ ಕೃತಿಯ ಪರಿವಿಡಿಯೇ ಲಾವಣಿ ಹಾಡುಗಾರಿಕೆಯ ಒಂದು ಸ್ಪಷ್ಟ ಚಿತ್ರವನ್ನು ಕೊಡುತ್ತದೆ.

ಪ್ರಸ್ತಾವನೆಯಲ್ಲಿ ಲಾವಣಿಯ ಸ್ವರೂಪ–ಲಕ್ಷಣ, ಪ್ರಾಚೀನತೆ, ಹರದೇಶಿ–ನಾಗೇಶಿ ಬಗ್ಗೆ ಸ್ಪಷ್ಟ ಕಲ್ಪನೆ ಕೊಡುವ ಮಾಹಿತಿ ಇವೆಲ್ಲವನ್ನು ವಿವರಿಸಲಾಗಿದೆ. ಉತ್ತರ ಕರ್ನಾಟಕದ ೧೧೫ ಪ್ರಮುಖ ಲಾವಣೀಕಾರರ ಒಂದು ಪಟ್ಟಿಯನ್ನೇ ಒದಗಿಸಲಾಗಿದೆ. ಕೊನೆಯಲ್ಲಿ ಅರ್ಥಕೋಶ, ಹಾಡುಗಳ ಅಕಾರಾದಿ ಕೊಡಲಾಗಿದೆ. ಈ ಕೃತಿ ಕನ್ನಡ ಲಾವಣಿಗಳ ಪ್ರಕಟನೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ.

ಈ ಕೃತಿಯ ಪ್ರಕಟನೆಯಿಂದಾಗಿ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿರುವ ಕವಿಗಳ ಲಾವಣಿಗಳು ಮೊದಲನೆಯದಾಗಿ ಪ್ರಕಟಗೊಂಡುದು ಒಂದು ವಿಶೇಷ ಸಂಗತಿ. ಇಲ್ಲಿಯವರೆಗೆ ಲಾವಣಿಗಳಿಗೆ ಸಂಬಂಧಿಸಿದಂತೆ ಪ್ರಕಟವಾದ ಕೃತಿಗಳೆಲ್ಲ ಹೆಚ್ಚಾಗಿ ಬೆಳಗಾಂವ ಜಿಲ್ಲೆಗೆ ಸಂಬಂಧಿಸಿಯೇ ಇದ್ದವು. ಜೊತೆಗೆ ಒಂದಿಷ್ಟು ವಿಜಯಪುರ ಜಿಲ್ಲೆಯ ಕವಿಗಳು ರಚಿಸಿದ ಹಾಡುಗಳೂ ಪ್ರಕಟಗೊಂಡಿದ್ದವು. ಈ ಕೃತಿಯಲ್ಲಿ ವಿಶೇಷವಾಗಿ ಕಲಬುರಗಿ ಮತ್ತು ವಿಜಯಪುರ ಜಿಲ್ಲೆಯ ಕವಿಗಳ ಹಾಡುಗಳು ಹೆಚ್ಚಾಗಿ ಪ್ರಕಟವಾದವು. ಬೀದರ ಕವಿಗಳ ಕೆಲವೊಂದು ಲಾವಣಿಗಳೂ ಈ ಕೃತಿಯಲ್ಲಿವೆ. ಇದರಿಂದ ಕಲಬುರಗಿ ಜಿಲ್ಲೆಯ ಲಾವಣಿಕಾರರ ಹಾಡುಗಳ ಬಗೆಗೆ ಆಸಕ್ತರ ಗಮನ ಹರಿಯುವಂತಾಯಿತು. ಹೀಗಾಗಿ ಕಲಬುರಗಿ ಜಿಲ್ಲೆಯಿಂದ ಮುಂದೆ ಈ ಕೃತಿಯನ್ನು ಅನುಸರಿಸಿ ಕಲಾವಿದರಿಂದ, ಅಭ್ಯಾಸಿಗಳಿಂದ ವಿಶೇಷವಾದ ಹಾಡುಗಳ ಸಂಗ್ರಹಗಳು ಬರುವಂತಾಯಿತು.

ಕಾಶಿನಾಥ ಚವ್ಹಾಣ ಒಬ್ಬ ಗೀಗೀ ಹಾಡುಗಾರ. 'ಹರದೇಶಿ–ನಾಗೇಶಿ' ಕೃತಿಯ ಪ್ರಭಾವಕ್ಕೆ ಒಳಗಾಗಿ ಅದೇ ಅರ್ಥದ **'ಕಲ್ಗಿ–ತುರಾಯಿ'** (೧೯೬೫) ಎಂಬ ಹೆಸರನ್ನಿಟ್ಟು ಒಂದು ಕೃತಿಯನ್ನು ಪ್ರಕಟಿಸಿದ್ದಾನೆ. ಹರದೇಶಿ–ನಾಗೇಶಿ ಹಾಡುಗಳಿಗೆ ಕಲ್ಗಿ–ತುರಾಯಿ ಹಾಡುಗಳು ಎಂಬ ಹೆಸರೂ ಇದೆ. ಕಲ್ಗಿ ಎಂದರೆ ಹೆಣ್ಣುಮಕ್ಕಳು ತಲೆಗೆ ಕಟ್ಟಿಕೊಳ್ಳುವ ಹೂದಂಡೆ. ನಾಗೇಶಿ ಪಂಗಡದವರು ಮೊದಮೊದಲಿಗೆ ತಲೆಗೆ ಹೂದಂಡೆಯನ್ನು ಕಟ್ಟಿಕೊಂಡು ಹಾಡುತ್ತಿದ್ದರೆಂದು ತಿಳಿದುಬರುತ್ತದೆ. 'ತುರಾಯಿ' ಎಂದರೆ ಹೂಗುಚ್ಛ ಅಥವಾ ಶಿರಪೇಚ್ ಎಂದು ಅರ್ಥವಾಗುತ್ತದೆ. ಇದು ಹರದೇಶಿಯನ್ನು ನಿರ್ದೇಶಿಸುವ ಪದ. ಡಾ. ಬಿ.ಬಿ.ಹೆಂಡಿ ಅವರು ಹರದೇಶಿ–ನಾಗೇಶಿ ಎಂಬ ಪ್ರಮುಖ ವಿಭಾಗಗಳಡಿ ಹಾಡುಗಳನ್ನು ಜೋಡಿಸಿ ಕೊಟ್ಟಿದ್ದರೆ, ಕಾಶೀನಾಥನು ಒಂದು ಕಲ್ಗಿ (ನಾಗೇಶಿ) ಹಾಡು, ಅದಕ್ಕೆ ಹೊಂದಿಕೆಯಾಗುವ ಇನ್ನೊಂದು ತುರಾಯಿ (ಹರದೇಶಿ) ಹಾಡು ಹೀಗೆ ಜೋಡಿಸಿ ಕೊಟ್ಟಿದ್ದಾನೆ. ಈ ಕೃತಿಯಲ್ಲಿ ಮೂರು ಭಾಗಗಳಿವೆ. ಹಾಡುಗಾರರು ಹಾಡುವ ಕ್ರಮದಂತೆ ಡಾ. ಬಿ.ಬಿ.ಹೆಂಡಿ ಅವರು ಪರಿವಿಡಿ ಮಾಡಿಕೊಂಡ ಕ್ರಮದಲ್ಲಿಯೆ

ಇಟ್ಟುಕೊಂಡಿದ್ದಾನೆ. ಇಲ್ಲಿಯ ಪರಿವಿಡಿ ಹೀಗಿದೆ: ೧. ಸಖಿ, ೨. ಪದ್ಯ, ೩. ಖ್ಯಾಲಿ. ಹಾಡುಗಾರರು ಹಾಡುವ ಕ್ರಮವಿದು. ಇಲ್ಲಿ ಕಾಶೀನಾಥನು ಮಾಡಿಕೊಂಡ ಇನ್ನೊಂದು ಹೊಸ ಕ್ರಮವೆಂದರೆ ಒಂದು ಸಖಿ ಕಲ್ಗಿಯವರದಾದರೆ ಇನ್ನೊಂದು ಅದಕ್ಕೆ ಸರಿಯಾದ ಪ್ರತ್ಯುತ್ತರವೆನಿಸುವ ತುರಾಯಿಯವರ ಸಖಿಯನ್ನು ಆರಿಸಿಕೊಂಡಿದ್ದಾನೆ. ಇಂತಹ ೯ ಜೋಡಿ ಸಖಿಗಳನ್ನು ಆರಿಸಿ ಕೊಟ್ಟಿದ್ದಾನೆ. ಇನ್ನು ಮುಖ್ಯ ಹಾಡುಗಳ ಏಳು ಜೋಡಿಗಳನ್ನೂ, ಖ್ಯಾಲಿಗಳ ೨೨ ಜೋಡಿಗಳನ್ನು ಇಲ್ಲಿ ಕಾಣಬಹುದಾಗಿದೆ. ಹೀಗೆ ಈ ಕೃತಿಯಲ್ಲಿ ಒಟ್ಟಿಗೆ ೩೮ ಜೋಡಿ ಹಾಡುಗಳನ್ನು (ಒಂದು ಕಲ್ಗಿ, ಇನ್ನೊಂದು ತುರಾಯಿ ಹಾಡು) ಕಾಣಬಹುದಾಗಿದೆ.

ಮುಖ್ಯ ಲಾವಣಿ/ಗೀಗೀ ಹಾಡುಗಳ ಏಳು ಜೋಡಿ ಹಾಡುಗಳ ವಸ್ತು ಹೀಗಿದೆ:

೧ನೇ ಜೋಡಿ : ಒಂದನೇ ಹಾಡು ಒಬ್ಬ ದೇವರು, ಆತ ಗಂಡಿನ ಸ್ವರೂಪದಲ್ಲಿದ್ದಾನೆಂದಾದರೆ, ಎರಡನೇ ಹಾಡು ಅದಕ್ಕೆ ತೋಡಿಯಾಗಿ ಎಲ್ಲ ದೇವರು ಹೆಣ್ಣಿನ ಸ್ವರೂಪ ಎಂದು ಹೇಳುತ್ತದೆ.

೨ನೇ ಜೋಡಿ : ಮೂರನೇ ಹಾಡು ಪಿಂಡ ಮೊದಲೋ ಅಥವಾ ಪ್ರಾಣ ಮೊದಲೋ ಎಂದು ಪ್ರಶ್ನೆ ಮಾಡಿದರೆ, ನಾಲ್ಕನೇ ಹಾಡು ಪ್ರಾಣ ಮೊದಲು, ಪಿಂಡ ನಂತರ ಎಂಬ ಉತ್ತರದ ವಿವರವನ್ನೊಳಗೊಂಡಿದೆ.

೩ನೇ ಜೋಡಿ : ಐದನೇ ಹಾಡು ಒಂದು ಮಡಿ(ಸೀರೆ)ಯ ವರ್ಣನೆ ಇದ್ದರೆ, ಆರನೇ ಹಾಡು ಐದನೇ ಹಾಡಿನ ವಿವರಗಳಿಗೆ ವಿಶೇಷ ಅರ್ಥಗಳನ್ನು ಹೇಳುತ್ತದೆ.

೪ನೇ ಜೋಡಿ : ಏಳನೇ ಹಾಡು ಆದಿ ಶಕ್ತಿ ಪ್ರಥಮ, ಆಕೆಯೇ ಶ್ರೇಷ್ಠವೆಂದು ವಾದಿಸಿದರೆ, ಎಂಟನೇ ಹಾಡು ಅನಾದಿ ಶಕ್ತಿ ಚಿನ್ಮಯನೇ ಶ್ರೇಷ್ಠ ಎಂದು ವಾದಿಸುತ್ತದೆ.

೫ನೇ ಜೋಡಿ : ಒಂಬತ್ತನೇ ಹಾಡು ನಾಗೇಶಿ ಪಂಗಡದು– ಮಣ್ಣು ಶ್ರೇಷ್ಠವೆಂದು ವಾದಿಸಿದರೆ, ಹತ್ತನೇ ಹಾಡು ಹರದೇಶಿಯದು, ನೀರಿನ ಶ್ರೇಷ್ಠತೆಯನ್ನು ಹೇಳುತ್ತದೆ.

೬ನೇ ಜೋಡಿ : ಹನ್ನೊಂದನೆಯದು ತಂದೆಯ ಶ್ರೇಷ್ಠತೆಯನ್ನು ಹೇಳಿದರೆ, ಹನ್ನೆರಡನೆಯದು ತಾಯಿಯ ಮಹತ್ವವನ್ನು ಸಾರುತ್ತದೆ.

೭ನೇ ಜೋಡಿ : ಹದಿಮೂರನೆಯದು ಬ್ರಹ್ಮಕುಂಬಾರನ ಚಮತ್ಕಾರದ ಗಡಿಗೆಯ ವರ್ಣನೆ ಮಾಡಿದರೆ, ಹದಿನಾಲ್ಕನೇ ಹಾಡು (ನಾಗೇಶಿ) ಅದಕ್ಕೆ ತೋಡಿಯಾಗಿದೆ.

೧೫ನೇ ಹಾಡು ಹಳೆಯ ಶೃಂಗಾರ ಲಾವಣಿಯ ಸ್ವರೂಪದ್ದಾಗಿದ್ದು, ಒಂದೇ ಹಾಡಿನಲ್ಲಿ ಹೆಣ್ಣಿನ ಗಂಡಿನ ಸಂವಾದವಿದೆ. ಹೀಗೆ ಇಲ್ಲಿಯ ೧೫ ಹಾಡುಗಳನ್ನು ಓದಿ ಕಡೆಗಾಗುವುದರಲ್ಲಿ ಕಲ್ಗಿ–ತುರಾಯಿ ಹಾಡುಗಳಲ್ಲಿ ಚರ್ಚೆಗೆ ಬರುವ ಬಹುತೇಕ ವಿಷಯಗಳ ಸ್ವರೂಪ ಓದುಗರಿಗೆ ತಿಳಿದಿರುತ್ತದೆ.

ಮೂರನೇ ಭಾಗ ಖ್ಯಾಲಿಗಳದಾಗಿದ್ದು ೪೪ ಖ್ಯಾಲಿಗಳನ್ನು ೨೨ ಜೋಡಿಗಳಾಗಿ ಹೊಂದಿಸಿಕೊಳ್ಳಲಾಗಿದೆ.

ಲಾವಣಿಗಳ ಸಂಪೂರ್ಣ ಕಲ್ಪನೆ, ಸ್ವರೂಪವನ್ನು ಒದಗಿಸುವ ಇದೊಂದು ಅಪರೂಪದ ಕೃತಿ ಎನಿಸುತ್ತದೆ. ಕಾಶಿನಾಥ ಒಬ್ಬ ಕಲಾವಿದನಾಗಿರುವುದರಿಂದ ತಾನು ಹಾಡುತ್ತ ಬಂದ ಹಾಡುಗಳನ್ನು ಆಯ್ದುಕೊಂಡು ಹೀಗೆ ಜೋಡಿಸಲು ಸಾಧ್ಯವಾಗಿದೆ. ಬರೀ ಸಂಗ್ರಾಹಕರಿಗೆ ಈ ಬಗೆಯ ಆಯ್ಕೆ ಕಷ್ಟಸಾಧ್ಯವೆಂದೇ ಹೇಳಬೇಕು. ಪಂಡಿತರಿಗೆ ಕಠಿಣವಾದ ಒಂದು ಕೆಲಸವನ್ನು ಹಾಡುಗಾರ ಕಾಶೀನಾಥ ಅತ್ಯಂತ ಸುಲಭವಾಗಿ ಆಗುಮಾಡಿದ್ದಾರೆ.

ಕಾಶಿನಾಥನು ಸಾವಳಗಿ ಮಹಮ್ಮದಸಾಬ ಅವರ ಪಕ್ಕಾ ಶಿಷ್ಯ. ಅವರ ಹೆಚ್ಚಿನ ಹಾಡುಗಳನ್ನು ಬಳಸಿಕೊಂಡು 'ಕಲ್ಗಿ–ತುರಾಯಿ' ಗ್ರಂಥವನ್ನು ಹೊರತಂದನು. ಡಾ. ಹರಿಶ್ಚಂದ್ರ ದಿಗ್ಸಂಗಿಕರ್ ಅವರು ಸಾವಳಗಿ ಮಹಮ್ಮದಸಾಬ ಅವರ ಬಗ್ಗೆ ಪಿಎಚ್.ಡಿ. ಅಧ್ಯಯನ ಮಾಡಿದವರು. ಹೀಗಾಗಿ ಲಾವಣಿಗಳ ಬಗ್ಗೆ ಅವರಿಗೆ ಸರಿಯಾದ ತಿಳವಳಿಕೆ ಇತ್ತು. ಡಾ. ಹೆಂಡಿ ಅವರ 'ಹರದೇಶಿ–ನಾಗೇಶಿ' ಹಾದಿಹಿಡಿದು ಕಾಶಿನಾಥ 'ಕಲ್ಗಿ–ತುರಾಯಿ' ಪ್ರಕಟಿಸಿದರೆ, ಅದೇ ಹಾದಿ ಹಿಡಿದ ಹರಿಶ್ಚಂದ್ರ **'ಲಾವಣಿ : ಸವಾಲ್–ಜವಾಬ್ ಪದಗಳು'** ಎಂಬ ಕೃತಿಯನ್ನು ೨೦೦೫ರಲ್ಲಿ ಪ್ರಕಟಿಸಿದ್ದಾರೆ. ಒಂದು ಪಂಗಡದ ಸವಾಲ್ ಪದಕ್ಕೆ ಇನ್ನೊಂದು ಪಂಗಡದ ಜವಾಬ್ ಪದಗಳಂತೆ ಜೋಡಿಸಿ ಪ್ರಕಟಿಸಿದ್ದಾರೆ.

'ಮುಖ್ಯ ಪದಗಳು' ಭಾಗದಲ್ಲಿ ೯ ಜೋಡಿ ಹಾಡುಗಳನ್ನು, 'ಸಖಿಗಳು ಮತ್ತು ಖ್ಯಾಲಿಗಳು' ಭಾಗದಲ್ಲಿ ಮೊದಲಿಗೆ 'ಸ್ತುತಿಪದಗಳಲ್ಲಿ ಸವಾಲ್–ಜವಾಬ್' ಎಂದು ಕೊಟ್ಟಿದ್ದು, ಇವೆಲ್ಲ ನಾಲ್ಕು ಜೋಡಿ 'ಸಖಿ'ಗಳೇ ಆಗಿವೆ. ನಂತರ 'ಖ್ಯಾಲಿ'ಗಳನ್ನು 'ನೀತಿ ಪದಗಳಲ್ಲಿ ಸವಾಲ್–ಜವಾಬ್' ಎಂದು ೫ ಜೋಡಿಗಳನ್ನು, 'ಶೃಂಗಾರ ಪದಗಳಲ್ಲಿ ಸವಾಲ್–ಜವಾಬ್' ಎಂದು ಐದು ಜೋಡಿಗಳನ್ನು ಹೊಂದಿಸಿ ಕೊಟ್ಟಿದ್ದಾರೆ. ಅಂದರೆ ಕ್ರಮವಾಗಿ ಸ್ತುತಿಯ ರೂಪದಲ್ಲಿರುವ ಸಖಿ–ಮುಖ್ಯ ಹಾಡು–ಖ್ಯಾಲಿಗಳ ಸವಾಲ್ ಜವಾಬ್‌ಗಳನ್ನು ಹುಡುಕಾಡಿ ಇಲ್ಲಿ ಜೋಡಿಸಿ ಪ್ರಕಟಿಸಿದ್ದಾರೆ. ಇದರಿಂದ ಹರದೇಶಿ–ನಾಗೇಶಿ ಹಾಡುಗಳ ಒಂದು ಸ್ಪಷ್ಟಕಲ್ಪನೆ ಬರುವಂತೆ ಆಗಿದೆ.

ಡಾ. ಹರಿಶ್ಚಂದ್ರ ದಿಗ್ಸಂಗಿಕರ್ ಅವರೇ **'ಚಾರಿತ್ರಿಕ ಲಾವಣಿಗಳು'** (೨೦೦೯) ಎಂಬ ಇನ್ನೊಂದು ಸಂಗ್ರಹವನ್ನೂ ಪ್ರಕಟಿಸಿದ್ದಾರೆ. ಇದರಲ್ಲಿರುವ ೧೯ ಹಾಡುಗಳಲ್ಲಿ ಪೌರಾಣಿಕ, ಐತಿಹಾಸಿಕ, ಚಾರಿತ್ರಿಕ ಮಹಾಪುರಷರ ಜೀವನ ಚರಿತ್ರೆಗಳಿರುವುದು ಕಂಡುಬರುತ್ತದೆ.

ಡಾ. ಬಿ.ಬಿ.ಬಿರಾದಾರ ಅವರು 'ಬೆತ್ತಲೆ ಗಾದೆಗಳು', 'ಬೆತ್ತಲೆ ಹೋಳಿ ಹಾಡುಗಳು' ಎಂಬ ವಿಶೇಷ ಕೃತಿಗಳನ್ನು ಪ್ರಕಟಿಸಿದ ನಂತರ **'ಶೃಂಗಾರ ಲಾವಣಿಗಳು'**(೧೯೯೮) ಎಂಬ ಕೃತಿಯನ್ನು ಪ್ರಕಟಮಾಡಿದ್ದಾರೆ. 'ಬೆತ್ತಲೆ ಜನಪದ ಸಾಹಿತ್ಯ' ಯೋಜನೆಯ ಮೂರನೆಯ ಕೃತಿ ಇದು ಎಂದು ಸಂಪಾದಕರೇ ಬರೆದುಕೊಂಡಿದ್ದಾರೆ. ಅವರು ಲಾವಣಿಗೆ ಸಂಬಂಧಪಟ್ಟಂತೆ ಎರಡು ಸಂಗ್ರಹಗಳನ್ನು ಸಂಪಾದಿಸಿದ್ದು, ಎರಡರಲ್ಲಿಯ ಹಾಡುಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿ ದೊರೆತ ಕಾಗದದ ಪ್ರತಿಗಳಿಂದ ಆಯ್ದ ಹಾಡುಗಳನ್ನೇ ಪ್ರತಿಮಾಡಿಕೊಂಡು ಪ್ರಕಟಿಸಿದ್ದಾರೆ.

ಡಾ. ಬಿ.ಬಿ.ಬಿರಾದಾರ ಅವರ ಆಸಕ್ತಿ ವಿಶೇಷವಾಗಿದೆ. ಹತ್ತಾರು ವರ್ಷಗಳವರೆಗೆ ತಮ್ಮ ಕಣ್ಣಿಗೆ ಬಿದ್ದ ಇಂತಹ ಶೃಂಗಾರದ ಲಾವಣಿಗಳನ್ನು ಬರೆದುಕೊಳ್ಳುತ್ತ ಹೋಗಿದ್ದಾರೆ. ಅಂತಹ ೪೬ ಹಾಡುಗಳು ಈ ಕೃತಿಯಲ್ಲಿವೆ. ತುಂಬಿ ಬಂದ ಪ್ರಾಯದ ಗಂಡು-ಹೆಣ್ಣಿನ ಭಾವನೆಗಳ ತಾಕಲಾಟವೇ ಇಲ್ಲಿಯ ಹಾಡುಗಳ ಮುಖ್ಯ ಸಂಗತಿ. ಉಕ್ಕಿ ಹರಿಯುವ ಶೃಂಗಾರ ರಸವೇ ಇಲ್ಲಿಯ ಮುಖ್ಯ ರಸ. ಒಂದೇ ಲಾವಣಿಯಲ್ಲಿ ಹೆಣ್ಣು-ಗಂಡು ಎರಡರ ಸಂವಾದದ ನಾಟಕೀಯತೆ ಇಲ್ಲಿಯ ಮುಖ್ಯಗುಣ. ಇವೆಲ್ಲ ಹಳೆಯ ಲಾವಣಿಗಳ ಪ್ರಮುಖ ಲಕ್ಷಣಗಳು. ಇಂತಹ ಲಾವಣಿಗಳಿಂದಲೇ 'ಜೀವನ ಸಂಗೀತ' ತುಂಬಿ ಹೋಗಿದೆ. ಥೇಟ ಅದೇ ಮಾದರಿಯ ಇನ್ನೂ ದೊಡ್ಡ ಸಂಗ್ರಹ ಈ **'ಶೃಂಗಾರ ಲಾವಣಿಗಳು'**.

ಜನಪದ ಸಾಹಿತ್ಯದಲ್ಲಿ ಶೃಂಗಾರ ಪ್ರಮುಖವಾದ ಸಂಗತಿ. ಆದರೆ ಅನೇಕ ಜನರು ಜನಪದ ಸಾಹಿತ್ಯದಲ್ಲಿ ರಸನಿಷ್ಪತ್ತಿಯಾಗುವುದಿಲ್ಲ ಎನ್ನುವ ಮಾತನಾಡುತ್ತಾರೆ. ಆದರೆ ಇಲ್ಲಿಯ ಶೃಂಗಾರದ ಲಾವಣಿಗಳಲ್ಲಿ ಸಹಜ ಶೃಂಗಾರ, ವಿಪ್ರಲಂಬ ಶೃಂಗಾರ, ಸಂಭೋಗ ಶೃಂಗಾರ ಎಂಬ ಪ್ರಕಾರಗಳನ್ನು ವಿವರಿಸಿ ಅವುಗಳಿಗೆ ಸಂಪಾದಕರು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಸಮೂಹದ ಮುಂದೆ ಹಾಡುವ ಈ ಹಾಡುಗಳು ಸ್ವಲ್ಪ ವಾಚ್ಯವಾಗಿಯೇ ಭಾಷೆಯನ್ನು ಬಳಸುತ್ತವೆ. ವಿಶೇಷವಾಗಿ ಜಾತ್ರೆಗಳಲ್ಲಿ ಹಾಡುವ ಹಾಡುಗಳಾಗಿರುವುದರಿಂದ, ಗಂಡಸರೇ ಇವುಗಳ ಶ್ರೋತೃಗಳಾಗಿರುವುದರಿಂದ ಹೀಗೆ ತೆರೆದ ಶೃಂಗಾರ ಭಾವವನ್ನು ವ್ಯಕ್ತಪಡಿಸುವ ಹುಮ್ಮಸ್ಸನ್ನು ಈ ಲಾವಣಿಕಾರರು ಮಾಡುತ್ತಾರೆಂದು ತೋರುತ್ತದೆ. ಜಾತ್ರೆಯ ಸಂದರ್ಭವೂ ಇಂತಹ ಹುಮ್ಮಸ್ಸಿಗೆ ಕುಮ್ಮಕ್ಕನ್ನು ಕೊಡುತ್ತಿರುತ್ತದೆ. ಇಂತಹ ರಂಜನೆಯ ಲಾವಣಿಗಳನ್ನು 'ಜೀವನ ಸಂಗೀತ' ಸಂಗ್ರಹದಲ್ಲೂ ಕಾಣುತ್ತೇವೆ. ಹೀಗಾಗಿ ಲಾವಣಿ ಹಾಡುಗಳಿಗೆ 'ಮರ್ಯಾದೆ ಶೃಂಗಾರ' ಅಪರೂಪವೆಂದೇ ಹೇಳಬೇಕು.

ಬಿಗಿದಪ್ಪಿ ಗಲ್ಲ ಕಡದಾನ

ರವಿಯಂತೆ ರಂಜಿಸುವಂಥಾ ಕಂಜಾಕ್ಷಿಯನು ಕಂಡು
ಕಣ್ಣಿಗೆ ಮಂಜ ಬಂದ ಬಿದ್ದೆ ಹೊರಳ್ಯಾಡುತಲಿ
ಕಾಮ ನಂಜಯೇರಿತಲ್ಲ ನಿನ್ನ ಕಾಣುತಲಿ
ನೋಡಿ ಗಂಜಿ ಹೋಗದ ಬಿದ್ದೆ ನನ್ನ ಬಾಯಲ್ಲಿ
ಪಂಜರದನ್ನ ಗಿಳಿಯಂಥಾ ಮಂಜುಳ ಮಾತಿನ ಗೆಳತಿ
ನಿನ್ನ ಅಂಜರದ್ಹಣ್ಣಿನಂತಾ ಕುಚ ಕಾಣುತಲಿ
ನಾ ಸುಂದ ಹಿಡದಾಂಗಾಗಿ ಬಡಬಡಿಸುತಲಿ ।ಪ।

ಹೀಗೆ ಸಾಗುತ್ತವೆ ಇಲ್ಲಿಯ ಲಾವಣಿಗಳು. ಈ ಬಗೆಯ ಲಾವಣಿಗಳ ಮಾನಸಿಕ ಹಿನ್ನೆಲೆಯನ್ನು, ಸಂದರ್ಭದ ಪ್ರಚೋದನೆಗಳನ್ನು, ಕವಿಯ ಭಾವನೆಗಳನ್ನು, ಭಾಷೆಯ ಬಳಕೆಯನ್ನು, ಇವುಗಳಿಂದಾಗುವ ಪರಿಣಾಮಗಳನ್ನು ಕುರಿತು ಗಂಭೀರವಾದ ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ.

ಡಾ। ಬಿ.ಬಿ.ಬಿರಾದಾರ ಅವರದೇ ಇನ್ನೊಂದು ಕೃತಿ **'ಗ್ರಂಥಸ್ಥ ಲಾವಣಿಗಳು'** (೨೦೦೭) ಎಂಬುದು. ಇದರಲ್ಲಿ ೧೦೫ ಲಾವಣಿಗಳಿವೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸಂಗ್ರಹದ ಕಾಗದದ ಪ್ರತಿಗಳಲ್ಲಿ ದೊರೆತ ಲಾವಣಿಗಳನ್ನು ಬರೆದು ಇಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಇಲ್ಲೂ ಬಾಂಬೆಕರ್ನಾಟಕ ಭಾಗದ ಲಾವಣಿ ಕವಿಗಳ ಹಾಡುಗಳೇ ಇರುವುದು ಗಮನಿಸತಕ್ಕ ಮಾತು. ನಾವು ಈಗಾಗಲೇ ಗಮನಿಸಿದಂತೆ ಬಾಳಗೋಪಾಳನ ಲಾವಣಿಗಳು ಇಲ್ಲೂ ಇವೆ. ಉಳಿದಂತೆ ಬೆಳಗಾಂವ, ಧಾರವಾಡ ಹಾಗೂ ವಿಜಯಪುರ ಜಿಲ್ಲೆಯ ಲಾವಣಿಕಾರರ ಹಾಡುಗಳಿವೆ. ಬಹುಶಃ ಹಳೆಯ ಲಾವಣಿಗಳಿಗೆ ಒಳ್ಳೆಯ ಉದಾಹರಣೆಗಳು ಇಲ್ಲಿವೆ ಎನಿಸುತ್ತದೆ. ಕವಿಗಳ ಹೆಸರಿನಲ್ಲಿ ಪರಿವಿಡಿ ಇದೆ. ಮುದ್ರಿಕೆ ಇರುವ ಹಾಗು ಮುದ್ರಿಕೆ ಇಲ್ಲದ ಲಾವಣಿಗಳು ಎಂಬ ಇನ್ನೆರಡು ಭಾಗಗಳಿವೆ. ಈ ಪರಿವಿಡಿಯಲ್ಲಿರುವ ಹದಿಮೂರು ಕವಿಗಳಲ್ಲಿ ಮೂವರು ಕವಿಗಳು ಮಾತ್ರ ಡಾ. ಎಂ.ಎಸ್.ಲಠ್ಠೆ ಅವರ 'ಜನಪದ ಕವಿಚರಿತೆ'ಯಲ್ಲಿ ದಾಖಲಾಗಿದ್ದಾರೆ. ಉಳಿದವರ ಬಗ್ಗೆ ಮಾಹಿತಿಗಳು ಲಭ್ಯವಿಲ್ಲ.

'ಗ್ರಂಥಸ್ಥ ಲಾವಣಿಗಳು' ಕೃತಿಯ ಜೊತೆಗೆ ಹಸ್ತಪ್ರತಿಯಿಂದಲೇ ಪ್ರತಿಮಾಡಿ ಪ್ರಕಟಿಸಿದ ಇದೇ ಸಂಪಾದಕರ **'ಶೃಂಗಾರ ಲಾವಣಿಗಳು'** ಕೃತಿಯನ್ನು ಬಳಸಿಕೊಂಡು ಇಲ್ಲಿಯ ಕವಿಗಳ ಹೆಸರುಗಳನ್ನು, ಊರುಗಳನ್ನು ಹಿಡಿದುಕೊಂಡು ಬಾಂಬೆಕರ್ನಾಟಕದಲ್ಲಿ ಶೋಧ ನಡೆಯಬೇಕಾದ ಅವಶ್ಯಕತೆ ಇದೆ. ಈ ಕವಿಗಳ ಮಾಹಿತಿಗಳು ಲಭ್ಯವಾದರೆ ಲಾವಣಿಗಳ ಹಳಮೆಯ ಬಗೆಗೆ ಒಂದಿಷ್ಟು ಮಾಹಿತಿಗಳು ದೊರೆಯಬಹುದಾಗಿದೆ. **'ಗ್ರಂಥಸ್ಥ ಲಾವಣಿಗಳು'** ಕೃತಿಯಲ್ಲಿ ಹರದೇಶಿ-ನಾಗೇಶಿಗೆ ಸಂಬಂಧಿಸಿದ ಹಾಡುಗಳೂ, ಐತಿಹಾಸಿಕ ಲಾವಣಿಗಳು, ಸಾಮಾಜಿಕ ನೀತಿ, ವಿಡಂಬನೆಗೆ ಸಂಬಂಧಿಸಿದ ಲಾವಣಿಗಳೂ ಕಾಣಿಸುತ್ತವೆ. ಎಲ್ಲವು ಸಂಪೂರ್ಣ ಪ್ರಮಾಣದಲ್ಲಿ ಲಾವಣಿಗಳ ರಚನೆಯನ್ನು ಹೊಂದಿಲ್ಲ. ಕೆಲವು ಸಮಾನವಾದ ನುಡಿಗಳನ್ನು ಹೊಂದಿದ ಹಾಡಿನ ರೂಪದಲ್ಲಿವೆ. ಸಖಿಗಳು, ಖ್ಯಾಲಿಗಳು ಕೆಲವಿವೆ. ಲಾವಣಿಗಳ ಅಧ್ಯಯನಕ್ಕೆ ಇಲ್ಲಿನ ಹಾಡುಗಳು ಅನುಕೂಲವಾಗಿವೆ.

೧೯೯೮ರಲ್ಲಿ ನಲವಡಿ ಶ್ರೀಕಂಠಶಾಸ್ತ್ರಿಗಳ **'ಹೈದರಾಬಾದ ರಜಾಕಾರ ಲಾವಣಿ'** ಪ್ರಕಟವಾಗಿದೆ. ಡಾ.ಬಸವರಾಜ ಮಲಶೆಟ್ಟಿ ಅವರು ಬರೆದ **'ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ'** ಎಂಬ ಪುಟ್ಟಕೃತಿಯಲ್ಲಿ ಹುಲಕುಂದ ಭೀಮಕವಿ ಹಾಗೂ ತಮ್ಮ ತಂದೆಯವರಾದ ಮರಿಕಲ್ಲಪ್ಪ ಮಲಶೆಟ್ಟಿ ಅವರ ಒಂದು ಹಾಡು ಹೀಗೆ ಭಾರತ ಸ್ವಾತಂತ್ರ್ಯಸಂಗ್ರಾಮಕ್ಕೆ ಸಂಬಂಧಪಟ್ಟ ಎರಡು ಹಾಡುಗಳಿವೆ. ಸ್ಥಳೀಯವಾಗಿ ನಿರ್ಮಾಣ ಗೊಂಡು ಜನರನ್ನು ಸ್ವಾತಂತ್ರ್ಯಚಳುವಳಿಯಲ್ಲಿ ಧುಮಕಲು ಪ್ರೇರಣೆ ನೀಡಿದ ಈ ಹಾಡುಗಳು ಅನೇಕ ಐತಿಹಾಸಿಕ ಘಟನೆಗಳನ್ನು ವಿವರಿಸುವಂಥವುಗಳಾಗಿವೆ. ಇವೆಲ್ಲ ಇತಿಹಾಸದ ಪುನರ್ ನಿರ್ಮಾಣದಲ್ಲಿ ಖಂಡಿತ ಮಹತ್ವದ ಸಂಗತಿಗಳನ್ನು ಒದಗಿಸುತ್ತವೆ.

ಡಾ. ಸಿ.ಕೆ.ನಾವಲಗಿ ಅವರು ಸಂಪಾದಿಸಿದ **'ಸೋಮಲಿಂಗ ಕವಿಯ ಲಾವಣಿಗಳು'** (೨೦೧೨) ಎಂಬುದು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟಂತೆ ಮಹತ್ವದ ಮಾಹಿತಿಗಳನ್ನು ಒಳಗೊಂಡ ಹಾಡುಗಳನ್ನು ಹೊಂದಿರುವ ಕೃತಿಯಾಗಿದೆ. ಹೀಗಾಗಲು ಕಾರಣವೆಂದರೆ ಸ್ವತಃ ಕವಿಯೇ ಗಾಂಧೀಜಿ ಪ್ರಭಾವಕ್ಕೆ ಒಳಗಾದವರು. ಸ್ವಾತಂತ್ರ್ಯ ಚಳುವಳಿಯಲ್ಲಿ

ಭಾಗವಹಿಸಿದವರು. "೧೯೩೦ರ ಈ ಚಳವಳಿಯಲ್ಲಿ ಹುಲಕುಂದ ಭೀಮಕವಿಗಳೂ ಇದ್ದರು. ಚಳವಳಿಯನ್ನು ತೀವ್ರಗೊಳಸಲು, ಜನತೆಗೆ ನೇರವಾಗಿ ಮುಟ್ಟುವ ಲಾವಣಿ/ಗೀಗೀ ಪದಗಳನ್ನು ಈರ್ವರೂ ಸೇರಿಯೇ ಹಾಡತೊಡಗಿದರು. ಲಾವಣಿ/ಗೀಗೀ ಪದಗಳನ್ನು ಭೀಮಕವಿಯು ಬರೆದೇ ಬರೆದರು. ಬಹಳಷ್ಟು ಬರೆದರು. ಕರ್ನಾಟಕ ಮಾತ್ರವಲ್ಲ ಮಹಾರಾಷ್ಟ್ರದಲ್ಲಿಯೂ ಇವರ ಸ್ವಾತಂತ್ರ್ಯಾಂದೋಲನ ಕುರಿತ ಗೀತೆಗಳನ್ನು ಹಾಡತೊಡಗಿದರು. ಸೋಮಲಿಂಗ ಕೂಡ ಇಪ್ಪತ್ತು ವರುಷ ತುಂಬುವುದರೊಳಗಾಗಿ ಸ್ವತಂತ್ರವಾದ ಲಾವಣಿ/ಗೀಗೀ ಪದರಚನೆಗೆ ತೊಡಗಿದರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಆಗಲೇ ಲಾವಣಿ/ಗೀಗೀ ಮೇಳಗಳು ಹೊಸೂರಿನಲ್ಲಿ ಹುಟ್ಟಿಕೊಂಡು ಅದ್ಭುತ ಸಾಧನೆ ಗೈದಿದ್ದವು. ಸೋಮಲಿಂಗ ಕವಿ ಈ ಮೇಳವನ್ನು ಇನ್ನೂ ಗಟ್ಟಿಯಾಗಿ ಕಟ್ಟಿ, ಮೇಳಕ್ಕೆ ದೊಡ್ಡ ಹೆಸರು ತಂದನು. ರಾಷ್ಟ್ರಾಭಿಮಾನದಿಂದ ಮನೆಮಾರು ತೊರೆದು ಜನಪದರ ರಾಷ್ಟ್ರೀಯ ಗೀತೆಗಳನ್ನು ಹಾಡುವುದರ ಮೂಲಕ ಪ್ರಚಾರ ಕಾರ್ಯ ಕೈಕೊಂಡರು. ಸುಮಾರು ಆರು ದಶಕಗಳವರೆಗೆ ಮೇಳದಲ್ಲಿ ಹಾಡುತ್ತ ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿದರು" (ಪ್ರ.ಪು.೯-೧೦).

ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಸೋಮಲಿಂಗಪ್ಪ ಅವರು ರಚಿಸಿದ ೧೧೦ ಹಾಡುಗಳು ಈ ಕೃತಿಯಲ್ಲಿವೆ. ಇಂತಹ ಕವಿಗಳು ಏನು ಹೇಳಿದ್ದಾರೆಂಬುದೇ ಮಹತ್ವದ ದಾಖಲೆಗಳಾಗುತ್ತವೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ ಕವಿ ಒಪ್ಪಿಕೊಂಡ ಮೌಲ್ಯಗಳನ್ನು ಇಲ್ಲಿಯ ಒಂದೊಂದು ಹಾಡೂ ಹೇಳುತ್ತವೆ. ಆಗಿನ ಕಾಲದ ಮೌಲ್ಯಗಳನ್ನು ನಮ್ಮ ಗಮನಕ್ಕೆ ತರುತ್ತವೆ. ಆ ದೃಷ್ಟಿಯಿಂದ ಈ ಕೃತಿಯೊಂದು ಅಪರೂಪದ ದಾಖಲೆಯೆ ಆಗಿದೆ. ಇಲ್ಲಿಯ ಎಲ್ಲ ಹಾಡುಗಳು ದೀರ್ಘವಾದ ಹಾಡುಗಳಾಗಿಲ್ಲ. ಸಖಿ, ಖ್ಯಾಲಿಯಾಗಿ ಬಳಕೆಯಾಗುವ ಹಾಡುಗಳ ಸಂಖ್ಯೆಯೂ ಸಾಕಷ್ಟಿದೆ. ಬಸವೇಶ್ವರ ಮೊದಲಾಗಿ ಅಲ್ಲಮಪ್ರಭು, ಗೊಲ್ಲಾಳ, ಅಕ್ಕಮಹಾದೇವಿಯಂತಹ ಶರಣರ ಹಾಡುಗಳಿವೆ. ಕಿತ್ತೂರ ಚನ್ನಮ್ಮಾಜಿ, ಬೆಳವಡಿ ಮಲ್ಲಮ್ಮ, ಭಾರತ ಸ್ವಾತಂತ್ರ್ಯ, ಮಹಾತ್ಮಾ ಗಾಂಧೀಜಿ, ಸುಭಾಶ್ಚಂದ್ರ ಭೋಸ, ಅಂಬೇಡಕರ ಅವರಂಥವರ ಹೋರಾಟದ ಹಾಡುಗಳೂ ಇಲ್ಲಿವೆ.

ಮಹಾತ್ಮಾ ಗಾಂಧೀಜಿ

ಬಸವಣ್ಣನವರ ತತ್ವಗಳಂತೆ ಗಾಂಧೀಜಿ ಒಬ್ಬಾತ ನಡದಾ
ನಡದಂತೆ ನುಡಿ ಆಡಿದಾ
ಭಾರತ ರಾಷ್ಟ್ರೀಯ ಕಾಂಗ್ರೆಸ್ಸಧಿವೇಶನ ಬೆಳಗಾವಿ ಜಿಲ್ಲಾಕ ಇತ್ತು
ಕಾಂಗ್ರೆಸ್ ಅಧ್ಯಕ್ಷ ಗಾಂಧೀಜಿ ಇದ್ದರು ಬಸವಣ್ಣನ ನೆನಪಾತು
ಹತ್ತೊಂಬತ್ತನೂರಾ ಇಪ್ಪತ್ತನಾಲ್ಕರಲ್ಲಿ ಗಾಂಧೀಜಿ ಆಡಿದ ಮಾತು
ನಾ ಇಲ್ಲಿ ಹೇಳುಮಾತು ಬಸವಣ್ಣನಂತೆ ತತ್ವವನ್ನು ಪಾಲಿಸಿದಾ
ಭಾರತಕ ಸ್ವತಂತ್ರ ತಂದಾ।

ಇಡೀ ಕೃತಿಯ ತುಂಬ ಇಂತಹ ಹಾಡುಗಳೇ ತುಂಬಿವೆ. ಜೊತೆಗೆ ಧಾರ್ಮಿಕ, ನೈತಿಕ ಸಂಗತಿಗಳುಳ್ಳ ಹಾಡುಗಳೂ ಇಲ್ಲಿವೆ. ಹೀಗಾಗಿ ಸ್ವಾತಂತ್ರ್ಯ ಸೇನಾನಿಯಾದ ಒಬ್ಬ

ಲಾವಣಿಕಾರನ ಮಹತ್ವದ ಹಾಡುಗಳ ಸಂಗ್ರಹವಾಗಿ ಈ ಕೃತಿ ಇತಿಹಾಸ ನಿರ್ಮಾಣದಲ್ಲಿ ಸಹಾಯಕ್ಕೆ ಬರುವ ಮಹತ್ವದ ದಾಖಲೆಗಳಲ್ಲಿ ಒಂದಾಗಿ ಕಾಣುತ್ತದೆ.

* * *

ಲಾವಣಿ/ ಗೀಗೀ ಹಾಡುಗಳ ಸಂಗ್ರಹಗಳು:

೧೯೩೩ : ಜೀವನ ಸಂಗೀತ, ಸಿಂಪಿ ಲಿಂಗಣ್ಣ, ಪಿ. ಧೂಲಾ, ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ಜಿ.ವಿಜಾಪೂರ, (೧೯೭೧, ಎರಡನೇ ಮುದ್ರಣ).

೧೯೭೨ : ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, (ಸಂ) ಕ್ಯಾತನಹಳ್ಳಿ ರಾಮಣ್ಣ, ಮೈಸೂರು ವಿಶ್ವವಿದ್ಯಾಲಯ.

೧೯೭೪ : ಕವಿ ಬಾಳಗೋಪಾಳನ ಲಾವಣಿಗಳು, (ಸಂ) ನಿಂಗಣ್ಣ ಸಣ್ಣಕ್ಕಿ, – ಸಮಾಜ ಪುಸ್ತಕಾಲಯ, ಧಾರವಾಡ.

೧೯೭೫ : ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ, (ಸಂ) ನಿಂಗಣ್ಣ ಸಣ್ಣಕ್ಕಿ, –ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಜಯೋತ್ಸವ ಸಮಿತಿ, ಬೆಳಗಾವಿ.

೧೯೭೯ : ಜಾನಪದ ಝೇಂಕಾರ, (ಸಂ) ಎ.ಜಿ.ನೀಲಗಾರ, –ಜಾಗೃತ ಭಾರತ, ಧಾರವಾಡ.

೧೯೮೦ : ದೈವದ ಎರಡು ಲಾವಣಿಗಳು, (ಸಂ) ನಿಂಗಣ್ಣ ಸಣ್ಣಕ್ಕಿ,–ಜಾನಪದ ಮಂಟಪ, ಕಾಲಗತಿ ಪ್ರಕಾಶನ, ರಾಯಬಾಗ.

೧೯೮೧ : ಚಾಪ ಹಾಕತಿವ ಡಪ್ಪಿನ ಮ್ಯಾಲ, (ಸಂ) ಡಾ. ಸಂಗಮೇಶ ಬಿರಾದಾರ, –ಗೆಳೆಯರ ಬಳಗ, ತುಂಗಳ, ತಾ. ಜಮಖಂಡಿ, ಜಿ. ವಿಜಯಪುರ.

೧೯೮೧ : ಸಾತು– ಕ್ಯಾಮಣ್ಣನ ಲಾವಣಿಗಳು (ಸಂ) ನಿಂಗಣ್ಣ ಸಣ್ಣಕ್ಕಿ, – ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೧೯೮೩ : ಹರದೇಶಿ–ನಾಗೇಶಿ, (ಸಂ) ಡಾ. ಬಿ.ಬಿ. ಹೆಂಡಿ, ಡಾ. ಎಂ.ಜಿ. ಬಿರಾದಾರ, ಡಾ. ಎಂ.ಎಸ್. ಲಠ್ಠೆ, ಕನ್ನಡ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

೧೯೮೫ : ಹುಲಕುಂದ ಶಿವಲಿಂಗಸ್ವಾಮಿ ವಿರಚಿತ ಕನ್ನಡ ಗೀಗೀ ಪದಗಳು, ಸಂ. ಧುಂಡಿರಾಜ ಲಿಮಯೆ,

೧೯೯೧ : ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳು, (ಸಂ) ಕ್ಯಾತನಹಳ್ಳಿ ರಾಮಣ್ಣ, ಸಾಗರ ಪ್ರಕಾಶನ, ಬೆಂಗಳೂರು(ಎರಡನೇ ಮುದ್ರಣ : ೨೦೧೨).

೧೯೯೫ : ಕಲ್ಗಿ–ತುರಾಯಿ, (ಸಂ) ಕಾಶೀನಾಥ ಚವ್ಹಾಣ, –ಅಮೃತ ಪ್ರಕಾಶನ, ಸರಸ್ವತಿ ನಿಲಯ, ಚೆನ್ನವೀರ ನಗರ, ಕಲಬುರಗಿ–೪.

೧೯೯೮ : ಶೃಂಗಾರ ಲಾವಣಿಗಳು, (ಸಂ) ಡಾ. ಬಿ.ಬಿ.ಬಿರಾದಾರ, –ಜ್ಯೋತಿ ಪ್ರಕಾಶನ, ಧಾರವಾಡ.

೧೯೯೮ : ಹೈದರಾಬಾದ ರಜಾಕಾರ ಲಾವಣಿ, ನಲವಡಿ ಶ್ರೀಕಂಠಶಾಸ್ತ್ರಿ, –ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೯೮ : ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ, ಡಾ. ಬಸವರಾಜ ಮಲಶೆಟ್ಟಿ, –ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೦೫ : ಲಾವಣಿ : ಸವಾಲ್–ಜವಾಬ್ ಪದಗಳು, (ಸಂ) ಡಾ. ಹರಿಶ್ಚಂದ್ರ ದಿಗ್ಸಂಗಿಕರ್, –ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೦೭ : ಗ್ರಂಥಸ್ಥ ಲಾವಣಿಗಳು, (ಸಂ) ಡಾ. ಬಿ.ಬಿ.ಬಿರಾದಾರ, –ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

೨೦೦೯ : ಚಾರಿತ್ರಿಕ ಲಾವಣಿಗಳು, (ಸಂ) ಡಾ. ಹರಿಶ್ಚಂದ್ರ ದಿಗ್ಸಂಗಿಕರ್, –ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨ : ಸೋಮಲಿಂಗ ಕವಿಯ ಲಾವಣಿಗಳು, (ಸಂ) ಡಾ. ಸಿ.ಕೆ.ನಾವಲಗಿ, –ಆನಂದ ಪ್ರಕಾಶನ, ಬೈಲಹೊಂಗಲ, ಜಿ.ಬೆಳಗಾವಿ.

ಸಹಾಯಕ ಗ್ರಂಥಗಳು:

೧೯೩೩ : ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಅರ್ಚಕ ಬಿ. ರಂಗಸ್ವಾಮಿ, –ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. (ಹುಟ್ಟಿದ ಹಳ್ಳಿ, ೧೯೭೧, ಎರಡನೇ ಮುದ್ರಣ).

೧೯೩೫ : ಕರ್ನಾಟಕ ಸಂಸ್ಕೃತಿ, ದೇವುಡು, –ಶಾರದಾ ಪ್ರಕಾಶನ, ಗಾಂಧೀನಗರ ಬೆಂಗಳೂರು.(೧೯೮೮ ಮೂರನೇ ಮುದ್ರಣ).

೧೯೭೯ : ಉತ್ತರ ಕರ್ನಾಟಕದ ಜನಪದ ಕವಿಚರಿತೆ, ಡಾ. ಎಂ.ಎಸ್.ಲಠ್ಠೆ, –ಬಸವಂತರಾಯ ಮಾಲಿಪಾಟೀಲ ಸ್ಮಾರಕ ಗ್ರಂಥ ಪ್ರಕಾಶನ, ಧಂಗಾಪೂರ. ತಾ. ಆಳಂದ, ಜಿ. ಕಲಬುರಗಿ.

* * *

೩. ಹಬ್ಬದ ಹಾಡುಗಳು

೧. ಹೋಳಿ ಹಾಡುಗಳು

'ಹೋಳಿ ಹುಣ್ಣಿವಿ ಸುತ್ತ ತನುಗಾಳಿ ಬೀಸ್ಯಾವ। ಬಣ್ಣದ ಹಚ್ಚಡ ಬಿಗಿಬಿಗಿದು ಹೊಚ್ಚ' ಎನ್ನುತ್ತಾಳೆ ಗರತಿ. ಪರಿಸರ ತನ್ನ ಮೇಲೆ ಬೀರುವ ಪರಿಣಾಮಗಳನ್ನು ಮನುಷ್ಯ ಚನ್ನಾಗಿ ಅರಿತುಕೊಂಡಿದ್ದಾನೆ. ಅದಕ್ಕೆ ತಕ್ಕಂತೆ ಆಹಾರ ಪಾನೀಯಗಳನ್ನು ಸೇವಿಸುತ್ತಾನೆ. ಬಟ್ಟೆಬರೆಗಳನ್ನು ಉಪಯೋಗಿಸುತ್ತಾನೆ. ಹಬ್ಬಹರಿದಿನಗಳನ್ನು ಆಚರಿಸುತ್ತಾನೆ. 'ಹೋಳಿ ಹುಣ್ಣಿವೆ' ಬಸಂತನ ಹುಣ್ಣಿವೆ ಎಂತಲೇ ಪ್ರಸಿದ್ಧವಾಗಿದೆ. ಫಾಲ್ಗುಣ ಮಾಸದ ಮಧ್ಯ ಬರುವ ಹುಣ್ಣಿವೆ ಇದು. ಫಾಲ್ಗುಣ ಮಾಸವನ್ನು ವಸಂತ ಮಾಸವೆಂತಲೂ ಕರೆಯುತ್ತಾರೆ. ಹೋಳಿ ಹುಣ್ಣಿವೆ ಬಗ್ಗೆ ಬರೆದ ಬಹಳಷ್ಟು ಜನ, ಹೋಳಿ ಆಚರಣೆ ಹುಣ್ಣಿಮೆಯಿಂದ ಪ್ರಾರಂಭಿಸಿ ಯುಗಾದಿವರೆಗಿನ ೧೫ ದಿನಗಳ ವರೆಗೆ ಆಚರಿಸಲಾಗುತ್ತದೆ ಎಂದು ಬರೆಯುತ್ತಾರೆ. ಆದರೆ ನಾವೆಲ್ಲ ನಮ್ಮೂರಿನಲ್ಲಿ ಆಚರಿಸಿದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಹೋಳಿ ಹುಣ್ಣಿವೆ ಹಿಂದಿನ ಮಹಾಶಿವರಾತ್ರಿ ಅಮವಾಸ್ಯೆ ದಾಟಿ ಚಂದ್ರ ದೊಡ್ಡವನಾದಂತೆ ಹುಡುಗರು ಕಟ್ಟಿಗೆ ಕುಳ್ಳು ಕದಿಯಲು, ಹಾಡುತ್ತ ಬೊಬ್ಬೆ ಹಾಕುತ್ತ ಅಡ್ಡಾಡಲು ಪ್ರಾರಂಭಿಸುತ್ತಾರೆ. ಇದು ಹೋಳಿಹುಣ್ಣಿವೆಯ ಕರಿ ಮುಗಿಯುವವರೆಗೆ, ಅಂದರೆ ಹೋಳಿ ಹಬ್ಬವಾದ ಎರಡು ದಿನಗಳ ವರೆಗೆ ಅದರ ಛಾಯೆ ಇರುತ್ತದೆ. ಈ ಅವಧಿಯನ್ನು 'ಗೊಬ್ಬಿ' ಎಂದೇ ಕರೆಯುತ್ತಾರೆ. ಬಾಗಲಕೋಟೆ ಒಂದು ನಗರದಲ್ಲಿ ಮಾತ್ರ ಹೋಳಿ ಹಬ್ಬದಿಂದ ಪ್ರಾರಂಭವಾಗಿ ಐದು ದಿನಗಳ ವರೆಗೆ ಬಣ್ಣ ಆಡುತ್ತಾರೆಂದು ತಿಳಿದುಬರುತ್ತದೆ. ಆದರೆ ಮುಂದಿನ ಅವಧಿಯಲ್ಲಿ ಬಣ್ಣವಾಡುವುದನ್ನು ನಾವು ಕಾಣೆವು. ಮುಂದೆ ಯುಗಾದಿಯೇ ಬರುವುದರಿಂದ ಯುಗಾದಿ ಮುಗಿದ ನಂತರವೇ ಶುಭಕಾರ್ಯಗಳೆಲ್ಲ ಪ್ರಾರಂಭವಾಗುತ್ತವೆ. ಅಂದರೆ ಶಿವರಾತ್ರಿ ಮುಗಿದ ನಂತರ 'ಗೊಬ್ಬಿ' ಅವಧಿ ಪ್ರಾರಂಭವಾಗಿ ಯುಗಾದಿಯವರೆಗೆ ಹಬ್ಬಿರುತ್ತದೆ. ಶಿವರಾತ್ರಿ – ಯುಗಾದಿ ನಡುವಿನ ಅವಧಿ ಅದು 'ಗೊಬ್ಬಿ'ಯೇ ಎನಿಸುತ್ತದೆ. ಆಚರಣೆ ಬಣ್ಣವಾಡುವುದು ಬಹಳವೆಂದರೆ ಹೋಳಿ ಹುಣ್ಣಿವೆಯಿಂದ ಐದು ದಿನಗಳು ಮಾತ್ರ. ಅಂದರೆ ಚತುರ್ಥಿವರೆಗೆ. ಪಂಚಮಿವರೆಗೆ ಅಲ್ಲವೆಂದು ತೋರುತ್ತದೆ. ಡಾ. ಗದ್ದಗಿಮಠರು ಹೀಗೆ ಬರೆಯುತ್ತಾರೆ "ಹೋಳಿಯು

ಹದಿನೈದು ಅಥವಾ ಇಪ್ಪತ್ತು ದಿನಗಳ ವರೆಗೆ ಆಡುವ ಆಟವಾಗಿದೆ. ಇದರ ಉತ್ಸವವು ಹೋಳಿಯ ಹುಣ್ಣಿಮೆಯಿಂದ ಪ್ರಾರಂಭವಾಗಿ ರಂಗಪಂಚಮಿವರೆಗೆ ನಡೆಯುವುದು"(ಕ.ಜ.ಗಿ.ಪು.೧೭೩).

ಈ ಸಮಯದಲ್ಲಿ ಶುಭಕಾರ್ಯಗಳನ್ನು ಯಾರೂ ಮಾಡುವುದಿಲ್ಲ. 'ಗೊಬ್ಬಿ ದಾಟಲಿ' ಎಂದು ನಿರೀಕ್ಷೆ ಮಾಡುತ್ತಾರೆ. ಗೊಬ್ಬಿ ಹೊಡೆಯುವುದು ಎಂದರೆ ಹೋಯ್ಕೊಳ್ಳುವುದು. ಮನುಷ್ಯನ ತೆರೆದ ವರ್ತನೆಗಳಲ್ಲಿ ಅತ್ಯಂತ ಕೊನೆಯ ವರ್ತನೆಯಿದು. ಅಪರೂಪಕ್ಕೆ ಪ್ರತಿಭಟನೆಯ ರೂಪದಲ್ಲಿ ಗೊಬ್ಬಿ ಹೊಡೆದು ಪ್ರತಿಭಟಿಸುವುದುಂಟು. ಇದಕ್ಕಿಂತ ಮುಂದೆ ಹೋಗಿ ಮಲವನ್ನು ತಮ್ಮ ಮೈ ಮೇಲೆ ಸುರಿದುಕೊಂಡು ಮಾಡಿದ ಪ್ರತಿಭಟನೆ ಭಾರತದಲ್ಲಿ ಅತ್ಯಂತ ಕ್ರೌರ್ಯದ ಪ್ರತಿಭಟನೆಯಾಗಿ ಕಂಡಿತು. ಅದಕ್ಕಿಂತ ಮುಂದೆ ಹೋಗಿ ಪ್ರತಿಭಟಿಸುವ ರೀತಿ ಮತ್ತೊಂದಿಲ್ಲವೆಂದು ಪರಿಗಣಿಸಲಾಯಿತು. ಬೊಬ್ಬೆ ಹಾಕಿ ಪ್ರತಿಭಟಿಸಿದ, ತಮ್ಮ ಮೇಲೆ ಮಲಸುರಿದುಕೊಂಡು ಪ್ರತಿಭಟಿಸಿದ ಎರಡೂ ಕ್ರಮಗಳು ಹೋಳಿ ಹುಣ್ಣಿಮೆಯಲ್ಲಿ ಹೊಯ್ಕೊಳ್ಳುವ ಮತ್ತು ಬಣ್ಣ ಎರಚಾಡುವ ಕ್ರಮಗಳ ಕೊನೆಯ ಅನುಕರಣಗಳೇ ಆಗಿವೆ.

ಎಲ್ಲ ಹಬ್ಬಗಳಲ್ಲಿ ಎಲ್ಲರಿಗೂ ಖುಷಿ ಕೊಡುವ ಹಬ್ಬವೆಂದರೆ ಹೋಳಿ ಹುಣ್ಣಿಮೆಯೇ. ಗಂಡಸರು ಹೆಚ್ಚು ತೆರೆದು ಆಚರಿಸಿದರೆ, ಅದನ್ನು ಕಂಡು ಸ್ತ್ರೀಯರು ಖುಷಿಪಡುತ್ತಾರೆ. ತಾವೂ ಪರಸ್ಪರ ಬಣ್ಣ ಹಾಕಿಕೊಂಡು ಸಂತೋಷಪಡುತ್ತಾರೆ. ಎಲ್ಲ ಹಬ್ಬಗಳು ಹೆಣ್ಣುಮಕ್ಕಳಿಗೆ, ನಮಗೇನು? ಎಂದು ಗಂಡಸರು ಕೇಳಿದ್ದಕ್ಕೆ ದೇವರು ಗಂಡಸರಿಗೆ ಹೋಳಿಹಬ್ಬವನ್ನು ಕೊಟ್ಟನಂತೆ. ಹೋಳಿ ಹಬ್ಬದಲ್ಲಿ ಗಂಡುಮಕ್ಕಳು ಅತಿಯಾಗಿ ವರ್ತಿಸುವುದನ್ನು ಕಂಡು ಹುಟ್ಟಿಕೊಂಡ ಕಥೆ ಇದಾಗಿದ್ದಂತೆ ತೋರುತ್ತದೆ.

ಹೋಳಿ ಹುಣ್ಣಿವೆಯ ಸುತ್ತ ಅತ್ಯಂತ ಖುಷಿ ಕೊಡುವ, ಹುಮ್ಮಸ್ಸನ್ನು ಕೊಡುವ ವಾತಾವರಣವನ್ನು ನಿಸರ್ಗವೇ ಸೃಷ್ಟಿಸಿರುತ್ತದೆ. ಆಧುನಿಕ ರಾಸಾಯನಿಕ ಬಣ್ಣಗಳ ಹಾವಳಿ ಇಲ್ಲದ ದಿನಗಳಲ್ಲಿ, ಅರಳಿ ನಿಂತ ನಾನಾ ತರದ ಹೂಗಳನ್ನು ಹರಿದು ತಂದು, ಕುಟ್ಟಿ ಬಣ್ಣ ತಯಾರಿಸಿ, ಪರಸ್ಪರ ಉಗ್ಗಿ ಸಂತೋಷಪಡುವ ದಿನಗಳಿದ್ದವು. ನಿಸರ್ಗ ಅಂತಹ ಬಣ್ಣ ಬಣ್ಣದ ಹೂಗಳನ್ನು ಗಿಡಗಂಟೆಗಳಲ್ಲಿ ಅರಳಿಸಿ ನಿಲ್ಲಿಸುವ ಕಾಲ ಅದು. ಮಾನವನ ಮನಸ್ಸಿನಲ್ಲಿಯೂ ಬಣ್ಣಬಣ್ಣದ ಹೂ ಅರಳಿ ಚಲ್ಲಾಟಕ್ಕೆ ಹಚ್ಚುವ ದಿನಗಳವು. ದೀಪಾವಳಿಗೆ ಪ್ರಾರಂಭವಾದ ಚಳಿ ಮುಕ್ತಾಯವಾಗುವ ಕಾಲವದು. ದೀಪಾವಳಿಯಿಂದ ಹೋಳಿಹುಣ್ಣಿವೆ ವರೆಗಿನ ಕಾಲ ಅದು ಮಾನವ ವಂಶೋತ್ಪತ್ತಿಯ ಕಾಲವಾಗಿದೆ.

ಯುಗಾದಿಗೆ ಹಳೆಯ ವರುಷ ಮುಗಿದು ಹೊಸ ವರುಷ ಪ್ರಾರಂಭವಾಗಬೇಕು. ಈ ಯುಗಾದಿ ಅಮವಾಸ್ಯೆಯ ಹಿಂದಿನ ಹುಣ್ಣಿವೆಯೇ ಹೋಳಿ ಹುಣ್ಣಿವೆ. ಇದಕ್ಕೆ ಬಸಂತನ ಹುಣ್ಣಿವೆ ಎಂತಲೂ ಕರೆಯುತ್ತಾರೆ. ಅದು ಫಾಲ್ಗುಣ ಮಾಸದಲ್ಲಿ ಬರುವ ಹುಣ್ಣಿವೆ. ವಸಂತಾಗಮನ ಸಂದೇಶ ಹೊತ್ತು ಬರುವ ಹಬ್ಬ ಹೋಳಿ ಹಬ್ಬ.

ಹೋಳಿ ಹಾಡುಗಳನ್ನು ಮೊದಲು ಪ್ರಸ್ತಾಪ ಮಾಡುವ ದೇವುಡು ಅವರು ತಮ್ಮ

'ಕರ್ನಾಟಕ ಸಂಸ್ಕೃತಿ' (೧೯೩೫) ಕೃತಿಯಲ್ಲಿ ಅವುಗಳನ್ನು 'ಕಾಮನ ಪದಗಳು' ಎಂದು ಕರೆದಿದ್ದಾರೆ. "ಕಾಮನ ಕಥೆಯನ್ನು ನಾನಾಪರಿಯಾಗಿ ಈ ಹಾಡುಗಳು ವರ್ಣಿಸುವವು. ಲಾವಣಿಗಳಲ್ಲಿ ಕಂಡುಬರುವ ಜಾತಿಗಳೆಲ್ಲವೂ ಇದರಲ್ಲಿಯೂ ಕಂಡು ಬರುವುವು. ಈ ಪದಗಳನ್ನು ವೈಷ್ಣವ ಕವಿಗಳೂ ಹಾಡಿದ್ದಾರೆ. ಈ ಹಾಡುಗಳಲ್ಲಿ ಭಂಡ ಮಾತುಗಳು ಬರುವುದುಂಟು. 'ಘುಂಘು, ಅಥವಾ ಹೋಲಿಕಾ ಎಂಬ ರಾಕ್ಷಸಿಯ ತೃಪ್ತಿಗಾಗಿ ತುಚ್ಛ ಭಾಷಣಗಳನ್ನುಚ್ಚರಿಸಬೇಕು ಎಂದು ಪುರಾಣ ಕಥೆಯಿದೆ"(ಪು.೭೭-೭೮). ಹೀಗೆ ಹೋಳಿಹಬ್ಬ ಆಚರಿಸುವ ಹಿನ್ನೆಲೆಗೆ ಬೌದ್ಧರಲ್ಲೂ ಒಂದು ಸಂಪ್ರದಾಯವಿದೆ ಎಂಬುದನ್ನು ಅವರು ಉಲ್ಲೇಖಿಸಿದ್ದಾರೆ. "ಮಾರನು ಬುದ್ಧನನ್ನು ವಿಷಯ ಪ್ರಪಂಚದ ಕಡೆಗೆ ಸೆಳೆಯಲು ಏಳು ವರ್ಷಗಳು ಶ್ರಮಪಟ್ಟು ವಿಫಲನಾದುದನ್ನು ಕುರಿತು ವರ್ಣಿಸುವ ಲಾವಣಿಗಳು ಬೌದ್ಧ ಸಾಹಿತ್ಯದಲ್ಲಿವೆ. ಕಾಮನ ವಿಚಾರವಾಗಿ ಋಗ್ವೇದ ಅಥರ್ವಣ ವೇದಗಳಲ್ಲಿ ಉಲ್ಲೇಖವಿದೆ. ಕ್ರಿ.ಶ. ೪೦೦ರಲ್ಲಿ (ಭಾರತೀಯ ವಿದ್ವಾಂಸರ ಮತದಂತೆ ಕ್ರಿಸ್ತಪೂರ್ವ ಒಂದನೆಯ ಶಮಾನದಲ್ಲಿ) ಬರೆದ ಶಾಬರ ಭಾಷ್ಯದಲ್ಲಿ ಈ ಹೋಲಿಕಾ ವ್ರತವು ಪ್ರಾಚ್ಯರಲ್ಲಿ ಮಾತ್ರ ವಾಡಿಕೆಯಲ್ಲಿದ್ದಿತು ಎಂದು ಹೇಳಿದೆ. (ಆನಂದಾಶ್ರಮದ ಮುದ್ರಣ, ಪು.೨೫೦). ಈ ಎಲ್ಲ ವಿಷಯಗಳನ್ನು ಸಮನ್ವಯ ಮಾಡಿ ಈ ಹಬ್ಬವು ಹುಟ್ಟಿದೆಯೆನ್ನಬಹುದೆ? ಇದು ಬೌದ್ಧರಿಂದ ತೆಗೆದುಕೊಂಡ ಹಬ್ಬವೆನ್ನುವುದಕ್ಕೆ -ದೀವಳಿಗೆಯಂತೆ- ಈ ವ್ರತವಿಧಾನದಲ್ಲಿ ಹೇಳಿರುವ ಹೋಮವು ಅಡ್ಡಿಯಾಗಿದೆ" (ಅದೆ, ಪು.೭೭). ಮುಂದುವರೆದು ದೇವುಡು ಅವರು ಶಿವನು ಕಾಮನನ್ನು ಸುಟ್ಟುರುಹಿದ ಪೌರಾಣಿಕ ಕಥೆಯನ್ನು ಪ್ರಸ್ತಾಪ ಮಾಡಿದ್ದಾರೆ. ಜನಪದ ಹಾಡುಗಳನ್ನು ಅವರು ಗಮನಿಸಿದಂತೆ ತೋರುವುದಿಲ್ಲ. ಒಂದೆರಡು ಲಿಖಿತ ಮೂಲದ ಹಾಡುಗಳನ್ನು ಉಲ್ಲೇಖ ಮಾಡಿದ್ದಾರೆ. ಆದರೆ ಜಯಕರ್ನಾಟಕದಲ್ಲಿ ಬೆಟಗೇರಿ ಕೃಷ್ಣಶರ್ಮ ಅವರು ಒಂದು ಹೋಳಿ ಹಾಡನ್ನು ಪ್ರಕಟಿಸಿದ ಪ್ರಸ್ತಾಪ ಮಾಡುವ ದೇವುಡು ಅವರು ಅದು ಬೇರೆ ಸಂಪ್ರದಾಯಕ್ಕೆ ಸೇರಿದ ಹಾಡಿನಂತಿದೆ ಎನ್ನುತ್ತಾರೆ. ಇದನ್ನು ಗಮನಿಸಿದರೆ ಕಾಮನಿಗೆ ಸಂಬಂಧಿಸಿದ ಕಥೆಗಳು ಭಾರತೀಯರಲ್ಲಿ ಎಲ್ಲ ಸಂಪ್ರದಾಯದ ಜನಸಮುದಾಯಗಳಲ್ಲಿ ಇವೆಯೆಂದು ತೋರುತ್ತದೆ.

ಪುರಾಣದಲ್ಲಿ ಕೇವಲ ಕಥೆಗಳಿವೆ. ಆದರೆ ಜಪದರಲ್ಲಿ ಹೋಳಿ ಹಬ್ಬದ ಆಚರಣೆ ಇಂದಿಗೂ ಉಳಿದುಕೊಂಡು ಬಂದಿದೆ. ಕಾಮ, ಜೋಕುಮಾರ, ಕುಂಯಾ ಇವೆಲ್ಲ ಫಲಸಂಪತ್ತನ್ನು ಅಭಿವೃದ್ಧಿ ಮಾಡುವ ದೇವತೆಗಳು ಎಂಬುದು ಜನಪದರ ಭಾವನೆ. ಇವರ ಬಗ್ಗೆ ಆಚರಣೆಗಳು ಹಾಗೆಯೇ ಉಳಿದುಕೊಂಡು ಬಂದಿವೆ.

ಹೈದ್ರಾಬಾದ ಕರ್ನಾಟಕದಲ್ಲಿ ಹೋಳಿಹಬ್ಬದ ದಿನ ಮತ್ತು ಮರುದಿನ ಎರಡು ದಿನ ಬಣ್ಣ ಆಡುವುದು ಸಾಮಾನ್ಯ. ಹಬ್ಬದ ದಿನ ಕಾಮನನ್ನು ಸಾಂಕೇತಿಕವಾಗಿ ಸುಡುವ ಕಾರ್ಯಕ್ರಮ ನಡೆಯುತ್ತದೆ. ಮರುದಿನ ಮುಂಜಾನೆ ಹೆಣ್ಣುಮಕ್ಕಳು ಹೋಳಿ ಸುಟ್ಟ ಬೆಂಕಿಯನ್ನು ತಂದು ತಮ್ಮ ಮನೆಯ ಒಲೆಗಳನ್ನು ಹೊತ್ತಿಸುತ್ತಾರೆ. ಅದರಲ್ಲಿ ಕಡ್ಲಿ ಹುರಿದು ತಿನ್ನುತ್ತಾರೆ. ಆ ಬೆಂಕಿಯಿಂದ ದೀಪ ಬೆಳಗಿಸಿ, ಮನೆತುಂಬ ದೀಪವನ್ನು ತೋರಿಸುತ್ತಾರೆ.

ಊರಿನ ಪ್ರತಿಭಾವಂತ ಕಲಾವಿದರು ನಾನಾ ತರದ ವೇಷಗಳನ್ನು ಹಾಕಿ ಜನರನ್ನು ರಂಜಿಸುವ ಕಲಾಪ್ರದರ್ಶನಗಳು ಮಧ್ಯಾಹ್ನದಿಂದ ನಡೆಯುತ್ತವೆ. ಕೊನೆಯ ದೃಶ್ಯ 'ಹೆಣದ ವೇಷ'. ಅದನ್ನು ಮೆರೆಸುತ್ತ, ನಾಟಕೀಯವಾಗಿ ಆಳುತ್ತ ಬರುವ ಮೆರವಣಿಗೆ ಹೋಳಿಯನ್ನು ದಹಿಸಿದ ಊರ ಹನುಮಂತ ದೇವರ ಗುಡಿಯೆಡೆಗೆ ಬರುತ್ತದೆ. ದಹಿಸಿದ ಬೂದಿ ದಿಬ್ಬದ ಎದುರಿಗೆ ಹೆಣ ಇಳಿಸುತ್ತಾರೆ. ಅಲ್ಲಿಗೆ ಸೋಗುಗಳ ಪ್ರದರ್ಶನ ಮುಗಿಯುತ್ತದೆ. ಅಷ್ಟೊತ್ತಿಗೆ ಊರ ಒಕ್ಕಲಿಗರೆಲ್ಲ ಬುಟ್ಟಿಗಳನ್ನು ಹಿಡಿದುಕೊಂಡು ನೆರೆದಿರುತ್ತಾರೆ. ಎಲ್ಲರೂ ಕಾಮನನ್ನು ಸುಟ್ಟ ಬೂದಿದಿಬ್ಬದ ಸುತ್ತಮುತ್ತ ನಿಂತು ಕಾಮನ ಹಾಡುಗಳನ್ನು ಹಾಡಲು ತೊಡಗುತ್ತಾರೆ. (ಇಂತಹ ಹೋಳಿಯ ಹಾಡುಗಳನ್ನು ಹಾಡಲು ಹೊಲಗೇರಿಯಿಂದ ಹೆಣ್ಣುಮಕ್ಕಳು ಬರುತ್ತಾರೆಂದು ಡಾ. ಗದ್ದಗಿಮಠ ಅವರು ಬರೆಯುತ್ತಾರೆ.) ಅಲ್ಲಿ ಹಾಡುಗಳ ಸ್ಪರ್ಧೆಯೇ ನಡೆಯುತ್ತದೆ. ತಾಸುಗಟ್ಟಲೆ ಈ ಸ್ಪರ್ಧೆ ಮುಂದುವರೆಯುತ್ತದೆ. ಕೊನೆಯಲ್ಲಿ ನೆರೆದ ಒಕ್ಕಲಿಗರೆಲ್ಲ ತಮ್ಮ ತಮ್ಮ ಮನೆಯಿಂದ ತಂದ ಬುಟ್ಟಿಯಲ್ಲಿ ಕಾಮನನ್ನು ಸುಟ್ಟ ಬೂದಿಯನ್ನು ತುಂಬಿಕೊಂಡು ಹೋಗುತ್ತಾರೆ. ಈ ಬೂದಿಯನ್ನು ಒಯ್ದು ಹೊಲದ ತುಂಬ ಸಿಂಪಡಿಸುತ್ತಾರೆ. ಇದರಿಂದ ಮುಂದೆ ತಮ್ಮ ಬೆಳೆ ಹುಲುಸಾಗಿ ಬರುತ್ತದೆಂಬ ನಂಬುಗೆ ಜನಪದರಲ್ಲಿದೆ.

ಒಕ್ಕಲಿಗನಿಗೂ ಹೋಳಿ ಹುಣ್ಣಿವೆಗೂ ಇರುವ ಸಂಬಂಧವನ್ನು ಡಾ. ಬಿ.ಎಸ್.ಗದ್ದಗಿಮಠ ಅವರು ತಮ್ಮ ಪ್ರಬಂಧ 'ಕನ್ನಡ ಜಾನಪದ ಗೀತಗಳು'(೧೯೬೩) ಕೃತಿಯಲ್ಲಿ ವಿವರಿಸಿದ್ದಾರೆ. "ಕಾಮನ ಕರಿಯಲ್ಲಿ ಒಕ್ಕಲಿಗನಿಗೆ ಬಲವಾದ ನಂಬಿಗೆಯಿದೆ. ಅವನು ಅದರಲ್ಲಿ ತನ್ನ ಭಾಗದ ವರುಷದ ಮಳೆ ಬೆಳೆಗಳನ್ನರಿತುಕೊಳ್ಳುವನು. ಕಾಮನ ಬೂದಿಯು ಸುಡುವ ಕಾಲಕ್ಕೆ ಯಾವ ದಿಕ್ಕಿಗೆ ಹಾರುವುದೊ ಆ ಭಾಗವು ಮಳೆ ಬೆಳೆಯಿಂದ ಸಮೃದ್ಧಿಯಾಗುವು ದೆಂದು ನಂಬುವನು. ಕಾಮನ ಬೂದಿಯನ್ನು ತೂರಿದ ಮರುದಿವಸ ಮಳೆಯಾಗಿ ಬೂದಿಯು ಭೂಮಿಯಲ್ಲಿ ಬೆರೆತರೆ ಲೋಕಕ್ಕೆ ರೋಗಾದಿಗಳ ಭಯವಿಲ್ಲೆಂದೂ, ಬೆಳಸು ಚೆನ್ನಾಗಿ ಬಂದು ಲೋಕವು ಸುಖದಿಂದ ಬಾಳುವುದೆಂದೂ ತಿಳಿಯುವನು. ಅಲ್ಲದೆ ಕಾಮನ ಬೂದಿಯನ್ನು ತಂದು ಬಿತ್ತುವ ಬೀಜಗಳಲ್ಲಿಯೂ ಬೀಜಗೊಬ್ಬರವೆಂದು ಕೂಡಿಸಿ ಬಿತ್ತುವನು. ಹೀಗೆ ಮಾಡಿದರೆ ಬೀಜವು ಹುಸಿಹೋಗದೆ, ನಾಟಿ ದೊಡ್ಡ ಬೆಳಸು ಬರುವದೆಂಬ ನಂಬಿಗೆಯೂ ಅವನಿಗಿದೆ. ಕಾಮನ ಕರಿಯನ್ನು (ಬೇವಿನ ಹೂ ಚಿಗುರು) ತಂದು ಕಣಜಗಳಲ್ಲಿಯೂ ಕಾಳು ತುಂಬುವ ಹಗೆ ಬಳತಗಳಲ್ಲಿಯೂ ಚೀಲಗಳಲ್ಲಿಯೂ ಚೆಲ್ಲುವನು. ತನ್ನ ರಾಶಿ ಹುಲುಸಾಗಿ ಈ ಭಂಡಾರಗಳು ತುಂಬಲೆಂದೇ ಅವನ ಮುಗ್ಧಭಾವನೆ.

ಹೋಳಿಯಾಡದ ನಾಡು ನಾಳೆನದೆ ಕಾಡಾತೊ
ಗೋಳಾತೊ ಜನಕ ಮೂಲಾತೊ । ಮಳೆ ಹೋಗಿ
ಹಾಳಾತೊ ಪಿಡುಗೆದ್ದು ದಿನ ದಿನಕೊ
ಎಂದು ಹಾಡಿದ್ದಾನೆ ರೈತ" (ಕ.ಜ.ಗೀ.ಪು.೧೭೮).

ಭಾರತದಲ್ಲಿ ಮುಸ್ಲೀಮರನ್ನುಳಿದು ಹೆಚ್ಚುಕಡಿಮೆ ಎಲ್ಲ ಜನಸಮುದಾಯದವರು ಹೋಳಿಯನ್ನಾಚರಿಸುತ್ತಾರೆ. ಹೀಗಾಗಿ ಇದು ಭಾರತದ ಹಬ್ಬವೆಂದು ಕರೆಯುಬಹುದಾಗಿದೆ.

ಹೋಳಿ ಹಬ್ಬ ಎಂದು ಕರೆಯುವುದು ಸಾಮಾನ್ಯ ವಾಡಿಕೆ. ಇದನ್ನು ಗಮನಿಸಿದರೆ, ಕಾಮನ ಹಬ್ಬವೆಂದು ಯಾರೂ ಕರೆಯರು. ಹೋಳಿ ಹಬ್ಬದ ಕಥೆ ಹೇಳುವಾಗ ಕಾಮದಹನದ ಕಥೆ ಹೇಳಲಾಗುತ್ತದೆ. ಆದರೆ ಹಬ್ಬದ ಹೆಸರು ಹೇಳುವಾಗ 'ಹೋಳಿಹಬ್ಬ'ವೆಂದೇ ಹೇಳಲಾಗುತ್ತದೆ. ಕೆಲವು ಕಡೆ ಹೋಳಿಯನ್ನು ಸುಡಲು ಹೊಲಗೇರಿಯಿಂದ ಬೆಂಕಿ ತರುವ ವಾಡಿಕೆ ಈಗಲೂ ಇದೆ ಎಂದು ಕೇಳುತ್ತೇವೆ. ಬಹಳ ಕಡೆ ಈ ನೆನಪು ಇದೆಯಾದರೂ ಹೊಲಗೇರಿಯಿಂದ ಬೆಂಕಿ ತರುವುದು ನಿಂತು ಹೋಗಿದೆ. ಇದಕ್ಕೆ ಕಾರಣ ಈಗಿನ ಸಾಮಾಜಿಕ ಪರಿಸ್ಥಿತಿಗಳಾಗಿವೆ. ಅಂದರೆ ಹೋಳಿಯನ್ನು ಸುಡುವುದು ಊರಲ್ಲಿ, ಉರಿಹಚ್ಚಲು ಬೆಂಕಿ ತರುವುದು ಹೊಲಗೇರಿಯಿಂದ. ಜನಪದರಲ್ಲಿರುವ ಒಂದು ಕಥೆ ಇದಕ್ಕೆ ನಿದರ್ಶನವಾಗಿ ದೊರೆಯುತ್ತದೆ. 'ಊರ ಬ್ರಾಹ್ಮಣರ ಹುಡುಗನೊಬ್ಬನು ಹೊಲಗೇರಿಯ ಹೋಳಿ ಎನ್ನುವ ಚಲುವ ಹುಡುಗಿಯನ್ನು ಮೋಹಿಸುತ್ತಾನೆ. ಊರವರು ಇದಕ್ಕೆ ಅಡ್ಡಿಯಾಗುತ್ತಾರೆ. ಆದರೂ ಹುಡುಗ ಹೋಳಿಯನ್ನು ಕೂಡಲು ಹೊಲಗೇರಿಗೆ ಹೋದಾಗ ಅಲ್ಲಿಯ ಜನ ಅವನನ್ನು ಹೊಡೆದು ಕೊಲ್ಲುತ್ತಾರೆ. ಅವನ ಶವವನ್ನು ಸುಡಲು ಬೇಕಾದ ಬೆಂಕಿಕೊಡಲು ಊರವರು ನಿರಾಕರಿಸುತ್ತಾರೆ. ಈಗ ಮತ್ತೆ ಹೋಳಿಯ ಮನೆಯಿಂದ ಬೆಂಕಿಯನ್ನು ತಂದು ಹುಡುಗನ ಶವಕ್ಕೆ ಬೆಂಕಿ ಕೊಡುತ್ತಾರೆ. ಆಗ ಹೋಳಿ ಬಂದು ಅದೇ ಬೆಂಕಿಗೆ ಹಾರಿ ತನ್ನ ಜೀವವನ್ನು ಕೊಡುತ್ತಾಳೆ. ಈ ನೆನಪಿಗೆ 'ಹೋಳಿಹಬ್ಬ' ಆಚರಿಸಲಾಗುತ್ತದೆ ಎಂಬ ಒಂದು ಕಥೆ ದೊರೆಯುತ್ತದೆ. ಅದಕ್ಕಾಗಿ ಈಗಲೂ ಹೋಳಿಯನ್ನು ಸುಡಲು ಹೊಲಗೇರಿಯಿಂದ ಬೆಂಕಿ ತರುವ ಪದ್ಧತಿ ಇತ್ತೆಂದು ಹೇಳಲಾಗುತ್ತದೆ.

ಈ ಪ್ರಸಂಗವನ್ನು ಕುರಿತು ಬನಹಟ್ಟಿಯ ಒಬ್ಬ ಕವಿ ಒಂದು ಹಾಡನ್ನು ರಚಿಸಿದ್ದು ಅದನ್ನು ಡಾ. ಮ.ಗು.ಬಿರಾದಾರ ಅವರು ಉಲ್ಲೇಖಿಸಿ ಒಂದು ಲೇಖನವನ್ನೇ ಬರೆದಿದ್ದಾರೆ: ಈ ಕವಿ ಶಿವನು ಕಾಮನನ್ನು ಸುಟ್ಟ ನಂತರ ರತಿಯ ಪ್ರಲಾಪವನ್ನು ಕಂಡು ಕಾಮ ಮತ್ತು ರತಿ ಇಬ್ಬರಿಗೂ ಭೂಲೋಕದಲ್ಲಿ, ಅದು ಕರ್ನಾಟಕದಲ್ಲಿ ಜನಿಸುವಂತೆ ಸೂಚನೆ ಕೊಡುತ್ತಾನೆ. ಕಾಮನು ಒಬ್ಬ ಬ್ರಾಹ್ಮಣನ ಹೊಟ್ಟೆಯಲ್ಲಿ, ರತಿಯು ಅದೇ ಊರಿನ ಹೊಲೆಯರ ಮನೆಯಲ್ಲಿ ಹುಟ್ಟು ಪಡೆದು, ಇಬ್ಬರೂ ಕೂಡಲಿ ಎನ್ನುತ್ತಾನೆ. ಹೀಗೆ ಅವರಿಬ್ಬರೂ ಭೂಲೋಕದಲ್ಲಿ ಜನಿಸಿದ ನಂತರ ಕಥೆ ಮುಂದುವರೆದು, ಇತ್ತ ಊರ ಜನ ಆ ಹುಡುಗನಿಗೆ ಬಹಿಷ್ಕಾರ ಹಾಕುತ್ತಾರೆ, ಅತ್ತ ಹೊಲಗೇರಿಯ ಜನ ಬರಗೊಡದೆ, ಊರಲ್ಲಿ ಯಾರೂ ಅವನಿಗೆ ಅನ್ನ ನೀರು ಕೊಡದೆ, ರೋಗ ಬಂದು ಸಾಯುತ್ತಾನೆಂದು ಕಥೆ ಬೆಳೆಸಿದ್ದಾನೆ. ಆತ ಸತ್ತಾಗ ಊರವರು ಬಾಗಿಲು ಮುಚ್ಚಿಕೊಳ್ಳುತ್ತಾರೆ. ಸುಡಲು ಕಟ್ಟಿಗೆ ಕೂಡ ಕೊಡುವುದಿಲ್ಲ. ಕಡೆಗೆ ಕೆಲ ಗೆಳೆಯರು ಕೂಡಿ, ಊರಹೊರಗೆ ಒಟ್ಟಿದ ಕಟ್ಟಿಗೆ, ಕುಳ್ಳು ತಂದು ಕೂಡಿಸುತ್ತಾರೆ. ಊರವರು ಬೆಂಕಿಯನ್ನೂ ಕೊಡದಿದ್ದಾಗ ಹೊಲಗೇರಿಯ ಹೋಳಿಯ ಮನೆಯಿಂದಲೇ ಬೆಂಕಿಯನ್ನು, ಜೊತೆಗೆ ಹೋಳಿಯನ್ನು ಹೊತ್ತು ತಂದು, ಶವಕ್ಕೆ ಹಚ್ಚಿದ ಬೆಂಕಿಯಲ್ಲಿಯೇ ಆಕೆಯನ್ನು ಹಾಕುತ್ತಾರೆ ಎಂದು ಕವಿ ಕಥೆ ಬೆಳೆಸಿದ್ದಾನೆ.

ಕವಿ ಕಥೆಯನ್ನು ಹೇಗೇ ಹೇಳಲಿ ಸಾರಾಂಶ ಮಾತ್ರ ಮೂಲ ಜನಜನಿತ ಕಥೆಗೆ ಹೋಲುತ್ತದೆ. ಈ ಕಥೆಯಲ್ಲಿ ಹೋಳಿಹುಣ್ಣಿವೆಯಲ್ಲಿ ಹೊಯ್ಕೊಳ್ಳುವುದು, ಕುಳ್ಳು ಕಟ್ಟಿಗೆಗಳನ್ನು ಕದಿಯುವುದು, ಹೊಲಗೇರಿಯಿಂದ ಬೆಂಕಿ ತರುವುದು, ಕೊನೆಗೆ ಹೋಳಿಯನ್ನೂ ಬೆಂಕಿಗೆ ಹಾಕಿ ಸುಡುವಲ್ಲಿ ಸತಿಪದ್ಧತಿಯ ಸಂಗತಿಯನ್ನು ಕಾಣುತ್ತೇವೆ. ಇದೆಲ್ಲ ನಡೆದುದು ಬಸಂತನ ಹುಣ್ಣಿವೆಯಲ್ಲಿ. ಆದುದರಿಂದ ಇದನ್ನು 'ಬಸಂತನ ಹುಣ್ಣಿವೆ' ಎಂದು ಕರೆಯಲಾಗುತ್ತದೆ. ಹೀಗಾಗಿ ಹೋಳಿಹುಣ್ಣಿವೆ ಪೌರಾಣಿಕ ಕಥೆಯಾದ ಕಾಮದಹನ, ಮತ್ತು ಜನಪದ ಕಥೆಯಾದ ಹೋಳಿ ದಹನ ಈ ಎರಡೂ ಸಂಗತಿಗಳನ್ನು ಒಳಗೊಂಡಿದೆ. ಅದರೆ ಗಮನಿಸಬೇಕಾದ ಸಂಗತಿ ಎಂದರೆ, ಕಥೆಯಲ್ಲಿ ಊರ ಹುಡುಗನ ಶವವನ್ನೂ ದಹಿಸಲಾಗುತ್ತದೆ ಎಂದಿದ್ದರೂ ಕೇವಲ ಹೋಳಿ ಹೆಸರಿನ ಮೇಲೆ ಹುಣ್ಣಿವೆ ಹೆಸರು ಇರುವುದರಿಂದ ಅಲ್ಲಿ ಮತ್ತೆ ಒಂದಿಷ್ಟು ಸಂಶಯ ಉಳಿದುಕೊಳ್ಳುತ್ತದೆ. ಅದು ಕಾಮ ದಹನದ ಕಥೆ ನಂತರ ಸಂಬಂಧಿಸಿದಂತೆ ತೋರುತ್ತದೆ.

ಹೋಳಿ ಹಾಡುಗಳು ಅತ್ಯಂತ ಅವಾಚ್ಯ, ಅಶ್ಲೀಲವಾಗಿರುವುದು ಸ್ಪಷ್ಟ. ಇವುಗಳ ಜೊತೆಗೆ ಕೆಲವು ಕಡೆ ಕಾಮ–ರತಿಯನ್ನು ಪ್ರತಿಷ್ಠಾಪನೆ ಮಾಡಿ, ಹಾಡುವ ಸ್ಪರ್ಧೆಯೂ ನಡೆಯುತ್ತದೆಂದು ತಿಳಿದುಬರುತ್ತದೆ. ಜೊತೆಗೆ ಹೋಳಿದಹನ ಮಾಡಿದ ಬೂದಿಯ ಎದುರಿಗೂ ಹಾಡುಗಳು ನಡೆಯುತ್ತವೆ. ಕುಳ್ಳು ಕಟ್ಟಿಗೆ ಕದಿಯುವಾಗ, ಬೀದಿ ಬೀದಿ ಗೊಬ್ಬಿ ಹೊಡೆಯುತ್ತ ಹುಡುಗರು ಹಾಡುವ ಚುಟುಕುಗಳು ತೀರ ಅಶ್ಲೀಲವಾಗಿರುತ್ತವೆ. ಆದರೆ ಸ್ಪರ್ಧೆಯಲ್ಲಿ ಕೇಳುಗರು ಇರುವುದರಿಂದ ಅವಾಚ್ಯ ಅಶ್ಲೀಲ ಪದಗಳು ಸ್ವಲ್ಪ ಕಡಿಮೆಯಾಗಿ ಶೃಂಗಾರ ಕಥೆಗಳು, ಹಾಡುಗಳು ಬಳಕೆಯಾಗುತ್ತವೆ. ಅಂತಹ ಹಾಡುಗಳನ್ನು ಕೆಲ ಜನಪದ ಕವಿಗಳು ಬರೆದಂತೆಯೂ ತೋರುತ್ತದೆ. ಡಾ. ಸುಂಕಾಪೂರ ಅವರು **'ಜೀವನ ಜೋಕಾಲಿ ೪'– 'ಹೋಳೀಹಾಡು'** (೧೯೭೪) ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇಲ್ಲಿಯ ಎಲ್ಲ ಹಾಡುಗಳು, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಇರುವ ಹಸ್ತಪ್ರತಿಗಳಿಂದಲೇ ಪ್ರತಿಮಾಡಿದ ಹಾಡುಗಳಾಗಿವೆ. ಈ ಕೃತಿಯಲ್ಲಿ ಒಟ್ಟಿಗೆ ನಾಲ್ಕು ಜನ ಕವಿಗಳು ಬರೆದ ೭ ಹಾಡುಗಳಿವೆ. ಕುಂದಗೋಳ ಬಸಲಿಂಗ, ತುರುವಿ ಗಿರೀಶನ ಶಿಷ್ಯ, ಉಜ್ಜಯಿನಿ ಮರುಳಸಿದ್ಧನ ಬಾಲಕ, ಗೋಕಾವಿ ಸಿದ್ಧಸೇವಕ ಇವರೆಲ್ಲ ಪ್ರತಿಭಾವಂತ ಜನಪದ ಕವಿಗಳು. ಒಂದಿಷ್ಟು ಶುದ್ಧಭಾಷೆ ಬಳಸಿ, ಜನರಿಗೆ ತಿಳಿಯುವಂತೆ ಹಾಡುಗಳನ್ನು ಬರೆದಿದ್ದಾರೆ. ಈ ಹೋಳಿ ಹಾಡುಗಳ ಧಾಟಿಗಳು ನಮಗೆ ಗೊತ್ತಿಲ್ಲ. ಆದರೆ ಇಲ್ಲಿಯ ಹಾಡುಗಳು ಮೂರ್ನಾಲ್ಕು ಜನ ಕವಿಗಳಿಂದ ನಿರ್ಮಾಣವಾಗಿದ್ದರೂ ಹಾಡುಗಳ ನುಡಿಗಳ ರಚನೆ ಒಂದೇ ಬಗೆಯಾಗಿದೆ. ಇದನ್ನು ಗಮನಿಸಿದರೆ ಈ ಎಲ್ಲವುಗಳ ಧಾಟಿ ಒಂದೇ ಬಗೆಯಾಗಿದೆ ಎಂದು ಅರ್ಥವಾಗುತ್ತದೆ. ಏಕೆಂದರೆ ಜನಪದ ಹಾಡುಗಳ ಧಾಟಿಗಳನ್ನು ಅನುಸರಿಸಿಯೇ ಛಂದಸ್ಸು, ಹಾಡಿನ ರಚನೆ ಹುಟ್ಟಿಕೊಳ್ಳುತ್ತದೆ. ಇಲ್ಲಿಯ ಪ್ರತಿ ನುಡಿಗಳ ಸಾಲುಗಳು ಐದೈದು ಇವೆ. ಪ್ರತಿ ಸಾಲು ೧೭, ೧೮, ೧೯, ೨೦ ಮಾತ್ರೆಗಳನ್ನು ಹೊಂದಿವೆ. ಅಂದರೆ ಕಡಿಮೆ ಮಾತ್ರೆಗಳಿರುವ ಸಾಲುಗಳಲ್ಲಿ ಒಂದು

ಅಥವಾ ಎರಡು ಮಾತ್ರೆಗಳಷ್ಟು ರಾಗ ಎಳೆಯುವ ಸ್ಥಳಗಳಿರುತ್ತವೆ. ಒಂದೆರಡು ಮಾತ್ರೆಗಳು ಹೆಚ್ಚಾದರೆ ಅವುಗಳನ್ನು ತೀವ್ರವಾಗಿ ಉಚ್ಚರಿಸಿ ಧಾಟಿಗೆ ಹೊಂದಿಸಿಕೊಳ್ಳಲಾಗುತ್ತದೆ. ಹೀಗಾಗಿ ಸಾಲುಗಳು ಮತ್ತು ಸಾಲುಗಳ ಮಾತ್ರೆಗಳು ಸಮಾನವಾಗಿವೆ ಎಂದಂತಾಯಿತು. ಹೀಗಾಗಿ ಧಾಟಿಗಳು ಕೂಡ ಒಂದೇ ಬಗೆಯಾಗಿರಲು ಸಾಧ್ಯವಿದೆ. ಸಹಜವಾಗಿಯೇ ಇಲ್ಲಿಯ ಮುಖ್ಯ ರಸ ಶೃಂಗಾರವಾಗಿರುವುದರಿಂದ ಇಲ್ಲಿ ಎಲ್ಲ ಹಾಡುಗಳ ಪ್ರಧಾನ ಭಾವ ಶೃಂಗಾರವೇ ಆಗಿರುತ್ತದೆ.

ಧೀರ ಕುಮಾರ ರಾಮ :

ಅಂಗಜನ ಮನೋಬಾಣ ನುಂಗಿ ನನ್ನ ಮನವ
ಅಂಗಸಂಗ ಸುಖವ ಬಿಡಲಾರೆ। ರಾಮ
ಭಂಗ ಮಾಡಲು ಬ್ಯಾಡ ನುಂಗಲಾರೆ। ಕಾಮ
ದಿಂಗ ಬಡಿಸಲು ಬ್ಯಾಡ ಚೆನ್ನಿಗನೆ।ಬಾರೊ
ಜಂಗಿ ಕಾಮೂಟಕ ಹಾರಿ ಚೆಂಗನೆ ಕೈಕೊಟ್ಟು
ಅಂಗವಾಲಿಂಗಿಸಿ ಹಿಂಗಿಸು ಕಾಮತಾಪ ।೫೩।

ಮಲುಹಣ :

ಕಳಸ ಕುಚವು ಚೆಲ್ವ ಗಳರವ ಕೋಗಿಲಿ
ನಳನಳಿಸುವ ತೋಳು ತಳಿರಡಿಯು ।ವಾರಿ
ಸುಳಿಯಂತೆ ನಾಭಿಯು ಗಿಳಿನುಡಿಯು
ಥಳಥಳಿಪ ರಂಭೆಯ ಪೋಲ್ವ ಒಳದೊಡೆಯು ।ಚಿಕ್ಕ
ಅಳಿಮುಡಿ। ಕಿಸಕುಳ ನುಡಿ। ಕರ್ಣಗಳು। ಹೆಡಿ
ತಿಲಪು ಗಲ್ಲಗಳಿಂದ ಪೊಳೆವ ಸುವರ್ಣ ಪು
ತ್ಥಳಿಯಂತೆ ಎಸೆವಳು ನಳಿನ ಸುಗಂಧಿ

ಕೃಷ್ಣ–ಗೊಲ್ಲತಿ :

ಎತ್ತೆತ್ತ ನೋಡಲು ಮುತ್ತಿದ ಸಖಿಯರ
ಎತ್ತಿ ಸೀರಿಯ ಸೆರಗ್ಗಿಡಿವುತಲಿ। ಮುಖ
ವೆತ್ತಿ ಮುಖಕೆ ಮುದ್ದನಿಡುವುತಲಿ । ಘನ
ವೃತ್ತ ಕುಚಗಳೊತ್ತಿ ಹಿಡಿವುತಲಿ । ತನ್ನ
ತ್ತತ್ತಲಿ ಸುತ್ತಲಿ ಜತ್ತಿಲಿ ನೆರೆ ರಂಜಿ
ಸುತ್ತಾಲಿಗೊತ್ತಲಿ ಅರ್ತಿಯಾಡುವನು ।೨೦।

ಕಾಮಿನಿ ಶೃಂಗಾರ :

ದಂತವ ಕಂಡು ದಾಳಿಂಬರ ನಾಚುತ
ಚಿಂತೆಯಿಂದಲಿ ಬಾಯ ಬಿಟ್ಟಿಹುದು। ಮುಖ
ಕಾಂತಿಗೆ ಚಂದ್ರ ಕಪ್ಪಾಗಿಹುದು। ಇಂಥ

ಪಂಥದ ನಾರಿಯ ಪ್ರಾಂತದೊಳಗೆ ಕಾಣೆ
ನೆಂತೆನುತಲಿ ಕುಕ್ಕುಟನು ಬೇಗ ಕೂಗೆ ।೧೪

ವೀರ ಅಭಿಮನ್ಯು, ಕೃಷ್ಣಾರ್ಜುನರ ಕಾಳಗ ವೀರರಸ ಭರಿತವಾಗಿವೆ. ಈ ಸಂಗ್ರಹ ಉತ್ತಮವಾದ ಶೃಂಗಾರ ಮತ್ತು ವೀರರಸ ಭರಿತವಾದ ಹಾಡುಗಳಿಂದ ತುಂಬಿದೆ.

೧೯೮೩ರಲ್ಲಿ ಪ್ರಕಟವಾದ ಡಾ. ಬಿ.ಬಿ.ಬಿರಾದಾರ ಅವರ **'ಬೆತ್ತಲೆ ಹೋಳಿಹಾಡುಗಳು'** ಹೋಳಿ ಹಾಡುಗಳಿಗೆ ಸಂಬಂಧಪಟ್ಟಂತೆ ಒಂದು ಅಪರೂಪದ ಕೃತಿ. ಹೋಳಿ ಹಬ್ಬದಲ್ಲಿ ಬಳಕೆಯಾಗುವ ಎಲ್ಲ ಬಗೆಯ ಹಾಡುಗಳ ಒಂದು ಸಂಕಲನ ಇದು. ಇದಕ್ಕೆ ಮುನ್ನುಡಿ ಬರೆದಿರುವ ಡಾ. ಎಂ. ಚಿದಾನಂದ ಮೂರ್ತಿ ಅವರು ಹೀಗೆ ಬರೆಯುತ್ತಾರೆ: "ಬೆತ್ತಲೆ ಹೋಳೀ ಹಾಡುಗಳು ಕನ್ನಡದ ಪೋಲಿ ಸಾಹಿತ್ಯಕ್ಕೆ ಇನ್ನೊಂದು ಕೊಡುಗೆ. ಈ ಪುಸ್ತಕವನ್ನು ಓದಿದ ಹಲವರು ಇಲ್ಲಿಯ ಪದ್ಯಗಳನ್ನು ಅಚ್ಚಿನಲ್ಲಿ ತರಬಾರದಿತ್ತು, 'ಅಶ್ಲೀಲ' ಒಳಗೇ ಇರಬೇಕು ಎಂದು ಗೊಣಗಿದರೂ ಕೆಲವನ್ನಾದರೂ ಓದಿ ಗುಪ್ತವಾಗಿ ಸುಖಿಸುತ್ತಾರೆ. ಇಲ್ಲಿಯ ಹಾಡುಗಳೆಲ್ಲ ಉತ್ತರ ಕರ್ನಾಟಕದವು. ಉತ್ತರ ಕರ್ನಾಟಕವು ದಕ್ಷಿಣ ಕರ್ನಾಟಕಕ್ಕಿಂತ, ಈ ಕಾಲದಲ್ಲಿ ಹೆಚ್ಚು ಬಡತನದಿಂದ ಕೂಡಿದ್ದರೂ, ಹೆಚ್ಚಿನ ಸಾಂಸ್ಕೃತಿಕ ಮಹತ್ವವನ್ನೂ ಪರಂಪರೆಯನ್ನೂ ಹೊಂದಿರುವ ಪ್ರದೇಶ. ಅಲ್ಲಿಯ ಬದುಕಿನ 'ಸಮೃದ್ಧಿ' ದಕ್ಷಿಣ ಕರ್ನಾಟಕದ ಲಿಲ್ಲವೆಂಬ ನನ್ನ ಭಾವನೆಯನ್ನು ಬೇರೊಂದು ಕಡೆ ಅವಕಾಶ ಸಿಕ್ಕಾಗ ಸ್ಪಷ್ಟ ಪಡಿಸಲಿದ್ದೇನೆ" (ಮುನ್ನುಡಿ, ಪು.೪). ಉತ್ತರ ಕರ್ನಾಟಕ ಮಹತ್ವದ ಸಾಂಸ್ಕೃತಿಕ ಪರಂಪರೆಯನ್ನು ಪಡೆದಿದೆ ಎಂಬ ಚಿದಾನಂದಮೂರ್ತಿ ಅವರ ಅಭಿಪ್ರಾಯ ಗಮನಿಸತಕ್ಕದ್ದಾಗಿದೆ. ಉತ್ತರ ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಹೋಳಿ ಹಾಡುಗಳ ಪಾತ್ರವೂ ಇದೆ ಎಂದಂತಾಯಿತು. ಚಿದಾನಂದ ಮೂರ್ತಿ ಅವರು ಕೊನೆಯಲ್ಲಿ : 'ಈ ಒಳ್ಳೆಯ ಉಪಯುಕ್ತ ಸಂಕಲವನ್ನು ಕನ್ನಡ ಓದುಗರು ಸ್ವಾಗತಿಸುತ್ತಾರೆ ಎಂದು ನಂಬಿದ್ದೇನೆ' ಎಂದಿದ್ದಾರೆ. ಎಲ್ಲ ಜೀವಿಗಳ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವಾಡುವುದೆ ಅವುಗಳ ವಂಶೋಭಿವೃದ್ಧಿಯ ಸಾಮರ್ಥ್ಯ. ಮನುಷ್ಯನ ಬದುಕಿನಲ್ಲೂ ಇದು ಅಷ್ಟೇ ಪ್ರಮುಖವಾದ ಪಾತ್ರವನ್ನು ಹೊಂದಿದೆ. ಆದರೆ ಮನುಷ್ಯ ಹೆಚ್ಚು ನಾಗರಿಕನಾಗುತ್ತ ಹೋದಂತೆ ಸಂಸ್ಕೃತಿಯ ಅಂಶವೊಂದು ಅವನ ಹಿಂದೆ ಬೆಳೆಯುತ್ತ ಹೋಯಿತು. ಅಲ್ಲಿಯ ಬೇಕು ಬೇಡಗಳ ನಿಯಂತ್ರಣಗಳನ್ನು ಮನುಷ್ಯ ತಾನೇ ಅನುಸರಿಸಿದ. ಹೀಗಾಗಿ ಲೈಂಗಿಕ ಸಾಮರ್ಥ್ಯ ಅತ್ಯಂತ ಮಹತ್ವದ್ದಾಗಿದ್ದರೂ ಅದನ್ನು ಪ್ರದರ್ಶನ ಮಾಡುವುದು ಹೆಚ್ಚು ಮರ್ಯಾದೆಗೆ ಒಳಗಾಗುತ್ತ ಬಂದಿತು. ಆ ಕುರಿತ ಭಾಷೆ, ಭಾವನೆಯ ಮಿತಿಗಳು ಬೆಳೆದು ನಿಂತವು. ಆದರೆ ಅದುಮಿ ಹಿಡಿಯುವ ಈ ಎಲ್ಲವನ್ನೂ ಕೆಲ ಅಂಶಗಳಲ್ಲಿಯಾದರು, ಅರ್ಥಾತ್ ಭಾಷೆಯಲ್ಲಿಯಾದರು ಹೊರಹಾಕಿ ಸಮಾಧಾನ ಪಟ್ಟುಕೊಳ್ಳಲು ಅದು ಹೇಗೋ ಹೋಳಿ ಹಬ್ಬವನ್ನು ಬಳಕೆಗೆ ತಂದ. ಹೀಗಾಗಿ ಇಲ್ಲಿ ಬಳಕೆಯಾಗುವ ಭಾಷೆ, ಸ್ವಲ್ಪ ಒರಟು ಎನ್ನಬಹುದಾದ ವರ್ತನೆಗಳು ಈ ಹಾಡುಗಳನ್ನು 'ಪೋಲಿ' ಅಭಿದಾನಕ್ಕೆ ಸಲ್ಲುವಂತಾಗಿವೆ.

ಡಾ. ಬಿ.ಬಿ.ಬಿರಾದಾರ ಅವರು ಒಳ್ಳೆಯ ಧೈರ್ಯ ಮಾಡಿದ್ದಾರೆ. ಅವರ ಆಯ್ಕೆಯೇ

ಹುಬ್ಬೇರಿಸುವಂತಿದೆ. 'ಬೆತ್ತಲೆ ಗಾದೆಗಳು' 'ಬೆತ್ತಲೆ ಹೋಳಿ ಹಾಡುಗಳು', 'ಶೃಂಗಾರ ಲಾವಣಿಗಳು'– ಇವೆಲ್ಲ ಮುಚ್ಚಿ ಓದುವಷ್ಟು ಬಿಚ್ಚು ಭಾಷೆಗಳಿಂದ ಕೂಡಿವೆ. ಒಬ್ಬರಾದರೂ ಇಂತಹ ಧೈರ್ಯ ಮಾಡಿದ್ದಾರಲ್ಲ ಎನಿಸುತ್ತದೆ. ಇದನ್ನು ಪೋಲಿ ಸಾಹಿತ್ಯವೆನ್ನಲಿ ಅಶ್ಲೀಲ ಸಾಹಿತ್ಯವೆನ್ನಲಿ, ಹೋಳಿಹಾಡುಗಳ ಮಜಾ ಗಂಡಸು ಹಾಡಿ ಪಡೆದರೆ, ಹೆಣ್ಣು ಕೇಳಿ ಪಡೆಯುತ್ತಾಳೆಂಬುದರಲ್ಲಿ ಎರಡು ಮಾತಿಲ್ಲ. ಹೋಳಿಹಬ್ಬದ ಎರಡು ದಿನ ಮಾತ್ರ ಇವುಗಳನ್ನು ಉಪಯೋಗಿಸಬೇಕೆಂಬ ಪ್ರಜ್ಞೆ ಹುಡುಗರಾದಿಯಾಗಿ ಎಲ್ಲರಲ್ಲೂ ಕಾಣುತ್ತದೆ. ಅಷ್ಟರಮಟ್ಟಿಗೆ ಇವುಗಳ ಪ್ರಯೋಗ ಒಂದು ಸಣ್ಣ ಅವಧಿಗೆ ಸೀಮಿತಗೊಂಡಿದೆ. ಮನುಷ್ಯ ಊಟದ ಜೊತೆಗೆ ನಂಜಿಕೊಳ್ಳುವ ಪದಾರ್ಥಗಳನ್ನು ಒಪಯೋಗಿಸುವಂತೆ, ವರ್ಷದ ಬದುಕೆಂಬ ಆಹಾರಕ್ಕೆ ಹೋಳಿ ಹುಣ್ಣಿಮೆಯ ಎರಡು ದಿನಗಳನ್ನು ನಂಜಿಕೊಳ್ಳುವ ಪದಾರ್ಥದಂತೆ ಬಳಸಿ ಸಂತೋಷ ಪಡುತ್ತಾನೆ.

ಬಿರಾದಾರ ಅವರು ಈ ಕೃತಿಗೆ ತಕ್ಕುದಾದ ಒಂದು ಮಹತ್ವದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹೋಳಿಹಬ್ಬದ ಹಿನ್ನಲೆಗೆ ಕಾರಣವಾದ, ಜನಪದ ಕವಿಯೊಬ್ಬ ಉಳಿಸಿಕೊಟ್ಟ ಲಾವಣಿ ಹಾಡಿನ ವಿಷಯವನ್ನು ಇಲ್ಲಿ ವಿವರಿಸಿದ್ದಾರೆ. ಹೋಳಿ ಹಾಡುಗಳಲ್ಲಿ ಮೊದಮೊದಲಿಗೆ ಅಶ್ಲೀಲ ನುಡಿಗಳು ಕಾಣಿಸಿಕೊಂಡರೂ ದೀರ್ಘಹಾಡುಗಳಲ್ಲಿ ಶೃಂಗಾರ ಮುಖ್ಯವಾಗಿ ಹಣಿಕಿಕ್ಕುತ್ತದೆ. ಹೋಳಿ ಹಾಡುವವರು, ಕೇಳುವವರು ಹೆಚ್ಚಾದಂತೆ ತಿಳಿಹಾಸ್ಯ, ವೀರರಸ ಪ್ರಧಾನವಾದ ಹಾಡುಗಳು, ನಂತರ ಭಕ್ತಿಪ್ರಧಾನ ಹಾಡುಗಳು ಇಲ್ಲಿ ಸೇರಿಕೊಂಡಿರಬೇಕು ಎನಿಸುತ್ತದೆ. ಈ ಮಾತನ್ನು ಹೋಳಿ ಹಾಡುಗಳನ್ನು ಸಂಪಾದಿಸಿದ ಬಹುತೇಕ ಸಂಪಾದಕರು ಹೇಳುತ್ತ ಬಂದಿದ್ದಾರೆ. ಅಂತಹ ಹಾಡುಗಳೂ ಈ ಸಂಗ್ರಹಗಳಲ್ಲಿ ನೋಡಲು ದೊರೆಯುತ್ತವೆ. "ಹೋಳೀಹಾಡು, ಗಾದೆ, ಒಗಟು, ಲಾವಣಿ, ಕಥೆ ಮುಂತಾದವುಗಳಲ್ಲಿ ಕಾಮವು ಹಾಸುಹೊಕ್ಕಾಗಿರುವುದರಿಂದ ಅವು ಉಗಮಿಸಿದ ಹಿನ್ನೆಲೆಯನ್ನು ಹಿಡಿದು, ಜಾನಪದ ಮಾನಸಿಕ ಅವಸ್ಥೆಗನುಗುಣವಾಗಿ ಸಂಸ್ಕೃತಿಯನ್ನು ಅಭ್ಯಾಸ ಮಾಡಲು ಅವಕಾಶವಿದೆ. ಆದ್ದರಿಂದ ಜನಮನದ ಅಧ್ಯಯನಕ್ಕೆ ಇಂಥ ಹಾಡುಗಳು ನೆರವಾಗದೇ ಇರವು" (ಪ್ರ.ಪು.೧೯) ಎಂಬ ಬಿ.ಬಿ.ಬಿರಾದಾರ ಅವರ ಮಾತು ಗಮನಿಸತಕ್ಕದ್ದಾಗಿದೆ.

ಈ ಕೃತಿಯಲ್ಲಿರುವ ಹಾಡುಗಳನ್ನು ಹೀಗೆ ವಿಭಾಗಿಸಿಕೊಂಡಿದ್ದಾರೆ: ೧. ಪದ್ಯವಿಭಾಗ, ೨. ಪದ ವಿಭಾಗ, ೩. ಲಾವಣಿರೂಪ ವಿಭಾಗ, ೪. ದುಂದುಮೆ ವಿಭಾಗ, ೫. ಸಂವಾದ ವಿಭಾಗ, ೬. ಚುಟುಕು ವಿಭಾಗ. ಕೊನೆಯಲ್ಲಿ ಕ್ಷೇತ್ರಕಾರ್ಯದ ವಿವರಗಳನ್ನೂ ಕೊಟ್ಟಿದ್ದಾರೆ. ಒಂದನೆಯ ಪದ್ಯ ವಿಭಾಗದಲ್ಲಿ ಕೇವಲ ತ್ರಿಪದಿಗಳನ್ನು ಕೊಟ್ಟಿದ್ದು, ಪದ ವಿಭಾಗದಲ್ಲಿ ದೀರ್ಘವಾದ ಹಾಡುಗಳನ್ನು ಕೊಟ್ಟಿದ್ದಾರೆ. ಬೆಳಗಾಂವ ಪ್ರದೇಶದಲ್ಲಿ ಹೋಳಿ ಸಂದರ್ಭದಲ್ಲಿ ಶೃಂಗಾರ ಲಾವಣಿಗಳನ್ನು ಹಾಡುತ್ತಾರೆಂಬ ಮಾಹಿತಿ ವಿಶೇಷವಾಗಿದೆ. ಅಂತಹ ಹಾಡುಗಳನ್ನೂ ಕೊಟ್ಟಿದ್ದಾರೆ.

ದುಂದುಮೆ ಹಾಡುಗಳನ್ನು ಹೋಳಿಸಂದರ್ಭದಲ್ಲಿ ಹಾಡುತ್ತಾರೆಂದು ಕೇಳಿಬರುತ್ತದೆ. ಬಿ.ಬಿ.ಬಿರಾದಾರ ಅವರು ದುಂದುಮೆ ಹಾಡುಗಳನ್ನು ಹೋಳಿ ಹಾಡುಗಳಲ್ಲಿ

ಸೇರಿಸಿಕೊಟ್ಟಿದ್ದಾರೆ. ಕಲಬುರಗಿ ಆಕಾಶವಾಣಿಯಿಂದ ಆಗಾಗ ಒಂದು ದುಂದುಮೆ ಕೇಳಿಬರುತ್ತಿತ್ತು. ಅದು ಸುರಪುರ ದೊರೆ ರಾಜಾ ವೆಂಕಟಪ್ಪನಾಯಕನ ದುಂದುಮೆ. ಇದು ವೀರರಸ ಪ್ರಧಾನವಾದ ಹಾಡು. ಇದನ್ನು ಹೋಳಿ ಹುಣ್ಣಿವೆಯಲ್ಲಿ ಹಾಡುತ್ತಾರೆಂದು ಆಕಾಶವಾಣಿಯಲ್ಲಿ ವಿವರಿಸುತ್ತಿದ್ದರು. ಸುರಪುರ ನಗರದಲ್ಲಿ ಹೋಳಿಹುಣ್ಣಿಮೆಯಂದು ಈಗಲೂ ಈ ದುಂದುಮೆ ಹಾಡುತ್ತಾರೆಂದು ತಿಳಿದುಬರುತ್ತದೆ. ಹೋಳಿ ಹುಣ್ಣಿಮೆಯ ದಿನ ಮತ್ತು ಮರುದಿನ ಧುಳಂಡಿ(ಕರಿ) ದಿನ ಎರಡೂ ದಿನ ಈ ದುಂದುಮೆಯನ್ನು ಹಾಡುತ್ತಾರೆ. ಮತ್ತು ಈ ಹಾಡನ್ನು ಕೇಳಲು ಸುರಪುರದ ಹೆಣ್ಣು-ಗಂಡುಗಳು ಕಿಕ್ಕಿರಿದು ನೆರೆದಿರುತ್ತಾರೆಂದು ತಿಳಿದುಬರುತ್ತದೆ. ಈ ಹಾಡನ್ನು ಅತ್ಯಂತ ರೋಚಕವಾಗಿ ಹಾಡುತ್ತ ಬಂದ ಕಲಾವಿದರ ತಂಡವೇ ಸುರಪುರದಲ್ಲಿದೆಯಂತೆ. ದಿ. ಪಾರಪ್ಪ ಗುತ್ತೇದಾರ, ಹಾಗೂ ಗುತ್ತೇದಾರ ಮನೆತನದ ಶ್ರೀ ಬಿ.ಲಿಂಗಣ್ಣ, ಲಕ್ಷ್ಮಣ, ಬಿ. ತಿಮ್ಮಣ್ಣ, ದೊಡ್ಡನಿಂಗಪ್ಪ, ಎಂ.ರಾಮಚಂದ್ರಪ್ಪ ಇವರು ಈ ದುಂದುಮೆಯನ್ನು ಹಾಡುತ್ತ ಬಂದಿದ್ದಾರೆ.

ಹೇ ದುಂದುಮೆ ಎಂದೆಂದು ಪಾಡಿರಿ ಜಾಣರೆ
ದುಂದುಮೆ ಬಸವಂತನ ಹಬ್ಬ ।ಪ।

ಕೇಮಲಸಾಹೇಬ ಸುರಪುರಕ ಬಂದು
ಬಾವಾನ ಭಾವೀಯ ಸ್ಥಳದಲ್ಲಿ ಇಳಿದು
ಬುದ್ಧಿವಂತರನೆಲ್ಲ ಬಳಿಯಲ್ಲಿ ಕರೆದು
ನಾನಾ ತರದ ವಿದ್ಯಾ ಮಾಡಿದರು ಪಂದು ।೧।

ತಲೆಯ ಟೊಪ್ಪಿಗೆ ಎರಡು ಕೈಯಲ್ಲಿ ಹಿಡಿದು
ದೊರೆ ಬಹರಿ ಬಹದ್ದೂರಿಗೆ ಎದುರಾಗಿ ನಡೆದು
ಮುಂದಿಟ್ಟು ಪುರ್ನಿಯ ಸಲಾಮು ಹೊಡೆದು
ದೊರೆ ನೋಡಿ ದಾಳಿ ಬಂತೆಂದು ನುಡಿದು ।೨೦।

ಭರದಿಂದ ಕರತಂತು ಇದು ಮಾಘಮಾಸ
ಭರದಿಂದ ಒದಗೀತು ಫಾಲ್ಗುಣ ಮಾಸ
ಒರೆದಂಥ ಪದಗಳು ಮನಕೆ ಉಲ್ಲಾಸ
ಧರೆಯೊಳು ವಾಗಣಗೇರಿ ಗೋಪಾಲದಾಸ ।೫೭।

(ಸಗರನಾಡ ದರ್ಶನ, ಪು.೨೬೫-೨೭೬)

ಇದನ್ನು ಗಮನಿಸಿದರೆ ವೀರರಸ ಪ್ರಧಾನವಾದ ದುಂದುಮೆ ಹಾಡುಗಳನ್ನು ಹೋಳಿಯಲ್ಲೂ ಹಾಡುವ ಪದ್ಧತಿ ಇತ್ತೆಂದು ತೋರುತ್ತದೆ. ಆದರೆ ಬಿ.ಬಿ.ಬಿರಾದಾರ ಅವರು ದಿಟ್ಟನಾರಿ, ಹುಬ್ಬಳ್ಳಿ ಸೂಳಿಗೇರೆ, ಜಾಣ ಗಾಣಗಿತ್ತಿ, ಅತ್ತಿ-ಅಳಿಯರ ಲಕ್ಷಣ, ಗವಳಗಿತ್ತಿ ಎಂಬ ಐದು ದುಂದುಮೆಗಳನ್ನು ಕೊಟ್ಟಿದ್ದು, ಅವೆಲ್ಲ ಶೃಂಗಾರ ರಸ ಪ್ರಧಾನವಾದ ದುಂದುಮೆಗಳಾಗಿವೆ.

೧. ದಿಟ್ಟ ನಾರಿ

ಹೊಸ್ತಾಗಿ ಹೋಳಿಯ ಪದದೊಳಗೆ ಪೇಳುವೆ
ವಿಸ್ತಾರ ಕೇಳಿರಿ ಸರ್ವರು ।ಮಾ
ವಸ್ತಾದ ಒನಪಿಲಿ ವನುತೆಯೋರ್ವಳು ಪ್ಯಾಟಿ
ರಸ್ತೆಯೊಳಗೆ ಬರುತಿರಲಾಗಿ ಮತ್ತೆ ।೪।

ಕಸ್ತೂರಿ ಗಂಧಿಯು ಕೈಕಾಲು ಕುಣಿಸುತ
ಸೂಸ್ತ್ರಗೊಂಬಿಗೆ ಮತ್ತೆ ಮಿಗಿಲಾಗಿ।ಮಾ
ಹಸ್ತಿಗಾಮಿನಿ ಘಾಟ ನೋಡಲು ತೇರಿನ
ಸಿಸ್ತಿಗಿಮ್ಮಡಿಯಾಗಿ ಕಾಣುಸತಿತ್ತು ।೫।

೨. ಹುಬ್ಬಳ್ಳಿ ಸೂಳಿಗೇರಿ :

ಕನ್ನೆಯ ಸುಗುಣ ಸಂಪನ್ನೆಯ ಕುಡಿನೋಟ
ಸನ್ನೆಯಿಂ ವಿಟರನ್ನ ಕರೆಯುತಲಿ । ರತ್ನ
ಗನ್ನಡಿಯೊಳು ಮುಖದೋರುತಲಿ।ಚೆಲ್ವ
ಪನ್ನಗವೇಣಿಯ ನಿಮಿರ್ಚುತಲಿ ।ಸುಖ
ಸನ್ಮೋಹದಿಂದಲಿ ವಿಟನ ಮುರುಳ್ಮಾಡೆ
ಮನ್ಮಥನಾಟಕ್ಕೆ ಮರುಳುದಿಂದಿಹರು।

೩. ಜಾಣ ಗಾಣಗಿತ್ತಿ :

ದುಂದುಮೆನ್ನಿಡುಮಿ ಸಾಲಿಗನ್ನಿ ದುಂದುಮೆ ।

ಜಾಣ ಗಾಣಗಿತ್ತಿ ಮನಿಯ ಕಷ್ಟವ ಬಿಟ್ಟು
ಕಾಣುತ ಗಂಡು ಜಾತಿಯ ಬೇಗನೆ
ಪ್ರಾಣವನೊಪ್ಪಿಸಿ ಮನಿಯ ಬಾಗಿಲ ಮುಂದೆ
ಗೋಣನಲ್ಲಾಡುತ ನಿಂತು ನೋಡಿದಳು ।೧।

೪. ಅತ್ತಿ ಅಳಿಯನ ಲಕ್ಷಣ :

ಮಗಳ ನಿನ್ನ ಗಂಡ ಸೊಗಸು ಉಳ್ಳವನಲ್ಲ
ನಗಿಗೇಡ ಮಾಡಿದ ನನ್ನನ್ನೆಂದು
ತಗೆದು ಮಂಚ ಹಾಕಿ ಕೊಟ್ಟು ಬುದ್ಧಿ ಹೇಳಿ
ಮಗಳ ಕಳವಿದಳು ಅಳಿಯನ ಬಳಿಗೆ ।೩

೫. ಗವಳಗಿತ್ತಿ :

ಸೋಗೆಗಣ್ಣಿನ ಗವಳಗಿತ್ತಿ ಮನಿಯಲಿಂದ
ಸಾಗಿ ಹಾಲ ಮೊಸರ ಬುಟ್ಟಿ ಹೊತ್ತು
ಬಾಗುತ ಕುಚಗಳೆರಡು ಕುಣಿಸುತ ।ಲಗು
ಬ್ಯಾಗದಿ ಬಾಜಾರದೊಳು ಬರುತಿಹಳು ।೨।

ಐದನೆಯ ಭಾಗದ ಸಂವಾದ ರೂಪದ ಹಾಡುಗಳು ಸ್ವಾರಸ್ಯಕರವಾಗಿವೆ. ಒಬ್ಬರು ಹೆಣ್ಣಿನ ಪಕ್ಷ ವಹಿಸಿದರೆ, ಇನ್ನೊಬ್ಬರು ಗಂಡಿನ ಪಕ್ಷವಹಿಸಿ ಸಂವಾದದಲ್ಲಿ ಭಾಗವಹಿಸುತ್ತಾರೆ.

ಹೆಣ್ಣು : ಕಾಮಕಸ್ತೂರಿಯ ಹೂವ ಭೀಮ ಹುಡುಕಿದರೆಂಗ
ರಾಮ ಸಾಲ್ಯಾಗ ಪಗಡಿಯs
ರಾಮ ಸಾಲ್ಯಾಗ ಪಗಡಿಯs । ಆಡೂದ ಕಂಡು
ಮತ್ತೊಮ್ಮಿ ನೀರ ತರಲಿಲ್ಲs

ಗಂಡು : ಗುಂಗುರಗೂದಲ ಹೆಣ್ಣ ಹೆಂಗಾರ ಹೊರಳ್ಯಾವ
ಜಂಬಿ ಬಾವಿ ಒಳಗ ಜಳಕವs
ಜಂಬಿ ಬಾವಿ ಒಳಗ ಜಳಕವ । ಮಾಡುದ ಕಂಡು
ಇನ್ನೊಮ್ಮಿ ನಾ ನೀರ ತರಲಿಲ್ಲs

ಕೊನೆಯ ಆರನೆಯ ವಿಭಾಗದ ಚುಟುಕುಗಳು ನಿಜವಾಗಿಯೂ ಚುರುಕಾಗಿವೆ. ಅಶ್ಲೀಲದ ಹದ್ದನ್ನೂ ಹರಿದು ಹಾಕುತ್ತವೆ. ಹುಡುಗರು ರಾತ್ರಿ ಕುಳ್ಳು ಕಟ್ಟಿಗೆ ಕದಿಯಲು ಹೋಗುವಾಗ, ಯಾರು ಹಾಡುತ್ತಿದ್ದಾರೆಂದು ಹಿರಿಯರಿಗೆ ಗೊತ್ತಾಗದ ಸ್ಥಿತಿಯಲ್ಲಿ ಈ ಚುಟುಕುಗಳನ್ನು ಹಾರಿಸುತ್ತಾರೆ. ಆದರೆ ಧಾಟಿಗಳು ಕಿವಿಗೆ ಇಂಪಾಗಿರುತ್ತವೆ. ಎರಡು, ಮೂರು, ಬಹಳವೆಂದರೆ ನಾಲ್ಕು ಸಾಲಿನ ಚುಟುಕುಗಳನ್ನು ರಾಗವಾಗಿ ಅಂದು, ಜೊತೆಗೆ ಗೊಬ್ಬೆಯ ರಾಗ ಬೆಳೆಸಲಾಗುತ್ತದೆ.

ಕಾಮಣ್ಣನ ಮಕ್ಕಳು
ಕಳ್ಳಸೂಳಿ ಮಕ್ಕಳು । (ಗೊಬ್ಬಿ ಹೊಡೆಯುವರು)
ಹಾದಿ ಮ್ಯಾಲ ಹೆಂಡಿ
ಅಕಿ ನನ್ನ ರಂಡಿ । (ಗೊಬ್ಬಿ ಹೊಡೆಯುವರು)

ಹೋಳಿಯ ನಿಜವಾದ ಮಜಾ ಇರುವುದೇ ಈ ಚುಟುಕುಗಳನ್ನು ಅಂದು ಗೊಬ್ಬಿ ಹೊಡೆಯುವಲ್ಲಿ, ಕೇಳಿ ಮಜಾ ಪಡೆಯುವಲ್ಲಿ.

ಕೊನೆಯಲ್ಲಿ ೧೭ ಪುಟಗಳಷ್ಟು ಸುದೀರ್ಘವಾದ ಅರ್ಥಕೋಶವನ್ನು ಕೊಟ್ಟಿದ್ದಾರೆ. ಹಾಡುಗಳಲ್ಲಿ ಬರುವ ಊರುಗಳನ್ನು ಹಿಡಿದು ಹೊರತೆಗೆದು ಪಟ್ಟಿಕೊಟ್ಟಿದ್ದಾರೆ. ಈ ಹಾಡುಗಳನ್ನು ಎಷ್ಟು ಮಜಾ ಪಡೆಯಲು ಸಾಧ್ಯವೋ ಡಾ. ಬಿ.ಬಿ.ಬಿರಾದಾರ ಅವರು ಯಾವುದೇ ಕಸರು ಬಿಡದಂತೆ ಆನಂದ ಪಡೆದಿದ್ದಾರೆನಿಸುತ್ತದೆ. ಓದಿ ಎಲ್ಲರೂ ಆನಂದ ಪಡೆಯಬಹುದು.

ಡಾ। ಎಂ. ಜಿ. ಬಿರಾದಾರ ಅವರು ತಾವು ಬಹುದಿನಗಳಿಂದ ಸಂಗ್ರಹಿಸಿಟ್ಟಿದ್ದ ಹೋಳಿಹಾಡುಗಳ ಸಂಗ್ರಹ **'ಹೋಳಿಯ ಹಾಡುಗಳು'** (೨೦೦೦) ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಇದು ಡಾ. ಸುಂಕಾಪೂರ ಹಾಗೂ ಡಾ। ಬಿ. ಬಿ. ಬಿರಾದರ ಅವರ ಕೃತಿಗಿಂತ ಬೃಹತ್ತಾದ ಕೃತಿ. ವೈವಿಧ್ಯಮಯವಾದ ಹಾಡುಗಳ ಸಂಗ್ರಹ. ಡಾ। ಎಂ. ಜಿ.

ಬಿರಾದಾರ ಅವರು ೧೯೭೩ ರಿಂದಲೇ ಹೋಳಿಹಾಡುಗಳ ಬಗ್ಗೆ ಬರೆಯುತ್ತ ಬಂದವರು. ೧೯೮೦ ರಲ್ಲಿ ಒಂದು ಪ್ರತ್ಯೇಕ ಲೇಖನವನ್ನೇ ಬರೆದಿದ್ದಾರೆ. ಹೀಗೆ ಲೇಖನ ಬರೆಯಲು ಮೂಲ ಕಾರಣವೆಂದರೆ, ೧೯೭೩ ರಲ್ಲಿ ಅವರು ಕಲಬುರಗಿಯಲ್ಲಿ ಸಂಗ್ರಹಿಸಿದ ಒಂದು ಹಾಡು ಹೋಳಿಹಬ್ಬದ ಹಿನ್ನೆಲೆಯನ್ನು ವಿವರಿಸಿರುವುದರಿಂದ. ಕಾಮ ಮತ್ತು ರತಿಯರು ಭೂಮಿಯ ಮೇಲೆ ಜನ್ಮ ತಾಳುತ್ತಾರೆ. ಕಾಮನು ಒಬ್ಬ ಬ್ರಾಹ್ಮಣನ ಮಗನಾಗಿ ಹುಟ್ಟಿದರೆ, ರತಿ ಹೊಲೆಯರ ಓಣಿಯ ಒಬ್ಬನಲ್ಲಿ ಹೋಳಿಯಾಗಿ ಹುಟ್ಟುತ್ತಾಳೆ. ಮುಂದೆ ಇವರಿಬ್ಬರೂ ವಯಸ್ಸಿಗೆ ಬಂದು, ಪ್ರೀತಿಸಿದಾಗ, ಸಮಾಜದಿಂದ ಬಹಿಷ್ಕರಣಕ್ಕೆ ಒಳಗಾಗಿ, ಕಾಮ ಸತ್ತಾಗ ಹೊಲಗೇರಿಯ ಹೋಳಿಯ ಮನೆಯಿಂದಲೇ ಬೆಂಕಿಯನ್ನೂ ಹೋಳಿಯನ್ನೂ ಹಿಡಿತಂದು ಕಾಮನ ಕಿಚ್ಚಿನಲ್ಲಿ ಹಾಕಿ ಸುಡುತ್ತಾರೆ. ಈ ಕಥೆಯೇ ಹೋಳಿಗೆ ಮೂಲವೆಂದು ಜನಪದರಲ್ಲಿ ಪ್ರಚಾರದಲ್ಲಿರುವುದನ್ನು ಬನಹಟ್ಟಿಯ ಕವಿಯೊಬ್ಬ ಹಾಡುಮಾಡಿದ್ದ. ಡಾ. ಬಿರಾದಾರ ಅವರು ಇದನ್ನು ಬಳಿಸಿಕೊಂಡು ಮೊದಲೇ ಒಂದು ಲೇಖನವನ್ನು ಬರೆದಿದ್ದರು. ಮುಂದೆ ೨೦೦೦ನೇ ವರ್ಷದಲ್ಲಿ ಪ್ರಸ್ತುತ **'ಹೋಳಿಯ ಹಾಡುಗಳು'** ಪ್ರಕಟವಾಗುವಾಗ ಮತ್ತೆ ಈ ಕಥೆಯನ್ನು ಬಳಸಿಕೊಂಡು ಸುದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹೀಗಾಗಿ ಹೋಳಿಹಾಡುಗಳ ಬಗ್ಗೆ ದೊಡ್ಡ ಸಂಗ್ರಹವನ್ನು ಪ್ರಕಟಿಸಿದವರು ಮಾತ್ರವಲ್ಲ, ಹೋಳಿ ಹಾಡುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದವರೂ ಡಾ. ಎಂ.ಜಿ.ಬಿರಾದರ ಆಗಿದ್ದಾರೆ.

ದುಂದುಮೆ ಮತ್ತು ಹಾಡುಗಳು ಎಂಬ ಹೆಸರಿನಲ್ಲಿ ಹೋಳಿಹಾಡುಗಳು ಸೃಷ್ಟಿಯಾಗಿರುವುದನ್ನು ಡಾ. ಸುಂಕಾಪೂರ ಹಾಗೂ ಡಾ। ಎಂ.ಜಿ.ಬಿ. ಅವರು ಗಮನಿಸಿದ್ದಾರೆ. ಅದಕ್ಕಾಗಿ ಅವೆರೆಡೂ ಭಿನ್ನ ಪ್ರಕಾರ ಎಂಬುದನ್ನು ಹೇಳುತ್ತಾರೆ. ಖಂಡಿತವಾಗಿ ದುಂದುಮೆ ಪ್ರಕಾರ ವೀರರಸ ಪ್ರಧಾನವಾದ ಹಾಡಿನ ಪ್ರಕಾರ. ಅದನ್ನು ಅರಮನೆಗಳಲ್ಲಿ ಅಷ್ಟೇ ಅಲ್ಲ, ಸೈನಿಕರನ್ನು ಹುರಿದುಂಬಿಸಲೂ ಹಾಡುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಯಾವುದೇ ಒಂದು ಗ್ರಾಮ ಅಥವಾ ಒಂದು ಪ್ರದೇಶದಲ್ಲಿ ಒಂದು ಪ್ರಕಾರದ ಹಾಡುಗಳನ್ನು ಹಾಡುವ ಕಲಾವಿದರಿದ್ದರೆ, ಆ ಗ್ರಾಮದಲ್ಲಿ ನಡೆಯುವ ಇತರ ಹಬ್ಬಹುಣ್ಣಿವೆ, ಉತ್ಸವಗಳಲ್ಲಿ ಅನಿವಾರ್ಯವಾಗಿ ಅವರೇ ಜನರನ್ನು ರಂಜಿಸಲು ಮುಂದೆ ಬರಬೇಕಾಗುತ್ತದೆ. ಆಗ ಆ ಕಲಾವಿದರು ತಮಗೆ ತಿಳಿದಿರುವ, ತಾವು ಪಳಗಿರುವ ಕಲೆಯ ಮೂಲಕವೇ ಆಯಾ ಸಂದರ್ಭಕ್ಕೆ ಸ್ಪಂಧಿಸುವುದು ಸಹಜವೆನಿಸುತ್ತದೆ. ಹೀಗಾಗಿ ದುಂದುಮೆ ಹಾಡುಗಾರರು ಹೋಳಿ ಹಾಡುಗಳನ್ನು ರಚಿಸಬೇಕಾಗಿ, ಹಾಡಬೇಕಾಗಿ ಬಂದಾಗ ಸಹಜವಾಗಿಯೇ ತಮಗೆ ಬಾರಿಸಲು ಬರುವ ದುಂದುಮೆಯನ್ನು, ತಮಗೆ ಹಾಡಲು ಬರುವ ದುಂದುಮೆ ಹಾಡನ್ನು ಒಂದೊಂದು ಸಲ ಹೋಳಿ ಸಂದರ್ಭಕ್ಕೆ ತಕ್ಕ ವಸ್ತುವನ್ನು ಇಟ್ಟುಕೊಂಡು ಹಾಡನ್ನು ರಚಿಸಿ ಹಾಡಿದ್ದು, ಜನರ ಬೇಡಿಕೆಯ ಮೇರೆಗೆ ತಮ್ಮೂರಿನ ಹಬ್ಬ ತುಂಬಿಬರಲು ಪ್ರತಿವರ್ಷ ಪ್ರತಿಸಲ ದುಂದುಮೆ ಹಾಡುಗಾರನೇ ಹಾಡುವುದು ರೂಢಿಯಾಗಿ ಬಿಡುತ್ತದೆ. ಹೀಗಾಗಿ ದುಂದುಮೆ ಬೇರೆ ಸಂದರ್ಭಕ್ಕೆ ಹೊಂದಿಕೊಂಡೂ ಬಳಕೆಯಾಗಲು ತೊಡಗುತ್ತದೆ. ವೀರರಸ ಪ್ರಧಾನವಾದ ಗೀಗೀ ಹಾಡುಗಳನ್ನು ಹಾಡುವಾಗಲೂ ಇವುಗಳ ಮೂಲ

ದುಂದುಮಿಯೇ ಇರಬೇಕೆನಿಸುತ್ತದೆ. ಒಂದು ಕಡೆ ಹೋಳಿಯಲ್ಲಿ, ಇನ್ನೊಂದು ಕಡೆ ಗೀಗೀ ಹಾಡುಗಳಲ್ಲಿ ಅದೇ ಡಪ್ಪು ಹಿಡಿದು ಹಾಡಲು ಹೋಗಿಯೇ ದುಂದುಮೆ ಪ್ರಭಾವ ಎರಡೂ ಕಡೆ ಕಾಣಿಸುತ್ತದೆ. ಹೀಗಾಗಿ ಲಾವಣಿಗಳ ಮೂಲವನ್ನು ಹುಡುಕುವಾಗ ದುಂದೆಮೆ ಅಲ್ಲಿ ಕಾಣಿಸಿಕೊಳ್ಳುತ್ತದೆ.

'ದುಮ್ಮಸಾಲೆ ಲೌಡಿ ದುಮ್ಮ ಹೋ ಹೋ ಹೋ' ಎಂದು ಬೊಬ್ಬೆ ಹೊಡೆಯುವ ಹುಡುಗರ ಬಾಯಿಂದ ಬರುವ 'ದುಮ್ಮಸಾಲೆ'ಯ ಪ್ರಯೋಗವೇ 'ದಿಮ್ಮಿಸಾಲೆ' ಇರಬೇಕು. ಕಲಬುರಗಿ ಭಾಗದಲ್ಲಿ ಹಾಡು ಹಾಡಿ 'ದುಮ್ಮಾಲಗೋ' ಎಂದೆ ಹೊಯ್ಕೊಳ್ಳುವುದು ರೂಢಿಯಾಗಿದೆ. ದುಂದುಮೆಗು 'ದುಮ್ಮಾಲಗೋ' ಪದಕ್ಕೂ ಸಂಬಂಧ ಇರುವಂತೆ ಕಾಣುವುದಿಲ್ಲ. ಆದರೆ ಎಂ.ಜಿ.ಬಿ ಅವರು –

"ದುಂದುಮೆಯೆಂದಂದು ಪಾಡಿರಿ ಜಾಣಾ
ದುಂದುಮೆ ಬಸವಂತನ ಹಬ್ಬ। ದುಂದುಮೆ

ಎನ್ನುವ ಬೆಳಗಾಂವ, ಧಾರವಾಡ ಜಿಲ್ಲೆಗಳಲ್ಲಿ ಹಾಡುವ ಪಲ್ಲ ಬಳ್ಳಾರಿ, ಕಲಬುರಗಿ ಜಿಲ್ಲೆಗಳಲ್ಲಿ 'ದಿಮ್ಮಿ ಸಾಲೆನ್ನಿರೋ ನಮ್ಮವರೆಲ್ಲ ದಿಮ್ಮಿಸಾಲೆನ್ನಿರೋ' ಎಂದು ಹೇಗೆ, ಯಾಕೆ ಪರಿವರ್ತನೆಯಾಯಿತೋ? 'ದಿಮ್ಮಿ ಸಾಲೆನ್ನುವ ಪಲ್ಲವಿಯ ಹಾಡುಗಳೇ ಕಾಲಜ್ಞಾನ, ದಾಸರ ಹಾಡುಗಳಲ್ಲಿವೆ. ದುಂದುಮೆ ಪಲ್ಲವಿಯವು ಇಲ್ಲ" ಎಂಬುದು ಎಂ.ಜಿ.ಬಿ. ಅವರ ಸಂಶಯ.

ಕ್ರೌನ್ ೧/೮ ಅಳತೆಯ ೩೫೨ ಪುಟಗಳ ದೊಡ್ಡ ಸಂಗ್ರಹ ಎಂ.ಜಿ.ಬಿ. ಅವರ 'ಹೋಳಿಯ ಹಾಡುಗಳು'. ಇದರಲ್ಲಿ ೭೦ ದೀರ್ಘವಾದ ಹಾಡುಗಳು, ೩೧೦ ತ್ರಿಪದಿಗಳಿವೆ. ಕಲಬುರಗಿ ಜಿಲ್ಲೆಯಲ್ಲಿ ಈ ತ್ರಿಪದಿಗಳೇ ಹೆಚ್ಚಾಗಿ ಪ್ರಚಾರದಲ್ಲಿವೆ. ದೀರ್ಘ ಹಾಡುಗಳನ್ನು ಕಲಬುರಗಿ ಭಾಗದಲ್ಲಿ ಹಾಡುವುದನ್ನು ಕೇಳಿದ ಅನುಭವವಿಲ್ಲ. ಈ ಹಾಡುಗಳನ್ನು ಹಾಡುವ ಸಂದರ್ಭಗಳನ್ನು ಯಾವ ಸಂಪಾದಕರೂ ವಿವರಿಸಿಲ್ಲ. ಪಾರತಂತ್ರ್ಯದ ಕಾಲಕ್ಕೆ ಕೆಲವು ಅರಸು ಮನೆತನಗಳಲ್ಲಿ, ದೇಸಾಯಿ, ದೇಶಮುಖ, ದೊಡ್ಡ ಗೌಡರ ಮನೆಯ ವಿಶಾಲವಾದ ಅಂಗಳದಲ್ಲಿ ಹೋಳಿಹಾಡುಗಳನ್ನು ಹಾಡುವ ಪದ್ಧತಿ ಇತ್ತು ಎಂದು ತಿಳಿದುಬರುತ್ತದೆ. ಅವರೆಲ್ಲ ವೀರರಸ ಪ್ರಧಾನವಾದ ದುಂದುಮೆ ಹಾಡುಗಳನ್ನು ಹಾಡಿಸಿರಬಹುದು, ಅಶ್ಲೀಲವಾದ ಹಾಡುಗಳನ್ನು ಹಾಡಿಸಿರಲು ಸಾಧ್ಯವಿಲ್ಲ. ಹೀಗಾಗಿಯೇ ವೀರರಸ ಪ್ರಧಾನವಾದ ದುಂದುಮೆ ಹಾಡುಗಳನ್ನು ಹೋಳಿಸಂದರ್ಭದ ಸಂಭ್ರಮದಲ್ಲಿ ಹಾಡುವ ರೂಢಿ ಬಂದಿರಬೇಕು. ಹೀಗಾಗಿ ಈ ದೀರ್ಘಹಾಡುಗಳು–ದುಂದುಮೆಗಳು, ಗೀಗೀಹಾಡುಗಳು, ಭಾವಗೀತೆಗಳು ಇವೆಲ್ಲ ನಂತರ ಹೋಳಿ ಸಂದರ್ಭಗಳಲ್ಲಿ ಸೇರಿಕೊಂಡಿರಬೇಕೆನಿಸುತ್ತದೆ. ಹೋಳಿಯಲ್ಲಿ ಏನಿದ್ದರೂ ತ್ರಿಪದಿ ಮತ್ತು ಚುಟುಕುಗಳದೇ ಕಾರುಭಾರು. ದುಂದುಮೆ, ಲಾವಣಿ ಮುಂತಾದ ಹಾಡುಗಾರರಿಗೆ ಹೋಳಿ ಸಂದರ್ಭದಲ್ಲಿ ಹಾಡುವುದು ಅನಿವಾರ್ಯವಾದಾಗ, ಹಾಡುವ ಧಾಟಿ, ಛಂದಸ್ಸು ಎಲ್ಲವನ್ನೂ ಉಳಿಸಿಕೊಂಡು, ಅಶ್ಲೀಲ ಕಥಾಸಂಗತಿಗಳನ್ನು ತುಂಬಿ ಹಾಡಲು ತೊಡಗಿದ ಕಾರಣವಾಗಿ ಹೋಳಿ

ಹಾಡುಗಳಲ್ಲಿ ಅಷ್ಟೊಂದು ವೈವಿಧ್ಯಮಯವಾದ ಹಾಡುಗಳು ದೊರೆಯುತ್ತಿರಬಹುದು ಎನಿಸುತ್ತದೆ.

* * *

ಹೋಳಿ ಹಾಡುಗಳ ಪ್ರಮುಖ ಸಂಗ್ರಹಗಳು :

೧೯೭೪ : ಜೀವನ ಜೋಕಾಲಿ-೪, ಹೋಳೀ ಹಾಡುಗಳು, ಡಾ. ಎಂ.ಎಸ್.ಸುಂಕಾಪುರ, ಕರ್ನಾಟಕ ವಿಶ್ವದ್ಯಾಲಯ, ಧಾರವಾಡ.

೧೯೮೩ : ಬೆತ್ತಲೆ ಹೋಳೀ ಹಾಡುಗಳು, (ಸಂ) ಡಾ. ಬಿ.ಬಿ.ಬಿರಾದಾರ, -ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.

೨೦೦೦ : ಹೋಳಿಯ ಹಾಡುಗಳು, (ಸಂ) ಡಾ. ಎಂ.ಜಿ.ಬಿರಾದಾರ, -ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು.

ಸಹಾಯಕ ಗ್ರಂಥಗಳು :

೧೯೩೫ : ಕರ್ನಾಟಕ ಸಂಸ್ಕೃತಿ, ದೇವುಡು, -ಶಾರದಾ ಪ್ರಕಾಸನ, ಬೆಂಗಳೂರು, (೩ನೇ ಮು. ೧೯೮೮).

೧೯೬೩ : ಕನ್ನಡ ಜಾನಪದ ಗೀತಗಳು, ಡಾ. ಬಿ.ಎಸ್.ಗದ್ದಗಿಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೮೫ : ಸಗರನಾಡ ದರ್ಶನ, -ಮಹಾಕವಿ ಲಕ್ಷ್ಮೀಶ ವಾಚನ ಸಂಘ, ಸುರಪುರ, ಜಿ. ಕಲಬುರಗಿ.

೨೦೦೮ : ಬೆಳೆ-೧, ಡಾ. ಎಂ.ಜಿ.ಬಿರಾದಾರ, -ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.

* * *

೨. ಸೀಗಿ-ಗೌರಿ ಹಾಡುಗಳು

ಅಶ್ವಿನ ಶುದ್ಧ ಹುಣ್ಣಿಮೆಯನ್ನು ಸೀಗೆ ಹುಣ್ಣಿವೆ ಎಂದು ಕರೆಯುವ ರೂಢಿ ಇದೆ. ಈ ಹಬ್ಬದ ಬಗ್ಗೆ, ಇಲ್ಲಿ ಹಾಡುವ ಹಾಡುಗಳ ಬಗ್ಗೆ ಮೊದಲನೆಯದಾಗಿ ದಾಖಲಿಸುವ ಡಾ. ಬಿ.ಎಸ್. ಗದ್ದಗಿಮಠ ಅವರು ತಮ್ಮ ಪಿಎಚ್.ಡಿ. ಪ್ರಬಂಧ **'ಕನ್ನಡ ಜಾನಪದ ಗೀತಗಳು'** (೧೮೬೩) ಕೃತಿಯಲ್ಲಿ ಇದನ್ನು ಒಂದು ಮಣ್ಣಪೂಜೆಯ ಪದ್ಧತಿ ಎಂದಿದ್ದಾರೆ. ಆದರೆ ಸೀಗೆ ಪೂಜೆಗೆ ಸಂಬಂಧಿಸಿದ ಒಂದು ಹಾಡನ್ನೂ ಕೂಡ ಅವರು ಉಲ್ಲೇಖಿಸದಿರುವುದು ಒಂದು ಆಶ್ಚರ್ಯದ ಸಂಗತಿಯೇ. ಏಕೆಂದರೆ ಅವರು ಯಾವುದೇ ವಿಷಯದ ಬಗ್ಗೆ ಬರೆಯಲಿ, ಅಲ್ಲಿ ಖಂಡಿತವಾಗಿ ಹಾಡುಗಳನ್ನು ಉಲ್ಲೇಖಿಸುತ್ತಾರೆ.

ಸೀಗೆ ಹುಣ್ಣಿವೆ ಬರುವುದು ದಸರೆ ಹಬ್ಬ ಮುಗಿದ ನಂತರ ಬರುವ ಹುಣ್ಣಿವೆಗೆ. ಆಗ ಮುಂಗಾರು ಬೆಳೆಗಳು ಹೊಲದಲ್ಲಿ ಬೆಳೆದು ನಿಂತಿರುತ್ತವೆ. ತನ್ನ ಮನೆ ತುಂಬಲು ತಯಾರಾಗಿ ನಿಂತ ಬೆಳೆಗೆ, ಆ ಬೆಳೆಯನ್ನು ಕೊಡುತ್ತಿರುವ ಭೂಮಿತಾಯಿಗೆ ಅಂದು ಚರಗ ಚೆಲ್ಲುವ ಕಾರ್ಯಕ್ರಮವೂ ಕೆಲವು ಕಡೆ ನಡೆಯುತ್ತದೆ.

ಶೀಗಿ ಹುಣ್ಣಿ ಬಂದಿತವ್ವ ಚರಗ ಚಲ್ಲುದಕ
ಮತ್ತ ಹೊಲಕ ಹೋಗುದಕ ।ಪ।

ಕರಚಿಕಾಯಿ ಕರಿಗಡಬು ಕರಕರದ ಹಪ್ಪಳ ಹರಹರದ
ಶೀರಿ ಉಟ್ಟಾಳವ್ವ ನಾರಿ ಗಳಿಗಿ ಮುರುದ
ಸಣ್ಣ ನಿಲಗಿ ಹೊಯ್ದ ।೧।

ರೊಟ್ಟಿ ಬುತ್ತಿ ಕಟ್ಟಿಕೊಂಡು ಎತ್ತಿನ ಮ್ಯಾಲ ಹೇರಿಕೊಂಡು।
ಬಂಧು ಬಳಗ ಕೂಡಿಕೊಂಡು
ಹೊಲಕ ಹೊಂಟೇವ। ೩।

ಸಂತೋಷದಿಂದ ಹೊಲಕ ಹೋಗಿ ಭೂದೇವಿಯ ಪೂಜೆ ಮಾಡಿ
ಎಡಿ ಹಿಡದ ಕಾಯಿ ಒಡದ ಹುಲ್ಲುಲಗೋ ಚಳಂಬರಿಗೋ।
ಅಂತ ಚರಗ ಚೆಲ್ಲೇವ । ೪।

ಎಲ್ಲರೂ ಕೂಡಿಕೊಂಡು ಪ್ರೀತಿಯಿಂದ ಉಂಡು ತಿಂದು
ಕಡಲೆಕಾಯಿ ಕಬ್ಬು ತಿಂದು ನಕ್ಕು ನಲಿದು ಸಂತದಿಂದ
ಮನೆಗೆ ಬಂದೇವ ।೫।

(ನಮ್ಮವ್ವ ಸುಮಿತ್ರಾದೇವಿಯ ಜಾನಪದ ಭಂಡಾರ, ಪುಟ-೫೦೭)

ಮುಂದೆ ಎಳ್ಳಾಮವಾಸ್ಯೆಗೆ ತುಂಬಿ ನಿಂತ ಹಿಂಗಾರಿ ಬಿಳಿಜೋಳದ ಬೆಳೆಗೆ ಚರಗ ಚಲ್ಲುವ ಪದ್ಧತಿ ಎಲ್ಲ ಕಡೆಯೂ ಇದೆ. ಮಾನವಮಿ (ದಸರೆ) ದಿನದ ರಾತ್ರಿಯಿಂದ ಮನೆಯ ಮುಂದಿನ ಗೋಡೆಗೆ ಹೆಂಡಿಯಿಂದ (ವಿಶೇಷವಾಗಿ ಆಕಳ ಹೆಂಡಿಯಿಂದ) ದಿನವೂ ಒಂದೊಂದು ಉಬ್ಬು ಚಿತ್ರಗಳನ್ನು ಬಿಡುಸುತ್ತ, ಹಾಡುತ್ತ ಹೋಗುತ್ತಾರೆ. ಸೂರ್ಯ, ಚಂದ್ರ, ತೊಟ್ಟಿಲು, ಹೂ, ಗೌಳಗಿತ್ತಿಯರು, ಸ್ವಾಸ್ತಿಕ ಚಿನ್ಹೆ, ಬಾರಂಭಾವಿ, ಏಳುಸುತ್ತಿನ ಕೋಟೆ ಹೀಗೆ ಹೆಂಡಿಯನ್ನು ಗೋಡೆಗೆ ಸುಲಭವಾಗಿ ಅಂಟಿಸಿ ಬಿಡಿಸಲು ಸಾಧ್ಯವಾದ ಉಬ್ಬು ಚಿತ್ರಗಳನ್ನು ನಿರ್ಮಿಸಿ, ಕೇರಿಯ ಹಾಡುಗಾರರನ್ನು ಕರೆಸಿ, ಸೀಗಿ ಹಾಡುಗಳನ್ನು ಹಾಡಿಸಿ, ಕೊನೆಯಲ್ಲಿ ಪುಟಾಣಿ ಸಕ್ಕರಿಯ ನೈವೇದ್ಯ ಮಾಡಿ, ನೆರೆದಿರುವ ಎಲ್ಲರಿಗೂ ಹಂಚಿ, ಅಂದಿನ ಕಾರ್ಯಕ್ರಮವನ್ನು ಮುಗಿಸುತ್ತಾರೆ.

ಮಾನವಮಿಯ ದಿನದಿಂದ ಸೀಗಿ ಹುಣ್ಣಿಮೆ ನಡುವೆ ಕನಿಷ್ಠ ಐದರಿಂದ ಏಳು ದಿನಗಳು ಬರುತ್ತವೆ. ಈ ದಿನಗಳಂದು ಪ್ರತಿ ಸಂಜೆ ಬೇರೆ ಬೇರೆ ಚಿತ್ರಗಳನ್ನು ಬಿಡಿಸುತ್ತಾರೆ. ಹಿಂದಿನ ರಾತ್ರಿ ಗೋಡೆಗೆ ಬಿಡಿಸಿದ ಉಬ್ಬು ಚಿತ್ರಗಳನ್ನು ಕಿತ್ತಿ ಹಾಕಿ, ಮತ್ತೆ ಹೊಸ ಚಿತ್ರಗಳನ್ನು ಬಿಡಿಸುತ್ತ, ಹಾಡಿ ಪೂಜೆ ಸಲ್ಲಿಸುತ್ತ ಹೋಗುತ್ತಾರೆ. ಇದು ಹುಣ್ಣಿಮೆಯ ದಿನದವರೆಗೆ ನಿರಂತರವಾಗಿ ನಡೆಯುತ್ತದೆ. ಹುಣ್ಣಿಮೆಯ ದಿನ, ಸೀಗಿ ಚಿತ್ರಗಳನ್ನು ಬಿಡಿಸುತ್ತ ಬಂದ ಗೋಡೆಯ ಸ್ಥಳವನ್ನು ಸ್ವಚ್ಛಗೊಳಿಸಿ, ಸಾರಿಸಿ, ಸುಣ್ಣ ಬಳಿದು, ಐದಾರು ದಿನಗಳವರೆಗೆ ಹೆಂಡಿಯನ್ನು ಮೆತ್ತಿ ಬಿಡುಸುತ್ತಿದ್ದ ಉಬ್ಬುಚಿತ್ರಗಳ ಜೊತೆಗೆ ಮತ್ತೆ ಕೆಲವು ವಿಶೇಷ ಚಿತ್ರಗಳನ್ನು ಜಾಜದ ಬಣ್ಣ ತಯಾರಿಸಿ, ಸುಂದರವಾಗಿ ಬರೆಸುತ್ತಾರೆ. ಅಂದು ರಾತ್ರಿ ಬೆಳದಿಂಗಳ ಬೆಳಕಿನಲ್ಲಿ ಸಂಭ್ರಮದಿಂದ ಮತ್ತೆ ಹಾಡುಗಾರರನ್ನು ಕರೆಸಿ, ಹಾಡಿಸಿ, ಕೊನೆಗೆ ನೈವೇದ್ಯ ಮಾಡಿ ಮುಗಿಸುತ್ತಾರೆ. ಇದು ಸೀಗಿ ಹುಣ್ಣಿಮೆಯ ಆಚರಣೆಯ ಪದ್ಧತಿ.

ಸೀಗಿ–ಗೌರಿ ಸಂಪ್ರದಾಯಗಳ ಬಗ್ಗೆ ವಿವರವಾಗಿ ವಿಶ್ಲೇಷಿಸುವ ಒಂದು ಲೇಖನವನ್ನು ಶ್ರೀಮತಿ ಶಶಿಕಲಾ ವಸ್ತ್ರದ ಅವರು ಬರೆದಿದ್ದಾರೆ. 'ಸೀಗಿಹುಣ್ಣಿವೆ ಮತ್ತು ಗೌರಿಹುಣ್ಣಿವೆಗಳು' (ಜಾನಪದ ಸಾಹಿತ್ಯ ದರ್ಶನ–೧೦,೧೯೮೭) ಎಂಬ ಲೇಖನದಲ್ಲಿ ಬಾಂಬೆ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಸೀಗಿ, ಗೌರಿ ಸಂಪ್ರದಾಯಗಳ ಬಗ್ಗೆ ಮಾಹಿತಿಗಳನ್ನು ಕಲೆಹಾಕಿ ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಬಾಂಬೆ ಕರ್ನಾಟಕದಲ್ಲಿ ಮಣ್ಣಿನಿಂದ ತಯಾರಿಸಿದ ಸೀಗಿಯನ್ನು ಕುಂಬಾರ ಮನೆಯಿಂದ ತರುವ ಪದ್ಧತಿಯಿದೆ.

"ಯುವತಿಯರ ತಂಡ ತಮ್ಮೂರಿನ ಕುಂಬಾರನಲ್ಲಿಗೆ ಹೋಗಿ ತಾವು ತಂದ ಜೋಳದಿಂದಲೋ ಅಕ್ಕಿ–ಗೋದಿ–ಸಜ್ಜೆಯಿಂದಲೋ ಕುಂಬಾರನ ಹೆಂಡತಿಯ ಉಡಿ ತುಂಬುತ್ತಾರೆ. ಆಗ ಅವನು ಎರಡು ಸೀಗವ್ವಗಳನ್ನು ಕೊಡುತ್ತಾನೆ. ಇವು ಮಣ್ಣಿನಿಂದ ಮಾಡಿದ್ದು ಗೋಪುರವಾಗಿ ಅಡಕಲು ಗಡಿಗೆ ಏರಿಸಿದಂತೆ ಐದು ಅಥವಾ ಒಂಬತ್ತು ಮಜಲುಗಳಿರುತ್ತವೆ. ಇವುಗಳನ್ನು ಒಂದು ಕಾಲುಮಣೆಯ ಮೇಲಿಟ್ಟುಕೊಂಡೋ ಅಥವಾ ಆರತಿಯ ತಟ್ಟೆ ದೊಡ್ಡದಿದ್ದರೆ ಅದರಲ್ಲೇ ಇಟ್ಟುಕೊಂಡೋ ಅಲ್ಲಿಂದಲೇ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾ ಮನೆಗೆ ತರುತ್ತಾರೆ. ಇದು ಸೀಗಿ ಹುಣ್ಣಿವೆ ಇನ್ನೂ ಐದು

ದಿನವಿರುವಾಗ ಸೀಗವ್ವನನ್ನು ಕರೆತರುವ ಸಂಪ್ರದಾಯ" (ಜಾನಪದ ಸಾಹಿತ್ಯ ದರ್ಶನ, ಪು. ೧೪೫).

ಇನ್ನು ಕೆಲವು ಗ್ರಾಮಗಳಲ್ಲಿ ಕಟ್ಟಿಗೆಯಿಂದ ತಯಾರಿಸಿದ ಸೀಗಿಗಳನ್ನು ಬಡಿಗೇರ ಮನೆಯಿಂದ ತರುವ ಪದ್ಧತಿ ಇದೆ ಎಂದು ತಿಳಿದು ಬರುತ್ತದೆ. ಸುಮಾರು ಒಂದು ಅಡಿ ಎತ್ತರದ, ಎರಡರಿಂದ ಮೂರು ಇಂಚು ದಪ್ಪನೆಯ ಗೋಲಾಕಾರದ ಕಟ್ಟಿಗೆಗೆ ಸುತ್ತಲೂ ಕೈಬಳೆ ಪೇರಿಸಿದ ರೀತಿಯಲ್ಲಿ ಜಂತ್ರ ಹಿಡಿದು, ತುದಿಯಲ್ಲಿ ಸ್ತ್ರೀ ದೇಹ, ಮುಖಗಳನ್ನು ಕೆತ್ತಿರುತ್ತಾರೆ. ಇಂತಹ ಜೋಡಿ ಕಟ್ಟಿಗೆಯ ಮೂರ್ತಿಗಳನ್ನು ಸೀಗಿ ಎಂದು, ಬಡಿಗೆರ ಮನೆಯಿಂದ ಹಾಡುತ್ತ ಚಾಜವುಳ್ಳವರು ತಮ್ಮ ಮನೆಗೆ ತಂದು, ಒಂದು ಅಲಂಕರಿಸಿದ ಮಾಡದಲ್ಲಿ ಕೂಡ್ರಿಸುತ್ತಾರೆ. ಅಲ್ಲಿಯೇ ಪ್ರತಿರಾತ್ರಿ ಪೂಜೆ ಹಾಡುಗಾರಿಕೆ ನಡೆಯುತ್ತದೆ. ಈ ಸೀಗಿಗಳನ್ನೇ ಜೋಪಾನವಾಗಿಟ್ಟು, ಪ್ರತಿವರ್ಷವೂ ಅವನ್ನೇ ಕೂಡ್ರಿಸಿ, ಪೂಜಿಸುತ್ತಾರೆ.

"ಈ ಸೀಗೆಗಳನ್ನು ಕೇವಲ ಒಕ್ಕಲಿಗರು ಮಾತ್ರ ತರುತ್ತಾರೆ ಅನ್ನುವದೊಂದು ಗಮನಾರ್ಹ ಅಂಶ. ಯಾಕೆಂದರೆ ಸೀಗಿಯ ಹುಣ್ಣಿವೆಯಲ್ಲಿ ಪೂಜಿಸಲ್ಪಡುವ ಈ ಗುಪ್ಪೆಯ ಆಕೃತಿ ಧಾನ್ಯ ರಾಶಿಯ ಆಕಾರವನ್ನು ಸಂಕೇತಿಸುತ್ತದೆ ಎನ್ನುವವರೂ ಇದ್ದಾರೆ. ಸೀಗಿ ಅನ್ನುವದು ಸುಗ್ಗಿಯ ವಿಕಾರರೂಪವೆಂದೂ ಈ ಆಕೃತಿಗಳಿಗೆ ಕೆಲವೆಡೆ ಸೀಗಿ ಗೌರಿ ಅನ್ನುವ ಹಿನ್ನೆಲೆಯಲ್ಲಿ, ಅದು ಸುಗ್ಗೀ ಗೌರಿ ಇರಬಹುದು ಎಂದು ವಾದಿಸುವವರೂ ಇಲ್ಲದಿಲ್ಲ. ಅನೇಕ ಭಾಗಗಳಲ್ಲಿ ಇದಕ್ಕೆ ಹೆಜ್ಜುಗ್ಗಿ ಹಬ್ಬ ಅನ್ನುತ್ತಾರೆ. ಹೆಜ್ಜುಗ್ಗಿ ಅಂದರೆ ಹಿರಿಯಸುಗ್ಗಿ ಎಂದೇ ಅರ್ಥ. ಇದು ಚಂದ್ರ ಸಂಪ್ರದಾಯದ ಮೂಲದಲ್ಲಿ ಬರುವ ಹಬ್ಬವೆಂದೂ ಇದನ್ನು ಕೌಮುದೀ ಮಹೋತ್ಸವವೆಂದು ಕರೆದು ಬೆಳದಿಂಗಳ ಹಬ್ಬ ಮಾಡುವದೂ ಇದೆ" (ಅದೇ, ಪು.೧೪೬).

"ಸೀಗೀ ಹುಣ್ಣಿವೆಗಾಗೇ ಪ್ರತ್ಯೇಕವಾದ ಹಾಡುಗಳು ಇಲ್ಲ. ಆದರೂ ಕೆಲವು ಕಡೆಗಳಲ್ಲಿ 'ಭಾಗ್ಯದ ಲಕ್ಷ್ಮೀ ಬಾರಮ್ಮಾ', ಅನ್ನುವ ಹಾಡನ್ನು 'ಧಾನ್ಯದಾ ಲಕ್ಷ್ಮೀ ಬಾರಮ್ಮಾ' ಎಂದು ಹಾಡುವ ವಾಡಿಕೆ ಇದೆ" (ಅದೆ, ಪು.೧೪೯) ಎಂಬ ಸಂಪಾದಕರ ಅಭಿಪ್ರಾಯ ಸರಿಯಾದುದಲ್ಲ. ಸೀಗಿ ಹಾಡುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಕಲಬುರಗಿ ನಾಡಿನಲ್ಲಂತೂ ಅತ್ಯಂತ ಸುಂದರವಾದ ಧಾಟಿಗಳುಳ್ಳ ಸೀಗಿ ಹಾಡುಗಳು ದೊರೆಯುತ್ತವೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು ಸೀಗಿ ಹಾಡುಗಳು ಎಂದು ಕರೆಯುತ್ತಾರೆ. ಈ ಸೀಗಿ ಹಾಡುಗಳ ಧಾಟಿಗಳು ಕೇಳಲು ಅತ್ಯಂತ ಹಿತವಾಗಿರುತ್ತವೆ. ಸೀಗಿಯ ಜೊತೆಗೆ ಗಂಗೆ–ಗೌರಿಯ ಹಾಡುಗಳನ್ನೂ ಸೇರಿಸಿ ಹಾಡುತ್ತಾರೆ. 'ಒಂದ ಸುತ್ತಿನ ಕ್ವಾಟಿ, ಅದರೊಳು ಹೊಂದಿ ಕುಂತಾನ ಬಸವ/ ಬಸವಕ ಬಸವೆನ್ನಿರೆ, ಬಸವನ ಪಾದಕ ಶರಣೆನ್ನಿರೆ' ಎಂಬ ಪ್ರಸಿದ್ಧ ಹಾಡು ಬಳಕೆಯಾಗುವುದೇ ಸೀಗಿ ಸಂದರ್ಭದಲ್ಲಿ. ಈ ಹಾಡಿನ ದೃಶ್ಯ ರೂಪವಾಗಿ ಏಳುಸುತ್ತಿನ ಕೋಟೆಯ ಚಿತ್ರವನ್ನು ಬಿಡಿಸುವ ಪದ್ಧತಿಯೂ ಇದೆ.

ಇಂತಹ ಹಾಡುಗಳದೇ ಒಂದು ಸಂಗ್ರಹವನ್ನು **'ಶೀಗಿ ಹಾಡುಗಳು'** (೧೯೯೪) ಎಂಬ ಹೆಸರಿನಲ್ಲಿ ರಾಜೇಂದ್ರ ಯರನಾಳೆ ಅವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಹಾಡುಗಳನ್ನು ಸಂಗ್ರಹಿಸಿದ್ದು ಸಂಪಾದಕರ ಗ್ರಾಮವಾದ ಬೀದರ ಜಿಲ್ಲೆಯ ಔರಾದ

ತಾಲೂಕಿನ ಕುಸನೂರ(ಠಾಣಾ) ಮತ್ತು ಎಕಲಾರ ಗ್ರಾಮದ ಹೆಣ್ಣುಮಕ್ಕಳಿಂದ. ಇನ್ನೂ ಕೆಲವು ಹಾಡುಗಳನ್ನು ಬಸವಕಲ್ಯಾಣ ತಾಲೂಕಿನ ಗ್ರಾಮಗಳಿಂದಲೂ ಸಂಗ್ರಹಿಸಿದ್ದಾರೆ.

ಈ ಕೃತಿಯ ಮುಖಪುಟದ ಮೇಲೆ ಸೀಗಿ ಆಚರಣೆಯ ಸಂದರ್ಭದಲ್ಲಿ ಕೊನೆಯದಿನ ಎಲ್ಲ ಚಿತ್ರಗಳನ್ನು ಸೇರಿಸಿ, ಗೋಡೆಯ ಮೇಲೆ ಜಾಜದಿಂದ ಬಿಡಿಸಿದ ಒಂದು ಚಿತ್ರಸಂಪುಟವನ್ನು ಕೊಟ್ಟಿದ್ದು, ಒಟ್ಟಿಗೆ ಎಂತೆಂತಹ ಚಿತ್ರಗಳನ್ನು ಸೀಗೆಯ ಹೆಸರಿನಲ್ಲಿ ಬಿಡಿಸುತ್ತಾರೆ ಎಂಬ ಒಂದು ಸ್ಪಷ್ಟ ಕಲ್ಪನೆಯನ್ನು ಕೊಡುವಂತಿದೆ. ಅಲ್ಲಿರುವ ಚಿತ್ರಗಳೆಂದರೆ– ಚುಕ್ಕಿ–ಚಂದ್ರ, ಗಂಗಿ–ಗೌರಿ, ಭಾರಂಬಾವಿ, ಬಾಳೆಗಿಡ, ಕುಂಬುಳ ಹೂವ, ಕಬ್ಬಿನ ಮಳು, ಹಣಮಂದೇವರು, ಕರಬನ ಗಡಗಿ, ಛೆರಚೀಲ, ಏಳುಸುತ್ತಿನ ಕ್ವಾಟಿ.

ಈ ಕೃತಿಯಲ್ಲಿ ಒಟ್ಟಿಗೆ ೫೪ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅವುಗಳನ್ನು ೧. ವಾಡಿಕೆ ಹಾಡುಗಳು, ೨. ಐದ್ಯೆದು ನುಡಿಯ ಹಾಡುಗಳು, ೩. ಶೀಗಿ ಹೂಗಳ ಹಾಡುಗಳು, ೪. ಶಿವಶಿವೆಯರ ವಾದ–ಸಂವಾದದ ಹಾಡುಗಳು, ೫. ಹುಟ್ಟು–ಸಾವು, ನೋವು ನಲಿವಿನ ಹಾಡುಗಳು, ೬. ಸಂಕೀರ್ಣ ಹಾಡುಗಳು, ೭. ಆರತಿ ಹಾಡುಗಳು, ೮. ಫರಾಳ ಹಾಡುಗಳು ಎಂದು ವಿಂಗಡಿಸಿ ಕೊಟ್ಟಿದ್ದಾರೆ. ಸೀಗಿ ಹಾಡುಗಳನ್ನು ಮೊದಲನೆಯದಾಗಿ ಸಂಗ್ರಹಿಸಿ, ಇಷ್ಟೊಂದು ವೈಜ್ಞಾನಿಕವಾಗಿ ಸಂಪಾದನೆ ಮಾಡಿಕೊಟ್ಟಿರುವ ಒಂದು ಅಪರೂಪದ ಕೃತಿ ಇದು.

ಈ ಕೃತಿಗೆ ಸಂಪಾದಕರು ಸುದೀರ್ಘವಾದ ೨೨ ಪುಟಗಳ ಪ್ರಸ್ತಾವನೆಯನ್ನೂ ಬರೆದಿದ್ದಾರೆ. "ಶೀಗಿ ಆಡುವುದು ವಿಜಯದಶಮಿಯ ಮಹಾನಮಿ ದಿನದಿಂದ ಪ್ರಾರಂಭಿಸಿ ಶೀಗಿ ಹುಣ್ಣಿಮೆಗೆ ಮುಕ್ತಾಯವಾಗುತ್ತದೆ. ಮುಂದೆ ಒಂದು ತಿಂಗಳಲ್ಲಿ ಬರುವ ಗೌರಿ ಹುಣ್ಣಿಮೆಗೆ ಗೌರಿ ಕುರಿತು ಹಾಡುವುದು, ಆಡುವುದು ಸಂಪ್ರದಾಯವಾಗಿದೆ. ಹೀಗೆ ಶಿವ ಹಾಗೂ ಅವನ ಅರ್ಧಾಂಗಿನಿಯರಾದ ಗಂಗಿ–ಗೌರಿಯರನ್ನು ಕುರಿತು ಸ್ಮರಿಸುವ, ಹೊಗಳುವ, ಹಾಡುವ ಭವ್ಯ ಪರಂಪರೆಯ ಒಂದು ಜನಪದ ಆಚರಣೆ ಶೀಗಿ ಆಗಿದೆ" (ಪ್ರ.ಪು.೧). ಸೀಗಿಯನ್ನು ಪೂಜಿಸುವ ಕಾಲಕ್ಕೆ ಗಂಗೆ–ಗೌರಿ ಸಂಪ್ರದಾಯಕ್ಕೆ ಸಂಬಂಧಿಸಿದ ಹಾಡುಗಳನ್ನೂ ಹಾಡುತ್ತಾರೆ. ಆದರೆ ಸೀಗಿ ಸಂಪ್ರದಾಯದ ಹಾಡುಗಳೇ ವಿಶೇಷವಾಗಿರುವುದು ಗಮನಕ್ಕೆ ಬರುತ್ತದೆ. ಹೀಗಾಗಿ ಈ ಸೀಗಿ ಯಾರು? ಎಂಬುದು ಇನ್ನೂ ಪತ್ತೆಯಾಗದೇ ಉಳಿದಿರುವ ಸಂಗತಿಯಾಗಿದೆ. ಸೀಗಿ ಆಚರಣೆ ಭೂಮಿ ತಾಯಿಯ ಪೂಜೆ ಎಂದೂ ಗೌರಿಯ ಆಚರಣೆ ಶಕ್ತಿ ಪೂಜೆ ಎಂದೂ ಸುಮಾರಾಗಿ ಸೀಗಿ–ಗೌರಿ ಬಗ್ಗೆ ಬರೆದ ಎಲ್ಲರೂ ಹೇಳುತ್ತ ಬಂದಿರುವುದು ಸಾಮಾನ್ಯ ಸಂಗತಿಯಾಗಿದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸೀಗಿ ಮತ್ತು ನಂತರ ಬರುವ ಹುಣ್ಣಿವೆಗೆ ಆಚರಿಸುವ ಗೌರಿ ಸಂಪ್ರದಾಯಗಳ ಆಚರಣೆ, ಪೂಜೆ ಪುನಸ್ಕಾರಗಳಲ್ಲಿ ಹಿರಿಯರ ಭಾಗಿದಾರಿಕೆ ಇದ್ದರೂ ಮುಖ್ಯವಾಗಿ ಇದು ಬಾಲಕಿಯರು, ಬಹಳವೆಂದರೆ ೧೪–೧೫ ವರ್ಷದವರೆಗಿನ ಕಿಶೋರಿಯರು ಈ ಸಂಭ್ರಮಗಳಲ್ಲಿ ಭಾಗವಹಿಸುವುದನ್ನು ಕಾಣುತ್ತೇವೆ. ಸೀಗಿಯನ್ನು ರಾತ್ರಿ ಸಮಯದಲ್ಲಿ ಗೋಡೆಗೆ ಚಿತ್ರಿಸುವುದು, ಅದಕ್ಕೆ ತರತರದ ಕಾಡು

ಹೂಗಳನ್ನು ತಂದು ಮೆತ್ತಿ-ಸಿಕ್ಕಿಸಿ ಶೃಂಗರಿಸುವುದು, ಹಾಡುವುದು, ನೈವೇದ್ಯ ಹಿಡಿಯುವುದು, ಫರಾಳ ಹಂಚುವುದು ಮುಂತಾದೆಡೆಯೆಲ್ಲೆಲ್ಲ ಈ ಎಳೆಯ ವಯಸ್ಸಿನ ಬಾಲಕಿಯರೇ ಭಾಗವಹಿಸುವುದು ಸಾಮಾನ್ಯ. "ಯಾರ ಮನೆಯಲ್ಲಿ ಹುಡುಗಿಯರು, ಮುದುಕಿಯರು ಹೆಚ್ಚಾಗಿ ಇರುವರೋ ಅವರ ಮನೆಯ ಮುಂದೆ ಶೀಗಿ ಆಡುವುದನ್ನು ಹೆಚ್ಚಾಗಿ ಕಾಣುತ್ತೇವೆ. ಏಕೆಂದರೆ ಶೀಗಿ ಆಡುತ್ತ ಮೋಜಿನಿಂದ ಕಾಲ ಕಳೆಯುವವರೆಂದರೆ ಈ ವಯಸ್ಸಿನವರೇ ಹೆಚ್ಚು" (ಪ್ರ.ಪು.೪) ಎಂಬ ಮಾತುಗಳನ್ನು ಸಂಪಾದಕರೂ ದಾಖಲಿಸಿದ್ದಾರೆ.

ಈಳೆಯವ ಕುಡುಲಾಕ ಸರಿಯಾಗಿ ಬರಲಾಕ
ಕುಡು ನನ್ನ ಹಬ್ಬ ದಸರಿಯ ಕೋಲೆ
ಕುಡು ನನ್ನ ಹಬ್ಬ ದಸರಿ ಮಾನಂಬಿ ದಿನ
ಹೊಸ (ಹಸು) ಮಕ್ಕಳೆಲ್ಲ ಗವರ್‍ಯಾಡಿ ಕೋಲೆ ।

ಎನ್ನುವ ನುಡಿಯಲ್ಲಿ ಕೊನೆಯ ಸಾಲಿನಲ್ಲಿ 'ಹೊಸ (ಹಸು) ಮಕ್ಕಳೆಲ್ಲ ಗವರ್‍ಯಾಡಿ ಕೋಲೆ' ಎಂದಿರುವುದನ್ನು ಗಮನಿಸಬೇಕು. ಸೀಗಿ ಮತ್ತು ಗೌರಿಯನ್ನು ಆಡುವಲ್ಲಿ ಎಳೆಯ ಪ್ರಾಯದ ಬಾಲಕಿಯರೇ ಹೆಚ್ಚಾಗಿ ಭಾಗವಹಿಸುವರು ಎಂಬ ಸಂಗತಿ ಮನದಟ್ಟಾಗುತ್ತದೆ. ಸೀಗಿ ನಂತರ ಆಡಲು ತೊಡಗುವುದು ಗೌರಿಯನ್ನು. ಇಲ್ಲಿ ಗಂಗಿಯ ಹೆಸರು ಬರುವುದಿಲ್ಲ ಎಂಬುದನ್ನು ಗಮನಿಸಬೇಕು. ಹಾಡಿನಲ್ಲಿ ಮಾತ್ರ ಗಂಗೆ ಬರುತ್ತಾಳೆ. ಪೂಜೆಗೊಳ್ಳುವಲ್ಲಿ ಆಕೆಯ ಪ್ರಸ್ತಾಪವಿಲ್ಲ ಎಂಬುದು ಮುಖ್ಯಸಂಗತಿಯಾಗಿ ಕಾಣುತ್ತಿದೆ. ಸೀಗೆಗೆ ಕೊನೆಯಲ್ಲಿ ಆರುತಿ ಬೆಳಗುವಾಗ 'ಪಾರಬತಿಗಾರೂತಿ ಬೆಳಗುವೆನೆ', 'ಆರುತಿ ಬೆಳಗಿರೆ ಗವರಮಗೆ' ಎಂಬ ಸಾಲುಗಳು ಬರುತ್ತವೆ. ಎಲ್ಲೂ ಗಂಗೆಯ ಪ್ರಸ್ತಾಪ ಮಾತ್ರ ಬರುವುದಿಲ್ಲ.

'ಶೀಗಿ ಹಾಡುಗಳು' ಕೃತಿಯಲ್ಲಿಯ ಹಾಡುಗಳನ್ನು ಸಂಪಾದಕರಾದ ರಾಜೇಂದ್ರ ಯರನಾಳೆ ಅವರು ಕ್ರಮವರಿತು ಜೋಡಿಸಿದ್ದಾರೆ. ಮೊದಲಿಗೆ ಸೀಗಮ್ಮನನ್ನು ಆಮಂತ್ರಿಸುವ ಹಾಡುಗಳು ಇವೆ.

ಕುತನಿಧರಿ ಕುಬ್ಬಸ ತೊಟ್ಟು ಕುಕಮಬಟ್ಟು ಹಣಿಮ್ಯಾಲಿಟ್ಟು
ಕುತನಿಧರಿ ಕುಬ್ಬಸ ತೊಟ್ಟು ಕುಕಮಬಟ್ಟು ಹಣಿಮ್ಯಾಲಿಟ್ಟು
ವಾಲಿಕಪ್ಪು ಕಿವಿದಲಿಟ್ಟು ಒಲಪೆದಿಂದೆ ಕರಿಯ ಬಂದ
ಮನಿಗಿ ನಡಿಯಮ್ಮ ಶೀಗಿ ಮನಿಗಿ ನಡಿಯಮ್ಮ
ವಾಲಿಕಪ್ಪು ಕಿವಿದಲಿಟ್ಟು ಒಲಪೆದಿಂದೆ ಕರಿಯ ಬಂದ
ಮನಿಗಿ ನಡಿಯಮ್ಮ ಶೀಗಿ ಮನಿಗಿ ನಡಿಯಮ್ಮ

ಹಿಗೆ ಪ್ರಾರಂಭವಾಗುತ್ತದೆ ಸೀಗಿ ಹಾಡುಗಾರಿಕೆ. ಈ ಹಾಡುಗಳ ಧಾಟಿಗಳು ಈ ಮೊದಲೇ ಹೇಳಿದಂತೆ ಕೇಳಲು ತುಂಬಾ ಸೊಗಸಾಗಿರುತ್ತವೆ. ಹಿರಿಯರಿಗೂ ಮಕ್ಕಳಿಗೂ ಹಾಡಲು ಸರಾಗವಾಗಿ ಬರುವಂತೆ ಇರುತ್ತವೆ. ಇವುಗಳ ಗುಣವೊಂದನ್ನು ಇಲ್ಲಿಯೇ ಹೇಳಿಬಿಡಬೇಕೆನಿಸುತ್ತದೆ. ಪುನರಾವರ್ತನೆ ಈ ಧಾಟಿಗಳ ಮೂಲ ಗುಣದಂತೆ ಕಾಣುತ್ತಿದೆ.

ಈ ಮೇಲೆ ಉಲ್ಲೇಖಿಸಿದ ಹಾಡಿನ ನುಡಿಯೂ ಕೂಡ ಒಂದು ತ್ರಿಪದಿಯಾಗಿರುವುದು ಕಾಣುತ್ತಿದೆ. ಆದರೆ ಅದನ್ನು ಪುನರಾವರ್ತಿಸಿ ಆರು ಸಾಲಾಗಿಸಿದ್ದನ್ನು ಕಾಣಬಹುದು.

ಕುತನಿಧರಿ ಕುಬ್ಬಸ ತೊಟ್ಟು ಕುಕಮ ಬಟ್ಟು ಹಣಿಮ್ಯಾಲಿಟ್ಟು
ವಾಲಿಕಪ್ಪು ಕಿವಿದಲಿಟ್ಟು ಒಲಪೆದಿಂದೆ । ಕರಿಯ ಬಂದ
ಮನಿಗಿ ನಡಿಯಮ್ಮ ಶೀಗಿ ಮನಿಗಿ ನಡಿಯಮ್ಮ

ಈ ತ್ರಿಪದಿ ಛಂದಸ್ಸು ಹಾಡುವಾಗ ನಾಲ್ಕು ಸಾಲಾಗುವುದು ಸಹಜ. ಇಲ್ಲಿ ಆರು ಸಾಲಾಗಿ ಹಿಗ್ಗಿ ನಿಂತಿರುವುದನ್ನು ಕಾಣಬಹುದಾಗಿದೆ. ಜನಪದ ಹಾಡುಗಳ ಛಂದಸ್ಸಿನ ಅಧ್ಯಯನ ಕುತೂಹಲ ಮೂಡಿಸುತ್ತದೆ. ಈ ಬಗೆಗೆ ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ. ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು; ಅದೆಂದರೆ ಸೀಗಿ ಸಂಪ್ರದಾಯದ ಹಾಡುಗಳಲ್ಲಿ ಉಲ್ಲೇಖವಾಗುವ ಹೆಸರುಗಳೆಂದರೆ ಗಂಗಿ ಮತ್ತು ಗೌರಿಯ ಹೆಸರುಗಳೇ.

ಗಂಗಮ್ಮನ ಪ್ರಸ್ತಾಪವಿರುವ ಹಾಡು:

ಚುಕ್ಕ ಚೆಂಡೆನ ಹೂವಾ ಘುಂಬುತ ತುಳಕುತ
ಘಂದದ ಮಡವ ಡುಳಕೂತ ಕೋಲೆ
ಘಂದು ಅದ ಮಡುವ ಝುಳಕಿ ಜಾಳಿಗಿದಂಡಿ
ಹಿಂಗೆ ನಡಿರಯ್ಯ ಥಡಿದೊಳೆ ಕೋಲೆ
ನಮಗೆಲ್ಲಿ ಜಡಿಗೋಳು ನಮಗೆಲ್ಲಿ ಥಡಿಗೋಳು
ಗಂಗಮ್ಮನ ಥಡಿಲಿ ಸಳಮಂಚ ಕೋಲೆ
ಗಂಗಮ್ಮನ ಥಡಿಲಿ ಸಳಮಂಚ ಕೋಲೆ

ಗೌರವ್ವನ ಪ್ರಸ್ತಾಪವಿರುವ ಹಾಡು:

ಒಂದ ಸೇರಕ್ಕಿ ತರುಲೇ
ಗವರವ ಒಂದೇ ಮಂಡಲ ಬರಿಲೇ
ಹಾಲಗುಂಜಿ ನೀಲಗುಂಜಿ ಹೂವಾ ತರುಲೇ
ಗವರವ್ವ ನಿಂಗ ಹುಣ್ಣಿ ಮಾಡಿ ಖಳು ಕುಡಲೆ

ಸೀಗಮ್ಮನಿಗೆ ಗಂಡನ ಮನೆಗೆ ಕಳಿಸುವ ಹಾಡು :

ಒಂದ ಸೇರಕ್ಕಿ ಥಳುಸಲೆ ಕೇರಲೆ ಬಿದರ ಮರುದಲೆ
ಕಂಚಿ ಕಳಿಸಲೆ ಕಂಚಿನೊಳಿಯಲೆ
ಬುತ್ತಿ ಕಟ್ಟಲೆ ಪಟ್ಟಣ ಸೇರಲೆ
ಆನಿ ಏರಿ ಶಿವ ಬಂದರ ನಡಿ ಗವರಮ್ಮ ಗಂಡನ ಮನಿಗೆ
ನಂದಿ ಏರಿ ಶಿವ ಬಂದರ ನಡಿ ಗವರಮ್ಮ ಗಂಡನ ಮನಿಗೆ

ಮುಂದೆ ಗಂಗೆ–ಗೌರಿ ಸಂವಾದ, ಜಗಳಕ್ಕೆ ಸಂಬಂಧಿಸಿದ ಹಾಡುಗಳೇ ಹೆಚ್ಚಾಗಿವೆ. ಹೀಗಾಗಿ ಈ ಸೀಗಿ ಸಂಪ್ರದಾಯವೆಂಬುದು ಏನನ್ನು ಹೇಳುತ್ತದೆ ಎಂಬುದು ಸ್ಪಷ್ಟವಾಗುವುದಿಲ್ಲ. ಸೀಗಿ ಎಂದರೆ ಗೋಪುರ, ಒಟ್ಟಿದ ರಾಶಿ, ಸುರುವಿದ ರಾಶಿ ಎಂತಲೂ ಅರ್ಥವಾಗುತ್ತದೆ. ಪ್ರಸ್ತುತ ಕೃತಿಯಲ್ಲಿ ಜೋಳ ಬಿತ್ತನೆ ಮಾಡುವ ಮತ್ತು ಬೆಳೆದ ಬೆಳೆಯನ್ನು ರಾಶಿಮಾಡಿ ತಂದು ಮನೆಯಲ್ಲಿ ಪೇರಿಸುವ ಹಾಡುಗಳೂ ಇವೆ.

ಗಂಗೆಯನ್ನು ತರುವ ಹಾಡು :

ದೇಶದೇಶವ ತಿರುಗಿ ಬ್ಯಾಸತ್ತು ನಾ ಬಂದ
ಕಾಲಿಗಿ ನೀರುತಾರೆ ಶ್ರೀ ಗವರಿ ಕೋಲೆ।
ಒಂದ ಗಿಂಡಿ ಕೊಡು ಅಂದುರ ಎರಡು ಗಿಂಡಿ ತಂದಾಳೆ
ಯಾಕ್ಯಾಕೆ ಗವರಿ ಎರಡು ಭಾವ ಕೋಲೆ।
ಅಯ್ಯಯ್ಯೋ ಶಿವರಾಯಾ ಅಣಕದು ಮಾತ್ಯಾಕ
ಶ್ರೀಗಂಗಾಗೊಂದು ನಿಮಗೊಂದು ಕೋಲೆ।

ಜೋಳ ಬಿತ್ತನೆ ಹಾಡು :

ಒಂದ ಮುಟ್ಟಿ ಬಿತ್ತುತಾ ಹಿಂದ ಮುಂದ ನೋಡುತಾ ।
ಒಂದಡ್ಡಿ ಜ್ವಾಳಾ ಒಂದ ತಿಂಗಳ ಬಿತ್ತುತಾ। ಕ್ಷೇಳಕ್ಷಿ ಬೆಳದಿಂಗಳೆ।

ಬಿತ್ತನೆ ಬಿತ್ತಿ ಬಂದ :

ನಮ್ಮಣ್ಣ ಕಡ್ಡಿ ಬಿತ್ತು ಬಂದಾನೆ ಗವರವ
ಮಳ್ಯಾಗ ತೊಯಿದು ಬಂದಾನೆ ಗವರವ
ಕಡ್ಡಿ ಮಳಕಿ ತಿರುಮಲಗಡ್ಡಿ
ಹಾರುರ ಚಿಮಣಿ ಕಯಕಟ ರಮಣಿ
ಬಾರಕ ಬೆಳಗಾಯಿತೆ ಗವರವ ತೇರಕ ಬೆಳಗಾಯಿತೆ।

ಧಾನ್ಯದ ಹೇರು :

ಕಡ್ಡಿಯ ಹೇರು ಬಂದಾವಕ್ಕ
ಬಂದ ಬಂದಿ ಬಾಗಿಲಿಗಿ ಬಿದ್ದಾವಕ್ಕ
ಹಾರೂರ ಪಾರಾ ದಂಡಿಗೆ ಬಂತು
ದಂಡಿನ ಚೆಂಡು ಆಡೂತ ಬಂತು
ಊದಿನ ಖಡ್ಡಿ ಉರಿವುತ ಬಂತು
ಹಾಲೇಂದು ಹರುದಾವೆ ನೀರೇಂದು ನಿಂತಾವೆ ।

ಹೀಗೆ ಸೀಗಿ ಹಾಡುಗಳಲ್ಲಿ ಗೌರಿ ಸಂಪ್ರದಾಯದ ಹಾಡುಗಳೂ ಸೇರಿಕೊಂಡಿವೆ. ಆದರೆ ಸೀಗಿ ಸಂಪ್ರದಾಯ ಗೌರಿ ಸಂಪ್ರದಾಯಕ್ಕೆ ಯಾವುದೋ ರೀತಿಯಲ್ಲಿ ಸಂಬಂಧವಿದ್ದಂತೆ ತೋರುತ್ತದೆ. ಆ ಸಂಗತಿಗಳಿನ್ನೂ ಅಧ್ಯಯನದ ಮೂಲಕ ಕಾಣಬೇಕಾಗಿದೆ.

೨೦೧೦ ರಲ್ಲಿ ಪ್ರಕಟವಾದ ಡಾ. ಶಕುಂತಲಾ ದುರಗಿ ಅವರು ಸಂಪಾದಿಸಿದ **'ಸೀಗಿ–ಗೌರಿ ಹಾಡುಗಳು'** ಎಂಬುದು ಈ ಬಗೆಯ ಹಾಡುಗಳ ಒಂದು ದೊಡ್ಡ ಕೃತಿಯಾಗಿದೆ. ಸುಮಾರು ೨೦೦ ಪುಟಗಳ ವಿಸ್ತಾರವನ್ನು ಈ ಕೃತಿ ಹೊಂದಿದೆ. ಪ್ರತ್ಯೇಕವಾಗಿ ಮತ್ತೆ ೪೨ ಪುಟಗಳ ವಿವರಗಳುಳ್ಳ ಪ್ರಸ್ತಾವನೆಯನ್ನು ಬರೆದಿದ್ದಾರೆ. ಒಟ್ಟಿಗೆ ೯೮ ಹಾಡುಗಳನ್ನು ಆರು ಬಗೆಯಲ್ಲಿ ವಿಂಗಡಿಸಿಕೊಂಡಿದ್ದಾರೆ. ಅವು ಹೀಗಿವೆ: ೧. ಸೀಗಿ–ಗೌರಿ ಕೂಡಿಸಿದಾಗ ಆಡುವಾಗ ಹೇಳುವ ಹಾಡುಗಳು, ೨. ಆರತಿ ಹಾಡುಗಳು, ೩. ತವರಿಗೆ ಬಂದಾಳ ಗೌರಿ, ೪. ಶಿವನ ಅರಮನೆಗೆ ನಡದಾಳ ಗೌರಿ, ೫. ಶಿವ–ಗೌರಿ–ಗಂಗೆ ಸಂವಾದ, ೬. ಶಿವ–ಗೌರಿಯ ಹಾದರದ ಹಾಡುಗಳು. ಕೊನೆಯಲ್ಲಿ ೩೫ ವಕ್ತಾರರ ಮಾಹಿತಿಗಳಿವೆ. ಅವರೆಲ್ಲ ಕಲಬುರಗಿ ಮತ್ತು ಬಾಗಲಕೋಟ ಜಿಲ್ಲೆಗೆ ಸೇರಿದವರಾಗಿದ್ದಾರೆ. ಹೀಗಾಗಿ ಬಾಂಬೆ ಕರ್ನಾಟಕ ಮತ್ತು ಹೈದ್ರಾಬಾದ ಕರ್ನಾಟಕ ಭಾಗದ ಹಾಡುಗಳು ಮತ್ತು ಸೀಗಿ–ಗೌರಿ ಸಂಪ್ರದಾಯದ ಮಾಹಿತಿಗಳು ಇಲ್ಲಿರುವುದು ಎದ್ದುಕಾಣುತ್ತದೆ.

ಸೀಗಿ–ಗೌರಿ ಸಂಪ್ರದಾಯಕ್ಕೆ ಸಂಬಂಧಿಸಿದ ಈ ಎರಡೂ ಕೃತಿಗಳನ್ನು ಗಮನಿಸಿದಾಗ ಸಹಜವಾಗಿಯೇ ಹುಟ್ಟುವ ಒಂದು ಅನುಮಾನವೆಂದರೆ, ಈ ಇಬ್ಬರು ಹೆಣ್ಣುಮಕ್ಕಳಲ್ಲಿ ಯಾವುದೋ ಒಂದು ಸಂಬಂಧವಿದೆ ಎಂಬುದು. ಜನಪದರು ಇಬ್ಬರೂ ಅಕ್ಕ–ತಂಗಿಯರು ಎಂದು ನಂಬುತ್ತಾರೆಂಬ ವಿವರವೂ ನಮಗೆ ದೊರೆಯುತ್ತದೆ. ಅದರಲ್ಲೂ ಡಾ. ದುರಗಿ ಅವರು ತಮ್ಮ ಪ್ರಸ್ತಾವನೆಯಲ್ಲಿ ಒದಗಿಸುವ ಎರಡು ಪೌರಾಣಿಕ ಕಥೆಗಳ ಕಡೆ ನಮ್ಮ ಲಕ್ಷವನ್ನು ಹಾಕಬೇಕು. ಅಲ್ಲಿರುವ ಸಂಗತಿ ಎಂದರೆ, ಪಾರ್ವತಿಯ ಮೊದಲಿನ ಕಳೆ ಕಪ್ಪಾಗಿತ್ತು. ಆಕೆಯೇ ಕಾಳಿ. ಶಿವನು ಹಂಗಿಸಲು, ಕಾಳಿ ದೇಹ ತ್ಯಾಗ ಮಾಡಿ ಗೌರ ವರ್ಣದವಳಾಗಿ ಪರ್ವತರಾಜನ ಮಗಳಾಗಿ ಜನಿಸಿದಳು ಎಂಬುದು ಒಂದು ಕಥೆ. ಇನ್ನೊಂದು ಕಥೆಯಂತೆ ಶುಂಭ–ನಿಶುಂಭರ ತೊಂದರೆಗೆ ಒಳಗಾದ ದೇವತೆಗಳು ಪಾರ್ವತಿಯನ್ನು ಮೊರೆ ಹೊಗಲು, ಆಕೆಯ ಶರೀರದಿಂದ ಕೌಶಿಕಿ ಎಂಬ ವೀರಾಗ್ರಣಿ ಜನಿಸಿ, ರಾಕ್ಷಸರನ್ನು ಸಂಹಾರ ಮಾಡಿದಳು. ಕೌಶಿಕಿ ಹುಟ್ಟಿದ ಮೇಲೆ ಪಾರ್ವತಿ ಕಪ್ಪಾಗಿ ಕಂಡಳು. ಶಿವ ಈಕೆಯನ್ನು ಕಾಳಿ ಎಂದು ಹಂಗಿಸಲು, ತಪಸ್ಸು ಮಾಡಿ ಗೌರ ವರ್ಣವನ್ನು ಪುನಃ ಪಡೆದಳು ಎಂಬುದು ಎರಡನೇ ಕಥೆ.

ಎರಡರಲ್ಲೂ ಪಾರ್ವತಿ ಒಂದು ಸ್ಥಿತಿಯಲ್ಲಿ ಕಾಳಿಯಾಗಿದ್ದಳು. ಆ ಮೇಲೆ ಆಕೆ ಇನ್ನೊಂದು ಸ್ಥಿತಿಯಲ್ಲಿ ಗೌರ ವರ್ಣದವಳಾಗಿ ಗೌರಿಯಾದಳು. ಈ ಸಂಗತಿಯನ್ನು ಇಟ್ಟುಕೊಂಡರೆ, ಸೀಗಿ–ಗೌರಿ ಸಂಪ್ರದಾಯಗಳು ಪಾರ್ವತಿಯ ಈ ಎರಡು ಸ್ಥಿತಿಗಳನ್ನು ಹೇಳುತ್ತಿರಬಹುದೇ? ಈ ಬಗೆಗೆ ವಿಚಾರಿಸಬೇಕು. ಸೀಗಿ ಪಾರ್ವತಿಯ ಕಾಳಿಯ ರೂಪವೆಂದೂ, ಗೌರಿ ಆಕೆಯ ಗೌರವರ್ಣದ ರೂಪವೆಂದೂ ಅನುಮಾನಿಸಲು ಇಲ್ಲಿ ಅವಕಾಶವಾಗುತ್ತಿದೆ. ಹೀಗಾಗಿಯೇ ಈ ಸಂಪ್ರದಾಯಗಳ ಆಚರಣೆಗಳು ಒಂದಾದ ನಂತರ ಮತ್ತೊಂದು ಬರುತ್ತಿರಬಹುದು. ಮೊದಲಿನ ಅವತಾರವೇ ಕಪ್ಪು, ಎರಡನೇ ಅವತಾರವೇ ಗೌರ. ಹಾಡುವ ಹಾಡುಗಳೂ ಒಂದೇ ಬಗೆಯಾಗಿ ಕಾಣುತ್ತವೆ. ಅಂದರೆ ಅಲ್ಲಿನ ಹಾಡುಗಳನ್ನು ಇಲ್ಲಿ, ಇಲ್ಲಿನ ಹಾಡುಗಳನ್ನು ಅಲ್ಲಿ ಹಾಡುತ್ತ ಬರಲಾಗಿದೆ. ಸೀಗಿ

ಅವತಾರ ಕಪ್ಪಾಗಿರುವುದರಿಂದ ಮಣ್ಣಿನಿಂದ, ಹೆಂಡಿಯಿಂದ ಆಕಾರ ಕೊಡುವಂತೆ ತೋರುತ್ತದೆ. ಗೌರಿ ಮಾತ್ರ 'ಕಂಚಿನ ಗೌರಿ' ಆಕಾರದಲ್ಲಿ ಕಾಣುತ್ತಾಳೆ. ಈಕೆಯನ್ನು ಬ್ರಾಹ್ಮಣರೂ ಪೂಜಿಸುತ್ತಾರೆ. ಆದರೆ ಸೀಗೆಯನ್ನು ಬ್ರಾಹ್ಮಣರು ಪೂಜಿಸುವುದಿಲ್ಲ. ಸೀಗಿಯನ್ನು ಕಳಿಸಿ, ಗೌರಿಯನ್ನು ಆಡಲು ಹೊರಡುವ ಕಿಶೋರಿಯರು ಈ ಸೀಗಿ ಮತ್ತು ಗೌರಿಯರನ್ನು ಪ್ರತಿನಿಧಿಸುತ್ತಾರೆ. "ಸೀಗೆ ಹಾಡುಗಳೆಂದು ಮತ್ತು ಗೌರಿಯ ಹಾಡುಗಳೆಂದು ಪ್ರತ್ಯೇಕವಾದ ಹಾಡುಗಳಿಲ್ಲ. ಇಬ್ಬರ ಆಚರಣೆಯಲ್ಲಿ ಹಾಡುವ ಹಾಡುಗಳು ಮಾತ್ರ ಒಂದೇ ತೆರನಾಗಿವೆ. ಜನಪದ ಸಂಸ್ಕೃತಿಯ ನೆಲೆಯಲ್ಲಿ ನೋಡಿದಾಗ ಸೀಗೆ-ಗೌರಿ ಬೇರೆ ಬೇರೆ ಅಲ್ಲ" ಎಂಬ ಡಾ. ಶಕುಂತಲಾ ದುರಗಿ ಅವರ ಅಭಿಪ್ರಾಯವೂ ಇಲ್ಲಿ ಗಮನಾರ್ಹವೆನಿಸುತ್ತದೆ. ಈ ಬಗೆಗೆ ಇನ್ನೂ ಅಧ್ಯಯನ ನಡೆಯಬೇಕು.

ಡಾ. ಶಕುಂತಲಾ ದುರಗಿ ಅವರು ತಮ್ಮ ಪ್ರಸ್ತಾವನೆಯನ್ನು ಮಾಹಿತಿಪೂರ್ಣವಾಗಿ ವಿವರಗೊಳಿಸಿದ್ದಾರೆ. ಸೀಗಿ-ಗೌರಿ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಇಷ್ಟೊಂದು ಮಾಹಿತಿಗಳನ್ನು ಕಲೆಹಾಕಿ ವಿಶ್ಲೇಷಿಸಿರುವುದು ಗಮನಿಸುವಂತಿದೆ. ತಮಗೆ ಲಭ್ಯವಾದ ವಕ್ತಾರರಿಂದ ಹಲವಾರು ಬಗೆಯ ಮಾಹಿತಿಗಳನ್ನು ಕಲೆಹಾಕಿ, ಅವುಗಳನ್ನು ಕ್ರಮವಾಗಿ ವಿವರಿಸಿದ್ದಾರೆ. ಹೀಗಾಗಿ ಒಂದೊಂದು ಗ್ರಾಮದಲ್ಲೂ ಈ ಸಂಪ್ರದಾಯಗಳಿದ್ದರೂ ಕ್ರಿಯಾಚರಣೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಾಣುವುದು ಸಹಜ. ಆದರೆ ಇವುಗಳನ್ನು ಆಚರಣೆ ಮಾಡುವುದು ಬೆಳದಿಂಗಳಿನಲ್ಲಿ ಎಂಬುದನ್ನು ಅವರು ಗಮನಿಸಿದ್ದಾರೆ. ಹೀಗಾಗಿ ಈ ಆಚರಣೆಗಳು ಬೆಳಂದಿಗಳ ಪೂಜೆಯಂತಿವೆ ಎಂಬ ಅವರ ಅನುಮಾನವೂ ಗಮನಾರ್ಹವೆನಿಸುತ್ತದೆ. "ದೀಪಾವಳಿಯ ಪಾಡ್ಯದ ದಿನದಂದು ಕುಂಬಾರನ ಮನೆಯಿಂದ ಮಣ್ಣಿನ ಕುಳ್ಳಿಯನ್ನು ತಂದು ಪೂಜಿಸಿ ಆಡುತ್ತಿದ್ದರು. ನಾಗರಿಕತೆ ಹಳ್ಳಿಗಳಿಗೆ ಕಾಲಿಟ್ಟಂತೆ ಮಣ್ಣಿನ ಕುಳ್ಳಿಗೆ ಬದಲಾಗಿ ಮರದಿಂದ ತಯಾರಿಸಿದ ಕುಳ್ಳಿಯನ್ನು ತರುತ್ತಾರೆ. ಅದರಲ್ಲಿ ಹಾಲು-ತುಪ್ಪ ಹಾಕಿ, ಮಂಗಳ ದ್ರವ್ಯಗಳಾದ ಅರಿಷಿಣ-ಕುಂಕುಮ ಇತ್ಯಾದಿಗಳನ್ನು ಏರಿಸಿ ಪೂಜಿಸುತ್ತಾರೆ"(ಪ್ರ.ಪು.೧೨). ಕೆಲವು ಕಡೆ ಮನೆಯಲ್ಲಿಯೇ ಮಣ್ಣಿನಿಂದ ಗೌರಿಯನ್ನು ತಯಾರಿಸಿ ಪೂಜಿಸುತ್ತಾರೆ. ಕೆಲವು ಕಡೆ ಕಟ್ಟಿಗೆಯ ಗೌರಿಯನ್ನೂ ಪೂಜಿಸುತ್ತಾರೆ.

'ಗೌರಿಕುಳ್ಳಿ' ಎಂದು ಸಣ್ಣ ಹೂಜಿ ಆಕಾರದ ಕಂಚಿನಿಂದ ಮಾಡಿದ 'ಗೌರಿಕುಳ್ಳಿ'ಗಳೆಂದೇ ಹೆಸರಿರುವ 'ಕಂಚಿನ ಗೌರಿಕುಳ್ಳಿ'ಗಳು ಭಾಂಡೆ ಅಂಗಡಿಯಲ್ಲಿಯೇ ದೊರೆಯುತ್ತವೆ. ಇವು ಸುಮಾರಾಗಿ ಎಲ್ಲರ ಮನೆಯಲ್ಲಿ ಇರುತ್ತವೆ. ಇವನ್ನು ಆರತಿಯ ತಟ್ಟೆಯಲ್ಲಿ ಯಾವಾಗಲೂ ಅಂದರೆ, ಆರತಿ ಬೆಳಗಲು ಆರತಿಯ ತಟ್ಟೆಯನ್ನು ಸಜ್ಜುಗೊಳಿಸುವಲ್ಲಿ ಈ ಗೌರಿಕುಳ್ಳಿಗಳನ್ನು ಇಟ್ಟಿರುವುದು ಕಲಬುರ್ಗಿ ಭಾಗದಲ್ಲಿ ಸಾಮಾನ್ಯವಾಗಿ ಕಾಣುತ್ತದೆ. ಇವನ್ನು ಹೂವಿನಿಂದ ಶೃಂಗರಿಸುತ್ತಾರೆ. ಹೀಗಾಗಿ ಈ ಕಂಚಿನ ಗೌರಿಕುಳ್ಳಿಗಳು ಎಲ್ಲರ ಮನೆಯಲ್ಲೂ ಇರುತ್ತವೆ. ಇವುಗಳನ್ನು ಕಂಚಿನಿಂದ ಮಾಡಿದ್ದರೂ 'ಕುಳ್ಳಿಗಳು' ಎಂದಿರುವುದು ಗಮನ ಸೆಳೆಯುವಂತಿದೆ. ಮಣ್ಣಿನ ಸಣ್ಣ ಪಾತ್ರೆಗಳಿಗೆ ಮಾತ್ರ ಕುಳ್ಳಿಗಳು ಎನ್ನುವುದು. ಹೀಗಾಗಿ ಗೌರಿ ಕುಳ್ಳಿಗಳನ್ನು ಮೊದಲು ಮಣ್ಣಿನಿಂದಲೇ ಮಾಡುತ್ತಿದ್ದರು ಎಂಬುದಕ್ಕೆ ಹೀಗೆ ಕುಳ್ಳಿ ಪದ ಉಳಿದುಕೊಂಡು ಬಂದಿರಬೇಕು. ಈ ಕಂಚಿನ ಗೌರಿಕುಳ್ಳಿಗಳಿಗೆ ಜೇಕಿನ

ಎಳೆಗಳನ್ನು ಸೇರಿಸಿ, ಜೆಡೆ ಹೆಣೆದಂತೆ ಹೆಣೆದು, ಅವಕ್ಕೆ ಹೂಗಳಿಂದ ಶೃಂಗರಿಸಿ, ಜಡೆಯನ್ನು ಹಿಡಿದುಕೊಂಡು, ಹುಣ್ಣಿವೆ ಸಮೀಪಬಂದಾಗ ಗೌರಿ ಆಡಲೆಂದು ಊರಹೊರಗಿನ ಸುಂದರವಾದ ಪ್ರದೇಶಕ್ಕೆ ಗೌರಿಹಾಡುಗಳನ್ನು ಹಾಡುತ್ತ ತೆರಳುತ್ತಾರೆ. ಅಲ್ಲಿ ಗೌರಿಕುಳ್ಳಿಗಳನ್ನು ಒಂದೆಡೆ ಇಟ್ಟು, ನಾನಾ ತರದ ಆಟಗಳನ್ನು ಆಡುತ್ತಾರೆ. ತಾವು ಊಟ ಮಾಡಿ, ತಿರುಗಿಬರುವಾಗ ಸುಮಾರಾಗಿ ಎಲ್ಲ ಕಡೆ ಕುಂಯಾ ಮಾಡಿ ಆಡುವ ರೂಢಿ ಇದ್ದಂತೆ ತೋರುತ್ತದೆ. ಇದನ್ನು ಶಶಿಕಲಾ ವಸ್ತ್ರದ ಅವರೂ ಉಲ್ಲೇಖ ಮಾಡಿದ್ದಾರೆ. ಕುಂಯಾ ಎಂದು ಗುರುತಿಸಲು ಮಾಡುವ ಆಕಾರಗಳು ಭಿನ್ನವಾಗಿರಬಹುದು. ಒಂದು ಕಲ್ಲನ್ನೇ ಇಟ್ಟು ಅದನ್ನು ಕುಂಯಾ ಎಂದು ಭಾವಿಸುತ್ತಾರೆ. ಕುಂಯಾ ಈಗಾಗಲೇ ಸತ್ತಿದ್ದಾನೆ. ಸತ್ತ ಕುಂಯಾನ ಮೇಲೆ ಒಣಗಿದ ಎಲೆಗಳನ್ನು ತೂರುತ್ತ, ಹಸಿಯ ಫಳ್ಯಾಗಳಿಂದ ಆತನಿಗ ಬಡಿಯುತ್ತ, ಹೆಣಕ್ಕೆ ಅಳುವಂತೆ ನಟಿಸುತ್ತಾರೆ.

ಕುಂಯಾ ಕುಂಯಾ ನೀ ಹ್ಯಾಂಗ ಸತ್ತಿ ಕುಂಯಾ।
ನಾ ಹಪ್ಪಳ ಮಾಡ್ದಲ ಕುಂಯಾ
ನೀ ಸಪ್ಪಳ ಇಲ್ದೆ ಹೋದೆಲ್ಲ ಕುಂಯಾ।
ನಾ ಹೋಳಿಗಿ ಮಾಡಿದ್ಯಾ ಕುಂಯಾ
ನೀ ಉಣಲೆ ಇಲ್ಲ ಕುಂಯಾ
ಹೋಯ್ಕೋತ ಹೋದೆಲ್ಲ ಕುಂಯಾ
ನಾ ಹ್ಯಾಂಗ ಮಾಡ್ಲಿ ಕುಂಯಾ

ಜನಪದ ಸಾಹಿತ್ಯದಲ್ಲಿ ದೊರೆಯುವ ಹೆಣದ ಮುಂದೆ ಹಾಡುವ ಶೋಕ ಗೀತೆಯಂತೆ ನಟಿಸುವ ಹಾಡು ಇದು. ಈ ಕುಂಯಾ ಯಾರು? ಈ ಕಿಶೋರಿಯರು ಹೀಗೆ ಕುಂಯಾನನ್ನು ಮಾಡಿ ಆತ ಸತ್ತಂತೆ ಭಾವಿಸಿ, ನಟಿಸಿ ಅಳುವುದು ಏಕೆ? ಇವುಗಳ ಬಗ್ಗೆ ಯಾವ ಮಾಹಿತಿಗಳೂ ದೊರೆಯುವುದಿಲ್ಲ. ಹುಣ್ಣಿವೆ ದಿನದ ವರೆಗೂ ಈ ಬಗೆಯ ಗೌರಿ ಆಡುವುದು ನಡೆಯುತ್ತದೆ. ಹುಣ್ಣಿವೆಯ ದಿನ ನಡೆಯುವ ಗೌರಿಯ ಪೂಜೆ ಕೊನೆಯದು.

ಬಾಂಬೆ ಕರ್ನಾಟಕದಲ್ಲಿ ಗೌರಿ ಆಡುವ ಬಗೆಗೆ ಇರುವ ಪದ್ಧತಿಯನ್ನೂ ಡಾ. ಶಕುಂತಲಾ ದುರಗಿ ಅವರು ವಿವರಿಸುತ್ತಾರೆ. ಕುಂಬಾರನ ಮನೆಯಿಂದ ಶಿವ–ಪಾರ್ವತಿ ಜೊತೆ ಇರುವ ಗೊಂಬೆಗಳನ್ನು ತಂದು, ಒಂದು ಯಾವುದಾದರೂ ಗುಡಿ, ಮಠ ಅಥವಾ ಚಾಜ ಇರುವ ಮನೆಯವರು ಗೌರಮ್ಮನನ್ನು ಕೂಡ್ರಿಸುತ್ತಾರೆ. ಗೌರಿಯನ್ನು ಕೂಡಿಸಿದಲ್ಲಿಯೇ ಕನ್ಯೆಯರು ಹೋಗಿ ಪೂಜೆ ಮಾಡುತ್ತಾರೆ. ಗೌರಿ ಬಸುರಿಯೆಂದು ಒಂದು ದಿನ, ಹುಣ್ಣಿವೆಯ ದಿನದಂದು ಮಗು ಗಣಪನನ್ನು ತೊಟ್ಟಿಲಿಗೆ ಹಾಕುತ್ತಾರೆ. ಹುಣ್ಣಿವೆಯ ಮರುದಿನ ಗೌರವ್ವನನ್ನು ಗಂಡನ ಮನೆಗೆ ಕಳಿಸುವ ಕಾರ್ಯಕ್ರಮ. ಸಮೀಪದ ಬಾವಿ, ಕೆರೆ, ನದಿಗಳಿಗೆ ವಿಧಿವತ್ತಾಗಿ ಪೂಜಿಸಿ, ಹಾಡುಗಳನ್ನು ಹೇಳುತ್ತ ನೀರಿಗೆ ಹಾಕುತ್ತಾರೆ.

ಸೀಗಿ–ಗೌರಿ ಆಚರಣೆಗಳು ವಿಶೇಷವಾಗಿ ಬೆಳದಿಂಗಳ ದಿನಗಳಲ್ಲಿ ನಡೆಯುವುದು ಒಂದು ವಿಶೇಷ. ಇಲ್ಲಿಯ ಹಾಡುಗಳಲ್ಲಿ ಬೆಳದಿಂಗಳ ಪ್ರಸ್ತಾಪವಾಗುವುದು ಸಾಮಾನ್ಯ.

ಒಂದ ಸುತ್ತಿನ ಕೋಟೆ
ಅದರೊಳಗ ಹೊಂದಿ ಕುಂತಾನ ಬಸವ
ಬಸವಕ್ಕ ಬಸವೆನ್ನಿರಿ
ಬಸವನ ಪಾದಕ ಶರಣೆನ್ನಿರಿ
ಹೋಗ ಹೋಗ ಬಿಸಿಲ ಬಾರೆ ಬೆಳದಿಂಗಳ।

ಒಂದ ಗಿಡಕ ಒಂದ ಪತರಿ ಗೌರಮ್ಮಗ
ಶೆಲ್ಲ್ಯಾ ಮುಡಿದು ಬೆಲ್ಲ ಪತರೆ
ಪಾತ್ರಂ ಪರಿಮಾಡೆ ಗೌರಮ್ಮಗ
ಮುತ್ತಿನ ಶಿವದಾರ।

* * *

ಪ್ರಮುಖ ಸಂಗ್ರಹಗಳು :

೧೯೯೪ : ಶೀಗಿ ಹಾಡುಗಳು, (ಸಂ) ರಾಜೇಂದ್ರ ಯರನಾಳೆ, –ಶ್ರೀ ಸಿದ್ಧಲಿಂಗೇಶ್ವರ ಸಾಹಿತ್ಯ ಭಂಡಾರ, ವಿರಕ್ತಮಠ ಕುಸನೂರ(ಠಾಣಾ), ತಾ. ಔರಾದ, ಜಿ. ಬೀದರ.
೨೦೧೦ : ಸೀಗಿ–ಗೌರಿ ಹಾಡುಗಳು, (ಸಂ) ಡಾ. ಶಕುಂತಲಾ ದುರಗಿ, –ಉಜ್ವಲ ಪ್ರಕಾಶನ, 'ಚೇತನ', ವೆಂಕಟೇಶ ನಗರ, ಕಲಬುರಗಿ–೫೮೫ ೧೦೨

ಸಹಾಯಕ ಗ್ರಂಥಗಳು :

೧೯೬೩ : ಕನ್ನಡ ಜಾನಪದ ಗೀತಗಳು, ಡಾ. ಬಿ.ಎಸ್. ಗದ್ದಗಿಮಠ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯೮೭ : ಜಾನಪದ ಸಾಹಿತ್ಯ ದರ್ಶನ–೧೦, (ಸಂ) ಡಾ. ವೃಷಭೇಂದ್ರಸ್ವಾಮಿ, –ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

* * *

೩. ಮೋಹರಂ ಹಾಡುಗಳು :

ಭಾರತದ ಮುಸ್ಲೀಂ ಸಮುದಾಯ ಆಚರಣೆ ಮಾಡುವ ಮೋಹರಂ ಹಬ್ಬ ಅದು ಕೇವಲ ಮುಸ್ಲೀಂ ಬಾಂಧವರು ಆಚರಿಸುವ ಹಬ್ಬವಾಗದೆ, ಅದು ಇಡೀ ಜನಸಮುದಾಯದ ಹಬ್ಬವೆಂಬಂತೆ ಆಚರಣೆಯಾಗುತ್ತ ಬಂದಿದೆ. ನಗರ ಪ್ರದೇಶಗಳಲ್ಲಿ, ಕೇವಲ ಮುಸ್ಲೀಮ ಜನವಾಸವಾಗಿರುವಲ್ಲಿ ಮಾತ್ರ ಮೋಹರಂ ಆಚರಣೆ ಕಾಣುತ್ತದೆ. ಅಲ್ಲಿ ಉಳಿದ ಜನಸಮುದಾಯಗಳ ಪ್ರವೇಶ ಕಾಣುವುದಿಲ್ಲ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅದು ಸಂಪೂರ್ಣವಾಗಿ ಜನಪದ ಹಬ್ಬವಾಗಿಯೇ ಆಚರಣೆಯಾಗುವುದನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ಸಾಮಾನ್ಯವಾಗಿ ಎಲ್ಲ ಜನಸಮುದಾಯದಲ್ಲಿ ಪ್ರಚಲಿತದಲ್ಲಿರುವ ಕಥೆಗಳು ಸೇರಿಕೊಂಡಿವೆ. ಕಾಶೀಬಾಯಿ ಕಥೆ, ಸೋಮರಾಯ-ಭೀಮರಾಯ, ಸಾಮಾಜಿಕವಾಗಿ ಹೋರಾಟ ಮಾಡಿದ, ಸಮಾಜ ಸುಧಾರಣೆಗೆ ದುಡಿದ ನಾಯಕರ, ಜನಸಮುದಾಯದ ನಡುವೆ ಮಹಾತ್ಮರು ಶರಣರು ಎಂದು ಪ್ರಭಾವ ಬೀರಿದವರ ಬಗ್ಗೆಯೂ ಹಾಡುಗಳು ಹುಟ್ಟಿಕೊಂಡಿವೆ. ಜೊತೆಗೆ ರಾಮಾಯಣ ಮಹಾಭಾರತದ ಕಥೆಗಳನ್ನೂ ಈ ಸಂದರ್ಭದ ಹಾಡುಗಳಿಗೆ ಬಳಸಿಕೊಳ್ಳಲಾಗುತ್ತದೆ. ಹಾಡುವವರೂ ಹಾಡು ರಚಿಸುವವರೂ ಎಲ್ಲ ಜಾತಿ ಜನಾಂಗದ ಜನರೂ ಇದ್ದಾರೆ. ಮೋಹರಂ ಸಂದರ್ಭದಲ್ಲಿ ನಡೆಯುವ ಅಲಾಯಿ ಕುಣಿತ, ಲೇಜಿಮ್ ಕುಣಿತ, ಹುಲಿ ಕುಣಿತ, ಕರಡಿ ಕುಣಿತ, ಜಂಗೀ ಕುಣಿತ, ಹೆಜ್ಜೆ ಮೇಳ ಮುಂತಾದ ಕುಣಿತಗಳಲ್ಲಿ ಎಲ್ಲರೂ ಭಾಗವಹಿಸುತ್ತಾರೆ.

ಸಾಮಾನ್ಯ ಜನ ತಮಗೆ ಒಳ್ಳೆಯದಾಗಲಿ ಎಂದು ಮೋಹರಂ ಹಬ್ಬಗಳಲ್ಲಿ ಕೂಡ್ರಿಸುವ ಪಂಜಾಗಳಿಗೆ ಬೇಡಿಕೊಂಡು ಹರಕೆ ಒಪ್ಪಿಸುತ್ತಾರೆ. ಕಾಯಿ ಕರ್ಪೂರ ಮಾಡಿಸುತ್ತಾರೆ. ಪಂಜಾಗಳಿಗೆ ಹೊಸ ಬಟ್ಟೆಗಳನ್ನು ಹೊದಿಸುತ್ತಾರೆ. ಊರವರೆಲ್ಲ ನೈವೇದ್ಯ ಮಾಡಿ ಅರ್ಪಿಸುತ್ತಾರೆ.

ಮೋಹರಂ ಒಂದು ತಿಂಗಳ ಹೆಸರು. ಈ ಸ್ಮರಣೆಯಲ್ಲಿ ಮೋಹರಂ ಆಚರಣೆ ನಡೆಯುತ್ತದೆ. ನಮ್ಮಲ್ಲಿಯ ಮಹಾಭಾರತದ ಯುದ್ಧಭೂಮಿ ಕುರುಕ್ಷೇತ್ರದಂತೆ ಕರ್ಬಲಾ ಎಂಬುದು ಅರಬಸ್ಥಾನದಲ್ಲಿಯ ಒಂದು ಯುದ್ಧಭೂಮಿ. ಈ ಯುದ್ಧಭೂಮಿಯಲ್ಲಿಯೇ ಪೈಗಂಬರನ ಮೊಮ್ಮಕ್ಕಳಿಗೂ ಮತ್ತು ವಿರೋಧಿ ಪಾಳಯದವರಿಗೂ ಘನಘೋರ ಯುದ್ಧ ನಡೆದು, ಮೋಹರಂ ತಿಂಗಳ ಹತ್ತನೇ ದಿನ ವೈರಿಯಾದ ಏಜಿದನ ಸೈನ್ಯಕ್ಕೆ ಮಹಮ್ಮದ ಪೈಗಂಬರ್ ಅವರ ಮೊಮ್ಮಕ್ಕಳಾದ ಹಸನ ಮತ್ತು ಹುಸೇನ ಬಲಿಯಾಗುತ್ತಾರೆ. ಆ ಸ್ಮರಣೆಗೆ ಮೋಹರಂ ಆಚರಣೆ ನಡೆಯುತ್ತದೆ.

ಮಹಮ್ಮದ ಪೈಗಂಬರರು ಪ್ರಜಾರಾಜ್ಯವನ್ನು ಸ್ಥಾಪಿಸಿದರು. ಒಬ್ಬರಾದ ನಂತರ ಒಬ್ಬರು ಆಡಳಿತಗಾರರನ್ನು ಆರಿಸುವ ಪದ್ಧತಿ ಖಿಲಾಫತ್ ಅನ್ನು ಪೈಗಂಬರರೇ ಜಾರಿಯಲ್ಲಿ

ತಂದರು. ಪೈಗಂಬರರ ಮಗಳಾದ ಬೀಬೀ ಫಾತಿಮಾಳ ಗಂಡ ಹಜರತಲಿ ಅತ್ಯಂತ ಜನಪ್ರಿಯ ಆಡಳಿತಗಾರನಾಗಿ ಪ್ರಸಿದ್ಧಿಯನ್ನು ಪಡೆದನು. ಇವರಿಗೆ ಹಸನ್ ಮತ್ತು ಹುಸೇನ್ ಎಂಬ ಇಬ್ಬರು ಮಕ್ಕಳಿದ್ದರು. ಹಜರತ ಅವರು ತಾವು ಐದು ವರ್ಷ ಆಡಳಿತ ನಡೆಸಿದ ನಂತರ ತಮ್ಮ ಹಿರಿಯ ಮಗ ಹಸನ್ ಅವರಿಗೆ ಆಡಳಿತಗಾರರನನ್ನಾಗಿ ನೇಮಿಸಿದರು. ಇವರ ನಂತರ, ಮೊದಲಿನಿಂದಲೂ ಈ ಗದ್ದುಗೆಯ ಮೇಲೆ ಕಣ್ಣಿಟ್ಟಿದ್ದ ಸಿರಿಯಾ ಪ್ರಾಂತದ ಆಡಳಿತಗಾರನಾಗಿದ್ದ ಮುಆವಿಯಾ ಅವರನ್ನು ಹಸನ್ ಅವರು ರಾಜ್ಯಾಡಳಿತವನ್ನು ಬಿಟ್ಟುಕೊಟ್ಟರು. ಈತ ತನ್ನ ನಂತರ ತನ್ನ ಮಗ ಏಜಿದನೇ ಆಡಳಿತಗಾರನಾಗಬೇಕೆಂದು ಸಾರಿದನು. ಇದಕ್ಕೆ ಹಸನ್ ಅವರ ಸಹೋದರ ಹುಸೇನ್ ವಿರೋಧವನ್ನು ವ್ಯಕ್ತಪಡಿಸಿದ. ಹೀಗಾಗಿ ಹುಸೇನ ಹಾಗೂ ಏಜಿದ ಇವರ ನಡುವೆ ಸಂಘರ್ಷ ನಡೆಯಿತು. ಕರ್ಬಲಾ ಅಡವಿಯಲ್ಲಿ ಘನಘೋರ ಯುದ್ಧನಡೆದು ಹಸನ್ ಹಾಗೂ ಹುಸೇನ್ ಅವರ ಕೊಲೆಯಾಯಿತು. ಏಜಿದನು ಅತ್ಯಂತ ಕ್ರೂರಿಯಾಗಿದ್ದನು. ಅತ ಹಸನ್ ಮತ್ತು ಹುಸೇನ ಅವರ ಚಿಕ್ಕಮಕ್ಕಳಿಗೂ ನೀರು ಸಿಗದಂತೆ ಮಾಡಿ ಕೊಂದು ಹಾಕಿದನು. ಹೀಗಾಗಿ ಮಹಮ್ಮದ ಪೈಗಂಬರರ ಮಗಳ ಮಕ್ಕಳಾದ ಹಸನ್ ಮತ್ತು ಹುಸೇನ್ ಅವರ ಸ್ಮರಣೆಗಾಗಿ ಮೋಹರಂ ಹಬ್ಬ ಆಚರಣೆಗೆ ಬಂದಿತು.

ಕನ್ನಡಕ್ಕೆ ಮುಸ್ಲೀಮ ಜನಪದ ಕವಿಗಳ ಕೊಡುಗೆ ಇರುವಂತೆ, ಇತರ ಜನಸಮುದಾಯಕ್ಕೆ ಸೇರಿದ ಕವಿಗಳ ಕೊಡುಗೆ ಮೋಹರಂ ಆಚರಣೆಯಲ್ಲೂ ಇದೆ. ಈ ಮೇಲೆ ಹೇಳಿದಂತೆ ಹಾಡು ರಚಿಸುವವರೂ, ಹಾಡುವವರೂ ಮುಸ್ಲೀಮೇತರ ಜನಸಮುದಾಯಕ್ಕೆ ಸೇರಿದವರೇ ಜಾಸ್ತಿಯಾಗಿರುತ್ತಾರೆ. ಮುಸ್ಲೀಮರು ಇಲ್ಲದ ಗ್ರಾಮಗಳಲ್ಲೂ ಮೋಹರಂ ಆಚರಣೆ ನಡೆಯುವ ಉದಾಹರಣೆಗಳು ದೊರೆಯುತ್ತವೆ. ಪಂಜಾಗಳನ್ನು ಮುಸ್ಲೀಮೇತರರೂ ಹಿಡಿಯುವ ಪದ್ಧತಿ ಕೆಲವು ಗ್ರಾಮಗಳಲ್ಲಿ ಇರುವುದು ಕಂಡುಬರುತ್ತದೆ. ಹೀಗಾಗಿ ಮೋಹರಂ ಅನ್ನು ಸಾಮಾನ್ಯರ ಹಬ್ಬವಾಗಿ ಮಾರ್ಪಡಿಸಿದ ಕೀರ್ತಿ ಮುಸ್ಲೀಮೇತರ ಜನಸಮುದಾಯಕ್ಕೆ ಸಲ್ಲುತ್ತದೆ.

ಈ ಸಂದರ್ಭದಲ್ಲಿ ಹಾಡುವ ಹಾಡುಗಳ ಸಂಗ್ರಹಗಳನ್ನು ಕನ್ನಡದಲ್ಲಿ ಪ್ರಕಟಿಸಿದ ಉದಾಹರಣೆಗಳೂ ನಮಗೆ ದೊರೆಯುತ್ತವೆ. ೧೯೭೦ರಲ್ಲಿಯೇ ಡಾ. ನಿಂಗಣ್ಣ ಸಣ್ಣಕ್ಕಿ ಅವರು 'ಹೇಳುವೆ ಮಜಕೂರ' ಎಂಬ ಹೆಸರಿನಲ್ಲಿ ಒಂದು ಕೃತಿಯನ್ನು ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಮೋಹರಂ ಆಚರಣೆಯ ಹಿನ್ನೆಲೆಯನ್ನು ವಿವರಿಸಿದ್ದಾರೆ. ಈ ಕೃತಿಯಲ್ಲಿ ೪೩ ಹಾಡುಗಳನ್ನು ಸಂಗ್ರಹಿಸಿದ್ದು, ಅವುಗಳನ್ನು ಕರ್ಬಲ್ ಪದ, ಚರಿತ್ರೆಗಳು, ಕಥನಕವನಗಳು, ಬೋಧನೆಗಳು, ವಾದವಿವಾದಗಳು ಎಂಬ ಐದು ಪ್ರಕಾರಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. ಇದರಲ್ಲಿ ಮೇಲಿನಿಂದ ಪ್ರಾರಂಭದ ಒಂಭತ್ತು ಹಾಡುಗಳು ಮಾತ್ರ ಕರ್ಬಲಾ ವಿಷಯಕ್ಕೆ ಸಂಬಂದಿಸಿದ ಹಾಡುಗಳಾಗಿದ್ದು, ಉಳಿದುವೆಲ್ಲ ಹಾಡುಗಳು ಬೇರೆ ವಿಷಯಕ್ಕೆ ಸಂಬಂದಿಸಿವೆ. ಗಾಂಧೀಜಿ, ಟಿಪ್ಪೂ ಸುಲ್ತಾನರಿಗೆ ಸಂಬಂಧಿಸಿದ ಹಾಡುಗಳೂ ಇಲ್ಲಿವೆ. ಇಲ್ಲಿಯ ಹಾಡುಗಳ ರಚನಾಕಾರರನ್ನು ಗಮನಿಸಿದರೆ, ಸುಮಾರಾಗಿ ಲಾವಣಿ–ಗೀಗೀ ಹಾಡುಗಳನ್ನು ರಚಿಸಿದ ಕವಿಗಳೇ ಇವನ್ನು ರಚಿಸಿದ್ದರಿಂದ ಲಾವಣಿಗಳಲ್ಲಿ ಪ್ರಚಲಿತದಲ್ಲಿರುವ

ಕಥೆಗಳನ್ನೇ ಮೋಹರಂ ಹಾಡುಗಳಿಗೆ ಬಳಸಿಕೊಂಡಿದ್ದಾರೆ. ಹೀಗಾಗಿಯೇ ವಾದವಿವಾದದ ಹಾಡುಗಳೂ ಇಲ್ಲಿ ಸೇರಿಕೊಂಡಿವೆ.

ಕರ್ಬಲಾ ಹಾಡುಗಳೂ ಸಾಮಾನ್ಯೀಕರಣಗೊಂಡಿರುವುದು ಕಾಣಿಸುತ್ತದೆ. ಮಹಮ್ಮದ ಪೈಗಂಬರರು ನಮ್ಮ ಜನಗಳಿಗೆ ಶರಣರಾಗಿ ಕಾಣುತ್ತಾರೆ.

ಶರಣ ಪೈಗಂಬರ ಹರಡ್ಯಾರ ಇಸ್ಲಾಂ
ಶರಣ ಪೈಗಂಬರ ಹರಡ್ಯಾರ ಇಸ್ಲಾಂ
ಇಸ್ಲಾಂ ಅಂದರೆ ತಿಳಿಸುವೆ ಶಾಂತಿಯನಾ

ಎನ್ನುತ್ತಾನೆ ಒಬ್ಬ ಕವಿ. ಈ ಕೃತಿಯಲ್ಲಿಯ ಹಾಡುಗಳನ್ನು ಹಾಡಿದ ವಕ್ತಾರರ ಪಟ್ಟಿಯನ್ನು ಗಮನಿಸಿದರೆ, ಅಲ್ಲಿ ೧೧ ಜನಗಳ ಮಾಹಿತಿಗಳಿವೆ. ಅದರಲ್ಲಿ ಐದು ಜನ ಮುಸ್ಲೀಮರಲ್ಲದವರೇ ಇದ್ದಾರೆ. ಈಶ್ವರಯ್ಯಾ ಮಠದ, ಕಾಮರಾಯ ಹೆಗಡಿ, ಕಾಳಪ್ಪ ಪತ್ತಾರ, ಶಂಕರ ದರೂರ, ದ್ಯಾವಪ್ಪ ರಕ್ಷಿ. ಇವರೆಲ್ಲ ಲಿಂಗಾಯತ, ಕುರುಬ, ವಿಶ್ವಕರ್ಮ ಹೀಗೆ ಭಿನ್ನ ಭಿನ್ನ ಜನಸಮುದಾಯಗಳಿಗೆ ಸೇರಿದ ಜನಗಳೇ ಆಗಿದ್ದಾರೆ. ಅದರಲ್ಲೂ ಇಲ್ಲಿಯ ಹೆಚ್ಚಿನ ಹಾಡುಗಳನ್ನು ಹಾಡಿದವರು ಈಶ್ವರಯ್ಯಾ ಮಠದ ಅವರು ಎಂಬುದು ಗಮನಾರ್ಹ ಸಂಗತಿಯಾಗಿದೆ. ಈ ಹಾಡುಗಳನ್ನು ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಿಂದ ಸಂಗ್ರಹಿಸಲಾಗಿದೆ.

ಇಲ್ಲಿ ನಾವು ಗಮನಿಸಬೇಕಾದ ಸಂಗತಿಗಳು ಬೇಕಾದಷ್ಟಿವೆ. ಸಾಮಾನ್ಯರಿಗೆ ಕರ್ಬಲಾ ಕಥೆ ಸಂಪೂರ್ಣವಾಗಿ ತಿಳಿದಿರಲು ಸಾಧ್ಯವಿಲ್ಲ. ಕಥೆಯ ಸ್ಥೂಲ ವಿವರಗಳನ್ನು ಮಾತ್ರ ಅವರು ಗಮನಿಸಿರುತ್ತಾರೆ. ಆದುದರಿಂದ ಕರ್ಬಲಾ ಕಥೆಗಳನ್ನು ರಚಿಸುವಾಗ ಅವುಗಳಲ್ಲಿ ಸಹಜವಾಗಿ ಕರ್ನಾಟಕ ಸಂಸ್ಕೃತಿ ಸೇರಿಕೊಳ್ಳುತ್ತದೆ. ಇದು ಜನಪದ ಸಾಹಿತ್ಯದ ಪ್ರಮುಖವಾದ ಲಕ್ಷಣವೂ ಹೌದು. ಕಾಶಿಮನೆಂಬ ವೀರ ಯುದ್ಧಕ್ಕೆ ಹೊರಟು ನಿಂತ ಸನ್ನಿವೇಶವನ್ನು ಕವಿ ಹೀಗೆ ಬಣ್ಣಿಸುತ್ತಾನೆ:

ಅವರ ಹೊರಡುವ ವ್ಯಾಳೇಕ
ಕಾಗಿಯ ಹಿಂಡು ಬಂದಿತ್ರಿ ಎಡಕ
ಗುಡಿಯ ಮ್ಯಾಲ ಹಲ್ಲಿ ನುಡದಿತ್ರಿ ಟಕಟಕ
ಹಂಗ ಬಂದೀತ್ರಿ ಬಲಕ ಽ
ಅಪಶಕುನ ಆಗುವದಕ ಽ ।
ಶಲ್ಲೆವ ಶರಗ ಹಿಡಿದು ಎಲ್ಲೆಲ್ಲಿ ಬಿಡವಳ್ಳ
ಮಲ್ಲಿಗಿ ಹೂವಿನ ತೂಕ
ನಮನ ಬಿಟ್ಟ ಹೋಗತಿದಿ ಕರಮಕ
ನೀವು ಬರುದು ಎಷ್ಟು ದಿನಕ ಽ
ಹೇಳರಿ ಈ ಕ್ಷಣಕ ಽ ।

ಇಲ್ಲಿಯ ಸಾಲುಗಳನ್ನು ಓದಿದಂತೆ ಇವು ಅರಬಸ್ಥಾನದಿಂದ ಬಂದ ಮಾತುಗಳು ಎನ್ನಲು ಯಾವ ಕುರುಹೂ ಇಲ್ಲ. ಕಾಶಿಮ ಎನ್ನುವ ಒಂದು ಹೆಸರನ್ನು ತೆಗೆದು

ಹಾಕಿದರೆ ಇದು ಶುದ್ಧಾಂಗವಾಗಿ ಭಾರತೀಯ ಸಂದರ್ಭದ ಕಥೆಯೇ. ಮೊದಲಿನ ನುಡಿಯಲ್ಲಿ ನಾವು ನಂಬುವ ಶಕುನಗಳು, ಎರಡನೇ ನುಡಿಯಲ್ಲಿ ಗಂಡ ಯುದ್ಧಕ್ಕೆ ಹೊರಟು ನಿಂತಾಗ ಗೋಳಾಡುವ ಹೆಂಡತಿ ನಮಗೆ ಕಾಣುತ್ತಾರೆ. ಕೊನೆಗೆ ಕಾಶಿಮ ಯುದ್ಧದಲ್ಲಿ ಮಡಿದ ಸುದ್ದಿ ಮನೆಗೆ ಬಂದಾಗಿನ ದೃಶ್ಯವನ್ನು ಕವಿ ಹೀಗೆ ಚಿತ್ರಿಸುತ್ತಾನೆ:

ಕಟ್ಟಿದ ಕರಿಮಣಿ ಚಟ್ಟಣ ಹರಿದು
ಒಗದ ಬಿಟ್ಟಾಳ್ರಿ ನೆಲಕ
ಕೈಯಾನ ಬಳಿ ಒಡದಾಳ್ರಿ ಹಸಿರ ಗಿಡಕ
ಮೋಜಿನ ಅಣ್ಣಿಗೇರಿ ಕಡಕs
ರಿವಾಯತ ಹೇಳುದಕs।

ಇದು ಅಣ್ಣಿಗೇರಿಯ ಸಂಸ್ಕೃತಿಯನ್ನೇ ಪ್ರತಿಬಿಂಬಿಸುವ ಹಾಡಾಗಿ ಪರಿವರ್ತನೆ ಆಗಿರುವುದು ಸ್ಪಷ್ಟವಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ಸಂಗ್ರಹಿಸಿದ **'ಹಳ್ಳಿ ಹಬ್ಬಿಸಿದ ಹೂಬಳ್ಳಿ'** (೧೯೮೧) ಮೋಹರಂ ಹಾಡುಗಳ ಒಂದು ಉತ್ತಮ ಸಂಗ್ರಹ. ಇದರ ಸಂಪಾದಕರು ಜಿ.ಬಿ.ಖಾಡೆ ಅವರು. ಈ ಕೃತಿಯ ಹಾಡುಗಳನ್ನು ಸಂಗ್ರಹಿಸಲು ತಾವು ಕ್ಷೇತ್ರಕಾರ್ಯ ಕೈಕೊಂಡ ಗ್ರಾಮಗಳನ್ನು ಸಂಪಾದಕರು ಹೀಗೆ ಪಟ್ಟಿ ಮಾಡಿಕೊಟ್ಟಿದ್ದಾರೆ. "ಬಿಜಾಪೂರ ಜಿಲ್ಲೆಯ ತೊದಲಬಾಗಿ, ಚಿಕ್ಕಲಕಿ, ನಾಗನೂರು, ಕನ್ನಳ್ಳಿ, ಗದ್ದಾಳ, ಗೋಠೆ, ತಿಕೋಟಾ, ಹುಬನೂರ, ಬಾಬಾನಗರ, ಬಿಜ್ಜರಗಿ, ಗುಣದಾಳ, ಅರ್ಜುಣಗಿ, ಕೆರೂರ, ಹಾಲಿಗೇರಿ ಮುಂತಾದ ಇನ್ನೂ ಎಷ್ಟೋ ಹಳ್ಳಿಗಳನ್ನು ಸುತ್ತಾಡಿ ಕಷ್ಟ ಪಟ್ಟು ಈ ಕರಬಲ ಹಾಡುಗಳನ್ನು ಸಂಗ್ರಹಿಸಿದ್ದೇನೆ" (ಪ್ರ.ಪು.೮). ಖಾಡೆ ಅವರು ಈ ಕೃತಿಯಲ್ಲಿಯ ಹಾಡುಗಳನ್ನು ರಚಿಸಿದ ಮತ್ತು ಹಾಡಿದ ಕವಿ ಮತ್ತು ಕಲಾವಿದರ ಹೆಸರುಗಳನ್ನು ಕೊಟ್ಟಿದ್ದಾರೆ. ಕವಿಗಳ ಹೆಸರುಗಳು ಹೀಗಿವೆ: ಕೃಷ್ಣ ಜಾಂಬ್ರೆ, ನೇಮಣ್ಣ, ಗಿರಿಜಣ್ಣಾ, ಅಮೀನ, ಸಂಗ್ಯಾ ಗದಿಗ್ಯಾ, ನಾಗುಗೌಸು, ಸುಣನಾಯ್ಕ, ನಬಿಸಾಹೇಬ ಧೂಲಾ, ತುಳಜಾರಾಮ, ವಸ್ತಾದ ನಾಗಪ್ಪ, ಶಿವನಿಂಗಪ್ಪ, ಬಾಳುಭೈರಿ, ರಾಮು ದ್ಯಾವು. ಹೀಗೆ ಈ ಮೋಹರಂ ಹಾಡುಗಳನ್ನು ರಚಿಸಿದ ೧೩ ಕವಿಗಳಲ್ಲಿ ಕೇವಲ ಒಬ್ಬಿಬ್ಬರು ಮಾತ್ರ ಮುಸ್ಲೀಮರಾಗಿರುವುದನ್ನು ಗಮನಿಸಬೇಕು. ಹಾಗೆಯೇ ಈ ಹಾಡುಗಳನ್ನು ಹಾಡಿದ ಕಲಾವಿದರ ಹೆಸರುಗಳು ಇಂತಿವೆ: ಶ್ರೀ ಗುಂಡಪ್ಪ ಕವಲಗಿ, ಭಾವುರಾವ, ಮಾರುತಿ ಜಾದವ, ಸಿಂಗಾಡಿ ಹೊನವಾಡ, ಹೊಳಿಬಸಪ್ಪ ಮಾಳಿ, ಹೊಳೆಪ್ಪ ಮಲ್ಲಪ್ಪ ಅನವಾಲ, ರಾಮಪ್ಪ ಬಡಿಗೇರ, ಕಬೀರಸಾಬ ಮೋದಿನ. ಹೀಗೆ ಈ ಎಂಟು ಜನ ಕಲಾವಿದರಲ್ಲಿ ಕೇವಲ ಒಬ್ಬ ಮಾತ್ರ ಮುಸ್ಲೀಮನಾಗಿರುವುದು ಕಂಡುಬರುತ್ತದೆ. ಅಂದರೆ ಮೋಹರಂ ಹಾಡುಗಳನ್ನು ರಚಿಸಿದವರು, ಹಾಡುವವರು ಎಲ್ಲ ಜನಸಮುದಾಯಗಳಿಗೆ ಸೇರಿದವರಾಗಿದ್ದು, ಹಳ್ಳಿಗಾಡಿನಲ್ಲಿ ಈ ಹಬ್ಬ ತನ್ನ ಮೂಲ ರೂಪದಲ್ಲಿರದೆ, ಅದು ಸಾಮಾನ್ಯ ಹಬ್ಬಗಳ ಸ್ವರೂಪವನ್ನು ಪಡೆದುಕೊಂಡಿರುವುದು ಮೇಲು ನೋಟಕ್ಕೆ ಸ್ಪಷ್ಟವಾಗುತ್ತದೆ.

ಈ ಸಂಗ್ರಹದಲ್ಲಿ ಒಟ್ಟಿಗೆ ೧೬೨ ಹಾಡುಗಳಿವೆ. ಮೋಹರಂ ಹಾಡುಗಳು ಗಂಡಸರ

ಹಾಡುಗಳಲ್ಲಿ ಲಾವಣಿ ಗೀಗೀ ಹಾಡುಗಳಂತೆ ಕೇವಲ ಕಥನಪರವಾದ ಹಾಡುಗಳಾಗಿರುತ್ತವೆ. ಒಮ್ಮೊಮ್ಮೆ ಎರಡು ತಂಡಗಳ ನಡುವೆ ಹಾಡಿನ ಸ್ಪರ್ಧೆ ಏರ್ಪಡುವುದರಿಂದ ಇಲ್ಲಿ ಸವಾಲ ಜವಾಬ್ ಹಾಡುಗಳೂ ಹುಟ್ಟಿಕೊಂಡಿವೆ. ಇಲ್ಲಿನ ಹಾಡುಗಳನ್ನು – ಜಂಗಿನ ಪದಗಳು(೫೦), ರಿವಾಯಿತದಲ್ಲಿ ಭಕ್ತಿ ಪದಗಳು(೪೧), ರಿವಾಯಿತದಲ್ಲಿ ಸವ್ವಾಲ ಪದಗಳು(೨೫), ರಿವಾಯಿತದಲ್ಲಿ ಹಿಂದೂ ಧರ್ಮದ ಜಾನಪದಗಳು(೪೬) ಹೀಗೆ ನಾಲ್ಕು ಭಾಗಗಳಲ್ಲಿ ವಿಭಾಗಿಸಿಕೊಂಡಿದ್ದಾರೆ. ಈ ಹಾಡುಗಳ ರಚನೆಯು ಸುಮಾರಾಗಿ ಲಾವಣೀ ಹಾಡುಗಳ ಬಗೆಯಲ್ಲಿಯೇ ಇರುತ್ತದೆ. ಏರು ಇಳುವು ನುಡಿಗಳ ಜೊತೆಗೆ ಕೆಲವು ಹಾಡುಗಳಿಗೆ ಚಾಲ ಮತ್ತು ಕೂಡು ನುಡಿಗಳನ್ನು ಕೂಡ ಗುರುತಿಸುತ್ತಿರುವುದು ಕಾಣುತ್ತದೆ. ಈ ಹಾಡುಗಳನ್ನು ಹಾಡುವಾಗ, ಹಾಡುಗಾರರು ಕೆಲವೊಮ್ಮೆ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ಕೈಯಲ್ಲಿ ಒಂದು ಕೋಲನ್ನು ಹಿಡಿದು ಲಯಕ್ಕನುಗುಣವಾಗಿ ಅದನ್ನು ಕುಟ್ಟುತ್ತಿರುತ್ತಾರೆ. ಈ ಕೋಲಿಗೆ ಗೆಜ್ಜೆಗಳನ್ನು ಕಟ್ಟಿರುತ್ತಾರೆ. ಹಿಮ್ಮೇಳ ಮುಮ್ಮೇಳವಾಗಿ ಈ ಹಾಡುಗಳು ಮೋಹರಮ್ ಹಬ್ಬದ ನಾಲ್ಕೈದು ದಿನ ರಾತ್ರಿಗಳಲ್ಲಿ ಹಾಡಲಾಗುತ್ತದೆ. ಮೋಹರಂ ಹಾಡುಗಳ ಒಂದು ವಿಶೇಷತೆ ಎಂದರೆ ಹಾಡು ಕೇಳಲು ಕುಳಿತಿರುವ ಸಹೃದಯರನ್ನು ಯಾವಾಗಲೂ ಸಂಬೋಧಿಸಿಯೇ ಹಾಡು ಪ್ರಾರಂಭವಾಗುತ್ತದೆ. ಒಮ್ಮೊಮ್ಮೆ ಒಂದೊಂದು ಪದವೇ ಸಹೃದಯರಿಗೆ ಶರಣುಗಳನ್ನು ಹೇಳುವ ಮಾದರಿಯಲ್ಲೂ ಇರಬಹುದಾಗಿದೆ. ಈ ಸಂಗ್ರಹದ ಮೊದಲನೇ ಪದ 'ದೈವಕ್ಕ ನಮ್ಮ ನಮಸ್ಕಾರ' ಎಂತಲೇ ಇದೆ.

ದೈವ ಕೂಡಿರಿ ಇಂದು ವಿನಯದಿಂದ
ನಾನು ಮಾಡುವೆ ಸಲಾಮಾ।
ಮೊದಲಿಗೆ ಅಲ್ಲಾನ ಧ್ಯಾನಾ।
ಬಿಡದೆ ಭಜಿಸುವೆ ನಾನು
ಶಿರಬಾಗಿ ಆತಗ ಸಲಾಮ।

ಹೀಗೆ ಕೇಳುಗರನ್ನು ವಂದಿಸುವ ಹಾಡುಗಳು ಅಪರೂಪಕ್ಕೆ ದೊರೆಯುತ್ತವೆ. ಜಂಗಿನ ಪದಗಳು ಎಂದರೆ ಕರ್ಬಲಾ ಯುದ್ಧಕ್ಕೆ ಸಂಬಂಧಿಸಿದ ಪದಗಳು.

ಜಂಗ ಕೇಳಾರಿ ಜನಾ ಹೆಳುವೆ ಬಯ್ಯಾನಾ
ಮಮ್ಮದನೀಪ ಮಾಡಿದಂಥಾ ಕದನಾ।
ಬಿಟ್ರೊ ಮದಿನ ಶಾರಾ ಹೊಂಟ್ರೊ ತಾ ರಣಧೀರ
ಬಂಟ ಬಂಟರನ್ನೆಲ್ಲ ಕೂಡಿಸಿದ್ದಾ
ಆನಿ ಒಂಟಿ ಕುದರಿ ಜೇಷ್ಟಾ।
ಪೈಲ್ವಾನ ಮರ್ದಾ ದಂಡಿನ ದಳವಾಯಿ
ಎಲ್ಲರ ಮ್ಯಾಲನವನಿದ್ದಾ।
ಕೂಡಿ ಹೊಂಟಾರಣ್ಣಾ ಬಿದ್ದಾಂಗಾತೋ ಕಿರಣ
ಮಾಡಿ ಅಬ್ಬರಣಾ।

ಹೀಗೆ ಸಾಗುತ್ತವೆ ಈ ಮೋಹರಂ ಹಬ್ಬದ ಹಾಡುಗಳು. ಜನ ಈ ಜಂಗಿನ ಪದಗಳಿಗಿಂತ ತಮಗೆ ತಿಳಿದಿರುವ ಕಥೆಗಳನ್ನು ಕೇಳಲು ಬಯಸುವುದರಿಂದ ಕರ್ಬಲಾ ಕದನಕ್ಕೆ ಹೊರತಾದ ಹಾಡುಗಳೇ ಹೆಚ್ಚಾಗಿ ಹುಟ್ಟಿಕೊಂಡಿರುವುದು ಕಾಣುತ್ತದೆ. ಸಾಮಾನ್ಯ ನೀತಿ, ವಿಡಂಬನೆ, ಸವಾಲ-ಜವಾಬ್ ಇವು ಕುಳಿತಿರುವ ಜನಕ್ಕೆ ಹೆಚ್ಚು ಹಿಡಿಸುವ ವಿಷಯಗಳು. ಗೀಗೀ ಹಾಡುಗಳಂತೆ ಇಲ್ಲೂ ಕೇಳಲು ನೆರೆದಿರುವವರು ಗಂಡಸರೇ ಜಾಸ್ತಿ. ಅದರಲ್ಲೂ ನಡು ರಾತ್ರಿಯವರೆಗೆ ಇಲ್ಲಿಯ ಹಾಡುಗಾರಿಕೆ ನಡೆಯುವುದರಿಂದ ಹೆಣ್ಣುಮಕ್ಕಳ ಗೈರುಹಾಜರಿ ಇಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ಪಾಂಡವರ ಲೀಲಾ :

ಪಂಚ ಪಾಂಡವರು ಮಾಡಿದಂತಾ ಲೀಲಾ
ಕುಂತಕೇಳರಿ ಜನ ಸರ್ವರೆಲ್ಲಾ।
ಕಾಶ್ಮೀರ ದೇಶಕ ಅರಜುನ ಸರದಾರ
ಲಡಾಯಿ ಮಾಡಲಾಕ ಹೊಂಟಾನಲ್ಲಾ
ಸಂಗಾಟ ತಗೊಂಡೋ ದಂಡ ಎಲ್ಲಾ
ಕೃಷ್ಣ ಸಾರಥಿ ಅವನ ಬೆನ್ನ ಮ್ಯಾಲಾ।

ಇಂತಹ ಪೌರಾಣಿಕ ಕಥೆಗಳನ್ನು, ಪ್ರಸ್ತುತ ಸಮಾಜ ಎದುರಿಸುತ್ತಿರುವ ಸಮಸ್ಯೆಗಳನ್ನು ಬಳಸಿಕೊಂಡು ಕವಿಗಳು ಮೋಹರಂ ಧಾಟಿಗಳಲ್ಲಿ ಹಾಡುಗಳನ್ನು ಹೆಣೆದಿರುತ್ತಾರೆ.

ಕಲಿಯುಗದಾಗಿನ ಕೌತುಕಾ
ಕುಂತ ಕೇಳಾರಿ ಜನರೆಲ್ಲಾ
ಲೋಕದೊಳಗ ಪಾಪ ಹೆಚ್ಚಾಗಿ ನಡದೀತ ಗದ್ದಲಾ
ಪುಣ್ಯ ಬಿಟ್ಟಾರ ಸರವರೆಲ್ಲಾ
ಪಾಪ ಹೊತ್ತಾರ ತಲಿಯ ಮ್ಯಾಲಾ
ಇದೇನ ಸುಳ್ಳಲ್ಲಾ ।

ಹೀಗೆ ಮುಕ್ತಿ, ಭಕ್ತಿ ಮುಂತಾದ ಸಾಮಾನ್ಯ ವಿಷಯಗಳ ಕುರಿತು ಕೂಡ ಇಲ್ಲಿ ಹಾಡುಗಳಿವೆ.

ಚಹಾದ ಮಹಿಮೆ

ಬಂದ ಚ್ಯಾಪುಡಿ ಹಬ್ಬತೋ ಎಲ್ಲಾ ಕಡಿ
ಮೂರಮನಿ ಹಳ್ಳ್ಯಾಗ ಅಂಗಡಿ ಇಟ್ಟಾರಲ್ಲಾ।
ಕುಂತ ಪಂಡಿತರಾ ಮಾಡರಿ ಇಚಾರಾ
ಸಣ್ಣ ದೊಡ್ಡವರಾ।
ದೊಡ್ಡ ದೊಡ್ಡವರ ಕೂಡಿ। ಹೂಡ್ಯಾರೋ ಧರ್ಮದ ಗಾಡಿ
ಅದರಾಗ ಕರ್ಮದ ಪುಡಿ ಸೇರಿತಲ್ಲಾ।
ಚಹಾಪುಡಿ ಕಾರಾ ದುರಗಿ ಅವತಾರಾ ಕೇಳರಿ ಸರ್ವರಾ
ತಿಂದ ಹಿಂಡಿಯ ಪುಡಿ ಕುಡುತಾರೋ ಚ್ಯಾ ಮಾಡಿ

ರಕ್ತ ವಡಿಸಿ ಮೈಯಾನ ಲಾಡಿ ಸೋತಾವಲ್ಲಾ।
ಬಂದ ಹೆಂಡರಾ ಗಂಡನ ಬಯ್ಯುವರಾ ಹಾಕಿ ಉಸರಾ
ರೊಕ್ಕ ರೂಪಾಯಿ ದಂಬಡಿ ಉಳಿಯಲಿಲ್ಲ ಮನ್ಯಾಗಿನ ಕವಡಿ
ಸೇದಲಾಕ ಒಂದ ಬೀಡಿ ಹಂತೇಕ ಇಲ್ಲ।

ಇಂತಹ ವಿಷಯ ಕುರಿತೂ ಇಲ್ಲಿ ಹಾಡುಗಳು ಹುಟ್ಟಿಕೊಂಡಿವೆ. ಹೀಗಾಗಿ ಮೋಹರಂ ಹಾಡುಗಳನ್ನು ಕೇಳಲು, ಸಮಾಜದ ಎಲ್ಲ ಸಮುದಾಯಗಳ ಜನ ಕೂಡುತ್ತಾರೆ.

ಹೈದ್ರಾಬಾದ ಕರ್ನಾಟಕದಿಂದ ಪ್ರಕಟವಾದ ಒಂದು ಮೋಹರಂ ಹಾಡುಗಳ ಸಂಗ್ರಹ ನಮಗೆ ದೊರೆಯುತ್ತಿದ್ದು, ಅದು ಡಾ. ಚೆನ್ನಣ್ಣ ವಾಲೀಕಾರ ಅವರು ಸಂಪಾದಿಸಿದ **'ಗುಲ್ಬರ್ಗ ಜಿಲ್ಲೆಯ ಮೊಹರ್‍ರಂ ಪದಗಳು'** (೧೯೮೩) ಎಂಬ ಕೃತಿಯಾಗಿದೆ. ಈ ಕೃತಿಯಲ್ಲಿ ಒಟ್ಟಿಗೆ ೫೫ ಹಾಡುಗಳಿವೆ. ಅವುಗಳನ್ನು ಕರ್ಬಲಾ ಪದಗಳು, ಧಾರ್ಮಿಕ ಪದಗಳು, ಸಾಮಾಜಿಕ ಪದಗಳು, ಇತರ ಪದಗಳು ಎಂಬ ನಾಲ್ಕು ಭಾಗಗಲ್ಲಿ ವಿಭಾಗಿಸಿಕೊಂಡಿದ್ದಾರೆ. ಕರ್ಬಲಾ ಪದಗಳು ಭಾಗದ ೧೩ ಹಾಡುಗಳನ್ನು ಬಿಟ್ಟರೆ ಉಳಿದವೆಲ್ಲ ಸಾಮಾನ್ಯ ವಿಷಯಕ್ಕೆ ಸಂಬಂಧಿಸಿದ ಹಾಡುಗಳೇ ಆಗಿವೆ. ಈ ಹಾಡುಗಳನ್ನು ರಚಿಸಿದ-ಅರ್ಜುಣಪ್ಪ, ರಾಮಚಂದ್ರ, ರಾಮಯ್ಯ, ಕಾಕಿಗುರು, ಮಹಮ್ಮದ ರಜಾಕ, ಮಹಮ್ಮದ ಹನೀಫ, ರುಕಮುದ್ದೀನ ಈ ೭ ಜನ ಕವಿಗಳಲ್ಲಿ ನಾಲ್ವರು ಮುಸ್ಲೀಮರಾಗಿದ್ದಾರೆ. ಆದರೆ ಇವುಗಳನ್ನು ಹಾಡಿದ ರಾಮಚಂದ್ರ, ನಾಗಪ್ಪ, ಗುಂಡಣ್ಣ, ಎಲ್ಲಪ್ಪ, ಅಣ್ಣಪ್ಪ, ಸಾಯಬಣ್ಣ, ಪೀರಪ್ಪ, ದೊಡ್ಡಕಾಸೀಮ, ಸಾಬಣ್ಣ, ಧೂಳಪ್ಪ ಈ ಹತ್ತು ಜನಗಳಲ್ಲಿ ಒಬ್ಬ ಮಾತ್ರ ಮುಸ್ಲೀಮನಾಗಿದ್ದಾನೆ. ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಹೊನಗುಂಟಿ, ನಾಲವಾರ, ಶಂಕರವಾಡಿ, ಗೋಳ್ಯಾ ಈ ನಾಲ್ಕು ಗ್ರಾಮದ ಹರಿಜನ, ಕಬ್ಬಲಿಗ ಕೇರಿಗಳಲ್ಲಿ ಸಂಗ್ರಹಿಸಿದ ಹಾಡುಗಳು ಇಲ್ಲಿವೆ.

ಮೋಹರಂ ಹಾಡುಗಳನ್ನು ಕೇಳುತ್ತಲೇ ಬೆಳೆದವರು ಡಾ. ಚೆನ್ನಣ್ಣ ವಾಲೀಕಾರ ಅವರು. ಕಾರಣ ಅವರ ಮನೆಯಲ್ಲಿಯೇ ಈ ಹಾಡುಗಳನ್ನು ಹಾಡುವವರಿದ್ದರು. ಹೀಗಾಗಿ ಅವರು ೧೯೭೪ರ ಸುಮಾರಿನಲ್ಲಿಯೇ ಇಲ್ಲಿಯ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಪ್ರಕಟಿಸಲು ತಡವಾಗಿದೆ. ಮೋಹರಂ ಹಬ್ಬದ ಇತಿಹಾಸವನ್ನು ಕನ್ನಡದಲ್ಲಿ ಪರಿಚಯಿಸಿದ ಒಂದು ಸಣ್ಣ ಪುಸ್ತಿಕೆಯೂ 'ಮೋಹರಂ ಹಾಡುಗಳು' (೧೯೭೪) ಅವರ ಹೆಸರಿಗಿದೆ. ಅಲ್ಲಿ ಹಬ್ಬದ ಹಿನ್ನೆಲೆಯುನ್ನು ವಿವರಿಸಲಾಗಿದೆ: "ಪೈಗಂಬರರು ಮಕ್ಕಾದ ಮೂರ್ತಿಪೂಜಕರಾದ ಕುಫಾರ ಜನರನ್ನು ಸೋಲಿಸಿ, ಪ್ರಜಾರಾಜ್ಯದ ನಾಯಕತ್ವ ಸ್ಥಾಪಿಸಿದರು. ಅವರ ಬಳಿಕ ಮಹಮ್ಮದೀಯರಿಂದ ಆರಿಸಲ್ಪಟ್ಟ ಹಜರತ ಉಸ್ಮಾನ, ಹಜರತ ಅಬೂಬಕರ್, ಸಿದ್ದೀಕಿ, ಹಜರತ ಉಮರ್ ಫಾರೂಕ್ ಮತ್ತು ಮಹಾತ್ಮರಾದ ಪೈಗಂಬರರ ಅಳಿಯಂದಿರಾದ ಹಜರತ ಅಲಿ ಎಂಬ ಜನಾನುರಾಗಿ ಖಲೀಫರು ಉತ್ತರಾಧಿಕಾರಿಗಳಾಗಿ ಬಂದು ಖಿಲಾಫತದ ಮಹತ್ವ ಹೆಚ್ಚಿಸಿದರು. ಹಜರತ ಅಲಿಯವರ ತರುವಾಯ ಅವರ ಹಿರಿಯ ಮಗನಾದ ಇಮಾಮ ಹಸನರನ್ನು ಜನತೆ ಆರಿಸಿ ಅಧಿಕಾರಕ್ಕೆ

ತಂದಾಗ ಸಿರಿಯಾದ ಅಧಿಕಾರಿಯಾಗಿದ್ದ ಅಮಿರ ಮುವಾಯಿಯಾ ತನ್ನ ಗೃಧ್ರ ದೃಷ್ಟಿಹಾಕಿ ಆ ಪೀಠವನ್ನು ಕಬಳಿಸಿಬಿಟ್ಟನು. ಜನಾಭಿಪ್ರಾಯ ತೆಗೆದುಕೊಳ್ಳದೆ ತನ್ನ ತರುವಾಯ ತನ್ನ ಮಗನಾದ ಯಜೀದನೇ ಇದಕ್ಕೆ ಹಕ್ಕುದಾರನೆಂದು ಸಾರುತ್ತ ದರ್ಪದಾಡಳಿತ ನಡೆಸತೊಡಗಿದನು" (ಮೋಹರಂ ಹಾಡುಗಳು, ಪು. ೩-೪).

'ಗುಲಬರ್ಗಾ ಜಿಲ್ಲೆಯ ಮೋಹರ್‍ರಂ ಪದಗಳು' ಕೃತಿಯ ಹಾಡುಗಳು ಹೆಚ್ಚು ಸ್ಪಷ್ಟವಾಗಿವೆ. ಓದಿದರೆ ತಿಳಿಯುತ್ತವೆ. ಹಾಡುಗಳನ್ನು ಬರೆದುಕೊಳ್ಳುವಲ್ಲಿ, ಸಂಪಾದನೆಯಲ್ಲಿ ಡಾ. ವಾಲಿಕಾರ ಅವರು ಅವರು ಎಚ್ಚರವಹಿಸಿದ್ದರಿಂದ ಈ ಕೃತಿಯ ಮೌಲ್ಯ ಹೆಚ್ಚಿದೆ ಎಂದೇ ಹೇಳಬೇಕು.

ದೈವಾ ಕೇಳರಿ ಕಥಿ ಇದು ಒಂದಾ
ಹೇಳತಿನಿ ದುಃಖ ಹೆಚ್ಚಿಂದಾ। ಪಲ್ಲ।
ಬಡಿತೊ ಬಾಣಾ ಹೋಯಿತೋ ಪ್ರಾಣಾ ಅಸಗರಂದಾ
ತಾಯಿ ಓಡಿ ಓಡಿ ಓಡಿ ಓಡಿ ಓಡಿ ಬಂದಾ
ಮಣ್ಣ ತೂರಿ ಕಬರಾ ಹಾರಿ ಮ್ಯಾಲ ಬಿದ್ದಾ
ದುಕ್ಕ ಮಾಡಿ ಅಳತಾಳೊ ಹಾಯ್ ಹಾಯ್ ಕಂದಾ।೧।

ನಾನಾ ಪರಿಲಿಂದ ಸುಲಿವಿದ ಕಂದಾ
ನ್ಯಾಯವೇನು ಅಗಲಿ ಹೀಂಗ ಹೋಗುವದಾ
ತಿಳಿಯಲಿಲ್ಲೊ ಮುಂದಿನ ಗತಿ ಆಗುವದಾ
ಬಂತೊ ಮಾಯಾ ಮಾಯಾ ಮಾಯಾ ಮಾಯಾ ಮಾಯಾದಲಿಂದಾ
ಹೊತ್ತು ಹೆಂಗ ಗಳಿಯಲಿ ಕೂಸಿಲ್ಲದಾ
ವ್ಯರ್ಥ ಸಾಯಿತೀನಿ ಮಗ ಎದಿ ವಡದಾ। ೨।

ನೋಡೊ ಅಸಗರಾ ತುಸು ಕಣ್ಣ ತೆರದಾ
ನಾ ಏನ ಅಂದಿಲ್ಲೊ ಮಲಗಿದಿ ಮುನಿದಾ
ಬಹಳ ಹೊತ್ತಾಯಿತು ಮಲಿ ಕುಡಿವಲ್ಲದಾ
ಲಗು ಏಳೊ ಏಳೊ ಏಳೊ ಏಳೊ ಏಳೊ ಕಂದಾ
ಕಣ್ಣಮುಚ್ಚಿ ಮಲಗೀದಿ ಕುದಿ ಇಲ್ಲದಾ
ಹಾಯ್ ಎನ್ನ ಜೀವಕೆ ಹತ್ತಿತೊ ಯಾದಾ ।೩।

ಅಂಗಿ ಟೊಪ್ಪಿಗಿ ಚಂದ ಮಕಮಲದಾ
ಇದು ಯಾರೀಗಿ ತೊಡಸಲಿ ಹೋಳೊ ಕಂದಾ
ಹಾಲಗಡಗಾ ಒಪ್ಪುತ್ತಾವೊ ಬಹಳ ಚಂದಾ
ಬಿಟ್ಟು ಹ್ವಾದೊ ಹ್ವಾದೊ ಹ್ವಾದೊ ಹ್ವಾದೊ ಹ್ವಾದೊ ಗೆದ್ದಾ
ಸಾರ್ಥಕ ಆಗಲಿಲ್ಲ ಹುಟ್ಟಿ ಬಂದಾ
ಇಷ್ಟೆ ಬಂದಿದ್ದೇನು ಶಿವನಲ್ಲಿ ಪಡದಾ ।೪।

ಆರು ತಿಂಗಳ ಉಮ್ಮರ ನಿಂದಾ
ರೂಪ ನೋಡಿದರ ಹಾಯ್ ಏನ್ ಚಂದ
ಹಲಬುತ್ತ ನಿಂತೆನೋ ನಾನು ಬಂದಾ
ಮಾತಾಡೋ ಆಡೋ ಆಡೋ ಆಡೋ ಆಡೋ ಆಡೋ ಕಂದಾ
ಬಾಯಿ ಮುಚ್ಚಿ ಮಲಗಿದಿ ಗಪ್ಪ ಹೊಡದಾ
ನನಗ್ಯಾಕ ಬರಲಿಲ್ಲೊ ನಿನ್ನ ಪಾಲಿಂದಾ ।೫।

ಎಲ್ಲಿ ಭೀಟಲಿ ತೊಟ್ಟಿಲ ನಿಂದಾ
ಮಲಿಹಾಲ ಯಾರು ಕುಡಿದಾರು ಬಂದಾ
ಯಾರಿಗಿ ಹೋಗಿ ಕರಿಯಾಲಿ ಅಸಗರಂದಾ
ಲಗು ಬಾರೋ ಬಾರೋ ಬಾರೋ ಬಾರೋ ಬಾರೊ ೯ಕಂದಾ
ಮರ್ತ್ಯದೊಳಗ ನೀ ಹುಟ್ಟಿ ಬಂದಾ
ಬಿಟ್ಟು ಹೋಗಿ ಕುಂತಿದ್ಯೊ ನಿನ ಮುತ್ಯಾನ ಮುಂದಾ ।೬।

ಬೇನೂರ ಊರ ಮರ್ತ್ಯಕ ಬೆಳದಾ
ಕುಂತಾದ್ರಿ ಮೌಲಾಲಿ ದಯದಿಂದ
ಆಗ್ತಾದೊ ಮೋರಮ್ಮಿಲ್ಲಿ ಬಾಳ ಚಂದಾ
ಒಳ್ಳೆ ದುಂದಾ ದುಂದಾ ದುಂದಾ ದುಂದಾ ದುಂದಾಲಿಂದಾ
ಕಾಕಿಗುರು ಹೇಳಿದ ಗಮಗೀನ ಪದಾ
ಮುತ್ತ ಪೋಣಿಸಿದಂಗೆ ಅಕ್ಷರ ಸುದ್ದಾ ।೭।

ಇದು ಖಾಕಿಗುರು ಎಂಬ ಅಂಕಿತನಾಮದ ಬೇನೂರಿನ ಕವಿ ರಚಿಸಿದ ಹಾಡು. ಕಲಬುರಗಿ ಭಾಗದಲ್ಲಿ ಈ ಕವಿ ಅತ್ಯಂತ ಶಕ್ತಿಶಾಲಿ ಜನಪದ ಕವಿ. ಅವನ ಮೋಹರಂ ಕಥನಕವನಗಳು ಕಲಬುರಗಿ ಭಾಗದಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದು, ತುಂಬಾ ಸೊಗಸಾಗಿವೆ. ಈ ಕೃತಿಯಲ್ಲಿ ಇಂತಹ ಉತ್ತಮ ಹಾಡುಗಳು ಸಾಕಷ್ಟಿವೆ. ಪ್ರಚಲಿತ ಸಮಸ್ಯೆಗೆ ಸಂಬಂಧಿಸಿದ ಒಂದು ಹಾಡೂ ಇಲ್ಲಿದೆ. ಮಟಗಾ ಎನ್ನುವ ಜೂಜಿಗೆ ಸಾಮಾನ್ಯರು ಬಲಿಯಾಗಿ, ತಮ್ಮ ಸಂಸಾರಗಳನ್ನು ಕೆಡಿಸಿಕೊಳ್ಳುವಾಗಿನ ಪದ ಇದು.

ಮಟಗದ ಪದ:

ಸುತ್ತ ಮುತ್ತ ನೆರದು ಕುಂತಿರಿ ಜನಾ
ತಾಜಾ ಖಬರ ನಿಮಗೆ ಒಂದು ತಿಳಿಸುವೆನಾ
ದಿಲ್ಲಿ ಮುಂಬೈ ಪೂನಾ ಆಗ್ರಾ ಅಮೇರಿಕಾನಾ
ಸಾರೆ ಹಿಂದುಸ್ತಾನಾ
ಬಹಳ ಮಂದಿ ಆಡ್ತಾರೊ ಓಪನ್ನಾ ।೧।

ಬೇಗ ಬೆಳಗು ಎಲ್ಲಿ ಬೀಳವಲ್ಲು ಚೈನಾ
ರಾತರಿ ಹಗಲು ಉಣದಿಲ್ಲೊ ಅನ್ನಾ

ಸಣ್ಣವರು ದೊಡ್ಡವರು ಹೆಂಗಸಾರು ಗಣಸಾರು
ಮುದುಕಾರು ತದಕಾರು
ಲೆಕ್ಕ ಮಾಡತಾರೊ ಬೇಗಿ ಬೆಳಗಾನಾ।೨।

ಸಾಲ ತೆಗದು ಆಡ್ತಾರೊ ಓಪನ್ನಾ
ಓಪನ್ನ ಚಿಟ್ಟಿ ಮಾಡ್ತಾರೊ ಜೋಪಾನಾ
ಚಿಟ್ಟಿ ಕಳಿದಾರಿನ್ನಾ ರೊಕ್ಕ ಇಲ್ಲಂತರಣ್ಣಾ
ಹೀಂಗಾ ತಿಳಿತಾರೊ ಜನಾ
ಬಾಳ ಜ್ವಾಕಿ ಮಾಡುತ್ತಾರೊ ಜತನಾ।೫।

ಸಾಮಾಜಿಕ ಸಮಸ್ಯವುಳ್ಳ ಪ್ರಚಲಿತ ಕಥೆಗಳನ್ನೂ ಮೋಹರಮ್ಮಿನ ಹಾಡುಗಳಲ್ಲಿ ಹೇಳುತ್ತಾರೆ: ಕಾಶಿಬಾಯಿ ಪದ, ಸೋಮ್ರರಾಯ ಭೀಮರಾಯನ ಪದ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದ ಹಾಡುಗಳಾಗಿವೆ. ಇಂತಹ ಹಾಡುಗಳನ್ನು ಕೇಳಲು ಜನ ಮೋಹರಂ ಹಾಡುಗಳು ನಡೆದಲ್ಲಿ ಮುಗಿಬೀಳುತ್ತಾರೆ. ಸಂತೋಷ ಪಡುತ್ತಾರೆ.

* * *

ಮೋಹರಂ ಹಾಡುಗಳ ಸಂಗ್ರಹಗಳು :

೧೯೭೮ : ಹೇಳುವೆ ಮಜಕೂರಾ, (ಸಂ) ನಿಂಗಣ್ಣ ಸಣ್ಣಕ್ಕಿ, –ಸಾಹಿತ್ಯ ಭಂಡಾರ, ಹುಬ್ಬಳ್ಳಿ–೨೦.

೧೯೮೧ : ಹಳ್ಳಿ ಹಬ್ಬಿಸಿದ ಹೂಬಳ್ಳಿ, (ಸಂ) ಜಿ. ಬಿ. ಖಾಡೆ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೮೨ : ರಿವಾಯತಗಳು, (ಸಂ) ಪ್ರೊ. (ಶ್ರೀಮತಿ) ಎಚ್. ಎಂ. ಬೀಳಗಿ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯೮೩ : ಗುಲ್ಬರ್ಗ ಜಿಲ್ಲೆಯ ಮೊಹರ್‍ರಂ ಪದಗಳು, (ಸಂ) ಚೆನ್ನಣ್ಣ ವಾಲಿಕಾರ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸಹಾಯಕ ಗ್ರಂಥಗಳು :

೧೯೭೫ : ಮೊಹರ್‍ರಂ ಪದಗಳು, ಚನ್ನಣ್ಣ ವಾಲೀಕಾರ, –ಕರ್ನಾಟಕ ವಿಶ್ವವಿದಾಯಲಯ, ಧಾರವಾಡ.

* * *

೪. ಸಂಪ್ರದಾಯದ ಹಾಡುಗಳು

(ಮದುವೆ, ಮೈನರೆದ, ಸೋಬಾನ, ಕುಪ್ಪಸ, ಜೋಗುಳ)

ಮಾನವನು ತನ್ನ ವಂಶೋತ್ಪತ್ತಿಯ ಉದ್ದೇಶಕ್ಕಾಗಿ, ಹೆಣ್ಣು-ಗಂಡು ಎರಡು ಜೀವಗಳನ್ನು ಗಂಡ-ಹೆಂಡತಿಯರಾಗಿ ಒಂದಾಗಿ ಬಾಳಲು ಸಾಮಾಜಿಕ ಮನ್ನಣೆಗಾಗಿ ಮಾಡಿಕೊಂಡ ಒಂದು ಸಾಂಸ್ಕೃತಿಕ ವ್ಯವಸ್ಥೆ ಮದುವೆಯಾಗಿದೆ. ವಿಶೇಷವಾಗಿ ಬಂಧುಬಾಂಧವರೆಲ್ಲ ಈ ಪವಿತ್ರ ಸಮಾರಂಭದಲ್ಲಿ ಭಾಗಿಯಾಗುತ್ತಾರೆ. ಜನಸಾಮಾನ್ಯರಿಗೆ ಮದುವೆಯೊಂದು ಸಂಭ್ರಮದ ಸಂಪ್ರದಾಯ. ಹೊಸ ವಸ್ತ್ರ-ವಡವೆಗಳನ್ನು ಹಾಕಿಕೊಂಡು, ಮದುವೆಯ ನಾನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ, ಹಾಡುತ್ತ, ನಲಿಯುತ್ತ ಸಂಭ್ರಮಿಸುವ ಆಚರಿಸುವ ಒಂದು ಶುಭಕಾರ್ಯಕ್ರಮ. ಈಗ ೪೦-೫೦ ವರ್ಷಗಳ ಹಿಂದೆ ೫ ದಿನಗಳ ವರೆಗೆ ನಡೆಯುತ್ತಿದ್ದ ಮದುವೆ ಈಗ ಮೊಟಕಾಗಿ ಒಂದು ದಿನಕ್ಕೆ ಬಂದು ನಿಂತಿದೆ. ನೇಮಕ್ಕೆ ಕೆಲವು ಆಚರಣೆಗಳು ಮಾತ್ರ ಉಳಿದಂತೆ ಕಂಡರೂ ಅಲ್ಲಿ ಬಳಕೆಯಾಗುತ್ತಿದ್ದ ಸುಮಾರು ೨೦ಕ್ಕೂ ಮೇಲ್ಪಟ್ಟು ಸಂಪ್ರದಾಯ ಸಂದರ್ಭಗಳು ಈಗ ಮಾಯವಾಗಿವೆ. ಹೀಗಾಗಿ ಅಷ್ಟು ನಮೂನೆಯ ಹಾಡುಗಳೂ ಮಾಯವಾಗುತ್ತಿವೆ.

ಹೆಣ್ಣುಮಕ್ಕಳೇ ವಿಶೇಷವಾಗಿ, ಪ್ರಧಾನವಾಗಿ ಭಾಗವಹಿಸುವ ಸಂಪ್ರದಾಯಗಳನ್ನು ಶುಭಸಂಪ್ರದಾಯಗಳು, ಶುಭಕಾರ್ಯಗಳು ಎಂದು ಕರೆಯುವ ವಾಡಿಕೆಯಿದೆ. ಕನ್ನಡದಲ್ಲಿ ಪ್ರಕಟವಾದ ಜನಪದ ಹಾಡಿನ ಕೃತಿಗಳನ್ನು ಗಮನಿಸಿದರೆ, ಒಟ್ಟಾರೆಯಾಗಿ ಶುಭಕಾರ್ಯದ ಎಲ್ಲ ನಮೂನೆಯ ಹಾಡುಗಳನ್ನು ಒಂದೆಡೆ ಸಂಗ್ರಹಿಸುತ್ತ ಬಂದ ಕೃತಿಗಳೇ ನಮಗೆ ಕಾಣುತ್ತವೆ. ಬಿಡಿಬಿಡಿಯಾಗಿ ಮದುವೆಯ ಹಾಡುಗಳು, ಮೈನರೆದ ಹಾಡುಗಳು, ಸೋಬಾನದ ಹಾಡುಗಳು, ಕುಪ್ಪಸದ ಹಾಡುಗಳು, ಜೋಗುಳ ಹಾಡುಗಳು ಎಂದು ಇವುಗಳನ್ನು ಸಂಗ್ರಹಸಿದ ಉದಾಹರಣೆಗಳು ಇಲ್ಲ. ಈ ಎಲ್ಲ ಬಗೆಯ ಹಾಡುಗಳನ್ನು ಹಾಡುವವರು ಹೆಣ್ಣುಮಕ್ಕಳು. ಸಂಗ್ರಹಕಾರರನ್ನು ಗಮನಿಸಿದರೆ ಅಪರೂಪಕ್ಕೆ ಒಬ್ಬಿಬ್ಬರು ಹೆಣ್ಣುಮಕ್ಕಳು ಮಾತ್ರ ಇಂತಹ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಉಳಿದೆಲ್ಲ ಕೃತಿಗಳನ್ನು ಸಂಪಾದಿಸಿ ಹೊರತಂದವರು ಪುರುಷರೆ. ಒಬ್ಬ ಹೆಣ್ಣುಮಗಳು ಒಳ್ಳೆಯ ಹಾಡುಗಾರ್ತಿ ದೊರೆತರೆ, ಆಕೆ ಹಾಡುವ ಎಲ್ಲ ಹಾಡುಗಳನ್ನು ಒಂದೆಡೆ ಸಂಗ್ರಹ ಮಾಡುತ್ತ ಹೋದುದರಿಂದ ಎಲ್ಲ ಬಗೆಯ ಸಂಪ್ರದಾಯದ ಹಾಡುಗಳನ್ನು ಒಂದೇ ಕೃತಿಯಲ್ಲಿ ಸಂಪಾದಿಸಿದ್ದನ್ನೇ ನಾವು

ನೋಡುತ್ತೇನೆ. ಆದರೆ ಪರಿವಿಡಿಗಳನ್ನು ನೋಡಿದರೆ, ಅಲ್ಲೆಲ್ಲ ಒಂದೊಂದು ಶುಭಕಾರ್ಯಕ್ಕೆ ಸಂಬಂಧಿಸಿದ ಹಾಡುಗಳನ್ನು ಬೇರೆ ಬೇರೆ ಮಾಡಿ, ವಿಭಾಗೀಕರಣಗೊಳಿಸಿ ಪ್ರಕಟಿಸಿದ್ದನ್ನು ಕಾಣುತ್ತೇವೆ. ಒಂದೇ ಕೃತಿಯಲ್ಲಾದರೂ ವಿಭಾಗಿಸಿ ಹಾಡುಗಳನ್ನು ಕೊಟ್ಟಿರುವುದು ಸ್ವಲ್ಪ ಅನುಕೂಲವಾಗಿದೆ. ಆದರೆ ಚರಿತ್ರೆ ಬರೆಯುವಾಗ ಕೃತಿಗಳನ್ನು ಅನುಸರಿಸುವುದು ಅನಿವಾರ್ಯವಾದ್ದರಿಂದ, ಒಂದೊಂದು ಕೃತಿಯಲ್ಲಿ ಆಯಾ ಸಂಪಾದಕರು ಸಂಗ್ರಹಿಸಿದ, ಸಂಪಾದಿಸಿದ ಕ್ರಮದಲ್ಲಿಯೇ ವಿಶ್ಲೇಷಿಸುವುದು ಅನುಕೂಲವಾಗುತ್ತದೆ. ಈ ಬಗೆಯ ಸಂಪ್ರದಾಯ ಹಾಡುಗಳ ಒಟ್ಟು ಸಂಗ್ರಹಕ್ಕೆ ಬುನಾದಿ ಹಾಕಿದ್ದು ಹಲಸಂಗಿ ಗೆಳೆಯರು. ಅವರ ಮೂರನೇ ಕೊಡುಗೆ, ಕಾಪಸೆ ರೇವಪ್ಪನವರು ಸಂಪಾದಿಸಿಕೊಟ್ಟ **'ಮಲ್ಲಿಗೆ ದಂಡೆ'** (೧೯೩೫) ಎಂಬ ಕೃತಿಯೇ ಅಂತಹ ಕೊಡುಗೆ ಆಗಿದೆ. 'ಮಲ್ಲಿಗೆ ದಂಡೆ' ಕೃತಿಗೆ ಮುನ್ನುಡಿ ಮತ್ತು ಎಲ್ಲ ಹಾಡುಗಳ ಸಂದರ್ಭಗಳನ್ನು ವಿವರಿಸುವ ೪೦ ಪುಟಗಳಷ್ಟು ದೀರ್ಘವಾದ ಟಿಪ್ಪಣಿಗಳನ್ನು ಅನುಬಂಧದ ರೂಪದಲ್ಲಿ ಬರೆದವರು ಮಧುರಚೆನ್ನರು. ಈ ಕೃತಿಗೆ ಪೂರ್ಣತೆ ಬಂದುದು ಮಧುರಚೆನ್ನರ ಮುನ್ನುಡಿ ಮತ್ತು ಟಿಪ್ಪಣಿಗಳಿಂದ. ಹಾಡುಗಳ ಆಯ್ಕೆ, ಅವಶ್ಯಕವಾದ ಹಿನ್ನೆಲೆಯ ಟಿಪ್ಪಣಿಗಳು, ಆಯಾ ಸಂದರ್ಭದಲ್ಲಿ ಸಮಯವಕಾಶ ದೊರೆತಾಗ ಹಾಡುವ ಹಾಡುಗಳ ಬಗೆಗಳನ್ನು ಕೊಟ್ಟಿರುವುದು ಅತ್ಯಂತ ಉಚಿತವಾಗಿದೆ. ಈ ಕಲ್ಪನೆಯನ್ನು, ಈ ಚೌಕಟ್ಟನ್ನು ಮೀರಿ, ಇವತ್ತಿಗೂ ಯಾರಿಗೂ ಅಂತಹ ಇನ್ನೊಂದು ಪರಿಪೂರ್ಣ ಸಂಗ್ರಹವನ್ನು ಕೊಡಲು ಸಾಧ್ಯವಾಗಿಲ್ಲ ಎಂಬುದು 'ಮಲ್ಲಿಗೆ ದಂಡೆ'ಯ ಮಹತ್ವವನ್ನು, ೬೫ ವರ್ಷಗಳ ಹಿಂದಿನ ಹಿರಿಯರ ಶೈಕ್ಷಣಿಕ ಶಿಸ್ತನ್ನು ಹೇಳಿಕೊಡುತ್ತದೆ.

'ಮಲ್ಲಿಗೆ ದಂಡೆ' (೧೯೩೫) ಕೃತಿಯಲ್ಲಿ ಪ್ರಮುಖವಾಗಿ ಐದು ಪ್ರಕಾರದ (ಮದುವೆ, ಮೈನರೆದ, ಸೋಬಾನ, ಕುಪ್ಪಸ, ತೊಟ್ಟಿಲ) ಹಾಡುಗಳಿವೆ. ಜೊತೆಗೆ ಮದುವೆಯನ್ನು ಹೊರತುಪಡಿಸಿ, ಉಳಿದ ನಾಲ್ಕು ಶುಭಕಾರ್ಯದ ಸಂದರ್ಭಗಳಲ್ಲಿ, ಸಮಯವಕಾಶ ದೊರೆತಾಗ ಹಾಡುವ– ಕಥನಕವನ, ಭಾವಗೀತೆ, ಹಾಸ್ಯ, ಪ್ರಣಯ, ಅತ್ತೆಮನೆಯ ಕಾಟದಂತಹ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಹೀಗೆ ಹೆಚ್ಚಿಗೆ ಸೇರಿಸಿರುವ ಈ ಹಾಡುಗಳನ್ನು ಹೊಲಮನೆಯ ಕೆಲಸದ ವೇಳೆಯಲ್ಲೂ ಅಂದರೆ ಗೂಡು ಮುರಿಯುವಾಗ, ಸದಿ ಹೊಡೆಯುವಾಗ (ಕಸ ತೆಗೆಯುವಾಗ), ಊಟದ ಪಾದಾರ್ಥಗಳನ್ನು (ಶಾವಿಗೆ, ಸೆಂಡಿಗೆ, ಹಪ್ಪಳ, ಕುರುಡಿಗೆ) ತಯಾರಿಸುವಾಗ ಹಾಡುತ್ತಾರೆ. ಇಂತಹ ಹಾಡುಗಳಿಗೆ ಸಂದರ್ಭದ ಕಟ್ಟುಪಾಡುಗಳಿಲ್ಲ. ಅಲ್ಲಿರುವುದು ವೇಳೆಯ ಅವಕಾಶದ ಸಂಗತಿ ಮಾತ್ರ.

'ಮಲ್ಲಿಗೆ ದಂಡೆ' ಕೃತಿಗೆ ಮುನ್ನುಡಿಯನ್ನು ಬರೆದಿರುವ ಮಧುರಚೆನ್ನರು ಈ ಹಾಡುಗಳ ಮಹತ್ವವನ್ನು ಕುರಿತು ಆಡಿದ ಮಾತುಗಳು ಆಗಿನ ಸಂದರ್ಭದ ಪ್ರತೀಕಗಳಾಗಿದ್ದರೂ ಅವು ಇಂದಿಗೂ ಪ್ರಸ್ತುತವೆನಿಸುತ್ತವೆ. "ವರಕವಿಗಳು ಉದಯಿಸುವ ಮುಂಚೆ ನಮ್ಮಂಥ ನರಕವಿಗಳ ಜಂಗುಳಿ ಯೇಳುವುದು ಅನಿವಾರ್ಯ. ಇವರ ಕಾವ್ಯಶಕ್ತಿಯು ಸಾಗುವಳಿಯಿಂದ ಬೆಳೆಯಬೇಕಾದದ್ದು. ಇವರ ಸಸಿಗೆ ಹೊರಗಿನ ನೀರೂ ಹವೆಯೂ ಕಾಲಕಾಲಕ್ಕೆ ಒದಗಬೇಕು. ಈ ದೃಷ್ಟಿಯಿಂದ ಸಂಗ್ರಹಿಸಿದ ಪ್ರಸ್ತುತ ಗೀತಗುಚ್ಛವು ನವ್ಯ ಕಾವ್ಯಕುಮಾರಿಯ ಕಳೆಯನ್ನು

ಹೆಚ್ಚಿಸುವುದಕ್ಕೆಂದು ಅವಳಿಗೆ ಕಟ್ಟಿದ 'ಮಲ್ಲಿಗೆ ದಂಡೆ'ಯಾಗಿದೆ" (ಮುನ್ನುಡಿ,ಪು.೫). ಹಲಸಂಗಿ ಗೆಳೆಯರೆಲ್ಲರೂ ಕವಿಗಳಾಗಿದ್ದರು. ಹೀಗಾಗಿ ತಮ್ಮ ಆಸಕ್ತಿಯ ಕನ್ನಡ ಕವಿತೆಗಳನ್ನು ಗಮನಿಸುತ್ತಿದ್ದ ಮಧುರಚೆನ್ನರು, ಕವಿಗಳ ಕಾವ್ಯಶಕ್ತಿ ಹೆಚ್ಚಬೇಕೆಂದರೆ ಜನಪದ ಗೀತೆಗಳನ್ನು ಅವರು ಅರಿಯಬೇಕು, ಅದು ಅವರ ಕಾವ್ಯಶಕ್ತಿಯನ್ನು ಹೆಚ್ಚಿಸುತ್ತದೆ ಎಂಬ ಮಾತುಗಳನ್ನು ಆಡುತ್ತಾರೆ. ಇನ್ನು 'ಮಲ್ಲಿಗೆ ದಂಡೆ' ಕೃತಿಯಲ್ಲಿಯ ಹಾಡುಗಳಂತಹವುಗಳ ಅಧ್ಯಯನದ ಅಗತ್ಯದ ಬಗ್ಗೆ ಅವರಾಡುವ ಮಾತುಗಳೂ ಗಮನಾರ್ಹವಾಗಿವೆ. "ಹೆಣ್ಣುಮಕ್ಕಳ ಈ ಹಾಡುಗಳಲ್ಲಿ ತ್ರಿಪದಿಗೆ ಸಂಬಂಧಿಸಿರುವವುಗಳೇ ತೀರ ಹೆಚ್ಚು. ಕೆಲವೇ ವೃತ್ತಗಳು ಭಾವಕ್ಕೆ ತಕ್ಕಂತೆ ಬೇರೆ ಬೇರೆ ವಿಧದ ಮಟ್ಟುಗಳಿಂದ ಹಾಡಲ್ಪಡುವುದನ್ನು ಬಗೆದರೆ ನಮಗೆ ಏಕಮೇವ ಪರಮಾತ್ಮನ ಅನಂತಲೀಲೆಯೇ ಇಲ್ಲಿ ನೆನಪಾಗುವುದು. ಈ ಹಾಡುಗಳನ್ನು ಪ್ರತ್ಯಕ್ಷವಾಗಿ ಅವುಗಳ ನೆಲೆಯರಿತ ಹೆಣ್ಣುಮಕ್ಕಳ ಬಾಯಿಂದ ಹಾಡಿಸಿ ಕೇಳಿದರೆ, ವಾಚಕರಿಗೆ ಈ ಮಾತಿನ ಮನವರಿಕೆಯಾಗಿ ಅತ್ಯಾಶ್ಚರ್ಯವಾಗದಿರದು. ದೇವತಾಸ್ತುತಿಯ ಹಾಡುಗಳು ಶುದ್ಧರಗಳೆಯ ವೃತ್ತಗಳಾಗಿರುವುದನ್ನು ನೆನೆದರೆ ಅತ್ಯಗಾಧವೆನಿಸುವುದು. ದ್ರೌಪದಿಯ ಹಾಡು ಭೋಗಷಟ್ಪದಿಯಾಗಿರುವುದನ್ನು ಬಗೆದರೆ ಹೆಣ್ಣುಮಕ್ಕಳ ಹಾಡುಗಳ ಸಂಶೋಧನದ ಮಹತ್ವವು ಸ್ಪಷ್ಟವಾಗಿ ವಿದಿತವಾಗುವಂತಿದೆ" (ಅದೆ, ಪು.೯). ಇಂತಹ ಮಹತ್ವದ ಮಾತುಗಳನ್ನು ಮುನ್ನುಡಿಯಲ್ಲಿ ಹೇಳಿದ್ದಲ್ಲದೆ, ಈ ಕೃತಿಯ ಹಾಡುಗಳಿಗೆ ೪೦ ಪುಟಗಳಷ್ಟು ದೀರ್ಘವಾಗಿ ಟಿಪ್ಪಣಿಗಳನ್ನು ಬರೆದವರೂ ಮಧುರಚೆನ್ನರೆ ಆಗಿದ್ದಾರೆ. ಇದನ್ನು ಗಮನಿಸಿದರೆ, ಈ ಹಾಡುಗಳ ಮಹತ್ವ ಅಡಗಿರುವುದು ಅವು ಪ್ರಯೋಗವಾಗುವ ಸಂದರ್ಭಗಳಲ್ಲಿ ಎಂಬ ಸಂಗತಿ ಅವರಿಗೆ ತಿಳಿದಿತ್ತು ಎಂಬುದು ಸ್ಪಷ್ಟವಾಗುತ್ತದೆ. ೧೯೩೦ರ ಕಾಲದಲ್ಲಿ ಜನಪದ ಹಾಡುಗಳನ್ನು ಹೇಗೆ ಸಂಗ್ರಹಿಸಬೇಕು, ಹೇಗೆ ಸಂಪಾದಿಸಬೇಕು ಎಂಬ ಹೆಚ್ಚಿನ ತಿಳುವಳಿಕೆ ಇಲ್ಲದ ಕಾಲದಲ್ಲಿ ಸಂಪಾದನೆಯ ಕೆಲಸವನ್ನು ಇಷ್ಟೊಂದು ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಆಶ್ಚರ್ಯದ ಸಂಗತಿಯೇ ಆಗಿದೆ.

'ಮಲ್ಲಿಗೆ ದಂಡೆ' ಕೃತಿಯಲ್ಲಿ ಶುಭಕಾರ್ಯದ ಹಾಡುಗಳೇ ಪ್ರಮುಖವಾದವುಗಳು. ಅವುಗಳನ್ನು ಮೊದಲಿಗೆ ಗಮನಿಸಿ, ನಂತರ ಉಳಿದ ಹಾಡುಗಳನ್ನು ಗಮನಿಸಬಹುದಾಗಿದೆ. ಇವುಗಳಲ್ಲಿ ಶುಭಕಾರ್ಯದ ಸಂದರ್ಭಗಳನ್ನು ಸರಿಯಾಗಿ ಗುರುತಿಸಿ ವಿಭಾಗೀಕರಣ ಮಾಡಿಕೊಳ್ಳಲಾಗಿದೆ. ಮದುವೆಯ ಹತ್ತು ಸಂದರ್ಭದ ಹಾಡುಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ. ಸೋಬಾನದ ಹಾಡುಗಳು ಭಾಗದಲ್ಲಿ ಮೈನರೆದ ಹಾಡುಗಳೂ ಸೇರಿಕೊಂಡಿವೆ. ಬಾಲ್ಯವಿವಾಹ ಸಾಮಾನ್ಯವಾಗಿದ್ದ ಕಾಲದಲ್ಲಿ ಈ ಕೃತಿ ಪ್ರಕಟವಾಗಿದೆ. ಬಾಲ್ಯದಲ್ಲಿ ಮದುವೆಯಾಗಿ, ಹುಡುಗಿ ದೊಡ್ಡವಳಾದಾಗ (ಮೈನೆರೆತಾಗ) ಅವಳನ್ನು ಕೂಡಿಸಿ ಹಾಡುವ ಕಾರ್ಯಕ್ರಮದ ಕೊನೆಯ ದಿನ (೫ನೇ, ೧೨ನೇ, ೧೬ನೇ ದಿನವಾಗಿರಬಹುದು) ಸೋಬಾನ ಮಾಡಿಕೊಡುವ ಪದ್ಧತಿ ಇತ್ತು. ಹೀಗಾಗಿ ಈ ಹಾಡುಗಳನ್ನು ಬೇರೆ ವಿಭಾಗ ಮಾಡಿ ಕೊಡದೆ ಒಂದೇ ವಿಭಾಗದಲ್ಲಿ ಕೂಡಿಸಿಕೊಟ್ಟಂತೆ ತೋರುತ್ತದೆ. ಮುಂದಿನ 'ಇತರ ವಿಧಾನಗಳು' ಎನ್ನುವ ಭಾಗದಲ್ಲಿ ಮೊದಲಿಗೆ ಕುಬ್ಬಸದ ಹಾಡುಗಳನ್ನು ಕೊಟ್ಟು, ಕೊನೆಯಲ್ಲಿ

ಒಂದು ಜೋಗುಳ ಹಾಡನ್ನೂ ಕೊಟ್ಟಿದ್ದಾರೆ. ಅಂದರೆ ಕ್ರಮವಾಗಿ ಮದುವೆ> ಮೈನೆರೆದ> ಶೋಭನ>ಕುಪ್ಪಸ>ಜೋಗುಳ- ಇಲ್ಲಿಗೆ ಹೆಣ್ಣಿನ ಒಂದು ಜೀವನಾವರ್ತನ ಮುಗಿದಂತಾಗುತ್ತದೆ.

'ಮಲ್ಲಿಗೆ ದಂಡೆ' ಕೃತಿಗಾಗಿ ಮಾಡಿಕೊಂಡು ಹಾಡುಗಳ ಆಯ್ಕೆ ಚೆನ್ನಾಗಿದೆ. ಎಲ್ಲವೂ ಪ್ರಸಿದ್ಧವಾದ ಹಾಡುಗಳಾಗಿವೆ. ಅದರಲ್ಲೂ ಈ ಎಲ್ಲ ಪ್ರಕಾರಗಳಲ್ಲಿ ಹೆಣ್ಣು ಪ್ರಮುಖ ಸ್ಥಾನದಲ್ಲಿದ್ದು, ಅವಳನ್ನು ಕುರಿತೇ ಹಾಡುಗಳಿವೆ. ಈ ಹಾಡುಗಳನ್ನು ರಚಿಸುವವರು ಮತ್ತು ಹಾಡುವವರು ಹೆಣ್ಣಮಕ್ಕಳೆ. ಉತ್ತರ ಕರ್ನಾಟಕದ ಈ ಹಾಡುಗಳು ಸಾಹಿತ್ಯಿಕ ದೃಷ್ಟಿಯಿಂದ ಮತ್ತು ಧಾಟಿಗಳ ದೃಷ್ಟಿಯಿಂದ ಮಹತ್ವದ ಹಾಡುಗಳೆನಿಸುತ್ತವೆ. ಮದುವೆ ಅನೇಕ ಸಂಪ್ರದಾಯಗಳ ಒಂದು ಬಹುದೊಡ್ಡ ಸಂಪ್ರದಾಯ ಪ್ರಕ್ರಿಯೆ. 'ಮಲ್ಲಿಗೆ ದಂಡೆ' ಕೃತಿಯಲ್ಲಿ ಹತ್ತು ಸಂಪ್ರದಾಯಗಳ ಹಾಡುಗಳನ್ನು ಸಂಗ್ರಹಿಸಲಾಗಿದೆ. ಮೊದಲಿಗೆ ಭಾಟಗಿ ಸಂಪ್ರದಾಯ. ಹೆಣ್ಣು ಕೊಡುವ-ತೆಗೆದುಕೊಳ್ಳುವ ಮಾತುಕತೆಗಳು ಮುಗಿದ ನಂತರ 'ಸಕ್ಕರೆ ಕುಂಕುಮ' ಕಾರ್ಯಕ್ರಮ. ಅಂದರೆ ನಿಶ್ಚಯ ಕಾರ್ಯಕ್ರಮ. ಇದು ನಡೆಯುವುದು ಹೆಣ್ಣಿನ ಮನೆಯಲ್ಲಿ. ಒಂದೊಂದು ಕಡೆ ಹೆಣ್ಣಿನ ಈ ಮನೆಯ ಕಾರ್ಯಕ್ರಮಕ್ಕೆ ಗೊತ್ತಾದ ಗಂಡನ್ನೂ ಕರೆಸಿಕೊಂಡು, ಇಬ್ಬರಿಗೂ ಜೊತೆಯಲ್ಲಿ ಕೂಡಿಸಿ ಆಹೇರಿ ಮಾಡಿ, ಹಾಡುಗಳನ್ನು ಹಾಡುತ್ತಾರೆ. ಇದಕ್ಕೆ 'ಭಾಟಗಿ ಕಾರ್ಯಕ್ರಮ' ಎನ್ನುತ್ತಾರೆ. ಗಂಡು ಇಲ್ಲದೆ ಕೇವಲ ಹೆಣ್ಣುಮಗಳಿಗೆ ಹೊಸ ವಸ್ತ್ರ ಆಭರಣಗಳನ್ನು ಹಾಕಿ, ಕೂಡಿಸಿ ಹಾಡಿ ಮುಗಿಸುವ ಕಾರ್ಯಕ್ರಮ ಅದು ಕೇವಲ 'ನಿಶ್ಚಯ ಕಾರಣ' ಎನಿಸುತ್ತದೆ.

ಹೆಣ್ಣು ಬೇಡಲಿ ಹ್ವಾದ್ರ ಹಣ್ಣೇನು ಮಾಡತಿರಲೆ
ಹೆಣ್ಣಾಲು ಬಾನಾ ಉಣತಿರಲೆ।
ಹೆಣ್ಣಾಲು ಬಾನಾ ಉಣತಿರಲೆ। ಹೆಣ್ಣಿನ ತಾಯಿ
ಉಮ್ಮಾ್ಯದ ನಗಿಯ ನಗತಿರಲೆ। ।೧।

ಇದು ನಿಶ್ಚಯ ಕಾರಣದಲ್ಲಿ ಕಾಣಿಸಿಕೊಳ್ಳುವ ಹಾಡಿನ ನುಡಿ. ಮೊದಲಿಗೆ ಕಾಣಿಸಿಕೊಳ್ಳುವವೆಲ್ಲ ಶುಭಸೂಚನೆಗಳನ್ನು ಹೊತ್ತ ಸಂದೇಶಗಳಾಗಿರಬೇಕು. ಜನಪದ ಹಾಡುಗಳ ಮೇಲ್ಮೆ ಎಂದರೆ ಅವು ನಮ್ಮ ಬದುಕಿನ ಅವಿಭಾಜ್ಯ ಅಂಗಗಳು ಎಂಬುದು. ಅವೆಲ್ಲ ನಮ್ಮ ಬದುಕಿನ ಶುಭಾಶುಭಗಳನ್ನು ತಾವೇ ಒರೆಯುತ್ತಿರುತ್ತವೆ. ಅಲ್ಲಿ ಮುಖ್ಯವಾಗಿ ಸುಖಸಂತೋಷಗಳು ಕಾಣಬೇಕೆಂಬ ಬಹುದೊಡ್ಡ ಮನಸ್ಸು ಕಾಣಿಸುತ್ತದೆ. ತಮ್ಮ ಸುಖಸಂತೋಷಗಳನ್ನು ಜನರೊಂದಿಗೆ ಕೂಡಿ ಹಂಚಿಕೊಳ್ಳುವ ಗುಣ ಜನಪದರದು.

ಆ ಮನಿ ಅತ್ತೀಗಿ ಈ ಮನಿ ನಾದುನಿ
ಆಕಳ ಕರ ಸಾಕ್ಷಿ ನೆಗಿಯಾಣಿ।
ಆಕಳ ಕರ ಸಾಕ್ಷಿ ನೆಗಿಯಾಣಿ। ಕರಕೊಂಡು
ಬಾಲನ ಭಾಟಿಗ್ಗೆ ಬರಬೇಕ।

ಹೀಗೆ ಬಂಧುಬಾಂಧವರನ್ನು, ನೆರೆಯೊರೆಯವರನ್ನು ಕರೆದು ಅವರ ಎದುರಿನಲ್ಲಿಯೇ ಮಗಳನ್ನು ಇನ್ನೊಂದು ಮನೆಗೆ ಕಳಿಸುವ ಮೊದಲನೇ ಕಾರ್ಯಕ್ರಮ ನಡೆಯುತ್ತದೆ.

ಹೀಗೆ ಪ್ರಾರಂಭವಾಗುವ ಹಾಡುಗಳು, ಮದುವೆಯ ಕಾರ್ಯಕ್ರಮದ ಪ್ರತಿಯೊಂದು ಕ್ರಿಯಾಚರಣೆಯ ಹಂತದಲ್ಲೂ ಬಳಕೆಯಾಗುತ್ತವೆ. ಹಾಡಿಲ್ಲದೆ ಮದುವೆಯ ಯಾವ ಕಾರ್ಯಕ್ರವೂ ನಡೆಯುವುದಿಲ್ಲ. ಹೆಣ್ಣು-ಗಂಡುಗಳಿಗೆ ಕೂಡಿ ಬಾಳಲು ಅಧಿಕೃತ ಮನ್ನಣೆ ಕೊಡುವ ವಿಶೇಷ ಕಾರ್ಯಕ್ರಮವೆ ಮದುವೆಯಾಗಿರುವುದರಿಂದ ಇಲ್ಲಿಯ ಕೇಂದ್ರ ವ್ಯಕ್ತಿಗಳು ಮದುಮಕ್ಕಳೇ ಆಗುತ್ತಾರೆ. ಹೀಗಾಗಿ 'ಕೋಮಲ ಶೃಂಗಾರ' ಭಾವ ಈ ಹಾಡುಗಳಲ್ಲೆಲ್ಲ ಉಸಿರಾಡುತ್ತಿರುತ್ತದೆ. ಇಲ್ಲಿಯ ಧಾಟಿಗಳೂ ಅಷ್ಟೇ 'ಕೋಮಲ ಸ್ವರ'ದಿಂದ ಕೂಡಿರುತ್ತವೆ. ಹಾಡುವವರು ಜೋಡಿಯಾಗಿ, ಹಿಮ್ಮೇಳ ಮುಮ್ಮೇಳಗಳಾಗಿ ಹಾಡುವುದರಿಂದ ಹಾಡಿನ ಸೊಗಸು ಇನ್ನೂ ವೃದ್ಧಿಸುತ್ತದೆ. ಹೀಗಾಗಿ ಶುಭಕಾರ್ಯದ ಹಾಡುಗಳ ಸೊಗಸು ಅದ್ಭುತವೆನ್ನುವಷ್ಟು ಮೈತುಂಬಿಕೊಂಡಿರುತ್ತದೆ.

ಶುಕ್ರವಾರದಿನ ಸೂರ್ಯಉದಯಾದಂಗ
ಇಂದ ನಮ್ಮಳಿಯ ಉದಯಾದ
ಇಂದ ನಮ್ಮಳಿಯ ಉದಯಾದ। ಹಡೆದವ್ವ
ಶಾಂವಿಗಿ ಸಯಿದಾನಕ ಹದಮಾಡ

ಕಡಲಿಕಾಳಂಗ ಕಟದ ಮುತ್ತಿಟ್ಟಾನ
ಹಡದವ್ವ ನೋಡ ಅಳಿಯರಿಗೆ।
ಹಡದವ್ವ ನೋಡ ಅಳಿಯರ ಚಲುವಿಕಿ।
ದೊಡ್ಡವರ ತಕ್ಕ ಅಳಿಯನ ।

ವರನು ತನ್ನ ಮನೆಯಿಂದ ಮೊದಲನೆಯದಾಗಿ ಬೀಗರ ಮನೆಗೆ ಬಂದ ಸಂದರ್ಭದ ಹಾಡು ಇದು. ಹೀಗಾಗಿ ವಿಶೇಷವಾಗಿ ಅಳಿಯನ ವರ್ಣನೆ ನಡೆಯುತ್ತದೆ. ಮನೆಗೆ ತಕ್ಕ ಸುಂದರವಾದ ಅಳಿಯ ದೊರೆತ ಬಗ್ಗೆ ಸಂತೋಷವನ್ನು ಅಭಿವ್ಯಕ್ತಿಸುವ ಸಂದರ್ಭವಿದು.

ಮದುವೆ ಪ್ರಾರಂಭವಾಗುವುದು ಒಳಕಲ್ಲ ಪೂಜಿಯಿಂದಲೇ. ಮದುವೆಯ ಸಾಹಿತ್ಯವೆಲ್ಲ ತಯಾರಿಸಲು ಅನುಕೂಲವಾಗಿರುವ ಒರಳು, ಕಲ್ಲುಗಳ ಪೂಜಿ ಮಾಡಿಯೇ ಮದುವೆಯ ಪ್ರವೇಶವಾಗುವುದು. ಇಷ್ಟೊತ್ತಿಗೆ ಹಂದರವೂ ತಯಾರಾಗಿರುತ್ತದೆ. ಮುತ್ತೈದೆಯರು ಬಂದು ಈ ಕಾರ್ಯಕ್ರಮ ಪ್ರಾರಂಭಿಸಬೇಕು.

ಕಲ್ಲ ಪೂಜಿ ಮಾಡಲಕ ನನ್ಯಾರು ಕರಸ್ಯಾರ
ಸಾಲಮ್ಯಾಳಿಗಿ ಮನಿಯವಳ। ಸುವ್ವಿ ಸುವ್ವಿ ಸುವ್ವಾಲೆ
ಸಾಲಮ್ಯಾಳ್ಗಿ ಮನಿಯವಳ ತಂಗೆವ್ವಾ
ಕಲ್ಲ ಪೂಜಿಗಿ ಕರಸ್ಯಾಳ। ಸುವ್ವಿ ಸುವ್ವಿ ಸುವ್ವಾಲೆ
ಹಂದರ ಮ್ಯಾಲಿನ ಕಣಕಿ ನಂದಿ ಮೆಯ್ದಾವಂದು
ಬಿಚ್ಚಿ ಬಿಳಿಯಲಿ ಹರವ್ಯಾರ । ಸುವ್ವಿ ಸುವ್ವಿ ಸುವ್ವಾಲೆ
ಬಿಚ್ಚಿ ಬಿಳಿಯಲಿ ಹರವ್ಯಾರ ತಮ್ಮಗ।
ಅಣ್ಣ ಮಾಡ್ಯಾನ ಮದವೀಯ ।ಸುವ್ವಿ ಸುವ್ವಿ ಸುವ್ವಾಲೆ

ಹೀಗೆ ಸಂದರ್ಭವರಿತು ಈ ಹಾಡುಗಳನ್ನು ಕೇಳುವ, ಓದುವ ಕ್ರಿಯೆ ನಡೆದರೆ ಈ ಹಾಡುಗಳ ಸೌಂದರ್ಯ ತುಂಬಿಕೊಳ್ಳುತ್ತದೆ.

ಮದುವೆಯ ಸಂಪ್ರದಾಯಗಳೆಲ್ಲ ಶೈವಸಂಪ್ರದಾಯದ ಪ್ರಭಾವದಲ್ಲಿಯೇ ಜರುಗುತ್ತವೆ. ಅಲ್ಲಿ ಪ್ರತಿಯೊಂದು ಕ್ರಿಯೆಯೂ ಶಿವನಿಗೆ ಸ್ಮರಿಸುವ ಮೂಲಕವೇ ನಡೆಯುತ್ತದೆ. ಮದುಮಕ್ಕಳಂತೂ ಜನಪದರಿಗೆ ಶಿವ–ಪಾರ್ವತಿಯರೇ ಆಗಿ ಕಾಣುತ್ತಾರೆ. ಹೀಗಾಗಿ ಅಲ್ಲಿ ಮದುಮಕ್ಕಳ ವರ್ಣನೆ ಎಂದರೆ ಶಿವ–ಪಾರ್ವತಿಯರ ವರ್ಣನೆಯೇ ಆಗಿರುತ್ತದೆ. ಎಣ್ಣೆ ಹಚ್ಚುವುದು ಶಿವಪಾರ್ವತಿಯರಿಗೆ, ಅಕ್ಷತಾ ಹಾಕುವುದು 'ದೇವರ ಅಕ್ಷತೆ' ಎಂದು ದೇವರ ಮುಂದೆಯೇ. ದೇವರು ಎಂದರೆ ಜನಪದರಿಗೆ ಆತ ಶಿವನೇ. ಮದುವೆ ಯಾವ ದೇವರ ಎದುರಿಗೆ ನಡೆದರೂ ಅವರು ನೆನೆಯುವುದು ಮಾತ್ರ ಶಿವ–ಪಾರ್ವತಿಯರನ್ನೆ.

ದೇವದೇವರೆಣ್ಣೆ ಯಾವ ದೇವರೆಣ್ಣಿ
ಮನಿಯ ದೇವರ ಮೊದಲೆಣ್ಣೆ ।
ಹರಹರ ನಮ ಶಿವಗ ನೆಯ್ಯೆಣ್ಣೆ ।ಪ।

ಬಾಲಗೆಣ್ಣಿ ಹಚ್ಚೊಟಿಗೆ ಬಾಗಿಲಿಗೆ ಬಿಸಿಲ್ಬಂದು
ನಾಲ್ವತ್ತಾಟದ ಎಲಿ ಬಂದ । ಹರಹರ ನಮ ಶಿವಗ. . .।೧।

ಕಂದಗೆಣ್ಣಿ ಹಚ್ಚೊಟ್ಟಿಗೆ ಅಂಗಳಕ ಬಿಸಿಲ್ಬಂದ
ಐವತ್ತಾಟದ ಎಲಿ ಬಂದ । ಹರಹರ ನಮ ಶಿವಗ. . .।೨।

ನೀರಿಲ್ಲದಂಗಳಾಗ ನೀರ್ಯಾಕನಾಗ್ಯಾವ
ಊರಿಗಿ ದೊಡ್ಡವರ ಮಗ ಮಿಂದ ।। ಹರಹರ ನಮ ಶಿವಗ. . .।೩।

ಕೆಸರಿಲ್ಲದಂಗಳಾಗ ಕೆಸರ್ಯಾಕನಾಗ್ಯಾವ
ಹೆಸರಿಗಿ ದೊಡ್ಡವರ ಮಗ ಮಿಂದ । ಹರಹರ ನಮ ಶಿವಗ. . .।೪।

ಹೆಸರಿಗಿ ದೊಡ್ಡವರ ಮಗ ಮಿಂದ ತಮ್ಮಗ
ಹಸರ ಪಲ್ಲಕ್ಕಿ ನೆರಳಾಗಿ । ಹರಹರ ನಮ ಶಿವಗ. . .।೫।

ಮದುಮಕ್ಕಳನ್ನು ಒಂದು ಸುರಗಿಯಲ್ಲಿ ಬಂಧಿಸಿ, ಸ್ನಾನ ಮಾಡಿಸುವ ಕ್ರಿಯೆಯೇ ಸುಂದರವಾದ ಶೃಂಗಾರ ಸನ್ನಿವೇಶ. ಹೆಣ್ಣಿನ ಗಂಡಿನ ಜೀವನದಲ್ಲಿ ಇದಕ್ಕಿಂತಲೂ ರೋಮಾಂಚನವಾದ ಇನ್ನೊಂದು ಸಂದರ್ಭ ಕಾಣಿಸಲು ಸಾಧ್ಯವಿಲ್ಲ. ಈ ಹಾಡಿನಲ್ಲಿ ಬರುವ ಒಂದೊಂದೇ ಮಾತುಗಳನ್ನು ಗಮನಿಸಿ– ಬಾಗಿಲಿಗೆ ಬಸಿಲು ಬರುವುದು, ನಾಲ್ವತ್ತೋಟದ ಎಲಿ ಬರುವುದು, ಮುಂದೆ ಈ ಪ್ರಮಾಣ ವೃದ್ಧಿಯಾಗುತ್ತ ಮುಂದುವರೆಯುತ್ತ ಬರುವುದನ್ನು ಕಾಣಬಹುದು. ಬಾಗಿಲಿಗಿ ಬಂದ ಬಿಸಿಲು, ಅಂಗಳಕೆ ಹಣಿಕಿಕ್ಕುತ್ತದೆ. ಅಂಗಳ ತುಂಬ ನೀರಾಗುತ್ತದೆ, ಕೆಸರಾಗುತ್ತದೆ. ಬಾಲನು ಕಂದನಾಗುತ್ತಾನೆ, ಮಗನಾಗುತ್ತಾನೆ. ನಾಲ್ವತ್ತೋಟದ ಎಲೆಗಳು, ಐವತ್ತೋಟದ ಎಲೆಗಳಾಗುತ್ತವೆ. ಕರೆದೊಯ್ಯಲು ಹಸರ ಪಲ್ಲಕ್ಕಿಯೇ ಬರುತ್ತದೆ. ಇವೆಲ್ಲ ರಂಜನೀಯ, ರೋಮಾಂಚನ ಹುಟ್ಟಿಸುವ,

ಮೈನವಿರೇಳಿಸುವ ಎಳೆಯ ಶೃಂಗಾರದ ಭಾವನೆಗಳೆಲ್ಲ ಇಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ಅದ್ಭುತವಾದ ವರ್ಣನೆಗಳು ಕಾಣಿಸುವುದು ಈ ಸಂದರ್ಭದ ಹಾಡುಗಳಲ್ಲಿ ಮಾತ್ರ. ಇವುಗಳನ್ನು ನೋಡುವ ವಿಮರ್ಶಿಸುವ ಕೆಲಸ ನಡೆಯಬೇಕಾದುದು ಅವಶ್ಯವಿದೆ.

ಮುಂದೆ ಬಾಲಿಯ ವರ್ಣನೆ ಬರುತ್ತದೆ. 'ಬಾಲ' ಇರುವಲ್ಲಿ 'ಬಾಲಿ' ಯನ್ನಿಟ್ಟು ಹಾಡು ಹಾಡಲಾಗುತ್ತದೆ.

'ಕಂಚೆಣ್ಣಿ ಬಟ್ಲಾಗ ಮಿಂಚೆಣ್ಣಿ ತಕ್ಕೊಂಡು
ಕೆಂಚರೊಂದ್ಯವರ ನೆರದ ಮುತ್ತೈದೇರ್ಯಾ
ಎಣ್ಣಿ ಹಚ್ಚನು ಬನ್ನೀರೆ'

ಕಂಚೆಣ್ಣಿ, ಮಿಂಚೆಣ್ಣಿ, ಕೆಂಚೆಯರು ಇತ್ಯಾದಿಗಳೆಲ್ಲ ಶೃಂಗಾರದ ಭಾವನೆಗೆ ಸಂಬಂಧಿಸಿದ ಉಲ್ಲೇಖಗಳಾಗಿವೆ.

'ಐರಾಣಿ ಹಾಡು' ಇದು ಹೊಸ ಸಂಸಾರಕ್ಕಾಗಿ ಏನೇನು ಗಡಿಗೆ ಮಡಿಕೆಗಳು ಬೇಕೋ ಅವೆಲ್ಲವನ್ನೂ ಕುಂಬಾರನ ಮನೆಯಿಂದ ತರುವ ಸಂದರ್ಭದ ಹಾಡಾಗಿದೆ. 'ಸಂಡಿಗೆ ಕಡಿಯುವ ಹಾಡು', 'ನೂಲುಸುತ್ತುವ ಹಾಡು' ಇವು ಎಣ್ಣೆ ಹಚ್ಚುವ ಕಾರ್ಯಕ್ರಮದ ಮೊದಲಲ್ಲಿ ಬರುವ ಹಾಡುಗಳು. ಮದುವಕ್ಕಳಿಗೆ ಎರಡು ಸಲ ಸ್ನಾನ ಮಾಡಿಸುವ ಕಾರ್ಯಕ್ರಮ ನಡೆಯುತ್ತದೆ. ಪ್ರಾರಂಭದಲ್ಲಿ ಒಂದು ಸಲ, ಅಕ್ಷತಾ ಕಾರ್ಯಕ್ರಮಕ್ಕಿಂತ ಮುಂಚೆ ಒಂದು ಸಲ. ಎರಡು ಕಡೆಯೂ ನೂಲು ಸುತ್ತುವ, ಎಣ್ಣೆ ಹಚ್ಚುವ ಕಾರ್ಯಕ್ರಮಗಳು ನಡೆಯುತ್ತವೆ. ಮದುಮಕ್ಕಳನ್ನು ಮಣೆಯ ಮೇಲೆ ಕೂಡ್ರಿಸಿ ಚೌಕಾಕಾರದಲ್ಲಿ ನಾಲ್ಕು ಮೂಲೆಗೆ ನಾಲ್ಕು ತಂಬಿಗೆಗಳನ್ನಿಟ್ಟು, ನಾಲ್ವರಿಗೆ ತಂಬಿಗೆಗಳನ್ನು ಹಿಡಿದು ಕುಳ್ಳಿರಿಸಿ, ನೂಲು ಸುತ್ತುವ ಕಾರ್ಯಕ್ರಮ ನಡೆಯುತ್ತದೆ. ಈ ನೂಲನ್ನೇ ಕಂಕಣ ಮಾಡಿ ಮದುವಕ್ಕಳ ಕೈಗೆ ಕಟ್ಟಲಾಗುತ್ತದೆ. ಈ ಕಂಕಣ ಮದುವೆಯ ನಂತರ ತಮ್ಮ ಮನೆಯ ದೇವರ ಮುಂದೆ ಬಿಚ್ಚುವ ಪದ್ಧತಿ ಇರುತ್ತದೆ. ಹೀಗೆ ಮದುವೆಯಲ್ಲಿ ನಡೆಯುವ ಒಂದೊಂದು ಕಾರ್ಯಕ್ರಮವೂ ವಿಶಿಷ್ಟವೆನಿಸುತ್ತದೆ.

ಅಕ್ಷತಾ ಕಾರ್ಯಕ್ರಮವೇ ಮದುವೆಯಲ್ಲಿ ಅತ್ಯಂತ ಔನತ್ಯದ ಸಂದರ್ಭ. ಇದು ಸಮಾಜದ ಒಪ್ಪಿಗೆ ಪಡೆದು, ಹೆಣ್ಣಿಗೆ ಗಂಡಿನಿಂದ ಮಂಗಳಸೂತ್ರ ಕಟ್ಟಿಸಿ, ಸಾರ್ವಜನಿಕರು ತಮ್ಮ ಒಪ್ಪಿಗೆಯ ರೂಪದಲ್ಲಿ ಅಕ್ಷತೆ ಹಾಕುತ್ತಾರೆ. ಮದುಮಕ್ಕಳು ಈಗ ಅಧಿಕೃತ ಗಂಡ–ಹೆಂಡರಾಗುತ್ತಾರೆ. ನಂತರ ಈ ನವೀನ ಗಂಡ–ಹೆಂಡರು ಪರಸ್ಪರ ಸ್ಪರ್ಷ ಪಡೆಯಲು ಯೋಗ್ಯರಾಗುತ್ತಾರೆ. ಇಂತಹ ಸಂದರ್ಭಗಳೂ ಹಂದರದಲ್ಲಿಯೇ ನಡೆಯುತ್ತವೆ. ಅದೇ 'ಅಡಿಕೆ ಆಡುವ ಹಾಡು'.

ಬಾಳಿಯ ಕಾಯಾಂಗ ಬಾಗಿ ಬಂದಳ ಬಾಲಿ
ಭಾಗ ಕೊಡು ರಾಯಾ ಎಡದಲ್ಲಿ
ಭಾಗ ಕೊಡು ರಾಯ ಎಡದಲ್ಲಿ ಸಾವಿರದ
ಮಾಣೀಕ್ಯೇರವರ ಮಗಳೀಗಿ ।

ನಿಂಬಿಯ ಕಾಯ್ಹಾಂಗ ತುಂಬಿ ಬಂದಳ ಬಾಲಿ
ಇಂಬ ಕೊಡು ರಾಯಾ ಎಡದಲ್ಲಿ
ಇಂಬ ಕೊಡು ರಾಯ ಎಡದಲ್ಲಿ ಸಾವಿರದ
ಒಜ್ಜಿರ್ಥೇರವರ ಮಗಳೀಗಿ ।

ಹೀಗೆ ಹಾಡುತ್ತ ಅಡಿಕೆ ಆಡಿಸುತ್ತಾರೆ. ಹೆಣ್ಣು ಮುಟ್ಟಿಗೆಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡ ಅಡಿಕೆಯನ್ನು ಗಂಡು ಎಡಗೈಯಿಂದ ಬಿಡಿಸಿ, ಅಡಿಕೆ ಪಡೆಯಬೇಕು. ಗಂಡು ಎಡಗೈಯ ಮೂರು ಬೆರಳಿನಲ್ಲಿ ಮಾತ್ರ ಅಡಿಕೆ ಹಿಡಿಯಬೇಕು. ಹೆಣ್ಣು ಎರಡೂ ಕೈಯಿಂದಲೂ ಬಿಡಿಸಿಕೊಳ್ಳುವ ಪ್ರಯತ್ನ ಮಾಡಬಹುದು. ಇಂತಹ ಇನ್ನೂ ಕೆಲವು ಸರಸದ ಆಟಗಳನ್ನು ಹಂದರದಲ್ಲಿ ಆಡಿಸುವ ಉದ್ದೇಶವೆಂದರೆ, ಗಂಡ-ಹೆಂಡಿರಲ್ಲಿ ಸರಸ ಮೂಡಲಿ, ಹಿಂಜರಿಕೆ ಮಾಯವಾಗಲಿ ಎಂಬ ಉದ್ದೇಶವೇ ಇರುತ್ತದೆ.

ನಂತರ ನಡೆಯುವ ಕಾರ್ಯಕ್ರಮಗಳೆಲ್ಲ ಮದುವೆಯ ಮುಕ್ತಾಯದ ಕಡೆ ನಡೆಯುವ ಶಾಸ್ತ್ರದ (ನೇಮದ) ಕಾರ್ಯಕ್ರಮಗಳು. ಅದರಲ್ಲಿ ಭೂಮದ ಹಾಡು ಒಂದು. ಹೊಸದಾಗಿ ಸಂಸಾರ ಹೂಡಲಿರುವ ಮದುಮಕ್ಕಳಿಗೆ ತಯಾರಿಸಿದ ಆಹಾರವನ್ನು ಕೊಡುವ ಸಂದರ್ಭದ ಹಾಡು. ಹೆಣ್ಣಿನ ಮನೆಯವರು ಮಾಡಿದ ಆಹಾರ ಪದಾರ್ಥಗಳನ್ನು, ಜೊತೆಗೆ ಬೇಕಾದ ಪಾತ್ರೆಪಗಡೆಗಳನ್ನು ಸಣ್ಣ ಮೆರವಣಿಗೆ ಹೊರಡಿಸಿ ಗಂಡಿನವರಿಗೆ ಒಪ್ಪಿಸುವ ಸಂದರ್ಭವದು.

ಹಸನುಳ್ಳ ಕಣಕೀಗಿ ಬಿಸಿನೀರ ಛಳಿಕೊಟ್ಟು
ಎಸಳ ಯಾಲಕ್ಕಿ ಪುಡಿಬೆಲ್ಲ ಸೋ। ನಂದಿಮನಾರಿ ಸೋ

ಎಸಳ ಯಾಲಕ್ಕಿ ಪುಡಿಬೆಲ್ಲ ಭಜ್ಜಕದ
ಬಿಸಿ ಹೋಳ್ಗಿ ಭೂಮಾಕ ಬರಬೇಕ ಸೋ। ನಂದಿಮನಾರಿ ಸೋ

ಹೀಗೆ ಆಹಾರದ ವರ್ಣನೆ ಮಾಡುತ್ತ ಹೆಣ್ಣು-ಗಂಡು ಮಕ್ಕಳು ಹೊಸ ಬಿದರಿನ ಬುಟ್ಟಿಯಲ್ಲಿ ಆಹಾರ ಪದಾರ್ಥಗಳನ್ನು ತುಂಬಿಕೊಂಡು, ಹಾಡುತ್ತ, ಮೆರವಣಿಗೆಯಲ್ಲಿ ಒಯ್ದು ಮುಟ್ಟಿಸಲಾಗುತ್ತದೆ. ಇದನ್ನು ಮದುವೆ ಕಾರ್ಯಕ್ರಮದ ಮುಕ್ತಾಯದ ಮಹಾನೈವೇದ್ಯವೆಂತಲೂ ಕೆಲವರು ವರ್ಣಿಸುತ್ತಾರೆ. ಈಗ ಕೊನೆಯದಾಗಿ 'ಬೀಗರ ಹಾಡು'ಗಳ ಸಂಭ್ರಮ. ಬೀಗರ ಹಾಡುಗಳು ಎರಡು ಸಲ ಪ್ರಯೋಗವಾಗುತ್ತವೆ. ಒಂದು ಮದುವೆಗೆಂದು ಬಂದ ಬೀಗರನ್ನು ಮೊದಲಿಗೆ ಕರೆತರುವಾಗ ಹಾಡಲಾಗುತ್ತದೆ. ಈಗ ಮದುವೆ ಮುಗಿದ ನಂತರ ಬೀಗರನ್ನು ಕಳಿಸುವಾಗ ಹಾಡಲಾಗುತ್ತದೆ. ಒಬ್ಬರನೊಬ್ಬರು ಅಪಹಾಸ್ಯ ಮಾಡಿಕೊಂಡು ಹಾಡುವ ಹಾಡುಗಳಿವು.

ಸರಕ್ಕ ಸರಿತಲ್ಲ ಬೀಗರ ಸುರಪ್ಪ ತಿಳಿತಲ್ಲಪ।
ಆನೀ ಬರತಾವಂತ ಆರ ಭಣಮೀ ಕೊಂಡ
ಆನೆಲ್ಲಿ ನಿಮ್ಮ ದಳವೆಲ್ಲಿ। ಸರಕ್ಕ
ಆನೆಲ್ಲಿ ನಿಮ್ಮ ದಳವೆಲ್ಲಿ ಬೀಗ।
ಬೋಳ್ಹೋರಿ ಮ್ಯಾಲ ಬರತಾರ । ಸರಕ್ಕ ।೧।

ಹೀಗೆ ಒಬ್ಬರನೊಬ್ಬರು ಟೀಕಿಸುವ ಅಪಹಾಸ್ಯ ಮಾಡುವ ಸಂದರ್ಭ ಇದು. ಕೊನೆಯದಾಗಿ ಮದುವೆಯಾದ ಹುಡುಗಿಯನ್ನು ಗಂಡನ ಮನೆಯರಿಗೆ ಒಪ್ಪಿಸುವ ಸಂದರ್ಭ 'ಕೂಸು ಒಪ್ಪಿಸುವ ಸಂದರ್ಭ'. ಅತ್ಯಂತ ಹೃದಯ ವಿದ್ರಾವಕವಾದ ಸನ್ನಿವೇಶವೆಂದರೆ ಈ ಸಂದರ್ಭವೇ.

ಒಂಬತ್ತು ತಿಂಗಳು ನಿನ್ನ ತಂಬಿಕೊಂಡು ತಿರುಗೇನ
ಹಂಬಲಿಸಿ ನಿನ್ನ ಹಡದೇನ ।ಸೋ।

ಹಂಬಲಿಸಿ ನಿನ್ನ ಹಡದೇನ ಚಿತ್ರದ
ಗೊಂಬಿ ನಿನಗೊಪ್ಪಿಸಿ ಕೊಡಲ್ಯಾಂಗ।ಸೋ।

ತೊಟ್ಟೀಲ ತೂಗಂದ್ರ ಸಿಟ್ಟೀಲಿ ಕೂಡೋಳ
ಬಟ್ಟಲ ಬೆಳಗಾಕ ಅರಿಯಾಳ । ಸೋ

ಬಟ್ಟಲ ಬೆಳಗಾಕ ಅರಿಯಾದ ಮಗಳನ್ನ
ಕೊಟ್ಟೇನು ಮಾವನ ಕೈಯಾಗ ।ಸೋ

ಹೀಗೆ ಮದುವೆ ಸುದೀರ್ಘವಾದ ಕ್ರಿಯಾಚರಣೆಗಳನ್ನು ಹೊಂದಿ ಮುಕ್ತಾಯವಾಗುತ್ತದೆ.

ಸೋಬಾನದ ಹಾಡುಗಳು : ಮದುವೆ ಮುಗಿದ ಕೂಡಲೇ ನಡೆಯಬೇಕಾದುದು ಸೋಬಾನ. ಮದುಮಗಳು ವಯಸ್ಸಿಗೆ ಬಂದವಳಾಗಿದ್ದರೆ ಸೋಬಾನ. ಬಾಲ್ಯವಿವಾಹವಿದ್ದರೆ, ಹುಡುಗಿ ದೊಡ್ಡವಳಾಗುವವರೆಗೆ ಕಾಯಬೇಕು. ದೊಡ್ಡವಳಾದಾಗ ನಡೆಯುವ ಕ್ರಿಯಾಚರಣೆಗಳ ಕೊನೆಯದಿನ ಸೋಬಾನದ ಕಾರಣ ನಡೆಯುತ್ತದೆ. ಹೀಗಾಗಿ 'ಮಲ್ಲಿಗೆ ದಂಡೆ' ಕೃತಿಯಲ್ಲಿ ಸೋಬಾನದ ಹಾಡುಗಳು ಎಂಬ ಶೀರ್ಷಿಕೆಯ ಕೆಳಗೆ ಮೈನೆರೆದ ಹಾಗೂ ಸೋಬಾನದ ಹಾಡುಗಳನ್ನು ಜೊತೆಯಲ್ಲಿ ಕೊಡಲಾಗಿದೆ.

ಹೆಣ್ಣು ದೊಡ್ಡವಳಾಗುವುದು ತವರು ಮನೆಯರಿಗೂ ಗಂಡನ ಮನೆಯವರಿಗೂ ಅತ್ಯಂತ ಸಂತೋಷದ ಮತ್ತು ಸಂಭ್ರಮದ ಕ್ಷಣವಾಗಿರುತ್ತದೆ. ಹುಡುಗಿ ದೊಡ್ಡವಳಾದಾಗಿನ ಅವಳ ದೈಹಿಕ ಸ್ಥಿತಿಗತಿಗಳನ್ನು ಹಾಡು ಹೀಗೆ ವರ್ಣಿಸುತ್ತದೆ.

ಬಾಲಿ ತಾ ಮೈನೆರೆದು ಬಾಗಿಲದಾಗ ನಿಂತಾಳ
ಬಾಳೇಲಿ ಹಂಗ ಮಕ ಬಾಡಿ ।ಸೋ

ಬಾಳೆಲಿ ಹಂಗ ಮಕ ಬಾಡಿ ಅವರವ್ವಾ
ಬಾ ಬಾಲಿನಂದ ಕರದಾಳ ।ಸೋ

ಬಡಗ್ಯಾರ ಕರಸ್ಯಾರ ಹಿಡಿ ಹೊನ್ನ ಕುಡಸ್ಯಾರ
ಚಂದನದ ಗೊಂಬಿ ಕೆತ್ತಸ್ಯಾರ।ಸೋ
ವಡ್ಡರನ ಕರಸ್ಯಾರ ಹಿಡಿ ಹೊನ್ನ ಕೊಡಸ್ಯಾರ
ಅಂಗಳದಾಗ ಭಾಂವಿ ಹೊಡಸ್ಯಾರ।ಸೋ

ಅಂಗಳದಾಗ ಭಾಂವಿ ಹೊಡಸ್ಯಾರ ತಂಗೆಮ್ಮ
ಇಲ್ಲೆ ಮೆಲಿಯವ್ವ ಹೊಲಿನೀರ ।ಸೋ

ನೀರ ಮಡು ಬಿಟ್ಟು ಹಾಲ ಮಡುಕ ಹೋಗಿ
ಹಸನಾಗಿ ಒಗಿರಿ ಮಡಿಗೋಳ।ಸೋ

ಹಸನಾಗಿ ಒಗಿರಿ ಮಡಿಗೋಳ ಈ ಮನಿಗಿ
ದಸಿಮಕದಳಿಯ ಬರತಾನ।ಸೋ

ಹೀಗೆ ಮಗಳು ಮೈನೆರದ ಸಡಗರದಲ್ಲಿ, ಅಳಿಯ ಮನೆಗೆ ಬರುವ ಸಂಭ್ರಮವೂ ಸೇರಿಕೊಂಡಿರುವುದು ಗಮನಾರ್ಹ. ಇದು ಬಾಲ್ಯವಿವಾಹದ ಸ್ಥಿತಿ.

ಮದುವೆಯ ಕಾಲಕ್ಕೆ ನಡೆವ ಸುರಗಿ ಸುತ್ತುವ, ಎಣ್ಣೆ ಹಚ್ಚುವ, ಸ್ನಾನ ಮಾಡಿಸುವ ಹಾಡುಗಳಲ್ಲಿ ಕಾಣುವ ಕೋಮಲ ಶೃಂಗಾರ ಭಾವ ಸೋಬಾನದ ಹಾಡುಗಳಲ್ಲಿ ಗರಿಗೆದರಿ ನಿಲ್ಲುತ್ತದೆ. ಹೆಣ್ಣು-ಗಂಡುಗಳು ವಯಸ್ಸಿಗೆ ಬಂದು ವಂಶೋತ್ಪತ್ತಿಗೆ ತೊಡಗುವ ಮುನ್ನಿನ ಸಂಭ್ರಮವೇ ಸೋಬಾನವಾಗಿರುತ್ತದೆ. ಹೀಗಾಗಿ ಇಲ್ಲಿ ವಿಶೇಷವಾಗಿ ಹೆಣ್ಣಿನ ತುಂಬಿಬಂದ ಪ್ರಾಯ, ಆಕೆ ತೊಡುವ ವಸ್ತ್ರ-ಒಡವೆಗಳ ವೈಭವ, ಇದರಿಂದಾಗಿ ಹೊಳೆಯುವ ಅವರ ಯೌವ್ವನ, ಮೋಹಕತೆ ಈ ಹಾಡುಗಳಿಗೆ ಆಹಾರವಾಗಿರುತ್ತದೆ.

ಮನಸ ಜೈನರ ಮಡದೇ ಬಾ
ಘನಮನಸಿನ ಗಂಭೀರಳ ಬಾ।
ಘನಮನಸೆಂಬೋ ಗರತ್ಯಾರು ಮೆಚ್ಚಿ
ನೀಲ ಬಾ ನೀಲ ಸೀಲ ಬಾ
ಸೋಗಿನ ಗೊಂಬೆ ನೀ ಬಾರ ಹಸಿಯ ಜಗಲೀಗೆ । ಸೋ

ಮಂದಗಮನೆ ಮೋಹನ್ನೇ ಬಾ
ಗಂಧ ಕಸ್ತೂರಿ ಪರಿಮಳ ಬಾ
ನಿನ್ನಾಣೆ ಬಾ ಕಟ್ಟಾಣೆ ಬಾ
ಧನ ಧನಿಯಳು ಬಾ
ಕೂಕಮದಾಗಿನ ಭರಣೆ ಬಾರೊಂದ್ಹಸಿಯ ಜಗಲೀಗೆ । ಸೋ

ಮಂಗಳ ಮಹಿಮನ ರಾಣಿ ಬಾ
ಶ್ರಿಂಗಾರದ ಮದ್ದಾನೆ ಬಾ
ಕುಂಬಕುಚಗಳು ನಲಿನಲಿದಾಡುತ
ರಂಭೆ ಬಾ ದೇಶದ ಗೊಂಬೆ ಬಾ
ಅಂಗೈ ನಿಂಗ ನೀ ಬಾರs ಹಸಿಯ ಜಗಲೀಗ । ಸೋ

ಈ ಹಾಡಿನಲ್ಲಿ ಬಳಸುವ ವಿಶೇಷಣಗಳನ್ನು ಗಮನಿಸಬೇಕು. ಘನಮನಸಿನವಳು, ಗಂಭೀರಳು, ನೀಲಶೀಲಳು, ಸೋಗಿನ ಗೊಂಬೆ, ಮಂದಗಮನೆ, ಮೋಹನ್ನೆ, ಗಂಧಕಸ್ತೂರಿಪರಿಮಳ, ಧನಧನಿಯಳು, ಕೂಕಮದಾಗಿನ ಭರಣಿ, ಶೃಂಗಾರದ ಮದ್ದಾನೆ, ಕುಂಬಕುಚಗಳ ರಾಣಿ, ರಂಬೆ, ಗೊಂಬೆ-ಹೀಗೆಲ್ಲ ಅನ್ನುತ್ತ ಕೊನೆಯಲ್ಲಿ ಬಳಸಿರುವ 'ಅಂಗೈ ನಿಂಗ' ಎಂಬ ವಿಶೇಷಣ ತುಂಬ ಅದ್ಭುತವಾಗಿದೆ. ಜನಪದರು ಹೆಣ್ಣುಮಕ್ಕಳನ್ನು

ಕಾಣುವ ಒಂದು ದೃಷ್ಟಿ ಇಲ್ಲಿ ದಾಖಲಾಗಿದೆ. ಜನಪದ ಸಾಹಿತ್ಯದಲ್ಲಿ ವರ್ಣನೆಗಳು ಕಡಿಮೆಯೆ. ಆದರೆ ಸೋಬಾನದ ಹಾಡುಗಳ ಮುಖ್ಯ ಗುಣವೇ ವರ್ಣಿಸುವುದು.

ಹಿಂಬಳಿ ಮುಂಬಳಿ ಗಂಧದ ಗೀರಾ
ಹೊಂದಿಸಿಟ್ಟಾಳ ಛಂದಗಿರಾಕಿ
ಜಾತಮಲ್ಲಿಗಿ ಜಾಳಿಗಿ ದಂಡಿ
ವಾನ್ಯಾಡು ತುರುಬ ಒನಪಿಲಿ ಕಟ್ಟಿ
ಖನ್ನಿ ಕೋಮಲಿ ಹಸೀಗೇಳ । ಸೋ ।೧।
ನೀರೆಯ ಬಾವುಲಿ ಲಿಗಿಲಿಗಿನಾಡುತ
ಕಾಲುಂಗ್ರ ಪಿಲ್ಲ್ಯಾ ಝುಗಝುಗ ಹೊಳೆವುತ
ಹೊನ್ನಾಭರಣಾ ಹರಡಿಗಿ ಮಲಕ
ಹೊನ್ನ ಪುತ್ತಳಿ ರುಳಿ ಸರಿಗಿಟಗೊಂಡು।
ಕೋಗಿಲ ಮದ್ದಾನೆ ಹಸಿಗೇಳ ಸೋ ।೨।

ಹೀಗೆ ಹೆಣ್ಣಿನ ವಸ್ತ್ರ–ವಡವೆಗಳ ಭರ್ಜರಿ ವರ್ಣನೆಯನ್ನು ಇಲ್ಲಿ ಕಾಣಬಹುದಾಗಿದೆ.

'ಇತರ ವಿಧಾನಗಳು' ಎಂಬ ಭಾಗದಲ್ಲಿ ಕುಬ್ಬಸದ ಹಾಡುಗಳನ್ನು ಹಾಗು ಒಂದು ಜೋಗುಳ ಹಾಡನ್ನು ಸೇರಿಸಿದ್ದಾರೆ. ಕುಬ್ಬಸ ಹಾಡುಗಳ ಬಗೆಗಳು ಗಮನಾರ್ಹವಾದವುಗಳಿರುತ್ತವೆ. ಕುಬ್ಬಸದ ಹಾಡುಗಳ ಸಂದರ್ಭವೆಂದರೆ ಮತ್ತೆ ಅಲ್ಲಿ ಹೆಣ್ಣುಮಗಳ ಪ್ರಾಮುಖ್ಯತೆಯೇ ಕಾಣುತ್ತದೆ. ಚೊಚ್ಚಿಲ ಬಸುರಿಯಾದ ಹೆಣ್ಣುಮಗಳಿಗೆ ಕೂಡಿಸಿ, ಹಾಡಿಸಿ, ಹೊಸಬಟ್ಟೆ ಆಹೇರಿ ಮಾಡಿ ಮರ್ಯಾದೆ ಕೊಡುವ ಪ್ರಸಂಗವದು. ತಾಯಿಯಾಗಲಿರುವ ಈ ಹೆಣ್ಣುಮಗಳಿಗೆ ಮಾನಸಿಕವಾಗಿ ಪೂರ್ವತಯಾರಿ ನಡೆಸುವ ಕಾರ್ಯಕ್ರಮವಿದು. ಒಂದು ರೀತಿಯಿಂದ ಪ್ರಫುಲ್ಲಿತಗೊಳ್ಳುವ ಸಂದರ್ಭ ಇದಾಗಿದೆ.

ಒಂದೊಂದು ತಿಂಗಳಿಗೂ ಬಸುರಿ ಬಯಸುವ ಆಹಾರ, ಉಡುಗೆ ತೊಡುಗೆ, ಅಲಂಕಾರ ಇತ್ಯಾದಿಗಳನ್ನು ಕುರಿತ ಕುಪ್ಪಸದ ಹಾಡುಗಳು ಒಂದು ಬಗೆಯವು. ಇಲ್ಲಿ ಅವಳ ದೈಹಿಕ ಬದಲಾವಣೆಗಳನ್ನು ಜನಪದರು ಸೂಕ್ಷ್ಮವಾಗಿ ಗಮನಿಸಿದ್ದನ್ನು ಕಾಣುತ್ತೇವೆ.

ಒಂದಂಬು ತಿಂಗಳಿಗೆ ಒಂದೇನ ಬಯಸ್ಯಾಳ
ಅಂಗೈಯಲುಪ್ಪಾ ಎಳೆಹುಣಸಿ।
ಎರಡಂಬು ತಿಂಗಳಿಗಿ ಎರಡೇನ ಬಯಸ್ಯಾಳ
ಎರಡೆಲಿಗೊಂಡ ಎಳಿಮಾವ।

ಮೂರನೆಯ ತಿಂಗಳಿಗೆ ಮಗಿಮಾವ, ನಾಲ್ಕಕ್ಕೆ ಕಾಕೀಯ ಹಣ್ಣು, ಐದಕ್ಕೆ ಕೊಯ್ದ ಮಲ್ಲಿಗೆ, ಆರಕ್ಕೆ ಆರಾಕಿದ ಬಾನ, ಏಳಕ್ಕೆ ತವರ ಧ್ಯಾನ, ಎಂಟಕ್ಕೆ ಕಂಟಲ್ಯಾಲಕ್ಕಿ ಕೊಡತುಪ್ಪ, ಒಂಬತಕ್ಕೆ ಕಿರಿಬ್ಯಾನಿ, ತಾಯಿಯ ಆಸರೆ,

ಹತ್ತಂಬು ತಿಂಗಳಿಗಿ ಹೆತ್ತಾಳ ಹಸಗೂಸ
ಸುತ್ತೆಲ್ಲ ನೆರದಾರ ಸುಮಂಗಲೇರು।

ಈ ಬಗೆಯ ಹಾಡುಗಳು ಬಸುರಿಯ ಬಯಕೆಗಳನ್ನು, ಕಾಲಕಾಲಕ್ಕೆ ಬದಲಾಗುವ ಆಕೆಯ ದೈಹಿಕ ಪರಿಯನ್ನು, ಕೊನೆಯಲ್ಲಿ ಆಕೆ ಹೆರುವ ಕಾಲಾವಧಿಯನ್ನು ಹೇಳುತ್ತ ಆ ಬಸುರಿ ತಾಯಿಯಾಗುವ ದಿನಚರಿಯನ್ನು ಹೇಳುತ್ತವೆ. ಇದರಲ್ಲಿಯೇ ಎರಡನೇ ನಮೂನೆಯ ಹಾಡುಗಳು ಕೇವಲ ಬಸುರಿ ಬಯಸುವ ಆಹಾರ, ಉಡುಗೆ ತೊಡುಗೆ, ಆಭರಣ, ಹೂ ಇತ್ಯಾದಿಗಳ ಬಯಕೆಯನ್ನು ಹೇಳುತ್ತವೆ.

ಕಸಕಸಿ ಕೊಬ್ಬರಿ ಹಸನುಳ್ಳ ಜಿಲಬಿಲಿ
ಬಿಸಿಯ ಹೂರಣಗಡಬ ಬಿಳಿಯ ಬೆಲ್ಲ
ರಸಬಾಳಿ ಖಬ್ಬ ಸುಲಿದು ಮುಂದಿಟ್ಟರ
ಇಸಮಾಡಿ ಒಂದ ತುತ್ತ ತಿಂದೇನ ತಾಯಿ
ಬಂಕಿ ಕಾಡತಾವ ತಾಯಿ ಪರಿಪರಿಯಿಂದ । ಬಂಕಿಕಾಡತಾವ ।೧।

ಗಂಗಾಲ ಚರಗಿ ಝುಳ ಝುಳ ಬೆಳಗ
ತೆಂಬಿಗಿ ತುಂಬಿ ಬದಿಯಲ್ಲಿ ಇಡs
ಡೊಣ್ಣಿ ತುಂಬ ತುಪ್ಪ ತಂದು ಮುಂದಿಟ್ಟರ
ಬಟ್ಟೆದ್ದಿ ಬಾಯಾಗ ಇಟ್ಟೇನ ತಾಯಿ । ಬಂಕಿಕಾಡತಾವ ।೩।

ಹೋಳಿ ಹುಣ್ಣಿವಿ ಸುತ್ತ ತನುಗಾಳಿ ಬೀಸ್ಯಾವ
ಮಾಳೀಗಿ ಏರಿ ಬೆಳಖಿಂಡಿ ಮುಚ್ಚ
ಬಣ್ಣದ ಹಚ್ಚಡ ಬಿಗಿಬಿಗಿದು ಹೊಚ್ಚಿದರ
ಕಣ್ತುಂಬ ಒಂದು ನಿದ್ದಿ ಮಾಡೇನ ತಾಯೀ। ಬಂಕಿ ಕಾಡತಾವ ।೫।

ತುಂಬು ಬಸುರಿಯ ದೇಹ ಎಷ್ಟೊಂದು ಸೂಕ್ಷ್ಮವಾಗಿರುತ್ತದೆಂದರೆ ಎಲ್ಲವೂ ಸ್ವಚ್ಛವಾಗಿರಬೇಕು. ಆಕೆಯ ದೈಹಿಕ ಸ್ಥಿತಿ ಎಂತಹದೆಂದರೆ ಪಕೃತಿಯ ಗಾಳಿ ಬೆಳಕುಗಳೂ ಆಕೆಗೆ ಸಹಿಸಿಕೊಳ್ಳುವುದು ಕಠಿಣ. ಇಂತಹ ಸಮಯದಲ್ಲಿ ಆಕೆ ಬಯಸುವುದು ಕಣ್ತುಂಬ ನಿದ್ರೆಯನ್ನು ವಿಶ್ರಾಂತಿಯನ್ನು.

ಈಗ ಇನ್ನೊಂದು ಬಗೆಯ ಬಯಕೆಯ ಹಾಡಿನಲ್ಲಿ ಬಸುರೆಗೆ ಉಡಿತುಂಬುವ ಸಂಭ್ರಮ ನಡೆಯುತ್ತದೆ. ಮನೆಯವರು, ನೆರೆಹೊರೆಯ ಮುತ್ತೈದೆಯರು ಬಂದು ಬಸುರೆಗೆ ಹರಕೆ ಕೊಡುವ, ಆಶೀರ್ವಾದ ಮಾಡುವ ಶುಭಸಂದರ್ಭವದು.

ಅತ್ತಿಕಾಯಿ ತಂದು ಅತ್ತೆ ಉಡಿಯಲಿ ತುಂಬಿ
ಅತ್ತೆದ್ದು ಹರಕಿ ಕುಡತಾಳ ತಂಗೆವನ
ಅತ್ತಿಯೆದ್ದು ಹರಕಿ ಕುಡತಾಳ ತಂಗೆವಗ
ಹತ್ತು ಮಕ್ಕಳ ಹಡೆಯೆಂದು ।ಸೋ
ಮಾವಿನ ಕಾಯಿ ತಂದು ಮಾವ ಉಡಿಯಲಿ ತುಂಬಿ
ಮಾಯದ ಮಕ್ಕಳ ಹಡೆಯೆಂದು।ಸೋ

ಮಾಯದ ಮಕ್ಕಳ ಹಡೆಯೆಂದು ತಂಗೆವಗ
ಮಾವ ಬಂದ್ಹರಕಿ ಕೊಡತಾನ ।ಸೋ

ಮುಂದಿನ ಹಂತದ ಹಾಡುಗಳೆಂದರೆ, ಬಸುರಿ ಕೂಸಿಗೆ ಜನ್ಮಕೊಡುವಾಗ ಆಗುವ ನೋವಿನ ಪರಿಯನ್ನು ಬಣ್ಣಿಸುವ ಹಾಡುಗಳು. ಇದೊಂದು ರೀತಿಯಿಂದ ಬಸುರೆಯ ಮಾನಸಿಕ ತಯಾರಿಯೇ ಸರಿ.

ಹುಟ್ಟಿದಂದೀಗಿ ಮೊದಲ ಹೊಟ್ಟಿ ಬ್ಯಾನೆಂಬೂದರಿಯೆ
ಹೊಟ್ಟಿ ಕುಟ್ಟಂದಾವಲ್ಲ।
ಎದ್ದಾವೇಳವ್ವಾ ಬ್ಯಾನಿ ತಾಳಲಾರೇನ ಬ್ಯಾನಿ ।೧।
ನಡಟೊಂಕ ಕೊಡಲೀಲಿ ಕಡದಂತ ತಡಬ್ಯಾನಿ
ಬದೀಲಿ ಕುಂತವ್ವಗಳಿರ್‍ಯಾ ಹಡಿಹಡೀ ಅಂದಾರಲ್ಲ ।
ಎದ್ದಾವೇಳವ್ವ ಬ್ಯಾನಿ।೨।
ಥರಥರ ನಡಗೂತ ತೊಡಿಗೋಳು ಅದರೂತ
ತುರುಬಿನ ಕೂದಲ ಬಾಯೊಗಿಡವೂತ।
ಎದ್ದಾವೇಳವ್ವ ಬ್ಯಾನಿ।೩।
ಒಡಿಗಾಯಿ ಹಿಡಿಗಾಯಿ ಒಡೆದು ತೆಂಗಿನ ಕಾಯಿ
ಒಡೆಯ ಪರವೂತಮಲ್ಲ ಕಡಿಗಾದರು ಮಾಡ್ಯಾನಲ್ಲ।
ಎದ್ದಾವೇಳವ್ವ ಬ್ಯಾನಿ।೪।

ಮನಶಾಸ್ತ್ರದ ದೃಷ್ಟಿಯಿಂದ ಅತ್ಯಂತ ಮಹತ್ವದ ಸಂಗತಿಗಳನ್ನು ಒಳಗೊಂಡ ಈ ಹಾಡು ಬಸುರೆ ಕೂಸಿಗೆ ಜನ್ಮಕೊಡುವಾಗಿನ ಸ್ಥಿತಿಯನ್ನು ವರ್ಣಿಸಿ, ಆಕೆಗೆ ಮಾನಸಿಕವಾದ ಸ್ಥೈರ್ಯಕೊಡುವ ಕೆಲಸವನ್ನು ಮಾಡುತ್ತದೆ. ಇಂದಿನ ಔಷಧೋಪಚಾರಗಳ ವೈದ್ಯರುಗಳ ಅನುಕೂಲವಿಲ್ಲದ ಆ ಕಾಲದಲ್ಲಿ ಇಂತಹ ಶುಭಸಂದರ್ಭಗಳೇ ಅವರಿಗೆ ದೊಡ್ಡ ಉಪಚಾರದ ಸಂದರ್ಭಗಳಾಗಿದ್ದವು ಎಂಬುದನ್ನು ಗಮನಿಸಿದರೆ ಈ ಹಾಡುಗಳ ಮಹತ್ವ ನಮಗೆ ಗೊತ್ತಾಗುತ್ತದೆ.

ಕೊನೆಯಲ್ಲಿ ತಾಯಿಯ ಗರ್ಭದಿಂದ ಕೂಸು ಹೊರಬಂದು ಸಂತೋಷ ಪಡುವ, ಕೂಸಿಗೊಂದು ಹೆಸರಿನಿಂದ ಗುರುತಿಸುವ ಸಂದರ್ಭವೇ ಜೋಗುಳ ಸಂದರ್ಭ.

ಸಿಂದಿಗಿ ತಳದಲ್ಲಿ ಗಂಗಮ್ಮನ ತಳ
ಶಂಭೋ ಮಠದೇವ ಇಂದು ದಯನಾಗೋ ।ಜೋ ಜೋ
ಭಂಗಾರ ತೊಟ್ಟಿಲ ಧೊರಿತಾಯಿ ।ಕುಂದಲ
ಸಿಂಗರದಾನ ಶ್ರೀಕೃಷ್ಣಗ ಛಂದಾಗಿ ತೂಗಾರಿ ।ಜೋ ಜೋ
ನೀರಾಗ ನೆಳ್ಳ ನೋಡಿ ಸೂರ್ಯ ಚಂದ್ರಾಮ ಬೇಡಿ
ಅದರಂಗ ತಾ ಬೇಡಿ ಬೋರ್‍ಯಾಡಿ ಅಳತಾನ । ಜೋಜೋ

ಏಳೆಮ್ಮಿ ನೊರೆಹಾಲ ತೊಟ್ಟಿಲದಾಗಿಟ್ಟೀದ
ಆಡಿ ಬಂದ್ಮುಡಿಯಂದ್ರ ಕಾಡಿಕಾಡ್ಯಳತಾನ ।ಜೋಜೋ

ಹೀಗೆ ಇಲ್ಲಿಗೆ ಶುಭಕಾರ್ಯಗಳು ಮುಗಿದು, ಮದುವೆ, ಮೈನರೆದ, ಸೋಬಾನ, ಕುಪ್ಪಸ, ಜೋಗುಳ ಹಾಡುಗಳು ಮುಗಿಯುತ್ತವೆ. ಅಂದರೆ ಸ್ತ್ರೀ ಬದುಕಿನ ಒಂದು ಸುತ್ತು ಮುಗಿಯುವವರೆಗೆ ಬಳಕೆಯಾಗುವ ಹಾಡುಗಳು ಮುಗಿದಂತಾಗುತ್ತದೆ.

ಇನ್ನು ಮದುವೆ ಪ್ರಸಂಗವೊಂದನ್ನುಳಿದು ಉಳಿದ ಪ್ರಸಂಗಗಳಲ್ಲಿ, ವಿಶೇಷವಾಗಿ ಮೈನರೆದಾಗ, ಸೋಬಾನ ಮತ್ತು ಕುಪ್ಪಸದ ಕಾರ್ಯಕ್ರಮಗಳು ಅತ್ಯಂತ ಖುಷಿಯ ಪ್ರಸಂಗಗಳಾಗಿರುತ್ತವೆ. ಆಗ ರಾತ್ರಿ ಸಮಯದಲ್ಲಿ ವೇಳೆ ಸಾಕಷ್ಟು ಇರುತ್ತದೆ. ಇಂತಹ ಸಮಯದಲ್ಲಿ ಈ ಕೃತಿಯಲ್ಲಿಯ ಉಳಿದ ವಿಭಾಗದ ಹಾಡುಗಳನ್ನು ಹಾಡುವುದುಂಟು. ಇವು ಇಂಥಲ್ಲೇ ಹಾಡಬೇಕೆಂದೇನಿಲ್ಲ. ಸಮಯ ದೊರೆತರೆ, ಆಯಾಸ ಮರೆಯಲು ಕೆಲಸ ಮಾಡುವಾಗಲೂ ಈ ಹಾಡುಗಳನ್ನು ಹಾಡುತ್ತಾರೆ. ಇದನ್ನು ಪ್ರಾರಂಭದಲ್ಲಿಯೇ ವಿವರಿಸಲಾಗಿದೆ.

ಜನಪದದ ಯಾವುದೇ ಪ್ರಸಂಗದಲ್ಲಿ ಹಾಡುಗಾರಿಕೆ ಪ್ರಾರಂಭವಾಗಿ ಮುಕ್ತಾಯವಾಗುವರೆಗೆ ಒಂದು ಸಾಮಾನ್ಯವಾದ ರಚನೆ ಕಂಡುಬರುತ್ತದೆ. ಮೊದಲಿಗೆ ಒಂದು ಸ್ತುತಿ, ನಂತರ ಹಾಡುಗಾರಿಕೆ ಪ್ರಾರಂಭವಾಗಿ, ಮುಕ್ತಾಯದಲ್ಲಿ ಒಂದು ಮಂಗಲದ ಹಾಡು ಹಾಡಿ ಬಿಡುವ ಪದ್ಧತಿ ಸುಮಾರಾಗಿ ಕಾಣುತ್ತದೆ. ಅದರಂತೆ ಇಲ್ಲಿ ಮೂರ್‍ನಾಲ್ಕು ಸ್ತೋತ್ರದ ಹಾಡುಗಳನ್ನು ಕೊಡಲಾಗಿದೆ. ಜನಪದರಲ್ಲಿ ಸ್ತುತಿಗೆ ನಿಂತಾಗ ಗಣಪತಿಯನ್ನು ಸರಸ್ವತಿಯನ್ನು ಸ್ತುತಿಸಿ, ಉಳಿದಂತೆ ಪ್ರಸಿದ್ಧರಾದ ಶರಣರನ್ನು ಸಂತರನ್ನು, ಸ್ಥಳೀಯ ದೇವದೇವತೆಗಳನ್ನು ಸ್ತುತಿಸುವುದು ಸಾಮಾನ್ಯ. ಇಲ್ಲಿ ಮೊದಲಿಗೆ ಗಣಪತಿಯ ಸ್ತೋತ್ರವೊಂದಿದೆ.

ಗಂಧ ಕಸ್ತುರಿ ಪುನಗು
ಗೌರವ್ವನ ಕಂದಗ ಧರಿಸಿದರ।
ಅಂದದ ಬಿಳಿ ಎಲಿ ಅಡಕಿ ಕಾಚವು ಸುಣ್ಣ
ಮುಂದ ಮಡಚಿನಿಟ್ಟು ಮಲ್ಲೀಗಿ ಮಳೆಗರೆದ।
ಮತಿಯ ಪಾಲಿಸೊ ಎನಗ
ಶ್ರೀಗಣರಾಯಾ ಸ್ತುತಿಮಾಡಿ ಉಣಿಸುವೆನೋ।೧।

ಹೀಗೆ ಗಣಪತಿಯನ್ನು ಮೊದಲಿಗೆ ಸ್ತುತಿಸಿ ನಂತರ ಸೊನ್ನಲಾಪುರದ ಶರಣ ಸಿದ್ಧರಾಮ, ಪಂಢರಪುರದ ವಿಠಲ, ಎಡೆಯೂರ ವೀರಭದ್ರ ಇವರ ಸ್ತೋತ್ರಗಳನ್ನು ಕೊಡಲಾಗಿದೆ. ಇನ್ನೊಂದು ಭಾಗವನ್ನು ಪ್ರಣಯಾಂತರದ ಹಾಡುಗಳು ಎಂದು ಕರೆಯಲಾಗಿದೆ. ಜನಪದದರಲ್ಲಿ ಶೃಂಗಾರದ ಭಾವವನ್ನು ಉದ್ದೀಪನಗೊಳಿಸುವ ಹಾಡುಗಳು ಅತ್ಯಂತ ಸುಂದರವಾದ ಹಾಡುಗಳೆನಿಸುತ್ತವೆ. ಇವುಗಳ ಹೆಚ್ಚುಗಾರಿಕೆ ಎಂದರೆ ಅತ್ಯಂತ ಕೋಮಲ ಶೃಂಗಾರ ಭಾವವನ್ನೇ ಉದ್ದೀಪನಗೊಳಿಸುವ ಹಾಡುಗಳನ್ನು ನಾವು ಇಲ್ಲಿ ಕಾಣುತ್ತೇವೆ. ಈ ಮಾತನ್ನು ಹೆಣ್ಣುಮಕ್ಕಳ ಈ ಐದು ಶುಭಕಾರ್ಯದ

ಹಾಡುಗಳಲ್ಲಿ ಬಳಕೆಯಾಗುವ ಹಾಡುಗಳಿಗೆ ಸೀಮಿತವಾಗಿ ಬಳಸಬಹುದು. ಗಂಡುಮಕ್ಕಳು ಹಾಡುವ ಹಾಡುಗಳಲ್ಲಿ ಶೃಂಗಾರದ ಎಲ್ಲ ಬಗೆಯ ಹಾಡುಗಳು ಕಾಣಿಸುತ್ತವೆ. ಅವು ಒಮ್ಮೊಮ್ಮೆ ಅಶ್ಲೀಲ ಹಂತಕ್ಕೂ ಏರಿಬಿಡುತ್ತವೆ. ಆದರೆ ಹೆಣ್ಣುಮಕ್ಕಳ ಹಾಡುಗಳಲ್ಲಿ ಅವು ತಿಳಿಹಾಸ್ಯ ಮತ್ತು ಕೋಮಲ ಶೃಂಗಾರ ಭಾವನೆಗಳಿಗೆ ಸೀಮಿತವಾಗಿರುತ್ತವೆ. ಅಂತಹ ನಾಲ್ಕೈದು ಹಾಡುಗಳನ್ನು 'ಮಲ್ಲಿಗೆ ದಂಡೆ' ಯಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಸಬ್ಬಂಬು ರಾತೂರಿ ಒಬ್ಬಕಿ ನಾ ಇದ್ದ
ನೀವೆಲ್ಲಿ ಹೋಗಿ ಬಂದ್ರೀ । ನೀವೆಲ್ಲಿ ಆಡಿ ಬಂದ್ರೀ।

ಜಾಣಿ ಬೆಟ್ಟಂಬು ಬ್ಯಾಸಗಿ । ಕಣ್ಣೀಗಿ ನಿದ್ದಿಲ್ಲ
ತನುಗಾಳಿಗ್ಹೋಗಿದ್ದೇವ । ತನುಗಾಳಿಗ್ಹೋಗಿದ್ದೇವ।

ಎದಿಯ ಮ್ಯಾಲಿನ ಘಾಯಿ ಎಳಿಯ ಚಂದ್ರಮನಂಗ
ನೀವೆಲ್ಲಿ ಹಾದು ಬಂದ್ರೀ । ನೀವೆಲ್ಲಿ ಹೋಗಿ ಬಂದ್ರೀ।

ಜಾಣಿ ಬಾಳೀಯ ಬನದಾಗ ಹಾದು ನಾವ್ಬರುವಾಗ
ಬಾಳೀಯ ಗರಿ ತಾಕ್ಯಾವ । ಬಾಳೀಯ ಗರಿ ತಾಕ್ಯಾವ

ಹೀಗೆ ನಡೆಯುವ ಗಂಡಹೆಂಡತಿಯ ಸಂವಾದದಲ್ಲಿ ತಿಳಿ ಹಾಸ್ಯದೊಂದಿಗಿನ ಕೋಮಲ ಶೃಂಗಾರವು ಭಾವನೆಗೆ ತಾಕುತ್ತದೆ. ಹದ್ದು ಮೀರಿ ಇಲ್ಲಿಯ ಯಾವ ಹಾಡೂ ಹೋಗುವುದಿಲ್ಲ. ಇಂತಹ ಸುಂದರವಾದ ಉದಾಹರಣೆಗಳನ್ನು ನಾವು ಕನ್ನಡ ಶಿಷ್ಟಸಾಹಿತ್ಯದಲ್ಲಿ ಹುಡುಕಿ ತೆಗೆಯುವುದು ಕಠಿಣ. ಈ ಶೃಂಗಾರ ಭಾವಕ್ಕೆ ಜನಪದರಲ್ಲಿ ಗಂಗೇಗೌರಿ ಹಾಡುಗಳು ಪ್ರಸಿದ್ಧವಾಗಿವೆ. ಹಾಡುಗಳನ್ನು ಗೌರಿಹಬ್ಬದಲ್ಲಿ ಹಾಡುವ ರೂಢಿ ಇದ್ದರೂ ಸಾಮಾನ್ಯವಾಗಿ ಬೇರೆಡೆಯಲ್ಲೂ ಇವನ್ನು ಬಳಸುತ್ತಾರೆ. ಇಲ್ಲಂತೂ ಶಿವಪಾರ್ವತಿಯರ ಪ್ರಸಂಗಗಳೇ ಬರುವುದರಿಂದ ಇವನ್ನು ಹದ್ದುಮೀರಗೊಡದಂತೆ ಎಚ್ಚರಿಕೆ ವಹಿಸುವುದನ್ನು ಕಾಣುತ್ತೇವೆ. ಗಂಗೆಯನ್ನು ಭೇಟಿಯಾಗಲು ಶಿವನು ಶೃಂಗಾರ ಮಾಡಿಕೊಂಡು ಹೊರಡುವ ಹಾಡು ಕೇಳಲು ತೀರ ಮಧುರವಾಗಿದೆ.

ಗಂಗಿನ ತರಬೇಕಂತ ನಂದಿನ ಶೃಂಗಾರ ಮಾಡಿ।
ಕೊಂಬಣಸ ಕೊರಳs ಹುಲಗೆಜ್ಜಿ ಕೋಲ। ೧।

ಕೊಂಬಣಸ ಕೊರಳs ಹುಲಗೆಜ್ಜಿ ಶಿವರಾಯಾ
ಗಂಗೀನ ತರುವೋ ನಡದಾರ । ೨।

ಹಳ್ಳsದ ದಂಡೀಗಿ ಹೂವ ಕೋವೂ ಜಾಣಿ
ಲಿಂಗಕೊಂದ್ಹೂವ ದಯಮಾಡ ।
ಲಿಂಗಕೊಂದ್ಹೂವs ದಯಮಾಡಿದ್ರ ಮಾಡೇನ।
ನಮ್ಮವ್ವ ನಮಗ ಬೈದಾಳ ।

ಹೀಗೆ ಸಾಗುತ್ತದೆ ಈ ಹಾಡು. ಗಂಡು-ಹೆಣ್ಣು ಸಂವಾದ ಮಾಡುವ ರೂಪದಲ್ಲಿರುವ ಹಾಡುಗಳನ್ನೇ ಇಲ್ಲಿ ಆಯ್ಕೆ ಮಾಡಿಕೊಂಡಿದ್ದು, ಇವತ್ತಿಗೂ ಈ ಹಾಡುಗಳೇ ಉತ್ತಮವಾದ ಹಾಡುಗಳೆನಿಸುತ್ತವೆ.

ಒಂದನೆಯದನ್ನು ಬಿಟ್ಟರೆ, ಮೂರು ಮತ್ತು ನಾಲ್ಕನೆಯ ಹಾಡುಗಳು ಕಥನಕಾವ್ಯ ಗುಂಪಿಗೆ ಸೇರುವ ಹಾಡುಗಳಾಗಿವೆ. 'ಭಾವಗೀತೆಗಳು' ಭಾಗದ ಮೂರೂ ಹಾಡುಗಳು ಅತ್ಯಂತ ಸುಂದರವಾದ ಹಾಡುಗಳು. ಒಂದು 'ಕೂಸಿನ ಹಾಡು', ಇನ್ನುಳಿದ ಎರಡು ಹಾಡುಗಳು ಸಾಮಾನ್ಯರ ಪ್ರಮುಖ ಬದುಕಾದ ಕಾಯಕ ಬದುಕಿಗೆ ಸಂಬಂಧಿಸಿದ ಹಾಡುಗಳೇ ಆಗಿವೆ. ಇವೆರಡೂ ಹಾಡುಗಳು ಇಂದಿಗೂ ಪ್ರಸಿದ್ಧವಾದ ಕಥನಪರ ಹಾಡುಗಳೇ ಆಗಿವೆ. 'ಎತ್ತಿನ ಹಾಡು' ನಮ್ಮ ಮನಸ್ಸನ್ನು ಕರಗಿಸುವ ಹಾಡು. ಸಾಮಾನ್ಯರ ಬದುಕು ಪ್ರಾಣಿಗಳೊಂದಿಗೆ, ಅದರಲ್ಲೂ ವಿಶೇಷವಾಗಿ ಒಕ್ಕಲುತನ ಮನೆತನದವರ ಬದುಕು ಎತ್ತುಗಳೊಂದಿಗೆ ಅತ್ಯಂತ ಅನ್ಯೋನ್ಯವಾಗಿ ಬೆಸೆದುಕೊಂಡಿರುತ್ತದೆ. ಎತ್ತಿನ ಶ್ರಮದಿಂದಲೇ ಸಾಗುವ ಒಕ್ಕಲುತನದಲ್ಲಿ, ಬೆಳೆಬಂದು, ತಪ್ಪಿ ಎತ್ತುಗಳು ಬೆಳೆಯ ಕೆಲ ದಂಟುಗಳನ್ನು ಮೈದಾಗ, ಅವುಗಳನ್ನು ದಂಡಿಸುವುದು ಮನುಷ್ಯನ ಅತ್ಯಂತ ದುಷ್ಟಗುಣಗಳಲ್ಲಿ ಒಂದು ಎಂಬ ಭಾವವನ್ನು ಹೊತ್ತಿದೆ ಈ ಹಾಡು.

ಮಾಗೀ ಹೊಡಿಯಾಗ
ನನ್ನ ಕೈಲೆ ಮಾಯದಿಂದ ಮಾಡಿಸಿಕೊಂಡ್ಯಾ
ನಾ ಹೋಗಿ ಒಂದ ತೆನಿದಂಟ ತಿಂದರ
ಕಲ್ಲಕಲ್ಲಿಲೆ ಹೊಡದ್ಯೋ । ನಮ ಜೀವ ಹೋದಾವೋ ಕೈಲಾಸಕ ।೧।

ಇಕ್ಕಿದರ ಹೆಂಡಿನಾದಿನs। ಹಚ್ಚಿದರ ಕುಳ್ಳನಾದಿನs
ದೇವರ ಮುಂದೀನ ಪರಸಾದ ನಾ ಆದ
ಮತ್ಯಾತಕಾದೇನs । ನಮ ಜೀವ ಹೋದಾವೋ ಕೈಲಾಸಕ ।೨।

ಸತ್ತರ ತೊಗಲನಾದೆನs।ಮೆಟ್ಟಿದರ ಕೆರವಾದೆನs
ಹೆಗಲ ಮ್ಯಾಲಾಡಂತ ಬಾರಕೋಲ ನಾ ಆದ
ಮತ್ತ್ಯಾತಕಾದೇನ । ನಮ ಜೀವ ಹೋದಾವೋ ಕೈಲಾಸಕ ।೬।

ತನ್ನಿಂದಾಗುವ ಉಪಕಾರಗಳನ್ನು ಗಣಿಸದೆ, ಮಾನವನಾದವನು ಮಾಡುವ ಹೀನ ಬುದ್ಧಿಗೆ ನೀತಿಯನ್ನು ಉಪದೇಶಿಸುವ ಒಂದು ಪ್ರಸಿದ್ಧ ಹಾಡು ಇದು. ಈ ಭಾಗದ 'ಮಳೀ ಹಾಡು' ಕನ್ನಡದ ಪ್ರಸಿದ್ಧ ಜನಪದ ಗೀತೆಗಳಲ್ಲಿ ಒಂದು. ಮಾನವನ ಬುದುಕು ನಿರ್ಭರವಾಗಿರುವುದೇ ಮಳೆಯ ಮೇಲೆ. ಅರ್ಥಾತ್ ನಿಸರ್ಗದ ಮೇಲೆ. ಮಳೆಯಿಲ್ಲದೆ ಮನುಷ್ಯನ ಬದುಕು ಇಲ್ಲ. ಮಳೆ ಕೊರತೆ ಬಿದ್ದರೆ ಅವನ ಬದುಕು ಬರಡಾಗುತ್ತದೆ. ಅತಿಯಾದರೆ ಅನೇಕ ತೊಂದರೆಗಳಿಗೆ ಸಿಕ್ಕುಹಾಕಿಕೊಳ್ಳುತ್ತದೆ. ಕಾಲಕಾಲಕ್ಕೆ ಬೀಳುವ ಒಣಬರಗಾಲಗಳಲ್ಲಿ ವಿಶೇಷವಾಗಿ ತೀವ್ರಪರಿಣಾಮಕ್ಕೆ ಒಳಗಾಗುವವನೆಂದರೆ ಒಕ್ಕಲಿಗನೇ ಎಂಬುದರಲ್ಲಿ ಎರಡು ಮಾತಿಲ್ಲ. ಹೀಗೆ ಮಳೆ ಹೋದಾಗ ಒಕ್ಕಲಿನ, ಸಾಮಾನ್ಯರ ಸ್ಥಿತಿ ಏನಾಗುತ್ತದೆಂದು ಬಣ್ಣಿಸುವ ಹಾಡು ಇದು.

ಬಣ್ಣದ ಗುಬ್ಬ್ಯಾರು ಮಳಿರಾಜಾ ಅವರು
ಮಣ್ಣಾಗಿ ಹೋದರು ಮಳಿರಾಜಾ
ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು
ಅನ್ನದ ದಿನ ಬಂದು ಮಳಿರಾಜಾ।೧।

ಒಕ್ಕಲಗೇರ್‍ಯಾಗ ಮಳಿರಾಜಾ ಅವರು
ಮಕ್ಕಳ ಮಾರ್‍ಯಾರ ಮಳಿರಾಜಾ
ಮಕ್ಕಳ ಮಾರಿs ರೊಕ್ಕಾ ಹಿಡಕೊಂಡು
ಭತ್ತಂತ ತಿರಗ್ಯಾರ ಮಳಿರಾಜಾ ।೨।

ಸೊಲಗಿ ಹಿಟ್ಟಿನಾಗ ಮಳಿರಾಜಾ ಅವರು
ಸುಣ್ಣನ್ನು ಬೆರಸ್ಯಾರ ಮಳಿರಾಜಾ ।
ಹಸ್ತು ಬಂದಕೇರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ। ೩

ಗಿದ್ದನ ಅಕ್ಕ್ಯಾಗ ಮಳಿರಾಜಾ ಅವರು
ಅಮವನ್ನು ಕೂಡ್ಸ್ಯಾರ ಮಳಿರಾಜಾ
ಸಣ್ಣ ಕೂಸಿಗಿ ಮನ್ನಿಸಿ ಉಣಸ್ಯಾರ
ಕಣ್ಣನ್ನೆ ಮುಚ್ಚ್ಯಾವ ಮಳಿರಾಜಾ ।೪।

ಗಂಡುಳ್ಳ ಬಾಲ್ಯಾರು ಮಳಿರಾಜಾ ಅವರು
ಭಿಕ್ಷಾಕ ಹೊರಟಾರ ಮಳಿರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು
ಅನ್ಯದ ದಿನ ಬಂದು ಮಳಿರಾಜಾ ।೫।

ಸ್ವಾತೀಯ ಮಳಿ ಬಂದು ಮಳಿರಾಜಾ ಸುತ್ತ
ದೇಶಾಕ ಆಗ್ಯಾದ ಮಳಿರಾಜಾ
ಹಳ್ಳಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ ।೬।

ನಿಸರ್ಗವೇ ಮುನಿದಾಗ ಮನುಷ್ಯನ ಬದುಕು ಎಂತಹ ಭೀಕರ ಪ್ರಸಂಗಗಳಿಗೆ ಈಡಾಗುತ್ತದೆಂಬುದಕ್ಕೆ ಇದೊಂದು ಐತಿಹಾಸಿಕ ಸತ್ಯಸಂಗತಿಯಾಗಿದೆ. ಇಂತಹ ಹಾಡುಗಳು ಒಂದು ಕಾಲದ ಸತ್ಯಘಟನೆಯನ್ನೇ ದಾಖಲಿಸಿರುತ್ತವೆ. ಈ ಹಾಡು ಬದುಕು ಒಂದು ಕಾಲದಲ್ಲಿ ಎದುರಿಸಿದ ಸ್ಥಿತಿಯನ್ನೇ ವರ್ಣಿಸುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. 'ಮಲ್ಲಿಗೆ ದಂಡೆ' ಕೃತಿಯ ಮಹತ್ವ ಅಡಗಿರುವುದು ಇಂತಹ ಹಾಡುಗಳ ಆಯ್ಕೆಯಿಂದಲೇ.

ಮುಂದಿನ ಇನ್ನೊಂದು ಭಾಗ 'ಕಥೆಯ ಹಾಡುಗಳು' ಎಂದಿದೆ. ಈ ಭಾಗದಲ್ಲೂ ಕೂಡ ಬರಗಾಲವನ್ನು ವರ್ಣಿಸುವ ಇನ್ನೊಂದು ಹಾಡು ಇದೆ. ಅದು 'ಬರದ ಹಾಡು'. ಈ ಬರದ ಹಾಡು ಮತ್ತು ಮಳೆಯ ಹಾಡುಗಳು ನಿಸರ್ಗದ ಮುನಿಸಿನ ಎದುರಿಗೆ ಮನುಷ್ಯನ ಬದುಕು ಹೇಗೆ ಹದಗೆಟ್ಟು ಹೋಗುತ್ತದೆ ಎಂಬುದಕ್ಕೆ ಇವೆರಡು ಐತಿಹಾಸಿಕ ಸತ್ಯಸಂಗತಿಗಳಾಗಿವೆ. 'ಬರದ ಹಾಡು' ಒಂದೇ ಹೊಟ್ಟೆಯಿಂದ ಹುಟ್ಟಿದ ಸಹೋದರರ ಸಂಬಂಧಗಳು ಕೆಟ್ಟುಹೋಗುವ ಪ್ರಸಂಗಗಳನ್ನು ವರ್ಣಿಸುತ್ತದೆ. ಮಳೆ ಹೋಗಿ ಬರಬಂದಾಗ, ಹೆಣ್ಣುಮಗಳೊಬ್ಬಳ ಗೋಳಿನ ಕಥೆಯನ್ನು ಈ ಬರದ ಹಾಡು ವರ್ಣಿಸುತ್ತದೆ. ಭಾವನ ಮನೆಯವರಿಂದಲೂ ಸಹಾಯ ಸಿಗದೆ, ತನ್ನ ತವರು ಮನೆಗೆ ಬಂದಾಗ

ಅಲ್ಲೂ ತನಗೂ ತನ್ನ ಮಕ್ಕಳಿಗೂ ತುತ್ತು ಕೂಳು ಸಿಗದೆ, ಆ ಹೆಣ್ಣುಮಗಳು ತನ್ನ ಕೊರಳ ತಾಳಿಯನ್ನೇ ಮಾರಿಹಾಕಿ–

ತಾಳಿನಾರೆ ತೊಗೊಂಡಾಳ ಅಂಗಡಿಗಾರೆ ಹೋಗಿದಾಳ ।ಕೋ।

ಅದ್ದನಕ್ಕಿ ಕೊಡಿರೆಪ್ಪಾ ದುಡ್ಡಿನಿಸಾ ಕೊಡಿರೆಪ್ಪಾ।ಕೋ।

ವಿಷ ತಂದು, ಅನ್ನದಲ್ಲಿ ಬೆರೆಸಿ, ಅದನ್ನು ಮಕ್ಕಳ ಜೊತೆಗೆ ಗಂಡಹೆಂಡರೂ ಸೇವಿಸಿ ಹೆಣವಾದ ಕಥೆಯನ್ನು ಈ ಹಾಡು ಹೇಳುತ್ತದೆ.

ಈ ಭಾಗದ 'ಆಕಳ ಹಾಡು' ಇದನ್ನಾಧರಿಸಿದ 'ಗೋವಿನ ಹಾಡು' ಕಥೆಯನ್ನು ನೆನಪಿಗೆ ತರುತ್ತದೆ. ಹಾಗೆ ನೋಡಿದರೆ ಗೋವಿನ ಹಾಡಿಗಿಂತ 'ಆಕಳ ಹಾಡು' ಬೀರುವ ಸಂದೇಶ ಮಹತ್ವದ್ದಾಗಿದೆ. ಇಲ್ಲಿ ಆಕಳನ್ನು ತಿನ್ನಲು ಬಂದ ಹುಲಿ ಕೊನೆಯಲ್ಲಿ ಉಪವಾಸವನ್ನು ಆಚರಿಸಿ ತನ್ನ ದುಷ್ಟಗುಣಕ್ಕೆ ತಾನೇ ಶಿಕ್ಷೆಯನ್ನು ಕೊಟ್ಟುಕೊಳ್ಳುವ ಪ್ರಸಂಗವಿದೆ. ಹೀಗೆ ಈ ಕೃತಿಯಲ್ಲಿಯ 'ಆಕಳ ಹಾಡು' ಪ್ರೇರಣೆಯಿಂದ 'ಗೋವಿನ ಹಾಡು' ಸೃಷ್ಟಿಯಾಗಿದ್ದು, 'ಎತ್ತಿನ ಹಾಡು' ಪ್ರೇರಣೆಯಿಂದ ಕಾವ್ಯಾನಂದರ 'ನೀನಾರಿಗಾದೆಯೋ ಎಲೆ ಮಾನವಾ' ಎಂಬ ಹಾಡು ಹುಟ್ಟಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇಂತಹ ಮಹತ್ವದ ಹಾಡುಗಳ ಗೊಂಚಲು 'ಮಲ್ಲಿಗೆ ದಂಡೆ' ಕೃತಿಯಾಗಿದೆ.

ಕೊನೆಯಲ್ಲಿರುವ 'ಅತ್ತೆಯ ಮನೆಯ ಕಾಟ' ಭಾಗದ ಹಾಡುಗಳು, ಹೆಣ್ಣು ತನ್ನ ಗಂಡನ ಮನೆಯಲ್ಲಿ ಪಡುವ ಕಷ್ಟಗಳನ್ನು ವರ್ಣಿಸುತ್ತದೆ. ಕೌಟುಂಬಿಕ ಬದುಕಿನಲ್ಲಿ ಅತ್ತೆ ಸೊಸೆಯರ ವಿರಸ ಪ್ರಸಿದ್ಧವಾದ ಸಂಗತಿಯಾಗಿದೆ. ಇನ್ನೊಂದು ಭಾಗ 'ಹಾಸ್ಯದ ಹಾಡುಗಳು' ಎಂಬಲ್ಲಿಯ ಹಾಡುಗಳಂತೂ ಅತ್ಯುತ್ತಮವಾದ ಹಾಸ್ಯರಸಕ್ಕೆ ಸಂಬಂಧಿಸಿದ ಹಾಡುಗಳಾಗಿವೆ. ಇಲ್ಲಿರುವ 'ನೂಲಲ್ಯಾಕೆ ಚೆನ್ನಿ' ಹಾಡಂತೂ ತುಂಬ ಪ್ರಸಿದ್ಧವಾದ ಹಾಡಾಗಿದೆ. ಹೆಂಡತಿ ನೂಲದೇ ಇರುವ ಕಾರಣಗಳನ್ನು ಗಂಡ ಕೇಳುತ್ತ ಹೋಗುವುದು, ಹೆಂಡತಿ ಗಂಡ ಕೇಳಿದ ಪ್ರಶ್ನೆಗೆ ಸಬೂಬುಗಳನ್ನು ಕೊಡುತ್ತ ಹೋಗುವುದು. ಕೊನೆಗೆ ಎಲ್ಲವೂ ಕೊಡಸಿದ ನಂತರವೂ ಏಕೆ ನೂಲುತ್ತಿಲ್ಲವೆಂದರೆ, ತನಗೆ ನೂಲಲು ಬರುವುದಿಲ್ಲ ಎಂಬ ಉತ್ತರ ಇಲ್ಲಿಯ ಹಾಸ್ಯದ ಔನತ್ಯವನ್ನು ಮುಟ್ಟಿಸುತ್ತದೆ. ಇಂತಹ ಪ್ರಸಿದ್ಧ ಹಾಡುಗಳಿಂದ ತುಂಬಿದ 'ಮಲ್ಲಿಗೆ ದಂಡೆ' ಇವತ್ತಿಗೂ ಅತ್ಯಂತ ಶ್ರೇಷ್ಠ ಸಂಕಲನವೇ ಆಗಿದೆ.

'ಮಲ್ಲಿಗೆ ದಂಡೆ' ಪ್ರಕಟವಾದ ನಂತರ ಇಂತಹ ಹಾಡುಗಳ ಉತ್ತಮ ಸಂಗ್ರಹವೊಂದು ಪ್ರಕಟವಾದುದು ನಮಗೆ ಕಂಡುಬರುವುದಿಲ್ಲ. ೧೯೬೦ರಲ್ಲಿ ವಿನೀತ ರಾಮಚಂದ್ರರಾಯ ಅವರು 'ಹಳ್ಳಿಯ ಹಾಡುಗಳು' ಎಂಬ ಸಂಗ್ರಹವನ್ನು ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಗಾಗಿ ಸಿದ್ಧಪಡಿಸಿ ಪ್ರಕಟಿಸಿದರೂ ಅದರಲ್ಲಿ ಹೊಸ ಹಾಡುಗಳಿಲ್ಲ. ಅಷ್ಟೊತ್ತಿಗೆ ತಮ್ಮ ಸಂಪರ್ಕಕ್ಕೆ ಬಂದಿದ್ದ, ಹಲಸಂಗಿ ಗೆಳೆಯರ ಗುಂಪಿನ ಮೂರೂ ಪ್ರಕಟನೆಗಳಿಂದ– 'ಗರತಿಯ ಹಾಡು', 'ಜೀವನ ಸಂಗೀತ', 'ಮಲ್ಲಿಗೆ ದಂಡೆ' ಈ ಸಂಗ್ರಹಗಳಿಂದ ಕೆಲಕೆಲವು ಹಾಡುಗಳನ್ನು ತೆಗೆದುಕೊಂಡು ಈ ಸಂಗ್ರಹವನ್ನು ಪೂರ್ತಿಮಾಡಿದ್ದಾರೆ. ಹೀಗಾಗಿ **'ಹಳ್ಳಿಯ ಹಾಡುಗಳು'** ಕೃತಿಯ ಬಗ್ಗೆ ಮತ್ತೆ ಬರೆಯಬೇಕಾದ ಅವಶ್ಯಕತೆ ಬೀಳುವುದಿಲ್ಲ.

೧೯೭೧ ರಲ್ಲಿ ಡಾ. ಸುಂಕಾಪೂರ ಅವರ 'ಜೀವನ ಜೋಕಾಲಿ' ಸಂಪುಟಗಳ ಎರಡನೇ ಕೃತಿ **'ಸರಸ ವಿರಸ'** ಸಂಪ್ರದಾಯದ ಹಾಡುಗಳನ್ನು ಹೊತ್ತು ಪ್ರಕಟವಾಗಿದೆ. ಬದುಕಿನ "ಮುಗಿಯದ ಈ ಸಂಸಾರ ಯುದ್ಧದಲ್ಲಿ ಮಾನವನೊಬ್ಬ ಕಾಲಾಳು. ಸೋಲು ಗೆಲವು ದೈವಾಯತ್ತವೆಂದು ನಂಬಿ ಹೋರಾಡಿ, ನೋವು-ನಲಿವು ಬಂದಾಗ ಕುಗ್ಗಿ-ಹಿಗ್ಗಿ, ಕೈ ಕಟ್ಟಾದಾಗ ಕೈಹೊತ್ತು ನಿಲ್ಲುವದೇ ಅವನ ಸಮರಸ ಬಾಳು. ಆ ಬಾಳಿನ ಮರ್ಮವನ್ನು ಅರಿಯಲೆಂದೇ ಈ ಕೃತಿಯಲ್ಲಿ ಮದುವೆಯಿಂದ ಮಸಣದವರೆಗೆ ಸಾಗಿಬಂದ ಶ್ರೀ ಸಾಮಾನ್ಯನ ಸುಖದುಃಖ ಮಿಶ್ರಿತ ಹಾಡುಪಾಡುಗಳನ್ನು ಕಲೆಹಾಕಲಾಗಿದೆ" (ಪ್ರ.ಮ.೩).

ಈ ಕೃತಿ ಐದೂ ಶುಭಕಾರ್ಯದ ಹಾಡುಗಳನ್ನು ಹೊತ್ತಿದೆ. ಜೊತೆಗೆ 'ಮಲ್ಲಿಗೆ ದಂಡೆ' ಕೃತಿಯಲ್ಲಿಯಂತೆ ಕಥನ ಕವನ, ಹಾಸ್ಯದ ಹಾಡು ಹೀಗೆ ಒಂದಿಷ್ಟು ಸಮಯವಕಾಶ ದೊರೆತಾಗ ಹಾಡುವ ಹಾಡುಗಳನ್ನೂ ಹೊಂದಿದೆ. ಮುಖ್ಯ ಹಾಡುಗಳನ್ನು ಕ್ರಮವಾಗಿ ಜೋಡಿಸಿದ್ದಾರೆ. ಆದರೆ ಮದುವೆಯ ಹಾಡುಗಳು ಮುಗಿದ ನಂತರ ಕುಪ್ಪಸದ ಹಾಡುಗಳನ್ನು ಹಾಕಿ, ನಂತರ ಸೋಬಾನದ ಹಾಡುಗಳನ್ನು ಹಾಕಿದ್ದಾರೆ. ಸೋಬಾನದ ಹಾಡುಗಳನ್ನು ಕುಬ್ಬಸದ ಹಾಡುಗಳಿಗಿಂತ ಮುಂಚೆ ಹಾಕಿಕೊಳ್ಳಬೇಕಿತ್ತು. ಮೈನರೆದ ಹಾಡುಗಳನ್ನು ಇಲ್ಲಿ ಆಯ್ದುಕೊಂಡಿಲ್ಲ. ಈ ಕೃತಿಯಲ್ಲಿ ಒಟ್ಟಿಗೆ ೬೨ ಹಾಡುಗಳಿವೆ. ಆಗಿನ ಕಾಲಕ್ಕೆ ಪ್ರಕಟವಾಗಿದ್ದ, ತಮ್ಮ ಕೈಗೆ ದೊರೆತ ಹಾಡುಗಳ ಸಂಗ್ರಹಗಳಲ್ಲಿ ಮುದ್ರಣಗೊಳ್ಳದ ಹಾಡುಗಳನ್ನೇ ಈ ಸಂಗ್ರಹದಲ್ಲಿ ತೆಗೆದುಕೊಂಡದ್ದು ಒಂದು ವಿಶೇಷ ಸಂಗತಿಯಾಗಿದೆ. ೧೯೩೫ ರಲ್ಲಿ ಪ್ರಕಟವಾದ 'ಮಲ್ಲಿಗೆ ದಂಡೆ' ಕೃತಿಯಲ್ಲಿ ಸಂದರ್ಭಗಳನ್ನು ವಿವರಿಸುವ ಟಿಪ್ಪಣಿಗಳನ್ನು ಹಾಕಿದ್ದಾರೆ. ಆದರೆ ಈ ಕೃತಿಯಲ್ಲಿ ಸಂದರ್ಭಗಳ ವಿವರಣೆಗಳಿಲ್ಲ. ಇದೊಂದು ದೊಡ್ಡ ಕೊರತೆಯಾಗಿ ಕಾಣುತ್ತಿದೆ. ಉತ್ತರ ಕರ್ನಾಟಕದ ಬೇರೆ ಭಾಗದವರಿಗೆ, ಅದೂ ಸಂದರ್ಭದ ಅರಿವಿದ್ದವರಿಗೆ ಇಲ್ಲಿಯ ಹಾಡುಗಳ ಮಹತ್ವ ಗೊತ್ತಾಗುತ್ತದೆ. ಸಂದರ್ಭದ ಅರಿವಿಲ್ಲದವರಿಗೆ, ಕರ್ನಾಟಕದವರಿಗೆ ಇಲ್ಲಿಯ ಹಾಡುಗಳ ಸಂದರ್ಭಗಳು ಅರ್ಥವಾಗುವುದಿಲ್ಲ. ಕೇವಲ ಸಾಹಿತ್ಯಿಕ ಅಧ್ಯಯನಕ್ಕಾಗಿ ಮಾತ್ರ ಇಲ್ಲಿಯ ಹಾಡುಗಳನ್ನು ಗಮನಿಸಬೇಕಾಗುತ್ತದೆ. ಒಳ್ಳೆಯ ಹಾಡುಗಳನ್ನು ಆಯ್ದುಕೊಂಡೂ ಸಂದರ್ಭಗಳ ಮಾಹಿತಿಗಳು ಇಲ್ಲದೆ ಇರುವುದು ಈ ಹಾಡುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಕೊರತೆಯಾಗಿ ಕಾಡುತ್ತದೆ.

ಈ ಕೃತಿಯ ಮೊದಲಿಗೆ ಆರು ಸ್ತುತಿ ಗೀತೆಗಳಿವೆ. ಜನಪದ ಸ್ತುತಿಗೀತೆಗಳಲ್ಲಿ ಅವರ ವಿಶಾಲ ದೃಷ್ಟಿ ವ್ಯಕ್ತವಾಗುವುದನ್ನು ಕಾಣುತ್ತೇವೆ. ಉತ್ತರ ಕರ್ನಾಟಕದ ಹಾಡುಗಾರರು ಮೊದಲಿಗೆ ನೆನೆಸುವುದು ೧೨ನೇ ಶತಮಾನದ ಶಿವಶರಣರನ್ನು; ನಂತರ ತಮ್ಮ ಗ್ರಾಮದೇವತೆಗಳನ್ನು, ಗುರುಗಳನ್ನು.

ಬಸವನ ಗಂಟೆಂತ ಹೊಳೆವ ಕೆಂಜಡಿಯಂತ
ಧರಣಿಯ ಬಾಲಂತ ಬಂಗಾರದಿಣಿಯಂತ
ಕೊಂಬು ಚೌರಿಗಳಂತ ದಸಮಕ್ಕಳ ದೈವಂತ
ದೇವಸ್ತಾನದವರಂತ ಪಾದ ನಂದಿಗೋಳಂತ

ಬಸವ ಬಂದಾನ ಬನ್ನಿರೆ ಮರ್ತೆಕ
ಚನ್ನಬಸವ ಬಂದಾನ ನೋಡಿರೆ।

ಸಹಜವಾಗಿ ಅವರ ಹಾಡು ಪ್ರಾರಂಭವಾಗುವುದು ಬಸವನ (ನಂದಿ, ಎತ್ತು) ನೆನೆದು. ಅದು ಕೊನೆಗೆ ಹೋಗಿ ಮುಟ್ಟುವುದು ಕಲ್ಯಾಣ ಬಸವಣ್ಣ, ಚೆನ್ನಬಸವಣ್ಣನವರನ್ನು. ಈ ಹಾಡಿನ ನುಡಿಗಳು ವಿಶೇಷವಾಗಿವೆ. ಐದು ಮತ್ತು ಆರು ಸಾಲುಗಳು ಸಹಜವಾಗಿ ಬರುವ, ಇದಕ್ಕಿಂತ ಹೆಚ್ಚಿನ ಸಾಲುಗಳನ್ನು ವೃದ್ಧಿಸಲು ಬರುವ ಧಾಟಿಗಳು ಇಲ್ಲೆಲ್ಲ ಬಳಕೆಯಾಗಿರುವುದು ಕಾಣುತ್ತದೆ. ಇಲ್ಲಿಯ ಇನ್ನೊಂದು ಸ್ತುತಿ ಹಾಡಿನಲ್ಲಿ ಒಂಬತ್ತು ಸಾಲುಗಳ ವರೆಗೆ ಒಂದು ನುಡಿಯನ್ನು ವೃದ್ಧಿಸಿರುವುದನ್ನು ಕಾಣಬಹುದಾಗಿದೆ.

ಮಂಗಳವಾರ ದಿನ ಈರ ನಿನ್ನ ವಾಲಗ
ಚಂಡು ಚೆಣಗಿಯ ಹೂವ ಮಂಡ ದಾಸಳ ಹೂವ
ಕೊಂಡಾಡು ಮಲ್ಲೀಗಿ ಮಂಡ್ಲ ಸುರಮುರ ಹೂವ
ಏಳು ಸಮುದರದಾನ ಪಾರಿಜಾತದ ಹೂವ
ಕ್ಯಾದಿಗೀ ಗರಿನೂರು ಕ್ಯಾದಿಗೀ ಹೊಡಿ ನೂರು
ಎಲ್ಲಕ್ಕು ಹೆಚ್ಚಿಂದ ಬೆಲ್ಲ ಪತ್ತರಿ ನೂರು
ಕರಕೀ ಪತ್ತೂರಿ ಕಮಳ ತುಂಬಿ ಬರುವಾ
ಕರಿ ಈರಭದ್ರನ ಕರಣ ನೋಡಿ ಪೂಜೆಗೊಳ್ಳ ಬನ್ನಿರೆ।
ಜಯಮಂಗಳಂ ನಿತ್ಯ ಶುಭಮಂಗಳಂ॥

ಹೀಗೆ ಹಿಗ್ಗಿ ಸಾಗುವ ನುಡಿಗಳ ನಡುವೆ ಕರಾರುವಕ್ಕಾಗಿ ಸಾಗುವ ದ್ವಿಪದಿಗಳೂ ತ್ರಿಪದಿಗಳೂ ಚೌಪದಿಗಳೂ ಕಾಣುತ್ತವೆ. ಜನಪದ ಹಾಡುಗಳ ಈ ಗುಣಗಳ ಬಗ್ಗೆ ಗಂಭೀರವಾದ ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ.

ಅಪ್ಪಾ ನಿನ್ನೆದಿ ಮ್ಯಾಲ ಇಪ್ಪತ್ತು ಸೇರಿನ ಚೌಕ
ಬಂಗಾರದ ರೂವ ಬರದಾರ। ಶಿವಶಿವ
ಬಂಗಾರದ ರೂವ ಬರದಾರ ಕಲ್ಯಾಣದ
ಅಪ್ಪ ಶರಣನ ಯೆದಿ ಮ್ಯಾಲ । ಶಿವಶಿವ

ಇದು ತ್ರಿಪದಿಯೊಂದು ಹಾಡಿದಾಗ ನಾಲ್ಕು ಸಾಲಾಗುವ ಪರಿ. ನಡುವೆ ಸೊಲ್ಲುಗಳು ಬಳಕೆಯಾಗುವ ರೀತಿಯನ್ನು ಕಾಣುತ್ತೇವೆ. ಹೀಗೆ ಛಂದಸ್ಸಿನ ದೃಷ್ಟಿಯಿಂದ ಬಹು ವೈವಿಧ್ಯಮಯವಾದ ಹಾಡುಗಳು ಇಲ್ಲಿವೆ. ಜನಪದ ಹಾಡುಗಳ ಶಾಸ್ತ್ರೀಯ ಅಧ್ಯಯನದ ಲಾಭಗಳನ್ನು ಮಧುರಚೆನ್ನರು 'ಮಲ್ಲಿಗೆ ದಂಡೆ' ಮುನ್ನುಡಿಯಲ್ಲಿಯೇ ಹೇಳಿದ್ದಾರೆ. ಆ ಬಗೆಗೆ ಗಂಭೀರವಾಗಿ ಯಾರೂ ಗಮನ ಹರಿಸಿದಂತೆ ಕಂಡುಬರುವುದಿಲ್ಲ.

ಈ ಕೃತಿಯಲ್ಲಿ ಸಂದರ್ಭಗಳನ್ನು ಸೂಚಿಸುವ ತಲೆಬರಹಗಳನ್ನು ಬಳಸಿದ್ದು ಒಂದಿಷ್ಟು ಅನುಕೂಲವಾಗಿದೆ. ಒರಳಕಲ್ಲ ಪೂಜೆಗೆ ಸಂಬಂಧಿಸಿದಂತೆ ಮೂರ್‍ನಾಲ್ಕು ಹಾಡುಗಳನ್ನು ಇಲ್ಲಿ ಕಾಣುತ್ತೇವೆ. ಹಾಡಿದರೆ ಇವುಗಳ ಧಾಟಿ ಗಮನ ಸೆಳೆಯುತ್ತದೆ. ಈ ಹಾಡುಗಳು ಇಲ್ಲಿ ಓದಿದರೂ ಚಂದಾಗಿ ಕಾಣುವಂತಿವೆ.

ಬಾಗಿಲ್ದಾಗ ಕಲ್ಲ ಒಳ್ಳ ಹಾಕಿ
ಅದಕ ರಂಗ ಮಾಣಿಕದ ಹರಳ್ಹಾಕಿ
ಕುದರಿ ಮಕದ ಮ್ಯಾಲ ಗಿಣಿ ಕುಂತು ಹೇಳ್ಯಾವ
ಸಂಜ್ಯಾದ ವ್ಯಾಳೇಕ ಒರಳಕ್ಕಿ ಪಾಡೂನ । ಸುವ್ವಿ ಸುವ್ವಿ ಸುವ್ವಾಲೆ।

ಈ ಹಾಡುಗಳಲ್ಲಿಯೇ ಬಂಧುಬಾಂಧವರಿಗೆ ಒಂದೊಂದು ಚಾಜ ಇರುವ ಸೂಚನೆಗಳನ್ನು ಕಾಣುತ್ತೇವೆ. ಈಗ ಒಳಕಲ್ಲ ಪೂಜೆಯಾದ ನಂತರ ನೇಮಕ್ಕೆ ಒಂದಿಷ್ಟು ಧಾನ್ಯ ಹಾಕಿ ಕುಟ್ಟಬೇಕು, ಬೀಸುವ ಕಲ್ಲಿಗೆ ಮುಕ್ಹಾಕಿ ತಿರುವಬೇಕು. ಈ ಕುಟ್ಟುವ ಬೀಸುವ ಕೆಲಸದ ಅನಾವರಣ ಮಾಡುವ ಹಕ್ಕು ಇಂತಿಂಥವರಿಗೆ ಎಂದು ಇರುತ್ತದೆ. ಅವರಿಗೆಲ್ಲ ಕರೆದು ಆಯಾ ಕೆಲಸವನ್ನು ಹಚ್ಚಲಾಗುತ್ತದೆ. ಮುಂದಿನ ನುಡಿಗಳಲ್ಲಿ ಆ ಸೂಚನೆಗಳಿವೆ. 'ಒಡಹುಟ್ಟಿದಕ್ಕ', 'ಒಡಹುಟ್ಟಿದ ತಂಗಿ', ಅನಂತರ ನಾದುನಿ, ಅತ್ತಿಗಿ ಹೀಗೆ ಮನೆಯ ಸಂಬಂಧಿಕರ ಚಾಜದ ಕೆಲಸವಿದು. ಹೀಗೆ ಈ ಮದುವೆಯ ಹಾಡುಗಳು ಮುಗಿಯುವ ವರೆಗೆ ಅಲ್ಲಲ್ಲಿ ನಮಗೆ ಇಂತಹ ಸೂಚನೆಗಳು ದೊರೆಯುತ್ತವೆ.

ಮದುವೆಯ ಸಂಭ್ರಮಗಳಲ್ಲಿ ಬೀಗರಿಗೆ ಕರೆದುಕೊಂಡು ಬರುವ ಪದ್ಧತಿಯೊಂದು ವಿಶೇಷವಾಗಿದೆ. ಬಾಜಿಬಜಂತ್ರಿಯೊಂದಿಗೆ ಹೋಗಿ, ಬಾಯಲ್ಲಿ ಸಕ್ಕರಿ ಹಾಕಿ ಸ್ವಾಗತಿಸಲಾಗುತ್ತದೆ. ಆದರೆ ಅವರನ್ನು ಕರೆದುಕೊಂಡು ಬರುವಾಗ ಹಾಡುವ ಹಾಡುಗಳಲ್ಲಿ ನಮ್ಮ ಜನಪದರ ಖಿಲಾಡಿತನವನ್ನು, ಹಾಸ್ಯದ ಗುಣವನ್ನು ಕಾಣುತ್ತೇವೆ. ಬೀಗರನ್ನು ಛೇಡಿಸುವ, ಅಪಹಾಸ್ಯ ಗೈಯುವ ನುಡಿಗಳುಳ್ಳ ಹಾಡುಗಳೂ ಕಾಣುತ್ತವೆ. ಇದೊಂದು ರೀತಿಯಿಂದ ವಾದಿಬೀದಿಯಾಗಿ ನಡೆಯುವ ಹಾಡುಗಾರಿಕೆ. ಇವರೊಂದು ಹಾಡು ಹಾಡಿದರೆ, ಬಂದ ಬೀಗರಲ್ಲಿಯ ಹೆಣ್ಣುಮಕ್ಕಳು ಅದಕ್ಕೆ ಸರಿಸಮನಾದ ಹಾಡನ್ನು ಹಾಡುತ್ತಾರೆ. ಎಷ್ಟೋ ವೇಳೆ ಇದರಿಂದ ವೈಮನಸ್ಸುಗಳು, ಜಗಳಗಳೂ ಹುಟ್ಟುವುದುಂಟು.

ಕರಿಯ ಬಂದಿನಿ ಬೀಗತಿ ನಾನು
ಛಲ ಮಾಡಲಿ ಬ್ಯಾಡೌ ನೀನು।
ಕರೆಬಂದದ್ದು ಖರೆಯವ್ವ ಕೇಳ
ಛಲ ಮಾಡಿದ್ದದು ಏನು ಹೇಳ।

ಹೀಗೆ ಸಾಗುತ್ತದೆ ಸಂವಾದದ ಹಾಡು. ಜನಪದರಲ್ಲಿ ವರ್ಣನೆಯ ಭಾಗಗಳು ಕಡಿಮೆ. ಆದರೆ ಶುಭಕಾರ್ಯದ ಹಾಡುಗಳಲ್ಲಿ ವಿಶೇಷವಾಗಿ ಸ್ತ್ರೀಯನ್ನು ವರ್ಣಿಸುವ ಹಾಡುಗಳು ಬರುತ್ತವೆ. ಅವುಗಳಲ್ಲಿ ಹಸೆಗೆ ಕರೆಯುವ ಹಾಡುಗಳು ಸ್ತ್ರೀಯ ವರ್ಣನೆ ಮಾಡುವ ಬಗೆ ಅದ್ಭುತವೆನ್ನುವಷ್ಟು ಚೆನ್ನಾಗಿರುತ್ತವೆ. ಅದರಲ್ಲೂ ಹಾಡಿದರೆ ಅವುಗಳ ಮಾಧುರ್ಯ ಇನ್ನೂ ಕೇಳುವಂತಿರುತ್ತದೆ.

ಮುದದಲಿ ಮದಗಜಗಮನೆ ಬಾ
ಬೆದರಿದೆರಳಿ ಮರಿನಯನೆ ಬಾ
ಪದುಳದ ಕೋಕಿಲಗಾನೆ ಬಾ
ಮದನನ ಮಾರ್ಬಲದಹನೆ ಬಾ

ಬಹುಜಾಣೆ ಬಾ ಕಲ್ಯಾಣೆ ಬಾ
ಫಣಿವೇಣಿ ಬಾರೆಂದ್ಹಸೆಗೆ ಕರsದಾರ ಸೋ।೧।

ಮಂಗಳಾಂಗ ನಿಜಲಿಂಗನೆ ಬಾ
ಸಂಗನ ಶರಣರ ಹಿಂಗನೆ ಬಾ
ಧವಳಾಂಗ ಬಾ ಯತಿತುಂಬ ಬಾ
ಧರಣೀಶ ಬಾ ಮರಣೀಶ ಬಾ
ಮಾಲಿಂಗ ಬಾ ಶರಭಾಂಗ ಬಾ
ಮದನಹರ ಬಾರೆಂದ್ಹಸೆಗೆ ಕರದಾರ ಸೋ।೪।

ಎಣ್ಣೆ ಹಚ್ಚುವ ಸಂದರ್ಭವಂತೂ ವರ್ಣನೆಯಲ್ಲಿ ಎಳೆಯ ಶೃಂಗಾರದ ಭಾವನೆಯಿಂದ ಕೂಡಿ, ಸಾಂಕೇತಿಕವಾಗಿ ವರ್ಣಿಸುವ ರೀತಿ ಸಾಹಿತ್ಯ ಸಂದರ್ಭಗಳಲ್ಲಿಯೇ ಅಪರೂಪದ್ದು. ಮದುಮಕ್ಕಳನ್ನು ಎಡಬಲಕ್ಕೆ ಕೂಡಿಸಿ ಎಣ್ಣೆ ಹಚ್ಚುವ, ಸ್ನಾನ ಮಾಡಿಸುವ ಅದೊಂದು ಅಪರೂಪದ ಕ್ಷಣ. ಮದುವೆಯಲ್ಲಿ ಮದುಮಕ್ಕಳು ತೀರ ರೋಮಾಂಚನಗೊಳ್ಳುವ ಸಂದರ್ಭವೆಂದರೆ ಈ ಎಣ್ಣೆ ಹಚ್ಚುವ ಸಂದರ್ಭವೇ ಆಗಿದೆ. ಎಣ್ಣೆ ಹಚ್ಚುವಾಗ ಹಾಡುವ ಹಾಡುಗಳು ಒಂದೆರಡು ಮಾತ್ರ ದೊರೆಯುತ್ತವೆ. ಹೆಚ್ಚಿನ ಹಾಡುಗಳು ದೊರೆಯುವುದಿಲ್ಲ. ಶೈವ ಸಂಪ್ರದಾಯದ ಕಾಲದ ಹಾಡುಗಳಿವು. ಮದುವಕ್ಕಳು ಇವತ್ತಿಗೂ ಶಿವ–ಪಾರ್ವತಿಯರೇ. ಆ ವರ್ಣನೆ ಶಿವ–ಪಾರ್ವತಿಯರ ಹೆಸರಿನ ಮೇಲೆಯೇ ನಡೆಯುತ್ತದೆ.

ನೀ ಎಣ್ಣೆ ನೀ ಎಣ್ಣೆ ನಮ್ಮ ದೇವರಿಗೆಲ್ಲಾ ನೀ ಎಣ್ಣೆ
ನಮ್ಮ ದೆವರು ಬಸವಯ್ಯಗ ನೀ ಎಣ್ಣೆ ।ಪಲ್ಲ।

ಬಾಲಾಗ ಎಣ್ಣಿ ಇಡೋತಿಗೆ ಬಾಗಿಲಿಗೆ ಬಿಸಲು ಬಂದು
ನಾಲತ್ತೋಟದ ಎಲಿ ಬಂದು। ಹರ ಹರ ನಮ್ಮ ಶಿವಗ ನೀ ಎಣ್ಣೆ ।೧।

ನೀರಿಲ್ಲದಂಗಳಕ ನೀರ್ಯಾಕ ಚಲ್ಯಾವ
ಊರಿಗೆ ದೊಡ್ಡವರ ಮಗ ಮಿಂದ। ಹರ ಹರ ನಮ್ಮ ಶಿವಗ ನೀ ಎಣ್ಣೆ ।೩।

ಕೆಸರಿಲ್ಲದಂಗಳಕ ಕೆಸರ್ಯಾಕ ಆಗೇವ
ಹೆಸರಿಗೆ ದೊಡ್ಡವರ ಮಗ ಮಿಂದ। ಹರ ಹರ ನಮ್ಮ ಶಿವಗ ನೀ ಎಣ್ಣೆ ।೪।

ಹೆಸರಿಗೆ ದೊಡ್ಡವರ ಮಗಮಿಂದ ಅಣ್ಣಪ್ಪ
ಹಸರ ಚತ್ತರಗಿ ನೆರಳೀಗಿ । ಹರ ಹರ ನಮ್ಮ ಶಿವಗ ನೀ ಎಣ್ಣೆ ।೫।

ಗಲ್ಲೆಂಬು ಹರಿವ್ಯಾಗ ಗಿಲ್ಲೆಂಬು ಮಗಿಹಾಕಿ
ನಿಲ್ಲದಲೆ ನೀರ ಬೆರಸ್ಯಾಳ। ಹರ ಹರ ನಮ್ಮ ಶಿವಗ ನೀ ಎಣ್ಣೆ।೬।

ನಿಲ್ಲದೆಲೆ ನೀರ ಬೆರಸ್ಯಾಳ ಶರಣಮ್ಮ
ಪಿಲ್ಲಿ ನೀರಾಗ ಹೊಳದಾವ ।ಹರ ಹರ ನಮ್ಮ ಶಿವಗ ನೀ ಎಣ್ಣೆ ।೭।
ಕಂಚೆಂಬು ಹರಿವ್ಯಾಗ ಮಿಂಚೆಂಬು ಮಗಿ ಹಾಕಿ
ಚೆಲ್ಲುತ ನೀರ ಬೆರಸ್ಯಾಳ। ಹರ ಹರ ನಮ್ಮ ಶಿವಗ ನೀ ಎಣ್ಣೆ ।೮।

ಚಲ್ಲುತ ನೀರ ಬೆರಸ್ಯಾಳ ಶರಣಮ್ಮ
ನಲ್ಲೆ ನಿನ ಮನಿಗ ಸೊಸಿ ಬಂದ । ಹರ ಹರ ನಮ್ಮ ಶಿವಗ ನೀ ಎಣ್ಣೆ।

ಅಂಗಳದಲ್ಲಿಯೇ ಈ ಕಾರ್ಯಕ್ರಮ ನಡೆಯುವುದು. ಬಾಗಿಲಿಗೆ ಬಿಸಿಲ ಬರುವುದು, ಅಂಗಳಕ ಬಿಸಿಲ ಬರುವುದು, ನಾಲ್ವತೋಟದ ಎಲೆ ಬರುವುದು, ಅಂಗಳಕ ನೀರು ಬರುವುದು, ಕೆಸರಾಗುವುದು, ಪಿಲ್ಲೆ ನೀರಾಗ ಹೊಳೆಯುವುದು– ಇವೆಲ್ಲ ಕೇವಲ ಸಾಮಾನ್ಯವಾದ ಅರ್ಥದಲ್ಲಿಲ್ಲ; ಅವೆಲ್ಲ ಸಾಂಕೇತಿಕವಾಗಿ ಮದುಮಕ್ಕಳ ಮಾನಸಿಕ ಬೆಳವಣಿಗೆಯನ್ನು, ಪರಸ್ಪರರ ಶೃಂಗಾರ ಭಾವನೆಗಳ ತರಂಗಗಳ ಸ್ಪಂಧನವನ್ನು ಹೇಳುತ್ತಿವೆ ಎನಿಸುತ್ತದೆ. ಇಂತಹ ವರ್ಣನೆ ನಮಗೆ ಬೇರೆಡೆ ಸಿಗುವುದಿಲ್ಲ. ಕೊನೆಯಲ್ಲಿ 'ನಲ್ಲೆ ನಿನ ಮನಿಗೆ ಸೊಸಿ ಬಂದು' ಎಂಬ ಮಾತನ್ನು ಗಮನಿಸಬೇಕು. 'ಸೊಸಿ' ಎಂಬ ಪದ ಮದುಮಗಳಿಗೆ ಮೊದಲನೆಯದಾಗಿ ಬಳಸಿದ ಸಂದರ್ಭವಿದು. ಮದುಮಕ್ಕಳ ಮಾನಸಿಕ ಬೆಳವಣಿಗೆಯ ಕೊನೆ ಹಂತ ಈ ಸಂದರ್ಭದಲ್ಲಿ ಬೆಳೆದು ನಿಲ್ಲುತ್ತದೆಂಬ ಭಾವವನ್ನು ಈ ಮಾತು ಕೊಡುತ್ತದೆ.

ಮದುವೆಯ ಕೊನೆಯ ದೃಶ್ಯ ಯಾವಾಗಲೂ ಕೂಸು ಒಪ್ಪಿಸುವುದು.

ನಮ್ಮನೆಯ ಮುಂಬೆಳಕು ನಿಮ್ಮನೆಯ ಹೊಂಬೆಳಕು
ನಮ್ಮಗಳು ನಿಮಗೆ ಹಿಂಬೆಳಕು ।ಸೋಬಾನವ
ನಮ್ಮಗಳು ನಿಮಗೆ ಹಿಂಬೆಳಕು ಈ ಬೆಳಕ
ನಿಮ್ಮ ಕೈಯಾಗ ಇಡತೀವಿ । ಸೋಬಾನವ
ಹುಟ್ಟೂತ ನಮ್ಮಗ್ಗಳು ಬೆಳೆಯೂತ ನಮ್ಮಗ್ಗಳು
ಕೊಟ್ಟ ಮ್ಯಾಲ್ಹೊರತು ನಮ್ಮಗಳು। ಸೋಬಾನವ
ಕೊಟ್ಟ ಮ್ಯಾಲ್ಹೊರತು ನಮ್ಮಗಳು ಕಂದಮ್ಮನ
ಕೊಟ್ಟೇವು ನಿಮ್ಮ ಮನಿಗಾಗಿ । ಸೋಬಾನವ

ಮದುವೆಯ ಕೊನೆಯಲ್ಲಿ ತಾಯಿ–ತಂದೆಗಳ ಮಾನಸಿಕ ಬೆಳವಣಿಗೆಯೂ ಹೀಗಾಗಿ ನಿಲ್ಲುತ್ತದೆ. ಆದುದರಿಂದಲೇ ಒಂದು ಮನೆಯ ವಂಶದ ಕುಡಿಯೊಂದನ್ನು, ಇನ್ನೊಂದು ಮನೆಯ ಬೆಳಕಾಗಿ ಒಪ್ಪಿಸುವ ಒಂದು ಅದ್ಭುತ ತ್ಯಾಗದ ಸುದೀರ್ಘ ಪ್ರಕ್ರಿಯೆಯಾಗಿ ಮದುವೆ ಜಾರಿಯಲ್ಲಿ ಬಂದದ್ದು. ಈಗ ಇವೆಲ್ಲವುಗಳ ಅವಶ್ಯಕತೆ ಕಡಿಮೆಯಾಗಿದೆ.

ಮದುವೆ ಮುಗಿದ ನಂತರ ಈ ಕೃತಿಯಲ್ಲಿ ಒಮ್ಮೆಗೇ 'ಕುಪ್ಪಸದ ಹಾಡು'ಗಳನ್ನೇ ಹಾಕಿದ್ದಾರೆ. ಬಹುಶಃ ಮೈನರೆದ ಹಾಗೂ ಸೋಬಾನದ ಉತ್ತಮವಾದ ಹಾಡುಗಳು ಸಿಗದೇ ಇರುವುದು ಒಂದು ಕಾರಣವಾಗಿರಬೇಕು. ಕುಪ್ಪಸದ ಹಾಡುಗಳಲ್ಲಿ ಬಸುರಿ ಹೆಣ್ಣುಮಗಳ ದೈಹಿಕ ಬೆಳವಣಿಗೆಗಳು, ಮಾನಸಿಕ ಅಪೇಕ್ಷೆಗಳು ಹೇಗೆ ಬೆಳವಣಿಗೆಯಾಗುತ್ತ ಹೋಗುತ್ತವೆ ಎಂಬುದನ್ನು ಬಹಳ ವೈಜ್ಞಾನಿಕವಾಗಿ ವಿವರಿಸುವುದನ್ನು ಕಾಣುತ್ತೇವೆ. ತಾಯಿಯ ಹೊಟ್ಟೆಯಲ್ಲಿ ಮಗು ಅಂಕುರಿಸಿ, ಪ್ರತಿತಿಂಗಳು ಅದರ ದೈಹಿಕ ಬೆಳವಣಿಗೆ ಹೇಗಾಗುತ್ತದೆಂದು ಹೇಳುವ ವೈಜ್ಞಾನಿಕ ಸಂಗತಿಗಳು ಬರುವುದು ಈ ಕುಪ್ಪಸದ ಹಾಡುಗಳಲ್ಲಿಯೆ.

ಒಂದೆಂಬ ತಿಂಗಳಿಗೆ ಒಂದೇನ ಬಯಸ್ಯಾಳ
ಚಂದಾಗಿ ಬೆಳೆದ ಎಳೆನೆಲ್ಲಿ!

ಹೀಗೆ ಎಳೆಯ ಹುಳಿಯಿಂದ ಪ್ರಾರಂಭವಾದ ಅವಳ ಬಯಕೆ ಈ ಹುಳಿ ಗಟ್ಟಿಗೊಳ್ಳುವ ಪದಾರ್ಥಗಳನ್ನು ಮೂರ್ನಾಲ್ಕು ತಿಂಗಳುಗಳ ವರೆಗೆ ಬಯಸುತ್ತಾಳೆ. ನಂತರ ಅವಳ ಬಯಕೆಯಲ್ಲಿ ಬದಲಾವಣೆ ಕಾಣುತ್ತದೆ. ಎಳೆನೆಲ್ಲಿ> ಎಳಹುಣಸಿ> ಮಗಿಮಾವ> ಕಾಕೀಯ ಹಣ್ಣು, ಮಲ್ಲಿಗೆ ನೆನೆದಂಡೆ>ಬಾನ>ಕೆನಿಮುಸರ. ನಾಲ್ಕು ತಿಂಗಳವರೆಗೆ ಹುಳಿ ಪದಾರ್ಥಗಳನ್ನು, ಐದರ ನಂತರ ಉಡುವ ತೊಡುವ ಸಂಭ್ರಮ, ವಿವಿಧ ಬಗೆಯ ಆಹಾರ ಬಯಕೆಗಳೆಲ್ಲ ಕಾಣಿಸಿಕೊಂಡು ಅವು ತನ್ನ ಹೊಟ್ಟೆಯಿಂದ ಮಗು ಹೊರಬರುವ ಕೊನೆಯ ದಿನಗಳವರೆಗೂ ಸಾಗುತ್ತವೆ. ಎಳನೇ ತಿಂಗಳಿಂದ ಸಾಂಪ್ರದಾಯಿಕ ಕಾರ್ಯಕ್ರಮಗಳು ಪ್ರಾರಂಭವಾಗುತ್ತವೆ. ತವರಿನ ಅರ್ಥಾತ್ ತಾಯಿಯ ಹಂಬಲ ಬೆಳೆಯುತ್ತದೆ. ಇವೆಲ್ಲ ಈ ಹಾಡಿನಲ್ಲಿ ದಾಖಲಾಗಿರುವುದು ಕಾಣುತ್ತದೆ. ಈ ಸೊಗಸಾದ ಸನ್ನಿವೇಶದ ಜೊತೆಗೆ ಹಾಸ್ಯವನ್ನು ಅವರು ಮರೆಯುವುದಿಲ್ಲ :

ಈಗಿನವರ ಸೋಗಿನ ಬಸರ ।
ಕೇಳ್ರಿ ಒಂಜರಾ । ಅತ್ತೀs ಕೇಳ್ರಿ ಒಂಜರಾ।
ದೀಡ ತಿಂಗಳ ಹೊಲಿ ತಡದೈತ್ರಿ
ನಿಲ್ಲುವಂಗ ಕಾನಿಸತೈತ್ರಿ
ಮಾಡಿಕೊಡರಿ ಮಸರಬುತ್ತಿ
ಮಜ್ಜಿಗಿ ಸಾರನು । ಅತ್ತೀ ಮಜ್ಜಿಗಿ ಸಾರನು ।

ಹೀಗೆ ಸಾಗುತ್ತದೆ ಅವರ ಹಾಸ್ಯಪ್ರಜ್ಞೆ, ಇಂತಹ ಹಾಡುಗಳಲ್ಲಿ ಜನಪದರ ಹಾಸ್ಯಪ್ರಜ್ಞೆ ವ್ಯಕ್ತವಾಗುವುದನ್ನು ಕಾಣುತ್ತೇವೆ. ಈ ಬಗೆಯಲ್ಲಿ ಕೊನೆಯದಾಗಿ ಜೋಗುಳ ಹಾಡುಗಳನ್ನು ಹಾಕಿದ್ದು, ಅವೆಲ್ಲ ಗೊಲ್ಲಾಳ, ಸಿಂಧುಬಲ್ಲಾಳ, ಅನುಸೂಯಾ, ಸ್ತ್ರೀ ನೀತಿ ಜೋಗುಳ ಪದ ಇವೆಲ್ಲ ಇವೆ. ಇವುಗಳನ್ನು ಗಮನಿಸಿದರೆ ಜೋಗುಳ ಸಂದರ್ಭದಲ್ಲಿ ಬಳಕೆಯಾಗುವ ಇತರ ವಸ್ತುಗಳಿಗೆ ಇವೆಲ್ಲ ಉದಾಹರಣೆಗಳಾಗುತ್ತವೆ. ಪ್ರತಿಭಾವಂತ ಹೆಣ್ಣುಮಕ್ಕಳು ಇಂತಹ ಕಥೆಗಳನ್ನು ತಿಳಿದುಕೊಂಡು ಹಾಡುಗಳ ರಚನೆಯನ್ನು ಮಾಡಬಹುದಾಗಿದೆ. ಇಲ್ಲವೆ ಗ್ರಾಮಾಂತರ ಪ್ರದೇಶದ ಯಾವನೋ ಒಬ್ಬ ಜನಪದ ಕವಿ ರಚಿಸಿದ ಹಾಡುಗಳಾಗಿರಲೂ ಬಹುದಾಗಿದೆ. ಉಳಿದಂತೆ ಯಾವುದೇ ಸಂದರ್ಭದಲ್ಲಿ ಸಮಯವಕಾಶವಿದ್ದರೆ ಹಾಡಲು ಬಳಸುವ ಹಾಡುಗಳನ್ನು ಆಯ್ದು ಕೊಡಲಾಗಿದೆ.

ಕರ್ನಾಟಕದ ಹಿರಿಯ ತಲೆಮಾರಿನ ಜಾನಪದ ಸಂಗ್ರಾಹಕರಾದ ಮತಿಘಟ್ಟ ಕೃಷ್ಣಮೂರ್ತಿ ಅವರು ತಾವು ಹಲವಾರು ವರ್ಷಗಳ ಹಿಂದೆ ಸಂಗ್ರಹಿಸಿಟ್ಟುಕೊಂಡಿದ್ದ, ಬ್ರಾಹ್ಮಣ ಸಮಾಜದ ಶುಭಕಾರ್ಯದ ಹಾಡುಗಳನ್ನು ೧೯೭೭ರಲ್ಲಿ ಪ್ರಕಟಿಸಿದ ತಮ್ಮ **'ಕನ್ನಡ ಜನಪದ ಸಾಹಿತ್ಯ ಭಂಡಾರ-೧'** ರಲ್ಲಿ ಒಂದು ಭಾಗವಾಗಿ ಪ್ರಕಟಿಸಿದ್ದಾರೆ. ಇವುಗಳನ್ನು ಅವರು 'ಶೋಬಾನೆ ಪದಗಳು' ಎಂದು ಕರೆದಿದ್ದಾರೆ. ಇದರಲ್ಲಿ ಒಟ್ಟಿಗೆ ಎರಡು ಭಾಗಗಳನ್ನು ಮಾಡಿಕೊಂಡಿದ್ದು, ೫೯ ಹಾಡುಗಳನ್ನು ಇಲ್ಲಿ ಕೊಟ್ಟಿದ್ದಾರೆ. ಅಂದರೆ

೫೧ ಬಗೆಯ ಶೋಬಾನೆ ಪದಗಳು ಇಲ್ಲಿವೆ. ಒಂದು ರೀತಿಯಿಂದ ಹೆಸರುಗಳೇ ಅವುಗಳ ಸಂದರ್ಭಗಳನ್ನು ಹೇಳುತ್ತಿವೆ ಎನಿಸುತ್ತದೆ. ಉದಾ: ಗೋದಿಕಲ್ಲು ಶಾಸ್ತ್ರ, ಬಳಗ ಕರದದ್ದು, ಕೇರಿ ಕರೆಯುವುದು, ಹಸೆ ಹಾಕುವುದು ಮುಂತಾದವುಗಳು. ಆದರೂ ಈ ಸಂದರ್ಭಗಳನ್ನು ಕೆಲವು ಸಾಲುಗಳಲ್ಲಿ ವಿವರಿಸಬಹುದಿತ್ತು ಎನಿಸುತ್ತದೆ. ವಕ್ತಾರರ ಮಾಹಿತಿಳನ್ನೂ ಸರಿಯಾಗಿ ಕೊಟ್ಟಿಲ್ಲ.

ಸಂದರ್ಭದ ಹಾಡುಗಳ ಒಂದೆರಡು ಉದಾಹರಣೆಗಳು:

ಎಣ್ಣೆ ಶಾಸ್ತ್ರ :

ಆ ನಾಡ ಅರಿಸಿನ ಈ ನಾಡ ಅರಿಸಿನ
ಗೋವಿ ಮಲೆನಾಡ ಅರಸಿನ ।ವ ಅವರಪ್ಪ
ಹಚ್ಚಡವೇ ಕೊಟ್ಟು ತರಿಸ್ಯಾರೆ
ಅಟ್ಟಕ್ಕೆ ಹಾಕ್ಯಾಳೆ ಹತ್ತು ಕಾಲೇಣಿಯ
ಹರಳೆಣ್ಣೆ ಕೊಡನ ತೆಗೆದಳೆ। ಅವರವ್ವ
ಹಚ್ಚೆಂದೋ ತನ್ನ ಮಗನಿಗೆ

ಹೆಣ್ಣಿಗೆ ಅಲಂಕಾರ :

ತುಂಬಿದ ಕೆರೆಯಾಗೆ ಚಂದಿರ ಮೂಡಿದ್ಹಂಗೆ
ದಂಡಿಗ್ಯಾಗಳಿಗೆಯ ಬರುತಾನೆ।ಹೆಣ್ಣಿನ ತಾಯಿ
ದಂಡೆಯ ಸೂಡೆ ಮಗಳಿಗೆ

ಮದುವಣಿಗನ ಅಲಂಕಾರ :

ಅಂದುಳ್ಳ ಗೆಣೆಯರು ಚೆಂದುಳ್ಳೆ ಗೆಣೆಯರು
ಅಂದ ಚಂದುಳ್ಳೆ ಗೆಣೆಯರು।ರಪ್ಪಯ್ಯಗೆ
ಅಂಗೀ ತೊಡಿಸ್ಯಾರೊಂದಲಪಿನ

'ಮಲ್ಲಿಗೆ ದಂಡೆ' (೧೯೩೫) ಪ್ರಕಟವಾದ ನಂತರ ಅದನ್ನು ಸರಿಗಟ್ಟುವ ಇನ್ನೊಂದು ಪುಸ್ತಕ ಬರಲೇ ಇಲ್ಲ ಎಂಬುದು ಸತ್ಯ ಸಂಗತಿ. ಜನಪದ ಸಾಹಿತ್ಯದ ಬಗ್ಗೆ ಅಷ್ಟೊಂದು ವೈಜ್ಞಾನಿಕ ತಿಳುವಳಿಕೆ ನಮ್ಮಲ್ಲಿ ಮೂಡಿ ಬಂದರೂ ಸಂಪ್ರದಾಯ ಹಾಡುಗಳ ಒಂದು ಉತ್ತಮ ಸಂಗ್ರಹ ಈ ವೇಳೆಗೆ ಬರಲಿಲ್ಲವೆಂಬುದು ಒಂದು ಕೊರತೆಯಾಗಿ ಕಾಣುತ್ತಿದೆ. ಹಾಗೆ ನೋಡಿದರೆ ಈ ಹಾಡುಗಳು ಬಹಳ ವ್ಯಾಪಕವಾಗಿ, ಸಹಜವಾಗಿ, ಸರಳವಾಗಿ ಸಂಗ್ರಾಹಕರ ಕೈಗೆ ದೊರೆಯುತ್ತವೆ. ಆದರೆ ಈ ಹಾಡುಗಳನ್ನು ಸರಿಯಾಗಿ ಸಂಗ್ರಹಿಸಿ, ಸಂಪಾದಿಸಿ, ಸಂದರ್ಭಗಳನ್ನು ವಿವರಿಸಿ ಕೃತಿಗಳನ್ನು ಪ್ರಕಟಿಸಿದ ಉದಾಹರಣೆಗಳು ಮಾತ್ರ ತೀರ ಕಡಿಮೆ. 'ಮಲ್ಲಿಗೆ ದಂಡೆ'(೧೯೩೫) ನಂತರ ಬಂದುದು ಅಂತಹ ಹಾಡುಗಳ ಇನ್ನೊಂದು ಸಂಗ್ರಹ ೩೫ ವರ್ಷಗಳ ನಂತರ, ೧೯೭೧ ರಲ್ಲಿ 'ಜೀವನ ಜೋಕಾಲಿ-೨, ಸರಸ ವಿರಸ' ಎಂಬ ಸಂಗ್ರಹ. ೧೯೭೫ರಲ್ಲಿ ಪ್ರಕಟವಾದ ಮತಿಘಟ್ಟ ಕೃತಿಮೂರ್ತಿ ಅವರ 'ಕನ್ನಡ ಜನಪದ ಸಾಹಿತ್ಯ ಭಂಡಾರ-೧' ಸಾವಿರಕ್ಕೂ ಮಿಕ್ಕ ಪುಟಗಳ ಬೃಹತ್ ಸಂಪುಟ. ಅವುಗಳಲ್ಲಿರುವ ಒಂದೊಂದು ಭಾಗಗಳೂ ಒಂದೊಂದು ಕೃತಿಗಳಾಗಿ

ಪ್ರಕಟವಾಗಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಬ್ರಾಹ್ಮಣ ಸಮುದಾಯಕ್ಕೆ ಸಂಬಂಧಿಸಿದ ಬಹತ್ ಪ್ರಮಾಣದ ಹಾಡುಗಳನ್ನು ಅವರು ಸಂಗ್ರಹಿಸಿದ್ದಾರೆ. ಸೋಬಾನೆ ಹಾಡುಗಳನ್ನು ಅಷ್ಟೊಂದು ಪ್ರಮಾಣದಲ್ಲಿ ಪ್ರಕಟವಾದದ್ದು ಗಮನಾರ್ಹ. ಮತ್ತೆ ಸುಮಾರು ೨೫ ವರ್ಷಗಳ ನಂತರ ಡಾ. ಶಶಿಕಲಾ ಮೋಳ್ದಿ ಅವರ **'ಚಾಜದ ಹಾಡುಗಳು'**(೧೯೭೯) ಎಂಬ ಅಂತಹ ಒಂದು ಕೃತಿ ಪ್ರಕಟವಾಗಿರುವುದು ಕಾಣುತ್ತಿದೆ. 'ಮಲ್ಲಿಗೆ ದಂಡೆ' ಹಲಸಂಗಿಯಲ್ಲಿ ಸಂಗ್ರಹವಾದುದು. ಹೀಗಾಗಿ ಅದು ಬಿಜಾಪೂರ ಜಿಲ್ಲೆಯ ಕೊಡುಗೆಯಾಗುತ್ತದೆ. 'ಸರಸ ವಿರಸ' ಬಹುಶಃ ಧಾರವಾಡ ಜಿಲ್ಲೆಯಲ್ಲಿ ಪ್ರಚಾರದಲ್ಲಿರುವ ಹಾಡುಗಳ ಸಂಗ್ರಹವಾಗಿರುವಂತೆ ತೋರುತ್ತದೆ. 'ಚಾಜದ ಹಾಡುಗಳು' ಕಲಬುರಗಿ ಜಿಲ್ಲೆಯ ಸಂಪ್ರದಾಯದ ಹಾಡುಗಳ ಪ್ರಾಥಿನಿಕ ಸಂಗ್ರಹವಾಗಿದೆ.

'ಚಾಜದ ಹಾಡುಗಳು' (೧೯೭೯) ಕೃತಿಯ ಪ್ರಾರಂಭದಲ್ಲಿಯೇ ಬರೆದ ಪ್ರಸ್ತಾವನೆಯಲ್ಲಿ ಶುಭಕಾರ್ಯಗಳ ಸಂದರ್ಭಗಳ ಬಗೆಗೆ ವಿವರಿಸಿದ್ದಾರೆ. ಐದೂ ಶುಭಕಾರ್ಯದ ಹಾಡುಗಳು ಇಲ್ಲಿವೆ. ಇವುಗಳನ್ನು 'ಚಾಜದ ಹಾಡುಗಳು' ಎಂದು ಕರೆದುದರ ಕಾರಣವನ್ನು ಸಂಪಾದಕರು ಹೀಗೆ ವಿವರಿಸಿದ್ದಾರೆ: "ಚಾಜ ಎಂಬ ಪದವನ್ನು ನೇಮ, ಕಟ್ಟಳೆ, ಆಚರಣೆ, ಹಕ್ಕು, ಮನ್ನಣೆ ಮುಂತಾದ ವಿವಿಧಾರ್ಥಗಳಲ್ಲಿ ಬಳಸಲಾಗುತ್ತದೆ. ಮದುವೆ ಮುಂಜಿವೆ ಶೋಭನ ಪ್ರಸ್ಥಾದಿ ಕಾರಣಗಳಲ್ಲಿ ಮಾಡಲೇಬೇಕಾದ ನೇಮಗಳು (ನಿಯಮಿತ ಎಂಬುದೇ ವಿಶಿಷ್ಟ ಅರ್ಥ ಪಡೆದಿದೆ). ಹಸಿ ಹೊಯ್ಯೋದು, ಆರತಿ ಹಿಡಿಯುವುದು, ಹಾಲುಗಂಬ ತರುವುದು, ಸುರಗಿಯಲ್ಲಿ ಕೈಹಿಡಿದು ಮಿನಿಯೋದು(ಮೀಯುವುದು); ಧಾರೆ ಎರೆಯುವುದು ಮುಂತಾದ ಅನೇಕ ಚಾಜಗಳು ರಕ್ತಸಂಬಂಧಿಗಳು ಮಾಡಬೇಕಾದವು. ಇಲ್ಲಿ ಚಾಜ ಮಾಡುವುದು ಒಂದು ಹಕ್ಕಾಗಿದೆ. ಸೋದರ ಮಾವನೇ ಹಾಲುಗಂಬ ತರಬೇಕು. ಮನೆಯ ಹೆಣ್ಣುಮಗಳು ಅಥವಾ ಹೆಣ್ಣುಮಗಳ ನಾತೆಯಿದ್ದವಳು ಆರತಿ ಹಿಡಿಯಬೇಕು. ಹೀಗೆಯೇ ಅಕ್ಕಿಕಾಳು ಹಾಕುವಾಗ ಊರಗೌಡ ಅಲ್ಲಿರಬೇಕು, ಅವನ ಪ್ರತಿನಿಧಿಯಾದರೂ ಅಲ್ಲಿರಬೇಕು. ...ಚಾಜ ಒಂದು ಮನ್ನಣೆಯಾಗಿದೆ. ಗೌರವದ ಗುರುತಾಗಿದೆ. ಅಂತೆಯೇ ಕುಂಬಾರ, ಅಕ್ಕಸಾಲಿಗ, ಅಗಸ, ವಾಲೀಕಾರರಿಗೂ ಕೆಲವು ಚಾಜಗಳಿವೆ. ಇವು ಕರ್ತವ್ಯಗಳ ರೀತಿಯಲ್ಲಿವೆ. ಹಡದಿ ಹಾಸುವುದು ಅಗಸರ ಚಾಜವಾದರೆ, ಗಡಿಗೆ ಅಡಕಿಲ ಐರಾಣಿ ಮಾಡಿಕೊಡುವುದು ಕುಂಬಾರನ ಚಾಜವಾಗಿದೆ" (ಪ್ರ.ಪು.೫). ಅಂದರೆ ಮದುವೆಯಾದಿಯಾಗಿ ನಡೆಯುವ ಸಂಪ್ರದಾಯಗಳಲ್ಲಿ ಮನೆಯವರಾದಿಯಾಗಿ ಗ್ರಾಮದ ಹಿರಿಯರ ಭಾಗಿದಾರಿಕೆಯೂ ಇರಲೆಂಬ ಉದ್ದೇಶದಿಂದ ಇಂತಿಂಥ ಕೆಲಸಗಳನ್ನು ಇವರಿವರೇ ಜರುಗಿಸಬೇಕೆಂಬ ಒಪ್ಪಂದಗಳು ಮೌಖಿಕ ಪರಂಪರೆಯಲ್ಲಿವೆ. ಹೀಗೆ ನಿಯಮಗಳಿಂದ ಸಂಪ್ರದಾಯಗಳೆಲ್ಲ ತುಂಬಿರುವುದರಿಂದ ಈ ಹಾಡುಗಳನ್ನು ಚಾಜದ ಹಾಡುಗಳು ಎಂದು ಕರೆದಂತೆ ತೋರುತ್ತದೆ.

ಈ ಕೃತಿಯ ಹಾಡುಗಳ ಆಯ್ಕೆ ಗಮನ ಸೆಳೆಯುತ್ತದೆ. ಉತ್ತಮವಾದ ಹಾಡುಗಾರರಿಂದ ಇಲ್ಲಿಯ ಹಾಡುಗಳನ್ನು ಹಾಡಿಸಿ, ಸಂಗ್ರಹಿಸುವ ಕೆಲಸ ಮಾಡಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇವೆಲ್ಲ ಕಲಬುರಗಿ ಜಿಲ್ಲೆಯಲ್ಲಿ ಪ್ರಸಿದ್ಧವಾದ ಹಾಡುಗಳೇ

ಆಗಿವೆ. ಸುಮಾರಾಗಿ ಈ ಭಾಗದ ಎಲ್ಲ ಸಮುದಾಯದ ಸಂಪ್ರದಾಯಗಳಲ್ಲಿ ಈ ಹಾಡುಗಳನ್ನು ಹಾಡುವುದು ಕಂಡುಬರುತ್ತದೆ. ಅನೇಕ ಕಡೆ ಬ್ರಾಹ್ಮಣರಲ್ಲೂ ಈ ಬಗೆಯ ಹಾಡುಗಳನ್ನು ಹಾಡುವುದನ್ನು ಅಪರೂಪಕ್ಕೆ ಕಾಣಬಹುದಾಗಿದೆ. ತೊಂಬತ್ತು ಪುಟಗಳ ಈ ಪುಟ್ಟ ಪುಸ್ತಕದಲ್ಲಿ, ೧೯ ನಮೂನೆಯ ೮೬ ಹಾಡುಗಳು ಇವೆ. ಸಂಪ್ರದಾಯಗಳ ಬಗ್ಗೆ ಸಂಪಾದಕರ ತಿಳುವಳಿಕೆ ಸ್ಪಷ್ಟವಾಗಿದೆ. ಮದುವೆ, ಸೋಬನ(ಮೈನರೆದ, ಸೋಬನ), ಕುಪ್ಪಸ, ಜೋಗುಳ ಹೀಗೆ ಕ್ರಮವರಿತು ಹಾಡುಗಳನ್ನು ಜೋಡಿಸಿರುವುದರಿಂದ ಈ ಸಂಪ್ರದಾಯಗಳ ಬೆಳವಣಿಗೆಯ ಕ್ರಮವೂ ತಿಳಿಯುತ್ತದೆ. ಇಲ್ಲಿಯವರೆಗೆ ಪ್ರಸ್ತಾಪವಾಗದ ಕೆಲವು ಅಪರೂಪದ ಸಂಪ್ರದಾಯ ಕ್ರಿಯಾಚರಣೆಗಳು ಮತ್ತು ಅಲ್ಲಿ ಹಾಡುವ ಹಾಡುಗಳನ್ನು ಇಲ್ಲಿ ಕಾಣಬಹುದಾಗಿದೆ. ಕೊಯಿಲ(ಮಾಸ) ಮಲಗಿಸುವ ಹಾಡು, ಗುಗ್ಗಳ ಹಾಡು, ಬಾಗಿಲ ಹಿಡಿಸುವ ಪದಗಳು, ಆಯಿ ಮುತ್ಯಾನ ಹಾಡು– ಇವೆಲ್ಲ ಅಪರೂಪದ ಹಾಡುಗಳಾಗಿವೆ. ಬಳಕೆಯಿಂದ ತಪ್ಪಿಹೋಗಿರುವ ಇವನ್ನು ಇಲ್ಲಿ ಸಂಗ್ರಹಿಸಿರುವುದು ತುಂಬ ಉಪಯುಕ್ತವಾದ ಕೆಲಸವೆನಿಸುತ್ತದೆ.

'ಕೊಯಿಲ (ಮಾಸ) ಮಲಗಿಸುವ ಹಾಡು' ಒಂದು ವಿಶೇಷ ಕ್ರಿಯಾಚರಣೆಯಾಗಿದ್ದು, ಮಗು ಜನಿಸಿದ ನಂತರ, ಅದರ ಮಾಸನ್ನು ಒಂದು ತಗ್ಗು ತೆಗೆದು, ಹೊಸ ಗಡಿಗೆಯಲ್ಲಿ ಹಾಕಿ, ಮುಚ್ಚಿ ಅದನ್ನು ತಗ್ಗಿನಲ್ಲಿ ಮುಚ್ಚುವ ಕ್ರಿಯಾಚರಣೆ ನಡೆಯುತ್ತದೆ. ಆಗಲೂ ಹಾಡುಗಳನ್ನು ಹಾಡುವುದು ಒಂದು ವಿಶೇಷ ಸಂಗತಿಯೇ. ಅಂತಹ ಒಂದು ಹಾಡು ಇಲ್ಲಿದೆ.

ನಾರಿಯ ಕೈಯಾಗ ಧಾರೀಯ ಕುಡಗೀಲ
ನಲ್ವತ್ತೊಂದೆಸಳ ಎಳಿಬೇವ। ಶಾರಮ್ಮ
ನಾರೆದ್ದು ಕೊಯಲ ಹುಗತಾಳ

ಹತ್ತೆಂಟು ಹಡಿಯವ್ವ ಪುತ್ರನ ಪಡಿಯವ್ವ
ಮತ್ತೊಂದು ಹೆಣ್ಣ ಹಡೆಯವ್ವ ಆಚಿಕೇರಿ
ನಾದಿನಿ ಬಂದೆಣ್ಣಿ ಇಡತಾಳ

ಇಂತಹ ನುಡಿಗಳಿಂದ ಕೂಡಿದ ಇದೊಂದು ಅಪರೂಪದ ಹಾಡಾಗಿದೆ. ಇಲ್ಲಿ ಕಾಣುವ ಇನ್ನೊಂದು ಹೊಸ ದಾಖಲೆಯೆಂದರೆ ಗುಗ್ಗಳ ಹಾಡು.

೧.
ನೀಲದ ಹಲಗಿ ತಂದು ಸೀಳಿ ಬಗಲಿಗ್ಹಾಕಿ
ಮತ್ತ ಪುರವಂತರ ಸೆರಗನಯ್ಯಾ। ಆಡಿದರ
ನೀರಿನೊಳಗಾಡಿ ಬೆವೆತರಯ್ಯಾ

ನಾಲಿಗಿ ಹಾಕಿದಾರ ನಾಲ್ವತ್ತು ಮಂದಿ ಶಸ್ತರ
ಉರಿಯಂಬ ಗುಗ್ಗಳ ತೆಲಿಮ್ಯಾಲ । ಇಟಗೊಂಡು
ವೀರೇಶನ ಪಾವಳ್ಯಾಗ ಇಳಿದಾರಯ್ಯ

೨.
ಮಲ್ಲಿಗಿ ಹೂ ಅಲ್ಲಿ ಇಲ್ಲಿ ಚೆಲ್ಲಿ
ಕಲ್ಲಾಗ ಚೆಲ್ಲಿ ಸಸಿನಾಟಿ ಮರವಂತ
ಎಲ್ಲಿದ್ದರೇನು ದಶವಂತ
ದಾಸ್ಯಾಳದ ಹೂವ ಅಲ್ಲಿ ಇಲ್ಲಿ ಚೆಲ್ಲಿ
ದಾರ್‍ಯಾಗ ಚೆಲ್ಲಿ ಸಸಿನಾಟಿ ಮರವಂತ
ಎಲ್ಲಿದ್ದರೇನು ದಶವಂತ

ಶುಭಕಾರ್ಯದ ಹಾಡುಗಳಲ್ಲಿ ಮದುವೆಯೇ ಅತ್ಯಂತ ದೊಡ್ಡ ಕಾರ್ಯಕ್ರಮ. ಇಲ್ಲಿಯ ಪ್ರತಿಯೊಂದು ಸಣ್ಣ ಸಣ್ಣ ಆಚರಣೆಗಳಲ್ಲೂ ಹಾಡುಗಳಿರುವುದು ವಿಶೇಷ. **'ಮಲ್ಲಿಗೆ ದಂಡೆ'** ಕೃತಿಯಲ್ಲಿ ಮದುವೆಗೆ ಸಂಬಂದಿಸಿ ೧೦ ಬಗೆಯ ಚಾಜದ ಹಾಡುಗಳಿವೆ: ೧. ಭಾಟಗಿ ಹಾಡು, ೨. ಒಳಕಲ್ಲ ಪೂಜಿ ಹಾಡು, ೩. ಅರಿಷಿಣ ಹಚ್ಚೊ ಹಾಡು, ೪. ಐರಾಣಿ ಹಾಡು, ೫. ಸಂಡಿಗೆ ಕಡಿಯುವ ಹಾಡು, ೬. ನೂಲು ಸುತ್ತುವ ಹಾಡು, ೭.ಅಡಿಕೆ ಆಡುವ ಹಾಡು, ೮. ಭೂಮದ ಹಾಡು, ೯. ಬೀಗರ ಹಾಡು, ೧೦. ಕೂಸು ಒಪ್ಪಿಸುವ ಹಾಡು. ನಂತರ ಪ್ರಕಟವಾದ ಡಾ. ಸುಂಕಾಪೂರ ಅವರ 'ಜೀವನ ಜೋಕಾಲಿ– ೨ ಸರಸ ವಿರಸ' ಕೃತಿಯಲ್ಲಿ ಹೆಚ್ಚು ಕಡಿಮೆ ಇಷ್ಟೇ ಪ್ರಕಾರದ ಹಾಡುಗಳಿವೆ. ಡಾ. ಶಶಿಕಲಾ ಮೋಳ್ದಿ ಅವರ 'ಚಾಜದ ಹಾಡುಗಳು' ಕೃತಿಯಲ್ಲಿ ಈ ಹತ್ತು ಪ್ರಕಾರಗಳ ಜೊತೆ ಗುಗ್ಗಳ ಹಾಡು, ಬಾಗಿಲು ಹಿಡಿಸುವ ಹಾಡುಗಳು ಎಂಬ ಎರಡು ವಿಧಗಳ ಹಾಡು ಹೆಚ್ಚಿಗಿವೆ.

ಮದುವೆಯಲ್ಲಿ ಇಪ್ಪತ್ತಕ್ಕೂ ಮೇಲ್ಪಟ್ಟು ಸಣ್ಣ ಸಣ್ಣ ಕ್ರಿಯಾಚರಣೆಗಳಿದ್ದು, ಅಗೆಲ್ಲ ಹಾಡುಗಳನ್ನು ಹಾಡುತಿದ್ದರು ಎಂದು ಕೇಳುತ್ತಿದ್ದೆವು. ಆ ಎಲ್ಲ ನಮೂನೆಯ ಹಾಡುಗಳ ಸಂದರ್ಭಗಳ ಮಾಹಿತಿಗಳೊಂದಿಗೆ ಹಾಡುಗಳನ್ನೂ ಸಂಗ್ರಹಿಸಿಕೊಟ್ಟ ಒಂದು ಅಪರೂಪದ ಕೃತಿ ನಮಗೆ ದೊರೆಯುತ್ತದೆ. ಅದು **'ಹತ್ತು ಮಂದ್ಯಾಗ ಹಾಡೇನ'** ೨೦೧೧ ರಲ್ಲಿ ಪ್ರಕಟವಾದ ಕೃತಿ. ಕರ್ನಾಟಕ ಜಾನಪದ ಅಕಾಡೆಮಿ ಅವರು, ಅಪ್ರಕಟಿತ ಹಸ್ತಪ್ರತಿಗಳನ್ನು ಆಹ್ವಾನಿಸಿ, ಅವುಗಳಲ್ಲಿ ತಮ್ಮಲ್ಲಿರುವ ನಾಲ್ಕು ಹಸ್ತಪ್ರತಿಗಳನ್ನು ಆರಿಸಿ, ಈ ಕೃತಿಯಲ್ಲಿ ಪ್ರಕಟಿಸಿದ್ದಾರೆ. 'ಮದುವೆಯ ಹಾಡುಗಳು' ಎಂಬ ಮೊದಲನೆಯ ಭಾಗ ಡಾ. ಸಿ.ಕೆ.ನಾವಲಗಿ ಹಾಗೂ ಶ್ರೀಮತಿ ಶಕುಂತಲಾ ನಾವಲಗಿ ಅವರು ಕಳಿಸಿದ ಹಸ್ತಪ್ರತಿ ಆಗಿದೆ. ಇದರ ವೈಶಿಷ್ಟ್ಯವೆಂದರೆ ಕೇವಲ ಮದುವೆಗೆ ಸಂಬಂಧಿಸಿದ ೧೮ ಬಗೆಯ ಸಂಪ್ರದಾಯಗಳನ್ನು ಪ್ರಸ್ತಾವನೆಯಲ್ಲಿ ಪರಿಚಯಿಸಿ, ಪಠ್ಯವಾಗಿ ಆ ೧೮ ಬಗೆಯ ಹಾಡುಗಳನ್ನು ಕೊಟ್ಟಿರುವುದು.

೧. ಒಳಕಲ್ಲಪೂಜಿ ಹಾಡು
೨. ಬೀಸುವ ಕಲ್ಲ ಪೂಜಿ ಹಾಡು
೩. ಉಯ್ಯಾಲೆ ಹಾಡು,
೪. ಇದಿರುಗೊಳ್ಳುವ ಹಾಡು

೫. ಹಂದರದಲ್ಲಿ ಸೆಂಡಿಗಿ ಕಡಿಯುವ ಹಾಡು
೬. ನಯ್ಯಾನ ಏರಿಸುವ ಹಾಡು
೭. ಭೂಮದ ಆರತಿ ಹಾಡು
೮. ಹೆಂಡತಿ ಕಾಲು ತೊಳೆಯುವ ಹಾಡು
೯. ತಂಗಿ ಕಾಲು ಹಿಡಿಯುವ ಹಾಡು
೧೦. ಮಂತ್ರಕ್ಕಿ ಹಾಡು
೧೧. ನಾಗೋಲಿ ಸಮಯದ ಉಯ್ಯಾಲೆ ಹಾಡು
೧೨. ಸುರಗಿ ಗಟ್ಟಿಸುವ ಹಾಡು
೧೩. ಹೆಣ್ಣೊಪ್ಪಿಸುವ ಹಾಡು
೧೪. ಬೀಗರ ಹಾಡು
೧೫. ಕುಟ್ಟುವ ಹಾಡು
೧೬. ಕಂಕಣ ಕಟ್ಟುವ ಹಾಡು
೧೭. ಸುರಗಿ ಕೊಡುವ ಹಾಡು
೧೮. ಶಾಸಕ್ಕಿ ಹಾಡು
೧೯. ಬಾಸಿಂಗ ಕಟ್ಟುವ ಹಾಡು
೨೦. ಭಾಷ್ಪಗಿ ಹಾಡು

'ಮಲ್ಲಿಗೆ ದಂಡೆ' ಕೃತಿಯಲ್ಲಿರುವ ಅರಿಷಿಣ ಹಚ್ಚೊ ಹಾಡು, ಐರಾಣಿ ಹಾಡು, ಅಡಿಕೆ ಆಡುವ ಹಾಡು– ಈ ಮೂರು ಪ್ರಕಾರದ ಹಾಡುಗಳು ಇಲ್ಲಿಲ್ಲ. **'ಮಲ್ಲಿಗೆ ದಂಡೆ'** ಕೃತಿಯಲ್ಲಿರುವ ೧೨ ಸಂದರ್ಭದ ಹಾಡುಗಳು ಇಲ್ಲಿ ಮೊದಲನೆಯದಾಗಿ ದಾಖಲಾಗಿವೆ. ಇದನ್ನು ಗಮನಿಸಿದರೆ, ಉತ್ತರಕರ್ನಾಟಕವನ್ನು ಗಮನಿಸಿ, ಒಂದು ಸಮಗ್ರವಾದ ಮದುವೆ ಸಂಪ್ರದಾಯಕ್ಕೆ ಸಂಬಂಧಿಸಿದ ಒಂದು ಅಧ್ಯಯನ ನಡೆಯಬೇಕಾದ ಅವಶ್ಯಕತೆ ಇದೆ ಎನಿಸುತ್ತದೆ.

ಬೆಳಗಾವ ಮತ್ತು ಧಾರವಾಡ ಜಿಲ್ಲೆಗಳಲ್ಲಿ 'ಹತ್ತು ಮಂದ್ಯಾಗ ಹಾಡೇನ' ಕೃತಿಗಾಗಿ ಹಾಡುಗಳನ್ನು ಸಂಗ್ರಹಿಸಲಾಗಿದೆ. ಕೊನೆಯಲ್ಲಿ ಹಾಡುಗಾರರ ವಿವರಗಳನ್ನು ಕೊಟ್ಟಿದ್ದಾರೆ. ಅದನ್ನು ಗಮನಿಸಿದರೆ ಬೆಳಗಾವ ಜಿಲ್ಲೆಯ ಬೈಲಹೊಂಗಲ ಗ್ರಾಮ, ಹಾಗೂ ಧಾರವಾಡ ಜಿಲ್ಲೆಯ ಕುಂದಗೋಳ ಗ್ರಾಮ ಈ ಎರಡು ಗ್ರಾಮಗಳಿಂದ ಮಾತ್ರ ಇಲ್ಲಿಯ ಹಾಡುಗಳನ್ನು ಸಂಗ್ರಹಿಸಲಾಗಿದೆ. ಬೈಲಹೊಂಗಲದ ಭಾಗವ್ವ ಈರಪ್ಪ ಜಿಗಜಿನ್ನಿ ಒಬ್ಬರೇ ೧೪ ನಮೂನೆಯ ಹಾಡುಗಳನ್ನು ಹಾಡಿದ್ದಾರೆ. ಮುಂದಿನ ೬ ಬಗೆಯ ಹಾಡುಗಳನ್ನು ಧಾರವಾಡ ಜಿಲ್ಲೆಯ ಕುಂದಗೋಳ ಗ್ರಾಮದ ರುದ್ರಮ್ಮ ಎರಡು ಬಗೆಯ ಹಾಡುಗಳನ್ನು, ಲಕ್ಷ್ಮವ್ವಾ, ಮಲ್ಲವ್ವಾ, ಸುಶಿಲವ್ವಾ, ಗಂಗವ್ವಾ ಎನ್ನುವ ಹೆಣ್ಣುಮಕ್ಕಳು ತಲಾ ಒಂದೊಂದು ಬಗೆಯ ಹಾಡುಗಳನ್ನು ಹಾಡಿದ್ದಾರೆ. ಕ್ರಿಯಾಚರಣೆಗಳು ನಡೆಯುವ ಕ್ರಮದಲ್ಲಿಯೆ ಹಾಡುಗಳನ್ನು ಜೋಡಿಸಿದರೆ ಚೆನ್ನಾಗಿರುತ್ತಿತ್ತು. ಅದೊಂದು ಇಲ್ಲಿ ಕೊರತೆಯಾಗಿ ಕಾಣುತ್ತಿದೆ.

ಉಯ್ಯಾಲೆ ಹಾಡು

ತೂಗ ತೂಗಯ್ಯ ತೂಗೆನ್ನ ನೆನೆವ ನಿತ್ಯ ದೈವಾಗ ।ಪ।
ಆರೆಡೆಯಲೊಂದು ಕಂಬ ಸಮುದ್ರದ ಹೆಡೆಯಲೊಂದು ಕಂಬ
ದಡೆಗೆ ತಾವಾರ ಮುಟ್ಟಲೆ ಮುಗಿಲೆಡೆಗೆ ಚಂದ್ರಾಮ ಮೂಡಿ ಬರಲೆ
ಮುಕ್ಕಣ್ಣ ಧೀರನಾಡಿದ ಉಯ್ಯಾಲೆ ತೂಗ ತೂಗಯ್ಯ ।೧।

ತಂಗಿ ಕಾಲುಹಿಡಿಯುವ ಹಾಡು

ಬಾಗಿಲ ಬಾಗಿಲ ತೋಳ ಬಿಡತಂಗೀ ಕಾಲ ।ಪ।
ಅಂದರ ಚಿನ್ನಣ್ಣ ಚೆಂದರ ಚಿನ್ನಣ್ಣ ಜಾತ ಬುಕಿಟ ಹಚ್ಚಿ ತೊಳದೇನ
ಜಾತ ಬುಕ್ಕಿಟ ಹಚ್ಚಿ ತೊಳದೇನ ಅಣ್ಣನ ಕಾಲು। ಮುತ್ತಿನ ಸೆರಗೀಲಿ ಒರಸೇನ।
ಯಾತಕಿಡದೆವ್ವ ತಂಗಿ। ಎಂತಕ ಹಿಡಿದೆವ್ವ ತಂಗಿ। ಏನ ಕಾರಣಕ ಹಿಡಿದೆವ್ವ

ಭಿನ್ನ ಸಮುದಾಯಗಳ ಶುಭಕಾರ್ಯದ ಹಾಡುಗಳು :

ವಿಶೇಷವಾಗಿ ಕಾರವಾರ ಜಿಲ್ಲೆಯಲ್ಲಿ ವಾಸವಾಗಿರುವ ವಿಶೇಷ ಜನಸಮುದಾಯಗಳ ಶುಭಕಾರ್ಯದ ಹಾಡುಗಳ ಸಂಗ್ರಹ ನಡೆದಷ್ಟು ಉಳಿದೆಡೆ ಭಾಗದ ಕರ್ನಾಟಕದ ಯಾವ ಭಾಗದಿಂದಲೂ ಅಷ್ಟೊಂದು ಹಾಡುಗಳ ಸಂಗ್ರಹಗಳು ಹೊರಬಂದಿಲ್ಲವೆಂದು ತೋರುತ್ತದೆ. ಎಲ್. ಆರ್. ಹೆಗಡೆ, ಎನ್.ಆರ್.ನಾಯಕ, ಶಾಂತಿ ನಾಯಕ, ಟಿ. ಕೇಶವ ಭಟ್ಟ ಇವರೆಲ್ಲ ಮಾಡಿದ ಸಂಗ್ರಹದ ಕೆಲಸ, ಅಧ್ಯಯನದ ಕೆಲಸ ಕರ್ನಾಟಕದ ಉಳಿದೆಡೆ ಅಷ್ಟೊಂದು ಪ್ರಮಾಣದಲ್ಲಿ, ಶಿಸ್ತುಬದ್ಧವಾಗಿ ನಡೆದಿಲ್ಲ. ಕಾರವಾರ ಜಿಲ್ಲೆಯಲ್ಲಿ ವಾಸವಾಗಿರುವ ಹಾಲಕ್ಕಿ ಒಕ್ಕಲಿಗರು, ಮುಕುರಿಗಳು, ಹೊಲೆಯರು, ನಾಡವರು, ಹವ್ಯಕರು, ನಾಮಧಾರಿಗಳು, ಗಾಮೊಕ್ಕಲಿಗರು, ತೆಂಗಿನ ದೀವರು, ಅಂಬಿಗರು, ಹರಕಂತ್ರರು ಈ ಜನಸಮುದಾಯಗಳಲ್ಲಿ ಬಳಕೆಯಿರುವ ಶುಭಕಾರ್ಯದ ಸಂಪ್ರದಾಯಗಳ ಬಗ್ಗೆ ವಿಶೇಷವಾದ ಸಂಗ್ರಹಗಳು ಪ್ರಕಟವಾಗಿವೆ. ಅವುಗಳ ಗಾತ್ರ, ಗುಣಮಟ್ಟಗಳು ಚೆನ್ನಾಗಿವೆ. ಆದರೆ ಉಳಿದೆಡೆ ಸಂಗ್ರಹಗಳು ನಡೆದಿದ್ದರೂ ಸ್ಪಷ್ಟತೆ ಇಲ್ಲ. ಅನೇಕ ಬಗೆಯ ಹಾಡುಗಳೊಂದಿಗೆ ಅವುಗಳನ್ನು ಪ್ರಕಟಿಸಿದ್ದಾರೆ. ಅಲ್ಪಮಟ್ಟಿನ ಮಾಹಿತಿಗಳೂ ಅಲ್ಲಿಲ್ಲ. 'ಮಲ್ಲಿಗೆ ದಂಡೆ' ಬಿಟ್ಟರೆ ಈ ಶುಭಕಾರ್ಯದ ಹಾಡುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳೊಂದಿಗೆ ಪ್ರಕಟವಾದ ಹಾಡುಗಳ ಸಂಗ್ರಹಗಳಿಲ್ಲ. 'ಸರಸ ವಿರಸ', 'ಚಾಜದ ಹಾಡುಗಳು' ಇದ್ದರೂ ಸಂದರ್ಭಗಳ ಮಾಹಿತಿ, ತಕ್ಕಮಟ್ಟಿನ ಅಧ್ಯಯನಗಳು ಕಾಣಿಸುವುದಿಲ್ಲ. ಉತ್ತರ ಕರ್ನಾಟಕದಿಂದ ಅಷ್ಟಿಷ್ಟು ಕೆಲಸ ನಡೆದಿದ್ದರೂ ದಕ್ಷಿಣ ಕರ್ನಾಟಕದಿಂದ ಯಾವ ಬಗೆಯ ಪ್ರಯತ್ನಗಳೂ ನಡೆದಿಲ್ಲ. ಒಂದೆರಡು ಸಂಗ್ರಹಗಳಲ್ಲಿ ಶುಭಕಾರ್ಯದ ಹಾಡುಗಳು ಕಾಣಿಸುತ್ತಿದ್ದರೂ ಅಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ಈ ಕ್ಷೇತ್ರ ಇಷ್ಟೊಂದು ನಿರ್ಲಕ್ಷಕ್ಕೆ ಒಳಗಾಗಿದೆ ಎಂಬುದೇ ಆಶ್ಚರ್ಯದ ಸಂಗತಿ. ಉಳಿದ ಪ್ರಕಾರಗಳ ಬಗ್ಗೆ ಕಾಣುವ ಆಸಕ್ತಿ ನಮ್ಮ ಜೀವನದ ಬಹುಮುಖ್ಯ ಕ್ರಿಯಾಚರಣೆಗಳನ್ನೊಳಗೊಂಡ ಸಂಪ್ರದಾಯದ ಹಾಡುಗಳ ಸಂಗ್ರಹ ಮತ್ತು ಅಧ್ಯಯನಗಳು ನಿರ್ಲಕ್ಷಕ್ಕೆ ಒಳಗಾಗಿರುವುದು ಸೋಜಿಗವೆನಿಸುತ್ತದೆ.

೧೯೭೪ರಲ್ಲಿ ಪ್ರಕಟವಾದ ಎಲ್.ಜಿ.ಭಟ್ ಅವರ **'ಹಾಲಕ್ಕಿ ಪಾಯಸ'** ಹಾಲಕ್ಕಿ ಒಕ್ಕಲಿಗರ ಅನೇಕ ಬಗೆಯ ಹಾಡುಗಳ ಸಂಗ್ರಹವಾಗಿದೆ. ಇದರಲ್ಲಿ ಅಧ್ಯಾಯ–೨: 'ಮದುವೆಯ ಸಂದರ್ಭದ ಹಾಡುಗಳು' ಎಂದಿದೆ. ಇದರಲ್ಲಿ 'ಸೋದರಿಗೆ ಹೆಣ್ಣು ಕೊಡಬೇಕು', 'ಪನ್ನೆಯ ಹಾಡು', 'ಮದುವೆಯ ಹಾಡು', 'ಮದುಮಗನನ್ನು ಮೀಸಿದ ಹಾಡು'– ಎಂಬ ನಾಲ್ಕು ಹಾಡುಗಳು ಮಾತ್ರ ಇವೆ. ಈ ಹಾಡುಗಳು ಬೇರಡೆ ಇರುವ ಮದುವೆಯ ಹಾಡುಗಳಿಗಿಂತ ದೀರ್ಘವಾಗಿವೆ. ಈ ಹಾಡುಗಳ ಸಂದರ್ಭಗಳನ್ನೂ ಇಲ್ಲಿ ವಿವರಿಸಿಲ್ಲ. ಆದರೂ ಹಾಡುಗಳ ಹೆಸರು ಓದಿದರೆ ಇವುಗಳ ಸಂದರ್ಭಗಳು ತಿಳಿಯುವಂತಿವೆ.

'ಸೋದರಿಗೆ ಹೆಣ್ಣು ಕೊಡಬೇಕು' :

ಲಪ್ಪನ ಮನೆಯೆಂದು ಹೆಣ್ಣ ಕೇಲುಕೋಗಿ
ಲಪ್ಪನ ಮನೆಯಲ್ಲೆ ಕುಲುತಿ ॥
ಲತ್ತುಗಿ ನೀ ಬಾರೆ ಮಾಯ್ನಣ್ಣೆ ಸಮಿಯುವ
ಮಾತನಾಡುವ ಜಗುಲಿಗೆ ॥
ಮಾತನಾಡಲು ಜಗುಲಿಗೆ ಬಾಯೆಂದು
ಲಣ್ಣನ ತಂಗಿ ಕರೆದಲು॥
ಅರಗೋಡೆ ವಲಗೆ ನಿತ್ತಲೆ ಲತುಗ್ಯಮ್ಮ
ಕಣ್ಣು ಜಡಿದಲೆ ಪುರುಷಗೆ ॥
ಶೋದುರಕೆ ಹೆಣ್ಣ ಕೊಡುಕಿಲ್ಲ ಪುರುಷರೆ
ಶೋರೆ ಕೊಡಿಗಿಂತ ಕಡೆಗಕ್ಕು ॥
ಶೋರೆ ಕೊಡಿಗಿಂತ ಕಡೆಯಲೆ ಪುರುಷರೆ
ಶೋದುರಕೆ ಹೆಣ್ಣ ಕೊಡಬೇಡಿ ॥

ಈ ಹಾಡನ್ನು ಗಮನಿಸಿದರೆ ತಂಗಿ ಅಣ್ಣನ ಮನೆಗೆ ಹೆಣ್ಣು ಬೇಡಲು ಬಂದಾಗಿನ ಸಂದರ್ಭವೆಂದು ಅನಿಸುತ್ತದೆ. ಹಾಲಕ್ಕಿಗಳು 'ಅ' ಬದಲಾಗಿ 'ಲ' ಉಚ್ಚರಿಸುತ್ತಾರೆ. ಅದನ್ನು ಗಮನಿಸಿ ಓದುತ್ತ ಹೋದಂತೆ ಕನ್ನಡ ಒಂದು ಭಿನ್ನ ಭಾಷೆಯ ರೂಪ ನಮ್ಮ ಅರಿವಿಗೆ ಬರುತ್ತದೆ. ಈ ವಿಶೇಷ ಭಾಷೆಯ ಕೇವಲ ನಾಲ್ಕು ಹಾಡುಗಳು ಮಾತ್ರ ಇಲ್ಲಿವೆ.

ನಂತರ ಪ್ರಕಟವಾದುದು ಕಾರವಾರ ಜಿಲ್ಲೆಯ ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ. ಎಲ್.ಆರ್. ಹೆಗಡೆ ಅವರ **'ಮುಕರಿ ಮತ್ತು ಹೊಲೆಯರ ಪದಗಳು'** (೧೯೭೬) ಎಂಬ ಕೃತಿ. ಈ ಹಾಡುಗಳನ್ನು ಉತ್ತರ ಕನ್ನಡದ ಕುಮಟಾ, ಹೊನ್ನಾವರ ತಾಲೂಕಾಗಳಲ್ಲಿ ವಾಸವಾಗಿರುವ ಮುಕ್ರಿಗಳಿಂದ ಸಂಗ್ರಹಿಸಲಾಗಿದೆ. ಈ ಮುಕ್ರಿಗಳು ತಾವು ಹಾಲಕ್ಕಿಗೌಡರಿಗೆ ಸಮಾನವಾದವರು. 'ಮಧ್ಯವನ್ನು ಕುಡಿಯದ ಹಾಲಕ್ಕಿ ಗೌಡರು ಸೆರೆ ಕುಡಿಯುವ ತಮ್ಮ ಜಾತಿಯನ್ನು ಕೀಳಾಗಿ ಗಣಿಸಿದರೆಂದೂ ತಾವೂ ಗಂಜೀಗೌಡರೆಂದೂ ಹೇಳುತ್ತಾರೆ. ಇವರು

ತುಂಬಾ ಆಲಸಿಗಳಾದುದರಿಂದ ಆರ್ಥಿಕವಾಗಿ ತೀರ ಹಿಂದುಳಿದಿದ್ದಾರೆ' ಎಂಬ ವಿವರಣೆಯನ್ನು ಸಂಪಾದಕರು ಕೊಡುತ್ತಾರೆ.

ಈ ಕೃತಿಯಲ್ಲಿ ಮುಕರಿ ಮತ್ತು ಹೊಲೆಯರ ಸಮಾಜದಲ್ಲಿರುವ ಕಥನಕಾವ್ಯಗಳು, ಒನಕೆವಾಡುಗಳು, ಕೋಲಾಟದ ಪದಗಳು, ಬೇಸಾಯದ ಹಾಡುಗಳು, ಗುಮಟೆಯ ಪದಗಳು, ತುಂಡುಪದಗಳು ಮತ್ತು ಒಗಟಿನ ಹಾಡುಗಳು– ಎಂಬ ವಿವಿಧ ಪ್ರಕಾರದ ಹಾಡುಗಳ ಜೊತೆಗೆ 'ಮದುವೆಯ ಹಾಡುಗಳು' ಎಂಬ ಒಂದು ವಿಭಾಗವನ್ನೂ ಕೊಟ್ಟಿದ್ದಾರೆ. ಅದರಲ್ಲಿ ಮುಕ್ರಿಯ ಮದುವೆಯ ಹಾಡುಗಳು, ಹೊಲೆಯರ ಮದುವೆಯ ಹಾಡುಗಳು ಎಂಬ ಎರಡು ಭಾಗಗಳನ್ನು ಮಾಡಿದ್ದು, ಮುಕ್ರಿಯರ ೨೦ ಮದುವೆಯ ಹಾಡುಗಳನ್ನು ಕೊಟ್ಟಿದ್ದರೆ, ಹೊಲೆಯರ ಮದುವೆಯ ಕೇವಲ ೪ ಹಾಡುಗಳನ್ನು ಕೊಟ್ಟಿದ್ದಾರೆ. ಅವಶ್ಯವಿದ್ದಲ್ಲಿ ಹಾಡುಗಳ ಹಿನ್ನೆಲೆಯನ್ನು ವಿರಿಸಿದ್ದಾರೆ. ಡಾ. ಎಲ್. ಆರ್. ಹೆಗಡೆ ಅವರು ಒಂದು ಕಠಿಣ ಪದ ಕಾಣಿಸಿಕೊಂಡರೂ ಅದಕ್ಕೆ ಕೂಡಲೆ ಮುಂದೆ ಕಂಸಿನಲ್ಲಿ ಅದರ ಅರ್ಥ ಕೊಡುತ್ತಾರೆ. ಹೆಚ್ಚಿನ ಅರ್ಥ ಕೊಡಬೇಕೆಂದು ತಮಗೆ ಅನಿಸಿದರೆ ಅಡಟಿಪ್ಪಣಿಯಲ್ಲಿ ಕೊಡುತ್ತಾರೆ. ಸಾಕಷ್ಟು ದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹಾಡುಗಾರರ ಎಲ್ಲ ವಿವರಗಳನ್ನು ಒದಗಿಸಿದ್ದಾರೆ. ಒಂದು ವಿಶೇಷ ಪ್ರದೇಶ, ವಿಶೇಷ ಜನಾಂಗ ಆಡುವ ಕನ್ನಡ ಭಾಷೆ, ಕನ್ನಡ ಹಾಡುಗಳು ಇವೆಲ್ಲ ಈ ಕೃತಿಯ ಕೊಡುಗೆಗಳಾಗಿವೆ. ಇವನ್ನು ತಿಳಿದುಕೊಳ್ಳಲು ಸ್ವಲ್ಪ ಪ್ರಯತ್ನ ಮಾಡಬೇಕಾಗುತ್ತದೆಂಬುದು ನಿಜ. ಆದರೆ ಇವೆಲ್ಲ ಕನ್ನಡ ಭಾಷೆಯ ಸಂಸ್ಕೃತಿಯ ಸಂಪತ್ತನ್ನು ಹೆಚ್ಚಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ದೃಷ್ಟಿಯಿಂದ ಹೆಗಡೆ ಅವರ ಪ್ರಯತ್ನಗಳು ವಿಶೇಷವೆನಿಸುತ್ತವೆ.

ವೀಳ್ಯದ ಹಾಡು

ಸಂಪಾದಕರ ಟಿಪ್ಪಣಿ : ಲಗ್ನದ ಮೊದಲು ಹೆಣ್ಣಿಗೆ ಚಿನ್ನ ಇಡುವುದಕ್ಕೆ ಹೋಗುವಾಗ ಮದುಮಗನ ಅಕ್ಕ ಭಾವ ಮತ್ತು ಜೊತೆಗೆ ಹತ್ತು ಹನ್ನೆರಡು ಜನರು ಹೋಗುತ್ತಾರೆ. ಭಾವನು ಎಲೆ ಅಡಿಕೆ ಹೊತ್ತುಕೊಂಡು, ಮದುಮಗಳ ಮನೆಗೆ ಹೋಗಬೇಕು. ಅಲ್ಲಿ ರಾತ್ರಿಯಲ್ಲಿ ಮದುವಗಳಿಗೆ ಚಿನ್ನ ಇಡುವವಳು ಮದುಮಗಳ ಅಕ್ಕ. ನೆಂಟರ ಮನೆಯಲ್ಲಿ ಯೇಳಿ (ವೀಳ್ಯ) ಇಟ್ಟು, ರಾತ್ರಿ ಅಲ್ಲೇ ಉಳಿದು, ಮರುದಿನ ಬೆಳಿಗ್ಗೆ ತಿರುಗಿ ಬರುತ್ತಾರೆ.

ಆನೀ ಅಡಕೀ ಹೇರೀ ಕೊಡುರೀ ಸುಣ್ಣಾ ಹೇರಿ
ಮಾನಾಡೆಂಬೆತ್ತೂ ಯೆಲೀ ಹೇರೀ। ಬರುವಾಗ
ಅದು ಸಾಲಾ ನಮ್ಮಾ ಬಳಗಕ್ಕೇ।
ಶೀತಾಳಿ ಕೊಡಿ ಹಿಡುದೇ ರಾತುರಿ ನವ್ ಬಂದಽವೇ
ಸೀತೇ ವಳ್ಳವನಾಽ ಮಗುಳೀಗೆ
ಸೀತೇ ವಳ್ಳವನಾಽ ಮಗುಳೀಗೆ ನಾವ್ ಬಂದೇವೇ
ಜ್ಯೋತಿ ಮಾಣಿಕದಾ ಕಡಗವೇ। (ಕಡಗಾ) ನಾವ್ ತಂದೇವೇ

ಪುಣ್ಣೊಳ್ಳರು ಮಗಳೇ ಕಯೀ ಕೊಡು। ಗಂಡರ ಮನಿಯಾ
ಚಿನ್ನ ಬಂದದಿಯೇ ಇಡವಾಕೇ।

'ದೂರುವ (ಜರಿಯುವ) ಹಾಡುಗಳು' ತುಂಬಾ ಸ್ವಾರಸ್ಯಕರವಾಗಿವೆ :

ವಧುವಿಗೆ ವಸ್ತ್ರ ಕೊಟ್ಟಿದ್ದನ್ನು ಜರೆವ ಹಾಡು :

ಗಾಳಿಗೆ ಹಾರಿದ ಚಣ್ಣಾ ದೂಳಿಗೆ ಮಾಸಿದ ಬಣ್ಣಾ
ಇದು ಹೆಂತಾ ಬಣ್ಣಾ? ಹಳೀ ಬಣ್ಣಾ॥ ಮುದುವಣ್ಣಾ
ಮಾರಿಗೆ ಮೂರು ಕಾಸೂ ಹಡಿಲಿಲ್ಲ।
ಗಾಳಿಗೆ ಹಾರಿದ ಬಣ್ಣಾ ದೂಳಿಗೆ ಮಾಸಿದ ಬಣ್ಣಾ
ಬಿಚ್ಚೀ ಬೀರಿದರೇ ಬೀದಿಸಣ್ಣಾ। ಮದುವಣ್ಣಾ
ಮಾರಿಗೆ ಮುರು ಕಾಸೂ ಹಡಿಲಿಲ್ಲ।

ಇದಕ್ಕೆ ಗಂಡಿನವರ ಉತ್ತರ :

ಹತ್ವರಸೀನಾಗಿದ್ದೇ ಬೂಮೀ ಕೆಲಸನೆ ಮಾಡೀ
ಅದರಾಗೆ ಹತ್ವರವಾ ಗಳಸೀದೇ ।(ಗಳಸಿದ) ನನ್ನ ತಮ್ಮಾ
ಕೂತೀ ತಂದಿದನೇ ಹೊಸಬಣ್ಣಾ । ಹೆಣ್ಣಿನ ತಂದೆ
ಈ ಬಣ್ಣಕ್ಕೆಂತಾ ಹಳೂ ಬಂತೇ? ಹೆಣ್ಣಿನ ತಾಯೆ
ಉಡುವಳು ಇನ್ನೆಟ್ಟೂ ಚೆಲುವೀಯೆ?

ಸಂಪಾದಕರು ಕೊಡುವ ಮದುವೆಯ ಇಪ್ಪತ್ತು ನಮೂನೆಯ ಹಾಡುಗಳನ್ನು ಗಮನಿಸಿದರೆ ಸಾಮಾನ್ಯವಾಗಿ ಎಲ್ಲ ಕಡೆ ಇರುವ ಕೆಲವೊಂದು ಸಂಪ್ರದಾಯಗಳೇ ಈ ಮುಕ್ರಿಗಳಲ್ಲೂ ಇರುವಂತೆ ತೋರುತ್ತದೆ. ಇನ್ನು ಕೆಲವೊಂದು ವಿಶೇಷವಾಗಿವೆ. ಮದುವೆಯ ಪ್ರತಿಯೊಂದು ಹಂತದಲ್ಲೂ ಹಾಡುಗಳಿರುತ್ತವೆಂಬುದು ಎಲ್ಲ ಕಡೆ ಕಾಣಿಸುತ್ತದೆ. ಕರ್ನಾಟಕದ ತುಂಬ ಪ್ರಚಲಿತದಲ್ಲಿರುವ ಮದುವೆಯ ಎಲ್ಲ ಹಂತದ ಹಾಡುಗಳನ್ನು ಇನ್ನೂವರೆಗೆ ಯಾರೂ ವಿವರಣೆಗಳ ಸಹಿತ ಕೊಡದೇ ಇರುವಾಗ ಎಲ್. ಆರ್. ಹೆಗಡೆ ಒಂದು ಸಣ್ಣ ಸಮುದಾಯದಲ್ಲಿರುವ ಮದುವೆಯ ಎಲ್ಲ ಹಂತಗಳ ೨೦ ಸಂದರ್ಭಗಳ ಇಪ್ಪತ್ತು ಹಾಡುಗಳನ್ನು ಕ್ರಮವಾಗಿ ಕೊಟ್ಟಿರುವುದು ಸಂಪಾದಕರ ತಿಳುವಳಿಕೆಯನ್ನು ವ್ಯಕ್ತಪಡಿಸುತ್ತದೆ. ಅವರು ಕೊಡುವ ಇಪ್ಪತ್ತು ಸಂದರ್ಭದ ಹಾಡುಗಳ ಶೀರ್ಷಿಕೆಗಳು ಹೀಗಿವೆ: ೧. ವೀಳ್ಯದ ಹಾಡು, ೨. ಪನ್ನೆ(ಕ್ಷೌರ) ಮಾಡುವಾಗಿನ ಹಾಡು, ೩. ಅತ್ತಿಯ ತೊಂಡಿಲ ಕಟ್ಟುವಾಗಿನ ಹಾಡು, ೪. ದಿಬ್ಬಣ ಹೊರಟ ಮೇಲೆ ಹೇಳುವ ಹಾಡು, ೫. ದಿಬ್ಬಣ ದಾರಿಯಲ್ಲಿ ಹೋಗುವಾಗ ಹೇಳುವ ಹಾಡುಗಳು, ೬. ವರನಿಗೆ ಉಪದೇಶ, ೭. ಮದುವೆಯ ಹೆಣ್ಣಿನ ಮನೆಯಲ್ಲಿ ಹೇಳುವ ಹಾಡು, ೮. ವರನು ಮಂಟಪದಲ್ಲಿ ಕೂತಾಗ ಹೇಳುವ ಹಾಡು, ೯. ಹೆಣ್ಣಿಗೆ ಉಂಗುರ ಇಡುವ ಹಾಡು, ೧೦. ಧಾರೆಯೆರೆವ ಹಾಡು, ೧೧. ವಧು ಸಣ್ಣವೆಂದ ಹಾಡು, ೧೨. ಬಳುವಳಿ ಹಂಚುವ ಹಾಡು, ೧೩. ದೂರುವ ಹಾಡುಗಳು, ೧೪. ಮದುವೆಯ ಮರುದಿನ ಮದುಮಗನೆದ್ದ ಮೇಲೆ ಹೇಳುವ ಹಾಡು, ೧೫. ಮುಖ

ತೊಳೆದ ಸಂದರ್ಭದ ಹಾಡು, ೧೬. ದಿಬ್ಬಣ ತಕ್ಕೊಂಡು ವರನು ಮನೆಗೆ ಹೋಗುವಾಗ ಹೇಳುವ ಹಾಡು, ೧೬. ಬಾಸಿಂಗ ಕಟ್ಟುವ ಹಾಡು, ೧೭. ದಿಬ್ಬಣ ವರನ ಮನೆಗೆ ಹೊರಟಾಗಿನ ಹಾಡುಗಳು, ೧೮. ಗೃಹ ಪ್ರವೇಶದ ಹಾಡು, ೧೯. ಹೂ ತರುವ ಹೆಣ್ಣಿನ ಕಡೆಯ ಹೆಂಗಸರ ಹಾಡು, ೨೦. ಹೆಣ್ಣಿನ ಕಡೆಯವರು ಹಿಂತಿರುವಾಗಿನ ಹಾಡು.

ದಕ್ಷಿಣ ಕರ್ನಾಟಕದಲ್ಲಿ ಎಲ್.ಆರ್. ಹೆಗಡೆ ಅವರ ನಂತರ ಕೆಲಸ ಮಾಡುತ್ತಿರುವವರು ಡಾ. ಎನ್.ಆರ್.ನಾಯಕ ಅವರು. ಅವರು **'ಕೂಸಾಯ್ತು ನಮ್ಮ ಕೊಮರಾಗೆ'**(೧೯೮೩) ಎಂಬ ೪೦೦ ಪುಟಗಳಿಗೂ ದೊಡ್ಡದಾದ ಮದುವೆಯ ಹಾಡುಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಕರ್ನಾಟಕದಲ್ಲಿ ಮದುವೆಯ ಹಾಡುಗಳಿಗೆ ಸಂಬಂಧಿಸಿದಂತೆ ಇಷ್ಟೊಂದು ದೊಡ್ಡ ಕೆಲಸ ಮಾಡಿದವರು ಇವರೊಬ್ಬರೇ ಎನಿಸುತ್ತಿದೆ. ಕಾರವಾರ ಜಿಲ್ಲೆಯಲ್ಲಿ ವಿಶೇಷವಾಗಿ ಹೊನ್ನಾವರ ತಾಲೂಕಿನಲ್ಲಿ ವಾಸಿಸುವ-ನಾಡವರು, ಹವ್ಯಕರು, ನಾಮಧಾರಿಯವರು, ಗಾಮೊಕ್ಕಲಿಗರು, ಹಾಲಕ್ಕಿ ಒಕ್ಕಲಿಗರು, ನಾಮಧಾರಿಗಳು, ತೆಂಗಿನದೀವರು, ಅಂಬಿಗರು, ಹರಕಂತ್ರರು ಈ ಒಂಬತ್ತು ಜನಾಂಗಗಳ ಮದುವೆಯ ಹಾಡುಗಳು ಇಲ್ಲಿವೆ. ೪೫ ಪುಟಗಳ ಸುದೀರ್ಘ ಪ್ರಸ್ತಾವನೆ ಬರೆದಿದ್ದಾರೆ. ಈ ಎಲ್ಲ ಹಾಡುಗಳನ್ನು ೧೯೬೮ ರಿಂದ ೧೯೭೦ರ ಸುಮಾರಿನಲ್ಲಿಯೇ ಸಂಗ್ರಹಿಸಲಾಗಿದೆ ಎಂದು ಸಂಪಾದಕರು ಬರೆದುಕೊಂಡಿದ್ದಾರೆ. ಪ್ರಕಟವಾಗಲು ಸಹಜವಾಗಿಯೇ ತಡವಾಗಿದೆ.

ನಾಡವರ ಮದುವೆಯ ೩೫ ನಮೂನೆಯ ಹಾಡುಗಳು, ಹವ್ಯಕರ ೨೫ ನಮೂನೆಯ ಹಾಡುಗಳು, ನಾಮಧಾರಿಗಳ ೩೩ ನಮೂನೆಯ ಹಾಡುಗಳು, ಗಾಮೊಕ್ಕಲಿಗರ ೨೩ ನಮೂನೆಯ ಹಾಡುಗಳು, ಹಾಲಕ್ಕಿ ಒಕ್ಕಲಿಗರ ೩೬ ನಮೂನೆಯ ಹಾಡುಗಳು, ನಾಮಧಾರಿಗಳ ೨೦ ನಮೂನೆಯ ಹಾಡುಗಳು, ತೆಂಗಿನ ದೀವರ ೧೧ ನಮೂನೆಯ ಹಾಡುಗಳು, ಅಂಬಿಗರ ೧೪ ನಮೂನೆಯ ಹಾಡುಗಳು, ಹರಕಂತ್ರರ ೯ ನಮೂನೆಯ ಹಾಡುಗಳು- ಈ ಕೃತಿಯಲ್ಲಿವೆ. ಒಟ್ಟಿಗೆ ೯ ಜನಸಮುದಾಯಗಳ, ೨೦೬ ಬಗೆಯ ಹಾಡುಗಳು ಇಲ್ಲಿರುವುದು ಸಹಜವಾಗಿಯೇ ಆಶ್ಚರ್ಯ ಮೂಡಿಸುತ್ತದೆ. ಇಷ್ಟೊಂದು ಜನಸಮುದಾಯದ ಹಾಡುಗಳನ್ನು, ಕ್ರಮವರಿತು ಜೋಡಿಸಿ ಕೊಟ್ಟಿದ್ದಾರೆ. ಒಂದು ಹಾಡಿನಿಂದ ಇನ್ನೊಂದು ಹಾಡಿಗೆ ಮುಂದುವರೆದಂತೆ ಮದುವೆಯ ಮುಂದುವರೆದ ಕ್ರಮ ತಿಳಿಯುತ್ತ ಹೋಗುತ್ತದೆ. ಎನ್. ಆರ್. ನಾಯಕ ಅವರ ಶ್ರಮ, ತಿಳುವಳಿಕೆ, ಸಮಾಧಾನದ ಕೆಲಸಗಳು ಗಮನ ಸೆಳೆಯುತ್ತವೆ. ಒಂದು ಜಿಲ್ಲೆಯಿಂದ ಇಷ್ಟೊಂದು ಬಗೆಯ ಜನಸಮುದಾಯಗಳ ಮದುವೆಯ ಹಾಡುಗಳು ಸಂಗ್ರಹಗೊಂಡು, ಪ್ರಕಟಿಸಿರುವುದು ಸ್ತುತ್ಯರ್ಹವಾದ ಕೆಲಸವಾಗಿದೆ.

ಪ್ರಸ್ತಾವನೆಯಲ್ಲಿ ೪೬ ಸಂದರ್ಭಗಳ ವಿವರಗಳನ್ನು ಕೊಟ್ಟಿದ್ದಾರೆ. ಅಕ್ಷರ ಉಚ್ಚಾರಣೆಯ ವ್ಯತ್ಯಾಸಗಳನ್ನು ಗುರುತಿಸಿ, ಯಾವ ಯಾವ ಅಕ್ಷರಗಳನ್ನು ಹೇಗೆ ಉಚ್ಚರಿಸುತ್ತಾರೆಂದು ವಿವರಿಸಿದ್ದಾರೆ. ಹಾಡು ಹೇಳಿದವರ ವಿವರಗಳನ್ನು ಆಯಾ ವಿಭಾಗದ ಮೊದಲಿಗೆ ದಾಖಲಿಸಿದ್ದಾರೆ. ಕೊನೆಯಲ್ಲಿ ಒಂದು ಶಬ್ದಾರ್ಥ ಕೋಶವೂ ಇದೆ. ತಾವು ಸಂಗ್ರಹಿಸಿದ, ಅಲ್ಪಮಟ್ಟಿಗೆ ಅಧ್ಯಯನ ಮಾಡಿದ ಇಷ್ಟೊಂದು ಜನಾಂಗಗಳ ಮದುವೆಯ

ಸಂಪ್ರದಾಯಗಳನ್ನು ಗಮನಿಸಿ ಸಂಪಾದಕರು ಹೀಗೆ ಬರೆಯುತ್ತಾರೆ: "ನಮ್ಮಲ್ಲಿ ಪ್ರಚಲಿತವಿರುವ ವಿವಾಹ ಪದ್ಧತಿಗಳ ವಿಧಿವಿಧಾನಗಳು, ನಮ್ಮ ವಿಭಿನ್ನ ಕುಟುಂಬ ಪದ್ಧತಿಗಳು, ಇವೆಲ್ಲ ಈಗಿದ್ದಂತೆಯೇ ಇದ್ದುವೆನ್ನಲಾಗದು. ಮುಂದೆ ಇರಬಹುದೆಂದು ಊಹಿಸಲಿಕ್ಕೂ ಆಗದು. ಅವರವರ ಆಶೆ ಆಕಾಂಕ್ಷೆಗಳು ಬದಲಾದಂತೆ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ನೈತಿಕ ಸ್ಥಿತ್ಯಂತರಗಳು ತಲೆದೋರಿದಂತೆ ಅವು ಭಿನ್ನಸ್ವರೂಪ ಪಡೆಯುತ್ತವೆ. ಅದರಿಂದಾಗಿಯೇ ನಮ್ಮ ವಿವಾಹ ಪದ್ಧತಿಗಳಲ್ಲಿ ಅದರ ಆಚರಣೆಯ ವಿಧಿವಿಧಾನಗಳಲ್ಲಿ ಎಷ್ಟೊಂದು ಭಿನ್ನತೆಗಳು. ಮನುಷ್ಯನ ವಿಭಿನ್ನ ಮನೋಭೂಮಿಕೆಗಳ ಪರಿಣಾಮವಾಗಿ ಭಿನ್ನ ಬಗೆಯ ವಿವಾಹ ಪದ್ಧತಿಗಳು ಬಳಕೆಯಲ್ಲಿ ಬಂದವು" (ಪೀಠಿಕೆ, ಪು.೩).

ಇಲ್ಲಿಯೇ ಎನ್.ಆರ್. ನಾಯಕ ಅವರಿಂದ ಸಂಪಾದನೆಗೊಂಡ ಇನ್ನೊಂದು ಪುಸ್ತಕದ ಬಗ್ಗೆ ಬರೆಯುವುದು ಅವಶ್ಯವೆನಿಸುತ್ತದೆ. **'ಗಾಮೊಕ್ಕಲ ಹಾಡುಗಳು'** (೨೦೦೪) ಎಂಬುದು ಒಂದು ಜನಾಂಗದಿಂದ ಸಂಗ್ರಹಿಸಿದ ಹಾಡುಗಳ ಸಂಗ್ರಹವಾಗಿದೆ. 'ಕೂಸಾಯ್ತು ನಮ್ಮ ಕೊಮರಾಗೆ' ಸಂಗ್ರಹದಲ್ಲಿ ಗಾಮೊಕ್ಕಲ ಮದುವೆಯ ಹಾಡುಗಳನ್ನು ಮಾತ್ರ ಸಂಗ್ರಹಿಸಿಕೊಟ್ಟಿದ್ದ ನಾಯಕ ಅವರು ಇಲ್ಲಿ ಗಾಮೊಕ್ಕಲುಗಳ ಎಲ್ಲ ಶುಭಕಾರ್ಯದ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಜೊತೆಗೆ 'ಲೋಕ ರೀತಿ ನೀತಿಯ ಹಾಡುಗಳು' ಹಾಗೂ ಆರಾಧನೆಯ ಹಾಡುಗಳು ಮತ್ತು ಭತ್ತ ಮೆರೆಯುವ ಹಾಗೂ ಇತರ ಒಂದೆರಡು ಬಗೆಯ ಹಾಡುಗಳೂ ಇಲ್ಲಿವೆ. ಅಂದರೆ ಗಾಮೊಕ್ಕಲುಗಳಲ್ಲಿ ಪ್ರಚಾರದಲ್ಲಿರುವ ಪ್ರಮುಖ ಹಾಡಿನ ಬಗೆಗಳನ್ನು ಇಲ್ಲಿ ಕಾಣಬಹುದಾಗಿದೆ. ಕೆಲವು ಉದಾಹರಣೆಗಳು ಹೀಗಿವೆ:

ಶುಭಕಾರ್ಯದ ಹಾಡುಗಳನ್ನು 'ಜೀವನಾವರ್ತನ ಹಾಡುಗಳು' ಎಂದಿದ್ದು– ಮದುವೆ, ಶೋಭನ (ದಿಂಡು), ಬಯಕೆ, ಬಾಳಂತಿ, ಬಾಳಂತಿ (ಅಮೆಪೂಜೆ), ತೊಟ್ಟಿಲು ಕಟ್ಟುವುದು, ಹೆಸರಿಡುವುದು, ತೊಟ್ಟಿಲು ತೂಗುವುದು, ಚ್ವೋಳಂಗಿ(ಜಡೆ ತೆಗೆಯುವ, ಕಿವಿ ಮುರು ಚುಚ್ಚುವ) ಈ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿ ಈ ಎಲ್ಲ ಸಂದರ್ಭಗಳನ್ನು ವಿವರಿಸಿದ್ದಾರೆ. ಹೀಗಾಗಿ ಈ ಹಾಡುಗಳನ್ನು ಅರ್ಥೈಸಿಕೊಳ್ಳಲು ಅನುಕೂಲವಾಗುತ್ತದೆ. ಇಲ್ಲಿಯ ಹಾಡುಗಳ ಛಂದಸ್ಸು ತ್ರಿಪದಿಯಾಗಿರುವುದು ವಿಶೇಷ. ಮದುವೆಯ ೫೦ ಬಗೆಯ ಹಾಡುಗಳು ಈ ಕೃತಿಯಲ್ಲಿ ಕ್ರಮವಾಗಿ ಕೊಟ್ಟಿರುವುದು ಒಂದು ವಿಶೇಷ ಸಂಗತಿ. ಇಷ್ಟೊಂದು ಬಗೆಯ ಕ್ರಿಯಾಚರಣೆಗಳು ಮದುವೆಯೊಂದರಲ್ಲೇ ನಡೆಯುವುದು ಗಮನಾರ್ಹ ಸಂಗತಿಯಾಗಿದೆ.

೧. ಮದುವೆ ತಯಾರಿ :

ಅಕ್ಕಿ ಗೇರೂಕೇ ಮುತ್ತನ ಗೆರಸೀ ಬೇಕೇ
ತುಪ್ಪ ತುಂಬಲಿಕೆ ಕೊಡ ಬೇಕೆ । ಅಣ್ಣನಾ
ಚುಚ್ಚೀಲ ಮಗನಾ ಮದೋವೀಗೇ।

೧೨. ಮದುಮಗನನ್ನು ಸಿಂಗರಿಸುವುದು:

ನೀರ್‌ಮಿಂದ್ ಬಾಲಗೆ ಬಂದದೆ ಜವಳೀ ದಿಂಡು
ಮೂಡಣಾರ ಜೆಣರ ಜವಳೀಯೇ

ಮೂಡಣರ ಜೀಣರ ಜವಳಿದಿಂದೀನಲ್ಲೇ
ಮಿಯ್ಯಾ ಚಳಿಯಿದ್ದೇ ನೆರದುಡೋ।

೧೮. ದಿಬ್ಬಣ ಹೊರಡುವ ಸಿದ್ಧತೆ :

ಉಂಬರುಣುತಿರಲಿ ದಂಡಿಗೆ ಸುಂಗರಗಯ್ರೆ
ಕೊಂಬೀಗೆ ಮುತ್ತು ಒಲೀಯಾಕೆ । ತಮ್ಮಯ್ಯ
ದಿಬ್ಬಣ ಸಂಗಡಲೆ ಸವನಾದೆ

೨೧. ಹೆಣ್ಣು ಕೇಳಲು ಹೋಗುವುದು :

ಆನೀ ಹತ್ತಿಕಂಡಿ ಜಾಣರ ಕೂಡಿಕಂಡೇ
ಆನೀ ಮ್ಯೆನ್ ಹಣವಾ ಹೊಯೀಕಂಡಿ। ಮಾರಯ್ರು
ಹೆಣ್ಣಾ ಕೇಳಲಕೆ ನೆಡದಾರೆ

೨೭. ಧಾರೆಯೆರೆಯುವುದು :

ಬಲಕ್ನ ತೊಡಿಮ್ಯೆನೆ ಅಳಿಯ ಎಡಕನ ತೊಡಿಮ್ಯೆನೆ ಮಗಳು
ಸಿರಿಗಂಗೆ ಗೌರೀ ತೊಡಿಯಾ ಮ್ಯೆನೆ।ಕೂರಿಸಕಂಡಿ
ಜಯ್ ವಂದೇ ದಾರೀ ಎರದಾನೆ

೪೨. ಹೆಣ್ಣೊಪ್ಪಿಸುವುದು :

ಮಾಳೂಗಿಯೊಳಗೆ ಹಸಗರದಸಿಯಲ್ಲಿ
ಎಸಳು ನೀಲದಾ ಮಣಿಯಿಟ್ಟೆ ಕರೆದಾರೆ
ಅರಸು ದೇವಿಂದ್ರ ಅಳೀಯಾನ

ಜಂಗಮ್ಮರ ಕುಲದ ಲಿಂಗ್ಮಂತ ಮದಮಣಿಗ
ಗಂಡ ಹೆಂಡತಿಗೆ ಸೆರೋಮಣೆ । ಮೆನೆಕೂತಿನ್ನು
ಗಂಗಿಗೆ ಪರಮೇಸ್ರ ಒಲೀದಾನೆ

೪೫. ಮನೆ ತುಂಬಿಸುವುದು :

ಸೊಸಿಯಾ ಬಳವರಿ ಆನೀಮ್ಯೆನ್ ಬರತದೆ
ಆಲದ ಮರದೊಮ್ಮೆ ಗಣೀಲಂದೆ।ತಾಯವ್ವ
ಮುಂದನ ಮಾಳುಗಿಯಾ ಸವನೀಸೆ

೫೩. ಮುಕ್ತಾಯ :

ಮಂಗೀಲಾರೂದಿನ ಮಂಗಲ ಮೂರು ದಿನೆ
ಮಂಗೀಲಾಲದಾ ಮರದಿನೆ । ತಮ್ಮನಾ
ಮಂಗೀಲಾ ಹಾಡ ಮುಗೀಸುವೋ

ಸ್ವಲ್ಪ ಲಕ್ಷಕೊಟ್ಟು ಓದಿದರೆ ಭಾಷೆ ತಿಳಿಯುತ್ತದೆ. ತ್ರಿಪದಿ ಛಂದಸ್ಸು ತೊಂದರೆಯೇನೂ ಕೊಡುವುದಿಲ್ಲ.

ಶೋಭನ (ದಿಂಡು):
ಪಟ್ಟೀ ಉಟ್ಟಾಳೆ ಮುತ್ತನ ಬಟ್ಟಿಟ್ಟಾಳೆ
ಗಟ್ಟೋ ಮಲ್ಲುಗಿಯಾ ಮುಡಿದಾಳೆ ।ರುಕ್ಮಿಣಿ
ಪಗಡ್ಯಾಟಕ್ಹೋಗಿ ಕುಳತಾಳೆ।

ಹೊಸಸುದ್ದೀ ಕೇಳಾನೆ ಕುಸ್ಲ ನೆಗ್ಗೀಯಾಡಾನೆ
ಪಲನೋಡಿ ಸಿಂಗರವಾ ಜಗದಾನೆ। ಅಪ್ಪಯ್ಯ
ಮಡದೀಯಾ ಕರದೇ ಕೊಡವಾನೆ।

ದುಮಡೂಮಲ್ಲುಗಿಯಾ ದಂಡಿ ಕಟ್ ಮುಡಿಯಂಬ
ಗಂಡ ಬೂಪತಿಯ ಒಡನಲ್ಲೀ। ಕೂರಸಗಂಡಿ
ಮರಿಯಂಬಾ ನಿನ್ನಾ ತವರೂರಾ ।

ಬಯಕೆ :
ಹೊನ್ನ ಹಣಗೀ ತನ್ನಿ ಎಣ್ಣೀ ಕಂದಲ ತನ್ನಿ
ಕನ್ನಡನಂಬು ಮಣಿಯಾ ತಂದೇ।
ಕನ್ನಡ ನಂಬ್ ಮಣಿ ತನ್ನಿ ಈ ಮನೆಯಾ
ಕನ್ನೆ ನಮ್ಮೊಡನೆ ಕರುತನ್ನಿ । ನಾವಿನ್ನು
ಬಾಚೀ ಕಟ್ಟೂವೊ ಸೆರಮುಡಿ ।ಬಾಮಾಕೆ
ಎಳಿಯೋ ಸಿಂಗರವ ಮುಡಿಸೂವೆ

ಬಾಳಂತಿ :
ಬೆನ್ನು ಬೈನಿಯೆಂದು ಹೆಂದು ಅಮ್ಮನಿಗೆ ಹೇಳೀತೆ
ರನ್ನದ ಗ್ವೊಡೀ ಮರಿಯಲ್ಲಿ। ನಿಂದೀ ಕಂಡಿ
ಬಣ್ಣವ ಬಿಡಸಿ ಬದಲೂಡೆ

ಬಾಳಂತಿ (ಅಮೆಪೂಜೆ):
ಪಟ್ಟೀ ಉಟ್ಟಾರೇಳಿ ಮುತ್ತಾ ಮಡದಾರೇಳಿ
ಅಪ್ಪನಾ ಮನಿಯಾ ಮಗಳ್ದೀರೆ।
ಅಪ್ಪನಾ ಮನಿಯಾ ಮಗಳ್ದೀರಯ್ಯೊ ಮಂದಿ
ಹೋಗ್ಬರುವ ಬಚ್ಚಲರಮನಗೆ ।

ತೊಟ್ಟಿಲು ಕಟ್ಟುವುದು :
ಹೆಣ್ಣೀನಣಾದೀರು ಹೊನ್ನಿಲಿ ಸಮವಂತರು
ಹೊನ್ನೀಗನ್ನೆರಡು ತಲೆ ದಿಂಬೆ।
ಹೊನ್ನೀಗನ್ನೆರಡು ತಲೆದಿಂಬನ ತೊಟ್ಟಲವಾ
ಅಣ್ಣದೀರ್ ಕೊಟ್ಟಿಕಳಗಾರೆ।

ಅಣ್ಣಾದೀರ್ ಕೊಟ್ಟೀ ಏನಂದೀ ಕಳಗಾರೆ
ತಂಗೀಕೂಡ ಮಗನಾ ಒರಗೀಸೆ।

ಹೆಸರಿಡುವುದು :
ಮುಂಚ್ ಹುಟ್ದ ಕಂದಂಗೆ ದೈವ್ರ ಹೆಸ್ರ ಇಡ್ವಾನಿ
ಮರ್ಚೀಲ ಗಂಡೂ ಕೊಮರಾನೆ । ಹುಟ್ಟಿದರೆ
ಮನಿಯಜ್ಜನ್ಹೆಸ್ರ ಇಡವಾನೆ

ಹೆಸರಿಡ್ವೊ ಅಜ್ಜಂದ ಹೆಸರಿಡ್ವೊ ಅಜ್ಜೀದ
ಹೆಸರಿಡ್ವೊ ಹೆತ್ತಾ ಹೆರಿಯೋರ್ದಾ।

ತೊಟ್ಟಿಲು ಕಟ್ವಾರೆ ತೊಟ್ಲಗಿರ್ಗ ಹಾಸರೆ
ಅತ್ತಗ ಮಯ್ದಿನಿಯಾ ಬರಹೇಳಿ। ನಮ್ಮನಿಯಾ
ಗುಂಡಪ್ಪಗೆ ಸೈಸೀ ಇಡವಾಕೆ

ತೊಟ್ಟಿಲು ತೂಗುವುದು :
ನಾಗರ ಹೆಡಿಮ್ಯನೆ ನಾರಾಯ್ನ ಒರುಗಾನೆ
ನಾರೀಯರೆಲ್ಲಾ ಲೇಸಾಗಿ ತೊಟ್ಟೀಲ ತೂಗೀರೆ
ತೂಗೀರೆ ಕಂದನ ತೂಗೀರೆ ಬಾಲನ
ತೂಗೀರೆ ಲಚ್ಚುತಲಾನಂದನ

ಚೊಳಂಗಿ (ಜಡೆ ತೆಗೆಯುವ, ಮುರು ಚುಚ್ಚುವ ಕಾರ್ಯಕ್ರಮ) :
ಹೊತ್ತರ ಮುಂಚೆದ್ದು ಕಾಲು ಮಾರಿ ತೊಳದೆ
ದೇವರಿಗೆ ಕಯ್ಯಾ ಮುಗಿದಾಳೆ।
ದೇವರಿಗೆ ಕಯ್ಯಾ ಮುಗದಾಳೆ ತಂಗವ್ವಿ
ಮಾಳೂಗೀ ಒಳಗೆ ನೆಡದಾಳೆ ।

ನಾಳೆ ನಮ್ಮನಗೆ ಬರಬೇಕೋ ನಮ್ಮನಿಯಾ
ಕಂದನಾ ಸೂರ ಗೆಯಿಬೇಕೊ।
ಕಂದನಾ ಸೂರ ಗೆಯಿಬೇಕೊ ಅಂದೇಳೆ
ತಾಯವ್ವಿ ಒಡನೋಗಿ ನಿಲೋವಾಳೆ।

೧೯೮೬ರಲ್ಲಿ ಪ್ರಕಟವಾದ ಪ್ರೊ. ಟಿ.ಕೇಶವಭಟ್ಟ ಅವರ **'ಹವ್ಯಕರ ಶೋಭಾನೆಗಳು'** ಹವ್ಯಕ ಬ್ರಾಹ್ಮಣ ಸಮಾಜದಲ್ಲಿರುವ ಮದುವೆ ಮುಂತಾದ ಸಂಪ್ರದಾಯ ಹಾಡುಗಳ ಬಹುದೊಡ್ಡ ಸಂಪುಟ. ಆರುವರಿನೂರು ಪುಟಗಳಿಗೂ ಮಿಕ್ಕು ಇರುವ ಈ ಕೃತಿಯಲ್ಲಿ ಎರಡು ಭಾಗಗಳಿವೆ. ಒಂದನೆಯ ಭಾಗ ೪೭೪ ಪುಟಗಳಷ್ಟು ಶೋಭಾನೆ ಹಾಡುಗಳಿದ್ದು, ಎರಡನೆಯ ಭಾಗ (೪೭೫–೬೬೪) ಪರಾಮರ್ಶೆ ಎಂದಿದೆ. ಯುಜಿಸಿ ಧನಸಹಾಯದಿಂದ ಕೈಕೊಂಡ ಒಂದು ಯೋಜನೆಯಡಿ ತಯಾರಿಸಿದ ಕೃತಿ ಇದು. ಇಲ್ಲಿಯ ಹೆಚ್ಚಿನ ವಕ್ತಾರರು

ಕಾರವಾರ ಜಿಲ್ಲೆಗೆ ಸಂಬಂಧಿಸಿದವರು. ಬೆರಳೆಣಿಕೆಯಷ್ಟು ವಕ್ತಾರರು ಶಿವಮೊಗ್ಗ ಮತ್ತು ಬೇರೆಡೆಯಿಂದಲೂ ಇದ್ದಾರೆ. ಏನಿದ್ದರೂ ಇದು ಕಾರವಾರ ಜಿಲ್ಲೆಯ ಕೊಡುಗೆಯೇ ಆಗಿದೆ. ಮದುವೆಯ ಹಾಡುಗಳು (೧೫೪), ಜನ್ಮದಿನೋತ್ಸವ (ಪೂರ್ವೋತ್ತರ ಸಹಿತ-೧೫೫-೧೮೪), ಇದರಲ್ಲಿ ಋತುಮತಿಯಾಗುವುದು, ಸೀಮಂತದ ಹಾಡುಗಳು, ಜನ್ಮೋತ್ಸವ ಹಾಡುಗಳು ಸೇರಿವೆ. ಉಪನಯನ (ಪೂರ್ವೋತ್ತರ ಸಹಿತ, ೧೮೫ ರಿಂದ ೨೦೬), ಐಚ್ಛಿಕ: ಪೂಜೆ, ವ್ರತ, ಹಬ್ಬ, ಹೋಮ (೨೦೭ ರಿಂದ ೨೭೪), ಪುಣ್ಯಕಥಾತ್ಮಕ ಹಾಡುಗಳು(೨೭೫-೨೮೦).

ಈ ಹಾಡುಗಳಿಗೆ ಅಲ್ಲಲ್ಲಿ ತಾಳದ ಗತಿಗಳನ್ನು ಸೂಚಿಸಿದ್ದಾರೆ. ಕೆಲವು ಕಡೆ ಬರೆದಿಟ್ಟ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ ಎನ್ನುತ್ತಾರೆ. ಭಾಷೆ ಖಂಡಿತ ಭಿನ್ನವೆನಿಸುತ್ತದೆ.

ಹೆಣ್ಣು ಕೇಳಿದ್ದು (ಅಷ್ಟ ತಾಳದ ಗತಿ)

ಕೊಡಬೇಕು ಪಾರ್ವತಿಯ
ಪರ್ವತರಾಯ ಕೈಲಾಸವಾಸನಿಗೆ।
ಕೊಡಬೇಕು ನಿನ್ನಯ ಮೋಹದ ಮಗಳನು
ಕೊಡಬೇಕು ಪಾರ್ವತಿಯ ।ಕೈಲಾಸದ
ಒಡೆಯ ಶಿವಗೆ ಸುತೆಯ ।

ಗಜಮುಖನಿಗೆ ಎರಗಿ।ಬ್ರಹ್ಮನ ರಾಣಿ
ವಾಣಿ ಸರಸ್ವತಿಗೆ ನಮಿಸಿ
ಕೈಲಾಸವಾಸ ಶ್ರೀ ಪರಮೇಶ್ವರರ
ಮದುವೆ ವಿಸ್ತಾರವನು ಒರೆಯುವ ಕೇಳಿ
ಮದುವೆ ವಿಸ್ತಾರವನು।

ಹೀಗೆ ಇಡೀ ಕೃತಿಯ ತುಂಬ ಇಂತಹ ಭಾಷೆಯೇ ಕಾಣಿಸುತ್ತದೆ. ಅಲ್ಲಲ್ಲಿ ಪೌರಾಣಿಕ ಹಿನ್ನೆಲೆ ಬಹುತರವಾಗಿ ಹಣಿಕಿಕ್ಕುತ್ತದೆ. ಏನಿದ್ದರೂ ಇವನ್ನು ವಕ್ತಾರರಿಂದಲೇ ಸಂಗ್ರಹ ಮಾಡಿದ ಬಗ್ಗೆ ವಿವರ ಕೊಡುತ್ತಾರೆ. ಈ ಹಾಡುಗಳಲ್ಲಿ ಜನಪದ ಶಕ್ತಿ ಕಡಿಮೆ ಇದೆ ಎನ್ನುವುದು ಸ್ಪಷ್ಟ. ಆದರೆ ಬ್ರಾಹ್ಮಣ ಜನಪದ ಸಾಹಿತ್ಯದ ಬಗ್ಗೆ ಒಂದಿಷ್ಟು ಲಕ್ಷ ಹಾಕಬೇಕಾದುದು ಅವಶ್ಯವಿದೆ. ಅದಕ್ಕೆ ಈ ಕೃತಿಯೊಂದು ಸಹಾಯಕ್ಕೆ ಬರುತ್ತದೆ.

ಇಂತಹ ಹಾಡುಗಳ ಇನ್ನೊಂದು ಕೃತಿ ಡಾ. ಗಾಯತ್ರಿ ನಾವಡಾ ಅವರಿಂದ ಸಂಪಾದಿಸಲ್ಪಟ್ಟ **'ಚಿತ್ತಾರ ಬರೆದ ಬದುಕು'**(೧೯೯೧). ಇದರಲ್ಲಿ ಕೋಟ ಬ್ರಾಹ್ಮಣರ ಶೋಬಾನೆ ಹಾಡುಗಳಿವೆ. "ಬ್ರಾಹ್ಮಣ ಶುಭಶೋಭನಾದಿಗಳಲ್ಲಿ ಎರಡು ವಿಧಿಗಳಿರುತ್ತವೆ. ಒಂದು ಶಾಸ್ತ್ರವಿಧಿ-ಆಗಮರೀತಿ, ಇನ್ನೊಂದು ಆಚರಣಾವಿಧಿ. ನಮ್ಮ ಎಲ್ಲಾ ಶುಭಶೋಭನಾದಿಗಳಲ್ಲಿ ಆಗಮಶಾಸ್ತ್ರ ಕ್ರಿಯಾವಿಧಿವಿಧಾನಗಳು ಜರಗುವುದಕ್ಕೆ ಸಮಾನಾಂತರವಾಗಿ ಅಲ್ಲಿನ ಆಚರಣೆ ಸಂಪ್ರದಾಯಗಳ ಚೆಲುವನ್ನು ಜನಪದ ಹೆಂಗಸರು ಹಾಡಿನ ರೂಪದಲ್ಲಿ ಹಿಡಿದಿರಿಸಿದ್ದಾರೆ. ಯಾವುದೇ ಶಾಸ್ತ್ರ ಛಂದಸ್ಸಿನ ಪರಿಚಯವಿಲ್ಲದ

ಕುರಿತೋದದ ಈ ಮಂದಿ ಬಾಯ್ದೆರೆಯಾಗಿ ತಲೆಮೊರೆಯಿಂದ ಉಳಿಸಿಕೊಂಡು ಬಂದಿರುವರು"(ಪ್ರ.ಪು. ೩–೪). ಬ್ರಾಹ್ಮಣ ಸಮಾಜದಲ್ಲಿರುವ ಶುಭಕಾರ್ಯಗಳಲ್ಲಿ ಹಾಡುವ ಹಾಡುಗಳನ್ನು ಆಯ್ದು ಈ ಕೃತಿಯಲ್ಲಿ ಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿ ಸಾಕಷ್ಟು ಸುದೀರ್ಘವಾಗಿ ಈ ಶುಭಕಾರ್ಯಗಳ ಬಗೆಗೆ ಮಾಹಿತಿಗಳನ್ನು ಒದಗಿಸಿದ್ದಾರೆ. ಇಲ್ಲಿಯ ಭಾಷೆ ದೈನಂದಿನ ವ್ಯವಹಾರಿಕ ಭಾಷೆಯಾಗಿರದೆ ಇದನ್ನು 'ಕೋಟಗನ್ನಡ, ಕುಂದಾಪುರ ಕನ್ನಡ, ಕುಂದಗನ್ನಡ ಇತ್ಯಾದಿ ಹೆಸರುಗಳಿಂದ ಗುರುತಿಸಲಾಗಿದೆ' ಎಂಬುದು ಸಂಪಾದಕರ ಅಭಿಪ್ರಾಯ. "ಇಲ್ಲಿನ ಬಹುಮಟ್ಟಿಗೆ ಅವಿದ್ಯಾವಂತ ಮಹಿಳೆಯರ ಬಾಯಲ್ಲಿರುವ ಈ ಸಂಪ್ರದಾಯದ ಹಾಡುಗಳು ಅವರ ದೈನಂದಿನ ಆಡುಮಾತಿನಲ್ಲಿ ಇರಬೇಕಾಗಿತ್ತು. ಆದರೆ ಶೋಭಾನೆ ಹಾಡುಗಳು ಅವರ ಮನೆಮಾತಿಗಿಂತ ಬೇರೆಯಾದ ಗ್ರಾಂಥಿಕ ಕನ್ನಡದಲ್ಲೇ ಮೂಡಿ ಬಂದಿರುವುದು ಅವರ ಲೋಕದೃಷ್ಟಿಗೆ (ವರ್ಡ್ಲ್ ವ್ಹೀವ್) ಕಾರಣವಾಗಿದೆ" (ಪ್ರ.ಪು.೪೫). ಇದು ಈ ಹಾಡುಗಳ ಭಾಷೆ ಕುರಿತ ಸಂಪಾದಕರ ಅಭಿಪ್ರಾಯವಾಗಿದೆ. ಈ ಜೀವನಾವರ್ತನದ ಹಾಡುಗಳ ಮಹತ್ವ ಕುರಿತು ಸಂಪಾದಕರು ಹೀಗೆ ಅಭಿಪ್ರಾಯ ಪಡುತ್ತಾರೆ : "ಎಲ್ಲಿ ಪುರೋಹಿತರ ಮಂತ್ರ ಇರುವುದಿಲ್ಲವೋ ಆ ನಿರ್ವಾತವನ್ನು ಈ ಹೆಂಗಸರ ಹಾಡುಗಳು ತುಂಬಿಕೊಡುತ್ತವೆ" (ಪ್ರ.ಪು. ೪೬) ಎಂಬ ಸಂಪಾದಕಿಯ ಮಾತು ಮಹತ್ವದ್ದೆನಿಸುತ್ತದೆ. ಮಂತ್ರಗಳೇ ಇಲ್ಲದ ಬ್ರಾಹ್ಮಣೇತರ ಅನೇಕ ಜನಸಮುದಾಯಗಳಲ್ಲಿ ಹಾಡುಗಳೇ ಮಂಗಳಕರವಾದ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಹಾಡುಗಳಿಗೆ ಆ ಶಕ್ತಿ ಇದೆ. ಹಾಡುಗಾರರಿಗೆ ಮರ್ಯಾದೆ ಇರುತ್ತದೆ. ಬ್ರಾಹ್ಮಣರೂ ಹೀಗೆ ಮಂತ್ರಕ್ಕಿಂತಲೂ ಜನಪದ ಹಾಡು ಮಹತ್ವದ್ದೆಂದೂ ಮಂತ್ರ ಇಲ್ಲದಿದ್ದರೂ ಆ ಸ್ಥಳವನ್ನು ಜನಪದ ಹಾಡು ತುಂಬುಬಲ್ಲ ಶಕ್ತಿ ಹೊಂದಿದೆ ಎಂಬ ಗೌರವಭಾವವನ್ನೂ ತಾಳುವುದು ಗಮನಾರ್ಹ ಸಂಗತಿಯೇ ಎನಿಸುತ್ತದೆ.

ಈ ಕೃತಿಯಲ್ಲಿ ಒಟ್ಟಿಗೆ ೪೦ ಹಾಡುಗಳಿವೆ. ಅವುಗಳನ್ನು ಕ್ರಮವಾಗಿ ಜೋಡಿಸಿದ್ದರೂ ವಿಭಾಗೀಕರಣ ಮಾಡಿ ಕೊಟ್ಟಿಲ್ಲ. ಪರಿವಿಡಿಯ ಹಾಡಿನ ಹೆಸರುಗಳನ್ನು ಗಮನಿಸಿದರೆ ಅವನ್ನೆಲ್ಲ ಹೀಗೆ ವಿಭಾಗಿಸಬಹುದಾಗಿದೆ. ಅಥವಾ ಈ ವಿಭಾಗೀಕರಣವನ್ನೇ ಮನಸ್ಸಿನಲ್ಲಿಟ್ಟುಕೊಂಡು ಹಾಡುಗಳನ್ನು ಕ್ರಮವಾಗಿ ಕೊಟ್ಟಿದ್ದಾರೆ: ಜೋಗುಳ, ಮದುವೆ, ಮೈನರೆದಾಗಿನಹಾಡು(+ಶೋಭನದ ಹಾಡು), ಸೀಮಂತನ ಹಾಡು ಹೀಗೆ ಜೋಡಿಸಿಕೊಳ್ಳಲಾಗಿದೆ. ಪ್ರಸ್ತಾವನೆಯಲ್ಲೂ ಹುಟ್ಟು, ಮದುವೆ, ಋತುಮತಿ, ಬಸುರಿ– ಈ ಕ್ರಮದಲ್ಲಿಯೇ ವಿವರಿಸಲಾಗಿದೆ. ಈ ಕ್ರಮದ ಹಿಂದೆ ಗುಪ್ತವಾಗಿ ಬಾಲ್ಯವಿವಾಹದ ಸಂಗತಿ ಅಡಗಿದೆ ಎಂಬುದು ಸ್ಪಷ್ಟವಾಗಿದೆ.

ಜೋಗುಳ

ಜೋಜೋ ಗಿರಿಕುಲಾಧಿಪ ಸುಕುಮಾರಿ
ಜೋಜೋ ಪ್ರಾಣರಂಜಕಹಾರಿ
ಜೋಜೋ ಸದ್ಗುಣಭರಿತೆ ಶ್ರೀಗೌರಿ
ಜೋಜೋ ಪಾವನಚರಿತೆ ಶೃಂಗಾರಿ ಜೋಜೋಜೋಜೋ।೧।

ನಾಮಕರಣದ ಹಾಡು

ಬಾಲೆ ಹುಟ್ಟಿದ ಸುದ್ದಿ ಬಾಯಲ್ಲಿ ಕೇಳಿದನೆ
ಹೋಗಿ ಗಂಗೆಯಲಿ ಮುಳಿಗೀದ
ಮುಳುಗಿ ಸ್ನಾನವ ಮಾಡಿ
ತೆಂಗು ಫಲದಾನ ಕೊಡುವಾನು ।ಶೋಬಾನೆ।

ದಿಬ್ಬಣ ಹೊಗ್ಗುವ ಹಾಡು

ಹೆಬ್ಬಾಗಿಲೊಳಗೆಲ್ಲ ಗುಬ್ಬಿ ಸಾಲಿಟ್ಟಂತೆ
ದಿಬ್ಬಣವು ಮನೆಗೆ ಬರಲೆಂದು
ಬರಲೆಂದು ಅಣ್ಣಯ್ಯ
ಮುದ್ರೆಯುಂಗುರವ ಕಳುಹೀದ ಶೋಭಾನೆ ।೧।

ಧಾರೆ ಎರೆವ ಹಾಡು

ಮೃಡನಸುತನ ಪಾದಕಮಲಕೊಂದಿಸುತ
ಕೊನೆಯ ಬಾಳೆಯ ಹಣ್ಣ ಸುಲಿದು ಅರ್ಪಿಸುತ
ಅಜನ ಪಟ್ಟದ ರಾಣಿಯ ಮನದಿ ಧ್ಯಾನಿಸುತ
ರಘುರಾಮಚಂದ್ರರ ಪದವ ಸ್ತುತಿಸುತ ।೧।

ಮೈನೆರೆದಾಗಿನ ಹಾಡು

ತೆಂಗಿನ ಮರ ನೋಡಿ ತಂಗಿ ಋತುಮಾದಳೆ
ತೆಂಗು ಫಲ ಕೊಟ್ಟು ಕರತನ್ನಿ
ಕರತನ್ನಿ ನಮ್ಮನೆಯ
ಚಿತ್ತಾರ ಬರೆದ ದೇಗುಲಿಗೆ ।೧।

ಬಯಕೆ ಹಾಡು

ರಂಗನರಾಣಿಯೆ ಮಂಜುಳವೇಣಿಯೆ
ಅಂಗನೆ ಗರ್ಭದಾಪೇಕ್ಷೆಗಳು ।ಪ।

ಪ್ರಥುಮನೆ ತಿಂಗಳೊಳ್ ಅತಿಬಳಲುತ ನಾರಿ
ಸುತನ ಬಯಕೆ ಕಟ್ಟಿ ಬಯಸುವಳೊ।೧।

ಘೃತಕ್ಷೀರ ಪರಮಾನ್ನ ಹಿತವಾದ ದಧ್ಯಾನ್ನ
ಸುತನ ಬಯಕೆ ಕಟ್ಟಿ ಬಯಸುವಳೊ।೨।

ಎರಡನೆ ತಿಂಗಳೊಳ್ ಎಳೆಯ ಹುಣಸೆ ನೆಲ್ಲಿ
ಹುಳಿಯ ಮಾವಿನಕಾಯಿ ಬಯಸುವಳೊ।೩।

ಹುಳಿಯ ಮಾವಿನ ಕಾಯಿ ಎಸೆಯುತ್ತ ವನದೊಳು
ಕೆನೆಮೊಸರವಲಕ್ಕಿ ಬಯಸುವಳೊ ।೪।

ಮೂರನೆ ತಿಂಗಳೊಳ್ ನಾರಿಗೆ ನಿಜವಾಗಿ
ತೋರಿಬರಲು ತನ್ನ ತವರಿನೊಳು ।೫।
ವಾರಿಗೆಯರು ಕೂಡಿ ಆಡುತ ವನದೊಳು
ಪಾರಿಜಾತದ ಪುಷ್ಪ ಬಯಸುವಳೊ ।೬।
ನಾಲ್ಕನೆ ತಿಂಗಳೊಳ್ ಪಾಕದೊಳದ್ದಿದ
ಸಾಟು ಜಿಲೋಬಿ ಚಿರೋಟಿಗಳು ।೭।
ಬಾಸುಂದಿ ಪೂರ್‍ಯ ವಾರಿಗೆಯರು ಕೂಡಿ
ದೋಸೆ ಸೀಕರಣೆ ಉಂಡೆ ಬಯಸುವಳೊ ।೮।
ಐದನೆ ತಿಂಗಳೊಳ್ ಕೊಯ್ದು ಮಲ್ಲಿಗೆ ಸರ
ಒರಗು ಕೇದಿಗೆ ವನ ಬಯಸುವಳೊ ।೯।
ಆರನೆ ತಿಂಗಳೊಳ್ ಆರಿದನ್ನವು ಬೇಳೆ
ಸಾರು ಉಪ್ಪಿನಕಾಯಿ ಬಯಸುವಳೊ ।೧೦।
ಏಳನೆ ತಿಂಗಳೊಳ್ ಹೋಳಿಗೆಣ್ಹೋಳಿಗೆ
ಬೆಣ್ಣೆ ಕಾಸಿದ ತುಪ್ಪ ಬಯಸುವಳೊ ।೧೧।
ಎಂಟನೆ ತಿಂಗಳೊಳ್ ಕಂಠಿ ಮುತ್ತಿನ ಹಾರ
ಹೊಸಮುತ್ತಿನಾಭರಣ ಬಯಸುವಳೊ ।೧೨।
ಹಸುರು ಪತ್ತಳನುಟ್ಟು ಜರಿಯ ಕುಪ್ಪಸ ತೊಟ್ಟು
ಹೊಸ ಮುತ್ತಿನಾಭರಣ ಬಯಸುವಳೊ ।೧೩।
ಒಂಬತ್ತು ತಿಂಗಳು ತುಂಬಲು ದೇವಿಗೆ
ಬಂದವು ತಕ್ಕ ಬೇನೆಗಳು ।೧೪।
ಅತಿಶ್ರಮ ಪಡೆಯುತ ಚಂದ್ರನ ಪೋಲುವ
ಕಂದನ ಪಡೆದಳೆ ಶಿವದಿನದಿ ।೧೫।

ಈ ಹಾಡುಗಳ ಭಾಷೆಯನ್ನು ಗಮನಿಸಿದರೆ, ಸಾಮಾನ್ಯ ಜನಪದರು ಬಳಸುವ ಭಾಷೆಗೂ ಬ್ರಾಹ್ಮಣರು ಹಾಡಿದ ಭಾಷೆಗೂ ವ್ಯತ್ಯಾಸ ಕಾಣಿಸುತ್ತಿದೆ. ಭಾಷೆ ಸುಧಾರಿಸಿದಂತೆ ಹಾಡಿನ ಭಾಷೆಯಲ್ಲಿಯ ಆಕರ್ಷಣೆ ಕಡಿಮೆಯಾಗುತ್ತ ಹೋಗುವ ಭಾಸವುಂಟಾಗುತ್ತದೆ. ಬಯಕೆಯ ಹಾಡನ್ನು ಬೇಕೆಂತಲೇ ಪೂರ್ತಿಯಾಗಿ ಕೊಡಲಾಗಿದೆ. ಎಲ್ಲ ಕಡೆ ಬಯಕೆಯ ಹಾಡಿನಲ್ಲಿ ಕಾಣುವ ಆಹಾರ ಪದಾರ್ಥಗಳು ಇಲ್ಲೂ ಕಾಣಿಸಿವೆ. ಕೆಲವೊಂದು ಆಹಾರ ಪದಾರ್ಥಗಳು ಬೇರೆಯಾಗಿದ್ದರೂ ಬಹುಮಟ್ಟಿನಲ್ಲಿ ಹೋಲಿಕೆ ಇದೆ. ಮತ್ತೆ ಭಾಷೆ ಮಾತ್ರ ಸ್ವಲ್ಪ ಸುಧಾರಿಸಿದ್ದು, ಕೃತ್ರಿಮತೆ ತಲೆಹಾಕಿದೆ.

* * *

ಸಂಪ್ರದಾಯದ ಹಾಡುಗಳ ಸಂಗ್ರಹಗಳು :

೧೯೩೫ : ಮಲ್ಲಿಗೆ ದಂಡೆ, (ಸಂ) ದಿ. ಶ್ರೀಮಾನ್ ಕಾಪಸೆ ರೇವಪ್ಪನವರು, –ರಾಮಚಂದ್ರ ವಿನೀತ, ರೈಟರ್ ಓಣಿ, ಧಾರವಾಡ. (೧೯೪೮ ಎರಡನೇ ಮು.)

೧೯೫೫ : ಗರತಿಯರ ಮನೆಯಿಂದ, (ಸಂ) ಈಶ್ವರಚಂದ್ರ ಚಿಂತಾಮಣಿ, –ಪಾರ್ವತೀಶ ಪ್ರಕಾಶನ, ಬಿ–೨೦, ಭಾವಸಾರ ನಗರ, ವಿಜಯಪುರ, (೨೦೧೩, ಎರಡನೇ ಮು.).

೧೯೬೦ : ಹಳ್ಳಿಯ ಹಾಡುಗಳು, (ಸಂ) ವಿನೀತರಾಮಚಂದ್ರರಾಯ, –ಅರುಣೋದಯ ಪ್ರಕಾಶನ, ಬೆಂಗಳೂರು.

೧೯೭೧ : ಜೀವನ ಜೋಕಾಲಿ : ಸರಸ ವಿರಸ, (ಸಂ) ಡಾ. ಎಂ.ಎಸ್.ಸುಂಕಾಪುರ, –ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೪ : ಹಾಲಕ್ಕಿ ಪಾಯಸ, (ಸಂ) ಎಲ.ಜಿ.ಭಟ್ಟ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೫ : ಕನ್ನಡ ಜನಪದ ಸಾಹಿತ್ಯ ಭಂಡಾರ–೧, (ಸಂ) ಮತಿಘಟ್ಟ ಕೃಷ್ಣಮೂರ್ತಿ, –ಗುರುಮೂರ್ತಿ ಪ್ರಕಾಶನ, ೧೫,೧ನೇ ರಸ್ತೆ, ದತ್ತಾತ್ತೇಯ ಬಡಾವಣೆ, ಕೆಂಪೇಗೌಡ ನಗರ, ಬೆಂಗಳೂರು–೧೯

೧೯೭೮ : ಕೊಂಬೆರೆಂಬೆಲ್ಲ ಎಳೆಗಾಯಿ, (ಸಂ) ಅಂದನೂರು ಶೋಭ, –ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯೭೯ : ಚಾಜದ ಹಾಡುಗಳು, (ಸಂ) ಡಾ. ಶಶಿಕಲಾ ಮೋಲ್ದಿ, –ಅರವಿಂದ ಪ್ರಕಾಶನ, ಮಹಾಗಾಂವ, ಜಿ. ಕಲಬುರಗಿ.

೧೯೭೯ : ಮುಕರಿ ಮತ್ತು ಹೊಲೆಯರ ಪದಗಳು, (ಸಂ) ಡಾ. ಎಲ್. ಆರ್. ಹೆಗಡೆ, –ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯೮೩ : ಕೂಸಾಯ್ತು ನಮ್ಮ ಕೊಮರಾಗೆ, (ಸಂ) ಡಾ. ಎನ್. ಆರ್. ನಾಯಕ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮.

೧೯೮೬ : ಹವ್ಯಕರ ಶೋಭಾನೆಗಳು, (ಸಂ) ಪ್ರೊ ಟಿ. ಕೇಶವಭಟ್ಟ, –ಚಿರಸಾಹಿತ್ಯ ಪ್ರಕಾಶನ, ನಂ. ೭೫೪, ಹದಿನೈದನೆ ಮುಖ್ಯರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು.

೧೯೯೧ : ಚಿತ್ತಾರ ಬರೆದ ಬದುಕು, (ಸಂ) ಗಾಯತ್ರಿ ನಾವಡ, –ಪ್ರಾದೇಶಿಕ ವ್ಯಾಸಂಗ, ಕುಂದಾಪುರ.

೨೦೦೪ : ಗಾಮೊಕ್ಕಲ ಹಾಡುಗಳು, (ಸಂ) ಡಾ. ಎನ್.ಆರ್.ನಾಯಕ, –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮

೨೦೧೧ : ಹತ್ತು ಮಂದ್ಯಾಗ ಹಾಡೇನ, (ಸಂ) ನಾವಲಗಿ ಸಿ.ಕೆ ಮುಂತಾದವರು, –ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೨೦೧೪ : ಮಕ್ಕಳ ಫಲವ ಬೇಡ್ಯಾಳೆ, (ಸಂ) ಪ್ರೊ. ಶೋಭಾದೇವಿ ಚೆಕ್ಕಿ, – ಭಾವಿಕಟ್ಟಿ, ಎಸ್.ಎಸ್., ಕಲಬುರಗಿ.

ಅಧ್ಯಯನಗಳು :

೧೯೯೯ : ಗುಲಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು, ಡಾ. ಬಿ. ಯಶೋಧರಾ ಶಾಸ್ತ್ರಿ, –ಜ್ಯೋತಿರ್ಮಯಿ ಪ್ರಕಾಶನ, ಮಾತಾ ಮಾಣಿಕೇಶ್ವರಿ ನಗರ, ಗುಲಬರ್ಗಾ.

* * *

೫. ಹೆಣ್ಣುಮಕ್ಕಳ ಜನಪದ ಕಥನ ಗೀತೆಗಳು

ಜನಪದ ಸಾಹಿತ್ಯದಲ್ಲಿ ಶಿಷ್ಟ ಸಾಹಿತ್ಯ ಗುಣಗಳಿಗೆ ಸರಿಸಮನಾಗಿ ನಿಲ್ಲಬಲ್ಲ ಎರಡು ಪ್ರಕಾರಗಳಿವೆ. ಅದರಲ್ಲಿ ಒಂದು ತ್ರಿಪದಿ, ಇನ್ನೊಂದು ಹೆಣ್ಣುಮಕ್ಕಳು ಹಾಡುವ ಕಥನಪರ ಹಾಡುಗಳು. ಇವನ್ನು ಜನಪದ ಕಥಾನಕಗಳು, ಜನಪದ ಕಥನ ಗೀತೆಗಳು, ಜನಪದ ಕಥನ ಕಾವ್ಯಗಳು ಎಂದೂ ಕರೆಯಬಹುದಾಗಿದೆ. ಇವುಗಳನ್ನು ಮದುವೆಯ ಸಂದರ್ಭವೊಂದನ್ನುಳಿದು ಇತರ ಶುಭಕಾರ್ಯದ ಸಂದರ್ಭಗಳಲ್ಲಿ, ಅಂದರೆ ಮೈನರೆದ, ಸೋಬಾನ, ಕುಪ್ಪಸ, ಜೋಗುಳ ಈ ಸಂದರ್ಭಗಳಲ್ಲಿ; ಹೊಲ ಮನೆಯ ಕೆಲಸಗಳಲ್ಲಿ– ಹೊಲದಲ್ಲಿ ಕಸ ತೆಗೆಯುವುದು, ಗೂಡು ಮುರಿಯುವುದು, ನಾಟಿ ಮಾಡುವುದು ಇಂತಹ ಕೆಲಸಗಳಲ್ಲಿ; ಮನೆಯಲ್ಲಿಯ ಕೆಲಸಗಳಾದ ಶಾವಿಗೆ ಹೊಸೆಯುವ, ಬಟವಿ ಕಡಿಯುವ, ಹಪ್ಪಳ ಸಂಡಿಗೆ ತಯಾರಿಸುವ, ಸೇಂಗಾ ಒಡೆಯುವ, ಹುಣಸಿ ಹಣ್ಣಿನಿಂದ ಬೀಜ ಬಿಡಿಸುವ, ಮನೆಯ ಮಾಳಿಗೆಗೆ ಧುಮ್ಮಸ್ಸು ಹಾಕುವ ಈ ಮುಂತಾದ ಕೆಲಸಗಳ ಸಂದರ್ಭಗಳಲ್ಲಿ, ಸುದೀರ್ಘವಾದ ಸಮಯ ದೊರೆಯುವುದರಿಂದ ಅಲ್ಲಿ ಕಥನ ಪರವಾದ ಹಾಡುಗಳು ಪ್ರಯೋಗವಾಗುತ್ತಲವೆ.

ಉತ್ತರ ಕರ್ನಾಟಕದಲ್ಲಿ ಈ ಹಾಡುಗಳನ್ನು ಹಬ್ಬಹರಿದಿನಗಳಲ್ಲಿ ಹಾಡುವ ಸಂಪ್ರದಾಯವೂ ಇದೆ. ಆ ಸಮಯವನ್ನು 'ಕೋಲು ಹಾಕುವ' ಸಂದರ್ಭವೆಂದು, ಹಾಡುಗಳನ್ನು 'ಕೋಲೆಣ್ಣ ಹಾಡುಗಳು' ಎಂದು ಹೇಳುತ್ತಾರೆ. ವಿಶೇಷವಾಗಿ ನಾಗರ ಪಂಚಮಿ ಹಬ್ಬದಲ್ಲಿ ಈ ಹಾಡುಗಳು ಕೇಳಿಬರುತ್ತವೆ. ಕೆಲವು ಕಡೆ ದಸರೆಯ ಸಂದರ್ಭದಲ್ಲೂ ಮತ್ತೆ ಇತರ ಹಬ್ಬಗಳಲ್ಲೂ ಹೆಣ್ಣುಮ್ಮಕ್ಕಳು ಸೇರಿ ಕಾಲಕಳೆಯುವಾಗ ಈ ಹಾಡುಗಳನ್ನು ಹಾಡಿಕೊಳ್ಳುತ್ತಾರೆಂದೂ ತಿಳಿದುಬರುತ್ತದೆ.

ಹಬ್ಬದ ಸಂದರ್ಭದಲ್ಲಿ– ಸಂಭ್ರಮ, ಸಂತೋಷ, ಲಹರಿ ಮನೋಭಾವದಲ್ಲಿ ಇರುವ ಹೆಣ್ಣುಮಕ್ಕಳು, ಮನೆಯಿಂದ ಹೊರಗೆ ಬಂದು, ತಮ್ಮ ದೊಡ್ಡಿಯ (ಗಲ್ಲಿಯ) ಒಂದು ವಿಸ್ತಾರವಾದ ಸ್ಥಳದಲ್ಲಿ, ಅಥವಾ ದೊಡ್ಡ ಮನೆಯ ವಿಸ್ತಾರವಾದ ಅಂಗಳದಲ್ಲಿ ಸೇರಿ, ದುಂಡಗೆ ನಿಂತು, ಹಾಗೇ ಕೈಕೈ ಹಿಡಿದು ತಿರುಗುತ್ತ ಅಥವಾ ಚಪ್ಪಾಳೆ ಬಾರಿಸುತ್ತ ಕಥನ ಪರವಾದ ಹಾಡುಗಳನ್ನು ಹಾಡುತ್ತಾರೆ. ಇವನ್ನು ಕಲಬುರಗಿ ಜಿಲ್ಲೆಯ ಕೆಲ

ಗ್ರಾಮಗಳಲ್ಲಿ ಚಪ್ಪಳಿಗೆ ಹಾಡುಗಳು ಎಂದೂ ಬೀದರ ಜಿಲ್ಲೆಯಲ್ಲಿ ಬುಲಾಯಿ ಹಾಡುಗಳು ಎಂದೂ ಕರೆಯುತ್ತಾರೆ. ಹಾಡುಗಳನ್ನು ಕೇಳಲು ಸಾಕಷ್ಟು ಜನ ಸ್ತ್ರೀಯರೇ ನೆರೆದಿರುತ್ತಾರೆ. ಹೆಣ್ಣುಮಕ್ಕಳು ಹಾಡುವ ಈ ಕಥಾನಕಗಳ ವಸ್ತು ವಿಶೇಷವಾಗಿ ಸ್ತ್ರೀ ಜೀವನಕ್ಕೆ ಸಂಬಂದಿಸಿಯೇ ಇರುತ್ತವೆ. ಜೊತೆಗೆ ಕೌಟುಂಬಿಕ, ಸಾಮಾಜಿಕ, ಐತಿಹಾಸಿಕ ಮತ್ತು ವೀರಕ್ಕೆ ಸಂಬಂದಿಸಿದ ಕಥೆಗಳ ಹಾಡುಗಳನ್ನೂ ಹಾಡುತ್ತಾರೆ.

ಹೈದ್ರಾಬಾದ ಕರ್ನಾಟಕದಲ್ಲಿ ಯುವಕರು ಕೋಲಾಟ ಕಲಿತು ಪ್ರದರ್ಶಿಸುವ ಸಂದರ್ಭವೆಂದರೆ ನಾಗರ ಪಂಚಮಿ ಹಬ್ಬ. ಹೀಗೆ ಗಂಡುಮಕ್ಕಳು ಕೋಲಾಟದ ಜೊತೆಗೆ ಸಂಭ್ರಮ ಪಡುತ್ತಿದ್ದರೆ, ಹೆಣ್ಣುಮಕ್ಕಳು ಅದನ್ನು ಅನುಕರಣೆ ಮಾಡುವ ರೀತಿಯೋ ಏನೋ 'ಕೋಲು ಹಾಕೋಣ' ಎಂದು ಸೇರುತ್ತಾರೆ. ಆದರೆ ಕೈಯಲ್ಲಿ ಕೋಲುಗಳು ಮಾತ್ರ ಇರುವುದಿಲ್ಲ. ಈ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು 'ಕೋಲೆಣ್ಣ ಪದಗಳು' ಎಂದು ಕರೆಯುತ್ತಾರೆ. ಕೋಲ, ಕೋಲೆಣ್ಣ ಕೋಲ, ಕೋಲ ಮಲ್ಲಿಗಿ ಕೋಲ, ಸುವ್ವಿಸುವ್ವಿ ಸುವ್ವಾಲೆ ಇಂತಹ ಅನೇಕ ಸ್ವರಗತಿಗಳು ಈ ಹಾಡುಗಳ ಧಾಟಿಗಳಲ್ಲಿ ಕಾಣುತ್ತವೆ.

ಬೀದರ ಜಿಲ್ಲೆಯಲ್ಲಿ ಈ ಸಂದರ್ಭವನ್ನೇ 'ಬುಲಾಯಿ' ಎಂಬ ಉರ್ದು ಶಬ್ದದಿಂದ ಗುರುತಿಸುತ್ತಾರೆ. ಹೀಗಾಗಿ ಅಲ್ಲಿ ಇವುಗಳನ್ನು ಬುಲಾಯಿ ಹಾಡುಗಳು ಎಂದು ಕರೆಯುತ್ತಾರೆ. ಮೋಹರಂ ಸಂದರ್ಭದಲ್ಲಿ ಗಂಡುಮಕ್ಕಳು ಮೋಹರಂ ಹಾಡುಗಳನ್ನು ಹಾಡುತ್ತಾರೆ. ಈ ಸಂದರ್ಭದಲ್ಲಿ ಮುಸ್ಲೀಮ ಹೆಣ್ಣುಮಕ್ಕಳು ತಮ್ಮ ವಿಶಾಲವಾದ ಅಂಗಳದಲ್ಲಿ ಸೇರಿ, ಗೋಲಾಗಿ ನಿಂತು, ತಿರುಗುತ್ತ ಕರ್ಬಲಾ ವಸ್ತುವುಳ್ಳ ಕಥನ ಕಾವ್ಯಗಳನ್ನು ಹಾಡುತ್ತಾರೆ. ಇದನ್ನು 'ಬುಲಾಯಿ ಹಾಕುವುದು' ಎಂದು ಕರೆಯುತ್ತಾರೆ. ಹೆಣ್ಣುಮಕ್ಕಳು ನಾಗರ ಪಂಚಮಿ ಸಂದರ್ಭದಲ್ಲಿ ಗೋಲಾಗಿ ನಿಂತು, ಕೈಕೈ ಹಿಡಿದು, ಸುತ್ತಲೂ ತಿರುಗುತ್ತ ಕಥನ ಗೀತೆಗಳನ್ನು ಹಾಡುವುದು, ಬುಲಾಯಿ ಹಾಕುವ ರೀತಿಯನ್ನು ಹೋಲುವುದರಿಂದ ಮುಸ್ಲೀಮ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವ ಬೀದರ ಜಿಲ್ಲೆಯಲ್ಲಿ 'ಕೋಲೆಣ್ಣ ಹಾಡು'ಗಳನ್ನು ಹಾಡುವ ಸಂದರ್ಭವನ್ನು 'ಬುಲಾಯಿ ಹಾಕುವುದು' ಎಂದೂ ಹಾಡುಗಳನ್ನು 'ಬುಲಾಯಿ ಹಾಡುಗಳು' ಎಂದೂ ಕರೆಯುವ ರೂಢಿ ಬಿದ್ದಂತೆ ತೋರುತ್ತದೆ.

ಹೆಣ್ಣುಮಕ್ಕಳು ಇಂತಹ ಕಥಾನಕಗಳನ್ನು ಹಾಡುವ ಇನ್ನೊಂದು ಸಂದರ್ಭವೂ ಇದೆ. ಮನೆಯಲ್ಲಿ ಏನಾದರೂ ತೊಂದರೆಗಳು ಬಂದಲ್ಲಿ, ಅನಾರೋಗ್ಯ ವುಂಟಾದಲ್ಲಿ, ಬಹಳ ದಿನಗಳವರೆಗೆ ಮಕ್ಕಳಾಗದಿದ್ದಲ್ಲಿ; ತಮ್ಮ ಮನೆಯಲ್ಲಿ ತಮ್ಮ ಮನೆಯ ದೇವರನ್ನು ಪ್ರತಿಷ್ಠಾಪನೆ ಮಾಡಿ, ಸಂಜೆ ಹೊತ್ತು ಕೆಲದಿನ ಪೂಜೆ ಮಾಡುವ ನೇಮ ಇಟ್ಟುಕೊಂಡು, ಹಾಡುವ ಹೆಣ್ಣುಮಕ್ಕಳನ್ನು ಕರೆಸಿ, ಹಾಡಿಸುತ್ತಾರೆ. ಇದರಿಂದ ತಮಗೊದಗಿರುವ ತೊಂದರೆ ದೂರಾಗುವುದೆಂಬ ನಂಬುಗೆ ಜನಪದರಲ್ಲಿದೆ. ಇವನ್ನು ಪುಣ್ಯ ಕಥಾನಕಗಳು ಎಂದು ಕರೆಯಬಹುದಾಗಿದೆ. 'ಚೆನ್ನಮ್ಮನ ದಂಡಿ', ಗುಣದಮ್ಮನ ಕಥೆಯಂತಹ ಕಥಾನಕಗಳನ್ನು ಇಲ್ಲಿ ಹಾಡಿಸುತ್ತಾರೆ. ಈ ಕಥಾನಕಗಳು ಸ್ವಲ್ಪ ದೀರ್ಘವಾಗಿರುತ್ತವೆ. ಇಲ್ಲೂ ಸ್ತ್ರೀ ಭೋಗಿಸುವ ತೊಂದರೆಗಳುಳ್ಳ ವಸ್ತುವೇ ಮುಖ್ಯವಾಗಿರುತ್ತದೆ. ಆದರೆ ಕೊನೆಯಲ್ಲಿ ಸುಖಾಂತವಾಗಿ ಮುಗಿಯುತ್ತವೆ.

ಈ ಎಲ್ಲ ನಮೂನೆಯ ಕಥಾನಕಗಳನ್ನು ಗಮನಿಸಿದರೆ, ಒಟ್ಟು ಭಾರತೀಯ ಸಂದರ್ಭದಲ್ಲಿ ಹೆಣ್ಣು ಭೋಗಿಸುವ ನಾನಾ ಬಗೆಯ ತೊಂದರೆಗಳು ಎಂತಹವು ಎಂಬ ಸಂಗತಿ ನಮಗೆ ಮನವರಿಕೆಯಾಗುತ್ತದೆ. ಕಾರಣ ಇಂತಹ ಕಥಾನಕಗಳ ಅಧ್ಯಯನ ನಡೆಯಬೇಕಾದುದು ಬಹುಮುಖ್ಯವೆನಿಸುತ್ತದೆ. ಹೊರಗಿನಿಂದ ಬಂದ ಸ್ತ್ರೀವಾದೀ ಚಿಂತನೆಗಳಿಗಿಂತ ಈ ಹಾಡುಗಳಲ್ಲಿ ವಿವರಿಸುವ ಸ್ತ್ರೀ ಸಮಸ್ಯೆಗಳು ಭಾರತೀಯ ಸ್ತ್ರೀ ಬದುಕಿನ ನಿಜವಾದ ಸಮಸ್ಯೆಗಳೆನಿಸುತ್ತವೆ. ಇವುಗಳ ಅಧ್ಯಯನದಿಂದ ಮಹಿಳೆಯ ಬದುಕಿನ ಪರಿಯನ್ನು ನಾವು ಅರಿಯಬಹುದಾಗಿದೆ.

ಜನಪದ ಕಥನಪರ ಹಾಡುಗಳನ್ನು ಅವುಗಳ ದೀರ್ಘತೆಯನ್ನು ಗಮನಿಸಿ ಮೂರು ಬಗೆಯಲ್ಲಿ ಗುರುತಿಸಲಾಗುತ್ತದೆ. ಒಂದು ಕಥನಗೀತೆಗಳು, ಎರಡನೆಯದು ಖಂಡಕಾವ್ಯಗಳು, ಮೂರನೆಯದು ಮಹಾಕಾವ್ಯಗಳು. ಕಥನಗೀತೆಗಳು ಎರಡು ಪುಟಗಳಿಂದ ೧೫ ಪುಟಗಳವರೆಗೆ, ಖಂಡಕಾವ್ಯಗಳು ೧೫ ಅಥವಾ ೨೦ ಪುಟಗಳಿಂದ ೬೦, ೭೦ ಪುಟಗಳ ವರೆಗೆ, ಮಹಾಕಾವ್ಯಗಳು ಸುಮಾರು ೧೫೦, ೨೦೦ ಪುಟಗಳ ಮೇಲ್ಪಟ್ಟು ದೀರ್ಘವಾಗಿರುತ್ತವೆ. ಪ್ರಸ್ತುತ ಅಧ್ಯಾಯದಲ್ಲಿ ಕೇವಲ ಹೆಣ್ಣುಮಕ್ಕಳು ಹಾಡುವ ಕಥನ ಗೀತೆಗಳನ್ನು ಹಾಗು ಖಂಡಕಾವ್ಯಗಳನ್ನು ಮಾತ್ರ ಗಮನಿಸಲಾಗಿದೆ. ವೃತ್ತಿಗಾಯಕರಾದ ಗಂಡುಮಕ್ಕಳು ಹಾಡುವ ಕಥನಗೀತೆಗಳ ಯಾವುದೇ ಪ್ರಕಾರಗಳನ್ನು ಇಲ್ಲಿ ಚರ್ಚಿಸಲು ಹೋಗಿಲ್ಲ.

ಹೆಣ್ಣುಮಕ್ಕಳ ಜನಪದ ಕಥನಕಾವ್ಯಗಳ ಪ್ರಕಟನೆ ಸಾಕಷ್ಟಾಗಿದೆ. ಸುಮಾರು ೨೫ ರಿಂದ ಮೂವತ್ತು ಪ್ರಮುಖವಾದ ಕೃತಿಗಳು ಕಾಣುತ್ತಿವೆ. ಆದರೆ ಉತ್ತರ ಕರ್ನಾಟಕದ ಐದಾರು ಸಂಗ್ರಹಗಳು ಮಾತ್ರ ಕಾಣುತ್ತಿವೆ. ಪ್ರಮಾಣದಲ್ಲೂ ಸಂಖ್ಯೆಯಲ್ಲೂ ಅಂತಹ ದೊಡ್ಡ ಪ್ರಮಾಣದಲ್ಲಿ ಕಥನಕಾವ್ಯಗಳ ಸಂಗ್ರಹವಾಗಿಲ್ಲ. ಡಾ. ಬಿ. ಎಸ್. ಗದ್ದಗಿಮಠ ಅವರು ಸಂಗ್ರಹಿಸಿ ಸಂಪಾದಿಸಿದ **'ನಾಲ್ಕು ನಾಡಪದಗಳು'**(೧೯೫೨), **'ಮಲ್ಲಮಲ್ಲಾಣಿ'** (೧೯೫೯), ಹಾಗೂ **'ಲೋಕಗೀತೆಗಳು'**(೧೯೬೦) ಸಂಗ್ರಹಗಳಲ್ಲಿ ಮೊದಲಿಗೆ ಕೆಲವು ಕಥನಗೀತೆಗಳು ಪ್ರಕಟವಾಗಿವೆ. ಡಾ. ಸುಂಕಾಪುರ ಅವರು ಸಂಪಾದಿಸಿ ಪ್ರಕಟಿಸಿದ **'ಜೀವನ ಜೋಕಾಲಿ–೩: ಗರತಿಯ ಗರಿಮೆ'** (೧೯೭೨) ಕೃತಿಯಲ್ಲಿ ಕೇವಲ ಎರಡು ಹಾಡುಗಳು ಮಾತ್ರ ಇವೆ. ಅದೂ ಎಂ.ಟಿ. ಸಾಸನೂರ ಅವರು ಸಂಗ್ರಹಿಸಿದ 'ಚೆನ್ನಮ್ಮನ ದಂಡಿ' ಹಾಗೂ ಸತಿ ಗುಣಸಾಗರಿ ಎಂಬ ಕಥೆಗಳಿವು. ಈ ಕತೆಗಳಲ್ಲಿಯೇ ಒಂದು ಹಾಡನ್ನು ದೊರಕಿಸಿಕೊಂಡು **'ಗುಣದಮ್ಮನ ಕಥೆ'** (೧೯೭೨) ಎಂಬ ಹೆಸರಿನಲ್ಲಿ ಸುಶೀಲಾ ಪಟ್ಟಣಶೆಟ್ಟಿ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಅಂದರೆ ಎರಡು ಕಥೆಗಳು ಮಾತ್ರ ಪ್ರಕಟವಾದಂತಾಯಿತು. ಮುಂದೆ ಹತ್ತು ವರ್ಷಗಳ ತರುವಾಯ, ಡಾ। ಬಿ. ಬಿ. ಹೆಂಡಿ ಅವರು, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ತಾವು ಕೈಕೊಂಡ ಜನಪದ ಸಾಹಿತ್ಯ ಯೋಜನೆಯಡಿ ಸಂಗ್ರಹವಾದ ಹಾಡುಗಳನ್ನು ಆಯ್ದುಕೊಂಡು **'ಆಯ್ದ ಜನಪದ ಕಥನ ಗೀತೆಗಳು'** (೧೯೭೮) ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿರುವ ಮೂರು ಹಾಡುಗಳಲ್ಲಿ ಒಂದು ಲಾವಣಿ ಸೇರಿಕೊಂಡಿದೆ. ಎರಡು ಹಾಡುಗಳು ಮಾತ್ರ ಹೆಣ್ಣುಮಕ್ಕಳ

ಕಥನಗೀತೆಗಳಾಗಿವೆ. ಇಲ್ಲೂ 'ಚೆನ್ನಮ್ಮನ ದಂಡಿ' ಕಥೆಯ ಪಾಠವೊಂದಿದ್ದು, ಇನ್ನೊಂದು 'ಈಸುರಾಯನ ಪದ' ಇದೆ. ಡಾ. ಬಸವರಾಜ ಮಲಶೆಟ್ಟಿ ಅವರು **'ಇಜಿಯಣ್ಣನ ಹಾಡು'** (೧೯೮೭) ಎಂಬ ಒಂದು ಕಥಾನಕವನ್ನು ಸಂಪಾದಿಸಿ ಪ್ರಕಟಿಸಿದ್ದು, ಇದು ಡಾ. ಹೆಂಡಿ ಅವರ ಸಂಗ್ರಹದಲ್ಲಿರುವ ಈಸುರಾಯನ ಹಾಡಿನ ಒಂದು ಭಿನ್ನ ಅವತಾರವಾಗಿದೆ. ಮತ್ತೆ ಐದು ವರ್ಷಗಳ ನಂತರ ಡಾ. ಶಶಿಕಲಾ ಮೋಳ್ದಿ ಅವರು ಕಲಬುರಗಿಯ ಸುತ್ತಮುತ್ತಲಿನ ಗ್ರಾಮಗಳ ಹತ್ತಿಪ್ಪತ್ತು ಹೆಣ್ಣುಮಕ್ಕಳಿಂದ ಸಣ್ಣ ಸಣ್ಣ ಕಥನ ಕಾವ್ಯಗಳನ್ನು ಸಂಗ್ರಹಿಸಿ, **'ಹರದೆಯರ ಹಾಡುಗಳು'** (೧೯೮೭) ಎಂಬ ಹೆಸರಿನಲ್ಲಿ ೩೪ ಕಥಾನಕಗಳ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಉತ್ತರಕರ್ನಾಟಕದಿಂದ ಪ್ರಕಟವಾದ ಅತ್ಯುತ್ತಮವಾದ ಸಂಗ್ರಹಗಳಲ್ಲಿ ಇದು ಗಮನ ಸೆಳೆಯುತ್ತದೆ. ಈ ಹಾಡುಗಳ ಕೇಂದ್ರಬಿಂದು ಸ್ತ್ರೀ ಬದುಕಿನ ಕೌಟುಂಬಿಕ ಸಮಸ್ಯೆಗಳೇ ಆಗಿರುವುದು ಈ ಕೃತಿಯ ಬೆಲೆಯನ್ನು ಹೆಚ್ಚಿಸಿದೆ. ಇನ್ನೊಂದು ಸಂಗ್ರಹ ಬೀದರ ಜಿಲ್ಲೆಯಲ್ಲಿ ಸಂಗ್ರಹಿಸಿದ, ಡಾ. ಜಗನ್ನಾಥ ಹೆಬ್ಬಾಳೆ ಅವರು ಸಂಪಾದಿಸಿದ **'ಬೀದರ ಜಿಲ್ಲೆಯ ಬುಲಾಯಿ ಹಾಡುಗಳು'** (೧೯೯೬) ಕೃತಿಯಲ್ಲಿ ೩೦ ಕಥಾನಕಗಳಿವೆ. ಇಷ್ಟು ಕೃತಿಗಳು ಮಾತ್ರ ಉತ್ತರ ಕರ್ನಾಟಕದಿಂದ ಪ್ರಕಟವಾಗಿವೆ. ಉಳಿದವೆಲ್ಲ ಕೃತಿಗಳು ಮಧ್ಯಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಿಂದಲೇ ಪ್ರಕಟವಾಗಿವೆ.

ದಕ್ಷಿಣಕರ್ನಾಟಕದವರಾದ ಕರಾಕೃ, ಕೃಷ್ಣಮೂರ್ತಿ ಹನೂರ, ಚಿತ್ರದುರ್ಗಜಿಲ್ಲೆಯವರಾದ ಮೈಲಹಳ್ಳಿ ರೇವಣ್ಣ ಇವರೆಲ್ಲ ಗಮನಾರ್ಹವಾದ ಸಂಗ್ರಹಗಳನ್ನು ಪ್ರಕಟಿಸಿದ್ದು, ಅವೆಲ್ಲ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಗ್ರಹಿಸಿದ ಹಾಡುಗಳೇ ಆಗಿವೆ. ಟಿ.ಎಸ್.ರಾಜಪ್ಪ ಅವರು ಕೊಡಗು ಜಿಲ್ಲೆಯಿಂದ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯಿಂದ ಸುಶೀಲಾ ಸೊಂಡೂರು, ಮೈಸೂರು ಜಿಲ್ಲೆಯ ಪಾಂಡವಪುರ ಸುತ್ತಲಿನ ಒಂದೆರಡು ಗ್ರಾಮಗಳಿಂದ ಜಯಲಕ್ಷ್ಮೀ ಸೀತಾಪುರ ಅವರು ಒಂದೊಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಜೀಶಂಪ ಅವರ 'ಖಂಡಕಾವ್ಯಗಳು' ಒಂದು ಈ ಭಾಗದಿಂದಲೇ ಪ್ರಕಟವಾಗಿದೆ.

ಕರಾವಳಿ ಭಾಗದಿಂದ ಡಾ। ಎಲ್. ಆರ್. ಹೆಗಡೆ ಹಾಗು ಡಾ। ಎನ್. ಆರ್. ನಾಯಕ ಅವರ ಕೆಲಸಗಳು ಎದ್ದು ಕಾಣುತ್ತವೆ. ಹೊನ್ನಾವರ ಹಾಗೂ ಬಾಳಿಗಾ ನಗರಗಳ ಸುತ್ತಮುತ್ತಲ ಗ್ರಾಮಗಳಿಂದ ಈ ವಿದ್ವಾಂಸರು, ಅಲ್ಲಿ ವಾಸವಾಗಿರುವ ಬುಡಕಟ್ಟು ಜನಾಂಗ ಹಾಗೂ ಅಸ್ಪೃಶ್ಯ ಕೇರಿಗಳಿಂದ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇಲ್ಲಿರುವ ಒಂದು ತೊಡಕೆಂದರೆ ಇವರ ಹಾಡುಗಳ ಕನ್ನಡ ಭಾಷೆ ಉಳಿದೆಡೆಯ ಕನ್ನಡಿಗರಿಗೆ ಸರಳವಾಗಿ ಓದಲು, ಅರ್ಥೈಸಿಕೊಳ್ಳಲು ಸ್ವಲ್ಪ ತೊಡಕಾಗಿದೆ ಎಂಬುದು. ಉಳಿದಂತೆ ಸಂಪಾದಕರ ಕೆಲಸ ಮಾತ್ರ ಕಡಿಮೆಯದು ಎನಿಸುವುದಿಲ್ಲ.

ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ, ಚಿತ್ರದುರ್ಗ ಹಾಗೂ ಕಾರವಾರ ಜಿಲ್ಲೆಗಳಿಂದಲೇ ಗಮನಾರ್ಹವಾದ ಜನಪದ ಕಥಾನಕಗಳು ಪ್ರಕಟವಾಗಿರುವುದು ಕಂಡುಬರುತ್ತದೆ.

ಹೆಣ್ಣುಮಕ್ಕಳ ಕಥನಕವನಗಳು ಮೊದಲು ಪ್ರಕಟವಾದುದು ಅರ್ಚಕ ಬಿ. ರಂಗಸ್ವಾಮಿ ಅವರ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'** (೧೯೩೩) ಎಂಬ ಕೃತಿಯಲ್ಲಿ. 'ಬೀಸುವ ಹಾಡುಗಳು' ಎಂಬ ಶೀರ್ಷಿಕೆಯಡಿ ಅಂತಹ ಕೆಲವು ಹಾಡುಗಳನ್ನು ಅವರು ತಮ್ಮೂರಿನ ಹೆಣ್ಣುಮಗಳು ಮಾಳಮ್ಮ ಗೌಡತಿ ಅವರಿಂದ ಸಂಗ್ರಹಿಸಿ ಕೊಡುತ್ತಾರೆ. ಆಕೆ ತನಗೆ ಬರುವ, ತ್ರಿಪದಿಯಲ್ಲಿರುವ ಕಥನಾತ್ಮಕ ಹಾಡುಗಳನ್ನು ಹಾಡಿದ್ದಾಳೆ. ಚೆಲುವರಾಯಸ್ವಾಮಿ, ಕೆಂಪಮ್ಮ, ಉತ್ತರದೇವಿ, ಚಾಮುಂಡಿ ದೇವೀರಿ ನಂಜುಂಡ, ಬೆಟ್ಟದ ಪುರದ ಮಲ್ಲಯ್ಯ, ಪತಿವ್ರತೆಯಾದ ಹೆಣ್ಣುಮಗಳು– ಹೀಗೆ ಆರು ದೀರ್ಘ ಕಥೆಯ ಹಾಡಗಳೂ ಬೀಸುವ ಹಾಡುಗಳ ಹೆಸರಿನಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಉತ್ತರದೇವಿ ಕಥೆಯಂತೂ ತುಂಬಾ ಪ್ರಸಿದ್ಧವಾದ ಕಥಾನಕವಾಗಿದೆ. ಉತ್ತರ ಕರ್ನಾಟಕದಲ್ಲಿ ಬೀಸುವ ಹಾಡುಗಳ ಸಂದರ್ಭದಲ್ಲಿ ನಾಲ್ಕೆಂಟು ನುಡಿಗಳ ಸಣ್ಣ ಸಣ್ಣ ಕಥೆಯ ಎಳೆಗಳುಳ್ಳ ಹಾಡುಗಳು ಮಾತ್ರ ಕಾಣುತ್ತವೆ. ದೀರ್ಘವಾದ ಹಾಡುಗಳನ್ನು ಬೀಸುವ ಸಂದರ್ಭದಲ್ಲಿ ಹಾಡಲಾರರು. ಆದರೆ ದಕ್ಷಿಣ ಕರ್ನಾಟಕದಲ್ಲಿ ಕಥನಗೀತೆಗಳನ್ನೂ ಬೀಸುವ ಸಂದರ್ಭದಲ್ಲಿ ಹಾಡುತ್ತಾರೆನ್ನುವುದು ವಿಶೇಷವೆನಿಸುತ್ತದೆ.

೧೯೩೫ ರಲ್ಲಿ ಪ್ರಕಟವಾದ ಹಲಸಂಗಿ ಗೆಳೆಯರ ಮೂರನೇ ಕೊಡುಗೆ **'ಮಲ್ಲಿಗೆ ದಂಡೆ'** ಯಲ್ಲಿ ಇಂತಹ ಏಳು ಉತ್ತಮ ಕಥಾನಕಗಳಿವೆ. ಜೊತೆಗೆ ಭಾವಗೀತೆಗಳು ಭಾಗದ ೩ ಹಾಡುಗಳಲ್ಲಿ ಎರಡು ಹಾಡುಗಳು, 'ಎತ್ತಿನ ಹಾಡು' ಹಾಗೂ 'ಮಳೀ ಹಾಡು' ಇವೂ ಕಥಾನಕಗಳಲ್ಲಿಯೇ ಸೇರುವ ಹಾಡುಗಳಾಗಿವೆ. ಹೀಗಾಗಿ 'ಮಲ್ಲಿಗೆ ದಂಡೆ' ಯಲ್ಲಿ ಒಂಬತ್ತು ಕಥನ ಕಾವ್ಯಗಳಿವೆ ಎಂದೇ ಹೇಳಬೇಕು. ಅವೆಲ್ಲ ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಮಹತ್ವದ ವಿಷಯಗಳನ್ನೊಳಗೊಂಡ ಹಾಡುಗಳೇ ಅಗಿವೆ. ಈ ಸಂಗ್ರಹದಲ್ಲಿರುವ 'ಆಕಳ ಹಾಡು' ಅತ್ಯಂತ ಮಹತ್ವದ ಹಾಡು. ಇದು ನಂತರದಲ್ಲಿ ಹುಟ್ಟಿದ 'ಗೋವಿನ ಹಾಡು' ಕವಿತೆಗೆ ಪ್ರೇರಣೆಯಾಗಿದೆ. ಗೋವಿನ ಹಾಡು ಕವಿತೆ ಬರೆದ ಕವಿ ಸಂಪೂರ್ಣವಾಗಿ ಈ ಆಕಳ ಹಾಡನ್ನು ಅನುಸರಿಸುತ್ತಲೇ ಸೂಕ್ಷ್ಮವಾದ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. 'ಆಕಳ ಹಾಡು' ತಾಯಿ ಮೌಲ್ಯವನ್ನೇ ಎತ್ತರದಲ್ಲಿಟ್ಟು ಸಾರಲು ಬಯಸುತ್ತದೆ. 'ಗೋವಿನ ಹಾಡು' ತಾಯಿ ಬದಲಾಗಿ ಸತ್ಯವೆಂಬ ಸಾಮಾಜಿಕ ಮೌಲ್ಯವನ್ನು ಸಾರಲು ಬಯಸುತ್ತದೆ. ಅಲ್ಲಿಯ ಕರು ತಾಯಿಯನ್ನು ನೀನು ಹುಲಿಯಲ್ಲಿಗೆ ಹೋಗುವುದೇ ಬೇಡ ಎಂದು ಹೇಳುತ್ತದೆ. ಆದರೆ 'ಆಕಳ ಹಾಡು' ಕವಿತೆಯ ಕರು ನೀನು ಇದ್ದಲ್ಲಿ ನಾನಿರುವೆ ಎಂದು ತಾಯಿಯೊಂದಿಗೆ ಹೊರಟು ಬರುತ್ತದೆ. 'ಆಕಳ ಹಾಡು' ಕಥಾನಕದಲ್ಲಿ ಕೊನೆಯಲ್ಲಿ ಹುಲಿ ಬೆಟ್ಟದಿಂದ ಹಾರಿ ಸಾಯದೆ, ಉಪವಾಸವನ್ನು ಆಚರಿಸಿ ಪ್ರಾಯಶ್ಚಿತ್ತವನ್ನು ಪಡೆಯುತ್ತದೆ. 'ಮಳೀ ಹಾಡು' ಹಾಗೂ 'ಬರಗಾಲದ ಹಾಡು' ಎಂಬ ಎರಡೂ ಹಾಡುಗಳು ಮಳೆ ಬರದೇ ಬರಗಾಲ ಬಿದ್ದಾಗ, ನಮ್ಮ ಬದುಕು ಹೇಗಾಗುತ್ತದೆ ಎಂಬ ವಾಸ್ತವವನ್ನು ವಿವರಿಸುತ್ತವೆ. ಇಲ್ಲಿ ಗಮನ ಸೆಳೆಯುವ ಹಾಡು 'ಅಕ್ಕಮಹಾದೇವಿ ಹಾಡು'. ಇದು ೧೨ನೇ ಶತಮಾನದ ಶರಣೆ ಅಕ್ಕಮಹಾದೇವಿಗೆ ಸಂಬಂಧಿಸಿದ ಹಾಡಾಗಿದ್ದು, ಶರಣರ ಹಾಡೊಂದು ಇಷ್ಟು ಹಳೆಯ

ಕಾಲಕ್ಕೆ ದಾಖಲಾಗಿರುವುದು ಮುಖ್ಯಸಂಗತಿಯಾಗಿ ಕಾಣುತ್ತದೆ.

ಕರ್ನಾಟಕದ ಸಂಸ್ಕೃತಿಯ ಶೋಧದಲ್ಲಿ ತೊಡಗಿದ ದೇವುಡು ಅವರ ಕಣ್ಣುಗಳು ಜನಪದ ಸಾಹಿತ್ಯ, ಅವರ ನಡೆ-ನುಡಿ, ನಂಬುಗೆ-ಆಚರಣೆಗಳ ಮೇಲೆ ಬಿದ್ದದ್ದು ಒಂದು ಐತಿಯಾಸಿಕ ಸತ್ಯಸಂಗತಿಯಾಗಿದೆ. **'ಕರ್ನಾಟಕ ಸಂಸ್ಕೃತಿ'** (೧೯೩೫) ಎಂಬ ಕೃತಿಯಲ್ಲಿಯ 'ಕೊಣವೇ ಗೌಡನ ಕಥೆ', ಗೀಜಗನ ಹಾಡು, ದೀವಳಿಗೆ ಲಾವಣಿ'- ಈ ಮೂರು ಕಥಾನಕಗಳು ಹೆಣ್ಣುಮಕ್ಕಳು ಹಾಡಿಕೊಳ್ಳುವ ಕಥನಪರವಾದ ಹಾಡುಗಳೇ ಆಗಿವೆ. ದೇವುಡು ಅವರು 'ಇತರ ಹಾಡುಗಳು' ಭಾಗದಲ್ಲಿ ಹೀಗೊಂದು ಟಿಪ್ಪಣಿ ಬರೆದಿದ್ದಾರೆ: "ಹೊಲಗದ್ದೆ ಕಾಯುವುದು, ದನ ಕುರಿ ಮಂದೆ ಕಾಯುವುದು, ನಾಟಿ, ಕುಯ್ಲು ಮೊದಲಾದ ಸಂದರ್ಭಗಳಲ್ಲಿ, ವಿಶೇಷವಾಗಿ ಹೆಂಗುಸರು ಹೆಂಗುಸರೇ ಇರುವಾಗ, ಹಾಡಿಕೊಳ್ಳುವ ಹಾಡುಗಳಿವು. ಹಾಗೆಯೇ ದೇವತಾ ಪೂಜನಾದಿಗಳಲ್ಲಿಯೂ ಬರುವುದುಂಟು" (ಪು.೧೨೭). ಈ ಅವರ ಟಿಪ್ಪಣಿ ನಮಗೆ ಕಥನಗೀತೆಗಳ ಸಂದರ್ಭವನ್ನು ಹೇಳಿಕೊಡುವುದರಿಂದ ಇವು ಹೆಣ್ಣುಮಕ್ಕಳು ಹಾಡುವ ಕಥನ ಗೀತೆಗಳೇ ಆಗಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ನಂತರ ಬಿ.ಎಂ.ಶ್ರೀ ಅವರು **'ಕನ್ನಡ ಬಾವುಟ'** ಎಂಬ ಕನ್ನಡ ಮಾದರಿ ಕಾವ್ಯ ಸಂಗ್ರಹವನ್ನು ಸಂಪಾದಿಸಿ ಪ್ರಕಟಪಡಿಸಿದ್ದು ೧೯೩೮ ರಲ್ಲಿ. ಅದರ ಎರಡನೇ ಮುದ್ರಣವಾದದ್ದು ೧೯೪೦ ರಲ್ಲಿ. ಈ ಸಂದರ್ಭದಲ್ಲಿ ಬಿ.ಎಂ.ಶ್ರೀ ಅವರು 'ನಾಡಪದಗಳಿಂದ' ಎಂಬ ಮೂರನೆಯ ವಿಭಾಗವನ್ನು ಸೃಷ್ಟಿಸಿಕೊಂಡು, ಅದರಲ್ಲಿ ನಾಲ್ಕು ಜನಪದ ಹಾಡುಗಳನ್ನು ಸೇರಿಸಿಕೊಂಡಿದ್ದಾರೆ. ಇದರಲ್ಲಿ 'ಗೋವಿನ ಹಾಡು' ಹಾಗೂ 'ಕೋಲಾಟದ ಪದ: ಕೆರೆಗೆ ಹಾರ' ಎಂಬ ಎರಡು ಕಥನಕಾವ್ಯಗಳನ್ನು ಹಾಕಿಕೊಂಡಿದ್ದಾರೆ. ಅದರಲ್ಲೂ 'ಕೋಲಾಟದ ಪದ: ಕೆರೆಗೆ ಹಾರ' ಎಂಬ ಹಾಡು ಪ್ರಸಿದ್ಧವಾದ ಜನಪದ ಕಥನಕಾವ್ಯವಾಗಿದೆ. 'ಕೆರೆಗೆ ಹಾರ' ಎಂಬ ಹೆಸರಿನ ಹಿಂದೆ ಹಚ್ಚಿರುವ 'ಕೋಲಾಟದ ಪದ' ಎಂಬ ವಿಶೇಷಣವನ್ನು ಗಮನಿಸಿ, ಅದು ಆ ಹಾಡು ಹಾಡುವ ಸಂದರ್ಭವನ್ನು ಹಾಗೂ ಕೋಲೆಣ್ಣ ಹಾಡುಗಳನ್ನು ನಿರ್ದೇಶಿಸುತ್ತಿದೆ. ಈ ಹಾಡಿನಲ್ಲಿ ಕಿರಿಯ ಸೊಸೆ ಭಾಗೀರತಿ ಕೆರೆಗೆ ಹಾರವಾಗುವುದು, ಅವಳ ಜೊತೆ ಗಂಡ ಮಹಾದೇವರಾಯ ನೀರಿಗೆ ಹಾರಿ ಪ್ರಾಣ ಬಿಡುವುದು ಮುಖ್ಯ ಸಂಗತಿಗಳಾಗಿ ತೋರುತ್ತವೆ. ಈ ಹಾಡನ್ನು ಬೆಟಗೇರಿ ಕೃಷ್ಣಶರ್ಮ ಅವರು ಮೊದಲು ಸಂಗ್ರಹಸಿ ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದರೆಂದು ತಿಳಿದುಬರುತ್ತದೆ. ಆದು ಒಂದು ಕೃತಿಯಲ್ಲಿ ಅಧಿಕೃತವಾಗಿ ಪ್ರಕಟವಾದುದು 'ಕನ್ನಡ ಬಾವುಟ'ದ ೧೯೪೦ರ ಎರಡನೇ ಪರಿಷ್ಕೃತ ಮುದ್ರಣದಲ್ಲಿ.

ಪೂರ್ಣ ಪ್ರಮಾಣದ ಜನಪದ ಸಾಹಿತ್ಯದ ಸಂಗ್ರಹ ಮತ್ತು ಅಧ್ಯಯನಗಳನ್ನು ಪ್ರಾರಂಭಿಸಿದವರು ಡಾ. ಬಿ.ಎಸ್.ಗದ್ದಗಿಮಠ ಅವರು ಎಂಬುದನ್ನು ಕನ್ನಡ ಸಾರಸ್ವತ ಲೋಕ ಮರೆಯುವಂತಿಲ್ಲ. ಗದ್ದಗಿಮಠ ಅವರಿಗೆ ಹಾಡುಗಳೆಂದರೆ ಪಂಚಪ್ರಾಣ. ಇದಕ್ಕೆ ಕಾರಣ ಅವರ ಮನೆಯಲ್ಲಿ ಜನಪದ ಹಾಡುಗಾರಿಕೆಯ ಸಂಪ್ರದಾಯವಿರುವುದು. ಅವರ ಇಬ್ಬರು ಅಜ್ಜಿಯರು, ತಂದೆ ಸಾವಳಿಗೆಯ್ಯ ಇವರೆಲ್ಲ ಅತ್ಯುತ್ತಮ ಹಾಡುಗಾರರು.

ಹೀಗಾಗಿ ಹೆಣ್ಣುಮಕ್ಕಳು ಹಾಡುವ ಎಲ್ಲ ಬಗೆಯ ಹಾಡುಗಳನ್ನು ಅವರು ಸಂಗ್ರಹಿಸಿದ್ದಾರೆ. ಈ ಹಾಡುಗಳನ್ನೇ ಕುರಿತು ಅವರು ಕರ್ನಾಟಕದಲ್ಲಿಯೇ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಥಮ ಪಿಎಚ್.ಡಿ. ಯನ್ನು ಪಡೆದಿದ್ದಾರೆ. ಇದಲ್ಲದೆ ಕೆಲವು ಸಂಶೋಧನಾತ್ಮಕ ಪ್ರಬಂಧಗಳನ್ನೂ ಬರೆದಿದ್ದಾರೆ.

ಹೆಣ್ಣುಮಕ್ಕಳು ಹಾಡುವ ಜನಪದ ಕಥನಕಾವ್ಯಗಳ ಸಂಗ್ರಹವೊಂದನ್ನು ಡಾ. ಬಿ.ಎಸ್.ಗದ್ದಗಿಮಠ ಅವರು **'ನಾಲ್ಕು ನಾಡಪದಗಳು'** ಎಂಬ ಹೆಸರಿನಲ್ಲಿ ೧೯೫೨ ರಲ್ಲಿಯೇ ಪ್ರಕಟಿಸಿದ್ದಾರೆ. ಈ ದೃಷ್ಟಿಯಿಂದ ಕಥನ ಗೀತೆಗಳ ಒಂದು ಸಂಗ್ರಹ ಇಷ್ಟು ಬೇಗ ಪ್ರಕಟವಾಗಿರುವುದು ಇದೇ ಮೊದಲೆಂದು ತೋರುತ್ತದೆ. ಇಲ್ಲಿಯ ಹಾಡುಗಳನ್ನು ಹಾಡುವ ಸಂದರ್ಭವನ್ನು ಸಂಪಾದಕರು ಹೀಗೆ ವಿವರಿಸುತ್ತಾರೆ: "ಈಗ ಪುಸ್ತಕ ರೂಪವಾಗಿ ಬಂದ ನಾಲ್ಕು ಮುಗ್ಧ ಶರಣರ ಹಾಡುಗಳನ್ನು ಸನ್ನಿವೇಶಕ್ಕೆ ಸರಿಯಾಗಿ ಕೆಳಗಿನ ಪಲ್ಲವಿಗಳನ್ನು ಹಾಕಿ ಹಾಡುವರು. ಹೆಣ್ಣುಮಕ್ಕಳ ಹಿಮ್ಮೇಳವು ಅವರ ಹಿಂದೆ ಪಲ್ಲವಿಗಳ ಸೋ ಎತ್ತುವರು:

ಈ ಪುಸ್ತಕದಲ್ಲಿ ಬಂದ ಹಾಡುಗಳಿಗೆ ಬಳಿಸುವ ಪಲ್ಲವಿಗಳು :

೧. ಶಿವಧೋ ಹರ ಶಿವಧೋ।

೨. ಶಿವಲಿಂಗವೆ ಶಿವಭಜನೆ ।

೩. ಶಿವನೆ, ಶರಣರ ಶಿವಕಾಯಕ।

೪. ಶಿವನೆ ಶಿವನೆ, ಕೈಲಾಸ ಶಿವನೆ ಶಿವಲಿಂಗ ಶಿವನೆ।

೫. ನಾಗಭೂಷಣನವ್ವ ಶಿವಗಣದೊಡೆಯನು।

೬. ಸುವ್ವೀ ಬಾ ಸುವ್ವೀ ಕೋಳಿ ಕೂಗುವಾಗ, ಬೆಳಗಾಗುವಾಗ।

೭. ಕೋಳಿ ಕೂಗುವಾಗ ಬೆಳಗಾಗುವಾಗ।

೮. ಸಾಗಿ ಸದ್ಗುರು ಯೋಗಿ ಬಂದರ ಹೋಗಿ ನೋಡೋಣ
ಗುರುಮೋಕ್ಷವ ಬೇಡುಣ।

ಮೊದಲಾದ ಈ ಶಿವಸೊಲ್ಲುಗಳ ಪಲ್ಲವಿಗಳನ್ನು ಅವರ ಹಾಡುಗಳ ಮುಖಾಂತರ ಕೇಳಿಯೇ ತಣಿಯಬೇಕಲ್ಲದೆ ಇಲ್ಲಿ ಬರೆಯಲಸಾಧ್ಯ. ಈ ಹಾಡುಗಳು ತ್ರಿಪದಿಗಳಲ್ಲಿವೆ. ಆದುದರಿಂದ ಕರ್ನಾಟಕದ ಯಾವದೇ ಭಾಗದಲ್ಲಿಯ ಹೆಣ್ಣುಮಕ್ಕಳು, ತಮಗೆ ಗೊತ್ತುಳ್ಳ ಜನಪದ ಪಲ್ಲವಿಗಳನ್ನು ಸಹಜವಾಗಿ ಕೂಡಿಸಿ, ಈ ಹಾಡುಗಳನ್ನು ಹಾಡಬಹುದು. **'ಕೋಲು ಕೋಲ'**, **'ರನ್ನದ ಕೋಲು ಕೋಲೆನ್ನ ಕೋಲ'** ಮೊದಲಾದ ಕೋಲು ಪಲ್ಲವಿಗಳನ್ನಾಗಲಿ, ಮತ್ತೆ ಬೇರೆ ಯಾವೇ ಪಲ್ಲವಿಗಳನ್ನಾಗಲಿ ಹಾಕಿ ಹಾಡಲು ಬರುವದು. ಈ ಹಾಡುಗಳನ್ನು ವಿಶೇಷವಾಗಿ ಶ್ರಾವಣ ಮಾಸದಿಂದ ದೀಪಾವಳಿಯ ವರೆಗೆ ಭಕ್ತಿಯಿಂದ ಹಾಡುವ ವಾಡಿಕೆಯುಂಟು. ಇದಲ್ಲದೆ ಹಾಡುಬಲ್ಲ ಕೆಲವು ಹೆಣ್ಣುಮಕ್ಕಳು ಈ ಹಾಡುಗಳನ್ನು ಬೇಸಿಗೆಯಲ್ಲಿ ಹತ್ತಿಯ ಹೊಲಗಳಲ್ಲಿ ಹತ್ತಿಯ ಬಿಡಿಸುವಾಗಾಗಲಿ, ಅಥವಾ ಗೋದಿಯ ಹೊಲಗಳಲ್ಲಿ ಗೋದಿಯ ಕೀಳುವಾಗಾಗಲಿ ದಣಿವಾರಿಸಲು ಹಾಡುವ ವಾಡಿಕೆಯೂ ಇದೆ" (ಪು.೨೦). ಈ ವಿವರಗಳನ್ನು ಗಮನಿಸಿದರೆ ಈ ಹಾಡುಗಬ್ಬಗಳ ಜೊತೆಗೆ ಡಾ. ಗದ್ದಗಿಮಠರ ಪಿಎಚ್.ಡಿ. ಪ್ರಬಂಧ **'ಕನ್ನಡ ಜಾನಪದ ಗೀತಗಳು'**(೧೯೬೩) ಅನುಬಂಧದ

ರೂಪದಲ್ಲಿ ಪ್ರಕಟವಾದ ೧೧ ಶರಣರ ಹಾಡುಗಳು, ಹಾಗೂ ಅರ್ಜುನ ಜೋಗಿ ಹಾಡು ಕೂಡ ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಮತ್ತು ಅದೇ ರೀತಿಯಲ್ಲಿಯೇ ಹಾಡುತ್ತಿದ್ದರೆಂದು ತೋರುತ್ತದೆ. ಇದರಿಂದಾಗಿ ಈ ಕಥನಕಾವ್ಯಗಳು ತ್ರಿಪದಿ ಛಂದಸ್ಸಿನಲ್ಲಿರುವುದರಿಂದ ಅವುಗಳನ್ನು ವಿವಿಧ ಧಾಟಿಗಳಲ್ಲಿ ಹಾಡಲು ಸಾಧ್ಯವಿರುವುದರಿಂದ ಈ ಹಾಡುಗಳನ್ನು ಸಮಯವರಿತು, ಸಂದರ್ಭಕ್ಕೆ ತಕ್ಕಂತಹ ಧಾಟಿಗಳಲ್ಲಿ ಹಾಡುತ್ತಿದ್ದರೆಂದು ತೋರುತ್ತದೆ.

ಇಲ್ಲಿಯೇ ಇನ್ನೊಂದು ಮಾತನ್ನು ಹೇಳಿಬಿಡುವುದು ಅವಶ್ಯವೆಂದು ತೋರುತ್ತದೆ. ಈ ಕೃತಿಯಲ್ಲಿರುವ ನಾಲ್ಕು ಹಾಡುಗಳನ್ನು ಮತ್ತು ಪಿಎಚ್.ಡಿ. ಪ್ರಬಂಧದಲ್ಲಿರುವ ೧೧ ಶರಣರ ಹಾಡುಗಳನ್ನು ರಚಿಸಿದವರು ತಮ್ಮ ತಂದೆಯವರಾದ ಸಾವಳಿಗಯ್ಯ ಗದ್ದಗಿಮಠ ಎಂಬುದನ್ನು ಡಾ. ಬಿ.ಎಸ್. ಗದ್ಗಿಮಠ ಅವರು ಸ್ಪಷ್ಟವಾಗಿ ಬರೆದಿದ್ದಾರೆ:

೧. ನನ್ನ ತಂದೆಯು ತನ್ನ ಚಿಕ್ಕವ್ವನ ಆಶೀರ್ವಾದದ ಬಲದಿಂದ ಹಾಡುಗಳನ್ನು ಹಾಡಹತ್ತಿದ್ದಲ್ಲದೆ ಸ್ವತಃ ಅನೇಕ ಶಿವಶರಣರ ಚರಿತೆಗಳನ್ನು ಸುಗ್ಗಿಯ ಕಾಲದಲ್ಲಿ ಹಂತಿಯ ಹಾಡರೂಪವಾಗಿ ಹಾಡುತ್ತ ಬಂದರು. (ಪು.೧೭)

೨. ನಮ್ಮ ಭಾಗದ ಅನೇಕ ಹಳೇ ರೈತರು **ನನ್ನ ತಂದೆಯ ಹಾಡುಗಳನ್ನು ಕೇಳಿಕೊಂಡು ಕಲಿತು ಹಾಡುತ್ತಿದ್ದರು.** ಆದರೆ ...ಈ ಹಾಡುಗಳು ನಮ್ಮ ಭಾಗದಲ್ಲಿ ಮರೆಯಹತ್ತಿ, ಒಂದೊಂದು ಬಿಡಿಬಿಡಿ ಪದ್ಯಗಳಾಗಿ ಈಗ ಹರಕುಮುರುಕಾಗಿ ಹೋಗಿವೆ. (ಪು.೧೮)

೩. ನನ್ನ ಅಜ್ಜಿಯ ಮತ್ತು ತಂದೆಯ ಹಾಡುಗಳನ್ನು ಕೇಳಿ, ...ನನ್ನ ತಾಯಿಯು ಮತ್ತು ಅವಳ ಮೂವರು ಗೆಳತಿಯರು ...ನನ್ನ ತಂದೆಯ ಕೆಲವು ಹಂತಿಯ ಹಾಡುಗಳನ್ನು ಶಿವನ ಸೊಲ್ಲುಗಳ ಪಲ್ಲವಿಗಳಲ್ಲಿ ಜೋಡಿಸಿ, ಜನಪದದ ನೂರೊಂದು ರಾಗಗಳಲ್ಲಿ ಹಾಡುವುದನ್ನು ನಾವು ಕೇಳಬಹುದು.

೪. ಈ ಜನಪದ ಕವಿಯು ತನ್ನ ಹಾಡುಗಳಲ್ಲಿ ಎಲ್ಲಿಯೂ ತನ್ನ ವ್ಯಕ್ತಿತ್ವದ ಸಂಬಂಧ ಹೆಚ್ಚಿಗೆ ಹೇಳಲು ಹೋಗಿಲ್ಲ. ...ಹೂಗಾರ ಮಾದಯ್ಯನ ಹಾಡಿನಲ್ಲಿ (ಇನ್ನೂ ಅಚ್ಚಾಗಿಲ್ಲ) ಕೊನೆಯ ಕೆಲವು ಪದ್ಯಗಳಲ್ಲಿ ತನ್ನ ಸಂಬಂಧ ಕೆಲವು ಸಂಗತಿಗಳನ್ನು ಮಾತ್ರ ಈ ಕವಿಯು ಹೇಳಹೋಗಿದ್ದಾನೆ.

ರಾಚಯ್ಯ ನಿನ ಮಗನು ಊಚ ಸಾವಳಿಗೇಶ
ಕೋಚೆತ್ತಿ ಕಣಕೆ ಹಾಡಿದನು। ಬೆಳತನಕ
ನಾಚಿ ಕತ್ತಲೆಯು ಬೆಳಗಾಯ್ತು

ನನ್ನ ಕಾಯಕ ಕೇಳೊ ನನ್ನಿಯಲಿ ಹಾಡುವದು
ಕುನ್ನಿ ನಾ ಜನಕೆ ಅಕ್ಕರವ। ಕಲಿತಿಲ್ಲ
ಸುನ್ನಿ ಬರೆಯುದಕೆ ಕೈಯಲ್ಲಿ

೫. ಮುಡಿಪು: ಕಣ್ಮರೆಯಾದ 'ಕುರಿತೋದದ' ಜನಪದ ಕವಿ ತೀ॥ ಕೈ॥ ಸಾವಳಿಗಯ್ಯ ರಾಚಯ್ಯ ಗದ್ದಗಿಮಠ ಕೇರೂರು.

ನಿಮ್ಮ ಹಂತಿಯ ಹಾಡು ಗುಮ್ಮ ಎದೆಯೊಳಗುಳಿದು
ನೆಮ್ಮದಿಯ ಹಾದಿ ಉಸುರಾಗಿ। ನನ್ನಪ್ಪ
ಸುಮ್ಮನಿರಲಿಲ್ಲ ಎದೆಯೊಳಗೆ

ತಂದೆ ನಿಮ್ಮಡಿಗಳಿಗೆ ತಂದಿರುವೆ ನಿಮ್ಹಾಡ
ಕಂದಯ್ಯನೆಂದು ಬಿಗಿದಪ್ಪು। ಹಾಡುದಕೆ
ಮುಂದೆನಗೆ ಹರಸು ಮಮತೆಯಲಿ

ಈ ಎಲ್ಲ ಮಾತುಗಳಿಂದ ಡಾ। ಬಿ.ಎಸ್.ಗದ್ದಗಿಮಠ ಅವರ ತಂದೆಯೇ **'ನಾಲ್ಕು ನಾಡ ಪದಗಳು'** ಕೃತಿಯಲ್ಲಿಯ ಹಾಡುಗಳನ್ನು ರಚಿಸಿದವರು ಎಂಬುದು ಸ್ಪಷ್ಟವಾಗುತ್ತದೆ. ಇದರ ಜೊತೆಗೆ ಅವರ ಪಿಎಚ್.ಡಿ.ಪ್ರಬಂಧದಲ್ಲಿ ಹಾಕಿರುವ ೧೧ ಶರಣರ ಹಾಡುಗಳನ್ನು ಸೇರಿಸಿದರೆ, ೧೫ ಹಾಡುಗಳನ್ನು ರಚನೆ ಮಾಡಿದವರು ಸಾವಳಿಗಯ್ಯ ಎಂಬುದು ಸ್ಪಷ್ಟವಾಗುತ್ತದೆ. ಅವರು ರಚಿಸಿ ಹಾಡುತ್ತಿದ್ದ ನೂರಾರು ಶರಣರ ಹಾಡುಗಳನ್ನು ಕಾಳಜಿ ವಹಿಸಿ ಸಂಗ್ರಹಿಸಿಟ್ಟಿದ್ದರೆ, ಕನ್ನಡ ಸಾಹಿತ್ಯಕ್ಕೆ ಸಾವಳಿಗೆಯ್ಯನವರ ಕೊಡುಗೆ ತುಂಬಾ ಗಮನಾರ್ಹವೆನಿಸುತ್ತಿತ್ತು. ಈಗಲೂ ಈ ೧೫ ಕಥಾನಕಗಳನ್ನು ಒಂದೆಡೆ ಮುದ್ರಿಸಿ, ಓದುಗರ ಕೈಗೆ ಕೊಟ್ಟರೆ ಸಾವಳಿಗೆಯ್ಯ ಅವರ ಕೊಡುಗೆ ಗಮನಾರ್ಹವೇ ಎನಿಸುತ್ತದೆ.

ಡಾ। ಬಿ.ಎಸ್. ಗದ್ದಿಗಿಮಠ ಅವರು ಸಂಗ್ರಹಿಸಿದ **'ಜನಪದ ಕವಯಿತ್ರಿ ಶಿವಶರಣೆ ಶಾವಂತ್ರಾದೇವಿ ಹಾಡಿದ ಮಲ್ಲಮಲ್ಲಾಣಿ'** ಎಂಬ ಕಥನಕಾವ್ಯವನ್ನು ೧೯೫೯ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ ಶೀರ್ಷಿಕೆಯಲ್ಲಿಯೇ ಇದರ ಕರ್ತೃ ಸಾವಂತ್ರಾದೇವಿ ಎಂಬುದು ಸ್ಪಷ್ಟವಾಗುತ್ತದೆ. ಈಕೆ ಬಿ. ಎಸ್. ಗದ್ದಗಿಮಠ ಅವರ ಅಜ್ಜಿ. ತಂದೆಯ ತಾಯಿಯ ತಂಗಿ. ತೀರ ಪ್ರತಿಭಾವಂತೆ. ಬಿ.ಎಸ್.ಗದ್ದಿಗಿಮಠ ಅವರ ತಂದೆಯನ್ನು ಸಾಕಿ ಸಲುಹಿ, ಅವರಿಗೆ ಹಾಡಿನ ಲಯಗಳನ್ನು ಎರದಾಕೆ ಈಕೆಯೆ. ಆಕೆಯೂ ನಿರಕ್ಷರಿಯೆ. ತಾನು ಕೇಳಿದ ಮಲುಹಣ ದೇವನ ಕಥೆಯನ್ನು ಈ ಬಗೆಯಲ್ಲಿ ಜನಪದ ಹಾಡಾಗಿಸಿದ್ದಾಳೆ.

ಡಾ. ದೇವೇಂದ್ರಕುಮಾರ ಹಕಾರಿ ಅವರು ಗದ್ದಗಿಮಠ ಅವರು ತಮ್ಮ ತಂದೆ ಸಾವಳಿಗೆಯ್ಯ ಕೃತವೆಂದು ಹೇಳುವ ಕೆಲವು ಶರಣರ ಹಾಡುಗಳನ್ನು ಪ್ರಕಟಿಸಿದ್ದು, ಅವುಗಳನ್ನು ತಾವು ನೇರವಾಗಿ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿರುವುದಾಗಿ ಬರೆದುಕೊಂಡಿದ್ದಾರೆ. ಹೀಗಾಗಿ ಸಾವಳಿಗೆಯ್ಯ ಈ ಹಾಡುಗಳ ನಿರ್ಮಾಪಕರು ಎಂಬುದನ್ನು ಅವರು ಒಪ್ಪಿಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಹೀಗಾಗಿ ಇವು ಸಾವಳಿಗೆಯ್ಯ ಕೃತವೇ ಅಲ್ಲವೆ ಎಂಬುದನ್ನು ಶೋಧಿಸುವ ಅವಶ್ಯಕತೆ ಉಳಿದುಕೊಳ್ಳುತ್ತದೆ. ಜೊತೆಗೆ ಬಿ.ಎಸ್.ಗದ್ದಗಿಮಠ ಅವರು ದಾಖಲಿಸುವಂತೆ 'ಮಲ್ಲಮಲ್ಲಾಣಿ' ಗೀತೆಯನ್ನೂ ಶಾವಂತ್ರಾದೇವಿ ಕೃತವೇ ಅಲ್ಲವೇ ಎಂಬುದನ್ನೂ ಸ್ಪಷ್ಟಪಡಿಸಿಕೊಳ್ಳಬೇಕೊಳ್ಳುವುದು ಸಂಶೋಧನೆಯ ದೃಷ್ಟಿಯಿಂದ ಸುರಕ್ಷಿತವೆನಿಸುತ್ತದೆ.

'ಮಲ್ಲಮಲ್ಲಾಣಿ' ಕೃತಿಯಲ್ಲಿ ಒಟ್ಟಿಗೆ ಸುಮಾರು ೩೦೦ ತ್ರಿಪದಿಗಳಿವೆ. ಇವುಗಳನ್ನು ನಾನಾ ಬಗೆಯ ಸೊಲ್ಲುಗಳೊಂದಿಗೆ ಹಾಡುತ್ತಿದ್ದರೆಂಬ ಸೂಚನೆಗಳೂ ಇಲ್ಲಿ ದೊರೆಯುತ್ತವೆ.

ಅಲ್ಲದೆ ಪಾರಂಪರಿಕ ಪುಣ್ಯ ಕಥಾನಕಗಳಿಗೆ ಹಚ್ಚುವ– ಹಾಡು ಆಲಿಸುವುದರಿಂದ ಪುಣ್ಯ ಬರುವುದೆಂದೂ ಹಾಡನ್ನು ನಿರಾಕರಿಸುವುದರಿಂದ ಪಾಪ ತಗಲುವುದೆಂದೂ ಹಾಡುವ ನುಡಿಗಳನ್ನು ಸೇರಿಸಿಕೊಳ್ಳಲಾಗಿದೆ.

ಹೊಟ್ಟೆಯೊಳಗಿನ ಹಾಡ ಬಿಟ್ಟು ಬಿಡದಲೆ ಹಾಡಿ
ಮುಟ್ಟಿಸಬೇಕ ಕಲಿತರುಣವ ।ಇಲದಿರಕ
ಹಾಡ ಹಿಂಗ್ಯಾವ ಬಾಯಾಗ

ಸತ್ಯವಂತ ಶರಣರ ಉತ್ತುಮರ ಹಾಡುಗಳ
ನಿತ್ಯದಲಿ ಹಾಡಿ ಮುಕುತಿಯ ।ದೊರಕಿಸಲು
ಗೊತ್ತಿನ ಹಾದಿ ನಿಮಗವ್ವ

ಡಾ. ಬಿ.ಎಸ್. ಗದ್ದಗಿಮಠ ಅವರದೇ ಇನ್ನೊಂದು ಹಾಡುಗಳ ಸಂಗ್ರಹ **'ಲೋಕಗೀತೆಗಳು'** ೧೯೬೦ ರಲ್ಲಿ ಪ್ರಕಟವಾಗಿದೆ. ಇದರಲ್ಲಿ 'ಕನ್ನಡ ಸೋಬಾನಗಳು' ಮತ್ತು 'ಕನ್ನಡ ಕೋಲುಪದಗಳು' ಎಂಬ ಎರಡು ದೊಡ್ಡ ವಿಭಾಗಗಳಿವೆ. ಇವುಗಳನ್ನು ಪ್ರತ್ಯೇಕವಾಗಿ ಒಂದೊಂದು ಕೃತಿಯಾಗಿ ಪ್ರಕಟಿಸಬೇಕೆಂಬ ಯೋಜನೆಯಿತ್ತೆಂಬುದು ೧೯೫೯ ರಲ್ಲಿ ಪ್ರಕಟವಾದ ಅವರ 'ಮಲ್ಲಮಲ್ಲಾಣಿ' ಸಂಗ್ರಹದ ಬೆನ್ನುಪುಟದಲ್ಲಿ ಮುದ್ರಿಸಿದ ಮಾಹಿತಿಯಿಂದ ತಿಳಿದುಬರುತ್ತದೆ. 'ಕೋಲುಪದಗಳು' ಎಂಬ ಭಾಗದಲ್ಲಿ ೧೧೬–೨೨೩ ಪುಟಗಳ ವ್ಯಾಪ್ತಿಯಲ್ಲಿ 'ಕೋಲೆಣ್ಣ ಪದಗಳು' ಇವೆ. ಅಂದರೆ ಜನಪದ ಕಥನಗೀತೆಗಳೇ ಇವೆ. ಗದ್ದಗಿಮಠ ಅವರು ಈ ಹಾಡುಗಳನ್ನು 'ಕೋಲು ಪದಗಳು' ಎಂದು ಕರೆದಿರುವುದು ಗಮನಾರ್ಹ. ಅಂದರೆ ಬಾಂಬೆಕರ್ನಾಟಕದಲ್ಲೂ ಕಥನ ಗೀತೆಗಳನ್ನು ಹಾಡುವಾಗ 'ಕೋಲೆಣ್ಣ ಕೋಲ', 'ಕೋಲ ಕೊಲೆಣ್ಣ ಕೋಲ' ಮುಂತಾದ ಸೊಲ್ಲುಗಳು ಹತ್ತುವವಲ್ಲದೆ, ಅವರೇ ಹಿಂದೆ ಹೇಳಿದಂತೆ ಹಬ್ಬಗಳ ಬಿಡುವಿನ ವೇಳೆಯಲ್ಲಿ, ಮತ್ತು ಹೊಲಮನೆ ಕೆಲಸಗಳ ಸಂದರ್ಭದಲ್ಲಿ ಹೆಣ್ಣುಮಕ್ಕಳು ಇವನ್ನು ಹಾಡಿಕೊಳ್ಳುತ್ತಾರೆ ಎಂಬ ಮಾತನ್ನು ಗಮನಿಸಿದರೆ, ಇಡೀ ಉತ್ತರ ಕರ್ನಾಟಕದಲ್ಲಿ ಈ ಕಥನ ಕಾವ್ಯಗಳನ್ನು ಹಾಡಿಕೊಳ್ಳುವ ಸಂದರ್ಭಗಳು, ಅವುಗಳಿಗೆ ಹೆಸರಿಸುವ ರೀತಿಗಳು ಒಂದೇ ಬಗೆಯಾಗಿವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕಥನ ಗೀತಗಳನ್ನು: ೧. ಗೌರಿಸೀಗೆಯ ಕೋಲುಪದಗಳು (ಬೆಳದಿಂಗಳ ಕೋಲುಪದಗಳು), ೨. ನಾಡ ಕೋಲು ಪದಗಳು, ೩. ಕಿತ್ತೂರ ಕೋಲುಪದಗಳು ಎಂದು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಸೀಗಿಗೌರಿಗೆ ಸಂಬಂಧಿಸಿದ ಕಥನಕಾವ್ಯಗಳನ್ನು 'ಹಬ್ಬದ ಹಾಡುಗಳು' ಎಂದು ವಿಂಗಡಿಸಿಕೊಂಡು, ಅಲ್ಲಿ ಚರ್ಚೆ ಮಾಡಲಾಗಿದೆ. ಗಂಗೆ ಗೌರಿ ಹಾಡುಗಳನ್ನು ಕೂಡ ಸಾಮಾನ್ಯವಾಗಿ ಇತರ ಕಥನಕಾವ್ಯಗಳು ಹಾಡುವ ಸಮಯದಲ್ಲೂ ಹಾಡಲಾಗುತ್ತದೆ. ಇಲ್ಲಿಯ **'ನಾಡ ಕೋಲು ಪದಗಳು'** ಸಂಗ್ರಹದಲ್ಲಿ ಕೌಟುಂಬಿಕ, ಸಾಮಾಜಿಕ, ಬಲಿ, ಶೃಂಗಾರ ಮುಂತಾದ ಸಂಗತಿಗಳಿಗೆ ಸಂಬಂಧಿಸಿದ ಹಾಡುಗಳಿವೆ. ಮೊದಲನೇ ಹಾಡು 'ಮಲವ್ವೆ ಸೆಟ್ಟಿ'. ತಂಗಿ ಇನ್ನೂ ಆಡುವ ಕೂಸಿರುವಾಗ, ಅಣ್ಣನು ವ್ಯಾಪಾರಕ್ಕೆಂದು ಹೋಗುತ್ತಾನೆ. ತನಗೆ ಮೆಚ್ಚಿಗೆಯಾದ ಬಸವಿಯೊಬ್ಬಳ ಮನೆಗೆ ಹೋಗಿ, ಪರಿಚಯವಾಗಿ, ಆಕೆ ತನ್ನ ತಂಗಿ ಎಂಬುದು

ತಿಳಿದುಬರುತ್ತದೆ. ಪಶ್ಚಾತ್ತಾಪ ಪಟ್ಟು, ದೇವರ ಪೂಜೆ ಮಾಡಿ ಮನಸ್ಸಿನ ಕಲ್ಮಶವನ್ನು ತೊಳೆದುಕೊಳ್ಳುತ್ತಾನೆ. ಹತ್ತೆಂಟು ಹಾಡುಗಳಲ್ಲಿ ಕೆಲವು ಸಣ್ಣ ಹಾಡುಗಳೂ ಸೇರಿಕೊಂಡಿವೆ. ಇವು ಹುಡುಗರು ಹಾಕುವ ಕೋಲಾಟದ ಹಾಡುಗಳಂತೆ ತೋರುತ್ತವೆ. ಇಂಥವುಗಳ ವಿವರಗಳನ್ನು ಸಂಪಾದಕರು ಸ್ಪಷ್ಟವಾಗಿ ಬರೆದಿಲ್ಲ. ಈ ಬಗೆಗೆ ಅವರಿಗೆ ಸ್ಪಷ್ಟ ಕಲ್ಪನೆ ಇರಬಹುದು. ಆದರೆ ಅದನ್ನು ಇಲ್ಲಿ ಸ್ಪಷ್ಟಗೊಳಿಸದೆ ಇರುವುದು, ವಕ್ತಾರರ ಮಾಹಿತಿ ಕೊಡದೆ ಇರುವುದು ಇಲ್ಲಿ ದೊಡ್ಡ ಕೊರತೆಗಳಾಗಿ ಕಾಣುತ್ತದೆ. ಮುಂದೆ 'ಕಿತ್ತೂರ ಕೋಲುಪದಗಳು' ಎಂಬ ಕೊನೆಯ ಭಾಗದಲ್ಲಿ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಐತಿಹಾಸಿಕ ಸಂಗತಿಗಳನ್ನು ಈ ಹಾಡುಗಳಲ್ಲಿ ವಿವರಿಸಲಾಗಿದೆ. ಮಲ್ಲಸರ್ಜನ ಸೆರೆ ಒಯ್ದದ್ದು, ರುದ್ರವ್ವ ರಾಣಿಯ ಅಂತ್ಯ, ಈರಪ್ಪ ದೇಸಾಯಿ, ಮಲ್ಲಸರ್ಜನ ಮರಣ, ಚನ್ನವ್ವ ರಾಣಿ, ದತ್ತಕ ಮಗನ ಪಟ್ಟ ಈ ಮುಂತಾದ ಕಥೆಗಳಿವೆ. ಹೀಗಾಗಿ ಇವೆಲ್ಲ ಕಥನಕಾವ್ಯಗಳೇ ಆಗಿವೆ. ಆದುದರಿಂದ ಡಾ| ಬಿ.ಎಸ್. ಗದ್ದಗಿಮಠ ಅವರು ಕಥನಕಾವ್ಯಗಳನ್ನು ಸಂಗ್ರಹಿಸಿ, ಪ್ರಕಟಿಸಿದವರಲ್ಲಿ ಮೊದಲಿಗರೆನಿಸುತ್ತಾರೆ.

ಸ್ವಾತಂತ್ರ್ಯಾನಂತರದ ಪೀಳಿಗೆಯಲ್ಲಿ ಜನಪದ ಹಾಡುಗಳ ಸಂಗ್ರಾಹಕರಲ್ಲಿ ಉತ್ತರ ಕರ್ನಾಟಕದಲ್ಲಿ ಡಾ. ಬಿ.ಎಸ್.ಗದ್ದಗಿಮಠ ಅವರ ನಂತರ ದಕ್ಷಿಣ ಕರ್ನಾಟಕದಲ್ಲಿ ಕರಾಕೃ ಅವರ ಹೆಸರು ತುಂಬಾ ವ್ಯಾಪಕವಾಗಿ ಕಂಡುಬರುತ್ತದೆ. ಅವರು ೧೯೫೦ರ ಸುಮಾರಿಗೆ ಸುಮಾರು ಹತ್ತು ಸಂಗ್ರಹಗಳನ್ನು ಪ್ರಕಟಿಸಿದ್ದರೆಂಬ ಮಾಹಿತಿಗಳು ದೊರೆಯುತ್ತವೆ. ಕರಾಕೃ ಅವರು ವ್ಯಾಪಕವಾಗಿ ಜನಪದ ಹಾಡುಗಳ ಸಂಗ್ರಹಣೆಗಾಗಿ ಕ್ಷೇತ್ರಕಾರ್ಯಕ್ಕೆ ತಿರುಗಿದಂತೆ ತೋರುತ್ತದೆ. ಅವರ ಜೊತೆಗೆ ಯಾಗಾಗಲೂ ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅವರು ಅಡ್ಡಾಡಿದ್ದಾರೆ. ಜೀ.ಶಂ.ಪರಮಶಿವಯ್ಯ ಅವರು ಆಗಾಗ ಜೊತೆಯಲ್ಲಿ ಕಾಣುತ್ತಾರೆ. ಅಂದರೆ ಈ ಮೂವರೂ ಸ್ನೇಹಿತರಾಗಿದ್ದಾರೆ. ಕರಾಕೃ ಅವರಿಗೆ ಕಥನಕಾವ್ಯಗಳ ಬಗೆಗೆ ಹೆಚ್ಚು ವ್ಯಾಮೋಹವಿರುವಂತೆ ತೋರುತ್ತದೆ. ನನ್ನಮುಂದೆ ಅವರ ನಾಲ್ಕು ಕಥನ ಕಾವ್ಯಗಳ ಸಂಗ್ರಹಗಳಿವೆ. ೧೯೬೨ ರಲ್ಲಿ **'ಜನಪದ ಗೀತೆಗಳಲ್ಲಿ ಮಹಾಭಾರತ'**, ೧೯೬೩ರಲ್ಲಿ **'ಗುಡ್ಡಾಡಿನ ಹಾಡ್ಗತೆಗಳು'**, ೧೯೬೪ರಲ್ಲಿ **'ಅಣಜಿ ಹೊನ್ನಮ್ಮ'**, ೧೯೬೫ರಲ್ಲಿ **'ಚೆನ್ನಿಗ ಚೆಲುವಯ್ಯ'** ಹೀಗೆ ನಿರಂತರವಾಗಿ ಪ್ರತಿವರ್ಷ ಜನಪದ ಕಥನಗೀತೆಗಳ ಸಂಗ್ರಹಗಳನ್ನು ಅವರು ಪ್ರಕಟಿಸಿದ್ದಾರೆ. ಅವರ ಕೃತಿಗಳ ಒಂದು ವಿಶೇಷತೆಯೆಂದರೆ, ಎಲ್ಲವಕ್ಕೂ ಸುಂದರವಾದ ರೇಖಾಚಿತ್ರಗಳನ್ನು ಹಾಕಿರುವುದು. ಮುಖಪುಟ, ಬೆನ್ನುಪುಟ, ಒಳಪುಟಗಳಲ್ಲಿ ಮತ್ತೆ ಅಲ್ಲಲ್ಲಿ ಅಲ್ಲಲ್ಲಿ ಕಥೆಗಳಿಗೆ ಅನುಸಾರವಾಗಿ ಸುಂದರವಾದ ರೇಖಾ ಚಿತ್ರಗಳನ್ನು ಕಲಾವಿದರಿಂದ ಬರೆಸಿ ಹಾಕಿದ್ದಾರೆ. ಕೆಲವು ಚಿತ್ರಗಳಿಗೆ ಪಿ.ಆರ್. ತಿಪ್ಪೇಸ್ವಾಮಿಗಳ ಸಹಿ ಇದೆ. ಕೆಲವಕ್ಕೆ ಆರ್. ಎಸ್. ನಾಯ್ಡು ಅವರ ಸಹಿ ಇದೆ. ಇನ್ನೂ ಕೆಲವಕ್ಕೆ ಇರುವ ಸಹಿಗಳು ಅರ್ಥವಾಗುತ್ತಿಲ್ಲ. ಇದನ್ನು ಗಮನಿಸಿದರೆ, ಹಲವಾರು ಕಲಾವಿದರನ್ನು ಅವರು ಬಳಸಿಕೊಂಡಿದ್ದಾರೆ ಎನಿಸುತ್ತದೆ. ಕೃತಿಗಳು ಸುಂದರವಾಗಿ ಬರಬೇಕೆಂಬ ಕರಾಕೃ ಅವರ ದೃಷ್ಟಿ ವಿಶೇಷವಾಗಿದೆ. ಅವರೊಬ್ಬರನ್ನು ಬಿಟ್ಟರೆ ಈ ಬಗೆಯ ಸೌಂದರ್ಯದ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಂತೆ ತೋರುವುದಿಲ್ಲ. ಈ ಕೃತಿಗಳೆಲ್ಲ ಪ್ರಕಟಿಸಿದ್ದು, 'ಜನಪದ ಅಕಾಡೆಮಿ'

ರಾಜಾಜಿನಗರ, ಬೆಂಗಳೂರು ಎಂದಿದೆ. ಅಂದರೆ ಜನಪದ ಸಾಹಿತ್ಯ ಕೃತಿಗಳ ಪ್ರಕಟನೆಗಾಗಿಯೇ ಹುಟ್ಟಿಕೊಂಡ ಸಂಸ್ಥೆ ಇದಾಗಿರುವಂತೆ ತೋರುತ್ತದೆ. ಕರಾಕೃ ಅವರ ಕೃತಿಗಳು ತುಂಬಾ ಜನಪ್ರಿಯವಾದಂತೆ ತೋರುತ್ತದೆ. ಅವೆಲ್ಲ ಎಂಟ್ಹತ್ತು ವರ್ಷಗಳ ಅವಧಿಯಲ್ಲಿ ಎರಡ್ಮೂರು ಸಲ ಮುದ್ರಣಗೊಂಡಿರುವುದು ಕಂಡುಬರುತ್ತದೆ. ಹೀಗಾಗಿ ಕರಾಕೃ ಅವರ ಕೊಡುಗೆ ಮಹತ್ವದ್ದೆಂದು ತೋರುತ್ತದೆ. ಆದರೆ ನನಗೆ ಅವರ ಕೆಲವು ಕೃತಿಗಳು ಮಾತ್ರ ದೊರಕಿಸಿಕೊಳ್ಳಲು ಸಾಧ್ಯವಾಗಿದೆ.

೧೯೫೫ರಲ್ಲಿಯೇ ಅವರ **'ಜಾನಪದ ಕಥನ ಗೀತೆಗಳು'** ಪ್ರಕಟವಾದ ದಾಖಲೆ ಸಿಗುತ್ತಿದೆ. ಆದರೆ ಆ ಪುಸ್ತಕ ನಮ್ಮ ಅವಸರಕ್ಕೆ ದೊರಕಿಲ್ಲ. ೧೯೬೨ರಲ್ಲಿ ಪ್ರಕಟವಾದ **'ಜನಪದ ಗೀತೆಗಳಲ್ಲಿ ಮಹಾಭಾರತ'** ಎಂಬ ಸಂಗ್ರಹವಿದೆ. ಒಳಗಡೆ ಬೇರೆ ಬೇರೆ ಕಲಾವಿದರು ಹಾಡಿದ ಸುಭದ್ರೆ, ಅರ್ಜುನ, ದ್ರೌಪತಿ, ಜೋಗಯ್ಯ ಎಂಬ ನಾಲ್ಕು ಕಥನಗೀತೆಗಳಿವೆ. ಅವರು ಕೃತಿಗೆ ಕೊಡುವ ಹೆಸರನ್ನು ನೋಡಿದರೆ, ಎಲ್ಲ ಕಥಾನಕಗಳು ಸೇರಿ 'ಒಂದು ಕೃತಿ' ಎಂಬ ಭಾವನೆ ಸಂಪಾದಕರಿಗೆ ಇದ್ದಂತೆ ತೋರುತ್ತದೆ. ಫಿನ್ಲೆಂಡಿನ ಜಾನಪದ ಮಹಾಕಾವ್ಯ 'ಕಲೆವಾಲ'ದ ಸಂಪಾದನೆ ಕೂಡ ಹೀಗೆಯೇ ಆಗಿರುವುದು. ಅದಕ್ಕಾಗಿ ಒಂದು ಮಹಾಕಾವ್ಯದ ಎಳೆಯನ್ನು ಈ ಕೃತಿಯಲ್ಲಿ ಕರಾಕೃ ಕಂಡಂತೆ ಭಾಸವಾಗುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಹೆಣ್ಣುಮಕ್ಕಳು ಹಾಡಿದ ಸುಭದ್ರೆ, ಅರ್ಜುನ ಮತ್ತು ದ್ರೌಪತಿ ಈ ಮೂರು ಹೊಸ ಕಥನಕವನಗಳನ್ನು ಸಂಗ್ರಹಿಸಿದ್ದು ಚಿತ್ರದುರ್ಗ ಜಿಲ್ಲೆಯ ಬೇರೆ ಬೇರೆ ಗ್ರಾಮದ ವಕ್ತಾರರಿಂದ ಎಂಬ ಸಂಗತಿ ಕುತೂಹಲಕಾರಿಯಾಗಿದೆ. ಜೋಗಯ್ಯ ಒಂದನ್ನು ಮಾತ್ರ ಚಾಮರಾಜನಗರದ ಭಾಗದಿಂದ ಸಂಗ್ರಹಿಸಿದ್ದಾಗಿದೆ. ನಂತರದಲ್ಲಿ ಅನೇಕರು ಕಥನಕಾವ್ಯಗಳನ್ನು ಸಂಗ್ರಹಿಸಿದ್ದು ಚಿತ್ರದುರ್ಗ ಜಿಲ್ಲೆಯಿಂದಲೇ ಎಂಬುದು ನಮಗೆ ತಿಳಿದುಬರುವ ಸಂಗತಿ. ಅಂದರೆ ಚಿತ್ರದುರ್ಗ ಪ್ರದೇಶವು ಕಥನಕಾವ್ಯಗಳಿಗೆ ತುಂಬಾ ಪ್ರಸಿದ್ಧವಾದ ಜಿಲ್ಲೆ ಎಂಬುದನ್ನೂ ಇಲ್ಲಿ ನೆನಪಿಡಬೇಕು.

ಈ ಕೃತಿಯಲ್ಲಿ ಮಹಾಭಾರತದ ಕಥೆಗಳಿಗೆ ಸಂಬಂಧಿಸಿದ ಎಲ್ಲ ಹಾಡುಗಳು ಒಂದೆಡೆ ಇರಲಿ ಎಂಬ ಉದ್ದೇಶದಿಂದ ಈ ಮೊದಲೇ ಪ್ರಕಟವಾಗಿದ್ದ 'ಜೋಗಯ್ಯ' ಕಥಾನಕವನ್ನು ಇಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಜೋಡಿಸಿದ ಕಥನಕಾವ್ಯಗಳ ಕ್ರಮದಲ್ಲಿ ಒಂದು ಸಣ್ಣ ಮಾರ್ಪಾಡು ಮಾಡಿಕೊಳ್ಳಬಹುದಿತ್ತು. ಅದೆಂದರೆ ಮೊದಲಿಗೆ ಹಾಕಿದ ಸುಭದ್ರೆ ಕಥಾನಕವನ್ನು ಮೂರನೆಯ ಸ್ಥಾನದಲ್ಲಿ ಇಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

'ಅರ್ಜುನ' ಕಥಾನಕದಲ್ಲಿ ದ್ರೌಪದಿಯನ್ನು ಮದುವೆಯಾಗಿ ಮನೆಗೆ ತರುವ ಕಥೆಯಿದೆ.

ಹುಟ್ಟಿದ ಹನ್ನೆರಡು ವರುಷಕೆ ನಿಸ್ತ್ರೆ ಸೂತಕವಾದಳು
ಬುಕ್ಕಪಟ್ಟಣದೊಳ್ಗೆ ಇರಬಾರದೆಂದೇಳಿ
ಅವರಪ್ಪ ಸಾರುತಾನೆ।

ಆರು ಸಾವಿರ ಹೊನ್ನ ಅವರಪ್ಪಯ್ಯ ಎತ್ತಿಗೆ ಏರಿಕೊಂಡು
ಸಾಲೇಳು ಸಮುದ್ರ ತಿರುಗಿ ನಾ ಬಂದೆ
ಈ ತಂಗ್ಯಮ್ಮಗೆ ವರನಿಲ್ಲವೆ।

ತುಪ್ಪ ಬೋನವುಂಡು ಪಟ್ಟೆ ಮಂಚದಲ್ಲಿದ್ದೆ
ಅಷ್ಟೆಂಬೊ ಅಡವಿಯಾಗೆ । ಹೇಗಿರುವೆಯೆಂದು
ಅವರ ತಾಯಮ್ಮ ಅಳುತಾಳೆ

ಋತುಮತಿಯಾಗುವ ಮೊದಲೇ ಆಕೆಗೆ ಮದುವೆಯಾಗಲಿಲ್ಲವೆಂದು ಅರಣ್ಯಕ್ಕೆ ಬಿಟ್ಟುಬರುತ್ತಾರೆ. ಅರಣ್ಯದಲ್ಲಿ ಬೇಟೆಗಾಗಿ ಹೋದ ಅರ್ಜುನ ಅಡವಿಯಲ್ಲಿದ್ದ ದ್ರೌಪದಿಯನ್ನು ಕಂಡು ಮೋಹಿಸಿ, ಮದುವೆಯಾಗಿ, ಅಣ್ಣ ತಮ್ಮಂದಿರೊಂದಿಗೆ ತಾಯಿಯಲ್ಲಿಗೆ ಹೋಗಿ ಸಮಾಚಾರ ತಿಳಿಸುತ್ತಾರೆ:

ಹೆಣ್ಣ ತಂದಿವ್ನಿ ಹೆಣ್ಣು ನಮ್ಮಮ್ಮ
ಈ ಹೆಣ್ಣ ಒಳಗೆ ಕರೆಯೆ।
ಹೆಣ್ಣ ತಂದಿದ್ರೆ ಏನಾಯ್ತು ಮಕ್ಕಳಿರಾ
ನೀವು ಪಂಚೈವರು ಹಂಚ್ಕೊಣ್ಣಿರೊ।

ತಾಯಿಯ ಮಾತನ್ನು ಪಾಂಡವರು ಪಾಲಿಸಿದರು. ಇಲ್ಲಿಗೆ ಈ ಕಥೆ ಮುಗಿಯುತ್ತದೆ. ಇದನ್ನು ಹಾಡಿದಾಕೆ ನಾಯಕರ ಗುಡ್ಡದಮ್ಮ. ಈ ಹಾಡಿನ ಕೊನೆಯಲ್ಲಿ ಮತ್ತೆ ದ್ರೌಪದಿ ಅಡವಿ ಸೇರುವ ನುಡಿಗಳು ತಪ್ಪಾಗಿ ಸೇರಿದಂತಿವೆ. ಇವು ದ್ರೌಪದಿಯನ್ನು ಅಡವಿ ಸೇರಿಸುವ ನಿರ್ಧಾರ, ತಾಯಿಯ ಗೋಳಾಟದ ನಂತರ ಬರಬೇಕಾದ ನುಡಿಗಳಾಗಿವೆ. ಸಂಪಾದಕರು ಇದನ್ನು ಗಮನಿಸಿ, ವಕ್ತಾರರೊಂದಿಗೆ ಈ ಬಗೆಗೆ ಚರ್ಚಿಸಿ ನುಡಿಗಳನ್ನು ಮೊದಲೇ ಸರಿಪಡಿಸಬಹುದಿತ್ತು.

ವಡ್ಡರ ವೆಂಕಟಮ್ಮ ಹಾಡಿದ ದ್ರೌಪತಿ ಮೂರನೆಯ ಕ್ರಮದ ಬದಲಾಗಿ ಎರಡನೆಯದಾಗಬೇಕಾಗಿತ್ತು. ಇಲ್ಲಿ ಪಾಂಡವರು ಕೌರವರೊಂದಿಗೆ ಪಗಡೆಯನಾಡಿ ದ್ರೌಪದಿಯನ್ನು ಸೋಲುವುದು, ಪುನಃ ದ್ರೌಪದಿ ತಾನು ಪಗಡೆಯನಾಡಿ ಕೌರವರನ್ನು ಸೋಲಿಸಿ, ಪಾಂಡವರೊಂದಿಗೆ ಅರಮನೆಗೆ ಬರುವ ಕಥೆ ಇದೆ. ಇಲ್ಲೂ ಸೊಗಸಾದ ತ್ರಿಪದಿಗಳೇ ಇವೆ. ಈ ಹಾಡನ್ನು ಪುಣ್ಯಕಥಾನಕದಂತೆ ಹಾಡಿದ ಕುರುಹುಗಳಿವೆ.

ಸತ್ಯವಂತ ಶಿವನುಡಿಯ ಎತ್ತಿ ಹೇಳುವಾಗ
ಅತ್ತೆ ಬೈಯ್ದಳೆಂದು ಮನೆಗೆದ್ದು।ಹೋದವ್ನ
ಕತ್ತೆ ಜನುಮಾಕೆ ಸಮನೆಂದು

ಕೊನೆಯಲ್ಲಿ ದ್ರೌಪದಿ ಗೆದಿಯುವಾಗ, ಎಸೆದ ದಾಳು ದುರ್ಯೋಧನನ ಹಣೆಗೆ ಬಡೆದು, ಗಾಯವಾಗಿ, ಆ ನೆತ್ತರಲ್ಲಿ ತನ್ನ ತಲೆಗೂದಲನ್ನು ಅದ್ದಿ, ತುರುಬು ಕಟ್ಟಿಕೊಳ್ಳುವ ನುಡಿ ತುಂಬಾ ಮಾರ್ಮಿಕವಾಗಿದೆ.

ಬೆಟ್ಟನಲಿ ಹಾಕಿದ ಸಾರೆ ನೆತ್ತೀಗೆ ತಗಿಳ್ಯಾವೆ
ನೆತ್ತಿಯೊಡೆದು ದುರ್ಯೋಧನನ ಹಣೆಯೊಡೆದು।ದ್ರೌಪತಿ
ನೆತ್ತುಲಾಗೆ ಹದ್ದಿ ತುರುಬಿಟ್ಟಾಳು

ಇದು ಜನಪದ ಮಹಾಭಾರತದ ಕಥೆ. ಈಗ ಒಂದನೆಯದಾದ 'ಸುಭದ್ರೆ' ಕಥಾನಕವನ್ನು ಮೂರನೆಯದಾಗಿ ಹಾಕಿದರೆ ಒಂದು ಕ್ರಮ ಬರುತ್ತದೆ. ಈ ಕಥಾನಕದಲ್ಲಿ ಸುಭದ್ರೆ ಗರ್ಭಿಣಿಯಾಗಿ, ಅಭಿಮನ್ಯು ಜನಿಸುವ ಸಂಗತಿಯೇ ಮುಖ್ಯವಾಗಿದೆ. ಇಲ್ಲೂ ಸೊಗಸಾದ ತ್ರಿಪದಿಗಳೇ ಇವೆ.

ಅತ್ತಿಗೆ ಹೆಣ್ಣು ಹಡೆದಾರೆ ನಾ ಗಂಡು ಪಡೆದಾರೆ
ಸತ್ಯ ಪಾಂಡವರ ಗದ್ದೆ ಬೆಳದಾರೆ ।ಅತ್ತಿಗೆ
ಮಾಡೋನ ಮಕ್ಕಳ ಮದ್ವೇಯ

ಬಾಯಿಗಳ ಮಾತು ಬಾಯಲ್ಲಿ ಇದ್ದಂಗೆ
ಮುಂದಲ ಮೂರಲ್ಲಿ ಉದರೊದ್ದ। ಅಭಿಮನ್ಯು
ಮಣಕಾಲು ಚಿಪ್ಪ ಎಗರೊದ್ದ

ಕೊನೆಯಲ್ಲಿ 'ಜೋಗಯ್ಯ' ಎಂಬ ಕಥನಕಾವ್ಯ ಇದೆ. ಇದು ಹೆಣ್ಣುಮಕ್ಕಳು ಹಾಡಿದ ಹಾಡು ಅಲ್ಲ. ಹರಿಜನರ ಕರಿಮಾದ ಹಾಡಿದ ಹಾಡು ಇದು. ೧೯೫೫ರಲ್ಲಿ ಪ್ರಕಟವಾದ 'ಜನಪದ ಕಥನಗೀತೆಗಳು' ಕೃತಿಯಿಂದ, ಮಹಾಭಾರತದ ಕಥೆಗಳೆಲ್ಲ ಒಂದೆಡೆ ಇರಲಿ ಎಂದು ಹಾಕಿಕೊಳ್ಳಲಾಗಿದೆ ಎಂದು ಇಲ್ಲಿ ಟಿಪ್ಪಣಿ ಬರೆದಿದ್ದಾರೆ. ಅರ್ಜುನ ಸನ್ಯಾಸಿ ವೇಷದಲ್ಲಿ ಹೋಗಿ ಹೆಂಗಳೆಯರ ಮನಸ್ಸನ್ನು ಸೂರೆಗೊಳ್ಳುವ ಕಥೆ ಇಲ್ಲಿದೆ. ಮೊದಲಿನ ಮೂರೂ ಹಾಡುಗಳು ತ್ರಿಪದಿಯಲ್ಲಿದ್ದರೆ, ಜೋಗಯ್ಯ ಮಾತ್ರ ಗಂಡಸು ಹಾಡಿದ ಕಾವ್ಯವಾಗಿದ್ದು, ವೃತ್ತಿಗಾಯಕನೊಬ್ಬ ತಂತಿ ವಾದ್ಯದ ಸಹಾಯದೊಂದಿಗೆ ಹಾಡಿದ ಹಾಡಿನಂತೆ ತೋರುತ್ತದೆ. ಸಂಪಾದಕರು ಮಹಾಭಾರತದ ಹಾಡುಗಳೆಲ್ಲ ಒಂದೆಡೆ ಇರಲಿ ಎಂದು 'ಜೋಗಯ್ಯ' ಕಥಾನಕವನ್ನು ಇಲ್ಲಿ ಹಾಕಿದ್ದಾರೆ ಅಷ್ಟೆ.

ಕರಾಕೃ ಅವರ **'ಗುಡ್ಡಾಡಿನ ಹಾಡ್ಗತೆಗಳು'** ೧೯೬೩ರಲ್ಲಿ ಪ್ರಕಟವಾಗಿದೆ. 'ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ಮತ್ತು ಜಗಲೂರು ತಾಲೂಕಿನ ಗುಡ್ಡಗಾಡಿನ ಹಳ್ಳಿಗಳಲ್ಲಿ ಆಯ್ದು ತಂದ ಹಾಡುಗಳು' ಈ ಕೃತಿಯಲ್ಲಿವೆ. ಹಿಂದಿನ ಕೃತಿಯಲ್ಲಿ ವಕ್ತಾರರ ಮಾಹಿತಿಗಳನ್ನಲ್ಲದೆ, ಕ್ಷೇತ್ರಕಾರ್ಯದ ಅನುಭವಗಳನ್ನೂ ಮುದ್ರಿಸಿದ್ದ ಕರಾಕೃ ಅವರು ಅಷ್ಟೊಂದು ದೂರದ ಗುಡ್ಡಗಳ ಮಗ್ಗುಲುಗಳ ಗ್ರಾಮಗಳಿಂದಲೇ ಆಯ್ದುಕೊಂಡ ಹಾಡುಗಳಿಗೆ ವಕ್ತಾರರ ಮಾಹಿತಿ ಕೊಡದೇ ಇರುವುದು ಕೊರತೆಯಾಗಿ ಕಾಣುತ್ತಿದೆ.

೧೯೬೪ರಲ್ಲಿ **'ಅಣಜಿ ಹೊನ್ನಮ್ಮ'** ಒಂದೇ ಕಥೆಯನ್ನೇ ಒಂದು ಪ್ರತ್ಯೇಕ ಕೃತಿಯಾಗಿ ಕರಾಕೃ ಅವರು ಪ್ರಕಟಿಸಿದ್ದಾರೆ. ಇದನ್ನು ರಂಗಮ್ಮ ಮತ್ತು ಜೊತೆಗೆಗಾರ್ತಿ ಶಾಂತಮ್ಮ ಅವರು ಹಾಡಿದ್ದಾರೆ. ಅಣಜಿಯಲ್ಲಿ ಈ ಕಥೆಯ ಮುಖ್ಯ ಪಾತ್ರವಾದ ಹೊನ್ನಮ್ಮನ ಮನೆತನಕ್ಕೆ ಸಂಬಂಧಿಸಿದ ಗೌಡರ ಮನೆ ಈಗಲೂ ಇದೆ ಎಂಬುದು ತುಂಬ ಅಪೂರ್ವ

ಮಾಹಿತಿಯಾಗಿದೆ. ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲೂಕಿನ ಒಂದು ಗ್ರಾಮ ಅಣಜಿ. ಆ ಗ್ರಾಮದ ಹೆಣ್ಣುಮಕ್ಕಳು ಕಥೆಯನ್ನು ಹಾಡಿದರೂ ಪೂರ್ತಿ ಹಾಡಲಿಲ್ಲವಂತೆ. ಮತ್ತೆ ಈ ಕಥೆಯನ್ನು ಹಾಡುವ ವಕ್ತಾರರ ಹುಡುಕಾಟವನ್ನು ಮುಂದುವರೆಸಿ, ಸೂರಗೊಂಡನಹಳ್ಳಿಗೆ ಬಂದು ಮುಟ್ಟುತ್ತಾರೆ. ಅಲ್ಲಿಯ ರಂಗವ್ವ ಮತ್ತು ಶಾಂತಮ್ಮ ಈ ಕಥೆಯನ್ನು ಪೂರ್ತಿಯಾಗಿ ಹಾಡಿದ್ದಾರೆ. ಸ್ತ್ರೀ ಪ್ರಧಾನವಾದ ಕಥೆಗಳು ಸ್ಥಳೀಯವಾದ ಇತಿಹಾಸವನ್ನೇ ಹೇಳುತ್ತವೆ ಎಂಬುದಕ್ಕೆ ಕರಾಕೃ ಅವರು ಅಂತಹ ಒಂದು ಮನೆತನವನ್ನೇ ಹುಡುಕಿ ತೆಗೆದುದು ಅಪೂರ್ವ ಶೋಧವಾಗಿದೆ.

'ಅಣಜಿ ಹೊನ್ನಮ್ಮ' ಕೃತಿ ಒಂದು ಅಪರೂಪದ ದಾಖಲೆ. ಕೃತಿಯ ಮುಖಪುಟ ಚಿತ್ರ ಮತ್ತು ಒಳಚಿತ್ರಗಳು ಕಥೆಗೆ ಅನುಗುಣವಾಗಿವೆ. ಈ ಕೃತಿಗೆ ಬಿ.ಶಿವಮೂರ್ತಿಶಾಸ್ತ್ರಿ ಅವರು 'ಆಶೀರ್ವಚನ' ಬರೆದಿದ್ದಾರೆ. ಜಿ.ಪಿ.ರಾಜರತ್ನಂ ಅವರು ಬೆನ್ನುಡಿ ಬರೆದಿದ್ದಾರೆ. ಡಿ. ಎಲ್. ಎನ್. ಅವರು ಅಭಿಪ್ರಾಯ ಕೊಟ್ಟಿದ್ದಾರೆ. ಡಾ. ಜೀಶಂಪ ಅವರು ಈ ಹಾಡನ್ನು ಒಂದು ಕಥೆಮಾಡಿ ಬರೆದುದನ್ನು ಪ್ರಜಾವಾಣಿ ಪತ್ರಿಕೆಯಿಂದ ಎತ್ತಿಕೊಂಡು ಇಲ್ಲಿ ಪುನಃ ಮುದ್ರಣಗೊಳಿಸಿದ್ದಾರೆ. ಈ ಹಾಡಿನ ಸಂಗ್ರಹಕ್ಕೆ ಹೋದಾಗ ಕರಾಕೃ ಅವರ ಜೊತೆಯಲ್ಲಿ ಇದ್ದ ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಅವರು ತಮ್ಮ ಅನುಭವಗಳನ್ನು ದಾಖಲಿಸಿದಲ್ಲದೆ, ಹಾಡುಗಾರ್ತಿ ರಂಗಮ್ಮನ ರೇಖಾಚಿತ್ರ, ಅವಳು ವಾಸಿಸುವ ಗುಡಸಲಿನ ರೇಖಾಚಿತ್ರಗಳನ್ನು ಕೊಟ್ಟಿದ್ದಾರೆ. ಕಥೆಗೆ ಸಂಬಂಧಿಸಿದಂತೆ ಇನ್ನು ಕೆಲವು ರೇಖಾಚಿತ್ರಗಳೂ ಇವೆ. ಇವೆಲ್ಲ ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ.

ಅಲ್ಲಿಂದ ಉಚ್ಚಂಗಮ್ಮ
ಏನಂದೇ ನುಡಿದಾಳೇ
ಬಾರಪ್ಪ ಕೆಂಚನಗೌಡ
ಅಣಜಿಕೆರೆ ಕಟ್ಟಿಸಬೇಕು

ಹೀಗೆ ಭಾಷೆ ತೆಗೆದುಕೊಂಡಾಕೆ ಉಚ್ಚಂಗಮ್ಮ. ಗೌಡ ಕೆರೆ ಕಟ್ಟಿಸಿದ, ನೀರು ಬರಲಿಲ್ಲ. ಪಂಚಾಂಗ ತೆಗೆಸಿ ಕೇಳಿದ. ಬಲಿ ಕೊಡಬೇಕೆಂದು ಬಂದಿತು. ಯಾರಿಗೆ ಬಲಿ ಕೊಡಬೇಕು ಎಂಬ ಪ್ರಶ್ನೆಗೆ ಉತ್ತರವಾಗಿ ಗೌಡ ತಮ್ಮ ಮನೆಯ ಮಂದಿಯ ಬಗ್ಗೆಯೇ ವಿಚಾರ ಮಾಡಿದ ಹೊರತಾಗಿ ಯಾರಿಗೋ ಬಲಿಕೊಡುವ ವಿಚಾರ ಮಾಡಲಿಲ್ಲ. ತನ್ನ ಹೆಂಡತಿ, ಇರುವ ಒಬ್ಬ ಮಗ ಅಥವಾ ಸೊಸೆ ಇವರಲ್ಲಿ ಯಾರನ್ನು ಬಲಿ ಕೊಡಬೇಕೆಂಬ ವಿಚಾರ ಗೌಡನದು. ಹೆಂಡತಿಗೆ ಕೊಟ್ಟರೆ ತನಗೆ ತೊಂದರೆ, ಇರುವ ಒಬ್ಬ ಮಗನಿಗೆ ಕೊಟ್ಟರೆ ಮನೆತನಕ್ಕೆ ಕೇಡು. ಸೊಸೆಗೆ ಕೊಟ್ಟರೆ ಇನ್ನೊಬ್ಬಳನ್ನು ತರಬಹುದು ಎಂದು ಹೊನ್ನಮ್ಮನಿಗೆ ಬಲಿ ಕೊಡಲು ನಿರ್ಧರಿಸುತ್ತಾನೆ. ಈ ಸುದ್ದಿ ತಿಳಿದ ಹೊನ್ನಮ್ಮ ತನ್ನ ತವರಿಗೆ ಹೋಗಿ ವಿಷಯ ತಿಳಿಸಿ, ತನ್ನ ಗಂಡನಿಗೆ ಏನೂ ಮಾಡಬಾರದೆಂದು ಮನವೊಲಿಸಿ ತಿರುಗಿ ಬರುತ್ತಾಳೆ. ಗಂಡ ವ್ಯಾಪಾರಕ್ಕೆಂದು ನಾಡಿನ ಮೇಲೆ ಹೋಗುತ್ತಾನೆ. ಕೆರೆಗೆ ಪೂಜೆ ಮಾಡಿ, ಮಾವ ಬಿಟ್ಟುಬಂದ ಬಟ್ಟಲು ತರುವಲ್ಲಿ ಹೋದ ಹೊನ್ನಮ್ಮ ಹರಿದು ಬಂದ ನೀರಿನಲ್ಲಿ ಕೊಚ್ಚಿ ಹೋಗುತ್ತಾಳೆ. ಅವಳಿಗೊಬ್ಬ ಗಂಡು ಮಗು ಇದ್ದವನನ್ನೂ ನಂತರ

ಆಕೆ ಕರೆದುಕೊಳ್ಳುತ್ತಾಳೆ. ಆಕೆಯನ್ನು ಗುಡಿಕಟ್ಟಿ ಆರಾಧಿಸುತ್ತಾರೆ. ಗಂಡನಿಗೆ ಹೊನ್ನಮ್ಮನ ತಂಗಿಯನ್ನು ನಿಶ್ಚಯ ಮಾಡಿ, ಕೆರೆಯ ಏರಿಯ ಮೇಲೆಯೇ ಮದುವೆ ಮಾಡುತ್ತಾರೆ.

ಕರ್ನಾಟಕದಲ್ಲಿ ಇಂತಹ ಕಥೆಗಳು ಅನೇಕ ದೊರೆಯುತ್ತವೆ. ಕೆರೆಗೆ ಹಾರವಾದ ಭಾಗೀರತಿಯ ಕಥೆಯಂತೂ ತುಂಬಾ ಪ್ರಸಿದ್ಧವಾಗಿದೆ. ಹೊನ್ನಮ್ಮನ ಕಥೆ ಭಾಗೀರತಿಯ ಕಥೆಯನ್ನು ಬಹುಬಾಗಿ ಹೋಲುತ್ತದೆ. ಇಂಥ ಕಥೆಗಳೆಲ್ಲ ನಿಜವಾದ ಕರ್ನಾಟಕದ ಸಂಸ್ಕೃತಿಯ ಕಥೆಯನ್ನು ಒರೆಯುತ್ತವೆ.

ಕರ್ನಾಟಕದ ಪ್ರಪ್ರಥಮ ಜಾನಪದ ಪ್ರಾಧ್ಯಾಪಕರಾದ ಡಾ. ಜೀ.ಶಂ.ಪರಮಶಿವಯ್ಯ ಅವರು ಬಾಲ್ಯದಿಂದಲೂ ಜನಪದ ಸಾಹತ್ಯದ ಹುಚ್ಚು ಹಿಡಿಸಿಕೊಂಡವರು. ಸ್ವಾತಂತ್ರ್ಯಾ ನಂತರ ೧೯೫೦ರ ಸುತ್ತುಮುತ್ತ ಜನಪದ ಸಾಹಿತ್ಯದ ಸಂಗ್ರಹಣೆಗೆ ತೊಡಗಿದ ದಕ್ಷಿಣ ಕರ್ನಾಟಕದ ಯುವಕರಲ್ಲಿ ಕರಾಕೃ, ಜೀಶಂಪ ಪ್ರಮುಖರಾಗಿ ಕಾಣುತ್ತಾರೆ. ಜೀಶಂಪ ಅವರ ಒಟ್ಟು ಜನಪದ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಗ್ರಹ ಮತ್ತು ಅಧ್ಯಯನಗಳನ್ನು ಗಮನಿಸಿದರೆ, ಕರ್ನಾಟಕದ ಹಳೆಯ ತಲೆಮಾರಿನ ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಶೋಧದಲ್ಲಿ ತೊಡಗಿದ ಹಿರಿಯರ ನಂತರ ಜೀಶಂಪ ಅವರು ಅತ್ಯಂತ ಪ್ರಮುಖ ಸಂಶೋಧಕರಾಗಿ ಕಾಣುತ್ತಾರೆ. ದುರ್ದೈವವೆಂದರೆ ಬರವಣಿಗೆ ಮೂಲದ ಶೋಧನೆಗಳಿಗೆ ಹೆಚ್ಚು ಮಹತ್ವ ಕೊಡುತ್ತ ಬಂದು, ಅಂತಹ ಕೆಲಸ ಮಾಡಿದವರನ್ನೇ ಶ್ರೇಷ್ಠ ಸಂಶೋಧಕರೆಂದು ಕಾಣುವ ಕನ್ನಡದ ಕಣ್ಣಿಗೆ ಡಾ. ಜೀಶಂಪ ಅಂತಹವರ ಮೌಖಿಕ ಪರಂಪರೆಯ ಶೋಧಗಳು ಕಾಣದಿರುವುದು ಕರ್ನಾಟಕ ಕಂಡ ಅನಂತ ದುರಂತಗಳಲ್ಲಿ ಒಂದು. ಜೀಶಂಪ ಅವರು ತಮ್ಮ ಒಂದು ಪಿಎಚ್.ಡಿ.ಪ್ರಬಂಧ ತಯಾರಿಸಲು ಸತತವಾಗಿ ಒಂಬತ್ತು ವರ್ಷಗಳ ವರೆಗೆ ಹಳ್ಳಿಹಳ್ಳಿಗಳನ್ನು ತಿರುಗಾಡಿದ್ದಾರೆ ಎಂಬ ಸಂಗತಿ ನಮ್ಮ ಸಂಸ್ಕೃತಿ ಚಿಂತಕರಿಗೆ ಕಾಣುತ್ತಿಲ್ಲ. ಡಾ. ಜೀಶಂಪ ಅವರ ಪಿಎಚ್‌ಡಿ ಪ್ರಬಂಧವು ಕನ್ನಡದಲ್ಲಿ ಬಂದ ಕರ್ನಾಟಕದ ಸಾಹಿತ್ಯ ಸಂಸ್ಕೃತಿ ಶೋಧಗಳಲ್ಲಿ ಇವತ್ತಿಗೂ ಒಂದನೇ ಸ್ಥಾನದಲ್ಲಿ ನಿಲ್ಲಬಲ್ಲುದು. ಆದರೆ ಶಾಸನ, ಹಳೆಗನ್ನಡ, ಧರ್ಮ–ಜಾತಿಗಳ ಅಭ್ಯಾಸಗಳ ಕಂಟಿಕಮರಿಗಳಲ್ಲಿ ಮೌಖಿಕ ಪರಂಪರೆಯನ್ನು ಶೋಧಿಸಿದ ಕಂಪು ಕನ್ನಡಿಗರ ಮೂಗಿಗೆ ತಲುಪಲೇ ಇಲ್ಲ. ಆದರೆ ಜೀಶಂಪ ಎಂದಾದರೊಂದು ದಿನ ಕನ್ನಡದ ಶ್ರೇಷ್ಠ ಸಂಶೋಧಕರ ಸಾಲಿನಲ್ಲಿ ಪ್ರಥಮರಾಗಿ ಗಣಿಸಲ್ಪಡುತ್ತಾರೆಂಬುದರಲ್ಲಿ ಸಂಶಯವಿಲ್ಲ.

ಡಾ. ಜೀಶಂಪ ಅವರು ಹೆಣ್ಣುಮಕ್ಕಳು ಹಾಡುವ ಕಥನಕವನಗಳನ್ನು ಸಂಗ್ರಹಿಸಿ, ಸಂಪಾದಿಸಿ, ೧೯೬೮ ರಲ್ಲಿ ಪ್ರಕಟಿಸಿದ **'ಜನಪದ ಖಂಡಕಾವ್ಯಗಳು'** ಎಂಬುದು ಏಳು ಕಥಾನಕಗಳ ಸಂಗ್ರಹ. ಇಲ್ಲಿಯ ಕಥನ ಗೀತೆಗಳನ್ನು ಜೀಶಂಪ ಅವರು ಖಂಡಕಾವ್ಯಗಳು ಎಂದು ಕರೆದಿದ್ದಾರೆ. ಆದರೆ ಇವಾವೂ ಖಂಡಕಾವ್ಯಗಳಾಗಿಲ್ಲ. ಈ ಅಧ್ಯಾಯದ ಪ್ರಾರಂಭದಲ್ಲಿಯೇ ವಿವರಿಸಿದಂತೆ ಈ ಹಾಡುಗಳ ದೀರ್ಘ ೧೦–೧೨ ಪುಟಗಳಷ್ಟಿದೆ. ಖಂಡಕಾವ್ಯಗಳ ದೀರ್ಘ ಕನಿಷ್ಠ ೧೫, ೨೦ ಪುಟಗಳಿಂದ ೬೦, ೭೦ ಪುಟಗಳ (ಡೆಮಿ ೧/೮ ಪುಟಗಳ) ವ್ಯಾಪ್ತಿಯನ್ನು ಹೊಂದಿರಬೇಕು. ವೃತ್ತಿಗಾಯಕ ಗಂಡುಮಕ್ಕಳ

ಹಾಡುಗಳಾದರೆ ಅವು ೧೨೦ ಪುಟಗಳವರೆಗೂ ಇರಬಹುದು. ೧೫೦ ರಿಂದ ೨೦೦ ಪುಟಗಳನ್ನು ಮೀರಿದ ವ್ಯಾಪ್ತಿ ಮಹಾಕಾವ್ಯದ ವ್ಯಾಪ್ತಿಗೆ ಒಯ್ದು ನಿಲ್ಲಿಸುತ್ತದೆ.

ತಮ್ಮ ಸಂಗ್ರಹವನ್ನು ಕುರಿತು ಜೀಶಂಪ ಅವರು ಹೀಗೆ ಬರೆದುಕೊಂಡಿದ್ದಾರೆ: "ಅನೇಕ ಸಂಪ್ರದಾಯದ ಕಥೋಪಜೀವಿಗಳು ಸಮಗ್ರರಾತ್ರಿ ಹಾಡುವ ಸುಪ್ರಸಿದ್ಧ ಕಥೆಗಳ ವಿಸ್ತಾರ ಒಂದು ಬಗೆಯದಾದರೆ, ನಾಡಿನ ಹೆಣ್ಣುಮಕ್ಕಳು ತಮ್ಮ ಬದುಕಿಗೆ ಹತ್ತಿರವಾದಂತೆ, ತಮ್ಮ ಹೃದಯದ ರಾಗ ಭಾವಗಳಿಗೆ ಸಮೀಪವರ್ತಿಯಾದಂತೆ ಹಾಡಿಕೊಳ್ಳುವ ಮನೋಜ್ಞ ಕಥನ ಗೀತೆಗಳ ವೈವಿಧ್ಯ ಇನ್ನೊಂದು ಬಗೆಯದು. ತಮ್ಮ ಬಿಡುವಿನ ವೇಳೆಯನ್ನು, ಕೆಲಸದ ಸಂದರ್ಭಗಳನ್ನು, ಸುಂದರ ಕಥೆಗಳನ್ನು ಹಾಡುವುದರ ಮೂಲಕ ಸಾರ್ಥಕ ಪಡಿಸಿಕೊಳ್ಳುವ ಅವರು ವಿಶೇಷವಾಗಿ ಆದರ್ಶ ಸ್ತ್ರೀ ಪಾತ್ರಗಳನ್ನೇ ಪ್ರತಿನಿಧಿಸುವ ಕಥೆಗಳತ್ತ ಹೆಚ್ಚು ಒಲವನ್ನು ತೋರುತ್ತಾರೆ. ಹೆಣ್ಣಿನ ಅನಂತ ದುಃಖವನ್ನು, ಸಂಕಷ್ಟಗಳನ್ನು ತ್ಯಾಗ, ಬಲಿದಾನಗಳನ್ನು ಸಮರ್ಥವಾಗಿ ಚಿತ್ರಿಸುವ ಸಮರ್ಪಕವಾಗಿ ಪ್ರತಿಮಿಸುವ ಅಪರಮಿತ ಕಥನ ಗೀತೆಗಳು ಕನ್ನಡ ಜನಪದ ಸಾಹಿತ್ಯದ ಅನರ್ಘ್ಯ ರತ್ನಗಳೇ ಆಗಿವೆ. ಇಂಥ ಗಂಭೀರ ಸ್ವರೂಪದ ಕಥೆಗಳನ್ನು ಹೆಣ್ಣುಮಕ್ಕಳೇ ಹಾಡಬೇಕೆಂಬುದೇನೂ ಇಲ್ಲ. ಅನೇಕ ಮಂದಿ ಪುರುಷರೂ ಹಾಡುವುದನ್ನು ಗುರುತಿಸಬಹುದು" (ಮೊದಲ ಮಾತು, ಪು.೩). ಜೀಶಂಪ ಅವರ ಕೊನೆಯ ಮಾತನ್ನು ಸ್ವಲ್ಪ ತಿದ್ದಿಕೊಳ್ಳುವ ಅವಶ್ಯಕತೆಯಿದೆ. ಗಂಡುಮಕ್ಕಳು ಈ ಕಥನಕವನಗಳನ್ನು ಹಾಡುವುದು ಅಪರೂಪ. ಇಲ್ಲವೆಂದರೂ ಸರಿಯೇ. ಆದರೆ ಇಲ್ಲಿಯ ಒಂದೆರಡು ಕಥಾನಕಗಳನ್ನು ಒಬ್ಬಿಬ್ಬ ಗಂಡಸರು ಹಾಡಿದ್ದಾರೆ. ಹೀಗೆಯೇ ಇನ್ನೊಂದೆರಡು ಕಡೆ ಒಂದೆರಡು ಹಾಡುಗಳನ್ನು ಗಂಡುಮಕ್ಕಳು ಹಾಡಿದ ನಿದರ್ಶನಗಳೂ ದೊರೆಯುತ್ತವೆ. ಇವನ್ನೆಲ್ಲ ಅಪವಾದಗಳೆಂತಲೇ ಇಟ್ಟುಕೊಳ್ಳಬೇಕು. ಏಕೆಂದರೆ ಶುಭಕಾರ್ಯದ ಸಂದರ್ಭಗಳನ್ನು ಹಿಡಿದುಕೊಂಡು, ಮನೆಯ ಕೆಲಸಗಳಲ್ಲಿ, ಹೊಲದ ಕೆಲಸಗಳಲ್ಲಿ, ಹಬ್ಬದ ಸಂಧರ್ಭಗಳಲ್ಲಿ ಹೆಣ್ಣುಮಕ್ಕಳು ಸೇರಿದಲ್ಲಿ ಮಾತ್ರ ಈ ಹಾಡುಗಳ ಪ್ರಯೋಗವಾಗುತ್ತದೆ. ಜೊತೆಗೆ ಇವೆಲ್ಲ ಹಿಮ್ಮೇಳ ಮುಮ್ಮೇಳದಲ್ಲಿ ಹಾಡುವ ಹಾಡುಗಳು. ಒಬ್ಬ ಪ್ರತಿಭಾವಂತ ಕಲಾವಿದ ಅಕಸ್ಮಾತ್ ತನಗೆ ಅಂತಹ ಅಪರೂಪದ ಅವಕಾಶ ದೊರೆತಾಗ ಒಂದೆರಡು ಹಾಡುಗಳನ್ನು ಕಲಿತುಕೊಂಡಿರಬಹುದು ಅಷ್ಟೇ. ಸ್ತ್ರೀಯರೇ ರಚಿಸುವ ಮತ್ತು ಹಾಡುವ ಅಪರೂಪದ ಕಥನ ಸಾಹಿತ್ಯ ಪ್ರಕಾರ ಇದಾಗಿದೆ. ಭಾರತೀಯ ಸ್ತ್ರೀ ಜೀವನದ ಮಹಾಗಾಥೆ ಕಾಣುವುದೇ ಈ ಕಥೆಗಳಲ್ಲಿ. ಇವತ್ತಿಗೂ ಭಾರತೀಯ ಸ್ತ್ರೀ ಜೀವನವನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ಅರಿಯಬೇಕೆಂದರೆ ನಾವು ಈ ಕಥನಕಾವ್ಯಗಳನ್ನೆ ನೋಡಬೇಕಾಗುತ್ತದೆ ಎಂಬುದು ಮಾತ್ರ ಸತ್ಯ ಸಂಗತಿ.

೧೯೭೦ರ ಕಾಲದಲ್ಲಿ ಡಾ. ಜೀಶಂಪ ಅವರು ಈ ಕೃತಿಗಾಗಿ ಅನುಸರಿಸಿದ ಸಂಪಾದನ ತಂತ್ರ ಕೂಡ ವಿಶಿಷ್ಟವಾಗಿದೆ. ಮೊದಲಿಗೆ ಹಾಡಿನ ಶೀರ್ಷಿಕೆ, ಅದರ ಕೆಳಗೆ ವಕ್ತಾರರ ಮಾಹಿತಿ, ಜೊತೆಗೆ ಸಂಗ್ರಹದ ದಿನಾಂಕ. ಇಷ್ಟಾದ ಮೇಲೆ ಕೆಳಗೆ ಇಡೀ ಕಥೆಯ ಸಾರಾಂಶವನ್ನು ಕೊಟ್ಟಿದ್ದಾರೆ. ಹೀಗೆ ಸಾರಾಂಶ ಕೊಡುತ್ತಲೇ ಮೊದಲಿಗೆ ತಾವು ಕೊಡುತ್ತಿರುವ ಹಾಡಿನ ಪಠ್ಯಗಳ ಪ್ರಸರಣ, ಪ್ರಕಟಣೆ ಇತ್ಯಾದಿಗಳ ಮಾಹಿತಿಗಳನ್ನೂ

ಒದಗಿಸುತ್ತಾರೆ: "ಉತ್ತರದೇವಿ ದಕ್ಷಿಣ ಕರ್ನಾಟಕದ ಸುಪ್ರಸಿದ್ಧ ಜನಪದ ಕಥನ ಗೀತೆ. ಶಿವಮೊಗ್ಗ, ತುಮಕೂರು, ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಆರು ಏಳು ಕೃತಿಗಳು ಈಗಾಗಲೆ ಹಲವು ಕಡೆ ಪ್ರಕಟವಾಗಿವೆ. ೧೯೩೩ರ ಮೇಳೆಗೇ ಶ್ರೀ ಅರ್ಚಕ ರಂಗಸ್ವಾಮಿಯವರು ತಮ್ಮ **'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'** ಕೃತಿಯಲ್ಲಿ ಈ ಕಥನ ಗೀತೆಯನ್ನು ಹೇಮಗಿರಿಯ ಸುತ್ತಿನಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ". ಇಂತಹ ಟಿಪ್ಪಣಿ ಮುಗಿದ ನಂತರ ಕತೆಯ ಸಾರಾಂಶ ಒದಗಿಸುತ್ತಾರೆ. ಮತ್ತೆ ಕೊನೆಯ ಪ್ಯಾರಾದಲ್ಲಿ, ಕಥೆಯ ಉತ್ತಮ ಅಂಶಗಳನ್ನು, ಅದರ ಕೊರತೆಗಳನ್ನು, ಪಾಠದ ಸ್ಥಿತಿಗತಿಗಳನ್ನು ವಿವರಿಸುತ್ತಾರೆ. ಇದರಿಂದ ಓದುಗರಿಗೆ ಕಥೆಯ ಪ್ರವೇಶಿಕೆ ಲಭಿಸಿದಂತಾಗುತ್ತದೆ. ಅಧ್ಯಯನ ಮಾಡುವವರಿಗೆ ಒಂದು ಕಥೆ ಯಾವ ಪ್ರದೇಶದ್ದು, ಯಾವ ಜನಾಂಗದಲ್ಲಿ ಪ್ರಚಲಿತದಲ್ಲಿದೆ. ಪಾಠ ಉತ್ತಮವಾದುದೋ ಅಲ್ಲವೋ ಎಂಬುದು ಗೊತ್ತಾಗುತ್ತದೆ. ಇಷ್ಟಾದ ಮೇಲೆ ಪಠ್ಯವನ್ನು ಕೊಟ್ಟಿದ್ದಾರೆ.

ಸುಮಾರು ಐವತ್ತು ವರ್ಷಗಳ ಹಿಂದೆ, ಬೆಳೆಯುತ್ತಿರುವ ವಿದ್ವಾಂಸರೊಬ್ಬರು, ಅದೇ ಆಗ ಇನ್ನೂ ಕನ್ನಡದಲ್ಲಿ ಗಮನ ಸೆಳೆಯುತ್ತಿದ್ದ ಮೌಖಿಕ ಪರಂಪರೆಯ ಸಾಹಿತ್ಯ ಪ್ರಕಾರವೊಂದರ ಕೃತಿ ಸಂಪಾದನೆಯ ಕಾಲಕ್ಕೆ ವಹಿಸಿದ ಕ್ರಮ ಮತ್ತು ಎಚ್ಚರಿಕೆಗಳು ಮುಂದಿನವರಿಗೆ ದಾರಿದೀಪಗಳಾಗಿವೆ.

ಈ ಕೃತಿಯಲ್ಲಿಯ ಮೊದಲನೇ ಹಾಡು 'ಉತ್ತರದೇವಿ'. ಉತ್ತರೆ ಹೊಸದಾಗಿ ಅತ್ತೆಯ ಮನೆಗೆ ನಡೆಯಲು ಬಂದ ಹೆಣ್ಣೇನೂ ಅಲ್ಲ. ಆಕೆಗೆ ಎರಡ್ಮೂರು ಜನ ಮಕ್ಕಳಿದ್ದಾರೆ. ನೀರಿಗೆ ಹೋದವಳು ಬೇಗ ಬರಲಿಲ್ಲವೆಂದು ಕೋಪಗೊಂಡ ಅತ್ತೆ ತಡವಾದ ಕಾರಣವನ್ನು ಕೇಳಿದಳು. ಅದಕ್ಕೆ ಉತ್ತರೆಯ ಉತ್ತರ ಸ್ಪಷ್ಟವಿತ್ತು:

ಉತ್ತರೆ ನೀರೀಗ್ಹೋಗಿ ಮತ್ಯಾಕ ಬರಲಿಲ್ಲ
ಉತ್ತುರ ದೇಶದ ಮಳೆ ಹೂದು। ಕೆರೆತುಂಬಿ
ಬಸುಳೆ ಮುಳ್ಳಡಿ ಅಡಗಿದ್ದೆ

ಆದರೆ ಇದಕ್ಕೆ ಅತ್ತೆ ಒಪ್ಪಲಿಲ್ಲ. ಮಗ ಬಂದೊಡನೆ ಈ ಸೊಸೆ ನನಗೆ ಬೇಡ ಎಂದಳು. ಮಗನು ಸುಲಭವಾಗಿ ಒಪ್ಪಲಿಲ್ಲ.

ಬಿಟ್ಟು ಬಿಡುಲಾಕೆ ಅವಳ್ಯಾಗೆ ಬಂದಳವ್ವ
ಒಂದರ ವರಾನಿಕ್ಕಿ ತೆರನಿಕ್ಕಿ। ಬಂದಂತೋಳ
ಬಿಟ್ಹೋರುಂಟೇನೆ ಹಡೆದವ್ವ

ಆದರೆ ತಾಯಿಯ ಹಟ ನಿಲ್ಲಲಿಲ್ಲ. ಮಗನ ಪ್ರತಿಕ್ರಿಯೆ ಏನೋ ನಮಗೆ ಹಾಡಿನಲ್ಲಿ ಸ್ಪಷ್ಟವಿಲ್ಲ. ಆದರೆ ಉತ್ತರದೇವಿ ಅತ್ತೆಯ ಮನೆಯನ್ನು ತೊರದು ಹೊರಡುತ್ತಾಳೆ. ಆದರೆ ತಾಯಿಯ ವರ್ತನೆ ಬಗ್ಗೆ ಮಗನಿಗೆ ಬೇಸರವಿದೆ ಎಂಬುದಕ್ಕೆ ಮಾತ್ರ ಕಥೆಯಲ್ಲಿ ಸೂಚನೆಗಳಿವೆ. ಬಳೆ ಮಾರುತ್ತ ಬಂದ ಬಳೆಗಾರನಿಗೆ ಮಗ ಕೊಡುವ ಉತ್ತರ ಹೀಗಿದೆ:

ಬಳಗಾರಶೆಟ್ಟಿ ಬಳೆ ಯಾರಿಗೆ ತಂದೊ
ಬಳೆತೊಡೊ ನಾರಿ ಒಳಗಿಲ್ಲ। ನನ್ನವಳ
ನನ್ನವ್ವ ನನಗೆ ಹಗೆಯಾದಳೆ

ಉತ್ತರದೇವಿ ಮಕ್ಕಳ ಜೊತೆಗೆ ಮನೆ ಬಿಟ್ಟಾಕೆ ತಂದೆಯ ಮನೆಗೆ ಹೋಗಿದ್ದಾಳೆ.

ಬಾಲಾನೆತ್ತಿಕೊಂಡು ನಾರಿಕೈಲಿಡಕೊಂಡು
ಮುಂದಲಚುಕ್ಕಿ ಬೆಳಕಲ್ಲಿ।ಉತ್ತರದೇವಿ
ಹೋದಾಳಪ್ಪಾಜಿ ತೌರಿಗೆ

ತವರಿನ ತಂದೆ, ದೊಡ್ಡಪ್ಪ, ಅಣ್ಣ, ತಮ್ಮ ಯಾರೂ ಆಕೆಗೆ ರಾತ್ರಿ ಕದ ತೆಗೆದು ಒಳಗೆ ಕರೆದುಕೊಳ್ಳಲಿಲ್ಲ. ತಾಯಿಯಲ್ಲಿಗೆ ಹೋದಳು. ಆದರೆ ಈ ಮೊದಲು ತಾಯಿಗೂ ಮಗಳ ಗತಿಯೇ ಆಗಿದೆ. ಆಗ ತಾಯಿ ಹೇಳುತ್ತಾಳೆ:

ಒಂದರಿಬೆ ಹಾಸಿದ್ದೆ ಒಂದರಿಬೆ ಚೆಲ್ಲಿದ್ದೆ
ಒಂದೊರುಷ ನಿನ್ನ ಸಲವಿದ್ದೆ।ಕಂದಮ್ಮ
ನನ್ನಾಡು ನಿನಗೆ ಮಡಗಿತ್ತೆ। ನನಮಗಳೆ
ನೀನುತ್ತರೆ ಮಳೆಯಾಗಿ ಹೊರಡವ್ವ

ಶಿಶುವನೆತ್ತಿಕೊಂಡು ನಾರಿಕೈಲ್ಹಿಡಕೊಂಡು
ಅಪ್ಪಕೊಟ್ಟೆಮ್ಮೆ ಹೊಡಕೊಂಡು। ಉತ್ತರದೇವಿ
ಉತ್ತರೆ ಮಳೆಯಾಗಿ ಹೊರಟಳು

ಈ ಕಥೆ ಸುಖಾಂತವಾಗಿ ಮುಗಿಯುವ ಒಂದು ಪಾಠವೂ ದೊರೆಯುತ್ತದೆಂದು ಸಂಪಾದಕರು ಮೂರು ಹೆಚ್ಚಿನ ನುಡಿಗಳನ್ನು ಕೊಟ್ಟಿದ್ದಾರೆ. ಆದರೆ ಇದರ ಫಲಿತಾಂಶ ಬಹುಶಃ ದುರಂತವೇ ಆಗಿರಲು ಸಾಧ್ಯ. ಹೀಗೆ ಹೆಣ್ಣಿನ ಗೋಳಿನ ಕಥೆಗಳೇ ಈ ಕಥಾನಕಗಳ ಮುಖ್ಯ ವಸ್ತು.

ಹೆಣ್ಣುಮಕ್ಕಳು ಹಾಡುವ ಸ್ತ್ರೀಪ್ರಧಾನ ಜನಪದ ಕಥೆಗಳಲ್ಲಿ ಸ್ತ್ರೀ ಪಾತ್ರಗಳೇ ಪ್ರಮುಖವಾಗಿರುತ್ತವೆ. ಈ ಹೆಣ್ಣುಮಕ್ಕಳೆಲ್ಲ ಮದುವೆಯಾಗಿ ಗಂಡನ ಮನೆಗೆ ಬಂದವರು. ಇವರಿಗೆ ಆವರಿಸುವ ಆತಂಕಗಳೆಲ್ಲ ಗಂಡನ ಮನೆಯಲ್ಲಿ ಹುಟ್ಟಿದ ಆತಂಕಗಳೇ. ಅವರ ಪಾತಿವ್ರತ್ಯವನ್ನು ಅನುಮಾನಿಸುವ, ಬಂಜೆ ಎಂಬ ದೋಷವನ್ನು ಹೊತ್ತು ತೊಂದರೆ ಪಡುವ, ಸತಿ ಹೋಗುವ, ಆಗೋಮಕ್ಕಾಗಿ ಹೆಣದೊಂದಿಗೆ ಮದುವೆಯಾಗುವ, ಕೆರೆ ಕಟ್ಟೆಗಳಿಗೆ ಬಲಿಯಾಗುವ ಈ ಮುಂತಾದ ಸಮಸ್ಯೆಗಳು ಮುಖ್ಯವಾಗಿ ಇಲ್ಲಿ ಕಾಡುತ್ತವೆ.

ಜೀಶಂಪ ಅವರ ಕೃತಿಯಲ್ಲಿಯ ಎರಡನೇ ಕಥಾನಕ 'ಈರೋಬಿ'. ಹೆಂಡತಿಗಾಗಿ ಚಿನ್ನದ ಹರಿವಾಣವನ್ನು ತರಲು ಗಟ್ಟದ ಕೆಳಗೆ ಹೋದವನು ದುರ್ಮರಣಕ್ಕೆ ಈಡಾಗುತ್ತಾನೆ. ಗಂಡನ ಜೊತೆಗೆ ಚಿತೆ ಏರಲು ತಯಾರಾಗುತ್ತಾಳೆ ಈರೋಬಿ.

ಗಂಡ ಸಾಯೋದಕಿಂತ ಮುಂಡ್ಯಾಗೋಕಿಂತ
ಕಂಡೋರ ಮನೆಯ ಕಸನ್ಹಾಕಿ। ಸಾಯೋದಕಿಂತ
ಕೊಂಡವನ್ನೋದೆ ಕಡುಲೇಸು

ಎಂಬ ನಿರ್ಧಾರ ಈರೋಬಿಯದು. ಆಕೆ ಚಿತೆ ಏರುವ ವರ್ಣನೆಯ ಪ್ರಮುಖ ಸಂಗತಿಗಳೇ ಈ ಕಥೆಯಲ್ಲೆಲ್ಲ ತುಂಬಿವೆ.

ಮೂರನೆಯ ಕಥಾನಕ ನಾಗವ್ವ. ಇದನ್ನು ಹಾಡಿದವರು ಕಾಡುಗೊಲ್ಲತಿ ಶಿಡ್ಲಮ್ಮ. 'ಕಾಡುಗೊಲ್ಲರ ಹೆಂಗಸರು ಹಾಡುವ ಕಥನಗೀತೆಗಳಲ್ಲಿ ದುರಂತ ಚಿತ್ರಗಳೇ ಹೆಚ್ಚು' ಎಂಬ ಟಿಪ್ಪಣಿ ಸಂಪಾದಕರದು. ನಾಗವ್ವನ ಮದುವೆ ತಯಾರಾಗಿದೆ. ಗಂಡಿನ ಮನೆಯಲ್ಲಿ ಮದುವೆ ತಯಾರಿ ನಡೆದಾಗ, ಅವರ ಕುರಿಗಳನ್ನು ಬೇಡರು ಕದ್ದುಕೊಂಡು ಹೋದರೆಂಬ ಸುದ್ದಿ ಬಂದು, ಮದುಮಗ ಓಡಿ ಹೋಗಿ, ಬೇಡರೊಡನೆ ಹೋರಾಡಿ ಕುರಿಗಳನ್ನು ಬಿಡಿಸಿ ತಂದನು. ಆದರೆ ತಪ್ಪಿಸಿಕೊಂಡ ಒಂದು ಮರಿಯನ್ನು ತರಲು ಹೋದಾಗ, ಪೊದೆಯಲ್ಲಿ ಅಡಗಿ ಕುಳಿತ ಬೇಡರು ಅವನನ್ನು ಕೊಂದುಹಾಕಿದರು. ನಾಗವ್ವನಿಗೆ ದುರ್ದೈವ ಆವರಿಸಿತು. ಲಗ್ನವಾಗಿಲ್ಲವಾದರೂ, ಅವನೇ ತನ್ನ ಗಂಡನೆಂಬ ಶಾಸ್ತ್ರಗಳೆಲ್ಲ ಮುಗಿದಿದ್ದರಿಂದ, ಅವನೊಡನೆ ಚಿತೆ ಏರಲು ನಾಗವ್ವ ತಯಾರಾದಳು. ಯಾರು ತಡೆದರು ನಿಲ್ಲದೆ, ಮದುವೆಯಾಗದಿದ್ದರೂ ನಾಗವ್ವ ಕೆಂಡಕೊಂಡವಾದಳು.

ಹೆಣ್ಣೀಗೆ ಮಣ್ಣುಬಿದ್ದೊ ಕಣ್ಣಿಗೆ ಸೆತ್ತೆ ಬಿದ್ದೊ
ಸಣ್ಣ ಸೀರೆಮ್ಯಾಲೆ ಕಿಡಿ ಬಿದ್ದೊ। ನಾಗವ್ವನ
ಹೆಣೆಗಂಟು ನಲುಗಿ ಉರಿದ್ಹೋದೋ

ಇದು ಭಾರತೀಯ ಸಮಾಜದಲ್ಲಿ ಕಾಣಿಸಿಕೊಂಡ ಅತ್ಯಂತ ಗಂಭೀರ ಸಮಸ್ಯೆ. ಯಾರೂ ಬಿಡಿಸಲು ಸಾಧ್ಯವಾಗದ ಸಮಸ್ಯೆಗಳು ಇವು. ಇವು ಈಗ ನಿಂತು ಹೋದರೂ ಇನ್ನೂ ಭಾರತೀಯರ ಮನಸ್ಸು ಸಾವಿರಾರು ಇಂತಹ ಸಂಗತಿಗಳಿಂದ ತುಂಬಿಹೋಗಿದೆ. ಈ ಕಥಾನಕಗಳನ್ನು ಅಧ್ಯಯನ ಮಾಡಿದರೆ ಮಾತ್ರ ಭಾರತೀಯ ಸ್ತ್ರೀ ಪುರುಷರ ಮನಸ್ಸಿನ ಸಂಕೀರ್ಣತೆಗಳು ಅಲ್ಪಮಟ್ಟಿಗೆ ಅರ್ಥವಾಗಲು ಸಾಧ್ಯ.

ಇಲ್ಲಿಯ ನಾಲ್ಕನೇ ಕಥಾನಕ 'ಹುಳಿಯಾರು ಕೆಂಚಮ್ಮ'. ಇಲ್ಲಿಯ ಸಮಸ್ಯೆ ಮತ್ತೆ ಬೇರೊಂದು ಬಗೆಯಾಗಿದೆ. ಊರ ಗೌಡನ ಸೊಸೆ ಕೆಂಚಮ್ಮ. ತನ್ನ ಸೊಸೆಗೆ ಕೆರೆಗೆ ಹಾರ ಕೊಡಬೇಕೆಂಬ ಭವಿಷ್ಯದ ನಿರ್ಧಾರ ಮಾವನಿಗೆ ತಿಳಿದಿತ್ತು. ಕೆಂಚಮ್ಮ ಕೆರೆಯ ಪೂಜೆಗೆ ಹೋದಾಗ, ಕೆರೆ ಒಡ್ಡಿನ ಕಲ್ಲು ಸಡಿಲಿತು. ಕೆರೆ ತನಗೆ ಆಹಾರ ಬೇಡಿದೆ ಎಂದು ತಿಳಿದಳು. ಗಂಡನಿಂದ ತವರಿಗೆ ಪತ್ರ ಬರೆಸಿದಳು. ತವರವರು ಕೋಪದಿಂದ ಬಂದಾಗ ಅವರನ್ನು ಸಮಾಧಾನ ಪಡಿಸಿ, ತನ್ನ ಚಿಕ್ಕಪ್ಪನ ಮಗಳನ್ನು ತನ್ನ ಗಂಡನಿಗೆ ತಂದುಕೊಳ್ಳಬೇಕೆಂದು ಹೇಳಿ ತಾನು ಕೆರೆಗೆ ಆಹುತಿಯಾದಳು.

ಗಂಡಾಗೆ ಬುದ್ಧಿ ಏನೆಂದು ಹೇಳುತಾಳೆ
ಚಿಕ್ಕಪ್ಪನ ಮಗಳು ಮರಿಗೆಂಚಿತಂದಿನ್ನ
ನೀವು ಲಗ್ನಾವ ಮಾಡಿಕೊಳ್ಳಿ ದೊರೆರಾಯ। ಅಂತೇಳಿ
ಹೋದಾಳು ಹುಳಿಯಾರ ಒಡವೀಗೆ

ಐದನೆಯ ಕಥಾನಕ ಹೊನ್ನಮ್ಮ. ಇಲ್ಲಿ ಬಂಜೆತನದ ಸಮಸ್ಯೆ ಇದೆ. ಏಳು ಜನ ಸಹೋದರಿಯರಲ್ಲಿ ಚಿಕ್ಕವಳು ಹೊನ್ನಮ್ಮ. ಮಕ್ಕಳಾಗಲಿಲ್ಲ. ಬಾವಿ ತೆಗೆಸಿ, ತೋಟ ಮಾಡಿದರೆ ಮನುಷ್ಯರಂತೂ ಸರಿಯೇ ಹಕ್ಕಿಪಕ್ಕಿಗಳೂ ಆ ಬಾವಿಯ ನೀರನ್ನು ಕುಡಿಯಲಿಲ್ಲ, ಗಿಡದ ಹಣ್ಣು ತಿನ್ನಲಿಲ್ಲ. ಗಂಗೆ ಪೂಜಿಸಲು ಹೋದರೆ ಗಂಗೆಯೇ ಬತ್ತಿ ಹೋಗುತ್ತಾಳೆ. ತನ್ನ ಸಹೋದರಿಯರ ಮಕ್ಕಳನ್ನು ಮುದ್ದಿಸಿ ಬದುಕಿದರಾಯಿತೆಂದರೆ ಅವರೆಲ್ಲ ತಮ್ಮ ಮಕ್ಕಳನ್ನು ಬಚ್ಚಿಡುತ್ತಾರೆ. ಹೊನ್ನಮ್ಮನನ್ನು ಬಡಿದು ಕೊರಕೊಲಿಗೆ ಎಸೆಯುತ್ತಾರೆ. ಕಥೆ ಇಲ್ಲಿಗೆ ಮುಗಿಯಬೇಕಾಗಿತ್ತು. ಕೆಲ ಹಾಡುಗಾರ್ತಿಯರು ಇದು ಅಶುಭವಾಯಿತೆಂದು, ಕಥೆಯನ್ನು ತಮಗೆ ತಿಳಿದಂತೆ ಸುಖಾಂತವಾಗಿ ಮುಗಿಸಲು ಬೆಳೆಸುತ್ತಾರೆ. ಇಲ್ಲಿ ಹಾಗೆಯೇ ಆಗಿದೆ. ಶಿವಪಾರ್ವತಿಯರು ಬಂದು ಆಕೆಯನ್ನು ಉಳಿಸುತ್ತಾರೆ. ಆಕೆಗೆ ಮಕ್ಕಳ ಭಾಗ್ಯವನ್ನೂ ದಯಪಾಲಿಸುತ್ತಾರೆ.

ಆರನೆಯ ಕಥಾನಕ ಸಂಪನ್ನೆ. ಅತ್ತಿಗೆ ನಾದುನಿಯರ ನಡುವೆ ಒಂದು ಒಪ್ಪಂದ ವಾಗುತ್ತದೆ. ಇಬ್ಬರೂ ಒಮ್ಮೆಗೆ ಬಸುರಿಯಾದವರು ಮಕ್ಕಳು ಹೆಣ್ಣು-ಗಂಡು ಹುಟ್ಟಿದರೆ ಅವುಗಳ ಮದುವೆ ಮಾಡಲು ಒಪ್ಪಿಕೊಳ್ಳುತ್ತಾರೆ. ಆದರೆ ಸಂಪನ್ನೆಗೆ ಗಂಡುಮಗುವಾದಾಗ, ಅಣ್ಣ-ಅತ್ತಿಗೆಯರು ತಂಗಿಯ ಮಗನಿಗೆ ಹೆಣ್ಣುಕೊಡದಿರಲು ನಿರ್ಧರಿಸುತ್ತಾರೆ. ಅಣ್ಣ ಅತ್ತಿಗೆ ಈಕೆಗೆ ನಾನಾ ತರದ ತೊಂದರೆಗಳನ್ನು ಕೊಡುತ್ತಾರೆ. ಕೊನೆಯಲ್ಲಿ ಮಗಳಿಗೆ ಬೇರೆಯವರಿಗೆ ಕೊಟ್ಟು ಮದುವೆ ಮಾಡಲು ನಿಂತಾಗ, ಸಂಪನ್ನೆ ತನ್ನ ಮಗನನ್ನು ಹೆಣ್ಣು ಗೆದ್ದು ತರಲು ಕಳಿಸುತ್ತಾಳೆ. ಸಂಪನ್ನೆಯ ಮಗ ಸಾಹಸವನ್ನು ತೋರಿ, ಹೆಣ್ಣನ್ನು ಗೆದ್ದು, ಮದುವೆಯಾಗಿ ಮನೆಗೆ ಕರೆತರುತ್ತಾನೆ. ಇಲ್ಲಿ ಹೆಣ್ಣು ಎದುರಿಸುವ ಪ್ರಶ್ನೆ ಮತ್ತೆ ಭಿನ್ನವಾಗಿದೆ. ಆಕೆ ಬಹುಶಃ ಬಡವಳಾದ್ದರಿಂದ ಅಣ್ಣ-ಅತ್ತಿಗೆಯರು ಅವಳ ಮನೆಗೆ ಹೆಣ್ಣು ಕೊಡಲು ನಿರಾಕರಿಸುತ್ತಾರೆ. ಮನೆಯ ಹೆಣ್ಣುಮಗಳು ಬಡವಳಾದರೂ ಆಕೆ ಮತ್ತೆ ಆತಂಕಗಳನ್ನು ಎದುರಿಸಬೇಕಾಗುತ್ತದೆ ಎಂಬುದು ಇಲ್ಲಿ ಕಾಣಿಸುವ ಹೊಸ ಸಮಸ್ಯೆಯಾಗಿದೆ. ಈ ಕಥೆ ಸುಭದ್ರೆ-ಅಭಿಮನ್ಯು ಇವರಿಗೆ ಸಂಬಂಧಿಸಿದಂತೆ ಬೆಳೆಯುವ ಕಥೆಯನ್ನು ಹೋಲುತ್ತದೆ.

ಕೊನೆಯ ಹಾಡು ಹಿರಿದಿಮ್ಮವ್ವ. ಬೇಡರ ಮೊಮ್ಮೇಗೌಡ ಹಿರಿದಿಮ್ಮವ್ವ ಹೊಲಕ್ಕೆ ಹೋಗುವಾಗ ಸೆರಗು ಹಿಡಿಯುತ್ತಾನೆ. ಆಕೆ ತಪ್ಪಿಸಿಕೊಂಡು ಹೋಗುತ್ತಾಳೆ. ಮದುವೆಯಾದ ಆಕೆಯನ್ನು ಸೋಬಾನ ಮಾಡುತ್ತಾರೆ. ಗಂಡನಿಗೆ ಊಟಕ್ಕೆ ಕೊಡುವಾಗ, ಬೊಮ್ಮೆಗೌಡ ಆಕೆಯ ಗಂಡನನ್ನು ಕೊಲ್ಲುತ್ತಾನೆ. ಆಕೆ ಬೊಮ್ಮೆಗೌಡನನ್ನು ನೀನೆ ನನ್ನ ಗಂಡನೆಂದು ನೇವರಿಸಿ, ಊಟಕ್ಕೆ ಕೊಟ್ಟು ಹೊಡೆದು ಕೊಲ್ಲುತ್ತಾಳೆ. ನಂತರ ಗಂಡನ ಜೊತೆಗೆ ಚಿತೆ ಏರುತ್ತಾಳೆ.

ಡಾ। ಬಿ.ಎಸ್.ಗದ್ದಗಿಮಠ ಅವರ ನಂತರ ಉತ್ತರಕರ್ನಾಟಕದಿಂದ ಹೆಣ್ಣುಮಕ್ಕಳ ಜನಪದ ಖಂಡಕಾವ್ಯಗಳ ಒಂದು ಪ್ರತ್ಯೇಕ ಸಂಕಲನ ಪ್ರಕಟವಾದುದು ೧೯೭೨ರಲ್ಲಿ. **'ಜೀವನ ಜೋಕಾಲಿ(೩) : ಗರತಿಯ ಗರಿಮೆ'** ಎಂಬ ಕೃತಿಯನ್ನು ಸಂಪಾದಿಸಿಕೊಟ್ಟವರು ಡಾ. ಎಂ.ಎಸ್. ಸುಂಕಾಪುರ ಅವರು. ಇಲ್ಲಿ ಪ್ರಕಟವಾದ ಎರಡೂ ತುಂಬಾ ದೀರ್ಘವಾದ

ಖಂಡಕಾವ್ಯಗಳಾಗಿದ್ದು, ಇವೆಲ್ಲ ಪುಣ್ಯ ಕಥಾನಕಗಳೇ ಆಗಿವೆ. ಶ್ರೀ ಎಂ.ಟಿ.ಸಾಸನೂರ ಅವರು ಸಂಗ್ರಹಿಸಿದ ಹಸ್ತಪ್ರತಿಯಲ್ಲಿದ್ದ 'ಚೆನ್ನಮ್ಮನ ದಂಡಿ' ಹಾಗೂ 'ಸತಿ ಗುಣಸಾಗರಿ' ಎಂಬ ಎರಡು ದೊಡ್ಡ ಹಾಡುಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಇವುಗಳನ್ನು ಸಂಪಾದಿಸುವಾಗ ಪುನಃ ಕ್ಷೇತ್ರಕಾರ್ಯ ಕೈಕೊಂಡು ಗೋಗಿ ಗ್ರಾಮದ ಬಸಮ್ಮ ಎನ್ನುವ ೭೦ ವಯಸ್ಸಿನ ವೃದ್ಧೆಯಿಂದ ಮತ್ತೆ ಈ ಹಾಡುಗಳನ್ನು ಸಂಗ್ರಹಿಸಿ, ಎರಡೂ ಪಾಠಗಳನ್ನು ಮುಂದಿಟ್ಟುಕೊಂಡು ಈ ಕೃತಿಯನ್ನು ಸಂಪಾದಿಸಿ ಕೊಟ್ಟಿದ್ದಾರೆ. 'ಚೆನ್ನಮ್ಮನ ದಂಡಿ' ೮೦೧ ದ್ವಿಪದಿಗಳನ್ನೊಳಗೊಂಡು ೬೮ ಪುಟಗಳಷ್ಟು ದೀರ್ಘವಾಗಿದ್ದರೆ, 'ಸತಿ ಗುಣಸಾಗರಿ' ೯೬೮ ದ್ವಿಪದಿಗಳನ್ನೊಳಗೊಂಡು ೮೩ ಪುಟಗಳಷ್ಟು ದೀರ್ಘವಾಗಿದೆ. ಪ್ರಾರಂಭದಲ್ಲಿ ಇಂತಹ ದೀರ್ಘಕಾವ್ಯಗಳನ್ನು ಪ್ರಕಟಿಸುವಾಗ ಡಾ. ಸುಂಕಾಪೂರ ಅವರು ಇವನ್ನು 'ಮಹಾಕಾವ್ಯ'ಗಳೇ ಎಂದಿದ್ದಾರೆ. ೩೩ ಪುಟಗಳ ಪ್ರಸ್ತಾವನೆ, ಐದಾರು ಪುಟಗಳ ಶಬ್ದಕೋಶಗಳು ಪಠ್ಯಗಳನ್ನು ಅರ್ಥಮಾಡಿಕೊಳ್ಳಲು ಪೂರಕವಾಗಿವೆ. ಕನ್ನಡದಲ್ಲಿ ಇನ್ನೂ ಮಹಾಕಾವ್ಯಗಳ ಕಲ್ಪನೆ ಸ್ಪಷ್ಟವಾಗದಿದ್ದ ಕಾಲದಲ್ಲಿ ಈ ಕೃತಿ ಪ್ರಕಟವಾಗಿದೆ. ನಂತರದ ಕಲ್ಪನೆಯಂತೆ ಇವು ದೀರ್ಘವಾದ ಖಂಡಕಾವ್ಯಗಳಾಗಿವೆ.

ಈ ದೀರ್ಘಕಾವ್ಯಗಳನ್ನು ಹಾಡುವ ಸಂದರ್ಭಗಳನ್ನು ಸಂಪಾದಕರು ಹೀಗೆ ವಿವರಿಸುತ್ತಾರೆ: "ಗುಣಸಾಗರಿ ಚೆನ್ನಮ್ಮ ಮೊದಲಾದವರನ್ನು ಕುರಿತು ಹೇಳುವ ಹಾಡುಗಳು ಮೊತ್ತ ಸತ್ವಗಳಲ್ಲಿ ಹಿರಿದಾಗಿವೆ. ಇಂತಹ ದೊಡ್ಡ ಹಾಡುಗಳನ್ನು ಹಾಡುವದಕ್ಕೆ ದಿನಗಳು ಬೇಕು. ಚಂಗಳಿ, ಗೌರಿ ಹಬ್ಬಗಳಲ್ಲಿ ಈ ಹಾಡುಗಳನ್ನು ಪ್ರತಿದಿನ ಮಧ್ಯಾಹ್ನ ನಾಲ್ಕು ಘಂಟೆಗೆ ಪ್ರಾರಂಭಿಸಿ ರಾತ್ರಿ ಹತ್ತು ಘಂಟೆಯ ಸುಮಾರಿಗೆ ಗತಿಗಳನ್ನು ನೋಡಿ ನಿಲ್ಲಿಸುತ್ತಾರೆ. ಮರುದಿವಸ, ಅದೇ ವೇಳೆಗೆ ಬಿಟ್ಟಲ್ಲಿಂದ ಪ್ರಾರಂಭಿಸುವರು. ಹೀಗೆ ತಿಂಗಳವರೆಗೆ ಈ ಹಾಡುಗಳನ್ನು ಹೇಳಿ ಮುಗಿಸಿ ಕೊನೆಯ ದಿನ, ಪ್ರಸ್ತ ಏರ್ಪಡಿಸುವುದು ರೂಢಿಯಾಗಿದೆ" (ಪ್ರ.ಪು. ೨೮). ಇದು ಡಾ. ಸುಂಕಾಪುರ ಅವರು ಗುರುತಿಸುವ ಸಂದರ್ಭ. ಇಂತಹ ದೀರ್ಘ ಹಾಡುಗಳನ್ನು ಕೇಳುವುದರಿಂದ, ಹಾಡುವುದರಿಂದ, ಹಾಡು ಹಚ್ಚುವುದರಿಂದ, ಹಾಡು ಕಲಿಸುವದರಿಂದ, ಹಾಡು ನಡೆದಾಗ ಪರಿಚಾರಿಕೆ ಮಾಡುವುದರಿಂದ ಪುಣ್ಯ ಬರುತ್ತದೆ ಎಂದೂ ಹಾಡುಗಳನ್ನು ಕೇಳದೆ ನಿರಾಕರಿಸಿ ಹೋದವರಿಗೆ ಪಾಪಗಳು ಆವರಿಸುತ್ತವೆಂದೂ ಈ ಹಾಡುಗಳ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಡಲಾಗುತ್ತದೆ. ಅಂದರೆ ಕೇಳುವುದರಿಂದ ಪುಣ್ಯ ಲಭಿಸುತ್ತದೆಂಬ ಕಲ್ಪನೆ ಮತ್ತು ಹಾಡನ್ನು ನಿರಾಕರಿಸುವದರಿಂದ ಕೇಡು ಒದಗುವುದೆಂಬ ಭಾವನೆ ಇಲ್ಲಿರವುದು ಗಮನಿಸಬೇಕಾದ ಸಂಗತಿ.

ಹಾಡಿನಿಂದಾಗುವ ಲಾಭಗಳು :

ಎಂದಿಗೆ ಈ ನುಡಿ ಸಂದುಕದೊಳಗಿತ್ತ
ಇಂದ್ಯಾವ ಜಾಣಿ ತಗಸ್ಯಾಳ। ಸುವ್ವಿ
ಇಂದ್ಯಾವ ಜಾಣಿ ತಗಸ್ಯಾಳ ಬಸಮ್ಮನ
ಕಂದರ ಸಂತಾನ ಘನವಾಗೆ। ಸುವ್ವಿ

ಹಾಲ ಕಾಸುದ ಬಿಟ್ಟು ಕೂಸ ತೂಗುದ ಬಿಟ್ಟು
ವ್ಯಾಳ್ಳೇಕ ನುಡಿಯ ಕಲಸುವಳ । ಸುವ್ವಿ
ವ್ಯಾಳ್ಳೇಕ ನುಡಿಯ ಕಲಸ್ಯಾಳ ನಿಂಬೆವ್ವನ
ಬಾಲರ ಸಂತಾನ ಘನವಾಗೆ । ಸುವ್ವಿ

ಹಾಡಿದವ್ವಗ ಹತ್ತು ಕೇಳಿದವ್ವಗ ಐದು
ಸೋ ಅಂದವನಿಗೆ ಸವರಾಜ್ಯ । ಸುವ್ವಿ
ಸೋ ಅಂದವ್ವನಿಗೆ ಸವರಾಜ್ಯ ಕೊಟ್ಟರ
ಅಲ್ಲಿ ಕಲ್ಯಾಣದ ಶರಣರ । ಸುವ್ವಿ

ಹಾಡು ನಿರಾಕರಣೆಯಿಂದಾಗುವ ಹಾನಿಗಳು :

ಅನ್ನು ಅನ್ನಂದರ ಅನ್ನದಿದ್ದರ ಪಾಪ
ಮುನ್ನ ಕೇಳವರ ಪರಚಿತ್ತ। ಪರಗ್ಯಾನ
ಅವರ ಕಣ್ಣ ಮುಂದ ಅವ ಯಮಗೊಂಡ।

ಯಾವಾಗ ಈ ಹಾಡ ಕೇಳಬಲ್ಲೆನೆಂದು
ಬಾಗಿಲಿಗೆ ಬಂದು ತಿರುಗೊಮ್ಮೆ । ಹೋದವ್ವ
ನಾಯಿಯಾ ಹೊಟ್ಟಿಲೆ ಜನ್ಮಿಸಿ

ಎಂದೀಗೆ ಈ ಹಾಡ ಕಂಡು ಬಲ್ಲೇನೆಂದು
ಕಂದ ಅಳತಾಳನೆಂದು ತಿರುಗೊಮ್ಮೆ। ಹೋದವ್ವ
ಆರು ಚಾಳಿಸದ ಕದವಾಗಿ

ಹೀಗೆ ಈ ಎರಡೂ ಕಥಾನಕಗಳು ಪಾಪ–ಪುಣ್ಯದ ಸಂಗತಿಗಳನ್ನು ಒರೆಯುತ್ತವೆ. ಮನೆಯಲ್ಲಿ ಅತಂಕಗಳು ಆವರಿಸಿದಾಗ, ತಮ್ಮ ಮನೆಯ ಆರಾಧ್ಯದೈವವನ್ನು ಪ್ರತಿಷ್ಠಾಪಿಸಿ ಇಂತಹ ಹಾಡುಗಳನ್ನು ಹಾಡಿಸುವ ಪರಿಪಾಠ ಕೆಲವು ಕಡೆ ಇರುವುದು ತಿಳಿದುಬರುತ್ತದೆ. ಮದುವೆಯಾದ ದಂಪತಿಗಳಿಗೆ ಬಹಳ ದಿನಗಳ ವರೆಗೆ ಮಕ್ಕಳಾಗದಿದ್ದಾಗ, ಮನೆಯಲ್ಲಿ ಯಾರಿಗಾದರೂ ಅನಾರೋಗ್ಯ ಕಾಡುತ್ತಿದ್ದಾಗ, ಕುಟುಂಬದಲ್ಲಿ ಏನಾದರೂ ಆತಂಕಗಳು ಬಂದೊದಗಿದಾಗ ಇಂತಹ ಹಾಡುಗಳನ್ನು ಹಾಡಿಸಲಾಗುತ್ತದೆ. ಈ ಪುಣ್ಯ ಕಥಾನಕಗಳ ಒಂದು ಸಾಮಾನ್ಯ ಗುಣವೆಂದರೆ, ಕೊನೆಯಲ್ಲಿ ಎಲ್ಲವೂ ಸುಖಾಂತವಾಗಿ ಕೊನೆಗೊಳ್ಳುವುದು. ಅಂದರೆ ಬಂತಂಥ ಆತಂಕಗಳೆಲ್ಲ ದೂರಾಗಿ, ಸುಖ ಸಂತೋಷಗಳು ಕಾಣಿಸಿಕೊಳ್ಳುವುದು. ಇಂತಹ ಹಾಡುಗಳು ಮಾತ್ರ ಪುಣ್ಯ ಕಥಾನಕಗಳು ಎನಿಸಿಕೊಳ್ಳುತ್ತವೆ.

'ಚೆನ್ನಮ್ಮನ ದಂಡಿ' ಹಾಗೂ 'ಸತಿ ಗುಣಸಾಗರಿ' ಇವೆರಡೂ ತುಂಬ ಪ್ರಸಿದ್ಧವಾದ ಕಾವ್ಯಗಳು. ಅರಸುಕುಮಾರನೊಬ್ಬ ಹುಲಿಗಂಜಿ ಸಾಯುತ್ತಾನೆಂದು ಭವಿಷ್ಯವಿರುತ್ತದೆ. ಮುಂದೆ ಆತ ಬೇಟೆಗೆ ಹೋದಾಗ ಅರಣ್ಯದಲ್ಲಿರುವ ಒಂದು ಗುಡಿಯಲ್ಲಿ ಬರೆದಿದ್ದ ಹುಲಿಯ ಚಿತ್ರಕ್ಕೆ ಹೆದರಿ ಸಾಯುತ್ತಾನೆ. ಮಗ ಮದುವೆ ಇಲ್ಲದೆ ಮಡಿದ ಕಾರಣ ಆತನಿಗೆ 'ಆಗೋಮ' ಮಾಡಿ ಶವ ಸಂಸ್ಕಾರ ಮಾಡಬೇಕು. ಅಂದರೆ ಹೆಣದೊಂದಿಗೆ

ಕಟ್ಟಿಗೆ, ಮಣ್ಣಿನ ಗೊಂಬೆ ಅಥವಾ ಹಣವುಳ್ಳವರು ಜೀವಂತ ಹೆಣ್ಣುಮಕ್ಕಳನ್ನೇ ಕೊಂಡು ತಂದು ಆಗೋಮ ಮುಗಿಸಿ, ಮತ್ತೆ ಅವರ ಹೆಣ್ಣನ್ನು ಅವರಿಗೆ ಹಿಂತಿರುಗಿಸಿ ಕೊಡುವ ಪದ್ಧತಿ ಒಂದು ಕಾಲಕ್ಕೆ ಇದ್ದಂತೆ ತೋರುತ್ತದೆ. ಹಾಗೆ ಆಗೋಮ ಶಾಸ್ತ್ರಕ್ಕಾಗಿ ಚೆನ್ನಮ್ಮನನ್ನು ಕೊಂಡು ತರಲಾಗುತ್ತದೆ. ಅಂದರೆ ಸತ್ತ ರಾಜಕುಮಾರನ ಜೊತೆ ಅವಳ ವಿವಾಹವಾಗುತ್ತದೆ. ಶವ ಸಂಸ್ಕಾರಕ್ಕೆ ಒಯ್ದಾಗ, ಶಿವ ಮಾಯದ ಮಳೆಗಾಳಿಗಳನ್ನು ತರುತ್ತಾನೆ. ಎಲ್ಲರೂ ಹೆಣವನ್ನು ಬಿಟ್ಟು ಹೋಗುತ್ತಾರೆ. ಆದರೆ ಚೆನ್ನಮ್ಮ ಈತ ತನ್ನ ಪತಿ ಎಂದು ಅಗಲಿ ಹೋಗಲಿಲ್ಲ. ಮಳೆಗಾಳಿಗಳು ನಿಲ್ಲುತ್ತವೆ. ತಾನೊಬ್ಬಳೇ ಶವದ ಮುಂದೆ ನಿಂತಿದ್ದು, ಅಲ್ಲಿಯೇ ಹರಿಯುವ ನೀರಿನ ಹಳ್ಳದ ಮರಳಿನಿಂದ ಲಿಂಗವನ್ನು ತಯಾರಿಸಿ, ಕಾಡು ಹೂ ಪತ್ರಿಗಳನ್ನು ಏರಿಸಿ, ಪೂಜೆ ಮಾಡುತ್ತಾಳೆ. ಶಿವ ಪ್ರತ್ಯಕ್ಷನಾದಾಗ, ತನಗೆ ಮುತ್ತೈದಿತನ ದೊರಕಲಿ ಎಂದು ಪ್ರಾರ್ಥಿಸುತ್ತಾಳೆ. ಆಗಲಿ ಎಂದು ಶಿವ ಸತ್ತವನನ್ನು ಬದುಕಿಸಿ ಮಾಯವಾಗುತ್ತಾನೆ. ಎಚ್ಚೆತ್ತ ರಾಜಕುಮಾರ ನೀನು ಯಾರು? ಎಂದು ಕೇಳಿದಾಗ, ಶಿವನನ್ನು ಪ್ರಾರ್ಥಿಸಲು ಮತ್ತೆ ಶಿವ ಪ್ರತ್ಯಕ್ಷನಾಗಿ ಚೆನ್ನಮ್ಮನ ಸಂಬಂಧವನ್ನು ಅರುಹುತ್ತಾನೆ. ಚೆನ್ನಮ್ಮನಿಂದಾಗಿ ಸತ್ತವನು ಎಚ್ಚರವಾಗುವುದಷ್ಟೇ ಅಲ್ಲ, ಶಿವನನ್ನೂ ಕಾಣುತ್ತಾನೆ. ಚೆನ್ನಮ್ಮ ಅರಮನೆಯ ರಾಣಿಯಾಗುತ್ತಾಳೆ. ಇಲ್ಲಿಗೆ ಈ ಕಥೆ ಮುಗಿಯುತ್ತದೆ.

ಮನೆಯಲ್ಲಿ ಗಂಡುಮಕ್ಕಳಿಗೆ ಬಹಳ ದಿನಗಳ ವರೆಗೆ ಅನಾರೋಗ್ಯ ಕಾಡಿದಾಗ, ಮನೆದೇವರನ್ನು ಪ್ರತಿಷ್ಠಾಪನೆ ಮಾಡಿ ಹಾಡುವ ಹಾಡು ಇದು. ಹೀಗೆ ಯಾವುದಕ್ಕಾಗಿ ದೇವರ ಪೂಜೆಯ ವ್ರತ ಹಿಡಿಯುತ್ತಾರೋ ಅಂತಹ ಪ್ರಸಂಗಗಳುಳ್ಳ ಕಥಾನಕಗಳನ್ನು ಅಲ್ಲಿ ಹಾಡುತ್ತಾರೆ. 'ಸತಿ ಗುಣಸಾಗರಿ' ಕಥೆಯಲ್ಲಿ ಮದುವೆಯಾದ ಹೊಸ ಹೆಂಡತಿಯನ್ನು ಮನೆಯಲ್ಲಿ ಬಿಟ್ಟು, ಗಂಡ ಮುತ್ತು ರತ್ನಗಳ ವ್ಯಾಪಾರಕ್ಕೆಂದು ಹೊರಟು ಹೋಗುತ್ತಾನೆ. ಆದರೆ ರಾತ್ರಿ ಹೆಂಡತಿಯ ನೆನಪಾಗಿ, ತಾನೊಬ್ಬನೇ ಕುದುರೆ ಹತ್ತಿ ಮಧ್ಯರಾತ್ರಿ ಮನೆಗೆ ಬಂದು ಹೆಂಡತಿಯನ್ನು ಎಚ್ಚರಿಸಿ, ಅವಳೊಂದಿಗಿದ್ದು, ಮತ್ತೆ ಹೊರಟು ಹೋಗುತ್ತಾನೆ. ಇದರಿಂದ ಗರ್ಭಧರಿಸಿದ ಗುಣಸಾಗರಿಗೆ ತೊಂದರೆಗಳು ಆವರಿಸಿಕೊಳ್ಳುತ್ತವೆ. ಮನೆಯಲ್ಲಿ ಗಂಡನಿಲ್ಲದಾಗ ಬಸುರಿಯಾದ ಹೆಣ್ಣುಮಗಳು ಇವಳು ಎಂಬ ಹಾದರದ ಆರೋಪ ಹೊರಬೇಕಾಗುತ್ತದೆ. ತಾನು ಬಸುರಿಯಾದದ್ದು ತನ್ನ ಗಂಡನಿಂದ ಎಂದು ಹೇಳಿದರೂ ಮನೆಯವರಾರೂ ಕಿವಿಗೊಡಲಿಲ್ಲ. ತವರವರೂ ಅಷ್ಟೆ. ಆಕೆಯ ಅಣ್ಣನು ತಮ್ಮ ಮನೆಗೆ ಕಳಂಕ ತಂದಳೆಂದು ಭಾವಿಸಿ, ಚಾಂಡಾಲರನ್ನು ನೇಮಿಸಿ, ಅಡವಿಯಲ್ಲಿ ಕೊಲೆಗೈದು ಬರಲು ಆಜ್ಞಾಪಿಸಿ ಕಳುಹಿಸುತ್ತಾನೆ. ಅರಣ್ಯದಲ್ಲಿ ಕೊಲೆಗಡುಕರು ಎತ್ತಿದ ಖಡ್ಗಗಳೆಲ್ಲ ಹೂಮಾಲೆಗಳಾಗಿ ಪರಿವರ್ತನೆಯಾಗುತ್ತವೆ. ಅವರು ಆಕೆಯನ್ನು ಜೀವಂತ ಬಿಟ್ಟು, ಬೇರೆನ್ನನ್ನೋ ಸಬೂಬು ತೋರಿಸಿ, ಗುಣಸಾಗರಿಯನ್ನು ಕೊಂದು ಬಂದಿರುವುದಾಗಿ ಹೇಳುತ್ತಾರೆ.

ಗುಣಸಾಗರಿ ಅಡವಿಯಲ್ಲಿ ಅನೇಕ ಪಶುಪಕ್ಷಿಗಳಿಗೆ ಉಪಕಾರ ಮಾಡುತ್ತಾಳೆ. ಇವಳಿಂದ ಉಪಕೃತರಾದ ರಾಕ್ಷಸರು ಅವಳನ್ನು ತಂದು, ಆಕೆಯ ತವರಮನೆಯ ತೋಟದಲ್ಲಿ ಬಿಡುತ್ತವೆ. ಇದರಿಂದ ಆಕೆ ತವರು ಸೇರುತ್ತಾಳೆ. ಗಂಡು ಮಗುವಿಗೆ ಜನ್ಮ

ಕೊಡುತ್ತಾಳೆ. ಮುಂದೆ ತನ್ನ ಗಂಡನು ಬಂದಾಗ, ಮಗನ ಮುಂದೆ ಸೋಲುವ ಪ್ರಸಂಗ ಬರುತ್ತದೆ. ಕೊನೆಯಲ್ಲಿ ಆತ ತನ್ನ ಮಗನೆಂದು ಗುರುತಾಗಿ, ಗುಣಸಾಗರಿಯನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ.

ಬಹಳ ದಿನಗಳ ವರೆಗೆ ಗಂಡನ ಮನೆಯಿಂದ ದೂರವಿದ್ದ ಹೆಣ್ಣುಮಕ್ಕಳು ವ್ರತ ಹಿಡಿದು, ಮನೆದೇವರನ್ನು ಪ್ರತಿಷ್ಠಾಪಿಸಿ, ಹಾಡಿಸುವ ಹಾಡು ಇದು. ಇಂತಹ ಎರಡು ಹಾಡುಗಳನ್ನು ಒಂದೆಡೆ ಸಂಪಾದಿಸಿ, ಪ್ರಕಟಿಸಿದ್ದು ಇದೊಂದು ಮೌಲಿಕ ಕೃತಿಯೇ ಆಗಿದೆ. ಕರ್ನಾಟಕದಾದ್ಯಂತ ಈ ಎರಡೂ ಕಥೆಗಳು ತುಂಬಾ ಪ್ರಚಾರದಲ್ಲಿವೆ. ಇವನ್ನು ಜನಪದ ಪುರಾಣಗಳು (ಪುಣ್ಯ ಕಥೆಗಳು) ಎಂದು ಇಟ್ಟುಕೊಳ್ಳಬಹುದಾಗಿದೆ.

ಸುಶೀಲಾ ಪಟ್ಟಣಶೆಟ್ಟಿ ಅವರು ಸಂಕಾಪುರ ಅವರು ಅನುಸರಿಸಿದ ಎಂ.ಟಿ.ಸಾಸನೂರ ಅವರ ಹಸ್ತಪ್ರತಿಯಿಂದಲೇ ಗುಣಸಾಗರಿ ಕಥಾನಕವನ್ನು ಪಡೆದು, 'ಗುಣದಮ್ಮನ ಕಥೆ' (೧೯೭೨) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಹೀಗಾಗಿ ವಕ್ತಾರರ ಮಾಹಿತಿ ಇಲ್ಲಿಲ್ಲ. ಕತೆಗೆ ಸಂಬಂಧಿಸಿ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ೨೪ ಅಧ್ಯಾಯಗಳು, ೧೧೦೪ ದ್ವಿಪದಿಗಳು ಇಲ್ಲಿವೆ. ಅಧ್ಯಾಯಗಳು ಬದಲಾದಂತೆ ಸೊಲ್ಲುಗಳೂ ಬದಲಾಗಿವೆ. ಇದನ್ನು ಗಮನಿಸಿದರೆ ಸೊಲ್ಲುಗಳು ಬದಲಾದಂತೆ ಧಾಟಿಗಳೂ ಬದಲಾದಂತೆ ತೋರುತ್ತದೆ. ಬಳಕೆಯಾದ ಸೊಲ್ಲುಗಳು ಹೀಗಿವೆ :

ಸುವ್ವಿ
ದೇವ ಮಾತಾಡ
ಇನ್ನಾಗಲೆ
ನೋಡಮ್ಮಯ್ಯ
ಏ ದೇವ ನಾರಾಯಣಾ
ಕಾಳಿ ಹಿಡದವಯ್ಯ ಚಿನ್ನದ ಭೇರಿ ಬಡದವಯ್ಯ
ಕೋಲು ಕೋಲೆನ್ನ ಕೋಲ
ಕೋಲು ಕೋಲು ಕೋಲೆನ್ನ ಕೋಲ
ಬಾರ ಗೀಜಗ ಹಕ್ಕಿಗಳರಸಾ ಬಾರಯ್ಯ ಗೀಜಗ
ಬೆಳಗನಾಗದೀರ ಎಲೆ ಬಳ್ಳಿ ನೀ ಪರಿಯನಾಗದೀರ
ಅಣ್ಣ ಹ್ವಾದಾ ಅಣ್ಣ ಹ್ವಾದಾ ಇಲ್ಲಿ ನನ್ನ ಕೊಲ್ಲ ಬಂದಣ್ಣ ಹ್ವಾದಾ
ಹಾಕಯ್ಯ ಮುಂಡಿಗಿಯೇ ಭೂಪಾಲ ನೆಗುವಲೆ ದಂಡಿಗಿಯೆ
ಜಾಣ ಮುದ್ದಣನ ಬೆಸಗೊಂಡ ಕೋಲು ಕೋಲು ಕೋಲೆನ್ನ ಕೋಲ
ಪಾಯಸ ತುಪ್ಪ ಪಂಚಕಜ್ಜ ಒಳಗಿರುವ ಮಹಾಮಂತ್ರಗೆಡಿಯಾದವ

ಇಷ್ಟೊಂದು ಬಗೆಯ ಸೊಲ್ಲುಗಳು, ಧಾಟಿಗಳ ಬದಲಾವಣೆ ಬೇರೆ ಹಾಡುಗಳಲ್ಲಿ ಎಲ್ಲೂ ಕಂಡುಬಂದಿಲ್ಲ.

ಉತ್ತರ ಕರ್ನಾಟಕದಿಂದ ನಾವು ಒಮ್ಮೆಲೆ ಉತ್ತರ ಕನ್ನಡ ಜಿಲ್ಲೆಯ ಸಂಗ್ರಹಗಳನ್ನು ನೋಡಬೇಕಾಗಿದೆ. ಡಾ. ಎಲ್. ಆರ್. ಹೆಗಡೆ ಅವರು ಕರ್ನಾಟಕದ ಈ

ಮೂಲೆಯಲ್ಲಿದ್ದುಕೊಂಡೇ ಜನಪದ ಸಾಹಿತ್ಯದ ಗಮನಾರ್ಹ ಕೆಲಸ ಮಾಡಿರುವುದು ಎಲ್ಲರೂ ಹುಬ್ಬೇರಿಸುವಂಥ ಕೆಲಸವಾಗಿದೆ. ಅವರು ೧೯೬೯-೭೦ ಮತ್ತು ನಂತರದ ವರ್ಷಗಳಲ್ಲಿ ಹೆಣ್ಣುಮಕ್ಕಳ ಕಥನ ಗೀತೆಗಳಿಗೆ ಸಂಬಂದಿಸಿದಂತೆ ಅಗಾಧವಾದ ಕೆಲಸ ಮಾಡಿದ್ದಾರೆ. ೧೯೬೯ರಲ್ಲಿ ಪ್ರಕಟವಾಗಿರುವ ಅವರ 'ತಿಮ್ಮಕ್ಕನ ಪದಗಳು', ನಂತರ ಪ್ರಕಟವಾದ 'ಪರಮೇಶ್ವರಿ ಪದಗಳು'(೧೯೭೨), 'ಗುಮ್ಮನ ಪದಗಳು'(೧೯೭೩) ಹಾಗೂ 'ಕೆಲವು ಲಾವಣಿಗಳು'(೧೯೭೩) ಈ ಎಲ್ಲ ಕೃತಿಗಳು ಕಥನ ಗೀತೆಗಳಿಗೆ ಸಂಬಂಧಿಸಿಯೇ ಇವೆ. ಹಾಡು ಹೇಳಿದ ವಕ್ತಾರರ ಹೆಸರಿನಲ್ಲಿ ಕೃತಿಗಳಿಗೆ ಶೀರ್ಷಿಕೆ ಇಡುವ ಪದ್ಧತಿಯನ್ನು ಬಹುಶಃ ಹೆಗಡೆ ಅವರೇ ಪ್ರಾರಂಭಿಸಿದಂತೆ ತೋರುತ್ತದೆ. ಇದಕ್ಕಿಂತ ಮುಂಚೆ ಹೀಗೆ ವಕ್ತಾರರ ಹೆಸರುಗಳನ್ನು ಬಳಸಿ ಕೃತಿಗಳಿಗೆ ಹೆಸರುಗಳನ್ನು ಇಟ್ಟಿರುವುದು ಗಮನಕ್ಕೆ ಬಂದಿಲ್ಲ. ಡಾ. ಹೆಗಡೆ ಅವರ ಇನ್ನೊಂದು ವೈಶಿಷ್ಟ್ಯವೆಂದರೆ ಕಾರವಾರ ಜಿಲ್ಲೆಯ ಕುಮಟಾ ತಾಲೂಕಿನಲ್ಲಿ ಇರುವ, ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡು ಬಂದಿರುವ ಸಣ್ಣ ಸಣ್ಣ ಸಮುದಾಯಗಳಿಗೆ ಸೇರಿದ ಜನಾಂಗಗಳಿಂದ ಅವರು ಬಹುತೇಕ ಜನಪದ ಸಾಹಿತ್ಯವನ್ನು ವ್ಯಾಪಕವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಡಾ. ಎಲ್.ಆರ್. ಹೆಗಡೆ ಅವರು ೧೯೬೯ರಲ್ಲಿಯೇ ಪ್ರಕಟಿಸಿದ 'ತಿಮ್ಮಕ್ಕನ ಪದಗಳು' ಕೃತಿಯಲ್ಲಿ ಹಾಲಕ್ಕಿ ಒಕ್ಕಲಿಗರ ಸಮುದಾಯಕ್ಕೆ ಸೇರಿದ ತಿಮ್ಮಕ್ಕನಿಂದ ಸಂಗ್ರಹಿಸಿದ ೧೫ ಹಾಡುಗಳ ಸಂಗ್ರಹವಾಗಿದೆ. ಉತ್ತರದೇವಿ, ಹೆಂಗಸಿನ ಧೈರ್ಯ, ಹುಲಿ ಬೇಟೆ, ಮಾರಕ್ಕ ದೇವಿಯ ಮದುವೆ, ದಂಡಿಗೆ ಹೋದ ರಾಮಸ್ವಾಮಿ, ಸಾವಿತ್ರಿಯ ಕಥೆ ಮುಂತಾದ ಕಥನಾತ್ಮಕ ಹಾಡುಗಳಿವೆ. ಈ ಕೃತಿಗೆ ೮೩ ಪುಟಗಳ ಪ್ರಸ್ತಾವನೆ ಇದೆ. ಎಲ್. ಆರ್. ಹೆಗಡೆ ಅವರ ವಿಶೇಷತೆ ಎಂದರೆ ಅವರ ಯಾವುದೇ ಬಗೆಯ ಜನಪದ ಸಾಹಿತ್ಯದ ಸಂಗ್ರಹಗಳನ್ನು ತೆಗೆದು ನೋಡಿದರೆ, ಅವರ ಪ್ರಸ್ತಾವನೆಗಳು ಗಮನ ಸೆಳೆಯುತ್ತವೆ. ಅಲ್ಲೆಲ್ಲ ಅವರ ವಿದ್ವತ್ತು, ಓದಿನ ವಿಸ್ತಾರ, ಸಂಪಾದಕನ ಶ್ರಮ, ಓದುಗರಿಗೆ ಆ ಕೃತಿ ಸುಲಭವಾಗಿ ಪ್ರವೇಶ ಒದಗಿಸಿ ಕೊಡಬೇಕಾದ ಎಲ್ಲ ವಿವರಗಳನ್ನು ಕೊಟ್ಟಿರುತ್ತಾರೆ. ಅವರ ಬಹುಮಹತ್ವದ ಕಥನಕಾವ್ಯಗಳ ಸಂಗ್ರಹ **'ಪರಮೇಶ್ವರಿ ಪದಗಳು'** (೧೯೭೨). ಅದರೆ ಪೀಠಿಕೆಯ ಪ್ರಾರಂಭದಲ್ಲಿ ಹೀಗೆ ಬರೆದಿದ್ದಾರೆ: "ಉತ್ತರ ಕನ್ನಡ ಜಿಲ್ಲೆಯು ಕಥನ ಕವನಗಳ ಬಹುದೊಡ್ಡ ಗಣಿಯಾಗಿದೆ. ಇಲ್ಲಿನ ಜನರು ಹುಟ್ಟುಕಥೆಗಾರರು. ಕಥನಕಲೆಯಲ್ಲಿ ಸಿದ್ಧಜಿಹ್ವರು ಎಂಬ ಮಾತನ್ನು ನನ್ನ 'ತಿಮ್ಮಕ್ಕನ ಪದಗಳು' ಎಂಬ ಗ್ರಂಥದ ಕಥನ ಕವನಗಳನ್ನೋದಿದವರು ಮನಗಂಡಿದ್ದಾರೆ. 'ಪರಮೇಶ್ವರಿ ಪದಗಳು' ಸಹ ಒಬ್ಬಳೇ ಹೆಂಗಸು ಹೇಳಿದ ಕಥನ ಕವನಗಳ ಒಂದು ಅಪೂರ್ವವಾದ ಸಂಕಲನವಾಗಿದೆ. 'ತಿಮ್ಮಕ್ಕನ ಪದಗಳು' ಗ್ರಂಥದಲ್ಲಿ ಹಾಲಕ್ಕಿ ಒಕ್ಕಲಿಗರ ಆಡುಮಾತು ಇದ್ದರೆ ಈ ಗ್ರಂಥದಲ್ಲಿ ನಾಮಧಾರಿ ಒಕ್ಕಲಿಗರ ಆಡುಮಾತು ಬಳಕೆಯಾಗಿದೆ. ಳಕಾರ ಲಕಾರವಾಗುವ ಹಾಲಕ್ಕಿ ಒಕ್ಕಲಿಗರ ಆಡುಮಾತಿನ ಸರಣಿಯನ್ನು ಬಿಟ್ಟರೆ ಆ ಆಡುಮಾತಿಗೂ ಇಲ್ಲಿನ ಆಡುಮಾತಿಗೂ ವಿಶೇಷ ಭೇದವೇ ಇಲ್ಲ" (ಪೀಠಕೆ, ಪು.೫).

ಪರಮೇಶ್ವರಿ ಕೂಲಿ ಕೆಲಸ ಮಾಡುತ್ತ ದಿನಗಳನ್ನು ನೂಕುವ ಬಡವೆ. ಅವಳ ಪ್ರತಿಭೆ ಅವಳಿಗೆ ಅವರಿವರಿಂದ ಹಾಡುಗಳನ್ನು ಕಲಿಯುವಂತೆ ಮಾಡಿದೆ. ಪರಮೇಶ್ವರಿ ಹಾಡಿದ ಎಂಟು ಹಾಡುಗಳು ಈ ಸಂಗ್ರಹದಲ್ಲಿವೆ. ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಗುಣಸಾಗರಿ ಕಥೆ, ವಲ್ಲಳ್ಳಿ ಹಾಡು, ಅಭಿಮನ್ಯುವಿನ ಹಾಡು, ಗೋವಿನ ಕಥೆ ಈ ಪ್ರಸಿದ್ಧವಾದ ಕನ್ನಡದ ಜನಪದ ಕಥನಗೀತೆಗಳನ್ನು ಪರಮೇಶ್ವರಿಯೂ ಹಾಡಿದ್ದು. ಇಲ್ಲಿಯ ಗುಣಸಾಗರಿಯ ಕಥೆ ೪೯೯ ಚೌಪದಿಗಳನ್ನು ಒಳಗೊಂಡಿದ್ದು, ೮೬ ಪುಟಗಳಷ್ಟು ದೀರ್ಘವಾಗಿದೆ.

ಕೆಂಪಣ್ಣ ಕೆಂಪುರಾಯ ಕೆಂಪಣ್ಣ ಗಿಳಿರಾಯಾ
ಕೆಂಪಣ್ಣಗ್ಯೇಳು ಮಂದೀ ಮಗದಿರು ಸುವ್ವೇ
ಕೇಳಲ್ಲೋ ನನ್ನಪ್ಪ ನೀ ಕೇಳೋ ನಮುತಾಯೇ
ಅಣ್ಣ ನೆರುವಾಣಿ ಮನೀಲಿಲ್ಲ ಸುವ್ವೆ ।

ಅಣ್ಣ ನೆರುವಾಣಿ ಮನ್ಯಲ್ಲಿಲ್ಲಾದರೆ
ತಮ್ಮ ಚಂಪಲು ಸೆಟ್ಟಿ ಮದುವಿಯೇ ಸುವ್ವೆ
ತಮ್ಮ ಚಂಪಲು ಚೆಟ್ಟಿ ಮದ್ಯ ಮಾಡದಿರೆ
ನಾವ್ಯೆದೂ ಮಂದೀ ಯಾಕವ್ವಾ ಸುವ್ವೆ

ಹೀಗೆ ಸಾಗುತ್ತವೆ ಇಲ್ಲಿಯ ಚೌಪದಿಗಳು. ಸ್ವಲ್ಪ ಲಕ್ಷಕೊಟ್ಟು ಓದಿದರೆ ಕಥೆ ತಿಳಿಯುತ್ತ ಹೋಗುತ್ತದೆ. ೧೯೭೨ ರಲ್ಲಿಯೇ ಇದೇ ಕಥೆಯುಳ್ಳ ಹಾಡು ಡಾ. ಸುಂಕಾಪೂರ ಅವರ **'ಜೀವನ ಜೋಕಾಲಿ– ಗರತಿಯ ಗರಿಮೆ'**(೧೯೭೨) ಎಂಬ ಕೃತಿಯಲ್ಲಿ ಹಾಗೂ ಸುಶೀಲಾ ಪಟ್ಟಣಶೆಟ್ಟಿ ಅವರ **'ಸತಿ ಗುಣಸಾಗರಿ'** (೧೯೭೨) ಎಂಬ ಕೃತಿಯಲ್ಲಿ ಗುಣಸಾಗರಿ ಕಥೆ ಎರಡು ಸಲ ಪ್ರಕಟವಾಗಿದೆ. ನಂತರ ಪ್ರಕಟವಾದ ಹಲವಾರು ಕೃತಿಗಳಲ್ಲೂ ಈ ಕಥನಗೀತೆ ಕಂಡುಬರುತ್ತದೆ. ಇದನ್ನು ಗಮನಿಸಿದರೆ ಗುಣಸಾಗರಿ ಕಥೆ ಇಡೀ ಕರ್ನಾಟಕದ ತುಂಬ ಪ್ರಸಿದ್ಧವಾಗಿರುವುದು ಸ್ಪಷ್ಟವಾಗುತ್ತದೆ. ಕನ್ನಡದಲ್ಲಿ ದೊರೆಯುವ ಹೆಣ್ಣುಮಕ್ಕಳ ದೀರ್ಘವಾದ ಎರಡ್ಮೂರು ಹಾಡುಗಳಲ್ಲಿ ಗುಣಸಾಗರಿಯೂ ಒಂದಾಗಿದೆ.

'ನಾರಾಯಣಸ್ವಾಮಿ ಹಾಡು' ಸೂಳೆ ವಲ್ಲಳ್ಳಿಯ ಕಥೆಯಾಗಿದ್ದು, ಇದು ಕೂಡ ಕರ್ನಾಟಕದ ತುಂಬ ಪ್ರಸಿದ್ಧವಾದ ಹಾಡಾಗಿದೆ. 'ನಕುಮಣ ಜೋಗಿ' ಕತೆ ಹಾಡುಗಾರಿಕೆಯಲ್ಲಿ ವ್ಯತ್ಯಾಸಗಳಾಗಿವೆ ಎನಿಸುತ್ತದೆ. ಅದು ಹಾಸ್ಯದಿಂದ ಪ್ರಾರಂಭವಾಗಿ, ಮುಂದೆ ಸುಭದ್ರೆ ತನ್ನ ಮಗ ಅಭಿಮನ್ಯುವಿಗೆ ಬಳಿರಾಮನ ಮಗಳಾದ ವತ್ಸಲಾಳನ್ನು ತೆಗೆದುಕೊಳ್ಳಬೇಕೆಂದು ಮಾತಾಗಿದ್ದರೂ ನಂತರ ಬಳಿರಾಮ ಕೌರವನ ಮಗನಿಗೆ ತನ್ನ ಮಗಳನ್ನು ನಿಶ್ಚಯಿಸಿದಾಗ, ತಾಯಿಯ ಗೋಳಾಟವನ್ನು ನೋಡದೆ ಅಭಿಮನ್ಯು ಬಳಿರಾಮನ ಮಗಳನ್ನು ಅಪಹರಿಸಿಕೊಂಡು ಬರುವ ಕಥೆಯನ್ನು ಒರೆಯುತ್ತದೆ. 'ಸಿರಿಕವಲಿ' ಎಂಬ ಕಥಾನಕ ಪ್ರಸಿದ್ಧವಾದ ಗೋವಿನ ಹಾಡಿನ ಮೂಲ ಜನಪದ ಕಥೆಯಾಗಿದೆ. ಈ ಕಥೆ ಈಗಾಗಲೇ 'ಮಲ್ಲಿಗೆ ದಂಡೆ' (೧೯೩೩) ಸಂಗ್ರಹದಲ್ಲಿ 'ಆಕಳು ಹಾಡು' ಎಂದು ಪ್ರಸಿದ್ಧಿಯನ್ನು ಹೊಂದಿದೆ. ಪರಮೇಶ್ವರಿ ಈ ಹಾಡು ಹಾಡುವಲ್ಲಿಯೂ ತಪ್ಪಿದ್ದಾಳೆ

ಎನಿಸುತ್ತದೆ. ಕೊನೆಗೆ ಹುಲಿ ಆಕಳನ್ನು 'ನಿನ್ನಂಥವಳಿಗೆ ತಿನ್ನುವುದಿಲ್ಲ ತಿರುಗಿ ಹೋಗು' ಎನ್ನುತ್ತದೆ. ಆಕಳು ತಿರುಗಿ ಬರುತ್ತ, ಕಾಲುಜಾರಿ ಬೆಟ್ಟದ ಕೆಳಗೆ ಬಿದ್ದು ಮರಣವನ್ನಪ್ಪುತ್ತದೆ ಎಂದು ಹಾಡಿರುವುದು ಈ ಕಥೆಗೆ ಅಲ್ಲದ ಸಂಗತಿಯೊಂದು ಸೇರಿಕೊಂಡಿದೆ ಎನಿಸುತ್ತದೆ. ಈ ಸಂಗ್ರಹದ ಮೊದಲನೇ ಕಥೆ 'ಅಣ್ಣ ನಾಗಿಂದ್ರ ತಂಗಿ ದೇಮಕ್ಕ' ಕಥೆ ಪ್ರಸಿದ್ಧವಾದ ಈಡಿಪಸ್ ಕಥೆಯ ಪೂರ್ವಭಾಗದ ಕಥೆಯಾಗಿದೆ. ಇದರಲ್ಲಿ ತಂಗಿಯನ್ನು ಅಣ್ಣ ಅಡವಿಯಲ್ಲಿ ಬಿಟ್ಟು ಹೋದಾಗ, ಅವಳನ್ನು ಬದುಕಿಸಿದವನು ತನ್ನ ಜಾತಿಯನ್ನು ಸುಳ್ಳು ಹೇಳಿ ಅವಳನ್ನು ಮದುವೆಯಾಗುತ್ತಾನೆ. ಮುಂದೆ ಒಂದು ಮಗುವಾಗಿ, ಅದರಿಂದ ತನ್ನ ಗಂಡ ಮಾದಿಗನೆಂದು ತಿಳಿಯುತ್ತದೆ. ಆಗ ಆಕೆ ರೌದ್ರಾವತಾರ ತಾಳಿ ಆ ಮಗುವಿನ ತಲೆಯನ್ನು ಚಚ್ಚಿ ಹಾಕುತ್ತಾಳೆ. ನಂತರ ಗಂಡನನ್ನು ಕೊಲ್ಲಲು ಬೆನ್ನಟ್ಟಿದಾಗ ಆತ ಅನೇಕ ಪ್ರಾಣಿಗಳ– ಕೋಳಿ, ಹಂದಿ, ಕೋಣಗಳ ಗರ್ಭ ಹೊಕ್ಕರೂ ಬಿಡದೆ ಬೆನ್ನು ಹತ್ತುತ್ತಾಳೆ. ಕೋಣನ ಗರ್ಭದಲ್ಲಿದ್ದಾಗ ಕೋಣವನ್ನು ಕೊಂದು, ತಾನು ಅಮ್ಮನಾಗಿ ಕುಳಿತುಬಿಡುತ್ತಾಳೆ ಎನ್ನುತ್ತದೆ ಕಥೆ. ಇದು ಶಿರಸಿ ಮಾರಿಕಾಂಬಾ ಕಥೆಯನ್ನು ಹೋಲುತ್ತದೆ ಎನ್ನುತ್ತಾರೆ ಸಂಪಾದಕರು. 'ಸೀತಾ ವನವಾಸ'ದ ಕಥೆಯಲ್ಲಿ ಸೀತೆಯಿಂದಲೇ ರಾವಣನ ಚಿತ್ರ ಬರೆಸುವ, ಸೀತೆ ಅದಕ್ಕೆ ಜೀವ ತುಂಬುವ, ರಾಮ ಮತ್ತೆ ಸೀತೆಗೆ ವನವಾಸಕ್ಕೆ ದೂಡುವ ಕಥೆ ಇದೆ. ಇದು ಪ್ರಸಿದ್ಧವಾದ ಜನಪದ ರಾಮಾಯಣ ಘಟನೆಗೆ ಸಂಬಂಧಿಸಿದ ಕಥೆಯಾಗಿದ್ದು, ಮುದೇನೂರ ಸಂಗಣ್ಣನವರು ಪ್ರಕಟಿಸಿದ **'ಚಿತ್ರಪಟ ರಾಮಾಯಣ'** ಎಂಬ ಬಯಲಾಟದ ಕಥೆಯಾಗಿದೆ. ಇನ್ನೊಂದು 'ಮಹಾಬಲಸ್ವಾಮಿ' ಎಂಬುದು ಶಿವನಿಗೆ ಇರುವ ಇಬ್ಬರು ಹೆಂಡಿರಲ್ಲಿ ಗಂಗೆ–ಗೌರಿಯರು ಜಗಳಾಡುವ ಕಥೆಯನ್ನು ಹೊಂದಿದೆ. ಹೀಗೆ ಪರಮೇಶ್ವರಿ ಹಾಡಿದ ಈ ಸಂಗ್ರಹದ ಕಥೆಗಳೆಲ್ಲ ತೀರ ಪ್ರಸಿದ್ಧವಾದ, ಮತ್ತು ಗಂಭೀರವಾದ ಪುರಾಣ ಮತ್ತು ಪುಣ್ಯ ಕಥೆಗಳ ಆಗರವಾಗಿದೆ. ಹೀಗಾಗಿ ಹೆಗಡೆ ಅವರ ಸಂಗ್ರಹಗಳು ಕನ್ನಡ ಕಥನಗೀತೆಗಳ ತೌಲನಿಕ ಅಧ್ಯಯನಕ್ಕೆ ಬೇಕಾದ ಪಾಠಗಳನ್ನು ಹೊಂದಿ, ಗಮನಾರ್ಹ ಸಂಗ್ರಹಗಳೆನಿಸುತ್ತವೆ.

ಡಾ. ಎಲ್. ಆರ್. ಹೆಗಡೆ ಅವರು ಈ ಕೃತಿಗೆ ಬರೆದಿರುವ ಪ್ರಸ್ತಾವನೆ ತುಂಬ ಮೌಲಿಕವಾಗಿದ್ದು, ಒಂದೊಂದು ಕಥೆಯ ಸಾರಾಂಶವನ್ನು ಹೇಳುವುದಲ್ಲದೆ ಆಯಾ ಕಥೆಗಳನ್ನು ತೌಲನಿಕವಾಗಿ ನೋಡುವ ಕೆಲಸವನ್ನೂ ಮಾಡಿದ್ದಾರೆ. ಹೀಗಾಗಿ ಅವರ ಪ್ರಸ್ತಾವನೆ ಸಂಶೋಧನೆ ಮತ್ತು ವಿಮರ್ಶೆಯ ದೃಷ್ಟಿಯಿಂದಲೂ ಮೌಲಿಕವೆನಿಸುತ್ತದೆ. ಈ ಮಾತನ್ನು ಅವರ ಎಲ್ಲ ಕಥನಗೀತೆ ಸಂಗ್ರಹಗಳ ಪ್ರಸ್ತಾವನೆಗಳಿಗೂ ಅನ್ವಯಿಸಬಹುದಾಗಿದೆ.

ಹೆಗಡೆ ಅವರು ಪ್ರಕಟಿಸಿದ ಇನ್ನೊಂದು ಕೃತಿ **'ಗುಮ್ಮನ ಪದಗಳು'**(೧೯೭೩) ಸಂಗ್ರಹದಲ್ಲಿ ಮತ್ತೆ ಒಬ್ಬ ಹೆಣ್ಣುಮಗಳೇ ಹಾಡಿದ ಹಾಡುಗಳಿವೆ. ಆದರೆ ಎಲ್ಲವೂ ಕಥನಗೀತೆಗಳಾಗಿಲ್ಲ. ಹಾಲಕ್ಕಿ ಒಕ್ಕಲಿಗ ಸಮುದಾಯಕ್ಕೆ ಸೇರಿದ ದೇವಿ ದೇವುಗೌಡ ಕಲ್ಲೋಡು ಎಂಬುವವಳು ಹಾಡಿದ ಹಾಡುಗಳು ಇವಾಗಿವೆ. ಅವಳ ಅಡ್ಡ ಹೆಸರು 'ಗುಮ್ಮ' ಎಂದಿದ್ದು, ಅದೇ ಹೆಸರನ್ನು ಈ ಕೃತಿಯ ಶೀರ್ಷಿಕೆಗೆ ಬಳಸಿಕೊಳ್ಳಲಾಗಿದೆ.

೧೯೭೩ರಲ್ಲಿಯೇ ಪ್ರಕಟಿಸಿದ ಇನ್ನೊಂದು ಕೃತಿ **'ಕೆಲವು ಲಾವಣಿಗಳು'** ಉತ್ತಮ ಕಥನ ಗೀತೆಗಳ ಸಂಗ್ರಹವಾಗಿದೆ. ಉತ್ತರ ಕನ್ನಡದ ಕುಮಟಾ ತಾಲೂಕಿನ ಹೆಗಡೆ ಗ್ರಾಮದ ನಾಮಧಾರಿ ಜಾತಿಯ ಹೆಣ್ಣುಮಕ್ಕಳು ಹಾಡಿದ ಕಥನಕವನಗಳು ಇಲ್ಲಿವೆ. ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿದ್ವಾಂಸರು ಜನಪದ ಕಥನ ಗೀತೆಗಳನ್ನು ಲಾವಣಿಗಳು ಎಂದು ಕರೆದಿದ್ದು, ನಂತರ ಮತ್ತೆ ಕಥನ ಗೀತೆಗಳು ಎಂದು ಕರೆದಿರುವುದು ಕರ್ನಾಟಕದಲ್ಲಿ ಪ್ರಸಿದ್ಧವಾಗಿದೆ. ಅದಕ್ಕಾಗಿ ಆ ಬಗೆಗೆ ವಿವರಣೆ ಬೇಕಾಗಿದೆ ಎನಿಸುವುದಿಲ್ಲ.

ಈ ಕೃತಿಯಲ್ಲಿ ೧೧ ಕಥಾನಕಗಳಿವೆ. ಕಾಸರಗೋಡು ತಿಮ್ಮಣ್ಣ, ಸಣ್ಣ ಗಂಗೆ, ರತ್ನದೇವಿ, ನಾಗಮ್ಮ-ಸುಬ್ಬರಾಯ, ಹೊನ್ನಮ್ಮ ಗೌರಿ, ಅಣ್ಣ ಹೊನ್ನಿಗ ತಮ್ಮ ಚೆನ್ನಿಗ, ದಿಂಡಿನ ಓಲೆ, ಅತುಮವ್ವಿ, ಜಂಗಮಸ್ವಾಮಿಯರು, ಗಿಡ್ಡಣ್ಣ ಗೌಡ, ಹರಿಚಂದ್ರ ಗಿರಿರಾಯ, ಉತ್ತರದೇವಿ – ಇಲ್ಲಿರುವ ಕಥಾನಕಗಳು. ಇವೆಲ್ಲವುಗಳನ್ನು ಕುಮಟಾ ತಾಲೂಕಿನ ಹೆಗಡೆ ಎಂಬ ಒಂದೇ ಗ್ರಾಮದಲ್ಲಿ ಸಂಗ್ರಹಿಸಿದ್ದಾರೆ. ಅದರಲ್ಲೂ ನಾಮಧಾರಿ ಜಾತಿಗೆ ಸೇರಿದ ಲಕ್ಷ್ಮೀ ನಾಗಪ್ಪ ನಾಯ್ಕ (೫), ಅಬ್ಬಿ ಗೌರಯ್ಯ ನಾಯ್ಕ(೨), ಗಂಗೆ ಸೋಪ ನಾಯ್ಕ, ಕು. ಪ್ರೇಮಾ ಮಹಾದೇವ ನಾಯ್ಕ, ಗೌರಿ ಶಿವಪ್ಪ ನಾಯ್ಕ, ನಾಗು ಮಾಸ್ತಿ ನಾಯ್ಕ ಇವರೆಲ್ಲ ತಲಾ ಒಂದೊಂದು ಹಾಡುಗಳನ್ನು ಹಾಡಿದ್ದಾರೆ. ಇವೆಲ್ಲ ಖಂಡಕಾವ್ಯಗಳಾಗಿವೆ.

ಕೃತಿಗೆ ೩೯ ಪುಟಗಳ ಸುದೀರ್ಘ ಪ್ರಸ್ತಾವನೆ ಇದೆ. ಎಲ್ಲ ಹಾಡುಗಳ ಕಥೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಇಲ್ಲಿಯ ಹಾಡುಗಳ ಕನ್ನಡ ಭಾಷೆ ಸರಳವಾಗಿ ತಿಳಿಯುವದಿಲ್ಲ. ಹೀಗಾಗಿ ಹೆಗಡೆ ಅವರು ಬರೆದಿರುವ ಕಾವ್ಯದ ಸಾರಾಂಶಗಳು ಓದುಗರ ನೆರವಿಗೆ ಬರುತ್ತವೆ. ಹೆಗಡೆ ಅವರು ಪ್ರಾರಂಭದ ಸಂಗ್ರಹಗಳಲ್ಲಿ ಹಾಡುವಾಗ ದನಿ ಎಳೆಯುವ ಸ್ಥಳಗಳನ್ನು ಸೂಚಿಸುವ 'ऽ' ಈ ಚಿನ್ಹೆಯನ್ನು ವಿಪರೀತವಾಗಿ ಬಳಸುತ್ತಾರೆ. ಇದರಿಂದ ಹಾಡುಗಳನ್ನು ಓದುವಾಗ ಕಿರಿಕರಿಯಾಗುತ್ತದೆ. ಆದರೆ ಮುಂದೆ ಬರುವ ಅವರ ಸಂಗ್ರಹಗಳಲ್ಲಿ ಈ ತಪ್ಪನ್ನು ಕಡಿಮೆ ಮಾಡಿಕೊಂಡಿದ್ದಾರೆ.

ಹೆಗಡೆ ಅವರು ಈ ಕಥಾನಕಗಳನ್ನು ಸಂಗ್ರಹ ಮಾಡಿದ ಕುಮಟಾ ತಾಲೂಕಿನ ಭಾಗಗಳಲ್ಲಿ ಕೆಲವು ಜನಪದ ಕಥೆಗಳೇ ಹಾಡುಗಳಾಗಿ ಬಳಕೆಯಾಗುವುದನ್ನು ಗಮನಿಸುತ್ತಾರೆ. ಸಂಪಾದಕರು ಈ ಹಾಡುಗಳನ್ನು ಹಾಡುವ ಸಂದರ್ಭವನ್ನು ವಿವರಿಸುತ್ತಾರೆ: "ಈ ಹಾಡುಗಳಲ್ಲಿ ಹೆಂಗಸರು ಗದ್ದೆಯಲ್ಲಿ ನೆಟ್ಟಿ(ನೇಜಿ) ಮಾಡುವ ಸಮಯದಲ್ಲಿಯೂ ಕಳೆ ತೆಗೆಯುವ ಸಮಯದಲ್ಲಿಯೂ ಬಹಳ ಹಾಡುಗಳನ್ನು ಹೇಳುತ್ತಿದ್ದರು. ಬಿಡುವಿನ ಸಮಯಗಳಲ್ಲಿ ಅಲ್ಲದೆ, ಬೆಟ್ಟಕ್ಕೆ ಸೌದೆ, ಕರಡಗಳನ್ನು ತರಲು ಹೋಗುವಂಥ ಕಠಿಣ ಕೆಲಸಗಳನ್ನು ಮಾಡುವಾಗಲೂ ಈ ಹಾಡುಗಳನ್ನು ಇತರರಿಂದ ಕಲಿಯುವುದೂ ಅವನ್ನು ಅಂದುಕೊಳ್ಳುವುದೂ ಈಗಲೂ ಪ್ರಚಾರದಲ್ಲಿದೆ" (ಪ್ರ.ಪು.೧). ಸಂಪಾದಕರು ಹಾಡಿನ ಸಂದರ್ಭಗಳನ್ನು ಗಮನಿಸುವುದು ಒಂದು ಮುಖ್ಯ ಸಂಗತಿಯಾಗಿದೆ. ಹೆಣ್ಣುಮಕ್ಕಳು ಈ ಕಥಾನಕಗಳನ್ನು ಹಾಡುವ ಸಂದರ್ಭಗಳು ನಾವೀಗ ಗಮನಿಸುತ್ತಿರುವಂತೆ ಎಲ್ಲ ಕಡೆ ಒಂದೇ ಬಗೆಯಾಗಿರುವುದು ಕಂಡುಬರುತ್ತಿದೆ. ಅಲ್ಲಲ್ಲಿ ಕೆಲ ಸಂಪಾದಕರು, ಇಂತಹ

ಹಾಡುಗಳು ತಮ್ಮ ಪ್ರದೇಶಗಳಲ್ಲಿ ಮಾತ್ರ ಪ್ರಚಾರದಲ್ಲಿವೆ ಎಂಬ ತಪ್ಪು ಕಲ್ಪನೆಯನ್ನೂ ಹೊಂದಿದ್ದಾರೆ. ಇಂತಹ ತಪ್ಪು ಭಾವನೆಗಳನ್ನು ಮರೆಯಲು ಈ ಸಂಗತಿಗಳು ಸಹಾಯಕ್ಕೆ ಬರುತ್ತವೆ. ಮತ್ತು ಕಥಾನಕಗಳ ಬಳಕೆ ಎಷ್ಟೊಂದು ವ್ಯಾಪಕವಾಗಿದೆ ಎಂಬ ಸಂಗತಿಯೂ ಗಮನಕ್ಕೆ ಬಂದಂತಾಗುತ್ತದೆ.

೧೯೭೪ ರಲ್ಲಿ ಪ್ರಕಟವಾದ **'ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು'** ಎಂಬುದು ಟಿ.ಎಸ್.ರಾಜಪ್ಪ ಅವರು ಸಂಗ್ರಹಿಸಿ ಸಂಪಾದಿಸಿದ ಕೃತಿ. ಶೀರ್ಷಿಕೆಯಲ್ಲಿಯ ಲಾವಣಿ ಎನ್ನುವುದು ಕಥನ ಗೀತೆಗಳು ಎನ್ನುವ ಬದಲಾಗಿ ಬಳಸಿದ ಪದವಾಗಿದೆ. ಈ ಕೃತಿಯಲ್ಲಿಯ ೯ ಕಥಾನಕಗಳನ್ನು ಕೊಡಗು ಜಿಲ್ಲೆಯ ಸುಂಡುವಳ್ಳಿ ಗ್ರಾಮದ, ೫೫ ವರ್ಷದ ಹರಿಜನರ ಶ್ರೀಮತಿ ಗಂಗಮ್ಮ ಅವರು ಹಾಡಿದ, ಶ್ರೀಮತಿ ಕೆಂಚಮ್ಮ ಅವರು ದನಿಗೂಡಿಸಿದ ಹಾಡುಗಳಾಗಿವೆ. ಅಂದರೆ ಇಲ್ಲಿಯ ಎಲ್ಲ ಹಾಡುಗಳು ಒಬ್ಬ ವಕ್ತಾರಳಿಂದಲೇ ಸಂಗ್ರಹವಾದವುಗಳಾಗಿವೆ. ಕೆರೆ ಹೊನ್ನಮ್ಮ, ಬಾಣಾವತಿ ದೊರೆ, ಹರಿಯಾಲ ದ್ಯಾವಮ್ಮ, ಕುಸುಮಾಲೆ, ಬಾಣಂತಮ್ಮ-ಹುಲುಕೋಡಯ್ಯ, ಕೆಂಚಮ್ಮ, ಉತ್ತರದೇವಿ, ಗಿರಿಜಾ ಮಲ್ಲಯ್ಯ, ಶಿವಗಂಗೆ-ಹೀಗೆ ಒಟ್ಟಿಗೆ ಒಂಬತ್ತು ಕಥಾನಕಗಳಿವೆ. ಇವೆಲ್ಲವುಗಳ ಒಟ್ಟು ವಿಸ್ತಾರ ೨೫೩ ಪುಟಗಳು. ಇಂತಹ ಒಬ್ಬ ವಕ್ತಾರರ ಸಂಗ್ರಹಗಳನ್ನೇ ಇಟ್ಟುಕೊಂಡು ವಿಶೇಷವಾದ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಒಂದೆರಡು ಗೀಗೀ ಹಾಡುಗಳ ಸಂಗ್ರಹಗಳು, ಒಂದೆರಡು ಜನಪದ ಕಥೆಗಳ ಸಂಗ್ರಹಗಳೂ ಪ್ರಕಟವಾಗಿವೆ. ಇವುಗಳ ಜೊತೆಗೆ ಒಬ್ಬ ವಕ್ತಾರನಿಂದ ಸಂಗ್ರಹಿಸಿ ಪ್ರಕಟಿಸಿದ ಒಟ್ಟು ಸಾಹಿತ್ಯ ಸಂಪುಟಗಳೂ ಕೆಲವೊಂದು ಪ್ರಕಟವಾಗಿವೆ. ಇಂತಹ ದೃಷ್ಟಿಯನ್ನಿಟ್ಟುಕೊಂಡು ಒಂದಿಷ್ಟು ಅಧ್ಯಯನಗಳು ನಡೆದರೆ ಅವುಗಳ ಫಲಿತಾಂಶ ಕುತೂಹಲಕಾರಿ ಆಗಿರಬಹುದಾಗಿದೆ. ಒಬ್ಬನೇ ಹಾಡುಗಾರನಿಂದ ಸಂಗ್ರಹಿಸಿದ ದೀರ್ಘ ಕಥಾನಕಗಳಾದ ಮೌಖಿಕ ಮಹಾಕಾವ್ಯಗಳ ಅಧ್ಯಯನ ನಡೆದಿವೆ. ಅಲ್ಲಿ ವಕ್ತಾರನ ದೃಷ್ಟಿಕೋನಗಳನ್ನು ಗುರುತಿಸುವ ಪ್ರಯತ್ನ ನಡೆದಂತಿಲ್ಲ. ಈ ಬಗೆಗೆ ಒಂದಿಷ್ಟು ಗಮನ ಹರಿಸುವುದು ಅವಶ್ಯವಾಗಿದೆ.

ಸುಮಾರು ೧೫, ೨೦ ರಿಂದ ೫೦, ೬೦ ಪುಟಗಳ ವ್ಯಾಪ್ತಿಯ, ಅಂದರೆ ಸುಮಾರು ಒಂದು ತಾಸಿನಿಂದ ನಾಲ್ಕೈದು ತಾಸುಗಳ ವರೆಗೆ ಹಾಡಬಹುದಾದ ಹಾಡುಗಳನ್ನೂ ಖಂಡಕಾವ್ಯಗಳ ಮಾಲಿಕೆಯಲ್ಲಿಯೇ ಗುರುತಿಸಬಹುದಾಗಿದೆ. **'ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು'** ಕೃತಿಯ ಮೊದಲನೇ ಹಾಡು 'ಕೆರೆ ಹೊನ್ನಮ್ಮ' ೧೧೦ ಪುಟಗಳ ವ್ಯಾಪ್ತಿಯನ್ನು ಹೊಂದಿದೆ. ಆದರೆ ಇಲ್ಲಿಯ ಸಾಲುಗಳನ್ನು ತೀರ ಚಿಕ್ಕಚಿಕ್ಕವಾಗಿ ಮಾಡಲಾಗಿದೆ. ಇಲ್ಲಿಯ ಎರಡೆರಡು ಸಾಲುಗಳನ್ನು ಕೂಡಿಸಿ ಒಂದು ಸಾಲು ಎಂದು ಗಣಿಸುವಂತಿದೆ. ಹೀಗಾಗಿ ಪೂರ್ಣಪ್ರಮಾಣದ ಸಾಲಿನಲ್ಲಿ ಇದು ೫೦ ಪುಟಗಳ ವ್ಯಾಪ್ತಿಯನ್ನೇ ಹೊಂದುತ್ತದೆ.

'ಕೆರೆ ಹೊನ್ನಮ್ಮ' ಕಥಾನಕದ ಹೆಸರೇ ಸೂಚಿಸುವಂತೆ ಹೊನ್ನಮ್ಮ ಕೆರೆಗೆ ಆಹುತಿಯಾಗುವ ಕಥಾನಕ ಇದು. ಇದು ಭಾಗೀರತಿಯ ಕಥೆಯಂತೆಯೇ ಇದೆ. ಮಾವನ ಹೆಸರೂ ಮಲ್ಲನಗೌಡನೇ. ತಾನು ಕಟ್ಟಿಸಿದ ಕೆರೆಗೆ ನೀರು ಬಾರದಿದ್ದಾಗ, ಅದು ತನ್ನ

ಕಿರಿಬೆರಳನ್ನು ಆಹುತಿ ಕೇಳಿತಂತೆ. ಅದಕ್ಕೆ ಒಪ್ಪದ ಗೌಡ ತನ್ನ ಹೆಂಡತಿ, ಮಕ್ಕಳು ಯಾರಾದರನ್ನು ಹಾರ ಕೊಡಲು ಯೋಚಿಸುತ್ತ, ಕಡೆಗೆ ಹಿರಿ ಸೊಸೆ ಹೊನ್ನಮ್ಮನಿಗೆ ಹಾರಕೊಡಲು ನಿರ್ಧರಿಸಿದ. ಹೊನ್ನಮ್ಮನಿಗೆ ವಿಷಯ ತಿಳಿದು, ತೌರವರಿಗೆ ಭೇಟಿಯಾಗಿ ಬರಲು ಹೋಗಿ, ತನಗೆ ಮನೆಯಲ್ಲಿ ಕೆಲಸ ಬಹಳವಾಗಿದ್ದರಿಂದ ತನ್ನ ತಂಗಿಯನ್ನು ತನ್ನ ಗಂಡನಿಗೆ ಧಾರೆಯೆರೆದು ಕೊಡಬೇಕೆಂದು ಭಾಷೆ ಪಡೆದು, ಹಿಂತಿರುಗಿ ಬಂದು ಕೆರೆಗೆ ಆಹುತಿಯಾಗುತ್ತಾಳೆ. ವ್ಯಾಪಾರಕ್ಕೆಂದು ಹೋದ ಗಂಡ ಬೊಮ್ಮಣ್ಣನಿಗೆ ಕೆಟ್ಟ ಕನಸು ಬಿದ್ದು, ಒತ್ತರದಿಂದ ಮನೆಗೆ ಬರುತ್ತಾನೆ. ಕೊನೆಗೆ ಹೆಂಡತಿ ಕೆರೆಗೆ ಆಹುತಿಯಾದಳೆಂಬ ಸುದ್ದಿ ತಿಳಿದು ತನ್ನ ಹಸುಮಗನೊಂದಿಗೆ ಕೆರೆಗೆ ಬರುತ್ತಾನೆ. ಹೊನ್ನಮ್ಮ ಮಗುವನ್ನು ಮಾತ್ರ ಕೊಡು, ನೀನು ಬೇಡವೆಂದರೂ ಮಗುವನ್ನೂ ಕೊಟ್ಟು, ಹಿಂದೆ ತಾನೂ ಕೆರೆಗೆ ಆಹುತಿಯಾಗುತ್ತಾನೆ. ಈ ಕಥೆ ಕರಾಕೃ ಪ್ರಕಟಿಸಿದ 'ಅಣಜಿ ಹೊನ್ನಮ್ಮ'ನ ಭಿನ್ನ ಪಾಠದಂತಿದೆ.

ಕೆರೆಗೆ ಬಲಿಯಾಗುವ ಆಶಯವುಳ್ಳ ಹೆಚ್ಚಾನ್ಹೆಚ್ಚು ಕಥೆಗಳ ಆಶಯಗಳು ಹೀಗೆಯೇ ಬರುತ್ತಿವೆ. ಹೆಂಡತಿಯ ಹಿಂದೆ ಗಂಡ ಕೆರೆಗೆ ಆಹುತಿಯಾಗುವುದು ಸಾಮಾನ್ಯವಾಗಿ ಕಾಣುತ್ತಿದೆ. ಆದರೆ ಪಾತಿವ್ರತ್ಯದ ಬಗೆಗಿನ ಸಂಶಯದಲ್ಲಿ ಆಹುತಿಯಾಗುವ ಹೆಣ್ಣಿನೊಡನೆ ಮಾತ್ರ ಗಂಡ ಹೀಗೆ ಆಹುತಿಯಾಗುವುದಿಲ್ಲ. 'ಉತ್ತರದೇವಿ' ಕಥಾನಕ ಅಂತಹ ವಸ್ತುವನ್ನು ಹೊಂದಿದೆ. ಸೊಸೆ ಉತ್ತರದೇವಿಯ ಪಾತಿವ್ರತ್ಯದ ಬಗ್ಗೆ ಅತ್ತೆ ಸಂಶಯ ಮಾಡಿಕೊಂಡ ನಂತರ, ಅನೇಕ ಬಗೆಯಲ್ಲಿ ಮಗ ಹೆಂಡತಿಯ ಪರವಾಗಿ ವಾದಿಸಿದರೂ, ಮನೆ ಹೊರಗಾದ ಉತ್ತರದೇವಿ, ತವರಿನಲ್ಲೂ ಅತ್ಮೀಯತೆ ಕಾಣದೆ, ಮಕ್ಕಳೊಂದಿಗೆ ನೀರಿಗೆ ಆಹುತಿಯಾಗುತ್ತಾಳೆ. ಉತ್ತರದೇವಿ ಕಥೆ ಈ ಸಂಗ್ರಹದಲ್ಲೂ ಇದ್ದು, ಅದೇ ಫಲಿತಾಂಶವನ್ನು ಹೊಂದಿದೆ.

ಇಲ್ಲಿಯ ಹಾಡುಗಳನ್ನೆಲ್ಲ ಹಾಡಿದಾಕೆ ಹರಿಜನರ ಹೆಣ್ಣುಮಗಳು. ಆದರೆ ಕಥಾನಕದ ಪಾತ್ರಗಳೆಲ್ಲ ಮೇಲ್ಜಾತಿಗೆ ಸೇರಿದವರು. ಅವರ ಜೀವನ ಕೆಳವರ್ಗದವರಿಗೂ ಸಮ್ಮತಿಯದಾಗಿತ್ತು ಎಂದು ತಿಳಿಯಬೇಕೆ? ಎಂಬುದು ಇಲ್ಲಿಯ ಪ್ರಶ್ನೆಯಾಗಿದೆ. ಈ ಹಾಡುಗಳನ್ನು ಹಾಡುವ ಸಂದರ್ಭಗಳನ್ನು ಸಂಪಾದಕರು ವಿವರಿಸಿಲ್ಲ. ಇಲ್ಲಿಯ ಹಾಡುಗಳನ್ನು ಓದಿನೋಡಿದರೆ ಸಾಲುಗಳು ಸಮನಾಗಿ ಇಲ್ಲ, ನುಡಿಗಳನ್ನು ಗುರುತಿಸಿಲ್ಲ. ಕಥೆ ಹೇಳುವ ಮಾದರಿಯಲ್ಲಿ ಇದ್ದಂತೆ ತೋರುತ್ತವೆ. ಸೊಲ್ಲುಗಳನ್ನು ಪಲ್ಲವಿಯ ರೂಪದಲ್ಲಿ ಕೊಟ್ಟಿದ್ದಾರೆ. ಸೊಲ್ಲುಗಳನ್ನು ಪ್ರತಿ ಸಾಲಿನಲ್ಲೂ ಪುನರಾವರ್ತನೆ ಮಾಡುತ್ತಾರೋ ಹೇಗೊ ಎಂಬುದೂ ತಿಳಿಯುವುದಿಲ್ಲ. ಮೊದಲಿನ ಹಾಡು ಕೆರೆ ಹೊನ್ನಮ್ಮ, ಕೊನೆಯಲ್ಲಿ ಕೊಟ್ಟಿರುವ ಚಿಕ್ಕ ಚಿಕ್ಕ ಕಥಾನಕಗಳಾದ ಉತ್ತರದೇವಿ, ಗಿರಿಜಾಮಲ್ಲಯ್ಯ, ಹಾಗೂ ಶಿವಗಂಗೆ ಈ ಹಾಡುಗಳು ಒಂದಿಷ್ಟು ತ್ರಿಪದಿ ದ್ವಿಪದಿಗಳಲ್ಲಿ ಇವೆ. ಉಳಿದಂತೆ ದೀರ್ಘವಾದ ಐದು ಹಾಡುಗಳ ಛಂದಸ್ಸು ಸರಳವಾಗಿ ಗಮನಕ್ಕೆ ಬಂದಿರುವುದಿಲ್ಲ. ಸಂಪಾದಕರು ಈ ಬಗೆಗೆ ಒಂದಿಷ್ಟು ವಿವರಿಸಬಹುದಿತ್ತು ಎನಿಸುತ್ತದೆ. ಉದಾಹರಣೆಗೆ:

ಹರಿಯಾಲ ದ್ಯಾವಮ್ಮ

ತಂದ ನಾನ ತಂದೆನಾನ
ತಾನಂದನಾ ತಾನಂದನೋ –ನಾ ।ಪಲ್ಲ।
ಹೇ ನೀಲಾವತಿ ದೊರೆಗಳಿಗೆ
ಎಲ್ಡಾಳು ಹೆಣ್ಣುಮಕ್ಕಳು
ಮಕ್ಕಳು ಹುಟ್ಟಿದ ಗಳಿಗೇಲಿ ನೋಡಿರೊ
ತಾಯಿಗೆ ಮರಣ ಬಂದ್ವಲ್ಲೋ
ಹೇ ನೀಲಾವತಿ ದೊರೆಗಳು
ಚಿಂತೆಯಾನೇ ಮಾಡುತ್ತಾರಲ್ಲೋ
ಹೇ ಮಕ್ಕಳ್ಹಿಂಗೆ ಸಾಕಲಾಂತವ
ಚಿಂತೆಯಾನೇ ಮಾಡುತ್ತಾರಲ್ಲೋ

ಕುಸುಮಾಲೆ

ರಾಮಚಂದ್ರ ರಾಮ ರಾಮ ಗಿಣಿರಾಮ
ತಿಮ್ಮಪ್ಪ ಸ್ವಾಮಿ ಅವರು ಮದುವ್ಯಾಗಿ ಆರುವರ್ಸ
ಅವರ ಹೆಂಡ್ತಿ ಕುಸುಮಾಲೆ
ಅವರ ತವರಲ್ಲೆ ಬುಟ್ಟವರೆ
ಮದುವ್ಯಾಗಿ ಆರುವರ್ಸ ಕಂದ್ಬುಟ್ಟಿ ಮೂರುವರ್ಸ
ಗೆಣೆಕಾರ್ರು ಗಟ್ಟಕ್ಕೆ ಹೊಂಟಾರು
ತಾಯಿ ಹಡದವ್ವ ನನ್ನ ಗಟ್ಟದ ಗೆಣೆಕಾರ್ರು
ಗಟ್ಟಾಕೆ ಹೊಂಟಾರು

ಬಿಜಾಪೂರ ಜಿಲ್ಲೆಯಲ್ಲಿ ಸಂಗ್ರಹವಾದ ಎರಡು ಹೆಣ್ಣುಮಕ್ಕಳ ಹಾಡುಗಳನ್ನು ಹಾಗೂ ಒಂದು ಲಾವಣಿಯನ್ನು ತೆಗೆದುಕೊಂಡು ಡಾ। ಬಿ. ಬಿ. ಹೆಂಡಿ ಅವರು **'ಆಯ್ದ ಜನಪದ ಕಥನ ಗೀತೆಗಳು'** (೧೯೭೮) ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. 'ಮುತ್ತೈದಿ ಚೆನ್ನಮ್ಮ' ಮತ್ತು 'ಈಸುರಾಯನ ಪದ' ಎಂಬ ಎರಡು ದೀರ್ಘ ಕಥಾನಕಗಳು ಇಲ್ಲಿವೆ. ಸಂಪಾದಕರು ಇದಕ್ಕೆ ೩೫ ಪುಟಗಳ ಸುದೀರ್ಘ ಪ್ರಸ್ತಾವನೆಯನ್ನು ಬರೆದಿದ್ದಾರೆ. ಇಲ್ಲೆಲ್ಲ ತಾವು ತೆಗೆದುಕೊಂಡ ಕಥೆಗಳು ಪೂರ್ವದಲ್ಲಿ ಎಲ್ಲೆಲ್ಲಿ ಪ್ರಕಟವಾಗಿವೆ. ಮತ್ತೆ ತಮಗೆ ದೊರೆಯುವ ಅವತಾರಗಳು ಯಾವುವು? ಇತ್ಯಾದಿಗಳ ಜೊತೆಗೆ ತಮ್ಮ ಮುಂದಿರುವ ಅವತಾರಗಳಲ್ಲಿರುವ ವ್ಯತ್ಯಾಸಗಳನ್ನು ಬರೆಯುತ್ತಾರೆ. ಈ ಮೊದಲು ಪ್ರಕಟವಾದ ಡಾ. ಸುಂಕಾಪುರ ಅವರು ಪ್ರಕಟಿಸಿದ 'ಚೆನ್ನಮ್ಮನ ದಂಡಿ' ಕಥೆಯ ಇನ್ನೊಂದು ಅವತಾರವೇ 'ಮುತ್ತೈದಿ ಚೆನ್ನಮ್ಮ' ಕಥಾನಕವಾಗಿದೆ. ಈಗಿನ ಬಾಗಲಕೋಟ ಜಿಲ್ಲೆಯ ಬಸವನ ಬಾಗೇವಾಡಿ ಗ್ರಾಮದವಳು ಈ ಚೆನ್ನಮ್ಮ ಎಂಬುದನ್ನು ಡಾ. ಹೆಂಡಿಯವರು ಗುರುತಿಸುತ್ತಾರೆ. ೧೨ನೇ ಶತಮಾನದಲ್ಲಿ ಮಾದಲಾಂಬಿಕೆ ಯಾವ ನಂದಿಯನ್ನು ಬೇಡಿಕೊಂಡು ಮಗ ಬಸವೇಶ್ವರರನ್ನು ಪಡೆದಳೋ ಅದೇ ನಂದಿಯನ್ನು ಪೂಜಿಸಿಯೇ ಚೆನ್ನಮ್ಮ ತನ್ನ

ಮುತ್ತೈದಿತನವನ್ನು ಪಡೆದಳಂತೆ. ಆಕೆ ನಂದಿಯನ್ನು ಪ್ರತಿಷ್ಠಾಪಿಸಿ ಪೂಜೆ ಗೈದ ಸ್ಥಳದಲ್ಲಿಯೇ ಬಾಗೇವಾಡಿ ಬಸವನ (ನಂದಿ) ಗುಡಿ ಇದೆ ಎನ್ನಲಾಗುತ್ತದೆ. ಇದಕ್ಕೆ ಪೂರಕವಾಗಿ ಡಾ. ಹೆಂಡಿ ಅವರು ಒಂದೆರಡು ತ್ರಿಪದಿಗಳನ್ನು ಉಲ್ಲೇಖ ಮಾಡುತ್ತಾರೆ:

ಬಾಗೋಡಿ ನಂಬೂದು ಬಾಲೇರ ಪಟ್ಟಣ
ಮ್ಯಾಲೆ ಚೆನ್ನಮ್ಮನ ಅರಮನಿ । ಬಾಗಿಲದಾಗ
ಬಾಗಿ ನಿಂತಾನ ಬಸವಣ್ಣ

ಬಾಗೋಡಿ ಬಸವಣ್ಣ ಬಾಳ ದೊಡ್ಡವನಂತ
ಬಾಗಲಕ ಬೆನ್ನ ಬಡದಾವ । ಹಾರೂರ
ಚೆನ್ನಮ್ಮ ತೀಡ್ಯಾಳೊ ಇಣಿಸುದ್ಗೋ

ಚೆನ್ನಮ್ಮನ ವ್ಯಕ್ತಿತ್ವದ ಬಗ್ಗೆ ಡಾ. ಹೆಂಡಿ ಅವರ ಅಭಿಪ್ರಾಯ ಹೀಗಿದೆ: "ಚೆನ್ನಮ್ಮ ಈ ಕಥೆಗೆ ಢಾಳವಾದ ಬೆಳಕನ್ನು ಬೀರಿರುವ ಧ್ರುವ ತಾರೆ. ಇನ್ನುಳಿದ ಪಾತ್ರಗಳೆಲ್ಲ ಆಕೆಯ ಮಹತಿಯನ್ನು ಪ್ರಕಟಿಸುವುದರಲ್ಲಿ ಸಾರ್ಥಕ್ಯ ಪಡೆಯುತ್ತವೆ. ಹಾಡು ಆಕೆಯ ಹೆಸರಿನಲ್ಲೆ ಪ್ರಚಾರಗೊಂಡಿರುವುದು ಔಚಿತ್ಯಪೂರ್ಣವಾಗಿದೆ. ಆಕೆ ಜನಪದ ಪ್ರಜ್ಞೆಯು ಮೂರ್ತಿಮಂತಗೊಳಿಸಿದ ಸಾವಿತ್ರಿ ಅಥವಾ ಅನಲಾಯಿ. ಜನಪದ ನಾರಿಯರ ಭಾವನೆಯಲ್ಲಿ ಆಕೆ ಚಿರ ಮುತ್ತೈದೆ. ಪ್ರಾತಃ ಸ್ಮರಣೀಯ ಪಾವನ ಚರಿತೆ" (ಪ್ರ.ಪು.೧೫).

ಈ ಕೃತಿಯಲ್ಲಿ ಸೇರಿದ ಹೊಸ ಹಾಡು 'ಈಸುರಾಯನ ಪದ' ಕೂಡ ಪುಣ್ಯ ಕಥಾನಕವೆ. ಈಸುರಾಯ ವಯಸ್ಸಿಗೆ ಬಂದ ನಂತರ ತಂದೆ ನೋಡಿದ ಹೆಣ್ಣು ತನ್ನ ಮನಸ್ಸಿಗೆ ಬರಲಿಲ್ಲವೆಂದು ತಾನೇ ಹೆಣ್ಣು ನೋಡಲು ಹೊರಡುವನು. ಸೂಳೆ ವಲ್ಲಳ್ಳಿ ಚಲುವಿಗೆ ಮಾರುಹೋಗಿ ಅವಳಲ್ಲಿಯೆ ಉಳಿಯುವನು. ಆದರೆ ಇತ್ತ ಮದುವೆಯ ತಯಾರಿಯಾಗುತ್ತದೆ. ಈಸುರಾಯನಿಗೆ ಪತ್ರ ಕಳಿಸಿದರೆ, ವಲ್ಲಳ್ಳಿ ಮುಚ್ಚಿಡುತ್ತಾಳೆ. ಈಸುರಾಯನ ಕಠಾರಿಯ ಜೊತೆಗೆ ವಧು ರುಕ್ಮಿಣಿಯ ಲಗ್ನ ಮುಗಿಯುತ್ತದೆ. ಆಕೆ ದೊಡ್ಡವಳಾದರೂ ಗಂಡ ಬರಲಿಲ್ಲ. ಅನೇಕ ವರ್ಷಗಳ ನಂತರ ರುಕ್ಮಿಣಿ ಗಂಡ ಬಾರದೇ ಇದ್ದುದಕ್ಕಾಗಿ ಕೊಂಡ ಹಾಯಲು ತಯಾರಿ ಆಗುತ್ತದೆ. ಈ ಸಲ ಪತ್ರ ಈಸುರಾಯನಿಗೆ ಮುಟ್ಟುತ್ತದೆ. ಆಗ ಈಸುರಾಯ ಮನೆಗೆ ಬರಲು ತಯಾರಾಗಿ ವಲ್ಲಳ್ಳಿಯನ್ನು ಕರೆಯುತ್ತಾನೆ. ಆಕೆ ನಿರಾಕರಿಸುತ್ತಾಳೆ. ಆಕೆಯ ತುರುಬು ಮೂಗುಗಳನ್ನು ಕೊಯ್ದು, ತಾನೊಬ್ಬನೇ ಮನೆಗೆ ಬರುತ್ತಾನೆ. ತನ್ನ ಹೆಂಡತಿ ತವರಿಗೆ ಹೋದುದನ್ನು ತಿಳಿದು ಅಲ್ಲಿಗೆ ಹೋಗುತ್ತಾನೆ. ಆಕೆ ಸನಿಯಕ್ಕೆ ಬರಗೊಡದೆ, ಕಿಚ್ಚಿಗೆ ಆಹುತಿಯಾಗುತ್ತಾಳೆ. ಅದೇ ಕಿಚ್ಚಿಗೆ ಈಸೂರಾಯನೂ ಆಹುತಿಯಾಗುತ್ತಾನೆ. ಈ ಹಾಡನ್ನು ಕುರಿತು ಸಂಪಾದಕರು ಹೀಗೆ ಬರೆಯುತ್ತಾರೆ: "ಈಸೂರಾಯನ ಪದ ಯಾವ ಮತೀಯ ಆವರಣಕ್ಕೂ ಒಳಗಾಗದೆ ಶುದ್ಧ ಲೌಕಿಕ ಸ್ವರೂಪದಲ್ಲಿರುವುದು ಅದರ ಒಂದು ವೈಶಿಷ್ಟ್ಯ. ನಿರಮುಕ್ಕಳಿರಾಯ-ಹಂಗುರಣಿ ವಾತ್ಸಲ್ಯಮಯ ತಾಯ್ತಂದೆಗಳು. ಮಕ್ಕಳನ್ನು ಪಡೆಯಬೇಕೆಂಬ, ಸುಖವಾಗಿ ಬೆಳೆಸಿ ಅವರ ಮದುವೆ ಶೋಭನಾದಿಗಳನ್ನು ಮಾಡಿ ಸಂತೋಷ ಪಡಬೇಕೆಂಬ ಪ್ರಾಪಂಚಿಕರ ಸಹಜ ಹಂಬಲವುಳ್ಳವರು. ಮಗ ಮನೆ ಬಿಟ್ಟು ಸೂಳೆಯ ಮನೆ ಸೇರಿದಾಗಲೂ

ಆತನನ್ನವರು ಪ್ರತಿರೋಧಿಸಲು ಯತ್ನಿಸುವುದಿಲ್ಲ. ಮಗನ ಸೌಖ್ಯವೇ ಅವರಿಗೆ ಮುಖ್ಯ. ಮದುವೆಯ ಹೆಂಡತಿಯೂ ಇರಲಿ, ಮೆಚ್ಚಿಕೊಂಡ ಸೂಳೆಯೂ ಇರಲಿ. ಇದೇನು ಮಹಾ! 'ಆಳುವವನಿಗೇನು ಅರವತ್ತು ಹೆಣ್ಣುಗಳು' ಎಂದು ಮಗನ ವರ್ತನೆಯನ್ನು ಲೋಕ ಸಹಜವಾಗಿ ಒಪ್ಪಿಕೊಳ್ಳುವರು" (ಪ್ರ.ಪು.೨೩). ಇದುವೇ ಈ ಕಥಾನಕದಲ್ಲಿಯ ದುರಂತಕ್ಕೆ ಕಾರಣವೆನ್ನಬೇಕು.

ಆದರೆ ಈ ಕಥೆ ಹಾಡುವ ಸಂದರ್ಭ ಒಂದು ವೇಳೆ ದೇವರ ಮುಂದಾದರೆ, ಇದನ್ನು ಸುಖಾಂತವಾಗಿ ಮುಗಿಸುತ್ತಾರೆ. ಡಾ. ಬಸವರಾಜ ಮಲಶೆಟ್ಟಿ ಅವರು **'ಇಜಿಯಣ್ಣನ ಹಾಡು'** (೧೯೮೨) ಎಂದು ಇದರ ಭಿನ್ನ ಪಾಠವೊಂದನ್ನು ಪ್ರಕಟಿಸಿದ್ದು, ಅಲ್ಲಿ ಕೊನೆಯಲ್ಲಿ ಎಲ್ಲರೂ ಜೀವಂತವಾಗಿ ಏಳುವ ದೃಶ್ಯವಿದೆ. ಹೀಗಾಗಿ ಇದು ಪುಣ್ಯ ಕಥಾನಕವಾಗಿಯೂ ಹಾಡಲ್ಪಡುತ್ತದೆ. ಡಾ. ಹೆಂಡಿ ಅವರು ತಮ್ಮ ಪ್ರಸ್ತಾವನೆಯಲ್ಲಿ ಅಪ್ರಕಟಿತವಾಗಿದ್ದ ಈ ಪಾಠವನ್ನು ಗಮನಿಸಿದ್ದಾರೆ. ಮತ್ತು ಈ ಹಾಡು ಸುಖಾಂತವಾಗಿ ಕೊನೆಗೊಳ್ಳುವುದನ್ನು ದಾಖಲಿಸಿದ್ದಾರೆ. ಹೀಗೆ ಸುಖಾಂತವಾಗಿ ಮುಗಿಸುವ ಹಾಡುಗಳನ್ನು ಪುಣ್ಯ ಕಥೆಗಳು, ಜನಪದ ಪುರಾಣಗಳು ಎಂದು ಕರೆಯುವುದು ಸೂಕ್ತವೆನಿಸುತ್ತದೆ.

ಗದ್ದಗಿಮಠ, ಕರಾಕೃ, ಜೀಶಂಪ ನಂತರ ಹೆಚ್ಚು ಜನಪದ ಕಥಾನಕಗಳನ್ನು ಸಂಗ್ರಹಿಸಿದವರು ಡಾ. ಕೃಷ್ಣಮೂರ್ತಿ ಹನೂರು. ಇಂತಹ ಕಥಾನಕಗಳು ಹೆಚ್ಚಾಗಿ ಸಂಗ್ರಹಗೊಂಡುದು ಚಿತ್ರದುರ್ಗ ಜಿಲ್ಲೆಯಿಂದ ಎನ್ನುವುದೂ ಗಮನಿಸಬೇಕಾದ ಸಂಗತಿ. ಕರಾಕೃ ಅವರು ಹೆಚ್ಚಿನ ಕಥಾನಕಗಳನ್ನು ಸಂಗ್ರಹಿಸಿದ್ದೂ ಚಿತ್ರದುರ್ಗ ಜಿಲ್ಲೆಯಿಂದಲೇ. ಕೃಷ್ಣಮೂರ್ತಿ ಹನೂರ ಅವರು ಮೂರು ದೊಡ್ಡ ದೊಡ್ಡ, ಸುಮಾರು ತಲಾ ೪೦೦ ಪುಟಗಳ ವ್ಯಾಪ್ತಿಹೊಂದಿದ ಕಥಾನಕಗಳ ಸಂಗ್ರಹಗಳನ್ನು ಪ್ರಕಟಿಸಿದ್ದು, ಅವೆಲ್ಲವನ್ನೂ ಅವರು ಸಂಗ್ರಹಿಸಿದ್ದು ಚಿತ್ರದುರ್ಗ ಜಿಲ್ಲೆಯಿಂದಲೇ. ಇವರಿಬ್ಬರೂ ಹೊರಗಿನ ಜಿಲ್ಲೆಯವರು. ಚಿತ್ರದುರ್ಗ ಜಿಲ್ಲೆಯವರೇ ಆದ ಮೈಲಹಳ್ಳಿ ರೇವಣ್ಣ ಅವರು ಕಥಾನಕಗಳ ಒಂದು ದೊಡ್ಡ ಸಂಗ್ರಹವನ್ನೇ ಪ್ರಕಟಿಸಿದ್ದಾರೆ. ಇಲ್ಲಿಯವರೆಗೆ ಪ್ರಕಟವಾದ ಎಲ್ಲ ಕಥಾನಕಗಳ ಸಂಗ್ರಹಗಳನ್ನು ಗಮನಿಸಿದರೆ, ಅರ್ಧದಷ್ಟು ಕಥಾನಕಗಳು ಪ್ರಕಟವಾದುದು ಚಿತ್ರದುರ್ಗ ಜಿಲ್ಲೆಯಿಂದ ಎಂಬುದು ಗಮನಸೆಳೆಯುವ ಸಂಗತಿಯಾಗಿದೆ.

ಚಿತ್ರದುರ್ಗ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಲೇ ಕೃಷ್ಣಮೂರ್ತಿ ಹನೂರ ಅವರು ಅಲ್ಲಿಯ ಜನಪದ ಸಾಹಿತ್ಯ ಸಂಗ್ರಹಕ್ಕೆ ತೊಡಗಿ, ೧೯೮೧ ರಲ್ಲಿ ೪೦೦ ಪುಟಗಳ ವ್ಯಾಪ್ತಿಯ ದೊಡ್ಡ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಇಲ್ಲಿರುವ ೧೦ ಪುಟಗಳ ಒಂದು ಹಾಡನ್ನುಳಿದು ಉಳಿದವೆಲ್ಲವೂ ಸುದೀರ್ಘವಾದ ಖಂಡಕಾವ್ಯಗಳೆ. ಅವುಗಳ ದೀರ್ಘ ೨೦-೩೦ ಪುಟಗಳಿಂದ ೫೦-೬೦ ಪುಟಗಳ ವರೆಗೆ ಇದೆ. ಎಲ್ಲ ಹಾಡುಗಳು ಕಾವ್ಯಮಯವಾಗಿವೆ. ಓದುತ್ತಿದ್ದಂತೆ ಲಯಬದ್ಧವಾಗಿವೆ ಎಂಬುದು ಅನುಭವಕ್ಕೆ ಬರುತ್ತದೆ. ಸಂಪಾದಕರು ಮಹತ್ವಪೂರ್ಣವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಚಿತ್ರದುರ್ಗ ವೀರರನಾಡು ಎಂಬುದು ಅವರ ಮೊದಲನೇ ಟಿಪ್ಪಣಿ. ಹೆಚ್ಚು ಕಡಿಮೆ ಪ್ರತಿಗ್ರಾಮದ ಸುತ್ತಲೂ ಹಾಳು ಬಿದ್ದಿರುವ ಕೋಟೆಗಳು ನೋಡಲು ದೊರೆಯುತ್ತವಂತೆ.

ಹೀಗಾಗಿ ಸ್ತ್ರೀ ಪಾತ್ರಗಳೂ ಧೈರ್ಯಶಾಲಿಗಳು, ಪುರಷ ಪಾತ್ರಗಳಂತೂ ವೀರರಾಗಿಯೇ ಇರುತ್ತಾರೆ. ಹೀಗಾಗಿಯೇ ವೀರತನಕ್ಕೆ ಸಂಬಂಧಿಸಿದ ಕಥಾನಕಗಳ ಒಂದು ದೊಡ್ಡ ಸಂಗ್ರಹವನ್ನೇ ಪ್ರಕಟಿಸಲು ಸಂಪಾದಕರಿಗೆ ಸಾಧ್ಯವಾಗಿದೆ.

'ಕತ್ತಲ ದಾರಿದೂರ' ಸಂಗ್ರಹದಲ್ಲಿಯ ಕಥೆಗಳೆಲ್ಲ ಹೆಚ್ಚಾಗಿ ನೀರು ಪಾಲಾದ, ಕಿಚ್ಚು ಪಾಲಾದ ಹೆಣ್ಣುಮಕ್ಕಳ ಕಥೆಗಳಾಗಿದ್ದು, ಇವೆಲ್ಲ ಸ್ತ್ರೀ ಬದುಕಿನ ವಾಸ್ತವ ಚರಿತ್ರೆಗಳೇ ಆಗಿವೆ. ಸಂಪಾದಕರು ಕೆಲವು ಸ್ತ್ರೀಯರ ಸಮಾಧಿಗಳ ಚಿತ್ರಗಳನ್ನೇ ಕೊಟ್ಟಿದ್ದಾರೆ. ಜನಪದ ಕಥಾನಕಗಳ ಅಧ್ಯಯನದಿಂದ ಭಾರತೀಯ ಸ್ತ್ರೀ ಸಮುದಾಯದ ಸಮಸ್ಯೆಗಳನ್ನು ಅರಿಯಲು ಸಾಧ್ಯ, ಆಧುನಿಕ ಸ್ತ್ರೀ ವಾದಗಳಿಂದ ಭಾರತೀಯ ಸ್ತ್ರೀ ಸಮಸ್ಯೆಗಳ ವಾಸ್ತವವನ್ನು ಅರಿಯಲು ಸಾಧ್ಯವಿಲ್ಲ. ಚೆನ್ನಮ್ಮ, ಗುಣಸಾಗರಿ ಇಂತಹ ಹಾಡುಗಳು ಹಳೆಯ ಹಾಡುಗಳೆನಿಸುತ್ತವೆ. ಅವೆಲ್ಲ ಪುಣ್ಯಕಥಾನಕಗಳಾಗಿವೆ. ಎಷ್ಟೇ ಕಷ್ಟಬಂದರೂ ಅವನ್ನು ಸಹಿಸಿಕೊಂಡು, ತಮಗೆ, ಕುಟುಂಬಕ್ಕೆ ಒಳ್ಳೆಯದನ್ನು ಬಯಸಿದ ಹೆಣ್ಣುಮಕ್ಕಳ ಚರಿತ್ರೆಗಳು ನಮಗೆ ಒಂದು ರೀತಿಯಲ್ಲಿ ಪುರಾಣಗಳಂತೆ ತೋರುತ್ತವೆ. ಇಂತಹ ಕಥೆಗಳನ್ನು ಹಾಡುವ ಸಂದರ್ಭವನ್ನು ಸಂಪಾದಕರು ತೀರ ಪ್ರಾಸಂಗಿಕವಾಗಿ ಉಲ್ಲೇಖಿಸಿದ್ದಾರೆ: "ಸತಿ ಚೆನ್ನಮ್ಮ ಕಥೆಯೂ ಗುಣಸಾಗರಿ ಕಾಡಸಿದ್ದಮ್ಮ ಗೀತೆಯ ಮಾದರಿಯಲ್ಲೇ ಹುಟ್ಟಿಕೊಂಡಿರುವ ಪಾತಿವ್ರತ್ಯದ ಮಹಿಮೆಯನ್ನು ಮೆರೆಯುವ ಕಥಾನಕ. ಕಾಳಿಂಗರಾಯ ಎನ್ನುವ ಹೆಸರಿನಲ್ಲೂ ಈ ಕಥಾನಕ ಕೆಲವು ಕಡೆ ಪ್ರಚಲಿತದಲ್ಲಿದೆ. ಮಳೆಬರದ ಕಾಲಕ್ಕೆ ಪೂಜೆ ನಡೆಸಿ, ಈ ಪತಿವ್ರತೆಯ ಕಥೆಯನ್ನು ಕೆಲವು ಕಡೆ ಹಾಡುವುದುಂಟು. ಹಾಡುಗಾರಿಕೆ ಮುಗಿಸಿದ ಒಂದು ವಾರದೊಳಗೆ ಮಳೆ ಬರುತ್ತದೆ ಎಂಬ ನಂಬಿಕೆ ಗ್ರಾಮಸ್ಥರಿಗಿದೆ" (ಪ್ರ.ಪು.೨೧). ಈ ಸಂಗ್ರಹದ ಹತ್ತು ಹಾಡುಗಳಲ್ಲಿ– ಮದಗದ ಕೆಂಚಮ್ಮ, ಧರಣಿಯಮ್ಮನ ಬಲಿದಾನ, ಕಾಡಸಿದ್ದಮ್ಮ, ಗುಣಸಾಗರಿ, ಸತಿಚೆನ್ನಮ್ಮ ಈ ಐದು ಹಾಡುಗಳು ಪುಣ್ಯ ಕಥಾನಕಗಳಾಗಿವೆ. ಇವುಗಳ ಜೊತೆಗೆ 'ಈಸೂರಾಯನ ಹಾಡು'(ಸೂಳೆ ವಲ್ಲಣ್ಣಿ ಹಾಡು, ಡಾ. ಬಿ.ಬಿ.ಹೆಂಡಿ ಸಂಗ್ರಹ) ಒಂದನ್ನು ಸೇರಿಸಿಕೊಂಡರೆ ಕರ್ನಾಟಕದಲ್ಲಿ ಒಟ್ಟಿಗೆ ಆರು ಜನಪದ ಪುರಾಣ ಕಥೆಗಳು ಹೆಚ್ಚು ಪ್ರಚಾರದಲ್ಲಿರುವಂತೆ ತೋರುತ್ತದೆ.

ಉಳಿದ ಹಾಡುಗಳನ್ನು ಹಾಡುವ ಸಂದರ್ಭಗಳನ್ನು ಸಂಪಾದಕರು ದಾಖಲಿಸದಿರುವುದು ಒಂದು ಕೊರತೆಯಾಗಿ ಕಾಣುತ್ತದೆ. ಆದರೆ ಒಬ್ಬ ವಕ್ತಾರಳು ಹೊಲದಲ್ಲಿ ಕುಳಿತು ಬೆಳೆಯಲ್ಲಿಯ ಕಸ ತೆಗೆಯುವಾಗಿನ ಚಿತ್ರವನ್ನು ಹಾಕಿದ್ದಾರೆ. ಇದನ್ನು ಗಮನಿಸಿದರೆ, ಪ್ರಾರಂಭದಲ್ಲಿ ವಿವರಿಸಿದಂತೆ ಎಲ್ಲ ಕಡೆ ಹೆಣ್ಣುಮಕ್ಕಳು ತಮಗೆ ಶುಭಸಂದರ್ಭಗಳಲ್ಲಿ ಸಮಯ ದೊರೆತಾಗ, ಕೂಡಿ ಸಣ್ಣಪುಟ್ಟ ಕೆಲಸಗಳನ್ನು ಮನೆಯಲ್ಲಿ, ಹೊಲದಲ್ಲಿ ಮಾಡುವಾಗ ಈ ಹಾಡುಗಳನ್ನು ಹಾಡಿಕೊಳ್ಳುತ್ತಾರೆಂಬುದು ಮನವರಿಕೆಯಾಗುತ್ತದೆ. ಮಹಾಸತಿ ಕಾಟವ್ವ ಕಥಾನಕ ಹಾಡಿದ ಸಿರಿಯಜ್ಜಿ ತನ್ನ ಸಂದರ್ಶನದಲ್ಲಿ 'ಈ ಹಾಡು ಯಾವಾಗ ಕಲ್ತೆ?' ಎನ್ನುವ ಪ್ರಶ್ನೆಗೆ ಹೀಗೆ ಉತ್ತರಿಸಿದ್ದಾಳೆ: "ಅದೇ ನಾಟಿ ಆಕಕೋದಾಗ, ಕಳೇ ಕೀಳಕೋದಾಗ, ರಾಗಿ ಬೀಸುವಾಗ ಏಳ್ಕತಿದ್ರೊ" (ಪು.೯೭) ಎಂದಿದ್ದಾಳೆ. ಇದರಿಂದ ಕರ್ನಾಟಕದ ತುಂಬ ಕಥಾನಕಗಳನ್ನು ಹಾಡುವ ಸಂದರ್ಭಗಳು ನಮ್ಮ ಗಮನಕ್ಕೆ ಬರುತ್ತಿರುವಂತೆ ಒಂದೇ ಬಗೆಯಾಗಿವೆ.

ಡಾ. ಕೃಷ್ಣಮೂರ್ತಿ ಹನೂರ ಅವರ ಸಂಪಾದನಾ ಕ್ರಮವು ವೈಜ್ಞಾನಿಕವಾಗಿದೆ. ಪ್ರಾರಂಭದಲ್ಲಿ ವಕ್ತಾರರ ಮಾಹಿತಿಗಳುಳ್ಳ ಒಂದು ಪ್ಯಾರಾ ಬರೆದು, ಕಥೆಯ ನಡಗೆ, ಕಾವ್ಯದ ಭಾಷೆ ಮತ್ತು ಅದರ ಪೂರ್ಣತೆ ಅಪೂರ್ಣತೆಗಳ ಬಗೆಗೆ ಒಂದಿಷ್ಟು ಟಿಪ್ಪಣಿಗಳನ್ನು ಕೊಡುತ್ತಾರೆ. ನಂತರ ಕಥಾನಕದ ಸಾರಂಶ ಕೊಡುತ್ತಾರೆ. ಆ ಮೇಲೆ ಕಥನ ಗೀತೆಯ ಪಠ್ಯವನ್ನು ಕೊಡುತ್ತಾರೆ. ಈ ಕ್ರಮ ೧೯೬೦ರಷ್ಟು ಹಿಂದೆ ಡಾ. ಜೀಶಂಪ ಅವರು ತಮ್ಮ 'ಜನಪದ ಖಂಡಕಾವ್ಯಗಳು' ಕೃತಿಯಲ್ಲಿ ಮೊದಲನೆಯದಾಗಿ ಬಳಸಿದ್ದಾರೆ. ಅದನ್ನು ಹನೂರ ಅವರು ಅನುಸರಿಸಿದ್ದು ಒಳ್ಳೆಯದಾಗಿದೆ. ಇದರಿಂದ ಕಥನ ಗೀತೆಯ ಪಠ್ಯ ಪ್ರವೇಶಕ್ಕೆ ಅನುಕೂಲವಾಗಿದೆ. ವಕ್ತಾರರ ಬಗೆಗಿನ ಮಾಹಿತಿಯನ್ನೂ ಕೊಡುವಲ್ಲಿ ಡಾ. ಜೀಶಂಪ ಅವರನ್ನು ಅನುಸರಿಸರಿಸಿದರೆ ಇನ್ನೂ ಸ್ಪಷ್ಟತೆ ಬರುತ್ತಿತ್ತು.

ಕರಾಕೃ ಅವರು ತಮ್ಮ ಕೃತಿಗಳಲ್ಲಿ ಕಥಾನಕಗಳಿಗೆ ಸಂಬಂಧಿಸಿದಂತೆ ಕಲಾವಿದರಿಂದ ರೇಖಾಚಿತ್ರಗಳನ್ನು ಬರೆಸಿ ಮುದ್ರಿಸಿದ್ದಾರೆ. ಅವರ ನಂತರ ಹನೂರ ಅವರು ಕಥೆಗಳಿಗೆ ಸಂಬಂಧಿಸಿದ ವಾಸ್ತವ ಸ್ಥಳಗಳನ್ನು ಶೋಧಿಸಿ ಅವುಗಳ ಚಿತ್ರಗಳನ್ನು ಹಾಕಿರುವುದರಿಂದ ಕೃತಿಗೆ ಸಂಶೋಧನೆಯ ಸ್ಪರ್ಶ ಬಂದಂತಾಗಿದೆ. 'ಮಹಾಸತಿ ವೀರ ತಿಮ್ಮವ್ವ' ಕೊಂಡಕ್ಕೆ ಬಿದ್ದ ಸ್ಥಳದಲ್ಲಿ ನಿರ್ಮಿಸಿದ ಸಣ್ಣ ಗುಡಿ ಸ್ಮಾರಕ ಮತ್ತು ಮಹಾಸತಿ ಕಲ್ಲು (ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕು, ಮರಬಳ್ಳಿ), ಮಹಾಸತಿ ತಾಡಿ ನಾಗಮ್ಮನ ಗುಡಿ ಸ್ಮಾರಕ, ವಡ್ಡಗೆರೆ (ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ), 'ಮಹಾಸತಿ ಕಾಟವ್ವ' ಕೊಂಡಕ್ಕೆ ಬಿದ್ದ ಸ್ಥಳ, ಹುಲಿಕಂಟೆ (ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು), 'ಮದಗದ ಕೆಂಚವ್ವ'ನ ಕೆರೆ, ಮಾಸೂರು–ಮದಗ, (ಹಿರಿಯೂರು ತಾಲೂಕು, ಧಾರವಾಡ ಜಿಲ್ಲೆ)– ಇವುಗಳ ಚಿತ್ರಗಳು ಈ ಹಾಡುಗಳ ಐತಿಹಾಸಿಕ ಸತ್ಯವನ್ನು ಸಾರುತ್ತವೆ. ಅದಕ್ಕಾಗಿ ಇಂತಹ ಕಥನ ಕಾವ್ಯಗಳ ಅಧ್ಯಯನ ಕರ್ನಾಟಕ ಸಂಸ್ಕೃತಿಯ ಅಧ್ಯಯನದಲ್ಲಿ ಮಹತ್ವದ ಸಂಗತಿಗಳೆನಿಸುತ್ತವೆ. ಸಾಮಾನ್ಯರ ಬದುಕು ಅರಿಯಲು ಇವೆಲ್ಲ ನಮ್ಮ ಸಹಾಯಕ್ಕೆ ಬರುತ್ತವೆ.

ದೀರ್ಘವಾದ ಖಂಡಕಾವ್ಯಗಳಾಗಿರುವುದರಿಂದ ಅವನ್ನು ಸಂಧಿಗಳಾಗಿ ವಿಂಗಡಿಸಿದ್ದಾರೆ. ಕಥೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ಉಪಶೀರ್ಷಿಕೆಗಳನ್ನು ಕೊಟ್ಟಿರುವುದು ಓದುಗರಿಗೆ ಅನುಕೂಲಕರವಾಗಿದೆ. ಹಾಡಿನ ಲಯದ ಬಗ್ಗೆ ಲಕ್ಷ ಇರುವುದರಿಂದ ಅವುಗಳ ಛಂದಸ್ಸು ಎಲ್ಲೂ ಕೆಡದಂತೆ, ಅಕ್ಷರಗಳು ತಪ್ಪಿಲ್ಲದಂತೆ ನೋಡಿಕೊಂಡಿದ್ದಾರೆ. ಇವೆಲ್ಲ ಡಾ. ಹನೂರ ಅವರ ಸಂಪಾದನಾ ಶ್ರಮವನ್ನು, ತಂತ್ರಗಾರಿಕೆಯನ್ನು ಎತ್ತಿ ತೋರಿಸುತ್ತವೆ. ಸ್ವತಃ ಕ್ಷೇತ್ರಕಾರ್ಯ ಮಾಡಿದ ಒಬ್ಬನಲ್ಲಿ ಈ ಎಲ್ಲ ಸಂಗತಿಗಳು ಅನುಭವದಿಂದಾಗಿಯೇ ಹೊಳೆಯುವಂತಹವುಗಳು. ಆ ಕೆಲಸವನ್ನು ಸಂಪಾದಕರು ಕ್ರಮಬದ್ಧವಾಗಿ ಮಾಡಿದ್ದಾರೆ. ಹೀಗಾಗಿ ಮೌಖಿಕ ಕಾವ್ಯಗಳನ್ನೂ ಶಾಸ್ತ್ರೀಯವಾಗಿ ಸಂಪಾದನೆ ಮಾಡಬಹುದು ಎಂಬುದಕ್ಕೆ 'ಕತ್ತಲ ದಾರಿ ದೂರ' ಒಂದು ನಿದರ್ಶನವಾಗಿದೆ. ಕೊನೆಯಲ್ಲಿ ಒಂದೂರಿನ ಕ್ಷೇತ್ರಕಾರ್ಯದ ಅನುಭವಗಳನ್ನೂ ಬರೆದು ಹಾಕಿದ್ದಾರೆ. ಇಷ್ಟೊಂದು ದೊಡ್ಡ ಕೃತಿಗೆ ಅವಶ್ಯವಾಗಿ ಒಂದು ಶಬ್ದಾರ್ಥಕೋಶ ಕೊಡುವ ಅವಕಾಶವನ್ನು ಸಂಪಾದಕರು ತಪ್ಪಿಸಿಕೊಂಡಿದ್ದಾರೆ.

ಗುಣಸಾಗರಿ ಕಥನಗೀತೆ

ಸಂಧಿ ಒಂದು

ಬೂಮ್ಯಮ್ಮನ ನೆನದೇನ :

ಸತ್ಯವಂತರ ಸಿವನುಡಿಯ ಸಕ್ಕುರಿ ಮೆದ್ದಂಗೆ
ಮತ್ತೆ ಅರಿಯಾದ ಎರವಾರೀಗೆ
ಮತ್ತೆ ಅರಿಯಾದ ಎರವಾರೀಗೆ ಏಳಿದರ
ಮುತ್ತು ಮಾಣಿಕವೆ ಎಸೆದಂಗ॥

ಬಲ್ಲಾರ ಸಿವನುಡಿ ಬೆಲ್ಲಾವ ಮೆದ್ದಂಗ
ಇನ್ನೇನರಿಯಾದ ಎರವಾರೀಗೆ
ಇನ್ನೇನರಿಯಾದ ಎರವಾರೀಗೆ । ಏಳಿದರ
ಕಲ್ಲಾದ ಮಾಣಿಕವ ಎಸೆದಾಂಗ॥

ಹೆಣ್ಣುಮಕ್ಕಳು ಸಂಪಾದಿಸಿದ ಕೃತಿಗಳಲ್ಲಿ **'ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲೆ'** (೧೯೮೧) ಎಂಬ ಸಂಗ್ರಹವು ಸುಶೀಲಾ ಸೊಂಡೂರ ಅವರ ೧೭ ಕಥಾನಕಗಳ ಒಂದು ಸಂಗ್ರಹ. ಇಲ್ಲಿ ಐದು ಜನ ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳು ಇಲ್ಲಿಯ ಹಾಡುಗಳನ್ನು ಹಾಡಿದ್ದಾರೆ. ಇಲ್ಲಿಯ ಬಹುಮುಖ್ಯವಾದ ಹಾಡೆಂದರೆ **'ಮದಗದ ಕೆಂಚವ್ವ'**. ಈ ಕಥೆಯ ಹಾಡು ೧೯೮೧ರಲ್ಲಿ ಒಮ್ಮೆಗೆ ಎರಡು ಸಂಗ್ರಹಗಳಲ್ಲಿ ಪ್ರಕಟವಾಗಿದೆ. ಹನೂರರ 'ಕತ್ತಲ ದಾರಿ ದೂರ' ಹಾಗೂ ಸುಶೀಲಾ ಸೊಂಡೂರ ಅವರ ಸಂಗ್ರಹಗಳಲ್ಲಿ. ಶಿವಮೊಗ್ಗ ಸುತ್ತಮುತ್ತಲ ಕೆಲ ಹಳ್ಳಿಗಳ ವಕ್ತಾರರಿಂದ ಸಂಗ್ರಹಿಸಿದ ಹಾಡುಗಳು ಇಲ್ಲಿವೆ. ಹೀಗಾಗಿ ಶಿವಮೊಗ್ಗ ಜಿಲ್ಲೆಯ ಒಂದು ಸಂಗ್ರಹ ಇದಾಗಿ ನಮ್ಮ ಮುಂದಿದೆ. 'ಮಾಯದಂಥ ಮಳೆಯ ಬಂತಣ್ಣ ಮದಗದ ಕೆರೆಗೆ' ಎಂಬ ಪ್ರಸಿದ್ಧ ಸಾಲಿನಲ್ಲಿ ಉಲ್ಲೇಖವಾಗುವ ಮದಗದ ಕೆರೆಗೆ ಕೆಂಚಮ್ಮ ಹಾರವಾದ ಕಥೆ ಇದು. ೧೮ ಪುಟಗಳ ಒಂದು ದೀರ್ಘಕಾವ್ಯ ಇದಾಗಿದೆ. ಇದಕ್ಕಿಂತ ದೊಡ್ಡ ಪಾಠವೊಂದನ್ನು ಬಳ್ಳೆಗೆರೆ ಹನುಮಂತರಾಯಪ್ಪ ಅವರು ೧೯೯೪ರಲ್ಲಿ ಅಂದರೆ ೧೩ ವರ್ಷಗಳ ನಂತರ ಮದಗದ ಕೆಂಚಮ್ಮನ ಒಂದು ಖಂಡಕಾವ್ಯವನ್ನೇ ಸಂಗ್ರಹಿಸಿ ಸಂಪಾದಿಸಿ ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. ಅದನ್ನು ಮುಂದೆ ಅವಲೋಕಿಸಲಾಗಿದೆ.

ಈ ಕೆರೆ ಇರುವುದು ಶಿವಮೊಗ್ಗ ಜಿಲ್ಲೆಯ ಅಂಚಿನಲ್ಲಿ. ಧಾರವಾಡ ಜಿಲ್ಲೆಯ ಸರ್ವಜ್ಞನ ಮಾಸೂರಿನ ಭೂಮಿಯ ತುದಿಯವರೆಗೂ ಹಬ್ಬಿಕೊಂಡಿದೆ. ಈ ಕೆರೆಗೆ 'ಮದಗದ ಕೆರೆ' ಎಂಬ ಹೆಸರು ಹೇಗೆ ಬಂತೊ ತಿಳಿಯದು. ಆದರೆ ಈ ಕಥೆಯಲ್ಲಿ 'ಮದಗದ ಊರು', 'ಮದಗದ ಕೆರೆ' ಎಂಬ ಹೆಸರುಗಳು ಬಳಕೆಯಾಗಿವೆ. ಮಾಸೂರು ಗ್ರಾಮವು 'ಮದಗ–ಮಾಸೂರು' ಎಂದು ಪ್ರಸಿದ್ಧವಾಗಿರುವುದು ಕಂಡುಬರುತ್ತದೆ. ಹೀಗಾಗಿ 'ಮದಗಜದಂತಹ ಕೆರೆ' 'ಮದಗದ ಕೆರೆ' ಆಗಿರಬೇಕೆನಿಸುತ್ತದೆ. ಕೆರೆಯ ಅಂಗಳ ತುಂಬಾ ವಿಸ್ತಾರವಾಗಿದೆಯಂತೆ. ಕೆರೆ ತುಂಬಿ ನಿಂತಾಗಿನ ಅದರ ನೋಟ, ಆರ್ಭಟ ಮದವೇರಿದ ಆನೆಯನ್ನು ನೆನಪಿಗೆ ತರುವಂತಿದ್ದು, ಹಾಗೆ ಹೆಸರು ಬಂದಿರುವ ಸಾಧ್ಯತೆ ಇದೆ. ಆದರೂ

ಪ್ರಸ್ತುತ ಸಂಗ್ರಹದಲ್ಲಿ ನಮೂದಾಗಿರುವಂತೆ 'ಮದಗದ ಊರು' ಎಂಬ ಉಲ್ಲೇಖ ಈ ಊಹೆಗೆ ಅಡ್ಡಿಯಾಗುತ್ತಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಈ ಹಾಡಿನಲ್ಲಿ ನಡೆವ ಘಟನೆಗಳು ೧೩೬೩ನೇ ಇಸ್ವಿಗೆ ಸಂಬಂಧಿಸಿದವು. ಅಷ್ಟು ದೂರದಿಂದ ಘಟನೆಗಳು ನೈಜವಾಗಿ ಉಳಿದುಕೊಂಡು ಬಂದಿರುವುದು ಮೌಖಿಕ ಮಾಹಿತಿಯ ಮತ್ತು ಮೌಖಿಕ ಸಾಹಿತ್ಯದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಕೆಂಚಮ್ಮ, ಆಕೆಯ ಗಂಡನ ಹೆಸರು ಬಸವನಗೌಡ, ಕೆಂಚಮ್ಮನ ತಂದೆ ಪುಟ್ಟಣಗೌಡ, ತವರೂರು ರಟ್ಟೇಹಳ್ಳಿ, ಎರಡೂ ಶ್ರೀಮಂತ ಕುಟುಂಬಗಳು ಇವೆಲ್ಲ ಕಾವ್ಯದಲ್ಲಿ ಉಳಿದು ಬಂದಿರುವ ಸಂಗತಿಗಳು. ಕೆಂಚವ್ವನ ಬಲಿಕೊಡುವ ನಿರ್ಧಾರದ ನಂತರ ಮಗ ಬಸವನಗೌಡನಿಗೆ ತಂದೆಯು ವಿಷಯ ತಿಳಿಸದೆ ಆತನಿಗೆ ವ್ಯಾಪಾರಕ್ಕೆಂದು ದೇಶಾಂತರ ಕಳಿಸುತ್ತಾನೆ. ಕೆಂಚವ್ವನಿಗೆ ಬಲಿಕೊಡುವುದು ತಯಾರಿಯಾದ ನಂತರ ಆಕೆ ತವರಿಗೆ ಹೋಗಿ, ಎಲ್ಲರನ್ನೂ ಭೇಟಿಯಾಗಿ ಗಂಡನಿಗೆ ತನ್ನ ತಂಗಿ ಚಿಕ್ಕಕೆಂಚಿಗೆ ಕೊಟ್ಟು ಮದುವೆ ಮಾಡಲು ಒಪ್ಪಿಸಿಯೇ ಕೆರೆಗೆ ಹಾರವಾಗುತ್ತಾಳೆ. ತಿರುಗಿ ಬಂದ ಗಂಡ ಪರಿತಪಿಸುತ್ತಾನೆ. ಆದರೆ ಕೊನೆಯಲ್ಲಿ ಶ್ರೀಕೆಂಚಿಯ ತಂಗಿಯನ್ನು ಮದುವೆ ಮಾಡಿಕೊಂಡು ಸುಖವಾಗಿರುತ್ತಾನೆ. ಕೆಂಚವ್ವನ ಜಾತ್ರೆ ಇವತ್ತಿಗೂ ನಡೆಯುವುದು ಒಂದು ಅಪರೂಪದ ಸಂಗತಿಯಾಗಿದೆ.

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವನ
ಇಲ್ಲಿಗೆ ಈ ಸಂದು ಪದಮುಂದು।ಕೆಂಚವ್ವನ
ಸಲ್ಲಿರಲಿ ನಮ್ಮ ಮನದಾಗೆ।

ಶರಣೆ ನಿನ್ನ ಹಾಡಿದೆ ಶರಣೆ ನಿನ್ನ ಪಾಡಿದೆ
ಶರಣೆ ನಿನ ನಿದ್ರೆ ಕೆಡಿಸಿದೆ।ಕೆಂಚವ್ವ
ಪಟ್ಟೆ ಮಂಚದಲಿ ಸುಖನಿದ್ರೆ।

'ಸುಲವಲರಾಯ' ಕಥೆಯಲ್ಲಿ ಅಣ್ಣ ತಂಗಿಯ ಪ್ರೀತಿಯ ಸಂಗತಿ ಇದೆ. 'ಅಣ್ಣತಂಗಿ' ಕಥೆಯಲ್ಲಿ ಅಣ್ಣನು ಒಡವೆ ವಸ್ತ್ರಗಳ ಆಸೆಗಾಗಿ ತಂಗಿಯನ್ನೇ ಮೇಲಿಂದ ಮೇಲೆ ಕೊಲೆ ಮಾಡಲು ಪ್ರಯತ್ನ ಮಾಡುವುದು, ಶಿವನೇ ಇದರಿಂದ ಪಾರು ಮಾಡುವ ಸಂಗತಿ ಇದೆ. 'ಅತ್ತೆ ಸೊಸೆ' ಕಥೆಯಲ್ಲಿ ಸೊಸೆ ಅತ್ತೆಯನ್ನು ಗಂಡನಿಂದ ಕೈಕಾಲು ಕಟ್ಟಿಸಿ ಮಡುವಿಗೆ ಒಗೆಸುತ್ತಾಳೆ. ಶಿವನ ಕರುಣೆಯಿಂದ ಅತ್ತೆ ಬದುಕಿ, ದ್ರವ್ಯದೊಂದಿಗೆ ಮನೆಗೆ ಬಂದಾಗ, ತಾನೂ ಹಾಗೆ ಸಂಪತ್ತನ್ನು ತರುತ್ತೇನೆಂದೂ ತನಗೂ ಕೈಕಾಲು ಕಟ್ಟಿ ಹೊಳೆಗೆ ಹಾಕಬೇಕೆಂದೂ ಗಂಡನಿಂದ ಹಾಗೆ ಮಾಡಿಸಿಕೊಂಡು ಹೆಂಡತಿ ಸಾವನ್ನಪ್ಪುತ್ತಾಳೆ. ತಾಯಿ ಮಗನಿಗೆ ಮತ್ತೊಂದು ಮದುವೆ ಮಾಡಿ ಸುಖವಾಗಿರುತ್ತಾಳೆ. 'ಆಳುಕೂಗಿನ ಹಕ್ಕಿ' ಕಥೆಯಲ್ಲಿ ತಮ್ಮನನ್ನು ಮತ್ಸರದಿಂದ ಕೊಲ್ಲಲು ಅಣ್ಣಂದಿರು ಮಾಡುವ ಪ್ರಯಾಸ, ತಮ್ಮನು ಅವುಗಳಿಂದ ಉಳಿದು ಬರುವ ದೃಶ್ಯಗಳಿಂದ ಈ ಕಥೆ ತುಂಬಿದೆ. ಹೀಗೆಯೇ ಮಹಾಭಾರತ ಕಥೆಗೆ ಸಂಬಂಧಿಸಿದ ಕಥೆಗಳಾದರೂ ಅವು ಸಾಮಾನ್ಯರ ಕುಟುಂಬದಲ್ಲಿ ನಡೆಯುವ ಘಟನೆಗಳಂತೆ ನಡೆಯುತ್ತವೆ. ಮೈಸೂರು ಜಿಲ್ಲೆಯ ಪಾಂಡವಪುರ ಮತ್ತು ಇನ್ನೊಂದು ಹಳ್ಳಿಯಲ್ಲಿ ಜಯಲಕ್ಷ್ಮಿ ಸೀತಾಪುರ ಅವರು ಸಂಗ್ರಹಿಸಿ ಪ್ರಕಟಿಸಿದ **'ನಮ್ಮ ಸುತ್ತಿನ ಜನಪದ ಕಥನ ಗೀತೆಗಳು'** ಎಂಬ ಸಂಗ್ರಹದ ಕೆಲ ಹಾಡುಗಳ ಭಿನ್ನಪಾಠಗಳು ಇಲ್ಲಿವೆ. ಜನಪದ

ಕಥಾನಕಗಳನ್ನು ಸಂಗ್ರಹಿಸಿ ಸಂಪಾದಿಸಿದ ಹೆಣ್ಣುಮಕ್ಕಳು ಗಮನಿಸಿದ ಹಾಡುಗಳು ವಿಶೇಷವಾಗಿ ಹೀಗೆ ಕುಟುಂಬದ ಸಣ್ಣ ಸಣ್ಣ ಸಮಸ್ಯೆಗಳಿಗೆ ಸಂಬಂಧಿಸಿದವುಗಳಾಗಿರುವುದು ವಿಶೇಷ. ಪುರುಷರು ಸಂಗ್ರಹಿಸಿದ ಕಥೆಗಳೆಲ್ಲ ದೀರ್ಘವಾದ ಖಂಡಕಾವ್ಯಗಳಾಗಿದ್ದು, ಅವೆಲ್ಲ ಪುರಾತನ ಕಾಲದ ಆಶಯಗಳಿಂದ ತುಂಬಿ ಹೋಗಿವೆ.

'ವಡ್ಡಗೆರೆ ನಾಗಮ್ಮ' (೧೯೮೧) ಎಂಬ ಒಂದು ದೀರ್ಘಕಾವ್ಯವನ್ನು ವೈಜಯಂತಿಮಾಲ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಹಾಡು ಸಂಗ್ರಹಿಸಿದ ಗ್ರಾಮ ಅಮರಾಪುರ. ಇದು ಅಚ್ಚ ಕನ್ನಡ ಪ್ರದೇಶವಾದರೂ ಅದೀಗ ಆಂದ್ರಪ್ರದೇಶದ ವ್ಯಾಪ್ತಿಗೆ ಸೇರಿದೆ. ಈ ಕಥೆ ಈಗಾಗಲೇ 'ಕತ್ತಲ ದಾರಿ ದೂರ' ಕೃತಿಯಲ್ಲಿ ಎರಡನೇ ಕಥಾನಕವಾಗಿ ೪೫ ಪುಟಗಳ ವ್ಯಾಪ್ತಿಯಲ್ಲಿ ಪ್ರಕಟವಾದ ಕಥೆಯೇ ಆಗಿದೆ. ಅಲ್ಲೂ ತ್ರಿಪದಿಯಲ್ಲೇ ಇರುವ ಈ ಕಥೆ ಇಲ್ಲಿಯ ಹಾಡುಗಾರ್ತಿ ಶ್ರೀಮತಿ ಕೆಂಚಜ್ಜಿ ೭೪೪ ತ್ರಿಪದಿಗಳಲ್ಲಿ ೮೬ ಪುಟಗಳ ವ್ಯಾಪ್ತಿ ಅಂದರೆ, ಸುಮಾರಾಗಿ ಎರಡುಪಟ್ಟು ದೀರ್ಘವಾಗಿ ಈ ಕಥೆಯನ್ನು ಬೆಳೆಸಿದ್ದಾಳೆ. 'ವಡ್ಡಗೆರೆ ನಾಗಮ್ಮ' ಕೃತಿಯ ನಾಯಕಿಯ ಹೆಸರಿಗೆ ಒಂದು ಗುಡಿ ಇದ್ದು, ಅದರ ಜಾತ್ರೆಯೂ ನಡೆಯುತ್ತದೆ ಎಂಬ ಸಂಗತಿ, ಗುಡಿಯ ಚಿತ್ರ ಇವೆಲ್ಲ 'ಕತ್ತಲ ದಾರಿದೂರ' ಸಂಗ್ರಹದಲ್ಲಿವೆ. ಪ್ರಸ್ತುತ ಕೃತಿಯ ತ್ರಿಪದಿಗಳೂ ಸೊಗಸಾಗಿ ಮೂಡಿಬಂದಿವೆ.

ಮುತ್ತಿನ ಮಣಿಯಂಗೆ ಎತ್ತೇವ ದಣಿಗಾಳು
ಅತ್ತು ಕೆಂಡದಾಗೆ ಪಗಡೀಯ।ಚೆಂಡಾದಳೋ
ಮುತ್ತೈದೆ ನಿನ್ನ ನೆನೆದೇನೆ।೧।

ಅವಳದ ಮಣಿಯಂಗೆ ತೆಗೆದೇನೆ ದಣಿಗಾಳು
ತಣಿಗಂಡದಾಗೆ ಪಗಡೀಯ । ಚೆಂಡಾದಳೋ
ಈರು ನಾಗಮ್ಮ ನಿನ್ನ ನೆನೆದೇನೆ ।೨।

ಈ ಕೃತಿಯ ವಿಶೇಷತೆ ಎಂದರೆ, ಇಲ್ಲಿಯ ಹಾಡುಗಾರ್ತಿ ವಡ್ಡಗೆರೆ ನಾಗಮ್ಮನ ಮಾವನ ಬಗ್ಗೆಯೂ ಒಂದು ಕಥೆಯನ್ನು ಹಾಡಿದ್ದಾಳೆ.

ಚಿತ್ರದುರ್ಗ ಜಿಲ್ಲೆಯಿಂದ ಸಂಗ್ರಹಿಸಿದ ಜನಪದ ಕಥಾನಕಗಳ ಸಂಗ್ರಹ **'ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು'** (೧೯೮೪) ಎಂಬ ಕೃತಿಯನ್ನು ಮೈಲಹಳ್ಳಿ ರೇವಣ್ಣ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ, ಮೈಲಹಳ್ಳಿ ರೇವಣ್ಣ ಅವರು ಚಿತ್ರದುರ್ಗ ಜಿಲ್ಲೆಯವರಾಗಿರುವುದು. ಇಲ್ಲಿಯ ಹಾಡುಗಳನ್ನು ಹಾಡಿದವರು ಮಾದಿಗ ಸಮಾಜದ ವಕ್ತಾರರು. ಈ ಕೃತಿಯಲ್ಲಿ ಒಟ್ಟಿಗೆ ಎಂಟು ಹಾಡುಗಳಿವೆ. ಕಾಳಿಂಗರಾಯ, ಗುಣಸಾಗರಿ, ಶಾನಯ್ಯ (ಈಸೂರಾಯನ ಹಾಡು) ಈ ಮೂರೂ ಕಥಾನಕಗಳು ಜನಪದ ಪುರಾಣ ಕಥೆಗಳಾಗಿದ್ದು, ಸುಂಕಾಪೂರ, ಬಿ.ಬಿ.ಹೆಂಡಿ ಅವರ ಸಂಗ್ರಹಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ಅರ್ಜುನರಾಯ, ದ್ರೌಪದಿ, ಸುಭದ್ರ ಈ ಕಥೆಗಳು ಕರಾಕೃ ಅವರು **'ಮಹಾಭಾರತದ ಜನಪದ ಗೀತೆಗಳು'** ಎಂಬ ಕೃತಿಯಲ್ಲಿ ಪ್ರಕಟಿಸಿದ ಕಥನಕಾವ್ಯಗಳ ಭಿನ್ನಪಾಠಗಳಾಗಿವೆ. ಯೋಗಿನಾರಂದ, ಭೂಮಿಗೆ ಗೌರಮ್ಮ ಇಳಿದಳಾಗ ಎಂಬ ಕಥೆಗಳು ಗಂಗೆ-ಗೌರಿ-ಶಿವ ಇವರಿಗೆ ಸಂಬಂಧಿಸಿದಂತೆ ಜನಪದ

ಶಿವಪುರಾಣ ಕಥೆಗಳಾಗಿವೆ. ಹೀಗೆ ಜನಪದ ಪುರಾಣ, ಜನಪದ ಶಿವಪುರಾಣ ಹಾಗೂ ಜನಪದ ಭಾರತ ಪುರಾಣಗಳಿಗೆ ಸಂಬಂಧಿಸಿದ ಹಾಡುಗಳು ಇಲ್ಲಿರುವುದು ಒಂದು ವಿಶೇಷ. ಎಂಟು ಹಾಡುಗಳಲ್ಲಿ ಈಗಾಗಲೇ ಆರು ಹಾಡುಗಳ ಪಾಠಗಳು ಪ್ರಕಟವಾದ ಹಾಡುಗಳು. ಇದನ್ನು ಸಂಪಾದಕರು ಗಮನಿಸಿ, ತಮ್ಮ ಪಾಠಗಳಿಗೂ ಮೊದಲು ಪ್ರಕಟವಾದ ಪಾಠಗಳಿಗೂ ಹೋಲಿಸಿ, ಒಂದಿಷ್ಟು ಚರ್ಚಿಸುವ ಅವಕಾಶವಿತ್ತು. ಸಂಪಾದಕರು ಪಾಠಗಳನ್ನು ಸಂಪಾದಿಸುವಲ್ಲಿ ಉಪಶೀರ್ಷಿಕೆಗಳನ್ನು ಮಾಡಿಕೊಂಡಿದ್ದಾರೆ, ಸೊಲ್ಲುಗಳು ಬದಲಾಗುವ ಸ್ಥಳಗಳನ್ನು ಸೂಚಿಸಿದ್ದಾರೆ. ಒಂದು ಸಲ ಅನ್ನುವ, ಎರಡು ಸಲ ಅನ್ನುವ ಸಾಲುಗಳನ್ನು ಅಡ್ಡಗೆರೆ ಬಳಸಿ ಸೂಚಿಸಿದ್ದಾರೆ. ಒಂದು ಅಡ್ಡಗೆರೆ ಇರುವ ಸಾಲುಗಳನ್ನು ಒಂದು ಸಲ, ಎರಡು ಅಡ್ಡಗೆರೆ ಇರುವ ಸಾಲುಗಳನ್ನು ಎರಡು ಸಲ ಅನ್ನಬೇಕೆಂಬ ಸೂಚನೆ ಕೊಟ್ಟಿದ್ದಾರೆ. ಈ ಸಂಕಲನದ ಹಾಡುಗಳೆಲ್ಲ ತ್ರಿಪದಿ ಇಲ್ಲವೆ ದ್ವಿಪದಿಯಲ್ಲಿರುವುದೇ ಜಾಸ್ತಿ. ನಾವು ಇಲ್ಲಿಯವರೆಗೆ ನೋಡಿದ ಹಾಡುಗಳ ಛಂದಸ್ಸು ಹೆಚ್ಚು ಕಡಿಮೆ ಹೀಗೆಯೇ ಇದೆ. ಕೆಲವರು ತಿಳಿದು ಛಂದಸ್ಸಿಗನುಗುಣವಾಗಿ ಸಾಲುಗಳನ್ನು ಒಡೆದು ಕೊಟ್ಟಿದ್ದಾರೆ. ಕೆಲವರು ಕೊಟ್ಟಿಲ್ಲ.

ಚಿತ್ರದುರ್ಗ ಜಿಲ್ಲೆಯಿಂದಲೇ ಸಂಗ್ರಹಿಸಲಾದ ಡಾ. ಕೃಷ್ಣಮೂರ್ತಿ ಹನೂರ ಅವರ ಇನ್ನೊಂದು ಕೃತಿ **'ಜನಪದ ವೀರಗೀತೆಗಳು'**(೧೯೮೭). ಚಿತ್ರದುರ್ಗ ವೀರರ ನಾಡು. ಅಲ್ಲಿ ವಾಸವಾಗಿರುವ ಕಾಡುಗೊಲ್ಲರು, ಬೇಡನಾಯಕರು ಇವರೆಲ್ಲ ಶೂರ ಜನಾಂಗವೆ. ಈ ಸಂಗ್ರಹದ ಕಾವ್ಯಗಳ ನಾಯಕರೆಲ್ಲ ಹೆಚ್ಚು ಕಡಿಮೆ ಈ ಜನಾಂಗದ ವೀರರೇ ಆಗಿದ್ದಾರೆ. ಈ ಕೃತಿಯಲ್ಲಿ ೧೨ ಹಾಡುಗಳಿವೆ. ಅವುಗಳಲ್ಲಿ 'ವೀರ ಅಪಿಮನ್ನು' ಒಂದು ಮಾತ್ರ ಮಹಾಭಾರತಕ್ಕೆ ಸಂಬಂಧಿಸಿದ ಕಥೆಯಾಗಿದ್ದು, ಉಳಿದವೆಲ್ಲ ಐತಿಹಾಸಿಕ ವ್ಯಕ್ತಿಗಳನ್ನು ಕುರಿತ ಕಾವ್ಯಗಳೇ ಆಗಿವೆ. ಅದರಲ್ಲೂ 'ವೀರಹನುಮಂತರಾಯ', 'ರಣಸಾಗರದಗೌಡ' ಇವರನ್ನುಳಿದು ಉಳಿದ ನಾಯಕರಾದ ಗಾದ್ರಿ ಪಾಲ್ನಾಯಕ, ಈರಬಡಪ್ಪ, ಸಿರಿಯಣ್ಣ, ಜುಂಜಪ್ಪ, ಯರ್ರಪ್ಪ, ಚಿತ್ರಲಿಂಗ, ನಿಂಗಣ್ಣ ಇವರ ಮೂಲ ಸ್ಥಳಗಳಲ್ಲಿ ಸಣ್ಣಪುಟ್ಟ ಸ್ಮಾರಕಗಳಿದ್ದು, ಅಲ್ಲೆಲ್ಲ ಜಾತ್ರೆಗಳು ನಡೆಯುತ್ತವೆ ಎಂದು ತಿಳಿದುಬರುತ್ತದೆ. ಇಂತಹ ಉತ್ಸವಗಳ ಕಾಲಕ್ಕೆ ಆಯಾ ವೀರರ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮಾಡುವಾಗ ಹೆಣ್ಣುಮಕ್ಕಳು ಆಯಾ ವೀರರ ಕಥೆಗಳನ್ನು ಹಾಡುತ್ತಾರೆಂದು ಸಂಪಾದಕರು ಬರೆಯುತ್ತಾರೆ. "...ಆಯಾ ವೀರರ ಸ್ಮಾರಕಗಳು ಇರುವ ಸ್ಥಳದಲ್ಲೇ ಗ್ರಾಮಸ್ಥರು ಸರಳವಾಗಿ ಜಾತ್ರೆ ಆಚರಿಸುವರು. ವೀರನ ಹೆಸರಿನಲ್ಲಿರುವ ಕತ್ತಿ, ಕಠಾರಿ, ಬಿಲ್ಲುಬಾಣಗಳನ್ನು ಅಥವಾ ಸಮಾಧಿ ಮಣ್ಣಿನ ಪೆಟ್ಟಿಗೆಯನ್ನು ಜಲದಿಗೆ ಕೊಂಡೊಯ್ಯುವರು. ಅಲ್ಲಿ ಶುದ್ಧಮಾಡಿ ಅಲಂಕರಿಸಿ ಊರ ಮೇಲೆ ಮೆರವಣಿಗೆಯಲ್ಲಿ ಕೊಂಡುಬರುತ್ತ, ಈ ಮೆರವಣಿಗೆಯ ಹಿಂದೆ ಹೆಂಗುಸರು ಗುಂಪಾಗಿ ವೀರನನ್ನು ಕುರಿತಾದ ಕಥನ ಗೀತೆಯನ್ನು ಹಾಡಿಕೊಳ್ಳುತ್ತ ಹಿಂಬಾಲಿಸುವರು. ...ಹಾಡುವ ಹೆಂಗಸರು, ಗಂಡುಮಕ್ಕಳ ಮಧ್ಯದಲ್ಲಿ ಮೆರವಣಿಗೆ ಹೊರಟು ಕೊನೆಯಲ್ಲಿ ಗುಡಿಗೆ ಬಂದು ಗುಡಿ ತುಂಬಿಕೊಳ್ಳುವುದು. ದೇವರು ಗುಡಿ ತುಂಬುವಾಗ ಹಾಡುವ ಪದಗಳನ್ನು ಮುದ್ದರಿಸುವ ಪದಗಳು ಎನ್ನುವರು. ಈ ಹಳ್ಳಿಯ ಜನವೆಲ್ಲ ತಮ್ಮ ನಡುವೆ ಆಗಿಹೋದ ವೀರನ ಹೆಸರನ್ನೇ ಇಟ್ಟುಕೊಳ್ಳುವರು. ...ಕತ್ತಿ,

ಬಿಲ್ಲು, ಬಾಣ ಪೆಟ್ಟಿಗೆ ಇವನ್ನು ಪೂಜಿಸುವರು"(ಪ್ರ.ಪು.೩೨-೩೩). ಈ ವೀರರ ಜಾತ್ರೆ ಉತ್ಸವಗಳ ಸಮಯದಲ್ಲಿ ಅಷ್ಟೇ ಅಲ್ಲದೆ ಹೊಲದಲ್ಲಿ ಕಳೆ ತೆಗೆಯುವಾಗ, ಬೇಸಿಗೆಯ ಬೆಳದಿಂಗಳ ರಾತ್ರಿಗಳಲ್ಲಿ ಇಂತಹ ಹಾಡುಗಳನ್ನು ಹಾಡುವ ಸಂಪ್ರದಾಯವಿರುವುದು ಸಾಮಾನ್ಯ.

ಸಂಪಾದಕರು ತಮ್ಮ ಹಿಂದಿನ ಕೃತಿ **'ಕತ್ತಲ ದಾರಿ ದೂರ'**(೧೯೮೧) ಕೃತಿಯಲ್ಲಿ ಕೆಲವು ಚಿತ್ರಗಳನ್ನು ಹಾಕಿದಂತೆ ಇಲ್ಲೂ ಗಾದ್ರಿಪಾಲನಾಯಕನ ಹೆಂಡತಿಯರಾದ ಕೆಂಚವ್ವ ಕಾಮವ್ವ ಇವರ ಮಾಸ್ತಿಕಲ್ಲು, ಗಾದ್ರಿಪಾಲನಾಯಕ ಹುಲಿಯೊಡನೆ ಹೋರಾಡಿ ಮಡಿದ ಸ್ಥಳ, ಅವನ ಗುಡಿ, ಈರಬಡೆಪ್ಪನ ವೀರಗಲ್ಲು, ಆತ ಹೋರಾಡಿ ಮಡಿದ ಸ್ಥಳ, ಜುಂಜಪ್ಪನ ಸಮಾಧಿ, ಯರ್ರಪ್ಪನ ಕತ್ತಿ ಪೂಜಿಸಲ್ಪಡುವ ಗುಡಿಸಿಲ ಗುಡಿ, ಚಿತ್ರಲಿಂಗನ ಗುಡಿ, ಪೆಟ್ಟಿಗೆ ಈ ಎಲ್ಲ ಐತಿಹಾಸಿಕ ದಾಖಲೆಗಳ ಜೊತೆಗೆ ಹಾಡುಗಳನ್ನು ಹಾಡಿದ ಹೆಣ್ಣುಮಕ್ಕಳ ಕೆಲವರ ಚಿತ್ರಗಳನ್ನು ಹಾಕಿದ್ದಾರೆ. ಈ ಎಲ್ಲ ಚಿತ್ರಗಳನ್ನು ಹಾಕಿರುವುದರಿಂದ ಜೀವಂತ ಇತಿಹಾಸವನ್ನು ಹಿಡಿದಿಟ್ಟಂತಾಗಿದೆ. ಈ ಹಾಡುಗಳಂತೂ ಕರ್ನಾಟಕ ಸಂಸ್ಕೃತಿಯ, ಇತಿಹಾಸದ ದೊಡ್ಡ ದಾಖಲೆಗಳಾಗಿ ಇವತ್ತಿಗೂ ಹಾಡಲ್ಪಡುತ್ತವೆ.

ಇಲ್ಲಿಯ ಸಂಪಾದನಾ ಕ್ರಮ ಕೂಡ ಗಮನಾರ್ಹವಾಗಿದೆ. 'ಕತ್ತಲ ದಾರಿ ದೂರ' ಕೃತಿಯಲ್ಲಿ ಅನುಸರಿಸಿದ ಎಲ್ಲ ಸಂಪಾದನ ತಂತ್ರಗಳನ್ನು ಇಲ್ಲೂ ಬಳಸಿದ್ದಾರೆ. ಮೊದಲಿಗೆ ಹಾಡು ಹೇಳಿದವರ ಪರಿಚಯ, ಕಥೆಯ ಸಾರಾಂಶ ಮುಂತಾದ ಸಂಗತಿಗಳನ್ನು ಕೊಟ್ಟು, ಹಾಡಿನ ಪಾಠಗಳನ್ನು ಕೊಡುತ್ತ ಹೋಗಿದ್ದಾರೆ. ಇದರಿಂದ ಓದುಗರಿಗೆ ಒಂದು ಪ್ರವೇಶಿಕೆಯನ್ನು ಒದಗಿಸಿದಂತಾಗಿದೆ. ಇಲ್ಲೂ ದೀರ್ಘವಾದ ಹಾಡುಗಳಿಗೆ ಅಲ್ಲಲ್ಲಿ ಸಂಧಿಗಳನ್ನು, ಉಪಶೀರ್ಷಿಕೆಗಳನ್ನು ಹಾಕಿ, ಕಥೆಯ ಬೆಳವಣಿಗೆಯನ್ನು ಓದುಗರ ಗಮನಕ್ಕೆ ಸರಳವಾಗಿ ಬರುವಂತೆ ಮಾಡಿದ್ದಾರೆ.

'ವೀರ ಅಪಿಮನ್ನು' ಒಂದು ಹಾಡು ಮಾತ್ರ ದ್ವಿಪದಿಯಲ್ಲಿದ್ದು, ಉಳಿದವೆಲ್ಲ ಪ್ರಸಿದ್ಧ ಛಂದಸ್ಸು ತ್ರಿಪದಿಯಲ್ಲಿಯೇ ಇರುವುದು ವಿಶೇಷ.

ಈರಬಡಪ್ಪ

ಭಾಗ ಒಂದು

ಆವೀಗಾರುತಿಯ ಬೆಳಗಮ್ಮ :

ದುಗ್ಗುಳ ದೂಪಾನಾಕಿ ದೊಡ್ಡೋನ ನೆನೆದೇನೆ
ದೊಡ್ಡೆಬ್ಬಿಯಾಗ ಇರುವೋನ। ಈರಣ್ಣಾನ
ದೊಡ್ಡೋನ ಮದಲು ನೆನೆದೇನು

ಸಾಮ್ರಾಣಿನಾಕಿ ಸ್ವಾಮೀನ ನೆನೆದೇನು
ಸಾಲೆಬ್ಬಿಯಾಗ ಇರುವೋನ। ಈರಣ್ಣಾನ
ಸ್ವಾಮೀಯ ಮದಲು ನೆನೆದೇನು

ಅಪ್ಪನಿನ ಆಡು ಚಿತ್ತ ಪಲ್ಲಟವಾಗಿ
ಚಿಕ್ಕವೊಸಳ್ಳಿ ಮಳಿಗ್ಯಾಗೆ । ಓದಿಕಂಬ
ವೊತ್ತೀನಾಗೆ ಈರಣ್ಣ ದಯಾಮಾಡೊ

ಕಲಬುರಗಿಯ ಡಾ. ಶಶಿಕಲಾ ಮೋಳ್ದಿ ಅವರು ಸಂಗ್ರಹಿಸಿ ಸಂಪಾದಿಸಿದ ಕೃತಿ **'ಹರದೆಯರ ಹಾಡುಗಳು'** (೧೯೮೭). ಈ ಸಂಗ್ರಹದಲ್ಲಿಯ ಹಾಡುಗಳು ವಿಶೇಷವಾಗಿವೆ. ಬಹುತೇಕ ಸಂಪಾದಕರುಗಳೆಲ್ಲ ಆರಿಸಿಕೊಂಡದ್ದು ದೀರ್ಘವಾದ ಹಾಡುಗಳನ್ನು. ಆದರೆ ಇಲ್ಲಿಯ ೩೪ ಹಾಡುಗಳು ಚಿಕ್ಕಚಿಕ್ಕ ಕಥಾನಕಗಳಾಗಿವೆ. ಸ್ತ್ರೀ ಜೀವನದಲ್ಲಿ ಬರುವ ಅನೇಕ ಸಂಕಟಗಳನ್ನು ಇಲ್ಲಿಂಯ ಹಾಡುಗಲ್ಲಿ ಕಾಣುತ್ತೇವೆ. ದೀರ್ಘವಾದ ಖಂಡಕಾವ್ಯಗಳಲ್ಲಿ ಒಂದಿಷ್ಟು ಪುರಾತನವೆನ್ನಬಹುದಾದ ಬದುಕಿನ ಆಶಯಗಳು ಹೆಚ್ಚಾಗಿ ವಿವರಣೆಗೊಂಡಿರುತ್ತವೆ. ಹೆಣದೊಂದಿಗೆ, ಕಠಾರಿಯೊಂದಿಗೆ ಹೆಣ್ಣಿನ ಮದುವೆ ಮಾಡುವುದು. ಕೆರೆ ಕಟ್ಟೆಗಳಿಗೆ ಬಲಿಕೊಡುವುದು. ಸತಿ ಹೋಗುವುದು. ದೇವರು ದರ್ಶನ ಕೊಡುವುದು. ಇಂತಹ ಘಟನೆಗಳು ಬರುವುದು ಜಾಸ್ತಿ. ಇಲ್ಲಿಯ ಹಾಡುಗಳಲ್ಲೂ ಅಂತಹ ಘಟನೆಗಳು ಬಂದಿವೆ. ಪ್ರಾಚೀನ ಆಶಯಗಳುಳ್ಳ ಕಥೆಗಳೂ ಇವೆ. ಆದರೂ ಇಲ್ಲಿಯ ಹಾಡುಗಳೆಲ್ಲ ತೀರ ಚಿಕ್ಕಚಿಕ್ಕವು. ಕೇಳ ಕೇಳುತ್ತಲೇ ಮುಗಿದು ಹೋಗುವಂತಹವು. ದೀರ್ಘವಾದ ವರ್ಣನೆ ವಿವರಗಳು ಇಲ್ಲಿ ಕಾಣುವುದಿಲ್ಲ. ನೇರವಾದ ಘಟನೆಯ ಪ್ರಸ್ತಾಪ ಮತ್ತು ಪರಿಣಾಮವನ್ನು ಕಾಣುತ್ತೇವೆ. ಹೀಗಾಗಿ ದೀರ್ಘ ಕಥೆಗಳಿಗಿಂತ ಇವು ಪರಿಣಾಮದಲ್ಲಿ ತೀವ್ರವಾಗಿವೆ ಎನಿಸುತ್ತದೆ.

ಇಲ್ಲಿಯ ಕಥಾನಕಗಳನ್ನು ಹಾಡುವ ಸಂದರ್ಭವನ್ನು ಕುರಿತು ಸಂಪಾದಕರು ಹೀಗೆ ವಿವರಿಸಿದ್ದಾರೆ. "ಇವುಗಳನ್ನು ಒಂದೆಡೆ ಕುಳಿತು ಹಾಡುವ ಪ್ರಥಾ ಈ ಭಾಗದಲ್ಲಿ ಬಹು ಕಡಿಮೆ. ನಾಗರಪಂಚಮಿ, ದಸರೆಯ ಕಾಲಕ್ಕೆ ವಿರಾಮದಲ್ಲಿ ಕೂಡಿ ಹಾಡುವರು. ಆದರೂ ಸಾಮೂಹಿಕವಾಗಿ ಕೆಲಸ ಮಾಡುತ್ತಿರುವಾಗ, ಹೊಲದಲ್ಲಿ ಕಸ ಕಳೆಯುತ್ತಿರುವಾಗ, ಮತ್ತಿತರ ಕೆಲಸಗಳನ್ನು ಮಾಡುತ್ತಿರುವಾಗಲೂ ಈ ಹಾಡುಗಳೆನ್ನುವರು" (ಪ್ರಮ.೧೩). ಈ ವಿವರಣೆ ಬಹುಮುಖ್ಯವಾಗಿದೆ. ದೀರ್ಘವಾದ ಕಥಾನಕಗಳನ್ನು ಹಾಡುವ ಸ್ಥಳದಲ್ಲಿಯೇ ಇವುಗಳನ್ನೂ ಹಾಡುವರು. ಈ ಹಾಡುಗಳ ವಸ್ತುವನ್ನು ಕುರಿತು ಸಂಪಾದಕರು ಹೀಗೆ ವಿವರಿಸಿದ್ದಾರೆ : "ಈ ಹಾಡುಗಳಲ್ಲಿ ಸ್ತ್ರೀಯರ ಭಾವನೆ ಮತ್ತು ಬದುಕಿನ ಸ್ವರೂಪಗಳಿವೆ. ಹಳ್ಳಿಯ ಹೆಣ್ಣುಮಕ್ಕಳ ಬದುಕು ಕುಟುಂಬಕ್ಕೆ ಸೀಮಿತ. ಹಳ್ಳಿಯ ಬದುಕು ಹಾಗೆ ಎಂದರೂ ಸರಿಯೇ. ಕೌಟುಂಬಿಕ ಜೀವನ ಮತ್ತು ಜೀವನೋದ್ಯೋಗಕ್ಕೆ ಮುಖ್ಯ ವೃತ್ತಿ ಕೃಷಿ. ಅದಕ್ಕೆ ಹೊಂದಿಕೊಂಡಿರುವ ಇನ್ನು ಕೆಲವು ವೃತ್ತಿಗಳು. ಆಯಿತು, ಒಂದು ರೀತಿಯಲ್ಲಿ ಸಂಕುಚಿತ ರೀತಿಯ ಬದುಕು. ಅದರಲ್ಲೂ ಹೆಣ್ಣಿನ ಜೀವನ ಅದಕ್ಕೂ ಕಿರಿದು. ಹರಹಿನಲ್ಲಿ ತಾಯಿ ಮಗಳು, ಅತ್ತೆ ಸೊಸೆ, ಅಕ್ಕ ತಂಗಿ, ಸವತಿ ನೆಗೆಣ್ಣಿ, ಅತ್ತಿಗೆ–ನಾದನಿ ಇವರ ಸಂಬಂಧಗಳು, ಇವರ ಭಾವನೆಗಳು ಈ ಹಾಡುಗಳ ವಿಷಯ. ಐದೆತನ ಮಹಿಳೆಯರ ಮಂಗಳ. ಮುತ್ತೈದೆ ಸಾವು ಶುಭಕರ ಪುಣ್ಯಕಾರಿ. ಶ್ರೇಷ್ಠ ಮೌಲ್ಯಗಳಲ್ಲೊಂದು ಪಾತಿವ್ರತ್ಯ. ಇದಕ್ಕೆ ಅವರ ಜೀವನವೇ ಮುಡಿಪು" (ಅದೆ, ೧೪). ಸಂಪಾದಕರು ಕೆಲವು ಹಾಡುಗಳಿಗೆ

ಟಿಪ್ಪಣಿಗಳನ್ನು ಬರೆದು ಕೊನೆಯಲ್ಲಿ ಹಾಕಿದ್ದಾರೆ. ಎಲ್ಲ ಹಾಡುಗಳ ಸಾರಾಂಶವನ್ನು ನಾಲ್ಕು ನಾಲ್ಕು ಸಾಲುಗಳಲ್ಲಿ ಬರೆದು ಹಾಕಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಇಂತಹ ಸಂಗ್ರಹಗಳ ಮಹತ್ವ ಹೆಚ್ಚಾಗಬೇಕೆಂದರೆ ಸಂಪಾದಕರ ಶ್ರಮ ಇನ್ನೂ ಸ್ವಲ್ಪ ವ್ಯಯವಾಗಬೇಕು. ಇಲ್ಲಿ ಮೂರು ವಿಭಾಗಗಳನ್ನು ಮಾಡಿಕೊಂಡಿರುವ ಉದ್ದೇಶವು ಸಹಜ ನೋಟಕ್ಕೆ ಗೊತ್ತಾಗುವುದಿಲ್ಲ. ಸಂಪಾದಕರು ತಾವು ಮಾಡಿದ್ದು ಏನು ಎಂದು ಸ್ಪಷ್ಟ ಪಡಿಸಬಹುದಿತ್ತು.

ಇಲ್ಲಿಯ ಹಾಡುಗಳು ಚಿಕ್ಕಚಿಕ್ಕವಾದರೂ ಪ್ರಾಚೀನ ಆಶಯಗಳುಳ್ಳ ಹಾಡುಗಳೂ ಇಲ್ಲಿವೆ. 'ಈಗ ನನಗ ಗಂಡನಾದಿ' ಎಂಬ ಕಥನ ಗೀತೆಯಲ್ಲಿ ಅಣ್ಣ ತಂಗಿಯನ್ನು ಮೋಹಿಸಿದ ಸಂಕೀರ್ಣ ವಿಷಯವಿದೆ. ಆದಿಮಾನವ ತಾನು ಯಾರ ಜೊತೆಗೆ ಹೇಗಿರಬೇಕೆಂದು ಭಾವಿಸಿದನೋ ಆ ನಿಯಮವನ್ನು ಮೀರಿ ವರ್ತಿಸಿದಾಗ, ಅವನಿಗೆ ಅದು ಅಸಹಜವಾಗಿ ಕಂಡಿದೆ, ದುರಂತಕ್ಕೆ ಈಡಾಗಿದೆ.

ಕೈಗೆ ನೀರ ಹಾಕ ಬಾರ
ಮಡದಿ ಕೈಲಿ ಹಾಕಸಗೋರೊ
ಉಳ್ಳಾಕ ಕುಡ ಬಾರ
ಹೆಣ್ತಿ ಕೈಲಿ ಊಟಕ್ಕಿಸಗೊ
ಹಾಸಿಗಾರ ಮಾಡಬಾರ
ಮಡದಿ ಕೈಲಿ ಹಾಕಸಗೋರೊ

ಹೀಗೆ ಅಣ್ಣನಾದವನು ತನ್ನನ್ನು ಅಲ್ಲದ ದೃಷ್ಟಿಯಿಂದ ನೋಡಿದ್ದರಿಂದ ತಂಗಿ ಆ ಭಾವನೆಗೆ ವಿರೋಧ ವ್ಯಕ್ತಪಡಿಸುತ್ತಾಳೆ. ಬೇಸರಗೊಂಡು ಅರಣ್ಯದ ದಾರಿಹಿಡಿದು, ಹೊಳೆಯ ದಂಡೆಯ ಮೇಲಿರುವ ಮರವೇರಿ ಕುಳಿತಳು. ಮನೆಯವರೆಲ್ಲ ಬಂದು ಇಳಿಯಲು ಹೇಳಿದರು. ಆಕೆಗೆ ಕೋಪ. ಅಪ್ಪ ಮಾವನಾಗುವ, ತಾಯಿ ಅತ್ತೆಯಾಗುವ, ತಮ್ಮ ಮೈದುನನಾಗುವ ಅಣ್ಣ ಗಂಡನಾಗುವ ಸ್ಥಿತಿಯನ್ನು ತಡೆದುಕೊಳ್ಳಲು ತನಗೆ ಸಾಧ್ಯವಿಲ್ಲದ್ದನ್ನು ಒರೆಯುತ್ತಾಳೆ.

ತಾಯಿನಾದರು ಹೋಗ್ಯಾಳಲ್ಲ
ಕೆಳಗ ಇಳಿಯೆ ರತುನದೇವಿ
ಈಸು ದಿನ ಅವ್ವ ಇದ್ದಿ
ಇಂದಿಗಿ ನೀನು ಅತ್ತಿನಾದಿ
ಅಪ್ಪನಾದರ ಹೋಗಿದ್ದಾನ
ಕೆಳಗಾರ ಇಳಿಯೆ ರತ್ನದೇವಿ
ಈಸು ದಿನ ಅಪ್ಪ ಇದ್ದಿ
ಇಂದಿಗಿ ನನಗ ಮಾಂವನಾದಿ

ಎಂದು ನಿರಾಕರಿಸುತ್ತಾಳೆ. ಕೊನೆಯಲ್ಲಿ ಹೊಳೆಗೆ ಹಾರುತ್ತಾಳೆ. ಹಾಡುಗಾರರು ಒಂದು ವಿವರಣೆಯನ್ನು ಮರೆತಿದ್ದಾರೆನಿಸುತ್ತದೆ. ಅಣ್ಣ ಆಕೆ ಕುಳಿತ ಗಿಡ ಏರಲು ತೊಡಗಿದಾಗ ಆಕೆ ಹೊಳೆ ಹಾರಬೇಕು. ಅವಳ ಹಿಂದೆಯೇ ಅಣ್ಣನೂ ಹೊಳೆ ಹಾರಬೇಕು.

ಇಬ್ಬರೂ ಎರಡು ನಮೂನೆಯ ಮೀನಗಳಾಗಬೇಕು. ತಂಗಿಯ ಪರವಾಗಿ ಹಾಡುಗಾರರ ಉಪದೇಶವಿದು:

ಮೀನ ಹಿಡಿಯೋ ಜಾಲಗರಣ್ಣ
ಹೆಣ್ಣಿನ ಮೀನ ಹೊಡಿಯೋ
ಗಂಡಿನ ಮೀನ ಹೊಡಿಯೋ
ಹೆಣ್ಣಿನ ಪಲ್ಯ ಬ್ಯಾರೆ ಮಾಡೊ
ಗಂಡಿನ ಪಲ್ಯ ಬ್ಯಾರೆ ಮಾಡೊ
ಗಂಡಿನ ನೀರು ಚಲ್ಲಿದಲ್ಲಿ
ಕಾರಿ ಗಿಡ ಬಾರಿ ಗಿಡ
ಹೆಣ್ಣಿನ ನೀರು ಚೆಲ್ಲಿದಲ್ಲಿ
ಶ್ಯಾವಂತಗಿ ಹೂವ ಮಲ್ಲಿಗ್ಹೂವ

ಈ ಕಥೆ ಈಡಿಪಸ್, ಇಲೆಕ್ಟ್ರಾ ಕಾಂಪ್ಲೆಕ್ಸ್‌ದಂತಹ ಒಂದು ಸಂಕೀರ್ಣ ಭಾವದ ಕಥೆ. ಮನುಷ್ಯನ ದುರ್ದೈವಗಳಿಂದಾಗಿ ಇಂತಹ ಘಟನೆಗಳು ನಡೆಯುವುದು. ಪ್ರಪಂಚದ ಘೋರ ದುರಂತಗಳಲ್ಲಿ ಈ ಘಟನೆಯೂ ಒಂದು. ಈ ಕಥೆ ಜನಪದ ಕಥೆಯ ರೂಪದಲ್ಲೂ ಪ್ರಸಿದ್ಧವಾಗಿದೆ. ಮತ್ತು ಕರ್ನಾಟಕದ ಎಲ್ಲ ಕಡೆ ದೊರೆಯುತ್ತದೆ. ಸಮುದ್ರ ತೀರದ ಪ್ರದೇಶದ ಕಥೆಯಲ್ಲಿ ಅಣ್ಣ ತಂಗಿ ಎರಡು ಬಗೆಯ ಮೀನುಗಳಾಗಿ ಹುಟ್ಟುತ್ತಾರೆ. ಆ ಮೀನುಗಳ ಮಾಂಸವನ್ನು ಕೂಡಿಸಿ ಕುದಿಸಿ ಪಲ್ಲೆ ಮಾಡಬಾರದೆಂಬ ನಂಬುಗೆ ಆ ಪ್ರದೇಶಗಳಲ್ಲೆಲ್ಲ ಇದೆ. ಇಂತಹ ಹತ್ತಾರು ಸಮಸ್ಯೆಗಳುಳ್ಳ ಗಮನಾರ್ಹ ಹಾಡುಗಳ ಸಂಗ್ರಹ ಇದಾಗಿದೆ.

'ಮದಗದ ಕೆಂಚಮ್ಮ' (೧೯೬೪) ಕಥಾನಕದ ದೀರ್ಘ ಪಾಠವನ್ನು (೬೩ ಪುಟಗಳು, ೧/೮ ಡೆಮಿ) ಸಂಗ್ರಹಿಸಿ ಪ್ರಕಟಿಸಿದವರು ಬಳ್ಳಿಕೆರೆ ಹನುಮಂತಪ್ಪ. ಮದಗದ ಕೆರೆ ಇರುವುದು ಶಿವಮೊಗ್ಗ ಜಿಲ್ಲೆಯ ಕೊನೆಯ ಗ್ರಾಮವಾದ ಖವಸಾಪೂರ ಊರ ಹೊರವಲಯದಲ್ಲಿ. ಇದು ಶಿವಮೊಗ್ಗ ಜಿಲ್ಲೆಯ ಕೊನೆಯ ಅಂಚಿನಲ್ಲಿದೆ. ಇದರ ಒಂದು ತುದಿ ಧಾರವಾಡ ಜಿಲ್ಲೆಯ ಮಾಸೂರಿನ ಎಡಕ್ಕೆ ಹತ್ತಿಕೊಂಡಿದೆ. ಇನ್ನೊಂದು ತುದಿ ಚಿತ್ರದುರ್ಗ ಜಿಲ್ಲೆಗೂ ಹತ್ತಿಕೊಂಡಿವೆ. ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ರಟ್ಟೆಹಳ್ಳಿಯ ಪುಟ್ಟನಗೌಡನ ಹಿರಿಯ ಮಗಳಾದ ಕೆಂಚವ್ವನನ್ನು ಮದಗದ ಕೆರೆಯ ಇನ್ನೊಂದು ತುದಿಯ ಮೇಲಿರುವ ಧಾರವಾಡ ಜಿಲ್ಲೆಯ (ಸರ್ವಜ್ಞನ) ಮಾಸೂರು ಗ್ರಾಮದ ಮಲ್ಲನಗೌಡನ ಹಿರಿಯ ಮಗ ಗೂಳೇಶನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಮಾಸೂರಿನ ಮಲ್ಲನಗೌಡನೇ ಕಟ್ಟಿಸಿದ ಕೆರೆ ಮದಗದ ಕೆರೆ. ಈ ಕೆರೆಗೆ ಹಿರಿಯ ಸೊಸೆಯಾದ ಕೆಂಚಮ್ಮ ಆಹುತಿಯಾಗುತ್ತಾಳೆ. ಈ ಕೆರೆ ಕಟ್ಟಿಸಿದ ಕಾಲವನ್ನೂ ಸಂಪಾದಕರು ಪತ್ತೆ ಹಚ್ಚಿದ್ದು ೧೩೬೩ರಲ್ಲಿ ಕೆರೆ ಕಟ್ಟಲಾಯಿತೆಂದು ತಿಳಿಸಿದ್ದಾರೆ. ಮಾಸೂರಿನಲ್ಲಿ ಕೆಂಚಮ್ಮನ ಕುಟುಂಬವನ್ನು ಗುರುತಿಸಿ ಅವರಿಂದ ಮಾಹಿತಿಯನ್ನು ಪಡೆದಿದ್ದಾರೆ. ಆ ಕುಟುಂಬದವರ ಒಂದು ಚಿತ್ರವನ್ನೂ ಮದಗದ ಕೆರೆಯ ದಂಡೆಯ ಮೇಲಿರುವ ಕೆಂಚಮ್ಮನ ದೇವಸ್ಥಾನದ

ಚಿತ್ರವನ್ನೂ ಕೊಟ್ಟಿದ್ದಾರೆ. ಇವತ್ತಿಗೂ ಕೆಂಚಮ್ಮನ ಜಾತ್ರೆ ಉತ್ಸವಗಳಾಗುತ್ತಿರುವುದನ್ನು ದಾಖಲಿಸಿದ್ದಾರೆ. ಇದನ್ನು ಗಮನಿಸಿದರೆ, ಈ ಕಾವ್ಯದ ವಸ್ತು ವಾಸ್ತವ ಸಂಗತಿಯನ್ನು ಒಳಗೊಂಡಿರುವುದು ಖಾತ್ರಿಯೆನಿಸುತ್ತದೆ. ಇಲ್ಲಿಯವರೆಗೆ ಪ್ರಕಟವಾದ ಕಥನವೊಂದನ್ನು ಕುರಿತು ಸುದೀರ್ಘವಾದ ಸಂಶೋಧನೆಯನ್ನು ಕೈಕೊಂಡು, ಸಾಕಷ್ಟು ದಾಖಲೆಗಳನ್ನು ಕೊಟ್ಟಿರುವ ಸಂಪಾದಕರ ಶ್ರಮ ಸಾರ್ಥಕವೆನಿಸುತ್ತದೆ.

ಕರ್ನಾಟಕದ ಸಂಸ್ಕೃತಿಯನ್ನು ಕೇವಲ ಕಲ್ಲು–ಕಾಗದಗಳಲ್ಲಿ ಹುಡುಕುವ ಸಂಶೋಧಕರು ಇಂತಹ ಮೌಖಿಕ ಕಾವ್ಯಗಳನ್ನು, ಅವುಗಳಿಗೆ ಸಂಬಂಧಿಸಿ ದೊರೆಯುವ ಮೌಖಿಕ ಮತ್ತು ಭೌತಿಕ ಸಾಕ್ಷಿಗಳನ್ನು ಗಮನಿಸುವುದು ಅವಶ್ಯವೆನಿಸುತ್ತದೆ. ಸಂಪಾದಕರು ಅರಿಕೆಯಲ್ಲಿ ಹೀಗೆ ಬರೆದುಕೊಂಡಿದ್ದಾರೆ: "ನಾನು ಒಮ್ಮೆ ಚಿತ್ರದುರ್ಗ ಜಿಲ್ಲೆಯ (ಧಾರವಾಡ ಜಿಲ್ಲೆಯ ಅಂಚಿನಲ್ಲಿರುವ) ನನ್ನ ಮಾವನ ಊರಾದ ಅಣಬೇರಿಗೆ ಹಬ್ಬಕ್ಕೆಂದು ಹೋದಾಗ ಮೂರು ಜನ ಹೆಂಗಸರು 'ಮದಗದ ಕೆಂಚಮ್ಮ'ನನ್ನು ಕಳಶದಲ್ಲಿ ಇಟ್ಟುಕೊಂಡು ಮನೆಮನೆಗೂ ಹೋಗಿ 'ಕೆಂಚಮ್ಮನ ಹಾಡ್ಗತೆ'ಯನ್ನು ಹಾಡುವುದನ್ನು ನೋಡಿ ಮತ್ತು ಕೇಳಿ, ಈ ಮಹತ್ವದ ಕಥೆಯನ್ನು ಸಂಗ್ರಹಿಸಬೇಕೆಂಬ ಹಂಬಲದಿಂದ ಶಿವಮೊಗ್ಗಗೆ ಹಿಂದಿರುಗಿ, ಕ್ಷೇತ್ರಕಾರ್ಯವನ್ನು ನಿಯೋಜಿಸಿಕೊಂಡು ಸಜ್ಜಾದೆನು" (ಅರಿಕೆ, ಪು. ೫). ಇಲ್ಲಿ ಕೆಂಚಮ್ಮನ ಮೂರ್ತಿಯನ್ನು ಇಟ್ಟುಕೊಂಡು ಅವಳ ಮಹಿಮೆಯನ್ನು ಸಾರುವ ಹಾಡನ್ನು ಹಾಡುವ ಸಂಗತಿಯನ್ನು ಗಮನಿಸಬೇಕು. ಇಂತಹ ಹಾಡುಗಳನ್ನು ಕೇಳುವುದರಿಂದ, ಪ್ರಸಾರ ಮಾಡುವುದರಿಂದ ಪುಣ್ಯ ಪ್ರಾಪ್ತವಾಗುತ್ತದೆಂಬ ಜನಸಾಮಾನ್ಯರ ನಂಬುಗೆ ಇವತ್ತಿಗೂ ಜಾರಿಯಲ್ಲಿರುವುದು ಮಹತ್ವದ ಸಂಗತಿಯಾಗಿ ಕಾಣುತ್ತದೆ. ಕರ್ನಾಟಕದ ಸಂಸ್ಕೃತಿಯನ್ನು ನಿರ್ಮಿಸುವಲ್ಲಿ, ಅದನ್ನು ಬಾಳುವಲ್ಲಿ ಜನಸಾಮಾನ್ಯರ ಕೊಡುಗೆಯನ್ನು ಎಲ್ಲರೂ ಗಮನಿಸಬೇಕಾದ ಅವಶ್ಯಕತೆ ಇದೆ.

ಸಂಪಾದಕರು ಕೆರೆಯ ವಿಸ್ತಾರವನ್ನು, ಅದರ ರಚನೆಯ ರೀತಿಯನ್ನು ವಿವರಿಸಿದ್ದಾರೆ. ವಿಜಯನಗರದ ಅರಸರು ಈ ಕೆರೆಯನ್ನು ಗಮನಿಸಿದ್ದರೆಂದು ಬರೆದಿದ್ದಾರೆ. ಅಂದರೆ ಈ ಕೆರೆಯ ನೀರು ೧೫೬೫ ರಿಂದ ಹೊಲಗದ್ದೆಗಳಿಗೆ ಉಪಯೋಗವಾಗುತ್ತಿತ್ತೆಂದು ಅರ್ಥವಾಗುತ್ತದೆ. ಹೀಗಾಗಿ ಕೆಂಚಮ್ಮನ ಕಥೆ ತುಂಬ ಹಳೆಯದೆಂದು ಸ್ಪಷ್ಟವಾಗುತ್ತದೆ. ಜನಸಾಮಾನ್ಯರ ಅನುಕೂಲಕ್ಕಾಗಿ ಎಂಬಂತೆ ಬಲಿಗಳು ನಡೆದಾಗ, ಜನ ಈ ತ್ಯಾಗಿಗಳನ್ನು ಮರೆಯದೆ ಪೂಜಿಸುತ್ತ, ಹಾಡು ಮಾಡಿ ಹಾಡುತ್ತ ಬಂದಿರುವುದು ಅವರ ಕೃತಜ್ಞತಾ ಭಾವವನ್ನು ವ್ಯಕ್ತಪಡಿಸುತ್ತದೆ. ಸಂಪಾದಕರು ಮದಗದ ಕೆರೆಯ ವಿಸ್ತಾರವನ್ನು ವರ್ಣಿಸುವುದನ್ನು ಗಮನಿಸಿದರೆ, ಕಾವ್ಯದಲ್ಲಿ ಮದಗದ ಕೆರೆಯನ್ನು 'ಐಭೋಗದ ಮದಗ', 'ದೇವಲೋಕದ ಮದಗ', 'ಚಂದದ ಮದಗ' ಎಂದು ವರ್ಣಿಸುವುದನ್ನು ಗಮನಿಸಿದರೆ, ಮದಗದ ಕೆರೆ ಒಡೆದು ಹೋಗಿ, ಅದರ ಅಂಗಳದ ಒಂದು ಭಾಗದಲ್ಲಿಯೇ ಶಿಕಾರಿಪುರ ನಗರ ನಿರ್ಮಾಣವಾಗಿದೆ ಎಂದರೆ ಅದರ ವಿಸ್ತಾರ, ನೀರು ತುಂಬಿ ನಿಂತಾಗ ಕಾಣಿಸುವ ಭವ್ಯ ನೋಟವೇ ಈ ಕೆರೆಗೆ 'ಮದಗದ ಕೆರೆ' ಎಂದು ಹೆಸರು ಬರಲು ಕಾರಣವಾಗಿರಬೇಕೆನಿಸುತ್ತದೆ. 'ಮದಗಜ' ವನ್ನು ನೆನಪಿಗೆ ತರುವ ತುಂಬಿ ನಿಂತ ಕೆರೆಗೆ

ಜನ 'ಮದಗಜದಂತಹ ಕೆರೆ'> 'ಮದಗದ ಕೆರೆ'>'ಮದಗ' ಎಂದೇ ಕಾವ್ಯದಲ್ಲಿ ಕರೆಯಲಾಗಿದೆ. ಹೀಗಾಗಿ 'ಮದಗದ ಕೆರೆ' ಎಂಬ ಹೆಸರು ಬಂದಿರಬೆಕೆನಿಸುತ್ತದೆ.

ಎಲ್ಲೆಲ್ಲಿ ಕೆರೆಗೆ ಹಾರದ ಸಂಗತಿಗಳು ಬರುವವೋ ಅಲ್ಲಿ ಊರ ಗೌಡರ ಗೋಳಾಟವನ್ನು ಗಮನಿಸಬೇಕು. ಅವರೆಲ್ಲ ಕೆರೆ ಕಟ್ಟಿಸುವುದು ಜನಸಾಮಾನ್ಯರ ಅನುಕೂಲಕ್ಕಾಗಿ. ಅದರಿಂದ ಬರುವ ಆಪತ್ತುಗಳೆಲ್ಲ ತಮ್ಮ ಕುಟುಂಬದವರೇ ಸಹಿಸಿಕೊಳ್ಳಬೇಕು. ಹೀಗೆ ಬಲಿ ಕೊಡುವಾಗ ತಮ್ಮ ಮೇಲೆ, ತಮ್ಮ ಹೆಂಡರು ಮಕ್ಕಳ ಮೇಲೆ ಬಂದುದನ್ನು, ತಪ್ಪಿಸಿಕೊಳ್ಳಲು ಅವರು ತಮ್ಮ ಸೊಸೆಯಂದಿರನ್ನು ಆಯ್ಕೆ ಮಾಡಿಕೊಂಡರು ಎಂಬ ಒಂದು ದೋಷವನ್ನು ಕೊಡಬಹುದೇ ಹೊರತು, ಅವರು ಯಾವುದೇ ತಾಪ ಸಂತಾಪಗಳಿಲ್ಲದೆ ಅವರನ್ನು ಬಲಿಕೊಟ್ಟರೆಂದು ಅಲ್ಲ. ತಮ್ಮ ಕುಟುಂಬದ ಮೇಲೆ ಬಿದ್ದ ಒಂದು ಅನಿಷ್ಠ ನಂಬುಗೆಯ ಹೊಡೆತದಿಂದ ಸ್ವಲ್ಪ ತಪ್ಪಿಸಿಕೊಳ್ಳುವ ಪ್ರಯತ್ನವಿದು ಎಂಬ ಆಪಾದನೆಯನ್ನು ಮಾಡಬಹುದು. ಆದರೆ ಅವರ ಜನೋಪಯೋಗಿ ಕಾರ್ಯಗಳನ್ನು ಗೈಯುವಲ್ಲಿ ಇಂದಿನವರಿಗೆ ಹೋಲಿಸಿದರೆ ಸಾವಿರ ಸಾವಿರ ಪಟ್ಟು ಹಿಂದಿನವರು ಶ್ರೇಷ್ಠರು ಎಂಬುದನ್ನು ಮರೆಯಲಿಕ್ಕಾಗದು.

ಆದರೆ ಕೆರೆಗೆ ನೀರು ಬಾರದ್ದಕ್ಕೆ ಬಲಿ ಕೊಟ್ಟರು ಎಂಬುದು ಸಂಶಯ ಬರುವಂತಿದೆ. ಬಹುಶಃ ಕೆರೆ-ಕಟ್ಟೆಯಂತಹ ಬೃಹತ್ ಯೋಜನೆಗಳು ಮುಗಿದ ನಂತರ ಅವುಗಳ ಶಾಂತಿಗಾಗಿ ಎಂಬಂತೆ ಬಲಿಗಳು ನಡೆದಿರಬಹುದೇನೋ ಎಂಬ ಅನುಮಾನ ಸುಳಿಯುತ್ತದೆ. ಕೆರೆಗೆ ನೀರು ಬರಲಾರದಕ್ಕೆ ಬಲಿ ಕೊಟ್ಟರು, ನೀರು ಹರಿದು ಬಂದು ಬಲಿ ಸ್ವೀಕರಿಸಿತು ಎಂಬಂತಹ ವರ್ಣನೆಗಳು ಆಶಯಗಳಾಗಿ (ಮೋಟೀಫ್ಸ್), ಕಾವ್ಯಾಂಶಗಳಾಗಿ ಕೆಲಸ ಮಾಡುವಂತಿವೆ. ವಾಸ್ತವ ಅದರ ಹಿಂದೆ ಅಡಗಿದೆ ಎನಿಸುತ್ತದೆ.

ಕೆಂಚಮ್ಮನ ವರ್ಣನೆಯನ್ನು ಗಮನಿಸಿದರೆ, ಆಕೆ ಸ್ಫುರದ್ರೂಪಿ, ಮುಗ್ಧೆ. ಬಲಿ ಕೊಡಬೇಕೆಂಬ ಆಲೋಚನೆ ಬಂದಾಗ, ಗೌಡ ತನ್ನ ಮಗ ಗೂಳೇಶನನ್ನು ವ್ಯಾಪಾರಕ್ಕೆಂದು ಹೊರಗೆ ಕಳಿಸುತ್ತಾನೆ. ಯಾವಾಗಲೂ ಗಂಡ ಮನೆಯಲ್ಲಿ ಇಲ್ಲದಾಗಲೇ ಸೊಸೆಯಂದಿರನ್ನು ಕೆರೆಗೆ ಹಾರ ಕೊಡುವ ಕೆಲಸ ನಡೆಯುತ್ತದೆ. ಇದು ಸಾಮಾನ್ಯವಾಗಿ ಕಾಣುವ ಆಶಯ. ಇಲ್ಲಿ ಕೆಂಚಮ್ಮನ ಮೈದುನ, ನಾದುನಿ ಕೆಂಚಮ್ಮನ ಪರವಾಗಿ ನಿಂತು, ಬಲಿಯನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಪರಿತಪಿಸುತ್ತಾರೆ. ಆದರೆ ಮಾವನ ಚಡಪಡಿಕೆಯನ್ನು ಗಮನಿಸಿದ ಕೆಂಚಮ್ಮ ಅವನು ಹೇಳಿದಂತೆ ಕೆರೆಗೆ ಹಾರವಾಗಲು ಸಿದ್ಧಳಾಗುತ್ತಾಳೆ. ತವರಿನವರಿಗೆ ಮನವರಿಕೆ ಮಾಡಿಕೊಡುತ್ತಾಳೆ. ಬಸುರಿಯಾದ ತಾನು ಮಗುವನ್ನು ಹೆತ್ತು, ತನ್ನ ಗಂಡ ಪರದೇಶಿಯಾಗಬಾರದೆಂದು ತನ್ನ ತಂಗಿಯನ್ನು ತನ್ನ ಗಂಡನಿಗೆ ಕೊಟ್ಟು ಮದುವೆ ಮಾಡಬೇಕೆಂದು ಒಪ್ಪಿಸಿ, ಕೆರೆಗೆ ಹಾರವಾಗುತ್ತಾಳೆ.

ಎಲ್ಲ ಹೆಣ್ಣುಮಕ್ಕಳು ಗಂಡನಮನೆಗ್ಹೋಗ್ತಾರೆ
ನಾನೋಗ್ತಿನವ್ವ ಮದಗಾಕೆ।

ಎಂಬ ದೃಢ ನಿರ್ಧಾರ ಕೆಂಚಮ್ಮನದು. ಬಲಿ ನಂತರ ಗಂಡ ಬರುವುದು ಗೋಳಾಡುವುದು ಈ ಭಾಗದಲ್ಲಿ ಕಾವ್ಯ ತನ್ನ ಉತ್ಕೃಷ್ಟತೆಯನ್ನು ತಲುಪುತ್ತದೆ. ಆದರೆ

ಬ್ಯಾಡ ಬ್ಯಾಡೆಂದರೆ ನಾನೆ ನೀರೀಗೆ ಬಂದೆ
ಬಂದಿ ಕಳಕೊಂಡು ಕೆರಿಗೆ ಬಿದ್ದೆ
ಬಂದಿಯ ಕಳಕೊಂಡು ಕೆರಿಗೆ ಬಿದ್ದೆ ಗೂಳೇಶ
ನನ ಮರೆತು ಊರ ನಡಸಯ್ಯ

ಎಂಬುದು ಕೆಂಚಮ್ಮನ ಕೊನೆಯ ಮಾತು. 'ನನ ಮರೆತು ಊರ ನಡಸಯ್ಯ' ಎಂಬುದು ಬಹುಶಃ ಜನಸಾಮಾನ್ಯರ ಭಾವನೆ. ಅದರಂತೆಯೇ ಆಗುತ್ತದೆ. ಸಂಪಾದಕರು ಉತ್ತಮವಾದ ಪಾಠವನ್ನು ದೊರಕಿಸಿಕೊಳ್ಳಲು ವರ್ಷಾನುಗಟ್ಟಲೆ ಶ್ರಮಪಟ್ಟು ಶೋಧಿಸಿದ್ದಾರೆ. ಅವರ ಶ್ರಮ ಸಾರ್ಥಕವಾಗಿದೆ.

ಅಪರೂಪಕ್ಕೆ ಮೈಸೂರು ಜಿಲ್ಲೆಯಿಂದ ಪ್ರಕಟವಾದ ಒಂದು ಕೃತಿ ನಮಗೆ ನೋಡಲು ದೊರೆಯುತ್ತದೆ. ಜಯಲಕ್ಷ್ಮೀ ಸೀತಾಪುರ ಅವರು ಪಾಂಡವಪುರ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಸಂಗ್ರಹಿಸಿದ ಎಂಟು ಕಥಾನಕಗಳ ಸಂಗ್ರಹ **'ನಮ್ಮ ಸುತ್ತಿನ ಜನಪದ ಕಥನಗೀತೆಗಳು'** (೧೯೯೪). ಇದರಲ್ಲಿ ಮೊದಲಿನ ಏಳು ಕಥಾನಕಗಳು ಚಿಕ್ಕ ಕಥಾನಕಗಳಾಗಿದ್ದು, ಕೊನೆಯ 'ಕಂಡ್ಹೆಣ್ಣ ಬಿಡೋರಲ್ಲ' (೮೪ ಪುಟಗಳು) ಎಂಬುದು ಮಾತ್ರ ಖಂಡಕಾವ್ಯವಾಗಿದೆ. ವಿಶೇಷವಾಗಿ ಕೌಟುಂಬಿಕ ತೊಂದರೆಗಳನ್ನು ಅನುಭವಿಸುವ ಹೆಣ್ಣಿನ ಚಿತ್ರಗಳುಳ್ಳ ಕಥೆಗಳೇ ಜಾಸ್ತಿಯಾಗಿವೆ. ಮೊದಲನೇ ಕಥೆ 'ಹೊನ್ನಮ್ಮ'. ಗಂಡ ದಂಡಿಗೆ ಹೋದಾಗ ಸೊಸೆ ಹೊನ್ನಮ್ಮನಿಗೆ ಅತ್ತೆ ಹಾಗೂ ನಾದುನಿಯರು ವಿಪರೀತವಾಗಿ ತೊಂದರೆ ಕೊಡುತ್ತಾರೆ. ಆಕೆಗೆ ವಿಷದ ಹಾವನ್ನು ಉಣಬಡಿಸಿ ಕೊಲ್ಲುತ್ತಾರೆ. ಮಕ್ಕಳನ್ನೂ ತೊಂದರೆಗೆ ಒಳಗು ಮಾಡುತ್ತಾರೆ. ಕೆಟ್ಟ ಸ್ವಪ್ನ ಕಂಡು ದಂಡಿನಿಂದ ಓಡಿಬಂದ ಹೊನ್ನಮ್ಮನ ಗಂಡನಿಗೆ ತಾಯಿ ತಂಗಿಯರು ನಯವಂಚನೆಯ ಮಾತನಾಡುತ್ತಾರೆ. ರಕ್ತದ ಮಡುವಿನಲ್ಲಿ ನೆರಳಾಡುವ ಮಗುವನ್ನು ಕಂಡು, ಮಗುವಿನಿಂದ ವಿಚಾರ ತಿಳಿದು, ತಾಯಿ ತಂಗಿಯರನ್ನು ಸೀಳಿ ತೋರಣ ಕಟ್ಟುತ್ತಾನೆ. ತನ್ನ ಸತ್ಯದಿಂದ ಹೆಂಡತಿಯನ್ನೂ ಬದುಕಿಸಿಕೊಂಡು ಸುಖದಿಂದ ಬಾಳುತ್ತಾನೆ. ಹೀಗೆಯೇ **'ಹೊನ್ನಾಲಿ'** ಎಂಬ ಕಥೆಯಲ್ಲೂ ಮನೆಯವರ ಕಾಟ ವಿಪರೀತವಾಗಿ, ಸೊಸೆ ನೇಣಿಗೆ ಶರಣಾಗುತ್ತಾಳೆ. ನಂತರ ಬಂದ ಗಂಡ ಹೆಂಡತಿಯ ಜೊತೆಗೆ ಚಿತೆ ಏರುತ್ತಾನೆ. 'ಆಳು ಕೂಗಿನ ಹಕ್ಕಿ' ಎಂಬ ಕಥೆಯಲ್ಲಿ ಏಳು ಜನ ಸಹೋದರರಲ್ಲಿ ಕಿರಿಯವನ ಹೆಂಡತಿ ಸುಂದರಿ. ಆರು ಜನ ಅಣ್ಣಂದಿರ ಕಾಮುಕ ಕಣ್ಣು ಈ ಸುಂದರಿಯ ಮೇಲೆ. ಮದುವೆಯಾದ ಮರುದಿನವೇ ಅಣ್ಣಂದಿರು ತಮ್ಮನಿಗೆ ಬೇಟೆಗೆಂದು ಕಾಡಿಗೆ ಕರೆದುಕೊಂಡು ಹೋಗಿ, ಹುಲಿ ಇರುವ ಅರಣ್ಯದಲ್ಲಿ ತಮ್ಮನನ್ನು ಬಿಟ್ಟುಬರುತ್ತಾರೆ. ಹುಲಿಗಳಿಗೆ ತನ್ನ ತೊಂದರೆಯನ್ನು ಹೇಳಿಕೊಂಡು ಬದುಕಿಬರುತ್ತಾನೆ. ಮತ್ತೆ ಒಂದು ದೊಡ್ಡ ಮರ ಹತ್ತಿಸಿ, ಅದರ ಟೊಂಗೆಗಳನ್ನೆಲ್ಲ ಕತ್ತರಿಸಿ ಬರುತ್ತಾರೆ. ಕೊನೆಯಲ್ಲಿ ತಮ್ಮನು 'ಆಳು ಕೂಗಿನ ಹಕ್ಕಿ'ಯಾಗಿ ಅಣ್ಣಂದಿರನ್ನು ಕೊಲ್ಲುತ್ತಾನೆ. 'ಸತ್ಯವಂತೆ ಹಡೆದವ್ವ' ಕಥೆಯಲ್ಲಿ ಮಗನು ಹೆಂಡತಿಯ ಮಾತು ಕೇಳಿ ತಾಯಿಯನ್ನು ಕೈಕಾಲು ಕಟ್ಟಿ ಹೊಳೆಗೆ ಎಸೆಯುತ್ತಾನೆ. ಶಿವಪಾರ್ವತಿ ಅವಳಿಗೆ ಮಡಕೆ ತುಂಬ ಹೊನ್ನು ತುಂಬಿ ಮನೆಗೆ ಕಳಿಸುತ್ತಾರೆ. ಸೊಸೆ ತಾನೂ ಹೊನ್ನು ತರಬೇಕೆಂದು,

ಗಂಡನಿಂದ ಕೈಕಾಲು ಕಟ್ಟಿಸಿಕೊಂಡು ಹೊಳೆಯ ಪಾಲಾಗುತ್ತಾಳೆ. ತಾಯಿ ಮಗನಿಗೆ ಮತ್ತೊಂದು ಹೆಣ್ಣು ತಂದುಕೊಂಡು ಸುಖವಾಗಿರುತ್ತಾರೆ. ಒಂದೆರೆಡು ಕಥೆಗಳು ಮತ್ತೆ ಕೆರೆಗೆ ಹಾರದ ಕಥೆಯನ್ನೇ ಹೊಂದಿವೆ. ಕೊನೆಯ ಹಾಡು ಖಂಡಕಾವ್ಯವಾಗಿದ್ದು, ೮೪ ಪುಟಗಳಷ್ಟು ದೀರ್ಘವಾಗಿದೆ. ಇದೊಂದು ಶೃಂಗಾರ ಪ್ರಧಾನವಾದ ಹಾಡಾಗಿರುವುದು ವಿಶೇಷವಾಗಿದೆ. ಖಂಡಕಾವ್ಯಗಳಲ್ಲಿ ಶೃಂಗಾರ ಪ್ರಧಾನವಾದ ಹಾಡು ಗಮನಕ್ಕೆ ಬರುವುದು ಇದೊಂದೆ. ಅಂದರೆ ಹೆಣ್ಣುಮಕ್ಕಳ ಕಥಾನಕಗಳಲ್ಲಿ ಗಂಭೀರವಾದ ವಸ್ತುಗಳೇ ಕಥಾನಕಗಳಿಗೆ ಬಳಸುವ ಪರಿಪಾಠವಿದೆ. ಹಾಸ್ಯ ಹಾಗೂ ಶೃಂಗಾರ ಅಪರೂಪಕ್ಕೆ ಬಳಸುತ್ತಾರೆಂಬುದು ಇಲ್ಲಿಯ ಸಮೀಕ್ಷೆಯಿಂದ ತಿಳಿದುಬರುತ್ತದೆ. ೧೯೮೧ರಲ್ಲಿ ಪ್ರಕಟವಾದ ಸುಶೀಲಾ ಸೊಂಡೂರ ಅವರ ಸಂಗ್ರಹದ ಹಲವು ಹಾಡುಗಳ ಅವತಾರಗಳು ಈ ಕೃತಿಯಲ್ಲಿ ಕಾಣುತ್ತವೆ.

'ಬೀದರ ಜಿಲ್ಲೆಯ ಬುಲಾಯಿ ಹಾಡುಗಳು' (೧೯೯೬) ಹೆಬ್ಬಾಳೆ ಜಗನ್ನಾಥ ಅವರು ಸಂಪಾದಿಸಿ ಪ್ರಕಟಿಸಿದ ೩೦ ಕಥಾನಕಗಳ ಸಂಗ್ರಹವಾಗಿದೆ. "ಬುಲಾಯಿ ಹಾಡುಗಳು ಬೀದರ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಾತ್ರ ಕೇಳಬಹುದು" (ಪ್ರ.ಪು.೧೦) ಎಂಬುದು ಸಂಪಾದಕರ ಅಭಿಪ್ರಾಯವಾಗಿದೆ. ಬುಲಾಯಿ ಹಾಡುಗಳು ಸಾಮಾನ್ಯವಾದ ಕಥನಕಾವ್ಯಗಳೇ ಆಗಿರುತ್ತವೆ. ಸಂದರ್ಭದ ಹೆಸರು ಮಾತ್ರ 'ಬುಲಾಯಿ' ಎಂಬುದು ಮುಸ್ಲೀಮ ಸಂಸ್ಕೃತಿಯ ಪ್ರಭಾವದಿಂದ ಉಳಿದುಕೊಂಡಿದ್ದಾಗಿದೆ. ಮೋಹರಂ ಸಂದರ್ಭದಲ್ಲಿ ಗಂಡುಮಕ್ಕಳು ಮೋಹರಂ ಹಾಡುಗಳನ್ನು ಹಾಡುತ್ತಿದ್ದರೆ, ಕರ್ಬಲಾಕ್ಕೆ ಸಂಬಂಧಿಸಿದ ಹಾಡುಗಳನ್ನು ಹೆಣ್ಣುಮಕ್ಕಳೂ ಹಾಡುತ್ತಿರುತ್ತಾರೆ. ತಮ್ಮ ಅಂಗಳದಲ್ಲಿ ಹೆಣ್ಣುಮಕ್ಕಳೆಲ್ಲ ಸೇರಿ, ಎಂಟ್ಹತ್ತು ಜನ ಗೋಲಾಕಾರದಲ್ಲಿ ನಿಂತು, ಕೈಹಿಡಿದು ಸುತ್ತುತ್ತ ಅಥವಾ ಚಪ್ಪಾಳೆ ಬಾರಿಸುತ್ತ ಕರ್ಬಲಾದ ಕಥೆಯುಳ್ಳ ಹಾಡುಗಳನ್ನು ಹಾಡುತ್ತಾರೆ. ಇದನ್ನು 'ಬುಲಾಯಿ ಹಾಕುವುದು' ಎನ್ನುತ್ತಾರೆ. ಹಾಡುಗಳನ್ನು 'ಬುಲಾಯಿ ಹಾಡುಗಳು' ಎನ್ನುತ್ತಾರೆ. ಬುಲಾಯಿ ಎಂದರೆ ಕರೆ, ಸ್ಮರಿಸು ಎಂದರ್ಥ. ಏಜಿದನ ಕ್ರೂರ ಹಿಂಸೆಗೆ ಒಳಗಾಗಿ ಪ್ರಾಣ ತ್ಯಾಗ ಮಾಡಿದ ಹಸನ್ ಹುಸೇನ್‌ರನ್ನು ಸ್ಮರಿಸಿ, ಮತ್ತೆ ಪುನಃ ಈ ಭೂಮಿಯ ಮೇಲೆ ಅವತರಿಸಿರೆಂದು ಹಾಡುವ ಹಾಡುಗಳು ಇವಾಗಿರುತ್ತವೆ.

ಸಾಮಾನ್ಯವಾಗಿ ಹೆಣ್ಣುಮಕ್ಕಳು ಕಥನ ಕಾವ್ಯಗಳನ್ನು ಹಾಡುವಾಗ, ವಿಶೇಷವಾಗಿ ಪಂಚಮಿ ಹಬ್ಬದ ಸಮಯದಲ್ಲಿ ಅವರೆಲ್ಲ ವಿಶಾಲವಾದ ಸ್ಥಳ ಅಥವಾ ದೊಡ್ಡ ಮನೆಯ ಅಂಗಳದಲ್ಲಿ ಸೇರಿ, ಎಂಟ್ಹತ್ತು ಜನ ಗೋಲಾಕಾರದಲ್ಲಿ ನಿಂತು, ಸುತ್ತುತ್ತ ಕಥೆಯ ಹಾಡುಗಳನ್ನು ಹಾಡುವ ಪದ್ಧತಿಯು ಮುಸ್ಲೀಮ ಹೆಣ್ಣುಮಕ್ಕಳು ಬುಲಾಯಿ ಹಾಕುವ ರೀತಿಯನ್ನು ಹೋಲುತ್ತಿರುವುದರಿಂದ ಬೀದರನಲ್ಲಿ ಕಥನಕಾವ್ಯಗಳ ಹಾಡುಗಾರಿಕೆಯ ಸಂದರ್ಭಕ್ಕೆ ಬುಲಾಯಿ ಎಂದು, ಹಾಡುಗಳಿಗೆ 'ಬುಲಾಯಿ ಹಾಡುಗಳು' ಎಂದು ಕರೆಯುವ ರೂಢಿ ಬಂದಿದೆ. ಡಾ. ಹೆಬ್ಬಾಳೆ ಅವರು ತಮ್ಮ ಕೃತಿಯ ಕಥಾನಕಗಳನ್ನು ಹಾಡುವ ಸಂದರ್ಭವನ್ನು ಹೀಗೆ ವಿವರಿಸುತ್ತಾರೆ: "ನಾಗರ ಪಂಚಮಿ ಹಬ್ಬಕ್ಕೆಂದು ತವರು ಮನೆಗೆ ಬಂದ ಹೆಣ್ಣುಮಕ್ಕಳು ಹಾಗೂ ಊರಿನವರು ಅಥವಾ ಓಣಿಯ ಹೆಣ್ಣುಮಕ್ಕಳೆಲ್ಲ ಸೇರಿ ಬುಲಾಯಿ ಹಾಕುತ್ತಾರೆ. ನಾಗರಪಂಚಮಿ ಇನ್ನು ೧೬-೨೦ ದಿವಸಗಳು

ಮುಂದಿರುವಾಗಲೇ ಬುಲಾಯಿ ಪ್ರಾರಂಭಿಸುತ್ತಾರೆ. ಪ್ರತಿ ದಿನ ರಾತ್ರಿ ಹೆಣ್ಣುಮಕ್ಕಳೆಲ್ಲ ಉಂಡು ತಿಂದು ಮನೆಗೆಲಸ ಮುಗಿಸಿ ಬುಲಾಯಿಗೆ ಸಿದ್ಧರಾಗುತ್ತಾರೆ. ಆಯಾ ಹಳ್ಳಿಯಲ್ಲೆ ಅವರವರ ಓಣಿಗೆ ಅವರದೇ ಆದ ಒಂದು ಗುಂಪು ಕಟ್ಟಿಕೊಂಡಿರುತ್ತಾರೆ. ಆ ಓಣಿಯ ಸ್ತ್ರೀಯರು ಆ ಓಣಿಯ ಯಾರಾದರೊಬ್ಬರ ವಿಶಾಲವಾದ ಮನೆಯ ಅಂಗಳದಲ್ಲಾಗಲಿ ಅಥವಾ ದೇವಾಲಯದ ಮುಂಭಾಗದಲ್ಲಾಗಲಿ ಬಂದು ಸೇರುತ್ತಾರೆ. ನಾಲ್ಕರಿಂದ ಹತ್ತು-ಹದಿನೈದು ಮಹಿಳೆಯರು ಅಲ್ಲಿರುತ್ತಾರೆ. ಎಲ್ಲರೂ ಗೋಲಾಕಾರದಲ್ಲಿ ನಿಂತು, ಪ್ರತಿಯೊಬ್ಬರೂ ಕೈಕೈ (ಒಬ್ಬರ ಕೈ ಒಬ್ಬರು) ಹಿಡಿದುಕೊಂಡು ಹಾಡುವುದಕ್ಕೆ ಪ್ರಾರಂಭಿಸುತ್ತಾರೆ. ಒಬ್ಬರು ಇಲ್ಲವೆ ಇಬ್ಬರು ಮಹಿಳೆಯರು ಮಾತ್ರ ಇಡೀ ಹಾಡನ್ನು ಹೇಳುವರು. ಆ ಹಾಡಿನ ಕೊನೆಯ ಎರಡು ಪಾದಗಳನ್ನು ಉಳಿದ ಮಹಿಳೆಯರು ಹೇಳುತ್ತಾರೆ. ಮುಂದೆ ಹಾಡುವ (ಮುಮ್ಮೇಳ) ಮಹಿಳೆಯರಿಬ್ಬರು ಸ್ವಲ್ಪ ಬಾಗುತ್ತಾರೆ. ಅದರಂತೆ ಹಿಂದೆ ಹಾಡುವ (ಹಿಮ್ಮೇಳ) ಮಹಿಳೆಯರು ಬಾಗುವರು. ಹಾಡಿನ ಪ್ರತಿನುಡಿಯ ಕೊನೆಗೆ 'ಕೋಲೆಣ್ಣ ಕೋಲೆ' ಎನ್ನುತ್ತಾರೆ. ಆದರೆ ಕೋಲು ಹಾಕುವುದಿಲ್ಲ. ಹಿಂದಿನ ಕಾಲದಲ್ಲಿ ಕೈಯಲ್ಲಿ ಹಿಡಿದ ಕೋಲನ್ನು ನುಡಿಸುತ್ತ ಹೇಳುತ್ತಿದ್ದ ಈ ಹಾಡುಗಾರಿಕೆಯಲ್ಲಿ 'ಕೋಲೆಣ್ಣ ಕೋಲು' ಎಂಬ ಪಾಠ ಉಳಿದುಕೊಂಡಿದ್ದರೂ ಇತ್ತೀಚೆಗೆ ಕೋಲು ಮಾಯವಾಗಿ ಹೋಗಿದೆ" (ಅದೆ,ಪು.೧೦). ಸಂಪಾದಕರ ಈ ವಿವರಣೆಯಲ್ಲಿ ಎಲ್ಲವೂ ಸರಿಯಾಗಿದೆ. ಅವರೇ ಹೇಳುವಂತೆ ಈ ಸಂದರ್ಭದಲ್ಲಿ ಹಿಂದೆ ಕೈಯಲ್ಲಿ ಹಿಡಿಯುತ್ತಿದ್ದ ಕೋಲುಗಳು ಈಗ ಮಾಯವಾಗಿವೆ ಎಂದು. ಅವರ ಅವಲೋಕನ ಸರಿಯಾಗಿದೆ, ಅರ್ಥ ಮಾಡಿಕೊಳ್ಳುವಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಬುಲಾಯಿ ಪದ ಮಾತ್ರ ಹೊರಗಿನಿಂದ ಬಂದುದು. ಹಾಡುಗಳು ಮತ್ತು ಸಂದರ್ಭ ಎರಡೂ ನಮ್ಮವೇ ಆಗಿವೆ.

ಡಾ. ಜಗನ್ನಾಥ ಹೆಬ್ಬಾಳೆಯವರು ತಮ್ಮ ಮನೆಯ ಹೆಣ್ಣುಮಕ್ಕಳು ಸಂಗ್ರಹಿಸಿದ ಹಾಡುಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇಲ್ಲಿಯ ೩೦ ಹಾಡುಗಳು ಅಪರೂಪದವೆ. ಈ ಹಾಡುಗಳು ಬೇರೆ ಪ್ರದೇಶದಲ್ಲಿ ಹಾಡುವುದನ್ನು, ಅವುಗಳ ಸಂದರ್ಭವನ್ನು ಅವರು ಗಮನಿಸಬೇಕಿತ್ತು. ಅಂದರೆ ಸಹಜವಾಗಿಯೇ ಅವರ ಮನಸ್ಸಿನಲ್ಲಿದ್ದ ಬುಲಾಯಿ ಬಗೆಗಿನ ಕಲ್ಪನೆ ತಾನಾಗಿಯೇ ಸರಿಯಾಗುತ್ತಿತ್ತು. ಇಲ್ಲಿರುವ ೩೦ ಹಾಡುಗಳಿಗೆ ಒಂದಿಷ್ಟು ಟಿಪ್ಪಣಿ ರೂಪದ ಸಾರಾಂಶವಾದರೂ ಬರೆಯಬೇಕಿತ್ತು. ಕೇವಲ ಪಠ್ಯ ಒದಗಿಸಿದರೆ ಸಾಲದು. ಪಠ್ಯದ ಪ್ರವೇಶಕ್ಕೆ ಬೇಕಾದ ಅವಶ್ಯ ಟಿಪ್ಪಣಿಗಳೂ ಬೇಕು.

ಈ ಕೃತಿಯಲ್ಲಿ ಅನೇಕ ವಿಶೇಷ ಹಾಡುಗಳಿವೆ. ಒಂದನೆಯ 'ಸೀತಾದೇವಿಯ ಹಾಡು' ಎರಡುವರಿ ಪುಟಗಳಲ್ಲಿ ರಾಮಾಯಣದ ಕಥೆಯನ್ನೇ ಹೇಳಿ ಮುಗಿಸುತ್ತದೆ. ಜನಪದ ಪ್ರತಿಭಾವಂತರ ಸಂಗ್ರಹ ಬುದ್ಧಿಗೆ ಇದೊಂದು ನಿದರ್ಶನ.

ಜನಕ ರಾಜನ ಹೊಟ್ಟಿಲಿ ಹುಟ್ಯಾಳೆ ಸೀತಾದೇವಿ
ಸೂರ್ಯ ಹೊಳದಾಂಗ ಹೊಳದಾಳ ಕೋಲ।
ದೊಡ್ಡ ದೊಡ್ಡ ರಾಜರು ನೆರೆದಾರ ಜನಕರಾಜ
ಬಾಣೆತ್ತಿದವರೀಗ ಮಗಳ ಕುಡುವೆ ಕೋಲ

ಲಂಕಾದ ರಾವಣ ಸಟ್ಟಂತ ಎದ್ದಾರೆ
ಎದ್ದು ನಿಂತಾರ ಬಂದು ಸಭೆದಾಗೆ ಕೋಲ
ನೆಲಕ ಬಿದ್ದಿದ ಬಾಣ ಎದಿ ತನಕ ಎತ್ತ್ಯಾರೆ
ಎದಿಮ್ಯಾಲ ಹಾಕ್ಕೊಂಡು ಬಿದ್ದಾರೆ ಕೋಲ
ಆವಾಗ ರಾಮದೇವ ಝುಟ್ಟಂತ ಎದ್ದಾರೆ
ಕಿರಿ ಬಳ್ಳಿಲಿ ಬಾಣ ಮಟಸ್ಯಾರೆ ಕೋಲ
ಮಾಯಾ ರೂಪದಿಂದ ಬಂದಾನ ರಾವಣ
ಭಂಗಾರ ಎಳ್ಯಾಗೆ ಸುಳದಾನ ಕೋಲ

ಹೀಗೆ ಎರಳೆಯಾಗಿ ಬಂದವನ ಹಿಂದೆ ರಾಮ ಹೋದ. ಅವನನ್ನು ಕರೆತರಲು ಲಕ್ಷ್ಮಣ ಹೋದ. ಸನ್ಯಾಸಿ ವೇಷ ಧರಿಸಿ ರಾವಣ ಬಂದ. ಸೀತೆಯನ್ನು ಅಪಹರಿಸಿದ. ತಿರುಗಿ ಬಂದ ರಾಮ ಲಕ್ಷ್ಮಣರು ಅಂದುಕೊಂಡರು:

ಹಸಿವ್ಯಾರೆ ಆಗ್ಯಾವೇನೆ ಹಣ್ಣು ತಿಲ್ಲ್ಯಾಕ ಹೋಗ್ಯಾಳೇನೆ
ಸುತ್ತೇಳು ಘಟ್ಟವ ಹುಡುಕ್ಯಾರೆ । ಕೋಲ
ನೀರಡಕಿ ಆಗ್ಯಾವೇನೆ ನೀರ ಕುಡಿಲಾಕ ಹೋಗ್ಯಾಳೇನೆ
ಸುತ್ತೇಳು ಕೆರಿಯ ಹುಡುಕ್ಯಾರೆ । ಕೋಲ
ಅಲ್ಲಿಂದು ರಾಮದೇವ ಏನಂತ ಅನುತಾನ
ವೈರಿ ತನ್ನ ಹ್ಯಾವ ಗೆದ್ದಾನಲ್ಲ। ಕೋಲ

ಇಷ್ಟೊಂದು ಸಂಕ್ಷಿಪ್ತವಾಗಿ ಇಡೀ ರಾಮಾಯಣವನ್ನು ಹೇಳಿ ಮಾಡಿಸಿದ್ದಾರೆ. ಈ ಕಥೆಗಳಲ್ಲಿ ಒಮ್ಮೊಮ್ಮೆ ಸ್ಥಳೀಯ ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದ ರಚನೆಗಳನ್ನು ಹೆಣ್ಣುಮಕ್ಕಳು ರಚಿಸುತ್ತಾರೆ, ಹಾಡುತ್ತಾರೆ. ರಜಾಕಾರರ ಹಾವಳಿಗೆ ತುತ್ತಾದ ಗೋರಟಾ ಗ್ರಾಮದಲ್ಲಿ ನಡೆದ ಭೀಕರ ಹತ್ಯಾಕಾಂಡ ಕುರಿತ ಕಥೆಯನ್ನು ಒಬ್ಬಕವಿ 'ಕೋಲೆಣ್ಣ ಹಾಡು' (ಬುಲಾಯಿ ಹಾಡು) ರಚಿಸಿದ್ದಾನೆ. ಅದನ್ನು ಬೀದರ, ಕಲಬುರಗಿ ಭಾಗದ ಹೆಣ್ಣುಮಕ್ಕಳು ಹಾಡುತ್ತಾರೆ. ಅದನ್ನು ಈ ಕೃತಿಯಲ್ಲಿ ಮುದ್ರಿಸಿದ್ದಾರೆ.

ಶ್ರೀ ಗುರು ಗೋರಖನಾಥ ವೈರಾಗ್ಯಶಾಲಿವಂತ
ಭಕ್ತರಿಗೆ ಒಲಿಯೊ ಸನ್ಯಸ್ಥ । ಕೋಲೆಣ್ಣ ಕೋಲ
ಹೈದ್ರಾಬಾದಿ ಬೀದರ ಜಿಲ್ಲಾ ರಝಾಕಾರ ಮಂಡರೆಲ್ಲ
ದಂಡೆತ್ತಿ ಬಂದಾರೋ ಗೋರಟಿ ಮ್ಯಾಲಾ । ಕೋಲೆಣ್ಣ ಕೋಲ
ಹದಿಮೂರು ಸಪ್ಟೆಂಬರ ಮಿಲ್ಟ್ರಿಯು ತಯಾರ
ನಿಜಾಮ ಸುತ್ತ ಹಾಕ್ಯಾರೊ ಘೇರ । ಕೋಲೆಣ್ಣ ಕೋಲ
ಹೈದ್ರಾಬಾದ ವಿಜಯವಾಯ್ತು ವಿಜಯ ದಸಮಿಯು ಬಂತು
ತ್ರೀರಂಗ ಧ್ವಜ ಹಾರಿತು । ಕೋಲೆಣ್ಣ ಕೋಲ

ಹೀಗೆ ಈ ಕೋಲೆಣ್ಣ ಹಾಡು ೧೦೮ ದ್ವಿಪದಿಗಳ ಒಂದು ದೀರ್ಘ ಕಥಾನಕ. ಕವಿ ಗೋರಟಾ ಗ್ರಾಮದವರೇ ಆಗಿರುವುದರಿಂದ ತಾನು ಕಣ್ಣಿನಿಂದ ನೋಡಿದ್ದನ್ನು ಯಥಾವತ್

ಚಿತ್ರಿಸಿದ್ದಾನೆ. ಈ ಕೃತಿಯಲ್ಲಿ ಇನ್ನೊಂದು ರಜಾಕಾರ ಹಾವಳಿಗೆ ಸಂಬಂಧಿಸಿದ ಹಾಡೂ ಇದೆ. ೧೨ನೇ ಶತಮಾನಕ್ಕೆ ಸಂಬಂಧಿಸಿದ ಶರಣರ ಹಾಡು, ಕಲಬುರಗಿಯ ಶರಣಬಸವೇಶ್ವರ ಹಾಡುಗಳೂ ಸೇರಿವೆ. ಹೀಗೆ ಅಪರೂಪಕ್ಕೆ ಇಂತಹ ವಾಸ್ತವಗಳನ್ನು ಕೂಡ ಕಥಾನಕಗಳು ಒರೆಯುತ್ತವೆ. ಹಾಗೆ ನೋಡಿದರೆ ಈ ಜನಪದ ಕಥಾನಕಗಳೆಲ್ಲ ಐತಿಹಾಸಿಕ ಘಟನೆಗಳಾಗಿರುತ್ತವೆ. ಹಾಡಿನಲ್ಲಿ ಒಂದಿಷ್ಟು ಸಾಹಿತ್ಯಿಕ ಗುಣಗಳು ಸೇರಿಕೊಂಡಿರುತ್ತವೆ. ಇವೆಲ್ಲ ಮೌಖಿಕ ಪರಂಪರೆಯಲ್ಲಿ ಕಥೆ ನೆನೆಪಿನಲ್ಲುಳಿಯಲು ಅಲ್ಲಿ ಅನೇಕ ಆಶಯಗಳು ಸೃಷ್ಟಿಯಾಗುತ್ತವೆ. ಹೀಗೆ ವೈವಿಧ್ಯಮಯವಾದ ಹಾಡುಗಳಿಂದ **'ಬೀದರ ಜಿಲ್ಲೆಯ ಬುಲಾಯಿ ಹಾಡುಗಳು'** ಗಮನ ಸೆಳೆಯುತ್ತದೆ.

'ಕಾಳಿಂಗರಾಯನ ಕಾವ್ಯ'(೨೦೦೦) ಸಂಪಾದಿಸಿ ಪ್ರಕಟಿಸಿದವರು ಡಾ. ಎಚ್.ಕೆ.ನಾಗೇಶ ಅವರು. ದ್ವಿಪದಿಯಲ್ಲಿರುವ ಈ ದೀರ್ಘಕಾವ್ಯ (೯೭ ಪುಟಗಳು) ಹಾಡಿದವರು ಶ್ರೀಮತಿ ಚೌಡಮ್ಮ ಮತ್ತು ಸಂಗಡಿಗರು. ಈ ಖಂಡಕಾವ್ಯವನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ರಾಮಸಾಗರ ಗ್ರಾಮದಲ್ಲಿ ಸಂಗ್ರಹಿಸಲಾಗಿದೆ. ೧೯೭೨ರಲ್ಲಿಯೇ ಡಾ. ಸುಂಕಾಪೂರ ಅವರು ಈ ಹಾಡಿನ ಒಂದು ಸುದೀರ್ಘ ಪಾಠವನ್ನು ಪ್ರಕಟಿಸಿದ್ದಾರೆ. ನಂತರ ಡಾ. ಬಿ.ಬಿ.ಹೆಂಡಿ ಅವರು ಅಷ್ಟೇ ದೀರ್ಘವಾದ ಇನ್ನೊಂದು ಪಾಠವನ್ನು ಪ್ರಕಟಿಸಿದ್ದಾರೆ. ಇವರ ಕೃತಿಗಳು ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿವೆ. ಕೃಷ್ಣಮೂರ್ತಿ ಹನೂರ, ಮೈಲಹಳ್ಳಿ ರೇವಣ್ಣ ಇವರು ಚಿತ್ರದುರ್ಗ ಜಿಲ್ಲೆಯ ಇನ್ನೆರಡು ಪಾಠಗಳನ್ನು ಪ್ರಕಟಿಸಿದ್ದಾರೆ. ಹನೂರ ಅವರ ಕೃತಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ, ಮೈಲಹಳ್ಳಿ ಅವರ ಕೃತಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿವೆ. ಚೆನ್ನಮ್ಮನ ಕಥೆ ತುಂಬಾ ಪ್ರಸಿದ್ಧವಾಗಿದ್ದು, ಅದು ಉತ್ತರ ಕರ್ನಾಟಕದಲ್ಲಿ ಎಲ್ಲ ಕಡೆ ದೊರೆಯುತ್ತದೆ. ಆದರೆ 'ಕಾಳಿಂಗರಾಯನ ಕಾವ್ಯ' ಕೃತಿಯ ಸಂಪಾದಕರಾದ ಡಾ. ನಾಗೇಶ ಅವರು ಮೊದಲು ಪ್ರಕಟವಾದ ಯಾವ ಕೃತಿಗಳನ್ನೂ ಗಮನಿಸಿಲ್ಲ. ಅನುಬಂಧ **'೫.ಅರಗಿಸಿಕೊಂಡ ಪುಸ್ತಕಗಳು'** ಎಂಬ ಶೀರ್ಷಿಕೆಯಲ್ಲಿ ಕನ್ನಡದ ಸುಮಾರು ೧೦ ಕೃತಿಗಳ ಪಟ್ಟಿಕೊಟ್ಟಿದ್ದು, ಅವ್ಯಾವೂ ಚೆನ್ನಮ್ಮನ ಕಥೆಗೆ ಸಂಬಂಧಿಸಿಲ್ಲ. ಮತ್ತೆ ಕೆಳಗೆ ಒಂದಿಷ್ಟು ಇಂಗ್ಲೀಷ ಕೃತಿಗಳ ಪಟ್ಟಿಯೂ ಇದ್ದು, ಅವುಗಳನ್ನು ಯಾಕೆ ಅರಗಿಸಿಕೊಂಡರೆಂಬುದು ಗೊತ್ತಾಗುವುದಿಲ್ಲ. ಅರಗಿಸಿಕೊಳ್ಳಬೇಕಾದ ಕೃತಿಗಳನ್ನು ಬಿಟ್ಟು, ಅನಾವಶ್ಯಕ ಕೃತಿಗಳನ್ನು ಅರಗಿಸಿಕೊಂಡು ಹೈರಾಣಾಗಿದ್ದಾರೆ.

ಕಾಳಿಂಗರಾಯನ ಕಥೆಯ ಇನ್ನೊಂದು ಪಾಠವನ್ನು ಹೊಂದಿರುವ ಎಚ್.ಎಲ್.ನಾಗೇಗೌಡರ **'ಕಾಳಿಂಗರಾಯ ಮತ್ತು ಇತರ ಕಥನ ಕಾವ್ಯಗಳು'** (೨೦೧೦) ಸಂಗ್ರಹ ಪ್ರಕಟವಾಗಿದೆ. ಈ ಸಂಗ್ರಹದಲ್ಲಿ ೧೦ ಹಾಡುಗಳಿದ್ದು, ಚೆನ್ನಮ್ಮನ ದಂಡಿ ಕಥೆಯ ಪಾಠವನ್ನು ಹೊತ್ತಿರುವ ಕಾಳಿಂಗರಾಯ ಕಥೆಗೆ ಒಂದು ವಿಶೇಷ ಮಹತ್ವವಿದೆ. ೬೫ ಪುಟಗಳ ದೀರ್ಘ ಕಾವ್ಯವಿದು. ಈ ಹಾಡನ್ನು ಎಸ್. ಕೆ. ಕರೀಂಖಾನ ಅವರ 'ಜನಪದ ಗೀತೆ' (೧೯೫೫) ಸಂಗ್ರಹದಲ್ಲಿ 'ಕತ್ತಲೆರಾಯನ ಪದ'ವೆಂದೂ ನಂತರ ೧೯೬೩ರಲ್ಲಿ ಕ. ರಾ. ಕೃ. ಅವರು 'ಕಾಳಿಂಗರಾಯ' ಎಂಬ ಹೆಸರಿನಲ್ಲಿ ಪ್ರತ್ಯೇಕ ಕೃತಿ

ರೂಪದಲ್ಲಿ, ನಾಗೇಗೌಡರು ೨೦೦೭ರಲ್ಲಿ ಪ್ರಕಟಿಸಿದ 'ಕನ್ನಡ ಜನಪದ ಕಥನ ಕಾವ್ಯಗಳು' ಕೃತಿಯಲ್ಲಿ ಗುಲಗಂಜಿ ಚೆನ್ನವ್ವ' ಎಂದು, ಅವರದೇ ೧೯೭೭ರಲ್ಲಿ ಪ್ರಕಟವಾದ 'ಪದವವೆ ನಮ್ಮ ಎದೆಯಲ್ಲಿ' ಎಂಬ ಕೃತಿಯಲ್ಲಿ 'ಕತ್ತಲೆರಾಯ' ಎಂಬ ಹೆಸರಿನಲ್ಲೂ ಈ ಕಥೆಯ ಪಾಠಗಳಿರುವುದನ್ನು ಸಂಪಾದಕರು ಗಮನಿಸಿದ್ದಾರೆ. ಆದರೆ ಉತ್ತರ ಕರ್ನಾಟಕದಲ್ಲಿ ಬಹುಪ್ರಸಿದ್ಧವಾದ ಈ ಕಥೆ ಚೆನ್ನಮ್ಮನ ದಂಡಿ, ಸತಿ ಚೆನ್ನಮ್ಮ ಮುಂತಾದ ಹೆಸರುಗಳಲ್ಲಿ ಅನೇಕ ಕಡೆ ಪ್ರಕಟವಾಗಿರುವುದನ್ನು ಸಂಪಾದಕರು ಗಮನಿಸಿದಂತಿಲ್ಲ. ಪ್ರಸ್ತುತ ನಾಗೇಗೌಡರ ಪಾಠದ ಮಹತ್ವವೆಂದರೆ ೧೯೬೩ರಲ್ಲಿ ಕರಾಕೃ ಅವರು ಸಂಗ್ರಹಿಸಿದ ಉಚ್ಚಂಗಿ ದುರ್ಗದ ಇಲಿಸವ್ವ ಎಂಬ ವಕ್ತಾರರಿಂದಲೇ ೧೯೮೫ರಲ್ಲಿ ಅಂದರೆ ಸುಮಾರು ೨೨ ವರ್ಷಗಳ ನಂತರ ಮತ್ತೆ ಈ ಹಾಡನ್ನು ಸಂಗ್ರಹಿಸಿದ್ದು. ಈ ಕಥೆ ಈಗಿನ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಗ್ರಾಮಕ್ಕೆ ಸಂಬಂಧಿಸಿದ್ದು ಎಂಬುದನ್ನು ಗಮನಿಸಬೇಕು. ಈಗ ಬಸವಣ್ಣನ ಗುಡಿ ಇರುವ ಸ್ಥಳವೇ ಚನ್ನಮ್ಮ ನಂದಿಯನ್ನು ಪೂಜಿಸಿ, ಸತ್ತ ಗಂಡನನ್ನು ಶಿವನಿಂದ ಬದುಕಿಸಿದ ಸ್ಥಳ ಎನ್ನಲಾಗುತ್ತದೆ. ಗ್ರಾಮದಲ್ಲಿ ಚೆನ್ನಮ್ಮನ ಅರಮನೆ ಇತ್ತೆಂದು ಹೇಳುವ ಸ್ಥಳವನ್ನು ಸ್ಥಳೀಯರು ಇವತ್ತೂ ತೋರಿಸುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಿಂದ ಜನಪದ ಸಾಹಿತ್ಯದ ಕೆಲಸ ಮಾಡಿದ ಹಿರಿಯರಲ್ಲಿ ಡಾ. ಎಲ್. ಆರ್. ಹೆಗಡೆ ಅವರದು ದೊಡ್ಡ ಹೆಸರು. ಅವರ ನಂತರದ ಪೀಳಿಗೆಯಲ್ಲಿ ಡಾ. ಎನ್. ಆರ್. ನಾಯಕ ಬಹುದೊಡ್ಡ ಕೆಲಸ ಮಾಡಿದ್ದಾರೆ. ಹೊನ್ನಾವರದ ಸುತ್ತ ಇರುವ ಹಲವಾರು ಬಗೆಯ ಬುಡಕಟ್ಟು ಜನಾಂಗಗಳು ಕನ್ನಡದಲ್ಲಿ ಸೃಷ್ಟಿಮಾಡಿಕೊಂಡು, ಬಳಸಿಕೊಂಡು, ಹಾಡಿಕೊಂಡು, ಬದುಕಿನಲ್ಲಿ ಅಳವಡಿಸಿಕೊಂಡಿರುವ ಹಲವಾರು ಬಗೆಯ ಜನಪದ ಸಾಹಿತ್ಯ, ಸಂಸ್ಕೃತಿಗೆ ಸಂಬಂಧಪಟ್ಟ ಮೌಖಿಕ ಮಾಹಿತಿ, ಸಾಹಿತ್ಯದ ಸಂಗ್ರಹ, ಸಂಪಾದನೆ, ವಿಶ್ಲೇಷಣೆ ಮಾಡುತ್ತ ಬಂದಿದ್ದಾರೆ. ತಾವು ಪಿಎಚ್.ಡಿ. ಮಾಡುವ ಕಾಲಕ್ಕೆ ಸುಮಾರು ೪೦೦೦ ಪುಟಗಳಷ್ಟು ಸಂಗ್ರಹಿಸಿದ್ದ ಜನಪದ ಸಾಹಿತ್ಯದ ಹಸ್ತಪ್ರತಿ ಗೆದ್ದಲಿಗೆ ಆಹುತಿಯಾದ ಬಗ್ಗೆ ಅವರು ಬರೆದುಕೊಂಡಿದ್ದಾರೆ. ಆ ಸಂಗ್ರಹದಲ್ಲಿ ಹೆಣ್ಣುಮಕ್ಕಳು ಹಾಡುವ ಕಥಾನಕಗಳೂ ಇದ್ದವು ಎಂದು ತಿಳಿದುಬರುತ್ತದೆ. ಅವುಗಳಲ್ಲಿ ಅಳಿದುಳಿದ ಕಥಾನಕಗಳನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ಅವರು ನಾಲ್ಕು ಚಿಕ್ಕಪುಟ್ಟ ಕೃತಿಗಳನ್ನು ಪ್ರಕಟಪಡಿಸಿದ್ದಾರೆ. 'ಅಭಿಮನ್ಯು'(೨೦೦೩, ಖಂಡಕಾವ್ಯ, ೧೦೦ ಪುಟಗಳು), 'ಕೊಮಾರ ಪಂತರ ಕಥನ ಕವನಗಳು'(೨೦೦೪, ೫ ಕಥಾನಕಗಳು, ೯೦ ಪುಟಗಳ ಚಿಕ್ಕ ಕೃತಿ), 'ನಾಡವರ ಪುರಾಣ ಕಥನ ಕಾವ್ಯಗಳು' (೨೦೧೨, ೫ ಕಥಾನಕಗಳು, ೬೦ ಪುಟಗಳ ಚಿಕ್ಕ ಕೃತಿ), ಹಾಲಕ್ಕಿ ಒಕ್ಕಲಿಗರ ಕಥನ ಗೀತಗಳು (೨೦೧೩, ೮ ಕಥಾನಕಗಳು, ೩೦ ಪುಟಗಳು). ಸಂಪಾದಕರ ಸಂಗ್ರಹವೆಲ್ಲ ಗೆದ್ದಲು ತಿಂದು ನಮಗಾಗಿ ಉಳಿದದ್ದು ಇವಿಷ್ಟೆ ಕಥಾನಕಗಳು ಎಂದು ತೋರುತ್ತದೆ. ಮೊದಲ ಸಂಗ್ರಹ ಗಾಮೊಕ್ಕಲ ಜಾತಿಯ ವಕ್ತಾರರಿಂದ ಹಾಡಿಸಲ್ಪಟ್ಟದ್ದು. ಉಳಿದಂತೆ ಒಂದೊಂದು ಸಂಗ್ರಹ ಒಂದೊಂದು ಜಾತಿಯ ವಕ್ತಾರರಿಂದ ಹಾಡಿಸಿದ್ದು ಎಂಬುದು ಅವುಗಳ ಶೀರ್ಷಿಕೆಯಲ್ಲಿರುವ ಕೊಮಾರ ಪಂತರ, ನಾಡವರ, ಹಾಲಕ್ಕಿ ಒಕ್ಕಲಿಗರ ಎಂಬ ಪದಗಳು ನೇರವಾಗಿಯೇ ಹೇಳುತ್ತಿವೆ.

ಸಂಪಾದಕರ ಶ್ರಮ, ದೃಷ್ಟಿ ಈ ಕಾವ್ಯಗಳನ್ನು ಸಂಗ್ರಹಿಸುವಲ್ಲಿ ಸ್ಪಷ್ಟವಾಗುತ್ತದೆ. ತಮ್ಮ ಸುತ್ತಮುತ್ತಲೂ ಬದುಕುತ್ತಿರುವ ಹಲವಾರು ಸಂಸ್ಕೃತಿಯ ಜನರೊಡನೆ ಸಂಪರ್ಕ ಬೆಳೆಸುವ, ಅವರ ಬದುಕನ್ನು ಅರಿಯುವ ಬಗೆಯಲ್ಲಿ ಈ ಚಿಕ್ಕಚಿಕ್ಕ ಕೃತಿಗಳೆಲ್ಲ ಮೂಡಿ ಬಂದಿವೆ. ಇಲ್ಲಿ ಹೇಳಲೇ ಬೇಕಾದ ಒಂದು ಸಂಗತಿಯೆಂದರೆ, ಎನ್. ಆರ್. ನಾಯಕ ಅವರು ಈ ಕೃತಿಗಳಿಗೆಲ್ಲ ಬರೆದಿರುವ ಪ್ರಸ್ತಾವನೆಗಳು ಮಹತ್ವದ್ದಾಗಿವೆ. ಹಳೆಯ ತಲೆಮಾರಿನ ಕರಾಕೃ, ಸುಂಕಾಪುರ, ಬಿ.ಬಿ.ಹೆಂಡಿ, ಜೀಶಂಪ ಅವರ ನಂತರ ಬಹಳ ಶ್ರದ್ಧೆಯಿಂದ, ವಿವರ ವಿವರವಾಗಿ ಅನೇಕ ವಿಷಯಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದವರು, ವಿವರಿಸಿದವರು ಎನ್.ಆರ್. ನಾಯಕ ಅವರು. ಕಥೆಗಳನ್ನು ಹಾಡುವ ಸಂದರ್ಭಗಳನ್ನು ತಪ್ಪದೆ ಹೇಳುತ್ತಾರೆ. ಅವುಗಲ್ಲಿ ಮುಖ್ಯವಾದ ಸಂದರ್ಭವೆಂದರೆ ಹೊಲ ಮನೆಯ ಕೆಲಸಗಳನ್ನು ಮಾಡುತ್ತಲೇ ಈ ಹಾಡುಗಳನ್ನು ಹಾಡುವುದು. ಈ ಸಂದರ್ಭ ತುಂಬಾ ಸಾಮಾನ್ಯವಾಗಿ ಕಾಣುತ್ತದೆ. ಅದಕ್ಕಾಗಿ ಹೆಣ್ಣುಮಕ್ಕಳ ಕಥನಕಾವ್ಯಗಳನ್ನು ಹಾಡುವ ಸಂದರ್ಭವೆಂದರೆ ಮುಖ್ಯವಾಗಿ ಅವರಿಗೆ ಬಿಡುವು ದೊರೆತಾಗ, ಆರಾಮವಾಗಿ ಕೆಲಸ ಮಾಡುವಾಗ, ಉಲ್ಲಾಸಮಯ ಬೆಳದಿಂಗಳ ರಾತ್ರಿಗಳನ್ನು ಕಳೆಯುವಾಗ ಕರ್ನಾಟಕದ ತುಂಬ ಹೆಣ್ಣುಮಕ್ಕಳು ಕಥನಕಾವ್ಯಗಳನ್ನು ಹಾಡಿಕೊಳ್ಳುತ್ತಾರೆಂಬುದು ಸಾಮಾನ್ಯ ಸಂಗತಿಯಾಗಿದೆ. ಇವುಗಳನ್ನು ಇಂಥ ಹಬ್ಬಗಳಲ್ಲಿ, ಹೀಗೆಯೇ ಹಾಡುತ್ತಾರೆಂಬ ವಿವರಗಳೂ ಇವುಗಳಲ್ಲಿ ಒಂದಾಗಿ ಸೇರಬೇಕಷ್ಟೆ. ಉದಾಹರಣೆಗೆ ಬೀದರ ಜಿಲ್ಲೆಯಲ್ಲಿ ಇರುವ ಬುಲಾಯಿ ಹಾಡುಗಳು ಹಬ್ಬದ ಸಂದರ್ಭಧಲ್ಲಿಯೇ ಹಾಡುತ್ತಾರೆ ಎಂಬ ಸಂಗತಿ. ಅವೇ ಹಾಡುಗಳನ್ನು ಈ ಮೇಲೆ ವಿವರಿಸಿದ ಸಂದರ್ಭಗಳಲ್ಲೂ ಹಾಡುತ್ತಾರೆಂಬ ಅರಿವು ಅವಶ್ಯ.

ಡಾ. ಎನ್. ಆರ್. ನಾಯಕರು ಬೇಸರವಿಲ್ಲದೆ ವಕ್ತಾರರ ಮಾಹಿತಿಗಳನ್ನು ಕೊಡುತ್ತಾರೆ. ಕಥೆಯ ಸಾರಾಂಶಗಳನ್ನು ಹೇಳುತ್ತಾರೆ. ಅವುಗಳ ವಿಶೇಷ ಸಂಗತಿಗಳನ್ನು ದಾಖಲಿಸುತ್ತಾರೆ. ತಾವು ಯಾವಾಗ, ಎಲ್ಲಿ, ಯಾರಿಂದ ಸಂಗ್ರಹಿಸಿದ್ದು, ಭಾಷೆ ಎಂತಹದು ಎಂಬ ಸಂಗತಿಗಳನ್ನೆಲ್ಲ ಚಾಚೂ ತಪ್ಪದೆ, ಬೇಸರವಿಲ್ಲದೆ ಅರುಹುತ್ತಾರೆ. ಪಠ್ಯಗಳಲ್ಲಿ ಕಾಣುವ ವಿಶೇಷ ಪದಗಳಿಗೆ ಅಡಿಟಿಪ್ಪಣಿಯಲ್ಲಿಯೇ ಅರ್ಥಗಳನ್ನು ಹೇಳಲು ಪ್ರಯತ್ನಿಸಿದ್ದಾರೆ. ಬದಲಾಗಿ ಅರ್ಥಕೋಶಗಳನ್ನು ಕೊಡಬಹುದಿತ್ತು ಎನಿಸುತ್ತದೆ. ನಾಯಕರಿಗೆ ತಾವು ಸಂಗ್ರಹ ಮಾಡಿದ ಹಾಡುಗಳ ಕನ್ನಡ ಭಾಷೆ ಉಳಿದೆಡೆಯ ಕರ್ನಾಟಕದ ಜನರಿಗೆ ಸರಳವಾಗಿ ಅರ್ಥವಾಗುವುದಿಲ್ಲ ಎಂದು ಗೊತ್ತಿದೆ. ಹಾಗಾಗಿ ತಾವು ಶ್ರಮವಹಿಸಿ ಕೊಡುತ್ತಿರುವ ಪಠ್ಯಗಳು ಓದುಗರಿಗೆ ಮುಟ್ಟಿಸುವಲ್ಲಿ ಒಬ್ಬ ಸಂಪಾದಕ ಏನೇನು ಪ್ರಯತ್ನ ಮಾಡಬೇಕೋ ಅವೆಲ್ಲವನ್ನೂ ಮಾಡಿದ್ದಾರೆ. ಇದು ಸಂಪಾದಕರ ಕರ್ತವ್ಯ. ಇದನ್ನು ಅನೇಕ ಜನ ನಿಭಾಯಿಸುವಲ್ಲಿ ಎಚ್ಚರವಹಿಸದೇ ಇರುವುದು ಕಾಣುತ್ತದೆ. ಅದಕ್ಕಾಗಿಯೇ ಹಳೆಯ ತಲೆಮಾರಿನ ಜನಗಳ ನಂತರ ಎನ್.ಆರ್. ನಾಯಕ ಅವರು ಎದ್ದುಕಾಣುತ್ತಾರೆ.

'ಅಭಿಮನ್ಯು' ಖಂಡಕಾವ್ಯದ ಕಥೆಗಳು ಮೂರು ಸೀಳಾಗಿ ಕಾಣುತ್ತದೆ. ಅಭಿಮನ್ಯುವಿನ ಜನನ, ಅವನ ಮದುವೆ, ಹೋರಾಟ. ಈ ಕಥೆಗಳೆಲ್ಲ ಎಲ್ಲರಿಗೂ ಗೊತ್ತಿರುವಂಥವೆ.

ಸ್ವಲ್ಪ ಶ್ರಮವಹಿಸಿ ಓದಿದರೆ ಈ ಕಾವ್ಯದ ಕನ್ನಡದ ಅನುಭಬವೇ ಭಿನ್ನವಾಗಿ ತೋರುತ್ತದೆ. ಕರ್ನಾಟಕದ ಬೇರೆಡೆ ಪ್ರಚಾರದಲ್ಲಿರುವ ಕಥೆಗಳು ಹೊನ್ನಾವರ ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರಚಾರದಲ್ಲಿ ಇದ್ದಂತೆ ತೋರುವುದಿಲ್ಲ. ಇಲ್ಲಿನ ಹೆಚ್ಚಿನ ಕಥೆಗಳು ರಾಮಾಯಣ, ಮಹಾಭಾರತಗಳಿಗೆ ಸಂಬಂಧಿಸಿರುವುದು ಕಂಡುಬರುತ್ತದೆ.

* * *

ಈ ಅಧ್ಯಾಯದ ಸಮೀಕ್ಷೆಯಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಕರಾಕೃ ಅವರ 'ಅಣಜಿ ಹೊನ್ನಮ್ಮ'(೧೯೬೪), ಸುಶೀಲಾ ಪಟ್ಟಣಶೆಟ್ಟಿ ಅವರ 'ಗುಣದಮ್ಮನ ಕಥೆ'(೧೯೭೨), ಡಾ. ಬಸವರಾಜ ಮಲಶೆಟ್ಟಿ ಅವರ 'ಇಜಿಯಣ್ಣನ ಹಾಡು'(೧೯೮೨), ವೈಜಯಂತಿಮಾಲಾ ಅವರ 'ವಡ್ಡಗೆರೆ ನಾಗಮ್ಮ'(೧೯೮೧), ಬಳ್ಳೆಕೆರೆ ಹನುಮಂತಪ್ಪ ಅವರ 'ಮದಗದ ಕೆಂಚಮ್ಮ' (೧೯೯೪), ಡಾ. ಹೆಚ್.ಕೆ.ನಾಗೇಶ ಅವರ 'ಕಾಳಿಂಗರಾಯನ ಕಾವ್ಯ'(೨೦೦೦) ಈ ಆರು ಕೃತಿಗಳು ಒಂದೊಂದೇ ದೀರ್ಘವಾದ ಕೃತಿಯನ್ನು ಪ್ರಕಟಿಸಿದ ಕೃತಿಗಳಾಗಿದ್ದು, ಇವುಗಳ ಭಿನ್ನಪಾಠಗಳು ಬೇರೆ ಬೇರೆ ಕೃತಿಗಳಲ್ಲಿ ಪ್ರಕಟವಾಗಿವೆ. ದೀರ್ಘಕಾವ್ಯದ ಪಾಠಗಳನ್ನು ಶೋಧಿಸಿ, ಶಾಸ್ತ್ರೀಯವಾಗಿ ಸಂಪಾದಿಸಿ, ಅವುಗಳ ಐತಿಹಾಸಿಕ ಮಹತ್ವವನ್ನು ಹೇಳುವ, ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಶೋಧಿಸಿ ಪ್ರಸ್ತಾವನೆಯಲ್ಲಿ ಚರ್ಚಿಸಿದ ಅತ್ಯಂತ ಮಹತ್ವದ ಕೃತಿ ಎಂದರೆ ಬಳ್ಳೆಕೆರೆ ಹನುಮಂತಪ್ಪ ಅವರ 'ಮದಗದ ಕೆಂಚಮ್ಮ'. ಈ ಅಧ್ಯಾಯದಲ್ಲಿ ಸಮೀಕ್ಷಿಸಿದ ಖಂಡಕಾವ್ಯಗಳ ಸಾಲಿನಲ್ಲಿ ಅತ್ಯಂತ ಮಹತ್ವದ ಕೃತಿಯಾಗಿ ನಿಲ್ಲುವಂತೆ ಸಂಪಾದಕರು ಶ್ರಮವಹಿಸಿದ್ದು ಎದ್ದುಕಾಣುತ್ತದೆ.

ಚೆನ್ನಮ್ಮನ ದಂಡಿ, ಗುಣಸಾಗರಿ ಕಥೆಗಳು ಜನಪದ ಪುರಾಣ ಕಥೆಗಳಾಗಿ ಪುಣ್ಯ ಕಥೆಗಳಾಗಿ ಕರ್ನಾಟಕದ ತುಂಬ ಪ್ರಸಿದ್ಧವಾಗಿವೆ. ಇದರ ನಂತರ ಪ್ರಸಿದ್ಧವಾದ ಇನ್ನೊಂದು ಕೃತಿ ಎಂದರೆ ಈಸೂರಾಯನ ಕಥೆ. ಅದು ಸೂಳೆ ವಲ್ಲಣಿ ಹೆಸರಿಗೂ ಅಲ್ಲಲ್ಲಿ ಪ್ರಕಟವಾಗಿದೆ. ಈ ಮೂರು ಜನಪದ ಪುರಾಣ ಕಥಾನಕಗಳ ಜೊತೆ, ಸುಖಾಂತವಾಗಿ ಕೊನೆಗೊಳ್ಳುವ ಮದಗದ ಕೆಂಚವ್ವ, ಕಾಡಸಿದ್ದವ್ವ, ಧರಣೆಮ್ಮನ ಕಥೆಗಳನ್ನು ಈ ಗುಂಪಿಗೆ ಸೇರಿಸಬಹುದಾಗಿದೆ. ಹೀಗಾಗಿ ಈ ಆರು ಕಥೆಗಳು ಕರ್ನಾಟಕದ ತುಂಬ ಪ್ರಸಿದ್ಧವಾಗಿರುವ ಜನಪದ ಪುಣ್ಯ ಕಥಾನಕಗಳಾಗಿವೆ.

ಈ ಸಮೀಕ್ಷೆಯಲ್ಲಿ ಗಮನಿಸಿದಂತೆ ಐವರು ಹೆಣ್ಣುಮಕ್ಕಳು ಮಾತ್ರ ಒಂದೊಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ. ಸುಶೀಲಾ ಪಟ್ಟಣಶೆಟ್ಟಿ ಅವರ 'ಗುಣದಮ್ಮನ ಕಥೆ'(೧೯೭೨), ಡಾ. ಶಶಿಕಲಾ ಮೋಳ್ದಿ ಅವರ 'ಹರದೆಯರ ಹಾಡುಗಳು'(೧೯೭೮), ವೈಜಯಂತಿಮಾಲ ಅವರ 'ವಡ್ಡಗೆರೆ ನಾಗಮ್ಮ'(೧೯೮೧), ಸುಶೀಲಾ ಸೊಂಡೂರ್ ಅವರ 'ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲೆ'(೧೯೮೧), ಶ್ರೀಮತಿ ಜಯಲಕ್ಷ್ಮೀ ಸೀತಾಪುರ ಅವರ 'ನಮ್ಮ ಸುತ್ತಿನ ಜನಪದ ಕಥನಗೀತೆಗಳು'(೧೯೯೪). ಸುಮಾರು ೨೫೦ಕ್ಕೂ ಮಿಕ್ಕಿ ಇರುವ ಮಹತ್ವದ ಕಥಾನಕಗಳ ಸಂಗ್ರಹಗಳಲ್ಲಿ ಕೇವಲ ಐದು ಮಾತ್ರ ಹೆಣ್ಣುಮಕ್ಕಳ ಸಂಪಾದನೆಗಳು. ಈ ಸಂಗ್ರಹಗಳ ವಿಶೇಷ ಗುಣವೊಂದಿದೆ. ಪುರುಷ ಸಂಪಾದಕರುಗಳೆಲ್ಲ ಹೆಚ್ಚಾಗಿ ಸಂಗ್ರಹಿಸಿದ್ದು, ಹೆಣ್ಣುಮಕ್ಕಳು

ಹಾಡುವ ಖಂಡಕಾವ್ಯಗಳನ್ನು, ಅತ್ಯಂತ ದೀರ್ಘವಾದ, ಐತಿಹಾಸಿಕ ಚಾರಿತ್ರಿಕ ಮಹತ್ವವುಳ್ಳ ಕಾವ್ಯಗಳನ್ನು. ಆದರೆ ಈ ಹೆಣ್ಣುಮಕ್ಕಳು ಸಂಗ್ರಹಿಸಿದ್ದು ಸಣ್ಣ ಸಣ್ಣ ಕಥಾನಕಗಳನ್ನು. ಸ್ವಲ್ಪ ದೀರ್ಘವಾದ ಒಂದೆರಡು ಹಾಡುಗಳು ಮಾತ್ರ ಕಾಣುತ್ತವೆ. ಸುಶೀಲಾ ಸೊಂಡೂರ್ ಅವರ ಸಂಗ್ರಹದಲ್ಲಿ 'ಮದಗದ ಕೆಂಚವ್ವ', ಜಯಲಕ್ಷ್ಮೀ ಸೀತಾಪುರ ಅವರ ಸಂಗ್ರಹದಲ್ಲಿ 'ಹೊನ್ನಮ್ಮ' ಇವು ಮಾತ್ರ ಸ್ವಲ್ಪ ದೀರ್ಘವಾಗಿವೆ. ಮೂರು ಖಂಡಕಾವ್ಯಗಳು ಮಾತ್ರ ಕಾಣುತ್ತವೆ. ಪ್ರತ್ಯೇಕವಾಗಿ ಪ್ರಕಟವಾಗಿರುವ ಸುಶೀಲಾ ಪಟ್ಟಣಶೆಟ್ಟಿ ಅವರ 'ಗುಣದಮ್ಮನ ಕಥೆ' (೧೯೭೨), ವೈಜಯಂತಿಮಾಲಾ ಅವರ 'ವಡ್ಡಗೆರೆ ನಾಗಮ್ಮ'(೧೯೮೧) ಹಾಗೂ ಜಯಲಕ್ಷ್ಮೀ ಸೀತಾಪುರ ಅವರ ಸಂಗ್ರಹದಲ್ಲಿಯ 'ಕಂಡ್ಹೆಣ್ಣ ಬುಡೋರಲ್ಲ' ಎಂಬ ಶೃಂಗಾರ ಕಾವ್ಯ. ಡಾ. ಶಶಿಕಲಾ ಮೋಳ್ದಿ ಅವರ ಸಂಗ್ರಹದಲ್ಲಿ ಒಂದೂ ದೀರ್ಘಕಾವ್ಯ ಇಲ್ಲ. ಹೆಣ್ಣುಮಕ್ಕಳ ಸಂಗ್ರಹಗಳಲ್ಲಿ ಕಂಡುಬರುವ ಹಾಡುಗಳ ವೈವಿಧ್ಯತೆ ಎಂದರೆ ಅಲ್ಲೆಲ್ಲ ಕೌಟುಂಬಿಕ ಸಂಬಂಧಗಳ ನಡುವೆ ಕಾಣಿಸುವ ಸಣ್ಣ ಸಣ್ಣ ಬಿರುಕುಗಳೇ ಕಥಾನಕಗಳ ವಸ್ತುವಾಗಿರುವುದು. ಅಲ್ಲಲ್ಲಿ ಒಂದಿಷ್ಟು ಶೃಂಗಾರ ಹಣಿಕ್ಕಿಕ್ಕಿರುವುದು. ಹಾದರ ತಲೆ ಹಾಕಿ ಸಂಬಂಧಗಳನ್ನು ಹದಗೆಟ್ಟಿಸಿರುವುದು. ಇವೆಲ್ಲ ಸಾಮಾನ್ಯವಾಗಿ ಕಂಡುಬರುತ್ತವೆ. ಪುರಷರಿಗೆ ಈ ಸಣ್ಣ ಹಾಡುಗಳು ಕೈಗೆ ಸಿಗದಿರುವುದು ಅಥವಾ ಅವರ ಗಮನ ಸೇಳೆಯದಿರುವುದು, ಹಾಡುಗಾರರು ಇಂತಹ ಹಾಡುಗಳನ್ನು ಗಂಡಸರ ಮುಂದೆ ಹಾಡದೇ ಇರುವುದು ವಿಶೇಷವಾಗಿ ಕಾಣುತ್ತದೆ. ಹೆಣ್ಣುಮಕ್ಕಳಿಗೆ ಇಂತಹ ಸಣ್ಣ ಸಣ್ಣ ಹಾಡುಗಳು ಇಷ್ಟವಾಗಿರುವುದು, ಇಲ್ಲೆಲ್ಲ ಮನಕರಗುವ ಘಟನೆಗಳೇ ಹಾಡಾಗಿರುವುದು ಕಾರಣವಾಗಿರಬೇಕು. ಇಷ್ಟೊಂದು ಕೃತಿಗಳಲ್ಲಿ ಚಿಕ್ಕ ಕೃತಿಯಾಗಿ ಕಾಣುತ್ತಿರುವ ಆದರೆ ಎಲ್ಲಕ್ಕಿಂತ ಸಂಖ್ಯೆಯಲ್ಲಿ ಹೆಚ್ಚಿನ ಕಥಾನಕಗಳನ್ನು (೩೪ ಹಾಡುಗಳು) ಹೊಂದಿರುವ ಭಾಷೆ, ಸಾಹಿತ್ಯದ ಗುಣಗಳಿಂದ ಡಾ. ಶಶಿಕಲಾ ಮೋಳ್ದಿ ಅವರ **'ಹರದೆಯರ ಹಾಡುಗಳು'** ಗಮನಸೆಳೆಯುತ್ತದೆ.

* * *

ಪ್ರಮುಖ ಕಥನಕವನ ಸಂಗ್ರಹಗಳು :

೧೯೩೨ : ನಾಲ್ಕು ನಾಡ ಪದಗಳು, (ಸಂ) ಡಾ. ಬಿ.ಎಸ್. ಗದ್ದಗಿಮಠ, – ಬಿ.ಎಸ್.ಗದ್ದಗಿಮಠ, ಘೂಲಭಾಗ ಗಲ್ಲಿ, ೨೪೪/೬೦, ಬೆಳಗಾವ.

೧೯೫೯ : ಮಲ್ಲಮಲ್ಲಾಣಿ, (ಸಂ) ಡಾ. ಬಿ.ಎಸ್. ಗದ್ದಗಿಮಠ, –ಬಿ.ಎಸ್.ಗದ್ದಗಿಮಠ, ವಿಶ್ವವಿದ್ಯಾಲಯ ವಸಾಹತು, ಧಾರವಾಡ.

೧೯೬೦ : ಲೋಕ ಗೀತೆಗಳು, (ಸಂ) ಡಾ. ಬಿ.ಎಸ್. ಗದ್ದಗಿಮಠ, –ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು.

೧೯೬೨ : ಜನಪದ ಗೀತೆಗಳಲ್ಲಿ ಮಹಾಭಾರತ, (ಸಂ) ಕರಾಕೃ, –ಜನಪದ ಸಾಹಿತ್ಯ ಅಕಾಡೆಮಿ, ಜಯನಗರ, ಬೆಂಗಳೂರು–೫.

೧೯೬೪ : ಅಣಜಿ ಹೊನ್ನಮ್ಮ, (ಸಂ) ಕರಾಕೃ, –ಜನಪದ ಸಾಹಿತ್ಯ ಅಕಾಡೆಮಿ, ಜಯನಗರ, ಬೆಂಗಳೂರು–೫.

೧೯೬೮ : ಜನಪದ ಖಂಡಕಾವ್ಯಗಳು, (ಸಂ) ಜೀ.ಶಂ.ಪರಮಶಿವಯ್ಯ, – ಸಾಹಿತ್ಯ ಸದನ, ಮಾನಸ ಗಂಗೋತ್ರಿ, ಮೈಸೂರು–೬.

೧೯೬೯ : ತಿಮ್ಮಕ್ಕನ ಪದಗಳು, (ಸಂ) ಎಲ್.ಆರ್.ಹೆಗಡೆ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೨ : ಪರಮೇಶ್ವರಿ ಪದಗಳು, (ಸಂ) ಎಲ್.ಆರ್.ಹೆಗಡೆ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೨ : ಜೀವನ ಜೋಕಾಲಿ(೩): ಗರತಿಯರ ಗರಿಮೆ, (ಸಂ) ಡಾ। ಎಂ. ಎಸ್. ಸುಂಕಾಪುರ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೨ : ಗುಣದಮ್ಮನ ಕಥೆ, (ಸಂ) ಸುಶೀಲಾ ಪಟ್ಟಣಶೆಟ್ಟಿ, –ಸಮಾಜ ಪುಸ್ತಕಾಲಯ, ಧಾರವಾಡ.

೧೯೭೩ : ಗುಮ್ಮನ ಪದಗಳು, (ಸಂ) ಡಾ। ಎಲ್. ಆರ್. ಹೆಗಡೆ, –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೭೩ : ಕೆಲವು ಲಾವಣಿಗಳು, (ಸಂ) ಡಾ। ಎಲ್. ಆರ್. ಹೆಗಡೆ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೪ : ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು, (ಸಂ) –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೭೮ : ಆಯ್ದ ಜನಪದ ಕಥನಗೀತಗಳು, (ಸಂ) ಡಾ। ಬಿ. ಬಿ. ಹೆಂಡಿ, – ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೮೧ : ಕತ್ತಲ ದಾರಿ ದೂರ, (ಸಂ) ಡಾ. ಕೃಷ್ಣಮೂರ್ತಿ ಹನೂರ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೧೯೮೧ : ವಡ್ಡಗೆರೆ ನಾಗಮ್ಮ, (ಸಂ) ವೈಜಯಂತಿಮಾಲ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೧೯೮೧ : ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲೆ, (ಸಂ) ಸುಶೀಲಾ ಸೊಂಡೂರ್, – ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೧೯೮೨ : ಇಜಿಯಣ್ಣನ ಹಾಡು, (ಸಂ) ಡಾ. ಬಸವಾಜ ಮಲಶೆಟ್ಟಿ, –ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ, ಜಿ. ಬಳ್ಳಾರಿ.

೧೯೮೪ : ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, (ಸಂ) ಮೈಲಹಳ್ಳಿ ರೇವಣ್ಣ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೮೭ : ಜನಪದ ವೀರಗೀತೆಗಳು, (ಸಂ) ಕೃಷ್ಣಮೂರ್ತಿ ಹನೂರು –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯೮೭ : ಹರದೇಯರ ಹಾಡುಗಳು, (ಸಂ) ಶಶಿಕಲಾ ಮೋಳ್ದಿ, –ಅರವಿಂದ ಪ್ರಕಾಶನ, ಮಹಾಗಾಂವ, ತಾ.ಜಿ.ಕಲಬುರಗಿ.

೧೯೯೪ : ಮದಗದ ಕೆಂಚಮ್ಮ, (ಸಂ) ಬಳ್ಳೆಕೆರೆ ಅನುಮಂತಪ್ಪ –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೯೯೪ : ನಮ್ಮ ಸುತ್ತಿನ ಜನಪದ ಕಥನಗೀತೆಗಳು, (ಸಂ) ಜಯಲಕ್ಷ್ಮೀ ಸೀತಾಪುರ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೯೯೬ : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, (ಸಂ) ಹೆಬ್ಬಾಳೆ ಜಗನ್ನಾಥ, –ಶ್ರೀಮತಿ ನೀಲಗಂಗಾ ಜಗನ್ನಾಥ ಹೆಬ್ಬಾಳೆ, ನಾವಡಗೇರಿ, ಜನವಾಡಾ ರಸ್ತೆ, ಬೀದರ–೧.

೨೦೦೦ : ಕಾಳಿಂಗರಾಯನ ಕಾವ್ಯ, (ಸಂ) ಡಾ। ಎಚ್. ಕೆ. ನಾಗೇಶ –ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೦೩ : ಅಭಿಮನ್ಯು, (ಸಂ) ಡಾ। ಎನ್.ಆರ್.ನಾಯಕ, –ಜಾನಪದ ಪ್ರಕಾಶನ ಹೊನ್ನಾವರ, ಉತ್ತರಕನ್ನಡ.

೨೦೦೪. ಕೊಮಾರಪಂತರ ಕಥನ ಕವನಗಳು, (ಸಂ) ಡಾ। ಎನ್.ಆರ್.ನಾಯಕ, –ಜಾನಪದ ಪ್ರಕಾಶನ ಹೊನ್ನಾವರ, ಉತ್ತರಕನ್ನಡ.

೨೦೧೦ : ಕಾಳಿಂಗರಾಯ ಮತ್ತು ಇತರ ಕಥನಕಾವ್ಯಗಳು, (ಸಂ) ಡಾ। ಎಚ್. ಎಲ್. ನಾಗೇಗೌಡ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು–೫೪

೨೦೧೨ : ನಾಡವರ ಪುರಾಣ ಕಥನ ಕಾವ್ಯಗಳು, (ಸಂ) ಡಾ। ಎನ್.ಆರ್.ನಾಯಕ, –ಜಾನಪದ ಪ್ರಕಾಶನ ಹೊನ್ನಾವರ, ಉತ್ತರಕನ್ನಡ.

೨೦೧೩ : ಹಾಲಕ್ಕಿ ಒಕ್ಕಲಿಗರ ಕಥನ ಗೀತಗಳು, (ಸಂ) ಡಾ। ಎನ್.ಆರ್.ನಾಯಕ, –ಜಾನಪದ ಪ್ರಕಾಶನ ಹೊನ್ನಾವರ, ಉತ್ತರಕನ್ನಡ.

ಸಹಾಯಕ ಗ್ರಂಥಗಳು :

೧೯೩೩ : ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಅರ್ಚಕ ಬಿ. ರಂಗಸ್ವಾಮಿ, –ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. (೧೯೭೧, ೨ನೇ ಮು.)

೧೯೩೫ : ಮಲ್ಲಿಗೆ ದಂಡೆ, (ಸಂ) ಶ್ರೀಮಾನ್ ಕಾಪಸೆ ರೇವಪ್ಪನವರು, –ರಾಮಚಂದ್ರ ವಿನೀತ, ರೈಟರ್ ಓಣಿ, ಧಾರವಾಡ. (೧೯೪೮ ಎರಡನೇ ಮು.)

೧೯೩೫ : ಕರ್ನಾಟಕ ಸಂಸ್ಕೃತಿ, ದೇವುಡು ನರಸಿಂಹ ಶಾಸ್ತ್ರಿ, –ಶಾರದಾ ಪ್ರಕಾಶನ, ಗಾಂಧೀನಗರ, ಬೆಂಗಳೂರು (೧೯೮೮ ತೃಮು.)

೧೯೪೦ : ಕನ್ನಡ ಬಾವುಟ, (ಸಂ) ಬಿ.ಎಂ.ಶ್ರೀ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು. (೨ನೇ ಮು.)

* * *

೬. ಒಬ್ಬ ವಕ್ತಾರನ ಸಮಗ್ರ ಸಾಹಿತ್ಯ

ಒಬ್ಬ ಸಾಹಿತಿಯ ಸಮಗ್ರ ಕೃತಿಗಳ ಪ್ರಕಟನೆಯ ಕಾಲ ಈಗ ಭರದಿಂದ ನಡೆದಿದೆ. ಇದರಿಂದ ಒಬ್ಬ ಲೇಖಕನ ಎಲ್ಲ ಕೃತಿಗಳು ಒಂದೆಡೆ ದೊರೆತು, ಅವನ ಸಮಗ್ರ ಸಾಹಿತ್ಯದ ಜೊತೆಗೆ ಅವನ ಒಟ್ಟು ಬದುಕಿನ ದೃಷ್ಟಿ ಏನು? ಎಂದು ತಿಳಿದುಕೊಳ್ಳಲು ಹೆಚ್ಚು ಅನುಕೂಲವಾಗುತ್ತದೆ. ಜನಪದ ಸಾಹಿತ್ಯ ಲೋಕದಲ್ಲೂ ನಮಗೆ ಗೊತ್ತಿಲ್ಲದಂತೆ ಒಬ್ಬ ಪ್ರತಿಭಾವಂತ ವಕ್ತಾರ ಹೇಳುವ/ಹಾಡುವ ಒಟ್ಟು ಸಾಹಿತ್ಯವನ್ನು ಒಂದೆಡೆ ಪ್ರಕಟಿಸುವ ಅಪರೂಪದ ಪ್ರಯತ್ನಗಳು ಆಗಾಗ ನಡೆಯುತ್ತ ಬಂದಿವೆ. ಇದರಿಂದ ಸಾಮಾನ್ಯ ಬದುಕನ್ನು ಬಾಳಿರುವ ಇಂತಹ ಜನಪದ ಪ್ರತಿಭಾವಂತನ ಒಟ್ಟು ಸೃಷ್ಟಿ ಹೇಗಿರಬಹುದು? ಅವನ ಬದುಕಿನ ವೈಶಿಷ್ಟ್ಯಗಳೇನು? ಅಭಿವ್ಯಕ್ತಿಯ ವೈಶಿಷ್ಟ್ಯ ಎಂತಹದು? ಭಾಷಾಭಿವ್ಯಕ್ತಿಯ ವಿಶೇಷತೆ ಏನು? ಈ ಮುಂತಾದವುಗಳನ್ನು ಅರಿಯಲು ಸಾಧ್ಯವೇ? ಎಂಬ ಸಂಗತಿಗಳನ್ನು ಮುಂದಿಟ್ಟುಕೊಂಡು ಹೀಗೆ ಒಬ್ಬನ ಸಮಗ್ರ ಸಾಹಿತ್ಯವನ್ನು ನೋಡುವ ಒಂದು ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗುತ್ತಿದೆ.

ಒಬ್ಬ ವಕ್ತಾರನಿಂದ ಸಂಗ್ರಹಿತ ಒಂದು ಜನಪದ ಸಾಹಿತ್ಯ ಕೃತಿ ಒಂದು ಉತ್ತಮ ಸಾಹಿತ್ಯ ಕೃತಿ ಆಗಬಲ್ಲುದು ಎಂಬ ಜಿ.ಎಸ್.ಎಸ್. ಅವರ ಅಭಿಪ್ರಾಯ ಮಹತ್ವದ್ದಾಗಿದೆ. ಅವರು ಸಿ. ವೀರಣ್ಣ ಅವರು ಸಂಗ್ರಹಿಸಿದ **'ಒಬ್ಬನೇ ಹೇಳಿದ ಇಪ್ಪತ್ತೆರಡು ಜಪದ ಕಥೆಗಳು'** ಎಂಬ ಕೃತಿಗೆ ಶೀರ್ಷಿಕೆಯನ್ನು ಆಯ್ಕೆ ಮಾಡಿದ್ದಲ್ಲದೆ, ಅದಕ್ಕೆ ಮುನ್ನುಡಿಯನ್ನೂ ಬರೆದಿದ್ದಾರೆ. ಅಲ್ಲಿ ಅವರು ಹೇಳುವ ಮಾತುಗಳು ಹೀಗಿವೆ: "ಈ ಕತೆಗಳನ್ನು ಓದುತ್ತ ಹೋದಂತೆ ನನಗೆ ಖುಷಿ ಕೊಟ್ಟ ಅಂಶವೆಂದರೆ, ಈ ಕತೆಗಳ ಅಭಿವ್ಯಕ್ತಿ. ನಾನು ಕತೆಗಾರನನ್ನು, ಅವನ ಪರಿಸರವನ್ನು ಹಾಗೂ ಆತನ ಅಭಿವ್ಯಕ್ತಿಯನ್ನು ಬೇರ್ಪಡಿಸಿ ನೋಡಲಾರೆ. ಕತೆ ಹೇಳುವವನ ಭಾಷೆಯ ಸೊಗಸು, ಸೊಗಡು, ಅವನ ಧಾಟಿ, ಧ್ವನಿ, ಹಾಸ್ಯ, ಅವನ ಸಮಕಾಲೀನತೆಯಿಂದ ಆತನ ಅಭಿವ್ಯಕ್ತಿಗೆ ಒದಗುವ ವಿಶೇಷತೆ, ಇವೂ ನನ್ನಂಥವನಿಗೆ ಮುಖ್ಯ" (ಅದೇ, ೫).

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಆಗಾಗ ಇಂತಹ ಸಮಗ್ರ ಸಂಪುಟಗಳನ್ನು ಪ್ರಕಟಿಸಿದ ಅಪರೂಪದ ಉದಾಹರಣೆಗಳು ನಮಗೆ ದೊರೆಯುತ್ತವೆ. ಅವು ಒಬ್ಬ ವಕ್ತಾರ ಹೇಳಿದ ಒಂದು ಬಗೆಯ ಹಾಡಿನ ಸಂಗ್ರಹಗಳು, ಜನಪದ ಕಥೆಗಳ ಸಂಗ್ರಹಗಳು ನಮಗೆ

ಹೆಚ್ಚಾಗಿ ದೊರೆಯುತ್ತವೆ. ಒಬ್ಬ ವಕ್ತಾರನಕ್ಕಿಂತ ಒಬ್ಬ ಕವಿಯ ಲಾವಣಿ ಹಾಡುಗಳ ಸಂಗ್ರಹಗಳು ಪ್ರಕಟವಾಗಿವೆ. ಜೊತೆಗೆ ಒಬ್ಬನೇ ಹೇಳಿದ ಜನಪದ ಕಥೆಗಳ ಸಂಗ್ರಹಗಳು ಹೆಚ್ಚಾಗಿ ಪ್ರಕಟವಾಗಿವೆ. ಒಬ್ಬ ವಕ್ತಾರನಿಂದ ಸಂಗ್ರಹಿಸಿದ ಜನಪದ ಕಥನ ಗೀತೆಗಳ ಸಂಗ್ರಹಗಳೂ ಪ್ರಕಟವಾಗಿವೆ. ಹೀಗೆ ಒಬ್ಬ ಹೇಳಿದ ಒಂದು ಪ್ರಕಾರದ ಸಾಹಿತ್ಯ ಕೃತಿಗಳು ಇದ್ದಾಗ, ಅವನ್ನು ಆಯಾ ಸಾಹಿತ್ಯ ರೂಪದ ಅಧ್ಯಾಯದಲ್ಲಿಯೇ ಸಮೀಕ್ಷಿಸಲಾಗಿದೆ. ಆದರೆ ಒಬ್ಬ ವಕ್ತಾರನು ಬಹು ವೈವಿಧ್ಯಮಯವಾದ ಸಾಹಿತ್ಯವನ್ನು ಹೇಳಿದ, ಅಂಥವುಗಳನ್ನು ಬೇಸರವಿಲ್ಲದೆ ಸಂಗ್ರಹಿಸಿ ಪ್ರಕಟಿಸಿದ ಕೆಲ ಕೃತಿಗಳು ಕೊನೆಯಲ್ಲಿ ಉಳಿದಿವೆ. ಆ ಕೃತಿಗಳು ಕೆಲವೇ ಆದರೂ ತೀರ ಅಪರೂಪದ ಉದಾಹರಣೆಗಳಾಗಿ ಕಾಣುತ್ತಿರುವುದರಿಂದ ಅವನ್ನು ಈ ಅಧ್ಯಾಯದಲ್ಲಿ ಪರಿಶೀಲನೆಗೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ.

ಒಬ್ಬ ವಕ್ತಾರನ ಸಮಗ್ರ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಬೇಕೆಂಬ ಆಲೋಚನೆ ಮಾಡಿ, ಅದನ್ನು ಮೊದಲನೆಯದಾಗಿ ಆಗು ಮಾಡಿದವರು ಎಚ್.ಎಲ್. ನಾಗೇಗೌಡ ಅವರು. ಅವರು ೧೯೭೨ ರಲ್ಲಿಯೇ ಪ್ರಕಟಿಸಿದ **'ಸೋಬಾನೆ ಚಿಕ್ಕಮ್ಮನ ಪದಗಳು'** ಎಂಬ ದೊಡ್ಡ ಸಂಪುಟವೊಂದು ನಮಗೆ ಲಭ್ಯವಾಗುತ್ತದೆ. ಚಿಕ್ಕಮ್ಮ ನಾಗೇಗೌಡರ ಊರಿನವಳು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿ ಅವಳ ಊರು. ಅವಳ ಹಾಡುಗಳನ್ನು ಕೇಳುತ್ತ ಅವುಗಳ ಪ್ರಭಾವಕ್ಕೆ ಒಳಗಾದವರು ನಾಗೇಗೌಡರು. ಹೀಗಾಗಿ ಚಿಕ್ಕಮ್ಮನ ಹತ್ತಿರ ಜನಪದ ಹಾಡುಗಳ ಭಂಡಾರವೇ ಇದೆ ಎಂಬುದು ಅವರಿಗೆ ತಿಳಿದಿತ್ತು. ಅವಳ ಹಾಡುಗಳನ್ನು ಒಂದೆಡೆ ಸಂಗ್ರಹಿಸಬೆಕು, ಪ್ರಕಟಿಸಬೇಕು ಎಂಬ ಆಲೋಚನೆಯಿಂದ ೧೯೬೭ರ ಜೂನ್ ತಿಂಗಳ ಒಂದು ವಾರದಲ್ಲಿಯೇ ಎಲ್ಲ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳುತ್ತಾರೆ. ಜನಪದ ಸಾಹಿತ್ಯದ ಸಂಪಾದನೆ ಕ್ರಮದಲ್ಲಿ ಅವರು ವಹಿಸಿದ ರೀತಿ, ಎಚ್ಚರಿಕೆಗಳು ಮಹತ್ವದ ಸಂಗತಿಗಳಾಗಿವೆ. "೧೯೬೭ರ ಜೂನ ೧೧ ರಂದು ಆರಂಭಿಸಿ ಬಹುಭಾಗದ ಧ್ವನಿಮುದ್ರಣವನ್ನು ನಾಲ್ಕಾರು ದಿನಗಳಲ್ಲಿ ಮುಗಿಸಿದರೂ ಆಕೆ ಬಿಟ್ಟಿದ್ದ ಪದಗಳನ್ನು ಹೇಳಿಸುವುದು, ಹೇಳಿದ್ದನ್ನೇ ಹೇಳಿಸಿ ಮಧ್ಯೆ ಏನಾದರೂ ಮರೆತು ಹೇಳುವುದನ್ನು ಬಿಟ್ಟಿದ್ದರೆ ಅದನ್ನು ಬರೆದುಕೊಳ್ಳುವುದು, ಆಯಾ ಪದಗಳನ್ನು ಕುರಿತ ವಿವರಣೆ ಪಡೆಯುವುದು, ಅನೇಕ ಮಾತುಗಳಿಗೆ ಅರ್ಥವೇನೆಂದು ಕೇಳಿ ತಿಳಿದುಕೊಳ್ಳುವುದು–ಇವೆಲ್ಲಾ ಕೆಲಸ ಎರಡು ಮೂರು ವರ್ಷ ನಡೆದುವು. ...ಹೀಗೆ ಸುಮಾರು ಐದು ವರ್ಷಗಳ ಸತತ ಶ್ರಮದ ಫಲ ಈ ಜಾನಪದ ಹಾಡುಗಳ ರಸಘಟ್ಟಿ, ಒಬ್ಬಾಕೆಯಲ್ಲಿ ಎಷ್ಟೊಂದು ಸರಕು ಇದೆ ಎಂಬುದು ಈ ಪುಸ್ತಕವನ್ನು ಅವಲೋಕಿಸಿದವರಿಗೆ ಮನದಟ್ಟಾಗುವುದರಲ್ಲಿ ಸಂದೇಹವಿಲ್ಲ" (ಅರಿಕೆ, ಪು.೫). ಸಂಪಾದಕರ ಈ ಮಾತುಗಳಲ್ಲಿ ಒಬ್ಬ ವಕ್ತಾರನ ಸಮಗ್ರ ಸಾಹಿತ್ಯ ಸಂಗ್ರಹಿಸಬೇಕು ಪ್ರಕಟಿಸಬೇಕು ಎಂಬ ಬಯಕೆ, ಸಂಪಾದನ ಕ್ರಮದಲ್ಲಿ ಸಂಗ್ರಹಿತ ಮಾಹಿತಿಯನ್ನು ಎದುರಿಗೆ ಇಟ್ಟುಕೊಂಡು ಅದನ್ನು ತಿಳಿದುಕೊಳ್ಳಲು, ಒಂದು ಪರಿಪೂರ್ಣ ಕೃತಿಯನ್ನಾಗಿಸಲು ಪುನಃ ಪುನಃ ಪರೀಕ್ಷೆಗೆ ಒಡ್ಡುವ ರೀತಿಗಳು ಇವೆಲ್ಲ ಜಾನಪದ ಕ್ಷೇತ್ರದಲ್ಲಿ ದುಡಿಯುತ್ತಿರುವವರು ಅವಶ್ಯವಾಗಿ ಗಮನಿಸಬೇಕಾದ ಸಂಗತಿಗಳಾಗಿವೆ.

ಈ ಚಿಕ್ಕಮ್ಮನ ಬದುಕು ಹೇಗಿದೆ ಎಂದು ಅವಳ ಮಾತುಗಳಲ್ಲಿಯೇ ಹಿಡಿದಿಡುವ ಪ್ರಯತ್ನವನ್ನು ನಾಗೇಗೌಡರು ಮಾಡಿದ್ದಾರೆ. ತನ್ನ ಬದುಕನ್ನು ಚಿಕ್ಕಮ್ಮ ಹೀಗೆ ಹೇಳಿಕೊಂಡಿದ್ದಾಳೆ: "ನನ್ನ ಯಾಳವಳ್ಳಿಗೆ ನಮ್ಮ ಸೋದರತ್ತೆ ಮಗನಿಗೇ ಕೊಟ್ಟು ಮದುವೆ ಆಯ್ತು. ಏನೋ ಅವರಿಗೂ ನನಿಗೂ ಮಾತು ಬಂತು. ಒಂದು ವರ್ಷದ ಮ್ಯಾಲೆ ನಾನು ಬಂದಿಲ್ಲೇ (ಹೆರಗನಹಳ್ಳಿ) ನಮ್ಮಪ್ಪನ ಮನೆ ಸೇರಿಬಿಟ್ಟೆ. ಅವರು ಕರೀಲಿಲ್ಲ; ನಾನು ಹೋಗಲಿಲ್ಲ. ಆಮ್ಯಾಲೆ ಒಬ್ಬಳ ತಂದು ಮದುವ್ಯಾದ್ರು. ಆಮ್ಯಾಲೆ ಇನ್ನೊಬ್ಬಳ್ನ–ಅವಳ ತಂಗಿನೆಯ– ಮಗು ಎತ್ತಿಕೊಳ್ಳಾಕೆ ಅಂತ ಕರಕೊಂಡು ಬಂದರು. ಅವಳ್ನೂ ಮದುವ್ಯಾದ್ರು. ಇಬ್ಬರಿರುವಾಗ ನಾನೇನ್ಹೋಗೋದೂ ಅಂತ ನಾನು ಹೋಗಲಿಲ್ಲ" (ಪು.೬). ಗಂಡ ಸತ್ತಾಗ ಕರೆಯಲು ಬಂದರಂತೆ. ಈಗೇಕೆ ಬಂದಿರಿ? ಎಂಬುದು ಚಿಕ್ಕಮ್ಮನ ಪ್ರಶ್ನೆ. ಆದರೆ ಹಿರಿಯರ ಸಲಹೆಯಂತೆ ಹೋಗಿ, ಶವಸಂಸ್ಕಾರ ಮುಗಿಸಿಕೊಂಡು ಬಂದಳಂತೆ. ಇದು ಚಿಕ್ಕಮ್ಮನ ಕಥೆ. ಇಂತಹ ಒಂಟಿ ಬದುಕಿನಲ್ಲಿ ಆಕೆಗೆ ಆಸೆರೆಯಾಗಿ ನಿಂತದ್ದು ಅವಳ ಮಧುರ ಕಂಠ ಮಾತ್ರ. ಆಕೆಯಲ್ಲಿರುವ ಹಾಡುಗಾರಿಕೆಯ ಪ್ರತಿಭೆ ಅವಳ ಇಡೀ ಬದುಕನ್ನು ನಿಯಂತ್ರಿಸಿದೆ. ಇದು ಜನಪದ ಹಾಡುಗಾರಿಕೆ ಮಾಡಿದ ಚಮತ್ಕಾರವೇ ಆಗಿದೆ.

ತಾನು ಹಾಡಲು ಹೇಗೆ ಕಲಿತೆ ಎಂಬುದನ್ನು ಚಿಕ್ಕಮ್ಮ ಹೇಳಿಕೊಂಡಿದ್ದಾಳೆ. ತನ್ನ ತಾಯಿಯಿಂದ ಬಂದ ಬಳುವಳಿ ಅದು. "ನಾನು ಸೋಬಾನ ಯಂಗೆ ಕಲ್ತೆ ಅಂದ್ರೆ, ನಾನು ನಮ್ಮಪ್ಪನ ಮಲ್ಲಿ ಬಂದು ಇದ್ದುಬುಟ್ಟ ಮ್ಯಾಲೆ, ಒಂದಿನ ನಮ್ಮಪ್ಪ ರಂಗ ಕುಣದು ಉಂಡು ಪಟ್ಟೆತಾವ ಮಲಗಿದ್ದ– ಹೆಗ್ಗಣ ಬತ್ತ ತಿಂತಾವೆ ಅಂತ. ನಮ್ಮವ್ವ ರಾಗೀ ಬೀಸ್ತಿದ್ಲು. ನಾನು ಕಡತ್ತುಡುಗಿ. ನಾನೂ ಕುಂತುಕೊಂಡು ಬೀಸ್ತಿದ್ದೆ. 'ಹೇಳೆ ಪುಟ್ಟು, ಹೇಳೆ!' ಅಂತಲೇ ಇದ್ಲು ನಮ್ಮವ್ವ, ನಮ್ಮಪ್ಪ ನಮ್ಮವ್ವ ಹಿಂದಿನಿಂದ್ಲೂ ನನ್ನ ಒಂದಿನಾಲೂ ಹೆಸರ್ಹಿಡಿದು ಕರದೋರಲ್ಲ. 'ಹೇಳವ್ವ! ಹೇಳವ್ವ! ಹೇಳು ಪುಟ್ಟಿ!' ಅಂತಲೇ ಇದ್ಲು ನಮ್ಮವ್ವ, ಇದ ಕೇಳಿಸ್ಕೋತ್ತಿದ್ದ ನಮ್ಮಪ್ಪ 'ಮತ್ತೆ, ಮುಂದಲೆ ಹಿಡಿದು ಮೂರು ಸತ್ತಿ ಒಗಿ, ರಾಗೀ ಕಲ್ಲು ತೂಬಿಗೆ! ಆಮ್ಯಾಲೆ ಅವಳೇ ಹೇಳ್ತಾಳೆ!' ಅಂತ ಅಂದುಬುಟ್ಟ ನಮ್ಮಪ್ಪ. 'ನಮ್ಮಪ್ಪ ಹಿಂಗಂದುಬುಟ್ಟನಲ್ಲ! ನಮ್ಮಪ್ಪ ಹಿಂಗಂದುಬುಟ್ಟನಲ್ಲ!' ಅಂದದ್ದೇ ಆಯ್ತು ಹಿಡದುಬುಟ್ಟೆ ಚಟವ. ಯಾರೋವಾರ ಆಗಲಿ, ಹೊಲೇರೋವಾರ ಆಗಲಿ, ಮಾದಿಗರೋವಾರಾ ಆಗಲಿ, ಆಮ್ಯಾಲೆ ತಿರುಗಿಸಿಕೊಂಡರಾಯ್ತು ಅಂದದ್ದೇ ಬಾಯಿ ಬಂದಂಗೆ ಹೇಳ್ತಲೇ ಇರೀವೆ; ಕೋತೀ ತಿಮ್ಮನಂಗೆ ಅಂತಲೇ ಇರಿವೆ. ...ಮಲಿಕೊಳ್ಳಾಕೆ ಮುಂಚೆ ಬೀಸುವಾಗ, ಬೆಳಗಿನಲ್ಲಿ ಮುಂಗೋಳಿ ಕೂಗಿದಾಗ, ಹಿಂಗೋಳಿ ಕೂಗಿದಾಗ, ದೊಡ್ಡ ಮಬ್ಬಿಗೆ ಎದ್ದು ಬೀಸುವಾಗ ರಾಗಿ ಬೀಸೋ ಪದ ಕಲ್ತುಕೊಂಡೆ. . . .ಆ ತಂಪೊತ್ತಿನಲ್ಲಿ ನಾನು ಪದ ಹೇಳಿಕೊಂಡು ರಾಗಿ ಬೀಸ್ತಿದ್ರೆ ನಮ್ಮ ಬಲವ್ವ, ಚೂರಿಬುಡ್ಯಮ್ಮ, 'ನನ್ನ ಸವತೀಮಗಳ ದನಿ ನೋಡೆ, ಏನು ಚಂದದೆ!' ಅಂತ ಅನ್ನೋಳಂತೆ" (ಪು. ೧೩–೧೪). ತನಗೆ 'ಸೋಬಾನೆ ಚಿಕ್ಕಮ್ಮ' ಎಂಬ ಹೆಸರು ಹೇಗೆ ಬಂದಿತು ಎಂದು ಚಿಕ್ಕಮ್ಮ ವಿವರಿಸಿದ ರೀತಿ ಹೀಗಿದೆ: "ನನ್ನ ಸೋಬಾನೆ ಚಿಕ್ಕಮ್ಮ ಅಂತ ಕರೀತಾರೆ. ಒಂದು ಸಲ ನಮ್ಮ ಹೊಲ ಅಳಿಯಾಕೆ ಮೋಜಿಣಿದಾರ್ರು ಬಂದರು. ಗೌಡರೂ ಹೋದರು ಅಳಿಯೋತಕ್ಕೆ. ನಮ್ಮ ಹೊಲಾನ

'ಇದು ಯಾರಹೊಲ?' ಎಂತ ಮೋಜಿನಿದಾರ್ರು ಕೇಳಿದರು. ಕೇಳಿದ್ದಕ್ಕೆ ಗೌಡರು 'ಸೋಬಾನೆ ಚಿಕ್ಕಮ್ಮನ ಹೊಲ' ಅಂದ್ರು, ಸರಿ, ಮೋಜನೀದಾರ್ರು ಲೆಕ್ಕದಲ್ಲಿ ಹಂಗೇ ಬರಕೊಂಡ್ರು. ಆಗಲಿಂದ 'ಸೋಬಾನೆ ಚಿಕ್ಕಮ್ಮ, ಸೋಬಾನೆ ಚಿಕ್ಕಮ್ಮ' ಅಂತ್ಲೆ ಊರಲ್ಲಿ ಕರೀತ್ ಬಂದವರೆ" (ಪು. ೧೬).

ಇಲ್ಲಿಯ ಹಾಡುಗಳನ್ನು ಆರು ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ೧. ಸೋಬಾನೆ ಪದಗಳು, ೨. ಒಸಗೆಯ ಪದಗಳು, ೩. ರಾಗಿ ಬೀಸುವ ಪದಗಳು, ೪. ತಿಂಗಳು ಮಾವನ ಪೂಜೆ ಪದಗಳು, ೫. ದೇವರ ಪದಗಳು, ೬. ಹಾಡ್ಗತೆಗಳು. ಈ ಹಾಡುಗಳಿಗೆಲ್ಲ ಒಬ್ಬ ಸಂಗೀತಗಾರರನ್ನು ಹಿಡಿದು ಸ್ವರಪ್ರಸ್ತಾರ ಹಾಕಿಸಿದ್ದರಂತೆ. 'ಸೂಕ್ತವಾದ ಅಚ್ಚುಮೊಳೆಗಳಿಲ್ಲದ ಕಾರಣ ಕೈಬಿಡಲಾಯಿತು' ಎಂದು ಸಂಪಾದಕರು ಬರೆದುಕೊಂಡಿದ್ದಾರೆ. ೮೦ ಪುಟಗಳಿಗೂ ಮಿಕ್ಕು ವಿವರಣೆ, ಅರ್ಥ, ಶಬ್ದಸೂಚಿ ಇತ್ಯಾದಿಗಳನ್ನು ಬರೆದಿದ್ದಾರೆ. ಸಂಪ್ರದಾಯಕ್ಕೆ ಸಂಬಂಧಿಸಿದ ೧೮ ಚಿತ್ರಗಳನ್ನು ಮುದ್ರಿಸಿದ್ದಾರೆ. ಆಗಿನ ಕಾಲಕ್ಕೆ ಧ್ವನಿಮುದ್ರಣದಲ್ಲಿ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇದನ್ನು ಗಮನಿಸಿದರೆ, ಸಂಪಾದನೆಯ ದೃಷ್ಟಿಯಿಂದ ಇದೊಂದು ಆಗಿನ ಕಾಲದ ಅಪರೂಪದ ಮಾದರಿ ಕೃತಿ ಎನಿಸುತ್ತದೆ. ಅದಕ್ಕಾಗಿ ಕನ್ನಡ ಜನಪದ ಸಾಹಿತ್ಯವನ್ನು ಹೇಗೆ ಸಂಪಾದಿಸಬೇಕು ಎಂಬುದಕ್ಕೆ ನಾಗೇಗೌಡರ ಈ ಕೃತಿಯೊಂದು ಮಾದರಿ ಕೃತಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಈ ಕೃತಿಯಲ್ಲಿಯ ಕೊನೆಯ ಭಾಗದಲ್ಲಿರುವ ಎಂಟು ಕಥಾನಕಗಳನ್ನು ಹೊರತು ಪಡಿಸಿದರೆ ಉಳಿದ ಹಾಡುಗಳೆಲ್ಲ ತ್ರಿಪದಿಯಲ್ಲಿಯೇ ಇವೆ. ಕಥಾನಕಗಳಲ್ಲೂ ತ್ರಿಪದಿ ಹಾಸುಹೊಕ್ಕಾಗಿ ಬಳಕೆಯಾಗಿದೆ. ಹೀಗಾಗಿ ಕನ್ನಡ ತ್ರಿಪದಿ ಸಾಹಿತ್ಯದ ವ್ಯಾಪಕ ಬಳಕೆಯನ್ನು ಇಲ್ಲಿ ಕಾಣಬಹುದಾಗಿದೆ.

ಇಲ್ಲಿಯ ಒಂದನೇ ಭಾಗ ಸೋಬಾನೆ ಪದಗಳನ್ನು ಕುರಿತಿದೆ. ನಾಗೇಗೌಡರು ಮದುವೆಯ ಶಾಸ್ತ್ರವನ್ನು ಕ್ರಮವರಿತು, ಆ ಹಾಡುಗಳನ್ನು ಜೋಡಿಸಿದ್ದಾರೆ. ಅನುಬಂಧದಲ್ಲಿ ಅವುಗಳ ಸಂದರ್ಭ, ಮಹತ್ವ ಇತ್ಯಾದಿ ಸಂಗತಿಗಳನ್ನು ವಿವರಿಸಿದ್ದಾರೆ. "ಶಾಸ್ತ್ರಗಳನ್ನು ಮಾಡುವಾಗಲೆಲ್ಲ ಪುರೋಹಿತರು ಇರುವುದಿಲ್ಲ; ಇರಬೇಕಾಗಿಯೂ ಇಲ್ಲ. 'ಶಾಸ್ತ್ರ' ಎಂದರೆ ಆಚರಿಸಬೇಕಾದ ಅಥವಾ ಅನುಸರಿಸಬೇಕಾದ ನಿಯಮ ಅಥವಾ ವಿಧಿ ಎನ್ನಬಹುದು. ...ಹಾಡಿನ ರೂಪಕ್ಕಿಳಿದ ಶಾಸ್ತ್ರಗಳೇ ಸೋಬಾನೆ ಪದಗಳೆಂದೂ ಹೇಳಬಹುದು"(ಪುಟ.೨೨೯).

ಎಲ್ಲ ಕಡೆಯ ಮದುವೆಯ ಹಾಡುಗಳನ್ನು ಗಮನಿಸಿದರೆ ಅಲ್ಲೆಲ್ಲ ಶಿವಪಾರ್ವತಿಯರ ಪ್ರಸ್ತಾಪ ಸಹಜವಾಗಿಯೇ ಆಗುತ್ತದೆ. 'ಸೋಬನವೆಲ್ಲ ಶಿವನಿಗೆ/ಸೋಬಾನವೆಲ್ಲ ಶಿವನಿಗೆ' ಎಂಬ ಪಲ್ಲವಿಯಿಂದಲೇ ಇಲ್ಲಿಯ ಹಾಡು ಪ್ರಾರಂಭವಾಗುತ್ತದೆ. ಅಂದರೆ ಶೈವಸಂಪ್ರದಾಯದ ಪ್ರಭಾವ ಎಲ್ಲ ಕಡೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಸಂಪಾದಕರು ಶಾಸ್ತ್ರದ ನೀರು ತರುವ ಸಂದರ್ಭದಿಂದ ಹಿಡಿದು ಶಾಸ್ತ್ರದ ಬತ್ತ ಕುಟ್ಟುವಾಗ, ವೀಳೆಯಶಾಸ್ತ್ರ ಮಾಡುವಾಗ, ಅರಿಷಿಣ ಎಣ್ಣೆ ಹಚ್ಚುವಾಗ ಮುಂತಾದ ಚಾಜಗಳನ್ನು ನೆರವೇರಿಸುವಾಗ

ಹಾಡುವ ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಸಂದರ್ಭದ ಹಾಡುಗಳನ್ನು ಕ್ರಮವಾಗಿ ಕೊಟ್ಟಿದ್ದಾರೆ. ತುಂಬಾ ಹಳೆಯ ಕಾಲಕ್ಕೆ ಸಂಪ್ರದಾಯದ ಹಾಡುಗಳನ್ನು ಇಷ್ಟೊಂದು ಶಿಸ್ತುಬದ್ಧವಾಗಿ ಸಂಪಾದನೆ ಮಾಡಿರುವುದು, ಅವುಗಳಿಗೆ ತಕ್ಕ ವಿವರಣೆಗಳನ್ನು ಕೊಟ್ಟಿರುವುದು ಈ ಕೃತಿಯ ಹೆಚ್ಚುಗಾರಿಕೆಯಾಗಿ ಕಾಣುತ್ತದೆ.

೧. ಶಾಸ್ತ್ರದ ನೀರು ತರುವಾಗ:

ನೀರಲ್ಲಿ ಹುಟ್ಟೋದು ನೀರಲ್ಲಿ ಬೆಳಿಯೋದು
ನೀರಲ್ಲಿ ಬಟವ ತಿರುವೋದು।ನೆಲ್ಲಕ್ಕಿಯ
ನಲ್ಲೆ ತಂದಿಡಿರೆ ಕಳಸಾಕೆ
ಸೂಸಲ ಉಂಡೆ ಸುಲದ ಬಾಳೆಯ ಹಣ್ಣು
ರಾಸಿಗಟ್ಟಿಸುವೆ ನಿನ ಮುಂದೆ ।ಗಂಗೆಮ್ಮ
ತುಂಬಮ್ಮ ನಮ್ಮ ಕೊಡನವ

೨. ಶಾಸ್ತ್ರದ ಬತ್ತ ಕುಟ್ಟುವಾಗ:

ಸುವ್ವಾ ಬಾ ಸುವ್ವಿ ಸುವ್ವಾ ಬಾ ।ಪ।
ಸುವ್ವಂತ ಕುಟ್ಯಾರೆ ಸೂಬತ್ತ ಜಾಣೀರು
ಸುವ್ವಾ ಬಾ ಸುವ್ವಿ ಸುವ್ವಾ ಬಾ।
ನಿಂತ ಒನಕೀಗೆ ಗಂಧ ಧೂಪವ ತೋರಿ
ಆಡಿ ಕುಟ್ಟಿದರೆ ಧಣಿರೆಂದೊ।ಒನಕೆಯ
ಕೆತ್ತೀದ ಬಡಗಿ ಸುಖಿ ಬಾಳೊ।ಸು

೩. ವೀಳೆಯ ಶಾಸ್ತ್ರ ಮಾಡುವಾಗ:

ಸೋಬಾನವೆಲ್ಲ ಶಿವನೀಗೆ ।ಪ।
ಅಂಬಾರದಲ್ಲಿ ತುಂಬಿದಂಗಿರುವೋಳೆ
ಹಂಗಂದರಕ್ಕಿ ಉದರೋಳೆ। ಹೊಂಬಾಳೆಯ
ರಂಭೆ ತಂದಿಡಿರೆ ಕಳಸಕೆ

ಎರಡನೇ ಭಾಗ 'ಒಸಗೆಯ ಪದಗಳು' ಎಂದಿದೆ. ಇಲ್ಲಿ ಮೈನರೆದ ಹಾಡುಗಳು ಮತ್ತು ಸೋಬಾನದ ಹಾಡುಗಳಿವೆ. ಚಿಕ್ಕಮ್ಮನ ಭಾಷೆ ಚೆನ್ನಾಗಿದೆ. ಆಕೆಯ ಹಾಡುಗಾರಿಕೆ ಸ್ಪಷ್ಟವಾಗಿದೆ. ಓದಿದರೆ ಎಲ್ಲ ಭಾಗದ ಜನರಿಗೂ ಹಾಡುಗಳು ಅರ್ಥವಾಗುವ ರೀತಿಯಲ್ಲಿವೆ. ತಿಳಿಯದ ಸ್ಥಳಗಳಲ್ಲಿ ಸಂಪಾದಕರ ಟಿಪ್ಪಣಿಗಳು ಸಹಾಯಕ್ಕೆ ಬರುತ್ತವೆ.

ಸೋಬಾನವೆಲ್ಲ ಶಿವನಿಗೆ
ಸೋಬಾನವೆಲ್ಲ ಶಿವನಿಗೆ ।ಪ।

ಹತ್ತೆಮ್ಮೆ ಕರದು ಚಟ್ಟಿಗೆ ಹಾಲನೆ ಬಿಟ್ಟು
ಹಟ್ಟಿ ಮಕ್ಕಳಿಗೆ ಉಣಲಿಕ್ಕಿ। ತಾಯಮ್ಮ
ಅತ್ತಿ ಗುಡಲಿಗೆ ನ್ಯಡದಾಳೆ।

ಅತ್ತಿ ಗುಡಲಲ್ಲಿ ಅತ್ತತ್ತ ಇರವ್ವೋಳೆ
ಇತ್ತತ್ತ ಬಾರೆ ಇದರಿಗೆ । ನಾವು ತಂದ
ಕಾಯ ತುಂಬೇವು ಮಡಲಿಗೆ

ಕಟ್ಟೆ ಹಿಂದೆ ಬಟ್ಲಡಕೆ ಕುಯ್ಯೋನೆ
ಶೆಟ್ಟಿ ನಿನಮಗಳು ಋತುವಾಗಿ । ವಸಿಗೀಗೆ
ಸಕ್ಕರೆ ತಿದ್ದೊ ಸಭಿಗೆಲ್ಲ
ರಂಭೆ ಮೈನ್ಯರದು ಇಂದೀಗೆ ತಿಂಗಳು
ಗಂಧವನೊಲ್ಲ ಅವರಪ್ಪ । ತ್ವಾಟದ
ಇಂಬಿಯ ಹೂವೆ ಅರಳಿದ

ಮಂಗಳ :
ಹಲಸಿನಕಾಯ್ತೊರ ಚಿನ್ನ ಗೆರಸಿಲಿ ಮಡಿಕೊಂಡು
ನರಸಿಂಗುರಾಯರ ಮಡದಿಗೆ। ಲಕ್ಷ್ಮಿದೇವಿಗೆ
ಅರಸೀರಾರತಿಯ ಬೆಳಿಗ್ಯಾರೆ

ಇಲ್ಲಿಗೆ ಮದುವೆ ಮತ್ತು ಸೋಬಾನದ ಹಾಡುಗಳು ಮುಗಿಯುತ್ತವೆ. ಸಂಪಾದಕರು ಚಿಕ್ಕಮ್ಮನಿಂದ ಶುಭಕಾರ್ಯದ ಹಾಡುಗಳನ್ನು ಕ್ರಮವಾಗಿ ಹಾಡಿಸಿ, ಇಲ್ಲಿ ಸೇರಿಸಿದರೆ ಈ ಕೃತಿಯ ಮೌಲ್ಯ ಇನ್ನೂ ಹೆಚ್ಚಾಗುತ್ತಿತ್ತು ಎನಿಸುತ್ತದೆ. ಕುಪ್ಪಸದ ಹಾಡು, ಜೋಗುಳ ಹಾಡುಗಳು ಇಲ್ಲಿಲ್ಲದಿರುವುದು ಒಂದು ಕೊರತೆಯಾಗಿ ಕಾಣುತ್ತಿದೆ.

ಇನ್ನು ಮುಂದಿನ ಭಾಗ 'ರಾಗಿ ಬೀಸುವ ಪದಗಳು' ಎಂದಿದೆ. ಈ ಭಾಗ ಇನ್ನಷ್ಟು ಸಮೃದ್ಧವಾಗಿರಬಹುದಿತ್ತು ಎನಿಸುತ್ತದೆ. ಆದರೆ ಒಬ್ಬ ವಕ್ತಾರನ ಹಾಡುಗಳೇ ಇಲ್ಲಿರುವುದರಿಂದ ಒಮ್ಮೊಮ್ಮೆ ಎಲ್ಲ ಭಾಗಗಳು ಸಮೃದ್ಧವಾಗಿರಬೇಕು ಎಂದು ಭಾವಿಸುವಂತಿಲ್ಲ. ಇಲ್ಲಿ ಮೊದಲಿಗೆ ಒಂದಿಷ್ಟು ಸ್ತುತಿ ಪದ್ಯಗಳಿವೆ. ನಂತರ ಸ್ತ್ರೀಗೆ ಹೇಳುವ ಕೆಲ ನೀತಿ ನುಡಿಗಳಿವೆ. ಮುಂದೆ ಅತ್ತೆ ಮನೆಯಲ್ಲಿ ಸೊಸೆ, ತಮ್ಮನ ಮೇಲಿನ ಪದಗಳು, ಹಿರಿಯಕ್ಕನ ಮೇಲೆ, ಕೊನೆಯಲ್ಲಿ ಬಿಡಿ ಹಾಡುಗಳು ಎಂದಿದೆ. ತ್ರಿಪದಿಗಳು ಕಾವ್ಯಾತ್ಮಕವಾಗಿವೆ.

ಕೆಲವು ಉದಾಹರಣೆಗಳು :
ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಜಲ್ಲಜಲ್ಲಾನೆ ಉದರಮ್ಮ ।ನಮ್ಮನೆ
ಬೆಲ್ಲದಾರುತಿಯ ಬೆಳಿಗೇವು

ಗೂಟ ಹಿಡಿದೇವೆ ಕೋಟಿಯ ನೆನುದೇವೆ
ಗೂಟದ ಕಲ್ಲು ತೆರಿಹೂದು। ಬರುವಾಗ
ಕೋಟಿ ಜಂಗಮರ ನೆನುದೇವ

ಹೆಣ್ಣಿನೊಡಲುರಿದು ಬನ್ನಿಯ ಮರ ಬೆಂದು
ಅಲ್ಲಿ ಸಂನ್ಯಾಸಿ ಮಠ ಬೆಂದು। ಹಾರುವ್ರ
ಪಂಚಂಗ ಕತ್ತಿ ಉರದಾವೆ

ಬಿಟ್ಹೋಯ್ತಾಳೆಂದು ಚಿಟ್ಟು ಬ್ಯಾಡ ಸರಸತಿಯೆ
ಕುಕ್ಕಲ್ಲಿ ರಾಗಿ ಬಿಳಿ ಎಲಿ। ತಕ್ಕೊಂಡು
ನಾ ಮತ್ತೆ ರಾತಿರಿಕೆ ಬರುತೀನಿ

ಅಣ್ಣಾನ ಮನಿಗೆ ಹಣ್ಣೀಗೆ ನಾನ್ಹೋದೆ
ಹೊನ್ನೀನ ಗ್ವಾಡೆ ವರಗೀದೆ।ಅತ್ತಿಗು ಬಾಲೆ
ಕಣ್ಣ ತಿರಿವ್ಯಾಳೆ ಪುರುಷಾಗೆ

ಮುಂಗಾರು ಮಳೆ ಹೂದು ತಮ್ಮಯ್ಯ ಹೊನ್ನಾರು ಕಟ್ಟಿ
ಊರ ಮೂರು ಬಳಸ ತಿರುಗ್ಯಾನೆ ।ತಮ್ಮಯ್ಯ
ಮೂಡಲಾಗಿ ಆರ ತಿರುವ್ಯಾನೆ

ಮೂಡುಬಾಕುಲು ಮನೆ ಹೊಡೇದ ಗಮಕೆ ಸಾಲು
ಹೊಡೇದಲ್ಲಿರುವೋ ಪರಸೆಯ ।ಜನಗಳ
ನೀ ನೋಡುತಲೆ ಬಾರೆ ಹಿರಿಯಕ್ಕ

ಅಡುಗೆ ಕ್ವಾಣಿಗೆ ಹದಿನಾರು ದೀವೀಗೆ
ನಾನು ಅಡುನಾರೆ ಅತ್ತೆ ಹೊಗಿ ಬಾಳ। ತೌರವರು
ಸಲಮುತ್ತನ್ನಾಕಿ ಸಲಿವ್ಯವರೆ

ಹೆತ್ತಮ್ಮನಿದ್ದರೆ ನೆತ್ತಿಗೆಣ್ಣೆಯ ಒತ್ತಿ
ಮತ್ಯೋಟು ದೂರ ಕಳುವೋಳು।
ಹೆತ್ತಮ್ಮನಲ್ಲ ಬಲತಾಯಿ ಇದ್ದರೆ
ಬಾಕಲ ಬಿಟ್ಟು ಬರಲಿಲ್ಲ।

ಮುಂದಿನ ನಾಲ್ಕನೆಯ ಭಾಗ 'ತಿಂಗಳು ಮಾವನ ಪೂಜೆ ಪದಗಳು' ಎಂದಿದೆ. ಇದರ ಸಂದರ್ಭವನ್ನು ಸಂಪಾದಕರು ವಿವರವಾಗಿ ಬರೆದಿದ್ದಾರೆ. "ತಿಂಗಳುಮಾವನ ಪೂಜೆ ಮಾಡುವುದು ಅಥವಾ ತಿಂಗಳುಮಾವನನ್ನು ಬರೆಯುವುದು ಗೌರಿ ಕಾಲದಲ್ಲಿ ಅಂದರೆ ಮೊಗೆ ಮಳೆಯ ವೇಳೆ. ಇದನ್ನು ಐದು, ಒಂಬತ್ತು ಅಥವಾ ಹನ್ನೆರಡು ದಿವಸ ಮಾಡುತ್ತಾರೆ. ಊರಿನ ಹೆಂಗಸರು ಮಕ್ಕಳೆಲ್ಲ ಹಾಲು ಚೆಲ್ಲಿದಂಥ ಬೆಳುದಿಂಗಳಿನಲ್ಲಿ ದೇವರ ಗುಡಿಯ ಮುಂದೆಯೋ ರಂಗದಲ್ಲೋ ಅಥವಾ ಮನೆಯ ಮುಂದೆಯೋ ಕೂಡಿ ಹಾಡು ಹೇಳಿಕೊಂಡು ತಿಂಗಳುಮಾವನನ್ನು ಬರೆಯುತ್ತಾರೆ. ಸಗಣಿಯಲ್ಲಿ ನೆಲ ಸಾರಿಸಿ, ರಂಗೋಲಿ ಬಿಡುತ್ತಾರೆ. ತಿಂಗಳುಮಾವನಿಗೆ ತೇರು, ಚಂದ್ರಮಂಡಲ, ಹೂವಿನ ಚಪ್ಪರ – ಹೀಗೆ ವಿಧವಿಧವಾಗಿ ಬರೆಯುತ್ತಾರೆ. ತೀರಿಸುವ ದಿವಸ ತೇರು ಬರೆಯುತ್ತಾರೆ. ತೇರು ಬರೆದು, ಮಧ್ಯೆ ಕಳಸದಲ್ಲಿ ನೀರಿಟ್ಟು, ಹಿಟ್ಟು ಅಥವಾ ರೊಟ್ಟಿಯನ್ನು ಕಳಸದ

ಮೇಲೆ ಮಡಗಿ, ಪೂಜೆ ಮಾಡಿ, ಚರ್ಮ ಚೆಲ್ಲಾಟ ಮಾಡುತ್ತಾರೆ. ...ಹುಡುಗರು ಮನೆಮನೆಗೆ ಹೋಗಿ, 'ತಿಂಗಳುಮಾವನ ತಂಗಳು ಭಿಕ್ಷ ಕೊಡಿರವ್ವೋ!' ಎಂದು ಕೂಗಿ ಭಿಕ್ಷೆ ಕೇಳುತ್ತಾರೆ. ಮನೆಯವರು ಒಂದಿಷ್ಟು ಹಸಿಟ್ಟು ಕೊಡುತ್ತಾರೆ. ಅದರಿಂದಲೇ ಹಿಟ್ಟು ರೊಟ್ಟಿ ಮಾಡುವುದು. ಕಕಲಾತಿಗೆ ಒಬ್ಬ ಹುಡುಗನಿಗೆ ಸೀರೆ ಉಡಿಸಿ, ಹೆಣ್ಣು ಗಂಡು ಮಾಡಿಕೊಂಡು ಮದುವೆ ಮಾಡುತ್ತಾರೆ. ಊರು ಕೇರಿಯಲ್ಲೆಲ್ಲಾ ತಮಟೆ ಬಡಿದುಕೊಂಡು ಹೋಗಿಬರುತ್ತಾರೆ. ಮಳೆ ಹೋದ ಸಂದರ್ಭಗಳಲ್ಲಿಯೂ ತಿಂಗಳುಮಾವನನ್ನು ಬರೆಯುತ್ತಾರೆ. ತಿಂಗಳು ಮಾವನನ್ನು ಬರೆಯುವುದು ದೇವೇಂದ್ರನನ್ನು ಕರೆದಂತೆ....ಮೊದಲು ಮಳೆರಾಯನ ಮೇಲೆ ಪದ ಹೇಳಿ, ಆಮೇಲೆ ತಿಂಗಳುಮಾವನ ಮೇಲಿನ ಪದ ಹೇಳುತ್ತಾರೆ" (ಪು.೨೭೦).

ಜಾನಪದ ಸಂಸ್ಕೃತಿಯಲ್ಲಿ ಇಂತಹ ಪ್ರಾದೇಶಿಕ ವಿಶೇಷತೆವುಳ್ಳ ಆಚರಣೆಗಳು ದೊರೆಯುತ್ತವೆ. ಈ ಪದ್ಧತಿ ಉತ್ತರ ಕರ್ನಾಟಕದಲ್ಲಿ ಕಾಣುವುದಿಲ್ಲ. ಒಂದು ವಿಶೇಷ ಆಚರಣೆಯನ್ನು ಸಂಪಾದಕರು ಇಲ್ಲಿ ಪರಿಚಯಿಸಿ ಆ ಸಂದರ್ಭದ ಕೆಲವು ಹಾಡುಗಳನ್ನು ಇಲ್ಲಿ ಕೊಟ್ಟಿದ್ದಾರೆ. ಸಂದರ್ಭವನ್ನೂ ಚಿಕ್ಕಮ್ಮನಿಂದಲೇ ಕೇಳಿ ಬರೆದುಕೊಂಡಿದ್ದಾರೆ.

ಮಳೆರಾಯನ ಮೇಲೆ :

ಕೋಲು ಮಲ್ಲಿಗೆ ಕೋಲೆ
ಕೋಲು ಸಂಪಿಗೆ ಕೋಲೆ ।ಪ।
ಮಳಿ ಹೋಯ್ತು ಅಂತ ಮಳಿರಾಯ್ನ ಬಯ್ಯದಿರೆ
ನೂರ್‍ಹೊನ್ನಿನ ಸರುಪನ। ಮೇಲ್ಹತ್ತಿಕೊಂಡು
ಸಾಲಕ್ಹೋಗ್ಯವನೆ ಮಳಿರಾಯ

ತಿಂಗಳುಮಾವನ ಮೇಲೆ:

ಸುಕ್ರ ಸೂಲ್ದಿಗ ಒತ್ತೀಲಿ ಬೆಳ್ಳಿದೇವ
ನಾಲೋರಿಗಿಂತ ಹಿರಿಯೋನು।ತಿಂಗಳುಮಾವ
ನಾರೀರ ಕುರುವ ಅರಿಯನು
ಹೊಲೆಯರ್ಹಟ್ಟೀಲಿ ಎಳಿಯ ಬೇವಿನಮರ
ಹಣ್ಣಾದರೇನೆ ಕಿರಿಕಯ್ಯೋ। ತಿಂಗಳುಮಾವ
ಚೆಂದಾದರೇನೆ ಮದುವಿಲ್ಲ

ತಿಂಗಳುಮಾವನ ತೀರಿಸುವಾಗ:

ಒಂದೆ ಮೊಗಿ ನೀರು
ಒಂದೆ ಕೊನೆ ಅರುಸಣ
ಅದು ನಮ್ಮನಿಗೆ ನಿಧನವೆ
ಕದನ ಕಸ್ತೂರಿ
ತುಪ್ಪದೋಕುಳಿಯ
ತಿಂಗಳುಮಾವಗೆತ್ಯಾರಾರುತಿಯ।

ಐದನೆಯ ಭಾಗ 'ದೇವರ ಪದಗಳು' ಎಂದಿದೆ. ಈ ಭಾಗದಲ್ಲಿ ಸ್ಥಳೀಯ ದೇವತೆಗಳ ಸ್ತುತಿ ನುಡಿಗಳಿರುವುದು ಕಂಡು ಬರುತ್ತದೆ.

ಸುಕ್ರಾರ ಕಾಣೆ ಸುವ್ವಾರಿ ಲಕ್ಕವ್ವಗೆ
ಸುತ್ತೇಳು ಕ್ವಾವೆ ಗುಡಿಯೊಳಿಗೆ।ಲಕ್ಕವ್ವಗೆ
ಸುಕ್ರಾರ ನಮ್ಮಲ್ಲಿ ಅನುಗಾಲ

ಹಾರೆ ತರಿಸ್ಯಾಳೆ ಬಾರೆ ಸಮ ಮಾಡ್ಯಾಲೆ
ಭೋರೆಂಬ ಕಾಳೆ ನುಡಿಸ್ಯಾಳೆ। ದೊಡ್ಡಮ್ಮ
ಬಾರ್‍ಯಲ್ಲಿ ಪರುಸೆ ಮೆರಿಸ್ಯಾಳೆ

ಜಂಬೂರಂಬೋದು ಇಂಬಳ್ಳಿ ಪಟ್ಟಣ
ಜಂಬೂರ್‍ವಾರುವರ ಮಗಳೇನೆ । ಉಡುಸಲವ್ವ
ನೀ ಮೀನ ಮಾರೊನಿಗೆ ಒಲಿದೇನೆ

ಅಣ್ಣನ ನೆನೆದೇನೆ ತಣ್ಣಾನೆ ಹೊತ್ತಿನಲ್ಲಿ
ಪನ್ನಂಗದೊಳಗೆ ಚವಲವ।ನ್ವಾಕೋನ
ನನ್ನಣ್ಣ ಜುಂಜಯ್ಯನ ನೆನುದೇನೆ

ಕೊನೆಯ ಅಧ್ಯಾಯದಲ್ಲಿದಲ್ಲಿಯ ದೀರ್ಘವಾದ ಕಥಾನಕಗಳನ್ನು 'ರಾಗಿ ಬೀಸುವ ಮಟ್ಟಿನಲ್ಲಿ' ಎಂದು ಸೂಚನೆ ಕೊಟ್ಟು ಮುದ್ರಣ ಮಾಡಲಾಗಿದೆ. ಇದನ್ನು ಗಮನಿಸಿದರೆ, ದೀರ್ಘವಾದ ಕಥಾನಕಗಳನ್ನೂ ಬೀಸುವ ಸಂದರ್ಭದಲ್ಲಿ ಹಾಡುವ ರೂಢಿ ದಕ್ಷಿಣ ಕರ್ನಾಟಕದಲ್ಲಿ ಇದೆ ಎಂದು ತೋರುತ್ತದೆ. ಇನ್ನೊಂದು ಕಥನ ಗೀತೆಗೆ ಬರೆದ ಟಿಪ್ಪಣಿ ಹೀಗಿದೆ– 'ಈ ಹಾಡನ್ನು ರಾಗಿಕಲ್ಲು ಮೇಲೆ ಹೇಳಬಹುದು. ಅಥವಾ ಸೋಬಾನದ ಮಟ್ಟಿನಲ್ಲಾದರೂ ಹೇಳಬಹುದು. ಸೋಬಾನದ ಮಟ್ಟಿನಲ್ಲಿ ಹೇಳುವಾಗ 'ಸೋಬಾನವೆಲ್ಲ ಶಿವನಿಗೆ' ಎಂಬ ಪಲ್ಲವಿ ಬರುತ್ತದೆ'. ಈ ಸೂಚನೆ ತೀರ ಸ್ಪಷ್ಟವಾಗಿದೆ. ಅರ್ಚಕ ಬಿ. ರಂಗಸ್ವಾಮಿ ಅವರು ದೀರ್ಘ ಕಥೆಯುಳ್ಳ ಹಾಡುಗಳನ್ನು **'ಬೀಸುವ ಹಾಡುಗಳು'** ಎಂದು ತಮ್ಮ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಕೃತಿಯಲ್ಲಿ ಪ್ರಕಟಿಸಿದ್ದಾರೆ. ಈ ಪದ್ಧತಿ ಉತ್ತರ ಕರ್ನಾಟಕದಲ್ಲಿ ಇಲ್ಲ. ಅಲ್ಲಿ ಕಥೆಯ ಒಂದೆರಡು ಘಟನೆಗಳನ್ನು ಕೇಲವೇ ತ್ರಿಪದಿಗಳಲ್ಲಿ, ಬಹಳವೆಂದರೆ ಎಂಟ್ಹತ್ತು ತ್ರಿಪದಿಗಳಲ್ಲಿ ಹಾಡಿ ಮುಗಿಸುವುದು ಕಾಣುತ್ತದೆ. ಎಚ್.ಎಲ್. ನಾಗೇಗೌಡರು ನಂಜನಗೂಡಿನ ನಂಜಯ್ಯ, ಮೇಲುಕೋಟೆ ಚಲುವಯ್ಯ ಈ ಎರಡು ಹಾಡುಗಳಿಗೆ ಮಾತ್ರ ಇಂತಹ ಟಿಪ್ಪಣಿಗಳನ್ನು ಬರೆದಿದ್ದಾರೆ. ಮುಂದಿನ ಗಂಗೆ ಗೌರಿ, ರವಿಕಣ್ಣ, ಜವರಾಯ, ಮಾದೇವಿ, ನಾಗರಗನ್ನೆ ಈ ಹಾಡುಗಳಿಗೆ ಅಂತಹ ಟಿಪ್ಪಣಿಗಳಿಲ್ಲ. ಇಲ್ಲೆಲ್ಲ ಸುವ್ವಿ, ತಂದನ್ನೇ ತಾನ ಎಂಬ ಸೊಲ್ಲುಗಳು ಬಳಕೆಯಾಗುತ್ತವೆ ಎಂಬ ಟಿಪ್ಪಣಿಗಳು ಮಾತ್ರ ಕಾಣುತ್ತವೆ. ೧೯೭೨ ರಲ್ಲಿಯೇ ಇಷ್ಟೊಂದು ಕಥನಕಾವ್ಯಗಳು ಮುದ್ರಣಗೊಂಡುದೂ ಒಂದು ದಾಖಲೆಯ ಸಂಗತಿಯೆ ಆಗಿದೆ.

'ಸೋಬಾನೆ ಚಿಕ್ಕಮ್ಮನ ಪದಗಳು' ಪ್ರಕಟವಾದುದು ೧೯೭೨ರಲ್ಲಿ. ಇಂತಹ ಇನ್ನೊಂದು ಕೃತಿ, ಪ್ರಕಟವಾದದ್ದು ಸುಮಾರು ೩೫ ವರ್ಷಗಳ ನಂತರ. ೨೦೦೫ ರಲ್ಲಿ ಡಾ. ಕೃಷ್ಣಮೂರ್ತಿ ಹನೂರ ಅವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಗ್ರಾಮದ ಪ್ರತಿಭಾವಂತ ಹಾಡುಗಾರ್ತಿ ಸಿರಿಯಜ್ಜಿಯ ಸಮಗ್ರ ಹಾಡುಗಳನ್ನು ಒಂದೆಡೆ

ಪ್ರಕಟಿಸಿದ್ದಾರೆ. **'ಸಾವಿರದ ಸಿರಿ ಬೆಳಗು'** ಎಂಬ ಈ ಕೃತಿ ೪೮೦ ಪುಟಗಳ ಬೃಹತ್ ಹೊತ್ತಿಗೆ. ಇದರಲ್ಲಿ 'ಸಿರಿಯಜ್ಜಿ ಹಾಡಿದ ೨೧ ಜನಪದ ಕಥನ ಗೀತೆಗಳು' ಎಂಬುದು ಸಂಪಾದಕರ ಟಿಪ್ಪಣಿಯಾಗಿದೆ. ಆದರೆ ಇದರಲ್ಲಿ ಇರುವುದು ಕೇವಲ ಕಥನಕವನಗಳಲ್ಲ. ಸಿರಿಯಜ್ಜಿ ಹಾಡಿದ ನಾಲ್ಕೈದು ಕಥನಕವನಗಳನ್ನು ಬಿಟ್ಟರೆ ಹೆಚ್ಚಿನವು ಆಯಾ ಸ್ಥಳೀಯ ದೈವಗಳ ಸ್ತುತಿ/ಪ್ರಾರ್ಥನಾ ಪದ್ಯಗಳಿವೆ. ಒಂದೊಂದು ದೈವದ ಗುಣಗಾನ, ಆಯಾ ದೈವಗಳು ಗೈಯ್ದರೆಂದು ಜನಮನದಲ್ಲಿರುವ ಸಣ್ಣ ಸಣ್ಣ ಸಂಗತಿಗಳನ್ನು ನೆನೆದು ಸ್ಮರಿಸುವ ತ್ರಿಪದಿಗಳು ಅವು ಆಗಿವೆ. ಜೊತೆಗೆ ಸೋಬಾನೆ ಪದಗಳು, ಮೈನರೆದಾಗ ಹಾಡುವ ಹಾಡುಗಳು, ಕೊನೆಯಲ್ಲಿ ಮಳೆರಾಯನನ್ನು ಕುರಿತು ಒಂದು ಹಾಡೂ ಇದೆ.

ಸಿರಿಯಜ್ಜಿಯ ಈ ಸಮಗ್ರ ಹಾಡುಗಳ ಸಂಗ್ರಹದಲ್ಲಿ ಎಲ್ಲ ಹಾಡುಗಳಿಗೆ ವ್ಯಾಪಕವಾಗಿ ಬಳಕೆಯಾದುದು ತ್ರಿಪದಿ ಛಂದಸ್ಸು ಎಂಬುದು ಗಮನಿಸಬೇಕಾದ ಮಾತು. ಇವೆಲ್ಲ ಹಾಡುಗಳನ್ನು ಸಿರಿಯಜ್ಜಿ ತಮ್ಮ ಗೊಲ್ಲರಟ್ಟಿಯ ಯಾವುದೇ ಕಾರ್ಯಕ್ರಮದಲ್ಲಿ ಹಾಡುತ್ತಿದ್ದಳು ಎಂದು ಸಂಪಾದಕರು ಬರೆಯುತ್ತಾರೆ. ಹೀಗಾಗಲು ಕಾರಣವೆಂದರೆ ಆ ಊರಿನ ಅಥವಾ ಆ ಗ್ರಾಮದ ಸುತ್ತಮುತ್ತಲಿನ ದೈವಗಳನ್ನೇ ಕುರಿತು ಆಕೆ ಪ್ರಾರ್ಥನಾ ಗೀತೆಗಳನ್ನು ಹಾಡುವುದರಿಂದ ಸಹಜವಾಗಿಯೇ ಜನರಲ್ಲಿರುವ ಭಕ್ತಿಭಾವ ಈ ಕೆಲಸ ಮಾಡಿರಬೇಕು ಎನಿಸುತ್ತದೆ.

ಕೊಂಡದ ಕಾಟವ್ವ, ಸಿರಿಯಣ್ಣ, ಎತ್ತಪ್ಪ, ಗಿರಿಜಾಕಲ್ಯಾಣ, ಅರ್ಜುಣ ದ್ರೋಪದಿ, ಕಟ್ಟೆ ಮಾರವ್ವ, ಜೋಕುಮಾರ ಇವು ಒಂದಿಷ್ಟು ತೆಳ್ಳನೆಯ ಕಥಾಘಟನೆಗಳನ್ನು ಬಿತ್ತರಿಸುವ ಹಾಡುಗಳಾಗಿವೆ. ಕರಡಿ ಬುಳ್ಳಪ್ಪ, ತಿರುಪತಿ ತಿಮ್ಮಪ್ಪ, ಹನುಮಂತರಾಯ, ಚನ್ನಕ್ಯಾಸಯ್ಯ, ಕಲ್ಲೇಶ್ವರ, ಗುಹೇಶ್ವರಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಬೋಸೇದೇವರು, ಬೋರೆದೇವರು, ಕುಲಗುರು ರಾಮಾಚಾರಿ, ದೇವರು ಹೊಳೆಗೆ ಹೋಗುವುದು– ಇವೆಲ್ಲ ಪ್ರಾರ್ಥನಾ ಗೀತೆಗಳೆ ಆಗಿವೆ. ಪ್ರಾರ್ಥನಾ ಸಾಹಿತ್ಯವು ಇಷ್ಟೊಂದು ವಿಸ್ತಾರವಾಗಿರುವುದು ಈ ಸಂಪುಟದ ವಿಶೇಷ. ಒಂದೊಂದು ದೈವದ ಬಗೆಗೆ ನೂರಾರು ನುಡಿಗಳು ಪ್ರಾರ್ಥನೆಯ ರೂಪದಲ್ಲಿ ಇರುವುದು ಒಂದು ವಿಶೇಷವೆ. ಇದು ಸಿರಿಯಜ್ಜಿಯ ವಿಶೇಷವೂ ಹೌದು. ಆಕೆ ಹೆಚ್ಚಿಗೆ ಮಾತನಾಡದ, ಹಾಡುಗಳನ್ನು ಮನರಂಜನೆಗಾಗಿ ಹಾಡದ ಹಾಡುಗಾರ್ತಿ ಎಂದು ಸಂಪಾದಕರು ಸಿರಿಯಜ್ಜಿಯ ಗುಣಗಳನ್ನು ಗುರುತಿಸುತ್ತಾರೆ. ಬಹುಶಃ ಆಕೆಯ ಈ ವ್ಯಕ್ತಿತ್ವದಿಂದಾಗಿಯೇ ಇಂತಹ ಹಾಡುಗಾರಿಕೆ ಅವಳದಾಗಿರಲು ಕಾರಣವಾಗಿರಬೇಕು. ಸಿರಿಯಜ್ಜಿ ಹಾಡುಗಾರಿಕೆ ಕಲಿತದ್ದನ್ನು ಕುರಿತು ಸಂಪಾದಕರು ಹೀಗೆ ವಿರಿಸುತ್ತಾರೆ: "ಸಿರಿಯಜ್ಜಿ ಚಿಕ್ಕಂದಿನಲ್ಲಿ ಜನಪದ ಗೀತೆಗಳ ಹಾಡುಗಾರಿಕೆ ಕಲಿತದ್ದು ತಾಯಿಯಿಂದಲೇ. ಹಟ್ಟಿಯ ದೇವರುಗಳನ್ನು ಉತ್ಸವಕ್ಕೆ ಹೊರಡಿಸುವುದು, ಜಲಧಿಗೆ ಕೊಂಡೊಯ್ಯುವುದು, ದೇವರ ಅಲಂಕಾರ ಮಾಡುವುದು ಇಂಥ ಹೊತ್ತಿನಲ್ಲಿ ಹಾಡುವ ಪದಗಳನ್ನೆಲ್ಲ ಸಿರಿಯಜ್ಜಿಗೆ ಆಕೆಯ ತಾಯಿಯೇ ಕಲಿಸಿದ್ದು. ಗಂಡನ ಮನೆಗೆ ಬಂದ ಮೇಲೆ ಅತ್ತೆ ಕರಿಸಿರಿಯಜ್ಜಿ ಕೊಂಡದ ಕಾಟವ್ವನ ಹಾಡು, ಸಿರಿಯಣ್ಣ, ಚಿತ್ರದೇವರು, ಜುಂಜಪ್ಪ, ಗೊಲ್ಲರ ಲಗ್ನದಲ್ಲಿ ಹೇಳುವ ಪದಗಳನ್ನು ಕಲಿಸಿಕೊಟ್ಟಳು" (ಪ್ರಮು.೩). ಈ ವಿವರವನ್ನು ಗಮನಿಸಿದರೆ,

ಸಿರಿಯಜ್ಜಿ ತಾಯಿಯಿಂದ ಕಲಿತದ್ದು ಮುಖ್ಯವಾಗಿ ದೇವರ ಹಾಡುಗಳನ್ನು. ಹೀಗಾಗಿ ಈ ಹಾಡುಗಾರಿಕೆಯೇ ಆಕೆಗೆ ಮುಖ್ಯವಾದುದು. ಉಳಿದವೆಲ್ಲ ಅತ್ತೆಯಿಂದ ಕಲಿತದ್ದು. ಅವು ತೀರ ತೆಳ್ಳನೆಯ ಕಥೆವುಳ್ಳ ಹಾಡುಗಳು. ಹೀಗಾಗಿ ಸಿರಿಯಜ್ಜಿಯನ್ನು ಪ್ರಾರ್ಥನಾ ಸಾಹಿತ್ಯ ಪ್ರಧಾನವಾಗಿ ಹಾಡುವ ಹಾಡುಗಾರ್ತಿ ಎನ್ನಬಹುದಾಗಿದೆ.

ಸಿರಿಯಜ್ಜಿ ಹಾಡುವ ಹಾಡಿನ ಛಂದಸ್ಸು ಮುಖ್ಯವಾಗಿ ಎಂಬುದನ್ನು ಹಿಂದೆ ಹೇಳಲಾಗಿದೆ. ತ್ರಿಪದಿಗಳನ್ನು ಹಾಡುವಾಗ ಹಿಗ್ಗಿ ನಾಲ್ಕು ಸಾಲಾಗುವ ರೀತಿಯಲ್ಲಿಯೆ ಸಂಪಾದಕರು ಬರೆದು ಪ್ರಕಟಿಸಿದ್ದಾರೆ. ಹೀಗಾಗಿ ಇಲ್ಲಿಯ ತ್ರಿಪದಿಗೆ ನಾಲ್ಕು ಸಾಲುಗಳು ಕಾಣುತ್ತವೆ. ಸಿರಿಯಜ್ಜಿ ಇಲ್ಲದೆ ಯಾವ ಮನೆಯ ಮದುವೆಗಳೂ ನಡೆಯುತ್ತಿರಲಿಲ್ಲವೆಂಬ ಸಂಪಾದಕರ ಟಿಪ್ಪಣಿ– ಸಿರಿಯಜ್ಜಿಯ ಹಾಡುಗಾರಿಕೆ, ಅವಳ ಕಂಠದ ಮಾಧುರ್ಯ ಇವೆಲ್ಲವುಗಳ ಪರಿಣಾಮವನ್ನು ಹೇಳಿಕೊಡುತ್ತವೆ.

ಸಿರಿಯಜ್ಜಿಯ ವೈವಿಧ್ಯಮಯ ಹಾಡುಗಾರಿಕೆಗೆ ಅವಳ 'ಸೋಬಾನೆ ಪದಗಳು' ಎಂಬ ಭಾಗ ಪ್ರಮುಖವಾಗಿ ಕಾಣುತ್ತದೆ. ಈ ಕೃತಿಯಲ್ಲಿರುವ ತೆಳ್ಳನೆಯ ಕಥೆಯ ಎಳೆಯುಳ್ಳ ಹಾಡುಗಳನ್ನೂ ಸೇರಿಸಿಕೊಂಡು ೩೦೦ ಪುಟಗಳಷ್ಟು ಪ್ರಾರ್ಥನಾ ಪದ್ಯಗಳೇ ತುಂಬಿಹೋಗಿವೆ. ನಂತರ ೧೫೦ ಪುಟಗಳ ವ್ಯಾಪ್ತಿಯಲ್ಲಿ ಶುಭಕಾರ್ಯದ ಹಾಡುಗಳಿವೆ. ಸಂಪಾದಕರು ಸೋಬಾನೆ ಪದಗಳನ್ನು ಅಂದರೆ ವಿಶೇಷವಾಗಿ ಮದುವೆಯ ಶಾಸ್ತ್ರಕ್ಕೆ ಸಂಬಂಧಿಸಿದ ಹಾಡುಗಳನ್ನು ಕ್ರಮವಾಗಿ ಜೋಡಿಸಿದ್ದಾರೆ. ಹೀಗಾಗಿ ಗೊಲ್ಲ ಸಮಾಜದಲ್ಲಿ ಮದುವೆಯ ಕ್ರಮ ಎಂತಹದು ಎಂಬ ಬಹುಮಹತ್ವದ ಸಂಗತಿ ಓದುಗರ ಅನುಭಕ್ಕೆ ಬರುತ್ತದೆ. ಸಂಪಾದಕರು ಉಪಶೀರ್ಷಿಕೆಗಳನ್ನು ಬರೆದು ಸಂದರ್ಭದ ಅರಿವು ಮೂಡುವಂತೆ ಮಾಡಿದ್ದಾರೆ. ಆಯಾ ಸಂದರ್ಭವನ್ನು ಒಂದಿಷ್ಟು ವಿವರಿಸಿದ್ದರೆ ಗೊಲ್ಲರ ಸಂಸ್ಕೃತಿಯನ್ನು ಅರಿತುಕೊಳ್ಳಲು, ಹಾಡುಗಳನ್ನು ಅರ್ಥೈಸಿಕೊಳ್ಳಲು ಇನ್ನಷ್ಟು ಸಹಾಯವಾಗುತ್ತಿತ್ತು. ಅವರು ಅಲ್ಲಲ್ಲಿ ಕೆಲವು ಭಾಗಗಳಿಗೆ ಕೊಡುವ ಟಿಪ್ಪಣಿಗಳು ಹೀಗಿವೆ– ಹಾಲಸ್ತದ ನಂತರ ಎರಡನೆಯ ಹಂತ ಒರಳಕ್ಕಿ ಹೊಯ್ಯುವುದು, ಹೆಣ್ಣುಮಗಳನ್ನು ಕುರಿತ ಹಸೆ ಹಾಡು, ಆರತಿ ಬೆಳಗುವ ಪದ್ಯಗಳು, ಚಪ್ಪರದಸೆ ಪದ್ಯಗಳು, ಭೂಮಿಯಸೆ ಪದ್ಯಗಳು, ಮದುವೆ ಹೆಣ್ಣನ್ನು ಹಸೆಗೆ ಕೂರಿಸುವುದು, ಹೆಣ್ಣಿಗೆ ಸುರಗಿ ನೀರೊಯ್ಯುವುದು, ಚಪ್ಪರದ ವೀಳ್ಯ ಇಡುವುದು, ಬಾಗಿನ ಕೊಡುವುದು, ತೊಟ್ಟಿಲ ತೂಗುವ ಪದ, ಮನೆ ತುಂಬಿಸುವುದು, ಗಂಡಿನ ಚಪ್ಪರಕ್ಕೆ ದಿಬ್ಬಣ ಬರುವುದು, ಮದುವಣಗಿತ್ತಿಯನ್ನು ಬಚ್ಚಿಡುವುದು, ಜೋಗುಳ ಪದ, ಹೆಣ್ಣನ್ನು ಗಂಡಿನಮನೆಗೆ ಕರೆದುಕೊಂಡು ಬರುವುದು: ಮನೆ ತುಂಬಿಸುವ ಶಾಸ್ತ್ರ, ಗಂಗಾ ದೇವತೆ ಮಾಡುವುದು, ದೊಡ್ಡ ಜಾಡಿ ಹಾಸುವುದು. ಇಷ್ಟು ನಮೂನೆಯ ಭಾಗಗಳನ್ನು ಸಂಪಾದಕರು ಕೇವಲ ಹೆಸರಿಸುತ್ತಾರೆ. ಪ್ರತ್ಯೇಕವಾಗಿ ಮೈನೆರೆದ ಹಾಡುಗಳನ್ನು ಕೊಟ್ಟಿದ್ದಾರೆ.

ಸುಕ್ರವಾರದ ದಿನ ಪುತ್ರಮ್ಮ ಮೈನೆರೆತಾಳ
ಅವರಪ್ಪ ಆರೋರನ ಬೆಸಗಂಡ
ಅವರಪ್ಪ ಆರೋರನ ಬೆಸಗಂಡು ಕೇಳ್ಯಾನೆ
ಪುತ್ರಮ್ಮ ನೆರೆತ ಗಳಿಗೀಯ ।

ಬಾಳೀಯ ಕಂಬ ಬಾಳೀಯ ಬೋದಿಗೆ
ನಾಗೋಜ ಕಡೆದ ಮಲುಕಿನ
ನಾಗೋಜ ಕಡೆದ ಮಲುಕಿನ ಮಾಳಿಗ್ಯಾಗೆ
ನಾರಿತಿಪ್ಪಮ್ಮ ಮೈನೆರೆತಾಳು

ಡಾ. ನೀಲಾಂಬಿಕಾ ಪೋಲಿಸಪಾಟೀಲ ಅವರಿಂದ ಇಂತಹ ಎರಡು ಕೃತಿಗಳು ಪ್ರಕಟವಾಗಿವೆ. ಇಲ್ಲಿಯ ವಕ್ತಾರರಿಬ್ಬರೂ ಬೀದರ ಜಿಲ್ಲೆಯವರಾಗಿದ್ದಾರೆ. ೧. ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು (೨೦೦೭), ೨. ಗಿರಿ ಕೋಗಿಲೆ (ಹಾಡಿದವರು: ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ, ೨೦೦೮) ಎರಡೂ ಕೂಡ ದೊಡ್ಡ ಸಂಪುಟಗಳೇ ಆಗಿವೆ. ಕಾಡಾದಿ ಗೌರವ್ವ ಅವರು ಹಾಡಿದ ಸಂಪುಟ ೨೭೨ ಪುಟಗಳಷ್ಟು ವಿಸ್ತಾರವಾಗಿದೆ. ೧೮೧ ಹಾಡುಗಳು ಇಲ್ಲಿವೆ. ಈ ಹಾಡುಗಳನ್ನು ೨೦ ಬಗೆಯಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಕಾಡಾದಿ ಗೌರವ್ವ ಅವರು ತುಂಬಾ ಪ್ರತಿಭಾವಂತರಾಗಿ ಕಾಣುತ್ತಾರೆ. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮೋರ್ಖಂಡಿ ಅವರ ತವರು ಮನೆ. ಇವರದು ಬಾಲ್ಯವಿವಾಹ. ಬಸವಕಲ್ಯಾಣ ತಾಲೂಕಿನ ಹುಲಸೂರ ಗ್ರಾಮದ ಮನ್ಮಥಪ್ಪ ಕಾಡಾದಿ ಅವರಿಗೆ ಕೊಟ್ಟು ಮದುವೆ ಮಾಡಿದರು. ಎಂಟನೇ ವರ್ಷದಲ್ಲಿಯೇ ಅತ್ತೆಯ ಮನೆಗೆ ನಡೆಯಲು ಬಂದ ಪ್ರತಿಭಾವಂತ ಸೊಸೆಯನ್ನು ಅತ್ತೆಯವರಾದ ಲಕ್ಷ್ಮಿಬಾಯಿಯವರು ಮಗಳಂತೆ ನೋಡಿಕೊಂಡಿದ್ದಾರೆ. ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಸೊಸೆಯಿಂದ ಹಾಡುಗಳನ್ನು ಹಾಡಿಸಿ ಆನಂದ ಪಟ್ಟಿದ್ದಾರೆ. ಹೊಸ ಹೊಸ ಹಾಡುಗಳನ್ನು ಕಲಿಯಲು ಪ್ರೋತ್ಸಾಹಿಸಿದ್ದಾರೆ. ಹೀಗಾಗಿ ಶ್ರೀಮತಿ ಗೌರವ್ವ ಅವರು ಜನಪದ ಹಾಡುಗಳನ್ನು ಹಾಡುತ್ತಲೇ ಬೆಳೆದಿದ್ದಾರೆ.

ಲದ್ದೆಯ ಸೋಮಣ್ಣ ಎಂಬ ೧೨ನೇ ಶತಮಾನದ ಶರಣನಿಂದ ಪ್ರಸಿದ್ಧವಾದ ಗ್ರಾಮ ಹುಲಸೂರು. ಆತ ಹುಲ್ಲು ಸಂಗ್ರಹ ಮಾಡುತ್ತಿದ್ದುದು ಇದೇ ಗ್ರಾಮದಲ್ಲಿಯೆ. ಜೊತೆಗೆ ಸೋಮಣ್ಣ ಈ ಗ್ರಾಮದ ದೈವ ಸೋಮೇಶ್ವರನ ಭಕ್ತನಾಗಿದ್ದನು. ಆರನೇ ವಿಕ್ರಮಾದಿತ್ಯನ ಕುದುರೆಗಳಿಗೆ ಈ ಗ್ರಾಮದ ಸೀಮೆಯಿಂದಲೆ ಹುಲ್ಲು ಒಯ್ಯುವ ಪರಿಪಾಠವಿತ್ತಂತೆ. ಹೀಗಾಗಿಯೆ ಈ ಊರಿಗೆ 'ಹುಲ್ಸೂರು' ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ.

ಸಂಪಾದಕರು ಗೌರವ್ವ ಅವರ ಹಾಡುಗಳನ್ನು ಸಂಗ್ರಹಿಸಲು ತೊಡಗಿದ್ದು ಅವರ ೮೪ನೇ ವಯಸ್ಸಿನಲ್ಲಿ. ಹೀಗಾಗಿ ಅಷ್ಟೊತ್ತಿಗೆ ಅವರ ನೆನಪಿನಿಂದ ಬಹಳಷ್ಟು ಹಾಡುಗಳು ಮಾಯವಾಗಿ ಹೋಗಿದ್ದಂತೆ ತೋರುತ್ತದೆ. ಸಾವಿರಗಟ್ಟಲೇ ಹಾಡುಗಳನ್ನು ಹಾಡಬಲ್ಲ ಗೌರವ್ವ ಅವರು ಈ ಇಳಿವಯಸ್ಸಿನಲ್ಲಿ ಹಾಡಿದ್ದು ಸುಮಾರು ನೂರಿನ್ನೂರು ಹಾಡುಗಳನ್ನು ಮಾತ್ರ. ಅವುಗಳಲ್ಲಿ ೧೮೧ ಹಾಡುಗಳನ್ನು ಈ ಕೃತಿಯಲ್ಲಿ ಆಯ್ಕೆ ಮಾಡಿಕೊಂಡಿದ್ದಾರೆ. ಗೌರವ್ವ ಅವರು ತಮ್ಮ ಸೊಸೆಯಂದಿರಗೂ ಹಾಡುಗಳನ್ನು ಕಲಿಸಿದ್ದಾರೆ. ಇಲ್ಲಿಯ ಹಾಡುಗಳ ಧಾಟಿಗಳನ್ನು ಅವರ ಸೊಸೆಯಂದಿರು ಬಂದು ಹಾಡಿ ತೋರಿಸಿದ್ದಾರೆ

ಎಂದು ಸಂಪಾದಕರು ಬರೆದುಕೊಂಡಿದ್ದಾರೆ. ಅಂದರೆ ಒಬ್ಬ ಪ್ರತಿಭಾವಂತೆ ತನ್ನ ಹಿರಿಯರಿಂದ ಪ್ರೀತಿ ವಿಶ್ವಾಸಗಳನ್ನು ಗಳಿಸುವುದಲ್ಲದೆ, ತನ್ನ ಮುಂದಿನವರಿಗೆ ಪ್ರೀತಿ ವಿಶ್ವಾಗಳಿಂದ ನೋಡಿಕೊಂಡದ್ದು ಇಲ್ಲಿ ಗಮನಿಸಬೇಕಾದ ಸಂಗತಿ ಎನಿಸುತ್ತದೆ.

ಅವರ ಸಂಗ್ರಹದಲ್ಲಿ ಗಮನ ಸೆಳೆಯುವ ಹಾಡುಗಳೆಂದರೆ ಶರಣರ ಹಾಡುಗಳು. ಶರಣರ ವ್ಯಕ್ತಿಚಿತ್ರಗಳು ಮತ್ತು ಶರಣಧರ್ಮದ ತತ್ತ್ವಗಳನ್ನು ಗೌರವ್ವ ಅವರು ಹೆಚ್ಚಾಗಿ ಹಾಡಿದ್ದಾರೆ. ಇಷ್ಟಲಿಂಗದ ಮಹತ್ವದ ಪದಗಳು, ಪಾದಪೂಜೆಯ ಪದಗಳು, ಗುರುವಿನ ಮಹತ್ವದ ಪದಗಳು ಮುಂತಾದ ತಾತ್ವಿಕ ಹಾಡುಗಳು ಇಲ್ಲಿವೆ. ಭಕ್ತಿ ಭಂಡಾರಿ ಬಸವಣ್ಣ, ಷಟ್‌ಸ್ಥಲ ಜ್ಞಾನಿ ಚನ್ನಬಸವಣ್ಣ, ವೈರಾಗ್ಯನಿಧಿ ಅಕ್ಕಮಹಾದೇವಿ, ನಿಜಲಿಂಗಿ ನೀಲಮ್ಮ, ಕರ್ಮಯೋಗಿ ಸಿದ್ಧರಾಮ, ಮಾದಾರ ಚನ್ನಯ್ಯ, ಹಿಪ್ಪರಗಿ ಮಾಚಯ್ಯ, ನುಲಿಯ ಚಂದಯ್ಯ, ಅಕ್ಕನಾಗಮ್ಮ, ಮುಕ್ತಾಯಕ್ಕ, ಹರಳಯ್ಯ, ಲದ್ದೆಯ ಸೋಮಣ್ಣ, ಏಳುನೂರೆಪ್ಪತ್ತು ಅಮರ ಗಣಂಗಳ ಪದ– ಹೀಗೆ ಶರಣರನ್ನು ಕುರಿತು ಸುಮಾರು ೩೦ಕ್ಕಿಂತಲೂ ಹೆಚ್ಚಿನ ಹಾಡುಗಳಿವೆ. ಉಳಿದ ಹಾಡುಗಳಲ್ಲೂ ಕಲ್ಯಾಣ ಮತ್ತು ಶರಣರನ್ನು ಸ್ಮರಿಸುವ ನುಡಿಗಳನ್ನು ಸೇರಿಸಿ ಹಾಡುವ ರೂಢಿ ಬೆಳೆಸಿಕೊಂಡಿರುವುದು ಕಾಣುತ್ತದೆ. ಇವುಗಳಲ್ಲಿ ಅಲ್ಲಲ್ಲಿ ಚಾರಿತ್ರಿಕ ಸಂಗತಿಗಳು ಹುದುಗಿಕೊಂಡಿರುವುದು ಕಾಣುತ್ತದೆ. ಉದಾಹರಣೆಗಾಗಿ ಲದ್ದೆ ಸೋಮಣ್ಣನ ಪದವನ್ನು ಗಮನಿಸಬಹುದು:

ಲದ್ದಿ ಊರ ಲದ್ದಿ ಸೋಮಯ್ಯ
ಹುಲಸೂರ ಊರ ಸಂತಿದಾಗ
ಹುಲ್ಲ ಮಾರಿ ಹೆಸರ ಪಡೆದ್ಯೆ
ಲದ್ದಿಯ ಸೋಮ ಹುಲ್ಲ ಮಾರಿ ಹೆಸರ ಪಡೆದ್ಯೆ ।೧।

ಒಂದಿನ ಹುಲ್ಲಿನ ಗಂಟ ಎತ್ತಲು
ಹೊರೆಯು ಭಾರ ಎಂದು ತಿಳಿದು
ಶಿವನು ಮಾಡಿದ ಆಟಯೆಂದು
ಲದ್ದಿಯ ಸೋಮ ತಿಳಿದೆ ನೀನು ಹೀಂಗ ಎಂದು ।೨।

ಹೊರೆಯು ಎತ್ತಿ ತಿಳಿದು ನೋಡಿ
ಕಳ್ಳಿ ನೀನು ಮಾಡಿದೆಂದು
ಉಂಗುಟಲ್ಲಿ ಎತ್ತಿ ಹೊಡೆದ್ಯೆ
ಲದ್ದಿಯ ಸೋಮ ಉಂಗುಟಲ್ಲಿ ಎತ್ತಿ ಹೊಡೆದ್ಯೆ ।೩।

ಅಂದಿನಿಂದ ಗಂಡ ಹೆಂಡತಿ
ಶಿವನಿಗೆ ಕರಿತಾರ ಕಳ್ಳಿಯೆಂದು
ಶಿವನಿಗೆ ಆಗ್ಯಾದ ಅದಕ ಚಿಂತಿ
ಶಿವನು ಚಿಂತೆ ಮಾಡಿದನ್ಯೆ ।೪।

ಸೋಮನ ಮಡದಿ ಮಂಗಮ್ಮನಿಗಿ
ತಂದು ಒಡ್ಯಾನ ಶಿವ ಮಾರೋಗ

ವೇಷ ಮರೆ ಮಾಚಿ ಮನಿಗೆ ಬಂದು
ಶಿವನಾಮ ಜಪಿಸಲು ಹೇಳಿದನ್ನೆ ।೫।

ಒಲ್ಲೆನೆಂದು ಅನತಾಳ ಮಂಗಮ್ಮ
ಬ್ಯಾನಿ ತಾಳಲಾರದಕ್ಕ ಮಂಗಮ್ಮ
ಮನದಾಗ ನುಡಿದಾಳ ಶಿವನಾಮ
ರೋಗ ಆಗ್ಯಾದ ಗುಣಮುಖನ್ನೆ ।೬।

ಮನಿಗೆ ಬಂದ ಲದ್ದಿ ಸೋಮ
ಬ್ಯಾನಿ ಹ್ಯಾಂಗ ಕಳಿತುಯೆಂದು
ನಡಿದ ಘಟನೆ ತಿಳಿಸುತ್ತಾಳ
ಸಿಟ್ಟಿಗೆದ್ದ ಲದ್ದಿ ಸೋಮ ।೭।

ಹುಲ್ಲ ಕೊಯ್ಯುವ ಆಯುಧದಿಂದ
ಹೆಂಡತಿಯ ಮೂಗ ಕೊಯ್ದಿದ
ಶಿವನು ಆಗ ಎದುರು ಬಂದ
ಹೆಂಡತಿಗೆ ಪ್ರಾಣ ಕೊಟ್ಟ ।೮।

ಲದ್ದೆ ಸೋಮಣ್ಣನ ಬಗೆಗೆ ಇರುವ ಸಂಗತಿಗಳನ್ನು ಜೋಡಿಸಿ ಮಾಡಿದ ಹಾಡು ಇದು. ಈ ಹಾಡು ಮತ್ತು ಹುಲಸೂರಿನಲ್ಲಿ ದೊರೆಯುವ ಇಂತಹದೇ ಇನ್ನೊಂದು ಜನಪದ ಹಾಡು, ಇವುಗಳ ಆಧಾರದಿಂದಲೇ ಲದ್ದೆಯ ಸೋಮಣ್ಣನ ಬಗೆಗೆ ಹೆಚ್ಚಿನ ಸಂಗತಿಗಳು ತಿಳಿದು ಬರುತ್ತವೆ. ಸೋಮಣ್ಣ ಮೂಲತಃ ಲಾದಾ ಗ್ರಾಮದವನು. ಅವನ ಆರಾಧ್ಯದೈವ ಈ ಹುಲಸೂರಿನ ಸೋಮೇಶ್ವರ. ಯಾರ ಹಂಗಿಗೂ ಒಳಗಾಗಬಾರದೆಂಬ ನಿರ್ಭಿಡೆಯ ಶರಣನೀತ ಎಂಬ ಸಂಗತಿಗಳನ್ನು ಆಧರಿಸಿಯೇ ಅವನ ಚರಿತ್ರೆಯನ್ನು ಹೊಸದಾಗಿ ಕಟ್ಟಿಕೊಳ್ಳಲಾಗಿದೆ.

ಉಳಿದಂತೆ ಹೊಲಮನೆಯ ಕೆಲಸದ ಹಾಡುಗಳಾದ ಕುಟ್ಟುವ ಹಾಡುಗಳು, ಬೀಸುವ ಹಾಡುಗಳು, ಹಂತಿಪದಗಳು ಇಲ್ಲಿವೆ. ಶುಭಕಾರ್ಯಗಳಾದ ಮದುವೆ, ಸೋಬಾನ, ಕುಬಸ, ಜೋಗುಳ ಈ ನಾಲ್ಕು ಪ್ರಕಾರದ ಹಾಡುಗಳಿವೆ. ಅನುಭವ ಪದಗಳು, ಸೀಗಿ ಪದಗಳು, ಭುಲಾಯಿ ಪದಗಳೂ ಇವೆ. ಭುಲಾಯಿ ಪದಗಳಲ್ಲಿ 'ಗೋರಟಾ ಪದ' ಎನ್ನುವುದು ಐತಿಹಾಸಿಕ ಮಹತ್ವವುಳ್ಳ ಹಾಡಾಗಿದೆ. ಈ ಭಾಗದಲ್ಲಿ ಸೇರಿಕೊಂಡಿರುವ 'ಪರುಷ ಕಟ್ಟೆ' ಎಂಬ ಹಾಡು ಇಲ್ಲಿ ಮಹತ್ವದ್ದಾಗಿ ಕಾಣುತ್ತದೆ. ಬಸವಕಲ್ಯಾಣದಲ್ಲಿರುವ ಪರುಷ ಕಟ್ಟೆಯನ್ನು ಕುರಿತು ಇರುವ ಹಾಡು ಇದು. ಇಷ್ಟು ವರ್ಷಗಳಲ್ಲಿ ಈ ಪರುಷ ಕಟ್ಟೆಯನ್ನು ಕುರಿತು ನಮ್ಮ ಕಣ್ಣು-ಕಿವಿಗಳಿಗೆ ಬಿದ್ದದ್ದು ಇದೊಂದೇ ರಚನೆ ಮಾತ್ರ.

ಕಲ್ಯಾಣ ಊರಾಗ ಪರುಷಕಟ್ಟೆ ಪವಿತ್ರ
ಬಸವಣ್ಣ ಮೆರೆದಂತ ಜಾಗದು ಕೋಲೆನ್ನ ಕೋಲ ।೧।

ಬಸವಣ್ಣ ಕುಂತಾರ ಸುತ್ತೆಲ್ಲಾ ಭಕುತರು
ಕಷ್ಟಸುಖ ಬಸವಗ ಹೇಳ್ಯಾರ ಕೋಲೆನ್ನ ಕೋಲ ।೨।
ದರಬಾರಕ ನಡದಾರ ಧರಿಮಗ ಬಸವಣ್ಣ
ದಾರ್‍ಯಾಗ ಇಳಿದು ಕುಂತ ನೆಲ ಅದು ಕೋಲೆನ್ನ ಕೋಲ ।೩।
ಬೇಡಿದ ಜನರಿಗಿ ಬೇಡಿದ್ದು ಕೊಟ್ಟಾರಲ್ಲಿ
ಬೇಡ್ಯಾರ ಭಕುತರು ಬಸವಗ ಕೋಲೆನ್ನ ಕೋಲ ।೪।
ಬೇಡ್ಯಾರ ಭಕುತರು ಬಸವಗ ತಾವಾಗಿ
ಉಡಿತುಂಬಿ ಖಳುವ್ಯಾರ ಬಸವಣ್ಣ ಕೋಲೆನ್ನ ಕೋಲ ।೫।
ಹತ್ತು ಬಡಿಲಾಕ ದರಬಾರಕ ಹೊಂಟಾರ
ಒಂದ ಗಂಟಿ ಮೊದಲ ಇಲ್ಲಿ ತಾ ಕುಂತಾರ ಕೋಲೆನ್ನ ಕೋಲ ।೬।
ಒಂಭತ್ತು ಬಡಿಲಾಕ ಅಲ್ಲಿಗಿ ಬರತಾರ
ಇಲ್ಲದ ಕತೆಯ ಕೇಳ್ಯಾರ ಅಲ್ಲಿ ಕೋಲೆನ್ನ ಕೋಲ ।೭।
ಕಾಲಜ್ಞಾನ ಮಾತೆಲ್ಲ ಅಲ್ಲಿ ನಿಂತು ನುಡಿತಾರ
ಜನರೆಲ್ಲ ಕೇಳಿ ಕೈಯ ಮುಗಿತಾರ ಕೋಲೆನ್ನ ಕೋಲ ।೮।
ಬಸವನ ನುಡಿಯೆಂಬುದ ಹುಸಿಹ್ಯಾಂಗ ಆಗ್ಯಾತು
ಧರಣೀಯ ಮ್ಯಾಲ ನಡದಾಗ ಸೋಜಿಗ ಕೋಲೆನ್ನ ಕೋಲ ।೯।

ಇಂತಹ ಹಾಡುಗಳಿಂದ ತುಂಬಿದ ಈ ಕೃತಿ ನಿಜವಾಗಿಯೂ ಒಂದು ಮಹತ್ವದ ದಾಖಲೆ ಎನಿಸುತ್ತದೆ. ಡಾ. ನೀಲಾಂಬಿಕಾ ಪೋಲಿಸ ಪಾಟೀಲ ಅವರ ಇನ್ನೊಂದು ಕೃತಿ **'ಗಿರಿ ಕೋಗಿಲೆ'** (೨೦೦೮) ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಅವರು ಹಾಡಿದ ಜನಪದ ಹಾಡುಗಳ ಸಂಗ್ರಹ. ೩೪೨ ಪುಟಗಳ ಬೃಹತ್ ಕೃತಿ. ಇದರಲ್ಲಿ ೧೯೨ ಹಾಡುಗಳಿವೆ. ಶ್ರೀಮತಿ ಶಶಿಕಲಾ ಅವರು ಕೂಡ ಬೀದರ ಜಿಲ್ಲೆಯವರೆ ಆಗಿದ್ದಾರೆ. ಇವರ ತವರು ಮನೆ ಬಸವ ಕಲ್ಯಾಣ, ಕೊಟ್ಟ ಮನೆ ಬೀದರ. ಸಹಜವಾಗಿಯೇ ೧೨ನೇ ಶತಮಾನದ ಶರಣರ ಬಗೆಗೆ ಅವರಲ್ಲಿ ಭಕ್ತಿಭಾವ ತುಂಬಿದೆ. ಇವರ ತಾಯಿ ಶ್ರೀಮತಿ ಕಾಶೀಬಾಯಿ ಅವರು ಒಳ್ಳೆಯ ಹಾಡುಗಾರರು. ತಾಯಿಯಿಂದಲೇ ಹಾಡುಗಾರಿಕೆಯ ಪ್ರತಿಭೆ ಈ ಮಗಳಿಗೆ ಬಂದದ್ದು. ಪತಿ ಡಾ. ಶರಣಪ್ಪ ಗಿರಿ ಅವರು ಕೂಡ ಶ್ರೀಮತಿ ಶಶಿಕಲಾ ಅವರಿಗೆ ಹಾಡುವಲ್ಲಿ ಪ್ರೋತ್ಸಾಹ ಕೊಟ್ಟಿದ್ದಾರೆ. ಹೀಗಾಗಿ ತಾಯಿ ಮತ್ತು ಪತಿಯ ಪ್ರೋತ್ಸಾಹದಿಂದ ಶಶಿಕಲಾ ಅವರ ಹಾಡುಗಾರಿಕೆ ಬೆಳೆದುಬಂದಿದೆ. ಡಾ. ಶರಣಪ್ಪ ಗಿರಿ ಅವರು ತಮ್ಮ ಧರ್ಮಪತ್ನಿಯ ಬಗ್ಗೆ ಹೀಗೆ ಬರೆದಿದ್ದಾರೆ : "ನನ್ನ ಧರ್ಮಪತ್ನಿಯಾದ ಶ್ರೀಮತಿ ಶಶಿಕಲಾ ಶರಣಪ್ಪ ಗಿರಿಯವರ ಐವತ್ತು ವರ್ಷಗಳ ತಪಸ್ಸಿನ ಫಲವೇ ಈ 'ಗಿರಿ ಕೋಗಿಲೆ' ಕೃತಿ. ಒಂದು ಕಡೆ ಅವರ ತಾಯಿ ಮತ್ತು ಅವರ ಅಕ್ಕಂದಿರ ಪ್ರೇರಣೆಯಾದರೆ ಇನ್ನೊಂದೆಡೆ ಬಸವಾದಿ ಪ್ರಮಥರ ಕಾರ್ಯಭೂಮಿಯಲ್ಲಿ ಜನ್ಮತಾಳಿದ ಪ್ರಭಾವ. ಈ ಎರಡು ಪ್ರೇರಣೆಗಳಿಂದಾಗಿ ಯಾವಾಗಲೂ ಪೂಜೆ, ಭಜನೆ ಮತ್ತು ಆಧ್ಯಾತ್ಮದ ಹಾದಿಯಲ್ಲಿ

ಕಾಲಕಳೆಯುತ್ತ ಗಿರಿಯಲ್ಲಿಯೇ ಕೋಗಿಲೆಯಂತೆ ಸ್ವಸಂತೋಷಕ್ಕಾಗಿ ಹಾಡುತ್ತಿದ್ದರು. ಅವರ ಹಾಡಿನ ಇಂಪು ಮತ್ತು ಅವುಗಳ ಅರ್ಥ ಗಮನಿಸಿದ ನಾನು ಸಹ ಅವುಗಳಿಗೆ ಯಾವಾಗಲೋ ಮಾರುಹೋಗಿದ್ದೆ. ಆದರೆ ಅಂತಹ ಅದ್ಭುತ ಶಕ್ತಿ ಅವುಗಳಿಗಿದೆಯೆಂದು ನಾನು ಭಾವಿಸಿರಲಿಲ್ಲ. ಈ ಕೃತಿಯನ್ನು ಓದಿದ ಮೇಲೆ ಅದರೊಳಗಡಗಿದ ಅರ್ಥ ಮತ್ತು ಅದ್ಭುತಕ್ಕೆ ಸಂತೋಷದಿಂದ ಮಾರು ಹೋಗಿದ್ದೇನೆ" (ಪ್ರಕಾಶಕರ ನುಡಿ).

ಸಂಪಾದಕರು ಈ ಕೃತಿಯಲ್ಲಿಯ ಹಾಡುಗಳನ್ನು ೧೮ ಬಗೆಯಲ್ಲಿ ವಿಂಗಡಿಸಿ ಕೊಂಡಿದ್ದಾರೆ. ಕಾಡಾದಿ ಗೌರವ್ವ ಅವರ ಕೃತಿಯಲ್ಲಿಯಂತೆ ಇಲ್ಲೂ ಶರಣರ ತತ್ತ್ವಗಳಿಗೆ ಸಂಬಂಧಿಸಿದ ಹಾಡುಗಳು ಮತ್ತು ಶರಣರ ವ್ಯಕ್ತಿತ್ವ ದರ್ಶನದ ಹಾಡುಗಳೂ ಇವೆ. 'ಇಷ್ಟಲಿಂಗ ಪದ್ಯಗಳು' ಎನ್ನುವ ವಿಭಾಗದಲ್ಲಿ ೧೦ ತಾತ್ವಿಕ ಹಾಡುಗಳಿವೆ. ಭಕ್ತಿ ಭಂಡಾರಿ ಬಸವಣ್ಣ, ಜ್ಞಾನಯೋಗಿ ಚನ್ನಬಸವಣ್ಣ, ವೈರಾಗ್ಯಮೂರ್ತಿ ಅಕ್ಕಮಹಾದೇವಿ, ನಿಜಲಿಂಗಿ ನೀಲಮ್ಮ ಇವು ಶರಣರನ್ನು ಕುರಿತ ಹಾಡುಗಳು. 'ಚಾಜದ ಹಾಡುಗಳು' ಹೆಸರಿನಲ್ಲಿ ಕುಟ್ಟುವ ಮತ್ತು ಬೀಸುವ ಹೊಲಮನೆಗೆಲಸದ ಹಾಡುಗಳನ್ನು ಕೊಟ್ಟಿದ್ದಾರೆ. ಇವು ಚಾಜದ ಹಾಡುಗಳಲ್ಲ. ಶುಭಕಾರ್ಯದ ಹಾಡುಗಳನ್ನು 'ಚಾಜದ ಹಾಡುಗಳು' ಎನ್ನುತ್ತಾರೆ. ಇವುಗಳಲ್ಲಿ ಮದುವೆಯ ಹಾಡುಗಳಲ್ಲಿ ಕುಂಕುಮ ಹಚ್ಚುವ ಪದಗಳು, ಎಣ್ಣೆ ಹಚ್ಚುವ ಪದಗಳು, ಗುಗ್ಗುಳ ಪದಗಳು ಎಂಬ ಹಾಡುಗಳನ್ನು ಕೊಟ್ಟಿದ್ದಾರೆ. ಉಳಿದಂತೆ ಸೋಬಾನದ ಪದಗಳು, ಕುಬಸ ಮಾಡುವ ಪದಗಳು, ಜೋಗುಳ ಪದಗಳು ಎಂಬ ಭಾಗಗಳಿವೆ. ಭುಲಾಯಿ ಪದಗಳು ಭಾಗದ ನಂತರ ಕೊನೆಯಲ್ಲಿ ಒಂದೆರಡು ಮಂಗಳಾರತಿ ಪದಗಳನ್ನು ಕೊಟ್ಟಿದ್ದಾರೆ.

ಶ್ರೀಮತಿ ಶಶಿಕಲಾ ಗಿರಿ ಅವರಲ್ಲೂ ಕ್ರಿಯಾಶಕ್ತಿ ಇದೆ. ಅವರ ಒಂದು ಆಧುನಿಕ ವಚನಗಳ ಸಂಕಲನವೂ ಪ್ರಕಟವಾಗಿದೆ. ಅವರು ಬರೆದ ಒಂದು ಹಾಡನ್ನು ಈ ಕೃತಿಯ ಕೊನೆಯಲ್ಲಿ ಹಾಕಿದ್ದಾರೆ.

ಕಲ್ಯಾಣ ಜಗದಾಗಲಿ ಪ್ರಭುವೆ
ಮಂಗಲಮಯವಾಗಲಿ ।ಪ।

ಸುಜಲಿತ ಸುಫಲಿತ ಸುಜ್ಞಾನ ಸುವೃಷ್ಟಿ
ಚಾತುರ್ಯ ಹೆಚ್ಚಾಗಲಿ ಪ್ರಭುವೆ
ಮಂಗಲಮಯವಾಗಲಿ ।೧।

ನಿರ್ಗುಣ ನಿಜಗುಣ ರಜಗುಣ ತಮೋಗುಣ
ಸತ್ತ್ವಗುಣ ಜಗದಾಗಲಿ ಪ್ರಭುವೆ
ಮಂಗಲಮಯವಾಗಲಿ।೨।

ಅಕಾರ ಉಕಾರ ಈಕಾರ ಮಕಾರ
ಓಂಕಾರ ಜಗದಾಗಲಿ ಪ್ರಭುವೆ
ಮಂಗಲಮಯವಾಗಲಿ ।೩।

ಚನ್ನಣ್ಣ ಬಸವಣ್ಣ ಅಪ್ಪಣ್ಣ ಅಜಗಣ್ಣ
ಅಲ್ಲಮರು ಹೆಚ್ಚಾಗಲಿ ಪ್ರಭುವೆ
ಮಂಗಲಮಯವಾಗಲಿ।೪।

ನೀಲಮ್ಮ ನಿಂಬೆಮ್ಮ ಅಕ್ಕಮ್ಮ ಲಕ್ಕಮ್ಮ
ಶರಣೀಯರು ನಾವಾಗಲಿ ಪ್ರಭುವೆ
ಮಂಗಲಮಯವಾಗಲಿ ।೮।

ಬೀಸುವ ಹಾಡುಗಳು ತ್ರಿಪದಿಗಳಾದರೂ ಧಾಟಿಗಳು ವಿಶೇಷವಾಗಿ ಸೊಲ್ಲುಗಳನ್ನು ಅವಲಂಬಿಸಿ ಇರುತ್ತವೆ. 'ಕಲ್ಯಾಣದ ಬಸವ ಬಂದಿದುರೇನ' ಎಂಬುದು ಒಂದು ಸೊಲ್ಲು. ಅದಕ್ಕೆ ತಕ್ಕಂತೆ ಕೆಲ ತ್ರಿಪದಿಗಳನ್ನು ಕೆಳಗೆ ಕೊಟ್ಟಿದ್ದಾರೆ.

ಕಲ್ಯಾಣ ಹುಟ್ಟಿದಾಗ ಎಲ್ಲಿದ್ದಿ ಬಸವಣ್ಣ
ಹಳ್ಳಿ ಮಂತಾಳ । ಕಲ್ಯಾಣದ ಬಸವ ಬಂದಿದುರೇನ
ಹಳ್ಳಿ ಮಂತಾಳ ತಿಪರಂತ। ಕೆರಿ ಮ್ಯಾಗ
ಬಸವಣ್ಣ ಮೂಡ್ಯಾರೆ । ಕಲ್ಯಾಣದ ಬಸವ ಬಂದಿದರೇನ

ಶರಣರ ಪ್ರಭಾವ ಉತ್ತರ ಕರ್ನಾಟಕದ ಸಮುದಾಯಗಳ ಮೇಲೆ ಸಾಕಷ್ಟು ವ್ಯಾಪಕವಾಗಿ ಆಗಿದೆ. ಅದರಲ್ಲೂ ಈ ಕೃತಿಯ ಹಾಡುಗಾರ್ತಿ ಬಸವಕಲ್ಯಾಣ ನಗರದವರೇ ಆಗಿರುವುದರಿಂದ ಎಂತಹ ಸಂದರ್ಭದ ಹಾಡು ಇದ್ದರೂ ಅಲ್ಲಿ ಶರಣರ ಸ್ಮರಣೆ ಸಾಮಾನ್ಯವಾಗಿ ಇರುತ್ತದೆ. ಉದಾಹರಣೆಗೆ ಒಂದು ನುಡಿ ನೋಡಬಹುದು:

ಶಿವಸ್ವಾಮಿ ಮಡದಿ ಅಕ್ಕನಾಗಮ್ಮ ತಾಯಿ
ಚೊಚ್ಚಿಲ ಬಸರಿಗಿ ಒಪ್ಪ್ಯಾಳೆ
ಕುಬುಸಕ ನಡಿರಿ ನೀವೆಲ್ಲಾ ।ಪಲ್ಲ।

ಒಂದ ತಿಂಗಳ ತುಂಬಿ
ಒಂದೇನು ಬಗಸ್ಯಾಳ ತಾಯಿ
ಒಂದೇ ದೇವರೆಂದು ನಂಬಿ।
ಒಂದ ಪೂಜಾ ನಡಸ್ಯಾಳ ತಾಯಿ ।೧।

ಐದ ತಿಂಗಳ ತುಂಬಿ
ಐದೇನು ಬಗಸ್ಯಾಳ ತಾಯಿ
ಐದೆಂಬ ಆಚಾರ ಬಗಸಿ
ಐದಾಚಾರ ನಡಸ್ಯಾಳ ತಾಯಿ। ೫।

ಈ ಹಾಡು ಒಂದು ಕುಪ್ಪಸದ ಸಾಮಾನ್ಯ ಹಾಡು. ಅದನ್ನು ಅಕ್ಕನಾಗಮ್ಮನನ್ನು ನೆನಸಿ ಹಾಡಲು ತೊಡಗುವುದರಿಂದ ಅದು ಅಕ್ಕನಾಗಮ್ಮನ ಹಾಡು ಎಂಬಂತೆ ಕಾಣುತ್ತದೆ. ಹೀಗೆ ಸಾಮಾನ್ಯವಾದ ಸಂಪ್ರದಾಯದ ಹಾಡುಗಳಲ್ಲೆಲ್ಲ ಈ ಬಗೆಯ ಶರಣರ ಸ್ಪರ್ಷ ಕೊಡುವುದನ್ನು ಕಾಣುತ್ತೇವೆ. ಈ ಸಂಗ್ರಹದ ಹಾಡುಗಳಲ್ಲಿ ಈ ಬಗೆಯ ಪರಿವರ್ತನೆ

ಸಾಮಾನ್ಯವಾಗಿ ಕಾಣುತ್ತದೆ. ಭುಲಾಯಿ ಹಾಡುಗಳಲ್ಲಿ ಶರಣ ಮೇದಾರ ಕೇತಯ್ಯ, ನೀಲಮ್ಮ ಏರಿದ ಘನ ನಿಲವ– ಈ ಹಾಡುಗಳು ಸೇರಿವೆ. ಮಂಗಳಾರತಿ ಹಾಡಾಗಿ ಒಂದು ಅಲ್ಲಮನ ಹಾಡು ಇದೆ. ಹೀಗೆ ಶರಣರನ್ನು ಜನಪದರು ಕಂಡ ರೀತಿಗಾಗಿ ಅಧ್ಯಯನ ಮಾಡಲು ಡಾ. ನೀಲಾಂಬಿಕಾ ಪೋಲಿಸ ಪಾಟೀಲ ಅವರ 'ಗಿರಿ ಕೋಗಿಲೆ' ಹಾಗೂ 'ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು' ದೊಡ್ಡ ಆಕರ ಗ್ರಂಥಗಳಾಗಿ ಕಾಣುತ್ತವೆ.

ಒಬ್ಬೊಬ್ಬ ವಕ್ತಾರನ ಸಮಗ್ರ ಸಾಹಿತ್ಯ ಪ್ರಕಟವಾಗಿರುವ ಕೃತಿಗಳೆಲ್ಲ ಹೆಣ್ಣುಮಕ್ಕಳ ಕೃತಿಗಳೆ ಆಗಿವೆ. ಆದರೆ ನಾಡೋಜ ಡಾ. ಎಸ್. ಕೆ. ಕರೀಂಖಾನ ಅವರು ಹಾಡಿದ ಹಾಡುಗಳ ಸಂಗ್ರಹವೊಂದು ಪುರುಷ ವಕ್ತಾರನ ಕೃತಿಯಾಗಿ ಕಾಣುತ್ತಿದೆ. ಬಾಲ್ಯದಿಂದಲೂ ಜನಪದ ಸಾಹಿತ್ಯದ ಹುಚ್ಚು ಹಿಡಿಸಿಕೊಂಡು, ಹಾಡುತ್ತ, ತಮಗೆ ಇಷ್ಟವಾದ ಜನಪದ ಹಾಡುಗಳನ್ನು ಆಗಾಗ ಪ್ರಕಟಿಸುತ್ತ ಬಂದವರು ಕರೀಂಖಾನ ಅವರು. ಅವರ ಕೃತಿಗಳನ್ನು ಒಟ್ಟಿಗೆ ಸೇರಿಸಿ **'ಬೆಲ್ಲದಾರತಿಯ ಬೆಳಗೇನು'** ಎಂಬ ಸಂಪುಟವನ್ನು ೨೦೦೮ ರಲ್ಲಿ ಡಾ. ಬಿ.ಎಸ್.ತಲ್ವಾಡಿ ಅವರು ಪ್ರಕಟಿಸಿದ್ದಾರೆ. ಇಂತಹ ಅಪರೂಪದ ಕೆಲಸ ಮಾಡಿದ್ದಕ್ಕಾಗಿ ಸಂಪಾದಕರು ಕೃತಜ್ಞತೆಗೆ ಅರ್ಹರಾಗಿದ್ದಾರೆ.

ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗಿರುವ ವಕ್ತಾರರಲ್ಲಿ ಕರೀಂಖಾನ್ ಅವರು ಎಲ್ಲರಿಗಿಂತ ಹಿರಿಯರು. "ಕರೀಂಖಾನರು ೧೯೫೯, ೧೯೬೩, ೨೦೦೩ ಮತ್ತು ೨೦೦೫ ರಲ್ಲಿ ಕಮವಾಗಿ ಪ್ರಕಟಿಸಿದ ಜನಪದ ಗೀತೆ (ಎರಡನೆಯ ಭಾಗ, ಜನಪದ ಪ್ರಕಾಶನ, ಗಾಂಧೀನಗರ, ಬೆಂಗಳೂರು), ಜನಪದ ಗೀತೆ (ಟಿ.ಜಿ.ಶಿವಣ್ಣ ಅಂಡ್ ಸನ್ಸ್, ತಿಪಟೂರು), ಕನ್ನಡ ಜಾನಪದ ಗೀತೆಗಳು (ದಿವ್ಯಚಂದ್ರ ಪ್ರಕಾಶನ, ಬಸವೇಶ್ವರ ನಗರ, ಬೆಂಗಳೂರು) ಮತ್ತು ಜನಪದ ಗೀತೆಗಳು (ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು)– ಈ ನಾಲ್ಕೂ ಕೃತಿಗಳಲ್ಲಿನ ಗೀತೆಗಳನ್ನು ಅವಲೋಕಿಸಿ, ಅವುಗಳನ್ನೆಲ್ಲಾ ಒಗ್ಗೂಡಿಸಿ ಪ್ರಸಕ್ತ ಸಂಗ್ರಹವನ್ನು ಸಂಪಾದಿಸಲಾಗಿದೆ" (ಪು.೫).

ಕರೀಂಖಾನ್ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ಪಾತ್ರವಹಿಸಿದವರು. ಹೀಗಾಗಿಯೇ ಅವರು ಮದುವೆಯಾಗದೆ ಹಾಗೆಯೇ ಉಳಿದವರು. ಸ್ವತಃ ಕವಿಗಳು ಕಾದಂಬರಿಕಾರರು. ಚಲನಚಿತ್ರ ಸಾಹಿತ್ಯ, ಹಾಡುಗಳನ್ನು ಬರೆದವರು. ನಾಟಕಗಳನ್ನು ಬರೆದವರು, ನಟಿಸಿದವರು. ಇಂತಹ ಬಹುಮುಖ ಪ್ರತಿಭೆಯ ವಕ್ತಾರರ ಪರಿಚಯವನ್ನು ಸಂಪಾದಕರು ಹೀಗೆ ಮಾಡಿಕೊಡುತ್ತಾರೆ: "ಜಾನಪದ ಜಂಗಮ, ಚಲನಚಿತ್ರ ಸಾಹಿತಿ, ಕರ್ನಾಟಕ ಏಕೀಕರಣದ ಹೊರಾಟಗಾರ, ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿಂದೂ ಮುಸ್ಲೀಂ ಸಾಮರಸ್ಯದ ಸಂಕೇತವಾಗಿದ್ದ ಡಾ. ಕರೀಂಖಾನರದು ಗೊಮ್ಮಟೋಮ ವ್ಯಕ್ತಿತ್ವ! ಪ್ರಶಂಸನೀಯ ಜೀವನ ಮೌಲ್ಯ! ಸ್ನೇಹಪೂರ್ಣ ಒಡನಾಡಿ. ಬದುಕಿಗೆ ಸ್ನೇಹಕ್ಕೆ ಅಪಾರ ಬೆಲೆ ಕೊಟ್ಟ ಕರೀಂಖಾನರ ನಿಷ್ಕಪಟವಾದ, ನಿಸ್ವಾರ್ಥವಾದ ಸ್ನೇಹವು ಗಂಗಾಜಲಕ್ಕಿಂತಲೂ ಕೌಸರ್ ಸುಧೆಗಿಂತಲೂ ಪವಿತ್ರವಾದುದು, ಪರಿಶುದ್ಧವಾದುದು, ಪಾವನವಾದುದು" (ಪು. ೭). ನಿಜವಾಗಿಯೂ ಕರೀಂಖಾನರಂಥವರ ಬಗೆಗೆ ಬರೆಯುವಾಗ ಯಾವ ವಿಶೇಷಣಗಳನ್ನು ಬಳಸಿದರೂ ಅವು ಅವರ ವ್ಯಕ್ತಿತ್ವವನ್ನು ಪೂರ್ತಿ ಹಿಡಿದುಕೊಡಲಾರವು.

ಡಾ. ಕರೀಂಖಾನ್ ಹುಟ್ಟಿದ್ದು ೧೯೦೪ರಲ್ಲಿ. ತಂದೆ ಜಬ್ಬಾರ್ ರೆಹಮಾನ್ ಖಾನ್. ತಾಯಿ ಜೈನಬಿ. ತಂದೆಯ ಪೂರ್ವಜರು ಅಫ್ಘಾನಿಸ್ಥಾನದವರು. ತಾಯಿಯ ಪೂರ್ವಜರು ಅರಬ್ ಮೂಲದವರು. ಇಂಥವರ ಪುತ್ರರಾದ ಕರೀಂಖಾನ್ ಹೆಮ್ಮೆಯ ಭಾರತೀಯ ಪುತ್ರರು. ಉರ್ದು ಹಿಡಿಸದೆ ಕನ್ನಡವನ್ನೇ ಕಲಿತವರು. ಸಂಸ್ಕೃತವನ್ನು ಬಾಲ್ಯದಿಂದಲೇ ಅಭ್ಯಸಿಸಿದವರು. ತಮ್ಮ ೧೫ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಏಳು ಸಲ ಜೈಲುವಾಸ ಅನುಭವಿಸಿದವರು.

ಹಾಸನ ಜಿಲ್ಲೆಯ ಸಕಲೇಶಪುರ ಇವರ ಹುಟ್ಟೂರು. ಪಾತ್ರೆಗಳನ್ನು ಮಾರುತ್ತ ಬರುವ ವ್ಯಾಪಾರಸ್ಥರು ಸಕಲೇಶಪುರದಲ್ಲಿ ಕರೀಖಾನರ ಮನೆಯ ಮುಂದೆ ಬೀಡುಬಿಡುತ್ತಿದ್ದರಂತೆ. ಅವರು ರಾತ್ರಿ ಹಾಡಿಕೊಳ್ಳುತ್ತಿದ್ದ ಜನಪದ ಹಾಡುಗಳಿಗೆ ಮನಸೋತು, ತಾವೂ ಆ ಹಾಡುಗಳನ್ನು ಕಲಿತು ಹಾಡತೊಡಗಿ, ಜೀವನದ ತುಂಬ ಜನಪದ ಹಾಡುಗಳನ್ನು ಕಲಿಯುವುದು ಹಾಡುವುದು ಅವರ ಹವ್ಯಾಸವಾಗಿ ಹೋಯಿತಂತೆ. ಹೀಗಾಗಿ ತಾವು ಸ್ವತಃ ಸಂಗ್ರಹಿಸಿದ ಹಾಡುಗಳನ್ನು ಆಗಾಗ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಅವರು ಒಂದು ಅವಧಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

ಕರೀಂಖಾನ ಹಾಡಿದ ಸಮಗ್ರ ಸಾಹಿತ್ಯ 'ಬೆಲ್ಲದಾರತಿಯ ಬೆಳಗೇನು' ಎಂಬ ಈ ಕೃತಿಯಲ್ಲಿ ಒಟ್ಟಿಗೆ ೧೦೩ ಹಾಡುಗಳಿವೆ. ಅವುಗಳನ್ನು ಸ್ತುತಿಗೀತೆಗಳು, ಸಂಸಾರಿಕ ಗೀತೆಗಳು, ಪ್ರೇಮ ಗೀತೆಗಳು, ನೀತಿ ಗೀತೆಗಳು, ಪೌರಾಣಿಕ ಗೀತೆಗಳು, ಚಾರಿತ್ರಿಕ ಗೀತೆಗಳು, ಕಥನ ಗೀತೆಗಳು, ಸಂಕೀರ್ಣ ಗೀತೆಗಳು ಎಂದು ಎಂಟು ಭಾಗಗಳಲ್ಲಿ ಇವುಗಳನ್ನು ವಿಭಾಗಿಸಿ ಕೊಟ್ಟಿದ್ದಾರೆ. ಇದರ ಜೊತೆಗೆ ಅವರು ಪ್ರಕಟಿಸಿದ ಕೃತಿಗಳ ಪರಿವಿಡಿಗಳನ್ನು ಕೊಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಇಂತಹ ಕೃತಿಗಳನ್ನು ಸಮಗ್ರ ಸಂಪುಟಗಳಲ್ಲಿ ತರುವಾಗ ಮೂಲ ಕೃತಿಗಳು ಪ್ರಕಟವಾದ ಕ್ರಮದಲ್ಲಿಯೇ ಉಳಿಸಿಕೊಳ್ಳುವುದು ಹೆಚ್ಚು ಉಪಯುಕ್ತ. ಅವುಗಳ ಹಿನ್ನುಡಿ, ಮುನ್ನುಡಿ, ಸಂಪಾದಕರ ನುಡಿ, ಪರಿವಿಡಿಗಳಿಗೆಲ್ಲ ಒಂದು ಚಾರಿತ್ರಿಕ ಮಹತ್ವ ಇರುತ್ತದೆ. ಹೀಗೆ ಎಲ್ಲವನ್ನೂ ಕೂಡಿಸಿಕೊಟ್ಟರೆ ಕೇವಲ ಹಾಡುಗಳನ್ನು ಮಾತ್ರ ಉಳಿಸಿಕೊಟ್ಟಂತಾಗುತ್ತದೆ. ಇದರಿಂದ ಬಹಳಷ್ಟು ಸಂಗತಿಗಳನ್ನು ಕಳೆದುಕೊಂಡಂತಾಗುತ್ತದೆ.

ಇಲ್ಲಿಯ ಹಾಡುಗಳನ್ನು ಗಮನಿಸಿದರೆ ಇವು ಒಬ್ಬ ಮುಸ್ಲೀಮ ಸಮುದಾಯಕ್ಕೆ ಸೇರಿದ ವಕ್ತಾರನ ಹಾಡುಗಳು ಎನಿಸುವುದೇ ಇಲ್ಲ. ಇದು ಕರೀಂಖಾನ್ ಅವರ ವ್ಯಕ್ತಿತ್ವವನ್ನು ದರ್ಶಿಸುವ ಮಹತ್ವದ ಸಂಗ್ರಹವಾಗಿ ಕಾಣುತ್ತದೆ. ಅವರ ಆಯ್ಕೆ ನಮಗೆ ಕೇವಲ ಜನಪದ ಹಾಡುಗಳನ್ನು ಮಾತ್ರ ಕೊಡುವುದಿಲ್ಲ; ಅದರ ಹಿಂದಿರುವ ಮನಸ್ಸು, ಬುದ್ಧಿ, ಭಾವಗಳನ್ನು ಪರಿಚಯಿಸಿ ಕೊಡುತ್ತದೆ. ಸ್ತುತಿ ಗೀತೆಗಳಲ್ಲಿ ೨೯ ದೈವಗಳ ಸ್ತುತಿಗಳಿದ್ದು, ಎಲ್ಲ ಸಮುದಾಯದವರು ಸ್ತುತಿಸುವ ದೈವಗಳ ಹಾಡುಗಳು ಇಲ್ಲಿವೆ. ಶಿವ, ಗಣಪತಿ, ಬೀರೆದೇವರು, ಜುಂಜಪ್ಪ, ಮಲ್ಲಯ್ಯ, ನಿರ್ವಾಣಶ್ ಸ್ವಾಮಿ, ಸೀಬಿಯ ರಂಗಯ್ಯ, ನಾಮದಯ್ಯ, ರಂಗ ದಯವಾಗೊ, ಸುಬ್ಬಯ್ಯ, ಕೆಂಗಪ್ಪ, ಕಾಳಪ್ಪ, ಸರಸ್ವತಿ, ಮಾರಮ್ಮ,

ದ್ಯಾವಮ್ಮ, ಕೆಂಚವ್ವ, ಕರಿಯವ್ವ ಹೀಗೆ ಹಲವಾರು ಜನಸಮುದಾಯಗಳು ಆರಾಧಿಸುವ ದೈವದ ಸ್ತುತಿಗೀತೆಗಳು ಇಲ್ಲಿವೆ. ಇಡೀ ಕೃತಿಯಲ್ಲಿ ಕಾಣುವುದು ಜನಪದ ಸಂಸ್ಕೃತಿ. ಅದು ಯಾವುದೋ ಒಂದು ಸಂಸ್ಕೃತಿಗೆ ಜೋತುಬಿದ್ದಂತೆ ಕಂಡುಬರುವುದಿಲ್ಲ. ಬಹುಶಃ ಇದು ಕರೀಂಖಾನ ಅವರ ಸಂಸ್ಕೃತಿಯ ವಿಶೇಷತೆ ಎನ್ನಬೇಕು.

'ಸಂಸಾರಿಕ ಗೀತೆಗಳು' ಭಾಗದಲ್ಲಿ ಸುಮಾರು ೨೮೦ ತ್ರಿಪದಿಗಳಿದ್ದು, ತಮಗೆ ಇಷ್ಟವಾದ ತ್ರಿಪದಿಗಳನ್ನು ಆಯ್ದುಕೊಂಡು ಹಾಡುತ್ತ ಬಂದಿದ್ದಾರೆ. ಇಷ್ಟೊಂದು ತ್ರಿಪದಿಗಳು ಒಬ್ಬ ಹಾಡುಗಾರನ ಸ್ಮೃತಿಯಲ್ಲಿರುವುದು ಸಾಮಾನ್ಯ ಮಾತಲ್ಲ. ಇದು ಕರೀಂಖಾನ ಅವರ ವಕ್ತಾರನ ಸಾಮರ್ಥ್ಯವಾಗಿಯೇ ಕಾಣಬೇಕು. ಇಲ್ಲೆಲ್ಲ ಗರತಿಯ ಹಾಡಿನಂತಹ ತ್ರಿಪದಿಗಳು ಕಂಡುಬರುತ್ತವೆ. ಇಲ್ಲಿಯ ೧೪ ವಿಷಯಗಳನ್ನು ಗಮನಿಸಿದರೂ ಅಲ್ಲೆಲ್ಲ ಕೇಂದ್ರ ವ್ಯಕ್ತಿ ಸ್ತ್ರೀ ಆಗಿದ್ದು, ತವರು ಮನೆ ಮತ್ತು ಅತ್ತೆಯ ಮನೆಯ ಸಂಬಂಧಗಳ ನಡುವಿನ ಅನುಭವವೇ ಇಲ್ಲಿಯ ಮುಖ್ಯ ದ್ರವ್ಯವಾಗಿದೆ.

ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ಆಳುವ ದೊರೆಗಂಜಿ।ಮಗಳೆ
ಅತ್ತೆ ಮಾನೆಯಾಗೆ ಬಾಳಮ್ಮ

ಕನ್ನಡಿ ಕೈತಪ್ಪಿ ಹನ್ನೆರಡು ಚೂರಾಗಿ
ಹೆಣ್ಣಿನ ಮನವು ಎರಡಾಗಿ। ದಾಳಿಂಬೆ
ಹಣ್ಣಾದರೇನು ಫಲವಿಲ್ಲ

ಹೆಣ್ಣೆತ್ತ ಮನೆಯು ಭಿನ್ನಭಿನ್ನತವಾದೊ
ಬಣ್ಣ ಬರೆದಿವ್ನಿ ನಡುಮನೆಗೆ ।ತಾಯಮ್ಮ
ಬಣ್ಣ ನೋಡಿ ನಮ್ಮ ಮರೆಯಮ್ಮ

ಅತ್ತರೆ ಜರೆದರೆ ಹತ್ತಿರಿರುವಿ ಏನ
ಹುಚ್ಚೇನ ಅವ್ವ ಮರುಳೇನೆ। ತಾಯಮ್ಮ
ಬಣ್ಣ ನೋಡಿ ನಮ್ಮ ಮರೆಯಮ್ಮ

ನಮರಾಯ್ರು ಕೂಡ ಅತ್ತೇಯ ಕಡೆಗಾಗಿ
ನನ ಮೇಲೆ ತಪ್ಪು ಹೇಳ್ತಾರೆ।ಪತಿದೇವ್ರು
ಯಾರನ್ನ ನೆನೆಯಾಲಿ ಆಮೇಲೆ

ನಂತರದ ಭಾಗ ಪ್ರೇಮಗೀತೆಗಳದ್ದಾಗಿದೆ. ಇಲ್ಲೂ ಕೆಲ ತ್ರಿಪದಿಗಳನ್ನು ಆಯ್ದುಕೊಂಡಿದ್ದಾರೆ. ನಂತರ ಕೆಲ ಸಣ್ಣ ಸಣ್ಣ ಹಾಡುಗಳನ್ನು ಆಯ್ದುಕೊಂಡಿದ್ದು, ಅವೆಲ್ಲ ಸುಂದರವಾದ ಹಾಡುಗಳಾಗಿವೆ. ಅಶ್ಲೀಲ ತಲೆಹಾಕದ ನುಡಿಗಳುಳ್ಳ ಹಾಡುಗಳು ಮಾತ್ರ ಇಲ್ಲಿರುವುದು ಕಂಡುಬರುತ್ತದೆ. ಕರೀಂಖಾನ್ ಅವರು ಚಲನಚಿತ್ರಗಳಿಗೂ ಹಾಡುಗಳನ್ನು ಬರೆದವರು. ಹೀಗಾಗಿ ಪ್ರಾರಂಭದ ಚಲನಚಿತ್ರದ ಪ್ರೇಮಗೀತೆಗಳೆಂದರೆ ಉತ್ತಮವಾದ ಭಾವಗೀತೆಗಳೇ ಆಗಿರುತ್ತಿದ್ದವು. ಅಂತಹ ಸ್ವಭಾವದ ಹಾಡುಗಳೇ ಇಲ್ಲಿವೆ. ಒಂದು ಹಾಡಿನ ನುಡಿ ಹೀಗಿದೆ:

ಗೆಜ್ಜೆ ಗಿಜ್ಜೇ ಕಟ್ಟುವಳಲ್ಲ
ಬರಿಯ ಕಾಲಲ್ ತಿರುಗುವಳಲ್ಲ
ಬರುವಳಲ್ಲ ಜಾತರಿಗೇ
ನಲ್ಲಾರಿ ಜಾಣ
ಇರುವಳಲ್ಲ ಮನೆಯೊಳಗೆ
ನಲ್ಲಾರಿ ಜಾಣ
ಇರುವಳಲ್ಲ ಮನೆಯೊಳಗೇ

ನಂತರದ ನೀತಿ ವಿಭಾಗದಲ್ಲಿ ಮತ್ತೆ ತ್ರಿಪದಿಗಳನ್ನೇ ಕಾಣುತ್ತೇವೆ.

ಸೂಳೇಗೆ ಹೋದವ್ನು ಏನಾದ ಎಂತಾದ
ಕಾಡು ನಾಯಾದ ಕಪಿಯಾದ। ಆ ಮುರುವ
ಸೂಳೇಯ ಕಾಲಿಗೆ ಕೆರವಾದ

ಪೌರಾಣಿಕ ಗೀತೆಗಳಲ್ಲಿ ಹೆಚ್ಚಾಗಿ ರಾಮಾಯಣ, ಮಹಾಭಾರತಗಳಿಗೆ ಸಂಬಂದಿಸಿದ ಹಾಡುಗಳಿವೆ. ಮೊದಲಿಗೆ ಒಂದೆರಡು ಗಂಗೆ ಗೌರಿಗೆ ಸಂಬಂಧಿಸಿದ ಹಾಡುಗಳಿದ್ದು, ನಂತರ ದ್ರೌಪದಿ ವಸ್ತ್ರಾಪಹರಣ, ಮಾವ ಕಂಸನ ಕೊಂದನೆ, ಸೀತಾರಾಮ ಕಲ್ಯಾಣ, ಹನುಮ ಇವನ್ನೆಲ್ಲ ಗಮನಿಸಿದರೆ ಪೌರಾಣಿಕ ನಾಟಕಗಳ ಹಾಡುಗಳ ನೆನಪಾಗುವಂತಿದೆ. ನಂತರದ ಚಾರಿತ್ರಿಕ ಗೀತೆಗಳು, ಕಥನ ಗೀತೆಗಳು, ಸಂಕೀರ್ಣ ಗೀತೆಗಳು ಇವನ್ನೆಲ್ಲ ಕರೀಂಖಾನರು ಜನ ಕೂಡಿದಲ್ಲಿ ಹಾಡುವ ಪರಿಪಾಠ ಇಟ್ಟುಕೊಂಡಂತೆ ತೋರುತ್ತದೆ. ಬಹುಶಃ ಈ ಹಾಡುಗಳು ಅವರಿಗೆ ನಾಟಕಗಳಿಗೆ ಮತ್ತು ಚಲನಚಿತ್ರಗಳಿಗೆ ಹಾಡುಗಳನ್ನು ಬರೆಯಲು ಅನುಕೂಲವಾಗಿರಬೇಕೆನಿಸುತ್ತದೆ. ಅವರು ದೀರ್ಘವಾದ ಕೆಲವು ಕಥನಕವನಗಳನ್ನೂ ಹಾಡಿದ್ದಾರೆ. ಉತ್ತರದೇವಿ, ಕೊಣವೇಗೌಡ, ದೊಂಬರಚೆನ್ನಿ, ರಾಜಕ್ಕಿ ರಾಜಣ್ಣ, ಕತ್ತಲೆ ರಾಯನ ಪದ– ಇವೆಲ್ಲ ಹೆಣ್ಣುಮಕ್ಕಳು ಹಾಡಿಕೊಳ್ಳುವ ಹಾಡುಗಳು. ಇವನ್ನು ಕರೀಂಖಾನರು ಹೇಗೆ ಬಳಸುತ್ತಿದ್ದರು ಎಂಬುದೇ ಆಶ್ಚರ್ಯದ ಸಂಗತಿಯಾಗಿ ಉಳಿಯುತ್ತದೆ. ಏನಿದ್ದರೂ ಅವರೊಬ್ಬ ಬಹುಮುಖ ಪ್ರತಿಭಾವಂತರಾದುದರ ಫಲ ಈ ಕೃತಿ ಎಂಬುದನ್ನು ನಾವು ಗಮನಿಸಬೇಕು.

೨೦೧೫ ರಲ್ಲಿ ಪ್ರಕಟವಾದ **'ನಮ್ಮವ್ವ ಸುಮಿತ್ರಾದೇವಿಯ ಜಾನಪದ ಭಂಡಾರ'** ಎಂಬ ಕೃತಿಯು ಒಂದು ವೈವಿಧ್ಯಮಯವಾದ ಸಂಪುಟ. ಇದರ ಸಂಪಾದಕರು ಡಾ. ಜಯಶ್ರೀ ದಂಡೆ. ಅವರು ತಮ್ಮ ತಾಯಿಯಾದ ಶ್ರೀಮತಿ ಸುಮಿತ್ರಾದೇವಿ ಅಂಗಡಿ ಅವರಿಗೆ ಬರುವ ಸಂಪ್ರದಾಯದ ಹಾಡುಗಳು, ಶೀಗಿ–ಗೌರಿ ಹಾಡುಗಳು, ಪ್ರಾರ್ಥನೆಗಳು, ಮಕ್ಕಳಾಟದ ಹಾಡುಗಳು, ತ್ರಿಪದಿಗಳು, ಗಾದೆಗಳು, ಒಗಟುಗಳು ಈ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಸಾವಧಾನವಾಗಿ ಸಂಗ್ರಹಿಸಿ ಇಲ್ಲಿ ಪ್ರಕಟಿಸಿದ್ದಾರೆ. ಈ ಸಾಹಿತ್ಯ ಪ್ರಕಾರಗಳ ಜೊತೆಗೆ ಸಮಿತ್ರಾದೇವಿಯವರಿಗೆ ಪರಂಪರೆಯಿಂದ ತಿಳಿದಿರುವ ಹಬ್ಬ, ಹುಣ್ಣಿವೆ, ಅಮವಾಸ್ಯೆಗಳ ಸಾಂಸ್ಕೃತಿಕ ಪರಿಚಯವನ್ನೂ ಮನುಷ್ಯನ ಹುಟ್ಟಿನಿಂದ ಸಾಯುವ ವರೆಗಿನ ವಿಶೇಷ ಸಂಸ್ಕಾರಗಳನ್ನೂ ಸಂಗ್ರಹಿಸಿ ಸೇರಿಸಿದ್ದಾರೆ. ಜೊತೆಗೆ ತಮ್ಮ ತಾಯಿಯ

ಒಟ್ಟು ಬದುಕಿನ ಅರಿವು, ಪ್ರೀತಿಗಳ ಅಪರೂಪದ ಗುಣಗಳನ್ನು ವಿವರಿಸಿದ್ದಾರೆ. ವಕ್ತಾರರಾದ ಸುಮಿತ್ರಾದೇವಿ ಅವರೂ ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಸ್ವತಃ ಶಿಕ್ಷಕಿಯಾಗಿ, ಒಬ್ಬ ಶಿಕ್ಷಕನ ಮಡದಿಯಾಗಿ, ಪ್ರಮಾಣಿಕವಾಗಿ ದುಡಿದ ಅವರ ಬದುಕಿನ ಬಗೆಗೆ ಮತ್ತೆ ಕೆಲ ಸಹೋದ್ಯೋಗಿಗಳಿಂದ ಅನಿಸಿಕೆ ಅಭಿಪ್ರಾಯಗಳನ್ನು ಸಂಗ್ರಹಿಸಿ ಸೇರಿಸಿದ್ದಾರೆ. ಜೊತೆಗೆ ಅವರ ಮಕ್ಕಳು ಮೊಮ್ಮಕ್ಕಳು ಸಹೊದ್ಯೋಗಿಗಳು ಇವರೆಲ್ಲರ ಕೆಲ ಅಭಿಪ್ರಾಯಗಳನ್ನೂ ದಾಖಲಿಸಿದ್ದಾರೆ. ಇದರಿಂದ ಒಬ್ಬ ಪ್ರತಿಭಾವಂತೆಯ ಬದುಕಿನ ಒಟ್ಟು ವ್ಯಕ್ತಿತ್ವದ ಛಾಯೆ ಈ ಕೃತಿಯಲ್ಲಿ ಕಾಣುವಂತಾಗಿದೆ. ೬೦೦ ಪುಟಗಳ ಈ ಬೃಹತ್ ಸಂಪುಟ ಕನ್ನಡ ಜನಪದ ಸಾಹಿತ್ಯ ಲೋಕದಲ್ಲಿ ಒಂದು ಅಪರೂಪದ ಕೃತಿ ಎನ್ನುವಂತಾಗಿದೆ.

ಸಂಪಾದಕರು ತಮ್ಮ ತಾಯಿಯ ಜಾನಪದ ಅರಿವಿನ ಬಗೆಗೆ ಹೀಗೆ ಬರೆದು ಕೊಂಡಿದ್ದಾರೆ: " ನನ್ನವ್ವ ಹಾಡುಗಳನ್ನು ಕಲಿತದ್ದು ತಮ್ಮ ತಾಯಿ ತಂದೆಗಳಾದ ಗುರಸಂಗಮ್ಮ ಮುಕ್ಕಣ್ಣಪ್ಪ ಕೋರಿ ಅವರಿಂದ. ಅಂದು ಹಿಟ್ಟಿನ ಗಿರಣಿಗಳು ಇಲ್ಲದ ಆ ಕಾಲದಲ್ಲಿ ನಸುಕಿನ ನಾಲ್ಕು ಗಂಟೆಯಿಂದಲೆ ಬೀಸುವ–ಕುಟ್ಟುವ ಕೆಲಸ ಪ್ರಾರಂಭವಾಗುತ್ತಿತ್ತು. ದೈಹಿಕ ಶ್ರಮದ ದಣಿವನ್ನು ಆರಿಸಿಕೊಳ್ಳಲು ಇಂಥ ಹಾಡುಗಳೆ ಸಹಾಯಕ್ಕೆ ಬರುತ್ತಿದ್ದವು. ಸಂಭ್ರಮದಿಂದ ಕೆಲಸ ಮಾಡುತ್ತಿದ್ದರು. ಕ್ರಿಯಾ–ಜ್ಞಾನ ಸಮನ್ವಯದ ಸೃಜನಶೀಲತೆ ಅವರಲ್ಲಿ ತುಂಬಿರುತ್ತಿತ್ತು. ನಮ್ಮ ಆಯಿ ಮುತ್ತ್ಯಾ ಹಾಡುವ ಎಲ್ಲ ಹಾಡುಗಳು ಅವರ ಎಲ್ಲ ಮಕ್ಕಳಿಗೂ (ಗಂಡು–ಹೆಣ್ಣು) ಬರುತ್ತಿದ್ದವು. ಇದೊಂದು ನಮ್ಮವ್ವನ ತವರು ಮನೆಯ ವಿಶೇಷ. ಇಂಥ ಅಪರೂಪದ ಕಣಜ ಬರಿದಾದದ್ದೆ ಇಲ್ಲ. ಅದೊಂದು ತವನಿಧಿ. ಬಳಸಿದಷ್ಟು ಹೆಚ್ಚಾಗುತ್ತಲೆ ನಡೆದಿದೆ. ನನ್ನವ್ವ ತನ್ನ ೭೮ನೆಯ ವಯಸ್ಸಿನಲ್ಲಿ (ಜನನ: ೫–೪–೧೯೩೬) ಅತ್ಯುತ್ಸಾಹದಿಂದ ಹಾಡುಗಳನ್ನು ಹಾಡುತ್ತಾಳೆ. ಕೇಳಿದ ಯಾವುದೆ ಜನಪದ ಸಂಸ್ಕೃತಿಯ ಮಾಹಿತಿಯನ್ನು ಕೊಡುತ್ತಾಳೆ. ...ಜಾನಪದ ಕಥೆಗಳು, ಜಾನಪದ ವೈದ್ಯ ಮಾಹಿತಿಗಳು, ಇನ್ನೂ ಉಳಿದುಕೊಂಡ ಗಾದೆ, ಒಗಟು, ಹಾಡುಗಳನ್ನು ಒಟ್ಟುಗೂಡಿಸಿದರೆ ಇನ್ನೊಂದು ಸಂಪುಟವಾಗುತ್ತದೆ. ದಣಿವರಿಯದ ಕಂಠ, ಮರೆಯದ ವಿವರಗಳು ನಮಗೆ ಎಷ್ಟೋ ಸಾರೆ ಕುಳಿತಲ್ಲಿಯೆ ಸಿಕ್ಕುಬಿಡುತ್ತವೆ" (ಸಂಪಾದಕರ ಮಾತು, ಪು. ೪). ಈ ವಿವರಗಳನ್ನು ಗಮನಿಸಿದರೆ, ಒಬ್ಬ ಪ್ರತಿಭಾವಂತರ ಇಡೀ ಬದುಕು ಹೇಗೆ ಸದಾ ಜೀವಂತಿಕೆಯಿಂದ ತುಂಬಿರುತ್ತದೆ ಎಂಬುದನ್ನು ಮನಗಾಣಬಹುದಾಗಿದೆ.

ಶ್ರೀಮತಿ ಸುಮಿತ್ರಾದೇವಿಯವರು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿಗೆ ಸೇರಿದ ಢವಳಗಿ ಗ್ರಾಮದವರು. ಮದುವೆಯಾಗಿ ಬಂದದ್ದು ಅವಿಭಾಜಿತ ಬಿಜಾಪೂರ ಜಿಲ್ಲೆಯ (ಈಗಿನ ಬಾಗಲಕೋಟ ಜಿಲ್ಲೆಯ) ಹುನಗುಂದ ತಾಲೂಕಿನ ಧನ್ನೂರ ಗ್ರಾಮಕ್ಕೆ. ಅವರ ಪತಿ ಲಿಂ. ಸಿದ್ರಾಮಪ್ಪ ಅಂಗಡಿ ಅವರೂ ಶಾಲಾ ಶಿಕ್ಷಕರು. ಶ್ರೀಮತಿ ಸುಮಿತ್ರಾದೇವಿಯವರೂ ಶಲಾಶಿಕ್ಷಕರು. ಹೀಗೆ ಶಾಲಾ ಶಿಕ್ಷಕರಾಗಿಯೂ ಅಪರೂಪದ ಜನಪದ ಭಂಡಾರವನ್ನೇ ಹೊತ್ತಿದ್ದು ಅವರ ವ್ಯಕ್ತಿತ್ವದ ಒಂದು ವಿಶೇಷತೆಯಾಗಿ ಕಾಣುತ್ತದೆ. ಇದರಿಂದಾಗಿಯೇ ತಾವು ದುಡಿಯುವ ಪರಿಸರದಲ್ಲಿ, ಕೌಟುಂಬಿಕ ಮತ್ತು ಸಾಮಾಜಿಕ

ಪರಿಸರದಲ್ಲಿ ವಿಶೇಷವಾದ ಗೌರವಕ್ಕೆ ಪಾತ್ರರಾಗಿ ಬದುಕಿದ್ದಾರೆ. ಇದು ಅವರ ಪ್ರತಿಭೆಯ ಕಾರಣವಾಗಿ ಕೈಗೂಡಿ ಬಂದ ವ್ಯಕ್ತಿತ್ವ ಎಂಬುದರಲ್ಲಿ ಎರಡು ಮಾತಿಲ್ಲ.

ಈ ಕೃತಿಯಲ್ಲಿ ಶ್ರೀಮತಿ ಸುಮಿತ್ರಾದೇವಿಯವರು ಹೇಳಿದ ಜನಪದ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ೧೦ ಅಧ್ಯಾಯಗಳಿವೆ. ಶರಣರ ಹಾಡುಗಳು, ಸ್ತುತಿ-ತತ್ತ್ವ-ಮಂಗಳ ಪದಗಳು, ಸಂಪ್ರದಾಯದ ಹಾಡುಗಳು, ಗಂಗೆ-ಗೌರಿ ಹಾಡುಗಳು, ಮಕ್ಕಳ ಹಾಡುಗಳು, ಜನಪದ ತ್ರಿಪದಿಗಳು, ಗಾದೆಗಳು, ಒಗಟುಗಳು, ಸಂಸ್ಕಾರಗಳು, ಹಬ್ಬ ಹುಣ್ಣಿಮೆ ಅಮವಾಸ್ಯೆಗಳು- ಹೀಗೆ ಇಲ್ಲಿಯ ಅಧ್ಯಾಯಗಳಲ್ಲಿ ತಾವು ಸಂಗ್ರಹಿಸಿದ ಮಾಹಿತಿಗಳನ್ನು ಸಂಪಾದಕರು ಅಳವಡಿಸಿದ್ದಾರೆ.

ಇಲ್ಲಿಯ ಮೊದಲ ಅಧ್ಯಾಯದಲ್ಲಿ ಶರಣರಿಗೆ ಸಂಬಂಧಿಸಿದ ೬೫ ಹಾಡುಗಳಿವೆ. ಕೂಡಲಸಂಗಮ ಕ್ಷೇತ್ರದ ಸುತ್ತಮುತ್ತಲ ಪರಿಸರದಲ್ಲಿಯೆ ಬದುಕಿದ ಈ ವಕ್ತಾರಳಿಗೆ ಶರಣರನ್ನು ಕುರಿತು ಅತ್ಯಂತ ಭಕ್ತಿಭಾವಗಳಿವೆ. ಹೀಗಾಗಿಯೇ ಶರಣರ ಕುರಿತು ಇಷ್ಟೊಂದು ಹಾಡುಗಳನ್ನು ಅವರು ಕಲಿತಿದ್ದಾರೆ. ಜೀವನದ ತುಂಬ ಹಾಡುತ್ತ ಬಂದಿದ್ದಾರೆ ಮತ್ತು ಈಗಲೂ ಹಾಡುತ್ತಾರೆ. ಈ ಹಾಡುಗಳಲ್ಲಿ ಬಸವಣ್ಣನವರನ್ನು ಕುರಿತ ಹಾಡುಗಳೆ ಹೆಚ್ಚಾಗಿವೆ. ಜೊತೆಗೆ ಅಕ್ಕನಾಗಮ್ಮ, ಕೂಡಲ ಸಂಗಮದೇವ, ಲಿಂಗ, ಅಷ್ಟಾವರಣ, ಷಟ್‌ಸ್ಥಲ ಈ ವಿಷಯಗಳಿಗೆ ಸಂಬಂಧಿಸಿದ ಹಾಡುಗಳೂ ಇವೆ.

ಸವಿಯೊ ಸವಿಯೊ ಸವಿಯೊ ಸವಿಯೊ ಲಿಂಗವೆ
ಹೃದಯದೊಲವಿನ್ಹಾಲ ನೀನು ಸವಿಯೊ ಲಿಂಗವೆ ।೧।
ಕಾಮಧೇನು ನೀನಾಗಿ ಲೋಕವೆಲ್ಲ ಸಲುಹುತಿರಲು
ಭಕ್ತಿಧೇನು ನಾನಾಗಿ ನಿನಗೆ ಹಾಲನೀವೆನು ।೨।
ಕಲ್ಪತರು ನೀನಾಗಿ ಲೋಕಾಶ್ರಯ ಕೊಡಲು ನೀನು
ಮಹೇಶನಾಗಿ ನಾ ನಿನಗೆ ಹಾಲನೀವೆನು ।೩।
ದಾನಿ ನೀನು ಲೋಕಕೆಲ್ಲ ದೀನ ನಾನು ಲೋಕದಲ್ಲಿ
ದಾಸೋಹ ಮನದ ಒಲವಿನ್ಹಾಲ ಅರ್ಪಿಸಿಟ್ಟಿಹೆ ।೪।
ಬಾರೊ ಬಾರೊ ಬಾರೊ ಬಾರೊ ಬಾರೊ ಲಿಂಗವೆ
ಸವಿಯೊ ಸವಿಯೊ ಒಲವ ಸಚ್ಚಿದಾನಂದ ಲಿಂಗವೆ ।೫।

ಇಲ್ಲಿಯ ಎರಡನೇ ಭಾಗ 'ಸ್ತುತಿ-ತತ್ತ್ವ-ಮಂಗಳ ಪದಗಳು' ಎಂದಿದೆ. ಇಲ್ಲಿ ಪೂಜೆ, ಭಜನೆ, ಪ್ರಾರ್ಥನೆ ಮಾಡುವಾಗ ಹಾಡುವ ಹಾಡುಗಳು ತುಂಬಿವೆ.

ಮಂಗಳಾರುತಿ ತಂದು ಬೆಳಗಿರಿ ಅಂಬುಜಾಕ್ಷನ ರಾಣಿಗೆ
ಇಂದು ವದನೆಯರೆಲ್ಲ ಕೂಡಿ ಮುದ್ದು ಮಂಗಳಗೌರಿಗೆ ।ಪ।
ಶುದ್ಧ ಸ್ನಾನವ ಮಾಡಿ ಗೌರಿಗೆ ವಜ್ರಪೀಠದಿ ನಿಲಸಿರಿ
ತಿದ್ದಿ ತಿಲಕವ ತೀಡಿದಂತೆ ಮುದ್ದು ಮಂಗಳಗೌರಿಗೆ ।೧।

ಹುಟ್ಟ ಬಡವಿಯ ಕಷ್ಟ ಕಳೆಯಲು ಕೊಟ್ಟಳರಸಿಯು ಸಿರಿಯನು
ಎತ್ತಿ ಕುವರನ ತೋರಿದಂತೆ ಶುಕ್ರವಾರದ ಗೌರಿಗೆ ।೨।
ಕರವಿನಂಚಿಸಿ ಕರವೀರಾದಳು ಭರದಿ ಸ್ಥಿರವಾಗಿರುವಳು
ಪರಮಭಕ್ತರ ಸ್ಮರಣೆ ಮಾಡುತ ನಗರದಿಂದಲಿ ಬರುವ ದೇವಿಗೆ ।೩।

ಮುಂದಿನ ಮೂರನೆಯ ಭಾಗ ಸಂಪ್ರದಾಯದ ಹಾಡುಗಳಿಂದ ತುಂಬಿದೆ. ಇಲ್ಲಿ ಮದುವೆ, ಸೋಬಾನ, ಮೈನೆರೆದಹಾಡು, ಕಪ್ಪಸದ ಹಾಡುಗಳು ಹಾಗೂ ಜೋಗುಳದ ಹಾಡುಗಳನ್ನು ಕ್ರಮವಾಗಿ ಜೋಡಿಸಲಾಗಿದೆ. ಹೀಗಾಗಿ ಈ ವಕ್ತಾರಳ ಹಾಡಿನ ಭಂಡಾರದ ಅರಿವು ನಮಗಾಗುತ್ತದೆ. ಮದುವೆ ಸಂದರ್ಭದ ಒಳ್ಳ-ಕಲ್ಲು ಪೂಜೆ ಹಾಡಿನಿಂದ ಪ್ರಾರಂಭವಾಗಿ, ಅರಿಷಿಣ ಹಚ್ಚುವ, ಹಸೆಗೆ ಕರೆಯುವ, ಐರಾಣಿ ತರುವ, ಎಣ್ಣೆ ಹಚ್ಚುವ, ಹೂ ಮುಡಿಸುವ, ಶ್ಯಾಸೆ ಇಡುವ, ಉಡಿ ತುಂಬುವ, ಬೀಗರ ಹಾಡುಗಳು, ಹಾಗು ಕೂಸು ಒಪ್ಪಿಸುವ ಹಾಡುಗಳನ್ನು ಕ್ರಮವಾಗಿ ಕೊಡಲಾಗಿದೆ. ಇನ್ನುಮುಂದೆ ಮೈನರೆದ ನಂತರ ಸೋಬಾನದ ಹಾಡುಗಳಿವೆ. ಈ ಮೈನೆರೆದ ಹಾಗು ಸೋಬಾನದ ಹಾಡುಗಳು ಶೃಂಗಾರ ಭಾವಕ್ಕೆ ಅತ್ಯಂತ ಉತ್ತಮ ಉದಾಹರಣೆಗಳಾಗಿವೆ. ಇಲ್ಲಿಯ ಮೈನೆರೆದ ಹಾಡೊಂದು ಬಾಲ್ಯವಿವಾಹದ ನಂತರ, ಹೆಣ್ಣು ಋತುಮತಿಯಾದಾಗಿನ ಹಾಡಾಗಿದೆ:

ಬುಟ್ಟ ಬುಧವಾರ ದಿನ
ಬುದವಂತಿ ಮೈನರದ
ಬರ್‍ತಾನಿಲ್ಲವ ಕೇಳ
ಜೀರಗ ದಂಡಿಯ ಹೇಳ
ದಂಡೀಗ್ಹಚ್ಚಂದ ರತನದ್ಹರಳs ಸೋಬಾನ ।೧।

ಅತ್ತಿಮಾವರ ಮ್ಯಾಲೆ
ಅಳಿಯ ಶ್ಯಾನವು ಮಾಡಿ
ಉಂಗರುಡುದಾರು ಬೇಡಿ
ಕಂಟಿ ಕಡೇವು ಬೇಡಿ
ಬಂಗಾರ ಕಡೇವು ಬೇಡಿ
ಇಷ್ಟೆಲ್ಲ ಬೇಡಿ ಹಠ ಮಾಡೆ ಸೋಬಾನ ।೨।

ಅತ್ತಿ ಮಾವರು ಕೂಡಿ
ಅಳಿಯನ ಸನುಮತು ಮಾಡಿ
ಉಂಗುರುಡುದಾರು ಹಾಕಿ
ಕಂಟಿ ಕಡೇವು ಹಾಕಿ
ಬಂಗಾರ ಕಡೇವು ಹಾಕಿ
ಶೆಲ್ಲೆ ಶಕುಲತಿ ಮಾಡಿ
ಊದಿನ ಕಡ್ಡಿಯ ತರಸಿ
ಊರೆಲ್ಲ ಮೆರಸಿ ಮಕರಂದ ಸೋಬಾನ ।೩।

ನಂತರ ಕುಪ್ಪಸದ ಹಾಡುಗಳಿವೆ. ಕುಪ್ಪಸದ ಹಾಡುಗಳಲ್ಲಿ ಒಂದು ಕ್ರಮವನ್ನು ಕಾಣುತ್ತೇವೆ. ಮೊದಲು ಬಸುರಿಯ ಇಡಿ ದೇಹದ ಕಳೆಯ ವರ್ಣನೆ ಕಾಣುತ್ತದೆ. ಆ ದೈಹಿಕ ಕಾಂತಿಯನ್ನು ವಿವರಿಸುವ, ನಾನಾ ತರದ ಹೊಸದಾದ ಬಣ್ಣಬಣ್ಣದ ಬಟ್ಟೆಗಳನ್ನು ಆಭರಣಗಳನ್ನು ಹಾಕಿಕೊಂಡು ಸಂತೋಷ ಪಡುವ ಆಕೆಯ ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನು ವರ್ಣಿಸುವ ಹಾಡುಗಳು ಸುಂದರವಾಗಿವೆ. ಎರಡನೆಯದು ಆಕೆ ಒಂದೊಂದು ತಿಂಗಳಿಗೆ ಆಹಾರ ಬದಲಾವಣೆಯ ಬಯಕೆಯನ್ನು ಹಿಡಿದಿಡುವ ಹಾಡುಗಳು. ನಂತರ ಆಕೆಗೆ ತರತರದ ಬಟ್ಟೆಗಳನ್ನು ಆಭರಣಗಳನ್ನು ತೊಡಿಸಿ, ಉಡಿತುಂಬಿ ಹಿರಿಯರೆಲ್ಲ ಹರಸುವ ಹಾಡುಗಳು. ಕೊನೆಯಲ್ಲಿ ಬೇನೆ ತಿನ್ನುವ ಹಾಡುಗಳು. ಹೀಗೆ ಕ್ರಮವಾಗಿ ಇಲ್ಲಿಯ ಹಾಡುಗಳನ್ನು ಕೊಡಲಾಗಿದೆ.

ಬಣ್ಣವು ಬದಲಾಗಿದೆ ಚಿನ್ನದ ಕಳೆ ಬಂದಿದೆ
ಕಣ್ಣುಗಳ ಕಾಂತಿಯು ಕಪ್ಪಾಗಿದೆ ।ಪ।
ನಡವು ದಪ್ಪಾಗಿದೆ ನಡಿಗೆ ಭಾರವಾಗಿದೆ
ನುಡಿಯಲ್ಲಿ ಬೇಸರವು ತಾ ತುಂಬಿದೆ
ಉಡುವ ತೊಡುವ ಮನಸದೆ ತಡೆಯದಂತಾಗಿದೆ
ಪಡೆದ ತಾಯಿ ತಂದೆ ಮನೆಯ ಕರೆಯನ್ನು ಕಾದಿದೆ ।೧।
ಹಸಿರು ಸೀರೆ ಬೇಡಿದೆ ಹೊಸಹೊಸ ರುಚಿ ಬಯಸಿದೆ
ರಸಬಾಳೆ ಹಣ್ಣು ತಿನ್ನುವ ಮನಸಾಗಿದೆ
ಬಿಸಿಲಿಗೆ ಬರಡಾಗಿದೆ ಬೇಸರಿಕೆಯು ಬರುತಿದೆ
ಬೀಸುವ ಕುಟ್ಟುವ ಕೆಲಸ ಕಟ್ಟಾಗಿದೆ ।೨।
ಉಟ್ಟ ಸೀರೆ ಸಾಲದೆ ಪಟ್ಟಿ ಬೇಡವಾಗಿದೆ
ಕಟ್ಟಿ ಕಟ್ಟಿ ಸೀರೆಗಂಟು ಕಿರಿದಾಗಿದೆ
ತೊಟ್ಟ ಕುಬಸ ಸಾಲದೆ ಕಟ್ಟು ಕಾಣದಾಗಿದೆ
ಹೊಟ್ಟೆಯಲ್ಲಿ ಬಂಗಾರದ ಗಟ್ಟಿಯಾಗಿ ನಿಂತಿದೆ ।೩।
ಬಾಯಿ ಸಪ್ಪಗಾಗಿದೆ ಬಾರಿ ಹಣ್ಣು ಬೇಡಿದೆ
ತಾಯಿಯಾಗಿ ನಲಿಯು ದಿನವು ತಾ ಬಂದಿದೆ
ತವರ ಮನೆಯ ನೆನಸಿದೆ ಬರಲು ಹೇಳಿ ಕಳಿಸಿದೆ
ಶಿವನ ಕಣ್ಣು ಸುಖದಿ ತೆರೆಯಲೆಂದು ಶಿರವು ಬಾಗಿದೆ ।೪।

ಈ ಬಗೆಯ ಉತ್ತಮವಾದ ಹಾಡುಗಳು ಇಲ್ಲಿವೆ. ಮುಂದೆ ಮಗುವಾದ ನಂತರ ಅದಕ್ಕೆ ಹೆಸರಿಡುವ ತೊಟ್ಟಿಲ ಕಾರ್ಯಕ್ರಮದ ಜೋಗುಳ ಹಾಡುಗಳನ್ನು ಕೊಡಲಾಗಿದೆ. ಈ ಎಲ್ಲ ಬಗೆಯ ಹಾಡುಗಳ ಸಂದರ್ಭಗಳನ್ನು 'ಸಂಸ್ಕಾರಗಳು' ಎಂಬ ಒಂಬತ್ತನೇ ಅಧ್ಯಾಯದಲ್ಲಿ ಜನನದಿಂದ ಮರಣದ ವರೆಗಿನ ಸಂಸ್ಕಾರಗಳ ಹಿನ್ನೆಲೆಗಳನ್ನು ವಕ್ತಾರರಿಂದ ಸಂಗ್ರಹಿಸಿ ಕೊಟ್ಟಿರುವುದು ಉಚಿತವಾಗಿದೆ.

ಭಾಗ ನಾಲ್ಕರಲ್ಲಿ ಗಂಗಿ–ಗೌರಿ ಸಂಪ್ರದಾಯಕ್ಕೆ ಸಂಬಂಧಿಸಿದ ೨೮ ಹಾಡುಗಳಿವೆ. ೧೦ ನೇ ಅಧ್ಯಾಯದಲ್ಲಿ 'ಹಬ್ಬ ಹುಣ್ಣಿವೆ ಅಮವಾಸ್ಯೆಗಳು' ಎಂಬಲ್ಲಿ ಇಂತಹ ಆಚರಣೆಗಳಿಗೆ ಸಂಬಂಧಿಸಿದಂತೆ ವಿವರಣೆಗಳನ್ನು ಕೊಡಲಾಗಿದೆ. ಶೀಗಿ ಹುಣ್ಣಿವೆ ಹಾಗೂ ಗೌರಿ ಹುಣ್ಣಿವೆಗಳ ವಿವರಗಳನ್ನು ಗಂಗಿ–ಗೌರಿ ಹಾಡುಗಳ ಹಿನ್ನೆಲೆಯಾಗಿ ಕಾಣಬಹುದಾಗಿದೆ.

ಶೀಗಿ ಹುಣ್ಣಿವೆ ವಿಜಯದಶಮಿ ಹಬ್ಬದ ನಂತರ ಬರುವ ಹುಣ್ಣಿವೆಯಾದರೆ, ಗೌರಿ ಹುಣ್ಣಿವೆ ದೀಪಾವಳಿ ಅಮವಾಸ್ಯೆಯ ನಂತರ ಬರುವ ಹುಣ್ಣಿವೆಯಾಗಿದೆ. 'ವಿಜಯದಶಮಿಯಂದು ಶೀಗವ್ವನನ್ನು ಕುಂಬಾರ ಮನೆಯಿಂದ ಹೆಣ್ಣುಮಕ್ಕಳು ಹಾಡುತ್ತ ಆರತಿಯೊಂದಿಗೆ ಹೋಗಿ ಪೂಜಿಸಿ, ಆರತಿ ಬೆಳಗಿ ತರುವರು. ಶೀಗಿ ಹುಣ್ಣಿಮೆಯ ವರೆಗೆ ಕೂಡಿಸಿ ದಿನಾಲು ಸಂಜೆಗೆ ಆರತಿ ಮಾಡುತ್ತಾರೆ'. ಈ ಸಂದರ್ಭದಲ್ಲಿ 'ಶೀಗಿ ಹುಣ್ವಿ ಬಂದಿತವ್ವ ಚರಗ ಚೆಲ್ಲುದಕ/ ಮತ್ತ ಹೊಲಕ ಹೋಗುದಕ', 'ಒಂದ ಸುತ್ತಿನ ಕ್ವಾಟಿ ಅದರಾಗ ಹೊಂದಿ ಕುಂತಾನ ಬಸವ' ಈ ಮುಂತಾದ ಹಾಡುಗಳನ್ನು ಹಾಡುತ್ತಾರೆ. ಜೊತೆಗೆ ಗಂಗೆ–ಗೌರಿಗೆ ಸಂಬಂಧಿಸಿದ ಹಾಡುಗಳನ್ನೂ ಇಲ್ಲಿ ಹಾಡುತ್ತಾರೆ.

'ಗೌರಿ ಹುಣ್ಣಿವೆ ದೊಡ್ಡ ಹುಣ್ಣಿವೆ. ದೀಪಾವಳಿ ಪಾಡ್ಯದ ದಿನ ಕೂಡಿಸಿದ ಗೌರವ್ವನನ್ನು ದಿನಾಲು ಪೂಜಿಸಿ, ಅವರೆ ಹೂ ಚಂಡು ಹೂ ಪತ್ರಿ ಏರಿಸುವ ಪರಿಪಾಠವಿದೆ. ತರತರದ ಆರತಿ ಕಣಕದಾರುತಿ, ಎಳ್ಳು ಬೆಲ್ಲ, ಶೇಂಗಾ ಬೆಲ್ಲ ಕುಟ್ಟಿ ಆರತಿ ಮಾಡುತ್ತಾರೆ. ಸಕ್ಕರೆ ಆರತಿಯನ್ನೂ ಬೆಳಗುವರು. ಛಟ್ಟಿ ಅಮವಾಸ್ಯೆಯ ಸಮೀಪಕ್ಕೆ ಗೌರವ್ವನನ್ನು ಕಳಿಸುವರು'. ಈ ಸಂದರ್ಭದಲ್ಲಿ ದಿನಾಲು ರಾತ್ರಿ ಗೌರವ್ವನ ಮುಂದೆ ಗಂಗೆ–ಗೌರಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವರು.

ಒಂದ ಸೇರ ಎಣ್ಣಿ ತಂದೀನೆ ಗೌರಿ
ಒಂದ ದೀವಿಗಿ ಹಚ್ಚೀನೆ ಗೌರಿ।
ರಾಯರಾಡುದು ಹಾದಿ ಬೀದ್ಯಾಗ
ಶಟ್ಟರಾಡುದು ಪಟ್ಟಣ ಸಾಲ್ಯಾಗ
ಹಾರೂರ ಚನ್ನಮ್ಮಗ ಹವಳದ ಕೈಕಟ್ಟು
ಭಾರತ ಬೆಳದಿಂಗಳ ।

ಶೀಗಿ ಮತ್ತು ಗೌರಿಗಳು ಮಣ್ಣಿನ ಪೂಜೆಗಳಾಗಿದ್ದು, ಶಕ್ತಿ ದೇವತೆಗಳ ಪೂಜೆಗಳೂ ಆಗಿವೆ. ಜೊತೆಗೆ ಬೆಳದಿಂಗಳ ಪೂಜೆಗಳೂ ಎನಿಸುತ್ತವೆ. ಗಂಗಿ–ಗೌರಿ ಹಾಡುಗಳು ಇಲ್ಲಿ ಬಳಕೆಯಾಗುತ್ತವೆ.

ಬಹು ವೈವಿಧ್ಯಮಯವಾದ ಜನಪದ ಸಾಹಿತ್ಯ ಪ್ರಕಾರಗಳನ್ನು ಹೊಂದಿದ ಈ ಕೃತಿ ಒಂದು ಅಪರೂಪದ ಸಂಗ್ರಹವಾಗಿದೆ. ಒಬ್ಬ ವಕ್ತಾರನ ಸಾಮರ್ಥ್ಯವನ್ನು ಪ್ರದರ್ಶಿಸುವ ಕೃತಿ ಇದು. ಇಲ್ಲಿಯ ಐದನೇ ಭಾಗ 'ಮಕ್ಕಳ ಹಾಡುಗಳು' ಎಂದಿದೆ. ಇಲ್ಲಿ ಮಕ್ಕಳನ್ನು ಆಡಿಸುವ, ಮಕ್ಕಳೇ ಆಡುತ್ತ ಅನ್ನುವ ಗೀತಗಳನ್ನು ಕೊಡಲಾಗಿದೆ. ಇವುಗಳನ್ನು ಶಿಶುಗೀತಗಳು, ಚುಕ್ಕೋಳ ಪದಗಳು, ಶಿಶುಪ್ರಾಸಗಳು ಎಂದು ಕರೆಯುತ್ತ ಬರಲಾಗಿದೆ.

ಇಲ್ಲಿಯ ಪದಗಳನ್ನು ನೆದರ ತೆಗೆಯುವ ಹಾಡುಗಳು, ಮಕ್ಕಳಿಗೆ ಆಸಿಬಟ್ಟು ಮಾಡುವ ಹಾಡು, ಶಿಶುಪ್ರಾಸಗಳು, ಕಲಿಕೆ–ಶಿಕ್ಷಣ, ಅನುಕರಣೆ, ನೀರು ತರುವ ಆಟ, ಚಂದಾ ಮಾಮಾ, ಹೆಣ್ಣುಮಕ್ಕಳ ಆಟಗಳು, ಗಂಡು ಮಕ್ಕಳ ಆಟಗಳು, ಒಕ್ಕಲುತನ ವೃತ್ತಿಗೆ ಸಂಧಿಸಿದವು, ಮಕ್ಕಳ ಹಾಡುಗಳು, ಕಥನ ಕವನಗಳು ಎಂದು ಹತ್ತಾರು ಬಗೆಯಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಶ್ರೀಮತಿ ಸುಮಿತ್ರಾದೇವಿ ಅವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದು ಮಕ್ಕಳಿಗೆ ಆಡಲು ಹಾಡಲು ಕಲಿಸುತ್ತ ಬಂದುದರ ಫಲ ಈ ಭಾಗ ಎನ್ನಬೇಕು. ಒಟ್ಟಿಗೆ ೮೯ ಹಾಡುಗಳು ಇಲ್ಲಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ನೆದರ ತೆಗೆಯುವ ಒಂದು ನುಡಿಯನ್ನು ನೋಡಬಹುದಾಗಿದೆ :

ಹಾದಿ ದೃಷ್ಟಿ ಬೀದಿ ದೃಷ್ಟಿ
ನಿಕ್ಕರ ದೃಷ್ಟಿ ಪಾಪಿ ದೃಷ್ಟಿ
ಚಂಡಾಳಿ ದೃಷ್ಟಿ
ತಾಯಿ ದೃಷ್ಟಿ ನಾಯಿ ದೃಷ್ಟಿ
ತಂದಿ ದೃಷ್ಟಿ ಹಂದಿ ದೃಷ್ಟಿ
ಮಂದಿ ದೃಷ್ಟಿ
ಹ್ವಾದವರ ದೃಷ್ಟಿ ಬಂದವರ ದೃಷ್ಟಿ
ಹಾದ್ಯಾನವರ ದೃಷ್ಟಿ ಬೀದ್ಯಾನವರ ದೃಷ್ಟಿ
ನೋಡಿದವ್ರ ಊರ ಜನರ ದೃಷ್ಟಿ
ಕಣ್ಣಾಗ ಕ್ಯಾರ ಇಳವಲಿ ಕಣ್ಣಾಗ ಕದರ ಚುಚ್ಚಿ
ನಮ್ಮಪ್ಪಣ್ಣನ ದೃಷ್ಟಿ ಹರದ ಹೋಗಲಿ।

ಹಲಸಂಗಿ ಗೆಳೆಯರ ದೊಡ್ಡ ಕೊಡುಗೆ **'ಗರತಿಯ ಹಾಡುಗಳು'** (೧೯೩೧) ಎಂಬ ತ್ರಿಪದಿಗಳ ಸಂಗ್ರಹ. ಶ್ರೀಮತಿ ಸುಮಿತ್ರಾದೇವಿ ಅವರು ಈ 'ಗರತಿಯ ಹಾಡು' ಸಂಗ್ರಹದ ಸುಮಾರಾಗಿ ಎಲ್ಲ ಹಾಡುಗಳನ್ನು ಇವತ್ತಿಗೂ ಹಾಡುತ್ತಾರೆಂಬುದು ಆಶ್ಚರ್ಯದ ಸಂಗತಿಯಾಗಿ ಕಾಣುತ್ತದೆ. ಗರತಿಯ ಹಾಡಿನಲ್ಲಿ ಕಾಣದ ಅನೇಕ ತ್ರಿಪದಿಗಳು ಇಲ್ಲಿರುವುದು ಕಂಡುಬರುತ್ತದೆ. ಅಂದರೆ ಬಿಜಾಪೂರ ಜಿಲ್ಲೆಯಲ್ಲಿ ಈಗಲೂ 'ಗರತಿಯ ಹಾಡು' ಕೃತಿಯ ತ್ರಿಪದಿಗಳು ಪ್ರಚಾರದಲ್ಲಿವೆ ಎಂಬುದು, ಅದರಲ್ಲೂ ಒಬ್ಬೊಬ್ಬ ವಕ್ತಾರರೆ ಅವನ್ನು ಹಾಡುತ್ತಾರೆಂಬುದು ಇದರಿಂದ ತಿಳಿದುಬರುತ್ತದೆ. ಸಂಪಾದಕರು ತಮ್ಮ ತಾಯಿಯಿಂದ ಸಂಗ್ರಹಿಸಿದ ೫೮೦ ತ್ರಿಪದಿಗಳನ್ನು ವಿಷಯಾನುಸಾರ ೨೩ ಭಾಗಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾರೆ. ಈ ವಿಂಗಡನೆ 'ಗರತಿಯ ಹಾಡುಗಳು' ಕೃತಿಯ ವಿಂಗಡಣೆಗಿಂತ ವಿಸ್ತಾರವಾಗಿದೆ ಮತ್ತು ತ್ರಿಪದಿಗಳ ಜೋಡಣೆ ಹೆಚ್ಚು ಕ್ರಮಬದ್ಧವಾಗಿದೆ. ಜೊತೆಗೆ ಈ ಹಾಡುಗಳಿಗೆ ಬಳಸುವ ಸೊಲ್ಲುಗಳನ್ನು ಕೊಟ್ಟು ಒಂದೊಂದು ತ್ರಿಪದಿಯ ಉದಾಹರಣೆಯನ್ನೂ ಕೊಟ್ಟಿದ್ದಾರೆ. ಹೀಗಾಗಿ ಬೀಸುವ ಹಾಡುಗಳ ವಿಶೇಷ ಕಲ್ಪನೆ ಇದರಿಂದ ಬರುವಂತಾಗಿದೆ. ಉದಾಹರಣೆಗೆ:

ಸೊಲ್ಲು : ನಾ ತೂಗಲೇನs ಜೋಗುಳ ಹಾಡಲೇನs
ಬಾಲ ನಿನ್ನ ಮ್ಯಾಲ।
ತಾಯಿದ್ರ ತವರ್ಹೆಚ್ಚು ತಂದಿದ್ರ ಬಳಗ್ಹೆಚ್ಚು
ಸಾವಿರಕ ಹೆಚ್ಚ ಪತಿಪುರುಷ । ನಾ ತೂಗಲೇನs ....
ಸಾವಿರಕ ಹೆಚ್ಚ ಪತಿಪುರುಷರ ಮನೆಯಲ್ಲಿ
ಉಂಡುಟ್ಟು ದಾನ ಕೊಡುವೇನ । ನಾ ತೂಗಲೇನs

ಸೊಲ್ಲು : ಕಲ್ಲ ಜಾಡಿಸು ಬ್ಯಾಡ ಕಡಿನುಚ್ಚ ಉದರ್ಯಾವ
ಮಲ್ಲೀಗಿ ತುರಬ ಸಡಿಲ್ಯಾವ । ಕಲ್ಲ ಜಾಡಿಸುಬ್ಯಾಡ ...
ಸಂತಿಗ್ಹೋಗುವ ಜಾಣ ನಿಂತು ಮಾತಾಡಿ ಹೋಗ
ಮೆಂತೇವ ಇಲ್ಲ ಮನಿಯಾಗ । ಕಲ್ಲ ಜಾಡಿಸು ಬ್ಯಾಡ ...
ಮೆಂತೇವ ಇಲ್ಲ ಮನಿಯಾಗ । ನನ್ನ ಜಯಾ
ಶಂಕರನ ಹಡದ ಮಲಗ್ಯಾಳ । ಕಲ್ಲ ಜಾಡಿಸುಬ್ಯಾಡ ...

ಮುಂದಿನ ಏಳನೆಯ ಭಾಗ 'ಗಾದೆಗಳು' ಎಂದಿದೆ. ಇಲ್ಲಿ ಒಟ್ಟಿಗೆ ೯೮೧ ಗಾದೆಗಳಿವೆ. ಇವುಗಳ ಸಂಖ್ಯೆ ಗಮನಿಸಿದರೆ ಈ ಗಾದೆಗಳದೆ ಒಂದು ಪ್ರತ್ಯೇಕ ಸಂಕಲನವಾಗುವಷ್ಟು ಸಮೃದ್ಧವಾಗಿದೆ ಈ ವಿಭಾಗ. ಇಲ್ಲಿಯ ಗಾದೆಗಳನ್ನು ವಿಷಯಾನುಸಾರವಾಗಿ: ೧. ಸಸ್ಯವರ್ಗ, ೨. ಪ್ರಾಣಿವರ್ಗ, ೩. ಮಾನವ ದೈಹಿಕವರ್ಗ, ೪. ಮಾನವ ಬಂಧುವರ್ಗ, ೫. ಮಾನವ ಸ್ವಭಾವ ಗುಣಲಕ್ಷಣಗಳು, ೬. ಸಾಮಾಜಿಕ ವ್ಯವಸ್ಥೆ: ಉದ್ಯೋಗ ಜಾತಿ ಜನಾಂಗಗಳು, ೭. ಕೃಷಿ ಸಂಬಂಧಿ, ೮. ಊಟೋಪಚಾರ, ೯. ಸಿರಿತನ-ಬಡತನ, ೧೦. ವಿಧಿ ಪಾಪ ಪುಣ್ಯ, ೧೧. ಬುದ್ಧಿ-ಭಾವ, ೧೨. ಸಂಗೀತ, ೧೩. ಭೂ-ಖಗೋಳವರ್ಗ- ಹೀಗೆ ೧೩ ವಿಭಾಗಗಳಲ್ಲಿ ವಿಂಗಡಿಸಿಕೊಂಡು ಕೊಟ್ಟಿರುವುದು ಉಚಿತವಾಗಿದೆ.

ಎಂಟನೆಯ ವಿಭಾಗ 'ಒಗಟು' ಎಂದಿದೆ. ಇಲ್ಲಿ ಒಟ್ಟಿಗೆ ೩೨೦ ಒಗಟುಗಳಿವೆ. ಇವುಗಳನ್ನು: ೧. ಪ್ರಾಣಿಗಳು, ೨. ಸಸ್ಯವರ್ಗ, ೩. ಶರೀರ ಸಂಬಂಧಿಗಳು, ೪. ಭೂ-ಖಗೋಳವರ್ಗ, ೫. ಗೃಹೋಪಕರಣಗಳು, ೬. ಆಹಾರ ಪದಾರ್ಥಗಳು, ೭. ವ್ಯವಸಾಯ ಸಂಬಂಧಿಗಳು, ೮. ನಾಮವಾಚಿಗಳು, ೯. ಅಲಂಕಾರ ವಸ್ತುಗಳು, ೧೦. ಸೌಲಭ್ಯ ಸಾಧನಗಳು, ೧೧. ಎರಡರ್ಥದ ಒಗಟುಗಳು- ಎಂದು ವಿಭಾಗಿಸಿಕೊಂಡಿದ್ದಾರೆ. ಗಾದೆಗಳಂತೆ ಒಗಟುಗಳ ಮೊತ್ತವೂ ಒಂದು ಪ್ರತ್ಯೇಕ ಸಂಕಲವಾಗುವಷ್ಟಿದೆ.

ಒಂಬತ್ತನೇ ಅಧ್ಯಾಯ 'ಸಂಸ್ಕಾರಗಳು' ಎಂದಿದ್ದು, ಇಲ್ಲಿ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಕ್ರಿಯಾಚರಣೆಗಳನ್ನು ವಕ್ತಾರರಿಂದ ಸಂಗ್ರಹಿಸಿ ವಿವರಿಸಲಾಗಿದೆ. ೧೦ನೇ ಅಧ್ಯಾಯ 'ಹಬ್ಬ ಹುಣ್ಣಿವೆ ಅಮವಾಸ್ಯೆಗಳು' ಎಂದಿದ್ದು, ಆಯಾ ಹಬ್ಬ ಹುಣ್ಣಿವೆ ಅಮವಾಸ್ಯೆಗಳ ವಿಶೇಷತೆಗಳನ್ನು ವಿವರಿಸಲಾಗಿದೆ. ಕೊನೆಯಲ್ಲಿ ವಕ್ತಾರರನ್ನು ಕುರಿತಂತೆ ಅವರ ಮಕ್ಕಳು ಮೊಮ್ಮಕ್ಕಳು, ಸಹೋದ್ಯೋಗಿಗಳು ಕೊಟ್ಟ ಅಭಿಪ್ರಾಯಗಳನ್ನು ಸಂಗ್ರಹಿಸಿ

ಪ್ರಕಟಿಸಲಾಗಿದೆ. ಇದರಿಂದ ವಕ್ತಾರರ ಒಟ್ಟು ವ್ಯಕ್ತಿತ್ವ ಎಂತಹದು ಎಂಬುದು ಇದರಿಂದ ಗೊತ್ತಾಗುವಂತಾಗಿದೆ.

ಶ್ರೀಮತಿ ಸುಮಿತ್ರಾದೇವಿ ಅವರಿಗೆ ಬರುವ ಹಾಡುಗಳ ಸಂಖ್ಯೆ ಮತ್ತು ಪ್ರತಿಯೊಂದು ಸಂದರ್ಭಕ್ಕೂ ಸಂಬಂಧಿಸಿದ ಹಾಡುಗಳು ಹಾಡಿದ್ದನ್ನು ಗಮನಿಸಿದರೆ, ಅವರ ಜ್ಞಾಪಕದಲ್ಲಿರುವ ಗಾದೆ, ಒಗಟು, ಮಕ್ಕಳಾಟದ ಹಾಡುಗಳನ್ನು ಗಮನಿಸಿದರೆ, ಅವರಲ್ಲಿರುವ ಒಬ್ಬ ಕಲಾವಿದನ ಒಟ್ಟು ಸಾಮರ್ಥ್ಯದ ಬಗೆಗೆ ಗೌರವ ಭಾವನೆ ಮೂಡುತ್ತದೆ. ಜಾನಪದ ಕ್ಷೇತ್ರದ ಇಂತಹ ಪ್ರತಿಭಾವಂತರ ಸಮಗ್ರ ಸಂಪುಟಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ಕ್ಷೇತ್ರದಲ್ಲಿ ಒಂದು ಹೊಸ ದಾರಿಯನ್ನೇ ತೆರೆದು ತೋರಿಸುತ್ತವೆ.

* * *

ವಕ್ತಾರರ ಸಮಗ್ರ ಸಾಹಿತ್ಯ ಸಂಪುಟಗಳು :

೧೯೭೨ : ಸೋಬಾನೆ ಚಿಕ್ಕಮ್ಮನ ಪದಗಳು, (ಸಂ) ಎಚ್.ಎಲ್. ನಾಗೇಗೌಡ, –ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು.(೨ನೇ ಮುದ್ರಣ, ೧೯೯೫).

೨೦೦೫ : ಸಾವಿರದ ಸಿರಿ ಬೆಳಗು, (ಸಂ) ಕೃಷ್ಣಮೂರ್ತಿ ಹನೂರ, –ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜಿ. ಬಳ್ಳಾರಿ.

೨೦೦೭ : ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು, (ಸಂ) ಡಾ. ನೀಲಾಂಬಿಕಾ ಪೋಲಿಸ ಪಾಟೀಲ, –ಶ್ರೀಮತಿ ಸರಸ್ವತಿ ಮಲ್ಲಿಕಾರ್ಜುನ ಕಾಡಾದಿ, ಗೋದುತಾಯಿ ನಗರ, ಕಲಬುರಗಿ.

೨೦೦೮ : ಗಿರಿ ಕೋಗಿಲೆ, (ಸಂ) ಡಾ. ನೀಲಾಂಬಿಕಾ ಪೋಲಿಸ ಪಾಟೀಲ, –ಡಾ. ಶರಣಪ್ಪ ಗಿರಿ, ಮನೆ ಸಂಖ್ಯೆ ೧–೮೬೭/೨೬, ಟೆಂಪಲ್ ಪಾರ್ಕ್, ವೆಂಕಟೇಶ ನಗರ, ಕಲಬುರಗಿ–೨.

೨೦೦೮ : ಬೆಲ್ಲದಾರತಿಯ ಬೆಳಗೇನು, (ಸಂ) ಡಾ. ಬಿ.ಎಸ್. ತಲ್ವಾಡಿ, –ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೦೧೫ : ನಮ್ಮವ್ವ ಸುಮಿತ್ರಾದೇವಿಯ ಜಾನಪದ ಭಂಡಾರ, (ಸಂ) ಡಾ. ಜಯಶ್ರೀ ದಂಡೆ, –ಕವಿಮಾರ್ಗ ಪ್ರಕಾಶನ, 'ತೇಜಸ್ವಿನಿ', ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಕಲಬುರಗಿ–೬.

* * *

ಎರಡು ಶತಮಾನಗಳಷ್ಟು ದೀರ್ಘ ಕಾಲಾವಧಿಯ, ಅಪಾರ ಗ್ರಂಥರಾಶಿಯುಳ್ಳ ಸಮಗ್ರ ಕನ್ನಡ ಬರವಣಿಗೆಯ ಚರಿತ್ರೆಯನ್ನು ರಚಿಸಿ ಪ್ರಕಟಿಸುವ ಐತಿಹಾಸಿಕ ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಶತಮಾನೋತ್ಸವದ ಮಹತ್ವಾಕಾಂಕ್ಷೆಯ ಯೋಜನೆಯನ್ನಾಗಿ ಕೈಗೆತ್ತಿಕೊಂಡಿದೆ. ಕನ್ನಡ ಕಾವ್ಯ, ನಾಟಕ, ಕಾದಂಬರಿ, ಕಥಾಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಿಗೆ ಒಂದೊಂದು ಸಂಪುಟದಂತೆ ಒಟ್ಟು ೧೭ ಸಂಪುಟಗಳಲ್ಲಿ ಈ ಸಾಹಿತ್ಯ ಚರಿತ್ರೆ ಪ್ರಕಟವಾಗಲಿದೆ. ಕನ್ನಡ ಬರವಣಿಗೆಯ ಎಲ್ಲ ಓದುಗರಿಗೆ, ವಿದ್ಯಾರ್ಥಿಗಳಿಗೆ, ಅಧ್ಯಯನಶೀಲರಿಗೆ, ವಿದ್ವಾಂಸರಿಗೆ ಇವು ಉಪಯುಕ್ತವಾಗಲಿವೆ ಎಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೫೬೦೦೧೮